ಇತಿಹಾಸ ದರ್ಶನ

೨೦೨೧

ಸಂಪಾದಕರು
ದೇವರಕೊಂಡಾರೆಡ್ಡಿ
ದೇವರಾಜಸ್ವಾಮಿ ಜಿ.ಕೆ.

ಸಂಪುಟ
೩೬

ಕರ್ನಾಟಕ ಇತಿಹಾಸ ಅಕಾದೆಮಿ (ರಿ.), ಬೆಂಗಳೂರು

ಡಾ. ಎಸ್. ನಾಗರಾಜು ಅವರಿಂದ ಕರ್ನಾಟಕ ಇತಿಹಾಸ ಅಕಾದೆಮಿ 34ನೇ ವಾರ್ಷಿಕ ಸಮ್ಮೇಳನದ ಉದ್ಘಾಟನೆ
ಆನ್‌ಲೈನ್ ಕಾರ್ಯಕ್ರಮ, ಬೆಂಗಳೂರು



ಶ್ರೀ ಜಿ.ಕೆ. ದೇವರಾಜಸ್ವಾಮಿ, ಡಾ. ಆರ್. ಲಕ್ಷ್ಮೀನಾರಾಯಣ್, ಶ್ರೀ ನಾಗರಾಜು, ಶ್ರೀ ಸೀತಾರಾಮ ಜಾಗೀರ್‌ದಾರ್
ಡಾ. ದೇವರಕೊಂಡಾರೆಡ್ಡಿ, ಶ್ರೀ ಕೆ. ಎಲ್. ರಾಜಶೇಖರ್

ಇತಿಹಾಸ ದರ್ಶನ

ITIHASA DARSANA - ***Volume 36* / 2021**

ಸಂಪುಟ ೩೬ / ೨೦೨೧

೨೦೨೦ರ ಡಿಸೆಂಬರ್‌ನಲ್ಲಿ ನಡೆದ ಕರ್ನಾಟಕ ಇತಿಹಾಸ ಅಕಾದೆಮಿಯ
೩೪ನೆಯ ವಾರ್ಷಿಕ ಸಮ್ಮೇಳನವನ್ನು ಆನ್‌ಲೈನ್‌ನಲ್ಲಿ ಆಯೋಜಿಸಿದ್ದ ಸಂದರ್ಭದಲ್ಲಿ ಅಕಾದೆಮಿಯ
ಸದಸ್ಯರು ಮಂಡಿಸಿದ ವಿದ್ವತ್ ಪ್ರಬಂಧಗಳ ಸಂಪುಟ.

ಸಂಪಾದಕರು

ದೇವರಕೊಂಡಾರೆಡ್ಡಿ

ಜಿ.ಕೆ. ದೇವರಾಜಸ್ವಾಮಿ

ಕರ್ನಾಟಕ ಇತಿಹಾಸ ಅಕಾದೆಮಿ (ರಿ.) ಬೆಂಗಳೂರು

ITIHĀSA DARŚANA - *Volume 36* / 2021

The volume of the scholarly papers presented and
Proceedings of the 35th Annual Conference
held at bengaluru on 27th to 29th December 2020

The Karnataka Ithihasa Academy (Regd.,)
B.M. Sri Pratistana, 3rd Main Road,
Narasimharaja Colony, Bengaluru - 560 019.

Published by : Secretary
Karnataka Itihasa Academy (Regd.)
B.M. Sri Pratistana, 3rd Main Road,
Narasimharaja Colony, Bengaluru - 560 019.

karnatakaitihasaacademy25@gmail.com

www.karnatakaitihasaacademy.org

Edited by : **Devarakondareddy**
G.K. Devarajaswamy

ಪ್ರಕಟಣೆ: ೨೦೨೧

ಪುಟಗಳು : 424 + xxviii + Col. Photos viii

Pages : 424 + xxviii + Col. Photos viii

Price : ₹ **900**

ಬೆಲೆ : ₹ ೯೦೦

ISBN No. 978-81-950402-6-1

ಆರ್ಥಿಕ ನೆರವು:

* ರಾಜ್ಯ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು.
* ಶ್ರೀ ಪರಮಪೂಜ್ಯ ಸಂಗನಬಸವ ಮಹಾಸ್ವಾಮಿಗಳು, ಶ್ರೀ ಮದ್ವೀರಶೈವ ಶಿವಯೋಗ ಮಂದಿರ ಸಂಸ್ಥೆ, ಬಾದಾಮಿ.
* ಶ್ರೀ ಜಗದ್ಗುರು ರಂಭಾಪುರಿ ವೀರಸಿಂಹಾಸನ ಮಹಾಸಂಸ್ಥಾನ ಪೀಠ, ಬಾಳೇಹೊನ್ನೂರು.

Printed at


ಲಕ್ಷ್ಮೀ ಮುದ್ರಣಾಲಯ
LAKSHMI MUDRANALAYA
ISO 9001-2000
ಚಾಮರಾಜಪೇಟೆ, ಬೆಂಗಳೂರು-೧೮
ದೂರವಾಣಿ : ೨೬೬೧ ೩೧೨೩, ೨೬೬೧ ೮೭೫೨



॥ ಶ್ರೀ ಜಗದ್ಗುರು ರೇಣುಕಾಚಾರ್ಯ: ಪ್ರಸೀದತು ॥



ಮಾನವ ಧರ್ಮಕ್ಕೆ ಜಯವಾಗಲಿ ।
ಧರ್ಮದಿಂದಲೇ ವಿಶ್ವಕ್ಕೆ ಶಾಂತಿ ॥



ಸಾಹಿತ್ಯ-ಸಂಸ್ಕೃತಿ ಸಂವರ್ಧಿಸಲಿ ।
ಶಾಂತಿ-ಸಮೃದ್ಧಿ ಸರ್ವರಿಗಾಗಲಿ ॥



ಶ್ರೀ ಮದ್ರಂಭಾಪುರಿ ವೀರಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ ೧೦೦೮ ಜಗದ್ಗುರು ಪ್ರಸನ್ನ ರೇಣುಕ ಡಾ. ವೀರಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದರು

ಶ್ರೀ ಜಗದ್ಗುರು ರಂಭಾಪುರಿ ವೀರಸಿಂಹಾಸನ ಮಹಾಸಂಸ್ಥಾನ ಪೀಠ

ಬಾಳೆಹೊನ್ನೂರು-೫೭೭೧೧೨ ಚಿಕ್ಕಮಗಳೂರು ಜಿಲ್ಲೆ ಕರ್ನಾಟಕ ರಾಜ್ಯ

ದಿನಾಂಕ : **10.02.2022** ವಾಸ್ತವ್ಯ : ಮಲಯಾಚಲ ತಪೋಭೂಮಿ

ಶುಭಾಶೀರ್ವಾದ ಸಂದೇಶ

ಮನುಷ್ಯ ಸುಂದರ ಸಾರ್ಥಕ ಬದುಕು ಕಟ್ಟಿಕೊಳ್ಳಬೇಕಾಗಿದೆ. ಭೌತಿಕ ಬದುಕಿಗೆ ಸಂಪತ್ತು ಬೇಕು. ಶಾಂತಿಯ ಬದುಕಿಗೆ ಸಂಪತ್ತು ಬೇಕು. ಶಾಂತಿಯ ಬದುಕಿಗೆ ಸಂಸ್ಕಾರ ಬೇಕು. ಮನುಷ್ಯ ಗಳಿಸುವುದನ್ನು ಕಲಿತ. ಆದರೆ ಹೇಗೆ ಬಾಳಬೇಕೆಂಬುದನ್ನು ಮರೆತ. ಮನಸ್ಸು ಇದ್ದರೆ ಮಾರ್ಗ ಮತ್ತು ಮಾರ್ಗದರ್ಶಕರು ಇದ್ದೇ ಇರುತ್ತಾರೆ. ಮನದೊಳಗೆ ನೆಲೆಸಿರುವ ಮಹಾದೇವನಿಗೆ ಮೆಚ್ಚುಗೆ ಆಗುವ ರೀತಿ ಬದುಕಬೇಕು. ಭವ್ಯ ಕಟ್ಟಡದ ಭದ್ರತೆಗೆ ಅಡಿಪಾಯ ಮುಖ್ಯ. ಅಮೂಲ್ಯ ಜೀವನ ವಿಕಸನಕ್ಕೆ ಧರ್ಮಾಚರಣೆ-ಸಂಸ್ಕೃತಿ ಮುಖ್ಯವಾಗಿದೆ.

ಆದರ್ಶಗಳು ಎಂದಿಗೂ ನಾಶಗೊಳ್ಳುವುದಿಲ್ಲ. ನದಿ ಎಷ್ಟೇ ದೂರ ಹರಿದು ಹೋದರೂ ತನ್ನ ಮೂಲವನ್ನು ಮರೆಯುವುದಿಲ್ಲ. ಅದರಂತೆ ಮನುಷ್ಯ ಎಷ್ಟೇ ಎತ್ತರಕ್ಕೆ ಬೆಳೆದರೂ ಮೂಲ ಸಂಸ್ಕೃತಿಯನ್ನು ಮರೆಯಬಾರದು. ಕಲಿತ ಪಾಠ ಮನುಷ್ಯ ಮರೆಯಬಹುದು. ಅನುಭವದಿಂದ ಕಲಿತ ಪಾಠ ಎಂದಿಗೂ ಮರೆಯಲು ಸಾಧ್ಯವಿಲ್ಲ. ಗತಕಾಲದ ಇತಿಹಾಸದ ಅರಿವು ಎಲ್ಲರಿಗೂ ಇರಬೇಕಾಗುತ್ತದೆ. ವೈಚಾರಿಕ ಮತ್ತು ಆಧುನಿಕತೆ ಹೆಸರಿನಲ್ಲಿ ಉತ್ಕೃಷ್ಟ ಸಂಸ್ಕೃತಿ ಇತಿಹಾಸವನ್ನು ಕಲುಷಿತಗೊಳಿಸಬಾರದು. ಸುಳ್ಳು ಹೇಳಲು ಹಲವು ದಾರಿಗಳಿವೆ. ಆದರೆ ಸತ್ಯ ಹೇಳಲು ಇರುವುದೊಂದೇ ಇತಿಹಾಸ.

ಕಷ್ಟವಿಲ್ಲದೇ ಗೆದ್ದರೆ ವಿಜಯ. ಕಷ್ಟಪಟ್ಟು ಗೆದ್ದರೆ ಇದು ಇತಿಹಾಸ. ಗೆಲ್ಲುವುದಷ್ಟೇ ಮುಖ್ಯವಲ್ಲ. ಗೆಲುವಿನಲ್ಲಿ ಇತಿಹಾಸ ನಿರ್ಮಿಸುವುದು ಮುಖ್ಯ. ಭೂಮಿಯಲ್ಲಿ ಬಿತ್ತಿದ ಬೀಜಕ್ಕೆ ನೀರು ಎಷ್ಟು ಅವಶ್ಯಕವೋ ಭವಿಷ್ಯತ್ತಿನ ಜನಾಂಗಕ್ಕೆ ಇತಿಹಾಸದ ಅರಿವು ಅವಶ್ಯವಾಗಿರುತ್ತದೆ. ಮುಳ್ಳಿನ ಮಧ್ಯೆ ಗುಲಾಬಿ ಇದ್ದರೂ ಗಾಯಗೊಳ್ಳದೇ ಅರಳಿ ಪರಿಮಳ ಬೀರುತ್ತದೆ. ಮುಳ್ಳಿನ ಗುಲಾಬಿಯಂತೆ ವರ್ತಮಾನದ ಸಂಕಷ್ಟಗಳನ್ನು ಎದುರಿಸಿ ಸಂಸ್ಕೃತಿ, ಇತಿಹಾಸ ಮತ್ತು ಆದರ್ಶಗಳನ್ನು ಉಳಿಸಿಕೊಂಡು ಬರಬೇಕಾಗುತ್ತದೆ.

ಕರ್ನಾಟಕ ಇತಿಹಾಸ ಅಕಾದೆಮಿ (ರಿ) **36** ವರುಷಗಳಿಂದ ಇತಿಹಾಸ ಅಧ್ಯಯನ ಮತ್ತು ಸಂಶೋಧನೆಗಳಿಂದ ಹೊಸ ಬೆಳಕು ಮೂಡಿಸುತ್ತಾ ಬಂದಿರುವುದು ಸ್ತುತ್ಯ ಕಾರ್ಯ. ಕಳೆದ **17** ವರುಷಗಳಿಂದ ಶ್ರೀ ಪೀಠದಿಂದ ಪ್ರತಿ ವರ್ಷ **25000/-** (ಇಪ್ಪತ್ತೈದು ಸಾವಿರ) ರೂಪಾಯಿಗಳನ್ನು ಆಶೀರ್ವದಿಸುತ್ತಾ ಬಂದಿರುವುದು ಗೊತ್ತಿರುವ ಸಂಗತಿ. ಈ ವರ್ಷವೂ ಸಹ ಶ್ರೀ ಪೀಠದ ಆಶೀರ್ವಾದವನ್ನು ಕಳುಹಿಸಿಕೊಡಲಾಗುವುದು.

ಇತಿಹಾಸ ಸಂಶೋಧನೆಗಾಗಿ ಸದಾ ಶ್ರಮಿಸುತ್ತಿರುವ ಅಕಾದೆಮಿ ಅಧ್ಯಕ್ಷರಾದ ಡಾ. ದೇವರಕೊಂಡಾರೆಡ್ಡಿ, ಉಪಾಧ್ಯಕ್ಷರಾದ ಡಾ. ಎಂ.ಜಿ. ನಾಗರಾಜ್ ಹಾಗೂ ಸಂಪಾದಕ ಮಂಡಳಿಯವರ ಶ್ರಮ ಸಾಧನೆ ಶ್ಲಾಘನೀಯ. ಬೆಂಗಳೂರಿನ ಕೇಂದ್ರ ಕಛೇರಿಯಲ್ಲಿಯೇ **2022** ಫೆಬ್ರವರಿ **19** ರಿಂದ **21** ರವರೆಗೆ **35** ನೇ ವಾರ್ಷಿಕ ವರ್ಚುವಲ್ ಸಮ್ಮೇಳನದಲ್ಲಿ ಇತಿಹಾಸ ದರ್ಶನ-**36** ಸಂಪುಟ ಪ್ರಕಟಗೊಳ್ಳಲಿರುವುದು ಸಂತೋಷದ ಸಂಗತಿ. ಸಮ್ಮೇಳನ ಅತ್ಯಂತ ಯಶಸ್ವಿಯಾಗಿ ಜರುಗಲೆಂದು ಹೃದಯ ತುಂಬಿ ಹಾರೈಸುತ್ತೇವೆ.

ಶ್ರೀ ಜಗದ್ಗುರು ರೇಣುಕಾಚಾರ್ಯರು ಹಾಗೂ ಕ್ಷೇತ್ರನಾಥ ಶ್ರೀ ವೀರಭದ್ರಸ್ವಾಮಿ ಸರ್ವರಿಗೂ ಮಂಗಲ ಪರಂಪರೆಯನ್ನು ಅನುಗ್ರಹಿಸಲಿ.

ಬಾಳೆಹೊನ್ನೂರು
577 112

ಶುಭಾಶೀರ್ವಾದಗಳೊಂದಿಗೆ
ಶ್ರೀ ರಂಭಾಪುರಿ ಜಗದ್ಗುರುಗಳು
ಬಾಳೆಹೊನ್ನೂರು

ವಾರ್ಷಿಕ ನಿಧಿ ರೂ. ಇಪ್ಪತ್ತೈದು ಸಾವಿರ ಕೊಡುಗೆ ಆರಂಭಿಸಿದ ವರ್ಷ - 2005

ಆರ್ಥಿಕ ನೆರವು

ರಾಜ್ಯ ಪುರಾತತ್ವ, ಸಂಗ್ರಹಾಲಯಗಳು ಮತ್ತು
ಪರಂಪರೆ ಇಲಾಖೆ, ಮೈಸೂರು



ಪರಮಪೂಜ್ಯ ಡಾ. ಸಂಗನಬಸವ ಮಹಾಸ್ವಾಮಿಗಳು

ಪಟ್ಟಾಧ್ಯಕ್ಷರು, ಕೊಟ್ಟೂರು ಮಠ, ಹೊಸಪೇಟೆ,

ಅಧ್ಯಕ್ಷರು

ಶ್ರೀ ಮದ್ವೀರಶೈವ ಶಿವಯೋಗಮಂದಿರ ಸಂಸ್ಥೆ, ಬಾದಾಮಿ



34ನೇ ವಾರ್ಷಿಕ ಸಮ್ಮೇಳನದ ಕಾರ್ಯಕ್ರಮವನ್ನು ಆನ್‌ಲೈನ್‌ನಲ್ಲಿ ಆಯೋಜಿಸಿದ
ಕರ್ನಾಟಕ ಇತಿಹಾಸ ಅಕಾದೆಮಿಯ ಸದಸ್ಯರುಗಳೊಂದಿಗೆ ಗಣ್ಯರು



ಇತಿಹಾಸ ದರ್ಶನ 35ನೇ ಸಂಪುಟ ಬಿಡುಗಡೆ ಮಾಡಿದ
ಡಾ. ಆರ್. ಲಕ್ಷ್ಮೀನಾರಾಯಣ ಅವರಿಗೆ
ಅಕಾದೆಮಿಯ ಅಧ್ಯಕ್ಷರಿಂದ ಸನ್ಮಾನ



ಇತಿಹಾಸ ಅಕಾದೆಮಿಯ 34ನೇ ವಾರ್ಷಿಕ ಸಮ್ಮೇಳನ
ಉದ್ಘಾಟನೆ ಮಾಡಿದ ಡಾ. ಎಸ್.ನಾಗರಾಜು ಅವರಿಗೆ
ಅಕಾದೆಮಿಯ ಅಧ್ಯಕ್ಷರಿಂದ ಸನ್ಮಾನ



ದಿನಾಂಕ : 28.12.2020ರಂದು ಕರ್ನಾಟಕ ಇತಿಹಾಸ ಅಕಾದೆಮಿಯ 34ನೇಯ
ಸರ್ವ ಸದಸ್ಯರ ಸಭೆಯಲ್ಲಿ
ಶ್ರೀಮತಿ ಸೀತಾಲಕ್ಷ್ಮೀ ರಾವ್, ಶ್ರೀ ಗುರುಪ್ರಸಾದ ಬಿ.ಎಸ್., ಶ್ರೀ ದೇವರಾಜಸ್ವಾಮಿ ಜಿ.ಕೆ.,
ಡಾ. ದೇವರಕೊಂಡಾರೆಡ್ಡಿ ಶ್ರೀ ಎಂ.ಬಿ. ಪಾಟೀಲ, ಶ್ರೀ ಕೆ.ಎಲ್. ರಾಜಶೇಖರ್, ಡಾ. ಸಂಧ್ಯಾ ವಿ.



ಅಕಾದೆಮಿಯ 34ನೇ ವಾರ್ಷಿಕ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ
ಮುಖ್ಯ ಅತಿಥಿಗಳಾದ ಶ್ರೀ ವಿ. ನಾಗರಾಜ್ ಗೌರವ ಕಾರ್ಯದರ್ಶಿಗಳು, ದಿ ಮಿಥಿಕ್ ಸೊಸೈಟಿ
ಅವರೊಂದಿಗೆ ಕರ್ನಾಟಕ ಇತಿಹಾಸ ಅಕಾದೆಮಿಯ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು




ಅಕಾದೆಮಿಯ 34ನೇ ವಾರ್ಷಿಕ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ
ಮುಖ್ಯ ಅತಿಥಿಗಳಾದ ಶ್ರೀ ವಿ. ನಾಗರಾಜ್ ಗೌರವ ಕಾರ್ಯದರ್ಶಿಗಳು, ದಿ ಮಿಥಿಕ್ ಸೊಸೈಟಿ
ಅವರಿಗೆ ಅಕಾದೆಮಿಯ ಅಧ್ಯಕ್ಷರಿಂದ ಸನ್ಮಾನ



ಅಕಾದೆಮಿಯ 34ನೇ ವಾರ್ಷಿಕ ಸಮ್ಮೇಳನವನ್ನು ಆನ್‌ಲೈನ್ ಮೂಲಕ
ಅಕಾಡೆಮಿಯ ಕಛೇರಿಯಲ್ಲಿ ನಿರ್ವಹಿಸುತ್ತಿರುವ ತಂಡ

ಸ್ಮರಣೆ



ಶ್ರೀ ಎಂ.ಬಿ. ಪಾಟೀಲ್

(ಮರಣ ದಿನಾಂಕ : 04-09-2021)

ಸಂಸ್ಥಾಪಕ ಸದಸ್ಯರು ಮತ್ತು ಕೋಶಾಧ್ಯಕ್ಷರು (1986 ರಿಂದ 2021 ರವರೆಗೆ)
ಕರ್ನಾಟಕ ಇತಿಹಾಸ ಅಕಾದೆಮಿ (ರಿ). ಬೆಂಗಳೂರು

ಅಧ್ಯಕ್ಷರ ನುಡಿ

ಕರ್ನಾಟಕ ಇತಿಹಾಸ ಅಕಾದೆಮಿಯು ೩೪ ಸಂವತ್ಸರಗಳನ್ನು ಪೂರೈಸಿ ೩೫ನೆಯ ಸಂವತ್ಸರಕ್ಕೆ ಕಾಲಿಡುತ್ತಿದೆ. ೩೪ ವರ್ಷಗಳಿಂದ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಕರ್ನಾಟಕ ಸಂಸ್ಕೃತಿ ಪ್ರಸರಣದಲ್ಲಿ ತೊಡಗಿದೆ. ಕರ್ನಾಟಕ ಇತಿಹಾಸ ಅಕಾದೆಮಿಯ ಧ್ಯೇಯವು ಕರ್ನಾಟಕದ ಭವ್ಯ ಇತಿಹಾಸ ಹಾಗೂ ಸಂಸ್ಕೃತಿಯನ್ನು ಪಸರಿಸುವುದೇ ಆಗಿದೆ. ಇಂತಹ ಸಂಸ್ಕೃತಿ ಪ್ರಸರಣ ಕಾರ್ಯದಲ್ಲಿ ನಮ್ಮೊಡನೆ ಕೈ ಜೋಡಿಸಿದ ಮಠ ಮಾನ್ಯಗಳಿಗೆ, ಸಂಘಸಂಸ್ಥೆಗಳಿಗೆ, ವ್ಯಕ್ತಿಗಳಿಗೆ ನಮ್ಮೆಲ್ಲರ ನಮನಗಳು.

ಕೋವಿಡ್ ಎಂಬ ಸಾಂಕ್ರಾಮಿಕ ರೋಗವು ಎಲ್ಲಾ ಸರ್ಕಾರ ಹಾಗೂ ಸಂಘಸಂಸ್ಥೆಗಳ ಕಾರ್ಯಕ್ರಮಗಳನ್ನು ನುಂಗಿದಂತೆ ನಮ್ಮ ಅಕಾದೆಮಿಯ ಕಾರ್ಯಕ್ರಮಗಳ ಮೇಲೂ ಪ್ರಭಾವಬೀರಿ ಕುಂಠಿತಗೊಳಿಸಿದೆ. ಆದರೂ ಆಧುನಿಕ ತಂತ್ರಜ್ಞಾನ ಬಳಸಿ 'ಇತಿಹಾಸ ನಿರ್ಮಾತೃಗಳು' ಕಾರ್ಯಕ್ರಮವನ್ನು ೨೦ ಕಂತುಗಳಲ್ಲಿ ಪೂರೈಸಿದ ಹೆಗ್ಗಳಿಕೆ ನಮ್ಮದಾಗಿದೆ. ಇದೇ ವೇಳೆ ಕನ್ನಡ ಲಿಪಿ ಕಲಿಕಾ ಕಾರ್ಯಕ್ರವನ್ನಿರಿಸಿಕೊಂಡು ಆನ್‌ಲೈನ್ ತರಗತಿಗಳನ್ನು ನಡೆಸಲಾಯಿತು. ಈ ಕಾರ್ಯಗಳಿಗೆ ನಮ್ಮ ನಿರೀಕ್ಷೆ ಮೀರಿ ದೇಶ–ವಿದೇಶದ ವಿದ್ವತ್ ವಲಯದ ಬೆಂಬಲ ದೊರೆತಿದೆ.

ಕರ್ನಾಟಕ ಇತಿಹಾಸ ಅಕಾದೆಮಿಯ ೩೪ನೆಯ ವಾರ್ಷಿಕ ಸಮ್ಮೇಳನವನ್ನು ಆನ್‌ಲೈನ್‌ನಲ್ಲಿ ಬೆಂಗಳೂರಿನ ಅಕಾದೆಮಿಯ ಕಛೇರಿಯ ಬಿ.ಎಂ.ಶ್ರೀ ಪ್ರತಿಷ್ಠಾನದ ಆವರಣದಲ್ಲಿ ಆಯೋಜಿಸಲಾಗಿತ್ತು. ಈ ಸಮ್ಮೇಳನದಲ್ಲಿ ೧೨೦ ಪ್ರಬಂಧಗಳು ಮಂಡನೆಯಾಗಿವೆ. ಈ ಬಗ್ಗೆ ಸದಸ್ಯರಿಗೆ ಪತ್ರ ಬರೆದಿದ್ದೇ ಅಲ್ಲದೆ ವೆಬ್‌ಸೈಟ್, ಫೇಸ್‌ಬುಕ್, ವಾಟ್ಸಾಪ್‌ಗಳ ಮೂಲಕ ಸಂವಹನ ನಡೆಸಲಾಯಿತು. ೨೦೨೦ರಲ್ಲಿ ಆನ್‌ಲೈನ್ ಸೇಮಿನಾರಿನಲ್ಲಿ ಮಂಡಿಸಿದ ಪ್ರಬಂಧಗಳನ್ನು ಒಂದೆಡೆ ಸಂಗ್ರಹಿಸಿ ಪ್ರಸುತ್ತ ಇತಿಹಾಸ ದರ್ಶನ ೩೬ನ್ನು ಹೊರ ತರುತ್ತಿದ್ದೇವೆ. ಪ್ರಬಂಧಗಳನ್ನು ಮಂಡಿಸಿದ ಹಾಗೂ ಮುದ್ರಣಕ್ಕೆ ನೀಡಿದ ಪ್ರಬಂಧಕಾರರಿಗೆ ವಂದನೆಗಳನ್ನು ಸಲ್ಲಿಸುತ್ತೇವೆ.

ಇತಿಹಾಸ ದರ್ಶನ ಸಂಪುಟದ ಪ್ರಕಟಣೆಗಾಗಿ ಬಾಳೆಹೊನ್ನೂರಿನ ರಂಭಾಪುರಿ ವೀರಾಸಿಂಹಾಸನಾಧೀಶ್ವರ ಶ್ರೀಶ್ರೀಶ್ರೀ ೧೦೦೮ ಜಗದ್ಗುರು ಪ್ರಸನ್ನ ರೇಣುಕ ವೀರಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದರು ಈ ವರ್ಷವೂ ರೂ. ೨೫,೦೦೦ಗಳನ್ನು ಆಶೀರ್ವಾದ ಪೂರ್ವಕವಾಗಿ ನೀಡಿದ್ದಾರೆ. ಶ್ರೀಗಳು ಕಳೆದ ೧೭ ವರ್ಷದಿಂದ ಈ ಸಹಾಯವನ್ನು ಮಾಡುತ್ತಾ ಬಂದಿದ್ದಾರೆ. ಕರ್ನಾಟಕ ರಾಜ್ಯಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯು ಅಕಾದೆಮಿಗೆ ಎರಡು ಸಾಲಿನ ಅನುದಾನವಾಗಿ ರೂ. ಆರು ಲಕ್ಷ (೬,೦೦,೦೦೦) ಗಳನ್ನು ಬಿಡುಗಡೆ ಮಾಡಿ ಅಕಾದೆಮಿಯ ಕಾರ್ಯಚಟುವಟಿಕೆಗಳನ್ನು ನಡೆಸಲು ಸಹಾಯ ಮಾಡಿದೆ. ಇಲಾಖೆಯ ಅಧಿಕಾರಿಗಳಿಗೆ ಅಕಾದೆಮಿಯ ವಂದನೆಗಳು.

ಬಾದಾಮಿಯ ಶಿವಯೋಗ ಮಂದಿರದ ಅಧ್ಯಕ್ಷರೂ ಹೊಸಪೇಟೆಯ ಕೊಟ್ಟೂರುಮಠದ ಪಟ್ಟಾಧ್ಯಕ್ಷರಾಗಿದ್ದ ಜಗದ್ಗುರು ಶ್ರೀ ಸಂಗನಬಸವಸ್ವಾಮಿಗಳು ಕರ್ನಾಟಕ ಇತಿಹಾಸ ಅಕಾದೆಮಿಗೆ ಒಂದು ಲಕ್ಷ ರೂಪಾಯಿಗಳನ್ನು (೧,೦೦,೦೦೦) ಈ ವರ್ಷವೂ ನೀಡಿದ್ದಾರೆ. ಶ್ರೀಗಳು ಇತ್ತೀಚೆಗೆ ಶಿವಗಣ ಪದವಿಯನ್ನು ಪಡೆದಿದ್ದು ಅಕಾದೆಮಿಗೆ ತುಂಬಲಾರದ ನಷ್ಟವಾಗಿದೆ. ಅಕಾದೆಮಿಯು ಅವರ ಆತ್ಮಕ್ಕೆ ಸದ್ಗತಿಯನ್ನು ಕೋರುತ್ತದೆ.

ಶ್ರೀಯುತ ಎಂ.ಬಿ.ಪಾಟೀಲ್ ಅವರು ಅಕಾದೆಮಿಯ ಸ್ಥಾಪಕ ಸದಸ್ಯರಾಗಿದ್ದಲ್ಲದೆ ಆರಂಭದಿಂದ ಕೋಶಾಧಿಕಾರಿಯಾಗಿ, ಅಕಾದೆಮಿಯ ಈವರೆಗಿನ ಬೆಳವಣಿಗೆಗೆ ಕಾರಣರಾಗಿದ್ದರು. ಶ್ರೀಯುತರು ಈತ್ತಿಚೇಗೆ ಲಿಂಗೈಕ್ಯರಾಗಿದ್ದಾರೆ. ಇವರ ಮರಣದಿಂದ ಅಕಾದೆಮಿಗೆ ತುಂಬಲಾರದ ನಷ್ಟವಾಗಿದೆ. ಅಕಾದೆಮಿಯು ಅವರ ಆತ್ಮಕ್ಕೆ ಸದ್ಗತಿಯನ್ನು ಕೋರುತ್ತದೆ.

ಹಾಗೆಯೇ ಕಳೆದ ವರ್ಷ ಕರ್ನಾಟಕ ಇತಿಹಾಸ ಅಕಾದೆಮಿಯ ಆರ್ಥಿಕ ಸಂಕಷ್ಟವನ್ನು ಎದುರಿಸುತ್ತಿದ್ದಾಗ ದಿ ಮಿಥಿಕ್‌ಸೊಸೈಟಿ, ಬೆಂಗಳೂರು ಇದರ ಕಾರ್ಯದರ್ಶಿಗಳಾದ ಶ್ರೀ ವಿ. ನಾಗರಾಜ್ ಅವರು 'ಇತಿಹಾಸ ದರ್ಶನ'ದ ಮುದ್ರಣದ ಸಂಪೂರ್ಣ ವೆಚ್ಚವನ್ನು ಭರಿಸಿದ್ದರು.

ಇವರೆಲ್ಲರಿಗೆ ನಮ್ಮ ಅಕಾದೆಮಿಯ ತುಂಬು ಹೃದಯದ ನಮನಗಳನ್ನು ಸಲ್ಲಿಸುತ್ತೇವೆ.

೦೮.೦೨.೨೦೨೨	**ದೇವರಕೊಂಡಾರೆಡ್ಡಿ**
ಮಂಗಳವಾರ, ರಥಸಪ್ತಮಿ	ಅಧ್ಯಕ್ಷರು
ಬೆಂಗಳೂರು.	

ಸಂಪಾದಕೀಯ

ಕರ್ನಾಟಕ ಇತಿಹಾಸ ಅಕಾದೆಮಿಯು ಸ್ಥಾಪಿತವಾಗಿ ೩೫ನೇ ವರ್ಷಕ್ಕೆ ಕಾಲಿಡುತ್ತಿದೆ. ಅಕಾದೆಮಿಯ ಪ್ರಮುಖ ಕಾರ್ಯಕ್ರಮಗಳಲ್ಲಿ ಇತಿಹಾಸ ಸಮ್ಮೇಳನವೂ ಒಂದು. ಈಗಾಗಲೇ ೩೪ ಸಮ್ಮೇಳನಗಳನ್ನು ಯಶಸ್ವಿಯಾಗಿ ನಡೆಸಿದ ಕೀರ್ತಿಯನ್ನು ಅಕಾದೆಮಿ ಹೊಂದಿದೆ. ಈ ಸಮ್ಮೇಳನಗಳಲ್ಲಿ ಸದಸ್ಯರುಗಳು ಮಂಡಿಸಿದ ಸಂಶೋಧನಾ ಲೇಖನಗಳ ಗುಚ್ಚವೇ "ಇತಿಹಾಸ ದರ್ಶನ"ವಾಗಿದೆ ಪ್ರಸ್ತುತ ಸಂಪುಟವು ೩೬ನೆಯ ಸಂಪುಟವಾಗಿದೆ. ಈವರೆಗಿನ ಎಲ್ಲಾ ಸಂಪುಟಗಳೂ, ಕರ್ನಾಟಕದ ಇತಿಹಾಸ ಮತ್ತು ಸಂಸ್ಕೃತಿ ಕಟ್ಟುವಲ್ಲಿ ಪ್ರಮುಖ ಆಕರ ಸಂಪುಟಗಳೆಂದೇ ವಿದ್ವಾಂಸರಿಂದ ಮನ್ನಣೆ ಪಡೆದಿದೆ.

ಕಳೆದೆರಡು ಸಾಲಿನಲ್ಲಿ ಅಂದರೆ ೨೦೨೦ ಮತ್ತು ೨೦೨೧ನೇ ಸಾಲಿನಲ್ಲಿ ದೇಶದಲ್ಲಿ ಹಬ್ಬಿದ ಮಹಾಮಾರಿ ಕೋವಿಡ್-೧೯ ಕಾಯಿಲೆಯು ಪ್ರಪಂಚವನ್ನೇ ತಲ್ಲಣಗೊಳಿಸಿದೆ. ಜನಜೀವನವನ್ನು ಅಲ್ಲೋಲಕಲ್ಲೋಲವಾಗಿಸಿದೆ. ಯಾವ ದೇಶವೂ ಇದರಿಂದ ಹೊರತಾಗಿಲ್ಲ. ಕೆಲವು ಅಕಾದೆಮಿಯ ಸದಸ್ಯರೂ ಕೋವಿಡ್‌ನಿಂದ ನಮ್ಮನ್ನಗಲಿದ್ದಾರೆ. ಸರ್ಕಾರವು ಜನರಿಗೆ ಎರಡು ಬಾರಿ ಕೋವಿಡ್ ವ್ಯಾಕ್ಸಿನ್ ನೀಡಿದ್ದರಿಂದ ಪ್ರಸ್ತುತ ದಿನಗಳಲ್ಲಿ ಸಾವು ನೋವುಗಳು ಕಡಿಮೆಯಾಗಿದೆ. ಆದರೆ ಕಳೆದುಹೋದ ಜನರ ಜೀವನಮಟ್ಟ ಸುಧಾರಿಸಲು ಸಾಕಷ್ಟು ವರ್ಷಗಳೇ ಬೇಕಾಗಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ಇತಿಹಾಸ ಅಕಾದೆಮಿಯ ೩೪ನೇ ಸಮ್ಮೇಳನವನ್ನು ದಿನಾಂಕ : ೨೪.೧೨.೨೦೨೧ ರಿಂದ ೨೮-೧೨-೨೯೨೧ರವರೆಗೆ, ಬೆಂಗಳೂರಿನ ಅಕಾದೆಮಿಯ ಕಛೇರಿಯಲ್ಲಿ ಸಮ್ಮೇಳನ ಉದ್ಘಾಟನೆ ಹಾಗೂ ಮೂರು ದಿನಗಳ ಗೋಷ್ಠಿಗಳನ್ನು ಆನ್‌ಲೈನ್ ಮೂಲಕ (ಅಂತರ್ಜಾಲ) ಹಮ್ಮಿಕೊಳ್ಳಲಾಗಿತ್ತು. ಇದು ನಾಡಿನಲ್ಲೇ ಯಶಸ್ವೀ ಪ್ರಯೋಗವಾಗಿದೆ. ಗೋಷ್ಠಿಗಳಲ್ಲಿ ಸದಸ್ಯರುಗಳು ಅವರಿರುವ ಸ್ಥಳದಿಂದಲೇ ಒಟ್ಟು ೧೨೦ ಪ್ರಬಂಧಗಳನ್ನು ಮಂಡಿಸಿ ಯಶಸ್ವಿಗೊಳಿಸಿದ್ದಾರೆ.

ಈ ಇತಿಹಾಸ ದರ್ಶನ ಸಂಪುಟ ೩೬ರಲ್ಲಿ ಒಟ್ಟು ತೊಂಬತ್ತೊಂದು ಲೇಖನಗಳಿದ್ದು ಪ್ರಮುಖ ಆಕರ ಗ್ರಂಥವಾಗಿ ಪ್ರಕಟಣೆಗೊಂಡಿದೆ. ಕರ್ನಾಟಕ ಇತಿಹಾಸ ಅಕಾದೆಮಿಯು ಈ ಮೂಲಕ ತನ್ನ ಅಸ್ತಿತ್ವದೊಂದಿಗೆ ನಾಡಿನ ಸಂಸ್ಕೃತಿ ಮತ್ತು ಇತಿಹಾಸ ಜ್ಞಾನ ವಿಕಾಸವನ್ನು ನಾಡಿನಲ್ಲಿ ವಿಸ್ತರಿಸಿದೆ. ಇದಕ್ಕೆ ಕಾರಣವಾಗಿದ್ದು, ಅನೇಕ ಮಠಮಾನ್ಯಗಳು, ಸಂಘ ಸಂಸ್ಥೆಗಳು, ಸರ್ಕಾರದ ಇಲಾಖೆಗಳು. ಮುಖ್ಯವಾಗಿ ಅಕಾದೆಮಿಯ ಸದಸ್ಯರುಗಳು ವಾರ್ಷಿಕ ಸಮ್ಮೇಳನದಲ್ಲಿ ಕರ್ನಾಟಕ ಇತಿಹಾಸ, ಸಂಸ್ಕೃತಿಗೆ ಸಂಬಂಧಿಸಿದಂತೆ ತಮ್ಮ ಸಂಶೋಧನಾ ಪ್ರಬಂಧಗಳನ್ನು ಮಂಡಿಸಿದ್ದಾರೆ. ಈ ಪ್ರಬಂಧಗಳು ಇತಿಹಾಸ ದರ್ಶನ ಸಂಪಾದಕ ಮಂಡಳಿ ಮೂಲಕ ಸಂಪಾದಿತಗೊಂಡು ಪ್ರಸ್ತುತ ೩೬ನೇ ಸಂಪುಟವಾಗಿ ಅಕಾದೆಮಿಯಿಂದ ಹೊರಬಂದಿದೆ.

ಅಕಾದೆಮಿಯು ಮೂವತ್ತೈದನೆಯ ವರ್ಷಕ್ಕೆ ಕಾಲಿಡುತ್ತಿರುವುದು ಸಣ್ಣ ಸಾಧನೆ ಅಲ್ಲ. ಕೇವಲ ವಿದ್ವಾಂಸರಿಗಷ್ಟೇ ಅಲ್ಲದೆ ಸಾಮಾನ್ಯ ಆಸಕ್ತಿಯ ಸಂಶೋಧಕರನ್ನೂ ಬೆಳೆಸುವ ಧ್ಯೇಯೋದ್ದೇಶದೊಂದಿಗೆ ಯಶಸ್ವಿಯಾಗಿದೆ. ಸಾಕಷ್ಟು ಯುವ ಸಂಶೋಧಕರನ್ನು ರೂಪಿಸಿದೆ. ಆಸಕ್ತ ಸಂಶೋಧಕರಿಗೆ ನಾಡಿನಲ್ಲಿ ಏಕಮಾತ್ರ ಸಂಸ್ಥೆಯಾಗಿ ಅವರನ್ನು ಹುರಿದುಂಬಿಸಿದೆ. ಈ ಮೂಲಕ ಸಾಕಷ್ಟು ಕೊಡುಗೆ ನಾಡಿಗೆ ದಕ್ಕಿದೆ. ಸಂಶೋಧನೆಯಲ್ಲಿ ಸಣ್ಣಪುಟ್ಟ ಕುಂದು ಕೊರತೆಗಳಿದ್ದರೂ ಹೊಸ ಮಾಹಿತಿ ಹಾಗೂ ಹೊಸ ವಿಚಾರಗಳನ್ನು ತಿಳಿಸಿವೆ. ಮುಂದಿನ ಪ್ರಮುಖ ಸಂಶೋಧನೆಗಳಿಗೆ ಮೆಟ್ಟಿಲುಗಳಾಗಿವೆ ಎಂಬುದರಲ್ಲಿ ಎರಡು ಮಾತಿಲ್ಲ. ಪ್ರಸ್ತುತ ಕನ್ನಡ ನಾಡಿನ ಇತಿಹಾಸ ಸಂಸ್ಕೃತಿಗೆ ಸಂಬಂಧಿಸಿದ ಸಂಶೋಧನೆಗಳನ್ನು ಮಾಡುವ ಸಂಶೋಧಕರು ಆಕರವಾದ 'ಇತಿಹಾಸ ದರ್ಶನ' ಸಂಪುಟಗಳನ್ನು ಗಮನಿಸದಿದ್ದಲ್ಲಿ ಆ ಸಂಶೋಧನೆಯು ಪರಿಪೂರ್ಣವಲ್ಲ ಎನ್ನುವಷ್ಟರ ಮಟ್ಟಿಗೆ ಇತಿಹಾಸ ದರ್ಶನ ಪ್ರಮುಖ ಆಕರ ಸಂಪುಟವಾಗಿ ಹೊರಬಂದಿವೆ.

ಇತಿಹಾಸ ದರ್ಶನ ೪೬ನೇ ಸಂಪುಟವು, ೪೫ನೇ ವಾರ್ಷಿಕ ಸಮ್ಮೇಳನ (ದಿನಾಂಕ: ೧೨.೨೦೨೧ ರಿಂದ ೨೮.೧೨.೨೦೨೧) ದಲ್ಲಿ ಮಂಡಿಸಿದ ಸಂಶೋಧನಾ ಪ್ರಬಂಧಗಳ ಸಂಪಾದಿತ ಆಕರವಾಗಿದೆ. ಇದರಲ್ಲಿ ಒಟ್ಟು ೯೧ ಪ್ರಬಂಧಗಳಿವೆ. ಇಲ್ಲಿನ ಕೆಲವು ಲೇಖನಗಳು ಹೆಚ್ಚಿನ ಅಧ್ಯಯನಕ್ಕೆ ಒಳಗಾಗಿ ವಿಮರ್ಶೆಯಾಗಬೇಕಿದೆ. ಕೆಲವೆಡೆ ಅಧ್ಯಯನ ಹಾಗೂ ಕ್ಷೇತ್ರ ಕಾರ್ಯದ ಕೊರತೆ ಎದ್ದುಕಾಣುತ್ತಿದೆ. ಯುವ ಸಂಶೋಧಕರು ಹಿಂದೆ ನಡೆದ ಸಂಶೋಧನೆಯನ್ನು ಗಮನಿಸದೆ ಉದ್ವೇಗ ಮತ್ತು ಆವೇಶದಲ್ಲಿ ವಿಷಯ ಮಂಡನೆ ಮಾಡಿದಂತಿದೆ. ಹಾಗೆಯೇ ಸಂಶೋಧನೆಯ ವಿಷಯ, ವಿಧಾನ, ನಿರೂಪಣೆಗಳ ವಿಧಿ-ವಿಧಾನಗಳನ್ನು ತಿಳಿದುಕೊಳ್ಳಬೇಕಾದ ಅವಶ್ಯಕತೆ ಕಾಣುತ್ತಿದೆ. ಈ ದಿಕ್ಕಿನತ್ತ ಗಮನ ಹರಿಸಲೇಬೇಕು ಇಲ್ಲದಿದ್ದಲ್ಲಿ ಸಂಶೋಧನೆಯು ದಾರಿ ತಪ್ಪುವ ಸಾಧ್ಯತೆ ಖಂಡಿತಾ ಇದೆ. ಒಟ್ಟಾರೆಯಾಗಿ, ಬೇರೆ ಬೇರೆ ಕ್ಷೇತ್ರದ ಯುವ ಸಂಶೋಧಕರು ಆಸಕ್ತಿಯಿಂದ ತೊಡಗಿಸಿಕೊಳ್ಳುತ್ತಿರುವುದು ಮತ್ತು ಹೊಸ ಮಾಧ್ಯಮಗಳ ಮೂಲಕ ನಾಡಿನ ಇತಿಹಾಸ ಮತ್ತು ಸಂಸ್ಕೃತಿಗೆ ಹೊಸ ಕೊಡುಗೆಗಳು ದೊರೆಯುವ ಸಾಧ್ಯತೆ ಆಶಾದಾಯಕವಾಗಿದೆ.

ಈ ಸಂಪುಟಕ್ಕೆ ರಂಭಾಪುರಿ ವೀರಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ ೧೦೦೮ ಜಗದ್ಗುರು ಶ್ರೀಮದ್ ಪ್ರಸನ್ನ ರೇಣುಕ ವೀರಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದರು ಬಾಳೆಹೊನ್ನೂರು, ಇವರು ೨೦೦೫ರಿಂದ ವಾರ್ಷಿಕ ಇಪ್ಪತ್ತೈದು ಸಾವಿರ ರೂಪಾಯಿಗಳ ನೆರವು ನೀಡುತ್ತಾ ಬಂದಿದ್ದಾರೆ. ಶ್ರೀಗಳ ಆಶೀರ್ವಾದದಿಂದ ಸಂಪುಟವು ಶಕ್ತಿಯುತವಾಗಿ ಆಕರ್ಷಿತವಾಗಿ ಹೊರಬರುತ್ತಿದೆ. ಇವರಲ್ಲದೆ ಶಿವಯೋಗಿ ಮಂದಿರದ ಅಧ್ಯಕ್ಷರೂ, ಹೊಸಪೇಟೆಯ ಕೊಟ್ಟೂರು ಮಠದ ಸಂಗನಬಸವ ಮಹಾಸ್ವಾಮಿಗಳು ರೂ. ೧,೦೦,೦೦೦ ನೀಡಿ ಆಶೀರ್ವದಿಸಿದ್ದಾರೆ. ಕರ್ನಾಟಕ ರಾಜ್ಯ ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯು ರೂ. ೬,೦೦,೦೦೦ ಗಳನ್ನು ನೀಡಿದೆ. ಇವರುಗಳ ಸಹಕಾರ, ಸಹಾಯದಿಂದ ಇತಿಹಾಸ ದರ್ಶನ ಸಂಪುಟಗಳು ವರ್ಷದಿಂದ ವರ್ಷಕ್ಕೆ ಗಾತ್ರ ಹಾಗೂ ಗುಣಮಟ್ಟವನ್ನು ಕಾಪಾಡಿಕೊಂಡು ಬರಲು ಕಾರಣವಾಗಿದೆ. ಅಕಾದೆಮಿಯ ಇತರೆ ಕಾರ್ಯಕ್ರಮಗಳು ಕೂಡಾ ಯಶಸ್ವಿಯಾಗಲು ಸಹಕಾರಿಯಾಗಿದೆ. ಈ ಹಿಂದಿನಂತೆ ಸಹೃದಯ ವಿದ್ವತ್ ವಲಯ ಈ ಸಂಪುಟವನ್ನು ಎಂದಿನಂತೆ ಆದರದಿಂದ ಬರಮಾಡಿಕೊಳ್ಳುವರೆಂದು ಆಶಿಸುತ್ತೇವೆ.

ಇತಿಹಾಸ ದರ್ಶನದ ಈವರೆಗಿನ ೪೫ ಸಂಪುಟಗಳಲ್ಲಿನ ಎಲ್ಲಾ ಸಂಶೋಧನಾ ಪ್ರಬಂಧಗಳನ್ನು ಅಕಾದೆಮಿಯ WEBSITE ನಲ್ಲಿ ನೋಡಬಹುದಾಗಿದೆ. ಈ ಲೇಖನಗಳು ರಾಷ್ಟ್ರೀಯ ಅಂತರಾಷ್ಟ್ರೀಯ ಮಟ್ಟದಲ್ಲೂ ಚರ್ಚೆಯಾಗುತ್ತಿವೆ. ನೂರಾರು ಸಂಶೋಧಕರು ಹಾಗೂ ಸಂಸ್ಕೃತಿ ಚಿಂತಕರು ಇದನ್ನು ಬಳಸಿಕೊಳ್ಳುತ್ತಿರುವುದು ಸಂತೋಷದಾಯಕ. ಆದರೆ ಆಕರವನ್ನು ಪಡೆದ ಮೂಲದ ಬಗ್ಗೆ ಸ್ಮರಿಸದಿರುವುದು ಮತ್ತು ಸಣ್ಣದೊಂದು ಕೃತಜ್ಞತೆ ಹೇಳದಿರುವುದು ವಿಷಾದಕರ.

ಇತಿಹಾಸ ದರ್ಶನ ಸಂಪುಟ ೪೬ ಹೊರಬರಲು ಸಹಕಾರ ನೀಡಿದ ಕರ್ನಾಟಕ ಇತಿಹಾಸ ಅಕಾದೆಮಿಯ ಕಾರ್ಯಕಾರಿ ಸಮಿತಿ ಹಾಗೂ ಲೇಖನಗಳನ್ನು ಇಮೇಲ್‌ನಿಂದ ಸಂಕಲಿಸಿಕೊಟ್ಟ, ಡಾ. ಸಂಧ್ಯಾ ವಿ., ಶ್ರೀಮತಿ ಸೀತಾಲಕ್ಷ್ಮೀ ರಾವ್, ಶ್ರೀ ರೇಣುಕಾಸ್ವಾಮಿ ಒಡೆಯರ್ ಬಿ.ಈ., ನಮ್ಮೊಂದಿಗೆ ಕೆಲಸಗಳಲ್ಲಿ ಸಹಕರಿಸಿದ ಶ್ರೀ ಗುರುಪ್ರಸಾದ್ ಬಿ.ಎಸ್., ಶ್ರೀಮತಿ ನಿರ್ಮಲಾ ಎಸ್.ವೈ., ಮುಖಪುಟವನ್ನು ಅಂದವಾಗಿ ರಚಿಸಿಕೊಟ್ಟ ಶ್ರೀ ಶ್ರೀನಿವಾಸ್ ಟಿ. ಅಂದವಾಗಿ ಮುದ್ರಿಸಿದ ಲಕ್ಷ್ಮೀ ಮುದ್ರಣಾಲಯದ ಶ್ರೀ ಕೆ.ಎಸ್. ಮಂಜು ಅವರಿಗೂ, ಡಿಟಿಪಿ ಮಾಡಿ ಚಿತ್ರಗಳನ್ನು ಸಂಯೋಜಿಸಿದ ಪಿ.ಎಸ್. ಸುಬ್ರಮಣಿ ಬಾಬು ಮತ್ತು ಶ್ರೀಮತಿ ಮಾಲಾ ಎಂ., ವಿ.ಎಸ್. ಪ್ರಸನ್ನಕುಮಾರ್ ಹಾಗೂ ಸಿಬ್ಬಂದಿ ವರ್ಗಕ್ಕೂ ನಮ್ಮ ಕೃತಜ್ಞತೆಗಳು.

೦೮.೦೨.೨೦೨೨
ಮಂಗಳವಾರ, ರಥಸಪ್ತಮಿ
ಬೆಂಗಳೂರು.

ದೇವರಕೊಂಡಾರೆಡ್ಡಿ
ದೇವರಾಜಸ್ವಾಮಿ ಜಿ.ಕೆ.

ಪರಿವಿಡಿ

ಕರ್ನಾಟಕ ಇತಿಹಾಸ ಅಕಾದೆಮಿಯ ವಾರ್ಷಿಕ ಅಧಿವೇಶನಗಳ ಸರ್ವಾಧ್ಯಕ್ಷರು

ಸರ್ವಾಧ್ಯಕ್ಷರು, ದಿನಾಂಕ-ವರ್ಷ/ಸ್ಥಳ, ಆಶ್ರಯ/ಸಹಯೋಗ

೧. **ಡಾ|| ಎಂ. ಚಿದಾನಂದಮೂರ್ತಿ**
೧೫-೧೭ ಮೇ ೧೯೮೭
ಕರ್ನಾಟಕ ಇತಿಹಾಸ ಅಕಾದೆಮಿ
ಬೆಂಗಳೂರು

೨. **ಡಾ|| ಜಿ. ಎಸ್. ಗಾಯಿ**
೨೩-೨೪ ಅಕ್ಟೋಬರ್ ೧೯೮೮
ಸಿದ್ಧಗಂಗಾಕ್ಷೇತ್ರ : ಡಾ| ಶಿವಕುಮಾರ
ಸ್ವಾಮಿಗಳು ಮತ್ತು ತುಮಕೂರು ಜಿಲ್ಲಾ
ಇತಿಹಾಸ ಪರಿಷತ್ತು, ತುಮಕೂರು

೩. **ಡಾ|| ಶ್ರೀನಿವಾಸ ರಿತ್ತಿ**
೧೦-೧೧ ಜೂನ್ ೧೯೮೯
ಶ್ರೀ ಮ. ನಿ. ಪ್ರ. ಜ|| ಡಾ|| ತೋಂಟದ
ಸಿದ್ಧಲಿಂಗ ಮಹಾಸ್ವಾಮಿಗಳು,
ಶ್ರೀ ತೋಂಟದಾರ್ಯ ಮಠದ
ವೀರಶೈವ ಅಧ್ಯಯನ ಸಂಸ್ಥೆ, ಗದಗ

೪. **ಡಾ|| ಎಸ್. ಆರ್. ರಾವ್**
೨೧-೨೨ ಜುಲೈ ೧೯೯೦
ಡಾ|| ಸದ್ಯೋಜಾತ ಶಿವಾಚಾರ್ಯ
ಸ್ವಾಮೀಜಿ, ಹಿರೇಮಠ, ದಾವಣಗೆರೆ

೫. **ಡಾ|| ಬಾ. ರಾ. ಗೋಪಾಲ್**
೧೨-೧೪ ಜುಲೈ ೧೯೯೧
ಚಿನ್ಮೂ ಲಾದ್ರಿ ಶ್ರೀ ಮುರುಘ
ರಾಜೇಂದ್ರ ಬೃಹನ್ಮ ಠ, ಚಿತ್ರದುರ್ಗ

೬. **ಡಾ|| ಕೆ. ವಿ. ರಮೇಶ್**
೧೧-೧೩ ಜುಲೈ ೧೯೯೨
ಪಂಡಿತ್ ತಾರಾನಾಥ ಶಿಕ್ಷಣ ಸಂಸ್ಥೆ
ರಾಯಚೂರು

೭. **ಡಾ|| ಅ. ಸುಂದರ**
೨೩-೨೫ ಜುಲೈ ೧೯೯೩
ಸುತ್ತೂರು ಮಠದ ಶ್ರೀ ಶ್ರೀ ಶಿವರಾತ್ರಿ
ದೇಶಿಕೇಂದ್ರ ಮಹಾಸ್ವಾಮಿಗಳು
ಜೆ. ಎಸ್. ಎಸ್. ಸಂಸ್ಥೆ, ಮೈಸೂರು

೮. **ಡಾ|| ಎಂ. ಎಂ. ಕಲಬುರ್ಗಿ**
೯-೧೦ ಜುಲೈ ೧೯೯೪
ಶ್ರೀ ಎಂ. ವೈ. ಘೋರ್ಪಡೆ
ಕರ್ನಾಟಕ ಸೇವಾ ಸಂಘ
ಸೊಂಡೂರು

೯. **ಡಾ|| ಎ.ವಿ. ನರಸಿಂಹಮೂರ್ತಿ**
೯-೧೧ ಸೆಪ್ಟೆಂಬರ್ ೧೯೯೫
ಶ್ರೀ ಮ. ನಿ. ಪ್ರ. ಸಿದ್ಧರಾಮ
ಮಹಾಸ್ವಾಮಿಗಳು - ಶ್ರೀ ನಾಗನೂರು
ರುದ್ರಾಕ್ಷಿಮಠದ ವೀರಶೈವ ಅಧ್ಯಯನ ಅಕಾದೆಮಿ
ಬೆಳಗಾವಿ

೧೦. **ಡಾ|| ಜಿ. ಎಸ್. ದೀಕ್ಷಿತ್**
೭-೯ ಜೂನ್ ೧೯೯೬
ಕರ್ನಾಟಕ ವಿಶ್ವವಿದ್ಯಾಲಯ ಮತ್ತು
ಶ್ರೀ ಮ. ನಿ. ಪ್ರ. ಶಿವಯೋಗಿ
ಮಹಾಸ್ವಾಮಿಗಳು ಶ್ರೀ ಮುರುಘಾಮಠ
ಧಾರವಾಡ

೧೧. **ಪ್ರೊ|| ಕೆ. ಅಭಿಶಂಕರ್**
೨೫-೨೭ ಅಕ್ಟೋಬರ್ ೧೯೯೭
ಶ್ರೀ ಸೋಂದಾ ಸ್ವರ್ಣವಲ್ಲಿ ಮಹಾಸಂಸ್ಥಾನ ಮಠ
ಹಾಗೂ ಸರ್ವಜ್ಞೇಂದ್ರ ಸರಸ್ವತೀ ಪ್ರತಿಷ್ಠಾನ
ಶಿರಸಿ

೧೨. **ಡಾ|| ಎಸ್. ನಾಗರಾಜು**
೧೪-೧೬ ನವೆಂಬರ್ ೧೯೯೮
ಕರ್ನಾಟಕ ಇತಿಹಾಸ ಅಕಾದೆಮಿ
ದಿ ಮಿಥಿಕ್ ಸೊಸೈಟಿ, ಬೆಂಗಳೂರು

೧೩. **ಡಾ|| ಶ್ರೀನಿವಾಸ ಹಾವನೂರ**
೧೧-೧೩ ಜೂನ್ ೧೯೯೯
ಮಾನ್ಯ ಸಚಿವ ಶ್ರೀ ಡಿ. ನಾರಾಯಣದಾಸ್
ಮತ್ತು ಆಯೋಜಕರಾದ ಶ್ರೀ ಕುಂ.ಬಾ.ಸದಾಶಿವಪ್ಪ
ಸ್ವಾಗತ ಸಮಿತಿ, ಹರಪನಹಳ್ಳಿ

೧೪. **ಶ್ರೀ ಸಿ. ಟಿ. ಎಂ. ಕೊಟ್ರಯ್ಯ**
೮-೧೦ ಜುಲೈ ೨೦೦೦
ಕನ್ನಡ ವಿಶ್ವವಿದ್ಯಾಲಯ
ವಿದ್ಯಾರಣ್ಯ
ಹಂಪಿ

೧೫. **ಡಾ|| ಜ್ಯೋತ್ಸ್ನಾ ಕಾಮತ್**
೧೩-೧೫ ಅಕ್ಟೋಬರ್ ೨೦೦೧
ಪೂಜ್ಯ ಶ್ರೀ ವಿಶ್ವೇಶ್ವರ ತೀರ್ಥ ಪಾದಂಗಳು
ಪೇಜಾವರ ಮಠಾಧೀಶರು, ಉಡುಪಿ

೧೬. **ಡಾ. ಎ.ಕೆ. ಶಾಸ್ತ್ರಿ**
೨೨-೨೪ ಸೆಪ್ಟೆಂಬರ್ ೨೦೦೨
ಪೂಜ್ಯಶ್ರೀ ರಾಘವೇಶ್ವರ ಭಾರತೀ ಸ್ವಾಮಿಗಳು
ಶ್ರೀ ರಾಮಚಂದ್ರಾಪುರ ಮಠ
ಹೊಸನಗರ

೧೭. **ಡಾ. ಎಸ್. ರಾಜಶೇಖರ್**
೧೩-೧೫ ಸೆಪ್ಟೆಂಬರ್ ೨೦೦೩
ವಿಶ್ವಚೇತನ ಸಂಸ್ಥೆ
ಬಾದಾಮಿ

೧೮. **ಶ್ರೀ ಕೆಳದಿ ಗುಂಡಾ ಜೋಯಿಸ್**
೨೪-೨೬ ಸೆಪ್ಟೆಂಬರ್ ೨೦೦೪
ಶ್ರೀ ಚನ್ನಪ್ಪಸ್ವಾಮಿ ವಿದ್ಯಾಪೀಠ
ಚನ್ನ-ಚೇತನ ಪ್ರಕಾಶನ ಮತ್ತು ಹಿರೇಕಲ್ಮ ಠ
ಹೊನ್ನಾಳಿ

೧೯. **ಡಾ. ಬಿ.ವ್ಹಿ. ಶಿರೂರ**
೧೧-೧೩ ಸೆಪ್ಟೆಂಬರ್ ೨೦೦೫
ಶ್ರೀ ಕೊತ್ತಲ ಬಸವೇಶ್ವರ
ಭಾರತೀಯ ಶಿಕ್ಷಣ ಸಂಸ್ಥೆ, ಸೇಡಂ

೨೦. **ಡಾ. ಸೂರ್ಯನಾಥ ಕಾಮತ್**
೯-೧೧ ಸೆಪ್ಟೆಂಬರ್ ೨೦೦೬
ಶ್ರೀ ರಾಘವೇಂದ್ರ ಸ್ವಾಮಿಗಳ ಮಠ
ನಂಜನಗೂಡು

೨೧. **ಪ್ರೊ. ಲಕ್ಷ್ಮಣ್ ತೆಲಗಾವಿ**
೮-೧೦ ಸೆಪ್ಟೆಂಬರ್ ೨೦೦೭
ಹಗರಿಬೊಮ್ಮನಹಳ್ಳಿಯ
ರಾಮನಗರ, ಹಗರಿಬೊಮ್ಮನಹಳ್ಳಿ
ಶ್ರೀರಾಮ ಯುವಕ ಸಂಘ

೨೨. **ಡಾ. ವಸುಂಧರಾ ಫಿಲಿಯೋಜಾ**
೧೮-೨೧ ಸೆಪ್ಟೆಂಬರ್ ೨೦೦೮
ಧರ್ಮಸ್ಥಳ ಮಂಜುನಾಥೇಶ್ವರ
ದೇವಾಲಯ ಸಂಸ್ಥೆ, ಧರ್ಮಸ್ಥಳ

೨೩. **ಡಾ. ಎಂ.ಜಿ. ನಾಗರಾಜ್**
೧೦-೧೨ ಅಕ್ಟೋಬರ್ ೨೦೦೯
ಶ್ರೀ ಜಗದ್ಗುರು ರಂಭಾಪುರಿ
ವೀರ ಸಿಂಹಾಸನ ಮಹಾಸಂಸ್ಥಾನ ಪೀಠ
ಬಾಳೆಹೊನ್ನೂರು

೨೪. **ಡಾ. ಎಂ.ಎಸ್. ಕೃಷ್ಣಮೂರ್ತಿ**
೧೩-೧೫ ನವೆಂಬರ್ ೨೦೧೦
ಶ್ರೀ ಆದಿಚುಂಚನಗಿರಿ
ಆದಿಚುಂಚನಗಿರಿ ಮಹಾ ಸಂಸ್ಥಾನ ಮಠ

೨೫. **ಡಾ. ಎಚ್.ಎಸ್. ಗೋಪಾಲರಾವ್**
೯-೧೧ ಸೆಪ್ಟೆಂಬರ್ ೨೦೧೧
ದಿ ಮಿಥಿಕ್ ಸೊಸೈಟಿ
ಬೆಂಗಳೂರು

೨೬. **ಡಾ. ಎಸ್.ವಿ. ವೆಂಕಟೇಶಯ್ಯ**
೨೨-೨೪ ಸೆಪ್ಟೆಂಬರ್ ೨೦೧೨
ದಕ್ಷಿಣಾಮ್ನಾಯ ಶ್ರೀ ಶಾರದಾ ಪೀಠಮ್
ಶೃಂಗೇರಿ

೨೭. **ಡಾ. ಎಸ್.ಕೆ. ಜೋಷಿ**
೨೧-೨೩ ಸೆಪ್ಟೆಂಬರ್ ೨೦೧೩
ದಿ ಮಿಥಿಕ್ ಸೊಸೈಟಿ
ಬೆಂಗಳೂರು

೨೮. **ಡಾ. ಕೆ.ಜಿ. ವಸಂತ ಮಾಧವ**
೨೬-೨೮ ಸೆಪ್ಟೆಂಬರ್ ೨೦೧೪
ಮೂಲ್ಕಿ ಸುಂದರರಾಮಶೆಟ್ಟಿ ಕಾಲೇಜು
ಶಿರ್ವ, ಉಡುಪಿ ಜಿಲ್ಲೆ
ಉಡುಪಿ

೨೯. **ನಾಡೋಜ ಪ್ರೊ. ಹಂಪ ನಾಗರಾಜಯ್ಯ**
೨೯-೩೧ ಅಕ್ಟೋಬರ್ ೨೦೧೫
ಕರ್ನಾಟಕ ಸಂಘ (ರಿ.) ಮಂಡ್ಯ
ಮಂಡ್ಯ ಜಿಲ್ಲೆ


೩೦. **ಪ್ರೊ. ಕೆ. ಪದ್ದಯ್ಯ**
೨೨-೨೪ ಅಕ್ಟೋಬರ್ ೨೦೧೬
ಕನ್ನಡ ಸಂಶೋಧನಾ ಸಂಸ್ಥೆ
ಕರ್ನಾಟಕ ವಿ.ವಿ., ಧಾರವಾಡ

೩೧. **ಡಾ. ಪಿ.ಎನ್. ನರಸಿಂಹಮೂರ್ತಿ**
೨೮-೩೦ ಅಕ್ಟೋಬರ್ ೨೦೧೭
ಎಸ್.ಜಿ.ವ್ಹಿ.ವ್ಹಿ. ಟ್ರಸ್ಟ್‌ನ
ಶ್ರೀ ಗವಿಸಿದ್ದೇಶ್ವರ ಪದವಿ ಮಹಾವಿದ್ಯಾಲಯ
ಮತ್ತು ಶ್ರೀ ಬಿ.ಸಿ. ಪಾಟೀಲ ಟ್ರಸ್ಟ್
ಕೊಪ್ಪಳ

೩೨. **ಡಾ. ಬಿ. ರಾಜಶೇಖರಪ್ಪ**
೨೬-೨೮ ಅಕ್ಟೋಬರ್ ೨೦೧೮
ಶ್ರೀಮದ್ವೀರಶೈವ ಶಿವಯೋಗಮಂದಿರ
ಸಂಸ್ಥೆ, ಶಿವಯೋಗಮಂದಿರ, ಬಾದಾಮಿ
ತಾಲ್ಲೂಕು, ಬಾಗಲಕೋಟೆ ಜಿಲ್ಲೆ

೩೩. **ಡಾ. ಟಿ.ವಿ. ವೆಂಕಟಚಾಲಶಾಸ್ತ್ರೀ**
೧೮-೨೦ ಅಕ್ಟೋಬರ್ ೨೦೧೯
ಶ್ರೀ ಹೊಂಬುಜ ಜೈನಮಠ, ಹುಂಚ,
ಹೊಸನಗರ ತಾ॥ ಶಿವಮೊಗ್ಗ ಜಿಲ್ಲೆ.

೩೪. **ಶ್ರೀ ಸೀತಾರಾಮ್ ಜಾಗೀರ್‌ದಾರ್**
೨೪-೨೮ ಡಿಸೆಂಬರ್ ೨೦೨೦
ಬೆಂಗಳೂರು.



೩೫. **ಡಾ. ಗುರುಮೂರ್ತಿ ಪೆಂಡಕೂರು**
೧೯-೨೧ ಫೆಬ್ರವರಿ ೨೦೨೨
ಬೆಂಗಳೂರು.



ಡಾ. ಬಾ.ರಾ. ಗೋಪಾಲ್ ಶಾಸನ ದತ್ತಿ ಪ್ರಶಸ್ತಿ ಸನ್ಮಾನಿತರು

[ಪ್ರಾರಂಭ : ೨೦೦೧ ರಿಂದ ನಗದು ಹತ್ತು ಸಾವಿರ ರೂಪಾಯಿಗಳು]

೧ ***ಡಾ. ಕೆ.ವಿ. ರಮೇಶ***
೧೫ನೇ ವಾರ್ಷಿಕ ಸಮ್ಮೇಳನ
ಅಕ್ಟೋಬರ್ ೨೦೦೧
ಉಡುಪಿ

೨ ***ಡಾ. ಶ್ರೀನಿವಾಸ ರಿತ್ತಿ***
೧೬ನೇ ವಾರ್ಷಿಕ ಸಮ್ಮೇಳನ
ಸೆಪ್ಟಂಬರ್ ೨೦೦೨
ಹೊಸನಗರ

೩ ***ಡಾ. ದೇವರಕೊಂಡಾರೆಡ್ಡಿ***
೧೭ನೇ ವಾರ್ಷಿಕ ಸಮ್ಮೇಳನ
ಸೆಪ್ಟಂಬರ್ ೨೦೦೩
ಬಾದಾಮಿ

೪ ***ಡಾ. ಬಿ. ರಾಜಶೇಖರಪ್ಪ***
೧೮ನೇ ಸಮ್ಮೇಳನ
ಸೆಪ್ಟಂಬರ್ ೨೦೦೪
ಹೊನ್ನಾಳಿ

೫ ***ಡಾ. ಕೆ.ಆರ್. ಗಣೇಶ್***
೧೯ನೇ ಸಮ್ಮೇಳನ
ಸೆಪ್ಟಂಬರ್ ೨೦೦೫
ಸೇಡಂ

೬ ***ಡಾ. ಎಂ.ಜಿ. ನಾಗರಾಜ್***
೨೦ನೇ ಸಮ್ಮೇಳನ
ಸೆಪ್ಟೆಂಬರ್ ೨೦೦೬
ನಂಜನಗೂಡು

೭ ***ಡಾ. ಎಚ್.ಎಸ್. ಗೋಪಾಲರಾವ್***
೨೧ನೇ ಸಮ್ಮೇಳನ
ಸೆಪ್ಟೆಂಬರ್ ೨೦೦೭
ಹಗರಿಬೊಮ್ಮನಹಳ್ಳಿ

೮ ***ಡಾ. ಪಿ.ಎನ್. ನರಸಿಂಹಮೂರ್ತಿ***
೨೨ನೇ ಸಮ್ಮೇಳನ
ಸೆಪ್ಟೆಂಬರ್ ೨೦೦೮
ಧರ್ಮಸ್ಥಳ

೯ ***ಶ್ರೀಮತಿ ಹನುಮಾಕ್ಷಿ ಗೋಗಿ***
೨೩ನೇ ಸಮ್ಮೇಳನ
ಅಕ್ಟೋಬರ್ ೨೦೦೯
ಬಾಳೇಹೊನ್ನೂರು

೧೦ ***ಡಾ. ಪಿ.ವಿ. ಕೃಷ್ಣಮೂರ್ತಿ***
೨೪ನೇ ಸಮ್ಮೇಳನ
ನವೆಂಬರ್ ೨೦೧೦
ಆದಿಚುಂಚನಗಿರಿ

೧೧ ***ಶ್ರೀ ಕೆ. ಮೊಹಮ್ಮದ್ ಶರೀಫ್***
೨೫ನೇ ಸಮ್ಮೇಳನ
ಸೆಪ್ಟೆಂಬರ್ ೨೦೧೧
ಬೆಂಗಳೂರು

೧೨ ***ಶ್ರೀ ಸೀತಾರಾಮ್ ಜಾಗೀರ್‌ದಾರ್***
೨೬ನೇ ಸಮ್ಮೇಳನ
ಸೆಪ್ಟೆಂಬರ್ ೨೦೧೨
ಶೃಂಗೇರಿ

೧೩ ***ಡಾ. ಆರ್. ಶೇಷಶಾಸ್ತ್ರಿ***
೨೭ನೇ ಸಮ್ಮೇಳನ
ಸೆಪ್ಟೆಂಬರ್ ೨೦೧೩
ಬೆಂಗಳೂರು

೧೪ ***ಶ್ರೀ ಎಚ್.ಎಂ. ನಾಗರಾಜರಾವ್***
೨೮ನೇ ಸಮ್ಮೇಳನ
ಸೆಪ್ಟೆಂಬರ್ ೨೦೧೪
ಶಿರ್ವ, ಉಡುಪಿ ಜಿಲ್ಲೆ.

೧೫ ***ಡಾ. ಡಿ.ವಿ. ಪರಮಶಿವಮೂರ್ತಿ***
೨೯ನೇ ಸಮ್ಮೇಳನ
ಅಕ್ಟೋಬರ್ ೨೦೧೫
ಮಂಡ್ಯ

೧೬ ***ಡಾ. ಎಸ್.ವಿ. ಪಾಡಿಗರ್***
೩೦ನೇ ಸಮ್ಮೇಳನ
ಅಕ್ಟೋಬರ್ ೨೦೧೬
ಕ.ವಿ.ವಿ., ಧಾರವಾಡ

೧೭ ***ಡಾ. ಎಂ.ಜಿ. ಮಂಜುನಾಥ್***
೩೧ನೇ ಸಮ್ಮೇಳನ
ಅಕ್ಟೋಬರ್ ೨೦೧೭
ಗವಿಮಠ, ಕೊಪ್ಪಳ

೧೮ ***ಶ್ರೀ ಆನಂದ ಎಸ್. ಕುಂಬಾರ***
೩೨ನೇ ಸಮ್ಮೇಳನ
ಅಕ್ಟೋಬರ್ ೨೦೧೮
ಶಿವಯೋಗಮಂದಿರ, ಬಾದಾಮಿ

೧೯ ***ಡಾ. ಜಿ.ಎಂ. ನಾಗಯ್ಯ***
೩೩ನೇ ಸಮ್ಮೇಳನ
ಅಕ್ಟೋಬರ್ ೨೦೧೯
ಶ್ರೀ ಹೊಂಬುಜ ಶಿವಮೊಗ್ಗ ಜಿಲ್ಲೆ.

೨೦ ***ಪ್ರೊ. ಜಿ.ಎನ್. ಉಪಾಧ್ಯ***
೩೪ನೇ ಸಮ್ಮೇಳನ – ೨೦೨೦
ಬೆಂಗಳೂರು



೨೧ ***ಡಾ. ಕೃಷ್ಣವೇಣಿ***
೩೫ನೇ ಸಮ್ಮೇಳನ – ೨೦೨೧
ಬೆಂಗಳೂರು



ಶ್ರೇಷ್ಠ ಇತಿಹಾಸತಜ್ಞರಿಗಾಗಿ ಬೈಸಾನಿ ರುಕ್ಮಣಮ್ಮ ರತ್ನಂಶೆಟ್ಟಿ ಕುಟುಂಬದ ಸೇವಾ ಟ್ರಸ್ಟ್‌ನ ಸನ್ಮಾನ್ಯ
ಶ್ರೀಮತಿ ವರಲಕ್ಷ್ಮೀ ಮತ್ತು ಶ್ರೀ ಅಶೋಕ್‌ಕುಮಾರ್ ಅವರು ಸ್ಥಾಪಿಸಿರುವ

"ಇತಿಹಾಸ ಸಂಸ್ಕೃತಿಶ್ರೀ" ಪ್ರಶಸ್ತಿ

[ಪ್ರಾರಂಭ : ೨೦೧೨ ರಿಂದ ನಗದು ಒಂದು ಲಕ್ಷ ರೂಪಾಯಿಗಳು]

೧. **ಪ್ರೊ. ಲಕ್ಷ್ಮಣ್ ತೆಲಗಾವಿ**
ಃ೨೬ನೆಯ ಸಮ್ಮೇಳನ
೨೨.೦೯.೨೦೧೨, ಶೃಂಗೇರಿ

೨. **ಡಾ. ಸೂರ್ಯನಾಥ ಕಾಮತ್**
೨೭ನೆಯ ಸಮ್ಮೇಳನ
೨೧.೦೯.೨೦೧೩, ಬೆಂಗಳೂರು

೩. **ಡಾ. ಅ. ಸುಂದರ**
೨೮ನೆಯ ಸಮ್ಮೇಳನ
೨೬.೦೯.೨೦೧೪, ಶಿರ್ವ, ಉಡುಪಿ.


೪. **ಡಾ. ಎಂ.ಜಿ. ನಾಗರಾಜ್**
೨೯ನೆಯ ಸಮ್ಮೇಳನ
೨೯.೧೦.೨೦೧೫, ಮಂಡ್ಯ

೫. **ಡಾ. ಎಸ್. ರಾಜಶೇಖರ್**
೩೦ನೆಯ ಸಮ್ಮೇಳನ
೨೨.೧೦.೨೦೧೬, ಧಾರವಾಡ


೬. **ಡಾ. ಶ್ರೀನಿವಾಸ ರಿತ್ತಿ**
೩೧ನೆಯ ಸಮ್ಮೇಳನ
೨೮.೧೦.೨೦೧೭, ಕೊಪ್ಪಳ

೭. **ಡಾ. ಕೆಳದಿ ಗುಂಡಾಜೋಯಿಸ್**
೩೨ನೆಯ ಸಮ್ಮೇಳನ
೨೬.೧೦.೨೦೧೮, ಬಾದಾಮಿ

೮. **ಡಾ. ವಸುಂಧರಾ ಫಿಲಿಯೋಜ**
೩೩ನೆಯ ಸಮ್ಮೇಳನ
೧೮.೧೦.೨೦೧೯, ಹೊಂಬುಜ



೯. **ಡಾ. ರಾಜರಾಮ ಹೆಗಡೆ**
೩೪ನೆಯ ಸಮ್ಮೇಳನ – ೨೦೨೦
ಬೆಂಗಳೂರು



೧೦. **ಡಾ. ಪಿ.ವಿ. ಕೃಷ್ಣಮೂರ್ತಿ**
೩೫ನೆಯ ಸಮ್ಮೇಳನ – ೨೦೨೧
ಬೆಂಗಳೂರು

ಮೇಲಣ ಮಠದ ಲಿಂ. ಶ್ರೀ ವೇ.ಎಸ್. ಸಿದ್ದಣ್ಣಯ್ಯ ಮತ್ತು ಲಿಂ. ಶ್ರೀಮತಿ ಗಂಗಮ್ಮ ಸ್ಮಾರಕ ಟ್ರಸ್ಟ್ (ರಿ). ಅರಸೀಕೆರೆ, ಇವರು ಸ್ಥಾಪಿಸಿರುವ

"ನೊಳಂಬಶ್ರೀ" ಪ್ರಶಸ್ತಿ

[ಪ್ರಾರಂಭ : ೨೦೧೫ ರಿಂದ, ನಗದು ಹತ್ತು ಸಾವಿರ ರೂಪಾಯಿಗಳು]

೧. **ಡಾ. ಎಂ.ಎಸ್. ಕೃಷ್ಣಮೂರ್ತಿ**
ರ್೯ನೆಯ ಸಮ್ಮೇಳನ
ರ್೯.೧೦.೨೦೧೫, ಮಂಡ್ಯ


೨. **ಡಾ. ಎಚ್. ಜಯಮ್ಮ ಕರಿಯಣ್ಣ**
೩೦ನೆಯ ಸಮ್ಮೇಳನ
೨೨.೧೦.೨೦೧೬, ಧಾರವಾಡ

೩. **ಪ್ರೊ. ಕೆ.ಆರ್. ಬಸವರಾಜು**
೩೧ನೆಯ ಸಮ್ಮೇಳನ
೨೮.೧೦.೨೦೧೭, ಕೊಪ್ಪಳ


೪. **ಡಾ. ಬಿ. ನಂಜುಂಡ ಸ್ವಾಮಿ**
೩೨ನೆಯ ಸಮ್ಮೇಳನ
೨೬.೧೦.೨೦೧೮, ಬಾದಾಮಿ

೫. **ಡಾ. ಡಿ.ವಿ. ಪರಮಶಿವಮೂರ್ತಿ**
೩೩ನೆಯ ಸಮ್ಮೇಳನ
೧೮.೧೦.೨೦೧೯, ಹೊಂಬುಜ

೬. **ಡಾ. ಸುಂಕಂ ಗೋವರ್ಧನ**
೩೪ನೆಯ ಸಮ್ಮೇಳನ – ೨೦೨೦
ಬೆಂಗಳೂರು



೭. **ಡಾ. ಎನ್. ನಂದೀಶ್ವರ**
೩೫ನೆಯ ಸಮ್ಮೇಳನ – ೨೦೨೧
ಬೆಂಗಳೂರು



ಶ್ರೀಮತಿ ವಿ. ಗೌರಮ್ಮ, ಗಂಗಾಧರಯ್ಯ ಇವರ ಹೆಸರಿನಲ್ಲಿ ಅವರ ಮಕ್ಕಳಾದ
ಡಾ. ಎಂ.ಜಿ. ನಾಗರಾಜ್, ಶ್ರೀಮತಿ ಪದ್ಮ ವಿರೂಪಾಕ್ಷಯ್ಯ ಮತ್ತು ಡಾ. ಎಂ.ಜಿ. ಚಂದ್ರಕಾಂತ್ ಇವರುಗಳು
ಸ್ಥಾಪಿಸಿರುವ

"ಸಂಶೋಧನಶ್ರೀ" ಪ್ರಶಸ್ತಿ

[ಪ್ರಾರಂಭ : ೨೦೧೬ ರಿಂದ, ನಗದು ಇಪ್ಪತ್ತೈದು ಸಾವಿರ ರೂಪಾಯಿಗಳು]


೧. **ಡಾ. ಬಿ. ರಾಜಶೇಖರಪ್ಪ**
೩೦ನೆಯ ಸಮ್ಮೇಳನ
೨೨.೧೦.೨೦೧೬, ಧಾರವಾಡ

೨. **ಪ್ರೊ. ಲಕ್ಷ್ಮಣ್ ತೆಲಗಾವಿ**
೩೧ನೆಯ ಸಮ್ಮೇಳನ
೨೮.೧೦.೨೦೧೭, ಕೊಪ್ಪಳ

೩. **ಡಾ. ಕೆ. ಬಿ. ಶಿವತಾರಕ್**
೩೨ನೆಯ ಸಮ್ಮೇಳನ
೨೬.೧೦.೨೦೧೮, ಬಾದಾಮಿ

೪. **ಡಾ. ಶೀಲಾಕಾಂತ ಪತ್ತಾರ್**
೩೩ನೆಯ ಸಮ್ಮೇಳನ
೧೮.೧೦.೨೦೧೯, ಹೊಂಬುಜ

೫. **ಡಾ. ಕೆ. ರವೀಂದ್ರನಾಥ**
೩೪ನೆಯ ಸಮ್ಮೇಳನ – ೨೦೨೦
ಬೆಂಗಳೂರು



೬. **ಡಾ. ಮೀನಾಕ್ಷಿ ಎಂ.ಎಂ.**
೩೫ನೆಯ ಸಮ್ಮೇಳನ – ೨೦೨೧
ಬೆಂಗಳೂರು



ಪ್ರೊ. ಲಕ್ಷ್ಮಣ್ ತೆಲಗಾವಿ ಅವರ ಹೆಸರಿನಲ್ಲಿ ಸ್ಥಾಪಿತವಾಗಿರುವ

"ನಾಯಕ ಶ್ರೀ" ಪ್ರಶಸ್ತಿ

[ಪ್ರಾರಂಭ : ೨೦೧೭ ರಿಂದ, ನಗದು ಹದಿನೈದು ಸಾವಿರ ರೂಪಾಯಿಗಳು]

೧. **ಡಾ. ಸಿ.ಆರ್. ಶಾಮಲ, ಮುಂಬೈ**
೩೧ನೆಯ ಸಮ್ಮೇಳನ
೨೮.೧೦.೨೦೧೭, ಕೊಪ್ಪಳ

೨. **ಡಾ. ಡಿ.ಎನ್. ಯೋಗೀಶ್ವರಪ್ಪ**
೩೨ನೆಯ ಸಮ್ಮೇಳನ
೨೬.೧೦.೨೦೧೮, ಬಾದಾಮಿ

೩. **ಡಾ. ವಿರೂಪಾಕ್ಷಿ ಪೂಜಾರಹಳ್ಳಿ**
೩೩ನೆಯ ಸಮ್ಮೇಳನ
೧೮.೧೦.೨೦೧೯, ಹೊಂಬುಜ

೪. **ಡಾ. ಮೀರಾಸಾಬಿಹಳ್ಳಿ ಶಿವಣ್ಣ**
೩೪ನೆಯ ಸಮ್ಮೇಳನ – ೨೦೨೦
ಬೆಂಗಳೂರು



೫. **ಡಾ. ಅಮರೇಶ ಯತಗಲ್**
೩೫ನೆಯ ಸಮ್ಮೇಳನ – ೨೦೨೧
ಬೆಂಗಳೂರು



ಡಾ. ಸಿ.ಆರ್. ಶ್ಯಾಮಲ ಅವರು ಸ್ಥಾಪಿಸಿರುವ

ಡಾ ಶ್ರೀನಿವಾಸ್ ಹಾವನೂರ ಸ್ಮರಣಾರ್ಥ ಪ್ರಶಸ್ತಿ

[ಪ್ರಾರಂಭ : ೨೦೧೮ರಿಂದ, ನಗದು ಹತ್ತು ಸಾವಿರ ರೂಪಾಯಿಗಳು – ಸ್ಮಾರಕಗಳ ಸಂಶೋಧನೆ / ಆ ವರ್ಷ ಪ್ರಕಟವಾದ ಸಂಶೋಧನಾ ಕೃತಿಗೆ]

೧. **ಡಾ. ಬೆಂ. ಶಾ. ಶ್ಯಾಮಲಾ ರತ್ನಕುಮಾರಿ**
೩೨ನೆಯ ಸಮ್ಮೇಳನ
೨೬.೧೦.೨೦೧೮, ಬಾದಾಮಿ

೨. **ಡಾ. ಕೆ. ವಸಂತಲಕ್ಷ್ಮಿ**
೩೩ನೆಯ ಸಮ್ಮೇಳನ
೧೮.೧೦.೨೦೧೯, ಹೊಂಬುಜ

೩. **ಡಾ. ಕೂ.ಸ. ಅಪರ್ಣ**
೩೪ನೆಯ ಸಮ್ಮೇಳನ – ೨೦೨೦
ಬೆಂಗಳೂರು



೪. **ಡಾ. ಎಸ್.ಕೆ. ಅರುಣಿ**
೩೫ನೆಯ ಸಮ್ಮೇಳನ – ೨೦೨೧
ಬೆಂಗಳೂರು



ಬಿ.ಸಿ. ಪಾಟೀಲ ಟ್ರಸ್ಟ್, ಕೊಪ್ಪಳ, ಇವರು ಸಂಶೋಧಕಿಯರಿಗೆ ನೀಡುವ

ಸುಮಂಗಲಾ ಪಾಟೀಲ ಪ್ರಶಸ್ತಿ


[ಪ್ರಾರಂಭ : ೨೦೧೮ರಿಂದ, ನಗದು ಹತ್ತು ಸಾವಿರ ರೂಪಾಯಿಗಳು]

೧. **ಶ್ರೀಮತಿ ಸೀತಾಲಕ್ಷ್ಮೀರಾವ್**
೩೧ನೆಯ ಸಮ್ಮೇಳನ
೨೮.೧೦.೨೦೧೭, ಕೊಪ್ಪಳ

೨. **ಡಾ. ಸ್ಮಿತಾ ಸುರೇಬಾನಕರ್**
೩೨ನೆಯ ಸಮ್ಮೇಳನ
೨೬.೧೦.೨೦೧೮, ಬಾದಾಮಿ

೩. **ಡಾ. ಸಿದ್ಧಲಿಂಗಮ್ಮ**
೩೩ನೆಯ ಸಮ್ಮೇಳನ
೧೮.೧೦.೨೦೧೯, ಹೊಂಬುಜ

೪. **ಡಾ. ಎಚ್.ಎಸ್. ಉಷಾರಾಣಿ**
೩೪ನೆಯ ಸಮ್ಮೇಳನ, ೨೦೨೦,
ಬೆಂಗಳೂರು



೫. **ಡಾ. ವಿ. ಶೋಭಾ**
೩೫ನೆಯ ಸಮ್ಮೇಳನ, ೨೦೨೧
ಬೆಂಗಳೂರು



ಡಾ. ಸೂರ್ಯನಾಥ ಯು. ಕಾಮತ್ ಅವರ ಹೆಸರಿನಲ್ಲಿ ಸ್ಥಾಪಿಸಿರುವ

ಸೂರ್ಯಕೀರ್ತಿ ಪ್ರಶಸ್ತಿ

[ಪ್ರಾರಂಭ : ೨೦೧೮ರಿಂದ, ನಗದು ಹತ್ತು ಸಾವಿರ ರೂಪಾಯಿಗಳು – ಇತಿಹಾಸ ಸಂಶೋಧಕರಿಗೆ]

೧. ಡಾ. ಎಚ್. ಚಂದ್ರಶೇಖರ್ ಎಚ್.
೩೨ನೆಯ ಸಮ್ಮೇಳನ
೨೬.೧೦.೨೦೧೮, ಬಾದಾಮಿ

೨. ಶ್ರೀ ಎಂ.ಬಿ. ಪಾಟೀಲ
೩೩ನೆಯ ಸಮ್ಮೇಳನ
೧೮.೧೦.೨೦೧೯, ಹೊಂಬುಜ

೩. ಶ್ರೀ ಎಸ್. ರಾಜೇಂದ್ರಪ್ಪ
೩೪ನೆಯ ಸಮ್ಮೇಳನ, ೨೦೨೦
ಬೆಂಗಳೂರು



೪. ಶ್ರೀ ಎಂ. ನಿತ್ಯಾನಂದ ಪೈ
೩೫ನೆಯ ಸಮ್ಮೇಳನ, ೨೦೨೧
ಬೆಂಗಳೂರು



ಪ್ರೊ. ಕೆ. ಪದ್ದಯ್ಯ : ಡೆಕ್ಕನ್ ಕಾಲೇಜು, ಪುಣೆ ಇವರು ಸ್ಥಾಪಿಸಿರುವ

ಡಾ. ಎಂ.ಎಚ್. ಕೃಷ್ಣ ಮೆರಿಟ್ ಅವಾರ್ಡ್

[ಪ್ರಾರಂಭ: ೨೦೧೭ರಿಂದ, ನಗದು ಎರಡು ಸಾವಿರ ರೂಪಾಯಿಗಳು – ಪ್ರಾಗೈತಿಹಾಸಿಕ ಸಂಶೋಧನ ಲೇಖನಕ್ಕೆ]

೧. ಡಾ. ಎಸ್.ವೈ. ಸೋಮಶೇಖರ್
೩೧ನೆಯ ಸಮ್ಮೇಳನ
೨೮.೧೦.೨೦೧೭, ಕೊಪ್ಪಳ

೨. ಶ್ರೀ ಕೆ. ರೇವಣಸಿದ್ಧಯ್ಯ
೩೨ನೆಯ ಸಮ್ಮೇಳನ
೨೬.೧೦.೨೦೧೮, ಬಾದಾಮಿ

೩. ಡಾ. ಮೋಹನ ಆರ್.
೩೩ನೆಯ ಸಮ್ಮೇಳನ
೧೮.೧೦.೨೦೧೯, ಹೊಂಬುಜ

೪. ಶ್ರೀ ಬಿ.ಈ. ರೇಣುಕಾಸ್ವಾಮಿ ಒಡೆಯರ್
೩೪ನೆಯ ಸಮ್ಮೇಳನ
೨೦೨೦, ಬೆಂಗಳೂರು



ಡಾ. ಬಿ.ಎಸ್. ಶ್ಯಾಮಲ ರತ್ನಕುಮಾರಿ ಅವರು ಸ್ಥಾಪಿಸಿರುವ

ಡಾ ಪ್ರತಿಭಾ ಚಿಣ್ಣಪ್ಪ ಸ್ಮರಣಾರ್ಥ ಪ್ರಶಸ್ತಿ

[ಪ್ರಾರಂಭ : ೨೦೨೧ರಿಂದ, ನಗದು ಹತ್ತು ಸಾವಿರ ರೂಪಾಯಿಗಳು]



೧. **ಡಾ. ಮಲ್ಲಿಕಾರ್ಜುನ ಸಿ. ಬಾಗೋಡಿ**
೩೩ನೆಯ ಸಮ್ಮೇಳನ
೨೦೨೧

ಡಾ. ದೇವರಕೊಂಡಾರೆಡ್ಡಿ ಅವರ ಅಭಿನಂದನಾ ಸಮಿತಿಯು ಸ್ಥಾಪಿಸಿರುವ ದತ್ತಿಯಿಂದ ಬರುವ ಬಡ್ಡಿಯಲ್ಲಿ ಕರ್ನಾಟಕ ಇತಿಹಾಸ ಅಕಾದೆಮಿಯ

ಅಂತರ್ಜಾಲ ನಿರ್ವಹಣೆ

[ಪ್ರಾರಂಭ : ೨೦೧೬ರಿಂದ, ಒಂದು ಲಕ್ಷ ಹತ್ತು ಸಾವಿರ ರೂಪಾಯಿಗಳು]

ಪ್ರೊ. ಲಕ್ಷ್ಮಣ್ ತೆಲಗಾವಿ ಅವರು ಸ್ಥಾಪಿಸಿರುವ

ಇತಿಹಾಸ ಸಂಶೋಧನ ಪ್ರಸಕ್ತ
ಹಲ್ಲೂರು ಶ್ರೀನಿವಾಸ ಜೋಯಿಸ ಸ್ಮಾರಕ ಅತ್ಯುತ್ತಮ ಗ್ರಂಥ ಪ್ರಶಸ್ತಿ

[ಪ್ರಾರಂಭ : ೨೦೨೦ರಿಂದ, ನಗದು ಹತ್ತು ಸಾವಿರ ರೂಪಾಯಿಗಳು]



೧. **ಡಾ. ಎಸ್. ಗುರುಮೂರ್ತಿ**
ಙಲನೆಯ ಸಮ್ಮೇಳನ – ೨೦೨೦
ಬೆಂಗಳೂರು
ಕದಂಬರು: ಸಮಗ್ರ ಅವಲೋಕನ



೨. **ಡಾ. ಎಸ್. ಗಂಗಾಂಬಿಕೆ**
ಙಙನೆಯ ಸಮ್ಮೇಳನ – ೨೦೨೧
ಬೆಂಗಳೂರು
ಕೆಂಪೇಗೌಡರು ಮತ್ತು ಅವರ ವಂಶೀಯರು

ಕರ್ನಾಟಕ ಇತಿಹಾಸ ಅಕಾದೆಮಿ ೩೪ನೆಯ ವಾರ್ಷಿಕ ಸಮ್ಮೇಳನ

ಸಮ್ಮೇಳನಾಧ್ಯಕ್ಷರು : ಸೀತಾರಾಮ ಜಾಗೀರ್‌ದಾರ್

ಅಧ್ಯಕ್ಷೀಯ ಭಾಷಣ

ಸಹೃದಯ ಇತಿಹಾಸ ಪ್ರಿಯ ಸೋದರ ಸೋದರಿಯರೆ, ನೀವೆಲ್ಲರು ಚೆನ್ನಾಗಿ ಬಲ್ಲಿರಿ COVID-19 ಪ್ರಪಂಚವನ್ನೇ ತತ್ತರಿಸಿರುವುದು. ಸುಮಾರು ಒಂದು ವರ್ಷದಿಂದ, ಮಾರ್ಚ್ ೨೦ರಲ್ಲಿಯ ಘೋಷಣೆ ನಮ್ಮ ದೇಶದಲ್ಲಿ ಎಲ್ಲದಕ್ಕೂ ಬೀಗಮುದ್ರೆಯನ್ನು ಜಡಿದಿತು; Lock-down ಕಾಲದಲ್ಲಿ ಏನನ್ನು ಮಾಡಬಹುದು? ಎಲ್ಲರೂ ಎಲ್ಲಿ ಎಲ್ಲಿ ಇದ್ದಾರೆಯೊ ಅಲ್ಲೇ ಸುಖದಿಂದ–ಆರಾಮಾಗಿ–ಇದ್ದರೆ ಸಾಕೆಂದು ಹಂಬಲಿಸುವ ಕಾಲ. ಮುಖಕ್ಕೆ ಮುಸುಕು (Mask) ಕೈಗೆ ಗ್ಲೌಜು ಹಾಕಿಕೊಂಡು ಮನುಷ್ಯ ಏನು ಕೆಲಸ ಮಾಡಬಹುದು? ನಾಲ್ಕು ಜನ ಒಂದಷ್ಟು ಕಾಲ ಒಂದೆಡೆ ಸೇರುವಂತೆಯೂ ಇದ್ದಿಲ್ಲ. ಏನೆಲ್ಲ ಮಾತುಗಳು ದೂರವಾಣಿಯಲ್ಲೇ ಜರುಗಬೇಕು. ಪತ್ರ ವ್ಯವಹಾರ ಕೂಡ ಒಂದಷ್ಟು ಕಾಲ ಸ್ಥಗಿತಗೊಂಡಿತ್ತು; ಇನ್ನೂ ಚೇತರಿಸಿಕೊಂಡಿಲ್ಲ. ಎಷ್ಟು ದಿವಸ ಹೀಗೆ ಕೈಕಟ್ಟಿಕೊಂಡು ಕೂಡಲು ಆಗುತ್ತದೆ? ಸ್ನೇಹಿತರು ಈ ವರ್ಷ ಇತಿಹಾಸ ಅಕಾಡೆಮಿ ವಾರ್ಷಿಕೋತ್ಸವ ಆಚರಿಸದೇ ಇರಬಾರದೆಂದು ಆಚರಿಸುತ್ತಿದ್ದೇವೆ. ನಮಗೆಲ್ಲರಿಗೂ ಗೊತ್ತಿದೆ.

ಮುತ್ತಿರುವುದಿಂದು ಭೂಮಿಯನೊಂದು ದುರ್ದೈವ ।
ಮೃತ್ಯು ಕುಣಿಯುತಲಿಹನು ಕೇಕೆ ಹಾಕುತಲಿ ॥
ಸುತ್ತಿಪುದು ತಲೆಯನನುದಿನದ ಲೋಕವಾರ್ತೆ ।
ಎತ್ತಲಿದಕೆಲ್ಲ ಕಡೆ? –ಮಂಕುತಿಮ್ಮ ॥

ಮಂಕುತಿಮ್ಮನ ಹಾಗೆ ನಾವೂ ಕಂಗಾಲಾಗಿದ್ದೇವೆ, ಆದರೆ ಹೀಗೇ ಕೈಕಟ್ಟಿ ಎಷ್ಟು ದಿವಸ ಕೂಡಲು ಸಾಧ್ಯ? ಮಾನವ ಮನಸ್ಸು, ಮರಳಿ ಯತ್ನವ ಮಾಡು ಎನ್ನುವ ಮನಸ್ಸು ಸ್ನೇಹಿತರಿಗೆ ಏನೋ ಚೇತನಶಕ್ತಿಯನ್ನು ನೀಡಿದೆ. ಅವರೊಂದಿಗೆ ನಾನೂ ನನ್ನ ಅಳಿಲುಶಕ್ತಿ–ಉಡತಾಭಕ್ತಿಯನ್ನು–ಇಲ್ಲಿ ಬೆರಸಿ ನಿಮ್ಮ ಮುಂದೆ ನಿಂತಿದ್ದೇನೆ. ಅಳಿಲು ಎಷ್ಟು ಮಳಲನ್ನು ತಂದೀತು? ಮುಂದಿರುವುದು ಮಹಾಸಾಗರ; ಬದುಕು ಒಂದು ಹೋರಾಟ ಈಗ ನಮ್ಮ ಮುಂದೆ ಹಲವಾರು ಆಕ್ರಮಣಗಳಿವೆ. ಅವೆಲ್ಲವನ್ನೂ ದೇಶ ಎದುರಿಸಬೇಕಾಗಿದೆ.

ಬದುಕೊಂದು ಕದನವೆಂದಂಜಿ ಬಿಟ್ಟೋಡುವನು ।
ಬಿದಿಯ ಬಾಯಿಗೆ ಕವಳವಾಗದುಳಿಯಯುವನೆ? ॥
ಎದೆಯನುಕ್ಕಾಗಿಸುತ, ಮತಿಗದೆಯ ಪಿಡಿದು, ನೀ–।
ನೆದುರು ನಿಲೆ ಬಿದಿಯೊಲಿವ –ಮಂಕುತಿಮ್ಮ ॥

ಕರ್ನಾಟಕ ಎಂದ ಕೂಡಲೆ ಇತಿಹಾಸ ಹಾಗೂ ಭಾಷೆಗಳ ವಿದ್ಯಾರ್ಥಿಯಾದ ನನಗೆ ಎರಡು ಸಂಗತಿಗಳು ಎದುರು ನಿಲ್ಲುತ್ತವೆ ಒಂದು ಭಾಷೆಯ ಗಡಿಗೆರೆಗಳು ಮತ್ತು ಸಾಮ್ರಾಜ್ಯದ ಗಡಿಗೆರೆಗಳು ಭಾಷೆಯ ವ್ಯಾಪ್ತಿ ಕವಿರಾಜಮಾರ್ಗ್ಗದ ಪ್ರಕಾರ ಕಾವೇರೀ ತೀರದಿಂದ ಗೋದಾವರೀ ತೀರದವರೆಗೆ–

ಕಾವೇರಿಯಿಂದಮಾಗೋ
ದಾವರಿವರಮಿರ್ದ್ದ ನಾಡದಾ ಕನ್ನಡದೊಳ್ ।
ಭಾವಿಸಿದ ಜನಪದಂ ವಸು
ಧಾವಳಯವಿಲೀನ ವಿಶದ ವಿಷಯ ವಿಶೇಷಂ ॥[೧]

ಇನ್ನು ಸಾಮ್ರಾಜ್ಯದ ಸೀಮೆಗಳನ್ನು ಸುಮಾರು ಇದೇ ಕಾಲದ ಗ್ರಂಥ 'ಶಕ್ತಿಸಂಗಮ ತಂತ್ರ' ಹೀಗೆ ನಿರ್ದೇಶಿಸಿದೆ–

✷ ನಂ. ೮೦೩, ಬಿ-೧, 'ಕಲ್ಪ', ಸರಸ್ವತಿಪುರಂ, ಮೈಸೂರು-೫೭೦೦೦೯, ಮೊ. ೯೫೫೫೧ ೩೯೫೧೩

ರಾಮನಾಥಪುರಮ್ ಸಮಾರಾಭ್ಯ ವಂಗಾಂ ಕಿಲೇಶ್ವರೀ
ಕರ್ಣ್ಣಾಟದೇಶೋ ದೇವೇಶಿ ಸಾಮ್ರಾಜ್ಯ ಭೋಗದಾಯಕಃ ॥ (ಪಟಲ-೭)[೨]

ತಮಿಳುನಾಡಿನ ರಾಮನಾಥಪುರಂ ಪ್ರದೇಶದಿಂದ ಉತ್ತರದಲ್ಲಿ ಬಂಗಾಲ ಪ್ರಾಂತದವರೆಗೆ, ಅಲ್ಲಲ್ಲ ನೇಪಾಲ ದೇಶದವರೆಗೆ ಚಾಚಿಕೊಂಡಿತ್ತು. ನೇಪಾಲದಲ್ಲಿರುವ ಪಶುಪತಿನಾಥ ತನ್ನ ಪ್ರಭಾವವನ್ನು ಕರ್ನಾಟಕದ ಜನತೆಯ ಮೇಲೆ ಬಹಳ ಹಿಂದಿನ ಕಾಲದಿಂದಲೇ ಎಂದರೆ ಕದಂಬರ ಕಾಲದಲ್ಲೇ ಬೀರಿದ್ದ ಸಂಗತಿಯು ಷಿಕಾರಿಪುರ ತಾಲೂಕಿನ ತಾಳಗುಂದ ಗ್ರಾಮದ ಪ್ರಣವೇಶ್ವರ ದೇವಾಲಯದ ಗರ್ಭಗುಡಿಯ ದ್ವಾರದ ಚೌಕಟ್ಟಿನ ಎಂದರೆ ಬಾಗಿಲ್ವಾಡದಲ್ಲಿರುವ (Inscription on the door jamb of Pranavesvara temple sanctum) ಶಾಸನದಿಂದ ಸ್ಪಷ್ಟವಿದೆ. ಪ್ರಣವೇಶ್ವರ ದೇವಾಲಯ ವಾಸ್ತವದಲ್ಲಿ ಪಶುಪತಿನಾಥನ ದೇವಾಲಯ:

ಸ್ವಸ್ತಿ[॥] ಮೂರ್ಧ್ನಿನ್ಯಸ್ತಂ ಶಶಿನಮಸಕಲಂ
ಗಙ್ಗೌಸಙ್ಗೌಚ್ಛಿಶಿರತರಕರಂ[।]
ಯೋ ವೈದಗ್ಧ್ಯಾದ್ವಹತಿ[ಸಲಿಲ-
- - - -] ಜಯಂತಿ ಪಶುಪತಿಃ ॥[೩]

[ಮೌಳಿಯಲ್ಲಿ ಕೊಂಬುಚಂದ್ರ (<ಅಪೂರ್ಣ ಕಲೆಗಳ ಚಂದ್ರ)ನನ್ನು ಧರಿಸಿದ, ಯಾರು ಗಂಗೆಯ ಸಾನಿಧ್ಯದಿಂದ ಶೀತಕಿರಣಗಳನ್ನು ಹೊಂದಿರುವನೊ, ಮತ್ತೆ ವೈದಗ್ಧತೆಯಿಂದ (ವಿವೇಚನೆಯಿಂದ) ನೀರು ಹರಿಯಲು ಕಾರಣನಾದ ಪಶುಪತಿ ಜಯತಿ(ಗೆಲ್ಲಲಿ)]

ಭ್ರಮರವಿಲಸಿತ(ಮಭನಲಗ) ವೃತ್ತ ಬಂಧದ ಛಂದದಲ್ಲಿ ಇರುವ ಈ ಸ್ತುತಿ ಕರ್ನಾಟಕ ಹಾಗೂ ನೇಪಾಲ ಪ್ರದೇಶಗಳ ಸಾಂಸ್ಕೃತಿಕ ಸಂಬಂಧವನ್ನು ಸೂಚಿಸಿದರೆ, ಮಧ್ಯಪ್ರದೇಶದ ಬಸ್ತರ ಅರಣ್ಯಪ್ರದೇಶದಲ್ಲಿ ಇರುವ ಸಿಂದರ ರಾಜಮನೆತನದ, ಬಂಗಾಲದ ಸೇನರಾಜ ಮನೆತನ (ಲಕ್ಷ್ಮಣಸೇನನಿಂದ ಸ್ಥಾಪಿತವಾಯಿತು) ನೇಪಾಲದ ಅಂಚಿನಲ್ಲಿರುವ ಮಿಥಿಲೆಯ ನಾನ್ಯದೇವನ ರಾಜಮನೆತನ ಹಾಗೂ ನೇಪಾಲದ 'ಮಲ್ಲ' ಅರಸು ಮನೆತನಗಳು ಕರ್ನಾಟಕದ ಸಾಮ್ರಾಜ್ಯದ ಸೀಮಾರೇಖೆಗಳನ್ನು ಗುರುತಿಸುತ್ತವೆ; ವ್ಯಾಪ್ತಿಯನ್ನು ತಿಳಿಸುತ್ತವೆ. ಕಲ್ಯಾಣದ ಚಾಳುಕ್ಯ ಚಕ್ರವರ್ತಿ ಆರನೆಯ ವಿಕ್ರಮಾದಿತ್ಯ ವಿಷ್ಣುವರ್ಧನ ಅತ್ತ ಉತ್ತರದಲ್ಲಿ ನೇಪಾಲ ಇತ್ತ ದಕ್ಷಿಣದಲ್ಲಿ ಶ್ರೀಲಂಕಾದವರೆಗೆ ಚಕ್ರವರ್ತಿಯಾಗಿ ರಾಜ್ಯವನ್ನು ೫೦ ವರ್ಷ ಆಳಿದನು. (೧೦೭೬-೧೧೨೬/೨೭-ಶಾ.ಶ.೯೯೮ ನಳ ಸಂವತ್ಸರದಿಂದ ಶಾ.ಶ. ೧೧೨೬/೨೭ ಪ್ರಭವ ಸಂವತ್ಸರದವರೆಗೆ), ಇಬ್ಬರು ಶಿಲಾಬಾಲಕಿಯರು - ಸಾಲಭಂಜಿಕೆಯರು- ಶಾಸನ ಬರೆದು ಸಾರುತ್ತ ನಿಂತಿದ್ದಾರೆ :

(೧) ಬೀದರ ಜಿಲ್ಲೆಯ ಜಲಸಂಗವಿಗ್ರಾಮದ ದೇವಾಲಯದ ಭಿತ್ತಿಯಲ್ಲಿ -

ಸಪ್ತದ್ವೀಪೋದರೀಭೂತಂ ಭೂತಲಂ ಸ್ವೀಕರಿಷ್ಯತಿ
ಚಲುಕ್ಯೋ ವಿಕ್ರಮಾದಿತ್ಯಃ ಸಪ್ತಮೋ ವಿಷ್ಣುವರ್ಧನಃ ॥

[ಸಪ್ತದ್ವೀಪಗಳನ್ನು ಹೊಂದಿದ ಭೂಪ್ರದೇಶವನ್ನು (ಅಳಲು) ಏಳನೆಯ ವಿಷ್ಣುವರ್ಧನನಾದ ಚಲುಕ್ಯ ವಿಕ್ರಮಾದಿತ್ಯನು ಸ್ವೀಕರಿಸಿದನು.]

(೨) ಬೀಡಜಿಲ್ಲೆಯ (ಈಗ ಮಹಾರಾಷ್ಟ್ರ ಪ್ರದೇಶ) ಮೋಮಿನಾಬಾದ್ ತಾಲೂಕಿನ ಧರ್ಮಪುರಿ ಗ್ರಾಮದ ಕೇದಾರೇಶ್ವರ ದೇವಸ್ಥಾನದಲ್ಲಿ-

@ಸುರಶೈಳಂಗೆತ್ತು ನಾರಾಯಣ ಸೆಳೆಯಮನುತ್ಸಾಹದಿಂದೇಜೆ ತದ್ವಿ ।
ಸ್ತರಸಾನುಪ್ರಾಂತಭಾಸ್ವಳ್ಗಲ್ಲಳಿತ ಫಳಕದೊಳ್ವಿಕ್ರಮಾಂಕಂಗೆ ಲೋಕೋ ।
ತ್ತರಮಾಗಿಟ್ಟಂಕಮಾಳಾವಳಿಯನೆ ಪಲವುಂ ಭಂಗಿಯಿಂ ಕೀರ್ತ್ತಿಸುತ್ತಂ ।
ಬರೆದಳ್ಚನ್ದ್ರಾರ್ಕ್ಕತಾರಂಬರಮೆಸೆದಿರೆ ಕೂರ್ತ್ತರ್ತ್ತಿಯಿಂ ಕೀರ್ತ್ತಿಸುತ್ತಂ ॥

[ಸುರಶೈಲವೆಂದು ಭಾಪಿಸಿ ನಾರಾಯಣ ಶಿಲೆಯನ್ನು ಉತ್ಸಾಹದಿಂದ ಏರಿ ಆ ಗುಡ್ಡಗಾಡು (ನೀರ್ಗಲ್ಲ ಬೆಟ್ಟ) ಪ್ರದೇಶದಲ್ಲಿ ವಿಕ್ರಮಾದಿತ್ಯನ ಬಿರುದಾಳಿಯನ್ನು ಅನಂತಕಾಲ ನಿಲ್ಲವ ಹಾಗೆ ಆ ಪ್ರದೇಶವನ್ನೇ ಫಲಕವನ್ನಾಗಿ ಮಾಡಿ ಕೀರ್ತಿಯನ್ನು ಆಚಂದ್ರಾರ್ಕ ತಾರೆಗಳು ಇರುವ ಹಾಗೆ ಇರುವಂತೆ ಬರೆದು (ಶಾಸನ) ನಿಲ್ಲಿಸಿದಳು.]

ಊರ ಹೆಸರುಗಳು, ಅವುಗಳ ಪ್ರಸ್ತಾಪವಿರುವ ಸಂದರ್ಭಗಳು ಮತ್ತೆ ವ್ಯಕ್ತಿಗಳ ಹೆಸರುಗಳು ಹಾಗೆಯೇ ಬಿರುದಾವಳಿಗಳು ಇತಿಹಾಸವನ್ನು ನಿರೂಪಿಸುತ್ತವೆ. ಸ್ವಲ್ಪ ಆ ಬಗೆಗೆ ಚಿಂತನೆ ಮಾಡಿದರೆ ಸಾಕು. ಕೆಲ ಉದಾಹರಣೆಗಳು ಈ ವಿಷಯವನ್ನು ಸ್ಫುಟವಾಗಿಸಬಹುದು - ಹೆಚ್ಚು ಬೆಳಕನ್ನು ಬೀರಬಹುದು.

(೧) **ವಿಕ್ರಮಪುರ :** ಈ ಹೆಸರಿನ ಅನೇಕ ಊರುಗಳಿವೆ. ಒಂದು ಯಾದಗೀರ ಜಿಲ್ಲೆಯಲ್ಲಿದೆ. ಈ ಜಿಲ್ಲೆಯ ಹುಣಸ್ಗಿ ಎಂಬ ಊರೇ ಅಲ್ಲಿಯ ಶಾಸನಗಳ ಪ್ರಕಾರ 'ವಿಕ್ರಮಪುರ', 'ವಿಕ್ರಮತೀರ್ಥ' (ಪಂಕ್ತಿ: ೪೬) 'ವಿಕ್ರಮಪುರ' (ಪಂಕ್ತಿ: ೫೬)

ಇವು ಜ್ಞಾತಿ ಶಬ್ದಗಳು (Congnates) ಎಂಬುದು ಸ್ಪಷ್ಟ. ಈ ಊರು, ಕಲ್ಯಾಣ ಚಳುಕ್ಯ ವಿಕ್ರಮಾದಿತ್ಯನ ಕಾಲದಲ್ಲಿ ಆತನ ರಾಣಿ ಪಟ್ಟಮಹಾದೇವಿ ಮಲಯಮತಿದೇವಿ ದಾನವಿತ್ತ ಅಗ್ರಹಾರದ ಊರು[೬].

(೨) ಅಲಿಳೂರ್ನಗರ : ಬಾದಾಮಿ ಚಳುಕ್ಯ ಚಕ್ರವರ್ತಿ ವಿನಯಾದಿತ್ಯ ಒಂದಷ್ಟು ಕಾಲ ಈ ಊರಲ್ಲಿ ತಂಗಿದ್ದನೆಂದು ಆತನು ಕೃಷ್ಣವೇಣ್ಣಾ ಭೀಮಾಸಂಗಮದ ಸಂಗಮೇಶ್ವರನಿಗೆ ಇತ್ತ ದಾನವನ್ನು ದಾಖಲಿಸಿರುವ ತಾಮ್ರಪಟ ಶಾಸನದಿಂದ ತಿಳಿದುಬಂದಿದೆ. ಹೈಹಯ ವಂಶದ ರಾಜರಿಗೆ (ಮಾಂಡಲೀಕ ರಾಜರಿಗೆ) ಸೇರಿದ ಇದು, ಅರಳು–೩೦೦ ಪ್ರಾಂತದ ರಾಜಧಾನಿ ಆಗಿತ್ತು. ಆ ಚಾಳುಕ್ಯರ ಅನಂತರ ಬಂದ ರಾಷ್ಟ್ರಕೂಟರ ಕದನಗಳಲ್ಲಿ ಈ ಊರು ನಾಶವಾಗಿ ಹೋಯಿತು. ಆದರೆ ಮಂಡಲದ (೩೦೦ ಗ್ರಾಮಗಳ ಗುಂಪಿನ) ಹೆಸರು ಹಾಗೇ ಉಳಿದಿತು[೭].

(೩) ಭೋಗವತಿಪುರ: ಭೋಗವತಿಪುರ ಒಂದು ಪ್ರಾಚೀನ ಮಹಾನಗರ – ಧರ್ಮಕ್ಷೇತ್ರ – ಯಾತ್ರಾಸ್ಥಳ ಇದು ಯಾವುದು, ಎಲ್ಲಿ ಇತ್ತು ಎಂಬುದು ಇನ್ನೂ ಅನೇಕರಿಗೆ ತಿಳಿಯದು. ಆದರೆ ಸಾಮಾನ್ಯವಾಗಿ ಎಲ್ಲರೂ ಒಪ್ಪುವಂತಹ ಸಂಗತಿ 'ದ್ವಾದಶ ಜ್ಯೋತಿರ್ ಲಿಂಗಗಳು' ಭಾರತೀಯರ ಜೀವನದಲ್ಲಿ – ಸಂಸ್ಕೃತಿಯಲ್ಲಿ – ವಿಶೇಷ ಪಾತ್ರವನ್ನು ವಹಿಸಿವೆ, ಅವೆಂದರೆ:

ಸೌರಾಷ್ಟ್ರೇ ಸೋಮನಾಥಂ ಚ ಶ್ರೀಶೈಲೇಮಲ್ಲಿಕಾರ್ಜುನಂ
ಉಜ್ಜಯನ್ಯಾಂ ಮಹಾಕಾಲಂ ಓಂಕಾರಮಮರೇಶ್ವರಂ ॥ ೧ ॥
ಪರಲ್ಯಾಂ ವೈಜನಾಥಂ ಚ ಡಾಕಿನ್ಯಾಂ ಭೀಮಶಂಕರಂ
ಸೇತುಬಂಧೇತು ರಾಮೇಶಂ ನಾಗೇಶಂ ದಾರುಕಾವನೇ ॥ ೨ ॥
ವಾರಣಸ್ಯಾಂ ತು ವಿಶ್ವೇಶಂ ತ್ರ್ಯಂಬಕಂ ಗೌತಮೀತಟೇ
ಹಿಮಾಲಯೇತು ಕೇದಾರ ಘಸ್ರಣೇಶಂ ಶಿವಾಯೇ ॥ ೩ ॥
ಏತಾನಿ ಜ್ಯೋತಿರ್ಲಿಂಗಾನಿ ಸಾಯಂ ಪ್ರಾತಃ ಪಠೇನ್ನರಃ
ಸಪ್ತಜನ್ಮಕೃತಂ ಪಾಪಂ ಸ್ಮರಣೇನ ವಿನಶ್ಯತಿ ॥ ೪ ॥[೮]

ಈ ಈಶ್ವರಲಿಂಗಗಳು ಇದ್ದ ಊರುಗಳು – ದೇಶಗಳು ಮತ್ತೇ ದೇವತಾ ವಿಗ್ರಹಗಳು ಜನರ ಹೆಸರಿನಲ್ಲೋ, ಊರಹೆಸರಿನಲ್ಲೋ ಪ್ರತಿಯೊಂದು ಊರಲ್ಲಿ – ಪ್ರದೇಶದಲ್ಲಿ ಶುದ್ಧರೂಪದಲ್ಲೋ – ಉಚ್ಚಾರಣೆಯಲ್ಲೋ – ಕಾಲಗತಿಯಲ್ಲಿ ಕೆಟ್ಟು ವಿಕೃತರೂಪದಲ್ಲೋ ಇಂದಿಗೂ ಅಸ್ತಿತ್ವದಲ್ಲಿ ಇರುವುದು ನಮಗೆ ಕಂಡುಬರುವುದು. ಎಂ. ಮೋನಿಯರ್ ವಿಲಿಯಮ್ಸ ಅವರ ಇಲ್ಲವೇ ಆಪ್ಟೇ ಅವರ ಸಂಸ್ಕೃತ–ಇಂಗ್ಲಿಷ್ ನಿಘಂಟುಗಳನ್ನು ತೆರೆದ ನೋಡಿದರೆ ಅನೇಕ ಸಂಗತಿಗಳು ತಿಳಿದು ಬರುತ್ತವೆ. ಅಂತಹದರಲ್ಲಿ ; 'ಭೋಗವತಿ' ಕೂಡ ಒಂದು. ಇದು ಉಜ್ಜಯನಿಯ ಇನ್ನೊಂದು ಹೆಸರು. ಉಜ್ಜಯನಿಯು ಮಾಳವ (ಆವತ್ತಿ) ದೇಶದಲ್ಲಿ ಇರುವ ಒಂದು ಪಟ್ಟಣ. ೧೮ ಯೋಗಶಕ್ತಿ ಪೀಠಗಳಲ್ಲೂ ಒಂದು. ಇಲ್ಲಿಯ ಶಕ್ತಿಗೆ 'ಮಹಾಕಾಳಿ' ಎಂತಲೂ ಶಿವನಿಗೆ 'ಮಹಾಕಾಲ' 'ಮಹಾಕಾಳೇಸ್ವರ' 'ಕಾಲೇಶ್ವರ' ಎಂದೂ ಹೆಸರು. ಹಿಂದೆ ವಿಕ್ರಮಾದಿತ್ಯರಾಜನು ಇಲ್ಲಿಂದ ರಾಜ್ಯಭಾರ ಮಾಡುತ್ತಿದ್ದನು ಎಂದೂ ತಿಳಿದುಬರುತ್ತದೆ.

ಉಜ್ಜೈನಿ 'ಉಜ್ಜನಿ' 'ಉಜ್ಜಲಿ' ಎಂದೂ ಒಂದು ನಗರವಾಗಿ ಕರ್ನಾಟಕದಲ್ಲಿ (ಈಗ ತೆಲಂಗಾಣ ಪ್ರದೇಶ) ಇದ್ದಿತು. ಹೀಗೆಯೇ 'ಭೋಗವತಿ' ಎಂಬುದೂ ಮನುಷ್ಯರ ಹೆಸರೋ ಊರ ಹೆಸರೋ ಆಗಿ ಕರ್ನಾಟಕದ ತುಂಬ ಕಾಣದೊರೆಯುತ್ತದೆ. ಅಲ್ಲಿಯ ದೇವರೇ ಭೋಗೇಶ್ವರ ಎಂಬುದು ಕೂಡ. ಭೋಗನಂದೀಶ್ವರ ದೇವರ ಹೆಸರಾದರೇ ಅದರ ನೆನಪಿನ ಉಳಿಕೆಗಳೇ ಭೋಗಪ್ಪ, ಭೋಗಣ್ಣ ಇತ್ಯಾದಿ. 'ಭೋಗವತಿ' (ಮಾನ್ವಿ ತಾಲೂಕು), 'ಆರ್ಯ್ಯಭೋಗಾಪುರ', 'ಭೋಗಾಪುರ' (ಲಿಂಗಸೂರು ತಾಲೂಕು), 'ಭೋಗನಹಳ್ಳಿ' ಇತ್ಯಾದಿ ದೇವತೆಗಳು ಇದ್ದ ಊರುಗಳ – ಪ್ರದೇಶದ – ಹೆಸರೇ ಆಗಾಗ ಅಲ್ಲಲ್ಲಿ ಆವರ್ತಹನ – ಪುನರಾವರ್ತನ – ಆಗುವುದು ಲೋಕರೂಢಿ. ಕೆಂಭಾವಿಯ 'ಭೋಗಣ್ಣ' ಎಂಬ ಹೆಸರಿನ ಮೂಲ ಆಕರವೂ ಅದೇ ಭೋಗೇಶ್ವರ.

ಭೋಗೇಶ್ವರ ಎಂಬ ದೇವರ ದೇವಾಲಯಗಳೂ ಅನೇಕ ಊರುಗಳಲ್ಲಿ ಕಾಣದೊರೆಯುತ್ತವೆ. (ಉದಾ: ಕಲ್ಬುರ್ಗಿ ಜಿಲ್ಲೆಯ–ತಾ॥ನ ಹರಸೂರು ಇತ್ಯಾದಿ) ಹೀಗೆಯೇ ಇದೇ ಪ್ರದೇಶದ ಓಂಕಾರಪುರ (ಓಂಕಾರ=ಮಾಂಧಾತ=ಮಾಹಿಷ್ಮತೀಪುರ) ವೇಶ್ವರ ಎಂದರೆ ಅಲ್ಲಿಯ ದೇವತೆ 'ಅಮರೇಶ್ವರ'– ಇದರ ನೆನಪಿನ ಉಳಿಕೆಗಳೇ: ಅಮರಪ್ಪ, ಅಮರೇಶ್ವರ, ಅಮರಾಪುರ, ಅಮರವಾಡಿ, ಅಮರಗೊಳ, ಅಮರಾಪುರಂ, ಅಮರಾಬಾದ್ ಇತ್ಯಾದಿ. 'ಅಲರು' 'ಅರಳು' (=ಹೂ) ಆದ ಹಾಗೆಯೇ 'ಅಮರೇಶ್ವರ' ಇದು ಅಮಲೇಶ್ವರ ಆಗಿ ಪ್ರಚಾರದಲ್ಲಿ ಇದ್ದ ಹೆಸರು. ಕ್ರಿ.ಶ. ೧೦೨೮ರ ಮದ್ರಿಕಿ ಶಾಸನ ಹಾಗೂ ಕ್ರಿ.ಶ. ೧೦೬೭ರ ಮುಡಬುಳ(<ಮುಡಬೊಳ<ಮೂಡಪೊಳಲ್) ಊರಿನಲ್ಲಿ ದೊರಕಿದ ಶಾಸನಗಳಿಂದ ಸುಸ್ಪಷ್ಟ[೯]. ಈಗ ಬೇಚಿರಾಫ್

(ಬೇಚಿರಾಕ್) ಆದ ಊರು ಆಮಲಾಪುರ (ಭೀಮರಾಯನಗುಡಿ ಇರುವ ಸ್ಥಳ) ಒಂದೊಮ್ಮೆ ಭವ್ಯ ದೇವಾಲಯವನ್ನು (ಶಿವಾಲಯ) ಹೊಂದಿತ್ತು. ಅದೊಂದು ೬೪ ಕಂಭಗಳ ದೊಡ್ಡದೇವಾಲಯ ಆಗಿತ್ತು. ಆದರೆ ಈಗ ಹಾಳಾಗಿ ನಿಂತ–ಭಗ್ನಾವಶೇಷ. ಇದು ವಚನಕಾರ ಆಯದಕ್ಕಿ ಮಾರಯ್ಯ ಹಾಗೂ ಆತನ ಪತ್ನಿ ಆಯದಕ್ಕಿ ಲಕ್ಕಮ್ಮನವರ ಆರಾಧ್ಯ ದೇವತೆಯಾಗಿದ್ದಿತು. ('ಅಮಲೇಶ್ವರಲಿಂಗ' ಎಂಬ ಅಂಕಿತವನ್ನು ಗಮನಿಸಿ):

(೧) **ಭಕ್ತರಿಗೆ ಬಡತನವುಂಟೆ? ಸತ್ಯರಿಗೆ ಕರ್ಮವುಂಟೆ?**
ಚಿತ್ತಮುಟ್ಟಿ ಸೇವೆಯ ಮಾಡುವ ಭಕ್ತಂಗೆ ಮರ್ತ್ಯಕೈಲಾಸ
ವೆಂಬುದುಂಟೇ ಆತನಿದ್ದುದೇ ಸುಕ್ಷೇತ್ರ, ಆತನ ಅಂಗವೇ
ಅಮಲೇಶ್ವರಲಿಂಗದ ಅಂಗದಸುಖ[೮].

(೨) **ಅಂಗಕ್ಕೆ ಬಡತನವಲ್ಲದೆ ಮನಕ್ಕೆ ಬಡತನವುಂಟೆ?**
ಬೆಟ್ಟಬಲ್ಲಿತ್ತೆಂದಡೆ ಉಳಿಯ ಮೊನೆಯಲ್ಲಿ ಬಡತನವಿದ್ದಡೆ
ಒಡೆಯದೆ? ಘನಶಿವಭಕ್ತರಿಗೆ ಬಡತನವಿಲ್ಲ; ಸತ್ಯರಿಗೆ
ದುಷ್ಕರ್ಮವಿಲ್ಲ ಎನಗೆ ಮಾರಯ್ಯ ಪ್ರಿಯ
ಅಮಲೇಶ್ವರಲಿಂಗವುಳ್ಳನ್ನಕ್ಕ ಅರಹಂಗಿಲ್ಲ ಮಾರಯ್ಯ?[೯]

ಮೈ.ವಿ.ವಿಯದ–'ವಚನಧರ್ಮಸಾರ' ಗ್ರಂಥದಲ್ಲಿಯೂ (ಲೇ. ದಿ. ಎಂ.ಆರ್.ಶ್ರೀ) ಅಂಕಿತಗಳು ಹೀಗೆಯೇ ಇವೆ.

ಬಿರುದಾವಳಿಗಳ ಬೆನ್ನು ಹತ್ತಿದರೂ ಒಂದಷ್ಟು ಇತಿಹಾಸವು ದೊರೆಯುತ್ತದೆ ಅಷ್ಟೇ ಅಲ್ಲ ಆವ್ಯಕ್ತಿ (ರಾಜ, ಮಾಂಡಲಿಕ ಇಲ್ಲವೇ ಸಾಮಂತ) ಯಾವ ರಾಜಮನೆತನದ ವ್ಯಕ್ತಿ ಎಂಬುದೂ ಸ್ಪಷ್ಟವಾಗುತ್ತದೆ. 'ಕಾಲಂಜರ' ಅಥವಾ 'ಕಾಳಂಜರಪುರವರಾಧೀಶ್ವರ' ಎಂಬುದು ಆ ರಾಜಮನೆತನದ ವ್ಯಕ್ತಿಯ ಪೂರ್ವಿಕರು ಆ ಗಿರಿದುರ್ಗದಿಂದ ಬಂದವರೆಂದು ತಿಳಿಸುತ್ತದೆ. ಇದು ಉತ್ತರ ಭಾರತದ ಬುಂದೇಲಖಂಡ ಪ್ರದೇಶದಲ್ಲಿ ಇರುವ ಒಂದು ಗಿರಿದುರ್ಗ. ಹೀಗೆಯೇ 'ವಲಭೀಪುರವರೇಶ್ವರ', 'ಮಾಹಿಷ್ಮತೀಪುರವರಾಧೀಶ್ವರ', 'ಅಯೋಧ್ಯಾಪುರವರೇಶ್ವರ' (ಚಾಲುಕ್ಯರು) ಇತ್ಯಾದಿ, ಇತ್ಯಾದಿ.

'ಜಗದೇಕಮಲ್ಲ' ಇದು ಮೂಲತಃ ಪಂಪನ ಆಶ್ರಯದಾತ ಇಮ್ಮಡಿ ಅರಿಕೇಸರಿ ಧರಿಸಿದ್ದ ಒಂದು ಬಿರುದು[೧೦]. ಆ ಮನೆತನವನ್ನು ಸೋಲಿಸಿ ಕಲ್ಯಾಣದ ಚಾಳುಕ್ಯರ ದೊರೆ ಜಯಸಿಂಹ (ಕ್ರಿ.ಶ. ೧೦೧೨–೧೦೪೪)[೧೧] ಅವರಿಂದ ಕಿತ್ತುಕೊಂಡದ್ದು. ಇವನ ಅನಂತರ ಈ ಬಿರುದನ್ನು ಇನ್ನೂ ಇಬ್ಬರು ಧರಿಸಿದ್ದಾರೆ. ಕಾರಣ ಇವನಿಗೆ 'ಜಗದೇಕಮಲ್ಲ(೧) ಎಂದು ಗುರುತಿಸಲಾಗುತ್ತದೆ. 'ಆಹವಮಲ್ಲ' 'ತ್ರಿಭುವನಮಲ್ಲ' ಎಂಬವೂ ಈ ಮನೆತನದ ಬಿರುದುಗಳೇ.

ಉಪಸಂಹಾರ: ಕರ್ನಾಟಕದ ಇತಿಹಾಸ ಮೌರ್ಯರಾಜಮನೆತನದಿಂದ ಆರಂಭವಾಗುತ್ತದೆ. ಕಟವಪ್ರ (=ಶ್ರವಣಬೆಳ್ಗೊಳ) ಅವರ ರಾಜ್ಯದಲ್ಲಿ ದಕ್ಷಿಣದ ಕೊನೆಯ ದುರ್ಗವಾಗಿತ್ತು. ಆ ಮನೆತನದ ಅಶೋಕ ಚಕ್ರವರ್ತಿಯ ಸುಮಾರ ೨೭ ಶಾಸನಗಳು ಈಗಿನ ಕರ್ನಾಟಕದಲ್ಲಿ ದೊರೆತಿವೆ:

ಚಿತ್ರದುರ್ಗ ಜಿಲ್ಲೆ	– ೦೬
ಬಳ್ಳಾರಿ ಜಿಲ್ಲೆ	– ೦೪
ಕೊಪ್ಪಳ ಜಿಲ್ಲೆ	– ೦೨
ರಾಯಚೂರು (ಮಸ್ಕಿ) ಜಿಲ್ಲೆ	– ೦೧
ಗುಲ್ಬರ್ಗ (ಸನ್ನತಿ) ಜಿಲ್ಲೆ	– ೧೪
	೨೭

ಕರ್ನಾಟಕದ ಸ್ಥೂಲ ಚರಿತ್ರೆಯೂ (Macro-history) ಮತ್ತೆ ಸೂಕ್ಷ್ಮ ಚರಿತ್ರೆಯೂ (Micro-history) ಪುನಾರಚನೆಗೊಳ್ಳಬೇಕು ಅಷ್ಟು ಸಾಮಗ್ರಿ ಉಪಲಬ್ಧವಾಗಿದೆ. ೧೯೧೨ರಲ್ಲಿ ದೊರೆತ ಶಾಸನಗಳು ಇತ್ತೀಚೆಗಷ್ಟೇ ಓದಲ್ಪಟ್ಟಿವೆ ಇನ್ನೂ ಪುಸ್ತಕ (S.I.I.) ರೂಪದಲ್ಲಿ ಪ್ರಕಟವಾಗಿ ಹೊರಬಂದಿಲ್ಲ. ಗಂಗದೊರೆ ದುರ್ವಿನೀತನಿಗೆ ಪೃಥ್ವೀ (ಪಿಟ್ಟಿ) ಪತಿ ಎಂಬ ಒಬ್ಬ ತಮ್ಮನಿದ್ದನೆಂಬುದು ಹಿಂದೂಪುರ (ಆಂಧ್ರ ಪ್ರದೇಶ) ಊರಲ್ಲಿ ದೊರೆತ, ರಂಗಾಚಾರ ಲಿಸ್ಟ ಸಂಪುಟದಲ್ಲಿ ಇರುವ ಶಾಸನ ಇತ್ತೀಚೆಗೆ ಓದಲ್ಪಟ್ಟಿದೆ! ಹೀಗೆಯೆ ಇನ್ನೂ ಅನೇಕ ಸಂಗತಿಗಳು ಬೆಳಕಿಗೆ ಬಂದಿವೆ. ಸಾತವಾಹನರು, ಪಲ್ಲವರು, ಗಂಗರು, ಬಾಣರು, ಕದಂಬರು, ಚುಟುಕುಲದವರು, ಭಟಾರಿ ಕುಲದವರು, ಚೋಳರು, ಕೇಕಯರು, ಸೇಂದ್ರಕರು, ಚಾಳುಕ್ಯರು, ರಾಷ್ಟ್ರಕೂಟರು, ಸಿಂದರು, ಹೈಹಯರು, ಕಳಚೂರ್ಯರು, ಸೇವುಣರು, ಕಾಕತೀಯರು ಶಿಲಾಹಾರರು, ಸಂಗಮರು (ವಾಸ್ತವದಲ್ಲಿ ಕಲ್ಯಾಣ ಚಾಳುಕ್ಯ

ಶಾಖೆ). ಸಾಳುವರು, ತುಳವರು, ಅರವೀಟಿ (ವೀಡು) ರಾಜರ ವಂಶಜರು (ವಾಸ್ತವದಲ್ಲಿ ಇವರು ಬಿಜ್ಜಳನ ಕಳಚೂರ್ಯ ವಂಶದ ಶಾಖೆಯವರು) ಅನಂತರದಲ್ಲಿ ಬಂದ ರೆಡ್ಡಿಯರು ಪಾಳೆಯಗಾರರ ಮನೆತನಗಳು, ಬಹುಮನೀ ಹಾಗೂ ಅನಂತರದಲ್ಲಿ ಬಂದ ಆದಿಲ್‌ಶಾಹೀ ಮನೆತನ, ಬೀದರಿನ ಬರೀದಶಾಹೀ, ಗೋಲ್ಕೊಂಡದ ಕುತುಬ್‌ಶಾಹೀ, ಅಹಮ್ಮದನಗರದ ನಿಜಾಮ್ ಶಾಹೀ ಹಾಗೂ ಗಾವಿಲ್‌ಗಡದ ಇಮಾದ್‌ಶಾಹೀ ರಾಜಮನೆತನಗಳು, ಮೈಸೂರು ಒಡೆಯರು, ಯಲಹಂಕ ಪ್ರಭುಗಳು, ಕೆಳದಿ ನಾಯಕರು ಸುರಪುರ ಇತ್ಯಾದಿ ಸಂಸ್ಥಾನಗಳ, ಹೈದರಾಬಾದಿನ ನಿಜಾಮರ ಹೀಗೆ ಹಲವು ಮನೆತನದ ಇತಿಹಾಸಗಳು ನಮ್ಮ ಚರಿತ್ರೆಗಳ ಪುಟಗಳಲ್ಲಿ ಬರಬೇಕಾಗಿದೆ. ಸ್ವಾತಂತ್ರ್ಯ ಸಂಗ್ರಾಮದವರೆಗೆ. Macro ಹಾಗೂ Micro ಇತಿಹಾಸಗಳ ಬರೆವಣಿಗೆಗೆ ನಾಂದಿ ಹಾಡಬೇಕಿದೆ.

ಇತಿಶಂ

ಸೀತಾರಾಮ ಜಾಗೀರ್‌ದಾರ್

ಅಡಿ ಟಿಪ್ಪಣಿಗಳು

೧. **ಕವಿರಾಜಮಾರ್ಗ್ಗಂ** (ಸಂ ಕೆ.ಬಿ. ಪಾಠಕ & ಸೀತಾರಾಮ ಜಾಗೀರ್‌ದಾರ್) ೧–೩೬, ಪು. ೪೧.

೨. **ಗೋ.ಪ್ರ ಜೋಶೀ,** ಪ್ರಾಚೀನ ಕರ್ನಾಟಕ : ಏಕ ಸಾಂಸ್ಕೃತಿಕ ಅವಲೋಕನ" ಪು. ೧೨ (ಮರಾಠೀ).

೩. ಎ.ಪಿ. ಕ. ಸಂಪುಟ – ೧೪ (R/ಪ) ಶಾಸನ ಸಂಖ್ಯೆ : ೧೨೩ ಪು. ೧೨೭.

೪. ನೋಡಿ ಶಾಸನಸಂಖ್ಯೆ : ೯೪, **ಸುರಪುರ ತಾಲೂಕಿನ ಶಾಸನಗಳು** (ಸಂ. ಹನುಮಾಕ್ಷಿ ಗೋಗಿ).

೫. **ಡಾ. ಪಿ.ವಿ. ಕೃಷ್ಣಮೂರ್ತಿ**ಗಳಿಗಿತ್ತ ಅಭಿನಂದನ ಗ್ರಂಥ **'ಅಕ್ಷರಮೇರು'** ಪು. ೩೬೪ – ೩೬೬.

೬ **ನಿತ್ಯಸ್ತೋತ್ರ ರತ್ನಮಾಲಾ** (ಸಂ ಶ್ರೀ ಗಿರಿಜಾನಂದ) ಪು. ೩೯.

೭. **ಕಲ್ಬುರ್ಗಿ ಜಿಲ್ಲೆಯ ಶಾಸನಗಳು** (ಸಂ. ಹನುಮಾಕ್ಷಿಗೋಗಿ) ಆಮಲೇಶ್ವರ (>ಅಲ್ಮೇಶ್ವರ) ಪು. ೪೧೭ & ೪೨೮.

೮. **ಕರ್ನಾಟಕ ಕವಿಚರಿತೆ, ಭಾಗ–೧** (ಆರ್. ನರಸಿಂಹಾಚಾರ್) ಪು. ೧೯೩ (೧೯೬೧).

೯. **ಶಿವಶರಣೆಯರ ವಚನಸಂಪುಟ** (ಸಂ. ಡಾ॥ ವೀರಣ್ಣ ರಾಜೂರ) ಪು. ೧೯೯–೨೦೪; ಇಪ್ಪತ್ತೈದು ವಚನಗಳಿವೆ.

೧೦. **ವಿಕ್ರಮಾರ್ಜುನ ವಿಜಯಂ (ಸಂಪಾದಕ :** ಬೆಳ್ಳಾವೆ ವೆಂಕಟನಾರಾಯಣಪ್ಪ) ಆ. ೧–೧೪೮ ವಚನ (ಗದ್ಯ) ಪು. ೩೭ (೧೯೭೩).

೧೧. (i) ಶಾಸನ ಅಧ್ಯಯನ, ಸಂಪುಟ–೨, ಸಂಚಿಕೆ–೧, ಪು. ೨೬–೪೮ (ಕ.ವಿ.ವಿ. ಹಂಪಿ).

(ii) A History of Karnataka (Au: Prof PBD, SHR & BRG) K.U. Dharwad; p. 777.

ಅನುಬಂಧಗಳು

ಅನುಬಂಧ–೧: ಬೀದರ ಜಿಲ್ಲೆಯ ಜಲಸಂಗವಿ ಗ್ರಾಮದ ದೇವಾಲಯದ ಭಿತ್ತಿಯಲ್ಲಿ



ಶಾಸನ ಪಾಠ

೧. @ ಸಪ್ತದ್ವೀಪೋದರೀಭೂತಂ ಭೂತಲಂ ಸ್ವೀಕರಿಷ್ಯ

೨. ತಿಚಲುಕ್ಯೋ ವಿಕ್ರಮಾದಿತ್ಯಃ ಸಪ್ತ

೩. ಮೋ ವಿಷ್ಣುವರ್ಧನಃ ॥

ಅನುಬಂಧ–೨: ಬೀಡ ಜಿಲ್ಲೆಯ (ಈಗ ಮಹಾರಾಷ್ಟ್ರ ಪ್ರದೇಶ) ಮೋಮಿನಾಬಾದ್ ತಾಲೂಕಿನ ಧರ್ಮಪುರಿ ಗ್ರಾಮದ ಕೇದಾರೇಶ್ವರ ದೇವಸ್ಥಾನದಲ್ಲಿ.


ಶಾಸನ ಪಾಠ

೧. @ ಸುರಶೈಳಂಗೆತ್ತು ನಾರಾಯಣ ಸೆಳೆಯಮನುತ್ಸಾಹದಿಂದೇಜಿ ತದ್ವಿಸ್ತ

೨. ರಸಾನುಪ್ರಾಂತಭಾಸ್ವಲ್ಲಳಿತ ಫಳಕದೊಳ್ವಿಕ್ರಮಾಂಕಂಗೆ ಲೋಕೋತ್ತರ

೩. ಮಾಗಿಟ್ಟಿಂಕಮಾಳಾವಳಿಯನೆ ಪಲವುಂ ಭಂಗಿಯಿಂ ಕೀರ್ತಿಸುತ್ತಂ ಬರೆದಳ್ಚ

೪. ನ್ದ್ರಾರ್ಕ್ಕತಾರಂಬರಮೆಸೆದಿರೆ ಕೂರ್ತ್ತರ್ತ್ತಿಯಿಂ ಕೀರ್ತ್ತಿಸುತ್ತಂ ॥@



ಸೀತಾರಾಮ್ ಜಾಗೀರ್‌ದಾರ್ – ಒಂದು ಪರಿಚಯಿಕೆ

ಜನನ : ೭ ಮೇ, ೧೯೩೫

ತಂದೆ : ಸ್ವಾಮಿನಾಥರಾವ್ ಜಾಗೀರ್‌ದಾರ್

ತಾಯಿ : ಚಂದ್ರಾಬಾಯಿ

ಉಸ್ಮಾನಿಯಾ ವಿಶ್ವವಿದ್ಯಾನಿಲಯದಲ್ಲಿ ಕನ್ನಡದಲ್ಲಿ ಸ್ನಾತಕೋತ್ತರ ಪದವಿ ಮೊದಲ ರ್‍ಯಾಂಕ್

- ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆ – ಎಪಿಗ್ರಾಫಿಯಾ ಕರ್ಣಾಟಿಕ, ಪರಿಷ್ಕೃತ ಸಂಪುಟ ಹೊರತರಲು ೧ ರಿಂದ ೮ರವರೆಗೆ ಲಿಪಿತಜ್ಞರಾಗಿ ಕೆಲಸ.
- ಇವರ ಪ್ರಧಾನ ಸಂಪಾದಕತ್ವದಲ್ಲಿ ಸಂ: ೯ (ಹಾಸನ ಜಿಲ್ಲೆ, ಬೇಲೂರು) ೧೪ (ಶಿವಮೊಗ್ಗ ಜಿಲ್ಲೆ, ಶಿಕಾರಿಪುರ ತಾಲ್ಲೂಕು) ಸಂಪುಟಗಳು ಬಂದಿವೆ.
- ಶ್ರವಣಬೆಳಗೊಳದ ಜೈನ ಮಠದವರು ಹೊರತರುತ್ತಿರುವ ಚಿಕ್ಕ ಬೆಟ್ಟದ ಶಾಸನ ಸಂಪುಟದ ಕಾರ್ಯ ಪ್ರಧಾನ ಸಂಪಾದಕರು.
- ಕೇಂದ್ರ ಶಾಸನ ಶಾಸ್ತ್ರ ಕಛೇರಿಯ ಪ್ರಧಾನ ನಿರ್ದೇಶಕರಾಗಿದ್ದ ಡಾ. ಕೆ.ವಿ. ರಮೇಶ್, ಎಂ.ಎನ್. ಶೆಟ್ಟಿ ಅವರೊಂದಿಗೆ "ಸ್ಥಳನಾಮಗಳ ನಿಘಂಟು ಕೋಶ ರಚನೆಯಲ್ಲಿ ನಿರಂತರವಾಗಿ ಪಾಲ್ಗೊಂಡಿದ್ದಾರೆ.
- ಮೈಸೂರು ವಿಶ್ವವಿದ್ಯಾನಿಲಯದ ವಿಶ್ವಕೋಶದ ಸಂಪುಟಗಳಿಗೆ ಹಲವಾರು ಲೇಖನಗಳನ್ನು ಅಲ್ಲದೆ ಒಂದು ನೂರಕ್ಕೂ ಹೆಚ್ಚು ಸಂಶೋಧನಾ ಪ್ರಬಂಧಗಳನ್ನು ರಚಿಸಿದ್ದಾರೆ.
- ಕೇಂದ್ರ ಸ್ವರಾಲೇಖ ವಾರ್ಷಿಕ ವರದಿ ೮೩–೮೪, ೯೩–೯೪ರ ವರದಿ ತಯಾರಿಕೆಯಲ್ಲಿ ನೆರವು.
- ಹೈದರಾಬಾದ್‌ನಲ್ಲಿ ಪ್ರಾಥಮಿಕ ವಿದ್ಯಾಭ್ಯಾಸದಿಂದ ಸ್ನಾತಕೋತ್ತರದವರೆಗೆ. ಬಿ.ಎ. ಪದವಿ–೧೯೫೫, ಎಂ.ಎ. ೧೯೬೮.
- ಹೈಸ್ಕೂಲಿನಲ್ಲಿ ಶಿಕ್ಷಕರಾಗಿ ೨ ವರ್ಷ. ನಂತರ ಅಕೌಂಟೆಂಟ್ ಜನರಲ್ ಪಿ ಅಂಡ್ ಟಿ ಡಿಪಾರ್ಟ್‌ಮೆಂಟ್‌ನಲ್ಲಿ ಆಡಿಟರ್ ಆಗಿ ೧೨ ವರ್ಷ.
- ಹಾಮಾ ನಾಯಕರ ಆಹ್ವಾನದ ಮೇರೆಗೆ ಮೈಸೂರು ವಿಶ್ವವಿದ್ಯಾನಿಲಯ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಶಾಸನ ತಜ್ಞರಾಗಿ ಜನವರಿ ೧೯೭೨ರಿಂದ ಕಾರ್ಯ.
- ಪ್ರಬುದ್ಧ ಕರ್ನಾಟಕದಲ್ಲಿ ೧೯೫೦ರ ಸಂ. ಜಿನವಲ್ಲಭನ ಗಂಗಾಧರಂ ಶಾಸನ ಅದರ ಭಾಷಾಂತರ.

ಪ್ರಕಟಣೆಗಳು

- ಕನ್ನಡ ಸಾಹಿತ್ಯ ಬೆಳವಣಿಗೆ ಹಾಗೂ ರಾಷ್ಟ್ರಕೂಟರ ಕಾಲ.
- ಕವಿರಾಜಮಾರ್ಗ: ವಿಶೇಷ ಉಪನ್ಯಾಸ ಪ್ರಸಾರಂಗ ಮೈ.ವಿ. ೨ ಮುದ್ರಣ ಕಂಡಿದೆ.
- ಗ್ರಂಥ ಸಂಪಾದನಾ ಶಾಸ್ತ್ರ ಪರಿಚಯ.
- ಛಂದೋರಚನಾ ಸಂಶೋಧನೆಗಳು.
- ಸಾಪೇಕ್ಷ – ೧ (ಆದಿಕವಿ ಪಂಪನನ್ನು ಕುರಿತ ಶೋಧ ಪ್ರಬಂಧಗಳು) ೨ ಮುದ್ರಣ. ಸಾಪೇಕ್ಷ – ೨ (ಶೋಧ ಪ್ರಬಂಧಗಳ ಸಂಪುಟ)
- ಕೊಂಡಕುಂದರ ಪ್ರಾಕೃತ ಗ್ರಂಥ – ಬಾರಸ ಅನುಪೆಹನ ದ್ವಾದಶಾನುಪ್ರೇಕ್ಷ.
- ಕುಮಾರವ್ಯಾಸ – ಒಂದು ಅಧ್ಯಯನ – ಎರಡು ಮುದ್ರಣ
- ಹಂಪಿ, ಕನ್ನಡ ವಿಶ್ವವಿದ್ಯಾಲಯದ ಪರ್ಷನ್, ಅರೇಬಿಕ್, ಉರ್ದು ಶಾಸನ ಸಂಪುಟಕ್ಕೆ ಸಹ ಸಂಪಾದಕತ್ವ.
- ಕಂಬದಳ್ಳಿ ಒಂದು ಜೈನ ಕೇಂದ್ರವಾಗಿ ಅಧ್ಯಯನ.
- ಮಹಾಕವಿ ಲಕ್ಷ್ಮೀಶ.
- ಅಲ್ಲಮಪ್ರಭು.
- ವಿಜ್ಞಾನೇಶ್ವರ ಮತ್ತು ಮರ್ತೂರು ಶಾಸನ.
- ಇಮ್ಮಡಿ ನಾಗವರ್ಮ – ಮೈ.ವಿ.ವಿ.
- ವೀರಶೈವ ಸಾಹಿತ್ಯ – ವಿಶೇಷ ಅಧ್ಯಯನ.
- ಕವಿರಾಜಮಾರ್ಗಂ – ಕೃತಿ.
- ಕನ್ನಡ ಕೈಪಿಡಿ ಭಾಗ – ೧ (ಪರಿಷ್ಕರಣೆ)

ಪ್ರಶಸ್ತಿಗಳು

- ಕಾಯಕ ಪ್ರಶಸ್ತಿ ೧೯೬೮ : ಉದಯೋನ್ಮುಖ ಬರಹಗಾರರ ಸಂಘ, ಗುಲ್ಬರ್ಗಾ.
- ಶಾಸನಶಾಸ್ತ್ರ ವಿಶಾರದ ಪ್ರಶಸ್ತಿ : ಶ್ರಣವಬೆಳಗೊಳದ ಜೈನ ಮಠ.
- ರಾಜ್ಯೋತ್ಸವ ಪ್ರಶಸ್ತಿ : ೨೦೧೭ರಲ್ಲಿ ಕರ್ನಾಟಕ ಸರ್ಕಾರದಿಂದ.
- ಸಾಹಿತ್ಯಶ್ರೀ ಲೇಖಕರ ಬಳಗ, ಕಲ್ಯಾಣ ಕರ್ನಾಟಕ, ೨೦೨೦.
- ಬಾ.ರಾ. ಗೋಪಾಲ್ ಪ್ರಶಸ್ತಿ: ಕರ್ನಾಟಕ ಇತಿಹಾಸ ಅಕಾಡೆಮಿಯಿಂದ ಶೃಂಗೇರಿ ಸಮ್ಮೇಳನದಲ್ಲಿ.
- ಕರ್ನಾಟಕ ಇತಿಹಾಸ ಅಕಾಡೆಮಿಯ ೨೦೨೦ನೇ ವರ್ಷದ ವಾರ್ಷಿಕ ಸಮ್ಮೇಳನದಲ್ಲಿ ಸಮ್ಮೇಳನಾಧ್ಯಕ್ಷರು.

೧

ಏಳು ಗುಡ್ಡ ಸಾಲಿನಲ್ಲಿ ಹಿರೇಅರವಿನ ಗುಡ್ಡ: ಸೂಕ್ಷ್ಮ ಶಿಲಾಯುಗ ಸಂಸ್ಕೃತಿಯ ವರ್ಣಚಿತ್ರ ನೆಲೆ ಶೋಧ

ಆರ್. ಮೋಹನ✷

ಪ್ರಸ್ತುತ ನೆಲೆಯು ತುಂಗಭದ್ರಾ ನದಿ ಎಡ ತೀರದಲ್ಲಿನ ಏಳು ಗುಡ್ಡಗಳ ಸಾಲಿನಲ್ಲಿ ಕಂಡುಬರುವ ಅನೇಕ ಪ್ರಾಗಿತಿಹಾಸ ಕಲೆಯ ನೆಲೆಗಳಲ್ಲಿ ಒಂದಾಗಿದೆ. ಈ ಗುಡ್ಡ ಸಾಲಿನಲ್ಲಿ ಮೊಟ್ಟಮೊದಲಬಾರಿಗೆ ಕೆಯಿಸ್ ಅವರು ಹಿರೇ ಬೆಣಕಲ್‌ನ ಬೃಹತ್ ಶಿಲಾಯುಗ ಸಂಸ್ಕೃತಿಯ ಸಮಾಧಿಗಳನ್ನು ೧೮೩೫ರಲ್ಲಿ ಶೋಧಿಸಿದರು. ಪ್ರಾಗಿತಿಹಾಸ ಕಾಲದ ಚಿತ್ರಗಳ ಹಿನ್ನಲೆಯಲ್ಲಿ ಲಿಯೋನಾರ್ಡ್ ಮನ್ ೧೯೧೫ರಲ್ಲಿ ಹಿರೇ ಬೆಣಕಲ್‌ನ ಎರಡು ಮತ್ತು ಮಲ್ಲಾಪುರ ಪರಿಸರದಲ್ಲಿನ ಒಂದು ವರ್ಣಚಿತ್ರ ಕಲ್ಲಾಸರೆಯನ್ನು ಬೆಳಕಿಗೆ ತಂದರು (Munn 1934). ನಂತರ ೧೯೬೮ರಲ್ಲಿ ಮನ್ ಅವರು ಹಿರೇ ಬೆಣಕಲ್ಲಿನಲ್ಲಿ ಶೋಧಿಸಿದ ಚಿತ್ರಿತ ಕಲ್ಲಾಸರೆಗಳನ್ನು ಅ. ಸುಂದರ ಅವರು ಹುಡುಕುವ ಸಂದರ್ಭದಲ್ಲಿ ಇನ್ನೂ ಒಂಬತ್ತು ಹೊಸ ವರ್ಣಚಿತ್ರ ಕಲ್ಲಾಸರೆಗಳನ್ನು ಬೆಳಕಿಗೆ ತಂದರು (Sundara 1974). ಇದೇ ಗುಡ್ಡ ಸಾಲಿನ ಚಿಕ್ಕರಾಂಪುರ, ಆನೆಗೊಂದಿ, ನಾರಾಯಣ ಪೇಟೆ, ಬಂಡೀ ಹರ್ಲಾಪುರ, ತಿರುಮಲಪುರ ನೆಲೆಗಳನ್ನು ಶೋಧಿಸಿದ ಕೀರ್ತಿ ಸುಂದರ ಅವರಿಗೆ ಸಲ್ಲುತ್ತದೆ (ಸುಂದರ ೧೯೯೪). ಶರಣಬಸಪ್ಪ ಕೋಲ್ಕಾರ ಹಂಪಿ–ಹಿರೇ ಬೆಣಕಲ್ ಪ್ರದೇಶದ ಪ್ರಾಗೈತಿಹಾಸಿಕ ವರ್ಣಚಿತ್ರಗಳ ಅಧ್ಯಯನವನ್ನು ಕೈಗೊಂಡು ತಮ್ಮ ಸಂಶೋಧನೆಯ ಫಲಶ್ರುತಿಯನ್ನು ಶಿಲಾಯುಗದ ಗವಿಚಿತ್ರಗಳು ಎಂಬ ಕೃತಿಯಾಗಿ ೨೦೧೦ರಲ್ಲಿ ಪ್ರಕಟಿಸಿದ್ದಾರೆ. ಇದರಲ್ಲಿ ತುಂಗಭದ್ರಾ ನದಿಯ ಮಧ್ಯಪಾತ್ರದಲ್ಲಿ ಒಟ್ಟು ೧೭ ಹೊಸ ನೆಲೆಗಳ ಒಟ್ಟು ೭೬ ಬಂಡೆಚಿತ್ರ ಸ್ಥಳಗಳನ್ನು ಹೊಸದಾಗಿ ಶೋಧಿಸಿದ್ದಾರೆ. ಸಿನೋಪೊಲಿ ಅವರು ಆನೆಗೊಂದಿ ಬಳಿಯಿರುವ ಕಡೇಬಾಗಿಲು ನೆಲೆಯಲ್ಲಿನ ವರ್ಣಚಿತ್ರಗಳನ್ನು ಶೋಧಿಸಿ ಅವುಗಳ ಮಹತ್ವವನ್ನು ವಿವರಿಸಿದ್ದಾರೆ (Sinopoli 2011). ಇದರ ಬೆನ್ನಲೇ ಪ್ರಸ್ತುತ ಲೇಖಕರು ಕೈಗೊಂಡಿರುವ ತುಂಗಭದ್ರಾ ನದಿ ಎಡತೀರದ ಏಳು ಗುಡ್ಡಗಳ ಸಾಲಿನ ಕ್ಷೇತ್ರಕಾರ್ಯ ಅನ್ವೇಷಣೆಯಲ್ಲಿ ಇನ್ನೂ ಹತ್ತಾರು ನೆಲೆಗಳ ಜೊತೆಗೆ ೧೦೦ಕ್ಕೂ ಹೆಚ್ಚು ಬಂಡೆಚಿತ್ರ ಸ್ಥಳಗಳನ್ನು ಶೋಧಿಸಿದರು. ಈಗ ಒಟ್ಟಾರೆಯಾಗಿ ೨೮೩ ಚಿತ್ರಿತ ಕಲ್ಲಾಸರೆಗಳು ಮತ್ತು ಕಲ್ಗುಳಿಗಳ ಬಂಡೆಗಳು ಬೆಳಕಿಗೆ ಬಂದಿವೆ. ಈ ಪ್ರದೇಶವನ್ನು 'ದಕ್ಷಿಣದ ಭೀಂಬೇಟ್ಕ' ಎಂದು ಇದುವರೆಗೂ ನಡೆದ ಸಂಶೋಧನೆಗಳಿಂದ ನಿಶ್ಚಯವಾಗಿ ಹೇಳಬಹುದು (Mohana 2017, 2019, 2021). ಇವುಗಳ ಹೆಚ್ಚಿನ ವಿವರಣೆಯನ್ನು ಲೇಖಕರು ೨೦೧೯ರಲ್ಲಿ ಪ್ರಕಟಿಸಿದ ಕರ್ನಾಟಕದ ಆದಿಮಚಿತ್ರಕಲೆ ಪುಸ್ತಕದಲ್ಲಿ ಕಾಣಬಹುದು.

ಹಿರೇಅರಿವಿನ ಗುಡ್ಡ ಮತ್ತು ಚಿತ್ರಗಳ ಗುಣವಿಶೇಷತೆ

ಹಿರೇಅರಿವಿನ ಗುಡ್ಡವು ಗಂಗಾವತಿಯಿಂದ ೧೨ ಕಿ.ಮೀ. ವಾಯುವ್ಯಕ್ಕೆ ಚಾಚಿಕೊಂಡಿರುವ ಗಡ್ಡಿ–ಎಮ್ಮಿಗುಡ್ಡ ಪರಿಸರಕ್ಕೆ ಹೊಂದಿಕೊಂಡಿರುವ ಗುಡ್ಡಗಾಡಿನ ಮಧ್ಯ ಭಾಗದಲ್ಲಿ ಕಂಡುಬರುವ ಎತ್ತರವಾದ ಪ್ರದೇಶವಾಗಿದೆ. ಪ್ರಾಗಿತಿಹಾಸ ವರ್ಣಚಿತ್ರ ಕಲ್ಲಾಸರೆಯು ಬಹಳ ಕಠಿಣ ಹಾದಿಯನ್ನು ಹೊಂದಿದೆ. ಸೂಕ್ಷ್ಮಶಿಲಾಯುಗ ಸಂಸ್ಕೃತಿಗೆ ಸೇರಿದ ಮನುಷ್ಯ ಮತ್ತು ಪ್ರಾಣಿ ಚಿತ್ರಗಳು ಕಂಡುಬಂದಿವೆ. ಈ ವರ್ಣಚಿತ್ರಗಳ ಜೊತೆಗೆ ಬೃಹತ್ ಶಿಲಾಯುಗ ಸಂಸ್ಕೃತಿಯ ಸಮಾಧಿ, ಕಪ್ಪು ಮತ್ತು ಕೆಂಪು ವರ್ಣದ ಮಡಿಕೆಚೂರುಗಳು ಹಾಗೂ ಕಲ್ಗುಳಿಗಳು ಕಂಡುಬಂದಿವೆ.

ಹಿರೇಅರಿವಿನ ಗುಡ್ಡವು ಗಡ್ಡಿಯಿಂದ ಬಂಡಿಜಾಡನ್ನು ಹಿಡಿದು ನೈರುತ್ಯ ದಿಕ್ಕಿನೆಡೆಗೆ ಸಾಗಿದರೆ, ಗುಡ್ಡಗಾಡು ಪ್ರದೇಶವು ವಿಶಾಲವಾಗಿ ಹಬ್ಬಿಕೊಂಡಿರುವುದನ್ನು ಕಾಣಬಹುದು. ಇದೇ ಗುಡ್ಡದ ಹಾದಿಯನ್ನು ಹಿಡಿದು ಹೊರಟರೆ, ಸ್ಥಳೀಯವಾಗಿ ಕರೆಯುವ ಬಾದಾಮಿ ಕೆರೆಯು ಎದುರಾಗುತ್ತದೆ. ಹಾಗೆಯೇ ಇಲ್ಲಿ ಒಂದು ಸರ್ವಕಾಲೀಕ ನೀರಿನ ಬುಗ್ಗೆಯು ಸಹ ಇದೆ. ಇಲ್ಲಿಂದ ಸುಮಾರು ೧ ಕಿ.ಮೀ. ಆಗ್ನೇಯ ದಿಕ್ಕಿಗಿರುವ ಎತ್ತರವಾದ ಗುಡ್ಡದ ತುತ್ತಾತುದಿಯಲ್ಲಿರುವ ಕಲ್ಲಾಸರೆಯಲ್ಲಿ


✷ ಯುಜಿಸಿ ಫೆಲೋ, ಡೆಕ್ಕನ್ ಕಾಲೇಜು, ಸ್ನಾತಕೋತ್ತರ ಮತ್ತು ಸಂಶೋಧನಾ ಸಂಸ್ಥೆ, ಪುಣೆ. ಮೊ: ೯೯೮೦೭ ೭೪೭೧೬




ಹಿರೇಅರಿವಿನ ಗುಡ್ಡ: ವರ್ಣಚಿತ್ರ
ಕಲ್ಲಾಸರೆಯ ವಿಹಂಗಮ ನೋಟ




ಹಿರೇಅರಿವಿನ ಗುಡ್ಡ: ಪ್ರಾಗಿತಿಹಾಸ ಕಾಲದ ವರ್ಣಚಿತ್ರಗಳು



ತಿಮ್ಮಪ್ಪ ಗುಡ್ಡ: ಸಹಜ ಶೈಲಿಯಲ್ಲಿರುವ
ಜಿಂಕೆ ಮತ್ತು ಜ್ಯಾಮಿತಿ ಚಿತ್ರಗಳು



ಹಿರೇ ಗುಡ್ಡ: ನಾಲ್ಕುಕೋಡಿನ ಕೃಷ್ಣಮೃಗ



ಹುಲಿಗೆಮ್ಮ ಕೊಳ್ಳ: ವಿವಿಧ
ಪ್ರಾಣಿಸಂಕುಲ (ಕಾಡೆಮ್ಮೆ, ಜಿಂಕೆ,
ಕತ್ತೆಕಿರುಬ, ನರಿ ಇತ್ಯಾದಿ)



ಮೋರೆರ ತಟ್ಟ: ಡಾಲ್ಮೆನ್‌ನಲ್ಲಿರುವ ಕಲ್ಲುಗುಳಿಗಳು



ಗಡ್ಡಿ: ಮಾನವರ ಮತ್ತು ಪ್ರಾಣಿಯ ಚಿತ್ರ

ವರ್ಣಚಿತ್ರಗಳಿವೆ (ಚಿತ್ರ ೧), ಈ ಕಲ್ಲಾಸರೆಯ ನೆಲಹಾಸು ನಿಧಿಗಳ್ಳರ ಹಾವಳಿಯಿಂದ ಹೆಚ್ಚು ಹಾನಿಗೊಳಗಾಗಿದೆ. ಚಿತ್ರಗಳು ಶೈಲಿಯಲ್ಲಿ ವಿಭಿನ್ನತೆಯನ್ನು ಹೊಂದಿದ್ದು, ಕಾಲಮಾನ ದೃಷ್ಟಿಯಿಂದ ಸೂಕ್ಷ್ಮ ಶಿಲಾಯುಗ ಹಂತಕ್ಕೆ ಸೇರಿವೆ. ಏಳು ಗುಡ್ಡ ಸಾಲಿನಲ್ಲಿ ಕಂಡುಬಂದಿರುವ ಈ ಹಂತದ ಕೆಲವೇ ಕೆಲವು ಚಿತ್ರಗಳಿದ್ದು, ಪ್ರಸ್ತುತ ಶೋಧನೆಯು ಅಧ್ಯಯನ ದೃಷ್ಟಿಯಿಂದ ಹೆಚ್ಚಿನ ಮನ್ನಣೆಯನ್ನು ಪಡೆದುಕೊಂಡಿವೆ. ಈ ಶೋಧನೆಗೆ ಮೊದಲು ಈ ಭಾಗದಲ್ಲಿ ನವ ಶಿಲಾಯುಗಕ್ಕಿಂತ ಪ್ರಾಚೀನವುಳ್ಳ ಚಿತ್ರಗಳಿಲ್ಲ ಎಂಬ ಭಾವನೆಯಿತ್ತು.

ಇಲ್ಲಿ ವಿವಿಧ ಬಗೆಯ ಮಾನವರ ಚಿತ್ರಗಳಿದ್ದು, ಗಂಡು, ಹೆಣ್ಣು ಮತ್ತು ಮಕ್ಕಳ ಚಿತ್ರಗಳಿವೆ. ಆದರೆ ಕಾಲಮಾನ ದೃಷ್ಟಿಯಿಂದ ಹೆಚ್ಚಿನ ಗಮನ ಸೆಳೆಯುವ ಚಿತ್ರಗಳೆಂದರೆ, ಜಿಂಕೆ ಮತ್ತು ಕೃಷ್ಣಮೃಗ. ಶೈಲಿಯಲ್ಲಿ ಸೂಕ್ಷ್ಮ ಶಿಲಾಯುಗ ಹಂತಕ್ಕೆ ಸೇರಿದ್ದು, ಸಹಜವಾಗಿ ತೋರಿಸಲಾಗಿದೆ (ಚಿತ್ರ ೨). ಈ ಮಾದರಿಯ ಚಿತ್ರಗಳನ್ನು ಮಲಪ್ರಭಾ ನದಿತೀರದಲ್ಲಿನ ತಿಮ್ಮಪ್ಪ ಗುಡ್ಡ (ಚಿತ್ರ ೩), ಹಿರೇ ಗುಡ್ಡ (ಚಿತ್ರ ೪) ಮತ್ತು ಹುಲಿಗೆಮ್ಮ ಕೊಳ್ಳ (ಚಿತ್ರ ೫) ನೆಲೆಗಳ ವರ್ಣಚಿತ್ರಗಳಲ್ಲಿ ನೋಡಬಹುದು (Mohana 2015). ಇವು ಕಾಲಮಾನ ದೃಷ್ಟಿಯಿಂದ ಅಂತ್ಯ ಹಳೆ ಶಿಲಾಯುಗ–ಸೂಕ್ಷ್ಮ ಶಿಲಾಯುಗ ಹಂತಕ್ಕೆ ಸೇರಿವೆ. ಆದಿಯಕಲೆಯ ಪ್ರಾರಂಭದ ಚಿತ್ರಗಳಲ್ಲಿ ಸಹಜ ರೂಪದಲ್ಲಿ ಸರಳ ರೇಖೆಗಳಿಂದ ಚಿತ್ರಗಳನ್ನು ರಚಿಸಲು ಆದಿ ಮಾನವನು ಕರಗತಮಾಡಿಕೊಂಡಿದ್ದನು. ಇದರ ಆಧಾರದ ಮೇಲೆ ಅವು ಆದಿ ಹಂತಕ್ಕೆ ಸೇರಿವೆ ಎಂಬುದನ್ನು ಸಲಭವಾಗಿ ತಿಳಿಯಬಹುದು.

ಇದೇ ನೆಲೆಯಲ್ಲಿ ಬೃಹತ್ ಶಿಲಾಯುಗ ಸಂಸ್ಕೃತಿಯ ಸಮಾಧಿಗಳು ಕಂಡುಬಂದಿವೆ. ಇವು ಬಹುತೇಕ ನೆಲಸಮವಾಗಿವೆ. ಅರೆ ಶಿಥಿಲಗೊಂಡಿರುವ ಒಂದು ಡಾಲ್ಮೆನ್‌ನಲ್ಲಿ ೧೪ ಕಲ್ಲುಗುಳಿಗಳಿದ್ದು, ವಿವಿಧ ಅಳತೆಯಲ್ಲಿವೆ (ಚಿತ್ರ ೬). ಈ ಪ್ರದೇಶವನ್ನು

ಸ್ಥಳೀಯವಾಗಿ 'ಮೋರೆರ ತಟ್ಟೆ' ಎಂದು ಕರೆಯುತ್ತಾರೆ. ಸ್ಥಳೀಕರು ಹೇಳುವಂತೆ ಮೋರೆರು ಎಂದರೆ ಕುಳ್ಳಕಿರುವ ಜನ, ತಟ್ಟೆ ಎಂದರೆ ವಾಸಿಸುವ ಸ್ಥಳ. ಅಂದರೆ ಡಾಲ್ಮೆನ್‌ಗಳು ಅಂದಿನ ಜನರ ವಾಸದ ಮನೆಗಳಾಗಿದ್ದು, ಕಂಡಿಯು ದ್ವಾರವಾಗಿತ್ತು. ಈ ಕಂಡಿಗಳು ಚಿಕ್ಕ ಅಳತೆಯಲ್ಲಿರುವುದರಿಂದ, ಅಂದಿನ ಜನರು ಕುಳ್ಳಕ್ಕಿದ್ದರೆಂಬುದು ಸ್ಥಳೀಕರ ನಂಬಿಕೆಯಾಗಿದೆ. ಹಾಗೆಯೇ ಹಿರೇ ಬೆಣಕಲ್ ನೆಲೆಯಲ್ಲಿನ ಶಿಲಾಯುಗ ಸಮಾಧಿಗಳನ್ನು ಮೋರೆರ ಮನೆಗಳೆಂದೇ ಕರೆಯುತ್ತಾರೆ.

ಗಡ್ಡಿ ಪರಿಸರದ ಎರಡು ಕಲ್ಲಾಸರೆಗಳಲ್ಲಿ ಕ್ರಮವಾಗಿ ಮಾನವರ ಮತ್ತು ಒಂದು ಪ್ರಾಣಿಯ ಚಿತ್ರಗಳನ್ನು ಕೋಲ್ಕಾರ ಅವರು ೨೦೦೨ರ ಅವಧಿಯಲ್ಲಿ ಬೆಳಕಿಗೆ ತಂದರು (ಚಿತ್ರ ೭).

ಈ ನೆಲೆಯನ್ನು ಸಾಂಸ್ಕೃತಿಕ ಹಿನ್ನೆಲೆಯಲ್ಲಿ ನೋಡುವುದಾದರೆ, ಇಲ್ಲಿನ ಚಿತ್ರಗಳು ಕಾಲಮಾನ ದೃಷ್ಟಿಯಿಂದ ಸೂಕ್ಷ್ಮ ಶಿಲಾಯುಗ ಹಂತಕ್ಕೆ ಸೇರಿವೆ. ಹಾಗೆಯೇ ಇಲ್ಲಿ ಕಂಡುಬಂದಿರುವ ಕಲ್ಗುಳಿಗಳು ಅಧ್ಯಯನ ದೃಷ್ಟಿಕೋನದಿಂದ ಹೆಚ್ಚು ವಿಶೇಷತೆಯನ್ನು ಪಡೆದುಕೊಂಡಿವೆ. ಇತ್ತೀಚಿನ ದಿನಗಳಲ್ಲಿ ನಡೆಯುತ್ತಿರುವ ಭಾರಿ ಗಣಿಗಾರಿಕೆ ಮತ್ತು ನಿಧಿಗಳ್ಳರ ಹಾವಳಿಯಿಂದ ಏಳು ಗುಡ್ಡ ಸಾಲಿನಲ್ಲಿ ಕಂಡುಬರುವ ಆದಿ ಮಾನವನ ಛಾಯೆ ಮರೆಮಾಚುತಿದೆ. ಇದರಲ್ಲಿ ಪ್ರಸ್ತುತ ನೆಲೆ ಮತ್ತು ಈಗಾಗಲೇ ಪ್ರಸಿದ್ಧಿ ಪಡೆದಿರುವ ಹಿರೇ ಬೆಣಕಲ್ ನೆಲೆಯು ಹೊರತಾಗಿಲ್ಲ. ಆದ್ದರಿಂದ ಈ ಕೂಡಲೇ ವಿದ್ವಾಂಸರು, ಆಸಕ್ತರು ಗಮನಹರಿಸಿ ಇವುಗಳ ರಕ್ಷಣೆಯಲ್ಲಿ ಮುಂದಾಗಬೇಕು. ಪ್ರಸ್ತುತ ಹಿರೇ ಬೆಣಕಲ್ ಪರಿಸರವು ಯುನೆಸ್ಕೋದ ವಿಶ್ವ ಪಾರಂಪರಿಕ ತಾತ್ಕಾಲಿಕ ಪಟ್ಟಿಗೆ ಸೇರಿರುವುದು ನಮ್ಮ ಸಂಸ್ಕೃತಿಗೆ ಹಿಡಿದ ಕನ್ನಡಿಯಾಗಿದೆ.

[ಕ್ಷೇತ್ರ ಕಾರ್ಯದಲ್ಲಿ ಸಹಕರಿಸಿದ ಗಡ್ಡಿಯ ಸುರೇಶ್ ಉಪ್ಪಾರ್, ನನ್ನ ಅಳಿಯ ಪ್ರದೀಪ್ ಎಸ್. ಕಲ್ಮನೆ ಮತ್ತು ತಾಂತ್ರಿಕವಾಗಿ ನೇರವಾದ ಹೇಮಂತ್ ದಳವಿ ಅವರಿಗೆ ಹಾಗೂ ಲೇಖನ ಸಿದ್ಧಪಡಿಸಲು ಸಹಕರಿಸಿದ ಡಾ. ಕೆ. ಎನ್. ಸುಪ್ರೀತ ಅವರಿಗೆ ಹೃದಯಪೂರ್ವಕ ಕೃತಜ್ಞತೆಗಳು.]

ಆಕರ ಗ್ರಂಥಗಳು

೧. ಕೋಲ್ಕಾರ, ಶರಣಬಸಪ್ಪ ೨೦೧೦. ಶಿಲಾಯುಗದ ಗವಿಚಿತ್ರಗಳು, ಬಸವ ಪ್ರಕಾಶನ ಮತ್ತು ಪುಸ್ತಕ ವ್ಯಾಪಾರಿಗಳು, ಗುಲಬರ್ಗಾ.

೨. ಮೋಹನ, ಆರ್. ೨೦೧೭. ತುಂಗಭದ್ರಾ ನದಿ ತೀರದಲ್ಲಿ ಇತ್ತೀಚೆಗೆ ಶೋಧಿಸಿದ ಪ್ರಾಗಿತಿಹಾಸ ಕಾಲದ ವರ್ಣಚಿತ್ರಗಳು. ಇತಿಹಾಸ ದರ್ಪಣ ೩೫ (ಅಕ್ಟೋಬರ್–ಡಿಸೆಂಬರ್): ೧೧–೨೭.

೩. ಮೋಹನ, ಆರ್. ೨೦೧೯. ಕರ್ನಾಟಕದ ಆದಿಮಚಿತ್ರಕಲೆ. ಬೆಂಗಳೂರು: ಇತಿಹಾಸ ದರ್ಪಣ ಪ್ರಕಾಶನ.

೪. ಸುಂದರ ಅ., ೧೯೭೪, ಕರ್ನಾಟಕ ಪ್ರಾಗಿತಿಹಾಸ ಕಾಲದ ಕಲೆ, ಕರ್ನಾಟಕ ಲಲಿತ ಕಲಾ ಅಕಾಡೆಮಿ, ಬೆಂಗಳೂರು.

೫. Mohana, R. 2015. Reading Rock Art: Interpreting Temporal and Geographic Variability in the Lower Malaprabha Basin, Karnataka. Unpublished Ph.D. Dissertation. Pune: Deccan College, PGRI.

೬ Mohana, R. 2021. Archaeology of Middle Tungabhadra Valley: with Reference to Rock Art. Post-doctoral Dissertation. Pune: Deccan College, PGRI.

೭. Munn, C. L. 1934. Prehistoric and Protohistoric Finds, The Journal Hyderabad Geological Society 1(2): 121-135.

೮. Sinopoli, C. M. 2011. Human Reorientation in the South Indian Iron Age: Examples from Kadebakele, South India. Man in India 91(2): 373-385.

೯. Sundara, A. 1974. Further Notice of Rock Paintings in Hire Benakal. Journal of Indian History 52(1): 21-35.

ಕಲ್ಲಂಡೂರು: ನವಶಿಲಾಯುಗ ಮತ್ತು ಬೃಹತ್ ಶಿಲಾಯುಗ ಸಂಸ್ಕೃತಿ ನೆಲೆ ಹೊಸ ಶೋಧ

ಆರ್.ವಿ. ರವೀಂದ್ರನಾಥ*

ಭಾರತದಲ್ಲಿ ಪ್ರಾಗೈತಿಹಾಸಿಕ ಕಾಲದ ಕೊನೆಯ ಹಂತವಾಗಿರುವ ಬೃಹತ್ ಶಿಲಾಯುಗ ಸಂಸ್ಕೃತಿಯು ಸವಿಸ್ತಾರವಾಗಿ ಹರಡಿದ್ದು ವಿವಿಧ ಕಾಲಘಟ್ಟಗಳಲ್ಲಿ ಅನೇಕ ಪ್ರಾದೇಶಿಕ ಲಕ್ಷಣಗಳನ್ನೊಳಗೊಂಡು ಪ್ರಸಾರವಾಗಿರುವುದು ತಿಳಿದು ಬರುತ್ತದೆ. ಕರ್ನಾಟಕದಲ್ಲಿ ಈ ಸಂಸ್ಕೃತಿಯು ಎಲ್ಲಾ ಜಿಲ್ಲೆಗಳಲ್ಲಿಯೂ ಕಂಡು ಬಂದಿದೆ. ವಿಶೇಷವಾಗಿ ಕೋಲಾರ ಜಿಲ್ಲೆಯ ಕಲ್ಲಂಡೂರು ಗ್ರಾಮದಲ್ಲಿ ಹೊಸದಾಗಿ ಪತ್ತೆ ಹಚ್ಚಲಾಗಿರುವ ನವ ಶಿಲಾಯುಗಕ್ಕೆ ಸೇರಿದ ಶಿಲೋಪಕರಣಗಳು ಮತ್ತು ಬೃಹತ್ ಶಿಲಾಯುಗ ಸಂಸ್ಕೃತಿಗೆ ಸೇರಿದ ಶಿಲಾಸಮಾಧಿ/ಕಲ್ಗೋರಿಗಳನ್ನು ಗುರುತಿಸುವಲ್ಲಿ ಹೇಗೆ ಪಾತ್ರವಹಿಸುತ್ತದೆ ಎಂಬುದನ್ನು ವಿಶ್ಲೇಷಿಸಲಾಗಿದೆ.

ಭೂ ವೈಜ್ಞಾನಿಕ ಲಕ್ಷಣಗಳು

ಕೋಲಾರ ಜಿಲ್ಲೆಯು ಬಹುಮಟ್ಟಿಗೆ ನೈಸ್‌ಕಣಶಿಲೆಯ ಪ್ರದೇಶವಾಗಿದೆ. ಇಲ್ಲಿನ ಒಂದು ಬೆಟ್ಟಗಳ ಶ್ರೇಣಿ ಪೂರ್ವಕ್ಕೆ ಹಬ್ಬಿದ್ದು ಇದು ಆಂಧ್ರಪ್ರದೇಶ ರಾಜ್ಯದ ಕಡೆಯಿಂದ ದಕ್ಷಿಣಾಭಿಮುಖವಾಗಿ ಸಾಗಿ ಕರ್ನಾಟಕ ರಾಜ್ಯದ ಚಿಕ್ಕಬಳ್ಳಾಪುರ ಜಿಲ್ಲೆಯ ಮುರುಗುಮಲೆ, ಅಂಬಾಜಿದುರ್ಗ, ರೆಹಮಾನ್‌ದುರ್ಗ ಮೂಲಕ ಕೋಲಾರ ಜಿಲ್ಲೆಯ/ನಗರದ ಪಶ್ಚಿಮದಿಂದ ಅವಿರತವಾಗಿ ದಕ್ಷಿಣದಲ್ಲಿ ಮೇಡಿಹಾಳಬೆಟ್ಟ, ಅಂದ್ರಹಳ್ಳಿಬೆಟ್ಟ, ಧನಮಟ್ಟನಹಳ್ಳಿಬೆಟ್ಟ, ಗರುಡನಹಳ್ಳಿಬೆಟ್ಟ, ಶತಶೃಂಗಪರ್ವತ (ಅಂತರಗಂಗೆ), ಕೆಂದಟ್ಟಿ, ಚುಂಚದೇನಹಳ್ಳಿ, ಚಲುವನಹಳ್ಳಿ, ಬೆಟ್ಟಬೆಣಜೇನಹಳ್ಳಿ, ಮಂಗಸಂದ್ರ, ಕಲ್ಲಂಡೂರು ಬೆಟ್ಟಗಳ ಮೂಲಕ ವಕ್ಕಲೇರಿಬೆಟ್ಟ ಭೂಪತಿಯಮ್ಮನಬೆಟ್ಟ ಮತ್ತು ಟೇಕಲ್ ಬೆಟ್ಟಗಳವರೆಗೂ ಮುಂದುವರೆದಿದೆ.

ಭೂ ಮೇಲ್ಮೈ ಲಕ್ಷಣಗಳು

ಕೋಲಾರ ಜಿಲ್ಲೆ, ದಕ್ಷಿಣ ಭಾರತದ ಮಧ್ಯವರ್ತಿ ಸ್ಥಾನದಲ್ಲಿದ್ದು, ಭಾರತದ ದೇಶಕ್ಕೆ ಅದರ ಸಂಸ್ಕೃತಿ ಮತ್ತು ಜೀವನ ವಿಧಾನಕ್ಕೆ ಮೂಲಾಧಾರವಾದ ಮಳೆಯ ಮಾರುತಗಳು ಜಿಲ್ಲೆಯ ಒಳಗಿನ ಪ್ರದೇಶಕ್ಕೆ ಕಡಿಮೆ ಮಳೆಯನ್ನು ಒದಗಿಸುತ್ತವೆ. ಈ ಅಂಶ ಜಿಲ್ಲೆಯ ಸಾಂಸ್ಕೃತಿಕ ರೂಪಣೆಯಲ್ಲಿ ಮುಖ್ಯಪಾತ್ರವನ್ನು ವಹಿಸುತ್ತದೆ. ಜಿಲ್ಲೆಯ ಒಟ್ಟು ಭೌಗೋಳಿಕ ವಿಸ್ತೀರ್ಣ ೩೯೬೯ ಚ.ಕಿ.ಮೀ. ಆಗಿದ್ದು, ಕೋಲಾರ ತಾಲ್ಲೂಕು ಪ್ರದೇಶ ೬೯೨ ಚ.ಕಿ.ಮೀ. ಇದರಲ್ಲಿ ೪೮೭ ಚ.ಕಿ.ಮೀ. ಜನಸಾಂದ್ರತೆ ಹೊಂದಿದ್ದರೆ, ೩೦೫ ಚ.ಕಿ.ಮೀ. ಜನಸಾಂದ್ರತೆ ಹೊಂದಿಲ್ಲದ ಪ್ರದೇಶವಾಗಿದೆ. ಈ ತಾಲ್ಲೂಕು ೩೬೨ ಗ್ರಾಮಗಳನ್ನು ಹೊಂದಿದ್ದು, ಇದರಲ್ಲಿ ಜನವಸತಿ ಇಲ್ಲದ್ದು ೩೧ ಗ್ರಾಮಗಳು.

ಕೋಲಾರ ಜಿಲ್ಲೆಯ ಪ್ರಾಚೀನತೆ

ಭೌಗೋಳಿಕವಾಗಿ ಬೆಟ್ಟ-ಗುಡ್ಡಗಳಿಂದ ಆವೃತ್ತವಾಗಿರುವ ಕೋಲಾರ ಜಿಲ್ಲೆಯಲ್ಲಿನ ಮಾನವನ ಚಟುವಟಿಕೆಗಳನ್ನು ಇತಿಹಾಸ ಪೂರ್ವಕಾಲಕ್ಕೆ ಗುರುತಿಸಬಹುದಾಗಿದೆ. ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಗಳ ಗಡಿಗೆ ಹೊಂದಿಕೊಂಡಂತಿರುವ ತುಮಕೂರು, ಬಳ್ಳಾರಿ, ತಮಿಳುನಾಡು ಮತ್ತು ಆಂಧ್ರಪ್ರದೇಶಗಳಲ್ಲಿ ಆದಿ ಶಿಲಾಯುಗ ಸಂಸ್ಕೃತಿಯ ಮಾನವನಿಗೆ ಸಂಬಂಧಿಸಿದ ಅವಶೇಷಗಳು ಕೆಲವೆಡೆ ದೊರತಿದ್ದು, ಅವುಗಳ ಪ್ರಾಚೀನತೆ ಆದಿ ಶಿಲಾಯುಗ ೫ ಲಕ್ಷ ವರ್ಷಗಳು, ಮಧ್ಯಶಿಲಾಯುಗ- ಕ್ರಿ.ಪೂ. ೪೦.೦೦೦ ದಿಂದ ಕಿ.ಪೂ. ೧೦,೦೦೦, ಸೂಕ್ಷ್ಮ ಶಿಲಾಯುಗ- ಕ್ರಿ.ಪೂ. ೧೦,೦೦೦ ದಿಂದ ಕ್ರಿ.ಪೂ. ೨,೫೦೦ ರಕ್ಕೆ ಸೇರಿದ ನೆಲೆಗಳು ಈ ಮೇಲಿನ ಜಿಲ್ಲೆಗಳಲ್ಲಿ ಯಥೇಚ್ಚವಾಗಿ ದೊರೆತಿವೆ.

* ಇತಿಹಾಸ ಉಪನ್ಯಾಸಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊಸಕೋಟೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ.

ಇತ್ತೀಚೆಗೆ ಡಾ॥ ಎಸ್.ಕೆ. ಅರುಣಿ ತಮ್ಮ "ಬೆಂಗಳೂರು ಪರಂಪರೆ [ಇತಿಹಾಸ ಸಂಶೋಧನೆಯ ಹೊಸ ನೋಟಗಳು] ಎಂಬ ಗ್ರಂಥದಲ್ಲಿ ಪ್ರಸ್ತಾಪಿಸಿರುವಂತೆ" ಕೋಲಾರ ಜಿಲ್ಲೆಯಲ್ಲಿಯು ಹಳೆ ಶಿಲಾಯುಗ ಅವಶೇಷಗಳು ದೊರಕಿರುವ ಮಾಹಿತಿಗಳಿದ್ದು, ಸು. ೫-೬ ಲಕ್ಷ ವರ್ಷಗಳ ಪುರಾತನ ಆದಿಮಾನವ ವಾಸವಾಗಿರುವ ಸಾಧ್ಯತೆಗಳಿವೆ ಎಂದು ಹೇಳುವ ಮೂಲಕ ಜಿಲ್ಲೆಯ ಪ್ರಾಚೀನತೆಯ ಬಗ್ಗೆ ಮೊದಲ ಬಾರಿಗೆ ಬೆಳಕು ಚೆಲ್ಲಿದ್ದಾರೆ.

ಕೋಲಾರ ಜಿಲ್ಲೆಯ ಪುರಾತತ್ವ ನೆಲೆಗಳು ಮತ್ತು ಶೋಧ

ಈವರೆಗೆ ಕೋಲಾರ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಪೂರ್ವ/ಸ್ವಾತಂತ್ರ್ಯೋತ್ತರದಲ್ಲಿ ದೊರೆತಿರುವ ಸಮಾಧಿನೆಲೆಗಳ ಸಂಖ್ಯೆಯೇ ಸುಮಾರು ಇನ್ನೂರಕ್ಕೂ ಹೆಚ್ಚು. ಇವುಗಳಲ್ಲಿ ಕೆಲವು ನೆಲೆಗಳ ಅಧ್ಯಯನ ಮತ್ತು ಉತ್ಖನನ ಕೈಗೊಂಡು ವರದಿ ನೀಡಿದ ಪುರಾತತ್ವ ಶಾಸ್ತ್ರಜ್ಞ ಕ್ಯಾಪ್ಟನ್ ರಾಬರ್ಟ್ ಕೋಲ್, ರಾಬರ್ಟ್ ಬ್ರೂಸ್ ಫೂಟ್, ಕುಕ್, ಜಾನ್ ಮಾರ್ಷಲ್, ಎಂ. ಹೆಚ್. ಕೃಷ್ಣ, ಎಂ. ಶೇಷಾದ್ರಿ, ಎಲ್.ಕೆ. ಶ್ರೀನಿವಾಸ್, ಸಿ. ಕೃಷ್ಣಮೂರ್ತಿ, ಬಿ. ನರಸಿಂಹಯ್ಯ ಮತ್ತು ಎಸ್.ಆರ್.ರಾವ್ ಹಾಗೂ ಇನ್ನೂ ಹಲವಾರು ವಿದ್ವಾಂಸರು.

ಆದರೆ ಜಿಲ್ಲೆಯ ಮಾಲೂರು ತಾಲ್ಲೂಕಿನ ಬನಹಳ್ಳಿ ಇಡೀ ದಕ್ಷಿಣ ಭಾರತದಲ್ಲೇ ಅತಿದೊಡ್ಡ ವಸತಿ ನೆಲೆಯಾಗಿತ್ತೆಂಬ ಅಂಶ ಮರೆಯುವಂತಿಲ್ಲ. ಉತ್ಖನನದಿಂದ ಇಲ್ಲಿನ ಸಂಸ್ಕೃತಿ ಕಾವೇರಿ ಬಯಲಿನ ಸಂಸ್ಕೃತಿಗಿಂತ ಭಿನ್ನ ಎಂದೂ ಹಾಗೂ ಒಂದು ಶವಕುಣಿಯಲ್ಲಿ ಬ್ಲೇಡಿನಂಥ ಮೂರು ಸಣ್ಣ ಸಣ್ಣ ಕಲ್ಲುಚಕ್ಕೆಗಳನ್ನು ಉದ್ದನೆಯ ಎಲುಬಿನಲ್ಲಿ ಕೊರೆದು ಮಾಡಿದ ತಗ್ಗಿನಲ್ಲಿ ಒಂದರ ಪಕ್ಕದಲ್ಲಿ ಒಂದರಂತೆ ಜೋಡಿಸಿ ಅಂಟಿನಿಂದ ಗಟ್ಟಿ ಮಾಡಲಾಗುತ್ತಿತ್ತು. ಇದೊಂದು ಸಂಕೀರ್ಣ ಉಪಕರಣ, ಇಡೀ ದಕ್ಷಿಣ ಭಾರತದಲ್ಲಿ ಇಂಥ ಉಪಕರಣ ದೊರೆತಿರುವುದು ಇದೇ ಮೊದಲು ಎಂದು ವಿದ್ವಾಂಸರು ತಿಳಿಸಿದ್ದಾರೆ.

ಕೋಲಾರ ಜಿಲ್ಲೆಯ/ತಾಲ್ಲೂಕಿನ ಕಲ್ಲಂಡೂರು ಗ್ರಾಮದಲ್ಲಿ ನವ ಶಿಲಾಯುಗ ಶಿಲೋಪಕರಣಗಳು ಮತ್ತು ಬೃಹತ್ ಶಿಲಾಯುಗ ಸಂಸ್ಕೃತಿಯ ಬೃಹತ್ ನೆಲೆಯನ್ನು ಲೇಖಕರು [ಡಾ॥ ಆರ್.ವಿ.. ರವೀಂದ್ರನಾಥ] ಪತ್ತೆಹಚ್ಚಿದ್ದಾರೆ. ಇದು ಹೊಸನೆಲೆ ಹಾಗೂ ಹೊಸಶೋಧವಾಗಿದೆ.

ಕಲ್ಲಂಡೂರು ಪರಿಚಯ

ಕಲ್ಲಂಡೂರು, ಕೋಲಾರ-ಮಾಲ್ಲೂರು ರಸ್ತೆಯಲ್ಲಿರುವ ಒಂದು ಗ್ರಾಮ. ದೂರ ಸು.೧೨ ಕಿ.ಮೀ., ಇದು ಬೆಟ್ಟದ ತಪ್ಪಲಿನಲ್ಲಿದೆ. ಈ ಗ್ರಾಮ ಸು.೧೫೦ ಮನೆಗಳು, ಸು.೧೦೦೦ ಜನಸಂಖ್ಯೆಯನ್ನು ಹೊಂದಿದ್ದು, ಬೆಗ್ಲಿಹೊಸಹಳ್ಳಿ ಪಂಚಾಯಿತಿಗೆ ಸೇರಿದೆ. ಈ ಗ್ರಾಮ ಏಳು ರಸ್ತೆಗಳ ಸಂಪರ್ಕ ಹೊಂದಿದೆ. ಐದು ರಸ್ತೆಗಳು ಕೋಲಾರ-ಮಾಲೂರು ರಸ್ತೆ ಮೂಲಕ, ಎರಡು ರಸ್ತೆಗಳು ಕೋಲಾರ-ಟೇಕಲ್ ಮಾರ್ಗದಲ್ಲಿರುವ ಬೆಗ್ಲಿಹೊಸಹಳ್ಳಿ ಮತ್ತು ಮುದುವತ್ತಿ ಮಾರ್ಗಗಳ ಮೂಲಕ ಸಂಪರ್ಕ ಹೊಂದಿವೆ. ಕಲ್ಲಂಡೂರು ದೊಡ್ಡಬೆಟ್ಟ ಹೊಂದಿದ್ದು, ಗ್ರಾಮದ ಜಮೀನಿಗಳಲ್ಲಿ ದೊಡ್ಡ ದೊಡ್ಡ ಬಂಡೆಗಳು-ಗುಟ್ಟೆಗಳು ಹೇರಳವಾಗಿವೆ. ಇವುಗಳ ಸುತ್ತ ಮುತ್ತಲಿನಲ್ಲಿಯೇ ಒಂದು ನೂರಕ್ಕೂ ಹೆಚ್ಚು ಶಿಲಾಸಮಾಧಿಗಳು ನನ್ನ ಕ್ಷೇತ್ರಕಾರ್ಯ ಅವಧಿಯಲ್ಲಿ ಪತ್ತೆಯಾಗಿದ್ದು, ಈ ನೆಲೆ ಹೊಸ ಶೋಧವಾಗಿದೆ . ಇಲ್ಲಿನ ಶಿಲಾಸಮಾಧಿಗಳನ್ನು ಸ್ಥಳೀಯವಾಗಿ ದೊರಕುವ ಕಲ್ಲುಗಳಿಂದಲೇ ನಿರ್ಮಾಣ ಮಾಡಿರುವುದು ಕಂಡು ಬಂದಿವೆ. ಈ ಪ್ರದೇಶದಲ್ಲಿ ಯಾವುದೇ ನದಿ ಅಥವಾ ಉಪ ನದಿಯಾಗಲಿ ಇಲ್ಲ.

ನವ ಶಿಲಾಯುಗ

ಕೋಲಾರ ಜಿಲ್ಲೆಯ ಮಾಲ್ಲೂರು ತಾಲ್ಲೂಕಿನ ಬನಹಳ್ಳಿ ದಕ್ಷಿಣ ಭಾರತದಲ್ಲೇ ಅತಿದೊಡ್ಡ ನೆಲೆಯಾಗಿದ್ದು. ೧. ನವ ಶಿಲಾಯುಗ ೨. ನವಶಿಲಾ-ತಾಮ್ರಯುಗ ೩. ತಾಮ್ರಶಿಲಾಯುಗ-ಕಬ್ಬಿಣಯುಗ ೪. ಕಬ್ಬಿಣಯುಗ ಮತ್ತು ಆದಿಚಾರಿತ್ರಿಕ ಕಾಲ. ಹೀಗೆ ನಾಲ್ಕು ಸಾಂಸ್ಕೃತಿಕ ಹಂತಗಳಲ್ಲಿ ಕಂಡು ಬಂದಿವೆ. ಜಿಲ್ಲೆಯಲ್ಲಿ ಈ ನವ ಶಿಲಾಯುಗಕ್ಕೆ ಸೇರಿದ ಸು.೨೦ ಹಾಗೂ ತಾಲ್ಲೂಕಿನಲ್ಲಿ ಸು.೫೦ ನೆಲೆಗಳು ಪತ್ತೆಯಾಗಿವೆ.

ಪ್ರಸ್ತುತ ಈ ಲೇಖನಕ್ಕೆ ಸಂಬಂಧಿಸಿದ ಕಲ್ಲಂಡೂರು ಗ್ರಾಮದಲ್ಲಿ ನವ ಶಿಲಾಯುಗಕ್ಕೆ ಸೇರಿದ ಕಲ್ಲಿನ ಕೈಕೊಡಲಿಗಳನ್ನು ಪತ್ತೆ ಹಚ್ಚಲಾಗಿದೆ. ಈ ಉಪಕರಣಗಳಲ್ಲಿ ಕೆಲವು ಶ್ರೀ ಪಟ್ಟಾಲಮ್ಮ ದೇವಾಲಯ [ಗರ್ಭಗುಡಿ ಮುಂಭಾಗ]ದಲ್ಲಿ ಪ್ರತಿಷ್ಠಾಪಿಸಿದ್ದಾರೆ. ಇನ್ನೂ ಕೆಲವು ಶಿಲೋಪಕರಣಗಳನ್ನು ಈ ಗ್ರಾಮದ ಬೆಟ್ಟದ ಮೇಲಿರುವ ಪಾಂಡವರ ಗುಡಿಯಲ್ಲಿ ಇಟ್ಟು ಇವುಗಳನ್ನು

‘ಅಕ್ಕನವರ ತಾಯಿ’ ಎಂದು ಕರೆಯುತ್ತಾ ತಲ ತಲಾಂತರಗಳಿಂದ ಪೂಜೆ ಮಾಡಿಕೊಂಡು ಬರುತ್ತಿದ್ದಾರೆ. ಇದರೊಡನೆ ಗ್ರಾಮದ ಜನರು ಭಾವನಾತ್ಮಕ ಸಂಬಂಧವನ್ನು ಗಟ್ಟಿಯಾಗಿ ಹೊಂದಿದ್ದಾರೆ. ಇದನ್ನು ನಾನು ನನ್ನ ಕ್ಷೇತ್ರಕಾರ್ಯದ ಅವಧಿಯಲ್ಲಿ ಗಮನಿಸಿದ್ದೇನೆ. ಈ ಕಲ್ಲಂಡೂರು ನೆಲೆ ಬನಹಳ್ಳಿ ನೆಲೆಗೆ ಕೇವಲ ೧೫ ಕಿ.ಮೀ. ದೂರದಲ್ಲಿದೆ.

ಬೃಹತ್ ಶಿಲಾಯುಗ ಸಂಸ್ಕೃತಿ

ಬೃಹತ್ ಶಿಲಾಯುಗ [ಕಬ್ಬಿಣದ ಯುಗ] ಸಂಸ್ಕೃತಿ ಜನರು ಕುತೂಹಲಕರವಾದ ವಿವಿಧ ಮಾದರಿಯ ಬೃಹತ್ ಶಿಲಾಗೋರಿಗಳನ್ನು ನಿರ್ಮಿಸುತ್ತಿದ್ದುದರಿಂದ ಈ ಸಂಸ್ಕೃತಿಯನ್ನು ಬೃಹತ್ ಶಿಲಾಯುಗ ಸಂಸ್ಕೃತಿ ಎಂದು ಕರೆಯಲಾಗುತ್ತಿದೆ. ಜೊತೆಗೆ ಈ ಹಂತದಲ್ಲಿ ಕಬ್ಬಿಣದ ಬಳಕೆಯ ಮಹತ್ವವನ್ನು ಕಾಣಬಹುದು. ಕಲ್ಲುಗೋರಿಗಳು ಈ ಜನರ ಪಾರಂಪರಿಕ ನಂಬಿಕೆಗಳ ತಳಹದಿಯ ಮೇಲೆ ರೂಪಿತವಾದವುಗಳಾಗಿವೆ. ಈ ಜನರು ಜೀವಿಸುತ್ತಿದ್ದ ಪ್ರದೇಶಗಳನ್ನು ವಾಸ್ತವ್ಯದ ನೆಲೆಗಳೆಂದೂ ಹಾಗೂ ಶವಸಂಸ್ಕಾರದ ಕೇಂದ್ರಗಳನ್ನು ಗೋರಿನೆಲೆಗಳೆಂದೂ ಪ್ರತ್ಯೇಕವಾಗಿ ಅಧ್ಯಯನ ನಡೆಸಲಾಗಿದೆ.

ಕೋಲಾರ ಜಿಲ್ಲೆಯಲ್ಲಿ ಈ ಸಂಸ್ಕೃತಿಗೆ ಸೇರಿದ ಶಿಲಾಗೋರಿಗಳು ಅತ್ಯಧಿಕವಾಗಿವೆ. ತಾಲ್ಲೂಕಿನ ಗರುಡನಹಳ್ಳಿಬೆಟ್ಟದ ಸಾಲು, ಮಾಲೂರು ತಾಲ್ಲೂಕಿನ ಬಿಟ್ನಹಳ್ಳಿ ಮತ್ತು ಅಲಹಳ್ಳಿಗಳಲ್ಲಿ ನೂರಾರು ಶಿಲಾಗೋರಿಗಳು ಪತ್ತೆಯಾಗಿರುವುದನ್ನು ಜಿಲ್ಲಾ ಗ್ಯಾಸೆಟಿಯರ್‌ನಲ್ಲಿ ಪ್ರಸ್ತಾಪಿಸಲಾಗಿದೆ. ಇಲ್ಲೆಲ್ಲ ಇಷ್ಟು ಅಧಿಕ ಸಂಖ್ಯೆಯಲ್ಲಿ ಬೃಹತ್ ಶಿಲಾಗೋರಿಗಳು ಇರುವುದಕ್ಕೆ ಮುಖ್ಯವಾಗಿ ಈ ಜನರಿಗೆ ಇವುಗಳನ್ನು ನಿರ್ಮಿಸಲು ಬೇಕಾದ ಚಪ್ಪಡಿ ಹಾಗೂ ಗುಂಡುಕಲ್ಲುಗಳು ಈ ಪ್ರದೇಶದಲ್ಲಿ ಯಥೇಚ್ಚವಾಗಿ ದೊರೆಯುವುದು ಒಂದು ಕಾರಣ. ಜಿಲ್ಲೆಯಲ್ಲಿ ಸು.೨೧೦ ಕ್ಕೂ ಹೆಚ್ಚು, ಕೋಲಾರ –೫೦, ಬಂಗಾರಪೇಟೆ–ಕೆ.ಜಿ.ಎಫ್–೭೦, ಮಾಲೂರು–೬೦, ಮುಳಬಾಗಿಲು–೨೫ ಮತ್ತು ಶ್ರೀನಿವಾಸಪುರ–೧೫ ನೆಲೆಗಳು ಪತ್ತೆಯಾಗಿವೆ.

ಜನಾಂಗ ಮತ್ತು ಮೂಲ ಹಾಗೂ ಭಾಷೆ

ಬ್ರಹ್ಮಗಿರಿ ಮತ್ತು ಮಸ್ಕಿಯಲ್ಲಿಯ ಕಲ್ಗೋರಿಗಳಲ್ಲಿ ದೊರೆತ ಅಸ್ಥಿ ಅವಶೇಷಗಳ ಪರೀಕ್ಷಣಗಳಿಂದ ಈ ಜನವರ್ಗದಲ್ಲಿ ಮೂರು ವಿಧದ ಜನಾಂಗಗಳನ್ನು ಗುರುತಿಸಲಾಗಿದೆ. ೧. ಸ್ಥಳಿಕ ಆಸ್ಟ್ರಲಾಯಿಡ್ ಹಾಗೂ ಪ್ರೋಟೊ ಆಸ್ಟ್ರಲಾಯಿಡ್, ೨. ಅಲ್–ಉಬೈದ್ ೩. ಸ್ಕಿಥೋ ಇರಾನಿಯನ್ ಜನಾಂಗದ ಮೆಸೊಬ್ಯಾಕಿ ಕ್ರೇನಿಯಲ್. ಈ ಬೃಹತ್ ಶಿಲಾಸಂಸ್ಕೃತಿಯ ಜನರು ಸ್ಥಳೀಯರಲ್ಲ ಎಂಬ ಅಭಿಪ್ರಾಯ ಬಹುಕಾಲ ಬಲವಾಗಿ ಬೇರೂರಿತ್ತು. ಆದರೆ ಇತ್ತೀಚೆಗೆ ಕೆನಡಿ ಮತ್ತು ಲೆವಿಸ್ಕಿ ಎಂಬ ಪುರಾತತ್ವ ವಿದ್ವಾಂಸರು ಕೈಗೊಂಡ ಅಸ್ಥಿಪಂಜರ ಅಧ್ಯಯನ ವಿದೇಶಿ ಸಿದ್ಧಾಂತಕ್ಕೆ ತೆರೆ ಎಳೆದಿದೆ. ಬೃಹತ್ ಶಿಲಾಸಂಸ್ಕೃತಿ ತಾಮ್ರ–ಶಿಲಾಯುಗದ ಮುಂದುವರಿಕೆಯಾಗಿದೆ ಎಂಬುದು ಇದರಿಂದ ಸಾಬೀತಾಗಿದೆ.

ದಕ್ಷಿಣ ಭಾರತದಲ್ಲಿ ಬೃಹತ್ ಶಿಲಾಸಂಸ್ಕೃತಿ ಕ್ರಿ.ಪೂ. ೧೨೦೦ರಿಂದ ೨೦೦ರವರೆಗೆ ಅಸ್ತಿತ್ವದಲ್ಲಿತ್ತು ಎಂಬುದನ್ನು ವೈಜ್ಞಾನಿಕವಾಗಿ ನಿರೂಪಿಸಿದಂತಾಗಿದೆ.

ಈ ಸಂಸ್ಕೃತಿಯ ಜನರು ಆಡುತ್ತಿದ್ದ ಭಾಷೆ ಯಾವುದು ಎಂಬುದರ ಬಗ್ಗೆ ಕುತೂಹಲಕಾರಿ ಚರ್ಚೆಗಳು ನಡೆದಿದ್ದರೂ ಇದರ ಬಗ್ಗೆ ಯಾವ ಸ್ಪಷ್ಟತೆಯೂ ಮೂಡಿಲ್ಲ, ಆದರೆ ಇದಕ್ಕಾಗಿ ಬಹುಮುಖೀಯ ಅಧ್ಯಯನವನ್ನು ನಡೆಸಬೇಕಾಗಿದೆ.

ಕಲ್ಲಂಡೂರು ಬೃಹತ್ ನೆಲೆ

ಕಲ್ಲಂಡೂರು ನೆಲೆ ಬೃಹತ್ ಶಿಲಾಯುಗ ಸಂಸ್ಕೃತಿಗೆ ಸೇರಿದ್ದೆಂದು ಅದರ ಗುಣಲಕ್ಷಣಗಳಿಂದ ಸಾಬೀತಾಗಿದೆ. ಆದರೆ ಇಲ್ಲಿರುವ ನೂರಾರು ಶಿಲಾಸಮಾಧಿಗಳೆಲ್ಲಾ ಒಂದೇ ಬಗೆಯಾಗಿವೆಯೆಂದು ಭಾವಿಸಬಾರದು. ಈ ನೆಲೆಯಲ್ಲಿ ಆರು ಬಗೆಯ ಸಮಾಧಿ ನಮೂನೆಗಳು ಕಂಡು ಬಂದಿದ್ದು, ಬಹುಶಃ ಆ ಜನರಲ್ಲಿದ್ದ ಒಳಪಂಗಡಗಳ ಆಚಾರ ಭೇದಗಳು ಇವಕ್ಕೆ ಕಾರಣವಾಗಿರಬಹುದು. ವಿದ್ವಾಂಸರಾದ ವಿ.ಡಿ. ಕೃಷ್ಣಸ್ವಾಮಿಯವರು ೧೨ ನಮೂನೆಯ ಶಿಲಾಸಮಾಧಿಗಳನ್ನು ಪ್ರಸ್ತಾಪಿಸಿದ್ದಾರೆ. ಈ ಶಿಲಾಸಮಾಧಿಗಳ ವಿನ್ಯಾಸವನ್ನು ಗುರುತಿಸುವಲ್ಲಿ ಪ್ರಾದೇಶಿಕ ಸನ್ನಿವೇಶ, ರಚನಾ ವಿಧಾನ, ತಳ ವಿನ್ಯಾಸ, ಶಿಲಾ ಮಾದರಿಗಳು ಮತ್ತು ಇನ್ನಿತರ ಅಂಶಗಳನ್ವಯ ಕಲ್ಲಂಡೂರು ಶಿಲಾ ಸಮಾಧಿಗಳನ್ನು

ಎ. ದೊಡ್ಡ ಎರಡು ವೃತ್ತ ಶಿಲಾಸಮಾಧಿ

ಬಿ. ದೊಡ್ಡ ಒಂದು ವೃತ್ತ ಶಿಲಾಸಮಾಧಿ

ಸಿ. ಕಲ್ಮನೆ ಸಮಾಧಿಗಳು

ಡಿ. ಕಲ್ಲುಗುಪ್ಪೆ ಸಮಾಧಿಗಳು

ಇ. ಗುಂಡುಕಲ್ಲು ಶಿಲಾವೃತ್ತ ಸಮಾಧಿಗಳು

ಎಫ್. ಅಂಡಾಕಾರ/ಆಯುತಾಕಾರ ಶಿಲಾಸಮಾಧಿಗಳು ಇತ್ಯಾದಿ ಗುಂಪುಗಳಾಗಿ ವಿಂಗಡಿಸಲಾಗಿದೆ.

ಎ. ದೊಡ್ಡ ಎರಡು ವೃತ್ತ ಶಿಲಾಸಮಾಧಿ [Portholed Cists]

ಎರಡು ಶಿಲಾವರ್ತುಲ [Stone circle] ಸಮಾಧಿ ಬೃಹತ್ ಶಿಲಾಯುಗ ಸಂಸ್ಕೃತಿಯಲ್ಲಿ ವಿಶೇಷವಾಗಿ ಬಳಕೆಯಲ್ಲಿದ್ದವು. ಈ ಶಿಲಾವರ್ತುಲಗಳು ಸಮಾಧಿಗಳ ಭೂ ಮಟ್ಟದ ಮೇಲಿನ ಲಕ್ಷಣವಾಗಿದ್ದು ಮಣ್ಣಿನ ದಿಬ್ಬಗಳು ಚದುರಿ ಹೋಗದಂತೆ ತಡೆಯುವ ಸಾಧನಗಳಾಗಿರುತ್ತಿದ್ದವು. ಈ ಶಿಲಾವರ್ತುಲ ಸಮಾಧಿಗಳ ಒಳಭಾಗದಲ್ಲಿ ಸಮಾಧಿ ಗುಂಡಿಗಳೋ, ಪೂರ್ಣ ಹೊತು ಹೋದ ಶಿಲಾತೊಟ್ಟಿಗಳೋ, ಶವಜಾಡಿಗಳೋ, ಶವತೊಟ್ಟಿಗಳೋ ಇರುವುದು ಬೇರೆ ಬೇರೆ ಕಡೆ ಉತ್ಖನನ ನಡೆದ ಜಾಗದಲ್ಲಿ ಕಂಡು ಬಂದಿರುವ ಲಕ್ಷಣಗಳು. ಆದುದರಿಂದ ಶಿಲಾ ವರ್ತುಲವಿದ್ದ ಮಾತ್ರಕ್ಕೆ ಸಮಾಧಿ ಯಾವ ಬಗೆಗೆ ಸೇರುತ್ತದೆಂದು ಹೇಳಲು ಸಾಧ್ಯವಾಗುವುದಿಲ್ಲವೆಂದು ವಿದ್ವಾಂಸರ ಅಭಿಪ್ರಾಯವಾಗಿದೆ.

ಇಂತಹ ಶಿಲಾವರ್ತುಲ ಸಮಾಧಿ ಕಲ್ಲಂಡೂರು ಗ್ರಾಮದಲ್ಲಿನ ಅರಸಪ್ಪನವರ ಆರು ಎಕರೆ ಜಮೀನಿನಲ್ಲಿ ಕಂಡು ಬಂದಿದೆ. ಇದು ಕಲ್ಲಂಡೂರು-ಬೆಗ್ಲಿಹೊಸಹಳ್ಳಿ ಮಾರ್ಗದ ಮುಂಭಾಗದಲ್ಲಿಯೇ ಇದೆ. ಇಲ್ಲಿ ದೊಡ್ಡ ಎರಡು ವೃತ್ತ ಅಥವಾ ಎರಡು ಸಾಲುಗಲ್ಲುಗಳ ಶಿಲಾಸಮಾಧಿಯನ್ನು ಸ್ಥಳೀಯ ನಿವಾಸಿ ಅಂಗಡಿ ಪಿಳ್ಳಪ್ಪನವರು ನನ್ನ ಕ್ಷೇತ್ರಕಾರ್ಯದ ಅವಧಿಯಲ್ಲಿ ತೋರಿಸಿದರು. ಈ ಶಿಲಾವೃತ್ತಗಳ ಸಮಾಧಿ ವ್ಯಾಸವು ಇಷ್ಟೇ ಎಂದು ನಾನು ಸ್ಪಷ್ಟವಾಗಿ ಹೇಳಲಾಗದಿದ್ದರೂ, ಈ ವರ್ತುಲ ಒಂದರೊಳಗೊಂದರಂತೆ ಇರುವಂತೆ ಮೇಲ್ನೋಟಕ್ಕೆ ತೋರುವ ಹೆಗ್ಗುರುತುಗಳಾಗಿವೆ. ಆದರೆ ಈ ಸಮಾಧಿಯ ಸುತ್ತಲು ಗುಂಡುಕಲ್ಲುಗಳನ್ನು ಹೊಂದಿರದೆ ಚತುಷ್ಕೋಣಾಕೃತಿ/ಷಟ್‌ಕೋಣಾಕೃತಿಯ ದೊಡ್ಡಗಾತ್ರದ ಕಲ್ಲುಗಳನ್ನು ಹೊಂದಿದೆ.

ಬಿ. ದೊಡ್ಡ ಒಂದು ವೃತ್ತ ಶಿಲಾಸಮಾಧಿ

ಒಂದು ಶಿಲಾವರ್ತುಲ [Stone circle] ಸಮಾಧಿಯು ಬೃಹತ್ ಸಂಸ್ಕೃತಿಯಲ್ಲಿ ವಿಶೇಷವಾಗಿ ಬಳಕೆಯಲ್ಲಿದ್ದವು. ಈ ಸಮಾಧಿ ಒಂದು ಸಾಲುಗಲ್ಲುಗಳನ್ನು ಮಾತ್ರ ಹೊಂದಿರುವ ದೊಡ್ಡಗಾತ್ರದ ಸಮಾಧಿಯಾಗಿದೆ. ಇದು ಕೂಡ ಕಲ್ಲಂಡೂರು ಗ್ರಾಮದ ಅರಸಪ್ಪನವರ ಜಮೀನಿನಲ್ಲಿಯೇ ಕಂಡು ಬಂದಿದೆ. ಇದು ದೊಡ್ಡ ಎರಡು ವೃತ್ತ ಶಿಲಾಸಮಾಧಿಯಿಂದ ಕೇವಲ ಹದಿನೈದು ಅಡಿ ದೂರದಲ್ಲಿದೆ. ಈ ಸಮಾಧಿವರ್ತುಲ ಗುಂಡುಕಲ್ಲುಗಳನ್ನು ಹೊಂದಿರದೆ ತ್ರಿಕೋಣಾಕೃತಿ/ಚತುಷ್ಕೋಣಾಕೃತಿ/ಷಟ್‌ಕೋಣಾಕೃತಿ ಹೊಂದಿದೆ, ಇದನ್ನು ನನ್ನ ಕ್ಷೇತ್ರ ಕಾರ್ಯದ ಅವಧಿಯಲ್ಲಿ ಸ್ಥಳೀಯ ನಿವಾಸಿ ಅಂಗಡಿ ಪಿಳ್ಳಪ್ಪನವರು ತೋರಿಸಿದರು.

ಸಿ. ಕಲ್ಮನೆ ಸಮಾಧಿಗಳು [Dolmenoid Cists]

ಭೂ ಮಟ್ಟದಲ್ಲಿ ೪-೫ ಚಪ್ಪಡಿ ಕಲ್ಲುಗಳಿಂದ ನಿರ್ಮಿಸಿದ ಪುಟ್ಟಕೋಣೆಯನ್ನು ಕಲ್ಮನೆ ಎನ್ನುವರು. ಅಂದರೆ ತೆಳುವಾದ ನಯವಾದ ಚಪ್ಪಡಿಗಳನ್ನು ತೆಗೆಯಲಾಗದಿದ್ದಾಗ ದಪ್ಪ ಮತ್ತು ಒರಟಾದ ಆದರೆ ಅಗಲವಾದ ಪ್ರಾಕೃತಿಕವಾಗಿ ದೊರಕುತ್ತಿದ್ದ ಕಲ್ಲುಬಂಡೆಯಗಳನ್ನು ನಾಲ್ಕುಪಾರ್ಶ್ವಗಳಿಗೆ ಗೋಡೆಯಂತೆ ಮತ್ತು ತಳಭಾಗದಲ್ಲಿ ಹಾಸುಗಲ್ಲಾಗಿ ಉಪಯೋಗಿಸಿ ಪೆಟ್ಟಿಗೆಯಾಕಾರದ ತೊಟ್ಟಿಗಳನ್ನು/ಪುಟ್ಟಕೋಣೆ/ಕಲ್ಮನೆಗಳನ್ನು ನಿರ್ಮಿಸುತ್ತಿದ್ದರು. ಇವುಗಳಲ್ಲಿ ಕೆಲವನ್ನು ನೇರವಾಗಿ ಶವಗಳ ಸಮಾಧಿ ಮಾಡಲು ಬಳಸಿಕೊಳ್ಳದೆ ಶವವನ್ನು ಕೆಲವು ಕಾಲ ಹೊರಗಿಟ್ಟು ಅಥವಾ ಬೇರೆ ಕಡೆ ಹುದುಗಿಟ್ಟು ಸ್ವಲ್ಪ ಕಾಲದ ನಂತರ ಅಂದರೆ ಮಾಂಸಖಂಡಗಳು ಮಣ್ಣಿನಲ್ಲಿ ಕರಗಿಹೋಗಿ ಉಳಿದು ಕೊಳ್ಳುವ ಅಸ್ಥಿಗಳನ್ನು ಸಂಗ್ರಹಿಸಿ ಮಡಕೆಯಲ್ಲಿಟ್ಟು ಈ ಶಿಲಾತೊಟ್ಟಿಗಳಲ್ಲಿ ಇಟ್ಟ ನಂತರ ಕೋಣೆಯ ಮೇಲ್ಭಾಗವನ್ನು ಚಪ್ಪಡಿಕಲ್ಲಿಂದ ಮುಚ್ಚಲಾಗಿರುತ್ತದೆ. ಕೆಲವೊಮ್ಮೆ ಯಾವುದಾದರೊಂದು ಬದಿಯ ಗೋಡೆಯಂತಿರುವ ಚಪ್ಪಡಿಕಲ್ಲಿನಲ್ಲಿ ವೃತ್ತಾಕಾರದ ಕಂಡಿ [ರಂದ್ರ-Portholed] ಕೊರೆದಿರುವುದು ಕಂಡು ಬರುತ್ತದೆ.

ಕಲ್ಲಂಡೂರು ಗ್ರಾಮದಲ್ಲಿ ಆರು ಕಲ್ಮನೆ ಸಮಾಧಿ/ಗೋರಿಗಳನ್ನು ಪತ್ತೆ ಹಚ್ಚಲಾಗಿದೆ. ಇದರಲ್ಲಿ ನಾಲ್ಕು ಕಲ್ಮನೆ ಸಮಾಧಿಗಳು ದಂಡೋರು ಗಂಗಪ್ಪನ ಮಗ ಸೀನಪ್ಪನ ಜಮೀನಿನ ನೀಲಗಿರಿ ತೋಪಿನಲ್ಲಿ ಕಂಡು ಬಂದಿದೆ. ಇನ್ನೊಂದು ಶ್ರೀ ಪಟ್ಟಾಲಮ್ಮ ದೇವಾಲಯದ ಪಕ್ಕದ ರಸ್ತೆ ಬದಿ ಕಂಡು ಬಂದಿದೆ. ಮತ್ತೊಂದು ಅಗಸರ ಚಿನ್ನಸ್ವಾಮಿಯವರ ಇನಾಂತಿ ಜಮೀನಿನ ಹಿಂಭಾಗದ ಕಲ್ಲುಬಂಡೆಗಳ ನಡುವೆ ಕಂಡು ಬಂದಿವೆ. ಇದನ್ನು ನಿಧಿಗಳ್ಳರು ಕಿತ್ತು ಹಾಕಿದ್ದಾರೆ.

ಸೀನಪ್ಪನ ಜಮೀನಿನಲ್ಲಿರುವ ನಾಲ್ಕು ಕಲ್ಮನೆಗಳಲ್ಲಿ ಎರಡು ಚೌಕಾಕಾರದಲ್ಲಿದ್ದರೆ, ಇನ್ನೊಂದು ಆಯುತಕಾರದಲ್ಲದೆ. ಚೌಕಾಕಾರದಲ್ಲಿರುವ ಕಲ್ಮನೆಗಳನ್ನು ಪುನರ್ ನಿರ್ಮಿಸಿರುವುದು ಕಂಡು ಬರುತ್ತದೆ. ಈ ಕೋಣೆಯ ಒಂದು ಭಾಗದಲ್ಲಿ ವೃತ್ತಾಕಾರದ ಒಂದು ಅಥವಾ ಒಂದೂವರೆ ಇಂಚಿನ ರಂಧ್ರ ಕೊರೆದಿರುವುದು ಕಂಡುಬಂದಿದೆ. ಅಲ್ಲದೆ ಈ ಕಲ್ಮನೆ ಒಳಗಡೆ ಮಧ್ಯಭಾಗದಲ್ಲಿರುವ ಕಲ್ಲಿನ ಮೇಲೆ ವೀರಗಲ್ಲು ಉಬ್ಬುಶಿಲ್ಪಗಳನ್ನು ಕೆತ್ತನೆ ಮಾಡಿರುವುದು ಕಂಡುಬಂದಿದೆ. ಇದನ್ನು ಪಕ್ಕದ ಚೋಳಘಟ್ಟ ಗ್ರಾಮದ ಕೆಲವು ಕುಟುಂಬದವರು ತಮ್ಮ ಮನೆ ದೇವರು/ಕುಲ ದೇವರು ಎಂದು ಪೂಜೆ ಮಾಡಿಕೊಂಡು ಹೋಗುತ್ತಾರೆಂದು ಕಲ್ಲಂಡೂರು ಗ್ರಾಮಸ್ಥರು ಮಾಹಿತಿ ನೀಡಿದ್ದಾರೆ.

ಈ ಕಲ್ಮನೆಗಳ ಪಕ್ಕದಲ್ಲಿಯೇ ಒಂದು ಆಯುತಾಕಾರದ ಕಲ್ಮನೆ ದೊರೆತಿದ್ದು, ಅಗಲ ೩ ಅಡಿ, ಉದ್ದ ೫ ಅಡಿ ಇದೆ. ಮೇಲಿನ ಚಪ್ಪಡಿಕಲ್ಲನ್ನು ಕಿತ್ತು ಹಾಕಿದ್ದಾರೆ, ಈ ಚಪ್ಪಡಿ ಇದರ ಮುಂಭಾಗದಲ್ಲಿಯೇ ಬಿದ್ದಿದೆ. ಆದರೆ ಅಗಲವಾದ ಚಪ್ಪಡಿ ಕಲ್ಲಿನಲ್ಲಿ ವೀರಗಲ್ಲು ಉಬ್ಬುಶಿಲ್ಪಗಳು ಕಂಡು ಬಂದಿವೆ. ಇದನ್ನು ಗಮನಿಸಿದರೆ ಆ ನಂತರದ ಕಾಲದಲ್ಲಿ ಕೆತ್ತನೆ ಮಾಡಿರುವುದು ಕಂಡು ಬರುತ್ತದೆ. ಇದನ್ನು ನಿಧಿಗಳ್ಳರು ಕಿತ್ತು ಹಾಕಿರುವುದು ಕಂಡು ಬರುತ್ತದೆ.

ವಿದ್ವಾಂಸರಾದ ಡಾ॥ ಎಸ್. ನಾಗರಾಜು ಪ್ರಕಾರ ಆ ಕಾಲದ ಅನೇಕ ಕಲ್ಮನೆ ಸಮಾಧಿಗಳನ್ನು ಇಲ್ಲಿ ಜನರು ಪಾಂಡವರ ಗುಡಿ, ಪಾಂಡವರ ಮನೆ ಇತ್ಯಾದಿಯಾಗಿ ಗುರುತಿಸುತ್ತಾರೆ. ದ್ರೌಪದಿ, ಧರ್ಮರಾಯ ಇವರ ಹೆಸರಿನಲ್ಲಿ ಕರಗದ ಉತ್ಸವ ನಡೆಯುತ್ತದೆ. ಇವೆಲ್ಲ ಒಂದಕ್ಕೊಂದು ಸಂಬಂಧಿಸಿದ್ದೆ. ಹಾಗಿದ್ದರೆ ಪಾಂಡವರು ಎಂದು ಗುರುತಿಸುವ ಅಥವಾ ಗೌರವಿಸುವ ಈ ಜನ ಯಾರು? ಅವರು ಸ್ಥಳೀಯರೇ? ಅಥವಾ ಉತ್ತರ ದೇಶದಿಂದ ವಲಸೆ ಬಂದವರೇ? ಇತ್ಯಾದಿ ಅನೇಕ ಪ್ರಶ್ನೆಗಳಿಗಾದರೂ ಈ ಶೋಧ ಉತ್ತರ ನೀಡಬಲ್ಲದು ಎಂದಿದ್ದಾರೆ.

ಡಿ. ಕಲ್ಲುಗುಪ್ಪೆ ಸಮಾಧಿಗಳು (Cairns Cists)

ಸಮಾಧಿಯ ಮೇಲೆ ಗುರುತಿಗಾಗಿ ಒತ್ತಾಗಿ ಗುಡ್ಡೆ ಹಾಕಿದ ಸಣ್ಣಕಲ್ಲುಗಳೇ ಕಲ್ಲುಗುಪ್ಪೆಗಳು. ಶವವನ್ನು ಸುಟ್ಟ ನಂತರ ಅಳಿದುಳಿದ ಬೂದಿ ಅವಶೇಷಗಳನ್ನು ಸಂಗ್ರಹಿಸಿ ಅದರ ಗುರುತಿಗಾಗಿ ಸುತ್ತಲೂ ಒತ್ತಾಗಿ ಹಾಕಿದ ಸಣ್ಣಕಲ್ಲು ಚೂರುಗಳಿಂದ ಮುಚ್ಚಿ ಕಲ್ಲುಗುಪ್ಪೆ ನಿರ್ಮಾಣ ಮಾಡಲಾಗುತ್ತದೆ. ಇವುಗಳು ನಿರ್ಧಿಷ್ಟ ಅಳತೆಯಲ್ಲಿರುವ ಕಲ್ಲುಗುಪ್ಪೆಗಳಾಗಿ ಗೋಚರಿಸುತ್ತವೆ. ಇವು ಚದುರಿ ಹೋಗದ ಹಾಗೆ ಅಂಚಿನಲ್ಲಿ ದೊಡ್ಡ ಗುಂಡು ಕಲ್ಲುಗಳ ಚೌಕೋನ ಅಥವಾ ಕಟ್ಟೆಯಿರುತ್ತದೆ.

ಕಲ್ಲಂಡೂರು ಗ್ರಾಮದಲ್ಲಿನ ನನ್ನ ಕ್ಷೇತ್ರಕಾರ್ಯ ಅವಧಿಯಲ್ಲಿ ಸು. ೮೦ಕ್ಕೂ ಹೆಚ್ಚು ಕಲ್ಲುಗುಪ್ಪೆ ಸಮಾಧಿಗಳನ್ನು ಪತ್ತೆ ಹಚ್ಚಲಾಗಿದೆ. ಇವುಗಳು ಹೆಚ್ಚಾಗಿ ಅಗಸರ ಚಿನ್ನಸ್ವಾಮಿಯವರ ಜಮೀನಿನಲ್ಲಿ ಕಂಡು ಬಂದಿವೆ. ಇನ್ನೂ ಕೆಲವು ಗ್ರಾಮದ ಬೇರೆ ಬೇರೆ ಜಮೀನುಗಳಲ್ಲಿ ಕಂಡು ಬಂದಿವೆ. ಇಲ್ಲಿನ ಕಲ್ಲುಗುಪ್ಪೆಗಳು ವಿಶೇಷವಾಗಿ ಬೆಣಚುಕಲ್ಲು ಚೂರುಗಳೇ ಆಗಿರುವುದು ಆಶ್ಚರ್ಯವನ್ನುಂಟು ಮಾಡಿದೆ. ವಿದ್ವಾಂಸರಾದ ಡಾ॥ ಅ. ಸುಂದರ ಪ್ರಕಾರ ಇದರ ಕಾಲಮಾನ ಕ್ರಿ.ಪೂ. ೧೨೦೦ ರಿಂದ ೧೦೦೦ ಪ್ರಾರಂಭಗೊಂಡು ಕ್ರಿ.ಪೂ. ೩ ರಿಂದ ೧ನೆಯ ಶತಮಾನದಲ್ಲಿ ರೂಢಿಯಲ್ಲಿತ್ತೆಂದು ಅಭಿಪ್ರಾಯ ಪಟ್ಟಿದ್ದಾರೆ.

ಇ. ಗುಂಡುಕಲ್ಲು ಶಿಲಾವೃತ್ತ ಸಮಾಧಿಗಳು (Stone Circle Cists)

ಸಮಾಧಿಯ ಸುತ್ತಲೂ ಸಣ್ಣಬಂಡೆಗಳನ್ನು ನೆಲಮಟ್ಟದಲ್ಲಿ ವೃತ್ತಾಕಾರದಲ್ಲಿ ಜೋಡಿಸಿರುತ್ತಾರೆ. ಸಾಮಾನ್ಯವಾಗಿ ಒಂದು ಸಮಾಧಿಗೆ ಒಂದೇ ಕಲ್ಲು ವೃತ್ತವಿರುತ್ತದೆ. ಶಿಲಾವರ್ತುಲಗಳು ಸಮಾಧಿಗಳ ಭೂ ಮಟ್ಟದ ಮೇಲಣ ಲಕ್ಷಣವಾಗಿದ್ದು, ಸಮಾಧಿಯನ್ನು ಮುಚ್ಚಲು ನಿರ್ಮಿಸಿದ್ದ ಜಲ್ಲಿಕಲ್ಲಿನ ಅಥವಾ ಮಣ್ಣಿನದಿಬ್ಬಗಳು ಚದುರಿ ಹೋಗದಂತೆ ತಡೆಯುವ ಸಾಧನಗಳಾಗಿರುತ್ತಿದ್ದವು. ಕಲ್ಲುವೃತ್ತಗಳಲ್ಲಿ ಸಮಾಧಿ ವೃತ್ತದ ಕೇಂದ್ರ ಭಾಗದಲ್ಲಿ ಮಾತ್ರ ಇರುತ್ತದೆಂದು ಈವರೆಗೆ ತಿಳಿಯಲಾಗಿತ್ತು. ಕಲ್ಲುವೃತ್ತದ ಹೊರಸುತ್ತಿನಲ್ಲಿಯೂ ಶವಕುಣಿ ಇರಬಹುದಾದ ಸಾಧ್ಯತೆ ಇರುತ್ತದೆಂದು ವಿದ್ವಾಂಸರು ತಿಳಿಸಿದ್ದಾರೆ.

ಕಲ್ಲಂಡೂರು ಗ್ರಾಮದಲ್ಲಿ ದೊಡ್ಡ ಕಲ್ಲುವೃತ್ತಗಳು ಮತ್ತು ಮಧ್ಯಮ ಗಾತ್ರದ ಕಲ್ಲುವೃತ್ತಗಳು ಇನಾಂತಿ ಮತ್ತು ಕಂದಾಯ ಜಮೀನುಗಳಲ್ಲಿ ಸು. ೨೫ಕ್ಕೂ ಹೆಚ್ಚು ಪತ್ತೆಯಾಗಿವೆ. ಇಂತಹ ಒಂದು ದೊಡ್ಡ ಗುಂಡುಕಲ್ಲು ಶಿಲಾವೃತ್ತ ಸಮಾಧಿ ಗ್ರಾಮದ ಅರಸಪ್ಪನವರ ಜಮೀನಿನಲ್ಲಿಯೇ ಕಂಡುಬಂದಿರುವುದು ಮತ್ತೊಂದು ವಿಶೇಷವಾಗಿದೆ. ಇದೇ ಗ್ರಾಮದ ದೊಡ್ಡಣ್ಣನವರ ನಾಯಕರ ಮುನಿಯಪ್ಪ, ಸಿದ್ದಪ್ಪನಾಯಕ, ಬಂಗೆಪ್ಪನವರ ಮುನಿಯಪ್ಪ(ಮಂಗಸಂದ್ರ), ಗೋವಿಂದಪ್ಪ (ಆಹಾರ ಇಲಾಖೆ) ಅವರ ಕುಟುಂಬದವರ ಹಾಗೂ ಸಿದ್ದಣ್ಣನಾಯಕ (ಮಂಗಸಂದ್ರ) ಜಮೀನುಗಳಲ್ಲಿಯೂ ದೊಡ್ಡ ಗುಂಡುಕಲ್ಲು ಶಿಲಾವೃತ್ತಗಳು ಕಂಡು ಬಂದಿವೆ. ಕಲ್ಲಂಡೂರು ವೆಂಕಟೇಶಪ್ಪನವರ ಜಮೀನಿನಲ್ಲಿ ಇದ್ದ ಎರಡು ದೊಡ್ಡ

ಶಿಲಾವೃತ್ತ ಸಮಾಧಿಯಲ್ಲಿದ್ದ ಕಲ್ಲುಗಳನ್ನು ಹೊರತೆಗೆದು ಹೊಡೆದು ಹಾಕಿ ಅವುಗಳನ್ನು ಎತ್ತಿನ ಬಂಡಿಯಲ್ಲಿ ತೆಗೆದುಕೊಂಡು ಹೋಗುವಾಗ ಎತ್ತುಗಳು ಬೆದರಿಕೊಂಡು ಗಾಡಿ ಮತ್ತು ಕಲ್ಲುಗಳು ಗಾಡಿಯಲ್ಲಿದ್ದು ವೆಂಕಟೇಶಪ್ಪನ ಮೇಲೆ ಬಿದ್ದು ಸ್ಥಳದಲ್ಲಿಯೇ ಮರಣ ಹೊಂದಿದ್ದನ್ನು ಹಾಗೂ ಆ ಕಲ್ಲುಗಳನ್ನು ಪುನಃ ತಂದು ಅವರ ಜಮೀನಿನಲ್ಲಿಯೇ ರಾಶಿ ಹಾಕಿರುವುದನ್ನು ಸ್ಥಳೀಯರಾದ ಚಂದ್ರಪ್ಪ ಮತ್ತು ಅಂಗಡಿ ಪಿಳ್ಳಪ್ಪ ಮಾಹಿತಿ ನೀಡಿದ್ದಾರೆ.

ಎಫ್. ಅಂಡಾಕಾರ/ಆಯುತಾಕಾರ ಶಿಲಾಸಮಾಧಿಗಳು.

ಕಲ್ಲಂಡೂರು ಗ್ರಾಮದಲ್ಲಿನ ಬೃಹತ್ ಶಿಲಾಸಮಾಧಿ ನೆಲೆಯಲ್ಲಿ ಅಂಡಾಕಾರ/ಆಯುತಾಕಾರದ ಸು.೧೨ ಶಿಲಾ ಸಮಾಧಿಗಳು ಪತ್ತೆಯಾಗಿವೆ. ಇವುಗಳ ವಿಶೇಷ ಲಕ್ಷಣವೆಂದರೆ ಇವು ಅಂಡಾಕಾರ/ಆಯುತಾಕಾರದಲ್ಲಿದ್ದು ಸುತ್ತಲೂ ಕಲ್ಲುಗಳನ್ನು ಹೊಂದಿದೆ. ಇವು ಹೊಸ ರೀತಿಯ ಸಮಾಧಿ ನಮೂನೆಗಳಾಗಿವೆ. ವಿದ್ವಾಂಸರಾದ ವಿ.ಡಿ.ಕೃಷ್ಣಸ್ವಾಮಿಯವರು ಪ್ರಸ್ತಾಪಿಸಿರುವ ಹನ್ನೆರಡು ನಮೂನೆ ಸಮಾಧಿಗಳಲ್ಲಿ ಈ ರೀತಿಯ ಸಮಾಧಿಯನ್ನು ಪ್ರಸ್ತಾಪಿಸಿಲ್ಲ.

ಇದೇ ಗ್ರಾಮದಲ್ಲಿ, ಬೆಗ್ಲಿಹೊಸಹಳ್ಳಿಯ ದೊಡ್ಡರಾಮಣ್ಣನ ಮಗ ಮುನಯ್ಯ(೯೦)ನವರ ಸರ್ವೆ ನಂ. ೧೨೫/೨ರಲ್ಲಿ ಈ ರೀತಿಯ ಎರಡು ಸಮಾಧಿಗಳನ್ನು ಪತ್ತೆ ಹಚ್ಚಲಾಗಿದೆ. ಈ ಜಮೀನಿನ ಪಕ್ಕದಲ್ಲಿಯೇ ಇರುವ ಕಲ್ಲಂಡೂರು ಹನುಮಂತಪ್ಪನವರ ಜಮೀನಿನಲ್ಲಿ ಐದು ಸಮಾಧಿಗಳನ್ನು ಪತ್ತೆ ಹಚ್ಚಲಾಗಿದೆ. ಇದೇ ಗ್ರಾಮದ ಕೆ.ಎಂ. ರಾಮಯ್ಯನವರ ಜಮೀನಿನಲ್ಲಿ ಒಂದು ಸಮಾಧಿಯನ್ನು, ಇದೇ ಜಮೀನಿಗೆ ಹೊಂದಿಕೊಂಡಿರುವ ಹಾಗೂ ಕೋಟೆಗೋಡೆ ಪಕ್ಕದಲ್ಲಿರುವ ಹರಿಜನ ಆಂಜನಪ್ಪನವರ ಜಮೀನಿನಲ್ಲಿ ನಾಲ್ಕು ಸಮಾಧಿಗಳನ್ನು ಪತ್ತೆ ಹಚ್ಚಲಾಗಿದೆ.

ಈ ಮೇಲಿನ ಸು. ೧೨ ಸಮಾಧಿಗಳು ವಿಶೇಷವೆನೆಂದರೆ ಈ ಸಮಾಧಿಗಳಿಗೆ ಬಳಸಿರುವ ಕಲ್ಲುಗಳು ಗುಂಡುಕಲ್ಲುಗಳಾಗಿರದೆ ತ್ರಿಕೋಣಾಕೃತಿ, ಚತುಷ್ಕೋಣಾಕೃತಿ, ಪಂಚಕೋಣಾಕೃತ್ತಿ, ಷಟ್‌ಕೋಣಾಕೃತಿಗಳನ್ನು ಹೊಂದಿವೆ. ಇವುಗಳಲ್ಲಿ ಕೆಲವು ದೊಡ್ಡ ಗಾತ್ರದ, ಕೆಲವು ಮಧ್ಯಮ ಗಾತ್ರದ ಸಮಾಧಿಗಳು. ದೊಡ್ಡಗಾತ್ರದ ಸಮಾಧಿಗಳು ಸು.೨೭ ಕಲ್ಲುಗಳನ್ನು ಒಂದು ವೃತ್ತವಾಗಿ ಹೊಂದಿದ್ದರೆ, ಮಧ್ಯಮ ಗಾತ್ರದ ಸಮಾಧಿಗಳು ಸು. ೧೭ ಕಲ್ಲುಗಳನ್ನು ಹೊಂದಿವೆ. ಇನ್ನೂ ಕೆಲವು ಸಮಾಧಿಗಳು ೧೦ ರಿಂದ ೧೨ ಕಲ್ಲುಗಳನ್ನು ವೃತ್ತವಾಗಿ ಹೊಂದಿವೆ. ಈ ಕಲ್ಲುಗಳು ಕಪ್ಪುಶಿಲೆಯಾಗಿರದೆ ಬಿಳಿ, ಹಳದಿ ಮತ್ತು ಕಂದು ಬಣ್ಣದ ಶಿಲೆಗಳನ್ನೇ ಈ ಸಮಾಧಿಗಳಿಗೆ ಬಳಸಿರುವುದು ವಿಶೇಷವಾಗಿ ಕಂಡು ಬರುತ್ತದೆ.

ಬೆಟ್ಟದ ಮೇಲೆ ಶಿಲಾಸಮಾಧಿಗಳು/ಗುಹೆಗಳು

ಕಲ್ಲಂಡೂರು ಬೆಟ್ಟದ ಮೇಲೆ ಗ್ರಾಮದ ನಿವಾಸಿಗಳ ಜೊತೆ ಕ್ಷೇತ್ರಕಾರ್ಯ ಕೈಗೊಂಡಿದ್ದು ಒಂದು ರೋಮಾಂಚನ ಅನುಭವ. ಈ ಬೆಟ್ಟದಲ್ಲಿ ನನಗೆ ಮೂರು ಶಿಲಾವೃತ್ತ ಸಮಾಧಿಗಳು ಹಾಗೂ ಹಲವಾರು ಆಳ ಗುಹೆಗಳು ಕಂಡು ಬಂದಿವೆ. ಮೂರು ಗುಂಡುಕಲ್ಲು ಶಿಲಾವೃತ್ತ ಸಮಾಧಿಗಳಲ್ಲಿ ಒಂದು ದೊಡ್ಡದಾಗಿದ್ದರೆ, ಮತ್ತೆರಡು ಮಧ್ಯಮ ಗಾತ್ರದವುಗಳು. ಈ ಮಧ್ಯಮ ಗಾತ್ರದ ಗುಂಡುಕಲ್ಲು ಶಿಲಾವೃತ್ತಗಳಲ್ಲಿ ಒಂದನ್ನು ಗ್ರಾಮದ ಜನರೇ ಅಗೆದು ಹಾಕಿದ್ದರೆ, ಇನ್ನೊಂದನ್ನು ನಿಧಿಗಳ್ಳರು ಅಗೆದು ಹಾಕಿದ್ದಾರೆ. ಆದರೆ ದೊಡ್ಡ ಗುಂಡುಕಲ್ಲು ಶಿಲಾವೃತ್ತ ಸಮಾಧಿ ಗಿಡಗಂಟಿಗಳಿಂದ ದಟ್ಟವಾಗಿ ಆವೃತ್ತವಾಗಿರುವುದರಿಂದ ಅದನ್ನು ನಿಧಿಗಳ್ಳರು ಗುರುತಿಸುವಲ್ಲಿ ಶಕ್ತರಾಗಿಲ್ಲ. ಇದನ್ನು ನನಗೆ ಗ್ರಾಮದ ನಿವಾಸಿ ಅಂಗಡಿ ಪಿಳ್ಳಪ್ಪನವರ ಮಗ ಅಶೋಕ ಎಂಬ ಯುವಕ ಪ್ರತ್ಯೇಕವಾಗಿ ತೋರಿಸಿದನು.

ಈ ಬೆಟ್ಟದಲ್ಲಿ ನಾನು ನೋಡಿರುವಷ್ಟು ಗುಹೆಗಳನ್ನು ಕೋಲಾರದ ಅಂತರಗಂಗೆಬೆಟ್ಟ ಹಾಗೂ ಸುತ್ತಮುತ್ತಲ ಯಾವ ಬೆಟ್ಟಗಳಲ್ಲೂ ನೋಡಿಲ್ಲ. ನಾವು ಕಲ್ಲಂಡೂರು ಬೆಟ್ಟದ ಗುಹೆಗಳ ಒಳಗೆ ಇಳಿದು ಯಾವುದಾದರೂ ಶಿಲೋಪಕರಣಗಳು ಸಿಗಬಹುದೇನೋ ಎಂದು ನೋಡಿದೆವು. ಆದರೆ ಏನೋ ಸಿಗಲಿಲ್ಲ. ಆಗಂತ ಇಡೀ ಬೆಟ್ಟವನ್ನು ಜಾಲಡಿದೆವೆಂದು ಹೇಳುವುದಿಲ್ಲ. ಕ್ಷೇತ್ರಕಾರ್ಯ ಮಾಡಬೇಕಾದ ಜಾಗಗಳು ಇನ್ನೂ ಸಾಕಷ್ಟು ಇಲ್ಲಿವೆ. ಅಲ್ಲದೆ ಆ ನಂತರದ ಕಾಲಘಟ್ಟಗಳಲ್ಲಿ ಆಳ್ವಿಕೆ ಮಾಡಿದ ರಾಜರು/ಪಾಳೆಗಾರರು ಬೆಟ್ಟದ ಮೇಲೆ ಹಾಗೂ ಗುಹೆಗಳಲ್ಲಿ

ಶತ್ರುಗಳಿಂದ ರಕ್ಷಣೆ ಪಡೆಯಲು ಕಲ್ಲಿನ ಗೋಡೆಗಳನ್ನು ರಕ್ಷಣಾತ್ಮಕವಾಗಿ ನಿರ್ಮಿಸಿಕೊಂಡಿರುವುದು ಕಂಡು ಬರುತ್ತದೆ.

ಜನಜೀವನ

ಬೃಹತ್ ಶಿಲಾಸಮಾಧಿಯುಗ ಅಥವಾ ಕಬ್ಬಿಣಯುಗದಲ್ಲಿ ವ್ಯವಸಾಯವು ಈ ಸಂಸ್ಕೃತಿಯ ಜನ ಸಮುದಾಯದ ಮುಖ್ಯ ವೃತ್ತಿಯಾಗಿತ್ತು. ಬೆಟ್ಟಪ್ರದೇಶದಲ್ಲಿ ಅಥವಾ ಕಲ್ಲುಬಂಡೆಗಳಿಂದ ಆವೃತ್ತವಾದ ಪ್ರದೇಶದಲ್ಲಿ ನೆಲೆಸಿದ್ದು, ಬುದ್ದಿವಂತರೂ,









ವ್ಯವಹಾರಿಕ ದೃಷ್ಠಿಯವರೂ ಆಗಿದ್ದು, ಕಬ್ಬಿಣ ಅದಿರು ಗಣಿಗಾರಿಕೆ, ಇದರಿಂದ ಲೋಹ ತಯಾರಿಕೆ ಮತ್ತು ಕಮ್ಮಾರಿಕೆಯ ತಂತ್ರಗಾರಿಕೆಯನ್ನು ಬಳಸಿಕೊಂಡು ಉಪಕರಣಗಳನ್ನು ಮಾಡುವ ಮತ್ತು ಉಪಯೋಗಿಸುವ ಕಲೆ ಕರಗತ ಮಾಡಿಕೊಂಡಿದ್ದರೆಂದು ಪುರಾತತ್ವ ವಿದ್ವಾಂಸರು ತಿಳಿಸಿದ್ದಾರೆ.

ಕಲ್ಲಂಡೂರು ಗ್ರಾಮದಲ್ಲಿದ್ದ ಈ ಸಮುದಾಯವೂ ಸಹ ಈ ಮೇಲೆ ಪ್ರಸ್ತಾಪಿಸಿರುವಂತೆ ಕಾರ್ಯ ಪ್ರವೃತ್ತವಾಗಿತ್ತೆಂದು ಕಂಡು ಬರುವಂತೆ, ಸಾಕ್ಷಿಯಾಗಿ ಗ್ರಾಮದ ಎರಡು ಪ್ರದೇಶಗಳಲ್ಲಿ ಅಂದರೆ ಇಲ್ಲಿನ ನಿವಾಸಿಗಳಾದ ಕೆ.ಎಂ. ರಾಮಯ್ಯ ಮತ್ತು ಹರಿಜನ ಆಂಜನಪ್ಪ ಎಂಬುವರ ಜಮೀನುಗಳ ನಡುವೆ ಕೋಟೆಗೋಡೆ ಅವಶೇಷಗಳು ಇದ್ದು ಅಲ್ಲಿ ಕಬ್ಬಿಣದ ಕಿಟ್ಟದ ದೊಡ್ಡ ಉಂಡೆಗಳ ರಾಶಿ ಪತ್ತೆಯಾಗಿವೆ. ಅಲ್ಲದೆ ಇದೇ ಗ್ರಾಮದ ಮತ್ತೊಂದು ಜಮೀನಿನಲ್ಲಿ ಎರಡು ದೊಡ್ಡ ಗಾತ್ರದ ಕಬ್ಬಿಣದ ಕಿಟ್ಟದ ಉಂಡೆಗಳನ್ನು ಪತ್ತೆ ಹಚ್ಚಲಾಗಿದ್ದು ಇದನ್ನು ಬೇರೆ ಕಡೆಯಿಂದ ತಂದು ಹಾಕಿರುವುದು ಕಂಡು ಬರುತ್ತದೆ. ಇದರಿಂದ ಈ ಗ್ರಾಮದ ಸುತ್ತಮುತ್ತಲೂ ಎಲ್ಲಾದರೂ ಕಬ್ಬಿಣದ ಅದಿರು ದೊರೆಯುವ ಪ್ರದೇಶ ಇದ್ದಿರಬಹುದೇ? ಅಥವಾ ಕಬ್ಬಿಣದ ಅದಿರುಗಳನ್ನು ಬೇರೆ ಕಡೆಯಿಂದ ತಂದು ಇಲ್ಲಿ ಅದಿರು ಸಂಗ್ರಹಿಸಿ ಕುಲುಮೆಗಳಲ್ಲಿ ಅದನ್ನು ಕರಗಿಸಿ ಕಬ್ಬಿಣದ ಆಯುಧಗಳೂ, ವ್ಯವಸಾಯ ಮತ್ತು ಗೃಹೋಪಯೋಗಿ ಉಪಕರಣಗಳನ್ನು ತಯಾರಿಸುತ್ತಿದ್ದರೆಂದು ಕಂಡು ಬರುತ್ತದೆ.

ಉಪಸಂಹಾರ

ವಿದ್ವಾಂಸರಾದ ಡಾ. ನಾ.ಶಿ. ರಂಗರಾಜು ಪ್ರಕಾರ ಇತ್ತೀಚೆಗೆ ಪುರಾತತ್ವ ಸಂಶೋಧನಾ ಕ್ಷೇತ್ರದಲ್ಲಿ ಹೆಚ್ಚು ಹೆಚ್ಚು ಬಳಕೆಯಾಗುತ್ತಿರುವ ವೈಜ್ಞಾನಿಕ ಅಧ್ಯಯನಗಳಾದ DNA- Deo xyribo nucleic Acid ಮತ್ತು RNA- Ribo nucleic Acid ಟೆಸ್ಟ್‌ಗಳನ್ನು ಮಾಡುವುದನ್ನು ನಾವು ಅಗತ್ಯವಾಗಿ ಬಳಸಿಕೊಳ್ಳಬಹುದಾಗಿದೆ ಎಂದಿದ್ದಾರೆ. ಹೀಗಾಗಿ ಕಲ್ಲಂಡೂರು ಗ್ರಾಮದಲ್ಲಿ ಪತ್ತೆಯಾಗಿರುವ ನೂರಾರು ಶಿಲಾ ಸಮಾಧಿಗಳು ಬೃಹತ್ ಶಿಲಾಯುಗ ಸಂಸ್ಕೃತಿಗೆ ಸೇರಿದ್ದೆಂದು ಕಂಡು ಬಂದಿದ್ದರೂ ಉತ್ಖನನ ಕಾರ್ಯ ಆಗಬೇಕಾಗಿದೆ. ಇತ್ತೀಚೆಗೆ ರೈತರು ಭೂಮಿಯನ್ನು ಉಳುಮೆ ಮಾಡಲು ಟ್ರ್ಯಾಕ್ಟರ್ ಮತ್ತು ಜೆ.ಸಿ.ಬಿ. ಯಂತ್ರಗಳ ಮೂಲಕ ತಮ್ಮ ತಮ್ಮ ಜಮೀನಿನಲ್ಲಿರುವ ಸಮಾಧಿಗಳನ್ನು ಮನಸೋಇಚ್ಛೆ ಕಿತ್ತು ಹಾಕುತ್ತಿರುವುದು ಕಂಡು ಬರುತ್ತಿದೆ. ಜೊತೆಗೆ ಇಲ್ಲಿನ ಬೆಟ್ಟದ ಮೇಲೆ ಇನ್ನು ಹೆಚ್ಚು ಕ್ಷೇತ್ರಕಾರ್ಯ ಕೈಗೊಂಡದ್ದೆ ಆದರೆ ಹಲವಾರು ವಿಸ್ಮಯಕಾರಿ ವಿಷಯಗಳು ಬೆಳಕಿಗೆ ಬರುವುದರಲ್ಲಿ ಯಾವುದೇ ಅನುಮಾನವಿಲ್ಲ. ಹಾಗೆಯೇ ಈ ನೆಲೆಯನ್ನು ರಕ್ಷಿಸುವ ಕೆಲಸವೂ ಆಗಬೇಕಾಗಿದೆ.

ಆಕರ ಗ್ರಂಥಗಳು

೧. ಗುರುರಾಜರಾವ್.ಬಿ.ಕೆ., ಕರ್ನಾಟಕ ಶಿಲಾಯುಗ ಸಂಸ್ಕೃತಿಗಳು, ಪ್ರಚಾರ ಪುಸ್ತಕ ಮಾಲೆ-೧೭೦, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು-೧೯೭೦.

೨. ಗುರುರಾಜರಾವ್.ಬಿ.ಕೆ., ಕರ್ನಾಟಕ ಲೋಹಯುಗ ಸಂಸ್ಕೃತಿ, ಪ್ರಚಾರ ಪುಸ್ತಕ ಮಾಲೆ-೧೮೧, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು-೧೯೭೧.

೩. Sundara.A.: The Early chamber Tombs of South India, University publishers, (India). Delhi-1971.

೪. ಕರ್ನಾಟಕ ಕನ್ನಡ ವಿಷಯ ವಿಶ್ವಕೋಶ: ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ-೧೯೭೯.

೫. ಡಾ. ದೇವರಕೊಂಡಾ ರೆಡ್ಡಿ, ಬನ್ನೇರುಘಟ್ಟ-ಪ್ರಾಗೈತಿಹಾಸಿಕ ಕಾಲದಿಂದ ಇಂದಿನವರೆಗೆ, ಸಂ-೮, ಪುಟ ೧-೫, ೧೯೯೩.

೬ ಮಂಜುನಾಥ.ಎಂ.ಜಿ., ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನವಶೋಧಿತ ಬೃಹತ್ ಶಿಲಾ ನಿವೇಶನಗಳು, ಇತಿಹಾಸ ದರ್ಶನ-೧೦, ಕರ್ನಾಟಕ ಇತಿಹಾಸ ಅಕಾದೆಮಿ (ರಿ), ಬೆಂಗಳೂರು, ಪುಟ ೧೮-೨೦-೧೯೯೫.

೭. ದೇವರಾಜಸ್ವಾಮಿ.ಜಿ.ಕೆ., ಮೇಳಿಗೆ ಮತ್ತು ಬುಕ್ಲಾಪುರದ ಶಿಲಾಯುಗ ನಿವೇಶನಗಳು-ಒಂದು ಶೋಧ, ಸಂ-೧೧, ಪುಟ, ೩೪-೩೬-೧೯೯೬.

೮. ಶಿವತಾರಕ್.ಕೆ.ಬಿ., ಕರ್ನಾಟಕದ ಪುರಾತತ್ವ ನೆಲೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಹಂಪಿ-೨೦೦೧.

೯. ನಾಗರಾಜು.ಎಸ್., ಸಮ್ಮೇಳನಾಧ್ಯಕ್ಷರ ಭಾಷಣ, ಕೋಲಾರ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ ಸಂ: ಗೋಪಾಲ್.ಆರ್. ಪುಟ ೧೧-೧೫, ೨೦೦೪.

೧೦. ಸುಂದರ.ಆರ್., ಆದಿ ಕಬ್ಬಿಣ ಯುಗದ ಬೃಹತ್ ಶಿಲಾಯುಗ ಸಂಸ್ಕೃತಿ, ಕೋಲಾರ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ. ಸಂ. ಗೋಪಾಲ್.ಆರ್., ಪುಟ ೧೬-೨೧, ೨೦೦೪.

೧೧. Narsimhaiah.B., Neolithic culture in Kolar District with special reference to Excavation at Banahalli, Kolara Jilleya ithihasa mattu puratatva, Editor: Gopal.R. page 22-28, 2004.

೧೨. ಕೋಲಾರ ಜಿಲ್ಲೆ ಗ್ಯಾಸೆಟಿಯರ್ [ಪರಿಷ್ಕೃತ ಆವೃತ್ತಿ], ಕರ್ನಾಟಕ ರಾಜ್ಯ-೨೦೦೫.

೧೩. ರಂಗರಾಜು.ನಾ.ಶಿ., ಕರ್ನಾಟಕದ ಬೃಹತ್ ಶಿಲಾ ಸಂಸ್ಕೃತಿ-ಒಂದು ಮರು ಚಿಂತನೆ ಪುಟ ೧೩-೨೧. ಸಂ. ರಮೇಶ್ ನಾಯಕ, ಕರ್ನಾಟಕದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನಗಳ ಮರು ಚಿಂತನೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭.

೧೪. ಕನ್ನಡ ವಿಷಯ ವಿಶ್ವಕೋಶ, ಇತಿಹಾಸ ಮತ್ತು ಪುರಾತತ್ವ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ೨೦೦೯.

೧೫. ಬೆಂಗಳೂರು ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪ್ರಾಚ್ಯವಸ್ತು ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು, ೨೦೧೩.

೧೬. ಅರುಣಿ.ಎಸ್.ಕೆ., ಬೆಂಗಳೂರು ಪರಂಪರೆ: ಇತಿಹಾಸ ಸಂಶೋಧನೆಯ ಹೊಸ ನೋಟಗಳು, ಇತಿಹಾಸ ದರ್ಪಣ ಪ್ರಕಾಶನ, ಬೆಂಗಳೂರು, ೨೦೧೯.

೩

ಬುಕ್ಕಾಪಟ್ಟಣ ಪರಿಸರದ ನವಶೋಧಿತ ಪ್ರಾಗೈತಿಹಾಸಿಕ ನೆಲೆಗಳು

ಕೆ.ಸಿ. ಶಶಿಕುಮಾರ ನಾಯ್ಕ*

ತುಮಕೂರು ಜಿಲ್ಲೆಯ ಸಿರಾ ತಾಲ್ಲೂಕಿನ ಹೋಬಳಿಗಳಲ್ಲೊಂದಾದ ಬುಕ್ಕಾಪಟ್ಟಣವು ಸಿರಾದಿಂದ ೨೦ ಕಿ.ಮೀ ದೂರದಲ್ಲಿದೆ. ಈ ಪ್ರದೇಶವು ಐತಿಹಾಸಿಕವಾಗಿ, ಸಾಂಸ್ಕೃತಿಕವಾಗಿ ಮಹತ್ವ ಪಡೆದಿದ್ದು ಬೆಟ್ಟ ಗುಡ್ಡಗಳಿಂದ ಆವೃತವಾಗಿ ಸುಂದರ ಪ್ರಾಕೃತಿಕ ಸಂಪತ್ತನ್ನು ಹೊಂದಿದೆ. ಈ ಪ್ರದೇಶವು ಗಂಗರು, ನೊಳಂಬರು, ಹೊಯ್ಸಳರು, ವಿಜಯನಗರ ಸಾಮ್ರಾಜ್ಯದ ಅರಸರು, ಸಿರಾ ಪಾಳೆಗಾರರು ಮುಂತಾದ ರಾಜಮನೆತನಗಳು ಆಳ್ವಿಕೆ ಮಾಡಿದ ಪ್ರದೇಶವಾಗಿದ್ದು, ಪುರಾತನ ದೇವಾಲಯಗಳು, ಮೂರ್ತಿಶಿಲ್ಪಗಳು, ಶಾಸನಗಳು, ಸ್ಮಾರಕಶಿಲ್ಪಗಳು ಮುಂತಾದ ಐತಿಹಾಸಿಕ ಕುರುಹುಗಳಲ್ಲದೆ ಆದಿಮಾನವನು ನೆಲೆಸಿದ ತಾಣಗಳು ಸಹ ಕಂಡುಬರುತ್ತವೆ. ಪ್ರಮುಖವಾಗಿ ಬೂದಿಗುಡ್ಡದಲ್ಲಿ ಆದಿಶಿಲಾಯುಗ ಸಂಸ್ಕೃತಿಯಿಂದ ನವಶಿಲಾಯುಗ ಕಾಲದ ಸಂಸ್ಕೃತಿವರೆಗಿನ ಕುರುಹುಗಳು ಪತ್ತೆಯಾಗಿವೆ. ಬುಕ್ಕಾಪಟ್ಟಣದಲ್ಲಿ ನೂತನ ಶಿಲಾಯುಗ ಮತ್ತು ಬೃಹತ್ ಶಿಲಾಯುಗ ಮತ್ತು ಇತಿಹಾಸ ಆರಂಭ ಕಾಲದ ಸಂಸ್ಕೃತಿಯ ನೆಲೆಗಳನ್ನು ಕಾಣಬಹುದು. ಪ್ರಸ್ತುತ ಬುಕ್ಕಾಪಟ್ಟಣ ಹೋಬಳಿ ಪ್ರದೇಶದಲ್ಲಿ ಕ್ಷೇತ್ರಕಾರ್ಯ ಕೈಗೊಂಡಿದ್ದಾಗ ನೂತನಶಿಲಾಯುಗ ಹಾಗೂ ಬೃಹತ್ ಶಿಲಾಯುಗ ಸಂಸ್ಕೃತಿಯ ಕುರುಹುಗಳು ಪತ್ತೆಯಾಗಿದೆ.

ನೂತನ ಶಿಲಾಯುಗದ ನೆಲೆ

ಬುಕ್ಕಾಪಟ್ಟಣ–ನೆರಲಗುಡ್ಡ–ತಾವರೆಕೆರೆ ಮಾರ್ಗದಲ್ಲಿ, ಬುಕ್ಕಾಪಟ್ಟಣದಿಂದ ಉತ್ತರಕ್ಕೆ ಮೂರು ಕಿ.ಮೀ. ದೂರದಲ್ಲಿರುವ **"ಬಂಗಾರಿ ಗೊಲ್ಲರಹಟ್ಟಿ"** ಗ್ರಾಮದ ಹೊರವಲಯದಲ್ಲಿ ಈರಣ್ಣನವರ ಹೊಲದಲ್ಲಿ ಬಸವನಗುಡ್ಡೆ ಎಂದು ಕರೆಯಲ್ಪಡುವ ಚಿಕ್ಕ ಕಲ್ಲಿನ ಗುಡಿಯ ಪಕ್ಕದ ಗುಡಿಯಲ್ಲಿ ಪೂರ್ವಾಭಿಮುಖವಾಗಿಟ್ಟಿರುವ ನಾಲ್ಕು ನೂತನ ಶಿಲಾಯುಗದ ಡಾಲರೈಟ್ ಶಿಲೆಯ ಕಲ್ಲಿನ ಕೊಡಲಿಗಳು (stone Axe) ಪತ್ತೆಯಾಗಿದೆ. ಇವು ಉಜ್ಜಿ ನಯಗೊಳಿಸಿದ ನುಣುಪಾಗಿದ್ದು ತ್ರಿಕೋನಾಕಾರದಲ್ಲಿವೆ.

ಈ ಕಲ್ಲಿನ ಆಯುಧಗಳು ಕ್ರಮವಾಗಿ ಮೊದಲನೆ ಕೊಡಲಿ ೧೦ ಸೆಂ.ಮೀ. ಉದ್ದ ೫ ಸೆಂ.ಮೀ. ಅಗಲ ಎರಡೂವರೆ ಸೆಂ.ಮೀ. ದಪ್ಪವಿದ್ದು ಮುಂಭಾಗವು ಮುರಿದು ಹೋಗಿದೆ ಇದನ್ನು ಗಮನಿಸಿದರೆ ಈ ಕೊಡಲಿಯು ಹೆಚ್ಚು ಬೇಟೆಯ ಪ್ರಸಂಗಗಳಲ್ಲಿ ಬಳಕೆಯಾಗಿದ್ದಿರಬಹುದೆನಿಸುತ್ತದೆ.

ಎರಡನೆಯ ಕೊಡಲಿ ಸಂಪೂರ್ಣ(ಇಡಿಯಾಗಿರುವ)ವಾಗಿದ್ದು ೧೬ ಸೆಂ.ಮೀ. ಉದ್ದ ೬ ಸೆಂ.ಮೀ. ಅಗಲ ೨ ಸೆಂ.ಮೀ. ದಪ್ಪವಿದೆ. ಮುಂಭಾಗವು ಅಗಲವಾಗಿದ್ದು ಮರದ ಕಾವಿಗೆ ಸಿಕ್ಕಿಸಲು ಅನುಕೂಲವಾದ ಆಕಾರದಲ್ಲಿದೆ.

ಮೂರನೆಯ ಕೊಡಲಿಯ ಹಿಂಭಾಗದ ತುದಿಯ ಭಾಗ ಭಗ್ನವಾಗಿದ್ದು ಇದು ಹನ್ನೆರಡುವರೆ ಸೆಂ.ಮೀ. ಉದ್ದ ಏಳು ಸೆಂ.ಮೀ. ಅಗಲ ಮೂರು ಸೆಂ.ಮೀ. ದಪ್ಪವಿದೆ. ಈ ಕೊಡಲಿಯು ಹೆಚ್ಚು ಬಳಕೆಯಾಗಿರುವಂತೆ ಕಂಡುಬರುತ್ತದೆ.

ನಾಲ್ಕನೆಯ ಕೊಡಲಿಯು ೧೧ ಸೆಂ.ಮೀ. ಉದ್ದ ೬ ಸೆಂ.ಮೀ. ಅಗಲ ೨ ಸೆಂ.ಮೀ. ದಪ್ಪವಿದೆ. ಇದೂ ಸಹ ಪೂರ್ಣವಾಗಿದೆ (ಇಡಿಯಾಗಿದೆ). ಹಾಗೆಯೇ ಈ ಪ್ರದೇಶದಲ್ಲಿ ಸೂಕ್ಷ್ಮವಾಗಿ ಅವಲೋಕಿಸಿದಾಗ ಕಪ್ಪು–ಕೆಂಪು, ಕಡು ಕಪ್ಪು, ಕೆಂಪು ವರ್ಣದ ಮಡಕೆಯ ಭಾಗಗಳು ದೊರೆತಿವೆ. ಸುತ್ತಮುತ್ತ ಚಿಕ್ಕ ಚಿಕ್ಕ ಕಲ್ಲಿನ ಗುಡಿಗಳಿದ್ದು ಇವುಗಳನ್ನು ಭೂತಪ್ಪನ ಗುಡಿ, ಹಿರಿಯರ ಸಮಾದಿಗಳೆಂದು ಸ್ಥಳಿಯರು ಕರೆದರೂ ಬೃಹತ್ ಶಿಲಾಯುಗದ ಗೋರಿಗಳೆಂದು ಅನಿಸುವುದಿಲ್ಲ. ಇಲ್ಲಿ ಯಾವುದೇ ರೀತಿಯ ಬೂದಿದಿಬ್ಬ ಕಂಡುಬರುವುದಿಲ್ಲವಾದರೂ ನೀರಿನಾಸರೆಯುಳ್ಳ ಪ್ರದೇಶವಾಗಿದೆ. ಈ ಪ್ರದೇಶವೆಲ್ಲಾ ಕೃಷಿಗೆ ಒಳಪಟ್ಟಿದ್ದು, ಸಮೀಪ ಮೂರ್ನಾಲ್ಕು ಕಿ.ಮೀ. ದೂರದಲ್ಲಿ ಬುಕ್ಕಾಪಟ್ಟಣ ಅರಣ್ಯ ಪ್ರದೇಶವಿದೆ ಇಲ್ಲಿ ಜಿಂಕೆ, ಮೊಲ, ಕಾಡುಹಂದಿ ಮುಂತಾದ ಕಾಡುಪ್ರಾಣಿಗಳಿವೆ ಹಾಗೂ ಸುಮಾರು ಅರ್ಧ ಕಿ.ಮೀ ದೂರದಲ್ಲಿ ಹಳ್ಳ

* ಕಮಲಾನಾಯ್ಕನ ತಾಂಡ, ಯರದಕಟ್ಟೆ, ಸಿರಾ, ತುಮಕೂರು ಜಿಲ್ಲೆ, ಮೊ. ೯೧೪೮೦ ೦೯೯೦೫

ಮತ್ತು ನೀರು ಹರಿಯುವ ಪ್ರದೇಶವಿದೆ ಇದನ್ನು ಗಮನಿಸಿದಾಗ ನವಶಿಲಾಯುಗದ ಜನರು ಉಜ್ಜಿ ನಯಗೋಳಿಸಿದ ಹರಿತವಾದ ಕಲ್ಲಿನ ಆಯುಧಗಳಿಂದ ಆಹಾರಕ್ಕಾಗಿ ಪ್ರಾಣಿಗಳನ್ನು ಬೇಟೆಯಾಡುವುದು ಮತ್ತು ಕೃಷಿ ಚಟುವಟಿಕೆಯಲ್ಲಿ ಬಳಸುತ್ತಿದ್ದರೆಂದು ತಿಳಿಯಬಹುದಾಗಿದೆ.

ನವಶಿಲಾಯುಗ ಸಂಸ್ಕೃತಿಯ ಕಾಲಘಟ್ಟವನ್ನು ಶಿಲಾಯುಗ ಸಂಸ್ಕೃತಿಯ ಕ್ರಾಂತಿಕಾರಿಯುಗವೆಂದೇ ಕರೆಯಲಾಗುತ್ತದೆ. ಈ ಸಂಸ್ಕೃತಿಯ ಮಾನವನು ಒಂದು ಕಡೆ ನೆಲೆ ನಿಂತು ಕೃಷಿ, ಪಶುಸಂಗೋಪನೆಯಲ್ಲಿ ತೊಡಗಿ ಉಜ್ಜಿ ನಯಗೊಳಿಸಿದ ಉಪಕರಣಗಳನ್ನು ಬಳಸಿದ ಹಾಗೂ ಬೆಂಕಿ ಮತ್ತು ಚಕ್ರದ ಸಹಾಯದಿಂದ ಮಡಕೆ ತಯಾರಿಸಲು ಆರಂಭಿಸಿದ್ದೂ ಇದೇ ಕಾಲ. ಈ ಸಂಸ್ಕೃತಿಯ ಜನರನ್ನು ಅವರು ಬಳಸಿದ ವಸ್ತುಗಳ ಆಧಾರದಲ್ಲಿ ಗುರುತಿಸಲಾಗುತ್ತದೆ.

ಸಿರಾ ತಾಲೂಕಿನ ಐದು ಹೋಬಳಿಗಳಲ್ಲಿ ಬುಕ್ಕಾಪಟ್ಟಣವೂ ಒಂದಾಗಿದ್ದು. ಈ ಹೋಬಳಿ ಪ್ರದೇಶದಲ್ಲಿ ಬುಕ್ಕಾಪಟ್ಟಣ, ಜಾನಕಲ್ಲುಗಳಲ್ಲಿ ವ್ಯಾಪಕವಾದ ಕ್ಷೇತ್ರಕಾರ್ಯದ ಫಲವಾಗಿ ಹಲವು ಪ್ರಾಗೈತಿಹಾಸಿಕ ನೆಲೆಗಳನ್ನು ಕೆ.ಬಿ. ಶಿವತಾರಕ್, ಎನ್. ನಂದೀಶ್ವರ್ ಮುಂತಾದವರು ಗುರುತಿಸಿದ್ದಾರೆ. ಆದರೆ ಬಂಗಾರಿ ಗೊಲ್ಲರಹಟ್ಟಿಯ ನೂತನ ಶಿಲಾಯುಗದ ನೆಲೆಯನ್ನು ಇದೂವರೆಗೂ ಯಾರು ಗುರುತಿಸದೆ ಈಗ ಬೆಳಕಿಗೆ ಬಂದಿರುವುದು ಗಮನಾರ್ಹ. ಈ ನೆಲೆಗೆ ಬುಕ್ಕಾಪಟ್ಟಣ, ಹುಯಿಲದೊರೆ, ಬೂದಿಗುಡ್ಡದ ನೆಲೆಗಳು ತೀರಾ ಸಮೀಪವಿರುವುದರಿಂದ ಆದಿಹಳೆ ಶಿಲಾಯುಗ ಸಂಸ್ಕೃತಿಯಿಂದ ಇತಿಹಾಸ ಕಾಲದವರೆಗೂ ವಿವಿಧ ಪ್ರದೇಶದಲ್ಲಿ ಜನರು ವಿಸ್ತರಿಸಿರುವ ಸಾಧ್ಯತೆಯಿದೆ.

ಬೃಹತ್ ಶಿಲಾಯುಗದ ನೆಲೆ

ನವಶಿಲಾಯುಗ–ತಾಮ್ರಯುಗಗಳ ನಂತರದ ಕಾಲದಲ್ಲಿ ಕಬ್ಬಿಣದ ಆವಿಷ್ಕಾರವಾಗಿ ಕಬ್ಬಿಣದ ಆಯುಧಗಳು ಬಳಕೆಗೆ ಬಂದು ಕಲ್ಲಿನ ಆಯುಧಗಳ ಬಳಕೆ ಕಡಿಮೆಯಾಯಿತು. ಇದು ಬೃಹತ್ ಶಿಲಾಯುಗವಾಗಿದ್ದು ಈ ಯುಗವನ್ನು ಕಬ್ಬಿಣಯುಗದ ಬೃಹತ್ ಶಿಲಾಯುಗ ಸಂಸ್ಕೃತಿಯೆಂದೂ ಕರೆಯಲಾಗಿದೆ.

ಬೃಹತ್ ಶಿಲಾಯುಗದಲ್ಲಿ ಸಮಾದಿಗಳನ್ನು ಕಟ್ಟಲು ಕಲ್ಲು ಪ್ರಧಾನವಾಗಿತ್ತು ಹಾಗಾಗಿ ಎಲ್ಲಾ ಸೌಕರ್ಯವಿರುವ ಬೆಟ್ಟ ಗುಡ್ಡಗಳ ಬದಿಯ ಪ್ರದೇಶವನ್ನು ಆರಿಸಿಕೊಳ್ಳುತ್ತಿದ್ದರು. ಕೃಷಿ ಉಪಕರಣ ಹಾಗೂ ಆಯುಧಗಳನ್ನು ಕಬ್ಬಿಣದಿಂದ ತಯಾರಿಸಿ ಉಪಯೋಗಿಸುತ್ತಿದ್ದರು. ನಿಸರ್ಗದತ್ತವಾಗಿ ದೊರಕುವ ಕಬ್ಬಿಣದ ಅದಿರನ್ನು ಕರಗಿಸಿ ಆಯುಧೋಪಕರಣ ಮಾಡಿಕೊಳ್ಳುವ ತಾಂತ್ರಿಕತೆ ಈ ಯುಗದ ಜನರಿಗೆ ತಿಳಿದಿತ್ತು ಎಂಬುದಕ್ಕೆ ಬೇರೆ ಬೇರೆ ಕಡೆ ನಿವೇಶನಗಳಲ್ಲಿ ದೊರೆತ ಕಬ್ಬಿಣದ ವಸ್ತುಗಳೇ ಸಾಕ್ಷಿಗಳಾಗಿವೆ.

ಬುಕ್ಕಾಪಟ್ಟಣದ ಪೂರ್ವಕ್ಕಿರುವ ಹುಯಿಲದೊರೆ ಗ್ರಾಮದ ಬಗ್ಗೆ ಈಗಾಗಲೇ ಡಾ. ಎನ್. ನಂದೀಶ್ವರರವರು ಉಲ್ಲೇಖಿಸಿದ್ದಾರೆ. ಪುನಃ ನಾನು ಈ ಗ್ರಾಮಕ್ಕೆ ಭೇಟಿ ನೀಡಿ ಸೂಕ್ಷ್ಮವಾಗಿ ಪರಿಶೀಲಿಸಿದಾಗ ನಿಲುಸುಗಲ್ಲು ಹಾಗೂ ಇತರೆ ಅವಶೇಷಗಳು ಪತ್ತೆಯಾಗಿದೆ. ನಿಲುಸುಗಲ್ಲು ಏಳು ಅಡಿ ಎತ್ತರ ಮೂರುವರೆ ಅಂಗುಲ ದಪ್ಪವಿದೆ. ಕೆಳಭಾಗ ಅಗಲವಾಗಿದ್ದು ಮೇಲಿನ ತುದಿಯ ಭಾಗ ಕಿರಿದಾಗಿದ್ದು ಬಾಗಿದಂತಿದೆ. ಬೃಹತ್ ಶಿಲಾಯುಗದ ಜನರು ತಮ್ಮ ಜನರ ಸಮಾಧಿಗಳ ಬಳಿಯಲ್ಲಿ ಸ್ಮಾರಕಗಳಾಗಿ ಈ ರೀತಿಯ ನಿಲುವುಗಲ್ಲುಗಳನ್ನು ನಿಲ್ಲಿಸುತ್ತಿದ್ದುದು ಗಮನಾರ್ಹ. ಹಾಗೆಯೇ ಈ ನಿಲುಸುಗಲ್ಲಿನ ಭೂಪ್ರದೇಶದಲ್ಲಿ ಕಬ್ಬಿಣದ ಕಿಟ್ಟಗಳು ಯಥೇಚ್ಛ ಪ್ರಮಾಣದಲ್ಲಿ ದೊರೆಯುತ್ತವೆ. ಸುಮಾರು ಅರ್ಧ ಕಿ.ಮೀ. ದೂರದಲ್ಲಿ ಹಳ್ಳವಿದ್ದು ಇದು ನೀರಿನಾಸರೆಯ ಪ್ರದೇಶವಾಗಿದೆ ಆದ್ದರಿಂದ ಈ ಸಂಸ್ಕೃತಿಯ ಜನರ ನೆಲೆಸುವಿಕೆಗೆ ಇದು ಪ್ರಾಶಸ್ತ್ಯವಾದ ಸ್ಥಳವಾಗಿತ್ತು ಎಂದೇ ಹೇಳಬಹುದಾಗಿದೆ.

ಮತ್ತೊಂದು ಶಿಲಾಯುಗದ ನೆಲೆಯು ಬುಕ್ಕಾಪಟ್ಟಣದಿಂದ ನೆರಲಗುಡ್ಡ– ತಾವರೆಕೆರೆ ಮಾರ್ಗದಲ್ಲಿ ಕುರುಬರಹಳ್ಳಿಯಲ್ಲಿದೆ. ಇಲ್ಲಿ ಸುಮಾರು ಆರು ಅಡಿ ಎತ್ತರದ ಎರಡು ನಿಲುವುಗಲ್ಲುಗಳಿದ್ದು ಇದರ ಸುತ್ತಮುತ್ತ ಸೂಕ್ಷ್ಮವಾಗಿ ಗಮನಿಸಿದಾಗ ಕಬ್ಬಿಣದ ಕಿಟ್ಟಗಳು, ಕಡುಗಪ್ಪು, ಬೂದುಬಣ್ಣದ ಹಾಗೂ ಬಿಳಿ ಗೆರೆಗಳುಳ್ಳ ಕಪ್ಪು ವರ್ಣದ ಮಡಕೆಯ ಭಾಗಗಳು ಕಂಡುಬಂದಿವೆ. ಉತ್ತಮ ನೀರಿನಾಸರೆಯ ಪ್ರದೇಶವಾಗಿದ್ದು ಇದೂ ಸಹ ಬೃಹತ್ ಶಿಲಾಯುಗ ಸಂಸ್ಕೃತಿಯ ನೆಲೆ ಎಂದು ಊಹಿಸಬಹುದಾಗಿದೆ.

ಒಟ್ಟಾರೆಯಾಗಿ ಬುಕ್ಕಾಪಟ್ಟಣ ಪರಿಸರವು ಆದಿಮಾನವ ಸಂಸ್ಕೃತಿಯಿಂದ ಇತಿಹಾಸ ಕಾಲದವರೆಗೂ ಮಹತ್ವ ಪಡೆದ ಪ್ರದೇಶವೆಂದೇ ಹೇಳಬಹುದಾಗಿದೆ. ಈ ಪ್ರದೇಶಗಳಲ್ಲಿ ದೊರೆತಿರುವ ಆಯುಧಗಳು, ಇತರೆ ಅವಶೇಷಗಳ ಆಧಾರವಾಗಿ

ಅಧ್ಯಯನ ಮಾಡಲಾಗಿದ್ದು, ವೈಜ್ಞಾನಿಕವಾಗಿ ಅಧ್ಯಯನ ಮಾಡುವ ಅವಶ್ಯಕತೆಯಿದೆ. ಈ ನೆಲೆಗಳು ಹೆಚ್ಚು ಕೃಷಿ ಭೂಮಿಗೆ ಒಳಪಟ್ಟಿರುವುದರಿಂದ ಅಳಿವಿನಂಚಿಗೆ ತಲುಪಿವೆ.

[ಕ್ಷೇತ್ರಕಾರ್ಯದಲ್ಲಿ ಸಹಾಯ ಮಾಡಿದ ಹುಯಿಲದೊರೆ ಹರೀಶ್‌ರವರಿಗೆ ಹಾಗೂ ಕೆ.ಬಿ. ಶಿವತಾರಕ್, ಜಿ.ಕೆ. ದೇವರಾಜಸ್ವಾಮಿ, ರೇಣುಕಾಸ್ವಾಮಿ ಒಡೆಯರ್‌ರವರಿಗೆ ಕೃತಜ್ಞತೆಗಳು.]



ಬಂಗಾರಿ ಗೊಲ್ಲರಹಟ್ಟಿಯಲ್ಲಿ ದೊರೆತ ನೂತನ ಶಿಲಾಯುಗದ ಆಯುಧಗಳು



ಬಂಗಾರಿ ಗೊಲ್ಲರಹಟ್ಟಿಯಲ್ಲಿ ದೊರೆತ ಮಡಕೆಯ ಭಾಗಗಳು





ಹುಯಿಲದೊರೆಯಲ್ಲಿ ದೊರೆತ ನಿಲಸುಗಲ್ಲು



ಕುರುಬರಹಳ್ಳಿಯಲ್ಲಿ ದೊರೆತ ಮಡಕೆಯ ಭಾಗಗಳು
ಮತ್ತು ಕಬ್ಬಿಣದ ಕಿಟ್ಟ

ಆಕರ ಗ್ರಂಥಗಳು

೧. ಶಿವತಾರಕ್ ಕೆ.ಬಿ. ೨೦೦೧, ಕರ್ನಾಟಕದ ಪುರಾತತ್ವ ನೆಲೆಗಳು, ಹಂಪಿ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
೨. ಶಿವತಾರಕ್ ಕೆ.ಬಿ, ೨೦೦೨, 'ತುಮಕೂರು ಜಿಲ್ಲೆಯ ಪ್ರಾಗಿತಿಹಾಸ-ಒಂದು ನೋಟ', ಕಲ್ಪಸಿರಿ ಸ್ಮರಣ ಸಂಚಿಕೆ (ಸಂ) ಬಿ. ನಂಜುಂಡಸ್ವಾಮಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
೩. ನಂದೀಶ್ವರ ಎನ್., ೨೦೦೮, ಸಿರಾ ತಾಲ್ಲೂಕು ದರ್ಶನ, ಪೂರ್ಣಚಂದ್ರ ತೇಜಸ್ವಿ ಪ್ರಕಾಶನ, ಬಾಲಾಜಿ ನಗರ, ಶಿರಾ.
೪. ಶಿವತಾರಕ್ ಕೆ.ಬಿ., ೨೦೦೧, 'ತುಮಕೂರು ಜಿಲ್ಲಾ ಪ್ರದೇಶದ ನೂತನ ಶಿಲಾಯುಗ ಸಂಸ್ಕೃತಿ', ಇತಿಹಾಸ ದರ್ಶನ ಸಂಪುಟ ೧೬.
೫. ಪದ್ಮ ಬಿ.ಎಸ್., ಚಿರಂಜೀವಿ ಎನ್.ಟಿ., ೨೦೧೨, 'ಬುಕ್ಕಾಪಟ್ಟಣ ಪರಿಸರದಲ್ಲಿ ಬೃಹತ್ ಶಿಲಾಗೋರಿಗಳ ನೆಲೆ', ಇತಿಹಾಸ ದರ್ಶನ, ಸಂ. ೨೭.
೬ ಶಿವತಾರಕ್ ಕೆ.ಬಿ., ೨೦೦೨, 'ತುಮಕೂರು ಜಿಲ್ಲಾ ಪ್ರದೇಶದ ಬೃಹತ್ ಶಿಲಾಯುಗ ಸಂಸ್ಕೃತಿ', ಇತಿಹಾಸ ದರ್ಶನ, ಸಂಪುಟ ೧೭.
೭. ಪತ್ರಿಕಾ ವರದಿ, 'ಗೊಲ್ಲರಹಟ್ಟಿಯಲ್ಲಿ ಶಿಲಾಯುಗದ ಆಯುಧಗಳ ಪತ್ತೆ', ಪ್ರಜಾಪ್ರಗತಿ ೨೨.೧೧.೨೦೨೦, ಪು.ಸಂ. ೦೭.
೮. ಎಂ. ಕೊಟ್ರೇಶ್, ೨೦೦೬, 'ನೂತನ ಶಿಲಾಯುಗದ ನೆಲೆ ಗಡಿಗುಡಾಳ', ಇತಿಹಾಸ ದರ್ಶನ, ಸಂಪುಟ ೨೧.

೪

ಶಿಂಗಿಹಳ್ಳಿ ಗ್ರಾಮದ ನವಶಿಲಾಯುಗ, ಬೃಹತ್ ಶಿಲಾಯುಗ ಮತ್ತು ಐತಿಹಾಸಿಕ ಅವಶೇಷಗಳು

ವೇಮಗಲ್ ಮೂರ್ತಿ**

ಕೋಲಾರ ತಾಲ್ಲೂಕು, ವೇಮಗಲ್ ಹೋಬಳಿಯ ಶಿಂಗಿಹಳ್ಳಿಯ ಕ್ಷೇತ್ರಕಾರ್ಯ ಮಾಡಿದಾಗ ಗುರುತಿಸಿದ ನವ, ಬೃಹತ್ ಶಿಲಾಯುಗ ಮತ್ತು ಐತಿಹಾಸಿಕ ಅವಶೇಷಗಳನ್ನು ಕುರಿತು ವಿವರಿಸಲಾಗಿದೆ. ಈ ಗ್ರಾಮದ ಸುತ್ತುಮುತ್ತಲಿನ ಹೊಲಗಳಲ್ಲಿ ಜನರು ಬೂದಿನೆತ್ತು (ಬೂದಿ ದಿಬ್ಬ) ಎಂಬುದಾಗಿ ಕರೆಯುವ ಕೆಲವು ಜಾಗಗಳಿವೆ. ಈ ರೀತಿಯ ಬೂದಿ ದಿಬ್ಬಗಳು ನವಶಿಲಾಯುಗಕ್ಕೆ ಸಂಬಂಧಿಸಿದುವು. ಈ ಜಾಗಗಳಲ್ಲಿ ನವಶಿಲಾಯುಗಕ್ಕೆ ಸಂಬಂಧಿಸಿದ ಕಪ್ಪು, ಕಂದು ಮತ್ತು ಕೆಂಪು ಬಣ್ಣದ ಮಡಿಕೆ ಚೂರುಗಳು ಮತ್ತು ಮೂಳೆಗಳು, ಹಣತೆಗಳು ಈ ಬಯಲಲ್ಲಿ ಉಳುಮೆ ಮಾಡುವಾಗ ಈಗಲೂ ದೊರೆಯುತ್ತವೆ. ವಿದ್ವಾಂಸರ ಪ್ರಕಾರ ಬೂದಿ ದಿಬ್ಬಗಳು ಸಂಗ್ರಹಿಸಿದ ಸಗಣಿ ಒಣಗಿದ ಮೇಲೆ ಅವುಗಳನ್ನು ಸುಟ್ಟಾಗ ಬೂದಿಯಿಂದ ಉಂಟಾದ ದಿಬ್ಬಗಳೇ "ಬೂದಿ ದಿಬ್ಬಗಳು"ಎಂದು ಕರೆಯಲ್ಪಡುತ್ತಿರುವುದು.

ಬೃಹತ್ ಶಿಲಾಯುಗಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ ಜನವಸತಿಗೆ ಅಗತ್ಯವಾದ ನೀರಿನ ಆಸರೆ ಈ ಪ್ರಾಂತ್ಯದಲ್ಲಿದ್ದು, ಬೇಸಾಯಕ್ಕೆ ಅನುಕೂಲವಾದ ಸಮತಟ್ಟಾದ ಭೂಮಿ ಇದ್ದು, ಇಲ್ಲಿಯೂ–ಕಂದು, ಕಪ್ಪು, ಕೆಂಪು ಬಣ್ಣದ ಮಡಿಕೆ ಚೂರುಗಳು, ಇಟ್ಟಿಗೆಕಿಟ್ಟ, ಮಣ್ಣಿನ ವಸ್ತುಗಳು, ಮೂಳೆಗಳು ಇತ್ಯಾದಿ ಉಳುಮೆ ಮಾಡುವಾಗ ಈಗಲೂ ಸಿಗುತ್ತವೆ. ಹಿಂದೆ ಹಲವಾರು ಕಿಂಡಿ ಸಮಾಧಿಗಳು ಇದ್ದವು, ಆದರೆ ಈ ಬಯಲು, ತೋಟ ಹೊಲಗಳಾಗಿ ಬದಲಾವಣೆಯಾದ ಮೇಲೆ ಸಮಾಧಿಗಳು ಉಳಿದಿಲ್ಲ.

ಶಿಂಗಿಹಳ್ಳಿ ಗ್ರಾಮದಲ್ಲಿ ವೀರಗಲ್ಲು, ಗದ್ದುಗೆ, ನಾಗ ಶಿಲ್ಪ, ಬಸವಣ್ಣನ ಗುಡಿ, ಯಂತ್ರದಕಲ್ಲು, ಲಿಂಗ ಮುದ್ರೆಕಲ್ಲು, ವಾಮನ ಕಲ್ಲುಗಳು ಮುಂತಾದ ಐತಿಹಾಸಿಕ ಅವಶೇಷಗಳು ಇವೆ.

ಶಿಂಗಿಹಳ್ಳಿಯಲ್ಲಿರುವ ಅವಶೇಷಗಳು

೧) ವೀರಗಲ್ಲು

ಈ ವೀರಗಲ್ಲನ್ನು ಮರದ ಬುಡದಲ್ಲಿ ನಿಲ್ಲಿಸಿದ್ದಾರೆ, ಇದಕ್ಕೆ ಗುಡಿ ಇಲ್ಲ. ಇಲ್ಲಿ ವೀರ ಎಡಗೈಯಲ್ಲಿ ತ್ರಿಶೂಲ, ಬಲಗೈಯಲ್ಲಿ ಒಂದು ಆಯುಧ ಹಿಡಿದಿದ್ದಾನೆ. ಇದು ವೀರ ತ್ರಿಶೂಲದ ಮೇಲೆ ಬಿದ್ದು ಆತ್ಮಾರ್ಪಣೆ ಮಾಡಿಕೊಂಡ ವೀರನ ಸ್ಮಾರಕ ಆಗಿರಬಹುದು. ಈ ರೀತಿಯ ವೀರಗಲ್ಲನ್ನು ಆತ್ಮಾಹುತಿ ವೀರಗಲ್ಲು ಎಂದು ಕರೆಯುತ್ತಾರೆ. ಇದೇ ರೀತಿ ವೀರಗಲ್ಲು ಹತ್ತಿರದ ಸೋಮಾಂಬುಧಿ ಅಗ್ರಹಾರದಲ್ಲಿದೆ. ಇದು ಸುಮಾರು ಹದಿನಾರನೇ ಶತಮಾನಕ್ಕೆ ಸೇರುತ್ತದೆ.

೨) ಗದ್ದುಗೆ

ಸ್ಥಳೀಯರ ಹೇಳಿಕೆಯಂತೆ, ಸುಮಾರು ೨೦೦ ವರ್ಷಗಳ ಹಿಂದೆ ಮರಿಸ್ವಾಮಿ ಎಂಬ ವೀರಶೈವ ಸನ್ಯಾಸಿ ಉತ್ತರ ಕರ್ನಾಟಕದಿಂದ ಶಿಂಗಿಹಳ್ಳಿಗೆ ಬಂದು ನೆಲೆಸಿದ್ದರು. ಅವರು ಕಾಲವಾದ ನಂತರ ಸ್ಥಳೀಯರು ಅವರಿಗೆ ಗದ್ದಿಗೆ ಕಟ್ಟಿ, ಅದರ ಮೇಲೆ ಒಂದು ಲಿಂಗವನ್ನೂ ಸ್ಥಾಪಿಸಿದ್ದಾರೆ. ಇವರು ಈ ಪ್ರಾಂತ್ಯದ ಪ್ರಭಾವಶಾಲಿಯಾದ ಶರಣರು ಇರಬೇಕು ಆದ್ದರಿಂದಲೇ ಇವರದೆಂದೇ ಜನ ಭಾವಿಸುವ ಇನ್ನೆರಡು ಗದ್ದುಗೆಗಳು ಜಂಗಮಕೋಟೆ ಮತ್ತು ನಂದಗುಡಿಯಲ್ಲಿವೆ ಎಂದು ಸ್ಥಳೀಯರು ಹೇಳುತ್ತಾರೆ.

* ೧೦೭, ಶ್ರೀ ಸಾಯಿ ವರ್ಷ, ಜಿ.ಆರ್. ಪ್ಯಾರಡೈಸ್, ಪೂರ್ಣಪ್ರಜ್ಞ ಬಡಾವಣೆ, ಬೆಂಗಳೂರು, ಮೊ: ೯೭೪೦೦ ೧೦೧೮೭

೩) ನಾಗ ಶಿಲ್ಪ (ತಳುಕು ನಾಗ)

ಸ್ಥಳೀಯರ ಪ್ರಕಾರ ಸಂತಾನ ಫಲ ಅಪೇಕ್ಷಿಸಿ, ಸಂತಾನ ಫಲ ಫಲಿಸಿದನಂತರ, ಈ ರೀತಿಯ ಶಿಲ್ಪವನ್ನು ಹಾಕಿಸುತ್ತಾರೆ. ಸಾಮಾನ್ಯವಾಗಿ ಅಶ್ವತ್ಥಕಟ್ಟೆಯಲ್ಲಿರುವ ನಾಗ ಶಿಲ್ಪವಲ್ಲ ಇದೊಂದು ರೇಖಾಚಿತ್ರ, ತಳಕು ನಾಗ ಶಿಲ್ಪದ ಜೊತೆಗೆ ಒಂದು ಹೆಣ್ಣು ಚಿತ್ರವಿರುವ ಮತ್ತೊಂದು ಕಲ್ಲನ್ನೂ ಹಾಕಿಸಿದ್ದಾರೆ. ಈ ಮಹಿಳಾ ರೇಖಾ ಶಿಲ್ಪವು ಪ್ರಸವಿಸುತ್ತಿರುವ ಹೆಂಗಸಿನ ಶಿಲ್ಪದಂತೆ ತೋರುತ್ತದೆ.

೪) ಯಂತ್ರದಕಲ್ಲು

ಈ ಯಂತ್ರದ ಕಲ್ಲು ಇದೇ ಗ್ರಾಮದ ಕೆರೆಕಟ್ಟೆ ಕೆಳಗಿನ ಗದ್ದೆ ಬಯಲಿನಲ್ಲಿದೆ. ಇದರ ಎತ್ತರ ಸುಮಾರು ಎರಡು ಅಡಿ, ಅಗಲ ಒಂದೂವರೆ ಅಡಿ, ದಪ್ಪ ನಾಲ್ಕು ಇಂಚು, ಇದರ ಒಂದು ಕಡೆ ಮಾತ್ರ ಚಕ್ರದ ರೂಪದಲ್ಲಿ ಯಂತ್ರ ಬಿಡಿಸಿದ್ದಾರೆ. ಲಿಪಿ ಅಥವಾ ಬೀಜಾಕ್ಷರಗಳು ಇಲ್ಲ. ಯಂತ್ರದ ಕಲ್ಲನ್ನು ಸಾಮಾನ್ಯವಾಗಿ ಊರ ಬಾಗಿಲು, ಕೋಟೆ ಗೋಡೆಯ ಬಳಿ ಅಥವಾ ದೇವಾಲಯದ ಬಳಿ ಹಾಕಿಸಿರುತ್ತಾರೆ. ಆದರೆ ಇಲ್ಲಿ ಗದ್ದೆ ಬಯಲಿಗೆ ಹೇಗೆ ಬಂತೋ ತಿಳಿಯದು. ಆದರೆ ಈ ಯಂತ್ರದ ಕಲ್ಲಿನ ಸ್ವಲ್ಪ ದೂರದ ಬಯಲಲ್ಲಿ ಶಿವನ ದೇಗುಲವಿದೆ, ಅಲ್ಲಿದ್ದ ಈ ಕಲ್ಲನ್ನು ಯಾರೋ ಗದ್ದೆ ಬಯಲಿನಲ್ಲಿ ತಂದು ಹಾಕಿರಬಹುದು ಎಂದು ಅನಿಸುತ್ತದೆ.

೫) ಲಿಂಗಮುದ್ರೆ ಕಲ್ಲು

ಕಲ್ಲಿನ ಮೇಲೆ ಶಿವಲಿಂಗದ ಚಿತ್ರವನ್ನು ಅಥವಾ ಬಸವನ ಚಿತ್ರವನ್ನು ಬಿಡಿಸಿರುತ್ತಾರೆ. ಈ ಕಲ್ಲುಗಳು ಹೆಚ್ಚು ಎತ್ತರವಿರುವುದಿಲ್ಲ. ಈ ರೀತಿಯ ಕಲ್ಲನ್ನು ಶೈವರು ದಾನವಾಗಿ ಪಡೆದ ಜಮೀನಿನ ಎಲ್ಲೆಗಳನ್ನು ಗುರುತಿಸಲು ಜಮೀನಿನ ನಾಲ್ಕೂ ಮೂಲೆಗಳಲ್ಲಿ ನೆಟ್ಟಿರುತ್ತಾರೆ. ಈ ಗ್ರಾಮದಲ್ಲಿ ವಿಶೇಷವಾಗಿ ವೀರಶೈವ ಧರ್ಮದವರೇ ಇರುವ ಕಾರಣದಿಂದಾಗಿ ಇಲ್ಲಿ ಹೆಚ್ಚಾಗಿ ಲಿಂಗಮುದ್ರೆ ಕಲ್ಲುಗಳು ದೊರೆಯುತ್ತವೆ. ಸುಗಟೂರು ಪಾಳೆಗಾರರು ವೀರಶೈವರಿಗೆ ದತ್ತಿ ನೀಡಿದ ಸಂದರ್ಭದಲ್ಲಿ ಇವುಗಳನ್ನು ಹಾಕಿಸಿರಬೇಕು ಎಂಬುದಾಗಿ ಊಹಿಸಬಹುದು.

೬) ವಾಮನ ಕಲ್ಲು

ಭೂಮಿಯನ್ನು ಬ್ರಾಹ್ಮಣರಿಗೆ ದಾನ ಕೊಟ್ಟಾಗ ಆ ಭೂಮಿಯ ಎಲ್ಲೆಗಳನ್ನು ಗುರುತಿಸಲು ನಾಲ್ಕೂ ಮೂಲೆಗಳಲ್ಲಿ "ಬಾಂದಿ" ಕಲ್ಲುಗಳನ್ನು ನೆಡುತ್ತಿದ್ದರು. ಇಂತಹ ಗಡಿ ಕಲ್ಲುಗಳ ಮೇಲೆ ಒಂದು ಕೈಯಲ್ಲಿ ಛತ್ರಿ, ಮತ್ತೊಂದು ಕೈಯಲ್ಲಿ ಕಮಂಡಲವನ್ನು ಹಿಡಿದಿರುವ ವ್ಯಕ್ತಿಯ ಚಿತ್ರವನ್ನು ಬಿಡಿಸುವುದು ರೂಢಿ, ಇದನ್ನೇ ವಾಮನ ಕಲ್ಲು ಎಂದು ಕರೆಯುತ್ತಾರೆ. ಇಂತಹ ಕಲ್ಲುಗಳು ಈ ಗ್ರಾಮದ ಹೊಲಗಳಲ್ಲಿ ಇವೆ.

ಇವಿಷ್ಟೇ ಅಲ್ಲದೇ ಶಿಂಗಿಹಳ್ಳಿ ಗ್ರಾಮದಲ್ಲಿ ಗ್ರಾಮದೇವತೆಗಳಾದ ಚೌಡೇಶ್ವರಿ, ಸಪ್ತಮಾತೃಕೆಯರು ಮಾರಮ್ಮ ಗುಡಿಗಳೂ ಇವೆ. ಈ ಗ್ರಾಮದ ಕೆರೆ ಎರಡೂ ಕಡೆ "ಕೆರೆಯ ಕೋಡಿ"ಗಳು ಇದ್ದು, ಆ ಎರಡೂ ಕಡೆ ಶಿವನ ಪುಟ್ಟ ದೇಗುಲಗಳು ಇವೆ.


ಗಂಗಮ್ಮನ ಬಯಲು

ಶಿಂಗಿಹಳ್ಳಿ ಗ್ರಾಮದ ಸಮೀಪದ ಗಂಗಮ್ಮನ ಬಯಲಲ್ಲಿ ಐದು ವೀರಗಲ್ಲುಗಳು, ಗಂಗಮ್ಮನ ಗುಡಿ, ಪುಷ್ಕರಿಣಿ, ತುಲಾಭಾರದ (ಉಯ್ಯಾಲೆ) ಕಂಬಗಳು ಇವೆ.

೧) ವೀರಗಲ್ಲುಗಳು


ಇಲ್ಲಿನ ಜನ ಪಾಂಡವರ ಗುಡಿಗಳು ಎಂಬ ಜಾಗವನ್ನು ತೋರಿಸುತ್ತಾರೆ. ಅವು ಕಲ್ಲು ಚಪ್ಪಡಿಗಳಿಂದ ಕಟ್ಟಿದ ಗುಡಿಗಳಾಗಿವೆ. ಇದು ವಾಸ್ತವವಾಗಿ ಪಾಂಡವರ ಗುಡಿಗಳಲ್ಲ (ಡಾಲ್ಮೆನ್ಸ್), ವೀರರಗುಡಿಗಳು. ಇದನ್ನೇ ಪಾಂಡವರ ಗುಡಿಗಳು ಎಂದು ಜನ ಕರೆಯುತ್ತಾರೆ.

೧) ಈ ವೀರಗಲ್ಲಿಗೆ ಗುಡಿ ಇದೆ. ಇಲ್ಲಿ ವೀರ ತನ್ನ ಬಲಗೈಯಲ್ಲಿ ಚಿಕ್ಕದಾದ ಖಡ್ಗ ಹಿಡಿದು ಎಡಗೈಯಲ್ಲಿ ಚಿಕ್ಕದಾದ ಕಠಾರಿ ಎಂಬ ಆಯುಧ ಹಿಡಿದಿದ್ದಾನೆ. ತನ್ನ ಸೊಂಟದ ಬಲಗಡೆ ಸಣ್ಣ ಚೂರಿ ಸಿಕ್ಕಿಸಿದ್ದಾನೆ. ಕಿವಿ, ಕುತ್ತಿಗೆಗೆ, ಕೈ, ಕಾಲುಗಳಿಗೆ ಆಭರಣಗಳನ್ನು ಧರಿಸಿದ್ದಾನೆ.













೨) ಇಲ್ಲಿ ವೀರ ಬಲಗೈಯಲ್ಲಿ ಪುಟ್ಟದಾದ ಖಡ್ಗ, ಎಡಗೈಯಲ್ಲಿ ಕಠಾರಿ ತರಹದ ಆಯುಧ ಹಿಡಿದಿದ್ದಾನೆ. ತನ್ನ ಸೊಂಟದ ಬಲಗಡೆ ಸಣ್ಣ ಚೂರಿ ಸಿಕ್ಕಿಸಿದ್ದಾನೆ. ಇಲ್ಲಿ ಶಿಲ್ಪಿ ವೀರನನ್ನು ಚೆನ್ನಾಗಿ ಬಿಡಿಸಿದ್ದಾನೆ. ಇಲ್ಲಿಯೂ ವೀರ ಕಿವಿ, ಕುತ್ತಿಗೆಗೆ, ಕೈ, ಕಾಲುಗಳಿಗೆ, ಆಭರಣಗಳನ್ನು ತೊಟ್ಟಿದ್ದಾನೆ. ಈ ವೀರಗಲ್ಲಿಗೆ ಗುಡಿ ಇಲ್ಲ.

೩) ಈ ವೀರಗಲ್ಲಿಗೆ ಗುಡಿ ಇದೆ. ಇಲ್ಲಿ ವೀರ ತನ್ನ ಎರಡೂ ಕೈಗಳಲ್ಲಿ ಖಡ್ಗ ಹಿಡಿದು ಎರಡೂ ಕೈಯನ್ನು ಮೇಲಕ್ಕೆ ಎತ್ತಿದ್ದಾನೆ. ಸೊಂಟದಲ್ಲಿ ಕಿರುಗತ್ತಿಯನ್ನು ಸಿಕ್ಕಿಸಿದ್ದಾನೆ. ಇಲ್ಲಿಯೂ ವೀರ ಕಿವಿ, ಕುತ್ತಿಗೆಗೆ, ಕೈ, ಕಾಲುಗಳಿಗೆ ಆಭರಣಗಳನ್ನು ಧರಿಸಿದ್ದಾನೆ.

೪) ಇಲ್ಲಿ ಶಿಲ್ಪಿ ವೀರನನ್ನು ಚೆನ್ನಾಗಿ ಬಿಡಿಸಿದ್ದಾನೆ. ತನ್ನ ಎರಡೂ ಕೈಗಳಲ್ಲಿ ಕಠಾರಿ ಅಥವಾ ಬಾಕು ಎಂಬ ಆಯುಧವನ್ನು ಹಿಡಿದು ಎರಡೂ ಕೈಗಳನ್ನು ಮೇಲಕ್ಕೆ ಎತ್ತಿದ್ದಾನೆ. ಇತರೆ ವೀರರಂತೆ ಈತನೂ ಸಹ ತನ್ನ ಕಿವಿ, ಕುತ್ತಿಗೆಗೆ, ಕೈ, ಕಾಲುಗಳಿಗೆ ಆಭರಣಗಳನ್ನು ಧರಿಸಿದ್ದಾನೆ. ಈ ವೀರಗಲ್ಲಿಗೆ ಗುಡಿ ಇದೆ.

೫) ವೀರ ಮಹಾಸತಿ ಕಲ್ಲು

ಈ ವೀರ ಮಹಾಸತಿ ಕಲ್ಲಿಗೆ ಗುಡಿ ಇದೆ. ಇಲ್ಲಿ ಕಲ್ಲು ಸುಮಾರು ಅರ್ಧ ಭಾಗದಷ್ಟು ಭೂಮಿಯಲ್ಲಿದೆ. ಇಲ್ಲಿ ವೀರ ಅಶ್ವಾರೂಢನಾಗಿದ್ದು, ತನ್ನ ಬಲಗೈಯಲ್ಲಿ ಕತ್ತಿಯನ್ನೂ ಎಡಗೈಯಲ್ಲಿ ಕುದುರೆಯ ಲಗಾಮನ್ನು ಹಿಡಿದಿದ್ದಾನೆ, ವೀರನು ತನ್ನ ಕಿವಿ, ಕುತ್ತಿಗೆಗೆ ಕೈ, ಕಾಲುಗಳಿಗೆ ಆಭರಣ ಧರಿಸಿದ್ದಾನೆ, ಕುದುರೆಯೂ ಅಲಂಕೃತವಾಗಿದೆ ಕುದುರೆಯನ್ನು ಕೆನೆಯುವಂತೆ ಚಿತ್ರಿಸಿರುವುದರಿಂದ ವೀರ ಯುದ್ಧದಲ್ಲಿ ಹೋರಾಡುತ್ತಿದ್ದಾನೆಂದು ಭಾವಿಸಬಹುದಾಗಿದೆ. ಇದೇ ವೀರಗಲ್ಲಿನಲ್ಲಿ ಹೆಣ್ಣಿನ ಚಿತ್ರವನ್ನು ಬಿಡಿಸಿದ್ದು ಈಕೆ ತನ್ನ ಬಲಗೈಯನ್ನು ಮುಷ್ಠಿ ಕಟ್ಟಿ ಮೇಲಕ್ಕೆ ಎತ್ತಿದ್ದು, ಎಡಗೈಯನ್ನು ಇಳಿಬಿಟ್ಟಿದ್ದು, ಈಕೆಯೂ ಅಲಂಕೃತಳಾಗಿದ್ದಾಳೆ. ಈ ಮೇಲಿನ ಚಿತ್ರಣದಿಂದ ಈ ವೀರಗಲ್ಲಿನ ಹೆಣ್ಣು ವೀರಗಲ್ಲಿನಲ್ಲಿರುವ ವೀರನ ಪತ್ನಿಯೆಂದು ತಿಳಿಯಬಹುದಾಗಿದೆ. ವೀರನ ಮರಣದ ನಂತರ ತಾನೂ ಪ್ರಾಣತ್ಯಾಗ ಮಾಡಿರಬಹುದು. ಇದರಿಂದ ಈ ವೀರಗಲ್ಲು ವೀರಮಹಾಸತಿ ಕಲ್ಲು ಎಂದು ತಿಳಿಯಬಹುದು.

ಈ ಮೇಲಿನ ವೀರಗಲ್ಲುಗಳು ವಿಜಯನಗರ ಕಾಲಕ್ಕೆ ಸೇರಿದಂತಹವಾಗಿವೆ.

೨) ಉಯ್ಯಾಲೆ ಕಂಬಗಳು (ತುಲಾಭಾರ ಕಂಬಗಳು)

ಎರಡು ದೊಡ್ಡ ಉಯ್ಯಾಲೆ ಕಂಬಗಳನ್ನು ಗಂಗಮ್ಮನ ಗುಡಿ ಬಳಿ ನೆಟ್ಟಿದ್ದು, ಇಲ್ಲಿ ಈವರೆಗೂ ಉಯ್ಯಾಲೆ ಸೇವೆ ಮಾಡುತ್ತಿದ್ದರು, ಇದನ್ನು ತುಲಾಭಾರದಂತಹ ಸೇವೆಗೂ ಬಳಸುತ್ತಿದ್ದರು. ಇದರಿಂದ ಈ ಕಂಬಗಳನ್ನು ತುಲಾಭಾರ ಕಂಬಗಳು ಎಂದೂ ಕರೆಯುತ್ತಾರೆ. ಹಲವಾರು ಕಾರಣಗಳಿಗೆ ಹರಕೆ ಹೊತ್ತವರು ತಮ್ಮ ಹರಕೆಗಳು ಫಲಿಸಿದ ನಂತರ ಈ

ಕಂಬಗಳಿಗೆ ತಕ್ಕಡಿಯನ್ನು ಕಟ್ಟಿ ತಮ್ಮಷ್ಟೇ ತೂಕದ ಹರಸಿಕೊಂಡ ಪದಾರ್ಥಗಳನ್ನು ತೂಗಿ ಹರಕೆ ತೀರಿಸುತ್ತಿದ್ದ ಪದ್ಧತಿ ಇತ್ತೆಂದು ತಿಳಿದುಬರುತ್ತದೆ.

೩) ಪುಷ್ಕರಿಣಿ

ಇದು ಗಂಗಮ್ಮನ ಗುಡಿ ಸಮೀಪವಿದೆ. ಪುಷ್ಕರಿಣಿಯ ಮಧ್ಯೆ ಒಂದು ಮಂಟಪವೂ ಇದೆ. ಹಿಂದೆ ವಿಶೇಷ ದಿನದಲ್ಲಿ ತೆಪ್ಪೋತ್ಸವ ನಡೆಯುತ್ತಿತ್ತು.

ಈ ಮೇಲಿನ ವಿವರಗಳಿಂದ ಶಿಂಗಿಹಳ್ಳಿ ಗ್ರಾಮವು ಅತಿ ಪ್ರಾಚೀನ ಕಾಲದಿಂದಲೂ ಮಾನವ ವಸತಿ ಇರುವ ಪ್ರದೇಶವೆಂದು ತಿಳಿಯಬಹುದು.

[ಕ್ಷೇತ್ರ ಕಾರ್ಯದಲ್ಲಿ ಸಹಕರಿಸಿದ ಡಾ. ಶೇಷಶಾಸ್ತ್ರಿ, ಸ್ಥಳೀಯರಾದ ಶಿಂಗಿಹಳ್ಳಿ ಗ್ರಾಮದ ನಟರಾಜ ಗೌಡರಿಗೆ, ಆತ್ಮೀಯ ಗೆಳೆಯ ಪುನೀತ್‌ರವರಿಗೆ ಕೃತಜ್ಞತೆಗಳು.]

೫

ಹಾಲಸಾಗರ ಬೆಟ್ಟದ ಪ್ರಾಗೈತಿಹಾಸಿಕ ನೆಲೆ

ಓಬಯ್ಯ ಓ. ಹಾಲಸಾಗರ*

ಹಾಲಸಾಗರ ಬೆಟ್ಟಗಳು ಬಳ್ಳಾರಿ ಜಿಲ್ಲಾಕೇಂದ್ರದಿಂದ ೫೨ ಕಿ.ಮೀ. ಕೂಡ್ಲಿಗಿ ತಾಲ್ಲೂಕು ಕೇಂದ್ರದಿಂದ ೩೦ ಕಿ.ಮೀ. ಗುಡೇಕೋಟೆ ಹೋಬಳಿ ಕೇಂದ್ರದಿಂದ ಪೂರ್ವಕ್ಕೆ ಅನತಿ ದೂರದಿಂದ ಪ್ರಾರಂಭವಾಗಿ ಮೊಳಕಾಲ್ಮೂರು ತಾಲ್ಲೂಕಿನ ಗಡಿ ಗ್ರಾಮಗಳಾದ ಭಟ್ಟರಹಳ್ಳಿ, ಚಿಕ್ಕೇರಹಳ್ಳಿಯ ಮಲ್ಲಪ್ಪನ ಬೆಟ್ಟದವರೆಗೆ ಸುಮಾರು ೨,೨೭೪.೫೩ ಹೆಕ್ಟೇರ್ ಪ್ರದೇಶದ ವಿಸ್ತೀರ್ಣದಲ್ಲಿ ವ್ಯಾಪಿಸಿದೆ. ಈ ವ್ಯಾಪ್ತಿಯಲ್ಲಿ ಗಿಡಮರಗಳ ಬಯಲು ಪ್ರದೇಶ, ಚಿಕ್ಕ ಮತ್ತು ಬೃಹತ್ ಬೆಟ್ಟಗುಡ್ಡಗಳು, ವಿಶಾಲವಾದ ಬಂಡೆಗಳು ಕ್ಲೋಸ್‌ಪೇಟೆ ಗ್ರಾನೈಟ್ ದುಂಡು ಮತ್ತು ಅಗಲವಾದ ಶಿಲೆಗಳಿಂದ ಕೂಡಿವೆ. ಇಲ್ಲಿರುವ ಪ್ರಮುಖ ಬೆಟ್ಟಗುಡ್ಡ ಬಂಡೆಗಳೆಂದರೆ ಪಾಲುಪೋತಲುಗುಡ್ಡ, ಗೋಡೆಗಳ ಗುಡ್ಡ, ರಾಗಲುಗುಡ್ಡ, ಪಾಂಡವರಬೆಟ್ಟ, ಬಂತಲುಗುಡ್ಡ, ಮಲ್ಲಪ್ಪನಬೆಟ್ಟ, ಗೋಡಗಲು ಗುಡ್ಡ, ಪಿಲ್ಲೆರಾಯಿ, ಕೋಡಿ ಗುಡ್ಡ, ಸನ್ಯಾಸಪ್ಪನ ಬಂಡೆ, ಊರು ಬಂಡೆ, ಗೋಬಂಡೆ, ರಾಗಲು ಬಂಡೆ, ಆರಾಗಿ ಬಂಡೆ, ಕತ್ತಿನೆತ್ತಿ ಬಂಡೆ ಇನ್ನು ಮುಂತಾದವು ಸುಮಾರು ಸಾವಿರಾರು ಅಡಿ ಎತ್ತರವಾಗಿವೆ. ಈ ಬೆಟ್ಟಗಳಲ್ಲಿ ನೈಸರ್ಗಿಕ ಶಿಲಾಗವಿಗಳು, ಕಲ್ಲಾಸರೆಗಳು, ಹಳ್ಳಕೊಳ್ಳಗಳು, ಸಸ್ಯವರ್ಗ, ವಿವಿಧ ಜಾತಿಯ ಪ್ರಾಣಿ ಸಂಕುಲ ಈ ಪ್ರದೇಶ ಉಷ್ಣ ಮತ್ತು ತಂಪಾದ ಹವಾಮಾನ ಇನ್ನು ಮುಂತಾದ ಭೌಗೋಳಿಕ ಲಕ್ಷಣಗಳು ಶಿಲಾಯುಗದ ಮಾನವನು ವಾಸಿಸಲು ಯೋಗ್ಯವಾದ ಸ್ಥಳವಾಗಿದೆ.

ಪ್ರಾಗಿತಿಹಾಸ ನೆಲೆ

ಹಾಲಸಾಗರ ಪರಿಸರದಲ್ಲಿ ಪುರಾತನಕಾಲದಿಂದಲೂ ಶಿಲಾಯುಗದ ಮಾನವನು ನೆಲೆಸಿ ಬಿಟ್ಟುಹೋಗಿರುವ ವಿವಿಧ ರೀತಿಯ ಕುರುಹುಗಳಾದ ಶಿಲಾ ಸಮಾಧಿಗಳು, ಶಿಲಾಯುಧಗಳು, ಗವಿ ವರ್ಣಚಿತ್ರಗಳು, ಇನ್ನು ಮುಂತಾದ ಪ್ರಾಕ್‌ಚಾರಿತ್ರಿಕ ಅವಶೇಷಗಳನ್ನು ಇತ್ತೀಚಿನವರೆಗೆ ಅನೇಕ ವಿದ್ವಾಂಸರು ಶೋಧಿಸಿ ವರದಿ ಮಾಡಿದ್ದಾರೆ. ಅವರಲ್ಲಿ ಪ್ರಮುಖರೆಂದರೆ ಸಿ.ಜೆ. ಪಿಳ್ಳೆ[೧], ಎಮ್.ಎಸ್. ನಾಗರಾಜರಾವ್ ಮತ್ತು ರು.ಮ. ಷಡಕ್ಷರಯ್ಯ[೨] ಹೆಚ್.ಎಮ್. ತಿಪ್ಪೇಶ[೩], ಮಂಜನಾಯ್ಕ[೪], ಓಬಯ್ಯ ಓ[೫], ಇನ್ನು ಮುಂತಾದವರು.

ಆದ್ದರಿಂದ ನಾನು ಮೇಲಿನ ಪೂರ್ವಭಾವಿ ಸಂಶೋಧನೆಗಳಿಂದ ಪ್ರಭಾವಿತನಾಗಿ ಹಾಲಸಾಗರ ಬೆಟ್ಟಗುಡ್ಡ ಮತ್ತು ಬಂಡೆಗಳಲ್ಲಿ ಕ್ಷೇತ್ರಕಾರ್ಯ ಕೈಗೊಂಡಾಗ ಗೀರುಬಂಡೆ/ಕುಟ್ಟು ಚಿತ್ರಗಳು, ಕಲ್ಗುಳಿಗಳು, ಮಸೆಯುವ ಕಲ್ಲು, ಶಿಲಾಯುಧಗಳು, ಮಣ್ಣಿನ ಮಡಿಕೆಗಳು ಇನ್ನು ಮುಂತಾದ ಪ್ರಾಕ್‌ಚಾರಿತ್ರಿಕ ಅವಶೇಷಗಳು ಬೆಳಕಿಗೆ ಬಂದಿದ್ದು ಇವುಗಳ ಬಗ್ಗೆ ಹೆಚ್ಚಿನ ಮಾಹಿತಿಯನ್ನು ವಿಶ್ಲೇಷಿಸುವುದು ಈ ಲೇಖನದ ಉದ್ದೇಶವಾಗಿದೆ.

ಬಯಲು ಬಂಡೆಗೀರು/ಕುಟ್ಟುಚಿತ್ರಗಳು

ಬೃಹತ್ ಶಿಲಾಯುಗದಲ್ಲಿ ಕೆಲವು ವರ್ಗದ ಜನರು ಪಶುಸಂಗೋಪನೆ ಕಸುಬನ್ನು ಅವಲಂಬಿಸಿಕೊಂಡು ಅಲೆಮಾರಿ ಜೀವನ ನಡೆಸುತ್ತಿರುವಾಗ ಬೆಟ್ಟಗುಡ್ಡಗಳಲ್ಲಿ ಇರುವ ಬಯಲುಬಂಡೆಗಳ ಮೇಲೆ ವಿಶ್ರಾಂತಿ ಸಮಯದಲ್ಲಿ ತಮ್ಮ ಭಾವನೆಗಳನ್ನು, ತನಗೆ ಇಷ್ಟವಾದ ಪ್ರಾಣಿಗಳ ಚಿತ್ರಗಳನ್ನು ಮೂಡಿಸುವುದಕ್ಕೆ ಕಲ್ಲಿನಿಂದ ಏಕಪ್ರಕಾರವಾಗಿ ಕುಟ್ಟಿ ಕುಟ್ಟಿ ಬಿಡಿಸುವುದು ಅಥವಾ ಶಿಲೆ/ಲೋಹದ ಉಳಿಯಂತಹ ಮೊನಚಾದ ಉಪಕರಣದಿಂದ ಗೆರೆಗಳನ್ನು ಮೂಡಿಸುತ್ತಿದ್ದರು. ಈ ರೀತಿಯ ಚಿತ್ರಗಳನ್ನು ವಿದ್ವಾಂಸರು ಬಯಲುಬಂಡೆ ಗೀರು/ಕುಟ್ಟಿದ ಚಿತ್ರಗಳು ಎಂದು ಕರೆಯುವುದುಂಟು. ಇಂತಹ ಚಿತ್ರಗಳನ್ನು ಭಾರತದಲ್ಲಿಯೇ ಪ್ರಥಮವಾಗಿ ಕರ್ನಾಟಕದ ಬಳ್ಳಾರಿ ಜಿಲ್ಲೆಯ ಕಪ್ಪಗಲ್ಲಿನಲ್ಲಿ ಕ್ರಿ.ಶಕ ೧೮೮೦ರಲ್ಲಿ ಹ್ಯೂಬರ್ಟನಾಕ್ಸ್ ಕುಟ್ಟಿದ ಚಿತ್ರಗಳನ್ನು

* ಇತಿಹಾಸ ಉಪನ್ಯಾಸಕರು, ಹಾಲಸಾಗರ, ಮಹದೇವಪುರ ಅಂಚೆ, ಕೂಡ್ಲಿಗಿ ತಾಲ್ಲೂಕು, ಬಳ್ಳಾರಿ ಜಿಲ್ಲೆ, ಮೊ. ೯೯೦೨೪ ೦೭೩೦೨

ಶೋಧಿಸಿದರು[೬]. ನಂತರ ಕುರುಗೋಡು, ಹಲಕುಂದಿ, ಬೆಳಗಲ್ಲು, ಕಮಲಾಪುರ, ನಂದಿ ಬಂಡೆ, ರಾಜಾಪುರ, ಬೈರನಾಯಕನಹಳ್ಳಿ ಇನ್ನು ಮುಂತಾದ ಸ್ಥಳಗಳಲ್ಲಿ ಬೆಳಕಿಗೆ ಬಂದಿವೆ[೭]. ಕೂಡ್ಲಿಗಿ ತಾಲ್ಲೂಕಿನ ಅಪ್ಪಯ್ಯನಹಳ್ಳಿ ಗ್ರಾಮ ಪಂಚಾಯಿತಿಯ ವ್ಯಾಪ್ತಿಯ ಹಾಲಸಾಗರ ಗ್ರಾಮದ ಉತ್ತರಕ್ಕೆ ಎರಡು ಕಿ.ಮೀ. ದೂರದಲ್ಲಿ ಶರಣರ ಬೆಟ್ಟದ ಮೇಲಿರುವ ಬಯಲುಬಂಡೆಗಳ ಮೇಲೆ ಕುಟ್ಟಿದ ಗೂಳಿಗಳು ಜಿಂಕೆಗಳು ಶಂಕುಹುಳು (ಬಸವನಹುಳು) ಏಣಿ (ನಿಚ್ಚಣಿಕೆ) ಹಾಗೂ ಪಾದದ ಮಾದರಿ ಚಿತ್ರಗಳನ್ನು ವಿದ್ವಾಂಸರಾದ ಎಮ್.ಎಸ್. ನಾಗರಾಜರಾವ್, ರು.ಮಾ. ಷಡಕ್ಷರಯ್ಯರವರು ಶೋಧಿಸಿದ್ದಾರೆ[೮]. ಈ ಕುಟ್ಟುಚಿತ್ರಗಳ ಸಮೀಪದಲ್ಲಿಯೇ ಬೃಹತ್ ಶಿಲಾಯುಗದ ಒಂದು ಕಲ್ಗೋರಿಯನ್ನು ಕಾಣಬಹುದು. ಅಷ್ಟೇ ಅಲ್ಲದೇ ಈ ಬೆಟ್ಟದ ಸುತ್ತಮುತ್ತಲಿನ ಪರಿಸರದಲ್ಲಿ ಸಹ ಬೃಹತ್ ಶಿಲಾಯುಗದ ವಿವಿಧ ಶಿಲಾ ಸಮಾಧಿಗಳನ್ನು ಕಾಣಬಹುದು[೯].

ಕೋಳಿ ಗುಂಡಿನ ಸಮೀಪದಲ್ಲಿ ಗೀರು ಬಂಡೆ ಚಿತ್ರಗಳು

ಶರಣರ ಬೆಟ್ಟದ ದಕ್ಷಿಣಕ್ಕೆ ಎರಡು ಕಿ.ಮೀ. ದೂರದಲ್ಲಿ ಹಾಲಸಾಗರ ಗ್ರಾಮದ ಮೇಲ್ಭಾಗದಲ್ಲಿರುವ ಕೋಳಿ ಗುಂಡಿನ ಸಮೀಪದ ನೆಲದ ಬಂಡೆಯ ಮೇಲೆ ಗೀರು ಚಿತ್ರಗಳನ್ನು ಕೊರೆಯಲಾಗಿದೆ. ಮೇಲ್ಭಾಗದಲ್ಲಿ ಚಂದ್ರನಂತೆ (ಶೂನ್ಯ) ಕಾಣುವ ಚಿತ್ರ ಕಂಡುಬರುತ್ತದೆ. ಕೆಳಭಾಗದಲ್ಲಿ ಗುರುತಿಸಲಾಗದ ಯಾವುದೋ ಪ್ರಾಣಿಯ ಮುಖದಂತಿದ್ದು ಹಿಂಭಾಗದ ರೇಖೆಗಳು ನಶಿಸಿವೆ. ನಂತರ ಕೈಹಿಡಿಯನ್ನು ಹೊಂದಿರುವ ಕತ್ತಿಯ ಚಿತ್ರವಿದೆ. ಇನ್ನು ಕೆಳಭಾಗದಲ್ಲಿ ಕೊಡಲಿ (ಪ್ರಶ್ನಾರ್ಥಕ ಚಿಹ್ನೆ) ಯಂತೆ ಕಾಣುವ ಚಿತ್ರವಿದೆ. ಸಮೀಪದಲ್ಲಿಯೇ ಬಾಲ ಎತ್ತಿಕೊಂಡು ನಿಂತಿರುವ ಕುದುರೆಯಂತೆ ಕಾಣುವ ಚಿತ್ರ ಮತ್ತು ಈ ಚಿತ್ರದ ಕೆಳಭಾಗದಲ್ಲಿ ಅಸ್ಪಷ್ಟವಾಗಿ ಕಾಣುವ ಗೂಳಿಯಂತಿರುವ ಚಿತ್ರವಿದೆ. ಇನ್ನು ಕೆಲವು ಗೀರುಚಿತ್ರಗಳು ಕಾಲನ ಹೊಡೆತಕ್ಕೆ ಸಿಲುಕಿ ನಶಿಸಿವೆ ಈ ಮೇಲಿನ ಆಯುಧ ಮತ್ತು ಪ್ರಾಣಿಗಳ ಚಿತ್ರಗಳನ್ನು ಶಿಲಾ ಅಥವಾ ಲೋಹದ ಹರಿತವಾದ ಆಯುಧದಿಂದ ಕೊರೆಯಲಾಗಿದೆ. ಈ ಗೀರು ಚಿತ್ರಗಳಿರುವ ಸುತ್ತಮುತ್ತಲಿನ ಪರಿಸರದಲ್ಲಿ ಕುಟ್ಟುಚಿತ್ರಗಳು, ಕಲ್ಲು ಗುಳಿಗಳು, ಬೃಹತ್ ಶಿಲಾಯುಗದ ಶಿಲಾ ಸಮಾಧಿಗಳು, ಗವಿ ವರ್ಣಚಿತ್ರಗಳು[೧೦], ಪತ್ತೆಯಾಗಿರುವುದರಿಂದ. ಈ ಸಂಸ್ಕೃತಿಗಳ ಪಶುಪಾಲನೆ ವೃತ್ತಿಯ ಜನವರ್ಗಕ್ಕೆ ಸೇರಿದವರು ಈ ಬಯಲು ಬಂಡೆಗಳ ಗೀರು ಚಿತ್ರಗಳನ್ನು ಕೊರೆದಿರಬಹುದು. ಇವುಗಳ ಕಾಲಾವಧಿ ಬಹುಶಃ ಶಿಲಾ ತಾಮ್ರಯುಗದ ಕೊನೆಯ ಹಂತ ಕ್ರಿ.ಸ್ತ.ಪೂ. ಸುಮಾರು ೧೪೦೦–೮೦೦ ಅಥವಾ ಬೃಹತ್ ಶಿಲಾಯುಗದ ಆದಿ ಮಧ್ಯಭಾಗದ ಕ್ರಿ.ಸ್ತ.ಪೂ. ೧೦೦೦–೫೦೦ ಕಾಲವಿರಬಹುದೆಂದು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ[೧೧]. ಪ್ರಸ್ತುತದಲ್ಲಿ ಈ ಗೀರು ಬಂಡೆ ಚಿತ್ರಗಳನ್ನು ಸ್ಥಳೀಯರು ದಸರಾ ಹಬ್ಬ ಹಿರಿಯರ ಹಬ್ಬ ಹೊಲ ಬಿತ್ತನೆ ಮತ್ತು ಬೆಳೆ ಕೊಯ್ಲು ಸಂದರ್ಭದಲ್ಲಿ ಪೂಜಿಸುತ್ತಾರೆ.

ಕಲ್ಲುಗುಳಿಗಳು: ಹಾಲಸಾಗರ ಗ್ರಾಮದ ಉತ್ತರಕ್ಕಿರುವ ಬಸವನ ಬಂಡೆಯ ಹಿಂಭಾಗ ಅಥವಾ ದೇವರಹಟ್ಟಿಯ ದಕ್ಷಿಣಕ್ಕಿರುವ ತೂತುಗಳ ಗುಂಡು ಮೃದು ಮರಳು ಮಿಶ್ರಿತ (ಗರಚುಮಿಶ್ರಿತ) ಕಲ್ಲಾಸರೆಯಾಗಿದೆ ಈ ಕಲ್ಲಾಸರೆಯಲ್ಲಿ ಕಲ್ಲುಗುಳಿಗಳು ಅಥವಾ ತೂತುಗಳು ಇರುವುದರಿಂದ ಸ್ಥಳೀಯರು ಈ ಗುಂಡಿಗೆ ತೂತುಗಳ ಗುಂಡು ಎಂದು ಕರೆಯುತ್ತಾರೆ. ಈ ಗುಂಡಿನ ವಿಶೇಷವೆನೆಂದರೆ ಬಂಡೆಯ ಮೇಲೆ ನಿಂತಿರುವ ಈ ಬೃಹತ್‌ಗುಂಡಿಗೆ ಒಳಹೋಗಲು ೧.೫೦X೫೪ ಸೆಂ.ಮೀ. ಉದ್ದಗಲದ ದಾರಿಯಿದೆ. ದಕ್ಷಿಣಕ್ಕೆ ೭೭X೭೩ ಉದ್ದಗಲದ ಕಿಂಡಿಯಂತಿರುವ ದಾರಿಯಿದೆ. ಪಶ್ಚಿಮಕ್ಕೆ ೧೫೮X೫೦ ಸೆಂ.ಮೀ. ಉದ್ದಗಲದ ಕಿಂಡಿ ದಾರಿಯಿದೆ ಈ ಕಲ್ಲಾಸರೆಯ ಒಳಭಾಗದಲ್ಲಿ ಮೇಲ್ಛಾವಣಿಯಂತೆ ೧.೫೦ ಸೆಂ.ಮೀ. ಎತ್ತರವಾಗಿ ನುಣುಪಾಗಿ ಗುಹೆಯಂತೆ ಕೊರೆಯಲಾಗಿದೆ. ಒಳಭಾಗದಲ್ಲಿ ಬಿಳಿ ಬಣ್ಣದ ವರ್ಣ ಚಿತ್ರಗಳಿವೆ[೧೨]. ಈ ಒಳಭಾಗದ ಕಲ್ಲಾಸರೆಯಲ್ಲಿ ೪ ಸೆಂ.ಮೀ. ಉದ್ದಗಲದ ಒಂದು ಏಕೈಕ ಕಲ್ಲುಗುಳಿಯಿದೆ ಈ ಕಲ್ಲಾಸರೆಯ ತಳಭಾಗದ ಬಂಡೆಗೆ ನುಣುಪಾಗಿ ತಂಪಾಗಿರುವಂತೆ ತೆಳುವಾದ ನಸಿ ಬಣ್ಣವನ್ನು ಲೇಪಿಸಲಾಗಿದೆ. ಈಗ ಇದು ನಶಿಸುವ ಹಂತದಲ್ಲಿದೆ ಆದರೆ ಇದನ್ನು ಯಾರು ಯಾವಾಗ ನಿರ್ಮಿಸಿದರೆಂಬುದನ್ನು ಹರಿಯಲು ಹೆಚ್ಚಿನ ಅಧ್ಯಯನ ಮಾಡಬೇಕಾಗಿದೆ.

ಈ ಕಲ್ಲಾಸರೆಯ ವಿಶೇಷವೆನೆಂದರೆ ಈ ಗುಂಡಿನ ಪಶ್ಚಿಮದ ಕಡೆಗೆ ೪೫ ಕಲ್ಲುಗುಳಿಗಳಿವೆ ಇವುಗಳಲ್ಲಿ ೨೫ ಕಲ್ಲುಗುಳಿಗಳು ೪ ಸೆಂ.ಮೀ. ಉದ್ದಗಲ, ೯ ಕಲ್ಲುಗುಳಿಗಳು ೩ ಸೆಂ.ಮೀ. ಉದ್ದಗಲ, ೩ ಕಲ್ಲುಗುಳಿಗಳು ೬ ಸೆಂ.ಮೀ. ಉದ್ದಗಲ, ೧ ಕಲ್ಲುಗುಳಿ ಮಾತ್ರ ೫.೧/೨ ಸೆಂ.ಮೀ. ಉದ್ದಗಲವಿದೆ, ಇನ್ನುಳಿದ ೯ ಕಲ್ಲುಗುಳಿಗಳು ಚಿಕ್ಕವಾಗಿದ್ದು ನಶಿಸುವ ಹಂತದಲ್ಲಿವೆ. ಈ ಕಲ್ಲುಗುಳಿಗಳನ್ನು ನಿರ್ದಿಷ್ಟವಾದ ಕಲ್ಲನ್ನು ಒಂದೇ ಕಡೆ ಇಟ್ಟು ಸತತವಾಗಿ ಶಕ್ತಿ ಹಾಕಿ ತಿರುಗಿಸುವುದರ ಮೂಲಕ ಇಂಥಹ ಕಲ್ಲುಗುಳಿ(ತಿರುಗುಳಿ)ಗಳನ್ನು ಮೂಡಿಸಲಾಗಿದೆ ಎಂದು ವಿದ್ವಾಂಸರ ಅಭಿಪ್ರಾಯ[೧೩]. ಶಿಲೋಪಕರಣಗಳನ್ನು ಅಥವಾ ಕಲ್ಲು ಕೊಡಲಿಗಳ ಮೊನೆಗಳನ್ನು ಮಸೆದು ಹರಿತಗೊಳಿಸುವ ಕಾರಣಕ್ಕಾಗಿಯೇ ಬಂಡೆಗುಂಡುಗಳ ಮೇಲೆ

ಕಲ್ಲುಗುಳಿಗಳು/ತಿರುಗುಳಿಗಳು ಉಂಟಾಗಿರುವುದನ್ನು ಬಳ್ಳಾರಿ ಜಿಲ್ಲೆ ಸಂಗನಕಲ್ಲು ಪರಿಸರದಲ್ಲಿ ಬಳ್ಳಾರಿ ನಗರದ ಉತ್ತರಕ್ಕಿರುವ ಬೆಟ್ಟದಲ್ಲಿ ಭೂವಿಜ್ಞಾನಿ ರಾಬರ್ಟ್ ಬ್ರೂಸ್‌ಫೂಟ್ ಗುರುತಿಸಲಾಗಿದೆ. ನಂತರ ಬಳ್ಳಾರಿಯ ಹಲಕುಂದಿ ಚಿತ್ರದುರ್ಗದ ಬೀಮನಗುಂಡು[೧೪]. ಬಾದಾಮಿ, ಪಟ್ಟದಕಲ್ಲು, ಕಳಾಸ, ಬೀರೂರು ಇನ್ನು ಮುಂತಾದ ಸ್ಥಳಗಳಲ್ಲಿ ವಿದ್ವಾಂಸರು ಕಲ್ಲುಗುಳಿನ್ನು ಗುರುತಿಸಿದ್ದಾರೆ.

ಮನುಷ್ಯನ ತಲೆಗೀರು ಚಿತ್ರ

ಈ ತೂತುಗಳ ಗುಂಡಿನಲ್ಲಿರುವ ೪೫ ಕಲ್ಲುಗುಳಿಗಳ ಸಮೀಪದಲ್ಲಿಯೇ ಮನುಷ್ಯನ ತಲೆಗೀರು ಚಿತ್ರವನ್ನು ಕೊರೆಯಲಾಗಿದೆ. ಮನುಷ್ಯನ ಕುತ್ತಿಗೆ (ಶಿರಾ) ಮತ್ತು ತಲೆಯ ಭಾಗವನ್ನು ಗೀರು/ಕುಟ್ಟುವುದರ ಮೂಲಕ ಕೊರೆಯಲಾಗಿದೆ ಕುತ್ತಿಗೆ ವಿಸ್ತೀರ್ಣ ೬ ಸೆಂ.ಮೀ. ತಲೆ ವಿಸ್ತೀರ್ಣ ೬ ಸೆಂ.ಮೀ. ಸುತ್ತಳತೆ ೧೪ ಸೆಂ.ಮೀ. ಈ ಕಲ್ಲುಗುಳಿಗಳ ಸಮೀಪದಲ್ಲಿಯೇ ಮನುಷ್ಯನ ತಲೆ ಭಾಗವನ್ನು ಕೊರೆದಿರುವುದರ ಬಗ್ಗೆ ವಿದ್ವಾಂಸರಿಂದ ಹೆಚ್ಚಿನ ಸಂಶೋಧನೆಯಾಗಬೇಕಾಗಿದೆ. ಈ ಕಲ್ಲುಗುಳಿಗಳು ಮತ್ತು ಮನುಷ್ಯನ ತಲೆಯ ಚಿತ್ರಕ್ಕೆ ಸಂಬಂಧವಿರಬಹುದೆ ? ಕೆಲ ವಿದ್ವಾಂಸರು ಕಲ್ಲುಗುಳಿಗಳನ್ನು ಸಾವಿನ ಸಂಕೇತವೆಂದು ಅಭಿಪ್ರಾಯಪಟ್ಟಿದ್ದಾರೆ[೧೫].

ಈ ರೀತಿಯ ಕಲ್ಲುಗುಳಿನ್ನು ಗೋಡೆಗಳ ಗುಡ್ಡದ ಹಿಂಭಾಗ (ಪಶ್ಚಿಮಕ್ಕೆ) ಬಯಲುಗರಚು ತುಂಡು ಬಂಡೆಗಳ ಮೇಲೆ ಮತ್ತು ಕಲ್ಗೋರಿಯಂತೆ ಇರುವ ದುಂಡು ಬಂಡೆಯ ಮೇಲೆ ಕಲ್ಲುಗುಳಿವೆ. ಈ ಸ್ಥಳದಲ್ಲಿ ಸುಮಾರು ೧೦ ಕಲ್ಲುಗಳಿದ್ದು ೬ ಸೆಂ.ಮೀ. ಉದ್ದಗಲ ವಿಸ್ತೀರ್ಣವಿದೆ. ಹನುಮಪ್ಪನ ಗುಂಡಿನ ಕೆಳಗಡೆ ಸಹ ಇಂತಹ ಕಲ್ಲುಗುಳಿಗಳನ್ನು ಕಾಣಬಹುದು.


ಕಲ್ಲುಗುಳಿಗಳು ಮತ್ತು ಮನುಷ್ಯನ ತಲೆಗೀರು ಚಿತ್ರವಿರುವ ತೂತುಗಳ ಗುಂಡು ಕಲ್ಲಾಸರೆಯ ಸುತ್ತಮುತ್ತಲಿನ ಪರಿಸರದಲ್ಲಿ ಬೃಹತ್ ಶಿಲಾಯುಗದ ಶಿಲಾ ಸಮಾಧಿಗಳು ಗೀರು/ಕುಟ್ಟು ಚಿತ್ರಗಳು ಪ್ರಾಗೈತಿಹಾಸಿಕ ಮತ್ತು ಮಧ್ಯಕಾಲೀನ ವರ್ಣಚಿತ್ರಗಳಿವೆ ಹಾಗಾಗಿ ಕಲ್ಲುಗಳಿಗಳು ಮತ್ತು ಬಯಲುಬಂಡೆಗೀರು/ಕುಟ್ಟುಚಿತ್ರಗಳ ಕಾಲ ಮಧ್ಯ ಆದಿ ಶಿಲಾಯುಗದಷ್ಟು ಹಿಂದಕ್ಕೆ ಹೋಗಬಹುದೆಂದು ತಜ್ಞರ ಅಭಿಪ್ರಾಯವಾಗಿದೆ[೧೬].

ಹರೆಯುವ (ಮಸೆಯುವ) ಕಲ್ಲು


ಈ ಗ್ರಾಮದ ಪೂರ್ವಕ್ಕೆ ಒಂದು ಕಿ.ಮೀ. ದೂರದಲ್ಲಿರುವ ಕೋಡಿಗುಡ್ಡದ ಮಧ್ಯದ ಬಯಲು ಪ್ರದೇಶದಲ್ಲಿ ಕ್ಷೇತ್ರಕಾರ್ಯ ಕೈಗೊಂಡಾಗ ಶಿಲಾಯುಗದ ಮಾನವನು ವಾಸಿಸಿರುವ ನೆಲೆ ಮತ್ತು ಅವರು ಉಪಯೋಗಿಸಿರುವ ಶಿಲಾಯುಧಗಳು, ಕೆಂಪು ಮತ್ತು ಬೂದುಬಣ್ಣದ ಮಣ್ಣಿನ ಮಡಿಕೆಗಳು ನೆಲದ ಸಮಾನಾಗಿರುವ ಮನೆಯ ಬುನಾದಿ ಕಲ್ಲುಗಳಂತಿರುವ ವೃತ್ತಕಾರದ ಕಲ್ಲುಗಳು ಕಂಡುಬರುತ್ತವೆ. ಇಲ್ಲಿ ಇನ್ನು ಹೆಚ್ಚಿನ ಅಧ್ಯಯನವಾಗಬೇಕಾಗಿದೆ. ಅಷ್ಟೇ ಅಲ್ಲದೆ ರಕ್ಷಣೆಗೆ ತಡೆಗೋಡೆಯಂತಿರುವ ಬೃಹತ್ ಕಲ್ಲುಗಳನ್ನು ಜೋಡಿಸಲಾಗಿದೆ. ಉಜ್ಜಿನಯಗೊಳಿಸಿರುವ ಅಥವಾ ಸವೆದಿರುವ ದುಂಡಾದ ಕಲ್ಲುಗಳು ಪತ್ತೆಯಾಗಿವೆ. ಈ ನೆಲೆಯಲ್ಲಿ ಹೆಚ್ಚನ ವಿಶೇಷವೆಂದರೆ ಗುಂಪು ಗುಂಪಾಗಿ ಹರೆಯುವ ಅಥವಾ ಮಸೆಯುವ ಕಲ್ಲುಗಳು ಚದುರಿ ಬಿದ್ದಿವೆ. ಇಲ್ಲಿ ದೊರೆತಿರುವ ಚಿಕ್ಕ ಮತ್ತು ದೊಡ್ಡದಾದ ನುಣುಪಾದ ತುಂಡು ಬಂಡೆಗಳನ್ನು ಗಮನಿಸಿದರೆ ಈ ಸ್ಥಳ ನೂತನ ಶಿಲಾಯುಗದಲ್ಲಿ ಆಯುಧಗಳನ್ನು ತಯಾರಿಸುವ ಕೇಂದ್ರವಾಗಿರಬಹುದೆಂದು ಭಾಸವಾಗುತ್ತದೆ. ಇಲ್ಲಿ ನೆಲೆಸಿರುವ ಜನರು ಸ್ಥಳೀಯವಾಗಿ ದೊರೆಯುವ ಕಲ್ಲು ತುಂಡುಬಂಡೆಗಳನ್ನು ಉಜ್ಜಿ ನಯಗೊಳಿಸಿರುವುದು ಕಂಡುಬರುತ್ತದೆ. ನೂತನ ಶಿಲಾಯುಗದಲ್ಲಿ ಕಲ್ಲಿನ ಆಯುಧಗಳನ್ನು ಹರಿತಗೊಳಿಸಲು ನುಣುಪು ಮಾಡಲು ಮತ್ತೊಂದು ಬಂಡೆಗೆ ಉಜ್ಜಿ ಉಜ್ಜಿ ನಯಗೊಳಿಸುತ್ತಿದ್ದರಿಂದ ಕೈಕೊಡಲಿಗಳು ಸಪೂರವಾಗಿ ಹರಿತವಾಗುತ್ತಿದ್ದವು. ಕೆಳ ಭಾಗದ ಬಂಡೆಗಳು ಸವೆದು ತಗ್ಗಾಗಿ ಪಾತ್ರೆಯಂತಾಗುತ್ತಿದ್ದವು. ಈ ರೀತಿ ಸವೆದಿರುವ ಕಲ್ಲುಬಂಡೆಗಳನ್ನು ಅವರು ನೀರಿನ ಸಂಗ್ರಹಕ್ಕೆ ಗೀಡಮೂಲಿಕೆಗಳನ್ನು ಹರಿಯಲು ಆಹಾರ ಸಂಗ್ರಹಿಸಿ ಸೇವಿಸಲು ಬಳಸಿರುವ ಸಾದ್ಯತೆ ಇದೆ ಎಂದು ತಜ್ಞರ ಅಭಿಪ್ರಾಯದ ಜೊತೆಗೆ ಇವುಗಳ ಕಾಲಾವಧಿ ಸುಮಾರು ಕ್ರಿ.ಪೂ. ೨೩೦೦–೧೮೦೦ ಇರಬಹುದೆಂದು ಅಂದಾಜಿಸಿದ್ದಾರೆ[೧೭].

ಒಂದು ಮಸೆಯುವ ಕಲ್ಲಿನ ವಿಸ್ತೀರ್ಣ ಅಗಲ ೩೮ ಸೆಂ.ಮೀ. ಉದ್ದ ೨೪ ಸೆಂ.ಮೀ. ಸುತ್ತಳತೆ ೯೭ ಸೆಂ.ಮೀ.


ಇದೇ ರೀತಿಯ ನೂತನ ಶಿಲಾಯುಗದಲ್ಲಿ ಉಜ್ಜಿ ನಯಗೊಳಿಸಿದ ಮಸೆಯುವ ಕಲ್ಲುಗಳು ರಾಗಲುಗುಡ್ಡದಲ್ಲಿ ಮತ್ತು ಗೋಡೆಗಳ ಗುಡ್ಡದಲ್ಲಿ ಹಲವಾರು ಕಡೆ ಪತ್ತೆಯಾಗಿವೆ. ಈ ಮೇಲಿನ ಅವಶೇಷಗಳನ್ನು ಅವಲೋಕಿಸಿದಾಗ ಈ




ಕೋಳಿಗುಂಡಿನ ಸಮೀಪ ಪತ್ತೆಯಾಗಿರುವ ಗೀರು ಬಂಡೆ ಚಿತ್ರಗಳು




ದೇವರಹಟ್ಟಿ ಹಿಂಭಾಗದಲ್ಲಿ ಪತ್ತೆಯಾಗಿರುವ ಕಲ್ಲುಗುಳಿಗಳು ಮತ್ತು ಮನುಷ್ಯನ ತಲೆಯ ಗೀರು ಚಿತ್ರ




ಎಮ್.ಎಸ್. ನಾಗರಾಜರಾವ್ ಮತ್ತು ರು.ಮ. ಷಡಕ್ಷರಯ್ಯ ಪತ್ತೆ ಮಾಡಿರುವ ಬಯಲು ಬಂಡೆ ಕುಟ್ಟು ಚಿತ್ರಗಳು (ಶರಣರ ಬೆಟ್ಟ ಅಪ್ಪಯ್ಯನಹಳ್ಳಿ)



ಕೆಂಪು ಮತ್ತು ಬೂದು ಬಣ್ಣದ ಮಣ್ಣಿನ ಮಡಿಕೆಯ ಅವಶೇಷಗಳು (ಕೋಳಿಗುಡ್ಡ)



ತುಂಡಾದ ಶಿಲಾಯುಧ ಕೋಳಿಗುಡ್ಡ



ಮನುಷ್ಯನ ತಲೆಗೀರು ಚಿತ್ರ

ಬೆಟ್ಟಗಳಲ್ಲಿ ಬೃಹತ್ ಶಿಲಾಯುಗಕ್ಕಿಂತಲೂ ಮುಂಚಿತವಾಗಿ ನೂತನ ಶಿಲಾಯುಗದ ಜನರ ವಸತಿ ಪ್ರದೇಶವಾಗಿತ್ತೆಂದು ಅರಿಯಬಹುದು.

ನೂತನ ಶಿಲಾಯುಗದ ಆಯುಧಗಳು

ಹಾಲಸಾಗರ ಬೆಟ್ಟಗಳಲ್ಲಿ ಬೃಹತ್ ಶಿಲಾಯುಗಕ್ಕಿಂತ ಮುಂಚಿತವಾಗಿ ನವಶಿಲಾಯುಗದ ಜನವಸತಿ ಪ್ರದೇಶವಾಗಿತ್ತು ಎಂಬುದಕ್ಕೆ ಕನ್ನಡ ಹಂಪಿ ವಿಶ್ವವಿದ್ಯಾಲಯದ ಸಂಶೋಧನಾ ವಿದ್ಯಾರ್ಥಿಯಾದ ಹೆಚ್.ಎಂ. ತಿಪ್ಪೇಶರವರು ಹಾಲಸಾಗರ ಪರಿಸರದಲ್ಲಿ ನವಶಿಲಾಯುಗದ ಕೈಕೊಡಲಿಗಳ ಪತ್ತೆ ಲೇಖನದಿಂದ ಅರಿಯಬಹುದು. ಈ ನನ್ನ ಕ್ಷೇತ್ರ ಕಾರ್ಯ ಸಂದರ್ಭದಲ್ಲಿಯೂ ಸಹ ಈ ಗ್ರಾಮದ ವಾಯುವ್ಯಕ್ಕೆ ಇರುವ ಗೋಡೆಗಳ ಗುಡ್ಡದ ಮೇಲು ತುದಿಯ ಮಧ್ಯಭಾಗದಲ್ಲಿ ಮೂರು ಕಪ್ಪುಶಿಲೆಯ ಕೈಕೊಡಲಿಗಳು ದೊರೆತಿವೆ.

ಒಂದು: ಈ ಶಿಲಾಯುಧ ಕಪ್ಪುಡೈಕ್ ಶಿಲಾಯುಧವಾಗಿದ್ದು ತ್ರಿಭುಜಕಾರವಾಗಿದೆ. ಈ ಶಿಲಾಯುಧ ೯ ಸೆಂ.ಮೀ. ಉದ್ದ, ೪ ಸೆಂ.ಮೀ. ಅಗಲ, ೨೦ ಸೆಂ.ಮೀ. ಸುತ್ತಳತೆ ಹೊಂದಿದೆ. ಕೈಹಿಡಿ ಭಾಗ ಚಿಕ್ಕದಾಗಿದ್ದು ಗುದ್ದಲಿಯಂತೆ ಚೂಪಾಗಿದೆ. ಮುಂದುವರೆದಂತೆ ಆಯುಧ ಅಗಲವಾದ ಅರಿತವಾಗಿ ಹಲಗೆಯನ್ನು ಹೊಂದಿದೆ. ಈ ಕೈಕೊಡಲಿಯ ಮೇಲ್ಮೈಯನ್ನು ಪೂರ್ಣವಾಗಿ ಉಜ್ಜಿ ನಯಗೊಳಿಸಲಾಗಿದೆ ಮತ್ತು ಹೆಚ್ಚಿನ ಕೆಲಸ ಕಾರ್ಯಗಳಿಗೆ ಉಪಯೋಗಿಸಿರುವುದರಿಂದ ಆಯುಧ ಸವೆಯಲಾಗಿದೆ. ಈ ಶಿಲಾಯುಧ ವಿಶೇಷವೇನೆಂದರೆ ಕೈಹಿಡಿ ಭಾಗ ಚೂಪಾದ ಮೊನೆಯನ್ನು ಹೊಂದಿದ್ದು ಇದನ್ನು ಗುದ್ದಲಿಯಂತೆ ಮಣ್ಣನ್ನು, ಗೆಡ್ಡೆಗೆಣಸುಗಳನ್ನು ಅಗೆಯಲು ಬಳಸಿದ್ದಾರೆ. ಮುಂಭಾಗದ ಹರಿತವಾದ ಹಲಗೆಯನ್ನು ಆಹಾರ ಮತ್ತು ವಸ್ತುಗಳನ್ನು ಕತ್ತರಿಸಲು ಬಳಸಿದ್ದಾರೆ. ಈ ಕೈಕೊಡಲಿ ತ್ರಿಭುಜಾಕರವಾಗಿದೆ ಬೂದುಬಣ್ಣದ ಶಿಲೆಯಿಂದ ನಿರ್ಮಿಸಲಾಗಿದೆ.

ಎರಡು: ಈ ಶಿಲಾಯುಧವನ್ನು ಸಹ ಕಪ್ಪು ಡೈಕ್ ಕಪ್ಪುಶಿಲೆಯಲ್ಲಿ ನಿರ್ಮಿಸಲಾಗಿದೆ. ಇದು ತ್ರಿಭುಜಕಾರವಿದ್ದು ೬ ಸೆಂ.ಮೀ. ಉದ್ದ, ೪ ಸೆಂ.ಮೀ. ಅಗಲ, ೧೫ ಸೆಂ.ಮೀ. ಸುತ್ತಳತೆ ಹೊಂದಿದೆ. ಈ ಕೈಕೊಡಲಿಯನ್ನು ಚಿಕ್ಕಚಿಕ್ಕ ಚೆಕ್ಕೆಗಳನ್ನು ಎಬ್ಬಿಸಿ ನಿರ್ಮಿಸಿದ್ದಾರೆ. ಈ ಆಯಧ ಹೆಚ್ಚು ನುಣುಪಾಗಿರದೆ ಸ್ವಲ್ಪ ಓರಟಾಗಿದೆ. ಮುಂಭಾಗವನ್ನು ಉಜ್ಜಿ ಹರಿತಗೊಳಿಸಲಾಗಿದೆ. ಹಿಂಭಾಗವನ್ನು ನಯಗೊಳಿಸಿಲ್ಲ ಕೈಹಿಡಿ ಭಾಗ ಮುಂಭಾಗ ಮುಕ್ಕಾಗಿದೆ.

ಮೂರು: ಈ ಶಿಲಾಯುಧ ಸಹ ಕಪ್ಪು ಡೈಕ್ ಕಪ್ಪು ಶಿಲೆಯಾಗಿದ್ದು ತ್ರಿಭುಜಕಾರದಲ್ಲಿದೆ. ಇದು ೪.೧/೨ ಸೆಂ. ಉದ್ದ, ೨.೧/೨ ಸೆಂ.ಮೀ. ಅಗಲ, ೧೨ ಸೆಂ.ಮೀ. ಸುತ್ತಳತೆ ಹೊಂದಿದೆ. ಈ ಕೈಕೊಡಲಿ ಚಿಕ್ಕದಾಗಿದ್ದು ಕೈಹಿಡಿ ಭಾಗ ಚಿಕ್ಕದಾಗಿ ಮುಂಭಾಗ ಅಗಲವಾಗಿದ್ದು ಹಲಗೆಯು ಮೊಂಡಾಗಿದೆ.

ಕೋಡಿ ಗುಡ್ಡದ ಶಿಲಾಯುಧ: ಈ ಗ್ರಾಮದ ಪುರಾತನ ಕೆರೆಯ ಬಲಕ್ಕೆ ಕೋಡಿ ಗುಡ್ಡದ ಮೇಲ್ಭಾಗದಲ್ಲಿ ಮಸೆಯುವ ಕಲ್ಲುಗಳು ಪತ್ತೆಯಾಗಿರುವ ಸ್ಥಳದ ಗವಿಯಲ್ಲಿ ೫.೧/೨ ಸೆಂ.ಮೀ. ಉದ್ದ, ೩ ಸೆಂ.ಮೀ. ಅಗಲದ ಓರಟಾದ ಕೈಕೊಡಲಿ ದೊರೆತಿದೆ. ಈ ಕೈಕೊಡಲಿ ಹಿಡಿ ಭಾಗ ಮುಂಭಾಗ ತ್ರಿಭುಜಾಕಾರದಲ್ಲಿದ್ದು ಮೊನೆಯು ತುಂಡಾಗಿದೆ. ಈ ಕೈಕೊಡಲಿಯನ್ನು ಹೆಚ್ಚು ಬಳಿಸಿದಂತೆ ಕಾಣುತ್ತಿಲ್ಲ.

ಚಿಕ್ಕ ದುಂಡಾಗಿರುವ ಮಸೆಯುವ ಕಲ್ಲು

ಕೋಡಿ ಗುಡ್ಡದಲ್ಲಿ ಮಸೆಯುವ ಕಲ್ಲುಗಳು ಶಿಲಾಯುಧ ಪತ್ತೆಯಾಗಿರುವ ಸಮೀಪದಲ್ಲಿರುವ ಗವಿಯಲ್ಲಿ ಚಿಕ್ಕದಾಗಿ ದುಂಡಾಗಿರುವ ಚಿಕ್ಕ ಮಸೆಯುವ ಕಲ್ಲು ದೊರೆತಿದೆ. ಈ ಕಲ್ಲು ಒಂದು ಭಾಗದಲ್ಲಿ ಮಾತ್ರ ನುಣುಪಾಗಿದೆ. ಈ ಚಿಕ್ಕ ದುಂಡು ಕಲ್ಲನ್ನು ಗಿಡ ಮೂಲಿಕೆಗಳನ್ನು ದವಸ ಧಾನ್ಯಗಳನ್ನು ಹರೆಯಲು ಬಳಸಿರಬಹುದು. ಇದರ ವಿಸ್ತೀರ್ಣ ೨ ಸೆಂ.ಮೀ. ಉದ್ದ ೨ ಸೆಂ.ಮೀ. ಅಗಲ, ೮ ಸೆಂ.ಮೀ. ಸುತ್ತಳತೆ ಹೊಂದಿದೆ.

ರಾಗಲುಗುಡ್ಡದಲ್ಲಿ ಐದನೇ ಶಿಲಾಯುಧ

ಈ ಗ್ರಾಮದ ದಕ್ಷಿಣಕ್ಕೆ ಇರುವ ರಾಗಲುಗುಡ್ಡದ ಯರ‍್ರಗುಂಡಿನ ಸಮೀಪದ ಕಲ್ಲಾಸರೆ ಕೆಳಗಡೆ ನೆಲದಲ್ಲಿ ಮುಚ್ಚಿದ ಮಣ್ಣಿನ ಮಡಿಕೆಯೊಳಗಡೆ ಕೈಕೊಡಲಿ ಇರುವುದು ಪತ್ತೆಯಾಗಿದೆ. ಈ ಆಯುಧವನ್ನು ರೈತ ಕೆ. ದೊಡ್ಡಜಯಣ್ಣ ತಮ್ಮ ಹೊಲದ ಸಮೀಪದ ಕಲ್ಲಾಸರೆ ಕೆಳಗಡೆ ನೆಲವನ್ನು ಅಗೆದು ನೀರಿನ ಕಾಲುವೆ ಮಾಡುತಿರುವಾಗ ಬೆಳಕಿಗೆ ಬಂದಿದೆ[೧೮]. ಈ ವಿಷಯ ನನ್ನ ಗಮನಕ್ಕೆ ಬಂದಾಗ ಅಲ್ಲಿ ಕ್ಷೇತ್ರಕಾರ್ಯ ಕೈಗೊಂಡಾಗ ಕಪ್ಪುಡೈಕ್ ಶಿಲೆಯಲ್ಲಿ ತ್ರಿಭುಜಾಕಾರದಲ್ಲಿ ನಿರ್ಮಿಸಲಾಗಿದ್ದು, ಹೊರ ಮತ್ತು ಒಳಭಾಗವನ್ನು ಚೆಕ್ಕೆಗಳನ್ನು ಎಬ್ಬಿಸಿ ನಯಗೊಳಿಸಲಾಗಿದೆ. ಮೇಲ್ಮೈಭಾಗ ಉಬ್ಬಿದಂತಿದೆ. ಕೈಹಿಡಿ ಭಾಗ ಚಿಕ್ಕದಾಗಿದ್ದು ಮುಂಭಾಗದ ಹಲಗೆಯನ್ನು ಉಜ್ಜಿ ಉಜ್ಜಿ ಮೊನಚು ಮಾಡಲಾಗಿದೆ. ಈ ಕೈಕೊಡಲಿ ೫.೧/೨ ಸೆಂ.ಮೀ. ಉದ್ದ, ೨.೧/೨ ಸೆಂ.ಮೀ. ಅಗಲವಿದ್ದು, ೧೩.೧/೨ ಸೆಂ.ಮೀ. ಸುತ್ತಳತೆ ಹೊಂದಿದೆ. ಈ ಕೈಕೊಡಲಿಯನ್ನು ಮುಚ್ಚಿದ ಮಣ್ಣಿನ ಮಡಿಕೆಯಲ್ಲಿ ಶೇಖರಿಸಿಟ್ಟಿರುವುದನ್ನು ಗಮನಿಸಿದರೆ ನೂತನ ಶಿಲಾಯಗವ ಜನರು ಪ್ರಮುಖ ಶಿಲಾಯುಧಗಳನ್ನು ಸಂರಕ್ಷಣೆಗಾಗಿ ಅಥವಾ ಸುರಕ್ಷಿತವಾಗಿರಲು ಮಣ್ಣಿನ ಮಡಕೆಯ ಒಳಗಡೆ ಮುಚ್ಚಿಟ್ಟಿರಬಹುದು.

ಈ ಮೇಲಿನ ಶಿಲಾಯುಧಗಳು ಅಥವಾಕೈಕೊಡಲಿಗಳನ್ನು ಗಮನಿಸಿದರೆ ಅವುಗಳು ದೊರೆತಿರುವ ನೆಲೆಗಳನ್ನು ಅವಲೋಕಿಸಿದಾಗ ಹಾಗೂ ಹಾಲಸಾಗರ ಪರಿಸರದ ಬಗ್ಗೆ ಲೇಖನಗಳ ವರದಿಗಳನ್ನು ಗಮನಿಸಿದಾಗ ಇವರು ಉಪಯೋಗಿಸಿರುವ ಕಪ್ಪುಡೈಕ್ ಶಿಲೆಯ ಕಲ್ಲುಗಳನ್ನು ಈ ನೆಲೆಯಿಂದ ಸುಮಾರು ೬ ಕಿ.ಮೀ. ದೂರದಲ್ಲಿರುವ ವಡೇರಹಳ್ಳಿ (ಮೊಳಕಾಲ್ಮೂರು ತಾಲ್ಲೂಕು) ಕಪ್ಪುಡೈಕ್ ಶಿಲಾ ಬೆಟ್ಟದಿಂದ ತಂದು ತಮ್ಮ ಆಯುಧೋಪಕರಣಗಳನ್ನು ತಯಾರಿಸಿಕೊಳ್ಳುತ್ತಿದ್ದರು ಎಂಬುವುದು ತಜ್ಞರ ಅಭಿಪ್ರಾಯ[೧೯].

ಈ ಮೇಲಿನ ನನಗೆ ದೊರೆತಿರುವ ಶಿಲಾಯುಧಗಳನ್ನು ಅವಲೋಕಿಸಿದಾಗ ಹಾಗೂ ಹಾಲಸಾಗರ ಪರಿಸರದಲ್ಲಿ ಪತ್ತೆಯಾಗಿರುವ ಕೈಕೊಡಲಿಗಳ ಬಗ್ಗೆ ವಿದ್ವಾಂಸರ ಬರಹಗಳನ್ನು ಗಮನಿಸಿದಾಗ ಈ ಶಿಲಾಯುಧಗಳು ನೂತನ ಶಿಲಾಯುಗದ ಜನರು ಉಪಯೋಗಿಸಿರುವ ಮತ್ತು ನಿರ್ಮಿಸಿಕೊಂಡಿರುವ ಆಯುಧಗಳಾಗಿವೆ. ಕಾಲಾವಧಿ ಕ್ರಿ.ಪೂ. ೨೩೦೦–೧೮೦೦ ರವರೆಗಿನ ಕಾಲವಾಗಿತ್ತೆಂದು ಹರಿಯಬಹುದು[೨೦].

ಒಟ್ಟಿನಲ್ಲಿ ಹಾಲಸಾಗರದ ಕಾಯ್ದಿಟ್ಟ ಅರಣ್ಯ ಪ್ರದೇಶದಲ್ಲಿ ಸುಮಾರು ೨೦ಕ್ಕೂ ಹೆಚ್ಚು ಬೆಟ್ಟಗುಡ್ಡ ಬಂಡೆಗಳಲ್ಲಿ ನೂತನ ಮತ್ತು ಬೃಹತ್ ಶಿಲಾಯುಗಕ್ಕೆ ಸಂಬಂಧಿಸಿದ ಸಾಕಷ್ಟು ಪುರಾವೆಗಳು ದೊರೆತ್ತಿದ್ದರಿಂದ ಅಂದು ಈ ನೆಲೆ

ಜನವಸತಿ ಪ್ರದೇಶವಾಗಿತ್ತು ಎಂಬುವುದನ್ನು ಅರಿಯಬಹುದು. ಆದರೆ ಜನರ ಸಂಪ್ರದಾಯ ಮೂಢನಂಬಿಕೆಗಳಿಂದ ಪ್ರಾಗಿತಿಹಾಸದ ಅರಿವಿಲ್ಲದಿರುವುದರಿಂದ ಸಾಕ್ಷ್ಯಾಧಾರಗಳು ನಶಿಸುತ್ತಿವೆ. ಇದರಿಂದ ನಾವು ಜನರಲ್ಲಿ ಪ್ರಾಗಿತಿಹಾಸದ ಅರಿವು ಮೂಡಿಸಬೇಕಾಗಿದೆ. ಜೊತೆಗೆ ಈ ಪ್ರದೇಶದಲ್ಲಿ ವಿದ್ವಾಂಸರು ಹೆಚ್ಚಿನ ಕ್ಷೇತ್ರಕಾರ್ಯ ಕೈಕೊಂಡರೆ ಪ್ರಾಕ್‌ಚರಿತ್ರೆ ಬಗ್ಗೆ ಹೆಚ್ಚಿನ ಮಾಹಿತಿ ದೊರೆಯುತ್ತದೆ.

[ಕ್ಷೇತ್ರಕಾರ್ಯದಲ್ಲಿ ಸಹಕರಿಸಿದ ಬಿ. ಬೊಮ್ಮಲಿಂಗಯ್ಯ, ಸಂಜೀವಪ್ಪ, ಕೆ. ಜಯಣ್ಣ, ಬಿ. ಪಾಪಣ್ಣ, ವಿನೋದ ಎಮ್.ವಿ., ಕೆ.ಎಮ್. ಮಾರೇಶ, ಕೆ.ಎಮ್. ಹೊನ್ನುರಪ್ಪ ಹಾಗೂ ಹೆಚ್.ಎಮ್. ತಿಪ್ಪೇಶ ಇವರಿಗೆ ನನ್ನ ಕೃತಜ್ಞತೆಗಳು.]

ಅಡಿ ಟಿಪ್ಪಣಿಗಳು

೧. ಮೆಡೋಸ್ ಟೇಲರ್ ೧೯೪೧, ಮೆಗಲಿಥಿಕ್ ಟೂಂಬ್ಸ್ ಏನ್ಸಂಟ್ರಿ ಮೈನ್ಸ್ ಇನ್ ದಿ ಡೆಕ್ಕನ್, ಪುಟ ೮೬–೮೭.

೨. ಡಾ. ಶರಣಬಸಪ್ಪ ಕೋಲ್ಕಾರ್, ೨೦೧೦, ಶಿಲಾಯುಗದ ಗವಿ ವರ್ಣಚಿತ್ರಗಳು, ಪುಟ ೨೮.

೩. ತಿಪ್ಪೇಶ ಹೆಚ್.ಎಮ್., ೨೦೧೬, ಹಾಲಸಾಗರದ ಪ್ರಾಚ್ಯಾವಶೇಷಗಳು, ಇ.ದ. ಸಂ. ೩೨, ಪುಟ ೧–೨.

೪. ಮಂಜನಾಯ್ಕ್ ಆರ್., ೨೦೧೮, ಹಾಲಸಾಗರ ಸಮೀಪದ ಬೃಹತ್ ಶಿಲಾಯುಗದ ಸಮಾಧಿಗಳ ಶೋಧ, ಇ.ದ. ಸಂ. ೩೩, ಪುಟ ೧೮–೨೧.

೫. ಓಬಯ್ಯ ಓ., ೨೦೧೯, ಹಾಲಸಾಗರ ಬೆಟ್ಟದ ಪ್ರಾಗಿತಿಹಾಸ ವರ್ಣಚಿತ್ರಗಳು, ಇ.ದ. ಸಂ. ೩೪, ಪುಟ ೨೬–೩೧.

೬. ಪ್ರೊ. ಬಿ. ಶೇಕ್ ಅಲಿ ಮತ್ತು ಪ್ರೊ. ಆ. ಸುಂದರ, ೨೦೧೮, ಕರ್ನಾಟಕ ಚರಿತ್ರೆ, ಸಂ. ೧, ಪುಟ ೩೧೨–೩೧೩.

೭. ಅದೇ ೨೦೧೮, ಕ.ಚ. ಸಂ. ೧, ಪುಟ ೩೧೪.

೮. ಅದೇ ೨೦೧೮, ಕ.ಚ. ಸಂ. ೧, ಪುಟ ೩೧೪–೩೧೫.

೯. ಅದೇ ೨೦೧೬, ಇ.ದ. ಸಂ. ೩೨, ಪುಟ ೫೧–೫೨.

೧೦. ಅದೇ ೨೦೧೯, ಇ.ದ. ಸಂ. ೩೪, ಪುಟ ೨೭–೩೧.

೧೧. ಅದೇ ೨೦೧೮, ಕ.ಚ. ಸಂ. ೧, ಪುಟ ೩೫೦.

೧೨. ಅದೇ ೨೦೧೯, ಇ.ದ. ಸಂ. ೩೪, ಪುಟ ೨೯ .

೧೩. ಅದೇ ೨೦೧೦, ಶಿಲಾಯುಗದ ಗವಿವರ್ಣ ಚಿತ್ರಗಳು, ಪುಟ ೩.

೧೪. ಪ್ರೊ. ಲಕ್ಷ್ಮಣ ತೆಲಗಾವಿ, ೨೦೦೬, ಇ.ದ. ಸಂ. ೨೧, ಪುಟ ೩.

೧೫. ಸುಪ್ರೀತ ಕೆ.ಎನ್., ೨೦೧೯, ಇ.ದ. ಸಂ. ೩೪, ಪುಟ ೨೦.

೧೬. ಅದೇ ೨೦೦೬, ಇ.ದ. ಸಂ. ೨೧, ಪುಟ ೩.

೧೭. ತಿಪ್ಪೇಶ ಹೆಚ್., ೨೦೨೦ Studies In Karnataka History And Culture, ಸಂಪುಟ ೧೭, ಪುಟ ೧೨೫–೧೨೬.

೧೮. ದೊಡ್ಡ ಕೆ. ಜಯಣ್ಣ ರೈತ, ೨೦೨೦, ನವಶಿಲಾಯಗದ ಆಯುಧ ಪತ್ತೆಯಾದ ಬಗ್ಗೆ ಹೇಳಿಕೆ.

೧೯. ಜಯಣ್ಣ ಉಲ್ಲಾನಹಳ್ಳಿ, ೨೦೧೩, ಕೂಡ್ಲಿಗಿ ತಾಲ್ಲೂಕು ಗುಡೇಕೋಟೆ ಪರಿಸರದ ಪುರಾತತ್ವ ಸಮೀಕ್ಷೆ, ಇ.ದ. ಸಂ. ೩೦. ಪುಟ ೧–೨.

೨೦. ಅದೇ ೨೦೨೦ Studies In Karnataka History And Culture, ಸಂಪುಟ ೧೭, ಪುಟ ೧೨೫–೧೨೬.

೬

ಗುಮ್ಮನಾಯಕನ ಪಾಳ್ಯದ ಬೂದಿ ದಿಬ್ಬ ಮತ್ತು ಕುಲುಮೆಗಳ ಶೋಧ

ಬಿ.ಆರ್. ಕೃಷ್ಣ*


ಆದಿಮಾನವನಿಂದ ಹಿಡಿದು ಆಧುನಿಕ ಮಾನವನವರೆಗೂ ವಿಕಾಸವಾದದ ಅನೇಕ ಮಜುಲುಗಳನ್ನು ನಾವು ದಾಟಿಕೊಂಡು ಬಂದಿದ್ದೇವೆ. ಆದಿಮಾನವ ಭೂಮಿಯ ಮೇಲೆ ಅಸ್ಥಿತ್ವಕ್ಕೆ ಬಂದ ನಂತರ, ಹಂತಹಂತವಾಗಿ ಅವನ ಕಾರ್ಯ ಚಟುವಟಿಕೆಗಳು ಅಭಿವೃದ್ಧಿಯತ್ತಾ ಮುನ್ನಡೆದವು. ನದಿ, ಹಳ್ಳ, ಕಾಡು-ಮೇಡು, ಬೆಟ್ಟಗುಡ್ಡಗಳಲ್ಲಿ ವಾಸವಾಗಿದ್ದ ಪ್ರಾಗಿತಿಹಾಸದ ಮಾನವನ ಬುದ್ಧಿ ವಿಕಾಸವಾಗುತ್ತಾ, ಅನೇಕ ಘಟ್ಟಗಳನ್ನು ದಾಟಿಕೊಂಡು ಪಯಣ ಮುಂದುವರೆಸಿದರು. ಈ ಸುಧೀರ್ಘವಾದ ಘಟ್ಟವನ್ನು ಆದಿಶಿಲಾಯುಗ, ಮಧ್ಯಶಿಲಾಯುಗ, ನವಶಿಲಾಯುಗ, ಶಿಲಾತಾಮ್ರಯುಗ ಹಾಗೂ ಕಬ್ಬಿಣದ ಬೃಹತ್ ಶಿಲಾಯುಗವೆಂದು ವಿಂಗಡಿಸಲಾಗಿದೆ. ಈ ನವಶಿಲಾಯುಗ ಸಂಸ್ಕೃತಿಯ ಘಟ್ಟದಲ್ಲಿ ತಾವು ವಾಸವಾಗಿರುವ ಭೌಗೋಳಿಕ ಲಕ್ಷಣಗಳಿಗೆ ಹೊಂದಿಕೊಂಡಂತೆ ಪಶುಪಾಲನೆ, ಕೃಷಿಯನ್ನು ಆರಂಭಿಸಿದರು. ಇಂತಹ ಒಂದು ಸಂಸ್ಕೃತಿಯ ನೆಲೆಗಳಲ್ಲಿ ಕಂಡುಬರುವ ಬೂದಿದಿಬ್ಬಗಳು (Ass Mounds) ಪುರಾತತ್ವ ಆಧ್ಯಯನಗಳಲ್ಲಿ ಅನೇಕ ಸಂಶೋಧಕರ ಹಾಗೂ ವಿದ್ವಾಂಸರ ಆಸಕ್ತಿಯನ್ನು ಕೆರಳಿಸಿವೆ. ನೂತನ ಶಿಲಾಯುಗ, ಶಿಲಾ-ತಾಮ್ರಯುಗ ಹಾಗೂ ಬೃಹತ್ ಶಿಲಾಯುಗ ಸಂಸ್ಕೃತಿಯ ಎಲ್ಲಾ ಹಂತಗಳಲ್ಲೂ ಬೂದಿ ದಿಬ್ಬಗಳು ನಿರ್ಮಾಣವಾಗಿವೆ.

ಅವಿಭಜಿತ ಕೋಲಾರ ಜಿಲ್ಲೆಯ ಇಂದಿನ ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿ ತಾಲ್ಲೂಕಿನ ಗುಮ್ಮನಾಯಕನಪಾಳ್ಯದಲ್ಲಿ ಇಂತಹ ಬೂದಿದಿಬ್ಬಗಳು ಕಂಡುಬರುತ್ತವೆ. ಗುಮ್ಮನಾಯಕನಪಾಳ್ಯವು ಬಾಗೇಪಲ್ಲಿ ಪಟ್ಟಣದಿಂದ ಸುಮಾರು ೨೪ ಕಿ.ಮೀ. ದೂರದಲ್ಲಿದೆ. ಪಾಳ್ಯದ ಪ್ರವೇಶದ ಎಡಭಾಗಕ್ಕೆ ತಿರುವಿಕೊಂಡು ಸುಮಾರು ಒಂದು ಕಿ.ಮೀ. ಒಳಗೆ ನಡೆದರೆ, ಇತ್ತೀಚೆಗೆ ತಲೆ ಎತ್ತಿರುವ ದರ್ಗಾ ಕಂಡುಬರುತ್ತದೆ. ಅದರ ಸುತ್ತಲೂ ಕ್ಷೇತ್ರ ಪರಿಶೋಧನೆ ಕೈಗೊಂಡು ಬೂದಿ ದಿಬ್ಬಗಳನ್ನು ಪತ್ತೆಹಚ್ಚಲಾಯಿತು. ಕರ್ನಾಟಕದ ವಿವಿಧ ಕಡೆಗಳಲ್ಲಿ ಇದುವರೆವಿಗೂ ಕಂಡುಬಂದಿರುವ ಬಹುತೇಕ ಬೂದಿದಿಬ್ಬಗಳಂತೆ, ಇಲ್ಲಿನ ಬೂದಿದಿಬ್ಬಗಳು ಎಲ್ಲಾ ವಿಚಾರಗಳಲ್ಲೂ ಸಾಮ್ಯತೆಯನ್ನು ಹೊಂದಿವೆ.


ಬೂದಿದಿಬ್ಬಗಳು ಪುರಾತತ್ವ ಶಾಸ್ತ್ರಜ್ಞರಲ್ಲಿ ಬಹು ಚರ್ಚಿತ ವಿಷಯವಾಗಿದ್ದು, ಆದಿಮಾನವರ ಧಾರ್ಮಿಕ ವಿಚಾರಕ್ಕೆ ಸಂಬಂಧಿಸಿದವೆ?, ಪಶುಪಾಲನೆಯಿಂದ ಬಂದ ತ್ಯಾಜ್ಯವನ್ನು ನಿರಂತರವಾಗಿ ಸುಡುವುದರಿಂದ ಉಂಟಾದ ಬೂದಿದಿನ್ನೆಗಳೆ? ಎಂಬ ವಿಚಾರಗಳ ಬಗ್ಗೆ ಸಂಶೋಧಕರು ಹಾಗೂ ವಿದ್ವಾಂಸರಲ್ಲಿ ಬಹು ಚರ್ಚಿತ ವಿಷಯವಾಗಿ, ಜಿಜ್ಞಾಸೆಗಳು ಇದ್ದವು. ಕ್ರಿ.ಶ. ೧೮೫೨ ರಲ್ಲಿ ಕರ್ನಲ್ ಮೆಕಂಜಿಯವರು ಬಳ್ಳಾರಿ ಹೊಸಪೇಟೆ ರಸ್ತೆಯಲ್ಲಿನ ಕುಡತಿನಿ ಬಳಿ ಬೂದಿದಿಬ್ಬವನ್ನು ಪ್ರಥಮಬಾರಿಗೆ ಶೋಧಿಸಿದರು ಎಂಬುದು ಇತಿಹಾಸದ ಪುಟಗಳಿಂದ ತಿಳಿದುಬರುತ್ತದೆ.

ಆನಂತರ ಪುರಾತತ್ವಜ್ಞ ರಾಬರ್ಟ್ ಬ್ರೂಸ್‌ಫೂಟ್ ಅವರು ನವ ಶಿಲಾಯುಗದ ಜನರು ಜಾನುವಾರುಗಳ ದೊಡ್ಡ ದೊಡ್ಡ ಮಂದೆಗಳನ್ನು ಸಾಕುತ್ತಿದ್ದರೆಂದೂ, ದನಕರುಗಳ ಸಗಣಿಯನ್ನು ಒಂದೆಡೆ ಗುಡ್ಡೆ ಹಾಕಿ ತ್ಯಾಜ್ಯವಾದ್ದರಿಂದ ಕಾಲಕಾಲಕ್ಕೆ ಸುಡುತ್ತಿದ್ದರು ಎಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ವಿದ್ವಾಂಸರಾದ ಮಜುಮ್‌ದಾರ್ ಮತ್ತು ರಾಜ್‌ಗುರು ರವರುಗಳು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿ, ಇವು ಮೂಲತಃ ದೊಡ್ಡಿಗಳಲ್ಲ. ದೊಡ್ಡಿಗಳಿಂದ ಸಗಣಿಯನ್ನು ಸಂಗ್ರಹಿಸಿ ಬೇರೆಡೆಗೆ ಸಾಗಿಸುತ್ತಿದ್ದರು. ಅಂತಹ ನೆಲೆಗಳನ್ನೇ ಬೂದಿ ದಿಬ್ಬಗಳು ಎನ್ನಲಾಗುತ್ತಿದೆ ಎನ್ನುತ್ತಾರೆ. ಮನುಷ್ಯರನ್ನು ಹಾಗೂ ಸಾಕು ಪ್ರಾಣಿಗಳನ್ನು ಹಿಡಿಯಲು ಬರುತ್ತಿದ್ದ ಕಾಡು ಪ್ರಾಣಿಗಳನ್ನು ದೂರವಿಡಲು ಇದೊಂದು ಕ್ರಮವಾಗಿತ್ತೆಂದು ಹಾಗೂ ಬಹು ದಿನಗಳು ಇದರ ಬೆಂಕಿ ಇರುವುದರಿಂದ ಉದ್ದೇಶಪೂರ್ವಕವಾಗಿಯೇ ಒಣಗಿದ ಸಗಣಿ ದಿಬ್ಬಗಳಿಗೆ ಬೆಂಕಿಯಿಡುತ್ತಿದ್ದರಿಂದ ಬೂದಿ ದಿಬ್ಬಗಳಾಗಿವೆ ಎನ್ನುವ ಅಭಿಪ್ರಾಯಗಳು ಇವೆ. ಇತಿಹಾಸಜ್ಞ ಅ.ಸುಂದರ ತಮ್ಮ ಅಭಿಪ್ರಾಯವನ್ನು

* ಸಂಶೋಧಕರು ಹಾಗೂ ಹಿರಿಯ ಪತ್ರಕರ್ತರು, ಬಾಗೇಪಲ್ಲಿ, ಚಿಕ್ಕಬಳ್ಳಾಪುರ ಜಿಲ್ಲೆ.



ಗಿಡಗಂಟಿಗಳಿಂದ ಮುಚ್ಚಲ್ಪಟ್ಟ ಬೂದಿದಿಬ್ಬಗಳನ್ನು ಸಮತಟ್ಟು ಮಾಡಿ ದರ್ಗಾ ನಿರ್ಮಿಸಿಕೊಂಡಿರುವ ನೋಟ



ಕುಲುಮೆಯಲ್ಲಿನ ಕಬ್ಬಿಣದ ಕಿಟ್ಟದ ನೋಟ



ಸುಟ್ಟ ಮಣ್ಣಿನಿಂದ ಮಾಡಲ್ಪಟ್ಟ ಕೊಳವೆಯಾಕಾರದ ಮೂಳೆಗಳು



ಇದೇ ಉತ್ಖನನದಲ್ಲಿ ದೊರೆತಿರುವ ಮೂಳೆಗಳು

ವ್ಯಕ್ತಪಡಿಸಿ ಇಂತಹ ಬೂದಿದಿನ್ನೆಗಳು ಬಹುಶಃ ಆಚರಣೆ ದ್ಯೋತಕವಾಗಿ ನಿರ್ಮಾಣವಾಗಿದ್ದಿರಬಹುದೆಂದು ವಿವರಿಸಿದ್ದಾರೆ.

ಪುರಾತತ್ವಜ್ಞ ಆಲ್ಚಿನ್ ಅವರು ತಮ್ಮ "ನಿಯೋಲಿತಿಕ್ ಕ್ಯಾಟಲ್ ಕೀಪರ್ಸ್ ಆಫ್ ಸೌಥ್ ಇಂಡಿಯಾ: ಎ ಸ್ಟಡಿ ಆಫ್ ಡೆಕ್ಕನ್ ಆಶ್ ಮೌಂಡ್ಸ್" ಎಂಬ ಕೃತಿಯಲ್ಲಿ ಬೂದಿ ದಿನ್ನೆ ನೆಲೆಗಳು ದನಕರುಗಳ ದೊಡ್ಡಿಗಳಾಗಿದ್ದು, ಇಲ್ಲಿ ಕ್ರಮೇಣ ದೊಡ್ಡ ಪ್ರಮಾಣದಲ್ಲಿ ಸಗಣಿ ಸಂಗ್ರಹವಾಗುತ್ತಿತ್ತು. ಅದನ್ನೇ ಸುಡಲಾಗುತ್ತಿತ್ತು ಇಂತಹ ಪ್ರಕ್ರಿಯೆ ಮೇಲಿಂದ ಮೇಲೆ ಅದೇ ಸ್ಥಳದಲ್ಲಿ ನಡೆಯುತ್ತಿದ್ದರಿಂದ ಕಾಲಕ್ರಮೇಣ ಅದು ಪದರುಗಳಾಗಿ ರಚನೆಯಾಗುತ್ತಿತ್ತು ಎಂದು ಅಭಿಪ್ರಾಯಿಸಿದ್ದಾರೆ. ಇವು ಮೂಲದಲ್ಲಿ ಕಬ್ಬಿಣದ ಅದಿರನ್ನು ಸಂಗ್ರಹಿಸಿ ಲೋಹ ತಯಾರಿಸುವ ಹಿನ್ನೆಲೆಯಲ್ಲಿ ಸುಟ್ಟಿದ್ದರಿಂದ ಉಂಟಾದ ದಿನ್ನೆಗಳು ಎಂಬ ಅಭಿಪ್ರಾಯಗಳು ಇವೆ. ಇವರೆಲ್ಲರ ಫಲವಾಗಿ ಬೂದಿದಿಬ್ಬಗಳ ಅಸ್ಥಿತ್ವದ ಬಗ್ಗೆ ಒಂದು ಸಾಮಾನ್ಯ ಅಭಿಪ್ರಾಯವನ್ನು ಕಂಡುಕೊಳ್ಳಲಾಯಿತು.

ಇಂತಹ ಬೆಟ್ಟಗುಡ್ಡಗಳಲ್ಲಿ ನೆಲೆಸಿದ್ದಂತಹ ಜನರು ಕೊಟ್ಟಿಗೆಗಳಲ್ಲಿ ಜಾನುವಾರುಗಳನ್ನು ನಿಲ್ಲಿಸಿರಬೇಕು. ಪ್ರತಿದಿನ ಸಂಗ್ರಹವಾಗುತ್ತಿದ್ದ ಸಗಣಿಯನ್ನು ಪಕ್ಕದಲ್ಲಿ ಒಂದೆಡೆ ಗುಡ್ಡೆ ಹಾಕಿ ಅದು ತ್ಯಾಜ್ಯವಾದ್ದರಿಂದ ಕಾಲದಿಂದ ಕಾಲಕ್ಕೆ ಸುಡುತ್ತಿದ್ದರು. ಇಲ್ಲವೇ ಸಗಣಿಯ ಈ ಗುಡ್ಡೆಗಳನ್ನು ಆಕಸ್ಮಿಕವಾಗಿ ಇಲ್ಲವೇ ಉದ್ದೇಶಪೂರ್ವಕವಾಗಿ ಬೆಂಕಿ ಹಾಕಿ ಸುಡುತ್ತಿರಬಹುದು. ಅದು ಕ್ರಮೇಣವಾಗಿ ದಹಿಸಿದಂತೆಲ್ಲಾ ಬೂದಿ ದಿನ್ನೆಗಳು ಉಂಟಾಗಿರುವ ಸಾಧ್ಯತೆ ಇದೆ. ಇಂತಹ ಬೂದಿ ದಿನ್ನೆಗಳ ಕಾಲಮಾನವನ್ನು ವಿದ್ವಾಂಸರು ಸುಮಾರು ಕ್ರಿ.ಪೂ. ೨೦೦೦-೬೦೦ ರವರೆಗೆ ಎಂದು ಅಂದಾಜು ಮಾಡಲಾಗಿದೆ.

ಗುಮ್ಮನಾಯಕನಪಾಳ್ಯದ ಬೂದಿದಿಬ್ಬಗಳಲ್ಲಿ ದೊರೆತಿರುವ ಅವಶೇಷಗಳನ್ನು ಪರಿಶೀಲಿಸಿ ನೂತನ ಶಿಲಾಯುಗ ಸಂಸ್ಕೃತಿಯ ಕಾಲದವೆಂದು ನಿರ್ಧರಿಸಬಹುದಾಗಿದೆ. ನೂತನ ಶಿಲಾಯುಗ ಕಾಲದ ಪಶುಪಾಲಕರ ರಚನೆ ಸ್ಪಷ್ಟವಾಗುತ್ತದೆ. ದಿಬ್ಬದಲ್ಲಿ ದೊರೆತಿರುವ ಮೂಳೆಗಳು, ಮಡಿಕೆ ಕುಡಿಕೆ ಚೂರುಗಳು ಈ ಅಭಿಪ್ರಾಯವನ್ನು ಸ್ಪಷ್ಟೀಕರಿಸುತ್ತವೆ. ಗುಮ್ಮನಾಯಕನಪಾಳ್ಯದ ಪ್ರದೇಶವು ಪ್ರಾಕ್ಚಾರಿತ್ರ್ಯಾವಾಗಿ ಗಮನಾರ್ಹವಾಗಿದೆ. ಬೆಟ್ಟಗುಡ್ಡಗಳ ಸಾಲುಗಳ ಪ್ರದೇಶ ಪ್ರಾಗೈತಿಹಾಸಿಕ ಕಾಲದಿಂದಲೂ ಆದಿಮಾನವನ ಚಟುವಟಿಕೆಯ ಮತ್ತು ವಾಸ್ತವ್ಯದ ತಾಣವಾಗಿದೆ. ಈ ಎಲ್ಲಾ ವಿವರಗಳಿಂದ ಗುಮ್ಮನಾಯಕನಪಾಳ್ಯದ ಬೆಟ್ಟಗುಡ್ಡಗಳು ಪ್ರಾಗಿತಿಹಾಸ ಕಾಲದಿಂದಲೂ ಜನವಸತಿಯ ನೆಲೆಗಳಾಗಿದ್ದವು ಎಂಬುದು ವೇದ್ಯವಾಗುತ್ತದೆ.

ಆದರೆ ಒಂದು ಧರ್ಮಕ್ಕೆ ಸೇರಿದ ಹಲವು ಜನರು ಈ ಬೂದಿ ದಿನ್ನೆಗಳನ್ನು ಅಗೆದು ಜೆ.ಸಿ.ಬಿ.ಯಿಂದ ಅಗೆಸಿ, ಟ್ರಾಕ್ಟರ್ ಮೂಲಕ ಬೂದಿಯನ್ನು ಬೇರೆ ಕಡೆಗೆ ಸಾಗಿಸಿ, ಅಲ್ಲೇ ಇದ್ದ ಬಹುತೇಕ ಗೋರಿಗಳನ್ನು ಹೊಡೆದು ಸಮತಟ್ಟು ಮಾಡಿ, ಕೇವಲ ಐದಾರು ಗೋರಿಗಳನ್ನು ಉಳಿಸಿಕೊಂಡು ದರ್ಗಾವನ್ನು ನಿರ್ಮಿಸಿಕೊಂಡಿದ್ದಾರೆ. ಇಂತಹ ವಿಚಾರಗಳನ್ನು ಸರ್ಕಾರ ಪರಿಶೀಲಿಸಬೇಕಾಗಿದೆ. ಒಟ್ಟಾರೆ ಇತಿಹಾಸ ಪೂರ್ವ ಕಾಲದ ಮಾಹಿತಿಯನ್ನು ಪಡೆಯಲು, ಪರಿಶೀಲನೆ ಮತ್ತಷ್ಟು ಸಂಶೋಧನೆ ಮಾಡಿ, ವಿಷಯ ತಿಳಿದುಕೊಳ್ಳಲು ಅನುಕೂಲವಾಗುತ್ತಿದ್ದ ಇಂತಹ ಸ್ಥಳವನ್ನು ಜತನದಿಂದ ಸಂರಕ್ಷಣೆ ಮಾಡದೆ ಇರುವುದು ನಾವು ಇತಿಹಾಸಕ್ಕೆ ಮಾಡಿದ ದ್ರೋಹವೇ ಎಂದು ಭಾವಿಸುತ್ತೇನೆ.

ಕುಲುಮೆಗಳು

ನವಶಿಲಾಯುಗದ ಕೊನೆಯ ಹಂತದಲ್ಲಿ ಅದಿರಿನಿಂದ ತಾಮ್ರವನ್ನು ತಯಾರಿಸುವ ಕಲೆಯನ್ನು ಕಂಡುಕೊಂಡರು. ಅನಂತರ ಕಬ್ಬಿಣದ ಉತ್ಪಾದನೆಯು ಆರಂಭವಾಯಿತು. ತಾಮ್ರ ಮತ್ತು ಕಬ್ಬಿಣದ ತಯಾರಿಕೆಯಿಂದಾಗಿ ಜನಜೀವನದಲ್ಲಿ ಕ್ರಾಂತಿಕಾರಕ ಬದಲಾವಣೆಗಳಾದವು.

ಕಬ್ಬಿಣದ ಬಳಕೆ ಉತ್ತರದಿಂದ ದಕ್ಷಿಣಕ್ಕೆ ಹರಡಿತ್ತೆಂದೂ, ಗಂಗಾನದಿಯ ಬಯಲಿನಲ್ಲಿ ವರ್ಣರಂಜಿತ ಬೂದು ಮಡಿಕೆಗಳ ಮತ್ತು ಮಧ್ಯ ಭಾರತದಲ್ಲಿ ಕಪ್ಪು-ಕೆಂಪು ಮಡಿಕೆಗಳನ್ನು ಬಳಸುತ್ತಿದ್ದ ಜನರಿಂದ ಪ್ರಾರಂಭವಾಯಿತೆಂದು ಹಲವು ವಿದ್ವಾಂಸರ ಅಭಿಮತವಾಗಿದೆ. ಕರ್ನಾಟಕದ ಹಲವು ಜಿಲ್ಲೆಗಳಲ್ಲಿ ದೊರೆತ ಕಬ್ಬಿಣದ ಉಪಕರಣಗಳ ಕಾಲವನ್ನು ಸಿ-೧೪ ತಂತ್ರಜ್ಞಾನದ ಮೂಲಕ ಕ್ರಿ.ಪೂ. ೧೧ನೇ ಶತಮಾನದಲ್ಲಿ ತಯಾರಾದವೆಂದು ತಿಳಿದುಬಂದಿದೆ. ಕ್ರಿ.ಪೂ. ೧೧ನೇ ಶತಮಾನದಿಂದ ಕ್ರಿ.ಪೂ. ೩ನೇ ಶತಮಾನದವರೆಗೆ ಬೃಹತ್ ಶಿಲಾಸಂಸ್ಕೃತಿಯಲ್ಲಿ ಕಬ್ಬಿಣದ ಉತ್ಪಾದನೆ ಕಂಡುಬಂದಿದೆ.

ಸ್ವಾಭಾವಿಕವಾಗಿ ಅದಿರನ್ನು ಕರಗಿಸಿ ತಾಮ್ರ, ಚಿನ್ನವನ್ನು ಪಡೆಯುವ ಕಲೆ ಕಬ್ಬಿಣಕ್ಕಿಂತಲೂ ಪ್ರಾಚೀನವಾದದ್ದು. ಇದಕ್ಕೆ ಕಾರಣ ತಾಮ್ರದ ಅದಿರನ್ನು ಕರಗಿಸಲು ಕಡಿಮೆ ಶಾಖ ಬೇಕಾದರೆ, ಕಬ್ಬಿಣದ ಅದಿರನ್ನು ಕರಗಿಸಲು ಹೆಚ್ಚು ಶಾಖ ಬೇಕಾಗಿರುವುದೇ ಬಹು ಮುಖ್ಯ ಕಾರಣ ಎನ್ನಲಾಗಿದೆ. ಸ್ಥಳೀಯ ಬೆಟ್ಟಗುಡ್ಡಗಳಲ್ಲಿ ಸಿಗುವಂತಹ ಕಬ್ಬಿಣದ ಅದಿರನ್ನು ತಂದು ಪುಡಿಮಾಡಿ ಎತ್ತರವಾದ ಬಂಡೆಗಳ ಮಧ್ಯೆ ಹಾಕಲಾಗುತ್ತಿತ್ತು. ಅದರಲ್ಲಿರುವ ಮಣ್ಣಿನ ಅಂಶ ನೀರಿನೊಂದಿಗೆ ಹರಿದುಹೋಗಿ ಪುಡಿ ಅದಿರು ಮುಂದೆ ಬಂದು ನಿಲ್ಲುತ್ತಿತ್ತು. ಇದನ್ನು ಇದ್ದಿಲಿನೊಂದಿಗೆ ಕುಲುಮೆಗೆ ಹಾಕಿ ಗಾಳಿ ಹಾಕಲಾಗುತ್ತಿತ್ತು. ಅದಕ್ಕೆ ಒಳಗೆ ಒಂದು ರಂಧ್ರವನ್ನು ಬಿಟ್ಟು ನಳಿಕೆಯನ್ನು ಕೂಡಿಸಲಾಗುತ್ತಿತ್ತು. ಈ ನಳಿಕೆಯಿಂದ ಅದಿರು ಕರಗಿ ಸೋರುತ್ತಿದ್ದ ರಸವನ್ನು ಜೇಡಿಮಣ್ಣಿನ ಮೂಸೆಗಳಲ್ಲಿ ತುಂಬಿ ಇಡಲಾಗುತ್ತಿದ್ದರಿಂದ ಕಬ್ಬಿಣದ ಗಟ್ಟಿಗಳಾಗುತ್ತಿದ್ದವು. ನಂತರ ತಮಗೆ ಬೇಕಾದಂತಹ ಆಯುಧಗಳನ್ನು ತಯಾರಿಸುವ ತಂತ್ರಜ್ಞಾನವನ್ನು ಬಲ್ಲವರಾಗಿದ್ದರು.

ಗುಮ್ಮನಾಯಕನಪಾಳ್ಯದ ಪರಿಸರದಲ್ಲಿಯೂ ಪಾರಂಪರಿಕವಾಗಿ ಕಬ್ಬಿಣದ ಉತ್ಪಾದನೆಯಾಗುತ್ತಿತ್ತು ಎಂಬುದನ್ನು ಕ್ಷೇತ್ರ ಕಾರ್ಯದ ಮೂಲಕ ನೆಲೆಗಳನ್ನು ಗುರ್ತಿಸಿ ಬೆಳಕಿಗೆ ತರಲಾಗಿದೆ. ಕೋಟೆಯ ಪ್ರವೇಶದ್ವಾರದ ಶ್ರೀ ಆಂಜನೇಯಸ್ವಾಮಿ ದೇವಾಲಯದ ಬಳಿ ಇತ್ತೀಚಿಗಷ್ಟೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಂಡು ಉತ್ಖನನ ನಡೆಸಿದಾಗ ಕುಲುಮೆಗಳು ಇರುವುದು ಕಂಡುಬಂದಿವೆ. ಕುಲುಮೆಯಲ್ಲಿ ಸಿಗುವ ಕಬ್ಬಿಣದ ಕಿಟ್ಟ, ತಾಮ್ರ ಮತ್ತು ಕಬ್ಬಿಣದ ಪಾಕವನ್ನು ಸಂಗ್ರಹಿಸುವ ಕೊಳವೆಯಾಕಾರದ ಸುಟ್ಟ ಮಣ್ಣಿನ ಮೂಸೆಗಳು, ಪ್ರಾಣಿಯೊಂದರ ಮೂಳೆಗಳು, ಪಾತ್ರೆಗಳು, ಮಣ್ಣಿನ ಅವಶೇಷ ಯಥೇಚ್ಛವಾಗಿ ಕಂಡುಬಂದಿದ್ದು, ಕಬ್ಬಿಣದ ಉತ್ಪಾದನೆಯ ಬಗ್ಗೆ ಸಾಕ್ಷೀಕರಿಸುತ್ತವೆ.

ಆದಿಶಿಲಾಯುಗ, ಮಧ್ಯಶಿಲಾಯುಗ, ನವಶಿಲಾಯುಗ, ತಾಮ್ರಯುಗ, ಕಬ್ಬಿಣದ ಬೃಹತ್ ಶಿಲಾಯುಗಗಳ ಆದಿಮಾನವನ ನಿವಾಸಿ ತಾಣವಾಗಿ ಹಂತಹಂತವಾಗಿ ವಿಕಾಸವಾಗುತ್ತಾ, ನಂತರ ಅದರ ಮುಂದುವರೆದ ಭಾಗವಾಗಿ ಗುಮ್ಮನಾಯಕನಪಾಳ್ಯದ ಪಾಳೆಗಾರರ ಕಾಲಘಟ್ಟದಲ್ಲೂ ಶಸ್ತ್ರಾಸ್ತ್ರಗಳ ಉತ್ಪಾದನೆಯ ಪ್ರಮುಖ ಆಯುಧಗಾರವಾಗಿ ಕಾರ್ಯನಿರ್ವಹಿಸಿರಬಹುದು. ಕಾರಣ ಗುಮ್ಮನಾಯಕನಪಾಳ್ಯವು ಪ್ರಮುಖ ಸೈನಿಕ ನೆಲೆಯಾಗಿತ್ತು. ಜೊತೆಗೆ ಈ ಕುಲುಮೆ ಕೋಟೆಯ ಒಳಗೆ ಬರುವುದರಿಂದ ವಿಷಯಕ್ಕೆ ಪುಷ್ಠಿ ನೀಡುತ್ತದೆ. ಸ್ಥಳೀಯವಾಗಿ ಸಿಗುವಂತಹ ಕಬ್ಬಿಣದ ಅದಿರಿನಿಂದ ಕಬ್ಬಿಣವನ್ನು ಉತ್ಪಾದಿಸಿ ತಮ್ಮ ಅವಶ್ಯಕತೆಗೆ ಬೇಕಾದಂತಹ ಆಯುಧ ಉಪಕರಣಗಳನ್ನು ತಯಾರಿಸಿಕೊಳ್ಳುವ ಪಾರಂಪರಿಕ ಜ್ಞಾನವನ್ನು ತಿಳಿದುಕೊಂಡಿದ್ದರು. ಸುತ್ತಲೂ ಇರುವ ಬೆಟ್ಟಗಳಿಂದ ತಂದಂತಹ ಕಬ್ಬಿಣದ ಅದಿರನ್ನು ಕುಲುಮೆಯಲ್ಲಿ ಹಾಕಿ ನಿರ್ದಿಷ್ಟ ಪ್ರಮಾಣದಲ್ಲಿ ಬೆಂಕಿಯ ಶಾಖವನ್ನು ಕೊಟ್ಟು ಹದಹಿಡಿಯಲಾಗುತ್ತಿತ್ತು. ತದನಂತರದಲ್ಲಿ ಸೈನ್ಯಕ್ಕೆ ಬೇಕಾದಂತಹ ರಕ್ಷಣಾ ಸಾಮಾಗ್ರಿಗಳನ್ನು ಹಾಗೂ ಕೃಷಿಗೆ ಸಂಬಂಧಿಸಿದ ಉಪಕರಣಗಳನ್ನು ತಯಾರಿಸಿಕೊಳ್ಳುತ್ತಿದ್ದರು, ಇದರ ಮುಂದುವರೆದ ಭಾಗವಾಗಿ ಇದೇ ನೆಲೆಯಲ್ಲಿ ವಿಜಯನಗರದ ಅರಸರ ಕಾಲದಲ್ಲಿ ಟಂಕಸಾಲೆಯನ್ನು ಆರಂಭಿಸಿ ನಾಣ್ಯಗಳನ್ನು ಟಂಕಿಸುತ್ತಿದ್ದರು ಎಂಬುದು ವೇದ್ಯವಾಗುತ್ತದೆ.

ಆಕರ ಗ್ರಂಥಗಳು

೧. F.R. Allchin,Neolithic cattle-keepers of south India-1963. Page No.1to 10th.-1st chapter.

೨. ಕ್ಷೇತ್ರ ಸಂಶೋಧನೆ ಸಂದರ್ಭದಲ್ಲಿ ಸ್ಥಳೀಯರಿಂದ ಪಡೆದುಕೊಂಡ ಮಾಹಿತಿಯ ವಿವರ.

೩. ಇತಿಹಾಸ ದರ್ಶನ-೨೦೧೮, ಕೊಂಚಗೇರೆಯ ಬೂದಿದಿಬ್ಬ ಹಾಗೂ ಸಿದ್ದರಾಂಪುರದ ಪ್ರಾಗೈತಿಹಾಸಿಕ ವರ್ಣಚಿತ್ರಗಳು. (ಪು.ಸಂ.೧೦)-ಹೆಚ್.ಎಂ. ತಿಪ್ಪೇಶ್.

೪. ಇತಿಹಾಸ ದರ್ಶನ-೨೦೧೮, ಕುಣಿಗಲ್ ಪರಿಸರದ ಕಬ್ಬಿಣದ ಕುಲುಮೆಗಳ ಶೋಧ (ಪು.ಸಂ.೧)-ಕೆ. ರೇವಣಸಿದ್ದಯ್ಯ.

೫. ಇತಿಹಾಸ ದರ್ಶನ-೨೦೨೧, ಸಂಪುಟ-೩೫, ಪು.ಸಂ. ೫೯, ಜಡಮಡುಗು ಅಕ್ಕಮ್ಮಬೆಟ್ಟ ಮಾನವಾಕೃತಿಯ ಕಲ್ಗೋರಿಗಳು-ಬಿ.ಆರ್.ಕೃಷ್ಣ.

೭

ಕಡೂರು ತಾಲೂಕಿನ ನವಶೋಧಿತ ಕಲ್ಗುಳಿ ನೆಲೆಗಳು

ರೇಣುಕಸ್ವಾಮಿ ಒಡೆಯರ್ ಬಿ.ಈ.*

ಚಿಕ್ಕಮಗಳೂರು ಜಿಲ್ಲೆಯ ವಿವಿಧ ಶಿಖರಶ್ರೇಣಿಗಳಲ್ಲಿ ಭದ್ರ, ತುಂಗಾ, ನೇತ್ರಾವತಿ, ಹೇಮಾವತಿ, ವೇದಾವತಿ ನದಿಗಳು ಹುಟ್ಟಿ ಕೃಷ್ಣ ಮತ್ತು ಕಾವೇರಿ ಕೊಳ್ಳದಲ್ಲಿ ಹರಿಯುತ್ತವೆ. ಜಿಲ್ಲೆಯು ವಿವಿಧ ರೀತಿಯ ಸಸ್ಯ-ಪ್ರಾಣಿ, ಖನಿಜಸಂಪತ್ತನ್ನು ಹೊಂದಿದೆ. ಈ ಪ್ರಾಕೃತಿಕ ಸಂಪತ್ತು ಮಾನವನ ವಾಸಕ್ಕೆ ಯೋಗ್ಯ ವಾತಾವಾರಣವನ್ನು ಸೃಷ್ಟಿಸಿವೆ. ಆದಿಮ ಕಾಲದ ಮಾನವನು ಈ ಪರಿಸರದ ವಿವಿಧ ನೆಲೆಗಳಲ್ಲಿ ವಾಸಿಸಿ ಅನೇಕ ಕುರುಹುಗಳನ್ನು ಬಿಟ್ಟುಹೋಗಿರುವನು. ಇಂತಹ ಅನೇಕ ನೆಲೆಗಳನ್ನು ವಿದ್ವಾಂಸರುಗಳು ಶೋಧಿಸಿ ದಾಖಲಿಸಿರುವರು. ಕಡೂರು ತಾಲೂಕಿನಲ್ಲಿಯೂ ಹಲವಾರು ನೆಲೆಗಳು ಶೋಧಗೊಂಡಿವೆ. ಲಿಂಗದಹಳ್ಳಿ, ನಿಡಘಟ್ಟ ನೆಲೆಗಳನ್ನು ರಾಬರ್ಟ್ ಬ್ರೂಸ್ ಫೂಟ್,[೧] ತುರುವನಹಳ್ಳಿಯ ಬೃಹತ್ ಶಿಲಾಯುಗದ ಶಿಲಾವೃತ್ತ ಸಮಾಧಿ ನೆಲೆಯನ್ನು ಎಂ. ಶೇಷಾದ್ರಿ,[೨] ಕನಕಪ್ಪನಗುಡ್ಡ, ಮಲ್ಲೇಶ್ವರ ನೆಲೆಗಳನ್ನು ಎಚ್. ತಿಪ್ಪೇಸ್ವಾಮಿ,[೩] ಕೆ. ದಾಸರಹಳ್ಳಿಯ ಕೋಗೇಮಲ್ಲಪ್ಪನಗುಡ್ಡ ನೆಲೆಯನ್ನು ಟಿ. ಮುರುಗೇಶಿ,[೪] ತಂಗಲಿ, ಕಾನಗೊಂಡನಹಳ್ಳಿ, ಚಿಕ್ಕತಂಗಲಿ, ಮಾಡಾಳು, ಅಂಚೆಚೋಮನಹಳ್ಳಿ ನೆಲೆಗಳನ್ನು,[೫] ಮತ್ತು ತುರುವನಹಳ್ಳಿಯ ವರ್ಣಚಿತ್ರ ನೆಲೆಯನ್ನು ರೇಣುಕಸ್ವಾಮಿ ಒಡೆಯರ್ ಬಿ.ಈ.[೬] ರವರು ಶೋಧಿಸಿ ದಾಖಲಿಸಿರುವರು. ಪ್ರಸ್ತುತ ಕಡೂರು ತಾಲೂಕಿನಲ್ಲಿ ಹೊಸ ಕಲ್ಗುಳಿ ನೆಲೆಗಳು ಪತ್ತೆಯಾಗಿದ್ದು ಇವುಗಳನ್ನು ದಾಖಲಿಸುವುದು ಈ ಪ್ರಬಂಧದ ಉದ್ದೇಶವಾಗಿದೆ.

ಮಾನವ ನಿರ್ಮಿತ ಕಲ್ಗುಳಿಗಳು ಬಟ್ಟಲಾಕೃತಿಯಲ್ಲಿದ್ದು ನೈಸರ್ಗಿಕ ಕಲ್ಗುಳಿಗಳಿಗಿಂತ ಭಿನ್ನವಾಗಿರುತ್ತವೆ. ಕಲ್ಗುಳಿಗಳಿಗೆ ಇಂಗ್ಲೀಷ್ನಲ್ಲಿ CUP MARKS, CUPULES ಎಂದು ಬಳಸುವರು. ಇಂಗ್ಲೀಷ್‌ನ CUPULES (kyoo'pyool-ಕ್ಯೂಪ್ಯೂಲ್ ಎಂದು ಉಚ್ಚರಿಸಬೇಕು. ka'pool-ಕಪೂಲ್ ಎಂದಲ್ಲ) ಎಂಬ ಪದವು ಲ್ಯಾಟಿನ್ ಭಾಷೆಯ cupula ಎಂಬ ಪದದಿಂದ ಬಂದಿದೆ. ಇದು ವಿವಿಧ ಭಾಷೆಗಳಿಗೆ ಮುಂದೆ ನೀಡಿರುವಂತೆ ಭಾಷಾಂತರಗೊಂಡಿದೆ. ಫ್ರೆಂಚ್-cupule, ಜರ್ಮನ್-kupule, ಇಟಾಲಿಯನ್-copella, ಸ್ಪ್ಯಾನಿಷ್-cupula.[೭] ಕಲ್ಗುಳಿಗಳು ಗ್ರಾಮೀಣ ಪ್ರದೇಶದ ಆಟವಾದ ಅಳುಗುಳಿಮನೆ ಅಥವಾ ಚನ್ನೇಮಣೆ (ಚಿತ್ರ-೧) ಆಟದ ಮಣೆಲ್ಲಿರುವ ಕುಳಿಗಳನ್ನು ಹೋಲುತ್ತವೆ. ಆಸ್ಟ್ರೇಲಿಯಾದ ರಾಬರ್ಟ್ ಜಿ ಬೆಡ್ನರಿಕರವರು ಕಲ್ಗುಳಿಗಳ ಗುಣವೈಶಿಷ್ಟ್ಯತೆಯನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡಿ ಇವುಗಳ ಇತಿಹಾಸವನ್ನು ಆದಿ ಹಳೇಶಿಲಾಯುಗಕ್ಕೆ ಕೊಂಡೊಯ್ದಿದ್ದಾರೆ.[೮] ಕಲ್ಗುಳಿಗಳು ಆದಿ ಹಳೇಶಿಲಾಯುಗದಿಂದ ಮಧ್ಯಕಾಲೀನ ಯುಗದವರೆಗೂ ಸಿಗುತ್ತವೆ. ಹೊಯ್ಸಳರ ಅನೇಕ ದೇವಾಲಯಗಳಲ್ಲಿ ಚನ್ನೇಮಣೆಯನ್ನು ಹೋಲುವ ಮತ್ತು ವಿವಿಧ ರೀತಿಯ ಕಲ್ಗುಳಿಗಳಿರುವುದನ್ನು ಗಮನಿಸಬಹುದು. (ಚಿತ್ರ-೧.ಅ) ಕಲ್ಗುಳಿಗಳು ಕರ್ನಾಟಕವೂ ಸೇರಿದಂತೆ ಪ್ರಪಂಚದಾದ್ಯಂತ ಪತ್ತೆಯಾಗಿದ್ದು ವೈಜ್ಞಾನಿಕ ಅಧ್ಯಯನಗಳು ನೆಡೆಯುತ್ತಿವೆ. ಇವುಗಳ ನಿರ್ಮಿತಿಗೆ ಸ್ಪಷ್ಟವಾದ ಕಾರಣವೇನೆಂದು ಹೇಳುವುದು ಕಷ್ಟಕರ. ಕಲ್ಗುಳಿಗಳು ದೊರೆತ ಪರಿಸರದ ಹಿನ್ನಲೆಯಲ್ಲಿ ಅವುಗಳ ರಚನೆಗೆ ಕಾರಣಗಳನ್ನು ಹೇಳಲಾಗುತ್ತದೆ.

ಕನ್ನೇರಗವಿ ಗುಡ್ಡದ ನೆಲೆಯಲ್ಲಿ ವರ್ಣಚಿತ್ರಗಳನ್ನೊಳಗೊಂಡ ಕಲ್ಲಾಸರೆಯ ಮುಂದೆ ಪ್ರತ್ಯೇಕ ಕಲ್ಲು ಚಪ್ಪಡಿಗಳ ಮೇಲೆ ಎರಡು ಕಲ್ಗುಳಿಗಳಿವೆ. ಇವುಗಳನ್ನು ವರ್ಣದ್ರವ್ಯ ತಯಾರಿಸಲು ಮಾಡಿರಬಹುದೆಂದು ಹೇಳುತ್ತಾರೆ. ತರೀಕೆರೆ ತಾಲೂಕಿನ ಕೃಷ್ಣಾಪುರದ ಕೆಪ್ಪ ಚೌಡೇಶ್ವರಿ ದೇವಾಲಯದ ಪಕ್ಕದ ಬೂತಪ್ಪನ ಗುಡಿ ಮುಂದಿರುವ ಕಲ್ಲು ಚಪ್ಪಡಿ ಮೇಲೆ ಸುಮಾರು ಐವತ್ತಕ್ಕೂ ಹೆಚ್ಚಿನ ಕಲ್ಗುಳಿಗಳಿವೆ. ಇಲ್ಲಿನ ಸಂಪ್ರದಾಯದಂತೆ ದೇವರಿಗೆ ಕಿವಿ ಕೇಳುವುದಿಲ್ಲವಾದ್ದರಿಂದ ಭಕ್ತರುಗಳು ಪ್ರಾರ್ಥನೆ ಮಾಡುವ ಅಥವಾ ಹರಕೆ ಒಪ್ಪಿಸುವ ಮುನ್ನ ಚಪ್ಪಡಿ ಕಲ್ಲಿನ ಮೇಲೆ ಕುಟ್ಟುವ ಕಲ್ಲಿನಿಂದ ಕುಟ್ಟುತ್ತಾರೆ. ಇದರಿಂದಾಗಿ ದೇವರಿಗೆ ಭಕ್ತರು ಬಂದಿದ್ದಾರೆಂದು ಅರಿವಾಗುತ್ತದೆಂಬುದು ಇಲ್ಲಿನ ಜನರ ನಂಬಿಕೆ. ಚಿತ್ರದುರ್ಗದ ಭೀಮನಗುಂಡು ನೆಲೆಯಲ್ಲಿ ಕಲ್ಲಗುಳಿಗಳಿರುವ ಬಂಡೆಯಲ್ಲಿ ಕುಟ್ಟಿದರೆ ಕಂಸಾಳೆಯಂತಹ ಶಬ್ಧ ಬರುವುದರಿಂದ ಮನರಂಜನೆಗಾಗಿ

* ಪಿಎಚ್.ಡಿ ಸಂಶೋಧನಾರ್ಥಿ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಮೊ: ೯೭೪೦೦ ೦೮೩೦೭




ಚಿತ್ರ-೧. ಕುಪ್ಪಳ್ಳಿಯ ಕುವೆಂಪುರವರ ಮನೆಯಲ್ಲಿರುವ ಚನ್ನೇಮಣೆ. ಛಾಯಾಚಿತ್ರ ತೆಗೆಯಲು ಅನುಮತಿಸಿದ ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನಕ್ಕೆ ಧನ್ಯವಾದಗಳು.

ಕುಟ್ಟಿರಬಹುದೆಂದು ಭಾವಿಸಬಹುದು.[೯] ಶಿಲೋಪಕರಣಗಳನ್ನು ಅಥವಾ ಕಲ್ಲುಕೊಡಲಿಗಳ ಮೊನೆಗಳನ್ನು ಮಸೆದು ಹರಿತಗೊಳಿಸುವ ಕಾರಣದಿಂದ ತಗ್ಗುಗಳು ಅಥವಾ ಕುಳಿಗಳು ಉಂಟಾಗಿರುವುದನ್ನು ಸಂಗನಕಲ್ಲು ಪರಿಸರದಲ್ಲಿ ಗುರುತಿಸಲಾಗಿದೆ. ಸಣ್ಣರಸಮ್ಮನ ಗುಡ್ಡದಲ್ಲೂ ಇಂಥವೇ ಕುಳಿ ಆಕೃತಿಗಳು ಗೋಚರಿಸಿವೆ. ಇವುಗಳು ಕಲ್ಲುಕೊಡಲಿಗಳನ್ನು ಉಜ್ಜಿ ಮೂಡಿಸಲಾದ ಕುಳಿಗಳಾಗಿವೆ.[೧೦]

ಪ್ರಸ್ತುತ ಕಡೂರು ತಾಲೂಕಿನ ಪಿಳ್ಳೇನಹಳ್ಳಿ, ಗಣಪತಿಹಳ್ಳಿ, ಕಾಮೇನಹಳ್ಳಿ, ಹುಲಿಹಳ್ಳಿಯಲ್ಲಿ ಕಲ್ಗುಳಿ ನೆಲೆಗಳು ಪತ್ತೆಯಾಗಿದ್ದು ಇವು ವೇದಾವತಿ ನದಿಪಾತ್ರದ ನೆಲೆಗಳಾಗಿವೆ.

ಪಿಳ್ಳೇನಹಳ್ಳಿ: ಪಿಳ್ಳೇನಹಳ್ಳಿ ಗ್ರಾಮವು ಸಖರಾಯಪಟ್ಟಣ ಹೋಬಳಿಯ ಗ್ರಾಮವಾಗಿದ್ದು ಹೋಬಳಿ ಕೇಂದ್ರಕ್ಕೆ ೪ ಕಿ.ಮೀ. ಮತ್ತು ಕಡೂರಿನಿಂದ ೨೦ ಕಿ.ಮೀ. ಹಾಗೂ ಪ್ರಸಿದ್ಧವಾದ ಅಯ್ಯನಕೆರೆಯಿಂದ ೧೨ ಕಿ.ಮೀ. ಅಂತರದಲ್ಲಿದೆ. ಈ ಗ್ರಾಮವು ಗುಡ್ಡದ ಪ್ರದೇಶದಲ್ಲಿದ್ದು ಇಲ್ಲಿ ಗೌರಿ ಹಳ್ಳವಿದೆ. ಇದು ಮುಂದೆ ವೇದಾವತಿ ನದಿಗೆ ಸೇರುತ್ತದೆ. ಕಾಲುವೆಹಳ್ಳಿಯ ರಸ್ತೆಯಲ್ಲಿ ಕಾಳಸ್ತೀಶ್ವರ ದೇವಾಲಯದ ಬಳಿ ರೈಲ್ವೇ ಸೇತುವೆ ಇದೆ. ಇದರ ಪಕ್ಕದಲ್ಲಿ ಕೇತುಮಾರನಹಳ್ಳಿಯ ಅಜ್ಜಯ್ಯನವರ ಅಡಿಕೆ ತೋಟದಲ್ಲಿ ಬೊಮ್ಮದೇವರ ಗುಡಿ ಇದೆ. ವಾಸ್ತವವಾಗಿ ಇದು ಬೃಹತ್ ಶಿಲಾಯುಗದ ಸಮಾಧಿಯಾಗಿದೆ. ಸ್ಥಳೀಯರು ಇದನ್ನು ಬೊಮ್ಮದೇವರು (ಬೊಮ್ಮಲಿಂಗೇಶ್ವರ) ಎಂದು ಕರೆಯುವರು. ತುಂಬಾ ಕಟ್ಟುನಿಟ್ಟಾಗಿ ಭಯ-ಭಕ್ತಿಯಿಂದ ಪೂಜಿಸುತ್ತಿರುವರು. ಸ್ಥಳೀಯರು ಮಾಂಸಹಾರ ಸೇವಿಸಿದಾಗ ಇಲ್ಲಿಗೆ ಭೇಟಿ ನೀಡುವುದಿಲ್ಲ. ಈ ಭಯ-ಭಕ್ತಿಯಿಂದಲೇ ಈ ಸಮಾಧಿ ಸಂರಕ್ಷಣೆಯಾಗಿದೆ ಎಂದರೆ ತಪ್ಪಾಗಲಾರದು. ಇಲ್ಲದಿದ್ದಲ್ಲಿ ಯಾವಾಗಲೋ ಕೃಷಿ ಚಟುವಟಿಕೆಗೆ ತುತ್ತಾಗಿರುತ್ತಿತ್ತು. ಸ್ಲ್ಯಾಬ್‌ನ ಮೇಲ್ಮೈನಲ್ಲಿ ವಿವಿಧ ಆಕಾರದ ಸುಮಾರು ೩೧೦ ಕಲ್ಗುಳಿಗಳಿವೆ. (ಚಿತ್ರ-೨) ಕೆಲವು ಕಲ್ಗುಳಿಗಳನ್ನು ಲಂಬಸಾಲಿನಲ್ಲಿ ರಚಿಸಲಾಗಿದೆ. ಸ್ಲ್ಯಾಬ್‌ನ ಅಂಚಿನಲ್ಲಿ ಕಲ್ಗುಳಿಗಳ ಮಧ್ಯೆ ಹಾವಿನ ರೀತಿಯಲ್ಲಿ ಗೆರೆಗಳನ್ನು ಎಳೆದು ಹಾವಿನ ತಲೆಯಂತಯೇ ಮಾಡಿರುವುದರಿಂದ ಹಾವಿನ ಆಕಾರದಲ್ಲಿ ಕಾಣುತ್ತದೆ. (ಚಿತ್ರ-೩) ಇದರ ಪಕ್ಕದ ಕಲ್ಗುಳಿಗಳ ಮಧ್ಯೆ ಬಾಕ್ಸ್‌ನ ಆಕಾರದಲ್ಲಿ ೪ ಮನೆಗಳಿರುವಂತೆ ಗೆರೆಗಳನ್ನು ಎಳೆಯಲಾಗಿದ್ದು ಇದು ಏಣಿಯಂತೆ ಕಾಣುತ್ತದೆ. (ಚಿತ್ರ-೪) ಇವು ಹಾವು-ಏಣಿ ಆಟದ ಫಲಕದಲ್ಲಿರುವಂತೆ ಗೋಚರಿಸುತ್ತದೆ. ಕಾಳಸ್ತೀಶ್ವರ ದೇವಾಲಯದ ಮುಂಭಾಗದಲ್ಲಿ ನವಶಿಲಾಯುಗದ ಅರೆಯುವಕಲ್ಲು ಪತ್ತೆಯಾಗಿರುವುದನ್ನು ಬಿಟ್ಟರೆ ಬೇರೆ ಅವಶೇಷಗಳು ಪ್ರಸ್ತುತ ಸಿಕ್ಕಿಲ್ಲ.


ಗಣಪತಿಹಳ್ಳಿ: ಗಣಪತಿಹಳ್ಳಿಯು ಸಖರಾಯಪಟ್ಟಣ ಹೋಬಳಿಯ ಗ್ರಾಮವಾಗಿದ್ದು ಹೋಬಳಿ ಕೇಂದ್ರಕ್ಕೆ ಸುಮಾರು ೧೮ ಕಿ.ಮೀ. ಮತ್ತು ಕಡೂರಿನಿಂದ ೨೫ ಕಿ.ಮೀ. ಹಾಗೂ ದೇವನೂರಿಂದ ೪ ಕಿ.ಮೀ. ಅಂತರದಲ್ಲಿದೆ. ಇಲ್ಲಿ ಹಳ್ಳವಿದ್ದು ಸಮೀಪದ ಅಂಚೆಚೋಮನಹಳ್ಳಿಯಲ್ಲಿ ಸುಮಾರು ೩೦ ಶಿಲಾವೃತ್ತ ಸಮಾಧಿಗಳಿರುವ ನೆಲೆಯಿದೆ. ಬಿ.ಎಚ್. ರಸ್ತೆಗೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ಗ್ರಾಮಕ್ಕೆ ಹೊಂದಿಕೊಂಡಂತಿರುವ ಹೊಲದಲ್ಲಿ ಹಾಸುಬಂಡೆಯ ಮೇಲೆ ಸುಮಾರು ೨೦ ಕಲ್ಗುಳಿಗಳಿವೆ. (ಚಿತ್ರ-೫) ಪೂರ್ವ-ಪಶ್ಚಿಮಕ್ಕೆ ಲಂಬವಾಗಿ ತಲಾ ೬ ರಂತೆ ೨ ಸಾಲಿನಲ್ಲಿ ೧೨ ಕಲ್ಗುಳಿಗಳಿವೆ. ಇವು ಚನ್ನೇಮಣೆ ಆಟದ ಮಣೆಯನ್ನು ಹೋಲುತ್ತದೆ. ಈ ಹೊಲದಲ್ಲಿ ಬೃಹತ್ ಶಿಲಾಯುಗದ ಸಮಾಧಿಗಳ ಸ್ಲ್ಯಾಬ್ಗಳಿವೆ ಮತ್ತು ಅನೇಕ ಉಂಡೆ ಕಲ್ಲುಗಳಿವೆ. ಬಹುಷ ಇಲ್ಲಿ ಶಿಲಾವೃತ್ತ ಸಮಾಧಿಗಳಿದ್ದು ಕೃಷಿ ಚಟುವಟಿಕೆಯಿಂದಾಗಿ ಎಲ್ಲವೂ ನಶಿಸಿವೆ.



ಚಿತ್ರ–೧.ಅ. ಬ್ರಹ್ಮಸಮುದ್ರ ಮತ್ತು ಆಸಂದಿಯಲ್ಲಿರುವ ಹೊಯ್ಸಳರ ಕಾಲದ ದೇವಾಲಯಗಳಲ್ಲಿರುವ ಕಲ್ಗುಳಿಗಳು.

ಹಾಸುಬಂಡೆಯ ಮೇಲಿರುವ ಕಲ್ಗುಳಿಗಳನ್ನು ಬಹುಷ ಸಮಾಧಿಗಳನ್ನು ಸೂಚಿಸಲು ರಚಿಸಿರಬಹುದೆಂದು ಊಹಿಸಬಹುದು. ಇದೇ ಹೊಲದಲ್ಲಿ ೧೦ ಸೆಂಟಿ ಮೀಟರ್ ಉದ್ಧದ ತುಂಡಾದ ನವಶಿಲಾಯುಗದ ಕೈಕೊಡಲಿ ಪತ್ತೆಯಾಗಿದೆ.

ಕಾಮೇನಹಳ್ಳಿ: ಕಾಮೇನಹಳ್ಳಿಯು ಸಖರಾಯಪಟ್ಟಣ ಹೋಬಳಿಗೆ ಸೇರಿದ ಗ್ರಾಮವಾಗಿದೆ. ಹೋಬಳಿ ಕೇಂದ್ರಕ್ಕೆ ಸುಮಾರು ೨೨ ಕಿ.ಮೀ ಮತ್ತು ಕಡೂರಿನಿಂದ ೨೫ ಕಿ.ಮೀ. ಹಾಗೂ ದೇವನೂರಿಂದ ೩ ಕಿ.ಮೀ. ಅಂತರದಲ್ಲಿದೆ. ಗ್ರಾಮದ ಬ್ರಹ್ಮಲಿಂಗೇಶ್ವರ ದೇವಾಲಯದ ಆವರಣದಲ್ಲಿ ಉತ್ಸವಮೂರ್ತಿಯನ್ನು ಕೂರಿಸಲು ಒಂದು ಕಟ್ಟೆಯನ್ನು ಮಾಡಿರುವರು. ಕಟ್ಟೆಯ ಮೇಲ್ಭಾಗದ ಚಪ್ಪಡಿಯ ಮೇಲ್ಮೈನ ತುದಿಯಲ್ಲಿ ಸುಮಾರು ೧೪ ಕಲ್ಗುಳಿಗಳಿವೆ. (ಚಿತ್ರ–೬) ಕುಳಿಗಳ ಜಾಗದಲ್ಲಿ



ಚಿತ್ರ–೨. ಪಿಳ್ಳೇನಹಳ್ಳಿಯ ಕಲ್ಗುಳಿಗಳು. ತಾಂತ್ರಿಕ ಸಹಾಯ – ವಿನಯಕುಮಾರ್ ಡಿ.



ಚಿತ್ರ–೩. ಹಾವಿನ ಆಕಾರ, ಪಿಳ್ಳೇನಹಳ್ಳಿ



ಚಿತ್ರ–೪. ಏಣಿಯ ಆಕಾರ, ಪಿಳ್ಳೇನಹಳ್ಳಿ



ಚಿತ್ರ–೫. ಕಲ್ಗುಳಿಗಳು, ಗಣಪತಿಹಳ್ಳಿ



ಚಿತ್ರ–೬. ಕಲ್ಗುಳಿಗಳು, ಕಾಮೇನಹಳ್ಳಿ

ಕುಟ್ಟಿದರೆ ಶಬ್ಧವು ಕಂಪಿಸುತ್ತದೆ. ಕಲ್ಗುಳಿಗಳ ಪಕ್ಕದಲ್ಲಿ ಕುಟ್ಟಿದರೆ ಬರುವ ಶಬ್ಧಕ್ಕೂ ಕಲ್ಗುಳಿಗಳಿರುವ ಜಾಗದಲ್ಲಿ ಕುಟ್ಟಿದರೆ ಬರುವ ಶಬ್ಧಕ್ಕೂ ವ್ಯತ್ಯಾಸವಿದೆ. ಬಹುಷ ಮನರಂಜನೆಗಾಗಿ ಈ ಕಲ್ಗುಳಿಗಳನ್ನು ರಚಿಸಿರಬಹುದು.

ಹುಲಿಹಳ್ಳಿ: ಹುಲಿಹಳ್ಳಿಯು ಚೌಳಹಿರಿಯೂರು ಹೋಬಳಿಯ ಗ್ರಾಮವಾಗಿದೆ. ಅಂತರಘಟ್ಟೆಯಿಂದ ೩ ಕಿ.ಮೀ. ಮತ್ತು ಕಡೂರಿನಿಂದ ಸುಮಾರು ೩೫ ಕಿ.ಮೀ. ಹಾಗೂ ಉತ್ಖನನಗೊಂಡಿರುವ ನೆಲೆಯಾದ ಅನುವನಹಳ್ಳಿಯಿಂದ ಸುಮಾರು ೨೦ ಕಿ.ಮೀ. ಅಂತರದಲ್ಲಿದೆ. ಗ್ರಾಮದ ಕೆರೆಯ ಏರಿ ಮೇಲೆ ಬೊಮ್ಮಲಿಂಗದೇವರ ಗುಡಿ ಇದೆ. ಗುಡಿಗೆ ಬಳಸಿರುವ ಚಪ್ಪಡಿಕಲ್ಲುಗಳು ಬೃಹತ್ ಶಿಲಾಯುಗದ ಸಮಾಧಿಗಳಲ್ಲಿ ಬಳಸುವ ಸ್ಲ್ಯಾಬ್‌ನಂತಿವೆ. ಮೇಲ್ಭಾಗದ ಸ್ಲ್ಯಾಬ್‌ನ ಮೇಲ್ಮೈನಲ್ಲಿ ಒಂದೇ ಸಾಲಿನಲ್ಲಿ ೧೦ ಮತ್ತೊಂದು ತುದಿಯಲ್ಲಿ ೨ ಕಲ್ಗುಳಿಗಳು (ಚಿತ್ರ–೭) ಇರುವುದನ್ನು ಗಮನಿಸಬಹುದು.



ಚಿತ್ರ–೭ ಕಲ್ಗುಳಿಗಳು, ಹುಲಿಹಳ್ಳಿ

ಕಲ್ಗುಳಿಗಳು ಆದಿ ಹಳೇಶಿಲಾಯುಗದಿಂದ ವಿವಿಧ ಕಾಲಗಟ್ಟದವರೆಗೆ ಮುಂದುವರೆದುಕೊಂಡು ಬಂದಿರುವದಕ್ಕೆ ಆಧಾರಗಳು ಲಭ್ಯವಾಗಿವೆ. ಹೊಯ್ಸಳರ ಕಾಲದ ದೇವಾಲಯಗಳಲ್ಲಿರುವ ಕಲ್ಗುಳಿಗಳನ್ನು ಇಂದಿಗೂ ಮನರಂಜನೆಯ ಉದ್ದೇಶಕ್ಕಾಗಿ ಬಳಸಿತ್ತಿರುವುದನ್ನು ಗಮನಿಸಬಹುದಾಗಿದೆ. ಪ್ರಸ್ತುತ ನೆಲೆಗಳಲ್ಲಿ ಪಿಳ್ಳೇನಹಳ್ಳಿ ಮತ್ತು ಗಣಪತಿಹಳ್ಳಿಯ ಕಲ್ಗುಳಿ ನೆಲೆಗಳು ಮುಖ್ಯವಾಗಿದ್ದು ಅಧ್ಯಯನ ಯೋಗ್ಯವಾಗಿದೆ. ಪುರಾತತ್ವಜ್ಞ ವಿದ್ವಾಂಸರುಗಳು ವೈಜ್ಞಾನಿಕ ಆಧ್ಯಯನ ಕೈಗೊಂಡಲ್ಲಿ ಇವುಗಳ ರಚನೆಗೆ ಕಾರಣಗಳನ್ನು ತಿಳಿಯಬಹುದಾಗಿದೆ.

[ಸಲಹೆಗಳನ್ನು ನೀಡಿದ ಡಾ. ಕೆ.ಬಿ. ಶಿವತಾರಕ್, ಪ್ರವೀಣ್‌ಕುಮಾರ್ ಕೆ. ರವರಿಗೆ ಮತ್ತು ಕಡೂರು ತಾಲೂಕಿನ ನೆಲೆಗಳನ್ನು ನೋಡಲು ಉತ್ಸುಕರಾಗಿ ಆಗಮಿಸಿ, ತಾಂತ್ರಿಕವಾಗಿ ಸಹಕರಿಸಿದ ವಿನಯಕುಮಾರ್ ಡಿ. ಹಾಗೂ ಪಿಳ್ಳೇನಹಳ್ಳಿಯ ಸ್ಥಳೀಯರಾದ ನಿತಿನ್‌ರವರಿಗೆ ಧನ್ಯವಾದಗಳು.]

ಅಡಿ ಟಿಪ್ಪಣಿಗಳು

೧. Abhishankar K., 1981, Karnataka State Gazetteer, Chikmagalur District. Govt. of Karnataka, Bangalore. p 34.

೨. ಶಿವತಾರಕ್ ಕೆ.ಬಿ., ೨೦೦೧. ಕರ್ನಾಟಕದ ಪುರಾತತ್ವ ನೆಲೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ಪು. ೨೪೮.

೩. ತಿಪ್ಪೇಸ್ವಾಮಿ ಎಚ್., ೨೦೦೯. "ಕಡೂರಿನ ಪುರಾತತ್ವ ಅವಶೇಷಗಳು", ಗೋಪಾಲ್ ಆರ್., (ಸಂ) ಚಿಕ್ಕಮಗಳೂರು ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪ್ರಾಚ್ಯವಸ್ತು ಮತ್ತು ಸಂಗ್ರಾಲಯಗಳ ನಿರ್ದೇಶನಾಲಯ, ಮೈಸೂರು. ಪು. ೧೮.

೪. ಮುರುಗೇಶಿ ಟಿ., ೨೦೦೯. "ಚಿಕ್ಕಮಗಳೂರು ಜಿಲ್ಲೆಯಲ್ಲಿ ಬೌದ್ಧ ಧರ್ಮ", ಅದೇ, ಪು. ೧೧೨.

೫. ರೇಣುಕಸ್ವಾಮಿ ಒಡೆಯರ್ ಬಿ.ಈ., ೨೦೧೯. "ಕಡೂರು ತಾಲೂಕಿನ ನವಶೋಧಿತ ಶಿಲಾಯುಗದ ನೆಲೆಗಳು", ಇತಿಹಾಸ ದರ್ಶನ ೩೪, ಪು. ೧೬–೧೮.

೬ ರೇಣುಕಸ್ವಾಮಿ ಒಡೆಯರ್ ಬಿ.ಈ., ೨೦೨೦. "ತುರುವನಹಳ್ಳಿಯ ಕರ್ನಾಟಕದ ಮೊದಲ ಪ್ರಾಗೈತಿಹಾಸಿಕ ಜಿಂಕೆ ಪ್ರಸವದ ವರ್ಣಚಿತ್ರ", ಇತಿಹಾಸ ದರ್ಶನ ೩೫, ಪು. ೧–೩.

೭. Robert G. Bednarik., 2008. Cupules, Rock Art Research, volume 25, Number 1, p. 61-62.

೮. ಮೋಹನ ಆರ್., ೨೦೧೯. ಕರ್ನಾಟಕದ ಆದಿಮ ಚಿತ್ರಕಲೆ, ಇತಿಹಾಸ ದರ್ಪಣ ಪ್ರಕಾಶನ, ಬೆಂಗಳೂರು. ಪು. ೧೩೦.

೯. ಮೋಹನ ಆರ್., ೨೦೧೯. ಅದೇ, ಪು. ೧೩೧–೧೩೨.


೧೦. ಲಕ್ಷ್ಮಣ್ ತೆಲಗಾವಿ, ೨೦೦೬. "ಚಿತ್ರದುರ್ಗ ಪರಿಸರದ ಕುಳಿಭರಿತ ಭೀಮನಗುಂಡು: ಪುರಾತತ್ವಿಕ ಅಧ್ಯಯನ", ಇತಿಹಾಸ ದರ್ಶನ ೨೧, ಪು. ೩.

೮

ಭಂಟನೂರಿನ ಪ್ರಿ ಕ್ಯಾಂಬ್ರಿಯನ್ ಯುಗದ ಅವಶೇಷಗಳ ಶೋಧ

ಶಿವಪ್ಪ ನ. ನೀರಲಗಿ*

ಇಂದಿನ ವಿಜಯಪುರಜಿಲ್ಲೆಯ ತಾಳಿಕೋಟೆ ತಾಲೂಕಿನಿಂದ ಈಶಾನ್ಯಕ್ಕೆ ಸುಮಾರು ೧೬ ಕಿ.ಮೀ. ಗಳ ಅಂತರದಲ್ಲಿ ಭಂಟನೂರು ಗ್ರಾಮವಿದೆ. ಈ ಊರಿನಿಂದ ದಕ್ಷಿಣಕ್ಕೆ ಅರ್ಧ ಕಿ.ಮೀ.ಗಳ ಅಂತರದಲ್ಲಿ ಶ್ರೀ ನಡಗೇರಪ್ಪ ನೀರಲಗಿ ಇವರ ಸರ್ವೆ ನಂಬರ್ ೧೧೪ರ ಹೊಲವನ್ನು ಲೆವೆಲ್ ಮಾಡುವಾಗ ಈ ಅವಶೇಷಗಳು ಲಭ್ಯವಾಗಿವೆ. ಈ ಹೊಲವನ್ನು "ಕಟಗನಕೋರೆ" ಎಂದು ಕರೆಯುತ್ತಾರೆ.





ಬೆಂಕಿ ಕಲ್ಲಿನಲ್ಲಿ ಕಪ್ಪು ನೀಲಿವರ್ಣದ ಸಸ್ಯಗಳು





ಪ್ರಾಣಿಗಳ ದೇಹವು ಜ್ವಾಲಾಮುಖಿ ಕಲ್ಲುಗಳಾಗಿ ಮಾರ್ಪಟ್ಟಿರುವುದು

ಊರಿನಿಂದ ಪೂರ್ವಕ್ಕೆ ಸುಮಾರು ೪ ಕಿ.ಮೀ.ಗಳ ಅಂತರದಲ್ಲಿ 'ಅಗ್ನಿ' ಎಂಬ ಊರಿದೆ, ಈ ಪ್ರದೇಶವು ಅಣಿಗಳಿಂದ (ತಗ್ಗು ದಿನ್ನೆ) ಕೂಡಿದೆ. ಭಂಟನೂರಿನ ಪೂರ್ವದಿಂದ ಪಶ್ಚಿಮಕ್ಕೆ ಪಶ್ಚಿಮವಾಹಿನಿಯಾಗಿ ಹರಿಯುವ ಹಳ್ಳವೊಂದು ಇದ್ದು ಇದನ್ನು"ಅಗ್ನಿಹಳ್ಳ"ವೆಂದು ಜನಪದರು ಕರೆಯುತ್ತಾರೆ, ಹೀಗಾಗಿ ಹಿಂದೊಮ್ಮೆ ಹಂತ ಹಂತವಾಗಿ ಭೂಮಿ ರೂಪಾಂತರ ವಾಗುವಾಗ (Formation of Earth) ಜ್ವಾಲಾಮುಖಿಗಳು, ಭೂಕಂಪಗಳು ಈ ಪ್ರದೇಶದಲ್ಲಿ ಸಂಭವಿಸಿದ್ದರಿಂದ ಈ ಪ್ರದೇಶವು ಅನೇಕ ಕಣಿವೆಗಳಿಂದ ಕೂಡಿದೆ. ಜ್ವಾಲಾಮುಖಿಯಿಂದ ಅಗ್ನಿಯ (Valley) ಹಳ್ಳವು ಹಿಂದೆ ಇಲ್ಲಿ ಹರಿದುದರಿಂದ ಈ ಹಳ್ಳಕ್ಕೆ ಜನರು ಅಗ್ನಿಹಳ್ಳವೆಂದು ಕರೆದುದರಲ್ಲಿ ತಪ್ಪೇನೂ ಇಲ್ಲ.

ಬೆಂಕಿ ಕಲ್ಲಿನಲ್ಲಿ ಕಪ್ಪು ನೀಲಿ ವರ್ಣದ ಸಸ್ಯಗಳು (ಬೆಂಕಿಕಲ್ಲು–Quartz)

ಈ ಪ್ರಿ ಕ್ಯಾಂಬ್ರಿಯನ್ ಯುಗದಲ್ಲಿ ಸಂಭವಿಸಿದ ಜ್ವಾಲಾಮುಖಿಯೊಳಗೆ ಸಿಕ್ಕ ಆಗಿನ ಕುರುಚಲು ಸಸ್ಯರಾಶಿಯು ಈ ಬೆಂಕಿ ಕಲ್ಲಿನಲ್ಲಿ (ಚೆಕಿಮುಖಿ) ಪಡೆ ಮೂಡಿವೆ. ಹೀಗಾಗಿ ಈ ಸಸ್ಯರಾಶಿಯಲ್ಲಿ ಸಮೀಪದ (ಕಪ್ಪು ನೀಲಿ ವರ್ಣದ)

* ಭಂಟನೂರು ಪೋಸ್ಟ್, ವಿಜಯಪುರ ಜಿಲ್ಲೆ, ಮೊ. ೯೪೪೯೦ ೩೩೩೮೩



ಬೆಂಕಿ ಕಲ್ಲಿನಲ್ಲಿ ನೀಲಿವರ್ಣದ ಸಸ್ಯಗಳು



ಪ್ರಾಣಿಗಳ ದೇಹವು ಜ್ವಾಲಾಮುಖಿ ಕಲ್ಲುಗಳಾಗಿ ಮಾರ್ಪಟ್ಟಿರುವುದು

ಮಿಣಜಗಿಯ ಸೇದಿಕಲ್ಲಿನಲ್ಲಿರುವ ಸಸ್ಯರಾಶಿಯನ್ನು ಹೋಲುವದರಿಂದ ಈ ಸಸ್ಯಗಳು ಸಹ ಮಿಣಜಗಿಯ ಸಮಕಾಲಿನ ಸಸ್ಯಗಳಾಗಿವೆ ಎಂದು ಹೇಳಬಹುದು. ಹೀಗಾಗಿ ಈ ಸಸ್ಯರಾಶಿಯು ಸುಮಾರು ೧೫ ಕೋಟಿ ವರ್ಷಗಳಿಗಿಂತಲೂ ಪ್ರಾಚೀನವುಗಳಾಗಿರಬಹುದೆಂದು ಹೇಳಬಹುದಾಗಿದೆ.

ಜ್ವಾಲಾಮುಖಿಯಲ್ಲಿ ಸಿಲುಕಿದ ಪ್ರಾಣಿಗಳ ದೇಹವು ಜ್ವಾಲಾಮುಖಿ ಕಲ್ಲುಗಳಾಗಿ ಮಾರ್ಪಟ್ಟಿದೆ

ದೊಡ್ಡ ಪ್ರಮಾಣದಲ್ಲಿ ಈ ಪ್ರದೇಶದಲ್ಲಿ ಜ್ವಾಲಾಮುಖಿ ಉಂಟಾದುದರಿಂದ ಆ ಕಾಲಘಟ್ಟದಲ್ಲಿ ಜೀವಿಸಿದ್ದ ಪ್ರಾಣಿಗಳ ದೇಹವು ಜ್ವಾಲಾಮುಖಿಯಲ್ಲಿ ಸಿಲುಕಿ ದಹಿಸಿದ್ದರಿಂದ ಆ ಪ್ರಾಣಿಗಳ ದೇಹವು ಜ್ವಾಲಾಮುಖಿ ಕಲ್ಲುಗಳಾಗಿ ಮಾರ್ಪಟ್ಟಿವೆ. ಜ್ವಾಲಾಮುಖಿಯಲ್ಲಿ ಸಿಕ್ಕ ಈ ಎಲುಬಿನ ಅವಶೇಷವು ಒಂದು ಮಗ್ಗಲು ಮರಳುಗಲ್ಲಿನಿಂದ ಕೂಡಿದ್ದರೆ, ಇನ್ನೊಂದು ಮಗ್ಗಲು ಪ್ರಾಣಿಯ ಎಲುಬು ಎಂಬುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಹೀಗಾಗಿ ಈ ಎಲುಬು ಪ್ರಿ ಕ್ಯಾಂಬ್ರಿಯನ್ ಯುಗದ ಡೈನೊಸರಸಿನದಾಗಿರಬಹುದೆಂದು ಊಹಿಸಬಹುದಾಗಿದ್ದು ಕಾರ್ಬನ್ ಡೇಟಿಂಗ್ (ಪ್ರಯೋಗಾಲಯಕ್ಕೆ) ಒಳಪಡಿಸಿದರೆ ಇದರ ಸತ್ಯಾಂಶ ತಿಳಿಯಬಹುದಾಗಿದೆ. ಹೀಗಾಗಿ ಭಂಟನೂರಿನ ಈ ಸಸ್ಯ ವರ್ಗ ಮತ್ತು ಎಲುಬುಗಳು ಪ್ರಿ ಕ್ಯಾಂಬ್ರಿಯನ್ ಯುಗಕ್ಕೆ ಸೇರಿವೆ ಎಂದು ಹೇಳಬಹುದಾಗಿದೆ. ಇದಕ್ಕೆ ಸಂಬಂಧಿಸಿದಂತೆ ಇನ್ನು ಸಂಶೋಧನೆಯ ಅವಶ್ಯಕತೆಯಿದೆ.

ಆಕರ ಗ್ರಂಥಗಳು

೧. ಬಿಜಾಪುರ ಜಿಲ್ಲೆಯ ಗ್ಯಾಸೆಟಿಯರ್, ಆರ್. ಮುನಿಸ್ವಾಮಿ.

೬

ಚಿತ್ರದುರ್ಗ ತಾಲ್ಲೂಕಿನ ಹೊಸಹಟ್ಟಿಯಲ್ಲಿ ದೊರೆತ ಅಪ್ರಕಟಿತ ತಾಮ್ರ ಶಾಸನ

ಎಸ್.ವೈ. ಸೋಮಶೇಖರ್*

ಹೊಸಹಟ್ಟಿಯು ಚಿತ್ರದುರ್ಗ ತಾಲೂಕಿನ ತುರುವನೂರು ಹೋಬಳಿಯಲ್ಲಿರುವ ಮ್ಯಾಸಬೇಡ ಸಮುದಾಯದ ಗ್ರಾಮ. ಇದು ಮುದ್ದಾಪುರದ ಬಳಿ ಇರುವುದರಿಂದ ಮುದ್ದಾಪುರ ಹೊಸಹಟ್ಟಿ ಎಂದೇ ಕರೆಯುತ್ತಾರೆ. ಈ ಗ್ರಾಮದಂತೆ ಇದರ ಆಸುಪಾಸಿನಲ್ಲಿ ಇದೇ ರೀತಿ ನಾಲ್ಕೈದು ಕಿ.ಮೀ. ವ್ಯಾಪ್ತಿಯಲ್ಲಿ ಹಳೆಹಟ್ಟಿ ಮತ್ತು ಮ್ಯಾಸರಹಟ್ಟಿಗಳಿದ್ದು, ಅಲ್ಲಿಯೂ ಇದೇ ಸಮುದಾಯದ ಕುಟುಂಬಗಳು ಪ್ರತ್ಯೇಕವಾಗಿ ವಾಸ್ತವ್ಯವನ್ನು ಹಿಂದಿನಿಂದಲೂ ಹೂಡಿ ಜೀವನವನ್ನು ಸಾಗಿಸುತ್ತಿವೆ.

ಈ ಹೊಸಹಟ್ಟಿಯಲ್ಲಿ ಇತ್ತೀಚೆಗೆ ಶ್ರೀ ಕಂಚಪ್ಪ ಎಂಬುವರ ಮನೆಯಲ್ಲಿ ಪ್ರಾಚೀನ ದಾಖಲೆಗಳು ಪತ್ತೆಯಾಗಿವೆ. ಅವುಗಳಲ್ಲಿ ತಾಮ್ರಪತ್ರ ಶಾಸನ, ತಾಳೆಗರಿ ಮತ್ತು ಕಾಗದದ ದಾಖಲೆಗಳು ಮುಖ್ಯವಾಗಿ ಕಂಡುಬಂದಿವೆ. ಇವರ ಬಳಿ ಇರುವ ತಾಮ್ರಶಾಸನವನ್ನು ಅದೇ ಶಾಸನದಲ್ಲಿ ಕಂಚಿನ ದಾಖಲೆಯೆಂದೇ ಕರೆದಿರುವುದು ಗಮನಾರ್ಹ.

ತಾಮ್ರಪತ್ರ ಶಾಸನದ ವಿವರ

ಕಂಚಿನ ದಾಖಲೆಯೆಂದೇ ಕರೆಯುವ ಈ ತಾಮ್ರಪತ್ರವು "ಓಂ ಶ್ರೀ ಶ್ರೀ ವಿಘ್ನೇಶ್ವರ" ಎಂಬ ದೇವರ ಸ್ತುತಿಯಿಂದ ಆರಂಭವಾಗುತ್ತದೆ. ನಂತರ ಇಪ್ಪತ್ತು ಸಾಲುಗಳಲ್ಲಿ ಮುಖ್ಯ ಪಠ್ಯವಿದ್ದು, ಕೊನೆಯಲ್ಲಿ ಅವರ ಕಟ್ಟೆಮನೆ ಗೋಣೂರು ಮತ್ತು ಅವರ ಸಂಸ್ಥಾನ ಜರಿಮಲೆ ಮತ್ತು ಗುಡೇಕೋಟೆಗಳೆಂದು ಮುಕ್ತಾಯಗೊಳ್ಳುತ್ತದೆ. ಈ ತಾಮ್ರಪತ್ರವು ಕನ್ನಡ ಭಾಷೆ ಮತ್ತು ಲಿಪಿಯಲ್ಲಿ ಸುಂದರ ಬರಹವುಳ್ಳದ್ದಾಗಿದೆ. ಇದರ ಆರಂಭದಲ್ಲಿ ಸೂರ್ಯ ಚಂದ್ರರ ಚಿತ್ರಗಳನ್ನು ಮೂಡಿಸಿದ್ದು, ಓಂ ಶ್ರೀ ಶ್ರೀ ವಿಘ್ನೇಶ್ವರ ಎಂದೇ ಆರಂಭವಾಗುತ್ತದೆ. ಈ ತಾಮ್ರಪತ್ರವು ೧೫ ಇಂಚು ಉದ್ದ ಮತ್ತು ೧೧ ಇಂಚು ಅಗಲವಾಗಿದೆ.

ತಾಮ್ರಶಾಸನದ ಪಾಠ ಇಂತಿದೆ

ಓಂ ಶ್ರೀ

ಶ್ರೀ ವಿಘ್ನೇಶ್ವರ

೧ ಶ್ರೀ ಶ್ರೀ ಶ್ರೀ. ಕಂಚೋಬಳೇಶ್ವರ ಪ್ರಸನ್ನ

೨ ಶ್ರೀ ಅಕಿಲಾಂಡ ಕೋಟಿ ಬ್ರಹ್ಮಾಂಡ

೩ ನಾಯಕ ಜಳಂದರ ಕಳಂದರ ಯುಗ

೪ ಓಂಕಾರ ಪ್ರಣಮ ಪಂಚಾಕ್ಷರಿ,

೫ ಉದ್ಭವಿಸಿದ ನಮಸ್ತುಂಗ ಸ್ಥಿರಸ್ತುಂಬಿ

೬ ತ್ರೈಲೋಕ್ಯ ನಾಗಲಾಂಬೆ ಮೂಲ

೭ ಸ್ಥಂಭಯ ಬಡಕರಾಜನ ವಂಶಾಬ್ದಿ

೮ ಮುದ್ರೆ ಧರ್ಮ ಪಡೆದುಕೊಂಡ.

೯ ವೇದವ್ಯಾಸ ಮಳೇಲು ಸಂತತಿಯವರು

* ಪ್ರಾಧ್ಯಾಪಕರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.


೧೦ ಕಂಚಿ ಓಬಳದೇವರು ಬೋರೇದೇವರು
೧೧ ಬೊಮ್ಮದೇವರು ಚಿತ್ರದೇವರು ಲಕ್ಷ್ಮೀ
೧೨ ನರಸಿಂಹ್ಮದೇವರು. ಗಂಗಮಾಳಮ್ಮ ದೇವರು
೧೩ ಜಡಕರಾಜ, ಬಡಕರಾಜ ಹರಳೇರಾಜ.
೧೪ ತರುಳೇರಾಜ ಗಂಡರಾಜ. ಬೊಮ್ಮಂತರಾಜ
೧೫ ಮರುಳೇರಾಜ ಮುದ್ದಾಪುರ ಮಾಕನಡಕು
೧೬ ದೊಡಗಟ್ಟ. ಸೊಂಡೇಕೋಳ ಕೋಡಿಹಳ್ಳಿ
೧೭ ನಿಂಗದಹಳ್ಳಿ. ಕಲ್ಲುಕುಂಟೆ. ಅಮಾಸೆಮನೆ
೧೮ ಏಳುಜನ ಅಣ್ಣತಮ್ಮಗಳು ಸೇರಿ
೧೯ ವಿಡುಪನಕುಂಟೆ ಯಳವರ ಮಲ್ಲನಿಗೆ
೨೦ ಬರೆದುಕೊಟ್ಟ ಕಂಚಿನ ದಾಖಲೆ.

ಇವರ ಕಟ್ಟೆಮನೆ ಗೋಣೂರು — ಶುಭಂ — ಇವರ ಸಂಸ್ಥಾನ ಜರುಮಲೆ ಗುಡೇಕೋಟೆ

ತಾಮ್ರ ಶಾಸನವಾದ ಈ ದಾಖಲೆಯನ್ನು ಕಂಚಿನ ದಾಖಲೆಯೆಂದೇ ಇದರಲ್ಲಿ ಕರೆದಿರುವುದು ವಿಶೇಷ. ೨೦ ಸಾಲುಗಳ ಪಠ್ಯದಲ್ಲಿ ಬಿರುದುಗಳ ಉಲ್ಲೇಖವಿದ್ದು, ಬಡಕರಾಜನ ವಂಶ ವಿವರಗಳಿವೆ. ಹಾಗೆಯೇ ಅವನ ಸಂತತಿಯ ವಿವರದೊಂದಿಗೆ ಅವನಿಗೆ ಇದ್ದ ಏಳು ಜನ ಮಕ್ಕಳು, ಅವರು ಆರಾಧಿಸುತ್ತಿದ್ದ ದೇವ-ದೇವತೆಗಳನ್ನು ಹೆಸರಿಸಿದ್ದಾರೆ. ಮುಂದುವರೆದು ಅವರು ಹಂಚಿಕೊಂಡು ನೆಲಸಿದ ಗ್ರಾಮಗಳನ್ನು ಹೇಳಲಾಗಿದೆ. ಹಾಗೆಯೇ ಕೊನೆಯಲ್ಲಿ ಅವರು ಗೋಣೂರು ಕಟ್ಟೆಮನೆಯವರೆಂದೂ ಅವರ ಸಂಸ್ಥಾನಗಳು ಜರಿಮಲೆ ಮತ್ತು ಗುಡೇಕೋಟೆಗಳೆಂದು ಸ್ಪಷ್ಟಪಡಿಸಿರುವುದು ಗಮನಾರ್ಹ. ಕೊನೆಯಲ್ಲಿ ಈ ಮೇಲಿನ ಎಲ್ಲ ವಿವರಗಳುಳ್ಳ ದಾಖಲೆಯನ್ನು ಒಳಗೊಂಡ ತಾಮ್ರಪಟವನ್ನು ವಿಡುಪನಕುಂಟೆ ಮಲ್ಲನಿಗೆ ಬರೆದುಕೊಟ್ಟ ಕಂಚಿನ ದಾಖಲೆಯೆಂದೇ ಹೇಳಿದೆ. ಇದರಿಂದ ಈ ದಾಖಲೆಯು ಹೊಸಹಟ್ಟಿಯಲ್ಲಿ ಬಡಕರಾಜನ ವಂಶಕ್ಕೆ ಸಂಬಂಧಿಸಿದ ಮನೆಯಲ್ಲಿ ಇರುವಂತೆ ವಿಡುಪನಕುಂಟೆಯ ಯಳವ ಮಲ್ಲನ ವಂಶದವರಲ್ಲೂ ಇನ್ನೊಂದು ಪ್ರತಿ ಇರುವ ಸೂಚನೆಯನ್ನು ಕೊಡುತ್ತದೆ.

ಈ ಶಾಸನದ ವಿಶೇಷತೆಯೆಂದರೆ ಬಡಕರಾಜನ ವಂಶವನ್ನು ಈ ವಂಶದ ಮುದ್ರೆಯನ್ನು ಪಡೆದುಕೊಂಡವರು ಮಳೇಲು ಸಂತತಿಯವರು ಎಂಬುದಾಗಿದೆ. ಇವರ ದೈವಗಳನ್ನು ಹೇಳಿರುವ ಇಲ್ಲಿ ಕಂಚಿಯ ಓಬಳದೇವರು, ಬೋರೆದೇವರು, ಬೊಮ್ಮದೇವರು, ಚಿತ್ರದೇವರು, ಲಕ್ಷ್ಮೀನರಸಿಂಹ ಎಂಬ ಗಂಡುದೇವರುಗಳಲ್ಲದೆ ಗಂಗಮಾಳಮ್ಮ ದೇವರನ್ನೂ ಉಲ್ಲೇಖಿಸಿದೆ. ಇದರಿಂದ ಅವರು ಆರಾಧಿಸುತ್ತಿದ್ದ ದೇವ-ದೇವತೆಗಳು ಸ್ಪಷ್ಟವಾಗಿ ದಾಖಲಾಗಿವೆ. ಹಾಗೆಯೇ ಇದರಲ್ಲಿ ಈ ಪರಿಸರದ ಗ್ರಾಮಗಳ ಉಲ್ಲೇಖವಿದ್ದು, ಅವುಗಳಲ್ಲಿ ಮುದ್ದಾಪುರ, ಮಾಕನಡುಕು, ದೊಡ್ಡಗಟ್ಟ, ಸೊಂಡೆಕೊಳ, ಕೋಡಿಹಳ್ಳಿ, ನಿಂಗದಹಳ್ಳಿ, ಕಲ್ಲುಕುಂಟೆಗಳನ್ನು ಹೆಸರಿಸಲಾಗಿದೆ. ಇವು ಚಿತ್ರದುರ್ಗ ಮತ್ತು ಕೂಡ್ಲಿಗಿ ತಾಲೂಕಿನಲ್ಲಿ ಬರುವ ಗ್ರಾಮಗಳಾಗಿದ್ದು, ಅವುಗಳಲ್ಲಿ ಮ್ಯಾಸಬೇಡ ಸಮುದಾಯದ ಕುಟುಂಬಗಳು ಇಂದಿಗೂ ವಾಸವಿರುವುದು ಗಮನಾರ್ಹ. ಇವುಗಳಲ್ಲಿ ಈಗ ಸಿಕ್ಕಿರುವ ತಾಮ್ರಪತ್ರದ ಸ್ಥಳವಾದ ಹೊಸಹಟ್ಟಿಗೆ ಅಂಟಿದಂತಿರುವ ಮುದ್ದಾಪುರವಿದೆ. ಹಾಗೆಯೇ ದೊಡ್ಡಗಟ್ಟ, ಸೊಂಡೆಕೊಳ, ಕೋಡಿಹಳ್ಳಿ, ನಿಂಗದಹಳ್ಳಿ, ಕಲ್ಲುಕುಂಟೆ ಗ್ರಾಮಗಳು ಚಿತ್ರದುರ್ಗ ತಾಲೂಕಿನಲ್ಲಿದ್ದರೆ, ಇಲ್ಲಿ ಉಲ್ಲೇಖವಾದ ಮಾಕನಡಕು ಗ್ರಾಮ ಮಾತ್ರ ಕೂಡ್ಲಿಗಿ ತಾಲೂಕಿನಲ್ಲಿರುವುದನ್ನು ಕಾಣಬಹುದು. ಈ ಗ್ರಾಮಗಳಲ್ಲಿ ಬಡಕರಾಜನ ವಂಶದವರು ನೆಲಸಿದ್ದುದು ದಾಖಲೆಯಿಂದ ಸ್ಪಷ್ಟವಾಗುತ್ತದೆ. ಇಲ್ಲಿ ಹೇಳುವ ದಾಖಲೆಯನ್ನು ನೀಡಿದ್ದ ವಿಡುಪನಕುಂಟೆ ಮಲ್ಲನ ಈ ಗ್ರಾಮವು ಇಂದು ಚಳ್ಳಕೆರೆ ತಾಲೂಕಿನಲ್ಲಿದೆ. ಇದು ಹೆಳವರ ಕುಟುಂಬದ ತಾಣವೆಂಬುದನ್ನು ಗಮನಿಸಬಹುದು. ಈ ಹೆಳವ ಸಮುದಾಯವು ಪಾರಂಪರಿಕವಾಗಿ ಪ್ರಾಚೀನ ಸಮುದಾಯ ಮತ್ತು ಮನೆತನಗಳ ವಿವರಗಳನ್ನು ದಾಖಲಿಸುವ ಮಹತ್ತರ ಜವಾಬ್ದಾರಿಯನ್ನು ಹೊತ್ತುದಲ್ಲದೆ ಅದನ್ನು ಒಂದು ತಲೆಮಾರಿನಿಂದ ಇನ್ನೊಂದು ತಲೆಮಾರಿಗೆ ಕುಟುಂಬದ ಚರಿತ್ರೆಯನ್ನು ದಾಟಿಸುವ





ಬಹುದೊಡ್ಡ ಕಾರ್ಯವನ್ನು ಪ್ರಾಚೀನ ಕಾಲದಿಂದಲೂ ಮಾಡಿಕೊಂಡು ಬಂದಿದ್ದುದು ಶ್ಲಾಘನೀಯ. ಇದನ್ನು ಇಲ್ಲಿನ ದಾಖಲೆಯು ದೃಢಪಡಿಸುತ್ತದೆ.

ಈ ತಾಮ್ರ ಪತ್ರವನ್ನು ಹೆಳವ ಮಲ್ಲನಿಗೆ ನೀಡಿದುದು ಮುಖ್ಯ ಮತ್ತು ಅಪರೂಪದ ಸಂಗತಿಯೇ ಆಗಿದೆ. ಹಾಗಾದರೆ ಈ ಹೆಳವ ಮಲ್ಲನ ಕಾರ್ಯವೇನೆಂದು ಪರಿಶೀಲಿಸಿದಾಗ ಅವನು ಬಡಕರಾಜನ ವಂಶದ ಎಲ್ಲ ಬಗೆಯ ವಂಶ ವಿವರ, ಅವರ ವೃತ್ತಿ, ವಲಸೆ, ಅನುಭವಿಸಿದ ಜೀವನ, ಅವರ ನೆಲೆಯ ವಿವರಗಳುಳ್ಳ ಸುಮಾರು ೧೫ ಪುಟಗಳ ಹಸ್ತಪ್ರತಿ ದೊರೆಯಿತು. ಇದನ್ನು ಸೂಕ್ಷ್ಮವಾಗಿ ಓದಿದಾಗ ಅದರ ಕೊನೆಯಲ್ಲಿ "ಇವರು ಏಳು ಜನ ದೊರೆಗಳು ಯಳವರ ಇಡಪ್ಪನುಕುಂಟೆ ಮಲ್ಲನನು ಒಪ್ಪಿ ಮಾಡಿಕೊಂಡಿರುತ್ತಾರೆ. ಇವರು ಬರೆದುಕೊಟ್ಟ ರಿಕಾರ್ಡು ಎಂಬ ಬರಹವಿದೆ. ಕೊನೆಯಲ್ಲಿ ಸಂಪೂರ್ಣ ಎಂಬುದಾಗಿ ಹೇಳಿರುವುದರಿಂದ ಹದಿನೈದು ಪುಟದ ಹಸ್ತಪ್ರತಿಯು ಸಂಪೂರ್ಣ ಮಾಹಿತಿಯನ್ನು ಒಳಗೊಂಡದ್ದೆಂಬುದು ದೃಢವಾಗುತ್ತದೆ. ಇದರಿಂದ ತಾಮ್ರ ಪತ್ರವನ್ನು ಬಡಕರಾಜನ ವಂಶಸ್ಥರು ನೀಡಿದ ಪ್ರಮುಖ ಉದ್ದೇಶವೆಂದರೆ ಅವರ ಇಡೀ ಪರಂಪರಾಗತ ವಂಶ ವಿವರವನ್ನು ಸುದೀರ್ಘವಾಗಿ ದಾಖಲಿಸಿಕೊಟ್ಟ ಹೆಳವ ಮನೆತನದ ಮಲ್ಲನಿಗೆ ಪ್ರತಿಯಾಗಿ ಕೊಟ್ಟ ದಾಖಲೆಯೆಂಬುದು ಈ ತಾಮ್ರಪಟದ ಹೆಗ್ಗಳಿಕೆಯಾಗಿದೆ.

೧೫ ಪುಟಗಳುಳ್ಳ ಕಾಗದದ ಹಸ್ತಪ್ರತಿಯಲ್ಲಿ ಈ ಸಮುದಾಯ ಮತ್ತು ಮನೆತನದ ಸಂಪೂರ್ಣ ವಿವರವನ್ನು ದಾಖಲಿಸಿಕೊಟ್ಟ ನೆನಪಿಗೆ ತಾಮ್ರ ಪತ್ರವನ್ನು ನೀಡಲಾಗಿದೆ. ಅದರಲ್ಲಿ ವಿಡುಪನಕುಂಟೆ ಮಲ್ಲನಿಗೆ ಬರೆದುಕೊಟ್ಟ ಕಂಚಿನ ದಾಖಲೆ ಎಂದು ಹೇಳಿದೆ. ಹಾಗೆಯೇ ಹಸ್ತಪ್ರತಿಯ ಕೊನೆಯಲ್ಲೂ "ಇವರು ಏಳು ಜನ ದೊರೆಗಳು ಯಳವರ ಇಡಪ್ಪನುಕುಂಟೆ ಮಲ್ಲನು ಒಪ್ಪ ಮಾಡಿಕೊಂಡಿರುತ್ತಾರೆ. ಇವರು ಬರೆದು ಕೊಟ್ಟ ರಿರ್ಕಾಟ್ಟು ಎಂದಿದೆ. ಅದರ ಪ್ರತಿ ಈ ಕೆಳಕಂಡಂತಿದೆ.

[ಈ ತಾಮ್ರಪತ್ರವನ್ನು ಒದಗಿಸಿ ಸಹಕರಿಸಿದ ಶ್ರೀ ಓ. ಕಂಚೋಬಳಪ್ಪ ಮತ್ತು ವಿದ್ಯಾರ್ಥಿ ಮಿತ್ರ ಬಿ.ನರಸಿಂಹಪ್ಪ ಅವರಿಗೆ ಅನಂತ ಧನ್ಯವಾದಗಳು.]

೧೦

ಮಸ್ಕಿ ಪರಿಸರದ ಅಪ್ರಕಟಿತ ಶಾಸನಗಳು

ಚನ್ನಬಸಪ್ಪ ಮಲ್ಕಂದಿನ್ನಿ*

ಮಸ್ಕಿ ಪಟ್ಟಣವು ರಾಯಚೂರು ಜಿಲ್ಲೆಯ ಒಂದು ತಾಲ್ಲೂಕಿನ ಕೇಂದ್ರ ಸ್ಥಳ. ಈ ತಾಲ್ಲೂಕಿನ ಗೋನವಾರ, ವೆಂಕಟಾಪುರ, ಮಸ್ಕಿ, ಮೆದಿಕಿನಾಳ, ದಿಗ್ಗನಾಯಕನಬಾವಿ (ದಿನ್ನೆಬಾವಿ), ಉಸ್ಕಿಹಾಳ, ಹಿರೇಕಡಬೂರು, ದಬ್ಬೇರಮಡು, ಕಾಚಾಪುರ, ಸಂತೆಕೆಲ್ಲೂರು, ಕುಣೆಕೆಲ್ಲೂರು ಮತ್ತು ಲಿಂಗಸೂಗೂರು ತಾಲ್ಲೂಕಿನ ಚಿಕ್ಕಹೆಸರೂರು ಎಂಬ ಹೆಸರಿನ ಹನ್ನೆರಡು ಗ್ರಾಮಗಳಲ್ಲಿ ಒಟ್ಟು ೧೮ ಶಾಸನಗಳು ಬೆಳಕಿಗೆ ಬಂದಿವೆ. ಈ ಶಾಸನಗಳು ಕ್ರಿ.ಶ. ೧೧ನೇ ಶತಮಾನದಿಂದ ಕ್ರಿ.ಶ. ೧೯೫೫ರ ವರೆಗೆ ಇರುವ ಶಾಸನಗಳಾಗಿವೆ. ಈ ಎಲ್ಲಾ ಶಾಸನಗಳು ದತ್ತಿ ನೀಡಿದ ಶಾಸನಗಳಾಗಿದ್ದು, ಇದರಲ್ಲಿ ಕೊನೆಯ ಗೋನವಾರ ಗ್ರಾಮದ ಶಾಸನವು ಕಣಶಿಲೆಯಲ್ಲಿ ಬರೆಸಲ್ಪಟ್ಟಿದ್ದು, ಶ್ರೀ ಶಾಲಿವಾಹನ ಶಕವರ್ಷ ೧೮೭೭ ಎಂದಿದ್ದು, ಇದು ಕ್ರಿ.ಶ. ೧೯೫೫ಕ್ಕೆ ಸರಿಹೊಂದುತ್ತದೆ. ಇದು ಇಲ್ಲಿಯವರೆಗೆ ಪ್ರಕಟಿತ ಮತ್ತು ಅಪ್ರಕಟಿತವಾದ ರಾಯಚೂರು ಜಿಲ್ಲೆಯ ಶಾಸನಗಳಲ್ಲಿಯೇ ಕೊನೆಯ ಮತ್ತು ಇತ್ತೀಚಿನ ಶಾಸನವಾಗಿದೆ. ಇವುಗಳಲ್ಲಿ ಶೈವಧರ್ಮದ ಹನ್ನೊಂದು ಶಾಸನಗಳು ವೈಷ್ಣವಧರ್ಮದ ಮೂರು ಶಾಸನಗಳು ಮತ್ತು ಪ್ರಮುಖ ವ್ಯಕ್ತಿಗಳ ಕುರಿತು ಉಲ್ಲೇಖಿಸುವ ನಾಲ್ಕು ಶಾಸನಗಳಿವೆ. ಇವೆಲ್ಲವುಗಳು ಕನ್ನಡ ಭಾಷೆ, ಕನ್ನಡ ಲಿಪಿಯಲ್ಲಿವೆ. ಈ ಶಾಸನಗಳಲ್ಲಿ ಉಲ್ಲೇಖಗೊಂಡಂತೆ ಮಸ್ಕಿ ಪರಿಸರದ ಪ್ರದೇಶವೂ ಪ್ರಾಚೀನ, ಮಧ್ಯಯುಗೀನ ಕಾಲದಲ್ಲಿ ಎಡೆದೊರೆ-೨೦೦೦ ನಾಡಿಗೆ ಸೇರಿತ್ತು. ಇದರ ರಾಜಧಾನಿ ಪಿರಿಯ ಮೊಸಂಗಿ [ಪ್ರಸ್ತುತ ಮಸ್ಕಿ ಪಟ್ಟಣ]ವಾಗಿತ್ತು. ನಂತರ ಇದು ಕ್ರಿ.ಶ. ೧೮-೧೯ನೇ ಶತಮಾನದಲ್ಲಿ ಮೊಸಗೆ ಮತ್ತು ಬಾಲ್ಲಮರೆ ಪ್ರಸ್ತುತ ಬೆಲ್ಲದ ಮರಡಿ ಗ್ರಾಮ ಮಸ್ಕಿ ತಾಲ್ಲೂಕು ಸೀಮೆಗಳು ಅಸ್ತಿತ್ವದಲ್ಲಿದ್ದವು. ಅಪ್ರಕಟಿತ ಶಾಸನಗಳ ಕುರಿತು ಸಂಕ್ಷಿಪ್ತ ವಿವರಗಳು.

೧. ಗೋನವಾರ ಗ್ರಾಮದ ಮೌನೇಶ್ವರ ದೇವಾಲಯದ ನವರಂಗದ ಬಿತ್ತಿಯಲ್ಲಿ ಜೋಡಿಸಿದ ಶಾಸನ

೧. ಶ್ರೀ . . . .
೨. ಬೀರಲಿಂಗಪ್ಪ
೩. ಶ್ರೀಶಕ ೧೬೧೩ನೇ ಸ್ಥಾ . .
೪. ಬೀರಲಿಂಗ ದೇವರಿನ . .
೫. ಅರ್ಚಕರಾದ ಕುರುಬ
೬. ಗೊಲ್ಲರಿಗೆ ಪಕ್ಕತಿ . . .
೭ ಯರಿಗೆ ಜಗ ಬಿಟ್ಟ
೮. ಗುಡಿಯೊಳಗಿನ ಬೀರಲಿಂಗ
೯. ದೇವನು । ವಡರು ಪಡುವಲು
೧೦. ದಿಕ್ಕಿಗೆ ಇತ್ತರು । ಅಜಗ
೧೧. ಡದಿಂದ ಬೀರಲಿಂಗ . . . .
೧೨. ಸ್ಥಾಪನಾನಿಂತಿತು
೧೩. ಲಿಂಗ ಪಡುಕಿ . . .
೧೪. ಸ್ಥಾಪನಾ ಗೈಯಿರಿ

ಈ ಶಾಸನದಲ್ಲಿ ಶಾಲಿವಾಹನ ಶಕವರ್ಷ ೧೬೧೩ ಎಂದಿದ್ದು ಇದಕ್ಕೆ ೭೮ನ್ನು ಸೇರಿಸಿದರೆ ಕ್ರಿ.ಶ. ೧೬೯೧ರ ಕಾಲಘಟ್ಟಕ್ಕೆ ಸೇರುತ್ತದೆ. ಇದರಲ್ಲಿ ಬೀರಲಿಂಗ ದೇವರ ಅರ್ಚಕರಾದ ಕುರುಬ ಗೊಲ್ಲರಿಗೆ ದತ್ತಿ ಬಿಟ್ಟ ಉಲ್ಲೇಖವಿದೆ.

೨. ಅದೇ ಗ್ರಾಮದ ದುರುಗಮ್ಮ ದೇವಾಲಯದ ಹಿಂಬದಿಯಲ್ಲಿರುವ ಶಾಸನ

೧. ಪ್ರಮಾಥಿ ಸಂ॥ ೨. ಆಷಾಡ ಬ॥ ೧೫ ೩. ವ॥ ನಾ॥ ವ॥ ಗೌ॥

ಈ ಶಾಸನದಲ್ಲಿ ಪ್ರಮಾಥಿ ಸಂವತ್ಸರ ಆಷಾಡ ಬಹುಳ ೧೫ ಎಂದಿದೆ. ಇದು ೧೮-೦೭-೧೮೭೨ ಬುದುವಾರಕ್ಕೆ ಸಮನಾಗುತ್ತಿದ್ದು, ವಸಮನಿ ನಾಗನಗೌಡ ವಕ್ಕಲಿಗ (ಒಕ್ಕಲಿಗ)ಗೌಡನೆಂದು ತಿಳಿಸುತ್ತದೆ. ಪ್ರಸ್ತುತ ಗೋನವಾರ ಗ್ರಾಮದಲ್ಲಿ

* ಇ.ಸ.ಪ್ರಾ., ದೇವನಾಂಪ್ರಿಯ ಅಶೋಕ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಸ್ಕಿ, ರಾಯಚೂರು ಜಿಲ್ಲೆ, ಮೊ. ೯೯೭೨೨ ೨೭೨೪೮

ನೆಲೆಸಿರುವ ಲಿಂಗಾಯತ ಜನಾಂಗದ ನಾಗನಗೌಡನ ಮುತ್ತಾತನ [೪ನೇ ತಲೆಮಾರು] ಹೆಸರೆಂದು ತಿಳಿದುಬರುತ್ತದೆ. ಶಾಸನೋಕ್ತ ಒಂದನೇ ನಾಗನಗೌಡನು ಅಂದಿನ ದಿನಗಳಲ್ಲಿ ಗೋನವಾರ ಗ್ರಾಮದ ಗೌಡಿಕೆಯನ್ನು ಮಾಡುತ್ತಿರಬೇಕು. ಗ್ರಾಮೀಣ ಜನರ ಭಾಷೆಯಲ್ಲಿ ಈ ಶಾಸನವು ಬರೆಸಲ್ಪಟ್ಟಿದ್ದು, ಆದುದರಿಂದ ವ ಅಂದರೆ ವಸಮನಿ > ಹೊಸಮನಿ ಎಂದಾಗುತ್ತದೆ. ಹಾಗೆಯೇ ಬಹುಳ ೧೫ ಎಂದರೆ ಅಮವಾಸ್ಯೆ.

ಶಾಸನದಲ್ಲಿ ಉಲ್ಲೇಖಗೊಂಡ ನಾಗನಗೌಡನ ವಂಶಾವಳಿ ಬೇರೆ ಮಾಹಿತಿಯಿಂದ ಹೀಗಿದೆ

ಒಂದನೇ ನಾಗನಗೌಡನ ಮಗ ಅಮರೇಗೌಡ ಅವನ ಮಗ ತಿಮ್ಮನಗೌಡ, ಇವನ ಮಗನೇ ಇಮ್ಮಡಿ ನಾಗನಗೌಡ ಎಂದು ತಿಳಿಯಬಹುದು.

೩. ಅದೇ ಗ್ರಾಮದ ಊರು ಹೊರಗೆ [ಸಂತೆಕೆಲೂರ ದಾರಿಯಲ್ಲಿ] ಬಸವಣ್ಣ ದೇವಾಲಯದ ಮುಂದೆ ಇರುವ ಶಾಸನ

೧. ಶ್ರೀ ಶಾ॥
೨. ಶ॥ ೧೮೭೭

ಇದರಲ್ಲಿ ಶಾಲಿವಾಹನ ಶಕವರ್ಷ ೧೮೭೭ ಎಂದಿದ್ದು, ಇದಕ್ಕೆ ೭೮ನ್ನು ಸೇರಿಸಿದರೆ ಕ್ರಿ.ಶ. ೧೯೫೫ಕ್ಕೆ ಸರಿ ಹೊಂದುತ್ತದೆ.

೪. ಮೆದಿಕಿನಾಳ ಗ್ರಾಮದ ಪೂರ್ವದಿಕ್ಕಿಗೆ ಭೀಮಪ್ಪ ತಂದೆ ತಿಮ್ಮಣ್ಣ ಕೊರವರ್‌ರವರ ಜಮೀನಿನ [ಸರ್ವೆ ನಂಬರ್-೧೧೭ ಚಿನ್ನಕ್ಕಿನ ಕೆರೆ ಹತ್ತಿರ] ಕರಿಮರಡಿಯಲ್ಲಿನ ಹುಟ್ಟು ಬಂಡೆಗಲ್ಲಿಗೆ ಇರುವ ಶಾಸನ

೧. ನಾಡಗೌಡ
೨. ಲಿಂಗನಗೌ
೩. ಡನವರು
೪. ಸೋಮೊ ನಾಮ ಸೀಮಾಂತ್ರಲ್ಲಿ
೫. ಮೆದಿಕಿನಹಾಳ ಮಸಿಗಿಹೊಳಿ
೬. ಬಾಲ್ಲಮೇರೆ ಸೀಮೆ
೭ ಂತ್ರದಲ್ಲಿರೊವಲವು

ಈ ಶಾಸನವು ಕ್ರಿ.ಶ. ೧೮-೧೯ನೇ ಶತಮಾನಕ್ಕೆ ಸೇರುತ್ತಿದ್ದು ಮೆದಿಕಿನಾಳ ನಾಡಗೌಡ ಲಿಂಗನಗೌಡರ ಜಮೀನು [ಹೊಲ] ಮಸಿಗಿ ಹೊಳೆ [ಪ್ರಸ್ತುತ ಮಸ್ಕಿ ಪಟ್ಟಣ ತಾಲ್ಲೂಕು ಕೇಂದ್ರ] ಬೆಲ್ಲದ ಮರಡಿ ಸೀಮೆಯಲ್ಲಿ ಇದ್ದಿತೆಂಬ ವಿಷಯವಿದೆ.

೫. ವೆಂಕಟಾಪುರ ಗ್ರಾಮದ ಉಪ್ಪಿನಹಳ್ಳದ ಬಲ ದಂಡೆಯ (ದಕ್ಷಿಣ) ಜಮೀನಿನ (ಸರ್ವೆ ನಂಬರ್-೧೪) ಲ್ಲಿರುವ ಶಾಸನ

೧. ಕರಸ್ತಲ್ಲದ ದೇವರು

ಈ ಶಾಸನವು ಕಣಶಿಲೆಯ ಗುಂಡಿಗೆ ಇದ್ದು, ಕ್ರಿ.ಶ. ೧೭-೧೮ನೇ ಶತಮಾನಕ್ಕೆ ಸೇರುತ್ತದೆ. ಇದರಲ್ಲಿ ಉಲ್ಲೇಖಗೊಂಡ ಕರಸ್ಥಲ ದೇವರು ಎಂಬ ಪದವು ಕ್ರಿ.ಶ. ೧೨ನೇ ಶತಮಾನದ ವಚನಕಾರನಾದ ನಾಗಿದೇವನ ವಚನಾಂಕಿತವಾಗಿದೆ. ಶರಣರ ವಚನಗಳು ಮತ್ತು ಅಂಕಿತನಾಮಗಳನ್ನು ಪ್ರಸ್ತುತ ದಿನಗಳವರೆಗೆ ಶಿಲೆ, ತಾಮ್ರಪಟ, ಕಂಚಿನ ಪಟಗಳಲ್ಲಿ ಕೆತ್ತನೆಗೊಂಡಿರುವುದು ಬಹಳ ಅಪರೂಪವೆಂದೇ ಹೇಳಬೇಕಾಗುತ್ತದೆ.

ಕ್ರಿ.ಶ. ೧೨ನೇ ಶತಮಾನದಲ್ಲಿ ಶರಣರು ಕಾಯಕ ಮತ್ತು ದಾಸೋಹಕ್ಕೆ ಪ್ರಾಮುಖ್ಯತೆ ನೀಡಿದಂತೆ ಶಿವಪೂಜೆಗೂ ಅಷ್ಟೇ ಪ್ರಾಮುಖ್ಯತೆ ಕೊಟ್ಟರು ಶರಣರು ಕರಸ್ತಲದೇವನನ್ನು ಅಂಗೈದೇವ, ಲಿಂಗದೇವ, ಈಶ್ವರ ಲಿಂಗವೆಂಬ ಪರ್ಯಾಯ ಅರ್ಥದಲ್ಲಿ ಕರೆದರು. ಅಂದರೆ ಅಂಗೈಯಲ್ಲಿರುವ ಶಿವಲಿಂಗವನ್ನು ಕರಸ್ತಲ ದೇವ ಎಂದು ಸಂಬೋಧಿಸಿದರು.

ಹಾಗೆಯೇ ಕರಸ್ಥಲದ ನಾಗಿದೇವನು ಕ್ರಿ.ಶ. ೧೫ನೆಯ ಶತಮಾನದಲ್ಲಿ ಕಾಣಿಸಿಕೊಳ್ಳುವ ನೂರೊಂದು ವಿರಕ್ತರಲ್ಲೊಬ್ಬನಾಗಿದ್ದಾನೆ.

ಒಟ್ಟಿನಲ್ಲಿ ಹೇಳುವುದಾದರೆ ಈ ಶಾಸನವು ವೆಂಕಟಾಪುರ ಗ್ರಾಮದ ಜಂಗಮ ಜನಾಂಗದವರಿಗೆ ಇಲ್ಲಿನ ಸಾಮಂತ ಅರಸರು, ಗೌಡರು ಗ್ರಾಮದಲ್ಲಿನ ದೇವರುಗಳ ಪೂಜೆ-ಪುನಸ್ಕಾರಗಳ ಸಲುವಾಗಿ ಜಮೀನನ್ನು ದತ್ತಿಕೊಟ್ಟು ಅದರ

ಮೇರೆ ಗುರುತಿಸುವುದಕ್ಕೆ ನಾಲ್ಕು ಮೂಲೆಗಳಲ್ಲಿ ಲಿಂಗಮುದ್ರೆಕಲ್ಲು ಹಾಕಿಸುವುದು ಅಂದಿನ ದಿನಗಳಲ್ಲಿ ವಾಡಿಕೆಯಾಗಿತ್ತು. ಆದರೆ ಇಲ್ಲಿನ ಜಮೀನಿನಲ್ಲಿ ನಾಲ್ಕು ಲಿಂಗ ಮುದ್ರೆ ಕಲ್ಲುಗಳಿರದೆ ಪ್ರಸ್ತುತ ಕೇವಲ ಒಂದೇ ಕಲ್ಲು ಕಾಣಬರುತ್ತದೆ.

೬. ದಬ್ಬೇರಮಢು ಗ್ರಾಮದ ಹನುಮಂತ ದೇವಾಲಯದ ಬಲಬದಿ[ಪಶ್ಚಿಮ]ಯಲ್ಲಿರುವ ಶಾಸನ

೧. ಯಭಟ್ಟಗ್ರರಂಣ
೨. ಲಯರಸ ೧ ರೌಬ್ಬಟ
೩. ತಪ್ಪಿದವರ ಬಾಯಿಗೆ
೪. ಕತ್ತೆ ತುಂಣಿ ಕಳ್ಳ
೫. ಮೊಗೆ

ಈ ಶಾಸನವು ಕ್ರಿ.ಶ. ೧೬-೧೭ನೇ ಶತಮಾನಕ್ಕೆ ಸೇರಿದ ಶಾಸನವಾಗಿದ್ದು, ಕಣಶಿಲೆಯಲ್ಲಿದೆ. ಇದರಲ್ಲಿ ಬಟ್ಟರಹಳ್ಳಿಯ . . . ರೌಬ್ಬಟ ಎಂಬಾತನ ಉಲ್ಲೇಖವಿದ್ದು, ನಂತರ ಅವಾಚ್ಯ ಶಬ್ದಗಳಿಂದ ಶಾಪಾಶಯವನ್ನು ಹಾಕಿಸಲಾಗಿದೆ.

೭. ಅದೇ ಹನುಮಂತ ದೇವಾಲಯದ ಎಡಬದಿ [ಪೂರ್ವ]ಯಲ್ಲಿರುವ ಶಾಸನ

೧. ಯ ಭ...
೨. ಪಾಲಮರ
೩. ತಪ್ಪಿದವರ ಬಾ[ಯಿಗೆ]
೪. [ಕ]ತ್ತೆ ತುಂ[ಣಿ]

ಈ ಶಾಸನವು ಕ್ರಿ.ಶ. ೧೬-೧೭ನೇ ಶತಮಾನಕ್ಕೆ ಸೇರಿದ ಶಾಸನವಾಗಿದ್ದು, ಕಣಶಿಲೆಯಲ್ಲಿ ರಚಿತಗೊಂಡಿದೆ. ಇಲ್ಲಿಯೂ ಕೂಡ ಅಸ್ಪಷ್ಟ ಭಟ್ಟರ ಹಳ್ಳಿಯ ಉಲ್ಲೇಖದೊಂದಿಗೆ ಆಲದಮರ (ಪಾಲಮರ)ದ ಪ್ರಸ್ತಾಪವಿದೆ. ಹಾಗೆಯೇ ಕೆಟ್ಟ ಪದಗಳಿಂದ ಶಾಪಾಶಯವನ್ನು ಹಾಕಿಸಲಾಗಿದೆ.

೮. ಕಾಚಾಪುರ ಗ್ರಾಮದ ಊರ ಹೊರಗೆ ಮಾರುತಿ ದೇವಾಲಯದ ಸ್ತಂಭಕ್ಕೆ ಇರುವ ಶಾಸನ

೧. ಓ ನಮಃ ಶಿವಾಯ
೨. ಶ್ರೀ ಮತು [ವ್ಯಯ]
೩. ಸಂವತ್ಸರದ ಬಾ
೪. ದ್ರ ಪದ ಸು ೧೯
೫. ಗುರುವಾರದ
೬ ಲು ಶ್ರೀ ಮಂ
೭ ನ್ಮಹಾ ನಾಯ್ಕ
೮ ಚಾರ್ಯಗುಜ್ಜ
೯. ಲ ಯಿಂಮ್ಮ
೧೦. ಡಿ ಪರ್ಸಿನಾ
೧೧. ಯ್ಕ ವಡೆಯ
೧೨. ರ ನಿರೂಪ
೧೩. ದಲಿ ಸಂಖ [ಬೀ]
೧೪. ರೆಯ ಗಡದ
೧೫. ಮಲೆಯ ಹ
೧೬. ಡಪದ ಮುದ್ಯೆ
೧೭. ಗಳು . . .

ಈ ಶಾಸನವು ಗರುಢ ಸ್ತಂಭಕ್ಕೆ ರಚಿಸಲ್ಪಟ್ಟಿದ್ದು, ಹದಿನೇಳು ಸಾಲುಗಳಿವೆ. ಇದರ ಮೇಲ್ಭಾಗದಲ್ಲಿ ನಂದಿ, ಈಶ್ವರಲಿಂಗದ ಶಿಲ್ಪಗಳಿವೆ. ಇದು ಶೈವಶ್ಲೋಕವಾದ ಓಂ ನಮಃ ಶಿವಾಯ ಎಂದು ಪ್ರಾರಂಭವಾಗುತ್ತದೆ. ನಂತರ ಶ್ರೀಮತು ವ್ಯಯ ಸಂವತ್ಸರದ ಬಾದ್ರಪದ ಸು ೧೯ ಗುರುವಾರವೆಂದಿದ್ದು ೨೬-೦೮-೧೪೬೬ರಕ್ಕೆ ಸಮನಾಗುತ್ತದೆ. ಇದನ್ನು ಶ್ರೀ ಮನ್ಮಹಾನಾಯಕಾಚಾರ್ಯ ಗುಜ್ಜಲ ವಂಶದ ಇಮ್ಮಡಿ ಪರ್ಸಿನಾಯಕ ವಡೆಯರು ಬರೆಸಿದ ನಿರೂಪವೆಂದಿದೆ. ಇವರು ಸಂಕ ಬೀರೆಯ ಗಡದ [ಪ್ರಸ್ತುತ ಅಮೀನಗಢ ಗ್ರಾಮ ಮಸ್ಕಿ ತಾಲ್ಲೂಕು] ಮಲೆಯ ಹಡಪದ ಮುದ್ಯೆಯಗಳೆಂದು ಪ್ರಸ್ತಾಪಿಸುತ್ತದೆ. ಶಾಸನದಲ್ಲಿ ಉಲ್ಲೇಖಗೊಂಡ ಇಮ್ಮಡಿ ಪರ್ಸಿನಾಯಕನು ಪ್ರಸ್ತುತ ಅಮೀನಗಢದ ಸುತ್ತಲಿನ ಪ್ರದೇಶವನ್ನು ವಿಜಯನಗರ ಸಾಮ್ರಾಟರ ಕಾಲಾವಧಿಯಲ್ಲಿ ಸಾಮಂತ ಅರಸನಾಗಿ ಆಳ್ವಿಕೆ ಮಾಡುತ್ತಿರಬೇಕು.

೯. ಮಸ್ಕಿ ಪಟ್ಟಣದ ಬೆಟ್ಟದ ಚೌಡೇಶ್ವರಿ ದೇವಾಲಯದ ಬಲಬದಿಯ (ದಕ್ಷಿಣ)ನವರಂಗದ ಹೊರಬಿತ್ತಿಗೆ ಜೋಡಿಸಿರುವ ಕಪ್ಪು ಶಿಲೆಯ ಶಾಸನ

೧. ಸ್ವಸ್ತಿ ಸಮಸ್ತಭುವನಾಶ್ರಯ ಶ್ರೀ ಪೃಥ್ವೀ
೨. ವಲ್ಲಭ ಮಹಾರಾಜಾಧಿರಾಜ ಪರಮೇಶ್ವರ ಪ
೩. ರಮ ಭಟ್ಟಾರಕಂ ಸತ್ಯಾಶ್ರಯ ಕುಳತಿ
೪. ಳಕಂ ಚಾಳುಕ್ಯಾಭರಣಂ ಶ್ರೀ ಮಧ್ಭುವನ್ಯೆ

೫. ಕಮಲ್ಲದೇವರ್ನ್ನಿಜ ವಿಜಯ ರಾಜ್ಯ ಮುತ್ತರೋತ್ತ	೬. ರಾಭಿವೃದ್ಧಿ ಪ್ರವರ್ಧ ಮಾನಮಾ ಚಂದ್ರಾರ್ಕ

೭. ತಾರಂಬರಂ ಸಲ್ಲುತ್ತಮಿರೆ ಕಿರುದೊರೆಯ	೮. ತಡಿಯ ಕಕ್ಕರಗೊಳದುಪ್ಪಯಣವೀಡಿನೊಳ್

೯. ಸಕವರ್ಷ ೯೯೩ನೆಯ ವಿರೋಧ ಕೃತ್ಸಂವತ್ಸ	೧೦. ರದ ವೈಶಾಖದ ಪುಣ್ಣಮೆ ಆದಿತ್ಯವಾ

೧೧. ರದಂದು ವ್ಯತೀಪಾತ ನಿಮಿತ್ತದಿಂ ಮೂ	೧೨. ವಡಿಯರಂ ದಂಡನಾಯಕಂ ಮಲ್ಲಯ್ಯ ಭಟಾರನ

೧೩. ಭಿನ್ನಪದೊಳಂ ಪ್ರಧಾನಂ ದಂಡನಾಯಕ ನೀಶ್ವರ	೧೪. ಭಟ್ಟರ ಸಾಧಿಷ್ಮತದೊಳಂ ಹೇರಿಲಾಳಸಂದಿವಿಗ್ರ

೧೫. ಹಿ ದಂಡನಾಯಕ ರವಿಯಣ ಭಟ್ಟರ್ಗ್ಗೆಸಮ	೧೬. . . . . . ಬೆಸಸಿ ರಾಜಧಾನಿ ಪಿರಿಯ ಮೊಸಂಗಿ

೧೭. . . . . ತೆಂಕವೊಲದ ನಾಗರಕೆರೆ ಪೆರಗೆ	೧೮. . . . . ಯೆಡೆವೊಲದಲ್ಲಿ ಮಾಧವ . . . .

ಶಾಸನದ ಮೇಲೆ ಬರೆದಿರುವುದು

೧೯. ಕೆಯೊಳಗೆ ತಳಾರ ಬಿಳಿಯ ಬೋವ ಕಾಟೆಬೋವ ಮಳವೆ	೨೦. ಗಂ ಮತ್ತ ೯॥

ಈ ಶಾಸನದಲ್ಲಿ ಕಾಲವು ಶಕವರ್ಷ ೯೯೩ ವಿರೋಧಿಕೃತ್ ವೈಶಾಖ ಪುಣ್ಣಮೆ ಆದಿತ್ಯವಾರವೆಂದಿದ್ದು, ಇದು ಕ್ರಿ.ಶ. ೧೭-೦೪-೧೦೭೧ರ ಕಾಲಕ್ಕೆ ಸಮನಾಗುತ್ತದೆ.

ಕಲ್ಯಾಣ ಚಾಳುಕ್ಯ ಅರಸ ಭುವನೈಕಮಲ್ಲದೇವನು ರಾಜ್ಯಭಾರ ಮಾಡುತ್ತಿದ್ದು ಕಿರುದೊರೆ [ತುಂಗ ಭದ್ರಾ ನದಿ] ದಡದಲ್ಲಿನ ಕಕ್ಕರಗೋಳದಲ್ಲಿ ಬೀಡು ಬಿಟ್ಟಿದ್ದಾಗ ಮೂವಡಿಯರ ದಂಡನಾಯಕ ಮಲ್ಲಯ್ಯ ಭಟಾರನ ಭಿನ್ನಪದಂತೆ ಹೇರಿಲಾಳ ಸಂದಿ ವಿಗ್ರಹಿ ದಂಡನಾಯಕ ರವಿಯಣಭಟ್ಟನು ರಾಜಧಾನಿ ಪಿರಿಯ ಮೊಸಂಗಿಯ ಬಳಿಯ ನಾಗರಕೆರೆಯ ಬಳಿ ಭೂದಾನ ನೀಡಿದಂತೆ ತಿಳಿಯುತ್ತದೆ. ಭೂದಾನ ನೀಡಿದ ವಿವರವು ತೃಟಿತಗೊಂಡಿದೆ. ಆದರೆ ಶಾಸನದ ಕೊನೆಯ ಎರಡು ಸಾಲುಗಳನ್ನು ಶಾಸನದ ಮೇಲೆ ಬರೆಸಲಾಗಿದ್ದು, ಶಾಸನದ ಕೊನೆಯ ಭಾಗದಲ್ಲಿ ಸ್ಥಳಾವಕಾಶವಿಲ್ಲದಿದ್ದುದರಿಂದ ರೂವಾರಿ ಈ ಕ್ರಮ ಕೈಗೊಂಡಿರಬೇಕು. ಈ ಎರಡು ಸಾಲುಗಳಲ್ಲಿ ತಳಾರ ಬಿಳಿಯ ಬೋವ ಮತ್ತು ಕಾಟಬೋವ ಎಂಬ ವ್ಯಕ್ತಿಗಳ ಪ್ರಸ್ತಾಪವಿದೆ.

೧೦. ಅದೇ ಪಟ್ಟಣದ ಬೆಟ್ಟದ ಮಲ್ಲಿಕಾರ್ಜುನ ದೇವಾಲಯದ ಮೆಟ್ಟಿಲುಗಳಲ್ಲಿರುವ (ಉತ್ತರ) ಶಾಸನ

೧. ನೆಲ್ಲಿದಿಗೆ ಚನಪ್ಪನ ಕಟ್ಟೆ ಡೊಮಗಸಿಪ್ಪ

ಇದು ಕ್ರಿ.ಶ. ೧೭-೧೮ನೇ ಶತಮಾನಕ್ಕೆ ಸೇರುತ್ತಿದ್ದು ಇದರಲ್ಲಿ ನೆಲ್ಲಿದಿಗೆ ಚನ್ನಪ್ಪನೆಂಬಾತನು ಬೆಟ್ಟದ ಮಲ್ಲಿಕಾರ್ಜುನ ದೇವಾಲಯಕ್ಕೆ ಹೋಗುವ ದಾರಿಯಲ್ಲಿ ಕಟ್ಟೆ (ವೇದಿಕೆ, ಜಗಲಿ) ಕಟ್ಟಿಸಿದನೆಂದು ಉಲ್ಲೇಖಿಸುತ್ತದೆ. ಆದರೆ ಈ ಕಟ್ಟೆಯನ್ನು ಚನ್ನಪ್ಪನು ಯಾವ ಕಾರಣಕ್ಕೆ ಕಟ್ಟಿಸಿದನೆಂಬುದು ನಿಗೂಢವಾಗಿದೆ.

೧೧. ಅದೇ ಪಟ್ಟಣದ ಕಲ್ಗುಡಿ ಚೌಡೇಶ್ವರ ದೇವಾಲಯದ ಗರ್ಭಗೃಹದ ತೊಲೆಗೆ ಆಸರೆಯಾಗಿ ಜೋಡಿಸಿದ ಸ್ತಂಭದಲ್ಲಿರುವ ಶಾಸನ

೧. ಭವನಾಮ ಸಂವತ್ಸರದ	೨. ಚಯಿತ್ರ ಸುದ್ಧ ೧೧ ಲು

೩. ಜಲಿಯ ಹಾಳ ಹ	೪. ಟ ಗುರು ಕರಡಿ ಸಿದ್ದಿ

೫. ಯ ಮಗ ಗಡದ ಮ	೬. ಸುರಪ್ಪನು ಪ್ರತಿಷ್ಟೆ

೭. ಯ ಮಾಡಿದನು ಬಿ	೮. ಯ ತಂಬಲು ಖಂಡರಿ

೯. ಸಿದ ಅಮಿತ ವೀರಯನು

ಈ ಶಾಸನವು ಇರುವ ಚೌಡೇಶ್ವರಿ ದೇವಾಲಯವು ಮೂಲದಲ್ಲಿ ಜೈನ ಬಸದಿಯೆಂದು ತಿಳಿದು ಬರುತ್ತದೆ. ನಂತರದ ದಿನಗಳಲ್ಲಿ ಇದು ಶೈವದೇವಾಲಯವಾಗಿ ಈಶ್ವರ, ನಂದಿ ವಿಗ್ರಹಗಳಿವೆ. ಇವುಗಳ ಆನಂತರದ ದಿನಗಳಲ್ಲಿ ಕಲ್ಗುಡಿ ಚೌಡೇಶ್ವರಿ ದೇವಾಲಯವಾಗಿ ಪರಿವರ್ತಿತವಾಗಿದೆ. ಪ್ರಸ್ತುತ ಇಲ್ಲಿ ಒಂಬತ್ತು ಸಾಲಿನ ಕ್ರಿ.ಶ. ೧೫-೧೬ನೇ ಶತಮಾನದ ಶಾಸನವಿದೆ. ಇದರಲ್ಲಿ ಭವನಾಮ ಸಂವತ್ಸರದ ಚೈತ್ರ ಶುದ್ಧ ಜಲಿಹಾಳ (ಪ್ರಸ್ತುತ ಸಿಂಧನೂರು ತಾಲ್ಲೂಕಿನ ಜಾಲಿಹಾಳ ಗ್ರಾಮ) ಹಟಗುರುವಾದ ಕರಡಿಸಿದ್ದ ಎಂಬಾತನ ಮಗನಾದ ಗಡದಮ ಸೂರಪ್ಪನೆಂಬುವಾತನು ಇಲ್ಲಿಯ ದೇವರುಗಳನ್ನು

(ಈಶ್ವರಲಿಂಗ, ಬಸವಣ್ಣ?) ಪ್ರತಿಷ್ಠೆ ಮಾಡಿದನು. ಹಾಗೆಯೇ ಶಾಸನವನ್ನು ಬರೆದಾತ ಬಿಯತುಂಬಲು ಎಂಬುವವನಾಗಿದ್ದು, ಇದನ್ನು ಖಂಡರಿಸಿದವನು ಅಮಿತವೀರಯ್ಯನಾಗಿದ್ದಾನೆ.

೧೨. ಸಂತೆಕೆಲೂರ ಗ್ರಾಮದ ಬೀರಲಿಂಗೇಶ್ವರ ದೇವಾಲಯದ ಮುಂಬದಿಯಲ್ಲಿರುವ ವೀರಗಲ್ಲು ಶಾಸನ

೧. ಜಂಗಾ ತಿಂ ೨. ಮಯ್ಯ

ಇದು ವೀರಗಲ್ಲು ಶಾಸನವಾಗಿದ್ದು, ಕ್ರಿ.ಶ. ೧೫-೧೬ನೇ ಶತಮಾನಕ್ಕೆ ಸೇರುತ್ತದೆ. ಇದರಲ್ಲಿ ವೀರನ ಹೆಸರು ಜಂಗಾ ತಿಮ್ಮಯ್ಯನೆಂದು ತಿಳಿದುಬರುತ್ತದೆ.

೧೩. ದಿಗ್ ನಾಯಕನ ಬಾವಿ (ದಿನ್ನೆಬಾವಿ) ಗ್ರಾಮದ ಊರಹೊರಗೆ (ಪೂರ್ವ) ಯಮನಗೌಡ ತಂದೆ ತಿಮ್ಮನಗೌಡರವರ (ಸರ್ವೆ ನಂಬರ್-೩೧/ಪೊ-೦೧/೦೨) ಜಮೀನಿನಲ್ಲಿರುವ ಶಾಸನ

೧. [ನಮಸ್ತುಂಗ ಶಿ]ರ ಶ್ಚುಂಬಿ ಚಂದ್ರಚಾಮರ ಚಾರವೇ ತ್ರೈಳೋಕ್ಯ ನಗರಾರಂಭ ಮೂಲ
೨. [ಸ್ತಂಬಾಯ] ಶಂಭವೇ॥ ಸ್ವಸ್ತಿ ಸಮಸ್ತ ಭುವನಾಶ್ರಯ ಶ್ರೀ ಪೃಥ್ವೀ
೩. [ವಲ್ಲಭ ಮಹಾ]ರಾಜಾಧಿರಾಜ ಪರಮೇಸ್ವರ ಪರಮಭಟ್ಟಾರಕಂ ಸತ್ಯಾ
೪. [ಶ್ರಯ ಕುಳತಿಳ] ಕಂ ಚಾಳುಕ್ಯಾಭರಣಂ ಶ್ರೀಮತ್ರಿಭುವನಮಲ್ಲದೇವರ
೫. [ವಿಜಯ ರಾಜ್ಯ ಮು]ತ್ತರೋತ್ತರಾಭಿವೃದ್ಧಿ ಪ್ರವರ್ದ್ಧಮಾನ ಮಾಚಂದ್ರಾರ್ಕ್ಕ ತಾರಂಬರಂ
೬ [ಸಲ್ಲುತಮಿ]ರೆ ಶ್ರೀಮತ್ಕುಮಾರನಾಹವಮಲ್ಲದೇವರು ಶ್ರೀ ಮನ್ಮಹಾ ಪ್ರ
೭ . . . .[ಕ]ನ್ನಡ ಸನ್ಧಿ ವಿಗ್ರಹಿ ಪಿರಿಯದಣ್ಡನಾಯಕಂ ಕಾಟಿಮರಸರ
೮. . . . . .ಕಾಟಿಂಗಲ್ಲ ಸುಖದಿನಾಳುತ್ತಮಿರೆ ಸ್ವಸ್ತಿ ಶ್ರೀ ಚಾಳುಕ್ಯ ವಿಕ್ರಮ ವರ್ಷದ
೯. [೨೯ನೆಯ ವ್ಯ]ಯ ಸಂವತ್ಸರದ ಪುಶ್ಯಬಹುಳ ೧೪ ಆದಿವಾರದಂದುತ್ತ
೧೦. [ರಾಯಣ ಸಂ]ಕ್ರಾನ್ತಿ ಪರ್ಬ್ಬ ನಿಮಿತ್ತಂ ಶ್ರೀ ಮತ್ಕುಮಾರನಾಹವಮಲ್ಲದೇವರುಂ ಬ
೧೧. . . . . [ದಂಡ] ನಾಯಕಂ ಕಾಟಿಮರಸರುವಿರ್ದ್ದು ಪಿರಿಯಪಳ್ಳಿಯ ಅಜ್ಜೇಸ್ವರದೇವ
೧೨. . . . . .ಸುಮತ್ತ ಮೂರು ತೀರ್ತದ ರಾಮೇಶ್ವರದೇವರ್ಗ್ಗೆ ಮತ್ತರೆರಡುಗದ್ದೆ
೧೩. . . . . .ರಾರು ಪಿರಿಯ ಹೊಸಗೆರಗೆ ಮತ್ತರೆಂಟು ಕಾಟಿಂಗಲ್ಲ ಕಲಿದೇವರಿಗೆ ನಿ
೧೪. . . . . .ಕ್ಕ ಹೊಸಗೆರೆಯ ಬಡಗಣ ಗದ್ದೆ ಕಮ್ಮಂ ಮೂನೂರು ಕಟ್ಟೆಯ ಕೆರೆಗೆ
೧೫. . . . . .[ಮ]ತ್ತರೆರಡು ಸೇನಬೋವ ಬಾವಿಮಯ್ಯನ ಕೆರೆಗೆ ಮತ್ತರೆರಡು ಅನ್ತನಿತಕಂ
೧೬. . . . . .ಹೊಸಗೆರೆಯ ಕೋಡಿಯಿಂ ಪಡುವಲು ಬಿಟ್ಟ ಕಿಸುಮತ್ತರು ೦೧ ಪೂವಿನತೋಂಟಕೆ
೧೭. . . . .[ಕ]ಮ್ಮದಿನ್ನೂರು ॥ ॥ ಸಾಮಾನ್ಯೋಯಂ ಧರ್ಮ್ಮಸೇತುಂ ನ್ರಿಪಾಣಾಂ ಕಾಲೇ ಕಾಲೇ ಪಾಲನಿ
೧೮. ಯೋ ಭವ[ದ್ಭಿ] ಭೂಯೋ ಭೂಯೋ ಯಾಚತೇ ರಾಮಚಂದ್ರ ॥ ಬಹುಭಿರ್ವ್ವ
೧೯. ಸುಧಾ ಭುಕ್ತಾ ರಾಜಭಿಸ್ಸಗರಾದಿಭಿಃ ಯಸ್ಯ ಯಸ್ಯ ಯದಾ ಪಾಥ್ವ [ಪೃಥ್ವಿ]ತಸ್ಯ ತ
೨೦. ಸ್ಯ ತದಾಫಲಂ ॥ ಸ್ವದತ್ತಂ ಪರದತ್ತಂ ವಾಯೋ ಹರೇತಿ ವಸುನ್ಧ
೨೧. ರಾ ಶರ್ಷ್ಟಿ ರ್ವರ್ಷ ಸಹಶ್ರಾಣಿ ಮಿಷ್ಟಾಯಾಂ ಜಾಯತೇ ಕ್ರಿ ಮಿ @ ಈ ದ
೨೨. ರ್ಮ್ಮಮನಾವನೋರ್ವ ನಳಿದವಗೆ ಸೇವಾ ತಾಸಿ [ಕಾಸಿ] ಕುರುಕ್ಷೇತ್ರದೊಳು ಕವಿಲೆಯುಂ
೨೩. ಬ್ರಾಹ್ಮಣರು ಮನಳಿದ ದೋಷ ಈ ಧರ್ಮಮಂ ಪ್ರತಿಪಾಳಿಸಿದಂತೆ ಸಾಯಿರ ಕವಿಲೆಯ
೨೪. ಕೋಡುಂ ಕೊಳಗುವಂ ಪೊನ್ನೊಳು ಕಟ್ಟಿಸಿ ವೇದಪಾರಗ ಬ್ರಾಹ್ಮಣರ್ಗ್ಗೆ ದಾನವ ಕೊಟ್ಟ ಫ
೨೫. ಳವಕ್ಕು ಮಂಗಳ ಮಹಾಶ್ರೀ ಶ್ರೀಮತ್ರಿಪುರಾನ್ತಕದೇವ ಪಾದಾರಾಧಕಂ

೨೬. ಪೆರ್ಗ್ಗಡೆ ನಾಗಿಯಣ್ಣ ॥ ಮಹಿಪೊಗಳೆ ದಣ್ಣನಾಯಕಂ ಪಿತಾಮ

೨೭. ಹಂ ಬಿಟ್ಟ ರಾಜನಭಿವೃದ್ಧಿಗೆ ಸನ್ನದಿನಿತ ಸಾಸನಮಂ ಬರೆವನ್ತ ಹರ್ಣ್ಣಿ

೨೮. ಶಂ ನಾಗರಾಜನೆಸೆದಿರೆ ಬರೆದಂ @

ಈ ಶಾಸನವು ೨೬-೧೨-೧೧೧೬ ಸೋಮವಾರಕ್ಕೆ ಸಮನಾಗುತ್ತಿದ್ದು, ಕಲ್ಯಾಣ ಚಾಳುಕ್ಯ ಅರಸ ಆರನೇ ವಿಕ್ರಮಾದಿತ್ಯನಿಗೆ ಸೇರುತ್ತದೆ. ಈ ಅವಧಿಯಲ್ಲಿ ಈತನ ಮಗ ಕುಮಾರ ಆಹವಮಲ್ಲದೇವನು ಬಹುಶಃ ಎಡೆದೊರೆ-೨೦೦೦ ನಾಡನ್ನು ಆಳುತ್ತಿರಬೇಕು. ಪ್ರಸ್ತುತ ದಿನಗಳವರೆಗೆ ಕಲ್ಯಾಣ ಚಾಳುಕ್ಯ ಅರಸ ಆರನೇ ವಿಕ್ರಮಾದಿತ್ಯನಿಗೆ ಐದು ಜನ ಪುತ್ರರಿದ್ದುದು ತಿಳಿದುಬರುತ್ತಿತ್ತು. ದಿಗ್ಗನಾಯಕನ ಬಾವಿ ಗ್ರಾಮದ (ಮಸ್ಕಿ ತಾಲ್ಲೂಕು, ರಾಯಚೂರು ಜಿಲ್ಲೆ) ಶಾಸನದ ಮೂಲಕ ವಿಕ್ರಮಾದಿತ್ಯನಿಗೆ ಇನ್ನೊಬ್ಬ ಮಗ ಕುಮಾರ ಆಹವಮಲ್ಲದೇವನಿದ್ದುದು ತಿಳಿದುಬರುತ್ತದೆ. ಈ ಕುಮಾರನು ಆರನೇ ವಿಕ್ರಮಾದಿತ್ಯನ ಯಾವ ರಾಣಿಯ ಮಗನೆಂದು ತಿಳಿದು ಬರುವುದಿಲ್ಲ. ಮುಂದೊಂದು ದಿನ ಬೇರೆ ಯಾವುದಾದರೊಂದು ಹೊಸ ಶಾಸನ ದೊರಕಿ ಈತ ಯಾವ ರಾಣಿಯ ಮಗನೆಂದು ತಿಳಿದುಬರಬಹುದು.

ಈ ಆಹವಮಲ್ಲದೇವನ ಕೈಕೆಳಗೆ ದಂಡನಾಯಕನಾಗಿ ಕಾಟಿಮರಸನಿದ್ದನು. ಈ ಕಾಟಿಮರಸನು ಪುರಾತನ ಕಾಟಿಂಗಲ್ [ಪ್ರಸ್ತುತ ಕಾಟಗಲ್ ಗ್ರಾಮ ಮಸ್ಕಿ ತಾಲ್ಲೂಕು] ಭೂ ಪ್ರದೇಶವನ್ನು ಆಳುತ್ತಿದ್ದನು. ಈ ಕಾಟಿಮರಸ ದಂಡನಾಯಕನು ಪಿರಿಯ ಪಳ್ಳಿಯಲ್ಲಿ ಅಜ್ಜೇಶ್ವರ ಮತ್ತು ರಾಮೇಶ್ವರ ದೇವರುಗಳಿಗೆ ತಲಾ ಎರಡೆರಡು ಮತ್ತರುಗಳ ಗದ್ದೆಯನ್ನು ದಾನವಾಗಿ ನೀಡಿದನು. ಈ ಪಿರಿಯ ಪಳ್ಳಿಯು ಪ್ರಸ್ತುತ ಯಾವ ಗ್ರಾಮವೆಂದು ಗೋಚರಿಸದೇ ಇದು ಶಾಸನವಿರುವ ಸ್ಥಳದ ಹಾಳೂರಾ [ಬೇಚಿರಾಕ್ ಗ್ರಾಮ]ಗಿರಬೇಕು. ಹಾಗೆಯೇ ಕಾಟಿಮರಸನು ಕಾಟಿಂಗಲ್ ಕಲಿದೇವರಿಗೆ ಹೊಸಗೆರೆಯಲ್ಲಿ ಗದ್ದೆ ಕಮ್ಮವನ್ನು ದತ್ತಿಯಾಗಿ ಕೊಟ್ಟನು. ಶಾಸನದಲ್ಲಿ ಸೇನಬೋವ ಬಾವಿಮಯ್ಯ, ಪೆರ್ಗ್ಗಡೆನಾಗಿಯಣ್ಣ, ಕೆರೆ, ಹೂವಿನ ತೋಟ, ಸಂಕ್ರಾಂತಿ ಹಬ್ಬಗಳು ಉಲ್ಲೇಖಗಳಿವೆ. ಶಾಸನದ ಕೊನೆಯ ಭಾಗದಲ್ಲಿ ನಾಗರಾಜ ಎಂಬುವವನು ಶಾಸನ ಬರೆದನೆಂದು ಪ್ರಸ್ತಾಪಿಸುತ್ತದೆ.

೧೪. ಉಸ್ಕಿಹಾಳ ಗ್ರಾಮದ ಹಿರೇಹಳ್ಳದ (ಮಸ್ಕಿ ನದಿ) ಗಂಗಮ್ಮ ಪಾದದ ಹತ್ತಿರದಲ್ಲಿರುವ ಶಾಸನ

೧. ಶ್ರೀಮತು ಯಮ ಂವ ಂನ

೨. ದ . ಲಿ ಮಾ ದೇವ ದದಿ

೩. ೄ ವಾರ

೪. ನ

೫. . . . . ಪ

ಈ ಶಾಸನವು ಅಸ್ಪಷ್ಟವಾಗಿದ್ದು, ಕ್ರಿ.ಶ. ೧೭-೧೮ನೇ ಶತಮಾನಕ್ಕೆ ಸೇರುತ್ತದೆ. ಇದರಲ್ಲಿ ಶ್ರೀಮತು ದೇವ, ವಾರ ಎಂಬ ಕೆಲವೇ ಅಕ್ಷರಗಳನ್ನು ಮಾತ್ರ ಓದಲಾಗಿದೆ.

೧೫. ಕುಣಿಕೆಲೂರು ಗ್ರಾಮದ ಊರ ಹೊರಗಿನ ಶಿವಪ್ಪ ತಂದೆ ಬಸಪ್ಪ ಹಿರೇಕುರುಬರರವರ ಹೊಲದ ಮರಕ್ಕೆ ಆನಿಸಿಟ್ಟಿರುವ ಶಾಸನ

೧. ಶ್ರೀ ಮನ್ನಾರಾಯಣ ದೇವರ್ಗ್ಗೆ

೨. ನೆಯ . . . ಯ . ರಿ ಯಿ

೩. ಬ್ಬ . . . . . . ಶ್ವರ

೪. ಗೆದಿ . . ಬರು

ಈ ಶಾಸನವನ್ನು ಲಿಪಿಯ ಆಧಾರದಿಂದ ಕ್ರಿ.ಶ. ೧೩ನೇ ಶತಮಾನಕ್ಕೆ ಸೇರಿಸಬಹುದು. ಇದರ ಚಪ್ಪಡಿಕಲ್ಲಿನಲ್ಲಿ ನಾರಾಯಣ ವಿಗ್ರಹ ಕಾಣಬರುವುದರೊಂದಿಗೆ, ಈ ದೇವರಿಗೆ ದತ್ತಿ ನೀಡಿದ ವಿಷಯವಿದೆ.

೧೬. ಚಿಕ್ಕಹೆಸರೂರು ಗ್ರಾಮದ ಶಿವಣ್ಣ ತಂದೆ ಅಮರಣ್ಣ ಕೊಡ್ಲಿಯವರ ಮನೆಯ ಮುಂದೆ ಇರುವ ಶಾಸನ

೧. ಶ್ರೀ ಮಣ್ಡಂಡ ನಾಯಕ ಕಾ

೨. ಟಿ ಮರಸರು ದ್ರಮ್ಮ [ಮ]


೩. ತ್ತರು ಬಿಟ್ಟರು ಕೆಯ್

ಈ ಶಾಸನವು ಕ್ರಿ.ಶ. ೧೨ನೇ ಶತಮಾನದ ಲಿಪಿಯಲ್ಲಿದೆ. ದಂಡನಾಯಕ ಕಾಟಿಮರಸರು ದ್ರಮ್ಮ ಮತ್ತರುಗಳನ್ನು ದತ್ತಿ ಬಿಟ್ಟ ಉಲ್ಲೇಖವಿದೆ. ಇವನ ಉಲ್ಲೇಖ ದಿಗ್‌ನಾಯಕನ ಬಾವಿ ಗ್ರಾಮದ ಶಾಸನದಲ್ಲಿ ಉಲ್ಲೇಖವಾಗಿದೆ.

೧೭. ಹಿರೇಕಡಬೂರು ಗ್ರಾಮದ ಮಾರುತಿ ದೇವಾಲಯದ ಮುಂದೆ ಇರುವ ಕೆಂಪು ಕಣಶಿಲೆಯ ಶಾಸನ

೧. ಸ್ವಸ್ತಿ ಸಮಸ್ತಭುವನಾಶ್ರಯ


೨. ಶ್ರೀ ಪೃಥ್ವೀವಲ್ಲಭ ಮಹಾರಾಜಾಧಿ


ಗೋನವಾರ ಶಾಸನ–೧


ಗೋನವಾರ ಶಾಸನ–೨



ಗೋನವಾರ ಶಾಸನ–೩


ಮೆದಿಕಿನಾಳ ಶಾಸನ


ವೆಂಕಟಾಪುರ ಶಾಸನ


ದಬ್ಬೇರಮಘು ಶಾಸನ–೧


ದಬ್ಬೇರಮಘು ಶಾಸನ–೨


ಕಾಚಾಪುರ ಶಾಸನ



ಮಸ್ಕಿ ಶಾಸನ–೧



ಮಸ್ಕಿ ಶಾಸನ–೨


ಮಸ್ಕಿ ಶಾಸನ–೩


ಸಂತೆಕೆಲ್ಲೂರ ಶಾಸನ


ಸಂತೆಕೆಲ್ಲೂರ ಶಾಸನ–೧


ದಿಗ್ ನಾಯಕನ ಶಾಸನ


ಉಸ್ಕಿಹಾಳ ಶಾಸನ


ಚಿಕ್ಕಹೆಸರೂರು ಶಾಸನ


ಹಿರೇಕಡಬೂರು ಶಾಸನ


ಹಿರೇಕಡಬೂರು ಶಾಸನ–೧

೩. ರಾಜ ಪರಮೇಸ್ವರ ಪರಮ ಭಟ್ಟಾರ

೪. ಕ ಸತ್ಯಾಶ್ರಯ ಕುಳತಿಳಕ ಚಾ

೫. ಳು ಕ್ಯಾ ಭರಣಂ ಶ್ರೀಮಜ್ಜಗದೇಕಮಲ್ಲದೇ

೬. ವರ ರಾಜ್ಯಮುತ್ತರೋತ್ತರಾಭಿವೃದ್ಧಿಯಂ

೭. ಸಲ್ಲುತ್ತಮಿರೆ ॥ ಸಕವರಿಷ

೮. . . ನೆಯ ಬಹುದಾನ್ಯ ಸಂವತ್ಸ

೯. ರದ ಕಾರ್ತಿಕ ಶುದ್ದ . . . . .

೧೦. ದೇವರ . . ಯ ಪ . . . . .

೧೧. ಬಣಜ . . ದೇಯ ವಿನಯ . .

೧೨. ಕೆಯ್ . . ಪ್ಪ . . ಮತ್ತರು . .

೧೩. ಕೊನ್ದು ಪಂಪಯ್ಯನ ಮ . . . .

೧೪. ಆಕಡಿ . . ಸನಿ . . . . . ವರ .

೧೫. ದೆನ ಲ ಮ . . . . . ವ ಬ .

೧೬. ಪಬ್ಬದ . . . .

೧೭. . ಲವನ ಬಣಜ . . . .   ೧೮. ಕದಿರೆಯ್ಯ ಬಾ . ಲ್ಪ . . .

೧೯. . . . ಮತ್ತರು

ಇದೇ ಚಪ್ಪಡಿ ಕಲ್ಲಿನ ಇನ್ನೊಂದು ಬದಿ(ಬಲ)ಯಲ್ಲಿರುವ ಸಾಲುಗಳು

೨೦. ಸಾಮಾನ್ಯೋಯಂ ಧರ್ಮ   ೨೧. ಸೇತುನೃಪಾಣಂ ಕಾಲೇ

೨೨. ಕಾಲೇ ಪಾಲನೀಯೋ   ೨೩. ಭವದ್ಭಿ ಸರ್ವನೇತಾ

೨೪. ನ್ಭಾವಿನಃ ಪಾರ್ತ್ಥಿವೇಂದ್ರಾನ್ಬುಯೋ   ೨೫. ಭೂಯೋ ಯಾಚತೇ

೨೬. ರಾಮಭದ್ರಃ ॥ ಸ್ವದತ್ತಾಂ   ೨೭. ಪರದತ್ತಾಂ ವಾ ಯೋಹ

೨೮. ರೇತ ವಸುನ್ಧರಾಂ ಷಷ್ಟಿರ್ವರ್ಷ   ೨೯. ಸಹಸ್ರಾಣಿ ವಿಷ್ಟಾಯಾಂ ಜಾಯತೇಕ್ರಿಮಿ॥

ಈ ಶಾಸನವು ಕ್ರಿ.ಶ. ೧೧ನೇ ಶತಮಾನಕ್ಕೆ ಸೇರುತ್ತಿದ್ದು, ಕಲ್ಯಾಣ ಚಾಳುಕ್ಯ ಚಕ್ರವರ್ತಿ ಇಮ್ಮಡಿ ಜಯಸಿಂಹ (ಕ್ರಿ.ಶ. ೧೦೧೫–೧೦೪೪)ನನ್ನು ಜಗದೇಕಮಲ್ಲನೆಂಬ ಬಿರುದಿನಿಂದ ಉಲ್ಲೇಖಿಸುತ್ತದೆ. ನಂತರ ಶಾಸನವು ಅಸ್ಪಷ್ಟವಾಗಿದ್ದು, ಶಾಸನದ ಕೊನೆಯಲ್ಲಿ ಎರಡು ಗೋವುಗಳ ಚಿತ್ರಗಳನ್ನು ಖಂಡರಿಸಿರುವುದು ಕಾಣಬರುತ್ತದೆ.

೧೮. ಇದೇ ಗ್ರಾಮದ ಮಾರುತಿ ಮಂದಿರದ ಮುಂಬದಿಯಲ್ಲಿರುವ ಬಿಳಿ ಕಲ್ಲು ಶಾಸನ

೧. @ ಸ್ವಸ್ತಿ ಶ್ರೀಮತು ಯಾದವರಾಯ ನಾರಾಯಣ ೨.ಭುಜಬಳ ಚಕ್ರವರ್ತಿ ಶ್ರೀವೀರ ರಾಮಚಂದ್ರರಾಯ ವಿಜಯ

೩. ರಾಜ್ಯೋದ್ಬುದಯ ಶಕ   ೪. ನ ಮದೊ . . . ದ . . . . .ಯ.

೫. ದಿರೆಗ   ೬. . . . . ಯ ಹ ಡು . ಗಿ . . . .

೭ ಯ . ಸ . . . ಳೇಸ್ವರ ಸಮಾ . . . .   ೮. ತ್ತರ

ಈ ಶಾಸನವು ಕ್ರಿ.ಶ. ೧೩ನೇ ಶತಮಾನಕ್ಕೆ ಸೇರುತ್ತಿದ್ದು, ಒಟ್ಟು ೧೫ ಸಾಲುಗಳಿಂದ ರಚಿತಗೊಂಡಿದೆ. ಇದರಲ್ಲಿ ಕೇವಲ ೮ ಸಾಲುಗಳು ಕಾಣಬರುತ್ತಿದ್ದು, ಇನ್ನುಳಿದ ೭ ಸಾಲುಗಳು ಅಸ್ಪಷ್ಟವಾಗಿವೆ. ಇದರಲ್ಲಿ ಯಾದವ (ಸೇವುಣ)ವಂಶದ ಕೊನೆಯ ಚಕ್ರವರ್ತಿ ವೀರ ರಾಮಚಂದ್ರದೇವ (ಕ್ರಿ.ಶ. ೧೨೭೧–೧೩೧೨)ನನ್ನು ಯಾದವ ನಾರಾಯಣ ಪ್ರತಾಪ ಚಕ್ರವರ್ತಿಯೆಂದು ಉಲ್ಲೇಖಿಸುತ್ತದೆ. ನಂತರದ ಸಾಲುಗಳು ಪೂರ್ತಿ ಸವೆದು ಹೋಗಿರುತ್ತವೆ.

[ಮಸ್ಕಿ ಪರಿಸರದ ಶಾಸನಗಳ ಕ್ಷೇತ್ರ ಕಾರ್ಯದಲ್ಲಿ ಅಶೋಕ ನಾಯಕ ದಿದ್ದಿಗಿ, ಪರಪ್ಪ ಬಂಡಾರಿ ಹಂಚಿನಾಳ, ಮಂಜುನಾಥ ಸಾಹುಕಾರ ಮನಿ, ಉದಯ ಕುಮಾರ ಅಮೀನಗಢ, ಶಿವಪುತ್ರ ಮಾರಲದಿನ್ನಿ, ನರಸನಗೌಡ ಮ್ಯಾದರನಾಳ, ಶ್ರೀಕಾಂತ ಚಿಕ್ಕಡಬೂರು ಹಾಗೆಯೇ ಈ ಶಾಸನಗಳ ಕುರಿತು ಕೆಲವು ಮಾಹಿತಿಗಳನ್ನು ನೀಡಿದ ಡಾ. ದೇವರಕೊಂಡಾ ರೆಡ್ಡಿ, ಶ್ರೀಮತಿ ಹನುಮಾಕ್ಷಿ ಗೋಗಿ, ಗುರುಪ್ರಸಾದ್ ಜಿ.ಎಸ್. ಬೆಂಗಳೂರು, ಡಾ. ಜಗದೀಶ ಅಗಿಸಿ ಬಾಗಿಲನವರು ಶಿವಮೊಗ್ಗ ಮೊದಲಾದವರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.]

ನಾಗವರ್ಮರಸನ ಬಡಗೇರಿ ಮತ್ತು ಭಂಡಾರಿಗದ್ದೆಯ ರಣಗಂಬ ಶಾಸನಗಳು

ಶ್ಯಾಮಸುಂದರ ಟಿ. ಗೌಡ✷

'**ನಾಗವರ್ಮರಸ**' ಸುಮಾರು ಕ್ರಿ.ಶ. ೧೦೭೦ ರಿಂದ ೧೧೧೩ರ ವರೆಗೆ ಗೋಕರ್ಣವನ್ನು ಕೇಂದ್ರವಾಗಿಟ್ಟುಕೊಂಡು ಹೊನ್ನಾವರ, ಕುಮಟ, ಅಂಕೋಲಾ, ಶಿರಸಿ, ಸಿದ್ದಾಪುರ ತಾಲೂಕುಗಳ ಭಾಗದಲ್ಲಿ ಮಹಾಮಂಡಳೇಶ್ವರನಾಗಿ ಸ್ವತಂತ್ರವಾಗಿ ಸಂಪೂರ್ಣ ಪ್ರಾಚೀನ ಹೈವೆ-೫೦೦ ಪ್ರಾಂತ್ಯ ಮತ್ತು ಅದರ ಆಚೀಚಿನ ಪ್ರದೇಶಗಳನ್ನು ಆಳುತ್ತಿದ್ದಂತಹ ಒಬ್ಬ ರಾಜ. ಪ್ರಸ್ತುತ ಚರ್ಚೆಯ ಶಾಸನಗಳ ಹೊರತು ಉತ್ತರ ಕನ್ನಡ ಜಿಲ್ಲೆಯ ಸಿದ್ಧಾಪುರ, ಹೊನ್ನಾವರ ತಾಲೂಕಿನ ಕೆಕ್ಕಾರ, ಹಳದೀಪುರ, ಕಡಬಾಳ, ಹಾವೇರಿ ಜಿಲ್ಲೆಯ ಗಳಗನಾಥ ಮೊದಲಾದೆಡೆ ದೊರೆತ ಶಾಸನಗಳಲ್ಲಿ ನಾಗವರ್ಮರಸನ ಉಲ್ಲೇಖವಿದೆ. ಹಳದಿಪುರದ ಶಾಸನ ಈತನನ್ನು 'ಗೋಕರ್ಣ ಪುರವರಾಧೀಶ್ವರ' ಎಂದು ಕರೆದಿದೆ. ಈ ನಾಗವರ್ಮರಸನಿಗೆ ಸಂಬಂಧಿಸಿದ ಮತ್ತೆರಡು ಅಪ್ರಕಟಿತ ಶಾಸನಗಳ ಮೇಲೆ ಈ ಪ್ರಬಂಧವನ್ನು ಸಿದ್ಧಪಡಿಸಲಾಗಿದೆ. ಬಡಗೇರಿಯ ಶಾಸನವು ಕೆ.ಆರ್.ಆಯ್. ಪ್ರಕಟಿಸಿದ ಶಾಸನಗಳ ಸಾರಾಂಶ ೧೯೪೩-೪೪ ರಿಂದ ೧೯೪೯-೫೦ ಪುಟ ೫೨-೫೩ ಸಂಖ್ಯೆ ೧೯ ರಲ್ಲಿ ವರದಿಯಾಗಿದೆ. ಆದರೆ ಈವರೆಗೆ ಎಲ್ಲಿಯೂ ಪಾಠ ಪ್ರಕಟವಾಗಿಲ್ಲ. ಅಲ್ಲದೇ ವರದಿಯಲ್ಲಿ ಪ್ರಕಟಿಸಿದ ಸಾರಾಂಶದಲ್ಲಿ ಶಾಸನದ ಮುಖ್ಯ ವಿಷಯವನ್ನು ತಪ್ಪಾಗಿ ತಿಳಿಸಲಾಗಿದೆ. ಭಂಡಾರಿಗದ್ದೆಯ ಶಾಸನ ನನ್ನ ಇತ್ತೀಚೀನ ಕ್ಷೇತ್ರಕಾರ್ಯದಲ್ಲಿ ಪತ್ತೆಯಾಗಿದ್ದು ಇದು ಒಂದು ಹೊಸ ಅಪ್ರಕಟಿತ ಶಾಸನವಾಗಿದೆ.

ಅ) ಬಡಗೇರಿ ರಣಗಂಬ ಶಾಸನ

ಬೇಟೇ ಬೀರ ದೇವಸ್ಥಾನದ ಎದುರಿನಲ್ಲಿದ್ದು ವೀರಗಂಬ ಶಾಸನವಾಗಿದ್ದು ಕನ್ನಡ ಭಾಷೆ ಲಿಪಿಯಲ್ಲಿದೆ.

ಕಾಲ : ಕ್ರಿ.ಶ. ೧೧೧೩ ಫೆಬ್ರುವರಿ ೨೭ಕ್ಕೆ ಸರಿ ಹೊಂದುತ್ತದೆ.

ಶಾಸನದ ಪಾಠ

೧. ಸ್ವಸ್ತಿ ಸಖವರಿಸ ೧೦೩೫ನೆ
೨. ಯ ವಿಕ್ರಿತ ಸಂವತ್ಸರದ ಫಾ
೩. ಲ್ಗುನಿ ಮಾಶಂ ಸುದ್ಧ ದಸ
೪. ಮಿ ಗುರುವಾರದಂದು
೫. ಸಮಧಿಗತ ಪಂಚಮಹಾ
೬. ಸಬ್ದ ಮಹಾಮಣ್ಡಳೇ
೭ ಸ್ವರಂ ನಾಗವರ್ಮ್ಮರ
೮. ಸರ ರಾಜ್ಯದೋಕಾಲದೊಳ್ ಆ
೯. ರಿದಗೇರಿಯೊಳ್ ಪುಟ್ಟಿದರ್
೧೦. ಆಡಹನ ಬಳಿಯಲು ದಾಯಿ
೧೧. ಮಾರಿದಂ ಸಿರಿಕಾರಿದನೆಂಬ ಸೊಂದರು
೧೨. ಸಾಕಿದರಂ ಉರ್ಕ್ಕಿದರಂ ಅಟಿಹದಸಿ
೧೩. ಅರಮನೆಗೆ ತ(ಂ)ತ್ರಂ ನಾದಿಂಗೆ ನಾ
೧೪. ದೆಗರಾಗಿ ಅರಸರು ಮನೆ ದೀಪಿ
೧೫. ದ ಬಟರು ಮೂವತ್ತಾಳು ಕ
೧೬. ಯ್ದುವಂ ಕೊಂಡು ಎಳ್ಳೂರಿಂಗೆ
೧೭. ಅವರಿನ್ದಂ ಮೂಡೆಯ
೧೮. ಪೋಷಿಸಿದರು ಬಟ್ಟಿಪೋಲಗದ
೧೯. ವರಂ ಮಿರಿವಂ ಹಜೆಯೇ ಪೊಯ್ದು
೨೦. ಅರಿದಗೇರಿಗೆ ಕೊಂಕಣದ ತಟೆಗೆ ೩
೨೧. ಭತ್ತ ಮೂಡೆ ೧೫ ಈಯಂದದ ಮಿಕ್ಕಸಾ
೨೨. ನ್ದರು ಅವರ ಮಮ್ಮೊಕ್ಕಳಾಗಿಯುಂ

✷ ಸಾಯಿ ಲೀಡ್ಸ್, ವಾಜಂತ್ರಿವಾಡ, ಕಾರವಾರ ರಸ್ತೆ, ಅಂಕೋಲಾ, ಉತ್ತರ ಕನ್ನಡ, ಮೊ: ೭೦೧೯೦ ೧೪೮೧೮೭

೨೩. ಅಸಗಾರಿದನ ಮಗಂ ರಕ್ಕಸಾರಿದ
೨೪. ಚಿಪ್ಪಿಯಲ್ಮುತ್ತು ಪುಟ್ಟುವನ್ತೆ ಪುಟ್ಟಿ
೨೫. ಅರಸಿಂಗನಾಡಿಂಗಡಿತ್ತು ಗುಡದೆ
೨೬. ಪಚ್ಚವದಿಗೆ ಬೆಂಗಾಣದ
೨೭. ಗಂಡ ರಕ್ಕಸಾರಿದಂ ಸುರ
೨೮. ಲೋಕ ಪ್ರಾಪ್ತನಾದಂ ನಾತನ
೨೯. ಮಗಂ ಗುಣುಕವಾರಿದಂ ಸಿಂಗ
೩೦. ದ ದೊಡೆಗೆ ವಜ್ರದ ಮುಗುಪ
೩೧. ಪುಟ್ಟುವನ್ತೆ ಯಾತಂ ದೇಗಿ ಮಗಂ
೩೨. ಪುಟ್ಟಿ ಅಡಹಾನ ಬಳಗದೊಂ
೩೩. ಬನ ಬಳಿಗಂ ಗೋತ್ರಕ್ಕೆಲ್ಲ ಪವಿ
೩೪. ತ್ರಮಾಗಿ ಸಂದಂ ತಮ್ಮಯ್ಯಗೆ ಇ
೩೫. ಪ್ಪತ್ತು ಗದ್ಯಾಣ ಪೋ
೩೬. ಲ ಮಾಡಿಸಿ ಕೊಳ
೩೭. ರುಮಂ ಮಾಡಿ ಕಲ್ಲನಿರಿಸಿದ
೩೮. ಫಲಗುನಿ ಮಾಸ ಸುದ್ಧ ಪು
೩೯. ಣ್ನಮೆಯ ದಸಮಿ ಗುರುವಾ
೪೦. ರಂ ಪುಸ್ಯಾ ನಕ್ಷತ್ರದಂದು
೪೧. ದಾನ ಧರ್ಮ್ಮಂ ಮಾಡಿ ದೇಮ
೪೨. ಗಾರಿದನುಂ ರಕ್ಕಸಾರಿದನುಂ
೪೩. ಬಂಮುವಾರಿದನುಂ ಗುಣುಕು
೪೪. ವಾರಿದೆಂಗೆ ಬುದ್ದಿಯಂ ಪೆರ್ದ್ದರಕ
೪೫. ಸಾರಿದಂ ದೇವಲೋಕಕ್ಕೆ
೪೬. ಪೋದರ್ ಈ ಕಲ್ಲ ಬರೆದಂ ಸೇನ
೪೭. ಭೋವ ರೇವಣಯ್ಯ ಮಚ್ಚರಿ
೪೮. ಪ ಬಲ್ಲರ ಮೊಗದಕ್ಕೆ ಬರೆದಂ
೪೯. ಲಕ್ಕಣೋಜಂ ವಿದ್ದೆಗೆ ಸಮುದ್ರದಾ
೫೦. ಗರ ಆತನಳಿಯಂ ಚಂದನ
೫೧. ಬಳಿಯ ಗೊರವೋಜಂ ಮಾಡಿದ ಕ
೫೨. ಲ್ಲು ಈ ಕಲ್ಲಂ ಮಾಡಿದವನ ಮೇಗನೆಂದ
೫೩. ನೆ ದೇಮಧು ಪೆರದು ಬಳಿಯುಲು
೫೪. ನಾಗವರ್ಮ್ಮರಸನ ಮಗಂ ಪೊನ್ನ

ಶಾಸನದ ಸಾರಾಂಶ :

ಶಕವರ್ಷ ೧೦೩೫ನೆಯ ವಿಕ್ರಿತ ಸಂವತ್ಸರದ ಫಾಲ್ಗುಣದ ಶುದ್ಧ ದಶಮಿ ಗುರುವಾರದಂದು (ಕ್ರಿ.ಶ. ೧೧೧೩ ಫೆಬ್ರವರಿ ೨೭) ಪಂಚಮಹಾ ಶಬ್ಧಗಳಿಂದ ಗೌರವಿತನಾದ ಮಹಾಮಂಡಳೇಶ್ವರ ನಾಗವರ್ಮರಸರ ಆಳ್ವಿಕೆಯ ಕಾಲದಲ್ಲಿ ಆರಿಡಗೇರಿಯಲ್ಲಿ ಹುಟ್ಟಿದ ಅಡಹನ ಬಳಿಯ ದಾಯಿಮಾರಿದ ಮತ್ತು ಸಿರಿಕಾರಿದ ಎಂಬ ಸಹೋದರರು ತಂತ್ರಮಾಡಿ ತಮ್ಮ ತಂಡದೊಂದಿಗೆ ಅರಮನೆಯ ಮೇಲೇರಿ ಬಂದಾಗ, ಅರಸನ ಉಪ್ಪಿನ ಋಣವುಳ್ಳ ಮೂವತ್ತು ಜನ ಯೋಧರು ಶಸ್ತ್ರಗಳನ್ನೆತ್ತಿಕೊಂಡು ಹೋರಾಡಿ ಸುಲಿಗೆಕೋರರಿಂದ ಮೂವರು ಧಾನ್ಯ ಅಳೆಯುವವರನ್ನೂ, ೧೫ ಮೂಡೆ ಭತ್ತವನ್ನೂ ರಕ್ಷಿಸಿದರು. ದುಃಖದ ಸಂಗತಿಯೆಂದರೆ, ಈ ಹೋರಾಟದಲ್ಲಿ ಮಿಕ್ಕಸಂದನ ಮೊಮ್ಮಗನೂ, ಅಸಗಾರಿದನ ಮಗನೂ ಆದ, ಚಿಪ್ಪಿಯಲ್ಲಿ ಮುತ್ತು ಹುಟ್ಟುವಂತೆ ಹುಟ್ಟಿ, ಅರಿದಗೇರಿಗೂ ಕೊಂಕಣಕ್ಕೂ ಛತ್ರದಂತಿದ್ದ, 'ಅರಸಿಂಗನಾಡಿಂಗಡಿತ್ತು ಗುಡದೆ ಪಚ್ಚವರಿಗೆ ಬೆಂಗಾಣದ ಗಂಡ' ಬಿರುದಾಂಕಿತ ರಕ್ಕಸರಿದನು ಸುರಲೋಕ ಪ್ರಾಪ್ತನಾದ (ಮರಣವನ್ನಪ್ಪಿದ). ಸಿಂಹದ ದವಡೆಗೆ ವಜ್ರದ ಮುಕುಟ ಮೂಡುವಂತೆ ಹುಟ್ಟಿದ ರಕ್ಕಸರಿದನ ಮಗ ಗುಣುಕುವಾರಿದನು ಇಪ್ಪತ್ತು ಗದ್ಯಾಣಗಳನ್ನು ವ್ಯಯಿಸಿ ಬನದಂತಿರುವ ಅಡಹಾನ ಬಳಗವೆಂಬ ಬಳಿಗೆ ಪವಿತ್ರನಾದ ತನ್ನ ತಂದೆಗೆ ಕಾರ್ಯಗಳನ್ನು ಮಾಡಿ ಈ ಕಲ್ಲನ್ನು ನಿಲ್ಲಿಸಿದ.

ಪುಣ್ಯದಿನವಾದ ಫಾಲ್ಗುಣ ಸುದ್ದ ದಶಮಿ ಗುರುವಾರದಂದು ಪುಷ್ಯ ನಕ್ಷತ್ರದಲ್ಲಿ ರಕ್ಕಸರಿದನ ಹೆಸರಲ್ಲಿ ದೇಮುಗಾರಿದ ಮತ್ತು ಬಂಮುವಾರಿದರು ದಾನ ಧರ್ಮಗಳನ್ನು ಮಾಡಿ ಗುಣುಕುವಾರಿದಗೆ ತಿಳುವಳಿಕೆಯ ಮಾತುಗಳನ್ನು ಹೇಳಿ ಪ್ರಾಣತ್ಯಾಗ ಮಾಡಿದರು. ದುಷ್ಟರಿಗೆ ಕಪಾಳಮೋಕ್ಷದಂತಿದ್ದ ಸೇನಭೋವ ರೇವಣಯ್ಯ ಶಾಸನ ರಚಿಸಿದ್ದು, ವಿದ್ಯೆಯ ಸಮುದ್ರವಾಗಿದ್ದ ಲಕ್ಕಣ್ಣೋಜ ಅದನ್ನು ಕಲ್ಲ ಕಂಬದ ಮೇಲೆ ಬರೆದರೆ, ಆತನ ಸೋದರ ಅಳಿಯ ಚಂದನ ಬಳಿಯ ಗೊರವೋಜ ಈ ಕಲ್ಲನ್ನು ಕೆತ್ತಿದ. ಶಾಸನದ ಕೊನೆಯಲ್ಲಿ ನಾಗವರ್ಮರಸನ ಮಗನಾದ ಪೊನ್ನನನ್ನು ಉಲ್ಲೇಖಿಸಲಾಗಿದೆ.

ಶಾಸನದ ಗೊಂದಲಗಳು ಮತ್ತು ಪರಿಹಾರಗಳು

ಶಾಸನವು ತೇದಿಯನ್ನು ಹೇಳುವಾಗ 'ಸಖವರಿಸ ೧೦೩೫ ನೇ ವಿಕ್ರಿತ ಸಂವತ್ಸರ' ಎಂದಿದೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ 'ವಿಕ್ರಿತ ಸಂವತ್ಸರ' ಬಂದಿರುವುದು ಶಕವರ್ಷ ೧೦೩೨ರಲ್ಲಿ. ಶಕವರ್ಷ ೧೦೩೫ರಲ್ಲಿರುವುದು 'ವಿಜಯ

ಸಂವತ್ಸರ'. ಶಾಸನ ಹೇಳುವ ಶಕ ವರ್ಷ ಅಥವಾ ಸಂವತ್ಸರ ಈ ಎರಡರಲ್ಲಿ ಯಾವುದಾದರೂ ಒಂದು ತಪ್ಪಾಗಿದೆ. ಸಕ ವರ್ಷ ೧೦೩೫ ಸರಿ ಎಂದು ಇಟ್ಟುಕೊಂಡರೆ ಸಂವತ್ಸರವನ್ನು 'ವಿಕ್ರಿತ'ದ ಬದಲು 'ವಿಜಯ' ಎಂದು ತಿದ್ದಿಕೊಳ್ಳಬೇಕು. ವಿಕ್ರಿತ ಸಂವತ್ಸರ ಸರಿ ಎಂದರೆ ಶಕವರ್ಷವನ್ನು ೧೦೩೫ರ ಬದಲು ೧೦೩೨ ಎಂದು ತಿದ್ದಿಕೊಳ್ಳಬೇಕಾಗುತ್ತದೆ. ಇದನ್ನು ಶಾಸನಕಾರನ ಅಥವಾ ಲಿಪಿಕಾರನ ದೋಷ ಎಂದು ಭಾವಿಸಬೇಕಾಗಿದೆ. ವಿಕ್ರತಿ ಮತ್ತು ವಿಜಯ ಈ ಹೆಸರುಗಳ ಮಧ್ಯೆ ಸಾಮ್ಯತೆ ಇರುವುದರಿಂದ ವಿಜಯ ಸಂವತ್ಸರದ ಸ್ಥಳದಲ್ಲಿ ಹಿಂದೆ ಆಗಿ ಹೋದ ವಿಕ್ರಿತ ಸಂವತ್ಸರದ ಹೆಸರನ್ನು ಬರೆದಿರಬಹುದಾದ ಸಾಧ್ಯತೆ ಹೆಚ್ಚಾಗಿರುವುದರಿಂದ ಶಾಸನ ಹೇಳುವ ಶಕವರ್ಷ ೧೦೩೫ನ್ನು ಸರಿ ಎಂದು ಇಟ್ಟುಕೊಂಡು ಕ್ರಿ.ಶ. ೧೧೧೩ ಫೆಬ್ರುವರಿ ೨೩ಕ್ಕೆ ಶಾಸನದ ಕಾಲವನ್ನು ಸರಿ ಹೊಂದಿಸಿಕೊಳ್ಳಬೇಕಾಗಿದೆ.

ಶಾಸನ ಪಠ್ಯವನ್ನು ಲಿಪಿಕಾರನು ಆಧುನಿಕ ಕಾವ್ಯದ ರೀತಿಯಲ್ಲಿ ವ್ಯಾಕರಣವನ್ನು ಮುರಿದು ಬರೆದಿರುವುದರಿಂದ ಶಾಸನದ ಪಾಠ ಎಚ್ಚರಿಕೆಯಿಂದ ಗಮನಿಸಬೇಕಾಗಿದೆ. ಮೊದಲಿಗೆ ವಿಷಯವನ್ನು ನೇರವಾಗಿ ಹೇಳಿ ನಂತರ ವಿಶೇಷಣಗಳನ್ನೂ, ಅಲಂಕಾರಗಳನ್ನೂ ಬಳಸಲಾಗಿದೆ. ಶಾಸನವನ್ನು ಕಾವ್ಯಮಯವಾಗಿ ಬರೆಯುವ ಪ್ರಯತ್ನವನ್ನು ಇಲ್ಲಿ ಕಾಣಬಹುದಾದರೂ ಛಂದಸ್ಸು ಪೂರ್ತಿಯಾಗಿ ತಪ್ಪಿದೆ.


ಶಾಸನದ ೩೮ ರಿಂದ ೪೦ನೇ ಸಾಲುಗಳಲ್ಲಿ 'ಫಲಗುನಿ ಮಾಸ ಸುದ್ಧ ಪುಣ್ನಮೆಯ ದಸಮಿ ಗುರುವಾರಂ ಪುಸ್ಯಾ ನಕ್ಷತ್ರ' ಎಂದು ಮತ್ತೊಮ್ಮೆ ತೇದಿಯನ್ನು ಹೇಳಿದರೂ ಇಲ್ಲಿ ಸಂವತ್ಸರವನ್ನು ಹೇಳಿರುವುದಿಲ್ಲ. ಮುಂದುವರಿದ ಶಾಸನವು 'ದಾನ ಧರ್ಮ್ಮಂ ಮಾಡಿ ದೇಮಗಾರಿದನುಂ ರಕ್ಕಸಾರಿದನುಂ ಬಂಮುವಾರಿದನುಂ ಗುಣುಕುವಾರಿದೆಂಗೆ ಬುದ್ಧಿಯಂ ಪೆರ್ದ್ದರಕ ಸಾರಿದಂ ದೇವಲೋಕಕ್ಕೆ ಪೋದರ್' ಎನ್ನುತ್ತದೆ. ಎರಡನೇಬಾರಿ ತೇದಿಯನ್ನು ಹೇಳುವುದಕ್ಕೂ ಮೊದಲು ರಕ್ಕಸಾರಿದನ ಮಗ ಗುಣುಕು ವಾರಿದನು ಇಪ್ಪತ್ತು ಗದ್ಯಾಣಗಳನ್ನು ವೆಚ್ಚಮಾಡಿ 'ಕೊಳರುವಂ ಮಾಡಿಸಿ ತಮ್ಮಯ್ಯಗೆ ಕಲ್ಲನಿರಿಸಿಸಿದ' ಎನ್ನುತ್ತದೆ. ಈ ಸಂಗತಿಗಳನ್ನು ಗಮನಿಸಿದಾಗ ರಕ್ಕಸಾರಿದನು ಸುರಲೋಕ ಪ್ರಾಪ್ತನಾದುದು ಮತ್ತು ದೇಮಗಾರಿದ ಹಾಗೂ ಬಂಮುವಾರಿದರು ದೇವಲೋಕಕ್ಕೆ ಪೋದುದು ಒಂದೇಬಾರಿ ನಡೆದಿದೆಯೋ ಅಥವಾ ಬೇರೆ ಬೇರೆ ದಿನ ನಡೆಡಿದೆಯೋ? ಎನ್ನುವ ಪ್ರಶ್ನೆ ಎದುರಾಗುತ್ತದೆ. ಶಾಸನದಲ್ಲಿ ಎರಡನೇ ಬಾರಿ ತೇದಿಯನ್ನು ಹೇಳುವಾಗ ಬಳಸಿದ 'ಪುಣ್ನಮಿಯ ದಸಮಿ' ಎನ್ನುವಲ್ಲಿನ ಪುಣ್ನಮಿ ಶಬ್ದವನ್ನು ಹುಣ್ಣಿಮೆ ಎನ್ನುವ ಅರ್ಥದ ಬದಲು ಪುಣ್ಯದಿನ ಅಥವಾ ಪುಣ್ಯತಿಥಿ ಎನ್ನುವ ಅರ್ಥದಲ್ಲಿ ಬಳಸಿದಾಗ ಇಲ್ಲಿನ ಗೊಂದಲ ಬಗೆಹರಿಯುತ್ತದೆ. ರಕ್ಕಸರಿದನು ಸುರಲೋಕ ಪ್ರಾಪ್ತನಾದುದು ವಿಕ್ರತಿ ಸಂವತ್ಸರದಲ್ಲಿ (ಶಕವರ್ಷ ೧೦೩೨). ಗುಣುಕುವಾರಿದನು ತಂದೆಯ ಕಾರ್ಯಗಳನ್ನು ಮಾಡಿ ಕಲ್ಲನಿರಿಸಿದ್ದು, ದೇಮಗಾರಿದ ಹಾಗೂ ಬಂಮುವಾರಿದರು ದಾನ-ಧರ್ಮಗಳನ್ನು ಮಾಡಿ ದೇವಲೋಕಕ್ಕೆ ಹೋದುದ್ದು ಶಕವರ್ಷ ೧೦೩೫ರಲ್ಲಿ (ವಿಜಯ ಸಂವತ್ಸರ). ರಕ್ಕಸರಿದನು ವಿಕ್ರಿತ ಸಂವತ್ಸರದಲ್ಲಿ ಮಡಿದರೆ ಆತನ ಮಗ ಗುಣಕವಾರಿದನು ಈ ಸ್ಮಾರಕ ಶಿಲೆಯನ್ನು ನಿಲ್ಲಿಸಿದ್ದು ವಿಜಯ ಸಂವತ್ಸರದಲ್ಲಿ. ಅಂದರೆ ರಕ್ಕಸರಿದನ ಮೂರನೇಯ ಪುಣ್ಯತಿಥಿಯ ಸಂದರ್ಭದಲ್ಲಿ. ಅದೇ ವೇಳೆಗೆ ದೇಮಗಾರಿದ ಹಾಗೂ ಬಂಮುವಾರಿದರು ರಕ್ಕಸಾರಿದನ 'ಲೆಂಕವಾಳಿ'ಯವರೋ, 'ಜೋಳವಾಳಿ'ಯವರೋ ಅಥವಾ 'ಗರುಡ'ರಾಗಿಯೋ ಆತ್ಮಾರ್ಪಪಣೆ ಮಾಡಿಕೊಂಡಿದ್ದಾರೆ. ಶಾಸನದ ಆರಂಭದಲ್ಲಿ ಹೇಳುವ ಶಕವರ್ಷ ೧೦೩೫ ಶಾಸನ ಬರೆಯಿಸಿದ ವರ್ಷವಾದರೆ, ಅದಕ್ಕಿಂತ ಮೂರುವರ್ಷ ಮೊದಲು (ಶಕವರ್ಷ ೧೦೩೨) ಬರುವ ವಿಕ್ರಿತ ಸಂವತ್ಸರ ರಕ್ಕಸರಿದನು ಮಡಿದ ವರ್ಷವಾಗಿದೆ ಎನ್ನುವುದು ಸ್ಪಷ್ಟವಾಯಿತು. ಇದನ್ನು ಸ್ಪಷ್ಟವಾಗಿ ಹೇಳುವಲ್ಲಿ ಶಾಸನಕಾರ ಎಡವಿದ್ದಾನೆ. ಇದೇ ವೇಳೆಗೆ ಸತ್ತವರ ಸಂಬಂಧಿಕರಿಂದ ಅಥವಾ ಹಿತೈಷಿಗಳಿಂದ ಸಮಾಧಿ ಸ್ಥಳದಲ್ಲಿ ದ್ರವ್ಯ ಇತ್ಯಾದಿಗಳನ್ನು ದಾನ ಮಾಡುವ ಪದ್ಧತಿ ಆ ಕಾಲದಲ್ಲಿ ಪ್ರಚಲಿತವಿದ್ದ ಬಗ್ಗೆ ಇದು ಬೆಳಕು ಚೆಲ್ಲುತ್ತದೆ. ಈ ಶಾಸನ ತಿಳಿಸುವ ಇನ್ನೊಂದು ಮಹತ್ವದ ಅಂಶ ಎಂದರೆ ನಾಗವರ್ಮರಸನ ಮಗನ ಹೆಸರು. ಈ ವರೆಗೆ ಲಭ್ಯವಾದ ಶಾಸನಗಳಲ್ಲಿ ನಾಗವರ್ಮರಸನಿಗೆ ಪೊನ್ನ ಎನ್ನುವ ಮಗನಿದ್ದ ಎನ್ನುವ ವಿಷಯ ತಿಳಿಸುವ ಏಕಮಾತ್ರ ಶಾಸನ ಇದಾಗಿದೆ. ಶಾಸನದ ಕೊನೆಯಲ್ಲಿ ಶಾಪಾಶಯ ವಾಕ್ಯಗಳಾಗಲಿ, ಮಂಗಳ ಶಬ್ಧಗಳಾಗಲಿ, ಚಿಹ್ನೆಗಳಾಗಲಿ ಇಲ್ಲ.

ಶಾಸನ ಶಿಲ್ಪ

ಆರು ಅಡಿ ಎತ್ತರ ೧೫ ಇಂಚು ಅಗಲ ಮತ್ತು ದಪ್ಪವಿರುವ ಚಚ್ಚೌಕವಾದ ವಿನ್ಯಾಸದ ಅಪರೂಪದ ಶಿಲ್ಪವಾಗಿದೆ. ಕಪ್ಪು ಶಿಲೆಯಿಂದ ಮಾಡಲ್ಪಟ್ಟಿದ್ದು ತಲೆಯ ಮೇಲೆ ಆಮ್ಲಕ ಅಥವಾ ಪೂರ್ಣ ಕಲಶ ಹೊತ್ತಂತೆ ಚಿತ್ರಿಸಲಾಗಿದೆ. ಇದು ಡಾ. ಎಸ್.ವಿ. ಪಾಡಿಗಾರ ಅವರು ಅಭಿಪ್ರಾಯ ಪಟ್ಟಂತೆ ಕೂಟಮಾದರಿಯ ಕಪೋತ, ಗ್ರೀವ ಸಹಿತ ಏಕತಲ ದೇಗುಲದ

ಪ್ರತಿರೂಪ. ಪ್ರಸ್ತುತ ಶಾಸನದ ಪೂರ್ವದ ಮುಖದಲ್ಲಿ ಪೂರ್ತಿ ಭಾಗದಲ್ಲಿ ೩೮ ಸಾಲುಗಳಲ್ಲಿ ಶಾಸನವನ್ನು ಬರೆದರೆ, ಉತ್ತರದ ಮುಖದಲ್ಲಿ ಅರ್ಧದಿಂದ ಕೆಳಕ್ಕೆ ೧೬ ಸಾಲುಗಳಲ್ಲಿ ಶಾಸನವನ್ನು ಬರೆಯಲಾಗಿದೆ. ಉತ್ತರದ ಮುಖದ ಮೇಲಿನ ಅರ್ಧ ಭಾಗ, ಪಶ್ಚಿಮ ಮತ್ತು ದಕ್ಷಿಣದ ಮುಖಗಳ ಪೂರ್ಣ ಭಾಗದಲ್ಲಿ ಶಿಲ್ಪಗಳನ್ನು ಕೆತ್ತಲಾಗಿದೆ. ೧೨ ಅಂಗುಲ ಅಗಲ ಮತ್ತು ೯ ಅಂಗುಲ ಎತ್ತರದ ಕೋಷ್ಟಕಗಳನ್ನು ಮಾಡಿಕೊಂಡು ಅದರಲ್ಲಿ ಯುದ್ಧದ ದೃಶ್ಯಗಳನ್ನು ವೀರನ ಸ್ವರ್ಗಾರೋಹಣದ ದೃಶ್ಯಗಳನ್ನು, ಕೈಲಾಸ ಮತ್ತು ವೈಕುಂಠದ ದೃಶ್ಯಗಳನ್ನು ಚಿತ್ತರಿಸಲಾಗಿದೆ. ಪ್ರತಿ ಕೋಷ್ಟಕಗಳ ನಡುವೆ ೩ ಅಂಗುಲ ಎತ್ತರದಲ್ಲಿ ಪುಷ್ಪಲತೆಗಳನ್ನು ಚಿತ್ರಿಸಲಾಗಿದೆ. ದಕ್ಷಿಣ ಮತ್ತು ಉತ್ತರದ ಮುಖದಲ್ಲಿ ತಲಾ ೫ ಕೋಷ್ಟಕಗಳನ್ನೂ ಉತ್ತರದ ಮುಖದಲ್ಲಿ ೩ ಕೋಷ್ಟಕಗಳನ್ನೂ ಚಿತ್ರಿಸಲಾಗಿದೆ. ಉತ್ತರದ ಮುಖದ ಮೇಲಿನ ಕೋಷ್ಟಕದಲ್ಲಿ ಶೇಷಶಯನ ವಿಷ್ಣುವನ್ನೂ, ಅವನ ನಾಭಿಯಿಂದ ಹೊರಟ ಕಮಲದಲ್ಲಿ ಬ್ರಹ್ಮನನ್ನೂ, ಕಾಲಬಳಿಯಲ್ಲಿ ಲಕ್ಷ್ಮೀಯನ್ನೂ ಕೆತ್ತಲಾಗಿದೆ. ಪಶ್ಚಿಮ ಮುಖದ ಮೇಲಿನ ಕೋಷ್ಟಕದಲ್ಲಿ ಮಂಟಪವನ್ನೂ ಚಿತ್ರಿಸಿದ್ದು ಮಧ್ಯದಲ್ಲಿ ಶಿವಲಿಂಗವನ್ನೂ, ಲಿಂಗದ ಅಕ್ಕ–ಪಕ್ಕದಲ್ಲಿ ಯತಿಯನ್ನೂ, ವೀರನನ್ನೂ ಕೆತ್ತಲಾಗಿದೆ. ಮಂಟಪದ ಒಂದು ಪಕ್ಕಕ್ಕೆ ಗಣಪತಿಯನ್ನೂ, ಇನ್ನೊಂದು ಪಕ್ಕಕ್ಕೆ ಕೋಣವನ್ನು ಮೆಟ್ಟಿನಿಂತ ಮಹಿಷಮರ್ಧಿನಿಯನ್ನು ಚಿತ್ರಿಸಲಾಗಿದೆ. ಯುದ್ಧದ ದೃಶ್ಯವನ್ನು ತೋರಿಸುವಾಗ ಮುಖ್ಯ ವೀರನನ್ನು ಕಿರೀಟಧಾರಿಯಾಗಿ ಮಾನವರೂಪದಲ್ಲಿ, ಅವನ ಸಹಚರರನ್ನು ವಾನರ ರೂಪದಲ್ಲಿ ತೋರಿಸಿದರೆ, ಶತ್ರುಗಳನ್ನು ರಾಕ್ಷಸ ರೂಪದಲ್ಲಿ ತೋರಿಸಲಾಗಿದೆ. ಆತ್ಮಾರ್ಪಣೆ ಮಾಡಿಕೊಂಡ ವೀರನನ್ನು ಸ್ವರ್ಗಕ್ಕೆ ಅಪ್ಸರೆಯರ ಬದಲು ವಾನರರು ಕರೆದುಕೊಂಡು ಹೋಗುತ್ತಿರುವುದು ಅಪರೂಪದ ದೃಶ್ಯವಾಗಿದೆ. ಹೀಗೆ ಸ್ತಂಭದಲ್ಲಿನ ಬಹುತೇಕ ಶಿಲ್ಪಗಳನ್ನು ರಾಮಾಯಣದ ದ್ರಶ್ಯಗಳಿಗೆ ಸಮೀಕರಿಸಿ ಚಿತ್ರಿಸಿರುವುದು ವಿಶೇಷವಾಗಿದೆ.

ಈ ಬಗೆಯ ಸ್ಥಂಬ ಮಾದರಿಯ ಶಾಸನಗಳನ್ನು ಬೇರೆ ಕಡೆಗಳಲ್ಲಿ ನೋಡಬಹುದಾದರೂ ಈ ರೀತಿಯ ಶಿಲ್ಪ ವಿನ್ಯಾಸದಿಂದ ಕೂಡಿದ ಶಾಸನಗಳನ್ನು ನೋಡುವುದು ಅಪರೂಪ. ಈ ರೀತಿಯ ಸ್ಥಂಬ ವೀರಗಲ್ಲು ಶಾಸನಗಳು ಬಡಗೇರಿಯ ಹೊರತು ಅಂಕೋಲಾ ತಾಲೂಕಿನ ವಂದಿಗೆ, ವಾಸರಕುದ್ರಿಗೆ, ಅಂಗಡಿಬೈಲು ಗ್ರಾಮಗಳಲ್ಲಿಯೂ ಕಂಡುಬರುತ್ತವೆ. ಅಲ್ಲದೇ ಕುಮಟಾ ತಾಲೂಕಿನ ಗೋಕರ್ಣ, ಹೊನ್ನಾವರ ತಾಲೂಕಿನ ಕೆಕ್ಕಾರ, ಹಳದಿಪುರ, ಮಂಕಿಯಲ್ಲಿಯೂ ಕಂಡುಬರುತ್ತವೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಈ ಎಲ್ಲ ಸ್ಥಂಬಗಳು ನಾವರ್ಮರಸನ ಕಾಲದಲ್ಲೇ (ಕ್ರಿ.ಶ. ೧೦೭೦ ರಿಂದ ಕ್ರಿ.ಶ. ೧೧೧೩) ರಚಿತವಾಗಿರುತ್ತವೆ. ಈ ಬಗೆಯ ರಣಗಂಬಗಳು ಕೇವಲ ಕರಾವಳಿ ವೀರರಿಗೆ ಅರ್ಪಿತವಾದ ಅತ್ಯುನ್ನತ ಗೌರವವಾಗಿವೆ.



ಭಂಡಾರಿಗದ್ದೆ ಶಾಸನ

ಭಂಡಾರಿಗದ್ದೆ, ಚಂದ್ರಕಾಂತ ಆಚಾರಿ ಅವರ ಮನೆ ಅಂಗಳದಲ್ಲಿದೆ.

ಕಾಲ: ೧೧ ನೇ ಶತಮಾನದ್ದಾಗಿದೆ. ಕನ್ನಡ ಲಿಪಿ ಮತ್ತು ಭಾಷೆಯಲ್ಲಿದೆ.

ಶಾಸನ ಪಾಠ

೧. ಶ್ರೀ ಸ್ವಸ್ತಿ ಸಮಸ್ತ ಗುಣ ಗಣಳೀಕ್ರಿತಮಪ್ಪ ಶ್ರೀಮನ್ಮಹಾಮಣ್ಣಳೇಶ್ವರಂ ಧರ್ಮ

೨. ಸುಮೇರು ಪರನಾರಿಪುತ್ರಂ ಕೋಕ ರಕ್ಷಪಾಲಕಂ ಶ್ರೀಮನ್ನಾಗವರ್ಮದೇ

೩. ವರ ಚಂದ ಚನ್ನಿಗನತಮಂ ತಳಜಮೂಕವಾಳೆಗೆ ತಪ್ಪಿದರೆ ಮುಟ

ಸಾರಾಂಶ : 'ಗುಣಗಣಳೀಕ್ರಿತಮಪ್ಪ', 'ಧರ್ಮಸುಮೇರು', 'ಪರನಾರಿಪುತ್ರ', 'ಕೋಕರಕ್ಷಪಾಲಕ' ಇತ್ಯಾದಿ ಬಿರುದುಗಳನ್ನು ಹೊಂದಿರುವ ಮಹಾಮಂಡಳೇಶ್ವರ ನಾಗವರ್ಮದೇವರು ಎಂಬ ಅರಸನನ್ನು ಹೆಸರಿಸುತ್ತದೆ. ಶಾಸನವು ಮುರಿದು ತುಂಡಾಗಿದೆ ಮತ್ತು ತುಂಡಾದ ಭಾಗಗಳು ಲಭ್ಯವಿಲ್ಲದ್ದರಿಂದ ಶಾಸನದ ಕಾಲಮಾನ, ಶಾಸನ ನಿಲ್ಲಿಸಿರುವ ಉದ್ದೇಶ ಮೊದಲಾದ ವಿವರಗಳು ತಿಳಿಯಲಾರವು.

ವಿಶ್ಲೇಷಣೆ : ಭಂಡಾರಿಗದ್ದೆಯಲ್ಲಿ ದೊರೆತ ಹೊಸ ಶಾಸನವು ಕೇವಲ ಮೂರು ಸಾಲುಗಳನ್ನೂ ಹೊಂದಿದ್ದರೂ, ಈ ಹಿಂದೆ ದೊರೆತ ಶಾಸನಗಳು ತಿಳಿಸದ ನಾಗವರ್ಮರಸನ ಬಿರುದುಗಳನ್ನು ನಮಗೆ ತಿಳಿಸುತ್ತದೆ. ಶಾಸನಕಾರನು ನಾಗವರ್ಮರಸನನ್ನು 'ಸಮಸ್ತ ಗುಣಗಣಳೀಕ್ರಿತಮಪ್ಪ' ಎಂದು ಕೊಂಡಾಡಿದ್ದಾನೆ. ಇದರಿಂದ ಅರಸನು ಸಕಲ ಸದ್ಗುಣಗಳ ಆಗರವಾಗಿದ್ದ ಒಬ್ಬ ಒಳ್ಳೆಯ ಆಡಳಿತಗಾರ, ಶೂರ–ಧೀರ ಅರಸನಾಗಿದ್ದನೆಂದು ಅರ್ಥೈಸಬಹುದಾಗಿದೆ. ಅರಸನು

ನ್ಯಾಯ–ನೀತಿಗಳ ಪರಿಪಾಲಕನಾದ ಧರ್ಮರಾಜ ಸಮಾನನಾಗಿರುವುದರಿಂದ ಶಾಸನವು ಆತನನ್ನು ‘ಧರ್ಮಸುಮೇರು’ ಎಂದಿದೆ. ಪರಸ್ತ್ರೀಯರನ್ನು ತನ್ನ ತಾಯಿಯಂತೆ ಕಾಣುತ್ತಿದ್ದ ಅರಸನನ್ನು ‘ಪರನಾರೀಪುತ್ರ’ನೆಂದು ಕರೆದಿದೆ. ಅಲ್ಲದೇ ಶಾಸನಕಾರ ಅರಸನನ್ನು “ಕೋಕರಕ್ಷಪಾಲಕಂ” ಎಂದು ಕರೆದಿರುವುದು ವಿಶೇಷವಾಗಿದೆ. ಇದರಿಂದ ಅರಸನು ಪಕ್ಷಿ ಸಂಕುಲವನ್ನೂ ಪ್ರೀತಿಸುವ ರಕ್ಷಿಸುವ ರಾಜನಾಗಿದ್ದ ಎನ್ನುವ ಅಪರೂಪದ ಅಂಶ ಇಲ್ಲಿ ತಿಳಿಯುತ್ತದೆ

ಭಂಡಾರಿಗದ್ದೆಯ ಈ ಹೊಸ ಶಾಸನ ತಿಳಿಸುವ ವಿಷಯದ ಜೊತೆಗೆ ಇದರ ಶಿಲ್ಪವೂ ಅಪರೂಪದ್ದಾಗಿದೆ. ಲಲಾಟ ಭಾಗದಲ್ಲಿ ಐದು ಅಂತಸ್ತುಗಳ ಮೂರು ಸುಂದರ ಮಂಟಪಗಳನ್ನು ಚಿತ್ರಿಸಲಾಗಿದ್ದು ಮಧ್ಯದ ಮಂಟಪದಲ್ಲಿ ಶಿವಲಿಂಗವಿದ್ದು ಅದನ್ನು ಪೂಜಿಸುವ ಯತಿ ಮತ್ತು ಲಿಂಗದ ಎದುರಿಗೆ ಕೈಮುಗಿದು ನಿಂತ ವೀರನನ್ನು ಚಿತ್ರಿಸಲಾಗಿದೆ. ಶಿಲೆಯ ಬಲಭಾಗದ ಮಂಟಪದಲ್ಲಿ ಗಣಪತಿ, ಷಣ್ಮುಖ ಮತ್ತು ನಂದಿಯನ್ನು ಚಿತ್ರಿಸಲಾಗಿದ್ದರೆ, ಎಡಭಾಗದ ಮಂಟಪದಲ್ಲಿ ಕರುವಿಗೆ ಹಾಲುಣಿಸುತ್ತಿರುವ ಆಕಳನ್ನು ಚಿತ್ರಿಸಲಾಗಿದೆ. ಕೇವಲ ವೀರಗಲ್ಲು ಎಂದು ಪರಿಗಣಿಸಿದಾಗ ಇದು ಕೈಲಾಸದ ಚಿತ್ರಣ. ಆದರೆ ಸೂಕ್ಷ್ಮವಾಗಿ ಗಮನಿಸಿದಾಗ ಆ ಕಾಲದಲ್ಲಿ ಭಂಡಾರಿಗದ್ದೆಯಲ್ಲಿ ಶಿವ, ಗಣಪತಿ ಮತ್ತು ಷಣ್ಮುಖರ ದೇವಾಲಯ ಇದ್ದ ಸುಳಿವನ್ನು ನೀಡುತ್ತದೆ. ಶಿಲ್ಪಿಯು ಶಾಸನದಲ್ಲಿ ಮಂಟಪಗಳನ್ನು ಬೋಧಿಗೆಯೊಂದಿಗೆ ಚಿತ್ರಿಸಿದ್ದನ್ನು ನೋಡಿದರೆ ಈ ಮಂಟಪಗಳ ರಚನೆಗೆ ಆತ ಆವೂರಿನ ದೇವಾಲಯದಿಂದ ಸ್ಫೂರ್ತಿಪಡೆದದ್ದು ಸ್ಪಷ್ಟವಾಗುತ್ತದೆ. ಇದಕ್ಕೆ ಪುಷ್ಠಿಕೊಡುವಂತೆ ಶಾಸನ ದೊರೆತ ಸ್ಥಳದಿಂದ ಸುಮಾರು ೬೦೦ ಮೀ. ದೂರದಲ್ಲಿ ಇಂದು ಕಾಂಕ್ರೀಟಿನಿಂದ ಜೀರ್ಣೋದ್ಧಾರವಾದ ಪ್ರಾಚೀನ ಶಿವಾಲಯವಿದೆ. ಅದರ ಪರಿಸರದಲ್ಲಿ ಸುಂದರ ಕೆತ್ತನೆಯ ಹಳೆಯ ಶಿಲಾಕಂಬಗಳ ಅವಶೇಷಗಳೂ ಇವೆ. ಇನ್ನು ಶಾಸನ ಶಿಲ್ಪದಲ್ಲಿ ಆಕಳು ಕರುವಿಗೆ ಹಾಲು ನೀಡುತ್ತಿರುವುದು ರಾಜ್ಯದ ಸಮೃದ್ಧಿಯ ಸಂಕೇತವಾಗಿ ಗುರುತಿಸಬಹುದು.

ನಾಗರ್ವಮರಸ

ಪ್ರಸ್ತುತ ಚರ್ಚೆಯ ಶಾಸನಗಳಲ್ಲಿ ಉಲ್ಲೇಖಿತ ಯಾವುದೇ ರಾಜವಂಶ ಇತ್ಯಾದಿಗಳನ್ನು ಉಲ್ಲೇಖಿಸದೇ ತೇದಿಯನ್ನು ಹೇಳಿ ನೇರವಾಗಿ ಪಂಚಮಹಾಶಬ್ದ ಮಹಾಮಂಡಳೇಶ್ವರ ನಾಗವರ್ಮರಸನನ್ನು ಉಲ್ಲೇಖಿಸುತ್ತದೆ. ಶಾಸನದ ಕಾಲಮಾನವು ಕಲ್ಯಾಣ ಚಾಲುಕ್ಯರ ಆಳ್ವಿಕೆಯ ಅವಧಿಯಾಗಿದ್ದು ಸಮಕಾಲೀನ ಸಂದರ್ಭದಲ್ಲಿ ಪರಿಚಿತವಿರುವ ಮತ್ತು ಅಂಕೋಲೆಯಲ್ಲಿ ಆಡಳಿತ ನಡೆಸಿದ ಪ್ರಮುಖ ರಾಜ ಮನೆತನದಲ್ಲಿ ಈ ಅರಸನ ಉಲ್ಲೇಖವಿಲ್ಲದಿರುವುದರಿಂದ ನಾವು ಈ ನಾಗವರ್ಮರಸ ಯಾರು? ಎಂದು ತಿಳಿಯಲು ಬೇರೆ ಆಕರಗಳನ್ನು ಪರಿಶೀಲಿಸಬೇಕಾಗುತ್ತದೆ.

ಹೊನ್ನಾವರದ ಕೆಕ್ಕಾರಿನ ಅಮ್ಮನವರ ದೇವಾಲಯದಲ್ಲಿನ ಮೂರು ವೀರಗಂಬ ಶಾಸನಗಳಿದ್ದು ಮೊದಲನೆಯ ಶಾಸನದ ಕಾಲ ಕ್ರಿ.ಶ. ೧೦೭೮,೧ ಎರಡನೆಯ ಶಾಸನದ ಕಾಲ ಕ್ರಿ.ಶ. ೧೦೭೯೨, ಮೂರನೆಯ ಶಾಸನದಲ್ಲಿ ಕಾಲಮಾನದ ವಿವರಣೆ ಇಲ್ಲ[೩]. ಕ್ರಿ.ಶ. ೧೦೭೯ ರ ಎರಡನೆಯ ವೀರಗಂಬ ಶಾಸನದಂತೆ ಪಂಚಮಹಾಶಬ್ದ ಮಹಾಮಂಡಳೇಶ್ವರ ಪೊನ್ನಾವುರಪುರವರಾಧೀಶ್ವರ ಶ್ರೀಮತು ಕಾಮದೇವರಸರ ಹೆಗ್ಗಡೆ, ನಾಡಮನೆ ಮತ್ತು ರಾಜ ಮನೆಯಲ್ಲಿ ಪ್ರಸಿದ್ಧ ವಾಗ್ಮಿಯಾದಂತಹ ಮಾರಸಿಂಗನ ವಿರುದ್ಧ ಅವನ ವೈರಿಗಳು ನಾಗವರ್ಮರಸನ ಕಿವಿಯಲ್ಲಿ ಪಿಸು ಮಾತನ್ನು ನುಡಿಯಲು, ಸಿಟ್ಟಿಗೆದ್ದ ನಾಗವರ್ಮರಸ ಮಾರಸಿಂಗನನ್ನು ಕೊಂದನೆಂದು ತಿಳಿದುಬರುತ್ತದೆ. ಮಾರಸಿಂಗನ ಹೆಸರಲ್ಲಿ ಆತನ ಹೆಂಡತಿ ಹೊನ್ನಬ್ಬೆ ಹೆಗ್ಗಡತಿ, ಗೋನು ಮತ್ತು ಮೇರು ಕೂಡಿಕೊಂಡು ವೀರಗಂಬವನ್ನು ನೆಡಿಸಿದರೆಂಬುದು ಇದರ ಸಾರಾಂಶ. ಮೂರನೆಯ ವೀರಗಂಬ ಶಾಸನವು ಪೊನ್ನವುರಪುರವರಾಧೀಶ್ವರ ಕಾಮದೇವರಸ ಮತ್ತು ಗೋಕರ್ಣ ಪುರವರಾಧೀಶ್ವರ ನಾಗವರ್ಮರಸರ ಮಧ್ಯೆ ಬಲ್ಲಾಳ ಬಯಲಿನಲ್ಲಿ ನಡೆದ ಕಾಳಗದಲ್ಲಿ ಜಳೆವಳಿಯ ಬಡಮ್ಮ ನಾಗವರ್ಮರಸನ ಕಡೆಯ ಹಲವು ಸೈನಿಕರನ್ನು ಕೊಂದು, ಜಯಹೊಂದಿ ಸ್ವರ್ಗಸ್ಥನಾದನೆಂದು ತಿಳಿಸುತ್ತದೆ.


ಭಂಡಾರಿಗದ್ದೆ ಶಾಸನ

ಕ್ರಿ.ಶ. ೧೦೭೯ರ ಹಳದಿಪುರ ಚಂಡೇಶ್ವರ ವೀರಗಂಬ ಶಾಸನದಲ್ಲಿ, ಸ್ವಸ್ತಿ ಸಮಧಿಗತ ಪಂಚ ಮಹಾಸಬ್ದ ಮಹಾಮಂಡಳೇಶ್ವರಂ ಪೊನ್ನವುರ ಪುರವರಾಧೀಶ್ವರಂ ಪರನಾರೀದೂರ ನರಸಂಕಸೂಲ ಕಲಿಗಳ ಮೊಗದ ಕೈ ನಾಮಾದಿ ಸಮಸ್ತ ಪ್ರಸಸ್ತಿ ಸಹಿತ ಶ್ರೀಮತು ಕಾಮದೇವರಸರುಂ ಗೋಕರ್ಣ ಪುರವರಾಧೀಶ್ವರಂ ನಾಗವರ್ಮದೇವರುಮಿದ್ದ ಪೊನ್ನವುರ ಕೋಟೆಯ ಮುತ್ತಿ ಸಕವರುಸಂ ಸಾಸಿರದೆರಡನೆಯ ಸಿದ್ಧಾರ್ಥಿ ಸಂವತ್ಸರದಾಸ್ವೇಜ ಸುದ್ಧ ಪಂಚಮಿ ವಡ್ಡವಾರದಂದು ಜಯಗೆಯ್ದರ್ ॥[೪] ಎಂದು ಹೊನ್ನಾವರದ ಕೋಟೆಯನ್ನು ಮಹಾಮಂಡಳೇಶ್ವರ

ಪೊನ್ನವುರ ಪುರವರಾಧೀಶ್ವರ ಕಾಮದೇವರಸನು ಗೋಕರ್ಣಪುರವರಾಧೀಶ್ವರ ನಾಗವರ್ಮರಸನಿಂದ ಜಯಿಸಿದನೆಂಬ ವಿವರ ಇದೆ.

ಹಾವೇರಿಯ ಗಳಗನಾಥದಲ್ಲಿರುವ ಕ್ರಿ.ಶ.೧೦೮೦ ರ ಕಾಲಕ್ಕೆ ಸೇರಿದ ಬೆಳ್ಳುಹೋಗೆ೭೦, ಮುವತ್ತಾರುಂಬವಾಡ ಕೊಂಡವಟಿ, ಮತ್ತು ಮಹಳಿಗೆನಾಡಿನ ರಾಜ್ಯಾಧಿಕಾರಿ ಚನ್ನರಸನು ಹೈವೆಯ ನಾಗವರ್ಮನ ಮೇಲೆ ಆಕ್ರಮಣ ಮಾಡಿದನು. ಈ ಯುದ್ಧದಲ್ಲಿ ಚನ್ನರಸನು ನಾಗವರ್ಮನನ್ನು ಸೋಲಿಸಿ, ಆತನಿಂದ ಕಪ್ಪಕಾಣಿಕೆಗಳನ್ನು ಪಡೆದಿದ್ದನೆಂದಿದೆ. ಈ ಶಾಸನದಲ್ಲಿ ಚೆನ್ನರಸನ ಹೈವೆಯ ಮೇಲಿನ ವಿಜಯವನ್ನು ಈ ಕೆಳಗಿನಂತೆ ಹೇಳಿದೆ:

ಬೆಸನಂ ಚಾಳುಕದ ಸಿಂಹಕ್ಷಿತಿಪ
ತಿ ಬೆಸಸಲ್ ಬನ್ದಪಂ ಚನ್ನುಗಂ ರಕ್ಕಸರೂಪಂ ತೋಱಲೆನ್ದಟ್ಟಿದನತಿಭಯದಿಂದಾಳ್ವರಂ ಕಪ್ಪ
ಮಂ ಗೊಗ್ಗಿ ಪಡಿಲ್ದುಳ್ಳರ್ತ್ತಮಂ ಕೊಟ್ಟಡಿಗೆಱಗಿದನಾ ಪೈವೆಯೊಳ್ ನಾಗವರ್ಮ್ಮಂ ಪೊಸ ಕಪ್ಪಂದೆತ್ತನಿನ್ನು
ಳ್ಳುಳಿದ ಮಲಪರುಳ್ಳಂಜಿ ತನ್ನೆಮ್ದದೆಂಬರ್ ಮಿಸುಕಾಡಲ್ ಬಕ್ಕುವೆ ಪೇಳ್ವನಿಜಮನಸಿಗಂ ಚನ್ನುಗಂಗಂ ಜವಂಗಂ॥[೫]

ಕ್ರಿ.ಶ. ಹನ್ನೆರಡನೇ ಶತಮಾನದ ಕಡಬಾಳ ಶಾಸನವೊಂದು ಮಹಾಮಂಡಳೇಶ್ವರ ಜೊಕ್ಕಿದೇವರಸನು ಹೈವೆಯ ನಾಗವರ್ಮರಸನ ವಿರುದ್ದ ದಂಡಯಾತ್ರೆ ಗೈದಾಗ ನಡೆದ ಯುದ್ಧದಲ್ಲಿ, ಕಾಳಾಚಾರಿ ಬರ್ಮನ ಮಗನಾದ ಕೋಟಿಗನು ಅಸುನೀಗಿದನೆಂದಿದೆ.[೬]

ಕಾಲ ನಿರ್ದೇಶನವಿಲ್ಲದ ಅಂಕೋಲಾ ತಾಲೂಕಿನ ಭಂಡಾರಿಗದ್ದೆಯ ಶಾಸನ ಮಹಾಮಂಡಳೇಶ್ವರ 'ಧರ್ಮಸುಮೇರು', 'ಪರನಾರಿಪುತ್ರ', 'ಕೊಕರಕ್ಷಪಾಲಕ' ಎಂದು ನಾಗವರ್ಮನನ್ನು ಉಲ್ಲೇಖಿಸುತ್ತದೆ.[೭]

ಈ ಎಲ್ಲ ಶಾಸನಗಳನ್ನು ಪರಿಶೀಲಿಸಿದಾಗ ಕೆಕ್ಕಾರ ಮತ್ತು ಹಳದಿಪುರ ಶಾಸನಗಳು ನಾಗವರ್ಮನನ್ನು "ಗೋಕರ್ಣಪುರವರಾಧೀಶ್ವರ' ಎಂದು ಉಲ್ಲೇಖಿಸಿವೆ. ಈ ಶಾಸನಗಳು ಕ್ರಿ.ಶ. ೧೧ನೇ ಶತಮಾನಕ್ಕೆ ಸೇರುತ್ತವೆ. ನಾಗವರ್ಮನು ಶಿಶುಗಲಿಯ ಪಾಂಡ್ಯ ದೊರೆ ಎರಡನೇ ಕಾಮನ ವಶದಲ್ಲಿದ್ದ ಹೊನ್ನಾವರ ಕೋಟೆಯನ್ನು ಗೆದ್ದುಕೊಂಡನು. ಈ ಕೋಟೆಯನ್ನು ಬಹುಶಃ ಗೋವೆಯ ಕದಂಬ ದೊರೆ ಜಯಕೇಶಿ ಕಟ್ಟಿದ್ದನು. ಕ್ರಿ.ಶ. ೧೦೮೦ ಹಾವೇರಿ ತಾಲೂಕಿನ ಗಳಗನಾಥ ಶಾಸನ ಮಹಾಮಂಡಳೇಶ್ವರ ಚೆನ್ನರಸನು ಕಲ್ಯಾಣ ಚಾಲುಕ್ಯರ ಸಿಂಹ ಕ್ಷಿತಿಪತಿ (ಎರಡನೇ ಜಯಸಿಂಹ, ೧೦೧೫–೧೦೪೪) ಯ ಆಜ್ಞೆಯ ಮೇರೆಗೆ ಹೈವೆಯ ನಾಗವರ್ಮನನ್ನು ಸೋಲಿಸಿ ಕಪ್ಪ ಕಾಣಿಕೆಗಳನ್ನು ಪಡೆದನೆಂದು ತಿಳಿಸುತ್ತದೆ. ಈ ನಾಗವರ್ಮನನ್ನು ಕೆಕ್ಕಾರ ಮತ್ತು ಹಳದೀಪುರ ಶಾಸನದಲ್ಲಿ ಉಲ್ಲೇಖಿತ ನಾಗವರ್ಮನೇ ಎಂದು ಭಾವಿಸಿದರೆ ಗೋಕರ್ಣದ ನಾಗವರ್ಮ ಕ್ರಿ.ಶ. ೧೦೭೦ರ ಸಮಯಕ್ಕೆ ಈ ಪ್ರದೇಶದಲ್ಲಿ ರಾಜಕೀಯವಾಗಿ ಕ್ರಿಯಾಶೀಲನಾಗಿದ್ದನೆಂದು ತಿಳಿಯುತ್ತದೆ. ಕ್ರಿ.ಶ. ೧೦೭೦ ರಿಂದ ಕ್ರಿ.ಶ. ೧೧೧೩ರ ಅವಧಿಯಲ್ಲಿ ಈ ಪ್ರದೇಶದ ಶಾಸನಗಳಲ್ಲಿ ನಾಗವರ್ಮನ ಉಲ್ಲೇಖವಿರುವದರಿಂದ ಈತ ಸ್ವತಂತ್ರ ರಾಜನಾಗಿದ್ದನೆಂದು ಭಾವಿಸಬಹುದು.

ಆದರೆ ಈ ಯಾವ ಶಾಸನಗಳೂ ನಾಗವರ್ಮನು ಯಾವ ರಾಜವಂಶಸ್ಥ ಎನ್ನುವ ಸುಳಿವನ್ನು ನೀಡುವುದಿಲ್ಲ. ಹೀಗಿರುವಾಗ ನಾಗವರ್ಮರಸನು ಮಹಾಮಂಡಳೇಶ್ವರನಾದ ಕುರಿತು ಒಂದು ವಾದವನ್ನು ಡಾ. ಸದಾನಂದ ನಾಯಕರು ಮುಂದಿಡುತ್ತಾರೆ.[೮] ಅವರ ಪ್ರಕಾರ ಕ್ರಿ.ಶ. ೯೭೩ರಲ್ಲಿ ತೈಲಪನು ರಾಷ್ಟ್ರಕೂಟ ಕಕ್ಕಲನನ್ನು ಗೆದ್ದು ಚಾಲುಕ್ಯ ಅಧಿಪತ್ಯವನ್ನು ಪುನಃ ಸ್ಥಾಪಿಸುವುದಕ್ಕೂ ಪೂರ್ವದಲ್ಲಿ ಅಂದರೆ ಕ್ರಿ.ಶ. ೯೬೭–೬೮ರಲ್ಲಿ ಚಾಲುಕ್ಯ ಚಟ್ಟದೇವನು ಬನವಾಸಿ ಮತ್ತು ಅದರ ಸೂತ್ತಲಿನ ಪ್ರದೇಶವನ್ನು ಗೆದ್ದುಕೊಂಡಿದ್ದನು. ತೈಲಪನು ಚಕ್ರವರ್ತಿಯಾದ ಮೇಲೆ ಬನವಾಸಿ ಪ್ರಾಂತ್ಯವನ್ನು ಆಳಲು ಮಹಾಮಂಡಲೇಶ್ವರನ್ನು ನೇಮಿಸುತ್ತಿದ್ದಂತೆ ತೋರುತ್ತದೆ. ಈ ಮಹಾಮಂಡಳೇಶ್ವರರನ್ನು ಅರಸ ಎಂದು ಕರೆಯುತ್ತಿದ್ದರು. ಕ್ರಿ.ಶ. ೯೯೭ರಲ್ಲಿ ಭೀಮರಸ'ನೆಂಬುವನು ಮಹಾಮಂಡಳೇಶ್ವರನಾಗಿದ್ದನು. ಕ್ರಿ.ಶ. ೧೦೪೫ರಲ್ಲಿ ಮಹಾಮಂಡಳೇಶ್ವರನಾದ 'ಸಿಂಗಣದೇವ'ನೆಂಬುವವನ ಆಳ್ವಿಕೆಯು ಬನವಾಸಿ ಸಾಂತಲಿಗೆ, ಕಿಸುನಾಡು ಪ್ರಾಂತ್ಯಗಳನ್ನಲ್ಲದೇ ಪಶ್ಚಿಮ ಕರಾವಳಿಯವರೆಗೂ ಹಬ್ಬಿತ್ತು.[೧೦] ಕ್ರಿ.ಶ. ೧೦೪೬ರಲ್ಲಿ ಮಹಾಮಂಡಳೇಶ್ವರನಾದ 'ಚಾಮುಂಡರಾಯ'ನೆಂಬುವನು ಬಲು ಪ್ರಖ್ಯಾತಿಯನ್ನು ಹೊಂದಿ ಹಲವು ಕೆರೆಕಟ್ಟೆ ದೇವಾಲಯಗಳನ್ನು ಕಟ್ಟಿಸಿದ್ದಾನಲ್ಲದೇ ತನ್ನ ಕೈಕೆಳಗಿನ ಅಧಿಕಾರಿಯಾಗಿದ್ದ ನಾಗವರ್ಮ ವಿಭುವಿನ ಕೈಯಿಂದ ಹಲವುದೇವಾಲಯಗಳನ್ನು ಕಟ್ಟಿಸಿದನು[೧೧]. ಈ ನಾಗವರ್ಮ ವಿಭುವೇ ಚಾಮುಂಡರಾಯನ ನಂತರ ಮಹಾಮಂಡಳೇಶ್ವರನಾಗಿ ಪ್ರಬಲನಾಗಿ ನಾಗವರ್ಮರಸನಾಗಿರಬೇಕು. ಗೋಕರ್ಣವನ್ನು ಗೆದ್ದು ಅಲ್ಲಿಂದ ಆಳ್ವಿಕೆ ನಡೆಸಿದ ಈತನನ್ನೇ ಕೆಕ್ಕಾರು ಮತ್ತು ಹಳದಿಪುರದ ಶಾಸನಗಳು ಗೋಕರ್ಣಪುರವರಾಧೀಶ್ವರ ನಾಗವರ್ಮರಸನೆಂದು ಕರೆದಿರುವುದೆಂದು ಭಾವಿಸಲು ಅಡ್ಡಿಯಿಲ್ಲ. ಅಲ್ಲದೇ ಪ್ರಸ್ತುತ ಬಡಗೇರಿ ಮತ್ತು ಭಂಡಾರಿಗದ್ದೆಯ ಶಾಸನದಲ್ಲಿ ಉಲ್ಲೇಖಿಸಲ್ಪಟ್ಟ ನಾಗವರ್ಮರಸ

ಮತ್ತು ಕೆಕ್ಕಾರ, ಹಳದಿಪುರ, ಕಡತೋಕ, ಗಳಗನಾಥ, ಶಿಕಾರಿಪುರ ಈ ಎಲ್ಲ ಶಾಸನಗಳಲ್ಲಿ ಉಲ್ಲೇಖಿತ ನಾಗವರ್ಮರಸ ಎಲ್ಲರೂ ಒಬ್ಬನೇ ಎನ್ನುವುದು ಸ್ಪಷ್ಟ. ಈ ಎಲ್ಲ ಶಾಸನಾಧಾರಗಳ ಅವಲೋಕನದಿಂದ 'ನಾಗವರ್ಮರಸ' ಸುಮಾರು ಕ್ರಿ.ಶ. ೧೦೭೦ ರಿಂದ ೧೧೧೩ರ ವರೆಗೆ ಗೋಕರ್ಣವನ್ನು ಕೇಂದ್ರವಾಗಿಟ್ಟುಕೊಂಡು ಹೊನ್ನಾವರ, ಕುಮಟ, ಅಂಕೋಲಾ, ಶಿರಸಿ, ಸಿದ್ದಾಪುರ ಶಿಕಾರಿಪುರ, ಸಾಗರ ತಾಲೂಕುಗಳ ಭಾಗದಲ್ಲಿ ಮಹಾಮಂಡಳೇಶ್ವರನಾಗಿ ಸ್ವತಂತ್ರವಾಗಿ ಸಂಪೂರ್ಣ ಪ್ರಾಚೀನ ಹೈವೆ-೫೦೦ ಪ್ರಾಂತ್ಯ ಮತ್ತು ಅದರ ಆಚೀಚಿನ ಪ್ರದೇಶಗಳನ್ನು ಆಳಿರುವಂತಹ ಒಬ್ಬ ರಾಜ ಎಂದು ನಿಷ್ಕರ್ಶೆಯಾಗಿ ಒಪ್ಪುವಂತದ್ದು.

[ಶಾಸನ ಪಾಠಗಳನ್ನು ಪರಿಶೀಲಿಸಿ ತಿದ್ದಿ ಕೊಟ್ಟು ಅಗತ್ಯ ಮಾರ್ಗದರ್ಶನ ನೀಡಿದ ಡಾ. ರವಿಕುಮಾರ ಕೆ. ನವಲಗುಂದ ಹರಿಹರ ಅವರಿಗೆ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಪ್ರಬಂಧ ಮಂಡಿಸಲು ಅವಕಾಶ ಮಾಡಿಕೊಟ್ಟ ಕರ್ನಾಟಕ ಇತಿಹಾಸ ಅಕಾದೆಮಿಯ ಎಲ್ಲ ಪದಾಧಿಕಾರಿಗಳಿಗೂ, ಸಿಬ್ಬಂದಿಗಳಿಗೂ ಹಾಗೂ ಸಮ್ಮೇಳನದ ಸಂಘಟಕರಿಗೂ ಧನ್ಯವಾಗಳು.]

ಅಡಿ ಟಿಪ್ಪಣಿಗಳು

೧. ಗಣಪತಿ ಗೌಡ, "ಶಿಸುಗಲಿ ಪಾಂಡ್ಯರ ಕೆಕ್ಕಾರ ವೀರಗಂಬ ಶಾಸನಗಳು : ಒಂದು ಅಧ್ಯಯನ" ಇತಿಹಾಸ ದರ್ಶನ, ಸಂಪುಟ ೧೧, ಪು. ೧೩೪-೧೩೯.

೨. ಪೂರ್ವೋಕ್ತ ೧.

೩. ಪೂರ್ವೋಕ್ತ ೧.

೪. ಪಾಡಿಗಾರ ಶ್ರೀನಿವಾಸ ಮತ್ತು ಗಣಪತಿ ಗೌಡ "ಎರಡನೆ ಕಾಮದೇವನ ಕಾಲದ ಚಂಡೇಶ್ವರ ವೀರಗಲ್ಲು ಶಾಸನ" ಕರ್ನಾಟಕ ಭಾರತಿ, ಸಂಪುಟ-೨೩, ಸಂ. ೨, ಪು. ೧೩೫.

೫. ಸೌಥ್ ಇಂಡಿಯನ್ ಇನ್ಸ್ಕ್ರಿಪಶನ್ಸ್, ಸಂಪುಟ ೧೮, ಸಂಖ್ಯೆ ೮೮ ಸಾಲು ೪೮-೫೨.

೬ ಅನುವಲ್ ರಿಪೋರ್ಟ ಆಫ ಸೌಥ್ ಇಂಡಿಯನ್ ಇಪಿಗ್ರಫಿ ೧೯೪೯-೫೦, ಭಾಗ ಬ., ಸಂ. ೧೩೩.

೭. ಡಾ. ಸದಾನಂದ ನಾಯಕ, 'ಸಾಹಿತ್ಯ ಸಂಶೋಧನೆ ಮತ್ತು ಸಮಾಲೋಚನೆ', ಪುಟ ೬೯.

೮. ಪೂರ್ವೋಕ್ತ ೭.

೯. ಡಾ. ಜಿ.ಎಂ. ಮೊರೇಸ್ 'ಕದಂಬಕುಲ' ಭಾಗ ೩ ಅಧ್ಯಾಯ ೨ ಪುಟ ೮೮.

೧೦. ಪೂರ್ವೋಕ್ತ ೮, ಪುಟ ೭೦.

೧೧. ಎಪಿಗ್ರಾಫಿಕಾ ಕರ್ನಾಟಿಕಾ ಸಂಪುಟ ೭ ಪುಟ ೧೨೦.
'ಬನವಾಸೆ ದೇಸದೊಳಗುಣ ಜಿನ ನಿಳಯಂ ವಿಷ್ಣು ನಿಳಯಮೀಶ್ವರ
ನಿಳಯಂ ಮುನಿಗಣ ನಿಳಯಮಿವಂ ರಾಯನ ಬೆಸದಿಂದ ನಾಗವರ್ಮವಿಭು ಮಾಡಿಸಿದಂ॥'

ಮೂರನೇ ಬಲ್ಲಾಳನ ಕಡತನಮಲೆಯ ಅಪ್ರಕಟಿತ ಶಾಸನ

ಕೆ.ಆರ್. ನರಸಿಂಹನ್✷

'ಕಡತನಮಲೆ'- ಎಂಬ ಹೆಸರಿನ ಗ್ರಾಮವು ಬೆಂಗಳೂರು ಉತ್ತರ ತಾಲ್ಲೂಕಿನ ಅರಕೆರೆ ಗ್ರಾಮಪಂಚಾಯಿತಿಯಲ್ಲಿ ಬರುವುದಾಗಿದ್ದು, ಬೆಂಗಳೂರು-ದೊಡ್ಡಬಳ್ಳಾಪುರ ಮಾರ್ಗದ ರಾಜಾನುಕುಂಟೆಯ ಮೂಲಕವಾಗಿ ಇಲ್ಲಿಗೆ ತಲುಪಬಹುದಾಗಿದೆ. ಅದ್ದೇವಿಶ್ವನಾಥಪುರವೆಂಬುದು ಕಡತನಮಲೆಗೆ ಸಮೀಪದಲ್ಲಿರುವ ಮುಖ್ಯ ಸ್ಥಳವಾಗಿದೆ. ಕಡತನಮಲೆ ಗ್ರಾಮದಲ್ಲಿರುವ ಕಂಬದ ಆಂಜನೇಯಸ್ವಾಮಿ ದೇವಾಲಯದ ಮುಂದೆ ರಸ್ತೆಯಲ್ಲಿ ಶಾಸನವನ್ನು ಕಾಣಬಹುದು.

ಶಾಸನವನ್ನು ಗ್ರಾಮಸ್ಥರ ನೆರವಿನಿಂದ ಕಾಂಕ್ರೀಟ್ ನೆಲದಿಂದ ಸಂಪೂರ್ಣವಾಗಿ ಹೊರತೆಗೆಯಲಾಗಿದ್ದು, ಇದು ಇಲ್ಲಿಯೇ ಸುಮಾರು ಇಪ್ಪತ್ತು ಮೀಟರ್ ದೂರದಲ್ಲಿ ನೆಲದಲ್ಲಿ ಇನ್ನೂ ಉಳಿದಿರುವ ಕಲ್ಲಿನ ಮೇಲಿನ ಭಾಗದ್ದೆಂದು ತೀರ್ಮಾನಿಸಬಹುದಾಗಿರುತ್ತದೆ. ಎಂದರೆ ಇವೆರಡು ಕಲ್ಲುಗಳು ಒಂದೇ ಶಾಸನವನ್ನು ಬರೆಯಲು ಸಹಾಯಕವಾಗಿದ್ದು ಇದು ಯಾವಾಗ ತುಂಡಾಯಿತೆಂದು ತಿಳಿದುಬರುತ್ತಿಲ್ಲ. ಇವೆರಡೂ ಶಿಲೆಗಳನ್ನು ಒಟ್ಟಾಗಿ ಸೇರಿಸಿ ಶಾಸನದ ಪಾಠವನ್ನು ತಾತ್ಕಾಲಿಕವಾಗಿ ಇಲ್ಲಿ ನೀಡಲಾಗಿದೆ.

ಶಾಸನದ ಪಾಠ

ಲಿಪಿ: ಕನ್ನಡ ರಾಜ: ಮೂರನೇ ಬಲ್ಲಾಳ ಕಾಲ: ಕ್ರಿಶ ೧೩೨೯

(ಶಾಸನಶಿಲೆಯ ಮೇಲ್ಭಾಗದಲ್ಲಿ ಚಂದ್ರ-ಸೂರ್ಯರ ನಡುವೆ ಅರ್ಧಸ್ವಸ್ತಿಕ ಚಿಹ್ನೆಯಿದೆ)

೦೧ ಸ್ವಸ್ತಿಶ್ರೀಶಕವರ್ಷಂಗಳು ೧೨೫೨
೦೨ ನೆಯ ಶುಕ್ಲಸಂವತ್ಸರದ . . .
೦೩ . . ಶ್ರೀಮತ್ಪ್ರತಾಪ ಚಕ್ರವ
೦೪ [ರ್ತಿ] ಹೊಯಿಸಣ ಬುಜಬಳ ವೀ
೦೫ [ರ] ಬಲ್ಲಾಳ ದೇವರಸರು ಉಣಾ
೦೬ ಮಲೆಯ ಪಟ್ಟಣದಲು ಸು
೦೭ ಖ ಸಂಗತಾ ವಿನೋದದಲು
೦೮ ರಾಜ್ಯಂಗೈಯುತಿರಲೂ
೦೯ ಶ್ರೀಮನುಮಹಾಪ್ರಧಾನಂ ಪೊಂನಣ
೧೦ ರವರ ಮಕ್ಕಳು ಕಾಮೆಯ ದಂಣಾ
೧೧ ಯ್ಕರು [ಊ] ಎಲಹಕ್ಕನಾಡ ಸಮಸ್ತ ಪ್ರ
೧೨ ಜೆ ಗಉಡಗಳು । ಚಯ್ಯುಮುಲೆ
೧೩ ಪ್ರಜೆಯರಿಗು ಕೊಟ್ಟ ಶಿಲಾಶಾಸನದ
೧೪ ಕ್ರಮವೆಂತೆಂದಡೆ ಎಲಹಕ್ಕನಾ
೧೫ ಡೊಳಗಣ ಕಡಿತಲೈಮಲೆಯ ಚ
೧೬ ತುಶೀಮೆವೊಳಗಾದ ಗದ್ದೆಬೆದ್ದಲನೂ
೧೭ ಕೊಡುಗೆ ಆಗಿ ಚಂದ್ರಸೂರಿಯ . .
೧೮ . . . . ವರಲಾಗಿರೆ
೧೯ ಕೊಡಗೆ ಮಂಗಳ ಮಹಾ ಶ್ರೀ ಶ್ರೀ
(ನೆಲದೊಳಗೆ ಇರುವ ಹೂತಿರುವ ಕಲ್ಲಿನ ಮೇಲಿರುವ ಕೊನೆಯ ಎರಡು ಸಾಲುಗಳು)

ಶಾಸನದ ಸಾರಾಂಶ: ಶಕವರ್ಷ ೧೨೫೨ನೆಯ ಶುಕ್ಲ ಸಂವತ್ಸರದಲ್ಲಿ ಎಂದರೆ ಕ್ರಿಶ ೧೩೨೯-೩೦ರ ವರ್ಷದಲ್ಲಿ ಶ್ರೀಮತ್ ಪ್ರತಾಪ ಚಕ್ರವರ್ತಿಯಾದ ಹೊಯಿಸಳ ಬಲ್ಲಾಳದೇವರಸರು (ಮೂರನೇ ಬಲ್ಲಾಳ:) ಆಳ್ವಿಕೆಯ ಕಾಲ ೧೨೯೧ ರಿಂದ ೧೩೪೩ರವರೆಗೆ) ಉಣ್ಣುಮಲೆ ಪಟ್ಟಣದಲ್ಲಿ ಸುಖಸಂಕಥಾವಿನೋದಗಳಿಂದ ರಾಜ್ಯಭಾರವನ್ನು ಮಾಡುತ್ತಿರುತ್ತಾರೆ.

✷ # ೨೦೩, ೧೦ಎ ಅಡ್ಡರಸ್ತೆ, ೧ನೇ ಮುಖ್ಯರಸ್ತೆ, ಮಾರುತಿನಗರ, ಯಲಹಂಕ, ಬೆಂಗಳೂರು, ಮೊ. ೯೪೪೮೪೪ ೧೩೦೪೫

ಇವರ ಮಹಾಪ್ರಧಾನಿಗಳಾದ ಪೊನ್ನಣ್ಣನವರ ಮಕ್ಕಳಾದ ಕಾಮೆಯ ದಂಡನಾಯಕನೂ, ಎಲಹಕ್ಕನಾಡಿನ ಸಮಸ್ತ ಪ್ರಜೆ ಗವುಂಡಗಳೂ ಚಯ್ಯಮೂಲೆಯ ಪ್ರಜೆಗಳಿಗೆ ಶಿಲಾಶಾಸನವನ್ನು ಇಲ್ಲಿ ಹಾಕಿಕೊಟ್ಟಿರುತ್ತಾರೆ.

ಇದರ ಕ್ರಮವೇನೆಂದರೆ ಎಲಹಕ್ಕನಾಡಿಗೆ ಸೇರುವ ಕಡಿತಲೈವಾಲೆಯ ಚತುಸ್ಸೀಮೆ ಒಳಗಾದ ಗದ್ದೆಬೆದಲು ಅಚಂದ್ರರ್ಕಸ್ಥಾಯಿಯಾಗಿ (ಚಂದ್ರಸೂರ್ಯರಿರುವರೆಗೆಂದು ಅರ್ಥ) ಕೊಡುಗೆ ನೀಡಲಾಗಿದೆ, ಮಂಗಳವಾಗಲಿ.

ಶಾಸನಾಧ್ಯಯನ

ಕಡತನಮಲೆ ಶಾಸನವು ಹೊಯ್ಸಳರ ಮೂರನೇ ಬಲ್ಲಾಳನ ಆಳ್ವಿಕೆಯ ಕಾಲಕ್ಕೆ ಸೇರಿದ್ದೆಂಬುದು ಸ್ಪಷ್ಟವಾಗುತ್ತದೆ. ಮೂರನೇ ನರಸಿಂಹನ ನಂತರದಲ್ಲಿ ಗದ್ದುಗೆಗೇರಿದ ಆತನ ಮಗ ಮೂರನೇ ಬಲ್ಲಾಳನ ಆಳ್ವಿಕೆಯ ಕಾಲವು ಚರಿತ್ರಾರ್ಹವಾದದ್ದು. ತನ್ನ ಕಾಲದಲ್ಲಿ ಈತನು ಮುಸ್ಲಿಮರ ಆಕ್ರಮಣವನ್ನು ದಿಟ್ಟವಾಗಿ ಎದುರಿಸಿ ಸಮರ್ಥ ರಾಜ್ಯಭಾರ ನಡೆಸಿದ್ದಾನೆ. ಆದರೆ ಅವರ ಉಪಟಳದಿಂದ ತನ್ನನ್ನು ರಕ್ಷಿಸಿಕೊಳ್ಳುವುದಕ್ಕೆ ರಾಜಧಾನಿಯನ್ನು ತಾತ್ಕಾಲಿಕವಾಗಿ ಹಲವೆಡೆಗೆ ಬದಲಾಯಿಸಿಕೊಳ್ಳುತ್ತಾನೆ. ಇಂಥವುಗಳಲ್ಲಿ **ಉಣ್ಣಾಮಲೆ**ಯೂ ಒಂದಾಗಿದೆ. ಇದು ಇಂದಿನ **ತಿರುವಣ್ಣಾಮಲೆ**ಯಾಗಿದ್ದು, ಬಲ್ಲಾಳನ ಚಿಕ್ಕಪ್ಪನಾದ ರಾಮನಾಥನ ಕಾಲದಿಂದ ಅಥವಾ ಅದಕ್ಕೂ ಮುನ್ನವೇ ತಾತ ಸೋಮೇಶ್ವರನ ಕಾಲದಿಂದಲೇ ಇವರಿಗೆ ತಮಿಳು ಪ್ರಾಂತ್ಯವು ಸುಪರಿಚಿತವಾಗಿತ್ತು. ಇದರಿಂದಾಗಿ ಈತನಿಗೆ 'ಉಣಾಮಲೆ'ಯಲ್ಲಿ **ಸುಖಸಂಗತಾವಿನೋದದಿಂದ ರಾಜ್ಯಭಾರ** ಮಾಡಲು ಸಾಧ್ಯವಾಯಿತು. ಬಲ್ಲಾಳನ ಇಂತಹದೊಂದು ಸಮಯೋಚಿತವಾದ ಚಾತುರ್ಯ ಮತ್ತು ಅದಕ್ಕೆ ದೊರೆತ ಪೋಷಣೆಗಳು ಸಹ ಈತನ ಸುದೀರ್ಘವಾದ ಆಳ್ವಿಕೆಗೆ ಕಾರಣವಾಗಿದೆಯೆನ್ನಬಹುದು.

ಮೂರನೇ ಬಲ್ಲಾಳನ ಕಾಲದ ಶಾಸನಗಳನ್ನು ಅಧ್ಯಯನ ಮಾಡಿದಲ್ಲಿ ಈತನು ಎರಡು ಬಾರಿ ಉಣಾಮಲೆ/ ಉಂಣಾಮಲೆ/ ವುಂಣಾಮಲೆ ಎಂಬ ಪ್ರಾಚೀನರೂಪಗಳನ್ನು ಹೊಂದಿದ ಇಂದಿನ ತಿರುವಣ್ಣಾಮಲೆಯಿಂದ ರಾಜ್ಯಭಾರ ಮಾಡಿದ್ದಾಗಿ ತಿಳಿದುಬರುತ್ತದೆ. ಇದರ ಕಾಲವು ಕ್ರಮವಾಗಿ ಕ್ರಿ.ಶ. ೧೩೨೮–೨೯ ಮತ್ತು ೧೩೪೨ರ ಸಂವತ್ಸರಗಳಾಗಿವೆ. ಇದಕ್ಕೆ ಪೂರಕವಾಗೆಂಬಂತೆ ಹೊಯ್ಸಳರ ಬಗ್ಗೆ ವಿಶೇಷ ಅಧ್ಯಯನವನ್ನು ನಡೆಸಿರುವ ಜೆ.ಡಿ.ಎಂ. ಡೆರಟ್ ಅವರೂ ಸಹ ಮೂರನೇ ಬಲ್ಲಾಳನು ೧೩೨೮ರ ಹೊತ್ತಿಗೆ ಬೇಸಿಗೆ ಮತ್ತು ಮಳೆಗಾಲಗಳನ್ನು ತಿರುವಣ್ಣಾಮಲೈನಲ್ಲಿ ಕಳೆದನೆಂದು ಅಭಿಪ್ರಾಯಪಟ್ಟಿರುತ್ತಾರೆ (ನೋಡಿ The Hoysalas J Duncan M Derrette P 164) ಇದೀಗ ಇದನ್ನು ವಿಸ್ತರಿಸಬಹುದಾಗಿದ್ದು ಕಡತನಮಲೆ ಶಾಸನದ ಆಧಾರದ ಮೇರೆಗೆ ಬಲ್ಲಾಳನು ಶುಕ್ಲ ಸಂವತ್ಸರದಲ್ಲಿ. ಎಂದರೆ ಕ್ರಿ.ಶ. ೧೩೨೯ರಲ್ಲಿ ಸಹ ಅಲ್ಲಿಯೇ ಇದ್ದಿರಬೇಕೆಂದು ಅಭಿಪ್ರಾಯಪಡಬಹುದಾಗಿದೆ. ಉಣಾಮಲೆ ಪ್ರಸ್ತಾಪವಿರುವ ಕ್ರಿ.ಶ. ೧೩೨೮ರ ವಿಭವ ಸಂವತ್ಸರಕ್ಕೆ ಸೇರುವ ಐದಾರು ಶಾಸನಗಳು ಬೆಂಗಳೂರು ಶಾಸನ ಸಂಪುಟದಲ್ಲಿ ದಾಖಲಾಗಿದೆ. ಅವು ಯಾವುದೆಂದರೆ, ದೊಡ್ಡಬಳ್ಳಾಪುರ ತಾಲ್ಲೂಕಿನ ಹಾಡೋನಹಳ್ಳಿ–ಕುರವಿಗೆರೆ, ದೇವನಹಳ್ಳಿ ತಾಲ್ಲೂಕಿನ ತಿಂಡಲು–ಚಿಕ್ಕಜಾಲ ಮತ್ತು ಹೊಸಕೋಟೆ ತಾಲ್ಲೂಕಿನ ಬೈರತಿ. ಈಗ ಸದ್ಯದಲ್ಲಿ ಶುಕ್ಲ ಸಂವತ್ಸರದ ಎಂದರೆ ೧೩೨೯ರಲ್ಲಿ ಬಲ್ಲಾಳನು ಉಣಾಮಲೆಯಿಂದಲೇ ರಾಜ್ಯ ನಿರ್ವಹಣೆ ಮಾಡುತ್ತಿದ್ದ ಎಂಬ ವಿಚಾರವನ್ನು ತಿಳಿಸುವ ಕಡತನಮಲೆ ಶಾಸನವು ವಿಶಿಷ್ಟವಾದದ್ದೆನ್ನಬಹುದು.

'ಎಲ್ವಾವಿಷಯ'ವೆಂಬುದು ಇಂದಿನ ಯಲಹಂಕ ಬಗೆಗಿನ ಪ್ರಾಚೀನ ರೂಪಕವಾಗಿದ್ದು ಇದನ್ನು ಹನ್ನೊಂದನೇ ಶತಮಾನದ ಶಾಸನದಲ್ಲಿಯೇ ಬಳಸಿರುವುದು ಕಂಡುಬರುತ್ತದೆ. (ನೋಡಿ 'ಇತಿಹಾಸ ದರ್ಶನ' ಸಂಪುಟ: ೩೩, ಲೇಖನ: ಹೆಸರಘಟ್ಟದ ಅಪ್ರಕಟಿತ ಶಾಸನ, ಲೇಖಕರು: ಕೆ.ಧನಪಾಲ್, ಕೆ.ಆರ್.ನರಸಿಂಹನ್, ಪ್ರಕಟಣೆ: ಕರ್ನಾಟಕ ಇತಿಹಾಸ ಅಕಾಡೆಮಿ) ಎಲಹಂಕವನ್ನು ತಮಿಳು ಶಾಸನಗಳು 'ಇಲೈಪಕ್ಕ' ಎಂದು ಕರೆದಿದೆ. **'ಇಲೈಪಕ್ಕನಾಟ್ಟು'** ಎಂಬ ಪ್ರಯೋಗಕ್ಕೆ ಹಲವಾರು ಶಾಸನಗಳು ಉದಾಹರಣೆಯಾಗಿ ನಮಗಿಂದು ದೊರೆಯುತ್ತಿವೆ. ಎಲಹಕ (ಎಲಹ / ಎಲಹಕ್ಕ / ಎಲಹಂಕ / ಯಲಹಂಕ– ಎಂಬಿತ್ಯಾದಿ ಹಲವು ಸ್ಥಳನಾಮಗಳು ಸುಮಾರು ಐವತ್ತಕ್ಕೂ ಹೆಚ್ಚು ಶಾಸನಗಳಲ್ಲಿ ಲಭ್ಯವಾಗುತ್ತಿವೆ. ಇದರ ಸಂಖ್ಯೆಯು ಹೊಸ ಹೊಸ ಶಾಸನಗಳ ಶೋಧದಿಂದ ಹೆಚ್ಚಾಗುತ್ತ ಸಾಗಿದೆ. ಕಡತನಮಲೆ ಶಾಸನದಲ್ಲಿ **'ಎಲಹಕ್ಕ'**ನಾಡಿನ ಉಲ್ಲೇಖ ಬಂದಿದೆ. 'ಎಲವ' ಎಂಬ ಪದದ ವಿಶ್ಲೇಷಣೆಯನ್ನು ಅರಿತುಕೊಳ್ಳುವುದು ಇಲ್ಲಿ ಅಗತ್ಯವಾದೀತು. **ಕೆಂಪು ಬೂರುಗದ ಮರಕ್ಕೆ 'ಎಲವ' ಎಂಬ ಹೆಸರಿದ್ದು ಇದನ್ನು ಇಲವ ಎಂದೂ ಪರ್ಯಾಯವಾಗಿ ಕರೆಯುತ್ತಾರೆ**. ಇದಕ್ಕೆ ಸಸ್ಯ ಶಾಸ್ತ್ರದ ಹೆಸರೇನೆಂದರೆ 'BOMBAS CEIBA' ಎಂಬುದಾಗಿದೆ. 'ಇಲವಿಂದ' ಎಂಬ ಒಂದು ಬಗೆಯ ವನಸ್ಪತಿಯನ್ನು 'ಸಕಲವೈದ್ಯಸಾರವು' ತಿಳಿಸುತ್ತದೆ. ಇದರ ಚಿಗುರನ್ನು ಜೀರಿಗೆ ಮತ್ತಿತರ ಸಾಂಬಾರ ವಸ್ತುಗಳೊಂದಿಗೆ ಸೇರಿಸಿ ಕಷಾಯ ಮಾಡಿ ಕುಡಿದರೆ ಅಂತರ್ದಾಹವು ಪರಿಹಾರವಾಗುತ್ತದೆಂಬ ಮನೆಮದ್ದಿನ ವಿಷಯ 'ಸಕಲವೈದ್ಯಸಾರ'ದಲ್ಲಿದೆ. (ಇದನ್ನು

ತಿಳಿಸಿದ ಕಾಲೇಜು ಪ್ರಾಧ್ಯಾಪಕ ಡಾ.ಎಸ್.ಎಲ್. ಶ್ರೀನಿವಾಸಮೂರ್ತಿ ಅವರಿಗೆ ಧನ್ಯವಾದಗಳು) ಇದರಿಂದ ನಮಗೆ ಎಲಹಂಕ ನಾಡಿನ ಪ್ರದೇಶವು ಇಂತಹ ಕೆಂಪು ಬೂರುಗದ ಮರಗಳಿಂದಲೂ 'ಇಲವ' ಎಂಬ ವನಸ್ಪತಿಯಿಂದಲೂ ಸಮೃದ್ಧವಾಗಿರಬೇಕೆಂದು ಆಲೋಚಿಸಲು ಅವಕಾಶವಿದೆ.

ಕಡತನಮಲೆ ಶಾಸನದಲ್ಲಿ ಪ್ರಸ್ತಾಪಗೊಂಡಿರುವ ಕಾಮೆಯ ದಂಡನಾಯಕನನ್ನು 'ಶ್ರೀಮನು ಪ್ರಧಾನಂ ಪೊಂನಣನವರ ಮಕ್ಕಳು ಕಾಮೆಯ ದಂಣಾಯ್ಕರು'–ಎಂದು ಹೇಳಲಾಗಿದೆ. ಈಗಾಗಲೇ ಪ್ರಸ್ತಾಪ ಮಾಡಿರುವ ಬಲ್ಲಾಳನ ಆಳ್ವಿಕೆಯ ಕಾಲದ ಐದೂ ಶಾಸನಗಳಲ್ಲಿ ಈತನನ್ನು ಬಹುಪಾಲು ಇದೇ ಹೆಸರಿನಿಂದ ಕರೆದಿರುವುದು ಈತನಿಗೆ ಸಂದಿದ್ದ ಗೌರವಕ್ಕೆ ನಿದರ್ಶನವಾಗಿದೆ. ಇಲ್ಲಿಯವರೆಗೆ ತಿಳಿದುಬಂದಿರುವ ಹಾಗೆ ಈತನ ಮೊದಲ ಪ್ರಸ್ತಾಪವು ಮಾಗಡಿ ತಾಲ್ಲೂಕಿನ ಹೆಬೊಳಲು ಗ್ರಾಮದ ಕ್ರಿಶ ೧೩೧೫ರ ಕಾಲಕ್ಕೆ ಸೇರಿರುವ ಶಾಸನದಲ್ಲಿ ಬಂದಿರುತ್ತದೆ.

ಕಾಮೆಯ ದಂಡನಾಯಕನು ಎಲಹಂಕ ನಾಡಿನ ಅಭಿವೃದ್ಧಿಯ ಕಡೆಗೆ ವಿಶೇಷ ಗಮನವನ್ನು ಹರಿಸಿದ್ದನೆಂಬ ಸಂಗತಿಯು ನಮಗೆ ಡಾ. ಗಂಗಾಂಬಿಕೆ ಅವರ ಮಾತುಗಳಲ್ಲಿ ತಿಳಿದುಬರುತ್ತದೆ. 'ಮೂರನೆ ಬಲ್ಲಾಳನು ಉಣಾಮಲೆ ಮತ್ತು ಸುತ್ತಮುತ್ತಲಿನ ಪ್ರದೇಶದಲ್ಲಿ ನಡೆಯುತ್ತಿದ್ದ ರಾಜಕೀಯ ಮೇಲಾಟಗಳಲ್ಲಿ, ರಾಜಕೀಯ ಸ್ಥಿತ್ಯಂತರದ ಕಾದಾಟಗಳಲ್ಲಿ ನಿರತನಾಗಿದ್ದ ಸಂದರ್ಭದಲ್ಲಿ ಕನ್ನಡ ನಾಡಿನ ಬಯಲುಸೀಮೆಯ ಪ್ರದೇಶಗಳಾದ ದೇವಗುಂದ ನಾಡು ಮತ್ತು ಯಲಹಂಕ ನಾಡುಗಳಲ್ಲಿ ಯುದ್ಧಾದಿ ಅಶಾಂತ ಪರಿಸ್ಥಿತಿಗಳು, ಅರಾಜಕತೆಗಳು, ಸಾಮಾನ್ಯ ವಿಪ್ಲವಗಳು ಸಹ ಮುನ್ನೆಲೆಗೆ ಬಾರದಂತೆ ದಕ್ಷವೂ, ಯೋಗ್ಯವೂ ಆದ ಆಡಳಿತವನ್ನು ನಡೆಸಿದ್ದನು ಎಂಬುದು ದೃಢವಾಗುತ್ತದೆ'– ಎಂದಿದ್ದಾರೆ (ನೋಡಿ: 'ಶಾಸನ ಅಧ್ಯಯನ' ಸಂಪುಟ: ೧೦, ಸಂಚಿಕೆ: ೧ ಜುಲೈ–ಡಿಸೆಂಬರ್ ೨೦೧೮, ಕನ್ನಡ ವಿಶ್ವವಿದ್ಯಾಲಯ, ಹಂಪಿ) ಎಲಹಂಕ ನಾಡಿನ ಉತ್ಕರ್ಷದಲ್ಲಿ ಮೂರನೇ ಬಲ್ಲಾಳನಿಗೆ ತನ್ನ ಸಮರ್ಥ ಆಡಳಿತ ನಿರ್ವಹಣೆಯಿಂದ ಒತ್ತಾಸೆಯಾಗಿ ನಿಂತ ಕಾಮಯ್ಯ ದಂಡನಾಯಕನ ಮಿಗಿಲಾದ ಪಾತ್ರವನ್ನು ಯಲಹಂಕ ಇತಿಹಾಸದ ಅಧ್ಯಯನದಲ್ಲಿ ಅರಿತಿರಲೇಬೇಕಾದದ್ದು ಅತ್ಯವಶ್ಯಕವಾದದ್ದು.

ಕಡತನಮಲೆಯನ್ನು ಶಾಸನದಲ್ಲಿ **'ಕಡಿತಲೈಮಲೆ'** ಎಂಬ ಹೆಸರಿನಿಂದ ಕರೆದಿದೆ. 'ಮಲೆ' ಎಂಬ ವಿಶೇಷಣ ಬೆಟ್ಟಕ್ಕೆ ಅನ್ವಯವಾಗಬಹುದಾದರೂ ಇಲ್ಲಿ ಯಾವುದೇ ಬೆಟ್ಟಗಳು ಕಂಡುಬರುತ್ತಿಲ್ಲವೆಂಬುದು ಇಲ್ಲಿ ಗಮನಿಸಬೇಕಾದದ್ದು. ಇದು 'ಉಣಾಮಲೆ'ಯ ಪ್ರಭಾವದಿಂದ ಇಲ್ಲಿನ ಪ್ರದೇಶಕ್ಕೆ ನೀಡಿರುವ ಹೆಸರಾಗಿರಬಹುದೆ ಎಂಬುದನ್ನು ಇಲ್ಲಿ ಚಿಂತಿಸಬೇಕಾಗುತ್ತದೆ. ಎಲಹಕ್ಕ ನಾಡಿನಲ್ಲಿ ಬರುವ ಕಡಿತಲೈಮಲೆಯ ಚತುಸ್ಸೀಮೆಯೊಳಗಣದ ಗದ್ದೆ–ಬೆದ್ದಲು ಎಲ್ಲವನ್ನು ಕಾಮೆಯ ದಂಡನಾಯಕ ಮತ್ತು ಎಲಹಕ್ಕ ನಾಡಿನ ಮಹಾಜನಗಳು 'ಚಯ್ಯಮೂಲೆ'ಯವರಿಗೆ ಕೊಡುಗೆಯಾಗಿ ಕೊಟ್ಟಿರುತ್ತಾರೆ. ಇಲ್ಲಿ ಬಂದಿರುವ ಚಯ್ಯಮೂಲೆಯವರು ಯಾರೆಂಬುದು ಇಲ್ಲಿ ಇನ್ನೂ ಬಿಡಿಸಬೇಕಾದ ಪ್ರಶ್ನೆಯಾಗುಳಿದಿದೆ. ಯಲಹಂಕ ನಾಡಿನ ಮಹಾಜನಗಳು ಹೊಂದಿದ್ದ ಗಣನೀಯ ಸ್ಥಾನವೂ ಶಾಸನದಿಂದ ನಿರ್ದೇಶಿತವಾಗಿದೆ.

ಕಡತನಮಲೆಯಲ್ಲಿ ಲಭ್ಯವಾದ ಹೊಸ ಶಾಸನದಿಂದಾಗಿ ನಮಗೆ ಮೂರನೇ ಬಲ್ಲಾಳನು ಉಣಾಮಲೆ ಅರ್ಥಾತ್ ತಿರುವಣ್ಣಾಮಲೆಯಿಂದ ಮೊದಲ ಹಂತದಲ್ಲಿ ಸುಮಾರು ಎರಡು ವರ್ಷಗಳ ಕಾಲ ರಾಜ್ಯ ನಿರ್ವಹಣೆ ಮಾಡಿದ್ದಿರಬೇಕೆಂಬ ಹೊಸ ಸಂಗತಿ ಬೆಳಕಿಗೆ ಬಂದಂತಾಗಿದೆ. ಕಾಮೆಯ ದಂಡನಾಯಕನ ಆಡಳಿತದ ಕೊನೆಯ ಹಂತದ ಶಾಸನವಾಗಿರುವ ಇದರಿಂದ ನಮಗೆ ಆತನಿಗೆ ತನ್ನ ರಾಜನಂತೆಯೇ ಪ್ರಜೆಗಳ ಬಗೆಗಿನ ಅಭಿಮಾನ, ಅವರ ಆರ್ಥಿಕ ಪುನಶ್ಚೇತನದ ಕಡೆಗಿದ್ದ ಒಲವು ವ್ಯಕ್ತವಾಗುತ್ತದೆ. ಇತಿಹಾಸದ ಬಲಸಂವರ್ಧನೆಯ ಕೊಂಡಿಯಾಗಿಯೂ ಉಳಿಯಬಲ್ಲ ಇಂತಹ ಶಾಸನಗಳ ಸಂರಕ್ಷಣೆಯ ಕಾರ್ಯ ಅತ್ಯವಶ್ಯಕವಾಗಿ ಆಗಬೇಕಾಗಿದೆ.

[ಲೇಖನ ರಚನೆಗೆ ನೆರವಾದ ಕೆ. ಧನಪಾಲ್, ಡಾ. ಆರ್. ಯುವರಾಜು, ಕಡತನಮಲೆಯ ಸತೀಶ್ ಹಾಗೂ ಅಲ್ಲಿನ ಯುವಕರು ಮತ್ತು ಪತ್ರಕರ್ತ ರಾಮಚಂದ್ರಮೂರ್ತಿ ಅವರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ.]

ದೇವನಹಳ್ಳಿ ತಾಲ್ಲೂಕಿನ ಬೊಮ್ಮವಾರದ ಅಪ್ರಕಟಿತ ಶಾಸನ

ಆರ್. ಯುವರಾಜು*

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನಾಲ್ಕು ತಾಲ್ಲೂಕ್‌ಗಳಲ್ಲಿ ಒಂದಾದ ದೇವನಹಳ್ಳಿ ತಾಲ್ಲೂಕಿನ ಕುಂದಾಣ ಹೋಬಳಿಗೆ ಸೇರಿರುವ ಬೊಮ್ಮವಾರ ಗ್ರಾಮವು ಐತಿಹಾಸಿಕವಾಗಿ ಮಹತ್ವ ಪಡೆದಿರುವುದಕ್ಕೆ ಹಲವಾರು ಶಾಸನಗಳಾಧಾರದಿಂದ ತಿಳಿದು ಬರುತ್ತದೆ. ಹಾಗೇಯೇ ಗ್ರಾಮದಲ್ಲಿನ ಪ್ರಸಿದ್ಧವಾದ ಸುಂದರೇಶ್ವರ ದೇವಾಲಯವನ್ನು ದೇವನಹಳ್ಳಿಯನ್ನು ಆಳುತ್ತಿದ್ದ ಬಚ್ಚೆಗೌಡ ಎಂಬುವವನು ನಿರ್ಮಿಸಿದನು ಎಂಬ ಪ್ರತೀತಿ ಇದೆ. ಗ್ರಾಮದ ಅಂಜನೇಯ ದೇವಾಲಯದ ಎದುರಿನ ರಸ್ತೆಯ ಪಕ್ಕದಲ್ಲಿ ಸುಮಾರು ೫ ಅಡಿ ಎತ್ತರ, ೩ ಅಡಿ ಅಗಲದ ೨೦ ಸಾಲುಗಳ ಅಪ್ರಕಟಿತ ಶಾಸನವನ್ನು ೨೦೧೯ ರಲ್ಲಿ ಪತ್ತೆ ಹಚ್ಚಲಾಗಿದೆ.

ಶಾಸನದ ಪಾಠ

೧. ಶ್ರೀ ಮತು ಸಕವರುಷ ೧೨೭೭ ಜ
೨. ಯ ಸಂವತ್ಸರದ (ಕಾ) ಸು ೧೫ ಶ್ರೀಮನು
೩. ಮಹಾ ಮಂಡಳೇಶ್ವರಂ ಅರಿರಾಯ ವಿಭಾಡ
೪. ಭಾಷೆಗೆ ತಪ್ಪುವರಾಯ ಗಂಡ ಚತುಸಮು
೫. ದ್ರಾದಿಪತಿ ಶ್ರೀವೀರ ಹ
೬. ರಿಯಪ್ಪ ಒಡೆಯರು ಪ್ರು ತಿ
೭ ವಿ ರಾಜ್ಯವಂ ಶ್ರೀಮನು ಮಹಾ
೮. ಎಲಹಕ್ಕನಾಡ ಪ್ರಭುಗಳು ಸೊಣಪ ..ದೇ
೯. ಣನ ..ಸರುರ ಬಯಿರಿದೇವ.. ವಾಗಟ
೧೦ ದ ಮಾರದೇವಯ ಕಂನ ಗಳುಡನು ತಾಮಿಯಪ್ಪ
೧೧ ..ಯಪ ಅಲಾಜಿಯರು ಒಳಗಾದ ಸ
೧೨. ಮಸ್ತ ಪ್ರಜೆಗಾವುಂಡಗಳು ಶ್ರೀಮನು ಮಹಾ
೧೩. ಸಾವಂತದಿಪತಿ ನರಲೋಕ ಗಂಡ ಮಯಿಲೆ
೧೪. ಯ ನಾಯಕನ ತಮ್ಮ ಚನ್ನಯನಾಯಕ
೧೫. ರಿಗೆ ಬೊಮ್ಮವರದ ಚತುಸೀಮೆನು
೧೬. ಕೊಡಗಿಯಾಗಿ ಕೊಟ್ಟೆಉ ಚಂದ್ರಾದಿತ್ಯ
೧೭. ವರೆ... ಅನುಭವಿಸೂದು ಮಂಗಳ
೧೮. ಮಹಾ ಶ್ರೀಶ್ರೀ ಇ ಉರ ಎಂಮ
೧೯. ತಮ ಮಕ್ಕಳು ವರಯತ್ರ ಸಲು
೨೦. ವುದು.

ಸಾರಂಶ: ವಿಜಯನಗರದ ವೀರ ಹರಿಯಪ್ಪ ಒಡೆಯರ್ ಆಳ್ವಿಕೆಯಲ್ಲಿ ಮಹಾ ಎಲಹಂಕನಾಡ ಪ್ರಭುಗಳು ಸೊಣಪ.., ಬಯಿರಿದೇವ, ವಾಗಟದ ಮಾರದೇವಯ, ಕಂನಗಳುಡ, ತಾಮಿಯಪ್ಪ, ..ಯಪ, ಅಲಾಜಿಯರು ಒಳಗಾದ ಸಮಸ್ತ ಪ್ರಜೆಗವುಂಡಗಳು ಸೇರಿ ಮಹಾ ಸಾವಂತಾಧಿಪತಿಯಾದ ನರಲೋಕ ಗಂಡ ಮಯಿಲೆಯನಾಯಕನ ತಮ್ಮ ಚನ್ನಯನಾಯಕನಿಗೆ ಬೊಮ್ಮವಾರದ ಚತುಸೀಮೆಯನ್ನು ಕೊಡುಗೆಯಾಗಿ ಕೊಟ್ಟ ವಿವರವಿದೆ.

ಶಾಸನದಲ್ಲಿ ಉಲ್ಲೇಖವಾದ ಜಯ ಸಂವತ್ಸರ ಹಾಗೂ ಶಾಲಿವಾಹನ ಶಕ ೧೨೭೭, ಕಾರ್ತಿಕ ಶು ೧೫ನ್ನು ಇಂದಿನ ಕಾಲಮಾನಕ್ಕೆ ಬದಲಾಯಿಸಿದರೆ ಕ್ರಿ.ಶ. ೧೩೫೪, ನವೆಂಬರ್ ೧ ಕ್ಕೆ ಸರಿ ಹೊಂದುತ್ತದೆ. ಮತ್ತು ಶಾಸನದಲ್ಲಿನ ಹರಿಹರರಾಯನು ವಿಜಯನಗರ ಮನೆತನ ಸಂಸ್ಥಾಪಕರಾದ ಸಂಗಮನ ಐದು ಸಹೋದರರಲ್ಲಿ ಹಿರಿಯವನಾಗಿದ್ದು, ೧೩೫೬ ರ ವರೆಗೆ ಆಳ್ವಿಕೆ ನಡೆಸಿದ್ದಾನೆ. ಜಿಲ್ಲೆಯಲ್ಲಿ ಹರಿಹರನಿಗೆ ಸಂಬಂಧಿಸಿದಂತೆ ೧೬ಕ್ಕೂ ಶಾಸನಗಳು ದೊರೆತಿವೆ.

ಹಾಗೆಯೇ ಮಹಾ ಯಲಹಂಕ ನಾಡಪ್ರಭು ಸೊಣ್ಣಪ ಎಂಬುವವನು ನಲ್ಲೂರುನಾಡ ನಾಯಕರಾದ ಶ್ರೀಪತಿನಾಯಕನ ಮಗನಿರಬೇಕು. ಇವನ ಕಾಲಮಾನ ಕ್ರಿ.ಶ. ೧೩೪೬–೧೪೧೭ ಆಗಿರುವುದರಿಂದ ಶಾಸನಕಾಲ ಕ್ರಿ.ಶ. ೧೩೫೫ ಆಗಿದ್ದು, ಈ

* ಸಂಶೋಧಕರು, ಶ್ರೀ ಅರವಿಂದ ಭವನ, ದಿ ಮಿಥಿಕ್ ಸೊಸೈಟಿ, ನೃಪತುಂಗ ರಸ್ತೆ, ಬೆಂಗಳೂರು, ಮೊ. ೯೬೭೦೬೯ ೯೯೬೯೯

ಸಂದರ್ಭದಲ್ಲಿ ಈ ಸೋಣಪ್ಪನಾಯಕ ಬಿಟ್ಟರೆ ಬೇರೆ ಯಾವ ಸೋಣಪ್ಪ ಇರುವುದಕ್ಕೆ ಶಾಸನಾಧಾರಗಳು ಲಭ್ಯವಾಗಿಲ್ಲ. ಸೊಣ್ಣಪ್ಪ ಹಾಗೂ ಅವರ ವಂಶಸ್ಥರು ದೇವನಹಳ್ಳಿ, ನಲ್ಲೂರು, ಚಿಕ್ಕಜಾಲ, ಹೊಸಕೋಟೆ ಹೋಬಳಿಗಳಲ್ಲಿ ಆಳ್ವಿಕೆ ನಡೆಸಿರುವುದಕ್ಕೆ ಹಲವಾರು ಶಾಸನಗಳು ಲಭ್ಯವಾಗಿವೆ. ಹೊಯ್ಸಳರ ಕಾಲದಲ್ಲಿದ್ದ ಸೊಣ್ಣೆಯನಾಯಕ ಅಥವಾ ಸೊಣ್ಣಗೌಡನು ವಿಜಯನಗರ ಕಾಲದಲ್ಲಿ ನಾಡಪ್ರಭುವಾಗಿದ್ದರು ಎಂದು ಪಿ.ವಿ.ಕೃಷ್ಣಮೂರ್ತಿ ಅಭಿಪ್ರಾಯ ಪಟ್ಟಿದ್ದಾರೆ. ವಿಜಯನಗರ ಕಾಲಾವಧಿಯಲ್ಲಿ ಮಹಾಸಾಮಂತಾಧಿಪತಿ, ನಾಡಪ್ರಭು, ಸೇನಾಧಿಪತಿಯಾಗಿ (EC-9, Ht63, ಕ್ರಿ.ಶ. ೧೪೧೨, ಬೆಂಡಿಗಾನಹಳ್ಳಿ) ಹಲವು ಬಗೆಯಲ್ಲಿ ಕಾರ್ಯನಿರ್ವಹಿಸಿದ್ದಾರೆ ಎನ್ನಬಹುದು. ಬೊಮ್ಮವಾರದ ಸೊಣ್ಣಪ್ಪ ಎಂದು ಚಿಕ್ಕಹೋಬನಹಳ್ಳಿಯ ಶಾಸನದಲ್ಲಿ ಇರುವುದರಿಂದ ಸೊಣ್ಣಪ್ಪನು ಬೊಮ್ಮವಾರದ ಗ್ರಾಮದವನಾಗಿದ್ದು (EC-9, Dv8, ಬೊಮ್ಮವಾರ), ಇದೇ ಗ್ರಾಮವನ್ನು ದಾನ ನೀಡಿದ್ದಾನೆ. ಸೊಣ್ಣಪ್ಪನಾಯಕನ ವಂಶಾವಳಿಯನ್ನು ಇಲ್ಲಿ ಕಾಣಬಹುದು.

ಶ್ರೀಪತಿನಾಯಕ
│
ಮಹಾಸಾಮಂತಾಧಿಪತಿ ಸೋಣಪ್ಪನಾಯಕ

ಸೊಯನಾಯಕ	ಅಂಕಿಯನಾಯಕ	ಚಿಕ್ಕಅಂಕಿಯ ನಾಯಕ	ಹಿರಿಯಪ್ಪ	ಚಾವುಂಡೆಯನಾಯಕ
ಪುರುಗಣ	ಜೀಮೆಯನಾಯಕ	ಭೈರಣ್ಣನಾಯಕ		

ಈ ಶಾಸನದಲ್ಲಿ ಪ್ರಮುಖವಾಗಿ ಕಂಡುಬರುವ ಬಯಿರಿದೇವ, ವಾಗಟದ ಮಾರದೇವ, ಕಂನಗವುಡನು, ತಾಮಿಯಪ್ಪನು ಅಲ್ಲಾಳಜಿಯರು ಈ ತಂಡದ ಉಲ್ಲೇಖವಿರುವ ಹಲವಾರು ಶಾಸನಗಳು ಈಗಾಗಲೇ ದಾಖಲಾಗಿವೆ. ಅಲ್ಲಾಳಜಿಯನು ಯಲಹಂಕನಾಡ ಸೇನಾಬೋವನಾಗಿದ್ದು, ಮಾರದೇವ ವಾಗಟದ ಗ್ರಾಮದವನಾಗಿದ್ದು, ಭೈರೀದೇವ ದೇವಣನ ಮಗನಾಗಿದ್ದು, ಮಹಿಲೆಗೌಡನ ಮಗ ವೈಚಣ್ಣನಿದ್ದನು.

ಮೂರನೇ ವೀರಬಲ್ಲಾಳ ದೇವರಸನ ಆಳ್ವಿಕೆಯಲ್ಲಿ ಯಲಹಂಕನಾಡ ಮಯಿಲುಗೌಡ, ಮಾರಗೌಡ, ಮಲ್ಲಯ್ಯಗೌಡ, ತಾಮಿಯಪ್ಪ ಹಾಗೂ ನಾಡಸೇನಬೋವ ಅಲ್ಲಾಳರು ಒಳಗಾದ ಸಮಸ್ತ ಪ್ರಜೆಗೌಡಗಳು ಕ್ರಿ.ಶ. ೧೩೨೮ ರಲ್ಲಿ ದೊಮ್ಮಲೂರಿನ ಸೋಮೇಶ್ವರ ದೇವಸ್ಥಾನಕ್ಕೆ (EC-9, ಅನುಬಂಧ, Bn165, ಕ್ರಿ.ಶ. ೧೩೨೮, ದೊಮ್ಮಲೂರು, ಈ ಶಾಸನ ಹಾಗೂ ದೇವಾಲಯ ಎರಡೂ ಈಗ ಇಲ್ಲ), ಅದೇ ವರ್ಷ ಜಾಲದ ಚೆನ್ನಕೇಶವ ದೇವರಿಗೆ (EC-9, Dv60, ಕ್ರಿ.ಶ. ೧೩೨೮, ಚಿಕ್ಕಜಾಲ, ದೇವಾಲಯವನ್ನು ಜೀರ್ಣೋದ್ದಾರ ಮಾಡುವಾಗ ಶಾಸನ ಕಣ್ಮರೆಯಾಗಿದೆ.) ಕ್ರಿ.ಶ. ೧೩೩೮ರಲ್ಲಿ ಉನ.ಲದ ದೇವಣ್ಣನ ಮಗ ಭೈರಿದೇವನಿಗೆ (EC-9, Dv60, ಕ್ರಿ.ಶ. ೧೩೩೮, ಬಂಡೆಕೊಡಿಗೇಹಳ್ಳಿ) ದಾನ ನೀಡುತ್ತಾರೆ. ಕ್ರಿ.ಶ. ೧೩೪೨ ರಲ್ಲಿ ಅಲ್ಲಯ್ಯರಿಗೆ (EC-9, Bn24, ಕ್ರಿ.ಶ. ೧೩೪೨, ಗಾಣಿಗರಹಳ್ಳಿ, ಈಗ ಶಾಸನವನ್ನ ಮಾಸ್ತಿಯಮ್ಮ ಗುಡಿ ಮುಂದೆ ಸಂರಕ್ಷಿಸಲಾಗಿದೆ), ಕ್ರಿ.ಶ. ೧೩೪೨ರ ನಾಗಸಂದ್ರ ಶಾಸನದಲ್ಲಿ (EC-9, Bn34, ಕ್ರಿ.ಶ. ೧೩೪೨, ನಾಗಸಂದ್ರ, ಶಾಸನವನ್ನು ಹೊಡೆದು ಹಾಕಲಾಗಿದೆ, ಶಾಸನದ ತುಂಡು ತುಂಡು ಭಾಗಗಳನ್ನು ಕಾಣಬಹುದು) ಶಾಸನ ತ್ರುಟಿತವಾಗಿರುವುದರಿಂದ ಮಾರದೇವ, ಅಲ್ಲಾಳಜಿಯರ ಉಲ್ಲೇಖ ಮಾತ್ರ ಕಾಣಿಸುತ್ತದೆ.

ನಾಡಸೇನಾಬೋವ ಅಲ್ಲಾಳರಿಗೆ ಕ್ರಿ.ಶ. ೧೩೪೨ರಲ್ಲಿ ಜಕ್ಕೂರ ಕೆರೆ ಕೆಳಗೆ ಗದ್ದೆಯನ್ನು (EC-9, Bn21, ಕ್ರಿ.ಶ. ೧೩೪೨, ಜಕ್ಕೂರು, (ಈ ಶಾಸನವನ್ನು ಗ್ರಾಮದ ಮದ್ಯಭಾಗದಲ್ಲಿನ ಪಾರ್ಕ್‌ನಲ್ಲಿ ಸಂರಕ್ಷಿಸಲಾಗಿದೆ), ಅದೇ ವರ್ಷ ಮಾರಪ್ಪನವರಿಗೆ (EC-9, Bn129, ಕ್ರಿ.ಶ. ೧೩೪೨, ನಾಗಶೆಟ್ಟಿಹಳ್ಳಿ, ಈಗ ಶಾಸನ ಇಲ್ಲ ನಾಶವಾಗಿದೆ.) ದಾನ ನೀಡುತ್ತಾರೆ.

ಹೊಯ್ಸಳ ಕಾಲದಲ್ಲಿದ್ದ ಈ ತಂಡವು ವಿಜಯನಗರ ಕಾಲದಲ್ಲಿಯೂ ಮುಂದುವರೆದಿದ್ದಾರೆ. ಕ್ರಿ.ಶ. ೧೩೪೮ರಲ್ಲಿ ವೀರಹರಿಯಪ್ಪ ಒಡೆಯರು ಮತ್ತು ಬುಕ್ಕಣ್ಣ ಒಡೆಯರ ಕಾಲದಲ್ಲಿ ಕೊಡಿಗೇಹಳ್ಳಿಯನ್ನು (EC-9, Dv60, ಕ್ರಿ.ಶ. ೧೩೪೮, ಕಟಿಗೇನಹಳ್ಳಿ, ಈ ಶಾಸನವು ಈಗ ಸರ್ಕಾರಿ ಮ್ಯೂಸಿಯಂನಲ್ಲಿದೆ) ದಾನ ನೀಡಿದ್ದಾರೆ. ಇವರುಗಳು ದಾನ ನೀಡುವಾಗ ತಂಡದಲ್ಲಿನ ಎಲ್ಲಾ ಗೌಡುಗಳು ಹಾಗೂ ಅಲ್ಲಾಳಜಿಯರು ಒಳಗಾದ ಸಮಸ್ತ ಪ್ರಜೆ ಗಾವುಂಡಗಳು ಸೇರಿ ಎಂದು ಹೇಳಿ ಅಧಿಕಾರಿಗಳ ಜೊತೆಗೆ ನಾಡಿನಲ್ಲಿನ ಸಮಸ್ತ ಪ್ರಜೆಗಳ ನೆನೆದು ದಾನ ಕೊಡುವುದೇ ವಿಶೇವಾಗಿದೆ.

ಕುಕ್ಕಲನಾಡು: ಬೆಂಗಳೂರು ನಗರ ಜಿಲ್ಲೆಯ ಪಶ್ಚಿಮ ಭಾಗವಾದ ಉತ್ತರ ತಾಲ್ಲೂಕು, ದಕ್ಷಿಣ ತಾಲ್ಲೂಕು ಹಾಗೂ ಮಾಗಡಿ ತಾಲ್ಲೂಕ್‌ಗಳ ಕೆಲವು ಭಾಗಗಳನ್ನು ಒಳಗೊಂಡ ಪ್ರದೇಶವೇ ಕುಕ್ಕಲನಾಡಾಗಿತ್ತು. ಈ ನಾಡನ್ನು ಕ್ರಿ.ಶ. ೭೫೦



ರಿಂದ ಕ್ರಿ.ಶ. ೧೫೨೩ ರ ಅವಧಿಯಲ್ಲಿ ಹಲವಾರು ಮನೆತನಗಳು ಆಳ್ವಿಕೆ ನಡೆಸಿರುವುದಕ್ಕೆ ೨೪ ಕ್ಕೂ ಹೆಚ್ಚು ಶಾಸನಗಳು ದೊರೆತಿವೆ. ಈ ರೀತಿಯಲ್ಲಿ ಅಧಿಕಾರ ನಡೆಸಿದ ಮನೆತನಗಳಲ್ಲಿ ಒಂದಾದ ಕೋಡಿಯ ನಾಯಕರ ಮಕ್ಕಳಾದ ಮೈಯಿಲೆಯನಾಯಕರು ಮತ್ತು ಅವರ ಸಹೋದರರು ೧೩೩೩ ರಿಂದ ಹೊಯ್ಸಳರ ಕಾಲದಲ್ಲಿ ಸಾಮಂತಾಧಿಪತಿಯಾಗಿ ಕುಕ್ಕಲನಾಡಿನಲ್ಲಿ ಆಳ್ವಿಕೆಯನ್ನು ನಡೆಸುತ್ತಿದ್ದು, ಹಲವಾರು ಸಾಮಾಜಿಕ, ಧಾರ್ಮಿಕ ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದಾರೆ. ಹೊಯ್ಸಳ ಮನೆತನದ ಅವನತಿಯ ನಂತರ ವಿಜಯನಗರ ಸಾಮ್ರಾಜ್ಯದ ಹರಿಯಪ್ಪ ಒಡೆಯರ್‌ನ ಅಧೀನಕ್ಕೆ ವರ್ಗಾವಣೆಯಾದನೆನ್ನಬಹುದು.

ಕ್ರಿ.ಶ. ೧೩೪೮ರ ವೇಳೆಗೆ ವಿಜಯನಗರ ಅರಸರಾದ ಹರಿಹರರಾಯರ ಸಾಮಂತರಾಗಿ ಯಲಹಂಕನಾಡನ್ನು ಮಯಿಲೆಯನಾಯಕನು, ಚನ್ನಪಟ್ನದ ಕಳುವಳೆನಾಡನ್ನು ಚನ್ನೆಯನಾಯಕನು ಆಳುತ್ತಿದ್ದರು. ಹೀಗೆ ನಾಡುಗಳನ್ನು ಅಧಿಕಾರ ನಡೆಸುತ್ತಿದ್ದು, ಹಲವಾರು ದಾನ ಧರ್ಮಗಳನ್ನು ನೀಡುತ್ತಿದ್ದ ಇವರಿಗೆ ಇದಾದ ೪ ವರ್ಷದ ನಂತರದಲ್ಲಿ ಅಂದರೆ ಕ್ರಿ.ಶ. ೧೩೫೪ ರಲ್ಲಿ ಈ ಚನ್ನೆಯನಾಯಕನಿಗೆ ಬೊಮ್ಮವಾರದ ಚತುಸೀಮೆಯನ್ನು ಯಾಕೆ ದಾನ ನೀಡಿದರು ಎಂಬುದಕ್ಕೆ ಹಲವಾರು ಪ್ರಶ್ನೆಗಳು ಕಾಡುತ್ತದೆ.

ಬಹುಶಃ ಸೊಣ್ಣೆಯನಾಯಕನ ಸಂಬಂಧಿ ಅಥವಾ ವೈವಾಹಿಕ ಸಂಬಂಧವನ್ನು ಚನ್ನೆಯನಾಯಕ ಹೊಂದಿರಬೇಕು ಅದಕ್ಕೆ ಅವನಿಗೆ ದಾನ ನೀಡಿರಬೇಕು. ಅಥವಾ ಅಧಿರಾಜರ ವಿರುದ್ದ ಬಂಡಾಯ ಏಳಬಹುದು ಎಂದು ತಮ್ಮ ನಿಷ್ಠಾವಂತ ಅಧಿಕಾರಿಗಳುಳ್ಳ ಪ್ರಾಂತ್ಯದಲ್ಲಿ ದಾನ ನೀಡುವುದರೊಂದಿಗೆ ಅವರ ಮೇಲೆ ನಿಗಾ ಇಡಬಹುದು ಎಂದು ಅಥವಾ ವೀರ ಬಲ್ಲಾಳನ ಕಾಲದಿಂದಲೂ ಪ್ರಬಲ ಅಧಿಕಾರಿಗಳಾಗಿದ್ದ ಇವರು ಅಧಿಕಾರವನ್ನು ಮೊಟಕು ಗೊಳಿಸಲು ಈ ರೀತಿಯಾಗಿ ದಾನ ನೀಡಿರಬಹುದು.

ಕ್ರಿ. ಶ. ೧೩೮೬ರ ಕ್ಯಾತಮಾರನಹಳ್ಳಿ (EC-9, Bn139, ಕ್ರಿ.ಶ. ೧೩೮೬, ಕ್ಯಾತಮಾರನಹಳ್ಳಿ, ಈಗ ಶಾಸನ ಕಾಣೆಯಾಗಿದೆ.) ಶಾಸನದ ನಂತರ ಮಯಿಲೆಯನಾಯಕರ ವಂಶಸ್ಥರ ಸುಳಿವು ಜಿಲ್ಲೆಯಲ್ಲಿ ಕಂಡುಬರುವುದಿಲ್ಲ.

[ಗೆಳೆಯರಾದ ಹೆಚ್.ಜಿ. ಶಶಿಧರರವರು ಮಾಹಿತಿ ನೀಡಿದರು, ಅವರಿಗೂ ಗುರುಗಳಾದ ಪ್ರೊ. ಕೆ.ಆರ್. ನರಸಿಂಹನ್ ಹಾಗೂ ಕೆ. ಧನಪಾಲ್‌ರವರಿಗೂ ಹಾಗೂ ಬೊಮ್ಮವಾರದ ಗ್ರಾಮಸ್ಥರಿಗೆ ಧನ್ಯವಾದಗಳು.]

ಆಕರ ಗ್ರಂಥಗಳು

೧. Lewis Rice.B, Epigraphia Carnatica, Inscriptions in The Bangalore District, vol. 9, 1905.

೨. Supplement to vol. 9, Director of Archaeological Researches in Mysore.

೩. ಕೆ.ಆರ್. ನರಸಿಂಹನ್, ಯಲಹಂಕ ನಾಡು, ಇತಿಹಾಸದ ನೋಟಗಳು, (ಭಾಗ-೧) ಶೋಧನ ಪ್ರಕಾಶನ, ಮಾರುತಿ ನಗರ, ಯಲಹಂಕ, ಬೆಂಗಳೂರು, ೨೦೧೯.

೪. ಪಿ.ವಿ. ಕೃಷ್ಣಮೂರ್ತಿ, "ಕುಕ್ಕಲನಾಡು ಒಂದು ಪ್ರಾಚೀನ ಪ್ರಾದೇಶಿಕ ವಿಭಾಗ, ಇತಿಹಾಸ ದರ್ಶನ, ಸಂಪುಟ ೭, ೧೯೯೨, ಪುಟ ಸಂಖ್ಯೆ ೧೪೪-೧೪೮.

೫. ಪಿ.ವಿ. ಕೃಷ್ಣಮೂರ್ತಿ, "ಕೋಳಾಲನಾಡು-ಒಂದು ಚಾರಿತ್ರಿಕ ಅಧ್ಯಯನ", ಇತಿಹಾಸ ದರ್ಶನ, ಸಂಪುಟ ೧೦, ೧೯೯೫, ಪುಟ ಸಂಖ್ಯೆ ೧೫೨.

೬. ಡಾ. ಎಂ.ಜಿ. ಮಂಜುನಾಥ, "ದೊಡ್ಡೇರಿಯ ಅಪ್ರಕಟಿತ ವೀರಗಲ್ಲು ಶಾಸನ", ಇತಿಹಾಸ ದರ್ಶನ, ಸಂಪುಟ ೧೬, ೨೦೦೧, ಪುಟ ಸಂಖ್ಯೆ ೨೪-೨೬.

೭. ಹೆಚ್.ಎಸ್. ಗೋಪಾಲರಾವ್, "ಬೈಲಕೋನೇನಹಳ್ಳಿ ಶಿಲಾ ಶಾಸನ", ಇತಿಹಾಸ ದರ್ಶನ, ಸಂಪುಟ ೨, ೧೯೮೭, ಪುಟ ಸಂಖ್ಯೆ ೬೮-೬೨.

೮. ಆರ್. ಯುವರಾಜು, "ಶಾಸನಗಳ ಹಿನ್ನೆಲೆಯಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಅಧ್ಯಯನ" (೫ನೇ ಶತಮಾನದಿಂದ ೧೮ನೇ ಶತಮಾನದವರೆಗೆ), (ಅಪ್ರಕಟಿತ ಮಹಾಪ್ರಬಂಧ ಬೆಂಗಳೂರು ವಿಶ್ವವಿದ್ಯಾಲಯ) ೨೦೨೦, ಪುಟ ಸಂಖ್ಯೆ ೫೭-೫೯, ೧೪೩-೧೪೮.

೯. ಆದಪ್ಪ ಪಾಸೋಡಿ, ಪುರಾವಸ್ತು, ಕ.ಸಾ.ಪ, ಬೆಂಗಳೂರು, ೨೦೧೬, ಪುಟ ಸಂಖ್ಯೆ_೬೩.

ಸರ್ಕಾರಿ ವಸ್ತುಸಂಗ್ರಹಾಲಯದಲ್ಲಿರುವ ಕಳಹೆ ಮತ್ತು ಶಂಖದ ಮೇಲಿರುವ ಅಪ್ರಕಟಿತ ಶಾಸನಗಳು

ಎಂ. ಕಾವ್ಯಶ್ರೀ✷ ಎಸ್. ಕಾರ್ತಿಕ್✷✷

ಬೆಂಗಳೂರಿನ ಸರ್ಕಾರಿ ವಸ್ತುಸಂಗ್ರಹಾಲಯವು ಭಾರತದ ಪ್ರಾಚೀನವಾದ ವಸ್ತುಸಂಗ್ರಹಾಲಯಗಳಲ್ಲಿ ಒಂದಾಗಿದ್ದು, ದಕ್ಷಿಣ ಭಾರತದಲ್ಲಿ ಸ್ಥಾಪನೆಯಾದ ವಸ್ತುಸಂಗ್ರಹಾಲಯಗಳಲ್ಲಿ ಎರಡನೆಯದಾಗಿದೆ[೧]. ಈ ಮ್ಯೂಸಿಯಂನಲ್ಲಿ ವಿವಿಧ ರಾಜಮನೆತನಗಳ ನಾಣ್ಯಗಳು, ವರ್ಣಚಿತ್ರಗಳು, ಶಿಲ್ಪಗಳು, ಸಂಗೀತ ವಾದ್ಯಗಳು, ಶಿಲಾಶಾಸನಗಳು, ತಾಮ್ರಶಾಸನಗಳು, ಉತ್ಖನನಗಳಲ್ಲಿ ದೊರಕಿರುವ ಅವಶೇಷಗಳು ಮುಂತಾದ ಅಮೂಲ್ಯ ವಸ್ತುಗಳು ಸಂಗ್ರಹವಾಗಿ, ಸಂರಕ್ಷಿತವಾಗಿ, ಪ್ರದರ್ಶಿತವಾಗಿವೆ. ಇವುಗಳನ್ನು ಕುರಿತಾದ ಪೂರ್ಣಪ್ರಮಾಣದ ಸೂಚಿ ಇದುವರೆಗೂ ಪ್ರಕಟವಾಗಿಲ್ಲ. ನಮ್ಮ ಗಮನಕ್ಕೆ ಬಂದಂತೆ ಮೂರು ಸೂಚಿಗಳು ಮಾತ್ರ ಮುದ್ರಿತವಾಗಿವೆ[೨]. ಇವುಗಳನ್ನು ಹೊರತುಪಡಿಸಿದರೆ ಮೈಸೂರು ಪುರಾತತ್ತ್ವ ಇಲಾಖೆಯ ವಾರ್ಷಿಕ ವರದಿಗಳಲ್ಲಿ (೧೮೮೫–೧೯೫೬), ಬೆಂಗಳೂರಿನ (ಮೈಸೂರು) ಸರ್ಕಾರಿ ವಸ್ತುಸಂಗ್ರಹಾಲಯದ ವಾರ್ಷಿಕ ವರದಿಗಳಲ್ಲಿ (೧೮೮೫–೧೯೫೬) ಈ ವಸ್ತುಸಂಗ್ರಹಾಲಯದಲ್ಲಿನ ವಸ್ತುಗಳ ಬಗೆಗೆ ಹಾಗೂ ಈ ವಸ್ತುಸಂಗ್ರಹಾಲಯಕ್ಕೆ ಸಂಬಂಧಪಡುವ ಬೇರೆಬೇರೆ ಅಂಕಿ–ಅಂಶಗಳ ಬಗೆಗೆ ಮಾಹಿತಿ ದೊರಕುತ್ತದೆ. ಆದರೆ ಕಾಲಾನುಕಾಲಕ್ಕೆ ಅಂದರೆ ೧೯೫೬ರ ಅನಂತರ ಸೇರ್ಪಡೆ ಯಾಗಿರುವವುಗಳ ವಿವರಗಳು ಲಭ್ಯವಾಗುವುದಿಲ್ಲ. ಆದರೂ ಇವುಗಳಿಂದ ಆಗುವ ನೆರವನ್ನು ಅಲ್ಲಗಳೆಯುವಂತೆಯೂ ಇಲ್ಲ. ಈ ಹಿನ್ನೆಲೆಯಲ್ಲಿ ಇಲ್ಲಿರುವ ಶಾಸನಗಳನ್ನು ಗಮನಿಸಿದಾಗ, ಬಹುತೇಕವು ಪ್ರಕಟವಾಗಿದ್ದರೂ ಎರಡು ಅಪ್ರಕಟಿತ ಶಾಸನಗಳೂ ಇರುವುದು ಇತ್ತೀಚಿನ ಪರಿಶೀಲನೆಯಿಂದ ಕಂಡುಬಂದಿದೆ. ಇವೆರಡೂ ಪ್ರಕಟವಾಗಿರುವುದು ನಮ್ಮ ಗಮನಕ್ಕೆ ಬಂದಿಲ್ಲ. ಈ ಎರಡು ಶಾಸನಗಳ ಪಾಠವನ್ನು ಪ್ರಕಟಿಸುವುದೇ ಪ್ರಕೃತ ಲೇಖನದ ಪ್ರಮುಖ ಉದ್ದೇಶವಾಗಿದೆ.

ಈ ಎರಡೂ ಶಾಸನಗಳಲ್ಲಿ ಒಂದು ಶಾಸನವು ಕನ್ನಡ ಭಾಷೆ ಮತ್ತು ಲಿಪಿಯಲ್ಲಿ ಎರಡು ಸಾಲುಗಳಲ್ಲಿದ್ದು, ಕಹಳೆಯ ಹೊರಗಿನ ಬಾಯಿಯ ಮೇಲೆ ಸುತ್ತಲೂ ಕೆತ್ತಲ್ಪಟ್ಟಿದೆ (ದಾಖಲಾತಿ ಸಂಖ್ಯೆ–೩೯, ಚಿತ್ರ–೧). ಮತ್ತೊಂದು ಶಾಸನವನ್ನು ಶಂಖದ ಕವಚದ ಮೇಲೆ ತಮಿಳು ಭಾಷೆ ಮತ್ತು ಲಿಪಿಯಲ್ಲಿ ಕೆತ್ತಲಾಗಿದೆ. ಈ ಎರಡೂ ಶಾಸನಗಳ ಪಾಠವನ್ನು ಕೆಳಗೆ ಕ್ರಮವಾಗಿ ನೀಡಿ ಅನಂತರ ವಿಶ್ಲೇಷಣೆಯನ್ನು ಮಾಡಲಾಗಿದೆ.

೧

ಕಹಳೆಯ ಹೊರಬಾಯಿಯ ಸುತ್ತಲೂ ಕೆತ್ತಿರುವ ಶಾಸನ

೧ ಬೆಲು. ॥ ದುರ್ಗಂಮ ॥ ॥ಕಂ ॥ ಯಿರೇ ॥ ಮಗ ನಿರುವಾಣಿಗೌಡರು

೨ ವಟ್ಟೇಗೌಡ ॥ ಕ ॥ ಳೆ

೨

ಶಂಖಕ್ಕೆ ಅಳವಡಿಸಿರುವ ಕಂಚಿನ ಕವಚದ ಮೇಲಿರುವ ಶಾಸನ

೧ ಶ್ರೀ ೨ ಮುರುಗನ್ ದುಣ್ಯೈ ೩ ಬಜ್ಗಾರ್ ದೇವರ್

ಈ ಕಹಳೆಯು ಸು. ೧೨೩ ಸೆಂಟಿಮೀಟರ್ ಉದ್ದವಿದ್ದು, ರೋಮನ್ ಲಿಪಿಯ ಎಸ್ ಅಕ್ಷರದ ಆಕಾರದಲ್ಲಿದೆ. ಕಹಳೆಯ ಮೇಲಿರುವ ಬರಹದ ಅರ್ಥವನ್ನು ಖಚಿತವಾಗಿ ತಿಳಿಯಲು ಸಾಧ್ಯವಾಗುತ್ತಿಲ್ಲ. ನಿರುವಾಣಿಗೌಡ ಮತ್ತು ವಟೇಗೌಡ ಎಂಬ ಇಬ್ಬರ ಹೆಸರುಗಳು ಮಾತ್ರವಿದ್ದು, ಬೆಲು ॥ ದುರ್ಗಂಮ ಎಂಬುದು ಏನನ್ನು ಹೇಳುತ್ತದೆ ಎಂದು ಸ್ಪಷ್ಟವಾಗುತ್ತಿಲ್ಲ. ಗೆರೆಗಳು ಮತ್ತು ಕಂ ಎಂಬುದು ಏನನ್ನು ಸಂಕೇತಿಸುತ್ತಿವೆ ಎನ್ನುವುದು ತಿಳಿಯದು. ಕ ॥ ಳೆ ಎಂದಿರುವುದು ಕಹಳೆಯ ಸಂಕ್ಷಿಪ್ತ

✷ ಉಪ ನಿರ್ದೇಶಕರು (ಪ್ರಭಾರ), ಸರ್ಕಾರಿ ವಸ್ತು ಸಂಗ್ರಹಾಲಯ (ಪು.ಸಂ. & ಪರಂಪರೆ ಇ), ಕಸ್ತೂರ ಬಾ ರಸ್ತೆ, ಬೆಂಗಳೂರು.
✷✷ # ೪೧೩, ಕರ್ನಾಟಕ 'ಡಿ' ಗ್ರೂಪ್ ಎಂಪ್ಲಾಯಿಸ್ ಲೇಔಟ್, ಲಿಂಗಧೀರನಹಳ್ಳಿ, ಅಂಧ್ರಹಳ್ಳಿ ಮುಖ್ಯರಸ್ತೆ, ಬೆಂಗಳೂರು.

ರೂಪವೇ ಗೊತ್ತಾಗುವುದಿಲ್ಲ. ಈ ಶಾಸನದ ಕಾಲವನ್ನು ಲಿಪಿಯ ಆಧಾರದಿಂದ ಹದಿನೆಂಟನೆಯ ಶತಮಾನದ ಕೊನೆಯ ಭಾಗವೆಂದು ಹೇಳಬಹುದು.

ಶಂಖದ ಕವಚದ ಮೇಲಿರುವ ತಮಿಳು ಬರಹವು ಕೂಡ ಬಲುಮಟ್ಟಿಗೆ ಹತ್ತೊಂಬತ್ತನೆಯ ಶತಮಾನದ್ದೆಂದೇ ತೋರುತ್ತದೆ. ಇದನ್ನು ವಸ್ತುಸಂಗ್ರಹಾಲಯದ ದಾಖಲೆಯಲ್ಲಿ ಧವಳ-ಶಂಖವೆಂದು ಕರೆಯಲಾಗಿದೆ (ದಾಖಲಾತಿ ಸಂಖ್ಯೆ-೧೫, ಚಿತ್ರ-೨). ಧವಳ ಅಥವಾ ಧವಲ ಶಬ್ದಕ್ಕೆ ಬಿಳಿ ಎಂಬರ್ಥವಿದೆ. ಧವಳ ಶಂಖವೆಂದರೆ ಬಿಳಿಯ ಶಂಖ ಎಂದರ್ಥ. ಇದಕ್ಕೆ ಅನುಗುಣವಾಗಿ ಈ ಶಂಖವೂ ಬಿಳಿಯ ಬಣ್ಣದ್ದಾಗಿದೆ. ಈ ಶಂಖಕ್ಕೆ ಅಳವಡಿಸಿರುವ ಕವಚದ ಭಾಗವು ಕಂಚಿನದಾಗಿದ್ದು ಶಂಖವನ್ನು ಊದಲು ಅನುವಾಗುವಂತೆ ಕೃತಕವಾಗಿ ಅಳವಡಿಸಲಾಗಿದೆ. ಇದರ ಮೇಲೆ ಶಾಸನವಿದೆ. ಇನ್ನೊಂದು ತುದಿಯಲ್ಲಿ ಹಿತ್ತಾಳೆ ಲೋಹದಲ್ಲಿ ಎಲೆಯನ್ನು ಕೃತಕವಾಗಿ ವಿನ್ಯಾಸಗೊಳಿಸಿದೆ. ಇದಿಷ್ಟೂ ಭಾಗ ಒಟ್ಟು ೫೩ ಸೆಂಟಿಮೀಟರ್ ಉದ್ದವಿದೆ (ಶಂಖವು ಊದುವ ಭಾಗದೊಳಗೆ ಹುದುಗಿರುವುದೂ ಸೇರಿ ಸುಮಾರು ೧೩ ಸೆಂಟಿಮೀಟರ್ ಉದ್ದವಿದೆ. ಊದಲು ಅಳವಡಿಸಿರುವ ಕಂಚಿನ ಭಾಗವು ಸು ೧೨ ಸೆಂಟಿಮೀಟರ್ ಉದ್ದವಿದ್ದು, ಎಲೆಯಾಕಾರದ ವಿನ್ಯಾಸವು ೩೧ ಸೆಂಟಿಮೀಟರ್ ಉದ್ದವಿದೆ). ಮುರುಗನ್ ದುಣ್ಯೆ ಎಂದರೆ ಮುರುಗ ಅಥವಾ ಷಣ್ಮುಖನ ಕೃಪೆ ಎಂದರ್ಥ. ಬಂಗಾರು ದೇವರ್ ಎಂದಿರುವುದು ವ್ಯಕ್ತಿಯ ಹೆಸರಾಗಿ ತೋರುತ್ತದೆ. ದೇವಾಲಯಕ್ಕೆ ಸಂಬಂಧಪಟ್ಟ ಹೆಸರಾಗಿಯೂ ಇದ್ದಿರುವುದು ಸಾಧ್ಯ (ಈ ಶಾಸನವನ್ನು ಓದಿಕೊಟ್ಟವರು ಶಾಸನತಜ್ಞ ಡಾ. ಪಿ.ವಿ. ಕೃಷ್ಣಮೂರ್ತಿ ಅವರು).

ಕಹಳೆಯು ಯುದ್ಧದಲ್ಲಿ ಬಳಸುತ್ತಿದ್ದ ಒಂದು ಸುಷಿರವಾದ್ಯವಾಗಿದೆ. ಇದು ಕರ್ನಾಟಕದಲ್ಲಿ ಪ್ರಾಚೀನ ಕಾಲದಿಂದಲೂ ಬಳಕೆಯಲ್ಲಿದೆ. ಕಹಳೆಯನ್ನು ಪೂಜಾದಿಗಳಲ್ಲಿ ಇಲ್ಲವೇ ಕೋಟೆಯ ಸಂರಕ್ಷಣೆಯ ಸಮಯದಲ್ಲಿ, ಯುದ್ಧಗಳ ಸಂದರ್ಭಗಳಲ್ಲಿ ಬಳಸಲಾಗುತ್ತಿತ್ತು. ಇದು ಉದ್ದವಾಗಿದ್ದು, ಬಾಗಿರುವ ವಾದ್ಯವಾಗಿದೆ. ಇದು ಪಂಚಮಹಾವಾದ್ಯಗಳಲ್ಲಿ ಒಂದಾಗಿದೆ. ಈ ಹಿನ್ನೆಲೆಯಲ್ಲಿಯೇ ವಸ್ತುಸಂಗ್ರಹಾಲಯದಲ್ಲಿರುವ ಕಹಳೆ ಮತ್ತು ಶಂಖವೂ ಬಳಕೆಯಾಗುತ್ತಿದ್ದಿರಬೇಕು ಎಂದು ತಿಳಿಯಲು ಸಾಧ್ಯವಿದೆ. ಪ್ರಕೃತ ವಿವರಿಸಿರುವ, ಶಾಸನವಿರುವ ಶಂಖವು ಯಾವುದೋ ದೇವಾಲಯದ್ದೇ ಆಗಿರಬೇಕೆಂದು ಇದರಿಂದ ತಿಳಿಯಲು ಸಾಧ್ಯವಿದೆ. ಕರ್ನಾಟಕದ ಅನೇಕ ಶಾಸನಗಳಲ್ಲಿ, ಸಾಹಿತ್ಯ ಕೃತಿಗಳಲ್ಲಿ ಶಂಖದ ಮತ್ತು ಕಹಳೆಯ ಉಲ್ಲೇಖವೂ ಅದರ ಬಳಕೆಯ ವಿವರಗಳೂ ತಕ್ಕಮಟ್ಟಿಗೆ ದೊರಕುತ್ತದೆ[೩]. ವಸ್ತುಸಂಗ್ರಹಾಲಯದಲ್ಲಿರುವ ಕಹಳೆ ಮತ್ತು ಶಂಖಗಳ ಬಗೆಗೆ ಇದಕ್ಕಿಂತ ಹೆಚ್ಚಿನ ವಿವರಗಳನ್ನು ವಿಶ್ಲೇಷಿಸಲು ಸದ್ಯದಲ್ಲಿ ಲಭ್ಯವಾಗಿರುವ ಮಾಹಿತಿಗಳಿಂದ ಸಾಧ್ಯವಿಲ್ಲವೆಂದು ಹೇಳಬಹುದಾಗಿದೆ.

[ಈ ಬರಹವನ್ನು ಸಿದ್ಧಪಡಿಸಲು ಪ್ರೋತ್ಸಾಹಿಸಿ, ಪ್ರಕಟನೆಗೆ ಅನುಮತಿಯನ್ನು ನೀಡಿರುವ ಡಾ. ಆರ್. ಗೋಪಾಲ್ (ನಿರ್ದೇಶಕರು, ಪುರಾತತ್ತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ) ಅವರಿಗೂ ಶ್ರೀಮತಿ ಬಿ.ಆರ್. ಪೂರ್ಣಿಮಾ (ಆಯುಕ್ತರು, ಪುರಾತತ್ತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ) ಅವರಿಗೂ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ]

ಅಡಿ ಟಿಪ್ಪಣಿಗಳು

೧. ಈ ವಸ್ತುಸಂಗ್ರಹಾಲಯದ ಬಗೆಗೆ ತಿಳಿದುಕೊಳ್ಳಲು ಈ ಕೆಳಗಿನ ಬರಹಗಳನ್ನು ಗಮನಿಸಬಹುದಾಗಿದೆ.

* ಕರ್ನಾಟಕ ರಾಜ್ಯದ ಪುರಾತತ್ತ್ವ ಇಲಾಖೆ: ಒಂದು ನೂರು ವರುಷ, ಕೆ.ಜಿ. ನಾಗರಾಜನ್, ಇತಿಹಾಸ ದರ್ಶನ, ಸಂಪುಟ ೧ (೧೯೮೬), ಪು. ೩೬-೪೨.
* ಬೆಂಗಳೂರು ಪ್ರಾಚ್ಯವಸ್ತು ಸಂಗ್ರಹಾಲಯ ಮತ್ತು ಚರ್ಮಪ್ರಸಾದನ ಕಲೆ, ವೇಮಗಲ್ ಸೋಮಶೇಖರ್, ಇತಿಹಾಸ ದರ್ಶನ, ಸಂಪುಟ ೪, (೧೯೮೯), ಪುಟ ೧೫೩-೧೫೬.
* ಬೆಂಗಳೂರು ವಸ್ತುಸಂಗ್ರಹಾಲಯದಲ್ಲಿದ್ದ ಗ್ರಂಥಭಂಡಾರ, ವೇಮಗಲ್ ಸೋಮಶೇಖರ್, ಇತಿಹಾಸ ದರ್ಶನ, ಸಂಪುಟ ೮ (೧೯೯೩), ಪುಟ ೨೦೨-೨೦೪.

೨. Catalogue of Mysore Coins in the Collection of The Government Museum Bangalore by Capt R.H. Campbell Tufnell, Madras-1889.

Catalogue of Sculptures [in the] Government Museum, Bengaluru-H.T. Talwar, Department of Archaeology, Museums and Heritage, Mysuru-2015.

ಕರ್ನಾಟಕದ ವಸ್ತುಸಂಗ್ರಹಾಲಯಗಳಲ್ಲಿನ ಚಿತ್ರಕಲೆ-ಪಿ.ಜಿ. ಗವಾನಿ, ಪುರಾತತ್ತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು-೨೦೧೭.

೩. ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು [ಸಂಪುಟ-೨, ಕ-ಗಾಢಿಕೆ], ಬೆಂಗಳೂರು-೧೯೭೬, ಪುಟ ೧೬೪೨ ಮತ್ತು ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು [ಸಂಪುಟ-೮, ವ-ಟಿಾಂತ], ಬೆಂಗಳೂರು-೧೯೯೫, ಪುಟ ೮೦೬೩-೮೦೬೪.

೧೫

ಶಿಕಾರಿಪುರದ ತೊಗರ್ಸಿ ಗ್ರಾಮದ ಗೋಸಾಸ ಶಾಸನ

ರಮೇಶ ಬಿ. ಹಿರೇಜಂಬೂರು*

ಶಿಕಾರಿಪುರ ತಾಲೂಕಿನ ತೊಗರ್ಸಿ ಗ್ರಾಮವು ಐತಿಹಾಸಿಕವಾಗಿ ಅನೇಕ ಪ್ರಾಚೀನ ಆಕರಗಳನ್ನು ಹೊಂದಿರುವ ಪ್ರದೇಶವಾಗಿದೆ. ಇಲ್ಲಿನ ಮಳಿಮಠದ ಶ್ರೀ ಮಲ್ಲಿಕಾರ್ಜುನ ದೇವಾಲಯದಲ್ಲಿ ದೊರೆತಿರುವ ಬೌದ್ಧ ದೀಪಸ್ಥಂಬವು ಕ್ರಿ.ಶ. ೨-೩ನೇ ಶತಮಾನಕ್ಕೆ ಸೇರಿದ್ದಾಗಿದೆ. ೧೧೩ ಸೆಂ.ಮೀ. ಉದ್ದವಿರುವ ಕೆತ್ತನೆಯ ಭಾಗವು ೩೦ ಸೆಂ.ಮೀ. ಸುತ್ತಳತೆ ಹೊಂದಿದೆ. ಕೆತ್ತನೆಗಳು ಮೂರು ಹಂತದಲ್ಲಿದ್ದು ಮದ್ಯದ ಭಾಗವು ವೃತ್ತಾಕಾರದಲ್ಲಿದೆ. ಎರಡೂ ಬದಿಯಲ್ಲಿ ಕುಬ್ಜ ಮತ್ತು ಯಕ್ಷರು ದೀಪ ಪಾತ್ರೆ ಹೊತ್ತು ನಿಂತ ಚಿತ್ರಗಳಿವೆ. ಮುಂಭಾಗ ಹಾಗೂ ಹಿಂಭಾಗಗಳಲ್ಲಿ ಬುದ್ದ ಹಾಗೂ ಬುದ್ಧನ ಅನುಯಾಯಿಗಳ ಚಿತ್ರಗಳು ಕೆತ್ತಲ್ಪಟ್ಟಿದ್ದು, ಕೆಳಭಾಗದ ವೃತ್ತಾಕಾರದ ಪಟ್ಟಿಕೆಯಲ್ಲಿ ವೀರರ ಕೆತ್ತನೆಗಳಿವೆ. ಬುದ್ದನ ಶಿಲ್ಪ ಎಡಗೈಯಲ್ಲಿ ವಸ್ತ್ರವನ್ನು ಹಿಡಿದಿದ್ದು, ಇದು ಎರಡನೇ ಶತಮಾನದ ಅಮರಾವತಿಯಲ್ಲಿರುವ ಶಿಲ್ಪವನ್ನು ಹೋಲುತ್ತದೆ ಎಂದು ಕರ್ನಾಟಕದ ಖ್ಯಾತ ಇತಿಹಾಸಕಾರರಾದ ಅ. ಸುಂದರ್‌ರವರು ಅಭಿಪ್ರಾಯಪಟ್ಟಿದ್ದಾರೆ. ಶ್ರೀಯುತರು ಇದೇ ದೇವಾಲಯದಲ್ಲಿ ತುಂಬಾ ಹಾಳಾದ ಸ್ಥಿತಿಯಲ್ಲಿರುವ ಎರಡನೇ ಶತಮಾನಕ್ಕೆ ಸೇರಿದ ಬುದ್ಧನ ಶಿರವನ್ನು ಗುರುತಿಸಿದ್ದಾರೆ.

ಈಗಿನ ತೊಗರ್ಸಿ ಗ್ರಾಮದ ವಾಯುವ್ಯ ದಿಕ್ಕಿನಲ್ಲಿರುವ ಹಳೆ ತೊಗರ್ಸಿ ಪ್ರದೇಶದಲ್ಲಿ ಕೆರೆಯ ದಂಡೆಯ ಮೇಲೆ ಉದ್ರಿ ಗ್ರಾಮಕ್ಕೆ ಸಾಗುವ ಮಾರ್ಗದಲ್ಲಿ ರಸ್ತೆ ಪಕ್ಕದಲ್ಲಿನ ದಿಬ್ಬದ ಮೇಲೆ ಒಂದು ಪ್ರಾಚೀನ ಶಿವಲಿಂಗವಿದೆ. ಸುಮಾರು ೧೦೧೦ ಅಡಿ ಅಳತೆಯ ತೆರೆದ ಪ್ರದೇಶದಲ್ಲಿ ಈ ಲಿಂಗು ಇದ್ದು ಅದರ ಉತ್ತರಕ್ಕೆ ಕೆರೆ ಹಾಗೂ ದಕ್ಷಿಣಕ್ಕೆ ರಸ್ತೆ ಕಂಡುಬರುತ್ತವೆ. ಪೂರ್ವ ಹಾಗೂ ಪಶ್ಚಿಮಕ್ಕೆ ಗಿಡ ಗಂಟೆಗಳಿಂದ ಕೂಡಿದ ಬೇಲಿ ರಚಿತವಾಗಿದೆ. ಈ ಪ್ರದೇಶವನ್ನು ಸೂಕ್ಷ್ಮವಾಗಿ ಗಮನಿಸಿದಾಗ ಈ ಕೆಳಕಂಡ ಅಂಶಗಳು ಕಂಡುಬಂದವು.

* ಅದರ ಕೆಳಭಾಗದಲ್ಲಿ ಸುಟ್ಟ ಇಟ್ಟಿಗೆಗಳಿಂದ ರಚಿಸಲ್ಪಟ್ಟ ಬೃಹತ್ ದೇವಾಲಯದ ತಳಪಾಯ.
* ನಾಲ್ಕು ಗೋಸಾಸ ಕಲ್ಲುಗಳು
* ಒಂದು ರಾಷ್ಟ್ರಕೂಟರ ಅವಧಿಯ ವೀರಗಲ್ಲು (ಶಾಸನ ಪಾಠ ಸವೆದಿದೆ)
* ಒಂದು ಮಹಾಸತಿ ಕಲ್ಲು

ದೇವಾಲಯದ ಉತ್ತರ ದಿಕ್ಕಿನಲ್ಲಿ ಕೆರೆಯಿದ್ದು ಇತ್ತೀಚಿಗೆ ಈ ದಂಡೆಯ ಮಣ್ಣನ್ನು ಸ್ಥಳೀಯರು ಗೃಹ ಕಾರ್ಯಗಳಿಗೆ ಜೆಸಿಬಿ ಯಂತ್ರಗಳಿಂದ ಅಗೆದಿದ್ದಾರೆ. ಇದರಿಂದಾಗಿ ಉತ್ತರ ಭಾಗದ ತಳಪಾಯ ಸ್ವಲ್ಪ ಪ್ರಮಾಣದಲ್ಲಿ ಹಾನಿಗೊಂಡು ಮಣ್ಣಿನ ಸ್ತರಗಳಲ್ಲಿ ಸ್ಪಷ್ಟವಾಗಿ ಕಾಣಿಸುತ್ತದೆ. ಈ ರಚನೆಯು ಸುಮಾರು ಎಂಬತ್ತು ಅಡಿ ಉದ್ದ ಹಾಗೂ ಮೂವತ್ತು ಅಡಿ ಅಗಲವಿದ್ದು ಅಂದಿನ ದೇವಾಲಯದ ವಿಶಾಲ ವಿಸ್ತೀರ್ಣವನ್ನು ಕಾಣಬಹುದಾಗಿದೆ. ಸುಮಾರು ನಾಲ್ಕು ಅಡಿಗಳ ಕೆಳಗೆ ಈ ಇಟ್ಟಿಗೆಗಳ ತಳಪಾಯವಿದ್ದು ಅದರ ಕೆಳಗೆ ೨ ಅಡಿ ಕಲ್ಲಿನ ತಳಪಾಯವಿದೆ. ಪೂರ್ಣ ಇಟ್ಟಿಗೆಯು ಸುಮಾರು ೪೪-೪೫ ಸೆಂ.ಮೀ. ಉದ್ದ, ೨೨ ಸೆಂ.ಮೀ. ಅಗಲ ಹಾಗೂ ೭ ಸೆಂ.ಮೀ. ದಪ್ಪ ಗಾತ್ರ ಹೊಂದಿದೆ. ಇಲ್ಲಿ ಕೆಂಪು ಹಾಗೂ ಕಪ್ಪು ಬಣ್ಣದ ಹೊಳೆಯುವ ಮೇಲ್ಮೈ ಹೊಂದಿರುವ ಮಡಿಕೆಗಳ ಭಾಗಗಳು ದೊರೆತಿವೆ. ಕದಂಬರ ಅವಧಿಯ ಸುಟ್ಟ ಹೆಂಚುಗಳ ಚೂರುಗಳು ಅಲ್ಲಲ್ಲಿ ಕಂಡುಬಂದಿವೆ.

ಈಗಾಗಲೇ ತೊಗರ್ಸಿಯಲ್ಲಿ ೨ನೇ ಶತಮಾನಕ್ಕೂ ಹಿಂದಿನ ಬೌದ್ಧ ದೀಪಸ್ತಂಭ ದೊರೆತಿದ್ದು ಈ ಪ್ರದೇಶವು ಪ್ರಾಚೀನ ಇತಿಹಾಸದ ನೆಲೆ ಎನ್ನಲು ಈ ತಳಪಾಯವು ಇನ್ನಷ್ಟು ಪುಷ್ಟಿ ನೀಡುತ್ತದೆ.

---

* ಹಿರೇಜಂಬೂರು, ಮೊ: ೯೭೪೩೫ ೯೨೨೨೮



ರಸ್ತೆ ಪಕ್ಕದಲ್ಲಿ ಗೋಚರ ದೃಶ್ಯ



ಅಡಿಪಾಯದಲ್ಲಿ ಇಟ್ಟಿಗೆ ಹಾಗೂ ಕಲ್ಲಿನ ಸ್ತರಗಳು



ಸ್ಥಳದಲ್ಲಿಯೇ ದೊರೆತ ಹೆಂಚು ಮತ್ತು ಮಡಿಕೆಗಳ ಚೂರುಗಳು



ಲಿಪಿ ಇರುವ ಗೋಸಾಸ



ಗೋಸಾಸದ ಪಾಠ



ಮಹಾಸತಿ ಕಲ್ಲು

ಮೂಲತಃ ಈ ಸ್ಥಳದಲ್ಲಿ ಕದಂಬರ ಕಾಲದಲ್ಲಿ ದೇವಾಲಯ ರಚನೆಯಾಗಿದ್ದು ರಾಷ್ಟ್ರಕೂಟರ ಅವಧಿಯಲ್ಲಿ ಅಭಿವೃದ್ಧಿ ಹೊಂದಿರಬಹುದಾಗಿದೆ. ಏಕೆಂದರೆ ಇದೇ ಸ್ಥಳದಲ್ಲಿ ರಾಷ್ಟಕೂಟರ ಅವಧಿಯ ಒಂದು ವೀರಗಲ್ಲು ಹಾಗೂ ನಾಲ್ಕು ಗೋಸಾಸ ಕಲ್ಲುಗಳು ಕಂಡು ಬಂದಿವೆ. ಕರ್ನಾಟಕದಲ್ಲಿ ವಿಶೇಷವಾಗಿ ಕಾಣಸಿಗುವ ಗೋಸಾಸ ಕಲ್ಲುಗಳ ಶಾಸನಗಳು ಅಂದಿನ ಭೂಮಿ ಮತ್ತು ಗೋವುಗಳ ದಾನದ ವಿವರಗಳನ್ನು ಹೊಂದಿರುತ್ತವೆ. ಇವುಗಳಲ್ಲಿ ಕೆಲವೇ ಕೆಲವುಗಳಲ್ಲಿ ಚಿಕ್ಕ ಮಾಹಿತಿ ಇರುತ್ತದೆ. ಇದರಿಂದ ಆ ಕಲ್ಲಿನ ಅವಧಿ ಹಾಗೂ ಯಾವ ರಾಜರ ಆಡಳಿತದ ಅವಧಿ ಎಂದು ತಿಳಿಯುತ್ತದೆ. ಗೋದಾನದ ಕಲ್ಲುಗಳು ಕರುನಾಡಿನ ವಿಶೇಷ ಶಾಸನಗಳಾಗಿದ್ದು, ಬಾದಾಮಿ ಚಾಲುಕ್ಯರು ಹಾಗೂ ರಾಷ್ಟಕೂಟರ ಅವಧಿಗಳಲ್ಲಿ ಇವುಗಳನ್ನು ಕಾಣಬಹುದು.

ಇಂತಹ ನಾಲ್ಕು ಗೋಸಾಸ ಕಲ್ಲುಗಳು ಇಲ್ಲಿ ಪತ್ತೆಯಾಗಿವೆ. ಗಾತ್ರದಲ್ಲಿ ಅವುಗಳ ಭೂಮಿಯ ಮೇಲ್ಭಾಗದಲ್ಲಿ ಎತ್ತರ ೪೨ ಇಂಚುಗಳಾಗಿದ್ದು, ಅಗಲ ೨೨ ಇಂಚಗಿರುತ್ತದೆ. ಈ ಗೋಸಾಸ ಕಲ್ಲುಗಳು ಶಿವಲಿಂಗದ ಹಿಂಬಾಗ ಅಂದರೆ ಪಶ್ಚಿಮ ದಿಕ್ಕಿನಲ್ಲಿ ಕಂಡುಬರುತ್ತವೆ. ಅವುಗಳಲ್ಲಿ ಒಂದರಲ್ಲಿ ಐದು ಸಾಲಿನ ಶಾಸನವಿದೆ.

ಶಾಸನ ಪಾಠ

೧. (ಮ)ರಕ್ಕೆ ಆ ಪನ್ನಿಚ್ಚಾಸಿರ ಆಳೆ ನಾಗಿಯ್ಯನ್ (ನಾಗಿಯ್ಮನ್?) ಊರಾಳೆ

೨. ಭರಕಣ್ಣಮ ನಾಳ್ಗಾಮು (ಙ್ಡ*) ಗೆಯೆ ಆರಿದಾರಾಕಾರಿ ಗೂಡಿ

೩. ಬಳ(ಬೀಳ್?) ಮತ್ತಲು ಭೂಮಿದಾನಮು ಪಡಲ್ದಾನ ಚಾ

೪. ಹಸ್ರ ಕೊಟ್ಟಾನ್ ಶ್ರೀ ಯಾಗರ ಆಚಾರಿ ಮಾಡಿ

೫. ದೋನ್

ಸಾರಾಂಶ : ರಾಷ್ಟ್ರಕೂಟರ ಮೂರನೇ ಗೋವಿಂದನ ಅವಧಿಯಲ್ಲಿ ಬನವಾಸಿ ೧೨೦೦೦ ರಾಜ್ಯವನ್ನು ಮರಕ್ಕೆರಸ (ಕ್ರಿ.ಶ. ೭೯೦- ೮೦೦) ಎಂಬ ದಂಡನಾಯಕ ಆಳುತ್ತಿದ್ದನು. ಈ ಅವಧಿಯಲ್ಲಿ ನಾಗಿಯಮ್ಮನು ಊರನ್ನು ಆಳುತ್ತಿದ್ದ, ಭರಕಣ್ಣ ನಾಡ ಗಾವುಂಡನಾಗಿದ್ದನು. ಇಬ್ಬರೂ ಸೇರಿ ಭೂಮಿದಾನ ನೀಡಿದ್ದಾರೆ. ಜೊತೆಗೆ ನಾಲ್ಕು ಸಹಸ್ರ ಗೋವುಗಳನ್ನು ದಾನ ನೀಡಿದ್ದಾರೆ. ಶ್ರೀಯಾಗರ ಆಚಾರಿ ಈ ಕಲ್ಲನ್ನು ಮಾಡಿಸಿದ್ದಾನೆ.

ಪ್ರಾಚೀನ ಕಾಲದಿಂದಲೂ ಗೋವುಗಳನ್ನು ಪವಿತ್ರ ಬಾವದಿಂದ ಕಾಣಲಾಗಿದೆ. ಗೋವುಗಳನ್ನು ಸಂಪತ್ತು ಎಂದು ಪರಿಗಣಿಸಲಾಗಿದೆ. ರಾಷ್ಟ್ರಕೂಟರ ಅವಧಿಯಲ್ಲಿ ಕರ್ನಾಟಕದ ಹಲವು ಭಾಗಗಳಲ್ಲಿ ಸಾವಿರ ಸಾವಿರ ಸಂಖ್ಯೆಯಲ್ಲಿ ಗೋದಾನ ಮಾಡಲಾಗಿದೆ. ಅನೇಕ ಗ್ರಾಮಗಳಲ್ಲಿ ರಾಮೇಶ್ವರ, ಕಲ್ಲೇಶ್ವರ ಎಂಬ ಶಿವ ದೇವಾಲಯಗಳನ್ನು ನಿರ್ಮಿಸಿ ಆ ದೇವಾಲಯಗಳಿಗೆ ಗೋವುಗಳನ್ನು ಮಂಡಳಿಕರು, ದಂಡನಾಯಕರು, ಸಿರಿವಂತರು, ಸ್ತ್ರೀಯರಾಧಿಯಾಗಿ ಅನೇಕರು ದಾನ ನೀಡಿದ್ದಾರೆ. ಕೆಲವು ಕಡೆ ಹೊಸ ಗ್ರಾಮ ನಿರ್ಮಾಣ ಮಾಡಿ ಆ ಗ್ರಾಮದ ಅಭಿವೃದ್ಧಿಗೆ ಗೋದಾನ ನೀಡಲಾಗಿದೆ. ಆ ಮೂಲಕ ಆ ಗ್ರಾಮಗಳ ಸಂಪತ್ತನ್ನು ವೃದ್ಧಿಸುವ ಮೂಲಕ ಸಾಮಾಜಿಕ ಬದುಕನ್ನು ಕಟ್ಟಿಕೊಡಲಾಗುತ್ತಿತ್ತು. ಗೋವುಗಳು ಸಂಪತ್ತಿನ ಪ್ರತೀಕ ಮಾತ್ರವಲ್ಲದೆ ಆ ಪ್ರದೇಶದ ಪ್ರತಿಷ್ಟೆ, ಹಿರಿಮೆಯ ಪ್ರತೀಕವೂ ಆಗಿದ್ದವು. ಒಂದು ಸಾವಿರ ಗೋವುಗಳನ್ನು ದಾನ ನೀಡಿದಾಗ ಅದರ ನೆನಪು ಹಾಗೂ ಪ್ರತಿಷ್ಟೆ ಮತ್ತು ಇನ್ನೊಬ್ಬರಿಗೆ ಪ್ರೇರಣೆ ನೀಡುವ ಕಾರಣಕ್ಕೆ ಒಂದು ವಿಶೇಷ ಕಲ್ಲನ್ನು ನೆಡಲಾಗುತಿತ್ತು. ಇವುಗಳನ್ನು ಗೋಸಾಸ ಕಲ್ಲುಗಳು ಎಂದು ಕರೆಯಲಾಗುತ್ತದೆ.ಗೋಸಾಸಗಲ್ಲುಗಳು ಗೋದಾನಕ್ಕೆ ಸಂಬಂಧಿಸಿದ ಶಾಸನಗಳಾಗಿದ್ದು ಕನ್ನಡ ಶಾಸನಗಳಲ್ಲಿಯೇ ವಿಶಿಷ್ಟವೆನಿಸಿವೆ.

ತೊಗರ್ಸಿಯಲ್ಲಿ ನಾಲ್ಕು ಗೋಸಾಸಗಳು ದೊರತಿರುವುದರಿಂದ ನಾಲ್ಕು ಸಹಸ್ರ ಗೋವುಗಳನ್ನು ದಾನ ನೀಡದ್ದು ಸ್ಪಷ್ಟವಾಗುತ್ತದೆ. "ಗೋಸಹಸ್ರ" ಸಂಸ್ಕೃತ ಪದದ ತದ್ಭವ "ಗೋಸಾಸ" ವಾಗಿದೆ. ಸಾವಿರ ಗೋವುಗಳ ದಾನ ಗೋಸಾಸವೆನಿಸಿದೆ. ಷೋಡಶ ದಾನಿಗಳಲ್ಲಿ ಇದೂ ಒಂದು.

[ಅಧ್ಯಯನಕ್ಕೆ ಪ್ರಾಕ್ತಾನ ಶಾಸ್ತ್ರದ ಖ್ಯಾತ ತಜ್ಞರಾದ ಟಿ.ಎಂ. ಕೇಶವರವರು ಮಾರ್ಗದರ್ಶನ ನೀಡಿದ್ದಾರೆ. ಶಾಸನ ತಜ್ಞರಾದ ಡಾ. ಎಸ್.ವಿ. ಪಾಡಿಗಾರ್ ಹಾಗೂ ಡಾ. ಜಗದೀಶ್‌ರವರು ಶಾಸನ ಪಾಠ ಓದಿ ಕೊಟ್ಟಿದ್ದಾರೆ. ಪತ್ತೆ ಕಾರ್ಯಕ್ಕೆ ಅರುಣ್‌ಕುಮಾರ್, ನವೀನ್‌ಕುಮಾರ್, ಅಶೋಕ್, ಚಂದನ್ ಮತ್ತು ಮಾಲತೇಶರವರಿಗೆ ಕೃತಜ್ಞತೆಗಳು.]

ಆಕರ ಗ್ರಂಥಗಳು

೧. ಕೆಲವು ಇತ್ತೀಚಿನ ಗಮನಾರ್ಹ ಪುರಾತನ ಶೋಧನೆಗಳು, ಕರ್ನಾಟಕ ಭಾರತಿ, ಸಂಪುಟ ೧೯, ಪುಟ ಸಂಖ್ಯೆ ೪, ೯೪-೯೫.

೨. ಕನ್ನಡ ಲಿಪಿ ಉಗಮ-ಡಾ. ಎಂ.ಜಿ. ಮಂಜುನಾಥ, ಪ್ರೊ. ಜಿ.ಕೆ. ದೇವರಾಜಸ್ವಾಮಿ.

೩. ಎಪಿಗ್ರಾಫಿಯಾ ಕರ್ನಾಟಕ-ಸಂಪುಟ ೧೪, ೨೦೧೯. ಕುವೆಂಪು ವಿಶ್ವವಿದ್ಯಾಲಯ.

೪. ಬನವಾಸಿ ನಾಗರಖಂಡ ಹಾಗೂ ಸುತ್ತಲಿನ ಪ್ರದೇಶದಲ್ಲಿ ಮಧ್ಯಕಾಲೀನ ಇಟ್ಟಿಗೆಯ ದೇವಾಲಯಗಳು, ರಾಜರಾಮ ಹೆಗಡೆ, ಇತಿಹಾಸ ದರ್ಶನ-೧೯೯೬.

೫. ಈಸೂರಿನಲ್ಲಿ ಬೆಳಕಿಗೆ ಬಂದಿರುವ ಗಜಪೃಷ್ಠಾಕಾರದ ದೇವಾಲಯದ ವಾಸ್ತು ಅವಶೇಷ-ಶಶಿಧರ ಸಿ.ಎಸ್., ಇತಿಹಾಸ ದರ್ಶನ-೧೯೯೧.

೧೬

ಕೆಳದಿ ಚೆನ್ನಮ್ಮನ ಕಾಲದ ಅಪ್ರಕಟಿತ ಶಾಸನಗಳು

ಆರ್. ಶೇಜೇಶ್ವರ*

ಶಿವಮೊಗ್ಗ ಜಿಲ್ಲೆ ಸೊರಬ ತಾಲ್ಲೂಕು ಉಳವಿ ಹೊಬಳಿಯ ಹೀರೆಕಸವೆ ಗ್ರಾಮದಲ್ಲಿ ಬಿ.ಎಲ್. ರೈಸ್‌ರವರು ಈಗಾಗಲೇ ಅಲ್ಲಿನ ವೀರಭದ್ರ ದೇವಾಲಯದ ಬಳಿ ಕೆಳದಿ ಚೆನ್ನಮ್ಮಾಜಿಯವರ ಸಾ.ಶ. ೧೬೮೨ರ ಕಾಲದ ಶಾಸನವನ್ನು ದಾಖಾಲಿಸಿದ್ದು,[೧] ಇದೇ ಗ್ರಾಮದಲ್ಲಿ ರಮೇಶ ಹಿರೇಜಂಬೂರು ಜೊತೆ ಲೇಖಕರು ಕ್ಷೇತ್ರ ಕಾರ್ಯ ಕೈಗೊಂಡಾಗ ಇದೇ ಗ್ರಾಮದ ಹಿರ್ಲೆರು ಮಲ್ಲಿಕಾರ್ಜುನ ಗೌಡ್ರ ಅಡಿಕೆಯ ತೋಟದಲ್ಲಿ ಲಿಂಗಮುದ್ರೆಯ ಕಲ್ಲಿನಲ್ಲಿ ಶಾಸನ ಹಾಗೂ ಶಾಂತಪ್ಪ ದಾಸರ ಮನೆಯ ಹತ್ತಿರ ಲಿಂಗಮುದ್ರೆಯ ಕಲ್ಲಿನಲ್ಲಿ ಶಾಸನ ಒಟ್ಟು ಎರಡು ಅಪ್ರಕಟಿತ ಶಾಸನಗಳನ್ನು ಪತ್ತೆ ಮಾಡಲಾಗಿದೆ.

೧. ಹಿರ್ಲೆರು ಮಲ್ಲಿಕಾರ್ಜುನ ಗೌಡ್ರ ಅಡಿಕೆಯ ತೋಟದಲ್ಲಿ ಲಿಂಗಮುದ್ರೆಯ ಕಲ್ಲಿನಲ್ಲಿ ಶಾಸನ: ಈ ಶಾಸನವು ಲಿಂಗಮುದ್ರೆ ಕಲ್ಲಿನ ಮೇಲಿದ್ದು, ಮೇಲ್ಬಾಗದ ಎಡ ಹಾಗೂ ಬಲ ಬಾಗದಲ್ಲಿ ಸೂರ್ಯ ಚಂದ್ರರಿದ್ದು, ಮಧ್ಯದಲ್ಲಿ ಶಿವಲಿಂಗವಿದೆ. ಇದು ೧೪ ಸಾಲುಗಳನ್ನೊಂದಿದ್ದು ಕನ್ನಡ ಬಾಷೆ ಹಾಗೂ ಕನ್ನಡ ಲಿಪಿಯ ಶಾಸನವಾಗಿದೆ. ಶಾಸನದ ಕಲ್ಲು ೭೨ ಸೆಂ.ಮೀ ಉದ್ದ ಹಾಗೂ ೪೭ ಸೆಂ.ಮೀ ಆಗಲವಾಗಿದ್ದು ಸ್ವಲ್ಪ ಭಾಗ ಮಣ್ಣಿನಲ್ಲಿ ಹೂತು ಹೋಗಿರುವುದು ಕಂಡುಬರುತ್ತದೆ.

ಶಾಸನದ ಪಠ್ಯ

೧. ಶ್ರೀಮತ್ಕೆ ಕೆಳದಿ ಚಂನಂಮಾಜಿಯವರು ಶಿವವೊಡೆರಿ
೨. ಗೆ ಶರಣಾರ್ತಿ ಚಿಂನದಕಂತೆಯ ಬಗೆನ ರಾಮ
೩. ಚೆಶ ದೇವರಿಗೆ ಚಿಟ್ಟೂರ ಸೀಮೆ ಹಿರೆಕಸವೆ ಗ್ರಾಮ
೪. .ದ ಗ ೩೦ ಮುವತ್ತು ವರಹ ಸ್ವಾಸ್ತಿಯನು ಶಿವರ್ಪಿತ
೫. ವಾಗಿ ಬಿಟ್ಟು ಯೀ ಭೂಮಿಗೆ ಲಿಂಗಮುದ್ರೆ ಶಿಲಾಸ್ತಾಪಿತವ
೬. ಮಾಡಿಸಿ ಕೊಡುವಲ್ಲಿಗೆ ಹುಜೂರಿಂದ ಊಳೆಗದ
೭ ಬಸವನ ಕಳುಹಿಸಿದೆ ವೆ ಚಲುಗ್ರಾಮದವರ ಕ
೮. ರಸಿ ಕೊಂಡು ಗಡಿತತ್ವರಾಬಾರದ ರೀತ್ತಿ ಯಿವನ
೯. ಮುಂದಿಟ್ಟು ರೇಕೆ ಪ್ರಮಾಣ ಭೂಮಿ ಐಭೂ
೧೦. ಮಿಗೆ ಸಲುವ ಹಕಲು ಆದಾಯದಲಿ ಯಿವರು
೧೧. (ಕಜಸ ಮಟದ) ಚಲು ಮುಲಿಗೆ . . ಲಿಂಗ ಮುದ್ರೆ
೧೧. [ಶಿಲಸ್ಥಪಿ]ತವ ಮಾಡಿಸಿ ಕೊಟ್ಟು ಯೀ ಕಾಗದವ ಸೇನ
೧೨. ಬೋವರ ಕಡತಕ್ಕೆ ಬರಸಿ [ತಿರಿಗಿ ಯವರಾ ವಾಶಕ್ಕೆ]
೧೩. ಕೊಡುವ ಹಾಗೆ ಸಿದ್ದಾರ್ಥಿ ಸಂವತ್ಸರದ ಕಾರ್ತಿಕ
೧೪. . [ಲು ಕಟ್ಟು ಮಾಡಿ] . . . .

* ಸಹಾಯಕ ನಿರ್ದೇಶಕರು, ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಶಿವಮೊಗ್ಗ, ಮೊ. ೯೧೬೪೫ ೩೦೫೦೭

ಸಾರಂಶ: ಕೆಳದಿ ಚೆನ್ನಮ್ಮಾಜಿಯವರು ಶಿವವೊಡೆಯರ ಶರಣಾರ್ಥವಾಗಿ ಚಿಂನದಕಂತೆಯ ಬಗೆನ ಚಿಟ್ಟೂರು ಸೀಮೆಯ ಹಿರೇಕಸವೆ ಗ್ರಾಮದ ಗದ್ಯಾಣ ೩೦ ವರಹ ಹುಟ್ಟುವಳಿಯ ಭೂಮಿಯನ್ನು ಕ್ರಿ.ಶ. ೧೬೭೯ರ ಕಾರ್ತಿಕ ಮಾಸದಲ್ಲಿ ರಾಮೇಶ್ವರ ದೇವರಿಗೆ ದಾನ ನೀಡಿ, ಈ ಭೂಮಿಯಲ್ಲಿ ಲಿಂಗಮುದ್ರೆ ಕಲ್ಲನ್ನು ನಿಲ್ಲಿಸುವಾಗ ಅರಮನೆಯ ಊಳಿಗದ (ಪ್ರತಿನಿಧಿ) ಬಸವನು ಬಂದು ಈ ಗ್ರಾಮದ ನಾಲ್ಕು ಗಡಿಯವರನ್ನು ಕರೆಯಿಸಿ ಗಡಿಯಲ್ಲಿ ಯಾವುದೇ ತಕಾರರು ಬರದಂತೆ ಭೂಮಿಯನ್ನು ಪ್ರಮಾಣಿಸಿ ನಾಲ್ಕು ಮೂಲೆಗೆ ಲಿಂಗ ಮುದ್ರೆ ಕಲ್ಲನ್ನು ಪ್ರತಿಷ್ಠಾಪಿಸಿ, ಅಧಿಕಾರಿ ಸೇನಬೋವರ ಕಡತಕ್ಕೆ ಶಾಸನದಲ್ಲಿರುವ ವಿಷಯವನ್ನು ಕಾಗದದಲ್ಲಿ ಬರೆಯಿಸಿ ದಾನ ನೀಡಿದವರಿಗೆ ಒಂದು ಪ್ರತಿ ಅರಮನೆಗೆ ಒಂದು ಪ್ರತಿ ಬರೆಯಿಸಿ ದಾಖಲಿಸಿ ದಾನ ನೀಡಿದ್ದಾರೆ.

೨. ಶಾಂತಪ್ಪ ದಾಸರ ಮನೆಯ ಹತ್ತಿರವಿರುವ ಲಿಂಗಮುದ್ರೆಯ ಕಲ್ಲಿನ ಶಾಸನ: ಈ ಶಾಸನವು ಲಿಂಗಮುದ್ರೆ ಕಲ್ಲಿನ ಮೇಲಿದ್ದು ಮೇಲ್ಭಾಗದ ಎಡ ಹಾಗೂ ಬಲ ಬಾಗದಲ್ಲಿ ಸೂರ್ಯ ಚಂದ್ರರಿದ್ದು, ಮಧ್ಯದಲ್ಲಿ ಶಿವಲಿಂಗವಿದೆ. ಇದು ೧೩ ಸಾಲುಗಳನೊಳ್ಳಗೊಂಡಿದ್ದು ಕನ್ನಡ ಬಾಷೆ ಹಾಗೂ ಕನ್ನಡ ಲಿಪಿಯ ಶಾಸನವಾಗಿದೆ. ೬೧ ಸೆಂ.ಮೀ. ಉದ್ದ ಹಾಗೂ ೪೯ ಸೆಂ.ಮೀ ಆಗಲವಾಗಿದೆ.

ಶಾಸನದ ಪಠ್ಯ

೧. ೦ ಶ್ರೀಮತ್ಕೆಳದಿ ಚೆಂನ್ನಮ್ಮಾಜಿಯವರೂ ಸಿವವೊಡೆರಿ

೨. ೦ ಗೆ ಶಣರ್ಥೆ ಚಿಂನದಕಂತೆ ಮಹತ್ತ ದೇವರ ಶಿಶ್ಯರು ಬಸವಲಿಂಗಣ

೩. ೦ ದೇವರ ಕೈಯ ಕ್ರಯ ಗ ೧೨೦ ನೂರಯಿಪ್ಪ ವರಹನ್ನು ಅರಮನಿಗೆ ತ್ತೆ

೪. ೦ ಗದುಕೊ(ಂ)ಡು ಚಿಟುರ ಸೀಮೆ ವಳಗಣ ಹಿರೆಕಸವೆ ಗ್ರಾಮದಿಂದ

೫. ೦ ಗ ೧೨ ಹಂನೆರಡು ವರಹನ ಸ್ವಾಸ್ಥಿಯನು ಶಿವಾರ್ಪಿತವಾಗಿ ಬಿಟು [ಯಿ]

೬. ೦ ಭೂಮಿಗೆ ಲಿಂಗಮುದ್ರೆ ಶಿಲಸ್ತಪಿತವ ಮ[ಮಾ]ಡಿದ ಬಗ್ಗೆ ಹಜೂರಿಂದ [ಊ]

೭. ೦ ಳಿಗದೆ ಮಲನಾಳುಲ್ಲಿಸಿದೆವೆ ಚೌಗ್ರಾಮದವರ ಕರಿಸಿ ಕೊಂಡು ಗಡಿ

೮. ೦ ತತ್ವಾರ ಬರದ ರೀತಿಯಲ್ಲಿ ಯಿವನ ಮುಂದಿಟ್ಟು ರೇಖೆ ಪ್ರಮಾಣ ಭೂಮಿ

೯. ೦ ಆ ಗ್ರಾಮದಲ್ಲಿ ಯಿವರು ಕಟ್ಟಿಸುವ ಮರದ ಚಉಮೂಲೆಗೆ .

೧೦. ೦ ಹ ಲಿಂಗಮುದ್ರೆ ಶಿಲಾಸ್ತಪಿತವ ಮಾಡಿಸಿ ಕೊಟ್ಟು [ಯಿ ಕಾಗದವ] ಸೇ

೧೧. ೦ ನಬೋವರ ಕಡತಕ್ಕೆ ಬರಸಿ [ತ್ತಿರಿಗಿಯವರ ವಶಕ್ಕೆ ಕೊ]ಡುವ ಹಾಗೆ

೧೨. ೦ ಆಂ ಅಂ ॥ ಗೀರಸ ಸವಚತ್ಸರದ ಆಸಾಡ ಬ ೧೧


೧೩. ೦ ಲ್ಲು ಮಡಿಸುವ . ಗಿ ಅಮರಣ

ಸಾರಾಂಶ: ಕೆಳದಿ ಸಾಮ್ರಾಜ್ಯದ ಚೆನ್ನಮ್ಮಾಜಿಯವರು ತಮ್ಮ ಆಡಳಿತದ ಅವಧಿಯ ಅಂಗೀರಸ ಸಂವತ್ಸರದ ಆಷಾಡ ಬಹುಳ-೧೧ರಂದು ಅಂದರೆ ಕ್ರಿ.ಶ. ೩೦-೦೬-೧೬೯೨ ರಂದು ಶಿವವೊಡೆಯರ ಶರಣಾರ್ಥವಾಗಿ ಚಿಂನದಕಂತೆ ಮಹತ್ತ ದೇವರ ಶಿಶ್ಯ ಬಸವಲಿಂಗಣ್ಣ ದೇವರು ೧೨೦ ಗದ್ಯಾಣ ವರಹವನ್ನು ಅರಮನೆಯಿಂದ ತೆಗೆದುಕೊಂಡು ಹಾಗೂ ಚಿಟ್ಟೂರ ಸೀಮೆಯಲ್ಲಿರುವ ಹೀರೆ ಕಸವೆ ಗ್ರಾಮದಿಂದ ೧೨ ಗದ್ಯಾಣ ವರಹದ ಹುಟ್ಟುವಳಿಯ ಭೂಮಿಗೆ ಲಿಂಗಮದ್ರೆಯಕಲ್ಲನ್ನು ಅರಮನೆಯ ಪ್ರತಿನಿಧಿಯಾಗಿ ಮಲನಾಳು ಬಂದು ಈ ಭೂಮಿಯ ಅಂದರೆ ಹಿರೇಕಸವೆ ಗ್ರಾಮದ ನಾಲ್ಕು ಗಡಿಯ ಗ್ರಾಮದವರನ್ನು ಕರೆಯಿಸಿ ಅವರ ಮುಂದೆ ಯಾವುದೇ ತಕಾರರು ಬರದಂತೆ ಭೂಮಿಯ ಪ್ರಮಾಣ ಮಾಡಿಸಿ ನಾಲ್ಕು ಮೂಲೆಗೆ ಲಿಂಗಮುದ್ರೆಯ ಕಲ್ಲನ್ನು ನಿಲ್ಲಿಸಿ, ಶಾಸನದ ವಿಷಯವನ್ನು ಅಧಿಕಾರಿಯಾದ ಸೇನಬೋವರ ಕಾಗದದ ಕಡತಕ್ಕೆ ಬರೆಸಿಟ್ಟಿರುವುದನ್ನು ತಿಳಿಸುತ್ತದೆ.

ಎರಡು ಶಾಸನಗಳ ಮಹತ್ವ: ಕೆಳದಿ ಅರಸರು ಕೆಳದಿ, ಇಕ್ಕೇರಿ ಹಾಗೂ ಬಿದನೂರನ್ನು ರಾಜಧಾನಿಯಾಗಿ ಮಾಡಿಕೊಂಡು ಕ್ರಿ.ಶ. ೧೬೩೮ ರಿಂದ ಕ್ರಿ.ಶ. ೧೭೬೩ ರವರೆಗೆ ಆಳ್ವಿಕೆ ಮಾಡಿದರು. ಇವರಲ್ಲಿ ಪ್ರಸಿದ್ದವಾದ ರಾಣಿ ಚೆನ್ನಮ್ಮ ಇವರನ್ನು ಕೆಳದಿ ಚೆನ್ನಮ್ಮ ಎಂದು ಕರೆಯಲಾಗಿದ್ದು, ಇವರು ಕ್ರಿ.ಶ. ೧೬೭೨ ರಿಂದ ಕ್ರಿ.ಶ. ೧೬೯೭ ರವರೆಗೆ ಸುಮಾರು ೨೬ ವರ್ಷಗಳ

ಕಾಲ ಆಳ್ವಿಕೆ ಮಾಡಿದ್ದಾರೆ. ಇವರು ತಮ್ಮ ಆಳ್ವಿಕೆಯ ಅವಧಿಯಲ್ಲಿ ಆನೇಕ ಯುದ್ಧ, ದಾನ, ಧರ್ಮಗಳನ್ನು ನೀಡಿದ್ದಾರೆ. ಚೆನ್ನಮ್ಮನ ಆಳ್ವಿಕೆಗೆ ಸಂಬಂಧಿಸಿದಂತೆ ಹಿರೇಕಸವಿ ಗ್ರಾಮದಲ್ಲಿ ಈಗ ಅಪ್ರಕಟಿತ ಎರಡು ಶಾಸನಗಳು ದೊರೆತಿವೆ. ಇದೇ ಗ್ರಾಮದಲ್ಲಿ ಈಗಾಗಲೇ ಈ ಹಿಂದೆ ಪ್ರಕಟಿತವಾದ ವೀರಭದ್ರ ದೇವಾಲಯದ ಬಳಿಯಿರುವ ಶಾಸನವು ಕ್ರಿ.ಶ. ೧೬೮೨ರ ಚೆನ್ನಮ್ಮಾಜಿಯ ಆಳ್ವಿಕೆಯ ಕಾಲದ್ದಾಗಿದೆ.[೨] ಆದರೆ ಈಗ ಇದೇ ಗ್ರಾಮದಲ್ಲಿ ದೊರೆತಿರುವ ಚೆನ್ನಮಾಜಿಯ ಶಾಸನ ಸಾ.ಶ. ೧೬೭೯ರ ಕಾಲದ್ದಾಗಿದ್ದು, ಇದು ಈ ಗ್ರಾಮದಲ್ಲಿ ಕ್ರಿ.ಶ. ೧೬೮೨ರ ಮೊದಲೇ ಇಲ್ಲಿ ಚೆನ್ನಮ್ಮ ಆಳ್ವಿಕೆ ಮಾಡಿರುವುದನ್ನು ತಿಳಿಸುತ್ತದೆ. ಇನ್ನೊಂದು ಶಾಸನವು ಕ್ರಿ.ಶ. ೧೬೯೨ರ ಕಾಲದ್ದಾಗಿದ್ದು ಇಲ್ಲಿ ಚೆನ್ನಮ್ಮನ ಆಳ್ವಿಕೆಯನ್ನು ತಿಳಿಸುತ್ತದೆ. ದೊರೆತಿರುವ ಎರಡು ಶಾಸನಗಳಲ್ಲಿ ಶಿವ ಒಡೆಯರ ಶರಣಾರ್ಥವಾಗಿ ಚಿಂನದಕಂತೆ ಮಹತ್ತ ದೇವರ ಉಲ್ಲೇಖಿಸಲಾಗಿದ್ದು, ಅಂದರೆ ಇದು ಮಠವಾಗಿದ್ದು ಹೀರೆಕಸವಿ ಗ್ರಾಮದಲ್ಲಿ ಈ ಶಾಸನಗಳು ದೊರೆತಿರುವ ಸ್ಥಳದಿಂದ ಸುಮಾರು ೫೦೦ ಮೀಟರ್ ದೂರದಲ್ಲಿ ಈಗ ಪಾಳುಬಿದ್ದ ಸ್ಥಿತಿಯಲ್ಲಿರುವ ಹೀರೆ ಮಠವೇ ಚಿಂನದಕಂತೆ ಮಠ ಎಂದು ಅಭಿಪ್ರಾಯಪಡಲಾಗಿದೆ. ಏಕೆಂದರೆ ಕೆಳದಿ ಸಾಮ್ರಾಜ್ಯದಲ್ಲಿ ಇದುವರೆಗೂ ಚಿಂನದಕಂತೆ ಮಠದ ಕುರಿತು ಚೆನ್ನಮ್ಮನ ಕಾಲದ ಕ್ರಿ.ಶ. ೧೬೯೬ರ ಶಿವಮೊಗ್ಗ ತಾಲ್ಲೂಕಿನ ಕಡೋಕಲ್ಲು ಗ್ರಾಮದ ಶಾಸನದಲ್ಲಿ ಚಿನದಕಂತೆ ಗಾಜನೂರು . . . . ದೇವರಿಗೆ ದಂಡಿಗೆ ಉಂಬಳಿಯ ಉಲ್ಲೇಖ ಕಂಡುಬರುತ್ತದೆ.[೩] ಈ ಮಠದ ದೇವರ ಪಲ್ಲಕ್ಕಿಯನ್ನು ಹೊರುವವರಿಗೆ ಉಂಬಳಿಯನ್ನು ನೀಡುವಾಗ ಈ ಕಡೋಕಲ್ಲು ಗ್ರಾಮವನ್ನು ದಾನ ನೀಡಿದ್ದಾರೆ. ಹಾಗೂ ಇದು ಕ್ರಿ.ಶ. ೧೬೭೨ರಲ್ಲಿಯೇ ಹಿರೇಕಸವಿ ಗ್ರಾಮದಲ್ಲಿ ಚಿಂನದಕಂತೆ ಮಠವಿರುವುದರಿಂದ ಅದರ ಉಪ ಅಥವಾ ಅದರ ಅಧೀನ ಮಠ ಕಡೋಕಲ್ಲು ಗ್ರಾಮದ ಶಾಸನದಲ್ಲಿ ಉಲ್ಲೇಖವಾಗಿರುವ ಮಠವಿರಬಹುದು.ಇದು ಗಾಜನೂರಿನಲ್ಲಿ ಇದ್ದಿರಬಹುದೆಂದು ತಿಳಿಯಬಹುದಾಗಿದೆ. ಕೆಳದಿ ಸಾಮ್ರಾಜ್ಯದಲ್ಲಿ ಹಿರೇ ಕಸವಿ ಹಾಗೂ ಕಡೋಕಲ್ಲು ಗ್ರಾಮದ ಶಾಸನಗಳಲ್ಲಿ ಬಿಟ್ಟರೇ ಬೇರೆ ಎಲ್ಲಿಯೂ ಸಹಾ ಈ ಮಠಗಳ ಉಲ್ಲೇಖ ನನ್ನ ಅಧ್ಯಯನದ ಪ್ರಕಾರ ಕಂಡುಬಂದಿಲ್ಲ. ಇನ್ನೊಂದು ಅರ್ಥದಲ್ಲಿ ಚಿನ್ನದಕಂತೆ ಎಂದರೆ ಲಿಂಗಕ್ಕೆ ಧರಿಸುವ ಚಿನ್ನದ ಕವಚ ಮುಖವಾಡ ಹಾಗೂ ಚಿನ್ನದಿಂದ ಆಭರಣ ಎಂದು ಅರ್ಥೈಯಿಸಬಹುದಾಗಿದೆ. ಇಲ್ಲಿ ರಾಮಚೇಶ ದೇವರಿಗೆ ದಾನ ನೀಡಲಾಗಿದೆ, ಈ ದೇವಾಲಯವು ಇದೇ ಗ್ರಾಮದ ಹಿರೇ ಮಠದ ಮುಂಬಾಗದಲ್ಲಿದ್ದು, ಈ ದೇವಾಲಯದ ಮರದ ಬಾಗಿಲನ್ನು ಚೌಡೇಶ್ವರಿ ಎಂದು ಕರೆಯಲಾಗಿದೆ. ಈ ಬಾಗಿಲನ್ನು ಕೆಳದಿ ಅರಸರ ಕಾಲದಲ್ಲಿಯೇ ನಿರ್ಮಾಣ ಮಾಡಿದ್ದಾರೆ. ದೇವಾಲಯವನ್ನು ಶಾಸನದಲ್ಲಿ ರಾಮೇಶ್ವರ ದೇವಾಲಯವೆಂದು ಹಾಗೂ ಸ್ಥಳೀಯರು ಇದನ್ನು ಇದೇ ಹೆಸರಿನಿಂದ ಕರೆಯಲಾಗಿದ್ದು ಶಾಸನದಲ್ಲಿ ಈ ದೇವಾಲಯಕ್ಕೆ ದಾನ ನೀಡಿದ್ದಾರೆ.ದಾನ ನೀಡುವಾಗ ಗದ್ಯಾಣ ವರಹ ಅಂದರೆ ಚಿನ್ನದ ನಾಣ್ಯಗಳನ್ನು ಹಾಗೂ ಈ ನಾಣ್ಯಗಳ ಬೆಲೆಯ ಆಧಾರದ ಮೇಲೆ ಹುಟ್ಟುವಳಿ ಭೂಮಿಯನ್ನು ದಾನ ನೀಡಿದ್ದಾರೆ. ದಾನ ನೀಡುವಾಗ ಚಿಟ್ಟೂರು ಸೀಮೆಯ ಉಲ್ಲೇಖವಿದ್ದು, ಚಿಟ್ಟೂರು ಗ್ರಾಮವು ಸೊರಬ ತಾಲ್ಲೂಕಿನ ಗ್ರಾಮವಾಗಿದ್ದು, ಕ್ರಿ.ಶ. ೧೧೫೪ರ ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಚಿಟ್ಟೆವೂರಗಿದ್ದು,[೪] ನಂತರ ಕ್ರಿ.ಶ. ೧೧೯೨ರ ಹೊಯ್ಸಳರ ಕಾಲದಲ್ಲಿ ಚಿಟ್ಟೂರು ಆಗಿದ್ದು,[೫] ವಿಜಯನಗರ ಕಾಲದಲ್ಲಿ ಚಿಟ್ಟೂರು ಸೀಮೆಯಾಗಿದೆ.[೬] ಈ ಸೀಮೆಯೇ ಕೆಳದಿ ಅರಸರ ಕಾಲದಲ್ಲಿ ಮುಂದುವರೆದು ಚೆನ್ನಮಾಜಿಯ ಕಾಲದಲ್ಲಿ ಈ ಸೀಮೆಗೆ ಸೇರಿದ ಹಿರೆಕಸವೆ ಗ್ರಾಮದಲ್ಲಿ ಅಂದರೆ ಈ ಗ್ರಾಮದ ಉಲ್ಲೇಖವು ಈ ಹಿಂದೆ ಪ್ರಕಟಿತವಾದ ಇದೇ ಗ್ರಾಮದ ವೀರಭದ್ರ ದೇವಾಲಯದ ಬಳಿಯಿರುವ ಶಾಸನದಲ್ಲಿ ಕ್ರಿ.ಶ. ೧೬೮೨ರ ಚೆನ್ನಮ್ಮಾಜಿಯ ಆಳ್ವಿಕೆಯ ಕಾಲದಲ್ಲಿ ಹೀರೆಕಸವಿ ಗ್ರಾಮವು ಚಿಟ್ಟೂರು ಸೀಮೆಗೆ ಸೇರಿರುವುದು ತಿಳಿಯುತ್ತದೆ.[೭] ಚೆನ್ನಮಾಜಿಯ ಊಳಿಗದ ಅಂದರೆ ಚೆನ್ನಮಾಜಿಯ ಪ್ರತಿನಿಧಿಯಾಗಿ ಮಲ್ಲನಾಳು ಹಾಗೂ ಬಸವನ ಎಂಬುವರು ಬಂದು ದಾನ ಕೋಡುವಾಗ ಗಡಿಯಲ್ಲಿ ಯಾವುದೇ ತಕಾರರು ಬರದಂತೆ ನಾಲ್ಕು ಗ್ರಾಮದವರನ್ನು ಕರೆಯಿಸಿ ದಾನ ನೀಡುವ ಭೂಮಿಗೆ ಲಿಂಗಮುದ್ರೆಯ ಕಲ್ಲನ್ನು ಶಿವಾರ್ಪಿತವಾಗಿ ನಿಲ್ಲಿಸಿ ಇದು ಶಾಶ್ವತವಾಗಿರುವಂತೆ ಹಾಗೂ ದಾಖಲೀಕರಣವಾಗುವಂತೆ ಈ ಶಾಸನದ ಕಲ್ಲಿನಲ್ಲಿ ಕಂಡರಿಸಿದ ವಿಷಯವನ್ನು ಕಾಗದದಲ್ಲಿ ಸೇನಬೋವರ ಕಡತಕ್ಕೆ ಅಂದರೆ ಸೇನಬೋವರ ಲೆಕ್ಕಪತ್ರಕ್ಕೆ ಕಾಗದದಲ್ಲಿ ಬರೆಯಿಸಿ ದಾಖಲಿಕರಿಸಿರುವುದು ತಿಳಿದುಬರುತ್ತದೆ. ಇವುಗಳು ದಾನವನ್ನು ಹಾಗೂ ಲಿಂಗಮದ್ರೆ ಕಲ್ಲಿನ ಮಹತ್ವವನ್ನು ಸಾರುವ ಕೆಳದಿ ಸಾಮ್ರಾಜ್ಯದ ಮಹತ್ವದ ಶಾಸನಗಳಾಗಿವೆ.

ಶಾಸನಗಳಲ್ಲಿ ಉಲ್ಲೇಖವಾಗಿರುವ ಚಿಂನದಕಂತೆ ಮಠವು ಶಿವಮೊಗ್ಗ ತಾಲ್ಲೂಕಿನ ಕೊಡೆಕಲ್ಲು(ಕಡೆಕಲ್ಲು)ನ ಶಾಸನದಲ್ಲಿ ಚಿನದ ಕಂತೆಯ ಗಾಜನೂರ ಎಂದು ಇಲ್ಲಿ ಶಾಸನವು ತೃಟಿತವಾಗಿರುವುದರಿಂದ ಯಾವ ದೇವರು/ಮಠ ಎನ್ನುವುದು ತಿಳಿಯುವುದಿಲ್ಲ, ಆದರೆ ಕಡೆಕಲ್ಲು ಗ್ರಾಮವನ್ನು ದಾನ ನೀಡಿರುವುದು ತಿಳಿಯುತ್ತದೆ. ಆದರೆ ಈಗ ಅಲ್ಲಿ ಮಠವಿರುವುದು ಕಂಡುಬಂದಿಲ್ಲ. ಅದರೆ ದಕ್ಷಿಣ ಕನ್ನಡ ಜಿಲ್ಲೆಯ ಕೊಡೆಕಲ್ಲುನಲ್ಲಿ ಕೊಡೆಕಲ್ಲು ಮಠವಿದ್ದು, ಇದು ಕೆಳದಿ ಅರಸರ ಕಾಲದ್ದು



ಶಾಂತಪ್ಪ ದಾಸರ ಮನೆಯ ಹತ್ತಿರವಿರುವ ಲಿಂಗಮುದ್ರೆಯ ಕಲ್ಲಿನ ಶಾಸನ

ಎಂದು ಹೇಳಲಾಗುತ್ತಿದೆ. ಈ ಮಠ ಚಿಂನದ ಕಂತೆ ಮಠವಿರಬಹುದೇ ಅಥವಾ ಇಲ್ಲಿನ ಕೊಡೆಕಲ್ಲು ಗ್ರಾಮದಿಂದ ಹಾಗೂ ಇದು ದಾನ ನೀಡಿದ ಗ್ರಾಮವಾಗಿರುವುದರಿಂದ ಕೆಳದಿ ಅರಸರು ಇದೇ ಗ್ರಾಮದ ಹೆಸರಿನಲ್ಲಿ ಅಲ್ಲಿ ಕೊಡೆಕಲ್ಲು ಮಠವನ್ನು ಸ್ಥಾಪಿಸಿರಬಹುದೇ ಎನ್ನುವುದರ ಕುರಿತು ಇನ್ನೂ ಹೆಚ್ಚಿನ ಅಧ್ಯಯನದ ಅವಶ್ಯಕತೆಯಿದೆ ಎಂದು ಅಭಿಪ್ರಾಯಪಡಲಾಗಿದೆ.

[ಈ ಶಾಸನವನ್ನು ಪತ್ತೆ ಹಚ್ಚುವಲ್ಲಿ ಸಹಕರಿಸಿದ ರಮೇಶ ಹೀರೆಜಂಬೂರು, ಶಾಸನವನ್ನು ಓದಿಕೊಟ್ಟ ಡಾ. ಜಗದೀಶ ಹಾಗೂ ಶಿಕ್ಷಕರಾದ ಸುಧಾಕರ, ಪುಟ್ಟರಾಜು ಗೌಡ್ರು, ಗಣಪತಿ, ನಾಗರಾಜ, ದಿನೇಶ್ ಬಾಬು, ಉದಯಬಾಬು ಹಾಗೂ ನಕ್ಷೆಯನ್ನು ತಯಾರಿಸಿ ಕೊಟ್ಟ ಅಜಯ ಕುಮಾರ ಶರ್ಮ ಇವರುಗಳಿಗೆ ಧನ್ಯವಾದಗಳು.]

ಅಡಿ ಟಿಪ್ಪಣಿಗಳು

೧. ರೈಸ್.ಬಿ.ಎಲ್., ೧೯೦೪, 'ಎಪಿಗ್ರಾಫಿಯ ಕರ್ನಾಟಿಕ' ಸಂಪುಟ ೮. ಸೊರಬ. ಶಾ.ಸಂ. ೫೪೮.

೨. ಅದೇ ಸೊರಬ., ಶಾ.ಸಂ. ೫೪೮.

೩. ರೈಸ್. ಬಿ.ಎಲ್., ೧೯೦೨, 'ಎಪಿಗ್ರಾಫಿಯ ಕರ್ನಾಟಿಕ' ಸಂಪುಟ ೭. ಶಿವಮೊಗ್ಗ. ಶಾ.ಸಂ. ೧೭.

೪. ರೈಸ್. ಬಿ.ಎಲ್., ೧೯೦೪, 'ಎಪಿಗ್ರಾಫಿಯ ಕರ್ನಾಟಿಕ' ಸಂಪುಟ ೮. ಸೊರಬ. ಶಾ.ಸಂ. ೫೧೦.

೫. ಅದೇ ಸೊರಬ., ಶಾ.ಸಂ. ೫೧೪.

೬. ಅದೇ ಸೊರಬ., ಶಾ.ಸಂ. ೫೫೪.

೭. ಅದೇ ಸೊರಬ., ಶಾ.ಸಂ. ೫೪೮.

೧೭

ಹಾಸನದ ದೊಡ್ಡ ಬಸದಿಯ ಅಪ್ರಕಟಿತ ಜೈನ ಶಾಸನಗಳು

ಎಚ್.ಪಿ. ನಿತಿನ್*

ಹಾಸನದ ದೊಡ್ಡ ಬಸದಿಯಲ್ಲಿ ೧೨ರಿಂದ ೧೫ನೇ ಶತಮಾನಕ್ಕೆ ಸೇರಿದ ಅಪರೂಪದ ನಾಲ್ಕು ಜೈನ ಶಿಲಾ ಶಾಸನಗಳು ಪತ್ತೆಯಾಗಿವೆ.

ಹಾಸನ ನಗರದ ದೇವಿಗೆರೆ ಸಮೀಪದಲ್ಲೇ ಇರುವ ದೊಡ್ಡ ಬಸದಿಯ ಮೂಲ ಸ್ವಾಮಿಯಾದ ಪಾರ್ಶ್ವನಾಥ ತೀರ್ಥಂಕರರು, ಮೊದಲ ಅಂತಸ್ತಿನಲ್ಲಿದ್ದ ನೇಮಿನಾಥ ತೀರ್ಥಂಕರರು, ಬಸದಿಯ ನವರಂಗದಲ್ಲಿರುವ ಕಂಬದ ಮೇಲೆ ಹಾಗೂ ಬಸದಿಯ ಆವರಣದಲ್ಲಿರುವ ಜೆಟ್ಟಿಗೆರಾಯನ ಗುಡಿಯ ಹೊರಭಾಗದ ಪೀಠದ ಮೇಲೆ ಈ ನಾಲ್ಕು ಶಾಸನಗಳು ಪತ್ತೆಯಾಗಿವೆ.

ಹಾಸನ ಜಿಲ್ಲೆಯು ಶಾಸನಗಳ ನೆಲೆವೀಡಾಗಿದ್ದು ಅದರಲ್ಲೂ ವಿಶೇಷವಾಗಿ ಶ್ರವಣಬೆಳಗೊಳದಲ್ಲಿರುವ ಸುಮಾರು ಆರುನೂರು ಜೈನ ಶಾಸನಗಳು ಹಾಗೂ ಜಿಲ್ಲೆಯಾದ್ಯಂತ ಹಲವಾರು ಜೈನ ಶಾಸನಗಳು ದೊರಕಿದ್ದರೂ ಕೂಡ ಹಾಸನ ನಗರದಲ್ಲಿ ಯಾವುದೇ ಜೈನ ಶಾಸನಗಳು ಇದುವರೆಗೆ ಪತ್ತೆಯಾಗಿರಲಿಲ್ಲ. ಪ್ರಸ್ತುತ ಸಿಕ್ಕಿರುವ ನಾಲ್ಕು ಜೈನ ಶಾಸನಗಳು ಹಾಸನ ನಗರದಲ್ಲಿನ ಜೈನ ಪರಂಪರೆಯ ಪುರಾತನ ಸಂಸ್ಕೃತಿಯನ್ನು ತಿಳಿಸುತ್ತದೆ.

ಶ್ರೀ ನೇಮಿನಾಥ ತೀರ್ಥಂಕರರ ಪಾದಪೀಠ ಶಾಸನ

ಬಸದಿಯ ಮೊದಲ ಅಂತಸ್ತಿನಲ್ಲಿ ನೇಮಿನಾಥ ತೀರ್ಥಂಕರರ ವಿಗ್ರಹವನ್ನು ಒಂದು ಪೀಠದ ಮೇಲೆ ಪ್ರತಿಷ್ಠಾಪಿಸಲಾಗಿತ್ತು. ಬಸದಿಯು ಜೀರ್ಣೋದ್ಧಾರದ ಸಮಯದಲ್ಲಿ ಈ ನೇಮಿನಾಥ ವಿಗ್ರಹವನ್ನು ಇಟ್ಟಿದ್ದ ಕೋಣೆಯನ್ನು ತೆರವುಗೊಳಿಸಬೇಕಾಗಿದ್ದರಿಂದ ವಿಗ್ರಹವನ್ನು ತೆಗೆದು ಮತ್ತೊಂದು ಜಾಗದಲ್ಲಿ ಇರಿಸಲಾಗಿದೆ. ಹಿಂದೆ ಕಾಂಕ್ರೀಟಿನಲ್ಲಿ ಮುಚ್ಚಿ ಹೋಗಿದ್ದ ಭಾಗದಲ್ಲಿ ಈ ಶಾಸನವು ಬೆಳಕಿಗೆ ಬಂದಿದೆ.

ಶಾಸನದ ಪಾಠ

೧ ಶ್ರೀ ಮೂಲಸಂಘ ದೇಸಿಯಗಣ ಪೊಸ್ತಕ ಗಚ್ಛ

೨ ಕೊಂಡ ಕುಂದಾನ್ವಯದ ಇಂಗಳೇಶ್ವರದ ಬ

೩ ಳಿಯ ಶ್ರೀ ಶ್ರುತಕೀರ್ತ್ತಿ ದೇವರ ಗುಡ್ಡಗಳು

೪ ಕೊಂಗನಾಡ ಶ್ರೀಕರಣದ ಕಾವಣ್ಣಂಗಳ ಮಕ್ಕ

೫ ಳು ನಾಕಣ್ಣ ಹೊನ್ನಣ್ಣಂಗಳು ಮಾಡಿಸಿದ ಶ್ರೀ


೬ ನೇಮಿನಾಥ ಸ್ವಾಮಿಗಳ ಪ್ರತಿಮೆ ಮಂಗ


೭ ಳ ಮಹಾ ಶ್ರೀ ಶ್ರೀ ಶ್ರೀ@@@ ॥

ಶಾಸನದ ಸಾರಾಂಶ: ಮೂಲ ಸಂಘ ದೇಸಿಯ ಗಣ ಪುಸ್ತಕ ಗಚ್ಛ ಕುಂದಕುಂದಾನ್ವಯ ಇಂಗಳೇಶ್ವರ ಬಳಿಯ ಮುನಿಗಳಾದ ಶ್ರೀ ಶೃತಕೀರ್ತಿ ದೇವರ ಶಿಷ್ಯರು ಕೊಂಗನಾಡಿನ ಶ್ರೀ ಕಾವಣ್ಣನ ಮಕ್ಕಳಾದ ನಾಕಣ್ಣ ಹಾಗೂ ಹೊನ್ನಣ್ಣರು ಶ್ರೀ ನೇಮಿನಾಥ ಸ್ವಾಮಿಗಳ ಪ್ರತಿಮೆಯನ್ನು ಮಾಡಿಸಿದರು ಎಂದು ತಿಳಿಸುತ್ತದೆ.

* # ೬೦೭, 'ರತ್ನತ್ರಯ', ೧೨ನೇ ಅಡ್ಡರಸ್ತೆ, ೨ನೇ ಬ್ಲಾಕ್, ೩ನೇ ಹಂತ, ಬಿಟಿಎಂ ಬಡಾವಣೆ, ಬೆಂಗಳೂರು.









ಮುನಿ ಪರಂಪರೆಯ ಸಂಪೂರ್ಣ ವಿವರ: ಒಂದೇ ಶಾಸನದಲ್ಲಿ ಮುನಿ ಪರಂಪರೆಯ ವರ್ಗೀಕರಣ ಅಂದರೆ ಸಂಘ, ಗಣ, ಗಚ್ಛ, ಅನ್ವಯ, ಬಳಿ ಎಲ್ಲವುಗಳು ಕಂಡು ಬರುವುದು ಅಪರೂಪ. ಈ ರೀತಿಯ ಉಲ್ಲೇಖಗಳನ್ನು ಶ್ರವಣಬೆಳಗೊಳದ ಒಂದೆರಡು ಶಾಸನಗಳು ಹಾಗೂ ಕರ್ನಾಟಕದ ಕೆಲವೇ ಕೆಲವು ಶಾಸನಗಳಲ್ಲಿ ಕಾಣಬಹುದು. ಈ ಶಾಸನದಲ್ಲಿ ಹೆಸರಿಸಲಾದ ಶ್ರುತಮುನಿಯ ಸಂಪೂರ್ಣ ಗುರುಪರಂಪರೆಯನ್ನು ನಾವು ಕಾಣಬಹುದು.

ಮೂಲ ಸಂಘ: ಮೂಲ ಸಂಘವೆಂದರೆ ಜೈನ ಮುನಿ ಪರಂಪರೆಯ ಸಂಘದ ಹೆಸರು ಹಾಗೂ ಈ ಮುನಿ ಪರಂಪರೆಗೆ ದೊಡ್ಡ ಹೆಸರಿದೆ.

ಇಂಗುಳೇಶ್ವರ ಬಳಿ: ಇಂಗುಳೇಶ್ವರ ಎಂಬುದು ಒಂದು ಊರಿನ ಹೆಸರು. 'ಇಂಗುಳೇಶ್ವರ ಬಳಿ' ಎಂದರೆ ಇಂಗುಳೇಶ್ವರ ಎಂಬ ಊರಿನಲ್ಲಿ ಜನ್ಮತಾಳಿದ ಮುನಿಸಂಘದ ವರ್ಗ.

ಕೊಂಗನಾಡು: ಈ ಶಾಸನದಲ್ಲಿ "ಕೊಂಗನಾಡ" ಎಂಬ ಪದದ ಪ್ರಯೋಗವಿದೆ. ಕೊಂಗನಾಡು ಎಂದರೆ ಇಂದಿನ ಹಾಸನ ಜಿಲ್ಲೆಯ ಅರಕಲಗೂಡು ತಾಲೂಕಿನ ಪ್ರದೇಶದಿಂದ ಉತ್ತರ ಕೊಡಗಿನ ಏಳು ಸಾವಿರ ಪ್ರದೇಶ ಅಂದರೆ ಕಾವೇರಿ ಹಾಗೂ ಹೇಮಾವತಿ ನದಿಗಳ ನಡುವಿನ ಸ್ಥಳದಲ್ಲಿ ಆಳ್ವಿಕೆ ಮಾಡುತ್ತಿದ್ದ ಪ್ರದೇಶವೇ ಕೊಂಗನಾಡು ಅಥವಾ ಕೊಂಗಾಳ್ವರನಾಡು ಹಾಗೂ ಆ ಪ್ರದೇಶದಲ್ಲಿ ಆಳ್ವಿಕೆ ಮಾಡುತ್ತಿದ್ದವರೇ ಕೊಂಗಾಳ್ವರು ಹಾಗೂ ಅವರು ಜೈನ ಅರಸರು.

ಶ್ರೀಕರಣ: ಈ ಶಾಸನದಲ್ಲಿ 'ಶ್ರೀಕರಣ' ಎಂಬ ಪದದ ಉಲ್ಲೇಖವಿದೆ, ಅಂದರೆ ಲೆಕ್ಕ ಪತ್ರವನ್ನು ಬರೆಯುವವರು.

೪. ಶಾಸನದ ಕಾಲ: ಈ ಶಾಸನದಲ್ಲಿ "ಕೊಂಗನಾಡು" ಎಂಬ ಪದದ ಉಲ್ಲೇಖವಿದೆ. ಕೊಂಗಳ್ವರು ಆಳಿದ ಸಮಯ ಸುಮಾರು ೧೧-೧೨ನೇ ಶತಮಾನ ಹಾಗೂ ಇದರ ಲಿಪಿಯ ಆಧಾರದಲ್ಲಿ ಈ ಶಾಸನವು ೧೨ನೇ ಶತಮಾನಕ್ಕೆ ಸೇರಿದ್ದೆಂದು ನಿಶ್ಚಯಿಸಿಬಹುದು.

ಶ್ರೀ ಪಾರ್ಶ್ವನಾಥ ತೀರ್ಥಂಕರರ ಪಾದಪೀಠ ಶಾಸನ

ಬಸದಿಯ ಮೂಲ ಸ್ವಾಮಿಯಾದ ಶ್ರೀ ಪಾರ್ಶ್ವನಾಥ ತೀರ್ಥಂಕರರನ್ನು ಪೀಠವೊಂದರ ಮೇಲೆ ಪ್ರತಿಷ್ಠಾಪಿಸಲಾಗಿತ್ತು. ಜೀರ್ಣೋದ್ಧಾರದ ಕಾರಣದಿಂದಾಗಿ ವಿಗ್ರಹವನ್ನು ತೆಗೆದಿದ್ದರಿಂದ ಹಿಂದೆ ಕಾಂಕ್ರೀಟಿನಲ್ಲಿ ಮುಚ್ಚಿಹೋಗಿದ್ದ ಪೀಠದ ಭಾಗದಲ್ಲಿ ಈ ಶಾಸನವು ಬೆಳಕಿಗೆ ಬಂದಿದೆ.

ಶಾಸನದ ಪಾಠ

೧ ಶ್ರೀ ಮೂಲ ಸಂಘ ದೇಸಿಯಗಣ ಪುಸ್ತಕಗಚ್ಛ ಕೊಂಡ ಕುಂ

೨ ದಾನ್ವಯ @@@

ಶಾಸನದ ಸಾರಾಂಶ: ಮೂಲ ಸಂಘ ದೇಸಿಯ ಗಣ ಪುಸ್ತಕ ಗಚ್ಛ ಕುಂದಕುಂದಾನ್ವಯ ಎಂಬ ಸಾಲನ್ನು ನಾವು ಕಾಣಬಹುದು. ಈ ಮುನಿ ಪರಂಪರೆಗೆ ಸೇರಿದ ಮುನಿಗಳ ಶಿಷ್ಯರು ಈ ವಿಗ್ರಹವನ್ನು ಮಾಡಿಸಿದರೆಂದು ನಿಶ್ಚಯಿಸಿಬಹುದು.

ಲಿಪಿಯ ಆಧಾರದಲ್ಲಿ ಈ ಶಾಸನವು ೧೨ನೇ ಶತಮಾನಕ್ಕೆ ಸೇರಿದ್ದೆಂದು ನಿಶ್ಚಯಿಸಿಬಹುದು.

ನವರಂಗದಲ್ಲಿನ ಕಂಬದ ಮೇಲಿನ ಶಾಸನ

ದೊಡ್ಡ ಬಸದಿಯ ನವರಂಗ(ಸಭಾಮಂಟಪ)ದಲ್ಲಿರುವ ಕಂಬವೊಂದರ. ಮೇಲ್ಭಾಗದಲ್ಲಿ ಎರಡು ಸಾಲಿನ ಶಾಸನವು ಹಾಗೂ ಕೆಳಭಾಗದಲ್ಲಿ ಕಾಯೋತ್ಸರ್ಗ ಭಂಗಿಯಲ್ಲಿ ನಿಂತಿರುವ ಜೈನ ಮುನಿಯೊಬ್ಬರ ಕೆತ್ತನೆಯಿದೆ. ಮುನಿಗಳ ಕೆತ್ತನೆ ಇರುವ ಕೆಳಭಾಗವು ಕಾಂಕ್ರೀಟ್ ಹಾಗೂ ಮಾರ್ಬಲ್‌ನಿಂದ ಮುಚ್ಚಲಾಗಿದೆ ಬಹುಶಃ ಈ ಭಾಗದಲ್ಲಿ ಶಾಸನವೊಂದು ಇದ್ದಿರಬಹುದು.

ಶಾಸನದ ಪಾಠ

೧ ಶ್ರೀ ಸಾಂತನ ಹ

೨ ಳ್ಳಿಯ

ಶಾಸನದ ಸಾರಾಂಶ: "ಶ್ರೀ ಸಾಂತನ ಹಳ್ಳಿಯ" ಎಂಬ ಪಾಠವಿರುವುದರಿಂದ ಬಹುಶಃ ಸಾಂತನಹಳ್ಳಿ ಎಂಬ ಊರಿಗೆ ಸೇರಿದ ಶ್ರಾವಕರೊಬ್ಬರು ಮುನಿಗಳ ಸೇವೆಯನ್ನು ಮಾಡಿದ್ದರ ವಿವರವನ್ನು ಕೆತ್ತಿಸಲು ಪ್ರಯತ್ನಪಟ್ಟ ಅಪೂರ್ಣ ಶಾಸನವೆಂದು ತೋರುತ್ತದೆ.

ಲಿಪಿಯ ಆಧಾರದಲ್ಲಿ ಈ ಶಾಸನವು ೧೪–೧೫ನೇ ಶತಮಾನಕ್ಕೆ ಸೇರಿದ್ದೆಂದು ನಿಶ್ಚಯಿಸಿಬಹುದು.

ನಾಲ್ಕನೇ ಶಾಸನ – ಜೆಟ್ಟಿಗೆರಾಯನ ಗುಡಿಯ ಹೊರಭಾಗದ ಪೀಠದ ಮೇಲಿನ ಶಾಸನ

ಬಸದಿಯ ಆವರಣದಲ್ಲಿರುವ ಜೆಟ್ಟಿಗೆರಾಯನ ಗುಡಿಯು ಮಂಟಪದ ರೂಪದಲ್ಲಿದ್ದು ಈ ಕಲ್ಲಿನ ಮಂಟಪದ ಹೊರ ಪೀಠದ ಮೇಲೆ ಎರಡು ಸಾಲಿನ ಶಾಸನವು ಪತ್ತೆಯಾಗಿದೆ.

ಶಾಸನದ ಪಾಠ

೧ ಶ್ರೀ ದೊಡಹಳಿಯ ಪದುಮಪ ಸೆಟಿಯರ ಮಕಳು ಬೊಂ

೨ ಮಣ ಸೆಟಿಯರು ಮಾಡಿದ ಧರ್ಮ ಮಂಗಲ ಮಹಾ ಶ್ರೀ

ಶಾಸನದ ಸಾರಾಂಶ ಹಾಗೂ ವಿಶ್ಲೇಷಣೆ: ಶ್ರೀ ದೊಡ್ಡಹಳಿಯ ಪದ್ಮಪ್ಪ ಶೆಟ್ಟಿಯ ಮಕ್ಕಳಾದ ಬೊಮ್ಮಣ್ಣ ಶೆಟ್ಟಿಯು ಮಾಡಿಸಿದ ಧರ್ಮ ಮಂಗಲಕಾರ್ಯ ಎಂದು ತಿಳಿಸುತ್ತದೆ. ಅಂದರೆ ಈ ಶಾಸನ ಜೆಟ್ಟಿಗರಾಯನ ಗುಡಿಯನ್ನು ಕಟ್ಟಿಸಿದವರ ವಿವರವನ್ನು ತಿಳಿಸುತ್ತದೆ.

ಲಿಪಿಯ ಆಧಾರದಲ್ಲಿ ಈ ಶಾಸನವು ೧೪–೧೫ನೇ ಶತಮಾನಕ್ಕೆ ಸೇರಿದ್ದೆಂದು ನಿಶ್ಚಯಿಸಿಬಹುದು.

[ಶಾಸನಗಳನ್ನು ಓದಿಕೊಟ್ಟು ಸಂಶೋಧನೆಯಲ್ಲಿ ಮಾರ್ಗದರ್ಶನ ನೀಡಿದ ಹರಿಹರದ ಡಾ. ರವಿಕುಮಾರ್ ಕೆ. ನವಲಗುಂದ, ಸಂಶೋಧನೆಯಲ್ಲಿ ನೆರವಾದ ಹಾಸನ ಜೈನ ಸಂಘದ ರವೀಂದ್ರಕುಮಾರ್, ಕಾಂತರಾಜ್, ದೊಡ್ಡ ಬಸದಿಯ ಪುರೋಹಿತರಾದ ಅನಂತರಾಜಯ್ಯನವರು, ತಮ್ಮ ತಂದೆ ಡಾ. ಹೆಚ್.ಎ. ಪಾರ್ಶ್ವನಾಥ್ ಹಾಗೂ ತಮ್ಮ ಪತ್ನಿ ಅಶ್ವಿನಿಯವರಿಗೆ ಕೃತಜ್ಞತೆಗಳು.]

ಕೊಮ್ಮನಾಳು ಗ್ರಾಮದ ಅಪ್ರಕಟಿತ ಜೈನ ಶಾಸನ

ಆರ್. ಮಂಜನಾಯ್ಕ*

ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ ತಾಲ್ಲೂಕಿನ ಕೊಮ್ಮನಾಳು ಗ್ರಾಮ ಪಂಚಾಯಿತಿಯ ಕೊಮ್ಮನಾಳು ಗ್ರಾಮದ ಶ್ರೀ ಚನ್ನಪ್ಪ ಎಂಬುವರ ಹೊಲದ ಹಳ್ಳದ ಬದಿಯಲ್ಲಿ ಈ ಜೈನ ಶಾಸನ ಕಂಡುಬರುತ್ತದೆ. ಶಾಸನ ದೊರೆತಿರುವ ಸ್ಥಳದಿಂದ ಒಂದು ಕಿ.ಮೀ. ದೂರದಲ್ಲಿ ಆಲದಹಳ್ಳಿ ಎಂಬ ಗ್ರಾಮದಲ್ಲಿ ವೀರಭದ್ರ ದೇವಾಲಯವಿದೆ. ಈ ದೇವಾಲಯದ ವಾಸ್ತುಶಿಲ್ಪ ಗಮನಿಸಿದರೆ ಹಿಂದೆ ಬಸದಿಯಾಗಿರಬಹುದು ಎಂದು ಈ ದೇವಾಲಯದ ಬಾಗಿಲುವಾಡದ ಲಲಾಟದಲ್ಲಿರುವ ಜಿನಬಿಂಬವು ತಿಳಿಸುತ್ತದೆ. ದೇವಾಲಯದ ಮುಂಭಾಗದಲ್ಲಿರುವ ಗಂಗರ ಭೂತುಂಗನ ಜೈನ ಶಾಸನ ಹಾಗೂ ಅಲ್ಲಿಯೇ ದೇವಾಲಯದಿಂದ ೩೦೦ ಮೀಟರ್ ಅಂತರದಲ್ಲಿರುವ ಜೈನರ ಶಾಸನಗಳು ಇರುವುದರಿಂದ ಇವುಗಳ ಆಧಾರದಿಂದ ಈಗ ಕರೆಯುವ ವೀರಭದ್ರ ದೇವಾಲಯವೇ ಹಿಂದೆ ಬಸದಿಯಾಗಿರಬಹುದು ಎಂದು ಸ್ಪಷ್ಟವಾಗುತ್ತದೆ. ಈ ಬಸದಿಗೆ ದಾನ ನೀಡಿರುವುದನ್ನು ಈ ಶಾಸನ ತಿಳಿಸುತ್ತದೆಂದು ತಿಳಿಯಬಹುದು.

ಶಾಸನದ ಪಠ್ಯ

೧.	ಸ್ವಸ್ತಿ ಶ್ರೀಮತು ಭುಜಬಳಗಂ.	೨.	ಗ(ಪೂಯ್ಸಳ)ಮಹಾವಿ...
೩.	ಗಂಗರಸನು.......	೪.	ಗೋಗರಸನುಂ ಮಸ(ಯ)ಗದೇವ
೫.	ನುಂ ಬಾಚಲದೇವಿಯುಂ ಹೆಗ್ಗಡೆ	೬	ಬಾಹುಬಲಿಯಂನು ಬಿಟ್ಟ
೭	ಕೆಯಿ ಗದ್ದೆ ಮತ್ತರ ಬೆದ್ದಲೆ ಮ	೮.	೧

ಶಾಸನದ ಸಾರಂಶ

ಶಾಸನದ ಮೇಲ್ಭಾಗದಲ್ಲಿ ಜಿನಬಿಂಬವಿದೆ. ಈ ಶಾಸನ ತೃಟಿತವಾಗಿರುವುದರಿಂದ ಇಲ್ಲಿ ರಾಜನ ಹೆಸರು ಗುರುತಿಸಲು ಸಾಧ್ಯವಾಗುತ್ತಿಲ್ಲ. ಆದರೆ ಈ ಶಾಸನವು ಶ್ರೀ ಸ್ವಸ್ತಿ ಬುಜಬಳದಿಂದ ಆರಂಭವಾಗಿದ್ದು, ಇದರಲ್ಲಿ ಬಾಚಲದೇವಿ ಹಾಗೂ ಹೆಗ್ಗಡೆ ಬಾಹುಬಲಿ ಇವರಿಬ್ಬರು ಸೇರಿ ಬಸದಿಗೆ ಒಂದು ಮತ್ತರುಗದ್ದೆ ಹಾಗೂ ಒಂದು ಮತ್ತರು ಬೆದ್ದಲು ಭೂಮಿಯನ್ನು ದಾನವಾಗಿ ನೀಡಿರುವುದು ಕಂಡುಬರುತ್ತದೆ.

ಎರೆಯಪ್ಪನು ಪಟ್ಟವನ್ನು ಧರಿಸಿದಾಗ, ಮಂಡಲಿ ನಾಡನ್ನು ಬೂತುಗನು ಪರಿಪಾಲಿಸುತ್ತಿದ್ದನು ಎಂದು ಆಲದಹಳ್ಳಿ ಶಾಸನವು ತಿಳಿಸುತ್ತದೆ. ಈ ಶಾಸನವು ಸುಮಾರು ೧೦ನೆಯ ಶತಮಾನಕ್ಕೆ ಸೇರಿದುದು. ಬೂತುಗನು ತನ್ನ ಅರಸಿ ಚಿಕ್ಕಬ್ಬೆಗೆ ಕೆರೆಯೊಂದನ್ನು ದಾನವಿತ್ತ ಸಂಗತಿಯನ್ನು ಅದು ನಿರೂಪಿಸುತ್ತದೆ. ಆದ್ದರಿಂದ ಈ ಶಾಸನದ ಕಾಲವು ಸುಮಾರು ೧೧-೧೨ನೆಯ ಶತಮಾನದ ಕಾಲದ್ದಾಗಿರಬಹುದು ಎಂದು ಅಭಿಪ್ರಾಯಪಡಲಾಗಿದೆ.

[ಲೇಖನವನ್ನು ರಚಿಸಲು ಸಹಕರಿಸಿದ ಶ್ರೀ ಆರ್. ಶೇಜೇಶ್ವರ, ಸಹಾಯಕ ನಿರ್ದೇಶಕರು, ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಶಿವಮೊಗ್ಗ, ಡಾ. ಜಗದೀಶ ಅಗಸೆ ಬಾಗಿಲು ಇವರುಗಳಿಗೆ ಕೃತಜ್ಞತೆಗಳು.]



ಶಾಸನದ ಛಾಯಾಚಿತ್ರ

* ಪುರಾತತ್ವ ಸಹಾಯಕರು, ಕಮಲಾಪುರ, ಹಂಪಿ, ಹೊಸಪೇಟೆ ತಾಲ್ಲೂಕು, ಬಳ್ಳಾರಿ ಜಿಲ್ಲೆ. ಮೊ. ೯೯೪೫೪ ೧೫೫೧೮

൧൯

ಚಿಕ್ಕಬಳ್ಳಾಪುರ ತಾಲ್ಲೂಕಿನ ಅಪ್ರಕಟಿತ ಶಾಸನಗಳು

ಎಸ್. ವಿಜಯಕುಮಾರ*

ಚಿಕ್ಕಬಳ್ಳಾಪುರದ ನಂದಿಯ ಗೋಪಿನಾಥ ಬೆಟ್ಟದಲ್ಲಿ ನಮಗೆ ಸು. ೭೫೦ರ (ಚಿ.ಬ.೨೯) ಜೈನ ಶಾಸನ ಸಿಗುತ್ತದೆ. ಸು. ೮೮೦ರ (ಚಿ.ಬ.೨೬) ನೊಳಂಬರ ಶಾಸನ ನಂದೀಗ್ರಾಮದಲ್ಲಿ ಮತ್ತೆ ಸು. ೯೫೩ರಲ್ಲಿ ಗೋಪಾಲಕೃಷ್ಣ ಕೆರೆಯ ಆನೆಕಟ್ಟೆಯ ಮೇಲೆ (ಚಿ.ಬ.೦೩) ಕೆರೆಕಟ್ಟಿಸಿರುವ ಶಾಸನ ಸಿಗುತ್ತದೆ. ಇವನ್ನು ಬಿಟ್ಟರೆ ಇದೇ ಕಾಲಘಟ್ಟದ ಶಾಸನಗಳು ಚಿಕ್ಕಬಳ್ಳಾಪುರದಿಂದ ಸುಮಾರು ೬-೭ ಕಿ.ಮೀ. ದೂರದ ಮನ್ನಾರ್‌ಪುರ, ಬೊಮ್ಮನಹಳ್ಳಿ, ಬಂಡಹಳ್ಳಿ ಗ್ರಾಮಗಳಲ್ಲಿ ಸಿಗುತ್ತವೆ. ಇವುಗಳಲ್ಲಿ ಒಂದು ಶಿಲಾಫಲಕವಾಗಿದ್ದು ಉಳಿದವು ವೀರಗಲ್ಲುಗಳಾಗಿವೆ.

ಚಿಕ್ಕಬಳ್ಳಾಪುರ ತಾಲ್ಲೂಕಿನ ಮನ್ನಾರ್‌ಪುರ ಎಂಬ ಗ್ರಾಮ ಗಂಗ ನೊಳಂಬರ ಆಡಳಿತಕ್ಕೆ ಒಳಪಟ್ಟ ಮಾಹಿತಿ ಇಲ್ಲಿ ಸಿಕ್ಕಿರುವ ಶಿಲಾ ಶಾಸನದಿಂದ ತಿಳಿದುಬರುತ್ತದೆ. ಪುಲಿನಾಡು-೬೦ರ ಆಡಳಿತ ವಿಭಾಗದಲ್ಲಿ ಈ ಪ್ರದೇಶ ಸೇರಿದ್ದು ಚೋಳರ ಮೇಲೆ ಯುದ್ಧ ಮಾಡಿ ಚೋಳರನ್ನು ಹಿಮ್ಮೆಟ್ಟಿಸಿದ್ದಷ್ಟೇ ಅಲ್ಲದೇ, 'ನೊಳಂಬನ ಸಾವಿನ ಸತ್ತ' ವಿಷಯದ ಜೊತೆಗೆ 'ಗಂಗರ ಸಮರ'ದ ಉಲ್ಲೇಖ ಈ ಶಾಸನದಿಂದ ತಿಳಿದು ಬರುತ್ತದೆ.

ಒಂದು ಶಿಲಾ ಶಾಸನ ಮತ್ತು ಎರಡು ವೀರಗಲ್ಲುಗಳು ಇದ್ದು ಒಂದು ವೀರಗಲ್ಲು ಹುತ್ತ ಬೆಳೆದು ಕೇವಲ ವೀರಗಲ್ಲು ಕೆಳಗಿನ ನಾಲ್ಕು ಸಾಲುಗಳ ನಾಲ್ಕು ಅಕ್ಷರಗಳು ಮಾತ್ರ ಕಾಣಿಸುತ್ತಿದ್ದು ಮತ್ತೊಂದು ವೀರಗಲ್ಲು ರಣರಂಗದ ಚಿತ್ರಣವನ್ನು ಕಟ್ಟಿಕೊಡುವ ತುಂಬಾ ಅದ್ಭುತವಾದ ಕೆತ್ತನೆಯುಳ್ಳ ವೀರಗಲ್ಲಾಗಿದೆ.ಇದು ಐದು ಸಾಲುಗಳನ್ನು ಹೊಂದಿದ್ದು ಇದರ ಶಾಸನ ಪಾಠ ಅಸ್ಪಷ್ಟವಾಗಿದೆ. ಇದರ ಪಕ್ಕದಲ್ಲಿರುವ ಶಿಲಾ ಶಾಸನ ಬಹುಶಃ ಈ ವೀರಗಲ್ಲಿನ ಮಾಹಿತಿಯನ್ನು ನೀಡುವ ಶಾಸನವಾಗಿದೆ..

ಈ ಶಿಲಾಶಾಸನ ನೊಳಂಬರ ಕಾಲಕ್ಕೆ ಸಂಬಂಧಿಸಿದ್ದು ಎಂದು ಶಾಸನ ಪಾಠದಿಂದ ಗೊತ್ತಾಗುತ್ತದೆ. ಈ ಶಾಸನದಲ್ಲಿ ಒಟ್ಟು ೧೪ ಸಾಲುಗಳಿದ್ದು ಶಾಸನದ ಮುಂದೆ ಹುಣಸೆಮರ ಬೆಳೆದಿರುವುದರಿಂದ ಶಾಸನ ಓದಲು ಸ್ವಲ್ಪ ಕಷ್ಟಕರವಾಗಿದೆ.

೧. ಸ್ವಸ್ತಿ ಸಮಧಿಗತ ಪಞ್ಚ ಮಹಾಶಬ್ದ ಪ

೨. ಲ್ಲವಾನ್ವಯ ಶ್ರೀ ಪೃಥ್ವೀರಾಜ್ಯಂಗೈಯೆ ಪಲ್ಲ

೩. ವ ಕೊಲ ತಿಲಕಮೇಕವಾಕ್ಯ ಕಾಂಚೀಪು

೪. ರಾಧೀಶ್ವರ ಶ್ರೀಮನ್ ನೊಟಂಬಾಧಿರಾಜರವೊ

೫. ಟನ ಮಗ ದಾಟೆವಂದೋ ಪುಲಿನಾಡೊಳಗಣ

೬. ದ ಸರಯ ಬೀಡಿನಲಿದೀ ಸಕ ವರಿಷ ೯೨೯ನೆಯ

೭ ಪ್ಲವಂಗ ಸಂವತ್ಸರದ ಕಾತ್ರಿಕ ಮಾಸದ , ಟ ನ

೮. ವಮಿ ಬುದವಾರದೊಟನ ಬಿಜುದರ ಟ

೯. ತತ್ತುದದನ್ನೊ ನಾಯಕ ಮಾನವಮಾರಾಯ

೧೦. ನೊಳಗಾಗಿ ಚೋಟನಮಳ ಕೊನ್ದು ನೊಟಂ

೧೧. ಬ ಸತ್ತ , , , , , , , , , , , , , , , ,

೧೨. ರಿಪುರಜುವ ನಾಯಕರ ಕೊಂದು , , ಶ್ರೀಮ

* ಸಂಶೋಧನಾ ವಿದ್ಯಾರ್ಥಿ, ಸರ್ಕಾರಿ ಕಲಾ ಕಾಲೇಜು, ಅಂಬೇಡ್ಕರ್ ವೀಥಿ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೧೩. ನ್ನೊಳಂಬಧಿರಾಜ ಪುಜಯಕ , , , ತ್ರಿ

೧೪. ಲೋಕ ತ್ರಿಣೇತ್ರಂಮಬಿಳಿಲೂಂರ ದೊರಂ ಗಂಗರ ಸಮರಂ

ಸಾರಾಂಶ: 'ಸ್ವಸ್ತಿ ಸಮಧಿಗತ ಪಂಚಮಹಾಶಬ್ದ ಪಲ್ಲವಾನ್ವಯ ಶ್ರೀ ಪೃಥ್ವೀರಾಜ್ಯ..ಪಲ್ಲವ ಕುಲತಿಲಕ ಏಕವಾಕ್ಯಕಂ , , , ಪುರವರಾಧೀಶ್ವರ ಶ್ರೀಮನ್ ನೊಳಂಬಾಧಿರಾಜ, , ಮಗದಾಳೆ, , ಪುಲಿನಾಡೊಳಗಣ , ಸರಯ ಬೀಡಿನಲಿ ಸಕ ವರುಷ ೯೨೯ನೆಯ ಪ್ಲವಂಗ ಸಂವತ್ಸರದ ಕಾರ್ತಿಕ ಮಾಸದ ಬಹುಳ ನವಮಿ ಬುದವಾರದೊಳನ , ಈ ಶಾಸನದಲ್ಲಿಸಕ ವರುಷ ೯೨೯' (ಕ್ರಿ.ಶ. ೧೦೦೪ಕ್ಕೆ ಸರಿಹೊಂದುತ್ತದೆ)ಎಂದು ಸ್ಪಷ್ಟವಾಗಿ ಉಲ್ಲೇಖವಾಗಿರುವುದರಿಂದ ನೊಳಂಬರ ಕಾಲಕ್ಕೆ ಸೇರಿದ ಹತ್ತನೇ ಶತಮಾನದ ಶಾಸನವೆಂದು ತಿಳಿಯಬಹುದಾಗಿದೆ.

ಭಾಷೆ ಹಳಗನ್ನಡ ಭಾಷೆಯಾಗಿದ್ದು ಲಿಪಿಯೂ ಹಳಗನ್ನಡ ಲಿಪಿಯಾಗಿದೆ.ಶಾಸನದಲ್ಲಿ ಉಲ್ಲೇಖವಾಗಿರುವ 'ಪುಲಿನಾಡು' ಎಂಬುದು ಕೋಲಾರ ಜಿಲ್ಲೆ ಮುಳಬಾಗಿಲು, ಶ್ರೀನಿವಾಸಪುರ, ಚಿತ್ತೂರು ಜಿಲ್ಲೆ, ಪುಂಗನೂರು, ಪಲಮನೇರು ತಾಲ್ಲೂಕುಗಳನ್ನು ಒಳಗೊಂಡ ಆಡಳಿತ ಘಟಕವನ್ನು ಹೆಸರಿಸುತ್ತದೆ. ಇದು ಹಲವು ಶಾಸನಗಳಲ್ಲಿ ಪುಲಿನಾಡು, ಪುಲಿನಾಡಜಿವತ್ತು, ಪುಲಿನಾಡು–೬೦, ಪುಲಿನಾಟ್ಟು ಹೆಸರಿನಿಂದ ಕರೆಯಲಾಗಿದೆ. "ಪುಲಿ" ಎಂಬ ಪದಕ್ಕೆ ಹುಲಿ, ಪುಲಿಂದ, ಪುಲಿನ, ಪಲ್/ಪುಲ್ಲೆ ಮೊದಲಾದ ಜ್ಞಾತಿಪದಗಳಿವೆ. ಇವು ಕ್ರಮವಾಗಿ ಪ್ರಾಣಿ, ಬೇಡ, ಉಸುಕು ಹುಲ್ಲು, ಜಿಂಕೆ ಮೊದಲಾದ ಅರ್ಥಗಳನ್ನು ಹೊಂದಿವೆ. ಇದರ ಪಕ್ಕದಲ್ಲಿ ಸಿಗುವ 'ಅಜ್ಜವರ್ಮ'ನ ಉಲ್ಲೇಖವಿರುವ ಶಾಸನದಲ್ಲಿ 'ವಿಣ್ಣುಮಂಗಲ'ದ ಪ್ರಸ್ತಾಪವಿದ್ದು ಬಹುಶ ಈ ಹಳ್ಳಿ ಅಥವಾ ಇಲ್ಲಿನ ಮತ್ತೊಂದು ವೀರಗಲ್ಲು ಹೆಸರಿಸುವ 'ವಿಣ್ಣುಮಂಗಲ' ಎಂಬ ಗ್ರಾಮ ಈ ಪುಲಿನಾಡಿನ ವಿಭಾಗಕ್ಕೆ ಸೇರಿರಬಹುದು ಎಂದು ಊಹಿಸಬಹುದಾಗಿದೆ. ಹಾಗೆಯೇ ಈ ಪುಲಿನಾಡು ಪ್ರದೇಶವು ನೊಳಂಬರ ಆಡಳಿತ ವಿಭಾಗವಾಗಿದ್ದನ್ನು ನಾವು ಇಲ್ಲಿ ತಿಳಿಯಬಹುದು.

ಇದರ ಪಕ್ಕದಲ್ಲಿರುವ ವೀರಗಲ್ಲು ರಣರಂಗದ ಚಿತ್ರಣವನ್ನು ಪ್ರತಿನಿಧಿಸುತ್ತಿದ್ದು ಶಿಲಾ ಶಾಸನದ ಮುಂದುವರಿಕೆಯೋ ಎಂಬಂತೆ ವೀರಗಲ್ಲಿನ ಕೆಳ ಎಡಭಾಗದಲ್ಲಿ ನಾಲ್ಕು ಸಾಲಿನ

೧. ಸರಯ್ಯ ಬೀಡಿನ

೨. ಕರರ್ಯ ಬೀಡಿನ

೩. ದೊರಿದ

೪. ಕಾದಿ

ಎಂಬ ಶಾಸನವಿರುವುದನ್ನು ಕಾಣಬಹುದಾಗಿದೆ.

ಇದೇ ಗ್ರಾಮದಲ್ಲಿ ಮತ್ತೂ ಮೂರು ವೀರಗಲ್ಲುಗಳು ಸಿಕ್ಕಿದ್ದು ಮಾಸ್ತಿಯನ್ನು ಒಳಗೊಂಡಿದೆ.ಇದರಲ್ಲಿ ಒಂದು ವೀರಗಲ್ಲು ಬಹಳ ವಿಶೇಷವಾಗಿದ್ದು ವೀರ ಕೇವಲ ಬಿಲ್ಲನ್ನು ಹಿಡಿದು ನಿಂತಿದ್ದಾನೆ ಆದರೆ ತುರುಬನ್ನು ಕಟ್ಟಿಲ್ಲ. ಈ ಎಲ್ಲಾ ಅಂಶಗಳಿಂದ ಬಹುಶಃ ಈ ಗ್ರಾಮ ಯುದ್ಧ ಸ್ಥಳವಾಗಿರಬಹುದು ಅಥವಾ ಈ ಪ್ರದೇಶದಲ್ಲಿ ಹೆಚ್ಚು ಯುದ್ಧಗಳು ನಡೆದಿವೆ ಎಂದು ಊಹಿಸ ಬಹುದಾಗಿದೆ.

ಮನ್ನಾರ್‌ಪುರ ಈ ಗ್ರಾಮದ ಹೆಸರು ಮೊದಲು 'ಪುಟಗೋಸನಹಳ್ಳಿ' ಎಂದಿದ್ದು ಕೇಳಲು ಅಸಹ್ಯವಾಗಿದೆ ಎಂದು 'ಮನ್ನಾರ್‌ಪುರ' ಎಂದು ಮರು ನಾಮಕರಣ ಮಾಡಲಾಗಿದೆ.ಈ ಮನ್ನಾರ್‌ಪುರ ಗ್ರಾಮದಿಂದ ಸುಮಾರು ಮೂರು ಕಿಲೋಮೀಟರ್ ದೂರದಲ್ಲಿ 'ಅಜ್ಜವಾರ' ಎಂಬ ಗ್ರಾಮವಿದ್ದು 'ಅಜ್ಜವರ್ಮ'ನ ನೆನಪಿಗಾಗಿ ಅಥವಾ 'ಅಜ್ಜವರ್ಮ'ನೇ ಈ ಗ್ರಾಮವನ್ನು ಸ್ಥಾಪಿಸಿರಬಹುದು ಎಂದು ತಿಳಿಯಬಹುದಾಗಿದೆ.

ಅಜ್ಜವರ್ಮ ಎಂಬುವನ ಮಾಂಡಲೀಕನ ಅಥವಾ ಸಾಮಂತನ ಅಥವಾ ನಾಯಕನ ಆಡಳಿತಕ್ಕೆ ಒಳಪಟ್ಟ ಮಾಹಿತಿ ಸಿಕ್ಕಿರುವ ಈ ವೀರಗಲ್ಲಿನಿಂದ ತಿಳಿದು ಬರುತ್ತದೆ. ಈ ಶಾಸನದಲ್ಲಿ ಅಜ್ಜವರ್ಮನನ್ನು 'ಅಜ್ಜವರ್ಮ್ಮರಸ' ಎಂದು ಉಲ್ಲೇಖಿಸುತ್ತದೆ. ಇದು ಈಗಾಗಲೇ ಇತಿಹಾಸ ದರ್ಶನ, ಸಂಪುಟ ೩೫, ಪುಟ ೯೫ರಲ್ಲಿ ಪ್ರಕಟವಾಗಿದೆ.

'೧. ಸ್ವಸ್ತಿಶ್ರೀ ಅಜ್ಜವರ್ಮರಸಊರಾ[ಳೆ] ಮ

೨. ರಕುರ ಮಡಾಪಮ್

೩. ವಿಣ್ಣುಮಜ್ಜಲ

೪. ಸತ್ತೊ ಗಜ್ಗ[ವ]ಟಿಕ

೫. ಕಣ್ಡುಕ ವೆದೆ ಕಟನಿ

೬. ನೆತ್ತಪಟ್ಟಿಕೊಟಾ[ಂ]? ?

೭ ಅದನಟಿವೊನ್

೮. ಪಞ್ಚ ಮಹಾ

೯. ಪಾತಕನಕ್ಕುಮ್.

'ಅಜ್ಜವರ್ಮರಸ ಊರಳಿವಿನಲ್ಲಿ ಮರಕುರ ಮಡಪ ಎನ್ನುವವನು ವಿಣ್ಣುಮಂಗಲದಲ್ಲಿ ಸತ್ತ. ಅವನಿಗೆ ಗಂಗವಟಿಕದಲ್ಲಿ ಕಣ್ಡುಗಗದ್ದೆ ಕಳನಿ ನೆತ್ತರಕೊಡಿಗೆ ಕೊಟ್ಟ. ಇದನ್ನಳಿಯುವವನು ಪಂಚ ಮಹಾ ಪಾತಕಕ್ಕೆ' ಗುರಿಯಾಗುವನು.

ಶಾಸನದ ಭಾಷೆ ಹಾಗೂ ಲಿಪಿಯ ಆಧಾರದ ಮೇಲೆ ಬಹುಶಃ ಸುಮಾರು ಎಂಟು–ಒಂಭತ್ತನೇ ಶತಮಾನಕ್ಕೆ ಸೇರಿರಬಹುದೆಂದು ಊಹಿಸಬಹುದು.ಶಾಸನದ ವೀರನಿಗೆ ಹೊಟ್ಟೆ ಭಾಗಕ್ಕೆ ಮತ್ತು ಎದೆ ಭಾಗಕ್ಕೆ ಎರಡು ಬಾಣ ಚುಚ್ಚಿದ್ದು ಒಂದುಕೈಯಲ್ಲಿ ಬಿಲ್ಲನ್ನು ಮತ್ತೊಂದು ಕೈಯಲ್ಲಿ ಚಿಕ್ಕ ಕತ್ತಿಯನ್ನು ಹಿಡಿದಿದ್ದಾನೆ. ಈ ಶಾಸನ ಶಿಲ್ಪವನ್ನು ಕೆತ್ತಿರುವ ಶಿಲ್ಪಿ ಬಹುಶಃ ನುರಿತ ಶಿಲ್ಪಿ ಅಲ್ಲ ಆದರೆ ಉತ್ತಮ ರಚನೆಕಾರ ಎಂಬುದು ಶಾಸನದ ಶಿಲ್ಪ ಮತ್ತು ಲಿಪಿಯಿಂದ ಗೊತ್ತಾಗುತ್ತದೆ.ಇದಕ್ಕಿಂತ ಮುಂಚೆ ಈ 'ಅಜ್ಜವರ್ಮ'ನಿಗೆ ಸಂಬಂಧಿಸಿದ ಶಾಸನ ದೇವನಹಳ್ಳಿ ತಾಲ್ಲೂಕಿನ ಗಂಗವಾರದಲ್ಲಿ ದಾಖಲಾಗುತ್ತದೆ. ಅದರ ಪಾಠ 'ಸ್ವಸ್ತಿಶ್ರೀ ಅಜ್ಜವರ್ಮ್ಮಕಸರೂರಲಿ , , , , , , , ಪಣ್ಣನ್ದೂರ , , ಕೀರ್ತ್ತನ್ನನ್ ಗಂಗಪುರದುಲ್ ದುಗ್ಗಮಾರರ್ಪ್ಪದ್ದೆಯು , , , , , , , , , , , , ಎರಿದುವಿಲ್ದೊರ್. – ಸಾರಾಂಶ – ಸ್ವಸ್ತಿಶ್ರೀ ಅಜ್ಜವಮ್ಮನು ಕಾಸರೂರಿಗೆ ಮುತ್ತಿ ಅದನ್ನು ನಾಶಮಾಡಿದಾಗ ಪೆಣ್ಣನ್ದೂರಿನ ಕೀರ್ತಣ್ಣನು ಗಂಗಪುರದೊಳಗೆ ದುಗ್ಗಮಾರ ಎದರಿಸಿದ ಶತ್ರುಗಳನ್ನು ತರಿದು ತಾನೂ ಸತ್ತನು.'ಎಂಬ ಮಾಹಿತಿ ಸಿಗುತ್ತದೆ. ಆದರೆ ಇಲ್ಲಿನ 'ಅಜ್ಜವರ್ಮ' ಮತ್ತು ಬೂದಿಗೆರೆ ಬಳಿಯ ಸಿಗುವ 'ಅಜ್ಜವರ್ಮ' ಬೇರೆಯವನೇ ಆಗಿರಬಹುದು ಅಥವಾ ಒಬ್ಬನೇ ಆಗಿರಬಹುದು. ದಾಖಲೆಗಳ ಕೊರತೆಯಿಂದ ಅದನ್ನು ನಿರ್ಧರಿಸುವುದು ಕಷ್ಟವಾಗುತ್ತದೆ. ಇವರಿಬ್ಬರೂ ಬೇರೆ ಬೇರೆ ಎಂದು ಹೇಳಲು ಈ ಶಾಸನದಲ್ಲಿ ಉಲ್ಲೇಖಿಸಬೇಕಾದರೆ 'ಅಜ್ಜವರ್ಮರಸ' ಎಂದೂ ಬೂದಿಗೆರೆ ಬಳಿಯ ಶಾಸನದಲ್ಲಿ 'ಅಜ್ಜವರ್ಮ' ಶಾಸನ ರಚನೆಕಾರ ಉಲ್ಲೇಖಿಸುತ್ತಾನೆ. ಇದೇ ಅಂಶ ಇಬ್ಬರೂ ಒಂದೇ ಎಂದು ಹೇಳಲು ಸಾಧ್ಯತೆಗಳನ್ನೂ ಒದಗಿಸಿಕೊಡುತ್ತದೆ.

ಮುಂದುವರೆದು ಇದೇ ನೊಳಂಬರ ಕಾಲಕ್ಕೆ ಸಂಬಂಧಿಸಿದ ಅಥವಾ ೧೦ನೇ ಶತಮಾನಕ್ಕೆ ಸಂಬಂಧಿಸಿದ ವೀರಗಲ್ಲುಗಳು ಈ ಸುತ್ತಮುತ್ತಲ ಪ್ರದೇಶಗಳಲ್ಲಿ ಸಿಗುತ್ತವೆ. ಅವುಗಳೆಲ್ಲವೂ ಇತಿಹಾಸ ದಾಖಲೆಯಲ್ಲಿ ಹೊಸ ಶಾಸನಗಳಾಗಿರುವುದು ವಿಶೇಷ. ಅವುಗಳಲ್ಲಿ

ಚಿಕ್ಕಬಳ್ಳಾಪುರ ತಾಲ್ಲೂಕಿನ ಚದಲಪುರದ ಬಳಿ ದೊಡ್ಡಮರಳಿ ಗ್ರಾಮ ಪಂಚಾಯತಿಗೆ ಸೇರುವ ಬೊಮ್ಮನಹಳ್ಳಿ ಎಂಬ ಗ್ರಾಮದ ಮುಂದೆ ಶಾಂತಿನಿಕೇತನ ಸ್ಕೂಲ್ ಎದುರುಗಡೆ ಮೋರಿಯ ಪಕ್ಕದಲ್ಲಿ ಒಂದು ವೀರಗಲ್ಲು ಇದ್ದು ಮೂರು ಸಾಲನ್ನು ಒಳಗೊಂಡಿದೆ.

೧. ಸ್ವಸ್ತಿಶ್ರೀ ಕಿಸೂಜದಕೊ(ರೊ)ತ್ಸ , ,

೨. ಸತ್ತ (ಮುಂದೆಅಸ್ಪಷ್ಟವಾಗಿದೆ)

ವೀರನ ಚಿತ್ರಣ ಪೂರ್ಣ ಕಾಣುವುದಿಲ್ಲ. ಸೊಂಟದ ಭಾಗದವರೆಗೂ ಕಾಣುವ ವೀರಗಲ್ಲಿನ ವೀರನಿಗೆ ಬೆನ್ನು, ಎದೆ ಮತ್ತು ಹೊಟ್ಟೆ ಭಾಗಕ್ಕೆ ಬಾಣ ಚುಚ್ಚಿದಂತೆದೆ. ಒಂದು ಕೈಯಲ್ಲಿ ಬಿಲ್ಲನ್ನು ಮತ್ತೊಂದು ಕೈಯಲ್ಲಿ ಚಿಕ್ಕ ಕತ್ತಿಯನ್ನು ಹಿಡಿದಿದ್ದಾನೆ. ಬಹುಶಃ ಯುದ್ಧದಲ್ಲಿ ಸತ್ತ ವೀರನಿಗೆ ದಾನ ನೀಡಿದ ಮಾಹಿತಿ ಇದರಲ್ಲಿ ಅಡಗಿದೆ ಎಂದು ಊಹಿಸಬಹುದಾಗಿದೆ. ಈ ಗ್ರಾಮದಿಂದ ಮುಂದುವರೆದರೆ ಶ್ರೀರಾಂಪುರಕ್ಕೆ ಸೇರಿರುವ ತೌಡನಹಳ್ಳಿ ರಸ್ತೆಯಲ್ಲಿರುವ ನರ್ಸರಿ ಬಳಿ ಗುಡಿಯನ್ನು ಹೊಂದಿರುವ ಒಂದು ವೀರಗಲ್ಲು, ಗುಡಿಯಿಲ್ಲದ ಮತ್ತೊಂದು ವೀರಗಲ್ಲು, ಕೊಳವನಹಳ್ಳಿಯಲ್ಲಿ ನಾಗರಾಜುರವರ ಜಮೀನಿನಲ್ಲಿ ಕೊಳವನಹಳ್ಳಿ ರಸ್ತೆಯ ಅಂಚಿನಲ್ಲಿ ಇಬ್ಬರು ಮಾಸ್ತಿಯರನ್ನು ಹೊಂದಿರುವ ವೀರಗಲ್ಲು ಇದೆ. ಕರಗಪ್ಪ ಎಂಬುವರ ತೋಟದ ಒಳಹೋಗುವ ದಾರಿಯ ಅಂಚಿನಲ್ಲಿ ಮೂರು ಮಾಸ್ತಿಯರನ್ನು ಒಳಗೊಂಡಿರುವ ವೀರಗಲ್ಲು

ಇದ್ದು ಕೇವಲ ತಲೆ ಮತ್ತು ಎದೆ ಭಾಗ ಕಾಣಿಸುತ್ತಿದ್ದು ಉಳಿದ ಶಿಲ್ಪ ಮಣ್ಣಲ್ಲಿ ಹೂತುಹೋಗಿದೆ. ಮುಂದೆ ಮಂಜುನಾಥ ಎಂಬುವರ ತೋಟದಲ್ಲಿ ರಸ್ತೆಯ ಅಂಚಿನಲ್ಲೇ ವೀರಗಲ್ಲು ಇದ್ದು ಅದಕ್ಕೆ ಗುಡಿಯನ್ನು ಕಟ್ಟಿ ಸಂರಕ್ಷಿಸಿದ್ದಾರೆ. ಮುಂದೆ ಮತ್ತೊಂದು ವಿಶೇಷವಾದ ವೀರಗಲ್ಲೊಂದು ರಸ್ತೆಯ ಬದಿಯಲ್ಲೇ ಇದ್ದು ಆಕರ್ಷಕವಾಗಿದೆ. ಈ ಮೇಲೆ ತಿಳಿಸಿದ ಬೊಮ್ಮನಹಳ್ಳಿ ಮತ್ತು ಕೊಳವನಹಳ್ಳಿ ಈ ಮಧ್ಯೆ ಇರುವ ಐದು ಸ್ಥಳಗಳಲ್ಲಿನ ವೀರಗಲ್ಲುಗಳು ಒಂದಕ್ಕೊಂದು ಸಮೀಪದ ಅಂತರಗಳಲ್ಲಿದೆ. ಬಹುಶಃ ಈ ಪ್ರದೇಶವೂ ಯುದ್ಧ ಪ್ರದೇಶವಾಗಿತ್ತೇನೋ ಆ ಕಾರಣಕ್ಕಾಗಿಯೇ ಈ ಸ್ಥಳದಲ್ಲಿ ಇಷ್ಟೊಂದು ವೀರಕಲ್ಲುಗಳು ಇವೆ.

ಕೊಳವನಹಳ್ಳಿಯಿಂದ ಚದಲಪುರದ ಕಡೆ ಮುಂದುವರೆದರೆ ಗವಿಗಾನಹಳ್ಳಿ ಎಂಬ ಗ್ರಾಮದಲ್ಲಿ ಅಶ್ವತ್ಥ ಕಟ್ಟೆ ಬಳಿ ಒಂದು ಶಾಸನ ಇದೆ. ಸ್ಥಳೀಯರನ್ನು ವಿಚಾರಿಸಲಾಗಿ ಶಾಸನದ ಮುಂದೆ 'ಕ್ರಿ.ಶ.೦೧-೦೧-೧೮೦೪ರಲ್ಲಿ ಸ್ಥಾಪಿತವಾಗಿರುವ ಶ್ರೀ ಪ್ರಸನ್ನ ಲಕ್ಷ್ಮೀನರಸಿಂಹ' ದೇವಾಲಯದ ಮಾಹಿತಿ ಒದಗಿಸುವ ಶಾಸನ ಎಂದು ಗೊತ್ತಾಗುತ್ತದೆ.

ಇದೇ ಚಿಕ್ಕಬಳ್ಳಾಪುರ ತಾಲ್ಲೂಕಿಗೆ ಸೇರಿದ ಬಂಡೆಹಳ್ಳಿ(ಮುದ್ದೇನಹಳ್ಳಿ ರಸ್ತೆ)ಯಲ್ಲಿ ಸುಮಾರು ೫ಅಡಿ ಎತ್ತರ ೩ ಅಡಿ ಅಗಲವಿರುವ ತುರುಗೋಳ್ ವೀರಗಲ್ಲು ಪತ್ತೆಯಾಗಿದ್ದು ಶಾಸನದಲ್ಲಿ ಅಕ್ಷರಗಳು ತ್ರುಟಿತವಾಗಿದ್ದು ವೀರಗಲ್ಲು ತುಂಬಾ ಆಕರ್ಷಕವಾಗಿದೆ. ಸ್ವರ್ಗಾರೋಹಣದ ಶಿಲ್ಪವನ್ನೇ ಸು.೧ಅಡಿಗೂ ಹೆಚ್ಚಿನ ಜಾಗದಲ್ಲಿ ಬಿಡಿಸಿದ್ದಾನೆ.

ಇದೇ ಊರುಗಳ ಸಾಲಿನಲ್ಲಿ ಸಿಗುವ ಶಿಡ್ಲಘಟ್ಟ ತಾಲ್ಲೂಕಿಗೆ ಸೇರುವ ಮುತ್ತೂರು ಎಂಬ ಗ್ರಾಮದಲ್ಲಿಯೂ ನೊಳಂಬನ ಕಾಲದ ವೀರಗಲ್ಲು ಒಂದು ಸಿಕ್ಕಿದ್ದು ಕೇವಲ ಮೇಲ್ಭಾಗದಲ್ಲಿ ಶಾಸನದ ನಾಲ್ಕು ಸಾಲು ಕಾಣುತ್ತಿದ್ದು ಉಳಿದ ವೀರಗಲ್ಲು ಪೂರ್ತಿಯಾಗಿ ಮಣ್ಣಲ್ಲಿ ಮುಚ್ಚಿಹೋಗಿದೆ.ಈ ನಾಲ್ಕು ಸಾಲಿನ ಶಾಸನದ ಪಾಠವೂ ಅಸ್ಪಷ್ಟವಾಗಿದ್ದು ಅದು ಹೀಗಿದೆ.

೧. ಸ್ವಸ್ತಿ ಸಮಧಿಗಥ

೨. ಪಜ್ಚ ಮಹಾ ಶಬ್ದ ಪಲ್ಲವಾನ್ವ

೩. ಯ ಶ್ರೀಮತ್, , , ಲ್ಲವ ನೊಬಿಂ

೪. ಬಾಧಿರಾಜ ಪೃಥವಿರಾಜ್ಯಂಗೆಯ ಸಿ , , (ಮುಂದೆ ಇಲ್ಲ)

ನೊಳಂಬರ ಕಾಲದ ಈ ಶಾಸನವು ತ್ರುಟಿತವಾಗಿರುವುದರಿಂದ ಕಾಲವನ್ನು ನಿರ್ಧರಿಸುವುದು ಕಷ್ಟಸಾಧ್ಯವಾಗಿದೆ.

ಇದೇ ಗ್ರಾಮದಲ್ಲಿ ಶಾಸನ ರಹಿತವಾದ ಮಾಸ್ತಿಯನ್ನು ಹೊಂದಿರುವ ಸುಮಾರು ಎರಡು ಅಡಿ ಎತ್ತರದ ಒಂದು ವೀರಗಲ್ಲು ಇದೆ. ಮತ್ತೊಂದು ಶಾಸನ ರಹಿತ ವೀರಗಲ್ಲು ಕಾಣಬಹುದು. ಶಿಲ್ಪದಲ್ಲಿರುವ ವೀರನ ಚಿತ್ರಣ ಒಂದು ಕೈಯಲ್ಲಿ ಕೊಡಲಿಯನ್ನು ಮತ್ತೊಂದು ಕೈಯಲ್ಲಿ ದಂಡದಂತಹ ಆಯುಧವನ್ನು ಹಿಡಿದಿರುವ ನೋಡಲು ರಾಜ ಲಕ್ಷಣವುಳ್ಳ ಸುಮಾರು ಏಳು ಅಡಿಗೂ ಎತ್ತರವಾದ ಸ್ಮಾರಕ ಶಿಲೆ ತುಂಡು ತುಂಡಾಗಿ ಕೆರೆಯ ಪೊದೆಗಳಲ್ಲಿ ಬಿದ್ದಿದೆ. ಈ ಶಾಸನದ ಮೇಲ್ಭಾಗದಲ್ಲಿ ಕೊಳಲನ್ನು ಊದುತ್ತಿರುವ ಕೃಷ್ಣನ ಚಿತ್ರವನ್ನು ಬಿಡಿಸಲಾಗಿದೆ. ಕಾಲುಗಳ ಭಾಗದಲ್ಲಿರುವ ತುಂಡಿನಲ್ಲಿ ಹಂದಿ ಅಥವಾ ಹುಲಿಯ ರೀತಿಯ ಶಿಲ್ಪ ಇದ್ದು ಮುಖ ಕಾಣಿಸುವುದಿಲ್ಲ. ಇದರ ಹೋರಾಡುತ್ತಾ ಇದನ್ನು ಹಿಡಿದಿರುವಂತೆ ಇದೆ ಎಂದು ಊಹಿಸಬಹುದು. ಒಟ್ಟಿನಲ್ಲಿ ಇದೊಂದು ಬೇಟೆ ಅಥವಾ ಕಾಳಗದ ವೀರಗಲ್ಲು ಎಂದು ಶಿಲ್ಪದಲ್ಲಿ ಗೋಚರಿಸುವ ಸಾಮಾನ್ಯ ಅಂಶಗಳ ಆಧಾರದ ಮೇಲೆ ಅರಿಯಬಹುದಾಗಿದೆ. ಕೆಳಭಾಗದಲ್ಲಿ ನಾಲ್ಕು ಕಾಲುಗಳು ಗೋಚರಿಸುತ್ತಿದ್ದು ಮೊದಲ ಎರಡು ಕಾಲುಗಳು ಮೇಲಿನ ತುಂಡಿನಲ್ಲಿ ಕಾಣಿಸುತ್ತಿರುವ ವೀರನದು ಎಂದು ಕೊಂಡರೂ ಹಿಂದೆ ಚಿತ್ರಿಸಿರುವ ಎರಡು ಕಾಲುಗಳು ವೀರನ ಹಿಂಬಾಲಕ ಎಂದು ಊಹಿಸಬಹುದಾಗಿದೆ.

ಇದೇ ಕೆರೆಯ ಅಂಚಿನಲ್ಲಿ ಇಂತಹದ್ದೇ ಶಿಲ್ಪ ಎಂದು ಊಹಿಸಲು ಅಸಾಧ್ಯವಾದ ಒಂದು ಶಿಲ್ಪಕಲ್ಲು ಜೊತೆಗೆ 'ಶ್ರೀ' ಇರುವ ಒಂದು ಯಂತ್ರದ ಕಲ್ಲು ಇದೆ. ಜೊತೆಗೆ 'ಶ್ರೀ ಚಕ್ರ' ಬಿಡಿಸಿರುವ 'ಶಕ್ತಿ ಸಿದ್ಧಾಂತ' ಪ್ರತಿಪಾದನೆಯದ್ದು ಎಂದು ಹೇಳಬಹುದಾದ ಮತ್ತೊಂದು ಯಂತ್ರದ ಕಲ್ಲು ಇದೆ. ಜೊತೆಗೆ ನಾಥ ಪಂಥದ ದಿಗಂಬರ ಶೈವನ ಮೂರ್ತಿ ಶಿಲ್ಪವನ್ನೂ ಇಲ್ಲಿ ಕಾಣಬಹುದು. ಈ ಮೂರ್ತಿ ಶಿಲ್ಪದ ಪಕ್ಕದಲ್ಲಿ ಮತ್ತೊಂದು ಯಂತ್ರ ಕಲ್ಲನ್ನು ಕಾಣಬಹುದು. ಇದೇ ಕೆರೆ ಕೋಡಿಯ ಸಮೀಪವಿರುವ ಏರಿಯ ಮೇಲೆ ಹೊಸದಾಗಿ ಜೀರ್ಣೋದ್ಧಾರ ಮಾಡಿರುವ ಈಶ್ವರ ದೇವಾಲಯದ ಮುಂದೆ ದೊಡ್ಡದಾದ ೨.೬ ಅಡಿ ಪಾಣಿಪೀಠ ಮತ್ತು ತೂಬುಕಲ್ಲು ಅನಾಥವಾಗಿ ಬಿದ್ದಿದೆ. ಈ ಎಲ್ಲಾ ವಿಶೇಷಗಳ ಜೊತೆಗೆ ಕೆರೆ ಕೋಡಿಯ

ಮೇಲ್ದಂಡೆಯ ಬಳಿ ಸು. ೧೨೦೦ ವರ್ಷಗಳಷ್ಟು ಹಳೆಯದಾದ ಗೋಡೆಗಳು, ಗಂಗರ ಕಾಲದ ಪ್ರತಿಷ್ಠಾಪನೆ ಇರಬಹುದು ಎಂದು ಊಹಿಸಬಹುದಾದ, ಮೂರು ಗರ್ಭಗೃಹಗಳನ್ನು ಹೊಂದಿರುವ ಪಾಳುಬಿದ್ದಿರುವ, ಬೀಳುವ ಹಂತದಲ್ಲಿರುವ ಶಿವಾಲಯವೂ ಇದ್ದು ಅಧಿಷ್ಠಾನದವರೆಗೆ ಮಣ್ಣಿನಲ್ಲಿ ಸಂಪೂರ್ಣವಾಗಿ ಮುಚ್ಚಿಹೋಗಿದೆ. ಸು. ೩೦ ವರ್ಷಗಳ ಹಿಂದೆ ವಲಸೆ ಬಂದು ಗ್ರಾಮದಲ್ಲಿ ವಾಸವಾಗಿರುವ ಕುಟುಂಬದ ಗಂಡ–ಹೆಂಡತಿ ಲಿಂಗಕ್ಕೆ ಪ್ರತಿ ಸೋಮವಾರ ಪೂಜೆಮಾಡಿಕೊಂಡು ಬಂದಿದ್ದಾರೆ. ಆದ್ದರಿಂದ ಈ ದೇವಾಲಯದ ಬಗ್ಗೆ ಹೆಚ್ಚಿನ ಮಾಹಿತಿ ದೊರೆಯುವುದಿಲ್ಲ. ೧೬ ಕಂಬಗಳಿರುವ ದೇವಾಲಯದ ಪ್ರವೇಶ ದ್ವಾರದ ಮೇಲ್ಭಾಗದ ಕಂಬದಲ್ಲಿ ಗಜಲಕ್ಷ್ಮೀ ಉಬ್ಬುಶಿಲ್ಪ, ಅಕ್ಕಪಕ್ಕದ ಕಂಬಗಳಲ್ಲಿ ಸು. ೩ಅಡಿ ಎತ್ತರದ ಭೃಂಗಿ ಮತ್ತು ಶೃಂಗಿಯ ಶಿಲ್ಪಗಳಿದೆ. ದೇವಾಲಯದ ಗರ್ಭಗೃಹ ಹೊರತು ಪಡಿಸಿ ಪಕ್ಕದ ಎರಡೂ ಗರ್ಭಗೃಹಗಳು ಪಾಳುಬಿದ್ದಿದೆ. ದೇವಾಲಯದಲ್ಲಿ ನವರಂಗದ ಭಾಗ ಇಲ್ಲದಿದ್ದರೂ ಗರ್ಭಗೃಹದ ಮುಂದಿನ ವತಾರದ ಕಂಬಗಳಲ್ಲಿ ರಂಗಭೋಗ ಶಿಲ್ಪಗಳು, ನಂದಿ, ಶಿವಲಿಂಗ, ಆಂಜನೇಯ, ಮತ್ಸ್ಯ–ಕೂರ್ಮ ಶಿಲ್ಪಗಳು ಇರುವುದನ್ನು ಕಾಣಬಹುದು.

[ಶಾಸನವನ್ನು ಓದಿಕೊಟ್ಟವರು ಪ್ರೊ. ಕೆ.ಆರ್. ನರಸಿಂಹನ್, ಕ್ಷೇತ್ರಕಾರ್ಯದ ಸಮಯದಲ್ಲಿ ಸಹಕರಿಸಿದ ಕೆ. ಧನಪಾಲ್‌ರವರಿಗೆ, ಆರ್. ಯುವರಾಜು ಅವರಿಗೆ ಧನ್ಯವಾದಗಳು.]

ತಿಮ್ಮಲಾಪುರ-೬೩ [ಅಲ್ಲಿಪುರ]ದ ಅಪ್ರಕಟಿತ ಶಾಸನ

ಎ. ನಾಗವೇಣಿ*

ತಿಮ್ಮಲಾಪುರ ೬೩ [ಅಲ್ಲಿಪುರ] ಹೂವಿನ ಹಡಗಲಿಯಿಂದ ಮಾಗಳಕ್ಕೆ ಹೋಗುವ ಮಾರ್ಗದಲ್ಲಿ ಸುಮಾರು ೧೦ ಕಿ.ಮೀ. ಅಂತರದಲ್ಲಿದೆ. ಇದು ನವಲಿ ಗ್ರಾಮ ಪಂಚಾಯಿತಿಗೆ ಸೇರಿದೆ. ಈ ಊರಿನ ಹೆಸರು ಮೊದಲಿಗೆ ಹಂದಿಗನೂರು ಎಂದೂ ನಂತರ ತಿಮ್ಲಾಪುರ ೬೩ [ಅಲ್ಲಿಪುರ] ಎಂದಾಯಿತು.

ಗ್ರಾಮದ ಉತ್ತರ ಭಾಗದಲ್ಲಿ ಕಲ್ಲೇಶ್ವರ ದೇವಾಲಯವಿದ್ದು ಅದು ಪೂರ್ವಾಭಿಮುಖವಾಗಿದೆ. ಈ ದೇವಾಲಯ ಕಲ್ಯಾಣ ಚಾಲುಕ್ಯ ಶೈಲಿಯಲ್ಲಿದ್ದು, ಕ್ರಿ.ಶ. ೧೨ನೆಯ ಶತಮಾನಕ್ಕೆ ಸೇರಿದೆ. ಕಪ್ಪುಶಿಲೆಯಲ್ಲಿ ನಿರ್ಮಾಣವಾಗಿರುವ ಇದು ಮಧ್ಯಮ ಸ್ಥಿತಿಯಲ್ಲಿದೆ. ಈ ದೇವಾಲಯವು ಗರ್ಭಗೃಹ, ಅಂತರಾಳ, ತೆರೆದ ಸಭಾಮಂಟಪಗಳಿಂದ ಕೂಡಿದೆ. ಗರ್ಭಗೃಹದ ಪೀಠದ ಮೇಲೆ ಉಮಾ-ಮಹೇಶ್ವರನ ಶಿಲ್ಪವಿದೆ. ಈತನ ಹಿಂದಿನ ಕೈಗಳಲ್ಲಿ ತ್ರಿಶೂಲ, ಡಮರು ಮತ್ತು ಮುಂದಿನ ಕೈಗಳು ಅಭಯ ಮುದ್ರೆ ಮತ್ತು ಉಮೆಯನ್ನು ಆವರಿಸಿದೆ. ಉಮಾಳ ಬಲಗೈ ಅಭಯ ಹಸ್ತವಾಗಿದ್ದು, ಎಡಗೈನಲ್ಲಿ ಪುಷ್ಪವಿದೆ. ಅಂತರಾಳ ಸರಳವಾಗಿದ್ದು, ನಂದಿ ವಿಗ್ರಹವಿದೆ. ಅದರ ಮುಂದಿನ ಸಭಾಮಂಟಪದಲ್ಲಿ ಕಲ್ಯಾಣ ಚಾಲುಕ್ಯ ಮಾದರಿಯ ಚೌಕಾಕಾರದ ಎಂಟು ಕಂಬಗಳಿವೆ. ಭುವನೇಶ್ವರಿಯಲ್ಲಿ ಅಲಂಕೃತ ಪದ್ಮವಿದೆ.

ಕಲ್ಲೇಶ್ವರ ದೇವರ ಕಟ್ಟೆಗೆ ಸೇರಿಸಿರುವ ಕ್ರಿ.ಶ.೨೩.೭.೧೫೫೫ರ ಶಾಸನವು ವಿಜಯನಗರದ ಸದಾಶಿವರಾಯನು ವಿದ್ಯಾನಗರದಿಂದ ಆಳುತ್ತಿದ್ದಾಗ ಅಳಿಯ ರಾಮರಾಜ ಅರಸನು ಮತ್ತು ವಿಠಲಪ್ಪ ಒಡೆಯನು ಗುತ್ತವೊಳಲ ಸೀಮೆಯ **ಹಕಹಂದಿಗನೂರು** ಗ್ರಾಮವನ್ನು ವಿಟಲದ ಸಮೀಪವಿದ್ದ ಆಳ್ವಾರು ದೇವರ ಸೇವಾಕಾರ್ಯಗಳಿಗೆ ದಾನ ಮಾಡಿರುವುದನ್ನು ಸ್ಪಷ್ಟವಾಗಿ ಉಲ್ಲೇಖಿಸಿದೆ. (ಕ.ವಿ.ವಿ. ಶಾ.ಸಂ. ೧, ಹಡಗ-೮೦, ಕ್ರಿ.ಶ. ೧೫೫೫.)

ಈ ಊರಿನಲ್ಲಿ ಕಲ್ಲೇಶ್ವರ ದೇವಾಲಯವಲ್ಲದೆ ಇತ್ತೀಚಿನ ಆಂಜನೇಯ, ದುರುಗಮ್ಮ, ಭೀಮವ್ವ, ದ್ಯಾಮವ್ವನವರ ಗುಡಿಗಳಿವೆ. ಊರಿನ ಆಂಜನೇಯನ ದೇವಸ್ಥಾನದ ಎದುರುಗಡೆ ಇರುವ ಸಿಬಾರ ಕಟ್ಟೆಯ ಮೇಲೆ ಒಂದು ಸಾಲಿನ ಶಾಸನವಿದೆ.



ಶಾಸನದ ಪಾಠ

೧. ಶ್ರೀ ವಿಕ್ರಮ ಸಂವತ್ಸರದ ಕಾರ್ತಿಕ ಸುದ್ಧ ದಶಮಿ ಗೌಃರದಲು ಶ್ರೀಮತು ಹಂದ್ದಿಗನೂರ ಹೊಂನಗೌಂಡ ಮಾಡಿಸಿದ ಸಿಬರ ಲಿಪಿಯ ಆಧಾರದ ಮೇಲೆ ಕ್ರಿ.ಶ. ಸುಮಾರು ೧೨ನೇ ಶತಮಾನದ ಕಲ್ಯಾಣ ಚಾಲುಕ್ಯರ ಶಾಸನವಾಗಿದೆ. ಶ್ರೀ ವಿಕ್ರಮ ಸಂವತ್ಸರದ ಕಾರ್ತೀಕ ಶುದ್ಧ ದಶಮಿ ಗುರುವಾರದಂದು ಶ್ರೀಮತು ಹಂದಿಗ ನೂರ ಹೊನ್ನಗೌಡನು ಸಿಬಾರವನ್ನು ಮಾಡಿಸಿದನು' ಎಂಬ ಉಲ್ಲೇಖವಿದೆ.

ಆಕರ ಗ್ರಂಥಗಳು

೧. ಬಳ್ಳಾರಿ ಜಿಲ್ಲಾ ಗೆಜೆಟಿಯರ್.

೨. ಡಾ. ದೇವರಕೊಂಡಾರೆಡ್ಡಿ (ಪ್ರಧಾನ ಸಂಪಾದಕರು), ಡಾ. ಕಲವೀರ ಮನ್ವಾಚಾರ್, ಡಾ. ಕೆ.ಜಿ. ಭಟ್‌ಸೂರಿ, ಡಾ. ಡಿ.ವಿ. ಪರಮಶಿವಮೂರ್ತಿ (ಸಹ ಸಂಪಾದಕರು), ೧೯೯೮, ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೧, ಬಳ್ಳಾರಿ ಜಿಲ್ಲೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

* ಹಂಪಿ, ಕನ್ನಡ ವಿಶ್ವವಿದ್ಯಾಲಯ-೫೮೩೨೭೬.

ಕಲ್ಲುಗಾಣಗಳ ಮೇಲಿನ ತೆಲ್ಲಿಗರ ಶಾಸನಗಳು

ಬಿ.ಜಿ. ಸಿದ್ಧಲಿಂಗಮ್ಮ*

ಶಾಸನಗಳನ್ನು ಸಾಮಾನ್ಯವಾಗಿ ಕಲ್ಲಿನಮೇಲೆ ಅಥವಾ ಲೋಹದಮೇಲೆ ಬರೆಯುವ ರೂಢಿ ಇತ್ತು. ಸುಟ್ಟ ಇಟ್ಟಿಗೆಗಳ ಮೇಲೂ ಶಾಸನಗಳಿವೆ. ಸುಟ್ಟ ಮಡಕೆ, ಇಟ್ಟಿಗೆ, ಶಂಖ, ದಂತ, ಮರಗಳ ಮೇಲೂ ಶಾಸನಗಳು ದೊರಕಿವೆ. ವಿಶೇಷವಾಗಿ ಕರ್ನಾಟಕದಲ್ಲಿ ಕಲ್ಲಿನ ಮೇಲೆ, ಸ್ತಂಭಗಳ ಮೇಲೆ, ದೇವಸ್ಥಾನದ ಗೋಡೆಗಳ ಮೇಲೆ, ವಿಗ್ರಹಗಳ ಪೀಠಗಳ ಮೇಲೆ, ತಾಮ್ರ ಪಟಗಳ ಮೇಲೆ, ಪಾತ್ರೆಗಳ ಮೇಲೆ ಶಾಸನಗಳು ದೊರತಿವೆ. (ಚಿ.ಮೂ–ಕ.ಶಾ.ಸಾಂ.ಅ) ಕಲ್ಲುಗಾಣಗಳ ಮೇಲೆಯೂ ಶಾಸನಗಳಿರುವ ವಿಚಾರವನ್ನು ಪ್ರಸ್ತುತ ಲೇಖನವು ತಿಳಿಸುವುದು.

೧೦ ರಿಂದ ೧೪ ನೇ ಶತಮಾನದ ಪ್ರಕಟಿತ ಶಾಸನಗಳನ್ನು ಕರ್ನಾಟಕಕ್ಕೆ ಸೀಮಿತಪಡಿಸಿಕೊಂಡು ಇಲ್ಲಿ ನೋಡಲಾಗಿದೆ. ಈ ಶಾಸನಗಳಲ್ಲಿ ತೆಲ್ಲಿಗರು, ಗಾಣಿಗರು ಎಂದೆಲ್ಲ ಸೂಚಿಸಲಾಗಿದೆ. ಕೆಲವು ಶಾಸನಗಳಲ್ಲಿ ಈ ಕುಲಕ್ಕೆ ಸೇರಿದ ವ್ಯಕ್ತಿಗಳು ದಾನ ಕೊಡುವುದೋ ಇಲ್ಲ ದಾನದಲ್ಲಿ ಭಾಗಿಗಳಾಗುವುದೋ ಕಂಡುಬರುತ್ತದೆ. ಎಣ್ಣೆಯನ್ನು ದಾನ ಮಾಡುವ ಉಲ್ಲೇಖ ಸಾಮಾನ್ಯವಾಗಿ ಶಾಸನಗಳಲ್ಲಿ ಬರುತ್ತದೆ. ಇಂಥ ಎಣ್ಣೆಯನ್ನು ಸೊಂಟಿಗೆಯ ಲೆಕ್ಕದಲ್ಲೂ, ಗಾಣದ ಲೆಕ್ಕದಲ್ಲೂ ನಿಶ್ಚಿತಪಡಿಸಿ ದಾನ ಮಾಡುತ್ತಿದ್ದರು. ಇದು ಧರ್ಮ ಮತ್ತು ಪುಣ್ಯ ಸಂಪಾದನೆಗೆ ಸಂಬಂಧಪಟ್ಟ ವಿಷಯ. ಈ ಎಣ್ಣೆಯನ್ನು ಕರ್ನಾಟಕದ ಹಳ್ಳಿಹಳ್ಳಿಯಲ್ಲಿ ಇದ್ದ ಸಹಸ್ರಾರು ದೇವಾಲಯಗಳಿಗೆ ನಿರಂತರವಾಗಿ ಪೂರೈಸುತ್ತಿದ್ದ ಜನರೇ ತೆಲ್ಲಿಗರು.

ಗಾಣದ ಕಲ್ಲಿನ ಶಾಸನಗಳು

ಹಳೆಮೈಸೂರಿನ ಭಾಗದಲ್ಲಿ ಸು. ೨೫ ಶಾಸನಗಳು ಕಲ್ಲಿನ ಗಾಣದ ಮೇಲಿವೆ. ಚಾಮರಾಜನಗರದ ಐದು ಶಾಸನಗಳು, ಗುಂಡ್ಲುಪೇಟೆ, ಹುಣಸೂರು, ಟೀ. ನರಸೀಪುರದ ಮೂರು ಶಾಸನಗಳು, ಮೈಸೂರಿನ ಎರಡು ಶಾಸನಗಳು, ನಂಜನಗೂಡು, ಹೆಗ್ಗಡದೇವನ ಕೋಟೆ, ಕೊಳ್ಳೆಗಾಲ, ಪಿರಿಯಾಪಟ್ಟಣಗಳ ತಲಾ ಒಂದೊಂದು ಶಾಸನಗಳು ಕಲ್ಲಿನ ಗಾಣದ ಮೇಲಿನ ಶಾಸನಗಳಾಗಿವೆ. ಸು.೨೦ ಗಾಣದ ಕಲ್ಲಿನ ಶಾಸನಗಳ ಪಠ್ಯಗಳು ಈ ಕೆಳಕಂಡಂತಿವೆ.

ಕಲ್ಲುಗಾಣಗಳು

೧. ಎ.ಕ. ೩ ಗುಂಡ್ಲುಪೇಟೆ ೧೨೮ ದೊಡ್ಡತುಪ್ಪೂರು, ಕ್ರಿ.ಶ. ೧೩೦೫ ಪು. ೯೪.

ಮನೆಯೊಂದರ ಪೂರ್ವಕ್ಕೆ ಹೊತುಕೊಂಡಿರುವ ಕಲ್ಲುಗಾಣದ ಮೇಲೆ

೧. ....ದ.......... ೧೨೨೭ ಸಂದ
೨. ವಿಸ್ವಾವಸು ಸಂ। ಆಸ್ವಿಜ ಬ ೫ ಸ..
೩. ತೆಂಕ ತುಪ್ಪೂರ ಅಪ್ಪಗೌಡನ ಮಗ
೪. . . . ಚೋಳರಾಮನಾಥಂಗೆ ಸೊಡರಗಳಿಗೆ
೫. . . . ಆ. ದಮ.. ವಾ. ಎಣ್ಣೆಯ. ಡು.
೬. . . ವಲ್ಲಿಗ ಹುಯ್ಸಿದ ಗಾಣ। ಮಂಗಳಮಹ
೭. ಶ್ರೀ ಶ್ರೀ ಶ್ರೀ ಬರೆದ ಗಂಗಣ

೨. ಎ.ಕ. ೩ ಗುಂಡ್ಲುಪೇಟೆ ೧೩೩ ಬೆಟ್ಟಹಳ್ಳಿ, ಕ್ರಿ.ಶ. ೧೩೧೧, ಪು. ೯೬.

ಗ್ರಾಮಕ್ಕೆ ಈಶಾನ್ಯ ಸ್ಮಶಾನ ಭೂಮಿಯಲ್ಲಿರುವ ಕಲ್ಲುಗಾಣದ ಮೇಲೆ

೧. ಸ್ವಸ್ತಿ ಶ್ರೀ ಶಕವರುಷ ೧೨೩೩ ರನೆಯ ವಿರೋ
೨. ಧಿಕ್ರುತು ಸಂವತ್ಸರದ ಪುಷ್ಯ ಶು ೧೦ ಆ। ಶ್ರೀ
೩. ಮನುಮಹಾಪ್ರಧಾನಂ ಮಾವದಣ್ಣಾಯಕ
೪. ಪೃಥ್ವೀರಾಜ್ಯಂಗೆಯ್ಯುತ್ತಿರಲು ಕುಡುಗಲೂರ ನಾಡ ಬೆ
೫.ಟ್ಟಹಳ್ಳಿಯ ರಾಮಗೌಡನ ಮಗಂ ಹರು(ಗ) ಉಡ ತ
೬. ಮ್ಮ ಅಪ್ಪ ಸತ್ತಲ್ಲಿ ಧ
೭. ರ್ಮಕ್ಕೆ ಹೊಯ್ಸಿದ ಗಾಣ ಮಂಗ

* ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ರಾಣಿಬೆನ್ನೂರು.

೮. ಳ ಮಹಾ ಶ್ರೀಶ್ರೀಶ್ರೀ

೩. ಎ.ಕ.೩ ಗುಂಡ್ಲುಪೇಟೆ ೧೫೫ ಕಂದಾಗಾಲ, ಕ್ರಿ.ಶ.೧೩೩೪ ಪು.೧೨೬

ಗ್ರಾಮದ ಕೆರೆಗೆ ಪಶ್ಚಿಮ ಹೊಲವೊಂದರ ಪಕ್ಕದಲ್ಲಿ ಇರುವ ಗಾಣದ ಮೇಲೆ

೧.ಸ್ವಸ್ತಿಶ್ರೀ ಸಕವರಿಷ ೧೨೫೬ ನೆಯ ಭಾವಸಂವತ್ಸರದಂ

೨.ದ ಮಾರ್ಗಸಿರ ಸು ೧೦ ಮಂ ಶ್ರೀಮನುಮಾಹಾ ಪ್ರಧಾನರಿಮ್ಮಡಿರಾ

೩. ಉತ್ತರಾಯ ಕೇತೆಯದಂಣ್ಣಾಯಕರು ರಾಜ್ಯಂಗೆಯು ತ್ತಿರಲು ಕಂದ

೪. ವಂಗಲದ ಬಮ್ಮಗೌಡನ ಮಕ್ಕಳು ರಾಮಗೌಡ ರಾಯಗೌಡ

೫. ಕೇತಗೌಡ ಕರೆಗೌಡನವರು ತಂದು ಅಪ್ಪನ ಧ

೬. ರ್ಮಕ್ಕೆ ಸೋಮನಾಥದೇವರ ನಂದಾದೇವಿಗೆಗೆ

೭. ಗಾಣ ೧ಕ್ಕೆ ಸೊಲ್ಲಿಗೆ ಎಣ್ಣೆ ಮಂಗಳ ಮ

೮. ಹಾ ಶ್ರೀಶ್ರೀಶ್ರೀ

೪. ಎ.ಕ.೩ ನಂಜನಗೂಡು, ೨೯೫, ದೊಡ್ಡಹೊಮ್ಮ. ಕ್ರಿ.ಶ. ೧೨೮೨ ಪು. ೩೬೭

ಸೋಮೇಶ್ವರ ದೇವಾಲಯದ ಮುಂದೆ ಇರುವ ಗಾಣದ ಕಲ್ಲಿನಲ್ಲಿ

೧. ಸ್ವಸ್ತಿಶ್ರೀ ವೀರನಾರಸಿಂಹದೇವರ

೨. ಸರು ಪ್ರಿಥಿವೀರಾಜ್ಯಂಗೆಯ್ಯುತ್ತಿರಲು

೩. ಸಕವರುಷ ೧೨೦೪ ಸಂದ ಚಿತ್ರಭಾ

೪. ನು ಸಂವತ್ಸರದ ಭಾದ್ರಪದ .. .. ..

೫. ಪಕ್ಷದಂದು ಮಾರಗಾರ ಹಿರಿಯ

೬. ಹೊಮ್ಮದ ಕಾರನ .. .. ಅರುಹಾರು

೭. ತರ ಮಿಗ್ಗನ ಮಗ ಗಾವುಂಡ.. ..

೮. .. .. ಪೊಯಿಸಿದ ಗಾಣ ಮಂ

೯. ಗಳಮಹಾ ಶ್ರೀಶ್ರೀಶ್ರೀ

೫. ಎ.ಕ. ೩ ಹೆಗ್ಗಡದೇವನಕೋಟೆ ೪. ಕಟ್ಟೆಮನುಗನಹಳ್ಳಿ. ಕ್ರಿ.ಶ. ೧೨೬೪. ಪು. ೪೩೩

ಹೊಳೆಗೆ ಹೋಗುವ ದಾರಿಯಲ್ಲಿ ಕಲ್ಲುಗಾಣದ ಮೇಲೆ

೧. ಸ್ವಸ್ತಿಶ್ರೀ ಸಕವರ್ಷ ೧೧೮೬ ನೆಯ

೨. ರಕ್ತಾಕ್ಷಿ ಸಂವತ್ಸರದ ಆಷಾಡ ಸು ೧೧।ಬ್ರಿ

೩. ಹಸ್ಪತಿವಾರದಲು ಪಾಂಡ್ಯದೇಸದ ಮನ

೪. ಜಯೊಕ್ಕಲ ಸ್ಥಾನಿಕ ಹರಿಪಿಜೀಯನ

೫. ಮಗ ನಾಗಿದೇವನು ನೆವಲೆನಾಡ ಮ

೬. ಣಿಗೆಹಳ್ಳಿಯ ರಾಮನಾಥದೇವರ

೭. ಸಿರಿಕಾರ್ಯ್ಯ ನಡವಂತಾಗಿ ನಂ

೮. ದಾದೇವಿಗೆ ನಡವಂತಾಗಿ ಕ

೯. ಲಗಾಣವನು ಮಾಡ್ಸಿದನು

೧೦. ಮಲ್ಲೆಯದಣ್ಣಾಯಕ ಅಧಿಕಾ

೧೧. ರದಲ್ಲಿ ಮಂಗಳ ಮಹಾ ಶ್ರೀಶ್ರೀಶ್ರೀ

೬ ಎ.ಕ. ೪ ಚಾಮರಾಜನಗರ ೧೦೫, ಗಣಗನೂರು ೧೨ ನೇ ಶತಮಾನ. ಪು. ೬೦

ಗಾಣಗತಾಳದ ಹೊಲದಲ್ಲಿ ಕಲ್ಲುಗಾಣದ ಮೇಲೆ

೧. ಸ್ವಸ್ತಿ ಸಮಸ್ತ ಪ್ರಶಸ್ತಿ ಸಹಿತ ಶ್ರೀಮನ್ಮಹಾ ಮಣ್ಣಳೇಸ್ವರ

೨. ತ್ರಿಭುವನಮಲ್ಲ ತಳಕಾಡುಗೊಣ್ಡ ಭುಜಬಲಪ್ರತಾಪ

೩. ಹೊಯ್ಸಳ ಶ್ರೀ ವಿಷ್ಣುವರ್ಧನ ಶ್ರೀ ನಾರಸಿಂಹದೇ

೪. ವರು ಪ್ರಿಥುವೀರಾಜ್ಯಗೆಯ್ಯುತ್ತವಿರಲು ಸುಭಾನು ಸಮ್ವತ್ಸರ

೫. ದಲು ತೊಹಿಮಾಸದಲು ಅಪರಕ್ಷದಲು ಅಶ್ವನಿ ನಕ್ಷತ್ರದಲು

೬. ಸೋಮವಾರಂ ಗಣಿಗನೂರ ತೆನ್ನಪಕ್ಷರ ಚಂಡ ಗಾವುಂಡನ

೭. ಮಗಂ ಅಸಕ್ಕಗಾವುಂಡಂ ಮಾಡಿಸಿದ ಕಲ್ಲಗಾಣಂ

೮. ಇಂತಪ್ಪುದಕ್ಕೆ ಮಂಗಳಮಹಾ ಶ್ರೀಶ್ರೀ

೭ ಎ.ಕ. ೪ ಚಾನ, ೧೨೭. ಬಸವಟ್ಟಿ. ಕ್ರಿ.ಶ. ೧೨೨೧, ಪು. ೭೨

ಹೊಲದಲ್ಲಿ ನೆಟ್ಟಿರುವ ಕಲ್ಲುಗಾಣದ ಮೇಲೆ

೧. ಸ್ವಸ್ತಿ ಶ್ರೀವೀರನಾ

೨. ರಸಿಂಹ ದೇವರಸರು

೩. ಪ್ರುಥುವೀರಾಜ್ಯಂ ಗೈ

೪. ಯ್ಯುತ್ತಿರಲು ವಿಷು

೫. ಸಂವತ್ಸರದ ಆ

೬. ಷಡ ಸು ೨ ಸುದ

೭. ಲು ಭಸೆಟ್ಟಿ

೮. ಯ ನಲ್ಲೂರದ

೯. ಹರತಿಗವುಡ

೧೦. ನ ಮಗ ಕೇತ

೧೧. ಗವುಡನ ಮ

೧೨. ಗ ಹರಗವುಡ

೧೩. ನ ಮರಾಹಲ್ಯ

೧೪. ಮಲ್ಲಿಕಾರ್ಜು

೧೫. ನ ದೇವರಿಗೆ ಇ

೧೬. ಕಿದ ಗಾಣ ಎಡೆ

೧೭. ಯೂರ ಮಾದಿಕಾ

೧೮. ವಿನ ಧರ್ಮ್ಮ

೮. ಎ.ಕ. ೪ ಚಾನ, ೧೮೨. ಹಂದ್ರಕಹಳ್ಳಿ, ಕ್ರಿ.ಶ. ೧೨೪೦. ಪು. ೧೧೦

ಭೀಮೇಶ್ವರ ದೇವಸ್ಥಾನದ ಹತ್ತಿರ ಹೂಳಿರುವ ಗಾಣದ ಕಲ್ಲಿನ ಮೇಲೆ

೧. ಸ್ವಸ್ತಿ ಶ್ರೀ ಪ್ರತಾಪಚ್ಚಕ್ರವತ್ತಿ ಪೊಯ್ಸಳ ಶ್ರೀ

೨. ವೀರ ಸೋಮೇಶ್ವರ ದೇವನ್ಪ್ರವೀರಾಜ್ಯಮ್ಪು

೩. ಣ್ಣಿಯರುಳಾನಿರ್ಕ ವಿಕಾರಿ ಸಮ್ವರ್ಚರತ್ತು ಮಕರ ಮಾಸಮ್

೪. ಎಣ್ಣೈನಾ . ರೂಮ್ಮಣ್ಡರಕ್ಕನ್ಪಳ್ಳಿಯಿಲ್

೫. .. . ರಾಸ ಕ್ಕೇತಗಾಮುಣ್ಡನ್ಮಕ್ಕಳ್ ಕೋವಿ

೬. ಗಾಮುಣ್ಡರುಮ್ ನಾಗಗಾಮುಂಡರುಮ್ವಿಮ್ಮ ಗಾಮುಣ್ಡ

೭ ರುಮ್ ವೀಮೇಶ್ವರ ಮುಡ್ಯೆಯ ನಾಯನಾಮಿಕ್ಕು ತಿರುನನ್ದಾವಿ

೮. ಳಕ್ಕುಕ್ಕು ಸಮಪ್ಪಿತ್ತ ಗಾಣಮ್

೯. ಎ.ಕ. ೪ ಚಾನ ೩೪೪೮, ಹಿರೇಬೇಗೂರು. ಕ್ರಿ.ಶ. ೧೩೭೭, ಪು. ೨೨೪

ಬನ್ನಿಮಹಂಕಾಳಿಯ ದೇವಸ್ಥಾನದ ಪ್ರಾಕಾರದ ಎಡಭಾಗದಲ್ಲಿರುವ ಗಾಣದ ಕಲ್ಲಿನ ಮೇಲೆ

೧. ಸ್ವಸ್ತಿ ಶ್ರೀ ಸಕವರುಷ

೨. ೧೯೨೪ ಪರಿಧಾವಿಸಂ

೩. ವತ್ಸರದ ಆಸ್ವಿ ಸು। ಚ

೪. ವುತ್ತಿಗೆಗೆ ಹಿರೆ ತಿರುಮಗ

೫. ವುಡನ ಮಗ ಹಾರ

೬. ವಗವುಡ ಕಚಗವುಡ

೭. (ಡ)ನ ಮಗ ಆಲಗವುಡ

೮. ರು ನಡ್ಸಿ ಗಾಣ ಮಂಗಳ ಮಹ

೧೦. ಎ.ಕ. ೪ ಚಾನ. ೩೯೩. ಹರವೆ.ಪು. ೨೫೯

ಗ್ರಾಮಕ್ಕೆ ಈಶಾನ್ಯದಲ್ಲಿ ಶಂಕರೇಶ್ವರ ದೇವಾಲಯದ ಮುಂದೆ ಗಾಣದ ಮೇಲೆ.

೧೧. ಶ್ರೀಮತು ಹಿರಿಯನಾಡ ಮಹಾ

೧೨. ಪ್ರಭು ತಗಡೂರ ಅಂಕನ

೧೩. ಗಉಡನ ಮಗ ಬ ..

೧೪. ಯ ಬಿ.. .. .. ..

೧೫. ಡಿಸಿದ ಗಾಣ.. .. .. ..

೧೬. ರೆ ಎತ್ತಿನಡದ ವಾಲೆ ಮಂ

೧೭. ಗಳ ಮಹಾ ಶ್ರೀ ಶ್ರೀ ಶ್ರೀ

೧೧. ಎ.ಕ. ೪ ಹುಣಸೂರು ೧೭ ರಾಮಪಟ್ಟಣ, ಕ್ರಿ.ಶ. ೧೩೪೨, ಪು. ೪೯೩

ರಾಮೇಶ್ವರ ದೇವಸ್ಥಾನದ ಬಳಿ ಕಲ್ಲುಗಾಣದ ಮೇಲೆ.

೧. ಶ್ರೀ ಚಿತ್ರಭಾನು ಸಂವತ್ಸರದ ಶ್ರಾವ

೨. ಣ ಸು ೧ ಬ್ರಿವಾರದಂದು ಹೆ

೩. ಜ್ಞಾದಿಯ ಆದಿಸಾವಂತನ ಮಗ ಕೇತವ

೪. ಲ್ಲಿಸಾವಂತನ ಮಗ ಆದಿಸಾವಂ

೫.ತ ಶ್ರೀ ಸೋಮನಾಥ (ದೇವ) ನಂದಾದೀವಿಗೆಯ

೬. (ತ್ತೈ) ಲಕ್ಕೆ ನಡವ ಗಾ(ಣ ಚ)ಂದ್ರ ಸೂರ್ಯ್ಯ

೭. ರು (ಳ್ಳನಕ) ನಡವ ಧಂರ್ಮ್ಮ

ಎಡಪಕ್ಕದಲ್ಲಿ

೮. .. .. ಮಾದಿ

೯. ಯ

೧೦. ಬೋವ

೧೨. ಎ.ಕ. ೪ ಹುಣಸೂರು. ೨೫. ಧರ್ಮಾಪುರ. ಕ್ರಿ.ಶ. ೧೧೧೫, ಪು. ೫೦೦

ಚೆನ್ನಕೇಶವ ದೇವಸ್ಥಾನದ ಮುಂದೆ ಗಾಣದ ಮೇಲೆ ಪೂರ್ವಕಡೆ

೧. ಶ್ರೀಮನುಮ

೨. ಥಸಂವತ್ಸ

೩. ರದ ವಯಿಸಾ

೪. ಖ ಸು ೨ ಮಂ॥

೫. ದಂಮಾಪುರದ

೬. ಕೇತಗವುಡನ ಮ

೭. ಗ ಗವುಡಿಗವುಡ

೮. ಮಾಡ್ಸಿದ ಗಾಣದ

೯. ಕಲ್ಲು ಚಂದ್ರಾರ್ಕರುಳ್ಳ

೧೦. ನ್ನೆವರ ಸ್ತಿರಂಜೀವಿ

ದಕ್ಷಿಣ ಕಡೆ

೧೧. ಗಾಣದ ಪಲ

೧೨. ಗವುಡಿಗವು

೧೩. ಡರಗೆ ಮಂಗಳ

೧೪. ಮಹಾ ಶ್ರೀ ಶ್ರೀ

೧೩. ಎ.ಕ. ೪ ಹುಣಸೂರು ೪೦. ಕಲ್ಲಹಳ್ಳಿ ಕ್ರಿ.ಶ. ೧೨೭೬, ಪು. ೫೦೭

ಗ್ರಾಮದ ದಕ್ಷಿಣಕ್ಕೆ ಕೆರೆಗೆ ಪೂರ್ವ ಹೊಲವೊಂದರಲ್ಲಿರುವ ಗಾಣದಕಲ್ಲಿನ ಮೇಲೆ.

೧. ಸ್ವಸ್ತಿ ಸಮಸ್ತಪ್ರಶಸ್ತಿ ಸಹಿತಂ

೨. ಶಕಕಾಲ ೧೧೯೮ ಸಂದಿಂ ಬಳಿಕ

೩. ಆಂಗಿರಸಂವತ್ಸರದ ಕಾರ್ತ್ತಿಕ

೪. ಸ ೭ ಬು ದಂದು ಚೆಳ್ಳಿಯರ ಕುಲದ

೫. ಕಲ್ಲಹಳ್ಳಿಯ ಕೆಂ(ಚ).. ..

೬. . ಮಗ ಮಾರಗ .. ..

೧೪. ಎ.ಕ. ೪ ಕೊಳ್ಳೆಗಾಲ. ೧೪ ತಗರಪುರ. ೧೪ನೇ ಶ. ಪು. ೪೦೭

ಹೊಲದಲ್ಲಿರುವ ಕಲ್ಲಿನ ಗಾಣದ ಮೇಲೆ

೧. ಶ್ರೀ ಸೊಸ್ತಿ ಶ್ರೀಸಮಸ್ತ ಶ್ರೀ

೨. ವೀ(ರ) ಬಲ್ಲಳದೇವರು ಪ್ರಿತುದಿ

೩. ರಾಜ್ಯ(ಂ) ಮಾಡುತಮಿರಲು

೪. ಬಾವಸ(ಂವ) ತ್ಸರದ ವೈ ರ್ಬ(ಭು)

೫. . ಂಡಿಯ ಕಂಬಯ ಗಾಣವನು

೬. ಮ(ಡಿ)ಸಿ ದವರು ಚವುಡಯ್ಯ(ನ)

೭. (ಮ)ಗ ಹರದಯ್ಯ ಕೊ.. .

೮. ಯ್ಯನ ಮಗ ಯಿ ಭಕ್ತ ಕೆ

೯. ಡಯ್ಯನ ಮಗ ಹೊಂಬಯ್ಯ..

೧೦. ತ್ತಿತಯ್ಯನ ಮಗಂ ಕಂಬಯ್ಯ

೧೧. .. ಎದು ಮಣ್ಣವನು

೧೨. . ಡನು ವದುರೊಡೆಯ

೧೩. . ರಂದರು ಬರದ ಸಿನ

ಇನ್ನೊಂದು ಕಡೆ

೧೪. ರಾಯಪ

೧೫. ದಂಡಿದ

೧೬. ಡಿ ..ಯ

೧೫. ಎ.ಕ. ೪ ಪಿರಿಯಾಪಟ್ಟಣ ೧೧ ಹಾರನಹಳ್ಳಿ. ಕ್ರಿ.ಶ. ೧೨೭೨, ಪು. ೫೧೪

ಗ್ರಾಮಕ್ಕೆ ಪೂರ್ವ ಬೆಟ್ಟದಪುರಕ್ಕೆ ಹೋಗುವ ವೋಣಿಯಲ್ಲಿರುವ ಗಾಣದಕಲ್ಲು

೧. ಶಕವರುಷ

೨. ೧೨೬೪ ಪ(ರಿ)ಧಾ (ವಿ) ಸಂ

೩. ವತ್ಸರದ ಕಾರ್ತ್ತಿಕ

೪. ಶು ೧೧ ಅ ಸಾಳುವ

೫. ಅರ್ಸರ ಮಕ್ಕಳು

೬. ಬಯಿರವೀರರಸು

೭. ಗಾಣವ ನೆಡ್ಸಿದ

೧೬. ಎ.ಕ. ೪ ಮೈಸೂರು. ೧೨೧ ವಾಜಮಂಗಲ. ಕ್ರಿ.ಶ. ೧೨೭೭, ಪು. ೨೭೦

ಊರಿನ ಈಶಾನ್ಯದಲ್ಲಿ ಅಂಕನಾಥೇಶ್ವರ ದೇವಾಲಯದ ಮುಂದೆ ಇರುವ ಗಾಣದಕಲ್ಲು(ಚಿತ್ರ-೧)

೧. ಸ್ವಸ್ತಿ ಶ್ರೀ ಮನುಮಹಾಮಂಡಳೇಶ್ವರ ಶ್ರೀ ವೀರನಾರ ಸಿಂಗದೇವರ

೨. ಸರು ಪ್ರಿಥ್ವಿರಾಜ್ಜಂಗೆಯ್ಯುತ್ತಿರೆ ಸಕವರಿಷ ೧೧೯೮ ಧಾತು ಸಂವತ್ಸರ

೩. ದ ಫಾಲ್ಗುಣ ಸು.೧೪ ಬ್ರು ಒಜಮಂಗ(ಲ)ದ ಚಿಕ್ಕಮಳೆಯರ ಕು. ರಾದ ರಾಜಮಂಣಗೌಡನ ಮಗ ಮ

೪. ರುಗೌಡನ ಮಗ ಅಂಕಗೌಡನ ಮಗ ಮುದ್ದಗೌಡನ ಮಕ್ಕಳು ಬೀರಗೌಡ ಮಾಡಿಗೌಡ ಅಂ

೫. ಕಗೌಡ ಯೀ ಮೂವರೂ ಮಾಡಿದ ಗಾಣ ಮಂಗಳ ಮಹಾಶ್ರೀ

೧೭. ಎ.ಕ. ೫. ತಿ. ನರಸೀಪುರ ೭೭ ಬೆಟ್ಟಹಳ್ಳಿ ಪು. ೪೬೫

ಮುಡುಕತೊರೆಬೆಟ್ಟದ ಮೇಲೆ ಮಲ್ಲಿಕಾರ್ಜುನ ದೇವಸ್ಥಾನದ ದೇವಿಯ ಗುಡಿಯ ಉತ್ತರಕ್ಕಿರುವ ಗಾಣದ ಮೇಲೆ

೧. ಅಪ್ಪಯನ್ ಮರುವ

೨. ಮಗ ವೈಸಣ್ಣನ (ರ್)

೩. ಗಾಣ(ಮ್)

೧೮. ಎ.ಕ. ೫. ಮೈಸೂರು ೧೩೨ ಚಟ್ಟನಹಳ್ಳಿ ಪಾಳ್ಯ ೧೨೧೦. ಕ್ರಿ.ಶ. ೨೭೪

ಹೊಲದಲ್ಲಿರುವ ಗಾಣದ ಕಲ್ಲಿನ ಮೇಲೆ(ಚಿತ್ರ-೨)

೧. ಸ್ವಸ್ತಿ ಶ್ರೀ ಪ್ರತಾಪ ಚಕ್ರವರ್ತಿ

೨. ಶ್ರೀ ವೀರಬಲ್ಲಾಳ ದೇವರು ಸು

೩. ಕ ಸಂಕತ ವಿನೋದದಿಂ ಪ್ರಿತು

೪. ವಿ ರಾಜ್ಯಂಗೆಯುತ್ತಮಿರೆ

೫. ಸಕವರಿಷ ೧೧೩೨ ಪ್ರಮೋ

೬. ದೊತ್ತ ಸಂವತ್ಸರದ ಭಾದ್ರಪದ

೭. ಬ ೧೦ ಮ। ಪರದಾಸಿ ಮಲಯಾ

೮. ಳ ಉಳಿಂಜಗೌಡ ಕಾಟವನಾಯ

೯. ಕರು ಚಟ್ಟನಹಳ್ಳಿಯ ಮೂಲ

೧೦. ಸ್ಥಾನೇಶ್ವರ ನಂದಾದೀವಿಗೆಗೆ ಮಾಡಿಸಿ

೧೧. ದ ಗಾಣ

ಇದರ ಎಡಭಾಗದಲ್ಲಿ

೧೨. ಚೋಳೋಜನ ತಮ್ಮ

೧೩. ಜವಮಾರೆಯ

೧೪. ಮಾಡಿದ ಗಾಣ

೧೯. ಎ.ಕ. ೫. ತಿ.ನರಸೀಪುರ ೧೨೨. ಬಿನಕನಹಳ್ಳಿ ಪು. ೫೩೯

ಹೊಲವೊಂದರಲ್ಲಿ ಕಲ್ಲಿನ ಗಾಣದ ಮೇಲೆ

ಪೂರ್ವಮುಖ

೧. ಸ್ವಸ್ತಿಶ್ರೀ ಸೋ

೨. ಭಕೃತು ಸಮ್ಮತ್ಸ

೩. ರತ್ತು ವೀರಬಲ್ಲಾಳ

೪. ದೇವನ್ ಪ್ರಿತುವೀ

ಉತ್ತರ ಮುಖ

೫. ರಾಜ್ಯಮ್ ಗೆ

೬. ಯುತ್ತಿರೆ

೭. ಸೋ..........

೮. ಜರಾಜ ....

೯. ಕು......ಲ... ಣ್

೧೦. ಣ ಗಾಮುಣ್ಣನ್ ಮ

೨೦. ಎ.ಕ. ೫ ತಿ.ನರಸೀಪುರ ೩೨೨ ಕಾರಗಹಳ್ಳಿ ಕ್ರಿ.ಶ. ೧೧೭೩, ಪು. ೬೭೧

ಗದ್ದೆಯೊಂದರಲ್ಲಿ ಬಿದ್ದಿರುವ ಕಲ್ಲುಗಾಣದ ಮೇಲೆ

೧. ಸ್ವಸ್ತಿ ಶ್ರೀ ಮನ್ಮಹಾಮಣ್ಣಳೇಶ್ವರಂ ತಳಕಾ

೨. ಡುಗೊಣ್ಣ ಅಸಹಾಯಸೂರ ನಿಸ್ಸಂಕಮಲ್ಲ ಸನಿ

೩. ವಾರಸಿದ್ದಿ ಗಿರಿದುರ್ಗ್ಗಮಲ್ಲ ಚಲದಂಕರಾಮ ಹೊಯ್ಸಳ ವೀರ

೪. ಬಲ್ಲಾಳದೇವರು ಪ್ರಿಥುವಿ ರಾಜ್ಯಂಗೆಯ್ಯುತ್ತಮಿರೆ ಸಕವರಿ

೫. ಷ ೧೧೦೧ ನೆ ವಿಕಾರಿ ಸಂವತ್ಸರ ಜ್ಯೇಷ್ಟ ಸುದ್ದ ೧೪ ಸೋಮ

೬.ವಾರದಂದು ಬಡಗರೆನಾಡ ಕೊಳಲ್ಲೂರ ಗಾಕರಗಣ್ಣ ಬಾ

೭. ಣಿಗರ ಬೆಳ್ಳಿಗವುಣ್ಣನ ಮಗ ಬಿಟ್ಟಿಗಾವುಂಡನು ಕೊಳಲ್ಲೂರ

೮. ಸೋಮೇಶ್ವರ ದೇವರ ಮುನ್ದೆ ನಡಿಸಿದ ಕಲ್ಲಗಾಣ॥

ಮಧ್ಯಕಾಲದ ಈ ಗಾಣದ ಕಲ್ಲಿನ ಶಾಸನಗಳು ಕಲ್ಲುಗಾಣವನ್ನು ಮಾಡಿಸಿದ ವ್ಯಕ್ತಿಗಳ ಹೆಸರುಗಳನ್ನು ದೇವಾಲಯದ ನಂದಾದೀವಿಗೆಗೆ ಎಣ್ಣೆಯನ್ನು ಕೊಡುತ್ತಿದ್ದ ವಿಷಯಗಳನ್ನು, ಹಾಗೂ ಅಪ್ಪ ಸತ್ತಲ್ಲಿ ಮಗ ಅಥವಾ ಬೇರೆಯವರು ಧರ್ಮಕಾರ್ಯಕ್ಕಾಗಿ ದೇವಾಲಯಕ್ಕೆ ದಾನ ಕೊಟ್ಟ ವಿಷಯವನ್ನು, ತೆಲ್ಲಿಗರಲ್ಲದವರು ಸಹ ದೇವಾಲಯಗಳಿಗೆ ಗಾಣಗಳನ್ನು ಮಾಡಿಸಿಕೊಡುತ್ತಿದ್ದ ಉಲ್ಲೇಖ ಹೀಗೆ ಅನೇಕ ವಿಷಯಗಳು ಗಾಣದ ಮೇಲೆ ಶಾಸನ ಉಲ್ಲೇಖಗಳಿವೆ.





ಉತ್ಪಾದಿಸುತ್ತಿದ್ದ ಎಣ್ಣೆಗಳು

ಕ್ರಿ.ಶ. ೧೨೮೦ ರ ನರಸೀಪುರ ಶಾಸನವೊಂದು (ಎ.ಕ. ೯ ಬೇ. ೫೬೨. ಕ್ರಿ.ಶ. ೧೨೮೦) 'ತೆಂಗಿನೆಂಣೆ ಬಾಳೆಯ ಹಣ್ಣು ೧೦೦೦ ಕಬ್ಬು ೩೦೦' ಎಂದು ಉಲ್ಲೇಖಿಸುವುದರಿಂದ ಅಂದು ತೆಂಗಿನಕಾಯಿಯಿಂದ ಎಣ್ಣೆ ತಯಾರು ಮಾಡುತ್ತಿದ್ದರೆಂದು ತಿಳಿಯಬಹುದು. ಹರಳೆ ಅಥವಾ ಔಡಲ ಬೀಜದಿಂದ ಹರಳೆಂಣ್ಣೆ ತಯಾರು ಮಾಡುತ್ತಿದ್ದ ಬಗ್ಗೆ ಬೇಲೂರಿನ ಶಾಸನ (ಎ.ಕ. ೯ ಬೇ. ೧೧೨. ಕ್ರಿ.ಶ. ೧೪೮೫) ತಿಳಿಸುತ್ತದೆ. ಅಲ್ಲದೇ ಮೈಸೂರಿನ ಶಾಸನವೊಂದು (ಎ.ಕ ೫. ಮೈಸೂರು ೨೧೬, ಕ್ರಿ.ಶ. ೧೧೯೫) ಕೂಡ 'ಹರಳಿಯ ಯಣ್ನೆ' ಯನ್ನು ಉಲ್ಲೇಖಿಸುತ್ತದೆ. ಔಡಲು ಅಥವಾ ಹೇರಂಡದಿಂದ ಮಾತ್ರ ಎಣ್ಣೆಯನ್ನು ಸ್ವಲ್ಪ ಭಿನ್ನ ರೀತಿಯಲ್ಲಿ ತಯಾರಿಸುತ್ತಿದ್ದರು.

ಹರಳಿನ ಬೀಜಗಳನ್ನು ಪುಡಿ ಮಾಡಿ ಅದನ್ನು ನೀರಿನಲ್ಲಿ ಕಲಿಸಿ ಬೇಯಿಸುತ್ತಿದ್ದರು. ನೀರೆಲ್ಲ ಆವಿಯಾಗಿ ಕೊನೆಗೆ ಹರಳೆಣ್ಣೆಯು ಮಾತ್ರ ಉಳಿಯುತ್ತಿತ್ತು. ಇದು ಮೋಳಿಗೆ ಮಾರಯ್ಯನ ವಚನವೊಂದರಲ್ಲಿ ಉಲ್ಲೇಖಗೊಂಡ ಬಗೆ (ಹೇರಂಡದ ಬಿತ್ತ ತುಳಿದು ವಾರಿದು ಕಲಸಿ ಬೇಯಿಸಿದಲ್ಲಿ ವಾರಿ ಬೇರೆ ತಾ ಬೇರಾದ ಭೇದದ ಬಲ್ಲರೆ ಇಷ್ಟಲಿಂಗ ಸಂಬಂಧಿ) ಕೆಲವು ಶಾಸನಗಳು ಹಾಗೂ ವಚನಗಳು ಎಳ್ಳನ್ನು ಉಲ್ಲೇಖಿಸುವುದರಿಂದ ಎಳ್ಳೆಣ್ಣೆಯನ್ನು ಕೂಡ ಉತ್ಪಾದಿಸುತ್ತಿದ್ದುದು ಗೊತ್ತಾಗುತ್ತದೆ. ಪಂಪ ತನ್ನ ಆದಿಪುರಾಣದಲ್ಲಿ ಒಂದೆಡೆ 'ತಿಳಾತಸೀಕು ಸುಂಭಾದಿದೀ ಪ್ರೌಷಧಿಗಳುಂ' ಅಂದರೆ ಎಳ್ಳು, ಅಗಸೆ, ಕುಸುಬೆ ಮುಂತಾದ ಎಣ್ಣೆಬೀಜಗಳು ಎಂದು ಉಲ್ಲೇಖಿಸುವುದರಿಂದ ಎಳ್ಳು, ಅಗಸೆ, ಕುಸುಬೆ ಬೀಜಗಳಿಂದಲೂ ಎಣ್ಣೆ ಉತ್ಪಾದಿಸುತ್ತಿದ್ದಿರಬಹುದು.

ಮಾಪನಗಳು

ಎಣ್ಣೆಯ ಅಳತೆಯನ್ನು ನಾನಾ ವಿಧದಲ್ಲಿ ಸೂಚಿಸಲಾಗಿದೆ. ಎಣ್ಣೆ ಉತ್ಪಾದಕರ ಸಂದರ್ಭದಲ್ಲಿ ದೊಡ್ಡ ಅಳತೆ ಗಾಣದ ರೂಪದಲ್ಲಿಯೂ, ಎಣ್ಣೆ ಮಾರಾಟಗಾರರ ಸಂದರ್ಭದಲ್ಲಿ ದೊಡ್ಡ ಅಳತೆ ಹಾಡದ ರೂಪದಲ್ಲಿಯು ಇತ್ತು. ಚಾಮರಾಜನಗರದ ಶಾಸನವೊಂದು 'ಒನ್ದು ಹೊರೆ ಗಾಣದಲೊಮ್ಮಾನ ಎಣ್ನೆ ತೋಂಟದ ಗುಳಿ ೧೦೦ ಆ ಊರ ಬಡಗಣ ಕೊಡೆಯನಹಳ್ಳಿ ಸಹಿತ ..... ದ ಪುಣಿಸಜಿನಾಲಯಕ್ಕೆ ಧಾರಾಪೂರ್ವ್ವಕವಾಗಿ ಬಿಟ್ಟ ದತ್ತಿ' ಎಂದು ಉಲ್ಲೇಖಿಸುವುದರಿಂದ ಒಮ್ಮಾನದ ಅಳತೆ ಇದ್ದದ್ದು ಗೊತ್ತಾಗುತ್ತದೆ. ಒಂದು ಗಾಣ ದೇವಾಲಯಗಳ ಸುಪರ್ದಿಗೆ ಬಿಟ್ಟು ಅದರಲ್ಲಿ ಎಷ್ಟು ಪ್ರಮಾಣದ ಎಣ್ಣೆ ಬರುತ್ತದೆಯೋ ಅಷ್ಟನ್ನು ದಾನ ಮಾಡಿದ್ದಾಗಿ ತಿಳಿಯಬಹುದು.

ಒಟ್ಟಿನಲ್ಲಿ ಕರ್ನಾಟಕದ ಎಲ್ಲಾ ತೆಲ್ಲಿಗ ಶಾಸನಗಳನ್ನು ನೋಡಿದಾಗ ಸು. ೫೦೦ ಕ್ಕೂ ಹೆಚ್ಚು ಶಾಸನಗಳು ಇವರಿಗೆ ಸಂಬಂಧಿಸಿದ್ದು ತೆಲ್ಲಿಗರ ಅರ್ಥಿಕ ಸ್ಥಾನಮಾನ ಉತ್ತಮವಾಗಿದ್ದು ಗೊತ್ತಾಗುತ್ತದೆ. ಆದರೆ ಮೈಸೂರು ಜಿಲ್ಲೆಗೆ ಸೀಮಿತಪಡಿಸಿ ತೆಲ್ಲಿಗ ಶಾಸನಗಳನ್ನು ನೋಡಿದಾಗ ಹೆಚ್ಚು ಕಲ್ಲಿನಗಾಣದ ಶಾಸನಗಳು ಕಂಡುಬಂದಿದ್ದು ದೇವಾಲಯದ ನಂದಾದೀವಿಗೆಗೆ ಕೊಟ್ಟ ವಿಚಾರಗಳು ಗೊತ್ತಾಗುತ್ತವೆ.

[ಶಶಿಕುಮಾರ್ ನಾಯ್ಕ ಕೆ.ಸಿ. ಹಾಗೂ ಮಾರ್ಗದರ್ಶನ ನೀಡಿರುವ ಗುರುಗಳಾದ ಡಾ. ಎಂ. ಕೊಟ್ರೇಶ್ ಹಾಗೂ ಡಾ. ಎಲ್.ಪಿ. ರಾಜು ಇವರಿಗೆ ಧನ್ಯವಾದಗಳು.]

೧೧

ಹುಬ್ಬಳ್ಳಿ ಮೂರು ಸಾವಿರ ಮಠಕ್ಕೆ ಸಂಬಂಧಿಸಿದ ಐತಿಹಾಸಿಕ ಪತ್ರಗಳು

ಬಿ. ನಂಜುಂಡಸ್ವಾಮಿ *

ಭಾರತ ದೇಶದ ಕರ್ನಾಟಕ ರಾಜ್ಯದ ಪ್ರಮುಖ ವೀರಶೈವ ಮಠಗಳಲ್ಲಿ ಧಾರವಾಡ ಜಿಲ್ಲೆ ಹುಬ್ಬಳ್ಳಿಯ ಮೂರುಸಾವಿರ ಮಠಕ್ಕೆ ವಿಶೇಷವಾದ ಸ್ಥಾನ ಈ ಮಠದಿಂದ ೧೯೨೧ರಲ್ಲಿ ಪ್ರಕಟವಾದ "ಶಿವಮಂತ್ರ ಜಪವಿಧಿಃ" ಪುಸ್ತಕದ ಮುಖಪುಟದಲ್ಲಿ "ಶ್ರೀಮನ್ನಿರಂಜನ ಜಗದ್ಗುರು ಭೂಲತಾಪುರ (ಹುಬ್ಬಳ್ಳಿ) ತ್ರಿಸಹಸ್ರ ಬೃಹನ್ಮಠಾಧೀಶ ಗಂಗಾಧರ ಮಹಾಸ್ವಾಮಿಗಳಿಂದ" ಸಂಗ್ರಹಿಸಲ್ಪಟ್ಟು ಶಂಕರಪ್ಪ ಅಚ್ಚಪ್ಪ ಟೋಪಿಗಿ ಹುಬ್ಬಳ್ಳಿ ಇವರಿಂದ ಪ್ರಕಟಿಸಲ್ಪಟ್ಟಿತು. ಪ್ರಥಮ ಮುದ್ರಣ ೫೦೦ ಪ್ರತಿಗಳು ಪುಸ್ತಕವು ಧಾರವಾಡದ ಶ್ರೀ ಎಲ್.ಎನ್. ಶಿವಲಿಂಗಶಾಸ್ತ್ರಿಗಳು ತಮ್ಮ ಧರ್ಮತರಂಗಿಣಿ ಮುದ್ರಣಾಲಯದಲ್ಲಿ ಮುದ್ರಿಸಿದರು. ೧೯೨೧ನೇ ಇಸವಿಯಲ್ಲಿ ಪುಸ್ತಕ ಮುದ್ರಣವಾಯಿತು.

ಪರಮಪೂಜ್ಯ ಜಗದ್ಗುರುಗಳು ಅಂದಿಗೆ ಬಹಳ ಮುಖ್ಯವಾದ ದಾಖಲೆಗಳನ್ನು "ಶಿವಮಂತ್ರ ಜಪವಿಧಿಃ" ಪುಸ್ತಕದ ಕಡೆಯಲ್ಲಿ ಮುದ್ರಿಸಿದ್ದರಿಂದ ಇತಿಹಾಸ ಆಸಕ್ತರಿಗೆ ಬಹಳ ಅನುಕೂಲವಾಯಿತು. ಈ ದಾಖಲೆಗಳನ್ನು ಶ್ರೀಮಠದ ಮೇಲೆ ಮಹಾಪ್ರಬಂಧ ರಚಿಸಿದ ವಿದ್ವಾಂಸರು ಬಳಸಿಕೊಂಡಿಲ್ಲ. ಈ ದಾಖಲೆಗಳಲ್ಲಿ ನಾಲ್ಕು ಕನ್ನಡ ಭಾಷೆಯಲ್ಲಿಯೂ, ಮರಾಠಿಯಲ್ಲಿ ಎರಡು ದಾಖಲೆಗಳು, ಇಂಗ್ಲಿಷಿನಲ್ಲಿ ಐದು ದಾಖಲೆಗಳು ಇವೆ.

೧೭ನೇ ಮಾಹೆ ಜೂನ್ ೧೮೪೮ W.W. BELL ನೀಡಿದ ಪತ್ರ

ಮೆಹರ್ಬಾನ ಗುರುಸಿದ್ಧಸ್ವಾಮಿ ಮೂರುಸಾವಿರಮಠ ಹುಬ್ಬಳ್ಳಿ ಇವರಿಗೆ

ಅಜತರ್ಫ ಉಲಿಯಾ ವಾರ್ಡನ್ ಬೆಲ್ ಸಾಹೇಬ ಮ್ಯಾಜಿಸ್ಟ್ರೇಟ್ ಜಿಲ್ಲಾ ಧಾರವಾಡ ಸಲಾಮ್ ಅಂಕಿ ಇಲ್ಲಿ ಖೈರಿಯತ ತಿಳೀದು ತಮ್ಮ ಸಂತೋಷಕ್ಕೆ ಆಗಿಂದಾಗ್ಯೆ ಬರಸಿ ತಿಳಿಸುತ್ತಾ ಬರಬೇಕು. ತರುವಾಯಾ ಮೆಹರ್ಬಾನ ಜುಡಿಸಿಯಲ್ ವ್ಹಿಜಿಟಿಂಗ್ ಕಮಿಶನರ್ ಸಾಹೇಬ ಸದರ್ನ ಮರಾಠ ಕಂಟ್ರಿ ಇವರ ಇಂಗ್ರೇಜಿ ಪತ್ರ ಸಪಟಂಬರ್ ತಾರೀಖು ೯-೧೫ ಮಾಹೆ ಮಜಕೂರ ನಂಬರ್ ೧೩೮/೧೬೬ ನೇದು ಹಾಂಗು ಅವರ ಸಂಗಡ ಪ್ರೊಸಿಡಿಂಗನ ಎಕ್‌ಸ್ಟ್ರ್ಯಾಕ್ಟ್ ಬಂದವರಲ್ಲಿ ತಮಗು ಹಾಂಗು ಮೆಹರ್ಬಾನ. ಶಂಕರಭಾರತಿಸ್ವಾಮಿ ಶ್ರಿಂಗೇರಿ ಇವರಿಗು ಅಡ್ಡಪಾಲಕಿ ನಡೆಸುವ ಬಾಬದಿಯಲ್ಲಿ ಕಜಿಯಾ ಇರುವುದಕ್ಕೆ ತಮ್ಮ ಕಡೆಯಿಂದ ಮೆಹರ್ಬಾನ ಷಾ ಸಾಹೇಬ ಮಾಜಿಸ್ಟ್ರೇಟ್ ಇವರು ೫೦೦೦೦ ರೂಪಾಯದ ಜಾಮಿೂನ ತಕ್ಕೊಂಡಂಥಾದ್ದು ಹಾಂಗು ನಾವು ತಮ್ಮಿಂದ ಹೊಸ ಜಾಮೀನು ತಕ್ಕೊಳಲ್ಲಿಕ್ಕೆ ಹುಕುಮ ಮಾಡಿರುವುದು ಸಹಾ ರದ್ದು ಮಾಡಿರುವುದಾಗಿ ಬರೆದಿರುತ್ತಾರಾದ್ದರಿಂದ ಸನ್ ೧೮೨೭ನೇ ಇಸವಿ ೧೨ನೇ ಕಾಯಿದೆ ೧೯ನೇ ಕಲಮು ೧ನೇ ರಕಮಿನ ಮೇಲೆ ನಜರ ಕೊಟ್ಟು ತಮಗೆ ಕಲಮಿ ಮಾಡುವದೇನೆಂದರೆ ಹಾದಿ ಇದು ಸರಕಾರದ್ದು ಇರುತ್ತದೆ. ಸರಕಾರದ ಹಾದೀ ಮೇಲೆ ದಾರು ಯಾವ ರೀತಿಯಿಂದಾ ಓಡಾಡಲಿಕ್ಕೂ ಅಡ್ಡಿ ಬರುವದಿಲ್ಲ. ತಾವು ಅಥವಾ ಮಹೆರ್ಬಾನ ಶಂಕರಭಾರತೀ ಸ್ವಾಮಿಗಳು ಅಡ್ಡಪಾಲಕಿಯೊಳಗೆ ಕೂತು ಯಾವ ಊರೊಳಗಾದರೂ ಸರಕಾರದ ಹಾದೀಮೇಲೆ ಹೋಗಬೇಕಾದರೆ ಮೊದಲು ಆ ತಾಲ್ಲೂಕಿನ ಪೋಲೀಸ್ ಅಮಲದಾರರ ಪರವಾನಗಿ ತಕ್ಕೊಂಡು ಯಾವಲ್ಲಿ ಅಡ್ಡಪಾಲಕಿ ನಡೆಸಿದರೂ ಅಡ್ಡಿ ಆಗಲಿಕ್ಕಿಲ್ಲ. ಜರ ಕದಾಚಿತ ದಾರಾದರು ನಮ್ಮ ಹುಕುಮು ಮಾನಿಸದೆ ಅಡ್ಡಿ ಮಾಡಿದರೆ ಅವರಿಗೆ ಕಾನೂನು ಪ್ರಕಾರ ಶಿಕ್ಷಾ ದೊರೆದೀತು. ಜರ ಮಾಮಲೇದಾರರಿಗೆ ತಾವು ಅಥವಾ ಮೆಹರ್ಬಾನ ಶಂಕರಭಾರತೀಸ್ವಾಮಿಗಳು ಪರವಾನಗಿ ಬೇಡಿದಾಗ್ಯೆ ಕಜಿಯಾ ಬಬೇಡಿ ಅದೀತು ಎಂತ ತೋರಿದರೆ ಅವರು ಪರವಾನಗಿ ಕೂಡದಲೆ ಮುಂದಾಗಿ ನಮಗೆ ರಿಪೋರ್ಟು ಮಾಡ್ಯಾರು ಆ ಬಗ್ಗೆ ನಾವು ಯೋಗ್ಯ ತೋರಿದಂತೆ ಕಾನೂನು

* ಪಂಡಿತ ತಾರಾನಾಥ್ ಆಯುರ್ವೇದ ಚಿಕಿತ್ಸಾಲಯ, ಬಿ.ಹೆಚ್. ರಸ್ತೆ, ತುಮಕೂರು, ಮೊ. ೯೮೮೦೯ ೬೭೧೯೬

ಪ್ರಕಾರ ಬಂದೋಬಸ್ತಿ ಹುಕುಮು ಕೊಟ್ಟೇವು. ಪೋಲೀಸ ಅಮಲದಾರರ ಪರವಾನಿಗಿ ತಕ್ಕೊಳ್ಳದ ಶಿವಾಯ ತಾವು ಹಾಂಗು ಮೆಹರ್ಬಾನ ಶಂಕರಭಾರತಿಸ್ವಾಮಿ ಶ್ರಿಂಗೇರಿ ಇವರು ಸಹ ಅಡ್ಡಪಾಲಕಿ ನಡಿಸಬಾರದು. ಹೆಚ್ಚು ಬರಿಯೋಣೀನದೆ ತಾರೀಖು ೧೭ನೇ ಮಾಹೆ ಜೂನ್ ಸನ್ ೧೮೪೮ ಇಸವಿ ಮುಕ್ಕಾಮ ಧಾರವಾಡ

Signed W.W. BELL

ಜಿಲ್ಲಾ ಮ್ಯಾಜಿಸ್ಟ್ರೇಟ್, ಧಾರವಾಡ

ಈ ಮೇಲಿನ ದಾಖಲೆಯಿಂದ ಸನ್ ೧೮೨೭ನೇ ಇಸವಿಯಲ್ಲಿ ಬಂದ ಕಾಯಿದೆ ಬಗ್ಗೆ ಮಾಹಿತಿ ಇದೆ. ಹುಬ್ಬಳ್ಳಿ ಮೂರುಸಾವಿರಮಠದ ಗುರುಸಿದ್ಧಸ್ವಾಮಿಗಳ ಅಡ್ಡಪಾಲಕಿ ಉತ್ಸವ ನಡೆಸುವ ಬಗ್ಗೆ ಶಂಕರಭಾರತಿಸ್ವಾಮಿ ಶೃಂಗೇರಿ ಇವರು ತಕರಾರು ಮಾಡಿರುವುದು. ಈ ದಾಖಲೆ ಹೇಳುತ್ತದೆ. ಶಂಕರಭಾರತೀ ಸ್ವಾಮಿಗಳು ಶೃಂಗೇರಿ ಅಂದರೆ ಅಂದಿನ ಶೃಂಗೇರಿ ಜಗದ್ಗುರು ಪೀಠದಲ್ಲಿ ವಿರಾಜಮಾನರಾದವರಲ್ಲ. ಉತ್ತರಕರ್ನಾಟಕದ ಸಂಕೇಶ್ವರದಲ್ಲಿರುವ, ಶೃಂಗೇರಿ ಶಾಖಾಮಠದ ಸ್ವಾಮಿಗಳು. ಈ ಸರ್ಕಾರಿ ನಿರೂಪ ಹೊರಟಿದ್ದು ೧೭ನೇ ಮಾಹೆ ಜೂನ್ ೧೮೪೮ನೇ ಇಸವಿಯಲ್ಲಿ.

No. 2679 of 1869/70

POONA OFFICE OF THE DIRECTOR OF PUBLIC INSTRUCTION
19 OCTOBER 1969

TO

SHRIMAT PARAMAHOMS PARIVRAJAKACHARYA
SHUNYA SINYASANADHISHA JAGAT GUROO
GANGADHARA SWAMY MURSAVIRAMATHA

SIR,

I HAVE THE HONOUR BY DIRECTION OF THE RIGHT HONOURABLE THE GOVERNOR IN COUNCIL TO ACKNOWLEDGE YOUR LIBERAL DONATION OF RS. 3000 AS A FUND FOR THE ESTABLISHMENT OF A SCHOLARSHIP IN THE PROPOSED HIGH SCHOOL AT DHARWAR

I HAVE THE HONOUR TO BE
SIR,
YOUR MOST OBEDIENT SERVANT
(SIGNED) J.B. PEILE
DIRECTOR OF PUBLIC
INSTRUTION

ವೀರಶೈವ ಮಠಗಳು ಮೊದಲಿನಿಂದ ಜನಸಾಮಾನ್ಯರ ವಿದ್ಯಾಭ್ಯಾಸಕ್ಕೆ ವಿಶೇಷವಾದ ಸೇವೆ ಸಲ್ಲಿಸುತ್ತಾ ಬಂದಿವೆ. ಅಂದಿಗೆ ಧಾರವಾಡದಲ್ಲಿ ಸರ್ಕಾರಿ ಹೈಸ್ಕೂಲು ಪ್ರಾರಂಭವಾಗುವ ಸಮಯ. ಸರ್ವ ಜನಾಂಗದವರು ವಿದ್ಯಾವಂತರಾಗಬೇಕು ಅನ್ನುವ ಮನೋಭಾವದಿಂದ ಪ್ರಾರಂಭವಾದ ಸಕಾರಿ ಹೈಸ್ಕೂಲ್‌ನ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡಲು ಮೂರುಸಾವಿರಮಠದ ಜಗದ್ಗುರುಗಳು ನೀಡಿದ ಅಂದಿನ ಮೂರು ಸಾವಿರ ಇಂದಿನ ಮೂವತ್ತು ಕೋಟಿಗೂ ಹೆಚ್ಚಿನದು.

ಜಾವಕ ನಂಬರು ೫೧೩ ಗುರುಸಿದ್ಧಸ್ವಾಮಿ

ಯಾದಿ ಹುಬ್ಬಳ್ಳಿಯಲ್ಲಿರುವ ಹಿರೇಮಠದ ಮಹಾಲಿಂಗಪ್ಪಾ ಇವರಿಗೆ

ಹುಬ್ಬಳ್ಳಿ ತಾಲ್ಲೂಕ ಮಾಮತೀದಾರರ ಕಡೆಯಿಂದ

ಕಲ್ಮಿ ನೀವು ತಾರೀಖು ೨೩ ನವೆಂಬರ್ ೧೮೬೯ ಇವಸಿ ಪತ್ರ ಮೂರುಸಾವಿರಮಠದ " " ಇವರು ಹುಬ್ಬಳ್ಳಿಯಲ್ಲಿ ತಾರೀಖು ೧೩ ಡಿಸೆಂಬರ್ ೧೮೬೯ ಇಸವಿ ಸೋಮವಾರದಿಂದ ೧೭ ಡಿಸೆಂಬರ್ ೧೮೬೯ ಇಸವಿವರಿಗೆ ಐದು ದಿವಸದವರಿಗೆ ಅಡ್ಡಪಾಲಕಿಯಿಂದ ಮೆರವಣಿಗೆ ಮಹೋತ್ಸವನಿಶಿ ಹೊರಡೊ ದೆಶಿಯಿಂದ ಪರವಾನಗಿ ಕೊಡಬೇಕಂತ ಬರೆದ ಬಗ್ಗೆ. ಹುಜೂರಿಗೆ ಪೊಲೀಸ್ ಜಾವಕ ನಂಬರ ೧೯೫ನೇ ರಿಪೋರ್ಟ್ ಮಾಡಿದ್ದರ ಕೆಳಗೆ ಮಹರ್ಬಾನ ಕ್ಯಾಮರನ್ ಸಾಹೇಬ ಪ್ರಲ್‌ಪಾವರ್ ಮ್ಯಾಜಿಸ್ಟ್ರೇಟ್ ಇವರ ಶರಾ ಹುಕುಂ ಅಡ್ಡಪಾಲಕಿ ಸದರಿ ಬರೆದ ತಾರೀಖುಗಳಲ್ಲಿ

ಆಗುವುದಕ್ಕೆ ನಾವು ಮಂಜೂರ ಕೊಟ್ಟಿದ್ದೇವೆ ಅಂತ ವಗೈರೆ ತಾರೀಖು ೨೯ ನವೆಂಬರ್ ಸನ್ ೧೮೪೯ ಇಸವಿ ಪೋಲೀಸ್ ಅವಕ ನಂಬರ ೯ ನೇದ್ದು ಬಂದಿರುತ್ತದೆ ತಿಳಿಯುವುದು ತಾರೀಖು ೨ನೇ ಡಿಶಂಬರ್ ೧೮೪೯ ಇಸವಿ.

ಹುಬ್ಬಳ್ಳಿಯಲ್ಲಿರುವ ಹಿರೇಮಠದ ಮಹಾಲಿಂಗಪ್ಪ ಅವರಿಗ ಹುಬ್ಬಳ್ಳಿ ಮಾಮಲೇದಾರರ ಕಡೆಯಿಂದ ಬರೆದ ಪತ್ರ ತಾರೀಖು ೧೩ ಡಿಸೆಂಬರ್ ೧೮೪೯ ಇಸವಿ ಸೋಮವಾರದಿಂದ ೧೭ ನೇ ಡಿಸೆಂಬರ್‌ವರೆಗೆ ಅಡ್ಡಪಲ್ಲಕ್ಕಿ ಮೆರವಣಿಗೆ ಹೊರಿಡಿಸುವ ಬಗ್ಗೆ ನೀಡಿದ ಒಪ್ಪಿಗೆ ಪತ್ರ.

ಶ್ರೀ ಶೂನ್ಯಸಿಂಹಾಸನಾಧೀಶ ಗಂಗಾಧರಸ್ವಾಮಿ ಮೂರುಸಾವಿರಮಠ ಹುಬ್ಬಳ್ಳಿ

ಇವರಿಗೆ

ಅಜತರ್ಫ ಎಲಿಫಿನ್‌ಷ್ಟನ್ ಸಾಹೇಬ ಬಾಹದ್ದೂರ ಕಲೆಕ್ಟರ ಜಿಲ್ಲಾ ಕಾನಡಾ ಸಲಾಮ್ ತಮ್ಮ ತಾರೀಖು ೨ನೇ ಡಿಶೇಂಬರನೇ ಕಾಗದ ಬರದ್ದು ಬಂದು ಮುಟ್ಟಿ ಮಜಕೂರು ತಿಳಿಯಲಾಯಿತು. ನಿಮ್ಮ ಮೆರವಣಿಗೆ ಆಗುವದು ಬಹಳ ಸಂತೋಷವಾಯಿತು. ನಮಗೆ ಪುರಸತ್ತು ಆದರೆ ನಾವು ಬಂದೇವು. ತಾ ೧೧ನೇ ಡಿಶಂಬರ ಸನ್ ೧೮೪೯ ಇಸವಿ :

(Signed) J. ELPHINSTON

ಮೂರುಸಾವಿರ ಮಠದ ಶೂನ್ಯಸಿಂಹಾಸನಾಧೀಶ್ವರರಾದ ಗಂಗಾಧರಸ್ವಾಮಿಗಳವರಿಗೆ ಕಾನಡಾ ಜಿಲ್ಲೆ ಅಂದರೆ ಮಂಗಳೂರು-ಕಾರವಾರದ ಏಕವಾದ ಜಿಲ್ಲೆಯ ಕಲೆಕ್ಟರ್‌ರವರು ಬರೆದ ಪತ್ರ. ತಮ್ಮ ಅಡ್ಡಪಾಲಿಕೆ ಉತ್ಸವಕ್ಕೆ ಪುರಸತ್ತು ಆದರೆ ಬರುತ್ತೇನೆ ಎಂದು ೧೧ನೇ ಡಿಸೆಂಬರ್ ಸನ್ ೧೮೪೯ನೇ ಇಸವಿಯಲ್ಲಿ ಬರೆದ ಪತ್ರ.

ಮು.ವಹುಕುಂ ನಂಬರು ೩೬

೧೧ ತಾಲ್ಲೂಕು
೨ ಪೇಠೆ
೧ ದಿವಾಣ ಸವಣೂರ
೧ ಪೋಲೀಸ ಸು.ಸಾ.ಬಾ

ಜಿಲ್ಹಾ ಧಾರವಾಡ

ಮಾಮಲೇದಾರ ಸಾ॥ ತಾಲ್ಲೂಕ

ಅಜತರ್ಫ ಸಿ.ಡಬ್ಲ್ಯೂ ಹಡಸನ್ ಕಲೆಕ್ಟರ್ ವ. ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಸಾ. ಬಾ.ಜಿಲ್ಲಾ ಧಾರವಾಡ ಸಲ್ಲಾಂ ದಿಗರ - ಶ್ರೀ ಜಗದ್ಗುರು ಗಂಗಾಧರಸ್ವಾಮಿ, ಮೂರುಸಾವಿರ ಮಠ, ಹುಬ್ಬಳ್ಳಿ ಇವರ ಕಡಿಯಿಂದ ಯಾದಿ ನಂಬರ ೨೧ / ೩-೨-೧೯೧೦ ನೇದು ಬಂದದ್ದರ ಮೇಲಿಂದ ಅಪ್ಪಣೆ ಅದಲ್ಲಾ - ಶ್ರೀ ಜಗದ್ಗುರು "ಗಂಗಾಧರ ಸ್ವಾಮಿಗಳವರು" ಸಂಚಾರ ಕ್ರಮದಿಂದ ಹುಬ್ಬಳ್ಳಿಯಿಂದ ಹೊರಟು ಜಿಲ್ಲಾ ಮಜಕೂರ ಪೈಕಿ ನವಲಗುಂದ, ಗದಗ, ರೋಣ, ಹಾವೇರಿ ರಾಣಿಬೆನ್ನೂರ ಮೊದಲಾದ ತಾಲ್ಲೂಕುಗಳಲ್ಲಿ ತೀವ್ರ ಬರತಕ್ಕವರಿದ್ದಾರೆ. ಆದ್ದರಿಂದ ಶ್ರೀಗಳವರು ನಿಮ್ಮ ತಾಲ್ಲೂಕಿನಲ್ಲಿ ಬಂದಾಗ್ಗೆ ಸದರಿಯವರಿಗೆ ಸರಿಯಾದ ಮಾನಮರ್ಯಾದೆದೆ ಮಾಡಬೇಕು ಮತ್ತು ಅವರಿಗೆ ಬೇಕಾಗುವ ಯೋಗ್ಯ ಮದ್ದತ ಮಾಡಬೇಕು. ಶ್ರೀ ಶ್ರೀ ಸ್ವಾಮಿಗಳವರ ಸರಿತಿ. ಸದರೀಯವರು ಶಿವ್ಹಿಲ್ ಕೋರ್ಟ್‌ಗೆ ಸ್ವತಃ ಹೋಗತಕ್ಕ ಅವಶ್ಯವಿಲ್ಲೆಂತ ಮಾಫಿ ಇದ್ದ ಬಗ್ಗೆ ಸರಕಾರ ಠರಾವು ನಂಬರ ೬೬೬೪ ತಾರೀಖು ೨೦-೧೨-೧೯೦೫ ನೇದ್ದು ಆಗಿರುತ್ತದೆ.

ಆದ್ದರಿಂದ ಶ್ರೀ ಶ್ರೀ ಯವರ ಹತ್ತಿರ ಇರುವ ಹತ್ಯಾರಗಳ ಬಗ್ಗೆ ಸನ್ ೧೮೭೮ನೇ ಇಸವಿಯ ಇಂಡಿಯಾ ಅರ್ಮ್ಸ ಆಕ್ಟ ನಂಬರ್ ೧೧ನೇದರ ಕಲಂ ೧೩-೧೪-೧೫-೧೬ ನೇ ಪ್ರಕಾರ ಲೈಶನ್ಸ್ ಸದರಿಯವರಿಗೆ ಅವಶ್ಯಕತೆ ಇಲ್ಲ. ಕಾರಣ ಹತ್ಯಾರಗಳ ಬಗ್ಗೆ ಸದರಿಯವರಿಗೆ ಪ್ರತಿಬಂಧ ಆಗಬಾರದು. ಇದರಂತೆ ಶ್ರೀ॥ ಶ್ರೀ॥ ಗಳವರು ನಿಮ್ಮ ತಾಲ್ಲೂಕಿನಲ್ಲಿ ಮುಕ್ಕಾಂ ಮಾಡುವ ಯಾವತ್ತು ಗ್ರಾಮಗಳಲ್ಲಿ ಬಂದೋಬಸ್ತ ಇಡುವ ಬಗ್ಗೆ ಯಾವತ್ತು ಗ್ರಾಮಸ್ತರಿಗೆ ಹುಕುಂ ಕೊಡಬೇಕು. ಸದರಿಯವರ ಮರ್ಯಾದೆಗೆ ಬಿಲ್ಕೂಲ ವ್ಯತ್ಯಾಸ ಬರಕೊಡದಂತೆ ತಜವೀಜ ಇಡಬೇಕು.

ತಾರೀಖು ೧೪-೨-೧೯೧೦

SIGNED C. HUDSON
COLLECTOR AND DISTRICT MAGISTRATE

NO 2186 OF 1910

KOLHAPUR AND S.M.C POLITICAL AGENCY

CAMP MBA 6TH MAY 1910

MEMORANDUM

IN REPLY TO HIS PETITION NO 30 DATED THE 1ST MAY 1910, REQUESTING TO BE SUPPLIED WITH THE COPY OF THE POLITICAL AGENT'S INSTRUCTIONS TO THE AUTHORITIES OF THE STATES CONCERNED IN CONNECTION WITH THE PROPSED VISIT OF SHRI JAGADGURU GANGADHAR SWAMI MURUSAVIR MATH HUBLI TO KUNDGOL, LAXMESHWAR, GUDGERI SHIRATTI, MR SHANKARAPPA ACHAPPA TOPGI KARBHARI TO THE SWAMI IS INFORMED THAT THE INSTRUCTIONS FORM A PART OF OFFICIAL CORRESPONDENCE, AND THAT THEREFORE A COPY THEREOF CANNOT BE GIVEN TO HIM

Sd/ MAJOR
POLITICAL AGENT, KOLOPHOR
AND S.M COUNTRY

ವೀರಶೈವ ಮಠಗಳಲ್ಲಿ ಶಿವಸರ್ವೋತ್ತಮತ್ವವನ್ನು ಸಾಧಿಸುವಂತಹ ನಂದಿಧ್ವಜ ಮೆರವಣಿಗೆಯಲ್ಲಿ ತೆಗೆದುಕೊಂಡು ಹೋಗುವುದರಿಂದ ಅದ್ವೈತ, ವಿಶಿಷ್ಟಾದ್ವೈತ, ದ್ವೈತಮಠಗಳು ವಿರೋಧಿಸುತ್ತಾ ಇದ್ದವು. ಅಂತಹ ಗಲಾಟೆ ಸಂದರ್ಭದಲ್ಲಿ ಈ ದಾಖಲೆಗಳು ಹುಟ್ಟಿದವು. ಮುಂದಿನ ಜನಾಂಗಕ್ಕೆ ಸುಲಭವಾಗಿ ಲಭ್ಯವಾಗಲಿ ಅನ್ನುವ ಉದ್ದೇಶದಿಂದ ಆ ದಾಖಲೆಗಳನ್ನು ಮುದ್ರಣ ಮಾಡಿದ್ದು. ಅಧ್ಯಯನಕ್ಕೆ ದಾಖಲೆಗಳು ಲಭ್ಯವಾಗಿದ್ದು ನಮ್ಮಗಳ ಭಾಗ್ಯ.

ಆಸಂದಿ ಶ್ರೀ ರೇವಣಸಿದ್ಧೇಶ್ವರ ಮಠದ ದಾಖಲೆಗಳು

ಎಫ್.ಟಿ. ಹಳ್ಳಿಕೇರಿ*

ಹಾಲುಮತ ಗುರು ಪರಂಪರೆಯಲ್ಲಿ ರೇವಣಸಿದ್ಧೇಶ್ವರ-ಸಿದ್ಧರಾಮೇಶ್ವರ-ಅಮೋಘಸಿದ್ಧೇಶ್ವರ ಎಂಬ ಮೂರು ಸಂಪ್ರದಾಯಗಳಿವೆ. ಈ ಸಂಪ್ರದಾಯಗಳಲ್ಲಿ ರೇವಣಸಿದ್ಧೇಶ್ವರನು ಬಹುಮುಖ್ಯನಾಗಿದ್ದಾನೆ. ಈತನ ಮುಂದುವರಿಕೆಯಾಗಿ ಶಾಂತಮುತ್ತಯ್ಯ > ಶಾಂತೊಡೆಯರು > ಒಡೆಯರು ಈಗಲೂ ಹಾಲುಮತ ಸಮುದಾಯಕ್ಕೆ ಗುರುಗಳಾಗಿದ್ದಾರೆ. ಈ ಸಂಪ್ರದಾಯದ ಮಠಗಳು ಕರ್ನಾಟಕದಾದ್ಯಂತ ಕಂಡುಬರುತ್ತವೆ. ವಿಶೇಷವಾಗಿ ದಕ್ಷಿಣ ಕರ್ನಾಟಕದ ಚಿತ್ರದುರ್ಗ, ತುಮಕೂರು, ಚಿಕ್ಕಮಗಳೂರು, ಹಾಸನ ಮೊದಲಾದ ಜಿಲ್ಲೆಗಳಲ್ಲಿ ಅಧಿಕ ಸಂಖ್ಯೆಯಲ್ಲಿವೆ. ವಿಜಯಪುರ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನ ಸರೂರು ಈತನ ಮೂಲ ನೆಲೆ. ದಕ್ಷಿಣ ಕರ್ನಾಟಕದಲ್ಲಿ ಚಿಕ್ಕಮಗಳೂರು ಜಿಲ್ಲೆಯ ಆಸಂದಿ, ಶಿವನಿ, ತರೀಕೆರೆ, ಹಾಸನ ಜಿಲ್ಲೆಯ ಅಣತಿ, ಕೆಂಕೆರೆ, ಬಾಣಾವರ, ತುಮಕೂರು ಜಿಲ್ಲೆಯ ತುರುವೇಕೆರೆ, ಹೊನ್ನವಳ್ಳಿ, ಹಾಗಲವಾಡಿ, ಆಕ್ಕಿರಾಮಪುರ, ಬೆಳ್ಳಾವಿ ಮೊದಲಾದೆಡೆ ರೇವಣಸಿದ್ಧೇಶ್ವರ ಮಠಗಳಿವೆ. ಅವುಗಳಲ್ಲಿ ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲೂಕಿನ ಆಸಂದಿ ಗ್ರಾಮದ ರೇವಣಸಿದ್ಧೇಶ್ವರ ಮಠ ಅತ್ಯಂತ ಪುರಾತನವಾದುದು. ಆ ಮಠದ ಕೆಲವು ಆಯ್ದ ದಾಖಲೆಗಳ ಅವಲೋಕನ ಈ ಸಂಪ್ರಬಂಧದ ಉದ್ದೇಶವಾಗಿದೆ.

ಆಸಂದಿ, ಚಿಕ್ಕಮಗಳೂರು ಜಿಲ್ಲೆ ಕಡೂರು ತಾಲೂಕಿನ ಒಂದು ಗ್ರಾಮ.ತಾಲೂಕು ಕೇಂದ್ರದಿಂದ ೨೪ ಕಿ.ಮೀ. ಅಂತರದಲ್ಲಿರುವ ಈ ಗ್ರಾಮ ಹೊಯ್ಸಳರ ಕಾಲಕ್ಕೆ "ಆಸಂದಿನಾಡು" ಎಂಬ ಆಡಳಿತ ಪ್ರಾಂತ್ಯದ ಮುಖ್ಯ ಕೇಂದ್ರವಾಗಿತ್ತು.ಇಲ್ಲಿರುವ ಪಾರಂಪರಿಕ ದೇವಾಲಯಗಳು ಹಾಗೂ ಶಾಸನಶಿಲ್ಪಗಳು ಒಂದು ಕಾಲಕ್ಕೆ ಆಸಂದಿ ಗ್ರಾಮವು ಮಹಾಸಂಸ್ಥಾನವಾಗಿತ್ತು ಎಂಬುದನ್ನು ಸಾಕ್ಷೀಕರಿಸುತ್ತವೆ. ಇಲ್ಲಿರುವ ರೇವಣಸಿದ್ಧೇಶ್ವರ ಮಠವು ತುಂಬ ಪ್ರಾಚೀನವಾದುದು.ಪೂರ್ವಾಭಿಮುಖವಾಗಿರುವ ಗರ್ಭಗೃಹದ ಮೇಲೆ ಎತ್ತರವಾದ ಶಿಖರವಿದ್ದು ಪಂಚಕಳಶಗಳನ್ನು ಹೊಂದಿದೆ.ಗರ್ಭಗೃಹದ ಪೀಠದ ಮೇಲೆ ಲಿಂಗೋದ್ಭವ ರೇವಣಸಿದ್ಧೇಶ್ವರ ಶಿಲಾಮೂರ್ತಿ, ಅದರ ಮುಂದೆ ರೇವಣಸಿದ್ಧೇಶ್ವರ ಬೆಳ್ಳಿಯ ಉತ್ಸವ ಮೂರ್ತಿಯಿದೆ.ತ್ರಿಕಾಲ ಪೂಜೆ ನಡೆಯುತ್ತದೆ. ದಸರಾ ಹಬ್ಬದಲ್ಲಿ ಪಲ್ಲಕ್ಕಿ ಉತ್ಸವವು ನಡೆಯುತ್ತದೆ.ಸುಮಾರು ೧೨ ಒಡೆಯರ ಕುಟುಂಬಗಳು ಇಲ್ಲಿವೆ. ವರ್ಷಕ್ಕೆ ಒಬ್ಬರಂತೆ ರೇವಣಸಿದ್ಧೇಶ್ವರನಿಗೆ ಪೂಜೆ ಗುರುತನ ಇತ್ಯಾದಿಗಳನ್ನು ಸರದಿಯಂತೆ ನಿರ್ವಹಿಸಿಕೊಂಡು ಬರುತ್ತಿದ್ದಾರೆ.ಇಲ್ಲಿನ ಕೆಲವು ಒಡೆಯರ ಕುಟುಂಬಗಳು ಕಡೂರಿನಲ್ಲಿ ನೆಲೆಸಿವೆ. ಇವರಲ್ಲಿ ಸಿದ್ಧರಾಮಯ್ಯ ಒಡೆಯರ್ ಅವರು ತುಂಬ ಗಣ್ಯವ್ಯಕ್ತಿಗಳಾಗಿದ್ದರು.ಇವರು ಚಿಕ್ಕಮಗಳೂರು, ಹಾಸನ ಪ್ರದೇಶದ ಹಾಲುಮತ ಸಮುದಾಯದ ಸಾಮಾಜಿಕ ಜಾಗೃತಿಗಾಗಿ ಹಾಗೂ ಧಾರ್ಮಿಕ ಉನ್ನತಿಗಾಗಿ ಪರಿಶ್ರಮವಹಿಸಿರುವುದು ಇಲ್ಲಿನ ದಾಖಲೆಗಳು ಶ್ರುತಪಡಿಸುತ್ತವೆ. ಅಂಥ ಕೆಲವು ದಾಖಲೆಗಳನ್ನು ಈಗ ಅವಲೋಕಿಸೋಣ.

ದಾಖಲೆ- ೧

"ಶ್ರೀಮತ್ ಸಚ್ಚಿದಾನಂದ ಅವಿರಳ ಪರಂಜ್ಯೋತಿ ಸ್ವರೂಪಮಾನರಾದ ಹಾಲುಮಥ ಕ್ಷೀರಸಾಗರಕ್ಕೆ ಕಾರಣಕರ್ತರಾದ ಸರವೂರು ಶಾಖಕ್ಕೆ ಸೇರಿದ ಶಾಂತಮುತ್ತು ವಡೆಯರಾದ ಆಸಂದಿ ಸಿಂಹಾಸನ ಗುರುಗಳು ವಡೇರ ಭಾವಿಸಿದ್ಧಪ್ಪಸ್ವಾಮಿಗಳವರ ಮಕ್ಕಳು ವಡೇರ ಸಿದ್ರಾಮಪ್ಪ ಸ್ವಾಮಿಗಳವರ ಸನ್ನಿಧಿಯಲ್ಲಿ-

ಸನ್ ೧೯೪೧ ಇಸ್ವಿ ಜೂನ್ ತಾರೀಖು ೨೭ರಲ್ಲಿ ಚಿಕ್ಕಮಗಳೂರು ತಾಲ್ಲೋಕು ಲಕ್ಯದ ಹೋಬಳಿ ಶಿಂದಿಗೆರೆ ಗ್ರಾಮದ ದೊಡ್ಡಯಜಮಾನರು ಬುದ್ದಿವಂತರು ಕೋಲುಕಾರ ಬಳಗಸ್ತರು ಸಹ ಸೇರಿ ಗುರುಸನ್ನಿಧಾನಕ್ಕೆ ಪಿರ್ಯಾದು ಕೊಟ್ಟಿರುವುದೇನೆಂದರೆ ಇದೇ ನಮ್ಮ ಗ್ರಾಮದಲ್ಲಿರುವ ದಿಣ್ಣೇನಳ್ಳಿ ಕೆಂಚೇಗೌಡನ ಹೆಂಡತಿ ಮುಳ್ಳಮ್ಮನೆಂಬ ಗಂಡಸತ್ತ ವಿಧವೆಯು ಇಲ್ಲಿಗೆ ಹದಿನೈದು ದಿವಸದಲ್ಲಿ ಗಂಡುಮಗುವನ್ನು ಜನನವಾಗಿರುತ್ತಾಳೆಂದು ಪಿರ್ಯಾದು ಕೊಟ್ಟಿದ್ದರಿಂದ ಮೇಲ್ಕಂಡ ಗುರುಗಳು ಮತ್ತು ಚಿಕ್ಕಬ್ಯಾಡಗೆರೆ ಕಟ್ಟೆಮನೆ ಯಜಮಾನರು ವಸೊಂಭತ್ತು ಗಡಿ ತಿಮ್ಮನಳ್ಳಿದೊಡ್ಡಿ

* ಪ್ರಾಧ್ಯಾಪಕ, ಹಸ್ತಪ್ರತಿ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ವಿಜಯನಗರ ಜಿಲ್ಲೆ, ಮೊ. ೯೪೪೮೧ ೮೮೦೨೨

ಯಜಮಾನರು ಮತ್ತು ಶಿವಾಲದಳ್ಳಿ ಕುಲಾಚಾರದ ದೊಡ್ಡಯಜಮಾನರು ಮತ್ತು ಮಲ್ಲನಳ್ಳಿರಾಜ್ಯದ ದೊಡ್ಡಯಜಮಾನರು ಮತ್ತು ಲಕ್ಕೇನಳ್ಳಿ ಗುಡಿಕಟ್ಟಿನ ಯಜಮಾನರು ಇನ್ನು ಮುಂತಾದ ಕೋಲುಕಾರ ಬಳಗಸ್ತರು ಸಹ ತಾರೀಖು ೯-೭-೪೧ರಲ್ಲಿ ಶಿಂದಿಗೆರೆ ಗ್ರಾಮಕ್ಕೆ ಮಕ್ಕಾ ಮಾಡಿ ಸದರ್ರಿ ಗ್ರಾಮದ ದೊಡ್ಡಯಜಮಾನರು ಕೋಲುಕಾರ ಬಳಗಸ್ತರು ಸಹ ಸೇರಿಕ್ಕೊಂಡು ಅಪರಾಧಿಯಾದ ದಿಣ್ಣೇನಳ್ಳಿ ಕೆಂಚೇಗೌಡ್ನ ಹೆಂಡತಿ ವಿಧವೆ ಮುಳ್ಳಮ್ಮನನ್ನು ಕರೆ[ದು] ವಿಚಾರ ಮಾಡುವಲ್ಲಿ ಈ ರೀತಿ ಸ್ಟೇಟಮೆಂಟ್ ಕೊಟ್ಟಿರುತ್ತಾಳೆ.

ಶಿಂದಿಗೆರೆ ದಿಣ್ಣೇನಳ್ಳಿ ಕೆಂಚೇಗೌಡನ ಹೆಂಡತಿ ಮುಳ್ಳಮ್ಮನ ಪ್ರಮಾಣದ ಹೇಳಿಕೆ: ನಾನು ಸತ್ಯವಾಗಿ ಹೇಳುತ್ತೇನೆ. ನಾನು ಕುಂಟಯ್ಯನ ರಂಗೇಗೌಡನ ಮಗಳು. ನನ್ನನ್ನು ಇದೇ ಗ್ರಾಮದ ದಿಣ್ಣೇನಳ್ಳಿ ಭೈರೇಗೌಡನ ಮಗ ಕೆಂಚೇಗೌಡನಿಗೆ ಕೊಟ್ಟು ಲಗ್ನವಾಗಿತ್ತು. ಕೆಲವು ದಿವಸದ ಮೇಲೆ ನನ್ನ ಗಂಡ ಸತ್ತುಹೋದನು.ಅಂದರೆ ಯಿಲ್ಲಿಗೆ ೨೦ ವರ್ಷವಾಯಿತು.ಆ ಗಂಡ ಸತ್ತ ಲಾಗಾಯ್ತಿನಿಂದ ನನ್ನ ತೌರು ಮನೆಯಲ್ಲೇ ಇದ್ದೆ. ಯಿಲ್ಲಿಗೆ ೯-೧೦ನೇ ತಿಂಗಳಲ್ಲಿ ಚಿಕ್ಕಮಗಳೂರ ಕಡೆ ಗಿಡ್ಡೇನಳ್ಳಿಯವರು ಕುರಿಕತ್ತರಿಸುವುದಕ್ಕೆ ನಮ್ಮ ಮನೆಗೆ ಬಂದರು. ೨-೩ ದಿವಸ ನಮ್ಮ ಮನೆ ಕುರಿಗಳನ್ನೇ ಕತ್ತರಿಸಿ ಕೊಂಡು ನಮ್ಮ ಮನೆಯಲ್ಲೇ ಇದ್ದರು.ಈಗಿರುವಾಗ ಒಂದು ದಿವಸ ಕುರಿ ಕತ್ತರಿಸಿಕೊಂಡು ನಮ್ಮ ಮನೆಯಲ್ಲೇ ಊಟ ಮಾಡಿಕ್ಕೊಂಡು ರಾತ್ರೆ ನಮ್ಮ ಮನೆಯಲ್ಲೇ ಮಲಗಿದ್ದರು. ಆ ಬೀರಯೆಂಬುವವನು ಮಲಗಿಕೊಂಡಾಗ್ಗೆ ನನ್ನ ಮೈಕೈ ಮುಟ್ಟಿ ನನ್ನನ್ನು ಕೆಡಿಸಿದನು. ಮತ್ತು ೨-೩ ದಿವಸ ನಮ್ಮ ಮನೆಯಲ್ಲೇ ಇದ್ದನು. ಆ ಮೇಲೆ ಅವರ ಊರಿಗೆ ಹೊರಟು ಹೋದನು. ಅವನು ಹೊರಟು ಹೋದಾಗಿನಿಂದ ನಾನು ಹೊರಗಾಗದೆ ಬಸುರಾಗಿ ಗಂಡು ಮಗುವನ್ನು ಹಡದು ಕೊಂಡಿದ್ದೇನೆ. ಗುರುಬಳಗಸ್ತರು ಬಂದು ಕೇಳಿದ್ದಕ್ಕೆ ಆ ಕುರಿ ಕತ್ತರಿಸುವುದಕ್ಕೆ ಬಂದ ಬೀರೇಗೌಡನೇ ನನ್ನನ್ನು ಬಸುರು ಮಾಡಿದನೆಂದು ಕೈಪತ್ತು ಕೊಟ್ಟಿರುತ್ತೇನೆ. ಇಷ್ಟೆ ನನ್ನ ಹೇಳಿಕೆ. ಮೇಲೆ ಓದಿದ್ದನ್ನು ಕೇಳಿ ಕೆಳಗೆ ರುಜು ಮಾಡಿರುತ್ತೇನೆ. (ಹೆಬ್ಬಟ್ಟಿನ ಸಹಿ) ದಿಣ್ಣೇನಳ್ಳಿ ಕೆಂಚೆಗೌಡನ ಹೆಂಡತಿ ಮುಳ್ಳಮ್ಮನ ಯಡಗೈ ಹೆಬ್ಬಟ್ಟಿನ ಗುರ್ತಿನ ರುಜುವಾಗೆ ರೇವಣ್ಣಯ್ಯನ ಬರಹಾ॥

ದಾಖಲೆ- ೨

"ಶ್ರೀಮತ್ ಸಚ್ಚಿದಾನಂದ ಅವಿರಳ ಪರಂಜ್ಯೋತಿ ಸ್ವರೂಪಮಾನರಾದ ಹಾಲುಮಥ ಕ್ಷೀರಸಾಗರಕ್ಕೆ ಕಾರಣಕರ್ತರಾದ ಸರವೂರು ಶಾಖಕ್ಕೆ ಸೇರಿದ ಶಾಂತಮುತ್ತು ವಡೆಯರಾದ ಆಸಂದಿ ಸಿಂಹಾಸನದ ಗುರುಗಳು ವಡೇರ ಭಾವಿಸಿದ್ಧಪ್ಪ ಸ್ವಾಮಿಗಳವರ ಮಕ್ಕಳು ವಡೇರ ಸಿದ್ರಾಮಪ್ಪ ಸ್ವಾಮಿಗಳವರ ಸನ್ನಿಧಿಯಿಂದಾ.............

ಸನ್ ೧೯೪೧ನೇ ಯಿಸ್ವಿ ಜುಲೈ ತಾರೀಖು ೧೦ರಲ್ಲಿ ಚಿಕ್ಕಮಗಳೂರು ತಾಲ್ಲೋಕು ಲಕ್ಯದ ಹೋಬಳಿ ಕಂದಿಗೆರೆ ಗ್ರಾಮದಲ್ಲಿರುವ ದಿಣ್ಣೇನಳ್ಳಿ ಕೆಂಚೇಗೌಡ್ನ ಹೆಂಡತಿ ಅಪರಾದಿ ಮುಳ್ಳಮ್ಮನೆಂಬ ಗಂಡಸತ್ತ ವ್ಯದವೆ[ವಿಧವೆ]ಯು ಗರ್ಭಿಣಿಯಾಗಿದ್ದರಿಂದ ಮೇಲಕಂಡ ತಪ್ಪಿತಸ್ಥಳಿಗೆ ರಾಜ್ಯದ ದೊಡ್ಡಿಯಜಮಾನರುಗಳು ಮತ್ತು ಗ್ರಾಮದ ದೊಡ್ಡಿಯಜಮಾನರು ಬಳಗಸ್ತರು ಸಹ ಸೇರಿ ಮೇಲ್ಕಂಡ ಗುರುಗಳು ಸಹ ಸೇರಿ ಕುಲದ ಊಟವನ್ನು ಗುರುವಿನ ದಂಡವನ್ನೂ ತೆಗೆದುಕ್ಕೊಂಡು ಮುಳ್ಳಮ್ಮನಿಗೆ ಶುದ್ಧ ನಿರೂಪವನ್ನು ಕೊಟ್ಟಿರುತ್ತೇ,

(ಹೆಬ್ಬೆಟ್ಟಿನ ಸಹಿ) -ಒಂದೂರುದಾಕೆ ಕಾಳಯ್ಯನ ಸೊಪ್ಪಲಲ್ಲಿರುವ ದೊಡ್ಡ ಲಕ್ಕೇಗವಡನ ಹೆಬ್ಬೆಟ್ಟಿನ ಗುರುತಿನ ರುಜುವಿಗೆ ರೆಮ್ಮನಹಳ್ಳಿ ಚಂನ್ನೇಗೌಡನ ಬರಹಾ॥

(ಹೆಬ್ಬೆಟ್ಟಿನ ಸಹಿ) – ಬೆಳವಾಡಿದಾಕೆಲೆ ಕಲ್ಲಹಳ್ಳಿಕೆರೆ ಹೆಬ್ಬಟ್ಟಿನ ಗುರುತಿನ ರುಜುವಿಗೆ ತಿಮ್ಮನಹಳ್ಳಿ ಚನ್ನೇಗೌಡ್ನನ ಬರಹ॥

(ಹೆಬ್ಬೆಟ್ಟಿನ ಸಹಿ) – ಕಾರೇಗೌಡನ ಯಡದೆಯಬ್ಬೆಟ್ಟಿನ ಗುರ್ತಿನ ರುಜುವಿಗೆ ಕವಲದಹಳ್ಳಿ ಬಸವೇಗವಡನ ಬರಹ॥

(ಹೆಬ್ಬೆಟ್ಟಿನ ಸಹಿ) – ಶಿಂದೇಗೌಡನ ಯಡದ ಹೆಬ್ಬೆಟ್ಟಿನ ಗುರುತಿನ ರುಜುವಿಗೆ ಸಣ್ಣಗೌಡನ ರುಜುವು । ತಿಮ್ಮನಹಳ್ಳಿ ಚನ್ನೇಗೌಡ.......

ದಾಖಲೆ – ೩

ತಾರೀಖು ೧೪/೬/೧೯೩೬
ದೊಡ್ಡಭಾಗನಹಳ್ಳಿ

"ಶ್ರೀಮತ್ ಸಚ್ಚಿದಾನಂದ ಅವಿರಳ ಪರಂಜ್ಯೋತಿ ಸ್ವರೂಪಮಾನರಾದ ಹಾಲುಮಥ ಕ್ಷೀರಸಾಗರಕ್ಕೆ ಕಾರಣಕರ್ತರಾದ ಸರವೂರು ಶಾಖಕ್ಕೆ ಸೇರಿದ ಶಾಂತಮುತ್ತು ವಡೆಯರಾದ ಆಸಂದಿ ಸಿಂಹಾಸನದ ಗುರುಗಳು ವಡೇರ ಭಾವಿಸಿದ್ಧಪ್ಪ ಸ್ವಾಮಿಗಳವರ ಮಕ್ಕಳು ವಡೇರ ಸಿದ್ರಾಮಪ್ಪ ಸ್ವಾಮಿಗಳ ಸನ್ನಿಧಿಯಿಂದಾ

ಸನ್ ಸಾವಿರದಾ ವಂಭೈನೂರಾ ಮೂವ್ವತ್ತಾರನೇ ಇಸ್ವಿ ಜೂನ್ ತಾರೀಖು ಹದಿನಾಲ್ಕರಲ್ಲಿ ದೊಡ್ಡಭಾಗನಹಳ್ಳಿ ಚಿಕ್ಕಭಾಗನಹಳ್ಳಿ, ಹ್ಯಾರಣೆ, ಹೂಲಿಯಳ್ಳಿ ಈ ಗ್ರಾಮಗಳ ಹಾಲುಮಥ ಭಕ್ತಾದಿಗಳೆಲ್ಲ ಗುರುಗಳ ಸನ್ನಿಧಿಯಲ್ಲಿ ದೊಡ್ಡಭಾಗನಹಳ್ಳಿಗೆ ಸೇರಿ ಮೀಟಿಂಗ ಮಾಡಿ ದೊಡ್ಡಭಾಗನಹಳ್ಳಿಗೆ ಕಟ್ಟೆಮನೆಯನ್ನು ಸ್ಥಾಪನೆಯನ್ನು ಮಾಡಿ ಯಿದಕ್ಕೆ ಕಟ್ಟೆಮನೆಗೌಡ ಮಾದಿಹಳ್ಳಿಗೌಡನ ಮಗ ಮಾದಿಹಳ್ಳಿಗೌಡ ವುರುಫ್ ಬುಡ್ಡೇಗೌಡ ಮತ್ತು ಹೂಲಿಯಳ್ಳಿ ದ್ಯಾವೆಗೌಡನ ಮಗ ಕೆಂಪೆಗೌಡ ಈ ಕಟ್ಟೆಗೆ ಯಜಮಾನ ಈ ಕಟ್ಟೆಗೆ ಕಟ್ಟೆಗೌಡನು ಯಜಮಾನನು ಸೇರಿ ಮಥ ಸಂಬಂಧವಾದ ಮಾತುಗಳು ಬಂದದ್ದೇಯಾದರೆ ಈ ನಾಲ್ಕು ಗ್ರಾಮಗಳನ್ನು ಸೇರಿಸಿಕೊಂಡು ವಿಚಾರವನ್ನು ಮಾಡಿ ಗುರುಗಳಿಗೆ ಕಾಗದವನ್ನು ಬರೆಯತಕ್ಕದ್ದು. ಈ ನಾಲ್ಕು ಗ್ರಾಮದ ಬಳಗಸ್ತರೆಲ್ಲಾ ಸೇರಿ ವಪ್ಪಿ ಮೇಲ್ಕಂಡ ಯಜಮಾನರಿಗೆ ನಾವುಗಳೆಲ್ಲಾ ಇವರ ಹೇಳಿಕೆಯಂತೆ ನಡೆದುಕೊಳ್ಳುತ್ತೇವೆ. ಮತ್ತು ಈ ರಾಜ್ಯದ ಮೇಲೆ ಈ ಮಥ ಸಂಬಂಧವಾದ ವ್ಯಾಜ್ಯಗಳು ಬಂದಿದ್ದೆಯಾದರೆ ಯಾವ ಆಚಾರ ವಿಚಾರ ಬಾಬಿಗೆ ಯಾವುದಾದರೂ ರಾಗಾದಿಗಳು ಬಂದದ್ದೇಯಾದರೆ ನಾವು ಬಳಗದವರೆಲ್ಲಾ ಸಹ ಹೋಗಬೇಕಾಗುತ್ತೆ. ಈ ರೀತಿಯಾಗಿ

ನಾವುಗಳೆಲ್ಲಾ ಒಪ್ಪಿ ರುಜು ಮಾಡಿರುತ್ತೇವೆ."

– ಶ್ರೀ ಗುರುಗಳು ಸಿದ್ಧರಾಮಯ್ಯ

– ಕಟ್ಟೆಮನೆ ಯಜಮಾನ ಹೂಲಿಹಳ್ಳಿ ಕೆಂಪೆಗೌಡನ ರುಜು

– (ಹೆಬ್ಬಟ್ಟಿನ ದಹಿ) –ಕಟ್ಟೆಮನೆಗೌಡ ಮದಿಹಾಳಗೌಡನ ಮಗ ವುರುಫ್ ಬುಡ್ಡೆಗೌಡರ ಎಡದ ಹೆಬ್ಬೆಟ್ಟಿನ ಗುರುತಿನ ರುಜುವಿಗೆ ಹ್ಯಾರನೆ ಟಿ. ಮದಪ್ಪಗೌಡರ ಮಗ ಯಮ್ ಕಂಮ್ಮೈಯನ ಬರಹಾ

– ದೊಡ್ಡಭಾಗಹಳ್ಳಿ ದೊಡ್ಡಗೌಡನ ಮಗ ನಿಂಗೆಗೌಡನ ರುಜುವು

– ದದ್ದೆಗೌಡನ ಯಡದ ಹೆಬ್ಬೆಟ್ಟಿನ ಗುರುತಿನ ರುಜುವಿಗೆ ಕೆಂಪೆಗೌಡನ ಬರಹ

– ಹೂಲಿಹಳ್ಳಿಕೊಪ್ಪಲನಲ್ಲಿ ಯಿರುವ ಕಾಳೆಗೌಡನ ಯಡದ ಹೆಬ್ಬಟ್ಟಿನ ಗುರುತಿನ ರುಜುವಿಗೆ

– ಹಂಡೆಗೌಡನ ಯಡದ ಹೆಬ್ಬಟ್ಟಿನ ಗುರ್ತಿನ ರುಜುವಿಗೆ

– ಹೂಲಿಹಳ್ಳಿಕೊಪ್ಪಲನಲ್ಲಿ ಯಿರುವ ನಿಂಗೆಗೌಡನ ಯಡದ ಹೆಬ್ಬಟ್ಟಿನ ಗುರುತಿನ ರುಜುವು

– ಚಿಕ್ಕಭಾಗನಹಳ್ಳಿ ಜುಜ್ಜೆಗೌಡನ ಯಡದ ಹೆಬ್ಬಟ್ಟಿನ ಗುರ್ತಿನ ರುಜುವಿಗೆ ಹೂಲಿಹಳ್ಳಿ ಕೆಂಪೆಗೌಡನ ಬರಹ

– ಹ್ಯಾರನೆ ಟಿ. ಮಾದಪ್ಪಗೌಡರ ಮಗ ಕಂಮ್ಮೈಯಗೌಡರ ರುಜುವು

– ಹೂಲಿಹಳ್ಳಿ ದ್ಯಾವೆಗೌಡ ರುಜುವು

– ಮತಳ್ಳಗೌಡನ ರುಜುವು

– ಕೋಲುಕಾರ ಮಾಸ್ತಗೌಡನ ಯಡಗೈ ಹೆಬ್ಬಟ್ಟಿನ ಗುರುತಿನ ರುಜುವಿಗೆ ರೇವಣಯ್ಯನವರ ಬರಹ

– ಹೊಟ್ಟಿಗೌಡನ ಮಗ ದೊಣ್ಣೆಗೌಡನ ಯಡಗೈ ಹೆಬ್ಬಟ್ಟಿನ ಗುರುತಿನ ರುಜುವಿಗೆ ಗುರುಗಳು ರೇವಣಯ್ಯನವರ ಬರಹ

– ಚಿಕ್ಕೇಗೌಡನ ಮಗ ನಿಂಗೇಗೌಡನ ಯಡಗೈ ಹೆಬ್ಬಟ್ಟಿನ ಗುರ್ತಿನ ರುಜುವಿಗೆ ಗುರುಗಳು ರೇವಣಯ್ಯನವರ ಬರಹ

– ಸೂಳಿ ನಿಂಗೇಗೌಡ್ನ ಮಗ ಜವರೇಗೌಡನ ಯಡಗೈ ಹೆಬ್ಬೆಟ್ಟಿನ ಗುರ್ತಿನ ರುಜುವಿಗೆ ಗುರುಗಳು ರೇವಣಯ್ಯನವರ ಬರಹ

– ಅಜ್ಜೇಗೌಡನ್ನ ಮಗ ಜವರೇಗೌಡ್ನ ಯಡಗೈ ಹೆಬ್ಬೆಟ್ಟಿನ ಗುರ್ತಿನ ರುಜುವಿಗೆ ಗುರುಗಳು ರೇವಣಯ್ಯನವರ ಬರಹ

– ಮಾದಿಹಳ್ಳಿಗೌಡನ ಮಗ ಗಿರಿಗೌಡನ ಯಡಗೈ ಹೆಬ್ಬಟ್ಟಿನ ಗುರ್ತಿನ ರುಜುವಿಗೆ ರೇವಣಯ್ಯನವರ ಬರಹ

– ಮಾದಿಹಳ್ಳಿ ಗಿರಿಗೌಡೆನ ಮಗ ದೊಡ್ಡ ಗಿರಿಗೌಡ್ನ ಯಡದ ಹೆಬ್ಬೆಟಿನ ಗುರ್ತಿನ ರುಜುವಿಗೆ ರೇವಣಯ್ಯನವೆ ಬರಹ

– ಜವರೇಗೌಡೆನ ಮಗ ಸಿದ್ಧೇಗೌಡ್ನ ಯಡಗೈ ಹೆಬ್ಬೆಟ್ಟಿನ ಗುರ್ತಿನ ರುಜುವಿಗೆ ಗುರುಗಳು ರೇವಣಯ್ಯನವರ ಬರಹ

- ಜವರೆಗೌಡರ ಮಗ ನಿಮಗೇಗೌಡರ ರುಜುವು
- ಪುಟ್ಟೇಗೌಡನ ಮಗ ಮಾದಳ್ಳಿಗೌಡನ ರುಜು
- ಸಿದ್ಧೇಗವಡನ ಮಗ ಸಿದ್ಧೇಗೌಡನ ರುಜುವು
- ಕೋಲುಕಾರ ಗಂಗೇಗೌಡ್ನ ಯಡಗೈ ಹೆಬ್ಬಟ್ಟಿನ ಗುರ್ತಿನ ರುಜುವಿಗೆ ಗುರುಗಳು ರೇವಣಯ್ಯನವರ ಬರಹ
- ಕರೇಗೌಡ್ನ ಮಗ ದ್ಯಾವೇಗೌಡರ ಯಡಗೈ ಹೆಬ್ಬಟ್ಟಿನ ಗುರ್ತಿನ ರುಜುವಿಗೆ ರೇವಣಯ್ಯನವರ ಬರಹ
- ಹೂಲಿಹಳ್ಳಿ ಕೋಲುಕಾರ ಕೆಂಗೆಗೌಡನ ಮಗ ಮರಿಗೌಡನ ರುಜುವು
- ಹೂಲಿಹಳ್ಳಿ ದೇವೇಗೌಡ ವುರುಫ್ ಎಕ್ಕೇಗೌಡ ಯಡಗೈ ಹೆಬ್ಬಟ್ಟಿನ ರುಜುವು
- ಹೂಲಿಹಳ್ಳಿ ಹಿಂಡೆಗೌಡ್ನ ಯಡಗೈ ಹೆಬ್ಬೆಟ್ಟಿನ ಗುರ್ತಿನ ರುಜು
- ಹೂಲಿಹಳ್ಳಿ ಪುಟ್ಟಜ್ಜೆಗೌಡನ ಯಡಗೈ ಹೆಬ್ಬೆಟ್ಟಿನ ರುಜು

ದಾಖಲೆ – ೪

ಶ್ರೀಮನ್ ಮಹಾ ಆಸಂದಿ ಸಂಸ್ಥಾನದ ಗುರುಗಳು ಶ್ರೀ ಸಣ್ಣಸಿದ್ಧಪ್ಪ ಒಡೆಯರು, ಸಿದ್ರಾಮಯ್ಯ ಒಡೆಯರು, ಬಸಪ್ಪ ಒಡೆಯರು ಮತ್ತು ಹನ್ನೆರಡು ಗುಡಿಕಟ್ಟು, ಹದಿನೆಂಟು ಹರಿವಾಣ, ಎರಡು ಕಟ್ಟೆಮನೆ ಯಜಮಾನರುಗಳ ಅಧಿಕಾರ ಸ್ಥಾನದಿಂದಾ –

ಹಾಸನ ಮತ್ತು ಚಿಕ್ಕಮಗಳೂರು ಡಿಸ್ಟ್ರಿಕ್ಟು (ಹಾಲುಮತ) ಕುರುಬ ಜನಾಂಗದ ಮಹಾಮಂಡಲಿಯವರಿಗೆ ಈ ಮೂಲಕ ಪ್ರಸಿದ್ಧಪಡಿಸುವುದೇನೆಂದರೆ –

ಮತ ಬಾಂಧವರೇ, ಕಡೂರಿನಲ್ಲಿರುವ ಬಾವಿಸಿದ್ಧಯ್ಯ ಒಡೆಯರ ಮಕ್ಕಳು ಸಿದ್ರಾಮಪ್ಪ ಒಡೆಯರ ಮೇಲೆ ಆಸಂದಿ ಕೋಲುಕಾರ ಮರುಳನ ಹೆಂಡತಿ ಲಕ್ಕಮ್ಮ ಎಂಬುವಳು ಚಿಕ್ಕಮಗಳೂರು ಕೋರ್ಟಿನಲ್ಲಿ ತಾ.೭–೧೨–೧೯೧೪ರ ಮರ್ಸ್ಕಂ ಕ್ರಿಮಿನಲ್ ಕೇಸು ನಂಬರು ೨೧ರಲ್ಲಿ ಅಕ್ರಮ ಸ್ತ್ರೀ ಸಂಘದ ಮೊಕದ್ದಮೆ ನಡೆಸಿ ಸದರಿ ಸಿದ್ರಾಮಪ್ಪ ಒಡೆಯರು ಲಾಕೋಫನ್ನು ಅನುಭವಿಸಿದ್ದರ ಮೇರೆ ಇವರನ್ನು ಮಠದ ಹಕ್ಕಿನಿಂದ ವಜಾ ಮಾಡಿರುತ್ತೇವೆ.

ಆದ್ದರಿಂದ ಸದರಿ ಸಿದ್ರಾಮಪ್ಪ ಒಡೆಯರು ಆಸಂದಿ ಮಠಕ್ಕೆ ಅಧಿಕಾರಿಗಳಾಗಿಲ್ಲ. ತಮ್ಮಗಳ ಸ್ವಪ್ರಯೋಜನಕ್ಕಾಗಿ ಆಸಂದಿ ಸಿಂಹಾಸನದ ಅಧಿಕಾರಿಗಳಂತ ರಿಕಾರ್ಡುಗಳಲ್ಲಿ ಒಕ್ಕಣಿಸಿಕೊಂಡು ಭಕ್ತಾದಿಗಳ ಮೇಲೆ ಕಪ್ಪಕಾಣಿಕೆ ಹಾಸಲು ಮೀಸಲು, ದಂಡವನ್ನು ಮಿತಿಮೀರಿ ವಸೂಲ್ ಮಾಡಿಕೊಂಡು ಕಡೂರಲ್ಲಿರುವ ತಮ್ಮ ಕುಟುಂಬ ಪೋಷಣೆಗೆ ಉಪಯೋಗಿಸಿಕೊಳ್ಳುತ್ತಿರುತ್ತಾ ರೆಂಬ ವರ್ತಮಾನ ತಿಳಿಯಲಾಗಿದೆ.

ಮಠದ ಯಾವ ಅಧಿಕಾರವೂ ಇಲ್ಲದಿರುವ ಸಿದ್ರಾಮಪ್ಪ ಒಡೆಯರು ನಡೆಸುವ ಆಚಾರ ವ್ಯವಹಾರಗಳು ಬದ್ಧವೆಂದು ಯಾರೂ ನಂಬಲಾಗದು.ಮತ್ತು ಇವರಿಂದ ಯಾವ ವಿಧವಾದ ಆಚಾರ, ವಿಚಾರ, ಹವಿ, ಕವಿಗಳನ್ನು ತೀರಿಸಿಕೊಳ್ಳಕೂಡದು.ಕಪ್ಪಕಾಣಿಕೆ ಸಹ ಕೊಡಕೂಡದೆಂದು ಈ ಮೂಲಕ ಪ್ರಸಿದ್ಧಪಡಿಸಲಾಗಿರುತ್ತೆ.

ಇವರ ಮೇಲೆ ನಡೆದಿರುವ ರಿಕಾರ್ಡಿನ ಮೂಲ ಅಂಶವನ್ನು ನೋಡಲು ಅಪೇಕ್ಷಿಸುವರು ಮೇಲ್ಕಂಡ ನಮ್ಮ ಆಸಂದಿ ಮಠಕ್ಕೆ ಬಂದು ನೋಡಬಹುದೆಂದು ಈ ಮೂಲಕ ಸೂಚಿಸಿರುತ್ತೇವೆ.

ಮಠದ ಯಜಮಾನರುಗಳು –

೧. ಮಠದ ಗೌಡ ರಾಮೇಗೌಡರು
೨. ಮಠದ ಧರ್ಮದರ್ಶಿ ಬಿ. ತಿಮ್ಮಯ್ಯನವರು, ಕಡೂರು
೩. ಹಿರೇನಲ್ಲೂರು ಗುಡಿಕಟ್ಟಿನ ದೊಡ್ಡಿಗೌಡ, ಈರೇಗೌಡರು
೪. ಪೂಜಾರಿ ಹನುಮಪ್ಪ
೫. ಗರ್ಜೆ ಗುಡಿಕಟ್ಟಿನ ಯಜಮಾನ್ ದೀವಿಟಿಗಪ್ಪ
೬. ಮುಗಳಿಕಟ್ಟೆ ಯಜಮಾನ್ ಪ. ಹೋಬಳಿ ಗೌಡರು

೭. ಪುರದ ಕೋಡಿಹಳ್ಳಿ ಗುಡಿಕಟ್ಟಿನ ಯಜಮಾನ್ ಗಿರಿಗೌಡ್ರು

೮. ಹಿರಿಯೂರು ಗುಡಿಕಟ್ಟಿನ ಯಜಮಾನ್ ಸಿದ್ರಾಮಪ್ಪ

೯. ಮರವಂಜಿ ಗುಡಿಕಟ್ಟಿನ ಯಜಮಾನ್ ಹುಲಿಯಪ್ಪ

೧೦. ಓಚಿಹಳ್ಳಿ ಗುಡಿಕಟ್ಟಿನ ಯಜಮಾನ್ ಥೇ[ರಮನ್]॥ ದಾಸಪ್ಪ

೧೧. ಯಗಟಿ ಗುಡಿಕಟ್ಟಿನ ಯಜಮಾನ್ ಜಡಿಯಪ್ಪ

೧೨. ಮಲಿಯಮ್ಮನ ಗುಡಿಕಟ್ಟಿನ ದೊಡ್ಡಿಗೌಡ ಬಸಪ್ಪ

೧೩. ಅಂಬ್ಳಳ್ಳಪ್ಪನ ಗುಡಿಕಟ್ಟಿನ ಯಜಮಾನ್ ಲಿಂಗನಾಯ್ಕನ ಹನುಮಯ್ಯ

ಮಠದ ಗುರು ಪೀಠಾಧಿಕಾರಿಗಳು

೧. ಸಣ್ಣಸಿದ್ಧಪ್ಪ ಒಡೆಯರು

೨. ಸಿದ್ರಾಮಯ್ಯ ಒಡೆಯರು, ರೇವಣಯ್ಯನವರ ಮಕ್ಕಳು

೩. ಬಸಪ್ಪ ಒಡೆಯರು

ದಾಖಲೆ – ೫

ಶ್ರೀ ರೇಣುಕಸಿದ್ಧೇಶ್ವರ ಪ್ರಸನ್ನ

ಮನ್ನಾ ಪತ್ರಿಕೆ

"ಶ್ರೀಮತ್ ಸಚ್ಚಿದಾನಂದ ಅವಿರಳ ಪರಂಜ್ಯೋತಿ ಸ್ವರೂಪಮಾನರಾದ ಹಾಲುಮತ ಕ್ಷೀರಸಾಗರಕ್ಕೆ ಕಾರಣಕರ್ತರಾದ ಸರವೂರು ಶಾಖಕ್ಕೆ ಸೇರಿದ ಶಾಂತಮುತ್ತುವಡೆಯರಾದ ಆಸಂದಿ ಸಿಂಹಾಸನದ ಗುರು ವಡೇಯರ್ ಭಾವಿಸಿದ್ಧಪ್ಪ ಸ್ವಾಮಿಗಳವರ ಮಕ್ಕಳು ಸಿದ್ರಾಮಪ್ಪ ವಡೆಯರ ಸನ್ನಿಧಿಯಿಂದಾ.............

ಹಾಸನದ ಡಿಸ್ಟ್ರಿಕ್ಟಿನಲ್ಲಿರುವ ಹಾಲುಮತದ ಕುರುಬರ ಜನಾಂಗದ ಮಹಾಮಂಡಲಿಯವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ –

ನಮ್ಮ ಸವಾರಿಯು ತಾ॥ ೧-೪-೧೯೫೦ನೇ ಗುರುವಾರ ಅರಕಲಗೂಡು ತಾ॥ ಕ॥ ಹೋ॥ ನೆಲಮನೆ ಗ್ರಾಮಕ್ಕೆ ದಯಮಾಡಿಸಿ ಇದೇ ಗ್ರಾಮದ ಬಿಳಿಗೇಗೌಡನ ಹೆಂಡತಿ ಸಣ್ಣಮ್ಮನೆಂಬುವಳು ಆಲೂರು ತಾ॥ ಕುಂದೂರು ಹೋ॥ ಮಡಿಕೇಕ್ಯಾತನಹಳ್ಳಿ ಗ್ರಾಮದ ಕಂಬಳಿ ಕುರುಬರಾದ ರಾಮೇಗೌಡ ಮತ್ತು ಕರೀಗೌಡ ಇವರ ಮಗನಿಗೆ ಹೆಣ್ಣು ಕೊಟ್ಟ ವಿಷಯದಲ್ಲಿ ಬಂದ ಫಿರ್ಯಾದನ್ನು ನಾವುಗಳು ಮತ್ತು ನಾಡುಗೌಡರಾದ ಅಣ್ಣೇನಹಳ್ಳಿ ಆರ್. ರಾಮೇಗೌಡರು ಮತ್ತು ಇದೇ ತಾಲ್ಲೋಕಿನ ಹಾಲುಮತದ ಸಾವಿರದವರೂ ಸೇರಿ ಈ ನ್ಯಾಯವನ್ನು ವಿಮರ್ಶೆ ಮಾಡಿದಾಗ ಇದೇ ನೆಲಮನೆ ಗ್ರಾಮದ ಹುಣಿಸೀಗೌಡ, ಮರೀಗೌಡ, ನಾಗೇಗೌಡ ಮತ್ತು ಸಣ್ಣಮ್ಮ ಈ ನಾಲ್ಕು ಜನಗಳು ಕಂಬಳಿಕುರುಬರಾದ ಮಡಿಕೆಕ್ಯಾತನಹಳ್ಳಿ ಗ್ರಾಮದ ರಾಮೇಗೌಡ ಮತ್ತು ಕರೀಗೌಡ ಇವರ ಪಂಗಡಕ್ಕೆ ನಾವೂ ಸೇರಿಕೊಳ್ಳುತ್ತೇವೆಂದು ತಿರಸ್ಕಾರ ಮಾಡಿ ಹೋದ್ದರಿಂದ ಈ ಮೇಲ್ಕಂಡ ನಾಲ್ಕು ಜನಗಳಿಗೂ ಸಹ ಗುರುಮಠದಿಂದ ಮನ್ನಾ ಪತ್ರಿಕೆ ನಡೆದು ಇವರುಗಳನ್ನು ಬಿಟ್ಟಿರುತ್ತೆ. ಈ ನಾಲ್ಕು ಜನಗಳನ್ನು ಹಾಲುಮತದವರು ಬಳಿಕೆ ಭೋಜನಕ್ಕೆ ಸೇರಿಸಕೂಡದೆಂದು ಈ ಮೂಲಕ ತಿಳಿಸಿದೆ.

ಗುರುಪೀಠ ಸಿದ್ಧರಾಮಪ್ಪ ವಡೆಯರು ಕಡೂರು

ಆರ್. ರಾಮೇಗೌಡ, ಅಣ್ಣೇನಹಳ್ಳಿ ನಾಡುಗೌಡ

ಆಸಂದಿ ಮಠದ ಇಂಥ ದಾಖಲೆಗಳಿಂದ ತಿಳಿದು ಬರುವ ಸಂಗತಿಗಳನ್ನು ಹೀಗೆ ಕ್ರೋಢೀಕರಿಸಬಹುದು.

೧. **ಸಾಮಾಜಿಕ ವ್ಯವಸ್ಥೆ:** ಹಾಲುಮತ ಸಮುದಾಯದ ಗುರುಗಳು ಹಾಗೂ ಪ್ರಮುಖರು ಸೇರಿ ಸಮುದಾಯವನ್ನು ಸರಿಯಾದ ದಾರಿಯಲ್ಲಿ ಮುನ್ನಡೆಸಿಕೊಂಡು ಹೋಗಬೇಕೆನ್ನುವ ನಿಟ್ಟಿನಲ್ಲಿ ಈಗಿನ ಮಂತ್ರಿಮಂಡಲದ ರೀತಿಯಲ್ಲಿ "ಗುಡಿಕಟ್ಟು" ಎಂಬ ಒಂದು ಧಾರ್ಮಿಕ ಸಂಸ್ಥೆಯನ್ನು ಹುಟ್ಟುಹಾಕಿರುವರು. ಒಂದು ರೀತಿಯಲ್ಲಿ ಇದು ಪ್ರಜಾಪ್ರಭುತ್ವದ

ತಳಹದಿ ಮತ್ತು ಸಹಕಾರ ತತ್ವದ ಆಧಾರದ ಮೇಲೆ ನಡೆಯುತ್ತಿರುತ್ತದೆ.ದೊಡ್ಡಯಜಮಾನರು, ಬುದ್ಧಿವಂತರು, ಕೋಲುಕಾರರು ಬಳಗಸ್ತರು ಎಂಬ ಹುದ್ದೆಗಳು, ಆ ಹುದ್ದೆಗಳಿಗೆ ಅನ್ವಯವಾಗುವ ಹಾಗೇ ಸಮುದಾಯದಲ್ಲಿಯೇ ಜನರನ್ನು ಆಯ್ಕೆ ಮಾಡುತ್ತಿದ್ದಿರಬಹುದು.

* ಗುರುಗಳು (ಒಡೆಯರು) : ಕುರುಬರ ಸಾಮಾಜಿಕ ಮತ್ತು ಧಾರ್ಮಿಕ ಕಾರ್ಯಕ್ರಮಗಳಲ್ಲಿ ಒಡೆಯರು ಅಂದರೆ ಕುರುಬರ ಗುರುಗಳಿಗೆ ಅಗ್ರಸ್ಥಾನ. ಇವರ ನೇತೃತ್ವ, ಸನ್ನಿಧಾನ, ಸಾನಿಧ್ಯದಲ್ಲಿಯೇ ಎಲ್ಲ ಕಾರ್ಯಕ್ರಮಗಳು ಜರುಗುತ್ತಿದ್ದವು. ನ್ಯಾಯ-ನೀತಿ, ವಾದ-ವಿವಾದವನ್ನು ಅನುಲಕ್ಷಿಸಿ ತೀರ್ಮಾನವನ್ನು ಘೋಷಿಸುವುದು ಇವರ ಕರ್ತವ್ಯವಾಗಿದೆ.

* ಯಜಮಾನ - ದೊಡ್ಡಯಜಮಾನ : ಈತ ಇಡೀ ಗುಡಿಕಟ್ಟು ಸಂಸ್ಥೆಗೆ ಮುಖ್ಯಸ್ಥನಿದ್ದಂತೆ. ಗುರುಗಳ ಆದೇಶದಂತೆ ಈತ ಕಾರ್ಯನಿರ್ವಹಿಸುವುದು.ಸಭೆ-ಸಮಾರಂಭದ ಅಧ್ಯಕ್ಷತೆಯನ್ನು ವಹಿಸುವುದು. ಒಂದು ರೀತಿ ಇಂದಿನ ಅಧ್ಯಕ್ಷ ಹುದ್ದೆ ಇದ್ದ ಹಾಗೆ.

* ಬುದ್ಧಿವಂತ : ಸಮುದಾಯದಲ್ಲಿ ಮನ್ನಣೆಯಿರುವಂಥ ವ್ಯಕ್ತಿ. ಒಂದು ರೀತಿ ತಿಳಿವಳಿಕಸ್ಥ ಎನ್ನಬಹುದು.

* ಕೋಲುಕಾರ : ರಾಯಭಾರಿಯಗಿ ಕಾರ್ಯನಿರ್ವಹಿಸುತ್ತಾನೆ. ಹಬ್ಬ-ಹರಿದಿನ, ಸಭೆ-ಸಮಾರಂಭ, ವಿಚಾರಣೆ ಇತ್ಯಾದಿ ಸಂದರ್ಭಗಳಲ್ಲಿ ಸಮಾಜದ ಒಕ್ಕಲುಗಳಿಗೆ, ಹಿರಿಯರಿಗೆ, ಬಂಧುಗಳಿಗೆ ಸುದ್ದಿಯನ್ನು ಮುಟ್ಟಿಸುವುದು, ಜನರನ್ನು ಸೇರಿಸುವುದು, ಗುರುಗಳು, ಯಜಮಾನ, ಬುದ್ಧಿವಂತ, ಬಳಗಸ್ಥರ ಪರವಾಗಿ ಈತನು ಕಾರ್ಯನಿರ್ವಹಿಸುತ್ತಾನೆ. ಒಂದು ರೀತಿ ಇಂದಿನ ಸಂಘಟನಾ ಕಾರ್ಯದರ್ಶಿಯಂತೆ ಕೆಲಸ ನಿರ್ವಹಿಸದುವುದು ಇವನ ಜವಾಬ್ದಾರಿಯಾಗಿತ್ತು.

೨. ನೀತಿ-ನ್ಯಾಯ ಪದ್ಧತಿ

೧. ಸಮಾಜದಲ್ಲಿ ಗಂಡಸಾಗಲಿ ಅಥವಾ ಹೆಂಗಸಾಗಲಿ ಹಾದರ ಅಥವಾ ಅನೈತಿಕ ಚಟುವಟಿಕೆಗಳಲ್ಲಿ ತೊಡಗಿರುವುದು ಕಂಡುಬಂದರೆ ಅಂಥವರ ಬಗ್ಗೆ ಕುಲದ ಹಿರಿಯರು, ಗೌಡರು, ಮುಖಂಡರು ಸೇರಿ ಗುರುಮಠಕ್ಕೆ ದೂರು ಸಲ್ಲಿಸುತ್ತಿದ್ದರು.

೨. ೨೭-೬-೧೯೪೧ರಲ್ಲಿ ಚಿಕ್ಕಮಗಳೂರು ತಾಲೂಕು ಲಕ್ಕದ ಹೋಬಳಿ ಶಿಂದಿಗೇರಿ ಗ್ರಾಮದ ಯಜಮಾನರು, ಬುದ್ಧಿವಂತರು ಕೋಲುಕಾರರು ಮತ್ತು ಬಳಗಸ್ಥರು ಕೂಡಿಕೊಂಡು "ನಮ್ಮ ಗ್ರಾಮದಲ್ಲಿರುವ ದಿಣ್ಣೇನಳ್ಳಿ ಕೆಂಚೇಗೌಡನ ಹೆಂಡತಿ ಮುಳ್ಳಮ್ಮನೆಂಬ ಗಂಡಸತ್ತ ವಿಧವೆಯು ಇಲ್ಲಿಗೆ ಹದಿನೈದು ದಿವಸದಲ್ಲಿ ಗಂಡುಮಗುವಿಗೆ ಜನನವಾಗಿರುತ್ತಾಳೆ" ಎಂದು ಆಸಂದಿ ರೇವಣಸಿದ್ಧೇಶ್ವರ ಮಠದ ಗುರುಗಳಾದ ವಡೇರ ಸಿದ್ರಾಮಪ್ಪ ಸ್ವಾಮಿಗಳಿಗೆ ಪಿರ್ಯಾದು ಕೊಟ್ಟಿದ್ದರು.

* ಆ ಪಿರ್ಯಾದನ್ನು ಸ್ವೀಕರಿಸಿದ ಗುರುಗಳು ೯-೭-೧೯೪೧ರಲ್ಲಿ ಶಿಂದಿಗೇರಿ ಗ್ರಾಮಕ್ಕೆ ಬಂದು ಸರ್ವರ ಸಮ್ಮುಖದಲ್ಲಿ ಮುಳ್ಳಮ್ಮಳನ್ನು ವಿಚಾರಣೆ ಗೊಳಪಡಿಸುತ್ತಾರೆ.

* ಆಗ ಮುಳ್ಳಮ್ಮ ಗುರು ಹಿರಿಯರ ಸಮ್ಮುಖದಲ್ಲಿ "ನನ್ನ ಗಂಡ ಸತ್ತುಹೋಗಿ ಇಪ್ಪತ್ತು ವರ್ಷವಾಯಿತು.ಈವರೆಗೆ ನಾನು ತವರುಮನೆಯಲ್ಲಿಯೇ ಇದ್ದೆ, ಕಳೆದ ೮-೯ ತಿಂಗಳ ಹಿಂದೆ ಗಿಡ್ಡೇನಹಳ್ಳಿಯ ಇಬ್ಬರು ಕುರಿಕತ್ತರಿಸುವುದಕ್ಕೆ ನಮ್ಮ ಮನೆಗೆ ಬಂದರು. ಅವರಲ್ಲಿ ಒಬ್ಬ ನನ್ನ ಕೈಮೈ ಮುಟ್ಟಿ ಕೆಡಿಸಿದನು. ಅಂದಿನಿಂದ ನಾನು ಹೊರಗಾಗದೆ ಬಸುರಾಗಿ ಗಂಡುಮಗುವನ್ನು ಹಡದುಕೊಂಡಿದ್ದೇನೆ. ಕುರಿಕತ್ತರಿಸುವುದಕ್ಕೆ ಬಂದ ಬೀರೇಗೌಡನೇ ನನ್ನನ್ನು ಬಸುರು ಮಾಡಿದನೆಂದು ಕೈಪತ್ತು ಕೊಟ್ಟಿದ್ದೇನೆ. ಇಷ್ಟೇ ನನ್ನ ಹೇಳಿಕೆ" ಎಂದು ರುಜು ಮಾಡಿದ ದಾಖಲೆ ಇದಾಗಿದೆ.

* ಮುಳ್ಳಮ್ಮಳ ಈ ಹೇಳಿಕೆಯನ್ನು ಪರಿಶೀಲಿಸಿ ಗುರುಗಳು ಮತ್ತು ಕುಲದ ಯಜಮಾನರು ಸೇರಿ ವಿಚಾರ ಮಾಡಿ "ಕುಲದ ಊಟವನ್ನು, ಗುರುವಿನ ದಂಡವನ್ನು ತೆಗೆದುಕೊಂಡು ಮುಳ್ಳಮ್ಮನಿಗೆ ಶುದ್ಧ ನಿರೂಪವನ್ನು ಕೊಟ್ಟ ಬಗ್ಗೆ ಎರಡನೆಯ ದಾಖಲೆ ಹೇಳುತ್ತದೆ.

* ಹೀಗೆ ಯಾರಾದರೂ ಅನೈತಿಕ ಚಟುವಟಿಕೆಯಲ್ಲಿ ತೊಡಗಿಕೊಂಡ ಬಗ್ಗೆ ದೂರು ಬಂದರೆ ಗುರುಗಳ ಸಮ್ಮುಖದಲ್ಲಿ ಕುಲದ ಹಿರಿಯರು ಸೇರಿ, ಕ್ಷಮಾಪಣೆ ಪತ್ರವನ್ನು ಪಡೆದುಕೊಂಡು, ದಂಡವನ್ನು ವಸೂಲು ಮಾಡಿ, ಸನ್ನಡತೆಯಿಂದ ನಡೆದುಕೊಳ್ಳಬೇಕೆಂದು ತಾಕೀತು ಮಾಡುತ್ತಿದ್ದರು.

* ಜನರು ಸನ್ಮಾರ್ಗದಲ್ಲಿ ನಡೆದುಕೊಳ್ಳಲಿ ಎಂಬ ಸದುದ್ದೇಶದಿಂದ ಈ ರೀತಿಯ ಕಟ್ಟುಪಾಡುಗಳನ್ನು ಅಂದಿನ ಸಮಾಜದ ಗುರುಗಳು ಮುಖಂಡರು ಜಾರಿಗೆ ತರುತ್ತಿದ್ದರೆಂಬುದು ಇದರಿಂದ ಗೊತ್ತಾಗುತ್ತದೆ.

೩. ಬಹಿಷ್ಕಾರ

* ಸಾರ್ವಜನಿಕವಾಗಿ ಸಾಮುದಾಯಿಕವಾಗಿ ವಿಷಯವನ್ನು ತಿಳಿಸುವುದಕ್ಕಾಗಿ ಪ್ರಸಿದ್ಧ ಪತ್ರಿಕೆಯನ್ನು ಹೊರಡಿಸುತ್ತಿದ್ದರೆಂಬುದಕ್ಕೆ ನಾಲ್ಕನೆಯ ದಾಖಲೆ ನಿದರ್ಶನವಾಗಿದೆ.

* ಆಸಂದಿ ಸಂಸ್ಥಾನದ ಒಡೆಯರು, ಹನ್ನೆರಡು ಗುಡಿಕಟ್ಟು, ಹದಿನೆಂಟು ಹರಿವಾಣ, ಎರಡು ಕಟ್ಟೆಮನೆ ಯಜಮಾನರುಗಳ ಅಧಿಕಾರ ಸ್ಥಾನದಿಂದ ಪ್ರಸಿದ್ಧ ಪತ್ರಿಕೆ(ಕರಪತ್ರ)ಯನ್ನು ಮುದ್ರಿಸಿ ಹಾಸನ ಮತ್ತು ಚಿಕ್ಕಮಗಳೂರು ಹಾಲುಮತ ಜನಾಂಗದ ಮಹಾಮಂಡಲಿಯವರಿಗೆ ಈ ಕೆಳಗಿನ ವಿಷಯವನ್ನು ತಿಳಿಸಲಾಗಿದೆ.

* ೭-೧೨-೯೧ಗಿಳರಂದು ಕಡೂರಿನಲ್ಲಿರುವ ಸಿದ್ರಾಮಪ್ಪ ಒಡೆಯರ ಮೇಲೆ ಕೋಲುಕಾರ ಮರುಳನ ಹೆಂಡತಿ ಲಕ್ಕಮ್ಮ ಅಕ್ರಮ ಸ್ತ್ರೀ ಸಂಘದ ಸಲುವಾಗಿ ಚಿಕ್ಕಮಗಳೂರು ಕೋಟಿನಲ್ಲಿ ಕ್ರಿಮಿನಲ್ಲ ಕೇಸ ಹಾಕಿದ್ದಳು. ಆ ಕೇಸು ಸಾಬೀತಾಗಿ ಸಿದ್ರಾಮಪ್ಪ ಒಡೆಯರು ಜೈಲುವಾಸವನ್ನು ಅನುಭವಿಸಿದ್ದರ ಪರಿಣಾಮವಾಗಿ ಮಠದ ಹಕ್ಕಿನಿಂದ ಅವರನ್ನು ವಜಾ ಮಾಡಲಾಗಿದೆ.

* ಆದ್ದರಿಂದ ಸಿದ್ರಾಮಪ್ಪನವರು ಆಸಂದಿ ಮಠಕ್ಕೆ ಅಧಿಕಾರಿಗಳಾಗಿಲ್ಲ. ಅವರು ತಮ್ಮ ಸ್ವಪ್ರಯೋಜನಕ್ಕಾಗಿ ಆಸಂದಿ ಸಿಂಹಾಸನದ ಅಧಿಕಾರಿಗಳೆಂದು ದಾಖಲೆಯನ್ನು ಸೃಷ್ಟಿಸಿಕೊಂಡು ಭಕ್ತಾದಿಗಳಿಂದ ಕಾಣಿಕೆ, ದಂಡವಸೂಲು ಮಾಡಿಕೊಂಡು ತಮ್ಮ ಕುಟುಂಬ ಪೋಷಣೆಗೆ ಉಪಯೋಗಿಸಿಕೊಳ್ಳುತ್ತಿದ್ದಾರೆ.

* ಮಠದ ಯಾವ ಅಧಿಕಾರವು ಇವರಿಗೆ ಇಲ್ಲದ್ದರಿಂದ ಅವರು ನಡೆಸುವ ಆಚಾರ-ವಿಚಾರ-ವ್ಯವಹಾರಗಳು ಬದ್ಧವಲ್ಲ. ಆದ್ದರಿಂದ ಭಕ್ತಾದಿಗಳು ಅವರಿಂದ ಯಾವುದೇ ವಿಧವಾದ ಆಚಾರ ವಿಚಾರಗಳನ್ನು ಮಾಡಿಸಿಕೊಳ್ಳಬಾರದು.

* ಇವರ ಮೇಲೆ ನಡೆದಿರುವ ಕೋರ್ಟಕೇಸಿನ ದಾಖಲೆಗಳನ್ನು ನೋಡಲು ಅಪೇಕ್ಷಿಸುವವರು ಆಸಂದಿ ಮಠಕ್ಕೆ ಬಂದು ನೋಡಬಹುದೆಂದು ಸೂಚಿಸಲಾಗಿದೆ.

* ಈ ಪತ್ರಕ್ಕೆ ಮಠದ ಗೌಡ ರಾಮೇಗೌಡ, ಧರ್ಮದರ್ಶಿ ತಿಮ್ಮಯ್ಯ, ಹಿರೇನಲ್ಲೂರು, ಗರ್ಜೆ, ಮುಗಳಿಕಟ್ಟೆ, ಪುರದ ಕೋಡಿಹಳ್ಳಿ, ಹಿರಿಯೂರು, ಮರವಂಜಿ, ಓಚಿಹಳ್ಳಿ, ಯಗಟಿ, ಮಲಿಯಮ್ಮ ಮೊದಲಾದವರು ರುಜು ಮಾಡಿದ್ದಾರೆ.ಮಠದ ಗುರುಗಳಾದ ಸಣ್ಣಸಿದ್ಧಪ್ಪ, ಬಸಪ್ಪ ಒಡೆಯರು ಸಹಿ ಮತ್ತು ಹೆಬ್ಬಟ್ಟಿನ ಗುರುತುಗಳಿವೆ.

* ಈ ದಾಖಲೆಯಿಂದ ಸಮುದಾಯದಲ್ಲಿ ಯಾರೇ ತಪ್ಪು ಮಾಡಿದರೂ ಅವರಿಗೆ ಶಿಕ್ಷೆ ಕಟ್ಟಿಟ್ಟ ಬುತ್ತಿ ಎಂಬುದು ಸ್ಪಷ್ಟವಾಗುತ್ತದೆ. ಕಡೂರಿನ ಸಿದ್ರಾಮಪ್ಪ ಒಡೆಯರು ಸ್ತ್ರೀ ಸಹವಾಸ ಕಾರಣದಿಂದಾಗಿ ಮಠದ ಅಧಿಕಾರದಿಂದ ಮೊಟಕುಗೊಳಿಸಿದ್ದನ್ನು ತಿಳಿಯಬಹುದು.

* ಸಮುದಾಯದ ಬಹುತೇಕ ಮುಖಂಡರು ಅಥವಾ ಪ್ರಮುಖರಿಗೆ ಅಕ್ಷರ ಬರೆಯಲಿಕ್ಕೆ ಓದಲಿಕ್ಕೆ ಬರುತ್ತಿರಲಿಲ್ಲ. ಅದಕ್ಕಾಗಿ ಅವರ ಹೆಬ್ಬಟ್ಟಿನ ರುಜು ಮಾಡಿಸಿಕೊಂಡು, ಅಕ್ಷರ ಬಲ್ಲವರು ಬರೆಯುವವರು ಅವರ ಹೆಸರನ್ನು ನಮೂದಿಸುತ್ತಿದ್ದರು. ಇಲ್ಲಿ ಉಲ್ಲೇಖಗೊಂಡ ಚನ್ನಗೌಡ್ನ ಬರಹ, ಬಸವೇಗೌಡನ ಬರಹ, ಕೆಂಪೇಗೌಡನ ಬರಹ, ರೇವಣಯ್ಯರ ಬರಹ ಇತ್ಯಾದಿ ಹೆಸರುಗಳು ಸಾಕ್ಷಿಯಾಗಿವೆ.

ಹೀಗೆ ಆಸಂದಿ ರೇವಣಸಿದ್ಧೇಶ್ವರ ಮಠದಲ್ಲಿ ಲಭ್ಯವಾದ ದಾಖಲೆಗಳು ಹಾಲುಮತ ಸಮುದಾಯದ ಸಾಮಾಜಿಕ-ಧಾರ್ಮಿಕ-ಆರ್ಥಿಕ-ಸಾಂಸ್ಕೃತಿಕ ಸಂಗತಿಗಳನ್ನು ತಿಳಿದುಕೊಳ್ಳಲು ಬಹುಮುಖ್ಯ ಆಕರಗಳಾಗುತ್ತವೆ. ಇಂಥ ಆಕರಗಳನ್ನು ಸಮಗ್ರವಾಗಿ ಸಂಗ್ರಹಿಸಿ ಸಂಪುಟಗಳ ರೂಪದಲ್ಲಿ ಪ್ರಕಟಿಸಿದರೆ ಜನಸಮುದಾಯದ ಅಧ್ಯಯನಕ್ಕೆ ತುಂಬ ಅನುಕೂಲವಾಗುತ್ತದೆ. ಅಂಥ ಅನುಕೂಲವಾಗುವಂಥ ಆಕರಗಳತ್ತ ಯುವ ಸಂಶೋಧಕರು ಗಮನಹರಿಸಲು ಈ ಸಂಪ್ರಬಂಧ ಪ್ರೇರಣೆಯಾಗಬಹುದೆಂದು ಭಾವಿಸಿದ್ದೇನೆ.

ಸಂತೇಬೆನ್ನೂರು ನಾಡಿಗರ ಕುರಿತ ಕೆಳದಿ ನಾಯಕರ ಎರಡು ನಿರೂಪಗಳು

ಸಂತೇಬೆನ್ನೂರು ಸುಮತೀಂದ್ರ ನಾಡಿಗ✷

ವಿಜಯನಗರ ಪತನಾನಂತರ ಅವರ ಅಧೀನರಾಗಿದ್ದ ಅನೇಕ ಪಾಳೆಯಗಾರರು ಸ್ವತಂತ್ರರಾಗಿ ತಮ್ಮದೇ ಆದ ಪಾಳೆಪಟ್ಟಗಳನ್ನು ರಚಿಸಿಕೊಂಡರು. ಅಂತಹುಗಳಲ್ಲಿ ಕೆಳದಿ, ಚಿತ್ರದುರ್ಗ ಸಂತೇಬೆನ್ನೂರು ಇತ್ಯಾದಿ ಪಾಳೆಪಟ್ಟುಗಳು ಈಗಿನ ಮಧ್ಯ ಕರ್ನಾಟಕದಲ್ಲಿ ಪ್ರಮುಖವಾದವು. ಕೆಳದಿ ಚೌಡಪ್ಪ ನಾಯಕನಿಂದ ಆರಂಭವಾದ ಕೆಳದಿ ಸಂಸ್ಥಾನವನ್ನು ಅಳಿದ ಅನೇಕ ನಾಯಕರು ಪಕ್ಕದ ಸಂತೇಬೆನ್ನೂರು ಚಿತ್ರದುರ್ಗ ಮುಂತಾದ ಪಾಳೆಪಟ್ಟುಗಳ ಮೇಲೆ ಯುದ್ಧ ಮಾಡಿ ತಮ್ಮ ಸಾಮ್ರಾಜ್ಯ ವಿಸ್ತಾರಮಾಡಿಕೊಂಡಿರುವುದಾಗಿ ದಾಖಲೆಗಳು ತಿಳಿಸುತ್ತವೆ. ಹಾಗೇ ತಮ್ಮ ಸಾಮ್ರಾಜ್ಯ ವಿಸ್ತರಿಸಿಕೊಂಡಾಗ ಅಲ್ಲಿದ್ದ ಪೂರ್ವಕಾರ್ಯಕರ್ತರು, ಅಧಿಕಾರಿಗಳು ತಾವು ಹಿಂದಿನ ಆಡಳಿತಗಾರರಿಂದ ಪಡೆದುಕೊಂಡ ಸ್ವಾಸ್ಥೆ ಮತ್ತು ವೃತ್ತಿಗಳನ್ನು ಮುಂದುವರೆಸಲು ಹೊಸದಾಗಿ ತಮ್ಮ ಪ್ರದೇಶವನ್ನು ಕೈವಶ ಮಾಡಿಕೊಂಡ ನಾಯಕರಿಂದ ಅನುಮತಿ ಪಡೆಯಬೇಕಾಗಿತ್ತು.ಅಂತಹವರಲ್ಲಿ ವಿಜಯನಗರ ಅರಸರು, ಬಿಜಾಪುರದ ಸುಲ್ತಾನರು ಸಂತೇಬೆನ್ನೂರು ನಾಯಕರಿಂದ ತಾವು ಹಿಂದೆ ಪಡೆದ ಅಧಿಕಾರ ಮುಂದುವರೆಸಿಕೊಂಡು ಬರಲು ಸಂತೇಬೆನ್ನೂರು ನಾಡಿಗ ಮನೆತನದವರು ಕೆಳದಿ ನಾಯಕರಿಂದ ಮರಳಿ ಅಧಿಕಾರ ಪಡೆದ ಎರಡು ನಿರೂಪಗಳು ಕುರಿತು ಈ ಸಪ್ರಬಂಧದಲ್ಲಿ ಚರ್ಚಿಸಲಾಗಿದೆ. ಈ ಎರಡು ನಿರೂಪಗಳಲ್ಲಿ ಒಂದು ಕೆಳದಿ ಸೋಮೇಶೇಖರನಾಯಕ (೧೬೬೩–೧೬೭೧), ಇನ್ನೊಂದು ಆತನ ಪತ್ನಿ ಕೆಳದಿ ಚೆನ್ನಮ್ಮ (೧೬೭೧–೧೬೯೭) ಬರೆಯಿಸಿ ಕಳುಹಿಸಿದ ನಿರೂಪಗಳಾಗಿದೆ.

ಮೊದಲ ನಿರೂಪ ಬಹುಶಃ ಕೆಳದಿ ಸೋಮಶೇಖರನಾಯಕ ಸಂತೇಬೆನ್ನೂರು ಠಾಣ್ಯದಾರ ರಾಮಣ್ಣಗೆ ಶಕ ೧೫೫೮ (ಕ್ರಿ.ಶ. ೧೬೬೩) ವಿಳಂಬಿ ಸಂವತ್ಸರದ ಶ್ರಾವಣಶುದ್ಧ೧೦ರಲ್ಲಿ ಸಂತೇಬೆನ್ನೂರು ಶೀಮೆ ಸುಂಕದ ಸ್ಥಳದ ಶ್ಯಾನಭೋಗ ನಾಡಿಗ ನರಸಿಂಹ ಹೂಜೂರು ಬಂದು ತನ್ನ ಹಿರಿಯರಿಗೆ ಪೂರ್ವದಿಂದ ಬಂದಂತ ಶಾನುಭೋಗಿಕೆ, ಜ್ಯೋತಿಕ ಪೌರೋಹಿತಿ ಸಹ ನಡೆದು ಬಾಹಂಗೆ ಅಪ್ಪಣೆಯಾಗಲು ಕೇಳಿಕೊಂಡ ಸಂಬಂಧ ಮಾವ ನಿರ್ವಾಣಪ್ಪನವರ ಸಲಹೆ ಮೇರೆಗೆ ಅದಕ್ಕೆ ಸಹಮತಿಸಿ ಸಂತೇಬೆನ್ನೂರು ಸೀಮೆ ಸುಂಕದ ಸ್ಥಳದ ಶಾನುಬೋಗಿಕೆ, ಜ್ಯೋತಿಗ್ಯ ಪುರೋಹಿತ ಸಹ ಇವರ ವಂಶಪರಂಪೆಯಾಗಿ ಮುಂದುವರೆಸಿ ಅರಮನೆಗೆ ೧೨೦ ವರಾಹ ತೆಗೆದುಕೊಂಡು ಅವರಿಗೆ ಕೊಟ್ಟ ಹೊಲವರ್ತನೆ, ಉಂಬಳಿಗ್ರಾಮ ಮರಳಿ ಅನಭವಿಸಿಕೊಂಡು ಬರುವ ಬಗ್ಗೆ ಈ ನಿರೂಪದಲ್ಲಿ ತಿಳುಹಿಸಲಾಗಿದೆ.

ಈ ಕುರಿತು ಈ ಹಿಂದೆ ಸಂತೇಬೆನ್ನೂರು ಶೀಮೆ ಆಡಳಿತ ನಡೆಸುತ್ತಿದ್ದ ಸಂತೇಬೆನ್ನೂರು ನಾಯಕರ ವಂಶದ ಬಿಲ್ಲಪ್ಪ, ಕೆಂಗಪ್ಪ ನಾಯಕರು ಈ ನಾಡಿಗ ಮನೆತನಕ್ಕೆ ಶಕ ೧೪೮೭ನೇ ರಕ್ತಾಕ್ಷಿ ಸಂವತ್ಸರದಲ್ಲಿ (೧೫೬೫) ಶಾನುಭೋಗ, ಜ್ಯೋತಿಷ್ಯ ಪುರೋಹಿತಕ್ಕೆ ಬರೆಸಿಕೊಟ್ಟ ತಾಮ್ರ ಶಾಸನವನ್ನು ಗಮನಿಸಬಹುದಾಗಿದೆ.

ಇನ್ನೊಂದು ನಿರೂಪ ಗರಜಿನ ಚನ್ನವೀರಪ್ಪ ಗೌಡರಿಗೆ ಬರೆಯಿಸಿ ಕೊಟ್ಟಿದ್ದಾಗಿದ್ದು (ಕ್ರಿ.ಶ. ೧೬೭೧) ಶಕ ೧೫೮೪ನೇ ದುಂದುಭೀ ಸಂವತ್ಸರದ ಶ್ರಾವಣ ಶುದ್ಧ೧೦ರಲ್ಲಿ ಸಂತೇಬೆನ್ನೂರು ಶೀಮೆ ದೇವರಹಳ್ಳಿ ರಂಗನಾಥ ದೇವರಿಗೆ ಅಮರಮಾಗಣಿಯಾಗಿ ನಡೆದು ಬರುತ್ತಿದ್ದ ಸೀಮೆಸ್ಥಳದ ಶ್ಯಾನುಭೋಗಿಕೆ ಜ್ಯೋತಿಷ್ಯ ಪುರೋಹಿತ್ಯ ಸಹ ತಮ್ಮ ಹಿರಿಯರಿಗೆ ಅಂದಿನ ಆಡಳಿತಗಾರರು, ಬಿಜಾಪುರದ ರಣದುಲ್ಲಾ ಖಾನ್ ಸಹ ಬರೆದುಕೊಟ್ಟ ದಾಖಲೆಗಳನ್ನು ಅಪ್ಪಾಜಿಭಟ್ಟರ ಮಗ ಲಿಂಗಣ್ಣನ ಮೊಮ್ಮಗ ನರಸಂಣನು ಕೆಳದಿ ಚೆನ್ನಮ್ಮಾಜಿಯವರಿಗೆ ಅರಿಕೆ ಮಾಡಿಕೊಂಡ ಮೇರೆಗೆ ಸಂತೇಬೆನ್ನೂರು ಶೀಮೆ ಒಳಗಣ ದೇವರಹಳ್ಳಿ ಮಾಗಣಿ ಸ್ಥಳದ ಜ್ಯೋತಿಷ್ಯ ಪುರೋಹಿತ್ಯ ಯಿದರ ಸಂಬಂಧ ೧೨೦ ವರಾಹ ತೆಗೆದುಕೊಂಡು ಅವರ ಅಧಿಕಾರ ಮರಳಿ ಮುಂದುವರೆಸಿಕೊಂಡು ಬರಲು ಅಪ್ಪಣೆ ನೀಡಿದ ನಿರೂಪ ಇದಾಗಿದೆ. ಈ ಎರಡೂ

✷ ನಿವೃತ್ತ ಪತ್ರಿಕಾ ವರದಿಗಾರ, ಸಂತೇಬೆನ್ನೂರು.

ನಿರೂಪಗಳನ್ನು ಜನರಲ್ ಮೆಕೆಂಜಿಯವರು ನಮ್ಮ ಮನೆಗೆ ಬಂದು ಸಂಗ್ರಹಿಸಿದ್ದಾಗಿ ತಿಳಿದು ಬಂದಿದ್ದು ಇದರ ಒಂದು ಮೂಲ ಪ್ರತಿ ನಮ್ಮ ಮನೆಯಲ್ಲಿದ್ದು ಅದನ್ನು ಈಗ ಕೆಳದಿ ವಸ್ತುಸಂಗ್ರಾಲಯಕ್ಕೆ ನಾನೇ ಕೊಟ್ಟಿರುತ್ತೇನೆ.

ಈ ನಿರೂಪಗಳಿಂದ ತಿಳಿದು ಬರುವ ವಿಷಯ ಏನೆಂದರೆ ಸಂತೇಬೆನ್ನೂರು ಶೀಮೆ ಕೆಳದಿ ಚೆನ್ನಮ್ಮ ಚನ್ನಗಿರಿ ವಶ ಪಡಿಸಿಕೊಂಡದ್ದಕ್ಕಿಂತ ಪೂರ್ವದಲ್ಲಿಯೇ ಅಂದರೆ ಕೆಳದಿ ಸೋಮಶೇಖರ ನಾಯಕರ ಕಾಲದಲ್ಲಿ ಕೆಳದಿ ಸಂಸ್ಥಾನದ ಆಡಳಿತಕ್ಕೆ ಒಳಪಟ್ಟಿತ್ತು ಎಂದು ತಿಳಿದು ಬರುತ್ತದೆ. ಸಂತೇಬೆನ್ನೂರು, ದೇವರಹಳ್ಳಿ ನಾಡಿಗ ಮನೆತನದರು ಒಂದೇ ಕುಟುಂಬಕ್ಕೆ ಸೇರಿದವರಾಗಿದ್ದು ಈ ಎರಡು ಪ್ರಾಂತ್ಯಗಳ ಈಗಿನ ಎರಡೂ ಹೋಬಳಿಗಳ ಶಾನುಭೋಗಿಕೆ ಇತ್ತೀಚಿನವರಿಗೂ ನಾಡಿಗ ಮನೆತನದವರೇ ನಡೆಸಿಕೊಂಡು ಬರುತ್ತಿದ್ದರು. ಈ ಎರಡೂ ನಿರೂಪಗಳಲ್ಲಿ ಉಲ್ಲೇಖಿತವಾದ ನಾಡಿಗ ಮನೆತನದವರ ಹೆಸರುಗಳು ನಮ್ಮ ಮನೆತನದ ಪೂರ್ವದಿಂದ ದಾಖಲೆ ಮಾಡಿಕೊಂಡು ಬಂದ ವಂಶವೃಕ್ಷದಲ್ಲಿ ನಮೂದಿಸಲಾಗಿದೆ. ಈ ದಾಖಲೆಗಳು/ನಿರೂಪಗಳಿಂದ ಕೆಳದಿ ನಾಯಕರು ಮತ್ತು ಸಂತೇಬೆನ್ನೂರು ನಾಡಿಗ ಮನೆತನದವರ ಬಗ್ಗೆ ಹೆಚ್ಚಿನ ಸಂಬಂಧ ಇರುವುದನ್ನು ಗುರುತಿಸಬಹುದಾಗಿದೆ. ಈ ನಿರೂಪದಲ್ಲಿ ಉಲ್ಲೇಖಿಸಿದಂತ ಸೋಮಶೇಖರ ನಾಯಕರ ಮಾವ ನಿರ್ವಾಣಯ್ಯನವರು ಸಂತೇಬೆನ್ನೂರಲ್ಲಿ ಶಿವೈಕ್ಯರಾದ ಬಗ್ಗೆ ಜನರಲ್ ಮೆಕೆಂಜಿ ಸಂಗ್ರಹಿಸಿದ ಸಂತೇಬೆನ್ನೂರು ಕೈಫಿಯತ್ತುನಲ್ಲಿ ಉಲ್ಲೇಖ ಇರುವುದನ್ನು ಸಹ ಗಮನಿಸಬಹುದಾಗಿದೆ.

ನಿರೂಪ–೧

೧. ವಿಳಂಬಿ ಸಂವತ್ಸರದ ಶ್ರಾವಣ೧ಶು.೧೦ಲ್ಲು। ಶ್ರೀಮತ್ಕೆಳದಿ ಸೋಮೇಶೇಖರ ನಾಯಕರ್ರು, ಸಂತ್ತೇಬೆಂನ್ನೂರ ಠಾಣಾದಾರ ರಾಮ

೨. ಂಣಗೆ ಬರಶಿ ಕಳುಹಿದಕಾರ್ಯ। ಸಂತ್ತೆಬೆಂನ್ನೂರ ಶಿಮೆ ಸುಂಕದ ಸ್ಥಳದ ಶ್ಯಾನುಬಾಗ ನಾಡಿಗ ನರಸಂಗಿನು ಹುಜುರು ಬಂದು।

೩. ಯಿ ಶಿಮೆ ಸುಂಕ್ಕದ ಸ್ಥಳದ ಶ್ಯಾನುಬಾವಿಕೆಯು। ತಂನ್ನದು ತಂನ್ನ ಹಿರ್‍ರಿಯರ್‍ರಿಗೆ। ಅದಂತ್ತ ಶ್ಯಾಸನಗಳು ಪರವಾನೆ ಚಿತ್ರಾ ಕಲ್ಲವ

೪. ನ ಕಾಗದ ಮುಂತ್ತಾಗಿ। ಯಿಟ್ಟುಕೊಂಡು ಅನುಬವಿಸಿ ಬಂದೆನ್ನು। ಯೀಗ ಸಿಮೆಯು ಅರಮನೆದ ವಾಲ್ಲು ಆಗಿದೆ। ಪೂರ್ವ ಪ್ರಮಾಣಿ। ಯೀ

೫. ಸಿಮೆ ಸುಂಕದ ಸ್ತಳದ ಶ್ಯಾನುಬಾವಿಕೆ ಜೋಯೆಷ್ಯ ಪೌರೋಹಿತ್ಯಕೆ ಸಹಾ ನಡೆದುಬಾಹಾಂಗೆ ಅಪ್ಪಣೆಯಾಗಬೇಕು ಕಾಣಿಕೆಯನ್ನು ಕೊ

೬. ಟ್ಟೆನೆಂಬುದಾಗಿ ಹೇಳುತ್ತಾನೆ ಈ ರಿತ್ತಿ ನಿರೂಪಕ್ಕೆ ಅಪ್ಪಣೆಯಾಗಬೇಕೆಂದು।
ನಿರ್ಮಣಪ್ಪನವರು ಹೇಳಿಕೊಂಡ ಸಂಮಂದಯಿಂದ

೭. ನ ಸೈಯ ಕಾಣಿನ೧೨೦ಹಂ ನೂರ ಯಿಪ್ಪತ್ತು ವರಹಾಂನ್ನು/ಅರಮನೆಗೆ
ತ್ತೆಗೆದುಕೊಂಡುಯಿೀ ಸಂತ್ತೆಬೆಂನ್ನೂರ ಸಿಮೆ ಸುಂಕ್ಕ

೮. ದ ಸ್ಥಳದ ಶ್ಯಾನುಬಾವಿಕೆ ಜೊತಿಷ ಪೌರೋಹಿತ್ಯ ಸಹ। ಯಿವನ ಸಂತಾನ ಪಾರಂ
ಪರ್ಯವಾಗಿ ನಡದು ಬಾಹಂತ್ತೆ ಅಪ್ಪಣೆ

೯. ಪಾಲಿಸಿಯಿಧೆವೆ। ಯಿವಗೆ ಸಲ್ಲುವ ಹೊಲವರ್ತನೆ ಆಯಾ ಬೇಡಿಕೆ ಹಿತ್ಲು
ಹುನಿಗ। ಉಂಬಲಿ ಗ್ರಾಮಗಳು ಕೊಡವಿಸ ಸಂಬ

೧೦. ಳ ಗ ೩೬ ಹಂ ಮುವತ್ತಾರು ವರಹಾ ಕೊಟ್ಟು ಪೂರ್ವ ಪ್ರಮಾಣಿ। ಯಿವನ ಕೈಯ
ಲೆಖವಂನು ಬರಶಿಕೊಂಡ್ರು ಯಿಕಾ

೧೧. (ಗ)ದವಂನ್ನು ಶ್ಯಾನುಬಾಗರ್‍ರ ಕಡಿತಕೆ ತ್ತಿರಗಾ ಯಿವನ ವಶಕೆ ಕೊಡು
ವುದಾಗಿ ಯಂದು ನಿರೂಪ ॥೧॥

ನಿರೂಪ–೨

೧. ದುಂದುಭಿ ಸಂವತ್ಸರದ ಶ್ರಾವಣ ಶು೧೦ಲ್ಲು ಶ್ರೀಮತ್ಕೆಳದಿ। ಚಂನಮಾಜಿಯವರು।
ಗರಜಿನ ಚನ್ನವಿರಪ್ಪವಡೆರ್‍ರಿಗೆ ಶರಣು

೨. ಅಪ್ಪಾಜಿ ಬಟರ ತಂಮ್ಮ ಲಿಂಗಂಣನ ಮೊಂಮ್ಮಗ ನರಸಂಣನು। ಹುಜೂರು ಬಂದ ಸಂತೆಬೆಂನ್ನೂರ ಸಿಮೆವಳಗಣ। ದೆವರಹಳ್ಳಿ

೩. ರಂಗನಾಥದೆವರ್‍ರಿಗೆ। ಅಮರಮಾಗಣಿಯಗಿ। ನಡದು ಬರುತ್ತಾಯಿದ್ದ। ದೆವರಹಳಿ ಮಾಗಣಿಯು। ಅರಮನೆ ಹವಾಲ್ಲು ಆಗಿ ಬರುತ್ತ

೪. ದೆ। ಯೀ ಸಿಮೆಸುಂಕದ ಸ್ಥಳದ ಶ್ಯಾನುಬಾವಿಕೆ ಜೊತಿಷ್ಯ ಪೌರೋಹಿತ್ಯ।
ಸಹತಂನ್ನದು। ತಂನ್ನ ಹಿರ್‍ರಿಯರ್‍ರಿಗೆ। ಸಂತ್ತೆಬೆಂನ್ನೂರ ಸಿ

೫. ಮೆ ಸುಂಕದ ಸ್ಥಳದ ಶ್ಯಾನುಬಾವಿಕೆ ಜೊತಿಷ್ಯ ಪೌರೋಹಿತ್ಯಕ್ಕೆ ಸಹ ಬರಶಿ ಕೊಟ್ಟ
ಶಾಸನಗಳು। ರಣದುಲ್ಲಾಖಾನನ ಪರವಾ

೬ ನೆ। ಮುಂತಾದ ಸ್ವಾಧನಗಳು ಸಹ। ತ್ತಂದು ತ್ತೊರ್‍ರಿಶಿ।ಸಂತೆಬೆಂನ್ನೂರು ಸಿಮೆ
ವಳಗಣ।
ದೇವರ ಹಳಿ ಮಾಗಣೆ। ಸಿಮೆ ಸುಂಕ್ಕದ ಸ್ತಳದ ಶ್ಯಾ

೭ ನುಬಾವಿರ್ಕೆ ಜೊತ್ತಿಷ್ಯ ಪೌರೋಹಿತ್ಯರ್ಕ ಸಹ ಪೂರ್ವಪ್ರಕಾರ್‍ರ ನಡದು ಬಾಹಾಗೆ।
ಅಪ್ಪಣೆಯಾಗಬೆಕ್ಕು। ಕಾಣಿಕೆಕೊಟ್ಟನು ಯೆಂದು

೮. ಹೆಳಿಕೊಳ್ಳುತ್ತಾನೆ ಆ ರಿತ್ತಿ ನಿರೂಪಕ್ಕೆ ಅಪ್ಪಣೆಯಾಗಬೆಕೆಂದು। ಮರಿಯಪ್ಪಭಟ್ರು
ಹೆಳಿಕೊಂಡ ಸಂಮಂಧ। ಯಿವನ ಕ್ರಯಕಾಣಿ

೯. ಕೆ ಗ ೧೨೦ ಹಂ ನೂರಯಿಪ್ಪತ್ತು ವರಹಾಂನ್ನು ಅರಮನೆಗೆ ತೆಗ್ಗೆದುಕೊಂಡು
ಯಿ ಸಂತ್ತೆ ಬೆಂನ್ನೂರ ಸಿಮೆವಳಗಣದೆವ

೧೦. ರ ಹಳಿ ಮಾಗಣಿ। ಸ್ತಳದ ಶ್ಯಾನುಬಾವಿಕೆ ಜೊತ್ತಿಷ್ಯ ಪೌರೋಹಿತ್ಯ ಸಹಾ ಯಿವನ
ಸಂತ್ತಾನಪಾರಂಪರ್ಯವಾಗಿ ನಡೆದು

೧೧. ಬಾಹಂತ್ತೆ ಅಪ್ಪಣೆ ಪಾಲಿಸಿಯಿಧೆವೆ। ಯಿವಗೆ ಸಲ್ಲುವ ಹೊಲವರ್ತನೆ ಆಯ
ಬೆಡಿಕೆ ಕೊಡವಿಸ ಸಂಬಳ ಗ ೧೨ ಹಂ ಹಂನ್ನೆರಡು ವ

೧೨. ರಹಾಂನ್ನು। ಕೊಟ್ಟುಪರ್ವ ಪ್ರಮಾಣಿ। ಯಿವನಕೈಯ। ಲ್ಲೆಖವಂನ್ನು ಬರಶಿ
ಕೊಂಡು ಯೀ ಕಾಗದವಂನ್ನು। ಶಾನುಬಾ

೧೩. ಗರ ಕಡಿತಕ್ಕೆ ಬರಸಿತ್ತಿರುಗಾಯಿವನ ವಶರ್ಕೆ ಕೊಡುವುದಾಗಿಯಂದು।ನಿರೂಪ।೧

ಆಕರ ಗ್ರಂಥಗಳು

೧. ಕರ್ನಾಟಕ ಶಾಸನ ಸಂಪುಟ ೭, ಭಾಗ ೧, ಚನ್ನಗಿರಿ ೬೨, ಶಾಸನ ಸಂ. ಬಿ.ಎಲ್. ರೈಸ್.

೨. ಕೆಳದಿ ಕಾಲದ ಐತಿಹಾಸಿಕ ದಾಖಲೆಗಳು, ಸಂ ೧ ಮತ್ತು ೨ (೨೦೦೬), ಸಂ. ಕೆಳದಿ ವೆಂಕಟೇಶ ಜೋಯಿಸ್ ರಾಜ್ಯಪತ್ರಾಗಾರ ಇಲಾಖೆ, ಬೆಂಗಳೂರು.

೩. ಸಂತೇಬೆನ್ನೂರು ನಾಯಕರು (೨೦೦೮), ಲೇ: ಸಂತೇಬೆನ್ನೂರು ಸುಮತೀಂದ್ರ ನಾಡಿಗ್, ಕರ್ನಾಟಕ ರಾಜ್ಯ ಪತ್ರಗಾರ ನಿರ್ದೇಶನಾಲಯ, ಬೆಂಗಳೂರು.

೪. ಕರ್ನಾಟಕದ ಕೈಫಿಯತ್ತುಗಳು (೧೯೯೪), ಸಂ. ಎಂ.ಎಂ. ಕಲಬುರ್ಗಿ, ಕನ್ನಡ ವಿಶ್ವವಿದ್ಯಾಲಯ ಹಂಪಿ.

ತೇರದಾಳ ಬಸವಪ್ರಭು: ಚಾರಿತ್ರಿಕ ಉಲ್ಲೇಖ

ಕೆ. ರವೀಂದ್ರನಾಥ*

೧೨ನೆಯ ಶತಮಾನದ ಕಲ್ಯಾಣ ಪರಂಪರೆಗೆ ಮುಸುಕಿದ್ದ ತೆರೆಯನ್ನು ಸರಿಸಿ, ಹೊಸ ಹೊಸ ಸಂಗತಿಗಳಿಂದ ಕಾಲ ಕಾಲಕ್ಕೆ ಕಟ್ಟುತ್ತಾಬಂದ ಕಲ್ಯಾಣಗಳ ಶೋಧವನ್ನು ವಿದ್ವಾಂಸರು ನಿರಂತರವಾಗಿ ಅಧ್ಯಯನ ನೆಡೆಸುತ್ತಾ ಬಂದಿದ್ದಾರೆ. ಈ ಸಂಬಂಧ ಕಲ್ಯಾಣ ಪರಂಪರೆಯ ಕೇಂದ್ರಗಳಾದ ಶಹಾಪುರದ ದಿಗ್ಗಿ ಸಂಗಮನಾಥನ ಅಮರಕಲ್ಯಾಣ, ನಾಗಾವಿ ಗುಂಡಬಸವೇಶ್ವರನ ಧರ್ಮಕಲ್ಯಾಣ, ಹಾಗೂ ಕಕ್ಕಳಮೇಳಿ ಕೇಂದ್ರಗಳನ್ನು ಕುರಿತು ಈ ಹಿಂದಿನ ಸಮ್ಮೇಳನಗಳಲ್ಲಿ ನಾನು ಪ್ರಬಂಧಗಳನ್ನು ಮಂಡಿಸಿದ್ದೆನು. ಈಗ ತೇರದಾಳ ಬಸವಪ್ರಭು:ಚಾರಿತ್ರಿಕ ಉಲ್ಲೇಖ ಎಂಬ ಪ್ರಬಂಧದ ಮೂಲಕ ತೋಂಟದ ಸಿದ್ಧಲಿಂಗ ಶಿವಯೋಗಿಗಳ ಗುರುಪರಂಪರೆಗೆ ಸೇರಿದ ಬಸವಪ್ರಭುವಿನ ಚಾರಿತ್ರಿಕ ಬದುಕನ್ನು ಇತಿಹಾಸ ತಜ್ಞರ ಗಮನಕ್ಕೆ ತರಬಯಸುವುದು ಈ ಪ್ರಬಂಧದ ಉದ್ದೇಶವಾಗಿದೆ.

ಮಧುರೆಗೆ ಹೋಗಿಬರುವ ಬಣಂಜಿಗರು ಮಾರ್ಗಮಧ್ಯದಲ್ಲಿ ಒಂದು ಪಟ್ಟಣವನ್ನು ಕಟ್ಟಿಸಿ ವಾಣಿಜ್ಯಪುರಿ ಅಥವಾ ಹರದನಹಳ್ಳಿ ಎಂದು ಹೆಸರನ್ನಿಟ್ಟು ಅಲ್ಲಿ ಅಮೃತೇಶ್ವರ ಲಿಂಗವನ್ನು ಪ್ರತಿಷ್ಠಾಪಿಸಿದರು. ಮುಂದೆ ಅಮೃತೇಶ್ವರ ಲಿಂಗದ ಸಮಯಾಚಾರಕ್ಕಾಗಿ ಮಠಕಟ್ಟಿಸಿ ಅಲ್ಲಿ ಅನಾದಿ ಗಣೇಶ್ವರನೆಂಬ ಚರಮೂರ್ತಿಯನ್ನು ನೆಲೆಗೊಳಿಸಿದರು. ಈ ಅನಾದಿ ಗಣೇಶ್ವರರಿಂದಲೆ ತೋಂಟದ ಸಿದ್ಧಲಿಂಗ ಯತಿಗಳ ಗುರುಪರಂಪರೆ ಆರಂಭವಾಗುತ್ತದೆ. ಇದೇ ಗುರುಪರಂಪರೆಯಲ್ಲಿ ಬರುವ ೯ನೇ ಪೀಠಾಧಿಪತಿಯಾದ ಬಸವಪ್ರಭು ಕೆಳದಿದೇಶ, ಹಿರೇಸೂರು, ಕಿರೇಸೂರು, ಹುಕ್ಕೇರಿನಾಡು, ಹನಗಂಡಿ, ತೇರದಾಳ ಮುಂತಾದ ಕಡೆ ಸಂಚಾರ ಮಾಡಿ ತೇರದಾಳದಲ್ಲಿ ಸಮಾಧಿ ಹೊಂದಿರುವುದಾಗಿ ಡಾ. ಆರ್.ಸಿ. ಹಿರೇಮಠ ಅವರು "ಷಟ್ಸ್ಥಲ ಪ್ರಭೆ" ಕೃತಿಯ ಪುಟ ೩೦೨ರಲ್ಲಿ ಉಲ್ಲೇಖಿಸುತ್ತಾರೆ. ಈ ಬಸವಪ್ರಭು ಸ್ವಾಮಿಗಳು ಮಗಿಪ್ರಭು ಎಂಬ ಇನ್ನೊಂದು ಹೆಸರಿನಿಂದಲೂ ಕರೆಸಿಕೊಂಡಿದ್ದಾರೆ. ಇದಕ್ಕೆ ಕಾರಣ ಇವರು ನಿರ್ವಯಲಾದಾಗ ಮಗಿ ಅಥವಾ ಮಡಕೆ ಗುರುತುಗಳನ್ನು ಇಟ್ಟಿದ್ದರಿಂದ "ಮಗಿಪ್ರಭು" ಎಂದು ಕರೆಯುವ ವಾಡಿಕೆಯಿದೆ ಎಂಬ ಜನವದಂತಿಯೂ ಇದೆ. ಈತನ ಸಮಾಧಿ ತೇರದಾಳದಲ್ಲಿದೆ. ಈತ ಉತ್ತರ ಕರ್ನಾಟಕ ಭಾಗದಲ್ಲಿ ಶರಣಸಿದ್ಧಾಂತಗಳನ್ನು ಪುನರುಜ್ಜೀವನಗೊಳಿಸಿ ಒಂಟಿಮುರಿ, ಹನಗಂಡಿ, ಹುಕ್ಕೇರಿ ಭಾಗಗಳಲ್ಲಿದ್ದ ಸಂಸ್ಥಾನಿಕರ ಕುಲದೈವವೆಂಬ ಪ್ರಸಿದ್ಧಿ ಪಡೆದಿದ್ದಾನೆ.

ಬಸವಪ್ರಭುವಿನ ಇತಿವೃತ್ತವನ್ನು ಹೇಳುವುದು ಈ ಪ್ರಬಂಧದ ಉದ್ದೇಶವಲ್ಲ. ಬದಲಾಗಿ ಹರದನಳ್ಳಿಯ ತೋಂಟದ ಸಿದ್ಧಲಿಂಗ ಯತಿಗಳ ಗುರುಪರಂಪರೆಯಲ್ಲಿ ೯ನೇ ಪೀಠಾಧಿಪತಿಯಾಗಿ ಬರುವ ಬಸವಪ್ರಭುವಿನ ಮೂಲ ಯಾವುದು? ಈತನ ಪರ್ಯಾಯ ಹೆಸರೇನು? ತೋಂಟದ ಅಲ್ಲಮನೆಂದು ಅಭಿನಾಮ ಹೊಂದಿ ವಚನಸಾಹಿತ್ಯದ ನಿಜದ ನೆಲೆಯನ್ನು ಮತ್ತೆ ಈ ನಾಡಿಗೆ ಪ್ರಸರಿಸಿದ ಗೋಸಲಪೀಠ ಪರಂಪರೆಯ ತೋಂಟದ ಸಿದ್ಧಲಿಂಗ ಯತಿಗಳ ವಚನ ಫಲಶ್ರುತಿಗೆ ಹಿನ್ನಲೆಯಾಗಿ ದುಡಿದ ಬಸವಪ್ರಭುವಿನ ವ್ಯಕ್ತಿತ್ವವನ್ನೂ, ಗೋಸಲಪೀಠ ಪರಂಪರೆಯ ಆಶೋತ್ತರಗಳನ್ನು ನಿರೂಪಿಸುವುದು, ಆ ಮೂಲಕ ಕರ್ನಾಟಕದ ಕಲ್ಯಾಣ ಪರಂಪರೆಯ ಹೆಜ್ಜೆಗುರುತುಗಳನ್ನು ಗುರುತಿಸುವುದು ಈ ಲೇಖನದ ಉದ್ದೇಶವಾಗಿದೆ.

ತೇರದಾಳದ ಬಸವಪ್ರಭುವನ್ನು ಅಲ್ಲಮರಾಯ ಎಂಬ ಹೆಸರಿನಿಂದಲೂ ಹಾಗೂ ಮಗಿಪ್ರಭು ಎಂಬ ಹೆಸರಿನಿಂದಲೂ ಅಲ್ಲಿಯ ಜನ ಕರೆಯುತ್ತಾರೆ. ತತ್ವಪದಕಾರನಾದ ಗುರುಬಸವಾರ್ಯನು ಈತನನ್ನು ಕುರಿತು ಒಂದು ತತ್ವಪದ ರಚನೆ ಮಾಡಿದ್ದಾನೆ.


ಏನುಹೇಳ್ವೆ ನಿರಾಳವಾದ ಪಸಕಿ ಅಲ್ಲಮಾ ॥
ನೀವು ನಮಗೆ ನಿಜವ ತೋರನಿಮಿಷಲ್ಲಮಾ ॥ಪ॥

ಮಗಿಯಬೆತ್ತ ಮಗಿಯಬಣ್ಣ ಭಾಪು ಅಲ್ಲಮಾ ।
ರಸಿಕಳಾದ ರಮಣಿಯೊಳಗೆ ರುದ್ರನಲ್ಲಮಾ ॥೧॥

---

* ಪ್ರಾಧ್ಯಾಪಕರು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ. ಮೊ. ೯೪೪೮೨ ೭೧೯೪೬





ಅಲ್ಲಮಪ್ರಭು ಸಮಾಧಿ, ತೇರದಾಳ

ಸೊಗಸು ಸೋಂಪು ಸುಗುಣ ಸುಗುಣ ಸುಗುಣನಲ್ಲಮಾ।
ಮುಸುಕು ತೆಗೆದು ಮುಖವ ನೋಡಿ ಮೋಡಿ ಅಲ್ಲಮಾ ॥೨॥

ಕಾಮ ಕಾಲಹರಣನಾದ ತ್ರೀಣಿ ಅಲ್ಲಮಾ ।
ಸೊಗಸಿ ಸರ್ವ ಸೈರಿಸಯ್ಯಾ ಶರಣು ಅಲ್ಲಮಾ ॥೩॥

ಮಾಯೆ ಬಯಲುಮಾಡಿ ಬೇಡಿಕೊಂಬೆನಲ್ಲಮಾ ।
ಮಮತೆಯೆಂಬ ಮುದ್ರೆ ಮುದ್ರೆ ಮುದ್ರೆ ಅಲ್ಲಮಾ ॥೪॥

ಅರಳಿಗರಳ ಅಂಕರಂಕರಿಸು ಅಲ್ಲಮಾ
ಪರಿಮಳವನ್ನು ಪೂಸಿ ಪ್ರೇಮಭಕ್ತಿ ಅಲ್ಲಮಾ ।೫॥

ಗುರುಬಸವನಂತರಂಗ ಗೋಪ್ಯ ಅಲ್ಲಮಾ
ಸೊಗಸಿ ಸರ್ವಕಾಲವಿಡಿದು ಶಾಂತ ಅಲ್ಲಮಾ ॥೬॥

ಎಂಬ ಆರು ನುಡಿಯ ಈ ತತ್ವಪದ ಬಸವಪ್ರಭುವಿಗೆ ಇರುವ ಅಲ್ಲಮರಾಯ ಮತ್ತು ಮಗಿಪ್ರಭು ಎಂಬ ಹೆಸರುಗಳಿದ್ದ ಕಡೆಗೆ ಗಮನ ಸೆಳೆಯುತ್ತದೆ. ಅದೇರೀತಿ ಈತನು ನಿರ್ವಯಲಾದಾಗ ಬೆತ್ತ-ಮಗಿ ಕುರುಹು ಬಿಟ್ಟುಹೋದ ಬಗ್ಗೆ ತೇರದಾಳದ ಜನ ಈಗಲೂ ಕಥೆ ಕಟ್ಟಿ ಹಾಡು ಹೇಳುತ್ತಾರೆ. ಈ ಅಲ್ಲಮರಾಯ ಅಥವಾ ಬಸವಪ್ರಭು ಯಾರೆಂಬುದು ಈಗಿರುವ ಪ್ರಶ್ನೆ? ನನ್ನ ಅಭಿಪ್ರಾಯದಲ್ಲಿ ಈತ ನಾಗಾವಿಯಲ್ಲಿ ಧರ್ಮಕಲ್ಯಾಣ ಸ್ಥಾಪನೆ ಮಾಡಿದ ಗುಂಡಬಸವೇಶ್ವರ ಹಾಗೂ ಜಕ್ಕಮ್ಮನ ಮಗ. ಈತ ಸಿಂದಗಿ ತಾಲೂಕು ಕಕ್ಕಳಮೇಳಿಯಲ್ಲಿ ಮಠವೊಂದನ್ನು ಕಟ್ಟಿಸಿದ. ಕೋಡೆಕಲ್ಲ ಬಸವಣ್ಣನಿಗಿಂತಲೂ ಹಿಂದಿನವನಾದ ಈತ ಸ್ವಲ್ಪ ಹೆಚ್ಚು-ಕಡಿಮೆ ೧೪-೧೫ನೆಯ ಶತಮಾನದಲ್ಲಿ ಇದ್ದಿರಬಹುದು. ಅಲ್ಲಮರಾಯ ವಿಜಯನಗರಕ್ಕೆ ಬರುತ್ತಾನೆ ಅಲ್ಲಿಯ ರಾಯನಿಗೆ (ಪ್ರೌಢದೇವರಾಯ ಅಥವಾ ಕೃಷ್ಣದೇವರಾಯ?) ವಿಜಯನಗರದಲ್ಲಿ ಬಸವನಾಚಾರ ಅಂದರೆ ಶರಣತತ್ವ ಅಪಚಾರಕ್ಕೆ ಒಳಗಾದುದ್ದನ್ನು ಹೀಗೆ ಹೇಳಿದ್ದಾನೆ.

ವಸುಧೆಯೋಳಗಿಲ್ಲ ಬಸವನಾಚಾರ
ಪಸರಿಸಿದ್ದುದನ್ನು। ನೆಸುವ
ಬುದ್ಧಿಗಳಿಂದ ಹಸಗೆಡಿಸಿದಿರಿಂದು
ಬಸವನ ಮೊರೆಯೆಂದನು ॥

ಶಿಕ್ಷೆದೀಕ್ಷೆ ತಂದಲ್ಲದೆ ಲೋಕ ಬರಿ
ವಾಕಿಗೆ ಮಣಿಯದೆಂದನು ॥
ಕಲ್ಯಾಣ ನಾಲ್ಕೊರೊಳಗೆ ಬಂದ ಶರಣ
ಸೊಲ್ಲ ಕೇಳದಾಯಿತು ಲೋಕ
ಬಲ್ಲದ ದೀಕ್ಷೆ ಶಿಕ್ಷೆಯ ಕೊಂಡುಬಂದು
ಹೊಸ ಕಲ್ಯಾಣವನ್ನು ನಿರ್ಮಿಸಿದನು ॥

ಎಂಬ ಗುಂಡಬಸವೇಶ್ವರ ಕಾವ್ಯದ ಈ ಹೇಳಿಕೆಗಳು ಅಲ್ಲಮರಾಯನೆಂಬ ಹೆಸರಿನಿಂದ ಕರೆಸಿಕೊಂಡಿರುವ ಬಸವಪ್ರಭುವಿನ ಕ್ರಾಂತಿಕಾರಕ ಮನೋಧರ್ಮವನ್ನು ಎತ್ತಿಹಿಡಿಯುತ್ತದೆ. ಹಾಗಾಗಿ ಬಸವಕಲ್ಯಾಣ, ವಿಜಯಕಲ್ಯಾಣ, ಅಮರಕಲ್ಯಾಣ, ಧರ್ಮಕಲ್ಯಾಣ ಹೆಸರಿನ ನಾಲ್ಕು ಕಲ್ಯಾಣಗಳ ಶರಣರ ಸೊಲ್ಲನ್ನು ಕೇಳದ ಈ ಲೋಕದಲ್ಲಿ ದಂಡನೆಯೇ ನಿಜವಾದ ದೀಕ್ಷೆ ಎನ್ನುತ್ತಾನೆ. ಜೊತೆಗೆ ಕಡೆಯಕಲ್ಯಾಣವಾದ ಕೊಡೆಕಲ್ಲು ಸ್ಥಾಪನೆಗೆ ಸೂಚನೆಯನ್ನು ನೀಡುತ್ತಾನೆ. ಈ ಮನೋಪ್ರವೃತ್ತಿಯ ಪ್ರತೀಕವಾಗಿಯೋ ಏನೋ ಈತನ ಕುರುಹು ಬೆತ್ತ(ದಂಡ) ಮತ್ತು ಮಗಿಗಳು ಆಗಿರಬೇಕು.

ವಚನ ಸಾಹಿತ್ಯದ ಆತ್ಮ "ಅನುಭಾವ" ಅಂಥ ಅನುಭಾವದ ಆತ್ಮವನ್ನು ಕಳೆದುಕೊಂಡು ಆಗಮಗೊಂಡು ಸ್ಥಾವರವಾಗಿದ್ದ ಶರಣತತ್ವವನ್ನು ಮತ್ತೇ ಜಂಗಮತ್ವಗೊಳಿಸುವ ಪ್ರಯತ್ನದಲ್ಲಿ ದಕ್ಷಿಣ ಕರ್ನಾಟಕದ ಭಾಗವಾದ ಹರದನಹಳ್ಳಿ ಅಮೃತೇಶ್ವರ ಲಿಂಗದ ಮಠಾಧಿಪತಿಯಾದ ಬಸವಪ್ರಭು ಇತ್ತ ಕಲ್ಯಾಣ ಬಸವಣ್ಣನ ಅಥವಾ ತನ್ನ ತಂದೆ ಗುಂಡಬಸವೇಶ್ವರನ ಹೆಸರನ್ನೂ ಅತ್ತ ಅನುಭವಮಂಟಪದ ಅಧ್ಯಕ್ಷನಾಗಿದ್ದ ಅಲ್ಲಮಪ್ರಭುವಿನ ಹೆಸರನ್ನೂ ಸೇರಿಸಿಕೊಂಡು ಬಸವಪ್ರಭು ಎಂತಲೂ, ಮಗಿಪ್ರಭು ಎಂತಲೂ, ಅಲ್ಲಮರಾಯನೆಂತಲೂ ಪ್ರಸಿದ್ಧಿಗೆ ಬಂದನೆಂಬುದು ನನ್ನ ಅಭಿಪ್ರಾಯವಾಗಿದೆ.

ಈ ಹೊತ್ತು ಮುಖ್ಯವಾಗಿ ತೋಂಟದ ಸಿದ್ಧಲಿಂಗ ಪರಂಪರೆಯು ಮೊದಲಿನಿಂದಲೂ ವಣಿಕ (ಬಣಜಿಗ) ವರ್ಗಕ್ಕೆ ಸೇರಿದ್ದೆಂಬುದಕ್ಕೆ ತೋಂಟದ ಸಿದ್ಧಲಿಂಗಯತಿಗಳ ಗುರುಪರಂಪರೆಯ ೯ನೆಯ ಪೀಠಾಧಿಪತಿಯಾಗಿದ್ದ ತೇರದಾಳದ ಬಸವಪ್ರಭುವಿನ ಮನೆತನ ಬಣಜಿಗಶೆಟ್ಟರ ಸಮುದಾಯವೆಂಬುದು ಈ ಕೆಳಗಿನ ಹೇಳಿಕೆಗಳಿಂದ ತಿಳಿದುಬರುತ್ತದೆ.

ಹಸುಬೆಯ ಬಣಸಿಹೆನೆಂದು ಎನುತಲಿ
ಬಸವಣ್ಣ ತಾ ಕೈಕೊಂಡು
ವಸುಧೆಯೊಳಗೆ ಉಳ್ಳ ಎಪ್ಪತ್ತೆರಡು ಕೇಣಿ(ಸಾಲು)
ಹಸುಬೆಯನಾಗ ತುಂಬಿದನು
ಬೆಲ್ಲ ಕೊಬ್ಬರಿ ತಿಂದ ಸೊಕ್ಕಿದ ಬಣಜಿಗ
ನಿಲ್ಲದೆ ಕುಣಿದಾಡುತಾಹನೆ ॥

ಎಂಬಂಥ ಉಲ್ಲೇಖಗಳು ಬಸವಪ್ರಭು ಬಣಜಿಗ ಶೆಟ್ಟರ ವರ್ಗಕ್ಕೆ ಸೇರಿದವನೆಂಬುದು ಖಾತ್ರಿಯಾಗುತ್ತದೆ. ಕೆಲವು ಜನರು ತೋಂಟದ ಸಿದ್ಧಲಿಂಗಯತಿಗಳು ಹಿರೇಮಠದ ಹಿನ್ನೆಲೆಯಿಂದ ಬಂದವರೆಂಬುದಾಗಿ ನಿರಾಧಾರವಾದ ಹೇಳಿಕೆಗಳನ್ನು ನೀಡುತ್ತಾರೆ. ಅಂಥವರು ಗಮನಿಸಬೇಕು. ಸಿದ್ಧಲಿಂಗಯತಿಗಳ ಗುರುಗಳಾದ ಗೋಸಲ ಚೆನ್ನಬಸವೇಶ್ವರರ ಹೆಸರಿನಲ್ಲಿ ಕಾಣಿಸಿಕೊಳ್ಳುವ ಗೋಸಲ ಎಂಬುದು ಆಕಳಗಳ ಮೇಲೆ ದಿನಸಿ ವಸ್ತುಗಳನ್ನು ಹೇರಿಕೊಂಡು ವ್ಯವಹಾರ ಮಾಡುತ್ತಿದ್ದ ವಣಿಕರು ಅಥವಾ ಹರದರು ಅಥವಾ ಸೆಟ್ಟಿಗಳೆಂಬುದಕ್ಕೆ ಇನ್ನೂ ಪುಷ್ಟಿ ದೊರೆಯುತ್ತದೆ. ಇಲ್ಲಿ ಗೋಸಲ ಎಂಬುದಕ್ಕೆ ಗೋಸಾಸನ ಎಂಬ ಶಾಸನೋಕ್ತ ಉಲ್ಲೇಖವನ್ನು ನೆನಪು ಮಾಡಿಕೊಳ್ಳಬೇಕು. ಮೂಲತಃ ಹರದನಹಳ್ಳಿಯ ಅಮೃತೇಶ್ವರ ಹೆಸರಿನ ಲಿಂಗ, ಅದೇ ರೀತಿ ಎಡೆಯೂರು ತೋಂಟದ ಸಿದ್ಧಲಿಂಗಯತಿಗಳ ಮೇಲೆ ಹಾಲು ಕರೆಯುವ ಗೋವು ಇವೆಲ್ಲ ಹರದನಹಳ್ಳಿಯ ವಣಿಕ ಸಮುದಾಯದ ಜೀವನ ಪದ್ಧತಿಯನ್ನು ನಿರೂಪಿಸುವ ಸಂಕೇತಗಳಾಗಿವೆಂಬುದನ್ನು ಊಹಿಸಿಕೊಳ್ಳಬಹುದಾಗಿದೆ.

ಒಟ್ಟಿನಲ್ಲಿ ಚಿತ್ತಾಪುರ ತಾಲೂಕಿನ ನಾಗಾವಿ ಗುಂಡಬಸವೇಶ್ವರನ ಮಗನಾದ ಅಲ್ಲಮರಾಯ ಹರದನಹಳ್ಳಿ ತೋಂಟದ ಸಿದ್ಧಲಿಂಗಯತಿಗಳ ಗುರುಪರಂಪರೆಯಲ್ಲಿ ಬಸವಪ್ರಭು ಹೆಸರಿನಿಂದ ೯ನೇ ಪೀಠಾಧಿಪತಿಯಾಗಿ ನಾಡಿನಾದ್ಯಂತ ಸಂಚಾರ ಮಾಡಿ ತೇರದಾಳದಲ್ಲಿ ಮಗಿಪ್ರಭುವಾಗಿ ಹೆಸರು ಮಾಡಿರುವುದನ್ನು ಗಮನಿಸಿದರೆ ಬಸವಪ್ರಭುವಿನ ಮೂಲ-ಸಂಚಾರ-ಅಂತ್ಯವನ್ನು ನಿರೂಪಿಸುವುದರ ಜೊತೆಗೆ ಅಲ್ಲಮಪ್ರಭುಗಳ ನೇತೃತ್ವದಲ್ಲಿ ನಡೆಯುತ್ತಿದ್ದ ಕೇಂದ್ರಿಕೃತ ಅನುಭವ ಮಂಟಪವನ್ನು ವಿಕೇಂದ್ರಿಕರಣಗೊಳಿಸಿ ವಚನಸಾಹಿತ್ಯ ಅಥವಾ ಶರಣತತ್ವಗಳ ಪುನರುಜ್ಜೀವನಕ್ಕೆ ಕಾರಣರಾದ ದ್ವಿತೀಯ ಅಲ್ಲಮ ಅಥವಾ ತೋಂಟದ ಅಲ್ಲಮರೆನಿಸಿದ್ದ ಸಿದ್ಧಲಿಂಗಯತಿಗಳ ವ್ಯಕ್ತಿತ್ವ ವಿಕಸನಕ್ಕೆ ತೇರದಾಳ ಬಸವಪ್ರಭುಗಳಂಥವರು ಕಾರಣರಾಗಿದ್ದಾರೆಂಬುದನ್ನು ಎತ್ತಿಹಿಡಿಯಬೇಕಾಗಿದೆ.

ಯಾವ ಯಾವುದೋ ಕಾರಣಗಳಿಗೆ, ಒತ್ತಾಸೆಗಳಿಗೆ ಹಸಗೆಟ್ಟು ಹೋಗಿದ್ದ ಕಲ್ಯಾಣ ಪರಂಪರೆಯ ಆಶಯ ತೇರದಾಳದ ಬಸವಪ್ರಭುಗಳಂಥ ಹತ್ತಾರು ಜನ ವಿರಕ್ತರ ಪ್ರಯತ್ನಗಳಿಂದ ತೋಂಟದ ಸಿದ್ಧಲಿಂಗಯತಿಗಳ ಕಾಲಕ್ಕೆ ಮತ್ತೇ ವಚನಸಾಹಿತ್ಯದ ಅಥವಾ ಶರಣ ಸಿದ್ಧಾಂತಗಳ ಅಥವಾ ಲಿಂಗಾಯತ ಧರ್ಮದ ನಿಜದ ನೆಲೆಯನ್ನು ಪುನಃ ಕಟ್ಟಿಕೊಳ್ಳಲು, ರೂಪಿಸಿಕೊಳ್ಳಲು ಸಾಧ್ಯವಾಗಿದೆಂಬುದು ಈ ಪ್ರಬಂಧದ ಪ್ರಮುಖ ಆಶಯವಾಗಿದೆ.

೨೬


ಭಿಷ್ಟಪ್ಪಯ್ಯನವರ ಮನೆತನದ ಅಪ್ರಕಟಿತ ದಾಖಲೆಗಳಲ್ಲಿ ಹಂಪೆಯ ವಿಷಯಗಳು: ಒಂದು ವಿವೇಚನೆ

ಹರಿಹರ ಶ್ರೀನಿವಾಸರಾವ್*✳*

ಹಂಪೆಯ ದ್ವಾರಗೋಪುರದ ನಿರ್ಮಾತೃ ಶ್ರೀ ಭಿಷ್ಟಪ್ಪಯ್ಯನವರು ರಂಗಾಪುರವನ್ನು ಸಂಸ್ಥಾನವನ್ನಾಗಿ ಮಾಡಿಕೊಂಡು ತುಂಗಭದ್ರೆಯ ದಕ್ಷಿಣದಡ, ಮಾಗಳ ಪ್ರದೇಶಗಳಲ್ಲಿ ಅನೇಕ ಸಮಾಜೋ-ಧಾರ್ಮಿಕ ಕಾರ್ಯಗಳನ್ನು ಕೈಗೊಂಡಿರುವುದು ನಮ್ಮ ಕಣ್ಣೆದುರಿಗಿದ್ದು, ಇತಿಹಾಸಕಾರರು ಅವುಗಳನ್ನು ಗಮನಿಸಿರುತ್ತಾರೆ.

ರಂಗಾಪುರದ ಆಚೆಯ ದಡದಲ್ಲಿರುವ ಇಂದಿನ ಗದಗ ಜಿಲ್ಲೆಯ ಮುಂಡರಗಿ ತಾಲ್ಲೂಕು, ವಿಠ್ಠಲಾಪುರದ ಗ್ರಾಮದಲ್ಲಿ ಭಿಷ್ಟಪ್ಪಯ್ಯನವರ ವಂಶಸ್ಥರು ವಾಸವಾಗಿರುತ್ತಾರೆ. ವಿಠ್ಠಲಾಪುರಗ್ರಾಮವು, ಗೊಂದಾಲಿ (ಮಹಾರಾಷ್ಟ್ರ, ಕರಾಡ್ ಜಿಲ್ಲೆ) ಶ್ರೀ ಬ್ರಹ್ಮಚೈತನ್ಯರು ಮತ್ತು ಬೆಳಧಡಿಯ ಶ್ರೀಬ್ರಹ್ಮಾನಂದರು ಶ್ರೀರಾಮ ತೇರಾಕೋಟಿಯಜ್ಞವನ್ನು ನಡೆಸಿದ್ದ, ಕಲ್ಯಾಣ ಚಾಲುಕ್ಯರ ಸೋಮೇಶ್ವರ ದೇವಸ್ಥಾನ ಇತಿಹಾಸ ಪ್ರಸಿದ್ದ ಬಿದರಹಳ್ಳಿ ಗ್ರಾಮದಿಂದ ೨ ಕಿ.ಮೀ. ದೂರದಲ್ಲಿದೆ.

ಶ್ರೀ ಭಿಷ್ಟಪ್ಪಯ್ಯ ರಂಗಾಪುರ ಅವರ ಸಂಕ್ಷಿಪ್ತ ವಿವರಗಳು (ಕ್ರಿ.ಶ. ೧೬೦೮ – ೧೬೯೮)



ಚಿತ್ರ ೧

ಇವರ ತಂದೆಯವರ ಹೆಸರು: ತ್ರೇಯಂಬಕ ಜೋಷಿ. ತಾಯಿಯವರ ಹೆಸರು ತಿಳಿಯುವುದಿಲ್ಲ. ಹುಟ್ಟಿದ್ದು ಶಕೆ ೧೫೩೦ ಕೀಲಕ ಸಂವತ್ಸರ ಅಂದರೆ ಕ್ರಿ.ಶ.೧೬೦೮. ಸ್ಥಳ: ಹಿಂದಿನ ಬಳ್ಳಾರಿ ಜಿಲ್ಲೆಯ ಸೋಗಿ. ಸಮಾಧಿ ಶಕೆ ೧೬೨೦ ಭಾದ್ರಪದ ಶುಕ್ಲ ಅಂದರೆ ಕ್ರಿ.ಶ. ೧೬೯೮. ಸಮಾಧಿ ಸ್ಥಳ: ತುಂಗಭದ್ರಾನದಿ ದಂಡೆಯ ಎಡ ಭಾಗದಲ್ಲಿರುವ ಬಿದರಹಳ್ಳಿ, ಹತ್ತಿರದ ದುರ್ಗದಕಲ್ಲು. ಈ ಸ್ಥಳವು ನದಿಯಲ್ಲಿಯೇ ಇದೆ. ಒಟ್ಟು ಜೀವಿತಾವಧಿ ೯೦ ವರ್ಷಗಳು. ಬಿದಿರಹಳ್ಳಿಯು ಮುಂಡರಗಿ ತಾಲ್ಲೂಕು, ಗದಗ ಜಿಲ್ಲೆಯಲ್ಲಿದೆ. ರಂಗಾಪುರವು ಇಂದಿನ ಮಾಗಳದಿಂದ ೨ ಕಿ.ಮೀ. ದೂರದ ಬಳ್ಳಾರಿ ಜಿಲ್ಲೆಯ ಹೂವಿನ ಹಡಗಲಿ ತಾಲ್ಲೂಕಿನಲ್ಲಿದ್ದು ತುಂಗಭದ್ರೆಯ ಬಲ ದಂಡೆಯಲ್ಲಿದೆ. ಈಗ ಈ ಮನೆತನದವರು ಮುಂಡರಗಿ ತಾಲ್ಲೂಕಿನ ವಿಠ್ಠಲಾಪುರ ಗ್ರಾಮದಲ್ಲಿ ವಾಸವಾಗಿರುತ್ತಾರೆ. ಗುಮ್ಮಗೋಳದ ಗೋಣಿ ಬಸಪ್ಪನವರು ಇವರ ಶಿಷ್ಯರು. ಹರಿಹರದಿಂದ ೧೨ ಕಿ.ಮೀ. ದೂರದಲ್ಲಿರುವ ಗಂಗನರಸಿಯಲ್ಲಿ ಇವರ ಪರಂಪರೆಯಲ್ಲಿ ಬಂದು ಸಮಾಜಸೇವೆ ಮಾಡಿದ ಅನೇಕ ಗುರುಗಳ ಸಮಾಧಿಗಳಿವೆ. ಇಂಡೋಸಾರ್ಸಿನಿಕ್ ಶೈಲಿಯಲ್ಲಿ ವಿಶಿಷ್ಟವಾಗಿ ಕಟ್ಟಿರುವ ಗುಮ್ಮಗೋಳ ಮತ್ತು ಬಾಗಳಿಯ ಹತ್ತಿರವಿರುವ ದೇವಸ್ಥಾನಗಳು ಸುಪ್ರಸಿದ್ಧವಾಗಿವೆ. ಈ ಗೋಣಿ ಬಸಪ್ಪನವರ ಜಾತ್ರೆಯನ್ನು ಪ್ರತಿ ವರುಷ ಈ ಸ್ಥಳಗಳಲ್ಲಿ ಅದ್ದೂರಿಯಿಂದ ಆಚರಿಸಲಾಗುತ್ತದೆ.

✳ # ೭೫/೧೭, ಸಮರ್ಥ, ವಿಕಾಸ್ ಹೈಸ್ಕೂಲ್ ಎದುರು, ಬನಶಂಕರಿ, ಬೆಂಗಳೂರು, ಮೊ. ೯೧೧೦೪ ೮೯೮೭೧

೧. ಶ್ರೀ ಭಿಷ್ಟಪ್ಪಯ್ಯ ರಂಗಾಪುರ ಸಂಸ್ಥಾನ, ಮಾಗಳ/ವಿಠ್ಠಲಾಪುರ


ಭಿಷ್ಟಪ್ಪಯ್ಯನವರ ವಂಶಾವಳಿ

ಕ್ರಮ ಸಂಖ್ಯೆ	ವ್ಯಕ್ತಿಯ ಹೆಸರು	ಜನನ ಶಕೆ	ಮರಣ ಶಕೆ	ಕ್ರಿ.ಶ.
೧	ತ್ರ್ಯಯಂ ಭಟ್ಟಾ ಜೋಷಿ (ತಂದೆ)			
೨	ಭಿಷ್ಟಪ್ಪಯ್ಯ (೧ನೇ ಭಿಷ್ಟಪ್ಪಯ್ಯ)	೧೫೩೦	೧೬೨೦	೧೬೦೮-೧೬೯೮
೩	ಶಿವಪ್ಪಯ್ಯ	೧೫೮೦	೧೬೩೨	೧೬೫೮-೧೭೦೧
೪	ಮಹದೇವಪ್ಪಯ್ಯ	೧೬೩೨	೧೬೬೮	೧೭೦೧-೧೭೪೬
೫	ಭಿಷ್ಟಪ್ಪಯ್ಯ (೨ನೇ ಭಿಷ್ಟಪ್ಪಯ್ಯ)	೧೬೫೭	೧೭೦೨	೧೭೩೫-೧೭೮೦
೬	ಶಿವಪ್ಪಯ್ಯ	೧೬೮೪	೧೭೩೪	೧೭೬೨-೧೮೧೨
೭	ಮಹದೇವಪ್ಪಯ್ಯ	೧೭೨೩	–	೧೮೦೨ --


ಈಗ ಈ ವಂಶಸ್ಥರ ೧೧ನೇ ತಲೆಮಾರಿನವರಾಗಿದ್ದ ದಿವಂಗತರು ಶ್ರೀ ಎಸ್.ಡಿ. ಮಹಾಪುರುಷ ಅವರು. ಅವರ ಧರ್ಮಪತ್ನಿ ಮತ್ತು ಪುತ್ರರು ವಿಠ್ಠಲಾಪುರದಲ್ಲಿ ಈಗ ವಾಸವಾಗಿದ್ದಾರೆ. ಮೇಲಿನ ವಂಶಾವಳಿಯ ಪ್ರಕಾರ ೬ನೇ ತಲೆಮಾರಿನವರೆಗೂ ಈ ಮನೆತನದಲ್ಲಿ ಇದ್ದದ್ದು ೩ ಹೆಸರುಗಳು ಮಾತ್ರ. ೧) ಭಿಷ್ಟಪ್ಪಯ್ಯ ೨) ಶಿವಪ್ಪಯ್ಯ ೩) ಮಹಾದೇವಪ್ಪ ಯ್ಯ. ಇಲ್ಲಿ ನಾನು ಇತಿಹಾಸದ ತೇದಿಗಳನ್ನು ಪರಿಶೀಲಿಸಿ ಹೊಂದಿಸಿಕೊಳ್ಳಲು ಮೇಲಿನ ಪಟ್ಟಿಯ ೨ನೇ ಕ್ರಮಸಂಖ್ಯೆಯಲ್ಲಿ ಬರೆದಿರುವಂತೆ ಮೂಲ ಪುರುಷ ಭಿಷ್ಟಪ್ಪಯ್ಯನವರನ್ನು ಭಿಷ್ಟಪ್ಪಯ್ಯ ೧ ಮತ್ತು ಕ್ರಮ ಸಂಖ್ಯೆ ೫ರಲ್ಲಿ ನಮೂದಿಸಿರುವ ಭಿಷ್ಟಪ್ಪಯ್ಯನವರನ್ನು ೨ನೆಯವರೆಂದು ಕರೆದಿರುತ್ತೇನೆ. ಈ ವಿವರಗಳನ್ನು ಅವರ ಮನೆತನದ ಸನದಿನಲ್ಲಿ ಮತ್ತು E/letters/JAEE Ltr ೨೦೦೫ ರಲ್ಲಿ ಉಲ್ಲೇಖಿತವಾಗಿರುವ ದಾಖಲೆಯಿಂದ ಆಯ್ದುಕೊಳ್ಳಲಾಗಿದೆ. ಈ ಸನದಿನಲ್ಲಿ ಭಿಷ್ಟಪ್ಪಯ್ಯನವರ ಹಂಪೆಯಗೋಪುರದ ಬಗೆಗೆ ಮತ್ತು ಅವರು ಅನೇಕ ಪವಾಡಗಳನ್ನು ಬರೆಯಲಾಗಿದ್ದು ಇದರ ಛಾಯಾ ಪ್ರತಿಯೊಂದು ಇಲ್ಲಿದೆ (ಚಿತ್ರ.೩,೪). ಚಾರಿತ್ರಿಕವಾಗಿಯೂ ಭಿಷ್ಟಪ್ಪಯ್ಯನವರು ಜೀವಿತದ ಕಾಲಾವಧಿ, ಮತ್ತು ಅವರ ವಂಶಾವಳಿಯವರು ಎಷ್ಟೆಷ್ಟು ವರುಷ ಜೀವಿಸಿದ್ದರು ಎನ್ನುವುದು ಈ ದಾಖಲೆಯಿಂದ ತಿಳಿದು ಬರುತ್ತದೆ. ಈ ವಂಶಾವಳಿ ಪಟ್ಟಿಯಲ್ಲಿರುವ ಅನೇಕರ ಹೆಸರುಗಳಲ್ಲಿ ಬಳ್ಳಾರಿ, ಹೊಸಪೇಟೆ, ಕೂಡ್ಲಿಗಿ, ಹೂವಿನ ಹಡಗಲಿ, ಮುಂಡರಗಿ, ಗದಗ, ಇತ್ಯಾದಿ ತಾಲ್ಲೂಕುಗಳಲ್ಲಿಯ ಜಮೀನು ಸಾಗುವಳಿ ಅಥವಾ ಮಾರಾಟ ಮಾಡುವ ಹಕ್ಕು ಇತ್ತೆಂಬುದನ್ನು ಬ್ರಿಟನ್ನಿನ ಮಹಾರಾಣಿಯ ಮೊಹರಿರುವ ಬಾಂಡ್ ಪೇಪರ್ ಮೇಲೆ ಇಂಗ್ಲೀಷಿನಲ್ಲಿ ಬರೆಯಲಾಗಿರುವುದನ್ನು ಮುಂದೆ ವಿವರಿಸಲಾಗಿದೆ.



ಚಿತ್ರ ೨. ಎಸ್.ಡಿ. ಮಹಾಪುರುಷ, ವಿಠ್ಠಲಾಪುರ ಇವರ ಜೊತೆಗೆ ಹಿಂದಿರುವ ಕಡತಗಳ ಕಟ್ಟುಗಳನ್ನು ಗಮನಿಸಿ.



ಚಿತ್ರ ೩. ಸನದು ಪುಟ ೧
E/letters/JAEE Ltr 2005



ಚಿತ್ರ ೪. ಸನದು ಪುಟ ೨
E/letters/JAEE Ltr 2005


ಚಿತ್ರ ೨ರಲ್ಲಿ ತೋರಿಸಿರುವ ಶ್ರೀಯುತ ಎಸ್.ಡಿ. ಮಹಾಪುರುಷ ಅವರು ತಮ್ಮ ಮನೆತನದಲ್ಲಿ ಇರುವ ದಾಖಲೆಗಳ ಪುಸ್ತಕ ಒಂದನ್ನು ತಾವೇ ಸ್ವತಃ ರಚಿಸಿರುವರು. ಅದರಲ್ಲಿ ಆಯಾ ದಾಖಲೆಗಳ ವಿಷಯಗಳ ಶಿರೋನಾಮೆಯನ್ನು ಕ್ರಮಾಂಕ ಸಹಿತ ನಮೂದಿಸಿರುತ್ತಾರೆ. ಅದರ ಒಂದು ಪುಟದಲ್ಲಿ ನಮೂದಿಸಿರುವ ಕ್ರಮಾಂಕ ೯ರಿಂದ ೧೯ರವರೆಗಿನ ದಾಖಲೆಗಳ ಶಿರೋನಾಮೆಗಳಲ್ಲಿಯ ಐತಿಹಾಸಿಕ ಅಂಶಗಳನ್ನು ಹೀಗೆ ಪಟ್ಟಿ ಮಾಡಲಾಗಿದೆ.

ಕ್ರ.ಸಂ.	ಶಿರೋನಾಮೆಯ ವಿಷಯ	ಕೋಶ ಸಂ. ಪುಟ ಸಂಖ್ಯೆ	ವಿಷಯ
೯	ಶ್ರೀ ಮಹಾಪುರುಷ ಭಿಷ್ಟಪ್ಪಯ್ಯನವರ ಕೋಶ/೯	೯/೭/೯ ಪು.೫/೨	ಎನ್.ಡಿ. ಮರಿಗೌಡ, ಚಿಕ್ಕ ಬೆಟಗೇರಿ ಭಿಷ್ಟೇಶ ಮಹಾಪುರುಷ, ಶಿರಹಟ್ಟಿ, ಫೋ.೦೮೪೮೭೭೨೫೩೮
೧೦(೧)	ಮಹದೇವಪ್ಪಯ್ಯನವರು ಕಂಪನಿ (ಈಸ್ಟ್ ಇಂಡಿಯಾ ಕಂಪನಿ) ಸರಕಾರಕ್ಕೆ ಬರೆದ ಪತ್ರ– ನಕಲು ೧	A/3 A/3	– –
೧೧/೨	ಭಿಷ್ಟಪ್ಪಯ್ಯನವರು ನಾರಾಯಣ ಸ್ವಾಮಿಯವರಿಗೆ ಬರೆದ ಪತ್ರದ ನಕಲು		
೧೨/೩	ಶ್ರೀ ಮಹಾದೇವಪ್ಪಯ್ಯ ರಂಗಾಪುರ ಇವರಿಗೆ ಕಿಲ್ಲೆ ಕೊಪ್ಪಳದ ದೇಸಾಯಿ ಬರೆದುಕೊಟ್ಟ ಪತ್ರದ ನಕಲು	A/4	–
೧೩/೪	ಶ್ರೀ ಮಹಾದೇವಪ್ಪಯ್ಯನವರು ಸರಕಾರಕ್ಕೆ ತೆರಿಗೆ ಕೊಟ್ಟ ಬಗ್ಗೆ ಗುಮಾಸ್ತರು ಬರೆದ ಪತ್ರದ ನಕಲು	A/4	–
೧೪.೫/೧	ದಾನ ಪತ್ರ. ಶಿವಪ್ಪಯ್ಯನವರಿಗೆ ಬಿದ್ರಳ್ಳಿ (ಬಿದಿರಹಳ್ಳಿ) ..ವರು ಬರೆದುಕೊಟ್ಟ ದಾನ ಪತ್ರದ ನಕಲು ಶ್ರೀ ಶಿವಪ್ಪಯ್ಯನವರು. . . ರಂಗಾಪುರ ಇವರಿಗೆ ಬರೆದು ಕೊಟ್ಟದಾನ ಪತ್ರ	A/4 A/5	– –
೧೬/೬	ಶಿವಪ್ಪಯ್ಯನವರಿಗೆ ಬರೆದುಕೊಟ್ಟ ದಾನಪತ್ರದ ನಕಲು	A/6	–
೧೭/೭	ಶಿವಪ್ಪಯ್ಯನವರಿಗೆ ಬರೆದುಕೊಟ್ಟ ದಾನಪತ್ರದ ನಕಲು – ಪ್ರತಿ ೧	A/17	–
೧೮ ೮/೭	ದಾನ ಪತ್ರ ಶ್ರೀ ಶಿವಪ್ಪಯ್ಯನವರು ರಂಗಾಪುರ A/4 ಇವರು ಹೊಂಬಳದ ಯಲ್ಲಪ್ಪಗೌಡರು ಬರೆದು ಕೊಟ್ಟ 'ದಾನಪತ್ರ'ದ ಪ್ರತಿ		–
೧೯ ೮/೨	ಶಿವಪ್ಪಯ್ಯನವರು ರಂಗಾಪುರ ಇವರಿಗೆ ಹೊಂಬಳದ ಗೌಡರು ಬರೆದುಕೊಟ್ಟ ದಾನ ಪತ್ರದ ನಕಲು	A/6	–
–		–	ಈ ಪುಟಗಳು ಮುಂದುವರೆದಿವೆ....

ಶ್ರೀ ಭಿಷ್ಟಪ್ಪಯ್ಯನವರ ೧೧ನೆಯ ತಲೆಮಾರಿನವರಾಗಿದ್ದ ಶ್ರೀಯುತ ಎಸ್.ಡಿ. ಮಹಾಪುರುಷ ಅವರು ತಮ್ಮ ಮನೆತನದಲ್ಲಿರುವ ದಾಖಲೆಗಳಗಳ ಪುಸ್ತಕದಲ್ಲಿಯ (Inventory Record Book) ಕೊನೆಯ ಪುಟದಲ್ಲಿ ನಮೂದಿಸಿರುವ "ಇತಿಹಾಸ ದರ್ಶನದಲ್ಲಿ, ಸೊಂಡೂರಿನಲ್ಲಿ ೧೯೫ರಲ್ಲಿ ಜರುಗಿದ್ದ ಕರ್ನಾಟಕ ಇತಿಹಾಸ ಅಕಾದೆಮಿ, ಬೆಂಗಳೂರಿನಿಂದ ಪ್ರಕಟವಾಗಿರುವ ಮೊಟ್ಟ ಮೊದಲ ಬಾರಿಗೆ ಇತಿಹಾಸದ ವಿದ್ವಾಂಸರೆದುರು "ಹಂಪೆಯ ದ್ವಾರ ಗೋಪುರದ ನಿರ್ಮಾತೃ



ಚಿತ್ರ ೫




ಚಿತ್ರ ೬




ಚಿತ್ರ ೭

ಎಸ್.ಡಿ. ಮಹಾಪುರುಷ ಅವರು ರಚಿಸಿರುವ ದಾಖಲೆಗಳ ಪುಸ್ತಕದ ಮೇಲಿನ ಪಟ್ಟಿಯ ಕೈಬರಹ ಪುಟ


ಶ್ರೀ ಭಿಷ್ಪಪ್ಪಯ್ಯನವರು" ಎಂಬ ಐತಿಹಾಸಿಕ ಸತ್ಯವನ್ನು ಪ್ರಸ್ತುತ ಪಡಿಸಿದ್ದ ನನ್ನ ಹೆಸರಿರುವ ಲೇಖನದ ದಾಖಲೆಯ ಮೂಲ ಪ್ರತಿಯ ಛಾಯಾ ಚಿತ್ರ ೬ರಲ್ಲಿ ತೋರಿಸಲಾಗಿದೆ.



ಚಿತ್ರ ೮



ಚಿತ್ರ ೯



ಚಿತ್ರ ೧೦


ಮೂಲ ದಾಖಲೆ ೧ (ಚಿತ್ರ. ೮) : ಶ್ರೀ ಶಿವಪ್ಪಯ್ಯ, ಸಂಸ್ಥಾನ ರಂಗಾಪುರ ಅವರ ಸಂಸ್ಕೃತದ ಸಹಿ ಇರುವ ಮರಾಠಿ ಲಿಪಿಯ ಪತ್ರದ ಮೇಲಿನ "ಶ್ರೀ ವಿರೂಪಾಕ್ಷ ವಿಜಯತೇ" ಮೊಹರು ಉಲ್ಲೇಖ ಇರುವ ಒಂದು ಭಾಗ. ದಾಖಲೆ ೨ (ಚಿತ್ರ.೯). "ಶ್ರೀ ವಿರೂಪಾಕ್ಷ"ನ ಒಪ್ಪವಿರುವ ಕೃಷ್ಣದೇವರಾಯನ ಕಾಲದ ಕಾಂಚೀಪುರಂನ ತಾಮ್ರ ಪಟ: ಕೃಪೆ: ಡಾ. ಲ.ನ. ಸ್ವಾಮಿ, ಮೈಸೂರು ಮೂಲ ದಾಖಲೆ ೩ (ಚಿತ್ರ ೧೦): ಶ್ರೀಯುತ ಮಹದೇವಪ್ಪಯ್ಯ ನವರಿಗೆ ದಾನಿಯರಾಮ ಕೆರೆ, ಹೊಸಪೇಟೆ ತಾಲ್ಲೂಕು, ಬಳ್ಳಾರಿಜಿಲ್ಲೆಯ ೧.೮ ಎಕರೆ ಇನಾಂ ಭೂಮಿಯನ್ನು ಬಳುವಳಿಯಾಗಿ ಬರೆದುಕೊಟ್ಟ "ಟೈಟಲ್ ಡೀಡ್". ಮದ್ರಾಸ್ ಇನಾಂ ಕಮೀಷನ್ ಅವರ ಸಹಿ, ಕಚೇರಿಯ ಸೀಲ್, ಹಾಗೂ ತಾರೀಖು ಡಿಸೆಂಬರ್ ೧೯, ವರ್ಷ ೧೮೬೧.

ಮೂಲ ದಾಖಲೆ ೩ ಚಿತ್ರ ೧೦ರಲ್ಲಿ ತೋರಿಸಿರುವ ಇಂಗ್ಲೀಷ್ ದಾಖಲೆಯ ಕನ್ನಡ ಅನುವಾದ

೧. ಮದ್ರಾಸ್ ಕೌನ್ಸಿಲ್ ನಲ್ಲಿದ್ದ ರಾಜ್ಯಪಾಲರ ಪರವಾಗಿ, ನಾನು ನಿಮ್ಮ ಪಟ್ಟವನ್ನು ವೈಯಕ್ತಿಕ ಇನಾಮಿಗೆ ಒಪ್ಪಿಕೊಂಡಿದ್ದೇನೆ, ಬಳ್ಳಾರಿ ಜಿಲ್ಲೆಯ ಹೊಸಪೇಟೆಯ ತಾಲ್ಲೂಕಿನ ದಾನಿಯ ರಾಮಕೇರಿ ಹಳ್ಳಿಯಲ್ಲಿಯಲ್ಲಿದೆ ಎಂದು ಹೇಳಲಾಗಿದೆ ----------- ಒಣ ಭೂಮಿ, ಮತ್ತು ಎಕರೆಗಳು (ಒಂದು) ೧.೮ ಎ ---- ತೇವಭೂಮಿ.

೨. ಈ ಇನಾಮ್ ಮೂಲ ಕುಟುಂಬದಿಂದ ಒಂದು ಪಿತ್ರಾರ್ಜಿತ ಆಸ್ತಿಯಾಗಿದ್ದು ವಾರ್ಷಿಕ ಬಾಡಿಗೆ ರೂ. ಏಳು ಮತ್ತು ಎಂಟು ಅಣೆ (೭-೮-೦) ಪಾವತಿಗೆ ಒಳಪಟ್ಟಿರುತ್ತದೆ. ಇದು ಸರ್ಕಾರದ ಹಕ್ಕುಗಳ ಸಂವಹನದಲ್ಲಿ (ನಿಯಮಗಳ ಪ್ರಕಾರ) ಮೇರೆಗೆ ವಿಧಿಸಲಾಗಿದೆ. ಇನಾಮ್ ಅನ್ನು ಸಂಪೂರ್ಣ ಅಧೀನತೆಗೆ (ಫ್ರೀಹೋಲ್ಡ್‌ನಲ್ಲಿ) ನಿಮಗೆ ದೃಢಪಡಿಸಲಾಗಿದೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಮೇಲೆ ತಿಳಿಸಿದ ಬಾಡಿಗೆಯ ಪಾವತಿಗೆ ಒಳಪಟ್ಟು, ನೀವು ಯೋಚಿಸಿದಂತೆ ಭೂಮಿಯು ನಿಮ್ಮದೇ ಸಂಪೂರ್ಣ ಆಸ್ತಿಯಾಗಿರುತ್ತದೆ ಅಥವಾ ನಿಮ್ಮ ಇಷ್ಟದಂತೆ ಮಾರಲು (ವಿಲೇವಾರಿ) ಮಾಡಲು ನಿಮಗೆ ಅಧಿಕಾರವಿರುತ್ತದೆ.

೩. ತೆರವು (ಕ್ವಿಟ್) ಬಾಡಿಗೆಯ ೨೦ ವರ್ಷಗಳ ಖರೀದಿಗೆ ಸಮನಾದ ಮೊತ್ತವನ್ನು ಒಮ್ಮೆಗೇ ಪಾವತಿಸಲು, ನೀವು ತೆರವು (ಕ್ವಿಟ್) ಬಾಡಿಗೆಗೆ ಒಳಪಡಿಸಲು ಬಯಸಿದರೆ, ಅದನ್ನು ಮಾಡಲು ನೀವು ಸ್ವಾತಂತ್ರ್ಯವನ್ನು ಹೊಂದಿರುತ್ತೀರಿ.




ಸೀಲ್ ಮದ್ರಾಸ್, ಮೂಲ ಸಹಿ
ಇನಾಂ ಆಯೋಗ, ಇನಾಂ ಆಯುಕ್ತರು
ದಿನಾಂಕ ೧೯ನೇ ಡಿಸೆಂಬರ್ ೧೮೬೧ ಸ್ಥಳ: ವೆಲ್ಲೂರು


ವಿಮರ್ಶೆ: ಮೇಲೆ ಕಾಣಿಸಿರುವ ಇಂಗ್ಲೀಷಿನ ಲಿಪಿಯಲ್ಲಿರುವ ಶ್ರೀಯುತ ಮಹದೇವಪ್ಪಯ್ಯನವರಿಗೆ ಬರೆದುಕೊಟ್ಟ ಹಕ್ಕು ಪತ್ರ (Title Deed) ದ ಕನ್ನಡ ಅನುವಾದ. ಇಲ್ಲಿರುವ ವಿಕ್ಟೋರಿಯಾ ರಾಣಿಯ ಮೊಹರಿನಲ್ಲಿ ಗರ್ವರ್ನರ್ ಇನ್ ಕೌನ್ಸಿಲ್ ಆಫ್ ಮದ್ರಾಸ್ ಎನ್ನುವುದನ್ನೂ ಮತ್ತು ಅಂದಿನಕಾಲದ ಇಂಗ್ಲೀಷಿನ ಎ.ಬಿ.ಸಿ.ಡಿಯ ೩ನೇ ರೀತಿಯಲ್ಲಿ ಬರೆದ ಸುಂದರವಾಗಿ ಬರೆದಿರುವ, ಮೂಲತಃ ಕೆಂಪು ಬಣ್ಣದ ಸೀಲ್‌ನಲ್ಲಿರುವ ಅಕ್ಷರಗಳನ್ನು ಓದುಗರು ಗಮನಿಸಬೇಕಾಗಿ ವಿನಂತಿ. ಇಂಗ್ಲೀಷಿನ ೩ನೇ ಎ.ಬಿ.ಸಿ.ಡಿಯಲ್ಲಿಯೇ ಅತಿಮುಖ್ಯ ಪತ್ರಗಳನ್ನು ಮತ್ತು ಗೌರವಾನ್ವಿತರಿಗೆ ಬಳಸುವುದೂ ಆಗಿನ ಕಾಲದ ಬ್ರಿಟಿಷರಲ್ಲಿ ಜಾರಿ ಇದ್ದಂಥ ಒಂದು ಶಿಸ್ತುಬದ್ಧ ಪದ್ಧತಿ ಆಗಿದ್ದಿತು.

೧. ಇದು ಮದ್ರಾಸ್ ಇನಾಂ ಆಯುಕ್ತರು ಅಲ್ಲಿಂದ ಆಡಳಿತ ಮಾಡುತ್ತಲಿದ್ದ ಗವರ್ನರ್ ಇನ್ ಕೌನ್ಸಿಲ್ಲರ ಪರವಾಗಿ ನೀಡಿರುವ ಹಕ್ಕು ಪತ್ರವಾಗಿದ್ದರಿಂದ ಬಳ್ಳಾರಿ ಜಿಲ್ಲೆ, ಹೊಸಪೇಟೆ ತಾಲ್ಲೂಕಿನಲ್ಲಿದ್ದ ದಾನಿಯ ರಾಮಕೇರಿ ಹಳ್ಳಿಯ ಭೂಪ್ರದೇಶವೆಲ್ಲಾ ಅವರ ಆಡಳಿತದಲ್ಲಿದ್ದುದನ್ನು ಸ್ಪಷ್ಟವಾಗಿ ತಿಳಿಸುತ್ತದೆ.

೨. "ನಾನು ನಿಮ್ಮ ಈ ಜಮೀನಿನ ಹಕ್ಕುದಾರಿಕೆಯ ಪಟ್ಟವನ್ನು ವೈಯಕ್ತಿಕ ಇನಾಮಿಗೆ ಒಪ್ಪಿಕೊಂಡಿದ್ದೇನೆ" ಎಂದು ನಮೂದಿಸಿರುವುದರಿಂದ ರಂಗಾಪುರ ಸಂಸ್ಥಾನದ (ಇಂದಿನ ಮಾಗಳದ) ಶ್ರೀ ಭಿಷ್ಟಪ್ಪಯ್ಯನವರಿಂದ ೭ನೇ ತಲೆಮಾರಿನವರಾಗಿದ್ದ ಮಹದೇವಪ್ಪಯ್ಯನವರಿಗೆ ಈ ಇನಾಮ್ ಮೂಲ ಕುಟುಂಬದಿಂದ ಬಂದ ಒಂದು ಪಿತ್ರಾರ್ಜಿತ ಆಸ್ತಿಯಾಗಿದ್ದು ಸರ್ಕಾರದ ಹಕ್ಕುಗಳ ಸಂವಹನದ (ನಿಯಮಗಳ ಪ್ರಕಾರ) ಮೇರೆಗೆ ನೀಡಿರುವುದು ಶ್ರೀಭಿಷ್ಟಪ್ಪಯ್ಯನವರ ಸಮಾಜ ಸೇವೆ ಯಾವ ಮಟ್ಟದ್ದಾಗಿತ್ತು ಎನ್ನುವುದನ್ನು ಖಚಿತಪಡಿಸುತ್ತದೆ. ಅವರ ಹೆಸರಿನ ವ್ಯಾಪ್ತಿ ರಂಗಾಪುರದಿಂದ ಬಹುದೂರದಲ್ಲಿದ್ದ ಮದ್ರಾಸಿನ ಬ್ರಿಟಿಷ್ ಗವರ್ನರ್‌ಗೂ ತಿಳಿದಿದ್ದಿತೆನ್ನುವುದನ್ನು ಶೃತಪಡಿಸುತ್ತದೆ ಎಂದು ಬೇರೆ ಹೇಳಬೇಕಾಗಿಲ್ಲ.

ಮೂಲ ದಾಖಲೆ ೪: ಶಿವಪ್ಪಯ್ಯ, ರಂಗಾಪುರ ಸಂಸ್ಥಾನ, ಇವರಿಗೆ ಬಳ್ಳಾರಿ ಮತ್ತು ಮದ್ರಾಸ್ ಆಡಳಿತ ವಿಭಾಗದಿಂದ ಹೊರಡಿಸಿರುವ ಆಗಿನ ಕಾಲದ ಬಾಂಡ್ ಪೇಪರ್ ಮೇಲೆ, ಇಂಗ್ಲೀಷ್ ಭಾಷೆಯ ಪ್ರಿಂಟ್ ಸಹಿತ ಇರುವ ಒಂದು ಮುಖ್ಯ ದಾಖಲೆ.





ಚಿತ್ರ ೧೧ ಮೂಲ ದಾಖಲೆ ೪ (ಚಿತ್ರ ೧೧): ಕನ್ನಡ ಅನುವಾದ

ಈಶ್ವರ ನಾಮ ಸಂವತ್ಸರದ ಶ್ರಾವಣ ಶುದ್ಧ ೧೦ಯಲ್ಲು ರಂಗಾಪುರ ಸಂಸ್ಥಾನ ಶ್ರೀಶಿವಪ್ಪಯ್ಯ ನವರಿಗೆ ----- ರಂಗಾಪುರದಲ್ಲಿ ಯಿರುವ ಸಿಂಗವ್ವಾಕೋರು ಮಲ್ಲಪ್ಪಾ ಚೆ - ಬಿ ನಾನು ಬರ್ತ ಕೊಟ್ಟ ಖ(ಕ)ರಾರುಪತ್ರ ಈ ಪತ್ರ ಯೇನಂದ್ರೆ(ಯೇನೆಂದರೆ) ನಾನು ಯೀದಿನ ನಂನ ಭಾಗ(ದ)ತ ಹಿತ್ತಲ್ಲಾಪೂರ (ವಿಠ್ಠಲಾಪುರ) ಹೊರಗೆಯಿರೋದು ಪೂರ್ವ ಪಶ್ಚಿಮ ಮಳಾ ೪೫ ದಕ್ಷಿಣೋತ್ತರ ಮಳಾ ೪೦ ಯೀ ಜಾಗ ರೂಪಾಯಿ ೨೧೧ ಅಕ್ಷರದಲ್ಲಿ ಯೆರಡುನೂರು ರೂಪಾಯಿ [ಸಂಖ್ಯೆಯಲ್ಲಿರುವ ಪ್ರಕಾರ ೨೧೧ ಇರಬೇಕು ಆದರೆ ಇಲ್ಲಿ ಅಕ್ಷರದಲ್ಲಿ ಬರೆಯುವಾಗ ೨೦೦ ಎಂದು ತಪ್ಪಾಗಿ ಬರೆದಿರುವಂತೆ ತೋರುತ್ತದೆ] ನಗದು ತೆಗೆದು ಕೊಂಡು ನಿಂಮ ವಶಕ್ಕೆ ಕೊಟ್ಟು ಯಿರುತೇನೆ ಯಿದರ ಚೆಕ [ಚೆಕ್ಕು] ಬಂದಿ ಪೂರ್ವಕ್ಕೆ ೭೦ ಮಳಾ ಯಿನಾಮು ಹೊಲಾ ಪಶ್ಚಿಕ್ಕೆ [ಪಶ್ಚಿಮಕ್ಕೆ] ನದಿನೀರು ತರೋ ರಸ್ತೆ ವುತ್ತರಕ್ಕೆ ೭೦ಮಳಾ ಹೀರ್ತಿಯಲಿ(ಈರೀತಿಯಲ್ಲಿ) ಕೊಟ್ಟಾಜಮೀನು ದಕ್ಷಿಣಕ್ಕೆ ದನಗಳು ಹೋಗತಕ್ಕ ರಸ್ತೆ ಮಧ್ಯದಲ್ಲಿ ಯಿರೋಜಾಗಾ ೩೫ಮಳಾ

ಖರಿದಿಗೆ ಕೊಟ್ಟು ಯಿರುತೇನೆ ಸದರಿ ಜಾಗಾದಮ್ಯಾಲ ನಂನ ಹಾಗೂ ನಂನ ವಾರ್ಸದಾರದು ಯೇನು ಹಕ್ಕುಯಿರೋದಿಲ್ಲಾ ಯೆಂದು ನಂನ ರಾಜಿಯಿಂದ ಬರ್‍ತಕೊಟ್ಟ ಪತ್ರಾ ಸಹಿ ------

------ಮಹೂರತಾ ನಿಂಗಪ್ಪಾ ಕೊನಾಮಲ್ಲಪ್ಪಾ ಚೈಬಿಚಿ । ಬರಹಾ

ಸಾಕ್ಷಿ

೧ ಕೆಂಚ –ರೆಡೀ (ಕೆಂಚ ರೆಡ್ಡಿ)ರಂಗಾಪುರ ಯೀತನ ಸಾಕ್ಷಿಗೆ ಬಿ । ಷರಾ

೧ ತಿರ್ಮಲಿ ರಾಮರೂ ॥ ರ ॥

ಬಿ॥ ಶಂಕರಾವ ಮೇವುಂಡಿ



SEAL	STAMP OFFICE
STAMP OF DEPARTMENT	25 APRIL 77
JUNE 1877 BELLARY	MADRAS

[ಶ್ರೀಗುರು ಭಿಷ್ಟಪ್ಪಯ್ಯ ಗ್ರಂಥ ಭಾಂಡಾರ, ವಿಠ್ಠಲಾಪುರ. ತಾ. ಗದಗ. ಪುಟ ಸಂಖ್ಯೆ ೨೭ A/9]

ಸೂಚನೆ: ೧. ಇಲ್ಲಿ ಉಲ್ಲೇಖಿತವಾಗಿರುವ ಜಾಗವನ್ನು ಚೆಕ್ಕು ಬಂದಿ ಹೇಳಿರುವುದರಿಂದ ಸ್ವಲ್ಪ ಕಷ್ಟಪಟ್ಟು ಆಸಕ್ತರು ಹುಡುಕಿದರೆ ಈಗಲೂ ವಿಠ್ಠಲಾಪುರದಲ್ಲಿ ಗುರುತಿಸಬಹುದಾಗಿದೆ. ಏಕೆಂದರೆ ನದಿ ನೀರುತರುವ ಹಾದಿ ಮತ್ತು ದನಕರುಗಳು ನದಿಗೆ ಹೋಗುವ ದಾರಿ ಇವೆರಡೂ ಇಂದಿಗೂ ಹಾಗೆಯೇ ಇವೆ.

೨. ಈ ರೆವೆನ್ಯೂ ಪತ್ರದ ಭಾಷೆ ಪಕ್ಕಾ ಬಳ್ಳಾರಿ ಸೀಮೆಯ ಗ್ರಾಮೀಣ ಶಬ್ದಗಳನ್ನು ಒಳಗೊಂಡಿದ್ದು ಬರೆದಿರುವವನು ಮರಾಠಿಯವನಾಗಿದ್ದಿರ ಬಹುದೆಂದು ಊಹಿಸಬಹುದಾಗಿದೆ.


೩. ಈ ಭಾಗವೆಲ್ಲವೂ ಅಂದಿನ ಮದ್ರಾಸ್ ಪ್ರೆಸಿಡೆನ್ಸಿಗೆ ಸೇರಿದ್ದ ಬಳ್ಳಾರಿ ಜಿಲ್ಲೆಯ ರೆವೆನ್ಯೂ ಡಿಪಾರ್ಟ್ ಮೆಂಟ್ ನಿಂದ ಖರೀದಿಯಾಗಿರುವುದರಿಂದ ಮತ್ತು ಸಾಕ್ಷೀದಾರರ ಸಹಿಯಲ್ಲಿ ತಿರ್ಮಲಿ ರಾಮ ಎಂಬವರು ಅಂದಿನ ಬಳ್ಳಾರಿ ಜಿಲ್ಲೆಯ ಒಬ್ಬ ರೆವೆನ್ಯೂ ಅಧಿಕಾರಿಯಾಗಿದ್ದರೆಂದು ಊಹಿಸಬಹುದಾಗಿದೆ.

ಮೇಲೆ ವಿವರಿಸಲಾಗಿರುವ ಶ್ರೀ ಶಿವಪ್ಪಯ್ಯನವರಿಗೆ ರಂಗಾಪುರದಲ್ಲಿ ಯಿರುವ ಸಿಂಗವ್ವಾಕೋರು ಮಲ್ಲಪ್ಪಾ ಅವರು ನೀಡಿರುವ ಜಮೀನಿನ ಮೂಲ ಹಕ್ಕುಪತ್ರದ ಛಾಯಾ ಚಿತ್ರ. ೮ ಅಣೆ ಸ್ಟಾಂಪ್ ಪೇಪರ್ ಮೇಲೆ ಬರೆದಿರುವ ಈ ಪತ್ರದಲ್ಲಿ ರಾಣಿ ವಿಕ್ಟೋರಿಯಾ, ಇಂಗ್ಲೆಂಡ್ ಅವರ ಭಾವ ಚಿತ್ರ ವಿರುವುದನ್ನು ಗಮನಿಸಿ.


ಬಳ್ಳಾರಿಯಿಂದ ಹೊರಡಿಸಲಾಗಿರುವ ಈ ಕಾಗದದ ತೇದಿ ಜೂನ್ ೧೧, ೧೮೭೭ ಹಾಗೂ ತಾರೀಖು ೨೬ನೇ ಏಪ್ರಿಲ್ ೧೮೭೭ರಲ್ಲಿ ಮದ್ರಾಸ್ ರೆವಿನ್ಯೂ ಕಛೇರಿಯಿಂದ ಅಧಿಕೃತವಾಗಿ ಅಂಗೀಕರಿಸಲಾಗಿದೆ ಎನ್ನುವುದನ್ನು (ಕೆಂಚ ರೆಡ್ಡಿ) ರಂಗಾಪುರ ಈ ಪತ್ರಕ್ಕೆ ಇಬ್ಬರು ಸಾಕ್ಷಿಗಳಾಗಿ ಬಿ । ತಿರರ್ಮಲಿ ರಾಮರೂ ॥ ರ । ಮತ್ತು ಬಿ॥ ಶಂಕರಾವ ಮೇವುಂಡಿ ಅವರು ತಮ್ಮ ಕೈಬರಹದ ಸಾಕ್ಷಿ ನೀಡಿರುವುದನ್ನು ಚಿತ್ರದಲ್ಲಿ ಗುರುತಿಸಲಾಗುತ್ತದೆ.

ಮೂಲ ದಾಖಲೆ ಛಾಯಾ ಚಿತ್ರ ೫. ಶ್ರೀ ಭಿಷ್ಟಪ್ಪಯ್ಯ, ರಂಗಾಪುರ ಸಂಸ್ಥಾನ, ಇಂದಿನ ಮಾಗಳದಿಂದ ೨ ಕಿ.ಮೀ. ಬಳ್ಳಾರಿಜಿಲ್ಲೆ, ತುಂಗಭದ್ರಾತೀರದ ಬಲದಂಡೆ ವಿಠ್ಠಲಾಪುರ ತುಂಗಭದ್ರೆಯ ಎಡದಂಡೆ ಮುಂಡರಗಿ ತಾ. ಗದಗ ಜಿಲ್ಲೆ ಅವರ ಮನೆತನದಲ್ಲಿರುವ ಖಾತೆ, ಕಿರ್ದಿ ಪುಸ್ತಕ. ಇದರಲ್ಲಿ ಅವರ ಆಡಳಿತಕ್ಕೆ ಒಳಪಟ್ಟ ಅನೇಕ ಜಮೀನುಗಳು, ಅವನ್ನು ಸಾಗುವಳಿ ಮಾಡುತ್ತಿದ್ದವರ ರೆವೆನ್ಯೂ ಹೊಲಸಂಖ್ಯೆಗಳ ಸಹಿತ, ಯಾವ ಜಮೀನಿಗೆ ಎಷ್ಟುತೆರೆಗೆ ಕಟ್ಟುತ್ತಿದ್ದರು ಎಂದು

ಪ್ರತಿ ವರುಷಜಮಾ ಬಂದಿಗೆ ಹಾಜರುಪಡಿಸುತ್ತಿದ್ದ ಒಂದು ಪುಸ್ತಕದ ವರುಷ ೧೭೮೩ನೇ ಇಸ್ವಿಯ ಪುಸ್ತಕದ ಮೇಲು ಹೊದಿಕೆ (ಅಟ್ಟೆ)ಯ ಭಾಗ. ಮರಾಠಿ ಲಿಪಿಯಲ್ಲಿದೆ.



ಚಿತ್ರ ೧೨



ಚಿತ್ರ ೧೩



ಚಿತ್ರ ೧೪

ಮೂಲ ದಾಖಲೆ ೬ ಚಿತ್ರ ೧೩. ವಿಠ್ಠಲಾಪುರದ ಮಹಲಿಂಗೇಶ್ವರ ದೇವಸ್ಥಾನದಲ್ಲಿರುವ ಸಿಂಹಾಸನ ಮಂಟಪದ ಕಂಚಿನಿಂದ ಮಾಡಿರುವ ಚರಪೀಠ (Removable peetha) ದ ಮೇಲಿರುವ ಶಾಸನ. ಇದರ ಇತರ ವಿವರಗಳನ್ನು ಇತಿಹಾಸ ಅಕಾದೆಮಿ, ಸೊಂಡೂರಿನಲ್ಲಿ ೧೯೯೫ ನಡೆಸಿದ ವಾರ್ಷಿಕ ಸಮ್ಮೇಳನದಲ್ಲಿ ಪ್ರಸ್ತುತ ಪಡಿಸಲಾಗಿದ್ದು ಈಗ ಅದರ ಮೂಲ ಲಿಪಿಯಿರುವ ಚಿತ್ರವನ್ನು ಪ್ರಕಟಿಸುತ್ತಿದ್ದೇನೆ.

ಸು. ೪ ಅಡಿ ಎತ್ತರವಿರುವ ಶಾಸನೋಕ್ತ ಕಂಚಿನ "ಸಿಂಹಾಸನ ಮಂಟಪ"ದಲಿ ಸು.೫೦ಕೆ.ಜಿ. ಭಾರವಿರುವ ಪಾದರಸಲಿಂಗ "ಮಹಾಲಿಂಗೇಶ್ವರ".



ಮೇಲ್ಭಾಗದಲ್ಲಿ ಶಾಸನವಿರುವ ಗಜಗಳು ಹೊತ್ತಿರುವ ಶಿಲ್ಪ ಗಳನ್ನು ಒಳಗೊಂಡಿರುವ "ಚರಪೀಠ" (Removable). ಇದನ್ನು ಮಂಟಪದಿಂದ ಹೊರ ತೆಗೆದು ಇಲ್ಲಿ ಛಾಯಾಗ್ರಹಣ ಮಾಡಲಾಗಿದೆ. ಇದಮೇಲೇಯೇ ಶ್ರೀ ಮಹಾಲಿಂಗೇಶ್ವರ ಮೂರ್ತಿಇರುವುದನ್ನು ಗಮನಿಸಬಹುದಾಗಿದೆ.

ಈ ಶಾಸನದ ಬಗೆಗೆಗಿನ ಹೆಚ್ಚಿನ ವಿವರಗಳನ್ನು ಇತಿಹಾಸದರ್ಶನ ೧೯೯೫ದಿಂದ ತಿಳಿಯಬಹುದು. ಇಲ್ಲಿ ಇದನ್ನು ಪ್ರಸ್ತುತ ಪಡಿಸಲು ಕಾರಣವೇನೆಂದರೆ ಈ ಶಾಸನದ ಮೂಲ ಪ್ರತಿಯನ್ನು ಅಲ್ಲಿ ಪ್ರಕಟಿಸಿರುವುದಿಲ್ಲ. ಆಗಿನ್ನೂ ಶ್ರೀ ಭಿಷ್ಟಪ್ಪಯ್ಯನವರ ಪೂರ್ಣ ಖಚಿತ ಜೀವಿತಾಧಿಯ ಕಾಲದ ಬಗೆಗೆ ಸರಿಯಾಗಿ ತಿಳಿದಿದ್ದಿಲ್ಲ. ಈಗ ಈ ಸಂಪ್ರಬಂಧದಲ್ಲಿ ಅವರ ಮನೆಯಲ್ಲಿ ದೊರೆತ ಮೇಲೆ ತೋರಿಸಲಾಗಿರುವ ಸನದಿನ ಪ್ರಕಾರ (ಚಿತ್ರ.೪) ಕ್ರಿ.ಶ. ೧೬೦೮ರಿಂದ ೧೬೯೮ ಎಂದು ಖಚಿತವಾಗಿದೆ. ಈ ಶಾಸನದ ಕಾಲ ಕ್ರಿ.ಶ. ೧೬೩೫ ಇದು ಅವರ ಜೀವಿತದ ಅವಧಿಯಲ್ಲೇ ಅವರು ಪೂಜಿಸುತ್ತಿದ್ದ ರಸಲಿಂಗ "ಮಹಾಲಿಂಗೇಶ್ವರನಿಗೆ" ಅವರ ನಿರ್ದೇಶನದಂತೆ ಕಾಶಿವಿಶ್ವೇಶ್ವರ ಮತ್ತು ಅನ್ನಪೂರ್ಣೆಯರನ್ನು ಕುರಿತಾಗಿ ವ್ರತ ಆಚರಿಸಿದನಂತರ ಮನೋರಥ ಪೂರ್ಣಗೊಂಡಿದ್ದರ ಗೌರವಾರ್ಥವಾಗಿ ಬೊಂಮಿಗಟ್ಟಿ ಸೀಮೆಯ ದೇಸಾಯಿದೇಶ ಕುಲಕರ್ಣಿ ವಂಶಸ್ಥರಾಗಿದ್ದ ತಿಂಮಪ್ಪನಮಗ ಕೋನಪ್ಪ ಎನ್ನುವವರು ಸಿಂಹಾಸನ ಮಂಟಪವೊಂದನ್ನು ಮಾಡಿಸಿ ಕೊಟ್ಟಿರುವುದನ್ನು ಉಲ್ಲೇಖಿಸುತ್ತದೆ. ಹೀಗಾಗಿ ಇದೊಂದು ಶ್ರೀಭಿಷ್ಟಪ್ಪಯ್ಯನವರಲ್ಲಿ ಜನರಿಟ್ಟಿದ್ದ ಭಕ್ತಿ-ವಿಶ್ವಾಸಗಳ ಹೆಗ್ಗುರುತಾಗಿದ್ದು, ಇಂದಿಗೂ ವಿಠ್ಠಲಾಪುರದ ದೇವಸ್ಥಾನದಲ್ಲಿ ಕಂಡುಬರುತ್ತದೆ.

ಈ ಶಾಸನದ ಎರಡನೇ ವಿಶೇಷವೆಂದರೆ ಶ್ರೀಯುತ ಮಾಧವ ನಾಕಟ್ಟಿಯವರು 'ಇತಿಹಾಸ ದರ್ಶನ'ದ ೨೫ನೇ ಸಂಚಿಕೆ ರಿವ್ಯೂ (ದಿ ಮಿಥಿಕ್ ಸೊಸೈಟಿ, ಬೆಂಗಳೂರು) ಕಾಲದಲ್ಲಿ ಅದುವರೆಗೆ ಇತಿಹಾಸ ದರ್ಶನದಲ್ಲಿ ಪ್ರಕಟವಾಗಿದ್ದ ಎಲ್ಲ ಶಾಸನಗಳಲ್ಲಿ ಇದೊಂದೇ ಕಂಚಿನ ಶಾಸನವೆಂದು ಗುರುತಿಸಿದ್ದಾರೆ.

೩ನೆಯದಾಗಿ ಈ ಶಾಸನದಲ್ಲಿ ಉಲ್ಲೇಖಗೊಂಡಿರುವ "ಬೊಂಮಿಘಟ್ಟಿ" ಇಂದಿನ ಬೊಮ್ಮಗಟ್ಟಿ ಶ್ರೀ ಭಿಷ್ಟಪ್ಪಯ್ಯನವರು ವಾಸಿಸುತ್ತಿದ್ದ ಮಾಗಳ, (ಅಂದಿನ ರಂಗಾಪುರ ಸಂಸ್ಥಾನ) ಹೂವಿನ ಹಡಗಲಿ ತಾಲ್ಲೂಕು ತುಂಗಭದ್ರಾ ನದಿಯ ಬಲದಂಡೆಯಿಂದ ಸುಮಾರು ೧೦೦ ಕಿ.ಮೀ. ದೂರದಲ್ಲಿದ್ದು ಅದು ವಿಜಯನಗರದ ಕಾಲದಿಂದಲೂ ಒಂದು "ಸೀಮೆ" ಆಗಿತ್ತೆಂದು ತಿಳಿದು ಬರುತ್ತದೆ. ಮಾಗಳವು ಹೂವಿನ ಹಡಗಲಿ ತಾಲ್ಲೂಕಿನಲ್ಲಿದ್ದರೆ ಬೊಮ್ಮಗಟ್ಟಿಯು ಕೂಡ್ಲಿಗಿ ತಾಲ್ಲೂಕಿನಲ್ಲಿದ್ದು ಇವೆರಡೂ ಸ್ಥಳಗಳು ಅಂದಿನ ಬಳ್ಳಾರಿಜಿಲ್ಲೆಗೆ ಸೇರಿದ್ದವು. ಬಳ್ಳಾರಿಜಿಲ್ಲೆಯ ರೆವೆನ್ಯೂ ಆಡಳಿತವು ಅಂದಿನ ಮದ್ರಾಸ್ ಪ್ರಾಂತ್ಯದಿಂದ ನಡೆಯುತ್ತಿತ್ತು ಎಂದು ಮೇಲೆ ತೋರಿಸಿರುವ ಇನ್ನಿತರ ಆಸ್ತಿ ಹಕ್ಕುಗಳ ಅಧಿಕಾರವು ಮದ್ರಾಸ್‌ನ ಬ್ರಿಟಿಷ್ ಇನಾಂ ಕಮೀಷಿನರ್ ಮತ್ತು ಗವರ್ನರ್ ನವರ ಕೈಯಲ್ಲಿತ್ತು ಎಂದು ತಿಳಿದುಬರುತ್ತದೆ.

ಸಂಪ್ರಬಂಧದ ಸಾರಾಂಶ

೧. ಮೇಲಿನ ದಾಖಲೆಗಳಿಂದ ತಿಳಿದುಬರುವ ಅಂಶವೇನೆಂದರೆ ಶ್ರೀ ಭಿಷ್ಟಪ್ಪಯ್ಯ ರಂಗಾಪುರ ಸಂಸ್ಥಾನ, (ಮಾಗಳ/ವಿಠ್ಠಲಾಪುರ) ಇವರು ಹಂಪೆಯ ದ್ವಾರಗೋಪುರವನ್ನು ನಿರ್ಮಿಸಿದವರೆಂದು (?) ಹೇಳುವ ಇಲ್ಲಿಯ ವರೆಗೆಗಿನ ಮೌಖಿಕ ಹೇಳಿಕೆ ಇತ್ಯಾದಿಗಳಿಗೆ ಉತ್ತರವಾಗಿ ಅವರ ಈಗಿನ ಮನೆತನದವರು ವಾಸವಾಗಿರುವ ವಿಠ್ಠಲಾಪುರ ಮುಂಡರಗಿ ತಾಲ್ಲೂಕು, ಗದಗ ಜಿಲ್ಲೆ, ಅವರ ಮನೆತನದಿಂದಲೇ ದೊರೆತಿರುವ ದಾಖಲೆಗಳಲ್ಲಿಯ ಸನದಿನಲ್ಲಿರುವ ಐತಿಹಾಸಿಕ ಅಂಶಗಳಿಗೆ ಹೋಲಿಸಿ ತೇದಿಸಹಿತ ಇರುವ ಶಾಸನ, ಇತ್ಯಾದಿಗಳನ್ನು ದಾಖಲೆಗಳೊಂದಿಗೆ ಮೊದಲ ಬಾರಿಗೆ ಪ್ರಸ್ತುತ ಪಡಿಸಿರುವುದು.

೨. ಶಾಸನವು ೧೭ನೇ ಶತಮಾನದ ಲಿಪಿಯಲ್ಲೇ ಇದ್ದು ಇದು ಶ್ರೀ ಭಿಷ್ಟಪ್ಪಯ್ಯನವರು ಜನಿಸಿದ ನಂತರ ಅವರ ೩೭ನೇ ವಯಸ್ಸಿನಲ್ಲಿ ಇರುವುದರಿಂದ ಅವರೊಬ್ಬ ಐತಿಹಾಸಿಕ ಪುರುಷರು ಮತ್ತು ಅವರಿಗೆ ರಸವಿದ್ಯೆ, ಸಿಂಹಾಸನ ಮಂಟಪದ ರಚನೆಗೆ ಕಾರಣವಾಗಿರುವುದರಿಂದ ಲೋಹವಿದ್ಯೆ, ಇತ್ಯಾದಿಗಳಲ್ಲಿ ಪರಿಣತಿ ಇತ್ತು ಎಂದು ಸ್ಪಷ್ಟವಾಗುತ್ತದೆ. ಈ ಲಿಂಗದಿಂದ ಆಗಾಗ ಪಾದರಸ ಹೊರ ಬರುತ್ತಿದ್ದು ಅದರ ಸಂಗ್ರಹವನ್ನು ಅವರ ಮೆನತನದವರಲ್ಲಿ ಇರಿಸಲಾಗಿದೆ. ನಾನು ನೋಡಿದಂತೆ ೩ ಸಲ ಪಾದರಸವು ಹೊರಬಂದಿದ್ದರೂ ವಿಶೇಷ ಲೋಹದಿಂದ ಮಾಡಲಾಗಿರುವ ಈ ಲಿಂಗವು ೨೦೨೧ಕ್ಕೆ ೩೮೬ ವರುಷ (ಕ್ರಿ.ಶ. ೧೬೩೫ ಶಾಸನೋಕ್ತ ಮಂಟಪದ ತೇದಿ)ಗಳ ನಂತರವೂ ಇನ್ನೂ ಪಾದರಸದಲ್ಲಿ ಕರಗದೇ ಇರುವುದು ಶ್ರೀ ಭಿಷ್ಟಪ್ಪಯ್ಯನವರಿಗಿದ್ದ "ರಸ ಶಾಸ್ತ್ರದ" ಪರಿಣತಿಗೆ ಮತ್ತು ಭಾರತದ ರಸವಿದ್ಯಾ ಶಾಸ್ತ್ರಕ್ಕೆ ಅವರು ಒದಗಿಸಿರುವ ಪ್ರಮಾಣಕ್ಕೆ ಸಾಕ್ಷಿಯಾಗಿದೆ. ಪ್ರಾಯಶಃ ಈ ಶಾಸನಕ್ಕಿಂತಲೂ ಮುಂಚಿತವಾಗಿಯೇ ಈ ಲಿಂಗವು ರಚಿತವಾಗಿರಬೇಕೆಂದು ನನ್ನ ಅನಿಸಿಕೆ. ನನ್ನ ಈ ಅನಿಸಿಕೆಯನ್ನು ಈಗ ಅದರಿಂದ ಹೊರಬಂದಿರುವ ಪಾದರಸವನ್ನು ಈಗಿನ ರಸಾಯನ ಶಾಸ್ತ್ರದ ಮೂಲಕ ಪರಿಶೀಲನೆಗೆ ಒಳಪಡಿಸಿದರೆ ಖಚಿತವಾದ ಮಾಹಿತಿ ದೊರೆಯುವುದರಲ್ಲಿ ಸಂಶಯವಿಲ್ಲ.

೩. "ಹಂಪೆಯ ಗೋಪುರದ ನಿರ್ಮಾಣ(?)/ಪುನರ್ ನಿರ್ಮಾಣ(?)ದ ಬಗೆಗೆಗಿನ ಮತ್ತು ಇಲ್ಲಿ ದೊರಕಿಸಲಾಗಿರುವ ಶ್ರೀಭಿಷ್ಟಪ್ಪಯ್ಯನವರ ಮನೆತನದಲ್ಲಿಯ ದಾಖಲೆಗಳ ಮಾಹಿತಿಗೆ ಸಂಬಂಧಿಸಿದಂತೆ ಹೇಳುವುದಾದರೆ ವಿಜಯ ನಗರದ ಅರಸ ಕಾಲದಲ್ಲಿ ಉಪಯೋಗಿಸುತ್ತಿದ್ದುದು "ಶ್ರೀ ವಿರೂಪಾಕ್ಷ" ಎಂಬ ಒಪ್ಪ ಮಾತ್ರ. ಆದರೆ ಇಲ್ಲಿಯ ರೆವಿನ್ಯೂ ಪತ್ರದ ಮೇಲಿನ ದಾಖಲೆಗಳಲ್ಲಿ "ಶ್ರೀ ವಿರೂಪಾಕ್ಷ ವಿಜಯತೇ" ಎನ್ನುವ ಮುದ್ರೆ ಇರುವುದು ಅವರಿಗೂ ಮತ್ತು ಹಂಪೆಯ ಆಡಳಿತಕ್ಕೂ ಇದ್ದ ಸಂಬಂಧವನ್ನು ಖಚಿತಪಡಿಸುತ್ತದೆ.

೪. ಸನದಿನಲ್ಲಿ ಬಂದಿರುವ ಐತಿಹಾಸಿಕ ಸಂಗತಿಗಳೂ ಮತ್ತು ಶ್ರೀ ಭಿಷ್ಟಪ್ಪಯ್ಯನವರನ್ನು ಕುರಿತಾಗಿ ಶ್ರೀಯುತ ಆಪ್ಟೆ ಮಾಸ್ತರರಿಂದ ರಚಿತವಾಗಿ ಆಲೂರು ವೆಂಕಟರಾಯ ಮುನ್ನುಡಿ ಇರುವ ಪುಸ್ತಕದಲ್ಲಿ ಬಂದಿರುವ ಐತಿಹ್ಯಗಳಿಗೆ ಮೇಲಿನ ಪುರಾವೆಗಳನ್ನು ತಾಳೆಮಾಡ ಬಹುದಾಗಿದೆ. ಈ ಪುಸ್ತಕದಲ್ಲಿರುವ ವಂಶಾವಳಿ ಮತ್ತು ಈ ಸನದಿನಲ್ಲಿರುವ ವಂಶಾವಳಿಯಲ್ಲಿ ಬಂದಿರುವ ಮಹದೇವಪ್ಪಯ್ಯ, ಶಿವಪ್ಪಯ್ಯ ಇವರ ಹೆಸರುಗಳನ್ನೊಳಗೊಂಡ ಮದ್ರಾಸ್ ಹಾಗೂ ಬೆಳಗಾಂ ಇನಾಂ ಕಮಿಷನರ್ ಅವರ ದಾಖಲೆಗಳಲ್ಲಿ ಉಲ್ಲೇಖಿಸಲಾಗಿರುವ ಅನೇಕ ತೇದಿಗಳು, ಇವರ ಮನೆತನದಲ್ಲಿನ ಇತರ ದಾಖಲೆಗಳಲ್ಲಿ ಹೈದರ್, ಟಿಪ್ಪುವಿನ ಕಾಲದ ಉಲ್ಲೇಖಗಳಿರುವುದನ್ನು ಗುರುತಿಸಬಹುದಗಿದೆ. ಇವುಗಳನ್ನು ಕುರಿತಾದ ವಿಸ್ತೃತ ಮಾಹಿತಿಗೋಸುಗ

ಬಾಳೇಹೊನ್ನೂರು ಇತಿಹಾಸ ಸಮ್ಮೇಳನದಲ್ಲಿ ಜರುಗಿದ್ದ-ಇತಿಹಾಸ ದರ್ಶನ ಸಂಪುಟದ ೩೯೦ರಿಂದ ೩೯೩ರ ವರೆಗಿನ ಭಿಷ್ಟಪ್ಪಯ್ಯನವರ ಮನೆತನದ ದಾಖಲೆಗಳಲ್ಲಿ ಬೆಳಗಾವಿ ಇನಾಂ ಕಮೀಷನರ್ ಹೆಚ್.ಬರ್ಡ್‌ವುಡ್‌ನ ಲೇಖನವನ್ನು ನೋಡಬಹುದಾಗಿದೆ. ಇದು ತಾಮ್ರಗುಂಡಿ ಎಂಬ ಜಮೀನಿನ ವಿವಾದಕ್ಕೆ ಸಂಬಂಧಿಸಿದ್ದು, ಬ್ರಿಟಿಷ್ ಆಡಳಿತ ಕಾಲದ ಒಂದು ರೆವಿನ್ಯೂ ವಿಭಾಗದ ದೊಡ್ಡಹುದ್ದೆಯಾಗಿದ್ದ ಇನಾಂ ಕಮೀಷನರ್ ಒಬ್ಬ ಆ ವಿವಾದವನ್ನು ಬಗೆಹರಿಸಲು ೨೦ ಪುಟಗಳಷ್ಟು ದೀರ್ಘವಾಗಿರುವ ಇತಿಹಾಸವನ್ನು ಕೂಲಂಕಷವಾಗಿ ಅಧ್ಯಯನ ಮಾಡಿ ಅಂದಿನ ಮೈಸೂರು, ಮಹಾರಾಷ್ಟ್ರ ಹಾಗೂ ಹೈದ್ರಾಬಾದ್ ಪ್ರಾಂತ್ಯದಲ್ಲಿ ಜರುಗಿದ್ದ ರಾಜಕೀಯ ಸಂಕ್ರಮಣ/ಸಂಚಲನಗಳನ್ನು ತೇದಿಗಳ ಸಹಿತ ವಿವರಿಸುವ ಮಹತ್ವಪೂರ್ಣ ದಾಖಲೆಯಾಗಿದೆ.

೫. ಮೇಲೆ ಉಲ್ಲೇಖಿಸಿರುವ ದಾಖಲೆಯಲ್ಲಿ ಹೂಟ್ ಎಂಬ ಇನ್ನೊಬ್ಬ ಬೆಳಗಾವಿ ಇನಾಂ ಕಮೀಷನರ್ ಹೇಳುವಂತೆ ನಾನು ನೋಡಿದ ದಾಖಲೆಗಳ ಪ್ರಕಾರ "ಮೂಲ ಭಿಷ್ಟಪ್ಪಯ್ಯ ಮಹಾಪುರುಷ ರಂಗಾಪುರ ಸಂಸ್ಥಾನದ (ಕ್ರಿ.ಶ. ೧೭೦೨-೧೮೧೪) ಇವರು ಈಗಿನ ಫಿರ್ಯಾದುದಾರರ ಅಜ್ಜ. ತಾಮ್ರಗುಂಡಿ ಹಳ್ಳಿಯು ಕ್ರಿ.ಶ. ೧೭೫೭ರಲ್ಲಿಯೂ ಭಿಷ್ಟಪ್ಪಯ್ಯನವರ ಮೊಮ್ಮಗ ಮಹಾದೇವಪ್ಪಯ್ಯನವರ ಅಧೀನದಲ್ಲಿತ್ತು. ಈ ದಾಖಲೆ ತಿಳಿಸುವಂತೆ ಸರ್ವೆ ಇನಾಮಿನ ಹಕ್ಕುದಾರಿಕೆ ಇದೇ ವ್ಯಕ್ತಿಗೆ ಮುಂದುವರೆದಿದ್ದು ಕ್ರಿ.ಶ. ೧೭೭೬ರಲ್ಲಿ ಹೈದರಾಲಿಯು ಮರಾಠಿ ಕರ್ನಾಟಕವನ್ನು ಆಕ್ರಮಿಸುವವರೆಗೆ ಮುಂದುವರೆದಿದೆ" ಎಂದು ಹೇಳಿದ್ದಾನೆ.

೬. ಲೇಖಕನಾಗಿ ನನ್ನ ಗ್ರಹಿಕೆಗೆ ನಿಲುಕುವಂತೆ ಹೇಳುವುದಾದರೆ ಮೇಲಿನ ತೀರ್ಪು ಅಥವಾ ಸ್ವಲಿಖಿತ ಹಸ್ತಾಕ್ಷರಗಳನ್ನುಳ್ಳ ಇಬ್ಬರು ಇನಾಂ ಕಮೀಷನರ್‌ಗಳು ವಿಕ್ಟೋರಿಯಾ ಮಹಾರಾಣಿಯವರ ಸೀಲ್ ಇರುವ ಬಾಂಡ್ ಪೇಪರ್ ನಮೇಲೆ ಬರೆದಿರುವ ಈ ವಿವರಗಳನ್ನು ಕೂಲಂಕಷವಾಗಿ ಅದರಲ್ಲಿ ನಮೂದಿಸಿರುವ ತೇದಿಗಳನ್ನು ತಾಳೆ ಹಾಕಿನೋಡಿದಾಗ ಶ್ರೀ ಭಿಷ್ಟಪ್ಪಯ್ಯ ರಂಗಾಪುರ ಸಂಸ್ಥಾನದ ವ್ಯಾಪ್ತಿ ಮತ್ತು ಗೌರವಗಳು ಹೇಗೆ ಮೈಸೂರು, ಮಹಾರಾಷ್ಟ್ರ ಪ್ರಾಂತಗಳಿಗೆ ಸಂಬಂಧಿಸಿತ್ತೆಂಬುದು ಸ್ಪಷ್ಟವಾಗುತ್ತದೆ.

೭. ಅಷ್ಟೇ ಅಲ್ಲ ಈ ಲೇಖನದಲ್ಲಿ ಪ್ರಸುತ್ತಪಡಿಸಿರುವ ಶ್ರೀ ಭಿಷ್ಟಪ್ಪಯ್ಯನವರ ಅಧಿಕೃತ ಮುದ್ರೆ ಇರುವ ಅವರ ಮನೆತನದ ಕಾಗದ ಪತ್ರಗಳು ಮದ್ರಾಸ್ ಗವರ್ನರ್ ಅವರ ಗಮನಕ್ಕೂ ಬಂದಿರುವುದನ್ನು ಇನ್ನೂ ಹೆಚ್ಚಿನ ವಿಷಯ ತಿಳುವಳಿಕೆಗಳಿಗೆ ಮೂಲ ಆಕರ ಸಾಮಗ್ರಿಗಳಾಗಿ ಮೊದಲ ಬಾರಿಗೆ ಇಲ್ಲಿ ಪ್ರಸ್ತಾಪವಾಗಿವೆ ಎಂದು ಒತ್ತಿಹೇಳಬೇಕಾಗಿದೆ. ಶ್ರೀ ಭಿಷ್ಟಪ್ಪಯ್ಯನವರು ಮತ್ತು ಅವರ ವಂಶದವರು ಕರ್ನಾಟಕದ ಇತಿಹಾಸ, ರಸವಿಜ್ಞಾನ, ವಾಸ್ತು ಶಿಲ್ಪ, ಸಂಸ್ಕೃತ, ಕನ್ನಡ, ಮರಾಠಿ ಇತ್ಯಾದಿ ಭಾಷೆಗಳಿಗೆ ಹಾಗೂ ಸಾಹಿತ್ಯಗಳ ಬಗೆಗೂ ವಿಸ್ತೃತವಾದ ಅಧ್ಯಯನಕ್ಕೆ ಅವಕಾಶವಿದೆ ಎಂದು ಅವರ ಮನೆತನದ ಭಂಡಾರದಲ್ಲಿರುವ ಅನೇಕ ಶಾಸ್ತ್ರಗ್ರಂಥಗಳಿಂದ ತಿಳಿದು ಬರುತ್ತದೆ.

೮. ಇಲ್ಲಿ ಪ್ರಸ್ತಾಪಿಸಿರುವುದು ಕೇವಲ ಬೆರಳೆಣಿಕೆಯ ರೆವಿನ್ಯೂ ರೆಕಾರ್ಡ್‌ಗಳಷ್ಟೇ. ಉಳಿದವುಗಳನ್ನು ಮುಂದೆ ಮತ್ತೆ ಪ್ರಸ್ತಾಪಿಸಲಾಗುವುದು. ಈ ಬಗೆಗೆ ನೈಜ ಇತಿಹಾಸಕ್ಕೆ ಹೆಚ್ಚು ಮಹತ್ವ ಬರಬಹುದೆನ್ನುವ ಸದಾಶಯದೊಂದಿಗೆ ಈ ಸುದೀರ್ಘ ಸಂಪ್ರಬಂಧವನ್ನು ಸಂಪನ್ನಗೊಳಿಸುತ್ತಿದ್ದೇನೆ.

[ಈ ಲೇಖನಕ್ಕೆ ತಮ್ಮ ಸಹಕಾರವನ್ನು ನೀಡಿ ಮೂಲ ದಾಖಲೆಗಳನ್ನು ಒದಗಿಸಿದ ಶ್ರೀಯುತ ದಿವಂಗತ ಎಸ್.ಡಿ. ಮಹಾಪುರುಷ, ರಂಗಾಪುರ ಸಂಸ್ಥಾನ, ವಿಠ್ಠಲಾಪುರ ಅವರ ಶ್ರೀಮತಿ ಹಾಗೂ ಇತರ ಕುಟುಂಬ ಸದಸ್ಯರಿಗೆ ನನ್ನ ಹೃತ್ಪೂರ್ವಕ ನಮನಗಳು.]

ಹುಲಗೂರಿನ ಅಪ್ರಕಟಿತ ಶಾಸನ

ಶ್ರೀಮತಿ ಎಸ್.ವೈ. ನಿರ್ಮಲಾ*

ಇಂದಿನ ಹಾವೇರಿ ಜಿಲ್ಲೆಯ ಶಿಗ್ಗಾವಿ ತಾಲೂಕಿಗೆ ಸೇರಿದ ಹುಲಗೂರಿನ ಸಿದ್ದಲಿಂಗೇಶ್ವರ ದೇವಾಲಯದ ಮುಂದೆ ತುಂಡಾಗಿರುವ ಶಾಸನವು ಇದುವರೆಗೆ ಎಲ್ಲೂ ದಾಖಲಾಗಿಲ್ಲ.

ಚಾಳುಕ್ಯ ಜಗದೇಕಮಲ್ಲನ ಕಾಲಕ್ಕೆ ಸಂಬಂಧಿಸಿದ ಈ ಶಾಸನದ ಮೇಲ್ಭಾಗದ ಮಧ್ಯೆದಲ್ಲಿ ಶಿವಲಿಂಗವಿದೆ. ಶಿವಲಿಂಗವನ್ನು ಪೂಜಿಸುತ್ತಿರುವ ಯತಿ, ಹಸು-ಕರುವಿನ ಶಿಲ್ಪವನ್ನು ಕಾಣಬಹುದಾಗಿದೆ. ಶಾಸನವನ್ನು ಭೂಮಿಯಲ್ಲಿ ಹೂತುಹಾಕಲಾದ ಕಾರಣ ೧೩ನೇ ಸಾಲಿನಿಂದ ಶಾಸನವನ್ನು ಓದಲು ಸಾಧ್ಯವಾಗಿಲ್ಲ.

ಶಾಸನದ ಪಾಠ

೧ [ರು]ದ್ರ ಭಕ್ತಿಯುಕ್ತರುದಾರಗುಣತ್ತುಂರೆನಸಿದ್ದತ್ತ . ಸಿಂಗದ್ದಾರಿಣಿಗೆ ನೆಗಳೆ ಮೃದುವಾಕ್ಯದ ಸ್ಥಾಪಿಸಿದೀ ಶಿಳಾಶಾಸನಮಂ

೨ ಸ್ವಸ್ತಿ ಸಮಸ್ತ ಭುವನಾಶ್ರಯ ಶ್ರೀ ಪೃಥ್ವೀವಲ್ಲಭ ಮಹಾರಾಜಾಧಿರಾಜ ಪರಮೇಶ್ವರ ಪರಮಭಟ್ಟಾ

೩ . . ಸತ್ಯಾಶ್ರಯ ಕುಳತಿಳಕಂ ಚಾಳುಕ್ಯಾಭರಣಂ ಶ್ರೀಮಜ್ಜಗದೇಕಮಲ್ಲದೇವರ ರಾಜ್ಯಮುತ್ತರೋ

೪ . . ಭಿವೃದ್ಧಿ ಪ್ರವರ್ದ್ಧಮಾನಮಾಚಂದ್ರಾರ್ಕತಾರಂ ಸಲುತ್ತಿರೆ ತತ್ಪಾದ ಪದ್ಮೋಪಜೀವಿ ಸಮಧಿಗತ ಪಂಚ

೫ . ಹಾಶಬ್ದ ಮಹಾಸಾಮನ್ತಾಧಿಪತಿ ಮಹಾಪ್ರಚಣ್ಡ ದಣ್ಡನಾಯಕ ಅಮ್ಮನ ಬಂಟ ಅರಿಘಟಾಮ

೬ . ನಚಟ್ಟನಾಶ್ರಿತ ಜನಕಳ್ಪವೃಕ್ಷ ಭೃತ್ಯಚಿನ್ತಾಮಣಿ ಸತ್ಯಕಾನೀನ ಸಮರ ಧುರನ್ಧರ ಶ್ರೀಮದ್ದಣ್ಡನಾ

೭ [ಯ]ಕ [ವಾ]ವಣರಸರ್ ಪುರಿಗೆಱೆ ಮೂನೂಱುಂ ಬೆಳ್ವೊಲ ಮೂನೂಱುಮಂ ಸುಖಸಂಕಥಾ ವಿನೋದದಿನಾಳುತ್ತಿರೆ

೮ . ಕರಿಪುನೃಪತಿ ಶಿರಶ್ಶೇಖರ ಪ್ರಭಾವ ಪ್ರಸಿದ್ದ . ಜಯವಿಜಯಚಕ್ರವರ್ತ್ತಿ ಪ್ರಸಾದೋಪಲ

೯ . . ಚಿಹ್ನಪ್ರಪಂಚ ಪಂಚಮಹಾಶಬ್ದ ಮಹಾಸಾಮನ್ತ . ಲಕ್ಷ್ಮೀಕಾನ್ತ ಮಣಲೇರಾನ್ವಯ ಪ್ರಸೂತ

೧೦ ಚ್ಛನ ಪ್ರಣೂತಂ ಪುರಿಗೆಱೆ ಪುರವರೇಶ್ವರ ವೀರಮ[ಹೇ]ಶ್ವರಂ ಭಗವದರ್ಹತ್ಪರಶ್ವರ . . .

೧೧ ಕಮಳ ಮಧುಕರ ವಿನಯ ರತ್ನಾಕರಂ ಪ್ರಚಣ್ಡಮ . . . .

೧೨ . . . ಷಣಂ ವಿನಯ ಸಂಚಾ

ಶಾಸನದಲ್ಲಿ ಕಾಲದ ಉಲ್ಲೇಖವಿಲ್ಲ. ಕಲ್ಯಾಣ ಚಾಲುಕ್ಯ ಜಯದೇಕಮಲ್ಲನ ಉಲ್ಲೇಖ ಬಂದಿರುವುದರಿಂದ ಇದನ್ನು ಕ್ರಿ.ಶ.೧೧೧೫-೧೧೪೨ರ ಕಾಲಕ್ಕೆ ಸೇರಿಸಬಹುದುದಾಗಿದೆ. ಶಾಸನದಲ್ಲಿ ಪಾರಂಪರಿಕದ ಬಿರುದಾವಳಿಗಳನ್ನು ಕಾಣಬಹುದು. ಜಗದೇಕಮಲ್ಲನ ದಂಡನಾಯಕನಾದ ವಾವಣರಸನು ಪುಲಿಗೆಱೆ ಮುನ್ನೂರು ಹಾಗೂ ಬೆಳ್ವಲ ಮುನ್ನೂರು ಪ್ರದೇಶಗಳನ್ನು ಆಳುತ್ತಿದ್ದನೆಂದು ತಿಳಿದುಬರುತ್ತದೆ. ಮಹಾಸಾಮಂತಾಧಿಪತಿ, ಅಮ್ಮನಭಂಟ, ಅರಿಘಟಾಮ, ಆಶ್ರಿತಜನ ಕಲ್ಪವೃಕ್ಷ ಭೃತ್ಯಚಿನ್ತಾಮಣಿ ಸತ್ಯಕಾನೀನ ಸಮರ ದುರಂಧರ ಎಂದೆಲ್ಲ ಶಾಸನ ವರ್ಣಿಸಿದೆ. ಈತನಿಗಿರುವ ಬಿರುದಾವಳಿಗಳನ್ನು ಗಮನಿಸಿದರೆ ಕಲ್ಯಾಣ ಚಾಲುಕ್ಯರ ಪ್ರಸಿದ್ಧ ಸಾಮಂತಾಧಿಪತಿಯಾಗಿದ್ದನೆಂದು ತೋರುತ್ತದೆ. ಇವನಿಗೆ ಕೊಂಕಣ ಧೂಮಕೇತು ಎಂದು ಇದೇ ಊರಿನ ಮತ್ತೊಂದು ಶಾಸನ ಹೇಳಿದೆ.

ಮಣಲೇರ ವಂಶಕ್ಕೆ ಸೇರಿದ ವ್ಯಕ್ತಿಯೊಬ್ಬನನ್ನು (ಹೆಸರು ಹಾಳಾಗಿದೆ) ಜಯವಿಜಯ ಚಕ್ರವರ್ತಿ, ಪ್ರಸಾದೋಪಲ .... ಚಿಹ್ನಪ್ರಪಂಚ, ಪಂಚಮಹಾಶಬ್ಬ, ಮಹಾಸಾಮನ್ತ ಎಂದು ಉಕ್ತನಾಗಿದ್ದು, ಪುಲಿಗೆಱೆಯ ಪುರವರೇಶ್ವರ, ವೀರ

* ನಂ. ೨೨೩, ಚನ್ನಮ್ಮನಕೆರೆ ಅಚ್ಚುಕಟ್ಟು, ತ್ಯಾಗರಾಜನಗರ, ಬೆಂಗಳೂರು, ಮೊ: ೯೭೪೩೩ ೦೪೧೮೪

ಮಹೇಶ್ವರ ಭಗವದರ್ಹತ್ತರಶ್ವರ ಮದುಕರ ವಿನಯ ರತ್ನಾಕರ ಪ್ರಚಣ್ಡನೆಂದು ಹೊಗಳಿದೆ. ಬಹುಶಃ ಇವನು ವೀರಮಾಹೇಶ್ವರಧರ್ಮಕ್ಕೆ ಸೇರಿದವನಾಗಿದ್ದಿರಬೇಕು.

ಹುಲಗೂರನ್ನು ತೃಣಗ್ರಾಮವೆಂದು ಮತ್ತೊಂದು ಶಾಸನವು ಕರೆದಿದೆ. ಕ್ರಿ.ಶ. ೧೧೭೪ರಲ್ಲಿ ಕಳಚೂರಿ ಬಿಜ್ಜಳನ ಮಗ ರಾಯಮುರಾರಿ ಸೋವಿದೇವನ ಆಳ್ವಿಕೆಯಲ್ಲಿ ಕೇರೆಮಯ್ಯ ದಂಡನಾಯಕನು ಪಾನುಂಗಲ್ಲು ೫೦೦ನ್ನು ಆಳುತ್ತಿರುತ್ತಾನೆ. ಇನವ ದಂಡನಾಯಕನಾದ ಮಹೇಶ್ವರ ಎಂಬುವವನು ಕೂತಕುಳಿ ೩೦ನ್ನು ಆಳುತ್ತಿದ್ದು, ಅದರೊಳಗಿದ್ದ ತೃಣಗ್ರಾಮ(ಹುಲ್ಲುಂಗೂರು)ದ ರಾಮನಾಥದೇವರಿಗೆ ಅಡಕೆಯ ಮೇಲಿನ ಸುಂಕವನ್ನು ಬಿಟ್ಟಂತೆ ಹೇಳಿದೆ. ಬಹುಶಃ ಹುಲ್ಲುಂಗೂರು ಸಂಸ್ಕೃತಿಕರಣಗೊಂಡು ತೃಣಗ್ರಾಮ ಆಗಿರಬೇಕು.

ಈ ಹುಲ್ಲುಂಗೂರು ಛತ್ರ, ಕೆರೆ, ಹೂದೋಟ ಹಾಗೂ ಬ್ರಾಹ್ಮಣರ ಮನೆಗಳಿಂದ ಅಲಂಕೃತವಾಗಿದ್ದು ಗ್ರಾಮ. ಇಲ್ಲಿ ರಸಭರಿತವಾದ ಕಬ್ಬಿನ ಗದ್ದೆಗಳಿಂದ ಕೂಡಿದ್ದು, ಅಡಕೆ, ಮೆಣಸು, ಅರಿಸಿಣ, ಮುಳ್ಳುಸೌತೆ, ಕುಂಬಳಕಾಯಿಯನ್ನು ಇಲ್ಲಿ ಬೆಳೆಯಲಾಗುತ್ತಿದ್ದು ಎಂದು ಶಾಸನದಿಂದ ತಿಳಿದುಬರುತ್ತದೆ. ಪನ್ನಯಾದ ಅಧಿಷ್ಠಾಯಕನಾಗಿದ್ದ ಮಾಯಿದೇವ ಹುಲ್ಲಂಗೂರ ನಿಡುಗುಂದೆಗೆ ಮಲ್ಲಿಕವ್ವೆ ಗಾವುಂಡಿಯ ಮಗನಾದ ಎರಕಗಾವುಂಡನು ಪನ್ನಾಯದ ಸುಂಕವನ್ನು ಸರ್ವಬಾದಾಪರಿಹಾರವಾಗಿ ನೀಡಿದನ್ನು ದಾಖಲಿಸಿದೆ.

ಯಾದವ ಕನ್ನರದೇವನ ಕಾಲದಲ್ಲಿ ಆತನ ಮಹಾಪ್ರಧಾನಿಯಾಗಿದ್ದ ತಿಪ್ಪರಸ ಹಾಗೂ ಆತನ ಪತ್ನಿ ಗೋಣಮಹಾದೇವಿಯು ಅನಾದಿ ಬಣಂಜುಪಟ್ಟಣವಾದ ಹುಲಗೂರು ೧೨ ಜನ ಗಾವುಂಡರು ಸೇರಿ ವ್ಯಾಪಾರಿಗಳಿಗೆ ಆ ಸ್ಥಳದ ದನಬಳ(ಎತ್ತಿನ ಸುಂಕ)ವನ್ನು ಬಿಟ್ಟಂತೆ ಹೇಳಿದೆ.

ರಾಷ್ಟ್ರಕೂಟ ನಿತ್ಯವರ್ಷನು ರಾಜ್ಯಭಾರ ಮಾಡುತ್ತಿದ್ದಾಗ ಅಂಕಬ್ಬರಸಿಯು ಪುಲ್ಲಂಗೂರಿನ ಶತ್ರುಗಳನ್ನು ಸೋಲಿಸಿ ಈ ಪ್ರದೇಶವನ್ನು ಆಳುತ್ತಿರುತ್ತಾಳೆ. ಇಲ್ಲಿನ ಪುಲ್ಲಂಗೂರಬ್ಬೆಗೆ ಆರು ತೋಟಗಳನ್ನು ೨೪ ಮತ್ತರು ಹೊಲವನ್ನು ಜಾತ್ರೆಗಾಗಿ, ಮುಖವಾಡಗಳಿಗಾಗಿ ೨೪ ದ್ರಮ್ಮವನ್ನು ನೀಡಿದಂತೆ ದಾಖಲಿಸಿದೆ.

ತ್ರುಟಿತ. ಕಾಲದ ಉಲ್ಲೇಖ ದೊರೆತಿಲ್ಲ. ಬಹುಶಃ ಇಮ್ಮಡಿ ಜಯಸಿಂಹ ಜಗದೇಕಮಲ್ಲನ (೧೦೧೫-೧೦೪೨) ಕಾಲದ್ದಿರಬಹುದು. ಚಾಳುಕ್ಯ ಜಗದೇಕಮಲ್ಲನು ರಾಜ್ಯಭಾರ ಮಾಡುತ್ತಿದ್ದಾಗ ಅವನ ದಂಡನಾಯಕನಾಗಿ ವಾವಣರಸನು ಪುರಿಗೆರೆ ೩೦೦, ಬೆಳ್ವೊಲ ೩೦೦ ಪ್ರದೇಶವನ್ನು ಆಳುತ್ತಿದ್ದ. ಇವನ ಕೈಕೆಳಗೆ ಮಣಲೇರ ವಂಶದ ಒಬ್ಬ ಅಧಿಕಾರಿ ಇದ್ದಂತೆ ಹೇಳಿದೆ. ಇಲ್ಲಿಂದ ಮುಂದೆ ಶಾಸನಪಾಠ ಭೂಮಿಯಲ್ಲಿ ಸೇರಿದೆ.

ಮಣರಾದಿತ್ಯನಾದ ಮಾರಸಿಂಘಯ್ಯನು ಪುರಿಗೆರೆ ೩೦ರ ಗಾವುಂಡನಾಗಿದ್ದ ಸಂದರ್ಭದಲ್ಲಿ ಗಂಗಮಹಾದೇವಿಯನ್ನು ವಿಜ್ಞಾಪನೆ ಮಾಡಿ ಪುಲ್ಲಂಗೂರಬ್ಬೆಯ ಪುಟ್ಟವಾದುದನ್ನೆಲ್ಲಾವನ್ನು ಬಿಡಿಸಿದನೆಂದಿದೆ.

ಹುಲಗೂರು ಮೊದಲಿಗೆ ಪುಲ್ಲಂಗೂರಬ್ಬೆ (ಕ್ರಿ.ಶ. ೯೭೨), ಹುಲಗೂರು (ಕ್ರಿ.ಶ. ೧೦೫೯), ಹುಲ್ಲಂಗೂರು (ಕ್ರಿ.ಶ. ೧೧೫೪), ತೃಣಗಾಮ (ಕ್ರಿ.ಶ. ೧೧೭೪) ಹೆಸರುಗಳಿದ್ದುದು ಕಂಡುಬರುತ್ತದೆ. ಅಲ್ಲದೆ ರಾಷ್ಟ್ರಕೂಟರು, ಕಲ್ಯಾಣ ಚಾಳುಕ್ಯರು ಇಲ್ಲಿ ಆಳ್ವಿಕೆ ನಡೆಸಿದ್ದನ್ನೂ ಕಾಣಬಹುದಾಗಿದೆ. ಜೈನ, ವೀರಮಾಹೇಶ್ವರ ಧರ್ಮಗಳನ್ನೊಳಗೊಂಡಂತೆ ಎಲ್ಲ ಧರ್ಮಗಳಿಗೂ ಆಶ್ರಯವಾಗಿದ್ದುದನ್ನು ಶಾಸನಗಳ ಮೂಲಕ ಕಾಣಬಹುದಾಗಿದೆ.

ಅಕ್ಷರಗಳನ್ನು ಆಳವಾಗಿ ಕೊರೆಯಲಾಗಿದ್ದು ಶಾಸನದ ಮಧ್ಯ ಒಡೆದಿರುವ ಭಾಗದಲ್ಲಿನ ಅಕ್ಷರಗಳು ಹಾಗೂ ಶಾಸನದ ಆರಂಭದ ಸಾಲುಗಳ ಆರಂಭದ ಅಕ್ಷರಗಳು ಹಾಳಾಗಿವೆ.

[ಶಾಸನವನ್ನು ಓದಿಕೊಟ್ಟು, ಪ್ರಬಂಧ ಮಂಡಿಸಲು ಅವಕಾಶ ನೀಡಿದ ಗುರುಗಳಾದ ಡಾ. ದೇವರಕೊಂಡಾರೆಡ್ಡಿಯವರಿಗೆ ಅನಂತ ಧನ್ಯವಾದಗಳು.]

೨೮

ಹುಳಿಯಾರು ವಿರಕ್ತಮಠದ ಧರ್ಮಶಾಸನ

ಪಿ. ಯಶೋದಾ ರಾಜಶೇಖರಪ್ಪ*

ಹುಳಿಯಾರು ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲೂಕಿನ ಒಂದು ದೊಡ್ಡ ಊರು. ಇಲ್ಲಿ ಚಿತ್ರದುರ್ಗದ ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠದ ಶಾಖಾಮಠವಾದ 'ಜ್ವಲತ್ಕಂಠದ ಮಹಂತಪ್ಪನವರ ವಿರಕ್ತಮಠ'ವಿದೆ. ಪ್ರಸ್ತುತ ಧರ್ಮಶಾಸನ ತಾಮ್ರಪಟ ಇದಕ್ಕೆ ಸಂಬಂಧಿಸಿದೆ. ಹಿಂದೆ ಶ್ರೀ ಮುರುಘರಾಜೇಂದ್ರ ಬೃಹನ್ಮಠವು ವೀರಶೈವ-ಲಿಂಗಾಯತ ಧರ್ಮದ ಪ್ರಧಾನ ಹಾಗೂ ಕೇಂದ್ರ ಮಠವಾಗಿತ್ತು.

ಹುಳಿಯಾರು ವಿರಕ್ತ ಮಠದ ಸ್ಥಾಪಕರು ಜ್ವಲತ್ಕಂಠ ಮಹಂತಪ್ಪನವರು. ಇವರು ೧ನೆಯ ಮುರಿಗೆ ಸ್ವಾಮಿಗಳ ಅರ್ಥಾತ್ ಮುರಿಗೆ ಶಾಂತವೀರ ದೇಶಿಕರ (೧೬೪೨?-೧೭೦೩) ನೇರ ಶಿಷ್ಯರು. ೧೮ನೆಯ ಶತಮಾನದ ಆರಂಭಕ್ಕಾಗಲೇ ಅವರಿಂದ ಈ ಮಠ ಇಲ್ಲಿ ಸ್ಥಾಪನೆಯಾಗಿತ್ತು. ಜ್ವಲತ್ಕಂಠ ಮಹಂತಪ್ಪನವರು ಇಲ್ಲಿಂದ ಕೊಡಗಿನ ಕೊಡಲಿ (ಕೊಡ್ಲಿಪೇಟೆ) ಮಠಕ್ಕೆ ಹೋಗಿ ಅಲ್ಲಿ ಸಾಕಷ್ಟು ಸಾಮಾಜಿಕ ಜಾಗೃತಿ ಮೂಡಿಸಿ ಪ್ರಸಿದ್ಧರಾಗಿದ್ದವರು. ಪ್ರಸ್ತುತ ಈ ಧರ್ಮಶಾಸನ ಹಾಕಿಸಿಕೊಟ್ಟಿದ್ದು ೧೮೦೨ರಲ್ಲಿ. ಅಷ್ಟು ಹೊತ್ತಿಗೆ ಅವರು ಇರಲಿಲ್ಲ. ಆದರೆ ಮುಂದುವರಿದ ಈ ಮಠದ ಗುರುಪರಂಪರೆಯಲ್ಲಿ ಈ ಶಾಸನ ಹಾಕಿಸಿದ ಕಾಲಕ್ಕೆ ಈ ಮಠದ ಪೀಠಾಧಿಕಾರಿಗಳು ಯಾರಿದ್ದರೋ ತಿಳಿಯದು. ಆ ವಿವರ ಈ ಶಾಸನದಲ್ಲಾಗಲಿ ಬೇರೆಡೆಯಲ್ಲಾಗಲಿ ಬಂದಿಲ್ಲ.

ಈ ತ್ರಾಮಪಟ ಶಾಸನದ ಉದ್ದ ೫೬ ೧/೨ ಸೆಂ.ಮೀ., ಅಗಲ ೨೨ ಸೆಂ.ಮೀ., ದಪ್ಪ ೦.೧ ಸೆಂ.ಮೀ. ಇದೆ. ಮುಂಬದಿ ಹಿಂಬದಿ ಸೇರಿ ಉದ್ದನೆಯ ೯೬ ಸಾಲು ಬರಹ ಸುಂದರವಾಗಿ ಕೆತ್ತಲಾಗಿದೆ. ಶಾಸನತಜ್ಞ ಬಿ.ಎಲ್.ರೈಸ್ ಅವರಿಂದ ಎಫಿಗ್ರಾಫಿಯಾ ಕರ್ನಾಟಿಕದ ಸಂಪುಟ ೧೬ ರಲ್ಲಿ ೯೦ನೆಯ ಶಾಸನವಾಗಿ ೧೯೦೬ರಲ್ಲಿ ಇದು ಪ್ರಕಟವಾಗಿದೆ. ೧೯೯೪ರಲ್ಲಿ ಸಂಶೋಧಕಾರದ ಡಾ. ಬಿ. ರಾಜಶೇಖರಪ್ಪನವರು ಇದನ್ನು ಪುನರ್ಪರಿಶೀಲನೆ ಮಾಡಿದ್ದಾರೆ.

ಈ ಧರ್ಮಶಾಸನ ಆರಂಭವಾಗುವುದು "ನಮಸ್ತುಂಗ ಶಿರಶ್ಚುಂಬಿ..." ಎಂಬ ಪ್ರಸಿದ್ಧ ಶಿವಸ್ತೋತ್ರದಿಂದ. ಶಾಸನವು ಶಾಲಿವಾಹನ ಶಕ ೧೭೨೪ರ ಅವಧಿಯನ್ನು ಹೇಳಿ, ಹುಳಿಯಾರಿನಲ್ಲಿ ನಿರ್ಮಿತವಾಗಿರುವ ಜ್ವಲತ್ಕಂಠದ ಮಹಂತಪ್ಪನವರ ವಿರಕ್ತ ಮಠ ಮುರುಘಾ ಸಂಪ್ರದಾಯಕ್ಕೆ ಸೇರಿದ್ದೆಂಬುದನ್ನು ಸೂಚಿಸಿ, ಸುಭೇದಾರರು ಅಯ್ಯನವರು ಶಿರಸ್ತೇದಾರರು, ಸ್ಥಳದ ನಾಡಿಗರು, ಸ್ಥಳದ ಶ್ಯಾನುಬೋಗರು, ಸುಂಕದ ಮಣೆಹಗಾರರು, ಸ್ಥಳದ ಗೌಡರು, ಮುಂತಾಗಿ ಸ್ಥಳ ಪರಸ್ಥಳದ ಐವತ್ತಾರು ದೇಶದವರು ಕುಳಿತುಕೊಂಡು, ಸಕಲರೂ ಧರ್ಮವನ್ನು ಅಪೇಕ್ಷಿಸಿ ಏಕೋಭಾವದಿಂದ ಒಪ್ಪಿ ಒಡಂಬಟ್ಟು, ಈ ವಿರಕ್ತ ಮಠಕ್ಕೆ ಧರ್ಮವನ್ನು ನಡೆಸಿಕೊಡುವ ಬಗ್ಗೆ ಈ ಶಾಸನವನ್ನು, ಈ ಮುಂದೆ ಹೇಳಿದಂತೆ ನಡೆಸಿಯಿಸಿಕೊಂಡು ಬರಬೇಕು ಎಂಬುದಾಗಿ ನಿರ್ಣಯ ಮಾಡಿ ಕೊಟ್ಟಿರುವುದೆಂಬುದರ ವಿವರವನ್ನು ಹೇಳುತ್ತದೆ. ಈ ವಿರಕ್ತಮಠಕ್ಕೆ ಪರಸ್ಥಳದಿಂದ ವಿರಕ್ತರು, ಚರಮೂರ್ತಿಗಳು, ಪರಸ್ಥಳದವರು ಬಂದು ಆಶ್ರಯಿಸುವುದಕ್ಕೂ ಮಠದ ದೀಪಾರಾಧನೆ ಬಗ್ಗೆಯೂ ಅನನುಕೂಲವಾದ ಕಾರಣ ಇಂಥಾ ಪ್ಯಾಟೆಮನೆ ಸ್ಥಳದಲ್ಲಿ ಇರುವ ಒಂದು ಮಠ ಈ ಪ್ರಕಾರ ಇರತಕ್ಕದ್ದು ಸರಿಯಲ್ಲ ಎಂಬುದಾಗಿ ಸಕಲ ದೇಶದವರು ಕುಳಿತುಕೊಂಡು ತಂತಮ್ಮ ಪುತ್ರ ಪೌತ್ರ ಪಾರಂಪರ್ಯವಾಗಿ ಈ ಧರ್ಮವನ್ನು ಶಾಶ್ವತವಾಗಿ ನಡೆಸಿಕೊಂಡು ಬರಬೇಕು ಎಂಬುದಾಗಿ ನಿಗದಿ ಮಾಡಿ ಕೊಟ್ಟಿರುವುದಾಗಿ ಸಹ ಹೇಳಲಾಗಿದೆ. ಈ ಪ್ರಕಾರ ಈ ಹುಳಿಯಾರು ಸುಂಕದಲ್ಲಿ ನಾನಾ ದಿನಸಿನ ಸಾಗಣೆಗೆ, ಬದ್ಧನೆ (=ವರ್ತನೆ) ಪ್ರಕಾರ ಲೆಕ್ಕಹಾಕಿ ಕೊಡಬೇಕಿದ್ದ ಸಾಗಣೆಗೆ, ನಡೆ ಒಂದಕ್ಕೆ ಕಂಟೀರಾಯಿ ಹಣ, ಅರ್ಧವೀಸವನ್ನು, ಮಠಕ್ಕೆ ಕೊಡುವುದಕ್ಕೆ ಈ ಧರ್ಮವನ್ನು ಶಾಶ್ವತವಾಗಿ ನಡೆಸಿಕೊಂಡು ಹೋಗುತ್ತೇವೆಂದು ಸ್ಥಳ ಪರಸ್ಥಳದವರು, ಸಕಲರು ಒಪ್ಪಿ ಒಡಂಬಟ್ಟು ಸೂರ್ಯ ಚಂದ್ರ ಸಾಕ್ಷಿಯಾಗಿ ಬರೆಸಿಕೊಟ್ಟರು ಎಂದು ಈ ಶಾಸನದಲ್ಲಿ

* ಕನ್ನಡ ಸಹಪ್ರಾಧ್ಯಾಪಕರು (ನಿ), ಜಯಚಾಮರಾಜೇಂದ್ರ ಬಡಾವಣೆ, ಚಿತ್ರದುರ್ಗ. ಮೊ. ೮೦೯೫೫ ೦೩೧೪೧

ಉಕ್ತವಾಗಿದೆ. ಅನಂತರದಲ್ಲಿ ಈ ಧರ್ಮರಕ್ಷಣೆ ಮಾಡಿದವರಿಗೆ ಬರುವ ಪುಣ್ಯ ಮಾಡದವರಿಗೆ ಬರುವ ಪಾಪ– ಈ ಶಾಪಾಶಯಗಳ ವಿವರಗಳಿವೆ. ಆನಂತರದಲ್ಲಿ ಇದಕ್ಕೆ ಸಹಿ ಹಾಕಿದ ಮಹಾರಾಜ ಶ್ರೀ ಸುಭೇದಾರ ಸದಾಶಿವರಾಯರು, ಶಿರಸ್ತೇದಾರ ಕೃಷ್ಣಪ್ಪನವರು ನಾರಾಯಣರಾಯರು, ನಾಡಿಗ ಶಂಕರರಾಯರು, ರಾಯಪ್ಪನವರು, ಸ್ಥಳದ ಶ್ಯಾನುಬೋಗರು, ಶೇಷಪ್ಪನವರು, ಕ್ಷೇತ್ರಪಾಲಯ್ಯನವರು, ಹೆಬ್ಬಾರು ಚೆನ್ನಪ್ಪನವರು, ಸುಂಕದ ಮಣಿಹಗಾರರು, ಹುಳಿಯಾರು ಲಿಂಗೇಗೌಡರು, ಸ್ಥಳದ ಪಟ್ಟಣಶೆಟ್ಟಿ ಲಿಂಗಪ್ಪನವರು, ಕೊರಟಗೆರೆ ಬಶೆಟ್ಟಿ, ಹೀಗೆ ನೂರಾರು (ಸುಮಾರು ೨೫೦) ಜನರು ಒಪ್ಪಿತ ಹಾಕಿದ ಉಲ್ಲೇಖ ಇದೆ. ನಾನಾ ವೃತ್ತಿಯವರು, ಎಲ್ಲಾ ರೀತಿಯ ವ್ಯಾಪಾರಿಗಳು, ಹದಿನೆಂಟು ಜಾತಿಯವರು ಅಷ್ಟೇ ಅಲ್ಲ ಆರೇಳು ಮುಸ್ಲಿಂ ಜನಾಂಗದವರು, ವೈಶ್ಯರು, ಬ್ರಾಹ್ಮಣರು, ತಳವಾರರು, ಕ್ಷೌರಿಕರು, ನೇಕಾರರು, ಕಮ್ಮಾರ ಕೆಲಸದವರು– ಹೀಗೆ ಜಾತ್ಯತೀತವಾಗಿ ಎಲ್ಲ ಕುಲದವರೂ ಕಸಬಿನವರೂ ಇಲ್ಲಿ ಒಪ್ಪಿತ ಹಾಕಿರುವುದು ಆಶ್ಚರ್ಯ ಹುಟ್ಟಿಸುತ್ತದೆ. ಆ ಮಠ ಲಿಂಗಾಯತ ಮಠವಾದರೂ ಸಮಾಜದ ಎಲ್ಲ ಜನರ ಹಿತವನ್ನು ಬಯಸುತ್ತಿದ್ದ ಹಾಗೂ ಎಲ್ಲ ಕುಲದವರ ಗೌರವಕ್ಕೆ ಪಾತ್ರವಾಗಿದ್ದ ಮಠವಾಗಿತ್ತೆಂದು ಸ್ಪಷ್ಟವಾಗುತ್ತದೆ. ಇದಲ್ಲದೆ ಉತ್ತರ ಕನ್ನಡ, ದಕ್ಷಿಣ ಕನ್ನಡ, ಮಲೆನಾಡು, ಆಂಧ್ರಪ್ರದೇಶ, ತಮಿಳುನಾಡು– ಇಂಥ ಕಡೆಯಿಂದ ಬಂದಂಥವರ ಒಪ್ಪಿತಗಳೂ ಇರುವುದನ್ನು ಗುರುತಿಸಬಹುದು.


ಈ ಶಾಸನದಿಂದ ವ್ಯಕ್ತವಾಗುವ ಹಲವು ಗಮನಾರ್ಹ ವಿಶೇಷಗಳನ್ನು ಹೀಗೆ ಪಟ್ಟಿಮಾಡಬಹುದು :

೧) ಹುಳಿಯಾರು ಪಟ್ಟಣ ೧೮ನೇ ಶತಮಾನಕ್ಕಾಗಲೇ ಒಂದು ಪ್ರಸಿದ್ಧ ಪಟ್ಟಣವಾಗಿತ್ತು. ನಾನಾ ರೀತಿಯ ವ್ಯಾಪಾರಿಗಳು ದೂರ ದೂರದಿಂದ ವ್ಯಾಪಾರಕ್ಕಾಗಿ ಇಲ್ಲಿಗೆ ಬರುತ್ತಿದ್ದರು. ಪೆನುಗೊಂಡೆ, ವೆಂಕಟಗಿರಿ, ಅನಂತಪುರ, ಹಿಂದೂಪುರ, ಧರ್ಮಾವರಂ, ಅಮರಾವತಿ, ತ್ಯಾಂಪಲ್ಲಿ, ಸೊರಬ, ಹಾವೇರಿ, ಮುದ್ದಲಾಪುರ, ಆನಂದಪುರ, ರಾಣೇಬೆನ್ನೂರು, ಕೊಪ್ಪ, ಮಂಡಗದ್ದೆ, ಬಸವಾಪಟ್ಟಣ, ಸಾಗರ, ಬಾಳುಪೇಟೆ, ಗದ್ವಾಲ, ಸಾಗರ, ಬಳ್ಳಾರಿ, ಚೆನ್ನಗಿರಿ, ಗಂಗಾವರ, ನಾಗಲಾಪುರ, ಕುಂಶಿ, ಭದ್ರಾವತಿ, ಹೊಳೆಹೊನ್ನೂರು ಹೀಗೆ ನೂರಾರು ಊರುಗಳ ಹೆಸರುಗಳು, ವ್ಯಾಪಾರಿಗಳ ಹೆಸರುಗಳು ಇಲ್ಲಿವೆ.

೨) ಚಿತ್ರದುರ್ಗದ ಶ್ರೀ ಜಗದ್ಗುರು ಮುರುಘರಾಜೇಂದ್ರ ಮಠದ ಶಾಖಾಮಠವಾದ ಇದು ಬೃಹನ್ಮಠ ನಡೆಯುತ್ತಿದ್ದ ದಾರಿಯಲ್ಲಿಯೆ, ಶರಣ ಸಂಸ್ಕೃತಿಯ ಜ್ಯಾತ್ಯತೀತ ನಿಲವುಗಳನ್ನು ಹೊಂದಿ ದಾಸೋಹ, ಆತಿಥ್ಯ ನಿರ್ವಹಿಸುತ್ತಿತ್ತು. ಈ ಮಠಕ್ಕೆ ಎಲ್ಲ ಜಾತಿಯ, ವೃತ್ತಿಯ ಜನರು ಬಂದಾಗ ವಸತಿ, ಅಶನ ನೀಡುತ್ತಿದ್ದರು. ಈ ರೀತಿ ಈ ಮಠ ಕೇವಲ ಧಾರ್ಮಿಕ ಉಪದೇಶವನ್ನಷ್ಟೆ ನೀಡದೆ, ಸಾಮಾಜಿಕ ಸೇವೆಯಲ್ಲೂ ತನ್ನನ್ನು ತೊಡಗಿಸಿಕೊಂಡಿತ್ತು.

೩) ಈ ಶಾಸನವು ಮತ್ತೊಂದು ಮುಖ್ಯ ಸಾಂಸ್ಕೃತಿಕ ಅಂಶವನ್ನೂ ಒಳಗೊಂಡಿದೆ: ಇಲ್ಲಿ ಪರಸ್ಪರ ಕೊಳುಕೊಡುಗೆಯಿಂದ ಒಂದು ಸುಭದ್ರ ಸಾಮಾಜಿಕ ಸ್ವಾಸ್ಥ್ಯದ ವ್ಯವಸ್ಥೆ ನಡೆದುಬಂದಿತ್ತು ಎಂಬುದು ಇದರಿಂದ ತಿಳಿಯುತ್ತದೆ. ಈ ಮಠಕ್ಕೆ ಲಿಂಗಾಯತ ಧರ್ಮದ ಹರಗುರು ಚರಮೂರ್ತಿಗಳಂತಹ ಧಾರ್ಮಿಕ ವ್ಯಕ್ತಿಗಳಲ್ಲದೆ, ವ್ಯಾಪಾರಿಗಳು ಮೊದಲಾದ ಹಲವು ವೃತ್ತಿಯವರು ಬರುತ್ತಿದ್ದು ಆರಂಭದ ಕಾಲದಲ್ಲಿ ಸ್ವಲ್ಪ ಜನಕಷ್ಟೆ ವ್ಯವಸ್ಥೆಯಿದ್ದು ಬರಬರುತ್ತಾ ಸ್ಥಳಾವಕಾಶವಿಲ್ಲದೆ, ದೀಪಾರಾಧನೆಗೂ ಕೊರತೆಯಾದಾಗ, ಇದನ್ನು ಅರಿತುಕೊಂಡು, ಅಲ್ಲಿಗೆ ಬರುವ ಎಲ್ಲ ಸಾಮಾಜಿಕರೂ ಮಠ ನಮಗೆ ಅನುಕೂಲ ಮಾಡುತ್ತಿದೆಯೆಂದೂ ನಾವು ಕೂಡ ಏನಾದರೂ ಅನುಕೂಲ ಮಾಡಿ ಮಠದ ಅನನುಕೂಲವನ್ನು ನಿವಾರಿಸಬೇಕು ಎಂದೂ ಯೋಚಿಸಿದುದು ಅವರೆಲ್ಲರೂ ಈ ಮಠವನ್ನು ತಮ್ಮ ಮಠವೆಂದು ಭಾವಿಸಿದ್ದರೆಂಬುದನ್ನು ಸೂಚಿಸುತ್ತದೆ. ಹಾಗಾಗಿಯೆ ಎಲ್ಲ ವೃತ್ತಿಯ ನೂರಾರು ಜನ ಸೇರಿ ಅದಕ್ಕೆ ತೆರಿಗೆಗಳ ಒಂದು ಭಾಗವನ್ನು ಅಧಿಕಾರಿಗಳ ಒಪ್ಪಿಗೆ ಮೇರೆಗೆ ಕೊಡಲು ಬಯಸುತ್ತಾರೆ. ಹಾಗೆಯೇ ಶಾಸನ ಕೆತ್ತಿದವನ ಹೆಸರೂ ಕೂಡ ಇದ್ದು ಅವನ ಒಪ್ಪಿತವೂ ಇದರಲ್ಲಿದೆ. ಹಾರಾತ್ರಿ ಗೂಳಪ್ಪ ಎಂಬುವನ್ನು ಇದನ್ನು ಸುಂದರವಾಗಿ ಕೆತ್ತಿ ಕೊಟ್ಟಿದ್ದಾನೆ. ಈ ಅಂಶಗಳೆಲ್ಲವೂ ಸಾಂಸ್ಕೃತಿಕ ಹಾಗೂ ಧಾರ್ಮಿಕ ಚರಿತ್ರೆಯ ದೃಷ್ಟಿಯಿಂದ ಮುಖ್ಯವೆನಿಸುತ್ತವೆ.

೪) ಈ ಶಾಸನ ನಮ್ಮ ಹಿಂದಿನ ಸಮಾಜದಲ್ಲಿ ಮಠಗಳು ಅದರಲ್ಲೂ ವೀರಶೈವ ಲಿಂಗಾಯತ ಮಠಗಳು, ಧಾರ್ಮಿಕ ಕೇಂದ್ರಗಳಾಗಿದ್ದರೂ, ಜೊತೆ ಜೊತೆಯಲ್ಲೇ ಸಮಾಜದ ಅಭಿವೃದ್ಧಿಯ ಕಾರ್ಯಗಳನ್ನು ಮಾಡುತ್ತಿದ್ದುದು ಸಾಮಾಜಿಕರೂ ಪರಸ್ಪರ ಕೊಳುಕೊಡುಗೆಗಳಿಂದ ಒಂದು ಆರೋಗ್ಯಕರ ವ್ಯವಸ್ಥೆಯನ್ನು ರೂಪಿಸಿದ್ದುದು ಆರೋಗ್ಯಕರ ರೀತಿಯಲ್ಲಿ ಆರ್ಥಿಕಾಭಿವೃದ್ಧಿಯನ್ನು ಮಾಡುತ್ತಿದ್ದುದು ಇಲ್ಲಿ ಕಾಣುತ್ತದೆ.



ಈ ಎಲ್ಲ ಕಾರಣಗಳಿಂದ, ಚಿತ್ರದುರ್ಗದ ಬೃಹನ್ಮಠದಂತೆ ಆ ಪರಂಪರೆಯ ಶಾಖಾಮಠಗಳು ಕೂಡಾ ಸಾಮಾಜಿಕ ಸ್ವಾಸ್ಥ್ಯವನ್ನು ಹೇಗೆ ತಮ್ಮ ಧ್ಯೇಯವಾಗಿಸಿಕೊಂಡಿದ್ದುವು ಎಂಬುದಕ್ಕೆ ಹುಳಿಯಾರಿನ ಈ ಮಠ ಒಂದು ಪ್ರತ್ಯಕ್ಷ ಸಾಕ್ಷಿಯಾಗಿದೆ.

[ಈ ಶಾಸನವನ್ನು ಮರುಪರಿಶೀಲನೆ ಮಾಡಿ ಇದರ ಪಾಠವನ್ನು ಬರೆದುಕೊಟ್ಟ ಶಾಸನ ತಜ್ಞರಾದ ಡಾ. ಬಿ. ರಾಜಶೇಖರಪ್ಪನವರಿಗೆ ಧನ್ಯವಾದಗಳು].

೨೬

ವೀರಬಲ್ಲಾಳದೇವ 'ನಾಡು' – ಹಿರಿಯರ ಸಭೆ, ಒಂದು ವಿವೇಚನೆ

ಪಿ.ವಿ. ಕೃಷ್ಣಮೂರ್ತಿ*

ಹಲವು ಶಾಸನಗಳಲ್ಲಿ ವೀರಬಲ್ಲಾಳದೇವನಾಡು ಎಂಬ ನಾಡೊಂದರ ಉಲ್ಲೇಖವಿದೆ. ಇದು ವಿಶಿಷ್ಟವಾದುದಾಗಿದೆ. ಈ ನಾಡನ್ನು ಪ್ರಸ್ತಾಪಿಸುವ ಶಾಸನಗಳ ಕಾಲ, ಸಂದರ್ಭಗಳ ಹಿನ್ನೆಲೆಯನ್ನು ಅವಲೋಕಿಸಿದರೆ; ಅಲ್ಲಿ ಅಂತರಗತವಾಗಿರುವ ಹಲವು ಸಂಗತಿಗಳನ್ನೂ ಅವುಗಳ ಸ್ವರೂಪವನ್ನೂ ಸಮಾಕಾಲೀನ ರಾಜಕೀಯ ಸ್ಥಿತಿಗತಿಗಳೊಂದಿಗೆ ಸಮೀಕರಿಸಿಕೊಂಡು ಪರಿಶೀಲಿಸಿ ವಿವೇಚಿಸುವ ಅಗತ್ಯವಿದೆಯೆಂದು ಅನಿಸುತ್ತದೆ. 'ನಾಡು' ಎಂಬುದು ಕೇವಲ ಭೌಗೋಳಿಕ ಆಡಳಿತಾತ್ಮಕ ಪ್ರದೇಶ ಸೂಚಕವಷ್ಟೇ ಆಗಿದ್ದಿತೆಂದು ಹೇಳಲು ಬರುವುದಿಲ್ಲ. ಅದಕ್ಕೆ ಅನೇಕ ಪರ್ಯಾಯ ಅರ್ಥಗಳಿರುವುದನ್ನು ನಾವು ಗಮನಿಸಬೇಕಾಗುತ್ತದೆ. ನಾಡು ಎಂಬುವ ಪದಕ್ಕೆ ಕನ್ನಡ ನಿಘಂಟುಗಳಲ್ಲಿ ಜನವಸತಿಯ ಪ್ರದೇಶ, ದೇಶ, ರಾಜ್ಯ, ಭೂಮಿ, ನೆಲ, ಸಾಮಾನ್ಯ ಜನ ಎಂಬ ಅರ್ಥಗಳಿವೆ.

ಕ್ರಿ.ಶ. ೧೩೦೦ ಅನಂತರದಲ್ಲಿ ಬೆಂಗಳೂರು ಜಿಲ್ಲೆಯ ಬೆಂಗಳೂರು ನಗರದ ಪೂರ್ವ ಅಂಚಿನಲ್ಲಿದ್ದ ಬೇಚಿರಾಕ್ ಬೇಲೂರು[೧]; ಬೆಂಗಳೂರು ಪೂರ್ವ ತಾಲ್ಲೂಕಿನ ವಿಭೂತಿಪುರ[೨] ಮತ್ತು ದೊಡ್ಡನೆಕ್ಕುಂದಿ,[೩] ಆನೆಕಲ್ ತಾಲ್ಲೂಕಿನ ಬನ್ನೇರುಘಟ್ಟ[೪]; ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕಿನ ದೊಡ್ಡಕಡತ್ತೂರು[೫] ಗ್ರಾಮಗಳಲ್ಲಿನ ತಮಿಳು ಶಾಸನಗಳಲ್ಲಿ ವೀರಬಲ್ಲಾಳದೇವನಾಡು ಎಂಬ ಒಂದು ನಾಡಿನ ಉಲ್ಲೇಖವು ಕಂಡುಬಂದಿರುತ್ತದೆ. ಇವೆಲ್ಲವೂ ಹೊಯ್ಸಳ ಮುಮ್ಮಡಿ ವೀರಬಲ್ಲಾಳನ ಆಳ್ವಿಕೆಯ ಕಾಲಕ್ಕೆ ಸೇರಿದವಾಗಿವೆ. ಈ ಶಾಸನಗಳ ಕಾಲ ವ್ಯಾಪ್ತಿ ಕ್ರಿ.ಶ. ಸು. ೧೩೦೩ ರಿಂದ ೧೩೦೮ ಆಗಿದೆ. ಈ ಪ್ರದೇಶದ ಮೇಲೆ ಮುಮ್ಮಡಿ ವೀರಬಲ್ಲಾಳನ ಆಳ್ವಿಕೆ ಪ್ರಾರಂಭವಾಗುವುದಕ್ಕೆ ಮೊದಲು, ಅವನ ಚಿಕ್ಕಪ್ಪನಾದ ಹೊಯ್ಸಳ ವೀರರಾಮನಾಥನ ಆಳ್ವಿಕೆ ನಡೆದಿತ್ತು. ಅವನು ಕ್ರಿ.ಶ. ೧೨೯೫ ಡಿಸೆಂಬರ್ ೧೯ರಂದು ಗತಿಸಿದ[೬] ನಂತರ ಅವನ ದುರ್ಬಲ ಮಗ ವಿಶ್ವನಾಥನೂ ಕ್ರಿ.ಶ. ೧೨೯೮ರಲ್ಲಿ ಮರಣಿಸಿದನು. ಅನಂತರದಲ್ಲಿ ಇಡೀ ಹೊಯ್ಸಳರಾಜ್ಯ ಮುಮ್ಮಡಿ ವೀರಬಲ್ಲಾಳನ ಆಳ್ವಿಕೆಗೆ ಒಳಪಟ್ಟಿತು. ಆ ಸಂದರ್ಭದಲ್ಲಿ ಅಂದರೆ ಕ್ರಿ.ಶ. ೧೩೦೧–೧೩೦೨ರ ಅವಧಿಯಲ್ಲಿ ಮುಮ್ಮಡಿ ವೀರಬಲ್ಲಾಳನು ಹೆಸರ್‌ಕುಂದಾಣಿ ರಾಜ್ಯದ ನಾಡುಗಳಾದ ವಿರವಿನಾಡು, ಮುರಶನಾಡು, ಮಾಶಂದಿನಾಡು, ವೆಪ್ಪೂರ್, ಎರುಮರೈನಾಡು, ಇಲೈಪಾಕ್ಕುನಾಡು, ಕಳವರನಾಡು, ಅಂಬಡಕ್ಕಿನಾಡು ನೊಣ್ಬುಂಗುಟಿ, ಕೈವಾರನಾಡು, ಕುವಲಾಳನಾಡು, ತೇಕ್ಕಲ್‌ನಾಡು, ಐಯ್ಮಬುಟಿಗನಾಡು, ಎಲವೂರ್‌ನಾಡು, ಎಯಿಲ್‌ನಾಡು, ತಗಡೈನಾಡು, ಪುಱುಮಲೈನಾಡು > ಅದಿಗೈಮಾನಾಡು, ಪೈಯ್ಯೂರ್‌ಪಟ್ರು, ಪೆಣ್ಣೈಯಾಂಡಾರ್‌ಮಡಂ, ಪುಲಿಯೂರ್–ನಾಡು ಮತ್ತು ಇತರ ಎಲ್ಲ ನಾಡುಗಳ ಎಲ್ಲ ದೇವಸ್ಥಾನಗಳು ಮತ್ತು ಮಠಗಳಲ್ಲಿನ ಎಲ್ಲಾ ವಿಧವಾದ ಪೂಜಾ ಕೈಂಕರ್ಯಗಳಿಗೆ ಎಲ್ಲಾ ವಿಧದ ತೆರಿಗೆಗಳನ್ನು ಮನ್ನ ಮಾಡಿ ದತ್ತಿ ಬಿಟ್ಟ ವಿವರವು ಬೆಂಗಳೂರು, ಕೋಲಾರ, ಧರ್ಮಪುರಿ, ಕ್ರಿಷ್ಣಗಿರಿ, ತಿರುವಣ್ಣಾಮಲೆ, ಕಡಲೂರು ಜಿಲ್ಲೆಗಳಿಗೆ ಸೇರಿದ ಅನೇಕ ಸ್ಥಳಗಳಲ್ಲಿನ ಶಾಸನಗಳಲ್ಲಿ ಬಂದಿದೆ[೭]. ಹೀಗೆ ಹೊಸದಾಗಿ ಮುಮ್ಮಡಿ ಬಲ್ಲಾಳನ ವಶಕ್ಕೆ ಬಂದ ಈ ಪ್ರದೇಶದ ಜನಸಮುದಾಯಗಳನ್ನು ತನ್ನೆಡೆಗೆ ಆಕರ್ಶಿಸುವ ಸಲುವಾಗಿಯೇ ಮೇಲ್ಕಂಡಂತಹ ದೇವಾಲಯ, ಬಸದಿ, ಮಠಗಳಿಗೆ ವಿಪುಲ ದಾನದತ್ತಿಗಳನ್ನು ಮುಮ್ಮಡಿ ವೀರಬಲ್ಲಾಳನು ಘೋಷಿಸಿರುವುದು ಗಮನಾರ್ಹ ಸಂಗತಿಯಾಗಿದೆ.

ಇದರ ನೆರಳಿನಲ್ಲೇ ಬೆಂಗಳೂರಿನ ಪೂರ್ವ ದಿಸೆಯಲ್ಲಿನ ಬೆಂಗಳೂರು ಪೂರ್ವ, ದಕ್ಷಿಣ, ಆನೇಕಲ್ ತಾಲ್ಲೂಕುಗಳು; ಕೋಲಾರ ಜಿಲ್ಲೆಯ ಮಾಲೂರು ಮತ್ತು ಪ್ರಾಯಃ ನೆರೆಯ ತಮಿಳು ನಾಡಿನ ಕ್ರಿಷ್ಣಗಿರಿ ಜಿಲ್ಲೆಯ ಹೊಸೂರು ತಾಲ್ಲೂಕು ಪ್ರದೇಶಗಳಲ್ಲಿ ವೀರಬಲ್ಲಾಳದೇವನಾಡನ್ನು ಪ್ರಸ್ತಾಪಿಸುವ ದಾಖಲೆಗಳು ಕಂಡುಬಂದಿರುವುದು ಗಮನಾರ್ಹ ಅಂಶವಾಗಿದೆ. ಇದೇ ಸಂದರ್ಭದಲ್ಲಿ ಮುಮ್ಮಡಿ ವೀರಬಲ್ಲಾಳನು, ರಾಮನಾಥನ ವಶದಲ್ಲಿದ್ದ ಹೊಯ್ಸಳರಾಜ್ಯದ ಭಾಗಗಳನ್ನು ಸಂಪೂರ್ಣವಾಗಿ

* # ೩೭. 'ಶ್ರೀಕೃಷ್ಣ ಕೃಪ', ೩ನೆಯ ಅಡ್ಡರಸ್ತೆ, ಮುನೇಶ್ವರ ಬ್ಲಾಕ್, ಹರಿನಗರ ಕ್ರಾಸ್, ಅಂಜನಾಪುರ ಅಂಚೆ, ಬೆಂಗಳೂರು.

ತನ್ನ ಆಳ್ವಿಕೆಗೆ ಒಳಪಡಿಸಿಕೊಳ್ಳುವಲ್ಲಿ ಅನೇಕ ಸ್ಥಳೀಯ ನಾಯಕರು ಕೈಜೋಡಿಸಿದ್ದರು. ಪ್ರಾಯಃ ಆ ನಾಯಕರುಗಳ ಒಕ್ಕೂಟವೇ "ವೀರಬಲ್ಲಾಳದೇವ ನಾಡು" ಎಂದು ತೋರುತ್ತದೆ.

ವೀರಬಲ್ಲಾಳದೇವನಾಡಿನ ಸಂಬಂಧದಲ್ಲಿ ಶಾಸನಗಳಲ್ಲಿ ಉಲ್ಲೇಖವಾಗಿರುವ ಸುಮಾರು ೨೦ಕ್ಕೂ ಅಧಿಕ ಸಂಖ್ಯೆಯ ನಾಯಕ, ಅಧಿಕಾರಿ, ಗಾಮುಂಡರ ಹೆಸರುಗಳೊಂದಿಗೆ ಶರಗುನಾಡ ಪೆರಿಯನಾಡಿನ ನಿವಾಸಿಗಳು, ಮಾಸಂದಿನಾಡಿನೊಳಗಿನ ಪೆರಿಯನಾಡಿನ ನಿವಾಸಿಗಳು. ಮಾಸಂದಿನಾಡಿನಲ್ಲಿ ಮೇಲಮುಕ್ಕಿಲ್‌ನ ತಿರುಮಜ್ಯೆಪಟ್ರು, ಮಾಶಂದಿನಾಟ್ಟಿನ ಪಶ್ಚಿಮ ಭಾಗದ ಮೆನ್ಮುಗತ್ತುನ್ನಾಟ್ಟು ನಾಯಕತನ ವೆಪ್ಪೂರಿನ ವಣಿಕವರ್ಗ ಅಂದರೆ ಪಟ್ಟಣಸ್ವಾಮಿಗಳ ಪ್ರಸ್ತಾಪಗಳು ಬಂದಿರುವುದನ್ನು ಗಮನಿಸಬಹುದಾಗಿದೆ. ವೀರಬಲ್ಲಾಳದೇವನಾಡಿನ ಪ್ರಮುಖರಲ್ಲಿ ಮೇಲೆ ಉಲ್ಲೇಖಿತ ಪ್ರದೇಶಗಳಿಗೆ ಸೇರಿದ ಹಲವು ಮುಖಂಡರುಗಳು ಒಳಗೊಂಡಿರುವುದು ಕಂಡುಬರುತ್ತದೆ. ಈ ಹಿನ್ನೆಲೆಯನ್ನು ಸೂಕ್ಷ್ಮವಾಗಿ ಗಮನಿಸಿದರೆ 'ವೀರಬಲ್ಲಾಳದೇವನಾಡು' ಹಲವು ಪ್ರದೇಶಗಳ ನಾಯಕರ ಅಂದರೆ ನಾಳ್ಗಾವುಂಡರ ಒಕ್ಕೂಟವಾಗಿದ್ದಿತೆಂಬುದು ಸ್ಪಷ್ಟವಾಗುತ್ತದೆ. ಅಂದ ಮೇಲೆ ವೀರಬಲ್ಲಾಳದೇವನಾಡು ಎಂಬುದು ಭೌಗೋಳಿಕ ಅಥವಾ ಪ್ರಾದೇಶಿಕ ವಿಭಾಗವಾಗಿರದೆ, ಅದೊಂದು ಸಭಾಸದರ ಕೂಟ, ಎಂಬುದು ಮನವರಿಕೆಯಾಗುತ್ತದೆ.

ನಾಡು–ಮಹಾನಾಡು ಎಂಬುವ ಪದಗಳಿಗೆ ಸಭೆ, ಕೂಟ, ಸಮಾವೇಶ ಎಂಬ ಅರ್ಥಗಳನ್ನು ಶಬ್ದಕೋಷಗಳು ನೀಡುತ್ತವೆ. ಹಾಗೇ ಹಿರಿಯ ಇತಿಹಾಸಜ್ಞರಾದ ಪ್ರೊ. ಜಿ.ಎಸ್. ದೀಕ್ಷಿತ್ ಅವರು ತಮ್ಮ 'ಲೋಕಲ್ ಸೆಲ್ಫ್ ಗೌರ್ನಮೆಂಟ್ ಇನ್ ಮಿಡೀವಲ್ ಕರ್ನಾಟಕ' ಕೃತಿಯಲ್ಲಿ ಗುರುತಿಸಿರವಂತೆ ಇಂತಹವು; ನಾಡ 'ಗಣ್ಯ ಹಿರಿಯರ ಕೂಟ' ಎಂಬುದು ನಿಶ್ಚಿತ.[೮] ಈ ಶಾಸನಗಳಲ್ಲಿ ಕಂಡುಬರುವ ಪೆರಿಯನಾಡು ಅಂದರೆ ಹಿರಿಯನಾಡು ಎಂಬುದನ್ನು ಹಿರಿಯರ ಅಥವಾ ಗಣ್ಯರಸಭೆ ಎಂದು ಸಮೀಕರಿಸಬಹುದೆಂದು ತೋರುತ್ತದೆ. ಹೀಗಾಗಿ ದಕ್ಷಿಣ ಕರ್ನಾಟಕದಲ್ಲಿ ಕಂಡು ಬರುವ ಪೆರಿಯ/ ಪಿರಿಯ/ಹಿರಿಯನಾಡು ಎಂಬುದು ಇಂತಹ ಹೊಣೆಗಾರಿಕೆಯನ್ನು ಪಡೆದಿರುವ ಸಭಾಸದರ ಕೂಟಗಳೇ ಆಗಿವೆ ಎಂದು ಹೇಳಬಹುದಾಗಿದೆ.

ಪೆರಿನಾಡು ಎಂದರೆ ಹಿರಿಯನಾಡು ಎಂದರ್ಥ, ಪೆರಿನಾಡು ಅಥವಾ ಹಿರಿನಾಡು ಎಂಬುವ ಉಲ್ಲೇಖಗಳು ಮುಖ್ಯವಾಗಿ ದಕ್ಷಿಣ ಕರ್ನಾಟಕದ ಹಲವಾರು ಪ್ರದೇಶದ ಶಾಸನಗಳಲ್ಲೂ ಕಂಡುಬರುತ್ತದೆ. ಸಾಮಾನ್ಯವಾಗಿ ಅಂತಹ ಪ್ರದೇಶಗಳ ಮೇಲೆ ಯುವರಾಜರನ್ನು ಆಡಳಿತಾನುಭವಕ್ಕಾಗಿ ಅಲ್ಲಿ ನೇಮಿಸಿರವುದನ್ನು ವಿದ್ವಾಂಸರು ಗುರತಿಸಿದ್ದಾರ್. ಅದೇನೆ ಇದ್ದರು ಪ್ರಧಾನವಾಗಿ ಹೊಯ್ಸಳರ ಕನ್ನಡ ಶಾಸನಗಳಲ್ಲಿ ಕಂಡುಬರುವ ನಾಳ್ಗಾವುಂಡ/ ನಾಡಗೌಡ/ ಪ್ರಭುಗೌಡ/ ಗೌಡಪ್ರಜೆ/ ಪಟ್ಟಣಸ್ವಾಮಿ ಎಂಬುವವರುಗಳಿಗೆ ಸಮಾನಾಂತರವಾಗಿ ಇರುವುದನ್ನು ಮನಗಾಣಬಹುದು.

ಪೆರಿಯನಾಡು ಅಥವಾ ಹಿರಿಯನಾಡುಗಳ ಪ್ರಸ್ತಾಪವಿರುವ ಕೆಲವನ್ನು ಇಲ್ಲಿ ಉದಾಹರಿಸಬಹುದು:

ಉದಾ: ನಿಗರಿಲಿ ಚೋಳಮಂಡಲದ ಕೈವಾರನಾಡಿನ ಅಮ್ಬುಡಕ್ಕಿ ಪಟ್ರುವಿನ ಪೆರೆಯನಾಡಿನವರು; ತೇಕ್ಕಲ್ ನಾಡಿನ ಪೆರಿಯನಾಡು, ಪೊನ್ನಣಿಗನಾಡಿನ ಪೆರಿಯನಾಡು ಪುಲ್ಲಿಯೂರ್ ನಾಡಿನ ಪೆರಿಯನಾಡು; ಮಾಶಂದಿನಾಡಿನ ಪೆರಿಯನಾಡು; ಕೈವಾರನಾಡಿನ ಪೆರಿನಾಡು; ಇಳವಂಜಿನಾಡಿನ ಪೆರಿಯನಾಡು; ಪುದನಾಡಿನ ಪೆರಿನಾಡು; ಕುವಲಾಳನಾಡಿನ ಪೆರಿಯನಾಡು); ಕುಲಾಳದ ಪೆರಿಯನಾಡು; ಇಲನಾಡಿನ ಪೆರಿಯನಾಡು,; ಪೆರಿಯನಾಡಿನ ಮಾಯಿಲಂಗ್ಯೆ; ಪೆರಿಯನಾಡಿನ ಮಾಯಿಲಂಗ್ಯೆ ಮದುರಾಂತಕ , .. ನಾಡಿನ ಇಡ್ಯೆನಾಡಿನ ಪೆರ್‍ರಿಯನಾಡ್; ಇಡ್ಯೆನಾಡಿನ ಪೆರ್‍ರಿಯನಾಡ್; ಮುಡಿಕೊಂಡ ಚೋಳ ಮಂಡಲಂನ ಗಂಗ್ಯೆಕೊಂಡ ಚೋಳವಳನಾಡಿನ ಪೆರಿಯನಾಡಾದ ಇಡ್ಯೆನಾಡು;; ಹಿರಿಯನಾಡಿನ ಮಹಾಪ್ರಭು; ಹಿರಿಯನಾಡ ಮಹಾಪ್ರಭು, ಕುಮಾರನಾಡಾದ ಹಿರಿಯನಾಡಾದ ತೊಜೆನಾಡಾದ ಕರೆಯಗಾವುಂಡರು . .; . . .ಪೆರಿನಾಡಿನ; ಹಿರಿಯನಾಡಿನ ಮಹಾಪ್ರಭು; ಜಿನ ಶಾಸನ ಪೆರಿಯನಾಡ್; ಪೆರಿಯನಾಡಾದ ಇಡ್ಯೆನಾಡ್; ಮದುರಾಂತಕ . . ., ಇಡ್ಯೆನಾಡಿನ ಪೆರಿಅನಾಡ್ ಎರುಮರ್‍ಯೆನಾಡಿನ ಪೆರಿಯನಾಡಿನವರು; ತೇಕ್ಕಲ್ ನಾಡಿನ ಪೆರಿಯನಾಡು ಇತ್ಯಾದಿ.

ವೀರವಲ್ಲಾಳದೇವನಾಡನ್ನು ಉಲ್ಲೇಖಿಸುವ ಶಾಸನಗಳು

ಕ್ರಿ.ಶ. ೧೩೦೪ರ ಬೆಂಗಳೂರು ಪೂರ್ವ ತಾಲ್ಲೂಕಿನ ಪಶ್ಚಿಮದ ಗಡಿ ಅಂದರೆ ಇಂದಿನ ಎನ್.ಎ.ಎಲ್ ಸಂಸ್ಥೆಯ ಆವರರಣಕ್ಕೆ ಸೇರಿ ಹೋಗಿರುವ ಬೇಚಿರಾಕ್ ಬೇಲೂರು ಗ್ರಾಮದ ಸೋಮೇಶ್ವರ ದೇವಾಲಯದ ಶಾಸನವು ಶರಗುನಾಡ ಪೆರಿಯನಾಡಿನ ನಿವಾಸಿಗಳು, ವೀರವಲ್ಲಾಳದೇವನಾಡಿನ ನಾಯಕತನವನ್ನು ಮಾಡುವ ಶೆಂಬಿದೇವರು ವಿಲ್ಲಗಾಮುಂಡರು ವೆಪ್ಪೂರ . .ದೇವ ಕಾಚ್ಚಿ. . .ಜೀಯರು, ಐಕ್ಕ ಜೀಯ . . ವೆಪ್ಪೂರ ಪರಶುರಾಮನು ಮಾರಶೆಟ್ಟಿಯರು ಮಾಲ್ಯೆ ಪೆರ್ಗಡೆಯು

ಮುಕ್ಕ್ಕಣಶೆಟ್ಟಿಯಾರು ಗಂಗಕ್ಕೋನುಂ ಇಳೈಯ ವಿಲ್ಲಗಾಮುಂಡರು ಇದಕ್ಕೆ ಊಟ್ಪಾ . . . ಗಳು ಸೇರಿ ದತ್ತಿ ನೀಡಿರುವ ವಿವರವಿದ್ದಂತಿದೆ. (ಎ.ಕ. ೯, ಬೆಂಗಳೂರು ೭೫–೧೩೦೪)

ಕ್ರಿ.ಶ. ೧೩೦೪ರ ಮುಮ್ಮಡಿ ವೀರಬಲ್ಲಾಳನ ಶಾಸವೊಂದು ಬೆಂಗಳೂರು ಪೂರ್ವ ತಾಲ್ಲೂಕಿನ ದೊಡ್ಡನೆಕ್ಕುಂದಿ ಗ್ರಾಮದಲ್ಲಿದ್ದು, ವೀರವಲ್ಲಾಳದೇವನಾಡಿನ ನಾಯಕತನವನ್ನು ಮಾಡುವ ಪಿಲ್ಲಗಾವುಂಡನನ್ನೊಳಗೊಂಡ ನಾಡಿನವರು ಅಧಿಕಾರಿಗಳಾದ ತಮ್ಮಣ್ಣನ್ ಮಾಸ್ಸನ್ . . ತಿಲ್ಲಪ್ಪರ್ ಊರ್. . . ಅವರುಗಳು ಸೇರಿ ತಮ್ಮನಾಡಿನ ನೆರುಮೂಕ್ಕಡಪ್ಪಳ್ಳಿ ಮತ್ತು ನೆಜ್‌ಕುನ್ದಿಯ ಹೊಲ ಗದ್ದೆ ಭೂಮಿಗಳನ್ನು ಶಿವಗಂಗೆಯ ದೇವರ ಅಮೃತಪಡಿ ಮುಂತಾದ ಪೂಜಾ ಕೈಂಕರ್ಯಗಳಿಗೆ ದತ್ತಿ ಬಿಟ್ಟ ವಿವರ ನೀಡುತ್ತದೆ. (ಎ.ಕ. ೯, ಬೆಂಗಳೂರು ೫೩–೧೩೦೪)

ಆನೆಕಲ್ ತಾಲ್ಲೂಕಿನ ಬನ್ನೇರುಘಟ್ಟದಲ್ಲಿನ ಕ್ರಿ.ಶ. ಸು. ೧೩೦೭ಕ್ಕೆ ಸೇರಿದ ಶಾಸನ ಮಹಾ ಪ್ರಸಾಯಿತ್ತ ಮಾದಣ್ಣ, ಮಾಸಂದಿ ನಾಡಿನೊಳಗಿನ ಪೆರಿಯನಾಡಿನ ನಿವಾಸಿಗಳಾದ ನಿನ್ರಾನ ಮಾದಣ್ಣ, ತಿಲ್ಲಪ್ಪ ಎಂಬುವರೊಂದಿಗೆ ಮಹಾಪ್ರಸಾಯಿತ ಮಾಚ್ಚಣ್ಣ, ಹಾಗೂ ವೀರಬಲ್ಲಾಳದೇವನಾಡಿನ ಅಧೀಕ್ಷಕನಾದ ಶೆಂಬಿದೇವರ್, ವಿಲ್ಲಗಾಮುಂಡರು ಮತ್ತು ವೆಪ್ಪೂರಿನ ಪಟ್ಟಣಸ್ವಾಮಿ ಮುಂತಾದವರೆಲ್ಲರೂ ಸೇರಿ ಬನ್ನೇರಘಟ್ಟದ ದಾಮೋದರ ದೇವಾಲಯಕ್ಕೆ ದತ್ತಿ ಬಿಟ್ಟ ವಿವರ. (ಎಂಎಆರ್ ೧೯೦೬–೧೯೦೯, ಸಂ.೨, ಎ ಸ್ಟಡಿ ಬೈ ಶೆಟ್ಟರ್, ಕರ್ನಾಟಕ ವಿವಿ, ೧೯೭೬, ಪ೬೭–೬೮.)

ಮಾಲೂರು ತಾಲ್ಲೂಕು ದೊಡ್ಡಕಡತ್ತೂರಿನ ಕ್ರಿ.ಶ. ೧೩೦೭ರ ಶಾಸನವು ಹೊಯ್ಸಳ ಮುಮ್ಮಡಿ ವೀರಬಲ್ಲಾಳನ ಆಳ್ವಿಕೆಗೆ ಸೇರಿದ್ದು ನಿಗರಲಿಚೋಳ ಮಂಡಲದ ಮಾಸಂದಿನಾಡಿನಲ್ಲಿ ಮೇಲಮುಕ್ಕಿಲ್ ನ ತಿರುಮಜೈಪಟ್ರು ಈ ನಾಡಿಗೆ ಸೇರಿದವರಾದ ಪ್ರಮಾಣನನುಮ್ . . .ಅಲ್ಲಪ್ಪಾರ . . ಂಗಣ್ಣನುಂ ಮಚ್ಚಣ್ಣನುಂ ಕುಮಾರಣ್ಣನುಂ ವೀರವಲ್ಲಾಳದೇವರ್ ನಾಡಿನ ನಾಯಮ್ (ನಾಯಕತನ) ಮಾಡುವ ವಿಲ್ಲಗಾಮುಟ್ಟ್‌ರ್ ವೆಪ್ಪೂರ್ಪ್ಪೈಯಿಲ್ ಶೈಮ್ಬಯರ್ ಗಂಗೈಕೋನ್ ಮಾಳಿಶೆಟ್ಟಿ ದೇವರ್ ಈ ನಾಡಿನ ಕೀಳ್ ಅಧಿಕಾರಿಯಾದ ಕೋವಾಣ್ಡೈ ಇವರೆಲ್ಲರು ಎಂಬ ಅಸ್ಪಷ್ಟ ವಿವರವಿದೆ. (ಎ.ಕ. ೧೦, ಮಾಲೂರು ೮೩–೧೩೦೭)

ಬೆಂಗಳೂರು ಪೂರ್ವ ತಾಲ್ಲೂಕಿನ ವಿಭೂತಿಪುರದ ಕ್ರಿ.ಶ. ೧೩೦೭ರ ಶಾಸನವು ಹೊಯ್ಸಳ ಚಕ್ರವರ್ತಿ ಮುಮ್ಮಡಿ ವೀರಬಲ್ಲಾಳನ ಆಳ್ವಿಕೆಗೆ ಸೇರಿದ್ದು, ಇದರಲ್ಲಿ ವೀರವಲ್ಲಾಳದೇವರ್ ನಾಡಿನ ಉಲ್ಲೇಖ ಬಂದಿಲ್ಲ, ಆದರೆ ಮೇಲಿನ ಶಾಸನಗಳಲ್ಲಿ ಕಂಡುಬರುವ ಅಧಿಕಾರಿಗಳ ಹೆಸರುಗಳು ಇಲ್ಲಿ ಕಂಡುಬರುವುದರಿಂದ ಅದನ್ನು ಇಲ್ಲಿ ದಾಖಲಿಸಿದ್ದೇನೆ. ಈ ಶಾಸನ; ವಲ್ಲಪ್ಪದೆಣ್ಣಾಕ್ಕರ್‌ಗೆ ಒಳ್ಳೆಯದಾಗಲೆಂದು ಮಹಾಪ್ರಸಾಯಿತ್ತ ನಿನ್ರಾನ್ ಮಾಶಂದಿನಾಟ್ಟಿನ ಪಶ್ಚಿಮ ಭಾಗದ ಮೆನ್ನುಗತ್ತುನಾಟ್ಟು ನಾಯಕತನವನ್ನು ಮಾಡುವ ಶೆಂಬಿದೇವರುಂ ವಿಲ್ಲಗಾಮುಂಡರ್ ಶಂದಗಾಮುಂಡ ವೆಪ್ಪೂರಿನ ತನ್ಮಜೀಯರ್ ಒಳಗೊಂಡ ನಾಡಿನವರು ಗೋವಾಣ್ಡೈಯುಂ ಅವರುಗಳು ಪೆರುಎರುಮೂರಿಗೆ ಹೊಂದಿಕೊಂಡ ಕಾಡನ್ನು ಕಡಿದು, ಮಟ್ಟಮಾಡಿ ಊರನ್ನು ಕಟ್ಟಿ ಮರಳನ್ನು ತೆಗೆದು ಕೆರೆಯನ್ನು ಕಟ್ಟಿ ಊರಿಗೆ ವಾಚ್ಚಿದೇವಪುರವೆಂದು ಹೆಸರಿಟ್ಟು ಅದಕ್ಕೆ ಸೇರಿದ ಹೊಲ ಗದ್ದೆ ಭೂಮಿಗಳನ್ನು ವಾಚ್ಚಿದೇವ ಎಂಬುವರಿಗೆ ಸರ್ವಮಾನ್ಯವಾಗಿ ಮಡಪುರ ದತ್ತಿ ನೀಡಿದ ವಿವರ ನೀಡುತ್ತದೆ. ಇದು ನಿನ್ರಾನನ ಬರಹ, ನಾಟ್ಟುಕ್ಕಣಕಂ (ಶಾನುಭೋಗ) ಪೆರಯಪಿಳ್ಳೈ ಬರಹ ಎಂಬ ವಿವರವಿದೆ. ಎ.ಕ. ೯, ಬೆಂಗಳೂರು ೧೩೩–೧೩೦೭)

ಈ ಶಾಸನಗಳಲ್ಲಿ ಉಲ್ಲೇಖಗೊಂಡಿರುವ ನಾಯಕ, ಅಧಿಕಾರಿ, ಗಾಮುಂಡ, ಶೆಟ್ಟಿವರ್ತಕರ ಹೆಸರುಗಳನ್ನು ಕೆಳಕಂಡ ಕೋಷ್ಟಕದಲ್ಲಿ ಸಂಕಲಿಸಲಾಗಿದೆ.

ಎ.ಕ.೯, ಬೆಂಗಳೂರು ೭೫, ೧೩೦೪, ಬೇಚಿರಾಕ್, ಬೇಲೂರು	ಎ.ಕ.೯, ಬೆಂಗಳೂರು ೫೩ ೧೩೦೪, ದೊಡ್ಡನೆಕ್ಕುಂದಿ	ಮೈ.ಆ.ರಿ–೧೯೦೮, ೧೩೦೭, ಬನ್ನೇರುಘಟ್ಟ	ಎ.ಕ.೯, ಬೆಂಗಳೂರು ೧೩೩, ೧೩೦೭, ವಿಭೂತಿಪುರ	ಎ.ಕ.೧೦ ಮಾಲೂರು ೮೩ ೧೩೦೭, ದೊಡ್ಡಕಡತ್ತೂರು
ಶೆಂಬಿದೇವ		ಶೆಂಬಿದೇವರ್	ಶೆಂಬಿದೇವ	ಶೈಮ್ಬಯರ್
ವಿಲ್ಲಗಾಮುಂಡ	ಪಿಲ್ಲಗಾವುಂಡ	ವಿಲ್ಲಗಾಮುಂಡ	ವಿಲ್ಲಗಾಮುಂಡ	ವಿಲ್ಲಗಾಮುಟ್ಟ್‌ರ್
. . ದೇವ				
ಕಾಚ್ಚಿ . . ಜೀಯರ್				

ಐಕ್ಕ ಜೀಯರ್				
ಪರಶುರಾಮ				
ಮಾರಶೆಟ್ಟಿಯರ್	ಮುಕ್ಕಣ್ಣಶೆಟ್ಟಿಯರ್	ವೆಪ್ಪೂರಿನ ಪಟ್ಟಣಸ್ವಾಮಿ		ಮಾಳಿಶೆಟ್ಟಿ ದೇವರ್
	ಮಾಲೈಪೆರ್ಗಡೆ			
				. ಂಗಣ್ಣನುಂ .
	ಇಳೈಯ			
	ಗಂಗಕೋನುಂ			ಗಂಗೈಕೋನ್
	ತಮ್ಮಣ್ಣನ್			
	ತಿಲ್ಲಪ್ಪರ್	ತಿಲ್ಲಪ್ಪ		
	ಮಾಸ್ಸನ್ . .	ಮಾಚ್ಚಣ್ಣ,		ಮಚ್ಚಣ್ಣನುಂ
				ಕುಮಾರಣ್ಣನುಂ
			ನಿನ್ರಾನ್	
			ಶಂದಗಾಮುಂಡ	
			ತನ್ಮಜೀಯರ್	
			ಗೋವಾಣ್ಡೈಯುಂ	ಕೋವಾಣ್
				ಪ್ರಮಾಣನ್
				. . .ಅಲ್ಲಪ್ಪಾರ .

ಈ ಹಿನ್ನೆಲೆಯಲ್ಲಿ ವೀರಬಲ್ಲಾಳದೇವನಾಡು ಎಂಬುದು ನಾಲ್ಗಾವುಂಡರ 'ಸಭೆ' ಗೆ ಪರ್ಯಾಯವಾಗಿದ್ದು, ಇಲ್ಲಿ ಇದಕ್ಕೆ ಒಂದು ನಿರ್ದಿಷ್ಟ ಹೆಸರು ಇರುವುದು ಒಂದು ವಿಶೇಷ. ಇದಕ್ಕೆ ಮೂಲ ಕಾರಣ ಮುಮ್ಮಡಿ ವೀರಬಲ್ಲಾಳನ ರಾಜ್ಯ ವಿಸ್ತರಣ ಮತ್ತು ದೃಢಿಕರಣ ಸಂದರ್ಭದಲ್ಲಿ ರೂಪುಗೊಂಡ ಒಂದು ವಿಶಿಷ್ಟ ಮಹಾನಾಡು ಅಂದರೆ ಹಿರಿಯರ ಗುಂಪು=ನಾಲ್ಗಾವುಂಡರ ಸಭೆಗೆ ಸಮಾನಂತರದಲ್ಲಿ ಸಾಂದರ್ಭಿಕವಾಗಿ ರೂಪುಗೊಂಡಿದ್ದ ಒಂದು ನಾಡು ಅಂದರೆ ಹಿರಿಯರಸಭೆ ಎಂದು ಹೇಳಬಹುದು ಅಂದರೆ ಅದು ಪ್ರಾದೇಶಿಕ ಅಥವಾ ಭೌಗೋಳಿಕ ಆಡಳಿತ ಘಟಕವಲ್ಲ.

ಅಡಿ ಟಿಪ್ಪಣಿಗಳು

೧. ಎಪಿಗ್ರಾಫಿಯಾ ಕರ್ಣಾಟಿಕ ಸಂ. IX, (ರೈಸ್), ಬೆಂಗಳೂರು ೭೫.

೨. ಎಪಿಗ್ರಾಫಿಯಾ ಕರ್ಣಾಟಿಕ ಸಂ. IX, (ರೈಸ್), ಬೆಂಗಳೂರು ೧೩೩.

೩. ಎಪಿಗ್ರಾಫಿಯಾ ಕರ್ಣಾಟಿಕ ಸಂ. IX, (ರೈಸ್), ಬೆಂಗಳೂರು ೫೩.

೪. MAR 1906-1909, Vol. II A Study by Settar, Karnataka University, Dharwar,1976, p.67-68.

೫. ಎಪಿಗ್ರಾಫಿಯಾ ಕರ್ಣಾಟಿಕ ಸಂ. ೧೦ (ರೈಸ್), ಮಾಲೂರು ೮೩.

೬ ಪಿ.ವಿ. ಕೃಷ್ಣಮೂರ್ತಿ., ತಮಿಳುನಾಡಿನ ಕನ್ನಡ ಶಾಸನಗಳು, ಕ.ಸಾ.ಪ. ಬೆಂಗಳೂರು, ೩ನೆಯ ಪರಿಷ್ಕೃತ ಮುದ್ರಣ ೨೦೧೮, ಪು. ೧೮೦.

೭. ಪಿ.ವಿ. ಕೃಷ್ಣಮೂರ್ತಿ., ಮುಮ್ಮಡಿ ವೀರಬಲ್ಲಾಳನ ಕಾಲದ ಹೆಸರ್‌ಕುಂದಾಣಿರಾಜ್ಯದ ನಾಡುಗಳು, ಇತಿಹಾಸ ದರ್ಶನ ಸಂ. ೧೫ (೨೦೦೦), ಪು. ೧೯೨–೧೯೬.

೮. G.S. Dikshit., Local Self Government in Mediaeval Karnataka, Karnataka University, Dharwar, 1964, p.29-57.

೯. ಪಿ.ವಿ. ಕೃಷ್ಣಮೂರ್ತಿ., ಮೈಸೂರು ಜಿಲ್ಲಾ ಪ್ರದೇಶದ ಪ್ರಾಚೀನ ಆಡಳಿ ಘಟಕಗಳು, ಮೈಸೂರು ಜಿಲ್ಲೆಯ ಇತಿಹಾಸ ಮತ್ತು ಪುರಾತತ್ತ್ವ, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, ೨೦೧೦, ಪು. ೧೭೯.

ಮಂಡ್ಯ ಜಿಲ್ಲೆ ಶಾಸನೋಕ್ತ ಕಿಳಲೆ/ಕೆಳಲೆ ನಾಡು ಒಂದು ವಿಶ್ಲೇಷಣೆ

ಲಿಂಗರಾಜು*

ಕಿಳಲೆ/ಕೆಳಲೆ ನಾಡು (ಕಿಳಲೆ ಸಹಸ್ರ) ಪದದ ಅರ್ಥ

ಕನ್ನಡ ಶಾಸನಗಳಲ್ಲಿ ಕಿಲಲೆನಾಡು, ಕಳವೆ ನಾಡು, ಕೆಳಲೆ ನಾಡು ಎಂದು ಕಾಣಿಸಿಕೊಳ್ಳುವ ಈ ವಿಭಾಗವನ್ನು ತಮಿಳು ಶಾಸನಗಳು 'ಕಿಲಲೈನಾಟ್ಟು' ಎಂದು ಕರೆದಿವೆ. ಕೀಳ್ ಅಥವಾ ಕಿಲಳೆ ಎಂದರೆ ಕೆಳಗಿನ, ಅಥವಾ ತಗ್ಗಿನ ಪ್ರದೇಶ ಎಂಬ ಅರ್ಥವಿದೆ. ಕಾವೇರಿ ನದಿಯ ಉಪನದಿಗಳಾದ ಶಿಂಷಾ, ಕಣ್ವಾ ಮತ್ತು ಅರ್ಕಾವತಿ ನದಿ ಕಣಿವೆಗಳ ತಗ್ಗಾದ ಪ್ರದೇಶವನ್ನು ಅನೇಕ ಶಾಸನಗಳು 'ಕಿಱಲೆ ನಾಡು' ಎಂದು ಉಲ್ಲೇಖಿಸಿದೆ. ಭೌಗೋಳಿಕವಾಗಿ ಈ ಪ್ರದೇಶ ನೆರೆಯ ಬೆಂಗಳೂರು ಮತ್ತು ಮಂಡ್ಯ ತಾಲ್ಲೂಕು ಪ್ರದೇಶಗಳಿಗೆ ಹೋಲಿಸಿದರೆ ಗಣನೀಯವಾಗಿ ತಗ್ಗಾಗಿದ್ದು, ಅದನ್ನು ತಗ್ಗು ಅಥವಾ ಕೆಳಗಿನ ಸೀಮೆ ಅಂದರೆ ಕಿಳಲೆ ನಾಡು ಎಂದು ಗುರುತಿಸಿರುವುದು ಅನ್ವರ್ಥಕವಾಗಿದೆ. ದ್ರಾವಿಡ ಭಾಷೆಯಲ್ಲಿ ಇ>ಎ ಪ್ರಕ್ರಿಯೆ ಸಾಮಾನ್ಯವಾಗಿದೆ. ಆದ್ದರಿಂದ ಕಿಱಲೆ>ಕಿಳಲೆ>ಕೆಳಲೆ ಎಂಬುದು ಒಂದೇ ವಿಭಾಗದ ಹೆಸರಾಗಿದೆ.

ಕಿಳಲೆ/ಕೆಳಲೆ ನಾಡಿನ ವಿಸ್ತಾರ

ಕ್ರಿ.ಶ. ೧೨೭೮ರ ಮದ್ದೂರು ಶಾಸನವೊಂದರಲ್ಲಿ ಕಿಱಲೆನಾಡು ಒಂದು ಸಾವಿರ ಗ್ರಾಮಗಳಿಂದ ಕೂಡಿತ್ತೆಂದು ಉಲ್ಲೇಖಿಸಿದೆ. ಕಿಳಲೆ/ಕೆಳಲೆ ನಾಡು ಮಂಡ್ಯ ಜಿಲ್ಲೆಯ ಮಳವಳ್ಳಿ, ಮಂಡ್ಯ ಮತ್ತು ಮದ್ದೂರು ತಾಲ್ಲೂಕಿನ ಕೆಲವು ಭಾಗ, ರಾಮನಗರ ಜಿಲ್ಲೆಯ ಚನ್ನಪಟ್ಟಣ ತಾಲ್ಲೂಕಿನ ಪಶ್ಚಿಮದ ಭಾಗ, ಮೈಸೂರು ಜಿಲ್ಲೆಯ ಟಿ. ನರಸೀಪುರ ತಾಲ್ಲೂಕಿನ ಉತ್ತರದ ಭಾಗಗಳನ್ನು ಒಳಗೊಂಡಿತ್ತು. ಒಂದು ಕಡೆ ಬಡಗಂದ ನಾಡಿನ ಗಡಿಗೆ ಹೊಂದಿಕೊಂಡಿದ್ದರೆ, ಮತ್ತೊಂದು ಕಡೆ ಕುಣಿಗಲ್ ನಾಡಿನ ಗಡಿಗೆ ಹೊಂದಿಕೊಂಡಂತಿತ್ತು. ಮಂಡ್ಯ, ಮದ್ದೂರು ಮತ್ತು ಮಳವಳ್ಳಿ ತಾಲ್ಲೂಕಿನ ಶಾಸನಗಳಲ್ಲದೆ ಮದ್ದೂರು ತಾಲ್ಲೂಕಿಗೆ ಹೊಂದಿಕೊಂಡಂತಿರುವ ಚನ್ನಪಟ್ಟಣ ತಾಲ್ಲೂಕಿನ ಶಾಸನಗಳಲ್ಲೂ ಕೆಳಲೆ ನಾಡಿನ ಪ್ರಸ್ತಾಪವಿದೆ.

ವಿವಿಧ ರಾಜಮನೆತನಗಳ ಕಾಲದ ಮಂಡ್ಯ ಜಿಲ್ಲೆ ಶಾಸನೋಕ್ತ ಕಿಲಳೆ ನಾಡಿನ ಬಗ್ಗೆ ಮಾಹಿತಿ

ಮೊದಲಿಗೆ ಕಿಳಲೆ ನಾಡಿನ ಬಗ್ಗೆ ಕ್ರಿ.ಶ. ೭೧೩ರ ಹಳ್ಳೆಗೆರೆ (ಮಂ.೩೫) ಶಾಸನದಲ್ಲಿ ಉಲ್ಲೇಖವಿದೆ. 'ಕೆರೆಗೋಡುತ್ತರ ಪಾರ್ಶ್ವದಲ್ಲಿ ಕಿಳನೀ ನದಿ' ಹರಿಯುತ್ತಿತ್ತು. ಅದರ ದಂಡೆಯ ಮೇಲೆ ಕಿಱಲೆ' ಎಂಬ ಹೆಸರಿನ ಊರು ಹುಟ್ಟಿಕೊಂಡಿರಬೇಕು. ಮುಂದೆ ಅದು ವಿಭಾಗವೊಂದರ ಮುಖ್ಯ ಸ್ಥಳವಾಗಿದೆ. ಕ್ರಿ.ಶ. ೯ನೇ ಶತಮಾನದ ವಿಜಯಪುರದ (ಟಿ.ನ.ಪು.) ಎರಡನೇ ಶಿವಮಾರನ ಕಾಲದ ಶಾಸನದಲ್ಲಿ. ಕೊಂಗುಣಿ ಶಿವಮಾರನ ಸಾಮಂತ ಮಣಲೆ ಅರಸ ಕಿಱಲೆ ನಾಡನ್ನು ಆಳುತ್ತಿದ್ದನು.

ಮದ್ದೂರು ತಾಲ್ಲೂಕಿನ (೪೨ನೇ) ೯೪೯-೯೫೦ರ ಆತಕೂರು ಶಾಸನವು ಮಣಲೆ ಅರಸರು (ಮಣಲೆರ) ಸಗರವಂಶದವರಾಗಿದ್ದು ಗಂಗರ ಮಾಂಡಲೀಕರಾಗಿ ಕಿಳಲೆ ನಾಡನ್ನು ಆಳುತ್ತಿದ್ದನೆಂದು ತಿಳಿಸುತ್ತದೆ. ಕೆಳಲೆ ನಾಡಿನ ಆತಕೂರು ಪನ್ನೆರಡನ್ನು ಬೂತಗನು ಸಗರವಂಶದ ಮಣಲೇರನಿಗೆ ಮೆಚ್ಚುಗೆಯಾಗಿ ನೀಡಿದನು. ಆತಕೂರು-೧೨ರಲ್ಲಿ ಬೆಳತೂರು ಒಂದು ಗ್ರಾಮವಾಗಿರುವ ವಿಚಾರ ಶಾಸನದಲ್ಲಿದೆ.

ಹೊಯ್ಸಳರ ಕಾಲದ ಮಂಡ್ಯ ಜಿಲ್ಲೆಯ ಅನೇಕ ಶಾಸನಗಳಲ್ಲಿ ಕೆಳಲೆ ನಾಡಿನ ಉಲ್ಲೇಖವಿರುವುದು ಕಂಡು ಬರುತ್ತದೆ. ಕ್ರಿ.ಶ. ೧೧೩೨ರ ವೈದ್ಯನಾಥಪುರ (ಮ.೬೯)) ಶಾಸನದಲ್ಲಿ ಕೆಳಲೆ ನಾಡಿನ ಮದ್ದೂರಾದ ನಾರಸಿಂಹ ಚತುರ್ವೇದಿ ಮಂಗಲದ ಶಿವಪುರದ ಶ್ರೀ ಸ್ವಯಂಭು ವೈಜನಾಥದೇವರಿಗೆ ದತ್ತಿ ಬಿಟ್ಟ ಉಲ್ಲೇಖವಿದೆ.

* ತಂಡಸನಹಳ್ಳಿ, ಇತಿಹಾಸ ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಮಹಾವಿದ್ಯಾಲಯ, ಮಂಡ್ಯ, ಮೊ. ೯೮೪೪೯ ೯೭೪೧೭

ಕ್ರಿ.ಶ. ೧೧೬೨ರ ಜೊಪ್ಪಸಮುದ್ರ (ಮ.೧೧೫) ಶಾಸನದಲ್ಲಿ ತಿಪ್ಪೂರು ತೀರ್ಥ (ಇಂದಿನ ಅರೆತಿಪ್ಪೂರು) ಜೊಪ್ಪಸಮುದ್ರಗಳು ಕೆಳಲೆನಾಡಿನಲ್ಲಿದ್ದವೆಂದು ಉಲ್ಲೇಖವಿದೆ. ಕ್ರಿ.ಶ. ೧೧೭೧ರ ಹುಲ್ಲಹಳ್ಳಿ (ಮವ.೨೮) ಶಾಸನದಲ್ಲಿ ಕೆಳಲೆ ನಾಡು ಅಂತರವಳ್ಳಿ, ಕ್ರಿ.ಶ. ೧೧೭೭-೭೮ರ ಹುಲ್ಲೇಗಾಲ (ಮವ.೩೯) ಶಾಸನದಲ್ಲಿ ಕೆಳಲೆ ನಾಡ ಹುಲ್ಲವಂಗಲದ ಹುಳ್ಳೆಯಹಳ್ಳಿಯ ಉಲ್ಲೇಖಗಳಿವೆ.

ಕ್ರಿ.ಶ. ೧೨-೧೩ನೇ ಶತಮಾನದ ಹುಸ್ಕೂರು (ಮವ.೨೯) ಶಾಸನದಲ್ಲಿ 'ವಡಗ ಪಿಳ್ಳೈಯೆನ್ ಕಿಳಲೈ ನಾಟ್ಟು ಪುತ್ತೂರು' ಎಂಬ ಉಲ್ಲೇಖವಿದೆ. ಕಿಳಲೈ ನಾಟ್ಟು ಎಂಬುದು ಕೆಳಲೆನಾಡು ಪ್ರದೇಶದ ತಮಿಳು ರೂಪಾಂತರವಾಗಿದೆ. ಹುಸ್ಕೂರಿನ ತಮಿಳು ಶಾಸನ 'ವಡಗ ಪಿಳ್ಳೈಯೆನ್' ಎಂದರೆ ವಡುಗರೆನಾಡಿನ ಮುಖಂಡನೆಂದು ತಿಳಿದುಬರುತ್ತದೆ.

ಕ್ರಿ.ಶ. ೧೨೦೦ರ(೧೨೨೨) ಬೆಳ್ಳೂರು (ಮ.೯೮) ಶಾಸನದಲ್ಲಿ ಕೆಳಲೆ (ಸಹಸ್ರ) ನಾಡಿನಲ್ಲಿ ಚಿಕ್ಕಬೇಳೂರು, ಕುಂಪೆನಾಡುಗಳ ಉಲ್ಲೇಖವಿದೆ. ಇಲ್ಲಿ ನಡೆದ ತುರುಗೋಳುಗಳ ಕಾಳಗದ ಉಲ್ಲೇಖ ಮದ್ದೂರು ಮತ್ತು ಮಳವಳ್ಳಿ ತಾಲ್ಲೂಕಿನ ಶಾಸನಗಳಲ್ಲಿ ಉಲ್ಲೇಖವಿದೆ. ಕ್ರಿ.ಶ. ೧೨೬೧ರ ವೈದ್ಯನಾಥಪುರ (ಮ. (೬೯) ಶಾಸನದಲ್ಲಿ ಕೆಳಲೆನಾಡ ವಿಳಸತ್ ವೈಜನಾಥ ಎಂದು ಉಲ್ಲೇಖವಿದೆ. ಈ ನಾಡಿಗೆ ಮದ್ದೂರು ಮುಖ್ಯ ಸ್ಥಳವಾಗಿತ್ತೆಂದು ತಿಳಿದುಬರುತ್ತದೆ.

೧೩ನೇ ಶತಮಾನದ ಹಾಗಲಹಳ್ಳಿ (ಮ.೧೦೩) ಶಾಸನವು ಕೆಳಲೆನಾಡಿನ ತಿಪ್ಪೂರು ತೀರ್ಥದ ಹದರಹಳಿವಿನ ಹಾದರವಾಗಿಲು ಬಲ್ಲಾಳದೇವರ ರಾಜ್ಯದಲ್ಲಿತ್ತೆಂದು ಹೇಳಿದೆ. ಕೆಳಲೆ ನಾಡಿನ ತೆಂಕಣ ಭಾಗದಲ್ಲಿದ್ದ ಅನ್ನದಾನಪಳ್ಳಿಯನ್ನು ಪಟ್ಟೆಯಾಂಗನೆಂಬುವವನಿಗೆ ದತ್ತಿಯಾಗಿ ಬಿಟ್ಟಿರುತ್ತಾನೆ. ೧೩ನೇ ಶತಮಾನದ ಹುಲ್ಲಹಳ್ಳಿ (ಮವ.೩೬) ಶಾಸನದಲ್ಲಿ 'ಕೆಳಲೆ ನಾಡ ಅಂತರವಳ್ಳಿ ವೃತ್ತಿಯ ಹುಲ್ಲವಂಗಲವನ್ನು ಮಂನೆಯ ನಾರಸಿಂಗದೇವನು ಮುತ್ತಿದಾಗ ನಡೆದ ಊರಳಿವಿನ ಉಲ್ಲೇಖವಿದೆ. ಹೀಗೆ 'ಕೆಳಲೆನಾಡ ಹಲಗೂರ' 'ಕೆಳಲೆನಾಡಿನ ವಿಲಸತು ಮದ್ದೂರ' 'ಕೆಳಲೆ ನಾಡ ವಿಷಯದ ಚಿಕ್ಕಬೇಳೂರ', 'ಕೆಳಲೆನಾಡ ಅಂತರವಳ್ಳಿ', 'ಕೆಳಲೆನಾಡ ಅನ್ತ್ರವಳ್ಳಿಯ ವ್ರಿತ್ತೀಯ ಹುಲ್ಲವಂಗಲ' 'ಕಳಲೆನಾಡ ಹುಲ್ಲವಂಗಲದ ಹುಳ್ಳೆಯಹಳ್ಳಿ', 'ಕಳಲೆನಾಡ ತಿಪ್ಪೂರ ತೀರ್ಥದ(ಹ)ದರ (ಹ)ಲವಿನ ಹಾದರವಾಗಿಲ ಮೊದಲಾದ ಹೆಸರುಗಳ ಉಲ್ಲೇಖ ಶಾಸನಗಳಲ್ಲಿ ಕಂಡುಬರುತ್ತದೆ.

ಅನೇಕ ಶಾಸನಗಳ ಪ್ರಕಾರ ಕ್ರಿ.ಶ. ೧೨-೧೩ನೇ ಶತಮಾನದ ವೇಳೆಗೆ (೩ನೇ ರಾಜೇಂದ್ರ ಚೋಳನ ಕಾಲ) ಕಿಳಲೆ ನಾಡು ಚೋಳ ಮಂಡಲಕ್ಕೆ ಸೇರಿತ್ತು ಎಂಬ ಉಲ್ಲೇಖವಿದೆ. ಉದಾ: ರಾಮನಗರ ಜಿಲ್ಲೆ ಚನ್ನಪಟ್ಟಣ ತಾಲ್ಲೂಕಿನ ಮಳೂರ, ಹೊಂಗನೂರು, ತಾಳವಾಡಿ, ಮಂಗಾಪಟ್ಟಣ, (ಕನ್ನಮಂಗಲ) ಕೂಡಲೂರು, ಬ್ಯಾಡರಹಳ್ಳಿ, ಹೊನ್ನಾನಾಯಕನಹಳ್ಳಿ, ಬೇವೂರು, ಹರೂರು, ಮಂಡ್ಯ ಜಿಲ್ಲೆಯ ಮದ್ದೂದರು ತಾಲ್ಲೂಕಿನ ಆತಕೂರು, ವೈದ್ಯನಾಥಪುರ, ಬೇಲೂರು, ಮಳವಳ್ಳಿ ತಾಲ್ಲೂಕಿನ ಹುಸ್ಕೂರು, ಅಂತರವಳ್ಳಿ ಶಾಸನಗಳಲ್ಲಿ ಉಲ್ಲೇಖವಿದೆ.

ವಿಜಯನಗರ ಕಾಲದಲ್ಲೂ ಕೆಳಲೆ ನಾಡಿನ ಅಸ್ತಿತ್ವ ಮುಂದುವರಿದಿತ್ತು. ಕ್ರಿ.ಶ. ೧೪೦೬ರ ವೈದ್ಯನಾಥಪುರ (ಮ.೭೫) ಶಾಸನದಲ್ಲಿ ಇಮ್ಮಡಿ ಬುಕ್ಕರಾಯನ ಕಾಲದಲ್ಲಿ ಕೆಳಲೆನಾಡ ಅನಾದಿ ಅಗ್ರಹಾರವಾದ ನಾರಸಿಂಹ ಚತುರ್ವೇದಿ ಮಂಗಲ ಮದ್ದೂರ ಅಶೇಷ ಮಹಾಜನಗಳು, ರಾಮರಾಯ ನರಸಿಂಗದೇವರು ಆ ಸ್ಥಳದ ಸಮಸ್ತ ಪ್ರಜೆಗಳು ಸಭೆ ಸೇರಿ ಆ ಊರಿನ ದೇವರುಗಳಿಗೆ ಅನೇಕ ತೆರಿಗೆಗಳನ್ನು ಆ ಊರಿನ ನಾಯಕತನವನ್ನು ನಡೆಸುತ್ತಿದ್ದ ಚೊಕ್ಕಣ್ಣನ ಕೈಯಲ್ಲಿ ಧಾರಾಪೂರ್ವಕವಾಗಿ ಬಿಡುತ್ತಾರೆ. ಹೀಗೆ ವಿಜಯನಗರ ಕಾಲದಲ್ಲಿ ಮಂಡ್ಯ ಜಿಲ್ಲೆಯ ಕೆಳಲೆನಾಡಿನ ಮದ್ದೂದರು, 'ನರಸಿಂಹಚತುರ್ವೇದಿ ಮಂಗಲ' ಎಂಬ ಹೆಸರುಳ್ಳ ಅಗ್ರಹಾರವಾಗಿದ್ದಿತು.

ಕ್ರಿ.ಶ. ೧೪೫೯ರ ರಾಂಪುರ (ಮ.೨೪) ಶಾಸನದಲ್ಲಿ ಕೆಳಲೆಯ ನಾಡ ಮದ್ದೂರ ಸ್ಥಳದ ಬಸವಾಪಟ್ಟಣವನ್ನು ಬೆಳತೂರು ರಾಮಯ್ಯ ದೇವರಿಗೆ ದತ್ತಿ ಬಿಡಲಾಗಿದೆ. ಇದೇ ವಿಷಯ ಇದೇ ಕಾಲದ ಕ್ರಿ.ಶ. ೧೪೫೯ರ ದಣ್ಣಾಯಕಪುರ (ಮ.೩೯) ಶಾಸನದಲ್ಲೂ ಉಲ್ಲೇಖವಿದೆ.

ಕ್ರಿ.ಶ. ೧೫೩೪ರಲ್ಲಿ ಕೆಳಲೆನಾಡಿನ ಕುಡಲೂರು ಸ್ಥಳದ ಚಿಕ್ಕರೆ ಅಥವಾ ರಾಜ ರಾಜಚೋಳ ಚತುರ್ವೇದಿ ಮಂಗಳದ ತಿರುಮಲ ದೇವಸ್ಥಾನವನ್ನು, ರಾಜನ ಖಜಾಂಚಿ ತಿಮ್ಮಪ್ಪಯ್ಯನ ಅಪ್ಪಣೆ ಮೇರೆಗೆ ವೇದಗಳ ವಿದ್ವಾಂಸ ನಾರಾಣಯ್ಯನಿಗೆ ಕೊಡಲಾಯಿತು.

ಕ್ರಿ.ಶ. ೧೬೨೩ರ ಹೊಂದಲಗೆರೆ (ಮ.೧೦೮) ಶಾಸನದ ಪ್ರಕಾರ ಮೈಸೂರು ಒಡೆಯರ ಕಾಲದಲ್ಲಿ ಕೆಳಲೆನಾಡು ಶ್ರೀರಂಗಪಟ್ಟಣ ರಾಜ್ಯಕ್ಕೆ ಸೇರಿತ್ತು. ಕೆಳಲೆ ನಾಡಿನ ಮದ್ದೂದರು ಸ್ಥಳದ ಹೊಂದಲಗೆರೆ, ತಿಮ್ಮಸಮುದ್ರ, ಭೀಮನಕೆರೆ,

ಹಾಗಲಹಳ್ಳಿ, ಕಿಳುವನಹಳ್ಳಿಕರೆ ಗ್ರಾಮಗಳನ್ನು ಚಾಮರಾಜ ಒಡೆಯರು ತಮ್ಮ ಮಂತ್ರಿಯಾಗಿದ್ದ ಗೋವಿಂದಯ್ಯ ಮತ್ತು ಅವನ ಸಹೋದರರಿಗೆ ಭೂದಾನ ಗ್ರಾಮ ಧರ್ಮಸಾಧನವಾಗಿ ದತ್ತಿ ಕೊಡುತ್ತಾರೆ.

ಕ್ರಿ.ಶ. ೧೬೬೩ರ ಕೌಡ್ಲೆ (ಮ.೩೪) ಶಾಸನದಲ್ಲಿ ದೇವರಾಜ ಒಡೆಯನು (ದೊಡ್ಡ ದೇವರಾಜ ಒಡೆಯ) ತನಗೆ ವಿಕ್ರಮಾರ್ಜಿತವಾಗಿ ಬಂದ ಕೆಳಲೆ ನಾಡ ಮದ್ದೂರು ಗ್ರಾಮಕ್ಕೆ (ಸ್ಥಳ) ಸಲ್ಲುವ ಕೌಡಲಿ (ಇಂದಿನ ಕೌಡ್ಲೆ) ಎಂಬ ಗ್ರಾಮವನ್ನು ಅದಕ್ಕೆ ಸೇರಿದ ಉಪಗ್ರಾಮಗಳಾದ ನಾಗನಹಳ್ಳಿ, ಕರಡಿಕೊಪ್ಪಲು, ಕೋಡಿನಕೊಪ್ಪಲು, ಕೀಲಾರ, ಉಂಮರಹಳ್ಳಿ (ಉಮ್ಮಡಹಳ್ಳಿ), ಯಲ್ಲಾಪುರ, ಈ ಆರು ಗ್ರಾಮಗಳನ್ನು ಸೇರಿಸಿ ದೇವರಾಜಪುರವೆಂಬ ಅಗ್ರಹಾರವನ್ನಾಗಿ ಮಾಡಿ ಬ್ರಾಹ್ಮಣರಿಗೆ ದತ್ತಿ ಕೊಟ್ಟಿರುತ್ತಾನೆ.

೧೮ನೇ ಶತಮಾನದ ವಳಗೆರೆಹಳ್ಳಿ (ಮ.೨೩) ಶಾಸನದಲ್ಲಿ ಉಲ್ಲೇಖವಿರುವಂತೆ ದೇವರಾಜ ಒಡೆಯರು ಕುಣಿಗಲ್ಲು ಮತ್ತು ಚನ್ನಪಟ್ಟಣ ಪ್ರಾಂತ್ಯವನ್ನು ಗೆದ್ದ ಸಂದರ್ಭದಲ್ಲಿ ಮೈಸೂರು ರಾಜ್ಯದಿಂದ ಕೈಬಿಟ್ಟುಹೋಗಿದ್ದ ಕೆಳಲೆನಾಡನ್ನು ವಶಪಡಿಸಿಕೊಂಡಿರಬಹುದು. ೧೮ನೇ ಶತಮಾನದ ವೇಳೆಗೆ ಈ ಕೆಳಲೆ ನಾಡು ಕೆಳಲೆಯ ಸೀಮೆಯಾಗಿ ಮಾರ್ಪಟ್ಟಿತ್ತು.

ಉಪಸಂಹಾರ: ಹೀಗೆ ಮಂಡ್ಯ ಜಿಲ್ಲೆಯ ಶಾಸನಗಳ ಆಧಾರದಿಂದ ಕಿಳಲೆ ನಾಡು ಅಥವಾ ಕೆಳಲೆ ನಾಡು ಎಂಬುದು ಗಂಗರು, ರಾಷ್ಟ್ರಕೂಟರು, ಹೊಯ್ಸಳರು, ಚೋಳರು, ವಿಜಯನಗರದ ಅರಸರು ಮತ್ತು ಮೈಸೂರು ಒಡೆಯರ ಕಾಲದಲ್ಲಿ ಅಸ್ತಿತ್ವದಲ್ಲಿದ್ದ ಒಂದು ಪ್ರಾದೇಶಿಕ ಆಡಳಿತ ಘಟಕವಾಗಿತ್ತು. (ಗ್ರಾಮ ಸಮುದಾಯ) ವಿವಿಧ ರಾಜಮನೆತನಗಳ ಕಾಲದಲ್ಲಿ ಸಮರ್ಪಕವಾಗಿ ಆಡಳಿತವನ್ನು ನಿರ್ವಹಿಸಿಕೊಂಡು ಹೋಗಲು ನಾಡು, ಸೀಮೆ (ವಿಜಯನಗರ ಸಾಮ್ರಾಜ್ಯ ಕಾಲದಲ್ಲಿ) ಸಹಕಾರಿಯಾಗಿತ್ತು. ವಿಜಯನಗರ ಕಾಲದ ಶಾಸನಗಳಲ್ಲಿ ಸೀಮೆಯ ಉಪವಿಭಾಗವಾಗಿ ನಾಡನ್ನೋ ಅಥವಾ ನಾಡಿನ ಉಪವಿಭಾಗವಾಗಿ ಸೀಮೆಯನ್ನೋ ಉಲ್ಲೇಖಿಸಿರುವುದುಂಟು. ಕನ್ನಡ ಪ್ರದೇಶದಲ್ಲಿ ನಾಡು ಎಂಬ ವಿಭಾಗವನ್ನು ತೆಲುಗು ಪ್ರದೇಶದಲ್ಲಿ ಸೀಮ ಎಂದು ಕರೆಯುತ್ತಿದ್ದರು ಉದಾ: ರಾಯಲ ಸೀಮ, ಚಂಗಲ ಮರ್ರಿ ಸೀಮ, ಹೀಗೆ ಗಂಗರ ಕಾಲದಿಂದ ಮೈಸೂರು ಒಡೆಯರ ಕಾಲದವರೆಗೆ ಮಂಡ್ಯ ಜಿಲ್ಲೆಯ ಕಿಳಲೆ ನಾಡು ಎಂಬ ಆಡಳಿತ ಘಟಕವಾಗಿತ್ತೆಂದು ಶಾಸನಗಳಿಂದ ತಿಳಿದುಬರುತ್ತದೆ.

ಆಕರ ಗ್ರಂಥಗಳು

೧. ಎಪಿಗ್ರಾಫಿಯಾ ಕರ್ನಾಟಕ, ಸಂಪುಟ ೦೬ ಮತ್ತು ೦೭, (೧೯೭೭), ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.

೨. ಷ. ಶೆಟ್ಟರ್, (೨೦೦೭), ಶಂಗಂ ತಮಿಳಗಂ ಮತ್ತು ಕನ್ನಡ ನಾಡು ನುಡಿ, ಅಭಿನವ ಪ್ರಕಾಶನ, ಬೆಂಗಳೂರು, ಪು.ಸಂ. ೧೪೬.

೩. ಅದೇ ಪು.ಸಂ. ೧೪೭.

೪. ಮಹದೇವಯ್ಯ ಎಂ.ಪಿ. (೨೦೧೨), ಪ್ರಾಚೀನ ಕರ್ನಾಟಕದ ಆಡಳಿತ ಪದ್ಧತಿಯ ಕೆಲವು ಅಂಶಗಳು, ಕುಮಾರ ಪ್ರಕಾಶನ, ಮೈಸೂರು, ಪು.ಸಂ. ೧೮೦–೧೮೧.

೫. ಕೃಷ್ಣಮೂರ್ತಿ ಪಿ.ವಿ., ಕಿಳಲೆ ನಾಡು, ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು, ಪು.ಸಂ. ೩೫–೩೬.

೬ ಚನ್ನಬಸವಯ್ಯ ಹಿರೇಮಠ, (೨೦೧೪), ಪ್ರಾಚೀನ ಕರ್ನಾಟಕದ ರಾಜಕೀಯ ವಿಭಾಗಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.ಸಂ. ೨೯.

೭. ಸಂತೇಬಾಚಹಳ್ಳಿ ಡಾ. ಎಸ್. ನಂಜುಂಡಸ್ವಾಮಿ, (೨೦೧೯), ಮಂಡ್ಯ ಜಿಲ್ಲೆಯ ಶಾಸನ ಸಂಸ್ಕೃತಿ, ಸುಮೇರು ಸಾಹಿತ್ಯ, ಬೆಂಗಳೂರು, ಪು.ಸಂ. ೨೨೭–೨೨೮.

೮. ವೆಂಕಟರತ್ನಂ ಎ.ವಿ., (೧೯೭೪), ವಿಜಯನಗರ ಸಾಮ್ರಾಜ್ಯದಲ್ಲಿ ಸ್ಥಳೀಯ ಸರ್ಕಾರ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ಪು.ಸಂ. ೭೨.

೯. ಅದೇ., ಪು.ಸಂ. ೮೧.

ಶಿವನ ಸಮುದ್ರ ಸೀಮೆ

ಆದಪ್ಪ ಪಾಸೋಡಿ*

ವಿಜಯನಗರ ದೊರೆಗಳು ಕ್ರಿ.ಶ. ೧೩೩೬ ರಿಂದ ೧೬೭೦ ರವರೆಗೆ ಕನ್ನಡನಾಡನ್ನು ಆಳಿದ್ದಾರೆ. ವಿಸ್ತೃತ ದಕ್ಷಿಣ ಭಾರತವನ್ನು ಅರಸರು ತಾವೇ ನೇರವಾಗಿ ಆಳುವುದು ಕಷ್ಟಸಾಧ್ಯವಾದ ಕಾರಣ ಸಾಮ್ರಾಜ್ಯವನ್ನು ರಾಜ್ಯ, ವಳಿತ, ವೇಂಠೆ, ಸ್ಥಳ, ಕಂಪಣ, ನಾಡು, ಸೀಮೆ, ಚಾವಡಿ ಹಾಗೂ ಗ್ರಾಮಗಳೆಂಬ ಆಡಳಿತ ಘಟಕಗಳನ್ನಾಗಿ ಮಾಡಿಕೊಂಡಿದ್ದರು. ಇಂದಿನ ಬೆಂಗಳೂರು ಜಿಲ್ಲೆಯ ವ್ಯಾಪ್ತಿಯಲ್ಲಿ ವಿಜಯನಗರಾವಧಿಯ 'ಸೀಮೆ' ಎಂಬ ಸುಮಾರು ೪೫ ಆಡಳಿತ ಘಟಕಗಳು 'ಎಪಿಗ್ರಾಫಿಯಾ ಕರ್ಣಾಟಿಕಾ-೯' ರಲ್ಲಿ ಉಲ್ಲೇಖಿಸಲ್ಪಟ್ಟಿವೆ.[1] ಅವುಗಳಲ್ಲಿ ಸಿವನಸಮುದ್ರಸೀಮೆಯೂ ಒಂದಾಗಿತ್ತು. ಕ್ರಿ.ಶ. ೧೪೨೫ರಿಂದ ೧೫೮೪ರವರೆಗೆ ಸುಮಾರು ೧೬೦ ವರ್ಷಗಳ ಕಾಲ ಇಂದಿನ ಹೆಸರಘಟ್ಟ ಸುತ್ತಲಿನ ಪ್ರದೇಶವನ್ನು 'ಸಿವನಸಮುದ್ರಸೀಮೆ' ಎಂದು ಕರೆಯಲಾಗುತ್ತಿತ್ತು. ಅದರಂತೆ ವಿಜಯನಗರ ದೊರೆಗಳಿಗೆ ದಂಡನಾಯಕನಾಗಿದ್ದ ಲಕ್ಕಣ್ಣ ದಂಡೇಶ (೧೩೯೮-೧೪೬೩)ನು ತನ್ನ ಕೃತಿ 'ಶಿವತತ್ವ ಚಿಂತಾಮಣಿ' ಯ ೫೮ನೆಯ ಪದ್ಯದಲ್ಲಿ ಬೆಂಗಳೂರು ಹತ್ತಿರದ ಶಿವನಸಮುದ್ರ, ಸಾರುಕೆ ಹಾಗೂ ಕನ್ನೆಲ್ಲಿ ಸ್ಥಳನಾಮಗಳನ್ನು ಉಲ್ಲೇಖಿಸಿರುತ್ತಾನೆ. ಶಿವನಸಮುದ್ರಸೀಮೆಯ ಕೇಂದ್ರಸ್ಥಾನ ಹೆಸರಘಟ್ಟವಾಗಿತ್ತಲ್ಲದೆ ಕ್ರಿ.ಶ. ೧೫೩೩ ರಲ್ಲಿ ಹೆಸರಘಟ್ಟಕ್ಕೆ ಪ್ರತಿನಾಮ 'ಸಿವಸಮುದ್ರ ಅಗ್ರಹಾರ' ಎಂದಾಯಿತು.[2] ಹೆಸರಘಟ್ಟವು ಶಿವನಸಮುದ್ರವೆನಿಸಿರುವುದಕ್ಕೆ ಇಲ್ಲಿಯ ಸಮುದ್ರದಂತಿರುವ ವಿಶಾಲ ಕೆರೆದಂಡೆಯ ಮೇಲಿರುವ ಶಿವದೇವಾಲಯವು ಕಾರಣವಾಗಿ, ಕಾಲಾಂತರದಲ್ಲಿ ಈ ದೇವಾಲಯ ಶಿಥಿಲವಾಗಿ ಅಥವಾ ದಾಳಿಗೊಳಗಾಗಿ ಬಿದ್ದು ಹೋದಾಗ, ಅಚ್ಯುತರಾಯನ ಅಧಿಕಾರಿಯೋರ್ವ ಗುಡಿಯನ್ನು ಕಟ್ಟಿಸಿ, ವಾರಣಾಸಿಯಿಂದ ಕಾಶೀಲಿಂಗವನ್ನು ತಂದು ಚಂದ್ರಮೌಳೀಶ್ವರ, ವಿಘ್ನೇಶ್ವರ ಮತ್ತು ನಂದಿಕೇಶ್ವರ ದೇವರ ಪ್ರತಿಷ್ಠೆ ಮಾಡಿರುವುದನ್ನು ತಿಳಿಯುತ್ತೇವೆ. ಶಾಸನಗಳಲ್ಲಿ ದೊರಕುವ 'ಶಿವನೆ' ಎಂಬ ಭೂಅಳತೆಯ ಅರ್ಥವಿರುವುದನ್ನೂ ಕೂಡ ಶಿವನಸಮುದ್ರಸ್ಥಳದ ಹಿನ್ನೆಲೆಯಾಗಿ ಗಮನಿಸಬೇಕಾಗುತ್ತದೆ.

ಶಿವನಸಮುದ್ರವೆಂಬ ಎರಡು ಸ್ಥಳಗಳು ನಮ್ಮ ರಾಜ್ಯದಲ್ಲಿದ್ದು, ಮಂಡ್ಯ ಜಿಲ್ಲೆ ಮಳವಳ್ಳಿ ತಾಲ್ಲೂಕಿನಲ್ಲಿ ಒಂದು ಶಿವನಸಮುದ್ರವಿದ್ದರೆ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಉತ್ತರ ತಾಲ್ಲೂಕಿನ ಯಲಹಂಕ ಹತ್ತಿರದ ಹೆಸರಗಟ್ಟವಾದ ಎರಡನೆಯ ಶಿವನಸಮುದ್ರವಾಗಿದೆ. ಈ ಎರಡೂ ಶಿವನಸಮುದ್ರಗಳು ಶಾಸನೋಕ್ತವಾಗಿದ್ದು, ಶಿವನಸಮುದ್ರವಾಗಿದ್ದ ಹೆಸರಘಟ್ಟದ ಬಗ್ಗೆ ನಾವಿಲ್ಲಿ ಚರ್ಚಿಸುತ್ತಿದ್ದೇವೆ. ಕ್ರಿ.ಶ. ೧೯೨ರ ಕಾಲಘಟ್ಟದಲ್ಲಿ ಇಲೈಪಕ್ಕನಾಡಿನ ಮಧ್ಯಭಾಗದಲ್ಲಿ 'ಪಯರುಕಟ್ಟಮ್'[3] ಎಂಬ ಎಡೆ ಇತ್ತು. ಪಯರುಕಟ್ಟಮ್>ಪಯರುಕಟ್ಟ>ಹೆಸರುಗಟ್ಟ>ಹೆಸರಘಟ್ಟ[4] ವಾಗಿರುವುದನ್ನು ಇಲ್ಲಿ ತಿಳಿಯಬಹುದು. ಇದರೊಟ್ಟಿಗೆ ವ್ಯಾಸಘಟ್ಟವೆಂಬ[5] ಸಾಂಪ್ರದಾಯಿಕ ಸ್ಥಳನಾಮವೂ ಪ್ರಚಲಿತವಿತ್ತು. ಪಯರು/ಪಯಿರು ನಾಮಪದಕ್ಕೆ ಹೊಲಗದ್ದೆಗಳಲ್ಲಿ ಬೆಳೆಯುವ ಬೆಳೆ, ತೆನೆ ಕೊಡುವ ಬೆಳೆ; ಗಿಡ-ಮರ-ಬಳ್ಳಿ ಮುಂತಾದ ಸಸ್ಯ, ಹಸುರು ಬೆಳೆ[6] ಎಂದೂ; ಕಟ್ಟಮ್/ಕಟ್ಟೆ ಉತ್ತರಪದಕ್ಕೆ ಕೆರೆ, ನದಿ ಮುಂತಾದೆಡೆಗಳಲ್ಲಿರುವ ಇಳಿಜಾರಿಗೆ ಅಡ್ಡವಾಗಿ ಕಟ್ಟಿದ ಒಡ್ಡು ಎಂದರ್ಥಗಳಿವೆ. ದ್ರಾವಿಡ ಭಾಷೆಗಳಾದ ತಮಿಳು, ಮಲಯಾಳಂನಲ್ಲಿ ಪಯಿರ್, ತುಳುವಿನಲ್ಲಿ ಪೈರ್, ತೆಲುಗು ಭಾಷೆಯ ಪಯಿರು ಪದಗಳು 'ಪೈರು' ಎಂಬರ್ಥವನ್ನೇ ಕೊಡುತ್ತವೆ. ಹಾಗಾಗಿ ಆಹಾರಧಾನ್ಯಗಳು ಬೆಳೆಯುವ ಫಲವತ್ತಾದ ನದಿಮುಖಜಭೂಮಿ ಅಥವಾ ಹಸುರು ಬೆಳೆಯಿಂದ ತುಂಬಿರುವ ಪ್ರದೇಶವೇ ಪಯರುಕಟ್ಟ>ಹೆಸರಗಟ್ಟವಾಗಿದ್ದು, ಭೌಗೋಳಿಕ ಸ್ಥಿತಿಗತಿ ಮತ್ತು ಬೇಸಾಯಾಭಿವೃದ್ಧಿ ಸೂಚಕ ಸ್ಥಳನಾಮ ಇದಾಗಿದೆ. ಹಾಗಾಗಿ ಶಾಸನೋಕ್ತ ದನದ ಓಣಿಯಿಂದ ಹಿಡಿದು ಪ್ರಸ್ತುತ ರಾಷ್ಟ್ರೀಯ ತೋಟಗಾರಿಕೆ ಸಂಸ್ಥೆ, ಕೇಂದ್ರೀಯ ಕುಕ್ಕುಟ ಅಭಿವೃದ್ಧಿ ಸಂಘಟನೆ/ತರಬೇತಿ ಸಂಸ್ಥೆಗಳವರೆಗಿನ ವ್ಯವಸಾಯಪೂರಕ ಚಟುವಟಿಕೆಗಳು ಇಲ್ಲಿ ಗಮನಾರ್ಹವಾಗಿವೆ.

* ಆಂಗ್ಲ ಭಾಷಾ ಶಿಕ್ಷಕ, ಕರ್ನಾಟಕ ಪಬ್ಲಿಕ್ ಶಾಲೆ, ಅಗರ, ಸರ್ಜಾಪುರ ರಸ್ತೆ, ಬೆಂಗಳೂರು.

ಸೀಮೆಯನ್ನು ಉಲ್ಲೇಖಿಸುವ ಶಾಸನಗಳು

ಶಾಸನಸಂಖ್ಯೆ/ಕಾಲಮಾನ	ಸೀಮೆಯ ಉಲ್ಲೇಖ	ಸೀಮೆಯ ನಾಯಕ	ವಿಜಯನಗರದ ಅಧಿರಾಜ
ದೇವನಹಳ್ಳಿ–೮೧ ಕ್ರಿ.ಶ. ೧೪೨೫	ಯಲಹಕ್ಕನಾಡ ನಿಷ್ಠಂ ಶಿವನಸಮುದ್ರಸ್ಯ ಸೀಮ್ನಿ	–	ಇಮ್ಮಡಿ ದೇವರಾಯ
ಬೆಂಗಳೂರು–೧೨೭ ಕ್ರಿ.ಶ. ೧೪೩೧	ಶಿವನಸಮುದ್ರದ ಕೆಳಗೆ ಸಲ್ಲುವ ಯೆಲಹಂಕನಾಡು	ಮಂಗಪ್ಪ ದಣ್ಣಾಯಕನ ಮಗ ಪ್ರತಾಪರಾಯ	ಇಮ್ಮಡಿ ದೇವರಾಯ
ಬೆಂಗಳೂರು–೨೮ ಕ್ರಿ.ಶ. ೧೫೩೦	ಶಿವನಸಮುದ್ರದಸ್ಥಳ	ಸೋಲೂರ ಬಸವಪ್ಪ ನಾಯಕನ ಮಗ ಕೃಷ್ಣಪ್ಪನಾಯಕ	ಅಚ್ಯುತದೇವರಾಯ
ಬೆಂಗಳೂರು–೫೭ ಕ್ರಿ.ಶ. ೧೫೩೨	ಎಲಹಕ ರಾಜ್ಯಕ್ಕೆ ಸಲ್ಲುವ ಸಿವನಸಮುದ್ರದ ಸೀಮೆ	ಕೆಂಪದೇವರಸ	ಅಚ್ಯುತದೇವರಾಯ
ನೆಲಮಂಗಲ–೩೧ ಕ್ರಿ.ಶ. ೧೫೩೩	ಚೇ(ಬೇ)ಲೂರು ಚಾವಡಿಗೆ ಸಲ್ಲುವ ಎಲಹಂಕನಾಡ ಸಿವನಸಮುದ್ರಸೀಮೆವೊಳಗಣ ಕಾಕೋಳಲಸ್ಥಳದ ಹೆಸರುಘಟ್ಟ	ಅಪ್ಪಂಣಗಳು/ಮಲಪಂಣಗಳು	ಅಚ್ಯುತದೇವರಾಯ
ಬೆಂಗಳೂರು–೧೩೮ ಕ್ರಿ.ಶ. ೧೫೩೮	ಸಿವನಸಮುದ್ರದ ಸೀಮೆ	ಮೇಚರಸಯ್ಯ	ಅಚ್ಯುತದೇವರಾಯ
ಬೆಂಗಳೂರು–೩೦ ಕ್ರಿ.ಶ. ೧೫೪೪	ಎಲಹಕನಾಡ ಸಿವನಸಮುದ್ರದ ಸೀಮೆ	ರಾಚುರ ನರಸಿಂಹಯ್ಯಗಳು	ಸದಾಸಿವರಾಯ
ದೊಡ್ಡಬಳ್ಳಾಪುರ–೭೧ ಕ್ರಿ.ಶ. ೧೫೪೪	ಸಿವನಸಮುದ್ರದ ಸೀಮೆ	ಕಾಮಗೌಡ ವೀರಣನಾಯಕ	ಸದಾಸಿವರಾಯ
ದೇವನಹಳ್ಳಿ–೮೨ ಕ್ರಿ.ಶ. ೧೫೮೪	ಯಲಹಕ್ಕನಾಡಿನ ಶ್ರೀ ಶಿವನಸಮುದ್ರ ಸೀಮೆ	ಆವತಿನಾಡಪ್ರಭು ಭೈರವೇಂದ್ರನ ಮಗ ಬೈಚಯ	ಒಂದನೆಯ ಶ್ರೀರಂಗರಾಯ

ಕ್ರಿ.ಶ. ೧೪೨೫ರಲ್ಲಿ ಯಲಹಕ್ಕನಾಡಿನಲ್ಲಿದ್ದ ಶಿವನಸಮುದ್ರ ಸೀಮೆಯು ೧೪೩೧ರ ಸುಮಾರಿಗೆ ಯಲಹಂಕನಾಡಿಗಿಂತಲೂ ಒಂದುಸ್ತರ ಮೆಲ್ಮಟ್ಟದಲ್ಲಿದ್ದುದರಿಂದ 'ಶಿವನಸಮುದ್ರದ ಕೆಳಗೆ ಸಲ್ಲುವ ಯಲಹಂಕನಾಡು' ಎಂದು ಶಾಸನೋಕ್ತವಾಗಿದೆ. ಕ್ರಿ.ಶ. ೧೪೩೧ರಿಂದ ೧೫೩೦ರ ವರೆಗಿನ ಒಂದು ಶತಮಾನಕಾಲ ಸೀಮೆಗಿಂತಲೂ ಎರಡು ಸ್ತರಗಳ ಉನ್ನತ ಆಡಳಿತಘಟಕವಾದ 'ಸಿವನಸಮುದ್ರ ಸ್ಥಳ' ಎಂಬ ಸ್ಥಾನಮಾನ ಹೊಂದಿತ್ತು. ಆದರೆ ಸ್ಥಳವನ್ನಾಳಿದ ನಾಯಕರನ್ನು ಪ್ರಸ್ತಾಪಿಸುವ ಶಾಸನಗಳಿಲ್ಲ. ಪುನಃ ೧೫೩೨ರಿಂದ ೧೫೮೪ರ ಕಾಲಘಟ್ಟದಲ್ಲಿ ಶಿವನಸಮುದ್ರಸೀಮೆ ಯಲಹಂಕ ನಾಡವ್ಯಾಪ್ತಿಯಲ್ಲಿ ಉಳಿದು ಬಂದಿರುವುದನ್ನು ಕಾಣುತ್ತೇವೆ.


ಸೀಮೆಯನ್ನು ಆಳಿದ ಅಧಿರಾಜ/ನಾಯಕರು

ಇಮ್ಮಡಿ ದೇವರಾಯ: ಕ್ರಿ.ಶ. ೧೪೨೫ರ ಜೋಡಿಸಾದಳ್ಳಿ ಶಾಸನದಂತೆ ವಿಜಯನಗರ ದೊರೆ ಇಮ್ಮಡಿ ದೇವರಾಯನು ಚಂದ್ರಮೌಳೇದೇವರ ಸನ್ನಿಧಾನದಲ್ಲಿ ಯಲಹಕ್ಕನಾಡನಿಷ್ಠ, ಶಿವನಸಮುದ್ರ ಸೀಮೆಯ ಮಧ್ಯದಲ್ಲಿರುವ ಹಲಸೂರು ಸ್ಥಳಕ್ಕೊಳಪಟ್ಟ ಯಿಲಿತೊರೆ ಗ್ರಾಮವನ್ನು ಉಪಗ್ರಾಮ ಮಾದಿಗೊಂಡನಹಳ್ಳಿ–ಸಾದುಹಳ್ಳಿ ಸಹಿತ ಸರ್ವಮಾನ್ಯ ಅಗ್ರಹಾರವಾಗಿಸಿ ದೇವರಾಯಪುರ ಪರಿಸರ ಗ್ರಾಮವೆಂದು ಕರೆದು, ಪೂರ್ವದಲ್ಲಿ ನಾಗಮಂಗಲ, ಪಶ್ಚಿಮದಲ್ಲಿ ಕಂದಮಂಗಲ, ದಕ್ಷಿಣಕ್ಕೆ ಉಗುನವಾಡಿ ಹಾಗೂ ಉತ್ತರ ದಿಕ್ಕಿನ ಹಿರಿಯ ಜಾಲ ಮೇರೆಗೊಳಪಟ್ಟ ಭೂಮಿಯನ್ನು ಅರುಣಾಚಲೇಶಪಂಡಿತನ ಮಗನಾದ ಕೇಶವಪಂಡಿತನಿಗೆ ದಾನ ಕೊಡುತ್ತಾನೆ.[೭] ಶಾಸನೋಕ್ತ ಹಲಸೂರುಸ್ಥಳ>ಬೆಟ್ಟ ಹಲಸೂರು, ಯಿಲಿತೊರೆ>ಇಳತೊರೆ(ಇಳ್ಳತೊರೆ), ಸಾದುಹಳ್ಳಿ>ಸಾದಹಳ್ಳಿ>ಸಾದಳ್ಳಿ ಗ್ರಾಮಗಳು ಇಂದಿನ ದೇವನಹಳ್ಳಿ ತಾಲ್ಲೂಕಿನಲ್ಲಿದ್ದರೆ, ಮಾದಿಗೊಂಡನಹಳ್ಳಿ>ಮಾದಗೊಂಡನಹಳ್ಳಿಯು ದೊಡ್ಡಬಳ್ಳಾಪುರ ತಾಲ್ಲೂಕಿಗೊಳಪಡುತ್ತದೆ. ಈ ತಾಮ್ರಶಾಸನದಲ್ಲಿ 'ದೇವರಾಯೇಣದತ್ತಂ ಕೇಶವಪಂಡಿತ:' ಎಂದು ಹೇಳಿ, ಯಲಹಕ್ಕನಾಡು, ಶಿವನಸಮುದ್ರಸೀಮೆ ಹಾಗೂ ಹಲಸೂರು

ಸ್ಥಳಗಳ ನಾಯಕರನ್ನು ಪ್ರಸ್ತಾಪಿಸದ ಕಾರಣ ಶಿವನಸಮುದ್ರಸೀಮೆಯು ಇಂದಿನ ಕೇಂದ್ರಾಡಳಿತ ಪ್ರದೇಶದಂತೆ ಅಧಿರಾಜ ಇಮ್ಮಡಿ ದೇವರಾಯನ ನೇರ ಆಡಳಿಕ್ಕೊಳಪಟ್ಟಿತ್ತು ಎಂದು ಸ್ಪಷ್ಟವಾಗುತ್ತದೆ.

ಮಂಗಪ್ಪ ದಣ್ಣಾಯಕನ ಮಗ ಪ್ರತಾಪರಾಯ: ಇಮ್ಮಡಿ ದೇವರಾಯರ ನಿರೂಪದಿಂದ ಸಕನಸಮುದ್ರದವೊಳಗಣ ಊರಮುಂದಣ ಸೋಮೇದೇವರ ನೈವೇದ್ಯ ಹಾಗೂ ಅಂಗರಂಗಭೋಗಕ್ಕೆ ಮಹಾಪ್ರಧಾನ ಮಂಗಪ್ಪ ದಣ್ಣಾಯಕನ ಮಗ ಪ್ರಥಾಪರಾಯನು ತನ್ನ ನಾಯಕತನಕ್ಕೆ ಕೊಡಲ್ಪಟ್ಟಿದ್ದ ಶಿವನಸಮುದ್ರದ ಕೆಳಗೆ ಸಲ್ಲುವ ಯಲಹಂಕನಾಡ ತರಣಿಯಪ್ಪನ ಬಾಗಿ[೯]ಯೊಳಗಿನ ದೇವಸಮುದ್ರ್ ಗ್ರಾಮದ ಉಪಗ್ರಾಮ ವಿರುಪಾಕ್ಷಪುರವನ್ನು ವಿಜಯದೇವರಾಯಪುರವಾಗಿ ಮಾಡುತ್ತಾನೆ. ದೇವಸಮುದ್ರ ಹಿರಿಯ ಕೆರೆಯ ಕೆಳಗಿನ ಐದು ಖಂಡುಗ ಬೀಜವರಿ ಗದ್ದೆಯನ್ನು ದೇವರಾಯ ಮಹಾರಾಯರ ಆಯುರಾರೋಗ್ಯ-ಐಶ್ವರ್ಯ ವೃದ್ಧಿಯಾಗಲೆಂದು ದಾನ ಕೊಡುತ್ತಾನೆ. ಪ್ರತಾಪರಾಯನು ತಾನು ದಾನ ಕೊಟ್ಟ ಭೂಮಿಯ ಈ ಹಿಂದೆ ಇದ್ದ ಹದಿನಾರುವರೆ ಗದ್ಯಾಣದ ಗುತ್ತಿಗೆ ಪ್ರಮಾಣಕ್ಕೆ ವರ್ತಮಾನದ ಆದಾಯದಂತೆ ಹೆಚ್ಚುವರಿಯಾಗಿ ಮೂರುವರೆ ಗದ್ಯಾಣ ಸೇರಿಸಿ, ಒಟ್ಟು ೨೦ ಗದ್ಯಾಣಕ್ಕೆ ಗುತ್ತಿಗೆ ನೀಡಿರುವ ಅಂಶ ಸಾ.ಶ. ೧೪೩೧ರ ಕೊಡಿಗೇಹಳ್ಳಿ ಶಾಸನದಲ್ಲಿದೆ. ಹೆಚ್ಚು ಹೆಚ್ಚು ರಾಜ್ಯಾದಾಯ ತರುವ ಗುತ್ತಿಗೆ ನೀಡುವ ಕ್ರಮವು ಪ್ರತಾಪರಾಯನ ಆರ್ಥಿಕ ಯೋಜನೆಯನ್ನು ನಿರೂಪಿಸುತ್ತದೆ. ಪಾತ್ರದವರು, ನಟವರರು, ಮದ್ದಳೆಕಾರ, ಸಿತಾರ, ಉಪಾಂಗ ಹಾಗೂ ಕಂಸಾಳೆಯವರೆಲ್ಲರೂ ಸೇರಿ ಒಟ್ಟು ಏಳು ಜನರು ಎರಡೂ ಹೊತ್ತು ಸೋಮೇದೇವರಿಗೆ ಅಂಗರಂಗಭೋಗ ನಡೆಸಿ, ಕೆರೆಕೆಳಗಿನ ಗದ್ದೆಯನ್ನು ಆಗು ಮಾಡಿಕೊಂಡು ಅನುಭೋಗಿಸುವುದು ಮತ್ತು ಇದು 'ಶ್ರೀಮತು ಪ್ರಥಾಪರಾಯರ ಬರಹ' ಎಂಬುದನ್ನು ಶಾಸನವು ಸ್ಪಷ್ಟಪಡಿಸುತ್ತದೆ.[೧೦] ಕೊಡಿಗೆಹಳ್ಳಿ[೧೧]ಯಿಂದ ಸುಮಾರು ಒಂದು ಕಿ.ಮೀ ಅಥವಾ ಬೆಂಗಳೂರು-ದೊಡ್ಡಬಳ್ಳಾಪುರ ರೈಲುಮಾರ್ಗದ ಕೊಡಿಗೇಹಳ್ಳಿ ರೈಲುನಿಲ್ದಾಣಕ್ಕೆ ಪಶ್ಚಿಮ ಸುಮಾರು ೮೦೦ ಅಡಿ ದೂರದ ವಿರುಪಾಕ್ಷಪುರದಲ್ಲಿ ಪಶ್ಚಿಮಾಭಿಮುಖ ಹಳೇಕೋಟೆ ವೀರಾಂಜನೇಯ ದೇವಾಲಯದ ಮುಂದೆ ಈ ಶಾಸನವಿದೆ. ಶಾಸನವಿರುವ ವಿರೂಪಾಕ್ಷಪುರವೇ ಶಾಸನೋಕ್ತ ವಿರೂಪಾಕ್ಷಪುರವಾಗಿದ್ದು ಕರ್ನಾಟಕ ಗ್ರಾಮಸೂಚಿಯಲ್ಲಿ ಈ ಗ್ರಾಮನಾಮವಿರುವುದಿಲ್ಲ. ಆಂಜನೇಯ ದೇವಾಲಯದ ಎಡಭಾಗದಲ್ಲಿ ೪೦ ವರ್ಷಗಳ ಹಿಂದೆ ಕೋಟೆಯ ಅವಶೇಷಗಳಿದ್ದ ಕಾರಣಕ್ಕಾಗಿ ಆಂಜನೇಯ ದೇವಾಲಯಕ್ಕೆ 'ಹಳೇಕೋಟೆ ವೀರಾಂಜನೇಯ' ಎನ್ನಲಾಗುತ್ತಿದೆ. ಶಾಸನೋಕ್ತ ಸಕನಸಮುದ್ರವು ಒಂದು ಕೆರೆಯಾಗಿದ್ದು, ಅದು ಇಂದಿನ ವಿರೂಪಾಕ್ಷಪುರ ಪಕ್ಕದ ಕೊಡಿಗೆಹಳ್ಳಿ ಕೆರೆಯಾಗಿರುವ ಸಾಧ್ಯತೆಯಿದೆ. ಇದೇ ಕೆರೆಯನ್ನು ದೊಡ್ಡಬೊಮ್ಮಸಂದ್ರ, ತಿಂಡ್ಲು ಗ್ರಾಮಸ್ಥರು ತಮ್ಮೂರ ಕೆರೆ ಎಂದು ಹೇಳಿಕೊಳ್ಳುತ್ತಾರೆ. ಸೋಮೇದೇವರ ದೇವಾಲಯದ ಕುರುಹುಗಳಿಗಾಗಿ ವಿರೂಪಾಕ್ಷಪುರ, ಕೊಡಿಗೇಹಳ್ಳಿ ಗ್ರಾಮಗಳಲ್ಲಿ ಕ್ಷೇತ್ರಕಾರ್ಯ ಮಾಡಲಾಗಿ ದೇವಾಲಯವು ಕಂಡು ಬಂದಿರುವುದಿಲ್ಲ.

ಶಿವನಸಮುದ್ರಸೀಮೆಯ ನಾಯಕತನ ಹೊಂದಿದ್ದ ಪ್ರತಾಪರಾಯನು ಮೊದಲನೆಯ ಬೈಚಯದಂಡನಾಯಕನ ಮೊಮ್ಮಗನೂ, ಮಂಗಪ್ಪ ದಂಡನಾಯಕ ಮತ್ತು ಜಾನಕಿಯ ಮಗನೂ ಆಗಿರುತ್ತಾನೆ. ಮೊದಲನೆಯ ಬೈಚಯ ದಂಡನಾಯಕನು ಹೊಯ್ಸಳ ಮೂರನೆಯ ಬಲ್ಲಾಳನ ಪತ್ನಿ ಕಿಕ್ಕಾಯಿತಾಯಿಯ ಪ್ರಧಾನಿಯಾಗಿ, ಒಂದನೆಯ ಬುಕ್ಕರಾಯನಿಗೆ ಬಾರಕೂರು-ಮಂಗಳೂರು ಪ್ರಾಂತಾಧಿಕಾರಿಯಾಗಿದ್ದನು. ಇನ್ನು ಮಂಗಪ್ಪ ದಂಡನಾಯಕನು ವಿಜಯನಗರ ಅರಸರ ವಿರುದ್ಧ ಸ್ವತಂತ್ರರಾಗಲು ಸಮರ ಸಾರಿದ್ದ ತುಳುನಾಡಿನ ಗೇರುಸೊಪ್ಪೆಯ ಹೈವರಸ ಮತ್ತು ಉಲ್ಲಾಳದ ವಿಕ್ರಮ ಚೌಟರ ದಂಗೆಗಳನ್ನು ಯಶಸ್ವಿಯಾಗಿ ಹತ್ತಿಕ್ಕಿದ್ದನು.[೧೨] 'ಉಡುಪಿಯ ಶ್ರೀಮಹಾದೇವರ ಸ್ಥಾನವಳಿದ ಸಂಮಂಧ' ಚಕ್ರವರ್ತಿಯ ಆಜ್ಞೆಯ ಮೇರೆಗೆ 'ಮಂಗಪ್ಪ ದಂಣಾಯಕರೂ ಸರ್ವದಳ ಸಹಿತ ಬಂದಲಿ'[೧೩] ಎಂಬ ಶಾಸನದ ಸಾಲಂತೂ ಮಂಗಪ್ಪ ದಣ್ಣಾಯಕನ ಶೌರ್ಯ-ಪರಾಕ್ರಮಗಳಿಗೆ ಹಿಡಿದ ಕೈಗನ್ನಡಿಯಾಗಿದೆ. ಸಹೋದರರಾದ ಇರುಗಪ್ಪ, ಬುಕ್ಕಣ್ಣರಿಗೆ ದಂಡನಾಯಕನ ಸ್ಥಾನಮಾನ ತಂದುಕೊಡುವಲ್ಲಿ ಮಂಗಪ್ಪ ದಣಾಯಕನ ಸಾಹಸಗಾಥೆ ಕಾರಣವಾಗಿತ್ತು.[೧೪] ಈ ವಂಶಸ್ಥರ ಸೇವಾ ಹಿರಿತನವನ್ನು ಪರಿಗಣಿಸಿ ದೊರೆ ಇಮ್ಮಡಿ ದೇವರಾಯನು ಮಂಗಪ್ಪ ದಣ್ಣಾಯಕನ ಮಗ ಪ್ರತಾಪರಾಯನಿಗೆ ಶಿವನಸಮುದ್ರಸೀಮೆಯ ನಾಯಕತನವನ್ನು ವಹಿಸಿದ್ದನು. ಇವರ ಮನೆತನ[೧೫]ವನ್ನು ಕೆಳಗಿನಂತೆ ನಿರೂಪಿಸಬಹುದಾಗಿದೆ. ದಂಡನಾಯಕರ ಮನೆತನದ ಈ ವಂಶಾವಳಿಯನ್ನು ಗಮನಿಸಿದಾಗ ಮಂಗಪ್ಪ ದಂಡನಾಯಕನು ತನ್ನ ಜೇಷ್ಠಪುತ್ರನಿಗೆ ತಂದೆಯ ಹೆಸರನ್ನು, ಎರಡನೆಯ ಪುತ್ರನಿಗೆ ಅಧಿರಾಜ ಇಮ್ಮಡಿ ಪ್ರೌಢದೇವರಾಯನ ಹೆಸರಾದ ಪ್ರತಾಪರಾಯ ಎಂಬ ನಾಮಕರಣ ಮಾಡಿರುವುದು ಸ್ಪಷ್ಟವಾಗುತ್ತದೆ. ಕ್ರಿ.ಶ. ೧೪೪೦ರ ಬೆಂಗಳೂರು-೮ ನೆಯ ಶಾಸನದಲ್ಲಿ 'ಪಟ್ಟಣದ ರಾಯಣಂಗಳು' ಎಂದು ಉಲ್ಲೇಖಿಸಲ್ಪಟ್ಟ ವ್ಯಕ್ತಿಯು ಮಂಗಪ್ಪ ದಣ್ಣಾಯಕನ ಸಹೋದರ ಹಾಗೂ ಪ್ರತಾಪರಾಯನ ಚಿಕ್ಕಪ್ಪನೆಂದು ಊಹಿಸಬಹುದಾಗಿದೆ.



ಸೋಲೂರ ಬಸವಪ್ಪನಾಯಕನ ಮಗ ಕೃಷ್ಣಪ್ಪನಾಯಕ (ಸಾ.ಶ. ೧೫೧೮–೧೫೮೧): ಕ್ರಿ.ಶ. ೧೫೩೦ರ ಹಾರೋಹಳ್ಳಿ ಶಾಸನವು ಅಚ್ಯುತದೇವರಾಯರು ಸೋಲೂರ ಬಸವಪ್ಪನಾಯಕರ ಮಗ ಕೃಷ್ಣಪ್ಪನಾಯಕನಿಗೆ ಸಿವನಸಮುದ್ರಸ್ಥಳದ ನಾಯಕತನ ವಹಿಸಿರುವುದನ್ನು ತಿಳಿಸುತ್ತದೆ. ಕೃಷ್ಣಪ್ಪನಾಯಕನು ತನ್ನ ಸಿವನಸಮುದ್ರಸ್ಥಳಕ್ಕೆ ಸಲ್ಲುವ ಹಾರೋಹಳ್ಳಿ ಗ್ರಾಮವನ್ನು ಸಿಂಗಾಪುರದ ತಿರುವೆಂಗಳನಾಥದೇವರ ಅಂಗರಂಗ ವೈಭೋಗ, ಅಮೃತಪಡಿ ನೈವೇದ್ಯ ಹಾಗೂ ರಾಮಾನುಜಕೂಟಕ್ಕೆ ಸಲ್ಲಿಸಿ, ದೊರೆ ಅಚ್ಯುತದೇವರಾಯರು ಮತ್ತು ತನ್ನ ತಂದೆ ಬಸವಪ್ಪನಾಯಕರಿಗೆ ಪುಣ್ಯವಾಗಬೇಕೆಂದು ಪ್ರಾರ್ಥಿಸಿದ್ದಾನೆ.[೧೬] ಸಿವನಸಮುದ್ರಸ್ಥಳದ ಸಿಂಗಾಪುರದಲ್ಲಿ ತಿರುವೆಂಗಳನಾಥ ದೇವಾಲಯಕ್ಕೆ ಹೊಂದಿಕೊಂಡು ರಾಮಾನುಜಕೂಟವಿತ್ತೆಂಬ ಅಂಶ ಗಮನಾರ್ಹವಾದುದು. ಕರ್ನಾಟಕದಲ್ಲಿ ವಿಷ್ಣುಪೂಜೆ–ವೈಷ್ಣವ ಭಕ್ತಿಗಳು ಹಿಂದಿನಿಂದ ನಡೆದು ಬಂದು, ಸಾಕಷ್ಟು ವೈಷ್ಣವ ದೇವಾಲಯಗಳಿದ್ದರೂ, ರಾಮಾನುಜರು ೧೦೯೬ರಲ್ಲಿ ಚೋಳ ಅರಸ ಇಮ್ಮಡಿ ಕಲೋತ್ತುಂಗನ ಶ್ರೀವೈಷ್ಣವಪಂಥದ ವಿರೋಧ ಕಾರಣಕ್ಕಾಗಿ ಮೂಲನೆಲೆ ಶ್ರೀರಂಗವನ್ನು ತೊರೆದು ಮೈಸೂರಿನತ್ತ ಬಂದ ಮೇಲೆ ಶ್ರೀ ವೈಷ್ಣವ ಪಂಥವು ಇಲ್ಲಿ ವ್ಯಾಪಕವಾಗಿ ಹರಡಿತು. ಇದರ ಫಲವಾಗಿ ಶ್ರೀ ವೈಷ್ಣವ ಆಳ್ವಾರರು ಮತ್ತು ಆಚಾರ್ಯರ ಆರಾಧನೆ, ಆಳ್ವಾರರ ದೇವಾಲಯ ನಿರ್ಮಾಣ, ಈ ದೇವಾಲಯಗಳಿಗೆ ಹೊಂದಿಕೊಂಡಂತೆ ಶ್ರೀ ವೈಷ್ಣವರು ತಂಗಲು, ಅವರಿಗೆ ಅನ್ನಪ್ರಸಾದ ಒದಗಿಸಲು ಹಾಗೂ ಧಾರ್ಮಿಕ ಸಂಗತಿಗಳ ಚರ್ಚೆ ನಡೆಸಲು ರಾಮಾನುಜಕೂಟಗಳ ಸ್ಥಾಪನೆಯಾಗಿರುವುದು ತಿಳಿದು ಬರುತ್ತದೆ.[೧೭] ಇದಕ್ಕೆ ಪುಷ್ಟೀಕರಣವೆಂಬಂತೆ ಜಂಕಿಯಣ್ಣನಾಯ್ಕನು ತನ್ನ ನಾಯಕತನದ ಕುಕ್ಕಲನಾಡಿನ ನಗರೂರ ಗ್ರಾಮದ ಗದ್ದೆ–ಬೆದ್ದಲು, ತೋಟ–ತುಡಿಕೆ, ಆಣೆ–ಅಚ್ಚುಕಟ್ಟುಗಳ ಆದಾಯವನ್ನು ರಾಮಾನುಜಕೂಟದ ದಾಸೋಹ ನಡೆಸಲು ಸರ್ವಮಾನ್ಯವಾಗಿ ಕೊಡುತ್ತಾನೆ.[೧೮] ನಗರೂರು ಇಂದಿನ ನೆಲಮಂಗಲ ತಾಲ್ಲೂಕಿನ ನಾಗರೂರು ಆಗಿದ್ದು, ಈ ಶಾಸನವಿರುವ ದಾಸನಪುರವೇ ರಾಮಾನುಜಪುರ ಎನಿಸಿರಬೇಕು.

ಕೃಷ್ಣದೇವರಾಯನ ಆಳ್ವಿಕೆಯ ಕ್ರಿ.ಶ. ೧೫೧೮ರಲ್ಲಿ ಸೋಲೂರ ಬಸವಪ್ಪನಾಯಕನ ಕುಮಾರ ಕೃಷ್ಣಪ್ಪನಾಯಕನು ಅಲುಬುರ (ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಅಲಬೂರು) ಹೊನ್ನತಿದೇವಿಗೆ ಭೂದಾನ[೧೯]

ನೀಡಿದ್ದರೆ, ಬಸವಪ್ಪನಾಯಕನು ತನ್ನ ತಂದೆ ಜಕ್ಕಣನಾಯಕ, ತಾಯಿ ತಿಪ್ಪಮ್ಮನವರಿಗೆ ಅಕ್ಷಯ ಪುಣ್ಯಲೋಕವಾಗಬೇಕೆಂದು ಹಾಗೂ ಮಗ ಕೃಷ್ಣಪ್ಪನಾಯಕನಿಗೂ ಅನೇಕ ಧರ್ಮವಾಗಬೇಕೆಂದು ಬೇಲೂರಿನ ಚೆನ್ನಿಗರಾಯಸ್ವಾಮಿಯ ಹತ್ತುದಿನಗಳ ಉತ್ಸವಕ್ಕಾಗಿ ತೆಪ್ಪಕೊಳ, ವಸಂತಮಂಟಪಗಳನ್ನು ಕಟ್ಟಿಸುತ್ತಾನೆ. ದೇವರಪೂಜೆ, ನೈವೇದ್ಯ ಹಾಗೂ ೪೦ ಜನ ಬ್ರಾಹ್ಮಣರ ಪರಮಾನ್ನಕ್ಕಾಗಿ ತನ್ನ ನಾಯಕತನಕ್ಕೊಳಪಟ್ಟ ವಸ್ತಾರೆಸೀಮೆ, ದೇವಣಿಗೆನಾಡಿನ ನಾರಾಯಣಪುರ, ಹಲುಮಿರಿ ಗ್ರಾಮಗಳ ಹುಟ್ಟುವಳಿಯನ್ನು ಸಮರ್ಪಿಸುತ್ತಾನೆ.[೨೦] ಅಚ್ಯುತದೇವರಾಯನ ಆಡಳಿತಾವಧಿಯ ಕ್ರಿ.ಶ. ೧೫೩೦ರಲ್ಲೇ ಸೋಲೂರ ಬಸವಪ್ಪನಾಯಕನ ಪುತ್ರ ಕೃಷ್ಣಪ್ಪನಾಯಕನು ಸಾತಿಗ್ರಾಮಕ್ಕೂ ಕರ್ತನಾಗಿದ್ದನು. ದಕ್ಷಿಣ ಭುಜಾದಂಡ, ಶ್ರೀಮನ್ಮಹಾಸಾವಂತಾಧಿಪತಿ, ಗಂಡಭೇರುಂಡ ಕದನ ಪ್ರಚಂಡನಸಹಾಯಸೂರ, ಏಕಾಂಗಿವೀರನೆಂಬ ಬಿರುದುಗಳು ಇವನಿಗಿದ್ದವು.[೨೧] ಶಿವನಸಮುದ್ರ ಸೀಮೆ ಮತ್ತು ಸಾತಿಗ್ರಾಮದ ಸೀಮೆಗಳೆರಡರ ಉಸ್ತುವಾರಿ ನೋಡಿಕೊಳ್ಳುತ್ತಿದ್ದ ಕೃಷ್ಣಪ್ಪನಾಯಕನಿಂದ ಹರಿಹರದ ಲಿಂಗಣ್ಣೊಡೆಯರಿಗೆ ಸಾತಿಗ್ರಾಮದ ಸೀಮೆಯ ಹಸ್ತಾಂತರವಾಗುತ್ತದೆ. ಈ ಸೀಮೆಯ ಕೇಂದ್ರಸ್ಥಾನವಾಗಿದ್ದ ಇಂದಿನ ಶಾಂತಿಗ್ರಾಮವು ಹೋಬಳಿ ಕೇಂದ್ರವಾಗಿದ್ದು ಚನ್ನರಾಯಪಟ್ಟಣ–ಹಾಸನ ರಾಷ್ಟ್ರೀಯ ಹೆದ್ದಾರಿಯಲ್ಲಿದೆ. ಕ್ರಿ.ಶ. ೧೫೮೧ರ ನಾಗಸಂದ್ರದ ತೃಟಿತ ಶಾಸನವೊಂದರಿಂದ ಕುಕ್ಕಲನಾಡಿನ ನಾಯಕತನವೂ ಕೃಷ್ಣಪ್ಪನಾಯಕನಿಗೆ ಇತ್ತೆಂದು ತಿಳಿದುಬರುತ್ತದೆ[೨೨]. ಲಭ್ಯ ಶಾಸನಗಳ ಪ್ರಕಾರ ಶಿವನಸಮುದ್ರ ಸೀಮೆ, ಸಾತಿಗ್ರಾಮದ ಸೀಮೆಗಳ ನಾಯಕತನ ಪಾಲಿಸಿದ್ದ ಕೃಷ್ಣಪ್ಪನಾಯಕನ

ಮನೆತನದ ಮೂಲಪುರುಷ ತಿಮ್ಮನಾಯಕ[೨೩]ನಾಗಿದ್ದು, ಇವನು ತುಳುವಂಶದ ಕೃಷ್ಣದೇವರಾಯನಿಗೆ ಮಂತ್ರಿಯಾಗಿದ್ದನು. ತಿಮ್ಮನ ಮಗ ಜಕ್ಕೇಂದ್ರ/ಜಕ್ಕನೃಪ/ಜಕ್ಕಕ್ಷಿತಿಪಾಲನು ಬೇಲೂರ ಕೇಶವದೇವರ ಮುಂದೆ ಚಿನ್ನದ ಗರುಡಗಂಬ ನಿಲ್ಲಿಸುತ್ತಾನೆ. ಜಕ್ಕನೃಪನ ಮಗ ಬಸವಪ್ಪನಾಯಕ/ ಬಸವಪ್ಪ ಒಡೆಯ/ ಬಸವ ಭೂಪಾಲ (೧೫೨೪–೧೫೫೮)ನು ಸಾಳುವ ಗುಂಡನ ಮೊಮ್ಮಗ ಎರಡನೆಯ ನರಸಿಂಹನ ಕಾಲ (೧೪೯೧–೧೫೦೫)ದಲ್ಲಿ ಸೋಲೂರ ಸೀಮೆಯನ್ನಾಳುತ್ತಿದ್ದನು. ಈ ಸೋಲೂರ ಬಸವಪ್ಪನಾಯಕನಿಗೆ ನಾಲ್ಕು ಜನ ಮಕ್ಕಳಿದ್ದು, ಅವರಲ್ಲಿ ತಿಂಮಪ್ಪನಾಯಕನು ಸಾ.ಶ ೧೫೩೭ರಲ್ಲಿ ಪಾಪೆಯನಾಯಕ ಅಯ್ಯನವರ ಕಾರ್ಯಕ್ಕೆ ಕರ್ತನಾಗಿದ್ದನು ಮತ್ತು ಇವನು ಸೋಲೂರ ಸೀಮೆಯ ಮದುವೆ ಸುಂಕವನ್ನು ಬಿಡುತ್ತಾನೆ.[೨೪] ಕ್ರಿ.ಶ. ೧೫೬೨ರ ಪುರ ಶಾಸನವು ಬಸವಪ್ಪನಾಯ್ಕಯ್ಯನವರ ಮಕ್ಕಳು ತಿಂಮಪ್ಪನಾಯ್ಕ ಮತ್ತು ವಿರುಪಾಕ್ಷನಾಯ್ಕರೆಂಬುದನ್ನು ಸ್ಪಷ್ಟಪಡಿಸಿ ವಿರುಪಾಕ್ಷನಾಯ್ಕನು ಹಾಸನದ ಸೀಮೆಯನ್ನು ವತ್ತಿಗೆಯಾಗಿ ನೋಡಿಕೊಳ್ಳುತ್ತಿದ್ದನೆಂದು ತಿಳಿಸುತ್ತದೆ.[೨೫] ಸೋಲೂರ ಬಸವಭೂಪಾಲನ ಮಗ ಚನ್ನಬಸವಪ್ಪನಾಯಕನು ಶಿವಭಕ್ತನು, ೬೪ ವಿದ್ಯೆಗಳಲ್ಲಿ ನಿಪುಣನು, ಆಧುನಿಕ ಭೋಜ, ಕುಮಾರ ಕಂದರ್ಪ, ತುರಗರೇವಂತ ಎಂಬ ಬಿರುದುಗಳನ್ನು ಹೊಂದಿದ್ದನು. ತಾವರೆಗಳ ನಡುವೆ ರಾಜಹಂಸದಂತೆ ಶೋಭಿಸುತ್ತಿದ್ದ ಇವನು ಹರಿಹರದ ಹರಿಹರೇಶ್ವರ ದೇವಾಲಯದ ಉತ್ತರದ್ವಾರದ ಮೇಲಿನ ಗೋಪುರವನ್ನು ಜೀರ್ಣೋದ್ಧಾರ ಮಾಡಿಸಲು ತನ್ನ ಸಹಾಯಕ ಬೋಗುರ ಅಕ್ಕಿಯ ಹೊನ್ನಿಶೆಟ್ಟಿ ಮಗ ಚಿಕ್ಕಮಲ್ಲಿಶೆಟ್ಟಿಗೆ ಆದೇಶಿಸುತ್ತಾನೆ.[೨೬] ಒಟ್ಟಾರೆ ಶಿವನಸಮುದ್ರಸ್ಥಳದ ನಾಯಕತನ ಪಾಲಿಸಿದ ಕೃಷ್ಣಪ್ಪನಾಯಕನ ವಂಶವಿವರಗಳನ್ನು ಲಭ್ಯ ಶಾಸನಾಧಾರಗಳಿಂದ ಕೆಳಗಿನಂತೆ ಕೊಡಬಹುದಾಗಿದೆ.

ತಿಮ್ಮನಾಯಕ
|
ಜಕ್ಕನೃಪ[೨೭] (ಸಾ.ಶ. ೧೫೧೪)+ ತಿಪ್ಪಮ್ಮ
|
ಸೋಲೂರ ಬಸವಪ್ಪನಾಯಕ[೨೮] (ಸಾ.ಶ. ೧೫೨೪–೫೮)/ ಬಸವಪ್ಪ ಒಡೆಯ/ ಬಸವ ಭೂಪಾಲ[೨೯]

ತಿಮ್ಮಪ್ಪನಾಯ್ಕ[೩೦] | ವಿರೂಪಾಕ್ಷನಾಯ್ಕ[೩೦] | ಕೃಷ್ಣಪ್ಪನಾಯಕ[೩೧] (ಸಾ.ಶ. ೧೫೧೮–೧೫೮೧) | ಚನಬಸವಪ್ಪನಾಯಕ[೩೨]

ಕೆಂಪದೇವರಸ (೧೫೩೨): ಕ್ರಿ.ಶ. ೧೫೩೨ರ ದಾಸರಹಳ್ಳಿ ಶಾಸನದ ಪ್ರಕಾರ ಅಚ್ಯುತರಾಯ ಮಹಾರಾಯರು ಎಲಹಕರಾಜ್ಯಕ್ಕೆ ಸಲ್ಲುವ ಸಿವನಸಮುದ್ರಸೀಮೆಯ ನಾಯಕತನವನ್ನು ಕೆಂಪದೇವರಸ....ಗೆ ವಹಿಸಿದ್ದರು. ಕೆಂಪದೇವರಸನು ಅಚ್ಯುತರಾಯರಿಗೆ ಧರ್ಮವಾಗಬೇಕೆಂದು ಹಾಗೂ ಪರುಚಯದೇವರ ಸೇವೆ–ಈರಯ್ಯ ದೇವಸ್ಥಾನದ ಅಂಗರಂಗ ವೈಭೋಗಕ್ಕೆಂದು ಎಲಹಕರಾಜ್ಯಕ್ಕೆ ಸಲ್ಲುವ ಸಿವನಸಮುದ್ರಸೀಮೆಯೊಳಗಣ ಚೊಕ್ಕನಹಳ್ಳಿಯನ್ನು ಬಿಟ್ಟುಕೊಡುತ್ತಾನೆ.[೩೩] ಪರುಚಯದೇವರು, ಈರಯ್ಯ ದೇವಾಲಯಗಳಿಗಾಗಿ ದಾಸರಹಳ್ಳಿ ನೆರೆಯ ಗ್ರಾಮಗಳಲ್ಲಿ ಕ್ಷೇತ್ರಕಾರ್ಯ ಮಾಡಬೇಕಿದೆ. ದತ್ತಿ ಬಿಟ್ಟ ಎಡೆಯ ಬಗ್ಗೆ ಹೇಳುವುದಾದರೆ, ಚೊಕ್ಕನಹಳ್ಳಿ ಎಂಬ ಒಟ್ಟು ಮೂರು ಗ್ರಾಮಗಳಿದ್ದು, ದೇವನಹಳ್ಳಿ ತಾಲೂಕಿನ ಬಾಗಲೂರು ಹೋಬಳಿಯಲ್ಲಿ ಒಂದು ಚೊಕ್ಕನಹಳ್ಳಿ, ದೊಡ್ಡಬಳ್ಳಾಪುರ ತಾಲ್ಲೂಕಿನ ಕಾಕೋಳಲ ಹತ್ತಿರದ ಚೊಕ್ಕನಹಳ್ಳಿ ಎರಡು ಹಾಗೂ ಶಾಸನ ದೊರೆತ ದಾಸರಹಳ್ಳಿಯಿಂದ ಉತ್ತರಕ್ಕೆ ಸುಮಾರು ಐದು ಕಿ.ಮೀ. ದೂರದ ಯಲಹಂಕ ತಾಲ್ಲೂಕಿನ ಚೊಕ್ಕನಹಳ್ಳಿ ಮೂರನೆಯದಾಗಿದೆ. ಈ ಮೂರನೆಯ ಎಡೆಯೇ ಶಾಸನೋಕ್ತ ಚೊಕ್ಕನಹಳ್ಳಿಯಾಗಿರುತ್ತದೆ.

ದಾಸರಹಳ್ಳಿ ಶಾಸನದ 'ಕೆಂಪದೇವರಸ....ಲೆಗೆ ನಾಯಕತನಕೆ' ಎಂಬ ಸಾಲನ್ನು 'ಕೆಂಪದೇವರಸಗೌಡರಿಗೆ ನಾಯಕತನಕೆ' ಎಂಬ ತಿದ್ದುಪಡಿ ಪಾಠವನ್ನು ಕೊಟ್ಟ ಡಾ. ಎಂ. ಜಮುನ, ಡಾ. ಎಂ.ಜಿ. ಮಂಜುನಾಥ ಅವರು ಎಲಹಂಕ ನಾಡಪ್ರಭು ಕೆಂಪೇಗೌಡರನ್ನು ಕೆಂಪದೇವರಸಗೌಡ ಎಂದು ಸಂಬೋಧಿಸಿರುವ ಅಂಶ ಗಮನಾರ್ಹ ಎಂದಿದ್ದಾರೆ.[೩೪] ಇದೇ ಶಾಸನದ ಕೆಂಪದೇವರಸನನ್ನು ಡಾ. ಪಿ.ವಿ. ಕೃಷ್ಣಮೂರ್ತಿ ಅವರು ಎಲಹಂಕ ನಾಡಪ್ರಭು ಕೆಂಪದೇವ ಅರಸಗೌಡನೆಂದೂ, ಇವನೇ ಆ ವಂಶದ ಹಿರಿಯ ಕೆಂಪೇಗೌಡನೆಂದೂ,[೩೫] ಡಾ. ಎಂ.ಜಿ. ಮಂಜುನಾಥ ಅವರು ಪುನಃ ತಮ್ಮ ಯಲಹಂಕ ನಾಡಪ್ರಭುಗಳ ರಾಜಕೀಯ ಚರಿತ್ರೆಯ ಮರುಪರಿಶೀಲನೆಯಲ್ಲಿ ಕೆಂಪದೇವರಸನೇ ಎಲಹಂಕ ನಾಡಪ್ರಭುಗಳ ವಂಶದ ಒಂದನೆಯ ಕೆಂಪೇಗೌಡನೆಂದೂ ಹಾಗೂ ಚೊಕ್ಕನಹಳ್ಳಿಯನ್ನು ಚೊಕ್ಕನಾಥಪುರ (ಇಂದಿನ ದೊಮ್ಮಲೂರು) ವೆಂದು ಸಾಧಿಸಿದ್ದಾರೆ.[೩೬] ಅದರಂತೆ ಎಚ್.ಎಂ. ಬೋರಯ್ಯನವರು ಶಾಸನದಲ್ಲಿ ಬಿಟ್ಟುಹೋದ ಅಕ್ಷರಗಳನ್ನು ಆವರಣದಲ್ಲಿ 'ಗೌಡ' ಎಂದು ಪರಿಭಾವಿಸಿ, ಕೆಂಪೇಗೌಡನಿಗೆ ವಿಜಯನಗರ ಸಾಮ್ರಾಜ್ಯದ ಸಾಮಂತ ಅರಸನ ಸ್ಥಾನಮಾನ ಲಭ್ಯವಾಗಿತ್ತು ಎಂದು ತೀರ್ಮಾನಿಸಿದ್ದಾರೆ.[೩೭] ಆದರೆ ಯಲಹಂಕ ನಾಡಪ್ರಭುಗಳಿಗೆ ಸಂಬಂದಿಸಿದಂತೆ ಲಭ್ಯ ಮಾಹಿತಿಗಳ ಪ್ರಕಾರ ಯಲಹಂಕ (ಈಗಿನ ತಾಲ್ಲೂಕು ಕೇಂದ್ರ), ದುಟ್ಟನಹಳ್ಳಿ (ಮಾಗಡಿ ತಾಲ್ಲೂಕು) ಹಾಗೂ ಹುಲಿಕಲ್ಲು (ಮಾಗಡಿ ತಾಲ್ಲೂಕು) ಮನೆತನಗಳಿವೆ. ಈ ಮೂರು

ಮನೆತನದವರ ಎಲ್ಲ ಶಾಸನಗಳಲ್ಲಿ 'ಯಲಹಂಕ ನಾಡಪ್ರಭು' ಎಂಬ ಸಂಬೋಧನೆಯಿಂದಲೇ ಆಳಿದವರ ಹೆಸರು ಹೇಳುವುದುಂಟು. ಇದಕ್ಕೊಂದು ಉದಾಹರಣೆ ಕೊಡುವುದಾದರೆ– ಬೆಂಗಳೂರು–೧೨೬ನೆಯ ತೀರ ಸಂಕ್ಷಿಪ್ತವಾದ ಶಾಸನದಲ್ಲೂ ಕೂಡ 'ಎಲವಕ–ನಡಪ್ರಭು ಬ..ರವರದ ಶ್ರೀಮನು.. ಚಂಯಗಉಡರು ..ಪುರದ ಕೆಂಪಗಉಡರಿಗೆ ಕೊಟ್ಟ ಕೊಡಗೆ' ಎಂದು ಹೇಳಲಾಗಿದೆ. ಆದರೆ ಯಲಹಂಕಕ್ಕೆ ಸುಮಾರು ಐದಾರು ಕಿ.ಮೀ. ದೂರದ ದಾಸರಹಳ್ಳಿ ಶಾಸನದಲ್ಲಿ ಕೆಂಪದೇವರಸನಿಗೆ 'ಯಲಹಂಕನಾಡಪ್ರಭು' ಎಂಬ ಪೂರ್ವಪದದ ಬಳಕೆಯಾಗಿಲ್ಲ. ಶಾಸನಕವಿ, ಲಿಪಿಕಾರ ಅಥವಾ ಶಾಸನ ಓದಿದವರೆಲ್ಲರೂ ರಾಜಮರ್ಯಾದೆಯ 'ಯಲಹಂಕ ನಾಡಪ್ರಭು' ಎಂಬ ಪೂರ್ವಪದವನ್ನು ಮರೆತರೇ? ಇಲ್ಲ, ಪ್ರಭುಗಳ ಸಂದರ್ಭದಲ್ಲಿ ಹಾಗಾಗಲು ಸಾಧ್ಯವಿಲ್ಲ. ದಾಸರಹಳ್ಳಿ ಸಪ್ತಮಾತೃಕೆಯರ ದೇವಾಲಯದ ಎದುರಿಗೆ ನಿಲ್ಲಿಸಲಾದ ಈ ಶಾಸನವನ್ನು ನಾನು ಖುದ್ದಾಗಿ ಪರೀಕ್ಷಿಸಿದಾಗ, ಶಾಸನದಲ್ಲಿ ಎಲ್ಲಿಯೂ 'ಯಲಹಂಕ ನಾಡಪ್ರಭು' ಪದಪ್ರಯೋಗ ಆಗಿರುವುದಿಲ್ಲ. ಹಾಗಾಗಿ ಈ ಶಾಸನದ ಕೆಂಪದೇವರಸನನ್ನು 'ಯಲಹಂಕ ನಾಡಪ್ರಭು' ಎಂದು ಪರಿಗಣಿಸುವುದು ಸಮಂಜಸವಾಗಲಾರದು. ಈ ಬಗೆಯ ಕೆಂಪ, ಕೆಂಪದೇವರಸ, ಕೆಂಪರಸಯ್ಯ ಎಂಬ ವ್ಯಕ್ತಿನಾಮಗಳು ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಹಾಗೂ ಬೆಂಗಳೂರಿನ ನೆರೆಯ ಜಿಲ್ಲೆಗಳ ಶಾಸನಗಳಲ್ಲಿ ಉಲ್ಲೇಖಿಸಲ್ಪಟ್ಟಿವೆ. ಉದಾ: ಸಾ.ಶ ೧೫೩೫ರ ಚನ್ನಪಟ್ಟಣ–೫೦ (ಮೊಗೇನಹಳ್ಳಿ)ನೆಯ ಶಾಸನದ ಅಂಗದರಾಯ, ಕೆಂಪ, ಬೊಂಮರಾಜು; ಇದೇ ವರ್ಷದ ಚನ್ನಪಟ್ಟಣ–೨೪ (ಮಾಗೇನಹಳ್ಳಿ) ನೆಯ ಶಾಸನದ ಕೆಂಪದೇವರಸ, ಬೊಂಮರಾಜ; ೧೫೭೬ರ ಚಿಂತಾಮಣಿ–೮೨ (ಭಗತರಹಳ್ಳಿ)ರ ವೊಡಿಗೇಹಳ್ಳಿ–೩೮ ಸೇನಭೋವ ಹಿರಿಯಂಣರಸರ ಮಕ್ಕಳು ಕೆಂಪರಸಯ್ಯ–ಇವರಾರೂ ನಾಡಪ್ರಭು ಕೆಂಪೇಗೌಡರ ವಂಶಸ್ಥರಲ್ಲ. ಅಂತೆಯೇ ಪ್ರಸ್ತುತ ಬೆಂಗಳೂರು–೫೭ನೆಯ ದಾಸರಹಳ್ಳಿ ಶಾಸನದ ಕೆಂಪದೇವರಸನೂ ಕೂಡ. ಹಾಗಾಗಿ ದಾಸರಹಳ್ಳಿ ಕೆಂಪದೇವರಸನ ವಂಶಾವಳಿಯನ್ನು ಈ ಕೆಳಗಿನಂತಿರುವುದನ್ನು ಗಮನಿಸಬೇಕಾಗಿದೆ.

ವೊಡಗೇಹಳ್ಳಿಯ ಸೇನಭೋವ ಹಿರಿಯಣ್ಣರಸ[೩೮]

- ಕೆಂಪರಸ[೩೯]
- ಬೊಮ್ಮರಾಜ[೪೦]
- ಅಂಗದರಾಯ[೪೧]

ಮಲಪಂಣಗಳು: ವಿಜಯನಗರದೊರೆ ಅಚ್ಯತದೇವರಾಯನ ಆಡಳಿತಾವಧಿಯ ಸಾ.ಶ. ೧೫೩೩ರ ಶಾಸನವು ಚೇಲೂರು (ಬೇಲೂರು?) ಚಾವಡಿಗೆ ಸಲ್ಲುವ ಎಲಹಂಕನಾಡ ಸಿವನಸಮುದ್ರ ಸೀಮೆವೊಳಗಣ ಕಾಕೋಳಲಸ್ಥಳದ[೪೨] ಹೆಸರುಘಟ್ಟಕೆ ಪ್ರತಿನಾಮ ಸಿವನಸಮುದ್ರ ಅಗ್ರಹಾರವೆಂದು ಸೂಚಿಸುವುದರಿಂದ ಆಡಳಿತ ಘಟಕಗಳಾದ ಚಾವಡಿ, ನಾಡು, ಸೀಮೆ ಮತ್ತು ಸ್ಥಳಗಳು ಇಲ್ಲಿ ಉಕ್ತಗೊಂಡಿವೆ. ಸಿವನಸಮುದ್ರ ಸರ್ವಮಾನ್ಯ ಅಗ್ರಹಾರದಲ್ಲಿ ಅಚ್ಯುತರಾಯನ ಅಧಿಕಾರಿಯೊಬ್ಬ ಗುಡಿಯನ್ನು ಕಟ್ಟಿಸಿ,[೪೩] ಕಾಶೀ (ವಾರಣಾಸಿ) ಲಿಂಗವನ್ನು ತಂದು ಚಂದ್ರಮೌಳೀಶ್ವರ ದೇವರು, ವಿಘ್ನೇಶ್ವರ ಮತ್ತು ನಂದಿಕೇಶ್ವರ ದೇವರನ್ನು ಪ್ರತಿಷ್ಠಾಪಿಸುತ್ತಾನೆ. ಪ್ರತಿಷ್ಠಾಪಿಸುವ ಸಮಯದಲ್ಲಿ ನಾನಾ ಗೋತ್ರ–ಸೂತ್ರ–ಶಾಖೆಗಳ ವಿದ್ವನ್ಮಹಾಜನರು ಉಪಸ್ಥಿತರಿದ್ದು, ಚಂದ್ರಮೌಳೀಶ್ವರದೇವರ ಅಮೃತಪಡಿ, ನೈವೇದ್ಯ, ದೀಪಾರಾಧನೆಗೆ ಹೊಲಗದ್ದೆತೋಟಗಳನ್ನು ದಾನ ಕೊಡುತ್ತಾರೆ. ದಾನಬಿಟ್ಟ ಭೂಮಿಯ ಮೇರೆಗಳು ಡೊಣೆಕಲ್ಲಸ್ಥಳ,[೪೪] ತೆಂಕಲು ದನದ ಓಣಿ, ಬಡಗಲಿಗೆ ದಾಸೇನಹಳ್ಳಿ,[೪೫] ದಶಕಸ್ಥಳದ ದೊಡ್ಡಬೀರ ಮೇರೆ, ಲಕ್ಷ್ಮಿನಾರಸಿಂಹ ಕುಂಟೆಗಳಾಗಿವೆ.[೪೬] ನಿವೇಶನಕ್ಕೆ ಇಪ್ಪತ್ತೈದುನೂರು ನೀಳ ಮೂವತ್ತು ಮಾರಿಗೆ ಅಗಲ ಸಾಲದೆ ಇರಲಾಗಿ ಮಹಾಜನರೆಲ್ಲರೂ ಸೇರಿ ದೇವರಗುಡಿಗೆ ಬಡಗಲು–ತೆಂಕಲು ದಿಕ್ಕಿಗೆ ನಾಲ್ಕುಮಾರು, ಮೂಡಲು ಆರುನೂರು, ಅಗಲ ಹದಿನೈದು ನೂರು, ನೀಳ ನಲವತ್ತನಾಲ್ಕು ನೂರು ಹೆಚ್ಚುವರಿ ದಾನ ಕೊಟ್ಟಿದ್ದನ್ನು ಶಾಸನ ತಿಳಿಸುತ್ತದೆ. ಆಗ ಮೇರೆಗಳು ಮೂಡಲಿಗೆ ಸೋಲದೇವನಹಳ್ಳಿ ಹೊಲ, ತೆಂಕಣ ದೊಡ್ಡಹಳ್ಳಿ, ಇನ್ನೊಂದೆಡೆ ಹುರುಳಿಚಿಕ್ಕನಹಳ್ಳಿ ಹೊಲದವರೆಗೆ ವಿಸ್ತರಣೆಯಾಗುತ್ತವೆ. 'ಅಚ್ಯುತರಾಯರು ಅಪ್ಪಂಣಗಳು ಚಂದ್ರಮೌಳೀಶ್ವರದೇವರ ಅಮೃತಪಡಿಗೆ ಕುಕಲನಾಡ'[೪೭] ಸಾಲಿನೊಂದಿಗೆ ಶಾಸನದ ಮುಂದಿನ ಅಕ್ಷರಗಳು ಕಾಣುವುದಿಲ್ಲ. ಈ ಶಾಸನದ ಪ್ರಕಾರ ಸಿವನಸಮುದ್ರ ಅಗ್ರಹಾರದಲ್ಲಿ ಗುಡಿಕಟ್ಟಿಸಿ ಕಾಶೀಲಿಂಗವ ತಂದು ಈಶ್ವರ ದೇವರುಗಳ ಪ್ರತಿಷ್ಠೆಮಾಡಿದ ಅಚ್ಯುತರಾಯನ ಅಧಿಕಾರಿ ಅಪ್ಪಂಣಗಳೆಂಬ ಉತ್ತರ ದೊರಕುತ್ತದೆ. ಆದರೆ ಬಿ.ಎಲ್. ರೈಸ್ ಸಂಪುಟದ ನೆಲದುಂಗಲ–೩೧ ನೆಯ ಶಾಸನದಲ್ಲಿ ಕಾಣದಾದ ಕೊನೆಯ ಸಾಲುಗಳು ಬೆಂಗಳೂರು ಸಪ್ಲಿಮೆಂಟರಿ ಸಂಪುಟದ ಬೆಂಗಳೂರು–೩೧ ರಲ್ಲಿ ಪರಿಷ್ಕೃತಗೊಂಡಿವೆ. ಇದರಲ್ಲಿ 'ಅಚ್ಯುತರಾಯ ಮಲಪಂಣಗಳು' ಚಂದ್ರಮೌಳೀಶ್ವರದೇವರ ಅಮೃತಪಡಿಗೆ ಕುಕಲನಾಡ ಕುಪ್ಪಸೀಮೆಯ ಮಾತಹಳಿ ಒಳಗಣ ಗೋವಿಂದನಹಳ್ಳಿಗೆ ಪ್ರತಿನಾಮ ಅಚ್ಯುತಮಲಾಪುರವನ್ನು ಸಮರ್ಪಿಸಿದರು' ಎಂದಾಗಿದೆ. ವಿಜಯನಗರದೊರೆ ಅಚ್ಯುತರಾಯರು ಮತ್ತು ಮಲಪಂಣಗಳು ಜಂಟಿಯಾಗಿ ಸಮರ್ಪಿಸಿದ ಅಚ್ಯುತಮಲಾಪುರ ಗಮನಸೆಳೆಯುತ್ತದೆ.[೪೮] ಶಾಸನಗಳಲ್ಲಿ ಯಲಬರಿಗೆಯ

ಮಲ್ಲಪ್ಪಣ್ಣ/ ಮಲಪಂಣಗಳು/ ಮಲಪಂಣ ಅಯ್ಯನವರೆಂದು ಉಲ್ಲೇಖಿಸಲ್ಪಟ್ಟ ಇವನು ತನ್ನ ತಾಯಿ ವೀರಮ್ಮ ಮತ್ತು ತನಗೂ ಒಳ್ಳೆಯದಾಗಲಿಯೆಂದು ಮಲಾಪುರದಲ್ಲಿ ಅಂಗಡಿ ನಿರ್ಮಿಸಿ, ಅಲ್ಲಿಯ ಸಂತೆವಸಿಗೆಯನ್ನು ಮೊರಬದ ಸೂರ್ಯನಾರಾಯಣದೇವರಿಗೆ ಸಮರ್ಪಿಸುತ್ತಾನೆ. ಪಾಂಡ್ಯನಾಡುವಳಿತದಲ್ಲಿದ್ದ ಮೊರಬವು ರಾಜನಿಂದ ಮಲ್ಲಪ್ಪಣ್ಣನಿಗೆ ಪಲ್ಲಕ್ಕಿಯ ಉಂಬಳಿಯಾಗಿ ಕೊಡಲ್ಪಟ್ಟಿತ್ತು.[೪೯] ಅಚ್ಯುತರಾಯರ ನಿರ್ದೇಶನದಂತೆ ಪಾಂಡ್ಯನಾಡು ಉಚ್ಚಂಗೇರಿ ವೇಂಠೆ, ಕುಂದವಾಡ, ಹರಿಹರದ ಅಗ್ರಹಾರ, ದೇವಾಲಯ ಮತ್ತು ಬ್ರಾಹ್ಮಣ ವಸತಿನೆಲೆಗಳ ಉಸ್ತುವಾರಿ ವಹಿಸಿಕೊಂಡ ಮಲ್ಲಪ್ಪಣ್ಣನು ಅಕ್ಕಪ್ಪನೊಡಗೂಡಿ ಆ ಪ್ರದೇಶವನ್ನು ಅಚ್ಯುತರಾಯೇಂದ್ರ ಮಲ್ಲಾಪುರವನ್ನಾಗಿ ಮಾಡಿ ರಾಜನಿಗೂ ತನಗೂ ಪುಣ್ಯವಾಗಲೆಂದು ಹರಿಹರೇಶ್ವರ ನೈವೇದ್ಯ ಹಾಗೂ ಛತ್ರದಲ್ಲಿ ಬ್ರಾಹ್ಮಣರ ಪ್ರಸಾದಕ್ಕಾಗಿ ದಾನಬಿಡುತ್ತಾನೆ.[೫೦]

ಅಚ್ಯುತರಾಯರ ಆಡಳಿತಾವಧಿಯಲ್ಲಿ ಅಡವಾಗಿಟ್ಟುಕೊಂಡ ಗ್ರಾಮವೊಂದರ ಮಲ್ಲಿಕಾರ್ಜುನದೇವರಿಗೆ ಸೊಂಟೇಕೊಪ್ಪದಸ್ಥಳದ ನಾಯಕತನದ ಹಾರೋಕೇತನಹಳ್ಳಿಯಲ್ಲೂ ಭೂದಾನ ಕೊಟ್ಟಿದ್ದಾನೆ.[೫೧] ಸಾ.ಶ ೧೫೩೭ ರಲ್ಲಿ ಭಂಡಾರದ ಅಪ್ಪರಸನ ಮಗ ತಿಂಮರಸ, ರಾಯಪ್ಪ, ಕೊಂಡಪ್ಪ ಮತ್ತು ರಾಮಪ್ಪನವರೆಲ್ಲರೂ ಸೇರಿ ತಮಗೆ ಕೊಡುಗೆಯಾಗಿ ಬಂದಿದ್ದ ಪೆನುಗೊಂಡೆ ರಾಜ್ಯ, ಕಾರಕುರಿಕೆ ಸ್ಥಳ, ಬುರಡೆಕುಂಟೆ ಸೀಮೇಗೊಳಪಟ್ಟ ನಂದಿಚೆರುವು (>ನಂಚೆರಲು) ಗ್ರಾಮಕ್ಕೆ ವಿರೂಪಾಕ್ಷಿಪುರವೆಂದು ಕರೆದು ಅದನ್ನು ಅಚ್ಯುತರಾಯಮಲ್ಲಪ್ಪಣ್ಣನಿಗೆ ದಾನಪತ್ರ ಮಾಡಿಸಿ ಕೊಡುತ್ತಾರೆ.[೫೨] ಇದೇ ವರ್ಷದಲ್ಲಿ ಅಚ್ಯುತದೇವರಾಯರಿಗೆ ಪುಣ್ಯವಾಗಲೆಂದು ಅಚ್ಯುತರಾಯ ಮಲಪಂಣನು ಪೆನುಗೊಂಡೆ ಸೀಮೆಯ ಲೇಪಾಕ್ಷಿ ವೀರೇಶ್ವರ ದೇವರ ಅಮೃತಪಡಿ, ನೈವೇದ್ಯ, ದೀಪಾರಾಧನೆ, ಅಂಗರಂಗ ವೈಭೋಗಗಳಿಗಾಗಿ ಭೂದಾನಮಾಡಿ ಧರ್ಮಶಾಸನವನ್ನು ಹಾಕಿಸಿರುತ್ತಾನೆ.[೫೩] ಮಲ್ಲಪ್ಪಣ್ಣನನ್ನು ಉಲ್ಲೇಖಿಸುವ ಎಲ್ಲ ಶಾಸನಗಳಲ್ಲಿ 'ಅಚ್ಯುತರಾಯ ಮಲಪಣ್ಣ' ಎಂಬ ಸಂಬೋಧನೆಯಿರುವುದರಿಂದ ಮಲಪಣ್ಣ ವಿಜಯನಗರ ದೊರೆ ಅಚ್ಯುತದೇವರಾಯನ ಹತ್ತಿರದ ಸಂಬಂಧಿ ಅಥವಾ ನೆಚ್ಚಿನ ಅಧಿಕಾರಿಯಾಗಿರಬೇಕೆಂದು ಭಾಸವಾಗುತ್ತದೆ. ಅಚ್ಯುತರಾಯ ಮಲಪಂಣ ಅಯ್ಯನವರ ಕಾರ್ಯಕರ್ತ ವಿರುಪಣನಾಯಕನೂ ಅಮೃತನಾಥದೇವರಿಗೆ ತನ್ನ ಕೊಡುಗೆ ಸಲ್ಲಿಸಿರುವುದು ತಿಳಿದುಬರುತ್ತದೆ.[೫೪] ಈ ಎಲ್ಲ ಲಭ್ಯ ಶಾಸನಗಳ ಆಧಾರದಲ್ಲಿ ಯಲಬುರಿಗೆ ಮೂಲದವನಾದ ಮಲಪಂಣನು ಯಲಹಂಕನಾಡಿನ ಶಿವನಸಮುದ್ರಸೀಮೆಯಲ್ಲದೆ, ಕುಕ್ಕಲನಾಡಿನ ಕುಪ್ಪಸೀಮೆ, ಪಾಂಡ್ಯನಾಡಿನ ಮೊರಬ, ಬುರುಡಕುಂಟೆಸೀಮೆ, ಪೆನುಗೊಂಡೆ ಸೀಮೆ ಹಾಗೂ ಸೊಂಟೇಕೊಪ್ಪಸ್ಥಳಗಳ ನಾಯಕತನವನ್ನು ನಿರ್ವಹಿಸಿರುವುದು ಸ್ಪಷ್ಟವಾಗುತ್ತದೆ.

ಮೇಚರಸಯ್ಯ: ಅಚ್ಯುತರಾಯರು ಸ್ಥಿರಸಿಂಹಾಸನದಲ್ಲಿರುವಾಗ, ಮೇಚರಸಯ್ಯನು ಸಿವನಸಮುದ್ರದ ಸೀಮೆಯ ಅನುಪೆಯನ್ನು ದಾನ ಬಿಟ್ಟು ಕೊಡುತ್ತಾನೆ.[೫೫] ಅನುಪೆ>ಅಣ್ಣೇಪುರವಾಗಿರುವ ಸಾಧ್ಯತೆಯಿದ್ದು, ಅದೀಗ ಬೆಂಗಳೂರು ಉತ್ತರ (ಯಲಹಂಕ) ತಾಲ್ಲೂಕಿನಲ್ಲಿದೆ. ಕ್ರಿ.ಶ. ೧೫೩೮ರಲ್ಲಿ ಮೇಚರಸಯ್ಯನು ಶಿವನಸಮುದ್ರಸೀಮೆಯ ನಾಯಕತನ ಹೊಂದಿದ್ದನೆಂದು ಈ ಶಾಸನದಿಂದ ತಿಳಿದುಬರುತ್ತದೆ. ಶಾಸನ ಶೀರ್ಷಿಕೆಯ ಕಾವಲ್‌ಬೈರಸಂದ್ರ ಮತ್ತು ಜೀಬನಹಳ್ಳಿಗಳು ಯಶವಂತಪುರ ಹೋಬಳಿಯ ಕ್ರಮವಾಗಿ ಕಾವಲುಬೈರಸಂದ್ರ, ಜೀಡಹಳ್ಳಿ ಗ್ರಾಮಗಳಾಗಿವೆ.

ರಾಚುರ ನರಸಿಂಹಯ್ಯ: ಕ್ರಿ.ಶ. ೧೫೪೩ರಲ್ಲಿ ಸದಾಶಿವರಾಯರು ಸಿಂಹಾಸನವೇರಿದ ಮರುವರ್ಷದಲ್ಲಿ ಮಹಾಮಂಡಲೇಶ್ವರ ಶ್ರೀ ಮರಾಟೆಯ ವಿಟಲೇಶ್ವರದೇವ ಮಹಾಅರಸುಗಳ ಕಾರ್ಯಕ್ಕೆ ಕರ್ತನಾದ ರಾಚುರ ನರಸಿಂಹಯ್ಯಗಳು ವಿಠಲೇಶ್ವರ ಅರಸುಗಳಿಗೆ ಪುಣ್ಯವಾಗಬೇಕೆಂದು ಜಕ್ಕೂರ ಅಲ್ಲಾಳನಾಥದೇವರ ಅಮೃತಪಡಿ ನೈವೇದ್ಯಕ್ಕೆ ಎಲಕನಾಡ ಸಿವನಸಮುದ್ರದ ಸೀಮೆವೊಳಗಣ ಅಲ್ಲಾಳಸಂದ್ರ ಗ್ರಾಮಕ್ಕೆ ಸಲ್ಲುವ ಕೆರೆಕುಂಟೆ, ಗದ್ದೆ-ಬೆದ್ದಲು, ಗುಡೆಗುಯಲು, ತೋಟ, ಕಾಡಾರಂಭ-ನೀರಾರಂಭಗಳ ಸಕಲ ಸುವರ್ಣಾದಾಯಗಳನ್ನು ಸಮರ್ಪಿಸಿದ್ದಾರೆ.[೫೬] ವಿಟಲೇಶ್ವರದೇವ ಮಹಾಅರಸುಗಳ ಕಾರ್ಯಕ್ಕೆ ಕರ್ತನಾಗಿದ್ದ ನರಸಿಂಹಯ್ಯನು ರಾಯಚೂರು ಮೂಲದವನಾಗಿದ್ದರಿಂದ ಪೂರ್ವಪದ 'ರಾಚುರ' ಬಳಕೆಯಾಗಿದೆ. ರಾಚುರು> ರಾಯಚೂರು ಆಗಿದ್ದು, ಬೇರೆ ಬೇರೆ ಶಾಸನಗಳಲ್ಲಿ ರಾಚೂರಿಪಟ್ಟಣ,[೫೭] ರಾಚೂರ,[೫೮] ರಾಚೂರು ಸೀಮೆಗಳು[೫೯] ಉಲ್ಲೇಖಗೊಂಡಿವೆ.

ಕಾಮಗೌಡ ವೀರಣ್ಣನಾಯಕ: ಕ್ರಿ.ಶ. ೧೫೪೪-೪೫ರ ದೊಡ್ಡಬಳ್ಳಾಪುರ ಶಾಸನದಲ್ಲಿ ಶ್ರೀ ಮನ್ಮಹಾಮಂಡಲೇಶ್ವರ ರಾಮರಾಜಯ್ಯ ವಿಠಲೇಶ್ವರದೇವ ಮಹಾಅರಸುಗಳ ಕಾರ್ಯಕ್ಕೆ ಕರ್ತರಾದ ಕಾಮಗೌಡ ವೀರಣ್ಣನಾಯಕರು ತಮ್ಮ ಸಿವನಸಮುದ್ರದಸೀಮೆಯೊಳಗಣ ಬೇಡನಾಡಸ್ಥಳಕ್ಕೆ ಸಲ್ಲುವ ದಾಸಗೊಂಡನಹಳ್ಳಿ ಗ್ರಾಮವನ್ನು ಮಾರಕದೇವರ ಜೀರ್ಣೋದ್ಧಾರ ಹಾಗೂ ಅಮೃತಪಡಿಗೆ ಸಮರ್ಪಿಸಿ, ಮಹಾಮಂಡಲೇಶ್ವರ ವಿಠಲೇಶ್ವರದೇವ ಮಹಾಅರಸುಗಳಿಗೆ ಆಯುರಾರೋಗ್ಯ

ಐಶ್ವರ್ಯಕ್ಕಾಗಿ ಪ್ರಾರ್ಥಿಸಿದ್ದಾರೆ.[೬೦] ದಾಸಗೊಂಡನಹಳ್ಳಿ> ದಾಸಗೊಂಡಹಳ್ಳಿಯಾಗಿದ್ದು, ಬೇಡನಾಡಸ್ಥಳದ ಕೇಂದ್ರಸ್ಥಾನ ಇಂದಿನ ಬ್ಯಾಡರಹಳ್ಳಿ/ ಬ್ಯಾಡರಜಕ್ಕಹಳ್ಳಿಯಾಗಿದ್ದಿರಬಹುದು.

ಇಮ್ಮಡಿ ಭೈರೇಗೌಡನ ಮಗ ಬೈಚೇಗೌಡ: (ಕ್ರಿ.ಶ. ೧೫೭೬–೧೫೮೬): ಕ್ರಿ.ಶ. ೧೫೮೪ರ ದೇವನಹಳ್ಳಿ ತಾಮ್ರಶಾಸನವು ವಿಜಯನಗರ ಅರವೀಡು ಮನೆತನದ ತಿರುಮಲದೊರೆಯ ಮಗನಾದ ಒಂದನೆಯ ಶ್ರೀರಂಗರಾಯನ ಆಡಳಿತಾವಧಿ (೧೫೭೮–೧೫೮೬)ಗೆ ಸಂಬಂಧಿಸಿದೆ. ಶಾಸನದ 'ಶ್ರಿ ವೆಂಗಲಾಂಬಾ ಚಿರಪುಣ್ಯರಾಸಿ ಶ್ರೀರಂಗರಾಯ' ಹಾಗೂ 'ದೇವ್ಯಾತೆ ವಿಜಯೇತೇ ತಿರುಮಲದೇವೀ ಚಯಸ್ಯ ಕೃಷ್ಣಾಂಬಾ' ಎಂಬ ಸಾಲುಗಳು ಒಂದನೆಯ ಶ್ರೀರಂಗರಾಯನ ತಾಯಿ ವೆಂಗಲಾ ಮತ್ತು ಪತ್ನಿಯರಾದ ತಿರುಮಲದೇವಿ–ಕೃಷ್ಣಾಂಬಾರನ್ನು ಉಲ್ಲೇಖಿಸುತ್ತವೆ. ವಿಜಯನಗರ ಅರಸರಿಗೆ ದಕ್ಷಿಣಭಾಗದಲ್ಲಿ ಸಾಮಂತರೆನಿಸಿ, ಕರಗದಮ್ಮನನ್ನು ಮನೆದೇವತೆಯನ್ನಾಗಿ ಹೊಂದಿರುವ ಆವತಿನಾಡಪ್ರಭುಗಳು ಇಂದಿನ ಚಿಕ್ಕಬಳ್ಳಾಪುರ ಜಿಲ್ಲೆಯ ನಂದಿಗ್ರಾಮವನ್ನು ಕೇಂದ್ರವಾಗಿಟ್ಟುಕೊಂಡು ಸುಮಾರು ೮೦ ಕಿ.ಮೀ. ವ್ಯಾಸ ಪರಿಮಿತಿಯ ನಂದಿಮಂಡಲವನ್ನು ಆಳಿದ್ದಾರೆ. ಈ ವಂಶದ ಮೂಲಪುರುಷ ರಣಭೈರೇಗೌಡನಿಂದ ಹಿಡಿದು ಚಿಕ್ಕಪ್ಪಗೌಡನವರೆಗೆ ಅಂದರೆ ಸು. ೧೪೯೬ರಿಂದ ೧೭೪೯ರವರೆಗೆ ಒಟ್ಟು ೩೫೦ ವರ್ಷ ಆಡಳಿತ ನಡೆಸಿದ ಇವರ ಶಾಸನಗಳಲ್ಲಿ ಕ್ರಿ.ಶ. ೧೪೯೭ರ ನಂತರ ದೇವಣಾಪುರ > ದೇವನಹಳ್ಳಿ ರಾಜ್ಯದ ಉಲ್ಲೇಖ ಬರುತ್ತದೆ.

ಆವತಿನಾಡಪ್ರಭು, ಸಂಗ್ರಾಮಸಾಹಸ ಸತ್ಯಸಂಧ ಧೀಮಂತ, ಭೈರವದೇವರ ಪೂಜಾಸಂಪದನೆನಿಸಿದ ಸೊಣ್ಣಪೇಂದ್ರ (ಸೊಣ್ಣಪ್ಪಗೌಡ–ಕ್ರಿ.ಶ. ೧೫೧೦–೧೫೬೫) ನ ಮೊಮ್ಮಗ ಭೈರವ ಮಹಿಪಾಲ (ಇಮ್ಮಡಿ ಬೈರೇಗೌಡ–ಸಾ.ಶ ೧೫೬೫–೧೫೭೬); ಭೈರವ ಮಹಿಪಾಲನ ಮಗನಾದ ಬೈಚಯ ಕ್ಷಿತಿಪಾಲೇಂದ್ರ (ಬೈಚೇಗೌಡ–ಕ್ರಿ.ಶ. ೧೫೭೬–೧೫೮೬)ನನ್ನು ಗುಣವಾರಿಧಿಯೆಂದು ಶಾಸನಕವಿ ಸ್ವಯಂಭು ಬಣ್ಣಿಸಿದ್ದಾನೆ. ಈ ತಾಮ್ರಶಾಸನದ 'ಯಲಹಕ್ಕನಾಡು ಕೇಚಾಪಿಶ್ರೀಕಾನವಿಲೇಪಿಚ ಶ್ರೀ ಶಿವನಸಮುದ್ರಾಖ್ಯ ಸೀಮಾಯಾಂ' ಸಾಲು ಶಿವನಸಮುದ್ರಸೀಮೆಯು ಯಲಹಂಕನಾಡಿನಲ್ಲಿ ಅಂತರ್ಗತವಾಗಿದ್ದುದನ್ನು ಸೂಚಿಸುತ್ತದೆ. ಈ ನಾಡಿನ ಬೇಲೂರಚಾವಡಿ ವ್ಯಾಪ್ತಿಯ ಮಾರಸಮುದ್ರ ಗ್ರಾಮದ ಪೂರ್ವ, ಬಿಸಿಲಹಳ್ಳಿಗೆ ಆಗ್ನೇಯ, ವರದನಪಲ್ಲಿ ಗ್ರಾಮದ ದಕ್ಷಿಣ, ದುಟ್ಟನಬಲ್ಲಿ ನೈರುತ್ಯ, ಜಾಲಿಕಾಗ್ರಾಮದ ಪಶ್ಚಿಮದಲ್ಲಿರುವ ದೇಶಿಪಲ್ಲಿ ಗ್ರಾಮವನ್ನು ನಾಡಪ್ರಭು ಬೈಚೇಗೌಡನು ತನ್ನ ಹೆಸರಿನಲ್ಲಿ ಬೈಚಾಪುರವೆಂದು ನಾಮಕರಣ ಮಾಡುತ್ತಾನೆ. ಅಲ್ಲಿಯ ಆದಾಯವನ್ನು ಸುಂಕರಹಿತವಾಗಿ ೪೦ ವೃತ್ತಿಗಳಾಗಿ ವಿಂಗಡಿಸಿ, ನಾನಾ ಶಾಖೆ–ಗೋತ್ರ–ಸೂತ್ರ–ಶಾಸ್ತ್ರವಿಶಾರದರಾದ ನಾಗಾಭಟ್ಟ, ಗೋವಿಂದಭಟ್ಟ, ತಿಮ್ಮಯಾರ್ಯ, ಲಕ್ಷ್ಮಣಭಟ್ಟ, ಅಲ್ಲಾಭಟ್ಟ, ಸೋಮಭಟ್ಟ, ಕೃಷ್ಣಂಭಟ್ಟ, ತಿಮ್ಮಾಭಟ್ಟ, ನಾರಸಿಂಹಭಟ್ಟ ಮತ್ತು ನಾಗಂಭಟ್ಟ ಮತ್ತಿತರರಿಗೆ ದಾನ ಕೊಡುತ್ತಾನೆ.[೬೧] ಆವತಿನಾಡಪ್ರಭುಗಳ ಕಾಲಘಟ್ಟದಲ್ಲಿ ಅಸ್ತಿತ್ವದಲ್ಲಿದ್ದ ಶಿವನಸಮುದ್ರಸೀಮೆಯ ವ್ಯಾಪ್ತಿಗೆ ಇಂದಿನ ದೇವನಹಳ್ಳಿ ತಾಲ್ಲೂಕಿನ ಬಂಟೇನಹಳ್ಳಿ, ಆವತಿ ಹಾಗೂ ಬೆಂಗಳೂರು ಉತ್ತರ ತಾಲ್ಲೂಕಿನ ಸುರದೇನುಪುರ, ಕಡತನಮಲೆ ಗ್ರಾಮಗಳೂ ಸೇರಿದ್ದವು.

ಶಿವನಸಮುದ್ರಸೀಮೆಯನ್ನು ಉಲ್ಲೇಖಿಸುವ ಶಾಸನಗಳನ್ನು ಅವಲೋಕಿಸಿದಾಗ ಕ್ರಿ.ಶ. ೧೪೩೧ರಿಂದ ೧೫೩೦ ರವರೆಗಿನ ಸುಮಾರು ಒಂದು ಶತಮಾನ ಕಾಲ ಸೀಮೆಯನ್ನಾಳಿದ ನಾಯಕರು ಯಾರೆಂಬುದು ತಿಳಿದುಬರುವುದಿಲ್ಲ ಮತ್ತು ಶಾಸನಗಳೂ ದೊರಕುವುದಿಲ್ಲ. ಅದರಂತೆ ವಿಜಯನಗರ ದೊರೆ ಇಮ್ಮಡಿ ದೇವರಾಯನ ಆಡಳಿತಾವಧಿಯ ಸಾ.ಶ ೧೪೨೫ರ ದೇವನಹಳ್ಳಿ ಶಾಸನದಲ್ಲಿ ಶ್ರೀ ಚಂದ್ರಮೌಳೀದೇವರ ಪ್ರಸ್ತಾಪವಿದೆ; ಮುಂದೆ ಕ್ರಿ.ಶ. ೧೫೩೩ರಲ್ಲಿ ಅಚ್ಯುತದೇವರಾಯನ ಅಧಿಕಾರಿ ಮಲ್ಲಪ್ಪಣ್ಣನು ಕಾಶಿಲಿಂಗವನ್ನು ತಂದು ಅರ್ಕಾವತಿ ನದಿತೀರದ ಹೆಸರುಗಟ್ಟದಲ್ಲಿ ಚಂದ್ರಮೌಳೀಶ್ವರನೆಂದು ಪ್ರತಿಷ್ಠಾಪಿಸಿ, ವಿಘ್ನೇಶ್ವರ–ನಂದಿಕೇಶ್ವರನೊಳಗೊಂಡು ಗುಡಿಯನ್ನು ಕಟ್ಟಿಸುತ್ತಾನೆ. ಹಳೆಯ ಚಂದ್ರಮೌಳೀದೇವರ ಆಲಯವಿದ್ದ ಜಾಗದಲ್ಲಿ ಹೊಸಗುಡಿಯನ್ನು ಕಟ್ಟಿಸಲಾಯಿತೋ ಅಥವಾ ಅದೇ ಊರಿನ ಹೊಸ ನಿವೇಶನ ಆಯ್ಕೆ ಮಾಡಿದರೋ ಎಂಬ ಜಿಜ್ಞಾಸೆ ಮೂಡುತ್ತದೆ. ಹಾಗಾದರೆ ಇಮ್ಮಡಿ ದೇವರಾಯನ ಕಾಲದಲ್ಲಿದ್ದ ಚಂದ್ರಮೌಳೀಶ್ವರ ದೇವಾಲಯಕ್ಕೆ ಏನಾಯಿತು? ಮೂಲತಃ ವಿಜಯನಗರ ಕಾಲದ ದೇವಾಲಯಗಳೆಲ್ಲವು ಭದ್ರ ತಳಪಾಯದ ಭವ್ಯ ಶಿಲಾ ನಿರ್ಮಿತಿಗಳಾಗಿದ್ದವು. ಇಮ್ಮಡಿ ದೇವರಾಯನ ಕಾಲದ ಇಂಥದ್ದೊಂದು ನಿರ್ಮಿತಿಯು ಶತ್ರುದಾಳಿ ಅಥವಾ ಧಾರ್ಮಿಕ ಸಂಘರ್ಷದಿಂದಾಗಿ ಹಾಳಾಗಿರಬೇಕು. ಕ್ರಿ.ಶ. ೧೪೩೧–೧೫೩೦ರ ಈ ಕಾಲಘಟ್ಟದಲ್ಲಿ ಸಂಗಮ ವಂಶದ ಇಮ್ಮಡಿ ದೇವರಾಯ, ಸಾಳುವ ವಂಶದ ಒಂದನೆಯ ನರಸಿಂಹ, ತುಳುವ ವಂಶದ ಕೃಷ್ಣದೇವರಾಯನ ಮನೆತನದವರ ನಡುವೆ ನಡೆದ ಆಂತರಿಕ ಕಲಹ–ರಕ್ತಪಾತಗಳು ವಿಜಯನಗರ ಆಡಳಿತದಲ್ಲಿ ದೌರ್ಬಲ್ಯವುಂಟುಮಾಡಿ, ಶತ್ರುದಾಳಿ ಮತ್ತು ದೇವಾಲಯಗಳನ್ನು ಹಾಳುಮಾಡುವ ಪ್ರಕ್ರಿಯೆಗೆ ಎಡೆಮಾಡಿಕೊಟ್ಟಿರಬೇಕು. ಹಾಗಾಗಿ ಅಧಿರಾಜರು ಶಿವನಸಮುದ್ರಸೀಮೆಯ ನಾಯಕತನವನ್ನು ಯಾರಿಗೂ ವಹಿಸದೇ





ಸಿಂಗಾಪುರದ ತಿರುವೆಂಗಳನಾಥ ದೇವಾಲಯ, ಶಿವನಸಮುದ್ರ(ಹೆಸರಘಟ್ಟ)ದ ಚಂದ್ರಮೌಳೀಶ್ವರ ದೇವಾಲಯದ ಅಧಿಷ್ಠಾನ

ಇದ್ದಿರುವುದರಿಂದ ಸರಿಸುಮಾರು ಒಂದುನೂರು ವರ್ಷಗಳ ಅವಧಿಯ ರಾಜ್ಯಭಾರದಲ್ಲಿ ಕಂದಕ ನಿರ್ಮಾಣವಾಗಿರುವುದು ಕಂಡುಬರುತ್ತದೆ. ಈ ಕಾಲಘಟ್ಟಕ್ಕೆ ಸಂಬಂಧಿಸಿದ ಕ್ರಿ.ಶ. ೧೪೯೬ರ ಕೋಲಾರ-೧ನೆಯ ಶಾಸನದಲ್ಲಿ ಹೊಸಕೋಟೆ ಸೀಮೆಯ ನಾಯಕತನವು ವಿ(ಶಿ)ವನಸಮುದ್ರದ ಅಪ್ಪರಸನಿಗಿತ್ತು. ಅದರಂತೆ ಕ್ರಿ.ಶ. ೧೫೧೫ರ ಶಿಕಾರಿಪುರ ಶಾಸನದ ಮಾಳೇನಹಳ್ಳಿ ಸೀಮೆಯ ನಾಯಕತನ ಪಾಲಿಸುತ್ತಿದ್ದ ತ್ರಿಯಂಬಕರಸನು ಶಿವನಸಮುದ್ರದ ತಿಪ್ಪರಸನ ಮಗನಾಗಿದ್ದಾನೆ. ಇಲ್ಲಿ ಅಪ್ಪರಸ ಮತ್ತು ತಿಪ್ಪರಸ ಇವರಿಬ್ಬರೂ ಶಿವನಸಮುದ್ರದ ಮೂಲದವರಾಗಿದ್ದು, ಶಿವನಸಮುದ್ರದಲ್ಲಿ ನಡೆದ ವಿಘಟನೆಯ ಕಾರಣಕ್ಕಾಗಿ ಅಲ್ಲಿಂದ ಹತ್ತಿರದ ಹೊಸಕೋಟೆ ಮತ್ತಿತರ ಕಡೆಗೆ ಹೋಗಿ ತಮ್ಮ ನೆಲೆಯನ್ನು ಕಂಡುಕೊಂಡಿರುವುದಕ್ಕಾಗಿ ಇವರ ವ್ಯಕ್ತಿನಾಮಗಳ ಪೂರ್ವಪದವಾಗಿ ಶಿವನಸಮುದ್ರ ಸೇರಿಕೊಂಡಿರುವುದು ತಿಳಿದುಬರುತ್ತದೆ. ಒಟ್ಟಾರೆಯಾಗಿ ಶಿವನಸಮುದ್ರದಲ್ಲಿ ಎರಡು ಬಾರಿ ಚಂದ್ರಮೌಳೀಶ್ವರನ ಪ್ರತಿಷ್ಠಾಪನೆ, ಒಂದು ಶತಮಾನಕಾಲ ಶಿವನಸಮುದ್ರಸೀಮೆಯನ್ನು ಆಳಿದ ನಾಯಕರ ಯಾವುದೇ ಶಾಸನಗಳಿಲ್ಲದಿರುವುದು ಹಾಗೂ ಶಿವನಸಮುದ್ರದ ಪ್ರತಿಷ್ಠಿತರು ಹತ್ತಿರದ ಬೇರೆ ಬೇರೆ ಸೀಮೆಗಳಿಗೆ ಹೋಗಿ ನಾಯಕತನ ಪಾಲಿಸಿದ ಉದಾಹರಣೆಗಳ ಕಾರಣಗಳಿಂದಾಗಿ ಕ್ರಿ.ಶ. ೧೪೩೧-೧೫೩೦ರ ಅವಧಿಯಲ್ಲಿ ಶಿವನಸಮುದ್ರ (ಹೆಸರಘಟ್ಟ)ವು ಯಾವುದೋ ಒಂದು ಆಂತರಿಕ ಕಲಹ ಅಥವಾ ಶತ್ರುದಾಳಿಯಂತಹ ಘಟನೆಗೆ ಸಾಕ್ಷಿಯಾಗಿರಬೇಕು.

ಅಡಿ ಟಿಪ್ಪಣಿಗಳು

೧. ಇತಿಹಾಸ ದರ್ಪಣ, ೪೬-೪೭, ಕೆಂಪೇಗೌಡ ನಗರ, ಬೆಂಗಳೂರು, ೯೧, ಪುಟ ೫೯, ೬೦.

೨. ಎಪಿಗ್ರಾಫಿಯಾ ಕರ್ಣಾಟಿಕಾ-೯, ಬೆಂಗಳೂರು ಜಿಲ್ಲೆ, ಬಿ.ಎಲ್. ರೈಸ್, ೧೯೦೫, ನೆಲಮಂಗಲ, ೩೧, ಹೆಸರಗಟ್ಟ ಸಾ.ಶ. ೧೫೩೩.

೩. -ಅದೇ- ನೆಲಮಂಗಲ-೩೮ಬಿ, ಅಯಿಗಂಡಪುರ, ಕ್ರಿ.ಶ. ೧೨೯೨; ಪಯರುಕಟ್ಟಮ್>ಹೆಸರುಗಟ್ಟ ಸ್ಥಳನಾಮವನ್ನೂ ಸೂಚಿಸುವ ಶಾಸನವು ಅಯಿಗಂಡಪುರದಲ್ಲಿದೆ. ಐವರುಕಂಡ ನಯನಾರ್ ದೇವರಿರುವ ಎಡೆಯಿದಾಗಿದೆ. ಐವರ್ಕಂಡಪುರ > ಐಗಂಡಪುರವಾಗಿದ್ದು, ಪಾಂಡವರು ತಾಯಿ ಕುಂತಿಯೊಂದಿಗೆ ಇಲ್ಲಿಗೆ ಬಂದು ನೆಲೆಸಿದ್ದರೆಂಬ ಪ್ರತೀತಿಯಿದೆ. ಇಲ್ಲಿ ನೆಲಮಟ್ಟದಿಂದ ಸುಮಾರು ಆರು ಅಡಿ ಎತ್ತರದ ಕಟ್ಟೆಯ ಮೇಲೆ ಧರ್ಮೇಶ್ವರ, ನಕುಲೇಶ್ವರ, ಸಹದೇಶ್ವರ ಹಾಗೂ ಕುಂತಿ ಹೆಸರಿನ ಲಿಂಗಗಳುಳ್ಳ ಗುಡಿಗಳಿವೆ. ಊರಬಾಗಿಲ ಬಲಗಡೆ ಎತ್ತರದ ಕಟ್ಟೆಯ ಮೇಲೆ ಭೀಮೇಶ್ವರ ಗುಡಿಯಿದೆ. ನಕುಲೇಶ್ವರ ಹೊರತುಪಡಿಸಿ ಎಲ್ಲ ಗುಡಿಗಳಲ್ಲಿ ಲಿಂಗದೆದುರು ನಂದಿ ಪ್ರತಿಷ್ಠಾಪನೆಯಿದೆ. ಕುಂತಿಗುಡಿಯ ಹಿಂದೆ ವಿಷದಬಾವಿಯಿದೆ. ಅರ್ಜುನನಿಂದ ಸ್ಥಾಪಿಸಲ್ಪಟ್ಟ ಅರ್ಜುನರಾಯನ ಗುಡಿಯು ಇಲ್ಲಿಗೆ ಸುಮಾರು ಏಳು ಕಿ.ಮೀ. ದೂರದ ತೋಟಗೆರೆಯಲ್ಲಿದೆ. ಐಗಂಡಪುರದಿಂದ ವನವಾಸ ಮುಂದುವರೆಸಿದ ಪಾಂಡವರು ನಂದಗುಡಿ (ನಂಜುಗುಳಿ > ವಿಷದಕೊಳ) ಮತ್ತು ಕೈವಾರದತ್ತ ನಡೆದು, ಅಲ್ಲಿ ತಂಗಿದ್ದಕ್ಕಾಗಿ ಅವರ ಹೆಸರಿನ ಗುಡಿಗಳು ಅಲ್ಲಿವೆ.

೪. ದೇವನಹಳ್ಳಿ ಪಶ್ಚಿಮಕ್ಕೆ ಕುಂದಾಣಿ> ಕುಂದಾಣದಲ್ಲಿ ಹೊಯ್ಸಳ ರಾಮನಾಥನ ಅರಮನೆಯಿದ್ದುದರಿಂದ ಹೆಸರ್ ಕುಂದಾಣಿ ರಾಜಧಾನಿಯೆನಿಸಿದೆ. ಹೆಸರಘಟ್ಟ ಸ್ಥಳನಾಮದಲ್ಲಿ 'ಹೆಸರ್' ಪೂರ್ವಪದವಿರುವುದನ್ನು ಬಿ.ಎಲ್. ರೈಸ್ ಅವರು ಎ.ಕ. ೯ರ ಆಂಗ್ಲಭಾಷಾ ಪೀಠಿಕೆ ಪುಟ ೨೨ರಲ್ಲಿ ತಿಳಿಸಿದ್ದಾರೆ. ಆನೇಕಲ್-೫೦ನೆಯ ಶಾಸನದಲ್ಲಿ ಹಸರುವಾಣಿ ಕೆರೆಯ ಉಲ್ಲೇಖವಿದೆ.

೫. ಗ್ಯಾಸೆಟಿಯರ್, ಬೆಂಗಳೂರು ಜಿಲ್ಲೆ, ಬೆಂಗಳೂರು ೧೯೯೦, ಪುಟ ೯೫.

೬ ಕನ್ನಡ ನಿಘಂಟು, ಸಂ. ೫, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು-೧೮, ೧೯೮೮, ಪುಟ ೫೨೬೦.

೭. ಎಪಿಗ್ರಾಫಿಯಾ ಕರ್ಣಾಟಿಕಾ-೯, ಬೆಂಗಳೂರು ಜಿಲ್ಲೆ, ಬಿ.ಎಲ್. ರೈಸ್ ೧೯೦೫, ದೇವನಹಳ್ಳಿ ೮೧, ಜೋಡಿ ಸಾದಳ್ಳಿ, ಕ್ರಿ.ಶ. ೧೪೨೫.

೮. -ಅದೇ- ಬೆಂಗಳೂರು-೮೧, ಕ್ರಿ.ಶ. ೧೩೬೩ರ ಅಗರ ಶಾಸನದಲ್ಲಿ ಎಲಹಕನಾಡ ಅಲ್ಲಾಳಜೀಯನ ಮಗ ತಣ್ಣಿಯಪ್ಪನಿಗೆ ಕಾಮ್ಮೆಯನಾಯ್ಕರು ..... ನ್ತಿನಾಡ ತೆಂಕಣಬಾಗೆಯ ತೊರೆವಳಿನಾಡ ಬೆಳರ್ತ (ಬೆಂಗಳೂರು ಪೂರ್ವ ತಾಲ್ಲೂಕಿನ ಕಾಡುಗೋಡಿ ಹತ್ತಿರದ ಬೆಳತ್ತೂರು) ದ ಗದ್ದೆ ಬೆದ್ದಲು ಕೊಡುತ್ತಾರೆ. ತಣ್ಣಿಯಪ್ಪ ತನ್ನ ಕೊನೆಗಾಲದಲ್ಲಿ ಕೊಡಿಗೆಹಳ್ಳಿಯಲ್ಲಿ ನೆಲೆಸಿದ್ದು, ಅವನ ಅನುಭೋಗದಲ್ಲಿದ್ದ ಭೂಮಿಯ ಸ್ವಲ್ಪ

ಭಾಗವನ್ನು ಸೋಮೆಯದೇವರಿಗೆ ದಾನ ಬಿಟ್ಟಿರುವುದಕ್ಕಾಗಿ‘ತರಣಿಯಪ್ಪನ ಬಾಗಿಯೊಳಗಿನ’ ಎಂಬ ಪದ ಬಳಕೆಯಾಗಿದೆ. ತಣ್ಣಿಯಪ್ಪನ ತಂದೆ ಅಲ್ಲಾಳಜೀಯ (೧೩೨೯-೧೩೪೨)ನು ಹೊಯ್ಸಳದೊರೆ ಮೂರನೆಯ ಬಲ್ಲಾಳನ ಆಡಳತಾವಧಿಯಲ್ಲಿ ಯಲಹಂಕನಾಡಿನ ಸೇನಬೋವನಾಗಿದ್ದನು. ಬಯಿರತ್ತಿ, ಹಾರಮರವೂರ ಕೋಟೆ (ಹೊರಮಾವು?) ಜಕ್ಕೂರು ಗ್ರಾಮಗಳಲ್ಲಿ ಗದ್ದೆ-ಬೆದ್ದಲುಗಳ ಕೊಡುಗೆ ಪಡೆದಿದ್ದರೆ, ನಾಗಿಶೆಟ್ಟಿಹಳ್ಳಿ ಕೆರೆ, ಜಾಲ, ಮಾಚಿಹಳ್ಳಿ, ಕೊಡಿಗೆಹಳ್ಳಿಯಲ್ಲಿ ಭೂದಾನ ಕೊಡುತ್ತಾನೆ. ಆರಂಭದಲ್ಲಿ ಬೇರೆಯವರಿಂದ ಭೂಮಿ ಪಡೆದು, ಆರ್ಥಿಕ ಚೈತನ್ಯ ಕಂಡಾಗ ಕೊಡುಗೈ ದಾನಿಯಾಗಿರುವುದನ್ನು ಕಾಣುತ್ತೇವೆ.

೯. -ಅದೇ- ಬೆಂಗಳೂರು-೧೩೨, ಕ್ರಿ.ಶ. ೧೩೭೬ರ ಬೇಚರಾಕ್ ದ್ಯಾವಸಂದ್ರ ಶಾಸನವು ಮಯಲಯನಾಯಕನ ಮಗ ದೇವಯನಾಯಕನು ಇಲೈಪಕ್ಕನಾಡ ದೇವಸಮುದ್ರದ ಭೂಮಿಯನ್ನು ಬ್ರಾಹ್ಮಣರಿಗೆ ದಾನಕೊಟ್ಟ ಬಗ್ಗೆ ವಿವರಿಸುತ್ತದೆ. ಬೆಂಗಳೂರು ಮಹಾನಗರದ ಎಂ.ಎಸ್.ರಾಮಯ್ಯ ಕಾಲೇಜಿನ ಹತ್ತಿರವಿರುವ ದೇವಸಂದ್ರವೇ ಈ ಗ್ರಾಮವಾಗಿದೆ.

೧೦. -ಅದೇ- ಬೆಂಗಳೂರು ೧೨೭, ಕೊಡಿಗೇಗಳ್ಳಿ, ಕ್ರಿ.ಶ ೧೪೩೧.

೧೧. -ಅದೇ- ದೇವನಹಳ್ಳಿ ೫೦, ಕಟಿಗೇನಹಳ್ಳಿ, ಸಾ.ಶ ೧೩೪೮ರ ಶಾಸನದ ‘ಕೊಡಿಗೆಹಳ್ಳಿಯ ಚತುಸ್ಸೀಮೆ’.

೧೨. ಕರ್ನಾಟಕ ಕನ್ನಡ ವಿಷಯ ವಿಶ್ವಕೋಶ, ಪುಟ ೬೨೮, ೧೪೯೫.

೧೩. ಶಾಸನ ಅಧ್ಯಯನ-ಸಂಪುಟ-೩, ಸಂಚಿಕೆ-೨ ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ, ೨೦೦೬ ಪುಟ ೧೧೨.

೧೪. ಎಪಿಗ್ರಾಫಿಯಾ ಕರ್ನಾಟಿಕಾ-೧೧, ಮೈಸೂರು ವಿ.ವಿ, ೧೯೭೩, ಶ್ರವಣಬೆಳಗೊಳ ೩೫೭, ದೊಡ್ಡಬೆಟ್ಟ, ಸಾ.ಶ. ೧೪೨೨.

೧೫. ಇತಿಹಾಸ ದರ್ಶನ ೨೯, ಕರ್ನಾಟಕ ಇತಿಹಾಸ ಅಕಾಡೆಮಿ (ರಿ), ಬೆಂಗಳೂರು ೨೦೧೪, ಪುಟ ೪೩೯.

೧೬. ಎಪಿಗ್ರಾಫಿಯಾ ಕರ್ನಾಟಿಕಾ-೯, ಬೆಂಗಳೂರು ಜಿಲ್ಲೆ, ಬಿ.ಎಲ್.ರೈಸ್, ೧೯೦೫, ಬೆಂಗಳೂರು-೨೮, ಹಾರೋಹಳ್ಳಿ-ಕ್ರಿ.ಶ. ೧೫೩೦.

೧೭. ವಿಜಯನಗರ ಅಧ್ಯಯನ, ಸಂ. ೧೪, ಪ್ರೊ. ಲಕ್ಷ್ಮಣ್ ತೆಲಗಾವಿ ಅವರ ಲೇಖನ ‘ವಿಜಯನಗರ ಕಾಲದ ರಾಮಾನುಜ ಕೂಟಗಳು,’ ಪುಟ ೩೪೦-೩೬೮.

೧೮. ಎಪಿಗ್ರಾಫಿಯಾ ಕರ್ಣಾಟಿಕಾ-೯, (ಸಪ್ಲಿ) ಬಿ.ಎಲ್. ರೈಸ್, ನೆಲಮಂಗಲ-೧೮೫, ದಾಸನಪುರ, ಕ್ರಿ.ಶ. ೧೩೩೭/೧೩೯೭/೧೪೫೭.

೧೯. ಕನ್ನಡ ವಿಶ್ವವಿದ್ಯಾಲಯ ಶಾ.ಸಂ. ೧, ಬಳ್ಳಾರಿ ಜಿಲ್ಲೆ, ಸಂ. ಡಾ. ದೇವರಕೊಂಡಾರೆಡ್ಡಿ, ಪ್ರಸಾರಾಂಗ, ಕನ್ನಡ ವಿ.ವಿ ಹಂಪಿ-೧೯೯೮, ಹಗರಿಬೊಮ್ಮನಹಳ್ಳಿ-೮, ಸಾ.ಶ. ೧೫೧೮.

೨೦. ಎಪಿಗ್ರಾಫಿಯಾ ಕರ್ನಾಟಕ-೯, ಹಾಸನ ಜಿಲ್ಲೆ, ಮೈಸೂರು ವಿ.ವಿ., ಬೇಲೂರು ೧೫೯ ಮತ್ತು ೧೮೨; ಬೇಲೂರು-ಕ್ರಿ.ಶ. ೧೫೨೪.

೨೧. -ಅದೇ- ೧೦, ಮೈಸೂರು ವಿ.ವಿ., ಚನ್ನರಾಯಪಟ್ಟಣ ೪೫, ಗೊಲ್ಲರ ಹೊಸಹಳ್ಳಿ, ಕ್ರಿ.ಶ. ೧೫೩೦.

೨೨. ಎಪಿಗ್ರಾಫಿಯಾ ಕರ್ನಾಟಿಕಾ-೯, ಬೆಂಗಳೂರು ಜಿಲ್ಲೆ, ಬಿ.ಎಲ್. ರೈಸ್, ೧೯೦೫, ನೆಲಮಂಗಲ-೨೦, ನಾಗಸಂದ್ರ-ಕ್ರಿ.ಶ. ೧೫೮೧. ಬಸವಪ್ಪನಾಯಕನ ಮಗ ಕೃಷ್ಣಪ್ಪನಾಯಕನಿಗಿಂತಲೂ ಪೂರ್ವದಲ್ಲಿ ಕುಕ್ಕಲನಾಡನ್ನು ಕೋಡಿಯನಾಯಕ/ಕೋಟೆಯನಾಯಕನ ಮಕ್ಕಳು ಆಳಿರುವ ಬಗ್ಗೆ ಬೆಂಗಳೂರು ಜಿಲ್ಲೆಯಲ್ಲಿ ಶಾಸನಾಧಾರಗಳಿವೆ. ನೆಲಮಂಗಲ-೨೩, ಹುರಳಿಚಿಕ್ಕನಹಳ್ಳಿ ಶಾಸನದಂತೆ ವೀರಬುಕ್ಕಣ್ಣೊಡೆಯನು ಬಸಪಟ್ಟಣದಲ್ಲಿ ರಾಜ್ಯಭಾರ ಮಾಡುತ್ತಿದ್ದಾಗ, ಕೋಡಿಯನಾಯಕನ ಮಗ ಮಯಿಲೆಯನಾಯಕನು ಮಹಾಸಾಮಂತಾಧಿಪತಿಯಾಗಿದ್ದನು. ಕರ್ನಾಟಕದಲ್ಲಿ ಬಸವಪಟ್ಟಣ ಎಂಬ ೨೫ ಎಡೆಗಳಿದ್ದು, ಯಾವ ಬಸವಪಟ್ಟಣದಿಂದ ವಿಜಯನಗರ ದೊರೆ ಒಂದನೆಯ ಬುಕ್ಕನು ಆಳ್ವಿಕೆ ನಡೆಸಿದ್ದನೆಂದು ಗುರುತಿಸಬೇಕಾಗಿದೆ.

೨೩. ಎಪಿಗ್ರಾಫಿಯಾ ಕರ್ನಾಟಕ-೯, ಹಾಸನ ಜಿಲ್ಲೆ, ಮೈಸೂರು ವಿ.ವಿ, ಬೇಲೂರು-೯೩, ಸಾ.ಶ. ೧೫೧೪.

೨೪. ಎಪಿಗ್ರಾಫಿಯಾ ಕರ್ಣಾಟಿಕಾ-೯, ಬೆಂಗಳೂರು ಜಿಲ್ಲೆ, ಬಿ.ಎಲ್.ರೈಸ್, ೧೯೦೫, ಮಾಗಡಿ-೬೨, ಸೊಲೂರು-ಕ್ರಿ.ಶ. ೧೫೩೭.

೨೫. ಎಪಿಗ್ರಾಫಿಯಾ ಕರ್ನಾಟಕ-೮, ಹಾಸನ ಜಿಲ್ಲೆ, ಮೈಸೂರು ವಿ.ವಿ., ಹಾಸನ-೧೨೨, ಪುರ-ಕ್ರಿ.ಶ. ೧೫೬೨.

೨೬. ಮೈಸೂರು ಆರ್ಕಿಯಾಲಜಿಕಲ್ ರಿಪೋರ್ಟ್ಸ್ -೧೯೧೨, ಸಂ-೪, ಕರ್ನಾಟಕ ವಿ.ವಿ; ಧಾರವಾಡ ೧೯೭೭, ಪುಟ-೯೭.

೨೭. ಎಪಿಗ್ರಾಫಿಯಾ ಕರ್ನಾಟಿಕ-೯, ಹಾಸನ ಜಿಲ್ಲೆ, ಮೈಸೂರು ವಿ.ವಿ, ಬೇಲೂರು-೯೩, ಬೇಲೂರು-ಕ್ರಿ.ಶ. ೧೫೧೪.

೨೮. -ಅದೇ- ಪರಿವಿಡಿ ಪುಟ IXX; ಎ.ಕ ೯, ಬೆಂಗಳೂರು ಜಿಲ್ಲೆ, ಜಿ.ಎಲ್ ರೈಸ್, ಮಾಗಡಿ-೨೮, ಕಲ್ಯ ಕ್ರಿ.ಶ. ೧೫೫೮.

೨೯. ಮೈಸೂರು ಆರ್ಕಿಯಾಲಜಿಕಲ್ ರಿಪೋರ್ಟ್ಸ್-೧೯೧೨, ಮೈಸೂರು ವಿ.ವಿ. ಪುಟ ೫೪.

೩೦. ಎಪಿಗ್ರಾಫಿಯಾ ಕರ್ನಾಟಕ -೮, ಹಾಸನ ಜಿಲ್ಲೆ, ಮೈಸೂರು ವಿ.ವಿ, ಹಾಸನ-೧೨೨, ಪುರ ಕ್ರಿ.ಶ. ೧೫೬೨.

೩೧. -ಅದೇ- ೧೦, ಹಾಸನ ಜಿಲ್ಲೆ, ಮೈಸೂರು ವಿ.ವಿ, ಚನ್ನರಾಯಪಟ್ಟಣ-೪೫, ಗೊಲ್ಲರ ಹೊಸಹಳ್ಳಿ-ಕ್ರಿ.ಶ. ೧೫೩೦.

೩೨. ಮೈಸೂರು ಆರ್ಕಿಯಾಲಜಿಕಲ್ ರಿಪೋರ್ಟ್ಸ್ ೧೯೧೨, ಮೈಸೂರು ವಿ.ವಿ., ಪುಟ ೫೪.

೩೩. ಎಪಿಗ್ರಾಫಿಯಾ ಕರ್ಣಾಟಿಕಾ-೯, ಬೆಂಗಳೂರು ಜಿಲ್ಲೆ, ಬಿ.ಎಲ್. ರೈಸ್, ೧೯೦೫, ಬೆಂಗಳೂರು-೫೭, ದಾಸರಹಳ್ಳಿ-ಕ್ರಿ.ಶ. ೧೫೩೨.

೩೪. ಯಲಹಂಕ ನಾಡಪ್ರಭುಗಳ ಶಾಸನ ಸಂಪುಟ, ಶ್ರೀ ಕೆಂಪೇಗೌಡ ಅಧ್ಯಯನ ಪೀಠ, ಬೆಂಗಳೂರು ವಿ.ವಿ., ೨೦೦೬, ಪುಟ ೨೬-೨೭.

೩೫. ನುಡಿಜಾಗರ, ನಾಡಪ್ರಭುಗಳಾದ ಬೆಂಗಳೂರು ಕೆಂಪೇಗೌಡ ವಂಶಸ್ಥರು, ಬೆಂ.ನ.ಜಿ.ಕ.ಸಾ. ಪರಿಷತ್ತು, ಬೆಂಗಳೂರು-೨೦೧೬, ಪುಟ-೯೮.

೩೬. ಶಾಸನ ಪರಿಶೋಧನೆ, ಯಲಹಂಕ ನಾಡಪ್ರಭುಗಳ ರಾಜಕೀಯ ಚರಿತ್ರೆ–ಮರುಪರಿಶೀಲನೆ, ಪುಟ ೧೦೩.

೩೭. ಎಚ್.ಎಂ. ಬೋರಯ್ಯ, ಯಲಹಂಕ ಮಹಾನಾಡ ಪ್ರಭುಗಳು, ಗೋಧೂಳಿ ಪ್ರಕಾಶನ, ತುಂಗಾನಗರ, ಬೆಂಗಳೂರು–೨೦೨೦, ಪ್ರಸ್ತಾವನೆ ಪುಟ–XV.

೩೮. ಹೊಸಕೋಟೆಗೆ ೧೦ ಕಿ.ಮೀ. ದೂರದ ವೊಡಿಗೇಹಳ್ಳಿಯಲ್ಲಿ ಊರಬಾಗಿಲು, ಎರಡು ಅಪ್ರಕಟಿತ ಶಾಸನಗಳಿವೆ. ಚಿಂತಾಮಣಿ–೮೨ ನೆಯ ಶಾಸನದ ಸೇನಬೋವ ಹಿರಿಯಣ್ಣರಸನ ಊರು ಇದಾಗಿದ್ದು, ದೇವನಹಳ್ಳಿ ತಾಲ್ಲೂಕಿನ ಇಂದಿನ ವಿಜಯಪುರವಾಗಿದೆ. ಶ್ರೀನಿವಾಸಪುರ ತಾಲ್ಲೂಕಿನ ವಡಿಗೇಪಲ್ಲಿ. ಎಸ್, ವಡಗೇನಹಳ್ಳಿ ಮತ್ತು ಮಾಲೂರು ತಾಲ್ಲೂಕಿನ ವಡಗನಹಳ್ಳಿ ಹಾಗೂ ಚಿಂತಾಮಣಿ ತಾಲ್ಲೂಕಿನ ವಡಗನಹಳ್ಳಿ ಇವೆಲ್ಲವು ಬೇರೆ ಬೇರೆ ಎಡೆಗಳಾಗಿವೆ.

೩೯. ಎಪಿಗ್ರಾಫಿಯಾ ಕರ್ನಾಟಿಕಾ–೧೦, ಕೋಲಾರ ಜಿಲ್ಲೆ, ಬಿ.ಎಲ್.ರೈಸ್, ೧೯೦೫, ಚಿಂತಾಮಣಿ–೮೨, ಭಗತರಹಳ್ಳಿ ಕ್ರಿ.ಶ. ೧೫೭೬.

೪೦. –ಅದೇ– ೯, ಬೆಂಗಳೂರು ಜಿಲ್ಲೆ, ಬಿ.ಎಲ್. ರೈಸ್, ೧೯೦೫, ಚನ್ನಪಟ್ಟಣ–೭೪, ಮೋಗೇನಹಳ್ಳಿ, ಕ್ರಿ.ಶ. ೧೫೩೩.

೪೧. –ಅದೇ– ಚನ್ನಪಟ್ಟಣ–೫೦, ಮೋಗೇನಹಳ್ಳಿ ಕ್ರಿ.ಶ. ೧೫೩೩.

೪೨. ಲಕ್ಕಣ್ಣ ದಂಡೇಶ (೧೩೯೮–೧೪೬೩)ನ ‘ಶಿವತತ್ವ ಚಿಂತಾಮಣಿ’ ಕೃತಿಯ ನೂತನ ಗಣಂಗಳ ೫೭ನೆಯ ಕಥಾಪದ್ಯದಲ್ಲಿ ಕಾಕೋಳಲ ಮಸಣಪ್ಪನೆಂಬ ಶಿವಶರಣನ ಉಲ್ಲೇಖವಿದೆ. ಕ್ರಿ.ಶ ೧೪೬೭(?) ರ ಸುರಧೇನುಪುರ ತಾಮ್ರಶಾಸನದಲ್ಲಿ ‘ಮೊರಸನಾಡು ನಿರ್ದಿಷ್ಟ ಕಾಕೋಳನಗರಮಂಡಲ’ ವೆಂಬ ಉಲ್ಲೇಖವಿದೆ. ‘ಕೆಂಪೇಗೌಡನ ಜಯಪ್ರಶಸ್ತಿ’ ಯಲ್ಲಿ ಮೂಡಿಬಂದಂತೆ, ಮಂಡಲೇಶ್ವರ ವೆಂಕಟಪತಿರಾಯನ ಸೂಚನೆಗನುಸಾರ ಕೆಂಪೇಗೌಡನು ವಸಂತನ ಸೀಮೆ, ಬಿಜ್ಜಾವರ ಸೀಮೆ, ರಣಭೈರವನ ಸೀಮೆಗಳ ನಾಯಕರನ್ನು ಬಗ್ಗುಬಡಿದು, ಮನ್ನಣೆ ಪಡೆದ ನಂತರ ಕಾಕೋಳಲ ಕೆರೆ ಅಂಗಳದಲ್ಲಿ ಪಾಳೆಯವಿಳಿದನೆಂಬ ಮಾಹಿತಿಯಿದೆ. ಹೆಸರಘಟ್ಟದಲ್ಲಿ ಸಂಗ್ರಹವಾಗುತ್ತಿದ್ದ ಅರ್ಕಾವತಿ ನದಿನೀರನ್ನು ಕ್ರಿ.ಶ. ೧೮೯೫ರಲ್ಲಿ ಬೃಹತ್ ಸೈಫನ್ ಮೂಲಕ–ಬೆಂಗಳೂರಿಗೆ ಸರಬರಾಜು ಮಾಡಲು ಪ್ರಾರಂಭಿಸಿದಾಗ ಸುತ್ತಮುತ್ತ ಇದ್ದ ಊರುಗಳು ಸ್ಥಳಾಂತರಗೊಂಡವು. ಅವುಗಳಲ್ಲಿ ಕಾಕೋಳು ಕೂಡ ಒಂದು. ಹೆಸರಘಟ್ಟದಲ್ಲಿ ನೀರು ಮೇಲೆತ್ತುವ ಸೈಫನ್ ಯಂತ್ರ ಸಾಮರ್ಥ್ಯದ ಬಗ್ಗೆ ಸ್ಥಳೀಯರ ಮಾತೊಂದಿದೆ. ‘ಆರುಕೆರೆ ಬಂದರೆ ಆಕಳಸ್ತೀನಿ, ಮೂರು ಕೆರೆ ಬಂದರೆ ಮುಕ್ಕಳಸ್ತೀನಿ, ಮಧುರಕ್ಕ ಬಂದರೆ ತಡೆಯಕ್ಕಾಗಲ್ಲ’; ಮದುರಕ್ಕ ಅಂದರೆ ಮದುರೆ/ಕನಸವಾಡಿ ಕೆರೆಯಾಗಿದ್ದು, ಈ ಕೆರೆಯ ನೀರು ಬೃಹತ್ಪ್ರಮಾಣದಲ್ಲಿ ಬರುತ್ತಿತ್ತು ಎಂಬರ್ಥದಲ್ಲಿ ಹೀಗೆ ಹೇಳಲಾಗಿದೆ.

೪೩. ಗ್ಯಾಸೆಟಿಯರ್–ಬೆಂಗಳೂರು ಜಿಲ್ಲೆ, ಸಂ. ಸೂರ್ಯನಾಥ್. ಯು. ಕಾಮತ್, ೧೯೯೦, ಪುಟ ೯೫೯.

೪೪. ಡೊಣೆಕಲ್ಲಸ್ಥಳದಲ್ಲಿ ದಪ್ಪ ದಪ್ಪ ನೆಲಬಂಡೆಗಳ ದಿನ್ನೆಗಳಿವೆ. ಇಲ್ಲಿ ವಾಸದ ಮನೆ ನಿವೇಶನಗಳಾಗುತ್ತಿದ್ದು, ಅಲ್ಲಲ್ಲಿ ಬಂಡೆಗಳನ್ನು ಒಡೆಯಾಲಾಗುತ್ತಿದೆ.

೪೫. ಹೆಸರಗಟ್ಟಕ್ಕೆ ಮೂರು ಕಿ.ಮೀ. ದೂರದ ದಾಸೇನಹಳ್ಳಿಯು, ಹೊಸಕೋಟೆ–೨೮ನೆಯ ಶಾಸನದ ಮುಳುವಾಗಲು ಸಾಲುವ ಕೆಂಚಣ್ಣನಾಯಕನ ಮಕ್ಕಳಾದ ವೀರಪ್ಪನಾಯಕ, ದಾಸಪ್ಪನಾಯಕರ ಪೈಕಿ ದಾಸಪ್ಪನಾಯಕನ ಹೆಸರಿನಲ್ಲಿ ಸ್ಥಾಪನೆಯಾಗಿರಬೇಕು/ನೆಲಮಂಗಲ–೩೦ನೆಯ ಶಾಸನದ ಆರು ತಲೆಮಾರು ಮೆನೆತನದ ದಾಸಿಯನಾಯ್ಕನ ಹೆಸರಿನಲ್ಲಿರುವ ಎಡೆಯಿದಾಗಿರಬೇಕು.

೪೬. ವಿಜಯನಗರ ವಾಸ್ತುಶೈಲಿಯ ಹೆಸರಗಟ್ಟ ಲಕ್ಷ್ಮಿನರಸಿಂಹ ದೇವಾಲಯಕ್ಕೆ ಸಂಬಂಧಿಸಿದ/ಹತ್ತಿರದ ಲಕ್ಷ್ಮೀ ನಾರಸಿಂಹ ಕುಂಟೆಯಿದಾಗಿದೆ.

೪೭. ಎಪಿಗ್ರಾಫಿಯಾ ಕರ್ನಾಟಿಕಾ–೯, ಬೆಂಗಳೂರು ಜಿಲ್ಲೆ, ಬಿ.ಎಲ್. ರೈಸ್, ೧೯೦೫, ನೆಲಮಂಗಲ–೩೧, ಹೆಸರಘಟ್ಟ ೧೫೩೩.

೪೮. –ಅದೇ– ೯ (ಸಪ್ಲಿ) ಬೆಂಗಳೂರು ಜಿಲ್ಲೆ, ಬಿ.ಎಲ್. ರೈಸ್, ಬೆಂಗಳೂರು–೩೧, ಹೆಸರಗಟ್ಟ–೧೫೩೨; ಅಚ್ಯುತಮಲಾಪುರ>ಮಲ್ಲಪುರ>ಮಲ್ಲೇಶ್ವರ (ಬೆಂಗಳೂರಿನ ಮಲ್ಲೇಶ್ವರ) ಹಾಗೂ ಅಲ್ಲಿಯ ಮಲ್ಲಿಕಾರ್ಜುನದೇವರು> ಮಲ್ಲೇಶ್ವರನಾಗಿರುವುದನ್ನು ಎ.ಕ. ೯ರ ಸಪ್ಲಿಮೆಂಟರಿ ಸಂಪುಟದ ಬೆಂಗಳೂರು–೧೫೯ ನೆಯ ಶಾಸನ ಮತ್ತು ಶೀರ್ಷಿಕೆಯಿಂದ ತಿಳಿದುಬರುತ್ತದೆ.

೪೯. ವಿಜಯನಗರ ಇನ್‌ಸ್ಕ್ರಿಪ್ಷನ್ಸ್ ಸಂ–೧, ಸಂ. ಬಿ.ಆರ್. ಗೋಪಾಲ್, ಆರ್ಕಿಯಾಲಜಿ, ಮುಸಿಯಂ ಡೈರೆಕ್ಟೋರೇಟ್, ಮೈಸೂರು, ೧೯೩೫, ಕೆ.ಎನ್. ೪೦೫, ಮೊರಬ–ಸಾ.ಶ ೧೫೨೮; ಸಿಂಧರಲ್ಲಿ ಏಳು ಶಾಖೆಗಳಿದ್ದು, ಇವರಲ್ಲಿ ಯಲಬುರ್ಗಿ ಸಿಂಧರೂ ಒಬ್ಬರು. ೧೦–೧೧ನೆಯ ಶತಮಾನದಲ್ಲಿ ಹೊಯ್ಸಳದೊರೆ ಒಂದನೆಯ ನರಸಿಂಹನ ಮಗ ಇಮ್ಮಡಿ ಬಲ್ಲಾಳನ ಉಪರಾಜಧಾನಿಯಾಗಿತ್ತು.

೫೦. –ಅದೇ– ಸಂ–೨, ಕೆ.ಎನ್. ೫೬೭, ಹರಿಹರೇಶ್ವರ ದೇವಾಲಯ, ಸಾ.ಶ. ೧೫೩೮.

೫೧. ಎಪಿಗ್ರಾಫಿಯಾ ಕರ್ನಾಟಿಕಾ–೯, ಬೆಂಗಳೂರು ಜಿಲ್ಲೆ, ಬಿ.ಎಲ್. ರೈಸ್, ೧೯೦೫, ನೆಲಮಂಗಲ–೧೦, ಹಾರೋಕ್ಯಾತನಹಳ್ಳಿ ಕ್ರಿ.ಶ. ೧೫೩೩.

೫೨. ಎಪಿಗ್ರಾಫಿಯಾ ಕರ್ನಾಟಿಕಾ–೧೦, ಕೋಲಾರ ಜಿಲ್ಲೆ, ಬಿ.ಎಲ್.ರೈಸ್, ೧೯೦೫, ಬಾಗೇಪಲ್ಲಿ–೪, ನಂಚರಲು, ಕ್ರಿ.ಶ. ೧೫೩೭.

೫೩. –ಅದೇ– ಬಾಗೇಪಲ್ಲಿ–೫, ನಂಚರಲು, ಕ್ರಿ.ಶ. ೧೫೩೭.

೫೪. –ಅದೇ– ಕನಕಪುರ–೬೩, ಕುರುಬರಹಳ್ಳಿ ಕ್ರಿ.ಶ. ೧೫೬೧.

೫೫. –ಅದೇ– ಬೆಂಗಳೂರು ೧೩೮, ಕಾವಲ್‌ಭೈರಸಂದ್ರ ಮತ್ತು ಜೀಬನಹಳ್ಳಿ, ಕ್ರಿ.ಶ. ೧೫೩೮.

೫೬ –ಅದೇ– ಬೆಂಗಳೂರು–೩೦, ಅಲ್ಲಾಳಸಂದ್ರ ಕ್ರಿ.ಶ. ೧೫೪೪.

೫೭. ಕನ್ನಡ ವಿ.ವಿ. ಶಾಸನಸಂಪುಟ–೭, ರಾಯಚೂರು ಜಿಲ್ಲೆ, ಸಂ. ಡಾ. ದೇವರಕೊಂಡಾರೆಡ್ಡಿ, ರಾಯಚೂರು–೪೫, ಕೋಟೆ ಕ್ರಿ.ಶ. ೧೨೯೪.

೫೮. –ಅದೇ– ಮಾನ್ವಿ–೧೯, ಚೀಕಲಪರ್ವಿ–ಕ್ರಿ.ಶ. ೧೫೨೧.

೫೯. –ಅದೇ– ಮಾನ್ವಿ–೮, ಮಾನ್ವಿ–ಸಾ.ಶ. ೧೫೩೩; ರಾಯಚೂರು–೫೫, ದೇವಸೂಗೂರು, ೧೭ನೆಯ ಶತಮಾನ.

೬೦. ಎಪಿಗ್ರಾಫಿಯಾ ಕರ್ನಾಟಿಕಾ–೯ (ಸಪ್ಲಿ), ಬೆಂಗಳೂರು ಜಿಲ್ಲೆ, ಬಿ.ಎಲ್. ರೈಸ್, ದೊಡ್ಡಬಳ್ಳಾಪುರ–೭೧, ದೊಡ್ಡಬಳ್ಳಾಪುರ–ಕ್ರಿ.ಶ. ೧೫೪೪.

೬೧. –ಅದೇ– ದೇವನಹಳ್ಳಿ–೮೨, ದೇವನಹಳ್ಳಿ–ಕ್ರಿ.ಶ. ೧೫೮೪.

ಚನ್ನಪಟ್ಟಣ ತಾಲ್ಲೂಕಿನ ಪ್ರಾಚೀನ ಅಗ್ರಹಾರಗಳು (ಚತುರ್ವೇದಿ ಮಂಗಲಗಳು)

ಎಂ.ಕೆ. ಮಂಜುನಾಥ*

ಬೊಂಬೆಯ ನಗರಿ ಎಂದೇ ಪ್ರಖ್ಯಾತಿಯನ್ನು ಪಡೆದಿರುವ ರಾಮನಗರ ಜಿಲ್ಲೆಯ ಚನ್ನಪಟ್ಟಣ ತಾಲ್ಲೂಕಿನಲ್ಲಿ ಪ್ರಾಚೀನ ಕಾಲದಲ್ಲಿ ಅಸ್ತಿತ್ವದಲ್ಲಿ ಇದ್ದಂತಹ ಅಗ್ರಹಾರಗಳು ಅಂದರೆ ಚತುರ್ವೇದಿ ಮಂಗಲಗಳನ್ನು ಕುರಿತ ವಿಶ್ಲೇಷಣೆ ಈ ಲೇಖನದಲ್ಲಿ ಮಾಡಲಾಗಿದೆ. ಪ್ರಾಚೀನ ಅಗ್ರಹಾರಗಳು ಸ್ಥಾಪನೆಯಾದ ವಿಚಾರ, ಅಲ್ಲಿನ ಜನವಸತಿ, ಆಡಳಿತ ವೈಖರಿ, ದೇವಾಲಯಗಳ ಪ್ರಾತಿನಿಧ್ಯ ಹಾಗೂ ಸಾಂಸ್ಕೃತಿಕ ವಿಚಾರಗಳ ವಿಶ್ಲೇಷಣೆಯನ್ನು ಕುರಿತು ಚರ್ಚಿಸಲಾಗಿದೆ.

ಬ್ರಾಹ್ಮಣರ ಮುಖ್ಯ ಕಸುಬು ಅಧ್ಯಯನ ಮತ್ತು ಅಧ್ಯಾಪನ. ವೇದ, ಶಾಸ್ತ್ರ ಹಾಗೂ ಇತರ ವಿದ್ಯೆಗಳನ್ನು ಓದುವುದಲ್ಲದೆ ಅದನ್ನು ಕಲಿಸುವುದೂ ಇವರ ಮುಖ್ಯ ಕರ್ತವ್ಯವಾಗಿತ್ತು. ಸಮಾಜವು ಸಹ, ಬ್ರಾಹ್ಮಣರಿಂದ ಅದನ್ನು ಅಪೇಕ್ಷಿಸುತ್ತಿತ್ತು. ಜೊತೆಗೆ ದೇವಾಲಯಗಳಲ್ಲಿ ಪೂಜಾ ಕಾರ್ಯಗಳನ್ನು ಬ್ರಾಹ್ಮಣರು ಮಾಡಬೇಕಾಗಿತ್ತು. ಈ ಕೆಲಸಗಳೆಲ್ಲವು ನಿರಾಯಾಸವಾಗಿ, ನಿರಂತರವಾಗಿ ಸಾಗಲೆಂಬ ಉದ್ದೇಶದಿಂದ ದಾನದತ್ತಿಗಳನ್ನು ನೀಡಿ, ಅವರು ಸುಖವಾಗಿರುವಂತೆ ನೋಡಿಕೊಳ್ಳುತ್ತಿದ್ದರು.

ಬ್ರಾಹ್ಮಣರಿಗೆ ದತ್ತಿಯಾಗಿ ನೀಡಿದ್ದ ಈ ಅಗ್ರಹಾರಗಳು ಮುಂದೆ ಶಿಕ್ಷಣ ಕೇಂದ್ರಗಳಾಗಿ ಮಾರ್ಪಾಡನ್ನು ಹೊಂದುತ್ತಿದ್ದವು. ದಾನವನ್ನು ನೀಡುವುದರಿಂದ ತನಗೂ ತನ್ನ ಬಂಧುಗಳಿಗೂ ಪುಣ್ಯ ಲಭಿಸುತ್ತದೆ ಎಂಬ ಕಾರಣಕ್ಕಾಗಿ ಹಳ್ಳಿಗಳನ್ನು ಅಗ್ರಹಾರವಾಗಿ ಪರಿವರ್ತಿಸಿ ಬ್ರಾಹ್ಮಣರಿಗೆ ದಾನ ನೀಡುತ್ತಿದ್ದರು. ಆ ಮೂಲಕ ಅಗ್ರಹಾರಗಳು ಶಿಕ್ಷಣವನ್ನು ಪ್ರಸಾರಗೊಳಿಸಿ, ಜ್ಞಾನವನ್ನು ನೀಡುವ ವಿದ್ಯಾಕೇಂದ್ರಗಳಾದವು. ಈ ಅಗ್ರಹಾರಗಳಲ್ಲಿ ವೇದ, ಪುರಾಣ, ಆಗಮ, ನ್ಯಾಯ, ಗಣಿತ, ಜ್ಯೋತಿಷ್ಯ, ಛಂದಸ್ಸು, ಅಲಂಕಾರಶಾಸ್ತ್ರ ಹಾಗೂ ವ್ಯಾಕರಣಶಾಸ್ತ್ರ ಮೊದಲಾದ ವಿಷಯಗಳನ್ನು ಕಲಿಸಲಾಗುತ್ತಿತ್ತು ಎಂದು ತಿಳಿಯುತ್ತದೆ. ಸಾಮಾನ್ಯವಾಗಿ ಗ್ರಾಮಾಂತರ ಪ್ರದೇಶಗಳಲ್ಲಿದ್ದ ಅಗ್ರಹಾರಗಳಲ್ಲಿ ಬ್ರಾಹ್ಮಣರು ಇತರ ಸಾಮಾಜಿಕ ವರ್ಗದವರೊಂದಿಗೆ ವಾಸಿಸುತ್ತಿದ್ದರೂ ಸಹ ಬ್ರಾಹ್ಮಣರಿಗೆ ಅರ್ಥಾತ್ ಮಹಾಜನರಿಗೆ ಉನ್ನತ ಸ್ಥಾನಮಾನ ಹಾಗೂ ಗ್ರಾಮದ ಎಲ್ಲಾ ಅಧಿಕಾರವಿರುತಿತ್ತು.

ಚನ್ನಪಟ್ಟಣ ತಾಲ್ಲೂಕು ಪ್ರಾಚೀನ ಕರ್ನಾಟಕದ ಗಂಗವಾಡಿಯ ಭಾಗವಾಗಿದ್ದು, ಕ್ರಿ.ಶ. ಹತ್ತನೇ ಶತಮಾನದಲ್ಲಿ ಚೋಳರ ಆಡಳಿತಕ್ಕೆ ಒಳಪಟ್ಟಿತು. ಆ ಕಾಲದಲ್ಲಿ ಚೋಳರ ನಾಡಿನಿಂದ ಬಂದ ಶ್ರೀವೈಷ್ಣವರನೇಕರು ಇಲ್ಲಿ ಬಂದು ನೆಲೆಸಿದ್ದರು. ಚೋಳರ ಆಳ್ವಿಕೆಯ ನಂತರವೂ ಇಲ್ಲೇ ನೆಲೆನಿಂತ ಚೋಳನಾಡಿನ ನಿವಾಸಿಗಳು ನೆಲೆಸಿದ್ದ ಪ್ರದೇಶದಲ್ಲಿ ಅವರ ನಾಡಿನ ಸಂಸ್ಕೃತಿಯು ಹೊರಹೊಮ್ಮಿದೆ. ಹೀಗೆ ಚನ್ನಪಟ್ಟಣ ತಾಲ್ಲೂಕಿನಲ್ಲಿ ಚೋಳರ ಸಂಸ್ಕೃತಿಯ ಪ್ರತೀಕವಾಗಿ ರೂಪುಗೊಂಡಿರುವ ಸರ್ವಮಾನ್ಯದ ಗ್ರಾಮಗಳೇ 'ಚತುರ್ವೇದಿ ಮಂಗಲಗಳು'. ಚೋಳನಾಡಿನಲ್ಲಿ ದೇವದೇಯವಾಗಿ ಬಿಡುತ್ತಿದ್ದ ಗ್ರಾಮಗಳನ್ನು ಚತುರ್ವೇದಿ ಮಂಗಲಗಳೆಂದು ಕರೆಯುವರು. ಚತುರ್ವೇದಿ ಮಂಗಲದ ಮಹಾಜನರೇ ಆ ಗ್ರಾಮದ ಅಧಿಪತಿಗಳಾಗಿರುತ್ತಿದ್ದರು. ಆ ಗ್ರಾಮಕ್ಕೆ ಸಂಬಂಧಿಸಿದ ಎಲ್ಲ ವ್ಯವಹಾರಗಳೂ, ವ್ಯವಸ್ಥೆಗಳನ್ನು ಮಹಾಜನರೇ ಸಭೆ ಸೇರಿ ನಡೆಸುತ್ತಿದ್ದರು. ಆ ಊರಿನಲ್ಲಿರುತ್ತಿದ್ದ ಎಲ್ಲಾ ದೇವಾಲಯಗಳ ಆಗುಹೋಗುಗಳಿಗೆ ಇವರೇ ಹೊಣೆಯಾಗಿರುತ್ತಿದ್ದರು ಎಂದು ತಿಳಿಯುತ್ತದೆ.

ಚನ್ನಪಟ್ಟಣ ತಾಲ್ಲೂಕಿನ ಅಗ್ರಹಾರಗಳ ಉಲ್ಲೇಖ ಕ್ರಿ.ಶ. ಹನ್ನೊಂದನೇ ಶತಮಾನದ ಆರಂಭದಲ್ಲಿ ಮೊತ್ತಮೊದಲ ಬಾರಿಗೆ ಕಾಣಿಸಿಕೊಂಡು, ಹದಿನೆಂಟನೇ ಶತಮಾನದವರೆಗೆ ಸುಮಾರು ಎಂಟು ನೂರು ವರ್ಷಗಳ ಅಂತರದಲ್ಲಿ ಸುಮಾರು ೧೧ ಅಗ್ರಹಾರಗಳು ಇಲ್ಲಿಯ ಶಾಸನಗಳಲ್ಲಿ ಉಲ್ಲೇಖಗೊಂಡಿವೆ. ಇವುಗಳಲ್ಲಿ ಕೆಲವನ್ನು ಹೊಸದಾಗಿ ಸ್ಥಾಪನೆ ಮಾಡಿದ್ದರೆ, ಇನ್ನೂ ಕೆಲವನ್ನು ಈಗಾಗಲೇ ಇದ್ದಂತಹ ಹಳೆಯ ಹಳ್ಳಿಗಳನ್ನು ಅಗ್ರಹಾರಗಳಾಗಿ ಪರಿವರ್ತಿಸಿರುವುದನ್ನು ಕಾಣಬಹುದು.

* ಮಾಕಳಿ ಗ್ರಾಮ ಮತ್ತು ಅಂಚೆ, ಚನ್ನಪಟ್ಟಣ ತಾಲ್ಲೂಕು, ರಾಮನಗರ ಜಿಲ್ಲೆ, ಮೊ. ೯೮೪೪೬ ೭೪೦೦೪

ತಾಲ್ಲೂಕಿನ ಪ್ರಾಚೀನ ಅಗ್ರಹಾರಗಳನ್ನು ಮಹಾ ಅಗ್ರಹಾರ, ಪಿರಿಯ ಅಗ್ರಹಾರ, ಅನಾದಿ ಅಗ್ರಹಾರ, ಚತುರ್ವೇದಿಮಂಗಲ ಮೊದಲಾದ ಹೆಸರುಗಳಿಂದ ಕರೆದಿರುವುದನ್ನು ಕಾಣಬಹುದು.

ಸಾಮಾನ್ಯವಾಗಿ ಈ ಸಭೆಗಳು ದೇವಸ್ಥಾನಗಳಲ್ಲಿ ಸಭೆಸೇರಿ ಅನೇಕ ತೀರ್ಮಾನಗಳನ್ನು ಕೈಗೊಳ್ಳುತ್ತಿದ್ದವು.[೧] ಗ್ರಾಮದ ಕೆರೆ ಮತ್ತು ಬಾವಿಗಳ ನೀರನ್ನು ಬಳಸಿಕೊಂಡು ವ್ಯವಸಾಯ ಮಾಡಲು ಅನುಮತಿ ನೀಡುವುದು.[೨] ದೇವಾಲಯಕ್ಕೆ ಸೇರಿದ ಭೂಮಿಯನ್ನು ಇತರರಿಗೆ ಉಳುಮೆಗೆ ಕೊಡುವುದು ಹಾಗೂ ಅದರಿಂದ ಬರುವ ಆದಾಯವನ್ನು ನಿರ್ದಿಷ್ಟ ಧಾರ್ಮಿಕ ಕಾರ್ಯಗಳಿಗೆ ಬಳಸುವುದು.[೩] ಶಾಸನಗಳನ್ನು ಬರೆಸಿ ಹಾಕಿಸಲು ಆದೇಶಿಸುವುದು.[೪] ದೇವಾಲಯದ ಭೂಮಿ ಅಥವಾ ಹಣವನ್ನು ಸಾಲವಾಗಿ ಕೊಟ್ಟು ಬಡ್ಡಿಯನ್ನು ವಸೂಲಿ ಮಾಡಿ, ದೇವಾಲಯದ ದಿನನಿತ್ಯದ ಪೂಜಾಕೈಂಕರ್ಯಗಳನ್ನು ನೆರವೇರಿಸುವುದು.[೫] ದೇವಾಲಯಕ್ಕೆ ಸಂಬಂಧಿಸಿದ ಆಸ್ತಿಗಳಿಗೆ ತೆರಿಗೆಯಿಂದ ವಿನಾಯಿತಿ ನೀಡುವುದು.[೬] ದೇವಾಲಯಕ್ಕೆ ದಾನಿಗಳು ನೀಡುತ್ತಿದ್ದ ಭೂದತ್ತಿಗಳನ್ನು ಸ್ವೀಕರಿಸುವುದು[೭] ಮತ್ತು ಮಾರಾಟ ಮಾಡುವುದು.[೮] ಕಾನೂನು ಉಲ್ಲಂಘಿಸಿದವರಿಗೆ ದಂಡ ವಿಧಿಸುವ ಅಧಿಕಾರ[೯] ಹಾಗೂ ದೇವಾಲಯಕ್ಕೆ ಸೇರಿದ ಒಡವೆ, ಆಭರಣಗಳು, ಹಣವನ್ನು ಸಂರಕ್ಷಿಸುವುದು[೧೦] ಮೊದಲಾದವುಗಳು ಅಗ್ರಹಾರಗಳಲ್ಲಿದ್ದ ಮಹಾಜನ ಸಭೆಗಳ ಪ್ರಮುಖ ಕರ್ತವ್ಯವಾಗಿದ್ದವು.

ಚನ್ನಪಟ್ಟಣ ತಾಲ್ಲೂಕಿನಲ್ಲಿ ಚೋಳರ ಕಾಲದಿಂದ ಮೈಸೂರು ಒಡೆಯರ ಕಾಲದವರೆಗೆ ಸುಮಾರು ಹತ್ತಕ್ಕೂ ಹೆಚ್ಚು ಅಗ್ರಹಾರಗಳು ಅಸ್ತಿತ್ವದಲ್ಲಿದ್ದವೆಂದು ಶಾಸನಗಳಿಂದ ತಿಳಿಯುತ್ತದೆ. ಚೋಳರ ಕಾಲದಲ್ಲಿ ಅಗ್ರಹಾರಗಳನ್ನು ಚತುರ್ವೇದಿಮಂಗಲವೆಂದು ಕರೆಯಲಾಗಿದೆ. ಚೋಳರ ಕಾಲದಲ್ಲಿ ತಾಲ್ಲೂಕಿನ ದೊಡ್ಡಮಳೂರು, ಪುಂಗನೂರು (ಈಗಿನ ಹೊಂಗನೂರು), ಕೂಡ್ಲೂರು, ಮಳೂರುಪಟ್ಣ, ಕೋಡಂಬಳ್ಳಿ ಗ್ರಾಮಗಳು ಅಗ್ರಹಾರಗಳಾಗಿ ಅಸ್ತಿತ್ವದಲ್ಲಿದ್ದರೆ, ಹೊಯ್ಸಳರ ಕಾಲದಲ್ಲಿ ಚಿಕ್ಕಸೋಮನಾಥಪುರ, ಕನ್ನಮಂಗಲಗಳು ಅಗ್ರಹಾರಗಳಾಗಿದ್ದವು. ವಿಜಯನಗರ ಅರಸರ ಕಾಲದಲ್ಲಿ ಮಾಚೇನಹಳ್ಳಿ (ಈಗಿನ ಮಾರ್ಚನಹಳ್ಳಿ) ಹಾಗೂ ಬ್ರಹ್ಮಣಿಪುರ ಗ್ರಾಮಗಳು ಅಗ್ರಹಾರಗಳಾಗಿ ನಿರ್ಮಾಣಗೊಂಡರೆ, ಮೈಸೂರು ಒಡೆಯರ ಕಾಲದಲ್ಲಿ ನಿರ್ಮಾಣಗೊಂಡ ಗರಕಹಳ್ಳಿ ಹಾಗೂ ವಿಜಯಲಕ್ಷ್ಮಿಸಾಗರ ಎಂಬ ಅಗ್ರಹಾರಗಳ ಕುರಿತ ವಿಶ್ಲೇಷಣೆ ಈ ಕೆಳಗಿನಂತಿದೆ.

ರಾಜೇಂದ್ರಸಿಂಹ ಚತುರ್ವೇದಿಮಂಗಲ (ದೊಡ್ಡಮಳೂರು) :ತಾಲ್ಲೂಕಿನ ಪ್ರಾಚೀನ ಅಗ್ರಹಾರಗಳಲ್ಲಿ ದೊಡ್ಡಮಳೂರು ಗ್ರಾಮವೂ ಒಂದು. ಚೋಳರ ಕಾಲದಲ್ಲಿ ಪಿರಿಯ ಮಳವೂರು, ಅನಾದಿ ಅಗ್ರಹಾರ, ಮಹಾ ಅಗ್ರಹಾರ ಎಂದು ಕರೆಸಿಕೊಂಡಿರುವ ಈ ಗ್ರಾಮ ಚೋಳ ದೊರೆ ರಾಜರಾಜಚೋಳನ ಮಗನಾದ ಒಂದನೇ ರಾಜೇಂದ್ರಚೋಳನ ಹೆಸರಿನಲ್ಲಿ 'ರಾಜೇಂದ್ರಸಿಂಹ ಚತುರ್ವೇದಿಮಂಗಲ'ವೆಂದು ಪ್ರತಿನಾಮ ಹೊಂದಿರುವುದನ್ನು ಶಾಸನಗಳಲ್ಲಿ ಕಾಣಬಹುದು. ಈ ಅಗ್ರಹಾರವನ್ನು 'ಶ್ರೀಮದನಾದಿ ಅಗ್ರಹಾರ' ಎಂದು ಕರೆದಿರುವುದರಿಂದ ಚೋಳರ ಪೂರ್ವ ಕಾಲದಲ್ಲೇ ಅಂದರೆ ಗಂಗರ ಕಾಲದಲ್ಲೇ ಅಗ್ರಹಾರವಾಗಿತ್ತು ಎಂದು ಸ್ಪಷ್ಟವಾಗುತ್ತದೆ. ಅಗ್ರಹಾರಗಳು ಯಾರಿಂದ ಸ್ಥಾಪಿತಗೊಂಡವು ಎಂಬುದು ಕಾಲಾನಂತರದಲ್ಲಿ ಜನರ ಸ್ಮರಣೆಯಿಂದ ಮರೆತುಹೋದಾಗ ಅಂತಹ ಸ್ಥಳವನ್ನು 'ಅನಾದಿ ಅಗ್ರಹಾರ'ವೆಂದು ಕರೆಯಲಾಗುತ್ತಿತ್ತು. ಈ ಪ್ರದೇಶವನ್ನು ಚೋಳರು ವಶಪಡಿಸಿಕೊಂಡ ನಂತರ ಇಲ್ಲಿನ ಅಗ್ರಹಾರಗಳಿಗೆ ಪ್ರತಿನಾಮವಾಗಿ ತಮ್ಮ ಕುಟುಂಬದವರ ಹೆಸರನ್ನು ಇಟ್ಟಿರುವುದನ್ನು ಕಾಣಬಹುದು.

ಈ ಅಗ್ರಹಾರದ ಉಲ್ಲೇಖ ಮೊಟ್ಟಮೊದಲ ಬಾರಿಗೆ ಕ್ರಿ.ಶ. ೧೦೦೭ರ ಶಾಸನದಲ್ಲಿ ಕಾಣಿಸಿಕೊಂಡಿದೆ.[೧೧] ಮಳೂರುಪಟ್ಣ ಗ್ರಾಮದ ಈ ಶಾಸನದಲ್ಲಿ ಚೋಳ ದೊರೆ ರಾಜರಾಜ ಚೋಳನ ಕಾಲದಲ್ಲಿ ಗಂಗವಾಡಿ ಕಿಳಲೈನಾಡಿನ ರಾಜೇಂದ್ರಸಿಂಹ ಚತುರ್ವೇದಿಮಂಗಲವಾದ 'ಪೆರಿಯ ಮಳವೂರಿ'ನ ಮಹಾಜನರು ಮಣಲೂರಿನ (ಈಗಿನ ಮಳೂರುಪಟ್ಣ) ಭಾಗವಾದ ನಿಗರಿಲಿ ಚೋಳಪುರಂನ ಜಯಗೊಂಡ ಚೋಳ ವಿಣ್ಣಾಗರ್ ಆಳ್ವಾರ್ ದೇವರಿಗೆ ಭೂದಾನ ಮಾಡಿದ ವಿವರವಿದೆ. ಈ ಭೂದಾನವನ್ನು ಅಗ್ರಹಾರದ ಸಭಾಸದಸ್ಯರ ಅಪ್ಪಣೆಯನ್ನು ಪಡೆದು ನೀಡಿರುವುದು ತಿಳಿಯುತ್ತದೆ. ಕ್ರಿ.ಶ. ೧೦೨೪ರ ಮಳೂರಿನ ಶಾಸನವೊಂದರಲ್ಲಿ[೧೨] ರಾಜೇಂದ್ರಸಿಂಹ ಚತುರ್ವೇದಿಮಂಗಲದ ಮಹಾಜನರು ಪರಮಸ್ವಾಮಿಗಳಿಗೆ ೩೦೦ ಕುಳಿ ಭೂಮಿಯನ್ನು ಮಾರಾಟ ಮಾಡಿದ ವಿವರವಿದೆ. ಇದರಿಂದ ಅಗ್ರಹಾರದ ಭೂಮಾರಾಟದ ಹಕ್ಕು ಮಹಾಜನರದ್ದೇ ಆಗಿತ್ತು ಎಂದು ತಿಳಿಯುತ್ತದೆ.

ಕ್ರಿ.ಶ. ೧೦೩೪ರ ಶಾಸನದಲ್ಲಿ[೧೩] ರಾಜೇಂದ್ರಸಿಂಹ ಈಶ್ವರ (ಈಗಿನ ಕೈಲಾಸೇಶ್ವರ) ದೇವಾಲಯಕ್ಕೆ ನೀಡಿದ ದತ್ತಿಯನ್ನು ಮಹಾಜನರು ಸ್ವೀಕರಿಸಿದ ಉಲ್ಲೇಖವಿದೆ. ಇದೇ ಸಮಯದಲ್ಲಿ ರಾಜೇಂದ್ರಸಿಂಹ ಚತುರ್ವೇದಿಮಂಗಲದ ಮಹಾಜನರು

ಅಪ್ರಮೇಯಸ್ವಾಮಿ ದೇವಾಲಯದಲ್ಲಿ ಮಣವಾಳಾಳ್ವರ್ ದೇವರನ್ನು ಪ್ರತಿಷ್ಠಾಪಿಸಿ, ದತ್ತಿ ಬಿಟ್ಟ ವಿವರ ಶಾಸನವೊಂದರಲ್ಲಿದೆ.[೧೪] ಅದೇ ರೀತಿ ಕ್ರಿ.ಶ. ೧೦೬೦ರಲ್ಲಿ ಈ ಅಗ್ರಹಾರದ ಮಹಾಜನರು ಅಪ್ಪಿಯೂರಿನಲ್ಲಿ (ಈಗಿನ ಅಬ್ಬೂರು) ಕೆರೆಯೊಂದನ್ನು ನಿರ್ಮಿಸಿದ ಮಲ್ಲಿಗಾವುಂಡನಿಗೆ ಭೂಮಿಯನ್ನು ಕೊಡುಗೆಯಾಗಿ ನೀಡಿದ ವಿವರ ಅಬ್ಬೂರು ಗ್ರಾಮದ ತಮಿಳಿನ ಶಾಸನದಲ್ಲಿದೆ.[೧೫]

ಕ್ರಿ.ಶ. ೧೦೮೬ರ ಶಾಸನದಲ್ಲಿ[೧೬] ರಾಜೇಂದ್ರಸಿಂಹ ಚತುರ್ವೇದಿಮಂಗಲವಾದ ಪೆರಿಯ ಮಳವೂರಿನ ಮಹಾಜನರು ಸರ್ವಾನುಮತದಿಂದ ರಾಜೇಂದ್ರಸಿಂಹ ಈಶ್ವರ ಒಡೆಯ ಮಹಾದೇವ ದೇವಾಲಯಕ್ಕೆ ಗ್ರಾಮದ ಸಂತೆಯಲ್ಲಿ ನಡೆಯುವ ಅಂಗಡಿಯ ಮೇಲಿನ ಸಣ್ಣದಾದ ತೆರಿಗೆಯನ್ನು ದಾನಬಿಟ್ಟು, ಈ ತೆರಿಗೆಯನ್ನು ದೇವಾಲಯದ ಅರ್ಚಕರು ವಸೂಲಿ ಮಾಡಲು ಅನುಮತಿ ನೀಡಿದ ವಿವರವಿದೆ. ಈ ಶಾಸನದಲ್ಲಿ ಅಗ್ರಹಾರದ ಯಾವುದೇ ವಿಚಾರವು ಮಹಾಜನರ ಸಭೆಯಲ್ಲಿ ತೀರ್ಮಾನವಾಗುತ್ತಿತ್ತು ಎಂಬುದು ತಿಳಿಯುತ್ತದೆ. ಈ ಅಗ್ರಹಾರದ ಉಲ್ಲೇಖ ಹೊಯ್ಸಳರ ಕಾಲದ ಶಾಸನಗಳಲ್ಲೂ ದೊರೆಯುತ್ತದೆ.[೧೭] ಈ ಶಾಸನಗಳಲ್ಲಿ ಮಳವೂರನ್ನು ರಾಜೇಂದ್ರಸಿಂಹ ಚತುರ್ವೇದಿ ಮಂಗಲವೆಂದೇ ಚೋಳ ದೊರೆಯ ಹೆಸರಿನಿಂದಲೇ ಕರೆಯಲಾಗಿದೆ.

ಕ್ರಿ.ಶ. ೧೨೦೭ರ ಶಾಸನದಲ್ಲಿ[೧೮] ಹೊಯ್ಸಳ ದೊರೆ ಮೂರನೇ ವೀರಬಲ್ಲಾಳನ ಕಾಲದಲ್ಲಿ ರಾಜೇಂದ್ರಸಿಂಹ ಚತುರ್ವೇದಿಮಂಗಲವನ್ನು 'ಶ್ರೀಮದನಾದಿಯ ಅಗ್ರಹಾರಂ' ಎಂದು ಕರೆಯಲಾಗಿದೆ. ಕ್ರಿ.ಶ. ೧೨೨೬ರ ಶಾಸನದಲ್ಲಿ[೧೯] 'ಮಹಾಸ್ರಮದ ಶ್ರೀಮದನಾದಿ ಅಗ್ರಹಾರಂ ಹಿರಿಯ ಮಳವೂರಾದ ಶ್ರೀರಾಜೇಂದ್ರಸಿಂಹ ಚತುರ್ವೇದಿಮಂಗಲದ ಶ್ರೀಮದಶೇಷ ಮಹಾಜನಂಗಳು' ವರ್ತಕರಿಗಾಗಿ 'ನರಸಿಂಹಪಟ್ಟಣ'ವೆಂಬ ಪಟ್ಟಣವನ್ನು ನಿರ್ಮಿಸಿದ ಉಲ್ಲೇಖವಿದೆ. ಈ ಅಗ್ರಹಾರದಲ್ಲಿ ಶ್ರೀಮನ್ಮಹಾವಡಂ ಬ್ಯವಹಾರಿಗಳು, ನಾನಾದೇಶಿಗಳು ಹಾಗೂ ಇತರೇ ಕುಲದವರು ವಾಸವಾಗಿದ್ದರೆಂದು ಇದೇ ಶಾಸನದಿಂದ ತಿಳಿಯುತ್ತದೆ. ಹೀಗೆ ಅಗ್ರಹಾರದ ಮಹಾಜನರು ಹೊಂದಿದ್ದ ಅಧಿಕಾರ ವ್ಯಾಪ್ತಿಯನ್ನು ಕಾಣಬಹುದು.

ತ್ರೈಲೋಕ್ಯ ಮಾದೇವಿ ಚತುರ್ವೇದಿಮಂಗಲ (ಪುಂಗನೂರು) : ಚೋಳರ ಕಾಲದಲ್ಲಿ ನಿರ್ಮಾಣಗೊಂಡ ಅಗ್ರಹಾರವಾಗಿದೆ. ತಾಲ್ಲೂಕಿನ ಹೊಂಗನೂರು ಗ್ರಾಮದ ಕ್ರಿ.ಶ. ೧೦೦೭ರ ಶಾಸನದಲ್ಲಿ 'ಗಂಗವಾಡಿಯ ಕಿಳಲೈನಾಡಿನ ತ್ರೈಲೋಕ್ಯ ಚತುರ್ವೇದಿಮಂಗಲವಾದ ಪುಂಗನೂರಿ'ನ ಉಲ್ಲೇಖ ಕಂಡುಬರುತ್ತದೆ.[೨೦] ಚೋಳ ದೊರೆ ರಾಜರಾಜಚೋಳನ ಮಡದಿಯಾದ ತ್ರೈಲೋಕ್ಯ ಮಹಾದೇವಿಯ ಹೆಸರಿನಲ್ಲಿ ಪುಂಗನೂರು ಅಗ್ರಹಾರಕ್ಕೆ ಪ್ರತಿನಾಮವಿಟ್ಟಿರುವುದನ್ನು ಈ ಶಾಸನದಲ್ಲಿ ಕಾಣಬಹುದು.

ಕ್ರಿ.ಶ. ೧೦೧೩ರಲ್ಲಿ ತ್ರೈಲೋಕ್ಯ ಮಾದೇವಿ ಚತುರ್ವೇದಿಮಂಗಲವಾದ ಪುಂಗನೂರಿನ ಸಭಾಸದಸ್ಯರು ಸೇರಿ ಕುನ್ದವೈ ವಿಣ್ಣಾಳ್ವಾರ್ ದೇವರಿಗೆ ಭೂದಾನ ಮಾಡಿದ ಉಲ್ಲೇಖ ಶಾಸನವೊಂದರಲ್ಲಿದೆ.[೨೧] ಕ್ರಿ.ಶ. ೧೦೧೪ರ ಶಾಸನವೊಂದರಲ್ಲಿ ತ್ರೈಲೋಕ್ಯ ಮಾದೇವಿ ಅಗ್ರಹಾರವು ಕಿಳಲೈನಾಡಿ ಮಣಲೂರಿನ ಭಾಗವಾದ ನಿಗರಿಲಿ ಚೋಳಪುರಂಗೆ ಸೇರಿತ್ತು ಎಂದು ತಿಳಿಯುತ್ತದೆ.[೨೨] ಇದೇ ಶಾಸನದಲ್ಲಿ ಮಣಲೂರಿನ ಕೆರೆಯ ನೀರನ್ನು ವ್ಯವಸಾಯಕ್ಕೆ ಬಳಸಿಕೊಳ್ಳಲು ಹಾಗೂ ಅನುಮತಿ ಇಲ್ಲದೇ ನೀರನ್ನು ಬಳಸಿದವರಿಗೆ ದಂಡ ವಿಧಿಸುವ ತೀರ್ಮಾನವನ್ನು ಈ ಅಗ್ರಹಾರದ ಮಹಾಜನರು ಮಾಡಿರುವುದನ್ನು ಕಾಣಬಹುದು. ಈ ಅಗ್ರಹಾರದ ಉಲ್ಲೇಖ ಕ್ರಿ.ಶ. ೧೦೧೮ರ ಶಾಸನದಲ್ಲಿಯೂ[೨೩] ಕಂಡುಬಂದು ನಂತರದ ಕಾಲಘಟ್ಟದ ಶಾಸನಗಳಲ್ಲಿ ಈ ಅಗ್ರಹಾರದ ಉಲ್ಲೇಖ ಕಾಣಬರುವುದಿಲ್ಲ.

ಚೋಳಮಾದೇವಿ ಚತುರ್ವೇದಿಮಂಗಲ (ವಣ್ಣೂರು): ಚೋಳ ದೊರೆ ರಾಜರಾಜಚೋಳನ ಮಡದಿಯಾದ ಚೋಳಮಹಾದೇವಿಯ ಹೆಸರಿನಲ್ಲಿ ವಣ್ಣೂರು ಅಗ್ರಹಾರಕ್ಕೆ 'ಚೋಳಮಾದೇವಿ ಚತುರ್ವೇದಿಮಂಗಲಂ' ಎಂಬ ಪ್ರತಿನಾಮವನ್ನಿಡಲಾಗಿದೆ. ಪ್ರಾಚೀನ ಅಗ್ರಹಾರವಾಗಿದ್ದ ಈ ವಣ್ಣೂರು ಪ್ರಸ್ತುತದಲ್ಲಿ ಅಸ್ತಿತ್ವದಲ್ಲಿಲ್ಲ. ಶಾಸನಗಳಲ್ಲಿ ಮಣಲೂರಿನ (ಈಗಿನ ಮಳೂರುಪಟ್ಣ) ಭಾಗವಾದ ನಿಗರಿಲಿ ಚೋಳಪುರಂಗೆ ಹೊಂದಿಕೊಂಡಂತೆ ವಣ್ಣೂರು ಇತ್ತೆಂದು ತಿಳಿಯುತ್ತದೆ. ಕ್ರಿ.ಶ. ೧೦೦೭ರ ಶಾಸನದಲ್ಲಿ[೨೪] ಚೋಳಮಾದೇವಿ ಚತುರ್ವೇದಿಮಂಗಲವಾದ ವಣ್ಣೂರಿನ ಮಹಾಜನರು ನಿಗರಿಲಿ ಚೋಳಪುರಂನಲ್ಲಿ (ಈಗಿನ ಮಳೂರುಪಟ್ಣ ಗ್ರಾಮ) ಜಯಂಗೊಂಡ ಚೋಳವಿಣ್ಣಗರ್ (ಈಗಿನ ನಾರಾಯಣಸ್ವಾಮಿ) ದೇವರನ್ನು ಪ್ರತಿಷ್ಠಾಪಿಸಿ ದೇವದಾನವಾಗಿ ಭೂಮಿಯನ್ನು ಸರ್ವಮಾನ್ಯವಾಗಿ ಬಿಟ್ಟ ವಿವರವಿದೆ. ಇದೇ ಶಾಸನದಲ್ಲಿ ಈ ಭೂಮಿಯಲ್ಲಿ ವ್ಯವಸಾಯ ಮಾಡಲು ವಣ್ಣೂರಿನ ಕೆರೆ ಮತ್ತು ಬಾವಿಯ ನೀರನ್ನು ಬಳಸಲು ಮಹಾಜನರು ಅನುಮತಿ ನೀಡಿದ ವಿವರವನ್ನು ಕಾಣಬಹುದು.

ಕ್ರಿ.ಶ. ೧೦೧೪ರ ಶಾಸನವೊಂದರಲ್ಲಿ[೨೫] ಚೋಳಮಾದೇವಿ ಚತುರ್ವೇದಿಮಂಗಲದ ಮಹಾಜನ ಸಭೆಯ ಸದಸ್ಯರಾದ ಕೌಶಿಕ ಗೋತ್ರದ ಸುಬ್ರಮಣಿಕ್ಕಿರಮಾವಿಟಾನ್, ಆತ್ರೇಯ ಗೋತ್ರದ ಜನ್ನಯಕಿರಮಾವಿಟಾನ್, ವಚ್ಚ ಗೋತ್ರದ ದಿವಾಕರೈಯನ್,

ಕೌಶಿಕ ಗೋತ್ರದ ಕುಮಾರಯನ್, ಸತ್ಯೆಯಾನ್ ಮೊದಲಾದವರ ಉಲ್ಲೇಖವಿದೆ. ಈ ಶಾಸನದಲ್ಲಿ ಮಹಾಜನರು ವ್ಯಕ್ತಿಯೊಬ್ಬನಿಗೆ ೩೨೦ ಕಲಂ ಭತ್ತವನ್ನು ಸಾಲವಾಗಿ ನೀಡಿ, ಇದಕ್ಕೆ ಬಡ್ಡಿಯಾಗಿ ವರ್ಷಕ್ಕೆ ೩ ಕರುಣಿ ಹಾಗೂ ೬ ನಾವೆ ದರದಂತೆ ೧೦೦ ಕಲಂ ಭತ್ತವನ್ನು ವಾಪಸ್ಸು ನೀಡಬೇಕೆಂಬ ಷರತ್ತು ವಿಧಿಸಿ, ಇದಕ್ಕೆ ತಪ್ಪಿದಲ್ಲಿ ೧೦೦೦ ಕಳಂಜುವಿನ ಚಿನ್ನವನ್ನು ದಂಡ ವಿಧಿಸುತ್ತೇವೆಂಬ ಆಜ್ಞೆ ಹೊರಡಿಸಿರುವುದನ್ನು ಕಾಣಬಹುದು.

ರಾಜರಾಜಚೋಳ ಚತುರ್ವೇದಿಮಂಗಲ (ಕೂಡ್ಲೂರು): ಗಂಗರ ಕಾಲದ ಪ್ರಸಿದ್ಧ ಸ್ಥಳ ಕೂಡ್ಲೂರು ಚೋಳರ ಕಾಲದಲ್ಲಿ ದೊರೆ ರಾಜರಾಜಚೋಳನ ಹೆಸರಿನಲ್ಲಿ ಚತುರ್ವೇದಿಮಂಗಲವಾಗಿ ಗುರುತಿಸಿಕೊಂಡಿತ್ತು. ಕೂಡ್ಲೂರು ಅಗ್ರಹಾರದ ಮೊದಲ ಉಲ್ಲೇಖ ಕ್ರಿ.ಶ. ೧೦೩೦ರ ಚೋಳ ದೊರೆ ರಾಜೇಂದ್ರಚೋಳನ ಶಾಸನವೊಂದರಲ್ಲಿದೆ.[೨೬] ಈ ಶಾಸನದಲ್ಲಿ ರಾಜರಾಜಚೋಳ ಚತುರ್ವೇದಿಮಂಗಲವಾದ ಕೂಡ್ಲೂರಿನ ಮಹಾಜನರು ಈಗಿನ ಮಳೂರುಪಟ್ಟದ ನಾರಾಯಣಸ್ವಾಮಿ ದೇವಾಲಯಕ್ಕೆ ದಾನ ನೀಡಿದ ಭೂಮಿಯಲ್ಲಿ ಬರುವ ಆದಾಯದಿಂದ ೨ ನಾಳಿ ಅಳತೆಯ ಅಕ್ಕಿಯನ್ನು ಪ್ರತಿನಿತ್ಯದ ದೇವರ ನೈವೇದ್ಯಕ್ಕೆ ಬಳಸಲು ನಿರ್ಧರಿಸಿದ ವಿವರವಿದೆ. ಈ ಅಗ್ರಹಾರದ ಉಲ್ಲೇಖ ಚೋಳರ ನಂತರ ಹೊಯ್ಸಳ, ವಿಜಯನಗರ ಅರಸರ ಕಾಲದ ಶಾಸನಗಳಲ್ಲೂ ಇದೆ.[೨೭]

ಕ್ರಿ.ಶ. ೧೧೮೦ರ ಹೊಯ್ಸಳ ದೊರೆ ಇಮ್ಮಡಿ ಬಲ್ಲಾಳನ ಕಾಲದ ಶಾಸನದಲ್ಲಿ[೨೮] ರಾಜರಾಜಚೋಳ ಚತುರ್ವೇದಿ ಮಂಗಲವಾದ ಕೂಡಲೂರಿನ ಮಹಾಜನರು ದೇವಸ್ಥಾನದ ಪಕ್ಕದಲ್ಲಿ ಹೂವಿನ ತೋಟವನ್ನು ನಿರ್ಮಾಣ ಮಾಡಿದ್ದಕ್ಕೆ ಸೋಮಣ್ಣಗಾವುಂಡನಿಗೆ ಭೂದಾನ ಮಾಡಿದ ಉಲ್ಲೇಖ ಕಂಡುಬರುತ್ತದೆ. ಕ್ರಿ.ಶ. ೧೫೩೪ರ ಶಾಸನವೊಂದರಲ್ಲಿ[೨೯] ವಿಜಯನಗರದ ದೊರೆ ಅಚ್ಯುತದೇವರಾಯನ ಆಳ್ವಿಕೆಯ ಕಾಲದಲ್ಲಿ ಕೂಡಲೂರ ಅಶೇಷ ಹೆಬ್ಬಾರುವ ಮಹಾಜನಂಗಳು ಚಕ್ಕೆರೆ ಗ್ರಾಮದ ತಿರುಮಲ ದೇವರಿಗೆ ದತ್ತಿ ನೀಡಿದ ವಿವರವನ್ನು ಕಾಣಬಹುದು.

ಕೋಡಂಬಳ್ಳಿ (.....ಚತುರ್ವೇದಿ ಮಂಗಲ): ಚೋಳರ ಕಾಲದಲ್ಲಿ ನಿರ್ಮಾಣಗೊಂಡ ಚತುರ್ವೇದಿ ಮಂಗಲಗಳಲ್ಲಿ ಇದೂ ಒಂದು. ಕ್ರಿ.ಶ. ೧೧ನೇ ಶತಮಾನದ ಶಾಸನವೊಂದರಲ್ಲಿ[೩೦] ಕೋಡಂಬಳ್ಳಿಯೂರನ್ನು ಚತುರ್ವೇದಿಮಂಗಲವೆಂದು ಕರೆದಿರುವುದನ್ನು ಕಾಣಬಹುದು. ಆದರೆ ಈ ಚತುರ್ವೇದಿಮಂಗಲಕ್ಕೆ ಇದ್ದ ಮತ್ತೊಂದು ಹೆಸರು ತ್ರುಟಿತವಾಗಿದೆ. ಶಾಸನದಲ್ಲಿ ಈ ಅಗ್ರಹಾರದ ಮಣಲೇಶ್ವರ ದೇವಾಲಯಕ್ಕೆ ಪೆರುಮಾಳನೆಂಬ ಸರ್ವಾಧಿಕಾರಿಯು ದಾನ ಮಾಡಿರುವ ಉಲ್ಲೇಖ ಕಂಡುಬರುತ್ತದೆ.

ಚಿಕ್ಕಸೋಮನಾಥಪುರ: ತಾಲ್ಲೂಕಿನ ಚಿಕ್ಕಸೋಮನಾಥಪುರ ಗ್ರಾಮವು ಹೊಯ್ಸಳರ ಕಾಲದಲ್ಲಿ ಅಗ್ರಹಾರವಾಗಿತ್ತು ಎಂದು ತಿಳಿಯುತ್ತದೆ. ಕ್ರಿ.ಶ. ೧೨೭೦ರ ಶಾಸನವೊಂದರಲ್ಲಿ[೩೧] ಹೊಯ್ಸಳ ದೊರೆ ಮೂರನೇ ನರಸಿಂಹನು ಚಿಕ್ಕಸೋಮನಾಥಪುರದ ಮಹಾಜನಂಗಳಿಗೆ ಕೆಲವು ಹಳ್ಳಿಗಳ ತೆರಿಗೆಗಳನ್ನು ವಸೂಲಿ ಮಾಡುವ ಅಧಿಕಾರವನ್ನು ಬಿಟ್ಟುಕೊಟ್ಟ ವಿವರವಿದೆ. ಈ ಶಾಸನದಲ್ಲಿ ಚಿಕ್ಕಸೋಮನಾಥಪುರವನ್ನು ಅಗ್ರಹಾರವೆಂದು ಉಲ್ಲೇಖಿಸದೇ ಹೋದರೂ, ಮಹಾಜನರ ಉಲ್ಲೇಖವಿರುವುದರಿಂದ, ಅಗ್ರಹಾರಗಳಲ್ಲಿ ವಾಸಿಸುವ ಬ್ರಾಹ್ಮಣ ಮುಖಂಡರಿಗೆ ಮಹಾಜನರೆಂದು ಕರೆಯುತ್ತಿದ್ದರೆಂಬ ಆಧಾರದಿಂದ ಚಿಕ್ಕಸೋಮನಾಥಪುರ ಅಗ್ರಹಾರವಾಗಿತ್ತೆಂದು ನಿರ್ಧರಿಸಬಹುದು. ಪ್ರಸ್ತುತದಲ್ಲಿ ಈ ಗ್ರಾಮದ ಹೆಸರು 'ಸೋಮನಾಥಪುರ' ಎಂಬ ಹೆಸರಿನಲ್ಲಿ ಅಸ್ತಿತ್ವದಲ್ಲಿರುವುದನ್ನು ಕಾಣಬಹುದು.

ಕನ್ನಮಂಗಲ: 'ಮಂಗಲ' ಎಂದರೆ ಅಗ್ರಹಾರವೆಂದೇ ಅರ್ಥ. ಊರುಗಳನ್ನು ಅಗ್ರಹಾರವಾಗಿ ಮಾರ್ಪಡಿಸುವಾಗ ಆ ಊರಿನ ಹೆಸರಿನ ಜೊತೆಗೆ 'ಮಂಗಲ' ಎಂಬ ವಿಶೇಷಣವನ್ನು ಸೇರಿಸಲಾಗುತ್ತಿತ್ತು ಎಂದು ತಿಳಿಯುತ್ತದೆ. ಅದೇ ರೀತಿ ಚನ್ನಪಟ್ಟಣ ತಾಲ್ಲೂಕಿನ ಕನ್ನಮಂಗಲ ಅಗ್ರಹಾರವಾಗಿತ್ತು ಎನ್ನಬಹುದು. ಈ ಕನ್ನಮಂಗಲದ ಮೊದಲ ಉಲ್ಲೇಖ ಕ್ರಿ.ಶ. ೧೨೯೧ರ ಶಾಸನದಲ್ಲಿ ಬರುತ್ತದೆ.[೩೨] ಇದರ ಆಧಾರದಿಂದ ಹೊಯ್ಸಳರ ಕಾಲಕ್ಕಾಗಲೇ ಕನ್ನಮಂಗಲ ಅಗ್ರಹಾರವಾಗಿತ್ತು ಎನ್ನಬಹುದು. ಈ ಶಾಸನದಲ್ಲಿಯೇ 'ಕಂನಮಂಗಲದ ಅಶೇಷಜನಂಗಳು' (ಬ್ರಾಹ್ಮಣರು) ಎಂಬ ಉಲ್ಲೇಖ ಬಂದಿರುವುದು ಅಗ್ರಹಾರವಾಗಿತೆಂಬುದಕ್ಕೆ ಪುಷ್ಟಿ ನೀಡುತ್ತದೆ. ಇದೇ ರೀತಿ ತಾಲ್ಲೂಕಿನ ಕದರಮಂಗಲ ಗ್ರಾಮವೂ ಅಗ್ರಹಾರವಾಗಿತ್ತು ಎನ್ನಬಹುದು. ಈ ಕದರಮಂಗಲದ ಉಲ್ಲೇಖ ಶಾಸನಗಳಲ್ಲಿ ದೊರೆಯುವುದಿಲ್ಲವಾದರೂ ಈ ಗ್ರಾಮ ಪ್ರಾಚೀನ ಅಗ್ರಹಾರವಾಗಿತ್ತು ಎಂಬುದು ಸ್ಪಷ್ಟ.

ಬ್ರಹ್ಮಣ್ಯತೀರ್ಥಪುರ: ವಿಜಯನಗರ ಅರಸರ ಕಾಲದಲ್ಲಿ ಈಗಿನ ಬ್ರಹ್ಮಣೀಪುರವು 'ಬ್ರಹ್ಮಣ್ಯತೀರ್ಥಪುರ' ಎಂಬ ಅಗ್ರಹಾರವಾಗಿ ಪ್ರಸಿದ್ಧವಾಗಿತ್ತು ಎಂದು ತಿಳಿಯುತ್ತದೆ. ಮಾಧ್ವ ಪರಂಪರೆಯ ಯತಿಗಳಾದ ಬ್ರಹ್ಮಣ್ಯತೀರ್ಥರ ಹೆಸರಿನಲ್ಲಿ

ನಿರ್ಮಾಣಗೊಂಡ ಅಗ್ರಹಾರವಾಗಿದೆ. ಕ್ರಿ.ಶ. ೧೫೨೩ರ ಅಬ್ಬೂರಿನ ತಾಮ್ರಶಾಸನವೊಂದರಲ್ಲಿ[೩೩] ವಿಜಯನಗರ ದೊರೆ ಕೃಷ್ಣದೇವರಾಯನು ಕೆಳಲೆನಾಡಿನ ಚನ್ನಪಟ್ಟಣ ಸೀಮೆಯ ಹೊಂಗನೂರು ಸ್ಥಳದ ಸಣಬನಹಳ್ಳಿ ಹಾಗೂ ಹೊಸಹಳ್ಳಿ ಅತ್ತಿಕುಪ್ಪೆ ಗ್ರಾಮಗಳನ್ನು ಅಗ್ರಹಾರವಾಗಿ ಮಾಡಿ ಬ್ರಹ್ಮಣ್ಯತೀರ್ಥಪುರ ಎಂಬ ಪ್ರತಿನಾಮವನ್ನಿಟ್ಟು ಬ್ರಹ್ಮಣ್ಯತೀರ್ಥರ ಶಿಷ್ಯರಾದ ವ್ಯಾಸತೀರ್ಥರಿಗೆ ದಾನವಾಗಿ ನೀಡಿದ ವಿವರವಿದೆ. ಪ್ರಸ್ತುತದಲ್ಲಿ ಈ ಅಗ್ರಹಾರ 'ಬ್ರಹ್ಮಣೀಪುರ' ಎಂಬ ಹೆಸರಿನಲ್ಲಿ ಪ್ರಚಲಿತದಲ್ಲಿದೆ.

ಕೊಂಡರಾಜಪುರ (ಮಾಚೇನಹಳ್ಳಿ): ಈ ಅಗ್ರಹಾರವು ವಿಜಯನಗರ ಅರಸರ ಕಾಲದಲ್ಲಿ ನಿರ್ಮಾಣಗೊಂಡಿದ್ದೆಂದು ತಿಳಿಯುತ್ತದೆ. ಕ್ರಿ.ಶ. ೧೫೪೮ರ ಮಳೂರು ಗ್ರಾಮದ ತಾಮ್ರಶಾಸನವೊಂದರಲ್ಲಿ[೩೪] ವಿಜಯನಗರದ ದೊರೆ ಸದಾಶಿವರಾಯನ ಸಾಮಂತನಾದ ಕೋನೇಟಿರಾಜನ ಮಗ ಕೊಂಡರಾಜನ ಕೋರಿಕೆಯ ಮೇರೆಗೆ ಸದಾಶಿವರಾಯನು ಚನ್ನಪಟ್ಟಣ ಸೀಮೆಯ ಕಿಳಲೈನಾಡಿನ ಮಾಚೇನಹಳ್ಳಿಯನ್ನು ಅಗ್ರಹಾರವಾಗಿ ಮಾಡಿ 'ಕೊಂಡರಾಜಪುರ' ಎಂಬ ಪ್ರತಿನಾಮವನ್ನಿಟ್ಟು ಭಾರದ್ವಜ ಗೋತ್ರದ ತಿರುವೆಂಕಟಾಚಾರ್ಯ ಎಂಬುವನಿಗೆ ಸರ್ವಮಾನ್ಯವಾಗಿ ಬಿಟ್ಟ ವಿವರ ದೊರೆಯುತ್ತದೆ. ಪ್ರಸ್ತುತದಲ್ಲಿ ಶಾಸನೋಕ್ತ ಮಾಚೇನಹಳ್ಳಿಯು 'ಮಾರ್ಚನಹಳ್ಳಿ' ಎಂಬ ಹೆಸರಿನಲ್ಲಿ ಪ್ರಚಲಿತದಲ್ಲಿದೆ.

ದೇವರಾಜಪುರ (ಗರಿಖಹಳ್ಳಿ): ಮೈಸೂರು ಒಡೆಯರ ಕಾಲದಲ್ಲಿ ನಿರ್ಮಾಣಗೊಂಡ ಅಗ್ರಹಾರ ಇದಾಗಿದೆ. ಕ್ರಿ.ಶ. ೧೬೬೮ರ ಶಾಸನವೊಂದರಲ್ಲಿ[೩೫] ಮೈಸೂರಿನ ದೊರೆ ದೇವರಾಜ ಮಹಿಪಾಲನು (ದೊಡ್ಡ ದೇವರಾಜ ಒಡೆಯ) ಗರಿಖಹಳ್ಳಿ (ಈಗಿನ ಗರಕಹಳ್ಳಿ) ಗ್ರಾಮವನ್ನು ಅಗ್ರಹಾರವಾಗಿ ನಿರ್ಮಿಸಿ, ತಮ್ಮ ತಂದೆ ದೇವರಾಜ ಒಡೆಯರ ಹೆಸರಿನಲ್ಲಿ 'ದೇವರಾಜಪುರ' ಎಂಬ ಪ್ರತಿನಾಮವನ್ನಿಟ್ಟು ಬ್ರಾಹ್ಮಣರಿಗೆ ದಾನಕೊಟ್ಟ ವಿವರವಿದೆ. ಇದೇ ಶಾಸನದಲ್ಲಿ ಈ ಅಗ್ರಹಾರವು ಸೋಗಾಲ, ಕಾಲಿಕೆರೆ, ದಾಸರಹಳ್ಳಿ, ರಾಮೇನಹಳ್ಳಿಗಳಿಂದ ಸುತ್ತುವರೆದಿತ್ತು ಎಂದು ತಿಳಿಯುತ್ತದೆ.

ವಿಜಯಲಕ್ಷ್ಮೀಸಾಗರ ಅಗ್ರಹಾರ: ಇದು ಮೈಸೂರು ಒಡೆಯರ ಕಾಲದ ಅಗ್ರಹಾರವಾಗಿದೆ. ಕ್ರಿ.ಶ. ೧೮ನೇ ಶತಮಾನದ ಶಾಸನವೊಂದರಲ್ಲಿ[೩೬] 'ಮಹಾರಾಜೇಶ್ರೀ ಪೂರ್ಣಯ್ಯ'ನವರ ಹೆಸರನ್ನು ದಾಖಲಿಸಿದ್ದು, ತದನಂತರದಲ್ಲಿ ವಿಜಯಲಕ್ಷ್ಮೀಸಾಗರ ಅಗ್ರಹಾರಕ್ಕೆ ಸೇರಿದ ಕನ್ನಮಂಗಲ, ಯಲ್ಲೆಹೊಸಹಳ್ಳಿ, ಮಂಗಾಪಟ್ಟಣ, ಗೊಲ್ಲಹಳ್ಳಿ, ಚಾಮನಹಳ್ಳಿಯ ಭೂಮಿಯನ್ನು ಅಗ್ರಹಾರದ ಮಹಾಜನರಿಗೆ ಹನ್ನೆರಡು ವೃತ್ತಿಯಾಗಿ ಮಾಡಿ ದಾನ ಮಾಡಿದ ವಿವರವಿದೆ. ಈ ಹೆಸರಿನ ಅಗ್ರಹಾರ ಪ್ರಸ್ತುತದಲ್ಲಿ ಅಸ್ತಿತ್ವದಲ್ಲಿಲ್ಲ. ಬಹುಶಃ ಈ ಪ್ರದೇಶದಲ್ಲಿ ಕಣ್ವ ನದಿಗೆ ಜಲಾಶಯ ನಿರ್ಮಿಸಿದ ಸಂದರ್ಭದಲ್ಲಿ ಮುಳುಗಡೆಯಾಗಿರಬಹುದು.

ಹೀಗೆ ಚನ್ನಪಟ್ಟಣ ತಾಲ್ಲೂಕಿನ ಶಾಸನಗಳಲ್ಲಿ ಉಲ್ಲೇಖಗೊಂಡಿರುವ ಪ್ರಾಚೀನ ಕಾಲದಲ್ಲಿದ್ದ ಅಗ್ರಹಾರಗಳು/ಚತುರ್ವೇದಿ ಮಂಗಲಗಳು ಹಾಗೂ ಅಲ್ಲಿ ನೆಲೆಗೊಂಡಿದ್ದ ಮಹಾಜನರ ಕಾರ್ಯವೈಖರಿ, ಸ್ಥಾನಮಾನಗಳನ್ನು ಹಾಗೂ ಈ ಅಗ್ರಹಾರಗಳಲ್ಲಿ ನೆಲೆಸಿದ್ದ ಇತರೆ ಜನಾಂಗದವರನ್ನು ಗುರುತಿಸಬಹುದು.

ಅಡಿ ಟಿಪ್ಪಣಿಗಳು

೧. ಬಿ.ಎಲ್. ರೈಸ್ (ಸಂ): EC IX, ಚನ್ನಪಟ್ಟಣ–೧೨೮, ಮಳೂರುಪಟ್ಣ, ಪು. ೧೫೯.
೨. ಅದೇ., ೧೩೨, ಮಳೂರುಪಟ್ಣ, ಪು. ೧೬೧.
೩. ಅದೇ., ೮೮ಎ, ಮಳೂರು, ಪು. ೧೫೧.
೪. ಅದೇ., ೧೨೮, ಮಳೂರುಪಟ್ಣ, ಪು. ೧೫೯.
೫. ಅದೇ., ಪು. ೧೫೯.
೬ ಅದೇ., ೪೨, ಹೊಂಗನೂರು, ಪು. ೧೪೧.
೭. ಅದೇ., ೧೩೯, ಮಳೂರುಪಟ್ಣ, ಪು. ೧೬೨.
೮. ಅದೇ., ೮೪, ಮಳೂರು, ಪು. ೧೫೦.
೯. ಅದೇ., ೧೨೯, ಮಳೂರುಪಟ್ಣ, ಪು. ೧೫೯.
೧೦. ಅದೇ., ೮೯, ಮಳೂರು, ಪು. ೧೫೩.
೧೧. ಅದೇ., ೧೨೮, ಮಳೂರುಪಟ್ಣ, ಪು. ೧೫೯.
೧೨. ಅದೇ., ೮೪, ಮಳೂರು, ಪು. ೧೫೦.
೧೩. ಅದೇ., ೮೨, ಮಳೂರು, ಪು. ೧೪೮.
೧೪. ಅದೇ., ೯೫, ಮಳೂರು, ಪು. ೧೫೪.
೧೫. ಅದೇ., ೧೫೪, ಅಬ್ಬೂರು, ಪು. ೧೬೫.
೧೬. ಅದೇ., ೭೭, ಮಳೂರು, ಪು. ೧೪೭.
೧೭. ಅದೇ., ೩೮, ೭೮, ೮೦, ೮೧, ೮೮ಎ, ಮಳೂರು, ಪು. ೧೪೦, ೧೪೮, ೧೫೧.

೧೮. ಅದೇ., ೭೬, ಮಳೂರು, ಪು. ೩೨೬.

೧೯. ಅದೇ., ೯೮, ಮಳೂರು, ಪು. ೩೨೮.

೨೦. ಅದೇ., ೧೩೦, ಮಳೂರುಪಟ್ಣ, ಪು. ೧೬೦.

೨೧. ಅದೇ., ೪೨ಎ, ಹೊಂಗನೂರು, ಪು. ೧೪೧.

೨೨. ಅದೇ., ೧೨೭, ಮಳೂರುಪಟ್ಣ, ಪು. ೧೫೯.

೨೩. ಅದೇ., ೪೨, ಹೊಂಗನೂರು, ಪು. ೧೪೧.

೨೪. ಅದೇ., ೧೩೨, ಮಳೂರುಪಟ್ಣ, ಪು. ೧೬೧.

೨೫. ಅದೇ., ೧೨೯, ಮಳೂರುಪಟ್ಣ, ಪು. ೧೫೯.

೨೬. ಅದೇ., ೧೩೩, ಮಳೂರುಪಟ್ಣ, ಪು. ೧೬೧.

೨೭. ಅದೇ., ೧೧೧, ೧೧೨, ೧೧೫, ೧೧೬, ೧೨೦, ಕೂಡ್ಲೂರು, ಪು. ೧೫೬–೧೫೮.

೨೮. ಅದೇ., ೧೫೭, ಸಂಕಲಗೆರೆ, ಪು. ೧೬೫.

೨೯. ಅದೇ., ೧೫೫, ಚಕ್ಕೆರೆ, ಪು. ೩೪೧.

೩೦. ಅದೇ., ೫೪, ಕೋಡಂಬಳ್ಳಿ, ಪು. ೧೪೩.

೩೧. ಎಂ.ಎ.ಆರ್–೧೯೪೨, ಶಾಸನ ಸಂಖ್ಯೆ–೨೬, ಪು. ೧೨.

೩೨. ಬಿ.ಎಲ್. ರೈಸ್ (ಸಂ): EC IX, ಚನ್ನಪಟ್ಟಣ–೧೭೧, ಕನ್ನಮಂಗಲ, ಪು. ೩೪೬.

೩೩. ಅದೇ., ೧೫೩, ಅಬ್ಬೂರು, ಪು. ೩೩೭.

೩೪. ಅದೇ., ೧೮೬, ಮಳೂರು, ಪು. ೩೫೧.

೩೫. ಅದೇ., ೫೬, ಗರಕಹಳ್ಳಿ, ಪು. ೩೧೮.

೩೬. ಅದೇ., ೧೭೧, ಕನ್ನಮಂಗಲ, ಪು. ೩೪೬.

ಲಕ್ಷ್ಮೇಶ್ವರದ ಶಾಸನಗಳಲ್ಲಿ ಸ್ಥಾನಪತಿಗಳು

ನಳಿನಿ ವೆಂಕಟೇಶ್*

ಲಕ್ಷ್ಮೇಶ್ವರದ ಸೋಮೇಶ್ವರ ದೇವಾಲಯದ ಸ್ಥಾನಪತಿಗಳಾದ ಮಹೇಂದ್ರಸೋಮ ಹಾಗೂ ಜ್ಞಾನಸೋಮ ಇವರ ಉಲ್ಲೇಖವಿರುವ ಹನ್ನೊಂದು ಶಾಸನಗಳನ್ನು (ಲಕ್ಷ್ಮೇಶ್ವರದ ಶಾಸನಗಳು, ಸಂ. ದೇವರಕೊಂಡಾರೆಡ್ಡಿ, ಗಣೇಶ್ ಇವರ ಪುಸಕ್ತದಿಂದ) ಈ ಪ್ರಬಂಧಕ್ಕಾಗಿ ಆರಿಸಿಕೊಂಡಿದ್ದೇನೆ.

ಸ್ಥಾನಪತಿಗಳ ಬಗೆಗೆ ಡಾ. ಎಂ. ಚಿದಾನಂದಮೂರ್ತಿಯವರು ಈ ರೀತಿ ಹೇಳಿದ್ದಾರೆ. "ಶಾಸನಗಳಲ್ಲಿ ಬರುವ 'ಸ್ಥಾನ', 'ನೈಷ್ಠಿಕಸ್ಥಾನ', 'ಸ್ಥಾನಪತಿ' ಎಂಬುವುದು ಒಂದು ರೀತಿಯಲ್ಲಿ ಪಾರಿಭಾಷಿಕ ಪದಗಳೆಂದು ಅಂಗೀಕರಿಸಬೇಕಾಗುತ್ತದೆ. ಶೈವ ಗುರುಗಳು ವಾಸವಾಗಿದ್ದ ದೇವಸ್ಥಾನಗಳು 'ಸ್ಥಾನ'ಗಳು. ಆ ದೇವಸ್ಥಾನದ ಆಗುಹೋಗುಗಳನ್ನು ನೋಡಿಕೊಳ್ಳುವ ಕರ್ತವ್ಯವನ್ನು ಹೊತ್ತಿರುವವರು 'ಸ್ಥಾನಪತಿ'ಗಳು ಅಥವಾ 'ಸ್ಥಾನಿಕ'ರು. ಒಬ್ಬರಿಗಿಂತ ಹೆಚ್ಚಾಗಿ ಗುರುಗಳಿದ್ದರೆ ಅವರಲ್ಲಿ ಹಿರಿಯನೇ ಸಾಮಾನ್ಯವಾಗಿ ಸ್ಥಾನಪತಿ ಎನ್ನಿಸಿಕೊಳ್ಳುತ್ತಿದ್ದನು."

ಮಹೇಂದ್ರಸೋಮಪಂಡಿತ

ಈತನ ಮೊದಲ ಉಲ್ಲೇಖ ಬರುವುದು ಕ್ರಿ.ಶ. ೧೧೦೨ರ ಶಾಸನದಲ್ಲಿ. ಮಾಧವಭಟರ್ ಎಂಬ ದಂಡನಾಯಕನು ಪುಲಿಗೆರೆಯ ಸೋಮೇಶ್ವರ ದೇವಾಲಯದ ಸ್ಥಾನಪತಿಯಾದ ಮಹೇಂದ್ರಸೋಮನ ಕಾಲು ತೊಳೆದು ದೇವಾಲಯದ ಸೋಮೇಶ್ವರದೇವರ, ಮುದ್ದೇಶ್ವರ ದೇವರ ಅಂಗಭೋಗ ರಂಗಭೋಗಕ್ಕಾಗಿ ದಾನವನ್ನು ಕೊಟ್ಟ ವಿವರವಿದೆ.

ಮಹೇಂದ್ರಸೋಮನ ಪ್ರಶಸ್ತಿ ಕ್ರಿ.ಶ. ೧೧೦೭ರ ತಾಮ್ರಶಾಸನದಲ್ಲಿ ಉಲ್ಲೇಖವಾಗಿದೆ. ಈ ತಾಮ್ರಶಾಸನವು ಮೂರು ಕಾಲವಿಭಾಗಗಳಿಂದ ಕೂಡಿದೆ. ಇದರ ಮೊದಲ ಭಾಗದಲ್ಲಿ (ಶಾ.ಸಂ. ೪೧) ಮಹೇಂದ್ರಸೋಮನ ಪ್ರಸ್ತಾಪವಿದೆ. ಆತನ ವರ್ಣನೆ ಹೀಗಿದೆ. "ಸುವ್ರತನಿಳಯಂ ಸಕಳ ಮಹಾವ್ರತಿ ಸನ್ತಾನ ಕಲ್ಪಭೂಜಂ ದಶವರ್ಮ ವಜ್ರನಿಯುಕ್ತನೆಸೆದಂ ಪ್ರವಾಜ್ಯ ಮಹೇಂದ್ರಸೋಮಪಂಡಿತದೇವಂ" ಎಂದು ಶಾಸನ ಕವಿ ಹೊಗಳಿದ್ದಾನೆ.

ಇಂತಹ ಮಹೇಂದ್ರಸೋಮನು ಸೋಮನಾಥದೇವರ ಸ್ಥಾನಾಚಾರ್ಯನಾಗಿದ್ದು ಸುವ್ರತಿ, ಮಹಾವ್ರತಿಯಾಗಿದ್ದು, ಶಮದಮ ಯಮನಿಯಮ ನಿಷ್ಠಾ ಗರಿಷ್ಠನಾಗಿ, ಷಟ್ಕರ್ಮನಿರತನಾಗಿದ್ದನು. ಕ್ರಿ.ಶ. ೧೧೦೭ರಲ್ಲಿ ಮಹೇಂದ್ರಸೋಮನು ಸೋಮನಾಥ ದೇವರ 'ಚಂದನಾನುಲೇಪ ಸುಗನ್ಧ ಗಂಧವನ್ನೂ ಶೇಷಾಕ್ಷತೆಗಳನ್ನೂ ತೆಗೆದುಕೊಂಡು ಹಾನುಂಗಲ್ಲಿಗೆ ಹೋಗುತ್ತಾನೆ. ಕಾದಂಬ ಕಣ್ಠೀರವನಾದಮಹಾ ಮಂಡಲೇಶ್ವರ ತೈಲಹದೇವನನ್ನು ಭೇಟಿ ಮಾಡಿ, ಪ್ರಸಾದವನ್ನು ಕೊಟ್ಟು ಹರಸುತ್ತಾನೆ. ಹರ್ಷೋತ್ಕರ್ಷ ಚಿತ್ತನಾದ ತೈಲಹದೇವನು ಸೋಮನಾಥ ದೇವರ ಅಂಗಭೋಗಕ್ಕೆ "ನಮ್ಮ ನಾಡೊಳೊಂದೂರಂ ಕೊಡುವೆನೆಂದು ಶ್ರೀಕರಣ ಪ್ರಧಾನ ಸೇನಾಧಿಪ ಪುರಸ್ಸರವಾಗಿ ಪಾನುಂಗಲ್ಲು ಪಣಂ ಕುನ್ದವುರ ಮೂವತ್ತಱ ಬಳಿಯ ಬಾಡಂ ಕಲ್ಲವಣಮಂ" ಸರ್ವನಮಸ್ಯವಾಗಿ ಸರ್ವ ಬಾಧಾ ಪರಿಹಾರವಾಗಿ ಪಾರಮೇಶ್ವರ ದತ್ತಿಯಾಗಿ ತಾಮ್ರಶಾಸನ ಸಹಿತ ಮಹೇಂದ್ರಸೋಮ ಪಂಡಿತನ ಕಾಲು ತೊಳೆದು ಧಾರಾಪೂರ್ವಕವಾಗಿ ದಾನ ಕೊಟ್ಟನು. (ಶಾ. ಸಂಖ್ಯೆ-೪೧).

ಈ ಸಮಯದಲ್ಲಿ (ಅಂದರೆ ಕ್ರಿ.ಶ. ೧೧೬೭) ರಾಯಮುರಾರಿ ಸೋವಿದೇವನು ರಾಜ್ಯವಾಳುತ್ತಿದ್ದನು. ಈತನ ಪಿರಿಯರಸಿ ದಾರಲದೇವಿ ರಾಜ್ಯಭಾರ ಮಾಡುತ್ತಿದ್ದಳು. ಈಕೆಯ ದಂಡಾಧೀಶ ದೇಗ ಎಂಬುವವನು ಪುಲಿಗೆರೆ-೩೦೦ನ್ನು ಆಳುತ್ತಿದ್ದಾಗ ಒಂದು ದಿನ ಧರ್ಮಕಥಾ ಪ್ರಸಂಗವಾದಾಗ, ಇಂದ್ರಕೇಸೀ ದೇವರಸ, ಪುಲಿಗೆರೆಯ ಮಹಾಜನರು, ಪಂಚಮಠ ಸ್ಥಾನಪತಿಗಳು, ಮಹಾಗ್ರಹಾರಗಳ ಮಹಾಜನರು ಗ್ರಾಮಾನುಗ್ರಾಮಂಗಳ ಪ್ರಭುಗಾವುಂಡುಗಳು ಮುಖ್ಯವಾಗಿ ದಯಣ

* # ೧೫, 'ಮನಸ್ವಿನಿ', ಸ್ನೇಹ ಕಾಲೋನಿ, ಚಿಕ್ಕಲ್ಲಸಂದ್ರ, ಬೆಂಗಳೂರು-೫೬೦೦೬೧, ಮೊ. ೯೯೪೫೫ ೬೦೧೯೪

ದಂಡನಾಯಕ ಎಲ್ಲರೂ ಸೇರಿ ಪಂಚಪರ್ವಗಳಲ್ಲಿ ಮಾಡುವ ದೇವರ ಅಂಗಭೋಗ-ರಂಗಭೋಗಗಳಿಗೆ ಮಹೇಂದ್ರಸೋಮನ ಕಾಲು ತೊಳೆದು ದಾನ ಕೊಟ್ಟರು. ಕ್ರಿ.ಶ. ೧೧೭೬ರ ಕಾಲಕ್ಕೆ ಸೋಮೇಶ್ವರ ದೇವಾಲಯದಲ್ಲಿ ಪಂಚಮಠಗಳು ಇದ್ದು, ಐದು ಜನ ಸ್ಥಾನಪತಿಗಳೂ ಇದ್ದರೆಂದು ಶಾಸನದಿಂದ ತಿಳಿಯುತ್ತದೆ. ಆದರೆ ಅವರ ಹೆಸರುಗಳ ಉಲ್ಲೇಖವಿಲ್ಲ. ೧೧೦೨-೧೧೭೬ರ ಕಾಲಾವಧಿಯಲ್ಲಿ ಸೋಮೇಶ್ವರ ದೇವಾಲಯವು ಚೆನ್ನಾಗಿ ಅಭಿವೃದ್ಧಿಯಾಗಿದ್ದಿತೆಂದು ಊಹಿಸಬಹುದು. ಕ್ರಿ.ಶ. ೧೧೩೮ರ ಶಾಸನದಲ್ಲಿಯೇ ಪಂಚಮಠದ ಪ್ರಸ್ತಾಪವಿದೆ.

ಜ್ಞಾನಸೋಮ ಪಂಡಿತ

ಕ್ರಿ.ಶ. ೧೧೪೭ರ ಶಾಸನದಲ್ಲಿ ಉಲ್ಲೇಖವಿರುವಂತೆ (ಶಾ.ಸಂ. ೧) ಸೋಮೇಶ್ವರ ದೇವಾಲಯದ ಸ್ಥಾನಪತಿಗಳ ಸ್ಥಾನಾಚಾರ್ಯ ಕ್ರಮ ಹೇಗೆಂದರೆ "ಕ್ಷಿತಿ ಪೂಜ್ಯದೇವ ಸೋಮವ್ರತಿ ಮಹಾವ್ರತಿ ಕುಳೋದ್ಭವಂ ಸಕಳ ಗುಣೋನ್ನತನಾ ಮಹೇಂದ್ರ ಸೋಮವ್ರತಿಯ ಸುತಂ ಜ್ಞಾನಸೋಮ ಪಂಡಿತದೇವಂ" ಹೀಗೆ ಮೂರು ತಲೆಮಾರಿನ ಒಂದು ಸಂಸಾರ ಚಿತ್ರವಿದೆ.

ಸಕಲ ಗುಣೋನ್ನತನಾದ ಜ್ಞಾನಸೋಮ ಪಂಡಿತದೇವನ ವರ್ಣನೆ ಇಂತಿದೆ.

ಮದನಂ ತಾಳ್ದಿರ್ದನೋ ರಾಜಿತ ವಿಪುಲ ಜಟಾಜಾಲಮಂ ಕಲ್ಪಭೂಜಂ
ಪಡೆಪಿಂದಂ ತಾಪಸಾಕಾರದೆ ಪುರಿಕರ ಸೋಮೇಶ್ವರ ಸ್ಥಾನದೊಳ್ ಸಂ
ಪದದಿಂದಂ ಸ್ಥಾಯಿಯಾಗಿದ್ದುದೊ ಜಲನಿಧಿ ಗಂಭೀರಮಂ ಯೋಗಿರೂಪಿಂ
ದಿದೆ ತಾಳ್ದಿರ್ದಪ್ಪುದೆಂಬಂತೆಸೆದನನುಪಮಂ ಜ್ಞಾನಸೋಮ ವ್ರತೀಂದ್ರಂ (ಶಾ.ಸಂ. ೧)

ರೂಪಿನಲ್ಲಿ ಮನ್ಮಥನಂತಿದ್ದವನು. ತಪಸ್ವಿಯಂತಿದ್ದು ಸುಂದರ ಜಟೆಯನ್ನು ಹೊಂದಿದ್ದವನು. ಕಲ್ಪತರುವಿನಂತಿದ್ದವನು. ಸಾಗರದ ಗಾಂಭೀರ್ಯ ಹೊಂದಿದ್ದವನು. ಯೋಗಿಯಂತಿದ್ದ ಜ್ಞಾನಸೋಮನು ಆ ಸೋಮೇಶ್ವರ ದೇವಾಲಯದಲ್ಲಿ ಸ್ಥಾಯಿಯಾಗಿದ್ದು ಅನುಪಮನಾಗಿದ್ದನು.

ಆ ಮಹಾವ್ರತಿಯಾದ ಜ್ಞಾನಸೋಮನ ಪುತ್ರಸಂತತಿ ಕ್ರಮವು ಉತ್ತರೋತ್ತರವಾಗಿ ಅಭಿವೃದ್ಧಿ ಹೊಂದಿತ್ತು. ಆದರೆ ಅದರಲ್ಲಿ ಮಕ್ಕಳ ಹೆಸರಿಲ್ಲ.

ದಾನಂ ಕಳ್ಪಮಹೀರಾಜಿಗೆ ಸಮಾನಂ ಕೀರ್ತಿ ಲೋಕತ್ರಯಾ
ಧೀನಂ ಮಿಕ್ಕ ಪರೋಪಕಾರನಿಕರಂ ಶಿಷ್ಯೇಷ್ಟತುಷ್ಟಿಪ್ರದಂ
ಜ್ಞಾನಂ ಸದ್ಬುಧಸಂತತಿ ಸ್ತುತಿಕರಂ ತಾನಾದುದೇಂ ಧನ್ಯನೋ
ಸ್ಥಾನಾಚಾರ್ಯ್ಯ ವರೇಣ್ಯನ ಪ್ರತಿಮಪುಣ್ಯಂ ಜ್ಞಾನಸೋಮಾಹ್ವಯಂ (ಶಾ.ಸಂ. ೧೨)

"ದಾನ ಮಾಡುವಾಗ ಕಲ್ಪವೃಕ್ಷಕ್ಕೆ ಸಮಾನ, ಮೂರು ಲೋಕಗಳಲ್ಲಿಯೂ ಹರಡಿರುವ ಕೀರ್ತಿ, ಶಿಷ್ಯರನ್ನು ತೃಪ್ತಿಪಡಿಸುವ ಪರೋಪಕಾರಗಳು, ಒಳ್ಳೆಯ ವಿದ್ವಾಂಸರ ಸಮೂಹಗಳೇ ಹೊಗಳುವಂತಹ ಜ್ಞಾನ ಇಂತಹ ಸ್ಥಾನಾಚಾರ್ಯ್ಯನಾದ ಜ್ಞಾನಸೋಮನು ಅಪ್ರತಿಮ ಪುಣ್ಯಪ್ರದನು" ಎಂದು ಹೊಗಳಲ್ಪಟ್ಟಿದ್ದಾನೆ.

(ಶಾ.ಸಂ. ೪೧) ಈ ಶಾಸನದ ಕಾಲ ಕ್ರಿ.ಶ. ೧೧೦೭ರ ತಾಮ್ರಶಾಶನ. ಮೊದಲೇ ಹೇಳಿದಂತೆ ಇದರಲ್ಲಿ ಮೂರು ಕಾಲವಿಭಾಗಗಳಿವೆ. ಮೂರನೆಯ ಭಾಗದಲ್ಲಿ ಅಂದರೆ ಕ್ರಿ.ಶ. ೧೧೫೩ರಲ್ಲಿ ಶ್ರೀ ಮನ್ಮಹಾಮಂಡಲೇಶ್ವರ ಮಾಹುಲಿ ತೈಲಹ ದೇವನು ಆಳುತ್ತಿದ್ದನು. ಆತನು ತನ್ನ ಅಜ್ಜನಾದ ಪಿರಿಯ ತೈಲಹದೇವನು ಕಲ್ಲವಣ ಗ್ರಾಮವನ್ನು ಮಹೇಂದ್ರ ಸೋಮನಿಗೆ ದತ್ತಿಯಾಗಿ ಕೊಟ್ಟಿದ್ದನು. ಅದನ್ನು ಮಾಹುಲಿ ತೈಲಹದೇವನು ಆಗ ಸ್ಥಾನಪತಿಯಾಗಿದ್ದ ಮತ್ತು ಮಹೇಂದ್ರ ಸೋಮ ಪಂಡಿತನ ಮಗನೂ ಆಗಿದ್ದ ಜ್ಞಾನಸೋಮಪಂಡಿತನಿಗೆ 'ಕಾಲಂಕರ್ಚ್ಚಿ' ಮತ್ತೆ 'ಕಲ್ಲವಣ'ವನ್ನು ದಾನ ನೀಡುತ್ತಾನೆ. ಕೇವಲ ೪೬ ವರ್ಷಗಳಲ್ಲಿ ಸರ್ವಸಮಸ್ಯವಾಗಿ ಪುನರ್ದತ್ತಿ ನೀಡಬೇಕಾದ ಕಾರಣವನ್ನು ಹೇಳಿಲ್ಲ.

ಈ ಶಾಸನದಲ್ಲಿ ಜ್ಞಾನಸೋಮನ ತಂದೆ ತಾಯಿಯರ ಪ್ರಸ್ತಾಪವೂ ಇದೆ. ಸಜ್ಜನ ಜನಕನಾದ ಮಹೇಂದ್ರಸೋಮ, ಜನವಿನುತ ಚಾರಿತ್ರ್ಯೆಯಾದ ವಿನಯಾಳಂಕಾರೆಯಾದ ಮಾಳಿಯಕ್ಕನು ತಾಯಿಯೆಂದ, ಗುಣಗಣವಾರಾಶಿಯಾದ ಜ್ಞಾನಸೋಮನು ಮಗನೆಂದು ಈ ಶಾಸನದಲ್ಲಿ ಹೇಳಿದೆ.

ಲಕ್ಷ್ಮೇಶ್ವರದ ಶಾಸನಗಳಲ್ಲಿಯೇ ವಿಶಿಷ್ಟವಾದುದು ಗೌರಲೆಯ ಶಾಸನ. (ಶಾ.ಸಂ. ೩೮) ಇಲ್ಲಿ ಮಹೇಂದ್ರಸೋಮನ ಇಡೀ ಸಂಸಾರದ ಪರಿಚಯವಿದೆ. ಗೌರಲೆಯು ಒಬ್ಬ ವಾರವಧು. (ಶಾ.ಸಂ. ೩೮) ಇದೊಂದು ಚಿಕ್ಕ ಶಾಸನ. ಗೌರಲೆಯ

ತಂದೆ ಮಹೇಂದ್ರಸೋಮ ತಾಯಿ ಪತಿಜನವಿಖ್ಯಾತೆ ಮಾಳೌವೆ. ಅಣ್ಣ "ಯೋಗೀಂದ್ರನುತಂ ಶ್ರೀ ಸೋಮದೇವ ಕ್ರಮಯುಗಕಮಳಾರಾಧಕಂ" ಜ್ಞಾನಸೋಮ ಎಂದು ಅಭಿಮಾನಪೂರ್ವಕ ಹೇಳಿಕೊಳ್ಳುತ್ತಾಳೆ. ತಂದೆ, ಅಣ್ಣನಂತೆ ಗೌರಲೆಯೂ ವಿಶಿಷ್ಟ ವ್ಯಕ್ತಿತ್ವವುಳ್ಳವಳು. ವಾರವಧುವಾದ ಗೌರಲೆಯು ಸೋಮನಾಥ ದೇವಾಲಯದ ಸಮೀಪದಲ್ಲಿ ಉದಕದಾನವೇ ಶ್ರೇಷ್ಠವೆಂದು ತಿಳಿದು ಒಂದು ಸುಂದರವಾದ ಭಾವಿಯನ್ನು ಕಟ್ಟಿಸಿದಳು.

ಕೆಳಗೆ ಇಳಿಯುವುದಕ್ಕೆ ಪಾವಟಿಕೆಗಳಿವೆ. ಅದರಲ್ಲಿ ೫-೬ ಮೆಟ್ಟಲುಗಳನ್ನು ಇಳಿದರೆ, ಅದರ ಎಡಪಕ್ಕದಲ್ಲಿ ಕೋಣೆಯೊಂದಿದೆ. ಅಲ್ಲಿಯೇ ಈ ಶಾಸನವಿದ್ದು, ಗೌರಲೆಯೂ ಅಲ್ಲಿಯೇ ಇರುತ್ತಿರಬೇಕು. "ಇಟ್ಟಿಗೆ, ಕಲ್ಲು, ಮರಗಳಿಂದ ಕೂಡಿದ ವಸ್ತುಗಳನ್ನು ಕೊಡುವ ಬದಲು ಉದಕದಾನವೇ ಶ್ರೇಷ್ಠವೆಂದು ಭಾವಿಯನ್ನು ಕಟ್ಟಿಸಿದಳಂತೆ. ಇದಕ್ಕೆ ಕರ್ಪೂರದ ಕರಂಡಿಗೆಯೋ ಎನ್ನುವಂತಿದ್ದ ವಜ್ರದ ಹರಳುಗಳಂತಿದ್ದ ಮೆಟ್ಟಿಲುಗಳನ್ನು ಕಟ್ಟಿಸಿದ ಗೌರಲೆಯು ಎಷ್ಟು ಪುಣ್ಯವಂತಳೋ" ಎಂದು ಕವಿ ಉದ್ಗಾರ ತೆಗೆಯುತ್ತಾನೆ.

ಅಷ್ಟೇ ಅಲ್ಲದೆ ಗೌರಲೆಯು 'ಚಾರು ವಿಚಿತ್ರ ನರ್ತನ' ಮಾಡುತ್ತಿದ್ದು, ಅವಳಿಗೆ ಸರಿಸಾಟಿ ಯಾರೂ ಇರಲಿಲ್ಲ. ಮೈಲಾರದ ಬಾಚ, ಚಕ್ರಗೊಟ್ಟದ ಕಾಮ, 'ಊರ್ವಸಿ ನಿಭಾಕಾರೆಯೆನಿಪ್ಪ ಕನ್ದರನ ಮಲ್ಲವ್ವೆ, 'ತ್ರಿಪುರಾಂತಿಕಂ ಘೃಪಂಕೇರುಹ ಸೇವನಾ ಚತುರೆ' ಚಟ್ಟವ್ವೆಯರು ಹೆಸರಾಂತ ನೃತ್ಯಗಾರರು ಸಹ ಗೌರಲೆಗೆ ಸರಿಸಾಟಿಯಾಗಿರಲಿಲ್ಲ. ಈ ಶಾಸನದಿಂದಾಗಿ ಗೌರಲೆಯಲ್ಲದೆ ಆ ಕಾಲದಲ್ಲಿದ್ದ ನಾಲ್ಕು ಜನ ಪ್ರಸಿದ್ಧರಾದ ನರ್ತಕ-ನರ್ತಕಿಯರ ಮಾಹಿತಿ ಸಿಕ್ಕುತ್ತದೆ.

ಅಷ್ಟೇ ಅಲ್ಲದೆ ನಮಗೆ "ಒಳ್ಳೆಯದಾಗಬೇಕಾದರೆ ಗಿರಿಜೆಯನ್ನು ಅರ್ಚಿಸುವ, ಆದರಿಸುವ, ಪೂಜಿಸುವ ಅವಶ್ಯಕತೆಯೇ ಇಲ್ಲ. ನಾನು ದೇಶದ ಹೆಣ್ಣುಮಕ್ಕಳಿಗೆಲ್ಲ ಉಪದೇಶಿಸುತ್ತೇನೆ. ನಂಬುವುದಾದರೆ ಸ್ತ್ರೀಯರಲ್ಲಿಯೇ ಮನೋಹರಿಯಾಗಿದ್ದ ವಾರವಧು ಮಣ್ಡನೆ ಗೌರಿಯ ಪಾದಪದ್ಮಗಳನ್ನು ಅನುರಾಗದಿಂದ ನೋಡಿದರೆ ನಿಮಗೆ ಒಳ್ಳೆಯದಾಗುತ್ತದೆ" ಎಂದು ಶಾಸನಕವಿ ಗೌರವಪೂರ್ವಕವಾಗಿ ಉದ್ಗರಿಸಿದ್ದಾನೆ.

ವಾರವಧು ಗೌರಲೆಯನ್ನು ಕುರಿತು ಪರಮಶಿವಮೂರ್ತಿಯವರು ಈ ರೀತಿ ಅಭಿಪ್ರಾಯಪಡುತ್ತಾರೆ. "ಅನಂತ ದಂಡಾಧೀಶನು ಕ್ರಿ.ಶ. ೧೧೧೨ರಲ್ಲಿ ಸೋಮೇಶ್ವರ ಗುಡಿಯ ಮುಂದೆ ಸೂಳೆಗೇರಿಯನ್ನು ನಿರ್ಮಿಸಿದನು......ಅಲ್ಲಿ ಬಂದು ನೆಲಸಿರಬಹುದಾದ ಮಾಳವ್ವೆಯು ಅಲ್ಲಿ ಆಚಾರ್ಯನಾಗಿದ್ದ ಮಹೇಂದ್ರಸೋಮ ಪಂಡಿತನನ್ನು ಮೋಹಿಸಿ ಮದುವೆಯಾಗಿರಬೇಕೆಂದು ತೋರುತ್ತದೆ. ಇವರಿಬ್ಬರಿಗೂ ಜನಿಸಿದವಳು ಗೌರಲೆ......ಈಕೆ ತನ್ನ ತಾಯಿಯ ಕುಲಕಸುಬಾದ ವೇಶ್ಯಾವೃತ್ತಿಯನ್ನೇ ಮುಂದುವರಿಸಿರಬೇಕು. ಇವಳ ಅಣ್ಣ ಜ್ಞಾನಸೋಮನು ಮಹೇಂದ್ರಸೋಮ ಪಂಡಿತನ ನಿಜ ಪತ್ನಿಯ ಮಗನಾಗಿದ್ದು ತನ್ನ ತಂದೆಯ ಕುಲಕಸುಬನ್ನು ಮುಂದುವರಿಸಿರಬೇಕು" ಎಂದು ಹೇಳುತ್ತಾರೆ. (ಇತಿಹಾಸ ದರ್ಶನ, ಸಂ. ೨೧, ಪು. ೮೫).

ಅವರ ಈ ಅಭಿಪ್ರಾಯ ಸರಿಯಲ್ಲವೆಂದು ಹೇಳಬಹುದು. ಏಕೆಂದರೆ ಗೌರಲೆ ಹಾಗೂ ಜ್ಞಾನಸೋಮರು ಏಕೋದರರೇ ಎಂದು ೪೧ನೆಯ ಶಾಸನ ಹೇಳುತ್ತದೆ. ಗೌರಲೆಯ ಶಾಸನದಲ್ಲಿ ಪತಿಜನಖ್ಯಾತೆ ಮಾಳೌವೆ' ಎಂದಿದ್ದರೆ ೪೧ನೆಯ ಶಾಸನದಲ್ಲಿ 'ಜನವಿನುತ ಚಾರಿತ್ರೆ ಮಾಳಿಯಕ್ಕ' ಎಂದಿದೆ. (ಇಲ್ಲಿ ಗೌರಲೆಯ ಪ್ರಸ್ತಾಪ ಇಲ್ಲ). ಎರಡು ಶಾಸನಗಳಲ್ಲಿಯೂ ತಾಯಿಯ ಹೆಸರು ಒಂದೇ ಇದೆ.

ಗೌರಲೆಯ ಶಾಸನದ ಕಾಲದ ಬಗ್ಗೆ ಹೇಳಬೇಕೆಂದರೆ 'ಲಕ್ಷ್ಮೇಶ್ವರದ ಶಾಸನಗಳು' ಗ್ರಂಥದ ಸಂಪಾದಕರು ಕ್ರಿ.ಶ. ೧೧೫೦ ಎಂದು ಹೇಳಿದ್ದಾರೆ. ಪರಮಶಿವಮೂರ್ತಿಯವರು ಅವರ ಲೇಖನದಲ್ಲಿ ೧೧೫೦ ಎಂದು ನಿರ್ಧರಿಸಬಹುದು ಎಂದಿದ್ದಾರೆ. (ಇತಿಹಾಸ ದರ್ಶನ, ೨೧, ಪು. ೮೪). ಅವರೇ, ಭಾವಿಗಾಗಿ ೧೧೪೭ರ ಶಾಸನದಲ್ಲಿ ೬ ಮತ್ತರು ದಾನ ನೀಡಿದ ವಿಷಯವಿದೆ ಎಂಬುದನ್ನು ಗುರುತಿಸಿದ್ದಾರೆ. ಈ ಲೇಖನದಲ್ಲಿ ಮುದ್ರಿತವಾಗಿರುವ ಚಿತ್ರದ ಮೇಲೆ ಕ್ರಿ.ಶ. ೧೧೪೫ ಎಂದಿದೆ. 'ನಿರ್ಮಲ ಗುಣಯುಕ್ತೆ ಗೌರಲೆ'ಯ ಭಾವಿಯ ನಿರ್ಮಾಣ ೧೧೪೫ರ ಹೊತ್ತಿಗೆ ರಚನೆಯಾಗಿ, ಈ ಶಾಸನದ ಕಾಲವು ೧೧೪೫ ಎಂದೇ ನಿರ್ಧರಿಸಬಹುದು.

ತಂದೆ ಮಹೇಂದ್ರ ಸೋಮನಿಗಿಂತ, ಅಣ್ಣ ಜ್ಞಾನಸೋಮನ ವರ್ಣನೆಗಿಂತ ವಾರವಧುವಾದ ಗೌರಲೆಯ ವರ್ಣನೆ ಮತ್ತು ವ್ಯಕ್ತಿತ್ವ ಒಂದು ಕೈ ಮೇಲಾಗಿದೆ.

ಮಧ್ಯಕಾಲೀನ ಶೈವಕೇಂದ್ರ ಗುಮ್ಮಳಾಪುರ

ಸ್ಮಿತಾರೆಡ್ಡಿ ಡಿ.✷

ಗುಮ್ಮಳಾಪುರವು ರಾಜಧಾನಿಯಾದ ಬೆಂಗಳೂರು ನಗರದಿಂದ ಸುಮಾರು ೫೦ ಕಿ.ಮೀ.ಗಳ ಅಂತರದಲ್ಲಿರುವ ತಮಿಳುನಾಡಿನ ಒಂದು ಗ್ರಾಮ. ರಾಜ್ಯಗಳ ಪುನಾರಚನೆಯ ಸಂದರ್ಭದಲ್ಲಿ ಭೌಗೋಳಿಕವಾಗಿ ತಮಿಳುನಾಡು ರಾಜ್ಯಕ್ಕೆ ಸೇರಿದ್ದರೂ, ಭಾವನಾತ್ಮಕವಾಗಿ ಮತ್ತು ಸಾಂಸ್ಕೃತಿಕವಾಗಿ ಕರ್ನಾಟಕದೊಂದಿಗೆ ಬೆಸೆದುಕೊಂಡಿರುವ ಅಚ್ಚಗನ್ನಡ ಪ್ರದೇಶ. ಹನ್ನೆರಡನೆಯ ಶತಮಾನಾನಂತರ ಕಲ್ಯಾಣದಿಂದ ಚದುರಿ ಬಂದ ವೀರಶೈವ ಶರಣರು ಮತ್ತು ವಚನ ಪರಂಪರೆಗೆ ತಾವು ನೀಡಿದ ನೆಲೆ.

ಗುಮ್ಮಳಾಪುರ ಪ್ರದೇಶವೂ ಒಳಗೊಂಡಂತೆ ಅದಕ್ಕೆ ಹೊಂದಿಕೊಂಡಿರುವ ದೇವರಬೆಟ್ಟ, ಕಾಳನಾಯಕನಹಳ್ಳಿ, ಸೋಲೂರು, ಮೇಲೂರು, ತಮಾಪುರ ಮುಂತಾದ ಹತ್ತಕ್ಕೂ ಹೆಚ್ಚಿನ ಗ್ರಾಮಗಳಲ್ಲಿ ಬೃಹತ್ ಶಿಲಾಯುಗದ ಅಸಂಖ್ಯ ನೆಲೆಗಳು ವಿಸ್ತರಿಸಿವೆ. ವ್ಯವಸ್ಥಿತ ಅಧ್ಯಯನ ನಡೆದಲ್ಲಿ ಬಹುಶಃ ಈ ಬೃಹತ್ ಶಿಲಾಯುಗ ನೆಲೆಯು ಕರ್ನಾಟಕದ ದಕ್ಷಿಣ ಭಾಗದಲ್ಲೇ ಅತ್ಯಂತ ಹೆಚ್ಚು ವ್ಯಾಪಕವೂ ಮತ್ತು ವಿಸ್ತಾರವೂ ಆದ ಬೃಹತ್ ಶಿಲಾಯುಗ ನೆಲೆಯಾಗುವುದರಲ್ಲಿ ಯಾವುದೇ ಸಂಶಯವಿಲ್ಲ. ಇಲ್ಲಿ ಕಬ್ಬಿಣದ ಕೈಕೊಡಲಿ, ಮೃತ್ಪಾತ್ರೆಗಳಲ್ಲದೆ, ದಕ್ಷಿಣ ಭಾರತದಲ್ಲಿಯೇ ಅತ್ಯಪರೂಪವಾಗಿ ದೊರೆಯುವ ಎರಡು ಸುಟ್ಟ ಮಣ್ಣಿನ ಗೊಂಬೆಗಳು ಸಹ ದೊರೆತಿರುವುದು ವಿಶೇಷ.[೧]

ಈ ಪ್ರದೇಶದ ಆರಂಭಿಕ ಐತಿಹಾಸಿಕ ಕಾಲಘಟ್ಟದ ಬಗ್ಗೆ ಬೆಳಕು ಚೆಲ್ಲಲು ಹೆಚ್ಚಿನ ಆಧಾರಗಳು ಲಭ್ಯವಿಲ್ಲ. ಈ ಪ್ರದೇಶದಲ್ಲಿ ದೊರೆತಿರುವ ಅತ್ಯಂತ ಹೆಚ್ಚು ಪ್ರಾಚೀನ ಶಾಸನವೆಂದರೆ, ವೀರಬಲ್ಲಾಳನ ತಮಿಳು ಶಾಸನ. ಇದು ಗುಮ್ಮಳಾಪುರ ಗ್ರಾಮದಿಂದ ಸು.೫ ಕಿ.ಮೀ. ದೂರದಲ್ಲಿರುವ ದಾರಾವಂದ ಎಂಬ ಊರಿನಲ್ಲಿರುವ ಅಪ್ರಕಟಿತ ಶಾಸನವಾಗಿದೆ[೨] ಅನಂತರ ಇಮ್ಮಡಿ ಹರಿಹರನ ಕಾಲದಿಂದ ಗುಮ್ಮಳಾಪುರದಲ್ಲಿ ಶಾಸನಗಳು ಲಭ್ಯವಾಗುತ್ತವೆ.

ಹದಿನೈದನೆಯ ಶತಮಾನದ ಆರಂಭ ಕಾಲದಿಂದಲೂ ಗುಮ್ಮಳಾಪುರವು ದಕ್ಷಿಣ ಕರ್ನಾಟಕದ ಪ್ರಖ್ಯಾತ ವೀರಶೈವ ಕೇಂದ್ರವಾಗಿ ಹೊರಹೊಮ್ಮಲಾರಂಭಿಸಿತು. ಶಾಸನ, ಸಾಹಿತ್ಯ, ಕೃತಿಗಳು ಗುಮ್ಮಳಾಪುರದಲ್ಲಿದ್ದ ಹಲವಾರು ವೀರಶೈವ ಕವಿಗಳನ್ನು, ಯತಿಗಳನ್ನು, ಗುರುಗಳನ್ನು ಉಲ್ಲೇಖಿಸುತ್ತದೆ. ಸ್ಥಳೀಯ ಐತಿಹ್ಯದ ಪ್ರಕಾರ ಕಲ್ಯಾಣದಲ್ಲಿ ಆಂತರಿಕ ಕ್ಷೋಭೆಗಳಿಂದಾಗಿ ಬಸವಣ್ಣ ಮರಣ ಹೊಂದಿದ ತರುವಾಯ ಶರಣರೆಲ್ಲ ಬೇರೆ ಬೇರೆ ಕಡೆ ಚದುರಿ ಉಳವಿ, ಹಂಪಿ, ಮೈಸೂರು, ಬಾಳೆಹೊನ್ನೂರು, ಶ್ರೀಶೈಲ, ಗುಮ್ಮಳಾಪುರ ಮುಂತಾದ ಕಡೆ ವಲಸೆ ಹೋಗಿ ನೆಲೆಗೊಳ್ಳುತ್ತಾರೆ. ಹಾಗೆ ಚದುರಿ ಹೋಗುವಾಗ ತಮ್ಮೊಂದಿಗೆ ಅಪಾರ ವಚನ ವಾಙ್ಮಯವನ್ನೂ ಹೊತ್ತೊಯ್ದು ತಂದರೆಂದು ಹೇಳಲಾಗುತ್ತದೆ. ಅಲ್ಲದೆ, ಇಲ್ಲಿ ೧೦೧ ಕೆರೆಗಳು, ಬಾವಿಗಳು, ಕುಂಟೆಗಳು ಹಾಗೂ ದೇವಾಲಯಗಳಿದ್ದವೆಂದು ಮತ್ತು ಗುಮ್ಮಳಾಪುರ ಮೂರು ಸಾರಿ ಕೈಲಾಸಕ್ಕೆ ಹೋಗಿ ಬಂದಿದೆಯೆಂಬ ಐತಿಹ್ಯದ ಹಿನ್ನೆಲೆಯಲ್ಲಿ ಈ ಗ್ರಾಮ ಹಿಂದೊಮ್ಮೆ ಪ್ರಖ್ಯಾತ ವೀರಶೈವ ಕೇಂದ್ರವಾಗಿತ್ತೆಂಬುದನ್ನು ಒತ್ತಿಹೇಳುತ್ತದೆ.

ಇಂತಹ ಐತಿಹ್ಯಗಳನ್ನು ಸಾಹಿತ್ಯ ಕೃತಿಗಳು ಸಹ ಪುಷ್ಟೀಕರಿಸುತ್ತವೆ. ಶಿವತತ್ತ್ವ ಚಿಂತಾಮಣಿಯ ಕರ್ತೃ ಲಕ್ಕಣ್ಣ ದಂಡೇಶ–"ಶಿವನ ಕೈಲಾಸ ಪರ್ವತ ಮನುಷ್ಯರೆಂದರೆ ಹೇಗಿರುತ್ತಾರೆ ಎಂಬುದನ್ನು ತಿಳಿದುಕೊಳ್ಳುವ ಕುತೂಹಲದಿಂದ ಭೂಲೋಕದಲ್ಲಿ ಪುನರವತಾರ ಎತ್ತಿತೆಂದು ಹಾಗೂ ಬಸವೇಶ್ವರನ ಕಲ್ಯಾಣ ನಗರ ಭೂಮಂಡಲಕ್ಕೆ ತಿಳಿಯುವಂತೆ ಉತ್ತರವ ಬಿಟ್ಟು ದಕ್ಷಿಣ ಭಾಗಕ್ಕೆ ಬಂದು ನೆಲೆಸಿತೆಂದು ಹೇಳುತ್ತಾನೆ. ಅಷ್ಟೇ ಅಲ್ಲದೆ, ಆ ಪುರದ ಸೀಮೆ ಪತ್ರೆ–ಪುಷ್ಪಗಳಿಂದ, ಆ ಪುರದ ಬಾಗಿಲುಗಳು ಲಿಂಗಮುದ್ರೆಗಳನ್ನು ಒಳಗೊಂಡಿದ್ದು ಆ ಊರು ಶಿವಸಮಯ ಪಟವರ್ಧನರ ನಿವಾಸವಾಗಿತ್ತೆಂದು" ಹೇಳುತ್ತಾನೆ.[೩]

✷ ಮುಖ್ಯ ಭಾಷಾಂತರಕಾರರು, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು. ಮೊ. ೯೪೪೯೫ ೨೨೪೬೩

ವಿರೂಪಾಕ್ಷ ಪಂಡಿತನ ಚೆನ್ನಬಸವ ಪುರಾಣದಲ್ಲೂ ಸಹ ಗುಮ್ಮಳಾಪುರವನ್ನು ಅಭಿನವ ಕಲ್ಯಾಣವೆಂದೇ ಹೆಸರಿಸಲಾಗಿದೆ. ಅವನು ಗುಮ್ಮಳಾಪುರ ನಗರ ನಿರ್ಮಾಣದ ಬಗ್ಗೆ ಮಾಹಿತಿ ನೀಡುತ್ತಾ ಕಲ್ಯಾಣ ನಾಶವಾದ ನಂತರ, ಅಲ್ಲಿ ತುರುಕರ ಉಪಟಳ ಹೆಚ್ಚಾದಾಗ ಗುಮ್ಮಣ್ಣ ಮತ್ತು ಪೆಮ್ಮಣ್ಣ ಎಂಬ ಸಹೋದರರು ದಕ್ಷಿಣದ ಕಡೆ ಬಂದು ಗುಮ್ಮಳಾಪುರ ಪಟ್ಟಣವನ್ನು ಕಟ್ಟಿ ಉದ್ಧರಿಸಿದರೆಂದು ಉಲ್ಲೇಖಿಸುತ್ತಾನೆ. ಈಗಾಗಲೇ ಅಲ್ಲಿದ್ದ ಗುಮ್ಮಹಾಳ ಗ್ರಾಮಕ್ಕೆ ಹೊಂದಿಕೊಂಡಂತೆ ಈ ಪುರವನ್ನು ನಿರ್ಮಿಸಿ, ಹೊಸದಾಗಿ ವಲಸೆ ಬಂದ ವೀರಶೈವ ಶರಣರಿಗೆ ಬಿಟ್ಟುಕೊಟ್ಟಿರುವ ಸಂಭಾವ್ಯತೆಯನ್ನು ಇವನ ವಿವರಣೆಯಿಂದ ಊಹಿಸಬಹುದು. ಇವನಲ್ಲದೆ, ಗುಬ್ಬಿಯ ಮಲ್ಲಣಾರ್ಯ, ರುದ್ರಕವಿ, ಸಿದ್ಧನಂಜೇಶ, ಬೊಮ್ಮರಸ ಮುಂತಾದ ಕವಿಗಳೂ ಸಹ ಗುಮ್ಮಳಾಪುರದ ಶಿವಲೀಲಾಮೃತವನ್ನು ಹಾಡಿ ಹೊಗಳಿದ್ದಾರೆ. 'ಬಸವೇಶ್ವರನ ಕಲ್ಯಾಣ ಉತ್ತರವ ಬಿಟ್ಟು ದಕ್ಷಿಣ ಭಾಗದಲ್ಲಿ ನೆಲೆಗೊಂಡಿತೆಂದು' ಹೇಳಿರುವ ಮಾತನ್ನು ವಾಚ್ಯಾರ್ಥದ ಹೊರತಾಗಿ ಅನ್ಯ ಧ್ವನಿಯಲ್ಲಿ ಗ್ರಹಿಸಿದರೆ, ಕಲ್ಯಾಣ ಕ್ರಾಂತಿಯ ನಂತರ ಅಲ್ಲಿದ್ದ ಹಲವಾರು ಶರಣರು ದಕ್ಷಿಣ ಕರ್ನಾಟಕಕ್ಕೆ ಬಂದು ನೆಲೆಸಿದರೆಂಬುದನ್ನು ಊಹಿಸಬಹುದು.

ಕ್ರಿ.ಶ. ಸು. ೧೬೫೦ರಲ್ಲಿದ್ದ ರುದ್ರಕವಿಯು ತನ್ನ ಕರಸ್ಥಲ ನಾಗಲಿಂಗದೇವ ಚರಿತೆಯಲ್ಲಿ ನಾಗಲಿಂಗನಿಗೆ ವೈರಾಗ್ಯ ಬಂದು ಅವನು ಊರೂರು ಸುತ್ತುತ್ತಾ ಗುಮ್ಮಳಾಪುರಕ್ಕೆ ಬಂದು ಹಲವಾರು ಪವಾಡಗಳನ್ನು ಮೆರೆದನೆಂದು ಉಲ್ಲೇಖಿಸಲಾಗಿದೆ.

ಗುಮ್ಮಳಾಪುರದ ಕವಿಗಳು

ಕರ್ನಾಟಕ ಕವಿಚರಿತೆಕಾರರು ತಮ್ಮ ಕೃತಿಯಲ್ಲಿ ಗುಮ್ಮಳಾಪುರದಲ್ಲಿದ್ದಂತಹ ಹಲವಾರು ಕವಿಗಳನ್ನು ಹೆಸರಿಸಿದ್ದಾರೆ. ಕ್ರಿ.ಶ. ೧೫೭೦ರಲ್ಲಿದ್ದ ವೀರಶೈವ ಕವಿಯಾದ ಪ್ರಭುಗನು ತನ್ನನ್ನು ಗುಮ್ಮಳಾಪುರದ ಶಾಂತೇಶನ ದೌಹಿತ್ರ, ಚಿಕ್ಕಾರ್ಯನ ಮಗನೆಂದು ಕರೆದುಕೊಂಡಿದ್ದಾನೆ.[೪]

ಕ್ರಿ.ಶ. ಸು. ೧೬೫೦ರಲ್ಲಿದ್ದ ಮತ್ತೊಬ್ಬ ವೀರಶೈವ ಕವಿ ಹಲಗನು ತಾನು ಚಪ್ಪನ್ನ ದೇಶದೊಳ ಕೈಲಾಸಮೆನಿಸಿರ್ಪ ಗುಮ್ಮಳಾಪುರದ ತೋಪಿನ ವೀರಗಣಾಚಾರಿಯ ಮಗನೆಂದು ಹೇಳಿಕೊಂಡಿದ್ದಾನೆ. ಇವನು ಹರಿಶ್ಚಂದ್ರ ಸಾಂಗತ್ಯ ಎಂಬ ಕೃತಿಯನ್ನು ಬರೆದಿದ್ದಾನೆ.[೫] ಹಾಗೆಯೇ ಕ್ರಿ.ಶ. ೧೬೭೭ರಲ್ಲಿ ವೆಂಕಟಶರ್ಮ ಹಾಗೂ ಕ್ರಿ.ಶ. ೧೮೪೦ರಲ್ಲಿ ಕವಿ ವೆಂಕಟೇಶನು ಗುಮ್ಮಳಾಪುರದಲ್ಲಿದ್ದರೆಂದು ಅಭಿಪ್ರಾಯ ಪಡುತ್ತಾರೆ.[೬] ಇದರಲ್ಲಿ ವೆಂಕಟಶರ್ಮ ರುದ್ರಭಟ್ಟನ ಜಗನ್ನಾಥ ವಿಜಯವನ್ನು ಪ್ರತಿಮಾಡಿದ್ದಾನೆ. ಇದರ ಜೊತೆಗೆ ಜಗನ್ನಾಥ ವಿಜಯದ ಮಂಗಳ ಶ್ಲೋಕಗಳಿಗೆ 'ಪಞ್ಚಪಾಷಾಣ ವ್ಯಾಖ್ಯೆ' ಎಂಬ ಸಂಸ್ಕೃತ ವ್ಯಾಖ್ಯಾನ ಬರೆದಿದ್ದಾನೆ.[೭]

ಮತ್ತೊಬ್ಬ ಕವಿ ವೆಂಕಟೇಶನು ಹಾಲಾಸ್ಯ ಮಹಾತ್ಮ್ಯ ಎಂಬ ಕೃತಿಯನ್ನು ರಚಿಸಿದ್ದಾನಲ್ಲದೆ, ಹರಿಹರನ ಗಿರಿಜಾ ಕಲ್ಯಾಣದ ಕಾವ್ಯವನ್ನು ಪ್ರತಿ ಮಾಡಿರುವುದಾಗಿಯೂ ಹೇಳಿಕೊಂಡಿದ್ದಾನೆ. ಆದರೆ, ಗುಮ್ಮಳಾಪುರದ ದಾನ ಶಾಸನ ಮತ್ತು ದೇವರಬೆಟ್ಟದಲ್ಲಿ ದೊರೆತಿರುವ ಶಾಸನಗಳನ್ನು ತೌಲನಿಕವಾಗಿ ವಿವೇಚಿಸಿ ಕವಿಚರಿತೆಕಾರರು ಕ್ರಿ.ಶ. ೧೬೭೭ರಲ್ಲಿದ್ದನೆಂದು ಹೇಳಲಾದ ವೆಂಕಟಶರ್ಮ ಹಾಗೂ ಕ್ರಿ.ಶ. ೧೮೪೦ರಲ್ಲಿದ್ದನೆಂದು ಹೇಳಲಾದ ವೆಂಕಟೇಶ ಇವರಿಬ್ಬರೂ ಅಭಿನ್ನರು ಎಂಬುದನ್ನು ಗುರುತಿಸಿರುತ್ತೇವೆ. ಹಾಲಾಸ್ಯ ಮಹಾತ್ಮ್ಯದಲ್ಲಿ ಕವಿ ವೆಂಕಟೇಶನು ತನ್ನ ಪೂರ್ವಜರಾದ ಅರುಣಗಿರಿ, ದೀಕ್ಷಿತ, ಗಿರೀಶ್ವರ, ವೆಂಕಟಸೂರಿ, ಗಿರೀಶ ಇವರೆಲ್ಲ ಕೆಂಪೇಗೌಡನ ವಂಶಸ್ಥರಿಂದ ಗ್ರಾಮ ಭೂಸ್ವಾಸ್ಥ್ಯಗಳನ್ನು ಪಡೆದು ಅನುಭವಿಸುತ್ತಿದ್ದರೆಂದು, ಅಲ್ಲದೆ, ವೆಂಕಟೇಶನ ಮುತ್ತಾತ ತಿಮ್ಮಯಾರ್ಯ ಏಕೋಜಿಯಿಂದ ಆಂದೋಳಿಕಾಶ್ವಾದಿ ಸನ್ಮಾನ ಪಡೆದನೆಂದೂ ಹೇಳಿಕೊಂಡಿದ್ದಾನೆ[೮]. ಆದರೆ ಯಾವ ಕಾರಣಕ್ಕೆ ಭೂದತ್ತಿಗಳನ್ನು ಮತ್ತು ಸನ್ಮಾನ ನೀಡಿದ್ದರೆಂದು ತಿಳಿಸಿಲ್ಲ. ಬೊಮ್ಮರಸನು ಸೌಂದರ ಪುರಾಣ ಎಂಬ ಕೃತಿಯನ್ನು ರಚಿಸಿದ್ದಾನೆ. ಇವನು ಡೆಂಕಣಿಕೋಟೆ ಪುರವರಾಧೀಶನಾದ ತಿಪ್ಪರಸನನ್ನು ಹೇಳಲಾಗಿ, ಚೊಕ್ಕದೇವಪಾರ್ಯನ ಮಗ ಗುಮ್ಮಳಾಪುರವರಾಧೀಶ ಚಿಕ್ಕವೀರಣಾರ್ಯನ ಆಜ್ಞಾನುಸಾರ ರಚಿಸಿದಂತೆ ಹೇಳಿಕೊಂಡಿದ್ದಾನೆ.[೯]

ಕೆಂಪೇಗೌಡ ಜಯ ಪ್ರಶಸ್ತಿಯ ರಚನಾಕಾರನು ತನ್ನ ಕೃತಿಯ ಆರಂಭದ ಭಾಗದಲ್ಲಿ 'ಹರುಷದಿ ಗುಮ್ಮಳಾಪುರದ ಸದ್ಗುರು ನಂಜೇಶ್ವರನ ಕೃಪೆಯ ಸಮಾಪ್ತಾ' ಎಂದು ಹೇಳಿಕೊಂಡಿರುವುದರಿಂದ, ಈ ಕೃತಿಯನ್ನು ಸಂಪಾದಿಸಿದ ಕರ್ಲಮಂಗಲಂ ಶ್ರೀಕಂಠಯ್ಯನವರು ಇವನು ಗುಮ್ಮಳಾಪುರದ ಗುರು ನಂಜೇಶ್ವರನಿರಬಹುದೆಂದು ಅಭಿಪ್ರಾಯ ಪಡುತ್ತಾರೆ. ಆದರೆ ಡಾ. ನಂಜುಂಡಸ್ವಾಮಿ ಬಿ. ಅವರು ಇದರ ಕರ್ತೃ ಹೊನ್ನಕವಿ ಎಂಬುದನ್ನು ಸ್ಥಿರೀಕರಿಸಿದ್ದಾರೆ.[೧೦]

ಕ್ರಿ.ಶ. ೧೪೮೪ರಲ್ಲಿ ಗುಮ್ಮಳಾಪುರದ ದಾನ ಶಾಸನವು[೧೧] ದಾನವನ್ನು ನೀಡುವಾಗ ಉಪಸ್ಥಿತರಿದ್ದ ಶರಣರನ್ನು ಪ್ರಸ್ತಾಪಿಸುತ್ತಾ, ಚಿಕ್ಕವೀರಣದೇವರು, ಶರಣವೀರಣ್ಣದೇವರು, ಶಾಂತಿದೇವರು, ನಾಗದೇವರು, ಚಿಕ್ಕದೇವಪ್ಪನವರು,

ನಿಜಲಿಂಗಚಿಕ್ಕಯ್ಯ, ಜಿಟ್ಟಮಂಡೆಯ ಪ್ರಭುದೇವರು, ಶಂಖದ ಸಿದ್ಧಲಿಂಗದೇವರು, ಜಂಗುಳಿ ದೇವರು, ಪ್ರಸಾದಿ ದೇವರು, ಮಲ್ಲಿಕಾರ್ಜುನಾರಾಧ್ಯರು, ಬಸವಣ್ಣ ಮುಂತಾದವರ ಹೆಸರನ್ನು ಉಲ್ಲೇಖಿಸುತ್ತದೆ. ಇವರು ಬಹುಶಃ ಶರಣರೇ ಆಗಿದ್ದು ವಚನಗಳನ್ನು ರಚಿಸಿರಬಹುದು.

ಶೂನ್ಯ ಸಂಪಾದನೆಗಳು ಮತ್ತು ಗುಮ್ಮಳಾಪುರ

ಮಧ್ಯಕಾಲೀನ ಕರ್ನಾಟಕದಲ್ಲಿ ಒಟ್ಟು ನಾಲ್ಕು ಶೂನ್ಯ ಸಂಪಾನೆಗಳು ರಚನೆಯಾದವೆಂದು ಹೇಳಲಾಗುತ್ತದೆ.[೧೨]

೧. ಶಿವಗಣಪ್ರಸಾದಿ ಮಹಾದೇವಯ್ಯಗಳ ಶೂನ್ಯಸಂಪಾದನೆ

೨. ಹಲಗೆಯಾರ್ಯನ ಶೂನ್ಯಸಂಪಾದನೆ

೩. ಗುಮ್ಮಳಾಪುರದ ಸಿದ್ಧಲಿಂಗದೇವರ ಶೂನ್ಯಸಂಪಾದನೆ

೪. ಗೂಳೂರು ಸಿದ್ಧವೀರಣ್ಣರ ಶೂನ್ಯಸಂಪಾದನೆ.

ಶೂನ್ಯ ಸಂಪಾದನೆ ಎಂಬುದು ಶಿಶರಣೆ–ಶರಣೆಯರ ವಚನಗಳನ್ನು ರಸವತ್ತಾಗಿ ಸಂಭಾಷಣೆಯ ರೂಪದಲ್ಲಿ ಸಂಕಲಿಸಿ ಅವರ ಜೀವನದ ಅನೇಕ ಪ್ರಮುಖ ಘಟ್ಟಗಳನ್ನು ಪರಿಚಯ ಮಾಡಿಕೊಡುವ ಒಂದು ಅದ್ಭುತ ಗ್ರಂಥ.[೧೩]

ವಿವಿಧ ವಚನಕಾರರ ವಚನಗಳ ಮೂಲಕ ಹನ್ನೆರಡನೆಯ ಶತಮಾನದ ಅನುಭವ ಮಂಟಪದ ವಚನಗೋಷ್ಠಿಗಳ ಪಾತ್ರಗಳನ್ನು ಮರುಸೃಷ್ಟಿಸಿ ವಚನಗಳ ಆಶಯವನ್ನು ಸಂವಾದಗಳ ಮೂಲಕ ವ್ಯಾಖ್ಯಾನಿಸುವ ಪ್ರಕ್ರಿಯೆಯನ್ನು ಮೊದಲಿಗೆ ಪ್ರಾರಂಭಿಸಿದವನು ಶಿವಗಣಪ್ರಸಾದಿ ಮಹದೇವಯ್ಯ. ಶಿವಗಣ ಪ್ರಸಾದಿ ಮಹದೇವಯ್ಯನ ಮೂಲದ ಬಗ್ಗೆ ಸ್ಪಷ್ಟವಾಗಿ ಎಲ್ಲೂ ದಾಖಲೆಗಳು ಲಭ್ಯವಾಗುವುದಿಲ್ಲ. ಅವರ ಬಗ್ಗೆ ಅಧ್ಯಯನ ಮಾಡುವಾಗ ಹಲವಾರು ವಿದ್ವಾಂಸರು ವಿಭಿನ್ನವಾದ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಬಸವಣ್ಣನ ಮನೆಯ ವರ್ಣನೆಯಲ್ಲಿ ಬರುವ ಶಿವಗಣ ಪ್ರಸಾದಿಗಳ ವಿವರ ಹೀಗಿದೆ: ಶಿವಗಣಗಳು ಆರೋಗಿಸಿ ಮಿಕ್ಕ ಶಿವಪ್ರಸಾದಮಂ ಕಂಡು, ಉಬ್ಬಿ, ಕೊಬ್ಬಿ, ನಲಿನಲಿದಾಡುತ್ತ, ಆ ಪ್ರಸಾದದೊಳು ಅಣುಮಾತ್ರಮಂ ನೆಲಕ್ಕೆ ತಪ್ಪಲೀಯದೆ ಎತ್ತಿ ತಂದು ಮಹಾಪ್ರಸಾದಮಂ ಅಷ್ಟವಿಧಾರ್ಚನೆಯಿಂದಾರ್ಚಿಸಿ, ಪರಮಾನಂದದಿಂ ಪ್ರಸಾದವಂ ಸ್ವೀಕಾರ ಮಾಡಿ ಪರಮ ಪರಿಣಾಮದೊಳಿಪ್ಪ ಶಿವಗಣಪ್ರಸಾದಿಗಳಂ" ಎಂಬ ಉಲ್ಲೇಖವನ್ನಾಧರಿಸಿ ಎಲ್. ಬಸವರಾಜುರವರು ಮಹದೇವಯ್ಯ ಕಲ್ಯಾಣದವನಿರಬಹುದೆಂದು ಅಭಿಪ್ರಾಯ ಪಡುತ್ತಾರೆ. ಎಂ.ಎಂ. ಕಲಬುರ್ಗಿಯವರು ಮಹದೇವಯ್ಯನ ಶೂನ್ಯ ಸಂಪಾದನೆಯಲ್ಲಿ ಬಳಸಿರುವ 'ಕೆಟ್ಟಿತ್ತು ಕಲ್ಯಾಣ' ಎಂಬ ಪದಗಳನ್ನಾಧರಿಸಿ ಹಾಗಾದರೆ ಆತ ಶಿವದಾಸ ಗೀತಾಂಜಲಿಯಲ್ಲಿ ಹೇಳಿರುವಂತೆ ವಿಜಯನಗರ ಪ್ರಾಂತದವನೆ? ಉತ್ತರ ಕನ್ನಡ ಜಿಲ್ಲೆಯ ಶಿವಗಣ>ಶಿವಗೊಳ ಗ್ರಾಮದವನಿರಬಹುದೆ ಅಥವಾ ಗುಮ್ಮಳಾಪುರದವನಿರಬಹುದೆ ಎಂಬ ಅನುಮಾನಗಳನ್ನು ಎತ್ತಿದ್ದಾರೆ.[೧೪] ಆರ್.ಸಿ. ಹಿರೇಮಠರವರು ಕ್ರಿ.ಶ. ೧೪೨೦ರಲ್ಲಿದ್ದ ಶೂನ್ಯ ಸಂಪಾದನೆಯ ಮೊದಲ ಕರ್ತೃವಾದ ಶಿವಗಣಪ್ರಸಾದಿ ಮಹಾದೇವಯ್ಯಗಳೂ ಇದೇ ಸ್ಥಳದವರಿರಬಹುದೆಂದು ಅಭಿಪ್ರಾಯ ಪಡುತ್ತಾರೆ.

ಶಿವಗಣ ಪ್ರಸಾದಿ ಮಹಾದೇವಯ್ಯನ ಮೂಲದ ಬಗೆಗಿನ ಊಹೆಗಳಲ್ಲಿ ಗುಮ್ಮಳಾಪುರವೂ ಸ್ಥಾನ ಪಡೆದಿದೆ. ಜಿ.ಎಸ್. ಸಿದ್ಧಲಿಂಗಯ್ಯನವರು 'ಪ್ರಸಾದಿ' ಎಂಬ ಹೆಸರು ಮತ್ತೆ ಮತ್ತೆ ಪ್ರಸಾರದಲ್ಲಿದ್ದ ಗುಮ್ಮಳಾಪುರದ ಪ್ರತಿಯ ವಿವರಗಳನ್ನು ಓದಿದರೆ, ಹಾಗೆಯೇ ಕಲ್ಯಾಣದ ಪತನದ ಅನಂತರ 'ಗುಮ್ಮಳಾಪುರ ಎರಡನೆಯ ಕಲ್ಯಾಣವಾಯಿತು' ಎನ್ನುವ ವಿರೂಪಾಕ್ಷನ ಚನ್ನಬಸವ ಪುರಾಣದ ಮಾತನ್ನು ಗಮನಿಸಿದರೆ ಈತ ಗುಮ್ಮಳಾಪುರದವನೇ ಇರಬೇಕು ಎಂಬ ವಾದ ಬಲ ಪಡೆದುಕೊಳ್ಳುತ್ತದೆ. ಈತನ ಶೂನ್ಯ ಸಂಪಾದನೆಯನ್ನು ಪ್ರತಿಮಾಡಿದವನೊಬ್ಬನು 'ಗುಮ್ಮಳಾಪುರದ ಬರಹದ ಬಸವಣ್ಣ ದೇವರು' ಆಗಿರುವುದು ಈ ಊಹೆ ಗಟ್ಟಿಗೊಳ್ಳಲು ಬಲವಾದ ಕಾರಣವಾಗುತ್ತದೆ.[೧೫]

ಇದಕ್ಕೆ ಪೂರಕವಾಗಿ ಗುಮ್ಮಳಾಪುರದ ಕ್ರಿ.ಶ. ೧೪೭೪ರ ದಾನಶಾಸನವು ಗುಮ್ಮಳಾಪುರದಲ್ಲಿದ್ದ ವೀರಮಾಹೇಶ್ವರ ಗೋತ್ರದ ಶಾಂತಿದೇವರ ಪೌತ್ರ ಚಿಕ್ಕವೀರಣ್ಣದೇವರು, ಶರಣ ವೀರಣ್ಣ ದೇವರು, ಶಾಂತಿದೇವರು, ನಾಗದೇವರು, ಚಿಕ್ಕದೇಪ್ಪನವರು, ನಿಜಲಿಂಗ ಚಿಕ್ಕಯ್ಯ, ಜಿಟ್ಟಮಾಡೆಯ ಪ್ರಭುದೇವರು, ಶಂಖದ ಸಿದ್ಧಲಿಂಗದೇವರು, ಜಂಗುಳಿದೇವರು, ಮಲ್ಲಿಕಾರ್ಜುನಾರಾಧ್ಯರು 'ಪ್ರಸಾದಿ ದೇವರ' ಸಮಕ್ಷಮದಲ್ಲಿ ದಾನ ನೀಡಿದ್ದುದಾಗಿ ಉಲ್ಲೇಖಿಸಲಾಗಿದೆ. ಸಿದ್ಧನಂಜೇಶನು ತನ್ನ ರಾಘವಾಂಕ ಚರಿತೆಯಲ್ಲಿ ಶುದ್ಧಪ್ರಸಾದಿ ಮಹಾದೇವಯ್ಯ ಈತನೇ ಇರಬೇಕೆಂದು ಚಿದಾನಂದಮೂರ್ತಿಯವರು ಅಭಿಪ್ರಾಯ ಪಡುತ್ತಾರೆ.[೧೬]

ಮಹದೇವಯ್ಯನ ಶೂನ್ಯ ಸಂಪಾದನೆಯ ಪ್ರತಿಯಲ್ಲಿ ಪುನರಾವರ್ತಿತವಾಗಿ ಬರುವ 'ಪ್ರಸಾದಿ' ಎಂಬ ಪದ ಗುಮ್ಮಳಾಪುರದ ಶಾಸನದ ಪ್ರಸಾದಿ ದೇವರನ್ನು ಸೂಚಿಸುತ್ತಿರಬಹುದು, ಶಿವಗಣ ಪ್ರಸಾದಿ ಮಹಾದೇವಯ್ಯಗಳ ಶೂನ್ಯ ಸಂಪಾದನೆಯ ಕಾಲವನ್ನು ವಿದ್ವಾಂಸರು ಕ್ರಿ.ಶ. ೧೪೨೦-೩೦ ಎಂದು ನಿರ್ಧರಿಸಿರುವುದರಿಂದ ಕಾಲದ ದೃಷ್ಟಿಯಿಂದಲೂ, ಶಾಸನೋಕ್ತ ಪ್ರಸಾದಿ ದೇವರು ಮತ್ತು ಶೂನ್ಯ ಸಂಪಾದನೋಕ್ತ 'ಪ್ರಸಾದಿ' ಒಬ್ಬರೇ ಆಗಿರುವ ಸಂಭವವಿದೆ. ಈ ಎಲ್ಲ ಅಂಶಗಳಿಂದ ಮೊದಲ ಶೂನ್ಯ ಸಂಪಾದನಾಕಾರ ಗುಮ್ಮಳಾಪುರದವನಾಗಿರಬಹುದೆಂಬ ಊಹೆಯ ಎಳೆ ಇನ್ನೂ ಗಟ್ಟಿಯಾಗುತ್ತದೆ.

ಮತ್ತೊಬ್ಬ ಶೂನ್ಯ ಸಂಪಾದನಾಕಾರನಾದ ಸಿದ್ಧಲಿಂಗಯತಿ ಗುಮ್ಮಳಾಪುರದವನೆಂಬುದು ಈಗಾಗಲೇ ಸ್ಥಾಪಿತವಾದ ವಿಷಯವಾಗಿದೆ. ಗುಮ್ಮಳಾಪುರದ ಸಿದ್ಧಲಿಂಗಯತಿಯ ಬಗ್ಗೆ ಶಾಸನ ಸಾಹಿತ್ಯಗಳಲ್ಲಿ ಗುಮ್ಮಳಾಪುರ ಊರಿನ ಹೆಸರಿನೊಂದಿಗೆ ಅವನ ಹೆಸರನ್ನು ಸೇರಿಸಿ ಪ್ರಸ್ತಾಪಿಸಲಾಗಿದೆ. ಮತ್ತೊಬ್ಬ ಶೂನ್ಯ ಸಂಪಾದನಾಕಾರನಾದ ಗೂಳೂರು ಸಿದ್ಧವೀರಣ್ಣೊಡೆಯ ತನ್ನ ಪರಿಷ್ಕರಣೆಯ ಬಗ್ಗೆ ಹೇಳುವಾಗ–"ಶೂನ್ಯ ಸಂಪಾದನೆಯೊಳ್ ಸದ್ಗೋಷ್ಠಿ ಕಥಾ ಪ್ರಸಂಗವನು ಮುಕ್ತಿಕಮಾಗಿರ್ದ ಶಿವಾದ್ವೈತ ವಚನಂಗಳನು ಉತ್ತರ ಪ್ರತ್ಯುತ್ತರ ಸಂಬಂಧವಾಗಿ ಸೇರಿಸಿ ಶಿವಗಣಪ್ರಸಾದಿ ಮಹಾದೇವಯ್ಯಗಳು ಮರ್ತ್ಯಲೋಕದ ಮಹಾಗಣಗಳಿಗೆ ಆ ಮಹಾಪ್ರಸಾದಮಂ ಸಮರ್ಪಿಸಿದಲ್ಲಿ ಸಿದ್ಧರಾಮೇಶ್ವರ ದೇವರಿಗೆ ಉಪದೇಶಕ್ರಮವಿಲ್ಲದಿರ್ದೊಡೆ ಗುಮ್ಮಳಾಪುರದ ಸಿದ್ಧಲಿಂಗದೇವರು ಸಮಸ್ತ ಪುರಾತನರ ವಚನ ಸನ್ಮತದಿಂ ಸಂಗ್ರಹಿಸಲು, ಆ ಕ್ರಮವಿಡಿದು ಈ ಶೂನ್ಯ ಸಂಪಾದನೆಯನು ಸೇರಿಸಿ ಶಿವಗಣಗಳಿಗೆ ಸಮರ್ಪಿಸಿದೆನು"[೧೭] ಎಂದು ಹೇಳುವಲ್ಲಿ ಸಿದ್ಧಲಿಂಗದೇವರು ಗುಮ್ಮಳಾಪುರದವನು ಎಂಬುದನ್ನು ಸೂಚಿಸುತ್ತದೆ.

ಗುಮ್ಮಳಾಪುರದ ಸಿದ್ಧಲಿಂಗಯತಿಯದೇ ಆದ ಶೂನ್ಯ ಸಂಪಾದನೆಯ ಓಲೆ ಪ್ರತಿಯೊಂದರ ಪುಷ್ಪಿಕೆಯಲ್ಲಿ "ಸ್ವಸ್ತಿ ವಿಜಯಾಭ್ಯುದಯ ಶಾಲಿವಾಹನ ಶಕವರುಷ ವಿಶ್ವಾವಸು ಸಂವತ್ಸರದ ಕಾರ್ತಿಕ ಬಹುಳ ಮಂಗಳವಾರದಲ್ಲು – – – – – ಸರ್ವಾಚಾರ ಸಂಪನ್ನ ಏಕಲಿಂಗಾ ನಿಷ್ಠಾಪರ ವೀರಶೈವ ಸಂಪನ್ನ ಗುಮ್ಮಳಾಪುರದ ಸಿದ್ಧಲಿಂಗ ದೇವರಿಗೆ ಹದಿನಾಡ ಯೆಳೆವಂದೂರ ಅರಸು ಚೆಂನೊಡೆಯರು ಶೂನ್ಯ ಸಂಪಾದನೆಯ ವಚನ ಸಂಗ್ರಹವನ್ನು ಬರಿಸಿ ಶಿವಾರ್ಪಿತವಾಗಿ ನಮಸ್ಕರಿಸಿದರು" ಎಂದಿದೆ. ಸಿದ್ಧಲಿಂಗಯತಿ ಇದ್ದ ಕಾಲದಲ್ಲಿಯೇ ಅದನ್ನು ಪ್ರತಿ ಮಾಡಿಸಿ ಅವರಿಗೇ ಅರ್ಪಿಸಲಾಗಿರುವುದರಿಂದ ಸಿದ್ಧಲಿಂಗಯತಿಯು ಕ್ರಿ.ಶ. ಸು. ೧೫೮೦ರ ವೇಳೆಗೆ ಶೂನ್ಯ ಸಂಪಾದನೆ ಕೃತಿಯನ್ನು ರಚಿಸಿದ್ದಿರಬಹುದೆಂದು ಎಂ.ಎಂ. ಕಲಬುರ್ಗಿಯವರು ಅಭಿಪ್ರಾಯಪಡುತ್ತಾರೆ.[೧೮]

ಕ್ರಿ.ಶ. ಸು. ೧೬೫೦ರಲ್ಲಿದ್ದ ಸಿದ್ಧನಂಜೇಶ ತನ್ನ ಗುರುರಾಜ ಚಾರಿತ್ರ್ಯದ ಪ್ರಾರ್ಥನಾ ಪದ್ಯಗಳಲ್ಲಿ ರಾಘವಾಂಕ, ಪಾಲ್ಕುರಿಕೆ ಸೋಮನಾಥ, ಚಾಮರಸಾದಿಯಾಗಿ ಹಲವಾರು ಪ್ರಮುಖ ವೀರಶೈವ ಕೃತಿಗಳನ್ನು ಸ್ತುತಿಸುತ್ತಾ ಗುಮ್ಮಳಾಪುರದ ಸಿದ್ಧಲಿಂಗರನ್ನೂ ಸಹ ಭಕ್ತಿಯಿಂದ ನೆನೆದಿದ್ದಾನೆ. ಸಂಗಮೇಶ ಸವದತ್ತಿಮಠರವರು 'ಸಿದ್ಧಲಿಂಗದೇವರು' ಎಂಬ ಹೆಸರೇ ಅವನು ಮಠಾದೀಶನಾಗಿರಬೇಕು ಎಂದು ಅಭಿಪ್ರಾಯ ಪಡುತ್ತಾರೆ.[೧೯]

ಎಡೆಯೂರು ತೋಂಟದ ಸಿದ್ಧಲಿಂಗೇಶ್ವರರ ಮಠದ ಶಾಸನದಲ್ಲಿ ತೋಂಟದ ಸಿದ್ಧಲಿಂಗೇಶ್ವರರು ತನ್ನನ್ನು ಶರಣುಹೊಕ್ಕ ಶಿಷ್ಯರಾದ ಸಪ್ಪೇದೇವರು, ಬೋಳಬಸವರಾಜದೇವರು, ಗುಮ್ಮಳಾಪುರದ ಸಿದ್ಧಲಿಂಗದೇವರು, ಪಟ್ಟಣದೇವರು ಮುಂತಾದ ಮುಖ್ಯವಾದ ಭಕ್ತ ಮಾಹೇಶ್ವರರಿಗೆ ಷಟಸ್ಥಲ ಜ್ಞಾನ, ಲಿಂಗಾಂಗ ಸಂಬಂಧ, ಏಕಾಂತಮಂ ಬೋಧಿಸಿ ಮುಕ್ತರನ್ನು ಮಾಡಿದರೆಂದು ಉಲ್ಲೇಖಿಸುತ್ತದೆ.[೨೦] ಗುಮ್ಮಳಾಪುರದ ಸಿದ್ಧಲಿಂಗಯತಿ "ಬೋಳ ಬಸವಾ ನಿಮ್ಮ ಧರ್ಮ, ನಿಮ್ಮ ಧರ್ಮ ಎಂಬ ಅಂಕಿತದಲ್ಲಿ ಸುಮಾರು ಹದಿನೆಂಟು ವಚನಗಳನ್ನು ಬರೆದಿದ್ದಾನೆಂದು ಹೇಳಲಾಗುತ್ತದೆ. ಅವನು ತನ್ನ ವಚನಗಳನ್ನು 'ನಿರ್ವಚನಗಳು' ಎಂದು ಕರೆದುಕೊಂಡಿದ್ದಾನೆ.

ಹಲಗೆಯಾರ್ಯನನ್ನು ಎರಡನೆಯ ಶೂನ್ಯ ಸಂಪಾದನೆಕಾರನೆಂದು ಗುರುತಿಸಲಾಗುತ್ತದೆ. ಹಲಗೆಯಾರ್ಯನೂ ಗುಮ್ಮಳಾಪುರದವನೆಂದು ಊಹಿಸಲು ಅವಕಾಶವಿದೆ. ಹಲಗೆಯಾರ್ಯನು ತನ್ನನ್ನು "ಅನಾದಿ ಪರಶಿವಮೂರ್ತಿಯಪ್ಪ ಶಿವಭಕ್ತನ ವಿರಕ್ತಿಯೆಂದು ವೀರವೂ, ನಿರ್ಮಲ ಸುಜ್ಞಾನವೆಂಬ ಭದ್ರವೂ, ಪರಮ ಪರಿಪೂರ್ಣ ಸಹಜ ಸದ್ಭಕ್ತಿಯಂ ಸಂಬಂಧವಾದ ವೀರಭದ್ರದೇವರ ಸಂಪ್ರದಾಯೋದ್ಭವ"[೨೧] ಎಂದು ಹೇಳಿಕೊಂಡಿದ್ದಾನೆ. ಇವನ ಶಿಷ್ಯನಾದ ಗುಬ್ಬಿಯ ಮಲ್ಲಣಾರ್ಯ : ವೀರಶೈವಾಮೃತ ಮಹಾ ಪುರಾಣದಲ್ಲಿ "ವೀರಭದ್ರಾಜ್ಞೆಯಿಂದೆಯತಂದ ಚಿತ್ಪಿಂಡವೇ ರಸೆಯೊಳಮಳ ಭಕ್ತರ ಗರ್ಭದೊಳು ಸದಾಚಾರದಿಂದುದ್ಭವಿಸಿ ದಿವ್ಯಗುರುಕಮಲ ಸಂಭೂತನಾದ . . . ಎಂದು ಹೇಳುತ್ತಾ ಅವನನ್ನು

ಚಿತ್ಕಾಂತ ಹಲಗೆಯ ದೇಶಿಕ, ಶ್ರೀವಿರಕ್ತಾದೀಶ್ವರ, ಹಲಗೆಯಾಚಾರ್ಯನ, ಷಟ್ಸ್ಥಲ ಹಲಗೆಯಾಚಾರ್ಯನ, ಸುಪಿರಕ್ತವ್ರತಾಚಾರ ಚಿತ್ರಿಯಾಪದ ಹಲಗೆಯಾಚಾರ್ಯನ . . . .” ಹೀಗೆ ವಿಧ ವಿಧವಾಗಿ ಸ್ತುತಿಸಿದ್ದಾನೆ.[೨೦] ಡಾ. ಬಿ.ವಿ. ಶಿರೂರರವರು ಈತನ ಹಲಗೆಯಾರ್ಯ ಎಂಬ ಹೆಸರೇ ವಿಚಿತ್ರವಾಗಿ ಕಾಣುತ್ತಿದೆ. ಈತನು ವೀರಭದ್ರ ದೇವರ ಮುಂದೆ ಹಲಗೆ ಬಾರಿಸುವುದರಿಂದಲೇ ಈ ಹೆಸರು ಬಂದಿರಬೇಕೆಂದು ಕೆಲವರ ಅಭಿಪ್ರಾಯ. ಆದರೆ ವೀರಭದ್ರನ ಮುಂದೆ ಹಲಗೆ ಬಾರಿಸುವ ಸಂಪ್ರದಾಯ ಎಲ್ಲಿಯೂ ಇಲ್ಲ. ಬಹುಶಃ ಪೋತರಾಜನ ವೇಷ ಹಾಕಿಕೊಂಡು ಹಲಗೆ ಬಾರಿಸುವವನಿದ್ದರೂ ಇರಬಹುದು ಅಥವಾ ಹಲಗೆ ಬಳಪವನ್ನು ಹಿಡಿದು ವಿದ್ಯೆ ಕಲಿಸುವ ಗುರು ಇದ್ದರೂ ಇರಬಹುದು ಎಂದು ಅಭಿಪ್ರಾಯ ಪಡುತ್ತಾರೆ. ಮೂಲ ನೆಲೆಯ ಬಗ್ಗೆ ಚರ್ಚಿಸುತ್ತಾ “ಈತ ಮಾಗಡಿ ತಾಲೂಕ ಅದರಂಗಿಯವನೆಂದು ಪ್ರೊ. ಜಿ.ಎಸ್. ಸಿದ್ಧಲಿಂಗಯ್ಯ ಅವರು ಪಂಡಿತ ಚನ್ನಪ್ಪ ಎರೆಸೀಮೆಯವರ ಅಭಿಪ್ರಾಯದ ಮೇರೆಗೆ ಹೇಳಿದ್ದಾರೆ. ಅದಕ್ಕೆ ಆಧಾರಗಳಿಲ್ಲ. ಆದರೆ ಈತನ ಕಾರ್ಯಕ್ಷೇತ್ರ ಶಿವಗಂಗೆ, ಗುಬ್ಬಿ ಪ್ರದೇಶಗಳಾಗಿರಬಹುದಾಗಿದೆ. ಈತನು ಭಕ್ತರನ್ನು ಉದ್ಧರಿಸಲು ಆತನ ಸದ್ಗುರು ವೀರಭದ್ರನೇ ಶೀವಂತಾರ್ಯನಾಗಿ ಭೂಮಿಯಲ್ಲಿ ಅವತರಿಸಲು ಆತನ ಆಂಶಿಕನಾದ ಹಲಗೆದೇವನೂ ಭೂಮಿಯಲ್ಲಿ ಅವತರಿಸಿದನು ಎಂದು ಹೇಳಿಕೊಂಡಿರುವನು ಎಂದು ಅಭಿಪ್ರಾಯ ಪಟ್ಟಿದಾರೆ.[೨೨]

ಡಾ. ನಂಜುಂಡಸ್ವಾಮಿ ಬಿ. ಅವರು ಗುಬ್ಬಿ ವೀರೇಶ್ವರ ಶಾಸ್ತ್ರಿಗಳು ವೀರಶೈವಾನ್ವಯ ಚಂದ್ರಿಕೆ ಎಂಬ ಸಂಸ್ಕೃತ ಸಂಕಲನ ಗ್ರಂಥಕ್ಕೆ ಕನ್ನಡ ಟೀಕೆಯನ್ನು ಬರೆದಿದ್ದು, ಅದರಲ್ಲಿ ಹಲಗೆಯಾರ್ಯನು ಶಿವಗಂಗೆಯ ಮೇಲಣ ಗವಿಮಠಕ್ಕೆ ಅಧ್ಯಕ್ಷನಾಗಿದ್ದನೆಂದೂ ಅವನಿಂದ ಅದರಂಗಿ ಗ್ರಾಮ ನಿರ್ಮಾಣವಾಯಿತೆಂದು, ಅಲ್ಲಿ ವೃಷಭೇಷ್ವರಾಲಯವನ್ನು ಕಟ್ಟಿಸಿ ಆ ಊರಿನ ಸಮಸ್ತ ಜಾತಿಯವರನ್ನು ಶಿಷ್ಯರನ್ನಾಗಿ ಮಾಡಿಕೊಂಡನೆಂದೂ, ಅಲ್ಲಿನ ಸೋಪಾನ ದ್ವಾರದ ಎಡಭಾಗದಲ್ಲಿ ಒಂದು ಶಿಲಾಶಾಸನವಿದ್ದು ಅದರಲ್ಲಿ ಹಲಗೆಯಾಚಾರ್ಯನ ಪುರವರ್ಗವೆಂದು ಬರೆದಿದೆಯೆಂದೂ ಹೇಳಿದ್ದಾರೆ. ಅಲ್ಲದೆ ಅದರಂಗಿಯ ಬಸವೇಶ್ವರನ ದೇವಾಲಯದಲ್ಲಿರುವ ಹಲಗೆ ಹಿಡಿದಿರುವ ಮಿಶ್ರಲೋಹದ ಪುಟ್ಟ ಮೂರ್ತಿ ಹಲಗೆಯಾಚಾರ್ಯನದೆ ಇರಬಹುದೆಂದು ಊಹಿಸಿದ್ದಾರೆ.[೨೩] ಹೆಚ್ಚಿನ ಆಧಾರಗಳು ಇನ್ನೂ ಲಭ್ಯವಾಗಬೇಕಿವೆ.

ಗುಮ್ಮಳಾಪುರದಲ್ಲಿ ‘ಹಲಗ’ ಎನ್ನುವ ಹೆಸರುಗಳು ಪ್ರಚಲಿತದಲ್ಲಿತ್ತು. ಕವಿಚರಿತೆಕಾರರು ‘ಹಲಗ’ ಎಂಬ ಕವಿಯು ಗುಮ್ಮಳಾಪುರದಲ್ಲಿದ್ದನೆಂದು ಹೇಳುತ್ತಾ ಅವನು ‘ಹರಿಶ್ಚಂದ್ರ ಸಾಂಗತ್ಯ’ ವನ್ನು ಬರೆದಿದ್ದಾನೆಂದು ಅಭಿಪ್ರಾಯಪಡುತ್ತಾರೆ. ಗುಮ್ಮಳಾಪುರ ಮಠದ ಆರಾಧ್ಯ ದೈವ ವೀರಭದ್ರನೆಂಬ ಸಂಗತಿಯೂ ಗಮನಾರ್ಹ. ಆದರೆ, ಕವಿ ಹಲಗನ ಕಾಲವನ್ನು ಕವಿಚರಿತಕಾರರು ಸು. ಕ್ರಿ.ಶ. ೧೬೫೦ ಎಂದು ಅಭಿಪ್ರಾಯ ಪಟ್ಟಿದ್ದಾರೆ. ಹಲಗೆಯಾಚಾರ್ಯನ ಕಾಲವನ್ನು ಡಾ. ವಿದ್ಯಾಶಂಕರ ಅವರು ಕ್ರಿ.ಶ. ೧೫೨೮ ಎಂದು ಸೂಚಿಸಿರುವುದರಿಂದ, ಇಬ್ಬರ ನಡುವಿನ ಕಾಲದ ಅಂತರ ಹೆಚ್ಚಾಗಿದೆ. ಹಾಗಾಗಿ ಇವರಿಬ್ಬರೂ ಭಿನ್ನ ವ್ಯಕ್ತಿಗಳೆಂದು ಹೇಳಬಹುದು. ಆದರೆ ಮೊದಲ ಶೂನ್ಯ ಸಂಪಾದನೆಕಾರ ಶಿವಗಣ ಪ್ರಸಾದಿ ಮಹಾದೇವಯ್ಯ ಗುಮ್ಮಳಾಪುರದವನಿರಬಹುದೆಂದು ಆರ್.ಸಿ. ಹಿರೇಮಠರವರು, ಕಲಬುರಗಿಯವರು, ಜಿ.ಎಸ್. ಸಿದ್ದಲಿಂಗಯ್ಯನವರು ಅಭಿಪ್ರಾಯ ಪಟ್ಟಿರುವ ಹಿನ್ನೆಲೆಯಲ್ಲಿ ಹಾಗೂ ಮೂರನೆಯ ಶೂನ್ಯ ಸಂಪಾದನೆಕಾರನಾದ ಸಿದ್ಧಲಿಂಗದೇವರು ಗುಮ್ಮಳಾಪುರದವನೇ ಆಗಿರುವುದು ಖಚಿತವಾಗಿರುವುದರಿಂದ, ಮೇಲ್ಕಂಡ ಆಧಾರಗಳ ಹಿನ್ನೆಲೆಯಲ್ಲಿ ಹಲಗೆಯಾರ್ಯನೂ ಗುಮ್ಮಳಾಪುರದವನಿರಬಹುದೆಂಬ ಅನುಮಾನದ ಎಳೆ ಮೂಡುತ್ತದೆ.

ಶೂನ್ಯ ಸಂಪಾದನೆಕಾರ ಗೂಳೂರು ಸಿದ್ಧವೀರಣ್ಣನಿಗೂ ಗುಮ್ಮಳಾಪುರಕ್ಕೂ ಇರುವ ನಂಟು ಏನಿರಬಹುದೆಂದು ನಮಗೆ ತಿಳಿದುಬರುವುದಿಲ್ಲ. ಗೂಳೂರು ಸಿದ್ಧವೀರಣ್ಣನು ಗುಮ್ಮಳಾಪುರದ ಸಿದ್ಧಲಿಂಗಯತಿಯ ಹಾಗೆ ತೋಟದ ಸಿದ್ಧಲಿಂಗಯತಿಯ ಮಠ ಪರಂಪರೆಯ ಗುರುಗಳಲ್ಲಿ ಒಬ್ಬನಾಗಿದ್ದಾನೆ. ಅವನು ತನ್ನ ಶೂನ್ಯ ಸಂಪಾದನೆಗಳಲ್ಲಿ ಶಿವಗಣ ಪ್ರಸಾದಿ ಮಹದೇವಯ್ಯ ಹಾಗೂ ಗುಮ್ಮಳಾಪುರದ ಸಿದ್ಧಲಿಂಗಯತಿಯನ್ನು ಸ್ತುತಿಸಿ, ಅವರ ಶೂನ್ಯ ಸಂಪಾದನೆಗಳನ್ನು ಆಧರಿಸಿ ತಾನು ಪರಿಷ್ಕರಣೆ ಮಾಡಿದುದಾಗಿ ಹೇಳಿಕೊಂಡಿದ್ದಾನೆ. ಗುಮ್ಮಳಾಪುರದಲ್ಲಿ ಪೂಜಿಸುವ ಗಣಪನನ್ನು ಗೂಳೂರು ಗಣಪ ಎಂದೇ ಕರೆಯಲಾಗುತ್ತದೆ.

ಗುಮ್ಮಳಾಪುರದ ಮಠ

ಗುಮ್ಮಳಾಪುರದಲ್ಲಿ ಇಂದಿಗೂ ಒಂದು ಶೈವ ಮಠ ಅಸ್ಥಿತ್ವದಲ್ಲಿದ್ದು ಅದು ಪಟ್ಟದ ಮಠವಾಗಿದೆ. ಅದನ್ನು ಸ್ಥಳೀಯರು ಹಿರೇಮಠ ಎಂದು ಕರೆಯುತ್ತಾರೆ. ಈ ಮಠದಲ್ಲಿ ಪ್ರಧಾನವಾಗಿ ವೀರಭದ್ರನನ್ನು ಆರಾಧಿಸಲಾಗುತ್ತಿದೆ. ಈ ಮಠ ಯಾವಾಗ ಸ್ಥಾಪನೆಯಾಯಿತು, ಮಠದ ಗುರುಪರಂಪರೆ ಏನಾಗಿತ್ತು ಎಂಬ ವಿಷಯಕ್ಕೆ ಸಂಬಂಧಿಸಿದಂತೆ ಹೆಚ್ಚಿನ ಆಧಾರಗಳು

ಲಭ್ಯವಾಗುವುದಿಲ್ಲ. ಇದನ್ನು ಸುಮಾರು ೮೦೦ ವರ್ಷಗಳ ಹಿಂದಿನಿಂದ ಬಾಳೆಹೊನ್ನೂರು ರಂಭಾಪುರಿ ವೀರ ಸಿಂಹಾಸನ ಸಂಸ್ಥಾನದ ರೇಣುಕಾಚಾರ್ಯ ಪರಂಪರೆಯ ಪಟ್ಟದ ಮಠವೆಂದು ಹೇಳಲಾಗುತ್ತದೆ.

ಗುಮ್ಮಳಾಪುರದಲ್ಲಿ ನಿರ್ಮಾಣವಾಗಿರುವ ಮಠವು ವಾಸ್ತುಶಿಲ್ಪದ ದೃಷ್ಟಿಯಿಂದ ವಿಜಯನಗರೋತ್ತರ ಕಾಲದ್ದಾಗಿದೆ. ಮಠದ ಸುತ್ತಲೂ ಎತ್ತರವಾದ ಜಗತಿಯ ಪ್ರಾಕಾರವಿದ್ದು, ಅಲ್ಲಿ ವಿಜಯನಗರೋತ್ತರ ಕಾಲದ ಕಂಬಗಳಂತೆಯೇ ಲೌಕಿಕ ಮತ್ತು ಪಾರಮಾರ್ಥಿಕ ಅಂಶಗಳನ್ನು ಸೂಚಿಸುವ ಶಿವಪೂಜಾನಿರತ ಧ್ಯಾನಾಸಕ್ತ ಯತಿಗಳ ಶಿಲ್ಪಗಳನ್ನು ಕೆತ್ತಲಾಗಿದೆ. ಆದರೆ ಇಲ್ಲಿ ಗಮನಿಸಬೇಕಾದ ಮುಖ್ಯ ಸಂಗತಿಯೆಂದರೆ, ಮಠದ ಬಲಭಾಗದಲ್ಲಿ ಸಂಪೂರ್ಣವಾಗಿ ಪಾರಮಾರ್ಥಿಕ ಆಶಯದ ಶಿಲ್ಪಗಳಿದ್ದರೆ, ಎಡಭಾಗದಲ್ಲಿ ಲೌಕಿಕ ಶಿಲ್ಪಗಳನ್ನು ಕೆತ್ತಲಾಗಿದೆ. ಅವುಗಳಲ್ಲಿ ಪ್ರಧಾನವಾಗಿ ಊರ್ಧ್ವರೇತು ನಗ್ನ ಮುನಿ, ಯೋಗಿ/ಯೋಗಿನಿ, ನಾಟ್ಯನಿರತ ನಗ್ನ ಮಹಿಳೆ, ಮಿಥುನ ಶಿಲ್ಪ, ತಾಯಿ-ಮಗು ಶಿಲ್ಪಗಳು ಗಮನಾರ್ಹ. ಇಲ್ಲಿ ಗಮನಿಸಬಹುದಾದ ಮತ್ತೊಂದು ವಿಶೇಷ ಶಿಲ್ಪ ಪ್ರಸವ ಶಿಲ್ಪ. ಪ್ರಸವ ಶಿಲ್ಪಗಳು ರಥಗಳಲ್ಲಿ ಸಾಮಾನ್ಯವಾಗಿ ಕಂಡುಬರುತ್ತವೆ. ಹೀಗೆಯೇ ಭಟ್ಕಳದ ಕೇತಪ್ಪಯ್ಯ ದೇವಾಲಯದ ಅಧಿಷ್ಠಾನದಲ್ಲಿ ಬಹಳ ಸುಂದರವಾದ ಪ್ರಸವ ಶಿಲ್ಪವಿದೆ.

ಕೆಂಪೇಗೌಡ ಬೆಂಗಳೂರು ಸುತ್ತಮುತ್ತ ಸುಮಾರು ೩೦೦ ಮಠಗಳನ್ನು ನಿರ್ಮಿಸಿದನೆಂದು ಹೇಳಲಾಗುತ್ತದೆ.[೨೫] ಆದರೆ, ಕೆಂಪೇಗೌಡನಿಗೂ ಮೊದಲೇ ಅಲ್ಲಿ ಮಠ ಅಸ್ತಿತ್ವದಲ್ಲಿರಬಹುದು ಎಂಬುದಕ್ಕೆ ಗುಮ್ಮಳಾಪುರದ ಕ್ರಿ.ಶ. ೧೪೭೪ರ ದಾನಶಾಸನವು ಸೂಚನೆಗಳನ್ನು ನೀಡುತ್ತದೆ. ಗುಮ್ಮಳಾಪುರದ ದಾನ ಶಾಸನವು ಅಲ್ಲಿನ ವೆಂಕಟೇಶ ಉಪಾಧ್ಯಾಯರಿಗೆ ರಾಯಸಮುದ್ರ ಹಾಗೂ ತಮ್ಮಾಪುರ ಗ್ರಾಮಗಳನ್ನು ದಾನ ನೀಡುವಾಗ ಅಲ್ಲಿದ್ದ ಹಲವಾರು ಶರಣರನ್ನು ದಾಖಲಿಸುತ್ತದೆ. ಎಂದರೆ ಮಠದ ವಾಸ್ತು ನಿರ್ಮಿತಿ ಪ್ರಾರಂಭವಾಗುವ ಮೊದಲೇ ಅಲ್ಲಿದ್ದ ಮಠದಲ್ಲಿ ಶರಣರು ನೆಲೆ ನಿಂತಿದ್ದರೆಂದು ಊಹಿಸಬಹುದು. ಬಹುಶಃ ಈಗಾಗಲೇ ಮೇಲೆ ತಿಳಿಸಲಾದಂತೆ ಕಲ್ಯಾಣದ ಕ್ಷೋಭೆಯ ನಂತರ ದಕ್ಷಿಣಾಭಿಮುಖವಾಗಿ ಬಂದ ಶರಣರು, ಕಾಡಂಚಿನಲ್ಲಿದ್ದ ಗುಮ್ಮಳಾಪುರವನ್ನು ಆಯ್ಕೆಮಾಡಿಕೊಂಡು ನೆಲೆ ನಿಂತರೆಂದು ತೋರುತ್ತದೆ. ಗುಮ್ಮಳಾಪುರದ ಪಕ್ಕದಲ್ಲಿಯೇ ಗುಮ್ಮಹಾಳ ಎಂಬ ಗ್ರಾಮವಿದ್ದು, ನಂತರ ಅದೇ ಹೆಸರಿನ ಪುರ ನಿರ್ಮಿಸಿ ಅಲ್ಲಿ ಶರಣರಿಗೆ ಆಶ್ರಯ ನೀಡಿರಬಹುದು. ಈ ಗುಮ್ಮಳಾಪುರ ನಂತರದ ಕಾಲಘಟ್ಟದಲ್ಲಿ ಶರಣರಿಗೆ, ವೀರಶೈವೀಯ ಧರ್ಮದವರಿಗೆ ಆಕರ್ಷಣೆಯ ಕೇಂದ್ರವಾಗಿ ಪರಿಣಮಿಸುತ್ತದೆ. ಶಿವತತ್ತ್ವ ಚಿಂತಾಮಣಿಯ ಲಕ್ಕಣ ದಂಡೇಶನೂ ಬೇರೆ ಬೇರೆಕಡೆಯಲ್ಲಿದ್ದ ಶರಣರೂ ಗುಮ್ಮಳಾಪುರದ ದಾಸೋಹದ ಮಠಕ್ಕೆ ಬಂದು ಇರುತ್ತಿದ್ದುದನ್ನು ಉಲ್ಲೇಖಿಸುತ್ತದೆ.[೨೫]

ಕರಸ್ಥಲ ನಾಗಲಿಂಗದೇವನಿಗೆ ವೈರಾಗ್ಯ ಉಂಟಾಗಿ ಅವನು ಊರೂರು ಸುತ್ತುತ್ತಾ ಗುಮ್ಮಳಾಪುರಕ್ಕೆ ಬಂದು ಅಲ್ಲಿ ಹಲವಾರು ಪವಾಡಗಳನ್ನು ಮೆರೆದನೆಂದು ರುದ್ರಕವಿ ಉಲ್ಲೇಖಿಸುತ್ತಾನೆ. ಹಲವಾರು ಕವಿಗಳ ಕಾವ್ಯ ವರ್ಣನೆಗೂ ಗುಮ್ಮಳಾಪುರ ಪಾತ್ರವಾಗಿದೆ. ಹೀಗೆ ೧೫-೧೬ನೇ ಶತಮಾನದಲ್ಲಿ ಅಸಂಖ್ಯ ಶರಣರು, ಕವಿಗಳು, ಅನುಭಾವಿಗಳನ್ನು ಆಕರ್ಷಿಸಿದ ಗುಮ್ಮಳಾಪುರದ ನೆಲದಲ್ಲಿ ಅಂಕುರಿಸಿದ ಶೂನ್ಯ ಸಂಪಾದನೆಯ ಬೀಜ ಹೆಮ್ಮರವಾಗಿ ನಂತರ ಎಲ್ಲ ಕಡೆಗೂ ಪ್ರಸರಿಸುತ್ತಾ ಸಾಗಿತು ಎಂದು ಊಹಿಸಬಹುದಾಗಿದೆ.

ಅಡಿ ಟಿಪ್ಪಣಿಗಳು

೧. ಸ್ಮಿತಾರೆಡ್ಡಿ, ಆನೇಕಲ್ಲಿನ ಮೇಲೂರು ದಿಣ್ಣೆ ಮತ್ತುಕಾಳನಾಯಕನಹಳ್ಳಿಯ ಶಿಲಾಯುಗದ ನಿವೇಶನಗಳು, ಇತಿಹಾಸ ದರ್ಶನ: ೧೧, ಪು.೨೩.

೨. ಸ್ಮಿತಾರೆಡ್ಡಿ ಡಿ: ದಾರಾವಂದದ ಇತಿಹಾಸ ಮತ್ತು ಪ್ರಾಚ್ಯಾವಶೇಷಗಳು, ಇತಿಹಾಸ ದರ್ಶನ-೨೯, ಪು. ೩೪೫.

೩. "ಶಿವನ ಕೈಲಾಸಾದ್ರಿಯೇ ಮನುಜರಜೆಯಲಂ/ ತವತರಿಸಿದಂತು ಬಸವೇಶ್ವರನ ಕಲ್ಯಾಣ/ಭುವನವಜೆಯಲ್ ನೆಲೆಸಲುತ್ತರವ ಬಿಟ್ಟು ದಕ್ಷಿಣ ಭಾಗಕೆಯ್ದಿದಂತೆ/ವಿವರಿಸುವಡೆಸೆವ ಜಂಗಮದ ಸಂಚಾರದಿಂ/ಭವಿಯ ಮುಖನೋಡದ ಮಹಾಭಕ್ತರಿರವನಿಂ/ ದವೆ ಮೆಱೆವ ಗುಮ್ಮಹಾಳೆಸೆವ ಪುರವಜೆವವರ ಚರಣಾಭುಜಕೆ ಶರಣು": (ಲಕ್ಕಣ್ಣ ದಂಡೇಶ : ಶಿವತತ್ತ್ವ ಚಿಂತಾಮಣಿ-೮೮/೬೧).

೪. ನರಸಿಂಹಾಚಾರ್. ಆರ್: ಕರ್ನಾಟಕ ಕವಿಚರಿತೆ-೨, ಪು. ೨೦೦.

೫. ನರಸಿಂಹಾಚಾರ್. ಆರ್: ಕರ್ನಾಟಕ ಕವಿಚರಿತೆ-೨, ಪು. ೪೩೦.

೬ ನರಸಿಂಹಾಚಾರ್. ಆರ್: ಕರ್ನಾಟಕ ಕವಿಚರಿತೆ-೨, ಪು. ೪೯.

೭. ಗುಂಡಪ್ಪ ಡಿ.ವಿ: ಜ್ಞಾಪಕ ಚಿತ್ರಶಾಲೆ-೮, ಪು. ೧೭೪.

೮. ಸ್ಮಿತಾರೆಡ್ಡಿ, ಕವಿ ವೆಂಕಟೇಶನ ಪೂರ್ವಿಕರ ಅಪ್ರಕಟಿತ ಶಾಸನ ಮತ್ತು ಕಾಲ, ಕ.ಸಾ.ಪರಿಷತ್ಪತ್ರಿಕೆ, ಸಂ.೧-೨, ೨೦೧೧, ಪು. ೮೫-೯೩.

೯. ನರಸಿಂಹಾಚಾರ್. ಆರ್: ಕರ್ನಾಟಕ ಕವಿಚರಿತೆ-೨, ಪು.೮೮ (ಕ.ಕ.ಚ.-೨/೮೮).

೧೦. ನಂಜುಂಡಸ್ವಾಮಿ. ಬಿ: ಗೌಡಕುಲವಿಭೂಷಣ ಜಯಪ್ರಶಸ್ತಿಯ ಕರ್ತೃ ಹೊನ್ನಕವಿ, ಸರ್ಪಭೂಷಣಶ್ರೀ, ಪು. ೫೯-೬೩.

೧೧. ತಮಿಳುನಾಡಿನ ಕನ್ನಡ ಶಾಸನಗಳು: ಸಂಪುಟ-೪, ಸಂ-೭೧.

೧೨. ಕೆಂಚವೀರಣ್ಣೊಡೆಯರು ಮತ್ತೊಂದು ಶೂನ್ಯ ಸಂಪಾದನೆಯನ್ನು ಬರೆದಿದ್ದು, ಒಟ್ಟು ಐದು ಶೂನ್ಯಸಂಪಾದನೆಗಳೆಂದು ಎಂದು ಕೆಲವು ವಿದ್ವಾಂಸರುಅಭಿಪ್ರಾಯಪಟ್ಟಿದ್ದರೂ, ಹೆಚ್ಚಿನ ವಿದ್ವಾಂಸರು ಕೆಂಚವೀರಣ್ಣೊಡೆಯರ ಶೂನ್ಯ ಸಂಪಾದನೆ ಹಲಗೆಯಾರ್ಯನದೇ ಆಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

೧೩. ಚಿದಾನಂದ ಮೂರ್ತಿ. ಎಂ: ಶೂನ್ಯ ಸಂಪಾದನೆಯನ್ನು ಕುರಿತು, ಪು. ೮೯.

೧೪. ಜಿ.ಎಸ್. ಸಿದ್ಧಲಿಂಗಯ್ಯ: ಶಿವಗಣಪ್ರಸಾದಿ ಮಹದೇವಯ್ಯಗಳ ಶೂನ್ಯ ಸಂಪಾದನೆ, ಪು. ೨೦-೨೮(ಉದೃತ ಬಸವರಾಜ ಸಬರದ (ಸಂ): ಶೂನ್ಯ ಸಂಪಾದನೆ).

೧೫. ಅದೇ, ಪು. ೨೫.

೧೬. ಚಿದಾನಂದ ಮೂರ್ತಿ. ಎಂ: ಶೂನ್ಯ ಸಂಪಾದನೆಯನ್ನು ಕುರಿತು, ಪು. ೨೯.

೧೭. ಭೂಸನೂರು ಮಠ ಸಂ.ಶಿ. (ಸಂ): ಗೂಳೂರು ಸಿದ್ದವೀರಣ್ಣನ ಶೂನ್ಯ ಸಂಪಾದನೆ ೧೯೯೮/೬).

೧೮. ಕಲಬುರ್ಗಿ ಎಂ.ಎಂ.: ಶೂನ್ಯ ಸಂಪಾದನೆಗಳು ಎಷ್ಟು ? ಕಾಲಾನುಕ್ರಮ ಯಾವುದು?, ಪು.೫೬ (ಉದೃತ ಬಸವರಾಜ ಸಬರದ (ಸಂ).

೧೯. ಸಂಗಮೇಶ ಸವದತ್ತಿ ಮಠ: ಗುಮ್ಮಳಾಪುರದ ಸಿದ್ಧಲಿಂಗದೇವನ ಶೂನ್ಯ ಸಂಪಾದನೆ, (ಬಸವರಾಜ ಸಬರದ (ಸಂ): ಪು. ೩೮).

೨೦. ರಾಜಶೇಖರಪ್ಪ ಬಿ : ಎಡೆಯೂರು ತೋಂಟದ ಸಿದ್ಧಲಿಂಗೇಶ್ವರರ ಮಠದ ಶಾಸನ-ಒಂದು ಅಧ್ಯಯನ, ಇತಿಹಾಸ ದರ್ಶನ, ಪು. ೧೩೮).

೨೧. ವಿದ್ಯಾಶಂಕರ ಎಸ್ (ಸಂ): ಹಲಗೆಯಾರ್ಯನ ಶೂನ್ಯ ಸಂಪಾದನೆ, ಪು. ೧, ೨೦೧೮.

೨೨. ಶಿರೂರ್ ಬಿ ವಿ: ಹಲಗೆಯಾರ್ಯನ ಶೂನ್ಯ ಸಂಪಾದನೆ, (ಬಸವರಾಜ ಸಬರದ (ಸಂ): ಶೂನ್ಯ ಸಂಪಾದನೆ. ಪು. ೩೦).

೨೩. ನಂಜುಂಡಸ್ವಾಮಿ ಬಿ: ಹಲಗೆಯಾರ್ಯನ ಬಗೆಗಿನ ಇತ್ತೀಚನ ಶೋಧನೆಗಳು, ಬಸವಪಥ ಸಂ.೨೨, ಸಂಚಿಕೆ ೧೨, ೨೦೦೧.

೨೪. ಅಭಿಶಂಕರ್ ಕೆ: ಬೆಂಗಳೂರು ಡಿಸ್ಟ್ರಿಕ್ಟ್ ಗೆಜೆಟಿಯರ್, ಪು. ೧೫೦, ೧೯೯೦.

೨೫. ಅಲ್ಲಿಪ್ಪ ಚೊಕ್ಕದೇವಪ್ಪಯ್ಯ ಗುಬ್ಬಿಯೂ/ ಮಲ್ಲಣ್ಣ ನಮ್ಮಣ್ಣನ ನಾಗಪ್ಪನೂ ಹೊನ್ನ/ಮಲ್ಲಣ್ಣನವರೊಳಗೆ ಮಳವಳಿಯ ಬಸವಣ್ಣ ಮಾನುಗಲ್ಲಾ ನಾಗಪ/ಅಲ್ಲಿಯವರೊಳಗಾದ ದಾಸೋಹದಾ ಮಠಗಳಲ್ಲಿ/ ತಿಂಥಿಣಿವಡೆದು ನೆರೆ ಭಕ್ತಿಮಯವಾಗಿ"-(ಲಕ್ಕಣ್ಣ ದಂಡೇಶ : ಶಿವತತ್ತ್ವ ಚಿಂತಾಮಣಿ, ಸಂ. ೩೮/೬೧).

ವಿಜಯನಗರೋತ್ತರ ಕಾಲದ ಮಹಿಳಾ ಆಳ್ವಿಕೆ

ಸಂಧ್ಯಾ ವಿ.*

ವಿಜಯನಗರೋತ್ತರ ಕಾಲದಲ್ಲಿ, ಮಹಿಳೆಯರ ಆಳ್ವಿಕೆ ಹೊಸದಾಗಿ ಆರಂಭವಾದದ್ದಲ್ಲ. ಕರ್ನಾಟಕದ ಇತಿಹಾಸದಲ್ಲಿ, ಆಡಳಿತನಡೆಸಿದ ಮಹಿಳಾಪರಂಪರೆಯನ್ನು ಬದಾಮಿ ಚಳುಕ್ಯರ ಕಾಲದಿಂದಲೇ ಗುರುತಿಸಬಹುದು. ಇಮ್ಮಡಿ ಪೊಲೆಕೇಶಿಯ ಸೊಸೆ ವಿಜಯಭಟ್ಟಾರಿಕೆ ತನ್ನ ಪತಿಯ ಸಹೋದರ ವಿಕ್ರಮಾದಿತ್ಯನ ಅಧೀನದಲ್ಲಿ ತನ್ನದೇ ಆದ ಗ್ರಾಮಗಳಲ್ಲಿ ಆಳ್ವಿಕೆ ನಡೆಸಿ, ತಾಮ್ರಪಟಗಳನ್ನು (ನೆರೂರು, ಕ್ರೋಚೆ) ಹೊರಡಿಸಿದ್ದಾಳೆ. ಮುಂದೆ ಗಂಗ, ರಾಷ್ಟ್ರಕೂಟರ ಮಹಿಳೆಯರೂ ಕೂಡ ರಾಜಕೀಯದಲ್ಲಿ ಆಸಕ್ತಿ ವಹಿಸಿದವರಾಗಿದ್ದರು. ಹತ್ತರಿಂದ ಹನ್ನೆರಡನೆಯ ಶತಮಾನಗಳ ಕಾಲಘಟ್ಟದಲ್ಲಿ ಆಳ್ವಿಕೆ ನಡೆಸಿದ ಕಲ್ಯಾಣದ ಚಾಲುಕ್ಯರು, ಹೊಯ್ಸಳರ ಮನೆತನದ ಮಹಿಳೆಯರು ತಮ್ಮ ಪತಿಯೊಂದಿಗೆ ರಾಜಧಾನಿಯಿಂದ ಅಥವಾ ತಮಗೆಂದೇ ಗೊತ್ತು ಪಡಿಸಿದ ಕೆಲವು ಪ್ರದೇಶಗಳಲ್ಲಿ ಸ್ವತಂತ್ರವಾಗಿ ಆಳ್ವಿಕೆ ನಡೆಸಿದ್ದಾರೆ. ಆದರೆ, ವಿಜಯನಗರದ ಅರಸರ ಆಳ್ವಿಕೆಯಲ್ಲಿ ಮಹಿಳೆಯರು ಆಡಳಿತ ನಡೆಸಿರುವುದು ತೀರಾ ಕಡಿಮೆ ಎನ್ನಬಹುದು. ಕರಾವಳಿ ಅರಸು ಮನೆತನದ ಕೆಲವು ಮಹಿಳೆಯರ ಆಳ್ವಿಕೆಯನ್ನು ಹೊರತು ಪಡಿಸಿದರೆ, ಈ ಕಾಲಘಟ್ಟದಲ್ಲಿ ಇತರ ಭಾಗದ ಮಹಿಳೆಯರ ಆಳ್ವಿಕೆಯು ತೀರಾ ಅಪರೂಪದ್ದಾಗಿದೆ.

ವಿಜಯನಗರ ಸಾಮ್ರಾಟರ ಕಾಲದಲ್ಲಿ ಮಹಿಳೆಯರ ಆಳ್ವಿಕೆ ಗಣನೀಯವಾಗಿ ಕಡಿಮೆ ಆಗುತ್ತಾ ಬಂದ ಸಂದರ್ಭಕ್ಕೆ ಹೋಲಿಸಿದರೆ ವಿಜಯನಗರೋತ್ತರ ಕಾಲಘಟ್ಟದಲ್ಲಿ ಕೆಲವು ಮಹಿಳೆಯರು ಸ್ವಯಂ ಪ್ರೇರಿತರಾಗಿ ಆಡಳಿತದಲ್ಲಿ ಆಸಕ್ತಿ ತೋರಿರುವುದಷ್ಟೇ ಅಲ್ಲದೆ, ಗುರುತರವಾದ ಸಾಹಸವನ್ನೂ ಮೆರೆದಿದ್ದಾರೆ. ಈ ಕಾಲಘಟ್ಟದಲ್ಲಿ ಮಹಿಳೆಯರ ಆಡಳಿತಕ್ಕೆ ಒಳಪಡುತ್ತಿದ್ದದ್ದು ಸಣ್ಣ-ಪುಟ್ಟ ಪ್ರದೇಶ ಅಥವಾ ಆಳ್ವಿಕೆ ನಡೆಸಿದ ಕಾಲಾವಧಿಯು ಅಲ್ಪಕಾಲದ್ದೆನ್ನುವ ಕಾರಣಗಳಿಂದಾಗಿ, ಈ ಕಾಲದ ಮಹಿಳೆಯರ ಹಲವಾರು ಸಂಗತಿಗಳು ಗಣನೆಗೆ ಬಾರದೆ ಹೋಗಿದೆ. ಆದರೆ, ತಮ್ಮ ಪಾಳೆಯ ಪಟ್ಟನ್ನು ಉಳಿಸುವುದಕ್ಕಾಗಿಯೋ, ಮುಂದಿನ ಉತ್ತರಾಧಿಕಾರಿಯನ್ನು ಗದ್ದುಗೆಯಲ್ಲಿ ಕೂರಿಸುವ ಪ್ರಯತ್ನದಲ್ಲಿಯೋ, ತಲೆದೋರಿದ ಅರಾಜಕತೆಯನ್ನು ತಡೆಯಲೆಂದೋ ಗಾದಿಯನ್ನು ಹಿಡಿದಿರುವ ಇಂತಹ ಮಹಿಳೆಯರ ಸಾಧನೆ ಕೂಡ ಯಾವುದೇ ಪ್ರಸಿದ್ಧ ಅರಸು ಮನೆತನದ ಮಹಿಳೆಯರಿಗೆ ಕಡಿಮೆಯೇನಲ್ಲ ಎನ್ನುವುದು ಇವರ ಕುರಿತು ನಡೆಸುವ ಅಧ್ಯಯನಗಳಲ್ಲಿ ಗಮನಿಸಬಹುದು.

ಈ ಹಿಂದೆ ತಿಳಿಸಿದಂತೆ ಹತ್ತರಿಂದ ಹನ್ನೆರಡನೆಯ ಶತಮಾನದ ಅವಧಿಯಲ್ಲಿ ಆಡಳಿತ ನಡೆಸಿದ ಮಹಿಳೆಯರು ತಮ್ಮ ಪತಿ. ಸಹೋದರ ಅಥವಾ ಇತರ ಬಂಧುಗಳ ಸುರಕ್ಷಾ ಕೋಟೆಯೊಳಗೆ ತಮ್ಮದೇ ಆದ ಪ್ರದೇಶಗಳಲ್ಲಿ ಆಳ್ವಿಕೆ ನಡೆಸಿದ್ದಾರೆ. ಉತ್ತಮ ಸಚಿವರ ಸಹಕಾರ ಅವರಿಗಿದ್ದುದನ್ನೂ ಶಾಸನಗಳು ತಿಳಿಸುತ್ತವೆ. ಆದರೆ ವಿಜಯನಗರೋತ್ತರ ಕಾಲದಲ್ಲಿ ಆಳ್ವಿಕೆ ನಡೆಸಿದ ಮಹಿಳೆಯರಿಗೆ ಇಂತಹ ಸಹಕಾರ ತೀರಾ ಅಪರೂಪದ್ದಾಗಿದೆ. ಕೆಲವರ ಸಹಕಾರ ದೊರೆತಿದ್ದರೆ, ಹಲವರ ವಿರೋಧಗಳನ್ನು ಹೋರಾಟದೋಪಾದಿಯಲ್ಲಿ ಎದುರಿಸಬೇಕಾಗಿ ಬಂದಿದೆ. ಅಲ್ಲದೆ ಒಳಜಗಳಗಳೊಂದಿಗೆ, ಹೊರಗಿನ ಧಾಳಿಗಳೂ ವಿಪರೀತವಾಗಿತ್ತು. ಈ ಅವಧಿಯಲ್ಲಿ ದಕ್ಷಿಣ ಭಾರತದಲ್ಲಿ ಏಕ ಸಾರ್ವಭೌಮತ್ವ ಇರಲಿಲ್ಲ. ಉತ್ತರದ ಮೊಗಲರ ಸೈನ್ಯ, ಬಿಜಾಪುರದ ಅರಸರ ಸೈನ್ಯ, ಮರಾಠರ ಸೈನ್ಯ ಪದೇ ಪದೇ ದಾಳಿ ನಡೆಸಿ ಸಣ್ಣಪುಟ್ಟ ಪಾಳೆಗಾರರ ಊರುಗಳನ್ನು ಧೂಳಿಪಟ ಮಾಡುತ್ತಿದ್ದವು. ಇಂತಹ ವಿಷಮ ಪರಿಸ್ಥಿತಿಯಲ್ಲಿ ಮಹಿಳೆಯರು ತಮ್ಮ ಪಾಳೆಯಪಟ್ಟನ್ನು ಉಳಿಸುವಲ್ಲಿ ಪಟ್ಟ ಶ್ರಮ ಬಹಳ ಸಾಹಸಮಯವಾದುದಾಗಿರುತ್ತಿತ್ತು.

ಈ ಕಾಲಘಟ್ಟದಲ್ಲಿ ಆಳ್ವಿಕೆ ನಡೆಸಿದ ಮಹಿಳೆಯರಲ್ಲಿ, ಕೆಳದಿ, ಮೈಸೂರು ಮೊದಲಾದ ಪ್ರಸಿದ್ಧ ಮನೆತನದ ಅಧ್ಯಯನ ವಿಸ್ತೃತವಾಗಿ ನಡೆದು ಬಂದಿದೆ. ಇದೇ ರೀತಿ ಕರಾವಳಿ ತೀರದ ಅಬ್ಬಕ್ಕ, ಚೆನ್ನಭೈರಾದೇವಿ ಮೊದಲಾದ ಅರಸಿಯರ

* ಉಪನ್ಯಾಸಕರು, ದಯಾನಂದ ಸಾಗರ್ ಕಾಲೇಜು, ಬೆಂಗಳೂರು.

ಅಧ್ಯಯನ ನಡೆದಿದ್ದರೂ ನಿಖರವಾದ ವಿಚಾರ ಇನ್ನೂ ತಿಳಿಯದಾಗಿದೆ. ಇವರನ್ನು ಹೊರತು ಪಡಿಸಿದರೆ, ಹಲವಾರು ಮನೆತನದ ಅರಸಿಯರ ಹೆಸರು ಬೆಳಕಿಗೇ ಬಂದಿಲ್ಲ. ಉದಾಹರಣೆಗೆ ಮೂಲ್ಕಿ ಅರಸು ಮನೆತನದ ಚೆನ್ನಮ್ಮ. ಇವಳು ವಿದೇಶಿ ಪ್ರವಾಸಿಗರ (ಪಿಯತ್ರೋ ದೆಲ್ಲಾವೆಲ್ಲೆ) ಬರಹಗಳಲ್ಲಿ 'ಕಾರ್ನಾಟು ರಾಣಿ' ಎಂದು ಕರೆಸಿಕೊಂಡಿದ್ದಾಳೆ. 'ವ್ಯಾಪಾರ ಚತುರೆ' ಎಂಬ ಬಿರುದನ್ನು ಗಳಿಸಿದ್ದ ಇವಳು, ಸಾಹಸಮಯ ಯುದ್ಧ ನಡೆಸುವಲ್ಲಿ, ಪ್ರಜಾಪಾಲನೆಯಲ್ಲಿ ಕೂಡ ಒಳ್ಳೆಯ ಹೆಸರನ್ನು ಗಳಿಸಿದ್ದಳು. ಇವಳು ಹೊರಡಿಸಿದ್ದ ಕೆಲವು ಶಾಸನಗಳೂ ದಾಖಲಾಗಿವೆ[೧]. ಇಂತಹ ಅರಸಿಯರ ಕುರಿತಾದ ವಿಚಾರ ಹೆಚ್ಚು ಚರ್ಚೆಗೆ ಒಳಗಾಗಿಲ್ಲ.

ಅಧಿಕಾರ ಪಡೆದುಕೊಂಡು ಯಶಸ್ವಿಯಾಗಿ ಆಡಳಿತ ನಡೆಸಿದ ಅರಸಿಯರು

ರಾಜ್ಯವು ಅರಾಜಕತ್ವಕ್ಕೆ ಈಡಾದಂತಹ ವಿಷಮ ಪರಿಸ್ಥಿತಿಯಲ್ಲಿ, ಅನಿವಾರ್ಯ ಕಾರಣಗಳಿಂದಾಗಿ ಆಳ್ವಿಕೆ ಕೈಗೊಳ್ಳುವ ಸಂದರ್ಭ ಎದುರಾದಾಗ, ಯಶಸ್ವಿಯಾಗಿ ಆಳ್ವಿಕೆ ನಡೆಸಿದ ಅರಸಿಯರು ಕೆಲವೇ ಮಂದಿ. ಅವರಲ್ಲಿ ಕೆಳದಿ ಚೆನ್ನಮ್ಮ ಅಗ್ರಸ್ಥಾನದಲ್ಲಿ ನಿಲ್ಲುತ್ತಾಳೆ. ಪತಿ ಸೋಮಶೇಖರ ಮರಣಿಸಿದ ಮೇಲೆ ಪರ, ವಿರೋಧಗಳನ್ನು ಎದುರಿಸಿ ಸಾಹಸದಿಂದ ಅಧಿಕಾರವನ್ನು ಕೈಗೊಂಡ ಚೆನ್ನಮ್ಮ ಹೊರಗಿನ ಶತ್ರುಗಳಲ್ಲದೆ, ಒಳಗಿನ ಶತ್ರುಗಳನ್ನೂ ಮಣಿಸಬೇಕಾಗಿರುತ್ತದೆ. ಕೆಲವರನ್ನು ತನ್ನ ಪರವಾಗಿ ನಿಷ್ಠೆಯಿಂದ ಕಾರ್ಯ ನಿರ್ವಹಿಸುವಂತೆ ಮನಃ ಪರಿವರ್ತಿಸಿ, ಮತ್ತೆ ಕೆಲವರಿಗೆ ಶಿಕ್ಷೆವಿಧಿಸಿ, ನಿಯಂತ್ರಿಸುತ್ತಾಳೆ. ಹೊರಗಿನ ಶತ್ರುಗಳನ್ನು ದಿಟ್ಟತನದಿಂದ ಹೋರಾಡಿ ಹೊಡೆದೋಡಿಸುತ್ತಾಳೆ. ಇವಳ ಯುದ್ಧನೀತಿ, ತೆರಿಗೆ ನೀತಿ, ಆಡಳಿತ ಕ್ರಮ ವಿದ್ವಾಂಸರಿಂದ ಬಹು ಮೆಚ್ಚುಗೆ ಪಡೆದಿದೆ. ಅಪುತ್ರಕಳಾದರೂ, ಪತಿಯನ್ನು ಕಳೆದುಕೊಂಡ ತಾನು ವಿಧಿವತ್ತಾಗಿ ದತ್ತು ಸ್ವೀಕರಿಸಿ, ತನ್ನ ಸಾಮ್ರಾಜ್ಯದ ಮುಂದಿನ ಉತ್ತಮ ವಾರಸುದಾರನನ್ನು ರೂಪಿಸುತ್ತಾಳೆ. ಕೆಳದಿಯ ಅರಸು ಮನೆತನವು ಮುಂದು ವರೆಯುವಲ್ಲಿ ಇವಳ ಶೌರ್ಯ, ಸಾಧನೆಗಳು ಮಹತ್ವಪೂರ್ಣದ್ದಾಗಿದೆ. ಆಶ್ರಯ ಬೇಡಿ ಬಂದ ಶಿವಾಜಿಯ ಮಗನ ಪರವಾಗಿ ಮೊಗಲರ ಸೈನ್ಯದೊಂದಿಗೆ ಕಾದಾಡಲೂ ಕೂಡಾ ಹಿಂಜರಿಯುವುದಿಲ್ಲ. ಇವಳ ಸಾಹಸ, ಸಾಧನೆಗಳು 'ಕೆಳದಿ ನೃಪವಿಜಯ'[೨] ಎಂಬ ಕೃತಿಯಲ್ಲಷ್ಟೇ ಅಲ್ಲದೆ, ಈಕೆಯ ದತ್ತು ಪುತ್ರ ಬಸವಪ್ಪ ನಾಯಕ ರಚಿಸಿರುವ 'ಶಿವತತ್ತ್ವ ರತ್ನಾಕರ'ದಲ್ಲಿ ಸಾಂದರ್ಭಿಕವಾಗಿ ಹಾಗೂ 'ಕಾಳಿಕಾ ಖಾಂಡ'[೩] ಎಂಬ ಬೃಹತ್ ಕಾವ್ಯದಲ್ಲಿ ಸುದೀರ್ಘವಾಗಿ ಬಣ್ಣಿತವಾಗಿದೆ.

ಕೆಳದಿಯ ಚೆನ್ನಮ್ಮನಂತೆಯೇ ಸುರಪುರದ ರಾಣಿ ಕಾಂತಮ್ಮ ಕೂಡ ತನ್ನ ಪಾಳೆಯ ಪಟ್ಟು ಮುಂದುವರೆಯಲು ಕಾರಣಳಾದ ದಿಟ್ಟ ಮಹಿಳೆಯಾಗಿದ್ದಾಳೆ ಇವಳು ರಾಜಾ ಇಮ್ಮಡಿ ವೆಂಕಟಪ್ಪನಾಯಕನ ಪತ್ನಿ (೧೮೦೧–೧೮೦೩). ಪತಿಯ ಮರಣಾನಂತರ ಮೊಮ್ಮಗಳು ವೆಂಕಟರಂಗಮ್ಮಳನ್ನು ಸಿಂಹಾಸನದ ಮೇಲೆ ಕೂಡಿಸಿ ಅವಳ ಪರವಾಗಿ ಆಳ್ವಿಕೆ ನಡೆಸುತ್ತಾಳೆ. ಆ ಸಂದರ್ಭದಲ್ಲಿ ಒಬ್ಬಮಗ ರಮಣಪ್ಪನಾಯಕ ಕರ್ನೂಲಿಗೆ ಹೋಗಿ ನೆಲೆಸಿದ್ದರೆ ಮತ್ತೊಬ್ಬ ಮಗ ಬಾಪುಸಾಹೇಬ ತೀರಿಕೊಂಡಿರುತ್ತಾನೆ. ಅರಾಜಕತ್ವ ತಲೆದೋರಬಾರದೆಂದು ಕಾಂತಮ್ಮಳು ಮಗ ಬಾಪುಸಾಹೇಬನ ಮಗಳಾದ ವೆಂಕಟರಂಗಮ್ಮಳನ್ನು ಸಿಂಹಾಸನದ ಮೇಲೆ ಕೂಡಿಸಿ ರಾಜ್ಯಭಾರವನ್ನು ವಹಿಸಿಕೊಳ್ಳುತ್ತಾಳೆ. ಮುಂದೆ ಮಗ ರಮಣಪ್ಪನಾಯಕನ ಮಗ ಪಿಡ್ಡನಾಯಕನಿಗೆ ಪಟ್ಟಕಟ್ಟಿ ರಾಜ್ಯಭಾರದಲ್ಲಿ ಸಲಹೆ–ಸಹಕಾರ ನೀಡುತ್ತಾಳೆ[೪]. ಇವಳು ಸ್ವತಂತ್ರವಾಗಿ ಒಂದು ವರ್ಷ ಕಾಲ ರಾಜ್ಯಭಾರ ನಡೆಸಿದ್ದು ಕೂಡ ಸಾಧನೆಯೇ ಆಗಿದೆ.

ಪತಿಯ ಅಕಾಲಿಕ ಮರಣದ ನಂತರ ಅಧಿಕಾರ ನಡೆಸುವ ಜವಾಬ್ದಾರಿಯನ್ನು ಸಮರ್ಥವಾಗಿ ಎದುರಿಸುವುದಲ್ಲದೆ, ಕೋಟೆ ನಿರ್ಮಾಣ, ನಗರ ನಿರ್ಮಾಣದಂತಹ ಕಾರ್ಯವನ್ನು ಕೈಗೊಂಡ ಮಹಿಳೆಯರ ಸಾಧನೆಗಳಿಗೂ ಹಲವಾರು ಉದಾಹರಣೆಗಳು ದೊರಕುತ್ತವೆ. ಅಂತವರಲ್ಲಿ, ಕೆಂಪೇಗೌಡನ ಮಡದಿ ಹಲಸೂರಮ್ಮ ಕೂಡಾ ಒಬ್ಬಳು. ಉಜ್ಜನಿ ಮೂಲದ ಕೆಂಪೇಗೌಡ ಶಿಡ್ಲಘಟ್ಟದ ಉತ್ತರಕ್ಕಿರುವ ಅಬ್ಲೋಡಿನ ಸುತ್ತಮುತ್ತಲ ಪ್ರದೇಶದಲ್ಲಿ ಆಳ್ವಿಕೆ ನಡೆಸುತ್ತಿರುವಾಗ, ವೆಲ್ಲೂರಿನ ಕದನದಲ್ಲಿ ಭಾಗವಹಿಸಿ ನಿಧನನಾಗುತ್ತಾನೆ. ಇವನ. ನಂತರ ಅಪ್ರಾಪ್ತ ವಯಸ್ಕನಾದ ಮಗ ಪ್ರೌಡನಾಗುವ ವರೆಗೂ ಹಲಸೂರಮ್ಮ ಆಳ್ವಿಕೆ ಕೈಗೊಳ್ಳುತ್ತಾಳೆ. ಇವಳು ಕ್ರಿ.ಶ. ೧೫೨೬ರಲ್ಲಿ ತನ್ನ ಮಾವ ಸಿಡಿಲೇಗೌಡನ ಹೆಸರಿನಲ್ಲಿ ಶಿಡ್ಲಘಟ್ಟವನ್ನೂ, ಅಲ್ಲಿನ ನಿವಾಸಿಗಳ ಸೌಕರ್ಯಕ್ಕಾಗಿ ಕೆರೆಯನ್ನೂ ನಿರ್ಮಾಣ ಮಾಡಿದಳೆಂದು ದಾಖಲೆ ಹೇಳುತ್ತದೆ. ಹಲಸೂರಮ್ಮನ ನಂತರ ಇವಳ ಮಗ ಎರಡನೆಯ ಶಿವನೇಗೌಡ ಹಾಗು ಇವನ ಉತ್ತರಾಧಿಕಾರಿಗಳು ೧೫೭೬ರ ವರೆಗೂ ಇಲ್ಲಿ ಆಳ್ವಿಕೆ ನಡೆಸಲು ಹಲಸೂರಮ್ಮ ಹಾಕಿಕೊಟ್ಟ ಭದ್ರ ಬುನಾದಿಯೇ ಕಾರಣವಾಗಿದೆ. ಇವಳು ನಿರ್ಮಿಸಿದ ಕೋಟೆಯು ಸುಮಾರು ಇನ್ನೂರು ವರ್ಷಗಳಿಗೂ ಮೀರಿ ಸುಭದ್ರತೆಯನ್ನು ಒದಗಿಸಿದೆ. ಆ ನಂತರ ಮೊಗಲರು ಮರಾಠರು ಈ ಕೋಟೆಯನ್ನು ವಶಪಡಿಸಿಕೊಳ್ಳುತ್ತಾರೆ. ೧೭೬೨ರಲ್ಲಿ ಹೈದರಾಲಿ ಆಕ್ರಮಣ ನಡೆಸಿ ಈ ಕೋಟೆಯನ್ನು ನಾಶಪಡಿಸುತ್ತಾನೆ. ಹಲಸೂರಮ್ಮ ಇಲ್ಲಿ ಕಟ್ಟಿಸಿದ ಕೆರೆಯ ನೀರು ಇಂದಿಗೂ ಬಳಕೆಯಾಗುತ್ತಿದೆ.[೫]

ಪತಿಯ ನಂತರ ಆಡಳಿದ ಕೈಗೊಂಡ ಮಹಿಳೆಯರು ಕೆಲ ಸಂದರ್ಭದಲ್ಲಿ ಹೊಸದಾಗಿ ಊರನ್ನು ನಿರ್ಮಿಸಬೇಕಾಗಿ ಬಂದಂತಹ ಸಂದರ್ಭಗಳನ್ನೂ ಸಮರ್ಥವಾಗಿ ನಿಭಾಯಿಸಿದ್ದಾರೆ. ಸುಗಟೂರು ಪಾಳೆಯಗಾರನಾಗಿದ್ದ ಮುಮ್ಮಡಿ ತಮ್ಮೇಗೌಡನು ೧೬೪೧ರ ಸುಮಾರಿನಲ್ಲಿ ಗತಿಸಿಹೋದಾಗ ಈತನ ಪತ್ನಿ ಹಲಸಮ್ಮ ತನ್ನ ಆರುವರ್ಷದ ಅಪ್ರಾಪ್ತ ವಯಸ್ಸಿನ ಮಗ ಚಿಕ್ಕರಾಯ ಬಸವನಗೌಡನ ಪರವಾಗಿ ಆಳ್ವಿಕೆ ನಡೆಸುತ್ತಾಳೆ. ಈಕೆಯನ್ನು ಯಲಹಂಕ ನಾಡ ಪ್ರಭು ಇಮ್ಮಡಿ ಕೆಂಪೇಗೌಡನ ಮಗಳೆಂದು ಗುರುತಿಸಲಾಗಿದೆ[೬] ಇವಳ ಕಾಲದಲ್ಲಿ ಬಿಜಾಪುರದ ರಣದುಲ್ಲಾಖಾನನು ಮರಾಠ ಸರದಾರರೊಂದಿಗೆ ಬೆಂಗಳೂರು ಹೊಸಕೋಟೆಗಳನ್ನು ವಶಪಡಿಸಿಕೊಂಡಾಗ ಹಲಸಮ್ಮಳು ಕೋಲಾರವನ್ನು ಬಿಟ್ಟು ಆವಪಲ್ಲಿಗೆ ಬಂದು ನೆಲೆಸಿ, ಹೊಸ ಆಳ್ವಿಕೆ ಪ್ರಾರಂಭಿಸಿ, ಪಾಳೆಯಪಟ್ಟು ಮುಂದುವರೆಯುವಂತೆ ಮಾಡುತ್ತಾಳೆ[೭].

ಪತಿಯನ್ನು ಕಳೆದುಕೊಂಡು ಆಳ್ವಿಕೆ ನಡೆಸುವ ಸಂದರ್ಭದಲ್ಲಿ, ಕೆಲವೊಮ್ಮೆ ಇತರ ಪ್ರಬಲ ಅರಸರ ಸಹಕಾರವನ್ನು ಪಡೆಯುವಲ್ಲಿ ಯಶಸ್ವಿಯಾಗಿ, ಸುಸೂತ್ರವಾಗಿ ಆಡಳಿತ ನಡೆಸಿದ ದಕ್ಷ ನಾಯಕಿಯರಾಗಿ ಕೆಲವು ಮಹಿಳೆಯರು ಕಂಡು ಬಂದಿದ್ದಾರೆ. ಈ ಪ್ರಕಾರವಾಗಿ ಅಧಿಕಾರ ನಡೆಸಿದವರಲ್ಲಿ ದೇಸಾಯಿ ಚನ್ನಮ್ಮಳೂ ಒಬ್ಬಳು. ಸಿರಸಂಗಿ ದೇಸಗತಿಯ ಮೂಲವಾದ ನವಲಗುಂದ ಸಂಸ್ಥಾನದ ಸವಣೂರ ನವಾಬ ಅಬ್ದುಲ್ ಗಫಾರ್‌ಖಾನ್‌ನ ಕಾಲದಲ್ಲಿ ಲಿಂಗಪ್ಪ ದೇಸಾಯಿಯ ನಿಧನಾನಂತರ ಅವನ ಹಿರಿಯ ಪತ್ನಿ ಚನ್ನವ್ವ ದೇಸಾಯಿಣಿ ನವಲಗುಂದ ಸಂಸ್ಥಾನದ ಆಳ್ವಿಕೆ ಮಾಡುತ್ತಿದ್ದಳು. (೧೭೧೬–೧೭೩೩) ಅವಳ ಶೌರ್ಯ, ನಿಷ್ಠೆಗೆ ಮೆಚ್ಚಿದ ನವಾಬ, ಕರವೀರಪುರದ ಮರಾಠ ಅರಸ, ಪುಣೆಯ ಪೇಶ್ವೆ, ನರಗುಂದದ ರಾಮರಾವ್ ಸಚಿವ ಮೊದಲಾದವರು ಇವಳಿಗೆ ಗ್ರಾಮಗಳನ್ನೂ–ಜಮೀನುಗಳನ್ನೂ ಉಂಬಳಿಯಾಗಿ ಕೊಟ್ಟಿದ್ದು ಇವಳ ಪ್ರಭಾವ ತಿಳಿದುಬರುತ್ತದೆ. ಮುಂದೆ ತನ್ನ ನಂತರ ಈ ಸಂಸ್ಥಾನವನ್ನು ಮುಂದುವರೆಸಿಕೊಂಡು ಹೋಗಲು ತನ್ನ ಸವತಿಯ ಮಗನನ್ನು ಸಮರ್ಥವಾಗಿ ಬೆಳೆಸಿ ಜವಾಬ್ದಾರಿ ವಹಿಸುತ್ತಾಳೆ.

ಹೀಗೆ ಯಶಸ್ವಿಯಾದ ಮಹಿಳೆಯರಲ್ಲಿ ಕೆಲವರು ತಾವು ಆಳ್ವಿಕೆ ನಡೆಸಲೆಂದೇ ಹೋರಾಡಿದವರಲ್ಲ, ತಮ್ಮ ಮಕ್ಕಳಿಗೆ ಅಧಿಕಾರ ದೊರಕಿಸುವಲ್ಲಿ ಹೋರಾಡಿದ ಮಹಿಳೆಯರೂ ಇದ್ದಾರೆ. ಕೆಲವರದು ನ್ಯಾಯಪರವಾದ ಹೋರಾಟವಾದರೆ, ಮತ್ತೆ ಕೆಲವು ಸಂದರ್ಭದಲ್ಲಿ ರಾಜ್ಯದ ಹಿತಾಸಕ್ತಿ ಬದಿಗಿಟ್ಟು, ತಮ್ಮ ಸ್ವಾರ್ಥ, ಪ್ರತಿಷ್ಠೆಯನ್ನು ಮೆರೆಯಲೆಂದು ಹೋರಾಡಿದವರನ್ನೂ ಇತಿಹಾಸದಲ್ಲಿ ಕಾಣುತ್ತೇವೆ. ಮೈಸೂರಿನ ಒಡೆಯರಲ್ಲಿ ಹೆಸರುವಾಸಿಯಾಗಿದ್ದ ಚಿಕ್ಕದೇವರಾಜ ಒಡೆಯರ ನಂತರ ಪಟ್ಟಕ್ಕೆ ಬಂದವನು ಇಮ್ಮಡಿ ಕಂಠೀರವ ನರಸರಾಜ ಒಡೆಯರ್. ಈತ ಹುಟ್ಟು ಮೂಕ ಮತ್ತು ಕಿವುಡ. ಸಂಹಿತೆಗಳ ಪ್ರಕಾರ ಇಂತಹ ವ್ಯಕ್ತಿ ಸಿಂಹಾಸನದ ಮೇಲೆ ಕೂರಲು, ರಾಜ್ಯಭಾರ ನಡೆಸಲು ಅನರ್ಹನಾಗಿರುತ್ತಾನೆ. ಆದರೆ, ಈತನ ತಾಯಿ ದೇವಾಜಮ್ಮಣ್ಣಿಯು ಪತಿಯ ಮರಣಾನಂತರ, ಪ್ರಧಾನಿಯಾಗಿದ್ದ ತಿರುಮಲ ಅಯ್ಯಂಗಾರ್ಯರ ಸಹಕಾರದಿಂದ ಪಟ್ಟುಬಿಡದೆ ತನ್ನ ಮಗನಿಗೆ ಪಟ್ಟ ಕಟ್ಟುವಲ್ಲಿ ಯಶಸ್ವಿಯಾಗುತ್ತಾಳೆ[೮]. ಜೊತೆಗೆ ರಾಜಮಾತೆ ದೇವಾಜಮ್ಮಣ್ಣಿ ಸ್ವತಃ ರಾಜ್ಯಾಡಳಿತದಲ್ಲಿ ಪ್ರಧಾನ ಪಾತ್ರವಹಿಸಿ, ರಾಜ್ಯಾಧಿಕಾರ ಸುಸೂತ್ರವಾಗಿ ನಡೆದುಕೊಂಡು ಬರುವಂತೆ ನೋಡಿಕೊಳ್ಳುತ್ತಾಳೆ. ಇವಳಿಗಿಂತಲೂ ಒಂದು ಹೆಜ್ಜೆ ಮುಂದುವರೆದು ಕ್ರೌರ್ಯವನ್ನು ಎಸಗಿಯಾದರೂ ತನ್ನ ಮಕ್ಕಳಿಗೆ ಅಧಿಕಾರ ದೊರಕಿಸಿಕೊಡಬೇಕೆಂದು ಮುಂದಾದ ನಾಗತಿಯೊಬ್ಬಳು ಕಳಲೆ ಅರಸು ಮನೆತನದಲ್ಲಿ ಕಂಡುಬರುತ್ತಾಳೆ. ಕ್ರಿ.ಶ. ೧೫೪೬ರ ವರೆಗೆ ಆಳ್ವಿಕೆ ನಡೆಸಿದ ಕಳಲೆ ಅರಸು ತಿಮ್ಮರಾಜ ಒಡೆಯನಿಗೆ ನಾಲ್ವರು ಪತ್ನಿಯರಲ್ಲಿ ರಾಣಿ ಚೆನ್ನಾಜಮ್ಮ ಎರಡನೆಯ ಪತ್ನಿ. ಇವಳು ತನ್ನ ಪತಿಯ ನಂತರ ಆತನ ಹಿರಿಯರಾಣಿಯ ಪುತ್ರ ಲಕ್ಷ್ಮೀಕಾಂತ ಒಡೆಯನು ಕಳಲೆಯ ಅಧಿಪತಿಯಾದಾಗ ತನ್ನ ಮಕ್ಕಳಿಗೆ ಅರಸೊತ್ತಿಗೆ ಸಿಗಬೇಕೆಂದು ಸಂಚುಹೂಡಿ ಲಕ್ಷ್ಮೀಕಾಂತ ಒಡೆಯನನ್ನು ಕೊಲ್ಲಿಸಿ, ತನ್ನ ಇತರ ಸವತಿಯರನ್ನೂ ಅವರ ಮಕ್ಕಳನ್ನೂ ಬಂಧನದಲ್ಲಿರಿಸುತ್ತಾಳೆ. ಇವಳ ಆಸೆಯಂತೆಯೇ ೧೫೪೬–೧೬೧೫ರ ವರೆವಿಗೆ ಸುಮಾರು ಏಳು ದಶಕಗಳ ಕಾಲ ಚೆನ್ನಾಜಮ್ಮಣ್ಣಿಯ ಮಕ್ಕಳು ಹಾಗೂ ಮೊಮ್ಮಕ್ಕಳು ಕಳಲೆಯ ಅಧಿಪತಿಗಳಾಗಿ ಆಳ್ವಿಕೆ ನಡೆಸಿದ್ದಾರೆ[೯].

ಹೋರಾಟದಲ್ಲಿಯೇ ಬದುಕನ್ನು ಸವೆಸಿದ ವೀರ ನಾರಿಯರು

ಕೆಳದಿಯ ರಾಜಮನೆತನದಲ್ಲಿ ಆಳ್ವಿಕೆ ನಡೆಸಿದ ಇಬ್ಬರು ರಾಣಿಯರಲ್ಲಿ ಒಬ್ಬಳು ಚನ್ನಮ್ಮಳಾದರೆ ಮತ್ತೊಬ್ಬಳು ಇವಳ ಮೊಮ್ಮಗನ ಸೊಸೆ ಚನ್ನವೀರಮ್ಮ. ಉತ್ತರಾಧಿಕಾರಿಯನ್ನು ನೇಮಿಸುವಲ್ಲಿ ಚನ್ನಮ್ಮ ಯಶಸ್ವಿಯಾದರೆ, ಚನ್ನವೀರಮ್ಮ ಪ್ರತಿಕೂಲ ಪರಿಸ್ಥಿತಿಯಲ್ಲಿ ಹೋರಾಟದಲ್ಲಿಯೇ ಅಸುನೀಗುತ್ತಾಳೆ. ಕ್ರಿ.ಶ. ೧೭೩೯ರಿಂದ ಕ್ರಿ.ಶ. ೧೭೫೫ರವರೆಗೆ ಕೆಳದಿಯನ್ನಾಳಿದ ಇಮ್ಮಡಿ ಬಸವಪ್ಪನಾಯಕನ ರಾಣಿ ಚೆನ್ನವೀರಮ್ಮಾಜಿಯು ಪಾಳ್ಯದ ಶಿವಲಿಂಗಪ್ಪನವರ ಮಗಳು. ಶಿವಲಿಂಗಪ್ಪ ರಾಜ್ಯದ ಸರ್ವಾಧಿಕಾರಿಯಾಗಿ ಕೆಲಸ ನಿರ್ವಹಿಸುತ್ತಿರುತ್ತಾನೆ. ಮಕ್ಕಳಿಲ್ಲದ ಕಾರಣ ಇಮ್ಮಡಿ ಬಸವಪ್ಪನಾಯಕನು ಚನ್ನಬಸವನಾಯಕನನ್ನು

ದತ್ತುಪುತ್ರನನ್ನಾಗಿ ಸ್ವೀಕರಿಸಿರುತ್ತಾನೆ. ಪತಿಯ ಮರಣಾನಂತರದ ಮೂರುವರ್ಷಗಳಲ್ಲಿ ದತ್ತುಪುತ್ರ ಚನ್ನಬಸವನಾಯಕ ಕೂಡ ಮರಣಕ್ಕೀಡಾಗುತ್ತಾನೆ. ಮತ್ತೊಬ್ಬ ಮಗನನ್ನು ದತ್ತುಪಡೆದುಕೊಂಡ ಚೆನ್ನವೀರಮ್ಮನಿಗೆ, ಮೊದಲನೆಯ ಮಗನ ಮರಣವೇ ದೊಡ್ಡ ಅಪಕೀರ್ತಿ ತಂದುಕೊಡುತ್ತದೆ. ಇವಳ ರಾಜ್ಯವನ್ನು ಕಬಳಿಸಲು ಬಂದ ಹೈದರಾಲಿಯ ಸೈನ್ಯಕ್ಕೆ ಮಲೆನಾಡ ಪ್ರದೇಶದಲ್ಲಿನ ಯುದ್ಧಕಲೆ ಕಷ್ಟಕರವಾಗಿದ್ದು, ಯುದ್ಧದ ಮೂಲಕ ಚೆನ್ನವೀರಮ್ಮನನ್ನು ಮಣಿಸಲು ಸಾಧ್ಯವಾಗುವುದಿಲ್ಲ. ನಾಡಿನ ಒಳಗಿನ ಇವಳ ಹಿತಶತ್ರುಗಳು ಹೈದರಾಲಿಯ ಕಡೆ ಸೇರಿ ಇವಳ ಕುರಿತು ಅಪಪ್ರಚಾರ ನಡೆಸುವಲ್ಲಿ ಯಶಸ್ವಿಯಾಗುತ್ತಾರೆ. ಹಿರಿಯ ದತ್ತುಪುತ್ರನ ಸಾವಿನ ಪ್ರಕರಣವನ್ನು ಇವಳ ತಲೆಗೆ ಕಟ್ಟುತ್ತಾರೆ, ಇವಳ ಚಾರಿತ್ರಹರಣ ಮಾಡಿಸುವಲ್ಲಿ ಪುಕಾರು ಎಬ್ಬಿಸುತ್ತಾರೆ. ಈ ಮೂಲಕ ಮಾನಸಿಕವಾಗಿ ಮಹಿಳೆಯೊಬ್ಬಳನ್ನು ದುರ್ಬಲಗೊಳಿಸಿ, ಅವಳನ್ನು ಮಣಿಸುವ ತಂತ್ರವನ್ನು ಹೆಣೆಯುತ್ತಾರೆ. ಇಷ್ಟೆಲ್ಲಾ ವ್ಯವಸ್ಥಿತವಾಗಿ ತೊಂದರೆ ನೀಡಿದರೂ, ಕೆಚ್ಚೆದೆಯ ಚೆನ್ನವೀರಮ್ಮ ಧೃತಿಗೆಡದೆ ಹೋರಾಡುತ್ತಾಳೆ. ಕಡೆಗೂ ಯುದ್ಧದಲ್ಲಿ ಇವಳನ್ನು ಸೋಲಿಸಲು ಸಾಧ್ಯವಾಗದ ಹೈದರಾಲಿಯು ಸಂಧಾನಕ್ಕೆಂದು ಕರೆಸಿಕೊಂಡು ಮೋಸದಿಂದ ಚೆನ್ನವೀರಮ್ಮನನ್ನೂ ಹಾಗೂ ಅವಳ ಎರಡನೆಯ ದತ್ತು ಪುತ್ರನನ್ನು ಬಂಧನದಲ್ಲಿರಿಸುತ್ತಾನೆ. ಕೆಲಕಾಲದ ನಂತರ ಮರಾಠರು ಇವರಿಬ್ಬರನ್ನು ಬಿಡಿಸಿಕೊಂಡು ಹೋಗುತ್ತಾರಾದರೂ, ಖಾಯಿಲೆಯಿಂದ ನರಳುತ್ತಿದ್ದ ಇವರೀರ್ವರಲ್ಲಿ ಚೆನ್ನವೀರಮ್ಮಾಜಿಯು ಮಾರ್ಗಮಧ್ಯದಲ್ಲಿ ಕೊನೆಯುಸಿರೆಳೆಯುತ್ತಾಳೆ ಹಾಗೂ ಇವಳ ಮಗ ಪೂನಾಗೆ ಹೋಗುವ ತನಕ ಜೀವಿಸಿದ್ದು ಅಲ್ಲಿ ಅಸುನೀಗುತ್ತಾನೆ.[೧೦]

ಪತಿಯ ನಂತರ, ಹೋರಾಟದ ನಡುವೆಯೇ ಸುಮಾರು ಹದಿನಾರು ವರ್ಷಗಳ ಕಾಲ ಆಳ್ವಿಕೆ ಕೈಗೊಂಡಿದ್ದ ಚೆನ್ನಮ್ಮಳದು ದೊಡ್ಡ ಸಾಧನೆಯೆಂದೇ ಹೇಳಬೇಕು. ಇವಳಂತೆಯೇ ಹೋರಾಟದಲ್ಲಿಯೇ ಬದುಕನ್ನು ಸವೆಸಿದ ಮತ್ತೋರ್ವ ಮಹಿಳೆ ಚಾಂದ್‌ಬೀಬಿ. ಭಾರತದಲ್ಲಿ ದೀರ್ಘವಾದ ಮುಸ್ಲಿಂ ಆಡಳಿತಾವಧಿಯಲ್ಲಿ ಮಹಿಳೆಯರು ಆಳಿದ್ದು ಅಪರೂಪ. ದಿಲ್ಲಿಯ ಗುಲಾಮ ವಂಶದ ಸುಲ್ತಾನಾ ರಝಿಯಾ ಬೇಗಂ (೧೨೩೬–೨೪೦) ನನ್ನು ಹೊರತು ಪಡಿಸಿದರೆ, ಸುಲ್ತಾನಾ ಎಂದು ಕರೆಸಿಕೊಂಡ ಮತ್ತೊಬ್ಬ ಮಹಿಳೆ ಕರ್ನಾಟಕದವಳಾದ ಚಾಂದ್‌ಬೀಬಿ. ಇವಳು ದೆಹಲಿಯ ಬಾದಶಹ ಅಕ್ಬರ್‌ನಿಂದಲೇ 'ಚಾಂದ್ ಸುಲ್ತಾನಾ' ಎಂಬ ಬಿರುದನ್ನು ಪಡೆದುಕೊಂಡವಳು.

ಅಹಮ್ಮದ್ ನಗರದ ಅರಸು ನಿಜಾಮ್ ಶಹನ ಮಗಳಾಗಿ, ಬಿಜಾಪುರದ ಆದಿಲ್‌ಶಾಹಿಗಳ ಸೊಸೆಯಾಗಿ, ತವರುಮನೆ ಗಂಡನಮನೆ ಎರಡೂ ನಾಡುಗಳನ್ನು ಆಳಿದವಳು ಚಾಂದ್ ಬೀಬಿ (ಕ್ರಿ.ಶ. ಸು ೧೫೪೮–೧೬೦೦). ಪತಿ ಅಲಿ ಆದಿಲ್ ಶಹ (೧೫೩೪–೧೫೮೦) ತನ್ನ ತಂಗಿಯ ಗಂಡನ ಕುತಂತ್ರಕ್ಕೆ ಬಲಿಯಾಗಿ ಅಸುನೀಗಿದ ಬಳಿಕ, ಸಾಕುಮಗ ಇಬ್ರಾಹಿಮನಿಗೆ ಪಟ್ಟಕಟ್ಟಿ, ಅಪ್ರಾಪ್ತ ವಯಸ್ಕ ಇಬ್ರಾಹಿಮನ ಪರವಾಗಿ ಅಧಿಕಾರ ನಡೆಸುತ್ತಾಳೆ. ಪರಸ್ಪರ ದ್ವೇಷಕಾರುತ್ತಿದ್ದ ಅಧಿಕಾರಿಗಳನ್ನು ನಿಯಂತ್ರಣದಲ್ಲಿರಿಸುವ ವೇಳೆಗೆ, ಅನಿರೀಕ್ಷಿತವಾಗಿ ಗೋಲ್ಕೊಂಡ ಮತ್ತು ಅಹಮ್ಮದ್ ನಗರದ ಅರಸರು ಒಟ್ಟಾಗಿ ಬಿಜಾಪುರವನ್ನು ಮುತ್ತುತ್ತಾರೆ. ಇವರಿಬ್ಬರಲ್ಲಿ ಒಬ್ಬ ಸೋದರಳಿಯನಾದರೆ ಮತ್ತೊಬ್ಬ ಸ್ವಂತ ಸಹೋದರನಾಗಿರುತ್ತಾನೆ. ಇವರನ್ನು ಎದುರಿಸಲು ಅಫಜಲ್ ಖಾನ್‌ನನ್ನು ಕಳಿಸಿ, ಕೋಟೆಯ ದುರಸ್ತಿ ಗೊಳಿಸುತ್ತಾಳೆ. ಸಮಯ ಬಂದಲ್ಲಿ ತಾನೂ ರಣರಂಗಕ್ಕೆ ಹೋಗುವ ತಯಾರಿ ನಡೆಸುತ್ತಿದ್ದ ಸಂದರ್ಭದಲ್ಲಿ, ಕೀಶ್ವರ್ ಖಾನನು ಎಂಬ ಒಳಶತ್ರು ಕೆಲವು ಪ್ರಜೆಗಳನ್ನು ಇವಳ ವಿರುದ್ಧ ಬಂಡಾಯ ಎಬ್ಬಿಸಿ, ಇವಳನ್ನು ಸತಾರದ ಬಂಧೀಖಾನೆಯಲ್ಲಿ ಸೆರೆಯಾಗಿ ಇಡುತ್ತಾನೆ. ಹೀಗೆ ಚಾಂದ್‌ಬೀಬಿಗೆ ರಕ್ತ ಸಂಬಂಧಿಗಳು, ಆಪ್ತರು ಎಲ್ಲರೂ ಹಗೆಗಳಾಗಿ ಪರಿಣಮಿಸುತ್ತಾರೆ. ಆದರೆ, ಛಲ ಬಿಡದೆ ಅಫ್‌ಜಲ್ ಖಾನ್, ಸವಣೂರ ನವಾಬ ಹಾಗೂ ಇತರರ ಸಹಾಯವನ್ನು ಪಡೆದು, ಸೆರೆಯಿಂದ ಮುಕ್ತಳಾಗಿ, ಮರಳಿ ಬಂದು ಕೀಶ್ವರ್ ಖಾನನನ್ನು ಹೊಡೆದೋಡಿಸುತ್ತಾಳೆ. ಅಲ್ಲದೆ ಓಡಿಹೋದ ಈತನನ್ನು ಹಿಡಿಸಿ ಕೊಲ್ಲಿಸುತ್ತಾಳೆ.

ಮುಂದೆ ಸುಮಾರು ಹತ್ತು ವರ್ಷಗಳಿಗೂ ಮೀರಿ ಬಿಜಾಪುರದ ಅಧಿಕಾರವನ್ನು ನಡೆಸಿದ ಚಾಂದ್‌ಬೀಬಿಯು ತನ್ನ ತವರು ಮನೆಯಲ್ಲಿ ಅರಾಜಕತ್ವ ತಲೆದೋರಿದಾಗ, ಸಾಕುಮಗ ಇಬ್ರಾಹಿಮ್‌ನಿಗೆ ಬಿಜಾಪುರದ ಸಂಪೂರ್ಣ ಜವಾಬ್ದಾರಿ ವಹಿಸಿ ಅಹಮದ್‌ನಗರಕ್ಕೆ ತೆರಳುತ್ತಾಳೆ. ಅಲ್ಲಿ ಕ್ರೂರಿಯೂ ಕುಧರ್ಮಿಯೂ ಆಗಿ, ತನ್ನ ಸ್ವಂತ ತಾಯಿಯನ್ನೇ ಸೆರೆಮನೆಯಲ್ಲಿಟ್ಟಿದ್ದ ಮುರ್ತುಝಾ ಮೃತನಾಗಿರುತ್ತಾನೆ. ಅಲ್ಲಿನ ವ್ಯವಸ್ಥೆ ಸರಿಪಡಿಸುವಲ್ಲಿ ಸಾಕಷ್ಟು ಸಮಯ ಹಿಡಿದರೂ ಕಡೆಗೂ ಮೃತನಾದ ತನ್ನ ಕಿರಿಯ ತಮ್ಮನ ಮಗನಿಗೆ ಪಟ್ಟ ಕಟ್ಟುವಲ್ಲಿ ಯಶಸ್ವಿಯಾಗುತ್ತಾಳೆ. ಆ ಅಪ್ರಾಪ್ತ ವಯಸ್ಕನ ಪರವಾಗಿ ಆಳ್ವಿಕೆ ಕೈಗೊಳ್ಳುತ್ತಾಳೆ. ಈ ನಡುವೆ ಮೊಗಲರ ಸೈನ್ಯ ಅಹಮ್ಮದ್ ನಗರವನ್ನು ಮುತ್ತಲು, ಧೈರ್ಯದಿಂದ ಹೋರಾಡಿ ಅವರನ್ನು ಹಿಮ್ಮೆಟ್ಟಿಸುವಲ್ಲಿ ಸಫಲಳಾಗುತ್ತಾಳೆ. ಮತ್ತೆ ಈ ಪ್ರಬಲ ಸೈನ್ಯ ಮುತ್ತುವ ಮುನ್ಸೂಚನೆ ಮನಗಂಡು, ಕೋಟೆಯನ್ನು ಭದ್ರಪಡಿಸುತ್ತಾಳೆ. ನಿರೀಕ್ಷಿಸಿದಂತೆ ೧೫೯೯ರಲ್ಲಿ ಎರಡನೆಯ ಬಾರಿ ದೆಹಲಿಯ ಸುಲ್ತಾನ ಅಕ್ಬರನ ಸೈನ್ಯ ಅಹಮ್ಮದ್‌ನಗರವನ್ನು

ಮುತ್ತಿಗೆ ಹಾಕುತ್ತದೆ. ಈ ಬಾರಿ ಇವಳಿಗೆ ಯಾವ ಹೊರ ರಾಜ್ಯದ ಸಹಕಾರವೂ ದೊರಕುವುದಿಲ್ಲ. ಏಕಾಂಗಿ ಯಾಗಿ ಹೋರಾಡುವಷ್ಟು ಸೈನ್ಯಾ ಬಲ ಇಲ್ಲದ್ದರಿಂದ ಸೋಲನ್ನು ಎದುರಿಸ ಬೇಕಾಗುತ್ತದೆ. ಇವಳ ಅಂತ್ಯವನ್ನು ವಿಭಿನ್ನ ಇತಿಹಾಸಕಾರರು ಭಿನ್ನ ರೀತಿಯಲ್ಲಿ ದಾಖಲಿಸಿದ್ದಾರೆ. ಹೋರಾಟದಲ್ಲಿ ಅಸುನೀಗಿದಳೋ ಅಥವಾ ವೈರಿಗಳ ಸೈನ್ಯ ಅರಮನೆಯನ್ನು ನುಗ್ಗುತ್ತಿರುವಾಗ ಸ್ವಯಂ ಆತ್ಮಾರ್ಪಣೆ ಮಾಡಿಕೊಂಡಳೋ ಅಥವಾ ಮತ್ತೆ ಕೆಲವು ಇತಿಹಾಸಕಾರರು ಬರೆದಿರುವಂತೆ ಒಳಶತ್ರುಗಳ ಕುತಂತ್ರಕ್ಕೆ ಬಲಿಯಾಗಿ ಹತ್ಯೆಯಾದಳೋ ನಿಖರವಾಗಿ ತಿಳಿದು ಬಂದಿಲ್ಲ. ಆದರೂ ಹೋರಾಟದ ಹಾದಿಯಲ್ಲಿಯೇ ಐವತ್ತೆರಡು ವರ್ಷದ ಚಾಂದ್‌ಬೀಬಿ ಮರಣ ಹೊಂದುತ್ತಾಳೆ[೧೧].

ಯಶಸ್ವಿಯಾಗದ ಕೆಲವು ಆಳ್ವಿಕೆಯ ಪ್ರಯತ್ನಗಳು

ಅಧಿಕಾರವನ್ನು ಪಡೆದುಕೊಳ್ಳುವ ಅವಕಾಶವಿದ್ದರೂ, ಆಳ್ವಿಕೆ ನಡೆಸುವ ಸಾಮರ್ಥ್ಯವಿದ್ದರೂ ಇತರರ ಕುಟಿಲೋಪಾಯಕ್ಕೆ ಈಡಾಗಿ, ಕಾರಣಾಂತರಗಳಿಂದ ಅವಕಾಶದಿಂದ ವಂಚಿತರಾದ ಹಲವು ಮಹಿಳೆಯರನ್ನು ಗಮನಿಸುತ್ತೇವೆ. ಕೊಡಗನ್ನು ಆಳಿದ ಅರಸು ಮನೆತನಗಳ ಸುದೀರ್ಘ ಇತಿಹಾಸವನ್ನು ಗಮನಿಸಿದರೆ, ಆಡಳಿತಾಧಿಕಾರ ನಡೆಸಿದ ಮಹಿಳೆ ಕಂಡುಬರುವುದು ಹಾಲೇರಿ ಅರಸು ಮನೆತನದಲ್ಲಿ ಮಾತ್ರ. ಅದೂ ಅತ್ಯಲ್ಪಕಾಲ ಆಡಳಿತ ನಡೆಸಿದ ಏಕೈಕ ಮಹಿಳೆಯಾಗಿ ದೇವಮ್ಮಾಜಿ (೧೮೦೯–೧೮೧೧) ಕಂಡುಬರುತ್ತಾಳೆ. ಇವಳು ದೊಡ್ಡವೀರರಾಜೇಂದ್ರ ಒಡೆಯನ ನಾಲ್ವರು ಹೆಣ್ಣುಮಕ್ಕಳಲ್ಲಿ ಕಿರಿಯವಳು. ಈ ದೇವಮ್ಮಾಜಿ ಆಳ್ವಿಕೆ ನಡೆಸಿದ್ದು ಕೇವಲ ಎರಡು ವರ್ಷಗಳ ಕಾಲ. ಅದೂ ಅಪ್ರಾಪ್ತ ವಯಸ್ಸಿನಲ್ಲಿ, ಇವಳು ಪಟ್ಟಕ್ಕೆ ಬರುವ ವೇಳೆಗೆ ಕೇವಲ ೧೦ ವರ್ಷ ವಯಸ್ಸಿನವಳಾಗಿರುತ್ತಾಳೆ. ಇವಳ ತಂದೆ ದೊಡ್ಡವೀರರಾಜೇಂದ್ರ ಇವಳೇ ಆಡಳಿತ ನಡೆಸಬೇಕೆಂದೂ, ಇವಳ ನಂತರ ಇವಳ ಹಿರಿಯ ಗಂಡುಮಗ, ಅಥವಾ ಇವಳಿಗೂ ಗಂಡು ಮಕ್ಕಳಾಗದದ್ದಲ್ಲಿ, ಇವಳ ಮೊದಲನೆಯ ಮೊಮ್ಮಗನಿಗೆ ಆಡಳಿತದ ಅಧಿಕಾರ ಹಸ್ತಾಂತರ ವಾಗಬೇಕೆಂದು ಮರಣಶಾಸನ ಬರೆಯಿಸಿದ್ದ ಕಾರಣ, ಇವಳಿಗೆ ಅಧಿಕಾರ ದೊರಕುತ್ತದೆ. ಇಷ್ಟೆಲ್ಲಾ ನಿಯಮಾವಳಿಗಳಿದ್ದರೂ ಕೂಡ ಇವಳಿಗೆ ಕೇವಲ ಎರಡು ವರ್ಷ ಆಡಳಿತ ನಡೆಸಲು ಅವಕಾಶ ದೊರಕುತ್ತದೆ. ಆ ನಂತರ ಇವಳ ಚಿಕ್ಕಪ್ಪ ಲಿಂಗರಾಜೇಂದ್ರ ಒಡೆಯ ಇವಳಿಂದ ಅಧಿಕಾರ ಕಸಿದುಕೊಳ್ಳುತ್ತಾನೆ. ನಂತರ ತನ್ನ ಮಗನನ್ನು ಉತ್ತರಾಧಿಕಾರಿಯನ್ನಾಗಿ ನೇಮಿಸುತ್ತಾನೆ.

ಬಹಳ ದುಃಸ್ಥಿತಿಯಲ್ಲಿ, ದೇವಮ್ಮಾಜಿಯು ಕೇವಲ ಎರಡು ವರ್ಷಗಳ ಕಾಲ ಆಳ್ವಿಕೆ ನಡೆಸಿದ್ದೂ ಇವಳ ಸಾಧನೆಯೇ ಆಗಿದೆ ಎಂದು ಇತಿಹಾಸಕಾರರು ಗುರುತಿಸಿದ್ದಾರೆ[೧೨]. ಅದೂ ವರೆಗೂ ಕೊಡಗಿನ ಸಿಂಹಾಸನವನ್ನು ಏರುವ ಸಾಹಸವನ್ನು ಯಾವ ಮಹಿಳೆಯೂ ಮಾಡಿರಲಿಲ್ಲ. ಇವಳು ತನಗೆ ಸರಿ ಕಾಣದ ಕೆಲವು ನಿಯಮಗಳನ್ನು ತೆಗೆಯುತ್ತಾಳೆ. ಪಹರೆದಾರರನ್ನು ನಿಯಮಿಸುವ ಮೂಲಕ ಅಂತಃಪುರದ ಮಹಿಳೆಯರ ಸ್ವಾತಂತ್ರಕ್ಕೆ ಕಡಿವಾಣ ವೆನಿಸುತ್ತಿದ್ದ, ಅದರಲ್ಲೂ ಪಹರೆದಾರರಾಗಿ ಶಿಖಂಡಿಗಳನ್ನು ನೇಮಿಸಿಕೊಳ್ಳುವ ಪದ್ಧತಿಯನ್ನು ತೆಗೆದುಹಾಕಿ ರಾಜಮನೆತನದ ಮಹಿಳೆಯರಿಗುಂಟಾಗುತ್ತಿದ್ದ ಕಿರಿ ಕಿರಿಯನ್ನು ಇಲ್ಲವಾಗಿಸುತ್ತಾಳೆ. ಜಾತಿ, ಮತ ಬೇಧವನ್ನೂ ಲೆಕ್ಕಿಸದೆ, ತಾನಿಷ್ಟ ಪಟ್ಟ ವರನನ್ನು ಮದುವೆಯಾಗುತ್ತಾಳೆ. ಇವಳ ದಿಟ್ಟ ಸ್ವಭಾವವನ್ನು ಅರಿತ ಇವಳ ಚಿಕ್ಕಪ್ಪನ ಮಗ ಚಿಕ್ಕವೀರರಾಜೇಂದ್ರ ಒಳ ಸಂಚಿನಿಂದ ಇವಳನ್ನು ಇಲ್ಲವಾಗಿಸುವ ಹುನ್ನಾರ ನಡೆಸುತ್ತಾನೆ ಈ ಕುರಿತಾದ ಅನುಮಾನ ಬಂದೊಡನೆಯೇ ದೇವಮ್ಮಾಜಿ ಹಾಗೂ ಆತನ ಪತಿ ಚೆನ್ನಬಸವ ಇಬ್ಬರೂ ಬ್ರಿಟಿಶರ ಆಶ್ರಯ ಪಡೆಯುತ್ತಾರೆ. ಬ್ರಿಟೀಶರು ಲಿಂಗೇಂದ್ರರಾಜ ಹಾಗೂ ಆತನ ಮಗ ಚಿಕ್ಕವೀರರಾಜೇಂದ್ರನ ಮೇಲೆ ಮತ್ತಷ್ಟು ಆರೋಪ ಹೊರೆಸಿ ೧೮೩೪ರಲ್ಲಿ ಚಿಕ್ಕವೀರರಾಜೇಂದ್ರನಿಂದ ಅಧಿಕಾರವನ್ನು ಕಸಿದುಕೊಳ್ಳುತ್ತಾರೆ. ಆ ನಂತರ ದೇವಮ್ಮ ಬ್ರಿಟಿಷರಿಂದ ಕೊಡಗಿನ ಅಧಿಕಾರವನ್ನು ಮರಳಿ ಪಡೆದುಕೊಳ್ಳಲು ನಿರಂತರ ಪ್ರಯತ್ನಿಸುತ್ತಾಳೆ. ಆದರೆ ಫಲಕಾರಿಯಾಗುವುದಿಲ್ಲ. ಹೀಗೆ ಕೊಡಗಿನ ಏಕೈಕ ಅರಸಿಯಾದ ದೇವಮ್ಮಾಜಿಗೆ ಅಧಿಕಾರ ಪಡೆಯುವ ಅವಕಾಶ ತಂದೆಯೇ ಒದಗಿಸಿದ್ದರೂ, ಚಿಕ್ಕಪ್ಪನ ಸಂಚಿನಿಂದ ಅಧಿಕಾರ ಕೈತಪ್ಪುತ್ತದೆ, ಆ ನಂತರ ಬ್ರಿಟಿಶರೂ ಕೂಡ ಅಧಿಕಾರ ಹಸ್ತಾಂತರ ಮಾಡದೆ ವಂಚಿಸುತ್ತಾರೆ.

ಗುಜ್ಜಲ ವಂಶದ ಗೌರಮ್ಮ ನಾಗತಿಯು[೧೩] ತನ್ನ ಪಾಳೆಯ ಪಟ್ಟನ್ನು ಉಳಿಸಿಕೊಳ್ಳಲು ಹೋರಾಡುತ್ತಾಳೆ. ಆದರೆ, ಪತಿಯನ್ನು ಕಳೆದುಕೊಂಡು ಏಕಾಂಗಿಯಾಗಿ ನಡೆಸುವ ಹೋರಾಟ ವಿಫಲವಾಗುತ್ತದೆ. ವಿಜಯನಗರೋತ್ತರ ಕಾಲದಲ್ಲಿ ಕನಕಗಿರಿಯನ್ನಾಳುತ್ತಿದ್ದ ಈ ವಂಶದ ಕಡೆಯ ನಾಯಕ ರಂಗಪ್ಪನಾಯಕನಿಗೆ ಗಂಡು ಸಂತಾನವಿರದ ಕಾರಣ ತಮ್ಮ ಕನಕಪ್ಪನಾಯಕನ ಮಗ ವುಡಿಸಿನಾಯಕನನ್ನು ದತ್ತು ಪಡೆದಿರುತ್ತಾನೆ. ರಂಗಪ್ಪನಾಯಕನು ಕಾಲವಾದಮೇಲೆ, ದತ್ತುಪುತ್ರ ಕಿರಿಯ ಪ್ರಾಯದವನಾಗಿದ್ದ ಕಾರಣ ರಂಗಪ್ಪನಾಯಕನ ಹಿರಿಯ ಮಡದಿ ರಾಣಿ ಗೌರಮ್ಮ ಸಂಸ್ಥಾನದ ಅಧಿಕಾರ ವಹಿಸಿಕೊಳ್ಳುತ್ತಾಳೆ. ಆದರೆ, ಕೆಲಕಾಲದಲ್ಲಿ ಇವರ ದತ್ತು ಮಗುವು ಅಕಾಲಮರಣಕ್ಕೀಡಾಗುತ್ತದೆ. ತನ್ನ ಪಾಳೆಯ ಪಟ್ಟು

ಮುಂದುವರೆಸಬೇಕೆಂಬ ಛಲದಿಂದ ಗೌರಮ್ಮ ನಾಗತಿಯು ಮತ್ತೊಬ್ಬ ಮೈದುನನ ಮಗನನ್ನು ದತ್ತಕ ಪಡೆದು, ಆಳ್ವಿಕೆ ಮುಂದುವರೆಸುತ್ತಾಳೆ. ಮಹಿಳೆಯೊಬ್ಬಳು ಆಡಳಿತ ನಡೆಸುತ್ತಿರುವುದನ್ನು ಸುಬೇದಾರರು ದುರುಪಯೋಗ ಪಡಿಸಿಕೊಳ್ಳುತ್ತಾರೆ. ಇವಳ ಪರವಾಗಿ ಸಹಕಾರ ನೀಡುವವರು ಇಲ್ಲದ ಕಾರಣ, ಏಕಾಂಗಿಯಾಗಿ ಆಳ್ವಿಕೆ ನಡೆಸುತ್ತಿದ್ದ ಇವಳ ಸಂಸ್ಥಾನವನ್ನು ಹೈದರಾಬಾದ್‌ನಿಜಾಮನು ವಶಕ್ಕೆ ತೆಗೆದುಕೊಳ್ಳುತ್ತಾನೆ. ಪ್ರಭಲ ನಿಜಾಮನೊಂದಿಗೆ ಹೋರಾಡಲು ಸಾಧ್ಯವಾಗದ ನಾಗತಿ ಗೌರಮ್ಮ ಒಪ್ಪಂದ ಮಾಡಿಕೊಳ್ಳುತ್ತಾಳೆ. ಕಡೆಗೆ ಅವಳಿಗೆ ಹಾಗೂ ಅವಳ ದತ್ತು ಪುತ್ರನಿಗೆ ಮಾಸಾಶನ ದೊರೆವುದರಲ್ಲಿ ತೃಪ್ತಿಪಡೆದುಕೊಳ್ಳಬೇಕಾಗುತ್ತದೆ.

ಬ್ರಿಟೀಶರೊಂದಿಗೆ ಹೋರಾಡಿದ ಮಹಿಳೆಯರು

ಹದಿನೆಂಟು–ಹತ್ತೊಂಬತ್ತನೆಯ ಶತಮಾನದಲ್ಲಿ ಆಡಳಿತವನ್ನು ಕೈಗೊಂಡ ಮಹಿಳೆಯರು ಹೈದರಾಲಿ, ಟಿಪ್ಪು ಇಲ್ಲವೆ ಬ್ರಿಟಿಷರೊಂದಿಗೆ ಮುಖಾಮುಖಿಯಾಗುವ ಸಂದರ್ಭ ಎದುರಿಸಬೇಕಿತ್ತು. ಇದರ ನಡುವೆ ಮರಾಠರೊಂದಿಗೆ ಒಪ್ಪಂದ ಮಾಡಿಕೊಂಡು ಹಣವನ್ನು ಒದಗಿಸಲು ಹೆಣಗಾಡಿದ ಸಂದರ್ಭಗಳೂ ಕಂಡುಬರುತ್ತವೆ. ಈ ಮೂವರನ್ನೂ ಎದುರಿಸಿದ ಮಹಿಳೆ ಗುಮ್ಮನಾಯಕನ ಪಾಳಯದ ರಾಮಕ್ಕ. ವಿಜಯನಗರದ ಅರಸರಿಗೆ ಅಧೀನರಾಗಿದ್ದ ಗುಮ್ಮನಾಯಕನಹಳ್ಳಿ ಪಾಳೆಯಪಟ್ಟು ವಿಜಯನಗರದ ಪರವಾಗಿ ಹಲವಾರು ಯುದ್ಧಗಳಲ್ಲಿ ಯಶಸ್ವಿಯಾಗಿ ಭಾಗವಹಿಸಿ, ಇನಾಮು, ಜಹಗೀರುಗಳನ್ನು ಪಡೆದ ಪ್ರತಿಷ್ಠಿತ ಮನೆತನವಾಗಿತ್ತು. ಆದರೆ ವಿಜಯನಗರದ ಪತನಾ ನಂತರದ ಕಾಲದಲ್ಲಿ ಈ ಮನೆತನದಲ್ಲಿ ಪ್ರಬಲ ಅರಸರು ಕಂಡುಬರುವುದಿಲ್ಲ. ಕ್ರಿ.ಶ. ೧೭೩೦ರಲ್ಲಿ ಅಧಿಕಾರಕ್ಕೆ ಬಂದ ಈ ಮನೆತನದ ಎರಡನೇ ನರಸಿಂಹ ನಾಯಕನು ಸಮರ್ಥ ನಾಯಕನಾಗಿರಲಿಲ್ಲ. ಜೊತೆಗೆ ಇವನು ದಳವಾಯಿಯ ಕೈಗೊಂಬೆಯಾಗಿದ್ದನು. ಈ ಸಂದರ್ಭದಲ್ಲಿ ಇವನ ಮಡದಿ ರಾಮಕ್ಕ ನಾಗತಿಯು ದಳವಾಯಿಯಿಂದ ರಾಜ್ಯವನ್ನೂ, ಗಂಡನನ್ನು ರಕ್ಷಿಸಿದ ದಿಟ್ಟ ಮಹಿಳೆಯಾಗಿದ್ದಾಳೆ. ಅಧಿಕಾರವನ್ನು ತಾನೇ ವಹಿಸಿಕೊಂಡು, ಸ್ವೇಚ್ಛಾಚಾರ ಮೆರೆಯುತ್ತಿದ್ದ ದಳವಾಯಿನರಸಿಂಹಯ್ಯನು ತನ್ನ ಹೆಸರಿನಲ್ಲಿಯೇ ಆಡಳಿತಾಜ್ಞೆಗಳನ್ನು ಹೊರಡಿಸುವ ಧೈರ್ಯ ತೋರಿದಾಗ, ನಾಗತಿ ರಾಮಕ್ಕಳಿಗೆ ಅಧಿಕಾರ ಕೈ ಬಿಟ್ಟು ಹೋಗುತ್ತಿರುವ ಅರಿವು ಉಂಟಾಗುತ್ತದೆ. ಪಾಳೆಯಪಟ್ಟನ್ನು ರಕ್ಷಿಸಿಕೊಳ್ಳಲು ಮರಾಠರ ಸಹಕಾರ ಬಯಸುತ್ತಾಳೆ. ಆದರೆ ಮುರಾರಿರಾವ್ ನಾಯಕತ್ವದ ಮರಾಠ ಪಡೆಗೆ ನರಸಿಂಹಯ್ಯನು ಹಣ ಕೊಟ್ಟು ಒಲಿಸಿಕೊಳ್ಳುತ್ತಾನೆ. ನಾಗತಿಯ ಪ್ರಯತ್ನ ವಿಫಲವಾಗುತ್ತದೆ. ಆದರೆ, ಕೈಚೆಲ್ಲಿ ಕೂರದ ನಾಗತಿಯು ಗುಮ್ಮನಾಯಕನ ಪಾಳ್ಯದ ಎಲ್ಲಾ ಸಾಮಂತರ ಸಹಕಾರ ಪಡೆದು ನರಸಿಂಹಯ್ಯನನ್ನು ಸೋಲಿಸುತ್ತಾಳೆ. ಆದರೆ ಇದಕ್ಕೆ ಪ್ರತಿಯಾಗಿ ಅವರೆಲ್ಲಾ ಸ್ವತಂತ್ರರಾಗ ಬಯಸುತ್ತಾರೆ ಇದರಿಂದಾಗಿ, ಗುಮ್ಮನಾಯಕನ ಪಾಳ್ಯದ ಹಿಡಿತದಲ್ಲಿದ್ದ ಎಲ್ಲ ಪ್ರಾಂತ್ಯಗಳನ್ನೂ ಸ್ವತಂತ್ರಗೊಳಿಸಿ, ಪಾಳೆಯಪಟ್ಟು ಕೇವಲ ದುರ್ಗ ಮತ್ತು ಅದರ ಸುತ್ತ ಮುತ್ತಲಿನ ಕೆಲವೇ ಹಳ್ಳಿಗಳನ್ನು ಮಾತ್ರ ಒಳಗೊಳ್ಳುವಂತಾಗುತ್ತದೆ. ನಾಗತಿಯು ಪತಿಯ ಸಹಕಾರದಿಂದ ಈ ಪುಟ್ಟ ಪ್ರಾಂತ್ಯವನ್ನೇ ಸಮರ್ಥವಾಗಿ ಹತ್ತು ವರ್ಷ ರಾಜ್ಯಭಾರ ಮಾಡುತ್ತಾಳೆ. ಮುಂದೆ ಕ್ರಿ.ಶ. ೧೭೬೦ರಲ್ಲಿ ಗುಮ್ಮನಾಯಕನ ಪಾಳ್ಯದಮೇಲೆ ದಂಡೆತ್ತಿಬಂದ ಹೈದರಾಲಿಯು ಕೋಟೆಯನ್ನು ಕೊಳ್ಳೆಹೊಡೆದು, ಬಹುಭಾಗ ನಾಶಪಡಿಸಿಹೋಗುತ್ತಾನೆ. ಕೋಟೆಯನ್ನು ಪುನರ್ನಿರ್ಮಾಣಮಾಡಲು ಯತ್ನಿಸಿ, ನರಸಿಂಹನಾಯಕನನ್ನು ಇಂಗ್ಲೀಷ್ ಜನರಲ್ ಹ್ಯಾರಿಸ್‌ನೊಡನೆ ಒಪ್ಪಂದ ಮಾಡಿಕೊಂಡು ಟಿಪ್ಪುವಿನ ವಿರುದ್ಧ ಹೋರಾಡಲು ಪ್ರೇರೇಪಿಸಿದ ರಾಮಕ್ಕನಾಗತಿಯು ಹೋರಾಟದಲ್ಲಿಯೇ ಬದುಕನ್ನು ಸವೆಸುತ್ತಾಳೆ[೧೪].

ಬ್ರಿಟಿಷರೊಂದಿಗೆ ಹೋರಾಡಿದ ಮಹಿಳೆ ಎಂದ ಕೂಡಲೆ ನೆನಪಾಗುವುದು 'ಕಿತ್ತೂರು ಚೆನ್ನಮ್ಮ'. ಇವಳ ಕುರಿತಾದ ಹಲವಾರು ಲಾವಣಿಗಳು, ವೀರಗಾಥೆ, ಚೌಪದಿ, ಕೋಲುಪದ ಮೊದಲಾದ ಜನಪದಗೀತೆಗಳು ಇವಳಿಗಿದ್ದ ಜನಪ್ರಿಯತೆಯನ್ನು ತಿಳಿಸುತ್ತವೆ. ಬೆಳಗಾವಿಯ ಬಳಿಯ ಕಾಕತಿಯ ದೇಸಾಯಿ ಧೂಳಪ್ಪಗೌರಡ ಮಗಳು ಚೆನ್ನಮ್ಮ ಮಲ್ಲಸರ್ಜ ದೇಸಾಯಿಯನ್ನು ವರಿಸಿ ಕಿತ್ತೂರಿನ ಕಿರಿಯರಸಿಯಾಗಿರುತ್ತಾಳೆ. ಚೆನ್ನಮ್ಮಳ ಮಗ ಹುಟ್ಟಿದ ಕೆಲವು ವರ್ಷಗಳಲ್ಲಿ ಮೃತನಾಗುತ್ತಾನೆ. ಇವಳ ಪತಿ ಮಲ್ಲಸರ್ಜನು ಮರಾಠರೊಂದಿಗಿನ ಯುದ್ಧದಲ್ಲಿ ಬಂದಿಯಾಗಿ ಪೂನಾಗೆ ರವಾನಿಸಲ್ಪಡುತ್ತಾನೆ. ಮೂರುವರ್ಷಗಳ ತರುವಾಯ ಬಿಡುಗಡೆ ಹೊಂದಿ ಮರಳಿ ಬರುವಾಗ ದಾರಿಯಲ್ಲಿ ಮೃತನಾಗುತ್ತಾನೆ. ಈತನ ಹಿರಿಯ ರಾಣಿ ರುದ್ರಮ್ಮನ ಮಗ ಶಿವಲಿಂಗ ರುದ್ರಸರ್ಜನಿಗೆ ಕಿತ್ತೂರು ಸಂಸ್ಥಾನದ ಪಟ್ಟ ಕಟ್ಟಲಾಗುತ್ತದೆ. ಕೆಲಕಾಲ ರಾಜ್ಯವಾಳಿದ ರುದ್ರಸರ್ಜನು ಕ್ರಿ.ಶ. ೧೮೨೪ರಲ್ಲಿ ಅಕಾಲಮರಣಕ್ಕೀಡಾಗುತ್ತಾನೆ. ವಾರಸುದಾರರಿಲ್ಲದ ಈತ ಸಾಯುವ ಮುನ್ನ ಮಾಸ್ತಮರಡಿ ಗೌಡರ ಪುತ್ರ ಶಿವಲಿಂಗಪ್ಪನನ್ನು ದತ್ತಕ ತೆಗೆದುಕೊಂಡಿರುತ್ತಾನೆ. ರುದ್ರಸರ್ಜನ ತರುವಾಯ ಈತನ ಮಲತಾಯಿ ಚೆನ್ನಮ್ಮಳು ರುದ್ರಸರ್ಜನ ದತ್ತು ಪುತ್ರ ಶಿವಲಿಂಗಪ್ಪನಿಗೆ ಪಟ್ಟ ಕಟ್ಟಿ ಅವನ ಪರವಾಗಿ ರಾಜ್ಯಭಾರ ನಡೆಸುತ್ತಾಳೆ. ರುದ್ರಸರ್ಜನು ಮರಾಠರ ಭೀತಿಯಿಂದ

ಬ್ರಿಟಿಷರೊಂದಿಗೆ ಕೆಲವು ಒಪ್ಪಂದಗಳನ್ನು ಮಾಡಿಕೊಂಡಿರುತ್ತಾನೆ. ಈ ಹಿನ್ನೆಲೆಯಲ್ಲಿ ಆಡಳಿತದಲ್ಲಿ ತಲೆದೂರಿಸಿದ ಬ್ರಿಟಿಶರು ಈ ದತ್ತಕವನ್ನು ಅಂಗೀಕರಿಸಲಾಗದೆಂದು ತಗಾದೆ ತೆಗೆಯುತ್ತಾರೆ. ಇದೇ ಕಿತ್ತೂರು ಕದನಕ್ಕೆ ನಾಂದಿಯಾಗುತ್ತದೆ. ಮೊದಲನೆಯ ಯುದ್ಧದಲ್ಲಿ ಚೆನ್ನಮ್ಮ ಗೆದ್ದರೂ, ಎರಡನೆಯ ಬಾರಿ ಮೋಸದಿಂದ ಇವಳನ್ನೂ, ಇವಳ ಸೊಸೆ ವೀರಮ್ಮಳನ್ನೂ ಬಂಧಿಸಲಾಗುತ್ತದೆ ಹಾಗೂ ಕಿತ್ತೂರು ಸಂಸ್ಥಾನವನ್ನು ಬ್ರಿಟಿಶ್ ಸರ್ಕಾರದಲ್ಲಿ ಲೀನಗೊಳಿಸಲಾಗುತ್ತದೆ. ಮಲ್ಲಸರ್ಜನು ಕೆಲಕಾಲ ಮರಾಠರ ಬಂಧಿಯಾಗಿ, ಅದಕ್ಕೂ ಮುನ್ನ ಕೆಲ ಕಾಲ ಟಿಪ್ಪುವಿನ ಬಂಧಿಯಾಗಿರುತ್ತಾನೆ. ಮಲ್ಲಸರ್ಜನಿಲ್ಲದ ವೇಳೆಯಲ್ಲಿ ಚೆನ್ನಮ್ಮಳೇ ಆಡಳಿತವನ್ನು ನಿಭಾಯಿಸುತ್ತಾಳೆ. ಇಂತಹ ಒಂದು ಸಂದರ್ಭದಲ್ಲಿ ಕಿತ್ತೂರನ್ನು ಕೆಣಕಿದ ನೆರೆಯ ಬೆಳವಡಿಯ ಬೊಮ್ಮಪ್ಪ ದೇಸಾಯಿಯ ವಿರುದ್ಧ ಚೆನ್ನಮ್ಮಳು ನಡೆಸಿದ ಯುದ್ಧ 'ಕರಿಯಾತಿ ಕಾಳಗ' ಮೊದಲಾದ ಕಾವ್ಯಗಳಲ್ಲಿ ದಾಖಲಾಗಿದೆ ಇಂತಹ ಕೆಲವು ಪ್ರಸಂಗಗಳು ಇವಳ ಆಡಳಿತ, ಯುದ್ಧ, ಪ್ರಜಾಪಾಲನೆ ಮೊದಲಾದ ವಿಚಾರಗಳನ್ನು ತಿಳಿಸುತ್ತದೆ. ಆದರೂ, ಬ್ರಿಟಿಷರಿಂದ ತನ್ನ ರಾಜ್ಯವನ್ನು ಉಳಿಸಿಕೊಳ್ಳುವಲ್ಲಿ ಇವಳು ವಿಫಲಳಾದದ್ದು ದುರಂತವಾಗಿದೆ.

ಕಿತ್ತೂರನ್ನು ವಶಪಡಿಸಿಕೊಂಡಂತೆ ಬ್ರಿಟಿಶರು ಇನ್ನೂ ಹಲವಾರು ಸಣ್ಣಪುಟ್ಟ ಪಾಳೆಯಗಾರರ ಆಡಳಿತ ಪ್ರದೇಶಗಳನ್ನು ವಶಪಡಿಸಿಕೊಳ್ಳುತ್ತಾರೆ. ಅವುಗಳಲ್ಲಿ ಹರಪ್ಪನಹಳ್ಳಿ ಪಾಳೆಯಪಟ್ಟೂ ಒಂದು. ಈ ಮನೆತನದ ಸೋಮಮ್ಮಾಜಿಯು ತನ್ನ ದತ್ತು ಮಗ ಬಸಪ್ಪನಾಯಕನು ಟಿಪ್ಪುವಿನ ಸೆರೆಯಲ್ಲಿ ಬಂಧಿಯಾದಾಗ, ಬಸಪ್ಪನಾಯಕನ ಹೆಸರಿನಲ್ಲಿ ದತ್ತು ಪಡೆದು ಎರಡನೆಯ ಸೋಮಶೇಖರನಾಯಕನೆಂದು ನಾಮಕರಣ ಮಾಡಿ, ಆತನಿಗೆ ರಾಜ್ಯದ ಪಟ್ಟವನ್ನು ಕಟ್ಟುತ್ತಾಳೆ. ಕಿತ್ತೂರಿನ ಪಾಳೆಯ ಪಟ್ಟಿನಂತೆಯೇ ಇವರೂ ಕೂಡ ಟಿಪ್ಪುವಿನ ಭಯಕ್ಕೆ ಬ್ರಿಟಿಷರಿಂದ ಸಹಾಯ ನಿರೀಕ್ಷಿಸುತ್ತಾರೆ. ಆದರೆ ಟಿಪ್ಪುವಿನ ಮರಣಾನಂತರ ಬ್ರಿಟಿಶರು ಇವರ ರಾಜ್ಯವನ್ನು ಸುಪರ್ದಿಗೆ ತೆಗೆದುಕೊಂಡು ಈ ಎರಡನೆಯ ಸೋಮಶೇಖರ ನಾಯಕನಿಗೆ ಮಾಸಾಶನ ನೀಡಲು ಮುಂದಾದಾಗ, ಇವನು ಬ್ರಿಟಿಶರ ವಿರುದ್ಧ ಪ್ರತಿಭಟಿಸಿ ವಿಫಲನಾಗಿ, ಅವರ ಸೆರೆಗೆ ಸಿಲುಕುತ್ತಾನೆ. ಇವನ ಪರವಾಗಿ ಇವನ ಮಡದಿ ನೀಲಮ್ಮಾಜಿ ಇವನು ಅಸುನೀಗುವವರೆಗೂ ಇವನ ಹೆಸರಿನಲ್ಲಿ ಆಡಳಿತ ನಡೆಸುತ್ತಾಳೆ. ಆದರೆ ಇವಳಿಗೆ ದತ್ತು ಸ್ವೀಕರಿಸಿ ಉತ್ತರಾಧಿಕಾರಿಯನ್ನು ನೇಮಿಸುವ ಅಧಿಕಾರ ಸಿಗುವುದಿಲ್ಲ. ಅಲ್ಲದೆ ಇವಳ ಪತಿಯ ಮರಣಾನಂತರ ಸ್ತ್ರೀ ಆಡಳಿತಕ್ಕೆ ಬ್ರಿಟೀಶರು ಒಪ್ಪದೆ ಇವಳ ಆಳ್ವಿಕೆಯ ಪ್ರದೇಶಗಳನ್ನು ಕ್ರಿ.ಶ. ೧೮೨೫ರಲ್ಲಿ ತಮ್ಮ ರಾಜ್ಯದಲ್ಲಿ ವಿಲೀನಗೊಳಿಸಿಕೊಳ್ಳುತ್ತಾರೆ[೧೬]. ನೀಲಮ್ಮಾಜಿ ಆಳ್ವಿಕೆಯ ಕಾಲದ ಕೆಲವು ದಾಖಲೆಗಳನ್ನು ಸರ್ಕಾರಿ ಕಚೇರಿಯ ಕಡತಗಳಲ್ಲಿ ದಾಖಲಾಗಿರುವುದನ್ನು ಗಮನಿಸಬಹುದು.

ಬ್ರಿಟೀಶರ ಕೈ ಕೆಳಗೆ ಹೆಸರಿಗೆ ಮಾತ್ರ ಆಡಳಿತ ನಡೆಸಿದವರು

ಕರ್ನಾಟಕದ ಹಲವಾರು ಪಾಳೆಯಪಟ್ಟುಗಳು ಹೈದರಾಲಿ, ಟಿಪ್ಪುವಿನ ಭಯದಿಂದ ಮರಾಠ, ಬ್ರಿಟಿಷರಿಂದ ಸಹಾಯ ಪಡೆಯಲು ಮುಂದಾಗಿ ಒಂದು ತೊಂದರೆಯಿಂದ ಮತ್ತೊಂದು ತೊಂದರೆಗೆ ಸಿಲುಕಿರುವುದನ್ನು ಗಮನಿಸುತ್ತೇವೆ. ಈ ಪ್ರಕಾರವಾಗಿ ಬ್ರಿಟೀಶರ ಕೈಕೆಳಗೆ ಕೆಲವು ಪಾಳೆಯಪಟ್ಟು ಬಂದಂಥಹ ಸಂದರ್ಭದಲ್ಲಿ ಕೂಡ, ಮಹಿಳೆಯರು ಆಡಳಿತಾಧಿಕಾರ ನಡೆಸಿದ್ದಾರೆ. ಆದರೆ, ಇಂತಹ ಸಂದರ್ಭದಲ್ಲಿ ಬ್ರಿಟಿಷರು ವಿಧಿಸಿದ ಹಲವು ಷರತ್ತುಗಳನ್ನು ಹಾಗೂ ಅವರ ಅಧೀನತೆಯನ್ನು ಒಪ್ಪಿಕೊಂಡು ನಡೆಸಿದ ಆಡಳಿತವಾಗಿದೆ. ಹೀಗೆ ಆಳ್ವಿಕೆ ನಡೆಸಿದವರಲ್ಲಿ, ಮಾಸ್ತಿನಾಡಿನ ಪಾಳೆಯಗಾರ ಮನೆತನದ ಇಬ್ಬರು ನಾಗತಿಯರು ಸುಮಾರು ೧೬ ವರ್ಷಗಳ ಕಾಲ ಆಳ್ವಿಕೆ ನಡೆಸಿದ್ದಾರೆ. (ಕೋಲಾರ ಜಿಲ್ಲಾ ಗೆಜಿಟಿಯರ್ (೧೯೬೮, ಪು. ೫೪೬) ಈ ಮನೆತನದ ನಾಲ್ಕನೆಯ ಕೆಂಪೇಗೌಡನ ಕಾಲಕ್ಕೆ ಇವರ ಆಳ್ವಿಕೆಯ ಪ್ರದೇಶವು ಹೈದರನ ವಶವಾಗುತ್ತದೆ. ರಾಜ್ಯ ಕಳೆದುಕೊಂಡ ಈತ ಬ್ರಿಟೀಶ್‌ರ ಜೊತೆ ಸೇರಿ ಮೈಸೂರು ಯುದ್ಧಗಳಲ್ಲಿ ಅವರಿಗೆ ಸಹಾಯ ನೀಡುತ್ತಾನೆ. ನಾಲ್ಕನೆಯ ಮೈಸೂರು ಯುದ್ಧಾನಂತರ ಇವರ ಸಂಸ್ಥಾನವನ್ನು ಕೈವಶ ಮಾಡಿಕೊಂಡ ಬ್ರಿಟೀಶರು, ಕೆಲವು ಪ್ರದೇಶಗಳ ಅಧಿಕಾರ ಮಾತ್ರ ನೀಡಿರುತ್ತಾರೆ. ಈ ನಾಲ್ಕನೆಯ ಕೆಂಪೇಗೌಡನ ನಂತರ ಈತನ ಮಗ ತಿಮ್ಮಯ್ಯ ಅಧಿಕಾರ ವಹಿಸಿಕೊಂಡರೂ ಅಲ್ಪಾವಧಿಯಲ್ಲಿ (ಕ್ರಿ.ಶ. ೧೮೪೪) ಮರಣ ಹೊಂದುತ್ತಾನೆ. ಇವನಿಗೆ ಮಕ್ಕಳಿಲ್ಲದ ಕಾರಣ ಇವನ ಇಬ್ಬರು ಮಡದಿಯರಲ್ಲಿ ಸಂಜೀವಮ್ಮ ಇವನ ನಂತರ ಕ್ರಿ.ಶ. ೧೮೪೯ರ ವರೆಗೆ ಐದು ವರ್ಷಗಳ ಕಾಲ ಆಳ್ವಿಕೆ ನಡೆಸುತ್ತಾಳೆ. ಇವಳ ನಂತರ ಮತ್ತೊಬ್ಬ ಮಡದಿ ವೀರಮ್ಮಣ್ಣಿ ಎಂಬುವವಳು ಹನ್ನೊಂದು ವರ್ಷಗಳ ಕಾಲ ಆಳ್ವಿಕೆ ನಡೆಸುತ್ತಾಳೆ. ಮುಂದೆ ತಿಮ್ಮಯ್ಯನ ಸಹೋದರಿಯ ಮಗ ಕೆಲ ಕಾಲ ಈ ಪಾಳೆಯ ಪಟ್ಟಿನ ಅಧಿಕಾರ ವಹಿಸಿಕೊಳ್ಳುತ್ತಾನೆ.

ಹದಿನೇಳನೆಯ ಶತಮಾನದಲ್ಲಿ ಸುಗುಟೂರು ಮನೆತನ ಊರ್ಜಿತವಾಗಲು ಹಲಸಮ್ಮನಂತಹ ಮಹಿಳೆ ಕಾರಣಳಾದಳೆನ್ನುವುದನ್ನು ಈ ಹಿಂದೆಯೇ ಗಮನಿಸಿದ್ದೇವೆ. ಮುಂದೆ ೧೭೫೮ರಲ್ಲಿ ಹೈದರಾಲಿ ಆನೇಕಲ್ಲನ್ನು ಗೆದ್ದು ಈ

ಮನೆತನದ ತಮ್ಮೇಗೌಡನೆಂಬ ನಾಯಕನನ್ನು ಸೆರೆಮನೆಯಲ್ಲಿರಿಸುತ್ತಾನೆ. ೧೭೯೧ರಲ್ಲಿ ಬ್ರಿಟಿಷರು ಬೆಂಗಳೂರನ್ನು ವಶಪಡಿಸಿಕೊಂಡಾಗ ಸೆರೆಮನೆಯಲ್ಲಿದ್ದ ಈತನನ್ನು ಬಿಡುಗಡೆಗೊಳಿಸಿ, ಇವನ ಮಗ ಮುಮ್ಮಡಿ ಐಮಗೌಡನಿಗೆ ಆಳ್ವಿಕೆಗೆ ಅವಕಾಶ ನೀಡುತ್ತಾರೆ. ಕ್ರಿ.ಶ. ೧೭೯೩ರಲ್ಲಿ ಸಂತಾನವಿಲ್ಲದ ಐಮಗೌಡ ಮಡಿದಾಗ, ಈತನಿಗೆ ಗೌರಮ್ಮ ಚೆನ್ನಮ್ಮ ಚಿಕ್ಕಮ್ಮನೆಂಬ ಮೂವರು ಮಡದಿಯರಲ್ಲಿ ಹಿರಿಯಳಾದ ಗೌರಮ್ಮಳು ಹೋರಾಟ ನಡೆಸಿ ಅಧಿಕಾರ ಪಡೆದುಕೊಳ್ಳುತ್ತಾಳೆ. ಬ್ರಿಟಿಷರು ಕೈಗೊಳ್ಳುವ ಯುದ್ಧಗಳಿಗೆ ಸಹಾಯಕರಾಗಿರಬೇಕೆಂಬ ಮೊದಲಾದ ಷರತ್ತನ್ನು ಹಾಕಿ ಬ್ರಿಟಿಶ್ ಅಧಿಕಾರಿ ಕರ್ನಲ್ ಅಲೆಕ್ಸಾಂಡರ್ ರೀಡನು ಮದ್ರಾಸ್ ಪ್ರೆಸಿಡೆನ್ಸಿಯ ಸ್ಥಳವಾದ ಕೃಷ್ಣಗಿರಿಯಲ್ಲಿ ನೆಲಸುವಂತೆ ಮಾಡಿ ಆ ಸ್ಥಳದ ಆಸುಪಾಸಿನ ಸ್ಥಳಗಳಾದ ಪಾಲ್ಕೋಡು, ಮಾರಂಡನಹಳ್ಳಿ ಮುಂತಾದ ಸ್ಥಳಗಳನ್ನು ಆಕೆಯ ವಶಕ್ಕೆ ನೀಡಿರುತ್ತಾನೆ. ಅನೇಕ ದಾಖಲೆಗಳಲ್ಲಿ ಈಕೆಯನ್ನು ದೊರೆಸಾನಿ ಎಂದು ಸಂಬೋಧಿಸಿರುವುದು ಕಂಡುಬರುತ್ತದೆ. ಮಕ್ಕಳಿಲ್ಲದ ನಾಗತಿ ಗೌರಮ್ಮಳು ಚಿಕ್ಕರಾಯ ಎಂಬ ಹೆಸರಿನ ಬಾಲಕನನ್ನು ದತ್ತು ಸ್ವೀಕಾರ ಮಾಡಿಕೊಂಡು, ಆನೇಕಲ್ ಸಂಸ್ಥಾನದ ಉತ್ತರಾಧಿಕಾರಿಯನ್ನಾಗಿ ನೇಮಿಸುತ್ತಾಳೆ. ಆದರೆ ಮುಂದೆ ಕ್ರಿ.ಶ. ೧೮೦೦ರಲ್ಲಿ ದಿವಾನ್ ಪೂರ್ಣಯ್ಯನ ನೇತೃತ್ವದ ಮೈಸೂರು ಸರ್ಕಾರದೊಳಗೆ ಇವಳ ಆಳ್ವಿಕೆಯ ಭಾಗವನ್ನು ವಿಲೀನಗೊಳಿಸಿಕೊಳ್ಳಲಾಗುತ್ತದೆ. ಪಾಳೆಯಪಟ್ಟನ್ನು ಉಳಿಸಿಕೊಳ್ಳಲು ಮೈಸೂರು ಸರ್ಕಾರದೊಂದಿಗೆ ಹೋರಾಡುತ್ತಾಳಾದರೂ ಹೋರಾಟ ಫಲಿಸದೆ, ಸರ್ಕಾರ ಕೊಡುವ ಪಿಂಚಣಿಗೆ ತೃಪ್ತಿ ಪಟ್ಟುಕೊಳ್ಳಬೇಕಾಗುತ್ತದೆ[೧೭].

ಬ್ರಿಟಿಶರ ನೀತಿಯಿಂದಾಗಿ ಹಲವಾರು ಪಾಳೆಯಪಟ್ಟುಗಳು ಕೊನೆಗೊಳ್ಳುವಂತಾಗುತ್ತದೆ. ಆದರೆ ಇದಕ್ಕೆ ಅಪವಾದವೆನ್ನುವಂತೆ ಒಂದೆರಡು ಪ್ರಸಂಗಗಳಲ್ಲಿ ದತ್ತು ಪಡೆದುಕೊಳ್ಳಲು ಹಾಗೂ ಉತ್ತರಾಧಿಕಾರಿಯನ್ನು ನೇಮಿಸಲು ಅನುಮತಿಯಿತ್ತ ಸಂದರ್ಭಗಳನ್ನೂ ಕಾಣಬಹುದು. ಅವುಗಳಲ್ಲಿ ಡಂಬಳದ ದೇಸಾಯಿಣಿಗೆ ಕೊಟ್ಟ ಅನುಮತಿ ವಿಶೇಷವೆನಿಸುತ್ತದೆ. ಕ್ರಿ.ಶ. ೧೮೦೦ರಲ್ಲಿ ಮರಾಠಾ ಸೈನ್ಯದೊಡನೆ ಸೇರಿ ಡಂಬಳದ ವೆಂಕಪ್ಪ ದೇಸಾಯಿಯೊಡನೆ ಸಮರ ಸಾರಿದ ಬ್ರಿಟೀಶರು ಡಂಬಳ ಕೋಟೆಯನ್ನು ವಶಪಡಿಸಿಕೊಂಡು, ವೆಂಕಪ್ಪದೇಸಾಯಿಯನ್ನು ಸೆರೆ ಹಿಡಿಯುತ್ತಾರೆ. ಬ್ರಿಟಿಶ್ ಅಧಿಕಾರಿಯಾಗಿದ್ದ ಕರ್ನಲ್ ವೆಲ್ಲೆಸ್ಲಿಯು ವೆಂಕಪ್ಪದೇಸಾಯಿಯನ್ನು ಗಲ್ಲಿಗೇರಿಸಲು ಆದೇಶ ನೀಡುತ್ತಾನೆ. ಕೆಲ ಕಾಲದ ನಂತರ ತಾನು ಮಾಡಿದ್ದು ತಪ್ಪೆಂದು ಪಶ್ಚಾತಾಪಪಟ್ಟ ವೆಲ್ಲೆಸ್ಲಿಯು ತಾನು ಇಂಗ್ಲೆಂಡಿಗೆ ಹಿಂದಿರುಗುವ ಮುನ್ನ ವೆಂಕಪ್ಪನಾಯಕನ ಹೆಂಡತಿಯು ದತ್ತಕ ತೆಗೆದುಕೊಳ್ಳುವುದಕ್ಕೂ, ಆ ಹುಡುಗನು ಡಂಬಳದ ಬಹದ್ದೂರ ದೇಸಾಯಿ ಎಂಬ ಬಿರುದನ್ನೂ, ದೇಸಗತಿಯ ಹಕ್ಕುದಾರಿಕೆಯನ್ನು ಪಡೆಯುವುದಕ್ಕೂ ಸಮ್ಮತಿಸಬೇಕೆಂದು ಅನುಮತಿ ಪತ್ರ ಬರೆದಿಟ್ಟು ಹೋಗುತ್ತಾನೆ. ಈ ಪ್ರಕಾರ ವೆಂಕಪ್ಪನಾಯಕನ ವಿಧವೆ ಮಡದಿ ಮಥುರಾಬಾಯಿಯು ಶಿವಪ್ಪ ಎಂಬುವನನ್ನು ದತ್ತು ತೆಗೆದುಕೊಂಡು ಉತ್ತರಾಧಿಕಾರಿಯನ್ನಾಗಿ ನೇಮಿಸುತ್ತಾಳೆ[೧೮] ಧಾರವಾಡದ ಆಡಳಿತ ವಹಿಸಿಕೊಂಡ ಥ್ಯಾಕರೆ ಇದಕ್ಕೆ ವಿರೋಧ ವ್ಯಕ್ತ ಪಡಿಸಿದರೂ, ಚಾಪ್ಲಿನ್ನನು, ವೆಲ್ಲಸ್ಲಿಯ ಅನುಮತಿಯನ್ನು ಅನುಮೋದಿಸಿ, ಇವಳ ಆಳ್ವಿಕೆಗೆ ಸಹಕರಿಸುತ್ತಾನೆ.

ಸಂತೆಬೆನ್ನೂರು ಪಾಳೆಯಗಾರರವಂಶದಲ್ಲಿ ಮೊದಲನೆಯ ಸರ್ಜಾ ಹನುಮಪ್ಪ ನಾಯಕನ ನಂತರ ಪಾಳೆಯ ಪಟ್ಟನ್ನು ವಶಪಡಿಸಿಕೊಂಡ ಬ್ರಿಟಿಶರು ಮಾಶಾಸನವನ್ನು ಕೊಟ್ಟು ಹೆಸರಿಗೆ ಮಾತ್ರ ಪಾಳೆಯಪಟ್ಟು ಉಳಿಯುವಂತೆ ಮಾಡಿರುತ್ತಾರೆ. ಆನಂತರ ಈ ಮನೆತನದಲ್ಲಿ ಹಲವರು ನಾಯಕ ಪಟ್ಟಕ್ಕೆ ಬಂದರು. ಮೂರನೆಯ ಸರ್ಜಾ ಹನುಮಪ್ಪ ನಾಯಕನಿಗೆ ಮಕ್ಕಳಿರಲಿಲ್ಲದ ಕಾರಣ ಅವನ ಮರಣಾನಂತರ ಆತನ ಮೂರನೆಯ ಮಡದಿ ಯಶೋದಮ್ಮ ನಾಗತಿಯು ಈ ಪಾಳೆಪಟ್ಟಿನ ಅಧಿಕಾರ ವಹಿಸಿಕೊಳ್ಳುತ್ತಾಳೆ. ಅವಳು ಒಂದು ಗಂಡು ಹಾಗೂ ಒಂದು ಹೆಣ್ಣುಮಗುವನ್ನು ದತ್ತು ತೆಗೆದುಕೊಳ್ಳುತ್ತಾಳಾದರೂ ಉತ್ತರಾಧಿಕಾರಿಗೆ ಪಟ್ಟಕಟ್ಟುವ ಮುನ್ನವೇ ಅವರು ಅಕಾಲಮರಣಕ್ಕೆ ತುತ್ತಾಗುತ್ತಾರೆ. ಇವಳು ತನ್ನ ಆಸ್ತಿಯನ್ನು ಚಿತ್ರದುರ್ಗದ ಶ್ರೀ ಮುರುಘರಾಜೇಂದ್ರ ಬೃಹನ್ಮಠಕ್ಕೆ ಸೇರುವಂತೆ ಬರೆದು ನಿಧಳಾಗುತ್ತಾಳೆ[೧೯].

ಕರ್ನಾಟಕದಲ್ಲಿ ಮರಾಠ ಮಹಿಳೆಯರ ಅಧಿಕಾರ

ಉತ್ತರ ಭಾರತದಲ್ಲಿ ಆಳ್ವಿಕೆ ನಡೆಸುತ್ತಿದ್ದ ಮೊಗಲರನ್ನು ಎದುರಿಸಿ, ಅವರ ಪ್ರಬಲ ಶತ್ರುಗಳಾಗಿ ಬೆಳೆದ ಮರಾಠರು ದಕ್ಷಿಣಭಾರತದ ಹಲವು ರಾಜ್ಯಗಳ ಮೇಲೆ ದಂಡೆತ್ತಿಬಂದು, ಕೆಲವು ಪಾಳೆಯಗಾರರ ಒಳಜಗಳಗಳ ಲಾಭವನ್ನು ಪಡೆಯುತ್ತಾ, ಕಪ್ಪಕಾಣಿಕೆಗಳನ್ನು ಪಡೆಯುತ್ತಿದ್ದುದಲ್ಲದೆ, ಕೆಲವು ರಾಜ್ಯಗಳನ್ನು ತಮ್ಮ ಅಧೀನದಲ್ಲಿ ಇರಿಸಿಕೊಂಡಿದ್ದರು. ಇಂತಹ ಸಂದರ್ಭಗಳಲ್ಲಿ ಮರಾಠ ಮಹಿಳೆಯರು ಕೆಲವು ಪ್ರದೇಶಗಳಲ್ಲಿ ಆಳ್ವಿಕೆ ನಡೆಸಿದ್ದಾರೆ. ಕೆಲವರು ತಾವೇ ಸ್ವತಃ ಆಡಳಿತ ನಡೆಸಿದರೆ ಮತ್ತೆ ಕೆಲವು ಮಹಿಳೆಯರ ಹೆಸರಿನಲ್ಲಿ ಇತರರು ಆಳ್ವಿಕೆ ನಡೆಸಿದ್ದಾರೆ. ಬೆಂಗಳೂರು ಕೆಲಕಾಲ ದೀಪಾಬಾಯಿ ಎಂಬ ಮಹಿಳೆಯ ಆಳ್ವಿಕೆಯಲ್ಲಿ ಇತ್ತು ಎಂದು ಕೆಲವು ದಾಖಲೆಗಳು ತಿಳಿಸುತ್ತವೆ. ಶಿವಾಜಿಯು ೧೬೭೭ರಲ್ಲಿ ಬೆಂಗಳೂರನ್ನೂ ಸೇರಿದಂತೆ

ಕೋಲಾರ, ಚಿಕ್ಕಬಳ್ಳಾಪುರ, ದೊಡ್ಡಬಳ್ಳಾಪುರ ಪ್ರದೇಶಗಳನ್ನು ಗೆದ್ದುಕೊಂಡ ಸಂದರ್ಭದಲ್ಲಿ ಬೆಂಗಳೂರನ್ನು ತನ್ನ ಅತ್ತಿಗೆ (ಏಕೋಜಿಯ ಪತ್ನಿ) ದೀಪಾಬಾಯಿಗೆ ಉಡುಗೊರೆಯಾಗಿ ನೀಡುತ್ತಾನೆ[೨೦]. ಶಿವಾಜಿಯ ಜೀವಿತಾವಧಿಯವರೆಗೂ ದೀಪಾಬಾಯಿಯ ವಶದಲ್ಲಿದ್ದ ಈ ಪ್ರದೇಶವನ್ನು ಮುಂದೆ ಶಿವಾಜಿಯ ಮಗ ಸಾಂಭಾಜಿಗೆ ವಶಪಡಿಸಿಕೊಂಡಿದ್ದಾನೆ. ಅಣ್ಣಾಜಿ ದತ್ತು, ಶಿವಾಜಿ, ಸಾಂಭಾಜಿಯರು ಕಲಘಟಗಿ, ಮಿಶ್ರಕೋಟಿ, ಹುಬ್ಬಳ್ಳಿ, ಕಂದಗೋಳ, ಶಿಗ್ಗಾಂವಿ ಮೊದಲಾದ ಪ್ರದೇಶಗಳನ್ನು ವಶಪಡಿಸಿಕೊಂಡಾಗ, ಕ್ರಿ.ಶ. ೧೭೫೬ರಲ್ಲಿ ಧಾರವಾಡ ಕೋಟೆಯನ್ನು ಘೋರ್ಪಡೆಯ ಹೆಂಡತಿಯೂ ಪೇಶ್ವೆಯ ಪ್ರೀತಿಯ ಸೋದರತ್ತೆಯೂ ಆದ ಅನೂಬಾಯಿಯ ಗೌರವಾರ್ಥ ಕೊಡುಗೆಯೆಂದು ಕೊಡಲಾಯಿತು. ಇಲ್ಲಿ ಕೆಲಕಾಲ ಈಕೆಯೊಂದಿಗೆ ಪತಿ ವಿಠ್ಠಲ್ ವಿಶ್ರಾಮ ಘೋರ್ಪಡೆ ಆಳ್ವಿಕೆ ನಡೆಸುತ್ತಿದ್ದನೆಂದು ತಿಳಿದು ಬರುತ್ತದೆ. ಇಂತಹ ಸಂದರ್ಭದಲ್ಲಿ ಮಹಿಳೆಯರಿಗೆ ಇತರರು ನೀಡಿದ ಗೌರವಾದರಗಳು ಮಾತ್ರ ಕಂಡು ಬರುತ್ತದೆ, ಮಹಿಳೆಯರ ಶಕ್ತಿ ಸಾಮರ್ಥ್ಯಕ್ಕೆ ಅವಕಾಶ ದೊರಕಿರುವುದಿಲ್ಲ. ಆದರೆ ಕೆಲವು ಮರಾಠ ಮಹಿಳೆಯರು ತಮ್ಮ ಸ್ವಯಂ ಸಾಮರ್ಥ್ಯದಿಂದ ಆಳ್ವಿಕೆ ಕೈಗೊಂಡಿರುವುದನ್ನೂ ಕಾಣಬಹುದು.

ಅಂದಿನ ಅಚ್ಚ ಕನ್ನಡ ಪ್ರದೇಶವಾಗಿದ್ದ ಕೊಲ್ಲಾಪುರವನ್ನು ಶಿವಾಜಿಯ ಸೊಸೆ ತಾರಾಬಾಯಿ ಕೆಲವು ಕಾಲ ಆಳ್ವಿಕೆ ನಡೆಸಿದ್ದಾಳೆ. ಇದೇ ರೀತಿ ಶಿವಾಜಿಯ ಹಿರಿಯ ಮಗ ಸಾಂಭಾಜಿಯ ಮಡದಿ ದೊಡ್ಡಬಳ್ಳಾಪುರದ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಕೆಲಕಾಲ ಆಳ್ವಿಕೆ ನಡೆಸಿದ ದಾಖಲೆಗಳಿವೆ. ೧೬೫೪ರಲ್ಲಿ ಸಾಂಭಾಜಿಯು ಹತನಾದಮೇಲೆ ಈತನ ಮಡದಿ ಜಯತಾಯಾಬಾಯಿಯು ಕೋಲಾರದ ಸುತ್ತಮುತ್ತಲ ಪ್ರದೇಶದಲ್ಲಿ ಆಡಳಿತವನ್ನು ಮುಂದುವರೆಸಿದ್ದಾಳೆ. ಇವಳ ಮೂರು ಶಾಸನಗಳು ಈ ಭಾಗದಲ್ಲಿ ದೊರೆತಿದ್ದು, ಕ್ರಿ.ಶ. ೧೬೬೬ಕ್ಕೆ ಸೇರಿದ ದಾನಶಾಸನ[೨೧] ಹಾಗೂ ಕ್ರಿ.ಶ. ೧೬೯೩ಕ್ಕೆ ಸೇರಿದ ಇವಳ ಮರಣದ ದಿನವನ್ನು ತಿಳಿಸುವ ಶಾಸನದ[೨೨] ಕಾಲದ ನಡುವಿನ ಸುಮಾರು ೨೭ ವರ್ಷಗಳ ಕಾಲ ಇವಳು ಆಳ್ವಿಕೆಯಲ್ಲಿ ತೊಡಗಿದ್ದಳೆಂದು ಗುರುತಿಸಬಹುದಾಗಿದೆ. ಇವಳ ಕಾಲದಲ್ಲಿ ಶಂಕರಯ್ಯ ಎನ್ನುವವನಿಗೆ ನೆತ್ತರು ಕೊಡುಗೆಯಾಗಿ ಭೂಮಿಯನ್ನು ಕೊಟ್ಟಿರುವ ಶಾಸನವನ್ನು[೨೩] ಗಮನಿಸಿದರೆ, ಇವಳ ಆಳ್ವಿಕೆಯ ಕಾಲದಲ್ಲಿ ಯುದ್ಧ ಸಂಭವಿಸಿರುವುದೂ ತಿಳಿದುಬರುತ್ತದೆ.

ಶಿವಾಜಿಯ ಕಾಲದಲ್ಲಿ ಕರ್ನಾಟಕದ ಹಲವು ಮಹಿಳೆಯರ ಸಾಹಸವನ್ನು ಗಮನಿಸಬಹುದು. ಅಂದಿನ ಕಾಲದಲ್ಲಿ ಮಹಿಳಾ ಸೈನ್ಯ ಇದ್ದುದು ತಿಳಿದು ಬರುತ್ತದೆ. ಬೆಳವಡಿ ಎಂಬ ಸಣ್ಣ ಪ್ರಾಂತ್ಯದ ಆಡಳಿತ ನಡೆಸುತ್ತಿದ್ದ ಈಶಪ್ರಭುವಿನ ಮಡದಿ ಮಲ್ಲಮ್ಮ ಇಂತಹ ಸ್ತ್ರೀ ಸೈನ್ಯ ಕಟ್ಟಿ ಹೋರಾಡಿದ ಮಹಿಳೆಯಾಗಿದ್ದಾಳೆ. ಇವಳನ್ನು ಕುರಿತು ಮರಾಠ ಬಖೈರುಗಳು ವಿಭಿನ್ನ ರೀತಿಯ ಮಾಹಿತಿ ನೀಡಿದರೆ, ಇವಳ ಆಸ್ಥಾನದಲ್ಲಿಯೇ ಇದ್ದ ಶ್ರೀನಿವಾಸ ಶೇಷೋ ಮುತಾಲಿಕ್ ಎನ್ನುವವನು 'ಬೆಳವಡಿ ಮಲ್ಲಮ್ಮನ ಸಮರೋತ್ಸವ' ಎಂಬ ಕೃತಿಯನ್ನು ರಚಿಸಿ, ಇವಳ ಜೀವಿತಾವಧಿಯಲ್ಲಿಯೇ ಇವಳ ಸಂಪೂರ್ಣ ಇತಿಹಾಸವನ್ನು ದಾಖಲಿಸಿದ್ದಾನೆ. ಈ ಕೃತಿಯನ್ನು ಅಂದಿನ ಕೊಲ್ಲಾಪುರವನ್ನು ಆಳುತ್ತಿದ್ದ ಶಿವಾಜಿಯ ಸೊಸೆ ತಾರಾಬಾಯಿಯ ಆಸ್ಥಾನದಲ್ಲಿ, ಮರಾಠ ಅಧಿಕಾರಿಗಳ ಎದುರು ಓದಲಾಗಿತ್ತು ಎನ್ನುವುದೊಂದು ಈ ಕೃತಿ ಹಾಗೂ ಬೆಳವಡಿಯ ಮಲ್ಲಮ್ಮನಿಗೆ ಸಂದ ಗೌರವವಾಗಿದೆ. ಇದರಲ್ಲಿ ಮಲ್ಲಮ್ಮಳು ಶಿವಾಜಿಯನ್ನು ಮಣಿಸಿದ ವಿಚಾರ ವಿಸ್ತೃತವಾಗಿ ಬಣ್ಣಿತವಾಗಿದೆ[೨೪].

ಕರ್ನಾಟಕದ ಇತಿಹಾಸದಲ್ಲಿ ಮಹಿಳಾ ಆಳ್ವಿಕೆ ಎಂದಾಗ ಬೆಳವಡಿ ಮಲ್ಲಮ್ಮ, ಕಿತ್ತೂರು ಚೆನ್ನಮ್ಮ, ಕೆಳದಿ ಚೆನ್ನಮ್ಮ, ಇತ್ತೀಚಿನ ದಿನಗಳಲ್ಲಿ ಹೆಚ್ಚು ಅಧ್ಯಯನಕ್ಕೆ ಒಳಗಾಗಿರುವ ಅಬ್ಬಕ್ಕ, ಚನ್ನಭೈರಾದೇವಿ ಮೊದಲಾದ ಬೆರಳೆಣಿಕೆಯ ಅರಸಿಯರ ಉಲ್ಲೇಖ ಮಾತ್ರ ಮುಖ್ಯವಾಗಿ ಬಿಂಬಿತವಾಗುತ್ತದೆ. ಇಂತಹ ಇನ್ನೂ ಅನೇಕ ಮಹಿಳೆಯರು ತಮ್ಮ ಪಾಳೆಯಪಟ್ಟನ್ನು ಉಳಿಸಿಕೊಳ್ಳಲು ನಾನಾ ಪರಿಯಲ್ಲಿ ಹೋರಾಟ ನಡೆಸಿರುವುದಕ್ಕೆ ಈ ಮೇಲಿನ ಕೆಲವು ಪ್ರಕರಣಗಳು ಸಾಕ್ಷಿಯಾಗಿವೆ. ಇಂತಹ ಮಹಿಳೆಯರ ಸಂಖ್ಯೆ ಅಪಾರವಾಗಿದೆ. ಒಂದೇ ರೀತಿಯ ಪ್ರಕರಣ ಅಥವಾ ಪರಿಸ್ಥಿತಿಯನ್ನು ವಿಭಿನ್ನ ಸಂದರ್ಭಗಳಲ್ಲಿ ಮಹಿಳೆಯರು ಎದುರಿಸಿದ ವಿಚಾರವನ್ನು ಇಲ್ಲಿ ತೌಲನಿಕವಾಗಿ ಗಮನಿಸಲು ಅವಕಾಶವಿದೆ.

ಸಂಪೂರ್ಣವಾಗಿ ನಾಡು ನಾಶ ಹೊಂದಿದಮೇಲೆ ಕೂಡ ಹಲಸೂರಮ್ಮನಂತಹ ಮಹಿಳೆ ಪುನಃ ರಾಜ್ಯವನ್ನು ನಿರ್ಮಾಣ ಮಾಡಿದರೆ, ಕೆಲವರು ಪೂರ್ವಜರ ನಾಡನ್ನು ಉಳಿಸಿಕೊಳ್ಳಲು ಹೋರಾಡಿದ್ದಾರೆ. ಸಂಸ್ಥಾನದೊಳಗಿನ ಶತ್ರುಗಳಲ್ಲದೆ ಹೊರಗಿನ ಪ್ರಬಲ ವೈರಿಗಳೊಂದಿಗೆ ಒಟ್ಟೊಟ್ಟಿಗೆ ಹೋರಾಟ ನಡೆಸುವುದು ದೊಡ್ಡ ಸವಾಲಾಗಿರುವಾಗ, ಇದನ್ನು ಸಮರ್ಥವಾಗಿ ಎದುರಿಸುವಲ್ಲಿ ಕೆಲವರು ಹೋರಾಟಕ್ಕೆ ಇಳಿದರೆ, ಮತ್ತೆ ಕೆಲವರು ಒಪ್ಪಂದ ಮಾಡಿಕೊಂಡು ಆಳ್ವಿಕೆ ನಡೆಸಿದ್ದಾರೆ. ಸಂಪೂರ್ಣ ಬದುಕನ್ನು ಹೋರಾಟಕ್ಕೇ ಮೀಸಲಿಟ್ಟವರೂ ಇದ್ದಾರೆ.

ಇಲ್ಲಿ ಗಮನಿಸಿರುವಂತೆ ಬಹುತೇಕ ಮಹಿಳೆಯರು ತಮ್ಮ ಪತಿಯನ್ನು ಕಳೆದು ಕೊಂಡ ನಂತರವೇ ರಾಜಕೀಯ ರಂಗಕ್ಕೆ ಪ್ರವೇಶಿಸಿದ್ದಾರೆ, ಅವಕಾಶ ಪಡೆದುಕೊಂಡಿದ್ದಾರೆ. ಕೇವಲ ರಾಜ್ಯಾಡಳಿತದ ಅವಕಾಶ ಪಡೆದ, ಅವಕಾಶಕ್ಕಾಗಿ ಹೋರಾಟನಡೆಸಿದ ಕೆಲವು ಪ್ರಮುಖ ಮಹಿಳೆಯರ ವಿಚಾರಗಳನ್ನು ಮಾತ್ರ ಇಲ್ಲಿ ಚರ್ಚಿಸಲಾಗಿದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಸಮಗ್ರ ಅಧ್ಯಯನ ನಡೆಯುವ ಅವಶ್ಯಕತೆ ಇದೆ.

ಅಡಿ ಟಿಪ್ಪಣಿಗಳು

೧. ಮುದ್ದು ಮೂಡುಬೆಳ್ಳೆ, ೨೦೧೧, ಮೂಲ್ಕಿಯ ಸಾವಂತ ಅರಸರು ಐತಿಹಾಸಿಕ ಸಾಂಸ್ಕೃತಿಕ ನೋಟ, ಮೂಲ್ಕಿ ಸೀಮೆ ಅರಮನೆ ಅಭಿವೃದ್ಧಿ ಸಮಿತಿ, ಪಡುಪಣಂಬೂರು.

೨. ಶಾಮಶಾಸ್ತ್ರಿ.ಆರ್(ಸಂ), ೧೯೭೩, ಲಿಂಗಣ್ಣ, ಕೆಳದಿನೃಪ ವಿಜಯಂ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿವಿ.

೩. ದೇವರ ಕೊಂಡಾರೆಡ್ಡಿ, ೨೦೦೧, ಕೆಳದಿ ಬಸವರಾಜ ವಿರಚಿತ ಕರ್ನಾಟಕ ಕಾಳಿಕಾಕಾಂಡದಲ್ಲಿನ ಐತಿಹಾಸಿಕ ಅಂಶಗಳು, ಗೌರವ, ಜಿ.ಎಸ್.ಎಸ್. ಅಭಿನಂದನಾ ಗ್ರಂಥ, ಅಂಕಣ, ಮಲ್ಲೇಶ್ವರಂ, ಬೆಂಗಳೂರು, ಪು. ೧೮೬.

೪. ಕಪಟರಾಳ ಕೃಷ್ಣರಾಯರು, ೨೦೦೯, ಸುರಪುರ ಸಂಸ್ಥಾನದ ಇತಿಹಾಸ, ಅನಂತ ಪ್ರಕಾಶನ.

೫. ಬೆಂ.ಶಾ. ಶ್ಯಾಮಲಾರತ್ನಕುಮಾರಿ, ೨೦೦೪. ಕೋಟೆಕೊತ್ತಲಗಳು, ಕೋಲಾರ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು.

೬ ಪಿ.ವಿ.ಕೃಷ್ಣಮೂರ್ತಿ, ಸುಗುಟೂರು ಪ್ರಭುಗಳು, ದಕ್ಷಿಣ ಕರ್ನಾಟಕದ ಅರಸು ಮನೆತನಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೭. ಅದೇ.

೮. ಬಿ. ರಾಮಕೃಷ್ಣ, ೧೯೧೬, ಶ್ರೀಮನ್ಮಹಾರಾಜರ ವಂಶಾವಳಿ, ಸಂಪುಟ ೧, ಬೆಂಗಳೂರು.

೯. ಸುಧಾಮಣಿ.ಬಿ.ವಿ, ೨೦೦೯. ದಳವಾಯಿ ನಂಜರಾಜನ ಕಾಲದ ಮೈಸೂರು, ಅನನ್ಯ ಪ್ರಕಾಶನ, ಮೈಸೂರು.

೧೦. ನಾಗಭೂಷಣ ಎಸ್.ಎಂ, ೧೯೯೪, ಉಜ್ಜಿನಿಯಲ್ಲಿ ಕೆಳದಿ ರಾಣಿ ವೀರಮ್ಮಾಜಿ ಸಮಾಧಿ ಶೋಧನೆ, ಇತಿಹಾಸ ದರ್ಶನ ಸಂ.೯ ಪು.೧೫೨–೧೫೩.

೧೧. ಜ್ಯೋತ್ಸ್ನಾ ಕೃಷ್ಣಾನಂದ ಕಾಮತ್, ೨೦೧೭, ಚಾಂದ್ ಬೀಬಿ, ವಸಂತ ಪ್ರಕಾಶನ, ಬೆಂಗಳೂರು.

೧೨. ನಾಗರಾಜ್.ಎಂ.ಜಿ., ೨೦೦೪, ಕೊಡಗಿನ ಹಾಲೇರಿ ರಾಜವಂಶವು ೧ & ೨, ಪ್ರಾಚ್ಯವಸ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ.

೧೩. ಕಲ್ಯಾಣ ಕರ್ನಾಟಕದ ಅರಸು ಮನೆತನಗಳು, ಹಂಪಿ: ಕನ್ನಡ ವಿಶ್ವವಿದ್ಯಾಲಯ.

೧೪. ದಕ್ಷಿಣ ಕರ್ನಾಟಕ ಅರಸು ಮನೆತನಗಳು, ೨೦೦೧, ಹಂಪಿ: ಕನ್ನಡ ವಿಶ್ವವಿದ್ಯಾಲಯ.

೧೫. ಚೆನ್ನಕ್ಕ ಪಾವಟೆ, ೨೦೦೨, ಕಿತ್ತೂರು ಕಥನ, ಚೆನ್ನಗಂಗಾ ಪ್ರಕಾಶನ, ಧಾರವಾಡ.

೧೬. ಕುಂ.ಬಾ. ಸದಾಶಿವಪ್ಪ, ಹರಪನಹಳ್ಳಿ ಪಾಳೆಯಗಾರರು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೧೭. ಪಿ.ವಿ. ಕೃಷ್ಣಮೂರ್ತಿ, ಸುಗುಟೂರು ಪ್ರಭುಗಳು, ದಕ್ಷಿಣ ಕರ್ನಾಟಕದ ಅರಸು ಮನೆತನಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೮. ಶ್ರೀನಿವಾಸ ಹಾವನೂರ, ದತ್ತಕ ವಿಧಿ–ಮುಂಬಯಿ ಕರ್ನಾಟಕದ ಕೆಲವು ಘಟನೆಗಳು, ಬೆಳಗಾವಿ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಮೈಸೂರು.

೧೯. ಸಂತೇಬೆನ್ನೂರು ಸುಮತೀಂದ್ರ ನಾಡಿಗ್, ಮಲೆಕರ್ನಾಟಕದ ಅರಸು ಮನೆತನಗಳು, ಪು. ೨೬೦.

೨೦. ಸೂರ್ಯನಾಥ ಕಾಮತ್, ೨೦೦೫, ಬೆಂಗಳೂರು ದರ್ಶನ, ಉದಯಭಾನು ಕಲಾಸಂಘ, ಬೆಂಗಳೂರು.

೨೧. ಇ.ಸಿ. ೧೦, ಕೋಲಾರ, ೨೨೭.

೨೨. ಅದೇ. ಶಾಸನ ಸಂಖ್ಯೆ ೨೫೪.

೨೩. ಅದೇ. ಶಾಸನ ಸಂಖ್ಯೆ ೨೨೪.

೨೪. ಶಿವಾಜಿ ಮಲ್ಲಮ್ಮಾಜಿ ಸಮರೋತ್ಸವ, ೧೯೯೩, ವೀರಶೈವ ಅಧ್ಯಯನ ಸಂಸ್ಥೆ, ಗದಗ.

ಗುಣದ ಬೆಡಂಗಿ ಚಾಳುಕ್ಯ ಕುಳೇಶ್ವರಿ 'ಅಕ್ಕಾದೇವಿ'

ಜೆ.ಎಂ. ನಾಗಯ್ಯ*

ಕಲ್ಯಾಣ ಚಾಲುಕ್ಯ ಮನೆತನದ ರಾಜಕುಮಾರಿಯರಲ್ಲಿ ಹೆಚ್ಚು ಪ್ರಸಿದ್ಧಿ ಪಡೆದವಳು ಅಕ್ಕಾದೇವಿ. ಧರ್ಮ ಸಮಾನತೆ, ಧರ್ಮ ಸಮನ್ವಯತೆಗೆ ಹೆಸರಾದವಳು ಈ ಅಕ್ಕಾದೇವಿ. ಈಕೆ ಕಿಸುಕಾಡು ೭೦ ಮೊದಲಾದ ವಿಭಾಗಗಳನ್ನು ಆಳುತ್ತಿದ್ದ ಉಲ್ಲೇಖ ಶಾಸನಗಳಿಂದ ತಿಳಿದು ಬರುತ್ತದೆ. ಈ ಚಾಲುಕ್ಯ ರಾಜಕುಮಾರಿಯನ್ನು ಕುರಿತಂತೆ ಈಗಾಗಲೇ ಕೆಲವು ವಿದ್ವಾಂಸರು ಲೇಖನಗಳ ಮೂಲಕ ಕೆಲವು ಸಂಗತಿಗಳನ್ನು ಹೊರಹಾಕಿದ್ದಾರೆ. ಈಕೆಯನ್ನು ಹಾನಗಲ್ಲು ಕದಂಬ ಮನೆತನಕ್ಕೆ ಮದುವೆ ಮಾಡಿಕೊಡಲಾಗಿತ್ತೆಂದೂ, ಈಕೆಯು ಕದಂಬ ರಾಣಿಯೆಂದೂ ಖಚಿತವಾಗಿ ಕೆಲವು ವಿದ್ವಾಂಸರು ಹೇಳಿದ್ದಾರೆ. ಜಾರ್ಜ್ ಮೊರೆಸ್ ಅವರು ತಮ್ಮ 'ಕದಂಬ ಕುಲ' ಎಂಬ ಗ್ರಂಥದಲ್ಲಿ ಹಾನಗಲ್ಲು ಕದಂಬ ಮನೆತನದ ಜಯಸಿಂಹನ ರಾಣಿಯೆಂದು ಹೇಳುತ್ತಾರೆ. ಜಯಸಿಂಹನ ಪುತ್ರನಾದ ತೋಯಿಮ ದೇವನ ತಾಯಿ ಈ ಅಕ್ಕಾದೇವಿಯೆಂದೂ ಹೇಳುತ್ತಾರೆ. ಈ ಸಂಗತಿಯನ್ನು ಮೊರೆಸ್[1] "The Inscriptions of this period of a queen named Akkadevi who appears to have been a personage of great reputation and consequence. We learn from these records that she wase the sister of Vikramaditya V and of Jayasimha IIs the chalukya Emperors... She was incharge of the kisukad seventy under Jayasimha II.... It may be concluded from some of these inscriprians that Akkadevi was related to the family of the kadambas. Thus record of 1067 states that she was the mother of Tohimadeva who was then ruling Banavasi and the Hangal provinces. Now this Toyimadeva seems to be the same as Taila the second son of Jayasimha. Hance to follow that Akkadevi was the wife of Jaysimha. It is not improbable that Irivabedanga deva Satyasraya the chalukya Emperor, being attacked by enemies on the north and the south sought to strength the louds of friendship between the kadamba and the chalukya royal families, by a dynastic marriage accordingly married his deughter Akkadevi to Jayasimha the son of chatta" ಅವರು ಎಂದು ಮುಂತಾಗಿ ಹೇಳಿದ್ದಾರೆ.

ಅಂದರೆ ಮೊರೆಸ್ ಅವರ ಪ್ರಕಾರ ಅಕ್ಕಾದೇವಿಯು ಸತ್ಯಾಶ್ರಮ ಇರಿವ ಬೆಡಂಗನ ಪುತ್ರಿ. ವಿಕ್ರಮಾದಿತ್ಯ V ಮತ್ತು ಜಯಸಿಂಹ II ರ ಸಹೋದರಿ. ಈಕೆಯನ್ನು ಮಹಾಮಂಡಳೇಶ್ವರ ಹಾನಗಲ್ಲು ಕದಂಬರ ಜಯಸಿಂಹನಿಗೆ ಕೊಟ್ಟು ವಿವಾಹ ಮಾಡಲಾಗಿತ್ತು. ಇವರಿಬ್ಬರಿಗೆ ಜನಿಸಿದ ಪುತ್ರ ತೋಯಿಮದೇವನಾಗಿದ್ದಾನೆ. ಹಾಗೆಯೇ ಮುಂದುವರೆದು ಹೇಳುತ್ತ ಈ ಜಯಸಿಂಹನ ಹಿರಿಯ ಮಗ ಮಯೂರವರ್ಮ II ಎಂದು ಹೇಳುತ್ತ ಜಯಸಿಂಹ ಮರಣ ಹೊಂದಿದಾಗ ಈ ಹಿರಿಯ ಮಗನನ್ನು ಮುಂದಿಟ್ಟುಕೊಂಡು ಅಕ್ಕಾದೇವಿಯು ನಿಯಂತ್ರಕಳಾಗಿ (regent) ಆಳುತ್ತಿದ್ದಳು ಎಂದು ಹೊಟ್ಟೂರು ಶಾಸನದ ಆಧಾರದಿಂದ ಹೇಳುತ್ತಾರೆ.

ಸತ್ಯಾಶ್ರಯ ಇರಿವ ಬೆಡಂಗನಿಗೆ ಒಬ್ಬ ಮಗಳಿದ್ದುದು ಶಾಸನಗಳಿಂದ ತಿಳಿದು ಬರುತ್ತದೆ. ಗದಗ ತಾಲೂಕಿನ ಆಲೂರು[2] ಗ್ರಾಮದ ಕ್ರಿ.ಶ. ೧೦೧೦ ಮೇ ೧ರ ಶಾಸನದಲ್ಲಿ "ಮನುಮಾರ್ಗ್ಗಾಗ್ರಣಿ ಚಕ್ರವರ್ತಿ ತಳಕಂ ತೈಲಂಗೆ ಮರ್ಮುಳ್ಪೊಡರ್ಪಿನ ಸತ್ಯಾಶ್ರಯ ಚಕ್ರವರ್ತಿಯ ಮಗಳ್ ಶ್ರೀ ವಿಕ್ರಮಾದಿತ್ಯ ದೇವನ ಚಕ್ರೇಶನ ತಂಗೆ ತನ್ನರಸಿಯೆನ್ದನ್ದೀ ನೊಳಂಬಾಧಿರಾಜನ ಪೆಂಪಂ ಕುಳಮಂ ಮಹಾಮಹಿಮೆಯಂ ಬಣ್ಣಿಪ್ಪೊನೇ ವಣ್ಣಿಪೊಂ..ಎಂದು ಬರುತ್ತದೆ. ನಂತರ ಚಕ್ರವರ್ತಿ ವಿಕ್ರಮಾದಿತ್ಯ V ಆಳುತ್ತಿರುವುದನ್ನು, ಈತನ ಪಾದಪದ್ಮೋಪ ಜೀವಿಯಾಗಿ ಪಲ್ಲವಾನ್ವಯದ ಶ್ರೀ ಪೃಥ್ವೀವಲ್ಲಭಂ ಪಲ್ಲವ ಕುಲತಿಳಕನು, ಏಕವಾಕ್ಯನು, ಕಾಂಚೀಪುರವರೇಶ್ವರ ಘಟೆಯಂಕಕಾರ ಶ್ರೀಮಂದಿಜೀವ ನೊಳಂಬಾಧಿರಾಜನು ನೊಳಂಬವಾಡಿ ೩೨೦೦೦, ಕೋಗಳಿ ೫೦೦, ಎಲ್ಲಕುಂದೆ ೩೦೦, ಕುಕ್ಕನೂರು ೩೦, ಮಾಸಿಯವಾಡಿ ನಾಡಿನಲ್ಲಿ ಪಂಚಗ್ರಾಮಗಳನ್ನು ಆಳುತ್ತಿದ್ದನೆಂದು ಹೇಳಲಾಗಿದೆ. ನೊಳಂಬ ಪಲ್ಲವ ಮನೆತನದ ಮಹಾಮಂಡಳೇಶ್ವರ ಇರಿವನೊಳಂಬ ಘಟೆಯಂಕ ತಾರೆ

* ನಿವೃತ್ತ ಪ್ರಾಧ್ಯಾಪಕರು, ೩೪೮೧/ಬಿ೧೪, ಸಾಯಿಶ್ರೀ, ಶಿವಗಿರಿ, ಲಿಂಗರಾಜ ನಗರ ಉತ್ತರ, ಉಣಕಲ್, ಹುಬ್ಬಳ್ಳಿ-೩೨.

ಪಲ್ಲವಾದಿತ್ಯನು ತನ್ನ ರಾಣಿ (ತನ್ನರಸಿ) ಸಾಮಾನ್ಯಳಲ್ಲ. ಆಕೆ ಚಕ್ರವರ್ತಿ ತೈಲಪನ ಮೊಮ್ಮಗಳೂ, ಸತ್ಯಾಶ್ರಯ ಚಕ್ರವರ್ತಿಯ ಪ್ರೀತಿಯ ಮಗಳೂ, ಚಕ್ರವರ್ತಿ ವಿಕ್ರಮಾದಿತ್ಯ V ನ ತಂಗಿ ಎಂದು ಹೆಮ್ಮೆಯಾಗಿ ಹೇಳಿಕೊಂಡಿದ್ದಾನೆ. ಇದರಿಂದ ಸತ್ಯಾಶ್ರಯ ಇರಿವ ಬೆಡಂಗನ ಮಗಳನ್ನು ಪಲ್ಲವ ಮನೆತನದ ಮಹಾಮಂಡಳೇಶ್ವರ ಇಜೆವ ನೊಳಂಬಾಧಿ ರಾಜನಿಗೆ ಕೊಟ್ಟು ವಿವಾಹ ಮಾಡಲಾಗಿತ್ತು.

ಹುನಗುಂದ ತಾಲೂಕಿನ ಮರೋಳದ[೩] ಕ್ರಿ.ಶ. ೧೦೨೪ ಡಿಸೆಂಬರ್ ೨೪ರ ಶಾಸನದಲ್ಲಿ ಜಯಸಿಂಹ II ಚಕ್ರವರ್ತಿ ಆಳುತ್ತಿರುವಾಗ ಸತ್ಯಾಶ್ರಯನ ಮಗಳಾದ ಮಹಾದೇವಿಯರು ಮರವೊಳಲ ಗ್ರಾಮವನ್ನು ಆಳುತ್ತಿದ್ದು ಆಕೆ ಬಸದಿಗೆ ದಾನ ಬಿಡುತ್ತಾಳೆ. ಶಾಸನದಲ್ಲಿ "xx ರತ್ನ ಮಕುಟಂ ಚೂಡಾಮಣಿ ಸಮಸ್ತ ದಾನ ಧರ್ಮಾನುರಾಗ ಪ್ರಿಯೆ ಸತ್ಯಬ್ರತಯುಕ್ತೆ ಮೋಹವಿದ್ಯಾಧರಿ ಸತ್ತಿಗರ್ನರುಂಗಿ ರೂಪವಿಳಾಸೆಯತ್ಯುದಾರ ಸಾ[ಳ]ನಿ ಗುಣರತ್ನ ನಿಧಾನೆಯ ರಪ್ಪ ಶ್ರೀಮಹ್ಮಹಾದೇವಿಯರಾಳ್ವ ಮರವೊಳಲ ಬಸದಿಗೆ ಶ್ರೀಮಜ್ಜಗದೇಕ ಮಲ್ಲದೇವರ ಪಾದಪದ್ಮೋಪ ಜೀವಿಗಳಪ್ಪ ಘಟೆಯಂಕಕಾರ ನೊಳಂಬರಸ ನೊಳಂಬವಾಡಿಯ ಕರಿವಿಡಿ ಮೂವತ್ತನಾಳುತ್ತಮಿರೆ ಸಕವರ್ಷ ೯೪೬ ರಕ್ತಾಕ್ಷಿ ಸಂವತ್ಸರದ ಸ್ರಾಹಿಯೊಳ್ ಉತ್ತರಾಯಣ ಸಂಕ್ರಮಣದನ್ದು ಶ್ರೀಮದುಗ್ಗಣಕೀರ್ತ್ತಿ ಸಿದ್ಧಾಂತ ಭಟ್ಟಾರಕರ ಶಿಷ್ಯ ದೇವಕೀರ್ತಿ ಪಂಡಿತರಿಗೆ" ದಾನ ಬಿಟ್ಟುದು ಹೇಳಲಾಗಿದೆ. ಮಾರುವೊಳಲು ಅದು ಈಗಿನ ಮರೋಳವಾಗಿದ್ದು ಸತ್ಯಾಶ್ರಯ ಇರಿವ ಬೆಡಂಗನ ಪುತ್ರ 'ಶ್ರೀಮನ್ಮಹಾದೇವಿ'ಯರು ಅದನ್ನು ಆಳುತ್ತಿದ್ದರು. ಈ ಮಹಾದೇವಿ ಮತ್ತು ಆಕೆಯ ಪತಿ ಘಟೆಯಂಕಕಾರ ಶ್ರೀಮದಿಜೆವ ನೊಳಂಬಾಧಿರಾಜ ಇಬ್ಬರೂ ಸೇರಿ ಬಸದಿಗೆ ದತ್ತಿ ಬಿಡುತ್ತಾರೆ. ಹೀಗಾಗಿ ಮೊರೇಸ್ ಅವರು ಹೇಳಿದಂತೆ ಸತ್ಯಾಶ್ರಯ ಇರಿವ ಬೆಡಂಗನ ಮಗಳನ್ನು ಕದಂಬ ಪಲ್ಲವ ಮನೆತನಕ್ಕೆ ಕೊಡಲಾಗಿತ್ತು, ಆಕೆಯೇ ಮಹಾದೇವಿ.

ಡಾ. ಚೆನ್ನಕ್ಕ ಪಾವಟೆ[೪] ಅವರು 'ಹಾನಗಲ್ಲು ಕದಂಬರು' ಎಂಬ ಗ್ರಂಥದಲ್ಲಿ "ಮಯೂರವರ್ಮನ ಸಮರ್ಥವಂತಿಕೆ ರಾಜನಿಷ್ಠೆ, ಮಹಾಮಂಡಲೇಶ್ವರತ್ವದ ಹೊಣೆಗಾರಿಕೆ ಮೆಚ್ಚಿ ಚಾಲುಕ್ಯರು ಇವನೊಂದಿಗೆ ರಕ್ತಸಂಬಂಧ ಬೆಸೆದಿರುವರು. ಈ ಸಂಬಂಧಕ್ಕೆ ಸಂಬಂಧಪಟ್ಟಂತೆ ಕದಂಬರ ಇತಿಹಾಸ ಬರೆದ ಜಾರ್ಜ್ ಮೊರೇಸ್‌ರು 'ಕದಂಬ ಚಟ್ಟಯ್ಯನ ಮಗ ಜಯಸಿಂಹನಿಗೆ ಚಾಲುಕ್ಯ ಐದನೆ ವಿಕ್ರಮಾದಿತ್ಯನ ಸೋದರಿ ಅಕ್ಕಾದೇವಿಯನ್ನು ಕೊಡಲಾಗಿತ್ತು ಎಂದು ಬರೆದಿರುವರು. ಆದರೆ ಕ್ರಿ.ಶ. ೧೦೩೭ರ ಹೊಟ್ಟೂರು ಶಾಸನಕ್ಕೆ ಮುನ್ನುಡಿ ಬರೆದ ಚಾರ್ನೆಟ್‌ರು 'ಅಕ್ಕಾದೇವಿ ಮತ್ತು ಮಯೂರವರ್ಮರಲ್ಲಿದ್ದುದು ಗಂಡ ಹೆಂಡತಿಯ ಸಂಬಂಧ' ಎಂಬುದನ್ನು ಸ್ಪಷ್ಟಪಡಿಸಿರುವರು. ಹೊಟ್ಟೂರು ಶಾಸನದಲ್ಲಿ "ಅಕ್ಕಾದೇವಿಯರ್ ವಾನವಾಸೆ ಪನ್ನಿರ್ಚ್ಛಾಸಿರಮುವುಂ ಸುಖ ಸಂಕಥಾ ವಿನೋದದಿಂ ಆಳುತ್ತಮಿರೆ" ಎಂದು ಹೇಳುತ್ತ ಮುಂದೆ ಬನವಾಸಿ ಪುರವರೇಶ್ವರಂ ಹರಿಕಾಂತನ ಸಿಂಗ ಶ್ರೀಮಾನ್ ಮಯೂರವರ್ಮ ದೇವರು ಬನವಾಸಿ ಪುರವರೇಶ್ವರಂ ಪಾನುಂಗಲೈನೂರುಮನ್ ಏಕಾಯತಪದಿ ನಾಳ್ದು" ಎಂದು ವಿವರಿಸಿದೆ. ಹೀಗಾಗಿ ಕ್ರಿ.ಶ. ೧೦೩೭ಕ್ಕೆ ಮೊದಲೇ ಅಕ್ಕಾದೇವಿಯನ್ನು ಕದಂಬ ಮಯೂರವರ್ಮ ವರಿಸಿರುವನು" ಎಂದು ಬರೆದಿದ್ದಾರೆ.

ಆದರೆ ಯಾವ ಶಾಸನಗಳಲ್ಲಿ ಅಕ್ಕಾದೇವಿಯನ್ನು ಕದಂಬ ಮನೆತನಕ್ಕೆ ಕೊಟ್ಟು ವಿವಾಹ ಮಾಡಲಾಗಿತ್ತು ಎಂದು ಹೇಳಿಲ್ಲ. ಅಲ್ಲದೆ ಕದಂಬ ಜಯಸಿಂಹನಾಗಲಿ ಅಥವಾ ಮಯೂರವರ್ಮನಾಗಲಿ ಅಕ್ಕಾದೇವಿಯನ್ನು ತಮ್ಮ 'ಮನೋನಯನ ವಲ್ಲಭೆ' ಎಂದಾಗಲಿ, 'ಎನ್ನರಸಿ' ಎಂದಾಗಲಿ, '....ವಿಶಾಳವಕ್ಷಸ್ಥಳ ನಿವಾಸಿನಿ' ಎಂದೂ ಹೇಳಿಕೊಂಡಿಲ್ಲ. ಹೀಗಾಗಿ ಈಕೆಯನ್ನು ಕದಂಬ ಮನೆತನಕ್ಕೆ ಕೊಟ್ಟು ವಿವಾಹ ಮಾಡಲಾಗಿತ್ತೆಂಬುದಕ್ಕೆ ಯಾವುದೇ ಆಧಾರಗಳಿಲ್ಲ. ಅಕ್ಕಾದೇವಿಯೂ ಕೂಡ ಪ್ರಶಸ್ತಿಯಲ್ಲಿ ತನ್ನ ಪತಿಯ ಬಗ್ಗೆ ಏನನ್ನೂ ಹೇಳಿಕೊಂಡಿಲ್ಲ.

ಎಸ್.ಪಿ. ಮಂಜುಶ್ರೀ[೫] ಅವರು 'ಹಾನುಗಲ್ಲಿನ ಕದಂಬರಾಣಿ ಅಕ್ಕಾದೇವಿ' ಎಂಬ ಲೇಖನದಲ್ಲಿ ಅಕ್ಕಾದೇವಿಯನ್ನು ಕುರಿತು ಹೀಗೆ ಹೇಳಿದ್ದಾರೆ: "ಕಲ್ಯಾಣ ಚಾಲುಕ್ಯ ಮನೆತನದ ದೇಶವರ್ಮ ಮತ್ತು ಭಾಗಲದೇವಿಯರ ಪುತ್ರಿಯಾದ ಅಕ್ಕಾದೇವಿಯು ಕರ್ನಾಟಕ ಇತಿಹಾಸದಲ್ಲಿಯೇ ಒಬ್ಬ ಅದ್ವಿತೀಯ ಮಹಿಳೆ. ರಾಜ್ಯದ ಆಡಳಿತ ಹಾಗೂ ಯುದ್ಧ ಎರಡರಲ್ಲಿಯೂ ಪ್ರತ್ಯಕ್ಷವಾಗಿ ಪಾಲ್ಗೊಂಡಿದ್ದ ವೀರಮಹಿಳೆಯರ ಅಕ್ಕಾದೇವಿಯ ಸಾಧನೆಯನ್ನು ಹತ್ತಾರು ಶಾಸನಗಳು ದಾಖಲಿಸಿವೆ. ಕಲ್ಯಾಣ ಚಾಲುಕ್ಯ ಚಕ್ರವರ್ತಿ ತ್ರಿಭುವನಮಲ್ಲ ೫ನೇ ವಿಕ್ರಮಾದಿತ್ಯನ ತಂಗಿ ಹಾಗೂ ಜಗದೇಕಮಲ್ಲ ಜಯಸಿಂಹನ ಅಕ್ಕನಾದ ಅಕ್ಕಾದೇವಿಯು ತನ್ನ ತಂದೆ ದೇಶವರ್ಮ ಮತ್ತು ಅಪ್ರತಿಮ ಪರಾಕ್ರಮಿಗಳಾದ ಸಹೋದರರಿಂದ ಪ್ರೇರಿತಳಾಗಿ ಆಡಳಿತ ಹಾಗೂ ಸಮರಕಲೆಗಳಲ್ಲಿ ಪಾರಂಗತಳಾಗಿದ್ದಳು. ಪ್ರೇರಿತಳಾಗಿ ಆಡಳಿತ ಹಾಗೂ ಸಮರಕಲೆಗಳಲ್ಲಿ ಪಾರಂಗತಳಾಗಿದ್ದಳು. ತದನಂತರ ಹಾನಗಲ್ ಕದಂಬ ವಂಶದ ಮಯೂರವರ್ಮನನ್ನು ಕ್ರಿ.ಶ. ಸು. ೧೦೨೨ರಲ್ಲಿ ವಿವಾಹವಾಗಿ ಆತನ ಪಟ್ಟಮಹಿಷಿಯಾದಳು" "ಬನವಾಸಿ ಪನ್ನಿರ್ಚ್ಛಾಸಿರ ಮತ್ತು ಹಾನುಂಗಲ್ಲು ೫೦೦ ಪ್ರದೇಶವನ್ನು ಮಹಾಮಂಡಲೇಶ್ವರನಾಗಿ

ಆಳುತ್ತಿದ್ದ ತೋಯಿಮರಸನು ಅಕ್ಕಾದೇವಿಯ ಪುತ್ರನಾಗಿದ್ದನು. ಕ್ರಿ.ಶ. ೧೦೬೪ರ ಹೊಟ್ಟೂರು ಶಾಸನದಲ್ಲಿ 'ತೋಯಿಮ ದೇವರಬ್ಬೆಗಳ್ ಶ್ರೀಮದಕ್ಕಾದೇವಿಯರ್' ಎಂಬ ಉಲ್ಲೇಖ ದೊರೆಯುತ್ತದೆಂದು ಹೇಳಿದ್ದಾರೆ. ಎಸ್.ಪಿ. ಮಂಜುಶ್ರೀ ಅವರು ದಶವರ್ಮನನ್ನು 'ದೇಶವರ್ಮ'ನೆಂದು ತಪ್ಪಾಗಿ ನಮೂದಿಸಿದ್ದಾರೆ. ದಶವರ್ಮ ಮತ್ತು ಭಾಗಲದೇವಿಯರ ಪುತ್ರಿಯೇ ಅಕ್ಕಾದೇವಿ ಎಂಬುದು ಸ್ಪಷ್ಟ. ಈಕೆ ವಿಕ್ರಮಾದಿತ್ಯ V ಮತ್ತು ಜಯಸಿಂಹ II ರ ಸಹೋದರಿ ಎಂಬುದೂ ಸತ್ಯ. ಆದರೆ ಈಕೆಯನ್ನು ಕದಂಬ ಮಯೂರವರ್ಮನಿಗೆ ಕೊಟ್ಟು ವಿವಾಹ ಮಾಡಲಾಗಿತ್ತೆಂಬುದಕ್ಕೆ ಖಚಿತ ಆಧಾರಗಳಿಲ್ಲ.

ಹೊಟ್ಟೂರಿನ 'ತೋಯಿಮ ದೇವರಬ್ಬೆಗಳ್ ಶ್ರೀ ಮದಕ್ಕಾದೇವಿಯರ್' ಎಂಬ ಶಾಸನೋಕ್ತ ಹೇಳಿಕೆಯೊಂದನ್ನು ಗಮನಿಸಿ ಈಕೆಯನ್ನು ಕದಂಬ ಮಯೂರವರ್ಮನಿಗೆ ಕೊಟ್ಟು ವಿವಾಹ ಮಾಡಲಾಗಿತ್ತೆಂಬ ನಿಲುವನ್ನು ವಿದ್ವಾಂಸರು ತಾಳಿದ್ದಾರೆ. ಮಯೂರವರ್ಮನು ಒಂದು ವೇಳೆ ಅಕ್ಕಾದೇವಿಯನ್ನು ವಿವಾಹವಾಗಿದ್ದರೆ ಆ ಸಂಗತಿಯನ್ನು ಶಾಸನಗಳಲ್ಲಿ ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದ. ಪಲ್ಲವ ನೊಳಂಬಾಧಿರಾಜ ಹೇಳಿಕೊಳ್ಳುವಂತೆ ಇವನೂ ಹೇಳಿಕೊಳ್ಳುತ್ತಿದ್ದ. ಆ ತೆರಾನದ ಯಾವುದೇ ರೀತಿಯ 'ಮನೋನಯನ ವಲ್ಲಭ' ಎಂದಾಗಲಿ, 'ಎನ್ನರಸಿ' ಎಂದಾಗಲಿ 'ಮಯೂರವರ್ಮದೇವರ ವಿಶಾಳ ವಕ್ಷಸ್ಥಳ ನಿವಾಸಿನಿ' ಎಂದಾಗಲಿ ಹೇಳಿಕೊಂಡಿಲ್ಲ. ಹೀಗಾಗಿ ಮಯೂರವರ್ಮನು ಅಕ್ಕಾದೇವಿಯನ್ನು ವಿವಾಹವಾಗಿದ್ದನೆಂಬುದಕ್ಕೆ ಆಧಾರಗಳಿಲ್ಲ.

ತಮಗಿಂತ ದೊಡ್ಡ ಸ್ಥಾನದಲ್ಲಿರುವವರನ್ನು, ತಮಗೆ ಉಪಕಾರ ಮಾಡಿದವರನ್ನು ತಂದೆಯೆಂದೂ, ತಾಯಿಯೆಂದೂ ಹೇಳಿಕೊಳ್ಳುವುದು ಸಾಮಾನ್ಯವಾಗಿತ್ತು. ಎಷ್ಟೋ ಜನರು ಚಕ್ರವರ್ತಿಯ ಮಗನೆಂದು ತಮ್ಮನ್ನು ತಾವು ಕರೆದುಕೊಂಡಿದ್ದಾರೆ. ಪ್ರತಿಷ್ಠಿತ ಮಹಾಮಂಡಲೇಶ್ವರರೂ, ಮಹಾಸಾಮಂತರು, ಪ್ರಭುಗಾವುಂಡುಗಳು, ಗಾವುಂಡರು ಈ ರೀತಿಯಾಗಿ ಕರೆದುಕೊಂಡದ್ದನ್ನು ಶಾಸನಗಳು ನಿರೂಪಿಸುತ್ತವೆ. ಹಾಗೆಯೇ ಚಕ್ರವರ್ತಿಯ ಮಗಳೂ, ಚಕ್ರವರ್ತಿಯ ತಂಗಿ, ಚಕ್ರವರ್ತಿಯ ಅಕ್ಕಳೂ ಆಗಿದ್ದು, ತಮ್ಮ ಮೇಲೆ ಪ್ರಭುವಾಗಿದ್ದ, ಬನವಾಸಿ ೧೨೦೦೦, ರಸುಕಾಡು ೭೦, ಮಾಸಿಯವಾಡಿ ೧೪೦, ಬಾಗಡಗೆ ೭೦, ತೊರಗಲ್ಲು ೬೦ ಮೊದಲಾದ ವಿಭಾಗಗಳನ್ನು ಆಳುತ್ತಿದ್ದ 'ಮಹಾಮಂಡಳೇಶ್ವರ' ಎಂದು ಕರೆಯಿಸಿಕೊಂಡಿದ್ದ ಅಕ್ಕಾದೇವಿಯನ್ನು 'ಅಬ್ಬೆ' 'ತಾಯಿ' ಕರೆಯುತ್ತಿದ್ದುದಲ್ಲದೆ ಆಕೆಯನ್ನು ತಮ್ಮ 'ಅಬ್ಬೆ' ಎಂದೂ ಕರೆದುಕೊಳ್ಳುತ್ತಿದ್ದರು. ಇದು ತಾವು ಅಕ್ಕಾದೇವಿಗೆ ನಿಷ್ಠರಾಗಿದ್ದೇವೆಂಬುದನ್ನು ಸೂಚಿಸುತ್ತದೆಯೇ ವಿನಃ ರಕ್ತಸಂಬಂಧವನ್ನಲ್ಲ. ಉದಾಹರಣೆಗೆ ಇಂಥ ಕೆಲವು ಹೇಳಿಕೆಗಳನ್ನು ಈ ಕೆಳಗಿನಂತೆ ಕೊಡಲಾಗಿದೆ.

೧) ರಾಣೆಬೆನ್ನೂರು ತಾಲೂಕಿನ ಗುಡ್ಡದ ಬೇವಿನಹಳ್ಳಿ[೬] ಶಾಸನದಲ್ಲಿ ಕುಂದರಾಜನು ತನ್ನನ್ನು ಚಕ್ರವರ್ತಿ ಸತ್ಯಾಶ್ರಯ ಇರಿವ ಬೆಡಂಗನ ಮಗನೆಂದು ಕರೆದುಕೊಂಡಿದ್ದಾನೆ. ಶಾಸನದಲ್ಲಿ "ಸತ್ತಿಗನ ಚಟ್ಟ ಶ್ರೀಮದಿರಿವ ಬೆಡಂಗದೇವರ ಮಗ ಕುಂನ್ದರಾಜಂ ಪೈವೆ ಆಳೆ ಬನವಾಸೆ ಪನ್ನಿರ್ಚ್ಛಾಸಿರಮುಮಂ ಪದಿನೆಂಟು ಅಗ್ರಹಾರಮುಮಂ ಸಾನ್ತಳಿಗೆ ಸಾಯ್ರಮುಮಂ ಸುಖಸಂಖಥಾ ವಿನೋದದಿನಾಳೆ" ಎಂದು ಬರುತ್ತದೆ.

೨) ಮಂಡರಗಿ ತಾಲೂಕಿನ ನಾಗರಹಳ್ಳಿಯ[೭] ಕ್ರಿ.ಶ. ೧೦೨೨ ಮಾರ್ಚ್ ೧೦ರ ಶಾಸನದಲ್ಲಿ 'ದಸರಸ' ಎನ್ನುವವನು ತಾನು ಜಗದೇಕಮಲ್ಲದೇವರ (ಜಯಸಿಂಹ II) ಮಗನೆಂದು ಹೇಳಿಕೊಂಡಿದ್ದಾನೆ. ಶಾಸನದಲ್ಲಿ "ಮಹಾಸಾಮನ್ತಂ ಸಿಂಗನ ಗರುಡಂ ಶ್ರೀ ಜಗದೇಕಮಲ್ಲ ದೇವರ ಮಗಂ ಶ್ರೀಮದ್ದಸರಸರು ಮಾಸೆಯವಾಡಿ ನೊಱನಾಲ್ವತ್ತಮನಾಳುತ್ತಮಿರೆ" ಎಂದು ಬರುತ್ತದೆ.

೩) ರಾಣೆಬೆನ್ನೂರು ತಾಲೂಕಿನ ಬೆನಕನಕೊಂಡದ[೮] ಕ್ರಿ.ಶ. ೧೦೩೩ ಡಿಸೆಂಬರ್ ೨೪ರ ಶಾಸನದಲ್ಲಿ ಚಿಕ್ಕ ಆಯ್ಚರಸನು ತಾನು ಜಯಸಿಂಹದೇವರ ಮಗನೆಂದು ಹೇಳಿಕೊಂಡಿದ್ದಾನೆ. ಶಾಸನದಲ್ಲಿ "ಮಹಾಸಾಮಂತ ಕಟಕ ಮುನ್ನಿಜಿವಂ ಘಟೆಯ ಬೆಂಕೊಳ್ವಂ ಶ್ರೀಮಜ್ಜಯ ಸಿಂಗದೇವರ ಮಗಂ ಚಿಕ್ಕಾಯಚ್ಚಯ್ಯರಸರ್" ಎಂದು ಬರುತ್ತದೆ.

ಇಂಥ ಅನೇಕ ಉದಾಹರಣೆಗಳನ್ನು ಕೊಡಬಹುದಾಗಿದೆ. ಈ ಹಿನ್ನೆಲೆಯಲ್ಲಿ ಗಮನಿಸಿದಾಗ ಕದಂಬ ತೋಯಿಮದೇವನು ಅಕ್ಕಾದೇವಿಯನ್ನು ತನ್ನ ತಾಯಿ ಎಂದು ಹೇಳಿಕೊಂಡಿದ್ದು ಮೇಲ್ಕಾಣಿಸಿದ ಅರ್ಥದಲ್ಲಿಯೇ. ಹೀಗಾಗಿ ಶಾಸನದಲ್ಲಿ 'ತೋಯಿಮ ದೇವರ ಬ್ಬೆಗಳ್ ಶ್ರೀಮದಕ್ಕಾದೇವಿಯರ್' ಎಂದು ಕರೆಯಲಾಗಿದೆ. ಹೀಗಾಗಿ ಅಕ್ಕಾದೇವಿಯ ಪತಿಯ ಬಗ್ಗೆ ಖಚಿತವಾಗಿ ತಿಳಿದು ಬರುವುದಿಲ್ಲ. ಈಕೆಯ ಆಡಳಿತ ವೈಖರಿ, ಉದಾರಗುಣ, ವೀರಗುಣ, ಧರ್ಮನಿಷ್ಠೆ, ಧರ್ಮಗಳನ್ನು ಸಮಾನವಾಗಿ ಕಾಣುವ ಗುಣ, ಗುಣಗ್ರಾಹಿ ಗುಣ ಇವುಗಳನ್ನು ಶಾಸನಗಳು ವರ್ಣಿಸುತ್ತವೆ. ಶಾಸನಗಳಿಂದ ಆಕೆಯ ಘನ ವ್ಯಕ್ತಿತ್ವವನ್ನು ಹೀಗೆ ನಿರೂಪಿಸಬಹುದು.

ರಾಜ್ಯಾಡಳಿತ ಮತ್ತು ಅಕ್ಕಾದೇವಿ

ಅಕ್ಕಾದೇವಿಯು ಪ್ರಭುವಾಗಿ ವಿವಿಧ ವಿಭಾಗಗಳನ್ನು ಆಳುತ್ತಿದ್ದುದನ್ನು ಶಾಸನಗಳು ನಿರೂಪಿಸುತ್ತವೆ. ಉಪಲಬ್ಧ ಈಕೆಯ ಮೊದಲ ಶಾಸನವೆಂದರೆ ಕ್ರಿ.ಶ. ೧೦೧೦ ನವೆಂಬರ್ ೮ರ ಸೂಡಿಯ್ ಶಾಸನ. ಈ ಶಾಸನದ ಕಾಲಕ್ಕಾಗಲೇ ಅಕ್ಕಾದೇವಿಯು ಕಿಸುಕಾಡು ೭೦ನ್ನು ಆಳುತ್ತಿದ್ದಳು. ಬೇಲೂರಿನ[೧೦] ಕ್ರಿ.ಶ. ೧೦೨೧ ಡಿಸೆಂಬರ್ ೨೪ರ ಕಿಸುಕಾಡು ೭೦ನ್ನು ಆಳುತ್ತಿದ್ದಳೆಂದೇ ಹೇಳುತ್ತದೆ. ಹೊಟ್ಟೂರಿನ[೧೧] ಕ್ರಿ.ಶ. ೧೦೩೭ ನವೆಂಬರ್ ೨೧ರ ಶಾಸನವು ಅಕ್ಕಾದೇವಿಯು ಜಗದೇಕ ಮಲ್ಲ ಜಯಸಿಂಹನ ಪಾದಪದ್ಮೋಪಜೀವಿಯಾಗಿ ಬನವಾಸಿ ೧೨೦೦೦ ಆಳುತ್ತಿದ್ದುದು ತಿಳಿದುಬರುತ್ತದೆ. ಈಕೆಗೆ ಅಧೀನನಾಗಿ ಕದಂಬ ಮನೆತನದ ಮಯೂರವರ್ಮ ದೇವನು ಬನವಾಸಿ ೧೨೦೦೦, ಪಾನುಂಗಲ್ಲು ೫೦೦ ಆಳುತ್ತಿದ್ದನು. ಸೂಡಿಯ[೧೨] ಕರಸ್ಥಲದ ಮಠದಲ್ಲಿ ನಿಲ್ಲಿಸಿದ ಕಲ್ಲಿನ ಮೇಲಿರುವ ಕ್ರಿ.ಶ. ೧೦೫೦ ಮೇ ೬ರ ಶಾಸನವು ಅಕ್ಕಾದೇವಿಯು ಕಿಸುಕಾಡು ೭೦, ತೊರುಗಲೆ ೬೦, ಮಾಸವಾಡಿ ೧೪೦, ಈ ವಿಭಾಗಗಳನ್ನು ಪನ್ನಾಳೆಯ ಕೋಟೆಯ ನೆಲೆವೀಡಿನಿಂದ ಆಳುತ್ತಿದ್ದಳೆಂದು ಹೇಳಲಾಗಿದೆ. ಕೊರ್ಲಹಳ್ಳಿಯ[೧೩] ಕ್ರಿ.ಶ. ೧೦೫೦ ಡಿಸೆಂಬರ್ ೨೪ರ ಶಾಸನದಲ್ಲಿ ಅಕ್ಕಾದೇವಿಯರು ಕಿಸುಕಾಡು ೭೦, ಬಾಗಡಗೆ ೭೦, ತೊರಗಲೆ ೬೦, ಮಾಸೆಯವಾಡಿ ೧೪೦ ವಿಭಾಗಗಳನ್ನು ಆಳುತ್ತಿದ್ದಳೆಂದು ಹೇಳಲಾಗಿದೆ. ಅಕ್ಕಾದೇವಿಯು ಸಮರ್ಥ ಆಡಳಿತಗಾರಳಾಗಿದ್ದಳು. ಹೀಗಾಗಿ ಈಕೆಯನ್ನು "ಚಳುಕ್ಯ ಕುಳತಿಳಕಂಯರಸು ಮೆನಿಸಿದಕ್ಕಾದೇವಿ" ಶಾಸನದಲ್ಲಿ ಕರೆಯಲಾಗಿದೆ. ಅಂದರೆ ಚಳುಕ್ಯ ಕುಲಕ್ಕೆ ತಿಲಕದೋಪಾದಿಯಲ್ಲಿರುವ ಅರಸು ಅಕ್ಕಾದೇವಿ ಎಂದು ಅರ್ಥ. ಪುರುಷರಂತೆ ಈಕೆಯನ್ನು ಕರೆದಿರುವುದು ವಿಶೇಷವಾಗಿದೆ. ಇಲ್ಲಿ ಕದಂಬಕುಲ ಎಂದು ಹೇಳದೇ ಇರುವುದನ್ನು ಗಮನಿಸಬೇಕು.

ಅಕ್ಕಾದೇವಿ ಮತ್ತು ಯುದ್ಧಗಳು

ಅಕ್ಕಾದೇವಿ ತಮ್ಮನಾದ ಜಯಸಿಂಹ ಮಾಡಿದ ಯುದ್ಧಗಳಲ್ಲಿ ತನ್ನ ಸೈನ್ಯದೊಂದಿಗೆ ಭಾಗವಹಿಸಿರಬೇಕು. ಹಾಗೆಯೇ ಒಂದನೆಯ ಸೋಮೇಶ್ವರನ ಕಾಲದಲ್ಲಿ ನಡೆದ ಯುದ್ಧಗಳಲ್ಲಿ ಈಕೆ ಭಾಗವಹಿಸಿರಬೇಕು. ಕಲ್ಯಾಣದ ಚಾಲುಕ್ಯ ಚಕ್ರವರ್ತಿಗಳು ನಡೆಸಿದ ಔತ್ತರೇಯ ದಂಡಯಾತ್ರೆಯಲ್ಲಿ ಈಕೆ ಭಾಗವಹಿಸಿದ್ದಾಳೆ. ಉತ್ತರ ಭಾರತದ ಪವಿತ್ರ ಗಂಗಾನದಿಯಲ್ಲಿ ಸ್ನಾನ ಮಾಡಿ ಪವಿತ್ರಳಾಗಿರುವುದನ್ನು ಶಾಸನಗಳು ನಿರೂಪಿಸುತ್ತವೆ.

ಗೋಕಾಗೆ ಯುದ್ಧ: ಬಿಜಾಪುರ ಜಿಲ್ಲೆಯ ಹುನಗುಂದ ತಾಲೂಕಿನ ಅರಸಿ ಬೀಡಿ[೧೪] ಶಾಸನದಲ್ಲಿ ಈಕೆಯು ಗೋಕಾಗೆ (ಗೋಕಾಕ)ಯ ಕೋಟೆಯ ಮೇಲೆ ದಾಳಿ ನಡೆಸಿ ಮುತ್ತಿಗೆ ಹಾಕಿದ ಸಂಗತಿಯನ್ನು ಹೇಳಲಾಗಿದೆ. ಈ ವಿಷಯ ಶಾಸನದಲ್ಲಿ "ಅರಿನೃಪ ಮಕುಟ ಘಟಿತ ಚರಗಾರವಿಂದೆಯರ್ಗಂಗಾ ಸ್ನಾನ ಪವಿತ್ರೆಯದ್ರ್ವಿನಾನಾಥ ಚಿನ್ತಾಮಣಿಗಳೇಕ ವಾಕ್ಯಗ್ರ್ಗುಣದ ಬೆಡಂಗಿಯರಪ್ಪ ಶ್ರೀಮದಕ್ಕಾದೇವಿಯರ್ ಗೋಕಾಗೆಯ ಕೋಟೆಯವು [ಸು] ತ್ತಿರ್ದ್ದ ಬೀಡಿನಲು" ಎಂದು ಇದ್ದಾಗ ಬರುತ್ತದೆ. ಹೀಗೆ ಇದ್ದಾಗ ವಿಕ್ರಮಪುರದ ಗುಣದ ಬೆಡಂಗಿಯ ಜಿನಾಲಯಕ್ಕೆ ಈಕೆ ದಾನ ಬಿಡುತ್ತಾಳೆ. ಇದರಿಂದ ಬಂಡೆದ್ದಿರಬಹುದಾದ ಮಂಡಳಿಕನ ಮೇಲೆ ಸೈನ್ಯ ಸಮೇತ ಎರಗಿ ಗೋಕಾಗೆ ಮೇಲೆ ದಾಳಿ ನಡೆಸಿ ಕೋಟೆಯನ್ನು ಮುತ್ತಿದುದು ತಿಳಿದು ಬರುತ್ತದೆ.

ಪನ್ನಾಳೆಯ ಕೋಟೆಯ ಯುದ್ಧ: ಮುಂಡರಗಿ ತಾಲೂಕಿನ ಕೊರ್ಲಹಳ್ಳಿ[೧೫] ಕ್ರಿ.ಶ. ೧೦೫೦ರ ಶಾಸನದಲ್ಲಿ ಅಕ್ಕಾದೇವಿಯು ಒಂದನೆಯ ಸೋಮೇಶ್ವರ ಪಾದಪದ್ಮೋಪಜೀವಿಯಾಗಿ ಕಿಸುಕಾಡು ೭೦, ಬಾಗಡಗೆ ೭೦, ತೊರಗಲೆನಾಡು, ಮಾಸೆಯವಾಡಿ ೧೪೦ ವಿಭಾಗಗಳನ್ನು 'ಪನ್ನಾವಳೆ' ನೆಲೆವೀಡಿನಿಂದ ಆಳುತ್ತಿದ್ದಳೆಂದು ಹೇಳಲಾಗಿದೆ. 'ಪನ್ನಾವಳೆ' ಎಂದರೆ ಪನ್ನಾಳೆ ಕೋಟೆ (ಪನ್ಹಾಳ) ಯಾಗಿದ್ದು ಕೊಲ್ಹಾಪುರಕ್ಕೆ ೧೨ ಮೈಲು ದೂರದಲ್ಲಿ ಉತ್ತರ ಪಶ್ಚಿಮ ದಿಕ್ಕಿನಲ್ಲಿದೆ. ಶಾಸನ "ಪನ್ನಾವಟಿಯ ಕೋಟೆಯ ದಣ್ಡಿನ...ಚೋಳಾಂಧ್ರ ಮಗಧ ಕೊಂಕಣ ಮಾಳವ ಪಾಞ್ಚಳ ಲಾಳರಂ ಭುಜಭಳ"ದಿಂದ ಕೊಂಡಾಳ್ದಳೆಂದು ಹೇಳುತ್ತದೆ. ದಂಡಿನೊಂದಿಗೆ ಈ ಕೋಟೆಯಲ್ಲಿ ಬೀಡು ಬಿಟ್ಟಿರುವುದನ್ನು ಗಮನಿಸಿದರೆ ಇಲ್ಲಿ ಯುದ್ಧ ಮಾಡಿ ಆ ಕೋಟೆಯನ್ನು ಅಕ್ಕಾದೇವಿ ವಶಪಡಿಸಿಕೊಂಡಿರಬೇಕು. ಈ ಶಾಸನದಲ್ಲಿ ಈಕೆಯು ಚೋಳ, ಆಂಧ್ರ, ಮಗದ, ಕೊಂಕಣ, ಮಾಳವ, ಪಾಂಚಾಳ, ಲಾಳ ಅರಸರನ್ನು ಭುಜಬಲದಿಂದ ಸೋಲಿಸಿದಳೆಂದು ಹೇಳಲಾಗಿದೆ. ಇದರಿಂದ ಈಕೆ ತನ್ನ ಸೈನ್ಯದೊಂದಿಗೆ ಕಲ್ಯಾಣದ ಚಕ್ರವರ್ತಿಗಳ ಪರವಾಗಿ ಯುದ್ಧಗಳಲ್ಲಿ ಭಾಗವಹಿಸಿ ಜಯಶೀಲಳಾಗಿರುವುದಂತೂ ಸ್ಪಷ್ಟ. ಇದರಿಂದ ಅಕ್ಕಾದೇವಿ ಶ್ರೇಷ್ಠ ವೀರಾಗ್ರಣಿಯಾಗಿದ್ದು ಶತ್ರುಗಳನ್ನು ನಿಗ್ರಹಿಸುವಲ್ಲಿ ಸಮರ್ಥಳಾಗಿದ್ದುದು ಸ್ಪಷ್ಟವಾಗುತ್ತದೆ.

ಯುದ್ಧನಾಶದ ಪುನರ್ಭರಣ: ಯುದ್ಧಗಳಲ್ಲಿ ಸಾರ್ವಜನಿಕರ ಆಸ್ತಿಪಾಸ್ತಿಗೆ ಹಾನಿಯಾಗುವುದು ಸಹಜ. ಒಮ್ಮೊಮ್ಮೆ ಶತ್ರುಗಳು ದಾಳಿ ಮಾಡಿ ನಾಶ ಮಾಡುವುದುಂಟು. ಅಂಥ ಸಂದರ್ಭ ಉಂಟಾದಾಗ ನಿಜವಾದ ಅರಸ ಹಾನಿಗೊಳಗಾದವರಿಗೆ

ಆ ಹಾನಿಯನ್ನು ತುಂಬಿಕೊಡುತ್ತಾನೆ. ಅಕ್ಕಾದೇವಿಯು ಇದೇ ರೀತಿಯಾಗಿ ಯುದ್ಧ ನಾಶದಿಂದ ಉಂಟಾದ ಹಾನಿಯನ್ನು ತುಂಬಿಕೊಟ್ಟಿದ್ದಾಳೆ. ಸೂಡಿಯ[೧೬] ಕ್ರಿ.ಶ. ೧೦೫೦ ಮೇ ೬ರ ಶಾಸನದಲ್ಲಿ ಅಕ್ಕಾದೇವಿಯು ಪನ್ನಾಳೆಯ ಕೋಟೆಯ ನೆಲೆವೀಡಿನಿಂದ ಆಳುತ್ತಿದ್ದಳೆಂದು ಹೇಳಲಾಗಿದೆ. ಈ ಶಾಸನದಲ್ಲಿ ಅಕ್ಕಾದೇವಿಯು ಚೋಳರೊಂದಿಗೆ ನಡೆದ ಯುದ್ಧದಲ್ಲಿ ಹಾನಿಗೊಳಗಾದವರಿಗೆ ದತ್ತಿ, ದಾನ ಬಿಡುವ ಮೂಲಕ ಹಾನಿಯನ್ನು ಪುನರ್ಭರಣ ಮಾಡಿಕೊಟ್ಟಿರುವ ಸಂಗತಿ ತಿಳಿದುಬರುತ್ತದೆ. ಮನೆವೆರ್ಗಡೆ ಕಾಳಿದಾಸಯ್ಯ, ತಂತ್ರಪಾಶ ಮಿಳ್ಳಯ್ಯ, ತಂತ್ರಪಾಳ ಚಿಟ್ಟಿಮಯ್ಯ, ಪ್ರಧಾನದೆಮ್ಮಣ್ಣ, ಅಳಿಯ ಚಂದಿಮಯ್ಯ, ಅಡಪದ ಚಾವುಂಡರಾಯ, ತಂತ್ರದ ಸೇನಬೋವ, ದಾಸಿಮಯ್ಯ, ಸಮಸ್ತ ಪ್ರಧಾನರು, ಶ್ರೀಮತ್ನಾಡ ಪೆರ್ಗಡೆ, ನಾಗದೇವಯ್ಯ ಪ್ರಮುಖ ಶರಣರು ಇದ್ದು, ಸೂಂಡಿ ಅಜವರ್ಮಸೆಟ್ಟಿ, ಚಾವುಂಡಿ ಶೆಟ್ಟಿಯ ಮಗ ಬಲ್ಲಯ್ಯ, ಶೋಭನಯ್ಯಶೆಟ್ಟಿ, ಮದನಾಗಯ್ಯ ಶೆಟ್ಟಿ, ಚಾಮಣ್ಣಶೆಟ್ಟಿ, ಜಯದೇವಯ್ಯ ಶೆಟ್ಟಿ, ಅಂತು ಎಂಟು ಜನ ಶೆಟ್ಟಿಯರಿಗೆ ಎಂಭತ್ತು ಒಕ್ಕಲಿಗ ಇವರಿಗೆ ಚೋಳರ ಮೇಲೆ ನಡೆದ ಯುದ್ಧಕಾರಣವಾಗಿ 'ಕೆಟ್ಟ ಸಮ್ಮನ್ದಿಯಂ' ಪುನರ್ಭರಣ ಮಾಡಿಕೊಡಲಾಗುತ್ತದೆ. ಅಂದರೆ ಯುದ್ಧದಲ್ಲಿ ಆದ ನಷ್ಟವನ್ನು ತುಂಬಿಕೊಡಲಾಗುತ್ತದೆ. ಅಂಗಡಿ, ಮನೆ, ಕರಗ, ಬಾಡ, ಹೊಲದ, ನೆಲದ ಚತುರಾಘಾಟ ಸಹಿತವಾಗಿ ಎರಡು ಶ್ರಾಹೆಯ ಸಿದ್ಧಾಯವನ್ನು ಸರ್ವಬಾಧಾ ಪರಿಹಾರವಾಗಿ ಬಿಡಲಾಗುತ್ತದೆ. ಕಿಸುಕಾಡು ೭೦ರಲ್ಲಿ ಸಾರಿಗೆ, ಬೀರವಣ ಸಹಿತ ಸುಂಕಪರಿಹಾರವಾಗಿ ಬಿಟ್ಟ ವಿವರಗಳಿವೆ.

ಅಕ್ಕಾದೇವಿ–ಕಾನೂನುಗಳು: ರಾಜ್ಯದ ಸುವ್ಯವಸ್ಥೆಗಾಗಿ ಅಕ್ಕಾದೇವಿಯು ಕೆಲವು ಕಾನೂನುಗಳನ್ನು ತಂದಿದ್ದು ಆ ವಿವರಗಳನ್ನು ಸೂಡಿಯ[೧೭] ಕ್ರಿ.ಶ. ೧೦೫೦ ಮೇ ೬ರ ಶಾಸನವು ನಿರೂಪಿಸುತ್ತದೆ. ತಳಾರನು ರಕ್ಷಣೇಯ ಕೆಲಸವನ್ನು ಮಾಡಬೇಕು. ಕಳ್ಳತನವಾದರೆ ಕಳೆದುದನ್ನು ಕೊಟ್ಟು ಸರಿಪಡಿಸಿ ರಕ್ಷಿಸಬೇಕು. ತಂದೆಯ ದೋಷ ಮಗನಿಗೆ ಇರುವುದಿಲ್ಲ. ಮಗನು ಮಾಡಿದ ದೋಷಗಳು ತಂದೆಗೆ ಇಲ್ಲ. ಕಳ್ಳ, ಬಂದಿಕಾರರನ್ನು, ವೈರಿ, ಕೆಟ್ಟ ಮನುಷ್ಯರನ್ನು ಅಂಗಡಿಯ ತಡಿಕೆಯನ್ನು ಕೇಳುವ ಸಂದರ್ಭದಲ್ಲಿ ಇರಿದರೆ ದಂಡ ದೋಷವಿಲ್ಲ. ಸುಮ್ಮನೆ ಯಾರಿಗಾದರೂ ಇರಿದರೆ (ಇರಿಸಿಕೊಂಡವನು ಸತ್ತಿರಬಾರದು) ಇರಿದವನಿಗೆ ಆರು ಪೊನ್ನು ಗದ್ಯಾಣ ದಂಡ, ಮೇಲೆ ಒಂದು ಪಣ ದಂಡ. ಸುಮ್ಮನೆ ಹೊಡೆದವನಿಗೆ ಎರಡು ಪಣ ದಂಡ. ಇತರ ದಂಡಗಳನ್ನು ನಿರೂಪಿಸುವ ಶಾಸನದ ಭಾಗ ತ್ರುಟಿತವಾಗಿದೆ. ಶಾಸನದಲ್ಲಿ ಈ ವಿಷಯದಲ್ಲಿ ಹೀಗೆ ಹೇಳಲಾಗಿದೆ: "ಪೊಳಲೊಳಗೆ ಅರತಳಾಱಂ ಕೆಟ್ಟುದರ್ಕ್ಕೆ ಕೊಟ್ಟು ಕಾವಂ । ತನ್ದೆಯ ದೋಷಂ ಮಗನನೆಯ್ದದು ಮಗನ ದೋಷಂ ತಂದೆಯನೆಯ್ದದು । ಕಳ್ಳಂ ಬನ್ದಿಕಾಱಂ ಮಂಚಲ್ವಿಡಿವವಂ ಪಗೆವಂ ಪೊಲ್ಲವ ಮಾನಸ ನಿನ್ತಿವರನಂ ಗಡಿಯ ತಡಿಕೆಯ ಕೀಳಿಲ ಕೆಳಗಿಱಿದೊಡೆ ದಣ್ಡಂ ದೋಷವಿಲ್ಲ । ಇಱಿದವಂಗೆ ದಣ್ಡಂ ಪೊಂಗದ್ಯಾಣಮಾಱು ಪೀ [ಬ?] ಟ್ಟಿನಾತನನಿಱಿದೊಡೆ ದಣ್ಡಂ ಪೊಂಗದ್ಯಾಣಂ xxxx ಮಿಕ್ಕಾತಂಗೆ ದಣ್ಡಂ ಪಣವೊನ್ದು ಪೊಯ್ದವಂಗೆ ದಣ್ಡಂ ಪಣವೆರಡು ಸುರಿ xxxxxxxx ನೂವದು xxxxxx ಪೊಂಗದ್ಯಾಣಂ ಮೂಱು". ಈ ರೀತಿಯಾಗಿ ಅಕ್ಕಾದೇವಿಯು ಬಿಗಿಯಾದ ಕಾನೂನುಗಳನ್ನು ಜಾರಿಗೊಳಿಸಿ ಸುಗಮವಾಗಿ ಆಡಳಿತ ನಡೆಸಿದ್ದಾಳೆ. ಒಳ್ಳೆಯ ಆಡಳಿತಗಾರ್ತಿಯಾಗಿ ಅಕ್ಕಾದೇವಿಯು ಹೆಸರು ಮಾಡಿರುವುದು ಸ್ಪಷ್ಟ.

ಅಕ್ಕಾದೇವಿಯ ಪ್ರಶಸ್ತಿ: ಶಾಸನಗಳಲ್ಲಿ ಅಕ್ಕಾದೇವಿಯ ಪ್ರಶಸ್ತಿಯನ್ನು ಸುದೀರ್ಘವಾಗಿ ಹೇಳಲಾಗಿದ್ದು ಅದರಲ್ಲಿ ಪರಂಪರಾಗತ ಪ್ರಶಸ್ತಿಯ ಜೊತೆಗೆ ಸ್ವಾರ್ಚಿತ ಪ್ರಶಸ್ತಿಗಳನ್ನು ಕೊಡಲಾಗಿದೆ. ಈ ಸ್ವಾರ್ಜಿತ ಪ್ರಶಸ್ತಿಗಳು ಈಕೆಯ ಸಾಧನೆಯನ್ನು ನಿರೂಪಿಸುತ್ತವೆ. ಸೂಡಿಯ[೧೮] ಕ್ರಿ.ಶ. ೧೦೧೦ ನವೆಂಬರ್ ೮ರ ಶಾಸನದಲ್ಲಿ "ಸ್ವಸ್ತ್ಯನವರತ ಪರಮ ಕಲ್ಯಾಣಾಭ್ಯುದಯ ಸಹಸ್ರ ಫಳಭೋಗ ಭಾಗಿನಿ ದ್ವಿತೀಯ ಲಕ್ಷ್ಮೀ ಸಮಾನೆಯರ ಗಣಿತ ದಾನಚಿನ್ತಾಮಣಿ ವಿವೇಕ ಚೂಡಾಮಣಿಗಳೇಕ ವಾಕ್ಯೆಯಗ್ಗುಣದ ಬೆಡಂಗಿಯರಪ್ಪ ಶ್ರೀಮದಕ್ಕಾದೇವಿಯರ್" ಎಂದು ಕೊಡಲಾಗಿದೆ. ಬಾದಾಮಿ ತಾಲೂಕಿನ ಬೇಲೂರಿನ[೧೯] ಶಾಸನದಲ್ಲಿ ವಿವರವಾದ ಪ್ರಶಸ್ತಿಯನ್ನು ಕೊಡಲಾಗಿದ್ದು ಅದು ಇಂತಿದೆ:

"ತಜ್ಜಯಸಿಂಹ ಚಕ್ರವರ್ತಿಯ ನಿಜಾಗ್ರಜಾತೆ ।
ಶ್ರೀವನಿತೆಯನಿಸಿದಕ್ಕಾ
ದೇವಿಗೆ ವಾಗ್ದೇವಿ ಗಖಿಳ ಜನನುತ ಸೀತಾ
ದೇವಿಗೆ ಮಾದೇವಿಗೆ ಭೂ
ದೇವಿಗೆ ಸಮನೆಂಬ ನೃಪಸುತಾ ಸಮುದಯಮಂ
ಗುಣದ ಬೆಡಂಗಿಯೆನಲ್ಸ
ದ್ಗುಣಮಂ ನೆಗಟ್ದೇಕ ವಾಕ್ಯೆಯೆನೆ ಸೂನೃತಮಂ

ರಣಭೈರವಿಯೆನೆ ಸೌರ್ಯ್ಯದ
ಗುಣಮನದೇನೆಂದು ಬಣ್ಣಿಪೆಂ ನೃಪಸುತೆಯಂ

ಜನಕಂ ಶ್ರೀದಸವರ್ಮ್ಮದೇವನಭಯಂ ಚಾಳುಕ್ಯ ವಜ್ರಂ ದಿನೇ
ಶನಿಭಂ ಭಾಗಲದೇವಿ ಪುಣ್ಯವತಿ ಸತ್ಯಾಳಾಪೆ ತಾಯ್ಚಕ್ರವ
ರ್ತ್ತಿ ನಿಜ ಪ್ರೋ ಜ್ಜಾಳ ಕೀರ್ತಿಮೂರ್ತ್ತಿ ಜಯಸಿಂಹಂ ತಮ್ಮನಂದಂದೆಮೇ
ದಿನಿಯೊಳ್ ಶ್ರೀನೆಗಟ್ದೇ ಕವಾಕ್ಯೆಯ ಯಶಃ ಪ್ರಖ್ಯಾತಿ ಸಾಮಾನ್ಯಮೇ ॥

ಅವಿನಮ್ನಾ [ಮ್ರಾ] ರಿ ನ್ರಿ [ನೃ] ಪಾಳಕ ಪ್ರಳಯ ಸಂಪಾ
ದಕ್ಷೋ ಚ್ಚಂದ ಭೈರವಿ ತಾನಾಗಿಯುಮೆಯ್ದೆ ಶಾಂತಪರ ರೂಪಾನ್ವಿತೆ
ನಿರ್ಬ್ಭತ್ಸನಾರವ ಸಿಂಹಾಗ್ರಜೆಯಾಗಿಯುಂ ಮದ ಗಜೋದ್ಯದ್ಯಾನೆ
ಯೆಂದಂದು ಧಾ [ಧೌ] ತ ವಿಚಿತ್ರಂ ನೆಗಟ್ದೇ ವಾಕ್ಯೆಯ

ಚರಿತ್ರಂ ಭೂರಿಭೂಚಕ್ರದೊಳ್ ॥ ಜಿನ ಬುದ್ದಾನನ್ತರು
ದ್ರಾಗಮ ನಿಗದಿತ ಧರ್ಮ್ಮಂಗಳೆಂ ಮಾಡಿ ಕಯ್ಯಾಂತನ [...] ವ್ರಜಕ್ಕಾಪ್ಪೆ
ನಿತನನುದಿನಂ ಕೊಟ್ಟು ಸರ್ವ್ವೋ ರ್ವ್ವಿಯೊಳ್ದಾನ ನಯಾಳಂಕಾರೆ ರಾರಾಜಿಸಿದಳಖಿಳ
ವಿದ್ಯಾರ್ಥಿ ದೀನಾವಳಿ ನಂದಿನಿಯಕ್ಕಾದೇವಿ ಧರ್ಮಾಗ್ರಣಿ ವಿಮಳವಚಃ ಶ್ರೀ
ಜಯಶ್ರೀ ಯಶಃ ಶ್ರೀ ॥ ವಚನ ॥ ಅನ್ತು ಸಕಳ ಜಗತ್ಪ್ರಣೂತೆಯುಂ
ಸಮಸ್ತರಿಪುನೃಪ ಚರಣಾರವಿಂದೆಯುಂ ವಿವೇಕ ಚೂಡಾಮಣಿಯುಂ ದೀನಾನಾಥ
ಚಿಂತಾಮಣಿಯುಂ [ಸ್ವವಂಶ] ವರ್ದ್ಧನೈಕ ಸಾಕ್ಷಾಲ್ಲಕ್ಷ್ಮಿಯುಂ ಪರಿಜನ
[ಕಳ್ಪ ವ್ರಿ [ವೃ] ಕ್ಷೆಯುಂ ವಸುಧಾಜನ ಕಾಮಧೇನುವುಮೇಕವಾಕ್ಯೆಯುಂ
ಗುಣದ ಬೆಡಂಗಿಯುಮೆನಿಸಿ ನೆಗಟ್ದಿ ಶ್ರೀಮದಕ್ಕಾದೇವಿಯರ್" ಕಿಸುಕಾಡು ೭೦ನ್ನು

ಆಳುತ್ತಿದ್ದಳು.

ಅಕ್ಕಾದೇವಿಯನ್ನು ಲಕ್ಷ್ಮಿಗೆ, ಸರಸ್ವತಿಗೆ, ಸೀತಾದೇವಿಗೆ, ಮಹಾದೇವಿಗೆ ಭೂದೇವಿಗೆ ಸಮನೆಂದು ವರ್ಣಿಸಲಾಗಿದೆ. 'ಗುಣದ ಬೆಡಂಗಿ' ಎಂಬುದು ಅಕ್ಕಾದೇವಿಗೆ ಇದ್ದ ಬಿರುದಾಗಿದೆ. ಇದರಿಂದ ಈಕೆಯು ಸದ್ಗುಣಗಳಿಂದ ಕೂಡಿದ್ದಳೆಂಬುದು ಗೊತ್ತಾಗುತ್ತದೆ. ಏಕವಾಕ್ಯೆ ಎಂಬುದು ಈಕೆ ಕೊಟ್ಟ ಮಾತನ್ನು ತಪ್ಪುತ್ತಿದ್ದಿಲ್ಲವೆಂಬುದನ್ನು ನಿರೂಪಿಸುತ್ತದೆ. ದಸವರ್ಮ ಮತ್ತು ಭಾಸಲದೇವಿಯ ಪುತ್ರಿಯಾಗಿದ್ದ ಈಕೆ ಸತ್ಯವಂತಳಾಗಿದ್ದಳು. ಚಕ್ರವರ್ತಿ ಜಯಸಿಂಹನನ್ನು ತಮ್ಮನನ್ನಾಗಿ ಪಡೆದು ಅಕ್ಕಾದೇವಿ ಪ್ರಸಿದ್ಧಳಾದಳು. ಯುದ್ಧಗಳನ್ನು ಮಾಡಿ ಜಯ ಸಂಪಾದಿಸಿ 'ರಣಭೈರವಿ' ಎನಿಸಿದ್ದಳು. ವಿವೇಕದಲ್ಲಿ ಚೂಡಾಮಣಿಯಾಗಿದ್ದ ಈಕೆ ದೀನ, ಅನಾಥರಿಗೆ ಬೇಡಿದ್ದನ್ನು ಕೊಡುವ ಚಿಂತಾಮಣಿ ಎನಿಸಿದ್ದಳು. ವಸುಧಾಜನ ಕಾಮಧೇನು ಎನಿಸಿದ್ದ ಅಕ್ಕಾದೇವಿ ದಾನ-ಧರ್ಮ ಕಾರ್ಯಗಳನ್ನು ಮಾಡಿ ಸಮಾಜಕ್ಕೆ ಉಪಕಾರ ಮಾಡಿದ್ದಾಳೆ. ಎಲ್ಲ ಧರ್ಮಗಳನ್ನು ಸಮಾನವಾಗಿ ಕಂಡುದುದಲ್ಲದೆ ಧರ್ಮ ಸಮನ್ವಯತೆಯನ್ನು ಮೆರೆದಿದ್ದಾಳೆ.

ಅಕ್ಕಾದೇವಿ-ಧರ್ಮ ಸಮಾನತೆ-ಧರ್ಮ ಸಮನ್ವಯತೆ: ಧರ್ಮ ಸಮಾನತೆ ಎಂದರೆ ಎಲ್ಲ ಧರ್ಮಗಳನ್ನು ಸಮಾನವಾಗಿ ಕಾಣುವುದು. ಧರ್ಮಸಮನ್ವಯತೆ ಎಂದರೆ ಒಂದು ಧರ್ಮದ ತತ್ವ-ಸಿದ್ಧಾಂತಗಳನ್ನು ಇನ್ನೊಂದು ಧರ್ಮದವರು ಅಳವಡಿಸಿಕೊಂಡು ಆಚರಿಸುವುದು. ಅಕ್ಕಾದೇವಿಯು ಎಲ್ಲ ಧರ್ಮಗಳನ್ನು ಸಮಾನವಾಗಿ ಕಾಣುತ್ತಿದ್ದಳು. ಆಯಾ ಧರ್ಮದ ದೇವಾಲಯಗಳಿಗೆ ದತ್ತಿ-ದಾನ ಕೊಟ್ಟಿದ್ದಾಳೆ. ಅಕ್ಕಾದೇವಿಯ ಇನ್ನೊಂದು ಗುಣವೆಂದರೆ ಬೇರೆ ಧರ್ಮಗಳ ತತ್ವಸಿದ್ಧಾಂತಗಳನ್ನು ತಾನು ಅಳವಡಿಸಿಕೊಂಡು ಆಚರಿಸುತ್ತಿದ್ದರು. "ಜಿನ ಬುದ್ಧ ಅನಂತ ರುದ್ರಾಗಮ"[೨೦] ಧರ್ಮಗಳನ್ನು ಸಮಾನವಾಗಿ ನೋಡುತ್ತಿದ್ದಳು. ಇವುಗಳ ತತ್ವಗಳನ್ನು ಸ್ವತಃ ಪಾಲಿಸುತ್ತಿದ್ದಳು. ಇಲ್ಲಿ 'ರುದ್ರಾಗಮ' ಎಂದರೆ ಶಿವಾಗಮಗಳು ಎಂದು ಅರ್ಥ. ಈ ಶಿವಾಗಮಗಳು ಕ್ರಿ.ಶ. ೧೦೨೧ ಕ್ಕಿಂತ ಹಿಂದಿನ ಕಾಲದವು ಎಂಬುದು ಸ್ಪಷ್ಟ. ಪವಿತ್ರ ಗಂಗಾನದಿಯಲ್ಲಿ ಪವಿತ್ರ ಸ್ನಾನ ಮಾಡಿ 'ಗಂಗಾಸ್ನಾನ ಪವಿತ್ರೆ' ಯಾಗಿದ್ದಳು ಅಕ್ಕಾದೇವಿ.

ಅಕ್ಕಾದೇವಿ-'ಗುಣಗ್ರಾಹಿ' ಗುಣ: ಪ್ರಾಮಾಣಿಕವಾಗಿ ಸೇವೆ ಸಲ್ಲಿಸುತ್ತಿರುವವರನ್ನು, ಒಳ್ಳೆಯ ವ್ಯಕ್ತಿಗಳನ್ನು ಗುರುತಿಸಿ ಅವರನ್ನು ಗೌರವಿಸುವಂಥ 'ಗುಣಗ್ರಾಹಿ' ಗುಣ ಅಕ್ಕಾದೇವಿಯಲ್ಲಿತ್ತು. ಮುಂಡರಗಿ ತಾಲೂಕಿನ ಕೊರ್ಲಹಳ್ಳಿ[೨೧]ಯ ಕ್ರಿ.ಶ. ೧೦೫೦ ಡಿಸೆಂಬರ್ ೨೪ರ ಶಾಸನದಲ್ಲಿ ಅಕ್ಕಾದೇವಿ ಒಂದನೆಯ ಸೋಮೇಶ್ವರನ ಪಾದಪದ್ಮೋಪಜೀವಿಯಾಗಿ ಕಿಸುಕಾಡು

೭೦, ಬಾಗಡಗೆ ೭೦, ತೊರಗಲೆ ನಾಡು, ಮಾಸೆಯವಾಡಿ ೧೪೦ ವಿಭಾಗಗಳನ್ನು 'ಪನ್ನಾವಳೆ' ನೆಲೆವೀಡಿನಿಂದ ಆಳುತ್ತಿದ್ದಳು. ಈಕೆಯ ಪಾದಪದ್ಮೋಪಜೀವಿಯಾಗಿ ಯಾದವ ಮನೆತನದ ಮಹಾಸಾಮಂತ ಅಜ್ಜರಸ ಇದ್ದನು. ಇವನನ್ನು 'ವೀರಲಕ್ಷ್ಮೀ ಕಾಂತಂ ದ್ವಾರಾವತಿ ಪುರವರೇಶ್ವರ ಗರುಡಧ್ವಜ ಶಂಖ ಚಕ್ರ ಲಾಂಚನಂ ಅರಿಭೂಪಾಟಿ ರನಾಜಿಯೊಳು ತರಿದು ಕೊಲ್ವೇಕಾಂಗ ವೀರಂ' ಎಂದು ಮುಂತಾಗಿ ಕರೆಯಲಾಗಿದೆ. ಇವನು 'ಚಾಳುಕ್ಯ ಕುಳೇಶ್ವರಿ'ಯ ಸಮೀಪದಿ ಸುಖದಿಂದ ಇದ್ದನೆಂದು ಹೇಳಲಾಗಿದೆ. ಈ ಅಜ್ಜರಸ ಭೂಪ ಕೊಡೆ, ಲಾಂಛನಗಳನ್ನು ಪಡೆದಿದ್ದಾನೆ. ಇವನ ಪ್ರಾಮಾಣಿಕತೆಯನ್ನು ಗುರುತಿಸಿ ಈ ಉಡುಗೊರೆಗಳನ್ನು ಕೊಟ್ಟುದಲ್ಲದೆ "ಅರಸಿಯರಾ ತನನಕ್ಕಜೆಂ ಬರಿಸಿ ಸುಖಾಸನದಲಿರಿಸಿದ"ಳೆಂದು ಶಾಸನ ಹೇಳುತ್ತದೆ. ಇದರಿಂದ ಅಕ್ಕಾದೇವಿಯು ಒಳ್ಳೆಯ ವ್ಯಕ್ತಿಗಳನ್ನು ಗುರುತಿಸುವ, ಅವರನ್ನು ಸನ್ಮಾನಿಸುವ ಗುಣವನ್ನು ಹೊಂದಿದ್ದುದು ಗೊತ್ತಾಗುತ್ತದೆ. ಈ ಅಜ್ಜರಸ ಚಕ್ರವರ್ತಿ ಜಯಸಿಂಹನಿಂದಲೂ ಉಪಕೃತನಾಗಿದ್ದಾನೆ.

ಅಕ್ಕಾದೇವಿಯು ಉತ್ತರಾಯಣ ಸಂಕ್ರಾಂತಿಯಂದು ಮನ್ನೆಯ ಅಜ್ಜರಸನನ್ನು ತನ್ನ ಸನ್ನಿಧಾನಕ್ಕೆ ಬರಿಸಿ ಧಾರಾಪೂರ್ವಕವಾಗಿ ದತ್ತಿ ಬಿಡುತ್ತಾಳೆ. ದೇವರ ನೈವೇದ್ಯಕ್ಕೆ, ಗ್ರಾಸಕ್ಕೆ, ಹರೆಕಾರರಿಗೆ, ತಪೋಧನರಿಗೆ, ಸೂಳೆಯರಿಗೆ, ಕೆರೆಗೆ ಭೂಮಿ, ಗದ್ದೆ, ಹಣ, ಮನೆಗಳು ೧೩, ಗಾಣ ೧-ಇವುಗಳನ್ನು ಅಕ್ಕಾದೇವಿ ಬಿಡುತ್ತಾಳೆ.

ಅಕ್ಕಾದೇವಿ-ಧರ್ಮ ಕಾರ್ಯಗಳು: ಧರ್ಮಕಾರ್ಯಗಳೆಂದರೆ ಸಾರ್ವಜನಿಕ ಕಾರ್ಯಗಳು. ಸಾರ್ವಜನಿಕರಿಗೆ ಉಪಯೋಗವಾಗುವಂಥ ಕಾರ್ಯಗಳು. ಕೆರೆ, ಬಾವಿ, ದೇವಾಲಯ ಮೊದಲಾದವುಗಳನ್ನು ನಿರ್ಮಿಸುವುದು, ಅವುಗಳಿಗೆ ದತ್ತಿ, ದಾನ ಬಿಡುವುದು ಧರ್ಮಕಾರ್ಯವೆನಿಸುತ್ತದೆ. ಅಕ್ಕಾದೇವಿ ಮಾಡಿದ ಧರ್ಮಕಾರ್ಯಗಳನ್ನು ಈ ಕೆಳಗಿನಂತೆ ನೋಡಬಹುದು:

ಬ್ರಹ್ಮಪುರಿಗೆ ದಾನ: ಸೂಡಿಯ[೨೨] ಕ್ರಿ.ಶ. ೧೦೧೦ ನವೆಂಬರ್ ೮ರ ಶಾಸನವು ಅಕ್ಕಾದೇವಿ ಆಳುತ್ತಿದ್ದಾಗ ಹುಣ್ಣಿಮೆ ಚಂದ್ರಗ್ರಹಣದ ದಿಸವ ಸೂಡಿಯ ಆರು ಜನ ಗಾವುಂಡರು, ಎಂಟು ಜನ ಶೆಟ್ಟಿಗಳು ದೇವರ ಸನ್ನಿಧಾನದಲ್ಲಿ ಬ್ರಹ್ಮಪುರಿಯ ಮಹಾಜನರಿಗೆ ಭೂಮಿ ದತ್ತಿ ಬಿಟ್ಟ ಸಂಗತಿಯನ್ನು ಹೇಳುತ್ತದೆ. ಹುನಗುಂದ ತಾಲೂಕಿನ ಅರಸಿ ಬೀಡಿಯ[೨೩] ಕ್ರಿ.ಶ. ೧೦೫೩ ನವೆಂಬರ್ ೧೩ರ ಶಾಸನದಲ್ಲಿ ಅಕ್ಕಾದೇವಿ ಕಿಸುಕಾಡು ೭೦ ಆಳುತ್ತಿದ್ದುದನ್ನು ಹೇಳಲಾಗಿದೆ. ಈಕೆಯು ಸೂರ್ಯ ಗ್ರಹಣವೆಂದು 'ಪಂಪೆಯ ತೀರ್ಥ'ದಲ್ಲಿದ್ದು (ಹಂಪೆಯಲ್ಲಿದ್ದು) ವಿಕ್ರಮಪುರದ ಬ್ರಹ್ಮಪುರಿಯ ನಂದಿಯಣ್ಣ ಷಡಂಗಿ ಭಟ್ಟೋಪಾಧ್ಯಾಯರು ಮತ್ತು ಪ್ರಮುಖರಾದ ೪೨ ಜನ ವಿದ್ವಾಂಸರಾದ ಮಹಾಜನರಿಗೆ ಊರ ದಕ್ಷಿಣ ದಿಕ್ಕಿಗೆ ಒಂದು ತೋಟದ ಭೂಮಿ 'ಯೆಳ್ಪತ್ತರ ಕೋಲಲಿ' ೪ಳನ್ನು ಕಿಸುವಿನ ಭೂಮಿ ಮತ್ತರು ೬ಳನ್ನು ಬಿಡುತ್ತಾಳೆ.

ಪರೋಕ್ಷ ವಿನಯವಾಗಿ ದಾನ: 'ಪರೋಕ್ಷ ವಿನಯ'ವೆಂದರೆ ಒಬ್ಬ ವ್ಯಕ್ತಿ ಮರಣ ಹೊಂದಿದ ಮೇಲೆ ಅವನಿಗೆ ಸದ್ಗತಿ ಪ್ರಾಪ್ತಿಯಾಗಲಿ, ಮೋಕ್ಷ ಪ್ರಾಪ್ತಿಯಾಗಲಿ ಎಂದು ದೇವಾಲಯಗಳಿಗೆ ದತ್ತಿ-ದಾನ ಮಾಡುವುದಾಗಿದೆ. ಬಾದಾಮಿ ತಾಲೂಕಿನ ಬೇಲೂರಿನ[೨೪] ಶಾಸನದಲ್ಲಿ ಅಕ್ಕಾದೇವಿಯು ತನ್ನ ಅಣ್ಣ ಚಕ್ರವರ್ತಿ ವಿಕ್ರಮಾದಿತ್ಯ V ಮರಣ ಹೊಂದಿದಾಗ ಆತನಿಗೆ ಪರೋಕ್ಷ ವಿನಯವಾಗಿ ಅಗ್ರಹಾರ ಪೇರೂರಲ್ಲಿ 'ತ್ರೈಪುರುಷರ ಶಾಲೆ'ಯ ಮಾಣಿಗಳಿಗೆ, ಅಶನ ಅಚ್ಛಾದನಕ್ಕೆ ೫೦೦ ಮತ್ತರು ಭೂಮಿಯನ್ನು, ೫೦ ಮನೆಗಳನ್ನು, ಹೂವಿನ ತೋಟವನ್ನು ಬಿಡುತ್ತಾಳೆ.

ಅಕ್ಕೇಶ್ವರ ದೇವರಿಗೆ ದಾನ: ರೋಣ ತಾಲೂಕಿನ ಸೂಡಿಯ[೨೫] ಕ್ರಿ.ಶ. ೧೦೫೪ ಮೇ ೧೦ರ ಶಾಸನದಲ್ಲಿ ಅಕ್ಕಾದೇವಿಯು ಕಿಸುಕಾಡು ೭೦, ತೊರುಗರೆ ೬೦, ಮಾಸಿವಾಡಿ ೧೪೦ ವಿಭಾಗಗಳನ್ನು ವಿಕ್ರಮಪುರದಿಂದ ಆಳುತ್ತಿದ್ದಳೆಂದು ಹೇಳಲಾಗಿದೆ. ವಿಕ್ರಮಪುರದಲ್ಲಿ ಅಕ್ಕಾದೇವಿ ಮತ್ತು ಈಕೆಯಲ್ಲಿ ಅಧಿಕಾರಿಗಳಾಗಿದ್ದ ನಾಡಪೆರ್ಗಡೆ ನಾಗದೇವಯ್ಯ ಸೇನಬೋವ ರೇವದಾಸಯ್ಯ, ಧರ್ಮಾಧ್ಯಕ್ಷ ಮಾಧವಯ್ಯ ಪ್ರಮುಖ ಶರಣರು ಸೇರಿ ಸೂರ್ಯ ಗ್ರಹಣದಂದು ಸೂಡಿಯ ಅಕ್ಕೇಶ್ವರ ದೇವರಿಗೆ, ಪಾತ್ರಕ್ಕೆ, ಚೈತ್ಯ ಪವಿತ್ರ ಕಾರ್ಯಗಳಿಗೆ ತಳವೃತ್ತಿ ೫೦೦ ಮತ್ತರೊಳಗೆ ವಿಶ್ವ ಶಿವಾಚಾರ್ಯರಿಗೆ ವಂಶಿಗರಿಗೆ, ವಿವಿಧ ಸೇವೆಯ ಸೂಳೆಯರಿಗೆ ಭೂಮಿ ದತ್ತಿ ಬಿಡುತ್ತಾನೆ. ವಿವಿಧ ಸೇವೆಯನ್ನು ಸಲ್ಲಿಸುತ್ತಿದ್ದ ಸೂಳೆಯರ ವಿವರಗಳು ಇಂತಿವೆ: ಎಡವಕ್ಕದ ಕೇರಿಯ ಮೊದಲ ದೆಸೆಯ ಬಿಟ್ಟಿಯ ಚಾಮರದ ಸೂಳೆxxಬ್ಬೆಗೆ ಮತ್ತರು ೧೧, ಬಲದ ದೆಸೆಯ ಮೊದಲ ಕಂಭದ ಸೂಳೆ xxಬ್ಬೆಗೆ ಮತ್ತರು ೧೫, ಅಲ್ಲಿಯ ಕಂಭದ ಸೂಳೆ ಅಸಗಬ್ಬೆಗೆ ಮತ್ತರು ೧೩, ಎಡದ ದೆಸೆಯ ಮೊದಲ ಕಂಭದ ಸೂಳೆ ರೇವಕಟ್ಟೆಗೆ ಮತ್ತರು ೧೩, ಅಲ್ಲಿಯ ಕಂಭದ ಸೂಳೆ ಗುಬ್ಬಿಯ ಚಾವುಂಡಬ್ಬೆಗೆ ಮತ್ತರು xx, ಬಲದ ದೆಸೆಯ ಬಿಟ್ಟಿಯ ಚಾಮರದ ಸೂಳೆ xx ಬ್ಬೆಗೆ ಮತ್ತರು ೧೨, ಎಡದ ದೆಸೆಯ ಕೇರಿಯ ಚಾಮರದ ಸೂಳೆ ಗುಬ್ಬಿಯ ಕೇತಬ್ಬೆಗೆ ಮತ್ತರು ೧೨, ಬಲದ ದೆಸೆಯ ಪಾತ್ರ ಸೂಳೆ xವಕಟ್ಟೆಗೆ ಮತ್ತರು ೧೨, ಎಡದ ದೆಸೆಯ ಪಾತ್ರದ ಸೂಳೆ x ಬ್ಬೆಗೆ ಮತ್ತರು ೧೩,

ಬಲದ ಮಾಡದ ಪಾತ್ರಂ ಸೂಳೆ ಗಾರ್ಗಬ್ಬೆಗೆ ಮತ್ತರು ೧೨, ಎಡವಕ್ಕದ ಕೇರಿಯ ಸೂಳೆ ಮೈಲಬ್ಬೆಗೆ ಮತ್ತರು ೧೨, ಬಲವಕ್ಕದ ಕೇರಿಯ ಸೂಳೆ ಜಕ್ಕಬ್ಬೆಗೆ ಮತ್ತರು ೧೨ನ್ನು ದತ್ತಿ ಬಿಡಲಾಗುತ್ತಿದೆ.

ಗುಬ್ಬಿಯಿಂದ ಚಾವುಂಡಬ್ಬೆ, ಕೇತಬ್ಬೆ ಇವರು ಸೂಡಿಗೆ ಬಂದು ಅಕ್ಕೇಶ್ವರ ದೇವಾಲಯದಲ್ಲಿ ಸೇವೆ ಸಲ್ಲಿಸುತ್ತಿದ್ದುದು ವಿಶೇಷ. ದೇವಾಲಯದ ಕಂಭಕ್ಕೆ ಸರ್ವಾಲಂಕೃತಗೊಂಡ ಸೂಳೆಯರನ್ನು ನಿಲ್ಲಿಸುತ್ತಿದ್ದುದು ಇದರಿಂದ ಗೊತ್ತಾಗುತ್ತದೆ. ಮಾಡದ ಎರಡೂ ಪಕ್ಕದಲ್ಲೂ ಸೂಳೆಯರು ನಿಂತಿರುತ್ತಿದ್ದರು. ಮೇಲ್ಕಾಣಿಸಿದ ಸೂಳೆಯರು ಪೂಜಾ ಸಮಯದಲ್ಲಿ ಮಾತ್ರ ಹಾಗೆ ನಿಲ್ಲುತ್ತಿದ್ದಿರಬೇಕು. ಇವರಿಗೆಲ್ಲ ಭೂಮಿ ದತ್ತಿ ಬಿಟ್ಟುದನ್ನು ಶಾಸನ ಹೇಳುತ್ತದೆ.

ತಪಸ್ವಿ ಗಂಗಿಕಬ್ಬೆಗಳಿಗೆ ದಾನ: ಶಿಗ್ಗಾವಿ ತಾಲೂಕಿನ ಹೊಟ್ಟೂರು[೨೬] ಗ್ರಾಮದ ಕ್ರಿ.ಶ. ೧೦೬೭ ಜನೇವರಿ ೩ರ ಶಾಸನದಲ್ಲಿ ತ್ರೈಲೋಕ್ಯಮಲ್ಲನ ಪಾದಪದ್ಮೋಪಜೀವಿಯಾಗಿ ಮಹಾಮಂಡಳೇಶ್ವರ ಜೇಮರಸನು ಪೊಟ್ಟಿಯೂರು, ನಿಟ್ಟಸಂಗಿ ಹಂಡಿಯೂರು ಮೊದಲಾದ ಕೆಲವು ಗ್ರಾಮಗಳನ್ನು ಕುಟ್ಟುಂಬಿತ್ತಿ ಅಣುಗ ಜೀವಿತದಿಂದ ಆಳುತ್ತಿದ್ದನು. ಇವನ ಪುತ್ರ ಮಹಾಸಾಮಂತ ಜೋಯಿಯರಸ ಪೊಟ್ಟಿಯೂರನ್ನು ಆಳುತ್ತಿದ್ದನು. ಮಹಾಮಂಡಳೇಶ್ವರ ಕದಂಬ ಮನೆತನದ ತೋಯಿಮದೇವನು ಬನವಾಸಿ ೧೨೦೦೦, ಪಾನುಂಗಲ್ಲು ೫೦೦ ಆಳುತ್ತಿದ್ದನು. ಪೆರ್ಮಾಡಿ ಕೇಶಿಗಾವುಂಡನು ಉದಕ ಸ್ವರ್ಣ, ಅನ್ನ, ಗೋವು, ಭೂಮಿ, ಕನ್ಯಾ, ವಿದ್ಯಾ ಮೊದಲಾದ ದಾನಗಳನ್ನು ಮಾಡಿದ್ದಾನೆ. ಅಲ್ಲದೆ ಶಂಕರನನ್ನು ಪ್ರತಿಷ್ಠಾಪಿಸಿ ಶ್ರೇಷ್ಠ ತೋರಣವನ್ನು ಮಾಡಿಸಿದ್ದಾರೆ. ಉತ್ತರಾಯಣ ಸಂಕ್ರಾಂತಿಯಂದು ಮಹಾಸಾಮಂತ ಜೋಯಿಯರಸರು, ಮಹಾಮಂಡಳೇಶ್ವರ ಜೋಯಿಮದೇವ, ಮೈಳಲ ದೇವಿಯರು ಇದ್ದು ಪೊಟ್ಟಿಯೂರ ಪೆರ್ಮಾಡಿ ಕೇಶಿಗಾವುಂಡ ಮಾಡಿಸಿದ ಕೆರೆಯೇರಿಯ ಮೇಲಿನ ಕೇಶವೇಶ್ವರ ದೇವರಿಗೆ ಸೊತೆ, ಸುಣ್ಣಕ್ಕೆ, ಪೂಜಾರಿಗೆ, ಗಂಧ, ಧೂಪ, ದೀಪ ನೈವೇದ್ಯಕ್ಕೆ ಪರೆಕಾರರಿಗೆ, ಪಾತ್ರಕ್ಕೆ, ವಂಸಿಗರಿಗೆ ಭೂಮಿ, ತೆರಿಗೆಗಳನ್ನು ಬಿಡುತ್ತಾರೆ. ತೋಯಿಮದೇವರ ಅಬ್ಬೆಗಳು ಶ್ರೀಮದಕ್ಕಾದೇವಿಯರು ತಪಸ್ವಿ ಗಂಗಿಕಬ್ಬೆಗಳ ಕಾಲು ತೊಳೆದು ಧಾರಾಪೂರ್ವಕವಾಗಿ ಮಠದ ವಿದ್ಯಾದಾನಕ್ಕೆ ತಮಗೆ ನಡೆಯುತ್ತಿದ್ದ ಅಂದಿಗರ್ಚ (ತಮ್ಮ ಖರ್ಚಿಗಾಗಿ ಇದ್ದಂಥ ತೆರಿಗೆ ಹಣ) ಕಾಣಿಕೆಯ ಎರಡು ಗದ್ಯಾಣದ ತೆರಿಗೆಯನ್ನು ಬಿಡುತ್ತಾಳೆ. ಶಾಸನದಲ್ಲಿ ಈ ವಿಷಯ "ತೋಯಿಮದೇವರಬ್ಬೆಗಳ್ ಶ್ರೀಮದಕ್ಕಾದೇವಿಯರು ತಪೋ ನಿಯಮ ಜಪ ಸಮಾಧಿಶೀಲ ಸಂಪನ್ನೆಯರಪ್ಪ ತಪಸ್ವಿ ಗಂಗಿಕಬ್ಬೆಗಳ ಕಾಲಂ ಕರ್ಚಿ" ಎಂದು ಬರುತ್ತದೆ.

ಗುಣದ ಬೆಡಂಗಿಯ ಜಿನಾಲಯಕ್ಕೆ ದಾನ: ಹುನಗುಂದ ತಾಲೂಕಿನ ಅರಸಿಬೀಡಿ[೨೭] ಶಾಸನದಲ್ಲಿ ಅಕ್ಕಾದೇವಿಯು ಗೋಕಾಗೆಯ ಸುತ್ತಿರ್ದ ಬೀಡಿನಲ್ಲಿರುವಾಗ ಈಕೆಯು ವಿಕ್ರಮಪುರದ ಗೋಣದ ಬೆಡಂಗಿಯ ಜಿನಾಲಯಕ್ಕೆ ಖಂಡಸ್ಫುಟಿತ ಜೀರ್ಣೋದ್ಧಾರಕ್ಕೆ, ಸುಧಾಕರ್ಮಕ್ಕೆ, ಗಂಧ, ಧೂಪ, ದೀಪಕ್ಕೆ ಸುರಗಿಗೆಂದು ಮೂಲಸಂಘ ವರಸೇನ ಗಣದ ಹೊಗರಿಯ ಗಚ್ಚದ ನಾಗಸೇನ ಪಂಡಿತರಿಗೆ, ಅಲ್ಲಿರುವ ಋಷಿಯರಿಗೆ, ಅಜ್ಜಿಯರಿಗೆ ಆಹಾರ ದಾನಕ್ಕೆ, ಅಜ್ಜಿಯರ ಕಪ್ಪಡಕ್ಕೆ ಎಂದು ಕಿಸುಕಾಡು ೭೦ರಲ್ಲಿನ ಭೂಮಿಯನ್ನು ದತ್ತಿ ಬಿಟ್ಟುದನ್ನು ಹೇಳಲಾಗಿದೆ. ಗಾಣದ ಹಾಳೂರು ಗ್ರಾಮವನ್ನು, ವಿಕ್ರಮಪುರದ ಈಶಾನ್ಯಕ್ಕೆ ತೋಟ ೧ ಮತ್ತರನ್ನು, ಊರಿನ ದಕ್ಷಿಣಕ್ಕೆ ಮೂಜುವ ದಿನ ಪಾಳ, ನೈರುತ್ಯಕ್ಕೆ ಪಂಡಿತ ನಾಗದೇವರಿಗೆ ೧೨ ಮತ್ತರು ಭೂಮಿಯನ್ನು ಇಲ್ಲಿಂದ ದಕ್ಷಿಣಕ್ಕೆ ಪರೆಕಾರ ಕೇತೋಜನಿಗೆ ಮತ್ತರು ೨೪ನ್ನು, ತೋಟವನ್ನು ಕಲ್ಕುಟಿಗೆ ಸುರೋಜನಿಗೆ ದತ್ತಿ ಬಿಡುತ್ತಾಳೆ.

ಹೀಗೆ ಅಕ್ಕಾದೇವಿ ಒಬ್ಬ ಮಹಿಳೆಯಾಗಿ ಈ ಎಲ್ಲ ಸಾಧನೆಗಳನ್ನು ಮಾಡಿದ್ದಾಳೆ. ಪುರುಷರ ಸಮವಾಗಿಯೇ ನಿಂತು ಹೋರಾಡಿದ್ದಾಳೆ. ಯುಕ್ತಿಯಿಂದ ಆಡಳಿತವನ್ನು ನಡೆಸಿದ್ದಾಳೆ. ತಮ್ಮ ಪ್ರಜೆಗಳ ನೋವಿಗೆ ಸ್ಪಂದಿಸಿದ್ದಾಳೆ. ಧರ್ಮಕಾರ್ಯಗಳನ್ನು ಮಾಡಿದ್ದಾಳೆ. ಧಾರ್ಮಿಕ ಶ್ರದ್ಧೆಯನ್ನು ಹೊಂದಿ ಗಂಗಾಸ್ನಾನ ಪವಿತ್ರೆಯಾಗಿದ್ದಾಳೆ. ಎಲ್ಲ ಧರ್ಮಗಳನ್ನು ಗೌರವಿಸಿದ್ದಾಳೆ.

ಅಡಿ ಟಿಪ್ಪಣಿಗಳು

೧. MORAES (George M); Kadamba Kula: A History of ancient and Mediaevel Karnataka, Bombay: F.X. Furtado, 1931, p. 102-103.

೨. ನಾಗಯ್ಯ (ಜೆ.ಎಂ.) ಸಂ: ಕಲ್ಯಾಣ ಚಾಲುಕ್ಯರ ಶಾಸನಗಳು, ಸಂಪುಟ ೧, ಮೈಸೂರು: ಮೈಸೂರು ವಿವಿ, ೨೦೧೧, ವಿಕ್ರಮಾದಿತ್ಯ V No. 4, ಕ್ರಿ.ಶ. ೧೦೧೦ ಮೇ ೧ ಆಲೂರು, ಗದಗ ತಾಲ್ಲೂಕು, ಧಾರವಾಡ ಜಿಲ್ಲೆ.

೩. ಅದೇ, ಜಯಸಿಂಹ II No 38, ಕ್ರಿ.ಶ. ೧೦೨೪ ಡಿಸೆಂಬರ್ ೨೪, ಮರೋಳ, ಹುನಗುಂದ ತಾಲ್ಲೂಕು, ಬಿಜಾಪುರ ಜಿಲ್ಲೆ.

೪. ಪಾವಟೆ (ಚೆನ್ನಕ್ಕ) : ಹಾನಗಲ್ಲ ಕದಂಬರು, ಧಾರವಾಡ: ಚೆನ್ನಗಂಗಾ ಪ್ರಕಾಶನ, ೧೯೯೮, ಪು. ೩೯.

೫. ಮಂಜುಶ್ರೀ (ಎಸ್.ಪಿ) : ಹಾನಗಲ್ಲಿನ ಕದಂಬರಾಣಿ ಅಕ್ಕಾದೇವಿ [ಮಂಜುನಾಥ (ಎಂಜಿ) ಸಂ: ರಾಣಿಯರು ಮತ್ತು ವೀರಮಹಿಳೆಯರು, ವಿಜಯಪುರ: ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿವಿ, ೨೦೧೩, ಪ. ೧೯–೨೦.

೬ ನಾಗಯ್ಯ (ಜೆ.ಎಂ.): ಕಲ್ಯಾಣ ಚಾಲುಕ್ಯರ ಶಾಸನಗಳು, ಸಂಪುಟ ೧, ಮೈಸೂರು: ಮೈಸೂರು ವಿಶ್ವವಿದ್ಯಾಲಯ, ೨೦೧೧, ಸತ್ಯಾಶ್ರಯ ಇರಿವರ ಬೆಡಂಗ ನಂ. ೨೮, ಕ್ರಿ.ಶ. (?) ಗುಡ್ಡದ ಬೇವಿನಹಳ್ಳಿ, ರಾಣಿಬೆನ್ನೂರು ತಾಲ್ಲೂಕು, ಧಾರವಾಡ ಜಿಲ್ಲೆ.

೭. ಅದೇ, ಜಯಸಿಂಹ II, No. 27, ಕ್ರಿ.ಶ. ೧೦೨೨ ಮಾರ್ಚ್ ೧೦, ನಾಗರಹಳ್ಳಿ, ಮುಂಡರಗಿ ತಾಲ್ಲೂಕು, ಧಾರವಾಡ ಜಿಲ್ಲೆ.

೮. ಅದೇ, ಜಯಸಿಂಹ II, No. 56, ಕ್ರಿ.ಶ. ೧೦೩೩, ಡಿಸೆಂಬರ್ ೨೪, ಬೆನಕನ ಕೊಂಡ, ರಾಣಿಬೆನ್ನೂರು ತಾಲ್ಲೂಕು, ಧಾರವಾಡ ಜಿಲ್ಲೆ.

೯. ಅದೇ, ವಿಕ್ರಮಾದಿತ್ಯ V, No. 5, ಕ್ರಿ.ಶ. ೧೦೧೦ ನವೆಂಬರ್ ೮, ಸೂಡಿ, ರೋಣ ತಾಲ್ಲೂಕು, ಧಾರವಾಡ ಜಿಲ್ಲೆ.

೧೦. ಅದೇ, ಜಯಸಿಂಹ II, No. 25, ಕ್ರಿ.ಶ. ೧೦೨೧, ಡಿಸೆಂಬರ್ ೨೪, ಬೇಲೂರು, ಬಾದಾಮಿ ತಾಲ್ಲೂಕು, ಬಿಜಾಪುರ ಜಿಲ್ಲೆ.

೧೧. ಅದೇ, ಜಯಸಿಂಹ II, No. 105, ಕ್ರಿ.ಶ. ೧೦೩೭, ನವೆಂಬರ್ ೨೧, ಹೊಟ್ಟೂರು, ಶಿಗ್ಗಾವಿ ತಾಲ್ಲೂಕು, ಧಾರವಾಡ ಜಿಲ್ಲೆ.

೧೨. EI, XV, No. 6D, ಕ್ರಿ.ಶ. ೧೦೫೦ ಮೇ ೬, ಸೂಡಿ, ರೋಣ ತಾಲ್ಲೂಕು, ಧಾರವಾಡ ಜಿಲ್ಲೆ.

೧೩. SII, XI, (i), No. 86, ಕ್ರಿ.ಶ. ೧೦೫೦ ಡಿಸೆಂಬರ್ ೨೪ ಕೊರ್ಲಹಳ್ಳಿ, ಮುಂಡರಗಿ ತಾಲ್ಲೂಕು, ಧಾರವಾಡ ಜಿಲ್ಲೆ.

೧೪. E.I. XVII, No. 10, ಕ್ರಿ.ಶ. ೧೦೪೭ ಮಾರ್ಚ್ ೨೯, ಅರಸಿಬೀಡಿ, ಹುನಗುಂದ ತಾಲ್ಲೂಕು, ಬಿಜಾಪುರ ಜಿಲ್ಲೆ.

೧೫. SII, XI (i), No. 86, ಕ್ರಿ.ಶ. ೧೦೫೦, ಡಿಸೆಂಬರ್ ೨೪, ಕೊರ್ಲಹಳ್ಳಿ, ಮುಂಡರಗಿ ತಾಲ್ಲೂಕು, ಬಿಜಾಪುರ ಜಿಲ್ಲೆ.

೧೬. E.I. XV, No. 6D, ಕ್ರಿ.ಶ. ೧೦೫೦ ಮೇ ೬, ಸೂಡಿ, ರೋಣ ತಾಲ್ಲೂಕು, ಧಾರವಾಡ ಜಿಲ್ಲೆ.

೧೭. ಅದೇ.

೧೮. ನಾಗಯ್ಯ (ಜೆ.ಎಂ.) ಸಂ: ಕಲ್ಯಾಣ ಚಾಲುಕ್ಯರ ಶಾಸನಗಳು, ಸಂಪುಟ ೧, ಮೈಸೂರು: ಮೈಸೂರು ವಿವಿ., ೨೦೧೧, ವಿಕ್ರಮಾದಿತ್ಯ V, No. 5, ಕ್ರಿ.ಶ. ೧೦೧೦ ನವೆಂಬರ್ ೮, ಸೂಡಿ, ರೋಣ ತಾಲ್ಲೂಕು, ಧಾರವಾಡ ಜಿಲ್ಲೆ.

೧೯. ಅದೇ, ಜಯಸಿಂಹ II, No. 25, ಕ್ರಿ.ಶ. ೧೦೨೧ ಡಿಸೆಂಬರ್ ೨೪, ಬೇಲೂರು, ಬಾದಾಮಿ ತಾಲ್ಲೂಕು, ಬಿಜಾಪುರ ಜಿಲ್ಲೆ.

೨೦. ಅದೇ.

೨೧. SII, XI, (i), No. 27, ಕ್ರಿ.ಶ. ೧೦೫೦ ಡಿಸೆಂಬರ್ ೨೪, ಕೊರ್ಲಹಳ್ಳಿ, ಮುಂಡರಗಿ ತಾಲ್ಲೂಕು, ಧಾರವಾಡ ಜಿಲ್ಲೆ.

೨೨. ನಾಗಯ್ಯ (ಜೆ.ಎಂ.) ಸಂ: ಕಲ್ಯಾಣ ಚಾಲುಕ್ಯರ ಶಾಸನಗಳು, ಸಂಪುಟ ೧, ಮೈಸೂರು ವಿ.ವಿ., ೨೦೧೧, ವಿಕ್ರಮಾದಿತ್ಯ V, No. 5, ಕ್ರಿ.ಶ. ೧೦೧೦ ನವೆಂಬರ್ ೮, ಸೂಡಿ, ರೋಣ ತಾಲ್ಲೂಕು, ಧಾರವಾಡ.

೨೩. SII, XI, (i), No. 88, ಕ್ರಿ.ಶ. ೧೦೫೩ ನವೆಂಬರ್ ೧೩, ಅರಸಿ ಬೀಡಿ, ಹುನಗುಂದ ತಾಲ್ಲೂಕು, ಬಿಜಾಪುರ ಜಿಲ್ಲೆ.

೨೪. ನಾಗಯ್ಯ (ಜೆ.ಎಂ.) ಸಂ: ಕಲ್ಯಾಣ ಚಾಲುಕ್ಯರ ಶಾಸನಗಳು, ಸಂಪುಟ ೧, ಮೈಸೂರು: ಮೈಸೂರು ವಿವಿ, ೨೦೧೧, ಜಯಸಿಂಹ II, No. 25, ಕ್ರಿ.ಶ. ೧೦೨೧, ಡಿಸೆಂಬರ್ ೨೪, ಬೇಲೂರು, ಬಾದಾಮಿ ತಾಲ್ಲೂಕು, ಬಿಜಾಪುರ ಜಿಲ್ಲೆ.

೨೫. E.I, XV, No. 6 E (1), ಕ್ರಿ.ಶ. ೧೦೫೪, ಮೇ ೧೦, ಸೂಡಿ, ರೋಣ ತಾಲ್ಲೂಕು, ಧಾರವಾಡ ಜಿಲ್ಲೆ.

೨೬. E.I, XV, No. 116, ಕ್ರಿ.ಶ. ೧೦೬೭, ಜನೇವರಿ ೩, ಹೊಟ್ಟೂರು, ಶಿಗ್ಗಾವಿ ತಾಲ್ಲೂಕು, ಧಾರವಾಡ ಜಿಲ್ಲೆ.

೨೭. E.I, XVII, No. 10, ಕ್ರಿ.ಶ. ೧೦೪೭, ಮಾರ್ಚ್ ೨೯, ಅರಸಿಬೀಡಿ, ಹುನಗುಂದ ತಾಲ್ಲೂಕು, ಬಿಜಾಪುರ ಜಿಲ್ಲೆ.

೩೭

ಬಾಣರಸರ ಕಾಲದ ನೀರಾವರಿ ಒಂದು ಚಾರಿತ್ರಿಕ ಅವಲೋಕನ

ಟಿ.ವಿ. ನಾಗರಾಜ*

ಪ್ರಾಗೈತಿಹಾಸಿಕ ಮಾನವ ತನ್ನವಾಸಕ್ಕಾಗಿ ಗುರುತಿಸಿಕೊಂಡ ನೆಲೆಗಳು ಸಾಮಾನ್ಯವಾಗಿ ನೀರು ಸಿಗುವಂತಹ ನೈಸರ್ಗಿಕ ತಾಣಗಳೆ ಆಗಿದ್ದವು.ಕೃಷಿಯನ್ನು ತಮ್ಮ ಮುಖ್ಯ ಜೀವನಕ್ಕೆ ಆದಾರವಾಗಿ ರೂಡಿಸಿ ಕೊಂಡ ದಿನದಿಂದಲೆ ಮಳೆಯ ಮತ್ತು ಹೊಳೆಯ ನೀರನ್ನು ಸಾಕಷ್ಟು ಕಾಲ ಹಿಡಿದಿಟ್ಟುಕೊಳ್ಳುವ ಅವಶ್ಯಕತೆಗೆ ತಕ್ಕ ಹಾಗೆ ಬಳಸಿಕೊಳ್ಳುಲು ನಡೆಸಿದ ಪ್ರಯತ್ನವೆ ಕೆರೆ, ಕುಂಟೆ, ಕಟ್ಟೆಗಳಾಗಿ ರೂಪ ಪಡೆದವು. ಪ್ರಾಚೀನ ಮತ್ತು ಮಧ್ಯಕಾಲೀನ ಯುಗದಲ್ಲಿ ನೀರಾವರಿ ಕಾಮಗಾರಿಗಳ ನಿರ್ಮಾಣದಲ್ಲಿ ಧಾರ್ಮಿಕ ಮಹೊನ್ನತಿಯ ಉದ್ದೇಶ ಪ್ರಧಾನ ಪಾತ್ರ ವಹಿಸಿದ್ದಿತು, ಇಂತಹ ಜನೋಪಕಾರ್ಯಗಳನ್ನು ಕೈಗೊಂಡ ವ್ಯಕ್ತಿ, ಕುಟುಂಬಗಳು ಪುಣ್ಯಕ್ಕೆ ಪಾತ್ರರಾಗುತ್ತಾರೆ ಎಂಬ ಗಾಢವಾದ ನಂಬಿಕೆ ಇದ್ದಿತು.[೧] ಕೌಟಿಲ್ಯನ ಅರ್ಥಶಾಸ್ತ್ರವೂ ಸಹ "ರಾಜನು ಜನಪದಗಳಲ್ಲಿ ಅಣೆಕಟ್ಟುಗಳನ್ನು, ಕೆರೆಗಳನ್ನು ಕಟ್ಟಿಸಬೇಕು. ಅಂತಹವರಿಗೆ ಹಣ, ಉಪಕರಣಗಳನ್ನು ನೀಡಿ ಸಹಕರಿಸಬೇಕು".[೨] ಎಂದು ಉಲ್ಲೇಖಿಸಿದೆ. ಪ್ರಾಚೀನ ಕಾಲದಿಂದಲೂ ನೀರಾವರಿ ಕಾಮಗಾರಿಗಳನ್ನು ಪ್ರಯೋಜಿಸಿಕೊಂಡು ಬಂದಿರುವುದು ಒಂದು ಪರಂಪರೆಯಾಗಿ ಬಂದಿದೆ. ಸಮಕಾಲೀನ ಶಾಸನಗಳ ಆದಾರದಿಂದ ನೀರಾವರಿ ಕಾಮಗಾರಿಗಳು ಸ್ಥಳೀಯ ಹಂತದಲ್ಲೆ ಎಲ್ಲಾ ಜವಾಬ್ದಾರಿಗಳನ್ನು ನಿರ್ವಹಿಸಿಕೊಂಡು ಬಂದಿರುವುದು ಕಂಡುಬಂದಿದೆ. ಇಂತಹ ಕಾರ್ಯಗಳಲ್ಲಿ ತೊಡಗಿಸಿಕೊಂಡು ಬಂದಂತಹ ವ್ಯಕ್ತಿಗಳಿಗೆ 'ಮಾನ್ಯ', 'ಕೊಡುಗ್ಯೆ', 'ಭೂದಾನ,' ಮುಂತಾದ ರಿಯಾಯಿತಿ ಹಾಗೂ ಸೌಲಭ್ಯಗಳನ್ನು ನೀಡುತ್ತಾ ಬಂದಿದ್ದು, ಅದು ನೀರಾವರಿ ಚೌಕಟ್ಟಿನ ಸಮರ್ಪಕ ಕಾರ್ಯನಿರ್ವಹಣೆಗೆ ಅನುವು ಮಾಡಿಕೊಡುವುದರ ಜೊತೆಗೆ, ಅಂತಹ ಕಾರ್ಯಗಳಲ್ಲಿ ಬಾಗಿಯಾದವರಿಗೆ ಸಾಮಾಜಿಕ ಮತ್ತು ರಾಜಕೀಯ ಮನ್ನಣೆ ದೊರಕಿಸಿಕೊಟ್ಟವು.[೩]

ಬಾಣರಸರು ಕ್ರಿ.ಶ. ಆರಂಭದ ಕಾಲಕ್ಕಾಗಲೇ ಇವರ ಸುಳಹು ದಕ್ಷಿಣ ಬಾರತದ ಇತಿಹಾಸದಲ್ಲಿ ಕಂಡುಬರುತ್ತದೆ. ವಿಶಾಲ ವ್ಯಾಪ್ತಿಯಲ್ಲಿದ್ದ ಬಾಣರಸರು ದಕ್ಷಿಣ ಬಾರತದ ಅರಸು ಮನೆತನಗಳಾದ ಪಲ್ಲವ, ಕದಂಬ, ಚಲುಕ್ಯ, ರಾಷ್ಟಕೂಟ, ಗಂಗ, ನೊಳಂಬ, ಚೋಳ ಮುಂತಾದವರ ಪಾದಾಕ್ರಾಂತದ ಕ್ರಿಯೆಗೆ ಒಳಪಟ್ಟರೂ ಸುಮಾರು ಆರೇಳು ನೂರು ವರ್ಷಗಳ ಸುದೀರ್ಘ ಇತಿಹಾಸದಲ್ಲಿ ನಿಚ್ಚಳವಾಗಿ ಕಾಣಿಸಿಕೊಂಡಿದ್ದಾರೆ. ಬಾಣರಸರು ರಾಜಕೀಯ ಸಂಘರ್ಷ ನೆಲೆಗಳಲ್ಲಿ ತಮ್ಮ ಅಸ್ತಿತ್ವ ಉಳಿಸಿಕೊಳ್ಳುತ್ತಾ, ಅಸ್ತಂಗತರಾಗುತ್ತಾ, ಮತ್ತೊಂದು ಪ್ರಾದೇಶಿಕ ನೆಲೆಯಲ್ಲಿ ಗೋಚರಿಸುವ ಮೂಲಕ ನಿರಂತರತೆ ಉಳಿಸಿಕೊಂಡಿದ್ದು ಗಮನಾರ್ಹ.

ಕ್ರಿ.ಶ. ಐದನೆಯ ಶತಮಾನ ಮೊದಲುಗೊಂಡು ಹದಿನೈದನೆ ಶತಮಾನದವರೆಗೆ ದಕ್ಷಿಣ ಭಾರತದಲ್ಲಿ ವಿಶೇಷವಾಗಿ ಕರ್ನಾಟಕ ರಾಜಕೀಯ ನೆಲೆಯಲ್ಲಿ ಕಂಡುಬರುವ ಬಾಣರಸರು, ಮಾಂಡಲೀಕರಾಗಿ ಒಂದಲ್ಲ ಒಂದು ಸಾಮ್ರಾಜ್ಯ ಶಕ್ತಿಯ ಭಾಗವಾಗಿ ತಮ್ಮ ಪಾತ್ರ ನಿರ್ವಹಿಸುತ್ತಾ ಬಂದುದು ಒಂದು ವಿಷೇಶ ರಾಜಕೀಯ ಬೆಳವಣಿಗೆಯಾಗಿದೆ. ಸಮಕಾಲೀನ ಸಾಮ್ರಾಜ್ಯಗಳ ರಾಜಕೀಯ ಸಂಘರ್ಷಗಳಿಂದಾಗಿ, ಸಾಮಂತರಾಗಿ ಆಳುತ್ತಿದ್ದ ಬಾಣರಸರು ಸಾಕಷ್ಟು ಸ್ವಾಯತ್ತತೆ ಮತ್ತು ಸ್ವಾತಂತ್ರ ಹೊಂದಿದ್ದುದು ಗಮನಾರ್ಹ. ಜನವಸತಿ ವಿರಳವಾಗಿ ಕಂಡು ಬರುವ ಹಲವು ಭೌಗೋಳಿಕ ವೈಶಿಷ್ಟ್ಯಗಳ ನಡುವೆ ಬಾಣರಸರು ಪ್ರಾಬಲ್ಯ ಹೊಂದಿದ್ದರು. ಅವರ ಭೌಗೋಳಿಕ ವ್ಯಾಪ್ತಿ ಪೂರ್ವಕ್ಕೆ ಕಾಳಹಸ್ತಿ, ಪಶ್ಚಿಮಕ್ಕೆ ಮಣ್ಣೆಯ ಪೂರ್ವ ಭಾಗಗಳವರೆಗೆ, ಉತ್ತರಕ್ಕೆ ಒಮ್ಮೊಮ್ಮೆ ಅನಂತಪುರ ಕಡಪ ಜಿಲ್ಲೆಗಳವರೆಗೂ, ದಕ್ಷಿಣಕ್ಕೆ ಉತ್ತರ ಆರ್ಕಾಡು ಧರ್ಮಪುರಿ ಜಿಲ್ಲೆಯ ಉತ್ತರ ಭಾಗಗಳವರೆಗೂ ವ್ಯಾಪಿಸಿದ್ದಿತು.[೪]

---

* ನಿವೃತ್ತ ಪ್ರಾಧ್ಯಾಪಕರು.

ಪೆರ್ಬಾಣವಾಡಿ ಪ್ರದೇಶ ಶುಷ್ಕ ವಾತಾವರಣದ, ಯಾವ ಜೀವ ನದಿಜಾಲಗಳೂ ಇಲ್ಲದ ಪ್ರದೇಶವಾಗಿರುವ ಹಿನ್ನೆಲೆಯಲ್ಲಿ ಅಲ್ಲಿ ಸ್ವಾಭಾವಿಕವಾಗಿ ನೂರಾರು ಕೆರೆ, ಕುಂಟೆಗಳು ಪ್ರಾಚೀನ ಕಾಲದಿಂದಲೂ ಪಾರಂಪರಿಕವಾಗಿ ಅಸ್ತಿತ್ವದಲ್ಲಿವೆ. ಅವುಗಳಲ್ಲಿ ಹಲವಾದರೂ ಬಾಣರಸರ ಕೊಡುಗೆಗಳಾಗಿರಬಹುದಾದರೂ, ಅವಕ್ಕೆ ಶಾಸನಾಧಾರಗಳು ಲಭ್ಯವಿಲ್ಲ. ಆದರೆ ಈ ಕಾಲಘಟ್ಟದಲ್ಲಿ ಅವರಿಂದ ನೀರಾವರಿ ಮೂಲಗಳ, ಕೆರೆ–ಕುಂಟೆಗಳ ನಿರ್ಮಾಣ, ಜೀರ್ಣೋದ್ಧಾರಗಳು ಪ್ರೋತ್ಸಾಹ ಪಡೆದು ವ್ಯವಸ್ಥಿತ ಚೌಕಟ್ಟಿನ ಒಂದು ಭಾಗವಾಗಿರುವುದರ ಬಗ್ಗೆ ಹಲವು ಶಾಸನಗಳು ಬೆಳಕು ಚೆಲ್ಲುತ್ತವೆ.

ಯದರೂರು ಸ್ಥಳದ ಚಿಕ್ಕಕೆರೆಯ ಏರಿಯ ಮೇಲಿರುವ ಮಹಾವಲಿಯ ವಂಶೀಯರಾದ ಶ್ರೀಮತ್ಸಂಬಯ್ಯನ ಶಾಸನವು ಆತನು ಬಿದನೂರನ್ನು ಆಳುತ್ತಿದ್ದಾಗ, ಆ ಕೆರೆಗೆ ಬಿತ್ತುವಟ್ಟ ಬಿಟ್ಟ ವಿವರ ನೀಡಿದೆ. 'ಬಿತ್ತುವಟ್ಟ' ಅಥವಾ 'ಬಿತ್ತುವಾಟ' ಎಂಬುದು ಕೆರೆಯನ್ನು ನಿರ್ಮಾಣ ಮಾಡಿದ ಅಥವಾ ದುರಸ್ತಿ ಕೈಗೊಂಡ ವ್ಯಕ್ತಿಗೆ ನೀಡುವ ದತ್ತಿಯಾಗಿದೆ.[೫] ವಿಜಯಾದಿತ್ಯ ಮಹಾವಳಿ ಬಾಣರಾಯನ ಗಂಡಿಮಲ್ಲನ ಪರಮೇಶ್ವರ ದೇವಾಲಯದ ಶಾಸನವು, ಆ ಸ್ಥಳದ ಸಭೆಯವರು ವೆಳ್ಳೂರಿ ಎಂಬ ಕೆರೆಯಲ್ಲಿ ಹೂಳು ತೆಗೆಯಲು ಭೂದಾನ ನೀಡಿದುದನ್ನು ದಾಖಲಿಸಿದೆ.[೬] ಆ ಭೂಮಿಯ ಉತ್ಪನ್ನದಿಂದ ಬರುವ ಆದಾಯದಿಂದ ಕೆರೆಯಲ್ಲಿ ಕುಣಿಗಳನ್ನು ತೋಡಿ ಹೂಳನ್ನು ತೆಗೆದು ಏರಿಯ ಮೇಲೆ ಹಾಕುವ ಕೆಲಸ ನಿರ್ವಹಿಸಬೇಕಾಗಿದ್ದಿತು ಎಂದು ಉಲ್ಲೇಖಿಸಿದೆ. ಆವನ್ಯ ಸ್ಥಾನವನ್ನು ನಲವತ್ತು ವರ್ಷಗಳ ಕಾಲ ಆಳಿದ ತ್ರಿಭುವನ ಕರ್ತಾರದೇವನಾದ ಕಲಿಯುಗ ರುದ್ರನೆಂಬ ಯತಿವರ್ಯನು ಎರಡು ದೊಡ್ಡ ಕೆರೆಗಳನ್ನು ಕಟ್ಟಿಸಿದ ವಿವರ ಆವಣಿಯ ಶಾಸನದಲ್ಲಿ ಬಂದಿದೆ.[೭] ಆವಣಿಯಲ್ಲಿನ ಕ್ರಿ.ಶ. ೯೪೦ ದೀವಬ್ಬರಸಿಯ ಶಾಸನ ಆಕೆಯ ಹೆಸರಿನಲ್ಲಯ 'ದೀವಳಬ್ಬಾ ಸಮುದ್ರ' ಎಂಬ ಕೆರೆಯನ್ನು ಪೊಲಿರಮಂಗಲ ಎಂಬಲ್ಲಿ ಕಟ್ಟಿಸಿದಳೆಂದು ತಿಳಿಸುತ್ತದೆ.[೮] ಮುಳಬಾಗಿಲು ತಾಲ್ಲುಕು ಹೆಬ್ಬಣಿಯ ದೊಡ್ಡಕೆರೆಯ ಒಡ್ಡು ಹೊಡೆದಿದ್ದಾಗ ಮಂಡೆಯಗಾವುಣ್ಣನ ಮಗ ಪೃಥ್ವಿರಾಮಶೆಟ್ಟಿ ಎಂಬುವನು ಕೆರೆಯ ಒಡ್ಡನ್ನು ಕಟ್ಟಿಸುತ್ತಾನೆ.[೯] ಪುಂಗನೂರು ತಾಲುಕು ಮೇಕಲಚಾಮಲಪಲ್ಲಿ ಕೆರೆಯೊಂದನ್ನು ಸಾನ್ವಿಶೆಟ್ಟಿ ಮಗ ದೊರ ಉತ್ತಮಶೆಟ್ಟಿ ಮತ್ತು ಮರಮಂಡಲ ಗಬರಿಶೆಟ್ಟಿಯ ಮಗ ಸಾವಯ ಎಂಬುವರು ತೋಡಿಸಿದಂತೆ ತಿಳಿಸಿದೆ.[೧೦] ಬಾಣರಸ ವಿದ್ಯಾದಿತ್ಯನ ಹೆಸರಿನಲ್ಲಿ ವಿಜಯಾದಿತ್ಯಮಂಗಲ ಆ ಸ್ಥಳದ ಪಿರಿಯ ಕೆರೆ ಭಿನ್ನವಾದಾಗ ಅದನ್ನು ಜೀರ್ಣೋದ್ಧಾರ ಮಾಡಿದ ತಿರುವಯ್ಯ ಎಂಬುವನಿಗೆ ಮಹಾಜನರು 'ಬಿತ್ತುವಟ್ಟ' ದತ್ತಿಯಾಗಿ ಬೂದಾನ ನೀಡಿದ್ದನ್ನು ದಾಖಲಿಸಿದೆ.[೧೧]

ಯಾವುದೇ ಕೆರೆಯ ರಚನೆಯಲ್ಲಿ ನೀರನ್ನು ನೀರಾವರಿಗಾಗಿ ಹೊರಕ್ಕೆ ಬಿಡುವ 'ತೂಬು' ಮುಖ್ಯ ಭಾಗವಾಗಿರುತ್ತದೆ.ಅದರ ರಚನೆ ಹಾಗೂ ನಿರ್ವಹಣೆಯೂ ಮುಖ್ಯ ಹೀಗಾಗಿ ಬೊಡಿನಾಯಿನಿಪಲ್ಲಿಯ ಕೆರೆಯ ತೂಬನ್ನು ಮಾಲಗುಂಡೂರಿನ ಬಲ್ಲಮಶೆಟ್ಟಿ ಎಂಬುವನು ಕಟ್ಟಿಸಿದನೆಂದು ದಾಖಲಾಗಿದೆ.[೧೨] ಮಾಲೂರು ತಾಲುಕಿನ ಬೆಳ್ಳೂರಿನ ಶೆಟ್ಟಿಕೆರೆ ತೂಬನ್ನು ತೊಟಿವಡ ಗುಡ್ಡಿಗಳ ಮಗ ಪೊಳ್ಳಮಯ್ಯ ಮಾಡಿಸಿದನೆಂದು ದಾಖಲಾಗಿದೆ.[೧೩] ಪುಂಗನೂರು ತಾಲುಕು ದೇಸಿದೊಡ್ಡ ಶಾಸನ. ಪೃಥ್ವಿರಾಮಶೆಟ್ಟಿಯ ಮಗ ಜನಬಲಿಗ ಎಂಬುವನು ಶ್ರೇಯಸ್ಸಿಗಾಗಿ ಪೆನಗುಂಟ ಕೆರೆಯ ತೂಬನ್ನು ನಿರ್ಮಾಣ ಮಾಡಿಸಿದನೆಂದು ದಾಖಲಾಗಿದೆ.[೧೪] ಹೀಗೆ ಕೆರೆ ತೂಬಿನ ರಚನೆಯನ್ನು ಒಂದು ಪುಣ್ಯಕಾರ್ಯವೆಂದು ಭಾವಿಸಿ ಅದರ ನಿರ್ಮಾಣ ಮತ್ತು ದುರಸ್ತಿಯ ಕಾರ್ಯಗಳನ್ನು ಅಂದಿನ ಸಮಾಜದ ವಣಿಕ ವರ್ಗದವರು ಹಾಗು ಇತರರು ಕೈಗೊಂಡಿದ್ದರು. ಪೆರ್ಬಾಣವಾಡಿ ಪ್ರದೇಶದಲ್ಲಿ ಕೆರೆ ರಚನೆ ಮತ್ತು ನಿರ್ವಹಣೆಗೆ ಸಂಬಂದಿಸಿದಂತೆ ದತ್ತಿ ಪ್ರಸ್ತಾವನೆಯ ಹಲವಾರು ಶಾಸನಗಳು ದೊರಕಿವೆ. ಕೋಲಾರ ತಾಲುಕಿನ ಗುಂಡ್ಲಹಳ್ಳಿ,[೧೫] ಕ್ಯಾಲನೂರಿನ ಶಾಸನದಲ್ಲಿ[೧೬] ಕೆರೆಯ ಕೆಳಗಿನ ಭೂಮಿಯ ಸಾಗುವಳಿ ಹಕ್ಕನ್ನು ದಯಪಾಲಿಸಿದೆ(೫೯) ಮುಳಬಾಗಿಲು ತಾಲುಕು ಯೆದರೂರು ಶಾಸನದಲ್ಲಿ[೧೭] ಆ ಗ್ರಾಮದ ಕೆರೆಗೆ 'ಬಿತ್ತುವಟ್ಟ' ನೀಡಿರುವುದನ್ನು ಪ್ರಸ್ತಾಪಿಸಿದೆ. ಕುರುಬರಹಳ್ಳಿಯ ಶಾಸನದಲ್ಲಿ ಸಾಂಬಯ್ಯ ಎಂಬುವನು ಮಂಡಿಕಲ್ ಕೆರೆಗೆ 'ಬಿತ್ತುವಟ್ಟ' ನೀಡಿರುವುದನ್ನು ಉಲ್ಲೇಖಿಸಿದೆ.[೧೮] ಹೆಬ್ಬಣಿಯ ಶಾಸನದಲ್ಲಿ[೧೯] ಅಲ್ಲಿನ ದೊಡ್ಡ ಕೆರೆ ಒಡೆದು ಹೋಗಿದ್ದು, ಅದನ್ನು ಮುಂತೇಯಗಾವುಂಡನ ಮಗ ಪೃಥ್ವಿರಾವಶೆಟ್ಟಿ ದುರಸ್ತಿ ಮಾಡಿಸಿದನೆಂದು, ಅದಕ್ಕಾಗಿ ಹಿಂದಿನ ತೆರಿಗೆ ಒಪ್ಪಂದದಲ್ಲಿ ಹತ್ತು ಗದ್ಯಾಣ ಮತ್ತು ಭತ್ತದ ಭತ್ಯೆ ಜೊತೆಗೆ ಗದ್ದೆಭೂಮಿಯನ್ನು ನೀಡಿರುವುದು ದಾಖಲಾಗಿದೆ. ಶ್ರೀನಿವಾಸಪುರ ತಾಲುಕಿನ ಏಚಪಲ್ಲಿ.[೨೦] ಬಂಗಾರಪೇಟೆ ತಾಲುಕಿನ ಬೇತಮಂಗಲ ಗ್ರಾಮಗಳ ಶಾಸನಗಳು 'ಬಿತ್ತಿವಟ್ಟ' ಪ್ರಸ್ತಾಪಿಸಿವೆ.[೨೧] ಬಿಜಯಂತಿ ಮಂಗಲವು ಬೇತಮಂಗಲವೆಂಬ ಸ್ವರೂಪ ಧರಿಸಿ ಪಾಲಾರ್ ನದಿಗೆ ಕಟ್ಟಿದ ಕಟ್ಟೆಯಿಂದಾಗಿ ವಿಶಾಲವಾದ ಕೆರೆ ಕಂಗೊಳಿಸಿದೆ. ಈ ಕೆರೆಯನ್ನು ಬಾಣರ ಕಾಲದಲ್ಲಿ ನಿರ್ಮಿಸಿದುದೆಂದು ಊಹಿಸಲು ವಿದ್ವಾಂಸರು ಪ್ರಯತ್ನಪಟ್ಟಿದ್ದಾರೆ.[೨೨]

ಉಪಸಂಹಾರ: ಪಾರಂಪರಿಕ ನೀರಾವರಿ ಚೌಕಟ್ಟಿನ ಮಾದರಿಗಳು ಬಾಣರಸರ ಕಾಲದಲ್ಲೂ ಮುಂದುವರಿದಿವೆ. ನೀರಾವರಿ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವುದು ಪುಣ್ಯದ ಕೆಲಸ ಎಂಬ ಪ್ರತೀತಿ, ಜೊತೆಗೆ ರಿಯಾಯಿತಿ, ದತ್ತಿ, ಬೂದಾನ,

ಮುಂತಾದವುಗಳನ್ನು ನೀಡಿ ಪ್ರೋತ್ಸಾಹಿಸುವುದು ನಿರಂತರವಾಗಿ ಮುಂದುವರಿದಿದೆ. ರಾಜರು, ಮಂತ್ರಿಗಳು, ಆಡಳಿತಾಧಿಕಾರಿಗಳು. ಮಹಿಳೆಯರು/ರಾಣಿಯರು, ಕೆರೆ ನೀರಾವರಿ ಚೌಕಟ್ಟಿನ ನಿರ್ಮಾಣದಲ್ಲಿ ತೊಡಗಿಸಿಕೊಂಡಿರುವುದು ಅತ್ಯಲ್ಪ ಹಾಗೂ ಪ್ರಾತಿನಿಧಿಕವೆಂಬಂತೆ ಹಲವೇ ಶಾಸನಗಳಿವೆ. ಸ್ಥಳೀಯ ರೈತ ಗುಂಪುಗಳು ತಮ್ಮ ನೆಲೆಗಳಲ್ಲಿ, ಪರಿಸ್ಥಿಯ ಅಗತ್ಯಗಳಿಗರ ತಕ್ಕ ಹಾಗೆ ಕಟ್ಟೆ, ಕೆರೆಗಳನ್ನು ನಿರ್ಮಿಸಿಕೊಂಡು, ನೀರನ್ನು ಸಂಗ್ರಹಿಸಿಕೊಳ್ಳುವ ಬಳಸಿಕೊಳ್ಳುವ ಕ್ರಮಗಳನ್ನು ಹಂತ ಹಂತವಾಗಿ ರೂಢಿಸಿಕೊಳ್ಳುತ್ತಾ ಬಂದಿದ್ದು, ಆ ವೇಳೆಗಾಗಲೇ ಒಂದು ನಿರ್ದಿಷ್ಟ ಮಾದರಿಗಳು ಅವಿಷ್ಕಾರಗೊಂಡಿದ್ದವು ಎಂಬುದು ಇದುವರೆಗಿನ ಅಧ್ಯಯನಗಳಿಂದ ಕಂಡುಬಂದಿದೆ. ರಾಜಧಾನಿ ಕೇಂದ್ರಿತ ನೀರಾವರಿ ಯೋಜನೆ ಯಾ ಕಾಮಗಾರಿಗಳು ದೊಡ್ಡ ಪ್ರಮಾಣದಲ್ಲಿ ಕಂಡುಬರುವುದಿಲ್ಲ. ಆಡಳಿತ ನಿರ್ವಹಣೆ, ಸಂಪತ್ತಿನ ಕ್ರೋಢೀಕರಣ, ಅಭಿವೃದ್ಧಿ ಆಯಾಮಗಳಿಗೆ ರಾಜಕೀಯ ಅಸ್ತಿರತೆ ಬಹುಮಟ್ಟಿಗೆ ಕಾರಣವಾಗಿದ್ದು, ಅದು ನೀರಾವರಿ ಕ್ಷೇತ್ರದ ಮೇಲೆ ಪ್ರತಿಕೂಲ ಪರಿಣಾಮ ಬೀರಿತು. ಭೌಗೋಳಿಕ ವೈಶಿಷ್ಟಗಳಿಂದಾಗಿ, ಯಾವುದೇ ಜೀವ ನದಿಜಾಲ ಇಲ್ಲದ ಪ್ರದೇಶವಾಗಿದ್ದು, ಇದೇ ಬಹು ದೊಡ್ಡ ಮಿತಿಯಾಗಿ ಪರಿಣಮಿಸಿದೆ. ದಕ್ಷಿಣ ಭಾರತದ ರಾಜಕೀಯ ಸಮರದಲ್ಲಿ ಆಯಕಟ್ಟಿನ ಪ್ರದೇಶದಲ್ಲಿದ್ದ ಬಾಣರಸರು, ರಾಜಕೀಯ ಚದುರಂಗದಾಟದಲ್ಲಿ ಕೇವಲ ಕಾಯಿಗಳಾಗಿ ವಿಜೃಂಭಿಸಿ ಕಣ್ಮರೆಯಾದರು.

ಅಡಿ ಟಿಪ್ಪಣಿಗಳು

೧. Stain Burton:The state and the Agrarian oeder in Medieval South: In "Essaya on South India" (Ed). Burton Steain. p. 70.

೨. ibid., p. 72.

೩. ibid., p. 73.

೪. ಕೃಷ್ಣಮೂರ್ತಿ ಪಿ.ವಿ., ಬಾಣರಸರ ಶಾಸನಗಳು, ೨೦೧೦, ಸಿ.ವಿ.ಜಿ., ಬೆಂಗಳೂರು.

೫. ಎಪಿಗ್ರಾಪಿಯಾ ಕರ್ನಾಟಕ, ಸಂಪುಟ X, Mulabagal-126.

೬ E. I, Vol. XI, p. 222.

೭. ibid., Mulabagal-65.

೮. ಅದೇ.,

೯. ibid., 208.

೧೦. ARIE., 1931-32/B-191.

೧೧. E.C. vol. X, Bangarpet-04.

೧೨. ARIE, 1931-32/B-185.

೧೩. E.C. XVII. (Kolar Suplement), Malur-161.

೧೪. ARIE, 1931-32/B-191.

೧೫. E.C. Vol. X, Kolar-128.

೧೬. ibid., 59.

೧೭. ibid., Mulbagal-126.

೧೮. ibid., 198.

೧೯. ibid., 208.

೨೦. ibid., Srinivasapura, 59.

೨೧. ibid., Bangarpet-4.

೨೨. ನರಸಿಂಹನ್ ಕೆ.ಆರ್., ಶಾಸವ ಕಂಡ ಕೆರೆ: ಪ್ರಹ್ಲಾದರಾವ್ (ಸಂ), ಕೆರೆಯ ಹಾರ, ೨೦೦೬, ಕೋಲಾರ ಪತ್ರಿಕೆ.

ಬಿಜಾಪುರ ಜಿಲ್ಲೆಯಲ್ಲಿ ಕಲ್ಯಾಣ ಚಾಳುಕ್ಯರ ಕಾಲದ ಕಂದಾಯ ವ್ಯವಸ್ಥೆ

ಎ.ಸಿ. ಭರತ್*

ಕಲ್ಯಾಣ ಚಾಳುಕ್ಯರು ಮಧ್ಯಕಾಲೀನ ಕಾಲದ ಕರ್ನಾಟಕದಲ್ಲಿ ಬಹುಭಾಗಗಳಲ್ಲಿ ಆಡಳಿತ ಮಾಡಿದ ರಾಜಮನೆತನಗಳಲ್ಲಿ ಒಂದು. ಈ ರಾಜಮನೆತನವು ಕ್ರಿ.ಶ. ೯೭೩ ರಿಂದ ೧೧೮೭ರವರೆಗೆ ಸುಮಾರು ೨೦೦ ವರ್ಷಗಳವರೆಗೆ ಕರ್ನಾಟಕ ಮಾತ್ರವಲ್ಲದೇ ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರದ ಕೆಲವು ಭಾಗಗಳಲ್ಲಿ ಆಳಿದರು. ರಾಜಕೀಯವಾಗಿ ರಾಷ್ಟ್ರಕೂಟರ ಆಳ್ವಿಕೆಯ ಕಾಲದಲ್ಲಿ ಕಲ್ಯಾಣ ಚಾಳುಕ್ಯರ ಸ್ಥಾಪಕನಾದ ಎರಡನೆಯ ತೈಲಪನು ಬಿಜಾಪುರ ಜಿಲ್ಲೆಯ ತರ್ದವಾಡಿ ನಾಡು-೧೦೦೦ದಲ್ಲಿ ಸಾಮಂತನಾಗಿದ್ದನು. ಕಲ್ಯಾಣ ಚಾಳುಕ್ಯರ ಕಾಲದ ರಾಜಕೀಯ ಇತಿಹಾಸದ ಕುರಿತು ಅನೇಕ ಅಧ್ಯಯನಗಳಾಗಿವೆ. ಹಾಗೇಯೆ ಇತರ ರಾಜಮನೆತನಗಳಂತೆ ಆಡಳಿತಾತ್ಮಕವಾಗಿಯೂ ಅನೇಕ ವಿಚಾರಗಳ ಬಗ್ಗೆ ತಿಳಿಸುವ ಪ್ರಯತ್ನಗಳಾಗಿವೆ. ಅದರೆ ಕಲ್ಯಾಣ ಚಾಳುಕ್ಯರ ಕಾಲದ ಕಂದಾಯ ವ್ಯವಸ್ಥೆಗೆ ಅನುಗುಣವಾಗಿ ಆಳವಾದ ಅಧ್ಯಯನಗಳು ವಿರಳವಾಗಿವೆ. ಹಾಗಾಗಿ ಪ್ರಾಥಮಿಕ ಆಕರಗಳಾದ ಸಮಕಾಲೀನ ಶಾಸನಗಳನ್ನು ಉಪಯೋಗಿಸಿಕೊಂಡು ಕಂದಾಯ ವ್ಯವಸ್ಥೆಯನ್ನು ರೂಪಿಸಿಕೊಂಡಿರುವುದನ್ನು ವಿಮರ್ಶಿಸಲಾಗಿದೆ.

ಬಿಜಾಪುರ ಜಿಲ್ಲೆಯಲ್ಲಿ ದೊರೆತ ಕಲ್ಯಾಣ ಚಾಳುಕ್ಯರ ಶಾಸನದ ಸಮೀಕ್ಷೆಯ ಪ್ರಕಾರ ಕಂದಾಯ ಪದಗಳ ಉಲ್ಲೇಖಿತ ೪೯ ಶಾಸನಗಳು ದೊರೆತಿವೆ. ಈ ಶಾಸನಗಳಲ್ಲಿ ವಿವಿಧ ರೀತಿಯ ೩೩ ಕಂದಾಯ ಪದಗಳು ಕಂಡುಬರುತ್ತವೆ. ಈ ಮೂಲಾಧಾರಗಳಿಂದ ತಿಳಿಯುವುದೆನೆಂದರೆ ಬಿಜಾಪುರ ಜಿಲ್ಲೆಯು ಕಲ್ಯಾಣ ಚಾಳುಕ್ಯರ ಕಂದಾಯ ವ್ಯವಸ್ಥೆಯ ಮೇಲೆ ಪ್ರಭಾವ ಬೀರಿರುವುದು ಮಾತ್ರವಲ್ಲದೇ ಈ ಜಿಲ್ಲೆಯ ಭೂಪ್ರದೇಶವು ಕಲ್ಯಾಣ ಚಾಳುಕ್ಯರ ಕಾಲದ ಪ್ರಮುಖ ಹಣಕಾಸಿನ ಮೂಲವಾಗಿತ್ತು ಎಂಬುದನ್ನು ಖಚಿತಪಡಿಸುತ್ತವೆ. ಬಿಜಾಪುರ ಜಿಲ್ಲೆಯು ಕಲ್ಯಾಣ ಚಾಳುಕ್ಯರ ಕೇಂದ್ರಾಡಳಿತಕ್ಕೆ ಒಳಪಟ್ಟಿದ್ದ ಬಯಲು ಪ್ರದೇಶವಾಗಿದ್ದರಿಂದ ಆದಾಯ ಸಂಗ್ರಹವು ಅಧಿಕವಾಗಿತ್ತು. ಈ ಜಿಲ್ಲೆಯು ಕೃಷಿ ಆಧಾರಿತ ಪ್ರದೇಶವಾಗಿದ್ದು ಆರ್ಥಿಕ ವ್ಯವಸ್ಥೆ ಉತ್ತಮವಾಗಿತ್ತು ಎಂಬುದು ತಿಳಿದುಬರುತ್ತದೆ.

ಕ್ರಿ.ಶ. ೯೫೪-೯೫೭ರ ಕಕ್ಕನಡಿ ಶಾಸನವು[೧] ದಶವಂದ, ಅರುವಣ ಮತ್ತು ಮನೆವಣಗಳನ್ನು, ಕ್ರಿ.ಶ. ೯೬೮ರ ಕಾರಜೋಳ್ ಶಾಸನವು[೨] ಕಾರಜೊಳದ ಊರಿನ ಒಡೆಯನಾದ ಕೇಸವಯ್ಯನಿಗೆ ತೆರಿಗೆ ನಿಗದಿಗೊಳಿಸಿದ ಪತ್ರವನ್ನು ನೀಡಿದಂತೆ ತಿಳಿಸಿದೆ. ಇದರಂತೆ ಬೀಜ ಬಿತ್ತಿದ ಉತ್ತಮ ಕಪ್ಪು ಮಣ್ಣಿನ ಭೂಮಿಗೆ ಸಲಿಕೆ ೨, ಅರ್ಧ ಫಲವತ್ತಾದ ಭೂಮಿಗೆ ಸಲಿಕೆ ೧, ಪಣ ೩, ಫಲವತ್ತಾದ ಭೂಮಿಯಲ್ಲದ ಭೂಮಿಗೆ ಸಲಿಕೆ ೧ ಎಂಬಂತೆ ತೆರಿಗೆಯನ್ನು ನಿಗದಿ ಪಡಿಸಿರುವುದು ಈ ಶಾಸನದಲ್ಲಿ ಉಲ್ಲೇಖಿತವಾಗಿದೆ. ಕ್ರಿ.ಶ. ೧೦೯೯ರ ರೂಗಿ ಶಾಸನವು[೩] ಅರುವಣವನ್ನು, ಕ್ರಿ.ಶ. ೧೦೨೯ರ ದೇವೂರು ಶಾಸನವು[೪] ಕರಭೂಮಿಯನ್ನು, ಕ್ರಿ.ಶ. ೧೦೩೩ರ ತಮ್ಮದಡ್ಡಿ ಶಾಸನವು[೫] ಅರುವಣವನ್ನು, ಕ್ರಿ.ಶ. ೧೦೩೩ರ ಬಿಜಾಪುರ ಶಾಸನವು[೬] ದಶವಂದ ಮತ್ತು ಅರುವಣಗಳನ್ನು, ಕ್ರಿ.ಶ. ೧೦೬೯ರ ಕಕ್ಕನಡಿ ಶಾಸನವು[೭] ಅರುವಣವನ್ನು, ಕ್ರಿ.ಶ. ೧೦೬೯ರ ರೂಗಿ ಶಾಸನವು[೮] ಅರುವಣ ಮತ್ತು ಪನ್ನವಣಗಳನ್ನು, ಕ್ರಿ.ಶ. ೧೦೭೧ರ ರೂಗಿ ಶಾಸನವು[೯] ಅರುವಣ, ಪನ್ನವಣ, ಪೆರ್ಜ್ಜುಂಕ ಮತ್ತು ಪನ್ನಾಯಗಳನ್ನು, ಕ್ರಿ.ಶ. ೧೦೮೩ರ ಬಿಜಾಪುರದ ಶಾಸನವು[೧೦] ವಡ್ಡರಾವುಳ, ಪನ್ನಾಯ, ಪೆರ್ಜ್ಜುಂಕ ಮತ್ತು ಎಲೆಹೇರಿನ ಸುಂಕಗಳನ್ನು, ಕ್ರಿ.ಶ. ೧೦೮೮ರ ದೇವರಗೆಣ್ಣೂರು ಶಾಸನವು[೧೧] ಪಾರಿಖಾಯ ಮತ್ತು ಕೊಳಗದಾಯಗಳನ್ನು, ಕ್ರಿ.ಶ. ೧೦೯೬ರ ಕಟಗೇರಿ ಶಾಸನವು[೧೨] ಸಿದ್ಧಾಯವನ್ನು, ಕ್ರಿ.ಶ. ೧೧೦೦ರ ಕಣ್ಣೂರು ಶಾಸನವು[೧೩] ವಡ್ಡರಾವುಳವನ್ನು, ಕ್ರಿ.ಶ. ೧೧೦೦ರ ಮಲಘಾಣ ಶಾಸನವು[೧೪] ದಶವಂದ ಮತ್ತು ಬೀಯಗಳನ್ನು, ಕ್ರಿ.ಶ. ೧೧೦೯ರ ಅಗರ್ ಖೇಡ್ ಶಾಸನವು[೧೫] ಅರುವಣ, ಸಿದ್ಧಾಯ ಮತ್ತು ಮಾನ್ಯದೆರೆಗಳನ್ನು, ಕ್ರಿ.ಶ. ೧೧೧೮ರ ಅಗರ್ ಖೇಡ್ ಶಾಸನವು[೧೬] ಪೆರ್ಜ್ಜುಂಕ, ಬೆಳ್ಳಾಯ

* ಸಂಶೋಧನಾರ್ಥಿ, ಇತಿಹಾಸ ಅಧ್ಯಯನ ವಿಭಾಗ, ಮಂಗಳೂರು ವಿಶ್ವವಿದ್ಯಾಲಯ, ಮಂಗಳಗಂಗೋತ್ರಿ, ಕೊಣಾಜೆ, ಮೊ. ೯೯೬೮೯ ೬೭೫೮೮

ಮತ್ತು ಬಿಲ್ಕೊಡೆಗಳನ್ನು, ಕ್ರಿ.ಶ. ೧೧೨೦ರ ಬಿಜಾಪುರ ಶಾಸನವು[೧೭] ಕಾಳಗದಾಯ, ಹೆಜ್ಜುಂಕ, ಬಿಲುಕೊಡೆ ಮತ್ತು ವಡ್ಡರಾವುಳಗಳನ್ನು, ಕ್ರಿ.ಶ. ೧೧೨೮ರ ಇಂಗಳೇಶ್ವರ ಶಾಸನವು[೧೮] ಅರುವಣವನ್ನು, ಕ್ರಿ.ಶ. ೧೧೪೨ರ ಮನಗೋಳಿ ಶಾಸನವು[೧೯] ಕರಭೂಮಿ, ಪನ್ನಸು ಮತ್ತು ಅರುವಣಗಳನ್ನು, ಕ್ರಿ.ಶ. ೧೧೪೫ರ ಬೇಲೂರು ಶಾಸನವು[೨೦] ಅರುವಣವನ್ನು, ಕ್ರಿ.ಶ. ೧೧೪೭ರ ಮುತ್ತಗಿ ಶಾಸನವು[೨೧] ಬೀರವಣ ಮತ್ತು ಅರುವಣಗಳನ್ನು, ಕ್ರಿ.ಶ. ೧೧೪೭ರ ಮುತ್ತಗಿ ಶಾಸನವು[೨೨] ಮನ್ನೆಯವಣವನ್ನು, ಕ್ರಿ.ಶ. ೧೧೪೮ರ ಮಲಘಾಣ ಶಾಸನವು[೨೩] ಅರುವಣವನ್ನು, ಕ್ರಿ.ಶ. ೧೧೪೮ರ ಮುತ್ತಗಿ ಶಾಸನವು[೨೪] ಪೊಲದೆರೆ ಮತ್ತು ಕಿರುದೆರೆಗಳನ್ನು, ಕ್ರಿ.ಶ. ೧೧೪೯ರ ಬಿಜಾಪುರ ಶಾಸನವು[೨೫] ಅರುವಣ ಮತ್ತು ಸೇಸೆಗಳನ್ನು, ಕ್ರಿ.ಶ. ೧೧೫೨ರ ಬಾಗೇವಾಡಿ ಶಾಸನವು[೨೬] ಎತ್ತುದೆರೆ, ಎಮ್ಮೆದೆರೆ, ಆಕಳದೆರೆ, ವೀಸದೆರೆ, ತಳದೆರೆ ಮತ್ತು ಸಿದ್ಧಾಯಗಳನ್ನು, ಕ್ರಿ.ಶ. ೧೧೫೪ರ ಬಿಜಾಪುರ ಶಾಸನವು[೨೭] ಹೆಜ್ಜುಂಕವನ್ನು, ಕ್ರಿ.ಶ. ೧೧೮೪ರ ತಾಳಿಕೋಟೆ ಶಾಸನವು[೨೮] ದಶವಂದವನ್ನು, ಕ್ರಿ.ಶ. ೧೧೮೬ರ ಕಡ್ಲೇವಾಡ ಶಾಸನವು[೨೯] ಹಲೆದೆರೆ, ಹಿಟ್ಟುದೆರೆ, ಅರುವಣ ಮತ್ತು ಕಿರುಕುಳಾಯಗಳನ್ನು, ಕ್ರಿ.ಶ. ೧೧ನೆಯ ಶತಮಾನದ ಚಟ್ಟರಗಿ ಶಾಸನವು[೩೦] ಹೊಲದೆರೆ, ಆಯದಾಯ, ಕುರಿದೆರೆ ಮತ್ತು ಸಂತವಣಗಳನ್ನು, ಕ್ರಿ.ಶ. ೧೨ನೆಯ ಶತಮಾನದ ನಿಂಬಾಳ್ ಶಾಸನವು[೩೧] ಬೀರವಣ, ಹೆಜ್ಜುಂಕ, ಬಿಲುಕೊಡೆ ಮತ್ತು ವಡ್ಡರಾವುಳಗಳನ್ನು, ಕ್ರಿ.ಶ. ೧೨ನೆಯ ಶತಮಾನದ ಕಡ್ಲೇವಾಡದ ಶಾಸನವು[೩೨] ಬೀರವಣ ಮತ್ತು ಮೂಲೆವತ್ತಗಳನ್ನು, ಕ್ರಿ.ಶ. ೧೨ನೆಯ ಶತಮಾನದ ತಡವಲ ಶಾಸನವು[೩೩] ಅರುವಣವನ್ನು, ಕ್ರಿ.ಶ. ೧೨ನೆಯ ಶತಮಾನದ ಬೆಕ್ಕಿನಾಳ ಶಾಸನವು[೩೪] ಮನೆದೆರೆ ಮತ್ತು ಪಾರಿಖಾಯಗಳನ್ನು, ಕ್ರಿ.ಶ. ೧೨ನೆಯ ಶತಮಾನದ ಕುಂತೋಳಿ ಶಾಸನವು[೩೫] ಬಿಲ್ಕೊಡೆ, ಹೆಜ್ಜುಂಕ ಮತ್ತು ಬೀಯಗಳನ್ನು, ಕ್ರಿ.ಶ. ೧೨ನೆಯ ಶತಮಾನದ ನಂದಿಹಾಳ್ ಶಾಸನವು[೩೬] ಕುರಿದೆರೆಗಳನ್ನು ಉಲ್ಲೇಖಿಸುತ್ತವೆ.

ಕಲ್ಯಾಣ ಚಾಳುಕ್ಯರ ಕಾಲದಲ್ಲಿ ಬಿಜಾಪುರ ಜಿಲ್ಲೆಯ ಶಾಸನಗಳಲ್ಲಿ ೩೨ ಬಾರೀ ಪ್ರಸ್ತಾಪಿಸಲ್ಪಟ್ಟ ತೆರಿಗೆ ಪದಗಳೆಂದರೆ ಭೂಮಿಯ ಮೇಲೆ ವಿಧಿಸಿರುವಂತಹ ಭೂ ತೆರಿಗೆಗಳಾಗಿವೆ. ಸಾಮಾನ್ಯವಾಗಿ ಭೂ ತೆರಿಗೆಯನ್ನು ಹಣ ಅಥವಾ ವಸ್ತುಗಳ ರೂಪದಲ್ಲಿ ಸಂಗ್ರಹಿಸಲಾಗುತ್ತಿತ್ತು. ಭೂಮಿಯ ತೆರಿಗೆಯು ವಿವಿಧ ಅರಸು ಮನೆತನಗಳ ಕಾಲದಲ್ಲಿ ಬದಲಾಗುತ್ತ ಹೋಗುತ್ತಿತ್ತು. ಭೂಕಂದಾಯವು ಸಾಮಾನ್ಯವಾಗಿ ಆಯಾ ರಾಜಮನೆತನಗಳ ಕಾಲದಲ್ಲಿ ೧/೩, ೧/೫, ೧/೬, ೧/೮, ೧/೧೨ ಇತ್ಯಾದಿಯಾಗಿ ನಿರ್ಧರಿಸಲಾಗುತ್ತಿತ್ತು. ಗದ್ದೆಗಳನ್ನು ಉತ್ತಮ, ಮಧ್ಯಮ, ಕನಿಷ್ಠ ಎಂಬ ೩ ಬಗೆಯಾಗಿ ವಿಂಗಡಿಸಲಾಗುತ್ತಿತ್ತು. ಕೆಲವೊಂದು ಸಲ ಬರಡುಭೂಮಿ ಅಥವಾ ಬಂಜರು ಭೂಮಿಗಳನ್ನು ಹಾಗೂ ಗುಡ್ಡಗಾಡು, ಅರಣ್ಯ ಪ್ರದೇಶಗಳನ್ನು ಕೃಷಿಗೆ ಯೋಗ್ಯವಾದ ಭೂಮಿಯನ್ನಾಗಿ ಪರಿವರ್ತಿಸಿ, ರೈತರಿಗೆ ಅನೇಕ ವರ್ಷಗಳವರೆಗೆ ತೆರಿಗೆ ಇಲ್ಲದೇ ವಿನಾಯಿತಿ ನೀಡಿ, ಸಾಗುವಳಿ ಮಾಡಲು ಅವಕಾಶ ಕಲ್ಪಿಸಿಕೊಡಲಾಗುತ್ತಿತ್ತು. ಹೀಗೆ ಪ್ರಾಚೀನ ಕಾಲದಲ್ಲಿ ಭೂಕಂದಾಯವನ್ನು ವಿಧಿಸುವ ಪದ್ಧತಿ ಅಸ್ತಿತ್ವದಲ್ಲಿದ್ದು, ಇದು ರಾಜ್ಯದ ಬೊಕ್ಕಸಕ್ಕೆ ಅತ್ಯಂತ ಲಾಭವನ್ನು ತರುತ್ತಿತ್ತು.[೩೭] ಪ್ರಮುಖವಾಗಿ ಸಿದ್ಧಾಯ ಪದಗಳು ಸಾಮಾನ್ಯವಾಗಿ ಭೂ ಕಂದಾಯವನ್ನು ಸೂಚಿಸುತ್ತವೆ.[೩೮] ಈ ಸಿದ್ಧಾಯ ಪದಗಳು ಪ್ರದೇಶದಲ್ಲಿ ೩ ಬಾರೀ ಉಲ್ಲೇಖವಾಗಿದೆ. ದಾಖಲೆಗಳಲ್ಲಿ ಆಗಾಗ್ಗೆ ಉಲ್ಲೇಖಿಸಲಾಗಿರುವ ಸಿದ್ಧಾಯವನ್ನು ಮೊದಲ ಸಿದ್ಧಾಯದಿಂದ ಪ್ರತ್ಯೇಕಿಸಲಾಗಿದೆ. ಆರಂಭಿಕ ಮೌಲ್ಯಮಾಪನದ ಸಮಯದಲ್ಲಿ ಇದನ್ನು ವಿಧಿಸಿರಬಹುದು. ಸ್ವಲ್ಪ ಸಮಯದ ನಂತರ ಇಡೀ ಹಳ್ಳಿಯ ಮೇಲೆ ವಿಧಿಸಲಾಗಿದ್ದು ವಾರ್ಷಿಕ ಮೊತ್ತವನ್ನು ನಿಗಧಿಪಡಿಸಲಾಗಿದೆ. ಸಂಗ್ರಹಿಸಿ ಮತ್ತು ಕಾಲ-ಕಾಲಕ್ಕೆ ಬ್ರಾಹ್ಮಣರಿಗೆ ಪಾವತಿಸಬೇಕಿತ್ತು. ರಾಜನಿಂದ ಉಪಶಮನಗಳನ್ನು ನೀಡಲಾಗಿತ್ತು. ಭೂಮಿಯನ್ನು ಸಹ ಅಡಮಾನ ಅಥವಾ ಮಾರಾಟ ಮಾಡಲಾಯಿತು. ಯಾವುದೇ ನಿಗದಿತ ಪಾವತಿಗಾಗಿ ಸಾಮಾನ್ಯ ಪದದಲ್ಲಿ ಸಿದ್ಧಾಯ ಎಂಬ ಪದವನ್ನು ಸಹ ಬಳಸಲಾಯಿತು. ಇದನ್ನು ಹಂತಹಂತವಾಗಿ ಬೆಳೆಸಲಾಯಿತು ಮತ್ತು ಕಾಲ-ಕಾಲಕ್ಕೆ ಇದನ್ನು ಹೆಚ್ಚಿಸಲಾಯಿತು. ಶಾಸನಗಳು ಸಿದ್ಧಾಯದ ಪ್ರಮಾಣದ ಬಗ್ಗೆ ಸ್ವಲ್ಪ ಬೆಳಕು ಚೆಲ್ಲುತ್ತವೆ ಅದರೂ ಕೂಡ ಮಾಹಿತಿ ಅಲ್ಪವಾಗಿದ್ದೂ ಯಾವುದೇ ಖಚಿತ ತೀರ್ಮಾನಕ್ಕೆ ಬರಲು ಅಸಾಧ್ಯ[೩೯] ಎಂದು ಕುಪ್ಪಸ್ವಾಮಿ ಜಿ.ಆರ್.ರವರು ಅಭಿಪ್ರಾಯಪಟ್ಟಿದ್ದಾರೆ.

ಸರ್ಕಾರವು ತನ್ನ ಆದಾಯದ ಬಹುಭಾಗಗಳನ್ನು ಸಿದ್ಧಾಯ ಎಂದು ಕರೆಯಲ್ಪಡುತ್ತಿದ್ದ ಭೂತೆರಿಗೆಯಿಂದ ಪಡೆಯುತ್ತಿತ್ತು. ಮಣ್ಣಿನ ಸ್ವರೂಪವನ್ನು ಆಧರಿಸಿ ಕಪ್ಪು ಮಣ್ಣು ಮತ್ತು ಕೆಂಪು ಮಣ್ಣು ಎಂದು ವರ್ಗೀಕರಿಸಲಾಗಿತ್ತು. ಮಣ್ಣಿನ ಫಲವತ್ತತೆಗೆ ಅನುಗುಣವಾಗಿ ಇದನ್ನು ಉತ್ತಮ, ಮಧ್ಯಮ ಮತ್ತು ಕನಿಷ್ಠ ಎಂದು ವರ್ಗೀಕರಿಸಲಾಗಿತ್ತು. ಕಮ್ಮ, ನಿರ್ವತನ ಅಥವಾ ಮತ್ತರ್‌ನಂತಹ ಭೂಮಾಪನ ಪದಗಳು ಭೂಮಿಯನ್ನು ಆ ಪ್ರಮಾಣದಲ್ಲಿ ಅಳೆಯಲಾಗುತ್ತಿತ್ತು ಎಂದು ಸ್ಪಷ್ಟವಾಗುತ್ತದೆ. ೧೦೦ ಕಮ್ಮಗಳು ೧ ಮತ್ತರ್‌ನ್ನು ರಚಿಸುತ್ತದೆ ಎಂದು ತಿಳಿದುಬರುತ್ತದೆ. ಒಂದು ನಿವರ್ತನ ಮತ್ತರು ಆಧುನಿಕ ಕಾಲದ ೫ ಎಕರೆಗಿಂತ ಸ್ವಲ್ಪ ಕಡಿಮೆಯಾಗಿರುತ್ತದೆ. ಏಕೆಂದರೆ ಅಳತೆಕೋಲುಗಳು ಸ್ಥಳದಿಂದ ಸ್ಥಳಕ್ಕೆ ಭಿನ್ನವಾಗಿರುತ್ತದೆ. ಉದಾಹರಣೆಗೆ

ಗದಗ ಶಾಸನ ಹೇಳುವಂತೆ ಅಣ್ಣಿಗೇರಿ (ಅಣ್ಣಿಗೇರಿಯ ಕೋಲು)ಯ ಕೋಲಿನಿಂದ ಅಳೆಯಲ್ಪಟ್ಟ ೧೦೦ ಮತ್ತರ್ ಭೂಮಿಯನ್ನು ವಿದ್ಯಾದಾನಕ್ಕೆ ನೀಡಲಾಗಿದೆ. ಮತ್ತೊಂದು ಅಳತೆಕೋಲು ಕಚ್ಚಾವಿಗಳೆ (Kaccha vigale) ಸಹ ಬಳಕೆಯಲ್ಲಿತ್ತು. ಕಚ್ಚವಿ ಧಾರವಾಡ ಜಿಲ್ಲೆಯ ಹಿರೇಕೇರೂರು ತಾಲೂಕಿನ ಹಳ್ಳಿಯಾಗಿರಬಹುದು. ಹಾಗಾಗೀ ಭೂಮಿಯನ್ನು ವರ್ಗೀಕರಿಸಿ ಮತ್ತು ಅಳೆಯಲಾಗಿದೆ. ಇದರ ನಂತರ ರಾಜನ ಅಧಿಕಾರಿ ಸರ್ಕಾರಕ್ಕೆ ಪಾವತಿಸಬೇಕಾದ ಕಂದಾಯವನ್ನು ಪಡೆದುಕೊಳ್ಳುತ್ತಿದ್ದನು. ಭೂಮಿಯ ಮೇಲೆ ತೆರಿಗೆ ವಿಧಿಸುವ ನಿಖರತೆಯನ್ನು ನಿರ್ಧರಿಸಲು ಪ್ರಸ್ತುತ ಸಾಧ್ಯವಿಲ್ಲ. ಆದರೆ ಇದು ಖಂಡಿತವಾಗಿಯೂ ಭೂಮಿಯ ಗುಣಮಟ್ಟದೊಂದಿಗೆ ಬದಲಾಗುತ್ತದೆ[೪೦] ಎಂದು ಬಸವರಾಜ ಕೆ.ಆರ್.ರವರು ಅಭಿಪ್ರಾಯಪಟ್ಟಿದ್ದಾರೆ.

ಸಿದ್ಧಾಯ ಪದದ ಉಲ್ಲೇಖ ಸಾಮಾನ್ಯವಾಗಿದ್ದು, ಸಾಮ್ರಾಜ್ಯದಾಹ ಹೆಚ್ಚಾದಂತೆ ವಿಸ್ತಾರವಾದ ಸಾಮ್ರಾಜ್ಯದ ಭದ್ರತೆಗೆ ಬಲಿಷ್ಠ ಸೇನೆಯು ಅಗತ್ಯವಿದ್ದು, ಪ್ರಜೆಗಳ ಸಂಪತ್ತು ಮತ್ತು ಜೀವದ ರಕ್ಷಣೆಗೆ ಸಮಸ್ಯೆಯಾಗಬಾರದೆಂಬ ಉದ್ದೇಶದಿಂದ ಪ್ರಜೆಗಳ ಮೇಲೆ ಹೆಚ್ಚುವರಿ ತೆರಿಗೆ ಹೇರಲು ಮುಂದಾಗುತ್ತವೆ. ಹಾಗಾಗಿ ಸೇನಾ ಕಾರ್ಯಚರಣೆಗೆ ತಗಲುವ ವೆಚ್ಚವನ್ನು ಫಲಾನುಭವಿಗಳು ಭರಿಸುತ್ತಿದ್ದರು. ಸಾಮಂತರಾಗಿದ್ದಾಗ ಇಂತಹ ವೆಚ್ಚವು ಮಾತ್ರವಲ್ಲದೇ ಶತ್ರುಗಳ ಭಯವೂ ಕಡಿಮೆಯಿದ್ದು, ಅವಶ್ಯಕತೆಗಳನ್ನು ಇನ್ನಿತರ ಮೂಲಗಳಿಂದ ಸರಿದೂಗಿಸಬಹುದಾಗಿತ್ತು. ಆದರೆ ಹೊರೆ ಹೆಚ್ಚಾದಂತೆ ಸೇನೆಯ ವೆಚ್ಚ ವಿಧಿಸುವ ತೆರಿಗೆಗಳು ಹೆಚ್ಚಾಗುತ್ತಾ ಹೋಗುತ್ತದೆ. ಈಗಾಗಲೇ ತಿಳಿಸಿದಂತೆ ಬೀರವಣ ೩ ಪುನರಾವರ್ತನೆಗೊಂಡಿದೆ. ಕ್ರಿ.ಶ. ೧೧೨೦ರ ಬಿಜಾಪುರ ಶಾಸನವು ಕಾಳಗದಾಯ, ಕ್ರಿ.ಶ. ೧೧೪೭ರ ಮುತ್ತಗಿ ಶಾಸನವು ಬೀರವಣ (ಸೈನಿಕರ ಜೀವನ ನಿರ್ವಹಣೆಗಾಗಿ ಪ್ರಜೆಗಳು ಕೊಡುತ್ತಿದ್ದ ತೆರಿಗೆ), ಕ್ರಿ.ಶ. ೧೨ನೆಯ ಶತಮಾನದ ಕಡ್ಲೆವಾಡ ಮತ್ತು ನಿಂಬಾಳ್ ಶಾಸನವು ಬೀರವಣವನ್ನು ಪ್ರಸ್ತಾಪಿಸಿರುವುದು ಸಮಯದ ಅವಶ್ಯಕತೆಯನ್ನು ತೋರಿಸಿವುದರ ಜೊತೆಜೊತೆಗೆ ಯುದ್ಧವು ಪ್ರಜೆಗಳ ಮೇಲೆ ತೆರಿಗೆಯ ಹೊರೆಯನ್ನು ದ್ವಿಗುಣಗೊಳಿಸಿತ್ತು ಎಂಬುದರಲ್ಲಿ ಎರಡು ಮಾತಿಲ್ಲ.

ಕಂದಾಯದ ಭೂಮಿ ಎಂದು ಕರೆಯಲ್ಪಡುವ ಪದವಾದ ಕರಭೂಮಿ[೪೧] ಪದವು ೨ ಬಾರೀ, ಮನೆಗಳ ಮೇಲೆ ಹಾಕುವ ತೆರಿಗೆಗಳಾದ ಮನೆದೆರೆ[೪೨] ಮತ್ತು ಮನೆವಣಗಳು ೨ ಬಾರೀ, ನೀರಾವರಿಯ ಕೆರೆ, ಬಾವಿ ಮತ್ತು ಕಾಲುವೆ ಮೊದಲಾದವುಗಳ ಜೀಣೊದ್ಧಾರಕ್ಕಾಗಿ ಮೀಸಾಲಾಗಿರಿಸಿದ ತೆರಿಗೆಯ ಹತ್ತನೆಯ ಒಂದು ೧ ಭಾಗವಾದ ದಶವಂದ[೪೩]ಪದವು ೪ ಬಾರೀ, ದತ್ತಿಯಾಗಿ ನೀಡಿದ ಭೂಮಿಯ ಮೇಲೆ ಹಾಕುತ್ತಿದ್ದಂತಹ ತೆರಿಗೆಗಳಾದ ಮನ್ನೆಯವಣ ಮತ್ತು ಮಾನ್ಯದೆರೆಗಳು[೪೪] ೨ ಬಾರೀ, ಹಾಗೂ ಶೇಕಡ ೫೦ರಷ್ಟು ತೆರಿಗೆ ವಿನಾಯಿತಿಯನ್ನು ಕೊಟ್ಟ ಭೂಮಿಯಾದ ಪನ್ನಸು[೪೫] ಪದವು ೧ ಬಾರೀ, ಭೂಮಿಯನ್ನು ಉಳುಮೆ ಮಾಡಲು ಬಳಸುತ್ತಿದ್ದ ಉಪಕರಣವಾದ ನೇಗಿಲಿನ ಮೇಲಿನ ತೆರಿಗೆಯಾದ ಅರುವಣ ಎಂಬ ತೆರಿಗೆ ಪದವು ಒಟ್ಟು ೧೫ ಬಾರೀ, ಹಾಗೂ ಮತ್ತೊಂದು ನೇಗಿಲಿನ ಮೇಲೆ ಹಾಕುತ್ತಿದ್ದ ತೆರಿಗೆಯಾದ ಹಲೆದೆರೆ[೪೬] ೧ ಬಾರೀ, ಹೊಲಗಳ ಮೇಲೆ ಹಾಕುವ ಒಂದು ಬಗೆಯ ತೆರಿಗೆಯಾದ ಹೊಲದೆರೆ(ಪೊಲದೆರೆ)[೪೭] ೨ ಬಾರೀ ಪುನರವರ್ತನೆಯಾಗಿವೆ. ಈ ವಿಷಯದಲ್ಲಿ ಅಧ್ಯಯನ ಮಾಡಿದಾಗ ಬಯಲು ಪ್ರದೇಶವಾಗಿರುವ ಬಿಜಾಪುರ ಜಿಲ್ಲೆಯಲ್ಲಿ ಕಲ್ಯಾಣ ಚಾಳುಕ್ಯರು ಕೃಷಿ ಕ್ಷೇತ್ರಕ್ಕೆ ಹೆಚ್ಚು ಅದ್ಯತೆ ನೀಡಿರುವುದು ಶಾಸನಗಳಿಂದ ತಿಳಿದುಬರುತ್ತದೆ. ಒಟ್ಟಾರೆಯಾಗಿ ಬಿಜಾಪುರ ಜಿಲ್ಲೆಯಲ್ಲಿ ಕಲ್ಯಾಣ ಚಾಳುಕ್ಯರ ಕಾಲದಲ್ಲಿ ಭೂಮಿಯನ್ನು ಅಗ್ರಹಾರ, ಮಠ, ದೇವಸ್ಥಾನಗಳಲ್ಲಿನ ಜೀರ್ಣೋದ್ಧಾರ ಕಾರ್ಯಗಳು ಮತ್ತು ಕೃಷಿಗೆ ಪ್ರೋತ್ಸಾಹ ನೀಡಿ ಕೃಷಿ ಚಟುವಟಿಕೆಯನ್ನು ವಿಸ್ತರಿಸುವ ಸಲುವಾಗಿ ಭೂದಾನ ಮಾಡಿರುವುದನ್ನು ಈ ಅಂಕಿ–ಅಂಶಗಳ ತಿಳಿಸುತ್ತವೆ.

ಕಲ್ಯಾಣ ಚಾಳುಕ್ಯರ ಕಾಲದಲ್ಲಿ ಬಿಜಾಪುರ ಜಿಲ್ಲೆಯಲ್ಲಿ ಭೂಕಂದಾಯಗಳ ನಂತರ ಹೆಚ್ಚು ಬಾರೀ ಪ್ರಸ್ತಾಪಿಸಲ್ಪಟ್ಟ ತೆರಿಗೆ ಪದಗಳೆಂದರೆ ಸುಂಕವಾಗಿದೆ. ಅಧ್ಯಯನಕ್ಕೊಳಪಟ್ಟ ಕೆಲವು ಶಾಸನಗಳಲ್ಲಿ ಸುಂಕ, ವಡ್ಡರಾವುಳ ಸುಂಕ ಮತ್ತು ಹೆಜ್ಜುಂಕ ಎನ್ನುವ ಪದಗಳನ್ನು ಗಮನಿಸಬಹುದು. ಸುಂಕ ಪದವು ಸಂಸ್ಕೃತದ ಶುಲ್ಕ ಎಂಬ ಪದದಿಂದ ರೂಪುಗೊಂಡಿದ್ದು, ಯಾವುದೇ ಒಂದು ವಸ್ತುವನ್ನು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಸಾಗಿಸುವಾಗ ವಿಧಿಸುವ ಸುಂಕವೇ ಶುಲ್ಕ. ಆದರೇ ಇದು ಕೆಲವೊಂದು ಸಂದರ್ಭದಲ್ಲಿ ಅಗಾಧವಾದ ಅರ್ಥವನ್ನು ಪಡೆದುಕೊಂಡ ನಿದರ್ಶನಗಳಿವೆ. ಅದರಲ್ಲೂ ಹೆಜ್ಜುಂಕ ಎಂದರೇ ದೊಡ್ಡ ಸುಂಕ. ಸಾಮಾನ್ಯವಾಗಿ ಅಡಿಕೆ ಮತ್ತು ವೀಳೆಯದೆಲೆಯ ಮೇಲೆ ವಿಧಿಸುತ್ತಿದ್ದರು.[೪೮] ಇವರ ಕಾಲದಲ್ಲಿ ಸಾಮಾನ್ಯವಾಗಿ ದಿನನಿತ್ಯ ಬಳಸುವಂತಹ ವಸ್ತು ಅಥವಾ ಸರಕುಗಳ ಮೇಲಿನ ಕರವು ಹೆಚ್ಚು ಆದಾಯ ತರುವಂತಹ ಮೂಲವಾಗಿದ್ದವು. ಡಾ. ಎಂ.ಎಂ. ಕಲಬುರ್ಗಿಯವರು ಕಲ್ಯಾಣ ಚಾಳುಕ್ಯರ ರಾಜನಾದ ಸೋಮೇಶ್ವರನ ಸಂಪಾದಿತ ಕೃತಿಯಾದ ಕಲ್ಯಾಣ ಚಾಳುಕ್ಯ ಸರ್ವಜ್ಞ ಸೋಮೇಶ್ವರ ವಿರಚಿತ ಮಾನಸೋಲ್ಲಾಸ ಕೃತಿಯಲ್ಲಿ ಪಶು ಸಂಪತ್ತು ಮತ್ತು ಚಿನ್ನ ಇವುಗಳಿಂದ ೫೦ನೆಯ ೧ ಭಾಗ ಕರವನ್ನು ತೆಗೆದುಕೊಳ್ಳಬೇಕು. ಧಾನ್ಯದಲ್ಲಿ ೧/೬, ೧/೮, ೧/೧೨ ಭಾಗ

ಕರವನ್ನು ತೆಗೆದುಕೊಳ್ಳಬೇಕು. ಹೊಲದ ವಿಸ್ತಾರಕ್ಕೆ ಅನುಗುಣವಾಗಿ ಧಾನ್ಯದ ರೂಪದ ಕರವನ್ನು ತೆಗೆದುಕೊಳ್ಳಬೇಕು. ಉಳಿದ ವ್ಯಾಪಾರ ಸರಕುಗಳ ಮೇಲೆ, ತುಪ್ಪ, ಜೇನು ತುಪ್ಪಗಳ ಮೇಲೆ ೧/೬ ಕರ ಹಾಕಬೇಕು. ರಸ-ಗಂಧ-ಔಷಧಿ,ಫಲ-ಪುಷ್ಪ-ಬೇರು, ಎಲೆ-ಸೊಪ್ಪು-ಹುಲ್ಲು, ಚರ್ಮ ಮತ್ತು ಕೈಗಾರಿಕೆಗಳ ಮೇಲೆ, ಮಣ್ಣಿನ ಪಾತ್ರೆಗಳ ಮೇಲೆ, ಕಲ್ಲುಗಡಿಗೆಗಳ ಮೇಲೆ ಮತ್ತು ಬ್ರಾಹ್ಮಣರ ಮೇಲೆ ಎಂಥ ಕಷ್ಟವಿದ್ದರೂ ರಾಜನು ಕರ ಹೇರಬಾರದು[೨೯] ಎಂದು ತಿಳಿಸಿದ್ದಾರೆ.

ಸುಂಕವು ಬಿಜಾಪುರ ಜಿಲ್ಲೆಯಲ್ಲಿ ಕಂದಾಯದ ಪ್ರಮುಖ ಆಕರವಾಗಿದೆ ಎನ್ನುವುದನ್ನು ಸ್ಪಷ್ಟಪಡಿಸುತ್ತದೆ. ಇದಕ್ಕೆ ಸಾಕ್ಷಿಯಾಗಿ ಈ ಜಿಲ್ಲೆಯಲ್ಲಿ ದೊರೆತ್ತಿರುವ ಶಾಸನಗಳಲ್ಲಿ ೧೮ ಬಾರೀ ಸುಂಕ ಪದವು ಪುನರಾವರ್ತನೆಯಾಗಿದೆ. ಅದರೇ ಸುಂಕ ಎಂಬ ಪದವು ಭೂತೆರಿಗೆಗಳಿಗಿಂತ ಕಡಿಮೆ ಪ್ರಮಾಣದಲ್ಲಿ ಇವು ದೊರೆತ್ತಿವೆ. ಹಾಗಾಗೀ ಕಲ್ಯಾಣ ಚಾಳುಕ್ಯರ ಕಾಲದಲ್ಲಿ ವ್ಯಾಪಾರ ಸಾಮಾಗ್ರಿಗಳು, ಸರಕುಗಳ ಸಾಗಾಣಿಕೆ ಮತ್ತು ಪ್ರಾಣಿಗಳ ಮೇಲೆ ಹೇರಿಕೊಂಡು ಬಂದ ವ್ಯಾಪಾರಿ ಸರಕುಗಳ ಮೇಲೆ ಸುಂಕವನ್ನು ವಿಧಿಸಲಾಗುತ್ತಿತ್ತು ಎಂಬುದು ಸ್ಪಷ್ಟವಾಗುತ್ತದೆ. ಈ ಎಲ್ಲಾ ಅಂಕಿಅಂಶಗಳನ್ನು ಗಮನಿಸಿದಾಗ ಸುಂಕವು ಬಿಜಾಪುರ ಜಿಲ್ಲೆಯ ಆದಾಯದ ಮೂಲವಾಗಿತ್ತು. ಇದರ ಜೊತೆಗೆ ಸುಂಕ ಪದಕ್ಕೆ ಸಮಾನ ಅರ್ಥಕೊಡುವ ವಡ್ಡರಾವುಳ[೩೦]ವು ವ್ಯಾಪಾರ ಸಾಮಗ್ರಿಗಳ ಮೇಲಿನ ತೆರಿಗೆಯು ಬಿಜಾಪುರ ಜಿಲ್ಲೆಯ ಶಾಸನಗಳಲ್ಲಿ ೪ ಬಾರೀ, ಬೆಲೆ ಬಾಳುವ ಸರಕು, ಪ್ರಾಣಿ, ಧಾನ್ಯ, ಅಂಗಡಿ ಮೊದಲಾದವುಗಳ ಮೇಲೆ ವಿಧಿಸಲಾಗುತ್ತಿದ್ದ ಹೆರ್ಜುಂಕ ಅಥವಾ ಪೆರ್ಜುಂಕ[೩೧] ೭ ಬಾರೀ, ಬಿಲುಕೊಡೆ[೩೨] ಅಂದರೇ ಪ್ರಾಣಿಗಳ ಮೇಲೆ ಹೇರಿಕೊಂಡು ಬರುತ್ತಿದ್ದ ಸಾಮಾನುಗಳ ಮೇಲೆ ಹಾಕುತ್ತಿದ್ದ ಸುಂಕವು ೨ ಬಾರೀ, ಸಾಗಣೆಯ ಸಮಯದಲ್ಲಿ ಕಳ್ಳಕಾಕರಿಂದ ರಕ್ಷಣೆ ನೀಡುವ ಸಲುವಾಗಿ ಪಡೆಯುತ್ತಿದ್ದ ಸುಂಕಗಳಾದ ಬಿಲ್ಕೊಡೆವು[೩೩] ೨ ಬಾರೀ ಉಲ್ಲೇಖಿತವಾಗಿವೆ.

ವೀಳ್ಯೆದೆಲೆಯ ಮೇಲಿನ ಒಂದು ಬಗೆಯ ತೆರಿಗೆಯಾದ ಪನ್ನಾಯ ಮತ್ತು ಪನ್ನವಣ[೩೪] ತೆರಿಗೆ ಪದಗಳು ೪ ಬಾರೀ, ಪ್ರಮುಖವಾಗಿ ವ್ಯಾಪಾರದಲ್ಲಿ ಕೊಳಗದ ಮೇಲೆ ಹಾಕುವ ತೆರಿಗೆಯಾದ ಕೊಳಗದಾಯ[೩೫] ಪದವು ೧ ಬಾರಿ, ಯುದ್ಧದ ಖರ್ಚನ್ನು ನಿರ್ವಹಿಸಲು ಹಾಕುವ ತೆರಿಗೆ ಅಥವಾ ಯುದ್ಧದ ತೆರಿಗೆಯಾದ ಕಾಳಗದಾಯ[೩೬] ೧ ಬಾರೀ, ಊರಿನಲ್ಲಿ ಹಬ್ಬ ಮಾಡಲು ಹಾಕುತ್ತಿದ್ದ ತೆರಿಗೆಯಾದ ಬೀಯ[೩೭] ೨ ಬಾರೀ, ರಾಜ ಅಥವಾ ಚಕ್ರವರ್ತಿಯ ಮದುವೆಯ ಸಂದರ್ಭದಲ್ಲಿ ಜನರು ಕೊಡುತ್ತದ್ದ ತೆರಿಗೆಯಾದ ಸೇಸೆ[೩೮] ಕುರಿದೆರೆ, ಸಂತವಣ, ರತ್ತುದೆರೆ, ಎಮ್ಮೆದೆರೆ, ಆಕಳದೆರೆ ಪಾರಿಖಾಯಗಳು ಒಂದೊಂದು ಬಾರೀ ಉಲ್ಲೇಖಿತವಾಗಿವೆ.

ಭೂಮಿಯ ಮೇಲಿನ ಎಲ್ಲಾ ತೆರಿಗೆಗಳಿಂದ ಮುಕ್ತಗೊಳಿಸಿರುವ ಸರ್ವ್ವನಮಸ್ಯ ಅಥವಾ ಸರ್ವ್ವಬಾಧಾಪರಿಹಾರ[೩೯]ದಂತಹ ಪದಗಳು ಬಿಜಾಪುರ ಜಿಲ್ಲೆಯಲ್ಲಿ ಒಟ್ಟು ೬೩ ಕ್ಕಿಂತಲೂ ಹೆಚ್ಚು ಬಾರೀ ಪುನರಾವರ್ತನೆಯಗೊಂಡಿರುವುದು ಶಾಸನಗಳಲ್ಲಿ ಉಲ್ಲೇಖಿತವಾಗಿವೆ. ಪ್ರಮುಖವಾಗಿ ಬಿಜಾಪುರ ಜಿಲ್ಲೆಯ ೧೦ ಶಾಸನಗಳಲ್ಲಿ ಸರ್ವ್ವನಮಸ್ಯ(ತೆರಿಗೆಯಿಂದ ಮುಕ್ತವಾದ)ದ ಅಗ್ರಹಾರಗಳು ದೊರೆಯುತ್ತದೆ. ಈ ಜಿಲ್ಲೆಯಲ್ಲಿ ಗಮನಿಸಿದ ಹಾಗೇ ತೆರಿಗೆಗಳನ್ನು ಅಗ್ರಹಾರಗಳಿಗೆ, ಮಠಗಳಿಗೆ, ದೇವಾಲಯಗಳಿಗೆ, ಬ್ರಾಹ್ಮಣರಿಗೆ ಅಧಿಕವಾಗಿ ತೆರಿಗೆಯಿಂದ ಮುಕ್ತಗೊಳಿಸಿರುವುದು ಶಾಸನಗಳಿಂದ ತಿಳಿದು ಬರುತ್ತದೆ. ಮುಂದೇ ಈ ದೇವಾಲಯಗಳಿಗೆ ನೀಡಿದ ವಿನಾಯಿತಿಗಳ ಪರಿಣಾಮವಾಗಿ ದೇವಾಲಯಗಳು ಧಾರ್ಮಿಕ ವಿಧಿ-ವಿಧಾನದ ಆಚರಣೆಗಳಿಗೆ ಕೊಡುತ್ತಿದ್ದ ಮಹತ್ವವು ಕಾಲಕ್ರಮೇಣ ಕಡಿಮೆಯಾಗಿ ಭೂಮಿಯ ನಿರ್ವಹಣೆಗೆ ಪ್ರಥಮ ಆದ್ಯತೆಯನ್ನು ನೀಡಿರುವುದರಿಂದ ದೇವಾಲಯಗಳು ಬೃಹತ್ ಭೂಹಿಡುವಳಿದಾರರಾಗಿ ಮತ್ತು ಭೂ ನಿರ್ವಹಣೆಯ ಸಂಸ್ಥೆಗಳಾಗಿ ಬದಲಾಗುವುದನ್ನು ತಿಳಿಯಬಹುದಾಗಿದೆ.[೪೦] ಸಾಮಾನ್ಯವಾಗಿ ದೇವಾಲಯಗಳಿಗೆ ತೆರಿಗೆ ವಿಧಿಸದಿರುವುದು ಇಷ್ಟೆಲ್ಲಾ ಬೆಳವಣಿಗೆಗೆ ಕಾರಣವಾಗಿದೆ. ದೇವಾಲಯಗಳ ಮೇಲಿನ ತೆರಿಗೆ ವಿನಾಯಿತಿಗಳ ಭಾರವನ್ನು ರಾಜ್ಯದ ಪ್ರಜೆಗಳು ಹೊರಬೇಕಾಗಿತ್ತು. ಸರ್ಕಾರವು ಇಚ್ಚೆಪಟ್ಟಂತೆ ಪ್ರಜೆಗಳು ತೆರಿಗೆಯನ್ನು ನೀಡಬೇಕಾಗಿದ್ದು, ಕಾಲ ಮತ್ತು ಅಗತ್ಯತೆಗಳಿಗೆ ಅನುಗುಣವಾಗಿ ಈಗಾಗಲೇ ಇರುವ ಹಳೆಯ ತೆರಿಗೆಗಳ ಜೊತೆ ಹೊಸ ತೆರಿಗೆಗಳನ್ನು ನೀಡುವುದು ಜನರಿಗೆ ಅನಿವಾರ್ಯವಾಗಿತ್ತು. ತೆರಿಗೆ ವ್ಯವಸ್ಥೆ ಸದಾ ಬದಲಾವಣೆಗೆ ಒಳಗಾಗುತ್ತಿತ್ತೆಂಬ ಸಂದೇಶವನ್ನು ರವಾನಿಸುತ್ತವೆ. ತೆರಿಗೆಗಳು ಹೊರೆಯೆಂದು ಕಂಡು ಬಂದರೂ ದೇವಸ್ಥಾನಗಳ ನಿರ್ಮಾಣ, ಶಿಕ್ಷಣ ಸಂಸ್ಥೆಗಳ ಸ್ಥಾಪನೆ, ನೀರಾವರಿ ವ್ಯವಸ್ಥೆಯನ್ನು ಕಲ್ಪಿಸುವುದು ಇತ್ಯಾದಿ ಲೋಕೋಪಯೋಗಿ ಕಾರ್ಯಗಳನ್ನು ಮಾಡುವಾಗ ಜನರಿಗೆ ಸೇವಾರೂಪದಲ್ಲಿ ತೆರಿಗೆ ಹಿಂಪಾವತಿಯಾಗುತ್ತದೆ ಎಂದು ವಾದಿಸಲಾಗಿದೆ.[೪೧] ಇದರಿಂದ ತಿಳಿಯುವುದೆನೆಂದರೆ ಬಿಜಾಪುರ ಜಿಲ್ಲೆಯಲ್ಲಿ ಕೃಷಿ ವಿಸ್ತರಣೆಯ ಕೊರತೆಯಿಂದಾಗಿ ರೈತರಿಗೆ ಕೃಷಿಗೆ ಪ್ರೋತ್ಸಾಹ ನೀಡುವುದಕ್ಕಾಗಿ ತೆರಿಗೆಯನ್ನು ಸಂಪೂರ್ಣವಾಗಿ ಕೆಲವು ವರ್ಷಗಳವರೆಗೆ ಮುಕ್ತಗೊಳಿಸಿರುವಂತೆ ಮೇಲಿನ ಅಂಕಿ-ಅಂಶಗಳಿಂದ ತಿಳಿದುಬರುತ್ತದೆ. ಇದಕ್ಕೆ ಕಾರಣವೆನೆಂದರೆ ವಾಣಿಜ್ಯ ಬೆಳೆಗಳನ್ನು ಬೆಳೆಯಲು ಪ್ರೋತ್ಸಾಹಿಸುವುದು, ನೀರಾವರಿ ಸೌಲಭ್ಯ ಒದಗಿಸುವುದು,

ಕೃಷಿ ಕ್ಷೇತ್ರವನ್ನು ಅಭಿವೃದ್ಧಿ ಪಡಿಸುವ ರೈತಾಪಿ ಜನರಿಗೆ ನಾನಾ ರೀತಿಯ ಬೆಂಬಲವನ್ನು ನೀಡಿರುವುದು ಈ ಶಾಸನಗಳಲ್ಲಿ ಉಲ್ಲೇಖಿತವಾಗಿರುವ ಹೆಚ್ಚಿನ ಸಂಖ್ಯೆಯ ತೆರಿಗೆ ವಿನಾಯಿತಿಗೆ ಕಾರಣವಾಗಿದೆ.

ಬಿಜಾಪುರ ಜಿಲ್ಲೆಯಲ್ಲಿ ಅಧಿಕ ಸಂಖ್ಯೆಯ ತೆರಿಗೆ ವಿನಾಯಿತಿ ನೀಡಿರುವುದಕ್ಕೆ ಇನ್ನೊಂದು ಪ್ರಮುಖ ಕಾರಣವೆಂದರೆ ಈ ಭೂಪ್ರದೇಶದಲ್ಲಿ ಬೆಳೆ ಮಾಡಿದ ಸಂದರ್ಭದಲ್ಲಿ ಸರಿಯಾಗಿ ಮಳೆ ಬೀಳದಿದ್ದಾಗ ಬೆಳೆನಷ್ಟವಾಗಿರುವುದರಿಂದ ಆರ್ಥಿಕ ಕುಂಠಿತವಾದಾಗ ಇಷ್ಟೊಂದು ತೆರಿಗೆ ವಿನಾಯಿತಿಯನ್ನು ಮಾಡಿರಬಹುದಾಗಿದೆ. ಇನ್ನೊಂದು ಬಹುಮುಖ್ಯವಾದ ವಿಚಾರವೆಂದರೆ ಬಿಜಾಪುರ ಜಿಲ್ಲೆಯಲ್ಲಿ ದೊರೆತ್ತಿರುವ ಶಾಸನಗಳಲ್ಲಿ ತೆರಿಗೆಗಳಿಂದ ವಿನಾಯಿತಿ ನೀಡುವ ಸಂದರ್ಭದಲ್ಲಿ ಪಿರಿಯ ಕೋಲು[೨] ಅಂದರೇ ಭೂಮಿಯನ್ನು ಅಳತೆಯಲು ಉಪಯೋಗಿಸುವ ಒಂದು ಬಗೆಯ ಅಳತೆ ಕೋಲು, ಭರಣದ ಕೋಲು, ಮಾಣಿಕೇಶ್ವರ ಕೋಲು, ಹಂಗದ ಕೋಲು ಮತ್ತು ಮಾನ್ಯದ ಕೋಲುಗಳಂತಹ ಭೂ ಆಳತೆಯ ಮಾಪನದ ಕೋಲುಗಳನ್ನು ಬಳಸಿರುವುದು. ಈ ಕೋಲುಗಳಿಂದ ಭೂಮಿಯನ್ನು ಅಳತೆ ಮಾಡಿ ತೆರಿಗೆ ಮುಕ್ತವಾದ ಭೂಮಿಯನ್ನು ದಾನ ಮಾಡಿರುವುದು ಶಾಸನಗಳಲ್ಲಿ ಕಂಡುಬರುತ್ತದೆ. ಮುಂದೇ ಈ ಅಳತೆ ಕೋಲುಗಳಲ್ಲಿ ಭೂಮಿಯನ್ನು ಅಳತೆ ಮಾಡಿ ದಾನ ಮಾಡಿರುವ ಕಾರಣದಿಂದಾಗಿ ಕೆಲವು ವರ್ಷಗಳ ನಂತರ ಈ ತೆರಿಗೆ ಮುಕ್ತ ಭೂಮಿಗಳಿಗೆ ತೆರಿಗೆ ವಿಧಿಸಿರುವ ಸಾಧ್ಯತೆಗಳಿವೆ.

ಬಿಜಾಪುರ ಜಿಲ್ಲೆಯಲ್ಲಿ ಕಲ್ಯಾಣ ಚಾಳುಕ್ಯರ ಉಲ್ಲೇಖವಾಗಿರುವ ಶಾಸನಗಳಲ್ಲಿ ತೆರಿಗೆಗಳನ್ನು ವಿಧಿಸಿರುವ ಮತ್ತು ಸುಂಕದ ವೆರ್ಗ್ಗಡೆ ಅಥವಾ ಸುಂಕದ ಅಧಿಕಾರಿಗಳ ಮೂಲಕ ಸುಂಕವನ್ನು ಸಂಗ್ರಹಿಸುವ ಪದ್ಧತಿ ಆಯಾ ಪ್ರದೇಶದ ಭೌಗೋಳಿಕ ಹಿನ್ನೆಲೆಯನ್ನು ಗಮನದಲ್ಲಿಟ್ಟುಕೊಂಡು ರೂಢಿಸಿಕೊಂಡಿತ್ತು. ಅ ಮೂಲಕ ರಾಜ್ಯದ ಪ್ರಜೆಗಳ ಹಿತ ಕಾಪಾಡುವ ಕಾರ್ಯದಲ್ಲಿ ಯಶಸ್ವಿಯಾಗಿತ್ತು. ಈ ಕಾರಣದಿಂದ ಕಲ್ಯಾಣ ಚಾಳುಕ್ಯರಿಗೆ ಸುಮಾರು ೨೦೦ ವರ್ಷಗಳವರೆಗೆ ಸುದೀರ್ಘವಾಗಿ ಇವರು ಆಡಳಿತ ನಡೆಸಲು ಸಾಧ್ಯವಾಗಿದೆ. ಮತ್ತು ಇವರ ಕಾಲದಲ್ಲಿ ಬಿಜಾಪುರ ಜಿಲ್ಲೆಯಲ್ಲಿ ಕಂದಾಯಾಡಳಿತ ಪ್ರಬಲವಾಗಿತ್ತು ಎಂಬುದು ಈ ಅಂಕಿ-ಅಂಶಗಳಿಂದ ತಿಳಿದು ಬರುತ್ತದೆ.

ಕ್ರಿ.ಶ. ೯೭೩ ರಿಂದ ೧೦೭೩ರವರೆಗಿನ ೧೦೦ ವರ್ಷಗಳ ಅವಧಿಯಲ್ಲಿ ಕೇವಲ ೧೪ ಕಂದಾಯ ಪದಗಳು ಶಾಸನಗಳಲ್ಲಿ ಕಂಡು ಬಂದಿದೆ. ಆದರೆ ಕ್ರಿ.ಶ. ೧೦೭೪ ರಿಂದ ೧೧೮೭ನೆಯ ನಂತರದ ೧೦೦ ವರ್ಷಗಳ ಅವಧಿಯಲ್ಲಿ ೬೨ ತೆರಿಗೆ ಪದಗಳು ಕಂಡುಬಂದಿವೆ. ಕಾಲಕಾಲಕ್ಕೆ ಅನುಗುಣವಾಗಿ ರಾಜ್ಯದ ಆದಾಯ ವೃದ್ಧಿಸಲು ಕಲ್ಯಾಣ ಚಾಳುಕ್ಯರ ಕಾಲದಲ್ಲಿ ವಿವಿಧ ರೀತಿಯಾದ ತೆರಿಗೆ ಮತ್ತು ಸುಂಕಗಳನ್ನು ವಿಧಿಸುತ್ತಾ ಬಂದಿರುವುದು ಖಚಿತವಾಗಿ ತಿಳಿಯುತ್ತದೆ. ಕಂದಾಯ ಪದಗಳ ಪ್ರಮಾಣದ ವ್ಯಾಪ್ತಿ ಕ್ರಮೇಣ ಹೆಚ್ಚಾಗಿ ರಾಜ್ಯದ ಜವಾಬ್ದಾರಿಯು ಹೆಚ್ಚಾಗಿರುವುದನ್ನು ಈ ಶಾಸನಗಳ ಅಧ್ಯಯನದಿಂದ ತಿಳಿದು ಬರುತ್ತದೆ. ಬಿಜಾಪುರ ಜಿಲ್ಲೆಯಲ್ಲಿ ಈ ಕಂದಾಯ ಪದಗಳು ಕಲ್ಯಾಣ ಚಾಳುಕ್ಯರ ಕಾಲದಲ್ಲಿ ಆದಾಯ ಹೆಚ್ಚಿಸಿಕೊಳ್ಳಬೇಕಾದ ಅನಿವಾರ್ಯತೆಯನ್ನು ವ್ಯಕ್ತಪಡಿಸುತ್ತವೆ. ಇಂದಿನ ರಾಜ್ಯಗಳ ಕಂದಾಯ ವ್ಯವಸ್ಥೆಯು ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿರುವ ರೀತಿಯಲ್ಲೇ ಕಲ್ಯಾಣ ಚಾಳುಕ್ಯರ ಕಾಲದಲ್ಲೂ ಕಂದಾಯ ವ್ಯವಸ್ಥೆ ವಿಸ್ತೃತಗೊಳ್ಳುತ್ತಾ ಸಾಗಿರುವುದನ್ನು ಈ ಅಧ್ಯಯನ ಮತ್ತು ವಿಶ್ಲೇಷಣೆಗಳು ಖಚಿತಪಡಿಸುತ್ತವೆ.

ಅಡಿ ಟಿಪ್ಪಣಿಗಳು

೧. SII. XVIII, No. 40.

೨. ಕನ್ನಡ ವಿಶ್ವವಿದ್ಯಾಲಯ ಶಾಸನ, ಸಂ. ೧೦, ಬಿಜಾಪುರ ಜಿಲ್ಲೆ, ಪ್ರಸಾರಾಂಗ, ಹಂಪಿ, ಶಾಸನ ಸಂಖ್ಯೆ ೮೫.

೩. SII. XX, No. 21.

೪. ಅದೇ., No. 23.

೫. SII. XI, part-I, No, 68.

೬ ಅದೇ., SII. XVIII, No. 51.

೭. ಅದೇ., ಶಾ.ಸಂ. ೭೪.

೮. ಅದೇ, (ಸಂ)., ಕ.ವಿ.ವಿ. ಶಾ.ಸಂ. ೧೦, ಶಾ.ಸಂ. ೫೯.

೯. ಅದೇ., SII. XX, No. 45.

೧೦. ಅದೇ, (ಸಂ)., ಕ.ವಿ.ವಿ. ಶಾ.ಸಂ. ೧೦, ಶಾ.ಸಂ. ೧೩.

೧೧. ಅದೇ., SII. XVIII, No. 94.

೧೨. SII. XI, part-II, No. 142.

೧೩. ಅದೇ., SII. XVIII, No. 103.

೧೪. ಅದೇ, (ಸಂ)., ಕ.ವಿ.ವಿ. ಶಾ.ಸಂ. ೧೦, ಶಾ.ಸಂ. ೬೫.

೧೫. ಅದೇ., SII. XX, No. 71.

೧೬. ಅದೇ., No. 77.

೧೭. ಅದೇ., No. 80.

೧೮. ಅದೇ., ಕ.ವಿ.ವಿ. ಶಾ.ಸಂ. ೧೦, ಶಾ.ಸಂ. ೦೧.

೧೯. ಅದೇ., ಶಾ.ಸಂ. ೩೭.

೨೦. ಅದೇ., ಶಾ.ಸಂ. ೫೦.

೨೧. ಅದೇ., ಶಾ.ಸಂ. ೫೧.

೨೨. ಅದೇ., ಶಾ.ಸಂ. ೪೯.

೨೩. ಅದೇ., ಶಾ.ಸಂ. ೬೪.

೨೪. ಅದೇ., ಶಾ.ಸಂ. ೪೨.

೨೫. ಅದೇ., SII. XX, No. 153.

೨೬. ಅದೇ, ಕ.ವಿ.ವಿ. ಶಾ.ಸಂ. ೧೦, ಶಾ.ಸಂ. ೨೪.

೨೭. ಅದೇ., ಶಾ.ಸಂ. ೪೫.

೨೮. ಅದೇ., ಶಾ.ಸಂ. ೫೪.

೨೯. ಅದೇ., SII. XX, No. 127.

೩೦. ಅದೇ., ಕ.ವಿ.ವಿ. ಶಾ.ಸಂ. ೧೦, ಶಾ.ಸಂ. ೨೦.

೩೧. ಅದೇ., ಶಾ.ಸಂ. ೪೫.

೩೨. ಅದೇ., ಶಾ.ಸಂ. ೩೯.

೩೩. ಅದೇ., ಶಾ.ಸಂ. ೨೮.

೩೪. ಅದೇ., ಶಾ.ಸಂ. ೯೬.

೩೫. SII. XV. No. 596.

೩೬. ಅದೇ., No. 581.

೩೭. ವೀಣಾ ಬ. ಬಿರಾದಾರ., ಬಿಜಾಪುರ ಜಿಲ್ಲೆಯ ಅರ್ಥವ್ಯವಸ್ಥೆ (ಆರಂಭದಿಂದ ಕ್ರಿ.ಶ. ೧೩೩೬ರವರೆಗೆ) (ಅಪ್ರಕಟಿತ ಮಹಾ ಪ್ರಬಂಧ, ಕರ್ನಾಟಕ ವಿಶ್ವವಿದ್ಯಾಲಯ, ೨೦೧೬) ಪುಟ ಸಂಖ್ಯೆ ೨೦೪-೨೦೫.

೩೮. ಚಿದಾನಂದ ಮೂರ್ತಿ ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ (ಕ್ರಿ.ಶ. ೪೫೦-೧೧೫೦), ಸಪ್ನ ಬುಕ್ ಹೌಸ್, ಬೆಂಗಳೂರು, ೧೯೬೬, ಪು.ಸಂ. ೪೪೭.

೩೯. ಕುಪ್ಪಸ್ವಾಮಿ ಜಿ ಆರ್., ಎಕಾನೊಮಿಕ್ ಕಂಡಿಷನ್ಸ್ ಇನ್ ಕರ್ನಾಟಕ (ಎ.ಡಿ.೯೭೩-೧೩೩೬), ಕರ್ನಾಟಕ ಯೂನಿವರ್ಸಿಟಿ, ಧಾರವಾಡ, ೧೯೭೫ ಪು.ಸಂ. ೧೫೨-೧೫೩.

೪೦. ಬಸವರಾಜ ಕೆ.ಆರ್., ಅಡ್ಮಿನಿಸ್ಟ್ರೇಷನ್ ಅಂಡರ್ ದಿ ಚಾಲುಕ್ಯಸ್ ಆಫ್ ಕಲ್ಯಾಣ, ನ್ಯೂ ಎರ ಪಬ್ಲಿಕೇಷನ್ಸ್, ಮದ್ರಾಸ್, ೧೯೮೩. ಪು.ಸಂ. ೭೭-೭೮.

೪೧. ಕನ್ನಡ ನಿಘಂಟು, ಸಂಪುಟ ೦೧, ಪು.ಸಂ. ೧೫೩.

೪೨. ಕನ್ನಡ ನಿಘಂಟು, ಸಂಪುಟ ೦೭, ಪು.ಸಂ. ೬೯೨೮.

೪೩. ಕನ್ನಡ ನಿಘಂಟು, ಸಂಪುಟ ೦೪, ಪು.ಸಂ. ೩೮೩೪.

೪೪. ಕನ್ನಡ ನಿಘಂಟು, ಸಂಪುಟ ೦೭, ಪು.ಸಂ. ೬೯೩೬, ೭೦೭೪.

೪೫. ಕನ್ನಡ ನಿಘಂಟು, ಸಂಪುಟ ೦೫, ಪು.ಸಂ. ೫೨೫೦.

೪೬. ಕನ್ನಡ ನಿಘಂಟು, ಸಂಪುಟ ೦೮, ಪು.ಸಂ. ೮೮೪೯.

೪೭. ಕನ್ನಡ ನಿಘಂಟು ಸಂಪುಟ-೦೮, ಪು.ಸಂ. ೮೪೯೯.

೪೮. ಗುರುರಾಜ್ ಚಾರ್., ಸಮ್ ಆಸ್ಪೆಕ್ಟ್ ಆಫ್ ಎಕಾನಾಮಿಕ್ಸ್ ಅಂಡ್ ಸೋಶಿಯಲ್ ಲೈಫ್ ಇನ್ ಕರ್ನಾಟಕ, ಪ್ರಸಾರಾಂಗ, ಯುನಿವರ್ಸಿಟಿ ಆಫ್ ಮೈಸೂರು, ೧೯೭೪. ಪು.ಸಂ. ೧೪೫.

೪೯. ಕಲಬುರ್ಗಿ ಎಂ.ಎಂ., ಕಲ್ಯಾಣ ಚಾಲುಕ್ಯ ಚಕ್ರವರ್ತಿ ಸರ್ವಜ್ಞ ಸೋಮೇಶ್ವರ ವಿರಚಿತ ಮಾನಸೋಲ್ಲಾಸ ಸಂಪುಟ ೦೧, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೮, ಪು.ಸಂ. ೫೮.

೫೦. ಅದೇ., ಚಿದಾನಂದ ಮೂರ್ತಿ ಎಂ., ಪು.ಸಂ. ೪೪೬.

೫೧. ಕನ್ನಡ ನಿಘಂಟು, ಸಂಪುಟ-೦೬, ಪು.ಸಂ. ೫೮೨೧.

೫೨. ಡಾ. ಮಂಜುನಾಥ್ ಸಿ.ಯು. (ಸಂ)., ಶಾಸನಗಳು ಮತ್ತು ಕರ್ನಾಟಕ ಸಂಸ್ಕೃತಿ (ಕ್ರಿ.ಶ. ೧೧೫೦-೧೩೪೦), ಚಿತ್ಕಲಾ ಪ್ರಕಾಶನ, ಕುಪ್ಪಂ, ೨೦೧೨, ಪು.ಸಂ. ೨೫೯.

೫೩. ಜಗದೀಶ, ವಡ್ಡರಾವುಳ ಮತ್ತು ಹೆಜ್ಜುಂಕ ತೆರಿಗೆಗಳು ಒಂದು ಟಿಪ್ಪಣಿ, ಇತಿಹಾಸ ದರ್ಶನ ಸಂಚಿಕೆ-೨೭, ಬೆಂಗಳೂರು, ೨೦೧೭, ಪು.ಸಂ. ೧೮೭.

೫೪. ಕನ್ನಡ ನಿಘಂಟು, ಸಂಪುಟ ೦೫, ಪು.ಸಂ. ೫೨೫೦-೫೨೫೧.

೫೫. ಕನ್ನಡ ನಿಘಂಟು, ಸಂಪುಟ ೦೨, ಪು.ಸಂ. ೨೨೦೮.

೫೬ ಕನ್ನಡ ನಿಘಂಟು, ಸಂಪುಟ ೦೨, ಪು.ಸಂ. ೧೭೮೪.

೫೭. ಅದೇ., ಚಿದಾನಂದ ಮೂರ್ತಿ ಎಂ., ಪು.ಸಂ. ೪೪೬.

೫೮. ಅದೇ., ಚಿದಾನಂದ ಮೂರ್ತಿ ಎಂ., ಪು.ಸಂ. ೪೪೭.

೫೯. ಕನ್ನಡ ನಿಘಂಟು, ಸಂಪುಟ ೦೮, ಪು.ಸಂ. ೮೫೯೮.

೬೦. ತಪನ್ ರಾರ್ಯ ಚೌಧರಿ & ಇರ್ಫಾನ್ ಹಬೀಬ್., ದ ಕೇಂಬ್ರಿಡ್ಜ್ ಎಕಾನೊಮಿಕ್ ಹಿಸ್ಟರಿ ಅಫ್ ಇಂಡಿಯಾ, ಸಂ-೦೧, ಪು.ಸಂ. ೧೧೩.

೬೧. ಅದೇ., ಗುರುರಾಜಾಚಾರ್., ಪು.ಸಂ. ೧೬೪.

೬೨. ಕನ್ನಡ ನಿಘಂಟು ಸಂಪುಟ ೦೬, ಪು.ಸಂ. ೫೬೨೭.

ರಣಮೂರ್ಖ ಕುಲ–ಒಂದು ವಿವೇಚನೆ

ಸಿ.ಎಂ. ತಿಪ್ಪೇಸ್ವಾಮಿ*

೧೨ನೇ ಶತಮಾನದಲ್ಲಿ ಕಲ್ಯಾಣ ಚಾಲುಕ್ಯರ ಸಾಮಂತರ ಅಧೀನರಾಗಿ ರಣಮೂರ್ಖ ಕುಲದವರು ಆಳ್ವಿಕೆ ಮಾಡಿದ್ದಾರೆ. ಇವರು ಚಿಮ್ಮಚ್ಚನೂರನ್ನು (ಚಿತ್ರದುರ್ಗ) ಕೇಂದ್ರವಾಗಿಸಿಕೊಂಡು ವಿವಿಧ ಕಾಲಾವಧಿಯಲ್ಲಿ ಹಡುವಗೆರೆ ೫೦೦, ಅರಹಟ ೧೨, ಜಗಳವುರ ೭೦ ಮುಂತಾದ ನೊಳಂಬವಾಡಿಯೊಳಗಿನ ಚಿಕ್ಕ ಪ್ರಾಂತ್ಯಗಳಲ್ಲಿ ಆಳ್ವಿಕೆ ಮಾಡಿದ್ದಾರೆ. ಇವರು ಮಹಾಮಂಡಳೇಶ್ವರರಾದ ಉಚ್ಚಂಗಿ ಪಾಂಡ್ಯರ ಅಧೀನರು. ಉಚ್ಚಂಗಿ ಪಾಂಡ್ಯರಿಗೆ ಅತ್ಯಂತ ನಿಷ್ಠರಾಗಿದ್ದುದು ಹಲವು ಶಾಸನಗಳಲ್ಲಿ ಕಂಡುಬರುತ್ತದೆ.

ರಣಮೂರ್ಖಕುಲದವರ ಬಗ್ಗೆ ಈಗಾಗಲೇ ಹುಲ್ಲೂರು ಶ್ರೀನಿವಾಸ ಜೋಯಿಸರು ಲೇಖನವೊಂದನ್ನು ಬರೆದಿದ್ದರೆ, ಡಾ. ಬಿ. ರಾಜಶೇಖರಪ್ಪನವರು ತಮ್ಮ ಪಿ.ಹೆಚ್.ಡಿ. ಮಹಾಪ್ರಬಂಧ 'ಪ್ರಾಚೀನ ಚಿತ್ರದುರ್ಗ'ದಲ್ಲಿ ಈ ಕುಲದವರ ಬಗ್ಗೆ ಸಾಕಷ್ಟು ಬೆಳಕನ್ನು ಚೆಲ್ಲಿದ್ದಾರೆ. ಪ್ರಸ್ತುತ ಲೇಖನದ ಚರ್ಚೆಯು ಹು.ಶ್ರೀ.ಜೋಯಿಸರ ಲೇಖನದಲ್ಲಿನ ಕೆಲವು ದೋಷಗಳನ್ನು ಸರಿಪಡಿಸುತ್ತಾ, ಡಾ. ಬಿ. ರಾಜಶೇಖರಪ್ಪನರ ಅಧ್ಯಯನದಲ್ಲಿ ಸೇರಿಸಿಲ್ಲದ ಕೆಲವು ಅಂಶಗಳನ್ನು ಸೇರಿಸುವ ಉದ್ದೇಶವನ್ನು ಹೊಂದಿದೆ. ಅದರಲ್ಲೂ ಮುಖ್ಯವಾಗಿ 'ರಣಮೂರ್ಖ' ಎಂಬುದರ ಅರ್ಥ, ವ್ಯುತ್ಪತ್ತಿ ಏನು? ಇವರ ಕಾಲಾವಧಿ ಏನು? ವಂಶಾವಳಿ ಏನು ಎಂಬುದರ ಬಗ್ಗೆ ಕೇಂದ್ರೀಕರಿಸಲಾಗಿದೆ.

ರಣಮೂರ್ಖ ಪದದ ಬಳಕೆ

ಈ ಪದವೇ ಕುತೂಹಲಕಾರಿಯಾದುದು. 'ರಣ' ಎಂಬ ಪದದ ಅರ್ಥ ಮತ್ತು ಬಳಕೆ ಸಾಮಾನ್ಯವಾಗಿ ಎಲ್ಲರಿಗೂ ತಿಳಿದಿದೆ. ಆದರೆ ಅದರೊಂದಿಗಿರುವ 'ಮೂರ್ಖ' ಎಂಬುದರ ಬಳಕೆ ಯಾವ ಅರ್ಥವನ್ನು ನೀಡುತ್ತದೆ? ಅದರ ಹೆಸರಿನ ಕುಲವೊಂದಿದ್ದು, ಹೇಗೆ ಆ ಕುಲಕ್ಕೆ ಪ್ರಶಸ್ತಿಯಾಗಿ ಅಂಟಿಕೊಂಡಿದೆ ಎಂಬುದು ಚರ್ಚಾರ್ಹ ವಿಷಯವಾಗಿದೆ. ಅದನ್ನು ಹುಡುಕುತ್ತಾ ಹೋದಂತೆ ಹಲವು ಗಮನಾರ್ಹ ಅಂಶಗಳು ಕಂಡುಬರುತ್ತವೆ.

ಚಿತ್ರದುರ್ಗ ಬಳಿಯ ತಮಟಕಲ್ಲು ಗ್ರಾಮದ ೬ನೇ ಶತಮಾನಾರಂಭದ ಗುಣಮಧುರನ ಶಾಸನವೆಂದು ಪ್ರಸಿದ್ಧವಾಗಿರುವ ಶಾಸನದಲ್ಲಿ, [ಎಕ ೧೧, ಚಿತ್ರದುರ್ಗ೪] ಗುಣಮಧುರನನ್ನು ಪ್ರಶಸ್ತಿ ಮಾಡುತ್ತಾ, 'ರಣಮುಖದುಳ್ಳ ಕಾಲನರಿಯರ್ಕ್ಕು' ಎಂಬುದಾಗಿ ಬಂದಿದೆ. ಇದರರ್ಥವನ್ನು 'ಯುದ್ಧಭೂಮಿಯಲ್ಲಿ ಶತ್ರುಗಳೂ ಮೆಚ್ಚುವಂತೆ' ಎಂಬರ್ಥದಲ್ಲಿ ವಿವರಿಸಲಾಗಿದೆ. ಇಲ್ಲಿ, ಈಗಾಗಲೇ ನಮಗೆ ಗೊತ್ತಿರುವ 'ರಣ' ದ ಅರ್ಥವನ್ನೇ ಹೇಳಿ, 'ಮುಖ' ಎಂಬುದಕ್ಕೆ ಸಮರಾಭಿಮುಖವಾಗಿರುವ ಎಂಬರ್ಥದಲ್ಲಿ ಬಳಕೆಯಾದಂತೆ ತೋರಿಸಲಾಗಿದೆ.

ಕ್ರಿ.ಶ. ಸುಮಾರು ೭೮೦ರ ಮುಳಬಾಗಿಲಿನ ತುರುಗೋಳ್ ಶಾಸನವೊಂದರಲ್ಲಿ, [ಎಕ೧೦, ಮುಳಬಾಗಿಲು ೯೩] 'ರಣಮುಖದುಟ್ಟ'ನೆಂಬುವವನ ಮಗನಾದ ಕರವುರನು ತುರುಗಳನ್ನು ಕದ್ದೊಯ್ಯುವಾಗ 'ಉವಳ' ಎಂಬುವವನು ಇರಿದು ಬಿದ್ದ ವಿಷಯ ಹೇಳಿದೆ. ಇಲ್ಲಿ ರಣಮುಖದುಟ್ಟ ಎಂದರೆ, ರಣಮುಖ ದುಷ್ಟ ಎಂದು ಯಾರಿಗೆ ಹೇಳಲಾಗಿದೆ ಎಂದು ಸ್ಪಷ್ಟವಾಗಿ ಹೇಳಿಲ್ಲವಾದ್ದರಿಂದ ಇವನ ಮೂಲ ಹೆಸರೇನು ತಿಳಿಯದು.

ಮುಂಡರಗಿ ತಾಲ್ಲೂಕಿನ ಮೇವುಂಡಿ ಗ್ರಾಮದಲ್ಲಿ ವೆಂಕಟೇಶ ದೇವಾಲಯದ ಮುಂದೆ ನಟ್ಟ ಕಲ್ಲಿನಲ್ಲಿರುವ ಶಾಸನವು [ಎಸ್‌ಐಐ ೯, ಭಾಗ ೧, ಸಂ. ೨೨] ಕ್ರಿ.ಶ. ೮೯೭ರದಾಗಿದ್ದು ರಾಷ್ಟ್ರಕೂಟದೊರೆ ಅಕಾಲವರ್ಷದೇವನ (೨ನೇ ಕೃಷ್ಣ) ಆಳ್ವಿಕೆಯಲ್ಲಿ 'ಕೇ.ಕಜ್ಜ' ಎಂಬ ಸಾಮಂತನು ಕೋಗಳಿ, ಮಾಸವಾಡಿಗಳನ್ನು ಮೆಟುವಿಡುವಿನಿಂದ ಆಳುತ್ತಿದ್ದುದನ್ನು ಹೇಳಿದೆ.

* 'ಇಸಿಲ', # ೮ಎ, ಮಾಸ್ತಮ್ಮ ಬಡಾವಣೆ, ಒನಕೆ ಓಬವ್ವ ಕ್ರೀಡಾಂಗಣದ ರಸ್ತೆ, ಚಿತ್ರದುರ್ಗ, ಮೊ. ೭೭೬೦೬ ೦೪೦೫೪

ಇವನನ್ನು 'ಯಾದವ ವಂಶೋದ್ಭವ', ರಣಮೂರ್ಖ್ಬಧವಳ', 'ರಣಮೂರ್ಖ್ಬಕೇಸರಿ' ಎಂದೆಲ್ಲಾ ಪ್ರಶಸ್ತಿ ಮಾಡಿದೆ. ಬಹುಶಃ ರಣಮೂರ್ಖ್ಬ ಎಂಬ ರೂಪ ಮೊದಲು ಬಂದಿರುವ ಶಾಸನ ಇದೇ. ಆದರೆ ಈ 'ಕೇ.ಕಜ್ಜ'ನ ಬಗ್ಗೆ ಹೆಚ್ಚಿನ ವಿವರಗಳಿಲ್ಲ.

ಮುಂದೆ ಕ್ರಿ.ಶ. ಸುಮಾರು ೯೫೦ರಲ್ಲಿ ಶ್ರವಣಬೆಳ್ಗೊಳದ ಬಾಹುಬಲಿ ಬಸದಿಯ ವೀರಗಲ್ಲಿನಲ್ಲಿ [ಎಕ೨, ೧೩೯] ಬಾಯಿಕ ಎಂಬುವವನನ್ನು 'ರಣಮೂರ್ಖನೃಪಾಮ್ನಾಯದೊಳಾಯದ ಮೆಯ್ಗಲಿ ಬಾಯಿಕ ' ಎಂದಿದೆ. ಇಲ್ಲಿ ರಣಮೂರ್ಖನೃಪಾಮ್ನಾಯ ಎಂಬುದನ್ನು 'ರಣಕ್ಕೆ ಮುಖ ಮಾಡಿದ ಅರಸರು' ಎಂಬರ್ಥದಲ್ಲಿ ಸಾರಾಂಶ ನೀಡಲಾಗಿದೆ. ಈ ಶಾಸನವು ಬಾಯಿಕನ ಮಕ್ಕಳ ಮಾಹಿತಿ ನೀಡುತ್ತಾ, ಬಾಗಿಯೂರಿನ ಬಳಿ ನಡೆದ ಯುದ್ಧದಲ್ಲಿ ಮಗಳು ಸಾವಿಯಬ್ಬೆ ಎಂಬುವವಳ ವೀರಮರಣವನ್ನು ತಿಳಿಸುತ್ತದೆ. ಇವರು ಜೈನರೆಂಬುದು ತಿಳಿಯುವುದರ ಹೊರತು ಹೆಚ್ಚಿನ ಮಾಹಿತಿಯಿಲ್ಲ.

ಇದಾದ ನಂತರ ಬೀಳಗಿ ತಾಲ್ಲೂಕು ಹೆಗ್ಗೂರಿನ ಈಶ್ವರ ದೇಗುಲದ ಬಳಿಯ ಕ್ರಿ.ಶ. ೧೦೨೪ರ ಶಾಸನದಲ್ಲಿ, [ಎಸ್‌ಐಐ ೧೧, ಸಂ. ೬೨] ಜಗದೇಕಮಲ್ಲದೇವರ ಮಹಾಸಾಮಂತ 'ಆಯ್ತವರ್ಮ್ಮರಸ' ಎಂಬುವವನನ್ನು 'ರಣಮೂರ್ಖ್ಬ ವಂಶೋದ್ಭವ' ಎಂದು ಕರೆಯಲಾಗಿದೆ. ಇವನು ಅಲ್ಲಿನ ರೆಬ್ಬಲೇಶ್ವರಕ್ಕೆ ದಾನ ನೀಡಿದ ಮಾಹಿತಿಯನ್ನು ಹೊರತುಪಡಿಸಿ ಮತ್ತಿನ್ನೇನೂ ವಿವರ ನೀಡಿಲ್ಲ. ಆದರೆ ಈ ಶಾಸನವು ರಣಮೂರ್ಖ ಎಂಬ ವಂಶವೊಂದು ಇದ್ದ ಬಗ್ಗೆ ಖಚಿತಪಡಿಸಿದೆ. ಮೇವುಂಡಿಯ ಇನ್ನೊಂದು ಶಾಸನವು 'ಅಕಾಲವರ್ಷ ಪೃಥುವೀವಲ್ಲಭ ಕೃಷ್ಣಕಂನರದೇವ' ಆಳುತ್ತಿದ್ದಾಗ 'ಕುಪ್ಪದೇವರಸ' ಎಂಬುವವನು ಪುಲಿಗೆರೆ, ಕೋಗಳಿ ಮತ್ತು ಮಾಸವಾಡಿ ಪ್ರಾಂತ್ಯಗಳ ಆಡಳಿತ ಮಾಡುತ್ತಿದ್ದುದನ್ನು ಹೇಳಿದೆ. [ಎಸ್‌ಐಐ ೧೧/೧, ಸಂ. ೩೦] ಇದರ ಲಿಪಿ ೧೨ನೇ ಶತಮಾನದಂತಿದೆ ಎಂದು ಶಾಸನ ಸಂಪಾದಕರು ಟಿಪ್ಪಣಿ ಮಾಡಿದ್ದರೂ ಅಲ್ಲಿ ದಾಖಲಿಸಲಾದ ದಾನದ ಕಾಲ ಕ್ರಿ.ಶ. ೯೬೦–೬೧ ಆಗಿದೆ. ಈ ಕುಪ್ಪದೇವರಸ 'ಯಾದವ ವಂಶೋದ್ಭವ, ರಣಮೂರ್ಖ್ಬಧವಳ...' ಮುಂತಾದ ಪ್ರಶಸ್ತಿಗೆ ಪಾತ್ರನಾಗಿ, ರಾಜಧಾನಿ 'ಮೆಳುವಿಡಿ' (ಮೇವುಂಡಿ) ಯಿಂದ ಆಳುತ್ತಿದ್ದ.

ಇಷ್ಟಾದ ನಂತರ ಸುಮಾರು ೮೦ ವರ್ಷಗಳ ಅವಧಿ ಚಿತ್ರದುರ್ಗವನ್ನು ಕೇಂದ್ರವಾಗಿಸಿಕೊಂಡು ಅಧಿಕಾರ ನಡೆಸಿದ ರಣಮೂರ್ಖಕುಲದ ಮಹಾಸಾಮನ್ತರು ಕಂಡುಬರುತ್ತಾರೆ. ಚಿಮ್ಮಚ್ಚನೂರನ್ನು ಕೇಂದ್ರವಾಗಿಸಿಕೊಂಡು ಆಳಿದ ಇವರ ಮೊದಲ ಶಾಸನ ಕ್ರಿ.ಶ. ೧೧೨೩ರಲ್ಲಿ ಹಾಕಿಸಿದ್ದಾಗಿದ್ದು ಅದು ಚಿತ್ರದುರ್ಗದ ಪಕ್ಕದ ಗಾರೆಹಟ್ಟಿ ಗ್ರಾಮದ ಚೋಳೇಶ್ವರ ದೇವಾಲಯದಲ್ಲಿದೆ. [ಎಕ ೧೧, ಚಿತ್ರದುರ್ಗ ೩೪] ಇದಾದ ನಂತರ ಕ್ರಿ.ಶ. ೧೧೮೪ರ ಶಾಸನವು ಚಿತ್ರದುರ್ಗದ ಕೋಟೆಯಲ್ಲಿರುವ ಹಿಡಿಂಬೇಶ್ವರ ದೇವಾಲಯದಲ್ಲಿತ್ತು. ಇದರ ಕಾಲವನ್ನು ಬಿ.ಎಲ್. ರೈಸ್‌ರವರು ಕ್ರಿ.ಶ. ೧೧೨೪? ಎಂದು ಸಂದೇಹಾತ್ಮಕವಾಗಿ ಸೂಚಿಸಿದ್ದರೂ ಅದು ವಾಸ್ತವವಾಗಿ ಕ್ರಿ.ಶ. ೧೧೮೪ರ ಕಾಲದ್ದಾಗಿದೆ. ನಂತರ ಕ್ರಿ.ಶ. ೧೧೮೭ರಲ್ಲಿ ಅದೇ ಗಾರೆಹಟ್ಟಿ ಗ್ರಾಮದ ಮಹೇಶ್ವರ ದೇವಾಲಯದೊಳಗೆ ಒಂದು ಮತ್ತು ಕೊನೆಯದಾಗಿ ಕ್ರಿ.ಶ. ೧೯೯ರ ಕಾಲದ ಶಾಸನವೊಂದು ಚಿತ್ರದುರ್ಗ ಹತ್ತಿರದ ಮದಕರಿಪುರ (ಮೆದಕೆರೆಪುರ)ದ ಉತ್ತರಕ್ಕೆ ಇರುವ ಕಲ್ಲೇಶ್ವರ ದೇಗುಲದ ಬಳಿ ಇದೆ. ಇದು ಉಚ್ಚಂಗಿ ಪಾಂಡ್ಯರ ಕೊನೆಯ ಶಾಸನವೂ ಹೌದು.

ಇತರೆ ಉಲ್ಲೇಖಗಳು: ವಿಜಯನಗರದ ಅಳಿಯ ರಾಮರಾಯನಿಗೆ 'ರಣಮುಖಭೀಮ' ಎಂಬ ಬಿರುದು ಇತ್ತೆಂದು ತಾಂಜಾವೂರಿನ ಒಂದು ಶಾಸನದಲ್ಲಿ ಹೇಳಲಾಗಿದೆ. [ಎಸ್‌ಐಐ ೨]. ಅವನ ಸಹೋದರ ತಿರುಮಲ ರಾಯನಿಗೆ 'ರಣಮುಖರಾಮ' ಎಂದು ಕರೆಯಲಾಗಿದೆ. [ಎಂಎಆರ್ ೧೯೪೫, ಪು೯೪] 'ಮೂರ್ಖ' ಎಂಬ ಪದದ ಇನ್ನಿತರೆ ರೂಪದಂತೆ ತೋರುವ ಹಲವು ಉಲ್ಲೇಖಗಳು ಇನ್ನೂ ಕೆಲವು ಶಾಸನಗಳಲ್ಲಿ ಕಂಡುಬರುತ್ತದೆ. ಉದಾಹರಣೆಗೆ, ಕ್ರಿ.ಶ. ೧೧೧೩ರ ಬಾಗಳಿಯ ತ್ರಿಭುವನಮಲ್ಲ ಪಾಂಡ್ಯನ ಶಾಸನವೊಂದರಲ್ಲಿ 'ಪೊಮ್ಮೂರ್ಖ್ಬಸೆಟ್ಟಿ' ಎಂಬುವವನ ಹೆಸರಿದೆ. [ಎಸ್‌ಐಐ ೯/೧:೧೮೯] ಇವನು ಮಲೆಯಾಳ ವಡ್ಡವ್ಯವಹಾರಿಯಾಗಿದ್ದ. ಹಾಗೆಯೇ ಮತ್ತೊಬ್ಬ ವಡ್ಡವ್ಯವಹಾರಿ 'ಕೊಮರಮೂರ್ಕ್ಬ' ಎಂಬುವವನನ್ನು ಅಲ್ಲಿಯದೇ ಇನ್ನೊಂದು ಶಾಸನ ಹೆಸರಿಸಿದೆ. [ಎಸ್‌ಐಐ ೯/೧:೧೭೭] ಇದರಲ್ಲಿ 'ಕೊಳೆಮೂಕ್ಕ ಪಳಿಂಬುಗಾದ..ಮಲೆಯಾಳ ವಡ್ಡಬೆವಹಾರಿ ಕೊಮರಮೂರ್ಕ್ಕ'ನು ಕಲಿದೇವಾಲಯಕ್ಕೆ ದಾನಗಳನ್ನು ಮಾಡಿದುದನ್ನು ಹೇಳಿದೆ. ಕೇರಳದಲ್ಲಿ 'ಕೊಳೆಮುಕ್ಕ' ಎಂಬ ಪಟ್ಟಣದ ದಾಮೋದರ ಸೆಟ್ಟಿ ಕುಂಜನಂಬಿ ಎಂಬ ವರ್ತಕರಿದ್ದುದನ್ನು ಗಮನಿಸಬಹುದು. [Hanuma Nayak, Malayali merchants in medieval India, Proceedings of Indian History Congress, vol 60, pp.1114-1151, ICHR] ಇದು ರಣಮೂರ್ಖ ಕುಲದವರಿಗೆ ಸಂಬಂಧಿಸಿದ ನಿಖರ ದಾಖಲೆ ಅಲ್ಲವಾದರೂ, ಈ ಶೋಧನೆಯಲ್ಲಿ ಗಮನ ಸೆಳೆಯುತ್ತವೆ.

ಆದಾಗ್ಯೂ ರಣಮೂರ್ಖ ಎಂಬುದು ವಾಸ್ತವವಾಗಿ ಒಂದು ಕುಲವೇ ಎಂಬ ಅನುಮಾನವೂ ಮೂಡುತ್ತದೆ. ಏಕೆಂದರೆ ಶಾಸನಗಳಲ್ಲಿ ಉಕ್ತವಾಗಿರುವ ಯಾವ ಸಂದರ್ಭದಲ್ಲೂ ಈ ಕುಲವನ್ನು, ಕುಲದ ಮೂಲವನ್ನು ಸ್ಪಷ್ಟವಾಗಿ

ಹೇಳಿಲ್ಲ. ರಣರಂಗದಲ್ಲಿ ಕಲಿಗಳಾಗಿದ್ದ ಯಾವುದೇ ವೀರನಿಗೂ ರಣರಂಗಕ್ಕೆ ನುಗ್ಗುವ ಸಮರವೀರ ಎಂಬರ್ಥದಲ್ಲಿ 'ರಣಮೂರ್ಖ' ಎಂಬ ಪದ ಬಳಕೆಯಾಗಿರಬಹುದು.

೧. ಮೇಲೆ ಗುರುತಿಸಲಾದ ಚಿತ್ರದುರ್ಗ ಪರಿಸರದ ೪ ಶಾಸನಗಳನ್ನು ರಣಮೂರ್ಖ ಕುಲದವರ ಶಾಸನಗಳೆಂದು ಪರಿಗಣಿಸಲಾಗಿದೆ. ಆದರೆ ಈ ನಾಲ್ಕರಲ್ಲಿ ಎರಡು ಶಾಸನಗಳು ಈ ಮಹಾಸಾಮಂತರನ್ನು ರಣಮೂರ್ಖ ಕುಲದವರೆಂದು ಸಾರಿದರೆ, ಉಳಿದೆರೆಡು ಅದನ್ನು ಹೆಸರಿಸುವುದಿಲ್ಲ. ಅಷ್ಟೇ ಅಲ್ಲದೆ ಅವುಗಳಲ್ಲಿನ ಪ್ರಶಸ್ತಿ ಭಾಗ ಸಂಪೂರ್ಣವಾಗಿ ಭಿನ್ನವಾಗಿದೆ. ಉದಾಹರಣೆಗೆ, ಕ್ರಿ.ಶ. ೧೧೨೩ ಹಾಗೂ ಕ್ರಿ.ಶ. ೧೧೯೯ರ ಶಾಸನಗಳಲ್ಲಿ ಮೊದಲನೆಯದು ಉದಯಾದಿತ್ಯ ನಾಯಕರದು, ಎರಡನೆಯದು ಕಾಮಯ್ಯನಾಯಕರದು. ಇವೆರಡರಲ್ಲಿ ಬರುವ ಪ್ರಶಸ್ತಿ ಭಾಗವು ಇವರನ್ನು 'ಮಹಾಸಾಮಂತ, ದಕ್ಷಿಣದಿಶಾವಿಷಯ ಗಡಿಯಂಕಮಲ್ಲ, ಮಾರ್ತಾಂಡದೇವರ ಪಾದಾರಾಧಕ, ಸುವರ್ಣಗರುಡಧ್ವಜ, ಮೂರ್ತಿಮಕರಧ್ವಜ, ರಣಮೂರ್ಖ್ಯಕುಳ ಪ್ರದೀಪ' ಎಂದು ಹೇಳುತ್ತದೆ. ಉದಯಾದಿತ್ಯರು ಚೋಳೇಶ್ವರದೇವರ ವರಲಬ್ಧಪ್ರಸಾದನೆನಿಸಿಕೊಂಡರೆ, ಕಾಮಯ್ಯನಾಯರು ಹಿಡುಂಬೇಸ್ವರದೇವರ ಪಾದಾರಾಧಕ ಎಂದೆನಿಸಿಕೊಂಡಿದ್ದಾರೆ. ಇವನ್ನು ಹೊರತುಪಡಿಸಿದ ಇನ್ನೆರೆಡು ಶಾಸನಗಳಲ್ಲಿ ಕ್ರಿ.ಶ. ೧೧೮೪ರ ಶಾಸನವು ಇರುಗಯ್ಯ-ಉದಯಾದಿತ್ಯ (ಒದ್ದಿಗಾಂಕ)ರದಾಗಿದ್ದು, ಕ್ರಿ.ಶ. ೧೧೮೭ರ ಶಾಸನ ಕಾಮೆಯನಾಯಕ(ಕಾಮಯ್ಯನಾಯಕ)ನದು ಆಗಿದೆ. ಈ ಎರಡರಲ್ಲಿ ಪ್ರಶಸ್ತಿ ಹೀಗೆ ಬಂದಿದೆ, 'ಮಹಾಸಾಮನ್ತ, ವಿಜಯಲಕ್ಷ್ಮೀ ಕಾನ್ತನಹಿತಕೃತಾನ್ತ ರಿಪುಸುದತೀವದನ ಕುವಳಯ ತೀಬ್ರಕಿರಣಂ ವಿದಿತಕೀತ್ಯಾಂಗನಾಭರಣಂ ಸೌಚಗಾಂಗೇಯಂ ಪರಬಳಸಾಧಕಂ ಪರಮಮಹೇಶ್ವರಂ' ಎಂದಿದೆ. ಇರುಗಯ್ಯ-ಉದಯಾದಿತ್ಯರು ಶ್ರೀ ಹಿಡುಂಬೇಶ್ವರ ದೇವರ ಪಾದಾರಾಧಕರಾದರೆ, ಕಾಮಯ್ಯನು ಮಹೇಶ್ವರ ದೇವರ ಪಾದಾರಾಧಕನೆಂದು ಹೇಳಲಾಗಿದೆ. ಇದರಿಂದಾಗಿ ಇವರು ಒಂದೇ ಕುಲದವರೆಂದು ಹೇಗೆ ಪರಿಗಣಿಸುವುದು?

೨. ಮೆದಕೆರೆಪುರದ ಬಳಿಯ ಕ್ರಿ.ಶ. ೧೨೦೦ರ ಶಾಸನವು ಕಾಳಾಯುಕ್ತ ಸಂವತ್ಸರದ್ದಾಗಿದ್ದು ಇದನ್ನು ಡಾ. ಬಿ. ರಾಜಶೇಖರಪ್ಪನವರು ಆ ಕಾಲಕ್ಕೆ ಚಾಳುಕ್ಯರ ಆಡಳಿತಾವಧಿ ಮುಗಿದುಹೋಗಿತ್ತಾದ್ದರಿಂದ, ಅದು ಕ್ರಿ.ಶ. ೧೧೪೦ ರಲ್ಲಿ ಬರುವ ಕಾಳಾಯುಕ್ತ ಸಂವತ್ಸರದ್ದಾಗಿರಬಹುದೆಂದು ಅಭಿಪ್ರಾಯಿಸಿದ್ದಾರೆ. ಆದರೆ ಕ್ರಿ.ಶ. ೧೧೪೦ರ ಅವಧಿಯಲ್ಲಿ ತ್ರಿಭುವನಮಲ್ಲನೆಂಬ ಬಿರುದಾಂಕಿತನಾದ ಚಾಳುಕ್ಯ ಅರಸನಾಗಲೀ, ತ್ರಿಭುವನಮಲ್ಲ ಪಾಂಡ್ಯನೆಂಬ ಸಾಮಂತನಾಗಲೀ ಇರಲಿಲ್ಲವಾದ್ದರಿಂದ ಇದೂ ಸರಿಯಲ್ಲ. ಚಾಲುಕ್ಯರ ನಾಲ್ಕನೇ ಸೋಮೇಶ್ವರನೇ ತ್ರಿಭುವನಮಲ್ಲನೆಂಬ ಬಿರುದಿನವನಾಗಿದ್ದು, ಅವನು ಅಧಿಕಾರದಲ್ಲಿಲ್ಲದಿದ್ದರೂ ಕ್ರಿ.ಶ. ೧೨೨೫ರವರೆಗೂ ಅವನ ಜೀವಿಸಿದ್ದನೆಂದು ತಿಳಿಯಲಾಗಿದೆ. ಇದಲ್ಲದೆ, ಕ್ರಿ.ಶ. ೧೨೧೫ರವರೆಗೆ ಧಾರವಾಡ ಜಿಲ್ಲೆಯ ಮನಗುಂಡಿಯ ೨ ಶಾಸನಗಳು [ಡಾ.ಎಂ.ಎಂ.ಕಲಬುರ್ಗಿ, ಧಾರವಾಡ ತಾಲ್ಲೂಕಿನ ಶಾಸನಗಳು, ಸಂ. ೫೧,೫೨] ಅವನ ಆಳ್ವಿಕೆಯನ್ನು ಉಲ್ಲೇಖಿಸುತ್ತದೆ. ಇನ್ನು ಉಚ್ಚಂಗಿ ಪಾಂಡ್ಯರ ಆಡಳಿತದ ಕೊನೆಯ ಶಾಸನ ಮೆದಕೆರೆಪುರದ ಬಳಿಯ ಶಾಸನವೇ ಆಗಿರುವುದರಿಂದ, ಈ ಶಾಸನದಲ್ಲಿ ಉಲ್ಲೇಖಿಸಿದ ಇಬ್ಬರೂ ಜೀವಂತವಿದ್ದರೆಂದು ದೃಢವಾಗುತ್ತದೆ. ಆದ್ದರಿಂದ ಈ ಶಾಸನದ ಕಾಲವನ್ನು ಕ್ರಿ.ಶ. ೧೨೦೦ ಎಂದೇ ಒಪ್ಪಬಹುದು.

೩. ಒಟ್ಟಾರೆ ಚಿತ್ರದುರ್ಗ ಪರಿಸರದ ೪ ಶಾಸನಗಳಲ್ಲಿ ಸಾಮಂತ ಉದಯಾದಿತ್ಯನಾಯಕರನ್ನು ಕ್ರಿ.ಶ. ೧೧೨೩ರಲ್ಲೊಮ್ಮೆ ಹಾಗೂ ಕ್ರಿ.ಶ. ೧೧೮೩ರಲ್ಲಿ ಇನ್ನೊಮ್ಮೆ ಆಳುತ್ತಿದ್ದುದಾಗಿ ಹೆಸರಿಸಲಾಗಿದೆ. ಕಾಮಯ್ಯನಾಯಕರನ್ನು ಕ್ರಿ.ಶ. ೧೧೮೭ರಲ್ಲೊಮ್ಮೆ ಹಾಗು ಕ್ರಿ.ಶ. ೧೨೦೦ರಲ್ಲಿ ಇನ್ನೊಮ್ಮೆ ಆಳುತ್ತಿದ್ದುದಾಗಿ ದಾಖಲಿಸಿದೆ. ಕಾಲಾವಧಿಯ ದೃಷ್ಟಿಯಿಂದ ಉದಯಾದಿತ್ಯನಾಯಕರು ಇಬ್ಬರಿದ್ದರೆಂದು ಭಾವಿಸಲು ಅವಕಾಶವಿದೆ. ಆದರೆ ಒಂದು ಶಾಸನವು ಉದಯಾದಿತ್ಯ ನಾಯಕರು ಕಾಮಯ್ಯನಾಯಕನಿಗೆ ತಂದೆಯೆಂತಲೂ ಇನ್ನೊಂದರಲ್ಲಿ ಅಜ್ಜನೆಂತಲೂ ಹೇಳಿದೆ. ಈ ಎರಡು ಶಾಸನಗಳ ಕಾಲವಾಧಿಯ ಅಂತರ ಕೇವಲ ೧೩ ವರ್ಷಗಳಷ್ಟೇ ಇದೆ. ಈ ಅಂತರದಲ್ಲಿ, ಡಾ.ಬಿ.ರಾಜಶೇಖರಪ್ಪನವರು ನೀಡಿದ ವಂಶಾವಳಿಯಂತೆ ತೆಗೆದುಕೊಂಡಾಗ, ೪ ತಲೆಮಾರುಗಳ ಆಳ್ವಿಕೆ ಬಂದು ಹೋಗುತ್ತದೆ. ಇದು ಅವಾಸ್ತವಿಕ. ಆದ್ದರಿಂದ ಇದೊಂದು ಸದ್ಯಕ್ಕೆ ಸಮಸ್ಯೆಯಾಗಿಯೇ ಉಳಿಯುತ್ತದೆ.

ಸದ್ಯಕ್ಕೆ ಲಭ್ಯವಿರುವ ಆಕರಗಳಲ್ಲಿ ಇಷ್ಟು ಮಾಹಿತಿ ಲಭ್ಯವಿದ್ದು, ಈ ವಂಶದ ಮೇಲೆ ಇನ್ನೂ ಸ್ಪಷ್ಟ ಹಾಗೂ ನಿಖರ ಮಾಹಿತಿಯನ್ನು ನೀಡುವ ಶಾಸನಗಳಾಗಲೀ ಅಥವಾ ಇತರೆ ಸಾಹಿತ್ಯವಾಗಲೀ ಸಿಕ್ಕಲ್ಲಿ ರಣಮೂರ್ಖ್ಯ ವಂಶದ ಬಗ್ಗೆ ಪೂರ್ಣ ಬೆಳಕು ಚೆಲ್ಲಬಹುದು.

ಮಂಡ್ಯ ಜಿಲ್ಲೆಯ ಶಾಸನಗಳಲ್ಲಿ ವಲಸಿಗರು

ಧನುಷ್ ಎಚ್. ಶೇಖರ್*

ಮನುಷ್ಯ ವ್ಯವಸ್ಥಿತವಾಗಿ ಬದುಕು ಸಾಗಿಸಬೇಕಾದರೆ ಅವನಿಗೊಂದು ಉತ್ತಮವಾದ ಸಮಾಜ ಅನಿವಾರ್ಯವಾಗಿರುತ್ತದೆ. ಮನುಷ್ಯ ತಾನು ಬದುಕುವ ಸಮಾಜ ಅವನಿಗೆ ಅನುಕೂಲಕರವಾಗಿಯೂ, ನೆಮ್ಮದಿಯ ನೆಲೆಯಾಗಿಯೂ ಇರಬೇಕೆಂದು ಬಯಸುವುದು ಸಹಜ. ಈ ಅನುಕೂಲಕರವಾದ ಜೀವನ ಅವನು ಬದುಕುತ್ತಿರುವ ಸಮಾಜದಲ್ಲಿ ಸಾಧ್ಯವಾಗದಿದ್ದಾಗ ಆ ಪ್ರದೇಶದಿಂದ ದೂರವಾಗಿ ಅವನಿಗೆ ಅನುಕೂಲಕರವಾಗಿರುವಂತಹ ಪ್ರದೇಶಕ್ಕೆ ಮುಖ ಮಾಡುವುದು ಮನುಷ್ಯನ ಮೂಲಭೂತವಾದ ಪ್ರವೃತ್ತಿಯಾಗಿದೆ.

ಈ ರೀತಿ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ರಾಜಕೀಯ ಪ್ರೇರಣೆ–ಪ್ರಭಾವಗಳಿಂದಲೋ, ಧಾರ್ಮಿಕ ಕಟ್ಟಳೆಗಳಿಂದಲೋ ಅಥವಾ ಮತ್ಯಾವುದೋ ವೈಯಕ್ತಿಕ ಕಾರಣಗಳಿಂದಲೋ ಮನುಷ್ಯ ಸ್ಥಳಾಂತರ ಹೊಂದುವುದನ್ನು ನಾವು ವಿಶಾಲ ಅರ್ಥದಲ್ಲಿ 'ವಲಸೆ' ಎಂದು ಕರೆಯುತ್ತೇವೆ. ಆದಿ ಮಾನವನ ಅನ್ನದ ಹುಡುಕಾಟದಿಂದ ಈ ವಲಸೆ ಎಂಬ ಇತಿಹಾಸವು ಮೊದಲಾಯಿತು ಎಂದು ಹೇಳಬಹುದು.

ಪ್ರಸ್ತುತ ಈ ಲೇಖನದ ಮುಖ್ಯ ಉದ್ದೇಶ ಮಂಡ್ಯ ಜಿಲ್ಲೆಯ ಶಾಸನಗಳಲ್ಲಿ ಬೇರೆ ಬೇರೆ ಕಾರಣಗಳಿಂದ ವಲಸೆ ಬಂದವರ ಮೇಲೆ ಬೆಳಕು ಚೆಲ್ಲುವುದೇ ಆಗಿದೆ. ಅಧ್ಯಯನದ ದೃಷ್ಟಿಯಿಂದ ೧. ಧಾರ್ಮಿಕ ವಲಸಿಗರು, ೨. ವೃತ್ತಿಪರ ವಲಸಿಗರು ಎಂದು ವಿಭಾಗಿಸಿಕೊಳ್ಳಲಾಗಿದೆ.

೧. ಧಾರ್ಮಿಕ ವಲಸಿಗರು: ನಮ್ಮ ದೇಶದಲ್ಲಿ ಧರ್ಮಕ್ಕೆ ಬಹಳ ಹಿಂದಿನಿಂದಲೂ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಲಾಗಿದೆ. ಧರ್ಮದ ಪ್ರಭಾವಕ್ಕೆ ಶಾಸನಗಳು, ಕಾವ್ಯಗಳೂ ಸಹ ಹೊರತಾಗಿಲ್ಲ. ಮಂಡ್ಯ ಜಿಲ್ಲೆಯ ಪ್ರದೇಶದಲ್ಲಿ ವೈದಿಕಧರ್ಮ, ಜೈನ ಧರ್ಮ, ಶ್ರೀವೈಷ್ಣವ ಧರ್ಮ ಹೆಚ್ಚಾಗಿ ಕಾಣಿಸಿಕೊಂಡಿದೆ. ಈ ಧರ್ಮಿಯರ ವಲಸೆಯನ್ನು ಕೆಲವು ಶಾಸನಗಳ ಮುಖಾಂತರ ಗುರುತಿಸಬಹುದಾಗಿದೆ.

ರಾಮಾನುಜಾಚಾರ್ಯರು ೧೧ ಮತ್ತು ೧೨ನೇ ಶತಮಾನದಲ್ಲಿ ಆಗಿಹೋದ ಒಬ್ಬ ಮಹಾನ್ ಮೇಧಾವಿಗಳು. ಸಮಾನತೆಯನ್ನು ಗುರಿಯಾಗಿರಿಸಿಕೊಂಡು ಹಲವಾರು ಕಡೆ ಸಂಚರಿಸಿ ಸಮಾಜದಲ್ಲಿನ ಮೇಲುಕೀಳುಗಳನ್ನು ಬುಡಮೇಲು ಮಾಡಲು ಪ್ರಯತ್ನಿಸಿದವರು. ಹೀಗೆ ರಾಮಾನುಜರು ಕರ್ನಾಟಕಕ್ಕೂ ಬಂದು ಮಂಡ್ಯ ಜಿಲ್ಲೆಯ ತೊಣ್ಣೂರು ಮತ್ತು ಮೇಲುಕೋಟೆಯಲ್ಲಿ ಕೆಲವು ವರ್ಷಗಳ ಕಾಲ ವಾಸಿಸಿದ್ದರು ಎಂಬುದು ತಿಳಿದುಬರುತ್ತದೆ.

ರಾಮಾನುಜರು ತಮಿಳುನಾಡಿನ ಶ್ರೀವೈಷ್ಣವ ಕೇಂದ್ರವಾದ ಶ್ರೀರಂಗಂನಿಂದ ಕನ್ನಡ ನಾಡಿಗೆ ಕ್ರಿ.ಶ. ೧೦೯೬ರಲ್ಲಿ ಬಂದರು[೧]. ಆದರೆ ರಾಮಾನುಜರು ಇಲ್ಲಿಗೆ ಬರುವಾಗ ಅವರೊಬ್ಬರೆ ಬಂದರೆ? ಅಥವಾ ಅವರ ಅನುಯಾಯಿಗಳು ಅವರೊಂದಿಗೆ ಬಂದಿದ್ದರೆ? ಎಂಬ ಪ್ರಶ್ನೆಗಳು ಮೂಡುತ್ತವೆ. ಸುಂ.ಕಂ.ಗೋವರ್ಧನ ಅವರು ಗುರುತಿಸುವಂತೆ ರಾಮಾನುಜಾಚಾರ್ಯರು ಕನ್ನಡ ನಾಡಿಗೆ ಬಂದದ್ದು ಮತ ಪ್ರಚಾರಕ್ಕಾಗಿ.[೨] ಅವರು ಶ್ರೀರಂಗದಲ್ಲಿ ಇದ್ದುಕೊಂಡು ಸುಮಾರು ವರ್ಷಗಳ ಕಾಲ ಶ್ರೀವೈಷ್ಣವ ಮತಪ್ರಚಾರವನ್ನು ಮಾಡಿದ ನಂತರದಲ್ಲಿ ಶ್ರೀವೈಷ್ಣವ ಧರ್ಮವನ್ನು ಮತ್ತಷ್ಟು ಪ್ರಬಲಗೊಳಿಸಬೇಕಾದ ಕಾರಣ ತಮಿಳುನಾಡಿನಷ್ಟೇ ಸಂಪದ್ಭರಿತವಾದ ಕನ್ನಡನಾಡಿನಲ್ಲಿ ತಮ್ಮ ಮತಪ್ರಚಾರವನ್ನು ಮುಂದುವರಿಸಲು ತೊಡಗಿದರು.

ಅದರಂತೆ ಅವರು ಮೊದಲು ಕಾವೇರಿ ನದಿ ತೀರದ ಸಾಲಿಗ್ರಾಮಕ್ಕೆ ಬಂದು ಅಲ್ಲಿಂದ ಮಂಡ್ಯ ಜಿಲ್ಲೆಯ ತೊಣ್ಣೂರಿಗೆ ಬಂದರು. ತೊಣ್ಣೂರು ೧೧೨೭ರ ವೇಳೆಗೆ ರಾಜಧಾನಿಯಾಗಿದ್ದ ಊರು.[೩] ಇದನ್ನು ಯಾದವಪುರ ಎಂದು ಕರೆಯಲಾಗುತ್ತಿತ್ತು.

* ಸಂಶೋಧನಾ ವಿದ್ಯಾರ್ಥಿ, ಡಾ. ಡಿ.ವಿ. ಗುಂಡಪ್ಪ ಕನ್ನಡ ಅಧ್ಯಯನ ಕೇಂದ್ರ, ತುಮಕೂರು ವಿಶ್ವವಿದ್ಯಾಲಯ.

ಸಾಕಷ್ಟು ಪ್ರಸಿದ್ಧವಾದ ಊರಿನಲ್ಲಿ ಮತಪ್ರಚಾರಕ್ಕೆ ಕಷ್ಟಕರವಾಗಿರಲಿಲ್ಲ. ತೊಣ್ಣೂರಿನ ಶಾಸನಗಳಲ್ಲಿ ಮೂರು ಪ್ರಮುಖವಾದ ದೇವಾಲಯಗಳನ್ನು ಗುರುತಿಸಬಹುದಾಗಿದೆ. ಈ ಮೂರು ದೇವಾಲಯಗಳು ಕೂಡ ಶ್ರೀವೈಷ್ಣವ ಧರ್ಮಕ್ಕೆ ಸೇರಿದ ದೇವಾಲಯಗಳೇ ಆಗಿದೆ. ಅವುಗಳು ಯೋಗನರಸಿಂಹ, ಲಕ್ಷ್ಮೀನಾರಾಯಣ ಮತ್ತು ಶ್ರೀಕೃಷ್ಣ ದೇವಾಲಯಗಳು. ಈ ದೇವಾಲಯಗಳನ್ನು ನಿರ್ಮಿಸಿದವರು ಅವುಗಳಿಗೆ ದಾನ–ದತ್ತಿಗಳನ್ನು ನೀಡಿ ಪೋಷಿಸಿದವರೆಲ್ಲರೂ ಸಹ ಶ್ರೀವೈಷ್ಣವರೇ. ಅದರಲ್ಲಿಯೂ ಇವರೆಲ್ಲರೂ ಈ ನಾಡಿನವರಾಗಿರದೆ ವಲಸಿಗರೇ ಆಗಿದ್ದಾರೆ. ಇವರುಗಳು ಮೂಲತಃ ತಮಿಳುನಾಡಿನ ಮೂಲದವರೆಂದು ಊಹಿಸಬಹುದಾಗಿದೆ. ಇವರು ಈ ದೇವಾಲಯಗಳನ್ನು ಲಕ್ಷ್ಮೀನಾರಾಯಣ ಪೆರುಮಾಳ್, ವೀಜೆರುನ್ದ ಪೆರುಮಾಳ್ ಹಾಗೂ ಸ್ಲಿಜ್ಗಪೆರುಮಾಳ್ ದೇವರುಗಳೆಂದು ಇಲ್ಲಿನ ತಮಿಳು ಮತ್ತು ಕನ್ನಡ ಶಾಸನಗಳು ಕರೆದಿವೆ.

ಇಲ್ಲಿರುವ ನರಸಿಂಹ ದೇವಾಲಯಕ್ಕೆ ಇಳೈಯಬಿರಾನ್ ಭಟ್ಟನ್ ಮತ್ತು ಅವನ ಹೆಂಡತಿ ಆಂಡಾಳ್ ಎಂಬ ದಂಪತಿಗಳು ಹತ್ತು ಹೊನ್ನು ಹಣವನ್ನು ಪುದುವಟ್ಟಾಗಿ ಇಟ್ಟು, ವೆಣ್ಣೈಕ್ಕೂತ್ತಪ್ಪಿಳ್ಳೈ ದೇವರಿಗೆ ಇದರ ಬಡ್ಡಿ ಹಣದಲ್ಲಿ ನೈವೇದ್ಯವಾಗುವಂತೆ ಕಾಣಿಕೆ ಸಲ್ಲಿಸಿದ್ದಾರೆ.[೪] ಈ ಆಂಡಾಳ್ ಎಂಬವಳು ಕ್ರಿ.ಶ. ೧೧೫೨ರ ಶಾಸನದ ಪ್ರಕಾರ ಕೃಷ್ಣಜಯಂತಿಯನ್ನು ನಡೆಸಲು ಆರು ಹೊನ್ನನ್ನು ದೇವಾಲಯಕ್ಕೆ ಪುದುವಟ್ಟಾಗಿ ಇಟ್ಟಿರುವುದು ಕಂಡುಬರುತ್ತದೆ. ಈ ಶಿಂಗಪ್ಪೆರುಮಾಳ್ ದೇವಾಲಯವನ್ನು ಚೊಕ್ಕಾಂಡೈ ಪೆರ್ಗಡಿಯು ೧೧೫೨ರಲ್ಲಿ ನಿರ್ಮಿಸಿದನು. ಅಂದರೆ ಈ ದೇವಾಲಯ ೧೧೫೨ರ ಹೊತ್ತಿಗೆ ನಿರ್ಮಾಣಗೊಂಡಿದ್ದು ಇದಕ್ಕೆ ಅನೇಕ ಜನ ವಲಸಿಗ ಶ್ರೀವೈಷ್ಣವರು ದತ್ತಿಗಳನ್ನು ಇಟ್ಟು ಹಬ್ಬ–ಜಯಂತಿಗಳನ್ನು ಆಚರಿಸುತ್ತಿದ್ದರು ಎನ್ನಬಹುದು.

ಕಾರಿಕುಡಿ ಕೂತ್ತಾಂಡಿ ದಂಡನಾಯಕನು ೧೧೫೭ ಸೆಪ್ಟೆಂಬರ್ ೨೭ರಂದು ವಿತ್ತಿರುಂದಪೆರುಮಾಳ (ಶ್ರೀಕೃಷ್ಣ) ದೇವಾಲಯವನ್ನು ಶ್ರೀಲಕ್ಷ್ಮೀ, ಶ್ರೀಭೂಮಿ ಸಹಿತವಾಗಿ ಪ್ರತಿಷ್ಠಾಪಿಸಿ ಅದಕ್ಕೆ ಬೆಟ್ಟಹಳ್ಳಿ ಗ್ರಾಮವನ್ನು ದಾನವಾಗಿ ಬಿಟ್ಟ ವಿಷಯವನ್ನು ತಿಳಿಸುತ್ತದೆ.[೫] ಈ ಕೂತ್ತಾಂಡಿ ದಂಡನಾಯಕನ ತಂದೆ ಕಾರಿಕುಡಿ ಉಲಗಮುಣ್ಡಾನ್ ಎಂದು ಒಂದು ತಮಿಳು ಶಾಸನ ಉಲ್ಲೇಖಿಸುತ್ತದೆ[೬] ಈ ದೇವಾಲಯಕ್ಕೆ ಮುಡಿಗೊಂಡ ಚೋಳಪುರದ ನಾರಾಯಣಭಟ್ಟನ ಮಗ ಉಡಯಪಿಳ್ಳೈ, ಕೋದೈಯಾಣ್ಡಾಳಮ್ಮೈ, ಕುಜ್ಜಪ್ಪವಿಲ್ ಸೀತೈಯಾಣ್ಡಾಳ್ ಇನ್ನೂ ಮುಂತಾದವರು ಹಲವು ರೀತಿಯ ದಾನ–ದತ್ತಿಗಳನ್ನು ನೀಡಿರುವ ವಿಚಾರವನ್ನು ಇಲ್ಲಿನ ಅನೇಕ ಶಾಸನಗಳು ತಿಳಿಸುತ್ತದೆ. ಇದಲ್ಲದೆ ಯಾದವನಾರಾಯಣ ಚತುರ್ವೇದಿ ಮಂಗಲ ಅಗ್ರಹಾರದ ಮಹಾಜನರು ಸಹ ದಾನ ನೀಡಿರುವುದನ್ನು ಗುರುತಿಸಬಹುದಾಗಿದೆ. ಈ ಅಗ್ರಹಾರದ ಬಹುತೇಕರು ಶ್ರೀವೈಷ್ಣವರೇ ಎಂಬುದು ಗಮನಾರ್ಹ.

ತೊಣ್ಣೂರಿನ ಕೈಲಾಸೇಶ್ವರ (ಕೈಲಾಸಮುಡೈಯಾರ್) ದೇವಾಲಯದ ಸ್ಥಾನಪತಿಗಳನ್ನು ಹೆಸರಿಸುವ ಹಲವು ಶಾಸನಗಳಿವೆ. ದೇವನ್ದೈ ಪುಡೋಲಾಣ್ಡೆ ಚೆಟ್ಟಿಯಾರ್ ಎಂಬುವನು ನಾಲ್ಕು ಹೊನ್ನು ಹಣವನ್ನು ದೇವಾಲಯದ ನಂದಾದೀವಿಗೆಗಾಗಿ ದತ್ತಿ ಇಟ್ಟ ವಿಷಯವನ್ನು ತಿಳಿಸುತ್ತಾ, ಕೈಲಾಸೇಶ್ವರ ದೇವಾಲಯದ ಸ್ಥಾನಪತಿಯಾದ ಕೂತ್ತಬಟ್ಟರ ಮಗ ಆಳುಡೈಯಾನ್ ಬಟ್ಟನನ್ನು ಹೆಸರಿಸುತ್ತದೆ.[೭] ಇದೇ ದೇವಾಲಯದ ಮತ್ತೊಂದು ಶಾಸನ ಆಳುಡೈಯಾನ್ ಬಟ್ಟರ ಜೊತೆಗೆ ಮಹದೇವನ್ ಭಟ್ಟನ್, ಆಳ್ವಾನ್‌ಭಟ್ಟನ್, ತಳುವಕ್ಕುಟ್ಟೈನ್ದಾನ್‌ಬಟ್ಟನ್ ಎಂಬ ಇನ್ನಿತರ ಸ್ಥಾನಪತಿಗಳನ್ನು ಸೂಚಿಸಿದೆ. ಇಲ್ಲಿ ಸುಂಕಂ ಗೋವರ್ಧನ ಅವರ ಮಾತನ್ನು ಉಲ್ಲೇಖಿಸಬೇಕು "ರಾಮಾನುಜರು ಕೇವಲ ತಾವೊಬ್ಬರೆ ಕನ್ನಡ ನಾಡಿಗೆ ಬರಲಿಲ್ಲ. ಅವರೊಂದಿಗೆ ಒಂದು ತಂಡವೇ ಬಂದಿತ್ತು. ಅಲ್ಲಲ್ಲಿ ಕೆಲವು ಪ್ರಮುಖರು ತಂಗುವುದರ ಮೂಲಕ ಶ್ರೀಮತದ ಪತಾಕೆಯನ್ನು ಇಲ್ಲೆಲ್ಲಾ ಹಾರಿಸಿದರು. ಕೆಲವು ರಾಮಾನುಜರಿಗೆ ಮುನ್ನವೇ ಇಲ್ಲಿಗೆ ಬಂದು ಇಲ್ಲಿ ಸೂಕ್ತವಾದ ಸನ್ನಿವೇಶಗಳನ್ನು ನಿರ್ಮಿಸಿದ್ದರು ಎಂದು ಹೇಳುವುದಕ್ಕೆ ಯಾವುದೇ ಅಡ್ಡಿಯಿಲ್ಲ"[೮] ಗೋವರ್ಧನ ಅವರ ಅಭಿಪ್ರಾಯದಂತೆ ಇಲ್ಲಿ ರಾಮಾನುಜಾಚಾರ್ಯರ ಅನುಯಾಯಿಗಳು ನೆಲೆನಿಂತಿರುವುದನ್ನು ಕಾಣಬಹುದಾಗಿದೆ. ರಾಮಾನುಜರು ತೊಂಡನೂರಿನಲ್ಲಿ ಇದ್ದರು ಎಂದು ಹೇಳಲು ಅವರ ಸಮಕಾಲೀನ ಯಾವ ಶಾಸನಗಳು ಇಲ್ಲದಿದ್ದರೂ ಅವರ ಕಾಲಾನಂತರದ ಶಾಸನಗಳ ಉಲ್ಲೇಖಗಳಿಂದ ರಾಮಾನುಜರ ಇರುವನ್ನು ತಿಳಿಯಬಹುದಾಗಿದೆ.

ಹದಿನಾಲ್ಕನೆಯ ಶತಮಾನದ ಗ್ರಂಥಲಿಪಿಯ ಶಾಸನವೊಂದು ಅಗ್ರಹಾರದ ಮಹಾಜನರು ರಾಮಾನುಜ ಮಠಕ್ಕೆ ಭೂದಾನ ನೀಡಿರುವ ವಿಷಯ ತಿಳಿಸುತ್ತದೆ.[೯] ಡಾ. ಶೆಲ್ವಪಿಳ್ಳೆ ಅಯ್ಯಂಗಾರ್ ಅವರು "ಮಠವಿತ್ತೆಂದರೆ ಅದು ಶ್ರೀರಾಮಾನುಜರು ಇದ್ದ ಮಠವಾಗಿರಬೇಕು" ಎಂದು ಊಹಿಸಿದ್ದಾರೆ.[೧೦] ಇದೇ ರೀತಿ ಮೇಲುಕೋಟೆಯಲ್ಲಿಯೂ ಸಹ ಯತಿರಾಜ ಮಠ ಎಂಬ ಹೆಸರಿನ ಮಠವೊಂದಿದ್ದು, ಅಲ್ಲಿ ರಾಮಾನುಜರು ವಾಸವಾಗಿದ್ದರು ಎಂದು ಹೇಳಲಾಗುತ್ತದೆ. ಆದರೆ ಇದಕ್ಕೂ ಸಹ ಯಾವುದೇ ಶಾಸನಾಧಾರಗಳಿಲ್ಲ. ಮೇಲುಕೋಟೆಯ ನಾರಾಯಣಸ್ವಾಮಿ ದೇವಾಲಯದ ಶಾಸನವೊಂದು ರಾಮಾನುಜರನ್ನು

'ಮಾಯಾವಾದಿಕೋಲಾಹಳ ಮಂತ್ರವಾದಿ ಭಯಂಕರ ಶರಣಾಗತ ವಜ್ರಪಂಜರ ಉಭಯವೇದಾಂತಾಚಾರ್ಯ ಅಭಂಗಗರುಡ ವೇದಮಾರ್ಗಪ್ರತಿಷ್ಠಾಚಾರ್ಯ" ಎಂದೆಲ್ಲ ಹೊಗಳಿ ಅವರ ಪ್ರಿಯಶಿಷ್ಯರಾದ ಅಯವತಿಬ್ಬರು ಅಯ್ಯನವರು ಎಂದು ಉಲ್ಲೇಖಿಸುತ್ತದೆ. ಈ ಐವತ್ತೆರಡು ಜನರ ಉಲ್ಲೇಖ ಇಲ್ಲಿನ ಅನೇಕ ಶಾಸನಗಳಲ್ಲಿ ಕಂಡುಬರುತ್ತದೆ. ದೇವಾಲಯದಿಂದ ಯಾರಿಗಾದರೂ ದಾನ ನೀಡುವಲ್ಲಿ ಅಥವಾ ದೇವಾಲಯಕ್ಕೆ ದಾನ-ದತ್ತಿಗಳನ್ನು ಪಡೆಯುವಲ್ಲಿ ಈ ಐವತಿಬ್ಬರ ಒಪ್ಪ ಇರಲೇಬೇಕೆಂಬುದನ್ನು ಇಲ್ಲಿನ ಅನೇಕ ಶಾಸನಗಳು ಖಚಿತಪಡಿಸುತ್ತವೆ.

ಈ ಐವತ್ತೆರಡು ಜನರು ತಮಿಳುನಾಡಿನಿಂದ ರಾಮಾನುಜಾಚಾರ್ಯರ ಜೊತೆಯಲ್ಲಿ ಬಂದ ಶ್ರೇಷ್ಠಪಂಡಿತರು. ಇವರನ್ನು ಇಲ್ಲಿನ ಪೂಜಾಕಾರ್ಯ ಕೆಲಸಗಳನ್ನು ಕೈಗೊಳ್ಳುವಂತೆ ನೇಮಿಸಿದರು. ಇವರ ಆಡಳಿತ ಅಧಿಕಾರದ ವ್ಯಾಪ್ತಿಯನ್ನು ತಿಳಿಯಲು ಇಲ್ಲಿನ ಒಂದು ಶಾಸನವನ್ನು ಗಮನಿಸಬಹುದಾಗಿದೆ.[೧೧]

ಧಾರ್ಮಿಕ ವಲಸೆಗಳಲ್ಲಿ ಬ್ರಾಹ್ಮಣರ ವಲಸೆ ಪ್ರಮುಖವಾದದ್ದು. ಪ್ರಭುತ್ವ ಅಧಿಕಾರ ಕೇಂದ್ರಿತವಾದರೆ ಬ್ರಾಹ್ಮಣರು ಬೌದ್ಧಿಕ ಕೇಂದ್ರಿತವಾಗಿದ್ದರು. ಬುದ್ಧಿ ಮತ್ತು ಅಧಿಕಾರ ಒಂದೆಡೆ ಸೇರಿ ಇಡೀ ಸಮಾಜವನ್ನು ನಿಯಂತ್ರಿಸುತ್ತಿತ್ತು. ಗ್ರಾಮಗಳನ್ನು ಅಗ್ರಹಾರಗಳಾಗಿ ಪರಿವರ್ತಿಸಿ ವೇದಶಾಸ್ತ್ರ ಪಾರಂಗತರಾದ ಬ್ರಾಹ್ಮಣರಿಗೆ ದಾನ ನೀಡಿದರೆ ಪುಣ್ಯ ಲಭಿಸುವುದೆಂಬ ಭಾವನೆಯಿಂದ ರಾಜರೂ, ರಾಣಿಯರೂ, ಅಧಿಕಾರಿಗಳು, ಅಗ್ರಹಾರಗಳ ನಿರ್ಮಾಣಕ್ಕೆ ಮುಂದಾದರು. ಈ ರೀತಿ ನಿರ್ಮಾಣಗೊಂಡ ಅಗ್ರಹಾರಗಳಿಗೆ ನಾನಾಗೋತ್ರದ, ನಾನಾಸೂತ್ರದ, ನಾನಾ ಶಾಖೆಗಳ ಬ್ರಾಹ್ಮಣರನ್ನು ರಾಜರು ಬೇರೆ ಬೇರೆ ಪ್ರದೇಶಗಳಿಮದ ಕರೆತಂದು ಅವರಿಗೆ ಅಗ್ರಹಾರಗಳನ್ನು ದಾನವಾಗಿ ನೀಡುತ್ತಿದ್ದರು. ಪ್ರಸ್ತುತ ಮಂಡ್ಯ ಜಿಲ್ಲೆಯಲ್ಲಿಯೂ ಸಹ ಅನೇಕ ಅಗ್ರಹಾರಗಳು ಕಂಡುಬರುತ್ತವೆ. ಆದರೆ ಹೊರಗಡೆಯಿಂದ ಬಂದವರನ್ನು ತಿಳಿಸುವುದು ಕೆಲವು ಶಾಸನಗಳು ಮಾತ್ರ.

ತೊಣ್ಣೂರಿನ ೧೭೨೨ರ ಮೈಸೂರು ದೊರೆ ಎರಡನೆ ಕೃಷ್ಣರಾಜನ ಶಾಸನ ತೊಣ್ಣೂರು ಮತ್ತು ಅತ್ತಿಕುಪ್ಪೆಯನ್ನು ಅಗ್ರಹಾರವಾಗಿ ಪರಿವರ್ತಿಸಿ ೧೧೨ ವೃತ್ತಿಗಳಾಗಿ ವಿಂಗಡಿಸಿ ಬೇರೆ ನಾಡುಗಳಿಂದ ಕರೆತಂದ ಬ್ರಾಹ್ಮಣರಿಗೆ ದಾನವಾಗಿ ನೀಡಿದ ವಿಷಯವನ್ನು ತಿಳಿಸುತ್ತದೆ.[೧೨]

೧೬೭೩ರ ಹೊಂದಲಗೆರೆಯ ಶಾಸನವು ಅಕಜಾಯಪುರದ ಹಿರಿಯಂಣಪಂಡಿತರ ಪೌತ್ರರೂ ಅಪ್ಪಾಜಿಪಂಡಿತರ ಪುತ್ರರೂ ಆದ ರಾಮಾಜಯ್ಯ ವಿರುಪಾಕ್ಷಯ್ಯ ಗೋವಿಂದಯ್ಯನವರಿಗೆ ಮೈಸೂರು ನರಸರಾಜ ಒಡೆಯರ ಪುತ್ರರಾದ ಚಾಮರಾಜ ಒಡೆಯರು ಹಲವು ಹಳ್ಳಿಗಳನ್ನು ದಾನವಾಗಿ ಬಿಟ್ಟಿರುವುದನ್ನು ತಿಳಿಸುತ್ತದೆ.[೧೩] ಈ ಅಕಜಾಯಪುರ ಎಂಬುದು ಎಲ್ಲಿಯದೋ ತಿಳಿಯುವುದಿಲ್ಲ ಮತ್ತು ಈ ಸುತ್ತಮುತ್ತಲ ಪ್ರದೇಶದಲ್ಲಿಯೂ ಸಹ ಕಂಡುಬರುವುದಿಲ್ಲ.

೧೫೦೬ರ ಮಳವಳ್ಳಿಯ ಮುಟ್ಲಹಳ್ಳಿ ಶಾಸನವೂ ಸಹ ಕಾಶ್ಯಪಗೋತ್ರದ ಅಪಸ್ತಂಭ ಸೂತ್ರದ ಯಜುಃಶಾಖೆಯ ಆಲಿಕೊಂಡ ತಿರುಮಲಭಟ್ಟರ ಮಕ್ಕಳಾದ ನಾಗಾಭಟ್ಟರಿಗೆ ಏಕಸ್ವಾಮ್ಯದ ಅಗ್ರಾಹಾರವಾಗಿ ಮಾಡಿ ಎಲ್ಲ ರೀತಿಯ ಜಾತಿತೆರಿಗೆ, ಸಮಯತೆರಿಗೆ ಮೊದಲಾದ ಸಕಲ ತೆರಿಗೆಯ ಸುಂಕವನ್ನು ನಾಗಾಭಟ್ಟರಿಗೆ ಅನುಭವಿಸಿಕೊಂಡು ಬರಲು ಬಿಟ್ಟ ವಿಷಯವನ್ನು ತಿಳಿಸುತ್ತದೆ.[೧೪] ಪ್ರಭುತ್ವ ಹೇಗೆ ಬ್ರಾಹ್ಮಣರ ವಲಸೆಗೆ ಅನುವು ಮಾಡಿಕೊಟ್ಟಿದೆ ಎಂಬುದನ್ನು ಈ ಎಲ್ಲಾ ಶಾಸನಗಳ ಮುಖೇನ ಗಮನಿಸಬಹುದಾಗಿದೆ. ಒಟ್ಟಾರೆಯಾಗಿ ಈ ಪ್ರದೇಶಕ್ಕೆ ಹಲವಾರು ಜನರು ಧಾರ್ಮಿಕ ಕಾರಣಗಳಿಂದಾಗಿ ವಲಸೆಗೊಂಡಿರುವುದನ್ನು ಗುರುತಿಸಬಹುದಾಗಿದೆ.

ವೃತ್ತಿಪರ ವಲಸಿಗರು: ವೃತ್ತಿಯನ್ನು ಆಧರಿಸಿ ಅನೇಕ ಜನರು ಈ ಪ್ರದೇಶಕ್ಕೆ ವಲಸೆ ಬಂದಿರುವುದನ್ನು ಗಮನಿಸಬಹುದು. ವ್ಯಾಪಾರವನ್ನು ಅವಲಂಭಿಸಿದ ವರ್ತಕರು, ರಾಜನ ಆಶ್ರಯದ ಅಧಿಕಾರಿಗಳು, ಕೆಲವೊಮ್ಮೆ ಕವಿ ಹಾಗೂ ಕಂಡರಣೆಕಾರರು ವಲಸೆ ಬಂದಿರುವುದನ್ನು ಕಾಣಬಹುದು. ಫಲವತ್ತಾದ ಭೂಪ್ರದೇಶದಿಂದ ಕೂಡಿದ ಈ ಜಿಲ್ಲೆ ಸಂಪದ್ಭರಿತವಾಗಿಯೂ ಇದ್ದ ಕಾರಣ ಕೇವಲ ಸ್ಥಳೀಯರನ್ನಲ್ಲದೆ ಹೊರಗಿನವರಿಗೂ ಆಕರ್ಷಿಸಿತು. ಹೆಚ್ಚು ಪ್ರಮಾಣದಲ್ಲಿ ಹೊರಗಿನವರು ಬರುತ್ತಿದ್ದ ಕಾರಣ ಅವರಿಗೆ ವಸತಿ ವ್ಯವಸ್ಥೆ ಮಾಡಲಾಗಿ ನಗರೀಕರಣ ಪ್ರಕ್ರಿಯೆ ಬಹಳ ಚುರುಕಾಗಿ ಸಾಗಿತು. ಇದು ಈ ಪ್ರದೇಶದ ಅಭಿವೃದ್ಧಿಗೂ ಸಾಕಾರವಾಯಿತು.

ಅಧಿಕಾರಿಗಳ ವಲಸೆ: ವೈದ್ಯನಾಥಪುರದ ತಮಿಳು ಶಾಸನ ೧೨೭೯ಕ್ಕೆ ಸೇರುತ್ತದೆ. ಇದರಲ್ಲಿ ಮಹಾಪಸಾಯಿತ ಪರಮವಿಶ್ವಾಸಿ ತಿರುವಿನ್ದಳೂರಿನ ಪ್ರಯಾಗ್ಯೆ ಪೆರುಮಾಳ್ ದಣ್ಣಾಯಕನನ್ನು ಹೆಸರಿಸುತ್ತದೆ. ಇವನು ಇಲ್ಲಿನ ವೈದ್ಯನಾಥ ಮುಡೈಯಾರ್ ದೇವಾಲಯದ ನಂದಾದೀವಿಗೆಗೆ ದೇವದಾನ ನೀಡಿದ್ದಾನೆ. ಈತ ತಿರುವಿನ್ದಳೂರು ಎಂಬಲ್ಲಿಂದ ಬಂದ

ಅಧಿಕಾರಿಯಾಗಿದ್ದಾನೆ. ತಮಿಳುನಾಡಿನಲ್ಲಿ ಇದೇ ಹೆಸರಿನ ಊರು ಇಂದಿಗೂ ಇರುವುದರಿಂದ ಇವನೇ ಅಲ್ಲಿಂದಲೇ ಬಂದಿರಬಹುದೆಂದು ಊಹಿಸಬಹುದಾಗಿದೆ. ಎಪಿಗ್ರಾಫಿಯ ಕರ್ನಾಟಿಕ ಪೀಠಿಕೆಯಲ್ಲಿಯು ಸಹ 'ಆತನು ತಮಿಳು ಪ್ರಾಂತದಿಂದ ಬಂದ ಅಧಿಕಾರಿ ಎಂಬುದು ಸ್ಪಷ್ಟ'[೧೫] ಎಂದಿರುವುದು ಗಮನಾರ್ಹವಾಗಿದೆ.

ಮಳವಳ್ಳಿಯ ಚಂದಹಳ್ಳಿ ಹೊಯ್ಸಳರ ಕಾಲದ ಶಾಸನವು ಗುಂಮಣ ಎಂಬ ಅಧಿಕಾರಿಯ ನೇತೃತ್ವದಲ್ಲಿ ಚಂದಹಳ್ಳಿಯ ಗೌಡುಗಳು ಮತ್ತು ಪ್ರಜೆಗಳು ಹಳ್ಳಿಯ ಮೂಡಲು ಪ್ರದೇಶದಲ್ಲಿ ಹೊಸದೊಂದು ಪಟ್ಟಣವನ್ನು ನಿರ್ಮಿಸಿ ಅನೇಕ ಸೆಟ್ಟಿಗಳನ್ನು ಆ ಹೊಸಪಟ್ಟಣದ ಪಟ್ಟಣಸ್ವಾಮಿಗಳನ್ನಾಗಿ ಮಾಡಿರುವ ವಿಷಯ ಇದೆ ಈ ಗುಂಮಣನು ಕಾಳಾಂಜಿಯವನು ಎಂದು ಶಾಸನ ತಿಳಿಸಿದೆ.[೧೬] ೧೫೧೧ರ ಕೃಷ್ಣದೇವರಾಯನ ಕಾಲದ ಶಾಸನವೊಂದು ಅರಮನೆಯ ಬೇಹಾರಿಗಳು ಗುಂಮಳಾಪುರದ ಅಕ್ಕನ ಚೆನ್ನಿಸೆಟ್ಟಿ ಅವರ ಮಕ್ಕಳು ಹೊಂನಿಶೆಟ್ಟಿ ನಾಗಮಂಗಲದ ಅಗ್ರಹಾರದಲ್ಲಿ ಶ್ರೀವೀರಭದ್ರದೇವರ ರಂಗಮಂಟಪದ ಮುಂದಣ ಗಂಧಗೋಡಿ ಮಂಟಪವನ್ನು ನಿರ್ಮಿಸಿದ ಉಲ್ಲೇಖ ಇದೆ'[೧೭] ಇದು ದೂರದ ಊರಿನಿಂದ ವ್ಯಾಪಾರ ವ್ಯವಹಾರಗಳಿಗಾಗಿ ವರ್ತಕರು ಈ ಪ್ರದೇಶಕ್ಕೆ ಬರುತ್ತಿದ್ದ ವಿಷಯವನ್ನು ಸೂಚಿಸುತ್ತದೆ.

ಈ ರೀತಿಯಾಗಿ ತಮಿಳುನಾಡಿನ ಕಂಚಿ, ತಿರುವಿನ್ದಳೂರು, ಗುಮಳಾಪುರ ಪ್ರಾಂತ್ಯಗಳಿಂದ ಅನೇಕ ಜನ ಅಧಿಕಾರಿಗಳು ಮಂಡ್ಯ ಪ್ರದೇಶದಲ್ಲಿ ಇದ್ದುದನ್ನು ನೋಡಬಹುದು. "ಹೊಯ್ಸಳರು ಚೋಳರನ್ನು ದಕ್ಷಿಣ ಕರ್ನಾಟಕದಿಂದ ಹೊರದೂಡಿದ ಮೇಲೆ ತಮಿಳು ರಾಜ್ಯಗಳ ರಾಜಕೀಯದಲ್ಲಿ ಪ್ರಭಾವಶಾಲಿಗಳಾಗಲು ಸಹಾಯವಾಯಿತು. ಈ ವಿಜಯದ ನಂತರ ಚೋಳರ ಸೈನ್ಯದಲ್ಲಿದ್ದ ಅನೇಕ ತಮಿಳು ಸೈನ್ಯಾಧಿಕಾರಿಗಳು ಹೊಯ್ಸಳರ ಸೈನ್ಯವನ್ನು ಸೇರಿದರು. ಹೀಗೆ ವಲಸೆ ಬಂದವರಲ್ಲಿ ಕೆಲವು ಮಲೆಯಾಳಿ ಅಧಿಕಾರಿಗಳು ಇದ್ದರು" ಎಂದು ಎಸ್. ಪರಶಿವಮೂರ್ತಿ ಅವರು ಮಲೆಯಾಳಿ ವೈದ್ಯರ ಬಗೆಗೆ ಬರೆಯುತ್ತ ದಾಖಲಿಸಿದ್ದಾರೆ.[೧೮] ಈ ಎಲ್ಲ ಆಧಾರಗಳು ವಲಸಿಗರು ಇಲ್ಲಿಗೆ ಬಂದು ತಕ್ಕಮಟ್ಟಿಗೆ ಅಧಿಕಾರದ ಚುಕ್ಕಾಣಿ ಹಿಡಿದು ಮೇಲ್ಮುಖವಾದ ಅಭಿವೃದ್ಧಿಯನ್ನು ಹೊಂದಿದರು ಎಂದು ಹೇಳಲು ಯಾವುದೇ ಅಡ್ಡಿ ಆತಂಕಗಳಿಲ್ಲ.

ಅಡಿ ಟಿಪ್ಪಣಿಗಳು

೧. 'Karnataka through the ages' Ed. Dr. R.R. Divakar, 1968, P. 420.
೨. ಗೋವರ್ಧನ ಸುಂಕಂ: 'ಕರ್ನಾಟಕ ಶಾಸನಗಳ ಅಧ್ಯಯನ ವಾಗ್ವಾದಗಳು–ವಿಮರ್ಶಾತ್ಮಕ ಅಧ್ಯಯನ' ಪುಟ ೨೪೧.
೩. ಎ.ಕ. ೬ [ಪ] ಪಾಂಪು ೧೩೫.
೪. ಎ.ಕ. ೬ [ಪ] ಪಾಂಪು ೧೨೦.
೫. ಎ.ಕ. ೬ [ಪ] ಪಾಂಪು ೮೮.
೬ ಎ.ಕ. ೬ [ಪ] ಪಾಂಪು ೮೬.
೭. ಎ.ಕ. ೬ [ಪ] ಪಾಂಪು ೧೦೮.
೮. ಗೋವರ್ಧನ ಸುಂ.ಕಂ: ಕರ್ನಾಟಕ ಶಾಸನಗಳ ಅಧ್ಯಯನ ವಾಗ್ವಾದಗಳು–ವಿಮರ್ಶಾತ್ಮಕ ಅಧ್ಯಯನ (ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ) ಪುಟ ೨೪೩.
೯. ಎ.ಕ. ೬ [ಪ] ಪಾಂಪು ೫೫.
೧೦. ಶೆಲ್ವಪಿಳ್ಳೆ ಅಯ್ಯಂಗಾರ್: 'ಶ್ರೀರಾಮಾನುಜಾಚಾರ್ಯರು ಮತ್ತು ಮಂಡ್ಯ ಜಿಲ್ಲೆಯಲ್ಲಿ ಅವರ ವಾಸ್ತವದ ನೆಲೆಗಳು', ಮಂಡ್ಯ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಸಂ. ಬಾ.ರಾ. ಗೋಪಾಲ್, ೨೦೦೮, ಪುಟ ೨೩೦.
೧೧. ಎ.ಕ. ೬ [ಪ] ಪಾಂಪು ೧೩೫.
೧೨. ಎ.ಕ. ೬ [ಪ] ಪಾಂಪು ೯೯.
೧೩. ಎ.ಕ. ೬ [ಪ] ಪಾಂಪು ೧೦೬.
೧೪. ಎ.ಕ. ೬ [ಪ] ಪಾಂಪು ೧೦೮.
೧೫. ಎ.ಕ. ೬ [ಪ] ಪಾಂಪು ixv.
೧೬. ಎ.ಕ. ೬ [ಪ] ನಾಗಮಂಗಲ ೯.
೧೭. ಎ.ಕ. ೬ [ಪ] ಮಳವಳ್ಳಿ ೮೧.
೧೮. ಪರಶಿವಮೂರ್ತಿ ಎಸ್., 'ಅರಸಿಕೆರೆ ತಾಲ್ಲೂಕಿನಲ್ಲಿ ಹೊಯ್ಸಳರ ಕಾಲದ ಮಲೆಯಾಳಿ ವೈದ್ಯರು ಮತ್ತು ವ್ಯಾಪಾರಿಗಳು' ಇತಿಹಾಸ ದರ್ಶನ, ಸಂ. ೨೯.

೪೧

ಶಾಸನಗಳಲ್ಲಿ ಕುಂಬಾರರು

ಮಲ್ಲಿಕಾರ್ಜುನ ಕುಂಬಾರ*

ಪ್ರಾಚೀನ ಕಲೆಗಳಲ್ಲಿ ಒಂದಾದ ಕುಂಬಾರಿಕೆಯು ಬಹು ವಿಶಿಷ್ಟವಾದ ಕಲೆ. ಆದರೆ ಇಂದು ಆಧುನಿಕ ವಿಜ್ಞಾನ, ತಂತ್ರಜ್ಞಾನದ ಪ್ರಭಾವದಿಂದ ವಂಶಪರಂಪರಾಗತವಾಗಿ ಬಂದಿರುವ ಕುಲಕಸಬುಗಳು ಆಧುನಿಕತೆಯನ್ನು ಪಡೆದುಕೊಂಡು ತಮ್ಮ ಮೂಲ ನೆಲೆಯನ್ನು ಕಳೆದುಕೊಳ್ಳುತ್ತಿವೆ. ಅಂತಹ ಕುಲಕಸಬುಗಳಲ್ಲಿ ಕುಂಬಾರಿಕೆಯೂ ಒಂದು. ಮಾನವನ ಬದುಕಿನಲ್ಲಿ 'ಮಣ್ಣು' ಬಹು ವಿಶಿಷ್ಟವಾದ ಪಾತ್ರವನ್ನು ವಹಿಸುತ್ತದೆ. ಅಂತೆಯೇ ದಾರ್ಶನಿಕರು 'ಮಣ್ಣಿಂದ ಕಾಯ' ಎಂದು, ಇದು ಮಣ್ಣಿನ ಕಾಯ, ಪೃಥ್ವಿಯ ಒಂದು ಅಂಶ ಎಂದ ಕರೆದದ್ದರಲ್ಲಿ ಬಹಳ ಅರ್ಥವಿದೆ. 'ಮಡಿಕೆಯ ಮಾಡುವರೆ ಮಣ್ಣೆ ಮೊದಲು' ಎಂದು ಅಣ್ಣ ಬಸವಣ್ಣನವರ ನುಡಿಯಲ್ಲಿ ವೃತ್ತಿ ಬದುಕಿನ ಸೂಚನೆ ಇದೆ. ಮಣ್ಣನ್ನು ಹದಗೊಳಿಸಿ ಅದನ್ನು ತುಳಿದು ಗಡಿಗೆ, ಮಡಿಕೆಯನ್ನು ಮಾಡುವ ಕುಂಬಾರಿಕೆ ವೃತ್ತಿಯು ಲೌಕಿಕ-ಪಾರಮಾರ್ಥಿಕ ಬದುಕಿನ ಜೀವನಕ್ಕೆ ಹಿಡಿದ ಕನ್ನಡಿಯಾಗಿದೆ. ಕುಂಬಾರರು ಮಣ್ಣನ್ನು ದೇವರೆಂದು ಪುರಾತನ ಕಾಲದಿಂದಲೂ ಪೂಜಿಸುತ್ತಾ ಬಂದಿದ್ದಾರೆ.

ಈ ನಾಡಿನಲ್ಲಿ ಹರಡಿಕೊಂಡ ಅನೇಕ ಶಾಸನಗಳಲ್ಲಿ ಕುಂಬಾರರನ್ನು ಕುರಿತು ಸಾಕಷ್ಟು ಉಲ್ಲೇಖಗಳಿವೆ. ಕುಂಬಾರರು ಜೇಡಿಮಣ್ಣನ್ನು ನೆನೆಯಿಸಿ ಚಕ್ರದ(ಕೋವರ ಚಕ್ರ)[೧] ಮೇಲಿಟ್ಟು (ಕ್ರಿ.ಶ. ೧೦೪೨) ನಾನಾ ಬಗೆಯ ಪಾತ್ರೆಗಳನ್ನು ಮಾಡಿ 'ಆವುಗೆ'ಗಳಲ್ಲಿ ಕುಂಬಾರರು ಸುಡುತ್ತಿದ್ದರು.[೨] ಎಂದು (ಕ್ರಿ.ಶ. ೧೧೨೩) ಶಾಸನಗಳು ಹೇಳುತ್ತವೆ. ಕ್ರಿ.ಶ. ೧೧೨೩-೨೪ರಲ್ಲಿ ಜೈನ ಧರ್ಮದ ಜಿನಾಲಯದ ದಾನಶಾಲೆಯೊಂದಕ್ಕೆ ತಾವು ಗಡಿಗೆಗಳನ್ನು ಸುಡುವ ಆವಿಗೆಯನ್ನು ಕುಂಬಾರರು ಬಿಟ್ಟುಕೊಡುತ್ತಾರೆ.[೩], ಕ್ರಿ.ಶ. ೧೦೭೧-೭೨ರಲ್ಲಿ ಧಾರವಾಡ ಸನಿಹದ ಅಮ್ಮಿನಭಾವಿ ಶಾಸನದಲ್ಲಿ ಊರ ದಕ್ಷಿಣಕ್ಕೆ ದೇಹಾರದ ನಾಗಣ್ಣ, ಅವನ ಮಗ ಆಯ್ತುವರ್ಮ ಬಬ್ಬಣ್ಣ ಮೊದಲಾದವರು ಸೇರಿ ಕುಂಭೇಶ್ವರ ದೇವಾಲಯವನ್ನು ಕಟ್ಟಿಸಿದ ಉಲ್ಲೇಖವಿದೆ.[೪] ಮತ್ತೊಂದು ಕ್ರಿ.ಶ. ೧೧೨೬ರ ಶಾಸನದಲ್ಲಿ 'ಕುಂಬಾರ ಬಮ್ಮಣಂ ತಲೆಪೊಸದ ಅನ್ನಮುಣದ ವೀರಬ್ರತಮ ಕಯ್ಕೊಂಡು ಪ್ರತಿಷ್ಠೆಯಂ ಮಾಡಿಸಿದ ಕುಂಭೇಸ್ವರ ದೇವರ...." ಕ್ರಿ.ಶ. ೧೧೨೬ ರಲ್ಲಿ ಕಲ್ಯಾಣ ಚಾಲುಕ್ಯ ಅರಸ ೬ನೆಯ ವಿಕ್ರಮಾದಿತ್ಯನ ಆಳ್ವಿಕೆಯಲ್ಲಿ ಇಲ್ಲಿನ ನೊಳಂಬವಾಡಿ ೩೨೦೦೦ ಯನ್ನು ಪಾಲಿಸುತ್ತಿದ್ದ ತ್ರಿಭುನಮಲ್ಲ ಪಾಂಡ್ಯದೇವನ ಕಾಲದಲ್ಲಿ ಅವನ ಮಂಡಳೇಶ್ವರನಾಗಿದ್ದ ಗಂಗರಸರ ಕಾಲದಲ್ಲಿ ಗುಂಜಿಗನೂರಿನ ಕುಂಬಾರ ಬಮ್ಮಣ್ಣ ಎಂಬವನು ವೀರವ್ರತವನ್ನು ಕೈಗೊಂಡು ಕುಂಬಾರ ಜನಾಂಗದ ಆರಾಧ್ಯ ದೇವತೆ ಕುಂಭೇಶ್ವರ ದೇವಸ್ಥಾನವನ್ನು ಕಟ್ಟಿಸುತ್ತಾನೆ.[೫] ಜೊತೆಗೆ ಅದಕ್ಕೆ ಸಾಕಷ್ಟು ದತ್ತಿಗಳನ್ನು ನೀಡಿದ್ದಾನೆ. ಕ್ರಿ.ಶ. ೧೧೨೪ರ ಶಾಸನದಲ್ಲಿ 'ಕುಂಬರ ಬಿಟ್ಟಕಂ' ಎಂದಿದ್ದು, ಕುಂಬಾರರು ಸಾಮಾಜಿಕ ಕಾರ್ಯಕ್ಕಾಗಿ ಬಿಟ್ಟಿಯಾಗಿ(ಪುಕ್ಕಟೆ) ಮಡಿಕೆಗಳನ್ನು ಮಾಡಿಕೊಡಬೇಕೆಂದು ನಿರ್ಬಂದನೆ ಹಾಕಲಾಗಿದೆ.[೬] ಕ್ರಿ.ಶ. ೧೩೮೦ಕ್ಕೆ ಸೇರಿದ ಯಳಂದೂರಿನ ಶಾಸನವೊಂದರಲ್ಲಿ ಸಾಮಾಜಿಕ ಸ್ತರದಲ್ಲಿ ತಮ್ಮ ಕುಲವು ಉನ್ನತವಾದುದೆಂದು, ತಮ್ಮ ಕೆಲವು ಹಕ್ಕುಗಳಿಗಾಗಿ ಸತ್ವಪರೀಕ್ಷೆಗೆ ಒಳಗಾಗಿ 'ತುಪ್ಪದ ದಿವ್ಯ' ವನ್ನು ಪ್ರತ್ಯಕ್ಷ ಮಾಡಿ ತೋರಿಸಿದ ಘಟನೆಯೊಂದನ್ನು ತಿಳಿಸುತ್ತದೆ. ಆ ಶಾಸನ ಪಾಠ ಹೀಗಿದೆ,

೧. ಶ್ರೀ ಗೌರೀಶ್ವರ ರಾಮರಾ

೨. ಜ ನಾಯಕರ ಕಾಲದಲ್ಲಿ ಕುಂಭಾ

೩. ರ ಸ್ವಾಮಿಗಳ ಸಾಸನದ ಕ್ರಮ । ಚಾ

೪. ಮ । ಅಂಸಮಾನ । ಹೊಂನ । ಧೂಮ । ಚಂ

---

* 'ವಚನ', ರಾಜೂರ ಅಂಚೆ, ಗಜೇಂದ್ರಗಡ ತಾಲ್ಲೂಕು, ಗದಗ ಜಿಲ್ಲೆ, ಮೊ. ೯೪೪೯೨ ೨೦೭೨೬

೫. ಡ। ಇವರು ನಾಯಂದರು ಅಗಸರು
೬. ಕುಂಬಾರರಿಗೆ ಕಾಲುಗುರು ಮೇಲುಕಟ್ಟು
೭. ಯಿಲ್ಲಯನಲಾಗಿ ಕುಂಬಾರಸೆಟ್ಟಿಗಳು
೮. ಉಂಟುಯೆಂದು ಹರದನಹಳ್ಳಿಯ
೯. ಲ್ಲಿ ದಿವ್ಯಲಿಂಗೇಶ್ವರನ ಮುಂದೆ ತುಪ್ಪದ
೧೦. ಲ್ಲಿ ಕೈಯಿಕ್ಕಿ ಗೆದ್ದಾಗ ಬರೆದ ಶಾಸನ ಕ್ರಮ
೧೧. ಕುಂಭರರಿಗೆ ಕಾಲುಗುರು ತೆಗಲುಣ ಮೇಲ ಕ
೧೨. ಟ್ಟು ಕುಟ್ಟುಣಯೆಂದು ಭರದ ಸಾಸನ[೭]

ಇದರಲ್ಲಿ ಕುಂಬಾರರಿಗೂ ನಾಯಂದರು(ಹಡಪಿಗ) ಮತ್ತು ಅಗಸರಿಗೂ ನಡೆದ ವಿವಾದವೊಂದರಲ್ಲಿ ಕುಂಬಾರರ ಮದುವೆ ಸಮಯದಲ್ಲಿ ನಾಯಂದರು ಕುಂಬಾರರ ಉಗುರುಗಳನ್ನು ತೆಗೆಯುವದಿಲ್ಲವೆಂದು, ಅಗಸರು ಮದುವೆ ಚಪ್ಪರಕ್ಕೆ ಮೇಲುಕಟ್ಟನ್ನು ಕಟ್ಟುವದಿಲ್ಲವೆಂದು ತಕರಾರು ತೆಗೆಯುತ್ತಾರೆ. ಈ ವಿಷಯದಲ್ಲಿ ಈ ಬಗ್ಗೆ ತೀರ್ಪು ನೀಡಲು ಯಾರಿಗೂ ಅಸಾಧ್ಯವಾದಾಗ ಕುಂಬಾರರು ಹರದನಹಳ್ಳಿಯ ದಿವ್ಯ ಲಿಂಗೇಶ್ವರದ ಮುಂದೆ ಕುದಿಯುವ ತುಪ್ಪದಲ್ಲಿ ಕೈಯಿಕ್ಕಿ ಗೆಲ್ಲುತ್ತಾರೆ. ಈ ನ್ಯಾಯವು ಕುಂಬಾರರ ಪರವಾದ ಕಾರಣ ಮೊದಲು ತಕರಾರು ತೆಗೆದ ನಾಯಂದರು ಮತ್ತು ಅಗಸರು ನಂತರ ಇಷ್ಟಕ್ಕೆ ಬಾಗಿ (ಒಪ್ಪಿ) ತಮ್ಮ ಕಾರ್ಯವನ್ನು ಮಾಡುತ್ತಾರೆ. ಈ ಶಾಸನದಲ್ಲಿ ಕುಂಬಾರರನ್ನು ಶೆಟ್ಟರು ಎಂದು ಕರೆದಿರುವಲ್ಲಿ ವಿಶೇಷತೆ ಇದೆ. ಕೆಲವು ಪ್ರದೇಶಗಳಲ್ಲಿ ಕುಂಬಾರಶೆಟ್ಟರೆಂದು ಇವರ ಅಡ್ಡ ಹೆಸರುಗಳಿವೆ. ಇವರು ಅಂದು ಅನುಸರಿಸಿದ ದಿವ್ಯವನ್ನು ಇಂದಿಗೂ ಹಳ್ಳಿಗಳಲ್ಲಿ ಜಗಳಗಳು ಬಂದಾಗ ಕುದಿಯುವ ತುಪ್ಪ ಅಥವಾ ಎಣ್ಣೆಯಲ್ಲಿ ಕೈ ಅದ್ದುವದು, ದೇವರ ಗಂಟೆ ಬಾರಿಸುವದು, ದೇವರ ಅಂಗಾರ ಕೊಡುವುದು, ಮಕ್ಕಳನ್ನು ಅಡ್ಡ ಹಾಕಿ ದಾಟುವದು, ದೇವರ ದೀಪವನ್ನು ಆರಿಸುವದು, ಹಚ್ಚುವದು, ಸೆರಗಿನಲ್ಲಿ, ವಸ್ತ್ರದಲ್ಲಿ ಕೆಂಡವನ್ನು ಕಟ್ಟಿಕೊಳ್ಳುವ ಕ್ರಮವನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು.

ಕ್ರಿ.ಶ. ೧೨೮೦ರ ಮರಡಿಪುರ ಶಾಸನದಲ್ಲಿ 'ನಂಬಿ ಕುಂಬಾರ ಗುಂಡ, ಅಂಡವಲ ಕರಿಕಾಲ ಚೋಳ'[೮] ಎಂದೂ, ಕ್ರಿ.ಶ. ೧೨೦೦ರ ಅಬ್ಬಲೂರ ಸೋಮೇಶ್ವರ ದೇವಾಲಯದ ಪೌಳಿಯಲ್ಲಿ 'ಕುಂಬಾರ (ಗು)ಂಡನ ಮುಂದೆ ಬಂ(ಧಾ)ದಾಡಿದ ನಮ್ಮ ಶಿವ'[೯] ಎಂದು ಇದ್ದು. ಈ ಶಾಸನದ ಕೆಳಗೆ ಗಡಿಗೆ ಬಾರಿಸುವ ಕುಂಬಾರ ಗುಂಡಯ್ಯನ ಚಿತ್ರವನ್ನು ಬಿಡಿಸಲಾಗಿದೆ.

ಕನ್ನಡದ ಅತ್ಯಂತ ಪ್ರಾಚೀನ ಶಾಸನಸ್ಥ ಜಾನಪದ ಕೃತಿ ಎಂದು ಹೆಸರು ಪಡೆದ 'ವಿವಾಹ ಪುರಾಣ' ವು ಕುಂಬಾರ ಜನಾಂಗ ಹೆಮ್ಮೆ ಪಡುವ ಪ್ರಾಚೀನ ಜಾನಪದ ಕೃತಿಯಾಗಿದೆ. ಕನ್ನಡ ಸಾಹಿತ್ಯ ಚರಿತ್ರೆಯ ದೃಷ್ಟಿಯಿಂದ ಕ್ರಿ.ಶ. ೧೯೮೮ರಲ್ಲಿ ಶೋಧಿಸಿದ ಈ ಶಾಸನವು ಅತ್ಯಂತ ಮಹತ್ವದ ಶೋಧನೆಯಾಗಿದೆ. ಇದು 'ವಿವಾಹ ಪುರಾಣ' ಎನ್ನುವ ಹೆಸರಿನ ಕಾವ್ಯವಾಗಿದೆ. ಕ್ರಿ.ಶ. ೧೨೦೦ಕ್ಕೆ ಸೇರಿದ ಶಾಸನದಲ್ಲಿ ಗದ್ಯದ ಜೊತೆಗೆ ಷಟ್ಪದಿಯೂ ಸೇರಿದೆ. ಇದು ಷಟ್ಪದಿ ಕಾವ್ಯ ಚರಿತ್ರೆಯಲ್ಲಿ ಆದ್ಯ ಕೃತಿಯಾಗಿ ನಿಲ್ಲುವಂತೆ, ಆನೆಗುಂದಿಯ ತಾಮ್ರ ಶಾಸನವು ಕನ್ನಡ ಜಾನಪದ ಸಾಹಿತ್ಯ ಚರಿತ್ರೆಯ ಆದ್ಯ ಕೃತಿಯಾಗಿದೆ. ಸೊಲ್ಲಾಪೂರ ಶಾಸನದ ಉತ್ತರಾರ್ಧವು ಒಡೆದು ಹಾಳಾದ ಕಾರಣ ಇಲ್ಲಿನ ಪಾಠವು ಬಹಳಷ್ಟು ಪ್ರಮಾಣದಲ್ಲಿ ಹಾಳಾಗಿದೆ. ಆದರೆ ಇದರ ಕಥೆಯನ್ನೆ ವಸ್ತುವಾಗಿರಿಸಿಕೊಂಡ ವಿಷಯವುಳ್ಳ ತಾಮ್ರಪತ್ರವು ಹಂಪಿಯ ಬದಿಯ ಆನೆಗುಂದಿಯಲ್ಲಿ ದೊರಕಿದೆ. ಸೊಲ್ಲಾಪೂರ ಶಿಲಾಶಾಸನ ಮತ್ತು ಆನೆಗುಂದಿಯ ತಾಮ್ರಪತ್ರದಲ್ಲಿರುವ ಎರಡರಲ್ಲಿನ ವಿಷಯವೂ ಶಿವ ಗಿರಿಜೆಯರ ಮದುವೆ ವಿಷಯವಾದ 'ವಿವಾಹ ಪುರಾಣ'ವಾಗಿದೆ. ಆನೆಗುಂದಿ ತಾಮ್ರ ಪತ್ರದ ಕಾಲ ಕ್ರಿ.ಶ. ೧೫ ಎನ್ನಲಾಗುತ್ತದೆ. ಕಥೆ ಅಷ್ಟೆ ಅಲ್ಲ, ಭಾಷೆಯ ಹೋಲಿಕೆಯೂ ಒಂದೇ ಆಗಿದೆ. ತಾಮ್ರ ಶಾಸನದಲ್ಲಿ 'ನಿಮ್ಮ ವೊಂದು ಕುಲಂ ಪುಟ್ಟಿದ ವಿವಾಹ ಪುರಾಣಂ ಸವಿಸ್ತರ ಕೇಳಿ ಸ್ವಾಮಿಗಳಿರ' ಎಂದು ಇದೆ. ಈ ವಿವಾಹ ಪುರಾಣವು ಕುಂಬಾರರ ಕುಲೋತ್ಪತ್ತಿಗೆ ಸಂಬಂಧಿಸಿದ ಕಥೆಯನ್ನು ಹೇಳುತ್ತದೆ. ಇದರಲ್ಲಿ ಕುಂಬಾರರನ್ನು 'ಆಯ್ಗಾವಂತ' ಎಂದು ಸಂಬೋಧಿಸಲಾಗಿದೆ. ತಮಗಿಂತ ಮೇಲು ಜಾತಿಗೆ ಸೇರಿದ ಬಣಜಿಗ ವರ್ತಕ ಮುಖ್ಯರಿಗೆ ಗೌರವವನ್ನು ತೋರಿ ತಮ್ಮ ಕುಲೋತ್ಪತ್ತಿಯ ಕಥೆಯನ್ನು ಅವರಿಗೆ ನಿವೇದನೆ ದಾಟಿಯಲ್ಲಿ ಹೇಳಲಾಗಿದೆ. ಈ ತಾಮ್ರಪತ್ರದಲ್ಲಿ ೧. ವಿವಾಹಪುರಾಣ, ೨. ಸಮಯ ಶಾಸನ ಪುರಾಣ, ೩. ಅಮೃತ ಮಥನ ಪುರಾಣ ಎಂದು ವಿಭಾಗಿಸಿ ಕುಂಬಾರರ ಕುಲೋತ್ಪತ್ತಿ ಮತ್ತು ಅವರ ಸೌಲತ್ತುಗಳನ್ನೊಳಗೊಂಡಿದೆ. ವಿವಾಹ ಪುರಾಣವು ಶಿವಗಿರಿಜೆಯ ಮದುವೆಯನ್ನು, ಅಮೃತಮಥನ ಪುರಾಣವು ಅಮೃತವನ್ನು ದೇವತೆಗಳು ರಾಕ್ಷಸರು ಕಡೆದ ವಿಚಾರವನ್ನು, ಸಮಯ ಶಾಸನ ಪುರಾಣವು ಕುಂಬಾರ ಕುಲಕ್ಕೆ ಕೊಡಲಾದ ಸೌಲತ್ತು, ಗೌರವಗಳನ್ನೊಳಗೊಂಡಿದೆ.

ವಿವಾಹ ಪುರಾಣದಲ್ಲಿನ ವಿಷಯವು ಪೌರಾಣಿಕ ಕಥೆಯನ್ನೆ ಹೋಲುತ್ತಿದ್ದರೂ ಸ್ವಲ್ಪ ಭಿನ್ನವಾಗಿದೆ. ಕೃತಯುಗ ಕೊನೆಗೊಂಡಿದೆ. ಇಂತಹ ಸಮಯದಲ್ಲಿ ಈಶ್ವರನಿಂದ ಪ್ರಕೃತಿಯನ್ನು ಸೃಷ್ಟಿಸಬೇಕೆಂದು ಗೌರಿಯು ಪರ್ವತರಾಜನಲ್ಲಿ ಹುಟ್ಟಿ ತಾನು ಶಿವನನ್ನು ಮದುವೆಯಾಗಬೇಕೆಂದು ಉಗ್ರವಾದ ತಪಸ್ಸನ್ನು ಮಾಡುತ್ತಾಳೆ. ಇದು ಹರಿಹರನ ಗಿರಿಜಾ ಕಲ್ಯಾಣವನ್ನು ನೆನಪಿಗೆ ತರುತ್ತದೆ. ನಂತರ ಗೌರಿಯ ಉಗ್ರ ತಪಸ್ಸಿಗೆ ಮೆಚ್ಚಿದ ಶಿವನು ಅವಳನ್ನು ಸ್ವೀಕರಿಸಲು ಸಮ್ಮತಿಸುತ್ತಾನೆ. ನಂತರ ವಿಷ್ಣು, ಬ್ರಹ್ಮ, ದೇವಗುರು ಬೃಹಸ್ಪತಿ, ದೇವೇಂದ್ರ ಮುಂತಾದವರ ಮಧ್ಯಸ್ತಿಕೆಯಿಂದ ಗಿರಿರಾಜನಲ್ಲಿ ಮಾತುಕತೆಯಾಗಿ ಮದುವೆ ಸಿದ್ಧತೆ ನಡೆಯುತ್ತದೆ. ಶಿವನು ಸಿಂಗಾರಗೊಂಡಿದ್ದಾನೆ. ನಂದಿಯ ಮೇಲೆ ಕುಳಿತ ಶಿವನು ವಿವಾಹ ಮಂಟಪಕ್ಕೆ ಬರುತ್ತಾನೆ. ಹಸೆಯ ಮೇಲೆ ಕುಳಿತ ಶಿವನು 'ಕೈಧಾರೆ ಎರೆಯಲು ಹೂಜೆ, ಪಾತ್ರೆಗಳು ಎಲ್ಲಿವೆ?' ಎಂದು ಕೇಳುತ್ತಾನೆ. ಶಿವನ ಮಾವ ಗಿರಿರಾಜನು ದಿವ್ಯ ಧ್ಯಾನದಿಂದ ವಿಷ್ಣುವಿನ ಚಕ್ರವನ್ನು ಕುಂಬಾರನ ತಿಗರಿಯನ್ನಾಗಿ, ಬ್ರಹ್ಮನ ಕೈಯಲ್ಲಿರುವ ಪುಸ್ತಕದಲ್ಲಿರುವ ಓದಿನ ಗುರುತಿಗಾಗಿಟ್ಟ ಕಂಬಿಯನ್ನು ತಿಗರಿಯ ಮೊಳೆಯನ್ನಾಗಿ, ಶಿವನ ಯೋಗದಂಡವನ್ನು ತಿಗರಿ ತಿರುಗಿಸುವ ಕೋಲನ್ನಾಗಿ, ಜನಿವಾರವನ್ನು ಮಡಿಕೆಯನ್ನು ಕೊರೆಯುವ ದಾರವನ್ನಾಗಿ, ಶಿವನು ತ್ರಿಪುರವನ್ನು ಸುಟ್ಟು ಧರಿಸಿದ್ದ ತಲೆಬುರುಡೆಯನ್ನು ಪಾತ್ರೆಯನ್ನಾಗಿಸಿ, ಎಲುಬವಿನ ಗುಂಡುಗಳನ್ನು ಗಡಿಗೆ ಬಡಿಯುವ ಗುಂಡುಗಳನ್ನಾಗಿ ಮಾಡಿಕೊಂಡು ಯಮನ ಕೋಣನಿಂದ ಮಣ್ಣನ್ನು ತಂದು ಅದರಿಂದ ಹೂಜೆ, ಸೊನ್ನಲಿಗೆ, ಕುಂಭ ಮೊದಲಾದ ಪಾತ್ರೆಗಳನ್ನು ತಯಾರಿಸಿ ಅವುಗಳನ್ನು ಸುಟ್ಟು, ನಂತರ ಬಣ್ಣದಿಂದ ಶೃಂಗಾರ ಮಾಡುತ್ತಾನೆ. ಇಲ್ಲಿ ಕುಂಬಾರನನ್ನು ಸೃಷ್ಟಿಸಿದವನು ಗಿರಿರಾಜನು, ಶಿವನ ಮದುವೆಗೆ ಋಷಿ ಕನ್ಯೆಯರು ವಾದ್ಯ ಸಮೇತವಾಗಿ ಬಂದು ಮಣ್ಣಿನ ಪಾತ್ರೆಗಳನ್ನು ಮಾಡಿದ ಕುಂಬಾರನಿಗೆ ಪಂಚ ಬಾಗಿನಗಳನ್ನು, ರೇಷ್ಮೆ ವಸ್ತ್ರಗಳನ್ನು ಚಿನ್ನದ ತಟ್ಟೆಯಲ್ಲಿಟ್ಟು ಕೊಟ್ಟು ವಿವಾಹ ಮಂಟಪಕ್ಕೆ ತರುತ್ತಾರೆ. ಶಿವ ಪಾರ್ವತಿಯರ ವಿವಾಹ ಅದ್ದೂರಿಯಾಗಿ ಜರುಗುತ್ತದೆ. ಶಿವನು ಪಾರ್ವತಿ ಸಹಿತನಾಗಿ ನಂದಿ ಏರಿ ಕೈಲಾಸಕ್ಕೆ ಹೊರಟು ನಿಂತಾಗ ಗಿರಿರಾಜನು ' ಈ ಹೂಜಿ, ಸೊನ್ನಲಿಗೆ, ಮಡಿಕೆಗಳನ್ನು ತಂದುದು ವ್ಯರ್ಥವಾಗಬಾರದು. ನೀನು ಅವನ್ನು ಮಾಡಿದ ಕುಲಕ್ಕೆ 'ಸಾಲೆ ಸಾಸಿರ್ವರು' ಎಂದು ಹೆಸರು ಕೊಡು, ಚಕ್ರವನ್ನು, ಅದನ್ನು ತಿರುಗಿಸುವ ಕೋಲನ್ನು 'ಆಯಿಸಾವಂತ' ಎಂದು ಅದನ್ನೆ ಬಿರುದು ಕೊಡು, ಅವರು ಗೌರವಾರ್ಹರಾಗಿ ಬದುಕಿ, ಕುಂಭ ಮೊದಲಾದ ಮೂವ್ವತ್ತಾರು ಬಗೆಯ ಪಾತ್ರೆಗಳನ್ನು ಮಾಡುತ್ತಾ ಅವರು ಲೋಕಕ್ಕೆ ಉಪಕಾರವನ್ನು ಮಾಡಲಿ. ಇನ್ನು ಮುಂದೆ ಅವರು ಹಿಡಿದುದೇ ಛಲ, ನುಡಿದುದೆ ಸತ್ಯ, ೧೮ ಪಟ್ಟಣ, ೧೮ ಯೋಗ ಪೀಠಗಳಗೆ ಕುಂಬಾರರು ಶ್ರೇಣಿಯ ವರ್ತಕರಾಗಲಿ' ಎಂದು ಶಿವನಿಗೆ ನಿವೇದಿಸಿಕೊಂಡಾಗ ಅವನು 'ತಥಾಸ್ತು' ಎಂದು ಹೇಳಿ ಕೈಲಾಸಕ್ಕೆ ಹೋದನು. ಆಗ ಅಲ್ಲಿ ಸೇರಿದ್ದ ಋಷಿ ಮುನಿಗಳು ಕುಂಬಾರರ ಕುಲವನ್ನು ಕೊಂಡಾಡಿದರು. ಇದು ವಿವಾಹ ಪುರಾಣದ ಸಾರ. ೧೦

ಕುಂಬಾರರನ್ನು ಕುರಿತಾದ ಕುಂಬಾರ ಮಹಿಳೆಯ ಅಪೂರ್ವ ಮಾಸ್ತಿ ಶಿಲ್ಪವೊಂದು ನಾಗರಖಂಡ-೭೦ರ ಪ್ರದೇಶವೆಂದು ಕರೆಯಲ್ಪಡುವ ಹಿರೇಕೆರೂರ ತಾಲೂಕಿನ ಚಿಕ್ಕೇರೂರ ಗ್ರಾಮದಲ್ಲಿ ದೊರೆತಿದೆ. ಈ ಭಾಗದಲ್ಲಿನ ಬಂದಳಿಕೆ, ಕುಪ್ಪಟೂರು, ಸಾತೇನಹಳ್ಳಿ, ತಿಳವಳ್ಳಿ ಗ್ರಾಮಗಳಲ್ಲಿ ಮಾಸ್ತಿ ಶಿಲ್ಪಗಳು ದೊರೆತರೂ ಇಲ್ಲಿ ದೊರೆತಿರುವ ಈ ಮಾಸ್ತಿ ಶಿಲ್ಪವು ಕುಂಬಾರ ಮಹಿಳೆಯದಾಗಿದೆ. ಸುಮಾರು ೧೫ನೆಯ ಶತಮಾನಕ್ಕೆ ಸೇರಿದ ಈ ಸತಿ ಶಿಲ್ಪವು ನೆಲಮಟ್ಟದಿಂದ ಸುಮಾರು ಒಂದು ಮೀಟರ ಎತ್ತರದಲ್ಲಿದೆ. ಲಿಪಿರಹಿತವಾದ ಈ ಶಿಲ್ಪದಲ್ಲಿ ಸುಂದರ ಕಾಯದ, ಅಜಾನು ಬಾಹುವುಳ್ಳ ಪುರುಷನು(ಪತಿ) ಪೀಠವೊಂದರ ಮೇಲೆ ಕುಳಿತಿದ್ದು, ಆತನ ಕಿವಿಯಲ್ಲಿ ಕುಂಡಲಗಳಿವೆ. ಕೊರಳಲ್ಲಿ ಲಿಂಗವುಳ್ಳ ಕರಡಿಗೆ ಇದೆ. ಸತಿಯಾಗಲಿರುವ ಪತ್ನಿಯು ನಿಂತ ಭಂಗಿಯಲ್ಲಿದ್ದಾಳೆ. ಆಕೆಗೆ ಮಾಟವಾದ ಮೈಕಟ್ಟನ್ನು, ಉಬ್ಬಿದ ಎದೆ, ಸಿಂಹ ಕಟಿ ಇದ್ದು, ಕೊರಳಲ್ಲಿ ಸರ, ಎರಡೂ ಕೈಗಳಲ್ಲಿ ಒಂದೊಂದು ಕಡಗ, ಒಂದೊಂದು ಕೈಯಲ್ಲಿ ಐದು ಬಳೆಗಳು, ತೋಳಬಂದಿ, ಸೊಂಟಪಟ್ಟಿ, ಕಿವಿಯಲ್ಲಿ ಬೆಂಡೋಲೆ, ಬುಗುಡಿ, ಕಾಲಲ್ಲಿ ಕಡಗ, ಕಿರುಬೆರಳಲ್ಲಿ ಕಾಲುಂಗುರ ಇದ್ದು, ಈ ಮಹಿಳೆ ಉಟ್ಟ ಸೀರೆಯು ಲಂಗದಂತಿದ್ದು ಬಹು ಸುಂದರವಾಗಿದೆ. ತಲೆಯಲ್ಲಿ ಕೇದಿಗೆಯನ್ನು ಮುಡಿದುಕೊಂಡಿದ್ದು, ಬಲಗೈಯನ್ನು ಮೇಲೆತ್ತಿ ಅದರ ಹೆಬ್ಬೆರಳು ಮತ್ತು ತೋರು ಬೆರಳುಗಳ ನಡುವೆ ಲಿಂಬೆ ಹಣ್ಣನ್ನು ಹಿಡಿದಿದ್ದಾಳೆ. ಎಡಗೈಯಲ್ಲಿ ಹೂಜಿಯಾಕಾರದ ತುಪ್ಪ ಇಲ್ಲವೆ ಎಣ್ಣೆ ತುಂಬಿದ ತಿರುಪಣಿ ಚಂಬನ್ನು ಹಿಡಿದಿದ್ದಾಳೆ. ಈ ಶಿಲ್ಪವು ಕುಂಬಾರ ಮಹಿಳೆಯೊಬ್ಬಳ ಸಹಗಮನ ಶಿಲ್ಪವಾಗಿದೆ. ಮಧ್ಯದಲ್ಲಿ ಕೈಮುಗಿದು ನಿಂತಿರುವ ಮಗು ಇದೆ. ಪುರುಷ ಶಿಲ್ಪದ ಕೆಳಭಾಗದಲ್ಲಿ ಮಡಿಕೆ ಮಾಡುವ ಚಿಕ್ಕದಾದ ಮಣ್ಣಿನ ಗುಪ್ಪೆ, ಪಕ್ಕದಲ್ಲಿ ಕುಂಬಾರಿಕೆಯ ಸಲಕರಣೆಗಳಾದ ತಿಗರಿ, ಕೋಲು, ಮಡಿಕೆ ತಟ್ಟುವ ಕಲ್ಲು, ಸೊಳ ಇರುವುದರಿಂದ ಇದು ಕುಂಬಾರ ದಂಪತಿಗಳದ್ದೆಂದು ನಿಸ್ಸಂದೇಹವಾಗಿ ಹೇಳಬಹುದು. ಈ ಶಿಲ್ಪದ ಮೇಲ್ಭಾಗದಲ್ಲಿ ಸೂರ್ಯ-ಚಂದ್ರ, ಮಧ್ಯದಲ್ಲಿ ಈಶ್ವರ ಮತ್ತು ನಂದಿ ಚಿತ್ರಗಳು ಇವೆ. ಇದು ಇದ್ದ ಸಣ್ಣ ಗುಡಿಯ ಬಾಗಿಲಿನಲ್ಲಿ 'ಮಹಾಸತಿ ಪ್ರಸನ್ನ' ಎಂದು ಬರೆಯಲಾಗಿದೆ.


ಚಿಕ್ಕೇರೂರ ಗ್ರಾಮದಲ್ಲಿ ದೊರೆತ ಕುಂಬಾರ ಮಾಸ್ತಿ ಶಿಲ್ಪ

ಕುಂಬಾರ ಮಹಿಳೆಯ ಈ ಮಹಾಸತಿ ಶಿಲ್ಪವನ್ನು ಇಲ್ಲಿನ ಕುಂಬಾರ ಸಮಾಜದವರು ದೈವತ್ವವೆಂದು ಬಗೆದು ಭಯ ಭಕ್ತಿಯಿಂದ ಪೂಜಿಸುತ್ತಾರೆ. ಶಿವರಾತ್ರಿಯ ಸಮಯದಲ್ಲಿ ವಿಶೇಷವಾಗಿ ಎಲ್ಲಾ ಜನಾಂಗದವರು ಈ ಮಾಸ್ತಿ ಶಿಲ್ಪವನ್ನು ಪೂಜಿಸುತ್ತಾರೆ. ಕುಂಬಾರ ಜನಾಂಗಕ್ಕೆ ಸೇರಿದ ಅಪರೂಪದ ಮಹಾಸತಿ ಶಿಲ್ಪದ ಬಗ್ಗೆ ಇನ್ನಷ್ಟು ಸಂಶೋಧನೆಗಳು ನಡೆಯಬೇಕಾಗಿದೆ.

ಬಹಳಷ್ಟು ಶಾಸನಗಳಲ್ಲಿ ಬರುವ ಶಾಪಾಶಯಗಳಲ್ಲಿ 'ಕುಂಭಿಪಾತಕ' ಎನ್ನುವ ಮಾತು ಬರುತ್ತದೆ. ಶಾಸನಗಳನ್ನು ನಾಶ ಮಾಡುವವರು ಮತ್ತು ದತ್ತಿ ಶಾಸನಗಳಲ್ಲಿ ಈ ಶಬ್ದ ಇರುತ್ತದೆ. ಹೀಗೆಂದರೆ ಕುಂಬಾರರು ಆವಿಗೆಗಳಲ್ಲಿ ಮಡಿಕೆಗಳನ್ನು ಸುಡುವಂತೆ ಪಾಪಿಗಳನ್ನು ಪರಲೋಕವಾದ ನರಕದಲ್ಲಿ ಈ ರೀತಿ ಬೇಯಿಸು(ಸುಡು)ತ್ತಾ ಶಿಕ್ಷಿಸಲಾಗುತ್ತದೆ ಎನ್ನುವ ಅರ್ಥವಿದಾಗಿದೆ.

ಸುಮಾರು ೭–೮ ನೆಯ ಶತಮಾನದಲ್ಲಿ ಕಂಡು ಬರುವ ಗೋವುಗಳನ್ನು ದಾನ ಮಾಡಿದ್ದರ ನೆನಪಿಗಾಗಿ ನಿಲ್ಲಿಸುವ ಗೋಸಾಸನಗಳಲ್ಲಿ ಪೂರ್ಣಕುಂಭದ ಚಿತ್ರಣವನ್ನು ಕಾಣುತ್ತೇವೆ. ಇವುಗಳ ಬದಿಯಲ್ಲಿ ಪೂರ್ಣಕುಂಭವನ್ನು ಕಂಡರಿಸಿರುತ್ತಾರೆ. ಇದು ಕುಂಬಾರರ ಕುಂಭದ ಶುಭ ಸಂಕೇತವಾಗಿದೆ. ಇದರೊಂದಿಗೆ ದೇವಸ್ಥಾನಗಳ ಮುಖ್ಯ ದ್ವಾರಗಳಲ್ಲಿಯೂ ಕೂಡಾ ಕುಂಭಗಳನ್ನು ಕಾಣುತ್ತೇವೆ.

ಅಡಿ ಟಿಪ್ಪಣಿಗಳು

೧. EC.VII.sa.109 (bis)1042 AD.

೨. IA.XIV.p. 15,1123-24 AD.

೩. IA.XIV-P.15,1123-24 AD.

೪. ಧಾರವಾಡ ತಾಲೂಕಿನ ಶಾಸನಗಳು, ಸಂ. ಡಾ. ಎಂ.ಎಂ. ಕಲಬುರ್ಗಿ.

೫. EC.XI, HK-68,1126 A.D.

೬. MAR.193-, P. 171, 1124 A.D.

೭. EC.IV.YI. 2, C. 1580, A.D.

೮. EC.III-I, (ಮಂಡ್ಯ) ಮರಡಿಪುರ–೮೩.

೯. EI, XXIV, P. 142, ಅಬ್ಬಲೂರ.

೧೦. ಹೊಸತು ಹೊಸತು, ಡಾ. ಎಂ. ಚಿದಾನಂದಮೂರ್ತಿ (ಪು. ೩೪೧ರಿಂದ ೩೫೯).

ದೇವಚಂದ್ರನ 'ರಾಜಾವಳಿ ಕಥಾಸಾರ'ದಲ್ಲಿ ಪ್ರಜಾ ಕ್ಷೋಭೆ ಕುರಿತು ಪರಿಶೀಲನೆ

ಎಚ್.ಎಸ್. ಉಷಾರಾಣಿ*

ಮಲೆಯೂರಿನ ದೇವಚಂದ್ರ (೧೭೭೦-೧೮೪೧) ಒಬ್ಬ ಜೈನ ಕವಿ. ಈತ ಮೈಸೂರಿನ ಹೈದರಾಲಿ. ಟಿಪ್ಪುಸುಲ್ತಾನ್, ಮುಮ್ಮಡಿ ಕೃಷ್ಣರಾಜ ಒಡೆಯರ್ ಮತ್ತು ದಿವಾನ್ ಪೂರ್ಣಯ್ಯ ಅವರ ಸಮಕಾಲೀನ. ಬ್ರಿಟೀಷರ ವಿರುದ್ಧ ನಡೆಯುತ್ತಿದ್ದ ಆಂಗ್ಲೋ ಮೈಸೂರು ಯುದ್ಧಗಳ ಕಾಲವದು. ದೇಶೀಯರು ಬ್ರಿಟೀಷರ ಪರ ವಿರುದ್ಧ ನಿಲುವು ತಾಳುತ್ತಿದ್ದ ಕಾಲಘಟ್ಟದಲ್ಲಿ ಒಬ್ಬ ಸಾಮಾನ್ಯ ಅರ್ಚಕ ವಿದ್ವಾಂಸರಾಗಿ ದೇವಚಂದ್ರ ಬ್ರಿಟೀಷ್ ಅಧಿಕಾರಿ ಕಾಲಿನ್ ಮೆಕೆಂಜಿಯ ಮೆಚ್ಚುಗೆಗೆ ಪಾತ್ರನಾಗಿ 'ರಾಜಾವಳಿ ಕಥಾಸಾರ' ರಚಿಸಿದ್ದು ಆತನ ಪಾಂಡಿತ್ಯಕ್ಕೆ ಹಿಡಿದ ಕೈಗನ್ನಡಿ. ತದನಂತರ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರ ಆಶ್ರಯದಲ್ಲಿದ್ದ ಸೂರಿ ಪಂಡಿತನ ನೆರವಿನಿಂದ ರಾಜಮಾತೆ ದೇವಿರಮ್ಮಣ್ಣಿ ಅವರಿಂದ ಗೌರವ ಪುರಸ್ಕಾರಕ್ಕೆ ಪಾತ್ರನಾದದ್ದನ್ನು ಬಹು ಸ್ವಾರಸ್ಯಕರವಾಗಿ ಕೃತಿಯಲ್ಲಿ ದಾಖಲಿಸಿರುವನು. ಈ ಕೃತಿ ಒಟ್ಟು ಹದಿಮೂರು ಅಧ್ಯಾಯಗಳಿಂದ ಕೂಡಿದೆ ಅದರಲ್ಲಿ ಅಂದಿನ ಪ್ರಜಾ ಕ್ಷೋಭೆ ಕುರಿತು ಪರಿಶೀಲಿಸಿ ವಿಶ್ಲೇಷಿಸುವುದೇ ಪ್ರಸ್ತುತ ಪ್ರಬಂಧದ ಉದ್ದೇಶ.

ಪ್ರಜಾ ಕ್ಷೋಭೆ ಕುರಿತು ವಿಶೇಷವಾಗಿ ಕೃತಿಯ ೧೧ನೆಯ ಅಧ್ಯಾಯದಲ್ಲಿ ಪ್ರಸ್ತಾಪಿಸಲಾಗಿದೆ. ಅದರಂತೆ ಅಂದಿನ ಪ್ರಜೆಗಳು ಎದುರಿಸುತ್ತಿದ್ದ ಬವಣೆಯನ್ನು ಚಿತ್ರಿಸಲಾಗಿದೆ. ಅದು ಹೀಗಿದೆ: ಮೂರನೇ ಆಂಗ್ಲೋ ಮೈಸೂರು ಕದನದ ತರುವಾಯ ಬ್ರಿಟೀಷ್ ಸರ್ಕಾರಕ್ಕೆ ತೆರಬೇಕಾಗಿದ್ದ ದ್ರವ್ಯ ಸಂಗ್ರಹದ ಬಗ್ಗೆ ಅನುಸರಿಸಿದ ಕ್ರಮವೆಂದರೆ, ಪ್ರಜೆಗಳ ಮೇಲೆ ವಿಧಿಸಿದ ಅಧಿಕ ತೆರಿಗೆ. ಈ ತೆರಿಗೆಗಳು ಆರ್ಥಿಕವಾಗಿ ಶೋಷಿಸುತ್ತಿದ್ದ ಪರಿಯನ್ನು ಬಿಂಬಿಸುತ್ತದೆ.

ವಾಸ್ತವವಾಗಿ ಪ್ರಜೆಗಳು ತೆರಬೇಕಾದ ತೆರಿಗೆಗಳು 'ಎರೆಹೊಲದ ಕಂದಾಯ ಕೆಬ್ಬೆ ಆಡು ಹೊರಕೊಟ್ಟಿಗೆ ಹಿತ್ತಿಲ ತೋಟ ಬಂಜರು ಭೂಮಿ ಚೌಳು ಮಾಡಿದ ಹಟ್ಟಿ ಮೊದಲಾದವು. ಕಂದಾಯ ದೀಪಾವಳಿ ಯುಗಾದಿ ಬೇಡಿಗೆ ವ್ಯವಹರಣೆ ನಾಣ್ಯ ತುಂಡು ನಾಣ್ಯ ಪಟ್ಟಿ ಹುಲ್ಲ ಸರತಿ ವರಹ ಸರತಿ ವಿನಾಯಕನ ಕಾಣಿಕೆ ಶಾನಾಯ ವಿಭೂತಿ ಕಾಣಿಕೆ ನಾಮ ಕಾಣಿಕೆ ಅಂಗಡಿ ತೆರಿಗೆ ಬಣಜ ಹತ್ತಿ ಪೊಮ್ಮ ಹೊಗೆ ಹಣ ಹೊಗೆಸೊಪ್ಪು ಸಂಬಳ ಸರತಿ ಜಾತಿ ಕೂಟ ತರಗು ಚಾರಿಗೆ ಉಪ್ಪಿನ ಕಾವಲಿ ಲಜ್ಜಾ ತೆರಿಗೆ ಚಕ್ಕ ತೆರಿಗೆ ಹಡಪ ಕುಮಟ ಸುಮಟ ಕುಲುಮೆ ಮಗ್ಗ ಮಾದಾರಿಕೆ ಚರ್ಮದೆರಿಗೆ ಕಡ್ಡಾಯ ಕಾಣಿಕೆ ಸುಣ್ಣದ ಗೂಡು ಚಾವಡಿ ಕಾಣಿಕೆ ಚಪ್ ಕಾಣಿಕೆ ಕೈವಾಡ ಅಟ್ಟವಣೆ ತೆರಿಗೆಗಳು'. ಹೆಚ್ಚುವರಿ ತೆರಿಗೆಗಳು ಯಾವುವೆಂದರೆ:- 'ಏಂಗಡ ಮಣೆಯ ಸುಂಕ ಏರು ಬಾಗಿಲು ಪೊಮ್ಮ ನಳುವಿನ ಗುತ್ತಿಗೆ ಅರಿಶಿನ ದುಂಡಗೆ ಮಸಗೋಲು ಪಟ್ಟಡಿ ಮಾರ್ಗ ಸುಂಕ ತುಂಬೋಳಿ ಕರಗ ಪಂತಿ ಮದುವೆ ಕೂಡೋಳಿ ಜೀತ ಸುಂಕ ಕಂಬಳದೆರಿಗೆ ಜಾತಿ ಮಣೆಯ ಶೇಂದಿ ಗುತ್ತಿಗೆ ಸಾರಾಯಿ ಹೊಗೆಸೊಪ್ಪು ಕೆಂಪಿನ ನೂಲು ಪನಾರಿ ಗಿಡ ಕಾವಲು ಅಡಕೆ ಗುತ್ತಿಗೆ ಎಲೆ ಗುತ್ತಿಗೆ ಗಂಧದ ಮಣೆಯ ಗುತ್ತಿಗೆ ಮೊದಲಾದವು'.[೧] ಉಲ್ಲೇಖಿತ ತೆರಿಗೆಗಳು ಸ್ವಯಂ ವಿವರ ನೀಡುವುದರಿಂದ ಮತ್ತೊಮ್ಮೆ ಅರ್ಥೈಸುವ ಅಗತ್ಯ ಕಂಡುಬರುವುದಿಲ್ಲ.

ಇದರೊಂದಿಗೆ ಕಂದಾಯ ತೆರಿಗೆ ಸಮಪೈರು ಹಣ ಇದರ ಮೇಲೆ ಗುತ್ತಿಗೆ ಕೈವಳಿ ಸಹಿತ ತೆಗೆದರಲ್ಲದೆ ಚರಾದಾಯವೆಂದು ಜಾಯಿತಪ್ಪು ಕೈತಪ್ಪು ಇರುಳ ತಪ್ಪು ಮೊದಲಾದ ಲೆಕ್ಕದಲ್ಲಿಯೂ ತೆರಿಗೆಗಳು ಸೇರಿದ್ದವು. ಜೊತೆಗೆ ಸಾಗುವಳಿ ಸಂತವಳಿ ಉಟ್ಟವಳಿ ಕಟ್ಟುವಳಿ ಪತ್ತುವಳಿ ಎಂಬಿವೇ ಮೊದಲಾದ ತೆರಿಗೆಗಳು ವಿಧಿಸಲ್ಪಟ್ಟಿದ್ದವು.

ಹೀಗೆ ನಾನಾ ರೀತಿಯ ಕೃಷಿ ಗೃಹ ಕೈಗಾರಿಕೆಗಳು ದಂಡ ವೃತ್ತಿ ತೆರಿಗೆ ವಾಣಿಜ್ಯ ಸರಕುಗಳು ಸಾರಿಗೆ ಇತ್ಯಾದಿ ತೆರಿಗೆಗಳಿಂದ 'ಬೇಸತ್ತ ರೈತರು ಅಮಲ್ದಾರರು ಕೊಡುವ ಕಿರುಕುಳ ಸಹಿಸಲಾರದೆ ಕೂಟ ಕಟ್ಟಿಕೊಂಡರೆಂದು ಹೇಳಲಾಗಿದೆ. ಅಂದರೆ ರೈತರು ಸಂಘಟಿತರಾಗಿ ಮೂರು ಮಂದಿ ಒಕ್ಕಲಿಗ ರೆಡ್ಡಿ ನಾಯಕರೆ ನೇತೃತ್ವದಲ್ಲಿ ಸುಮಾರು ಒಂದು ಸಾವಿರ

* ೨೭೪, ೪ನೇ ಮುಖ್ಯರಸ್ತೆ, ಬ್ಯಾಂಕ್ ಕಾಲೋನಿ, ಬೋಗಾದಿ, ಮೈಸೂರು.

ಕಂಬಳಿ ನಿಶಾನ ಸಹಿತ ಕರಿಘಟ್ಟದ ಬಳಿಯಲ್ಲಿ ಸಮಾವೇಶಗೊಂಡು ಸುಲ್ತಾನನಿಗೆ ವಿಷಯ ಮುಟ್ಟಿಸಿದರು'. ಇದು ಅಂದು ರೈತರು ಮನವಿ ಮಾಡುವ ಪ್ರವೃತ್ತಿ ಹೊಂದಿದ್ದರೆಂಬುದನ್ನು ತಿಳಿಸುತ್ತದೆ. ಇದಕ್ಕೆ ಸುಲ್ತಾನ ಸ್ಪಂದಿಸಿದ್ದಾದರೂ ಹೇಗಿತ್ತು?. 'ಸುಲ್ತಾನ ಅವರನ್ನು ಮನ್ನಿಸಿ ಪ್ರಜಾಕ್ಷೋಭೆ ಮಾಡಿದ ಸರ್ವಾಧಿಕಾರಿಗಳೇ ಮೊದಲಾದ ಅಧಿಕಾರಿಗಳನ್ನೂ ಒಳಗೊಂಡಂತೆ ಎಲ್ಲಾ ತೊಂದರೆಗಳನ್ನು ಪರಿಹರಿಸಬೇಕೆಂದು ಆದೇಶಿಸಿದನು. ಆದರೆ ಮೀರ್ ಸಾಬಿ ಎಂಬ ಸರ್ವಾಧಿಕಾರಿ ಮಾಡಿದ ದೋಷಾರೋಪಗಳನ್ನು ನಂಬಿದ ಸುಲ್ತಾನ ರೈತರ ಮುಂದಾಳತ್ವ ವಹಿಸಿದ್ದ ಮೂವರು ನಾಯಕರನ್ನು ಕಂಠ ಪಾಶವನ್ನಿಕ್ಕಿಸಿ ಕೊಂದನು'.[೨] 'ಅಲ್ಲದೆ ರಾಜ್ಯದಲ್ಲಿರುವ ಗ್ರಾಮಾಧಿ ಗ್ರಾಮಗಳ ಗುತ್ತಿಗೆ ಮೇಲೆ ವರಹ ಒಂದಕ್ಕೆ ಮೂರು ಹಣದ ಮೇರೆಗೆ ಹೆಚ್ಚಿಸಿದನು'. ಈ ಪರಿಯ ಕಾರ್ಯವೈಖರಿ ಪ್ರಜಾಕ್ಷೋಭೆಯನ್ನು ಹೆಚ್ಚಿಸಿತು. ಪರಿಣಾಮವಾಗಿ 'ಮೊದಲು ಹಾಕಿದ್ದ ತೆರಿಗೆಯನ್ನು ಕೊಡಲಾರದ ರೈತರಿಗೆ ಹೆಚ್ಚುವರಿ ತೆರಿಗೆಯಿಂದಾಗಿ ಕೆಲವರು ದೇಶಾಂತರ ಹೋದರು. ಮತ್ತೆ ಕೆಲವರು ಜಲಪಾತ ಮೊದಲಾದೆಡೆಯಲ್ಲಿ ಬಿದ್ದು ಸತ್ತರು'[೩] ಎಂದು ಹೇಳಿರುವನು.

ಈ ಸಂದರ್ಭವನ್ನು ಕುರಿತು ವಿದ್ವಾಂಸರಾದ ಮೊಹಿಬುಲ್ ಹಸನ್‌ರ ವಿಶ್ಲೇಷಣೆ ಪ್ರಕಾರ, ಯುದ್ಧದಲ್ಲಿ ಸೋತು ಅರ್ಧ ರಾಜ್ಯ ಕಳೆದುಕೊಂಡು ಪರಿಹಾರಧನ ಕೊಡಬೇಕಾಗಿ ಬಂದುದ್ದರಿಂದ ಅದು ಸುಲ್ತಾನನ ಅರ್ಥವ್ಯವಸ್ಥೆಯನ್ನೇ ಬುಡಮೇಲು ಮಾಡಿದಂತಾಯಿತು.[೪] ಮಿಗಿಲಾಗಿ ಟೀಪುವಿನ ಮಂತ್ರಾಲೋಚಕರ ಸಲಹೆಯಂತೆ ಪರಿಹಾರ ಧನವನ್ನು ಸೈನ್ಯ ಸ್ವಯಂಪ್ರೇರಿತವಾಗಿ ಅರವತ್ತು ಲಕ್ಷ ರೂಪಾಯಿಗಳ ಕೊಡುಗೆ ನೀಡಬೇಕೆಂದು ಉಳಿದ ಒಂದು ಕೋಟಿ ಅರವತ್ತು ಲಕ್ಷ ರೂಪಾಯಿಗಳು ನಾಗರೀಕ ಅಧಿಕಾರಿಗಳು ಮತ್ತು ಪ್ರಜೆಗಳಿಂದ ಎತ್ತತ್ತಕ್ಕದೆಂದು ತೀರ್ಮಾನಿಸಿದನು'[೫] ಎಂದು ಹೇಳಲಾಗಿದೆ. ಈಗಾಗಲೇ ದೇವಚಂದ್ರ ಹೇಳಿರುವುದೇನೆಂದರೆ 'ರಾಜ್ಯದಲ್ಲಿದ್ದ ಎಲ್ಲಾ ಜನರಿಂದ ನಜರಾನ ರೂಪಾಯಿಯನ್ನು ಸಂಗ್ರಹಿಸಿಕೊಟ್ಟು ಮಕ್ಕಳನ್ನು ಬಿಡಿಸಿಕೊಂಡನು'.[೬] ಅಂದರೆ ಒತ್ತೆ ಇಟ್ಟ ಮಕ್ಕಳನ್ನು ಹಿಂದೆ ಪಡೆಯಲು ಪ್ರಜೆಗಳನ್ನು ಸಂಕಷ್ಟಕ್ಕೀಡುಮಾಡಿ ಬ್ರಿಟೀಷರಿಗೆ ಮತ್ತೆ ಸವಾಲೊಡ್ಡಿದನು ಎಂಬುದು ಇಲ್ಲಿ ಖಚಿತ.

ದೇವಚಂದ್ರರ 'ರಾಜಾವಳಿ ಕಥಾಸಾರ' ಪ್ರಕಾರ 'ಅದೇ ವರ್ಷ ಕ್ಷಾಮ ತಲೆದೋರಿತು ಪ್ರಜೆಗಳು ಕೈಕರಟ ಹಿಡಿದು ನೆಲದಲ್ಲಿ ಬಿದ್ದ ಧಾನ್ಯ ಮೊದಲಾದವನ್ನು ಆಯ್ದು ಕೊಳ್ಳುವಂತಾದರು. ಜೀವನ ನಿರ್ವಹಣೆ ಸಾಧ್ಯವಿಲ್ಲದೆ ಹೆಣ್ಣು ಗಂಡೆಲ್ಲಾ ಬೇರೆಡೆಗೆ ಹೋಗುವಲ್ಲಿ ನಿಂದಲ್ಲಿ ಮಲಗಿದಲ್ಲಿ ಪ್ರಾಣ ಬಿಟ್ಟರು. ಎಲ್ಲೆಲ್ಲೂ ಹೆಣಮಯವಾಗಿ ಕಾಗೆ ಹದ್ದುಗಳಿಗೆ ಆಹಾರವಾದರು. ಹಣ ಒಂದಕ್ಕೆ ಮೂರು ಮಾನ ಜೋಳ ಮಾರಿದರು. ಜನರು ಕುಂಬಳಕಾಯಿಗಳನ್ನು ತಿಂದು ಜೀವಿಸಿದರು'.[೭]

ಹೀಗಿರಲು ನಾಲ್ಕನೆಯ ಆಂಗ್ಲೋ ಮೈಸೂರು ಯುದ್ಧ ೧೭೯೯ರಲ್ಲಿ ಕೊನೆಗೊಂಡು ಮೈಸೂರು ಸಂಸ್ಥಾನ ಸಹಾಯಕ ಸೈನ್ಯ ಪದ್ಧತಿಯ ಕರಾರಿಗೆ ಒಳಪಟ್ಟು ಸೈನ್ಯದ ಖರ್ಚು ರೆಸಿಡೆಂಟನ ನಿರ್ವಹಣೆ ಜೊತೆಗೆ ನಿಗದಿತ ಕಪ್ಪ ನೀಡಬೇಕಾಗಿತ್ತು. ಮುಮ್ಮಡಿ ಕೃಷ್ಣರಾಜ ಒಡೆಯರ್ ಅಪ್ರಾಪ್ತ ವಯಸ್ಕರಾಗಿದ್ದರಿಂದ ಅವರ ಪ್ರತಿನಿಧಿಯಾಗಿ ಹಾಗೂ ದಿವಾನರಾಗಿ ಕಾರ್ಯನಿರ್ವಹಿಸಿದ ದಿವಾನ್ ಪೂರ್ಣಯ್ಯ ತಮ್ಮ ಹನ್ನೆರಡು ವರ್ಷಗಳ ಅಧಿಕಾರದ(೧೭೯೯–೧೮೧೧) ಅವಧಿಯಲ್ಲಿ ಪ್ರಜೆಗಳ ಹಿತಕ್ಕಾಗಿ ಕಲ್ಯಾಣಕಾರಕ ಯೋಜನೆಗಳನ್ನು ಆಯೋಜಿಸಿದ್ದರೆ? ಎಂಬ ಪ್ರಶ್ನೆಗೆ ಸಮಾಧಾನಕರ ಅಥವಾ ತೃಪ್ತಿಕರ ಉತ್ತರ ದೊರಕುವುದು ಅಸಂಭವ. ಕಾರಣ ದಶಕಗಳಿಂದ ಅಳವಡಿಸಿಕೊಂಡಿದ್ದ ನೀತಿಯಲ್ಲಿ ಮಾರ್ಪಾಟುಗಳನ್ನು ತರುವಷ್ಟು ತರುಣರಾಗಿರಲಿಲ್ಲ. ಬದಲಿಗೆ ನಿಷ್ಠೆಯಿಂದಿರಲು ನಿಗದಿತ ಸಮಯಕ್ಕೆ ಸರಿಯಾಗಿ ಕಪ್ಪಕಾಣಿಕೆ ಸೈನ್ಯದ ನಿರ್ವಹಣೆಗೆ ಬೇಕಾಗುವ ಆದಾಯ ಸಂಗ್ರಹಿಸುವತ್ತ ಆದ್ಯ ಗಮನ ನೀಡಿದ್ದರೆಂಬುದು ವಾಸ್ತವ. ಇದರ ಪರಿಣಾಮ ಎಂಬಂತೆ ಪ್ರಕೃತಿ ಮುನಿದು ಮತ್ತೆ ಪ್ರಜಾಕ್ಷೋಭೆ ಉಂಟಾಯಿತು.

ದೇವಚಂದ್ರನ 'ರಾಜಾವಳಿ ಕಥಾಸಾರ'ವು ಜನತೆ ಮತ್ತೆ ಪ್ರಕೃತಿ ವಿಕೋಪಕ್ಕೆ ತುತ್ತಾದುದನ್ನು ಈ ರೀತಿ ತಿಳಿಸುತ್ತದೆ. ದೋಂಡಿಯ ವಾಘ್‌ನ ದಂಗೆಯ ತರುವಾಯ ಪರಿಸರದಲ್ಲಿ ಬಂದೆರಗಿದ 'ಪಟಕಿ ಮಿಡತೆ ಹಿಂಡುಗಳು ಶಲಬಾಧಿ ಹುಳುಗಳು' ಬಗ್ಗೆ ಪ್ರಸ್ತಾಪಿಸಿದ್ದಾನೆ.[೮] ಇವು ಭವಿಷ್ಯದಲ್ಲಿ ಶ್ರೀಸಾಮಾನ್ಯ ಎದುರಿಸಬೇಕಾದ ವಿಪತ್ತಿನ ಮುನ್ಸೂಚನೆ ಆಗಿತ್ತು. ಸತತವಾಗಿ ನಡೆದ ಯುದ್ಧಗಳಿಂದಾಗಿ ಭೂಮಿ ಕಂಪಿಸುತ್ತಿದ್ದು ಕೀಟಗಳು ಹೊರಬರಲಾರಂಬಿಸಿದ್ದು ಪ್ರಕೃತಿದತ್ತವಾದ ಕ್ರಿಯೆ. ಮಾನವ ಎಸಗಿದ ಕುಕೃತ್ಯದಿಂದಾಗಿ ಪ್ರಕೃತಿ ಮುನಿದು ಆತನ ಅಸ್ತಿತ್ವಕ್ಕೆ ಕಂಟಕಪ್ರಾಯವಾಗಿ ಗೋಚರಿಸತೊಡಗಿತ್ತೆಂದು ಅರ್ಥೈಸಬಹುದು. ಈ ಹಿನ್ನೆಲೆಯಲ್ಲಿ ಏಳು ದಿನಗಳ ಕಾಲ ನಿರಂತರವಾಗಿ ಸುರಿದ ಮಳೆ ಬಗ್ಗೆ 'ರಾಜಾವಳಿ ಕಥಾಸಾರ'ದಲ್ಲಿ ಉಲ್ಲೇಖಿಸಲಾಗಿದೆ. ಹುಚ್ಚು ಮಳೆಯಿಂದಾಗಿ 'ಚನ್ನಪಟ್ಟಣದ ಪೇಟೆ ಜಲಾವೃತಗೊಂಡು ಗೃಹಗಳಿಗೆ ನೀರು ನುಗ್ಗಿತೆಂದು ತಿಳಿಸಿದ್ದಾನೆ.[೯] ಇದರಿಂದ ಅತಿವೃಷ್ಠಿಯೂ ಜನರನ್ನು ಕಂಗೆಡಿಸಿತು ಅಂದರೆ ಊರಿಗೆ ಊರೆ ಶೋಚನೀಯ ಪರಿಸ್ಥಿಯನ್ನು

ಎದುರಿಸಿತು ಎಂಬ ಅಂಶ ವೇದ್ಯವಾಗುತ್ತದೆ. ನೀರು ಇಳಿಯುವವರೆಗೂ ಅನುಸರಿಸಿದ ಕ್ರಮಗಳೇನು? ಎಂದು ತಿಳಿಯುವ ಕುತೂಹಲವಿದೆ. ಇದರ ಬಗ್ಗೆ ದೇವಚಂದ್ರ ಹೆಚ್ಚಿಗೆ ಹೇಳಿಲ್ಲ.

'ರಾಜಾವಳಿ ಕಥಾಸಾರ'ದಲ್ಲಿರುವ ಪ್ರಕಾರ, 'ಚಿತ್ರಭಾನು ಸಂವತ್ಸರ, ಮಾರ್ಗಶಿರ ಮಾಸದಲ್ಲಿ ಉಜ್ಜಯಿನಿ ನಗರಕ್ಕೆ ಮುತ್ತಿಗೆ ಹಾಕಿ ಹಿಂತಿರುಗುವ ವೇಳೆಗೆ ಹಲವೆಡೆ ವಾಂತಿ ಭೇದಿಯಂತ ನರಮಾರಿ ರೋಗ ಹೊಕ್ಕು ಅನೇಕ ಜನರು ನಷ್ಟವಾದರು. ಆಗ ಜನ ದೊಡ್ಡಮ್ಮ ಚಿಕ್ಕಮ್ಮ ಎಂಬ ಗುಡಿ ಕಟ್ಟಿಸಿದರು' ಅಂದರೆ ಜನ ದೇವರ ಮೊರೆ ಹೊಕ್ಕರು. ಇಂದಿಗೂ ಮೌಳೆ ಮೋಳ ಗ್ರಾಮ(ಯಳಂದೂರು ತಾಲ್ಲೂಕು)ದಲ್ಲಿ ದೊಡ್ಡಮ್ಮ ಚಿಕ್ಕಮ್ಮ ತಾಯಿಯ ಗುಡಿಯಿದ್ದು ಜಾತ್ರೆ ಕೊಂಡೋತ್ಸವ ನಡೆಯುತ್ತದೆ. ಮತ್ತೊಂದು ನಿದರ್ಶನ ಶಾಸನ ದಲ್ಲಿದೆ. ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರ ಪಾಂಡವಪುರ ಶಾಸನ[೧೦] ಪ್ರಕಾರ, ಬಹುಧಾನ್ಯ ಸಂವತ್ಸರದ ಮಾರ್ಘಶಿರ ಶುದ್ಧ ಏಳು ಗುರುವಾರದಲ್ಲೂ ಭೂತ ಗಣಕ್ಕೆ ಅಧಿಷ್ಟಾನ ದೇವತೆಯಾದ ಮಹಾಕಾಳಿ ಮಹಾಲಕ್ಷ್ಮಿ ಮತ್ತು ಸರಸ್ವತಿಯರನ್ನು ಪ್ರತಿಷ್ಟೆ ಮಾಡಿಸಿದ ಬಗ್ಗೆ ನೀಡಿರುವ ವಿವರ ಇಂತಿದೆ:- 'ಶ್ರೀಮದ್ ರಾಜಾಧಿರಾಜ ಪ್ರೌಢ ಪ್ರತಾಪ ವೀರ ನರಪತಿ ಕೃಷ್ಣರಾಜ ಒಡೆಯರ್ ಅವರು ಮೈಸೂರು ನಗರದಲ್ಲೂ ಸಾಮ್ರಾಜ್ಯ ಗೈಯುತ್ತಿರಲು ಅಷ್ಟಾದಶ ಪೀಠದಲ್ಲಿ ಮುಖ್ಯ ಪೀಠ ಸ್ತಂಭ ಕೊಲ್ಲಾಪುರ ಮಹಾಲಕ್ಷ್ಮಿ ಅಮ್ಮನವರು ವುಜನಿ ಮಹಾಕಾಳಿ ಅಮ್ಮನವರು ಶೀಮೆ ಒಳಗೆ ಮಹೇಶ್ವರಿ ವುಪದ್ರದಿಂದ ವಾಂತಿ ಬ್ರಾಂತಿಯಾಗಿ ಜನರು ಮೃತರಾಗುತ್ತಾ ಇದ್ದಲ್ಲಿ ಈ ವುತ್ಪಾತ ರೋಗ ನಿವರ್ತ್ಯರ್ತವಾಗಿ ಈ ಕಣ್ವಪುರಿ ಕ್ಷೇತ್ರದಲ್ಲಿ ಇದ್ದಂತಾ ನಾಲ್ಕನೇ ವರ್ಗದಲ್ಲಿ ಗಂಗಡಿಕಾರರಲ್ಲಿ ಜನಿಸಿದ ಬೋಗೇಗೌಡನ ಪೌತ್ರನಾದ ಮರಿನಂಜೇಗೌಡನ ಪುತ್ರನಾದ ಬೋಗೇಗೌಡನ ಪತ್ನಿ ತಿಮ್ಮಮ್ಮನ ಪುತ್ರಿಯಾದ ನಂಜಮ್ಮ ಎಂಬ ಕನ್ನಿಕೆ ಮೇಲೆ ಶ್ರೀ ಅಮ್ಮನವರು ಅವಿರ್ಭವಿಸಿ ಬ್ರಹ್ಮ ಕ್ಷತ್ರಿಯ ಶೂದ್ರ ನಾಲ್ಕು ವರ್ಗದಲ್ಲು ಮನಸಾಭಿಷ್ಟಗಳು ಆಗಿ ರೋಗಾದುಪದ್ರಗಳು ಪರಿಹಾರವಾದ್ರಿಂದ ಶೀಮೆಗಳ ಮೇಲೆ ಬಂದ ಕಾಣಿಕೆಯಲ್ಲಿ ನಂಜಯ್ಯನು ಯಿ ಕನ್ನಂಬಾಡಿ ಗ್ರಾಮ ಮಧ್ಯದಲ್ಲಿ ನೂತನವಾಗಿ ದೇವಸ್ಥಾನವನ್ನು ಕಟ್ಟಿಸಿ ಅವತಾರ ಬೇಧವಾಗಿ ಭೂತಗಣಕ್ಕೆ ಅಧಿಷ್ಟಾನ ದೇವತೆಯಾದ ಮಹಾಕಾಳಿ ಅಮ್ಮನವರು, ಮಹಾಲಕ್ಷ್ಮಿ ಅಮ್ಮನವರು ಸರಸ್ವತಿ ಅಮ್ಮನವರು ಸಮೇತವಾಗಿ ಪ್ರತಿಷ್ಟೆ ಮಾಡಿದರು' ಎಂದಿದೆ.

ಉಲ್ಲೇಖಿತ ನಂಜಮ್ಮನನ್ನು ಆವೇಶದಮ್ಮ ಎಂದು ಕರೆಯಲಾಗುತ್ತಿತ್ತೆಂದು ೧೮೬೯ರ ಪಾಂಡವಪುರ ಶಾಸನ[೧೧] ದಿಂದ ಗೊತ್ತಾಗುತ್ತದೆ.

ಕಾಲರಾರೋಗ ಮತ್ತೆ ಮರುಕಳಿಸಿತ್ತು ಕ್ರಿ.ಶ.೧೮೨೮ರಲ್ಲಿ ಆರು ತಿಂಗಳುಗಳ ಕಾಲ(ಜನವರಿಯಿಂದ ಜೂನ್) ಮೈಸೂರು ಸಂಸ್ಥಾನದ ಅನೇಕ ಪ್ರದೇಶಗಳಲ್ಲಿ ಈ ಪಿಡುಗು ಕಾಣಿಸಿಕೊಂಡಿತ್ತು. ಇದರಿಂದ ಅಪಾರ ಹಾನಿಯುಂಟಾಗಿ ಜಾನುವಾರುಗಳು ಮೇವು ಮತ್ತು ನೀರಿಲ್ಲದೆ ಅಸುನೀಗಿದವು ಜನರು ವಲಸೆ ಹೋಗಲಾರಂಬಿಸಿದರು. ಇದಕ್ಕೆ ಮುನ್ನ ಕ್ರಿ.ಶ.೧೮೨೭-೨೮ರ ಅವಧಿಯಲ್ಲಿ ಮಳೆಯಿಲ್ಲದೆ ಸಂಸ್ಥಾನದಾದ್ಯಂತ ಹಾಹಾಕಾರ ಪರಿಸ್ಥಿತಿ ತಲೆದೋರಿದ್ದಂತೂ ಹೌದು, ಕೃಷಿಗೆ ಹಿನ್ನೆಡೆಯಾಯ್ತು ಮಹಾರಾಜರ ವೈಯುಕ್ತಿಕ ವೆಚ್ಚಗಳ ಮೇಲೂ ಕಡಿವಾಣ ಬಿತ್ತು ಎಂದು ಸಂಶೋಧನೆಗಳಿಂದ ತಿಳಿದಿದೆ.[೧೨]

ದೇವಚಂದ್ರನ 'ರಾಜಾವಳಿ ಕಥಾ'ಪ್ರಕಾರ ಕುಂಪಣಿ ಸರದಾರರು ತಮ್ಮ ವೈದ್ಯರನ್ನು ಡಾಕತರರೆಂಬ ವೈದ್ಯ ಪರೀಕ್ಷಾಕುಶಲರನ್ನು ಸಂಬಳ ಕೊಟ್ಟು ಅಲ್ಲಲ್ಲಿ ನೇಮಕ ಮಾಡಿದರು.[೧೩] ಈ ಹೊಸ ಕ್ರಮವನ್ನು ಅಷ್ಟು ಸಲೀಸಾಗಿ ಸ್ವೀಕರಿಸುವ ಮನಸ್ಥಿತಿ ಸ್ಥಳೀಯರಿಗಿರಲಿಲ್ಲ ಎಂದು ತೋರುತ್ತದೆ. ಏಕೆಂದರೆ ಸಾಮಾಜಿಕ ಅಂತರದಿಂದಾಗಿ ಜಾತಿ ಕೆಡುವುದೆಂಬ ಬೀತಿ ನೂತನ ಚಿಕಿತ್ಸಾ ವಿಧಾನವನ್ನು ಅಳವಡಿಸಿಕೊಳ್ಳಲು ನಂಬಿಕೆ ಬರದಂತೆ ಮಾಡಿತ್ತು. ಪರಿಣಾಮವಾಗಿ ಜನ ಚಿಕಿತ್ಸೆ ಇಲ್ಲದೆ ಸಾವನ್ನಪ್ಪುತ್ತಿದ್ದರು. ಭಂಡಾರದ ಅಭಿವೃದ್ಧಿಗೆ ಆದ್ಯತೆ ನೀಡುತ್ತಿದ್ದ ಅಧಿಕಾರ ವರ್ಗ ಪ್ರಜೆಗಳ ಆರೋಗ್ಯಕ್ಕೆ ಹೆಚ್ಚು ಒತ್ತು ನೀಡಿದಂತಿಲ್ಲ. ಶ್ರೀಮನ್ಮಹಾರಾಜರು ೧೮೧೨ರಲ್ಲಿ ಆಸ್ಪತ್ರೆಯನ್ನು ತೆರೆಯುವವರೆಗೆ ಯಾವುದೇ ಸಂಘಟಿತ ಚಿಕಿತ್ಸಾ ಕೇಂದ್ರಗಳು ಇರಲಿಲ್ಲ.[೧೪]

ದಿವಾನ್‌ರಾಗಿದ್ದ ಪೂರ್ಣಯ್ಯನವರು ತಮ್ಮ ಹನ್ನೆರಡು ವರ್ಷಗಳ ಆಳ್ವಿಕೆಯಲ್ಲಿ ಕಠಿಣ ಆರ್ಥಿಕ ನೀತಿ ಅನುಸರಿಸಿದ್ದರೂ ಪ್ರಜಾ ಹಿತದ ಕಡೆಗೆ ಅಷ್ಟಾಗಿ ಗಮನ ನೀಡಲಿಲ್ಲ.

ಶ್ರೀ ಮನ್ಮಹಾರಾಜರ ವಂಶಾವಳಿ ಪ್ರಕಾರ[೧೫] ಮುಮ್ಮಡಿ ಕೃಷ್ಣರಾಜ ಒಡೆಯರ್ ಲೋಕೋಪಕಾರಾರ್ಥವಾಗಿ ಲೋಕರಂಜನ ಮಹಲ್‌ಗೆ ಉತ್ತರದಲ್ಲಿ ವೈದ್ಯ ಶಾಲೆ ನಿರ್ಮಿಸಿ ಅಲ್ಲಿ ಸಕಲರಿಗೂ ಧರ್ಮಾರ್ಥವಾಗಿ ಔಷದಿ ಕೊಡುವಂತೆ ಕಟ್ಟಳೆ ಮಾಡಿ ಔಷಧಿ ಕೊಡಲು ಸಮರ್ಥರಾದ ಇಂಗ್ಲೀಷ್ ವೈದ್ಯರನ್ನು ಕರೆಸಿ ಹೆಚ್ಚಿನ ಸಂಬಳ ಕೊಟ್ಟು ನೇಮಿಸಿದ್ದರು.

ಜನ ಸಾಮಾನ್ಯರು ಅನಾರೋಗ್ಯದಿಂದ ಬಳಲುತ್ತಿದ್ದಲ್ಲಿ ಸ್ಥಳೀಯ ಹಕೀಮ ಮತ್ತು ಪಂಡಿತರನ್ನು ಸಂಪರ್ಕಿಸುತ್ತಿದ್ದರು. ದೇಶೀಯ ಪದ್ಧತಿಗಳು ಜನಪ್ರಿಯವಾಗಿದ್ದವು ಹಾಗು ಪರಿಣಾಮಕಾರಿಯಾಗಿದ್ದವು ಜನರ ಸಾಮಾಜಿಕ ಪದ್ಧತಿಗನುಗುಣವಾಗಿ ಚಿಕಿತ್ಸಾ ಕ್ರಮವಿದ್ದು ಫಲಕಾರಿಯಾಗುತ್ತಿತ್ತು ಹಾಗಾಗಿ ಮಾರ್ಕ್‌ಕಬ್ಬನ್ (ಕಮಿಷನರ್ ೧೮೩೪-೧೮೬೧) ಜನ ಅಧಿಕೃತವಾಗಿ ಗುರುತಿಸಿ ಸ್ವೀಕರಿಸುವ ಪ್ರಶ್ನೆಯನ್ನು ಜನರ ಆಯ್ಕೆಗೇ ಬಿಟ್ಟಿದ್ದನು. ಮಾರ್ಕ್‌ಕಬ್ಬನ್ ತನ್ನ ಆಳ್ವಿಕೆಯ ಅವಧಿಯಲ್ಲಿ ಸ್ಥಳಿಯ ಹಕೀಮ ಮತ್ತು ಪಂಡಿತರನ್ನು ಜೈಲಿನ ಸಿಬ್ಬಂದಿ ವರ್ಗಕ್ಕೂ ನೇಮಿಸಿದ್ದನು. ಎಲ್ಲಾ ತಾಲ್ಲೂಕು ಕಛೇರಿಗಳಲ್ಲಿ ಮತ್ತು ಸೈನಿಕ ಠಾಣೆಗಳಲ್ಲಿ ಹಕೀಮ ಮತ್ತು ಪಂಡಿತರಿಗೆ ಸಂಪ್ರದಾಯದಂತೆ ಸ್ಥಾನ ಕಲ್ಪಿಸಲಾಗಿತ್ತು.[೧೬]

ಬೆಂಗಳೂರು ಕೋಟೆಯೊಳಗೆ ೧೮೩೫ರಲ್ಲಿ ಪ್ರಥಮ ಸಾರ್ವಜನಿಕ ಆರೋಗ್ಯ ಕೇಂದ್ರ ತೆರೆಯಲಾಯಿತು. ೧೮೪೯ರಲ್ಲಿ ಸಣ್ಣ ಮಟ್ಟದ ಆಸ್ಪತ್ರೆ ಆರೋಗ್ಯ ಘಟಕ ತೆರೆಯಲಾಯಿತು. ೧೮೪೬ರಲ್ಲಿ ಸಣ್ಣ ಪ್ರಮಾಣದ ಆಸ್ಪತ್ರೆ ಮತ್ತು ಆರೋಗ್ಯ ಘಟಕ ತೆರೆದು ಎಪ್ಪತ್ತು ಒಳ ರೋಗಿಗಳಿಗೆ ಸ್ಥಳಾವಕಾಶ ಕಲ್ಪಿಸಲಾಯಿತು. ಮೊದಲಿಗೆ ಬ್ರಾಹ್ಮಣರಿಗೆ ಪ್ರತ್ಯೇಕ/ವಾರ್ಡ್ ಕಲ್ಪಿಸಲಾಗಿತ್ತು ನಂತರ ೧೮೫೨ರವೇಳೆಗೆ ವೈಶ್ಯರಿಗೂ ೧೮೫೬-೫೭ರಲ್ಲಿ ಲಿಂಗಾಯಿತರಿಗೂ ಪ್ರತ್ಯೇಕ ವಿಭಾಗಗಳನ್ನು ಕಲ್ಪಿಸಲಾಯಿತು. ಈಗಾಗಲೇ ೧೮೫೨ರಲ್ಲಿ ಶಿವಮೊಗ್ಗ ಸರ್ಕಾರಿ ಆಸ್ಪತ್ರೆ ಹೊಂದಿತ್ತು.[೧೭]

ಪ್ರಾರಂಭದಲ್ಲಿ ಯುರೋಪಿಯನ್ ಪ್ರಜೆಗಳ ಚಿಕಿತ್ಸೆಗಾಗಿ ವೈದ್ಯರನ್ನು ನೇಮಿಸಲಾಗಿತ್ತೇ ವಿನಹ ಸ್ಥಳೀಯರಿಗಲ್ಲ. ಯುರೋಪಿಯನ್ನರು ಆಧುನಿಕ ಚಿಕಿತ್ಸಾ ವಿಧಾನದಲ್ಲಿ ಗುಣಮುಖರಾಗುತ್ತಿದ್ದುದನ್ನು ವೀಕ್ಷಿಸುತ್ತಿದ್ದ ಸ್ಥಳೀಯರು ನೂತನ ಚಿಕಿತ್ಸಾ ವಿಧಾನದತ್ತ ಆಸಕ್ತಿ ತಾಳಿದರು. ಈ ಹಿನ್ನೆಲೆಯಲ್ಲಿ ಬೆಂಗಳೂರು ಹಾಗೂ ಇತರ ನಗರ ಪ್ರದೇಶಗಳಲ್ಲಿ ಚಿಕಿತ್ಸೆಗಾಗಿ ಬೇಡಿಕೆ ಉಂಟಾಯಿತು.[೧೮]

ದೇವಚಂದ್ರ ಸೂಚಿಸಿದ ಮತ್ತೊಂದು ಪ್ರಜಾಕ್ಷೋಭೆ ಸಿಡುಬು ರೋಗ. ರಾಜಾವಳಿ ಕಥಾಸಾರದಲ್ಲಿ 'ಪ್ರತೀಕಾರವಿಲ್ಲದ ಬಾಲಕರಿಗೆ ಬಪ್ಪ ಸ್ಫೋಟಕದಿಂದ ಅನೇಕರು ಲಯವಾಗುತ್ತಿದ್ದರು ಅದಕ್ಕೆ ಯುಕ್ತಿಯಿಂದ ಹಸುವಿನ ಸಿಡುಬಿನ ತೋಳ ಮೇಲಕ್ಕೇರಿಸಿ ಒಂದೆರಡರೋಳ್ ಕಳೆವಂತೆ ಉಪಾಯವಂ ಮಾಡಿದರು' ಎಂದು ಹೇಳಲಾಗಿದೆ. ಹಾಗೆಯೇ ರಾಜ್ಯದಲ್ಲಿ ಸುಗಮ ಸಂಚಾರಕ್ಕೆಂದು ರಸ್ತೆ ನಿರ್ಮಿಸಲು ಆದ್ಯತೆ ನೀಡಿದರು. ಇದರ ಸಲುವಾಗಿ ಲಕ್ಷಾಂತರ ರೂಪಾಯಿ ಖರ್ಚುಮಾಡಿ ಗಿಡ ಹಳ್ಳ ಬೆಟ್ಟ ಗುಡ್ಡಗಳನ್ನು ಸಮಮಾಡಿ ಅಲ್ಲಲ್ಲಿ ಬಂಗಲೆಗಳನ್ನು ನಿರ್ಮಿಸಿದರೆಂದು ರಾಜಾವಳಿ ಕಥಾಸಾರದಲ್ಲಿ ಹೇಳಲಾಗಿದೆ.[೧೯] ಇದರಿಂದ ಸಾರಿಗೆ ಸುಧಾರಿಸಿ ಬ್ರಿಟೀಷರ ಚಲನ ವಲನಕ್ಕೆ ಅನುವು ಮಾಡಿಕೊಟ್ಟಂತಾಯಿತು. ಆದರೆ ಪರಿಸರದಲ್ಲಿ ಅಸಮತೋಲನ ಕಂಡುಬರತೊಡಗಿತ್ತೆಂದರೆ ತಪ್ಪಾಗಲಾರದು.

ದೇವಚಂದ್ರ ತನ್ನ ರಾಜಾವಳಿ ಕಥಾಸಾರದಲ್ಲಿ ಸಾರಿಗೆ ಬಗ್ಗೆ ಹಾಗು ಚಾವಡಿಗಳ ಬಗ್ಗೆ ಮತ್ತಷ್ಟು ವಿವರ ನೀಡಿರುವನು. ಅದು ಹೀಗಿದೆ 'ಕುಂಪಣಿ ಸರದಾರರ ಸುಗಮ ಸಂಚಾರಕ್ಕೆಂದು ಸಾರಿಗೆ ವಿಸ್ತರಿಸಿ ಗಮನಾಗಮನಕ್ಕೆ ಸರಾಗವಾಗುವಂತೆ ಮಾಡಿ ಗ್ರಾಮನುಗ್ರಾಮಗಳಿಗೆ ಮುಳ್ಳು ಬೇಲಿ ಹಾಕಿ ಪೋಲೀಸ್ ಚಾವಡಿಗಳನ್ನು ನಿಯಮಿಸಿದರು'[೨೦] ಎಂಬ ವಿಚಾರ ಇಂದಿನ ಚೆಕ್ ಪೋಸ್ಟ್ ಮಾದರಿಯ ಪೊಲೀಸ್ ಚಾವಡಿಗಳು ಅಂದು ತೆರೆಯಲ್ಪಟ್ಟಿದ್ದು ಸರ್ಕಾರ ಅನುಸರಿಸಿದ ಕ್ರಮಗಳಲ್ಲಿ ಒಂದು ಎಂಬುದು ಸ್ಪುಟವಾಗುತ್ತದೆ.

ಹೀಗೆ ದೇವಚಂದ್ರನ 'ರಾಜಾವಳಿ ಕಥಾಸಾರ'ದಲ್ಲಿ ಮೂಡಿಬಂದಿರುವ ಹಲವು ವಿಷಯಗಳಲ್ಲಿ ಪ್ರಜಾಕ್ಷೋಭೆಯು ಮಹತ್ವ ಪೂರ್ಣವಾದದ್ದು ಅಂದಿನ ಆಡಳಿತ ವರ್ಗ ತಮ್ಮ ಸ್ವಪ್ರತಿಷ್ಠೆಯ ಯುದ್ಧಗಳಿಂದ ಜನರನ್ನು ಆರ್ಥಿಕವಾಗಿ ಶೋಷಿಸುತ್ತಿದ್ದುದು ಕೃಷಿ ಪ್ರಧಾನ ಅರ್ಥ ವ್ಯವಸ್ಥೆಯ ಮೇಲೆ ಬೀರಿದ ಪ್ರಭಾವವನ್ನು ಸೂಚಿಸುತ್ತದೆ ಪರಿಣಾಮ ಪರಿಸರದಲಿ ಅಸಮತೋಲನ ಇದು ಅತಿ ವೃಷ್ಟಿ ಅನಾವೃಷ್ಟಿ ಸಾಂಕ್ರಾಮಿಕ ರೋಗಗಳಲ್ಲಿ ಹೊರ ಹೊಮ್ಮುತ್ತಿದ್ದವು. ಅಂತಿಮವಾಗಿ ಪ್ರಜೆಗಳಲ್ಲಿದ್ದ ಅರಿವಿನ ಕೊರತೆ ಸ್ಥಳೀಯ ಅಧಿಕಾರಿಗಳ ಅಟ್ಟಹಾಸ ಜನರ ಬವಣೆ ಹೆಚ್ಚುವಂತೆ ಮಾಡಿತ್ತು. ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಆಡಳಿತ ಶಿಥಿಲಗೊಂಡಿದೆ ಎಂಬ ನೆಪವೊಡ್ಡಿ ಬ್ರಿಟೀಷ್ ಸರ್ಕಾರ ೧೮೩೧ರ ವೇಳೆಗೆ ಮೈಸೂರು ಸಂಸ್ಥಾನವನ್ನು ಕಮಿಷನರ್ ಆಳ್ವಿಕೆಗೆ ಒಳಪಡಿಸಿ ಸುಮಾರು ಐವತ್ತು ವರ್ಷಗಳ ಕಾಲ (೧೮೩೧-೧೮೮೧) ಮೈಸೂರು ಸಂಸ್ಥಾನವನ್ನು ಬ್ರಿಟೀಷರ ನೇರ ಆಳ್ವಿಕೆಗೆ ಒಳಪಡಿಸಿದ್ದು ವಾಸ್ತವದ ಸಂಗತಿ. ಇದರ ಬಗ್ಗೆ 'ರಾಜಾವಳಿ ಕಥಾಸಾರ'ದಲ್ಲಿ ನಿರೀಕ್ಷಿಸುವಂತಿಲ್ಲ.

ಅಡಿ ಟಿಪ್ಪಣಿಗಳು

೧. ಜಿ.ಎಸ್. ಸಣ್ಣಯ್ಯ (ಸಂ) ದೇವಚಂದ್ರರ 'ರಾಜಾವಳಿ ಕಥಾಸಾರ' (ಹೊಸಗನ್ನಡ ಗದ್ಯಾನುವಾದ) ಪುಟ ೩೦೪, ಕನಕಗಿರಿ ಪ್ರಕಾಶನ, ೨೦೦೦.

೨. ದೇವಚಂದ್ರ, ಅದೇ ಪುಟ ೩೦೫.

೩. ದೇವಚಂದ್ರ, ಅದೇ ಪುಟ ೩೦೫.

೪. ಮೊಹಿಬುಲ್ ಹಸನ್, 'ಟಿಪ್ಪುಸುಲ್ತಾನನ ಇತಿಹಾಸ' ಕನ್ನಡಕ್ಕೆ ಸಮೇತನಹಳ್ಳಿ ರಾಮರಾಯರು, ಪುಟ ೩೧೨, ೧೯೮೮.

೫. ಮೊಹಿಬುಲ್ ಹಸನ್, ಅದೇ ಪುಟ ೪೦೦.

೬. ದೇವಚಂದ್ರ, ಅದೇ (೧), ಪುಟ ೩೦೪.

೭. ದೇವಚಂದ್ರ, ಅದೇ (೧), ಪುಟ ೩೦೪.

೮. ದೇವಚಂದ್ರ, ಅದೇ (೧), ಪುಟ ೩೦೭.

೯. ದೇವಚಂದ್ರ, ಅದೇ ಪುಟ ೩೦೭.

೧೦. ಎಪಿಗ್ರಾಫಿಯ ಕರ್ನಾಟಕ (ಪರಿಷ್ಕೃತ ಆವೃತ್ತಿ), ಸಂ. ೬, ಪಾಂಡವಪುರ, ೨೩.

೧೧. ಎಪಿಗ್ರಾಫಿಯ ಕರ್ನಾಟಕ ಅದೇ (೯), ಪಾಂಡವಪುರ, ೨೪.

೧೨. ಡಾ॥ ಆರ್. ಗೋಪಾಲ್, ಡಾ॥ ನರೇಂದ್ರ ಪ್ರಸಾದ್, 'ಮುಮ್ಮಡಿ ಕೃಷ್ಣರಾಜ ಒಡೆಯರು' ಒಂದು ಚಾರಿತ್ರಿಕ ಅಧ್ಯಯನ, ಪುಟ ೫೨–೨೦೦೪.

೧೩. ದೇವಚಂದ್ರ ಅದೇ (೧), ಪುಟ ೩೦೭.

೧೪. ಕೆ.ಎನ್. ವೆಂಕಟಸುಬ್ಬಾಶಾಸ್ತ್ರಿ ಅಡ್ಮಿನಿಸ್ಟ್ರೇಷನ್ ಆಫ್ ಮೈಸೂರ್ ಅಂಡರ್ ಮಾರ್ಕ್ ಕಬ್ಬನ್, ೧೮೩೪–೧೮೬೭, ಪುಟ ೮೮.

೧೫. ಶ್ರೀ ಮನ್ಮಹಾರಾಜರ ವಂಶಾವಳಿ, ಭಾಗ–೨, ಪುಟ ೧೭೦.

೧೬. ಕೆ.ಎನ್. ವೆಂಕಟಸುಬ್ಬಾಶಾಸ್ತ್ರಿ ಅಡ್ಮಿನಿಸ್ಟ್ರೇಷನ್ ಆಫ್ ಮೈಸೂರ್ ಅಂಡರ್ ಮಾರ್ಕ್ ಕಬ್ಬನ್, ಪುಟ ೮೯.

೧೭. ಕೆ.ಎನ್. ವೆಂಕಟಸುಬ್ಬಾಶಾಸ್ತ್ರಿ ಅಡ್ಮಿನಿಸ್ಟ್ರೇಷನ್ ಆಫ್ ಮೈಸೂರ್ ಅಂಡರ್ ಮಾರ್ಕ್ ಕಬ್ಬನ್, ಪುಟ ೮೯.

೧೮. ಕೆ.ಎನ್. ವೆಂಕಟಸುಬ್ಬಾಶಾಸ್ತ್ರಿ ಅಡ್ಮಿನಿಸ್ಟ್ರೇಷನ್ ಆಫ್ ಮೈಸೂರ್ ಅಂಡರ್ ಮಾರ್ಕ್ ಕಬ್ಬನ್, ಪುಟ ೮೯.

೧೯. ದೇವಚಂದ್ರ ಅದೇ (೧), ಪುಟ ೩೦೭.

೨೦. ದೇವಚಂದ್ರ ಅದೇ (೧), ಪುಟ ೩೦೭.

ಪನ್ನೆಯ: ಹೊಯ್ಸಳರ ಕಾಲದ ವೀಳ್ಯದೆಲೆ ಮೇಲಿನ ತೆರಿಗೆ (ಮಂಡ್ಯ ಜಿಲ್ಲೆಯ ಶಾಸನಗಳನ್ನು ಅನುಲಕ್ಷಿಸಿ)

ಎಸ್. ಶಿವರಾಮು*

ಬಹಳ ಪ್ರಾಚೀನ ಕಾಲದಿಂದಲೂ ಭಾರತೀಯರ ಸಾಮಾಜಿಕ ಬದುಕಿನಲ್ಲಿ ವೀಳ್ಯದೆಲೆ ಅತ್ಯಂತ ಹಾಸುಹೊಕ್ಕಾಗಿದೆ. ಮಾನವ ತನ್ನ ದೈನಂದಿನ ಬದುಕಿನಲ್ಲಿ ವೀಳ್ಯವನ್ನು ದೇವತಾಕಾರ್ಯ, ಶುಭಕಾರ್ಯಗಳಲ್ಲಿ ಹಾಗೂ ಸಾಮಾಜಿಕ, ಸಾಂಸ್ಕೃತಿಕ, ಸಾಂಘಿಕ ಕ್ಷೇತ್ರಗಳಲ್ಲಿ ವೀಳ್ಯದೆಲೆಯನ್ನು ಬಳಸುತ್ತಿರುವುದು ಚಾರಿತ್ರಿಕ ಸತ್ಯವಾಗಿದೆ. ಮಾನವನ ಬದುಕಿನ ಎಲ್ಲಾ ಹಂತಗಳಲ್ಲೂ ವೀಳ್ಯ ಪ್ರಮುಖವಾಗಿ ಕಾಣಿಸುತ್ತದೆ.[೧] ವೀಳ್ಯವನ್ನು ಭೋಜನಾ ನಂತರ ಚರ್ವಣವಾಗಿ; ವ್ಯವಹಾರದಲ್ಲಿ ಅರ್ಥಗರ್ಭಿತವಾದ ಸಂಕೇತವಾಗಿ ಪರಿಗಣಿಸಲಾಗಿದೆ.

ವೀಳ್ಯದ ಪ್ರಾಧಾನ್ಯತೆ: ಆರಂಭಸೂಚಕವಾಗಿ ವೀಳ್ಯವನ್ನು ನೀಡಲಾಗುತ್ತದೆ. ಯುದ್ಧಕ್ರೀಡೆ, ವ್ಯವಸಾಯದ ಆರಂಭದಲ್ಲಿ ಅಲ್ಲದೆ ಇನ್ನೂ ಅನೇಕ ಸಂದರ್ಭಗಳಲ್ಲಿ ಶುಭಸೂಚಕವಾಗಿ ವೀಳ್ಯ ಬಳಕೆಯಾಗುತ್ತದೆ. ಎದುರಾಳಿಯನ್ನು ಸೋಲಿಸಲು ಕಣಕ್ಕಿಳಿಯುವವರಿಗೆ ವೀಳ್ಯವನ್ನು ನೀಡಲಾಗುತ್ತೆಂದರೆ ಪಂಥಾಹ್ವಾನ ಸ್ವೀಕರಿಸಿದಂತೆ ಭಾವಿಸಲಾಗುತ್ತದೆ. ಅದು ಸಮ್ಮತಿಯ ಸೂಚಕವೆಂದರ್ಥ. ವೀಳ್ಯ ಪಡೆದ ನಂತರ ಹಿಂದಿರುಗುವಂತಿರಲಿಲ್ಲ. ತೊಟ್ಟ ಪಣಕ್ಕೆ ಬದ್ಧರಾಗುತ್ತಿದ್ದರು. ಹಾಗೆಯೇ ವಿವಾಹಾದಿ ಶುಭಕಾರ್ಯಗಳಲ್ಲೂ ನಿಶ್ಚಯ ತಾಂಬೂಲದ ವಿನಿಮಯ ಹಿರಿಯರ ಹಾಗೂ ವಧು-ವರರ ಸಮ್ಮತಿಯ ಸಂಕೇತವಾಗಿ ಪರಿಣಮಿಸುತ್ತದೆ. ವಿದ್ಯಾರಂಭದಲ್ಲಿ ಗುರುವಿಗೆ ವೀಳ್ಯ ನೀಡಲಾಗುತ್ತದೆ. ಸ್ವೀಕರಿಸಿದ ಗುರು ಶಿಷ್ಯನ ವಿದ್ಯಾಭ್ಯಾಸದ ಹೊರೆಯನ್ನು ಹೊರುತ್ತಾನೆ. ದೇವರನ್ನು ಅರ್ಚಿಸುವಾಗ ಮುತ್ತೈದೆಯರಿಗೆ ವೀಳ್ಯವನ್ನು ಕೊಡುವಾಗ ವೀಳ್ಯ ಸಂಪ್ರದಾಯದ ಸಂಕೇತವಾಗಿದೆ. ಒಬ್ಬರನ್ನೊಬ್ಬರು ಬೀಳ್ಕೊಡುವುದಾದರೂ ತಾಂಬೂಲ ಗ್ರಹಣ ನಂತರವೆ.

ವೀಳ್ಯದ ಚಾರಿತ್ರಿಕತೆ: ತಾಂಬೂಲದ ಬಳಕೆ ವೇದಕಾಲದಿಂದಲೂ ನಮ್ಮಲ್ಲಿ ರೂಢಿಯಲ್ಲಿದೆ. ರಾಮಾಯಣದಲ್ಲಿ ನಾಗವಲ್ಲಿ, ಅಮರದಲ್ಲಿ ತಾಂಬೂಲವಲ್ಲಿಯೇ, ಅಲ್ಲದೆ ಅದನ್ನು ತಾನ್‌ಬುಲ್, ತಾನ್‌ಬುರ್ ಹಾಗೂ ಫಣಿರಾಜವಲ್ಲಿ (ಆಮುಕ್ತಮೌಲ್ಯದ) ಎಂಬಿತ್ಯಾದಿಯಾದ ಹೆಸರುಗಳಿಂದ ಕರೆಯಲ್ಪಡುತ್ತಿತ್ತು. ರಾಮಾಯಣದಲ್ಲಿ ಉಕ್ತವಾಗಿರುವ ನಾಗವಲ್ಲಿ ಎಂಬ ವಿವರ ಹಾಗೂ ಅಮರದಲ್ಲಿ ಉಕ್ತವಾಗಿರುವ 'ತಂಬೂಲವಲ್ಲಿ, ತಾಂಬೂಲಿ, ನಾಗವಲ್ಯಪಿ' ಎಂಬ ವಿವರವನ್ನು ಗಮನಿಸಿದಾಗ ರಾಮಾಯಣದಲ್ಲಿ ಉಕ್ತವಾಗಿರುವ ನಾಗವಲ್ಲಿ ಎಂಬುದು ವೀಳ್ಯವನ್ನು ಕುರಿತ ಪ್ರಸ್ತಾಪವೇ ಆಗಿರುವುದು ಸ್ಪಷ್ಟವಾಗುತ್ತದೆ. ಹತ್ತನೆಯ ಶತಮಾನದಲ್ಲಿದ್ದ ಅರಬ್ ಬರಹಗಾರನಾದ ಅಲ್-ಮಸೂದಿ ತಾಂಬೂಲವನ್ನು 'ತಾನ್‌ಬೂಲ್' ಎಂಬುದಾಗಿ ಕರೆದಿದ್ದಾನೆ. ಇದು ಯಮೆನ್‌ನಲ್ಲಿ ಬೆಳೆಯುವ ಬೈಬುಲ್ ಗಿಡದ ಎಲೆಯ ಗಾತ್ರ ಇರುತ್ತದೆ. ಗ್ರಾಮದ ವ್ಯಾಜ್ಯ ಇತ್ಯರ್ಥದ ನಂತರವೂ ದಾಯಾದಿಗಳ ಆಸ್ತಿಜಗಳಗಳನ್ನು ಬಗೆಹರಿಸಿದರ ಸಂಕೇತವಾಗಿಯೂ ವೀಳ್ಯವನ್ನು ಕೊಡುತ್ತಿದ್ದರು. ಹಿಂದ್ ದೇಶದ ದೊರೆಗಳಾದರೋ ಯುದ್ಧಕ್ಕೆ ಸೇನಾಧಿಪತಿಗಳನ್ನು ಕಳುಹಿಸುವಾಗ ಕತ್ತಿಯ ಮೇಲೆ ವೀಳ್ಯವನ್ನು ಇಟ್ಟು ಕಳುಹಿಸುತ್ತಿದ್ದರು. ಹೊಯ್ಸಳರ ಕಾಲದ ಕ್ರಿ.ಶ. ೧೨೮೨ರ ಶಿವಮೊಗ್ಗ ಜಿಲ್ಲೆ ಸಾಗರ ತಾಲ್ಲೂಕಿನ ಶಾಸನವು ಮಹಾಮಂಡಲೇಶ್ವರ ಬೀರರಸ ಹೊಸಗುಂದವನ್ನು ಆಕ್ರಮಿಸಲು ಹಾಗೂ ಹೋರಾಡಲು ಅಳಿಯನಾದ ಬೊಮ್ಮಬೂವನಿಗೆ ವೀಳ್ಯವನ್ನು ನೀಡಿ ಗೌರವಿಸಿ ಯುದ್ಧಕ್ಕೆ ಕಳುಹಿಸಿಕೊಟ್ಟನು.[೨] ಇದೇ ರಣವೀಳ್ಯ. ಈ ಎಲ್ಲ ಸಂದರ್ಭಗಳಲ್ಲೂ ವೀಳ್ಯದ ಜೊತೆಗೆ ಅಡಿಕೆಯ ಬಳಕೆಯ ಉಲ್ಲೇಖವಿರುತ್ತಿತ್ತೇ ವಿನಃ ಸುಣ್ಣದ ಉಲ್ಲೇಖ ಕಂಡುಬರುವುದಿಲ್ಲ. ಆಯುರ್ವೇದದಲ್ಲಿ ತಾಂಬೂಲ ಸೇವನೆ ಆರೋಗ್ಯಕರ ವಾದದ್ದು ಎಂಬ ಮಾತುಂಟು. ಬಾಣಭಟ್ಟನು ತನ್ನ ಕಾದಂಬರಿಯಲ್ಲಿ ತಾಂಬೂಲವನ್ನು ಸೇವಿಸುವವರು, ಭೋಜನಾ ನಂತರ ಬಾಯಿಯನ್ನು ನೀರಿನಿಂದ ಚೆನ್ನಾಗಿ ಶುಚಿಗೊಳಿಸಿಕೊಂಡು ಅನಂತರವೇ ವೀಳ್ಯವನ್ನು ಸೇವಿಸಬೇಕೆನ್ನುತ್ತಾನೆ. ಅಂತಃಪುರದಲ್ಲಿ ರಾಣಿಯರಿಗೆ ವೀಳ್ಯವನ್ನು ಮಡಿಸಿಕೊಡುವುದಕ್ಕಾಗಿಯೇ ಪ್ರತ್ಯೇಕವಾದ ದಾಸಿಯರಿರುತ್ತಿದ್ದರು. ಅಂತೆಯೇ

* ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಮಹಿಳಾ ಸರ್ಕಾರಿ ಕಾಲೇಜು, ಮಂಡ್ಯ, ಮೊ. ೯೮೪೫ ೯೮೮೧

ಪ್ರತ್ಯೇಕವಾದ ಉಾಳಿಗವೇ ಇರುತ್ತಿತ್ತು. ಭೋಜನಾನಂತರ ಸೇವಿಸುತ್ತಿದ್ದ ವೀಳ್ಯ ಕ್ರಮೇಣ ಅಭ್ಯಾಸವಾಗಿ ಸದಾ ಮೆಲ್ಲುವ ಚಟವಾಯಿತು. ಕಾಮಸೂತ್ರದಲ್ಲಿನ ನಾಗರೀಕನು ಅಲಂಕೃತವಾಗಿ ಬಾಯಿ ಸಿಹಿಯಾಗಿಯೂ, ಸುಗಂಧಭರಿತವಾಗಿಯೂ ಇರಲು ವೀಳ್ಯವನ್ನು ಮೆಲ್ಲುತ್ತಿದ್ದನು.

ಒಂದನೆಯ ಕುಮಾರಗುಪ್ತನ ಮಂದಸೋರ್ ಶಾಸನವು ಸುಂದರಿಯೊಬ್ಬಳು ಅಲಂಕೃತಳಾಗಿ ವೀಳ್ಯವನ್ನು ಮೆಲ್ಲುತ್ತಿದ್ದಳೆನ್ನುವುದನ್ನು ಉಲ್ಲೇಖಿಸುತ್ತದೆ. ಅಲ್‌ಮಸೂದಿ ಒಂದು ವಿಚಿತ್ರವಾದ ನಂಬಿಕೆಯನ್ನು ಹೇಳುತ್ತಾನೆ. ಹಿಂದ್ ದೇಶದ ಜನರು ವೀಳ್ಯ ಮೆಲ್ಲುತ್ತಿದ್ದಾಗ ಸಾವನ್ನಪ್ಪಿದರೆ ಸ್ವರ್ಗಕ್ಕೆ ಹೋಗುತ್ತಾರೆಂಬ ನಂಬಿಕೆ ಉಂಟು. ಸತಿಯಾಗಿ ಹೋಗುವ ಸ್ತೀ ತಾಂಬೂಲವನ್ನು ಜಗಿಯುತ್ತಾ ಚಿತೆಯಲ್ಲಿ ಜಿಗಿಯುತ್ತಿದ್ದಳು. ೧೩ನೆಯ ಶತಮಾನದಲ್ಲಿ ದಕ್ಷಿಣಭಾರತವನ್ನು ಸಂದರ್ಶಿಸಿದ ವೆನಿಸಿನ ವರ್ತಕನಾದ ಮಾರ್ಕೊಪೋಲೋ ಭಾರತೀಯರನ್ನು ವರ್ಣಿಸುತ್ತಾ ಹೀಗೆ ಹೇಳುತ್ತಾನೆ. ಭಾರತೀಯರು ಬಾಯಲ್ಲಿ 'ತಾನ್‌ಬುರ್' ಎನ್ನುವ ಎಲೆಯನ್ನು ಸದಾ ಜಗಿಯುವ, ರಸವನ್ನು ಉಗಿಯುವ ಚಟವನ್ನು ಹೊಂದಿದ್ದರು. ರಾಜಮಹಾರಾಜರು, ಉನ್ನತ ವರ್ಗದವರು ವೀಳ್ಯವನ್ನು ಪಚ್ಚಕರ್ಪೂರ, ಏಲಕ್ಕಿ, ಲವಂಗ, ಜಾಕಾಯಿ, ಜಾಯಿಪತ್ರೆ ಮುಂತಾದ ಸುಗಂಧ ಪದಾರ್ಥಗಳೊಂದಿಗೆ ಸುಣ್ಣವನ್ನು ಲೇಪಿಸಿ ಅಡಿಕೆಯೊಂದಿಗೆ ಸೇವಿಸುತ್ತಿದ್ದರು.[೩]

ವೈರಿಯನ್ನು ಕೆಣಕುವುದಕ್ಕೂ ವೀಳ್ಯ ಸಹಾಯಕ್ಕೆ ಬರುತ್ತಿತ್ತು. ಮಾರ್ಕೊಪೋಲೋ ಹೇಳಿಕೆಯಂತೆ ವೈರಿಯನ್ನು ಅವಮಾನಗೊಳಿಸಲು ಜಗಿಯುತ್ತಿದ್ದ ವೀಳ್ಯವನ್ನು ಎದುರಾಳಿಯ ಮುಖದ ಮೇಲೆ ಉಗಿದು ನಿನ್ನ ಯೋಗ್ಯತೆ ಇದಕ್ಕಿಂತಲೂ ಕಡಿಮೆ ಎಂದು ಮೂದಲಿಸುತ್ತಿದ್ದನು. ಅಪಮಾನಿತನಾದ ಎದುರಾಳಿಯು ರಾಜನಲ್ಲಿ ದೂರು ಹೇಳಿಕೊಂಡು ದ್ವಂದ್ವ ಯುದ್ಧಕ್ಕೆ ಅನುಮತಿಯನ್ನು ಪಡೆಯುತ್ತಿದ್ದನು. ಹೀಗೆ ಎದುರಾಳಿಯನ್ನು ಹೀಯಾಳಿಸಿದುದೇ ಅಲ್ಲದೆ ದ್ವಂದ್ವಯುದ್ಧಕ್ಕೆ ಅವಕಾಶವನ್ನೂ ಗಿಟ್ಟಿಸಿಕೊಳ್ಳುತ್ತಿದ್ದನು.

ಪರ್ಷಿಯಾದ ಅಬ್ದುಲ್ ರಜಾಕ್ ವಿಜಯನಗರಕ್ಕೆ ಭೇಟಿಕೊಟ್ಟು ಇಲ್ಲಿನ ಸಾಮಾಜಿಕ ಜೀವನವನ್ನು ಚಿತ್ರಿಸಿದ್ದಾನೆ. ಅವನು ಅನೇಕ ಸಂಗತಿಗಳನ್ನು ಹೇಳುತ್ತಾನೆ. ತಾಂಬೂಲ ಅಥವಾ ವೀಳ್ಯೆಯದ ಬಗೆಗೆ ಅವನು ಕೊಡುವ ವಿವರಗಳು ಬಹು ಕುತೂಹಲಕರವಾಗಿದೆ. ಮಧ್ಯಕಾಲೀನ ಸಾಮಾಜಿಕ ಜೀವನ ತಿಳಿಯಲು ಇವು ಪ್ರೇರಕವಾಗಿವೆ:

ವೀಳೆಯದೆಲೆಯನ್ನು ಹಿಂದೂಸ್ಥಾನ, ಅರಬ್ಬೀ ದೇಶದ ಬಹುಭಾಗ, ಓರ್ಮಸ್ ರಾಜ್ಯ ಈ ಕಡೆಗಳ ಜನರು ಬಹಳ ಆಸೆಯಿಂದ ಉಪಯೋಗಿಸುತ್ತಾರೆ. ನಿಜವಾಗಿಯೂ ಅದರಲ್ಲಿ ಒಳ್ಳೆಯ ಗುಣಗಳಿರುವುದರಿಂದ ಅದಕ್ಕೆ ಇಷ್ಟು ಪ್ರಾಶಸ್ತ್ಯ; ಇದನ್ನು ಉಪಯೋಗಿಸುವ ರೀತಿ ಹೀಗಿದೆ: ಸಿಪಾರಿ (ಸುಪಾರಿ) ಎಂದು ಕರೆಯುವ ಅಡಕೆಯನ್ನು ಸ್ವಲ್ಪ ಜಜ್ಜಿ ಬಾಯೊಳಕ್ಕೆ ಹಾಕಿಕೊಳ್ಳುತ್ತಾರೆ. ವೀಳೆಯದೆಲೆಗೆ ಸುಣ್ಣವನ್ನು ಹಚ್ಚಿ ಸುರಳಿ ಮಾಡಿ ಬಾಯಲ್ಲಿಟ್ಟು ಅಗಿಯುತ್ತಾರೆ. ಒಂದೊಂದು ಸಲ ನಾಲ್ಕಾರು ಎಲೆಗಳನ್ನು ಒಟ್ಟಿಗೆ ಬಾಯಲ್ಲಿ ಹಾಕಿಕೊಂಡು ಅಗಿಯುವುದುಂಟು. ಕೆಲವು ವೇಳೆ ಪಚ್ಚ ಕರ್ಪೂರ ಸೇರಿಸಿಕೊಳ್ಳುತ್ತಾರೆ. ರಸವನ್ನು ಒಮ್ಮೊಮ್ಮೆ ಉಗಿಯುತ್ತಾರೆ. ಅದು ಕೆಂಪು ಬಣ್ಣಕ್ಕಿರುತ್ತದೆ. ವೀಳೆಯವನ್ನು ಹಾಕಿಕೊಂಡಾಗ ಮುಖವು ಬಣ್ಣವೇರಿ ತೇಜಸ್ಸು ಕಾಣಿಸುತ್ತದೆ. ದ್ರಾಕ್ಷಾರಸವನ್ನು ಕುಡಿದರೆ ಬರುವಂಥ ಅಮಲು ಬರುತ್ತದೆ. ಹೊಟ್ಟೆ ತುಂಬಾ ಉಂಡಾಗ ಇದನ್ನು ಹಾಕಿಕೊಂಡರೆ ಆಹಾರವನ್ನು ಜೀರ್ಣ ಮಾಡುತ್ತದೆ. ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸಿ ಹಲ್ಲುಗಳಿಗೆ ಶಕ್ತಿಕೊಡುತ್ತದೆ. ವೀಳೆಯದೆಲೆ ಎಷ್ಟು ಬಲವರ್ಧಕ, ಎಷ್ಟು ಕಾಮೋತ್ತೇಜಕ ಎಂಬುದನ್ನು ವರ್ಣಿಸಲಾರೆ. ಬಹುಶಃ ಈ ವೀಳೆಯದೆಲೆಯ ಗುಣವೇ ಕಾರಣ ಇರಬೇಕು ಈ ದೇಶದ ದೊರೆ ತನ್ನ ಅಂತಃಪುರದಲ್ಲಿ ಲೆಕ್ಕವಿಲ್ಲದಷ್ಟು ಸ್ತ್ರೀಯರನ್ನು ಇಟ್ಟುಕೊಂಡಿರುವುದಕ್ಕೆ.[೪] ಈ ವೀಳ್ಯದೆಲೆ ನಮ್ಮ ದೇಶದ ಮೆಣಸು ಅಥವಾ ಐವಿ ತರಹದ ಎಲೆಯುಳ್ಳ ಸಸ್ಯ; ಅವರು ಈ ಎಲೆಯನ್ನು ಯಾವಾಗಲೂ ತಿನ್ನುತ್ತಾರೆ ಮತ್ತು ಅಡಿಕೆ ಎನ್ನುವ ಇನ್ನೊಂದು ಕಾಯಿಯೊಂದಿಗೆ ಯಾವಾಗಲೂ ಬಾಯಿಯಲ್ಲಿ ಇಟ್ಟುಕೊಳ್ಳುತ್ತಾರೆ. ಅದು ಸ್ವಲ್ಪ ಮೆಡ್ಲರ್‌ನಂತಿದ್ದು ಗಟ್ಟಿಯಾಗಿರುತ್ತದಲ್ಲದೆ ಪರಿಮಳಕ್ಕೆ ಒಳ್ಳೆಯದಾಗಿರುತ್ತದೆ ಮತ್ತು ಇತರ ಅನೇಕ ಗುಣಗಳುಳ್ಳದ್ದಿರುತ್ತದೆ. ಏನೇ ಆದರೂ ಇಡೀ ದಿನ ವೀಳ್ಯದೆಲೆ ಮೆಲ್ಲುವುದನ್ನು ಅವರು ಬಿಡರು.[೫]

ಸಂಗಂ ಯುಗದ ನಂತರ ವೀಳ್ಯದೆಲೆ ಜಗಿಯುವುದು ಒಂದು ಸಾಮಾನ್ಯ ವಾಡಿಕೆಯಾಗಿ ಅಸ್ತಿತ್ವದಲ್ಲಿತ್ತು. ಅಲ್ಬೆರೂನಿ ಈ ವೀಳ್ಯದೆಲೆಯನ್ನು ಉಲ್ಲೇಖಿಸುತ್ತಾ ಇದೊಂದು ಪ್ರಖ್ಯಾತ ಮತ್ತು ಸಾಮಾನ್ಯ ಹವ್ಯಾಸವಾಗಿತ್ತೆಂದು ಬರೆದಿದ್ದಾನೆ.[೬]

ವೀಳ್ಯೆಯದೆಲೆ ವೈಜ್ಞಾನಿಕವಾಗಿಯೂ ಬಳಕೆಯಾಗುತ್ತದೆ. ಇದು ಔಷಧೀಯ ಗುಣವನ್ನು ಹೊಂದಿದ್ದು, ಚಿಕ್ಕಮಕ್ಕಳಿಗೆ ಬಾಲ್ಯಾವಸ್ಥೆಯಲ್ಲಿ ಕೆಮ್ಮು ಮತ್ತು ಉಸಿರಾಟದ ತೊಂದರೆಯಾದಾಗ ತೈಲ ಲೇಪಿತ ವೀಳ್ಯೆಯದೆಲೆಯನ್ನು ಶಿಶುವಿನ ಎದೆ ಹಾಗೂ ಹೊಟ್ಟೆಯ ಮೇಲೆ ಹಚ್ಚುವುದರಿಂದ ಬಹು ಬೇಗನೆ ಗುಣಗೊಳ್ಳುತ್ತದೆ. ಇದೊಂದು ದೇಸೀ ಅಭ್ಯಾಸವಾದರೂ

ಇದರ ಉಪಯುಕ್ತತೆಯು ಯೂರೋಪಿಯನ್ ಅನುಭವದಿಂದ ದೃಢವಾಗಿದೆ. ಅಲ್ಲದೇ ಗ್ರಂಥಿಗಳು ಬಾವುಗೊಂಡು ಹಾಲು ಸ್ರವಿಸುವಿಕೆಯ ಸಮಸ್ಯೆಯನ್ನು ತಡೆಗಟ್ಟಲು ವೀಳ್ಯೆದೆಲೆಯನ್ನು ಬೆಂಕಿ ಶಾಖದಲ್ಲಿ ಬೆಚ್ಚಗೆ ಮಾಡಿ ಎದೆತೊಟ್ಟಿಗೆ ಎಲೆಯನ್ನು ಲೇಪನಗೊಳಿಸಿದರೆ ಪರಿಣಾಮಕಾರಿಯಾಗಿ ಬಾವು ಕಡಿಮೆಯಾಗುತ್ತದೆ.[೭]

ಶಾಸನಗಳಲ್ಲಿ ಪನ್ನೆಯ ತೆರಿಗೆ: ಹೊಯ್ಸಳ ಸರ್ಕಾರವು ತನ್ನ ಸಾಮ್ರಾಜ್ಯದಲ್ಲಿ ಸಾಮಾಜಿಕ–ಆರ್ಥಿಕ ರಚನೆಯ ಪ್ರಗತಿಗಾಗಿ ಬಲವಾದ ಬುನಾದಿಯನ್ನು ಹಾಕಿತು. ತನ್ನ ಆರ್ಥಿಕ ಸಂಪನ್ಮೂಲವನ್ನು ಬಲಗೊಳಿಸಲು ಕೃಷಿ ಉತ್ಪನ್ನಗಳ ಮೇಲೆ ತೆರಿಗೆಯನ್ನು ಜಾರಿಗೊಳಿಸಿತು. ಅಂತಹ ನಗದು ರೂಪದ ತೆರಿಗೆಗಳು ರಾಜ್ಯದ ಖಜಾನೆಗೆ ಪ್ರಮುಖವಾದ ಆದಾಯದ ಮೂಲವಾಗಿದ್ದವು.

ಹೊಯ್ಸಳ ರಾಜ್ಯಾಡಳಿತದಲ್ಲಿ ಹೊರಡಿಸಲ್ಪಟ್ಟ ಹಲವು ಶಾಸನಗಳು ವಿಶೇಷವಾಗಿ ಮಂಡ್ಯ ಜಿಲ್ಲೆಯ ೧೨ ಮತ್ತು ೧೩ನೆಯ ಶತಮಾನದ ಶಾಸನಗಳು 'ಪನ್ನೆಯ' ಎಂಬ ವೀಳ್ಯೆಯದೆಲೆ ಮೇಲೆ ಸಂಗ್ರಹಿಸುತ್ತಿದ್ದ ತೆರಿಗೆಯ ಬಗ್ಗೆ ಬೆಳಕು ಚೆಲ್ಲುತ್ತವೆ. ಈ ತೆರಿಗೆಯು ಜಾರಿಯಲ್ಲಿದ್ದ ಪ್ರದೇಶಗಳೆಂದರೆ ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆ, ಪಾಂಡವಪುರ ತಾಲ್ಲೂಕಿನ ಹಿರಿಕಳಲೆ, ಗೋವಿಂದನಹಳ್ಳಿ, ತೊಣ್ಣೂರು ಹಾಗೂ ಕೊಳ್ಳೇಗಾಲ ಮತ್ತು ಹುಣಸೂರು ತಾಲ್ಲೂಕಿನ ಕೆಲವೆಡೆ ಅಸ್ತಿತ್ವದಲ್ಲಿತ್ತು. ಒಂದನೇ ನರಸಿಂಹ, ಎರಡನೇ ಬಲ್ಲಾಳರ ಅವಧಿಯಲ್ಲಿ ಈ ತೆರಿಗೆಯನ್ನು ಸಂಗ್ರಹಿಸುತ್ತಿದ್ದರು. ವೀಳ್ಯೆಯದೆಲೆ ಮೇಲೆ ತೆರಿಗೆ ಸಂಗ್ರಹಿಸುವ ಮುಖ್ಯ ಉದ್ದೇಶವೆಂದರೆ ಇದು ನೇರವಾಗಿ ಸಾಮಾಜಿಕ ಮತ್ತು ಧಾರ್ಮಿಕ ಸಂಬಂಧಗಳನ್ನು ಹೊಂದಿತ್ತು. ಈ ವೀಳ್ಯೆಯದೆಲೆ ಮೇಲೆ ಸಂಗ್ರಹವಾದ ತೆರಿಗೆಯನ್ನು ಧಾರ್ಮಿಕ ಸಂಸ್ಥೆಗಳಿಗೆ ದಾನವಾಗಿ ನೀಡಲಾಗುತ್ತಿತ್ತು.[೮]

ಮಂಡ್ಯ ಜಿಲ್ಲೆ ಕೃಷ್ಣರಾಜಪೇಟೆ ತಾಲ್ಲೂಕಿನ ಹಿರೀಕಳಲೆಯ ಶಾಸನವು ತ್ರುಟಿತವಾಗಿದ್ದು, ಹಿರೀಕಳಲೆಯ ಸ್ವಯಂಭು (ಅಂಕಕಾರ?) ದೇವರ ನಂದಾದೀಪೋತ್ಸವಕ್ಕೆ ಪನ್ನೆಯ ತೆರಿಗೆಯಿಂದ ಬಂದ ಆದಾಯವನ್ನು ದಾನವನ್ನಾಗಿ ಬಿಟ್ಟ ವಿಚಾರವನ್ನು ಉಲ್ಲೇಖಿಸುತ್ತದೆ. ಅಲ್ಲದೇ ಹಿರಿಯಣ್ಣ ಮತ್ತು ಸೋಮಯ್ಯ ಎಂಬಿಬ್ಬರನ್ನೂ ಶಾಸನದಲ್ಲಿ ತಿಳಿಸಿದೆ.[೯]

ಕೃಷ್ಣರಾಜಪೇಟೆ ತಾಲ್ಲೂಕಿನ ಕ್ರಿ.ಶ. ೧೨೩೬ರ ಗೋವಿಂದನ ಹಳ್ಳಿಯ ಶಾಸನವು ನಾಗರಿ ಲಕ್ಷಣಗಳಿಂದ ಕೂಡಿದ ಸಂಸ್ಕೃತ ಮತ್ತು ಕನ್ನಡ ಭಾಷೆಯಲ್ಲಿದ್ದು, ಹೊಯ್ಸಳ ಅರಸ ಸೋಮೇಶ್ವರನ ಆಳ್ವಿಕೆಯ ಕಾಲದ್ದಾಗಿದೆ. ಸಳನಿಂದ ಪ್ರಾರಂಭಗೊಂಡ ರಾಜರ ವಂಶಾವಳಿಯನ್ನು ತಿಳಿಸುತ್ತದೆ. ದಣ್ಣಾಯಕ ಕೇತಣ್ಣನ ಮಕ್ಕಳಾದ ಬೋಗಯ್ಯ, ಮುರಾರಿ ಮಲ್ಲಯ್ಯ ಎಂಬ ಮಂತ್ರಿಗಳು, ದೊರೆ ಸೋಮೇಶ್ವರ ಕಬ್ಬಾಹು ನಾಡಿನ ತೆಂಗಿನಘಟ್ಟ ಮತ್ತು ಅದಕ್ಕೆ ಹೊಂದಿಕೊಂಡ ೧೧ ಹಳ್ಳಿಗಳನ್ನು ದಾನ ನೀಡಿದ ಉಲ್ಲೇಖವಿದೆ. ಇವುಗಳನ್ನು ಅಗ್ರಹಾರವನ್ನಾಗಿ ಪರಿವರ್ತಿಸಿ ಅದಕ್ಕೆ ಪ್ರಸನ್ನ ಸೋಮನಾಥಪುರವೆಂದು ಮರುನಾಮಕರಣಗೊಳಿಸಿ ವಿವಿಧ ಗೋತ್ರದ ಮತ್ತು ಸೂತ್ರದ ಬ್ರಾಹ್ಮಣರಿಗೆ ೬೨ ವೃತ್ತಿಗಳನ್ನು ವಿವಿಧ ತೆರಿಗೆಗಳನ್ನು ದಾನಮಾಡಿ ಈ ತೆರಿಗೆಗಳನ್ನು ಹಣದ ರೂಪದಲ್ಲಿ ರಾಜ್ಯದ ಬೊಕ್ಕಸಕ್ಕೆ ಸಲ್ಲಿಸಬೇಕು. ಈ ದಾನವನ್ನು ರಾಮನಾಥದೇವರ ಸಮ್ಮುಖದಲ್ಲಿ ಮಾಡಲಾಯಿತು. ಈ ಶಾಸನದಲ್ಲಿ ವಿವಿಧ ರೀತಿಯ ತೆರಿಗೆಗಳ ವಿವರಗಳಿದ್ದು, ಪಣಂ ಮೂರು ಹಾಗಂ ಮೂರು। ನಿಬಂಧ ಗದ್ಯಾಣವೊಂದು ಪಣವೆರಡು ಹಾಗ ಮೂರು । ಶ್ರೀಕರಣಂ ಪಣಂ ವೊಂಬತ್ತು ಹಾಗಂ ಮೂರು ಸುಂಕ ಗದ್ಯಾಣಂವೈದು ಪಣವೊಂದು । ಪನ್ನಾಯ ಪಣವೆಂಟು ಹಾಗವೆರಡು ಅಡಿಕೆ ಪಕ್ಕ... ಕ್ಕೆ ಗದ್ಯಾಣವೆಂಟು । ಪಣಗಟ್ಟರುವೊಂದು। ಎಂಬ ಉಲ್ಲೇಖವಿದೆ.[೧೦]

ಮಂಡ್ಯ ಜಿಲ್ಲೆ ಪಾಂಡವಪುರ ತಾಲ್ಲೂಕಿನ ತೊಣ್ಣೂರಿನ ಕ್ರಿ.ಶ. ೧೧೭೪ರ ಶಾಸನವು ಹೊಯ್ಸಳ ದೊರೆ ಇಮ್ಮಡಿ ಬಲ್ಲಾಳನ ಕಾಲದ್ದಾಗಿದ್ದು, ತ್ರುಟಿತವಾಗಿದೆ. ಈ ಶಾಸನದಲ್ಲಿ ದಾನಿಯಾದ ಪಸಾಯತನ ಉಲ್ಲೇಖವಿದೆ. ಇದು ಲಕ್ಷ್ಮೀನಾರಾಯಣ ದೇವರ ಸೇವೆಗಾಗಿ ಪನ್ನೆಯ ತೆರಿಗೆಯಿಂದ ಬಂದ ಆದಾಯವನ್ನು ನೀಡಿದನೆಂದು ತಿಳಿಸುವುದಲ್ಲದೇ ಕೊನೆಯಲ್ಲಿ ಭಾಳಚಂದ್ರದೇವನ ಉಲ್ಲೇಖವಿರುವುದರಿಂದ ಬಹುಶಃ ಈತ ಶಾಸನ ಕೆತ್ತಿದವನಿರಬಹುದು.[೧೧] ಇದೇ ತಾಲ್ಲೂಕಿನ ಇದೇ ಗ್ರಾಮದ ಕ್ರಿ.ಶ. ೧೧೭೫ರ ಹೊಯ್ಸಳ ಬಲ್ಲಾಳ ದೇವನ ಶಾಸನವು ಶ್ರೀ ಮನ್ಮಹಾಪ್ರಧಾನ ಸರ್ವಾಧಿಕಾರಿ ಮಹಾಪಸಾಯತ ತಂತ್ರಾಧಿಷ್ಠಾಯ ಹೆಗ್ಗಡೆ ಸುರಗಿಯ ನಾಗಯ್ಯ ಮರಣದಿಂದ ನಾಯಕ ಹೆಗ್ಗಡೆಯು ಶ್ರೀಮದನಾದಿಯಗ್ರಹಾರಂ ತೊಂಡನೂರ ನಡುವಣಯಾದ ಪಡಿಯಲೆಯ ವೀಳೆಯಕ್ಕ ಬಿಲ್ಕುಂಬಳಿಯ ತೋಟದಲು ಎಲೆಯಗುಳಿ ಇನೂರು ಗುಳಿಯಂ ಕುಳಿಯ ಗಾಡವಗದೆ ಮೂವತು ಗುಳಿಯುಂ ಅನ್ನು ಇನ್ನೂರಲಂಬತ್ತು ಗುಳಿಯ ಪನ್ನೆಯವಂ ಸರ್ವಭಾಧಾ ಪರಿಹಾರವಾಗಿ ಧಾರಾಪೂರ್ವಕವಾಗಿ ಮಾಡಿಕೊಟ್ಟರು.[೧೨]

ಇದಲ್ಲದೇ ಕೊಳ್ಳೇಗಾಲ ತಾಲ್ಲೂಕಿನ ೧೪ನೇ ಶತಮಾನದ ಶಾಸನವು ಕೂಡ ಪನ್ನೆಯದ ಬಗ್ಗೆ ವಿವರ ನೀಡುತ್ತದೆ. ಇದೇ ತಾಲ್ಲೂಕಿನ ಮುಡಿಗೊಣ್ಣ ಗ್ರಾಮದ ಶಾಸನವು ದಕ್ಷಿಣಾಯ ಸಂಕ್ರಮಣದ ಶುಕ್ರವಾರ ಮುಡಿಗೊಂಡ ಚೋಳಪುರದ ಪ್ರಭುಸ್ವಾಮಿಗಳು, ಕೆಲವು ಗಾವುಂಡರುಗಳು ನಖರಜಿನಾಲಯದ ಜೀರ್ಣೋದ್ಧಾರಕ್ಕೆ, ದೇವರ ಪೂಜೆಗೆ ಆಹಾರ ದಾನಕ್ಕೆ ಹದಿನಾಡು ಹಳ್ಳಿಯ ಪೂರ್ವ ಮರ್ಯಾದೆಯ ಚತುಸ್ಸೀಮೆಯ ಭೂಮಿಯ ಸಿದ್ದಾಯ ಸುಂಕ ಪನ್ನಾಯ ಒಳಗೊಂಡ ತೆರಿಗೆಗಳನ್ನು ಸರ್ವಪರಿಹಾರವಾಗಿ, ಧಾರಾಪೂರ್ವಕವಾಗಿ ನೀಡಿದೆ. ಶಾಸನ ತ್ರುಟಿತವಾಗಿರುವುದರಿಂದ ಹೆಚ್ಚು ವಿವರಗಳು ಲಭ್ಯವಿಲ್ಲ.[೧೩] ಹುಣಸೂರು ತಾಲ್ಲೂಕಿನ ಧರ್ಮಾಪುರದ ಕ್ರಿ.ಶ. ೧೧೬೨ರ ಶಾಸನವು ಹೊಯ್ಸಳ ದೊರೆ ಒಂದನೇ ನರಸಿಂಹನ ಕಾಲದ್ದಾಗಿದ್ದು, ಆರಿದವಾಳಿಕೆಯ ತೊಗರವಾಡಿಯಂ ಮಂನ್ನೆಯ ಬೂವನಹಳ್ಳಿ ಒಳಗಾದ ಹಳ್ಳಿಗಳು ಸಹಿತ ಧರ್ಮಾಪುರವೆಂಬ ಹೆಸರಂ ಮಾಡಿ ಅಲ್ಲಿಯ ಶ್ರೀ ಕೇಶವದೇವರ ರಂಗಭೋಗ ನಿವೇದ್ಯಸ್ಕಂಡ ಸ್ಪುಟಿತ ಜೀರ್ನ್ಣೋದ್ಧಾರಕ್ಕಂ ಪಾತ್ರ ಪಾವುಡಕ್ಕೆ ಸಲುವಂತಾಗಿ ಶ್ರೀಮನುಮಹಾಪ್ರಧಾನಂ ಭಂಡಾರಿ ಹುಳ್ಳಯ್ಯ ಪಸಾಯಿತ ಸುರಿಗೆಯ ನಾಗಯ್ಯ ಲಕುಮಯ್ಯಂಗಳ ಸಮಕ್ಷಮದಲ್ಲಿ ಅಲ್ಲಿಯ ಕೇಶವದೇವರಿಂಗೆ ಅಲ್ಲಿಗೆ ಮೂಲಿಗನಾಗಿ ಶ್ರೀಧರೆಯ ಕೈಯಲು ಧಾರಾಪೂರ್ವಕವಾಗಿ ಕೊಟ್ಟ ದತ್ತಿ, ಶ್ರೀಮಹಾಪ್ರಧಾನ ದಂಡನಾಯಕ ಬಿಟ್ಟಿಯಣ್ಣರು ಬಿಟ್ಟ ದತ್ತಿ ಎಂದರೆ ಧರ್ಮಾಪುರದ ಶ್ರೀ ಕೇಶವದೇವರಿಂಗೆ ಆವೂರ ಮನೆ ಚಿನ್ನವೊಳವಾರು ಹೊರವಾರು ಗಾಣದೆರೆ, ಕುಂಬಾರದೆರೆ, ಅಗಸದೆರೆ, ತೊತ್ತುದೆರೆ, ಭಂಡಿದೆರೆ, ವೊಡದೆರೆ, ಮೇದದೆರೆ, ಸಾದದೆರೆ, ಉದುವಂಕದೆರೆ, ಐನ್ನೂರು ಕುಳಿಯ ಪನ್ನಾಯದೆರೆ, ನಾವಿದದೆರೆ ಇನ್ನಿತರ ತೆರಿಗೆಯನ್ನು ಧಾರಾಪೂರ್ವಕವಾಗಿ ಬಿಟ್ಟ ಉಲ್ಲೇಖವಿದೆ.[೧೪]

ಹೀಗೆ ವೀಳ್ಯವು ಪವಿತ್ರವೆಂದು ಭಾವಿಸಲಾಗಿದೆ. ಈ ವೀಳ್ಯದೆಲೆಯ ಬಗ್ಗೆ ಭಾರತೀಯರಿಗೆ ಗೌರವವಿದೆ. ತಾನ್‌ಬುಲ್ ತೋಟಕ್ಕೆ ಪಾದರಕ್ಷೆಗಳನ್ನು ಹಾಕಿಕೊಂಡು ಎಂದೂ ಪ್ರವೇಶಿಸುತ್ತಿರಲಿಲ್ಲ. ಇದಲ್ಲದೇ ಹೆಣ್ಣು ರಜಸ್ವಲೆಯಾದಾಗಲೂ ಇದನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದರು. ಡೆಮಿಂಗೊ ಪಯಾಸ್‌ನು ವಿಜಯನಗರದ ಪಾನ್‌ಸುಪಾರಿ ಬಜಾರ್ ಕೂಡ ಒಂದಾಗಿತ್ತು ಎಂಬುದಾಗಿ ತಿಳಿಸಿದ್ದಾನೆ. ಹೀಗೆ ವೀಳ್ಯದ ಬಳಕೆಯು ಸಾಂಸ್ಕೃತಿಕವಾಗಿ, ಆರ್ಥಿಕವಾಗಿ, ಸಾಂಘಿಕವಾಗಿ ಜನರಲ್ಲಿ ಅಂದಿನಿಂದ ಇಂದಿನವರೆಗೂ ವೈವಿಧ್ಯಮಯವಾಗಿ ಬೆಳೆದುಬಂದಿದೆ.

ಅಡಿ ಟಿಪ್ಪಣಿಗಳು

೧. Pade J.S. (1958) Tambula Manjari, Orientant Institute, Boarda p. II.

೨. E.C. VIII, Sa, 84-85, p. 107.

೩. ಇತಿಹಾಸ ದರ್ಶನ (೧೯೯೫), ಸಂಪುಟ ೧೦, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು, ಪು. ೨೫೬.

೪. ವಿವೇಕ ರೈ ಬಿ.ಎ. (ಸಂ) (೨೦೦೫), ಪ್ರವಾಸಿ ಕಂಡ ವಿಜಯನಗರ, ಹಂಪಿ, ಪು. ೧೯.

೫. ಅದೇ, ಪು. ೫೮.

೬ Sampath Kumaracharya V.S. (2006), Life in the Hoysala Age, Mysore, p. 140.

೭. Edward John Waring (1883), Remarks on the Uses of Some of the Bazaar Medicines and Common Medical Plants of India, London, pp. 27-28.

೮. Veerathappa K. (Ed) (1987), Studies in Karnataka History and Culture Proceedings, Vol. II, KHC, Mysore, p. 78.

೯. E.C. VI, Kr, 75, Hiri-Kallale, p. 60-61.

೧೦. E.C. VI, Kr, 39, Govindanahalli, p. 23-27.

೧೧. E.C. VI, pp, 60, Tonnur, p. 138-139.

೧೨. E.C. VI, pp, 79, Tonnur, p. 151-152.

೧೩. E.C. IV, Ko, 118, Muddigonna, p. 140.

೧೪. E.C. IV, Hn, 24, Dharmapura, p. 496-497.

ಕಳಸ ಪರಿಸರದಲ್ಲಿ ದೊರೆತ ಜಿಂಕೆ ಬೇಟೆ ವೀರಗಲ್ಲುಗಳ ವಿಶ್ಲೇಷಣೆ


ಕೆ.ಎನ್. ಸುಪ್ರೀತ*

ಚಿಕ್ಕಮಗಳೂರು ಜಿಲ್ಲೆಯ ಕಳಸ ಪರಿಸರವು ಮಲೆನಾಡಾಗಿದ್ದು, ಹಚ್ಚ ಹಸಿರಿನಿಂದ ಕೂಡಿದೆ. ಇದೇ ಪರಿಸರವು ಹೇಮಾವತಿ, ನೇತ್ರವತಿ, ತುಂಗಾ ಮತ್ತು ಭದ್ರಾ ನದಿಗಳ ಉಗಮಸ್ಥಾನವಾಗಿದೆ. ಇದರಲ್ಲಿ ಭದ್ರಾ ನದಿಯು ಕಳಸ ಪೇಟೆ ಮೂಲಕ ಹಾದುಹೋಗುತ್ತದೆ. ಇಲ್ಲಿನ ದಟ್ಟವಾದ ಅರಣ್ಯ ಹಾಗೂ ಇತ್ತೀಚೆಗೆ ಕಾಫಿತೋಟಗಳಲ್ಲಿ ಅದೆಷ್ಟೋ ಆದಿ ಮಾನವನ ಕುರುಹುಗಳು ದೊರೆಯುತ್ತವೆ. ಅದರಲ್ಲಿ ಬೃಹತ್ ಶಿಲಾಯುಗ ಸಂಸ್ಕೃತಿಯ ಸಮಾಧಿಗಳು, ಕಲ್ಗುಳಿಗಳು, ಸ್ಮಾರಕಗಳು, ಶಾಸನಗಳು ಸೇರಿವೆ.

ಜಿಂಕೆ ಬೇಟೆ ವೀರಗಲ್ಲಿನ ಕುರಿತು ಕರ್ನಾಟಕದಲ್ಲಿ ಅಧ್ಯಯನವಾಗಿರುವುದು ವಿರಳ ಅದರಲ್ಲಿ ಪ್ರಮುಖವಾಗಿ ಡಿ. ವಿ. ಪರಮಶಿವಮೂರ್ತಿ ಅವರ ಶೋಧ ಮೊದಲನೆಯದೆನ್ನಬಹುದು. ಅವರು 'ಜಿಂಕೆ ಬೇಟೆಯ ಕುರಿತು ಬನಶಂಕರಿಯಲ್ಲಿ ದೊರೆತಿರುವ ವೀರಗಲ್ಲಿನ ಎರಡನೆಯ ಹಂತದಲ್ಲಿದ್ದು, ಈ ಶಿಲ್ಪದಲ್ಲಿ ಬೇಟೆಯಾಡುತ್ತಿರುವ ವ್ಯಕ್ತಿ ಬಾಣ ತಗುಲಿ ಸತ್ತಿದ್ದಾನೆ. ಕಡವೆಯನ್ನು ಹೊಡೆವದವರಾರು? ಎಂಬ ವಿಷಯದಲ್ಲಿ ಕಲಹವಾಗಿ ಸತ್ತಿರಬಹುದು' ಎಂದು ಊಹಿಸಿದ್ದಾರೆ. ಇವರ ನಂತರದಲ್ಲಿ ಕಳಸ ಸಮೀಪದ ಮರಸಣಿಗೆಯ ಕಾಮನಕೊಡಿಗೆ ಕಾಫಿತೋಟದಲ್ಲಿ ವಿಶಿಷ್ಟವಾದ ವೀರಗಲ್ಲೊಂದನ್ನು ಎ. ಆರ್. ಗುರು ಅವರು ಇತಿಹಾಸ ದರ್ಶನ ಸಂಪುಟ ೧೬ರಲ್ಲಿ ಮರಸಣಿಗೆಯ ಅಪರೂಪದ ಬೇಟೆ ವೀರಗಲ್ಲು ಎಂಬ ಶೀರ್ಷಿಕೆಯೊಂದಿಗೆ ಲೇಖನ ಪ್ರಕಟಿಸಿದ್ದಾರೆ. ಈ ವೀರಗಲ್ಲಿನಲ್ಲಿ ಮೊದಲನೆ ಹಂತವೇ ಜಿಂಕೆ ಮತ್ತು ಹಂದಿಯನ್ನು ಇಬ್ಬರು ಪುರುಷರು ಬಿಲ್ಲುಗಳನ್ನು ಹಿಡಿದು ಬೇಟೆಯಾಡುವ ದೃಶ್ಯವನ್ನು ಚಿತ್ರಿಸಿದ್ದಾರೆ. ಇವರೊಡನೆ ನಾಯಿಗಳು ಬೇಟೆಯಲ್ಲಿ ಸಹಾಯ ಮಾಡುವಂತೆ ತೊರುತ್ತದೆ. ಇವುಗಳ ಬೇಟೆ ಮಾಡುವ ಸಂದರ್ಭದಲ್ಲಿ ಮಡಿದಿರಬಹುದು ಎಂಬುದು ಅವರ ಅಭಿಪ್ರಾಯವಾಗಿದೆ. ಈ ಎರಡು ಜಿಂಕೆ ಬೇಟೆ ವೀರಗಲ್ಲುಗಳು ಮೊದಲು ಅಧ್ಯಯನಕ್ಕೆ ಒಳಪಟ್ಟಿದ್ದು, ಪ್ರಸ್ತುತ ಲೇಖನಕ್ಕೆ ಸಂಬಂಧಿಸಿದಂತೆ ಈ ಹಿಂದೆ ಮರಸಣಿಗೆಯಲ್ಲಿ ದೊರೆತ ವೀರಗಲ್ಲಿಗಿಂತ ಸುಮಾರು ೧೫ ಕಿ.ಮೀ. ದೂರದಲ್ಲಿರುವ ಹೆಮ್ಮಕ್ಕಿಯಲ್ಲಿದೆ. ೫ ಅಡಿ ಉದ್ದ ಮತ್ತು ೨.೬ ಅಡಿ ಅಗಲವಿದ್ದು, ನಾಲ್ಕು ಹಂತಗಳನ್ನು ಒಳಗೊಂಡಿದೆ. ಕೆಳಗಿನ ಹಂತದಲ್ಲಿ ಬಿಲ್ಲು ಬಾಣವನ್ನು ಹಿಡಿದುಕೊಂಡು ವೀರನು ತನ್ನ ಬೇಟೆ ನಾಯಿಗಳೊಂದಿಗೆ ಜಿಂಕೆಯನ್ನು ಬೇಟೆಯಾಡುವ ದೃಶ್ಯವಿದೆ. ನಾಯಿಯೊಂದಿಗೆ ಬೇಟೆಯಾಡುವುದನ್ನು 'ಶ್ವಗಣಿಕಾ' ಮಾರ್ಗ ಎಂದು ಕರೆಯುತ್ತಾರೆ. ಇಲ್ಲಿ ಬೇಟೆಯಾಡಲಿರುವ ಪ್ರಾಣಿಯನ್ನು ಗುರುತಿಸಿದ ಬೇಟೆಗಾರ ಅವುಗಳ ಮೇಲೆ ನಾಯಿಗಳನ್ನು ಬಿಟ್ಟು ಹೋರಾಡುವಂತೆ ಮಾಡುವುದು, ತಾನು ದೂರದಲ್ಲಿ ನಿಂತಿದ್ದು, ತನ್ನ ನಾಯಿಗಳಿಗೆ ಏಟು ಬೀಳದಂತೆ, ಪ್ರಾಣಿಯನ್ನೇ ಗುರಿಯಿಟ್ಟು ಶಸ್ತ್ರಪ್ರಯೋಗ ಮಾಡುವುದು. ನಂತರದ ಹಂತದಲ್ಲಿ ಮರಣಹೊಂದಿದ ವೀರನನ್ನು ಅಪ್ಸರೆಯರು ಸ್ವರ್ಗಕ್ಕೆ ಕರೆದೊಯ್ಯುವ ಚಿತ್ರಣವಿದೆ. ಬೇಟೆಯಾಡುವಾಗ ಯಾವುದೋ ಒಂದು ಅವಘಡದಿಂದ ವೀರನು ಮರಣಹೊಂದಿರುವುದು. ನಂತರದ ಹಂತದಲ್ಲಿ ವೀರನ ಸತಿಯರು ಕೈಮುಗಿದು ಕುಳಿತಿರುವ ದೃಶ್ಯವಿದೆ. ಮೇಲಿನ ಹಂತದಲ್ಲಿ ಸೂರ್ಯ, ಚಂದ್ರ, ಶಿವಲಿಂಗ, ನಂದಿ, ಹಸು ಮತ್ತು ಕರುವಿನ ಕೆತ್ತನೆಯಿದ್ದು, ವೀರನು ಸ್ವರ್ಗಸ್ತನಾದ ಎಂಬ ಚಿತ್ರಣವನ್ನು ತೋರಿಸುತ್ತದೆ.

ಮತ್ತೊಂದು ಅಪರೂಪದ ವೀರಗಲ್ಲು ಸಂಸೆ ಸಮೀಪದ ನಲ್ಲಿಬೀಡು ಸ್ಥಳದ ಕೆಳಮನೆ ಪುಟ್ಟಯ್ಯ ಅವರ ಜಮೀನಿನಲ್ಲಿದೆ. ಇದು ೭ ಅಡಿ ಉದ್ದ ಮತ್ತು ೪ ಅಡಿ ಅಗಲವನ್ನು ಹೊಂದಿದ್ದು, ಗ್ರಾನೈಟ್ ಶಿಲೆಯಲ್ಲಿ ಕೆತ್ತಲಾಗಿದೆ. ಸ್ಮಾರಕ ಶಿಲ್ಪದ ಮೊದಲನೆಯ ಹಂತದಲ್ಲಿ ಬಿಲ್ಲು-ಬಾಣ ಹಿಡಿದ ಇಬ್ಬರು ವೀರರಿದ್ದು, ಅದರಲ್ಲಿ ಒಬ್ಬ ತನ್ನ ಮೇಲೆ ಎಗರುತ್ತಿದ್ದ ವ್ಯಾಘ್ರವನ್ನು

* ಇತಿಹಾಸ ಮತ್ತು ಪುರಾತತ್ವ ಸಂಶೋಧನಾರ್ಥಿ, ಕಳಸ, ಚಿಕ್ಕಮಗಳೂರು.

ಹೆಮ್ಮಕ್ಕಿಯಲ್ಲಿರುವ ಜಿಂಕೆ ಬೇಟೆ ವೀರಗಲ್ಲು, ನೆಲ್ಲಿಬೀಡಿನಲ್ಲಿರುವ ಜಿಂಕೆ ಬೇಟೆ ವೀರಗಲ್ಲು, ಜಿಂಕೆ ಬೇಟೆ ಚಿತ್ರಣವಿರುವ ಮೊದಲ ಮತ್ತು ಎರಡನೇ ಹಂತ.



ವೀರಗಲ್ಲಿನಲ್ಲಿರುವ ಸಮುದ್ರಮಂಥನ ದೃಶ್ಯ.

ಎದುರಿಸುತ್ತಿದ್ದರೆ, ಇನ್ನೊಂದೆಡೆ ಇನ್ನೊಬ್ಬ ವೀರ ಜಿಂಕೆಯನ್ನು ಬೆನ್ನಟ್ಟುತ್ತಿದ್ದಾನೆ. ಇವರೊಡನೆ ಇರುವ ಐದು ಬೇಟೆ ನಾಯಿಗಳು ದಾಳಿಗೆ ಸಹಕರಿಸುತ್ತಿವೆ. ಮೊದಲ ಹಂತವನ್ನು ಗಮನಿಸಿದಾಗ ಬೇಟೆಯಾಡಲು ಹೋದಂತ ಸಂದರ್ಭದಲ್ಲಿ ವೀರರ ಮೇಲೆ ವ್ಯಾಘ್ರ ದಾಳಿ ಮಾಡಿರುವುದನ್ನು ಚಿತ್ರಿಸುವ ಪ್ರಯತ್ನ ಕಾಣುತ್ತದೆ. ಎರಡನೆಯ ಹಂತದಲ್ಲಿ ನಾಲ್ಕು ಜನ ವೀರರು ತಮ್ಮ ಎರಡು ನಾಯಿಗಳೊಂದಿಗೆ, ಬಿಲ್ಲು-ಬಾಣ, ಬಾಕುಗಳನ್ನು ಹಿಡಿದುಕೊಂಡು ಜಿಂಕೆ ಬೇಟೆಯಾಡುವ ದೃಶ್ಯವನ್ನು ಕೆತ್ತಲಾಗಿದೆ. ಎರಡನೆ ಹಂತದಲ್ಲೂ ಜಿಂಕೆ ಬೇಟೆ ದೃಶ್ಯ ಚಿತ್ರಿಸಿರುವುದು ವೀರಗಲ್ಲಿನಲ್ಲಿ ವೀರರು ಪ್ರಮುಖವಾಗಿ ಜಿಂಕೆ ಬೇಟೆಗೆ ಹೋಗಿದ್ದರು ಎಂಬುದು ಸ್ಪಷ್ಟವಾಗುತ್ತದೆ. ಮೂರನೆಯ ಹಂತದಲ್ಲಿ ಸಮುದ್ರ ಮಂಥನದ ಚಿತ್ರಣವನ್ನು ತೋರಿಸಲಾಗಿದೆ. ಈ ದೃಶ್ಯವನ್ನು ಗಮನಿಸಿದಾಗ, ಒಂದು ಅಭಿಪ್ರಾಯದಂತೆ ಶತ್ರು ಪಡೆಯನ್ನು ದಾನವರಂತೆ ಹಾಗೂ ವೀರನ ಸೇನೆಯನ್ನು ದೇವರಂತೆ ತೋರಿಸಿರಬಹುದು. ಇನ್ನೊಂದು ಅಭಿಪ್ರಾಯದ ಪ್ರಕಾರ ದಾನವರಿಗೂ ದೇವರಿಗೂ ಅಮೃತಕ್ಕೋಸ್ಕರ ಯುದ್ಧವಾದ ಹಾಗೇ ಶತ್ರು ಪಡೆಗೂ ವೀರರಿಗೂ ಭೂಮಿಯ ವಿಚಾರದಲ್ಲಿ ಯುದ್ಧವಾಗಿರಬಹುದು. ಸಮುದ್ರ ಮಂಥನದ ಚಿತ್ರಣವನ್ನು ಈ ರೀತಿ ಸ್ಮಾರಕ ಶಿಲ್ಪದಲ್ಲಿ ತೋರಿಸಿರುವುದು ವಿಶೇಷವೆನಿಸಿದೆ. ನಾಲ್ಕನೆಯ ಹಂತದಲ್ಲಿ ಅಶ್ವದಳದ ಮೂಲಕ ವೀರನನ್ನು ಪಲ್ಲಕ್ಕಿಯಲ್ಲಿ ಯುದ್ಧ ಭೂಮಿಗೆ ಕರೆದೊಯ್ಯುವಂತೆ ಚಿತ್ರಣವಿದೆ. ಐದನೆ ಹಂತದಲ್ಲಿ ಮಡಿದ ವೀರರ ಬಲ ಭಾಗದಲ್ಲಿ ಧ್ಯಾನಾಸಕ್ತರಾಗಿರುವ ಯತಿಯನ್ನು ತೋರಿಸಲಾಗಿದೆ. ಕೊನೆಯ ಹಂತದಲ್ಲಿ ಸೂರ್ಯ-ಚಂದ್ರ, ಶಿವಲಿಂಗ, ಶಿವನನ್ನು ಪೂಜಿಸುತ್ತಿರುವ ಯತಿ, ವೀರ, ನಂದಿ ಮತ್ತು ಹಸು-ಕರುವಿನ ಚಿತ್ರಣವಿದೆ.

ಕರ್ನಾಟಕದಲ್ಲಿ ಇದುವರೆಗೂ ದೊರೆತಿರುವ ನಾಲ್ಕು ಜಿಂಕೆ ಬೇಟೆ ವೀರಗಲ್ಲುಗಳನ್ನು ಗಮನಿಸಿದರೆ, ಬನಶಂಕರಿಯ ವೀರಗಲ್ಲನ್ನು ಹೊರತುಪಡಿಸಿ ಇನ್ನುಳಿದ ಮೂರು ವೀರಗಲ್ಲುಗಳು ಕಳಸ ಸುತ್ತಮುತ್ತಲಿನಲ್ಲಿ ಕಂಡುಬಂದಿರುವುದು ವಿಶೇಷ. ಮಲೆನಾಡು ಶಿಕಾರಿ ಅಥವಾ ಬೇಟೆಗೆ ಅನಾದಿ ಕಾಲದಿಂದಲೂ ಪ್ರಸಿದ್ಧಿಯಾಗಿದೆ. ಬೇಟೆಯಾಡುವುದು ಇವರಿಗೆ ಕೇವಲ ಆಹಾರಕ್ಕಾಗಿ ಅಲ್ಲದೇ, ಬೆಳೆನಾಶ ತಪ್ಪಿಸಲು, ವಿನೋದಾವಳಿಯಾಗಿಯು ಸಹ ಆಗಿತ್ತು. ಇಂದಿಗೂ ಮಲೆನಾಡಲ್ಲಿ

ಬಂದೂಕು ಇಟ್ಟುಕೊಳ್ಳಲು ಪರವಾನಿಗೆ ಇದೆ ಆದರೆ ಕೇವಲ ಇದು ಪ್ರಾಣಿಗಳನ್ನು ಹೆದರಿಸಿ ಬೆಳೆನಾಶವನ್ನು ತಪ್ಪಿಸಲು ಮತ್ತು ಪ್ರಾಣಿಗಳಿಂದ ತಮ್ಮ ರಕ್ಷಣೆಗೆ ಮಾತ್ರ. ಹಿರಿಯರು ಹೇಳುವ ಕತೆಯಲ್ಲಿ, ಬೇಟೆಯಾಡಲು ಹೋದಾಗ ಅನೇಕ ಕಾರಣಗಳಿಂದ ಸತ್ತವರುಂಟು. ಹೀಗೆ ಜಿಂಕೆ ಬೇಟೆಯಾಡಲು ಹೋದ ಸಂದರ್ಭದಲ್ಲಿ ಬೇರೆ ಪ್ರಾಣಿಗಳ ದಾಳಿಯಿಂದ ಅಥವಾ ಜಿಂಕೆಯ ಕೋಡು ಹರಿತವಾಗಿರುತ್ತದೆ, ಅಕಸ್ಮಾತಾಗಿ ಚುಚ್ಚಿ ಸತ್ತಿರುವ ಸಾಧ್ಯತೆಗಳು ಇರಬಹುದು.

ಜಿಂಕೆ ಬೇಟೆ ಕುರಿತು ಸ್ಥಳೀಯ ಕತೆಯೊಂದಿದೆ, ಜಿಂಕೆ ಬೇಟೆಯಾಡಲು ಬೇಟೆಗಾರರು ತಂತ್ರವನ್ನು ಹೂಡಿ ಬಲ್ಲಾಳರಾಯನ ದುರ್ಗದ ರಾಣಿಯರಿಗೆ ಓಡಿಸಿಕೊಂಡು ಹೋಗಿ ಅವುಗಳು ಪ್ರಪಾತಕ್ಕೆ ಸ್ವತಃ ತಾವೇ ಹಾರುವಂತೆ ಮಾಡಿ, ಪ್ರಪಾತದಲ್ಲಿ ಕೆಲವು ಬೇಟೆಗಾರರು ಕಾಯ್ದುಕುಳಿತುಕೊಂಡು ಬೇಟೆಯನ್ನು ತೆಗೆದುಕೊಂಡು ಬರುತ್ತಿದ್ದರು ಎನ್ನುವುದನ್ನು ಗಮನಿಸಿದರೆ, ಜಿಂಕೆ ಬೇಟೆ ಎಂಬುದು ಮಲೆನಾಡು ಭಾಗವಾದ ಕಳಸ ಸುತ್ತಮುತ್ತಲಿನಲ್ಲಿ ವಿಶೇಷವಾಗಿತ್ತು ಎಂಬುದು ತಿಳಿಯುತ್ತದೆ. ಆ ಕಾಲಘಟ್ಟದಲ್ಲಿ ಜಿಂಕೆಗಳಿಗೆ ಪರಿಸರವೂ ಅನುಕೂಲವಾಗಿತ್ತು ಎನ್ನಬಹುದು.

[ಕ್ಷೇತ್ರಕಾರ್ಯ ಸಂದರ್ಭದಲ್ಲಿ ಸಹಕರಿಸಿದ ಸಹೋದರ ಸುಮಂತ್ ಕೆ.ಎನ್., ಪರಮೇಶ್ವರ್ ಹೆಬ್ಬಾರ್, ಪ್ರೀತಮ್ ಹೆಬ್ಬಾರ್, ತೇಜು ನಲ್ಲಿಬೀಡು, ಕೆಳಮನೆ ಪುಟ್ಟಯ್ಯ ಅವರಿಗೆ ಮತ್ತು ವೀರಗಲ್ಲಿನ ಬಗ್ಗೆ ಹೆಚ್ಚಿನ ಮಾಹಿತಿ ನೀಡಿದ ಡಾ. ಶೇಷಶಾಸ್ತ್ರಿ ಆರ್., ಜಿ.ಕೆ. ದೇವರಾಜ ಸ್ವಾಮಿ, ದೇವರಕೊಂಡಾರೆಡ್ಡಿ, ಡಾ. ಡಿ.ವಿ. ಪರಮಶಿವಮೂರ್ತಿ, ಡಾ. ಸ್ಮಿತಾ ರೆಡ್ಡಿ, ಶ್ರುತೇಶ್ ಆಚಾರ್ಯ ಮೂಡುಬೆಳ್ಳೆ ಇವರಿಗೆ ಧನ್ಯವಾದಗಳು.]

ಆಕರ ಗ್ರಂಥಗಳು

೧. ಶೇಷಶಾಸ್ತ್ರಿ ಆರ್., ಕರ್ನಾಟಕದ ವೀರಗಲ್ಲುಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೪.

೨. ಬಿ.ಆರ್. ಭಾರತೀ, ಎ.ಆರ್. ಗುರು., ಮರಸಣಿಗೆಯ ಅಪರೂಪದ ಬೇಟೆ ವೀರಗಲ್ಲು, ಇತಿಹಾಸ ದರ್ಶನ, ಸಂಪುಟ ೧೬, ೨೦೦೧.

ಕಳಸ ಸೀಮೆಯ ಮಹಾಸತಿ ಕಲ್ಲುಗಳು

ಹೆಚ್.ಆರ್. ಪಾಂಡುರಂಗ*

ಭದ್ರಾನದಿ ತೀರದಲ್ಲಿನ ಪಶ್ಚಿಮಘಟ್ಟದ ತಪ್ಪಲಲ್ಲಿರುವ ಮಲೆನಾಡು ಕಳಸ ಸೀಮೆಯು ಕಳಸ ಸಾಂತರರ ಆಡಳಿತದಲ್ಲಿ ಕ್ರಿ.ಶ. ೧೧೫೪–೧೨೭೮ರವರೆಗೆ ಕಳಸ ಕಂಪಣವಾಗಿ, ವಿಜಯನಗರ ಸಾಮ್ರಾಜ್ಯದ ಮಂಡಲೇಶ್ವರರಾದ ಭೈರವರಸರ ಆಡಳಿತದಲ್ಲಿ ಕ್ರಿ.ಶ. ೧೪೮೯–೧೬೭೯ರವರೆಗೆ ಕಳಸ–ಕಾರ್ಕಳ ರಾಜ್ಯದ ಕಳಸ ಏಳು ಮಲೆನಾಡು, ಸಾವಿರ ಗ್ರಾಮದ ಕೇಂದ್ರ ಸ್ಥಾನವಾಗಿ, ಭೈರವರಸರ ಬೇಸಿಗೆ ರಾಜಧಾನಿಯಾಗಿಯೂ ನಂತರ ಕೆಳದಿ ನಾಯಕರ ಆಡಳಿತದಲ್ಲಿ 'ಕಳಸ ಸೀಮೆ' ಯಾಗಿಯೂ, ಮೈಸೂರು ಒಡೆಯರ ಆಳ್ವಿಕೆಯಲ್ಲಿ 'ಕಳಸ ಮಾಗಣೆ' ಯಾಗಿಯೂ ಕರೆಯಲ್ಪಡುತ್ತಿದ್ದ ಇಂದಿನ ಚಿಕ್ಕಮಗಳೂರು ಜಿಲ್ಲೆ, ಮೂಡಿಗೆರೆ ತಾಲ್ಲೂಕಿನ ಕಳಸ ಹೋಬಳಿ, ಬಾಳೂರು ಹೋಬಳಿ ವ್ಯಾಪ್ತಿಯ ಅಂದಿನ 'ಕಳಸ ಸೀಮೆ' ಪ್ರದೇಶವು ನಿತ್ಯ ಹರಿದ್ವರ್ಣ ಕಾಡುಗಳಿಂದ ಕೂಡಿದ ಸಮೃದ್ಧ ಪ್ರದೇಶವಾಗಿದ್ದು, ಅಷ್ಟೇ ಸಮೃದ್ಧವಾದ ಇತಿಹಾಸವನ್ನೂ ಹೊಂದಿದೆ. ದೇವಸ್ಥಾನ, ಬಸದಿ, ಶಾಸನ, ವೀರಗಲ್ಲು, ನಿಸಿದಿಗಲ್ಲು, ಮಹಾಸತಿ ಕಲ್ಲುಗಳು ಮುಂತಾದ ಗತ ಇತಿಹಾಸ ಸಾರುವ ಮೂಕ ಸಾಕ್ಷಿಗಳಾದ ಸ್ಮಾರಕಗಳು ಕಳಸ ಸೀಮೆಯ ಇತಿಹಾಸದ ನನ್ನ ಅನ್ವೇಷಣೆಯಲ್ಲಿ ದೊರಕಿದ್ದು ತಾಯಿನಾಡಿಗಾಗಿ ಯುದ್ಧದಲ್ಲಿ ಹೋರಾಡಿ ಮಡಿದ ವೀರನ ಸತಿ, ಅವನ ವಿಯೋಗ ತಾಳಲಾಗದೆ ಪತಿಯ ಪಾರ್ಥಿವ ಶರೀರದೊಂದಿಗೆ ಸ್ವಇಚ್ಛೆಯಿಂದ ಚಿತೆಯೇರಿ ಅಗ್ನಿಗೆ ಆಹುತಿಯಾಗಿ ನರಲೋಕದಿಂದ ಸುರಲೋಕಕ್ಕೆ ತೆರಳಿ 'ಮಹಾಸತಿ'ಯಾದ ಕಳಸ ಸೀಮೆಯ ಪುಣ್ಯವತಿ ಮಾತೆಯರ ಪ್ರೀತಿ–ತ್ಯಾಗದ ಸ್ಮಾರಕಗಳಾದ ಒಕ್ಕೈ ಮಹಾಸತಿಯ ಏಳು ಸ್ಮಾರಕಗಳು ಹೊರನಾಡು–ಮಾವಿನಕೆರೆ–ತಲಗೋಡು–ಮರಸಣಿಗೆ–ಕೆಳಗೂರು–ಇಡಕಿಣಿ–ಎಡೂರು ಗ್ರಾಮಗಳಲ್ಲಿ ನನ್ನ ಶೋಧ ಕಾರ್ಯದಲ್ಲಿ ದೊರೆತಿದ್ದು ಅವುಗಳ ಬಗ್ಗೆ ಇಲ್ಲಿ ಸಚಿತ್ರವಾಗಿ ವಿಶ್ಲೇಷಿಸಲಾಗಿದೆ.

೧) ಒಕ್ಕೈ ಮಹಾಸತಿಕಲ್ಲು–ಬಸರೀಮಕ್ಕಿ, ಹೊರನಾಡು



ಕಳಸ ಏಳು ಮಲೆನಾಡಿನ ಭದ್ರಾನದಿ ಎಡದಂಡೆಯ ಮೇಲಿರುವ ಶಾಸನೋಕ್ತ ಹೊರನಾಡು (ಶ್ರೀ ಕೃಷ್ಣದೇವ ರಾಯನ ಪಥಮ ಕನ್ನಡ ಶಾಸನೋಕ್ತ 'ಹೋರಿನಾಡು' ಕ್ರಿ.ಶ. ೨೦–೦೪–೧೫೨೯) ಬಸರೀಮಕ್ಕಿ ದೇವರಾಜಯ್ಯ ನೇಮಯ್ಯ ಅವರ ಪಾಳು ಬಿದ್ದ ಗದ್ದೆಯಲ್ಲಿ ದೊರೆತಿರುವ ಈ ಸ್ಮಾರಕವು ಗ್ರಾನೈಟ್ ಕಲ್ಲಿನ ರಚನೆ–೪.೦೦ ಅಡಿ ಎತ್ತರ, ೨.೦೦ ಅಗಲ ಅಳತೆಯದಾಗಿದ್ದು ಪೂರ್ವಾಭಿಮುಖವಾಗಿ ನಿಂತಿದೆ. ಈ ಕಲ್ಲಿನ ಮಧ್ಯಭಾಗದಲ್ಲಿ ದಂಪತಿಗಳು ಕೈಮುಗಿದು ಪದ್ಮಾಸನದಲ್ಲಿ ಕುಳಿತ ಚಿತ್ರಣವಿದೆ. ಅವರ ಬಲಗಡೆಗೆ ಅದೇ ಶಿಲಾ ಫಲಕದಲ್ಲಿ ಸ್ತ್ರೀಯೊಬ್ಬಳ ಆಶೀರ್ವಾದ ಭಂಗಿಯ ತೆರೆದ ಹಸ್ತದ ಬಲದೋಳಿನ ಚಿತ್ರಣವಿದೆ. ಸ್ಮಾರಕದ ಅಗ್ರ ಭಾಗದಲ್ಲಿ ಸೂರ್ಯ–ಚಂದ್ರರ ರೇಖಾ ಚಿತ್ರವಿದೆ. ಹದಿನಾರು ಹದಿನೇಳನೇ ಶತಮಾನದ್ದಾಗಿದೆ.

ಈ ಒಕ್ಕೈ ಮಹಾಸತಿ ಕಲ್ಲು ಸ್ಥಳೀಯ ಭತ್ತ ಬೆಳೆಯುವ ರೈತರ 'ಸುಗ್ಗಿ ದೇವತೆ' ಯಾಗಿಯೂ ಆರಾಧಿಸಲ್ಪಡುತ್ತಿದೆ. ಭತ್ತದ ಸುಗ್ಗಿ ಸಮಯದಲ್ಲಿ ಗಾಳಿ ಕಡಿಮೆಯಾಗಿ ಭತ್ತ ತೂರಲು ತೊಂದರೆಯಾದಾಗ ರೈತ ಕುಟುಂಬದ ಯಜಮಾನ ಶುಚಿರ್ಭೂತನಾಗಿ ಮರುದಿನ ಬೆಳಗಿನ ಜಾವ ಬಸರೀಮಕ್ಕಿಯ ಈ ಒಕ್ಕೈ ಮಹಾಸತಿಕಲ್ಲಿನ ಬಳಿಹೋಗಿ ಭತ್ತದ ಸುಗ್ಗಿ ಕಾರ್ಯಕ್ಕೆ ಗಾಳಿಯ ಕೊರತೆಯಾಗದಂತೆ ಆಶೀರ್ವದಿಸಲು ಭಕ್ತಿಯಿಂದ ಪ್ರಾರ್ಥಿಸುವುದುಂಟು.

* ಕೃಷಿ ಅಧಿಕಾರಿ, ರೈತ ಸಂಪರ್ಕ ಕೇಂದ್ರ, ಕಳಸ, ಮೂಡಿಗೆರೆ ತಾಲ್ಲೂಕು.





೨) ಒಕ್ಕೈ ಮಹಾಸತಿಕಲ್ಲು–ಕಂಚಿನಕೆರೆ, ಕಳಸ

ಪ್ರಾಚೀನ ಕಳಸ ಸಾಂತರರ ರಾಜಧಾನಿ ಕಳಸ ನಗರದ ಉತ್ತರ ದಿಕ್ಕಿನಲ್ಲಿ ಭದ್ರಾನದಿ ಬಲದಂಡೆಯ ವಶಿಷ್ಠ ತೀರ್ಥದ ಪಕ್ಕದಲ್ಲಿರುವ ಶ್ರೀ ಗೋಪಾಲಗೌಡ ನಾಗಪ್ಪಗೌಡ, ಕಂಚಿನಕೆರೆ ಇವರ ಕಾಫಿ ತೋಟದಲ್ಲಿ ದೊರೆತಿರುವ ಈ ಒಕ್ಕೈ ಮಹಾಸತಿಕಲ್ಲು ೩.೯ ಅಡಿ ಎತ್ತರ ಹಾಗೂ ೧.೯ ಅಡಿ ಅಗಲವಿದ್ದು ಪೂರ್ವಾಭಿಮುಖವಾಗಿದೆ. ಗ್ರಾನೈಟ್ ಕಲ್ಲಿನ ಈ ಸ್ಮಾರಕ ಮೂರು ಫಲಕ ಹೊಂದಿದೆ.

ಕೆಳಗಿನ ಫಲಕದಲ್ಲಿ ಹೂವಿನ ಚಿತ್ರಣವಿದೆ, ಮಧ್ಯದ ಫಲಕದಲ್ಲಿ ಶಿಲ್ಪದ ಎಡಗಡೆಯಿಂದ ಬಲಗಡೆಗೆ ಚಾಚಿದಂತೆ ಸ್ತ್ರೀಯೊಬ್ಬಳ ಬಲತೋಳಿನ ಚಿತ್ರಣವಿದೆ. ಆ ತೋಳಿನಲ್ಲಿ ಪೀಠಗಳ ಮೇಲೆ ಪದ್ಮಾಸನದಲ್ಲಿ ಧ್ಯಾನ ಭಂಗಿಯಲ್ಲಿ ಕೈ ಮುಗಿದು ಕುಳಿತ ದಂಪತಿಗಳ ಚಿತ್ರಣವಿದೆ. ಚಾಚಿದ ಬಲತೋಳಿನಲ್ಲಿ ಆಶೀರ್ವಾದ ರೂಪದಲ್ಲಿ ತೆರೆದ ಹಸ್ತದ ಚಿತ್ರಣವಿದೆ, ಅದರ ಮೇಲಿನ ಅಗ್ರ ಫಲಕದಲ್ಲಿ ಸೂರ್ಯ–ಚಂದ್ರರ ಚಿತ್ರಣವಿದೆ. ೧೫–೧೬ನೇ ಶತಮಾನದ್ದಾಗಿದೆ.

೩) ಒಕ್ಕೈ ಮಹಾಸತಿಕಲ್ಲು–ಗೊರಸುಕೊಡಿಗೆ, ತಲಗೋಡು

ಐತಿಹಾಸಿಕ ಕಳಸ ಕಾರ್ಕಳ ರಾಜ್ಯದ ಶಾಸನೋಕ್ತ ತನೂಡಿ ನಾಡಿಗೆ ಸೇರಿದ್ದ ತಲಗೋಡು ಗ್ರಾಮದ ಕಳಸ–ಬಸರೀಕಟ್ಟೆ ರಸ್ತೆಯ ಎಡಭಾಗದಲ್ಲಿರುವ ಶ್ರೀ ಕೃಷ್ಣಮೂರ್ತಿ ಗೊರಸುಕೊಡಿಗೆ ಅವರ ಕಾಫಿ ಗ್ಯಾರೇಜ್ ಉಪಹಾರ ಗೃಹದ ಎಡಗಡೆ ಕಾಫಿ ತೋಟದಲ್ಲಿ ಸಂರಕ್ಷಿಸಲ್ಪಟ್ಟಿರುವ ಈ ಒಕ್ಕೈ ಮಹಾಸತಿ ಕಲ್ಲು ೩ ಅಡಿ ಎತ್ತರ ಹಾಗೂ ೨ ಅಡಿ ಅಗಲವಿದೆ. ಬಳಪದ ಕಲ್ಲಿನ ಈ ಸ್ಮಾರಕ ಎರಡು ಫಲಕ ಹೊಂದಿದೆ. ಮಹಾಸತಿ ಕಲ್ಲಿನ ಮಧ್ಯದ ಕೋಷ್ಠಕದಲ್ಲಿ ದಂಪತಿಗಳಿಬ್ಬರು ಕೈಮುಗಿದು ಪದ್ಮಾಸನದಲ್ಲಿ ಕುಳಿತ ಚಿತ್ರಣವಿದೆ. ತ್ರಿಕೋನಾಕಾರದ ಅಗ್ರಭಾಗದಲ್ಲಿ ಸೂರ್ಯ ಚಂದ್ರರ ಚಿತ್ರಣವಿದೆ. ದಂಪತಿಗಳ ಬಲಭಾಗದಲ್ಲಿ ಸ್ಮಾರಕದಿಂದ ಅವಿರ್ಭವಿಸಿದಂತೆ ಆಶೀರ್ವಾದ ಭಂಗಿಯ ಸ್ತ್ರೀಯೊಬ್ಬಳ ಬಲತೋಳಿನ ತೆರೆದ ಹಸ್ತದ ಚಿತ್ರಣವಿದ್ದು, ತೋಳಬಂದಿ, ಮುಂಗೈ ಕಡಗ ಬಳೆಗಳಿಂದ ಅಲಂಕೃತವಾಗಿದೆ. ತೆರೆದ ಹಸ್ತದಲ್ಲಿ ನಿಂಬೆ ಹಣ್ಣಿನ ಚಿತ್ರಣವಿದೆ. ಕ್ರಿ.ಶ.ಸು. ೧೪ನೇ ಶತಮಾನದ್ದಾಗಿದೆ.

೪) ಒಕ್ಕೈ ಮಹಾಸತಿಕಲ್ಲು–ಚಾವಡಿ ಬೈಲು, ಮರಸಣಿಗೆ

ಕಳಸ ಸೀಮೆಯ ಮರಸಣಿಗೆ ನಾಡಿನ ಇಂದಿನ ಮರಸಣಿಗೆ ಗ್ರಾಮದ ಪಟೇಲ್ ಮನೆತನದ ಶ್ರೀ ನಂಜುಂಡೇಗೌಡರ ಚಾವಡಿ ಬೈಲು ಗದ್ದೆಯಲ್ಲಿ ದೊರೆತಿರುವ ಈ ಒಕ್ಕೈ ಮಹಾಸತಿ ಕಲ್ಲು ೩.೬ ಅಡಿ ಎತ್ತರ ಹಾಗೂ ೨.೦ ಅಡಿ ಅಗಲ, ೦.೬ ಅಡಿ ದಪ್ಪದ ಗ್ರಾನೈಟ್ ಶಿಲಾ ರಚನೆಯಾಗಿದ್ದು ಮೂರು ಹಂತದ ಚಿತ್ರಣ ಹೊಂದಿದೆ. ಮಹಾಸತಿ ಕಲ್ಲಿನ ಕೆಳ ಫಲಕದಲ್ಲಿ ಅಷ್ಟದಳ ಕಮಲದ ಚಿತ್ರಣವಿದೆ. ಮಧ್ಯದ ಹಂತದಲ್ಲಿ ದಂಪತಿಗಳಿಬ್ಬರು ಪದ್ಮಾಸನದಲ್ಲಿ ಕೈಮುಗಿದು ಧ್ಯಾನಮಗ್ನರಾಗಿ ಕುಳಿತ ಚಿತ್ರಣವಿದೆ. ಅವರ ಬಲಗಡೆ ಸ್ತ್ರೀಯೊಬ್ಬಳ ಬಲದೋಳಿನ ಆಶೀರ್ವಾದ ಭಂಗಿಯ ಚಿತ್ರಣವಿದೆ. ತೋಳಿನ ಕಡಗ – ಮುಂಗೈನ ಬಳೆ ಹಾಗೂ ತೆರೆದ ಹಸ್ತದ ಚಿತ್ರಣವಿದೆ. ಸ್ಮಾರಕದ ಅಗ್ರ ಫಲಕದಲ್ಲಿ ಮಧ್ಯೆ ಶಿವಲಿಂಗ, ಎರಡೂ ಬದಿ





ಗೋವುಗಳ ಚಿತ್ರಣವಿದೆ. ಶಿವಲಿಂಗದ ಮೇಲ್ಭಾಗದಲ್ಲಿ ಸೂರ್ಯ ಚಂದ್ರರ ಚಿತ್ರಣವಿದೆ. ಈ ಸ್ಮಾರಕ ಸ್ಥಳೀಯ ರೈತರ ಪಶುಪಾಲನೆ ದೇವತೆಯಾಗಿ, ಅವರ ಗೋ ಸಂಪತ್ತನ್ನು ಕಾಪಾಡುವ ಕಾವಲು ದೈವವಾಗಿ ಇಂದಿಗೂ ಪೂಜಿಸಲ್ಪಡುತ್ತಿದೆ. ರೈತರ ಹಸು-ಕರುಗಳ ಆರೋಗ್ಯಕ್ಕೆ ತೊಂದರೆಯಾದಾಗ ರೈತರು ಮಹಾಸತಿ ಕಲ್ಲಿನ ಬಳಿ ಬಂದು ಭಕ್ತಿಯಿಂದ ಪೂಜೆ ಪ್ರಾರ್ಥನೆ ಮಾಡಿಕೊಂಡು ಹೋದರೆ ಹಸು-ಕರುಗಳ ಆರೋಗ್ಯ ಸುಧಾರಣೆ ಆಗುತ್ತದೆ ಎಂಬ ನಂಬಿಕೆ ಈಗಲೂ ಸ್ಥಳೀಯ ರೈತರಲ್ಲಿದೆ.

೫) ಒಕ್ಕೈ ಮಹಾಸತಿಕಲ್ಲು-ಚಾವಡಿ ಬೈಲು, ಕೆ. ಕೆಳಗೂರು

ಭೈರವರಸರ ಆಡಳಿತದ ಕಳಸ ಕಾರ್ಕಳ ರಾಜ್ಯದ ಕೆಳಗೂರು ಅಂದರೆ ಇಂದಿನ ಕೆಳಗೂರಿನ ಶ್ರೀ ಮಾಧವಗೌಡ ಅವರ ಚಾವಡಿ ಬಯಲಿನ ಪಾಳುಗದ್ದೆಯಲ್ಲಿ (ಮರಸಣಿಗೆ ಹಳ್ಳದ ಬಲದಂಡೆಯ ಮೇಲೆ) ದೊರೆತಿರುವ ಈ ಒಕ್ಕೈ ಮಹಾಸತಿ ಕಲ್ಲು ೪.೦೦ ಅಡಿ ಎತ್ತರ ಹಾಗೂ ೨.೪ ಅಡಿ ಅಗಲದ ಬಿಳಿ ಗ್ರಾನೈಟ್ ಶಿಲೆಯದಾಗಿದೆ. ಈ ಸ್ಮಾರಕದಲ್ಲಿ ಎಡದಿಂದ ಬಲಕ್ಕೆ ಸ್ತ್ರೀಯೊಬ್ಬಳ ಎತ್ತಿದ ಬಲಗೈನ ಅಭಯ ಹಸ್ತದ ಚಿತ್ರಣವಿದೆ. ಬಲಗೈ ತೋಳಿನ ಮೇಲೆ ಕೈ ಮುಗಿದು ಪದ್ಮಾಸನದಲ್ಲಿ ಪೀಠವೊಂದರ ಮೇಲೆ ದಂಪತಿಗಳು ಧ್ಯಾನಸ್ಥರಾಗಿ ಕುಳಿತ ಶಿಲ್ಪ ಚಿತ್ರಣವಿದೆ. ಅವರ ಬಲಭಾಗದಲ್ಲಿ ಕಂಕಣ ಧರಿಸಿದ ಬಲಗೈನ ತೆರೆದ ಹಸ್ತ ಆಶೀರ್ವಾದ ಭಂಗಿಯಲ್ಲಿದೆ. ಸ್ಮಾರಕದ ಶಿರೋಭಾಗ ತ್ರಿಕೋನಾಕೃತಿಯಲ್ಲಿದ್ದು ಮೇಲ್ಭಾಗದಲ್ಲಿ ಸೂರ್ಯ ಚಂದ್ರರ ಅಸ್ಪಷ್ಟ ಚಿತ್ರಣವಿದೆ.

೬) ಒಕ್ಕೈ ವೀರಮಹಾಸತಿಕಲ್ಲು-ಮಳಲಕೇರಿ, ಇಡಕಿಣಿ

ಭೈರವರಸರ ಕಳಸ ಕಾರ್ಕಳ ರಾಜ್ಯದ ಏಳು ಮಲೆನಾಡಿನ ಇದಕಿನಿಯ ಅಂದರೆ ಇಂದಿನ ಇಡಕಿಣಿ ಗ್ರಾಮದ ಮಳಲಕೇರಿ ಕಾಲೋನಿಯ ಹೆಮ್ಮಕ್ಕಿ-ಗಬ್ಗಲ್ ರಸ್ತೆಯ ಎಡಭಾಗದಲ್ಲಿ ಶ್ರೀ ಸುಬ್ಬಯ್ಯ ದ್ಯಾವಯ್ಯರವರ ಕಾಫಿ ತೋಟದ ಬೇಲಿಯ ಬದಿ ಪೂರ್ವಾಭಿಮುಖವಾಗಿ ನಿಂತಿರುವ ಬಿಳಿ ಕಣಶಿಲೆಯ ಈ ಒಕ್ಕೈ ವೀರ ಮಹಾಸತಿಕಲ್ಲು ೩.೬ ಅಡಿ ಎತ್ತರ ಹಾಗೂ ೨.೫ ಅಡಿ ಅಗಲ ಮತ್ತು ೦.೬ ಅಡಿ ದಪ್ಪದ ಅಳತೆಯದಾಗಿದೆ. ಈ ಸ್ಮಾರಕದ ಎಡಭಾಗದಲ್ಲಿ ವೀರನೊಬ್ಬ ಬಲಗೈಯಲ್ಲಿ ಕರ್ಕಡೆ-ಎಡಗೈಯಲ್ಲಿ ಢಾಲು ಹಿಡಿದು-ಸೊಂಟದಲ್ಲಿ ಖಡ್ಗ ಧರಿಸಿದ್ದಾನೆ. ಅವನ ಬಲಭಾಗದಲ್ಲಿ ಸ್ತ್ರೀ ಒಬ್ಬಳು ಇಳಿಸಿದ ಎಡಗೈನಲ್ಲಿ ಕಲಶ ಹಿಡಿದ ಚಿತ್ರಣ, ಎತ್ತಿದ ಬಲಗೈನಲ್ಲಿ ಆಶೀರ್ವಾದ ಭಂಗಿಯಲ್ಲಿ ಇರುವ ತೆರೆದ ಹಸ್ತದಲ್ಲಿ ನಿಂಬೆಹಣ್ಣು ಹಿಡಿದು ನಿಂತ ಚಿತ್ರಣವಿದೆ. ಈ ಪುರುಷ-ಸ್ತ್ರೀಯರ ಬಲಭಾಗದಲ್ಲಿ ಆಶೀರ್ವಾದ ರೂಪದಲ್ಲಿ ಎತ್ತಿದ ಸ್ತ್ರೀಯೊಬ್ಬಳ ತೆರೆದ ಹಸ್ತದ ಚಿತ್ರಣವಿದೆ.





ಈ ಸ್ಮಾರಕವು ಒಕ್ಕೈ ಮಹಾಸತಿ ಕಲ್ಲಿನ ಶಿಲ್ಪ ಲಕ್ಷಣ ಹಾಗೂ ಆಯುಧಧಾರಿ ಪುರುಷನ ಚಿತ್ರಣದ ವೀರಮಹಾಸತಿ ಕಲ್ಲೂ ಆಗಿದೆ. ಆ ಹಿನ್ನೆಲೆಯಲ್ಲಿ ಕಳಸ ಸೀಮೆಯಲ್ಲಿ ದೊರೆತ ಅಪರೂಪವಾದ ವಿಶಿಷ್ಟ, ವಿಶೇಷ ಮಹಾಸತಿ ಸ್ಮಾರಕವೆಂದು ಪರಿಗಣಿಸಬಹುದು. ಶಿಲ್ಪ ಲಕ್ಷಣದ ಆಧಾರದ ಮೇಲೆ ವಿಜಯನಗರ ಕಾಲದ ಭೈರವರಸರ ಆಡಳಿತದ ಕಾಲದ್ದೆಂದು ಊಹಿಸಬಹುದಾಗಿದೆ.

೭) ಒಕ್ಕೈ ಮಹಾಸತಿಕಲ್ಲು– ಜನಿಗೆಗುಡ್ಡ, ಎಡೂರು

ಕಳಸ ಕಾರ್ಕಳದ ದೊರೆಗಳಾದ ಭೈರವರಸರ ಆಡಳಿತದ ಕಳಸ ಸಾವಿರ ಗ್ರಾಮ– ಏಳು ಮಲೆನಾಡಿನ ಶಾಸನೋಕ್ತ ಮರಸಣಿಗೆ ನಾಡಿನ ಎಡೂರಿನ 'ಜಂನಗೆ' ಅಂದರೆ ಇಂದಿನ 'ಜನಿಗೆ' ಸಮೀಪದ ಜನಿಗೆ ಗುಡ್ಡದ ಮೇಲೆ ಅರಣ್ಯ ಇಲಾಖೆಯ ಅಕೇಶಿಯಾ ಮರಗಳ ನೆಡು ತೋಪಿನಲ್ಲಿ ದೊರೆತ ಈ ಒಕ್ಕೈ ಮಹಾಸತಿ ಕಲ್ಲು ಕೆಳಗಿನ ಅರ್ಧ ಭಾಗ ನೆಲದಲ್ಲಿ ಹುದುಗಿ ಹೋಗಿದ್ದು, ಮೇಲಿನ ಅರ್ಧ ಭಾಗ ಮಾತ್ರ ಕಾಣುತ್ತಿದೆ. ಈ ಶಾಸನ ರಹಿತ ಸ್ಮಾರಕದ ಎಡದಿಂದ ಬಲಕ್ಕೆ ಚಾಚಿದಂತೆ ಸ್ತ್ರೀಯೊಬ್ಬಳ ತೋಳು, ಮೇಲೆತ್ತಿದ ಕಂಕಣ ಸಹಿತ ಕೈ ಹಾಗೂ ಆಶೀರ್ವಾದ ಭಂಗಿಯ ತೆರೆದ ಹಸ್ತದ ಚಿತ್ರಣವಿದೆ. ತೋಳಿನ ಮೇಲೆ ಪೀಠವೊಂದರಲ್ಲಿ ಕುಳಿತ ದಂಪತಿಗಳ ಅರೆಭಗ್ನ ಶಿಲ್ಪ ಚಿತ್ರಣವಿದೆ. ಸ್ಮಾರಕದ ಅಗ್ರಭಾಗದಲ್ಲಿ ಅಸ್ಪಷ್ಟವಾಗಿ ಕಾಣುತ್ತಿರುವ ಸವೆದು ಹೋದ ಗಜಲಕ್ಷ್ಮೀ ಹಾಗೂ ಎರಡೂ ಬದಿಗಳಲ್ಲಿ ಆನೆಯ ಚಿತ್ರಣವಿದೆ.

ವಿಜಯನಗರ ಸಾಮ್ರಾಜ್ಯದ ಮಂಡಲೇಶ್ವರರಾಗಿ ಕಳಸ–ಕಾರ್ಕಳ ರಾಜ್ಯವನ್ನಾಳುತ್ತಿದ್ದ ಭೈರವರಸರ ಕಾಲದಲ್ಲಿ ನಡೆದ ಯುದ್ಧಗಳು, ಊರಳಿವಿನ ಕಾಳಗಗಳಲ್ಲಿ ಹೋರಾಡಿ ನಾಡನ್ನು ಕಾಪಾಡಿ, ಹುಲಿಬೇಟೆಗಳಲ್ಲಿ ಹೋರಾಡಿ ಪ್ರಜೆಗಳು ಮತ್ತು ಪಶುಸಂಪತ್ತನ್ನು ಕಾಪಾಡಿ ಅಸುವಿಟ್ಟು ಅಮರರಾದ ಕಳಸ ನಾಡಿನ ವೀರರ ಪರಾಕ್ರಮ, ಬದುಕಿನಲ್ಲಿ ಅನುಸರಿಸಿ ನಡೆದಂತೆ, ಸಾವಿನಲ್ಲಿಯೂ ಪತಿಯನ್ನು ಅನುಸರಿಸಿ ನಡೆದ ವೀರರ ಮಡದಿಯರ ಪತಿಪ್ರೀತಿಯಿಂದಾಗಿ ಕಳಸ ಸೀಮೆಯಲ್ಲಿ ಹೆಚ್ಚು ಮಹಾಸತಿ ಸ್ಮಾರಕಗಳು ದೊರೆಯಲು ಕಾರಣವಾಗಿದೆ. ಈ ಮಹಾಸತಿಯರು ಇಂದಿಗೂ ಕಳಸ ನಾಡಿನ ಕೃಷಿ ಹಾಗೂ ಪಶುಪಾಲನಾ ಸಂಸ್ಕೃತಿಯ ದೈವಗಳಾಗಿ ಪೂಜಿಸಲ್ಪಡುತ್ತಿದ್ದು, ಮಾತೃದೇವತಾ ಆರಾಧನೆ ಸಂಸ್ಕೃತಿಯ ಪ್ರತೀಕ ವಾಗಿದ್ದಾರೆ.

[ಕ್ಷೇತ್ರ ಕಾರ್ಯದಲ್ಲಿ ಮಾಹಿತಿ ನೀಡಿ ಸಹಕರಿಸಿದ ಹೊರನಾಡಿನ ಶ್ರೀ ವೆಂಕೇಗೌಡ, ಶ್ರೀ ಗಣೇಶ ಭಟ್, ಶ್ರೀ ಚಂದ್ರುಗೂರ್ಲಿಕೆ–ಕಳಸ ಕಂಚಿನಕೆರೆಯ ಶ್ರೀ ಗೋಪಾಲಗೌಡ (ಸಂತೋಷ್)–ತಲಗೋಡು ಗೊರಸುಕೊಡಿಗೆಯ ಶ್ರೀ ಕೃಷ್ಣಮೂರ್ತಿ, ಶ್ಯಾಮಕೀರ್ತನ್ ಹೊಳ್ಳ–ಮರಸಣಿಗೆಯ ನಮ್ಮನೆ ಶ್ರೀಸಂಪತ್ ಗೌಡ, ನಮ್ಮನೆ ಮಹೇಂದ್ರ, ಶ್ರೀಮತಿ ಸರಸ್ವತಮ್ಮ ಸುಬ್ರಹ್ಮಣ್ಯಭಟ್ಟ–ಕೆ. ಕೆಳಗೂರಿನ ಶ್ರೀ ಜೇಡಿಬೈಲು ಮಾಧವಗೌಡ–ಇಡಕಿಣಿಯ ಶ್ರೀ ಮಂಜಯ್ಯ ಈರಯ್ಯ, ಶ್ರೀ ಕೃಷ್ಣಯ್ಯ, ಶ್ರೀ ಗುರುವಯ್ಯ–ಎಡೂರಿನ ಶ್ರೀ ಶ್ರೀನಾಥ್ ಅವರಿಗೂ ಮಿತ್ರರಾದ ಶ್ರೀ ಚಂದ್ರಪ್ಪಕಬ್ಬಳ, ತೋಟಗಾರಿಕೆ ಇಲಾಖೆ–ಕಳಸ, ಶ್ರೀ ಮಹಾವೀರ ಪ್ರಭು–ಕಳಸ ಇವರೆಲ್ಲರಿಗೂ ಕೃತಜ್ಞತಾಪೂರ್ವಕ ಧನ್ಯವಾದಗಳು]

ಆಕರ ಗ್ರಂಥಗಳು

೧. ಡಾ. ಎಂ.ಎಂ. ಕಲಬುರ್ಗಿ, ಸಮಾಧಿ–ಬಲಿದಾನ–ವೀರಮರಣ ಸ್ಮಾರಕಗಳು, ಪುಟ ೨೯.

ವೆಂಕಟಗಿರಿ ಕೋಟೆಯ ವೀರಗಲ್ಲು ಶಾಸನ ಒಂದು ವಿಶ್ಲೇಷಣೆ

ಕೆ. ಧನಪಾಲ್✷

ವೆಂಕಟಗಿರಿಕೋಟೆ ಬೆಂಗಳೂರು–ಚಿಕ್ಕಬಳ್ಳಾಪುರ ನಡುವೆ ದೇವನಹಳ್ಳಿ ಆದ ನಂತರ ಸುಮಾರು ೧೧ ಕಿ.ಮೀ. ದೂರದಲ್ಲಿದೆ. ಈ ಊರು ಚಿಕ್ಕಬಳ್ಳಾಪುರಕ್ಕೆ ಸನಿಹವಿದ್ದರೂ ಇದು ದೇವನಹಳ್ಳಿ ತಾಲ್ಲೂಕಿಗೆ ಸೇರಿದ ಒಂದು ಗ್ರಾಮ. ಈ ಊರು ಚಾರಿತ್ರಿಕವಾಗಿ ಒಂದು ಇತಿಹಾಸವನ್ನೇ ತೆರೆದಿಡುತ್ತದೆ. ಈಗ ಲಭ್ಯವಾದ ಶಾಸನ, ಈ ಗ್ರಾಮಕ್ಕೆ ಬಲಭಾಗದಲ್ಲಿ ಶ್ರೀ ಚನ್ನರಾಯಸ್ವಾಮಿ ದೇವಾಲಯವಿದೆ. ಅದರ ಅಂಗಳದಲ್ಲಿ ವಿಶೇಷವಾದ ಮೂರು ಕಂಬಗಳಿವೆ. ಹಾಗಾಗಿ ಹಿಂದೆ ಈ ಊರಿಗೆ ಮೂರು ಕಂಬದೂರು ಎಂದು ಕರೆಯುತ್ತಿದ್ದರು. ಒಂದು ಮನೆಯ ಹಿಂದೆ ತಿಪ್ಪೆಯಲ್ಲಿ ಶಾಸನ ಸಮೇತವಾದ ಒಂದು ಯುದ್ಧ ಸನ್ನಿವೇಶದ ವೀರಗಲ್ಲು ಹಾಗೂ ಮುರಿದ ಇನ್ನೊಂದು ಶಾಸನಕಲ್ಲು ಕಂಡು ಬಂದಿರುತ್ತದೆ.

ವೀರಗಲ್ಲಿನಲ್ಲಿ ಒಟ್ಟು ಮೂರು ಹಂತಗಳಿವೆ. ಕೆಳಭಾಗದ ಹಂತದಲ್ಲಿ ಭೀಕರವಾದ ಹೋರಾಟವನ್ನು ಶಿಲ್ಪಿಯು ನಮಗೆ ತಿಳಿಸಿಕೊಡುತ್ತಾನೆ. ಅಲ್ಲಿ ನರಿಗಳು ಯುದ್ಧದಲ್ಲಿ ಮಡಿದ ಯೋಧರ ಹೆಣಗಳನ್ನು ತಿನ್ನುತ್ತಿವೆ. ಇನ್ನು ಯುದ್ಧದಲ್ಲಿ ಮಡಿದ ಯೋಧರ ಮತ್ತು ಯುದ್ಧದಲ್ಲಿ ಬಳಸಿರುವ ಕುದುರೆ, ಆನೆಗಳ ಮೃತದೇಹಗಳಿದ್ದರೆ, ಹಾಗೆಯೇ ಒಂದು ಬೇತಾಳವು ಸತ್ತ ಕುದುರೆಯ ದೇಹವನ್ನು ತಿನ್ನುತ್ತಿದೆ. ಇನ್ನೊಂದು ಪಾರ್ಶ್ವದಲ್ಲಿ ಯೋಧನ ದೇಹವನ್ನು ನರಿ ಅಥವಾ ನಾಯಿಗಳು ಕಿತ್ತುತಿನ್ನಲು ಹವಣಿಸುತ್ತಿವೆ. ಇನ್ನು ಸ್ವಲ್ಪ ಮೇಲ್ಭಾಗದಲ್ಲಿ ಪದಾತಿಧಳದ ಯೋಧರು ಸೆಣಸುತ್ತಿದ್ದಾರೆ.

ಮಧ್ಯಭಾಗದಲ್ಲಿ ಒಂದು ಕಡೆ ರಾಜನು ಆನೆಯ ಮೇಲಿಂದ ಯುದ್ಧ ಮಾಡುತ್ತಿದ್ದಾನೆ. ಎದುರುಗಡೆ ರಾಜನು ನಿಂತೇ ಯುದ್ಧ ಮಾಡುತ್ತಿದ್ದಾನೆ. ಓರ್ವ ರಾಜನಿಗೆ ಇನ್ನೋರ್ವ ಯೋಧ ಕತ್ತಿ, ಗುರಾಣಿಯೊಡನೆ ಸಹಾಯಕನಾಗಿದ್ದಾನೆ. ಇನ್ನೋರ್ವ ರಾಜನಿಗೆ ಕುದುರೆಯ ಮೇಲೆ ಕುಳಿತು ಸಹಾಯಕನಾಗಿದ್ದಾನೆ. ಎರಡೂ ಕಡೆಯ ರಾಜರಿಗೆ ಆವರವರದೇ ಆದ ಛತ್ರಿ ಮತ್ತು ಅವರದೇ ಆದ ಧ್ವಜವಿರುವುದರಿಂದ ಇಬ್ಬರೂ ಪ್ರಸಿದ್ಧ ರಾಜರೇ ಆಗಿರುವ ಸಾಧ್ಯತೆಗಳಿವೆ.

ಮಧ್ಯಭಾಗದಲ್ಲಿ ಯುದ್ಧದಲ್ಲಿ ಮರಣ ಹೊಂದಿದ ರಾಜನು ಕುದುರೆಯ ಸಮೇತ ಸ್ವರ್ಗಕ್ಕೆ ಹಾರು ಚಿತ್ರಣವಿದೆ.

ಇನ್ನು ಸ್ವರ್ಗಾರೋಹಣದಲ್ಲಿ ಅಪ್ಸರೆಯರ ಮಧ್ಯೆ ವೀರನು ಪ್ರತಿಷ್ಠಾಪಿಸಲ್ಪಟ್ಟಿದ್ದಾನೆ. ಅಲ್ಲೇ ಪಕ್ಕದಲ್ಲಿ ಒಂದು ಪಕ್ಷಿಯನ್ನು ಚಿತ್ರಿಸಲಾಗಿದೆ.

ಶಾಸನ ಪಾಠ

೧. ಅಣೂಮನಗಣ್ಡ ಸಾತನೆಣೆಪಿರ್ವೆರಡೆ . . . . ಸಿಮೆ (?)

೨. ದೊಂಗಲೆ ಕಾದಾಡೆ ದೊ . . . ದು . ದಯ (?)

೩. ಣೆಗಲ್ಲುಜಿಲ್ವಡೆ ಪಡ . ಡೆ . ರಣ

೪. ಗೋಟಕಂಗಳಂ (?) . . . . . ಡೆ . . ದೆ

೫. ನ್ದನವೆದಂ ತವೆ ಸನ್ದೆ ಮಚ್ಚೆ . . .

ಶಾಸನವು ತುಂಬಾ ತೃಟಿತವಾಗಿರುವುದರಿಂದ ಪೂರ್ಣ ಪಾಠವನ್ನು ಪ್ರಸ್ತುತಪಡಿಸಲು ಸ್ವಲ್ಪ ಕಷ್ಟವಾದರೂ, ಸಾತನೆಂಬ ವೀರನು ಅಣುಮನಗಣ್ಡ ಎಂಬ ಬಿರುದಾಂಕಿತನಾಗಿರುತ್ತಾನೆ. ಅವನು ಆನೆ, ಕುದುರೆಗಳೊಳಗೊಂಡ ಭೀಕರ ಯುದ್ಧದಲ್ಲಿ ಪಾಲ್ಗೊಂಡು ಯುದ್ಧದಲ್ಲಿ ವೀರ ಸ್ವರ್ಗ ಸೇರಿರುತ್ತಾನೆ. ಆತನ ವೀರತ್ವಕ್ಕೆ ಮೆಚ್ಚಿ ಈ ವೀರಗಲ್ಲನ್ನು ಹಾಕಿಸಲಾಗಿದೆ. ಆದರೆ ಇದು ಯಾವ ಯುದ್ಧ, ಯಾರ ಮೇಲೆ ಎಂಬುದು ಇದರಲ್ಲಿನ ಶಾಸನದಿಂದ ತಿಳಿದುಬರುವುದಿಲ್ಲ.

✷ # ೧೧/೧೨, ಕೊಂಡಪ್ಪ ಬಡಾವಣೆ, ಮಾರುತಿ ಆಸ್ಪತ್ರೆ ಹಿಂಭಾಗ, ಮಾರುತಿನಗರ, ಯಲಹಂಕ, ಬೆಂಗಳೂರು, ಮೊ. ೯೭೪೧೪ ೮೮೭೭೧



ಕೆಲವು ಯುದ್ಧ ಸನ್ನಿವೇಶದ ವೀರಗಲ್ಲುಗಳಿಗೆ ತುಲನೆ ಮಾಡಿ ನೋಡಿದಾಗ, ಬೆಂಗಳೂರಿಗೆ ಸೇರಿದ ಬೇಗೂರಿನ ಯುದ್ಧಶಿಲ್ಪ, ನಂಬಿಹಳ್ಳಿಯ ಸಮರಶಿಲ್ಪ, ಕೋಲಾರಮ್ಮನ ದೇವಸ್ಥಾನದ ಯುದ್ಧಶಿಲ್ಪಗಳು ಕಣ್ಮುಂದೆ ಬರುತ್ತವೆ. ಆದರೆ ಇವುಗಳಲ್ಲಿ ಬೇಗೂರಿನ ಯುದ್ಧಶಿಲ್ಪ ಮತ್ತು ವೆಂಕಟಗಿರಿಕೋಟೆಯ ಶಿಲ್ಪಗಳಲ್ಲಿ ಮಾತ್ರ ಶಾಸನ ಲಭ್ಯವಿದೆ.

ಬೇಗೂರಿನ ವೀರಗಲ್ಲು: ಭಾರತೀಯ ಶಾಸನ ಪ್ರಪಂಚದಲ್ಲಿ ಯುದ್ಧದ ದಟ್ಟ ಚಿತ್ರವೊಂದನ್ನು ಶಿಲ್ಪದ ಮೂಲಕ ನೀಡುವ ಏಕೈಕ ಶಾಸನವಾಗಿದೆ. ಗಂಗರ ಎರೆಯಪ್ಪರಸನು ತನ್ನ ಶತ್ರುಗಳನ್ನು ಸೋಲಿಸಿ ಗಂಗವಾಡಿ ೯೬೦೦೦ವನ್ನು ಏಕಚ್ಛತ್ರಛಾಯೆಯಲ್ಲಿ ಆಳುತ್ತಿದ್ದನು. ನೊಳಂಬರ ವೀರಮಹೇಂದ್ರನಿಗೆ ಎದುರಾಗಿ ಯುದ್ಧ ಮಾಡಲೆಂದು ಅಯ್ಯಪ್ಪದೇವನ ಸಹಾಯಕ್ಕಾಗಿ ಸಾಮಂತ ಸಹಿತವಾಗಿ ನಾಗತ್ತರನನ್ನು ಸೈನ್ಯ ತೆಗೆದುಕೊಂಡು ಹೋಗಲು ಹೇಳಿದನು. ತುಂಬೆಪಾಡಿ ಎಂಬಲ್ಲಿ ಯುದ್ಧ ನಡೆದು ಯುದ್ದದಲ್ಲಿ ಆನೆಯ ತುಳಿತಕ್ಕೆ ಸಿಕ್ಕಿ ನಾಗತ್ತರನು ಮರಣಿಸಿದಾಗ ಅದನ್ನು ಕೇಳಿ ಮೆಚ್ಚಿ, ಇನ್ನೊಬ್ಬ ಸೇನಾಧಿಕಾರಿಯಾಗಿದ್ದ ಇರುಗನಿಗೆ ನಾಗತ್ತರನ ಪಟ್ಟಗಟ್ಟಿ ಬೆಂಪೂರು ೧೨ನ್ನು ದತ್ತಿಯಾಗಿ ನೀಡಿದ ವಿವರಗಳಿವೆ.

ನಂಬಿಹಳ್ಳಿ ವೀರಶಿಲ್ಪ: ಸಂಗ್ರಾಮದ ವಿವರಗಳನ್ನು ವಿಶಿಷ್ಟವಾಗಿ ಹೊತ್ತಿರುವ ಶಿಲಾಫಲಕವು ಸುಮಾರು ೧೦ ಅಡಿ ಎತ್ತರವಾಗಿದ್ದು, ೪ಅಡಿಗೂ ಹೆಚ್ಚು ಅಗಲವಿದೆ. ಒಂದು ಅಡಿಗಿಂತಲೂ ಕಡಿಮೆ ದಪ್ಪವಿರುವ ಬೃಹತ್ ಬಂಡೆಯ ೬ ಅಡಿಗಳಷ್ಟು ವಿಸ್ತಾರವಾದ ಪ್ರದೇಶವನ್ನು ಕೆತ್ತನೆಯ ವಿವರಗಳು ಒಳಗೊಂಡಿವೆ. ಒಂದು ವೀರಗಲ್ಲಿನ ಸರ್ವಲಕ್ಷಣಗಳನ್ನು ಇದು ತಾಳಿರುವುದಾದರೂ ಯುದ್ಧದ ವಿವರಗಳನ್ನು ಕಣ್ಣಿಗೆ ಕಟ್ಟಿರುವ ರೀತಿಯಲ್ಲಿ ಬಿಡಿಸಿಟ್ಟಿರುವ ರೀತಿ ಶಿಲ್ಪಿಯ ಕಲಾನೈಪುಣ್ಯವು ಅಚ್ಚರಿಪಡುವಂತಿದೆ.

ಆನೆ ಮತ್ತು ಕುದುರೆಗಳ ಭಾಗಿತ್ವಕ್ಕೆ ಮಹತ್ವವಿರುವ ಯುದ್ಧಚಿತ್ರಣವನ್ನು ತನ್ನಲ್ಲಿ ಹೊಂದಿರುವ ನಂಬಿಹಳ್ಳಿಯ ಸಮರ ಶಿಲ್ಪದಲ್ಲಿ ಮೂರು ಹಂತಗಳನ್ನು ಗುರುತಿಸಬಹುದು. ಮೊದಲ ಹಂತದಲ್ಲಿ ರಣಭೂಮಿಯ ಭೀಬತ್ಸತೆ ಎದ್ದುಕಾಣುತ್ತದೆ. ಇದು ಕಾಳಗದ ತೀವ್ರತೆಯನ್ನು ಮನಮುಟ್ಟುವಂತೆ ಶಿಲ್ಪದ ಮೂಲಕ ಹೇಳುವುದಕ್ಕೆ ನಿದರ್ಶನವಾಗಿದೆ. ಯುದ್ಧಭೂಮಿಯಲ್ಲಿ ಕಡಿದುಬಿದ್ದಿರುವ ಸೈನಿಕರು, ತುಂಡಾದಂತೆ ಕಾಣುವ ಕುದುರೆಗಳು, ಅದನ್ನು ತಿನ್ನಲು ಹವಣಿಸುತ್ತಿರುವ ದೃಷ್ಟ ಮೃಗಪಕ್ಷಿಗಳ ಸಂಕುಲವನ್ನು ಬಿಡಿಸಿ ತೋರಿಸಲಾಗಿದೆ. ರಣಪಿಶಾಚಿಗಳ ರೂಪದಲ್ಲಿ ಕಂಡುಬರುವ ಅವು ಬೇತಾಳಗಳು ಇರಬಹುದು. ಎರಡು ಮೈನವಿರೇಳಿಸುವ ಆಕಾರಗಳನ್ನು ಇಲ್ಲಿ ಬಿಡಿಸಲಾಗಿದೆ. ಇವುಗಳ ಕೈಯಲ್ಲಿ ಯಾವುದೋ ಅರೆಬರೆಯಾದ ಶರೀರ ಎದ್ದು ಅದನ್ನು ಸಿಗಿದು ತಿನ್ನುತ್ತಿರುವಂತೆ ಕಂಡುಬರುವುದು ಭೀಷಣತೆಯ ಪರಾಕಾಷ್ಠೆಯ ಉದಾಹರಣೆಯೆಂದು ಹೇಳಬಹುದು.

ಸಮರಶಿಲ್ಪದ ಎರಡನೆಯ ಹಂತವನ್ನು ಪ್ರಮುಖ ಭಾಗವೆಂದು ಪರಿಗಣಿಸಬಹುದು. ಇಲ್ಲಿ ಸಮರದ ವಿಧಿ ವಿಧಾನಗಳ ಚಿತ್ರವಿವರಣೆಯಿದೆ. ಇದರಿಂದ ಯುದ್ಧದಲ್ಲಿ ಭಾಗವಹಿಸಿದ ಪ್ರಮುಖ ಬಲಗಳ ಅರಿವುಂಟಾಗುತ್ತದೆ. ಆನೆಗಳ ಪರಾಕ್ರಮ ಶೈಲಿಯನ್ನು ಇಲ್ಲಿ ಕಾಣುತ್ತೇವೆ. ಅವುಗಳ ಬೆನ್ನಮೇಲೆ ಬುಟ್ಟಿ ಆಕಾರದ ಅಂಬಾರಿಯಿದ್ದು, ಅದರಲ್ಲಿ ಕುಳಿತ ವೀರರು ಬಾಣ ಪ್ರಯೋಗನಿರತರಾಗಿದ್ದರೆ, ಯುದ್ಧಕ್ಕೆ ಅಗತ್ಯವಾದ ರೀತಿಯಲ್ಲಿ ಆನೆಗಳನ್ನು ತರಬೇತಿಗೊಳಿಸಿರುವುದನ್ನು ಇಲ್ಲಿನ ಕ್ರಿಯಾಶೀಲವಾದ ಆನೆಗಳ ಚಿತ್ರದಿಂದ ಮನಗಾಣಬಹುದಾಗಿದೆ.

ಶಿಲ್ಪದ ಎಡಭಾಗದಲ್ಲಿ ಎರಡೆರಡು ಆನೆಗಳಿವೆ. ಎಲ್ಲವೂ ಸಹ ಒಂದಲ್ಲ ಒಂದು ರೀತಿ ಕ್ರಿಯಾಭಂಗಿಯಲ್ಲಿರುವಂತೆ ಕಂಡುಬರುತ್ತದೆ. ಕುದುರೆಗಳನ್ನು ತುಂಡರಿಸಿದ ಆನೆಗಳ ಚಿತ್ರಣವಿರುವಂತೆ ತಮ್ಮ ಸೊಂಡಿಲಲ್ಲಿ ವೀರನನ್ನು ಸುತ್ತಿಕೊಂಡಿರುವ ಆನೆಯೊಂದನ್ನು ನಾವು ಗಮನಿಸಬಹುದು.

ಯುದ್ಧಶಿಲ್ಪದ ಮಧ್ಯಭಾಗದಲ್ಲಿ ಎದ್ದುಕಾಣುವ ಕುದುರೆಗಳನ್ನು ಪ್ರಮುಖ ಬಲವನ್ನಾಗಿ ಪರಿಗಣಿಸಬಹುದು. ಇದರಿಂದಾಗಿ ಕುದುರೆಗಳ ಸಂಪತ್ತನ್ನು ಹೊಂದಿದ ವೀರಪುರುಷನ ಚಿತ್ರಣ ಮನಸ್ಸಿನಲ್ಲಿ ಮೂಡುತ್ತದೆ. ಇಲ್ಲಿ ಕುದುರೆಗಳ ಚಿತ್ರಣದಲ್ಲಿ ಸಾಮಾನ್ಯ ವೀರರ ಸುಳಿವು ನೀಡುವ ಒಂದು ಭಾಗವಿದ್ದರೆ, ಎದುರುಬದುರಾದ ಕುದುರೆಗಳ ಮೇಲೆ ಕುಳಿತು ಹೋರಾಟ ನಡೆಸಿರುವ ಪ್ರಮುಖ ರಾಜಕುಟುಂಬದ ವೀರನನ್ನು ಗಮನಕ್ಕೆ ತಂದುಕೊಳ್ಳಬಹುದು. ಈ ಶಿಲ್ಪದಲ್ಲಿ ಕಂಡುಬರುವ ಒಂದೆರಡು ವೈಶಿಷ್ಟ್ಯದ ಧ್ವಜಲಾಂಛನಗಳ ಪ್ರತ್ಯೇಕತೆ ಗಮನಿಸಬಹುದು. ಎಡಬದಿಯಲ್ಲಿ ಇಬ್ಬರು ಪುರುಷ ವ್ಯಕ್ತಿಗಳಿದ್ದಾರೆ. ಇವರಲ್ಲಿ ಒಬ್ಬನು ರಾಜನಿಗೆ ಸತ್ತಿಗೆಯನ್ನು ಹಿಡಿದಿದ್ದಾನೆ. ಆದರೆ ಮತ್ತೊಬ್ಬನ ಕೈಯಲ್ಲಿರುವ ಧ್ವಜವು ಕುತೂಹಲ ಹುಟ್ಟಿಸುತ್ತಿದೆ. ಇದು ಎಲುಬುಗಳನ್ನು ಅಡ್ಡಕ್ಕೆ ಜೋಡಿಸಿ ಅದರ ಮೇಲೆ ತಲೆಬುರುಡೆಯನ್ನು ಸಿಕ್ಕಿಸಿದಂತೆ ಕಂಡುಬರುತ್ತದೆ. ಪಲ್ಲವರ ರಾಜಲಾಂಛನ ನಂದಿ ಮತ್ತು ಖಟ್ವಾಂಗ ಧ್ವಜವಾಗಿತ್ತು ಎಂಬ ಅಭಿಪ್ರಾಯವಿದೆ. ಇಲ್ಲಿ ಕಾಣುವ ಧ್ವಜವೂ ಸಹ ಖಟ್ವಾಂಗವಾಗಿರಬಹುದು.

ಕೋಲಾರಮ್ಮ ದೇವಸ್ಥಾನದ ಒಳಗೆ ಇರುವ ವೀರಗಲ್ಲು: ಇದು ಸಹ ಶಾಸನರಹಿತ ಯುದ್ಧ ಸನ್ನಿವೇಶದ ವೀರಗಲ್ಲು. ಈ ವೀರಗಲ್ಲನ್ನು ಯಾವಾಗ ಈ ದೇವಸ್ಥಾನದಲ್ಲಿ ಪ್ರತಿಷ್ಠಾಪಿಸಿದರು ಎಂಬ ಮಾಹಿತಿ ಇದುವರೆಗೂ ದೊರೆತಿಲ್ಲ. ಈ ಶಿಲ್ಪ ಭೀಕರ ಕಾಳಗದ ಸಂಕೇತವೆಂದೇ ತಿಳಿಯಬಹುದು. ಇಲ್ಲಿ ವೀರನು ಆನೆಯ ಮೇಲಿರುವ ವೈರಿಯೊಡನೆ ಸೆಣಸುತ್ತಿದ್ದಾನೆ. ಸ್ವತಃ ರಾಜನಿರಬಹುದು, ಆತನ ಹಿಂದೆ ಛತ್ರಿ ಸಮೇತವಾದ ಕುದುರೆಯಿದೆ. ವೀರ ಕುದುರೆಯಿಂದ ಇಳಿದು ಯುದ್ಧ ಮಾಡುತ್ತಿರಬಹುದು. ವೀರತ್ವಕ್ಕೆ ಸಾಕ್ಷಿಯೆಂಬಂತೆ ಆನೆಯ ಪಕ್ಕದಲ್ಲೇ ವೈರಿಯ ರುಂಡ ಚೆಂಡಾಡಿದ್ದಾನೆ.

ಕೆಳಹಂತದಲ್ಲಿ ಯುದ್ಧದ ಭೀಕರತೆ ಎದ್ದುಕಾಣುತ್ತಿದೆ. ಅನೇಕ ಯೋಧರು ಸತ್ತುಬಿದ್ದಿದ್ದಾರೆ. ಹೆಣಗಳನ್ನು ತಿನ್ನಲು ಹವಣಿಸುತ್ತಿರುವ ಕಾಗೆ ಅಥವಾ ಹದ್ದುಗಳನ್ನು ಚಿತ್ರಿಸಿದ್ದಾರೆ. ಜೊತೆಗೆ ನಾಯಿ ಅಥವಾ ನರಿಯನ್ನು ಚಿತ್ರಿಸಿದ್ದಾರೆ. ಇದು ಕೂಡ ಯುದ್ಧದ ಭೀಕರತೆಯನ್ನು ತೋರುತ್ತದೆ.

ಮೇಲಿನ ಹಂತದಲ್ಲಿ ಅಪ್ಸರೆಯರ ಜೊತೆ ಮಂಟಪದಲ್ಲಿ ವೀರನು ಅಸೀನನಾಗಿದ್ದಾನೆ. ಬೇರೆ ಯುದ್ಧ ಸನ್ನಿವೇಶದ ಶಿಲ್ಪಗಳಲ್ಲಿರುವಂತೆ ವೀರನು ಕುದುರೆಯ ಸಮೇತ ಸ್ವರ್ಗಕ್ಕೆ ಹಾರುವಂತೆ ಚಿತ್ರಿಸಿದ್ದಾರೆ. ಒಟ್ಟಾರೆಯಾಗಿ ಬೇಗೂರು, ನಂಬಿಹಳ್ಳಿ, ವೆಂಕಟಗಿರಿಕೋಟೆ ವೀರಗಲ್ಲುಗಳ ಕಾಲಮಾನಕ್ಕೆ ಈ ವೀರಗಲ್ಲು ಸೇರಿಸಬಹುದಾಗಿದೆ. ಈ ವೆಂಕಟಗಿರಿಕೋಟೆಯ ವೀರಗಲ್ಲು ಸಹ ಇಂತಹ ಭೀಕರತೆಯನ್ನೇ ಹೋಲುತ್ತದೆ.

[ಈ ಶಿಲ್ಪವನ್ನು ಗುರುತಿಸಿದ ಬಿ.ಜಿ. ಗುರುಸಿದ್ದಪ್ಪ ಬಿಟ್ಟಸಂದ್ರ, ಗೋಪಾಲಗೌಡ ಕಲ್ವಮಂಜಲಿ ರವರಿಗೆ, ಶಾಸನದ ಪಾಠವನ್ನು ಸಿದ್ಧಪಡಿಸಲು ಮಾರ್ಗದರ್ಶಕರಾದ ಡಾ. ದೇವರಕೊಂಡಾರೆಡ್ಡಿ ಮತ್ತು ಪ್ರೊ. ಕೆ.ಆರ್. ನರಸಿಂಹನ್‌ರವರಿಗೆ, ಕ್ಷೇತ್ರ ಕಾರ್ಯದಲ್ಲಿ ಸಹಕರಿಸಿದ ಗೆಳೆಯ ಡಾ. ಆರ್. ಯುವರಾಜ್ ತಾವರೆಕೆರೆ ಮತ್ತು ಶ್ರೀಮತಿ ಎಸ್.ವೈ. ನಿರ್ಮಲಾರವರಿಗೆ ಧನ್ಯವಾದಗಳು.]

ಆಕರ ಗ್ರಂಥಗಳು

೧. ಕರ್ನಾಟಕ ವೀರಗಲ್ಲುಗಳು, ಆರ್. ಶೇಷಶಾಸ್ತ್ರಿ, ಕಾಮಧೇನು ಪುಸ್ತಕ ಭವನ.

೨. ಕುವಳಾಲ, ಕೆ.ಆರ್. ನರಸಿಂಹನ್, ಕೋಲಾರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ಕೋಲಾರ.

ಹಾವೇರಿ ಜಿಲ್ಲೆಯ ರಾಷ್ಟ್ರಕೂಟರ ವೀರಗಲ್ಲುಗಳು

ಮಹಾಂತೇಶ ಮ. ಅಕ್ಕಿ*

"ಹಾವೇರಿ" ಎಂಬ ಹೆಸರು ಸುಮಾರು ಸಾವಿರ ವರ್ಷಗಳಷ್ಟು ಪ್ರಾಚೀನ ಆದರೆ ಈ ಹೆಸರು ಹೇಗೆ ಬಂದಿತೆಂದು ಹೇಳುವುದು ಕಷ್ಟ, ಆದರೆ ಶಾಸನಗಳಲ್ಲಿ ಈ ಊರನ್ನು 'ಹಾವರಿ', 'ಪಾವರಿ', 'ಹಾಹರಿ', 'ನಳಪುರಿ', 'ಹವರಿ', ಎಂಬ ಹೆಸರುಗಳಿಂದ ಉಲ್ಲೇಖಿಸಲಾಗಿದೆ. ಅಲ್ಲದೆ ಈ ಜಿಲ್ಲೆಯ ಇತಿಹಾಸ ಕ್ರಿ.ಶ.ಪೂ. ೩೫೦೦ರಿಂದ ಕ್ರಿ.ಶ.ಪೂ. ೧೦೦ ದ ಅವಧಿಯಲ್ಲಿ ಬದುಕಿದ್ದ ಹಳೆಯ ಶಿಲಾಯುಗದ ಜನರಿಂದ ಆರಂಭವಾಗುತ್ತದೆ. ನಂತರದ ಕಾಲದಲ್ಲಿ ಈ ಜಿಲ್ಲೆಯನ್ನು ಮೌರ್ಯರು, ಬನವಾಸಿ ಕದಂಬರು, ಶಾತವಾಹನರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರು, ಕಲಚೂರಿಯರು, ಹೊಯ್ಸಳರು, ವಿಜಯನಗರದ ಅರಸರು, ಹಾನಗಲ್ ಕದಂಬರು, ಗುತ್ತಲದ ಗುತ್ತರು ಆಳ್ವಿಕೆ ಮಾಡಿ ಕಲೆ, ಸಾಹಿತ್ಯ, ಆರ್ಥಿಕ, ಧಾರ್ಮಿಕ, ಸಾಂಸ್ಕೃತಿಕ ಕ್ಷೇತ್ರಕ್ಕೆ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ. ಇವರ ಕಾಲದ ಇತಿಹಾಸವನ್ನು ತಿಳಿಯಲು ಇಲ್ಲಿ ನೂರಾರು ಶಾಸನಗಳು ದೊರೆತಿವೆ ಪ್ರಸ್ತುತ ಅಧ್ಯಯನದಲ್ಲಿ ಹಾವೇರಿ ಜಿಲ್ಲೆಯಲ್ಲಿ ಕಂಡು ಬರುವ ರಾಷ್ಟ್ರಕೂಟರ ಕಾಲದ ವೀರಗಲ್ಲುಗಳ ಬಗೆಗೆ ಇಲ್ಲಿ ಚರ್ಚಿಸಲಾಗಿದೆ.

ಈ ರಾಷ್ಟ್ರಕೂಟರಿಗೆ ಸಂಬಂಧಿಸಿದಂತೆ ಸುಮಾರು ೬೧೨ ಶಾಸನಗಳು ಪ್ರಕಟವಾಗಿದ್ದು ಅವುಗಳು ಕರ್ನಾಟಕ, ಆಂಧ್ರಪ್ರದೇಶ, ತಮಿಳುನಾಡು, ಮಹಾರಾಷ್ಟ್ರ, ಗುಜರಾತ್, ಪಾಂಡಿಚೇರಿ, ಮಧ್ಯಪ್ರದೇಶ, ಉತ್ತರ ಪ್ರದೇಶದಲ್ಲಿ ದೊರೆತಿವೆ. ಕರ್ನಾಟಕದ ಹಾವೇರಿ ಜಿಲ್ಲೆಯಲ್ಲಿ ಅತೀ ಹೆಚ್ಚಿನ ಶಾಸನಗಳೆಂದರೆ ಸುಮಾರು ೧೧೭ ಈ ಜಿಲ್ಲೆಯಲ್ಲಿಯೇ ದೊರೆತಿವೆ. ಇವುಗಳಲ್ಲಿ ಸುಮಾರು ೫೬ ವೀರಗಲ್ಲುಗಳು ಲಭ್ಯವಾಗಿವೆ, ಅವುಗಳನ್ನು ಪ್ರಾದೇಶಿಕವಾಗಿ ಹಾಗೂ ರಾಜರುಗಳ ಪ್ರಕಾರ ಹೀಗೆ ಗುರುತಿಸಬಹುದು.

ತಾಲೂಕು-ಸಂಖ್ಯೆ: ಹಿರೇಕೆರೂರು ೧೭, ಹಾನಗಲ್ ೧೩, ಹಾವೇರಿ ೧೨, ಶಿಗ್ಗಾವಿ ೦೫, ಬಂಕಾಪುರ ೦೪, ರಾಣಿಬೆನ್ನೂರು ೦೩, ಬ್ಯಾಡಗಿ ೦೨, ಒಟ್ಟು ೫೬.

ರಾಜರುಗಳ ಪ್ರಕಾರ: ರಾಜರು ಸಂಖ್ಯೆ– ಒಂದನೇ ಕೃಷ್ಣ ೦೨, ಧೃವ ೦೨, ಮೂರನೇ ಗೋವಿಂದ ೦೬, ಒಂದನೇ ಅಮೋಘವರ್ಷ ೦೨, ಎರಡನೇ ಕೃಷ್ಣ ೧೧, ಜತ್ತುಂಗ ೦೨, ಮೂರನೇ ಇಂದ್ರ ೦೫, ನಾಲ್ಕನೇ ಗೋವಿಂದ ೦೨, ಮೂರನೇ ಅಮೋಘವರ್ಷ ೦೧, ಮೂರನೇ ಕೃಷ್ಣ ೧೦, ಖೊಟ್ಟಿಗ ೦೧, ಇತರೆ (ಸಂಕೀರ್ಣ) ೧೨, ಒಟ್ಟು ೫೬.

ವೀರಗಲ್ಲುಗಳನ್ನು ನಿಲ್ಲಿಸುವ ಪ್ರಮುಖ ಉದ್ದೇಶ ವೀರನ ಪರಾಕ್ರಮ ಲೋಕಕ್ಕೆ ತಿಳಿಯುವಂತೆ ಅದರಿಂದ ಮುಂದಿನ ತಲೆಮಾರಿನ ವೀರರು ಉತ್ತೇಜನಗೊಳ್ಳುವಂತೆ ಆ ವೀರನನ್ನು ಆದರ್ಶ ಪುರುಷನನ್ನಾಗಿ ಮಾಡಿಕೊಳ್ಳುವಂತೆ ಮಾಡುವುದೇ ಆಗಿತ್ತೆಂಬುವುದು ಸ್ಪಷ್ಟವಾಗುತ್ತದೆ. (ಶೇಷಶಾಸ್ತ್ರಿ ಆರ್. ಕರ್ನಾಟಕದ ವೀರಗಲ್ಲುಗಳು, ಪುಟ-೭೨) ಹೀಗಾಗಿ ಆ ಪ್ರಾಚೀನ ಕಾಲದಿಂದಲೂ ವೀರಗಲ್ಲುಗಳನ್ನು ಹಾಕಿಸುವ ಪರಂಪರೆಯು ಇದುವರೆಗೂ ಮುಂದುವರೆಸಿಕೊಂಡು ಬಂದಿರುವುದನ್ನು ಗಮನಿಸಬಹುದು.

ವೀರರಿಗೆ ಉತ್ತೇಜನವನ್ನು ನೀಡುವದರ ಸಲುವಾಗಿಯೇ ಹಾಕಿಸುತ್ತಿರುವ ಈ ವೀರಗಲ್ಲುಗಳಲ್ಲಿ ಅನೇಕ ಬಾರಿ ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ಅರ್ಜುನನಿಗೆ ಹೇಳುವ ಶ್ಲೋಕವು ಬೇರೆಯ ರೂಪವನ್ನು ತಾಳಿ "ಹತೋ ವಾ ಪ್ರಾ ಪ್ಯಸಿ ಸ್ವರ್ಗಂ ಜಿತ್ವಾಬಾಭೋಕ್ಷ್ಯಕೇ ಮಹೀಂಮ್ ಕಾಂತೇಯ ಯುದ್ಧಾಯ ಶೃತನಿಶ್ಚಯಃ ಜೀತೇನ ಲಭ್ಯತೆಲಕ್ಷ್ಮೀ ಮೃತೇನಾಪಿ ಸುರಾಂಗನೇ ಕ್ಷಣ ವಿಧ್ವಂಸಿನೀ ಕಾಯೇ ಕಾ ಚಿಂತಾ ಮರಣೇರ ಣೇ."

ಎಂಬ ಶ್ಲೋಕ ಕಂಡು ಬರುತ್ತದೆ. ಆದರೆ ಯುದ್ದದಲ್ಲಿ ಗೆದ್ದರೆ ಲಕ್ಷ್ಮೀ (ಸಂಪತ್ತು) (ವಿಜಯಲಕ್ಷ್ಮೀ) ಲಭಿಸುತ್ತಾಳೆ ಮರಣ ಹೊಂದಿದರೆ ದೇವತಾ ಸ್ತ್ರೀಯರು ಸಿಗುತ್ತಾರೆ. ಕ್ಷಣ ಮಾತ್ರದಲ್ಲಿ ನಾಶವಾಗುವುದು ಈ ದೇಹ ಅದಕ್ಕಾಗಿ ಯುದ್ಧದಲ್ಲಿ

* ಮುಖ್ಯಸ್ಥರು, ಇತಿಹಾಸ ವಿಭಾಗ, ಹಂಸಭಾವಿ, ಹಿರೇಕೆರೂರು ತಾಲ್ಲೂಕು, ಹಾವೇರಿ ಜಿಲ್ಲೆ, ಮೊ. ೮೯೭೦೭ ೬೫೪೮೯೩

ಹೋರಾಡುತ್ತಾ ಮರಣಹೊಂದುವುದಕ್ಕೆ ಏಕೆ ಚಿಂತೆ ಮಾಡುತ್ತೀಯಾ ? ಇದನ್ನು ನಂಬಿದ್ದ ವೀರರು ಹಲವಾರು ಕಾರಣಗಳಿಗಾಗಿ ಹೋರಾಡಿ ಮರಣ ಹೊಂದಿದ್ದಾರೆ.

ಆದರೆ ಹಾವೇರಿ ಜಿಲ್ಲೆಯ ರಾಷ್ಟ್ರಕೂಟರ ಕಾಲದ ವೀರಗಲ್ಲುಗಳನ್ನು ಅವಲೋಕನ ಮಾಡಿದರೆ ಯುದ್ದದಲ್ಲಿ ಮಡಿದ ವೀರರು, ತುರುಗೋಳ್‌ದಲ್ಲಿ ಮಡಿದ ವೀರರು, ಗೋಸಾಸ, ಊರುಳಿವುನಲ್ಲಿ ಮಡಿದ ವೀರರು ಈ ಪ್ರಭೇದದ ವೀರಗಲ್ಲುಗಳು ಕಂಡುಬರುತ್ತವೆ. ಅವುಗಳ ವಿವರ ಈ ರೀತಿಯಾಗಿದೆ. ಯುದ್ದದಲ್ಲಿ ಮಡಿದ ವೀರರು ೦೮, ತುರುಗೋಳ್‌ದಲ್ಲಿ ಮಡಿದ ವೀರರು ೧೧, ಗೋಸಾಸ ೧೨, ಊರುಳಿವುದಲ್ಲಿ ಮಡಿದ ವೀರರು ೦೭, ಇತರೆ (ಸಂಕೀರ್ಣ) ಶಾಸನಗಳು ೧೮, ಒಟ್ಟು ೫೬.

ಹಾವೇರಿ ಜಿಲ್ಲೆಯ ರಾಷ್ಟ್ರಕೂಟರ ಕಾಲದ ವೀರಗಲ್ಲುಗಳನ್ನು ಅವಲೋಕನ ಮಾಡಿದರೆ ಯುದ್ದಗಳಲ್ಲಿ ಮಡಿದ ವೀರರನ್ನು ಕುರಿತಾದ ೦೮ ಸ್ಮಾರಕಗಳು ಈ ವರೆಗೆ ಪ್ರಕಟವಾಗಿವೆ. ಈ ವೀರರು ತಮ್ಮ ಒಡೆಯನಿಗೆ ಆಪತ್ತು ಒದಗಿ ಬಂದಾಗ ಆತನ ಪರವಾಗಿ ಹೋರಾಡಿ ಮಡಿಯುತ್ತಿದ್ದರು. ಆಗ ಒಡೆಯರು ಅವರಿಗೆ ಗೌರವ ಸಲ್ಲಿಸುವದಕ್ಕೂ ಹಾಗೂ ಅವರ ಸ್ಮರಣಾರ್ಥವಾಗಿಯೂ ಇಂತಹ ವೀರಗಲ್ಲುಗಳನ್ನು ಕೊರೆಸಿ ಅವರ ಪರಿವಾರದವರಿಗೆ ಉಂಬಳಿಯನ್ನು ಬಿಡುತ್ತಿದ್ದರು. (ಡಾ. ಚಿ.ಸಿ. ಲಿಂಗಣ್ಣ, ಕನ್ನಡ ಸಾಹಿತ್ಯ ಸಂಸ್ಕೃತ ಕೋಶ, ಪುಟ ೪೮೯) ಹಾವೇರಿ ಜಿಲ್ಲೆಯಲ್ಲಿ ಇಂತಹ ೦೮ ಶಾಸನಗಳು ರಾಷ್ಟ್ರಕೂಟರ ಕಾಲದಲ್ಲಿ ದೊರೆತಿವೆ ಅವುಗಳ ವಿವರ ಈ ರೀತಿಯಾಗಿವೆ. ತಾಲೂಕು–ಸಂಖ್ಯೆ: ಹಾವೇರಿ ೦೩, ಹಾನಗಲ್ ೦೧, ಹಿರೇಕೆರೂರು ೦೩, ಬ್ಯಾಡಗಿ ೦೧, ಒಟ್ಟು ೦೮.

ಮಂತಗಿ ಶಾಸನವು ಚಲ್ಲಕೇತನ ವಂಶದ ಲೋಕಟೆಯು ಬನವಾಸಿ ೧೨೦೦೦ನ್ನು ಆಳುತ್ತಿದ್ದಾಗ ಕುನ್ದವರ್ಮನು ನಾಡನ್ನಾಳುತ್ತಿದ್ದನು. ಆಗ ಹೋರಾಟದಲ್ಲಿ ಮಡಿದ ವೀರನ ನೆನಪಿಗೆ ಕಲ್ಲನ್ನಿರಿಸಲಾಗಿದೆ [ಸಂಪಾದಕರು, ಡಾ. ಬಿ.ಆರ್.ಭಾರತಿ, ರಾಷ್ಟ್ರಕೂಟರ ಶಾಸನಗಳು ಸಂ. ೧ ಮತ್ತು ಸಂ. ೨, ನಂ. ೨೦] ಸಿಡೇನೂರು ಶಾಸನದಲ್ಲಿ ಮಾರಕ್ಕ ಅರಸನು ಬನವಾಸಿಯನ್ನು ಆಳುತ್ತಿದ್ದಾಗ ಬಿನೆತಿಅಬ್ಬೆ ಸಿಡೇನೂರು ಗ್ರಾಮದ ಆಡಳಿತ ನೋಡಿಕೊಳ್ಳುತ್ತಿದ್ದಳು. ಆಗ ಯುದ್ದವೊಂದರಲ್ಲಿ ಮೃತಪಟ್ಟ ಒಬ್ಬ ವೀರನ ನೆನಪಿಗಾಗಿ ಹಾಕಿಸಿದ ಕಲ್ಲು ಆದರೆ ಇಲ್ಲಿ ವೀರನ ಹೆಸರು ಸ್ಪಷ್ಟವಾಗಿಲ್ಲ [ಅದೇ, ನಂ. ೪೩]. ಮತ್ತೊಂದು ವೀರಗಲ್ಲು ಸಂಗವೂರಿನ ಯುದ್ದದಲ್ಲಿ ಬಳಿಯರೇಚ ಗಾಮುಂಡನು ಸತ್ತು ಸ್ವರ್ಗ ಸೇರಿದುದನ್ನು ಮತ್ತು ದಂತಿಗನು ಈ ನಾಡನ್ನು ಆಳುವಾಗ ಗಾಮಿಲೆ (ಬಹುಶಃ ರೇಚಗಾಮುಂಡನ ಪತ್ನಿ)ಯು ವೀರಗಲ್ಲನ್ನು ಸ್ಥಾಪಿಸಿದ್ದನ್ನು ತಿಳಿಸುತ್ತದೆ [ಅದೇ ನಂ. ೭೮]. ಜಾವಳ್ಳಿ ಶಾಸನವು ಕನ್ನಮ ಎಂಬ ವ್ಯಕ್ತಿಯು ಹೋರಾಟದಲ್ಲಿ ಮರಣ ಹೊಂದಿದ ಸಂದರ್ಭದಲ್ಲಿ ಗ್ರಾಮದ ೭೦ ಜನರು ಸೇರಿ ಭೂಮಿಯನ್ನು ದಾನ ಮಾಡಿದ್ದನ್ನು ದಾಖಲಿಸುತ್ತದೆ. ಮರಣಿಸಿದ ವೀರನ ಸಹೋದರನು ಈ ವೀರಗಲ್ಲನ್ನು ನೆಡಿಸಿದನು. [ಅದೇ ನಂ. ೮೩]

ದೇವಿಹೊಸೂರಿನ ಶಾಸನವು ಬನವಾಸಿನಾಡನ್ನು ರಾಜಾದಿತ್ಯನು ಆಳುತ್ತಿದ್ದಾಗ ಪೆರ್ಮಾಡಿನಾಯಿಗನ ಮಗ ಸರುವಯ್ಯಸೆಟ್ಟಿ ಎಂಬುವವನು ಯುದ್ದದಲ್ಲಿ ಸತ್ತುದನ್ನು ಶಾಸನ ಹೇಳುತ್ತದೆ. ಸರುವಯ್ಯಸೆಟ್ಟಿಯ ತಮ್ಮ ಚಿಕ್ಕಿಸೆಟ್ಟಿಯು ಈ ಶಾಸನವನ್ನು ನಿಲ್ಲಿಸಿದ [ಅದೇ ನಂ. ೧೮೦]. ಮಾಸಣಗಿ ಶಾಸನ [ಅದೇ ನಂ. ೨೬೮] ಮಾಸಲಿಗೆಯ ಅವ್ವೆಯರ ಪುಣಿಸೆಯಮ್ಮನು ಅಮ್ಮಣನು ಅಣ್ಣಿಗನು ಯುದ್ದದಲ್ಲಿ ತೊಡಗಿದ್ದಾಗ ಅಮ್ಮಣನು ಹಲವಾರು ಜನರನ್ನು ಕೊಂದು ತಾನೂ ಮೃತನಾಗುತ್ತಾನೆ ಎಂದಿದೆ. ನಿಲೋಗಲ್ ಶಾಸನವು [ಅದೇ ನಂ. ೨೦೬] ಪೀಗನ ಮೇಲೆ ನಡೆದ ಹಲ್ಲೆಯನ್ನು ಹೇಳುತ್ತದೆ ಹಾಗೂ ಇನ್ನೊಬ್ಬ ವ್ಯಕ್ತಿ [ಅವನ ಹೆಸರು ದೊರೆಯುವುದಿಲ್ಲ] ಅವನ ಬಿರುದು ತೊರವರ ಕಲಿಯು ನಲವತ್ತೆಂಟು ಮಂದಿಯನ್ನು ಕಾಳಗದಲ್ಲಿ ಕೊಂದು ತಾನೂ ಮಡಿದುದನ್ನು ತಿಳಿಸುತ್ತದೆ.

ಹೀಗೆ ರಾಷ್ಟ್ರಕೂಟರ ಕಾಲದಲ್ಲಿ ಅನೇಕ ವೀರರು ಹೋರಾಡಿ ಮರಣ ಹೊಂದಿದ ವಿಷಯವನ್ನು ಹಾವೇರಿ ಜಿಲ್ಲೆಯ ಶಾಸನಗಳು ತಿಳಿಸುತ್ತವೆ.

ತುರುಗೋಳ್‌ನಲ್ಲಿ ಮಡಿದ ವೀರರು: ಗೋವುಗಳಿಗೆ ಪ್ರಾಚೀನ ಭಾರತದಲ್ಲಿ ಅತ್ಯಂತ ಪವಿತ್ರವಾದ ಸ್ಥಾನವಿತ್ತು ಅಲ್ಲದೇ ಅವುಗಳು ಕೃಷಿಕನ ಸಂಪತ್ತಾಗಿದ್ದವು ಹೀಗಾಗಿ ಅವುಗಳ ಸಂರಕ್ಷಣೆಗಾಗಿ ಸದಾಕಾಲ ಯುವಕರು ಗ್ರಾಮಗಳಲ್ಲಿ ಜಾಗೃತರಾಗಿರುತ್ತಿದ್ದರು.

'ತುರುಗೋಳ್' ಎನ್ನುವುದು ಅನೇಕ ಸಂದರ್ಭಗಳಲ್ಲಿ ಯುದ್ದವೆನ್ನುವದಕ್ಕಿಂತ ಯುದ್ದಕ್ಕೆ ಪೀಠಿಕೆಯಾಗುತ್ತಿತ್ತು. ತುರುಗೋಳ್‌ನ ಮುಖ್ಯ ಉದ್ದೇಶ ತುರುಗಳನ್ನು ಅಪಹರಿಸುವುದು ಮತ್ತು ತುರುಗಳ ಅಪಹರಣವನ್ನು ತಡೆದು ಅವುಗಳ

ರಕ್ಷಣೆಗೆ ಹೋರಾಡುವುದು ಇವೆರಡೂ ತುರುಗೋಳಿನ ಹೋರಾಟಗಳೆಂದೇ ಗುರುತಿಸಲ್ಪಟ್ಟಿವೆ ಆರ್.ಶೇಷಶಾಸ್ತ್ರಿಯವರು ತುರುಗೋಳಿನ ಉದ್ದೇಶವನ್ನು ಎರಡು ರೀತಿಯಾಗಿ ವಿಶ್ಲೇಷಿಸಿದ್ದಾರೆ. ಒಂದು ಕಳ್ಳರು ಕಳ್ಳತನದ ಉದ್ದೇಶದಿಂದ ಮಾಡಿದ ಗೋಗ್ರಹಣ.

ರಾಷ್ಟ್ರಕೂಟರ ಅವಧಿಯಲ್ಲಿ ತುರುಗೋಳ್ ಶಾಸನ ಶಿಲ್ಪವು ಒಂದು ಹೆಜ್ಜೆ ಮುಂದುವರಿಯುವುದರ ಮೂಲ ಶಾಸನಶಿಲ್ಪದ ಬೆಳವಣಿಗೆಗೆ ಚಾಲನೆ ನೀಡಿತಲ್ಲದೆ ಶಾಸನಗಳ ವಿನ್ಯಾಸದಲ್ಲಿ ಹೊಸತನವನ್ನು ಪಡೆಯಿತು. ಈ ತುರುಗೋಳ್ ವೀರಗಲ್ಲುಗಳು ಅಗಲ ಜಾಸ್ತಿ, ಎತ್ತರ ಕಡಿಮೆ. ಇವು ಸುಮಾರು ಏಳು ಅಡಿ ಅಗಲದಿಂದ ಹಿಡಿದು ಹತ್ತು ಅಡಿ ಅಗಲದವರೆಗೂ ಇದ್ದು, ನಾಲ್ಕು ಅಡಿಯಿಂದ ಆರು ಅಡಿಯವರೆಗೂ ಎತ್ತರವಾಗಿರುತ್ತವೆ. ಕೆಳಗಿನ ಎರಡು ಅಥವಾ ಮೂರು ಹಂತಗಳಲ್ಲಿ ವೀರನ ಮೆರವಣಿಗೆ, ಯುದ್ದಕ್ಕೆ ಹೊರಟ ಚಿತ್ರಣ ನಂತರದ ಹಂತಗಳಲ್ಲಿ ಶತ್ರುಗಳೊಂದಿಗೆ ಹೋರಾಟದ ಚಿತ್ರಣ ವಿರುತ್ತದೆ. ಈ ಹೋರಾಟದ ಹಂತದಲ್ಲಿ ಕುದುರೆಗಳನ್ನು, ತುರುಗಳನ್ನು ಮತ್ತು ಕಾಲಾಳುಗಳನ್ನು ಹೆಚ್ಚು ಸಂಖ್ಯೆಯಲ್ಲಿ ಚಿತ್ರಿಸಿರುತ್ತಾರೆ.

ಹಾವೇರಿ ಜಿಲ್ಲೆಯಲ್ಲಿ ೧೧ ಶಾಸನಗಳು ದೊರೆತಿದ್ದು ನರೇಗಲ್ ಶಾಸನ [ಅದೇ ನಂ. ೪೨] ಮಾರಕ್ಕ ಅರಸ ಬನವಸೆ ೧೨೦೦೦ ನ್ನು ಆಳುತ್ತಿದ್ದಾಗ ತುರುಗಾಳಗದಲ್ಲಿ ಮಡಿದ ವಿಚಾರ ತಿಳಿಸುತ್ತದೆ. ಇದೇ ಗ್ರಾಮದ ಮತ್ತೊಂದು ಶಾಸನ [೩೧೫] ಕನ್ನರನು ರಾಜ್ಯಭಾರ ಮಾಡುತ್ತಿದ್ದಾಗ ಪುಣಸೆಯ ಗಜ್ಜನಾಳುತ್ತಿರುವಾಗ ನರೆಯಂಗಲ್ಲಿನ ಕೋಚಾರರ ಕೋಟೆಯಮ್ಮನ ಮಗ ತೋಯಿಮ್ಮ ಗೋಗ್ರಹಣದ ಪ್ರಸಂಗದಲ್ಲಿ ಹೋರಾಡಿ ಮಡಿಯುತ್ತಾನೆ. ಸಾಸಿರ್ವರು ಆತನ ಮಕ್ಕಳಿಗಾಗಿ ಆರು ಮತ್ತರು ಭೂಮಿಯನ್ನು ಹಾಗೂ ಆರು ಕೈ ಅಳತೆಯ ಮನೆಯನ್ನು ದಾನವಾಗಿ ನೀಡಿದ್ದನ್ನು ಉಲ್ಲೇಖಿಸಿದೆ. ಚಿಲ್ಲೂರಿನ ಶಾಸನವು [ಅದೇ ನಂ. ೧೫೯] ಬಂಕೆಯರಸನು ನಾಡನ್ನಾಳುತ್ತಿದ್ದಾಗ ಪಿದ್ದವಣಿ, ಅಸಗರ ಮಾಚ ಸಱುಗ, ಚಟ್ಟ ಮುಂತಾದವರು ಗೋವುಗಳನ್ನು ಸಂರಕ್ಷಿಸಲು ಹೋರಾಡಿ ಮಡಿದಂತೆ ತಿಳಿಯುತ್ತದೆ. ಶಬನೂರು ಶಾಸನ [ಅದೇ ನಂ. ೧೯೮] ಅಣ್ಣಿಗನು ನಿಡುಗುನ್ದಗೆ ೧೨ ನಾಡಿನ ನಾಲ್ಗಾವುಂಡನಾಗಿದ್ದಾಗ ಸೆಂಬೂರಿನ ಗ್ರಾಮಸ್ಥನಾದ ಕುನ್ದಟೆಯು ತುಱುಗಾಳಗದಲ್ಲಿ ಮಡಿದುದನ್ನು ದಾಖಲಿಸುತ್ತದೆ. ಹಿರೇಹುಲ್ಲಾಳ ಶಾಸನ [ಅದೇ ನಂ. ೧೬೦] ಬನವಾಸಿ ನಾಡನ್ನು ಚಲ್ಲಕೇತನ ಕಲಿವಿಟ್ಟರಸ ಆಳುವಾಗ ಅಕ್ಕಣನೆಂಬುವವನು ಪೆರೂರಿನ ಗೋವು ಹಿಡಿದಾಗ ವೈರಿಭಯಂಕರದೇವನು ಹೋರಾಡಿ ಅವನನ್ನು ಕೊಂದು ತಾನು ವೀರಮರಣ ಹೊಂದಿದ ಬಗ್ಗೆ ತಿಳಿಸಿದೆ. ಹಿರೇಬಿದರಿ ಶಾಸನ [ಅದೇ ನಂ. ೧೫೫] ಎರಡನೆಯ ಕೃಷ್ಣನ ಆಳ್ವಿಕೆಯಲ್ಲಿ ದುಗ್ಗತಿ ಗಾವುಣ್ಡನ ಮಗ ನಾಗತಿ ಎಂಬುವವನು ಸಾಲತ್ತಿ ಎಂಬಲ್ಲಿ ನಡೆದ ತುಱುಗೋಳ ಕಾಳಗದಲ್ಲಿ ಮಡಿದುದನ್ನು ದಾಖಲಿಸಿದೆ. ಹಾವೇರಿ ಶಾಸನ [ಅದೇ ನಂ. ೪೫೪] ಕನ್ನರದೇವನು ರಾಜ್ಯವಾಳುತ್ತಿದ್ದಾಗ ಕಲಿವಿಟ್ಟನು ಬನವಾಸಿ ದೇಶವನ್ನಾಳುತ್ತಿದ್ದನು. ಹಾವೇರಿಯ ವೀರ[ಹೆಸರು ನಷ್ಟವಾಗಿದೆ]ನೊಬ್ಬನು ಹಸುಗಳಿಗಾಗಿ ನಡೆದ ಯುದ್ದದಲ್ಲಿ ಮರಣ ಹೊಂದಿದ್ದನ್ನು ದಾಖಲಿಸಿದೆ. ಸೇನಮಲ್ಲರ ಮಲ್ಲಪನು ಆಗ ನಾಳ್ಗಾವುಂಡನಾಗಿದ್ದನೆಂದು ಹೇಳಿದೆ. ಕಿತ್ತೂರಿನ ಶಾಸನವು [ಅದೇ ನಂ. ೪೮೭] ಈ ಶಾಸನವು ಗೋವುಗಳಿಗಾಗಿ ನಡೆದ ಯುದ್ದದಲ್ಲಿ ಕಂದುರರ ಯರೆಯಮ್ಮನ ಮಗ ಬೀರನಾಗಿಯಣ್ಣನು ಸ್ವರ್ಗಸ್ಥನಾದುದನ್ನು ಹೇಳುತ್ತದೆ ಅರಳಿಕಟ್ಟೆ ಶಾಸನ ತುರುಕಾಳಗದಲ್ಲಿ ಕೆಲವರು [ವೀರರ ಹೆಸರು ಉಲ್ಲೇಖವಿಲ್ಲ] ಮರಣ ಹೊಂದಿದ ಬಗ್ಗೆ ವಿವರಿಸುತ್ತದೆ. [ಅದೇ ನಂ. ೫೯೮] ಶಬನೂರಿನ ಶಾಸನವು ಗೋಗ್ರಹಣ ಪ್ರಸಂಗದಲ್ಲಿ ಶಂಬೂರ ಕುಂದಾತಿಯ ವೀರಮರಣವನ್ನು ತಿಳಿಸುತ್ತದೆ. [ಧಾ.ಜಿ.ಶಾ.ಸೂ ಪುಟ ಸಂ. ೩೦, ನಂ. ೩೧,] ಹೊಟ್ಟೂರಿನ ಶಾಸನವು ಕಳ್ಳರು ತಂಬುಲಿಗರ ಎತ್ತುಗಳನ್ನು ಕೊಂದಾಗ ಅವರೊಡನೆ ಹೋರಾಡಿದ ಗೊಜ್ಜಿಗನ ವೀರ ಮರಣವನ್ನು ಉಲ್ಲೇಖಿಸಿದೆ [ಅದೇ ಪುಟ.ಸಂ ೩೩, ನಂ. ೧೦].

ಊರುಳಿವುದಲ್ಲಿ ಮಡಿದ ವೀರರು: ಇದು ಊರಿನ ನಾಶವನ್ನು ಹೇಳುತ್ತದೆ. ಗೆದ್ದ ರಾಜನು ತಾನು ಗೆದ್ದ ಪ್ರದೇಶಗಳನ್ನು ಲೂಟಿ ಮಾಡಿಸುವ ಸುಡಿಸುವ ಹೆಂಗಸರ ಮಾನಭಂಗ ಮಾಡಿಸುವಂತಹ ದುಷ್ಕೃತ್ಯದಲ್ಲಿ ತೊಡಗುತ್ತಿದ್ದಾಗ ಸ್ಥಳೀಯ ವೀರರು ಮಾಡುತ್ತಿದ್ದ ಹೋರಾಟವನ್ನು ಇದು ತಿಳಿಸುತ್ತದೆ. ಇಂತಹ ಘಟನೆಗಳನ್ನು ಶಾಸನಗಳು 'ಊರಳಿವು' 'ಊರುಹುಯ್ಯಲು' ಎಂದು ಕರೆದಿವೆ. (ಡಾ. ಸಿ.ಯು. ಮಂಜುನಾಥ, ಶಾಸನಗಳು ಮತ್ತು ಕರ್ಣಾಟಕ ಸಂಸ್ಕೃತಿ ಪುಟ ೪೧೯) ಇಂತಹ ೦೭ ಶಾಸನಗಳು ಹಾವೇರಿ ಜಿಲ್ಲೆಯಲ್ಲಿ ದೊರೆತಿವೆ. ಶಬನೂರು ಶಾಸನವು ಇಟ್ಟಿಗೆ ಗ್ರಾಮದ ಮೇಲೆ ದಾಳಿಯಾದ ಸಂದರ್ಭದಲ್ಲಿ ಸೆಂಬೂರು ಗ್ರಾಮದ ಕುನ್ದಟಿಯೆಂಬ ವ್ಯಕ್ತಿಯ ಮಡಿದನೆಂದು, ಈ ಸಮಯದಲ್ಲಿ ಲೋಕಟೆಯು ಬನವಾಸಿ ೧೨೦೦೦ ಪ್ರಾಂತ್ಯವನ್ನು ಆಳುತ್ತಿದ್ದನೆಂದೂ, ಅಣ್ಣಿಗನು ನಿಡುಗುಂಡಗೆ ೧೨ ಪ್ರದೇಶದ ನಾಲ್ಗಾವುಂಡನಾಗಿದ್ದನೆಂದೂ ತಿಳಿಸುತ್ತದೆ. (ARSIE BK No.33, 1943-44). ಇದೇ ವಿಷಯವನ್ನು ಈ ಗ್ರಾಮದ ಮತ್ತೊಂದು ಶಾಸನವು ಸಹ ತಿಳಿಸುತ್ತದೆ. (ARSIE BK

No.32, 1943-44) ಹಲಸೂರಿನ ಶಾಸನವು ಅಣ್ಣಿಗನು ಪಾನುಗಲ್ಲು-೫೦೦ರ ನಾಡಗಾವುಂಡನಾಗಿದ್ದಾಗ ಪೆರ್ಗ್ಗಡೆಯಾಗಿದ್ದ ಮಾರವಯ್ಯನ ಮಗನಾದ ಮೂರನು ಕಾದಾಟದಲ್ಲಿ ಊರ ಬಿಡಿಸಿದೊಡೆ ಓಂಕಾರ ಶಿವಭಟಾರನು ಈ ಶಾಸನವನ್ನು ಹಾಕಿಸಿದನೆಂಬ ವಿಚಾರವನ್ನು ಹೇಳುತ್ತದೆ. (ARIE 1945-46 B 288). ಮಂತಗಿ ಶಾಸನವು ಕುನ್ದವರ್ಮ ಎಂಬ ನಾಡ ಅರಸನನ್ನು ಉಲ್ಲೇಖಿಸಿದೆ ಈತ ಚಲ್ಲಕೇತನ ಮನೆತನದ ಮಂಡಳೇಶ್ವರ ಕುನ್ಧವರ್ಮ ಅಥವಾ ಕುಂದಟೆಯಾಗಿದ್ದಿರಬಹುದು. ಅಮೋಘವರ್ಷ ನೃಪತುಂಗನ ಕೈಕೆಳಗೆ ಆಡಳಿತ ನಡೆಸುತ್ತಿದ್ದ ಈತ ನಂತರ ಎರಡನೇ ಕೃಷ್ಣನ ಕಾಲದಲ್ಲೂ ರಾಷ್ಟ್ರಕೂಟ ಮನೆತನದ ನಿಷ್ಠೆಯನ್ನು ಉಳಿಸಿಕೊಂಡಿದ್ದ. ಕುಂದವರ್ಮನು ನಾಡನ್ನಾಳುತ್ತಿದ್ದಾಗ ಸಿರಿಗಾಮುಂಡನು ಊರನ್ನಾಳುತ್ತಿದ್ದನು. ಮನ್ತಗೆಯ ಹೋರಾಟದಲ್ಲಿ ಮಡಿದ ವೀರನಿಗೆ ಪಟ್ಟಕಲ್ಲನ್ನಿರಿಸಿದ್ದನ್ನು ದಾಖಲಿಸಿದೆ. (EI Vol. VI. No. 14 P-47-48), ಹತ್ತಿಮತ್ತೂರಿನ ಶಾಸನವು ಸುರಗೆಯೂರಿನ ದಾಸಮ್ಮ ಮತ್ತು ಎರೆಯ ಎಂಬ ಇಬ್ಬರು ವೀರರು ಊರಳಿವಿನಲ್ಲಿ ಮರಣ ಹೊಂದಿದ್ದನ್ನು ದಾಖಲಿಸಿದೆ (ಸಂಪಾದಕರು, ಡಾ. ಬಿ.ಆರ್. ಭಾರತಿ-ರಾಷ್ಟ್ರಕೂಟರ ಶಾಸನಗಳು ಸಂಪುಟ-೧, ನಂ. ೦೯) ದುಂಡಸಿಯಲ್ಲಿ ದೊರೆತ ವೀರಗಲ್ಲು ಮಹಾಸಾಮಂತ ಚಲ್ಲಕೇತನ ಎರಡನೆಯ ಕಲಿವಿಟ್ಟರಸನು ಬನವಾಸಿಯ ಕುಪ್ಪಟೂರು ನಾಡನ್ನು ಆಳುತ್ತಿದ್ದನು ಎಂದು ಹೇಳುತ್ತದೆ ಒಬ್ಬ ವೀರನ ಪತ್ನಿಗೆ (ಹೆಸರು ತಿಳಿಯುವುದಿಲ್ಲ) ಐದು ಮತ್ತರು ಜಮೀನನ್ನು ದಾನವಾಗಿ ಮೂವದಿಂಬರು ಕೊಟ್ಟದ್ದನ್ನು ತಿಳಿಸುತ್ತದೆ. ಈತನು ದುಂಡಸಿಯ ದಾಳಿಯಲ್ಲಿ ಮಡಿದನೆಂದು ಹೇಳಿದೆ. ಈಕೆಯು ತನ್ನ ಗಂಡನ ಹೆಸರಿನಲ್ಲಿ ಈ ವೀರಗಲ್ಲನ್ನು ಸ್ಥಾಪಿಸಿದಳು. (ARIE 1968-69, B 85) ಅರಳಿಕಟ್ಟೆಯ ಶಾಸನ ವೀರಪುಲಿ ಎಂಬುವವನ ಮಗನಾದ ಮಾರಮ್ಮನು ಪ್ರಾಯಶಃ ಗ್ರಾಮದ ಮೇಲೆ ನಡೆದ ದಾಳಿಯ ಸಮಯದಲ್ಲಿ ಮರಣ ಹೊಂದಿದ್ದನ್ನು ಉಲ್ಲೇಖಿಸುತ್ತದೆ. (ARIE 1958-59 B 539) ಹೀಗೆ ಹಾವೇರಿ ಜಿಲ್ಲೆಯ ಶಾಸನಗಳು ಈ ಜಿಲ್ಲೆಯಲ್ಲಿನ ಊರಳುವಿನಲ್ಲಿ ಮಡಿದ ಹಲವಾರು ವೀರರನ್ನು ಉಲ್ಲೇಖಿಸಿವೆ.

ಇತರೆ ಶಾಸನಗಳು (ಸಂಕೀರ್ಣ): ಇತರೆ ಶಾಸಸನಗಳೆಂದರೆ ಇವು ಕಲೆ, ಭಾಷೆ ಹಾಗೂ ಲಿಪಿಯ ದೃಷ್ಟಿಯಿಂದ ರಾಷ್ಟ್ರಕೂಟರ ಕಾಲದ್ದಾಗಿದ್ದು ಇವುಗಳಲ್ಲಿ ಕೆಲವು ಶಾಸನಗಳಲ್ಲಿ ರಾಜನ ಹಾಗೂ ಕಾಲದ ಉಲ್ಲೇಖವಿಲ್ಲ, ಇನ್ನು ಹಲವು ಶಾಸನಗಳಲ್ಲಿ ವೀರನು ಯಾವ ಉದ್ದೇಶಕ್ಕಾಗಿ ಮರಣ ಹೊಂದಿದ ಎಂಬುದು ಸ್ಪಷ್ಟವಾಗಿಲ್ಲ, ಕೆಲವೊಮ್ಮೆ ಇವು ವೀರನ ಹೆಸರನ್ನು ಸಹ ಉಲ್ಲೇಖಿಸದೆ ಕೇವಲ ವೀರನ ಸ್ಮರಣಾರ್ಥವಾಗಿ ಹಾಕಿಸಿರುವ ಶಾಸನ ಎಂದಷ್ಟೇ ತಿಳಿಸುತ್ತವೆ. ಮತ್ತು ಇನ್ನು ಕೆಲವು ಶಾಸನಗಳು ತೃಟಿತವಾಗಿದ್ದು ಅಪೂರ್ಣವಾಗಿವೆ. ಇಂತಹ ಸುಮಾರು ೧೮ ವೀರಗಲ್ಲು ಶಾಸನಗಳು ಹಾವೇರಿ ಜಿಲ್ಲೆಯಲ್ಲಿ ರಾಷ್ಟ್ರಕೂಟರ ಕಾಲದಲ್ಲಿ ದೊರೆತಿವೆ. ಅವುಗಳ ವಿವರ ಈ ರೀತಿಯಾಗಿದೆ. ಹಾವೇರಿ ೦೧, ಹಾನಗಲ್ಲು ೦೮, ಹಿರೇಕೆರೂರು ೦೫, ಬ್ಯಾಡಗಿ ೦೧, ರಾಣೆಬೆನ್ನೂರು ೦೧, ಬಂಕಾಪುರ ೦೨, ಒಟ್ಟು ೧೮.

ಹೀಗೆ ರಾಷ್ಟ್ರಕೂಟರ ಕಾಲದ ವೀರಗಲ್ಲುಗಳು ಆ ಕಾಲದ ವೀರರ ಹೋರಾಟ ಹಾಗೂ ಅವರ ಆತ್ಮಬಲಿದಾನವನ್ನು ಚಿತ್ರಿಸುತ್ತವೆ.

ಆಕರ ಗ್ರಂಥಗಳು

೧. ಡಾ. ಸೂರ್ಯನಾಥ ಕಾಮತ್, ಧಾರವಾಡ ಜಿಲ್ಲಾ ಗ್ಯಾಸೆಟಿಯರ್.

೨. ಡಾ. ಕಲಬುರ್ಗಿ ಎಂ.ಎಂ., ಧಾರವಾಡ ಜಿಲ್ಲಾ ಶಾಸನ ಸೂಚಿ.

೩. ಡಾ. ಬಿ.ಆರ್. ಭಾರತಿ, (ಸಂ) ರಾಷ್ಟ್ರಕೂಟರ ಶಾಸನಗಳು, ಸಂ. ೧ ಮತ್ತು ಸಂ. ೨.

೪. ಡಾ. ಚಿ.ಸಿ. ಲಿಂಗಣ್ಣ, ಕನ್ನಡ ಸಾಹಿತ್ಯ ಸಂಸ್ಕೃತಿ ಕೋಶ.

೫. ಡಾ. ಸಿ.ಯು. ಮಂಜುನಾಥ್, ಶಾಸನಗಳು ಮತ್ತು ಕರ್ನಾಟಕ ಸಂಸ್ಕೃತಿ.

೬. ಡಾ. ಎಂ. ಚಿದಾನಂದ ಮೂರ್ತಿ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ.

೭. ಡಾ. ಡಿ.ವಿ. ಪರಶಿವಮೂರ್ತಿ, ತುರುಗೋಳ್ ಸಂಕಥನ.

೮. ಸಂಪಾದಕರು ಡಾ. ಡಿ.ವಿ. ಪರಶಿವಮೂರ್ತಿ ಶಾಸನ ಅಧ್ಯಯನ ಸಂಪುಟ ೪, ಸಂಚಿಕೆ ೧.

೯. South Indian Inscriptions, vols. XI, XV, XVIII.

೧೦. Karnatak Inscriptions, vol. II.

ಕರ್ನಾಟಕದಲ್ಲಿ "ಕಳಿಂಗ" ದೇವಾಲಯ ಶೈಲಿ

ಎಂ.ಎಸ್. ಪ್ರಭಾಕರ್*

ಕರ್ನಾಟಕದಲ್ಲಿ ಕಳಿಂಗ ಶೈಲಿಯ ರಚನೆಗಳಿವೆ ಎಂಬ ಅರಿವು ಮೂಡುವುದು ವಿಜಯನಗರ ಜಿಲ್ಲೆಯ ಹೊಳಲು ಶಾಸನದಿಂದ. ಶಾಸನದ ಉಲ್ಲೇಖ ಇಂತಿದೆ:

"ಸ್ವಸ್ತಿ ಸಮಸ್ತ ಶಿವಪಾದ ಶೇಖರ ಕಲಿಯುಗ ವಿಶ್ವಕರ್ಮ
ಚೌಷಷ್ಟಿ ಕಳಾವಿದ್ಯೆ ಪ್ರವೀಣ ಚೌಷಷ್ಟಿ ಪ್ರಾಸಾದ ವಿಶಾರದ
ನಾಗರ ಕಳಿಂಗ ದ್ರಾವಿಳ ವೇಸರ ಚತುರ್ಜಾತಿ ಪ್ರಾಸಾದ ವಿನಿರ್ಮಿತ
ಸೂತ್ರಧಾರಿ ಸೋಗೆಯ ಪಾದೋಜರ ಛತ್ರ ಬೊಮ್ಮೋಜನು...."

ಶಾಸನದ ಪ್ರಕಾರ ನಾಗರ-ಕಳಿಂಗ-ದ್ರಾವಿಳ-ವೇಸರ ಎಂಬ ನಾಲ್ಕು ಪ್ರಾಸಾದ ಜಾತಿಗಳು; ಈ ಜಾತಿಗಳನ್ನೇ ವಾಸ್ತುಶೈಲಿಗಳು ಎಂದು ಗುರುತಿಸಲಾಗಿದೆ. ನಾಗರ-ದ್ರಾವಿಡ(ಳ)-ವೇಸರ ಶೈಲಿಗಳು ದಾಕ್ಷಿಣಾತ್ಯ ಸಂಪ್ರದಾಯಕ್ಕೆ ಸಂಬಂಧಿಸಿವೆ. ಕಳಿಂಗವು ಔತ್ತರೇಯ ಶೈಲಿ ಎನ್ನಲಾಗಿದೆ.

ಅಪರಾಜಿತ ಪೃಚ್ಛಾ ಗ್ರಂಥಕಾರನು "ಕಲಿಂಗದೇಶೇ ಕಲಿಂಗಂ" ಎಂದು ಹೆಸರಿಸುತ್ತಾನೆ. ಇಂದಿನ ಒರಿಸ್ಸಾ ದೇಶವೇ ಕಳಿಂಗ ದೇಶವೆನಿಸಿದ್ದು "ಕಳಿಂಗ" ಪದವು ದೇಶಸೂಚಿಯೂ ಹೌದು. ಒರಿಸ್ಸಾ ಪ್ರಾಂತ್ಯದ ವಾಸ್ತು ವಿದ್ವಾಂಸರು ಅವರ ವಾಸ್ತುಶಿಲ್ಪದ ಅಧ್ಯಯನದ ಆರಂಭದಲ್ಲಿ ಕರ್ನಾಟಕದ ಮೇಲ್ಕಂಡ ಶಾಸನವನ್ನು ತಪ್ಪದೇ ಉಲ್ಲೇಖಿಸುತ್ತಾರೆ! ಅವರ ವಾಸ್ತುಶೈಲಿಗೆ "ಕಳಿಂಗ" ಎಂಬ ಪದವನ್ನು ನೀಡಿದ ಗರಿಮೆ ಕರ್ನಾಟಕದ್ದು. ಈ ಶೈಲಿ ಕರ್ನಾಟಕದಲ್ಲಿತ್ತು ಎನ್ನಲು ಶಾಸನವು ಸಾಕ್ಷಿಯಾಗಿದೆ. ವಿದ್ವಾಂಸರು ಶಾಸನದ ಕಾಲವನ್ನು ಕ್ರಿ.ಶ. ೧೨ನೆಯ ಶತಮಾನವೆಂದು ನಿರ್ಣಯಿಸಿದ್ದಾರೆ. ಒರಿಸ್ಸಾ ಪ್ರದೇಶದಲ್ಲಿ ವಾಸ್ತುಶೈಲಿಗೆ ಸಂಬಂಧಿಸಿದಂತೆ ಈ ಪದಬಳಕೆಯಿಲ್ಲಿಲ್ಲ. ಒಟ್ಟಾರೆ ವಾಸ್ತುರಚನೆಗಳನ್ನು "ಕಳಿಂಗ ವಾಸ್ತುಶಿಲ್ಪ" ದಡಿಯಲ್ಲಿ ಗುರುತಿಸಬಹುದು. ಇಲ್ಲಿನ ವಾಸ್ತುವಿಗೆ ಸಂಬಂಧಿಸಿದಂತೆ ಕೆಲವು ಪ್ರಾಚೀನ ಗ್ರಂಥಗಳೂ ಲಭ್ಯ. ಅವು ಪ್ರಾದೇಶಿಕ ವ್ಯಾಪ್ತಿಯುಳ್ಳದ್ದು. ಇವುಗಳಲ್ಲಿ "ಶಿಲ್ಪ ಪ್ರಕಾಶ" ಎಂಬ ಗ್ರಂಥ ಹೆಚ್ಚು ಮನ್ನಣೆ ಗಳಿಸಿದೆ. ಈ ಗ್ರಂಥವೂ ೧೧-೧೨ನೆಯ ಶತಮಾನದಲ್ಲಿ ರಚನೆಗೊಂಡದ್ದು. ಕರ್ನಾಟಕದ ಶಾಸನವೂ ಸಮಕಾಲೀನ ಎನ್ನಬಹುದು. ಈ ಗ್ರಂಥದಲ್ಲಿ ಮಯ ಮತ್ತು ವಿಶ್ವಕರ್ಮ ಪ್ರಣೀತ ಪ್ರತ್ಯೇಕ ಸಂಪ್ರದಾಯಗಳಿವೆ ಎಂದು ಹೇಳಲಾಗಿದೆ; ಅದನ್ನು ಬೇರ್ಪಡಿಸುವುದೂ ಅಸಾಧ್ಯ ಎನ್ನಲಾಗಿದೆ!

ಒರಿಸ್ಸಾ ಮೂಲದ ದೇವಾಲಯಗಳನ್ನು "ದೇವುಲ್" ಎಂದು ಹೆಸರಿಸುತ್ತಾರೆ. ಈ ಪದ ನಮ್ಮ ಕರಾವಳೀ ಮೂಲದ "ದೇವಳ" ಪದಕ್ಕೆ ಹತ್ತಿರ! ಇಲ್ಲಿಯ ದೇವಾಲಯಗಳ ಶಿಖರ ಸ್ವರೂಪವನ್ನಾಧರಿಸಿ ರೇಖಾ, ಪೀಢಾ ಮತ್ತು ಖಾಖರ ದೇವುಲ್ ಎಂದು ಗುರುತಿಸುತ್ತಾರೆ. ಕೆ.ವಿ. ಸೌಂದರರಾಜನ್ ಅವರು ಬಾಗಿದ ಶಿಖರಕ್ಕೆ ಬಳಸಿದ "ರೇಖಾ ನಾಗರ" ಪದ, ಒರಿಸ್ಸಾ ಮೂಲದ್ದು ಎನ್ನುವುದು ಖಚಿತ. ಮೂಲಗರ್ಭಗೃಹವು ಬಾಗಿದ ಶಿಖರವನ್ನು ಪಡೆದಿದ್ದಲ್ಲಿ "ರೇಖಾ ದೇವುಲ್"; ಇದರ ಮುಂದಿರುವ ರಚನೆ "ಪೀಢಾ ದೇವುಲ್" ಪೀಢಾ ರಚನೆಗೆ ಕರ್ನಾಟಕದ ಫಾಂಸನಾ ಶೈಲಿ ಮೂಲ ಎನ್ನಿಸಿದೆ. ಇದು ಪಿರಮಿಡ್ ಅಥವಾ ವಿಮಾನ ಮಾದರಿ ಶಿಖರವನ್ನು ಪಡೆದಿದೆ. ರೇಖಾ ಮತ್ತು ಪೀಢಾ ದೇವುಲ್‌ಗಳು ಕರ್ನಾಟಕದಲ್ಲಿ ಕಂಡ ಗರ್ಭಗೃಹ ಮತ್ತು ನವರಂಗ ಅಥವಾ ರಂಗಮಂಟಪಗಳ ಸ್ಥಾನ ಆಕ್ರಮಿಸಿವೆ. ಪೀಢಾ ದೇವುಲ್ ರಚನೆಯ ಮೇಲ್ಭಾಗದಲ್ಲಿ ಶಿಖರ, ಕಳಶ ರಚನೆ ಒರಿಸ್ಸಾ ದೇಶದಲ್ಲಿದೆ.

* 'ಪದ್ಮಪ್ರಭಾ', ನಂ. ೪೨, ಬ್ಲಾಕ್-೧೭, ಶ್ರೀರಾಮಪುರ, ೨ನೇ ಹಂತ, ಮೈಸೂರು-೫೭೦೦೨೩.

ರೇಖಾ ದೇವುಲ್‌ಗೆ "ಬಡಾ ದೇವುಲ್" ಎಂಬ ಪರ್ಯಾಯ ಪದವೂ ಉಂಟು. ಗರ್ಭಗೃಹದ ಮುಂದಿರುವ ಪೀಢಾ ರಚನೆಯೇ ಜಗಮೋಹನ. ಭಕ್ತರು ದೇವರ ಸಂದರ್ಶನಕ್ಕಾಗಿ ಸೇರುವುದು ಜಗಮೋಹನ ಭಾಗದಲ್ಲಿ. ಇವೆರಡರ ನಂತರ ಕಾಣುವ ನಾಟ್ಯಮಂದಿರ ಹಾಗೂ ಭೋಗಮಂದಿರಗಳು ಐಚ್ಛಿಕ.

ಖಾಖರ ದೇವುಲ್‌ಗಳು ಕಡಿಮೆ ಸಂಖ್ಯೆಯಲ್ಲಿದ್ದು, ಈ ಶಿಖರಗಳು ದೇವಿಮಂದಿರಗಳಿಗೆ ಸೀಮಿತ. ಖಾಖರವು ದೋಣಿಯಾಕಾರದ ಶಿಖರವುಳ್ಳದ್ದು. ಇವನ್ನು ವೈತಲ್ ದೇವುಲ್ ಎಂದೂ ಹೆಸರಿಸುತ್ತಾರೆ. "ವೈತಾ" ಎಂದಲ್ಲಿ ಕವುಚಿದ ದೋಣಿಯಾಕಾರ; ಇವು ಶಾಲಾಕಾರ ಶಿಖರಕ್ಕೆ ಸಮೀಪ. ಇದರೊಂದಿಗಿರುವ ಅಲಂಕಾರಿಕ ಪೂರಕ ರಚನೆಗಳು ನಾಸಿ, ಕೂಟ, ಶಾಲಾಗಳನ್ನು ಅನುಕರಿಸಿವೆ. ಭುವನೇಶ್ವರದಲ್ಲಿ ಈ ರೀತಿಯ ಐದು ದೇವಾಲಯಗಳನ್ನು ಕಾಣಬಹುದು.

ಭುವನೇಶ್ವರದಲ್ಲಿ ಅತಿ ಪ್ರಾಚೀನವೆಂದು ಗುರುತಿಸಲಾಗಿರುವುದು ಪರಶುರಾಮೇಶ್ವರ ದೇವಾಲಯ. ಇದರ ಜಗಮೋಹನದಲ್ಲಿ ಕಂಡ ಕಿರು ಶಾಸನಗಳ ಲಿಪಿಯನ್ನು ಆಧರಿಸಿ ಇದರ ಕಾಲವನ್ನು ಕ್ರಿ.ಶ. ೬೫೦ ಎಂದು ನಿರ್ಧರಿಸಲಾಗಿದೆ. ಈ ದೇವಾಲಯದ ಗರ್ಭಗೃಹವೇ ಬಾಗಿದ ಶಿಖರವುಳ್ಳ ರೇಖಾ ದೇವುಲ್; ಮುಂಭಾಗದಲ್ಲಿ ಆಯತಾಶ್ರ ರಚನೆಯ ಪೀಢಾ ದೇವುಲ್. ಈ ಜಗಮೋಹನ ರಚನೆಗೆ ಶಿಖರವಿಲ್ಲ. ಇದರ ಛಾದ್ಯರಚನೆ ಕರ್ನಾಟಕದ ದೇವಾಲಯಗಳನ್ನು ಅನುಕರಿಸುತ್ತದೆ. ಕ್ರಿ.ಶ. ೧೮೯೨ರಲ್ಲಿ ತೆಗೆದ ಈ ದೇವಾಲಯದ ಛಾಯಾಚಿತ್ರ ಲಭ್ಯವಿದೆ! ಗರ್ಭಗೃಹದ ಶಿಖರವು ಪಂಚಭೂಮಿ ರಚನೆ. ಶಿಖರವನ್ನು "ಗಂಡೀ" ಎಂದು ಗುರುತಿಸುತ್ತಾರೆ. ಇದು ೨೦ ಕಪೋತ ಖಂಡಗಳಿಂದ ಕೂಡಿದ್ದು ಪ್ರತಿ ನಾಲ್ಕು ಕಪೋತ ಖಂಡಗಳಿಗೆ ಒಂದು ಭೂಮಿ. ಪ್ರತಿಭೂಮಿಯ ಮೇಲ್ತುದಿಯಲ್ಲಿ ಕರ್ಣ ಭಾಗದಲ್ಲಿ ಭೂಮಿಆಮ್ಲವಿದೆ. ಇತರೆ ಕಪೋತಗಳ ಅಂಚಿನಲ್ಲಿ ನಾಸಿಕಾಲಂಕಾರವಿದೆ. ಶಿಖರದ ಮೇಲ್ತುದಿ ಒಳಕ್ಕೆ ಬಾಗಿದ್ದು"ಬಿಸಮ" ಎಂದು ಹೆಸರು. ನಂತರ ಕಂಠ, ಆಮಲಸಾರ, ಪದ್ಮ (ಖಾಪುರಿ), ಕಳಶ ರಚನೆಗಳು. ಗರ್ಭಗೃಹದ ತಲಚ್ಛಂದ ಪಂಚಾಂಗ ಅಥವಾ ಪಂಚರಥ. ಶಿಖರದ ಪೂರ್ವಭಾಗದಲ್ಲಿ, ಮಧ್ಯದ ಭದ್ರ ಅಥವಾ ರಾಹಭಾಗದಲ್ಲಿ ಮಹಾನಾಸಿಯಂತೆ ಎತ್ತರದ ಎರಡು ಅಲಂಕೃತ ಉಬ್ಬು ನಾಸೀ ರಚನೆಗಳು. ಶಿಖರದ ಮೇಲ್ತುದಿಯಲ್ಲಿ ಕಂಡ ಆಮಲಸಾರ, ಕರ್ನಾಟಕದಲ್ಲಿ ಕಂಡ ದುಂಡಗಿರುವ ಆಮಲಕದ ವಿಕಸಿತ ರೂಪ. ಇದು ಕೊಂಚ ಚಪ್ಪಟೆಯಾದ ರೂಪವೆನಿಸಿದೆ.

ಗರ್ಭಗೃಹದ ಮುಂದಿರುವ ಜಗಮೋಹನದ ಛಾವಣಿಯಲ್ಲಿ ಎರಡು ಹಂತದ ಛಾದ್ಯವಿದೆ. ಮಧ್ಯದಲ್ಲಿ ಸಮತಲಛಾದ್ಯ, ಸುತ್ತ ಇಳಿಜಾರು ಛಾದ್ಯ. ಇವನ್ನು ದಂಡಛಾದ್ಯ ಹಾಗೂ ಮಲ್ಲಛಾದ್ಯ ಎಂದು ಗ್ರಂಥಗಳು ಹೆಸರಿಸುತ್ತವೆ. ಛಾದ್ಯದ ಕಲ್ಲಿನ ಹಲಗೆಗಳು ಕೂಡುವೆಡೆಯಲ್ಲಿ ಒಳಗೆ ನೀರು ಸೋರದಂತೆ ನೀಳವಾದ ಪಟ್ಟಿಕೆಗಳನ್ನು ಮೇಲೆ ಜೋಡಿಸಿದ್ದರು. ಈಗ ಈ ಪಟ್ಟಿಕೆಗಳಿಲ್ಲ. ಈ ರೀತಿಯ ರಚನೆ ಐಹೊಳೆಯ ಲಾಡ್‌ಖಾನ್ ದೇಗುಲದಲ್ಲಿದೆ. ಬಾದಾಮಿ ಚಲುಕ್ಯರ ಹಲವು ಪ್ರಾಚೀನ ರಚನೆಗಳಲ್ಲಿ ಇಂದಿಗೂ ಇದೆ. ಪರಶುರಾಮೇಶ್ವರ ದೇವಾಲಯವನ್ನು ಕಳಿಂಗ ಶೈಲಿಯ ಮಾದರೀ ರಚನೆ ಎಂದು ಪರಿಗಣಿಸಬೇಕು. ಈ ಹಿನ್ನೆಲೆಯಲ್ಲಿ ಕರ್ನಾಟಕದಲ್ಲಿ ಕಂಡ ಈ ಶೈಲಿಯನ್ನು ಗುರುತಿಸಬೇಕು. ಇದನ್ನು ವಿವಿಧ ಹಂತಗಳಲ್ಲಿ ಗುರುತಿಸಲು ಸಾಧ್ಯ.

ಕೆಲವು ಶೈಲಿಗಳು ಆರಂಭಿಕ ರಚನೆಗಳಿಗೆ ಮಹಾಕೂಟದ ಪರಿಸರವೇ ಆಡುಂಬೋಲ. ಕಳಿಂಗ ಶೈಲಿಯೊಂದಿಗೆ, ಆಮಲಕವೂ ಅರಳಿದೆ. ಭುವನೇಶ್ವರದಲ್ಲಿ ಕಂಡ ಆಮಲಸಾರದ ಮೂಲರೂಪ ಆಮಲಕ. ಆಮಲಕವು ಕಳಶಕ್ಕೆ ಪರ್ಯಾಯವೆಂದೇ ಗುರುತಿಸಬಹುದು. ಈಗಿರುವ ಕಳಶವೂ ತದನಂತರ ಕಾಲದಲ್ಲಿ ಸೇರ್ಪಡೆಯಾಯಿತು ಎನ್ನಬಹುದು. ಕ್ರಿ.ಶ. ೫೯೫ರ ಮಹಾಕೂಟದ ಸ್ತಂಭ ಶಾಸನದೊಂದಿಗೆ ಆಮಲಕವೂ ಪ್ರಕಟಗೊಂಡಿದ್ದು, ಕಳಿಂಗ ಶೈಲಿ ಇದಕ್ಕೂ ಪೂರ್ವದ್ದು ಎನ್ನಬಹುದು.

ಕಳಿಂಗ ಶೈಲಿಯ ವಿವಿಧ ಹಂತಗಳು ಮಹಾಕೂಟ, ಪಟ್ಟದಕಲ್ಲು, ಐಹೊಳೆಗಳಲ್ಲಿ ಬೆಳೆದು ಉತ್ತರ ಭಾರತಕ್ಕೆ ವಿಸ್ತರಿಸಿದೆ ಎಂದು ನಿರ್ಣಯಿಸಲಾಗಿದೆ. ಆರಂಭಿಕ ಏಕಭೂಮಿ, ತ್ರಿಭೂಮಿ ರಚನೆಗಳು ಮಹಾಕೂಟದಲ್ಲಿವೆ. ಸರಳವೆನಿಸುವ ಏಕಭೂಮಿ ರಚನೆ ಫಾಂಸನಾ ಶಿಖರದಿಂದ ಅರಳಿದೆ. ಫಾಂಸನಾ ಮೂಲವನ್ನೂ ಮಹಾಕೂಟದಲ್ಲಿ ಗುರುತಿಸಬಹುದು.

ಆರಂಭಿಕ ಫಾಂಸನಾ ಶೈಲಿಯ ಎರಡು ರಚನೆಗಳು ಮಹಾಕೂಟದಲ್ಲಿ ಪುಷ್ಕರಿಣಿಯ ಪೂರ್ವ ದಿಕ್ಕಿನಲ್ಲಿ ಪ್ರಾಕಾರ ಭಿತ್ತಿಯ ಸಮೀಪದಲ್ಲಿದೆ. ಇವೆರಡೂ ಗರ್ಭಗೃಹ ಹಾಗೂ ಮುಖಮಂಟಪಗಳನ್ನು ಹೊಂದಿದ್ದು ಕಕ್ಷಾಸನವನ್ನೂ ಪಡೆದಿವೆ. ತುಸು ಎತ್ತರದ ರಚನೆಗಳು. ಶಿಖರದಲ್ಲಿ ಕಂಠ, ಕಪೋತ ರಚನೆಗಳು ಒಂದರ ಮೇಲೊಂದರಂತೆ ಸಾಗಿ ಕಳಶ ರಚನೆಯೊಂದಿಗೆ ಕೊನೆಗೊಂಡಿದೆ. ಕಪೋತದ ಮೇಲೆ ಅಲಂಕಾರವಿಲ್ಲದ ಉಬ್ಬು ರಚನೆಗಳಿವೆ. ಇವು ಮುಂದಿನ ಹಂತಗಳಲ್ಲಿ ನಿಯತ ಅಂತರದಲ್ಲಿ ನಾಸೀ ಅಲಂಕಾರಕ್ಕೆ ಅವಕಾಶ ಮಾಡಿಕೊಟ್ಟಿದೆ. ಕಂಠಭಾಗದಲ್ಲಿ ಅಣುಕು ಭಿತ್ತಿಯಂತೆ ಅಲಂಕಾರವನ್ನು

ಕಡೆದಿದ್ದಾರೆ. ಇಲ್ಲಿ ಸರಳ ಬೋದಿಗೆಯುಳ್ಳ ಕಂಭಗಳನ್ನೂ, ಮಧ್ಯೆ ಭಿತ್ತಿ ಅಥವಾ ಜಾಲಂದ್ರ ಜೋಡಿಸಿದಂತಿದೆ. ಶಿಖರಗಳು ಸಮಚತುರಶ್ರ ರಚನೆಗಳು. ಕಿರಿದಾಗುತ್ತಾ ಸಾಗುವ ೩-೪ ಕಪೋತಗಳು, ನಂತರ ವೇದಿ; ತುದಿಯಲ್ಲಿ ಕಳಶ, ಎರಡೂ ಶಿಖರಗಳ ಮೇಲಿರುವ ಕಳಶ ಒಂದೇ ರೀತಿಯದು. ಕಳಶಗಳಲ್ಲಿ ಎರಡು ಹಂತ; ವೃತ್ತಾಕಾರದ ಕೆಳಭಾಗ ಕುಂಭದಂತಿದ್ದು ಸುತ್ತ ಸೀಳು ಮುಖವಿದೆ. (xibbed feature) ಮೇಲ್ಭಾಗ ಚೌಕದ್ದು. ಎರಡೂ ಭಾಗಗಳನ್ನು ಪ್ರತ್ಯೇಕಿಸಿದಲ್ಲಿ ಕೆಳಭಾಗವನ್ನು ಆಮಲಕವೆಂದೂ, ಮೇಲಿನ ಭಾಗವನ್ನು ಘಂಟಾ ಎಂದು ಸಮೀಕರಿಸಬಹುದು!

ಏಕಭೂಮಿ ರಚನೆ

ಕಳಿಂಗ ಶೈಲಿಯ ಏಕಭೂಮಿ ರಚನೆ, ಮಹಾಕೂಟೇಶ್ವರ ದೇವಾಲಯದ ಆಗ್ನೇಯಕ್ಕೆ ನಂದಿ ಮಂಟಪದ ದಕ್ಷಿಣಕ್ಕಿದೆ. ಇದು ಒಂದು ಪುಟ್ಟ ದೇವಾಲಯ. ಸರಳ ಚತುರಶ್ರ ರಚನೆ. ಸರಳ ಪೀಠ, ಜಂಘಾ, ಛಾದ್ಯದ ನಂತರ ಶಿಖರದಲ್ಲಿ ಮೂರು ಕಪೋತ ಖಂಡಗಳು; ಕಪೋತ ಖಂಡಗಳ ನಡುವೆ ಕಿರಿದಾದ ಕಂಠ. ಜಂಘಾ ಭಾಗದಲ್ಲಿ ಮಧ್ಯೆ ಭದ್ರದಂತೆ ಕೊಂಚ ಉಬ್ಬಿದ್ದು ಎರಡು ಸ್ತಂಭಿಕೆಗಳ ನಡುವೆ ಗುಹಾಭಾಗದಲ್ಲಿ ಸ್ಥಾನಕ ಶಿಲ್ಪ. ಸ್ತಂಭಿಕೆಗಳ ಮೇಲೆ ನಾಸೀಪಂಜರ. ಶಿಖರ ಭಾಗದಲ್ಲಿ ಕರ್ಣ ಭದ್ರಗಳಿರದೆ ಸಮಚತುರಶ್ರ ರಚನೆ. ಕಪೋತ ಖಂಡಗಳ ಮಧ್ಯೆ ನಾಸಿ; ನಾಸಿಯಿಂದ ಎರಡೂ ಕಡೆ ಗೆರೆ ಎಳೆದಂತೆ ಪಟ್ಟಿಕೆಗಳು ಅಂಚಿನವರೆಗೆ ವಿಸ್ತರಿಸಿವೆ. ಅಂಚಿನಲ್ಲಿ ಅರ್ಧನಾಸೀ. ಮೂರು ಕಪೋತ ಖಂಡಗಳ ನಂತರ ಕೊಂಚ ಮುಕ್ಕಾದ ವೇದಿ. ವೇದಿಯ ಮೇಲೆ ಆಮಲಕ. ಈ ಆಮಲಕ ಫಾಂಸನಾ ಶಿಖರದಲ್ಲಿ ಕಂಡ ಕಳಶದ ವಿಕಸಿತ ರೂಪ ಎಂದು ಖಚಿತವಾಗಿ ಹೇಳಬಹುದು. ಈ ದೇವಾಲಯದಲ್ಲಿ ಕಂಡ ನಾಸಿ, ಅರ್ಧನಾಸಿ ಹಾಗೂ ಆಮಲಕಗಳು ಕಳಿಂಗ ಶೈಲಿ ಎಂದು ಗುರುತಿಸುವಲ್ಲಿ ನಿರ್ಣಾಯಕವೆನಿಸಿವೆ. ಈ ದೇವಾಲಯದ ಪೂರ್ವಕ್ಕೆ ಇದಕ್ಕಿಂತ ಕೊಂಚ ಎತ್ತರವಾದ ಫಾಂಸನ ಶೈಲಿಯ ದೇವಾಲಯವಿದೆ. ಇದರ ತುದಿಯಲ್ಲಿಯೂ ಆಮಲಕವಿದೆ. ಈವರೆಗೆ ವಿವರಿಸಿದ ಫಾಂಸನ ಮತ್ತು ಕಳಿಂಗ ರಚನೆಗಳು ಕ್ರಿ.ಶ. ೬೦೦ಕ್ಕೆ ಮುನ್ನ ಆವಿಷ್ಕಾರಗೊಂಡಿದೆ ಎಂದು ಹೇಳಲು ಸಾಧ್ಯ.

ತ್ರಿಭೂಮಿ ರಚನೆಗಳು

ಕಳಿಂಗ ಶೈಲಿಯಲ್ಲಿ ತ್ರಿಭೂಮಿ ರಚನೆಗಳೇ ಕರ್ನಾಟಕದಲ್ಲಿ ಹೆಚ್ಚು ಲಭ್ಯ. ಮಹಾಕೂಟ, ಐಹೊಳೆ, ಪಟ್ಟದಕಲ್ಲುಗಳಲ್ಲಿ ಹಲವು ದೇವಾಲಯಗಳಿವೆ. "Stylistic evolution does not always follow straight linear path" ಎಂಬ ವಿದ್ವಾಂಸರ ಉದ್ಗಾರವಿದೆ. ನಿಜ; ವಿಕಾಸ ನೇರ ಹಾದಿಯನ್ನು ಕಾಣುವುದು ಕಷ್ಟಸಾಧ್ಯ. ಆದರೆ ಕಾಲಾನುಕ್ರಮಣಿಕೆಯಲ್ಲಿ ಹೇಳಲಾಗದಿದ್ದಲ್ಲಿ ಸರಳ ರೇಖೆಯ ನೇರಹಾದಿಯನ್ನು ಗುರುತಿಸಲು ಪ್ರಯತ್ನಿಸಬೇಕು. ಗತ್ಯಂತರವಿಲ್ಲ.

ತ್ರಿಭೂಮಿ ರಚನೆಗಳಲ್ಲಿ ಮೊದಲಿಗೆ ಮಹಾಕೂಟದ ಸಂಗಮೇಶ್ವರ, ಮಹಲಿಂಗ ದೇವಾಲಯಗಳು. ನಂತರ ಐಹೊಳೆಯ ಹುಚ್ಚುಮಲ್ಲಿ ಗುಡಿ, ಚಕ್ರಗುಡಿ, ಹುಚ್ಚಪ್ಪಯ್ಯನ ಗುಡಿ ಮತ್ತು ತಾರಬಸಪ್ಪನ ಗುಡಿಗಳು. ಕೊನೆಯಲ್ಲಿ ಪಟ್ಟದಕಲ್ಲಿನ ಜಂಬುಲಿಂಗ, ಕಾಡುಸಿದ್ದೇಶ್ವರ, ಪಾಪನಾಥ ದೇವಾಲಯಗಳು. ತ್ರಿಭೂಮಿಗಳೊಂದಿಗೆ ಶುಕನಾಸ, ವೇದೀ ರಚನೆಯನ್ನೂ ಗುರುತಿಸಬಹುದಾಗಿದ್ದು ಬೆಳವಣಿಗೆಯಲ್ಲಿ ಇವು ಗಮನಾರ್ಹ ಪಾತ್ರವಹಿಸುತ್ತವೆ.

ಮಹಾಕೂಟದ ಸಂಗಮೇಶ್ವರ, ಮಹಲಿಂಗ ದೇವಾಲಯಗಳು ಪುಷ್ಕರಿಣಿಯ ಎಡಭಾಗ ಹಾಗೂ ಹಿಂಭಾಗದಲ್ಲಿವೆ. ಎರಡೂ ರಚನೆಗಳಲ್ಲಿ ಗರ್ಭಗೃಹ ಹಾಗೂ ಮುಖಮಂಟಪಗಳಿವೆ. ಮುಖಮಂಟಪದಲ್ಲಿ ಕಕ್ಷಾಸನದ ಒರಗು ಭಾಗವನ್ನು ಕಾಣಬಹುದು. ಈ ದೇವಾಲಯಗಳಲ್ಲಿ ಬಾಗಿದ ಶಿಖರವಿದ್ದು, ರೇಖಾ ಶಿಖರ ಎಂದು ಗುರುತಿಸಲಾಗಿದೆ. ಪರಶುರಾಮೇಶ್ವರದಲ್ಲಿ ಗುರುತಿಸಿದ "ರೇಖಾ ಡುಯಲ್" ಇದಕ್ಕೆ ಮೂಲವೆನ್ನಬಹುದು. ಏಕಭೂಮಿ ರಚನೆ ಕಿರಿದಾದ್ದರಿಂದ ಇದು ರೇಖಾ ಮಾದರಿಯೇ ವಿಮಾನ ಮಾದರಿಯೇ ಎಂಬ ಜಿಜ್ಞಾಸೆ ಇತ್ತು. ತ್ರಿಭೂಮಿ ರಚನೆಯಲ್ಲಿ ರೇಖಾ ಮಾದರಿಯೆಂದು ಸ್ಪಷ್ಟವಾಗಿ ಹೇಳಬಹುದು. ಈ ಶಿಖರಗಳು ಹೆಚ್ಚು ಭಾರವಿದ್ದು, ಇದರ ಕೆಳಗಿರುವ ಛಾದ್ಯದ ಹರಹು ದೊಡ್ಡದು. ಇದನ್ನು ವರಂಡಿಕಾ ಎಂದು ಗುರುತಿಸಲಾಗಿದೆ. ಆನೆಯ ಮೇಲೆ ಅಂಬಾರಿಯನ್ನು ಕೂರಿಸುವಾಗ ಜೋಡಿಸುವ ಗಾದಿಯಂತೆ (cushion - ವರಂಡಕ) ಛಾದ್ಯವಿದೆ.

ಗರ್ಭಗೃಹವು ತ್ರಯಂಗ ತಲಚ್ಛಂದವುಳ್ಳದ್ದು. ಕರ್ಣ-ಭದ್ರ-ಕರ್ಣಗಳಿದ್ದು, ಭದ್ರವು ಮುಂಚಾಚಿದೆ. ಶಿಖರ ಭಾಗದಲ್ಲಿ ಒಂಬತ್ತು ಕಪೋತ ಖಂಡಗಳು. ೩-೬-೯ರ ಕರ್ಣಭಾಗದಲ್ಲಿ ಭೂಮಿಆಮ್ಲ ಅಥವಾ ಕರ್ಣಾಮಲಕವಿದೆ. ಇತರ ಕಪೋತ ಖಂಡಗಳ ಕರ್ಣ ಹಾಗೂ ಭದ್ರಭಾಗದಲ್ಲಿ ಮಧ್ಯೆ ನಾಸೀ; ಇಕ್ಕೆಲಗಳಲ್ಲಿ ಅರ್ಧನಾಸೀ ರಚನೆಗಳಿವೆ. ಮಧ್ಯದ ಭದ್ರಭಾಗದ

ನಾಸೀ ಪಾರ್ಶ್ವಗಳಲ್ಲಿ ಎರಡೆರಡು ಅರ್ಧನಾಸಿ ಇದ್ದು, ಮೇಲ್ತುದಿಯ ಭದ್ರ ಭಾಗದಲ್ಲಿ ತುಸು ಎತ್ತರದ ನಾಸಿಯನ್ನು ಕಂಡರಿಸಿದ್ದಾರೆ. ಇದರ ಅಕ್ಕಪಕ್ಕದಲ್ಲಿ ಅರ್ಧನಾಸಿ ಇಲ್ಲ. ಅದರ ಕೆಳಗಿನ ಎರಡು ಕಪೋತ ಖಂಡಗಳಲ್ಲಿ ನಾಸಿಯೊಂದಿಗೆ ಒಂದೊಂದೇ ಅರ್ಧನಾಸಿ.

ಶಿಖರದ ಮೇಲೆ ಚತುರಶ್ರ ವೇದಿ; ನಂತರ ಕಂಠ, ಆಮಲಕಗಳಿವೆ. ಶಿಖರದ ಮುಂದೆ ಶುಕನಾಸ ರಚನೆ ಇತ್ತು ಎಂಬ ಕುರುಹನ್ನು ಸಂಗಮೇಶ್ವರದಲ್ಲಿ ಕಾಣಹುದು. ಮಹಾಲಿಂಗ ದೇವಾಲಯದಲ್ಲಿ ಶುಕನಾಸದ ಮುಂಚಾಚು ಇದೆ. ಆದರೆ, ಅದರ ಮುಂದಿರಬೇಕಾದ ನಾಸೀಫಲಕವಿಲ್ಲ. ಕಳಿಂಗ ಶೈಲಿಯ ರೇಖಾ ಮಾದರಿ ಶಿಖರದ ಸ್ವರೂಪ ಇಲ್ಲಿ ಖಚಿತವಾಗುತ್ತದೆ! ಔತ್ತರೇಯ ಮತ್ತು ದಾಕ್ಷಿಣಾತ್ಯ, ಎರಡೂ ಸಂಪ್ರದಾಯದಲ್ಲಿ ವೇದಿ, ಶುಕನಾಸ ರಚನೆಗಳು ಕರ್ನಾಟಕದಲ್ಲಿ ಬಳಕೆಗೊಂಡವು ಎಂದು ಗಮನಿಸಬಹುದು.

ಐಹೊಳೆಯಲ್ಲಿ ಕಂಡ ದೇವಾಲಯಗಳನ್ನು ಈಗ ಪರಿಶೀಲಿಸಬಹುದು. ಮೊದಲಿಗೆ ಹುಚ್ಚುಮಲ್ಲಿ ಗುಡಿ. ಇದೊಂದು ಆಯತಾಶ್ರ ರಚನೆ, ಗರ್ಭಗೃಹದ ಸುತ್ತ ಅಲಿಂದ. ಅಲಿಂದವನ್ನು ಆವರಿಸಿದಂತೆ ಭಿತ್ತಿ. ಗರ್ಭಗೃಹದ ಹಿಂದೆ, ಅಕ್ಕಪಕ್ಕಗಳಲ್ಲಿ ಭಿತ್ತಿಯಲ್ಲಿ ಗಾಳಿ ಬೆಳಕಿಗಾಗಿ ಕಿರುಗವಾಕ್ಷಗಳಿವೆ. ಮುಂಭಾಗದಲ್ಲಿ ಕಕ್ಷಾಸನವುಳ್ಳ ಮುಖಮಂಟಪ. ಕೆಳಗಿಳಿಯಲು ಸೋಪಾನಗಳು. ಗರ್ಭಗೃಹದ ಮುಂಭಾಗದಲ್ಲಿ ನವರಂಗದಂತಹ ರಚನೆ; ಆದರೆ ಸ್ಪಷ್ಟವಿಲ್ಲ. ಛಾದ್ಯ ರಚನೆಯು ಮಧ್ಯೆ ಸಮತಲ ದಂಡಛಾದ್ಯ. ಸುತ್ತ ಇಳಿಜಾರು ಮಲ್ಲಛಾದ್ಯ. ದಂಡಛಾದ್ಯದ ಮೇಲೆ, ಹಲಗೆಗಳು ಕೂಡುವೆಡೆಯಲ್ಲಿ ದಿಂಡುಗಳಿವೆ. ಗರ್ಭಗೃಹದ ಮೇಲೆ ರೇಖಾಮಾದರಿಯ ತ್ರಿಭೂಮಿಯುಳ್ಳ ಶಿಖರ. ಒಂಬತ್ತು ಕಪೋತ ಖಂಡಗಳು. ತ್ರಯಂಗ ರಚನೆ, ೩, ೬, ೯ರಲ್ಲಿ ಕರ್ಣಾಮಲಕಗಳು. ಉಳಿದೆಡೆ ನಾಸೀ, ಅರ್ಧನಾಸೀ ರಚನೆಗಳು. ನಾಸೀ, ಅರ್ಧ ನಾಸೀ ಕಂಡರಣೆಗಳು ಸಂಗಮೇಶ್ವರ ದೇವಾಲಯದಂತೆಯೇ ಇದೆ. ದೇವಾಲಯದ ಒಟ್ಟು ಆಕಾರಕ್ಕೆ ಹೋಲಿಸಿದಾಗ ಶಿಖರ ಪುಟ್ಟದೆನಿಸಿದರೂ ಚೆನ್ನಾಗಿದೆ. ಶಿಖರದ ಮೇಲಿದ್ದ ಆಮಲಕ ಕಳಚಿಬಿದ್ದಿತ್ತು. ಈಗ ಪುನಃ ಜೋಡಿಸಿದ್ದಾರೆ. ಶಿಖರದ ಮುಂಭಾಗದಲ್ಲಿ ಶುಕನಾಸ; ಮುಂಭಾಗದಲ್ಲಿ ನಾಸೀಫಲಕ. ನಾಸೀಫಲಕದಲ್ಲಿ ನಾಟ್ಯ ಶಿವನಿದ್ದಾನೆ. ದೇವಾಲಯದ ಹೊರಗೋಡೆಯಲ್ಲಿ ವಿಜಯಾದಿತ್ಯನ ಕಾಲದ ಕ್ರಿ.ಶ. ೭೦೮ರ ದಾನ ಶಾಸನವಿದೆ. ದೇವಾಲಯ ಇದಕ್ಕೂ ಮುನ್ನ ನಿರ್ಮಾಣ ಎಂದಷ್ಟೇ ಹೇಳಬಹುದು. ಈ ಕಾಲಕ್ಕಾಗಲೇ ಕಳಿಂಗ ಶೈಲಿ ಖಚಿತ ರೂಪ ಪಡೆದಿತ್ತು.

ಮುಂದಿನ ಹಂತದಲ್ಲಿ ಚಕ್ರಗುಡಿಯನ್ನು ಗುರುತಿಸಬಹುದು. ಗರ್ಭಗೃಹವು ಆಯತಾಕಾರ ರಚನೆಯಿಂದ ಹಿಂಸರಿದು ಪ್ರತ್ಯೇಕಗೊಂಡಿದೆ. ಗರ್ಭಗೃಹದ ಮೇಲೆ ತ್ರಿಭೂಮಿಯ ಶಿಖರ ರಚನೆ. ಶಿಖರ ಲಕ್ಷಣಗಳು ಮಹಾಕೂಟದ ಸಂಗಮೇಶ್ವರ ದೇವಾಲಯವನ್ನು ಅನುಸರಿಸುತ್ತದೆ. ಶಿಖರದ ಮೇಲೆ ಕಂಠ, ಆಮಲಕ. ಆಮಲಕದೊಂದಿಗೆ ಕಳಶವೂ ಜೋಡಣೆಗೊಂಡಿದೆ. ಗರ್ಭಗೃಹದ ಮುಂದಿರುವ ಶಾಲಾರಚನೆ ನವರಂಗ ರಚನೆಯ ಹಂತವೆಂದೇ ಪರಿಗಣಿಸಬೇಕು. ಗರ್ಭಗೃಹದ ಹೊರಭಿತ್ತಿಯಲ್ಲಿ ಭದ್ರ ಭಾಗದಲ್ಲಿ ಎರಡೆರಡು ಸ್ತಂಭಿಕೆಗಳಿವೆ. ಮಧ್ಯೆ ತೆರವಾದ ಗುಹಾಭಾಗ. ಕರ್ಣಭಿತ್ತಿಯ ಮಧ್ಯೆ ನಾಸೀ ಪಂಜರಾಲಂಕಾರ. ಈ ದೇವಾಲಯಕ್ಕೆ ಸಂಬಂಧಿಸಿದ ಶಾಸನವನ್ನು ಡಾ. ಶ್ರೀನಿವಾಸ ಪಾಡಿಗಾರ ಅವರು ಗುರುತಿಸಿದ್ದಾರೆ; ಇದು ಇಮ್ಮಡಿ ಪುಲಿಕೇಶಿಯ ಕಾಲದ್ದು. ಯುವರಾಜ ಒಂದನೆ ವಿಕ್ರಮಾದಿತ್ಯನ ಉಲ್ಲೇಖವಿದ್ದು ಕ್ರಿ.ಶ. ೬೪೦ರ ಶಾಸನ ಎಂದು ನಿರ್ಣಯಿಸಲಾಗಿದೆ.

ಭುವನೇಶ್ವರದ ಪರಶುರಾಮೇಶ್ವರ ದೇವಾಲಯ ಕಾಲವನ್ನು ಕ್ರಿ.ಶ. ೬೫೦ ಎಂದು ನಿರ್ಣಯಿಸಿದ್ದಾರೆ. ಇದಕ್ಕೂ ಮುನ್ನ ಕಳಿಂಗ ಶೈಲಿ ಕರ್ನಾಟಕದಲ್ಲಿತ್ತು ಎಂದು ಚಕ್ರಗುಡಿಯ ಶಾಸನದಿಂದ ಸಾಬೀತಾಗಿದೆ.

ಚಕ್ರಗುಡಿಯ ನಂತರ ಹುಚ್ಚಪ್ಪಯ್ಯನ ಗುಡಿ, ತಾರಬಸಪ್ಪನ ಗುಡಿಗಳನ್ನು ಗಮನಿಸಬೇಕು. ಇಲ್ಲಿಯೂ ಗರ್ಭಗೃಹ ಪ್ರತ್ಯೇಕವಿದ್ದು, ತ್ರಿಭೂಮಿ ರಚನೆಯ ಕಳಿಂಗ ಶಿಖರವಿದೆ. ಈ ಶಿಖರಗಳು ಕೊಂಚ ಉಬ್ಬಿದೆ. ಶಿಖರಾನಂತರ ಜೋಡಿ ಫಲಕಗಳ ವೇದಿ ಇದೆ. ವೇದಿಯ ಮೇಲೆ ಆಮಲಕ, ಕಳಶಗಳು ಕಾಣೆಯಾಗಿವೆ. ಗರ್ಭಗೃಹದ ಮುಂದಣ ಮಂಟಪವು ನಾಲ್ಕು ಕಂಭಗಳುಳ್ಳ ಚತುಷ್ಕವನ್ನು ಹೊಂದಿದೆ. ಎರಡು ದೇವಾಲಯಗಳಿಗೂ ಮುಖಮಂಟಪಗಳಿದ್ದು ಹುಚ್ಚಪ್ಪಯ್ಯ ಗುಡಿ, ಕಕ್ಷಾಸನವನ್ನು ಹೊಂದಿದೆ. ಅಲಂಕೃತ ಶುಕನಾಸಿದೆ.

ತ್ರಿಭೂಮಿ ರಚನೆಯ ಅಂತಿಮ ಹಂತವನ್ನು ಪಟ್ಟದಕಲ್ಲು ಸಂಕೀರ್ಣದಲ್ಲಿ ಗುರುತಿಸಬಹುದು. ಗಳಗನಾಥ ದೇವಾಲಯದ ಹಿಂದೆ ಜಂಬುಲಿಂಗ ಹಾಗೂ ಕಾಡುಸಿದ್ದೇಶ್ವರ ದೇವಾಲಯಗಳಿವೆ. ಇವು ಚಿಕ್ಕದಾದರೂ, ಪರಿಪಕ್ವತೆಯನ್ನು ಸಾಧಿಸಿದ ಲಕ್ಷಣಗಳನ್ನು ಕಾಣಬಹುದು. ಕೊಂಚ ಉಬ್ಬಿದ ತ್ರಿಭೂಮಿ; ಮೇಲೆ ಜೋಡಿಫಲಕಗಳ ಪೆಟ್ಟಿಗೆಯಾಕಾರದ ವೇದಿ. ಎರಡೂ ದೇವಾಲಯಗಳಲ್ಲಿ ಆಮಲಕಗಳಿಲ್ಲ.

ಜಂಬುಲಿಂಗ ದೇವಾಲಯದ ಶಿಖರದ ಮುಂಭಾಗದಲ್ಲಿ ಶುಕನಾಸ ರಚನೆ ಇದ್ದು, ಸುಂದರವಾದ ನಾಸೀ ಫಲಕವನ್ನು ಹೊಂದಿದೆ. ಕುಕ್ಷಿಭಾಗದಲ್ಲಿ ನಾಟ್ಯಶಿವನಿದ್ದಾನೆ. ಕಾಡುಸಿದ್ದೇಶ್ವರದ ಶುಕನಾಸದ ಭಾಗ ಭಗ್ನಗೊಂಡಿದೆ. ಗರ್ಭಗೃಹದ ಭಿತ್ತಿಯ ಮಧ್ಯದಲ್ಲಿ ಭದ್ರಕೋಷ್ಠಗಳು; ಶಿಲ್ಪಗಳೂ ಇವೆ. ಛಾದ್ಯದ ಕೆಳಗೆ ವಲಭೀ ಭಾಗದಲ್ಲಿ ಲತಾಲಂಕಾರದೊಂದಿಗೆ ಸಾಲು ಶಿಲ್ಪಗಳಿವೆ. ಗರ್ಭಗೃಹದ ಮುಂದಿನ ಮಂಟಪವು ಭಿತ್ತಿಯಿಂದ ಆವರಿಸಿದೆ. ಎರಡೂ ಕಡೆ ಪಾರ್ಶ್ವಭಿತ್ತಿಯಲ್ಲಿ ಗಾಳಿ ಬೆಳಕಿಗಾಗಿ ಜಾಲಂದ್ರಗಳ ಜೋಡಣೆ ಇದೆ. ಛಾದ್ಯದ ಕೆಳಗೆ ವಲಭಿ ಭಾಗದಲ್ಲಿ ಗರ್ಭಗೃಹದ ಭಾಗದಲ್ಲಿದ್ದಂತೆ ಲತಾಲಂಕಾರ ಹಾಗೂ ಶಿಲ್ಪಗಳಿವೆ. ಶಿಖರವನ್ನುಳಿದ ಗರ್ಭಗೃಹ ಹಾಗೂ ಮಂಟಪಗಳ ಅಲಂಕಾರದಲ್ಲಿ ದಾಕ್ಷಿಣಾತ್ಯ ಪ್ರಭಾವವನ್ನು ಕಾಣಬಹುದು.

ಪಟ್ಟದಕಲ್ಲಿನ ಪಾಪನಾಥ ದೇವಾಲಯ ತ್ರಿಭೂಮಿ ರಚನೆಯ ಕಡೆಯ ಹಂತ. ಕಳಿಂಗ ಶೈಲಿಯ ದೇವಾಲಯಗಳಲ್ಲಿ ದೊಡ್ಡದು. ರೇಖಾ ಶಿಖರದೊಡನೆ ಭಿತ್ತಿಯ ಮೇಲಿನ ಹಾರ ಭಾಗದಲ್ಲಿ ದಾಕ್ಷಿಣಾತ್ಯ ಲಕ್ಷಣಗಳುಳ್ಳ ಶಾಲಾ ಕೂಟ ರಚನೆಗಳನ್ನು ಸುತ್ತ ಕಂಡರಿಸಲಾಗಿದೆ. ದೇವಾಲಯದ ತಲಚ್ಛಂದವು ದಾಕ್ಷಿಣಾತ್ಯವೇ; ಆದರೆ ಗರ್ಭಗೃಹದ ಸುತ್ತ ಇಳಿಜಾರು ಛಾದ್ಯವನ್ನು ಜೋಡಿಸಿದ್ದು ದಿಂಡುಗಳನ್ನೂ ಜೋಡಿಸಿದ್ದಾರೆ. ಪ್ರದಕ್ಷಿಣಾ ಪಥವುಳ್ಳ ರಚನೆ. ಹೊರಭಿತ್ತಿಯಲ್ಲಿ ಮೂರು ದಿಕ್ಕಿನಲ್ಲಿ ಮಧ್ಯೆ ಪ್ರಾಗ್ರೀವ ಮಂಟಪವಿದೆ. ಗರ್ಭಗೃಹದ ಮುಂಭಾಗದಲ್ಲಿ ನಾಲ್ಕು ಕಂಭಗಳುಳ್ಳ ನವರಂಗವಿದೆ. ನಂತರ ಮತ್ತೊಂದು ಚತುರಶ್ರಾಕಾರದ ಮಹಾಮಂಟಪವಿದೆ. ಈ ಮಂಟಪಗಳ ಹೊರಭಿತ್ತಿಯಲ್ಲಿ ಸಾಲಾಗಿ ಭಿತ್ತಿಕೋಷ್ಠಗಳಿವೆ. ಕೋಷ್ಠಗಳ ಮೇಲೆ ನಾಸೀ ಪಂಜರಾಲಂಕಾರ. ಇವೆಲ್ಲವೂ ಔತ್ತರೇಯ ಮೂಲದ್ದು. ಮಹಾಮಂಟಪದ ಮುಂಭಾಗದಲ್ಲಿ ತೆರೆದ ಮುಖಮಂಟಪ. ಈ ದೇವಾಲಯದಲ್ಲಿ ಔತ್ತರೇಯ, ದಾಕ್ಷಿಣಾತ್ಯ ಲಕ್ಷಣಗಳನ್ನು ಸ್ಪಷ್ಟವಾಗಿ ಗುರುತಿಸಬಹುದು. ಈ ದೇವಾಲಯದ ರಚನೆ ಎಂಟನೇ ಶತಮಾನದ ಉತ್ತರಾರ್ಧ ಎನ್ನಲಾಗಿದೆ.

ಚತುರ್ಭೂಮಿ ರಚನೆಗಳು

ಕಳಿಂಗ ಶೈಲಿಯಲ್ಲಿ ಮೂರು, ಚತುರ್ಭೂಮಿ ರಚನೆಗಳು ಕರ್ನಾಟಕದಲ್ಲಿ ಲಭ್ಯ. ಪಟ್ಟದಕಲ್ಲಿನ ಗಳಗನಾಥ ದೇವಾಲಯದಲ್ಲಿ ಪೂರ್ಣ ಪ್ರಮಾಣದ ಶಿಖರವಿದೆ. ಶಿಖರದ ಶುಕನಾಸದ ಮುಂಭಾಗ ಹಾಳಾಗಿದೆ. ಶಿಖರ ರಚನೆ ತಿಳಿಯುವಲ್ಲಿ ಬಾಧಕವಿಲ್ಲ. ಈ ದೇವಾಲಯ ಆಯತಾಶ್ರ ರಚನೆ. ಗರ್ಭಗೃಹ ಸುಸ್ಥಿತಿಯಲ್ಲಿದೆ. ಅದರ ದ್ವಾರಬಂಧವೂ ಸ್ಪಷ್ಟ. ಸುತ್ತ ಅಲಿಂದ ರಚನೆ. ಎರಡೂ ಪಕ್ಕಗಳಲ್ಲಿ ಇಳಿಜಾರು ಛಾದ್ಯ. ಹೊರಭಿತ್ತಿಯಲ್ಲಿ ಮೂರು ಕಡೆ ಪ್ರಾಗ್ರೀವ ರಚನೆ. ಬಲಭಾಗದ ಭಿತ್ತಿಯಲ್ಲಿ ತ್ರಿಪುರಾಂತಕನ ಸ್ಥಾನಕ ಶಿಲ್ಪವಿದೆ.

ಗರ್ಭಗೃಹದ ಮುಂಭಾಗದಲ್ಲಿ ಕೇವಲ ಪೀಠರಚನೆ ಮಾತ್ರ ಉಳಿದುಬಂದಿದೆ. ಶಿಖರದಲ್ಲಿ ೨೦ ಕಪೋತ ಖಂಡಗಳು. ೫, ೧೦, ೧೫, ೨೦ರ ಅಂಚಿನಲ್ಲಿ ಕರ್ಣಾಮಲಕಗಳು. ಮೊದಲ ಎರಡು ಕಪೋತಖಡಗಳ ಮಧ್ಯೆ ಹೆಚ್ಚು ಅಂತರವಿದೆ. ಪ್ರತಿಭೂಮಿಯ ೨-೩-೪ ಕಪೋತ ಖಂಡಗಳ ಕರ್ಣಭಾಗದಲ್ಲಿ ಕಪೋತಖಂಡಗಳ ಮೇಲೆ ನಾಸಿಯನ್ನೊಳಗೊಂಡಂತೆ ಪಂಜರ ರಚನೆ; ನಾಸೀಪಂಜರವೆಂದೇ ಹೆಸರು. ಕರ್ಣ ಹಾಗೂ ಭದ್ರಭಾಗದ ಮಧ್ಯೆ ಹಿಂಸರಿತವಿದ್ದು ನೀಳವಾದ ಕಿರುಸ್ತಂಭಿಕೆಯುಳ್ಳ ನಾಸೀರಚನೆ ಇದೆ. ಭದ್ರಭಾಗದಲ್ಲಿಯೂ ನಾಸೀ, ಅರ್ಧನಾಸಿಯನ್ನೊಳಗೊಂಡಂತೆ ನಾಸಿಪಂಜರ ರಚನೆ. ಮೇಲ್ತುದಿಯ ಭದ್ರಭಾಗದಲ್ಲಿ ಎತ್ತರಿಸಿದ ನಾಸಿ ಇದ್ದು ವೇದೀ ಭಾಗಕ್ಕೂ ವಿಸ್ತರಿಸಿದೆ.

ಶಿಖರಾನಂತರ ಜೋಡಿ ಫಲಕಗಳುಳ್ಳ ಪೆಟ್ಟಿಗೆಯಾಕಾರದ ವೇದಿ; ವೇದಿ ನಂತರ ಕಂಠ, ಆಮಲಕ. ಆಮಲಕದ ಸುತ್ತ ಸೀಳು ಭಾಗ. ಆಮಲಕವೂ ನೆಲ್ಲಿಕಾಯಿಯಂತಿದೆ. ತುದಿಯಲ್ಲಿ ಸೂಜಿಯಂತಹ ಸೂಚೀಕಳಸ.

ಬಾದಾಮಿ ಚಲುಕ್ಯರ ವಂಶದ ಶಾಖೆಯೊಂದು ಆಂಧ್ರ ಪ್ರದೇಶದಲ್ಲಿ ರಾಜ್ಯಭಾರ ನಡೆಸಿತ್ತು. ಪಟ್ಟದಕಲ್ಲಿನ ಗಳಗನಾಥ ದೇವಾಲಯದಂತೆ ಹಲವು ಚತುರ್ಭೂಮಿ ರಚನೆಗಳೂ ನಿರ್ಮಾಣಗೊಂಡವು. ಅಲಂಪುರದ ಹೆಚ್ಚಿನ ದೇವಾಲಯಗಳು ಇದೇ ಮಾದರಿಯವು. ಕೆಲವು ಪೂರ್ಣವಾಗಿ ಉಳಿದಿವೆ. ಕುಮಾರಬ್ರಹ್ಮ ದೇವಾಲಯದಲ್ಲಿ ಒಂದನೇ ವಿಕ್ರಮಾದಿತ್ಯನ ಶಾಸನವಿದೆ. ಶಾಸನಾಧಾರದಿಂದ ದೇವಾಲಯದ ಕಾಲವನ್ನು ಕ್ರಿ.ಶ. ೬೭೫ರಲ್ಲಿ ಸುಮಾರಿಗೆ ಗುರುತಿಸಬಹುದು. ಇದೇ ರಚನೆಯುಳ್ಳ ಸತ್ಯವೋಲುವಿನಲ್ಲಿರುವ ದೇವಾಲಯಗಳನ್ನೂ ಸಮಕಾಲೀನ ಎನ್ನಬಹುದು.

ಐಹೊಳೆಯ ದುರ್ಗಾ ಹಾಗೂ ಸೂರ್ಯನಾರಾಯಣ ಗುಡಿಗಳು ಚತುರ್ಭೂಮಿ ರಚನೆಗಳು. ಆದರೆ ಈ ಶಿಖರಗಳ ಅರ್ಧದಷ್ಟು ಭಾಗ ಭಗ್ನವಾಗಿವೆ. ಅಳಿದುಳಿದ ಭಾಗಗಳಿಂದ ಚತುರ್ಭೂಮಿ ರಚನೆ ಎನ್ನಲು ಸಾಧ್ಯ.

ದುರ್ಗಾ ದೇವಾಲಯವು ಎರಡು ಹಂತದ ಅಲಿಂದ ರಚನೆಯುಳ್ಳ ಗಜಪೃಷ್ಠಾಕಾರದ ಬೃಹತ್ ರಚನೆ. ತುಸು ಎತ್ತರದ ಪೀಠರಚನೆ ಇದೆ. ಗರ್ಭಗೃಹದ ಭಿತ್ತಿ ಹಾಗೂ ಅಲಿಂದದ ಸ್ತಂಭಗಳಲ್ಲಿ ಅದ್ಭುತ ಶಿಲ್ಪಗಳ ಕಂಡರಣೆ ಇದೆ. ಬಾದಾಮಿ ಗುಹೆಗಳ ನಂತರ ಇಲ್ಲಿರುವ ಮೂರ್ತಿಶಿಲ್ಪಗಳೇ ಗಮನಾರ್ಹವೆನಿಸಿದೆ. ರೇಖಾ ಮಾದರಿಯ ದೇವಾಲಯಗಳಲ್ಲಿ ಇದು ದೊಡ್ಡದು. ಲಾಡ್‌ಖಾನ್ ದೇವಾಲಯದಲ್ಲಿರುವಂತೆ ಎರಡು ಹಂತದಲ್ಲಿ ಅಲಿಂದ. ಮೂರು ಹಂತಗಳಲ್ಲಿ ಛಾದ್ಯರಚನೆ. ಮಧ್ಯೆ ಸಮತಲ ಛಾದ್ಯ; ಸುತ್ತ ಎರಡು ಹಂತಗಳಲ್ಲಿ ಇಳಿಜಾರು ಛಾದ್ಯ. ಮುಖಮಂಟಪದ ಮೇಲೆಯೂ ಪ್ರತ್ಯೇಕ ರಚನೆ ಇದೆ. ಮುಖಮಂಟಪವನ್ನೂ ಆವರಿಸಿದಂತೆ ಎರಡನೆಯ ಅಲಿಂದ ವಿಸ್ತರಿಸಿದೆ. ಮುಂಭಾಗದಲ್ಲಿ ಎಡಬಲದಲ್ಲಿ ಕೆಳಗಿಳಿಯಲು ಸೋಪಾನಗಳು. ಈ ದೇವಾಲಯದ ಬಾಗಿದ ಶಿಖರವು ಪೂರ್ಣ ರೂಪದಲ್ಲಿ ಲಭಿಸಿದ್ದಲ್ಲಿ, ಇದು ಸುಂದರವಾದ ಅಪುರೂಪದ ದೇವಾಲಯವೆಂದು ಪ್ರಖ್ಯಾತಿ ಪಡೆಯುತ್ತಿತ್ತು.

ಗರ್ಭಗೃಹದ ಸಮತಲ ಛಾದ್ಯದ ಮೇಲೆ ರೇಖಾ ಶಿಖರವಿದೆ; ತ್ರಯಂಗ ರಚನೆ. ಶಿಖರದ ನಾಲ್ಕು ಭೂಮಿಗಳಲ್ಲಿ ಎರಡರ ಅಲಂಕಾರವನ್ನು ಗುರುತಿಸಬಹುದು. ೫ x ೪ರ ಕಪೋತಖಂಡ ರಚನೆ ಎಂದು ಊಹಿಸಬಹುದು. ಕರ್ಣಭಾಗದ ಕಪೋತ ಖಂಡಗಳ ಮೇಲೆ ನಾಸೀಪಂಜರ; ಭದ್ರಭಾಗದಲ್ಲಿ ನಾಸಿ, ಅರ್ಧನಾಸಿಗಳುಳ್ಳ ನಾಸಿಪಂಜರವಿದೆ. ಐದು, ಹತ್ತರ ಕರ್ಣಭಾಗದಲ್ಲಿ ಕರ್ಣಾಮಲಕ ರಚನೆ ಸ್ಪಷ್ಟ. ದೇವಾಲಯದ ಶಿಖರದ ಮೇಲ್ತುದಿಯಲ್ಲಿದ್ದ ಆಮಲಕವು ಅನಾಥವಾಗಿ ಪಕ್ಕದಲ್ಲಿ ಉರುಳಿಬಿದ್ದಿದೆ!

ದೇವಾಲಯದಲ್ಲಿರುವ ಶಾಸನಗಳಲ್ಲಿ "ಸುರೇಂದ್ರಪಾದ" ಎಂಬ ಉಲ್ಲೇಖವಿರುವ ಕ್ರಿ.ಶ. ೭ನೆಯ ಶತಮಾನದ ಶಾಸನವೇ ಪ್ರಾಚೀನ; ಆ ಕಾಲಕ್ಕೆ ದೇವಾಲಯವು ರಚನೆಗೊಂಡಿತ್ತು ಎಂದು ಊಹಿಸಬಹುದು. ಇದನ್ನು ಆದಿತ್ಯ ದೇಗುಲವೆಂದು ವಿದ್ವಾಂಸರು ಗುರುತಿಸಿದ್ದಾರೆ.


ಚತುರ್ಭೂಮಿಯ ಕೊನೆಯ ಪ್ರತಿನಿಧಿಯಾಗಿ ಐಹೊಳೆಯ ಸೂರ್ಯನಾರಾಯಣ ಗುಡಿಯನ್ನು ಗುರುತಿಸಬಹುದು. ಇದನ್ನು ಎಂಟನೆಯ ಶತಮಾನದ ರಚನೆಯೆಂದು ವಿದ್ವಾಂಸರು ನಿರ್ಣಯಿಸಿದ್ದಾರೆ. ಮೊದಲು ಕಂಡ ಎರಡು ದೇವಾಲಯಗಳಲ್ಲಿ ಅಲಿಂದವನ್ನೊಳಗೊಂಡ ಪ್ರದಕ್ಷಿಣಾ ಪಥವಿತ್ತು. ಈ ದೇವಾಲಯದಲ್ಲಿ ಪ್ರತ್ಯೇಕಗೊಂಡ ಗರ್ಭಗೃಹವಿದೆ. ಗರ್ಭಗೃಹದ ನಂತರ ನವರಂಗದಂತಿರುವ ಚತುರಶ್ರ ಮಂಟಪ; ನಂತರ ಮುಖಮಂಟಪವಿದೆ. ಚತುರಶ್ರ ಮಂಟಪದ ಮೇಲೆ ದಿಂಡುಗಳನ್ನು ಇರಿಸಿದ್ದಾರೆ. ಗರ್ಭಗೃಹದ ಮೇಲಿನ ರೇಖಾ ಶಿಖರದಲ್ಲಿ ಮೊದಲ ಭೂಮಿ ರಚನೆ ಸಂಪೂರ್ಣ ಲಭ್ಯ. ಉಳಿದಂತೆ ನಾಶವಾಗಿದೆ. ಮೊದಲ ಭೂಮಿ ರಚನೆಯ ಐದು ಕಪೋತ ಖಂಡಗಳನ್ನು ಅಚ್ಚುಕಟ್ಟಾಗಿ ಗುರುತಿಸಬಹುದು. ಐದನೆಯ ಕಪೋತಖಂಡದ ಕರ್ಣಭಾಗದಲ್ಲಿ ಕರ್ಣಾಮಲಕಗಳು. ಭದ್ರಭಾಗದಲ್ಲಿ ನಾಸಿ, ಅರ್ಧ ನಾಸಿಯೊಂದಿಗೆ ನಾಸೀ ಪಂಜರವು ೨–೩ ಹಾಗೂ ೪–೫ ಕಪೋತಖಂಡಗಳ ಮೇಲೆ ರಚಿಸಲಾಗಿದೆ. ಗರ್ಭಗೃಹದ ಹೊರಭಿತ್ತಿಯಲ್ಲಿ ಭದ್ರಭಾಗದಲ್ಲಿ ಎರಡು ಸ್ತಂಭಿಕೆಗಳು. ಕರ್ಣಭಾಗದಲ್ಲಿ ನಾಸೀ ಪಂಜರಾಲಂಕಾರ. ಈ ದೇವಾಲಯವು ಸರಳ ರಚನೆಯಾಗಿದೆ.

ಪಂಚಭೂಮಿ ರಚನೆ

ಕಳಿಂಗ ಶೈಲಿಯ ತುರೀಯ ಹಂತವನ್ನು ಪಟ್ಟದಕಲ್ಲಿನ ಕಾಶಿ ವಿಶ್ವೇಶ್ವರ ದೇವಾಲಯದ ಶಿಖರದಲ್ಲಿ ಕಾಣಬಹುದು. ಕರ್ನಾಟಕದಲ್ಲಿ ಪಂಚಭೂಮಿ ರಚನೆಗೆ ಇದೊಂದೇ ಉದಾಹರಣೆ ಲಭ್ಯ. ತಲಚ್ಛಂದವೂ ಪಂಚಾಂಗವುಳ್ಳದ್ದು. ಕರ್ಣ–ಪ್ರತಿರಥ–ಭದ್ರ–ಪ್ರತಿರಥ–ಕರ್ಣ; ಇವುಗಳ ಮಧ್ಯೆ ತುಸು ಹಿಂಸರಿತಗಳನ್ನೊಳಗೊಂಡಿವೆ.

ಕರ್ಣಭಾಗದಿಂದ ಕಪೋತ ಖಂಡಗಳ ಎಣಿಕೆ ಸಾಧ್ಯ. ಇಪ್ಪತ್ತು ಕಪೋತಖಂಡಗಳು. ಪ್ರತಿನಾಲ್ಕಕ್ಕೆ ಒಂದು ಭೂಮಿ; ಐದು ಭೂಮಿಗಳು. ೪–೮–೧೨–೧೬–೨೦ ಕಪೋತಖಂಡಗಳ ಅಂಚಿನಲ್ಲಿ ಕರ್ಣಾಮಲಕಗಳು.

ಪ್ರತಿ ಭೂಮಿಯ ಕರ್ಣಭಾಗದಲ್ಲಿ ೨–೩ ಕಪೋತ ಖಂಡಗಳ ಮೇಲೆ ನಾಸೀಪಂಜರ ರಚನೆ. ಭದ್ರ ಹಾಗೂ ಪ್ರತಿರಥ ಭಾಗದಲ್ಲಿ ಕೆಳಗಿನಿಂದ ಮೇಲ್ತುದಿಯವರೆಗೆ ನಾಸೀಜಾಲವು ಜೇನುಗೂಡಿನಂತೆ ವಿಸ್ತರಿಸಿದೆ. ಭದ್ರ ಹಾಗೂ ಪ್ರತಿರಥಗಳ ಮಧ್ಯೆ ಹಿಂಸರಿತವನ್ನು ಗುರುತಿಸಬಹುದು. ಮುಂಭಾಗದಲ್ಲಿ ಶುಕನಾಸವು ನಾಲ್ಕು ಸಾಲುಗಳಲ್ಲಿ ನಾಸಿ ಪಂಜರವು ಎರಡು ಭೂಮಿಯವರೆಗೆ ಹಬ್ಬಿದ್ದು ನಂತರ ನಾಸೀಫಲಕವಿದೆ. ಫಲಕದ ಮಧ್ಯೆ ನಾಟ್ಯಶಿವನ ಶಿಲ್ಪವಿದೆ. ಕಳಿಂಗ ಶೈಲಿಯ ಶಿಖರಗಳಲ್ಲಿ ನಾಟ್ಯಶಿವನ ಕಂಡರಣೆ ಒಂದು ರೀತಿಯ ಸಾಂಪ್ರದಾಯಿ ರಚನೆ ಎನಿಸಿದೆ. ಶುಕನಾಸ ರಚನೆ ಇದರೊಂದಿಗೆ ಪೂರ್ಣತೆಯನ್ನು ಸಾಧಿಸಿದೆ! ಶಿಖರಾನಂತರ ಜೋಡಿ ಫಲಕಗಳುಳ್ಳ ಪೆಟ್ಟಿಗೆಯಾಕಾರದ ಪೇಟಿಕಾವೇದಿ. ವೇದಿಯ ಮೇಲೆ ಆಮಲಕವಿಲ್ಲ.





ಪರಶುರಾಮೇಶ್ವರ ದೇವಾಲಯ




ಸಂಗಮೇಶ್ವರ ದೇವಾಲಯ
ಮಹಾಕೂಟ

ಗರ್ಭಗೃಹದ ಮುಂಭಾಗದಲ್ಲಿ ಚತುರಶ್ರ ಮಂಟಪ; ಮಧ್ಯೆ ಸಮತಲ ಛಾದ್ಯ. ಸುತ್ತ ಇಳಿಜಾರು ಛಾದ್ಯ. ಮುಂಭಾಗದಲ್ಲಿ ಪ್ರವೇಶ ದ್ವಾರ ಹಾಗೂ ಸೋಪಾನಗಳು. ಇವುಗಳ ಇಕ್ಕೆಲಗಳಲ್ಲಿ ನಾಲ್ಕು ಸ್ತಂಭಿಕೆಗಳನ್ನು ಕಂಡರಿಸಿದ ಕಿರು ದೇವಕೋಷ್ಠಗಳಿವೆ. ನಾಸೀ, ಶಾಲಾ ಅಲಂಕಾರವುಳ್ಳ ಹಾರಭಾಗವನ್ನು ಜೋಡಿಸಿದೆ. ಮಂಟಪದ ಎರಡು ಪಾರ್ಶ್ವಗಳಲ್ಲಿ ಪಾಪನಾಥ ದೇವಾಲಯದಲ್ಲಿ ಇರುವಂತೆ ಸಾಲು ದೇವಕೋಷ್ಠಗಳು. ಗರ್ಭಗೃಹದ ಭಿತ್ತಿಯಲ್ಲಿಯೂ, ಭದ್ರಭಾಗದಲ್ಲಿಯೂ ದೇವಕೋಷ್ಠಗಳು. ಈ ಕೋಷ್ಠಗಳ ಮೇಲ್ತುದಿಯಲ್ಲಿ ನಾಸೀಪಂಜರಗಳು. ಮಂಟಪದೊಳಗಿನ ಕಂಭಗಳ ಅಲಂಕಾರವನ್ನು ಆಧರಿಸಿ ಈ ದೇವಾಲಯವನ್ನು ರಾಷ್ಟ್ರಕೂಟರ ಆರಂಭಕಾಲದ್ದು ಎಂದು ಗುರುತಿಸುತ್ತಾರೆ.

ಕಾಶಿ ವಿಶ್ವೇಶ್ವರ ದೇವಾಲಯದ ನಂತರ ಕರ್ನಾಟಕದಿಂದ ಕಳಿಂಗ ಶೈಲಿ ಮಾಯವಾಯಿತೇ ಎಂಬ ಪ್ರಶ್ನೆ ಕಾಡುತ್ತದೆ! ಹತ್ತನೆಯ ಶತಮಾನದ ನಂತರ ಬಾಗಿದ ರೇಖಾಶಿಖರವು ಲತಿನ, ವಿಮಾನ ನಾಗರ ಶೈಲಿಗಳಲ್ಲಿ ಮರುಹುಟ್ಟು ಪಡೆಯಿತು ಎನ್ನಬುದು. ಇವನ್ನು "ಪಿರಿದುಂನಾಗರ" ಶೈಲಿಯಡಿ ಏಕಶೃಂಗ, ಬಹುಶೃಂಗಗಳೆಂದು ಗುರುತಿಸಲಾಗುತ್ತದೆ. ಶಿರೂರಿನ ಸಿದ್ದೇಶ್ವರ ದೇವಾಲಯ, ಕಳಿಂಗ ಹಾಗೂ ಪಿರಿದುಂ ನಾಗರ ಶೈಲಿಗಳ ಮಧ್ಯೆ ಸೇತುವೆಯಾಗಿ ನಿಲ್ಲುತ್ತದೆ! ಈ ದೇವಾಲಯದಲ್ಲಿ ಉರುಶೃಂಗ ಹಾಗೂ ಕಿರುಶೃಂಗಗಳು ಉಬ್ಬು ರಚನೆಯಾಗಿ ಅರಳಿವೆ. ಶಿಖರದ ಮೇಲೆ ವಿಸ್ತರಿಸಿದ ನಾಸೀ ಜಾಲಕವು ಕಾಶೀ ವಿಶ್ವೇಶ್ವರ ದೇವಾಲಯವನ್ನು ಅನುಕರಿಸುತ್ತದೆ. ಆಮಲಕವು ವೃತ್ತಾಕಾರದಿಂದ ಅಗಲಗೊಂಡು ಅಮಲಸಾರವೆಂಬ ಅಭಿದಾನ ಪಡೆಯುತ್ತದೆ. ಆಮಲಸಾರದ ಮೇಲೆ ಕಳಶವೂ ವ್ಯವಸ್ಥಿತ ರೂಪ ಪಡೆಯುತ್ತದೆ.

ತಲಚ್ಛಂದ ಅನುಸರಿಸಿ ಕೆಲವು ಅಷ್ಟಾಶ್ರ ಪ್ರಭೇದ ದೇವಾಲಯಗಳು

ಜಗದೀಶ* ಎಂ.ಎನ್. ಪ್ರಭಾಕರ್**

ಚತುರಶ್ರದಿಂದ ಉಂಟಾದ ಪ್ರಭೇದಗಳಲ್ಲಿ ಅಷ್ಟಾಶ್ರ ಒಂದು. ಅಷ್ಟಾಶ್ರ ಎಂಟು ಮೂಲೆಗಳನ್ನು ಅಥವಾ ಎಂಟು ಮುಖಗಳನ್ನು ಹೊಂದಿರಬಹುದು.

ವೈರಾಜ್ಯ ಮಾದರಿ ದೇವಾಲಯಗಳಲ್ಲಿ ಅಷ್ಟಕೋಣಾಕಾರ (ತ್ರಿವಿಷ್ಟಪ) ಪ್ರಭೇದವನ್ನು ಪಡೆಯುವ ಉಲ್ಲೇಖ ಹೀಗಿದೆ:

ಅಷ್ಟಾಶ್ರಶ್ಚ ತತಃ ಶುದ್ಧಾಸ್ತಥಾ ಚ ಸಮಕರ್ಣಿಕಾಃ
ತರ್ದದಂ ಚ ಭವೇದ್ ಭದ್ರಂ ಕಾಮದಾಶ್ಚ ತ್ರಿವಿಷ್ಟಪಾಃ ॥ ೨೦ ॥

(ಅಪರಾಜಿತ ಪೃಚ್ಛ, ಅಧ್ಯಾಯ ೧೫೫ ವೈರಾಜ್ಯಾದಿ ಪ್ರಾಸಾದ)

ಲತಿನ ಮಾದರಿಯ ೨೫ ಉಪ ಪ್ರಭೇದಗಳನ್ನು ವಿವರಿಸುವಾಗ ಅಷ್ಟಾಶ್ರ ಕುರಿತಾದ ಶ್ಲೋಕ ಹೀಗಿದೆ:

ಅಷ್ಟಕರ್ಣೋ ವಜ್ರಕಃ ಸ್ಯಾತ್ ಸ್ವಸ್ತಿಕ ಭದ್ರ ಸಂಯುತಃ
ಸ್ವಸ್ತಿಕ ಪ್ರತಿಭದ್ರಾಣಿ ಶಂಕುಶ್ಚಾಷ್ಟಾಶ್ರ ಸೂತ್ರತಃ ॥ ೩೩ ॥

(ಅ.ಪೃ, ಅಧ್ಯಾಯ ೧೫೮ ಲತಿನ ಪ್ರಾಸಾದ)

ವಜ್ರಕಃ ಸ್ವಸ್ತಿಕಃ ಶಂಕುರಿತ್ಯಮಷ್ಟಾಶ್ರಯತ್ರಯಃ ॥ ೧೫ ॥

(ಸ.ಸೂ ಅಧ್ಯಾಯ ೫೬)

ಅಷ್ಟಕೋಣಾಕಾರ ಮಾದರಿಯು ಎಂಟು ಕರ್ಣ ಹೊಂದಿದರೆ ವಜ್ರಕ ವಿನ್ಯಾಸ, ಎಂಟು ಭದ್ರ ಹೊಂದಿದರೆ ಸ್ವಸ್ತಿಕ ವಿನ್ಯಾಸ ಮತ್ತು ಪ್ರತಿಭದ್ರ ಭಾಗದಲ್ಲಿ ಎಂಟು ಕರ್ಣಗಳನ್ನು ಹೊಂದಿದರೆ ಶಂಕು ಉಪ ಮಾದರಿಯ ವಿನ್ಯಾಸ ಎಂದು ಹೇಳಲಾಗಿದೆ. ಎಂಟು ಕೋನಗಳಿರುವುದು ವಜ್ರ, ಎಂಟು ಭುಜಗಳಿರುವುದು (ಬಾಹು/ಮುಖ) ಸ್ವಸ್ತಿಕ ಮತ್ತು ಪ್ರತಿಭದ್ರ ಭಾಗದಲ್ಲಿ ಕರ್ಣಗಳಿದ್ದರೆ ಅದು ಶಂಕು ಮಾದರಿ.

ಸ್ವಸ್ತಿಕ ಮಾದರಿಯನ್ನು ಅ.ಪೃ ಕುಂಭಕೋದ್ಭವ ಪ್ರಾಸಾದ ಆಧ್ಯಾಯ ೧೬೧ ಶ್ಲೋಕ ಹೀಗಿದೆ:

ಪ್ರತಿಭದ್ರೇವ ಪಕ್ಷಿರಾಜಃ ಸುಶೀಲೋವಾರಿಮಾರ್ಗತಃ
ಕರ್ಣಾಷ್ಟಕಂ ಚಾಷ್ಟಭದ್ರಂ ಸ್ವಸ್ತಿಕಂ ಸು ತು ನಾಮತಃ ॥ ೧೦ ॥

ಎಂಟು ಕರ್ಣದ ಬದಲಾಗಿ ಎಂಟು ಭದ್ರ ಇದ್ದರೆ ಸ್ವಸ್ತಿಕ?

ಅಷ್ಟಾಶ್ರ (ವಜ್ರ) ವಿನ್ಯಾಸ ಪಡೆಯುವ ಬಗೆ ಸಮರಾಂಗಣ ಸೂತ್ರಧಾರದಲ್ಲಿ ಹೀಗಿದೆ:

ಚತುರಶ್ರೀ ಕೃತೇ ಕ್ಷೇತ್ರೇ ಕರ್ಣ ಸೂತ್ರಂ ಪ್ರಸಾರಯೇತ್ ॥ ೩೩ ॥

ಕರ್ಣಸ್ಯಾರ್ಧಂ ತತಃ ಕೃತ್ವಾ ಗಭಾದ್ರುಕ್ (?) ಬಹಿರ್ವಯೇತ್

ತದಗ್ರಯೋಃ ಸೂತ್ರಪಾತಾತ್ ಸ್ಯಾದನ್ಯಶ್ಚತುರಶ್ರಕಂ ॥ ೩೪ ॥

---

* ನಂ. ೩೩, ಮೊದಲ ಅಡ್ಡ ರಸ್ತೆ, ಹೊಸಮನೆ ಬಡಾವಣೆ, ಶಿವಮೊಗ್ಗ.
** ಪದ್ಮಪ್ರಭಾ, ನಂ. ೪೨, ಬ್ಲಾಕ್ ೧೭, ಬ್ಯಾಂಕ್ ಕಾಲೋನಿ, ಶ್ರೀರಾಂಪುರ, ೨ನೆಯ ಹಂತ, ಮೈಸೂರು.

ಕೂಟಂ ಕುರ್ಯಾತ್ ದ್ವಿಭಾಗೇನ ಸಮಸ್ತತ್ರವಿಚಕ್ಷಣಃ
ಸೂಕರಾನನಸಂಸ್ಥಾನಂ ಕುರ್ವೀತ ಸಲಿಲಾಂತರಂ ॥ ೩೫ ॥

ಏವಂ ಸರ್ವೇಷು ಕೂಟೇಷು ಸಲಿಲಾಂತರ ಮಿತ್ಯತೇ
ಯದಾಯತಂ ಭವೇತ್ ಸ್ತ್ರಂ ಚತುರ್ಭಾಗ ವಿಭಾಜಿತೇ ॥ ೩೬ ॥

ಗರ್ಭೋಃ ದ್ವಿಭಾಗಿಕಸ್ತೇನ ಭಾಗಿಕಾ ಭಿತಿರುಚ್ಯತೇ
ಗರ್ಭಕರ್ಣಾರ್ಧಮಾದಾಯ ಕೋಣಾಂತಂಲಾಂಛಯೇತ್॥ ೩೭ ॥

ಅಷ್ಟ – ಮಧ್ಯೇ ಸ್ಯಾದೇವಂ –– ಬಹಿಃ
ಏವಂ ಪದ್ಮತಲಚ್ಛಂದೋ ವಿಧಾತವ್ಯೋ ವಿಚಕ್ಷಣೈಃ ॥ ೩೮ ॥

ತೇಷು ಸಂಪಾದಯೇತ್ ಮಧ್ಯಭಾಗೇ ದಿಕ್ ವಿದಿಗಂತರೇ
ಕರ್ಣಾರ್ಧಂ ದಾಪಯೇತ್ ತತ್ರ ಬಾಹ್ಯವಿನಿರ್ಗತಾ ॥ ೪೦ ॥

ಐಂದ್ರಾಗ್ನೆಯೋರ್ದಿಶೋರ್ಮಧ್ಯೇ ಲಾಂಛನಮಂ ತದ್ ವ್ಯವಸ್ಥಿತಂ
ನೈರುತಿಯಾಮ್ಯಯೇರ್ಮಧ್ಯೇ ತಸ್ಮಾತ್ ತತ್ರ ಪ್ರಸಾರಯೇತ್ ॥ ೪೧ ॥


ವಾಯ್ವಂಬುಪದಿಶೋರ್ಮದ್ಯಾದೀಶ ಸೋಮ ದಿಗಂತರೇ
ತೃತೇಯಾಂ – ಖುಟಸ್ಯ ಜಲಾಂತರಂ

ಕೂಟಯೋ ರುಭಯೋರ್ಮಧ್ಯೇ ಸೂಕರಾನನ ಸನ್ನಿಭಂ ॥ ೪೩ ॥


ಮಹಾಪದ್ಮ ತಲಚ್ಛಂದಃ ಪ್ರೋಕ್ತವ್ಯಃ ರಾಜಪೂಜಿತಃ

(ಸಮರಾಂಗಣ ಸೂತ್ರಧಾರ ಅಧ್ಯಾಯ ೬೧)


ಒಂದು ಚೌಕದ ಮೂಲೆಗಳು ಎಬಿಸಿಡಿ. ಎಸಿ ಮತ್ತು ಬಿಡಿ ಚೌಕದ ಕರ್ಣಗಳು. ಅರ್ಧ ಕರ್ಣ ಅಳತೆಯನ್ನು ತೆಗೆದುಕೊಳ್ಳಿ ಮತ್ತು ಎ ಬಿಂದುವಿನಿಂದ ಎಬಿ ಮತ್ತು ಎಡಿ ಗೆರೆಗಳ ಮೇಲೆ ತ್ರಿಜ್ಯದಿಂದ ಈ ಅಳತೆಯನ್ನು ಗುರ್ತಿಸಿ. ಇದೇ ರೀತಿ ಬಿ, ಸಿ ಮತ್ತು ಡಿ ಬಿಂದುಗಳಿಂದ ಗುರ್ತಿಸಿ. ಈ ಬಿಂದುಗಳನ್ನು ಸೇರಿಸಿ ಮುಂದುವರೆಸಿ. ಇವು ಮತ್ತೊಂದು ಚೌಕವನ್ನು ನೀಡುತ್ತವೆ. ಇದನ್ನು ಇಎಫ್‌ಜಿಹೆಚ್ ಎಂದು ಕರೆಯಬಹುದು. ಎಬಿಸಿಡಿ ಮತ್ತು ಇಎಫ್‌ಜಿಹೆಚ್ ಪರಸ್ಪರ ೪೫ ಡಿಗ್ರಿ ತಿರುಗಿದ ಚೌಕಗಳು.



ವಜ್ರ ಪ್ರಭೇದ – ದ್ರಾವಿಡ ಪದ್ಧತಿಯಲ್ಲಿ ದೇವಾಲಯ ತಳವಿನ್ಯಾಸ ಎಂಟು ಮೂಲೆ ಹೊಂದಿದ್ದರೆ ಅದು ಪದ್ಮ ಪ್ರಾಸಾದ. ಲತಿನ ಮಾದರಿಯಲ್ಲಿ ಎಂಟು ಮೂಲೆಗಳಿರುವ ತಲವಿನ್ಯಾಸ ವಜ್ರ ಪ್ರಾಸಾದ ಆಗಲಿದೆ (ಆಧ್ಯಾಯ ೧೫೮ ಅ.ಪ್ರ). ಎಂಟು ಮೂಲೆಗಳ ದೇವಾಲಯದಲ್ಲಿ ಪ್ರತಿಯೊಂದು ಕರ್ಣಗಳ ಮಧ್ಯದಲ್ಲಿನ ಕೋನವು ೪೫ ಡಿಗ್ರಿ ಇರುತ್ತದೆ. ವಜ್ರ ಮಾದರಿಯ ದೇವಾಲಯಗಳು ಕರ್ನಾಟಕದಲ್ಲಿ ಕಂಡು ಬರುವುದಿಲ್ಲ. ಆದರೆ ದೇಶದ ಇತರ ಕಡೆ ಅವುಗಳ ನಮಗೆ ಕಂಡು ಬರುತ್ತದೆ. ಒರಿಸ್ಸಾದಲ್ಲಿ ಬೌಧ ಎಂಬ ಸ್ಥಳದಲ್ಲಿ ಸಿದ್ಧೇಶ್ವರ, ಕಪಿಲೇಶ್ವರ ಮತ್ತು ಭುವನೇಶ್ವರ ದೇವಾಲಯ ಸಂಕೀರ್ಣ ಇದೆ. ಆ ಪ್ರಾಂಗಣದಲ್ಲಿ ಮೂರು ಎಂಟು ಮೂಲೆಗಳಿರುವ ದೇವಾಲಯಗಳಿವೆ. ಗಮನಿಸಬೇಕಾದ ಅಂಶವೆಂದರೆ ದೇವಾಲಯದ ಒಳ ಮತ್ತು ಹೊರ ಭಿತ್ತಿಯು ಎಂಟು ಮೂಲೆಗಳನ್ನು ಹೊಂದಿದೆ. ಒಂದು ಮೂಲೆಯಲ್ಲಿ ದ್ವಾರವನ್ನು ತೆಗೆಯಲಾಗಿದೆ ಮತ್ತು ಇದಕ್ಕೆ ಮುಖ ಮಂಟಪವನ್ನು ಸೇರಿಸಲಾಗಿದೆ. ದೇವಾಲಯದ ಒಳಗೆ ಎಂಟು ಮೂಲೆಗಳಿರುವ ಪೀಠದ ಮೇಲೆ ಶಿವಲಿಂಗ ಇದೆ. ಈ ಮೂರು ದೇವಾಲಯಗಳ ಮಧ್ಯ ಆಯತಾಕಾರದ ತಳಪಾಯ ಇದೆ. ಇದು ಪಂಚಾಯತನ ಮಾದರಿ ಅಲ್ಲವೆಂದು ಮತ್ತು ತಾಂತ್ರಿಕ ಪೂಜೆ ಸಂಬಂಧಿಸಿರಿಬಹುದು ಎಂದು ಅಭಿಪ್ರಾಯ ಪಡಲಾಗಿದೆ. (ಅರ್ಲಿ ಸ್ಟೋನ್ ಟೆಂಪಲ್ಸ್ ಆಫ್ ಒರಿಸ್ಸಾ, ವಿದ್ಯಾ ದೆಹೆಜಿಯಾ, ವಿಕಾಸ್ ಪಬ್ಲಿಷಿಂಗ್ ಹೌಸ್ ಪ್ರೈ ಲಿಮಿಟೆಡ್, ನವದೆಹಲಿ ೧೯೭೯). ಮಹಾರಾಷ್ಟ್ರ ರಾಜ್ಯ ನೆವಾಸ ಜಿಲ್ಲೆಯ ಟೊಕಾದಲ್ಲಿನ ಸಿದ್ದೇಶ್ವರ ದೇವಾಲಯ ಎಂಟು ಮೂಲೆ ಇರುವ ಲತಿನ ಮಾದರಿಯ ದೇವಾಲಯ ಇದೆ. (ಚಿತ್ರ ಸಂತೋಷ ಕಾಂಬ್ಳೆ).



ವಜ್ರ ತಲ ವಿನ್ಯಾಸ



ಮೂರು ದೇವಾಲಯಗಳು–ಚೌಧ

ಕರ್ನಾಟಕದಲ್ಲಿ ವಜ್ರ ವಿನ್ಯಾಸವನ್ನು ದೇವಾಲಯದ ಕೆಲವು ಅಂಗಗಳ ವಿನ್ಯಾಸದಲ್ಲಿ ಬಳಸಿರುವುದನ್ನು ಕಾಣಬಹುದು. ಹಾವೇರಿಯ ಸಿದ್ಧೇಶ್ವರ ದೇವಾಲಯದ ಭಿತ್ತಿಯ ಮೇಲೆ ಅನೇಕ ಶಿಖರ ಮಾದರಿಗಳಿವೆ. ಅಲ್ಲಿರುವ ಕೆಲವು ಶಿಖರ ಮಾದರಿಗಳ ಕರ್ಣಭಾಗದಲ್ಲಿ ವಜ್ರ ವಿನ್ಯಾಸ ಬಳಸಿರುವುದನ್ನು ಕಾಣಬಹುದು. ವಜ್ರ ವಿನ್ಯಾಸ ಯಾವ ಭಾಗದಲ್ಲಿದೆ ಮತ್ತು ಎಷ್ಟು ಹೊರಚಾಚಿದೆ ಎಂಬ ಅಂಶದ ಮೇಲೆ ೮ ಮೂಲೆಗಳಲ್ಲಿ ಕೆಲವು ಮೂಲೆಗೆ ಕಂಡು ಬರುತ್ತವೆ. ಸಾಮಾನ್ಯವಾಗಿ ವಜ್ರ ವಿನ್ಯಾಸ ಕರ್ಣ ಭಾಗದಲ್ಲಿದ್ದರೆ ಐದು ಮೂಲೆಗಳು ಮಾತ್ರ ಕಾಣುತ್ತವೆ ಮತ್ತು ಉಳಿದ ಮೂರು ಭಾಗಗಳು ದೇವಾಲಯದ ಗೋಡೆಯಲ್ಲಿ ಹುದುಗಿ ಹೋಗಿರುತ್ತವೆ. ವಜ್ರ ವಿನ್ಯಾಸ ಭದ್ರ ಭಾಗದಲ್ಲಿ ಹೊರ ಸೂಸುವಂತೆ ಚಿತ್ರಿತವಾಗಿದ್ದರೆ ಐದು ಮೂಲೆಗಳು ಕಂಡು ಬರುತ್ತವೆ ಮತ್ತು ಉಳಿದ ಮೂರು ಮೂಲೆಗಳು ಗೋಡೆಯ ಒಳ ಭಾಗದಲ್ಲಿ ಹುದುಗಿ ಹೋಗಿರುತ್ತವೆ.

ಸೋಮನಾಥಪುರದಲ್ಲಿನ ಕೇಶವ ದೇವಾಲಯ ಮತ್ತು ಅಮೃತಾಪುರ ಅಮೃತೇಶ್ವರ ದೇವಾಲಯ ಭಿತ್ತಿಯಲ್ಲಿ ದ್ರಾವಿಡ ರೀತಿಯ ಎಂಟು ಮೂಲೆಗಳ ಅಧಿಷ್ಠಾನದಿಂದ ಸ್ತೂಪಿವರೆಗಿನ ಪ್ರಾಸಾದ ಚಿತ್ರಿತವಾಗಿದೆ. ಅಮೃತಾಪುರದ ಬಿತ್ತಿಯಲ್ಲಿರುವ ಒಂದು ಶಿಖರ ಮಾದರಿಯ ಕರ್ಣ ಕೂಟದಲ್ಲಿ ವಜ್ರ ವಿನ್ಯಾಸ ಇದೆ. ಮಂಟಪ ಭಾಗದಲ್ಲಿ ಕಕ್ಷಾಸನಕ್ಕೆ ಒರಗಿರುವಂತೆ ಇರುವ ಅಧಿಷ್ಠಾನದಿಂದ ಸ್ತೂಪಿವರೆಗಿನ ಒಂದು ಮಾದರಿಯ ಕಂಬವೊಂದರಲ್ಲಿ ವಜ್ರ ವಿನ್ಯಾಸ ಇದೆ. ಗೋವಿಂದೇಶ್ವರ ಮತ್ತು ನಾಕೇಶ್ವರ ದೇವಾಲಯದ ಭಿತ್ತಿಯ ಮೇಲೆ ವಜ್ರ ಪ್ರಭೇದ ತಳ ವಿನ್ಯಾಸ ಮತ್ತು ಶಿಖರ ಮಾದರಿ ಚಿತ್ರಿತವಾಗಿದೆ.


ಮುಳ್ಳೂರಿನ ಲಕ್ಷ್ಮೀಕಾಂತ ದೇವಾಲಯ ಚೌಕಾಕಾರವಾಗಿದ್ದು ಕರ್ಣ, ಉಪ ಭದ್ರ ಮತ್ತು ಭದ್ರ ಭಾಗಗಳನ್ನು ಹೊಂದಿದೆ. ಕರ್ಣ ಭಾಗದಲ್ಲಿ ಮತ್ತು ಭದ್ರ ಭಾಗದ ಮಧ್ಯದಿಂದ ವಜ್ರ ವಿನ್ಯಾಸ ಹೊರ ಬಂದಿದೆ. ಈ ಎರಡೂ ಭಾಗದಲ್ಲಿ ಎಂಟು ಮೂಲೆಗಳ ವಜ್ರದಲ್ಲಿ ಐದು ಮೂಲೆಗಳು ಕಂಡುಬರುತ್ತಿದ್ದು ಉಳಿದ ಮೂರು ಮೂಲೆಗಳು ಗೋಡೆಯಲ್ಲಿ ಹುದುಗಿ ಹೋಗಿವೆ.



ಮುಳ್ಳೂರು ಲಕ್ಷ್ಮೀಕಾಂತ ದೇವಾಲಯ

ವಜ್ರ ವಿನ್ಯಾಸವನ್ನು ಈ ಕೆಳಗಿನ ದೇವಾಲಯಗಳಲ್ಲಿ ಅಳವಡಿಸಿರುವುದನ್ನು ಕಾಣಬಹುದು. ಆನೇಕನ್ನಂಬಾಡಿ ನಾರಾಯಣ ಸ್ವಾಮಿ ದೇವಾಲಯ ಮತ್ತು ಕೇರಳಾಪುರದ ವೀರಭದ್ರ ದೇವಾಲಯ ಮುಖ್ಯ ಗರ್ಭಗೃಹಗಳು ೧೬ ಮೂಲೆಗಳನ್ನು ಹೊಂದಿದೆ. ಇವೆರಡು ಸ್ಥಳಗಳು ೨೩.೦೦ ಕಿ.ಮೀ. ಅಂತರದಲ್ಲಿ ಇವೆ. ಅನೆಕನ್ನಂಬಾಡಿ ಮುಖ್ಯ ಗರ್ಭಗೃಹದ ಎಲ್ಲ ೧೬ ಮೂಲೆಗಳು ಒಂದೇ ಸಮನಾಗಿವೆ ಎಂಬ ತಳ ವಿನ್ಯಾಸದ ರೇಖಾ ನಕ್ಷೆ ೧೯೩೦ರ ಎಂ.ಎ.ಆರ್.ನಲ್ಲಿ ಬಿಂಬಿತವಾಗಿದೆ (ಪ್ಲೇಟ್ ೪). ಅಲ್ಲದೇ ಪ್ರತಿ ಮೂಲೆಯಲ್ಲಿ ಕುಡ್ಯಸ್ಥಂಬವನ್ನು ತೋರಿಸಲಾಗಿದೆ. ಕುಡ್ಯಸ್ಥಂಬ ಅಲಂಕರಣೆ ದಾಕ್ಷಿಣಾತ್ಯ ಅಂಶವೆಂದು ವಿದ್ವಾಂಸರು ಪರಿಗಣಿಸಿದ್ದಾರೆ. (ಡಾ. ಎಸ್.ವಿ.ಪಾಡಿಗಾರ). ಆದರೆ ನಾಲ್ಕು ವಿದಿಕ್ಕುಗಳಲ್ಲಿ (ಈಶಾನ್ಯ, ವಾಯವ್ಯ, ನೈರುತ್ಯ, ಆಗ್ನೇಯ ದಿಕ್ಕುಗಳಲ್ಲಿ) ವಜ್ರ ವಿನ್ಯಾಸ ಇರುವುದನ್ನು ಕಾಣಬಹುದು. ವಜ್ರ ವಿನ್ಯಾಸದಲ್ಲಿ ಮೂರು ಮೂಲೆಗಳು ಕಾಣುತ್ತವೆ ಮತ್ತು ಉಳಿದಂತೆ ಐದು ಮೂಲೆಗಳು ಭಿತ್ತಿಯ ಒಳಗಡೆ ಸೇರಿ ಹೋಗಿದೆ. (ದೇವಾಲಯದ ನಕ್ಷೆಯನ್ನು ನೋಡಿ).

ಅರಸೀಕರೆಯ ಶಿವ ದೇವಾಲಯ ಗರ್ಭಗೃಹ ೮ ಮೂಲೆ ಮತ್ತು ೮ ಮುಖಗಳನ್ನು ಹೊಂದಿದೆ. ನಾಲ್ಕು ವಿದಿಕ್ಕುಗಳಲ್ಲಿ ವಜ್ರ ವಿನ್ಯಾಸ ಇದೆ. ನಾಲ್ಕು ಪ್ರಮುಖ ದಿಕ್ಕಿನಲ್ಲಿರುವ ಸಾದಾ ಮೂಲೆ ಇದೆ. ವಿದಿಕ್ಕುಗಳಲ್ಲಿರುವ ವಜ್ರ ವಿನ್ಯಾಸ ಮತ್ತು ದಿಕ್ಕುಗಳಲ್ಲಿರುವ ಸಾದಾ ಮೂಲೆಯ ಮಧ್ಯ ಭದ್ರ ವಿನ್ಯಾಸ ಅಳವಡಿಸಲಾಗಿದೆ. ಆಡಮ್ ಹಾರ್ಡಿಯವರು ಈ ದೇವಾಲಯ ಗರ್ಭಗೃಹದ ಮೂಲತಚ್ಛಂದ ೨೨.೫೦ ಡಿಗ್ರಿ ತಿರುಗಿದೆಯಂದು ಹೇಳುತ್ತಾರೆ. ಆದರೆ ಇದು ತಿರುಗಿದ ತಲಚ್ಛಂದವಲ್ಲ.



ಅರಸೀಕೆರೆ ಶಿವ ದೇವಾಲಯ

ಭದ್ರಾವತಿಯ ಲಕ್ಷ್ಮೀನರಸಿಂಹ ದೇವಾಲಯ ತ್ರಿಕೂಟ ಹೊಂದಿದ್ದು ಎಲ್ಲ ಮೂರು ಗರ್ಭಗೃಹಗಳು ೧೬ ಮೂಲೆಗಳನ್ನು ಹೊಂದಿದೆ. ಶಿಲ್ಪಿ ಮಾಬ ಉಲ್ಲೇಖ ಹಲವು ವಿಗ್ರಹಗಳಲ್ಲಿ ಇದೆ. ಮಾಬ ಹೆಸರಿನ ಶಿಲ್ಪಿ ಹಳೇಬೀಡಿನ ಹೊಯ್ಸಳೇಶ್ವರ ದೇವಾಲಯ ಮತ್ತು ಕೇದಾರೇಶ್ವರ ದೇವಾಲಯದಲ್ಲಿ ಕಂಡು ಬರುತ್ತದೆ. ಪ್ರಮುಖ ಮೂರು ದಿಕ್ಕುಗಳಲ್ಲಿ ಮತ್ತು ನಾಲ್ಕು ವಿದಿಕ್ಕುಗಳಲ್ಲಿ ವಜ್ರ ವಿನ್ಯಾಸ ಇದೆ. ನವರಂಗದ ನಾಲ್ಕು ಮೂಲೆಗಳಲ್ಲಿ ವಜ್ರ ವಿನ್ಯಾ ಇದೆ. ಉಳಿದಂತೆ ಮುಖ್ಯ ಗರ್ಭಗೃಹದಲ್ಲಿ ವಜ್ರ ವಿನ್ಯಾಸಗಳ ಮಧ್ಯೆ ಭದ್ರ ಅಲಂಕರಣ ಇದೆ. ಉಳಿದ ಉತ್ತರ ಮತ್ತು ದಕ್ಷಿಣ ದಿಕ್ಕಿನಲ್ಲಿರುವ ಗರ್ಭಗೃಹಗಳ ವಜ್ರ ವಿನ್ಯಾಸಗಳ ಮಧ್ಯೆ ಚೂಪಾದ ಕತ್ತಿಯ ಅಲುಗನಂತೆ ಇರುವ ಅಲಂಕರಣ ಇದೆ.

ನುಗ್ಗೇಹಳ್ಳಿಯ ಸದಾಶಿವ ದೇವಾಲಯ ಭೂಮಿಜ ಮಾದರಿಯಲ್ಲಿದೆ ಎಂದು ಗುರ್ತಿಸಲಾಗಿದೆ. ಎಂಟು ಮುಖಗಳಿಂದ ಹೊರಬಂದಿರುವ ಕರ್ಣ ಶೃಂಗಗಳ ಮಾಲೆಯು ವಜ್ರ ವಿನ್ಯಾಸ ಹೊಂದಿವೆ.

ರಾಮನಾಥಪುರದ ರಾಮನಾಥೇಶ್ವರ ದೇವಾಲಯ ೧೬ ಮೂಲೆಗಳನ್ನು ಹೊಂದಿದೆ. ಪ್ರಮುಖ ಮೂರು ದಿಕ್ಕುಗಳಲ್ಲಿ ಮತ್ತು ನಾಲ್ಕು ವಿದಿಕ್ಕುಗಳಲ್ಲಿ ವಜ್ರ ವಿನ್ಯಾಸ ಇದೆ. ವಜ್ರ ವಿನ್ಯಾಸಗಳ ಮಧ್ಯೆ ಚೂಪಾದ ಕತ್ತಿಯ ಅಲುಗನಂತೆ ಇರುವ ಅಲಂಕರಣ ಇದೆ.

ಅರಸೀಕರೆ, ಅನೇಕನ್ನಂಬಾಡಿ ಮತ್ತು ಭದ್ರಾವತಿಯ ದೇವಾಲಯಗಳ ನವರಂಗದ ನಾಲ್ಕು ಮೂಲೆಗಳಲ್ಲಿ ಸಹ ವಜ್ರ ವಿನ್ಯಾಸ ಅಳವಡಿಸಲಾಗಿದೆ.

ಸ್ವಸ್ತಿಕ ಪ್ರಭೇದ – ಎಂಟು ಭದ್ರಗಳನ್ನು ಹೊಂದಿದ ವಿನ್ಯಾಸ ಸ್ವಸ್ತಿಕ. ಕರ್ನಾಟಕದಲ್ಲಿ ಈ ಮಾದರಿಯ ದೇವಾಲಯಗಳು ಇಲ್ಲ. ಕೊರವಂಗಲ ಗೋವಿಂದೇಶ್ವರ ಮತ್ತು ನಾಕೇಶ್ವರ ದೇವಾಲಯದ ಭಿತ್ತಿಯ ಮೇಲೆ ಸ್ವಸ್ತಿಕ ಪ್ರಭೇದದ ತಳ ವಿನ್ಯಾಸ ಮತ್ತು ಶಿಖರ ಮಾದರಿ ಚಿತ್ರಿತವಾಗಿದೆ. ಇತ್ತೀಚಿನ ಕೆಲವು ದೇವಾಲಯಗಳು ಈ ಮಾದರಿಯಲ್ಲಿ ಇವೆ. ಉದಾಹರಣೆಗೆ ಸಾಗರದ ಮಾರಿಕಾಂಬಾ ದೇವಾಲಯ.

ಶಂಕು ಪ್ರಭೇದ – ಪ್ರತಿಭದ್ರ ಭಾಗದಲ್ಲಿ ಕರ್ಣ ಇರುವ ಅಷ್ಟಾಶ್ರ ಪ್ರಭೇದದ ಶಂಕು ಉಪ ಪ್ರಭೇದವಾಗಲಿದೆ. ಭದ್ರ ಭಾಗದೊಂದಿಗಿರುವ ಸಾಮಾನ್ಯ ಚೌಕ ವಿನ್ಯಾಸ ತೆಗೆದುಕೊಳ್ಳಿ. ಈ ರೀತಿಯ ಚೌಕ ವಿನ್ಯಾಸದ ಪ್ರತಿಭದ್ರ ಭಾಗದಲ್ಲಿ ಪುನಃ ಕರ್ಣಗಳು ಬಂದು ಅವು ೩೦ ಡಿಗ್ರಿ ಮತ್ತು ೬೦ ಡಿಗ್ರಿ ಕೋನದಲ್ಲಿದ್ದರೆ ಶಂಕು ಉಪ ಪ್ರಭೇದ. ಅನೇಕ ಶಂಕು ಮಾದರಿಯ ದೇವಾಲಯಗಳು ಕರ್ನಾಟಕದಲ್ಲಿ ಕಂಡು ಬರುತ್ತವೆ. ಅವುಗಳು ತಲ ವಿನ್ಯಾಸ ಗಮನಿಸಬಹುದು. ಅವು ಹೀಗಿವೆ:

ಬೇಲೂರಿನ ಕೇಶವ ದೇವಾಲಯ (ಇಸಿ ೪),


ಹಳೇಬೀಡಿನ ಹೊಯ್ಸಳೇಶ್ವರ ಶಾಂತಲೇಶ್ವರ ದೇವಾಲಯ (ಇಸಿ ೪),

ಬೆಳ್ಳೂರಿನ ಮಾಧವರಾಯ ದೇವಾಲಯ (ಎಂಎಆರ್ ೧೯೩೯),


ಸೆಟ್ಟಿಕೆರೆಯ ಯೋಗಮಾಧವ ದೇವಾಲಯ (ಎಂಎಆರ್ ೧೯೩೪)

ತುರುವೇಕರೆಯ ಚೆನ್ನಕೇಶವ ದೇವಾಲಯ,

ಹಾರನಹಳ್ಳಿಯ ಸೋಮೇಶ್ವರ ದೇವಾಲಯ,



ಬೆಳ್ಳೂರಿನ ಮಾಧವರಾಯ ದೇವಾಲಯ



ಬೇಲೂರು ಚೆನ್ನಕೇಶವ ದೇವಾಲಯ

ಔತ್ತರೇಯ ಸಂಪ್ರದಾಯದಲ್ಲಿ ದೇವಾಲಯದ ಮುಂಚಾಚಿದ ಭದ್ರ ಭಾಗದಲ್ಲಿ ನಾಸಿಗಳಿರುತ್ತವೆ. ಪಟ್ಟದಕಲ್ಲಿನ ಗಳಗನಾಥ ದೇವಾಲಯವನ್ನು (ಕ್ರಿ.ಶ ೭೨೦) ಉದಾಹರಣೆಗಾಗಿ ತೆಗೆದುಕೊಳ್ಳಬಹುದು. ಮುಂಚಾಚಿದ ಭದ್ರ ಭಾಗದಲ್ಲಿ ಮಧ್ಯದಲ್ಲಿ ಪೂರ್ಣ ನಾಸಿ ಮತ್ತು ಅಕ್ಕ ಪಕ್ಕದಲ್ಲಿ ಅರ್ಧ ನಾಸಿಗಳು ಸೇರಿಸಲ್ಪಟ್ಟಿವೆ. ಒಂದರ ಮೇಲೊಂದು ಪೇರಿಸಿದ ನಾಸಿಗಳ ಸರಮಾಲೆಯೇ ಭದ್ರಭಾಗದ ಪಟ್ಟಿಕೆಯಲ್ಲಿ ಚಿತ್ರಿತವಾಗಿದೆ. ಆಲಂಪುರದ ವಿಶ್ವಬ್ರಹ್ಮ ದೇವಾಲಯದಲ್ಲೂ (ಕ್ರಿ.ಶ ೭೯೦) ಈ ರೀತಿಯ ನಾಸಿ ಪಟ್ಟಿಕೆ ಇದೆ. ಈ ನಾಸಿಗಳ ಒಂದು ಹೆಣಿಗೆಯೇ ಇದ್ದಂತೆ ತೋರುತ್ತದೆ. (ಅಡಮ್ ಹಾರ್ಡಿ) ಕರ್ನಾಟಕದಲ್ಲಿ ನಾಸಿ ಇರುವ ಪಟ್ಟಿಕೆಯ ಚಿತ್ರಣ ಬಹು ಬೇಗ ಲತಾ ಪಟ್ಟಿಕೆಯಾಗಿ ಬದಲಾಯಿತು ಮತ್ತು ನಂತರ ಕಾಲದಲ್ಲಿ ಕೇವಲ ಕೆಳಗಿನಿಂದ ಮೇಲಕ್ಕೆ ಸಣ್ಣದಾಗುವ ಒಂದು ಸಾದಾ ಪಟ್ಟಿಕೆಯಾಗಿ ಚಿತ್ರಿತವಾಗಿರುವುದನ್ನು ಕಾಣಬಹುದು. ಮೂಲೆ ಶಂಕರೇಶ್ವರ ದೇವಾಲಯ ಉತ್ತಮ ಉದಾಹರಣೆ. ಭದ್ರ ಭಾಗವಿರುವ ಶಿಖರದಲ್ಲಿ ಸರಳ ತ್ರಿಕೋಣಾಕಾರದ ಪಟ್ಟಿಕೆ ಇದೆ. ಬೇಲೂರಿನ ಶಂಕರೇಶ್ವರ ದೇವಾಲಯ ಫಾಂಸನಾ ಮಾದರಿಯಾದರೂ ಭದ್ರ ಭಾಗದಲ್ಲಿ ತ್ರಿಕೋಣಾಕಾರದ ಸಾದಾ ಪಟ್ಟಿಕೆ ಇದೆ. ಪಟ್ಟಿಕೆಗಳು ಪ್ರಾಯಶಃ ಔತ್ತರೇಯ ಸಂಪ್ರದಾಯದ ನಾಸಿಗಳ ಸೂಚಕ ಲಕ್ಷಣವಾಗಿ ಮುಂದುವರಿಕೆ ಕಂಡಿದೆ. ನುಗ್ಗೆಹಳ್ಳಿ ಸದಾಶಿವ ದೇವಾಲಯದ ಪ್ರತಿ ಶೃಂಗ ೮ ಮೂಲೆ ಹೊಂದಿದೆ, ಐದು ಮೂಲೆಗಳು ಕಾಣುತ್ತವೆ, ಇವುಗಳ ಮಧ್ಯ ನಾಲ್ಕು ಪಟ್ಟಿಕೆಗಳಿವೆ. ಇವು ಕೆಳಗಿನಿಂದ ಮೇಲಕ್ಕೆ ಹೋದಂತೆ ಸಣ್ಣದಾಗುತ್ತವೆ.

ಚತುರಶ್ರ ಮಾದರಿಯಲ್ಲಿ ೨೫ ಉಪ ಮಾದರಿಗಳಿವೆ. ಚೌಕ, ಧೀರ್ಘಚೌಕ, ಅಷ್ಟಕೋನಾಕಾರ, ವೃತ್ತ, ಧೀರ್ಘವೃತ್ತ ವಿನ್ಯಾಸಗಳಲ್ಲಿ ೧೬, ೨, ೩, ೨ ಮತ್ತು ೨ ಉಪ ಮಾದರಿಗಳಿವೆ. ಅಷ್ಟಕೋಣಾಕಾರ ಮಾದರಿಯಲ್ಲಿ ವಜ್ರಕ, ಸ್ವಸ್ತಿಕ ಮತ್ತು ಶಂಕು ಉಪ ಮಾದರಿಗಳು. (ಸಮರಾಂಗಣ ಸೂತ್ರಧಾರ ೫೬/೯-೧೫ ?)

ನುಗ್ಗೇಹಳ್ಳಿ ಸದಾಶಿವ ದೇವಾಲಯ ಕರ್ನಾಟಕ ಶೈಲಿಯಲ್ಲಿರುವ ಭೂಮಿಜ ಮಾದರಿ ಎಂದು ಗುರ್ತಿಸಲಾಗಿದೆ. ಆದರೆ ಇದು ಮೂಲತಃ ಅಷ್ಟಾಶ್ರ ಮುಖವುಳ್ಳ ಸ್ವಸ್ತಿಕ ಮಾದರಿ ದೇವಾಲಯವೆಂದು ತೋರುತ್ತದೆ. ಎಂಟು ಮುಖಗಳ ಪಟ್ಟಿಕೆ ಇದೆ. ಇದರ ಅಂಚುಗಳಲ್ಲಿ ಲತಾ ಕೆತ್ತನೆ ಇದೆ. ಈ ಪಟ್ಟಿಕೆಯಲ್ಲಿ ಕ್ರಮವಾಗಿ ಮೇಲೇರುತ್ತಾ ಹೊದಂತೆ ಸಣ್ಣದಾಗುವು ಮೂರು ಸಣ್ಣ ಶೃಂಗಗಳು ಇವೆ. ಈ ಶೃಂಗಳು ಎಂಟು ಮೂಲೆಗಳನ್ನು ಹೊಂದಿವೆ. ನಮಗೆ ಐದು ಮೂಲೆಗಳು ಗೋಚರವಾಗಿವೆ ಮತ್ತು ಉಳದಂತೆ ಇರುವ ಮೂರು ಮೂಲೆಗಳು ಗೋಡೆಯ ಪಟ್ಟಿಕೆ ಭಾಗದಲ್ಲಿ ಹುದುಗಿ ಹೋಗಿವೆ.

ಅಂತೆಯೇ ೧೬ ಮೂಲೆಗಳ ದೇವಾಲಯದಲ್ಲಿ ಪ್ರತಿ ಮೂಲೆಗಳ ಮಧ್ಯದಲ್ಲಿನ ಕೋನವು ೨೨.೫೦ ಡಿಗ್ರಿ ಇರುತ್ತದೆ.

ಹಿರೆಸಿಂಗನಗುತ್ತಿಯಲ್ಲಿ ವಜ್ರ ವಿನ್ಯಾಸದ ಗರ್ಭಗೃಹ ಇರುವ ದೇವಾಲಯವಿದೆ. ಸೂಡಿಯ ಜೋಡು ಕಲಶದ ಗುಡಿ ಮತ್ತು ನರಗುಂದದ ದಂಡೇಶ್ವರ ದೇವಾಲಯದ ಭದ್ರ ಭಾಗದಲ್ಲಿ ವಜ್ರ ಅಲಂಕರಣವಿದೆ.

ದ್ರಾವಿಡ ಪ್ರಾಸಾದ ಮಾದರಿಯಲ್ಲಿ ವೃತ್ತ ಪ್ರಭೇದ ವಿವರಣೆಯಲ್ಲಿ ನಾಲ್ಕು ಉಪ ಭೇದಗಳಿವೆ. ಅವು ಪದ್ಮ, ಮಹಾಪದ್ಮ, ಕೈಲಾಸ ಮತ್ತು ಮೇರುನಾಯಕ.

ಅಷ್ಟಕೋಣಾಃ ಪಂಛಭೂಮಾ ಪದ್ಮನಾಮಾಚ ಕಾಮದಃ
ಪಂಛಭೂಮಾ ದ್ವ್ಯಷ್ಟದಲಾ ಮಹಾಪದ್ಮ ಇತಿ ಸ್ಮೃತಃ ॥ ೩೧ ॥
ಚತುರ್ವಿಂಶತಿ ಭಿರ್ರ್ವೃತ್ತಃ ಕೈಲಾಸ ಸಪ್ತಭೂಮಿಕಃ
ದ್ವಾತ್ರಂಶದ್ಭಿದಲೈರ್ವೃತ್ತಃ ಸಭವೇನ್ಮೆರು ನಾಯಕಃ ॥ ೩೨ ॥ **(ಅ.ಪೃ ಅಧ್ಯಾಯ ೧೭೪ ದ್ರಾವಿಡ ಪ್ರಾಸಾದ)**

ಎಂಟು ಕೋಣಗಳನ್ನು (ಮೂಲೆಗಳನ್ನು) ಹೊಂದಿ ಗುಂಡಾಗಿ ತೋರುವ ೫ ಅಂತಸ್ತು (ಭೂಮಿ/ತಲ) ಇರುವುದು ಪದ್ಮ ಪ್ರಾಸಾದ. ೧೬ ಕೋಣಗಳನ್ನು ಹೊಂದಿ ೫ ಅಂತಸ್ತು ಇರುವುದು ಮಹಾಪದ್ಮ ಪ್ರಾಸಾದ. ೨೪ ಕೋಣಗಳನ್ನು ಹೊಂದಿ ೭ ಅಂತಸ್ತು ಇರುವುದು ಕೈಲಾಸ ಪ್ರಾಸಾದ. ೩೨ ಕೋಣಗಳನ್ನು ಹೊಂದಿ ೭ ಅಂತಸ್ತು ಇರುವುದು ಮೇರುನಾಯಕ ಪ್ರಾಸಾದ.

ದೇವ ವೈದ್ಯ ಧನ್ವಂತ್ರಿ ಶಿಲ್ಪ

ಪದ್ಮಜಾ ದೇಸಾಯಿ*

ಕ್ರಿ.ಶ. ೧೩೩೬ರಲ್ಲಿ ಸ್ಥಾಪನೆಗೊಂಡ ವಿಜಯನಗರದ ಸಾಮ್ರಾಜ್ಯವನ್ನು ವಿದ್ಯಾರಣ್ಯರ ಮಾರ್ಗದರ್ಶನದಲ್ಲಿ ಸಂಗಮ ವಂಶದ ಸಹೋದರರಾದ ಹರಿಹರ ಬುಕ್ಕರು ಈ ಸಾಮ್ರಾಜ್ಯವನ್ನು ಸ್ಥಾಪನೆ ಮಾಡಿದರು. ವಿಜಯನಗರದ ಅರಸರು ಕಲಾ ಪ್ರೇಮಿಗಳು ಆಗಿದ್ದರು. ಎಂಬುದಕ್ಕೆ ಅವರು ನಿರ್ಮಿಸಿದ ಸ್ಮಾರಕಗಳೇ ಸಾಕ್ಷಿಯಾಗಿವೆ. ಇಡೀ ಸಾಮ್ರಾಜ್ಯದ ತುಂಬೆಲ್ಲಾ ಹರಡಿರುವ ಅಳಿದುಳಿದ ಅವಶೇಷಗಳು ಅವರ ದೈವ ಭಕ್ತಿಯಲ್ಲಿ ತಲ್ಲೀನರಾಗಿದ್ದರು ಎಂಬುದನ್ನು ಸೂಚಿಸುತ್ತದೆ.

ಪ್ರಸ್ತುತ ಪ್ರಬಂಧದ ಶೀರ್ಷಿಕೆಯು "ದೇವ ವೈದ್ಯ ಧನ್ವಂತ್ರಿ ಶಿಲ್ಪ" ಎಂಬುದಾಗಿದ್ದು, ಧನ್ವಂತ್ರಿ ಶಿಲ್ಪದ ಪ್ರಾಚೀನತೆ ಮತ್ತು ಶಿಲ್ಪದ ಕುರಿತು ವಿವರಿಸುವುದು, ಮತ್ತು ಈ ಶಿಲ್ಪವು ಆಗಮ ಸಹಿತವಾಗಿ ರಚನೆಯಾಗಿದೇಯೋ/ ಅಥವಾ ಆಗಮರಹಿತವಾಗಿ ರಚನೆಯಾದೆಯೋ ಎಂಬುದನ್ನು ಚರ್ಚಿಸುವುದು ಈ ಲೇಖನದ ಮೂಲ ಉದ್ದೇಶವಾಗಿದೆ.

ಧನ್ವಂತ್ರಿ ಶಿಲ್ಪದ ಪ್ರಾಚೀನತೆ

ಧನ್ವಂತ್ರಿ ಶಿಲ್ಪದ ಪ್ರಾಚೀನತೆಯನ್ನು ಅವಲೋಕಿಸಿದಾಗ, ಪುರಾಣ ಕಥೆಗಳಲ್ಲಿ ಬರುವ ಸಮುದ್ರ ಮಥನ ಸಂದರ್ಭದಲ್ಲಿ ಸುರರು ಮತ್ತು ಅಸುರರಿಗೆ ನಡೆಯುವ ಯುದ್ಧದಲ್ಲಿ ಸಮುದ್ರ ಮಥನದಿಂದ ಅಮೃತವನ್ನು ಪಡೆಯುವುದಕ್ಕೆ ಸೆಣಸಾಟವು ನಡೆಯುತ್ತದೆ. ಆ ಸಂದರ್ಭದಲ್ಲಿ ಸಮುದ್ರದಿಂದ ಹಲವು ಅಮೂಲ್ಯ ವಸ್ತುಗಳು ಹೊರಗೆ ಬರುತ್ತವೆ. ಅದರಲ್ಲಿ ಕೌಸ್ತುಭ, ಕಾಮೇಧೆನು, ಚಿಂತಾಮಣಿ, ಅಮೃತ ಕಲಶ ಹೊತ್ತ ಧನ್ವಂತ್ರಿ ಹೀಗೆ ಹತ್ತು ಹಲವು ವಸ್ತುಗಳು ಹೊರಗೆ ಬರುತ್ತವೆ. ಶಿವನು ಸಮುದ್ರ ಮಂಮರ್ಥ ಸಂದರ್ಭದಲ್ಲಿ (ವಿಷ)ಹಾಲಾಹಲವನ್ನು ಕುಡಿದು ನೀಲಕಂಠನಾಗುತ್ತಾನೆ. ಅಮೃತ ಕಳಶ ಹಿಡಿದ ಧನ್ವಂತ್ರಿಯು ಸುಂದರ ಕಾಯಕದವನು ವಿಷ್ಣುವಿನ ಅಪರೂಪದ ರೂಪವಾದ ಮೋಹಿನಿ ರೂಪದಲ್ಲಿ ಅಸುರರಿಗೆ ಅಮೃತವನ್ನು ಹಂಚುತ್ತಾನೆ.



ಹಜಾರರಾಮ ದೇವಾಲಯ, ಹಂಪಿ
ಹಜಾರರಾಮ ದೇವಾಲಯದ ನವರಂಗ

ಪ್ರತಿಮಾ ಶಾಸ್ತ್ರದ ವಿವರಗಳು

* ಆಗಮ ಮತ್ತು ಪುರಾಣಗಳಲ್ಲಿ ಈ ಧನ್ವಂತ್ರಿ ಶಿಲ್ಪದ ಪ್ರತಿಮಾಲಕ್ಷಣಗಳನ್ನು ವಿವರಿಸಲಾಗಿದೆ. ಆಗಮಗಳು ಈ ಶಿಲ್ಪದ ವಿವರಣೆಯನ್ನು ನೀಡಿಲ್ಲ. ಆದರೆ ವಿಷ್ಣು ಧರ್ಮೋತ್ತರ, ಪುರಾಣವು ಧನ್ವಂತ್ರಿ ಶಿಲ್ಪದ ಪ್ರತಿಮಾ ಲಕ್ಷಣದ ವಿವರಣೆಯನ್ನು ನೀಡಿದೆ.
* ವಿಷ್ಣುಧರ್ಮೋತ್ತರ ಪುರಾಣದ ಪ್ರಕಾರ ಧನ್ವಂತ್ರಿ ಶಿಲ್ಪವನ್ನು ಸುಂದರ ಕಾಯದ ಪುರುಷನ ರೂಪದಲ್ಲಿ ಕೆತ್ತಲಾಗುತ್ತದೆ. ಅವನ ಎರಡು ಕೈಗಳಲ್ಲಿ ಅಮೃತ ತುಂಬಿದ ಕಲಶಗಳನ್ನು ಹಿಡಿದಿರಬೇಕೆಂಬ ನಿಯಮವಿದೆ.
* ಹೊಯ್ಸಳರ ಕಾಲದ ದೇವಾಲಯಗಳಲ್ಲಿ ಹೆಚ್ಚಾಗಿ ಈ ಧನ್ವಂತ್ರಿ ಶಿಲ್ಪಗಳನ್ನು ಕಾಣಬಹುದು. ಆದರೆ ಬೇರೆ, ಬೇರೆ ರಾಜವಂಶಗಳ ಕಾಲದಲ್ಲಿ ಈ ಶಿಲ್ಪದ ಕೆತ್ತನೆ, ವಿರಳವಾಗಿರುತ್ತದೆ.

* W/o ಅಶ್ವಿನ್ ಕುಮಾರ್, ಗುಮಗೇರಾ ಅಂಚೆ, ಕುಷ್ಟಗಿ ತಾಲ್ಲೂಕು, ಕೊಪ್ಪಳ ಜಿಲ್ಲೆ, ಮೊ. ೯೩೪೨೬ ೨೧೧೧೭

* ಎರಡು ಕೈಗಳಿರುವ ವಿಷ್ಣುವು ಪದ್ಮಾಸನದಲ್ಲಿ ಕುಳಿತು ಎರಡೂ ಕೈಗಳಲ್ಲಿ ಕಲಶಗಳನ್ನು ಹೊಂದಿರಬೇಕು, ಶಂಖ ಮತ್ತು ಚಕ್ರಗಳು ಬಲ ಮತ್ತು ಎಡಗೈಯಲ್ಲಿ ಹಿಡಿದಿರಬೇಕು. ಪ್ರಭಾವಳಿಯಲ್ಲಿ ಕೆತ್ತಲಾಗಿರುತ್ತದೆ. ಹೊಯ್ಸಳರ ಕಾಲದಲ್ಲಿ ಇಂತಹ ಶಿಲ್ಪಗಳು ಹೆಚ್ಚಾಗಿ ಕಂಡುಬರುತ್ತವೆ.

ಧನ್ವಂತ್ರಿ ಶಿಲ್ಪದ ಪ್ರತಿಮಾ ಲಕ್ಷಣದ ವಿವರಗಳು

ಹಂಪಿಯ ಹಜಾರರಾಮದೇವಾಲಯದ ನವರಂಗದ ನಾಲ್ಕು ಕಪ್ಪು ಬೆಣಚುಕಲ್ಲಿನ ಕಂಬಗಳಲ್ಲಿ ೨ನೇ ಕಂಬದ ಮಧ್ಯದ ಭಾಗದ ದಕ್ಷಿಣಕ್ಕೆ ಇರುವ ಈ ಶಿಲ್ಪವು ವಿಶೇಷವಾದ ಧನ್ವಂತ್ರಿ ಶಿಲ್ಪವಾಗಿದೆ.

ಈ ಶಿಲ್ಪವು ಮಕರ ತೋರಣದ ಪ್ರಭಾವಳಿಯಲ್ಲಿ ಕೆತ್ತಲಾಗಿದೆ. ವಿಷ್ಣುವು (ಧನ್ವಂತ್ರಿ) ಪೀಠದ ಮೇಲೆ ಪದ್ಮಾಸನದಲ್ಲಿ ಕುಳಿತಿದೆ. ಎರಡು ಕೈಗಳನ್ನು ಮಾತ್ರ ಹೊಂದಿದೆ. ಎಡಗೈಯಲ್ಲಿ ಅಮೃತ ಕಲಶವನ್ನು ಹೊಂದಿದೆ ವಿಶೇಷವಾಗಿದೆ. ಬಲಗೈಯನ್ನು ತೊಡೆಯಮೇಲೆ ಇರಿಸಲಾಗಿದೆ.

ಈ ಶಿಲ್ಪವು ಕಪ್ಪು ಗ್ರಾನೈಟ್ ಶಿಲೆಯಲ್ಲಿ ಇರುವುದು ತುಂಬಾ ಸುಂದರವಾಗಿ ಕೆತ್ತಲ್ಪಟ್ಟಿದೆ. ಧನ್ವಂತ್ರಿ ಶಿಲ್ಪವು ಕಿರೀಟ ಮುಕುಟ, ಕುಂಡಲಗಳು, ತೋಳ್ಬಂದಿ, ಕೇಯೂರ ಕಡಗಗಳು, ಯಜ್ಞೋಪವೀತ, ಕೊರಳಹಾರ, ಕಂಠಹಾರ ಹೊಂದಿದ್ದು, ನೆರಿಗೆವುಳ್ಳ ಧೋತಿಯ ಸುಂದರವಾಗಿ ಕೆತ್ತಲ್ಪಟ್ಟಿದೆ. ಇದು ಆಗಮದರಹಿತ ಶಿಲ್ಪವಾಗಿದೆ ಎಂದು ಗುರುತಿಸಬಹುದು. ಏಕೆಂದರೆ, ವಿಷ್ಣುಧರ್ಮೋತ್ತರ ಪುರಾಣದಲ್ಲಿ ಧನ್ವಂತ್ರಿ ಶಿಲ್ಪದ ವಿವರಣೆಗಿಂತ ಭಿನ್ನವಾದ ಶಿಲ್ಪವಿದೆ.

ಈ ಹಜಾರರಾಮ ದೇವಾಲಯವು ೧೪-೧೫ನೇ ಶತಮಾನದಲ್ಲಿರುವ ಅಪ್ಪಟ ವೈಷ್ಣವ ದೇವಾಲಯ ಇಮ್ಮಡಿ ಪ್ರೌಢ ದೇವಾರಯನ ಕಾಲದಲ್ಲಿ ನಿರ್ಮಾಣವಾಯಿತು. ಈ ದೇವಾಲಯದಲ್ಲಿ ೧೦೦೦ ಹೆಚ್ಚು ವಿಷ್ಣುವಿನ ವಿವಿಧ ರೀತಿಯ ಶಿಲ್ಪಗಳು ಇವೆ. ಹಜಾರ ಎಂದರೆ ಆವರಣ ಎಂದು ತಿಳಿಯಬಹುದು. ಹೀಗೆ ಈ ದೇವಲಯ ಗರ್ಭಗೃಹದಲ್ಲಿ ಯಾವುದೇ ಶಿಲ್ಪವಿಲ್ಲ ಆದರೆ ದೇವಾಲಯ ಒಳಗೆ, ಹೊರಗೆ, ಕುಂಬಗಳ ಮೇಲೆ ಅನೇಕ ವಿಶೇಷ ಶಿಲ್ಪಗಳು ಇವೆ. ಈ ದೇವಾಲಯದ ನವರಂಗದಲ್ಲಿರುವ ನಾಲ್ಕು ಕಂಬಗಳಲ್ಲಿರುವ ವಿಷ್ಣುವಿನ ವಿವಿಧ ರೀತಿಯ ಶಿಲ್ಪಿಗಳು ಇವೆ. ಪರವಾಸುದೇವ ಶಿಲ್ಪ ಇದೆ. ನವರಂಗದ ೪ನೇ ಕಂಬದಲ್ಲಿ ಧನ್ವಂತ್ರಿ ಶಿಲ್ಪವು ಇದೆ. ಈ ಶಿಲ್ಪ ವಿಶೇಷವಾಗಿದೆ.

ಸಮಾರೋಪ

ಒಟ್ಟಾರೆಯಾಗಿ ಈ ಧನ್ವಂತ್ರಿ ಶಿಲ್ಪವು ವಿಶೇಷವಾಗಿದೆ. ಸಮುದ್ರಮಥನದ ಸಂದರ್ಭದಲ್ಲಿ ಬಂದ ಈ ಶಿಲ್ಪವು ವಿಶೇಷವಾಗಿದೆ. ಅನೇಕ ಕಾಯಿಲೆಗಳಿಗೆ ಔಷಧಿಯನ್ನು ನೀಡುವ ಧನ್ವಂತ್ರಿ ದೇವ ವೈದ್ಯನ ಶಿಲ್ಪವು ಅಪರೂಪವಾಗಿ ಕೆತ್ತಲ್ಪಟ್ಟಿದೆ.

ಧನ್ವಂತ್ರಿ ಶಿಲ್ಪಗಳು ವಿವಿಧ ರೀತಿಯಲ್ಲಿ ಕೆತ್ತಲ್ಪಟ್ಟಿರುತ್ತವೆ. ಕುಳಿತ ಮತ್ತು ನಿಂತ ಭಂಗಿಯಲ್ಲಿರುತ್ತವೆ ಮತ್ತು ನಾಲ್ಕು ಕೈಗಳನ್ನು ಹೊಂದಿರುತ್ತವೆ. ಆದರೆ ಈ ಶಿಲ್ಪವು ಎರಡೇ ಕೈಗಳನ್ನು ಹೊಂದಿದ್ದು, ಒಂದೇ ಕೈಯಲ್ಲಿ ಅಮೃತ ಕಲಶವಿದೆ. ನಾಲ್ಕು ಕೈಗಳಿರುವ ಶಿಲ್ಪಗಳಲ್ಲಿ ಮೇಲಿನ ಕೈಗಳಲ್ಲಿ ಶಂಖ, ಚಕ್ರ, ಕೆಳಗಿನ ಕೈಗಳಲ್ಲಿ ಅಮೃತ ಕಲಶಗಳು ಇರುತ್ತವೆ.

ಇನ್ನೊಂದು ವಿಧದಲ್ಲಿ ಧನ್ವಂತ್ರಿ ನಾಲ್ಕು ಕೈಗಳನ್ನು ಹೊಂದಿದ್ದು, ಮೇಲಿನ ಕೈಗಳಲ್ಲಿ ಶಂಖ, ಚಕ್ರ, ಕೆಳಗಿನ ಕೈಗಳಲ್ಲಿ ಪುಸ್ತಕ (ಗ್ರಂಥ) ಆಯುರ್ವೇದದ ಗ್ರಂಥ ಮತ್ತು ಜಿಗಣಿ ಹುಳು ಇರುತ್ತದೆ. ಹೀಗೆ ಹಲವು ಬಗೆಯ ಶಿಲ್ಪಗಳನ್ನು ಕಾಣಬಹುದಾಗಿದೆ. ಆದರೆ ಈ ಶಿಲ್ಪವು ವಿಶೇಷವಾಗಿದೆ ಎಂದು ಇಲ್ಲಿ ಗುರುತಿಸಲಾಗಿದೆ. ಹಂಪಿ ಪಂಪರಲ್ಲಿ ದೊರೆತ ಏಕೈಕ ಧನ್ವಂತ್ರಿ ಶಿಲ್ಪವಾಗಿದೆ.

ಹಂಪಿಯನ್ನು ಕುರಿತ ಹಲವು ವಿದ್ವಾಂಸರು ಅಧ್ಯಯನವನ್ನು ಕೈಗೊಂಡಿದ್ದಾರೆ. ಅವರಲ್ಲಿ ಕೆ.ಎಂ. ಸುರೇಶ ಮತ್ತು ಜಾನಫ್ರಿಡ್ಜ, ಜಾರ್ಜ್‌ಮಿಷಲ್ ಇವರು ಈ ಶಿಲ್ಪವನ್ನು ಗಮನಿಸಿಲ್ಲ. ಆದರೆ ಶಿಲ್ಪವನ್ನು ಆಗಮಗಳ ಹಿನ್ನೆಲೆಯಲ್ಲಿ ಗುರುತಿಸಿಲ್ಲ. ಒಟ್ಟಾರೆಯಾಗಿ ಇದು ವಿಶೇಷವಾದ ಪ್ರತಿಮಾ ಲಕ್ಷಣವನ್ನು ಹೊಂದಿದೆ.

ಆಕರ ಗ್ರಂಥಗಳು

೧. ಪಿ.ಬಿ. ದೇಸಾಯಿ, ಕರ್ನಾಟಕ ಇತಿಹಾಸ, ಪು. ೧-೫.

೨. ಓ.ಎ. ಗೋಪಿನಾಥರಾವ್, ಹಿಂದೂ ಐಕೋನೋಗ್ರಫಿ, ಭಾಗ-೧, ಪು. ೨೪೫-೨೪೬.

೩. ಶ್ರೀನಿವಾಸ ಪಾಡಿಗಾರ, 'ವಿಷ್ಣುಕಲ್ಪ ಇನ್ ಕರ್ನಾಟಕ', ಪು. ೨೪೪-೨೪೫.

೪. ಕೆ.ಎಮ್. ಸುರೇಶ, '____ ಆರ್ಟ್ ಆಫ್ ಹಂಪಿ', ಪು. ೬೦-೬೫.

೫. ಎಸ್.ಕೆ. ರಾಮಚಂದ್ರರಾವ್.

೬. ಡಾ. ಶ್ರೀಮತಿ ಪದ್ಮಜಾ ದೇಸಾಯಿ, 'ಹಂಪಿ ಪರಿಸರದ ವೈಷ್ಣವ ಶಿಲ್ಪಗಳು', (ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ), ಪು. ೧೦೮.

ಚಿತ್ರದುರ್ಗ ಪಾಳೆಯಗಾರರ ಕಾಲದ ಗಣಪತಿ ದೇವಾಲಯ

ಎನ್. ಶಕುಂತಲ*


ವೇದಮೂರ್ತಿ, ಅನಾರ್ಯ ದೇವತೆ, ಕೃಷಿಕರ ಆರಾಧ್ಯದೈವ, ಬೇಟೆಗಾರರ ಒಡೆಯ, ಪ್ರವಣಸ್ವರೂಪಿ, ಆಧ್ಯಾತ್ಮಿಕ ತತ್ವದ ಪ್ರತೀಕ, ಗಣರಾಜ್ಯ ತಂತ್ರದ ಪ್ರತಿಮೆ, ಸಮಾಜವಾದಿ ಆರ್ಥಿಕ ವ್ಯವಸ್ಥೆಯ ಸಂಕೇತ, ವಿಕಟ ಹೀಗೆ ವಿವಿಧ ನಾಮಗಳಿಂದ ಕರೆಸಿಕೊಂಡಿರುವ ಗಣಪತಿಗೆ ಪುರಾಣದಲ್ಲಿ ಉಲ್ಲೇಖವಿರುವ ವೈವಿಧ್ಯಮಯ ಕಥೆಗಳಂತೆ ಶಿಲ್ಪದಲ್ಲೂ ವೈವಿಧ್ಯತೆಯನ್ನು ಚಿತ್ರಿಸಿದ್ದಾರೆ. ಅಂದರೆ ಕಥನಕ್ಕೂ-ಶಿಲ್ಪಚಿತ್ರಣಕ್ಕೂ ಸಂಬಂಧ ಹಾಗೂ ಹೊಂದಾಣಿಕೆಯನ್ನು ಹುಡುಕುವುದೇಒಂದು ಸ್ವಾರಸ್ಯಕರ ಸಂಗತಿಯಾಗಿದೆ.

ಗಣಪತಿಯ ಆರಾಧನೆ/ಪೂಜೆ ಮನುವಿನ ಕಾಲಕ್ಕೆ ಶೂದ್ರರಲ್ಲೇ ಮಾತ್ರ ನಡೆಯುತ್ತಿತ್ತು ಎಂಬ ನಂಬಿಕೆಯಿದ್ದರೂ, ಕಾಲಾನಂತರದಲ್ಲಿ ಬ್ರಾಹ್ಮಣರಿಗೂ ಪ್ರಸಾರಗೊಂಡಿತು. ಶಂಕರಾಚಾರ್ಯರ ಕಾಲದಲ್ಲಿ 'ಗಾಣಪತ್ಯ'ರೆಂಬ ಉಗ್ರ ಪಂಥದವರು ಮಾತ್ರ ಆರಾಧನೆ ಮಾಡುತ್ತಿದ್ದರೆಂದು ತಿಳಿದುಬಂದರೂ ಪ್ರಸ್ತುತ ದಿನಗಳಲ್ಲಿ ಗಣಪತಿಯ ಗುಡಿಯಿಲ್ಲದ ಊರುಗಳೇ ಇಲ್ಲದಂತಾಗಿ ನಾಡಿನವರೆಲ್ಲರೂ ಗಾಣಪತ್ಯರಾಗಿದ್ದಾರೆ. ಹಾಗೆಯೇ ಎಲ್ಲಾ ಜಾತಿ/ಪಂಥದವರಿಗೂ ಬೇಕಾದವನಾಗಿದ್ದಾನೆ.

ಕಾಲಕ್ರಮೇಣ ಗಣಪತಿಯ ಸ್ವರೂಪ, ಆಕಾರ ನಿರ್ದಿಷ್ಟವಾಗಿ ಮೂಡಿಬಂದಿತು, ಹೆಚ್ಚಿನವುಗಳು ಆಸೀನ ಅಂದರೆ ಕುಳಿತಿರುವ ಭಂಗಿಯ ಶಿಲ್ಪಗಳೇ ಆಗಿವೆ. ಹಾಗೆಯೇ ಸ್ಥಾನಕ ಅಂದರೆ ನಿಂತಿರುವ ಭಂಗಿಯ (ಸಮಭಂಗ, ದ್ವಿಭಂಗ ತ್ರಿಭಂಗ) ಶಿಲ್ಪಗಳೂ ಕಂಡುಬರುತ್ತವೆ. ಸಾಮಾನ್ಯವಾಗಿ ಗಣಪತಿ ಏಕಮೂರ್ತಿಯಾದರೂ ಅಪರೂಪವಾಗಿ ತನ್ನ ಎಡತೊಡೆಯ ಮೇಲೆ ಶಕ್ತಿ (ಶ್ಯಾಮಲಾಂಗಿ ಅಥವಾ ಜಯಂತಿ)ಯನ್ನು ಕೂರಿಸಿಕೊಂಡು ಸುಖಾಸೀನ ಭಂಗಿಯಲ್ಲಿರುವ ಮೂರ್ತಿಗಳೂ ಹಾಗೂ ಋದ್ಧಿ-ಸಿದ್ದಿಯರೆಂಬ ಇಬ್ಬರು ಶಕ್ತಿಯರನ್ನು, ಎಂಟುಮಂದಿ ಮಹಿಷಿಯರನ್ನು (ಅಷ್ಟ ಸಿದ್ಧಿಯರು) ಹೊಂದಿರುವ ಶಿಲ್ಪಗಳೂ ಕಂಡುಬರುತ್ತವೆ. ಸಾಮಾನ್ಯವಾಗಿ ನಾಲ್ಕು ಕೈಗಳು ವಾಡಿಕೆ. ಆದರೆ ೫ ತಲೆಗಳ ಹೇರಂಬ ಗಣಪತಿಗೆ ೧೦ ಕೈಗಳು ಇರುತ್ತವೆ. ಹಾಗೆಯೇ ಶಕ್ತಿಗಣಪತಿಗೆ ೪ ರಿಂದ ೧೦ ಕೈಗಳಿರುತ್ತವೆ. ತಾಂಡವಗಣಪತಿಗೂ ೧೦ ಕೈಗಳು. ಕೆಲವೊಮ್ಮೆ ಎರಡೇ ಕೈಗಳಿರುವ ಆಸೀನ ಗಣಪತಿಯೂ ಇರುವುದುಂಟು. ಇಲಿಯನ್ನು ತನ್ನ ವಾಹನವನ್ನಾಗಿ ಹೊಂದಿರುವುದು ಸಾಮಾನ್ಯವಾಗಿದ್ದರೂ ಹೇರಂಬ ಗಣಪತಿ ಸಿಂಹವನ್ನು ವಾಹನವನ್ನಾಗಿಸಿಕೊಂಡಿದೆ. ಸೊಂಡಿಲೂ ಎಡಭಾಗಕ್ಕೆ ತಿರುಗಿರುವುದು ಸಾಮಾನ್ಯವಾಗಿದ್ದರೆ ಕೆಲವೊಮ್ಮೆ ಬಲಭಾಗಕ್ಕೆ ತಿರುಗಿರುವ, ಮೇಲಕ್ಕೆತ್ತಿರುವ, ಕೆಳಕ್ಕೆ ಇಳಿಬಿಟ್ಟಿರುವ ಉದಾಹರಣೆಗಳಿವೆ. ಏಕದಂತ ಇರುವುದು ಹಾಗೂ ಒಂದು ದಂತ ಮುರಿದಂತೆ ತೋರಿಸಿರುವುದು ವೈಶಿಷ್ಟ್ಯ.[೧]

ಹೊಳಲ್ಕೆರೆಯ ತೂಗುದೆಲೆ ಗಣಪತಿ: ಚಿತ್ರದುರ್ಗದಿಂದ ಸುಮಾರು ೩೫ ಕಿ.ಮೀ. ದೂರದಲ್ಲಿರುವ ಹೊಳಲ್ಕೆರೆ ಚಿತ್ರದುರ್ಗ ಜಿಲ್ಲೆಯ ತಾಲ್ಲೂಕು ಕೇಂದ್ರವಾಗಿದೆ. ಇಲ್ಲಿ ಗ್ರಾಮದ ಮಧ್ಯಭಾಗದಲ್ಲಿ ಗಣಪತಿ ದೇವಾಲಯವಿದ್ದು, ಬಯಲಿನಲ್ಲಿರುವುದರಿಂದ ಇದನ್ನು ಬಯಲು ಗಣಪತಿ ದೇವಾಲಯವೆಂದೂ ಕರೆಯುತ್ತಾರೆ. ಶಿಲ್ಪಕ್ಕೆ ಶ್ರೀಪ್ರಸನ್ನ ಗಣಪತಿ, ತೂಗುದೆಲೆ ಅಥವಾ ಜಡೆಗಣಪತಿ ಹಾಗೂ ಮಳೆ ಗಣಪತಿ (ಮಳೆ ಬಾರದಿದ್ದಾಗ ೧೦೧ ಬಿಂದಿಗೆ ನೀರನ್ನು ಹಾಕಿದರೆ ಮಳೆ ಬರುವುದರಿಂದ) ಎಂತಲೂ ಕರೆಯುತ್ತಾರೆ. ದೇವಾಲಯವನ್ನು ಚಿತ್ರದುರ್ಗದ ಪಾಳೆಯಗಾರ ಮತ್ತಿತಿಮ್ಮಣ್ಣ ನಾಯಕನ[೨] ಅಳಿಯ ಗುಲ್ಯಪ್ಪನಾಯಕನಿಂದ ಕ್ರಿ.ಶ. ೧೪೭೫ರಲ್ಲಿ ನಿರ್ಮಾಣಗೊಂಡಿದೆ. ಶಿಲ್ಪವೂ ಸುಮಾರು ೧೫ ಅಡಿ ಎತ್ತರವಾಗಿದ್ದು, ರಾಜ್ಯದ ಬೃಹತ್ ಏಕಶಿಲಾ ಗಣಪತಿಯಾಗಿದೆ. ಶಿಲ್ಪವು ಬಹು ಅಲಂಕೃತವಾಗಿದ್ದು, ನಾಲ್ಕು ಕೈಗಳಲ್ಲಿದಂತ, ಅಂಕುಶ, ಪಾಶ ಹಾಗೂ ಬೀಜಪೂರವನ್ನು ಹೊಂದಿದೆ. ಅಂಗಾಂಗಗಳನ್ನು ವಿವರವಾಗಿ, ಸ್ಪಷ್ಟವಾಗಿ ಬಿಡಿಸಲಾಗಿದ್ದು, ಕರಂಡ ಮಕುಟ, ಯಜ್ಞೋಪವೀತ, ಉಪವೀತ, ಕಾಲ್ಕಡಗ, ಪಾದಜಾಲಕ, ತೋಳ್ಬಂದಿ, ತಲೆಯ ಭಾಗದ ಎರಡೂ ಕಡೆ ವಲ್ಲಿಯ ಸುರುಳಿಯನ್ನು

* ಸಹಾಯಕ ಪ್ರಾಧ್ಯಾಪಕರು ಹಾಗೂ ವಿಭಾಗದ ಮುಖ್ಯಸ್ಥರು, ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ದಾವಣಗೆರೆ.

ಬಿಡಿಸಲಾಗಿದೆ. ಹೊಯ್ಸಳ ಶಿಲ್ಪದ ಛಾಯೆ ಈ ಬಿಂಬದ ಮೇಲೆ ಇರದಿದ್ದರೂ ಅದರ ಅನುಕರಣೆ ಸ್ಪಷ್ಟವಾಗಿ ಈ ಶಿಲ್ಪದಲ್ಲಿ ಕಂಡುಬರುತ್ತದೆ.

ಮೇಲಿನ ಎಲ್ಲಾ ಲಕ್ಷಣಗಳು ಸಾಮನ್ಯವಾಗಿ ಕಂಡುಬಂದರೆ, ಈ ಶಿಲ್ಪದ ವಿಶೇಷತೆ ಇರುವುದು ಅದರ ಹಿಂಬದಿಯಲ್ಲಿ. ಈ ಶಿಲ್ಪ ಪೂರ್ಣಾಕಾರದ್ದಲ್ಲ. ಮುಂಬದಿ ಉಬ್ಬು ಶಿಲ್ಪದಂತೆ ಬಿಡಿಸಿದ್ದರೆ, ಹಿಂಬದಿಯಲ್ಲಿ ಸಪಾಟಾದ ಜಾಗದಲ್ಲಿ ವೃತ್ತಾಕಾರದ್ದೆಂಬಂತೆ ಭಾವಿಸಿಕೊಂಡು ಹಿಂಭಾಗಕ್ಕೂ ಮುಂದುವರಿದಂತೆ ಕೆತ್ತಲಾಗಿದೆ. ತಲೆಯ ಹಿಂಬದಿಯಲ್ಲಿ ವೃತ್ತಾಕಾರದ ಪ್ರಭೆಯನ್ನು ಬಿಡಿಸಿದ್ದು, ಇದು ವಿಗ್ರಹದ ಮುಂದಿನ ತಲೆಗೆ ನೇರ ಹಿಂಬದಿಯಲ್ಲಿದೆ. ಈ ಚಕ್ರದಲ್ಲಿ ಕಮಲಗಳನ್ನು ಬಿಡಿಸಿದ್ದು, ಕರಂಡ ಮಕುಟವಿರುವ ಜಾಗದಲ್ಲಿ ತ್ರಿಕೋನಾಕರದ ಕಿರೀಟವನ್ನು ಬಿಡಿಸಿದೆ. ಭುಜಾವಳಿಗಳು, ಯಜ್ಞೋಪವೀತಗಳನ್ನು ಬಿಡಿಸಲಾಗಿದೆ. ಶಿಲ್ಪದ ಈ ಎಲ್ಲಾ ಅಂಶಗಳಲ್ಲಿ ಹೆಚ್ಚು ಗಮನ ಸೆಳೆಯುವ ಭಾಗವೆಂದರೆ ಜಡೆ. ಇದು ತಲೆಯ ಹಿಂಬದಿಯಲ್ಲಿರುವ ಕಮಲ ವೃತ್ತದಿಂದ ನೇರಕ್ಕೆ ಇಳಿಬಿದ್ದಿದೆ. ನೀಟಾಗಿ, ತುಂಬಾ ಬಿಗಿಯಾಗಿ ನಾಲ್ಕು ಕಾಲುಗಳಿಂದ ಎಣೆದಿರುವ ಈ ಜಡೆಯ ಅಂತ್ಯದಲ್ಲಿ ಅರಳಿ ಎಲೆಯಂತೆ ಅಲಂಕರಿಸಿದೆ. ಈ ರೀತಿಯ ಜಡೆ ಸಾಮಾನ್ಯವಾಗಿ ಇತರೆಡೆಯ ಶಿಲ್ಪಗಳಲ್ಲಿ ಕಾಣಸಿಗುವುದಿಲ್ಲ. ಎಲ್ಲಾ ಗಣಪತಿಯ ಶಿಲ್ಪಗಳೂ ಸಹ ಮುಂಬದಿಯಲ್ಲಿ ಮಾತ್ರ ಚೆನ್ನಾಗಿ ಅಲಂಕೃತಗೊಂಡಂತೆ ಬಿಡಿಸಲಾಗಿದ್ದು, ಹಿಂಬದಿಯಲ್ಲಿ ಏನನ್ನೂ ಬಿಡಿಸದೆ ಬರಿಯ ಕಲ್ಲನ್ನು ಮಾತ್ರ ತೋರಿಸಲಾಗಿರುವುದು ಸಾಮಾನ್ಯವಾಗಿರುತ್ತದೆ. ವಿಜಯನಗರ ಕಾಲದ ಅನೇಕ ಶಿಲ್ಪಗಳಲ್ಲಿ ತುರುಬನ್ನು ಗಂಟು ಹಾಕುವ ಬದಲಿಗೆ ಇಂತಹ ಹೆಣೆದ ಜಡೆಯನ್ನು ಬಿಡಿಸಿರುವುದುಂಟು. ಹಾಗಾಗಿ ಈ ಶಿಲ್ಪದ ಕಾಲವನ್ನು ವಿಜಯನಗರ ಕಾಲಕ್ಕೆಂದು ಹೇಳಬಹುದಾಗಿದೆ.

ಈ ದೇವಾಲಯದ ಎಡಭಾಗದಲ್ಲಿರುವ ಶಿಲಾಶಸನವು ಕ್ರಿ.ಶ. ೧೫೪೬ರ ಕಾಲದ್ದಾಗಿದ್ದು,[3] ಮಹಾರಾಜಾಧಿರಾಜ ರಾಜಪರಮೇಶ್ವರ, ವೀರಪ್ರತಾಪ ಸದಾಶಿವದೇವ ಮಹಾರಾಯನ, ಮಹಾಮಂಡಲೇಶ್ವರ ರಾಮರಾಜಯ್ಯ ಕೆಲಸಿ ಕೊಂಡೋಜಿಗೆ ತಾವು ಆಳುವಂತಹ ಸರ್ವದೇಶವನ್ನು ಮಾನ್ಯವಾಗಿ ಗಡಿಯ ತಿಮ್ಮಪ್ಪನಾಯಕರ ಸೇನಬೋವನು ತೆರಿಗೆ ಬಿಟ್ಟಂತೆ.

ಅಡಿ ಟಿಪ್ಪಣಿಗಳು

೧. ಎಸ್.ಕೆ. ರಾಮಚಂದ್ರರಾವ್, ೧೯೭೫, ಮೂರ್ತಿಶಿಲ್ಪದ ನೆಲೆ-ಹಿನ್ನೆಲೆ, ಪು. ೭೫-೯೨.

೨. ಪುಟ್ಟಣ್ಣ ಎಂ.ಎಸ್. ೧೯೨೪, ಚಿತ್ರದುರ್ಗದ ಪಾಳೆಯಗಾರರು, ಪು. ೫.

೩. ಇಸಿ ೧೧, ಚಿತ್ರದುರ್ಗ, ಶಾ. ಸಂಖ್ಯೆ. ಹೊಳಲ್ಕೆರೆ-೧೧.

೫೨

ಮುದ್ದೇಬಿಹಾಳದ ಲಕುಮೇಶ್ವರ ದೇವಾಲಯ

ಮಹೇಶಕುಮಾರ ಹ. ಪಾಟೀಲ✷

ವಿಜಯಪುರ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನ ಮುಖ್ಯ ಪಟ್ಟಣವಾಗಿರುವ ಮುದ್ದೇಬಿಹಾಳವು ರೇಖಾಂಶ ೭೫೦ ಮತ್ತು ೮೦೦ ಹಾಗೂ ಅಕ್ಷಾಂಶ ೧೫೦ ಮತ್ತು ೨೦೦ ಗಳ ಮಧ್ಯದಲ್ಲಿದ್ದು, ಸಮುದ್ರಮಟ್ಟದಿಂದ ೧೬೫೦ ರಿಂದ ೧೮೦೦ ಅಡಿ ಎತ್ತರದಲ್ಲಿದೆ. ಪಟ್ಟಣದ ಈಶಾನ್ಯ ದಿಕ್ಕಿನಲ್ಲಿರುವ ಕೋಟೆ(ಕಿಲ್ಲಾ)ಯ ಒಳಗಡೆ ಪ್ರಸ್ತುತ ಶಿವದೇವಾಲಯವಿದೆ. ಈ ಹಿಂದೆ ಇಲ್ಲಿಯೇ ಶಾಸನವೊಂದು ದೊರಕಿದ್ದು ಅದು ಇತಿಹಾಸ ದರ್ಶನ ಸಂಪುಟ ೩೦ರಲ್ಲಿ ಪ್ರಕಟಗೊಂಡಿದೆ. ಆ ಶಾಸನದ ಪ್ರಕಾರ ಯಾದವ ದೊರೆ ರಾಮಚಂದ್ರದೇವನು ಈ ದೇವಾಲಯವನ್ನು ಕ್ರಿ.ಶ. ೧೨೩೮ರ ಚಿತ್ರಭಾನು ಸಂವತ್ಸರದ ಸಂಕ್ರಾಂತಿಯಂದು ಪ್ರತಿಷ್ಠಾಪಿಸಿದ ವಿಷಯ ಉಲ್ಲೇಖಗೊಂಡಿದೆ. ಶಾಸನವು ದೇವಾಲಯವನ್ನು ಕುರಿತು ಹೇಳುವಾಗ ನಾಲ್ವತ್ತುಂಬಾಡು ನಾಡೊಳಗಿನ ಸಿರಿವೊಳಲ ಬಳಿಯಲ್ಲಿ ಕೊಳ್ಳದ ಭೈರವನ ನಾಡಿಗೆ ಮೂಲಸ್ತಾನವಾಗಿ ಲಕುಮೇಶ್ವರ ದೇವರನ್ನು ಸ್ಥಾಪಿಸಿದ ವಿಷಯ ಹೇಳುತ್ತದೆ. ಅಂದರೆ ಪ್ರಸ್ತುತ ದೇವಾಲಯವು ಮೂಲತಃ ಲಕುಮೇಶ್ವರ ದೇವಾಲಯವಾಗಿತ್ತು. ಕಲ್ಯಾಣದ ಚಾಲುಕ್ಯರ ಶೈಲಿಯಲ್ಲಿ ಈ ದೇವಾಲಯವು ನಿರ್ಮಿತವಾಗಿದೆ.

ತಲವಿನ್ಯಾಸ: ದೇವಾಲಯವು ನಿರಾಂಧಾರ ಮಾದರಿಯದಾಗಿದ್ದು ಪ್ರದಕ್ಷಿಣಾಪಥವು ಕಂಡುಬರುವುದಿಲ್ಲ. ಸರಳ ತಲವಿನ್ಯಾಸದಲ್ಲಿದ್ದು ಗರ್ಭಗೃಹ, ಸುಕನಾಸಿ, ನವರಂಗ, ಮಧ್ಯದಲ್ಲಿ ನಂದಿಮಂಟಪ, ಮೂರು ಅರೆತೆರೆದ ಮುಖಮಂಟಪಗಳನ್ನು ಹೊಂದಿದೆ. ದೇವಾಲಯವನ್ನು ಮೂರು ಕಡೆಯಿಂದ ಈ ಅರೆತೆರೆದ ಮಂಟಪಗಳ ಮೂಲಕ ಪ್ರವೇಶಿಸಬಹುದು. ಮುಖ್ಯ ಪ್ರವೇಶದ್ವಾರವು ಪೂರ್ವಾಭಿಮುಖವಾಗಿದ್ದು, ಉಳಿದೆರಡು ಪ್ರವೇಶದ್ವಾರಗಳು ದಕ್ಷಿಣೋತ್ತರಾಭಿಮುಖವಾಗಿವೆ. ದೇವಾಲಯವನ್ನು ಸ್ಥಳೀಯವಾಗಿ ಲಭ್ಯವಿರುವ ಕಪ್ಪುಬಣ್ಣದ ಬೆಣಚುಕಲ್ಲಿನಿಂದ ನಿರ್ಮಿಸಲಾಗಿದೆ.

ಅಧಿಷ್ಠಾನ: ದೇವಾಲಯವನ್ನು ಹೊರಗಿನಿಂದ ನೆಲಮಟ್ಟದ ಸಮಪಾತಳಿಯ ಮೇಲೆ ನಿರ್ಮಿಸಲಾಗಿದ್ದು, ಹೊರಭಾಗದ ಅಧಿಷ್ಠಾನ ಕಂಡುಬರುವುದಿಲ್ಲ. ಆದರೆ ಮುಖ್ಯ ಪ್ರವೇಶದ್ವಾರದ ಅರೆತೆರೆದ ಮಂಟಪವನ್ನು ಪ್ರವೇಶಿಸುವಾಗ ಮೆಟ್ಟಿಲುಗಳಿದ್ದು, ಪಕ್ಕದಲ್ಲಿ ಕಂಡುಬರುವ ಒಳಭಾಗದ ಅಧಿಷ್ಠಾನದಲ್ಲಿ ಜಗತಿ, ಗಳ ಭಾಗವು ಆಳ ಹಾಗು ಎತ್ತರವಾಗಿದ್ದು ಚಚ್ಚೌಕಾಕಾರದ ಪದ್ಮವನ್ನೊಳಗೊಂಡ ಸಾಲು ಪಟ್ಟಿಕೆಗಳನ್ನು ಕೆತ್ತಲಾಗಿದೆ. ಮೇಲ್ಭಾಗದಲ್ಲಿ ಕಪೋತವಿದೆ.




ದೇವಾಲಯದ ಗೋಡೆಗಳು ಸರಳವಾಗಿದ್ದರೂ ಸಹ ಹಿಂಬಣೆ ಮುಂಬಣೆಗಳನ್ನು ಕಾಣಬಹುದು. ಅನೇಕ ಅರ್ಧಕಂಬಗಳು, ಸಾದಾ ಮತ್ತು ಸರಳವಾದ ಕೋಷ್ಠಗಳು ಕಂಡುಬರುತ್ತವೆ. ಗರ್ಭಗೃಹದ ಹಾಗೂ ಸುಖನಾಸಿಯ ಹೊರಗೋಡೆಗಳ ಮೇಲೆ ಪ್ರತಿ ಗೋಡೆಯಲ್ಲಿ ಒಂದೊಂದು ಕೋಷ್ಠಗಳಿವೆ. ಪ್ರಸ್ತುತ ಈ ಕೋಷ್ಠಗಳಲ್ಲಿನ ಶಿಲ್ಪಗಳು ಕಾಣೆಯಾಗಿವೆ. ಗರ್ಭಗೃಹ ಹಾಗೂ ಸುಖನಾಸಿಯ ದ್ವಾರಗಳ ಪಕ್ಕದಲ್ಲಿನ ಅರ್ಧಕಂಬಗಳ ಕೆಳಭಾಗದಲ್ಲಿ ಅಲಂಕೃತ ಕುಂಭಗಳನ್ನು ಕೆತ್ತಲಾಗಿದೆ.

ನವರಂಗ: ದೀರ್ಘ ಚತುರಸ್ರಾಕಾರದ ನವರಂಗವಿದ್ದು, ಗೋಡೆಗಳಲ್ಲಿ ಅರ್ಧಕಂಬಗಳು, ಸಾದಾ ಕೋಷ್ಠಗಳು ಕಂಡುಬರುತ್ತವೆ. ನವರಂಗದ ಮಧ್ಯದಲ್ಲಿ ನಾಲ್ಕು ಕಂಬಗಳುಳ್ಳ ನಂದಿಮಂಟಪವನ್ನು ಅಳವಡಿಸಲಾಗಿದೆ. ಮಧ್ಯದಲ್ಲಿ ನಂದಿಯನ್ನು ಪ್ರತಿಷ್ಠಾಪಿಸಲಾಗಿದೆ.

ದ್ವಾರಗಳು: ಗರ್ಭಗೃಹ ಹಾಗೂ ಸುಕನಾಸಿಗಳಿಗೆ ದ್ವಾರಗಳಿದ್ದು, ಈ ದ್ವಾರಗಳ ಅಕ್ಕಪಕ್ಕದಲ್ಲಿ ಅರ್ಧಕಂಬಗಳನ್ನು ಬಿಡಿಸಲಾಗಿದೆ ಹೊರತು ಯಾವುದೇ ದ್ವಾರಶಾಖೆಗಳಿಲ್ಲ. ದ್ವಾರಗಳ ಮೇಲ್ಭಾಗದಲ್ಲಿ ಚಚ್ಚೌಕ ಲಲಾಟವನ್ನು ಬಿಡಿಸಲಾಗಿದ್ದು, ಲಲಾಟಬಿಂಬವನ್ನು ಕೆತ್ತಿರುವುದಿಲ್ಲ.

✷ ಸಹಾಯಕ ಉಪನ್ಯಾಸಕರು, ಇತಿಹಾಸ ವಿಭಾಗ, ಕರ್ನಾಟಕ ಕಲಾ ಮಹಾವಿದ್ಯಾಲಯ, ಧಾರವಾಡ.



ಜಾಲಂಧ್ರಗಳು: ದೇವಾಲಯದ ಸುಕನಾಸಿಯ ದ್ವಾರದ ಎರಡೂ ಬದಿಗೆ ಅಕ್ಕಪಕ್ಕದಲ್ಲಿ ಅರ್ಧಕಂಬ ಹಾಗೂ ದ್ವಾರಪಟ್ಟಿಕೆಗಳ ನಡುವೆ ದೀರ್ಘ ಚತುರಸ್ರಾಕಾರದ ಜಾಲಂಧ್ರಗಳನ್ನು ಅಳವಡಿಸಲಾಗಿದೆ. ಜಾಲಂಧ್ರಗಳು ಸರಳವಾಗಿದ್ದು ಅಗಲವಾಗಿ ಎರಡು ಸಾಲು ಉದ್ದವಾಗಿ ಐದು ಸಾಲುಗಳ ಪದ್ಮವನ್ನೊಳಗೊಂಡ ಚಚ್ಚೌಕಗಳನ್ನು ಹೊಂದಿವೆ.

ಕಂಬಗಳು: ಈ ದೇವಾಲಯದಲ್ಲಿ ಮೂರು ಪ್ರಕಾರದ ಕಂಬಗಳಿದ್ದು, ನವರಂಗದಲ್ಲಿನ ನಂದಿಮಂಟಪದ ನಾಲ್ಕು ಕಂಬಗಳು ಅಕರ್ಷಕವಾಗಿವೆ. ಈ ಕಂಬಗಳು ಕೆಳಭಾಗದಲ್ಲಿ ಚಚ್ಚೌಕಾಕಾರದ ಕೆತ್ತನೆಯುಳ್ಳ ಪೀಠದ ಮೇಲಿದ್ದು, ಚಚ್ಚೌಕ, ವೃತ್ತಾಕಾರದ ಅಷ್ಟಪೈಲು, ವೃತ್ತಗಳಿದ್ದು ಕಾಂಡದ ಮೆಲ್ಭಾಗದಲ್ಲಿ ಚಚ್ಚೌಕವಾದ ಮತ್ತು ಅಗಲವಾದ ಫಲಕವಿದೆ. ಫಲಕದ ಮೇಲೆ ನಾಲ್ಕೂ ಮೂಲೆಗಳಿಗೆ ಕೆತ್ತನೆಯಿಂದ ಅಲಂಕೃತಗೊಂಡ ಬೋದಿಗೆಗಳನ್ನು ಅಳವಡಿಸಲಾಗಿದೆ. ಎರಡನೆಯ ಪ್ರಕಾರದ ಕಂಬಗಳು ಮೂರು ಕಡೆಗಿರುವ ಅರೆತೆರೆದ ಪ್ರವೇಶ ಮಂಟಪಗಳಿಗೆ ಅಳವಡಿಸಲಾಗಿದ್ದು, ಅವುಗಳು ಕೆಳಭಾಗದಲ್ಲಿ ಚತುರಸ್ರಾಕಾರವಾಗಿದ್ದು ಮಧ್ಯದಲ್ಲಿ ವರ್ತುಲಾಕಾರ, ಅಷ್ಟಪೈಲು, ಮೇಲ್ಭಾಗದಲ್ಲಿ ಚಚ್ಚೌಕ, ವೃತ್ತವಿದ್ದು ಅದರ ನಾಲ್ಕೂ ಬದಿಗೂ ಎಲೆಯಾಕಾರದ ಕೆತ್ತನೆಯೊಂದಿಗೆ ಬೋದಿಗೆಗಳನ್ನೊಳಗೊಂಡಿವೆ. ಮೂರನೆಯ ಪ್ರಕಾರದ ಕಂಬಗಳು ಅರ್ಧಕಂಬಗಳಾಗಿದ್ದು, ದೇವಾಲಯದ ಗರ್ಭಗೃಹ, ಸುಕನಾಸಿ ಹಾಗೂ ನವರಂಗದ ಗೋಡೆಗಳಲ್ಲಿ ಕಂಡುಬರುತ್ತವೆ. ಅವು ಕೇವಲ ಕೆಳಗಡೆ ಪೀಠ, ಕಾಂಡ, ಮಧ್ಯದಲ್ಲಿ ಚಚ್ಚೌಕ, ಕಾಂಡ ಹಾಗೂ ಮೇಲ್ಭಾಗದಲ್ಲಿ ಬೋದಿಗೆಗಳನ್ನೊಳಗೊಂಡಿವೆ.

ಭುವನೇಶ್ವರಿ: ದೇವಾಲಯದ ಗರ್ಭಗೃಹ ಹಾಗೂ ನವರಂಗದ ಮಧ್ಯದ ನಂದಿಮಂಟಪದ ಅಂಕಣಗಳಲ್ಲಿ ಭುವನೇಶ್ವರಿಯನ್ನು ಕೆತ್ತಲಾಗಿದೆ. ಗರ್ಭಗೃಹದ ಭುವನೇಶ್ವರಿಯನ್ನು ಚಚ್ಚೌಕದ ಮಧ್ಯದಲ್ಲಿ ಅರಳಿದ ಕಮಲದ ರೂಪದಲ್ಲಿ ಕೆತ್ತಲಾಗಿದೆ. ನವರಂಗದ ಮಧ್ಯದ ನಂದಿಮಂಟಪದ ಭುವನೇಶ್ವರಿ ಇದಕ್ಕಿಂತಲೂ ಭಿನ್ನವಾಗಿದ್ದು, ಮೂರು ಚೌಕುಗಳನ್ನು ಜ್ಯಾಮಿತಿಯ ಆಕಾರದಲ್ಲಿಟ್ಟು ಎಂಟು ತ್ರಿಕೋನಗಳನ್ನಾಗಿ ಮಾಡಿ, ಮಧ್ಯದ ಚೌಕದಲ್ಲಿ ಅರಳಿದ ಕಮಲವನ್ನು ಕೆತ್ತಲಾಗಿದೆ.

ಶಿಖರ: ದೇವಾಲಯದ ಶಿಖರ ಸಂಪೂರ್ಣ ಭಗ್ನಗೊಂಡಿದ್ದು ಹಿಂಬದಿಯಲ್ಲಿ ಕೇವಲ ಅದರ ತಳಪಾಯ ಮಾತ್ರ ಉಳಿದುಕೊಂಡಿದೆ. ಅದನ್ನು ಗಮನಿಸಿದಾಗ ಅದು ನಕ್ಷತ್ರಾಕಾರದ ವೇಸರ ಶೈಲಿಯ ಶಿಖರವಾಗಿದ್ದು, ಭೂಮಿಯಿಂದ ಮೇಲಕ್ಕೆ ಮೆಟ್ಟಿಲಾಕಾರವಾಗಿ ಏರುತ್ತಿರುವುದು ಕಂಡುಬರುತ್ತದೆ.



ಮೂರ್ತಿಶಿಲ್ಪಗಳು: ಪ್ರಸ್ತುತ ದೇವಾಲಯದಲ್ಲಿ ನಾಲ್ಕು ಶಿಲ್ಪಗಳು ಕಂಡುಬರುತ್ತಿದ್ದು ಗರ್ಭಗೃಹದಲ್ಲಿ ಪ್ರತಿಷ್ಠಾಪಿಸಿದ ಶಿವಲಿಂಗ ಮತ್ತು ನಾಗಶಿಲ್ಪಗಳು. ನವರಂಗದಲ್ಲಿ ಪ್ರತಿಷ್ಠಾಪಿಸಿದ ಕುಳಿತ ನಂದಿ ಹಾಗೂ ಪಕ್ಕದಲ್ಲಿ ಕಟ್ಟೆಯ ಮೇಲೆ ಇಟ್ಟಿರುವ ಗಣಪತಿ.

[ನನಗೆ ಸಹಕರಿಸಿದ ಮಿತ್ರ ಪ್ರೊ. ಅಶೋಕ ಕೆ. ಕಂದಗಲ್ ಇವರಿಗೆ ನನ್ನ ಧನ್ಯವಾದಗಳು.]

ಆಕರ ಗ್ರಂಥಗಳು

೧. ಡಾ.ಆರ್. ಮುನಿಸ್ವಾಮಿ(ಸಂ.), ಕರ್ನಾಟಕ ರಾಜ್ಯ ಗ್ಯಾಸಿಟಿಯರ್(ವಿಜಾಪುರ ಜಿಲ್ಲೆ), ಬೆಂಗಳೂರು, ೧೯೯೯.

೨. ಡಾ.ಸಿಂದಗಿ ರಾಜಶೇಖರ, ಕರ್ನಾಟಕದ ವಾಸ್ತುಶಿಲ್ಪ ಮತ್ತು ಚಿತ್ರಕಲೆ, ಧಾರವಾಡ, ೧೯೮೮.

೩. ಕೂ.ಸ.ಅಪರ್ಣ, ದೇವಾಲಯಗಳ ವಾಸ್ತುಶಿಲ್ಪ ಪರಿಚಯ, ಹಂಪಿ, ೧೯೯೯.

೪. ಎಂ.ಎನ್. ಪ್ರಭಾಕರ್, ದೇವಾಲಯ ವಾಸ್ತುಚಂದ್ರಿಕೆ, ಹಂಪಿ, ೨೦೦೦.

೫. ಡಾ.ದೇವರಕೊಂಡಾರೆಡ್ಡಿ ಮತ್ತು ಜಿ.ಕೆ.ದೇವರಾಜಸ್ವಾಮಿ(ಸಂ), ಇತಿಹಾಸ ದರ್ಶನ, ಸಂ.೩೦, ಪು.೬೭.

ಹರಿಹರೇಶ್ವರ ದೇವಾಲಯದ ಎಡ ಪಾರ್ಶ್ವದ ಕಾಲಭೈರವ ದೇಗುಲ-ಒಂದು ಅಧ್ಯಯನ

ಪಿ. ವೀಣಾ*

ಪಾರಂಪರಿಕ, ಐತಿಹಾಸಿಕ ಮತ್ತು ಧಾರ್ಮಿಕ ಔನ್ನತ್ಯದ ಕಾರಣವಾಗಿ "ದಕ್ಷಿಣ ಕಾಶಿ" ಎಂದೇ ಖ್ಯಾತವಾದ ಪ್ರಸ್ತುತ ದಾವಣಗೆರೆ ಜಿಲ್ಲೆಯ ತಾಲ್ಲೂಕು ಪ್ರದೇಶವಾದ 'ಹರಿಹರ' ತುಂಗಭದ್ರಾ ನದಿಯ ಬಲದಂಡೆಯಲ್ಲಿ ಸ್ಥಿತವಾಗಿದ್ದು, ಅಲ್ಲಿನ ಹರಿಹರೇಶ್ವರ ದೇವಾಲಯ ವಿಶಿಷ್ಟ ಪೌರಾಣಿಕತೆ, ಧರ್ಮಶಾಸ್ತ್ರೀಯ ನೆಲೆ ಹಾಗೂ ವಾಸ್ತು ವೈಭವದ ದೃಷ್ಟಿಯಿಂದ ವಿಶೇಷವಾಗಿದೆ. ಈ ದೇವಾಲಯವು ಶೈವ ಮತ್ತು ವೈಷ್ಣವ ಪಂಥೀಯ ಭಿನ್ನತೆಗಳನ್ನು ಮೀರಿದ ಸಮನ್ವಯದ ಧಾರ್ಮಿಕ ಜಾಗೃತಿಯ ಐತಿಹಾಸಿಕ ಘಟ್ಟವನ್ನು ಪ್ರತಿನಿಧಿಸುತ್ತದೆ. ಪೌರಾಣಿಕವಾಗಿ ಗುಹಾಸುರನ ಅಂತ್ಯದ ಹಿನ್ನೆಲೆಯನ್ನೂ, ಧರ್ಮಶಾಸ್ತ್ರೀಯವಾಗಿ ಶಿವ ಮತ್ತು ವಿಷ್ಣು ಐಕ್ಯತೆಯ ಪ್ರತೀಕವಾಗಿದೆ. ವಿವಿಧ ಕಾಲ ಘಟ್ಟಗಳಲ್ಲಿ ಆಳ್ವಿಕೆಯಲ್ಲಿದ್ದ ರಾಜಮನೆತನಗಳ ಆಶ್ರಯ ಹಾಗೂ ಅಧೀನತೆಯಲ್ಲಿ ಹರಿಹರವು ಚಾರಿತ್ರಿಕ ಏರಿಳಿತಗಳನ್ನು ಕಂಡಿದ್ದು, ಹರಿಹರೇಶ್ವರ ದೇವಾಲಯದ ನಿರ್ಮಾಣ, ಪುನರುಜ್ಜೀವನ ಮತ್ತು ಪೋಷಣೆಗೆ ಅನೇಕ ಶಾಸನಾಧಾರಗಳಿರುವುದನ್ನು ಗುರುತಿಸಬಹುದಾಗಿದೆ. ಈ ಹಿನ್ನೆಲೆಯಲ್ಲಿ ಹರಿಹರೇಶ್ವರ ದೇವಾಲಯದ ಎಡ-ಪಾರ್ಶ್ವ ವಿಸ್ತರಿತ ನಿರ್ಮಿತಿಯಾದ ಕಾಲಭೈರವ ದೇಗುಲದ ಕುರಿತಾದ ಐತಿಹಾಸಿಕ ಹಾಗೂ ವಾಸ್ತುಕಲೆಯ ಅಧ್ಯಯನವನ್ನು ನಿರೂಪಿಸುವುವಾಗಿದೆ.


ಹರಿಹರೇಶ್ವರ ವಾಸ್ತುಶಿಲ್ಪದ ದೃಷ್ಟಿಯಿಂದ ಗಮನಿಸಿದಾಗ, ಶಾಸನಾಧಾರಗಳನ್ನು ಪರಿಶೀಲಿಸಿದಾಗ ದೇವಾಲಯದ ಹಲವು ಭಾಗಗಳು ಬೇರೆ ಬೇರೆ ಕಾಲದಲ್ಲಿ ಅಸ್ತಿತ್ವಕ್ಕೆ ಬಂದಿರುವುದು ಸ್ಪಷ್ಟವಾಗುತ್ತದೆ. ಹರಿಹರದಲ್ಲಿ ದೊರಕುವ ಶಾಸನಗಳಲ್ಲಿ ಮೊಟ್ಟಮೊದಲನೆಯದಾದ ಕ್ರಿ.ಶ. ೬೯೪ರ ಬಾದಾಮಿ ಚಾಲುಕ್ಯ ದೊರೆ ಇಮ್ಮಡಿ ಪುಲಿಕೇಶಿಯ ಮೊಮ್ಮಗನಾದ ವಿನಯಾದಿತ್ಯನ ತಾಮ್ರ ಶಾಸನ (ದಾ.೬೬)ವನ್ನಾಧರಿಸಿ ಏಳನೇ ಶತಮಾನದ ವೇಳೆಗಾಗಲೇ ಸಣ್ಣದಾದ ಹರಿಹರ ದೇವಾಲಯವಿದ್ದಿಬಹುದೆಂದು ಊಹಿಸಬಹುದಾಗಿದೆ ಮತ್ತು ದೇವಾಲಯದ ಗರ್ಭಗೃಹ ದೇವಾಲಯದ ಅತ್ಯಂತ ಪ್ರಾಚೀನ ಭಾಗವಾಗಿದೆ. ಹದಿಮೂರನೆಯ ಶತಮಾನದ ಆದಿಭಾಗದಲ್ಲಿ ಹೊಯ್ಸಳರು ಉಚ್ಛ್ರಾಯ ಸ್ಥಿತಿಯಲ್ಲಿದ್ದ ಅವಧಿಯಲ್ಲಿ ಹೊಯ್ಸಳ ಇಮ್ಮಡಿ ನಾರಸಿಂಹನ ಪ್ರಧಾನಮಂತ್ರಿ ಪೋಲಾಳ್ವ ದಂಡನಾಥನು ಹರಿಹರೇಶ್ವರ ದೇವಾಲಯವನ್ನು ನಿರ್ಮಿಸಿ, ಶಕವರ್ಷ ೧೧೪೫ನೆಯ ಸ್ವಭಾನು ಸಂವತ್ಸರದ ಮಾಘ ಶುದ್ಧ ಏಕಾದಶಿ ಗುರುವಾರದ ದಿನ (ಕ್ರಿ.ಶ. ೧೨೨೪ನೆಯ ವರ್ಷ) ಹದಿನೈದು ಚಿನ್ನದ ಕಲಶಗಳಿಂದ ಮೆರೆಯುವಂತೆ ಮಾಡಿಸಿ ಅದನ್ನು ಶ್ರೀ ಹರಿಹರದೇವರಿಗೆ ಅರ್ಪಿಸಿದನು - ಎಂಬ ವಿವರಗಳು ಕ್ರಿ.ಶ. ೧೨೨೪ರ ಪೋಲಾಳ್ವ ದಂಡನಾಥನ (ದಾ.೨೫) ಶಾಸನದಲ್ಲಿ ದೊರಕುತ್ತವೆ. ನಂತರ ಕ್ರಿ.ಶ. ೧೨೬೮ರಲ್ಲಿ ಹೊಯ್ಸಳ ರಾಜ ೩ನೇ ನರಸಿಂಹನ ದಂಡಾಧಿಪತಿಯಾದ ಸೋಮನಾಯಕನು ಈ ದೇವಾಲಯಕ್ಕೆ ಕೆಲವು ಸೇರ್ಪಡೆಗಳನ್ನು ಮಾಡಿದನೆಂದು ತಿಳಿದು ಬರುತ್ತದೆ. ಹೀಗೆ ಭಿನ್ನ ಕಾಲಾವಧಿಗಳಲ್ಲಿ ನಿರ್ಮಾಣ ಮತ್ತು ಪುನರುಜ್ಜೀವನ ಕಂಡ ಹರಿಹರೇಶ್ವರ ದೇವಾಲಯದ ಎಡ-ಪಾರ್ಶ್ವ ವಿಸ್ತರಿತ ಕಾಲಭೈರವ ದೇಗುಲದ ನಿರ್ಮಾಣ ಕಾಲದ ಬಗ್ಗೆ ಭಿನ್ನ ಅಭಿಪ್ರಾಯಗಳಿಗೆ ಆಸ್ಪದವಿದೆ. ಈ ದೇವಾಲಯವು ಪೋಲಾಳ್ವ ದಂಡನಾಥನ ಕಾಲದಲ್ಲಿ ನಿರ್ಮಿತ ಹರಿಹರೇಶ್ವರ ದೇವಾಲಯದ ನಿರ್ಮಾಣೋತ್ತರದ ರಚನೆ ಎಂಬುದು ಒಂದು ಅಭಿಪ್ರಾಯವಾದರೆ, ಮತ್ತೊಂದು ಅಭಿಪ್ರಾಯದನ್ವಯ, ಪ್ರಾಚೀನ ಹರಿಹರೇಶ್ವರ ದೇವಾಲಯವಿದ್ದ ಕಾಲದಲ್ಲಿಯೇ ಈ ದೇವಾಲಯವೂ ಅಸ್ತಿತ್ವದಲ್ಲಿದ್ದಿತೆಂಬುದು ಇನ್ನೊಂದು ಅಭಿಪ್ರಾಯ. ಈ ಅಭಿಪ್ರಾಯಗಳ ಪರಾಮರ್ಶೆಗೆ ಪೂರಕವಾಗಿ ಕಾಲಭೈರವ ದೇಗುಲದ ಸ್ಥಾನ ಮತ್ತು ವಿನ್ಯಾಸಗಳನ್ನು ಇಲ್ಲಿ ನಿರೂಪಿಸಲಾಗಿದೆ.

ಹರಿಹರೇಶ್ವರ ದೇವಾಲಯದ ಎಡ ಪಾರ್ಶ್ವ ವಿಸ್ತರಿತ ಕಾಲಭೈರವ ದೇಗುಲ: ಕಾಲಭೈರವ ದೇಗುಲವು ಹರಿಹರೇಶ್ವರ ದೇವಾಲಯದ ಎಡ ಪಾರ್ಶ್ವದಲ್ಲಿ ವಿಸ್ತರಿತವಾದಂತೆ ನಿರ್ಮಾಣಗೊಂಡಿದ್ದು, ಕಾಲಭೈರವ ದೇಗುಲವನ್ನೊಳಗೊಂಡ


* ಸಂಶೋಧನಾರ್ಥಿ, ಇತಿಹಾಸ ಮತ್ತು ಪ್ರಾಕ್ತನಾಶಾಸ್ತ್ರ ವಿಭಾಗ, ಕುವೆಂಪು ವಿವಿ, ಶಂಕರಘಟ್ಟ, ಶಿವಮೊಗ್ಗ, ಮೊ. ೯೮೮೬೦ ೨೩೬೧೮

ಹರಿಹರೇಶ್ವರ ದೇಗುಲದ ತಲ ವಿನ್ಯಾಸದ ಪೂರ್ಣಾವಲೋಕನವು ಕಾಲಭೈರವ ದೇಗುಲದ ಸ್ಥಾನ ಮತ್ತು ವಿನ್ಯಾಸದ ಸ್ಪಷ್ಟ ಪರಿಕಲ್ಪನೆಯನ್ನೊದಗಿಸಲು ಉಪಯುಕ್ತಕಾರಿಯಾಗಿದೆ.

ಹರಿಹರೇಶ್ವರ ದೇವಾಲಯದ ತಲವಿನ್ಯಾಸದ ನಕ್ಷೆಯಲ್ಲಿ ಗಮನಿಸಬಹುದಾದಂತೆ, ಹರಿಹರೇಶ್ವರ ದೇವಾಲಯವು ಗರ್ಭಗೃಹ, ಸುಕನಾಸಿ, ನವರಂಗ ಮಂಟಪ, ಸಭಾ ಮಂಟಪ ಹಾಗೂ ಪ್ರವೇಶವನ್ನು ಅನುಕ್ರಮವಾಗಿ ಹೊಂದಿರುವುದನ್ನು ಕಾಣುತ್ತೇವೆ. ಹರಿಹರೇಶ್ವರ ದೇವಾಲಯದೊಳಗೆ ಪ್ರವೇಶಕ್ಕೆ ಮುಖ್ಯ ಪ್ರವೇಶವನ್ನೂ ಸೇರಿ ಒಟ್ಟು ಏಳು ಮಾರ್ಗಗಳಿಂದ ಪ್ರವೇಶವಿದೆ. ಕಾಲಭೈರವ ದೇಗುಲದ ಸ್ಥಿತ ಸ್ಥಾನಕ್ಕೆ ಸಂಬಂಧಿಸಿದಂತೆ, ಹರಿಹರೇಶ್ವರ ದೇಗುಲದ ನವರಂಗದ ಎರಡೂ ಪಕ್ಕಗಳಲ್ಲಿ – ಉತ್ತರ, ದಕ್ಷಿಣ ದಿಕ್ಕುಗಳಲ್ಲಿ – ಎರಡು ದ್ವಾರಗಳಿವೆ. ಈ ಎರಡೂ ದ್ವಾರಗಳಿಗೆ ಮುಂದೆ ಒಂದು ಅಂಕಣದಷ್ಟು ವಿಸ್ತಾರವಾಗಿರುವ ಒಂದೊಂದು ಕೈಸಾಲೆ (Porch)ಗಳಿದ್ದು, ಉದ್ದವಾದ ತೊಲೆಗಳನ್ನೂ, ಮುಂಚಾಚಿದ ಅಗಲವಾದ ಏಣುಗಳನ್ನೂ ಹೊಂದಿವೆ. ಎರಡೂ ಬದಿಗಳಲ್ಲಿ ಕಕ್ಷಾಸನವಿದೆ. ಈ ಕೈಸಾಲೆಯ ಅಂಕಣಗಳನ್ನು ಆಧರಿಸಿ ನಾಲ್ಕು ಕಂಬಗಳಿವೆ. ನವರಂಗದ ಪೂರ್ವದ ಬಾಗಿಲುವಾಡದಲ್ಲಿರುವಂತಹ ಅಲಂಕರಣ ಈ ಬಾಗಿಲುವಾಡದ ಮೇಲೂ ಇದೆ. ಆದರೆ ಅದರಷ್ಟು ಸೂಕ್ಷ್ಮ ನವಿರು ಇಲ್ಲಿ ಕಾಣಿಸಿಕೊಂಡಿಲ್ಲ. ದ್ವಾರಬಂಧದ ಮೇಲೆ ನಡುವಣ ಭಾಗದಲ್ಲಿ ಗಜಲಕ್ಷ್ಮೀ, ಎರಡೂ ಕಡೆಗಳಲ್ಲಿ ಕೆಳಮುಖ ಮಾಡಿದ ಕಮಲದ ಮೊಗ್ಗುಗಳು, ಚೌಕಟ್ಟಿನ ಎರಡೂ ಬದಿಗಳಲ್ಲಿ ಬಾಗಿಲುವಾಡದ ಭಾಗವಾಗಿ ಎರಡೆರಡು ಕಂಬಗಳು ಇವೆ. ಉತ್ತರದ ಬಾಗಿಲವಾಡದ ಕಂಬದಲ್ಲಿ ಎರಡೂ ಕಡೆಗಳಲ್ಲಿ ಸುಮಾರು ಹದಿಮೂರನೆಯ ಶತಮಾನದ ಶಾಸನಗಳಿದ್ದು (ದಾ. ೫೨ ಮತ್ತು ೫೪) ಅದರಲ್ಲಿ ಹರಿಹರದೇವರ ನಂದಾದೀಪ ಹಾಗೂ ವನಮಾಲೆಗಳನ್ನು ಒದಗಿಸಲು ಮಾಡಿದ ವ್ಯವಸ್ಥೆಯ ಪ್ರಸ್ತಾಪವಿದೆ. ದಕ್ಷಿಣದ ದ್ವಾರ ಪ್ರವೇಶಕ್ಕೆ ಮುಕ್ತವಾಗಿದ್ದು, ಉತ್ತರದ ದ್ವಾರದ ಭಾಗದಲ್ಲಿ ಕೈಸಾಲೆಗೆ ಹೊಂದಿಕೊಂಡು ಜೋಡಿಸಲ್ಪಟ್ಟಂತೆ ಸ್ವಲ್ಪ ವಿಸ್ತರಿಸಿದ ಉತ್ತರದ ತುದಿಯಲ್ಲಿ ದಕ್ಷಿಣಾಭಿಮುಖವಾಗಿ ಸ್ಥಿತವಾಗಿರುವಂತೆ ಕಾಲಭೈರವನ ಸಣ್ಣ ದೇಗುಲವನ್ನು ನಿರ್ಮಿಸಲಾಗಿದೆ. ಹೀಗೆ ಕಾಲಭೈರವ ದೇಗುಲವು ಉತ್ತರ ದಿಕ್ಕಿನ ದ್ವಾರದ ಕೈಸಾಲೆಯ ಹೊರ ಭಾಗದ ಪ್ರವೇಶಕ್ಕೆ ಹೊಂದಿಕೊಂಡು ರಚಿತವಾದ ಕಾರಣ, ಕಾಲಭೈರವ ದೇಗುಲಕ್ಕೆ ಪ್ರವೇಶಿಸಲು ಹಾಗೆಯೇ ಹರಿಹರೇಶ್ವರ ದೇಗುಲದ ನವರಂಗ ಮಂಟಪಕ್ಕೆ ಉತ್ತರದ ಕಡೆಯಿಂದ ಪ್ರವೇಶಿಸಲು ಸಾಧ್ಯವಾಗುವಂತೆ ಪೂರ್ವ ಮತ್ತು ಪಶ್ಚಿಮದ ಎರಡೂ ಪಕ್ಕಗಳ ಭಾಗದಲ್ಲಿ ಕೈಸಾಲೆಯ ಭಾಗವನ್ನು ತುಂಡರಿಸಿ ಕಿರು ಪ್ರವೇಶ ಮಾರ್ಗವನ್ನು ಏರ್ಪಡಿಸಲಾಗಿದೆ.



ಕಾಲಭೈರವ ದೇಗುಲವನ್ನೊಳಗೊಂಡ ಹರಿಹರೇಶ್ವರ ದೇಗುಲದ ತಲ ವಿನ್ಯಾಸ



ಕಾಲಭೈರವ ದೇವಾಲಯದ ಪ್ರವೇಶ ಭಾಗಗಳು

ಕಾಲಭೈರವ ದೇಗುಲದ ವಿನ್ಯಾಸ

ಕಾಲಭೈರವ ದೇಗುಲವು ಚಿಕ್ಕದಾದ ಗಾತ್ರ ಹಾಗೂ ಅತ್ಯಂತ ಸರಳವಾದ ವಿನ್ಯಾಸದಿಂದ ಕೂಡಿದ ರಚನೆಯಾಗಿದೆ. ಈ ದೇಗುಲದ ಪೂರ್ಣ ವಿನ್ಯಾಸದ ಸ್ಪಷ್ಟ ಅರಿವಿಗೆ ದೇಗುಲದ ನಾಲ್ಕೂ ಬದಿಗಳ ಸಂಪೂರ್ಣ ನೋಟದ ಚಿತ್ರಣವು ಸಹಾಯಕವಾಗುತ್ತದೆ.

ದೇವಾಲಯದ ಹೊರ ಪಾರ್ಶ್ವ ಹಾಗೂ ಹಿಂಬದಿಯ ನೋಟಗಳನ್ನು ಪರಿಶೀಲಿಸಿದಾಗ ದೇಗುಲವು ಪೀಠ, ಅಧಿಷ್ಠಾನ, ಭಿತ್ತಿ ಮತ್ತು ಪ್ರಸ್ತರ – ಭಾಗಗಳನ್ನು ಮಾತ್ರ ಹೊಂದಿರುವುದು ಕಂಡು ಬರುತ್ತದೆ. ಯಾವುದೇ ಕಲಾತ್ಮಕ ರಚನೆಗಳಿಲ್ಲದ ಸರಳವಾದ ಭಿತ್ತಿಯಿದ್ದು, ಪ್ರಸ್ತರದ ಮೇಲ್ಭಾಗದಲ್ಲಿ ಗಾರೆಯಿಂದ



ಕಾಲಭೈರವ ದೇಗುಲದ ಮುಂಭಾಗ



ಕಾಲಭೈರವ ದೇಗುಲದ ಬಲ–ಪಾರ್ಶ್ವ



ಕಾಲಭೈರವ ದೇಗುಲದ ಎಡ–ಪಾರ್ಶ್ವ



ಕಾಲಭೈರವ ದೇಗುಲದ ಹಿಂಭಾಗ

ನಿರ್ಮಿತ ಭಾಗವೇ ಅಂತಿಮವಾಗಿದೆ. ದೇಗುಲದ ಒಳ ಭಾಗ ಚೌಕಾಕಾರವಾಗಿದ್ದು, ಅರ್ಧಗಂಬಕ್ಕೆ ಹೊಂದಿಕೊಂಡು ರಚಿತವಾದ ಸರಳ ಭಿತ್ತಿಯಿಂದಾಗಿದೆ. ಮಧ್ಯ ಭಾಗದಲ್ಲಿ ಕಾಲಭೈರವ ಶಿಲ್ಪವಿದೆ. ಗರ್ಭಗೃಹದ ಮೇಲ್ಭಾವಣಿಯಲ್ಲಿ ಚೌಕಾಕೃತಿಯ ದಿಂಡಿನೊಳಗೆ ಅರಳಿದ ಕದಳೀಕರಣದ ಕೆತ್ತನೆ ಇದೆ.

ಈ ಸಂಪೂರ್ಣ ದೇವಾಲಯದಲ್ಲಿ ಅತ್ಯಂತ ಆಕರ್ಷಕ ವಾಗಿರುವ, ಕಲಾತ್ಮಕವಾದ ಭಾಗವೆಂದರೆ, ದೇಗುಲದ ಬಾಗಿಲುವಾಡ. ಬಾಗಿಲುವಾಡದ ಅಲಂಕರಣಕ್ಕೆ ಸಂಬಂಧಿಸಿದಂತೆ ಬಾಗಿಲುವಾಡದಲ್ಲಿ ಐದು ಶಾಖೆಗಳಿರುವುದನ್ನು ಗಮನಿಸಬಹುದಾಗಿದೆ. ಆ ಶಾಖೆಗಳೆಂದರೆ:

(೧) ವಜ್ರ ಶಾಖೆ, (೨) ಮಿಥುನ ಶಿಲ್ಪ ಶಾಖೆ, (೩) ಅರ್ಧಗಂಬ ಶಾಖೆ, (೪) ಸಿಂಹ ಶಾಖೆ, (೫) ವಲ್ಲಿ ಶಾಖೆ

ಕಾಲಭೈರವ ದೇಗುಲದ ಬಾಗಿಲುವಾಡದಲ್ಲಿರುವ ಗಜಲಕ್ಷ್ಮೀ ಶಿಲ್ಪ ಮತ್ತು ಕುಕನೂರ ನಾಗೆಯ (ನಾಗಯ್ಯ)ನ ಮಗ ಗೋಪಯನಾಯ್ಕನ ಧರ್ಮ(ದಾನ) ಶಾಸನ

ಬಾಗಿಲುವಾಡದ ದ್ವಾರಬಂಧದ ನಡುವಿನ ಲಲಾಟ ಬಿಂಬದಲ್ಲಿ ಗಜಲಕ್ಷ್ಮಿಯ ಆಕರ್ಷಕ ಕೆತ್ತನೆಯಿದೆ. ಗಜಲಕ್ಷ್ಮೀ ಶಿಲ್ಪದ ಮೇಲ್ಭಾಗದಲ್ಲಿ ಕೀರ್ತಿಮುಖ ಹಾಗೂ ಅದರ ಎರಡೂ



ಕಾಲ ಭೈರವ ದೇಗುಲದ ಗರ್ಭಗೃಹದ ಮೇಲ್ಭಾವಣಿ



ಬಾಗಿಲುವಾಡದ ಅಲಂಕರಣ

ಬದಿಗಳಲ್ಲಿ ಕೆಳಮುಖವಾಗಿರುವಂತೆ ವಿನ್ಯಾಸಗೊಂಡಿರುವ ಕಮಲದ ಮೊಗ್ಗುಗಳ ಕೆತ್ತನೆಯಿದೆ. ಲಲಾಟಬಿಂಬದ ಉತ್ತರಾಂಗದಲ್ಲಿ ಯಾವುದೇ ಅಲಂಕರಣಗಳ ಕೆತ್ತನೆಗಳು ಕಂಡುಬರುವುದಿಲ್ಲ. ಗಜಲಕ್ಷ್ಮೀ ಶಿಲ್ಪದ ಕೆಳಭಾಗದ ಲಲಾಟ ಬಿಂಬದ ಆಧಾರ ಪಟ್ಟಿಕೆಯಲ್ಲಿ ಕುಕನೂರ ನಾಗೆಯ (ನಾಗಯ್ಯ)ನ ಮಗ ಗೋಪಯನಾಯ್ಕನ ಧರ್ಮ(ದಾನ) ಶಾಸನವೊಂದಿದೆ. ಈ ಶಾಸನವು ಹರಿಹರ ಶಾಸನ–೭೬, ಹಾಗೂ ಎಪಿಗ್ರಾಫಿಯಾ ಕರ್ನಾಟಕದ ಸಂಪುಟ–XI "ಚಿತ್ರದುರ್ಗ ಡಿಸ್ಟ್ರಿಕ್ಟ್‌ನಲ್ಲಿರುವ ಶಾಸನಗಳು"ನಲ್ಲಿ ಬಿ. ಲೆವಿಸ್ ರೈಸ್‌ರಿಂದ ಉಲ್ಲೇಖಿಸಲ್ಪಟ್ಟಿರುವಂತೆ, ಹರಿಹರೇಶ್ವರ ದೇವಾಲಯದ ಉತ್ತರಕ್ಕೆ ಕಾಲಭೈರವನ ದೇವಾಲಯದ ಬಾಗಿಲ ಮೇಲೆ ರಚಿತ ದಾವಣಗೆರೆ ತಾಲ್ಲೂಕು ೫೧ನೇ ಸಂಖ್ಯೆಯ ಶಾಸನವಾಗಿದೆ. ಇದು ಶಾಲಿವಾಹನ ಶಕೆಯ ವಿಳಂಬಿ ಸಂವತ್ಸರದ ಉಲ್ಲೇಖವನ್ನು ಮಾತ್ರ ಹೊಂದಿದ್ದು, ಖಚಿತವಾದ ವರ್ಷದ ಉಲ್ಲೇಖವನ್ನು ಹೊಂದಿಲ್ಲ. ಆದರೆ ಉಲ್ಲೇಖಿತ ಸಂವತ್ಸರದ ಆಧಾರದ ಮೇಲೆ ಶಾಸನದ ಕಾಲಗತಿಯನ್ನು ಸುಮಾರು ಕ್ರಿ.ಶ. ೧೨೯೮ರ ಕಾಲದ್ದೆಂದು ಊಹಿಸಲಾಗಿದೆ. ಈ ಶಾಸನಾಧಾರವು ದೇವಾಲಯದ ಕಾಲದ ನಿರ್ಧರಣೆಗೆ ಪೂರಕವಾದ ಆಧಾರವಾಗಿದ್ದು, ಸುಮಾರು ಕ್ರಿ.ಶ. ೧೨೯೮ರ ಪೂರ್ವದಲ್ಲಿಯೇ ಈ ದೇವಾಲಯವಿದ್ದಿತೆಂಬುದು ಖಚಿತವಾಗುತ್ತದೆ.



ಬಾಗಿಲುವಾಡದಲ್ಲಿರುವ ಗಜಲಕ್ಷ್ಮೀ ಶಿಲ್ಪ ಮತ್ತು ಕುಕನೂರ ನಾಗೆಯನ ಮಗ ಗೋಪಯನಾಯ್ಕನ ಧರ್ಮ ಶಾಸನ

ಶಾಸನದ ಪೂರ್ಣ ಪಾಠ

"ಸ್ವಸ್ತಿ ಶ್ರೀಮತು ವಿಳಂಬಿ ಸಂವತ್ಸರದ ಭಾದ್ರಪದ ಶು. ೧೦ (ದಶಮಿ) ಸೋಮವಾರದಂ

ದು ಶ್ರೀಮನ್ಮಹಾಮಂಡಳೇಶ್ವರಂ ಯಾಚರಸ ಪಂಡಿತರ ಯಳಿಯ ಮೊಂಮ

ರಸರ ಮನೆಯ ತಡಿಯನಾಯಕ ಕುಕನೂರ ನಾಗೆಯ ನಾಯ್ಕನ ಮಗ ಮಂ

ದೆಯರ ಗಂಡ ಗೋಪಯ ನಾಯ್ಕನು ಶ್ರೀ ಸ್ವಾಮಿ ಹರದೇವರ ತೆಂಕಣಬಾಗಿಲ ಕಂಚಿನ ವಾ

ರಣಕ್ಷಿ(ಸಿ?)ಲ ಪಾಳನ ಬಾಗಿಲ ಕಂಚಿನ ತೋ[ರ]ಣ ಯೀ ಯೆರಡನಾ ಮಾಡಿದ

ಧರ್ಮಯಾಚಂದ್ರಾರ್ಕ ಮಂಗಳ

ಮಹಾ ಶ್ರೀ ಶ್ರೀ ಶ್ರೀ ಶ್ರೀ."

ಶಾಸನದ ವಿವರಗಳು

ಸುಮಾರು ಕ್ರಿ.ಶ. ೧೨೯೮ನೇ ಕಾಲಕ್ಕೆ ಸೇರಿದ, ವಿಳಂಬಿನಾಮ ಸಂವತ್ಸರ, ಭಾದ್ರಪದ ಮಾಸ, ದಶಮಿ ತಿಥಿ, ಸೋಮವಾರವೆಂದು ಉಲ್ಲೇಖಿತ ಈ ಶಾಸನವು ಆ ದಿನದಂದು ಕುಕನೂರ ನಾಗೆಯ ನಾಯ್ಕನ ಮಗ ಗೋಪಯನಾಯ್ಕನು ಶ್ರೀ ಸ್ವಾಮಿ ಹರ ದೇವರ ದಕ್ಷಿಣ ಬಾಗಿಲಿಗೆ ಮತ್ತು ಕಾಲಭೈರವ ದೇವರ ಬಾಗಿಲಿಗೆ ಕಂಚಿನ ತೋರಣವನ್ನು ಮಾಡಿಸಿದ ವಿಷಯವನ್ನು ಪ್ರಸ್ತಾಪಿಸುತ್ತದೆ. ಕುಕನೂರಿನ ನಾಗೆಯನಾಯಕನು ಮಹಾಮಂಡಲೇಶ್ವರ ಏಚರಸ ಪಂಡಿತರ ಅಳಿಯ ಒಮ್ಮರಸರ ಮನೆಯ ತಡಿಯ ನಾಯಕ (ಅಶ್ವಾಧಿಕಾರಿ)ಯಾಗಿದ್ದಿರಬೇಕೆಂದು ತರ್ಕಿಸಲಾಗಿದೆ. ತಮ್ಮ ಧರ್ಮ (ದಾನ) ಶಾಶ್ವತವಾಗಿರಬೇಕಿತ್ತೆಂಬ ಉದ್ದೇಶದಿಂದ ರಚಿತ ಈ ಶಾಸನವು ಗರ್ಭಗೃಹದ ದೇವರ ಶಿಲ್ಪವನ್ನು ಗುರುತಿಗೆ ಆಧಾರವನ್ನೂ ಒದಗಿಸುತ್ತದೆ. ಶಾಸನದಲ್ಲಿ ಉಲ್ಲೇಖಿತ 'ವಾರಣಾಕ್ಷಿ(ಸಿ?)ಪಾಳ' ಎಂದರೆ 'ಕಾಶಿ (ವಾರಣಾಸಿ)ಯ ಪಾಲಕ' ಅರ್ಥಾತ್ 'ಶಿವ' ಅರ್ಥಾತ್ 'ಕಾಲಭೈರವ' ಎಂದು ಅರ್ಥೈಸುವುದು ಔಚಿತ್ಯಪೂರ್ಣವಾಗಿದೆ. ಈ ವೇಳೆಗೆ ಹರಿಹರ ಹೊಯ್ಸಳರ ಕೈಬಿಟ್ಟು ಯಾದವರ ಕೈಗೆ ಬಂದಿದ್ದಿರಬೇಕು.





ಬಾಗಿಲುವಾಡದ ಶೈವ ದ್ವಾರಪಾಲಕ ಶಿಲ್ಪಗಳು: ನಂದಿ ಮತ್ತು ಭೃಂಗಿ, ಸೇವಕಿಯರು ಮತ್ತು ಚಾಮರಧಾರಿ ಸ್ತ್ರೀಯರೊಂದಿಗೆ

ಬಾಗಿಲುವಾಡದಲ್ಲಿ ಸೇವಕಿಯರು ಮತ್ತು ಚಾಮರಧಾರಿ ಸ್ತ್ರೀಯರೊಂದಿಗೆ ಇರುವ ನಂದಿ ಮತ್ತು ಭೃಂಗಿ ಎಂಬ ಕೈಯಲ್ಲಿ ಡಮರುಗ ಮತ್ತು ತ್ರಿಶೂಲವನ್ನು ಹೊಂದಿರುವ ಶೈವ ದ್ವಾರಪಾಲಕ ಶಿಲ್ಪಗಳು ದೇವಾಲಯದೊಳಗಿನ ಶಿಲ್ಪ ಶಿವ ಇಲ್ಲವೇ ಶಿವಾವತಾರಿಯಾಗಿದ್ದಿತೆಂಬುದಕ್ಕೆ ಸಾಕ್ಷಿಯಾಗಿವೆ.

ಹರಿಹರದಲ್ಲಿ ಕಾಲ(ಳ) ಭೈರವ ಶಿಲ್ಪ: ಪ್ರತಿಷ್ಠಾಪನೆಯ ಹಿನ್ನೆಲೆ

ಹರಿಹರದಲ್ಲಿ ಕಾಲ(ಳ) ಭೈರವ ಶಿಲ್ಪ ರಚನೆ/ಪ್ರತಿಷ್ಠಾಪನೆಯ ಕುರಿತಾಗಿ ಸ್ಥಳೀಯ ಪೌರಾಣಿಕ ಹಿನ್ನೆಲೆಯನ್ನು ಹೇಳಲಾಗುತ್ತದೆ. "ದಕ್ಷಿಣ ಕಾಶಿ" ಎಂದು ಖ್ಯಾತ ಹರಿಹರೇಶ್ವರ ದೇವಾಲಯದ ಶ್ರೇಷ್ಠತೆಯನ್ನು ನಿರೂಪಿಸುವಂತೆ ಕಾಲ(ಳ) ಭೈರವನು ಹರಿಹರ ಕ್ಷೇತ್ರವನ್ನೂ, ಕಾಶಿಯನ್ನೂ ಒಂದು ತಕ್ಕಡಿಯಲ್ಲಿಟ್ಟು ತೂಗುತ್ತ ಹರಿಹರ ಕ್ಷೇತ್ರ ಕಾಶಿಗಿಂತ ಒಂದು ಗುಲಗಂಜಿ ತೂಕದಷ್ಟು ಹೆಚ್ಚೆಂದು ನಿರ್ದೇಶಿಸುತ್ತಿರುವಂತೆ ಈ ಶಿಲ್ಪ ರಚನೆಯಿದೆ ಎಂದು ಹೇಳಲಾಗುತ್ತದೆ. ಆದರೆ ತಕ್ಕಡಿ ಹಿಡಿದಿದ್ದಾನೆಂದು ಹೇಳಲಾಗುವ ಕಾಳಭೈರವ ಶಿಲ್ಪದ ಕೈ ಭಾಗ ಭಗ್ನಗೊಂಡಿದ್ದು, ಕೈಯಲ್ಲಿರುವುದು ತಕ್ಕಡಿಯೋ? ಅಥವಾ ಕತ್ತಿಯೋ? – ಎಂಬುದು ತಿಳಿಯದಾಗಿದೆ. ಊಹೆಗೆ ಮಾತ್ರ ಇಲ್ಲಿ ಅವಕಾಶವಿರುವುದನ್ನು ಉಲ್ಲೇಖಿಸಬಹುದಾಗಿದೆ. ಕಾಲ(ಳ) ಭೈರವನನ್ನು ಕ್ಷೇತ್ರ ಪಾಲಕನೆಂಬುದಾಗಿಯೂ ಪ್ರತಿಷ್ಠಾಪಿಸಲಾಗಿದೆಯೆಂದೂ ಹೇಳಲಾಗುತ್ತದೆ.

ಕಾಲಭೈರವ ಶಿಲ್ಪವು ಸಾಮಾನ್ಯವಾಗಿ ವಸ್ತ್ರಧಾರಿಯಾಗಿಲ್ಲ ದಿರುವ ಲಕ್ಷಣದಂತೆಯೇ ನಿರ್ಮಿಸಲ್ಪಟ್ಟಿರುವ ಈ ಶಿಲ್ಪವು ಬಳಪದ ಕಲ್ಲಿನಿಂದ ನಿರ್ಮಿತವಾಗಿದ್ದು, ಗಾತ್ರದಲ್ಲಿ ಚಿಕ್ಕದಾಗಿದೆ. ಲೀಲಾಂಜನಾಸನಾರೂಢವಾಗಿ ರಚಿತ ಈ ಶಿಲ್ಪವು ಸರಳ ಮುಕುಟಧಾರಿಯಾಗಿದೆ. ಚತುರ್ಭುಜಧಾರಿಯಾಗಿದ್ದು, ಹಿಂದಿನ ಎಡಗೈಯಲ್ಲಿ ತ್ರಿಶೂಲ ಹಾಗೂ ಬಲಗೈಯಲ್ಲಿ ಡಮರುಗವಿರುವಂತೆಯೂ, ಮುಂದಿನ ಎಡಗೈ ಭಾಗದಲ್ಲಿ ಕಪಾಲಧಾರಿಯಾಗಿರುವಂತೆಯೂ, ಬಲಗೈಯಲ್ಲಿ ಕತ್ತಿ ಅಥವಾ ತಕ್ಕಡಿಯನ್ನು (ಸ್ಥಳ ಪುರಾಣದಲ್ಲಿ ಉಲ್ಲೇಖಿತವಾದಂತೆ) ಹಿಡಿದಿರುವಂತೆಯೂ ರಚಿತವಾಗಿದೆಯೆಂದು ತೋರುತ್ತದೆ. ವಿವಸ್ತ್ರವಾಗಿರುವಂತೆ ರಚಿತ ಈ ಶಿಲ್ಪದಲ್ಲಿ ಕಂಠಹಾರ, ಕಂಠೀ ಹಾರ, ಕೈಗಡಗ, ಕಾಲ್ಗಡಗ, ಕರ್ಣಕುಂಡಲ, ಉದರಬಂಧದ ಅಲಂಕರಣಗಳಿವೆ. ಕಾಲಭೈರವನ ವಾಹನವಾದ ಶ್ವಾನವೂ ಪಾದ ಭಾಗದಲ್ಲಿ ಕೂಡಾ ಸ್ಪಷ್ಟವಾಗಿ ಕೆತ್ತಲ್ಪಟ್ಟಿದೆ.

ಮೂಲ ಹರಿಹರೇಶ್ವರ ದೇವಾಲಯದ ವಿಸ್ತೃತ ಭಾಗವೆಂದು ಸ್ಪಷ್ಟವಾಗಿ ನಿರೂಪಿಸಲು ಸಾಧ್ಯವಾಗುವ ಕಾಲಭೈರವ ದೇವಾಲಯ ಕಲಾವಂತಿಕೆ, ಸೌಂದರ್ಯದ ದೃಷ್ಟಿಯಿಂದ ಬಾಗಿಲುವಾಡದ ಅಲಂಕರಣವನ್ನು ಹೊರತುಪಡಿಸಿ ಯಾವುದೇ ವಿಶೇಷತೆಯನ್ನು ಹೊಂದಿಲ್ಲದಿರುವುದು ಗಮನಾರ್ಹ. ಈ ದೇಗುಲ ಹೊಯ್ಸಳ ಪೂರ್ವದಲ್ಲಿಯೇ ಕಲ್ಯಾಣದ ಚಾಲುಕ್ಯರ ಕಾಲದಲ್ಲಿ ನಿರ್ಮಿತವಾಗಿದ್ದಿರಬಹುದೇ – ಎಂಬ ಚರ್ಚೆಯಿದೆ. ಆದಾಗ್ಯೂ, ದೇವಾಲಯದ ಪೂರ್ಣ ತಲ ನಕಾಶೆಯ ಸೂಕ್ಷ್ಮ ಅಧ್ಯಯನವು ಹರಿಹರೇಶ್ವರ ದೇವಾಲಯದ ನವರಂಗದ ಉತ್ತರ, ದಕ್ಷಿಣ ದಿಕ್ಕುಗಳಲ್ಲಿನ ಎರಡೂ ಪಾರ್ಶ್ವಗಳಲ್ಲಿರುವ ದ್ವಾರಕ್ಕೆ ಹೊಂದಿಕೊಂಡಂತಿರುವ ಕೈಸಾಲೆಗಳ ಅಂಕಣಗಳ ವಿನ್ಯಾಸ ಕಾಲಭೈರವ ದೇಗುಲ ನಿರ್ಮಾಣಕ್ಕೆ ಪೂರ್ವದಲ್ಲಿ ಸಮಾನ ಸ್ವರೂಪದಲ್ಲಿದ್ದವೆಂದು ಖಚಿತವಾಗಿ ಊಹಿಸಲು ಸಾಧ್ಯವಾಗುವಂತಿವೆ. ಈ ಸಮಾನ ಸ್ವರೂಪದಲ್ಲಿದ್ದ ಕೈಸಾಲೆಯ

ಅಂಕಣಗಳಲ್ಲಿ ಉತ್ತರದ ದ್ವಾರದ ಭಾಗದಲ್ಲಿ ಕೈಸಾಲೆಗೆ ಹೊಂದಿಕೊಂಡು ಜೋಡಿಸಲ್ಪಟ್ಟಂತೆ ಸ್ವಲ್ಪ ವಿಸ್ತರಿಸಿದ ಉತ್ತರದ ತುದಿಯಲ್ಲಿ ದಕ್ಷಿಣಾಭಿಮುಖವಾಗಿ ಸ್ಥಿತವಾಗಿರುವಂತೆ ಕಾಲಭೈರವನ ದೇಗುಲದ ನಿರ್ಮಾಣವಾದ ಕಾರಣದಿಂದಾಗಿ ಕಾಲಭೈರವ ದೇಗುಲಕ್ಕೆ ಪ್ರವೇಶಿಸಲು ಹಾಗೆಯೇ ಹರಿಹರೇಶ್ವರ ದೇಗುಲದ ನವರಂಗ ಮಂಟಪಕ್ಕೆ ಉತ್ತರದ ಕಡೆಯಿಂದ ಪ್ರವೇಶಿಸಲು ಸಾಧ್ಯವಾಗುವಂತೆ ಪೂರ್ವ ಮತ್ತು ಪಶ್ಚಿಮದ ಎರಡೂ ಪಕ್ಕಗಳ ಭಾಗದಲ್ಲಿ ಕೈಸಾಲೆಯ ಭಾಗವನ್ನು ತುಂಡರಿಸಿ ಕಿರು ಪ್ರವೇಶ ಮಾರ್ಗವನ್ನು ಏರ್ಪಡಿಸಲಾಗಿರುವುದು ಹರಿಹರೇಶ್ವರ ದೇವಾಲಯದ ನಿರ್ಮಾಣಾ ನಂತರವೇ ಈ ದೇವಾಲಯ ನಿರ್ಮಾಣಗೊಂಡಿರುವು ದೆಂಬುದನ್ನು ನಿರೂಪಿಸಲು ಆಧಾರವಾಗಿದೆ. ಇನ್ನು ದೇಗುಲ ದಲ್ಲಿ ಪ್ರಸ್ತುತ ಪ್ರತಿಷ್ಠಾಪಿತ ಕಾಲಭೈರವ ಶಿಲ್ಪ ಮೊದಲಿನಿಂದಲೂ ಆ ದೇವಾಲಯದಲ್ಲಿ ಪ್ರತಿಷ್ಠಾಪಿತ ಶಿಲ್ಪವಾಗಿದ್ದಿರಲಾರದು – ಎಂಬ ಸಂದೇಹಕ್ಕೆ ಪೀಠದ ಮೇಲೆ ಪ್ರತಿಷ್ಠಾಪಿತ ಕಾಲಭೈರವ ದೇವರ ಶಿಲ್ಪಕ್ಕೂ, ಬಾಗಿಲುವಾಡಕ್ಕೂ ಸೂಕ್ತ ಪ್ರಮಾಣಾನುಗತಿಗಳು ಕಂಡುಬರದಿರುವುದು, ಬಾಗಿಲುವಾಡದ ಎತ್ತರಕ್ಕೆ ಅನುಗುಣವಾಗಿ ಶಿಲ್ಪದ ಗಾತ್ರವಿರದೇ ಚಿಕ್ಕದಾದ ಶಿಲ್ಪವಿರುವಿಕೆಯ ಅಂಶಗಳು ಆಸ್ಪದ ಮಾಡಿಕೊಡುತ್ತವೆ. ಹಾಗಾಗಿ ಬಹುಶಃ ಮೂಲ ಅನ್ಯ ಶಿಲ್ಪವಿದ್ದಿದ್ದು, ನಂತರದ ಕಾಲಘಟ್ಟದಲ್ಲಿ ಪ್ರಸ್ತುತವಿರುವ ಕಾಲಭೈರವ ಶಿಲ್ಪವನ್ನು ಪ್ರತಿಷ್ಠಾಪಿಸಿರಬೇಕೆಂದೆನಿಸುತ್ತದೆ. ಶಿಲ್ಪವನ್ನು ಸೂಕ್ಷ್ಮವಾಗಿ ಗಮನಿಸಿದಾಗ ಅದು ಅಷ್ಟೇನೂ ಪ್ರಾಚೀನವಾದದ್ದಲ್ಲವೆಂದು ತೋರುತ್ತದೆ. ಅಲ್ಲದೇ ಈ ಶಿಲ್ಪವು ಭಗ್ನ ಸ್ಥಿತಿಯಲ್ಲಿರುವಿಕೆಯು ಹೊಯ್ಸಳೋತ್ತರ ಮುಸ್ಲಿಂ ಧಾಳಿಯ ಪ್ರಭಾವವನ್ನು ಸೂಕ್ಷ್ಮಗ್ರಾಹಿಯಾಗಿ ಗುರುತಿಸಲು ಅನುವಾಗುತ್ತದೆ. ವಿಜಯನಗರದ ಪತನದ ಬಳಿಕ ಹರಿಹರವನ್ನು ತರೀಕೆರೆಯ ಪಾಳೆಯಗಾರರು ಆಕ್ರಮಿಸಿಕೊಂಡು ಕೋಟೆಯನ್ನು ಕಟ್ಟಿದುದು; ನಂತರ ಅವರಿಂದ ಸವಣೂರು ನವಾಬರು ಪಡೆದು ಷೇರ್‌ಖಾನ್‌ನಿಗೆ ಜಹಗೀರಾಗಿ ನೀಡಿದ ವೇಳೆಯಲ್ಲಿ ಹರಿಹರೇಶ್ವರ ದೇವಾಲಯವನ್ನು ಮಸೀದಿಯನ್ನಾಗಿ ಬಳಸುತ್ತಿದ್ದ ಐತಿಹಾಸಿಕತೆಯು ಕಾಲಭೈರವನ ಶಿಲ್ಪದ ಭಗ್ನತೆಗೆ ಕಾರಣವನ್ನು ತರ್ಕಿಸಲು ಮಾರ್ಗವನ್ನು ತೆರೆಯುತ್ತದೆ. ಒಟ್ಟಾರೆ ಅತ್ಯಂತ ಸರಳವಾದ ಈ ಕಾಲಭೈರವ ದೇಗುಲ ಜೋಡಣೆಯಿಂದ ಮೂಲತಃ ಏಕಕೂಟವಾಗಿದ್ದ ಹರಿಹರೇಶ್ವರ ದೇವಾಲಯಕ್ಕೆ ಮತ್ತೊಂದು ಗರ್ಭಗೃಹವು ಜೋಡಣೆಯಾಗಿ ದ್ವಿಕೂಟ ಸ್ವರೂಪವನ್ನು ಪಡೆದಿರುವುದನ್ನು ಗಮನಿಸಬಹುದಾಗಿದೆ.



ಹರಿಹರದ ಕಾಲ(ಳ) ಭೈರವ ಶಿಲ್ಪ

ಆಕರ ಗ್ರಂಥಗಳು

೧. B. Lewis Rice, 1894: "Epigraphia Carnatica Vol-XI", "Inscriptions in the Chitradurga District", Bangalore: Mysore Govt. Central Press, Page No.100.

೨. ಡಾ॥ ನಾ. ಕೊಟ್ರೇಶ್ ಉತ್ತಂಗಿ, ೨೦೧೩: "ಹರಿಹರದೆಳೆಗಳು" – ಹರಿಹರ ತಾಲ್ಲೂಕು ಸಮಗ್ರ ಅಧ್ಯಯನ, ಹೊನ್ನಾಳಿ: ಸಹನಾದ್ರಿ ಪ್ರಕಾಶನ, ಪುಟ ಸಂಖ್ಯೆ ೩೮೬.

೩. ಎಚ್.ಎಂ. ಶಂಕರನಾರಾಯಣರಾವ್, ೧೯೮೨: "ಶ್ರೀ ಹರಿಹರ ದೇವಾಲಯ", ಮೈಸೂರು, ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್, ಪುಟ ಸಂಖ್ಯೆ ೩೨೦–೩೨೧.

೪. ಟಿ. ಗಿರಿಜಾ, ೨೦೦೧, "ದಾವಣಗೆರೆ ಇದು ನಮ್ಮ ಜಿಲ್ಲೆ", ನಿಹಾರಿಕಾ ಪ್ರಕಾಶನ, ದಾವಣಗೆರೆ.

೫. ಸಂತೇಬೆನ್ನೂರು ಸುಮತೀಂದ್ರ ನಾಡಿಗ್, ೨೦೧೦: "ದಾವಣಗೆರೆ ಜಿಲ್ಲೆ: ಇತಿಹಾಸದ ಕೆಲವು ಹೆಜ್ಜೆಗಳು", ಸಂತೇಬೆನ್ನೂರು: ವಿಜಯ ಯುವಕ ಸಂಘ.

೫೪

ಶಾಸನೋಕ್ತ ಗೋಪೀನಾಥ ದೇವರು: ಆರಾಧನೆ-ವೈಶಿಷ್ಟ್ಯ

ವಸುಧ ವಿದ್ಯಾಧೀಶ*

ವಿಷ್ಣುಪಾರಮ್ಯವನ್ನು ಸಾರುವುದು ವೈಷ್ಣವಧರ್ಮ, ವಿಷ್ಣುವೇ ಸರ್ವೋತ್ತಮ, ಸರ್ವಶ್ರೇಷ್ಠ ಎಂಬುದು ಇದರ ಸಿದ್ಧಾಂತ, ಈ ಮತದ ಮೂಲ ನಾಲ್ಕು ವೇದಗಳು, ಹಾಗೂ ಅನೇಕ ಧಾರ್ಮಿಕ ಗ್ರಂಥಗಳು ಈ ಮತದ ಪ್ರಾಚೀನತೆಯನ್ನು ತಿಳಿಸಿಕೊಡುತ್ತಿದೆ.

ಐತಿಹಾಸಿಕವಾಗಿ ವಿಷ್ಣುವಿನ ಆರಾಧನೆಯು ಕ್ರಿ.ಪೂರ್ವ ಕಾಲದಿಂದಲೂ ನಡೆಯುತ್ತಾ ಬಂದಿದೆ ಎಂದು ತಿಳಿಯುತ್ತದೆ. ವೈಷ್ಣವಮತವು ಬೆಳೆದಂತೆ ಜೀವಿಯ ಹೃದಯಸ್ಥನಾದ ನಾರಾಯಣನ ಕಲ್ಪನೆ ಬೆಳೆಯುತ್ತಾ ಬಂದಿತು. ಇದರೊಡನೆ ಈ ಪರಮೋಚ್ಚಸತ್ತೆಯ ವಿಭವಾವತಾರಗಳೂ ಸೇರುತ್ತಾ ಹೋಯಿತು. ಅದರಲ್ಲೂ ಪೂರ್ಣಾವತಾರವೆಂದು ಹೇಳಲಾಗುವ ರಾಮ ಹಾಗೂ ಕೃಷ್ಣನ ಆರಾಧನೆಯು ವೈಷ್ಣವಧರ್ಮೀಯರಲ್ಲಿ ಹಾಸು ಹೊಕ್ಕಾಯಿತು. ದ್ವಾಪರ ಯುಗದ ವಾಸುದೇವನ ಅವತಾರವನ್ನು ಸಾಕ್ಷಾತ್ ನಾರಾಯಣ ಭಗವಂತನೆಂದೇ ಪರಿಗಣಿಸಲಾಗಿ, ಇದರಿಂದ ಭಾಗವತಮತ ಬೆಳೆಯಿತು.

ಶ್ರೀಯುತ ಆರ್.ಜಿ. ಭಂಡಾರ್‌ಕರ್ ಅವರು ತಿಳಿಸುವಂತೆ "ಸಾತ್ವತರು ಎಂಬ ಬುಡಕಟ್ಟು ಜನಾಂಗದಿಂದ ಭಾಗವತಮತವು ಪ್ರಚಾರವಾದರೂ, ಇಲ್ಲಿ ಮೂರು ಬಗೆಯ ಧಾರ್ಮಿಕ ವಿಚಾರಧಾರೆಗಳು ಒಟ್ಟಾಗಿ ಪ್ರವಹಿಸಿತು.[೧]

೧) ವೇದ ದೇವತೆಯಾದ ವಿಷ್ಣುವಿನಿಂದಲೂ

೨) ವಿಶ್ವಾತ್ಮಕ ಮತ್ತು ತಾತ್ವಿಕ ದೇವತೆಯಾದ ನಾರಾಯಣನಿಂದಲೂ

೩) ಐತಿಹಾಸಿಕ ದೇವತೆಯಾದ ವಾಸುದೇವನಿಂದಲು ಬಂದಿದ್ದು.

ಇದರೊಟ್ಟಿಗೆ ದ್ವಾಪರಾಂತ್ಯದಲ್ಲಿ ವಾಸುದೇವ, ಕೃಷ್ಣ, ಗೋಪಾಲಕೃಷ್ಣ ಅಭಿನ್ನವೆಂದು ಭಾವಿಸುವ ಮತ್ತೊಂದು ವಿಚಾರಧಾರೆ ಬೆಳೆಯಿತು ಎಂದಿದ್ದಾರೆ.

ಇದೆಲ್ಲದರ ಆಧಾರದಲ್ಲಿ ಗೋಪಾಲಕೃಷ್ಣನ ಆರಾಧನೆಯು ದ್ವಾಪರದಲ್ಲಿಯೇ ಹೆಚ್ಚು ಪ್ರಸಿದ್ಧಿಗೆ ಬಂದಿತ್ತು ಎನ್ನಬಹುದು. ಗೋ ಎಂದರೆ ಸಂಸ್ಕೃತ ವಾಙ್ಮಯದಲ್ಲಿ ಅನೇಕಾರ್ಥಗಳು ಇವೆ. ಗೋ-ಎಂದರೆ -ಗೋವುಗಳು, ತುರುಗಳು ಎಂದು, ಗೋ-ಎಂದರೆ ಶೃತಿವಾಕ್ಯಗಳು ಅಥವಾ ವೇದದಲ್ಲಿ ಹೇಳಿದ ಮಾತುಗಳು ಎಂದೂ, ಗೋ -ಎಂದರೆ ಬೆಳಕಿನ ಕಿರಣಗಳು, ಗೋ-ಭೂಮಿ ಎಂದೂ ನಾನಾರ್ಥಗಳು ಇವೆ. ಪಾ - ಎಂದರೆ ಪಾಲಿಸುವವ, ರಕ್ಷಕ, ಒಡೆಯ ಎಂದು ಗೋಪ -ಅಂದರೆ ತುರುಗಳನ್ನೂ, ಭೂಮಿಯನ್ನೂ ತನ್ನ ಪ್ರಖರವಾದ ತೇಜಸ್ಸಿನಿಂದ ಅಂದರೆ ಜ್ಞಾನಧಾರೆಯನ್ನು ಇತ್ತು ರಕ್ಷಿಸುವವನು ಎಂದು ಅರ್ಥೈಸಲಾಗಿದೆ. ಗೋಪ ಎಂದರೆ "ಗೋ ಬ್ರಾಹ್ಮಣಸ್ಯ ಪಾಲಕಃ" ಎಂದು ವಿವರಿಸಲಾಗಿದೆ. ಗೋಪಾಲಕೃಷ್ಣನ ಆರಾಧನೆಯೊಟ್ಟಿಗೆ ಗೋಪ, ಗೋಪಿ, ಗೋಪಾಲ, ಗೋಪೀನಾಥ ಎಂಬ ಹೆಸರುಗಳು ಹೆಚ್ಚು ಬಳಕೆಯಲ್ಲಿದ್ದದ್ದು ಕಂಡುಬರುತ್ತದೆ. ವಸುದೇವನ ಸುತನಾದ ವಾಸುದೇವನೇ ಗೋಪಾಲಕೃಷ್ಣ, ವೇಣುಗೋಪಾಲ, ಗೋಪೀನಾಥ ಎಂಬ ಅನೇಕ ಹೆಸರುಗಳಿಂದ ಪ್ರಸಿದ್ಧನಾದವನು. ವಾಸುದೇವ ಕೃಷ್ಣನೇ ಈ ಹೆಸರುಗಳಿಂದ ಹೆಚ್ಚಾಗಿ ಆರಾಧನೆಗೊಂಡಿರುವುದನ್ನು ಅನೇಕ ಗ್ರಂಥಗಳು, ಶಾಸನಗಳೂ ನಮಗೆ ತಿಳಿಸುತ್ತಿವೆ. ಕ್ರಿ.ಪೂರ್ವ ೫ನೇ ಶತಮಾನದಲ್ಲಿದ್ದ ಪಾಣಿನಿ, ಕ್ರಿ.ಪೂ. ೪ನೇ ಶತಮಾನದಲ್ಲಿ ಭಾರತಕ್ಕೆ ಬಂದಿದ್ದ ಮೆಗಾಸ್ತನೀಸನೂ ಕೃಷ್ಣನ ಆರಾಧನೆಯ ವಿಷಯ ತಿಳಿಸಿದ್ದಾನೆ.

ಐತಿಹಾಸಿಕವಾಗಿ ವೈಷ್ಣವಮತ ದಕ್ಷಿಣಭಾರತದಲ್ಲಿ ಎಂದಿನಿಂದ ಪ್ರಚಾರವಾಗಿರಬಹುದೆಂದು ನಿಖರವಾಗಿ ಹೇಳಲಾಗದಿದ್ದರೂ, ಕ್ರಿಸ್ತಶಕೆಯ ಆರಂಭದಿಂದಲೇ ವೈಷ್ಣವ/ವೈದಿಕ ಮತವು ಆಚರಣೆಯಲ್ಲಿತ್ತು ಎಂಬುದಕ್ಕೆ ಸಾಕಷ್ಟು ಆಧಾರಗಳು ದೊರೆಯುತ್ತಿವೆ. ಕ್ರಿ.ಪೂ. ೧೨೧ರಿಂದ ಕ್ರಿ.ಶ. ೧೭೪ರವರೆಗೆ ದಕ್ಷಿಣಭಾರತವನ್ನು ಆಳಿದ ಶಾತವಾಹನರು,

* # ೬೪೮, ೧೨ನೇ ಅಡ್ಡರಸ್ತೆ, ಈಸ್ಟ್-ವೆಸ್ಟ್ ಕಾಲೇಜು ರಸ್ತೆ, ವಿಶ್ವನೀಡಂ ಅಂಚೆ, ಬೆಂಗಳೂರು.

ವೈದಿಕ ಧರ್ಮಾವಲಂಬಿಗಳಾಗಿದ್ದು, ವೈದಿಕ ಪರವಾದ ಅನೇಕ ಯಜ್ಞಯಾಗಾದಿಗಳನ್ನು ಮಾಡಿದ್ದನ್ನು ಶಾಸನಗಳು ತಿಳಿಸುತ್ತಿವೆ.[೨] ಶಾತವಾಹನರ ಎರಡನೇ ಶಾತಕರ್ಣಿಯ ರಾಣಿ ನಾಗಣಿಕೆಯ ನಾನಾಘಾಡ ಶಾಸನದಲ್ಲಿ (ಕ್ರಿ.ಪೂರ್ವ.೧೮೪-೧೨೫) ರಾಜನು ಸುಮಾರು ಇಪ್ಪತ್ತರಷ್ಟು ಯಾಗಗಳನ್ನು ಮಾಡಿದನೆಂದು ತಿಳಿಸುತ್ತಿದೆ. ಇವರ ನಂತರ ಬಂದ ಕನ್ನಡದ ಮೊಟ್ಟಮೊದಲ ಮನೆತನವಾದ ಕದಂಬರೂ ವೈದಿಕಧರ್ಮವನ್ನು ಆಚರಿಸುತ್ತಿದ್ದರೆಂಬುದಕ್ಕೆ ಶಾಶನಾಧಾರಗಳು ಇವೆ.

ಕ್ರಿ.ಶ. ನಾಲ್ಕನೇ ಶತಮಾನದ ವೇಳೆಗಾಗಲೇ ವೈಷ್ಣವಮತ ದಕ್ಷಿಣಭಾರತದಲ್ಲಿ (ಹೆಚ್ಚಾಗಿಯೇ) ಪ್ರಚಾರವಾಗಿದ್ದಿತು. ಬಾದಾಮಿ ಚಾಲುಕ್ಯರ ಅನೇಕ ಶಾಸನಗಳು, ತಾಮ್ರ ಪಟಗಳಲ್ಲಿ ಕಂಡುಬರುವ ಶ್ಲೋಕಗಳು ಇದಕ್ಕೆ ಸಾಕ್ಷಿಯಾಗಿವೆ.[೩]

ಜಯತಿ ಅವಿಷ್ಕೃತಂ ವಿಷ್ಣೋಃ ವಾರಾಹಂ ಕ್ಷೋಭಿತಾರ್ಣವಂ।
ದಕ್ಷಿಣೋನ್ನತ ದಂಷ್ಟ್ರಾಗ್ರೇ ವಿಶ್ರಾಂತ ಭುವನಂ ವಪುಃ॥

ವಿಷ್ಣುವಿನ ಒಂದು ಅವತಾರವಾದ ಈ ವರಾಹದ ಲಾಂಛನವನ್ನು ತಮ್ಮ ಮುದ್ರೆಗಳ ಮೇಲೆ ಹಾಕಿಸಿದ್ದು ಕಂಡುಬರುತ್ತಿದೆ. ನಂತರದ ಗಂಗರು, ನೊಳಂಬರು, ಹೊಯ್ಸಳರು, ವಿಜಯನಗರದ ಅರಸರುಗಳು ಪರಮತ-ಸಹಿಷ್ಣುಗಳಾಗಿದ್ದು ವೈಷ್ಣವ ಮತಕ್ಕೂ ಪ್ರಾಶಸ್ತ್ಯ ನೀಡಿದ್ದರೆಂಬುದನ್ನು ಅನೇಕ ಶಾಸನಗಳು ತಿಳಿಸುತ್ತವೆ. ಅವರ ನಾಮಧೇಯಗಳು, ಅವರು ಹೊತ್ತಿದ್ದ ಬಿರುದುಬಾವಲಿಗಳು, ಹಾಗೇ ನಿರ್ಮಾಣ ಮಾಡಿಸಿರುವ ಅನೇಕ ದೇವಾಲಯಗಳು, ಈ ವಿಷಯವನ್ನು ಹೆಚ್ಚು ಸ್ಪಷ್ಟಗೊಳಿಸುತ್ತದೆ. ಭಾಗವತದಲ್ಲಿ ತಿಳಿಸಿರುವಂತೆ ನಾರಾಯಣನ ೨೨ ಅವತಾರಗಳಲ್ಲಿ ಕೆಲವು ಅದರಲ್ಲೂ, ನರಸಿಂಹ, ರಾಮ ಹಾಗೂ ಕೃಷ್ಣನ ಅವತಾರಗಳ ಆರಾಧನೆಯು ಪ್ರಮುಖವಾಗಿದ್ದು, ಇಂದಿಗೂ ದಕ್ಷಿಣ ಭಾರತದಾದ್ಯಂತ ಈ ಅವತಾರಗಳಿಗೆ ಮೀಸಲಾಗಿರುವ ಅನೇಕ ದೇವಾಲಯಗಳನ್ನು ಕಾಣುತ್ತೇವೆ. ಅದರಲ್ಲೂ ಹೆಚ್ಚಾಗಿ ಕೃಷ್ಣನ ಆಲಯಗಳು ಕಂಡುಬರುತ್ತಿದ್ದು, ಅವನ ವಿವಿಧ ಹೆಸರುಗಳಿಂದ ಆಲಯಗಳು ನಿರ್ಮಾಣವಾಗಿ ಇಂದಿಗೂ ಪೂಜೆಗೊಳ್ಳುತ್ತಿರುವುದನ್ನು ನೋಡಬಹುದಾಗಿದೆ. ಚತುರ್ಭುಜಗಳಿಂದ ಅಲಂಕೃತನಾಗಿ ಎರಡು ಕೈಯಲ್ಲಿ ವೇಣುವನ್ನು ನುಡಿಸುತ್ತಾ ಶಂಕಚಕ್ರಧಾರಿಯಾಗಿ ತುರುಗಳನ್ನು ಕಾಯುತ್ತಾ ಸುತ್ತಲೂ ಗೋಪಬಾಲಕರು, ಗೋಪಿಕೆಯರಿಂದ ಕೂಡಿದ ಕೃಷ್ಣನ ಆರಾಧನೆ ಹೊಯ್ಸಳರ ಕಾಲದಿಂದ ಪ್ರವರ್ಧಮಾನಕ್ಕೆ ಬಂದಿತು ಎನ್ನಬಹುದು ಗೋಪಾಲಕೃಷ್ಣ, ವೇಣುಗೋಪಾಲಸ್ವಾಮಿ ಎಂಬ ಹೆಸರಿನಿಂದ ಪೂಜೆಗೊಳ್ಳುತ್ತಿದ್ದರೂ, ಕೆಲವು ಸ್ಥಳಗಳಲ್ಲಿ ಇದೇ ಕೃಷ್ಣನನ್ನು "ಗೋಪಿನಾಥ" ಎಂಬ ವಿಶಿಷ್ಟವಾದ, ಅಪ್ಯಾಯಮಾನವಾದ ಹೆಸರಿನಿಂದ ಕರೆದು ಪೂಜಿಸುತ್ತಿದ್ದು, ಅವನಿಗಾಗೇ ಅನೇಕ ದೇವಾಲಯಗಳನ್ನು, ಅವನ ಹೆಸರಲ್ಲೇ ಕೊಟ್ಟ ಅನೇಕ ದಾನಶಾಸನಗಳನ್ನು ಕಾಣುತ್ತೇವೆ. ಹಿಂದೆಯೇ ತಿಳಿಸಿದಂತೆ "ಗೋಪಿನಾಥ" ಎಂದರೆ ಗೋಕುಲದ ಸಮಸ್ತರಿಗೂ ಒಡೆಯನಾದವನು, ಪ್ರಭುವಾದವನು, ಅಲ್ಲಿನ ಸಕಲ ಚರಾಚರ ಸಂಪತ್ತಿನ ರಕ್ಷಕನೂ, ಎಂದು. ಇಂತಹ ಗೋಪಿನಾಥನ ಆರಾಧನೆಯನ್ನು ಅದಕ್ಕೆ ಸಂದಿರುವ ವಿಶೇಷದಾನಗಳ ವಿವರಗಳನ್ನು ಹಲವಾರು ಶಾಸನಗಳು ತಿಳಿಸುತ್ತಿದ್ದು, ಇಲ್ಲಿ ಕೆಲವನ್ನು ಸಂಗ್ರಹಿಸಿಕೊಡಲಾಗಿದೆ.

ಕ್ರ.ಸಂ.	ತಾಲ್ಲೂಕು / ಸ್ಥಳ	ಕಾಲ	ವಿವರಗಳು
೧.	Sr. 57, ತೊಣ್ಣೂರು/ ಶ್ರೀರಂಗಪಟ್ಟಣ EC-III, B.L. Rice, New Vol-6, Pg No. 158	ಕ್ರಿ.ಶ. ೧೧೯೧	ಹೊಯ್ಸಳ ದೊರೆ, ವೀರಬಲ್ಲಾಳ ದೇವರಸರ ಕಾಲ ದಾಗಿದ್ದು, ವಿರೋಧಿ ಕೃತ್ ಸಂವತ್ಸರದ ಆಶ್ವಯುಜ ಬಹುಳ ೨. ಶ್ರೀ ಗೋಪೀನಾಥ ದೇವರಿಗೆ ಎಂಬಷ್ಟೇ ವಿವರಗಳು ಇವೆ.
೨.	Gu 58, ಕಣ್ಣಗಾಲ/ (ಗುಂಡ್ಲುಪೇಟೆ), EC-II, ಶಾಸನ ಸಂಖ್ಯೆ-೨೨೩, B.L. Rice, New Vol-3, Pg No. 163.	ಕ್ರಿ.ಶ. ೧೩೧೫ ಏಪ್ರಿಲ್ ನಾಲ್ಕು ಶುಕ್ರವಾರ	ಪೆರುಮಾಳ ದಂಣ್ಣಾಯಿಕರ ಮಗ ಮಾಧವ ದಂಣಾಯಕರು ಗೋವರ್ಧನ ಗಿರಿಯಲಿ ಪ್ರತಿಷ್ಠಾಪಿಸಿದ ಗೋಪೀನಾಥ ದೇವರ ಆರಾಧನೆಗೆ ಕಣ್ಣಗಾಲ ಗ್ರಾಮವನ್ನು ದಾನ ನೀಡಿದ ವಿವರಗಳಿವೆ.
೩.	Ch 193, ಕಿಲಗೆರೆ, (ಚಾಮರಾಜನಗರ) EC-IV, New Vol. 04, ಶಾಸನ ಸಂಖ್ಯೆ-೩೦೬ Pg No. 198.	ಕ್ರಿ.ಶ. ೧೩೧೮ ಏಪ್ರಿಲ್ ೬	ಹೊಯ್ಸಳರ ೩ನೇ ವೀರಬಲ್ಲಾಳರಾಯನ ಕಾಲವಾಗಿದ್ದು ತೆರಕಣಾಂಬಿಯಿಲಿ ಆಳುತ್ತಿದ್ದ ಅಲ್ಲಪ್ಪ ದಂಣಾಯಿಕರ ಪತ್ನಿ ಚಾಮವ್ವೆ ದಂಣಾಯಕಿಯು ಕಿಲಗೆರೆ ಹಾಗೂ ಉಪಗ್ರಾಮ ವಾದ ಬೆಳಕುಪ್ಪೆ ಗ್ರಾಮಗಳನ್ನು ಗೋಪೀನಾಥ ದೇವರ ಆರಾಧನೆಗೆ ದಾನಕೊಟ್ಟ ವಿವರವಿದೆ.

೪.	ಕೊತ್ತ ಶಿವರ, ಮಡಕಶಿರ ತಾಲ್ಲೂಕು, ಆಂಧ್ರ ಪ್ರದೇಶದ ಶಾಸನಗಳು, ಸಂ. ಕೆ.ಆರ್. ಗಣೇಶ್, ಶೇಷಶಾಸ್ತ್ರಿ, ಶಾಸನ ಸಂಖ್ಯೆ ೬೯, ಪುಟ ಸಂಖ್ಯೆ ೭೨	ಕ್ರಿ.ಶ. ೧೩೬೫	ವೀರ ಬುಕ್ಕಣ್ಣರಾಯರ ಕಾಲವಾಗಿದ್ದು ಇಲ್ಲಿನ ಗೋಪೀನಾಥ ದೇವರಿಗೆ ಆರಾಧನೆಗೆ ದಾನ ಕೊಟ್ಟ ವಿವರಗಳಿಗೆ
೫.	MI 20, ಆರುಹನಹಳ್ಳಿ (ಮಳವಳ್ಳಿ) EC-III, New Vol-07, ಶಾಸನ ಸಂಖ್ಯೆ–೫೯, Pg No. 306	ಕ್ರಿ.ಶ. ೧೩೮೮	ಊರಿನ ಕಲ್ಲಮ್ಮ ದೇವಸ್ಥಾನದ ಉತ್ತರದಲ್ಲಿರುವ ಒಂದು ಕಲ್ಲಿನ ಮೇಲೆ ಕಠಾರಿ ತ್ರಿನೇತ್ರನ ಶಾಸನವಿದ್ದು, ಇದರಲ್ಲಿ ಗೋಪೀನಾಥ ದೇವರ ಸಾಕ್ಷಿಯನ್ನು ಮಾಡಲಾಗಿದೆ.
೬.	47, ಹಾಗಲಹಳ್ಳಿ/ (ಮಳವಳ್ಳಿ), EC-III, New Vol-07, ಶಾಸನ ಸಂಖ್ಯೆ–೪೭ Pg No. 317	ಕ್ರಿ.ಶ. ೧೩೯೨	ಊರ ಗೋಪೀನಾಥ ದೇವರಿಗೆ ದಾನ ಕೊಟ್ಟ ವಿವರಗಳು ಹೆಚ್ಚಿನ ಮಾಹಿತಿಗಳು ಅಲಭ್ಯ
೭	ಊಲವಾಡಿ (ಚಿಂತಾಮಣಿ) EC-X, B.L. Rice ಶಾಸನ ಸಂಖ್ಯೆ–೪೫	ಕ್ರಿ.ಶ. ೧೪೦೭	ವಿಜಯನಗರ ಸಾಮ್ರಾಜ್ಯವನ್ನು ಪ್ರತಾಪ ದೇವರಾಯ ಆಳುತ್ತಿದ್ದಾಗ ಈ ಊರ ಗೋಪೀನಾಥ ದೇವರಿಗೆ ಮುಳವಾಯಿ ಚಾವಡಿಯ ಮಹಾನಾಯಕರ ಮಕ್ಕಳು ಸಿದ್ಧಯ್ಯ ಮತ್ತು ಓಬಯ್ಯ ನಾಯಕರು ಕೊಟ್ಟ ದಾನದ ವಿವರಗಳಿವೆ
೮.	ದಂಡಪಲ್ಲಿ, (ಚಿತ್ತೂರು ಜಿಲ್ಲೆ), ತಾಮ್ರ ಶಾಸನ EC-XIV, by G. Venkoba rao , Madras	ಕ್ರಿ.ಶ. ೧೪೧೦ ಸೆಪ್ಟಂಬರ್ ೧೦ ಸೋಮವಾರ	ವಿಜಯ ಭೂಪತಿಯು ತನ್ನ ಗುರುಗಳಾದ ಕ್ರಿಯಾಶಕ್ತಿ ದೇಶಿಕರಿಗಾಗಿ ಸ್ಥಾಪಿಸಿದ ಕ್ರಿಯಾಶಕ್ತಿಪುರ ಹಾಗೂ ಅಲ್ಲಿನ ಗೋಪೀನಾಥ ಹಾಗೂ ರಾಮೇಶ್ವರ ದೇವಾಲಯಗಳಿಗೆ ವಿಜಯ ಸಮುದ್ರವೆಂಬ ಕೆರೆಯನ್ನು ಕಟ್ಟಿಸಿ ೮೨ ವೃತ್ತಿ ಮಾಡಿ ದಾನ ಕೊಟ್ಟನೆಂಬ ವಿವರವಿದೆ
೯.	IV Mg 81, ದೇವಲಾಪುರ (ನಾಗಮಂಗಲ), EC-IV New Vol-07, ಶಾಸನ ಸಂಖ್ಯೆ–೭೮, Pg No. 153	ಕ್ರಿ.ಶ. ೧೪೭೨	ಗೃಹ ಸಮಾರಾಧನೆಯು ಗೋಪೀನಾಥ ದೇವರಿಗೆ ಕೊಟ್ಟ ದಾನದ ವಿವರವಿದೆ
೧೦.	HS 07 ಮರದೂರ (ಹುಣಸೂರು), EC-IV New Vol-04, ಶಾಸನ ಸಂ. ೧೪, Pg No. 488		ಶ್ರೀ ಗೋಪೀನಾಥ ದೇವರು ಗಂಧದ ಕೋಡಿ
೧೧.	MG 62 ಕಳಸ (ಮೂಡಿಗೆರೆ), EC-V B.L. Rice	ಕ್ರಿ.ಶ. ೧೫೧೨	ಕೃಷ್ಣದೇವರಾಯನ ಶಾಸನಲ್ಲಿ ಉಲ್ಲೇಖವಾದದು ಶ್ರೀ ಗೋಪೀನಾಥ ದೇವರ ಎಂಬಷ್ಟೇ ವಿವರವಿದೆ

೧೨.	ತಡಮಾಲಂಗಿ T.Narasipura -37 EC-III, New Vol-05, ಶಾಸನ ಸಂಖ್ಯೆ-೨೪೫ Pg No. 626	ಕ್ರಿ.ಶ. ೧೫೧೪ ಜನವರಿ ೧೬	ಶ್ರೀರಂಗಪುರ ಅಲಿಯಾಸ್ ತಡಮಾಲಂಗಿಯಲ್ಲಿ ವಿಶ್ವಮೂರ್ತಿ ಗುರು ರಾಯರು ವಿಶ್ವೇಶ್ವರ ಲಿಂಗವನ್ನು ಪ್ರತಿಷ್ಠೆ ಮಾಡಿದ ಸಂದರ್ಭದಲ್ಲಿ ನೀಡಿದ ದಾನಗಳಿಗೆ ಗೋಪೀನಾಥ ದೇವರ ಸಾಕ್ಷಿ / ಒಪ್ಪಿಸಿ ಹಾಕಿಸಿದ್ದಾರೆ
೧೩.	TP 51 ಕೈದಾಳ (ತಿಪಟೂರು) EC-XII, B.L. Rice	ಕ್ರಿ.ಶ. ೧೫೨೨	ನೊಣವಿನಕೆರೆಯ ಗೋಪೀನಾಥ ದೇವರಿಗೆ ಶ್ರೀ ಕೃಷ್ಣದೇವ ರಾಯರ ನಿಜಸೇವಕರಾದ ಮಾರಪ್ಪ ನಾಯಕರಿಗೆ ಧರ್ಮವಾಗಬೇಕೆಂದು ಗಣಪನಾಯಕರು ಕೈದಾಳ ಗ್ರಾಮವನ್ನು ದಾನ ಕೊಟ್ಟ ವಿವರವಿದೆ
೧೪.	KP 57 ನಾರನೆ (ಕೊಪ್ಪ) EC-IV, B.L. Rice	ಕ್ರಿ.ಶ. ೧೫೮೮	ಗೋಪೀನಾಥ ದೇವರ ಆರಾಧನೆಗೆ ಕೊಟ್ಟ ದಾನ ವಿವರಗಳಲ್ಲಿ
೧೫.	ಎಂಬ್ರಳ್ಳಿ (ಚಿಕ್ಕಬಳ್ಳಾಪುರ) ತಾಮ್ರ ಶಾಸನ MAR -1924 ಶಾಸನ ಸಂಪುಟ ೫೯	ಕ್ರಿ.ಶ. ೧೭೦೮	ಶ್ರೀ ಪಾದರಾಜ ಮಠದ ಗೋಪೀನಾಥ ದೇವರ ದೀಪಾರಾಧನೆಗೆ ಶ್ರೀ ಲಕ್ಷ್ಮೀಮನೋಹರ ತೀರ್ಥ ಶ್ರೀಪಾದಂಗಳವರ ಕಾಲಕೆ, ಬೈಚಪ್ಪಗೌಡನು ತನ್ನ ಮಾತಪಿತೃಗಳ ಒಳತಿಗಾಗಿ ಗ್ರಾಮವನ್ನು ದಾನ ಕೊಟ್ಟ ವಿವರವಿದೆ.
೧೬.	ದಿಂಡಿಗಲ್ಲು ಪ್ರಾಂತ್ಯ ದವರು ಮಾಧ್ವ ಮಠದ ಶಾಸನಗಳು ಸಂಪುಟ ೧ ಶ್ರೀರಾಘವೇಂದ್ರ ಸ್ವಾಮಿ ಮಠ, ಮಂತ್ರಾಲಯ	ಕ್ರಿ.ಶ. ೧೭೫೫ ಡಿಸೆಂಬರ್ ೧೩	ಶ್ರೀಪಾದರಾಯ ಮಠದ ಗೋಪೀನಾಥ ದೇವರ ಆರಾಧನೆಗೆ ಶ್ರೀನಿವಾಸರಾಯ ಎಂಬುವರು ಕೆಲವು ವಿರಹಗಳನ್ನು ದಾನ ಕೊಟ್ಟ ವಿವರಗಳಿವೆ
೧೭.	ತಾಮ್ರ ಶಾಸನ, ಮಾಧ್ವ ಮಠದ ಶಾಸನಗಳು ಡಾ॥ ಎಂ.ಜಿ. ಮಂಜು ನಾಥ್, ಡಾ॥ ಕೆ.ಜಿ. ಗೋಪಾಲಕೃಷ್ಣ, ಸಂ.೧	ಕ್ರಿ.ಶ. ೧೭೬	ಶ್ರೀಪಾದರಾಜ ಮಠದ ಶ್ರೀ ಲಕ್ಷ್ಮೀನಿಧಿ ತೀರ್ಥರಿಗೆ ನಾರಾಯಣ ಸಮುದ್ರದ ಮಹಾ ಜನರು ಭೂ ದಾನ ಪತ್ರ ಹಾಗೂ ಗೋಪೀನಾಥ ದೇವರಿಗೆ ದಾನ ಕೊಟ್ಟ ವಿವರವಿದೆ.

ಇದುವರೆವಿಗೂ ಸುಮಾರು ಹದಿನಾರು – ಹದಿನೇಳು ಶಿಲಾಶಾಸನಗಳು ಹಾಗೂ ಕೆಲವು ಮಠಗಳಿಗೆ ಸಂಬಂಧಿಸಿದಂತೆ ಗೋಪೀನಾಥ ದೇವರ ಆರಾಧನೆಗೆ ದಾನ ಕೊಟ್ಟ ತಾಮ್ರ ಪಟಗಳು ದೊರೆತಿವೆ.

ಗೋಪಿನಾಥದೇವರ ಹೆಸರಿನಲ್ಲಿ ದೊರೆತಿರುವ ಮೊಟ್ಟಮೊದಲ ಶಾಸನವು ಕ್ರಿ.ಶ. ೧೧೯೧ರ ಕಾಲಕ್ಕೆ ಸೇರಿದ್ದು, ಇದು ಇಂದಿನ ಶ್ರೀರಂಗಪಟ್ಟಣದ ತೊಣ್ಣೂರು ಗ್ರಾಮದಲ್ಲಿ ಹಾಕಿದ ಶಾಸನವಾಗಿದೆ. ಹೊಯ್ಸಳರ ಎರಡನೇ ಬಲ್ಲಾಳನ ಕಾಲಕ್ಕೆ ಸೇರಿದ್ದು,[೪] ಈ ತೊಣ್ಣೂರು ಗ್ರಾಮದಲ್ಲಿಯೇ ತಮಿಳುನಾಡಿನಿಂದ ಬಂದ ಶ್ರೀರಾಮಾನುಜಾಚಾರ್ಯರು ಮೊದಲಬಾರಿಗೆ ಕ್ರಿ.ಶ. ೧೧೧೬ರಲ್ಲಿ ಬಿಟ್ಟಿದೇವನನ್ನು (ವಿಷ್ಣುವರ್ಧನನನ್ನು) ಸಂಧಿಸಿ, ಅವನ ಮನವೊಲಿಸಿ, ಜೈನಧರ್ಮೀಯನಾಗಿದ್ದ ಬಿಟ್ಟಿಗನನ್ನು ವಿಷ್ಣುವರ್ಧನನಾಗಿ ಪರಿವರ್ತಿಸಿದ್ದು ಎಂಬ ಐತಿಹ್ಯಗಳಿವೆ. ಹೊಯ್ಸಳರ ಕಾಲದಲ್ಲಿ ಅದೂ ರಾಮಾನುಜರು ಬಂದ ನಂತರದಲ್ಲಿ ಇಲ್ಲಿ ವಿಷ್ಣುವಿನ ಆರಾಧನೆಯು ಮತ್ತಷ್ಟು ಪ್ರವರ್ಧಮಾನಕ್ಕೆ ಬಂದಿತು. ಇದನ್ನು ೩ನೇ ಬಲ್ಲಾಳನ ಕಾಲಕ್ಕೆ ಸೇರಿದ ಎರಡು ಗೋಪೀನಾಥದೇವರಿಗೆ ದಾನನೀಡಿದ ಶಾಸನಗಳು ಪುಷ್ಟೀಕರಿಸುತ್ತದೆ. ತೆರಕಣಾಂಬಿಯನ್ನು ಪದಿನಾಲ್ಕು ನಾಡುಗಳ ರಾಜಧಾನಿಯನ್ನಾಗಿ ಮಾಡಿಕೊಂಡು ಆಳುತ್ತಿದ್ದ ಮಾಧವ ದಂಣಾಯಕನು ಕಣ್ಣಗಾಲ ಗ್ರಾಮವನ್ನು ಅವನ ತಂದೆ ಪೆರುಮಾಳೆ ದಂಣಾಯಕನು ಗೋವರ್ಧನ ಗಿರಿ ಅಂದರೆ ಈಗಿನ ಗೋಪಾಲಸ್ವಾಮಿ ಬೆಟ್ಟದಲ್ಲಿರುವ

ಗೋಪೀನಾಥದೇವರಿಗೆ ದಾನಕೊಟ್ಟ ವಿಷಯವನ್ನು ಕ್ರಿ.ಶ. ೧೩೧೫ಕ್ಕೆ ಸೇರಿದ ಶಿಲಾಶಾಸನವೊಂದು ತಿಳಿಸುತ್ತಿದೆ. ಹಾಗೆಯೇ ಇದಕ್ಕೆ ಕ್ರಿ.ಶ. ೧೩೧೮ರಲ್ಲಿ ಚಾಮವ್ವೆ ದಂಣಾಯಕಿಯೂ ಚಾಮರಾಜನಗರದ ಕಿಲಗೆರೆ ಹಾಗೂ ಅದರ ಉಪಗ್ರಾಮ ಬೆಳಕುಪ್ಪೆಯನ್ನು ದಾನನೀಡಿದ ವಿವರದ ಶಾಸನವೂ ಇದೆ.

ಹೊಯ್ಸಳರ ಪತನಾನಂತರ ದಕ್ಷಿಣಭಾರತದಲ್ಲಿ ತಲೆಯೆತ್ತಿದ್ದ ವಿಜಯನಗರ ಸಾಮ್ರಾಜ್ಯದ ದೊರೆಗಳು, ಗೋಪೀನಾಥದೇವರ ಆರಾಧನೆಗೆ ಹೆಚ್ಚು ಪ್ರಾಶಸ್ತ್ಯವಿತ್ತಿರುವುದನ್ನು ಅನೇಕ ಶಾಸನಗಳು ತಿಳಿಸುತ್ತಿವೆ. ಮೊತ್ತಮೊದಲ ಶಾಸನವು ವೀರಬುಕ್ಕಣ್ಣರಾಯರ ಕಾಲದಾಗಿದ್ದು, ಇಂದಿನ ಆಂಧ್ರದ ಮಡಕಶಿರ ತಾಲ್ಲೂಕಿನ ಕೊತ್ತ ಶಿವರಂ ಗ್ರಾಮದಲ್ಲಿ ಇದೆ. ಇಲ್ಲಿ ಈಗ ಸಣ್ಣ ಶಿವಾಲಯವಿದೆ. ಶಾಸನದ ವಿವರ ನೋಡಿದಾಗ ಮೊದಲು ಗೋಪಿನಾಥದೇವರದೇ ಆಲಯವಿತ್ತೆಂದು ಊಹಿಸಬಹುದಾಗಿದೆ. ಬೆನಕೆಯ ಬೂಚಯ್ಯನಾಯಕನು ಗೋಪಸಮುದ್ರವೆಂಬ ಗ್ರಾಮವನ್ನೇ ಸಿವಾರದ ರಾಮಕೃಷ್ಣದಾಸ, ಕೇಶವದಾಸರಿಗೆ ದಾನ ನೀಡಿದ ವಿಷಯ ತಿಳಿದುಬರುತ್ತಿದೆ. ಮುಂದೆ ಪ್ರತಾಪದೇವರಾಯನ ಕಾಲದಲ್ಲಿ ಮುಳವಾಯಿ ರಾಜ್ಯದ ಚಿಂತಾಮಣಿಯ ಬಳಿಯ ಊಲವಾಡಿ ಗ್ರಾಮದ ಗೋಪೀನಾಥ ದೇವರಿಗೆ ದಾನಕೊಟ್ಟ ವಿವರಗಳು, ನಂತರ ವಿಜಯಭೂಪತಿಯ ಆಳ್ವಿಕೆಯಲ್ಲಿ, ಕೃಷ್ಣದೇವರಾಯರ ಆಳ್ವಿಕೆಯ ಕಾಲದಲ್ಲಿ ದಂಡಪಲ್ಲಿ, ಮೂಡಿಗೆರೆ ಬಳಿಯ ಕಳಸ, ತಿಪಟೂರಿನ ಕೈದಾಳುವಿನ ಶಾಸನಗಳು ಗೋಪೀನಾಥದೇವರ ಆರಾಧನೆಗೆ ನೀಡಿದ ದಾನ ವಿವರಗಳನ್ನು ತಿಳಿಸುತ್ತಿದೆ.

ಮಳವಳ್ಳಿಯ ಅರುಹನಹಳ್ಳಿ (ಕ್ರಿ.ಶ. 1388- MI 20) ಹಾಗೂ ಟಿ. ನರಸೀಪುರದ ತಡಮಾಲಂಗಿಯ ಶಾಸನಗಳು (EC IV-245) ವಿಶೇಷವಾಗಿ ಗೋಪೀನಾಥದೇವರನ್ನು ಸಾಕ್ಷಿಯಾಗಿಟ್ಟುಕೊಂಡು ಒಪ್ಪಹಾಕಿಸಿರುವ ವಿಷಯವನ್ನು ತಿಳಿಸುತ್ತಿದೆ. ಅಂದರೆ ಗೋಪೀನಾಥದೇವರಲ್ಲಿ ಜನರಿಗೆ ಇದ್ದ ಶ್ರದ್ಧೆ ಭಕ್ತಿಯನ್ನೂ, ನಂಬಿಕೆಯನ್ನೂ ಇದು ತಿಳಿಸಿಕೊಡುತ್ತಿದೆ.

೧೩ನೇ ಶತಮಾನದಲ್ಲಿ ಪಾಜಕದಲ್ಲಿ ಜನಿಸಿ, ದ್ವೈತವೇದಾಂತ ತತ್ವಗಳನ್ನು (ಪ್ರತಿಷ್ಠಾಪಿ) ತಿಳಿಸಿ, ಉಡುಪಿಯಲ್ಲಿ ಸುಂದರವಾದ ಕಡಗೋಲ ಕೃಷ್ಣನನ್ನು ಪ್ರತಿಷ್ಠಾಪಿಸಿ, ಅಷ್ಟಮಠಗಳನ್ನೂ, ತಮ್ಮ ಸಿದ್ಧಾಂತದ ಪ್ರಚಾರಕ್ಕಾಗಿ ನಾಲ್ಕು ಜನರ ಶಿಷ್ಯರನ್ನು ನಿಯಮಿಸಿದ ಆಚಾರ್ಯ ಮಧ್ವರ ಪೀಠದ ಪೀಳಿಗೆಯಲ್ಲಿ ಬಂದ ಕೆಲವು ಮಠಗಳಲ್ಲಿ ಇಂದಿಗೂ ಗೋಪಾಲಕೃಷ್ಣನನ್ನು ಗೋಪೀನಾಥ ಎಂಬ ಅಭಿದಾನದಿಂದಲೇ ಆರಾಧಿಸುತ್ತಿರುವುದನ್ನು ಕಾಣಬಹುದಾಗಿದೆ. ಶ್ರೀಪಾದರಾಜಮಠವೆಂದೇ ಪ್ರಖ್ಯಾತವಾದ ಮುಳಬಾಗಿಲಿನ ಪದ್ಮನಾಭತೀರ್ಥರ ಮಠದ ಪರಂಪರೆಯಲ್ಲೂ, ಉಡುಪಿಯ ಕಡೇಕಾರು ಮಠದಲ್ಲೂ ಗೋಪೀನಾಥ ದೇವರ ಆರಾಧನೆಯು ಇಂದಿಗೂ ವಿಜೃಂಭಣೆಯಿಂದ ನಡೆಯುತ್ತಿದ್ದ, ಕ್ರಿ.ಶ. ೧೪೨೫ಕ್ಕೆ ಸೇರುವ ಕಡೇಕಾರುಮಠದ ಆವರಣದಲ್ಲಿ ಇರುವ ಶಾಸನವು, ನರಸಿಂಹದೇವನ ಆಳ್ವಿಕೆಯ ಕಾಲದಲ್ಲಿ ಬಾರಕೂರಿನ ಸುತ್ತಲ, ವೈಷ್ಣವ ವಿದ್ಯಾತ್ಮ ತೀರ್ಥ ಶ್ರೀಪಾದಂಗಳು ಪೂಜಿಸುವ ಶ್ರೀ ಗೋಪಿನಾಥ ದೇವರಿಗೆ ಕಡೆಕಾರಿನಲ್ಲಿ ಮಠವನ್ನು ಕಟ್ಟಲು ಭೂದಾನ ಕೊಟ್ಟ ವಿವರಗಳು ಇದೆ. ಇನ್ನು ಶ್ರೀಪಾದರಾಜ ಮಠದ ಗೋಪೀನಾಥ ದೇವರಿಗೆ ವಿಫುಲವಾದ ದಾನಗಳು ಹರಿದು ಬಂದಿದ್ದು, ಶ್ರೀ ಲಕ್ಷ್ಮೀನಿಧಿ ತೀರ್ಥರ ಕಾಲದಲ್ಲೂ ಮೈಸೂರಿನ ಒಡೆಯರು ಅನೇಕರೀತಿಯ ದಾನ ನೀಡಿರುವುದನ್ನು ತಾಮ್ರ ಪಟಗಳ ಮೂಲಕ ತಿಳಿಯಬಹುದಾಗಿದೆ.

ಒಟ್ಟಿನಲ್ಲಿ ಹಿಂದಿನಿಂದಲೂ (ಗೋಪಿನಾಥನ) ಕೃಷ್ಣನ ಆರಾಧನೆಯು ಪ್ರಚಲಿತವಾಗಿದ್ದು, ಇದು ಜನರಿಗೆ ಆಪ್ಯಾಯಮಾನವೂ, ಪ್ರೀತಿಕರವೂ ಆಗಿದ್ದು, ಗೋಪೀನಾಥ ಹೆಸರಿನಲ್ಲಿ ಪ್ರಸಿದ್ಧಿಗೆ ಬಂದಿತು ಎನ್ನಬಹುದು. ಗೋ ಎಂದರೆ ಭೂಮಿ ಎಂಬ ಅರ್ಥವೂ ಇರುವುದರಿಂದ ಭೂಪಾಲಕನಾದ, ಗೋಪೀನಾಥನ ಹೆಸರು ಇಂದಿಗೂ ಅಚ್ಚಳಿಯದೆ ನಿಂದಿದೆ ಎನ್ನಬಹುದಾಗಿದೆ.

ಮತ್ತಷ್ಟು ಕ್ಷೇತ್ರಕಾರ್ಯಗಳು ನಡೆದರೆ ಈ ದೇವರಿಗೆ ದೊರೆತಿರುವ ಮನ್ನಣೆ, ಆಧರಗಳ ಬಗ್ಗೆ ತಿಳಿಸುವ ಇನ್ನಷ್ಟು ಶಾಸನಗಳು ದೊರೆಯಬಹುದು ಎಂಬ ನಂಬಿಕೆ ಇದೆ. ಇದರಿಂದ ವೈಷ್ಣವ ಧರ್ಮ, ಆಲಯಗಳು, ವಿಷ್ಣುವಿನ ಅವತಾರ ರೂಪದ, ನೂತನ ನಾಮಗಳ ಆರಾಧನೆಯ ಬಗ್ಗೆ ಅರಿವು ಪಡೆಯಲು ಸಾಧ್ಯವಿದೆ.

[ಮಾರ್ಗದರ್ಶನ ನೀಡಿದ ಪ್ರೊ. ಕೆ.ಆರ್. ನರಸಿಂಹನ್ ಅವರಿಗೆ ಕೃತಜ್ಞತೆಗಳು.]

ಆಕರ ಗ್ರಂಥಗಳು

೧. ಕರ್ನಾಟಕ ಪರಂಪರೆ, ಪುಟ ಸಂಖ್ಯೆ ೧೮೯, ಸಂಪುಟ ೧, ಮೈಸೂರು ರಾಜ್ಯ ಸರಕಾರ–೧೯೭೦.
೨. ಅದೇ ಪುಟ ಸಂಖ್ಯೆ ೧೨೫.
೩. ಅದೇ ಪುಟ ಸಂಖ್ಯೆ ೨೫೮.
೪. ಅದೇ ಪುಟ ಸಂಖ್ಯೆ ೪೭೦.

ಪುಲಿಗೆರೆಯ ಶಂಖ ಜಿನಾಲಯ ಮತ್ತು ಅನಂತನಾಥ ಜಿನಾಲಯ

ಶಿವಯೋಗಿ ಕೋರಿಶೆಟ್ಟರ*

'**ಅ**ಹಿಂಸೆಯೇ ಪರಮೋಧರ್ಮ' ಎಂದು ಸಾರಿದ ಜೈನ ಧರ್ಮವು, ಕರ್ನಾಟಕದಲ್ಲಿ ಪ್ರಾಚೀನ ಕಾಲದಿಂದಲೂ ಪ್ರಭಾವಶಾಲಿಯಾದ ಧರ್ಮವಾಗಿತ್ತು. ಕರ್ನಾಟಕವನ್ನಾಳಿದ ಪ್ರಖ್ಯಾತ ಅರಸು ಮನೆತನಗಳಾದ ಗಂಗರು ಹಾಗೂ ಹೊಯ್ಸಳರು ಜೈನ ಧರ್ಮವನ್ನು ತಮ್ಮ ರಾಜ್ಯಧರ್ಮವೆಂಬಂತೆ ಬೆಳೆಸಿದರು. ಇನ್ನಿತರ ಅರಸು ಮನೆತನಗಳ ಅರಸರೂ ಕೂಡಾ ಜೈನ ಧರ್ಮವನ್ನು ಪ್ರೋತ್ಸಾಹಿಸಿದರು. ಜೈನರ ಪೂಜಾ ಕೇಂದ್ರಗಳಾದ ಬಸದಿಗಳು ಮತ್ತು ಅದಕ್ಕೆ ಸಂಬಂಧಿಸಿದ ಮೂರ್ತಿಶಿಲ್ಪಗಳು ನಿರ್ಮಾಣಗೊಂಡವು. ಶ್ರವಣಬೆಳ್ಗೊಳ, ದೋರಸಮುದ್ರ, ಐಹೊಳೆ, ಪುಲಿಗೆರೆ, ಹಲಸಿ, ದೇವಗಿರಿ, ಲಕ್ಕುಂಡಿ, ಮೂಡಬಿದರೆಯಂತಹ ಜೈನ ಕೇಂದ್ರಗಳು ಬೆಳೆದು ಬಂದವು. ದಾನಚಿಂತಾಮಣಿ ಅತ್ತಿಮಬ್ಬೆ ಹಾಗೂ ಚಾವುಂಡರಾಯ ಜೈನಧರ್ಮದ ಉದಾತ್ತತೆಯ ಪ್ರತಿನಿಧಿಗಳು. ಅಂತೆಯೇ ಜೈನ ವಿದ್ವಾಂಸರ ಕೃತಿಗಳು ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿವೆ. ಕ್ರಿ.ಶ.೩ನೇ ಶತಮಾನದಿಂದ ಕ್ರಿ.ಶ. ೧೧ನೇ ಶತಮಾನದವರೆಗೂ ಕರ್ನಾಟಕದಲ್ಲಿ ಅತ್ಯಂತ ಉಚ್ಛ್ರಾಯ ಸ್ಥಿತಿಯಲ್ಲಿದ್ದ ಜೈನಧರ್ಮವು ಮುಂದೆ ಕ್ರಮೇಣವಾಗಿ ಅವಸಾನಗೊಳ್ಳಲಾರಂಭಿಸಿತು. ಜೈನಧರ್ಮದ ಉತ್ಕರ್ಷದ ಕಾಲದಲ್ಲಿ ನಿರ್ಮಾಣಗೊಂಡ ಬಸದಿಗಳು, ವಿಗ್ರಹಗಳು, ಇತರೆ ಕಲಾಕೃತಿಗಳು ಜನರ ಅನಾದರಕ್ಕೆ ಒಳಗಾದವು.

ಗದಗ ಜಿಲ್ಲೆಯ ಪ್ರಮುಖ ಪಟ್ಟಣವಾಗಿರುವ ಇಂದಿನ ಲಕ್ಷ್ಮೇಶ್ವರವು ಪ್ರಾಚೀನ ಕಾಲದಲ್ಲಿ ಪುಲಿಗೆರೆ, ಹುಲಿಗೆರೆ, ಪುರಿಗೆರೆ ಎಂಬ ಹೆಸರುಗಳಿಂದ ಪ್ರಖ್ಯಾತಿ ಪಡೆದಿದೆ. ಇದು ಪುಲಿಗೆರೆ-೩೦೦ ಆಡಳಿತ ಕಂಪಣದ ರಾಜಧಾನಿ ಪಟ್ಟಣವಾಗಿದ್ದು, ೧೨೦ ಮಹಾಜನರನ್ನೊಳಗೊಂಡ ಬ್ರಹ್ಮೇಶ್ವರಗಿರಿ ಘಟಿಕಸ್ಥಾನವಾಗಿಯೂ ಪ್ರಖ್ಯಾತಿ ಹೊಂದಿತು. ಪುಲಿಗೆರೆ ಶೈವ ಹಾಗೂ ವೈಷ್ಣವರ ಕೇಂದ್ರವಾಗಿದ್ದಂತೆ ಜೈನರ ಪ್ರಮುಖ ಕೇಂದ್ರವೂ ಆಗಿದ್ದಿತು. ಇಲ್ಲಿನ ಶಾಸನಗಳಲ್ಲಿ ಅನೇಕ ಜೈನಬಸದಿಗಳ ಉಲ್ಲೇಖವಿದೆ. ಅವುಗಳಲ್ಲಿ ತೀರ್ಥಬಸದಿ, ರಾಚಮಲ್ಲಬಸದಿ, ಗಂಗಕಂದರ್ಪಬಸದಿ, ಶ್ರೀವಿಜಯಬಸದಿ, ಮರುದೇವಿಬಸದಿ, ಗೊಗ್ಗಿಯ ಬಸದಿ, ಶಾಂತಿನಾಥ ಬಸದಿ, ಧವಲ ಜಿನಾಲಯ, ಜಿನಮಂದಿರ, ಗಂಗಪೆರ್ಮಾಡಿ ಚೈತ್ಯಾಲಯಗಳ ಉಲ್ಲೇಖವಿದೆ. ಆದರೆ ಉಲ್ಲೇಖಿತ ಜಿನಾಲಯಗಳೆಲ್ಲವೂ ಇಂದು ಅಸ್ತಿತ್ವದಲ್ಲಿಲ್ಲ. ಇಲ್ಲಿನ ಕೆಲ ಶೈವ ದೇವಾಲಯಗಳ ಲಲಾಟಬಿಂಬಗಳಲ್ಲಿ ಜಿನಬಿಂಬಗಳನ್ನು ಕಾಣಬಹುದು. ಈ ಹಿನ್ನಲೆಯಲ್ಲಿ ಪುಲಿಗೆರೆ ಪ್ರಖ್ಯಾತ ಜೈನ ಕೇಂದ್ರವಾಗಿತ್ತೆಂಬ ಅಂಶ ಇದರಿಂದ ಸ್ಪಷ್ಟವಾಗುತ್ತದೆ. ಪ್ರಸ್ತುತ ಲೇಖನವು ಪುಲಿಗೆರೆಯಲ್ಲಿ (ಇಂದಿನ ಲಕ್ಷ್ಮೇಶ್ವರ) ಅಸ್ತಿತ್ವದಲ್ಲಿರುವ ಎರಡು ಪ್ರಮುಖ ಜಿನಾಲಯಗಳ ವಾಸ್ತುಶಿಲ್ಪವನ್ನು ಪರಿಚಯಿಸುವ ಉದ್ದೇಶ ಹೊಂದಿದೆ. ಅವುಗಳೇ ಶಂಖ ಜಿನಾಲಯ ಹಾಗೂ ಅನಂತನಾಥ ಜಿನಾಲಯ.

ಶಂಖ ಜಿನಾಲಯ

ಪುಲಿಗೆರೆಯ ಜಿನಾಲಯಗಳಲ್ಲಿ ಅತೀ ಪ್ರಾಚೀನವಾದ ಜಿನಾಲಯವೆಂದರೆ ಶಂಖ ಜಿನಾಲಯ. ಬಾದಾಮಿ ಚಾಲುಕ್ಯರ ಕಾಲದಲ್ಲಿಯೇ ಇದು ನಿರ್ಮಾಣಗೊಂಡಂತೆ ಕಾಣುತ್ತದೆ. ಈ ಜಿನಾಲಯದ ಗೋಡೆಯ ಮೇಲಿರುವ ಬಾದಾಮಿ ಚಾಲುಕ್ಯ ದೊರೆ ೨ನೇ ಪುಲಕೇಶಿಯ ಕಾಲದ ಶಾಸನವು ಸೇಂದ್ರಕ ವಂಶದ ದುರ್ಗಶಕ್ತಿಯಿಂದ ಶಂಖ ಜಿನಾಲಯಕ್ಕೆ ಭೂಮಿದಾನ ನೀಡಿರುವ ಉಲ್ಲೇಖವನ್ನು ಹೊಂದಿದೆ. ಇದೇ ಮನೆತನದ ವಿನಯಾದಿತ್ಯನ ಕಾಲದ ಶಾಸನವು ಈ ಜಿನಾಲಯಕ್ಕೆ ಬೆಳ್ವಲ-೩೦೦ರ ಹಡಗಲಿ ಗ್ರಾಮವನ್ನು ದಾನವಾಗಿ ನೀಡಿದ್ದನ್ನು ದಾಖಲಿಸಿದೆ. ಮತ್ತೊಂದು ಶಾಸನವು ಇದೇ ಜಿನಾಲಯದ ನಿರವದ್ಯ ಪಂಡಿತರಿಗೆ ಕದ್ದಮವೆಂಬ ಗ್ರಾಮವನ್ನು ದಾನ ನೀಡಿದ ವಿವರಗಳನ್ನು ಹೊಂದಿದೆ. ವಿಜಯನಗರದ ಅರಸು ೧ನೇ ದೇವರಾಯನ ಕಾಲದ ಶಾಸನವೊಂದು ಶಂಖಬಸದಿಯ ಜೈನರಿಗೂ, ಸೋಮನಾಥ ದೇವಾಲಯದ ಶೈವರಿಗೂ

* ಸಹ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಕೆಎಲ್‌ಇ ಸಂಸ್ಥೆ, ಗುದ್ಲೆಪ್ಪ ಹಳ್ಳಿಕೇರಿ ಪದವಿ ಮಹಾವಿದ್ಯಾಲಯ, ಹಾವೇರಿ.

ತಲೆದೋರಿದ ವ್ಯಾಜ್ಯವನ್ನು ನಿರ್ಣಯಿಸಿದ ಉಲ್ಲೇಖ ಹೊಂದಿದೆ. ಹೀಗೆ ಬಾದಾಮಿ ಚಾಲುಕ್ಯರಿಂದ ಮೊದಲ್ಗೊಂಡು ವಿಜಯನಗರದ ಕಾಲದವರೆಗೂ ಈ ಜಿನಾಲಯಕ್ಕೆ ಸಂಬಂಧಿಸಿದಂತೆ ಶಾಸನಾಧಾರಗಳನ್ನು ಕಾಣಬಹುದು.

ಶಂಖ ಜಿನಾಲಯವು ಕಾಲಕಾಲಕ್ಕೆ ಅನೇಕ ಮಾರ್ಪಾಡುಗಳಿಗೆ ಒಳಗಾಗಿದೆ. ಪ್ರಸ್ತುತದಲ್ಲಿ ಗರ್ಭಗೃಹ, ನವರಂಗ ಹಾಗೂ ವಿಶಾಲವಾದ ಮಂಟಪವನ್ನು ಹೊಂದಿದೆ. ಗರ್ಭಗೃಹವು ಚೌಕಾಕಾರವಾಗಿದ್ದು, ಜೈನ ಪಾಣಿಪೀಠದ ಮೇಲೆ ಧ್ಯಾನಮುದ್ರೆಯಲ್ಲಿ ಕುಳಿತ ನೇಮಿನಾಥನ ವಿಗ್ರಹವನ್ನು ಇತ್ತೀಚೆಗೆ ಪ್ರತಿಷ್ಠಾಪಿಸಲಾಗಿದೆ. ಮೂಲ ವಿಗ್ರಹವು ಈಗ ಇರುವುದಿಲ್ಲ. ಗರ್ಭಗೃಹ ಬಾಗಿಲವಾಡದ ಎರಡೂ ಬದಿಗಳಲ್ಲಿ ಜ್ವಾಲಾಮಾಲಿನಿ ಮತ್ತಿತರ ಯಕ್ಷ ಯಕ್ಷಿಯರು ಹಾಗೂ ವೃಕ್ಷಗಳ ವಿಗ್ರಹಗಳನ್ನು ಕಾಣಬಹುದು. ಜೈನಧರ್ಮದ ೨೨ನೇ ತೀರ್ಥಂಕರ ನೇಮಿನಾಥನ ಲಾಂಛನ ಶಂಖದಿಂದಾಗಿ ಈ ಬಸದಿಗೆ ಶಂಖಜಿನಾಲಯ ಎಂಬುದಾಗಿ ಕರೆದಿರಬಹುದಾಗಿದೆ. ನವರಂಗವು ಆಕರ್ಷಕವಾದ ಕಲ್ಯಾಣ ಚಾಲುಕ್ಯರ ಕಾಲದ ಕಂಭಗಳನ್ನು ಹೊಂದಿದೆ. ನವರಂಗ ಭಾಗದಲ್ಲಿ ಎರಡು ಕೊಠಡಿಗಳಿದ್ದು, ಇದರ ಒಂದು ಕೊಠಡಿಯಲ್ಲಿ ಧರಣೇಂದ್ರ ಹಾಗೂ ಪದ್ಮಾವತಿಯರ ವಿಗ್ರಹಗಳನ್ನು ಪ್ರತಿಷ್ಠಾಪಿಸಲಾಗಿದ್ದರೆ, ಮತ್ತೊಂದು ಕೊಠಡಿಯಲ್ಲಿ ಮೊದಲ ತೀರ್ಥಂಕರ ಆದಿನಾಥನ ಸ್ಥಾನಕ ವಿಗ್ರಹವನ್ನು ಪ್ರತಿಷ್ಠಾಪಿಸಲಾಗಿದೆ. ನವರಂಗದ ಬಾಗಿಲುವಾಡದ ಇಕ್ಕೆಲಗಳು ಜಾಲಂಧ್ರಗಳಿಂದ ಅಲಂಕೃತವಾಗಿವೆ.

ನವರಂಗದ ಮುಂಭಾಗದಲ್ಲಿ ವಿಶಾಲವಾದ ಮುಖಮಂಟಪವಿದ್ದು, ಕಲ್ಯಾಣ ಚಾಲುಕ್ಯರ ಕಾಲದ ಶೈಲಿಗೆ ಸರಿಹೊಂದುವ ಹದಿನಾರು ಕಂಭಗಳನ್ನು ಹೊಂದಿದೆ. ಐದು ವಿಭಿನ್ನ ಪ್ರಕಾರದ ಚಾಲುಕ್ಯ ಶೈಲಿಯ ಕಂಭಗಳು ಅತ್ಯಂತ ನುಣುಪಾಗಿಯೂ ಆಕರ್ಷಕವಾಗಿಯೂ ಇವೆ. ಮುಖಮಂಟಪದ ಒಂದು ಬದಿಯಲ್ಲಿ ಎತ್ತರದ ಚೌಕಪೀಠದ ಮೇಲೆ ಮಂಟಪವಿದ್ದು, ಇದರಲ್ಲಿ ಕಪ್ಪು ಶಿಲೆಯ ಸಹಸ್ರ ಜಿನಬಿಂಬಗಳಿರುವ ಕಿರು ಸ್ಥಂಭದಂತಹ ರಚನೆಗಳಲ್ಲಿ ಸ್ವಲ್ಪ ಎತ್ತರದ ತೀರ್ಥಂಕರರ ಶಿಲ್ಪಗಳನ್ನು ನಾಲ್ಕು ಮುಖಗಳಲ್ಲಿ ಅಳವಡಿಸಲಾಗಿದೆ. ಇದು ಚಾಲುಕ್ಯ ಕಲಾ ಪ್ರಾವಿಣ್ಯತೆಯ ಉತ್ತಮ ಪ್ರತೀಕವಾಗಿದೆ. ಮುಖಮಂಟಪದ ಮೂಲೆಯಲ್ಲಿ ಚೈತ್ಯಾಲಯದ ಮಾದರಿಯನ್ನು ಹೋಲುವ ಶಾಸನ ಶಿಲೆಯನ್ನು ಕಾಣಬಹುದು. ಜಿನಾಲಯದ ಹೊರ ಭಾಗದ ಅಧಿಷ್ಠಾನದಲ್ಲಿ ಸುತ್ತುವರಿದಿರುವ ಪಟ್ಟಿಕೆಯಲ್ಲಿ ಹಲವು ಮಿಥುನ ಶಿಲ್ಪಗಳಿವೆ. ಜಿನಾಲಯದ ಮಹಾದ್ವಾರದಲ್ಲಿ ಚಾಲುಕ್ಯ ಶೈಲಿಯ ಅಲಂಕರಣವಿದ್ದು, ಎರಡೂ ಬದಿಗಳಲ್ಲಿ ಜಾಲಂಧ್ರಗಳಿವೆ. ದ್ವಾರದ ಲಲಾಟದಲ್ಲಿ ಮುಕ್ಕೊಡೆಯಿರುವ ಜಿನ ಬಿಂಬವಿದೆ. ಗರ್ಭಗೃಹದ ಶಿಖರವನ್ನು ಆಧುನಿಕ ಶೈಲಿಯಲ್ಲಿ ನವೀಕರಿಸಲಾಗಿದೆ.

ಅನಂತನಾಥ ಜಿನಾಲಯ

ಪುಲಿಗೆರೆಯ ಮತ್ತೊಂದು ಪ್ರಮುಖ ಜಿನಾಲಯವೆಂದರೆ ಊರಿನ ಮಧ್ಯಭಾಗದಲ್ಲಿರುವ ಅನಂತನಾಥ ಜಿನಾಲಯ. ತ್ರಿಕೂಟವಾಗಿರುವ ಈ ಜಿನಾಲಯ ಉತ್ತರಾಭಿಮುಖವಾಗಿದ್ದು, ಚಾಲುಕ್ಯ ಶೈಲಿಯಲ್ಲಿ ನಿರ್ಮಾಣವಾಗಿದೆ. ಮೂರು ಗರ್ಭಗೃಹಗಳು, ಮೂರು ಅಂತರಾಳಗಳು, ವಿಶಾಲವಾದ ನವರಂಗ ಹಾಗೂ ವಿಜಯನಗರದ ಕಾಲದಲ್ಲಿ ನಿರ್ಮಿಸಲ್ಪಟ್ಟಿರುವ ಮುಖಮಂಟಪಗಳನ್ನು ಒಳಗೊಂಡಿದೆ. ಮುಖ್ಯ ಗರ್ಭಗೃಹವು ಉತ್ತರಕ್ಕೆ ಮುಖಮಾಡಿದ್ದು, ಗರ್ಭಗೃಹದ ಪಾಣಿಪೀಠದ ಮೇಲೆ ಸಮಭಂಗಿಯಲ್ಲಿ ನಿಂತಿರುವ ಜೈನಧರ್ಮದ ೧೪ನೇ ತೀರ್ಥಂಕರ ಅನಂತನಾಥನ ವಿಗ್ರಹವನ್ನು ಪ್ರತಿಷ್ಠಾಪಿಸಲಾಗಿದೆ. ಹಿಂಭಾಗದಲ್ಲಿ ಸರಳ ಪ್ರಭಾವಳಿಯನ್ನು ಹೊಂದಿದ್ದು, ಬದಿಗಳಲ್ಲಿ ಚೌರಿಬೀಸುತ್ತಿರುವವರನ್ನು, ಪ್ರಭಾವಳಿಯ ಮೇಲ್ಭಾಗದಲ್ಲಿ ಮುಕ್ಕೊಡೆಯನ್ನು ಕೆತ್ತಲಾಗಿದೆ. ಈ ಗರ್ಭಗೃಹದ ಅಂತರಾಳವು ಪಂಚಶಾಖಾಲಂಕೃತವಾದ ಸುಂದರ ಬಾಗಿಲವಾಡವನ್ನು ಹೊಂದಿದೆ. ಇದರ ಲಲಾಟದಲ್ಲಿ ಯಾವುದೇ ಬಿಂಬಗಳಿಲ್ಲ. ಬಾಗಿಲವಾಡದ ಎರಡೂ ಬದಿಗಳಲ್ಲಿ ಸುಂದರವಾದ ಜಾಲಂಧ್ರಗಳನ್ನು ಅಳವಡಿಸಲಾಗಿದೆ. ಎರಡನೇ ಗರ್ಭಗೃಹವು ದಕ್ಷಿಣಾಭಿಮುಖವಾಗಿದ್ದು, ಗರ್ಭಗೃಹದ ಪಾಣಿಪೀಠದ ಮೇಲೆ ಜೈನ ಧರ್ಮದ ೮ನೇ ತೀರ್ಥಂಕರ ಚಂದ್ರಪ್ರಭನ ವಿಗ್ರಹವಿದೆ. ಬದಿಗಳಲ್ಲಿ ಯಕ್ಷ ಯಕ್ಷಿಯರನ್ನು ಕಾಣಬಹುದಾದರೂ ಅವು ಸ್ಪಷ್ಟವಾಗಿರುವುದಿಲ್ಲ. ಇದರ ಹಿಂಭಾಗದ ಪ್ರಭಾವಳಿಯಲ್ಲಿ ಅಲಂಕೃವಾದ ಮಕರತೋರಣವಿದೆ. ಈ ಗರ್ಭಗೃಹದ ಅಂತರಾಳವು ಸುಂದರ ಬಾಗಿಲವಾಡವನ್ನು ಹೊಂದಿದೆ. ಮೂರನೇ ಗರ್ಭಗೃಹದಲ್ಲಿ ಪಾಣಿಪೀಠದ ಮೇಲೆ ಜೈನಧರ್ಮದ ೨೩ನೇ ತೀರ್ಥಂಕರ ಪಾರ್ಶ್ವನಾಥನ ವಿಗ್ರಹ ಪ್ರತಿಷ್ಠಾಪಿಸಲಾಗಿದೆ. ವಿಗ್ರಹದ ಹಿಂಭಾಗದಲ್ಲಿ ಅಲಂಕೃತಗೊಂಡಿರುವ ನಾಗಶಿಲ್ಪದ ಪ್ರಭಾವಳಿಯನ್ನು ಹೊಂದಿದೆ. ಈ ಗರ್ಭಗೃಹದ ಅಂತರಾಳವು ಸುಂದರ ಬಾಗಿಲವಾಡವನ್ನು ಹೊಂದಿದ್ದು, ಈ ಬಾಗಿಲವಾಡದ ಎರಡೂ ಬದಿಗಳಲ್ಲಿಯೂ ಆಕರ್ಷಕ ಜಾಲಂಧ್ರಗಳನ್ನು ಕಾಣಬಹುದು. ಈ ಜಿನಾಲಯದ ಗರ್ಭಗೃಹದ ಮುಂಭಾಗದಲ್ಲಿ ವಿವಿಧ ಲೋಹ ಹಾಗೂ ಅಮೃತ ಶಿಲೆಗಳಲ್ಲಿ ನಿರ್ಮಾಣಗೊಂಡ ವಿವಿಧ ತೀರ್ಥಂಕರರ ಬಿಡಿ ವಿಗ್ರಹಗಳನ್ನು

ಕಾಣಬಹುದಾದರೂ, ಸಂಗಮರಿಶಿಲೆಯಲ್ಲಿ ನಿರ್ಮಾಣವಾದ ಮಹಾವೀರ ಹಾಗೂ ಪಾರ್ಶ್ವನಾಥ ತೀರ್ಥಂಕರರ ಶಿಲ್ಪಗಳು ಆಕರ್ಷಕವಾಗಿವೆ.

ದೇವಾಲಯದ ಮೂರೂ ಗರ್ಭಗೃಹಗಳನ್ನು ಜೋಡಿಸುವ ನವರಂಗವು ಚಾಲುಕ್ಯ ಶೈಲಿಯ ಸುಂದರವಾದ ನಾಲ್ಕು ಕಂಭಗಳನ್ನು ಒಳಗೊಂಡಿದ್ದು, ಮಧ್ಯಭಾಗದಲ್ಲಿ ಸ್ವಲ್ಪ ಎತ್ತರದ ಚೌಕಾಕಾರದ ಪೀಠವನ್ನು ಹೊಂದಿದೆ. ನವರಂಗದ ಎಡಭಾಗದಲ್ಲಿ ಬ್ರಹ್ಮೇಂದ್ರ ಬಲಭಾಗದಲ್ಲಿ ಪದ್ಮಾವತಿ ಯಕ್ಷಿಯ ಶಿಲ್ಪಗಳನ್ನು ಪ್ರತಿಷ್ಠಾಪಿಸಲಾಗಿದೆ. ನವರಂಗದ ಬಾಗಿಲವಾಡವು ವಿವಿಧ ಶಾಖೆಗಳಿಂದ ಅಲಂಕೃತವಾಗಿದೆ. ಮುಖಮಂಟಪವು ನಾಲ್ಕು ಕಂಭಗಳ ನಾಲ್ಕು ಸಾಲುಗಳನ್ನು ಹೊಂದಿ ಒಟ್ಟು ಹದಿನಾರು ವಿಭಿನ್ನ ರೀತಿಯ ಕಂಭಗಳಿಂದ ನಿರ್ಮಿತವಾಗಿದೆ. ಮಂಟಪದ ಪಶ್ಚಿಮ ಗೋಡೆಗೆ ಹೊಂದಿಕೊಂಡಂತೆ ಗರ್ಭಗೃಹವೊಂದನ್ನು ನಿರ್ಮಿಸಲಾಗಿದ್ದು, ಇಲ್ಲಿ ಪಾರ್ಶ್ವನಾಥನ ವಿಗ್ರಹವನ್ನು ಪ್ರತಿಷ್ಠಾಪಿಸಲಾಗಿದೆ. ಏಳು ಹೆಡೆಗಳ ಸರ್ಪವು ಈತನಿಗೆ ನೆರಳಾಗಿದೆ. ಈ ವಿಗ್ರದ ಎದುರಿನಲ್ಲಿ ಮತ್ತೊಂದು ತೀರ್ಥಂಕರ ವಿಗ್ರಹವಿದೆ. ಈ ವಿಗ್ರಹವು ಯಕ್ಷ ಹಾಗೂ ಯಕ್ಷಿಣಿಯನ್ನು ಹೊಂದಿದ್ದು, ಪ್ರಭಾವಳಿಯಲ್ಲಿ ಹದಿನಾರು ತೀರ್ಥಂಕರರನ್ನು ಕೆತ್ತಲಾಗಿದೆ. ಈ ಗರ್ಭಗೃಹದ ದ್ವಾರಭಂಧವು ಏಳು ಅಲಂಕೃತ ಶಾಖೆಗಳಿಂದ ಕೂಡಿದೆ. ಕೆಳಭಾಗದಲ್ಲಿ ಪೂರ್ಣಕುಂಭ ಹಾಗೂ ದ್ವಾರಪಾಲಕ ಶಿಲ್ಪಗಳನ್ನು ಒಳಗೊಂಡಿದೆ. ಗರ್ಭಗೃಹದ ವಿತಾನವು ಪದ್ಮದಿಂದ ಅಲಂಕೃವಾಗಿದೆ. ಮುಖಮಂಟಪವೂ ಕೂಡಾ ಪಂಚಶಾಖಾಲಂಕೃತ ಪ್ರವೇಶದ್ವಾರ ಹೊಂದಿದೆ. ಕೆಳಭಾಗದಲ್ಲಿ ದ್ವಾರಪಾಲಕ ಶಿಲ್ಪಗಳನ್ನು ಹೊಂದಿದ್ದರೆ, ಲಲಾಟದಲ್ಲಿ ಜಿನನಶಿಲ್ಪವನ್ನು ಕೆತ್ತಲಾಗಿದೆ.

ಈ ಜಿನಾಲಯದ ಮೂರೂ ಗರ್ಭಗೃಹಗಳು ಕದಂಬನಾಗರ ಶೈಲಿಯ ಶಿಖರಗಳನ್ನು ಹೊಂದಿವೆ. ಪ್ರತಿ ಗರ್ಭಗೃಹದ ಹೊರಗೋಡೆಯ ಮಧ್ಯಭಾಗದಲ್ಲಿ ಒಂದೊಂದು ದೇವಕೋಷ್ಠಗಳಿದ್ದು, ಇವು ಸರಳ ದ್ವಾರಬಂಧ ಹಾಗೂ ಶಿಖರಗಳ ರಚನೆಯನ್ನು ಹೊಂದಿವೆ. ಕೋಷ್ಠದ ದ್ವಾರಬಂಧದ ಲಲಾಟಗಳಲ್ಲಿ ರೇಖಾನಾಗರ ಶೈಲಿಯಶಿಖರ ರಚನೆಯನ್ನು ಕಾಣಬಹುದು. ದೇವಕೋಷ್ಠಗಳ ಕೆಳಭಾಗದಲ್ಲಿ ನಿಂತ ಆನೆಗಳನ್ನು ಕಂಡರಿಸಲಾಗಿದೆ. ಉಳಿದಂತೆ ಜಿನಾಲಯದ ಭಿತ್ತಿಗಳು ಸರಳವಾಗಿ ನಿರ್ಮಿತವಾಗಿವೆ. ಈ ಜಿನಾಲಯವು ೯–೧೦ನೇ ಶತಮಾನದಲ್ಲಿ ನಿರ್ಮಾಣಗೊಂಡಿರಬಹುದಾದರೂ, ನಂತರದಲ್ಲಿ ಇವೇ ಪ್ರಾಚ್ಯಾವಶೇಷಗಳನ್ನು ಬಳಸಿಕೊಂಡು ಪುನರುಜ್ಜೀವನಗೊಳಿಸಲಾಗಿದೆ. ಈ ಜಿನಾಲಯಕ್ಕೆ ಸಂಬಂಧಿಸಿದಂತೆ ಶಾಸನವಿದೆಯಾದರೂ, ಇದರ ನಿರ್ಮಾಣದ ವಿವರಗಳನ್ನು ಹೊಂದಿರದೇ, ಜಿನಾಲಯಕ್ಕೆ ನೀಡಲಾದ ದಾನದ ವಿವರಗಳನ್ನು ಒಳಗೊಂಡಿದೆ.

ಕನ್ನಡದ ಜನತೆಗೆ ಶಾಸ್ತ್ರದ ಬೆಳಕನ್ನು ಕಾವ್ಯದ ತಂಪನ್ನು ಕರುಣಿಸಿದ ಜೈನಧರ್ಮವು, ತಾನು ಅಳವಡಿಸಿಕೊಂಡಿದ್ದ ಅಹಿಂಸೆ ಹಾಗೂ ಸಲ್ಲೇಖನದಂತಹ ಕಠಿಣ ಆಚರಣೆಗಳಿಂದಾಗಿಯೇ ಅವನತಿಯತ್ತ ಸಾಗಿತು. ಈ ಧರ್ಮವು ಪ್ರತಿಯೊಬ್ಬನೂ ಸ್ವಪ್ರಯತ್ನದಿಂದಲೇ ತನ್ನ ಕರ್ಮಕ್ಷಯ ಮಾಡಿಕೊಳ್ಳಲು, ಆ ಮೂಲಕವೇ ಮುಕ್ತಿಹೊಂದಲು ಪ್ರೇರೇಪಿಸಿತು. ಕ್ರಿ.ಶ. ೧೨ನೇ ಶತಮಾನ ಸುಮಾರಿಗೆ ಹೆಚ್ಚು ಪ್ರಬಲಗೊಂಡ ವೀರಶೈವ ಹಾಗೂ ಶ್ರೀವೈಷ್ಣವ ಧರ್ಮಗಳ ಪ್ರಾಬಲ್ಯವು ಈ ಧರ್ಮದೊಂದಿಗೆ ಸಂಘರ್ಷಕ್ಕೆ ಮತ್ತು ಜೈನಧರ್ಮದ ಅವಸಾನಕ್ಕೆ ಕಾರಣವಾದವು. ಈ ನಿಟ್ಟಿನಲ್ಲಿ ನಡೆದ ಘರ್ಷಣೆಯನ್ನೆ ಹೆರ್ಮಾಡಿಯರಸ, ಗೊಗ್ಗಿದೇವ, ಏಕಾಂತದ ರಾಮಯ್ಯ ಮುಂತಾದವರ ಶಾಸನಗಳು ಪ್ರತಿನಿಧಿಸುತ್ತವೆ. ಪ್ರಸ್ತುತ ಪುಲಿಗೆರೆಯಲ್ಲಿಯೂ ಜೈನಧರ್ಮವು ತನ್ನ ಅಸ್ತಿತ್ವಕ್ಕಾಗಿ ಸೆಣಸಿದಂತೆ ಕಾಣುತ್ತದೆ. ಕಾರಣ ಇಂದು ಶೈವ ದೇವಾಲಯಗಳೆಂದು ಕರೆಯಿಸಿಕೊಳ್ಳುವ ಅನೇಕವುಗಳಲ್ಲಿ ಮೂಲ ಜೈನ ವಾಸ್ತುವಿನ ರಚನೆಗಳು ಹಾಗೂ ಅವುಗಳ ಪರಿವರ್ತನೆಯಾಗಿರುವುದು ಧಾರ್ಮಿಕ ಸಂಘರ್ಷದ ಪ್ರತೀಕಗಳಾಗಿವೆ.

ಆಕರ ಗ್ರಂಥಗಳು

೧. ದೇಸಾಯಿ ಪಿ.ಬಿ., ಜೈನಿಸಮ್ ಇನ್ ಸೌಥ ಇಂಡಿಯಾ ಆ್ಯಂಡ ಸಮ್ ಜೈನಾ ಎಪಿಗ್ರಾಫ್ಸ್, ಕೊಲ್ಲಾಪೂರ, ೧೯೫೭.

೨. ಚಿದಾನಂದಮೂರ್ತಿ ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಮೈಸೂರು, ೧೯೭೯.

೩. ಸೂರ್ಯನಾಥ ಕಾಮತ., (ಸಂ) ಧಾರವಾಡ ಜಿಲ್ಲಾ ಗ್ಯಾಸೆಟಿಯರ್, ಬೆಂಗಳೂರು, ೧೯೯೫.

೪. ಹಸಬಿ ಸಿ.ಎಸ್., ಪುಲಿಗೆರೆನಾಡು ಥ್ರೋ ದಿ ಏಜಿಸ್, ದೀಪಾ ಪಬ್ಲಿಶರ್ಸ್, ಹುಬ್ಬಳ್ಳಿ, ೨೦೦೯.

೫. ದೇವರಕೊಂಡಾರೆಡ್ಡಿ ಮತ್ತು ಕೆ.ಆರ್. ಗಣೇಶ್, ಲಕ್ಷ್ಮೇಶ್ವರದ ಶಾಸನಗಳು.

ಬಾಗಲಕೋಟೆ ಜಿಲ್ಲೆಯಲ್ಲಿ ನಾಗಾರಾಧನೆ ಪರಂಪರೆ

ವಿ.ಎಂ. ಕಲ್ಮಠ*

ನಾಗಾರಾಧನೆ ವಿಶ್ವವ್ಯಾಪಿ. ಪ್ರಾಚೀನ ಕಾಲದಿಂದಲೂ ಮಾನವ–ಪ್ರಕೃತಿ ನಡುವಿನ ಅನ್ಯೋನ್ಯ ಸಂಬಂಧಕ್ಕೆ ಧಾರ್ಮಿಕ ರೂಪ ಪಡೆದದ್ದು ಕಾಲಾಂತರದ ಬದಲಾವಣೆಗಳಿಂದ. ಅಗ್ನಿ, ವಾಯು, ಜಲ ಮುಂತಾದವುಗಳನ್ನು ಕೃತಜ್ಞತಾ ಮನೋಭಾವದಿಂದ ಪೂಜಿಸುವ ಉಪಕ್ರಮ ಆರಂಭವಾಗಿರುವುದು ಮಾನವನ ಆರಾಧನೆಯ ಹಲವು ಉಪಕ್ರಮಗಳಲ್ಲಿ 'ನಾಗಾರಾಧನೆ' ಪ್ರಮುಖವಾದುದು.

ಜಾಗತಿಕವಾಗಿ ಚಾರಿತ್ರಿಕ ಹಿನ್ನೆಲೆಯಲ್ಲಿ ಗಮನಸಿದಾಗ ಸಿಂಧೂ ಸಂಸ್ಕೃತಿಯ ಅವಶೇಷಗಳಲ್ಲಿ ನಾಗಮಿಥಾನವಿದೆ. ಈಜಿಪ್ಟ್, ಗ್ರೀಕ್, ಅಸೀರಿಯಾ ಮುಂತಾದ ಪುರಾತನ ಸಂಸ್ಕೃತಿಗಳಲ್ಲಿ 'ನಾಗ' ಆದಿ ದೈವವಾಗಿದೆ. ಈಜಿಪ್ಟಿನ ಆದಿದೇವ ಮಿಡಿನಾಗ ಆಗಿದೆ. ಋಗ್ವೇದದ ಪ್ರಧಾನ ದೈವ ಸರ್ಪವಾದರೆ, ಅಥರ್ವವೇದದಲ್ಲಿ 'ಅಶ್ವತ್ಥೋ ದೇವಸದನಃ' ಎಂಬ ಮಾತುಗಳನ್ನು ಗಮನಿಸಿದಾಗ ಅಶ್ವತ್ಥವೃಕ್ಷದ ಕೆಳಗೆ ನಾಗನ ಕಲ್ಲುಗಳನ್ನು ನೆಟ್ಟಿರುವುದನ್ನು ನಾವು ಇಂದಿಗೂ ಸಾಮಾನ್ಯವಾಗಿ ಕಾಣಬಹುದಾಗಿದೆ.

ಭಾರತದಲ್ಲಿ ನಾಗಾರಾಧನೆಯ ಇತಿಹಾಸ ಆರಂಭಕಾಲದಿಂದಲೂ ಕಂಡುಬರುತ್ತದೆ. ಶೈವ, ಶಾಕ್ತ, ವೈಷ್ಣವ, ಬೌದ್ಧ, ಜೈನ ಮುಂತಾದ ಎಲ್ಲ ಧಾರ್ಮಿಕ ಮತ ಸಂಪ್ರದಾಯಗಳಲ್ಲಿ ನಾಗಪ್ರತಿಮೆ ಪೂಜೆ ಪ್ರಚಲಿತದಲ್ಲಿದೆ. ಭಾರತದ ಪಡುವಣ ಸೀಮೆಯಾಗಿರುವ ಗೋಕರ್ಣದಿಂದ ಕನ್ಯಾಕುಮಾರಿವರೆಗಿನ ಪರಶುರಾಮ ಕ್ಷೇತ್ರಕ್ಕೆ ಪ್ರಾಚೀನ ಕಾಲದಲ್ಲಿ ನಾಗ ಖಂಡ ಎಂಬ ಹೆಸರಿತ್ತು (ಶಿಕಾರಿಪುರ–ಶಾಸನವನ್ನಾಧರಿಸಿ) ಎಂಬ ವಿವರ ನಾಗ ಪರಂಪರೆಯನ್ನು ಸೂಚಿಸುತ್ತದೆ.

ಪುರಾಣಗಳಲ್ಲಿ 'ನಾಗ'ನ ಪಾತ್ರ ಪ್ರಾತಿನಿಧಿಕವಾಗಿದೆ. ಸಮುದ್ರ ಮಂಥನದಲ್ಲಿ 'ನಾಗ'ನಿದ್ದಾನೆ. ಈ ಭುಮಿ ಸರ್ಪರಾಜನ ಹೆಡೆಯ ಮೇಲೆ ನಿಂತಿದೆ ಎಂಬ ನಂಬಿಕೆ ಇದೆ.

ಮಹಾಭಾರತದ ಪ್ರಕಾರ ದಕ್ಷ ರಾಜನು ತನ್ನ ೧೩ ಜನ ಪುತ್ರಿಯರನ್ನು ಕಶ್ಯಪ ಋಷಿಗೆ ವಿವಾಹ ಮಾಡಿ (ಕದ್ರಿ ವಿನುತೆ) ಕೊಡುತ್ತಾನೆ. ಅವರಲ್ಲಿ 'ಕದ್ರಿ' ಎಂಬುವವಳಿಂದ ಜನಿಸಿದ ಸಂತಾನವನ್ನು ನಾಗಸಂತಾನವೆಂದು ಕರೆಯಲಾಗಿದೆ. ಇವರೇ ಮುಂದೆ ಕಶ್ಯಪ ಗೋತ್ರದ ಮೂಲದವರೆಂದು ಹೇಳಿಕೊಳ್ಳುವುದು ವಾಡಿಕೆ ಇದೆ.

'ನಾಗರಾಧನೆ' ಎಂಬುದು ಮಾನವ ಕುಲದ ಸಮೃದ್ಧಿಯ ಸಂಕೇತವಾಗಿದೆ. ಕನ್ನಡ ನಾಡಿನಲ್ಲಿ ಇಂದಿಗೂ ನಾಗಾರಾಧನೆಯ ವಿಶೇಷವಾಗಿ ದಕ್ಷಿಣದಲ್ಲಿದೆ. ಕರ್ನಾಟಕ ಅರಸುಮನೆತನಗಳ ಸಂಸ್ಕೃತಿಯಲ್ಲಿ ನಾಗನಿದ್ದಾನೆ.

ಕರ್ನಾಟಕದಲ್ಲಿಯೂ ನಾಗಾರಾಧನೆ ತುಂಬಾ ಪ್ರಾಚೀನವಾದದು. ನಾಗನನ್ನು ಸಂತಾನ ಮತ್ತು ಸಮೃದ್ಧಿಯ ಸಂಕೇತವಾಗಿ ಆರಾಧಿಸುತ್ತಾರೆ. ಕರ್ನಾಟಕದ ಹಾನಗಲ್, ಹಿರೇಕೆರೂರ, ಶಿಕಾರಿಪುರ, ಸೊರಬ ತಾಲೂಕು ಪ್ರದೇಶಗಳು ನಾಗರಖಂಡ ಎಂದು ಕರೆಯಲ್ಪಟ್ಟಿವೆ.

ದಕ್ಷಿಣದಲ್ಲಿ ಕದಂಬರು, ಶಾತವಾಹನರು ಚುಟುಗಳು, ಸೇಂದ್ರಕರು, ಚಾಲುಕ್ಯರು, ರಾಷ್ಟ್ರಕೂಟರು ನಾಗರಖಂಡ ಪ್ರದೇಶದ ಆಡಳಿತದಲ್ಲಿ ಕಾಣಿಸಿಕೊಳ್ಳುತ್ತಾರೆ. ಪ್ರತಿಯೊಂದು ಅರಸುಮನೆತನದವರು ನಾಗಾರಾಧಕರಾಗಿದ್ದು, ಸಮೃದ್ಧಿಯ ಸಂಕೇತವಾಗಿ ಪೂಜಿಸುತ್ತಿದ್ದರು. ಇಂದಿಗೂ ಅವರ ಕಲೆ, ವಾಸ್ತುಶಿಲ್ಪದಲ್ಲಿ ನಾಗ ಶಿಲ್ಪಗಳು ಕಂಡುಬರುತ್ತವೆ.

ಕರ್ನಾಟಕದ ದೇವಾಲಯಗಳಲ್ಲಿ ಕಾಣುತ್ತಿದ್ದ ನಾಗಾರಾಧನೆ ಮನೆಯ ದೇವರ ಜಗುಲಿಯ ಮೇಲೆ ನಾಗನ ವಿಗ್ರವನ್ನಿಟ್ಟು ನಿತ್ಯ ಪೂಜಿಸುವುದು ಕಾಣುತ್ತೇವೆ. ಕರ್ನಾಟಕದ ಕುಕ್ಕೆಸುಬ್ರಮಣ್ಯ ಇಂದಿಗೂ ನಾಗಾರಾಧನೆ ಪ್ರಮುಖ ತಾಣವಾಗಿದೆ. ಕರ್ನಾಟಕ ಅರಸುಮನೆತನ ಬಾದಾಮಿ ಚಾಲುಕ್ಯರ ಕಾಲದಲ್ಲಿ ನಾಗಾರಾಧಣೆ ಪರಂಪರೆ ಇದ್ದು, ಅವರ ಸಾಮಂತರಸರಾದ ಬಾಗಡಿಗೆ ಸಿಂಧರು ತಮ್ಮನ್ನು ನಾಗವಂಶಸ್ಥರೆಂದು ಶಾಸನಗಳಲ್ಲಿ ಹೇಳಿಕೊಂಡಿದ್ದಾರೆ.

* ಪ್ರಾಧ್ಯಾಪಕರು, ಕನ್ನಡ ಸ್ನಾತಕೋತ್ತರ ವಿಭಾಗ, ಬಸವೇಶ್ವರ ಕಲಾ ಮಹಾವಿದ್ಯಾಲಯ, ಬಾಗಲಕೋಟೆ, ಮೊ. ೯೦೦೮೯ ೦೧೩೬೪

ಬಾಗಿಲುಕೋಟೆಯ ಪರಿಸರದಲ್ಲಿ ಐತಿಹಾಸಿಕ ಹಿನ್ನೆಲೆಯನ್ನು ಗಮನಿಸಿದಾಗ ಬಾದಾಮಿ ಚಾಲುಕ್ಯರ ಕಾಲದಿಂದಲೂ ನಾಗಾರಾಧನೆ ಅಸ್ತಿತ್ವದಲ್ಲಿದ್ದ ಬಗ್ಗೆ ವಿವರಗಳು ದೊರೆಯುತ್ತದೆ. ಇಲ್ಲಿ ನಾಗಾರಾಧಣೆಯ ಚಾರಿತ್ರಿಕ ಮಹತ್ವನ್ನು ಶಾಸನಗಳಲ್ಲಿ ಮತ್ತು ನಾಗಸಂಬಂಧಿ ಪಂಪರೆಯ ಐತಿಹ್ಯದೊಂದಿಗೆ ಮಿಳಿತವಗಿರುವ ಸ್ಥಳನಾಮಗಳು ಕುರಿತು ಅಧ್ಯಯನ ಮಾಡಲಾಗಿದೆ.

ಚಾರಿತ್ರಿಕ ಹಿನ್ನೆಲೆಯಾಗಿ ಹದಿನಾಲ್ಕು ಶಾಸನಗಳನ್ನು ಹಾಗೂ ಸ್ಥಳನಾಮಗಳ ಹಿನ್ನೆಲೆಯಲ್ಲಿ ಬಾಗಲಕೋಟ ಜಿಲ್ಲೆಯಲ್ಲಿ ಹತ್ತು ಗ್ರಾಮನಾಮಗಳನ್ನು ಆಕರವಾಗಿಟ್ಟುಕೊಂಡು ನಾಗಾರಾಧನೆ ಪಂಪರೆಯ ಪ್ರಾಚೀನತೆ ಕುರಿತು ಚರ್ಚಿಸಲಾಗಿದೆ.

ಬಾಗಲಕೋಟೆಯ ಚರಿತ್ರೆ ಗಮನಿಸಿದಾಗ ಶಿಲಾಯುಗದ ಅಡಿಪಾಯದ ಮೇಲೆ ಬೆಳೆದು ಬಂದ ನಾಗರಿಕತೆಯು ವಿಶಿಷ್ಟವಾದ ಸಾಂಸ್ಕೃತಿ ಪರಂಪರೆಯನ್ನು ರೂಢಿಸಿಕೊಂಡು ಬಂದಿದೆ. ಬಾದಾಮಿಯ ಚಾಲುಕ್ಯರು, ಬಾಗಡಿಗೆ ಸಿಂಧರು ನಾಗ ಕುಲದೇವರೆಂಬುದು ವಿಶೇಷ. ಸಂಶೋಧಕರಾದ ಸಿ.ವ್ಹಿ.ವೈದ್ಯ ಅವರ ಪ್ರಕಾರ ನಾಗವಂಶದ ಅರಸರು ತಮ್ಮ ಹೆಸರಿನ ಜೊತೆಗೆ 'ದಿತ್ಯ' 'ಸೇನ' ಎಂದು ಸೇರಿಸಿಕೊಳ್ಳುತ್ತಿದ್ದರು. ಚಾಲುಕ್ಯರಲ್ಲಿ ಅರಸರುಗಳಲ್ಲಿ ವಿನಯಾದಿತ್ಯ, ವಿಕ್ರಮಾದಿತ್ಯ ನಾಮಗಳನ್ನು ಕಾಣಬಹುದಾಗಿದೆ. ಅಲ್ಲದೇ ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟ ಅರಸು, ಶಿವಮೊಗ್ಗದ ಸೇಂದ್ರಕರು ಹಾಗೂ ಉತ್ತರ ಪ್ರದೇಶದ ಚೇದಿ ಅರಸು ಮನೆತದೊಂದಿಗೆ ವಿವಾಹ ಸಂಬಂಧ ಹೊಂದಿದ್ದರೆಂದು ತಿಳಿದುಬರುತ್ತದೆ.

ಚಾಲುಕ್ಯರು ಹಾಗೂ ರಾಷ್ಟ್ರಕೂಟರು ನಾಗವಂಶೀಯರೆಂದು ಸಿ.ವ್ಹಿ.ವೈದ್ಯ ಅವರು (History of medieval India vol-II) ಅಭಿಪ್ರಾಯಪಟ್ಟಿದ್ದಾರೆ. ಚಾಲುಕ್ಯರ ಕಾಲದ ಸಾಮಂತ ಅರಸರಾಗಿ ಬಾಗಡಿಗೆ ಸಿಂಧರು ಬಾಗಿಲುಕೋಟೆಯ ಪರಿಸರದಲ್ಲಿ ಪ್ರಮುಖರಾಗಿದ್ದು, ಶಾಸನಗಳ ಇವರನ್ನು ನಾಗಕುಲದವರೆಂದು ಉಲ್ಲೇಖಿಸಿದ್ದಾರೆ. ಇವರು ತಮ್ಮ ಶಾಸನಗಲಲ್ಲಿ ಭೋಗಾವತಿಪುರವರಾಧೀಶ್ವರರೆಂದು ಕರೆದುಕೊಂಡಿದ್ದು ಫಣಿಪತಾಕ ಧ್ವಜ ಎಂಬ ಉಲ್ಲೇಖಗಳಿವೆ. ಸಿಂಧರು ಪ್ರಸ್ತಾಪಿಸಿದ ಭೋಗಾವತಿ ಎಂಬುದು ನಾಗಲೋಕದ ರಾಜಧಾನಿ ಎಂಬುದು ಸ್ಪಷ್ಟ.

ಮೇಲಿನ ವಿವರಗಳಿಗೆ ಪೂರಕವಾಗಿ ಶಾಸನಗಳನ್ನು ಅಧ್ಯಯನಕ್ಕೊಳಪಡಿಸಿದಾಗ ಚಾಲುಕ್ಯರ ಕಾಲದಲ್ಲಿ ನಾಗಾರಾಧನೆ ಇತ್ತೆಂದು ಸಿಂಧರು ಅದನ್ನು ಮುಂದುವರೆಸಿಕೊಂಡು ಬಂದಿರುವ ಕುರಿತು ವಿವರಗಳು ಲಭ್ಯವಾಗುತ್ತವೆ.

೧) ಬಾದಾಮಿ ಸಮೀಪದ ಶಿಬಾರದೋಣೆಯ ಸಮೀಪದಲ್ಲಿ ಚಾಲುಕ್ಯರ ಕಾಲದ ಶಾಸನಗಳಲ್ಲಿದ್ದು, ೨ನೇ ಶತಮಾನದಲ್ಲಿ ಧರ್ಮಣ್ಣ ಎಂಬುವವನು ಎತ್ತರವಾದ ಬೆಟ್ಟಗಳಿಂದ ಕೂಡಿದ ಸ್ಥಳದಲ್ಲಿ ವಿನಾಯಕ ಮತ್ತು ಫಣೀಂದ್ರ ಶಿಲ್ಪ ಸ್ಥಾಪಿಸಿದನು (ಶಾಸನ ಸಂಖ್ಯೆ: ೩೨, ೩೭)

೨) ತ್ರೈಲೋಕ್ಯಮಲ್ಲ ಮತ್ತು ಪಿರಿಯರಸಿ ಮೈಳಲದೇವಿ ಇವರ ಕಾಲದಲ್ಲಿ ನಂದವಾಡಗಿಯಲ್ಲಿ ಕ್ರಿ.ಶ. ೧೦೪೪ರಲ್ಲಿ ನಾಗಲೇಶ್ವರ ದೇವಾಲಯ ಕಟ್ಟಿಸಿದನು (ಶಾಸನ ಸಂಖ್ಯೆ:೧೨೨)

೩) ಮಹಾಕೂಟ ದೇವಾಲಯದ ಪ್ರವೇಶ ಕಂಬದ ಮೇಲೆ ವೀರನಾದ ಮಣಿನಾಗಕಂಭನ ವಿವರವಿದೆ

೪) ಹಳ್ಳೂರಿನ ಮೇಲ್ ಗುಡಿ ದೇವಾಲಯದ ಮುಂದಿರುವ ಕಲ್ಲಿನ ಮೇಲಿನ ಶಾಸನದಲ್ಲಿ ಮಹಾಪ್ರಧಾನ ದಂಡನಾಯಕ ಸೋಮರಸನ ಸಲಹೆಯಂತೆ ದೇವರಸನು ಪಡುವಣ ನಾಗೇಶ್ವರ ದೇವರಿಗೆ ದಾನ ಮಾಡಿದನೆಂದು ವಿವರವಿದೆ. ಕಾಲದ ಕುರಿತಂತೆ ಮೂರನೇ ಸೋಮೇಶ್ವರ ಕಾಲಕ್ಕೆ ಸೇರಿದೆ ಎಂದು ವಿವರವಿದೆ.

* ಕ್ರಿ.ಶ.೮ನೇ ಶತಮಾಕ್ಕೆ ಸೇರಿದ ನಾಗರಾಳ್ ಗ್ರಾಮದ ಗಾನನಾಥನ ಗುಡಿಯ ಗೋಡೆಯ ಮೇಲೆ ಶಾಸನವಿದೆ.

೫) ಬೇವೂರ ಗ್ರಾಮದ ಪರ್ವತಪ್ಪ ದೇವಾಲಯದ ಗೋಡೆಯಲ್ಲಿ ವೀರಗಲ್ಲಿನ ಮೇಲೆ ನಾಗಣ್ಣ ಎಂಬುವನು ಹೋರಾಡಿ ಮಡಿದ ಬಗ್ಗೆ ವಿವರವಿದೆ (ಕ್ರಿ.ಶ. ೧೪)

೬) ಕ್ರಿ.ಶ. ೧೦೩೩-೩೪ರ ಕಾಲಕ್ಕೆ ಸೇರಿದ ಶಾಸನದಲ್ಲಿ ಮಹಾಸಾಮಂತ ನಾಗತಿಯರಸ ಎಂಬ ಉಲ್ಲೇಖವಿದೆ.

೭) ಕ್ರಿ.ಶ. ೯೯೦-೯೧ರ ಭೈರನಮಟ್ಟಿ ಶಾಸನದಲ್ಲಿ ಸಿಂಧ ವಂಶದ ವಂಶಾವಳಿಯ ವಿವರವಿದ್ದು, ತೈಲಪನ ಸಾಮಂತರಾದ ಸಿಂಧ ಸರ್ಪರಾಜನ ಕೃಪೆಯಿಂದ ರಕ್ಷಣೆ ಪಡೆದರೆಂದು, ನಾಗಾದಿತ್ಯ ಎಂಬ ಹೆಸರಿನ ಅರಸರು ಇರುವ ವಿವರವಿದೆ.

೮) ಕ್ರಿ.ಶ. ೯೯೦-೯೧ರ ಶಾಸನದಲ್ಲಿ ಇಮ್ಮಡಿ ತೈಲಪನ ಕಾಲದ ಸಾಮಂತನಾದ ಸಿಂಧವಂಶದ ವ್ಯಕ್ತಿಯ ಕುರಿತು ಹೇಳುತ್ತ, ನಾಗಧ್ವಜ ಪ್ರತಾಪ, ಭೋಗಾವತಿ ಪುರೇಶ್ವರ ಎಂದು ಕರೆದಿದ್ದಾರೆ.

೯) ಬಾದಾಮಿಯ ಎರಡು ಶಾಸನಗಳಲ್ಲಿ 'ಶ್ರೀ ನಾಗರಗೋಪನ್' ಮತ್ತು ನಾಗೇಶಸ್ಯ, ನಾಗವರ್ಮ್ಮಯ್ಯ ಎಂಬ ಹೆಸರು ನಾಗಾರಾಧನೆಯ ಪ್ರಭಾವವನ್ನು ಸೂಚಿಸುತ್ತದೆ.

ವಾಸ್ತುಶಿಲ್ಪವನ್ನು ಗಮನಿಸಿದಾಗ–

* ನಾಗರಾಳದ ನಾಗನಾಥನ ದೇವಸ್ಥಾನ ೬–೭ನೇ ಶತಮಾನದಲ್ಲಿ ಚಾಲುಕ್ಯರ ವಿಜಯಾದಿತ್ಯನ ಕಾಲದಲ್ಲಿ ನಿರ್ಮಾಣಗೊಂಡಿದ್ದ ಗರ್ಭಗೃಹ, ನವರಂಗ ಮತ್ತು ಸಬಂಧಗಳ ಮುಖಮಂಟಪ ಹೊಂದಿದೆ. ನವರಂಗದ ದಕ್ಷಿಣ ತೋಲೆಯ ಮೇಲೆ ಹಾವಾಡಿಗನ ಶಿಲ್ಪವಿದೆ. ಕಂಬಗಳಲ್ಲಿ ಸ್ತ್ರೀಯರು ಮತ್ತಪಾನರಾಗಿ ಜೋಲಿ ಹೊಡೆಯುತ್ತಿರುವ ಸನ್ನಿವೇಶವಿದೆ. ಮುಖಮಂಟಪದ ಭಾವಣಿಯಲ್ಲಿ ಐದು ಹೆಡೆಗಳ ನಾಗರಾಜನ ಶಿಲ್ಪವಿದೆ.

* ಬಾದಾಮಿ ಚಾಲುಕ್ಯರ ಒಂದನೇ ಪುಲಕೇಶಿ ಕಾಲದಲ್ಲಿ ಬಾದಾಮಿ ಗುಹೆಗಳು ನಿರ್ಮಾಣ ವಾಗಿರಬಹುದೆಂದು ಇವರ ರಚನೆ ಕಾಲವನ್ನು ಕ್ರಿ.ಶ. ೫೦೦–೫೫೦ ಎಂದು ಡಾ. ಎಸ್.ವ್ಹಿ.ಪಾಡಿಗಾರ ಅವರು ಅಭಿಪ್ರಾಯಪಟ್ಟಿದ್ದಾರೆ.

* ಮೊದಲ ಗುಹೆಯಲ್ಲಿ ಶಿವಲಿಂಗವಿದ್ದು, ಗುಹೆಯ ಮೊಗಸಾಲೆ ನಡುವೆ ಭಾವಣಿಯ ಮಧ್ಯದಲ್ಲಿ ೯ ಹೆಡೆಗಳ ನಾಗರಶಿಲ್ಪವಿದ್ದು, ಮೇಲ್ಭಾಗ ಮನುಷ್ಯಾಕೃತಿ ಕೆಳಭಾಗ ಹಾವಿನ ರೂಪವನ್ನು ಹೊಂದಿದೆ. ಭಾವಣಿ ಅಂಚುಗಳಲ್ಲಿ ಗಂಧರ್ವ ದಂಪತಿ ಶಿಲ್ಪಗಳಿವೆ.

* ಬಾದಾಮಿ ಪಂಚಲಿಂಗ ಘಡಿಯ ಮೇಲೆ ಶಿವ, ವಿಷ್ಣು, ದುರ್ಗೆ ಮುಂತಾದ ಶಿಲ್ಪಗಳ ಜೊತೆಗೆ ನಾಗಶಿಲ್ಪಗಳಿರುವುದು ಕಂಡು ಬರುತ್ತದೆ.

ಸ್ಥಳನಾಮ ಗಮನಿಸಿದಾಗ

ಬಾಗಿಲುಕೋಟೆ ಜಿಲ್ಲೆಯ ಸ್ಥಳನಾಮಗಳನ್ನು ಗಮನಿಸಿದಾಗ, ಒಟ್ಟು ಹತ್ತು ಹಳ್ಳಿಗಳು ನಾಗನ ಹೆಸರಿನಲ್ಲಿರುವುದು ಕಾಣಬಹುದು.

* ನಾಗಸಂಪಿಗೆ, ನಾಗೂರು, ನಾಗನಾಪುರ, ನಾಗನೂರ ಇದ್ದು ನಾಗರಳಾ ಎಂಬ ಹೆಸರಿನ ಐದು ಹಳ್ಳಿಗಳು ದೊರೆಯುತ್ತವೆ.

* ಎಲ್ಲ ಸ್ಥಳ ನಾಮಗಳ ವಿಶ್ಲೇಷಣೆ ಗಮನಿಸಿದಾಗ ನಾಗಗಳ ಆವಾಸ ಸ್ಥಾನ ಎಂಬರ್ಥದಲ್ಲಿವೆ.

* ನಾಗರಾಳ ಎಂಬುದು ನಾಗರು ಎಂಬ ಜನಾಂಗದವರು ವಾಸಿಸುತ್ತಿದ್ದರೆಂಬದು ತಿಳಿದುಬರುತ್ತದೆ.

* ನಾಗನಾಪುರ, ನಾಗನೂರ (೨ ಹಳ್ಳಿಗಳು) ವ್ಯಕ್ತಿ ಹೆಸರಿನ ನಾಗಣ್ಣನವರು ಆಗಿದ್ದು ವ್ಯಕ್ತಿವಾಚಿ ಪ್ರದೇಶಗಳಾಗಿವೆ.

ಈವರೆಗಿನ ಶಾಸನ ಮತ್ತು ವಾಸ್ತುಶಿಲ್ಪದ ವಿವರಗಳನ್ನು ಮತ್ತು ಪ್ರಸ್ತುತ ಸ್ಥಳನಾಮಗಳನ್ನು ಅಧ್ಯಯನಕ್ಕೊಳಡಿಸುವಲ್ಲಿ ಕಾಲವನ್ನು ಮುಖ್ಯವಾಗಿ ಗಮನಿಸಲಾಗಿದೆ. ರಾಜಕೀಯ ಮತ್ತು ಧಾರ್ಮಿಕ ಅಂಶಗಳ ಆಧಾರದ ಮೇಲೆ ಅವಲೋಕಿಸಿದಾಗ ಬಾಗಲಕೋಟೆ ಪ್ರದೇಶವನ್ನಾಳಿದ ಚಾಲುಕ್ಯ ಮತ್ತು ಸಿಂಧರ ಕಾಲದಲ್ಲಿ ನಾಗಾರಾಧನೆ ಪರಂಪರೆ ಇತ್ತೆಂದು ಸ್ಪಷ್ಟವಾಗುತ್ತದೆ.

* ಕ್ರಿ.ಶ. ೫೦೦ರಲ್ಲಿ ನಾಗಾರಾಧನೆಯ ಪರಿಚಯವಿತ್ತೆಂದು ಗೊತ್ತಾಗುತ್ತದೆ.

* ವ್ಯಕ್ತಿನಾಮಗಳಲ್ಲಿ ನಾಗಾದಿತ್ಯ, ನಾಗವರ್ಮ, ನಾಗೇಶಸ್ಯ ಕೌಟುಂಬಿಕವಾಗಿ ನಾಗನನ್ನು ಆರಾಧಿಸುತ್ತಿದ್ದರೆಂದು ತಿಳಿದು ಬರುತ್ತದೆ.

* ಸಿಂಧ ಅರಸರು ತಮ್ಮ ನಾಗವಂಶಜರೆಂದು ಕರೆದುಕೊಂಡಿರುವುದು ನಾಗದೇವನ ಬಗ್ಗೆ ಆರಾಧನಾ ಮನೋಭಾವವನ್ನು ಸೂಚಿಸುತ್ತದೆ.

* ಸಿಂಧರಲ್ಲಿ ಭೋಗಾವತಿಪುರವರಾಧೀಶ್ವರ ಎಂಬುದು ಬಿರುದಾಗಿದ್ದು, ಭೋಗವತಿ ಎಂಬ ನಾಗಲೋಕದ ರಾಜಧಾನಿ ಆಗಿತ್ತೆಂದು ಗಮನಿಸಿದಾಗ ನಾಗದೇವರ ಬಗ್ಗೆ ಅವರ ನಂಬಿಕೆ ಎಷ್ಟು ಗಟ್ಟಿಯಾಗಿತ್ತೆಂಬುದು ಸ್ಪಷ್ಟ.

* ಸ್ಥಳ ನಾಮಗಳಲ್ಲಿಯೂ ನಾಗನ ಕಾಲದವರು, ನಾಗಗಳು ಇರುವ ಸ್ಥಳಗಳೆಂದು ಗುರುತಿಸಲಾಗಿದೆ.

ಬಾಗಿಲುಕೋಟೆ ಪರಿಸರದ ರಾಜಕೀಯ ಹಾಗೂ ಧಾರ್ಮಿಕ ಇತಿಹಾಸದಲ್ಲಿ ನಾಗನಿಗೆ ಹಾಗೂ ನಾಗಾರಾಧನೆ ಪ್ರಾಧಾನ್ಯ ಪಡೆದಿರುವುದಲ್ಲದೇ, ಇಂದಿಗೂ ಮನೆ–ಮನೆಗಳಲ್ಲಿ ನಾಗಾರಾಧನೆ ಮಾಡುವ ಪರಂಪರೆ ರೂಢಿಯಲ್ಲಿದೆ. ಅರಳಿಕಟ್ಟೆ ಎಂಬುದು ನಾಗದೇವರ ಆವಾಸಸ್ಥಾನವಾಗಿದ್ದು, ಮನೆಯ ಜಗುಲಿಯ ಮೇಲೆ ನಾಗನನ್ನಿಟು ಪೂಜಿಸುವ ಸಂಪ್ರದಾಯವಿದೆ. ವರ್ಷಕ್ಕೊಮ್ಮೆ 'ನಾಗರಪಂಚಮಿ'ಎಂಬ ಹಬ್ಬವನ್ನು ಆಚರಿಸುವ ರೂಢಿಯಿದೆ. ಒಟ್ಟಾರೆ ಮಾನವ ಕುಲವನ್ನು ರಕ್ಷಿಸುವ ಮಾನವ ಸಂತಾನವನ್ನು ವೃದ್ಧಿಸುವ ದೇವನೆಂದು ಪೂಜಿಸುವ ಪರಂಪರೆ ಪ್ರಾಚೀನದಲ್ಲಿಯೂ ಇದ್ದು, ಈಗಲೂ ಇದೆ. ಹಾಗೆಯೇ ಮಾನವಕುಲ ಇರುವವರೆಗೆ ನಿರಂತರವಾಗಿ ನಡೆದುಕೊಂಡು ಹೋಗುತ್ತದೆ.

ದಾವಣಗೆರೆ ಜಿಲ್ಲೆಯ ಸರ್ಪದೋಷದಿಂದ ಮಡಿದ ವೀರರ ಸ್ಮಾರಕ ಶಿಲ್ಪಗಳು

ಹೆಚ್. ಹೊನ್ನೂರಸ್ವಾಮಿ*

ಗುಹೆಗಳಲ್ಲಿ ಬದುಕುತ್ತಿದ್ದ ಆದಿಮಾನವನಿಗೆ ಪ್ರಾಣಿಗಳನ್ನು ಬೇಟೆಯಾಡುವುದು ಮುಖ್ಯ ವೃತ್ತಿಯಾಗಿತ್ತು. ಆತ್ಮರಕ್ಷಣೆ, ಬೆಳೆರಕ್ಷಣೆ, ಸಾಕುಪ್ರಾಣಿಗಳ ರಕ್ಷಣೆ ಮತ್ತು ಊರಿನ ರಕ್ಷಣೆಗಾಗಿಯೂ ಕಾಡುಪ್ರಾಣಿಗಳನ್ನು ಬೇಟೆಯಾಡುತ್ತಿದ್ದರು. ಕಾಲಾಂತರದಲ್ಲಿ ಬೇಟೆಯು ಮೋಜಿಗಾಗಿ, ಮನರಂಜನೆಗಾಗಿ ಹಾಗೂ ಕಾಲಯಾಪನೆಗಾಗಿ ನಡೆಯುತಿತ್ತು. ಈ ಕುರಿತಾಗಿ ಕರ್ನಾಟಕದ ಶಾಸನ ಮತ್ತು ಸಾಹಿತ್ಯ ಆಧಾರಗಳಲ್ಲಿ ಉಲ್ಲೇಖಗಳು ದೊರೆಯುತ್ತವೆ. ಈವರೆಗೆ ದೊರೆತಿರುವ ಬೇಟೆ ಸ್ಮಾರಕಗಳನ್ನು ಅಲೋಕಿಸಿದರೆ ಹುಲಿ, ಹಂದಿ, ಆನೆ ಪ್ರಾಣಿಗಳನ್ನು ಬೇಟೆಯಾಡಿದ ಹಾಗೂ ಹುಲಿ, ಆನೆ, ಹಂದಿ, ಜಿಂಕೆ, ಗೂಳಿ ಮೊದಲಾದ ಪ್ರಾಣಿಗಳೊಂದಿಗೆ ಹೋರಾಡಿದ ನಿದರ್ಶನಗಳಿವೆ. ಅದೇ ರೀತಿ ಹಾವುಗಳನ್ನು ಕೊಲ್ಲಲು ಹೋಗಿ ಅಥವಾ ಅವುಗಳಿಂದ ಆಕಸ್ಮಿಕ ಕಚ್ಚಿಸಿಕೊಂಡು ಮಡಿದ ವೀರರ ಸ್ಮಾರಕಶಿಲ್ಪಗಳೂ ಕಂಡುಬಂದಿವೆ. ಆ ಸ್ಮಾರಕಗಳನ್ನು ಕುರಿತು ಪರಾಮರ್ಶಿಸುವ ಪ್ರಯತ್ನವನ್ನು ಪ್ರಸ್ತುತ ಲೇಖನದಲ್ಲಿ ಮಾಡಲಾಗಿದೆ.

ಹಾವನ್ನು ಬೇಟೆಯಾಡಲು ಹೋದ ಅಥವಾ ಅದರಿಂದ ಕಚ್ಚಿಸಿಕೊಂಡು ಮಡಿದ ವಿಷಯವನ್ನು ತಿಳಿಸುವ ಸ್ಮಾರಕಶಿಲ್ಪಗಳು ಕಂಡುಬರುವುದು ಅತಿ ವಿರಳ. ಈ ಹಾವಿನ ಬೇಟೆ ಶಿಲ್ಪಗಳ ಬಗ್ಗೆ ಈಗಾಗಲೇ ವಿದ್ವಾಂಸರು ತಮ್ಮದೇ ಆದ ನೆಲೆಯಲ್ಲಿ ಚರ್ಚಿಸಿದ್ದಾರೆ. ಸಂಶೋಧಕರಾದ ಡಿ.ವಿ. ಪರಮಶಿವಮೂರ್ತಿ ಅವರು ವೀರನು 'ಸರ್ಪವನ್ನು ಕೊಲ್ಲಲು ಹೋಗಿ ಅದರಿಂದ ಕಚ್ಚಿಸಿಕೊಂಡು ಮೃತನಾಗಿರಬೇಕು ಇಲ್ಲವೇ ವೀರನು ಅನ್ಯಕಾರ್ಯದಲ್ಲಿ ಮಗ್ನನಾಗಿದ್ದಾಗ ಹಾವು ಕಚ್ಚಿ ಮಡಿದಿರಬೇಕೆಂದು' ಅಭಿಪ್ರಾಯಿಸಿದ್ದಾರೆ.[೧] ಮತ್ತೊಬ್ಬ ಸಂಶೋಧಕರಾದ ಜಿ.ಕೆ. ದೇವರಾಜಸ್ವಾಮಿ ಅವರು ಈ ರೀತಿಯ ಸ್ಮಾರಕ ಶಿಲ್ಪಗಳು ಒಂದು ಸಮುದಾಯದ ಕುಟುಂಬ ಅಥವಾ ಗೋತ್ರವನ್ನು ಮಾತ್ರ ಸೂಚಿಸುತ್ತವೆ ಎಂದಿದ್ದಾರೆ. ವಿದ್ವಾಂಸರು ಇದಕ್ಕೆ ನೀಡುವ ಸಮರ್ಥನೆ ಹೀಗಿದೆ. 'ಹೊಸಕೋಟೆ ತಾಲೂಕು ದೊಡ್ಡ ಹುಲ್ಲೂರಿನ ವೀರರ ಗುಡಿಯಲ್ಲಿ ನೂರಕ್ಕೂ ಹೆಚ್ಚು ವೀರಗಲ್ಲುಗಳಿವೆ. ಅವುಗಳನ್ನು ಮೂವತ್ತಾರು ಗುಂಪುಗಳಾಗಿ ವಿಂಗಡಿಸಲಾಗಿದೆ. ಆ ಗುಂಪುಗಳು ಸ್ಥಳೀಯ ಕುರುಬ ಜನಾಂಗದ ಸುಮಾರು ಆರುನೂರು ಕುಟುಂಬಗಳಿಗೆ ಸಂಬಂಧಿಸಿವೆ. ಪ್ರತಿಯೊಂದು ಕುಟುಂಬದವರು ಒಂದೊಂದು ಗುಂಪಿನ ವೀರಗಲ್ಲುಗಳನ್ನು ಪ್ರತ್ಯೇಕವಾಗಿ ಪೂಜಿಸುತ್ತಿದ್ದಾರೆ. ಆ ಮೂವತ್ತಾರು ಗುಂಪುಗಳಲ್ಲಿ ಸರ್ಪ ಚಿತ್ರಣಗಳಿರುವ ವೀರಗಲ್ಲುಗಳ ಒಂದು ಗುಂಪನ್ನು ಕುರುಬ ಸಮುದಾಯದ ಸರ್ಪಗೋತ್ರದವರು ಮಾತ್ರ ಪೂಜಿಸುತ್ತಿರುವುದು ಕಂಡುಬರುತ್ತದೆ. ಈ ಹಿನ್ನೆಲೆಯಲ್ಲಿ ಹಾವಿನ ಶಿಲ್ಪವಿರುವುದು ಅವರ ಕುಟುಂಬವನ್ನು ಅಥವಾ ಗೋತ್ರವನ್ನು ಮಾತ್ರ ಸೂಚಿಸುತ್ತದೆ. ಅದರ ಸಂಕೇತವಾಗಿ ಸ್ಮಾರಕ ಶಿಲ್ಪಗಳಲ್ಲಿ ಹಾವಿನ ಚಿತ್ರವನ್ನು ಚಿತ್ರಿಸಿರುತ್ತಾರೆ. ಇದರಿಂದಾಗಿ ವೀರ ಅಥವಾ ವೀರನ ಕುಟುಂಬ ಸರ್ಪಗೋತ್ರದವರೆಂದು ತಿಳಿಯುತ್ತದೆ. ಈ ಹಿನ್ನೆಲೆಯಲ್ಲಿ ಆ ಶಿಲ್ಪಗಳು ಕುಟುಂಬ ಮೂಲವನ್ನು ಸೂಚಿಸುತ್ತವೆಯೇ ಹೊರತು ಹಾವಿನ ಬೇಟೆ ಶಿಲ್ಪಗಳಲ್ಲ' ಎಂದು ತರ್ಕಿಸಿದ್ದಾರೆ.[೨] ಇನ್ನೋರ್ವ ಸಂಶೋಧಕರಾದ ಬಸವರಾಜ ಕಲ್ಗುಡಿ ಅವರು 'ಚಳ್ಳಕೆರೆ ತಾಲೂಕು ಯರಬಳ್ಳಿಯ ಸರ್ಪವಿರುವ ವೀರಮಾಸ್ತಿಗಲ್ಲೊಂದನ್ನು ಗೊಲ್ಲರು' ಪೂಜಿಸುತ್ತಾರೆಂದು ಉಲ್ಲೇಖಿಸುವ ಮೂಲಕ ಸಾಮಾಜಿಕ ಹಿನ್ನೆಲೆಯನ್ನು ಗ್ರಹಿಸುವ ಪ್ರಯತ್ನ ಮಾಡಿದ್ದಾರೆ.[೩]

ಉಲ್ಲೇಖಿತ ವಿದ್ವಾಂಸರ ಅಭಿಪ್ರಾಯಗಳನ್ನು ಮತ್ತೊಮ್ಮೆ ಇಲ್ಲಿ ಚರ್ಚಿಸುವ ಅಗತ್ಯವಿದೆ. ಸರ್ಪ ಗೋತ್ರದವರು ಅಥವಾ ಮತ್ತಾವುದೋ ಸಮುದಾಯದವರು ಪೂಜಿಸುತ್ತಾರೆ ಎಂದಮಾತ್ರಕ್ಕೆ, ಸರ್ಪವಿರುವ ಸ್ಮಾರಕ ಶಿಲ್ಪಗಳು ಕುಟುಂಬದ ಮೂಲವನ್ನು ಸೂಚಿಸುತ್ತವೆಂಬ ತೀರ್ಮಾನಕ್ಕೆ ಬರುವುದು ಸಮಂಜಸವಲ್ಲವೆಂದು ತೋರುತ್ತದೆ. ದಾವಣಗೆರೆ ಜಿಲ್ಲೆಯ


* ಸಹಾಯಕ ಪ್ರಾಧ್ಯಾಪಕರು, ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾಲಯ, ಶಿವಗಂಗೋತ್ರಿ, ದಾವಣಗೆರೆ.



ಹರಪನಹಳ್ಳಿ ತಾ. ಮಾದಿಹಳ್ಳಿ



ಜಗಲೂರು ತಾ. ನಿಬಗೂರು



ಹರಪನಹಳ್ಳಿ ತಾ. ಯಡಿಹಳ್ಳಿ

ಮಾದಿಹಳ್ಳಿ, ಯಡಿಹಳ್ಳಿ, ನಿಬಗೂರು ಮತ್ತು ನೀರ್ಥಡಿ ಗ್ರಾಮಗಳಲ್ಲಿ ಹಾವು ಬೇಟೆ ಸ್ಮಾರಕಶಿಲ್ಪಗಳು ಕಂಡುಬಂದಿವೆ. ಈ ನಾಲ್ಕು ಗ್ರಾಮಗಳಲ್ಲಿ ಕುರುಬ ಸಮುದಾಯದವರು ಇದ್ದಾಗಿಯೂ ಸರ್ಪ ಗೋತ್ರದವರು ಇಲ್ಲದಿರುವುದು ವಿಶೇಷವಾಗಿದೆ. ಅಲ್ಲದೇ ಉಳಿದ ಗೋತ್ರದ ಕುರುಬರು ಸಹ ಆ ಶಿಲ್ಪಗಳನ್ನು ಪೂಜಿಸುವುದು ಕಂಡುಬರುವುದಿಲ್ಲ. ಮಾದಿಹಳ್ಳಿ, ನಿಬಗೂರು, ನೀರ್ಥಡಿಯಲ್ಲಿರುವ ಸ್ಮಾರಕಗಳು ಅನಾಥವಾಗಿ ಬಿದ್ದಿದ್ದರೆ, ಯಡಿಹಳ್ಳಿ ಗ್ರಾಮದಲ್ಲಿ ಮಾತ್ರ ನಾಯಕ ಸಮುದಾಯದವರು ಪೂಜಿಸುವುದು ಕಂಡುಬರುತ್ತದೆ. ಸೊರಬ ತಾಲೂಕು ದೂಗೂರು ಗ್ರಾಮದ ಕ್ರಿ.ಶ. ೧೩೮೮ರ ಮಾಸ್ತಿಗಲ್ಲೊಂದು ೧೩೧೦ ವಿಭವ ಸಂವತ್ಸರದಂದು ಮುಟ್ಟುಗುಪ್ಪೆಯ ಚಿಕ್ಕಗೊಂಡನ ಮಗ ದೇವಯನಯ್ಕ ಸರ್ಪದುಷ್ಟವಾದಲ್ಲಿ ಆತನ ಸತಿ ಮುದ್ದೊನಕೆತಿ ಮಹಾಸತಿಯಾಗಿ ವಯಕುಂಟ ಪ್ರಾಪ್ತಿಯಾದಳೆಂದು ಉಲ್ಲೇಖಿಸುತ್ತದೆ. ಇಲ್ಲಿ ಹಾವು ಕಚ್ಚಿ ಮಡಿದ ವೀರನ ಪತ್ನಿ ಸತಿ ಹೋಗಿರುವುದು ತಿಳಿಯುತ್ತದೆ.[೪] ಈ ಹಿನ್ನೆಲೆಯಲ್ಲಿ ಗಮನಿಸಿದಾಗ ಸರ್ಪವಿರುವ ಸ್ಮಾರಕಶಿಲ್ಪಗಳು ಕುಟುಂಬದ ಮೂಲ ಅಥವಾ ಗೋತ್ರವನ್ನು ಸೂಚಿಸುವುದಿಲ್ಲವೆಂದು ತೋರುತ್ತದೆ. ಬದಲಾಗಿ ರಾಜ ಮನೆತನಗಳಲ್ಲಿ ಮೋಜಿಗಾಗಿ, ಕಾಲಾಯಾಪನೆಗಾಗಿ ಅಥವಾ ತಮ್ಮ ಶೌರ್ಯ ಪ್ರದರ್ಶನಕ್ಕಾಗಿ ಬೇಟೆಯಾಡುತ್ತಿದ್ದ ವಿಷಯ ನಮಗೆ ತಿಳಿದೇ ಇದೆ. ಹಾಗಾಗಿ ಅರಸುಮನೆತನಗಳಿಗೆ ಸೇರಿದ ವ್ಯಕ್ತಿಗಳು ಬೇಟೆಯಾಡಲು ತೆರಳಿ ಅದರಲ್ಲಿ ಮಗ್ನರಾಗಿದ್ದಾಗ, ಆಕಸ್ಮಿಕವಾಗಿ ಹಾವು ಕಚ್ಚಿ ಮಡಿದಿರಬಹುದು. ಅವನ ವೀರತ್ವ ಕಾರ್ಯಗಳಿಂದ ಉಪಕೃತರಾಗಿದ್ದ ಆಡಳಿತವರ್ಗ ಅಥವಾ ಜನರು ಅವನಿಗಾಗಿ ಸ್ಮಾರಕಶಿಲ್ಪಗಳನ್ನು ನೆಟ್ಟಿರುವ ಸಾಧ್ಯತೆಯಿದೆ. ದಾವಣಗೆರೆ ಪ್ರದೇಶದಲ್ಲಿ ಕಂಡುಬಂದಿರುವ ಸ್ಮಾರಕಶಿಲ್ಪಗಳಲ್ಲಿನ ಉಡುಪು, ಆಭರಣ ಮತ್ತು ಆಯುಧಗಳು ಆ ವೀರರ ವೀರತ್ವವನ್ನು ಅರ್ಥೈಸುತ್ತಿವೆ. ವೀರನು ಹಾವು ಕಚ್ಚಿ ಮಡಿದನೆಂದು ತೋರಿಸಲು ಶಿಲ್ಪಿ ಸ್ಮಾರಕದ ಯಾವುದಾದರೂ ಒಂದು ಮೂಲೆಯಲ್ಲಿ ಅದನ್ನು ಸಾಂಕೇತಿಕವಾಗಿ ತೋರಿಸಿರುವುದು ತಿಳಿಯುತ್ತದೆ. ಪ್ರಸ್ತುತ ದಿನಮಾನಗಳಲ್ಲೂ ಸಹ ಹಾವು ಕಚ್ಚಿ ಮಡಿದವರ ವಿಷಯಗಳನ್ನು ನಾವು ಆಗಾಗ ಕೇಳುತ್ತೇವೆ. ಆಧುನಿಕ ಕಾಲಘಟ್ಟದಲ್ಲೇ ಹೀಗಾದರೆ ಇನ್ನು ಹಿಂದಿನ ದಿನಗಳಲ್ಲಿ ಅದಕ್ಕೆ ತಕ್ಷಣ ಚಿಕಿತ್ಸೆ ದೊರೆತಿತೇ? ಹಾಗಾಗಿ ಇಂತಹ ಸ್ಮಾರಕಶಿಲ್ಪಗಳು ಹಾವು ಕಚ್ಚಿ ಮಡಿದಿರುವ ವೀರರನ್ನು ನೆನಪಿಸುತ್ತಿರಬಹುದು.

ಹರಪನಹಳ್ಳಿ ತಾಲೂಕು ಯಡಿಹಳ್ಳಿ ಗ್ರಾಮದ ಗುಡಿಯಲ್ಲಿರುವ ಒಂದು ಸ್ಮಾರಕಶಿಲ್ಪದಲ್ಲಿ ವೀರನೊಬ್ಬನು ಬಲಗೈಯಲ್ಲಿ ಕತ್ತಿ, ಮತ್ತೊಂದು ಕೈಯಲ್ಲಿ ಬಂದೂಕು ಹಿಡಿದು ನಿಂತಿದ್ದಾನೆ. ಅವನ ಎಡಭಾಗದಲ್ಲಿ ಸ್ಮಾರಕದಿಂದ ಹೊರಬಂದಿರುವ ಪಟ್ಟಿಯಲ್ಲಿ ಹಾವೊಂದು ಹೆಡೆಯನ್ನು ಬಿಚ್ಚಿರುವಂತೆ ಕೆತ್ತಲಾಗಿದೆ. ಇದೇ ತಾಲೂಕಿನ ಮಾದಿಹಳ್ಳಿಯ ವೀರಮಾಸ್ತಿ ಸ್ಮಾರಕವೊಂದರಲ್ಲಿ ವೀರನು ಎಡಗೈಯಲ್ಲಿ ಬಾಕುವೊಂದನ್ನು ಹಿಡಿದು, ಬಲಗೈಯನ್ನು ಸತಿಯ ಕಡೆ ಚಾಚಿದ್ದಾನೆ. ಅವನ ಪಕ್ಕದಲ್ಲಿರುವ ಸತಿ ಎಡಗೈಯಲ್ಲಿ ನಿಂಬೆಹಣ್ಣು ಹಿಡಿದು, ಬಲಗೈಯನ್ನು ವೀರನ ಕಡೆ ಚಾಚಿ ನಿಂತಿರುವಂತೆ ಕೆತ್ತಲಾಗಿದೆ. ಸ್ಮಾರಕದ ಎಡಭಾಗ ಅಂಚಿನ ಪಟ್ಟಿಯಲ್ಲಿ ಹೆಡೆ ಬಿಚ್ಚಿರುವ ಹಾವನ್ನು ಚಿತ್ರಿಸಲಾಗಿದೆ. ವೀರನ ಬಲಭಾಗದಲ್ಲಿ ಕುದುರೆಯೊಂದು ನಿಂತಿದೆ.



ದಾವಣಗೆರೆ ತಾ. ನೀರ್ಥಡಿ

ಜಗಲೂರು ತಾಲೂಕು ನಿಬಗೂರು ಗ್ರಾಮದ ವೀರಮಾಸ್ತಿಕಲ್ಲಿನಲ್ಲಿ ಅಶ್ವಾರೂಢನಾಗಿರುವ ವೀರನ ಕೈಯಲ್ಲಿ ಕಿರುಗತ್ತಿಯಿದೆ. ಅವನ ಬೆನ್ನ ಹಿಂದೆ ದೊಡ್ಡದಾದ ಹಾವೊಂದು ಹೆಡೆಯನ್ನು ಬಿಚ್ಚಿ ನಿಂತಿದೆ. ಕುದುರೆ ಮುಂದೆ ನಿಂತಿರುವ ಸತಿಯು ಎರಡು ಕೈಯಲ್ಲಿ ನಿಂಬೆಹಣ್ಣು ಹಿಡಿದು ಬಲಗೈಯನ್ನು ಮೇಲಕ್ಕೆತ್ತಿ ಹಿಡಿದಿರುವಳು. ದಾವಣಗೆರೆ ತಾಲೂಕು ನೀರ್ಥಡಿ ಗ್ರಾಮದ ವೀರಮಾಸ್ತಿಕಲ್ಲಿನಲ್ಲಿ ವೀರನು ಬಿಲ್ಲಿಗೆ ಬಾಣವನ್ನು ಹೂಡಿ ನಿಂತಿದ್ದಾನೆ. ಅವನ ಬದಿಯಲ್ಲಿರುವ ಸತಿಯು ಬಲಗೈಯನ್ನು ಮೇಲಕ್ಕೆತ್ತಿ ನಿಂಬೆಹಣ್ಣು ಹಿಡಿದಿರುವಳು. ಇವರಿಬ್ಬರ ಶಿರಭಾಗದ ಮಧ್ಯದಲ್ಲಿ ಹೆಡೆ ಬಿಚ್ಚಿಕೊಂಡಿರುವ ಹಾವೊಂದನ್ನು ಚಿತ್ರಿಸಲಾಗಿದೆ. ಒಟ್ಟಾರೆ ಉಲ್ಲೇಖಿತ ಸ್ಮಾರಕಶಿಲ್ಪಗಳಲ್ಲಿರುವ ಹಾವಿನ ಚಿತ್ರಣಗಳು ಆ ವೀರರ ಸಾವಿನ ಹಿನ್ನಲೆಯನ್ನು ಸೂಚಿಸುತ್ತಿವೆ. ಇದರೊಂದಿಗೆ ವೀರರ

ಮರಣದ ನಂತರ ಅವರ ಸತಿಯರೂ ಸಹಗಮನಗೊಂಡಿರುವುದು ತಿಳಿಯುತ್ತದೆ. ಈ ಹೇಳಿಕೆಯನ್ನು ಸೊರಬ ತಾಲೂಕು ದೂಗೂರಿನ ಸತಿಗಲ್ಲು ಪುಷ್ಠೀಕರಿಸುತ್ತದೆ. ವಿವರಿಸಿದ ಸ್ಮಾರಕಶಿಲ್ಪಗಳಲ್ಲಿ ಕಂಡುಬರುವ ಹಾವೆಂದರೆ ನಾಗರಹಾವು. ಅದು ನಾಗರಹಾವೇ ಎಂದು ಹೇಳಲು ಆ ಶಿಲ್ಪಗಳಲ್ಲಿರುವ ಹಾವು ಹೆಡೆಯನ್ನು ಅಗಲಿಸಿದಂತೆ ಚಿತ್ರಿತವಾಗಿರುವುದೇ ಸಾಕ್ಷಿಯಾಗಿದೆ.

ಅಡಿ ಟಿಪ್ಪಣಿಗಳು

೧. ಪರಮಶಿವಮೂರ್ತಿ ಡಿ.ವಿ., ೧೯೯೯, ಕನ್ನಡ ಶಾಸನಶಿಲ್ಪ, ಪು. ೧೦೩.

೨. ದೇವರಾಜಸ್ವಾಮಿ ಜಿ.ಕೆ., ೨೦೧೭, ಶಾಸನಗಳಲ್ಲಿ ಬೇಟೆ ಹಾಗೂ ಸ್ಮಾರಕಗಳು, ಡಾ. ಆರ್. ಶೇಷಶಾಸ್ತ್ರಿ ಅಭಿನಂದನಾ ಗ್ರಂಥ 'ವಿಶೇಷ', ಪು. ೩೨೩.

೩. ಬಸವರಾಜ ಕಲ್ಗುಡಿ, ೧೯೮೫, ಮಹಾಸತಿ ಆಚರಣೆ: ಒಂದು ಅಧ್ಯಯನ, ಪು. ೧೯೦-೧೯೧.

೪. ಎಪಿಗ್ರಾಫಿಯಾ ಕರ್ನಾಟಿಕ, ಸಂ-೮, ಸೊರಬ ತಾಲೂಕು, ಶಾ. ಸಂ. ೪೮೩, ದೂಗೂರು.

ಕುಂದಗೋಳ ಶಂಭುಲಿಂಗನ ದೇವಸ್ಥಾನದ ಕಥಾನಿರೂಪಕ ಶಿಲ್ಪಗಳು

ದತ್ತಪ್ರಸನ್ನ ಪಾಟೀಲ*

ಪ್ರತಿಯೊಂದು ದೇವಾಲಯವು ಒಂದು ವಿಶಿಷ್ಟ ಉದ್ದೇಶಕ್ಕಾಗಿ ನಿರ್ಮಿಸಿಲ್ಪಟ್ಟಿರುತ್ತದೆ. ಅದರಲ್ಲಿಯೂ ಕಲ್ಯಾಣಚಾಲುಕ್ಯರ ಕಾಲದಲ್ಲಿ ನಿರ್ಮಾಣಗೊಂಡಿರುವ ದೇವಾಲಯಗಳು ವಾಸ್ತುಶಿಲ್ಪ ಕಲೆಯ ವಿಶೇಷತೆಗಳೊಂದಿಗೆ ವಿಶಿಷ್ಟ ರೀತಿಯ ಮೂರ್ತಿ ಶಿಲ್ಪಗಳನ್ನು ಹೊಂದಿದ್ದವು. ಅಂತಹ ದೇವಾಲಯಗಳಲ್ಲಿ ಧಾರವಾಡಜಿಲ್ಲೆಯ ಕುಂದಗೋಳ ನಗರದ ಶಂಭುಲಿಂಗನ ದೇವಾಲಯವು ಉಬ್ಬು ಶಿಲ್ಪಗಳು ಮತ್ತು ಪುರಾಣಕ್ಕೆ ಸಂಬಂಧಿಸಿದ ಕಥಾನಿರೂಪಕ ಶಿಲ್ಪಗಳಿಂದ ಅಲಂಕೃತವಾಗಿದೆ.

ಕುಂದಗೋಳದ ಕಿಲ್ಲಾ ಪ್ರದೇಶದಲ್ಲಿ ಕಲ್ಯಾಣಚಾಲುಕ್ಯರ ಕಾಲಕ್ಕೆ ಸಂಬಂಧಿಸಿದ ಶಂಭುಲಿಂಗನ ದೇವಾಲಯವಿದೆ. "ಈ ದೇವಾಲಯವು ಗರ್ಭಗೃಹ ಅಂತರಾಳ ಮತ್ತು ತೆರೆದ ವಿಶಾಲವಾದ ನಕ್ಷತ್ರಾಕಾರದ ಸಭಾ ಮಂಟಪಗಳಿಂದ ಕೂಡಿದ ದೇವಾಲಯವಾಗಿದೆ. ಈ ಸಭಾಮಂಟಪವು ಸುತ್ತಲೂ ಕಕ್ಷಾಸನ ಹೊಂದಿದ್ದು ಹೊರಮೈಯಲ್ಲಿ ಮೇಲಿನ ಸಾಲಿನಲ್ಲಿ ಉಬ್ಬು ಹಾಗೂ ಕಥಾನಿರೂಪಕ ಶಿಲ್ಪಗಳು ಹಾಗೂ ಕೆಳಗಿನ ಸಾಲಿನಲ್ಲಿ ನಾಗರಶೈಲಿಯ ಶಿಖರಗಳನ್ನು ಬಿಡಿಸಿ ಅಲಂಕರಿಸಲಾಗಿದೆ".[೧]

ಈ ನಗರದ ಮೂರು ಶಾಸನಗಳಿಂದ ಈ ದೇವಾಲಯದ ಕುರಿತು ಮಾಹಿತಿ ತಿಳಿದುಬರುತ್ತದೆ. "ಗಂಗಾಧರೇಶ್ವರ ಗುಡಿಯಗೋಡೆಯ ಮೇಲಿರುವ ಕಲ್ಯಾಣಚಲುಕ್ಯರ ದೊರೆ ವಿಕ್ರಮಾದಿತ್ಯನ ಕಾಲದ ೧೧೦೦ರ ಶಾಸನ ಸ್ವಯಂಭೂ ದೇವರ ಸೂತ್ರಧಾರಿ ಬರ್ಮೋಜನ ಮಗ ಕಾಳೋಜನಿಗೆ ಕೊಟ್ಟದಾನದ ಬಗೆಗೆ ತಿಳಿಸುತ್ತದೆ. ಇದರಿಂದ ಸ್ವಯಂಭೂ ಶಂಭುಲಿಂಗ ದೇವಾಲಯವು ಕಲ್ಯಾಣಚಾಲುಕ್ಯರ ಕಾಲದಲ್ಲಿ ಅಂದರೆ ೧೧ನೇ ಶತಮಾನದಲ್ಲಿ ನಿರ್ಮಾಣವಾಗಿರ ಬಹುದೆಂದು ಹೇಳಬಹುದಾಗಿದೆ".[೨] "ಈ ದೇವಾಲಯದ ಸಭಾಮಂಟಪದಲ್ಲಿರುವ ಮತ್ತೊಂದು ಶಾಸನವು ಕಳಚೂರಿಯ ದೊರೆ ಸೋವಿದೇವನ ಕಾಲದ್ದಾಗಿದ್ದು, ಮಹಾಪ್ರಧಾನ ಲಕ್ಷ್ಮೀಧರ ದಂಡನಾಯಕಾದಿಗಳಿಂದ ಸ್ವಯಂಭೂ ದೇವರಿಗೆ ದಾನ ನೀಡಿದ್ದನ್ನು ಉಲ್ಲೇಖಿಸುತ್ತದೆ.[೩] "ಇದೇ ದೇವಾಲಯದ ಪ್ರಾಕಾರದ ಬಾಗಿಲವಾಡದ ಬುಡದಲ್ಲಿರುವ ಮರಾಠಿ ಶಾಸನವು ಈ ಗುಡಿಯು ೧೮೬೭ರಲ್ಲಿ ಜೀರ್ಣೋದ್ಧಾರಗೊಂಡಿತೆಂಬ ವಿಷಯವನ್ನು ತಿಳಿಸುತ್ತದೆ".[೪]

ಈ ದೇವಾಲಯವು ನಕ್ಷತ್ರಾಕಾರದ ತೆರೆದ ವಿಶಾಲವಾದ ಸಭಾಮಂಟಪವನ್ನು ಹೊಂದಿದ್ದು, ಇದರ ಸುತ್ತಲೂ ಅಂಚಿನುದ್ದಕ್ಕೂ ನಯನಮನೋಹರವಾದ ಕಕ್ಷಾಸನವಿದೆ. ಈ ಕಕ್ಷಾಸನದ ಹೊರಭಾಗದಲ್ಲಿ ೩೦ಕ್ಕೂ ಹೆಚ್ಚು ವಿವಿಧ ದೇವತೆಗಳು ಹಾಗೂ ಉಪದೇವತೆಗಳಾದ ಬ್ರಹ್ಮ, ಗಣಪತಿ, ಶಿವ, ರತಿಮನ್ಮಥ, ವಿಷ್ಣುವಿನ ಚತುರ್ವಿಂಶತಿ ಮೂರ್ತಿಗಳು, ದಶಾವತಾರ ಮುಂತಾದ ಉಬ್ಬು ಶಿಲ್ಪಗಳ ಕೆತ್ತನೆಯಿದೆ. ಈ ಉಬ್ಬು ಶಿಲ್ಪಗಳ ಸಾಲಿನಲ್ಲಿರುವ ಮಹಿಷಾಸುರಮರ್ಧಿನಿಯ ಕಥಾನಿರೂಪಕ ಶಿಲ್ಪಗಳು ಕಲಾಸಂಶೋಧಕರ ಗಮನ ಸೆಳೆಯುತ್ತವೆ.

ಮಹಿಷಾಸುರಮರ್ದಿನಿ

ಮಹಿಷಾಸುರಮರ್ದಿನಿಯು ಮಹಿಷನೆಂಬ ಅಸುರನನ್ನು ಸಂಹರಿಸುವ ಕಥೆ 'ದೇವಿಭಾಗವತ ಪುರಾಣ'ದಲ್ಲಿ ಹೀಗೆ ವರ್ಣಿಸಲ್ಪಟ್ಟಿದೆ: "ಮಹಿಷ ಎಂಬ ಅಸುರನುಎಲ್ಲ ದೇವತೆಗಳನ್ನು ಸೋಲಿಸಿದಾಗ ಬ್ರಹ್ಮ ಮತ್ತು ಶಿವ ವಿಷ್ಣುವಿನ ಬಳಿ ತೆರಳಿ ಶಕ್ತಿರೂಪಿಣಿ ದೇವತೆಯಿಂದ ಮಾತ್ರ ಮಹಿಷನು ಸಂಹಾರವಾಗುತ್ತಾನೆ ಎಂದು ಹೇಳಿದರು. ಆಗ ತ್ರಿಮೂರ್ತಿಗಳು ಮಹಿಷಾಸುರಮರ್ಧಿನಿಯ ಅರ್ವಿಭಾವಕ್ಕೆ ನಿರ್ಧರಿಸಿದರು. ಅಷ್ಟಾದಶ ಹಸ್ತಗಳುಳ್ಳ ಮಹಾನ್ ಶಕ್ತಿವಂತಳಾದ ದೇವಿಯ ಉದಯವಾಯಿತು. ಎಲ್ಲ ದೇವತೆಗಳು ತಮ್ಮ ಶಕ್ತಿಯನ್ನು ಆಯುಧಗಳ ರೂಪದಲ್ಲಿ ಅವಳಿಗೆ ನೀಡಿದರು. ವಿಷ್ಣು ಚಕ್ರವನ್ನು, ಶಿವನು ತ್ರಿಶೂಲವನ್ನು, ವರುಣನು ಪಾಶವನ್ನು, ಅಗ್ನಿ ಶಕ್ತಿಯನ್ನು, ಮರುತರು ಬಿಲ್ಲು ಮತ್ತು ಬಾಣಗಳನ್ನು ಇಂದ್ರನು ವಜ್ರ

* ಸಂಶೋಧನಾ ವಿದ್ಯಾರ್ಥಿ, ಪ್ರಾಚೀನ ಇತಿಹಾಸ & ಪುರಾತತ್ವ ವಿಭಾಗ, ಕನ್ನಡ ವಿವಿ, ಹಂಪಿ, ಮೊ. ೯೪೪೮೬೪೦೮೩೩

ಮತ್ತು ಘಂಟಾವನ್ನು, ಕಾಲನು ಖಡ್ಗ ಮತ್ತು ಖೇತಕವನ್ನು, ಬ್ರಹ್ಮನು ಕಮಂಡಲ, ವಿಶ್ವಕರ್ಮನು ಪರಶುವನ್ನು, ಕುಬೇರನು ಸುವರ್ಣ ಪಾತ್ರೆಯನ್ನು ಮತ್ತು ಸೂರ್ಯನು ಪ್ರಖರ ಕಿರಣಗಳನ್ನು ದೇವಿಗೆ ನೀಡಿದರು. ಹೀಗೆ ಸರ್ವ ಆಯುಧಗಳನ್ನು ಧರಿಸಿದ ದೇವಿಯು ರಾಕ್ಷಸನ ಮೇಲೆ ಆಕ್ರಮಣ ಮಾಡಿದಳು. ಆಗ ಮಹಿಷನು ಮೊದಲು ಸಿಂಹ, ಆನೆ, ಶರಭ, ನಂತರ ಕೋಣನ ರೂಪದಲ್ಲಿ ದೇವಿಯೊಂದಿಗೆ ಹೋರಾಡಿದನು. ಕೊನೆಗೆ ದೇವಿಯು ಮಹಿಷಾಸುರನ ತಲೆಯನ್ನು ಚಕ್ರದಿಂದ ಕತ್ತರಿಸಿ, ಖಡ್ಗವನ್ನು ಕೊರಳಿಗೆ ಚುಚ್ಚಿ ಅವನನ್ನು ಸಂಹರಿಸಿದಳು"[೫]

ಶಿವಪುರಾಣದಲ್ಲಿ "ಮಹಿಷಾಸುರನು ಎಲ್ಲ ದೇವಿ ದೇವತೆಗಳನ್ನು ಸೋಲಿಸಿ ಅವರನ್ನು ಸ್ವರ್ಗಲೋಕದಿಂದ ಹೊರಗಟ್ಟಿದನು. ಎಲ್ಲ ದೇವತೆಗಳು ಬ್ರಹ್ಮನ ನೇತೃತ್ವದಲ್ಲಿ ಶಿವ ಮತ್ತು ವಿಷ್ಣುವಿನ ಹತ್ತಿರ ಬಂದರು. ಆಗ ಅವರೆಲ್ಲರೂ ಮಹಿಷನ ಸಂಹಾರಗೈಯುವ ಸ್ತ್ರೀದೇವತೆಯ ಸೃಷ್ಟಿಗಾಗಿ ತಮ್ಮ ತಮ್ಮ ಶಕ್ತಿಗಳನ್ನು ಆಯುಧಗಳ ರೂಪದಲ್ಲಿ ದೇವತೆಗೆ ನೀಡಿದರು. ಕೊನೆಗೆ ದೇವಿಯು ತನ್ನ ಪಾದವನ್ನು ಅಸುರ ಮೇಲಿಟ್ಟು ತ್ರಿಶೂಲದಿಂದ ಅವನ ಕೊರಳಿಗೆ ಚುಚ್ಚಿ ಮಹಿಷನನ್ನು ಸಂಹರಿಸಿ ಮಹಿಷಾಸುರ ಮರ್ಧಿನಿ ಎಂದು ಪ್ರಸಿದ್ಧಳಾದಳು."[೬]

ವರಾಹಪುರಾಣದಲ್ಲಿ, "ವೈಷ್ಣವಿದೇವಿಯು ಮಂದಾರ ಪರ್ವತದಲ್ಲಿ ತಪಸ್ಸನ್ನಾಚರಿಸುತ್ತಿದ್ದಳು. ನಾರದರಿಂದ ವೈಷ್ಣವಿದೇವಿಯ ಸೌಂದರ್ಯದ ವರ್ಣನೆಯನ್ನು ಕೇಳಿದ ಮಹಿಷನು ಅವಳನ್ನು ವಿವಾಹವಾಗಲು ಬಯಸಿದನು. ತನ್ನ ಸೇವಕನೊಂದಿಗೆ ತಾನು ವೈಷ್ಣವಿ ದೇವಿಯನ್ನು ವಿವಾಹವಾಗಲು ಇಚ್ಛಿಸುವುದಾಗಿ ಸಂದೇಶ ಕಳುಹಿಸಿದ. ಅದರೆ ದೇವಿಯು ಯುದ್ಧದಲ್ಲಿ ತನ್ನನ್ನು ಸೋಲಿಸಿದವರನ್ನು ಮಾತ್ರ ತಾನು ವಿವಾಹವಾಗುವುದಾಗಿ ಮರು ಸಂದೇಶ ಕಳುಹಿಸಿದಳು. ನಂತರ ದೇವಿಯ ಹತ್ತಿರ ಬಂದ ನಾರದನು ಮಹಿಷನು ಅತ್ಯಂತ ಬಲಶಾಲಿಯಾದ ಅಸುರನಾಗಿದ್ದು ದೇವತೆಗಳನ್ನೆಲ್ಲಾ ಪರಾಭವಗೊಳಿಸಿದ್ದು, ಇದೀಗ ವೈಷ್ಣವಿದೇವಿಯನ್ನು ಬಲವಂತದಿಂದ ಹೊತ್ತುಕೊಂಡು ಹೋಗಿ ಮದುವೆಯಾಗಲು ಬರುತ್ತಿದ್ದಾನೆಂದು ದೇವಿಗೆ ತಿಳಿಸಿದನು. ಕ್ರೋಧಗೊಂಡ ದೇವಿಯು ತನ್ನ ಮಹಿಳಾ ದೇವತೆಗಳ ಸೈನ್ಯ ಸಮೇತವಾಗಿ ಮಹಿಷನನ್ನು ಸಂಹರಿಸಿದಳು"[೭]

ವಾಮನಪುರಾಣದಲ್ಲಿ, "ರಂಭೆಯ ಮಗನಾದ ಮಹಿಷನು ಅಸುರ ದೊರೆಯಾದ ನಂತರ ದೇವತೆಗಳನ್ನೆಲ್ಲಾ ಸೋಲಿಸಿ ಅವರನ್ನು ಸ್ವರ್ಗದಿಂದ ಓಡಿಸಿದನು. ನಂತರದ ದೇವತೆಗಳು ಬ್ರಹ್ಮನಲ್ಲಿಗೆ ತೆರಳಿ ಮಹಿಷನಿಂದಾದ ತಮ್ಮ ದುಸ್ಥಿತಿಯನ್ನು ಅರುಹಿದಾಗ; ಬ್ರಹ್ಮನು ದೇವತೆಗಳನ್ನೆಲ್ಲಾ ಕರೆದುಕೊಂಡು ಶಿವ ಹಾಗೂ ವಿಷ್ಣುವಿನಲ್ಲಿಗೆ ತೆರಳಿ ಸರ್ವ ದೇವತೆಗಳೊಡನೆ ಸಮಾಲೋಚನೆ ನಡೆಸಿ ಎಲ್ಲ ದೇವತೆಗಳು ತಮ್ಮ ಶಕ್ತಿಯನ್ನು ಸಮ್ಮಿಳಿತಗೊಳಿಸಿ 'ಕಾತ್ಯಾಯಿನಿ' ಎಂಬ ಶಕ್ತಿ ದೇವತೆಯನ್ನು ಸೃಷ್ಟಿಸಿದರು. ಆಗ ದೇವಿ ಕಾತ್ಯಾಯಿನಿ ಕಾಲಿನಿಂದ ಕೋಣನನ್ನು ತುಳಿದು; ತ್ರಿಶೂಲದಿಂದ ಮಹಿಷನ ಕೊರಳಿಗೆ ಚುಚ್ಚಿ ಅವನನ್ನು ವಧಿಸಿದಳು".[೮]

ಮಹಿಷಾಸುರಮರ್ಧಿನಿ ಕಥಾ ಶಿಲ್ಪ

ಕಲ್ಯಾಣ ಚಾಲುಕ್ಯರ ಕಾಲದ ಬಹುತೇಕ ದೇವಾಲಯಗಳ ನವರಂಗ ಹಾಗೂ ಭಿತ್ತಿಗಳಲ್ಲಿ ಮಹಿಷಾಸುರ ಮರ್ಧಿನಿಯ ಬಿಡಿ ಶಿಲ್ಪಗಳು ಕಂಡುಬರುತ್ತವೆ. ಆದರೆ ಇವುಗಳಿಗಿಂತ ಭಿನ್ನವಾಗಿ ಶಂಭುಲಿಂಗ ದೇವಸ್ಥಾನದಲ್ಲಿ ಮಹಿಷ ಸಂಹಾರದ ದೃಶ್ಯಗಳನ್ನು ಕ್ರಿಯೆಯ ಭಿನ್ನತೆಯಿಂದಾಗಿ, ಇಲ್ಲಿನ ಕಥಾನಕ ಶಿಲ್ಪಗಳನ್ನು ಬಹುದೃಶ್ಯ ನಿರೂಪಣೆಯಲ್ಲಿ ವಿಶಿಷ್ಟ ರೀತಿಯಲ್ಲಿ ತೋರಿಸಲಾಗಿದೆ. ಈ ದೇವಾಲಯದ ದಕ್ಷಿಣ ಬದಿಯ ಕಕ್ಷಾಸನಗಳ ಪಟ್ಟಿಕೆಯಲ್ಲಿ ಆರು ದೃಶ್ಯಗಳಲ್ಲಿ ಮಹಿಷ ಮತ್ತು ದೇವಿಯ ಹೋರಾಟದ ವಿವಿಧ ಹಂತಗಳನ್ನು; ದೇವಿಯು ವಿಭಿನ್ನ ಆಯುಧಗಳೊಂದಿಗೆ ಹೋರಾಡುತ್ತಿರುವಂತೆ ಈ ಕಥಾನಕ ಪಟ್ಟಿಕೆಯನ್ನು ಆರು ದೃಶ್ಯಗಳಲ್ಲಿ ಕಂಡರಿಸಲಾಗಿದೆ.

ಪ್ರಥಮ ದೃಶ್ಯದಲ್ಲಿ ಚಂಡಮುಂಡರು ಮಹಿಷಾಸುರನೊಂದಿಗೆ ವಿವಾಹವಾಗಬೇಕೆಂದು ದೇವಿಗೆ ತಿಳಿಸುತ್ತಿದ್ದಾರೆ. ಅವರಿಬ್ಬರ ಕಿರು ಶಿಲ್ಪಗಳನ್ನು ಮಹಿಷಾಸುರ ಮರ್ಧಿನಿಯ ಅಕ್ಕಪಕ್ಕದಲ್ಲಿ ಕಂಡರಿಸಲಾಗಿದ್ದು ಎಡಭಾಗದಲ್ಲಿರುವ ಮುಂಡನು ಕೈ ಎತ್ತಿ ದೇವಿಗೆ ಎಚ್ಚರಿಕೆ ನೀಡುತ್ತಿದ್ದಾನೆ. ದೇವಿಯು ಕೈಯಲ್ಲಿ ಖಡ್ಗ, ತ್ರಿಶೂಲ, ಡಮರು, ಇನ್ನಿತರ ಆಯುಧಗಳನ್ನು ಧರಿಸಿದ್ದಾಳೆ.

ಎರಡನೆಯ ದೃಶ್ಯದಲ್ಲಿ ಮಹಿಷನು ದೇವಿಯೊಂದಿಗೆ ಯುದ್ಧ ಮಾಡಲು ಬರುತ್ತಿದ್ದಾನೆ. ಕೈಯನ್ನು ಖಡ್ಗ ಹಾಗೂ ಬಿಲ್ಲನ್ನು ಹಿಡಿದು ಮಹಿಷದ (ಕೋಣದ) ಮೇಲೆ ಕುಳಿತುಕೊಂಡು ಬರುತ್ತಿದ್ದಾನೆ. ದೇವಿಯು ಕೈಯಲ್ಲಿ ಶಂಖ, ಚಕ್ರ, ಭಲ್ಲೆ, ಮತ್ತು ಘಂಟೆಯನ್ನು ಹಿಡಿದು ಕಾಲನ್ನು ಸಿಂಹದ ತಲೆಯ ಮೇಲಿರಿಸಿ ಯುದ್ಧಕ್ಕೆ ಸಿದ್ಧಳಾಗಿ ನಿಂತಿದ್ದಾಳೆ.

ಪಕ್ಕದ ಮೂರನೆಯ ದೃಶ್ಯದಲ್ಲಿ ದೇವಿಯು ಭರ್ಜಿಯನ್ನು ಹಿಡಿದು ಮಹಿಷನ ವಾಹನವಾದ ಪ್ರಾಣಿರೂಪದ ಕೋಣದ ಕುತ್ತಿಗೆಗೆ ಚುಚ್ಚುತ್ತಿದ್ದಾಳೆ. ಪಕ್ಕದಲ್ಲಿ ಮಾನವ ರೂಪದ ಕಿರು ಶಿಲ್ಪದಲ್ಲಿ ಖಡ್ಗ ಢಾಲನ್ನು ಹಿಡಿದು ಮಹಿಷನು ಹೋರಾಡುತ್ತಿದ್ದಾನೆ.

ನಾಲ್ಕನೆಯ ದೃಶ್ಯದಲ್ಲಿ ದೇವಿಯು ಎಡಗೈಯಿಂದ ಕೋಣನ ತಲೆಗೆ ಈಟಿಯನ್ನು ಚುಚ್ಚಿದ್ದು, ಬಲಗೈಯಿಂದ ಕೋಣನ ಮುಖವನ್ನು ಹಿಡಿದಿದ್ದಾಳೆ. ಬಲಗಾಲನ್ನು ಕೋಣದ ಮೇಲಿರಿಸಿದ್ದಾಳೆ. ಪಕ್ಕದಲ್ಲಿ ಮಾನವ ರೂಪದ ಮಹಿಷನು ಬಲಗಾಲನ್ನು ಮುಂದಕ್ಕೆ ಚಾಚಿ ಖಡ್ಗ, ಢಾಲುಗಳನ್ನು ಹಿಡಿದು ದೇವಿಯೊಂದಿಗೆ ಹೋರಾಡುತ್ತಿರುವಂತೆ ತೋರಿಸಲಾಗಿದೆ.

ಐದನೆಯ ದೃಶ್ಯದಲ್ಲಿ ದೇವಿಯು ಬಲಗಾಲನ್ನು ಕೋಣದ ಮೇಲಿರಿಸಿ ಅದರ ಕೊರಳಿಗೆ ಈಟಿಯನ್ನು ಚುಚ್ಚಿ ಅದನ್ನು ವಧಿಸುತ್ತಿದ್ದಾಳೆ. ಪಕ್ಕದ ಕಿರುಶಿಲ್ಪದಲ್ಲಿ ಮಾನವರೂಪದ ಮಹಿಷನು ಅವಳ ಆಕ್ರಮಣವನ್ನು ತಾಳಲಾರದೇ ಎರಡೂ ಕೈಗಳನ್ನು ಮೇಲಕ್ಕೆತ್ತಿ ಬೀಳುತ್ತಿರುವಂತೆ ತೋರಿಸಲಾಗಿದೆ.


ಆರನೆಯ ದೃಶ್ಯದಲ್ಲಿ ಮಹಿಷನನ್ನು ವಧಿಸಿದ ಮಹಿಷಾಸುರ ಮರ್ಧಿನಿಯ ಮುಂದೆ ಇಬ್ಬರು ಗಣಗಳು ಆಸೀನ ಭಂಗಿಯಲ್ಲಿದ್ದು, ಭಕ್ತಿಯಿಂದ ಕೈ ಮುಗಿದು ಕುಳಿತಿದ್ದಾರೆ.

ತಂತ್ರ ಮತ್ತು ಶೈಲಿ

ಮಹಿಷಾಸುರ ಮರ್ಧಿನಿ ಕಥೆ ವಿಭಿನ್ನ ಪುರಾಣಗಳಲ್ಲಿ ವರ್ಣಿಸಲ್ಪಟ್ಟಿದ್ದು, ಕಥೆಯ ವರ್ಣನೆ ಮತ್ತು ದೇವಿ ಧರಿಸಿರುವ ಆಯುಧಗಳ ಕುರಿತಾಗಿ ಭಿನ್ನ ವಿವರಣೆಗಳಿದ್ದರೂ ಮೂಲ ಕಥೆಯ ಆಶಯ ಮತ್ತು ತಿರುಳು ಒಂದೇ ಆಗಿದೆ. ಮಹಿಷಾಸುರ ಮರ್ಧಿನಿಯನ್ನು ವರಾಹ ಪುರಾಣದಲ್ಲಿ ವೈಷ್ಣವಿದೇವಿ, ವಾಮನ ಪುರಾಣದಲ್ಲಿ ಕಾತ್ಯಾಯಿನಿ ದೇವಿ ಭಾಗವತ ಹಾಗೂ ಶಿವಪುರಾಣಗಳಲ್ಲಿ ಮಹಿಷಾಸುರ ಮರ್ಧಿನಿ ಎಂದು ಹೇಳಲಾಗಿದೆ. ಮೇಲಿನ ಪುರಾಣಗಳ ವರ್ಣನೆಯಲ್ಲಿ ದೇವಿಯ ಹೆಸರುಗಳನ್ನು ಮಾತ್ರ ವಿವಿಧ ರೀತಿಯಲ್ಲಿ ಉಲ್ಲೇಖಿಸಲಾಗಿದ್ದರೂ ಅಸುರ ಹೆಸರು ಮಾತ್ರ 'ಮಹಿಷಾಸುರ' ಎಂಬ ಒಂದೇ ಹೆಸರಿನಿಂದ ಕರೆಯಲ್ಪಟ್ಟಿದ್ದು ಗಮನಾರ್ಹವಾಗಿದೆ. ಪ್ರಸ್ತುತ ಕಥಾನಕ ಶಿಲ್ಪದಲ್ಲಿ ದೇವಿಯೊಂದಿಗೆ ಹೋರಾಟದಲ್ಲಿ ಅಸುರನು ತನ್ನ ವಾಹನವಾದ ಮಹಿಷದೊಂದಿಗೆ (ಕೋಣ) ಹೋರಾಡುತ್ತಿರುವ ವಿವಿಧ ಪ್ರಸಂಗಗಳನ್ನು ಶಿಲ್ಪಿಯು ಕಂಡರಿಸಿದ್ದು ವಿಶೇಷವಾಗಿದೆ.

ಮಹಿಷಾಸುರ ಮರ್ದಿನಿ ಕಥಾನಕ ಶಿಲ್ಪವನ್ನು ಹೊರತುಪಡಿಸಿ ಬೇರಾವ ಕಥಾನಿರೂಪಕ ಶಿಲ್ಪಗಳು ಈ ದೇವಾಲಯದಲ್ಲಿ ಕಂಡುಬರುವುದಿಲ್ಲ. ಇಲ್ಲಿ ಶಿಲ್ಪಿಯು ಪುರಾಣ ಕಥೆಯಲ್ಲಿ ಬರುವ ದೇವಿಯ ಮಹಿಷನನ್ನು ಸಂಹರಿಸುವ ವಿವಿಧ ಹಂತಗಳನ್ನು ಅತ್ಯಂತ ಸೂಕ್ಷ್ಮವಾಗಿ ಆರು ದೃಶ್ಯಗಳಲ್ಲಿ ಕಂಡರಿಸಿದ್ದಾನೆ. ಈ ಶಿಲ್ಪಗಳು ಸರಳರೇಖಾ ಪ್ರಧಾನ ತಂತ್ರದಲ್ಲಿ ನಿರೂಪಿಸಲ್ಪಟ್ಟಿದ್ದು ಪ್ರತಿಯೊಂದು ದೃಶ್ಯವನ್ನು ಕಂಬಗಳ ಕಿರು ಶಿಲ್ಪಗಳಿಂದ ವಿಭಜಿಸಲಾಗಿದೆ. ಕಥಾನಕ ಪಟ್ಟಿಕೆಯ ಮೇಲ್ಭಾಗದಲ್ಲಿ ತರುಲತೆಗಳ ಸುರಳಿ ಅಲಂಕಾರಗಳನ್ನು ಹಾಗೂ ಪಟ್ಟಿಕೆ ಕೆಳಭಾಗದಲ್ಲಿ ರೇಖಾನಾಗರ ಶೈಲಿಯ ಗೋಪುರಗಳನ್ನು ಹಾಗೂ ಅವುಗಳ ಮಧ್ಯೆ ಯಾಳಿ ಶಿಲ್ಪಗಳನ್ನು ಕಂಡರಿಸಲಾಗಿದೆ. ಪ್ರಸ್ತುತ ಮಹಿಷಾಸುರ ಮರ್ಧಿನಿಯು ಕಥಾನಕ ಶಿಲ್ಪಪಟ್ಟಿಕೆ ಕಲ್ಯಾಣ ಚಾಲುಕ್ಯರ ಕಾಲದ ಕಥಾನಕಗಳಲ್ಲಿಯೇ ಅತ್ಯಂತ ಅಪರೂಪವೆನ್ನಬಹುದಾದ ಶಿಲ್ಪವಾಗಿದೆ. ಕೆಲವು ಪುರಾಣಗಳಲ್ಲಿ ಮಹಿಷಾಸುರನು ಮಹಿಷ ರೂಪದಲ್ಲಿ ದೇವಿಯೊಂದಿಗೆ ಹೋರಾಟವನ್ನು ನಡೆಸಿದ ಎಂದು ಹೇಳಲಾಗಿದೆ. ಇನ್ನಿತರ ಪುರಾಣಗಳಲ್ಲಿ ಮಹಿಷ (ಕೋಣ) ಮಹಿಷಾಸುರ ಎಂಬ ರಾಕ್ಷಸನ ವಾಹನವಾಗಿರುತ್ತದೆ. ಪ್ರಸ್ತುತ ಕಥಾನಕದಲ್ಲಿ ಶಿಲ್ಪಿಯು ಒಂದೇ ಪಟ್ಟಿಕೆಯಲ್ಲಿ ದೇವಿಯು ಮಾನವ ರೂಪದ ಮಹಿಷ ಅಸುರ ಮತ್ತು ವಾಹನ ರೂಪದ ಕೋಣ ಇಬ್ಬರೊಂದಿಗೆ ಹೋರಾಡುತ್ತಿರುವ ದೃಶ್ಯಗಳನ್ನು ಏಕಕಾಲದಲ್ಲಿಯೇ ಕಂಡರಿಸಿ ತೋರಿಸಿದ್ದಾನೆ.

ಈ ಕಥಾನಕಗಳಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವೆಂದರೆ ವಿವಿಧ ಪುರಾಣಗಳಲ್ಲಿ ವರ್ಣಿತಗೊಂಡಿರುವಂತೆ ಭರ್ಜಿ, ಶಂಖ, ಚಕ್ರ, ಘಂಟಾ, ತ್ರಿಶೂಲ, ಬಿಲ್ಲು, ಖೇತಕ, ಡಮರು, ಖಟ್ವಾಂಗ ಮುಂತಾದ ವಿವಿಧ ದೇವರುಗಳು ತಮ್ಮ ಶಕ್ತಿಯ ಸ್ವರೂಪವಾಗಿ ನೀಡಿದ ಆಯುಧಗಳನ್ನು ಧರಿಸಿ ದೇವಿಯು ಅಸುರನ ಸಂಹಾರದಲ್ಲಿ ತೊಡಗುತ್ತಾಳೆ ಎಂಬ ಅಂಶವನ್ನು ಶಿಲ್ಪಿಯು ವಿವಿಧ ದೃಶ್ಯಗಳಲ್ಲಿ ಅಭಿವ್ಯಕ್ತಿಸುತ್ತಾ ಹೋಗುತ್ತಾನೆ. ಈ ರೀತಿಯ ಕಂಡರಿಸುವಿಕೆ ಈ ಕಾಲದ ಕಥಾನಕಗಳಲ್ಲಿ ಅಪರೂಪವೆನಿಸಿದೆ. ಇಲ್ಲಿ ವಿವಿಧ ಪುರಾಣಗಳಲ್ಲಿ ವರ್ಣಿತಗೊಂಡಿರುವ ಆಯುಧಗಳನ್ನು ಸಹ ನಿಖರವಾಗಿ ಗುರುತಿಸಬಹುದಾಗಿದೆ. ಇಡೀ ದೇವಾಲಯದ ಉಬ್ಬು ಶಿಲ್ಪಗಳಲ್ಲಿ ಕಂಡುಬರುವ ಆಯುಧಗಳ ಕಂಡರಿಸುವಿಕೆ ಕಲಾಸಕ್ತರ ಗಮನಸೆಳೆದು ಇದರ ಕುರಿತಾದ ಇನ್ನೂ ಹೆಚ್ಚಿನ ಅಧ್ಯಯನದ ಸಾಧ್ಯತೆಗಳು ಹೊರಹೊಮ್ಮುತ್ತವೆ. ಈ ಕಥಾನಕಗಳಲ್ಲಿ



ಶಂಭುಲಿಂಗ ದೇವಾಲಯ



ಶಂಭುಲಿಂಗ ದೇವಾಲಯದ ಕಥಾನಿರೂಪಕ ಶಿಲ್ಪಗಳಿರುವ ದಕ್ಷಿಣ ಕಕ್ಷಾಸನ ಭಾಗ



ಚಂಡಮುಂಡರೊಂದಿಗೆ ದೇವಿಯ ಸಂವಾದ



ಮಹಿಷಾಸುರ ಮರ್ಧಿನಿಯೊಂದಿಗೆ ಹೋರಾಟಕ್ಕೆ ಮಹಿಷನು ಆಗಮಿಸುತ್ತಿರುವುದು



ಮಹಿಷಾಸುರ ಮರ್ಧಿನಿ ಮತ್ತು ಮಹಿಷನ ಹೋರಾಟ



ಮಹಿಷಾಸುರ ಮರ್ಧಿನಿ ಕೋಣನನ್ನು ಸಂಹರಿಸುತ್ತಿರುವುದು



ಮಹಿಷನ ಅವಸಾನ



ಗಣಗಳು ಮಹಿಷಾಸುರ ಮರ್ದಿನಿಗೆ ನಮಿಸುತ್ತಿರುವುದು

ದೇವಿ ದೇವತೆಗಳು ಧರಿಸಿರುವ ಆಭರಣಗಳನ್ನು ಸಹ ಸ್ಪಷ್ಟವಾಗಿ ತೋರಿಸಲಾಗಿದೆ. ಆದರೆ ಮಹಿಷಾಸುರ ಮರ್ದಿನಿಯ ಶಿಲ್ಪಗಳ ಮುಖಭಾಗವು ತೃಟಿತಗೊಂಡಿದ್ದು ಬೇಸರದ ಸಂಗತಿಯಾಗಿದೆ.

ಐತಿಹಾಸಿಕ ಪ್ರವಾಸೋದ್ಯಮವು ಪ್ರಾಮುಖ್ಯತೆ ಪಡೆಯುತ್ತಿರುವ ಇಂದಿನ ದಿನಮಾನಗಳಲ್ಲಿ ಕಥಾ ನಿರೂಪಕ ಶಿಲ್ಪಗಳು ಪ್ರವಾಸಿಗರನ್ನು, ಕಥೆಗಳ ಮೂಲಕ ಹೆಚ್ಚು ಆಕರ್ಷಿಸುವುದರಿಂದ ಅವುಗಳ ಅಧ್ಯಯನ ಹೆಚ್ಚು ಮಹತ್ವ ಪಡೆದುಕೊಳ್ಳುತ್ತವೆ. ಒಟ್ಟಿನಲ್ಲಿ ಶಂಭುಲಿಂಗ ದೇವಾಲಯದ ಮಹಿಷಾಸುರ ಮರ್ದಿನಿ ಕಥಾನಿರೂಪಕ ಶಿಲ್ಪಗಳು ಈ ಕಾಲದ ಇತರ ಮಹಿಷಾಸುರ ಮರ್ದಿನಿಯ ಬಿಡಿ ಶಿಲ್ಪಗಳಿಗಿಂತ ವಿಭಿನ್ನವಾಗಿ ಕಂಡರಿಸಲ್ಪಟ್ಟಿದೆ.

[ಈ ಲೇಖನವನ್ನು ರಚಿಸಲು ಮಾರ್ಗದರ್ಶನ ನೀಡಿದ ಮಾರ್ಗದರ್ಶಕರಾದ ಡಾ. ಸಿ.ಎಸ್. ವಾಸುದೇವನ್ ಇವರಿಗೆ ಧನ್ಯವಾದಗಳು).

ಅಡಿ ಟಿಪ್ಪಣಿಗಳು

೧. ಸೂರ್ಯನಾಥ ಕಾಮತ್., (ಪ್ರಸಂ.), ಕರ್ನಾಟಕ ರಾಜ್ಯ ಗೆಜಿಟೀಯರ್, "ಧಾರವಾಡ ಜಿಲ್ಲೆ", ಬೆಂಗಳೂರು, ಕರ್ನಾಟಕ ಸರಕಾರ, ೧೯೯೫.

೨. ಮಹದೇವ. ಸಿ., ೨೦೦೬ : "ಕರ್ನಾಟಕ ದೇವಾಲಯ ಕೋಶ", ಧಾರವಾಡ ಜಿಲ್ಲೆ, ಹಂಪಿ, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ.

೩. SII-XX-163.

೪. ಸೂರ್ಯನಾಥ ಕಾಮತ್, "ಪೂರ್ವೋಕ್ತ.

೫. Devi Bhagavata Purana, Vol. 5, Chpt. 8, pp. 62-74.

೬. Shastri. J.l. (Ed.), 1991, "Shiva MahaPurana" Vol. 9, chpt 46, New Delhi, Motilal Banarasidas, 515-557.

೭. ವರದಾಚಾರ್.ಎಂ.ಆರ್., (ಅನು.), "ಶ್ರೀ ವರಾಹ ಪುರಾಣಂ", ಭಾಗ-೧ ಅಧ್ಯಾಯ ೨೮, ಮೈಸೂರು, ಶ್ರೀ ಹನುಮಾನ್ ಪ್ರೆಸ್, ೧೯೪೬.

೮. ಶಕ್ತಿಘಟ್ಟಂ ವೆಂಕಟಾಚಾರ್ಯ., (ಅನು.), ೧೯೪೬: "ಶ್ರೀ ವಾಮನಪುರಾಣಂ": ಭಾಗ-೩, ಅಧ್ಯಾಯ ೫೦, ೧೯೪೬.

೫೯

ಕಥಾನಕ ಉಬ್ಬು ಶಿಲ್ಪಗಳಲ್ಲಿ ವ್ಯಾಸ, ವಾಲ್ಮೀಕಿ

ಆರ್. ರಘು*

ಭರತ ಖಂಡದ ಬೋಗ ಭೂಮಿಯಲ್ಲಿ ಜನಿಸಿದ ವಾಲ್ಮೀಕಿ ಮತ್ತು ವ್ಯಾಸಮುನಿಗಳು ಸನಾತನ ಧರ್ಮದ ವೈದಿಕ ಸಂಸ್ಕೃತಿಯಲ್ಲಿ ಸಂಸ್ಕೃತ ಭಾಷೆಯನ್ನು ಬಳಸಿಕೊಂಡು ಸಂಪೂರ್ಣ ರಾಮಾಯಣವನ್ನು ವಾಲ್ಮೀಕಿ ಮತ್ತು ವ್ಯಾಸ ಮುನಿಗಳು ವ್ಯಾಸ ಭಾರತವೆಂಬ ಎರಡು ಮಹಾಕಾವ್ಯವನ್ನು ಬರೆದಿದ್ದಾರೆ. ಈ ಕಾರಣದಿಂದ ಜಗತ್ತಿನಲ್ಲಿ ಭಗವಾನ್ ವಾಲ್ಮೀಕಿಯನ್ನು ರಾಮಾಯಣದಿಂದ ಮತ್ತು ಭಗವಾನ್ ವ್ಯಾಸರವರನ್ನು ಸೂತ ಭಾರತದಿಂದ ಭರತ ಖಂಡದ ಎಲ್ಲಾ ಭಾಷೆಗಳಲ್ಲಿ ಮಹರ್ಷಿ ಹಾಗೂ ಕವಿ ಎಂದು ಸಾಹಿತ್ಯದಲ್ಲಿ ವರ್ಣಿಸಿ ಗುಣಗಾನ ಮಾಡಿ ನಮೂದಿಸಿದ್ದಾರೆ ಹಾಗೂ ಮಹಾಕಾವ್ಯವನ್ನು ಕೇಳಿದವರ ಜನಮಾನಸದಲ್ಲಿ ವಾಲ್ಮೀಕಿ ಮತ್ತು ವ್ಯಾಸಮುನಿ ನೆಲೆಸಿದ್ದಾರೆ.

ರೂಢಿಗತವಾಗಿ ವ್ಯಾಸಮುನಿ ಮತ್ತು ವಾಲ್ಮೀಕಿಯವರು ಜನ್ಮಿಸಿದ ಸ್ಥಳ ಬೆಳೆದ ಸಂಸ್ಕೃತಿಯು ಆದಿ ವೈದಿಕ, ಸಾಮಾಜಿಕ, ದ್ರಾವಿಡ ಸಂಸ್ಕೃತಿಯಾಗಿದೆ. ಇವರುಗಳಿಗೆ ಆದ ಸಂಸ್ಕಾರ, ಜೀವನ ಕ್ರಮ, ಬದುಕಿನ ಸಾಕ್ಷಾತ್ಕಾರದಿಂದ ಬ್ರಾಹ್ಮಣ್ಯವನ್ನು ಪಡೆದು ಭಗವಾನ್ ವಾಲ್ಮೀಕಿ ಹಾಗೂ ಭಗವಾನ್ ವ್ಯಾಸರು ಕೀರ್ತಿವಂತರಾಗಿ ಮಾನವ ಜೀವನದ ಭಾವದಲ್ಲಿ ಶಾಶ್ವತವಾಗಿ, ನೆಲೆಯಾಗಿ, ಚಿರಂಜೀವಿಯಾಗಿದ್ದಾರೆಂದು ಸ್ಮರಿಸಿಕೊಳ್ಳುತ್ತಾರೆ.

ವಾಲ್ಮೀಕಿ ಮತ್ತು ವ್ಯಾಸರ ಸ್ವರೂಪ ವರ್ಣನೆಯನ್ನು ಶಿಲ್ಪಕಲೆಯಲ್ಲಿ ಶೋಧಿಸಿದಾಗ ಬಿಡಿಶಿಲ್ಪಗಳು ಮತ್ತು ಕಂಬಗಳಲ್ಲಿ ದೇವಾಲಯದ ಹೊರ ಬಿತ್ತಿಯಲ್ಲಿ ತನ್ನ ಭಾವನೆಯಂತೆ ಶಿಲ್ಪಿ ಉಬ್ಬು ಶಿಲ್ಪವನ್ನು ಸುಂದರವಾಗಿ ಚಿತ್ರಿಸಿದ್ದಾನೆ.

ಸಂಪೂರ್ಣ ರಾಮಾಯಣ ಮಹಾಕಾವ್ಯದಲ್ಲಿ ವಾಲ್ಮೀಕಿಯು ತನ್ನ ಸ್ವರೂಪ ವರ್ಣನೆಯನ್ನು ಬರೆದುಕೊಂಡಿಲ್ಲ. ಆದರೂ ವಾಲ್ಮೀಕಿ ರಾಮಾಯಣ ದೃಶ್ಯವನ್ನು ಕಥಾ ಸಾಂದರ್ಭಿಕವಾಗಿ ಶಿಲ್ಪಿ ಚಿತ್ರವನ್ನು ಚಿತ್ರಿಸಿದ್ದಾನೆ. ಶಿಲ್ಪಿಯೂ ಕಥಾ ಸಂದರ್ಭಗಳನ್ನು ಸೌಂದರ್ಯ ಪ್ರಜ್ಞೆಯಿಂದ ನೋಡಲು ಸುಂದರವಾಗಿ ಕಾಣುವಂತೆ ಸುಂದರ ಶಿಲ್ಪಗಳನ್ನು ಚಿತ್ರಿಸಿದ್ದಾನೆ. ಶಿಲ್ಪಕಲೆಯನ್ನು ಮಾಧ್ಯಮವನ್ನಾಗಿ ಬಳಸಿಕೊಂಡರೆ ಕಲ್ಲಿನ ರಚನೆ ಶಾಶ್ವತವಾಗಿ ಉಳಿಯುತ್ತದೆ ಎಂದು ಶಿಲ್ಪಿ ಆಯ್ಕೆ ಮಾಡಿಕೊಂಡಿದ್ದಾನೆ.

ಮೈಸೂರು ಜಿಲ್ಲೆ, ಟಿ.ನರಸೀಪುರ ತಾಲ್ಲೂಕು, ಸೋಮನಾಥಪುರದ ದೇವಾಲಯದಲ್ಲಿ ದೇವಿ ರಾಮಾಯಣದ ದೃಶ್ಯಗಳನ್ನು ಪಟ್ಟಿಕೆಗಳಲ್ಲಿ ಸುಂದರವಾಗಿ ಶಿಲ್ಪಿ ಚಿತ್ರಿಸಿದ್ದಾನೆ ಮತ್ತು ವರುಣ ಗ್ರಾಮದ ದೇವಮ್ಮನ ದೇವಾಲಯದ ಹೊರ ಬಿತ್ತಿಯಲ್ಲಿ ರಾಮಾಯಣ ದೃಶ್ಯ ನೋಡಬಹುದಾಗಿದೆ. ಆದರೆ ಲವಕುಶ ರಾಮಾಯಣ ಉತ್ತರಖಂಡದ ಭಾವ ಶಿಲ್ಪಗಳನ್ನು ಚಿತ್ರಿಸಿರುವುದಿಲ್ಲ.


ಹಂಪಿ ಹಜಾರ ರಾಮಸ್ವಾಮಿ ದೇವಾಲಯದ ಹೊರ ಬಿತ್ತಿಯಲ್ಲಿ ಮತ್ತು ಕೋಟೆಯ ಕಲ್ಲಿನ ಗೋಡೆಯಲ್ಲಿ ಹಾಗೂ ಕೋಟೆಯ ಮೇಲ್ಭಾಗದಲ್ಲಿ ರಾಮಾಯಣ ದೃಶ್ಯವನ್ನು ಶಿಲ್ಪಿ ಮನೋಹರವಾಗಿ ಚಿತ್ರಿಸಿದ್ದಾನೆ. ಹಯಗ್ರೀವ ರಾಮಾಯಣದ ಋಷ್ಯಶೃಂಗನಿಂದ ಪ್ರಾರಂಭವಾಗಿ ಶ್ರೀರಾಮನ ಪಟ್ಟಾಭಿಷೇಕದವರೆಗೆ ದೃಶ್ಯಗಳು ಮುಕ್ತಾಯವಾಗಿರುತ್ತದೆ. ಶ್ರವಣನ ಪಿತೃಭಕ್ತಿಯ ದೃಶ್ಯ ತೊರೆವೆ ರಾಮಾಯಣ, ಸಂಪೂರ್ಣ ರಾಮಾಯಣದ ದೃಶ್ಯ ಶಿಲ್ಪಗಳನ್ನು ಶಿಲ್ಪದಲ್ಲಿ ನಾಜೂಕಾಗಿ ಚಿತ್ರಿಸಿದ್ದಾನೆ.

ಶ್ರೀರಾಮನ ಪಟ್ಟಾಭಿಷೇಕದ ಸಂದರ್ಭದಲ್ಲಿ (ಋಗ್ವೇದ, ಯರ್ಜುವೇದ, ಸಾಮವೇದ, ಅಥರ್ವರ್ಣವೇದಗಳು) ೪ ವೇದಗಳ ಋಷಿಗಳ ಸ್ವರೂಪವನ್ನು, ಮತ್ತು ಸಪ್ತಋಷಿಗಳು ಹಾಗೂ ಮನು, ಮಯ, ಶಿಲ್ಪಿ, ತ್ವಷ್ಟ ವಿಶ್ವಜ್ಞಾ, ಪಂಚ ವಿಶ್ವಕರ್ಮ ಮಹರ್ಷಿಗಳು ಶ್ರೀರಾಮನ ಪಟ್ಟಾಭಿಷೇಕದಲ್ಲಿ ಸೀತಾರಾಮರಿಗೆ ಆಶೀರ್ವದಿಸುವ ಸಂದರ್ಭದ ಶಿಲ್ಪದಲ್ಲಿ ಋಷಿಗಳ ಭಿನ್ನತೆಯನ್ನು ತೋರಿಸಲು ಶಿಲ್ಪಿ ಚಿತ್ರಿಸಿದ್ದಾರೆ. ವಾಲ್ಮೀಕಿ ರಾಮಾಯಣದ ಮಹಾಕಾವ್ಯದಲ್ಲಿ ನೂರಾರು ಋಷಿಯ ಕಥಾಸಂದರ್ಭಗಳ ವರ್ಣನೆಯಿದೆ. ಆದರೆ ವಾಲ್ಮೀಕಿಯ ಜೀವನ ಕಥೆಯ ದೃಶ್ಯಗಳನ್ನು ಶಿಲ್ಪಿ ಚಿತ್ರಿಸಿರುವುದಿಲ್ಲ.

* ಚೈತ್ರ ಚಾವಡಿ ರಸ್ತೆ, ನಂ. ೨೧೯/೫, ಕೊಳ್ಳೇಗಾಲ ಟೌನ್, ಚಾಮರಾಜನಗರ ಜಿಲ್ಲೆ, ಮೊ. ೬೩೬೧೩ ೧೪೮೨೨



ಭಗವಾನ್ ವಾಲ್ಮೀಕಿಯ ಸಂಪೂರ್ಣ ರಾಮಾಯಣ



ವಾಲ್ಮೀಕಿ ರೂಪ ಕಥಾನಕ ಶಿಲ್ಪಗಳು



ಸೀತೆ-ರಾಮ ಕೈಯಲ್ಲಿ ಮುದ್ರೆ ಹಾಕಿರುವುದು



ವಾಲ್ಮೀಕಿಯಲ್ಲಿ ಸೀತೆ-ಲಕ್ಷ್ಮಣ ಪ್ರಾರ್ಥಿಸುತ್ತಿರುವುದು



ವಾಲ್ಮೀಕಿರವರಿಂದ ಲವಕುಶರಿಗೆ ಉಪದೇಶ



ವಾಲ್ಮೀಕಿರವರಿಂದ ಲವಕುಶರಿಗೆ ವಿದ್ಯಾರ್ಜನೆ

ವಾಲ್ಮೀಕಿಯನ್ನು ಒಬ್ಬ ಕವಿ ಎಂಬ ಭಾವನೆಯಾದ ಅವನ ಸ್ವರೂಪವನ್ನು ಓಲೆಗಿರಿ ಗ್ರಂಥದಲ್ಲಿ ಚಿತ್ರಿಸಿರುವುದಿಲ್ಲ. ಶಿಲ್ಪಗಳಲ್ಲಿ ಕಥಾ ಸಂದರ್ಭಗಳಲ್ಲಿ ವಾಲ್ಮೀಕಿಯ ರೂಪ ಕಂಡು ಬರುವುದಿಲ್ಲ. ಅನೇಕ ಋಷಿಗಳ ಚಿತ್ರ ಕೆತ್ತಲ್ಪಟ್ಟಿದ್ದರೂ ಅವರ ಹೆಸರನ್ನು ಕೆತ್ತಿರುವುದಿಲ್ಲ. ಕಥಾ ಸಂದರ್ಭವನ್ನು ನೋಡಿ ಗಮನಿಸಿ, ಋಷಿಗಳನ್ನು ಗುರ್ತಿಸಿಕೊಳ್ಳಬೇಕು. ಹೀಗೆ ವಾಲ್ಮೀಕಿಯನ್ನು ಕಥಾ ಸಂದರ್ಭಕ್ಕೆ ಕವಿಯ ಸ್ವರೂಪವಾಗಿ ಬರೆಯುವಂತೆ ಕುಳಿತಿರುವ ದೃಶ್ಯವಾಗಿದೆ.

ಶಿಲ್ಪಕಲಾ ಸಾಮ್ರಾಜ್ಯ ಬೆಳೆದ ಸಂಸ್ಕೃತಿಯ ಇತಿಹಾಸದಲ್ಲಿ ಹಂಪಿ ವಿಜಯನಗರ ಸೇರಿದೆ. ಹಜಾರ ರಾಮಸ್ವಾಮಿ ದೇವಾಲಯದ ಪಕ್ಕದಲ್ಲಿನ ಸೀತಾಮಾತೆಯ ಸುಂದರವಾದ ದೇವಸ್ಥಾನವಿದೆ. ದೇವಾಲಯದ ಹೊರಬಿತ್ತಿಯಲ್ಲಿ ಉತ್ತರಾಖಂಡ ಲವಕುಶ ರಾಮಾಯಣದ ಕಥಾ ಸಂದರ್ಭದ ಘಟನೆಯ ದೃಶ್ಯದ ಶಿಲ್ಪಗಳನ್ನು ನೋಡಬಹುದಾಗಿದೆ.

ಶ್ರೀರಾಮಚಂದ್ರನು ಸೀತೆಯ ತಾಯ್ತನದ / ಗರ್ಭಿಣಿಯ ಬಯಕೆಯನ್ನು ಕೇಳಿ, ವಾಲ್ಮೀಕಿ ಆಶ್ರಮದಲ್ಲಿ ನನ್ನ ಪುತ್ರರ ಜನನವಾಗಬೇಕೆಂಬ ಸೀತೆಯ ಆಶಯವನ್ನು ಪೂರೈಸಲು ಲಕ್ಷ್ಮಣನಿಗೆ ತಿಳಿಸುತ್ತಾನೆ. ಹೀಗೆ ಕಥಾ ಸಂದರ್ಭದ ೧೦ ದೃಶ್ಯಗಳನ್ನು ಶಿಲ್ಪಿ ಆಯ್ಕೆ ಮಾಡಿಕೊಂಡು ನಯನ ಮನೋಹರವಾಗಿ ವಾಲ್ಮೀಕಿಯ ವೃತಾಂತವನ್ನು ಶಿಲ್ಪಿ ಉಬ್ಬು ಶಿಲ್ಪದಲ್ಲಿ ಮೂಡಿಸಿದ್ದಾನೆ.

ವಾಲ್ಮೀಕಿ ಶಿಲ್ಪ ಲಕ್ಷಣ: ವಾಲ್ಮೀಕಿಯು ವಯೋವೃದ್ಧರಾಗಿ ಉದ್ದನೆಯ ಜಡೆಮುಡಿ ಕಟ್ಟಿಕೊಂಡಿದ್ದ, ಗಡ್ಡ ಮೀಸೆ ಬಿಟ್ಟು ಕವಿಯ ಮುಖ ಭಾವನೆ ತೋರಿಸಿದ್ದಾನೆ, ಪದ್ಮಾಸನದಲ್ಲಿ ಕಾಲಮೇಲೆ ಕಾಲು ಹಾಕಿ ಕುಳಿತಿದ್ದ ರುದ್ರಾಕ್ಷಿಯನ್ನು ಕಿವಿ, ಕತ್ತಿನ ಹಾರ, ತೋಳಬಂಧಿ, ಕೈಕಂಕಣ, ಕಾಲಕಂಕಣ, ಎದೆ ಪಟ್ಟಿ, ವಸ್ತ್ರವನ್ನು ಎಡಭಾಗದಿಂದ ಬಲಭಾಗಕ್ಕೆ ಕಟ್ಟಿ ಅಲಂಕರಿಸಿ, ನಡುವಸ್ತ್ರವನ್ನು ಧರಿಸಿರುವಂತೆ ಮತ್ತು ಪೀಠದ ಮೇಲೆ ಕುಳಿತಂತೆ ಮತ್ತು ನಿಂತಂತೆ ಶಿಲ್ಪ ಚಿತ್ರಿಸಿರುತ್ತಾರೆ. ಪಾರ್ಶ್ವ ನೋಟದಲ್ಲಿ ಕಥಾ ಸಂದರ್ಭಕ್ಕೆ ತಕ್ಕಂತೆ ವಾಲ್ಮೀಕಿಯ ಭಾವನೆಯ ನಿಲುವನ್ನು ಚಿತ್ರಿಸಿದ್ದಾರೆ.

ಶ್ರೀರಾಮ ಮತ್ತು ಲಕ್ಷ್ಮಣ ಇವರು ರಾಜಕುಮಾರರಂತೆ ಅಲಂಕರಿಸಿಕೊಂಡಿದ್ದಾರೆ. ಯೋಧರಂತೆ ಶಸ್ತ್ರದಾರಿಗಳಾಗಿದ್ದಾರೆ. ಸೀತೆಯ ಸ್ವರೂಪವು ರಾಜಕುಮಾರಿಯಂತೆ ಅಲಂಕರಿಸಿಕೊಂಡಿದ್ದು, ಶ್ರೀರಾಮನ ಧರ್ಮಪತ್ನಿಯಂತೆ ಮತ್ತು ಲವಕುಶರಿಗೆ ಪ್ರೀತಿ ಪಾತ್ರಳಾಗಿ ಮಮತೆಯನ್ನು ತೋರಿಸುವಂತಿದೆ.

ಲವಕುಶರು ಕೀರೀಟ ಧರಿಸಿ, ಅಲಂಕರಿಸಿಕೊಂಡಿದ್ದಾರೆ. ವಾಲ್ಮೀಕಿಯ ಗುರುಗಳಿಗೆ ನಮ್ರತೆಯಿಂದ ನಡೆದುಕೊಂಡು ಸಕಲ ವಿದ್ಯಾಪಾರಂಗತರಾಗಿ ಆರ್ಶೀವಾದ ಪಡೆದು, ಕ್ಷಾತ್ರ ತೇಜಸ್ಸಿನಿಂದ ರಾಮ, ಲಕ್ಷ್ಮಣರ ಮೇಲೆ ಯುದ್ಧ ಮಾಡಿ, ಪರಾಕ್ರಮವನ್ನು ತೋರಿಸಿ ರಾಮ ಲಕ್ಷ್ಮಣರನ್ನು ಮೂರ್ಛೆಗೊಳಿಸಿದ್ದಾರೆ. ಶ್ರೀರಾಮನಿಗೆ ತಕ್ಕ ಮಕ್ಕಳಾಗಿ ಕ್ಷತ್ರಿಯ ಕುಲ ಸಂಜಾತರಾಗಿ ತೋರಿಸುವಂತೆ ಶಿಲ್ಪಿ ಈ ಶಿಲ್ಪಗಳನ್ನು ನಯನ ಮನೋಹರವಾಗಿ ಚಿತ್ರಿಸಿದ್ದಾನೆ. ಶಿಲ್ಪಿಯು ಹತ್ತು ದೃಶ್ಯಗಳನ್ನು ಅಲಂಕರಿಸಿದ್ದು ಅವುಗಳಲ್ಲಿ ಸುಂದರ ಮರಗಳು, ಕಂಬಗಳಲ್ಲಿ ಸಿಂಹಮುಖದ ರೂಪಾಂತರಗಳು, ರಥ, ರಾಹುತನನ್ನು, ಬಲಿಷ್ಠಕಾಯದ ಕುದುರೆ ಅಲಂಕಾರದ ಸನ್ನಿವೇಶದ ಶಿಲ್ಪಿ ಚಿತ್ರ ಕಥಾ ಸನ್ನಿವೇಶಗಳನ್ನು ಶಿಲ್ಪ ಮೂಡಿಸಿದ್ದಾನೆ.

ಮಹಾಭಾರತದ ಕರ್ತೃ ವ್ಯಾಸ ಭಗವಾನ್

ಮಹಾಭಾರತದ ಕರ್ತೃ ವ್ಯಾಸರನ್ನು ಸೂತಮುನಿ ಎಂದು ಕರೆಯಲಾಗಿದೆ. ವ್ಯಾಸನು ತನ್ನ ಸ್ವರೂಪವನ್ನು ತಾನೇ ಕಥಾ ಸಂದರ್ಭದಲ್ಲಿ ಅಂಬಿಕೆ, ಅಂಬಾಲಿಕೆಗೆ, ದಾಸಿಗೆ ನಿಯೋಗ ಪದ್ಧತಿಯಲ್ಲಿ ಗರ್ಭವನ್ನು ಸ್ಥಾಪಿಸಲು ಅನುಸರಿಸುವಾಗ ಸೂತ ಮುನಿಯ ಸ್ವರೂಪವು ನೋಟದಿಂದ ಆದ ಬೇಸರದ ಪರಿಣಾಮವನ್ನು ವಿವರಿಸುವ ಸಂದರ್ಭ ವ್ಯಾಸಮುನಿಯ ಸ್ವರೂಪ ವರ್ಣನೆ ತಿಳಿದುಬರುತ್ತದೆ. ಈ ಸಂದರ್ಭವನ್ನು ಶಿಲ್ಪಿ ಚಿತ್ರಿಸುವುದಕ್ಕೆ ಒಪ್ಪದೆ ತನ್ನದೆ ಆದ ಭಾವನೆಯಲ್ಲಿ ಕಥಾ ಸಂದರ್ಭವನ್ನು ತಿಳಿದು, ದಾಸರಾಜನ ಮಗಳು ಮತ್ಸ್ಯಗಂಧಿಯನ್ನು ಮೀನಿನ ಸಂಕೇತವಾಗಿ ಭಾವಿಸಿ, ಮೀನಿನ ಮೇಲೆ ಕುಳಿತಿರುವಂತೆ ವ್ಯಾಸಮುನಿ ತಪಸ್ವಿ ಮತ್ತು ಜ್ಞಾನಿಯಾದುದಕ್ಕೆ ಪದ್ಮಾಶನ ಭಂಗಿಯಲ್ಲಿ ಮಂಡಿಯಿಂದ ಸೊಂಟದವರೆಗೆ ಯೋಗಪಟ್ಟಿ ಧರಿಸಿರುವಂತೆ ಚಿತ್ರಿಸಲಾಗಿದೆ. ಸನ್ಯಾಸಿ ಎನ್ನಲು ಮುಡಿಯನ್ನು ಗಂಟು ಹಾಕಿಕೊಂಡು, ತೋಳಬಂದಿ, ಕಂಕಣಬಂದಿ, ಕತ್ತಿನ ಹಾರ, ಕಾಲಬಂಧಿ, ಕಚ್ಚೆ–ವಸ್ತ್ರ ಧರಿಸಿ ಕಮಂಡಲವನ್ನು ಅಲಂಕರಿಸಿಕೊಂಡಂತಿದೆ. ನಾನಾ ಭಂಗಿಯಲ್ಲಿ ಕುಳಿತಿರುವ ಚಿಂತಾಕ್ರಾಂತನಾಗಿ ಆರ್ಶೀವಾದ ಮಾಡುವಂತೆ, ತಪಸ್ವಿಯಂತೆ ಮೀನಿನ ಮೇಲೆ ಕುಳಿತಿರುವಂತೆ (ವ್ಯಾಸನ ತಾಯಿ ಸಂಕೇತ ಮೀನಿನ ಚಿತ್ರವಾಗಿದೆ) ಸುಂದರವಾಗಿ ನಾನಾ ವಿಧದಲ್ಲಿ ವ್ಯಾಸನ ರೂಪವನ್ನು ಶಿಲ್ಪಿ ತನ್ನ ಇಚ್ಛೆಯಂತೆ ಬೇರೆ ಬೇರೆ ಶಿಲ್ಪ ಕಲಾವಿದರೂ ಚಿತ್ರಿಸಿದ್ದಾರೆ. ಉದಾ: ಜ್ಞಾನಿ ಎಂಬುದಕ್ಕೆ ಅಯ್ಯಪ್ಪಸ್ವಾಮಿ, ಯೋಗನರಸಿಂಹ, ದಕ್ಷಿಣಾಮೂರ್ತಿ ಹೀಗೆ ಋಷಿಗಳಿಗೆ ಯೋಗಪಟ್ಟಿಯನ್ನು ತೋರಿಸಲಾಗಿದೆ. ವ್ಯಾಸನು ಶ್ರೀಕೃಷ್ಣಪರಮಾತ್ಮನ ಕಥೆಯನ್ನು ಮತ್ತು ವಿಶ್ವರೂಪ ಅವತಾರವನ್ನು ಸಾಂದರ್ಭಿಕವಾಗಿ ಭೀಷ್ಮನಿಗೆ ದರ್ಶನವಾಗುವಂತೆ ಮಾಡಿದ ಮಹಾಪುರುಷನಾಗಿದ್ದಾನೆ.

ಸೊರಬ ತಾಲ್ಲೂಕು ಚಂದ್ರಗುತ್ತಿಯ ಕಲ್ಲಿನ ಬಾವಿಗಳು

ಮಹಾದೇವಪ್ಪ ರಂಗಣ್ಣನವರ*

ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೂಕಿನ ಚಂದ್ರಗುತ್ತಿಯ ಪ್ರದೇಶದಲ್ಲಿ ಆಳ್ವಿಕೆ ಮಾಡಿದ ಅರಸರೆಂದರೆ ಗುತ್ತಿಯ ಅರಸರು. ಗುತ್ತಿ ೧೮ ಎಂಬ ಆಡಳಿತ ವಿಭಾಗವು ಇತಿಹಾಸದಲ್ಲಿ ಕಂಡುಬರುತ್ತದೆ. ಆ ಆಡಳಿತ ವಿಭಾಗವೇ ಈ ಚಂದ್ರಗುತ್ತಿಯಾಗಿದ್ದಿತ್ತು ಎಂಬುದಕ್ಕೆ ಅನೇಕ ಆಧಾರಗಳು ಪುಷ್ಟಿ ನೀಡುತ್ತವೆ. ಆದರೆ ಇತಿಹಾಸಕಾರರಲ್ಲಿ ಈ ವಿಚಾರದಲ್ಲಿ ಒಮ್ಮತವಾದ ಅಭಿಪ್ರಾಯವಿರುವುದಿಲ್ಲ. ಏಕೆಂದರೆ ಗುತ್ತಿ ೧೮ ಎಂಬುದು ಮಹಾರಾಷ್ಟ್ರದಲ್ಲಿ ಕಂಡುಬರುವುದೆಂಬ ವಾದವೂ ಕೂಡಾ ಇದೆ. ಈ ಪ್ರದೇಶದಲ್ಲಿ ಪ್ರಾಚೀನ ಮೌರ್ಯ ಅರಸರ ಚಂದ್ರಗುಪ್ತ ಮೌರ್ಯ ಆಳ್ವಿಕೆ ಮಾಡಿದ್ದು. ಇವರಿಂದಲೇ ಈ ಪ್ರದೇಶಕ್ಕೆ ಚಂದ್ರಗುತ್ತಿಯೆಂಬ ಹೆಸರು ಬಂದಿರುವುದೆಂದು ತಿಳಿದು ಬರುತ್ತದೆ. ಗುಪ್ತರ ನಂತರ ಕರ್ನಾಟಕದ ಗುತ್ತರು ಎಂಬ ಹೆಸರಿನಿಂದ ಹಾವೇರಿ ಜಿಲ್ಲೆಯ ಗುತ್ತಲದ ಅರಸರು, ಹೊನ್ನಾಳಿ ತಾಲ್ಲೂಕಿನ ಬೆಳಗುತ್ತಿಯ ಗುತ್ತರು ಮತ್ತು ಚಂದ್ರಗುತ್ತಿಯ ಗುತ್ತರು ಎಂಬ ಹೆಸರಿನಿಂದ ಗುಪ್ತರ ನಂತರ ಆಳ್ವಿಕೆ ಮಾಡಿರಬಹುದೆಂದು ತಿಳಿದುಬರುತ್ತದೆ. ಗುಪ್ತರು ಚಂದ್ರಗುತ್ತಿಯ ಗುಡ್ಡದಲ್ಲಿರುವ ಕೋಟೆ ದುರ್ಗಾ ದೇವಿಯನ್ನು ಆರಾಧಿಸುತ್ತಿದ್ದರು. ಈ ದುರ್ಗಾದೇವಿಯೇ ಗುಪ್ತರ ಕಾಲದಲ್ಲಿ ಮೂಕಾಂಬಿಕೆ ಎಂಬ ಹೆಸರಿನಿಂದ ಕುಲದೈವವಾಗಿ ಪೂಜಿಸಿರುವುರೆಂದು ತಿಳಿದುಬರುವುದು. ಅಪಾರ ಪ್ರಮಾಣದ ಪ್ರಾಚೀನ ಅವಶೇಷಗಳು ತುಂಬಿ ತುಳುಕುತ್ತವೆ ಮನೆದಳಗಳು. ಬೃಹತ್ ಏಳು ಸುತ್ತಿನ ಕೋಟೆ, ಈ ಪ್ರದೇಶವೂ ಶಾಶ್ವತವಾದ ರಾಜಧಾನಿ ಅಥವಾ ಆಳ್ವಿಕೆ ಪ್ರದೇಶವಾಗಿರಲಿಲ್ಲ. ಇದೊಂದು ಬೇಸಿಗೆಯ ಅರಮನೆಯಂತೆ ಉಪಯೋಗಿಸಿರುವುದು ಕಂಡುಬರುತ್ತದೆ. ಪಕ್ಕದಲ್ಲಿಯೇ ಇರುವ ವೈಜಯಂತಿಪುರ ಅಥವಾ ಬನವಾಸಿ ಕದಂಬರ ಮತ್ತು ಗುಪ್ತರ ಕಾಲದಲ್ಲಿ ರಾಜಧಾನಿಯಾಗಿರುವುದರಿಂದ. ಈ ಪ್ರದೇಶಕ್ಕೆ ಹೆಚ್ಚಿನ ಮಹತ್ವ ಕೊಟ್ಟಂತೆ ಕಾಣುವುದಿಲ್ಲ. ವಿಶಾಲವಾದ ಕಲ್ಲಿನಿಂದ ಕಟ್ಟಿದ ಕಟ್ಟಡಗಳು ಈ ಪ್ರದೇಶದಲ್ಲಿ ಅದರಲ್ಲೂ ವಿಶೇಷವಾಗಿ ಬೆಟ್ಟದ ಮೇಲ್ಭಾಗದಲ್ಲಿ ಸುಮಾರು ೧೦ಕ್ಕೂ ಹೆಚ್ಚು ಬಾವಿಗಳು ಇರುವುದು ನನಗೆ ಬಹಳ ಆಶ್ಚರ್ಯ ಮತ್ತು ಕುತೂಹಲವನ್ನುಂಟು ಮಾಡಿದೆ.

ಈ ಬಾವಿಗಳಲ್ಲಿ ಒಂದು ಬಾವಿ ಮತ್ತೊಂದು ಬಾವಿಯ ಮಧ್ಯದಲ್ಲಿ ಬಹಳ ವ್ಯತ್ಯಾಸ ಕಂಡುಬರುತ್ತದೆ. ಇಲ್ಲಿರುವ ಸುಮಾರು ೧೦ ಬಾವಿಗಳಲ್ಲಿ ಒಂದೇ ತೆರೆನಾದ ೫ ಬಾವಿಗಳಿವೆ ಇನ್ನು ಕೆಲವು ಹದವಾದ ಆಕೃತಿ ಮತ್ತು ಕೆತ್ತನೆಗಳಿಂದ ಭಿನ್ನವಾಗಿರುವುದು ಕಂಡುಬರುತ್ತದೆ. ಬಾವಿಗಳಲ್ಲಿ ಅನೇಕ ಪ್ರಕಾರಗಳಿರುವುದು ಕಂಡು ಬರುತ್ತದೆ. ಅದರಲ್ಲೂ ವಿಶೇಷವಾಗಿ ಮಲೆನಾಡು ಭಾಗದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಬಾವಿಗಳನ್ನು ಕುಡಿಯುವ ನೀರಿಗಾಗಿ ಉಪಯೋಗಿಸುವುದು ಕಂಡುಬರುತ್ತದೆ. ಇನ್ನು ಕೆಲವು ಬಾವಿಗಳು ನೀರಾವರಿಗಾಗಿ ನಿರ್ಮಾಣ ಮಾಡಿರುವುದು ಮತ್ತೆ ಕೆಲವು ದೇವಸ್ಥಾನ ಪೂಜೆಗಾಗಿಯೇ ನಿರ್ಮಾಣ ಮಾಡಿರುವುದು ಸಂಶೋಧನೆಗಳಿಂದ ತಿಳಿದುಬರುತ್ತದೆ. ಅನೇಕ ಶಾಸನಗಳಲ್ಲಿ ರಾಜರು ಬಾವಿ ನಿರ್ಮಾಣ ಮಾಡಿರುವ ಉಲ್ಲೇಖಗಳು ಕಂಡುಬರುತ್ತವೆ. ಕೆಲವು ಶಾಸನಗಳು ಕೊಳ, ಸರೋವರಗಳನ್ನು ಹೆಸರಿಸಿವೆ. ಮುಖ್ಯವಾಗಿ ಗಮನಿಸಬೇಕಾದುದೆಂದರೆ ಇಂತಹ ಕೊಳ ಕಲ್ಯಾಣಿಗಳು ನೀರಾವರಿಗೂ ಬಳಕೆಯಾಗಿರುವುದು ಕಂಡುಬರುತ್ತದೆ. ೧೨ನೇ ಶತಮಾನದ ಕೆಲವು ಶಾಸನಗಳು ಬಾವಿಗಳು ಮತ್ತು ಕೊಳಗಳನ್ನು ನೇರವಾಗಿ ಉಲ್ಲೇಖಿಸದೆ ಇದ್ದರೂ ಪರೋಕ್ಷವಾಗಿ ಉಲ್ಲೇಖ ಮಾಡುತ್ತವೆ. ಉದಾಹರಣೆಗೆ ರೈತರ ತೆರಿಗೆ ಸಂಗ್ರಹದ ಸಂದರ್ಭದಲ್ಲಿ ನೀರ್ದೆರಗೆ ಎಂದು ಉಲ್ಲೇಖದೊಂದಿಗೆ ಬಾವಿದೆರೆಗೆ, ಕೆಳಗಣ ಬಾವಿದೆರೆ, ಇನ್ನು ಕೆಲ ಶಾಸನಗಳಲ್ಲಿ ರಾಜರು ನಿರ್ಮಾಣ ಮಾಡಿದ ಉದ್ದೇಶ ತಿಳಿಸುವಾಗ ಬಾವಿಗಳ ಉಲ್ಲೇಖ ಕಂಡುಬರುತ್ತದೆ. ಕ್ರಿ.ಶ. ೧೧೧೮ರ ಬಳ್ಳಿಗಾವಿಯ ಶಾಸನವೊಂದರಲ್ಲಿ ಪಟ ಸರೋವರ, ಬೆಂಡೆಯ ಸರೋವರದ ಉಲ್ಲೇಖಗಳು ಕಂಡುಬರುತ್ತವೆ. ೧೧೪೯ರ ಒಂದು ಶಾಸನದಲ್ಲಿ ಬೆನಕನ ಬಗ್ಗೆ ಮಾಹಿತಿ ನೀಡಿರುವುದು

* ಸಹಾಯಕ ಪ್ರಾಧ್ಯಾಪಕರು, ಇಂದಿರಾಗಾಂಧಿ ಸ.ಪ್ರ.ದ.ಮ.ಕಾ., ಸಾಗರ, ಶಿವಮೊಗ್ಗ, ಮೊ. ೯೯೦೧೯ ૩૩૧೮೦

ಕಂಡುಬರುತ್ತದೆ. ಕೆಳದಿ ಅರಸರ ಕಾಲದಲ್ಲಿ ಹೆಚ್ಚು ಕೊಳ ಪುಷ್ಕರಣಿ ಮತ್ತು ಕೆರೆಗಳನ್ನು ನಿರ್ಮಾಣ ಮಾಡಿರುವುದು ಕಂಡುಬರುತ್ತದೆ. ಚಂದ್ರಗುತ್ತಿಯ ಬಾವಿಗಳಲ್ಲಿ ಹೆಚ್ಚಿನವೂ ಇವರ ಕಾಲದ ಬಾವಿಗಳಂತೆಯೇ ಕಂಡುಬರುತ್ತವೆ.

ಕ್ರಿ.ಶ. ೧೫೪೯ರ ಸೊರಬ ತಾಲ್ಲೂಕಿನ ಒಂದು ಶಾಸನದಲ್ಲಿ ಕೆರೆಯನ್ನು ಪರೀಕ್ಷಿಸಿದರ ಬಗ್ಗೆ ತಿಳಿಸುತ್ತದೆ. ಕೆರೆಗಳನ್ನು ಕಟ್ಟಿಸುವುದು ಅಷ್ಟೆ ಅಲ್ಲದೆ ಅವುಗಳ ನಿರ್ವಹಣೆ ಕೂಡಾ ಅಷ್ಟೆ ಮುಖ್ಯವಾಗಿತ್ತು. ಸೊರಬ ತಾಲ್ಲೂಕಿನ ಒಂದು ಶಾಸನದಲ್ಲಿ ನೀರ್ಗಂಟಿಯರನ್ನು ಉಲ್ಲೇಖಿಸಿದೆ ಈ ನೀರ್ಗಂಟಿಯರು ನೀರಿನ ನಿರ್ವಹಣೆಗಾಗಿ ಗ್ರಾಮಗಳಲ್ಲಿ ನೇಮಕಗೊಂಡಿರುತ್ತಿದ್ದರು. ಕ್ರಿ.ಶ. ೧೦೧೨ ಸೊರಬ ತಾಲ್ಲೂಕು ನೆಲ್ಲೂರಿನ ಒಂದು ಶಾಸನದಲ್ಲಿ ಮಲೆಯ ಕೆರೆಯಮ್ಮನ ಮಗ ಅಮ್ಮಣ ಗಾವುಂಡನ ಬಾವ ಮುದ್ದಯ್ಯ ಬಾವಿ ತೋಡಿಸಿದ ಉಲ್ಲೇಖ ಕಂಡುಬರುತ್ತದೆ. ಕ್ರಿ.ಶ. ೧೦೬೬ ಹುಂಚದ ಶಾಸನವೊಂದರಲ್ಲಿ ಚಟ್ಟಲದೇವಿ ಕೆರೆ ಬಾವಿಗಳನ್ನು ಕಟ್ಟಿದರ ಬಗ್ಗೆ ತಿಳಿಸುವುದು. ಹೀಗೆ ಬಾವಿಗಳು ಇತಿಹಾಸದ ಪುಟಗಳಲ್ಲಿ ಒಂದಿಲ್ಲೊಂದು ಉದ್ದೇಶದಿಂದ ಅದರ ಉಲ್ಲೆಖಗಳು ಕಂಡುಬರುತ್ತವೆ. ಒಟ್ಟಾರೆ ಈ ಬಾವಿಗಳು ಪ್ರಾಚೀನ ಕಾಲದಿಂದಲೂ ಮಾನವನ ನೀರಿನ ಸೆಲೆಯನ್ನು ನಿವಾರಿಸಿಕೊಂಡು ಬಂದಿರುವುದು ಇದರಿಂದ ಸ್ಪಷ್ಟವಾಗುತ್ತದೆ. ಆದರೆ ಚಂದ್ರಗುತ್ತಿಯ ಗುಡ್ಡ ಭಾಗದಲ್ಲಿರುವ ಈ ಬಾವಿಗಳು ಆಧುನಿಕರಿಗೆ ಒಂದು ರೀತಿಯ ಆಶ್ಚರ್ಯ ಮತ್ತು ಸೋಜಿಗವನ್ನು ಮಾಡುತ್ತಿರುವುದು ಸಹಜ. ಏಕೆಂದರೆ ಈ ಬಾವಿಗಳು ಬೃಹತ್ ಕಲ್ಲಿನ ಗುಡ್ಡದ ಮೇಲೆ ಕಲ್ಲನ್ನೇ ಆಳವಾಗಿ ಅಗೆದು ತೆಗೆದು ಬಾವಿಯನ್ನಾಗಿ ನಿರ್ಮಾಣ ಮಾಡಿದ್ದಾರೆ ಸುಮಾರು ೮೪೫ ಅಡಿ ಎತ್ತರದ ಬೆಟ್ಟದ ಮೇಲ್ಭಾಗದಲ್ಲಿ ಈ ಬಾವಿಗಳಿರುವುದು ವಿಶೇಷ. ಈ ಪ್ರದೇಶವೂ ಮಲೆನಾಡಾಗಿದ್ದು ವರ್ಷದ ೪ರಿಂದ ೬ ತಿಂಗಳುಗಳ ಕಾಲ ಹೆಚ್ಚಿನ ಮಳೆ ಬೀಳುವ ಪ್ರದೇಶ ಸೊರಬ ತಾಲ್ಲೂಕಿನಲ್ಲಿ ೨೦೦೦ ದಿಂದ ೫೦೦೦ ಮೀ ಲಿ ಮಳೆಯಾಗುತ್ತದೆ. ಹಾಗೂ ಮಳೆ ಆಶ್ರಿತ ವ್ಯವಸಾಯವನ್ನು ಅವಲಂಬಿಸಿದ ಪ್ರದೇಶ ಹೀಗಾಗಿ ಇಲ್ಲಿ ಬೀಳುವ ಮಳೆಯಿಂದ ಸಮೃದ್ಧ ನೀರು ಈ ಬಾವಿಗಳಲ್ಲಿ ಸಂಗ್ರಹವಾಗಿರುತ್ತಿತ್ತು ಅದೇ ನೀರನ್ನು ತಮ್ಮ ದೈನಂದಿನ ಕೆಲಸ ಕಾರ್ಯಗಳಿಗೆ ಬಳಸುವುದಕ್ಕಾಗಿ ಈ ಬಾವಿಗಳ ನಿರ್ಮಾಣ ಮಾಡಿರುವುದು ಕಂಡುಬರುತ್ತದೆ.

ಆಯತಕಾರದ ಬಾವಿ: ಈ ಬಾವಿ ಚಂದ್ರಗುತ್ತಿ ಗುಡ್ಡದ ಮಧ್ಯಭಾಗದಲ್ಲಿರುವುದು ಅಂದರೆ ಗುತ್ತಿಗುಡ್ಡದ ಕೋಟೆಯ ಒಳಗೆ ಕಂಡುಬರುತ್ತದೆ. ಇದರ ವಿಸ್ತೀರ್ಣ ಸುಮಾರು ೧೦ ಅಡಿ ಅಗಲ, ೨೦ ಅಡಿ ಉದ್ದವಾಗಿದೆ. ಆಳ ಸುಮಾರು ೨೫ ರಿಂದ ೩೦ ಅಡಿ ಇರುವುದು ನೋಡುವುದಕ್ಕೆ ಒಂದು ತೊಟ್ಟಿಯಂತೆ ಕಂಡುಬಂದರು ಇದೊಂದು ಬಾವಿಯಾಗಿರುವುದು ವಿಶೇಷ. ಇದನ್ನು ಆ ಪ್ರದೇಶವಲ್ಲಿ ಪ್ರಸಿದ್ಧವಾದ ಕಪ್ಪು ಕಲ್ಲನ್ನು ಆಳವಾಗಿ ತೆಗೆದಿದ್ದಾರೆ. ಅದೇ ಕಲ್ಲನ್ನು ಉಪಯೋಗಿಸಿ ಅದರ ಮೇಲ್ಮೈಯಲ್ಲಿ ಗೋಡೆ ಕಟ್ಟಿರುತ್ತಾರೆ. ಈ ಬಾವಿಗೆ ಪಶ್ಚಿಮ ದಿಕ್ಕಿನಲ್ಲಿ ಇಳಿಯಲಿಕ್ಕೆ ಮೆಟ್ಟಲನ್ನು ನಿರ್ಮಿಸಿರುವುದು ಕಂಡುಬರುತ್ತದೆ. ಈ ಬಾವಿಯನ್ನು ನೋಡಿದರೆ ಕೋಟೆಯ ಒಳಭಾಗದಲ್ಲಿ ವಾಸವಾಗಿದ್ದ ಜನರಿಗೆ ದಿನ ನಿತ್ಯದ ನೀರಿನ ಉಪಯೋಗಕ್ಕಾಗಿ ನಿರ್ಮಿಸಿರುವುದು ಸ್ಪಷ್ಟವಾಗುತ್ತದೆ. ಈ ಬಾವಿಯ ಒಳಗೆ ವರ್ಷವಿಡಿ ನೀರು ತುಂಬಿರುವುದೆಂದು ಸ್ಥಳೀಯರು ಹೇಳವರು.

ಚೌಕಾಕಾರದ ರಾಜ ರಾಣಿಯರ ಬಾವಿ: ಇದು ಆಯತಕಾರದ ಬಾವಿಯಿಂದ ಸುಮಾರು ೮೦೦ ಮೀಟರ್ ದೂರದಲ್ಲಿರುವುದು. ಇದಕ್ಕೆ ಹೊಂದಿಕೊಂಡಂತೆ ರಾಜ ರಾಣಿಯ ವಾಸದ ಮನೆ ಇರುವುದು ಹೀಗಾಗಿ ಇದಕ್ಕೆ ರಾಜ ರಾಣಿಯರ ಬಾವಿ ಎಂದು ಕರೆಯಬಹುದು. ಇದರ ಆಕಾರ ಮತ್ತು ರಚನೆಯಿಂದ ಬಹಳ ಸುಂರವಾಗಿದೆ. ಇದರ ಆಳ ಸರಿಸುಮಾರು ೮೦ರಿಂದ ೯೦ ಅಡಿ ಇರಬಹುದು. ಇದಕ್ಕೆ ಮೂರು ದಿಕ್ಕಿನಿಂದ ಕಲ್ಲಿನಿಂದ ಗೋಡೆ ಕಟ್ಟಿದ್ದಾರೆ. ಮತ್ತೊಂದು ದಿಕ್ಕಿನಲ್ಲಿ ಇಳಿಯಲು ಹತ್ತಲು ಮೆಟ್ಟಲಿರುವುದು ವಿಶೇಷ ಈ ಮೆಟ್ಟಿಲುಗಳು ಉತ್ತರ ದಿಕ್ಕಿನಲ್ಲಿದೆ. ಈ ಮೆಟ್ಟಿಲನ್ನು ಅದೇ ಶಿಲೆಯನ್ನು ಒಡೆದು ನಿರ್ಮಿಸಿರುವರು. ಇಲ್ಲಿ ೨೫ ಮೆಟ್ಟಿಲುಗಳಿವೆ. ಮೂರು ಭಾಗದಲ್ಲಿ ನಿರ್ಮಾಣ ಮಾಡಿರುವ ಕಲ್ಲಿನ ಗೋಡೆ ದೊಡ್ಡ ಗಾತ್ರದ ಕಲ್ಲನ್ನು ಉಪಯೋಗಿಸಿ ಕಟ್ಟಿರುವರು. ಈ ಬಾವಿಗೆ ಹೊರಚಾಚಿದ ಪೆಟ್ಟಿಗೆಗಳಿರುವುದು ವಿಶೇಷ. ಈ ಪೆಟ್ಟಿಗೆಗಳು ೧೦ ಅಡಿಗೊಂದರಂತೆ ಕಂಡುಬರುತ್ತವೆ. ಈ ಬಾವಿಯನ್ನು ರಾಜ ರಾಣಿಯರ ಉಪಯೋಗಕ್ಕೆ ಕಟ್ಟಿ ಬಳಸಿರುವಂತೆ ಕಂಡುಬರುವುದು. ಬಾವಿ ಕಟ್ಟಲು ಬಳಸಿದ ಕಲ್ಲು ಒಂದೇ ಸಮಾನವಾದ ಗಾತ್ರ ಮತ್ತು ನೈಜತೆಯಿಂದಾಗಿ ಬಾವಿ ನೋಡುಗರಿಗೆ ಸುಂದರವಾಗಿ ಕಾಣುತ್ತದೆ. ಇದರ ಒಂದು ಭಾಗ ಅರಮನೆಯ ದ್ವಾರಬಾಗಿಲಿನ ಅನುಭವವನ್ನುಂಟು ಮಾಡುತ್ತದೆ. ಹೀಗಾಗಿ ಇದು ಮನೆಯೊಳಗಣ ಬಾವಿಯಂತೆ ತೋರುತ್ತದೆ. ಮೆಟ್ಟಲು ಹತ್ತುವಾಗ ಎಡ ಮತ್ತು ಬಲಬದಿಗೆ ಒಂದೊಂದು ಚಿಕ್ಕ ಕೋಣೆಗಳಿವೆ. ಇವು ರಾಜ ರಾಣಿಯರು ತಮ್ಮ ಸ್ನಾನದ ಸಮಯದಲ್ಲಿ ಬಟ್ಟೆ ಬದಲಾಯಿಸಲು ನಿರ್ಮಿಸಿದ ಡ್ರೆಸ್ಸಿಂಗ್ ರೂಮ್‌ಗಳಂತೆ ಕಂಡುಬರುತ್ತವೆ. ಅಂದರೆ ಈ ಬಾವಿಯು ರಾಜ ರಾಣಿಯರು ಸ್ನಾನಕ್ಕಾಗಿ ಉಪಯೋಗಿಸಿರಬೇಕೆಂದೆನಿಸುತ್ತದೆ. ಆದರೆ ಬಹಳ ನೋವಿನ ಸಂಗತಿಯೆಂದರೆ ಈ ಬಾವಿಯ ಸುತ್ತಲೂ ಗಿಡ ಮರಗಳು ಬೆಳೆದಿದ್ದು ತನ್ನ ಸೌಂದರ್ಯವನ್ನು ಕಳೆದುಕೊಳ್ಳುತ್ತಿದೆ.

ಗುಡ್ಡದ ಮೇಲ್ಭಾಗದಲ್ಲಿರುವ ವೃತ್ತಾಕಾರದ ಬಾವಿಗಳು

ಗುಡ್ಡದ ಮೇಲ್ಭಾಗದಲ್ಲಿ ಹೋದರೆ ೬ ಬಾವಿಗಳು ಕಂಡುಬರುತ್ತವೆ. ಈ ಬಾವಿಗಳು ವೃತ್ತಾಕಾರದಲ್ಲಿ ಕಂಡುಬರುತ್ತವೆ. ಇದರಲ್ಲಿ ಮೊದಲನೆ ಬಾವಿಯು ಸುಮಾರು ೨೫ ಅಡಿ ಆಳವಾಗಿದ್ದು ಹತ್ತು ಅಡಿ ಅಗಲವಾಗಿದೆ. ಇದು ಕೂಡಾ ಸಾಮಾನ್ಯ ಜನರು ತಮ್ಮ ದೈನಂದಿನ ಉಪಯೋಗಕ್ಕಾಗಿ ನಿರ್ಮಿಸಿದಂತಿದೆ ಈ ಬಾವಿಯು ಗುತ್ತಿಗುಡ್ಡದ ತುತ್ತತುದಿಯ ಭಾಗದಲ್ಲಿರುವುದು ಆದರೂ ಕೂಡಾ ಈ ಭಾಗದಲ್ಲಿ ನೀರು ಸದಾ ತುಂಬಿರುವುದು. ಎರಡನೇ ಬಾವಿಯು ಕೂಡಾ ಸುಮಾರು ೨೫ರಿಂದ ೩೦ ಅಡಿ ಆಳವಾಗಿದೆ. ೧೦ ಅಡಿ ಅಗಲವಾಗಿದೆ. ಆದರೆ ಇದು ಸ್ವಲ್ಪ ಮೊಟ್ಟೆಯಾಕಾರದಲ್ಲಿದೆ. ಇದನ್ನು ಕೂಡಾ ಸಾಮಾನ್ಯ ಜನರ ದೈನಂದಿನ ಕಾರ್ಯಗಳಿಗೆ ಬೇಕಾಗುವ ನೀರನ್ನು ಇದರಿಂದಲೇ ಉಪಯೋಗಿಸಿದಂತಿದೆ. ಮತ್ತೆರಡು ಬಾವಿಗಳು ವೃತ್ತಾಕಾರದಲ್ಲಿದ್ದರೆ ಇನ್ನೆರಡು ಬಾವಿಗಳು ಮೊಟ್ಟೆಯಾಕಾರದಲ್ಲಿ ಕಂಡುಬರುತ್ತವೆ. ಈ ವೃತ್ತಾಕಾರದ ಬಾವಿಗಳು ಸುಮಾರು ೧೫ ರಿಂದ ೨೦ ಅಡಿ ಆಳವಾಗಿಯು ಮತ್ತು ೧೦ ಅಡಿ ಅಗಲವಾಗಿವೆ ಇವು ಕೂಡಾ ಸಾಮಾನ್ಯ ಜನರಿಗಾಗಿ ನಿರ್ಮಿಸಿದ್ದಾರೆ. ಮೊಟ್ಟೆಯಾಕಾರದ ಬಾವಿಗಳು ಕೂಡಾ ಸುಮಾರು ೧೫ರಿಂದ ೨೦ ಅಡಿ ಆಳವಾಗಿವೆ ಮತ್ತು ೧೫ ಅಡಿ ಅಗಲವಾಗಿವೆ. ಈ ಬಾವಿಗಳು ಕೂಡಾ ಸಾಮಾನ್ಯರ ಬಾವಿಗಳೇ. ಒಂದು ವಿಶೇಷವೆಂದರೆ ಈ ಎಲ್ಲಾ ಬಾವಿಗಳು ಮಳೆಗಾದಲ್ಲಿ ತುಂಬಿ ತುಳುಕುತ್ತಿದ್ದರೆ ಬೇಸಿಗೆಯಲ್ಲಿ ಕೆಳಭಾಗದಲ್ಲಿ ಸುಮಾರು ೪ರಿಂದ ೫ ಅಡಿ ನೀರನ್ನು ಉಳಿಸಿಕೊಂಡಿರುತ್ತವೆ.

ಈ ಎಲ್ಲ ಬಾವಿಗಳನ್ನು ನೋಡಿದರೆ ನಮ್ಮ ಪ್ರಾಚೀನರು ಬಹಳ ಬುದ್ಧಿವಂತಿಕೆಯಿಂದ ಈ ಬಾವಿಗಳನ್ನು ನಿರ್ಮಿಸಿದ್ದಾರೆ. ಏಕೆಂದರೆ ಈ ಬಾವಿಗಳಲ್ಲಿ ಬೇಸಿಗೆಯ ಸಂದರ್ಭದಲ್ಲಿಯೂ ಕೂಡಾ ನೀರಿರುವಂತೆ ನೋಡಿಕೊಂಡಿದ್ದಾರೆ. ಸುಮಾರು ೯೦೦ ಅಡಿ ಎತ್ತರದ ಬೆಟ್ಟಗಳ ಮೇಲೆ ಈ ತರನಾದ ತಂತ್ರಜ್ಞಾನ ಮತ್ತು ಬುದ್ಧಿಮತ್ತೆ ಆಧುನಿಕ ಮಾನವನಿಗೆ ಸವಾಲಿನಂತೆ ಕಂಡುಬರುವುದು. ಒಂದಂತು ಸತ್ಯ. ಈ ಬಾವಿಗಳು ಅಂದಿನ ಕಾಲದ ಜನರ ನೀರಿನ ದಾಹ ತುಂಬಿಸಿತ್ತೋ ಇಲ್ಲವೋ ಗೊತ್ತಿಲ್ಲ. ಆದರೆ ಇಂದಿನ ಕಾಡಿನ ಪ್ರಾಣಿ ಪಕ್ಷಿಗಳಿಗೆ ವರ್ಷವಿಡಿ ದಾಹ ಇಂಗಿಸುತ್ತಿರುವುದಂತು ಸತ್ಯವಾಗಿದೆ. ಏಕೆಂದರೆ ಇಂದು ಈ ಗುಡ್ಡಪ್ರದೇಶವೂ ಚಂದ್ರಗುತ್ತಿ ಗ್ರಾಮ ಭಾಗದಿಂದ ಸುಮಾರು ೫ರಿಂದ ೬ ಕಿ.ಮೀ. ದೂರದಲ್ಲಿದೆ. ಈ ಭಾಗದವರೆಗೆ ಯಾರಿಂದಲೂ ನೀರನ್ನು ತಂದು ಈ ಪ್ರಾಣಿಗಳ ದಾಹ ತೀರಿಸಲಿಕ್ಕೆ ಸಾಧ್ಯವಿಲ್ಲ. ಹೀಗಾಗಿ ಪಕ್ಷಿ ಸಂಕುಲ ಪ್ರಾಣಿ ಸಂಕುಲ ವರ್ಷವಿಡಿ ನೀರನ್ನು ಕುಡಿದು ಬದುಕಲಿಕ್ಕೆ ಈ ಬಾವಿಗಳೇ ಕಾರಣ. ಈ ಕಾರಣದಿಂದಾಗಿ ಚಂದ್ರಗುತ್ತಿಯ ಗುಡ್ಡದ ಮೇಲಿನ ಬಾವಿಗಳು ಬಹಳ ಮಹತ್ವ ಪಡೆದುಕೊಂಡಿವೆ.

ಆಕರ ಗ್ರಂಥಗಳು

೧. ಗೋಪಾಲ ಆರ್., ಶಿವಮೊಗ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ೨೦೦೮, ಪ್ರಾಚ್ಯವಸ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು.

೨. ಡಾ. ಸಿ.ಯು. ಮಂಜುನಾಥ ಶಾಸನಗಳು ಮತ್ತು ಕರ್ನಾಟಕ ಸಂಸ್ಕೃತಿ, ೨೦೧೨, ಚಿತ್ತಕಲಾ ಪ್ರಕಾಶನ, ಕುಪ್ಪಂ.

೩. ಮೂರ್ತಿ ಕೆ.ಎಲ್.ಎನ್., ಕರ್ನಾಟಕದಲ್ಲಿ ಕಲೆ ಮತ್ತು ವಾಸ್ತುಶಿಲ್ಪ, ೧೯೯೮, ರಂಪಲಾ ಪ್ರಕಾಶನ, ತುಮಕೂರು.

೪. ತಿಪ್ಪೇರುದ್ರಸ್ವಾಮಿ ಎಚ್., ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ೨೦೦೩, ಡಿವಿಕೆ ಮೂರ್ತಿ ಪ್ರಕಾಶಕರು, ಬೆಂಗಳೂರು.

೫. ಚಿದಾನಂದಮೂರ್ತಿ ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ೨೦೦೨, ಸ್ವಪ್ನ ಬುಕ್ ಹೌಸ್, ಬೆಂಗಳೂರು.

೬. ಜಿ.ಎಸ್. ಸಾಮಕ, ಕವಲೆ ದುರ್ಗದ ಕೋಟೆ, ಅಪ್ರಕಟಿತ, ಕುವೆಂಪು ವಿವಿ, ಶಿವಮೊಗ್ಗ.

೭. ನಾ. ಡಿಸೋಜಾ, ಸೊರಬ ತಾಲ್ಲೂಕು ದರ್ಶನ, ೧೯೮೫, ಜಿ.ಕೆ. ಅನಂತರಾವ್, ಐದನೇ ಮುಖ್ಯರಸ್ತೆ, ಗಾಂಧಿನಗರ, ಬೆಂಗಳೂರು.

೮. ಎಫಿಗ್ರಾಫಿಯ ಕರ್ನಾಟಕ, ಸಂಪುಟ ೫, ೬, ರೈಸ್ ಆವೃತ್ತಿಗಳು.

೯. ಕಲ್ಬುರ್ಗಿ ಎಂ.ಎಂ., ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು, ಕನ್ನಡ ವಿವಿ, ಹಂಪಿ.

೧೦. ಅನುರಾಧ ಪಟೇಲ ಆರ್. ಜಿಚ್ಚುಗತ್ತಿ ಶ್ರೀಪಾದರ ಸಂಶೋಧನೆಗಳು, ೨೦೦೭, ಮಲೆನಾಡು ರಿಸರ್ಚ್ ಅಕಾಡೆಮಿ (ರಿ), ಶಿವಮೊಗ್ಗ.

೧೧. ಚಂದ್ರಗುತ್ತಿ ಮೋಹನ್ ಎಚ್.ಎಸ್., ಚಂದ್ರಗುತ್ತಿ ರೇಣುಕಾಂಬಾದೇವಿ ಜಾತ್ರೆ, ಬೇಡ್ತಿ ಪ್ರಕಾಶನ, ಎಡಜಿಗಳಿ ಮನೆ, ಸಾಗರ, ಶಿವಮೊಗ್ಗ ಜಿಲ್ಲೆ.

ಬೆನಕಟ್ಟಿಯ ಆದಿಲ್‌ಶಾಹಿ ಕಾಲದ ದಂಡಿನಭಾವಿ ಒಂದು ವಿಶ್ಲೇಷಣೆ

ಸ್ಮಿತಾ ಸುರೇಬಾನಕರ*

ವಿಜಯಪುರ ಅಥವಾ ಬಿಜಾಪುರವನ್ನು ಕೇಂದ್ರ ಸ್ಥಾನವನ್ನಾಗಿಸಿಕೊಂಡು ಆಡಳಿತ ನಡೆಸಿದ ಆದಿಲ್‌ಶಾಹಿ ದೊರೆಗಳು ಬೆಳಗಾವಿಯ ಮೇಲೆ ತಮ್ಮ ಸ್ವಾಮಿತ್ವವನ್ನು ಹೊಂದಿದ್ದರು. ಬೆಳಗಾವಿ ನಗರ, ಹುಕ್ಕೇರಿ ಮತ್ತು ರಾಯಬಾಗ ಪ್ರದೇಶಗಳಲ್ಲಿ ವಿಶೇಷವಾಗಿ ಆದಿಲ್‌ಶಾಹಿ ಆಡಳಿತದ ಹೆಗ್ಗುರುತುಗಳಾದ ಕೋಟೆ, ದರ್ಗಾ, ಮಸೀದಿ, ಗುಂಬಜಗಳು ಮತ್ತು ಕೆರೆ, ಕಟ್ಟೆ, ಬಾವಿಗಳನ್ನು ಇಂದಿಗೂ ಕಾಣಬಹುದು. ಅಂತಹ ಒಂದು ವಿಶಿಷ್ಟ ಸ್ಮಾರಕವೇ ಆದಿಲ್‌ಶಾಹಿ ಜಲವಾಸ್ತುಶಿಲ್ಪದ ವಿಶಿಷ್ಟ ರಚನೆಯಾದ ಬೆನಕಟ್ಟಿ ಗ್ರಾಮದ ವಿಶಾಲವಾದ ಮೆಟ್ಟಿಲಬಾವಿ

ಬೆಳಗಾವಿ ಜಿಲ್ಲೆಯ ಸವದತ್ತಿ ತಾಲೂಕಿನ ಮದ್ಲೂರು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿರುವ ಪುಟ್ಟ ಗ್ರಾಮ ಬೆನಕಟ್ಟಿ. ಇದು ಧಾರವಾಡ – ಸವದತ್ತಿಯ ರಾಜ್ಯ ಹೆದ್ದಾರಿಯ ಮೇಲಿರುವ ಯರಗಟ್ಟಿಯಿಂದ ನಾಲ್ಕು ಕಿ.ಮಿ. ಅಂತರದಲ್ಲಿದೆ. ನೀರಾವರಿ ಜಮೀನಿಂದ ಕೂಡಿದ ಹಚ್ಚ ಹಸಿರು ಭತ್ತ ಮತ್ತು ಕಬ್ಬಿನ ಬೆಳೆಗಳಿಂದ ಆವೃತವಾಗಿದ್ದರೂ ಸುಮಾರು ೨೦ ಮೀಟರ x ೧೦ ಮೀಟರ್ ಮತ್ತು ಹೊರಭಾಗದ ೩ ಅಡಿ ಎತ್ತರದ ಗೋಡೆಯಿಂದ ಕೂಡಿದ ಒಣಭೂಮಿಯ ಮೇಲಿರುವುದೇ ಅರಗದ–ಬಾವಿ. ಇದನ್ನು ಮೌಖಿಕ ಪರಂಪರೆಯ ಭಾಗವಾಗಿ ಸ್ಥಳೀಯರು ದಂಡಿನ ಬಾವಿ ಎಂದು ಕರೆಯುತ್ತಾರೆ. ಈ ಭಾವಿ ಇರುವ ಪ್ರದೇಶ ಆದಿಲ್‌ಶಾಹಿ ಕಾಲದಲ್ಲಿ ದಂಡಿನ ದಾರಿ ಎಂದು ಗುರುತಿಸಲಾದ ಮಾರ್ಗದಲ್ಲಿದೆ. ಆದಿಲ್‌ಶಾಹಿ ಜಲತಂತ್ರಜ್ಞಾನದ ಪ್ರತೀಕದಂತಿರುವ ಈ ಬಾವಿ ಈಗಲೂ ದುರಸ್ತಿಗೊಳಿಸಿದರೆ ಉಪಯೋಗಾರ್ಹವಾಗಿದ್ದದ್ದು ಇದರ ವಿಶೇಷ. ಈ ಬಾವಿ ಒಣಪ್ರದೇಶಲ್ಲಿದ್ದು ಇಲ್ಲಿ ಮಳೆಯ ಪ್ರಮಾಣ ವಿರಳವಿರುತ್ತದೆ ಇಂಥ ಒಣಭೂಮಿ ಹೊಂದಿರುವ ಅರೆ ಬಂಜರುಭೂಮಿ ಇರುವ ಪ್ರದೇಶದಲ್ಲಿ ಅಂತರ್ಜಲದ ಮೂಲ ಗುರುತಿಸಿದ್ದು ಅದೂ ಐದು ಶತಮಾನಗಳಷ್ಟು ಹಿಂದೆ – ಇದು ಆದಿಲ್‌ಶಾಹಿಗಳ ವೈಜ್ಞಾನಿಕ, ತಾಂತ್ರಿಕ ಮತ್ತು ಅಭಿಯಾಂತ್ರಿಕ ನಿಪುಣತೆಗೆ ಸಾಕ್ಷಿ ಎಂಬಂತಿದೆ. ಬರ ಪ್ರದೇಶವಿರುವುದರಿಂದ ಇದಕ್ಕೆ ಅರೆಕಾಡು–ಅರೆಗಾಡು–ಅರೆಗಡ ಎಂದೂ ಕರೆಯಲಾಗುತ್ತದೆ.

ಪ್ರಸ್ತುತ ಬಾವಿ ಇರುವ ದಾರಿ ಆದಿಲ್‌ಶಾಹಿಗಳ ಸೈನ್ಯ ನಿರ್ಗಮನದ ದಾರಿಯಲ್ಲಿ ಇದ್ದುದರಿಂದ ಈ ಮಾರ್ಗ ದಂಡಿನ ದಾರಿ ಎಂದು ಪ್ರಸಿದ್ಧಿ ಪಡೆದಿದೆ. ಈ ಮಾರ್ಗದಲ್ಲಿ ವಿಜಯಪುರ–ಮುಧೋಳ–ಯಾದವಾಡ–ಯರಗಟ್ಟಿ ಸಮೀಪದ ಸೋಪಡ್ಲ – ಮುನವಳ್ಳಿ – ಹೂಲಿ – ಸವದತ್ತಿ – ಧಾರವಾಡ (ನುಗ್ಗಿಕೇರಿಯ ಸಮೀಪ) ದಕ್ಷಿಣಕ್ಕೆ ಮುಂದುವರೆದು ತುಂಗಭದ್ರ ಮತ್ತು ಇದು ಟಿಸಿಲು ಒಡೆದು ಗೋವಾದ ಪೊಂಡಾ – ಇದೆಲ್ಲ ಸೇರಿ ದಂಡಿನ ದಾರಿ. ಕೆಲ ಸಂಶೋಧನೆಗಳಿಂದ ಪೊಂಡಾ, ಮೀರ್‌ಜಾನ ಕೋಟೆ ಮತ್ತು ತುಂಗಭದ್ರದ ಕೆಲಪ್ರದೇಶಗಳಲ್ಲಿ ಈ ತರಹದ ಜಲಮೂಲಗಳಿದ್ದದ್ದು ತಿಳಿದು ಬರುತ್ತದೆ. ಎಂಬತ್ತರ ದಶಕದಲ್ಲಿ ನಾನು ಈ ಬಾವಿಯನ್ನು ಗುರುತಿಸಿದೆನಾದರೂ ಅದಕ್ಕೂ ಮೊದಲು ನಿವೃತ್ತ ಲೆಫ್ಟಿನೆಂಟ್ ಜನರಲ್ ಎಸ್.ಸಿ. ಸರದೇಶಪಾಂಡೆಯವರು ಈ ಬಾವಿಯನ್ನು ಗುರುತಿಸಿದ್ದಷ್ಟೇ ಅಲ್ಲದೇ ಇದರ ಪ್ರಾಮುಖ್ಯತೆಯನ್ನು ಮನಗಂಡು ಈ ಅರಗದ ಬಾವಿ ರಾಜ್ಯಪುರಾತತ್ವ ಇಲಾಖೆಯ ಸಂರಕ್ಷಿತ ಸ್ಮಾರಕಗಳ ಪಟ್ಟಿಯಲ್ಲಿ ಸೇರಿ ತಾಂತ್ರಿಕವಾಗಿ, ಐತಿಹಾಸಿಕವಾಗಿ ಮತ್ತು ಸಾಂಸ್ಕೃತಿಕವಾಗಿ ವಿಶೇಷ ಮಹತ್ವವುಳ್ಳ ಈ ಸ್ಮಾರಕವನ್ನು ಸಂರಕ್ಷಿಸಿ ಪುನರುಜ್ಜೀವನಗೊಳಿಸಬೇಕೆಂಬ ಕಳಕಳಿಯ ಪ್ರಯತ್ನವನ್ನು ಮುಂದುವರಿಸಿಕೊಂಡು ಬಂದಿದ್ದಾರೆ.

ಆಯತಾಕರದ ಕಟ್ಟಡ ಸುಸಜ್ಜಿತವಾದ ಸುಮಾರು ೧೨೬ ಮೆಟ್ಟಿಲುಗಳು, ತ್ರಿಜ್ಜಿನಿಂದ ಕೊರೆದಷ್ಟು ಶಾರ್ಪ ಫಿನಿಶಿಂಗ್ ಇರುವ ಕಮಾನು, ಐದು ನೂರು ವರುಷಗಳ ನಂತರವೂ ನಿಖರವಾದ ಪ್ರತಿಬಿಂಬ ಕಾಣುವ ಆಳದ ನೀರು – ಈ ಬಾವಿಯನ್ನು ಇನ್ನೂ ಜೀವಂತವಾಗಿಸಿವೆ. ನಾಲ್ಕು ಕಡೆಗಳಲ್ಲಿ ಗಟ್ಟಿಮುಟ್ಟಾದ ಗೋಡೆ, ಒಂದು ಕಡೆ ಮಾತ್ರ ಮೆಟ್ಟಲುಗಳನ್ನು

* ಸ್ಮಿತಾ ಸುರೇಬಾನಕರ.

ಮಾಡಲಾಗಿದೆ. ನಿರ್ವಹಣೆಯ ಕೊರತೆಯಿಂದ ಈ ಬಾವಿ ಇಂದು ನಿಷ್ಕ್ರಿಯವಾಗಿದೆ. ಈ ಬಾವಿಯ ವಾಸ್ತುಶಿಲ್ಪ, ನಿರ್ಮಾಣ ತಂತ್ರಜ್ಞಾನ, ಅಭಿಯಾಂತ್ರಿಕ ಕೌಶಲ್ಯ, ಜಲತಂತ್ರ ಜ್ಞಾನ, ಉಪಯುಕ್ತತೆ ಮೈನವಿರೇಳಿಸುವಂತಿದೆ. ಆದರೆ ಕಾಲನ ಹೊಡೆತಕ್ಕೆ ಸಿಕ್ಕು ಬಾವಿಯ ಹೊರಗೋಡೆ ಶಿಥಿಲಗೊಂಡಿದೆ. ಗಿಡಮರಗಳ ಬೇರು ಬೀಳಲುಗಳು ಬಾವಿಯನ್ನು ಆವರಿಸಿವೆ ಮತ್ತು ಇಡೀ ಬಾವಿ ಹಕ್ಕಿಗೂಡುಗಳಿಂದ ಕೂಡಿದೆ.

ಬರೋಬ್ಬರಿ ೫೦ ಮೀಟರ್ X ೨೦ ಮೀಟರ್ ಮತ್ತು ೨೦೦ ಅಡಿ ಆಳವಿದ್ದು ಆಯತಾಕಾರದ ಈ ಅರಗದಬಾವಿ ಕಟ್ಟಡ ಸಂಪೂರ್ಣ ಕೆಂಪುಕಲ್ಲುಗಳಿಂದ ಕಟ್ಟಲಾಗಿದೆ. ಮೆಟ್ಟಿಲುಗಳಿರುವ ಕಾರಿಡಾರನ್ನು ಮೂರು ಪಟ್ಟಿಕೆಗಳಾಗಿ ವಿಂಗಡಿಸಲಾಗಿದ್ದು ಮಧ್ಯದ ಪಟ್ಟಿಕೆಯಲ್ಲಿ ಇಳಿಜಾರಾದ ಮೆಟ್ಟಿಲುಗಳಿವೆ. ಮೆಟ್ಟಿಲುಗಳ ಕೊನೆಗೆ ಪ್ರವೇಶದ್ವಾರದ ರೀತಿ ಸುಂದರವಾಗಿ ವಿನ್ಯಾಸಗೊಂಡ ಕಮಾನು ಇದೆ. ಈ ಕಮಾನು ಆದಿಲ್‌ಶಾಹಿ ಕಾಲದ ಇಂತಹ ನಿರ್ಮಿತಿಗಳಾದ ಬಾವಡಿ/ಬಾವಿಗಳಲ್ಲಿರುವ ಆದಿಲಶಾಹಿ ಶೈಲಿಯ ಕಮಾನನ್ನೆ ಹೋಲುತ್ತದೆ. ಕಡಿದಾಗಿ ಕಟೆದ ಕೆಂಪುಕಲ್ಲುಗಳಿಂದ ನಿರ್ಮಿತವಾದ, ಆಳದಿಂದ ಮೇಲಿನವರೆಗೂ ಒಂದೇ ರೀತಿಯಿರುವ ಅಚ್ಚುಕಟ್ಟಾದ ಗೋಡೆಯಿಂದ ಆವೃತವಾಗಿದೆ. ೧೬ನೇಯ ಶತಮಾನದ ನಿರ್ಮಿತಿಯಾದ ಅರಗದಬಾವಿ ಆದಿಲ್‌ಶಾಹಿ, ಮರಾಠಾ, ಪೇಶ್ವೆ ಮತ್ತು ಬ್ರಿಟೀಷ ಸೈನಿಕರು ಉಪಯೋಗಿಸಿರಬಹುದಾದ ಈ ಬಾವಿಯ ವೈಶಿಷ್ಟ್ಯತೆ ಎಂದರೆ ಇದರ ಸರಳತೆ. ಇದು ಮೂಲತಃ utilitarian ಸ್ವರೂಪದ್ದು.

ಹೊರಗೋಡೆ ಭಾಗಶಃ ಶಿಥಿಲಗೊಂಡಿದ್ದರೂ ಒಳಭಾಗ ಸುಸ್ಥಿತಿಯಲ್ಲಿದೆ. ಇದರ ಉಲ್ಲೇಖ ಸಮಕಾಲೀನ ಯಾವುದೇ ದಾಖಲೆಗಳಲ್ಲಿ ಇರದೇ ಇರುವುದು ವಿಪರ್ಯಾಸ. ಬೆಳಗಾವಿ ಜಿಲ್ಲಾ ಗೆಝೆಟಿಯರ್‌ನಲ್ಲೂ ಇದರ ಉಲ್ಲೇಖವಿಲ್ಲ.

ಸಮೀಪದಲ್ಲೇ ಮಲಪ್ರಭ ನದಿಗೆ ಅಡಲಾಗಿ ಕಟ್ಟಲಾಗಿರುವ ನವಿಲುತೀರ್ಥ ಆಣೆಕಟ್ಟಿನಿಂದಾಗಿ ಅಂತರಜಲದ ನೀರಿನಮಟ್ಟ ಹೆಚ್ಚಿದ್ದು ಕೆಳಭಾಗದ ಕಮಾನುಗಳು ಜಲಾವೃತವಾಗಿವೆ.

ಬರದ ಊರಲ್ಲಿ ಬಂಗಾರದಂತಹ ಬಾವಿ ಇದ್ದರೂ ಅದು ನಿರ್ವಹಣೆ ಇಲ್ಲದೆ, ಪುನಶ್ಚೇತನ ಕಾಣದೇ, ನೀರನ್ನು ಬಳಸದೇ ಹಾಳು ಬಿದ್ದಿದೆ. ಇದು ಅಕ್ಷರಶಃ ಕಸದ ತೊಟ್ಟಿಯಾಗಿದೆ. ಕೊಲೆಗಡುಕರು ಮೃತದೇಹಗಳನ್ನು ಎಸೆಯುವುದರಿಂದ ನೀರು ದುರ್ನಾತದಿಂದ ಕೂಡಿದೆ. ನಮ್ಮ ಸಂಸ್ಕೃತಿಯ ಹೆಗ್ಗುರುತಾದ ಅರಗದ / ದಂಡಿನ ಬಾವಿ ಇಂದು ಬಳಕೆಯಾಗದೇ ಹಾಳು ಬಿದ್ದಿದ್ದು ಅವಿನಾಶದ ಅಂಚಿನಲ್ಲಿದೆ. ಕಟ್ಟೆಯಂತಿರುವ ಮೇಲ್ಗೋಡೆಗಳು ಶಿಥಿಲಗೊಂಡಿವೆ. ಶಾಸ್ತ್ರೋಕ್ತವಾಗಿ ನಿರ್ಮಿಸಿದ ಈ ಬಾವಿ ಈಗ ದಯನೀಯ ಸ್ಥಿತಿಯಲ್ಲಿದೆ. ಅಂಥ 'ಕೂಪ' ಕ್ಕೆ ತಳ್ಳಲಾದ ಶುದ್ಧ ಸಿಹಿಜಲದ ತಾಣವಾದ ಈ ಐತಿಹಾಸಿಕ ಕುರುಹು ವ್ಯವಸ್ಥೆಯ ಅಣಕ. ಹನಿ ನೀರಿಗೆ ಪರದಾಡುತ್ತಿರುವ ಈ ದಿನಗಳಲ್ಲಿ ಸಿಹಿನೀರಿನ ಮೂಲಗಳನ್ನು ಪುನಶ್ಚೇತನಗೊಳಿಸಿದರೆ ಅಜ್ಞಾತ ಇತಿಹಾಸದ ಅನಾವರಣವಾಗುವುದರಲ್ಲಿ ಸಂದೇಹವಿಲ್ಲ.

ಲಿಂಗೇರಿ ಕೋನಪ್ಪನವರ ಮನೆಯಲ್ಲಿನ ಭಿತ್ತಿ ಚಿತ್ರಗಳ ಶೋಧ

ಮಲ್ಲಿಕಾರ್ಜುನ ಸಿ. ಬಾಗೋಡಿ✷

ಪ್ರಸ್ತುತ ಮನೆ ಜಿಲ್ಲಾ ಕೇಂದ್ರ ಯಾದಗಿರಿ ನಗರದಲ್ಲಿದೆ. ನಗರದ ಮುಖ್ಯ ರಸ್ತೆಗೆ ಹೊಂದಿಕೊಂಡಿರುವ ಕೋನಪ್ಪನವರ ಈ ಮನೆ ನೂರೈವತ್ತು ವರ್ಷಗಳಷ್ಟು ಹಳೆಯದು. ಯಾದಗಿರಿ ಸಮೀಪದ ಲಿಂಗೇರಿ ಗ್ರಾಮ ಕೋನಪ್ಪನವರ ಮೂಲನೆಲೆ. ಕೋನಪ್ಪನವರ ಪೂರ್ವಿಕರ ಬಗ್ಗೆ ಹೆಚ್ಚಿಗೆ ತಿಳಿದುಬಂದಿಲ್ಲ, ಕೃಷಿ ಇವರ ಮೂಲ ಕಾಯಕ ಎನ್ನಲಾಗಿದೆ. ಕೋನಪ್ಪನವರ ಹೆಂಡತಿ ನೀಲಮ್ಮನವರು ಸರಳ ಮತ್ತು ಸಜ್ಜನಿಕೆಯುಳ್ಳವರಾಗಿದ್ದರು. ಈ ದಂಪತಿಗಳಿಗೆ ಕೋನಪ್ಪ (ಎರಡನೇ) ಮತ್ತು ಮಹಾಬಲೇಶ್ವರಪ್ಪ ಎಂಬ ಇಬ್ಬರು ಮಕ್ಕಳು. ಕಾಳುಕಡಿ ವ್ಯಾಪಾರದೊಂದಿಗೆ ಹತ್ತಿ ಉದ್ದಿಮೆ ನಡೆಸುತ್ತಿದ್ದ ಕೋನಪ್ಪನವರ ವ್ಯವಹಾರ ದಿನೇ ದಿನೇ ವೃದ್ಧಿಸತೊಡಗುತ್ತದೆ. ಕುದುರೆ ಸವಾರಿ ಮಾಡಿಕೊಂಡೇ ಯಾದಗಿರಿ ನಗರಕ್ಕೆ ಬಂದು ತಮ್ಮ ನಿತ್ಯದ ವ್ಯವಹಾರಗಳನ್ನು ನೋಡಿಕೊಳ್ಳುವುದು ಕೋನಪ್ಪನವರಿಗೆ ದುಸ್ತರವಾಗುತ್ತದೆ. ಆ ಕಾರಣಕ್ಕಾಗಿಯೇ ಯಾದಗಿರಿ ನಗರದಲ್ಲಿ ಎರಡಂತಸ್ತಿನ ಭವ್ಯ ಮನೆಯನ್ನು ಕಟ್ಟಿಕೊಂಡರು.

ಉತ್ತರಾಭಿಮುಖವಾಗಿ ಕಟ್ಟಿಸಿರುವ ಈ ಮನೆ ಎಕರೆಯಷ್ಟು ಜಾಗೆಯಲ್ಲಿ ಅತ್ಯಂತ ವಿಶಾಲವಾಗಿ ಕಟ್ಟಿದೆ. ಮುಖ್ಯರಸ್ತೆಗೆ ಹೊಂದಿಕೊಂಡಿರುವ ಈ ಮನೆಯನ್ನು ಪ್ರವೇಶಿಸಲು ಎತ್ತರದ ಕಮಾನು ರಚನೆಯನ್ನು ಮಾಡಿದೆ. ಒಳಬಂದರೆ ಎಡ ಮತ್ತು ಬಲ ಬದಿಗಳಲ್ಲಿ ವಿಸ್ತರಿಸಿ ಕಟ್ಟಿದ ಕಟ್ಟಡಗಳಿವೆ. ಇವುಗಳನ್ನು ದಾಟಿ ಮುಂದೆಹೋದರೆ ಎದುರಿಗೆ ಕಾಣಿಸುವುದೇ ಕೋನಪ್ಪನವರ ಎರಡಂತಸ್ತಿನ ಭವ್ಯಸೌಧ. ಕೋನಪ್ಪನವರು ಅತ್ಯಂತ ಮುತುವರ್ಜಿ ವಹಿಸಿ ಈ ಮನೆಯನ್ನು ಕಟ್ಟಿಸಿದ್ದಾರೆ ಎನ್ನಲಾಗಿದೆ. ತಮ್ಮ ವ್ಯಾಪಾರ ವಹಿವಾಟುಗಳಿಂದಾಗಿ ಈಗಿನ ತೆಲಂಗಾಣ ರಾಜ್ಯದಲ್ಲೂ ಹೆಸರು ಮಾಡಿದ್ದ ಕೋನಪ್ಪನವರು ಹೈದರಾಬಾದಿನಿಂದ ನುರಿತ ಕುಶಲ ಕರ್ಮಿಗಳನ್ನು ಕರೆಸಿ ಕೆಲಸ ಮಾಡಿಸಿಕೊಂಡಿದ್ದಾರೆನ್ನುವ ಮಾತನ್ನು ಶ್ರೀಮತಿ ನಿರ್ಮಲಾದೇವಿಯವರು ಹೇಳುತ್ತಾರೆ. ಈ ಮನೆಯ ಎದುರಿಗೆ ಚಿನ್ನಾಕಾರ ಮಲ್ಲನಗೌಡರ ಮನೆಯಿದ್ದು, ಎರಡೂ ಒಟ್ಟೊಟ್ಟಿಗೆ ಕಟ್ಟಲಾಗಿವೆ ಎನ್ನುವ ಮಾತು ಕೇಳಿ ಬರುತ್ತದೆ.

ಆಧುನಿಕತೆಯ ಎಲ್ಲ ಲಕ್ಷಣಗಳು ಕೋನಪ್ಪನವರ ಮನೆಯಲ್ಲಿ ಕಾಣಸಿಗುತ್ತದೆ. ಕುಸುರಿ ಕೆತ್ತನೆಯ ಕಮಾನುಗಳು, ಕಂಬಗಳು, ಹವಾನಿಯಂತ್ರಿತ ಬಾಲ್ಕನಿಗಳನ್ನು ಈ ಮನೆ ಹೊಂದಿದೆ. ಮನೆಯ ಆರಂಕಣದ ಪಡಸಾಲೆಯು ಅಪೂರ್ವ ಕೆತ್ತನೆಯ ಕಾಷ್ಠ ಪಟ್ಟಿಕೆಗಳಿಂದ ಜೋಡಿಸಲ್ಪಟ್ಟಿದೆ. ರಾಜಸ್ತಾನಿ ಅರಮನೆಗಳಲ್ಲಿ ಕಂಡುಬರುವ ಬಾಲ್ಕನಿ ಮಾದರಿಯ ಗಾರೆ ರಚನೆಗಳಂತೂ ತುಂಬ ಸೊಗಸಾಗಿವೆ. ಸ್ಥಳೀಯ ಕಪ್ಪು ಮತ್ತು ನೀಲಿ ಛಾಯೆಯ ಶಿಲೆಗಳಿಂದ ನೆಲಹಾಸನ್ನು ನುಣುಪಾಗಿಸಿದೆ. ಒಟ್ಟಿನಲ್ಲಿ ಕಟ್ಟಡದ ಗಾರೆ ಕೆಲಸ ಮತ್ತು ಕುಸುರಿ ಕೆತ್ತನೆಯನ್ನು ನುರಿತ ಕುಶಲ ಕರ್ಮಿಗಳೇ ಮಾಡಿದ್ದಾರೆನ್ನುವಲ್ಲಿ ಎರಡು ಮಾತಿಲ್ಲ.

ಆರಂಕಣದ ಕಮಾನು ರಚನೆಯ ತೆರೆದ ಪಡಸಾಲೆ ಆಕರ್ಷಕವಾಗಿದೆ. ಸ್ಥಳೀಯರು ಇದನ್ನು ಝಳಜಿ, ಜಗತಿ ಎಂತೆಲ್ಲ ಕರೆಯುತ್ತಾರೆ. ಎತ್ತರವಾದ ಕಟ್ಟೆಯ ಮೇಲೆ ಆರು ಕಂಬಗಳನ್ನು ಹೊತ್ತು ನಿಂತಿರುವ ಝಳಜಿಯ ಎರಡೂ ಬದಿಯಲ್ಲಿ ಕೋಣೆಗಳಿವೆ. ಈ ಆರು ಅಂಕಣವುಳ್ಳ ಕಮಾನು ರಚನೆಯ ಮೇಲಂತಸ್ತು ಆಯತಾಕಾರದ ಹಾಲ್‌ನಂತಿದ್ದು, ಇದೂ ಸಹ ಆರು ಕಂಬಗಳನ್ನು ಹೊತ್ತುನಿಂತಿದೆ. ರಕ್ಷಣೆ ಸಹಿತ ಅಲಂಕಾರಕ್ಕೆಂದು ಕಟ್ಟಿಗೆಯ ಚಪ್ಪಟೆ ಪಟ್ಟಿಗಳನ್ನು ಜೋಡಿಸಿದ್ದರಿಂದ ಬಹು ಸುಂದರವಾಗಿ ಕಾಣಿಸುತ್ತದೆ. ಕೆಳಗಿನಂತೆ ಇಲ್ಲೂ ಸಹ ಎರಡೂ ಬದಿಯಲ್ಲಿ ಕೋಣೆಗಳಿವೆ. ಈ ಕೋಣೆಗಳ ಜಾಲಂಧ್ರ ನಿರ್ಮಾಣದಲ್ಲಿ ಗಾರೆನಿರ್ಮಿತಿ ಕಂಬಗಳು ಹಾಗೂ ಗಾರೆಯಲ್ಲೇ ಮಾಡಿದ ವಿನ್ಯಾಸಗಳು ಆಕರ್ಷಣೀಯವಾಗಿದೆ. ಸುಮಾರು ಮೂರು ದಶಕಗಳಿಂದ ಈ ಮನೆಯಲ್ಲಿ ಯಾರೂ ವಾಸವಿಲ್ಲದ್ದರಿಂದ ಮನೆಯ

✷ ಅಧ್ಯಾಪಕರು, ದೃಶ್ಯಕಲಾ ಅಧ್ಯಯನ ವಿಭಾಗ, ಗುಲಬರ್ಗಾ ವಿವಿ, ಕಲಬುರಗಿ, ಮೊ. ೯೪೪೮೬ ೫೨೧೫೭

ಒಳಾವರಣದ ವಿನ್ಯಾಸವನ್ನಿಲ್ಲಿ ಕಟ್ಟಿಕೊಡಲಾಗುತ್ತಿಲ್ಲ. ಮನೆಯ ಆವರಣದ ಎಡಬದಿಯಲ್ಲಿ ದನದ ಕೊಟ್ಟಿಗೆಯಿದ್ದು, ಒಮ್ಮೆಲೆ ನೂರಾರು ದನಗಳನ್ನು ಕಟ್ಟಬಹುದಾದಷ್ಟು ವಿಶಾಲವಾಗಿದೆ. ಇಲ್ಲೇ ತಾಯಮ್ಮ ನೆಲೆಸಿದ್ದು, ಮನೆಯವರ ಕಷ್ಟ-ಸುಖಃಗಳಿಗೆ ಆಸರೆಯಾಗಿದ್ದಾಳೆ.

ತಮ್ಮ ವ್ಯಾಪಾರ ವಹಿವಾಟುಗಳಿಂದಾಗಿ ಕೋನಪ್ಪನವರು ತುಂಬ ಎತ್ತರಕ್ಕೆ ಬೆಳೆದರು. ಆ ಮೂಲಕ ಸಾಕಷ್ಟು ಆಸ್ತಿ-ಪಾಸ್ತಿಯನ್ನು ಮಾಡಿದರು. ಯಾದಗಿರಿ ನಗರದ ರೈಲು ನಿಲ್ದಾಣ ರಸ್ತೆಯಲ್ಲಿ ಹತ್ತಿ ಕಾರ್ಖಾನೆಯೊಂದನ್ನು ಪ್ರಾರಂಭಿಸುತ್ತಾರೆ. ಇದರಿಂದ ಹಣ ಮತ್ತು ಹೆಸರು ಎರಡನ್ನೂ ಸಂಪಾದಿಸಿದರು.


೧೯೭೦ರ ದಶಕದವರೆಗೂ ಎಲ್ಲವೂ ಸರಿಯಾಗಿಯೇ ನಡೆದುಕೊಂಡು ಬರುತ್ತದೆ. ಅಲ್ಲಿಯವರೆಗೂ ಎರಡನೇ ಕೋನಪ್ಪ ಹಾಗೂ ಮಹಾಬಲೇಶ್ವರಪ್ಪನವರ ಕುಟುಂಬಗಳು ಈ ಮನೆಯಲ್ಲೇ ವಾಸ ಮಾಡಿಕೊಂಡಿದ್ದವು. ಎರಡನೇ ಕೋನಪ್ಪನವರ ಹೆಂಡತಿ ಗಿರಿಜಮ್ಮನವರ ನಿಧನದ ನಂತರ, ಮಹಾಬಲೇಶ್ವರಪ್ಪನವರ ಪರಿವಾರ ನಗರದ ಹೊರ ವಲಯದ ಹತ್ತಿ ಕಾರ್ಖಾನೆ ಆವರಣದಲ್ಲಿ ಮನೆಯೊಂದನ್ನು ಕಟ್ಟಿಕೊಂಡು ನೆಲೆಸಲು ಪ್ರಾರಂಭಿಸುತ್ತದೆ. ಇದರಿಂದಾಗಿ ಹಳೆಯ ಮನೆ ನಿರ್ಲಕ್ಷ್ಯಕ್ಕೆ ಒಳಗಾಗಿ ಅವಸಾನದ ದಾರಿ ಹಿಡಿದಿದೆ.

ಶೋಧ: ಯಾದಗಿರಿಗೆ ಹೋದಾಗಲೊಮ್ಮೆ ಈ ಮನೆಗೆ ಭೇಟಿ ನೀಡುತ್ತ ಬಂದಿರುವ ನಾನು ಆಯಾ ಸಂದರ್ಭಗಳಲ್ಲಿ ಛಾಯಾಚಿತ್ರಗಳನ್ನು ಮಾಡಿಕೊಳ್ಳುತ್ತ ಬಂದಿದ್ದೇನೆ. ೨೦೧೧ ಮೇ ತಿಂಗಳಲ್ಲಿ ಮೊದಲಬಾರಿಗೆ ಈ ಮನೆಗೆ ಭೇಟಿಯಿತ್ತಾಗ ಮನೆ ಚೆನ್ನಾಗಿಯೇ ಇತ್ತು. ಆರಂಕಣದ ಪಡಸಾಲೆಯಲ್ಲಿ ಜನ ಕುಳಿತುಕೊಳ್ಳುವುದಾಗಲಿ, ಬೇಸಿಗೆ ಬಿಸಿಲಿನಿಂದ ರಕ್ಷಿಸಿಕೊಳ್ಳಲೆಂದು ನಿದ್ರೆಗೆ ಜಾರುವುದಾಗಲಿ ಮಾಡುತ್ತಿದ್ದರು. ಆಗಲೇ ನನಗೆ ಈ ಮನೆಯ ವಾಸ್ತುವಿನ್ಯಾಸ ಬಹು ಆಕರ್ಷಿಸಿತ್ತು. ಮನೆಯ ವಾರಸುದಾರನ್ನು ಕಂಡು ಮಾಹಿತಿಯನ್ನು ಕಲೆಹಾಕುತ್ತ ಹೋದೆ. ಎರಡ್ಮೂರು ವರ್ಷಗಳಲ್ಲಿ ಸುಮಾರು ಆರೇಳುಬಾರಿ ಈ ಮನೆಗೆ ಕ್ಷೇತ್ರಕಾರ್ಯ ಕೈಗೊಳ್ಳುವ ಮೂಲಕ ಒಂದು ಹಂತದ ಬರವಣಿಗೆಯನ್ನು ಸಿದ್ಧಪಡಿಸಿದೆ.

೨೦೧೫ರಲ್ಲಿ ವಿಜಯ ಕರ್ನಾಟಕ ಕನ್ನಡ ದಿನಪತ್ರಿಕೆಯಲ್ಲಿ 'ದೃಶ್ಯಪದ' ವಿಶೇಷ ಅಂಕಣದ ಮೂಲಕ ನಾಡಿನ ಕಲೆ ಮತ್ತು ಸಂಸ್ಕೃತಿಗಳ ಬಗೆಗೆ ಬರೆಯುವ ಅವಕಾಶ ನನಗೆ ಒದಗಿಬಂತು. ಕಲ್ಯಾಣ ಕರ್ನಾಟಕ ಭಾಗದ ಸುಮಾರು ಐವತ್ತಕ್ಕೂ ಹೆಚ್ಚಿನ ಕಲಾತ್ಮಕ ಮನೆಗಳ ಬಗ್ಗೆ ಈ ಅಂಕಣ ಬರಹದಲ್ಲಿ ಬರೆಯುತ್ತ ಬಂದೆ. ಇಂಥದೇ ಒಂದು ಸಂದರ್ಭದಲ್ಲಿ ೨೦೧೫ ಜೂನ್ ೨೮ರಂದು "ಯಾದಗಿರಿಯ ಲಿಂಗೇರಿ ಕೋನಪ್ಪನವರ ವಾಡೆ-ಶತಮಾನ ಕಂಡ ಸುಂದರ ಮನೆ" ಲೇಖನ ಪ್ರಕಟವಾಯ್ತು. ಅದಾದ ನಂತರದಲ್ಲೂ ನಾನು ಈ ಮನೆಗೆ ಆಗಾಗ ಭೇಟಿ ನೀಡುತ್ತಲೇ ಬಂದೆ. ಪ್ರತಿಬಾರಿಯೂ ಈ ಮನೆ ಒಂದಲ್ಲ ಒಂದು ರೀತಿಯಲ್ಲಿ ಅವಸಾನದತ್ತ ಸಾಗುತ್ತಿರುವುದನ್ನು ಕಂಡು ಮನಸ್ಸು ಮಮ್ಮಲ ಮರುಗುತ್ತಿತ್ತು. ಮನೆಯನ್ನು ಸಂರಕ್ಷಿಸಬಹುದಾದ ಮಾರ್ಗೋಪಾಯಗಳ ಕುರಿತು ಮನೆಯ ವಾರಸುದಾರರಿಗೆ ಹೇಳುತ್ತ ಬಂದೆನಾದರೂ ಅದರಿಂದ ಯಾವುದೇ ಪ್ರಯೋಜನ ಆಗಲಿಲ್ಲ. ಆದರೆ, ಮನೆಯ ಕಲಾತ್ಮಕತೆ ಮತ್ತು ವಿನ್ಯಾಸ ನನ್ನ ಮನಸ್ಸಿನಲ್ಲಿ ಅಚ್ಚೊತ್ತಿತ್ತು. ಹಾಗಾಗಿ ಪ್ರತಿಬಾರಿ ಹೋದಾಗಲೊಮ್ಮೆ ಮನೆಯ ವಿವಿಧ ಕೋನಗಳನ್ನು ಛಾಯಾಚಿತ್ರಗಳ ಮೂಲಕ ದಾಖಲಿಸುತ್ತ ಬಂದೆ.

೨೦೧೮ ಡಿಸೆಂಬರ್ ೧೭ರಂದು ಪುನಃ ಈ ಮನೆಗೆ ಭೇಟಿಯಿತ್ತಾಗ ನನಗೆ ಕೆಲ ಅಚ್ಚರಿಗಳು ಕಾಣಿಸಿದವು. ಈ ಹಿಂದೆ ನೋಡಿದ್ದಕ್ಕಿಂತಲೂ ಈ ಮನೆ ಸಾಕಷ್ಟು ಹಾನಿಗೀಡಾಗಿತ್ತು. ಆರಂಕಣದ ಪಡಸಾಲೆ ಸಂಪೂರ್ಣ ಶಿಥಿಲಗೊಂಡಿದ್ದು, ಮೇಲಂಸ್ತು ಬಿದ್ದುಹೋಗಿತ್ತು. ಒಂದೆಡೆ ಛತ್ತು ಸಂಪೂರ್ಣ ಕುಸಿದಿದ್ದರೆ, ಮತ್ತೊಂದೆಡೆ ಗೋಡೆಗಳ ಮೇಲಿನ ಹಸಿರು ವರ್ಣದ ರಾಸಾಯನಿಕ ವರ್ಣಲೇಪನ ಅಲ್ಲಲ್ಲಿ ಕಳಚಿ ಬಿದ್ದಿತ್ತು. ಕಳಚಿರುವ ಹಸಿರು ವರ್ಣದ ರಾಸಾಯನಿಕ ವರ್ಣಲೇಪನದ ಹಿಂಬದಿಯಲ್ಲಿ ಬಹುವರ್ಣಗಳ ಚಿತ್ತಾರಗಳು ಕಾಣಿಸುತ್ತಿದ್ದವು. ಒಂದಿಬ್ಬರನ್ನು ಕರೆದು ಪಡಸಾಲೆಯಲ್ಲಿ ಬಿದ್ದಿದ್ದ ಕಲ್ಲು, ಮಣ್ಣು-ದಿನ್ನೆಗಳನ್ನು ಒಂದೆಡೆ ಸರಿಸಿ ಗೋಡೆಗಳ ಮೇಲೆ ಕಾಣಿಸುತ್ತಿರುವ ಚಿತ್ತಾರಗಳನ್ನು ನನ್ನ ಕ್ಯಾಮೆರಾದಲ್ಲಿ ಕ್ಲಿಕ್ಕಿಸಿಕೊಂಡೆ. ಹೀಗೆ ಬೇರೆ ಬೇರೆ ಸಂದರ್ಭಗಳಲ್ಲಿ ಸೆರೆಹಿಡಿದ ಛಾಯಾಚಿತ್ರಗಳ ಮೂಲಕ ಮನೆಯ ಸೊಬಗನ್ನು ಒಂದೆಡೆ ದಾಖಲಿಸಲು ಸಾಧ್ಯವಾಯ್ತು.

ಚಿತ್ರಗಳ ವಿವರಣೆ: ಕೋನಪ್ಪನವರ ಮನೆಯ ಹಿಂದೆ ಬೆಟ್ಟವೊಂದಿದ್ದು, ಮನೆ ಕಟ್ಟುವ ಸಂದರ್ಭದಲ್ಲಿ ಬೆಟ್ಟದ ಕಲ್ಲುಗಳನ್ನೇ ಬಳಸಿದೆ. ಎರಡರಿಂದ ಮೂರು ಅಡಿ ಅಂಗುಲ ಅಳತೆಯ ಕಲ್ಲಿನ ಗೋಡೆಗಳ ಮೇಲೆ ಒಂದಿಂಚು ದಪ್ಪ ಗಾರೆಲೇಪನ ಮಾಡಲಾಗಿದೆ. ಕೋನಪ್ಪನವರ ವಿಶ್ರಾಂತಿ ಕೋಣೆ ಮತ್ತು ಆರಂಕಣದ ಪಡಸಾಲೆಯಲ್ಲಿ ಮಾತ್ರ ಈ ರೀತಿಯ



ಗಾರೆಲೇಪನ ಮಾಡಲಾಗಿದ್ದರೆ, ಮನೆಯ ಆವರಣದಲ್ಲಿನ ಇತರ ಕಟ್ಟಡಗಳಲ್ಲಿ ಈ ರೀತಿಯ ಗಾರೆಲೇಪನ ಕಾಣಸಿಗುವುದಿಲ್ಲ. ಆರಂಕಣದೊಳಗಿನ ಮೂರೂ ಬದಿಯ ಗೋಡೆ ಮೇಲೆ ಬಹು ವರ್ಣಗಳಿಂದ ವಿವಿಧ ಬಗೆಯ ಚಿತ್ತಾರಗಳನ್ನು ಬರೆಯಲಾಗಿದೆ. ಕಲೆಯ ಬಗೆಗಿನ ಶಾಸ್ತ್ರೀಯ ತಿಳಿವಳಿಕೆ ಉಳ್ಳವರೇ ಇಲ್ಲಿನ ಚಿತ್ರಗಳನ್ನು ಬರೆದಿರಬೇಕು.

ಪಡಸಾಲೆಯ ವಿಶಾಲವಾದ ಗೋಡೆಯ ಮೇಲೆ ಕಪ್ಪು ಮತ್ತು ನೀಲಿ ವರ್ಣಗಳಿಂದ ಚೌಕಾಕಾರದ ವಿನ್ಯಾಸಗಳನ್ನು ಬರೆಯಲಾಗಿದ್ದರೆ, ಬಾಗಿಲು ಮತ್ತು ಕಿಟಕಿಗಳ ಸುತ್ತಲೂ ಸೇರಿದಂತೆ ತೀರ ಮೇಲ್ಭಾಗದಲ್ಲಿನ ಪಟ್ಟಿಕೆಯಲ್ಲಿ ಹೂಬಳ್ಳಿ ಸಹಿತ ಸುಳುವಿನ ವಿನ್ಯಾಸಗಳನ್ನು ಬರೆಯಲಾಗಿದೆ. ಬಲಬದಿಯಲ್ಲಿ ಮಾವಿನ ಮರ, ಹಂಸಪಕ್ಷಿ ಚಿತ್ರಗಳನ್ನು ಬರೆಯಲಾಗಿದೆ. ಹಳದಿ ಮಿಶ್ರಿತ ಹಸಿರು ವರ್ಣದಲ್ಲಿ ಮಾವಿನ ಮರವೊಂದನ್ನು ಬಹು ಸುಂದರವಾಗಿ ಚಿತ್ರಿಸಿದ್ದು, ಮಾವಿನ ಎಲೆಗಳಂತೆ ತೋರಿಸಲು ಕಪ್ಪು ವರ್ಣದ ಗೆರೆಯನ್ನು ಎಳೆಯಲಾಗಿದೆ. ಕೆಂಪುವರ್ಣದಿಂದ ಹೂಗಳನ್ನು ಮರದಲ್ಲಿ ತೋರಿಸಿದೆ. ಮೂರು ಮಂಗಗಳು ಮಾವಿನ ಮರವನ್ನೇರಲು ಪ್ರಯತ್ನಿಸುತ್ತಿದ್ದು, ಮಂಗಗಳನ್ನು ಕಪ್ಪುವರ್ಣದ ರೇಖೆಗಳಲ್ಲಿ ಚಿತ್ರಿಸಿದೆ. ಕೆಂಪು, ಹಳದಿ ಮತ್ತು ದಟ್ಟವರ್ಣಗಳಿಂದ ಪ್ರಭಾವಳಿಯೊಂದರಲ್ಲಿ ಮಾವಿನ ಮರವೊಂದನ್ನು ಚಿತ್ರಿಸಿದೆ. ಆದರೆ, ಪ್ರಭಾವಳಿಯ ವರ್ಣ ಮಸುಕಾಗಿದೆ. ಈ ಚಿತ್ರದ ಪಕ್ಕದಲ್ಲೇ ಹಂಸಪಕ್ಷಿಯೊಂದನ್ನು ಹಳದಿ ವರ್ಣದಲ್ಲಿ ತೋರಿಸಿದ್ದು, ಕಪ್ಪು ವರ್ಣದಿಂದ ಹೊರರೇಖೆ ಎಳೆಯಲಾಗಿದೆ. ಈ ಚಿತ್ರಗಳ ಸಾಮಿಪ್ಯದಲ್ಲೇ ಬಾಗಿಲು ಚೌಕಟ್ಟು ವಿನ್ಯಾಸಕ್ಕೆ ಪೂರಕವಾಗಿ ಕೆಂಪುವರ್ಣದ ಸುಳುವಿನ ವಿನ್ಯಾಸಗಳನ್ನು ಬರೆಯಲಾಗಿದೆ.

ಚೌಕಾಕಾರದ ವಿನ್ಯಾಸಗಳು ಸಮಕಾಲೀನ ಅರಮನೆಯಲ್ಲಿ ಕಂಡುಬರುವ ಲಕ್ಷಣಗಳನ್ನು (ಇಂಥದೇ ಹೋಲಿಕೆ ಇರುವ ಚಿತ್ರಗಳು ಗದವಾಲ ಸಂಸ್ಥಾನಿಕರ ಅರಮನೆಯಲ್ಲಿ ಕಂಡುಬರುತ್ತವೆ) ಹೋಲುವಂತಿದ್ದರೆ, ಮಾವಿನಮರ, ಹಂಸಪಕ್ಷಿ ಮತ್ತು ಸುಳುವಿನ ವಿನ್ಯಾಸಗಳು ರಾಯಚೂರಿನ ಖಾಜನಗೌಡರ ಮನೆಯಲ್ಲಿನ ಚಿತ್ರಗಳನ್ನು ಹೋಲುತ್ತವೆ. ಈ ರೀತಿಯ ಅನುಮಾನ ಪಡಲು ಒಂದು ಕಾರಣವೂ ಇದೆ. ರಾಯಚೂರಿನ ಖಾಜನಗೌಡರು, ಲಿಂಗೇರಿ ಕೋನಪ್ಪನವರು, ವಾರದ ವೀರಬಸಪ್ಪನವರು, ಫತ್ತೆಪುರೆ ಶರಣಪ್ಪನವರು, ಖೇಣಿ ಮಹಾರುದ್ರಪ್ಪನವರು; ಇವರೆಲ್ಲರೂ ಸಮಕಾಲೀನ ಶ್ರೀಮಂತರು, ಮೇಲಾಗಿ ಪರಸ್ಪರ ಆತ್ಮೀಯರು. ಈ ಎಲ್ಲರ ಮನೆಗಳಲ್ಲಿ ಬಹಳ ಹಿಂದೆಯೇ ಬರೆಯಲಾಗಿರುವ ಭಿತ್ತಿ ಚಿತ್ರಗಳಿವೆ. ಇನ್ನೊಂದೆಡೆ ಯಾದಗಿರಿ ಮತ್ತು ರಾಯಚೂರು ಅಕ್ಕಪಕ್ಕದ ಜಿಲ್ಲೆಗಳು. ಖಾಜನಗೌಡರ ಮನೆಯಲ್ಲಿನ ಚಿತ್ರಗಳನ್ನು ಬರೆದವರು ಹೈದರಾಬಾದ್‌ನಲ್ಲಿ ನೆಲೆಕಂಡ ಕಲಾವಿದರು. ಇತ್ತ ಕೋನಪ್ಪನವರೂ ಸಹ ತಮ್ಮ ಮನೆಯ ಗಾರೆವಿನ್ಯಾಸ ಸೇರಿದಂತೆ ಕಿಟಕಿ ಮುಚ್ಚಿಕೆಗಳ ಕೆಲಸಕ್ಕೆಂದು ಹೈದರಾಬಾದಿನಿಂದಲೇ ಕಲಾವಿದರನ್ನು ಕರೆಸಿದ್ದನ್ನಿಲ್ಲಿ ಅವಲೋಕಿಸಿದರೆ, ಕೋನಪ್ಪನವರ ಮನೆಯಲ್ಲಿನ ಚಿತ್ರಗಳನ್ನು ಖಾಜನಗೌಡರ ಮನೆಯಲ್ಲಿ ಬರೆದ ಕಲಾವಿದರೇ ಬರೆದಿರಬಹುದಾದ ಸಾಧ್ಯತೆಗಳಿವೆ.

ಈ ರೀತಿಯ ಚಿತ್ರಗಳು ನಮ್ಮ ಮನೆಯ ಮೇಲಂತಸ್ತಿನ ಒಂದೆರಡು ಕೋಣೆಗಳಲ್ಲೂ ಬರೆಯಲಾಗಿತ್ತು ಎಂದು ಶ್ರೀಮತಿ ನಿರ್ಮಲಾದೇವಿಯವರು ಹೇಳುತ್ತಾರಾದರೂ, ಸದ್ಯ ಮನೆಯ ಒಳಹೋಗಿ ನೋಡುವ ಸ್ಥಿತಿಯಲ್ಲಿಲ್ಲ. ಹಾಗಾಗಿ ಪ್ರಸ್ತುತ ಆರಂಕಣದ ಪಡಸಾಲೆಯಲ್ಲಿ ಕಾಣಸಿಗುವ ಚಿತ್ರಗಳನ್ನಿಟ್ಟುಕೊಂಡೇ ಈ ಬರೆಹವನ್ನು ಸಿದ್ಧಪಡಿಸಲಾಗಿದೆ.

ಜ್ಞಾನ-ಅಜ್ಞಾನಗಳ ನಡುವೆ: ಒಂದೆಡೆ ಕೋನಪ್ಪನವರ ಪರಿವಾರ ದೊಡ್ಡದಾಗುತ್ತ ಹೋದಂತೆ ಅವರ ಮನೆಯ ವಿಸ್ತರಣೆ ಕೆಲಸವೂ ಭರದಿಂದ ಸಾಗುತ್ತದೆ. ಆಗ ಆರಂಕಣದ ಪಡಸಾಲೆಯಲ್ಲಿ ಕೆಲ ಮಾರ್ಪಾಟುಗಳನ್ನೂ ಮಾಡಲಾಗಿ, ಚಿತ್ರಿತ ಗೋಡೆಗಳ ಮೇಲೆ ರಾಸಾಯನಿಕ ಹಸಿರು ವರ್ಣದ ಲೇಪನ ಮಾಡಲಾಗುತ್ತದೆ. ಗೋಡೆಯ ಬಾಗಿಲು-ಕಿಟಕಿಗಳ ಸುತ್ತಲೂ ಮಾಡಿಕೊಳ್ಳಲಾದ ಉಬ್ಬು ಮಾದರಿಯ ಗಾರೆವಿನ್ಯಾಸದ ಮೇಲೆ ಬೆಳ್ಳಿ ವರ್ಣಲೇಪನ ಮಾಡಲಾಗುತ್ತದೆ (ಈ ರೀತಿಯ ವರ್ಣಲೇಪನ ಅಂದಿನ ದಿನಗಳಲ್ಲಿ ಒಂದು ರೀತಿಯ ಫ್ಯಾಶನ್ ಆಗಿ ರೂಢಿಯಲ್ಲಿರುತ್ತದೆ). ಇದರೊಂದಿಗೆ ಶತಮಾನ ಕಂಡ ಈ ಮನೆಯ ಚಿತ್ರಗಳು ರಾಸಾಯನಿಕ ಹಸಿರು ವರ್ಣಲೇಪನದೊಳಗೆ ಮರೆಯಾಗುತ್ತವೆ. ಪುನಃ ಈ ಚಿತ್ರಗಳು ಕಲಾಜಗತ್ತಿಗೆ ಕಾಣಿಸಿದ್ದು ನಾಲ್ಕೈದು ವರ್ಷಗಳ ಹಿಂದೆ (೨೦೧೮ ಡಿಸೆಂಬರ್ ೧೭ರಂದು ಈ ಮನೆಗೆ ಭೇಟಿ ನೀಡಿದ್ದ ವೇಳೆ). ಏಳೆಂಟು ವರ್ಷಗಳ ಅವಧಿಯಲ್ಲೇ ಈ ಮನೆ ಏನೆಲ್ಲ ಸ್ಥಿತ್ಯಂತರಗಳನ್ನು ಕಾಣಬೇಕಾಯ್ತು. ಸದ್ಯ ಏನೂ ಮಾಡದ ಸ್ಥಿತಿಯಲ್ಲಿದೆ ಈ ಮನೆ. ಆದರೆ, ಅಲ್ಲಿನ ಚಿತ್ರಗಳನ್ನು ಒಂದೆಡೆ ದಾಖಲಿಸಲಾಯ್ತು ಎನ್ನುವ ಸಂತಸ ಬಿಟ್ಟರೆ, ಶತಮಾನ ಕಂಡ ಪಾರಂಪರಿಕ ಕಟ್ಟಡವೊಂದು ನಮ್ಮ ಕಣ್ಮುಂದೆಯೇ ಅವಸಾನ ಹೊಂದುತ್ತಿದೆಯಲ್ಲ ಎನ್ನುವ ನೋವು ಕಾಡದೇ ಇರದು.

ಆಕರ ಗ್ರಂಥಗಳು

೧. ಯಾದಗಿರಿಯ ಲಿಂಗೇರಿ ಕೋನಪ್ಪನವರ ವಾಡೆ-ಶತಮಾನ ಕಂಡ ಸುಂದರ ಮನೆ, ಡಾ. ಮಲ್ಲಿಕಾಜುನ ಸಿ. ಬಾಗೋಡಿ, ೨೦೧೫ ಜೂನ್ ೨೮ರ ವಿಜಯ ಕರ್ನಾಟಕ ಕನ್ನಡ ದಿನಪತ್ರಿಕೆಯ 'ದೃಶ್ಯಪದ' ಅಂಕಣ. ಪುಟ ೪.

೨. ಕಲಬುರಗಿ ಜಿಲ್ಲೆಯ ಚಿಂಚೋಳಿ ತಾಲೂಕಿನ ಗಡಿಕೇಶ್ವಾರ ಗ್ರಾಮದ ವೀರಬಸಂತಪ್ಪ ಬಳಿ ಇವರ ಮನೆಯಲ್ಲಿ ಮೂರು ತಲೆಮಾರುಗಳಿಂದ ಬರೆದುಕೊಂಡು ಬರಲಾದ ದಾಖಲೊಂದಿದೆ. ಈ ಹಸ್ತಲಿಖಿತ ದಾಖಲುವಿನಲ್ಲಿ ಈ ಸಮಕಾಲೀನ ಶ್ರೀಮಂತರ ಹೆಸರುಗಳು ಕಾಣಿಸಿಕೊಂಡಿವೆ.

ಇಂಗಳಗಿಯ ಧರ್ಮಾಂತರಗಳು: ಪ್ರಾಚ್ಯಾವಶೇಷಗಳ ಆಧಾರಗಳಿಂದ

ಹೆಚ್. ಚಂದ್ರಶೇಖರ*

ಇಂಗಳಗಿ ಗ್ರಾಮವು ಚಿತ್ತಾಪುರ (ಕಲಬುರ್ಗಿ ಜಿಲ್ಲೆ) ತಾಲ್ಲೂಕಿನಲ್ಲಿರುವ ಒಂದು ಚಿಕ್ಕ ಹಳ್ಳಿ. ಈ ಗ್ರಾಮವು ಕಾಗಿನಾ ನದಿಯ ಎಡದಂಡೆಯ ಮೇಲಿದೆ. ಇದು ತಾಲ್ಲೂಕು ಕೇಂದ್ರದಿಂದ ನೈರುತ್ಯಕ್ಕೆ ೧೮ ಕಿ.ಮೀ. ಹಾಗೂ ವಾಡಿ ಜಂಕ್ಷನ್‌ನಿಂದ ಪಶ್ಚಿಮಕ್ಕೆ ಆರು ಕಿ.ಮೀ. ದೂರದಲ್ಲಿದೆ. ಇದೊಂದು ಪ್ರಾಚೀನ ಗ್ರಾಮ. ಪ್ರಾಚೀನ ಶಾಸನಗಳಲ್ಲಿ 'ಇಂಗಳಗಿ', 'ಮಿಂಗುಳಿಗೆ' ಹಾಗೂ 'ಮಿಂಗಿಲಿಗಿ' ಎಂದು ಉಲ್ಲೇಖಗೊಂಡಿದೆ. ಇಲ್ಲಿರುವ ಪ್ರಾಚ್ಯಾವಶೇಷಗಳನ್ನು ಗಮನಿಸಿದಾಗ ಕ್ರಿ.ಶ. ೧೦-೧೨ ಶತಮಾನಗಳಲ್ಲಿ ಒಂದು ನಗರವಾಗಿರಬೇಕೆಂದು ಗೊತ್ತಾಗುತ್ತದೆ. ಈ ಅಧ್ಯಯನದ ಉದ್ದೇಶವೇ ಇಲ್ಲಿರುವ ಪುರಾತನ ಬಸದಿಗಳ, ಗುಡಿಗಳ, ದರ್ಗಾ ಮತ್ತು ಶಾಸನಗಳ ಅಧ್ಯಯನವೇ ಆಗಿದೆ.

ಬಸದಿಗಳು

ಈ ಗ್ರಾಮದಲ್ಲಿ ಎರಡು ಜೈನರ ದೇಗುಲಗಳು ಅಥವಾ ಬಸದಿಗಳಿವೆ. ಈ ಊರಿನ ಅಗಸಿಯನ್ನು ದಾಟಿ ಎಡಕ್ಕೆ ಸ್ವಲ್ಪ ದೂರ ಸಾಗಿದರೆ ವೃಷಭನಾಥ ಬಸದಿ ಇದೆ. ವೃಷಭನಾಥನೇ ಆದಿತೀರ್ಥಂಕರ. ಈ ಗ್ರಾಮದಲ್ಲಿ ವೃಷಭನಾಥ ಮತ್ತು ಪಾರ್ಶ್ವನಾಥ ಬಸದಿಗಳಿವೆ. ಈ ಗ್ರಾಮದ ಜನರು, ಬಸದಿಗಳನ್ನು ದೇಗುಲಗಳೆಂದು ಕರೆಯುತ್ತಾರೆ.

ಆಗಲೇ ಉದಾಹರಿಸಲಾದ ವೃಷಭನಾಥ ಬಸದಿಯನ್ನು ಅಲ್ಲಿಯ ಪ್ರೈಮರಿ ಶಾಲೆಗಳ ವಿದ್ಯಾರ್ಥಿಗಳಿಗಾಗಿ ಬಳಸಲಾಗುತ್ತದೆ. ಗರ್ಭಗುಡಿಗೆ ಬಣ್ಣ ಹೆಚ್ಚಲಾಗಿದೆ. ಆದರೆ ವೃಷಭನಾಥ ಶಿಲ್ಪ ಸ್ಪಷ್ಟವಾಗಿದೆ. ಗರ್ಭಗುಡಿಯ ಮುಂದಿರುವ ಅಂಕಣದಲ್ಲಿರುವ ಕಂಬಗಳಿಗೆ ವಾರ್ನಿಷ್‌ನು ಬಳಿಯಲಾಗಿದೆ. ಆದರೂ ಕಂಬದ ಮೇಲೆ ವೃಷಭನಾಥನ ಉಬ್ಬುಶಿಲ್ಪವನ್ನು ಗುರ್ತಿಸಬಹುದು.

ಈ ಗ್ರಾಮದ ಅತ್ಯಂತ ತಗ್ಗಿನ ಪ್ರದೇಶದಲ್ಲಿ ದೇಗುಲವೆಂದು ಕರೆಯಲ್ಪಡುವ ಪಾರ್ಶ್ವನಾಥ ಬಸದಿ ಇದೆ. ಸಧ್ಯ ಗರ್ಭಗುಡಿಯಲ್ಲಿ ಒಂದು ಶಿವಲಿಂಗವನ್ನು ಸ್ಥಾಪಿಸಲಾಗಿದೆ. ಮುಂದಿನ ಅಂಕಣದಲ್ಲಿ ಪಾರ್ಶ್ವನಾಥ ಉಬ್ಬುಶಿಲ್ಪವನ್ನು ಕೆತ್ತಲಾಗಿದೆ. ಈ ದೇಗುಲದೊಳಗೆ ಮುಕ್ಕೊಡೆಯ ಶಿಲ್ಪವನ್ನು ಹೊಂದಿರುವ ಶಾಸನ ಇದೆ. ಅಕ್ಷರಗಳನ್ನು ಓದಲು ಸಾಧ್ಯವಾಗುತ್ತಿಲ್ಲ.

ಶೈವ ಗುಡಿಗಳು

ಗ್ರಾಮದ ಅಗಸಿಯೊಳಗೆ ಪ್ರವೇಶಿಸುತ್ತಿದ್ದಂತೆ ಒಂದು ಬಯಲು ಪ್ರದೇಶ ಇದೆ. ಒಂದು ಸುಂದರವಾಗಿ ಕೆತ್ತಲಾಗಿರುವ ನಂದಿ ಶಿಲ್ಪ ಇದೆ. ಒಂಟಿ ನಂದಿ ಶಿಲ್ಪವನ್ನು ನೋಡಿದರೆ ಅದರ ಎದುರಿಗೆ ಒಂದು ಕಲಾತ್ಮಕವಾಗಿ ನಿರ್ಮಿಸಲ್ಪಟ್ಟಿರುವ ಈಶ್ವರ ದೇವಾಲಯವಿದ್ದಿರಬೇಕು, ಈಗ ಇಲ್ಲ. ಅದರ ಬದಲಾಗಿ ಎಡಗಡೆ ಒಂದು ಈಶ್ವರ ದೇವಾಲಯ ಮತ್ತು ವೀರಭದ್ರೇಶ್ವರ ದೇವಾಲಯಗಳಿಗೆ.

ಈ ಬಯಲಿನಿಂದ ಬಲಕ್ಕೆ ತಿರುಗಿದರೆ ಪಂಚಮಲಿಂಗೇಶ್ವರ ದೇವಾಲಯ ಸಂಕೀರ್ಣವಿದೆ. ಇದು ವಾಸ್ತವವಾಗಿ ಸಪ್ತಲಿಂಗೇಶ್ವರ ಸಂಕೀರ್ಣ. ಎದುರಿಗೆ ಕಾಣುವುದೇ ಶ್ರೀ ಚಂದ್ರಮೌಳೇಶ್ವರ ದೇವಸ್ಥಾನವೆಂದು ಬರೆಯಲಾಗಿರುವ ದೇವಾಲಯ ಕಾಣುತ್ತದೆ. ಈ ದ್ವಾರದಲ್ಲಿ ಪ್ರವೇಶಿಸಿದರೆ ಎರಡು ಈಶ್ವರ ದೇವಾಲಯಗಳಿವೆ. ಚಿ. ೧೦ರಲ್ಲಿ ಕಾಣುವ ಗರ್ಭಗುಡಿಯ ಚೌಕಟ್ಟಿನ ಮೇಲೆ ಕಲ್ಯಾಣ ಚಾಳುಕ್ಯರ ಲಾಂಛನವನ್ನು ನೋಡಬಹುದು. ಜನರು ಈ ಎರಡು ಗಡಿಗಳ ಬಾಗಿಲ ಚೌಕಟ್ಟುಗಳಿಗೆ ಸವರ್ಣ ವರ್ಣದ ಬಣ್ಣವನ್ನು ಪೇಂಟ್ ಮಾಡಿದ್ದಾರೆ. ಕಾಣುವ ಗರ್ಭಗುಡಿಯಲ್ಲಿ ಶಿವಲಿಂಗ ಇದೆ. ಈ

* 'ಸಂಗಮ', ಎಂಐಜಿ-೭೭, ಕೆಹೆಚ್‌ಬಿ ಕಾಲೋನಿ, ಬಸವೇಶ್ವರನಗರ, ಬೆಂಗಳೂರು, ಮೊ. ೯೪೪೯೪ ೦೩೭೮೩

ಗುಡಿಗಳ ಎಡಗಡೆ ಒಂದು ಶಿವಲಿಂಗ ಇದೆ. ಅದಕ್ಕೂ ಪ್ರತಿದಿನ ಪೂಜೆ ಮಾಡುತ್ತಾರೆ. ಈ ಚಿಕ್ಕಗುಡಿಯನ್ನು ಸಿದ್ಧರಾಮನ ಗದ್ದುಗೆ (ಗುಡಿ) ಎಂದು ಕರೆಯುತ್ತಾರೆ. ಈ ಗುಡಿಯ ಪಕ್ಕದಲ್ಲಿಯೇ ಒಂದು ಪ್ರಮುಖ ಶಾಸನ ಇದೆ. (ನೋಡಿ ಅನುಬಂಧ ೧ & ೨).

ಈ ಶಾಸನದ ಕಾಲ ಕ್ರಿ.ಶ. ೧೨೨೯. ಇದರ ಪಠ್ಯ ಲಭ್ಯವಿದೆ. ಈ ಎರಡು ಗುಡಿಗಳ ಸುತ್ತಲೂ ಐದು ಚಿಕ್ಕ ಚಿಕ್ಕ ಗುಡಿಗಳಿವೆ. ಅದಕ್ಕಾಗಿ ಈ ಸಂಕೀರ್ಣವನ್ನು ಪಂಚಲಿಂಗೇಶ್ವರ ಎಂದು ಜನರು ಕರೆಯುತ್ತಾರೆ. ಆದರೆ, ಒಳಗಿರುವ ಎರಡು ಗುಡಿಗಳನ್ನು ಪರಿಗಣಿಸಿದರೆ ಸಪ್ತಲಿಂಗೇಶ್ವರ ಸಂಕೀರ್ಣವೆಂದು ಕರೆದರೆ ಸರಿ. ಇದನ್ನೇ ಕಲಬುರ್ಗಿ ಗೆಜಿಟಿಯರ್‌ನಲ್ಲಿ ಸಪ್ತ ಲಿಂಗೇಶ್ವರ ಸಂಕೀರ್ಣವೆಂದು ಗುರ್ತಿಸಲಾಗಿದೆ (ಪುಟ ೬೮೫). ಈ ಗುಡಿಗಳಲ್ಲದೆ ಈ ಸಂಕೀರ್ಣದ ಆವರಣದಲ್ಲಿ ಸಪ್ತಮಾತೃಕೆಯ ಒಂದು ಶಿಲ್ಪ, ದಕ್ಷಿಣಾಮೂರ್ತಿ ಶಿಲ್ಪ, ಗಣೇಶ ಶಿಲ್ಪ ಹಾಗೂ ನಾಗಶಿಲ್ಪಗಳು ಇವೆ. ಈ ಗುಡಿಗಳನ್ನೂ, ಬಸದಿಗಳನ್ನೂ ಗಮನಿಸಿದರೆ ಈ ಗ್ರಾಮ ಹಿಂದೆ ಒಂದು ಪ್ರಮುಖ ನಗರವಾಗಿತ್ತು ಎಂಬುದು ಗೊತ್ತಾಗುತ್ತದೆ. ಈ ಗ್ರಾಮದ ಕೊನೆಯಲ್ಲಿ ಕಾಗಿನಾ ನದಿಗೆ ಹೊಂದಿಕೊಂಡೇ ಕೂಡಲಸಂಗಮೇಶ್ವರ ಎಂದು ಕರೆಯಲ್ಪಡುವ ಗುಡಿ/ಮಠ ಇದೆ.

ಮುಸ್ಲಿಂ ದರ್ಗಾ

ಈ ಊರಿನ ಅಗಸಿ ಬಾಗಿಲನ್ನು ಪ್ರವೇಶಿಸುವುದಕ್ಕೆ ಕೆಲ ಅಡಿಗಳ ಮುಂಚೆ ಬಲಕ್ಕೆ ಒಂದು ದರ್ಗಾ ಇದೆ. ಇದೊಂದು ಸೂಫಿ ಸಂತನ ದರ್ಗಾ ಇರಬಹುದು. ಇದರ ಹೆಸರನ್ನು ಹೇಳಲು ನನಗೆ ಯಾರು ಸಿಗಲಿಲ್ಲ. ಬಹುಶಃ ಕಲಬುರ್ಗಿಯ ಖಾಜಾ ಬಂದೇ ನವಾಬನ ಸಮಕಾಲೀನ ಸೂಫಿ ಸಂತನ ದರ್ಗಾ ಇರಬಹುದೆಂದು ಊಹಿಸಬಹುದು. ಈ ದರ್ಗಾದ ಉಲ್ಲೇಖ ಜಿಲ್ಲಾ ಗೆಜೆಟಿಯರ್‌ನಲ್ಲಿ ಇಲ್ಲ.

ಶಾಸನಗಳು

ಇಂಗಳಗಿ ಗ್ರಾಮದಿಂದ ನಾಲ್ಕು ಶಿಲಾಶಾಸನಗಳನ್ನು ಹನುಮಾಕ್ಷಿ ಗೋಗಿಯವರು "ಕಲಬುರ್ಗಿ ಜಿಲ್ಲೆಯ ಶಾಸನಗಳು" ಎಂಬ ಹೆಸರಿನ ಗ್ರಂಥದಲ್ಲಿ ಸಂಪಾದಿಸಿದ್ದಾರೆ (೧೯೯೬). ಇವುಗಳಲ್ಲಿ ಶಾಸನ ಸಂ. ೨. ಜಿನ ಶಾಸನವಾಗಿದೆ (ಸೋಮವಾರ ೨೭-೨-೧೦೯೧). ಉಳಿದ ಮೂರು ಶಾಸನಗಳು ಶೈವಧರ್ಮಕ್ಕೆ ಸೇರಿದವುಗಳಾಗಿವೆ. ಶಾಸನ ಸಂ. ೧, ೩, ೪ ಇವುಗಳು ಅನುಕ್ರಮವಾಗಿ ೨೪-೦೭-೧೦೭೧, ಭಾನುವಾರ, ೦೧-೦೭-೧೧೪೮ ಭಾನುವಾರ ಮತ್ತು ೧೩-೦೯-೧೨೨೯ ಸೋಮವಾರಕ್ಕೆ ಸರಿಹೊಂದುತ್ತವೆ.

ಚರ್ಚೆ ಮತ್ತು ಫಲಿತಾಂಶಗಳು

ಮೇಲ್ಕಾಣಿಸಿದ ಹಾಗೂ ವಿವರಿಸಲಾಗಿರುವ ಪ್ರಾಚ್ಯಾವಶೇಷಗಳನ್ನು ಗಮನಿಸಿದರೆ ಇಂಗಳಗಿ ಗ್ರಾಮವು ಹಿಂದೆ ಅಂದರೆ (ಕ್ರಿ.ಶ. ೧೦-೧೨ ಶತಮಾನಗಳಲ್ಲಿ) ಒಂದು ಪ್ರಮುಖ ಜೈನಕೇಂದ್ರವಾಗಿತ್ತು. ಈ ಮಾತಿಗೆ ಶಾಸನ ಸಂ. ೨. ಕ್ರಿ.ಶ. ೧೦೯೫ ಸಾಕ್ಷಿ ನೀಡುತ್ತದೆ. ಇದಕ್ಕೂ ಪೂರ್ವದಲ್ಲಿ ಒಂದು ಶೈವಕೇಂದ್ರವಾಗಿತ್ತು. ಶಾ.ಸ. ೧ರಲ್ಲಿ ಲೋಕೇಶ್ವರ ದೇವರ ಗುಡಿ ಹೆಸರಿನ ಉಲ್ಲೇಖ ಬರುತ್ತದೆ (ಕ್ರಿ.ಶ. ೧೦೭೧). ನಂತರ ಕ್ರಿ.ಶ. ೧೧೪೮ರಿಂದ ಕ್ರಿ.ಶ. ೧೨೨೯ರವರೆಗೆ ಶೈವಕೇಂದ್ರವಾಗಿತ್ತು. ಈ ನಿರ್ಣಯಕ್ಕೆ ಇಲ್ಲಿರುವ ಶೈವ ಗುಡಿಗಳು ಮತ್ತು ವೀರಭದ್ರೇಶ್ವರ ಗುಡಿಗಳು ಸಾಕ್ಷಿಯಾಗಿವೆ. ವೀರಭದ್ರೇಶ್ವರ ಗುಡಿಯು ವೀರಶೈವದ ಸಂಕೇತ. ಇಲ್ಲಿ ಸಿದ್ದರಾಮನ ಗುಡಿ/ಗದ್ದುಗೆಯು ಮತ್ತು ಶಾಸನ (ಕ್ರಿ.ಶ. ೧೨೨೯) ಈ ಊರಿನಲ್ಲಿ ಲಿಂಗಾಯತ ಧರ್ಮವು ಸ್ಥಾಪಿತಗೊಂಡಿತ್ತು ಎಂಬ ನಿರ್ಣಯಕ್ಕೆ ಇಂಬುಗೊಡುತ್ತದೆ.

ನದಿ ದಂಡೆಯ ಮೇಲಿರುವ ಕೂಡಲಸಂಗಮೇಶ್ವರ ಗುಡಿಯು ಖಚಿತವಾಗಿ ಈ ಗ್ರಾಮಕ್ಕೆ ಲಿಂಗಾಯತ ಧರ್ಮ ಪ್ರವೇಶ ಪಡೆದು ನೆಲೆಯೂರಿತು. ಈ ಮಾತಿಗೆ ಕ್ರಿ.ಶ. ೧೨೨೯ರ ಶಾಸನ ಮತ್ತು ಸಿದ್ಧರಾಮನ ಗದ್ದುಗೆ ಪುಷ್ಟಿ ಕೊಡುತ್ತವೆ. ಸಂಕ್ಷೇಪದಲ್ಲಿ ಹೇಳುವುದಾದರೆ ಇಲ್ಲಿ ಮೊದಲು ಶೈವಧರ್ಮ ಇತ್ತು, ನಂತರ ಜೈನ ಧರ್ಮ ಇತ್ತು. ನಂತರ ೧೨ನೆಯ ಶತಮಾನದಲ್ಲಿ ಲಿಂಗಾಯತ ಧರ್ಮ ನೆಲೆಯೂರಿತು. ಬಹುಶಃ ಆಗ ಜೈನರು ಮತ್ತು ಬಹುಸಂಖ್ಯೆಯಲ್ಲಿ ಹಿಂದು ಧರ್ಮದ ಜಾತಿಗಳ ಕುರುಬರು, ಕಬ್ಬಲಿಗರು ಲಿಂಗಾಯತ ಧರ್ಮವನ್ನು ಸ್ವೀಕರಿಸಿದರು. ಈ ಊರಿನಲ್ಲಿ ಜೈನರ ಒಂದು ಮನೆತನವೂ ಇಲ್ಲ. ಬಹುಶಃ ೧೫-೧೬ನೇ ಶತಮಾನದಲ್ಲಿ ಮುಸ್ಲಿಂ ಧರ್ಮವು ಪ್ರವೇಶಿಸಿತು.

ಅನುಬಂಧ-೧

ಸೊನ್ನಲಿಗೆ/ಸಿದ್ಧರಾಮದೇವರು/ಕಪಿಲಸಿದ್ಧ ಮಲ್ಲಿಕಾರ್ಜುನ ದೇವರಿಗೆ ಸಂಬಂಧಿತ ಶಾಸನಗಳು

ಕ್ರ.ಸಂ.	ಕಾಲ ಕ್ರಿ.ಶ.	ಸ್ಥಳ/ಪ್ರದೇಶ	ಜಿಲ್ಲೆ	ರಾಜವಂಶ
೧	೧೧೩೬	ಬುಧುವಾರಪೇಟೆ	ಸೊಲ್ಲಾಪುರ	ಕಲ್ಯಾಣ ಚಾಳುಕ್ಯ
೨	೧೧೭೦	ಶಿವನಿ	ಸೊಲ್ಲಾಪುರ	ಕಳಚೂರಿ
೩	೧೧೯೦	ಚೂರ್ಗಿ	ಬಿಜಾಪುರ	ಸೇವುಣ
೪	೧೧೯೨	ನೀಲೆಗಾಂವ	ಸೊಲ್ಲಾಪುರ	ಸೇವುಣ
೫	೧೧೯೪	ಸಂಖ	ಬಿಜಾಪುರ	ಸೇವುಣ
೬	೧೧೯೪	ಜಾಮಗಾಂವ	ಸೊಲ್ಲಾಪುರ	ಅದೇ
೭	೧೧೯೭	ಕೇಶೇಗಾಂವ	ಉಸ್ಮಾನಾಬಾದ	ಅದೇ
೮	೧೨೦೧	ಕೂಡಿಗಿ	ವಿಜಾಪುರ	ಅದೇ
೯	೧೨೦೭	ಹುಟಗಿ	ಸೊಲ್ಲಾಪುರ	ಅದೇ
೧೦	೧೨ನೇ ಶತ	ಸೊಲ್ಲಾಪುರ ಕೋಟೆ	ಸೊಲ್ಲಾಪುರ	ಅದೇ
೧೧	೧೨ನೇ ಶತ	ಸೊಲ್ಲಾಪುರ ಕೋಟೆ	ಸೊಲ್ಲಾಪುರ	ಅದೇ
೧೨	೧೨೧೭	ಇಟ್ಕಲ್	ಸೊಲ್ಲಾಪುರ	ಸೇವುಣ
೧೩	೧೨೩೦	ಗುಂಜೆಗಾಂವ	ಸೊಲ್ಲಾಪುರ	ಸೇವುಣ
೧೪	೧೨೩೨	ಗುಂಜೆಗಾಂವ	ಸೊಲ್ಲಾಪುರ	ಸೇವುಣ
೧೫	೧೨ನೇ ಶತ	ಗುಂಜೆಗಾಂವ	ಸೊಲ್ಲಾಪುರ	ಸೇವುಣ
೧೬	೧೨೩೪	ಮಂತ್ರವಾಡಿ	ಧಾರವಾಡ	ಸೇವುಣ
೧೭	೧೨೪೩	ಕಪ್ಪನಿಂಬರಗಿ	ವಿಜಾಪುರ	ಸೇವುಣ
೧೮	೧೩ನೇ ಶತ	ಗುಂಡಕರ್ಜಗಿ	ವಿಜಾಪುರ	ಸೇವುಣ
೧೯	೧೨೫೫	ಅಕ್ಕಲಕೋಟೆ	ಸೊಲ್ಲಾಪುರ	ಸೇವುಣ
೨೦	೧೩ನೇ ಶತ	ಟಾಕಳಿ	ವಿಜಾಪುರ	ಸೇವುಣ
೨೧	೧೨೫೬	ಕೋಳಿಸಾಲೆ	ಶಿವಮೊಗ್ಗ	ಸೇವುಣ
೨೨	೧೩ನೇ ಶತ	ಘಟೇಕನೂರು	ವಿಜಾಪುರ	ಸೇವುಣ
೨೩	೧೨೫೭	ಜಟ್ಟಗಿ	ವಿಜಾಪುರ	ಸೇವುಣ
೨೪	೧೨೫೭	ತಡವಳ	ಸೊಲ್ಲಾಪುರ	ಸೇವುಣ
೨೫	೧೨೫೭	ಬುಡರಸಿಂಗಿ	ಧಾರವಾಡ	ಸೇವುಣ
೨೬	೧೨೬೪	ಕೊಟಗಿ	ಧಾರವಾಡ	ಸೇವುಣ
೨೭	೧೨೬೫	ಸಂಗೂರು	ಹಾವೇರಿ	ಸೇವುಣ
೨೮	೧೩ನೇ ಶತ	ಯಡಹಳ್ಳಿ	ವಿಜಾಪುರ	ಸೇವುಣ
೨೯	೧೩೦೦	ಚಡಚಣ	ವಿಜಾಪುರ	ಸೇವುಣ

೩೦	೧೩೧೬	ಕಾಮತಿ	ಸೊಲ್ಲಾಪುರ	ಸೇವುಣ
೩೧	೧೫೧೮	ಚಿತ್ರದುರ್ಗ	ಚಿತ್ರದುರ್ಗ	ಸೇವುಣ
೩೨	೧೨೨೯	ಇಂಗಳಗಿ	ಕಲಬುರ್ಗಿ	ಸೇವುಣ

ಅನುಬಂಧ – ೨

ಇಂಗಳಗಿ ೧೩–೦೯–೧೨೨೯ರ ಶಾಸನ

೧. ಶ್ರೀ ಓಂ ನಮಃ ಶಿವಾಯಃ । ನಮಸ್ತುಂಗ ಶಿರಶ್ಚಿಂಬಿ
೨. ಚಂದ್ರಚಾಮರ ಚಾರವೇ । ತ್ರೈಲೋಕ್ಯ ನಗರಾರಂಭ ಮೂ
೩. ಲಸ್ತಂಭಾಯ ಶಂಭವೇ ॥ ಸ್ವಸ್ತಿ ಸಮಸ್ತ ಭುವನಾಶ್ರಯಂ
೪. ಶ್ರೀ ಪೃಥ್ವೀವಲ್ಲಭಂ ಮಹಾರಾಜಾಧಿರಾಜಂ ಪರಮೇಶ್ವರಂ ಪ್ರ
೫. ತಾಪ ಚಕ್ರವರ್ತಿ ತ್ರಿಭುವನಮಲ್ಲ ಸಿಂಗಣದೇವರ ವಿಜ
೬. ಯರಾಜ್ಯಮುತ್ತರೋರಾಭಿವೃದ್ಧಿ ಪ್ರವರ್ದ್ಧಮಾನಮಾ
೭. ಚಂದ್ರಾರ್ಕ್ಯ ತಾರಂಬರಂ ಸಲುತ್ತಮಿರೆ ದೇವಗಿರಿಯ
೮. ನೆಲೆವೀಡಿನೊಳು ಸುಖಸಂಕಥಾ ವಿನೋದದಿಂ ರಾಜ್ಯಂ
೯. ಗೆಯ್ಯುತ್ತಮಿರೆ ಶ್ರೀಮನ್ಮಹಾಪ್ರಧಾನಂ ಯಾದ
೧೦. ವ ರಾಜ್ಯ ಸಮುದ್ಧರಣಂ ಸೇಪುಣರಾಯ ಶ್ರೀ
೧೧. ಸಿಂಗಣದೇವರ ದಕ್ಷ ಭುಜಾದಂಡ ನಾ
೧೨. ಯಕ ನಾರಾಯಣನು ಲಕ್ಷ್ಮೀದೇವರಸ ದಂಡನಾಯಕರು
೧೩. ಅನೇಕ ದೇಶ ದೇಶಂಗಳಂ ಆಳುತ್ತ ಸಕಳಧರ್ಮಾರ್ಥಧರ್ಮಂ
೧೪. ಗಳಂ ಪ್ರತಿಪಾಳಿಸುತ್ತಮಿರೆ ಸ್ವಸ್ತಿ ಸಮಧಿಗ
೧೫. ತ ಪಂಚ ಮಹಾಶಬ್ದ ಮಹಾಮಂಡಳೇಶ್ವರಂ ಮಾಹಿಷ್ಮತೀ
೧೬. ಪುರವರಾಧೀಶ್ವರಂ ಅಹಿಹಯ ವಂಶೋದ್ಭವಂ
೧೭. ವಿವೇಕ ವನಜೋದ್ಭವಂ ದಾಯಿಗ ಗಿರಿವಜ್ರದಂಡಂ ನರ
೧೮. ನಂಕ ಸೂನೆಗಾರ ದಳದಂಕಕಾರ ವೈರಿಮಂಡಳಿಕ ಗಂಡಗೋ
೧೯. ಪಾಳ ಶ್ರೀ ಲೋಕನಾಥದೇವರ ದಿಬ್ಯಪಾದಾರಾಧಕ
೨೦. ನುಂ ಮಹಾಮಂಡಳೇಶ್ವರಂ ಆನೆಗದೇವ ಪ್ರಿಯಪುತ್ರನು
೨೧. ಗಂಡ ಭೂರಿಸ್ತವನಿಯಪ್ಪ ವೀರ ಬಿಜ್ಜರಸರು ಮಾಡಿದ ಧರ್ಮ
೨೨. ವಂ ಸಮಸ್ತ ಲೋಕಾ ಲೋಕ ಚಕ್ರವರ್ತ್ತಿಯಿಂ ಸಾಸ್ವ
೨೩. ಯಶ್ವರ್ಯ್ಯ ಮೂರ್ತ್ತಿಯುಮಪ್ಪ ಶ್ರೀ ಮಹಾಲಿಂಗ
೨೪. ದೇವರಮುರಿಗಣ್ಣಜ್ವಾಳೆಯಿಂದುದಯಿ
೨೫. ಸಿದ ಮಹಾವೀರ ಗಣಂಗಳ ಸಂಖ್ಯಾತರ ಮಹಿಮೆ
೨೬. ಯೆಂತೆಂದೊಡೆ ॥ ಕಂದ ॥ ಕರಕರನು ಸೆಂಡಾಡುವರು
೨೭. ರಗಪ್ಪನಂ ಕಿಲರಲಿಟ್ಟು ಬಿಟ್ಟಿಕ್ಕುವರಾ ಗಿರಿಕುಳಮಂ ಕತ್ತೆತ್ತುಮ
೨೮. ರುಯೊಳು ಪರಿ ವೈರಿಯನಾಡುತ್ತಿರ್ಪ್ಪರು ಸರಣ

೨೯. ರು॥ ಸ್ವಸ್ತಿ ಸಕನೃಪವರ್ಷದ ೧೧೩೧ ನೆ
೩೦. ಯ ಸುಕ್ಲ ಸಂವತ್ಸರದ ಅಶ್ವಯುಜ ಸುದ್ಧ ತ್ರ
೩೧. ಯೋದಸಿ ಸೋಮವಾರದಂದು ಶ್ರೀಮನ್‌ಮಹಾ
೩೨. ಮಂಡಳೇಶ್ವರಂ ಬಿಬ್ಬರಸರು ಅಲು ಮುಂನೂ ಬ
೩೩. ಳಿಯ ಬಾಡ ಯಿಂಗುಗಳಿಗೆಯ ಪ್ರಭುನಾಗರಸ ವೆರ್ಗ್ಗಡೆ
೩೪. ಬಸವಯ್ಯನಲ್ಲಿಯ ಪಂಚಮತ ಯಿಂತಿವರೇಕಸ್ತರಾಗಿ ಶೃ
೩೫. ಮೂಲಸ್ತಾನದೇವರ ಪಾದಾರಾಧಕೆಯರಪ್ಪ ಕ್ಷೇತ್ರ ಸಂನ್ಯಾ
೩೬. ಸಿ ಮಹಾನುಭಾವೆಯನುಮಪ್ಪ ಚಲವ್ವೆಯಗಳ ಕಾಲಂ ತೊ
೩೭. ಳದು ಧಾರಾಪೂರ್ಬ್ಬಕಂ ಮಾಡಿ ಶ್ರೀ ಸಿದ್ಧರಾಮನಾಥ ದೇವರ್ಗ್ಗೆ
೩೮. ದೇವರ್ಗ್ಗಂದ ನಗಣ ಸಿಂಗಿದೇವ ಬಿಜ್ಜೇಶ್ವರ ದೇವರು
೩೯. ರೇವಣೇಶ್ವರ ಕಂನ್ನೇಶ್ವರ ಕೇದಾರದೇವರು ನಾಗೇಶ್ವರ ಯಿಂ
೪೦. ತೀ ಸಕಳ ಲಿಂಗದೇವರಿಗೆ ಶ್ರೀ ಗುಡ್ಡವ್ವೆಗಳು ಮುಖ್ಯ
೪೧. ವಾಗಿ ಗಣಮತಕ್ಕೆ ಕೊಟ್ಟ ವೃತ್ತಿ ಮನೆಯ ನಿವೇಶಣ
೪೨. ನಾಲ್ಕು ಮೂಡಣ ಹೊಲದಲು ಹಿರಿಯ ಕೋಲಮತ್ತರು ೨
೪೩. ಬಡಗಣ ಹೊದಲು ಹರಿಕಾರರಿಗೆ ಕಾಲಡಿಯ ಮತ್ತರು ೪
೪೪. ಬಡಗಲು ಕೋಟೆಯ ಕೆಳಗೆ ಹೂದೋಟ ಮತ್ತರು ೧ ದೀವಿಗೆಗೆ
೪೫. ಸರ್ಬನಮಸ್ಯ ಗಾಣ ೧ ವೂರೊಳಗಣ ಗಾಣದಲು ಗಾಣಾ
೪೬. ಯಲೆ ಸೊಳಸ ೧ ದೇವರೊರಗರಾಶಿಯಲು ಕೊಳಗ ೧
೪೭. ಎಲೆಯ ಹೇರಿನ ಸುಂಕ ಷೇಡಸ ಗಟ್ಟೊಳಗಾಗಿ ದೇವರಿಗೆ ಸ
೪೮. ಲಿಸುವರು ಶ್ರೀ ತೊನಸೆಯ ಹಳ್ಳಿಯಲು ಮೇಲಕುಂದೆ ಈದ್ದು
೪೯. ದಂ ಬೋಮನು ಗಣಮತಕೆ ಕೊಟ್ಟ ಭೂಮಿ ತರಲಹಳ್ಳಿಯ
೫೦. ಕಾಚವ್ವೆದೂರಗೌಡ ಮುಖ್ಯವಾಗಿ ಧಾರಾಪೂರ್ಬಕಂ
೫೧. ಮಾಡಿ ಬಿಟ್ಟ ಕಾಲಡಿಯ ಮತ್ತರು ನಾಲ್ಕು ಪಾಂ ನಿಕ್ಕ
೫೨. ಯ್ಯ ನಿವೇಶನ ೧ ಇಂತೀ ಧರ್ಮಮ ಚಲವ್ವೆಗಳುಂ ಮಾದೇವಯ್ಯ
೫೩. ಗೆಯಸಂಖ್ಯಾತರು ಕೂರ್ತು ತೊತ್ತುಗೆಲಸಮಂ ಬೆಸ
೫೪. ಸಿಕೊಟ್ಟು ಸಿರಪಟ್ಟವಂ ಕಟ್ಟಿ ಆಚಂದ್ರಾರ್ಕ ತಾರಂಬರಂ
೫೫. ಕಾರುಣ್ಯಂಗೆಯ್ದು ಸ್ತಿರಂಜೀವಿಯೆಂದು ಮಾಡಿದ ಮಂ
೫೬. ಗಳ ಮಹಾಶ್ರೀ । ಯೀ ಧರ್ಮ್ಮಂ ಪ್ರತಿಪಾಳಿಸಿದವ
೫೭. ರು ಗಣಂಗಳು ಕೂರ್ಪರು ಈ ಧರ್ಮಕ್ಕೆ ಪ್ರತಿ
೫೮. ಕೂಲರಾದವರು ಶಿವದ್ರೋಹರು ಗಣಂಗಳುಮೆನಿಪರು
೫೯. ಕುಲಕಂದೆಯ ಪ್ರಭು ನಾಗರಸ ಬರೆದ ಶಾಸನ ।

[ಇಂಗಳಗಿಯ ಶಾಸನಗಳನ್ನು ಒದಗಿಸಿದ ಡಾ. ಎಸ್.ಕೆ. ಅರಣಿ ಹಾಗೂ ಹನುಮಾಕ್ಷಿ ಗೋಗಿ ಅವರಿಗೂ ಶಾಸನಗಳ ಕಾಲವನ್ನು ಕ್ರಿ.ಶ.ದಲ್ಲಿ ಸರಿಯಾಗಿ ಹೇಳಿದ ಡಾ. ಎಚ್.ಎಸ್. ಗೋಪಾಲ ಅವರಿಗೂ ನನ್ನ ಹೃತ್ಪೂರ್ವಕ ಧನ್ಯವಾದಗಳು. ನನ್ನ ಕ್ಷೇತ್ರಕಾರ್ಯಕ್ಕೆ ವಾಹನ ಸೌಕರ್ಯವನ್ನು ಒದಗಿಸಿದ ಬಂಧು ಸಂತೋಷದಾಮಾ ಅವರಿಗೂ, ಇಂಗಳಗಿಯ ಸುಪ್ರಸಿದ್ಧ ವ್ಯಕ್ತಿ ಬಸವಂತರಾವ್ ಪಾಟೀಲರಿಗೂ, ಅವರ ವಾಹನ ಚಾಲಕ ಮಂಜುನಾಥ ಅವರಿಗೂ ನಾನು ಕೃತಜ್ಞ.]




ವೃಷಭನಾಥ ಬಸದಿಯ
ವೃಷಭನಾಥನ ಶಿಲ್ಪ



ವೃಷಭನಾಥ ಗುಡಿಯ ಕಂಬದ
ಮೇಲೆ ಜಿನ ಶಿಲ್ಪ



ಇಂಗಳಗಿ ದೇಗುಲ



ದೇಗುಲದೊಳಗೆ ಪಾರ್ಶ್ವನಾಥ
ಉಬ್ಬು ಶಿಲ್ಪ




ಮುಕ್ಕೊಡೆ ಶಿಲ್ಪ ಮತ್ತು ಶಾಸನ
ದೇಗುಲದೊಳಗೆ ಶಾಸನದ
ಅಕ್ಷರಗಳನ್ನು ಗುರ್ತಿಸಲು
ಸಾಧ್ಯವಿಲ್ಲ



ಒಂಟಿ ನಂದಿ ಶಿಲ್ಪ



ಒಂಟಿ ನಂದಿ ಶಿಲ್ಪದ ಎದುರುಗಡೆ ಮೈದಾನದಲ್ಲಿ ಎಡಗಡೆ
ವೀರಭದ್ರಗುಡಿ, ಬಲಗಡೆ ಈಶ್ವರ ಗುಡಿ




ಚಂದ್ರಮೌಳೇಶ್ವರ ದೇವಸ್ಥಾನ



ಈಶ್ವರ ದೇವಾಲಯ, ಚಾಳುಕ್ಯ ಶೈಲಿಯ ಬಾಗಿಲ ಚೌಕಟ್ಟು



ಸಿದ್ಧರಾಮನ ಗದ್ದುಗೆ ಮತ್ತು ಈಶ್ವರಲಿಂಗ



ಕ್ರಿ.ಶ. ೧೨೦೯ರ ಶಾಸನ ೩೭ನೇ ಸಾಲಿನಲ್ಲಿ ಸಿದ್ಧರಾಮನ ಉಲ್ಲೇಖ ಇದೆ



ಕೂಡಲಸಂಗಮೇಶ್ವರ ದೇವಸ್ಥಾನ ಇದೊಂದು ತ್ರಿಕೂಟಾಚಲ



ಮುಸ್ಲಿಂ ಸಂತನ ದರ್ಗಾ

ಆಕರ ಗ್ರಂಥಗಳು

೧. ಎಂ.ಬಿ. ಪಾಟೀಲ (೧೯೯೭), ಗುಲಬರ್ಗಾ ಜಿಲ್ಲೆ ಗ್ಯಾಸೆಟಿಯರ್, ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಬೆಂಗಳೂರು.

೨. ಹನುಮಾಕ್ಷಿ ಗೋಗಿ (೧೯೯೬), ಕಲಬುರ್ಗಿ ಜಿಲ್ಲೆಯ ಶಾಸನಗಳು, ಶಿವಚಂದ್ರ ಪ್ರಕಾಶನ, ಹುಬ್ಬಳ್ಳಿ.

೩. ಚಂದ್ರಶೇಖರ ಹೆಚ್. (೨೦೧೬), ವಚನ ತವನಿಧಿ, ಐ.ಬಿ.ಎಚ್. ಪ್ರಕಾಶನ, ಬಿ.ಎಸ್.ಕೆ. ಲೇಔಟ್ ಈಗ ಹನುಮಂತನಗರ, ಬೆಂಗಳೂರು, ಪುಟ ೧೫೧–೧೫೯, ಲೇಖನ: ಶಿವಯೋಗಿ ಸಿದ್ಧರಾಮರ ಕಾಲನಿರ್ಣಯ, ಶಾಸನಗಳ ಹಿನ್ನೆಲೆಯಲ್ಲಿ.

ಕನ್ನಡ ವಾಗ್ಗೇಯ ಪರಂಪರೆ

ಪ್ರೊ. ಶಕುಂತಲಾ ಸಿ. ಸಿಂಧೂರ*

ಕಲೆಗಳಲ್ಲಿ ಸಂಗೀತ ಅತ್ಯಂತ ಪ್ರಾಚೀನವಾದುದು. ಅಷ್ಟೇ ಪರಿಣಾಮಕಾರಿ 'ಕನ್ನಡ ವಾಗ್ಗೇಯ ಪರಂಪರೆ' ಎಂಬ ಪ್ರಖ್ಯಾತಿ ಪಡೆದಿರುವುದು. ಲಲಿತ ಕಲೆಗಳಲ್ಲಿ ಅತ್ಯಂತ ಲಲಿತವಾದದ್ದೆಂದು ಪರಿಗಣಿಸಲ್ಪಟ್ಟಿದೆ. ಸಂಗೀತವು ಮಾನವನಿಗೆ ದೈವದತ್ತ ವರದಾನವಾಗಿರುತ್ತದೆ. ಮಾತ್ರ ಹೃದಯದ ವಿಚಾರಗಳ ಭಾಷೆಯಾದರೆ ಸಂಗೀತ ಹೃದಯಾಂತರಾಳದ ಭಾಷೆ. ಉತ್ತರ ಭಾರತದಲ್ಲಿ ಮುಸ್ಲಿಮರ ದಾಳಿಗಳಿಂದ ಅಲ್ಲಲ್ಲಿ ಕಲೆಗಳು ತತ್ತರಿಸತೊಡಗಿದಾಗ ದಕ್ಷಿಣದಲ್ಲಿ ಭಾರತೀಯತೆಯನ್ನು ಉಳಿಸಿಕೊಂಡು ಬರಲು ಕರ್ನಾಟಕ ಕಾರಣವಾಯಿತು. ಆದ್ದರಿಂದ ದಕ್ಷಿಣ ಭಾರತದ ಸಂಗೀತಕ್ಕೆ 'ಕರ್ನಾಟಕ ಸಂಗೀತ' ಎಂದು ಹೆಸರಾಯಿತು.

ಪುರಂದರದಾಸರು ಕರ್ನಾಟಕ ಸಂಗೀತ ಪಿತಾಮಹರು. ಇವರ ಅನೇಕ ಕೃತಿಗಳಲ್ಲಿ ವಿಜಯನಗರ ಸಾಮ್ರಾಜ್ಯದ ವಿವಿಧ ಭಾಗಗಳಲ್ಲಿದ್ದ ದೇವದೇವತೆಗಳ ಸ್ತುತಿಗಳು ಕಂಡುಬರುತ್ತವೆ. ಇದಕ್ಕೆ ಉತ್ತಮ ನಿದರ್ಶನ ಹೇಮಕೂಟದ ಮೇಲಿರುವ ಗಣೇಶನ ಸ್ತುತಿ. 'ಲಂಬೋದರ ಲಕುಮಿಕರ ಅಂಬಾಸುತ ಅಮರವಿನುತ' ಈ ಪಿಳ್ಳಾರಿ ಗೀತೆಯಲ್ಲಿ ಹೇಮಕೂಟ ಸಿಂಹಾಸನದ ಮೇಲಿನಿಂದ ಕಾಣುವ ವಿರೂಪಾಕ್ಷನ ಮಂದಿರವನ್ನು ವರ್ಣಿಸಿದ್ದಾರೆ. ಇಂತಹ ವರ್ಣನೆಗಳು ಅಂದಿನ ಭೌಗೋಳಿಕ ಸ್ಥಿತಿಯನ್ನರಿಯಲು ತುಂಬಾ ಸಹಾಯಕಾರಿ ಆಗಿರುತ್ತವೆ.

ನಮ್ಮ ನಾಡುನುಡಿಯ ಸಂಸ್ಕೃತಿಯ ಮಹಿಮೆಯನ್ನು ಬಿತ್ತರಿಸುವ ಸಂಗೀತ ಕಲೆಯು ಕನ್ನಡ ವಾಗ್ಗೇಯ ಪರಂಪರೆಯ ಸಾಂಸ್ಕೃತಿಕ ಹಿರಿಮೆಯ ಪ್ರತಿಬಿಂಬವಾಗಿರುತ್ತದೆ. ಆರಂಭದಲ್ಲಿ ನಮ್ಮ ಸಂಗೀತದ ಹೂರಣವನ್ನೂ ತಿಳಿಯಲಾಗದ ಪಾಶ್ಚಾತ್ಯರಲ್ಲಿ ಕೆಲವರು ಅಸಂಗತ ಟೀಕೆಗೈದಿದ್ದರು. ಆದಾಗ್ಯೂ ಆಂಗ್ಲರ ಆಡಳಿತವು ಸಂಗೀತವನ್ನು ಒಂದು ಪಠ್ಯವನ್ನಾಗಿ ಶಾಲೆಯಲ್ಲಿ ಕಲಿಸುವ ವ್ಯವಸ್ಥೆ ಕಲ್ಪಿಸಿರುವುದು ಪ್ರಶಂಸನೀಯ. ೧೯೨೦-೩೦ರ ವೇಳೆಗೆ ಸಾಂಪ್ರದಾಯಿಕ ಮಡಿವಂತಿಕೆ ಬಿಟ್ಟು ಮಧ್ಯಮ ವರ್ಗದವರೂ ಸಂಗೀತದ ಕಡೆಗೆ ವಾಲಿದ್ದು ರಾಜರ ಪ್ರೋತ್ಸಾಹ ಹಾಗೂ ಗಾಯನ ಸಮಾಜದ ಪರಿಶ್ರಮದ ಕಾರಣವೇ ಆಗಿದೆ. ಪತ್ರಿಕಾ ಮಾಧ್ಯಮಗಳು ಆಕಾಶವಾಣಿ ದೂರದರ್ಶನ ಅಂತರ್ಜಾಲ ಮಾಧ್ಯಮಗಳು ಈ ದಿಶೆಯಲ್ಲಿ ಸಂಪೂರ್ಣ ನೆರವಾಗಿವೆ.

ತಂಜಾವೂರು ರಾಜ್ಯದ ಪತನದ ನಂತರ ಬಹುವಾಗಿ ಕಲೆಗೆ ರಾಜಪ್ರೋತ್ಸಾಹ ಲಭಿಸಿದ್ದು ಕಲಾಭಿಮಾನಿಗಳಾದ ಮೈಸೂರು ಅರಸರಿಂದ 'Mysore court become a cynosure of musical and Literary attention' ಆದರೆ ಸಂಗೀತವನ್ನು ಶಾಲೆಗಳಲ್ಲಿಯೇ ಆಗಲಿ ಕಾಲೇಜುಗಳಲ್ಲಿಯೇ ಆಗಲಿ ಕಲಿಸುವ ವಿಷಯ ಆಗಿರಲಿಲ್ಲ. ಇದಕ್ಕಾಗಿ ರಾಷ್ಟ್ರೀಯ ಆಂದೋಲನ ನಡೆಯಬೇಕಾಯಿತು. ೧೮೯೨-೧೯೩೨ರ ಮೈಸೂರಿನ ಆಡಳಿತ ವರದಿಗಳನ್ನು ಪರಿಶೀಲಿಸಿದಾಗ ಸಂಗೀತದ ಬಗ್ಗೆ ಯಾವ ವರದಿಯೂ ಕಂಡುಬರುವುದಿಲ್ಲ. ಕುಶಲ ಕೈಗಾರಿಕಾ ಕಲೆಗಳಿಗೆ ಹೆಚ್ಚು ಒತ್ತು ಕೊಟ್ಟಿದ್ದು ಮಾತ್ರ ಕಂಡುಬರುತ್ತದೆ. ಆದರೆ ೧೯೩೨-೪೪ರ ಮೈಸೂರು ವಿದ್ಯಾಭ್ಯಾಸದ ವರದಿಯಲ್ಲಿ [Misscellaneoys ch XV. p. 107] Aesthetic Education ತಲೆಬರಹದ ಅಡಿ ಸಂಗೀತದ ಬಗ್ಗೆ ಪ್ರಪ್ರಥಮ ಸೂಚನೆ ಇದೆ. ಮತ್ತು ೧೯೩೭ರಲ್ಲಿ ಸಂಗೀತವು ಮಾಧ್ಯಮಿಕ ಶಾಲೆಯಲ್ಲಿ ಆರಂಭಿಸಿದ್ದು ಕಂಡುಬರುತ್ತದೆ. ಸಂಗೀತವನ್ನು ಐಚ್ಛಿಕವಾಗಿ ಅಭ್ಯಾಸ ಮಾಡಲು ಸರ್ಕಾರ ಪರವಾನಗಿ ನೀಡಿತು. ಇದರಿಂದ ಹಲವಾರು ವಿದ್ಯಾರ್ಥಿಗಳು ಸಂಗೀತ ಕಲಿಯಲು ಅವಕಾಶ ಪ್ರೌಢಶಾಲೆಯಲ್ಲಿ ಮುಂದುವರಿಸಲು ಅನುಕೂಲವಾದರೂ ಎಸ್‌ಎಸ್‌ಎಲ್‌ಸಿ ಮುಗಿದ ನಂತರ ಮುಂದಿನ ವ್ಯವಸ್ಥೆ ಇಲ್ಲದ್ದರಿಂದ ಸಂಗೀತದ ಮುಂದುವರಿಕೆ ಅಸಾಧ್ಯವಾಯಿತು.

ಸಂಗೀತವನ್ನು ಹೆಚ್ಚು ಪ್ರೋತ್ಸಾಹಿಸಿದ್ದು ಮಹಿಳಾ ಸೇವಾ ಸಮಾಜ, ೧೯೧೨ರಲ್ಲಿ ಗಾಯನ ಸಮಾಜ, ೧೯೦೫ ಮತ್ತು ಲೇಡೀಸ್ ಅಸೋಸಿಯೇಷನ್. ಸರ್ಕಾರ ಒಂದು ರಚನಾ ಮಂಡಳಿಯನ್ನು ರಚಿಸಿ ಅದರಲ್ಲಿ ಉತ್ತಮ ಸಂಗೀತ

* ಶಿವಗಂಗಾ ನಿಲಯ, ಪಿ&ಟಿ ಕ್ವಾಟ್ರಸ್ ಹಿಂದೆ, ಕರಿಯಮ್ಮ ಬಡಾವಣೆ, ಗದಗ, ಮೊ. ೯೯೮೦೭ ೧೧೪೩೫

ವಿದ್ವಾಂಸರು ಪರೀಕ್ಷಾ ಮಂಡಳಿಯಲ್ಲಿ ಇರುವಂತೆ ಸೂಚಿಸಿತು. ೧೯೩೦ರ ನಂತರದ ಈ ಬದಲಾವಣೆಗೆ ಮಾರ್ಗರೇಟ್ ಕಸಿನ್ಸ್‌ರವರ ಕೊಡುಗೆ ಅಪಾರ. ಸ್ವತಃ ಸಂಗೀತಗಾರರೂ ಸಂಗೀತದ ಬಗ್ಗೆ ಅಪಾರ ಕಾಳಜಿಯುಳ್ಳ ಥಿಯಾಸಫಿ ಪಂಗಡಕ್ಕೆ ಸೇರಿದವರೂ ಆಗಿದ್ದರಿಂದ ಸಂಗೀತದ ರಾಷ್ಟ್ರೀಯ ಮೌಲ್ಯವನ್ನು ಎತ್ತಿ ಹಿಡಿದದ್ದೇ ಅಲ್ಲದೆ ಇದು ಪಠ್ಯಕ್ರಮದಲ್ಲಿ ಸೇರಿಸಬೇಕೆಂದು ವಾದಿಸಿದರು.

ಮಾರ್ಗರೇಟ್ ಕಸಿನ್ಸ್‌ರವರ ಕಲೆಯ ಕಾಳಜಿಯಿಂದ ಸಂಗೀತವು ಐಚ್ಛಿಕ ವಿಷಯವಾಯಿತಲ್ಲದೆ ಸರ್ಕಾರದ ಗಮನವು ಸಂಗೀತದೆಡೆಗೆ ಹರಿಯುವಂತಾಯಿತು. ಅಲ್ಲದೆ ಜನಸಾಮಾನ್ಯನಿಗೆ ಸಂಗೀತವನ್ನು ಶಾಲೆ-ಕಾಲೇಜುಗಳಲ್ಲಿ ಕಲಿಯಲು ಅವಕಾಶ ಲಭಿಸಿದಂತಾಯಿತು. ೨೦ನೆಯ ಶತಮಾನದ ಮಧ್ಯದಷ್ಟೊತ್ತಿಗೆ ಸಂಗೀತ ಕೇವಲ ಗುರುಶಿಷ್ಯ ಬಾಂಧವ್ಯದಿಂದ ಮಾತ್ರ ಸಂಗೀತ ಕಲಿಯಲು ಸಾಧ್ಯ ಎಂಬ ಭಾವನೆ ಬೇರ್ಪಟ್ಟು ಒಂದು ವ್ಯವಸ್ಥೆಗೊಳಪಟ್ಟು ಸಂಗೀತಕ್ಕೂ ಒಂದು ಸ್ಥಾನವಿದೆ ಎಂಬುದನ್ನು ಗುರುತಿಸಿಕೊಂಡಿತು. ಹೀಗಾಗಿ ಸಂಗೀತ ಸಮಾಜದ ಅಂಗವಾಯಿತಲ್ಲದೆ ರಾಷ್ಟ್ರೀಯ ಆಂದೋಲನದಲ್ಲಿ ಪ್ರಮುಖ ಪಾತ್ರ ವಹಿಸುವಂತಾಯಿತು.

೧೯೨೪ರ ಬೆಳಗಾಂ ಕಾಂಗ್ರೆಸ್ ಅಧಿವೇಶನದಲ್ಲಿ ಸಂಗೀತಕ್ಕೆ ಪ್ರಾಮುಖ್ಯತೆ ಲಭಿಸಿ ಕನ್ನಡ ನಾಡಿನ ಅಪೂರ್ವ ಕಲಾವಿದರಾದ ವೈಣಿಕ ಶಿಖಾಮಣಿ ವೀಣೆ ಶೇಷಣ್ಣ, ಕೆ. ವಾಸುದೇವಾಚಾರ್ಯರು ಬೆಳಗಾಂ ಕಾಂಗ್ರೆಸ್‌ನಲ್ಲಿ ಉಪಸ್ಥಿತರಿದ್ದರು. ಗಾಂಧೀಜಿಯವರು ಶೇಷಣ್ಣನವರ ವೀಣಾವಾದನವನ್ನು ಪೂರ್ಣ ಆಲಿಸಿದರು. "ಜೈ ಭಾರತ ಭೂಮಿಗೆ ಮಾತೆಗೆ, ಜೈ ಪಾವನ ಮೂರ್ತಿಗೆ ಸನ್ಮಂಗಳವಾಗಲಿ ಸತತಂ ॥" ತಿರುಮಲೆ ರಾಜಮ್ಮ ರಚಿಸಿದ ಈ ಅತ್ಯಂತ ಜನಪ್ರಿಯ ಗೀತೆಯನ್ನು ಶಾಲೆ-ಕಾಲೇಜುಗಳಲ್ಲಿ ಮಕ್ಕಳು ಹಾಡಲಾರಂಭಿಸಿದಾಗಿನಿಂದ ಸಾರ್ವಜನಿಕರಿಗೂ ಸಂಗೀತ ೧೯೩೦-೩೫ರಲ್ಲಿ ತಲುಪಿತ್ತು. ೧೯೨೬ರಲ್ಲಿ ಗ್ವಾಲಿಯರ್‌ನಲ್ಲಿ ಸಂಗೀತ ವಿಶ್ವವಿದ್ಯಾಲಯ ಸ್ಥಾಪಿಸಿದರು. ಬರೋಡದಲ್ಲಿ ಮಹಾರಾಜರ ಪ್ರೋತ್ಸಾಹದಿಂದ ಸಂಗತೀಶಾಸ್ತ್ರ ಬಲ್ಲ ಸಂಗೀತಗಾರರ ಸಮ್ಮೇಳನ ನಡೆಸಿದ್ದರಿಂದ ಮೈಸೂರಿನಿಂದ ಹೊರಗಡೆ ನಡೆದ ಸಂಗೀತಕ್ಕೆ ಪ್ರೋತ್ಸಾಹವಾದಂತಾಗಿ ಕನ್ನಡ ವಾಗ್ಗೇಯ ಪರಂಪರೆ ಮುಂದುವರಿಯಲು ಸುವರ್ಣಾವಕಾಶ ಲಭ್ಯವಾಯಿತು. ೧೯೩೭ರಲ್ಲಿ ಆಕಾಶವಾಣಿ ಸ್ಟೇಷನ್ ಮೈಸೂರಿನಲ್ಲಿ ವಾಣಿವಿಲಾಸಪುರಂನಲ್ಲಿ ಆರಂಭವಾಯಿತು. ಖಾಸಗಿ ಸಂಸ್ಥೆಯಾಗಿ ನಡೆಯುತ್ತಿದ್ದ ಇದು ೧೯೪೨ರಲ್ಲಿ ಕೇಂದ್ರ ಸರ್ಕಾರಕ್ಕೆ ವರ್ಗಾಯಿಸಲ್ಪಟ್ಟಿತು. ಮುಂದೆ ೧೯೫೫ ನವೆಂಬರ್ ೨ರಂದು ಈ ಕೇಂದ್ರವನ್ನು ಬೆಂಗಳೂರಿಗೆ ಸ್ಥಳಾಂತರಿಸಲಾಯಿತು. ನಂತರ ಧಾರವಾಡ, ಭದ್ರಾವತಿ, ಗುಲ್ಬರ್ಗ ಮೊದಲಾದ ಅಂಗಸಂಸ್ಥೆಗಳು ಜನ್ಮ ತಾಳಿದ್ದರಿಂದ % ೫೩ರಷ್ಟು ಶಾಸ್ತ್ರೀಯ ಸಂಗೀತ ಬಿತ್ತರಿಸಲಾರಂಭಿಸಿದ್ದರಿಂದ ಸಂಗೀತಕ್ಕೆ ಅಧಿಕ ಪ್ರಾಧಾನ್ಯತೆ ಹಾಗೂ ಪ್ರತಿಭಾವಂತರಿಗೆ ಅವಕಾಶ ಲಭಿಸತೊಡಗಿತು.

ಸ್ವಾತಂತ್ರ್ಯದ ನಂತರ ಸಂಗೀತ ಪರಂಪರೆ ಬೆಳೆಯುತ್ತ ಹೋದಂತೆ ಅದು ನಮ್ಮ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿ ಬೆಳೆದದ್ದು ಇತಿಹಾಸ. ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಕರ್ನಾಟಕ ಸಂಗೀತ ತನ್ನ ಬಹುಮುಖೀ ಬೆಳವಣಿಗೆಯನ್ನು ಕಾಣಲಾರಂಭಿಸಿತು. ಅನೇಕ ಪ್ರತಿಭಾವಂತ ಶಾಸ್ತ್ರಕಾರರು ತಮ್ಮ ಶಾಸ್ತ್ರಕೃತಿಗಳನ್ನು ರಚಿಸತೊಡಗಿದರು. ಈ ಅವಧಿಯಲ್ಲಿ ಹಲವು ಸಂಗೀತಗಾರರು ಸಂತರು ಮತ್ತು ಸಂಗೀತ ಶಾಸ್ತ್ರಜ್ಞರು ತಮ್ಮ ಸಮೃದ್ಧ ಕೊಡುಗೆಗಳನ್ನು ಧಾರೆಯೆರೆದರು.

ಕ್ರಿ.ಶ. ೧೩೩೩-೧೩೮೬ರ ಅವಧಿಯಲ್ಲಿ ವಿದ್ಯಾರಣ್ಯರು ಸಂಗೀತ ಸಾರವೆಂಬ ಕೃತಿಯನ್ನು ರಚಿಸಿದ್ದು ಇದು ದೊರೆತಿಲ್ಲ. ತಂಜಾವೂರಿನ ದೊರೆ ಚನ್ನಪ್ಪನಾಯಕನ ಮಂತ್ರಿಯಾಗಿದ್ದ ಗೋವಿಂದ ದೀಕ್ಷಿತನು ಕ್ರಿ.ಶ. ಸು. ೧೬೦೦ರಲ್ಲಿ ಸಂಗೀತ ಸುಧಾ ಎಂಬ ಕೃತಿ ರಚಿಸಿರುವನು. ಇದರಲ್ಲಿ ವಿದ್ಯಾರಣ್ಯರು ಸಂಗೀತಸಾರವನ್ನು ಬರೆದಿರುವ ಸಂಗತಿಯನ್ನು ಸೂಚಿಸಿರುವುದಲ್ಲದೆ "ಕರ್ನಾಟಕ ಸಿಂಹಾಸನ ಭಾಗ್ಯ ವಿದ್ಯಾರಣ್ಯಾಭಿಧ ಶ್ರೀ ಚರಣಾಗ್ರಣೀಭ್ಯ" ಎಂಬ ವಾಕ್ಯ ಉಲ್ಲೇಖಿಸಿದ್ದಾರೆ.

ಕ್ರಿ.ಶ. ಸು. ೧೨೩೦ರ ಸಾರಂಗದೇವನ ಸಂಗೀತ ರತ್ನಾಕರಕ್ಕೆ ವ್ಯಾಖ್ಯಾನವನ್ನು ರಚಿಸಿರುವ ಕಲ್ಲಿನಾಥ (ಕಲ್ಲಪ್ಪನು) ಪ್ರೌಢದೇವರಾಯನ [ಕ್ರಿ.ಶ. ೧೪೨೪-೧೪೪೯] ಆಸ್ಥಾನದಲ್ಲಿದ್ದವನು. ಇವನು ವಲ್ಲಭದೇವನ ಮೊಮ್ಮಗ. ಲಕ್ಷ್ಮೀಧರ-ನಾರಾಯಣಿ ದೇವಿಯರ ಮಗ. ಇವನು ಪ್ರೌಢದೇವರಾಯನ ಕೋರಿಕೆಯಂತೆ ಸಂಗೀತ ರತ್ನಾಕರಕ್ಕೆ ವ್ಯಾಖ್ಯಾನ ಬರೆದಿದ್ದಾನೆ. ವಿಜಯನಗರ ಸಾಮ್ರಾಜ್ಯದ ರಾಜರ ಕಲಾಪೋಷಣೆಯನ್ನು ಸ್ವತಃ ರಾಜರಿಗಿದ್ದ ಸಂಗೀತಶಾಸ್ತ್ರ ಪಾಂಡಿತ್ಯವನ್ನರಿಯಲು ಇಂತಹ ಕೃತಿಗಳು ಪ್ರೇರಣೆದಾಯಕವಾಗಿರುತ್ತವೆ. ಈಗ ರಾಷ್ಟ್ರ ಪ್ರಸಿದ್ಧವಾಗಿರುವ ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರು ತಾಲ್ಲೂಕಿನ ಚಿಂತಲಪಲ್ಲಿ (ಹುಣಸನಹಳ್ಳಿ) ಸಂಗೀತ ಪರಂಪರೆಯ ಪೂರ್ವಿಕರಲ್ಲಿ ಒಬ್ಬರಾಗಿರುವ ಚಿಲಿವೆಂದಲ ಗವಿರಂಗದಾಸರೆಂಬುವರು ಪ್ರೌಢದೇವರಾಯನ ಕಾಲದಲ್ಲಿದ್ದರು. ಇವರು ಪ್ರೌಢದೇವರಾಯನನ್ನು ಕುರಿತು ಕೀರ್ತನೆ

ರಚಿಸಿದ್ದಾರೆ. ಇತಿಹಾಸಕಾರರು ಇದನ್ನು ಗಮನಿಸಿಲ್ಲ. ಇಮ್ಮಡಿ ದೇವರಾಯನ ವ್ಯಕ್ತಿತ್ವವನ್ನು ಕರ್ನಾಟಕದ ವೈಭವವನ್ನು ವರ್ಣಿಸುವ ಈ ಕೀರ್ತನೆಯನ್ನು ಇತಿಹಾಸದ ವಿಶ್ಲೇಷಣೆಯಲ್ಲಿ ಬಳಸಿಕೊಳ್ಳಬಹುದಾಗಿದೆ. ಈ ಕೀರ್ತನೆ ಹೀಗಿದೆ–

ದೇವರಾಯುಡೇ ಮನ ಸದಾಶಿವುದು
ಪಾವನ ಗಂಗಾಧರುಡು ಗಜವೇಟಕಾರುಡು ॥
ಅ.ಪ ॥ ಶ್ರೀ ವಿಜಯ ವಿದ್ಯಾನಗರ ಪು
ರೀ ವಿಶೇಷ ಸ್ಥಿತುಡೇ ಧರಹಾಸುಡೇ ॥
ನವಾವರಣ ಸಾಲಂಕೃತ ಸಾಲಂಕಾರುಡೇ
ಭಾವುಕ ಜನ ರಕ್ಷಕುಡೇ ಕರ್ನಾಟದೇಶಾಧಿಪುಡೇ ॥
ಚ ॥ ಭಸ್ಮಮೆಗಾಕ ಮಲಯ ಯವನಾದಿ ಸುಗಂಧ ಧರುಡೇ ॥
ವಿಸ್ಮಯಕಾರುಡೇ ಭುವ । ನೇಶ್ವರಿ ಧವುಡೇ ॥
ಅಶ್ವಗಜ ಪದಾತಿ ರಥಾಂ ಚತುರಂಗ ವಿತುಡೇ ॥
ವಿಶ್ವವಿಜಯ ದಶಮೀ ದಶದಿಕ್ಪಾಲಕನುತುಡೇ ॥ ಪರಿಪೂರ್ಣುಡೇ ॥
ಮತ್ಸ್ಯಶರಭ ಸಾಲ್ವಗಂಢ ಭೇರುಂಡಾದ್ಯನೇಕ ಬಿರುದಾಧಿಷ್ಠಿತುಡೇ ॥
ಮತ್ಸ್ಯಗಿರೀ ನಾಮಕ ಚಲುವಿಂದಲ ಗಿರೀಶ ಸಖುಡೇ ॥

ಪೂರ್ಣ ಪಾಠವಿದಾಗಿದೆ.

ಭಂಡಾರು ಲಕ್ಷ್ಮೀನಾರಾಯಣನು ಸಂಗೀತ ಸೂರ್ಯೋದಯವೆಂಬ ಕೃತಿಯನ್ನು ರಚಿಸಿದ್ದಾರೆ. ಈತನು ಕೃಷ್ಣದೇವರಾಯನ ಆಸ್ಥಾನಿಕ. ತನ್ನ ಕೃತಿಯಲ್ಲಿ ಕೃಷ್ಣದೇವರಾಯನ ದಿಗ್ವಿಜಯವನ್ನು ವರ್ಣಿಸಿದ್ದು ಈ ಕೆಳಗಿನಂತಿದೆ.

ದುರ್ಗಂ ಜಿತ್ವಾಽಥ ಸೋಽಸಾವುದಯ
ಗಿರಿವರಂ ತತ್ರ ರಾಹುತ್ತ ರಾಜಂ
ಬಂದೀಕೃತ್ವಾ ತುಹೃತ್ವಾಯುಧಿ
ನಗರವರೇ ಕೊಂಡವೀಡ್–ಕೊಂಡಪಲ್ಲ್ಯೌ ।

ಜೀವಗ್ರಾಹಂ ಗೃಹೀತ್ವಾ ಗಜಪತಿ
ತನಯಂ ಪೋಟ್ಟು – ಸೂರ್ – ಪಟ್ಟಣಾಗ್ರೇಽ
ಶ್ಯಸ್ಲಾಘ್ಯಪ್ರತಾಪೋ ಬಿರುದಯುತ
ಜಯಸ್ತಂಭ ಮುಚ್ಚೈಃಕ್ ನ್ಯಖಾನಿರ್ ।

ಸ್ವರಮೇಳ ಕಲಾನಿಧಿ ಎಂಬ ಕೃತಿಯ ಕರ್ತೃ ಬಯಕಾರ ರಾಮಪ್ಪಯ್ಯ. ಇವನು ರಾಮ ಮಂತ್ರಿಯು ಅಳಿಯ ರಾಮರಾಯನ ಆಸ್ಥಾನದಲ್ಲಿದ್ದನು. ಈತನ ತಂದೆ ತಿಮ್ಮರಸ. ರಾಮಪ್ಪಯ್ಯನು ಸಂಗೀತರತ್ನಾಕರಕ್ಕೆ ವ್ಯಾಖ್ಯಾನ ರಚಿಸಿದ ಕಲ್ಲಿನಾಥನ ಮಗಳ ಮಗ. ತನ್ನ ಕೃತಿಯಲ್ಲಿ ಅಳಿಯ ರಾಮರಾಯನ ಆಸ್ಥಾನ ವೈಭವವನ್ನು ಅಲ್ಲಿ ನಡೆಯುತ್ತಿದ್ದ ಸಂಗೀತ ಸಾಹಿತ್ಯ ವಿನೋದ ಕಾರ್ಯಕ್ರಮ ವರ್ಣಿಸಿದ್ದಾನೆ. ಮತ್ತು ಈ ಕೃತಿ ರಚನೆಗೆ ರಾಮರಾಯಪ್ರಭುವೇ ಕಾರಣನೆಂದು ಉಲ್ಲೇಖಿಸಿದ್ದಾನೆ. ಹಲವಾರು ಸಂಗೀತ ಶಾಸ್ತ್ರ ಕೃತಿಗಳು ಅಪ್ರಕಟಿತವಾಗಿದ್ದು ಅವುಗಳನ್ನು ಪ್ರಕಟಿಸಿದರೆ ಸಂಶೋಧಕರಿಗೆ ಅನುಕೂಲವಾಗುತ್ತದೆ.

ದಕ್ಷಿಣ ಕರ್ನಾಟಕದ ಜನತೆ ಇದು ಮುಂಬೈ ಸಂಗೀತ, ಚೆನ್ನೈ ಸಂಗೀತ, ಬೆಂಗಳೂರು ಸಂಗೀತ ಅಥವಾ ತ್ರಿಪುಣಿತ್ತುರ ಸಂಗೀತವೆಂದು ಪ್ರತ್ಯೇಕಿಸದೆ ಕರ್ನಾಟಕ ಸಂಗೀತವನ್ನು ಸಂಗೀತವಾಗಿಯೇ ನೋಡುವ ಬಲವಾದ ಪ್ರವೃತ್ತಿಯನ್ನು ಹೊಂದಿದ್ದು ಇದು ಮುಂದುವರಿದರೆ ಮಾತ್ರ ಸನಾತ್ನವಾಗಿರುವ ಪರಂಪರೆಯ ಸಂಗೀತವು ಅಬಾಧಿತವಾಗಿ ಉಳಿಯಲು ಸಾಧ್ಯ.

ಕರ್ನಾಟಕ ಸಂಗೀತ ಪರಂಪರೆಗೆ ಮೈಸೂರು ಅರಸರ ಕೊಡುಗೆ ಅವಿಸ್ಮರಣೀಯವಾದುದು. ವಿಜಯನಗರದ ಅವನತಿಯ ನಂತರ ಕರ್ನಾಟಕ ಸಂಗೀತಕ್ಕೆ ಆಶ್ರಯದಾತರಾಗಿ ಅದರ ಶ್ರೇಯೋಭಿವೃದ್ಧಿಗೆ ಪ್ರಚಾರಕ್ಕೆ ಮೈಸೂರಿನ ದೊರೆಗಳು ಅಪಾರವಾಗಿ ಶ್ರಮಿಸಿದ್ದಾರೆ. "ಮೈಸೂರು ಅರಸರ ಆಸ್ಥಾನವು ಭೋಜರಾಜನ ಆಸ್ಥಾನದಂತಿತ್ತು." ರಾಜರ ಉತ್ಸಾಹ ಪ್ರೋತ್ಸಾಹಗಳಿಂದಾಗಿ ಸಂಗೀತ ಕಲೆಯು ಉನ್ನತ ಮಟ್ಟಕ್ಕೇರಿತು. ಚಿಕ್ಕದೇವರಾಜ ಒಡೆಯರು, ಮುಮ್ಮಡಿ

ಕೃಷ್ಣರಾಜ ಒಡೆಯರು, ನಾಲ್ವಡಿ ಕೃಷ್ಣರಾಜ ಒಡೆಯರು ಸಂಗೀತ ಕಲಾಭಿಮಾನಿಗಳಾಗಿದ್ದರಲ್ಲದೇ ಸ್ವತಃ ನಾಲ್ವಡಿ ಕೃಷ್ಣರಾಜ ಒಡೆಯರು ವೀಣಾವಾದಕರಾಗಿರುವುದರೊಂದಿಗೆ ಭಾರತೀಯ ಪಾಶ್ಚಿಮಾತ್ಯ ಸಂಗೀತ ವಾದ್ಯಗಳ ವಾದನದಲ್ಲಿಯೂ ನಿಪುಣರಾಗಿದ್ದರು. ಹೀಗಾಗಿ ಕರ್ನಾಟಕ ಸಂಗೀತ ಕಚೇರಿಯ ಕೊನೆಗೆ ಹಿಂದೂಸ್ಥಾನಿ ಚೀಜೊಂದಾಗಲಿ ಎನ್ನುವಷ್ಟರ ಮಟ್ಟಿಗೆ ಹಿಂದೂಸ್ಥಾನಿ ಸಂಗೀತದ ಪ್ರಭಾವ ಮಹಾರಾಜರ ಮೇಲೆ ಗಾಢವಾಗಿ ಪರಿಣಾಮ ಬೀರಿತ್ತು. ಇದು ಕರ್ನಾಟಕ ಹಾಗೂ ಹಿಂದೂಸ್ಥಾನಿ ಸಂಗೀತಗಾರರಲ್ಲಿದ್ದ ಅನ್ಯೋನ್ಯತೆಯ ಪ್ರತೀಕವೂ ಆಗಿದೆ.

ಕರ್ನಾಟಕ ಸಂಗೀತದ ಕಛೇರಿಯು ಈಗಿನ ಮಾದರಿಯಲ್ಲಿ ರೂಪು ಪಡೆದುದು ಬಹುಶಃ ತಂಜಾವೂರಿನ ಆಸ್ಥಾನದಲ್ಲಿಯಾದರೂ ಬೆಳೆದುದು ಮಾತ್ರ ಮೈಸೂರಿನಲ್ಲಿ ಹಾಗೂ ತಿರುವಾಂಕೂರು ಮತ್ತಿತರ ರಾಜಾಸ್ಥಾನಗಳಲ್ಲಿ ೧೮ನೆಯ ಶತಮಾನದ ವೇಳೆಯಲ್ಲಿ. ರಾಜಾಸ್ಥಾನಗಳಲ್ಲಿಯೂ ದೇವಸ್ಥಾನಗಳಲ್ಲಿಯೂ ಶ್ರೀಮಂತರ ಮನೆಗಳಲ್ಲಿಯೂ ವಿಶೇಷ ಉತ್ಸವಗಳಲ್ಲಿಯೂ ಆಗುತ್ತಿದ್ದ ಸಂಗೀತ ಕಛೇರಿಯು ಈಗ ಶ್ರೀಸಾಮಾನ್ಯನಿಗೂ ಸುಲಭವಾಗಿ ಹೆಚ್ಚು ಕಡಿಮೆ ವರ್ಷದ ಎಲ್ಲಾ ವೇಳೆಗಳಲ್ಲಿಯೂ ಲಭಿಸುವಂತಾಗಿದೆ. ೩–೪ ತಾಸುಗಳವರೆಗೆ ನಡೆಯುತ್ತಿದ್ದುದು ಈಗ ಎರಡು ಗಂಟೆಗೆ ಕುಗ್ಗಿದೆ. ಸಂಗೀತವು ದೂರದರ್ಶನ ಹಾಗೂ ಗಣತಂತ್ರ ರಾಜ್ಯದ ಆದರ್ಶಗಳಿಗೆ ಅನುಸಾರವಾಗಿ ತನ್ನ ಉದ್ದೇಶ ಕರ್ತವ್ಯ ಗತಿಗಳನ್ನು ತಿದ್ದಿಕೊಳ್ಳುತ್ತಲಿರುವುದು ಸಾಮಾನ್ಯ ಸಂಗತಿ.

೧೮–೧೯ನೆಯ ಶತಮಾನ ಕನ್ನಡ ನಾಡಿನ ಸಂಗೀತ ಇತಿಹಾಸದಲ್ಲಿ ಅವಿಸ್ಮರಣೀಯವಾದುದು. ಮೈಸೂರು ವೀಣೆಯು ಮೈಸೂರಿನಲ್ಲಿಯೂ, ತಮಿಳು, ಆಂಧ್ರ ಪ್ರದೇಶಗಳಲ್ಲಿಯೂ ತನ್ನ ಹಿರಿಮೆ–ಗರಿಮೆಯನ್ನು ವರ್ಧಿಸಿದ ಕಾಲವದು. ಹೈದರಾಲಿ ಖಾನರು ಮೈಸೂರು ರಾಜ್ಯಸೂತ್ರವನ್ನು ಕೈಗೊಂಡಾಗ ಅವರ ಆಸ್ಥಾನದಲ್ಲಿ ಆದಪ್ಪಯ್ಯನವರು ಪ್ರಮುಖ ವಿದ್ವಾಂಸರಾಗಿದ್ದರು.

ಚಿಕ್ಕದೇವರಾಜ ಒಡೆಯರು ಗೀತಗೋಪಾಲ ಎಂಬ ಅದ್ಭುತ ಕೃತಿ ರಚಿಸಿರುವ ವಿದ್ವಾಂಸರು. ಮುಮ್ಮಡಿ ಕೃಷ್ಣರಾಜರ ಕಾಲದಲ್ಲಿ ಕರ್ನಾಟಕ ಸಂಗೀತ ಅದರಲ್ಲಿಯೂ 'ವೀಣೆ' ಇವರ ಕಾಲದಲ್ಲಿ ಉಚ್ಛ್ರಾಯ ಸ್ಥಿತಿ ತಲುಪಿತು. 'ವೀಣೆಯ ಬೆಡಗಿದು ಮೈಸೂರು ಆದದ್ದು ಇವರಿಂದಲೇ. ಇವರ ನಂತರ ನಮ್ಮ ರಾಜ್ಯ ಅನೇಕ ವೈಣಿಕ ವಿದ್ವಾಂಸರಿಗೆ ಜನ್ಮವಿತ್ತಿತು.

ಮೈಸೂರು ಸದಾಶಿವರಾಯರು ಸ್ವತಃ ಶ್ರೇಷ್ಠ ವಾಗ್ಗೇಯಕಾರರಾಗಿದ್ದರು. ಪ್ರಭುಗಳ ಆದರಾತಿಥ್ಯಕ್ಕೆ ಮನಸೋತು ಅವರಿಬ್ಬರ ಪರಸ್ಪರ ಪ್ರೀತಿ ಚಿರಿಕಾಲ ಉಳಿಯುವಂತಾಲಿ ಎಂದೋ ಏನೋ ಸದಾಶಿವರಾಯರು ದೊರೆಯ ಮೇಲೆ ರಚಿಸಿರುವ ತಿಲ್ಲಾನ ಇಂದಿಗೂ ಕರ್ನಾಟಕ ಸಂಗೀತ ಪ್ರಪಂಚದಲ್ಲಿ ವಿರಾಜಮಾನವಾಗಿದೆ.

ತಂಜಾವೂರಿನ ವೆಂಕಟಸುಬ್ಬಯ್ಯನವರ ದಿವ್ಯ ಪ್ರತಿಭೆಗೆ ಬೆರಗಾಗಿ ಆಗಿನ ದಿವಾನರಾಗಿದ್ದ ಪೂರ್ಣಯ್ಯನವರು "ಸುವರ್ಣ ವೀಣೆ"ಯನ್ನು ಕೊಟ್ಟರಂತೆ! ನಾಲ್ವಡಿ ಕೃಷ್ಣರಾಜರಿಂದ ವೈಣಿಕ ಶಿಖಾಮಣಿ ಎಂದು ಬಿರುದಾಂಕಿತರಾದ ವೀಣೆ ಶೇಷಣ್ಣನವರು ದಕ್ಷಿಣ ಭಾರತದಾದ್ಯಂತ ಸಂಚರಿಸಿ ತಮ್ಮ ವಿದ್ವತ್ತನ್ನು ಪ್ರದರ್ಶಿಸಿ ಮೈಸೂರಿನ ಕೀರ್ತಿಯನ್ನು ನೂರು ಪಟ್ಟು ವಿಸ್ತರಿಸಿದ್ದಾರೆ.

ಮಹಾನ್ ವಾಗ್ಗೇಯಕಾರರ ಶ್ರೇಣಿಗೆ ಸೇರಿದ ಮೈಸೂರು ವಾಸುದೇವಾಚಾರ್ಯರು ಕರ್ನಾಟಕ ಸಂಗೀತ ಪ್ರಪಂಚದಲ್ಲಿ ನಮ್ಮ ರಾಜ್ಯದ ಹೆಸರನ್ನು ಗಗನದೆತ್ತರಕ್ಕೇರಿಸಿರುವುದು ಕನ್ನಡಿಗರಿಗೆ ಕೋಡು ಮೂಡಿದಂತಾಗಿದೆ. ತ್ಯಾಗರಾಜರ ಕೃತಿಗೆ ಸರಿಸಮವಾದ ಹಲವಾರು ಕೃತಿಗಳನ್ನು ರಚಿಸಿದ್ದಾರಲ್ಲದೆ ಇಡೀ ರಾಷ್ಟ್ರದ ಮನ್ನಣೆ ಗಳಿಸಿದ್ದಾರೆ. ಈ ಎಲ್ಲ ಮಹನೀಯರು ಹಾಕಿಕೊಟ್ಟಿರುವ ಭವ್ಯ ಸಂಗೀತ ಪರಂಪರೆಯನ್ನು ಉಳಿಸಿ ಬೆಳೆಸಿಕೊಂಡು ಬರುತ್ತಲಿರುವ ಕೀರ್ತಿ ಇಂದಿನ ವಾಗ್ಗೇಯಕಾರರಿಗೆ ಸಲ್ಲುತ್ತದೆ.

ವೀಣೆ ಸುಬ್ರಹ್ಮಣ್ಯಯ್ಯರ್ ಸ್ವತಃ ಪ್ರಖ್ಯಾತ ವಿದ್ವಾಂಸರು ಶಾಸ್ತ್ರಜ್ಞರು. 'ಸಂಗೀತ ಸಮಯಸಾರ' ಎಂಬ ಲಕ್ಷ್ಯ ಲಕ್ಷಣಯುಕ್ತವಾದ ಗ್ರಂಥವನ್ನು ರಚಿಸಿದವರು. ಶಾಮಾಶಾಸ್ತ್ರಿಗಳು ಶಂಕರಾಭರಣದಲ್ಲಿ ರಚಿಸಿರುವ 'ಸರೋಜದಳನೇತ್ರಿ' ಕೃತಿಗೆ ಇಂದು ದೊರೆಯುವ ಚಿಟ್ಟೆ ಸ್ವರವು ಇವರದೇ. ಅವರು ಸ್ವರಜತಿಗಳನ್ನೂ ಒಂದು ರಾಗಮಾಲಿಕೆಯನ್ನೂ ರಚಿಸಿದ್ದಾರೆ.

ವೀಣೆ ಶಾಮಣ್ಣನವರ ಪಟ್ಟಶಿಷ್ಯರಾದ ಬೂದಿಹಾಳಿನ ವೀಣಾ ಪದ್ಮನಾಭಯ್ಯನವರು ಶಾಸ್ತ್ರಜ್ಞಾನ ಸಂಪನ್ನರು. ಆಗ ಶಾಸ್ತ್ರಕೋವಿದರಾಗಿದ್ದ ವೀಣಾ ಸಾಂಬಯ್ಯನವರನ್ನು ಸಂಗೀತ ರತ್ನಾಕರದ ಒಂದು ಉಕ್ತಿಯ ಚರ್ಚೆಯಲ್ಲಿ ತರುಣ ಪದ್ಮನಾಭಯ್ಯನವರು ಎದುರಿಸಿ ಜಯಶಾಲಿಗಳಾಗಿದ್ದರು. ಅವರದು ಸಂಗೀತ ಶಾಸ್ತ್ರದಲ್ಲಿ ಹೇಗೆ ನಿಶಿತವಾದ ಜ್ಞಾನವೋ

ಕಲೆಯಲ್ಲಿಯೂ ಅಷ್ಟೇ ಸಂಯಮ ಶಿಸ್ತು ನಿಷ್ಕೃಷ್ಟ ಜ್ಞಾನ. ಶ್ರುತಿಲಯಗಳಲ್ಲಿ ಶುದ್ಧಿಗಾಗಿ ನಿಖರತೆಗಾಗಿ ಆಯುಷ್ಯವನ್ನೆಲ್ಲ ತಪಸ್ಸಾಗಿಸಿ ಗೆದ್ದವರು. ಹಾಡುಗಾರಿಕೆ ಮತ್ತು ವಾದ್ಯಸಂಗೀತಗಳೆರಡರಲ್ಲಿಯೂ ಪ್ರಬಲ ಪರಂಪರೆಯನ್ನು ನಿರ್ಮಿಸಿದ ಏಕೈಕ ಪ್ರಖ್ಯಾತರು.

ವೀಣಾಪದ್ಮನಾಭಯ್ಯನವರು ಮಿಗಿಲಾದ ವಾಗ್ಗೇಯಕಾರರೂ ಹೌದು. ಮೈಸೂರಿನ ಮುಮ್ಮಡಿ ಕೃಷ್ಣರಾಜರ ಹಾಗೂ ಚಾಮರಾಜ ಪ್ರಭುಗಳ ಆಸ್ಥಾನದಲ್ಲಿ ವಾಗ್ಗೇಯಕಾರರಿಗೆ ವಿಶೇಷವಾದ ಪ್ರೋತ್ಸಾಹವಿತ್ತು. ಪದ್ಮನಾಭಯ್ಯನವರ ಶಿಷ್ಯೋತ್ತಮರಾದ ಸುಂದರಶಾಸ್ತ್ರಿಗಳು ಹಾಡುತ್ತ ವೀಣೆಯನ್ನು ನುಡಿಸುತ್ತಿದ್ದರಲ್ಲದೆ ಸಂಗೀತ ಕೃತಿಗಳನ್ನು ರಚಿಸುತ್ತಿದ್ದರು.

ವೀಣೆಯ ಬೆಡಗಿನ ಶೇಷಣ್ಣ, ಸುಬ್ಬಣ್ಣನವರು ವೀಣೆಯ ಬೆಡಗಿದು ಮೈಸೂರು ಎಂಬುದನ್ನು ವಿಶ್ವಕ್ಕೆ ಸಾರಿದ ಸಂಗೀತದ ಮಹಾವೃಕ್ಷಗಳು. ಚಾಮರಾಜ ಒಡೆಯರು ಮತ್ತು ನಾಲ್ವಡಿ ಕೃಷ್ಣರಾಜರ ಆಸ್ಥಾನಗಳು ದೂರ ದೇಶಗಳ ಸಂಗೀತ ವಿದ್ವಾಂಸರು ಪೈಪೋಟಿಯಿಂದ ಬರುವಂತೆ ಆಕರ್ಷಿಸಿ ಇಡೀ ದೇಶದಲ್ಲಿಯೇ ಪ್ರಖ್ಯಾತವಾಗುವಂತೆ ಪ್ರೇರೇಪಿಸಿದರು.

ಸಂಗೀತ ಸಿಂಹದ ಗುಹೆ ಎನ್ನಿಸಿಕೊಂಡಿದ್ದ ತಂಜಾವೂರಿನಲ್ಲಿಯೇ ಏರ್ಪಡಿಸಿದ್ದ ಸಂಗೀತ ಪಣಗಳನ್ನೆಷ್ಟೋ ನಿರಾಯಾಸವಾಗಿ ಗೆದ್ದು ಕನ್ನಡ ಕಲೆಯ ಬಾವುಟವನ್ನು ಎತ್ತರೆತ್ತರಕ್ಕೆ ಮತ್ತೆ ಮತ್ತೆ ಹಾರಿಸಿದ ಶ್ರೇಯಸ್ಸು ವೀಣೆ ಶೇಷಣ್ಣನವರದು. ಮೈಸೂರು ವೀಣೆ ಕಲೆಯ ನೆಲೆಯೆಂಬುದು ಇತರ ಪ್ರಾಂತ್ಯಗಳಿಗೆ ದೊರೆಗಳಿಗೆ ಕಲೆಗಾರರಿಗೆ ತಿಳಿದಿರುವುದು ವೀಣೆ ಶೇಷಣ್ಣನವರಿಂದಲೇ.

ಸುಬ್ಬಣ್ಣನವರ ನುಡಿಸಾಣಿಕೆ ಶಾಸ್ತ್ರಮರ್ಯಾದಿತವಾದುದಲ್ಲದೆ ಘನಗಂಭೀರವಾದುದು. ಗಂಡು ಶೈಲಿಯದು. ಗಮಕಪೂರ್ಣವಾದುದು. ಆದರೂ ಮೃದು ಮಧುರವಾದ ನಾದ ಶಾರೀರದ ಸೊಂಪು ವೀಣೆಯ ಇಂಪಿನೊಡನೆ ಸೇರಿದಾಗ ಮೈಮರೆಸುವಂತಿತ್ತು. ಭೈರವಿ ಲಕ್ಷ್ಮೀನಾರಣಪ್ಪನವರ ಪೂರ್ವಜರಾದ ಕೃಷ್ಣಪ್ಪನವರು ಬೆಟ್ಟದ ಚಾಮರಾಜ ಒಡೆಯರ ಕಾಲದವರಂತೆ ಪ್ರಭುವಿನ ಅಂಕಿತದಲ್ಲಿ ಕಾಂಬೋದಿ ರಾಗದಲ್ಲಿ ರಚಿಸಿದ 'ಇರಿತ ಚಲಮುಸೇಯಗ ಇದಿಮೇರಗಾದುರ' ಎಂಬ ಅಟ್ಟ ತಾಳವರ್ಣವು ಇಂದಿಗೂ ಉಪಲಬ್ಧವಿದೆ. ವೆಂಕಟಕೃಷ್ಣಪ್ಪನವರು ಸ್ವತಃ ಸಂಗೀತ ವಿದ್ವಾಂಸರಾಗಿಯೂ ಸಂಗೀತ ಶಿಕ್ಷಕರಾಗಿಯೂ ಇದ್ದು ಸಂಗೀತಾಭ್ಯಾಸಿಗಳಿಗೆ ಅನುಕೂಲವಾಗುವ ರಚನೆಗಳನ್ನು ಪುಸ್ತಕರೂಪದಲ್ಲಿ ಹೊರತಂದಿದ್ದಾರೆ. ಸುಬ್ಬಣ್ಣ, ಶೇಷಣ್ಣನವರಂತೆಯೇ ವೀಣೆ ವೆಂಕಟಗಿರಿಯಪ್ಪನವರು ವೈಣಿಕರಾಗಿ ವಾಗ್ಗೇಯಕಾರರ ಪರಂಪರೆಯನ್ನು ಮುಂದುವರೆಸಿದರು. ಅನೇಕ ವರ್ಣ ಕೃತಿ ತಿಲ್ಲಾನಗಳನ್ನು ರಚಿಸಿದರು. ಅವರ ರಚನೆಗಳಲ್ಲಿ ಬಹುಪಾಲು ಕನ್ನಡದವೆಂಬುದೇ ಪ್ರಮುಖವಾದುದು. ಕರ್ನಾಟಕ ಸಂಗೀತಕ್ಕೆ ತೆಲುಗು ಭಾಷೆ ಕಟ್ಟಿಕೊಂಡ ಕೋಟೆ ಕೊತ್ತಲಗಳು ಬಿರುಕು ಬಿಟ್ಟು ಮುರುಕಾದುದು ಕನ್ನಡದ ರಾಜರ್ಷಿ ನಾಲ್ವಡಿ ಕೃಷ್ಣರಾಜರ ಕಾಲಕ್ಕೆ ತಮಿಳರಾದ ಮುತಯ್ಯ ಭಾಗವತರು ನಮ್ಮ ದೇವೋತ್ತಮ ಜೋಯಿಸರಿಂದ ಮಾತುವನ್ನು ರಚಿಸಿ ಕನ್ನಡ ಕೀರ್ತನೆಗಳಿಗೆ ಧಾತುವನ್ನು ಒದಗಿಸಿದರು. ವೀಣೆ ಶೇಷಣ್ಣನವರು ಹಲವು ಕನ್ನಡ ಕೃತಿಗಳನ್ನು ರಚಿಸಿದರು. ವೆಂಕಟಗಿರಿಯಪ್ಪನವರೂ ಇದನ್ನು ಮುಂದುವರೆಸಿ ಪ್ರಭುಪ್ರಿಯ ಶಂಕರಪ್ರಿಯ ಕುಲಭೂಷಿಣಿ ಭುವನಗಾಂಧಾರ ಬುಧಮನೋಹರಿ ಶಾರದಾಪ್ರಿಯ ಸುನಾದವಿನೋದಿನಿ ಇತ್ಯಾದಿ ಹಲವಾರು ಹೊಸ ರಾಗಗಳಲ್ಲಿ ಕೃತಿ ರಚಿಸಿದರು. ಅಲ್ಲದೆ ಸು. ೩೦ ಮೇಳಕರ್ತರಾಗಗಲ್ಲಿಯೂ ಕೃತಿಗಳನ್ನು ನಿರ್ಮಿಸಿದರು.

ಮೈಸೂರು ರಾಜಾಸ್ಥಾನಕ್ಕೆ ಪರಸ್ಥಳದ ವಿದ್ವಾಂಸರು ಬಂದು ಹಾಡುತ್ತಿದ್ದ ಸ್ವಾರಸ್ಯಪೂರ್ಣ ಹಾಗೂ ಅಪರೂಪದ ರಚನೆಗಳನ್ನು ಸ್ವರಲಿಪಿಯಲ್ಲಿ ವೆಂಕಟಗಿರಿಯಪ್ಪನವರು ಅರಮನೆಗೆ ಬರೆದುಕೊಟ್ಟರು. ಇಂದು ಮೈಸೂರು ಅರಮನೆಯು ಒಂದು ವಸ್ತು ಸಂಗ್ರಹಾಲಯವಾಗಿ ಪ್ರವಾಸಿಗರಿಗೆ ಆಕರ್ಷಕ ಕೇಂದ್ರವೆನಿಸಿದೆಯಷ್ಟೆ. ಅನರ್ಘ್ಯವಾದ ಅದರ ಸೌಂದರ್ಯ ನಿಧಿಗಳನ್ನು ಕಂಡು ತಣಿಯುವ ಜನಕ್ಕೆ ಕಣ್ಣಿಗೆ ಕಾಣದ ಈ ಅಪೂರ್ವ ನಿಧಿಯೂ ಅಲ್ಲಿದೆ ಎಂದು ತಿಳಿದೇ ಇಲ್ಲ. ಸು. ೪೩ ವರ್ಷಗಳ ಹಿಂದೆ ವಿದ್ವತ್ ಪರೀಕ್ಷೆಯ ವಿದ್ಯಾರ್ಥಿಗಳಿಗಾಗಿ ಬರೆದ ಸಂಗೀತಾಮೃತಸಾರವಾದರೂ ಅಷ್ಟೇ. ಅದರ ಪ್ರತಿಯೂ ಇಂದು ದೊರೆಯಲಾರವು. ಪ್ರಸಿದ್ಧ ವಾಗ್ಗೇಯಕಾರರ ಅಮೂಲ್ಯ ರಚನೆಗಳ ಸಂಗ್ರಹವನ್ನೊಳಗೊಂಡ ಅದನ್ನು ಪುನಃ ಪ್ರಕಟಿಸಿದರೆ ಅಗಣಿತ ಸಂಗೀತಾಸಕ್ತರಿಗೆ ಪ್ರಯೋಜನವಾದೀತು.

ವೆಂಕಟಗಿರಿಯಪ್ಪನವರ ಪ್ರಮುಖ ಶಿಷ್ಯ ಡಾ. ದೊರೆಸ್ವಾಮಿ ಅಯ್ಯಂಗಾರರು, ಚೆಲುವರಾಯಸ್ವಾಮಿಯವರು ಸಂಗೀತ ಗ್ರಂಥಕರ್ತರು. ಸಂಗೀತ ಶಾಸ್ತ್ರಜ್ಞರು ಅಧ್ಯಾಪಕರು, ವಾಗ್ಮಿಗಳೂ ಆಗಿದ್ದರು. ಹಲವಾರು ಶಿಷ್ಯರು ಪ್ರಾಚೀನ ಆಸ್ಥಾನ ವಿದ್ವಾಂಸರಾದಂತೆ ಇತ್ತೀಚಿನ ಸಂಗೀತಗಾರರಾದ ದೇವೇಂದ್ರಪ್ಪನವರು ಕೇಶವಮೂರ್ತಿಯವರು ರಾಜಮ್ಮನವರು ನೀಲಮ್ಮ ಕಡಾಂಬಿಯವರು ಚೊಕ್ಕಮ್ಮನವರು ಅನಂತಪದ್ಮನಾಭರಾಯರು ಈ ಮೊದಲಾದವರು ನೂತನ ಸಂಗೀತ ಕೋವಿದರೆನಿಸಿದ್ದಾರೆ.

ಇವರೆಲ್ಲರೂ ಕನ್ನಡ ವಾಗ್ಗೇಯ ಪರಂಪರೆ ಮುಂದುವರೆಯಲು ತಮ್ಮನ್ನು ತಾವು ಸಮರ್ಪಿಸಿಕೊಂಡು ಕೃತಾರ್ಥರಾಗಿದ್ದಾರೆ. ಈ ಎಲ್ಲ ವಾಗ್ಗೇಯಕಾರರ ಕೊಡುಗೆಗಳನ್ನು ಅಧ್ಯಯನಗೈಯಲು ದಾಖಲೀಕರಿಸುವುದು ಸಂಶೋಧಕ ದಿಗ್ಗಜರ ಆದ್ಯ ಕರ್ತವ್ಯ.

ಆಕರ ಗ್ರಂಥಗಳು

೧. ಜ್ಞಾನದೇಗುಲ, ಡಾ. ಪುಟ್ಟರಾಜ ಗವಾಯಿಯವರು ಅಭಿನಂದನ ಗ್ರಂಥ, ಸಂ.ವಿ.ಬಿ. ಹಿರೇಮಠ.

೨. ಕರ್ನಾಟಕ ಸಂಗೀತವಾಹಿನಿ, ಡಾ. ರಾ. ಸತ್ಯನಾರಾಯಣ.

೩. ಸಂಗೀತ ಸನ್ಮಾರ್ಗ ದರ್ಶಿನಿ, ಭಾಗ–೨, ಶ್ರೀ ಎಚ್.ವಿ. ವಲ್ಲೀಶಾಯಿ.

೪. ಕರ್ನಾಟಕ ಸಂಗೀತ ದರ್ಪಣ, ಡಾ. ಟಿ. ಶಚಿದೇವಿ ಮತ್ತು ಟಿ. ಶಾರದಾ.

೫. ವಿಜಯನಗರ ಅಧ್ಯಯನ, ಸಂ. ೧೯, ಪ್ರ. ಪ್ರಾಚ್ಯವಸ್ತು ಸಂಗ್ರಹಾಲಯ, ಮೈಸೂರು, ೨೦೧೪.

೬ ಇತಿಹಾಸ ದರ್ಶನ, ಸಂ. ೨೦, ಪ್ರ. ಕರ್ನಾಟಕ ಇತಿಹಾಸ ಅಕಾಡೆಮಿ (ರಿ). ಬೆಂಗಳೂರು, ೨೦೦೫.

೭. ಮೈಸೂರು ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪ್ರ. ಪ್ರಾಚ್ಯವಸ್ತು ಇಲಾಖೆ, ಮೈಸೂರು.

ಚಿದಂಬರ ವಾರಕರಿ ಮೂಲಪೀಠ – ರಾಜಾರಾಮ ಮಠ (ಗುರ್ಲಹೊಸೂರು)

ಎ.ಸಿ. ಕುಮಾರ್ ✷

ಸರ್ವಾಲಾಗೀ ನಾಮ ಮಾತ್ರಾ । ದ್ಯಾವೇ ಭರ್ಠ್ಹೋನಿ ಯಾತ್ರಾ ॥
ಸುಖಿವ್ಹಾವೇ ಸರ್ವಜನ । ಭವರೋಗ ತೋ ಜಾವೂ ನ ॥
ಪ್ರೇಮರಸ ಪಾಯಿ ಜನಾ । ಚಿದಂಬರ ನಾರಾಯಣಾ ॥
ವ್ಹಾವ್ಹಾ ಆನಂದ ಸರ್ವಾಸೀ । ದಾಸಮ್ಹಣೇ ಇಚ್ಛಾ ಐಸೀ ॥

ಕೊರೋನಾ ಮಹಾಮಾರಿಯ ಈ ಕಾಲದಲ್ಲಿ ಸಂತರಾಜಾರಾಮ ಮಹಾರಾಜರ (ಕ್ರಿ.ಶ. ೧೭೬೮–ಕ್ರಿ.ಶ. ೧೮೪೩) ಈ ಮಾಗಣಿ ಅಭಂಗ ಇಂದಿಗೂ ಪ್ರಸ್ತುತವಾಗಿದೆ. ಸರ್ವಜನಗಳು ಸುಖವಾಗಿರಲಿ, ಎಲ್ಲೆಡೆಯೂ ಆನಂದ ತುಂಬಿರಲಿ ಎಂಬುದು ಸಂತ ಜನರ ಆಶಯ.

"ಚಿದಂಬರ ರಾಜಾರಾಮ । ವಿಠೋಬಾ ತುಕಾರಾಮ ॥ ಎಂಬುದು ಚಿದಂಬರ ವಾರಕರಿ ಸಂತರ ನಂಬಿಕೆ. 'ವಾರಕರಿ' ಎಂದ ತಕ್ಷಣ ನಮ್ಮ ಸ್ಮೃತಿ ಪಟಲದ ಮೇಲೆ ಬರುವುದು ಮಹಾರಾಷ್ಟ್ರದ ಪಂಢರಪುರ ಹಾಗೂ ಸಂತಜನರ ಆರಾಧ್ಯದೈವ 'ವಿಠ್ಠಲ'. ವಿಠ್ಠಲನೇ 'ಚಿದಂಬರ'ನಾಗಿ ಅವತಾರ ತಾಳಿದ್ದು, ತುಕಾರಾಮರೇ ರಾಜಾರಾಮನಾಗಿ ಜನ್ಮತಾಳಿ ಅಭಂಗಗಳ ರಚನೆ ಮಾಡಿದ್ದಾನೆ ಎಂಬುದು ಚಿದಂಬರ ವಾರಕರಿ ಸಂತರ ವಿಶ್ವಾಸ. ಇದಕ್ಕೆ ಸಂಬಂಧಿಸಿದ ಅಭಂಗ ಈ ರೀತಿ ಇರುತ್ತದೆ.

'ಚಂದ್ರ ಭಾಗೇ ತೀರೀ ಆಯಕಿಲ್ಯಾ ಗೋಷ್ಠಿ । ವಾಲ್ಮಿಕಿ ಶತಕೋಟಿ ಗ್ರಂಥ ಕೇಲಾ ।[1]

ವಿಠ್ಠಲನ ಸ್ತುತಿಸದೆ ಜೀವನ ವ್ಯರ್ಥವಾಗಬಾರದು ಎಂಬುದು ನಾಮದೇವನ ಆಶಯ. ಇದರ ಮುಂದುವರೆದ ಭಾಗವಾಗಿ ತುಕಾರಾಮರು, ನಾಮದೇವರ ಬಗ್ಗೆ ಈ ರೀತಿ ಅಭಂಗ ಬರೆದಿರುತ್ತಾರೆ. 'ಸಾತ ಲಕ್ಷ ಆಣೆ ಚೌರಣ್ಣವ ಕೋಟಿ। ಲಿಳಿತ ಶೇವಟಿ ನವಲಕ್ಷ.... ಏಕಕೋಟಿ ಅಭಂಗ ಶ್ರೀಮುಖಾಚಾ ಬಾಕಿ ರಾಹಿಲೇ ದೇಖ ಪಂಚ ವೀಸಾಚ.......

ಇದರ ಮುಂದುವರೆದ ಭಾಗವಾಗಿ ಸಂತರಾಜಾರಾಮರು, ತುಕಾರಾಮರ ನಂತರ ಅಭಂಗ ಪೂರ್ಣಗೊಳಿಸುವ ಪಾಳಿ ತನ್ನದಾಗಿದೆ ಎಂದು ಈ ಕೆಳಗಿನ ಅಭಂಗದಲ್ಲಿ ಹೇಳಿರುತ್ತಾರೆ.

ಅಭಂಗಾ ಚೀ ಪಾಳೀ ದಿಲೆ ಮಜಕಡೆ ।
ಕಾಯಹೋಯ ಪುಢೆ ನಕಳೇಚಿ ॥
ತುಕೋ ಚರಣೇಚಾ ಅಸೇ ರಜಕಣ ।
ಪಾಯಾ ಚೇ ವಾಹಣ ಮ್ಹಂಣೆ ತ್ಯಾಂಚಾ ॥
ಪಾಂಡುರಂಗ ತೋಚಿ ಚಿದಂಬರ ಝಾಲಾ ।
ತುಕಾ ಹೋ ವೋನಿ ಆಲಾ ರಾಜಾರಾಮ ॥
ಸಂತ ಜನಾಚೇ ಮೀ ಅಸೇ ದಾಸಾನುದಾಸ ।
ಅಭಂಗ ಮುದ್ರಿಸ ದಾಸಮ್ಹಣೆ ॥

ಶತಕೋಟಿ ಅಭಂಗಗಳನ್ನು ಪೂರ್ಣಗೊಳಿಸಲು ರಚಿಸಬೇಕಿದ್ದ ೧,೫೧,೪೯೧ ಅಭಂಗಗಳನ್ನು ತಾನು ರಚಿಸಿ ನಾಮದೇವನ ಆಶಯವನ್ನು ಪೂರ್ಣಗೊಳಿಸಿದ್ದೇನೆ ಎಂಬುದು ಸಂತ ರಾಜಾರಾಮರ ಅಭಿಪ್ರಾಯ.

✷ S/o ಸಿ.ಆರ್. ಅಣಜಿ, # ೮೨೨, ೬೨ನೇ ಅಡ್ಡರಸ್ತೆ, ಕುಮಾರಸ್ವಾಮಿ ಬಡಾವಣೆ, ಬೆಂಗಳೂರು, ಮೊ. ೯೯೦೦೫ ೦೬೨೨೫

ಚಿದಂಬರ ವಾರಕರಿ ಪಂಥದ ಸ್ಥಾಪಕರು ಸಂತ ರಾಜಾರಾಮರು. ಇವರ ಮೂಲಸ್ಥಳ ಮಹಾರಾಷ್ಟ್ರದ ಔರಂಗಾಬಾದ ಜಿಲ್ಲೆಯ ವೈಜಾಪುರ ತಾಲ್ಲೂಕಿನ ಗೋದಾವರಿ ನದಿಯ ದಂಡೆಯ ಮೇಲಿರುವ ಗಂಗಾಬಾಬಳಗಾಂವ್. ಇವರು ವಿಠಲ ವಾರಕರಿಯ ಪರಿಸರದಲ್ಲಿ ಬೆಳೆದಿರುತ್ತಾರೆ. ಚಿದಂಬರ ವಾರಕರಿಯ ಆರಾಧ್ಯ ದೈವ, ಚಿದಂಬರ ದೀಕ್ಷಿತರು (ಕ್ರಿ.ಶ. ೧೭೫೮ – ಕ್ರಿ.ಶ. ೧೮೧೫) ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನ ಮುರಗೋಡಿನವರು. ತಂದೆ ಮಾರ್ತಾಂಡಭಟ್ಟರು, ತಾಯಿ ಲಕ್ಷ್ಮೀಬಾಯಿ. ಇವರ ಪೂರ್ವಜರು ಇಂದಿನ ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲ್ಲೂಕಿನ 'ಗೋಠೆ' ಗ್ರಾಮದವರು. ಚಿದಂಬರ ದೀಕ್ಷಿತರು ತಮ್ಮ ಕುಲದ ಸಂಪ್ರದಾಯದಂತೆ ಈಶ್ವರನ ಆರಾಧಕರು. ಇವರು ಶೈವಾಗಮೋಕ್ತ ಆಚರಣೆ ನೆಡೆಸಿಕೊಂಡಿರುತ್ತಾರೆ.

ಮುರಗೋಡು ಚಿದಂಬರರನ್ನು, ಅಂದಿನ ರಾಜಕೀಯ ಸನ್ನಿವೇಶದಲ್ಲಿ ಬಹಳಷ್ಟು ಸಂಸ್ಥಾನದ ಮುಖ್ಯಸ್ಥರು ಭೇಟಿ ಮಾಡಿರುವ ವಿಚಾರವನ್ನು ಚಿದಂಬರ ಸಮಕಾಲೀನ ಭಕ್ತರಾದ ಸಖಾರಾಮ ತ್ರ್ಯಂಬಕ ಗರ್ದೆ, ಸಂತರಾಜಾರಾಮರು ತಮ್ಮ ಅಭಂಗಗಳಲ್ಲಿ ದಾಖಲಿಸಿದ್ದು, ಇವುಗಳು ಇತಿಹಾಸಕ್ಕೆ ತಾಳೆಯಾಗುತ್ತವೆ. ಎರಡನೇ ಪೇಶ್ವೆ ಬಾಜಿರಾಯ, ನಿಪ್ಪಾಣಿಕರ ದೇಸಾಯಿ, ಸವಣೂರಿನ ನವಾಬ, ರಾಮದುರ್ಗದ ಮಾರಾಠ ಜಹಗೀರುದಾರರು ಇದೇ ಕಾಲಾವಧಿಯಲ್ಲಿ ರಾಜ್ಯಭಾರ ಮಾಡಿರುತ್ತಾರೆ. ಚಿದಂಬರರ ಮರಿಮಗ ಪಾಂಡುರಂಗ ದೀಕ್ಷಿತರ ಆಶೀರ್ವಾದದಿಂದ ತಾವು ಚಿದಂಬರ ಭಕ್ತರಾಗಿರುವುದನ್ನು (ಕ್ರಿ.ಶ. ೧೮೭೯) ಸಂಡೂರು ರಾಜಮನೆತನದ ಎಂ.ವೈ. ಘೋರ್ಪಡೆಯವರು ದಾಖಲಿಸಿದ್ದಾರೆ.[೨]

ಸವಣೂರಿನ ನವಾಬರಾದ ದಿಲೇರ್ ಅಬ್ದುಲ್ ಹಕೀವಲ್ ಖಾನ್, ಅಬ್ದುಲ್ ಹುಸೇನ್‌ಖಾನ್, ಅಬ್ದುಲ್ ಖಾಜಿರ್ ಖಾನ್, ಚಿದಂಬರರ ಕಾಲಾವಧಿಯಲ್ಲಿ ರಾಜ್ಯಭಾರ ಮಾಡಿರುತ್ತಾರೆ.[೩]

ಸಂತರಾಜಾರಾಮರ ಮರಾಠೀ ಅಭಂಗಗಳಲ್ಲಿ ಹಂಪಿ ವಿರೂಪಾಕ್ಷನ ಪ್ರಸ್ತಾಪವಿದೆ. ಕ್ರಿ.ಶ. ೧೮೦೨[೪]ರಲ್ಲಿ ಚಿದಂಬರರು ಇಂದಿನ ಧಾರವಾಡ ಜಿಲ್ಲೆಯ ಹುಬ್ಬಳ್ಳಿ ಸಮೀಪದ ಕುಸಗಲ್ಲಿನಲ್ಲಿ ವಾಸ್ತವ್ಯವಿದ್ದಾಗ, ಈ ಘಟನೆ ನಡೆದಿದೆ ಎಂದು ಸುಮಾರು ೨೦ ಅಭಂಗಗಳಲ್ಲಿ ದಾಖಲಿಸಲಾಗಿದೆ.

ಹಂಪಿ ವಿರೂಪಾಕ್ಷನು 'ಸರ್ಪ' ರೂಪದಲ್ಲಿ ಚಿದಂಬರ ದರ್ಶನ ಪಡೆಯುತ್ತಾನೆ.[೫] – ಶ್ರೀ ಹಂಪೀ ವಿರೂಪಾಕ್ಷ ಭೇಟೀಸ ಆಲೆ. ಮೂರು ಹಗಲು – ರಾತ್ರಿಗಳ ಪರ್ಯಂತ ವಿರೂಪಾಕ್ಷನು ಸರ್ಪರೂಪದಲ್ಲಿ ಶ್ರೀ ದೀಕ್ಷಿತರ ಸನ್ನಿಧಾನದಲ್ಲಿದ್ದು, ಅವರಿಂದ ಆದರಾತಿಥ್ಯ, ನೈವೇದ್ಯ ಆರತಿಗಳನ್ನು ಸ್ವೀಕರಿಸಿದನು. ನೆರೆದ ಭಕ್ತರು ಈ ದೃಶ್ಯವನ್ನು ಕಣ್ಣಾರೆ ಕಂಡು ಧನ್ಯರಾದರು. ನಾಲ್ಕನೇ ದಿವಸ ಆತನು ಬೆಳಿಗ್ಗೆ ಶ್ರೀ ಚಿದಂಬರರ ನಿರೂಪ ಪಡೆದು ಹೊರಬಿದ್ದನು. ಜನ ಹಿಂಬಾಲಿಸಿದರು, ನೋಡನೋಡುತ್ತಲೇ ಸರ್ಪರೂಪಿ ವಿರೂಪಾಕ್ಷನು ದಾರಿಯಲ್ಲಿ ಗುಪ್ತನಾದನು. ಜನರೆಲ್ಲರೂ ಗುಪ್ತಸ್ಥಳಕ್ಕೆ ಶಿರಬಾಗಿ ನಮಿಸಿದರು. ಹೀಗೆ ಚಿದಂಬರರ ಹಾಗೂ ವಿರೂಪಾಕ್ಷನ ಭೇಟಿಯ ವಿಚಾರಗಳು ದಾಖಲಾಗಿವೆ.

ಅಂದಿನ ಸಾಮಾಜಿಕ, ರಾಜಕೀಯ ಧಾರ್ಮಿಕ ಹಾಗೂ ಸ್ವಾತಂತ್ರ್ಯ ಪೂರ್ವದ ಸ್ಥಿತಿಗತಿಗಳು ನಾಗರೀಕರಲ್ಲಿ ಅಸ್ಥಿರಭಾವ ಹೊಂದಲು ಕಾರಣವಾಗಿತ್ತು. ಸಂಸ್ಥಾಪಕರುಗಳ ನಡುವಿನ ವೈಮನಸ್ಯಗಳು ಹಾಗೂ ಬ್ರಿಟಿಷರ ವಿರುದ್ಧ ಹೋರಾಟ ಮುಂದುವರೆದಿತ್ತು. ಈ ಸಂದರ್ಭದಲ್ಲಿ ಸರ್ವಜನ ಹಿತಕ್ಕಾಗಿ ತೆಗೆದುಕೊಂಡಿರಬಹುದಾದ ನಿರ್ಧಾರಗಳಿವೆ ಎನಿಸುತ್ತದೆ.

ಈ ಹಿನ್ನಲೆಯಲ್ಲಿ 'ವಿಠ್ಠಲ ವಾರಕರಿ ಪಂಥ' ಜೀವಂತವಿದ್ದಾಗ್ಯೂ, 'ಚಿದಂಬರ ವಾರಕರಿ ಪಂಥ' ಸ್ಥಾಪನೆ ಮಾಡಲು ಮರಗೋಡು ಚಿದಂಬರರ ಹಾಗೂ ಹಂಪಿ ವಿರೂಪಾಕ್ಷನ ಈ ಭೇಟಿ ಕಾರಣವಾಗಿರಬಹುದು. ಸಮಾಜದ ಸ್ವಾಸ್ಥ್ಯ ಕಾಪಾಡುವಲ್ಲಿ ಈ ಹೆಜ್ಜೆ ಬಹುಮುಖ್ಯ ಪಾತ್ರ ವಹಿಸಿದ್ದು, ಇಂದಿಗೂ ಜೀವಂತವಾಗಿದೆ. ಇದೇ "ಚಿದಂಬರ ವಾರಕರಿ ಪಂಥ"ಕ್ಕೆ ನಾಂದಿಯಾಗಿರಬಹುದಾಗಿದೆ.[೬]

ಮುರಗೋಡು ಚಿದಂಬರರ ಹಾಗೂ ಸಂತ ರಾಜಾರಾಮರ ಪ್ರಥಮ ಭೇಟಿ ಕ್ರಿ.ಶ. ೧೮೦೫ರಲ್ಲಿ ಹುಬ್ಬಳ್ಳಿ ಸಮೀಪದ ಕುಂದಗೋಳದಲ್ಲಾಗುತ್ತದೆ. ಕ್ರಿ.ಶ. ೧೮೧೦ರ ಸುಮಾರಿಗೆ ಮಲಪ್ರಭ ನದಿಯ ದಂಡೆಯ ಮೇಲೆ ದೀಕ್ಷಿತರು ವ್ಯವಸ್ಥಿತವಾಗಿ ಹೊಸಗ್ರಾಮ ನಿರ್ಮಾಣ ಮಾಡಿಸುತ್ತಾರೆ. ಇದೇ ಗುರುವನಪುರ, ಮುಂದೆ ಗುರ್ಲಹೊಸೂರು ಎಂದು ಪ್ರಸಿದ್ಧವಾಗುತ್ತದೆ. ಕ್ರಿ.ಶ. ೧೮೧೩ರ ಸುಮಾರಿಗೆ ರಾಜಾರಾಮರು 'ವರದ ಅಭಂಗಗಳ'ನ್ನು ಇದೇ ಸ್ಥಳದಲ್ಲಿ ರಚಿಸಿರುತ್ತಾರೆ. ಕ್ರಿ.ಶ. ೧೮೧೫ರಲ್ಲಿ ಚಿದಂಬರ ದೀಕ್ಷಿತರ ನಿರ್ಯಾಣದ ನಂತರ ಸಂತರ ಅಪೇಕ್ಷೆಯ ಮೇರೆಗೆ, ಸಪ್ತಾಹ ನಡೆಸುತ್ತಾರೆ ಹಾಗೂ ಚಿದಂಬರ ದೀಕ್ಷಿತರು ದರ್ಶನ ನೀಡಿರುತ್ತಾರೆ ಎಂದು ಐತಿಹ್ಯವಿದ್ದು, ಅವರು ನಿಂತ ಕಲ್ಲಿನ ಮೇಲೆ ಪಾದುಕಾ ನಿರ್ಮಾಣ ಮಾಡಿಕೊಂಡು, ಪೂಜಾ, ಸತ್ಸಂಗ, ಅಭಂಗ ರಚನೆಯಲ್ಲಿ ಸತ್ಕಾಲಕ್ಷೇಪ ನಡೆಸುವುದರ ಜೊತೆಗೆ, ದಿಂಡೀ ಯಾತ್ರೆಯ ಮುಖಾಂತರ

ಸಂತರಸಂಗದಲ್ಲಿ ಭರತ ಭೂಮಿಯಲ್ಲಿ 'ಚಿದಂಬರ ನಾಮ ಪ್ರಸಾರ' ಮಾಡಿರುವ ವಿಚಾರಗಳು ಅಭಂಗ ರೂಪದಲ್ಲಿ ನಮಗೆ ದೊರೆತಿವೆ. ಪಂಡರಪುರ ಮೂಲದ ಸಂತಮಾತಾ ವಿಠಾಬಾಯಿ, ಇವರೂ ಸಹ ಚಿದಂಬರ ನಾಮಪ್ರಸಾರದಲ್ಲಿ ತೊಡಗಿಕೊಂಡು ಸುಮಾರು ೨೦ ಸಾವಿರ ಅಭಂಗಗಳನ್ನು ರಚಿಸಿರುವುದರಲ್ಲಿ ಕೆಲವು ಅಭಂಗಗಳು ಮುದ್ರಣಗೊಂಡಿವೆ.

ಕ್ರಿ.ಶ. ೧೮೪೩ರಲ್ಲಿ ಸಂತ ರಾಜಾರಾಮರು, ಬೆಳಗಾವಿ ಸಮೀಪದ ಷಹಪುರ (ಗೋವಾವೇಸ್)ದಲ್ಲಿ ಸಮಾಧಿಸ್ಥರಾಗುತ್ತಾರೆ. ನಂತರ ಅವರ ಮಗ ಚಿದಂಬರ ಪ್ರಸಾದರೂ, ನಂತರ ಚಿದಂಬರ ಪ್ರಸಾದರ ಮಗಳು ಭಾಗೀರಥಿ ಬಾಯಿಯವರು ನಾಮಪ್ರಸರಣ ಕಾರ್ಯ ಮುಂದುವರೆಸುತ್ತಾರೆ. ನಂತರ ಸರಿಸುಮಾರು ಕ್ರಿ.ಶ. ೧೯೨೫ ಸುಮಾರಿಗೆ, ಮುರಗೋಡು ಚಿದಂಬರ ದೀಕ್ಷಿತರ ವಂಶದ ಶ್ರೀ ದತ್ತೂದೀಕ್ಷಿತರು[೭] ಗುರ್ಲಹೊಸೂರಿನಲ್ಲಿ ಚಿದಂಬರ ಜನ್ಮೋತ್ಸವ ಕಾರ್ಯಕ್ರಮ ಮುಂದುವರೆಸುತ್ತಾರೆ. ಕ್ರಿ.ಶ. ೧೮೩೩ರಲ್ಲಿ ಕೊಮಾರನಹಳ್ಳಿಯಲ್ಲಿ ಸಮಾಧಿಸ್ಥರಾಗಿರುವ ಶಂಕರಲಿಂಗ ಭಗವಾನರು ತಮ್ಮ ಶಿಷ್ಯ ಪರಿವಾರದ ಜೊತೆಗೆ ಮುರಗೋಡು, ಗುರ್ಲಹೊಸೂರು, ಯಲ್ಲಮ್ಮನ ಗುಡ್ಡ ಪ್ರವಾಸ ಮಾಡಿರುತ್ತಾರೆ.[೮]

ಕ್ರಿ.ಶ. ೧೯೫೧ರಲ್ಲಿ ದತ್ತೂದೀಕ್ಷಿತರು ತಡಕೋಡ ಮೂಲದ ಶ್ರೀ ಮಲ್ಹಾರ ದೀಕ್ಷಿತರಿಗೆ ಫಲಪ್ರದಾನ ಮಾಡುತ್ತಾರೆ. ಇವರು ಮಧ್ಯ ಕರ್ನಾಟಕದಲ್ಲಿ ಸಂಚಾರ ಮಾಡಿ ಚಿದಂಬರ ನಾಮಪ್ರಸಾರ ಮಾಡುತ್ತಾರೆ. ತುಂಗಭದ್ರಾ ದಂಡೆಯ ಹಾವನೂರಿನಿಂದ ಇಂದಿಗೂ ಇವರು ಸ್ಥಾಪಿಸಿರುವ ದಿಂಡಿ, ಚಿದಂಬರ ಜನ್ಮೋತ್ಸವಕ್ಕೆ ತಪ್ಪದೇ ದಿಂಡೀಯಾತ್ರೆಯ ಮುಖಾಂತರ ಹಾಜರಾಗುತ್ತಿದ್ದಾರೆ. ಅಕ್ಷಯ ತೃತೀಯದಂದು ವೀಣಾಜಯಂತಿ ಆಚರಣೆ ಪ್ರಾರಂಭ ಮಾಡಿರುತ್ತಾರೆ ಹಾಗೂ ಸುಮಾರು ೪೩ ವರ್ಷಗಳ ಪರ್ಯಂತ ಅಖಂಡ ವೀಣಾಪಾಳಿ ನಡೆಸಿರುತ್ತಾರೆ.

ಕ್ರಿ.ಶ. ೧೯೭೧ರಲ್ಲಿ ಮಲಪ್ರಭಾ ನದಿಯ ನವಿಲುತೀರ್ಥ ಅಣೆಕಟ್ಟಿನಲ್ಲಿ ಗುರ್ಲಹೊಸೂರು ಮುಳುಗಡೆಗೊಂಡಾಗ ಸವದತ್ತಿ ಗ್ರಾಮಾಂತರದ ಚಿದಂಬರ ನಗರದಲ್ಲಿ, ತಗಡಿನ ಷೆಡ್‌ನಲ್ಲಿ ವಾಸ್ತವ್ಯ ಮಾಡುವುದರೊಂದಿಗೆ 'ಚಿದಂಬರ ನಿರ್ಗುಣ ಪಾದುಕ' ಪೂಜಾ, ವೀಣಾಪಾಳಿ, ಸತ್ಸಂಗ, ನಾಮಪ್ರಸರಣ ಅತ್ಯಂತ ಕಷ್ಟಮಯ ಪರಿಸ್ಥಿತಿಯಲ್ಲೂ ಮುಂದುವರೆಸಿಕೊಂಡು ಬಂದು ತಮ್ಮ ಪುತ್ರ ಮನೋಹರ ದೀಕ್ಷಿತರಿಗೆ ಸರಿಸುಮಾರು ಕ್ರಿ.ಶ. ೧೯೮೦ರಲ್ಲಿ ಫಲಪ್ರಧಾನ ಮಾಡುತ್ತಾರೆ.

ಮನೋಹರ ದೀಕ್ಷಿತರು ಹಾಗೂ ಅವರ ತಮ್ಮ ಪಾಂಡುರಂಗ ದೀಕ್ಷಿತರು ರಾಮ–ಲಕ್ಷ್ಮಣರಂತೆ ಚಿದಂಬರ ಸೇವೆ, ನಾಮಪ್ರಸಾರದಲ್ಲಿ ತೊಡಗಿಕೊಂಡು ಸುಮಾರು ೧೨ ವರ್ಷ ಅಖಂಡ ವೀಣಾಪಾಳಿ ಮುಂದುವರೆಸುತ್ತಾರೆ. ಕ್ರಿ.ಶ. ೧೯೫ರಲ್ಲಿ ಹೊಸಮಂದಿರದಲ್ಲಿ ಅಕ್ಷಯ ತೃತೀಯದಂದು ಚಿದಂಬರ ನಿರ್ಗುಣಾ ಪಾದುಕಾ ಪುನಃಪ್ರತಿಷ್ಠಾನ ಕಾರ್ಯ ನೆರವೇರಿಸುತ್ತಾರೆ.

ಅಂದಿನಿಂದಲೂ ಹೊಸಮಂದಿರದಲ್ಲಿ ಪೂಜೆ, ಸತ್ಸಂಗ, ಜನ್ಮೋತ್ಸವ, ಪ್ರತಿನಿತ್ಯ ಮುಂಜಾನೆ ಕಾಕಡಾರತಿ, ಸಂಜೆ ಭಜನ ಕಾರ್ಯಕ್ರಮದಲ್ಲಿ ಹಳೆಯ ಪದ್ಧತಿ ಮುಂದುವರೆದಿದ್ದು, ಗುರ್ಲಹೊಸೂರಿನ ಸಂತರು ಭಾಗವಹಿಸುತ್ತಾರೆ.

ಕ್ರಿ.ಶ. ೨೦೧೯ರಲ್ಲಿ ತಮ್ಮ ಪುತ್ರ ಗಂಗಾಧರ ದೀಕ್ಷಿತರಿಗೆ, ಸಂತ ಜನರ ಅಪೇಕ್ಷೆಯ ಮೇರೆಗೆ ಮನೋಹರ ದೀಕ್ಷಿತರು ಫಲಪ್ರಧಾನ ಮಾಡುತ್ತಾರೆ.

ಗಂಗಾಧರ ದೀಕ್ಷಿತರು ಹಾಗೂ ಅವರ ತಮ್ಮ ವೇ.ಬ್ರ.ಶ್ರೀ ಸದಾನಂದ ದೀಕ್ಷಿತರು, ದಕ್ಷಿಣ ಕರ್ನಾಟಕದ ಮೈಸೂರು, ಬೆಂಗಳೂರು, ತುಮಕೂರು ಪ್ರಾಂತ್ಯಗಳಲ್ಲಿ ನಾಮಪ್ರಸರಣ ಕಾರ್ಯ ಮುಂದುವರೆಸಿಕೊಂಡು ಬರುತ್ತಿದ್ದಾರೆ. ಕುಲದೈವ ಮಲ್ಹಾರಿ ನವರಾತ್ರಿ, ಬನಶಂಕರಿ ನವರಾತ್ರಿ, ಚಿದಂಬರ ಜನ್ಮೋತ್ಸವ, ರಾಜಾರಾಮ ಜನ್ಮೋತ್ಸವ, ವಿಠಾಬಾಯಿ ಜಯಂತಿ, ವೀಣಾಜಯಂತಿ, ಶ್ರಾವಣ ಮಾಸದ ಕೊನೆಯ ಸೋಮವಾರ ಲಕ್ಷ ಬಿಲ್ವಾರ್ಚನೆ ಹಾಗೂ ರಾಜಾರಾಮ ಜಯಂತಿಯ (ಹೋಳಿ ಹುಣ್ಣಿಮೆ) ಸಮಯದಲ್ಲಿ 'ಜ್ಞಾನೇಶ್ವರಿ ಪರಾಯಣ' – ವಿಠ್ಠಲ ವಾರಕರಿ ಸಂತರ ಸಹಯೋಗದಿಂದ ನಡೆದು ಬರುತ್ತಿದೆ.

ಸಹೃದಯ ಭಕ್ತರ ನೆರವಿನಿಂದ 'ದತ್ತ ಮಲ್ಹಾರಿ ನಿವಾಸ' ರೂಪುಗೊಂಡಿದ್ದು, ಸಂತ ಭಕ್ತರ ಸೇವೆಯಲ್ಲಿ ನಿರತರಾಗಿದ್ದು, 'ರಾಜಾರಾಮ ಮಠ' ಮೂಲ ಆಶಯದ ನೆಲೆಯಲ್ಲಿ ಸರ್ವಜನರ ಹಿತ ಕಾಯ್ದುಕೊಂಡು ಬರುತ್ತಿದೆ.



ಚಿದಂಬರ ನಿರ್ಗುಣ ಪಾದುಕಾ



ಗರ್ಭಗುಡಿ, ರಾಜಾರಾಮಮಠ

ಅಡಿ ಟಿಪ್ಪಣಿಗಳು

೧. ಗಂಗಾಧರ ಮನೋಹರ ದೀಕ್ಷಿತರು, ಚಿದಂಬರ ವಾರಕರಿ ಸಂಸ್ಥಾ, ರಾಜಾರಾಮ ಮಠ, ಚಿದಂಬರನಗರ (ಗುರ್ಲಹೊಸೂರು), ಸವದತ್ತಿ, ಬೆಳಗಾವಿ ಜಿಲ್ಲೆ, ಇವರ ಹಸ್ತಪ್ರತಿ ಸಂಗ್ರಹದಿಂದ.

೨. ಕಂಚಿಯ ಪರಮಾಚಾರ್ಯರು ಒಂದು ಆಧ್ಯಾತ್ಮಿಕ ಮತ್ತು ಮಾನವೀಯ ಸಂಬಂಧ. ನನ್ನ ದಿನಚರಿಯಿಂದ ಆಯ್ದ ನೆನಪುಗಳು – ಎಂ.ವೈ. ಘೋರ್ಪಡೆ, ಅನುವಾದ: ಎಸ್.ಆರ್. ರೋಹಿಡೇಕರ್, ಪ್ರಕಾಶಕರು: ಅಭಿನವ, ನ. ರವಿಕುಮಾರ್. ಬೆಂಗಳೂರು. ೨೦೧೧ ಆವೃತ್ತಿ.

೩. Wikipedia

೪. ಶ್ರೀ ಚಿದಂಬರ ಪ್ರಕಾಶ ಜಿ.ಸಿ. ಇನಾಮದಾರರು, ಸರಿಸುಮಾರು ಕ್ರಿ.ಶ. ೧೯೭೬–೭೭ ಜೀರ್ಣಗೊಂಡ ಪ್ರತಿ. ಪದ್ಮಶ್ರೀ ದ.ರಾ. ಬೇಂದ್ರೆಯವರ ಮುನ್ನುಡಿ ಹಾಗೂ ಸಂದರ್ಶನ, ಅವರ ಕುಟುಂಬಕ್ಕೆ ಮುರಗೋಡು ಚಿದಂಬರರ ಸಂಪರ್ಕ ದಾಖಲಿಸಲಾಗಿದೆ. ಶ್ರೀ ಗಂಗಾಧರ ಮನೋಹರ ದೀಕ್ಷಿತ್ ರಾಜಾರಾಮ ಮಠ. ಇವರ ಸಂಗ್ರಹದಿಂದ.

೫. ಪೂರ್ಣಬ್ರಹ್ಮ ಚಿದಂಬರ ಗಾಥಾ – ಸಂತರತ್ನ ರಾಜಾರಾಮ ಮಹಾರಾಜ ಕೃತ ಮೂಲ ಮರಾಠಿ ಅಭಂಗಗಳು. ಶ್ರೀ ಚಿದಂಬರ ಪ್ರತಿಷ್ಠಾನ, ಆಲಾಪ, ಪಂ. ವಿನಾಯಕ ತೊರವಿ, ಮಂಜುನಾಥನಗರ, ಬೆಂಗಳೂರು–೧೬. ಪುಟ ೧೪೪

೬ ಮರಾಠೀ ಸಾಹಿತ್ಯದ ಅಭಂಗಗಳಲ್ಲಿ ಹಂಪಿ ವಿರೂಪಾಕ್ಷನ ಪ್ರಸ್ತಾಪ–ಕೆಲವು ಹೊಸ ವಿಷಯಗಳು. ಎ.ಸಿ. ಕುಮಾರ್, ಹಂಪಿ ಉತ್ಸವ ೨೦೧೯–೨೦ರ ಅಂಗವಾಗಿ 'ವಿಜಯನಗರ ಅಧ್ಯಯನ' ಕುರಿತ ೨೪ನೇ ವಾರ್ಷಿಕ ವಿಚಾರ ಸಂಕಿರನದಲ್ಲಿ ಸಾದರಪಡಿಸಿದ ಪ್ರಬಂಧ. ದಿನಾಂಕ: ೧೧.೦೧.೨೦೨೦–೧೨.೦೧.೨೦೨೦. ಉಪನಿರ್ದೇಶಕರ ಕಛೇರಿ ಆವರಣ, ಕಮಲಮಹಲ್ ಹತ್ತಿರ, ಕಮಲಾಪುರ, ಹಂಪಿ.

೭. ಪೂಜ್ಯ ದತ್ತು ದೀಕ್ಷಿತರು–ಲೇಖಕರು ಪೂಜ್ಯ ಮಹದೇವ ಶಾಸ್ತ್ರಿಗಳು, ತಡಕೋಡ. ಪ್ರಕಾಶಕರು: ಶ್ರೀ. ಬಿ.ಡಿ. ಗುರ್ಲಹೊಸೂರು, ಮದಿಹಾಳ, ಧಾರವಾಡ–೬. ಪ್ರಥಮ ಮುದ್ರಣ ೧೯೯೨.

೮. ಹೊಳಲ್ಕೆರೆಯ ಮಾಳೇನಹಳ್ಳಿ ಚಿದಂಬರ ದೇವಾಸ್ಥಾನ–ಒಂದು ಅವಲೋಕನ. ಎ.ಸಿ. ಕುಮಾರ್, ಕರ್ನಾಟಕ ಇತಿಹಾಸ ಅಕಾಡೆಮಿ (ರಿ). ಬೆಂಗಳೂರು ಇವರು ಶ್ರೀ ಕ್ಷೇತ್ರ ಹೊಂಬುಜ ಜೈನ ಮಠದ, ಆಶ್ರಯದಲ್ಲಿ ನೆಡೆಸಿದ ೩೩ನೇ ರಾಷ್ಟ್ರೀಯ ವಾರ್ಷಿಕ ಸಮ್ಮೆಳನ ೨೦೧೯ರಲ್ಲಿ, ಸಾದರಪಡಿಸಿರುವ ಪ್ರಬಂಧ. ಇತಿಹಾಸ ದರ್ಶನ ೨೦೨೦. ಸಂಪುಟ ೩೫. ಪುಟ ೩೬೨–೩೬೪. ೧೮–೨೦ ಅಕ್ಟೋಬರ್ ೨೦೧೯.

ಜೋಡಿ ಸಿಡಿ ಬಂಡಿಯ ಹಬ್ಬ ಕೆಂಚಿಕೊಪ್ಪ

ಬಿ.ಸಿ. ರಾಕೇಶ್*

ಪ್ರಸ್ತುತ ಲೇಖನವು ದಾವಣಗೆರೆ ಜಿಲ್ಲೆ ನ್ಯಾಮತಿ ತಾಲೂಕಿನ ಕೆಂಚಿಕೊಪ್ಪ ಗ್ರಾಮದಲ್ಲಿ ಐದು ಶತಮಾನಗಳಿಂದ ನಡೆಸಿಕೊಂಡು ಬಂದಿರುವ ಗೌಡರ ಬಂಡಿ ಹಾಗು ರೈತರ ಬಂಡಿ ಜೋಡಿ ಸಿಡಿ ಬಂಡಿಯ ಹಬ್ಬದ ಐತಿಹಾಸಿಕ ಹಿನ್ನಲೆಯನ್ನು ವಿವರಿಸುವುದಾಗಿದೆ. ಕೆಂಚಿಕೊಪ್ಪದ ಸಾಂಸ್ಕೃತಿಕ ಹಬ್ಬದ ರೀತಿಯಲ್ಲಿ ನೇಡೆಯುತ್ತದೆ. ಕೆಂಚಿಕೊಪ್ಪ ಮೊದಲು ಹೊನ್ನಾಳಿ ತಾಲೂಕಿನ ಪ್ರಸ್ತುತ ನ್ಯಾಮತಿ ತಾಲೂಕಿನ ದಾವಣಗೆರೆ ಜಿಲ್ಲೆಯ ಗ್ರಾಮವಾಗಿದೆ. ಡಾ. ಡಿ.ಬಿ. ಗಂಗಪ್ಪ ಮಾಜಿ ಎಮ್‌ಎಲ್‌ಎ ಇದೆ ಗ್ರಾಮದವರು. ಶ್ರೀಯುತ ಡಿ.ಬಿ. ಶಂಕರಪ್ಪನವರೂ ಇದೇ ಊರಿನವರು. ಇವರು ಶಿವಮೊಗ್ಗ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇವರ ಕೃತಿ ಗಿಡ್ಡಜ್ಜಿಯ ಬಯಲು ಇದರಲ್ಲಿ ಹೈದರಬಾದ್ ನಿಜಾಮರು ರಜಕಾರ ಮೂಲಕ ಊರಿಗೆ ಬಂದು ಇಲ್ಲಿನ ದವಸ ದಾನ್ಯಗಳನ್ನು ದೊಚುತ್ತಿದ್ದ ಕೆಲವು ವಿಚಾರಗಳನ್ನು ಮಂಡಿಸಿದ್ದಾರೆ ಅಲ್ಲದೆ ಸಿಡಿ ಹಬ್ಬದ ಪ್ರಾಚೀನತೆಯ ಬಗ್ಗೆ ಬೇಳಕು ಚಲ್ಲಿದ್ದಾರೆ. ಗೌಡರ ವಂಶದವರು ಕೆಂಚಿಕೊಪ್ಪಕ್ಕೆ ವಲಸೆ ಬಂದಾಗ ಮೂಲದ ಊರಿನಲ್ಲಿ ಇದ್ದ ಗ್ರಾಮದೇವತೆ ಮಾಯಾಮ್ಮ ದೇವಿಯನ್ನು ತಂದರು ಅಲ್ಲಿಂದನೆ ಹಬ್ಬದ ಆಚರಣೆ ಪ್ರಾರಂಭವಾಹಿತು. ಅಲ್ಲದೆ ಮಾಯಮ್ಮನನ್ನು ಗೌಡರ ಮನೆಯ ಮಗಳು ಎಂದು ಬಾವಿಸುತ್ತಾರೆ. ಬಿಜಾಪುರದ ಸುಲ್ತನನಿಗೆ ಗೌಡರಮನೆಯ ಹೆಣ್ಣುಮಗಳಮೇಲೆ ಆಸೆ ಪಟ್ಟಿದ್ದರಿಂದ ಮೂಲ ಊರನ್ನು ತೊರೆದು ಇಲ್ಲಿಗೆ ಬಂದು ನೆಲಸಿದರು. ಆರು ಕುಟುಂಬಗಳು ಹೊರಟು ಒಂದು ಕುಟುಂಬ ತಡಕನಹಳ್ಳಿಯಲ್ಲಿ ನೆಲಸಿ, ಇನ್ನೊ ಐದು ಕುಟುಂಬಗಳು ಕೆಂಚಿಕೊಪ್ಪಕ್ಕೆ ಬಂದು ನೆಲೆಸುತ್ತವೆ. ಈ ಐದು ಕುಟುಂಬಗಳು ಐದು ಬೇರೆ ಬೇರೆ ಹೆಸರುಗಳಿಂದ ವಟಾರವೆಂದು ಕರೆಯುತ್ತಾರೆ. ಬೆಳಗಾವಿ ಜಿಲ್ಲೆ ಚಿಂಚಲಿ ಮಾಯಮ್ಮನ ಸಿಡಿಯ ರೀತಿಯಲ್ಲಿ ಇಲ್ಲೂ ಸಿಡಿಯನ್ನು ಆಚರಣೆಮಾಡುತ್ತಾರೆ. ಪಕ್ಕದ ಊರುಗಳಲ್ಲಿ ಕಾಲರದಂತಹ ಸಾಂಕ್ರಾಮೀಕ ರೋಗಗಳು ಬಂದಾಗ ಊರಿನಲ್ಲಿ ಬಾರದೆ ಇರಲಿ ಎಂದು ದೇವರನ್ನು ಕೇಳಿ ಸಿಡಿ ಬಂಡಿಯ ಹಬ್ಬವನ್ನು ಗ್ರಾಮದಮುಖಂಡರು ತಿರ್ಮಾನ ಮಾಡುತ್ತಾರೆ. ಸಿಡಿ ಬಂಡಿಯ ಹಬ್ಬವು ಊರಿನ ಶ್ರೇಯೋಭಿವೃದ್ಧಿಗಾಗಿ ಬೆಳೆ ಚನ್ನಾಗಿ ಬಂದಾಗ ಒಕ್ಕಣೆ ಮಾಡುವ ಕಾಲದಲ್ಲಿ ಆಚರಣೆ ಮಾಡುವ ಹಬ್ಬವಾಗಿದ್ದು ಹಲವು ವರ್ಷಗಳಿಗೊಮ್ಮೆ ಹಬ್ಬವನ್ನು ಆಚರಿಸುತ್ತಾರೆ. ಇತ್ತಿಚೆಗೆ ಸಂಕ್ರಾಮಿಕ ರೋಗಗಳು ಬರದೆ ಇದ್ದುದರಿಂದ ಬೆಳೆಗಳು ಚೆನ್ನಾಗಿ ಬಂದಾಗ ಸಿಡಿಹಬ್ಬವನ್ನು ಆಚರಣೆ ಮಾಡುತ್ತಾರೆ. ಆರ್ಥಿಕವಾಗಿ ಬಲಿಷ್ಠವಾಗಿರುವ ಗ್ರಾಮವಾಗಿದ್ದು ಉತ್ತಮ ಪಸಲು ಇಳುವರಿ ಬರುವ ಜಮೀನು ಇದೆ. ಊರಿನಲ್ಲಿ ರುಚಿಯಾದ ಹೆಚ್ಚಿನ ಬೆಲೆ ಬಾಳುವ ಕೆಕರಲಹಣ್ಣು ಕರಬುಜ ಜಾತಿಗೆ ಸೇರಿದ ವಿಶೇಷವಾದ ಹಣ್ಣು ಚಳಿಗಾಲದಲ್ಲಿ ಮಾತ್ರ ದೊರೆಯುತ್ತದೆ. ಊರಿನ ಜನರಿಗೆ ತುಂಬಾ ಆದಾಯ ತರುವ ಬೇಳೆಯಾಗಿದೆ. ಇಲ್ಲಿನ ಸಿಡಿಬಂಡಿ ಹಬ್ಬವು ಬೇರೆ ಕಡೆಗಿಂತಲೂ ಬಿನ್ನವಾದ ಆಚರಣೆಯನ್ನು ಹೊಂದಿದೆ ನಿಂತಜಾಗದಲ್ಲಿಯೇ ತಿರುಗಣಿಯನ್ನು ತಿರುಗಿಸುವ ಸಿಡಿಯಲ್ಲ ಮತ್ತು ದೇಹದ ಚರ್ಮಕ್ಕೆ ಹುಕ್ಕನ್ನು ಹಾಕಿ ಸಿಡಿ ಏರುವುದಿಲ್ಲ. ಬದಲಾಗಿ ಸಿಡಿಬಂಡಿಗಳು ಊರ ಸುತ್ತಾ ಜನಸಾಗರದ ಮಧ್ಯೆ ಪ್ರದಕ್ಷಿಣೆ ಹಾಕುವ ಇಂತಹ ವಿಶೇಷ ಆಚರಣೆಯನ್ನು ಕೆಂಚಿಕೊಪ್ಪ ಗ್ರಾಮದಲ್ಲಿ ಐದುನೂರು ವರ್ಷಗಳಿಂದ ಆಚರಿಸುತ್ತಾ ಬಂದಿದ್ದಾರೆ. ಕೆಂಚಿಕೊಪ್ಪದಲ್ಲಿ ಹಲವು ಬಾರಿ ಬೆಳೆ ಬೆಲೆ ಚನ್ನಾಗಿ ಬಂದಾಗ ಮೂರು ನಾಲ್ಕು ಐದು ವರ್ಷಗಳಿಗೊಮ್ಮೆ ಸಿಡಿಯನ್ನು ಕಟ್ಟುತ್ತಾರೆ ಸಾಮಾನ್ಯವಾಗಿ ಮಾಗಿಯ ಕಾಲದಲ್ಲಿ ಅಂದರೆ ಡಿಸೆಂಬರ್ ತಿಂಗಳಲ್ಲಿ ಆಚರಿಸಲಾಗುತ್ತದೆ. ಊರಿನ ಪ್ರಮುಖರೆಲ್ಲಾ ಸೇರಿ ಹಬ್ಬ ಆಚರಿಸುವ ಬಗ್ಗೆ ಚರ್ಚಿಸಿ ನಿರ್ಧರಿಸಿ ಸಾರು ಹಾಕುತ್ತಾರೆ. ಒಂದು ತಿಂಗಳಿರುವಂತೆ ಹಬ್ಬದ ಸಿದ್ದತೆ ನಡೆಯುತ್ತದೆ ಊರಿನ ದೇವಾಲಯಕ್ಕೆ ಸುಣ್ಣ ಬಣ್ಣ ಮಾಡಿಸುತ್ತಾರೆ. ಸಿಡಿ ಕಂಭಗಳನ್ನು ಹೊರತೆಗೆದು ಅವುಗಳನ್ನು ಪರಿಶೀಲಿಸಿ ಭದ್ರವಾಗಿರುವ ಬಗ್ಗೆ ದೃಢಪಡಿಸಿಕೊಳ್ಳುತ್ತಾರೆ ಸಿಡಿಬಂಡಿ ಸಿಡಿಕಂಬ ಹಚ್ಚು ತಿರುಗಣೆ ಸಿದ್ದತೆಗೆ ಹಾಗು ಸುಸ್ಥಿತಿ, ಧೃಡತೆ ಪರೀಕ್ಷೆಯನ್ನು ಮಾಡಲು ಬಡಗಿ ಹಾಗೂ ಕಂಬಾರರಿಗೆ ವಹಿಸಲಾಗುತ್ತದೆ. ಕೆಂಚಿಕೊಪ್ಪ ಗ್ರಾಮದ ಶ್ರೀ ಮಾಯಮ್ಮ ಶ್ರೀ ಮರಿಯಮ್ಮದೇವಿಯರ ಜೋಡಿ ಸಿಡಿ ಉತ್ಸವ


* ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಎಆರ್‌ಎಮ್ ಪ್ರಥಮ ದರ್ಜೆ ಕಾಲೇಜು, ದಾವಣಗೆರೆ.

ಇತ್ತೀಚೆಗೆ ೨೭ ಜನವರಿ ೨೦೨೦ರಂದು ನಡೆಯಿತು. ಸಂಪ್ರದಾಯದಂತೆ ಊರಿನ ನಾಗರಿಕರು ಅವರ ಸಂಬಂಧಿಕರು, ಸುತ್ತಮುತ್ತಲಿನ ಜನರು ಶಿವಮೊಗ್ಗ, ದಾವಣಗೆರೆ, ಬೆಂಗಳೂರಿನಿಂದ ಬರುವ ಹಲವಾರು ಜನರ ಸಮ್ಮುಖದಲ್ಲಿ ಸ್ವಾತಂತ್ರ್ಯ ಹೋರಟಗಾರ ದಿ। ಬೊಮ್ಮಪ್ಪನವರ ಶಿವಲಿಂಗಪ್ಪನವರ ಕಣದಲ್ಲಿರುವ ಕೆಂಚಿಕೊಪ್ಪ ಗ್ರಾಮದ ಮೂಲದೇವರು ಬೊಮ್ಮಲಿಂಗೇಶ್ವರಸ್ವಾಮಿ ದೇವಾಲಯದಿಂದ ಹೊರಟ ಜೋಡಿ ಸಿಡಿ ಬಂಡಿ ಉತ್ಸವ ಗ್ರಾಮದ ನ್ಯಾಮತಿ ರಸ್ತೆಯಲ್ಲಿ ಹಾಗು ಸರ್ಕಾರಿ ಪ್ರೌಢಶಾಲೆಯ ಮಾರ್ಗದಲ್ಲಿ ಮುಂದೆ ಹೋಲಗಳ ಮೂಲಕ ಸಾಗಿ ಹೊನ್ನಾಳಿ ರಸ್ತೆಯ ಮೂಲಕ ಊರನ್ನು ಪ್ರದಕ್ಷಿಣೆ ಹಾಕಿ ಹೊನ್ನಾಳಿ ಮಾರ್ಗದಲ್ಲಿರುವ ಶ್ರೀ ಮಾಯಮ್ಮ ಮರಿಯಮ್ಮದೇವಿಯರ ದೇವಾಲಯಗಳನ್ನು ತಲುಪಿ ದೇವಾಲಯವನ್ನು ಮೂರು ಸುತ್ತು ಪ್ರದಕ್ಷಿಣೆ ಹಾಕುತ್ತವೆ. ನಂತರ ಹುತ್ತೇಶ್ವರ ಸ್ವಾಮಿಯ ದೇವಾಲಯದ ಮುಂದೆ ಭರ್ಜರಿಯಾಗಿ ಜೋಡಿ ಸಿಡಿ ಉತ್ಸವ ನಡೆಯುತ್ತದೆ. ಬಹಳ ಕಡೆ ಸಿಡಿಯನ್ನಾಡುವ ಪರಿಪಾಟವಿದೆ. ಅದರೆ ಕೆಂಚಿಕೊಪ್ಪದಲ್ಲಿ ಊರಗೌಡರ ಬಂಡಿ ಮತ್ತು ರೈತರ ಬಂಡಿ ಹೀಗೆ ಜೋಡಿ ಸಿಡಿ ಬಂಡಿಗಳು ದೇವಿಯರ ದೇವಾಲಯಗಳನ್ನು ಪ್ರದಕ್ಷಿಣೆ ಹಾಕುವುದರೊಂದಿಗೆ ಸಿಡಿ ಉತ್ಸವ ಮುಕ್ತಾಯವಾಗುತ್ತದೆ.

ಬೆಳಗ್ಗೆ ಬೊಮ್ಮಲಿಂಗೇಶ್ವರ ದೇವಾಲಯದ ಬಳಿ ಸಿಡಿ ಕಂಭ ಮತ್ತು ಸಿಡಿ ಬಂಡಿಯನ್ನು ಸಂಪ್ರದಾಯದಂತೆ ಗ್ರಾಮದ ನೊಳಂಬ ಲಿಂಗಾಯಿತ ಸಮುದಾಯದವರು, ಇನ್ನುಳಿದ ಕೈವಾಡಸ್ತರು ಹಾಗೂ ಭಕ್ತರು ನೀರಿನಿಂದ ಶುದ್ದಗೊಳಿಸಿ ಸಿಡಿಗಂಭಕ್ಕೆ ಕೆಮ್ಮಣ್ಣು ಲೇಪನ ಮಾಡುತ್ತಾರೆ. ನಂತರ ಅದನ್ನು ಬಂಡಿಗೆ ಜೋಡಿಸಿ ಬೀರಿಹೊಡೆದು ಗಟ್ಟಿಗೊಳಿಸಿ ಸಾಕಷ್ಟು ಸುರಕ್ಷತಾ ಕ್ರಮಗಳನ್ನು ವಹಿಸುತ್ತಾರೆ. ಮುಂಭಾಗದ ತುದಿಯಿಂದ ಸಿಡಿ ಬಂಡಿಯ ಕಂಭಗಳು ೩೫ ಅಡಿಗಳಷ್ಟು ಉದ್ದವಿರುತ್ತವೆ ಅದನ್ನು ತುದಿಯವರೆಗೆ ಹಗ್ಗದಿಂದ ಬಿರಿಹಾಕಿ ಸುಭದ್ರಗೊಳಿಸಿರುತ್ತಾರೆ ಅದರ ತುದಿಯ ಮುಂಭಾಗದಲ್ಲಿ ಸಿಡಿ ಆಡುವ ಮಹಿಳೆಯು ನಿಂತುಕೊಳ್ಳುವುದಕ್ಕೆ ತೊಟ್ಟಿಲ ವ್ಯವಸ್ಥೆ ಮಾಡಿರುತ್ತಾರೆ. ಕಂಭಗಳ ಸುರಕ್ಷತೆಗೆ ಬಹಳಷ್ಟು ಮುಜಾಗ್ರತೆಗಳನ್ನು ಅನುಸರಿಸುತ್ತಾರೆ. ಸಿಡಿ ಪ್ರಾರಂಭವಾದಾಗ ಮಹಿಳೆಗೆ ಬಟ್ಟೆಯಿಂದ ಕಟ್ಟಿ ಉಡಿಯಲ್ಲಿ ಕುಂಕಮ ಚರಗ ತುಂಬಿಸಿ ಮೇಲೆರಿಸುತ್ತಾರೆ. ಇದಕ್ಕು ಮುಂಚೆ ಕುರಿ ಹೋತಗಳನ್ನು ಬಲಿ ಕೊಡುತ್ತಾರೆ. ಸುರಕ್ಷತಾ ಕ್ರಮಗಳನ್ನು ತಗೆದುಕೊಂಡು ಪೂಜಾ ವಿಧಿವಿಧಾನಗಳನ್ನು ನೇರವೇರಿಸಿ ಉಡಿಯಲ್ಲಿ ಚರಗ ತುಂಬಿಕೊಂಡು ಸಿಡಿ ಏರುತ್ತಾರೆ. ಚರಗ ಹೊಡೆಯುವುದು ಕುಂಕುಮಾರ್ಚನೆ ಹರ್ಷೋದ್ಘಾರದೊಂದಿಗೆ ಮೆರವಣಿಗೆ ಪ್ರಾರಂಭವಾಗಿ ಜನಜಂಗುಳಿಯ ಮಧ್ಯೆ ಜೋಡಿ ಸಿಡಿಬಂಡಿಯ ಮೇರವಣಿಗೆ ಪ್ರಾರಂಭವಾಗುತ್ತದೆ. ಸ್ಥಳದಲ್ಲಿಯೇ ಮುಂಜಾಗೃತವಾಗಿ ಬಡಗಿಗಳು ಮತ್ತು ಕಾಯಸ್ತರು ಇರುತ್ತಾರೆ. ಊರಿನ ಸಮಸ್ಥರು ವಿಷೇಶ ಹೊಸ ಉಡುಪುಗಳನ್ನು ಧರಿಸಿಕೊಂಡು ಬಂಡಿಗಳ ಮೆರವಣಿಗೆ ಮುಂತಾದ ಸುರಕ್ಷತ ಕ್ರಮಗಳೊಂದಿಗೆ ಪ್ರಾರಂಭ ಮಾಡಿ ಗೌಡರ ಬಂಡಿಯನ್ನು ರೈತರಬಂಡಿ ಹಿಂಬಾಲಿಸುತ್ತದೆ. ಪ್ರೌಢಶಾಲೆಯ ಮುಂಭಾಗದಲ್ಲಿ ಸಾಗುವಾಗ ಹರ್ಷೋದ್ಗಾರದೊಂದಿಗೆ ಮೂಲೆಯಲ್ಲಿ ಕೋಳಿಯ ಬಲಿ ಕೊಡುತ್ತಾರೆ. ಅಲ್ಲಿಂದ ಸಾಗಿ ರಸ್ತೆಯ ಕೊನೆಯಲ್ಲಿ ಹೊಲಗಳಿಗೆ ಹೊಗುವ ಮೂಲೆಯಲ್ಲಿ ಹರ್ಷೋದ್ಗಾರದೊಂದಿಗೆ ಮತ್ತೊಂದು ಕೋಳಿಯ ಬಲಿಕೊಡುತ್ತಾರೆ. ಹೊಲಗಳಲ್ಲಿ ಎರಡು ಬಂಡಿಗಳನ್ನು ಸ್ಪರ್ಧೆಗೆ ಬಿದ್ದವರಂತೆ ಓಡಿಸುತ್ತಾರೆ. ಕೊನೆಗೆ ದೇವಾಲಯ ಮೂರು ಸುತ್ತು ಪ್ರದಕ್ಷಿಣೆ ಹಾಕಿದ ಮೇಲೆ ಮಹಿಳೆಯರನ್ನು ಸಿಡಿಯಿಂದ ಇಳಿಸಿದ ಮೇಲೆ ಯಾರು ಬೇಕಾದರು ಪುರುಷ, ಮಹಿಳೆಯರು ಸಿಡಿ ಏರಿ ದೇವಾಲಯ ಪ್ರದಕ್ಷಣೆ ಹಾಕುತ್ತಾರೆ.

ಸಿಡಿ ಬಂಡಿಯು ಹೋಗುವ ದಾರಿಯನ್ನು ಸುಗಮ ಸ್ವಚ್ಚ ಗೊಳಿಸಿರುತ್ತಾರೆ, ಇಲ್ಲಿ ರೈತರ ಸಿಡಿ ಹಾಗೂ ಗೌಡರ ಸಿಡಿ ಎಂದು ಎರಡು ಕಂಬಗಳನ್ನು ಕಟ್ಟುತ್ತಾರೆ. ಸಿಡಿಕಂಬವನ್ನು ಏರುವವರು ಮೂರು ದಿನ ಮೊದಲಿನಿಂದ ಉಪವಾಸ ನೇಮದಿಂದಿರುತ್ತಾರೆ. ಸಿಡಿ ಆಡುವರು ಕೇವಲ ಕೇಳಜಾತಿಗೆ ಸೇರಿರದೆ ನೊಳಂಬ ಲಿಂಗಾಯತ ಜಾತಿಗೆ ಸೇರಿರುವ ಗೌಡ್ರನಂಜಪ್ಪ, ತಳವಾರ ಸಮುದಾಯದ ಹಲವರು, ಅಗಸರ ಹಳದಪ್ಪ ಮತ್ತು ಅವರ ಹೆಂಡತಿ, ಹರಿಜನರು ಇನ್ನು ಮುಂತಾದವರು ತಮಗೆ ತೊಂದರೆ ಅದರೆ ನಾವು ಸಿಡಿ ಅಡುತ್ತೇವೆ ಎಂದು ಹೇಳಿಕೊಳ್ಳುತ್ತಾರೆ. ಹೇಳಿಕೊಂಡವರನ್ನು ಎಲ್ಲರನ್ನು ಸಿಡಿಆಡಿಸುವದಿಲ್ಲ ಅವರ ಜೀವನ ಶೈಲಿ, ಪರಿಶುದ್ದತೆ ಮುಂತಾದ ಮಾನದಂಡಗಳನ್ನು ಪರಿಗಣಿಸಿ ಆಯ್ಕೆ ಮಾಡುತ್ತಾರೆ. ಆಯ್ಕೆ ಆದವರನ್ನು ಊರು ಸುತ್ತ ಸಿಡಿ ಆಡಿಸಿಮಾಯಮ್ಮನ ದೇವಾಲಯದ ಬಳಿ ಅವರನ್ನು ಕೆಳಗೆ ಇಳಿಸಿ ಆಯ್ಕೆ ಮಾಡದವರನ್ನು ಜಾತ್ಯಾತೀತವಾಗಿ ಅವರ ಕಾಲಿಗೆ ಬಿದ್ದು ಆಶೀರ್ವಾದ ಪಡೆದು ದಕ್ಷಿಣೆ ಉಡುಗರೆಗಳನ್ನು ನೀಡುತ್ತಾರೆ. ಅ ನಂತರ ಉಳಿದ ಹರಕೆ ಹೆಳಿಕೊಂಡವರನ್ನು ದೇವಾಲಯದ ಸುತ್ತಲು ಪ್ರದಕ್ಷಿಣೆ ಹಾಕಿಸುತ್ತಾರೆ. ಸಿಡಿಯ ದಿನ ಶುಭ ಸಮಯದಲ್ಲಿ ಸಿಡಿಕಟ್ಟುವ ಜಾಗಕ್ಕೆ ಊರ ದೇವರುಗಳ ಸಮ್ಮುಖದಲ್ಲಿ ಸಿಡಿಕಟ್ಟುವ ಜಾಗಕ್ಕೆ ದೇವರನ್ನು ಸಿಡಿಆಡುವರನ್ನು ಕರೆತರಲಾಗುತ್ತದೆ. ಸಿಡಿಆಡುವ ಮಹಿಳೆಯರ ಹರಿಜನ ಸಮುದಾಯಕ್ಕೆ ಸೇರಿದವರಾಗಿರುತ್ತಾರೆ. ಈ





ಬಾರಿ ಸಿಡಿ ಆಡಿದ ಮಹಿಳೆಯರು ನಲವತ್ತು ವರ್ಷಗಳಿಂದ ಸಿಡಿ ಆಡಿರುತ್ತಾರೆ. ಆಗ್ರಪೂಜೆ ಗೌಡರ ಸಿಡಿಬಂಡಿಯ ಕಂಬಕ್ಕೆ ಸಲ್ಲುತ್ತದೆ. ನಂತರ ರೈತರ ಸಿಡಿಬಂಡಿಕಂಬಕ್ಕೆ ಸಲ್ಲುತ್ತದೆ ಸಿಡಿಕಂಭ ಏರುವವರನ್ನು ಮಂಗಳವಾಧ್ಯಗಳ ಮೂಲಕ ಕರೆತಂದು ಕಂಬದತುದಿಗೆ ಕಬ್ಬಿಣದ ತೊಟ್ಟಿಲಲ್ಲಿ ನಿಲ್ಲಿಸಿ ಸುರಕ್ಷತೆಯೊಂದಿಗೆ ಸಿಂಗರಿಸಿ ಕಂಬದತುದಿಗೆ ಸೀರೆಯಿಂದ ಅವರನ್ನು ಕಟ್ಟಲಾಗುತ್ತದೆ. ಗೌಡರ ಸಿಡಿ ಬಂಡಿ ಕಂಬಕ್ಕೆ ಚಾಲನೆ ಕೊಟ್ಟ ನಂತರ ರೈತರ ಸಿಡಿಬಂಡಿಯು ಅದನ್ನು ಹಿಂಬಾಲಿಸುತ್ತದೆ. ಸಿಡಿಬಂಡಿಗೆ ಕಟ್ಟುವ ಎತ್ತುಗಳ ಆಯ್ಕೆ ಪ್ರಮುಖವಾಗಿರುತ್ತದೆ. ಜಿದ್ದಿಗೆ ಬಿದ್ದವರ ರೀತಿ ಲಕ್ಷಗಟ್ಟಲೆ ಹಣ ಕೊಟ್ಟು ಎತ್ತುಗಳನ್ನು ಖರೀದಿಸಿ ತಂದು ಕಟ್ಟು ಮಸ್ತಾದ ಎತ್ತಗಳನ್ನು ಸಿಡಿಬಂಡಿಗಳಿಗೆ ಕಟ್ಟಲಾಗುತ್ತದೆ. ಅದಕ್ಕಾಗಿ ಸಿಡಿಯ ದಿನ ಎತ್ತುಗಳನ್ನು ಸ್ವಚ್ಚಮಾಡಿ ಜೂಲಹಾಕಿ ಕೊಂಬುಗಳಿಗೆ ಟೇಪು ಗೆಂಡೆಸರ ಕೊರಳಹಾರ ಗೊಂಡೆಕಟ್ಟಿ ಕೊರಳಿಗೆ ಕರಿದಂಡೆಕಟ್ಟಿ ಅಲಂಕರಿಸಿರುತ್ತಾರೆ. ಅವುಗಳನ್ನು ಹಬ್ಬದ ಮುಂಚಿನ ದಿನಗಲ್ಲಿ ಪಳಗಿಸಿ ತಾಲಿಮು ಮಾಡಿಸಿ ಹಬ್ಬದ ದಿನ ಹಿಡಿಯುವುದೆ ದೊಡ್ಡ ಸಾಹಸವಾಗಿರುತ್ತದೆ. ಸಿಡಿಬಂಡಿಗೆ ಮೂರು ನಾಲ್ಕು ಜೊತೆ ಎತ್ತುಗಳನ್ನು ಕಟ್ಟಿ ಎಳಸುತ್ತಾರೆ. ಸಿಡಿಬಂಡಿ ಕಟ್ಟಲಿಕ್ಕೆಂದೇ ಗೌಡರು ಮತ್ತು ರೈತರು ಪೈಪೋಟಿಯಲ್ಲಿ ಎತ್ತುಗಳನ್ನು ಖರೀದಿಸುತ್ತಾರೆ. ಸಿಡಿ ಬಂಡಿಗಳಿಗೆ ಎಂಟು ಜೋತೆ ಎತ್ತುಗಳನ್ನು ಕಟ್ಟುತ್ತಾರೆ, ಯಾರದು ಎತ್ತಗಳು ಮೊದಲು ಕಟ್ಟಬೇಕು ಎಂಬುದನ್ನು ಚೀಟಿ ಮೂಲಕ ಅಯ್ಕೆ ಮಾಡುತ್ತಾರೆ. ಅವುಗಳನ್ನು ಖುಷಿಯಿಂದ ನೋಡಿ ಒಡೆಯ ಬೀಗುತ್ತಿರುತ್ತಾನೆ ಊರತುಂಬ ನೆಂಟರಿಷ್ಟರ ಓಡಾಟ ಗದ್ದಲ ಬೆರಗು ಬೆಡಗು ಹಬ್ಬದ ಸಡಗರ ಸಂತೋಷವನ್ನು ದುಪ್ಪಟ್ಟು ಹೆಚ್ಚಿಸಿರುತ್ತದೆ. ಬೇರೆ ಬೇರೆ ಜಿಲ್ಲೆಗಳಿಂದ ಜನರು ಈ ಹಬ್ಬದ ವಿಶೇಷತೆಯನ್ನು ಕಣ್ತುಂಬಿಕೊಳ್ಳಲು ಸಾಗರೋಪಾದಿಯಲ್ಲಿ ಬರುತ್ತಾರೆ. ಬೇರೆ ಬೇರೆ ಸ್ಥಳಗಳಿಂದ ಇವರಿಗೆ ಊಟದ ವ್ಯವಸ್ಥೆ ಮಾಡಿರುತ್ತಾರೆ.

ಗ್ರಾಮೀಣ ಭಾಗದ ಸೊಗಡನ್ನು ಕಣ್ತುಂಬಿಗೊಳ್ಳಲು ಸಿಡಿ ಬಂಡಿಉತ್ಸವ ಒಂದು ವಿಶೇಷವಾದ ಹಬ್ಬವಾಗಿದ್ದು ಆಧುನಿಕತೆಗೆ ತಕ್ಕಂತೆ ಮುಂದುವರಿದು ಮೂಡನಂಬಿಕೆ ನಿಷೇಧ ಕಾಯ್ದೆಯನ್ನು ಪರಿಗಣಿಸಿ ಅದಕ್ಕೆ ತೊಂದರೆಯಾಗದಂತೆ ಸಿಡಿ ಆಡುವವರ ಮನವೊಲಿಸಿ ಸಿಡಿ ಆಡುವ ಮಹಿಳೆಗೆ ಧನಸಹಾಯ ಬಟ್ಟೆ ದವಸಧಾನ್ಯ ಕಾಣಿಕೆಗಳನ್ನು ಅವರಿಗೆ ನೀಡಿ ಆರ್ಥಿಕವಾಗಿ ಅಲ್ಲದೆ ಅವರಿಗೆ ದೇವಾಲಯದ ಕಮಿಟಿಯಿಂದ ಧನಸಹಾಯವನ್ನು ನೀಡಿ ಅವರಿಗೆ ಆರ್ಥಿಕ ಸಬಲತೆಯನ್ನು ನೀಡುತ್ತಾರೆ. ಇದರಿಂದ ಸಿಡಿಯಾಡುವ ಮಹಿಳೆಯು ಕುಟುಂಬಸ್ಥರು ಖುಷಿಯಿಂದ ಹಬ್ಬದಲ್ಲಿ ಭಾಗವಹಿಸುತ್ತಾರೆ. ಊರಿನ ಜನರ ಶ್ರೇಯೊಬಿವೃದ್ಧಿಗಾಗಿ ಅಚರಣೆ ಮಾಡುವ ಸಿಡಿ ಉತ್ಸವ ಕರ್ನಾಟಕದಲ್ಲಿ ವಿಶೇಷವಾಗಿ ನಮ್ಮ ಮುಂದೆ ಬರುತ್ತದೆ. ಇತಿಹಾಸಿಕ ಹಿನ್ನೆಲೆಯನ್ನು ಇಟ್ಟುಕೊಂಡು ಇನ್ನು ಹೆಚ್ಚಿನ ಅಧ್ಯಯನದ ಅವಶ್ಯಕತೆ ಇದೆ.

ಆಕರ ಗ್ರಂಥಗಳು

೧. ಕ್ಷೇತ್ರಕಾರ್ಯ.

೨. ಡಾ. ನಾ. ಕೊಟ್ರೇಶ್ ಉತ್ತಂಗಿ, 'ಹೊನ್ನೆಲೆಗಳು' ಸಹನಾದ್ರಿ ಪ್ರಕಾಶನ, ಹೊನ್ನಾಳಿ, ೨೦೦೪.

೩. ಟಿ. ಗಿರಿಜಾ, ದಾವಣಗೆರೆ-ಇದು ನಮ್ಮ ಜಿಲ್ಲೆ, ನಿಹಾರಿಕ ಪ್ರಾಕಾಶನ, ದಾವಣಗೆರೆ, ೨೦೦೧.

೪. ಡಿ.ಬಿ. ಶಂಕರಪ್ಪ, 'ಗಿಡ್ಡಜ್ಜಿಯ ಬಯಲು', ಮಾಯಮ್ಮ ಪ್ರಾಕಾಶನ, ಶಿವಮೊಗ್ಗ, ೨೦೧೩.

ಚಿತ್ರದುರ್ಗ ಜಿಲ್ಲೆಯ ಶಾಸನದಲ್ಲಿ ತಿರು ನಕ್ಷತ್ರ ಆಚರಣೆ

ಜೆ.ಸಿ. ಅನಿಲ್‌ಕುಮಾರ್*✷*

ಭಾರತದ ಪ್ರಾಚೀನ ಇತಿಹಾಸವನ್ನು ಗಮನಿಸಿದಾಗ ಇಲ್ಲಿ ಹಲವು ಧರ್ಮಗಳು ಉಗಮಗೊಂಡಿರುವುದನ್ನು ಕಾಣಬಹುದು. ಜೊತೆಗೆ ಅನೇಕ ಧಾರ್ಮಿಕ ಮಹಾಪುರುಷರು, ಸಾದು ಸಂತರು, ಯೋಗಿಗಳು ಅವತರಿಸಿರುವುದು ಕಂಡುಬರುತ್ತದೆ.

ಭಾರತದಲ್ಲಿ ಉಗಮಗೊಂಡ ಪ್ರಮುಖ ಧರ್ಮಗಳಲ್ಲಿ ವೈಷ್ಣವ ಧರ್ಮವು ಒಂದು. ವಿಷ್ಣುವನ್ನು ಸರ್ವೋತ್ತಮನು ಎಂದು ಪ್ರತಿಪಾದಿಸುವ ಸಿದ್ಧಾಂತಕ್ಕೆ ವೈಷ್ಣವ ಸಿದ್ಧಾಂತವೆಂದು ಕರೆಯಲಾಗುವುದು. ಈ ವೈಷ್ಣವ ಧರ್ಮದಲ್ಲಿ ದ್ವೈತ ಸಿದ್ಧಾಂತ ಪ್ರತಿಪಾದಕರಾಗಿ ಶ್ರೀ ಮಧ್ವಾಚಾರ್ಯರು ಹಾಗೂ ವಿಶಿಷ್ಟಾದ್ವೈತ ಸಿದ್ಧಾಂತ ಪ್ರತಿಪಾದಕರಾಗಿ ಶ್ರೀರಾಮಾನುಜಚಾರ್ಯರು ಕಂಡುಬರುತ್ತಾರೆ. ಇಲ್ಲಿ ವಿಶಿಷ್ಟಾದ್ವೈತ ಆಚಾರ್ಯರಾದ ರಾಮಾನುಜರ ಅನುಯಾಯಿಗಳಾಗಿ ಬಂದವರು ಶ್ರೀ ವೈಷ್ಣವ ಸಂಪ್ರದಾಯದವರಾಗಿರುತ್ತಾರೆ. ಇವರುಗಳು ತಮ್ಮ ಆರಾಧ್ಯರಾದ ಶ್ರೀರಾಮಾನುಜರ ಜನ್ಮದಿನವನ್ನು ತಿರುನಕ್ಷತ್ರ ಎಂಬುದಾಗಿ ಆಚರಿಸಿಕೊಂಡು ಬರುತ್ತಿದ್ದಾರೆ. ಈ ನಿಟ್ಟಿನಲ್ಲಿ ಚಿತ್ರದುರ್ಗ ಜಿಲ್ಲೆಯ ಶಾಸನೋಕ್ತ ತಿರುನಕ್ಷತ್ರ ಉಲ್ಲೇಖಗಳ ಬಗ್ಗೆ ಈ ಲೇಖನದಲ್ಲಿ ತಿಳಿಸಲು ಪ್ರಯತ್ನಿಸಲಾಗಿದೆ.

ಶ್ರೀರಾಮಾನುಜಾಚಾರ್ಯರು (ಕ್ರಿ.ಶ. ೧೦೧೭–೧೧೩೭)

೧೧ನೇ ಶತಮಾನದ ಆದಿಭಾಗದಲ್ಲಿ ಜನಿಸಿದ ರಾಮಾನುಜಾಚಾರ್ಯರು ಕ್ರಿ.ಶ. ೧೦೧೭ರಲ್ಲಿ ವೈಶಾಖ ಶುದ್ಧ ಪಂಚಮಿಯಂದು ಆರ್ದ್ರ ನಕ್ಷತ್ರದಲ್ಲಿ ತಮಿಳುನಾಡಿನ ಕಂಚಿ ಪಟ್ಟಣದ ಶ್ರೀಪೆರಂಬದೂರಿನಲ್ಲಿ ಶ್ರೀ ಆಸುರಿ ಕೇಶವ ಸೋಮ ಯಾಜಿ ದೀಕ್ಷಿತರು ಮತ್ತು ಕಾಂತಿಮತಿ ದಂಪತಿಗಳಿಗೆ ಜನಿಸಿದರು. ಕಾಂಚಿಪುರದ ಶ್ರೀ ಯಾದವ ಪ್ರಕಾಶರ ಶಿಷ್ಯರಾಗಿ ಶಾಸ್ತ್ರಾಧ್ಯಯನ, ವೇದಾಧ್ಯಯನಗಳನ್ನು ಅಧ್ಯಯನ ಮಾಡಿ ತಮ್ಮದೇ ಆದ ವಿಶಿಷ್ಟಾದ್ವೈತ ಸಿದ್ಧಾಂತವನ್ನು ಪ್ರತಿಪಾದಿಸುವ ಮೂಲಕ ಭಾರತದಾದ್ಯಂತ ಪ್ರಸಿದ್ಧಿ ಪಡೆದರು. ಅಂದಿನ ಸಮಾಜದಲ್ಲಿದ್ದ ವರ್ಣ, ಜಾತಿ, ಲಿಂಗಗಳ ತಾರತಮ್ಯತೆಯನ್ನು ಹೋಗಲಾಡಿಸಿ ಸಾಮಾಜಿಕ ಅನ್ಯೋನ್ಯತೆಯನ್ನು ಬೆಳೆಸಿದರು. ಭಾರತದಾದ್ಯಂತ ಸಂಚಾರ ಮಾಡಿದ ರಾಮಾನುಜರು ಅನೇಕ ವೈಷ್ಣವ ದೇವಾಲಯಗಳನ್ನು ಸ್ಥಾಪಿಸಿದರಲ್ಲದೆ ದಲಿತರಿಗೆ ದೇವಾಲಯ ಪ್ರವೇಶಕ್ಕೆ ಅವಕಾಶ ಕಲ್ಪಿಸಿಕೊಟ್ಟರು. ಅವರು ಜಾತಿಯನ್ನು ಲೆಕ್ಕಿಸದೆ ತಮ್ಮ ಶಿಷ್ಯರನ್ನಾಗಿ ಪಿಳ್ಳೈ ಲೈ ಉರುಂಗಾವಿಲ್ಲದಾಸರನ್ನು ಸ್ವೀಕಾರ ಮಾಡಿದರು. ಸುಮಾರು ೧೨೦ ವರ್ಷಗಳ ಕಾಲ ಜೀವಿಸಿದ ರಾಮಾನುಜರು ಶ್ರೀ ವಿಶಿಷ್ಟಾದ್ವೈತ ಸಿದ್ದಾಂತವನ್ನು ಪ್ರಚಾರಪಡಿಸಲು ತಮಿಳು ನಾಡಿನಿಂದ ಹೊರಟು ಕರ್ನಾಟಕಕ್ಕೆ ವಲಸೆ ಬಂದರು. ಆಗ ಹೊಯ್ಸಳರ ದೊರೆ ವಿಷ್ಣುವರ್ಧನನಿಂದ ರಾಜಾಶ್ರಯವನ್ನು ಪಡೆದರು. ತದ ನಂತರ ರಾಮಾನುಜರು ಮೇಲುಕೋಟೆಯಲ್ಲಿ ನೆಲೆಸಿ ಚೆಲುವ ನಾರಾಯಣಸ್ವಾಮಿ ದೇವಾಲಯವನ್ನು ಸ್ಥಾಪಿಸಿದರು. ಇಲ್ಲಿ ಮಾತ್ರವಲ್ಲದೆ ರಾಮಾನುಜರು ಕರ್ನಾಟಕದ ಹಲವು ಭಾಗಗಳಲ್ಲಿ ವೈಷ್ಣವ ದೇವಾಲಯಗಳನ್ನು ಸ್ಥಾಪಿಸಿರುವುದನ್ನು ಕಾಣಬಹುದು. ನಂತರ ಕರ್ನಾಟಕದಾದ್ಯಂತ ಸಂಚರಿಸಿ ಶ್ರೀವೈಷ್ಣವ ಮತ ಪ್ರಚಾರ ಮಾಡಿದರು. ಹೀಗೆ ೩೨ ವರ್ಷಗಳ ಕಾಲ ಕರ್ನಾಟಕದಲ್ಲೇ ನೆಲೆಸಿದ ರಾಮಾನುಜರು ಹಲವು ಧಾರ್ಮಿಕ, ಸಾಮಾಜಿಕ, ಕಾರ್ಯಗಳನ್ನು ಮಾಡುವ ಮೂಲಕ ಭಾರತದ ವಿದ್ವಾಂಸರು, ದಾರ್ಶನಿಕರು ಹಾಗೂ ಸಂತರಾಗಿ ಹೊರಹೊಮ್ಮಿದರು. ತಮ್ಮ ಜೀವಿತದ ಕೊನೆಯ ಕಾಲವನ್ನು ಶ್ರೀರಂಗಂನಲ್ಲಿ ಕಳೆದ ಇವರು ತಮ್ಮ ೧೨೦ನೇ ವಯಸ್ಸಿನಲ್ಲಿ ಅಂದರೆ ಕ್ರಿ.ಶ. ೧೧೩೭ರ ಮಾಘ ಶುದ್ಧ ಸಪ್ತಮಿಯಂದು ವಿಷ್ಣುವಿನಲ್ಲಿ ಐಕ್ಯರಾದರು. ಇಂತಹ ಮಹಾನ್ ವ್ಯಕ್ತಿಯ ಜನ್ಮದಿನವನ್ನು ಶ್ರೀವೈಷ್ಣವ ಸಂಪ್ರದಾಯದವರು ತಿರುನಕ್ಷತ್ರ ಎಂಬುದಾಗಿ ಆಚರಿಸಿಕೊಂಡು ಬರುತ್ತಿದ್ದಾರೆ. ಕರ್ನಾಟಕದಲ್ಲಿ ವಿಶೇಷವಾಗಿ ಮೇಲುಕೋಟೆ ಶ್ರೀ ಚೆಲುವನಾರಾಯಣ ಸ್ವಾಮಿ ದೇವಾಲಯದಲ್ಲಿ ಶ್ರೀ ರಾಮಾನುಜಾಚಾರ್ಯರ ಜನ್ಮದಿನವನ್ನು ತಿರು ನಕ್ಷತ್ರ ಮಹೋತ್ಸವವಾಗಿ ಇಂದಿಗೂ ವಿಜೃಂಭಣೆಯಿಂದ ಆಚರಿಸಿಕೊಂಡು ಬರುತ್ತಿರುವುದನ್ನು ಇಲ್ಲಿ ಕಾಣಬಹುದಾಗಿದೆ ಹಾಗೆಯೆ ಚಿತ್ರದುರ್ಗ ಭಾಗದಲ್ಲಿ ತಿರು ನಕ್ಷತ್ರ ಆಚರಣೆಯು ಜಾರಿಯಲ್ಲಿದ್ದು ಈ ವಿಚಾರವನ್ನು ಚಿತ್ರದುರ್ಗ ಜಿಲ್ಲೆಯ ಶಾಸನಗಳ ಆಧಾರದ ಮೂಲಕ ಉಲ್ಲೇಖಿಸಬಹುದಾಗಿದೆ.

✷ ಸಂಶೋಧನಾ ವಿದ್ಯಾರ್ಥಿ, ಮಾರ್ಗದರ್ಶಕರು: ಬಿಜಿ. ಸಿದ್ಧಲಿಂಗಮ್ಮ, ಕನ್ನಡ ವಿವಿ, ವಿದ್ಯಾರಣ್ಯಪುರ, ೯೧೬೪೮೩ ೩೪೮೩೬೫

ಹೊಳಲ್ಕೆರೆ ಶ್ರೀ ವೇಣುಗೋಪಾಲಕೃಷ್ಣ ದೇವಸ್ಥಾನದ ತಾಮ್ರ ಶಾಸನ

ಕಾಲ: ಶಕ ವರ್ಷ ಕ್ರಿ.ಶ. ೧೪೯೦, ವಿಭವ ಸಂವತ್ಸರ, ಜೇಷ್ಠ ಶುದ್ಧ-೫ (ಶಾಸನ ಸಂ. ೧೧: ಹೊಳಲ್ಕೆರೆ ತಾಲ್ಲೂಕು ೭, ಪುಟ ೩೨)

ಈ ತಾಮ್ರ ಶಾಸನದಲ್ಲಿ ವೀರ ಸದಾಶಿವರಾಯರು ವಿಜಯನಗರದ ಸಿಂಹಾಸನರೂಢರಾಗಿ ಆಳ್ವಿಕೆ ನಡೆಸುತ್ತಿರುವಾಗ ಶ್ರೀಮನ್ ಮಹಾಮಂಡಲೇಶ್ವರನಾದ ಅಳಿಯ ರಾಮರಾಯದೇವ ಮಹಾರಾಯರು ಮುಸ್ಲಿಂರ ವಿರುದ್ಧ ನಡೆಸಿದ ಹೋರಾಟದಲ್ಲಿ ಮರಣಹೊಂದಿದಾಗ ಹೊಳಲ್ಕೆರೆ ಪಟ್ಟಣವು ಮುಸ್ಲಿಂರಿಂದ ಲೂಟಿಗೆ ಒಳಗಾಗುತ್ತದೆ. ಆಗ ಕಾಮಗೇತಿ ಮೆದಕೇರಿನಾಯಕರಿಗೆ ರಾಜಶ್ರೀ ತಿರುಮಲ ರಾಜ್ಯೈಯ್ಯದೇವರಿಂದ ಅಮರ ಮಾಗಣಿಯಾಗಿ ಹೊಳಲ್ಕೆರೆ ಪಟ್ಟಣವನ್ನು ಪಡೆದುಕೊಂಡು ಮೆದಕೇರಿ ನಾಯಕರು ತಮ್ಮ ಮೈದುನ ಗುಲ್ಲಿಯಪ್ಪನಾಯಕರಿಗೆ ಹೊಳಲ್ಕೆರೆಯ ಶ್ರೀಮದನ ಗೋಪಾಲಸ್ವಾಮಿ ದೇವಾಲಯವನ್ನು ಜೀರ್ಣೋದ್ಧಾರ ಮಾಡಲು ತಿಳಿಸಿಕೊಡುತ್ತಾರೆ. ಆಗ ಗುಲ್ಲಿಯಪ್ಪನಾಯಕರು ದೇವಾಲಯಕ್ಕೆ ಅರ್ಚಕರನ್ನು ನೇಮಿಸಿ ದೇವಾಲಯದಲ್ಲಿ ನಡೆಸಬೇಕಾದ ವಿವಿಧ ಕಾರ್ಯಗಳಿಗೆ ಮತ್ತು ಅಲ್ಲಿನ ಖರ್ಚು ವೆಚ್ಚಕ್ಕಾಗಿ ಹಲವು ಗ್ರಾಮಗಳನ್ನು ದಾನವಾಗಿ ನೀಡುತ್ತಾರೆ. ಅವುಗಳೆಂದರೆ (೧) ಭೀಮಾ ಅಗ್ರಹಾರದ ಆದಾಯ ಅರ್ಚಕರ ಸಂಬಳಕ್ಕೆ (೨) ವಾಮಲ್ಲಾಪುರಿ - ಅಂಗರಂಗ ವೈಭವಕ್ಕೆ (೩) ಕೊಮಾರಾ ಕೆರೆ-ಸಹಸ್ರನಾಮ ಪೊಂಗಲ್ಲು ನೈವೇದ್ಯಕ್ಕೆ (೪) ಚೆನ್ನಪುರದ ಭೂಮಿ ಶನಿವಾರ ಪೂಜೆಗಾಗಿ ಹೀಗೆ ಹಲವು ಗ್ರಾಮಗಳನ್ನು ಭೂದಾನವಾಗಿ ಕೊಡುವಾಗ ಹೊಳಲ್ಕೆರೆ ಸೀಮೆಯಿಂದ ಬರುವ ವರಮಾನವನ್ನು ಅಡುಗೆ ಪರಿಚಾರಕರಿಗೆ, ಪಲ್ಲಕ್ಕಿ ಉತ್ಸವಕ್ಕೆ, ರಥದ ಅಲಂಕಾರಕ್ಕೆ, ವಸ್ತ್ರ ಆಭರಣಗಳಿಗೆ ಜೊತೆಗೆ ಆಳ್ವಾ ತಿರುನಕ್ಷತ್ರದ ಆಚರಣೆಗೆ ನೀಡಬೇಕೆಂದು ತಿಳಿಸಿದ್ದಾರೆ. ಅಂದರೆ ಆ ಕಾಲದಲ್ಲಿ ಶ್ರೀ ಮದನಗೋಪಾಲ ಕೃಷ್ಣ ದೇವಾಲಯದಲ್ಲಿ ಶ್ರೀರಾಮಾನುಜರ ಜನ್ಮದಿನವನ್ನು ಮತ್ತು ಶ್ರೀವೈಷ್ಣವ ಸಂಪ್ರದಾಯದ ಸಂತರಾದ ಆಳ್ವಾರ ಜನ್ಮದಿನವನ್ನು ಆಚರಿಸುತ್ತಿದ್ದರು ಎಂಬುದು ತಿಳಿಯಬಹುದಾಗಿದೆ. ಈ ಆಚರಣೆಯನ್ನು ನಾವು ಇಂದಿಗೂ ಶ್ರೀಮದನ ಗೋಪಾಲಕೃಷ್ಣ ದೇವಾಲಯದಲ್ಲಿ ನಡೆಸಿಕೊಂಡು ಬರುತ್ತಿರುವುದನ್ನು ಗಮನಿಸಬಹುದಾಗಿದೆ.

(೨) ಬಾಗೂರಿನ ಚೆನ್ನಕೇಶವ ದೇವಾಲಯದ ಪ್ರಾಂಗಣದ ಶಿಲಾಶಾಸನ

ಶಾಲಿವಾಹನ ಶಕೆ ೧೪೭೭ನೇ ಪರಿಧಾವಿ ಸಂವತ್ಸರ ಪುಶ್ಯ ಶುದ್ಧ ೧೨ (ಶಾಸನ ಸಂ. ೧೧, ಹೊಳಲ್ಕೆರೆ ತಾಲ್ಲೂಕು ಶಾಸನ ಸಂ. ೧೧೪, ಪುಟ ಸಂ. ೩೮೦) ಈ ಶಾಸನದ ಪ್ರಕಾರ ಕೃಷ್ಣಸಮುದ್ರ ಗ್ರಾಮವನ್ನು ಕೃಷ್ಣಪ್ಪನಾಯಕರು ಸದಾಶಿವ ರಾಯರಿಗೆ ಪುಣ್ಯವಾಗಲೆಂದು ಚೆನ್ನಿಗರಾಯ ದೇವರಿಗೆ ಸಮರ್ಪಿಸಿ ಚೆನ್ನಿಗರಾಯರ ದೇವಾಲಯದ ಅರ್ಚಕರಾದ ತಿರು ವೆಂಗಳೈಯ್ಯ ಶಠಗೋಪಯ್ಯ, ಲಕ್ಷ್ಮಣಯ್ಯರು ಪ್ರತಿದಿನ ಅನುಸಂಧಾನ, ತಿರುನಕ್ಷತ್ರ, ತಿರುಧ್ಯಾನದ ಆಚರಣೆಗಳನ್ನು ಮಾಡಿ ಕೊಂಡು ಹೋಗಬೇಕೆಂದು ತಿಳಿಸಿರುವುದನ್ನು ಗಮನಿಸಬಹುದು. ಶಾಸನದಲ್ಲಿ ತಿರುನಕ್ಷತ್ರದ ಉಲ್ಲೇಖ ಶ್ರೀ ರಾಮಾನುಜನರ ಜನ್ಮದಿನದ ಆಚರಣೆಯ ಬಗ್ಗೆ ತಿಳಿಸಿಕೊಡುವುದರ ಜೊತೆಗೆ ತಿರುಧ್ಯಾನದ ಆಚರಣೆಯ ಕುರಿತು ಹೇಳುತ್ತದೆ. ತಿರುಧ್ಯಾನ ಎಂದರೆ ಶ್ರೀವೈಷ್ಣವ ಸಂಪ್ರದಾಯದ ಮತ್ತೊಂದು ಆಚರಣೆ. ಇಲ್ಲಿ ಶ್ರೀವೈಷ್ಣವ ಸಂಪ್ರದಾಯದ ಸಂತರಾದ ಆಳ್ವರ ಜನ್ಮದಿನವನ್ನು ಆಚರಿಸುವುದಾಗಿದೆ. ಈ ಎರಡು ಆಚರಣೆಗಳನ್ನು ಬಾಗೂರಿನ ಚೆನ್ನಕೇಶವ ದೇವಾಲಯದಲ್ಲಿ ಇಂದಿಗೂ ಆಚರಿಸಿಕೊಂಡು ಬರಲಾಗುತ್ತಿದೆ.

ಒಟ್ಟಾರೆಯಾಗಿ ಚಿತ್ರದುರ್ಗ ಜಿಲ್ಲೆಯಲ್ಲಿ ಕಂಡುಬರುವ ಶಾಸನ ಉಲ್ಲೇಖಿತ ತಿರುನಕ್ಷತ್ರ ಆಚರಣೆಗಳಷ್ಟೇ ಅಲ್ಲದೆ ಚಿತ್ರದುರ್ಗ ಜಿಲ್ಲೆಯ ಶ್ರೀವೈಷ್ಣವ ಕ್ಷೇತ್ರಗಳಾದ ಚಳ್ಳಕೆರೆಯ ಪರಶುರಾಂಪುರದ ಚೆನ್ನಕೇಶವ ದೇವಾಲಯ, ಈ ದೇವಾಲಯದಲ್ಲಿ ಶ್ರೀ ರಾಮಾನುಜಚಾರ್ಯರ ಮೂರ್ತಿ ಶಿಲ್ಪವಿದೆ. ಚಿತ್ರದುರ್ಗದ ಹೊಂಡದ ಗೋಪಾಲಸ್ವಾಮಿ ದೇವಾಲಯ, ಹೊರಕೆರೆ ದೇವರಪುರದ ಶ್ರೀಲಕ್ಷ್ಮಿನರಸಿಂಹ ದೇವಾಲಯ, ಹೊಸದುರ್ಗದ ನಗರಗೆರೆಯ ಕಟ್ಟೆ ರಂಗನಾಥಸ್ವಾಮಿ ದೇವಾಲಯ ಹೀಗೆ ಮೊದಲಾದ ಶ್ರೀವೈಷ್ಣವ ಕ್ಷೇತ್ರಗಳಲ್ಲಿ ಇಂದಿಗೂ ಸಹ ತಿರುನಕ್ಷತ್ರ, ತಿರುಧ್ಯಾನಗಳನ್ನು ಆಚರಿಸಿಕೊಂಡು ಬರುತ್ತಿರುವುದನ್ನು ಕಾಣಬಹುದಾಗಿದೆ. ಈ ಮೇಲ್ಕಂಡ ಅಂಶಗಳನ್ನು ಗಮನಿಸಿದಾಗ ಚಿತ್ರದುರ್ಗದಲ್ಲಿ ವೈಷ್ಣವ ಧರ್ಮವು ಪ್ರಮುಖ ಸ್ಥಾನವನ್ನು ಪಡೆದುಕೊಂಡಿತ್ತು ಎಂಬುದನ್ನು ತಿಳಿಯಬಹುದಾಗಿದೆ.

ಅಡಿ ಟಿಪ್ಪಣಿಗಳು

೧. ಎಪಿಗ್ರಾಫಿಯಾ ಕರ್ನಾಟಕ, ಸಂಪುಟ ೧೧.

೨. ಎಸ್.ವೈ. ಸೋಮಶೇಖರ್, ಕರ್ನಾಟಕ ದೇವಾಲಯ ಕೋಶ ಚಿತ್ರದುರ್ಗ ಜಿಲ್ಲೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೧೭.

೩. ವಿದ್ವಾನ್ ರಘುಸುತ, ಶ್ರೀ ವೈಷ್ಣವ ದರ್ಶನ ಮತ್ತು ಸಂಸ್ಕೃತಿ, ವ್ಯಾಸ ಪ್ರಕಾಶನ, ಬೆಂಗಳೂರು ೨೦೦೨.

೪. ಪ್ರೊ. ಕೆ.ಎಸ್. ಗಂಗಾನಾಯಕ್ (ಸಂ.) ಪಾಳೆಯಗಾರರ ಶಾಸನಗಳು ಸಂಪುಟ ೧, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮಾನಸ ಗಂಗೋತ್ರಿ, ಮೈಸೂರು ೨೦೧೨.

ಮಹಾರಾಷ್ಟ್ರದ ಚರಿತ್ರೆಯಲ್ಲಿ ಕೆಳದಿ ಇತಿಹಾಸ

ಡಾ. ಕೆಳದಿ ಗುಂಡಾಜೋಯಿಸ್*

ಕೆಳದಿ ಮತ್ತು ಮಹಾರಾಷ್ಟ್ರ ಇತಿಹಾಸ ಕುರಿತು ಈ ಕೆಳಕಂಡಂತೆ ಸಮಕಾಲೀನ ಮೂಲ ಸಾಮಗ್ರಿಗಳು ಬೆಳಕು ಚೆಲ್ಲುತ್ತವೆ.

ಕೆಳದಿ ಅರಸರ ಸಮಕಾಲೀನ ಪೀಳಿಗೆಗೆ ಸೇರಿದ ಬಸವರಾಜನು ಶಿವತತ್ವ ರತ್ನಾಕರದಲ್ಲಿ:

ತತಶ್ಚ ಸರ್ವಯವನ ಸಾರ್ವಭೌಮಪದಂಗತೇ ॥ ೧೨ ॥

ನೃಪಶ್ರೇಷ್ಠಾನ್ ದ್ವಿಪಂಚಾ ಶತ್ಸಂಖ್ಯಾಕಾನ್ ಬಲವತ್ತರಾನ್ ।
ಉನ್ಮೂಲ್ಯ ವೈರಿತಾಂ ಪ್ರಪಾಂ ಛತ್ರಾಧಿಪತಿ ಶಾಬ್ದಿತಮ್ ॥ ೧೩ ॥

ರಾಜಾರಾಮನೃಪಂ ಜಿತ್ವಾ ಗೃಹೀತುಮಭಿವಾಂಛತಿ ।
ಮ್ಲೇಚ್ಛಾsವರಂ ಸಾಬಾಖ್ಯೇ ಸಮಾಯಾತಿ ಬಲೀಯಸಿ ॥ ೧೪ ॥

ಕಾಲಂ ಪ್ರತೀಕ್ಷ ಮಾಣಿಕಾsಥ ನಿರ್ಗತ್ಯಸ ಸುಧೀಸ್ತತಃ ।
ಚರಿತ್ವಾ ತತ್ರ ತತ್ರಾಪಿ ನೃಪೋಮಾರ್ಗವಶಾಗತಃ ॥ ೧೫ ॥

ಸಮಾಗತೋಭವದ್ದೇಶಮಿಮಂತು ಸಪರಿಚ್ಛದಃ ।
ಸ್ವದೇಶಂ ಸಮುಪಾಯಾಂತಂ ರಾಜಾರಾಮಂ ವಿಭಾವ್ಯಸಾ ॥ ೧೬ ॥

ಮಹತಾಮಪಿ ಶೂರಾಣಂ ಬಲಿನಾಂ ನೀತಿವೇದಿನಾಂ ।
ಪರಾಭವಸ್ತತ್ರ ತತ್ರ ಪೂರ್ವೇಷಾಮಪಿ ದೃಶ್ಯತೇ ॥ ೧೭ ॥

ಸಂಪದೋ ಮಹತಾಮೇವ ಮಹತಾಮೇವ ಚಾಪದಃ ॥
ಹೀಯತೇ ವರ್ಧತೇ ಚಂದ್ರೋ ನೈವಂ ನಕ್ಷತ್ರ ತಾರಕಾಃ ॥ ೧೯ ॥

ತಸ್ಮಾದುಪಗತಾಯಾಸ್ಮೈ ಸಮಾನನಮಿಹೋಚಿತಮ್ ।
ಇತ್ಯಾಲೋಚ್ಯ ನಿಜೈಃ ಸಾರ್ಧಂ ಮಂತ್ರಯಿತ್ವಾಚ ಮಂತ್ರಭಿಃ ॥ ೨೦ ॥

ಮಹಾರ್ಹವಸ್ತ್ರ ಭೂಷಾದ್ಯೈಃ ಮಾನಯಾಮಾಸ ಮಾನಿತಮ್ ।
ಅನುಧಾವ್ಯತಮಾಯಾ ತಮುದ್ಧತಂ ಮ್ಲೇಚ್ಛನಾಯಕಮ್ ॥ ೨೧ ॥

ವರ್ಧಮಾನೇನಾಬ್ಧಿ ನೇವಸ್ತಬಲೇ ನಾನುಭಾವಿತಮ್ ।
ಸ್ವಾಮ್ಯಾಜ್ಞಾ ಚಂಡವಾತೇನ ಪ್ರೇರ್ಯಮಾಣೇನ ವೇಣುನಾ ॥ ೨೨ ॥

ಜ್ವಲಂತಮಧಿಕಂ ಭೂಯೋ ಮಹತಾಮರ್ಷವಹ್ನಿನಾ ।
ಸೇನಾಪ್ರಧಾನಮುಖತಃ ಪರಾಜಯಮವಾಪಯತ್ ॥ ೨೩ ॥

ತದ್ಬಲಂಚಾನಯತ್ಸರ್ವ ಯಾವನಂ ತಮನಾಲಯಮ್ ।
ಆಮೇಯ ಬಲಪೂರ್ಣಸ್ಯ ಸಮಸ್ತ ಧರಣೀಶಿತುಃ ॥ ೨೪ ॥

ಯವನಾಧಿಪತೇಃ ಸೈನ್ಯಂ ಜೇತುಂ ಕೋsಪ್ಯತ್ರ ವಕ್ಷಮಃ ।
ಏಷಾವಿಜಿತವತ್ಯಾಸೀತ್ ಸೈನ್ಯಂ ತಸ್ಯಾಪಿಚ ಸ್ವಯಮ್ ॥ ೨೫ ॥

* ಪ್ರಾಚ್ಯವಸ್ತು ಸಂಗ್ರಹಾಲಯ, ಕೆಳದಿ, ಸಾಗರ ತಾಲ್ಲೂಕು, ಶಿವಮೊಗ್ಗ-೫೭೭೪೦೧, ಮೊ. ೯೪೪೮೮ ೩೯೭೩೯

ಅಸಾಧಾರಣ ವಿಶ್ರಾಂತಿಂ ಯಮಿತ್ಯಖಿಲೈಃ ಸ್ತುತಾ ।
ಆಸೇತು ಹಿಮವತ್ಪಾದಂ ಕೀರ್ತಿಂ ಪ್ರಾಪ ಸುನಿರ್ಮಲಮ್ ॥ ೨೬ ॥
[ಶಿತರ ೮-೮ (೧೨-೧೬)-೧೭-(೧೯-೨೬)]

ಕೆಳದಿ ಆಸ್ಥಾನ ಕವಿ ಲಿಂಗಣ್ಣನ ಕೆಳದಿನೃಪ ವಿಜಯದಲ್ಲಿ–

ಕಂ ॥ ಹರಿಜಿಯೊಗೆದಂ ತದಾತ್ಮಜ
ನುರುತರ ನೇತೋಜಿ ತತ್ಸುತಂ ತಾಜಿಯುಮಾ
ವರಶಾಜಿಯ ಸುಕುಮಾರರ್
ಪರಿಕಿಸೆ ವಿಲಸಚ್ಛಿವಾಜಿ ಯೇಕೋಜಿವಲಂ ॥

ಇಲ್ಲಿಂದ ಒಂಭತ್ತನೆಯ ಆಶ್ವಾಸದಲ್ಲಿ ಆರಂಭವಾಗುತ್ತದೆ.

ಪೂನಾದ ಭಾರತೀಯ ಇತಿಹಾಸ ಸಂಶೋಧನಾ ಮಂಡಳದ ಅಧ್ಯಕ್ಷ ಡಾ. ಜಿ.ಎಸ್. ಖರೆರವರ ಸಂಗ್ರಹದಲ್ಲಿರುವ ಶಿವಚರಿತ್ರ ವೃತ್ತ ಸಂಗ್ರಹದ ಮಾಹಿತಿಯಲ್ಲಿ–

Chennammajis' army resisted it vehemently and defeated the mughal army.

Marathi source material named Records of the Tarali period Vol I There are more than four references to Raja Ram's halt at shimoga, the Mughal army surrounding him there, the entensting of his portable valuable to a very devoted servant Arjoji yadava, the latter carrying them safe to ginji and some details about Rupaji bhosale (as mentioned in the keladi Nrpa vijayam) and Marata generals. (PP. 180, 195, 378, 472, 473, 484.)

ಶಿವಾಜಿಯ ಪರಮಾಪ್ತ ಕವೀಂದ್ರ ಪರಮಾನಂದ ವಿರಚಿತ ಶಿವಭಾರತ ಕೃತಿಯಲ್ಲಿ ಪೂನಾದ ಡಾ. ಪಿ.ಕೆ. ಘೋಡೆ ದಾಖಲಿಸಿದಂತೆ–

ತತೋ ಬಿಂದುಪುರಾಧೀಶಂ ವೀರಭದ್ರಂ ಮಹೌಜಸಮ್
ವಶೀಕೃತ್ಯ ಪ್ರತಾಪೇನ....
ತಥಾನ್ಯಾನಪಿ ಪಾರ್ಥಿವಾನ್
ಶಾಹಃ ಸಂತೋಷಯಾಮಾಸ ಸೇನಾನ್ಯಂ ರಣದೂಲಹಮ್ ॥
(ಶಿವಭಾರತ ಆ IX)

ಬಿಂದುಪುರ > ವೇಣುಪುರ > ಬಿದನೂರು.

Selections from the peshwa Daftar

1. No. 21 Date 28-10-1761

Lala Nanda Ram writes to Raghunatha Rao. saying that Murari Rao Ghorpade collects the tributes from the chief of Bedunur, Tarikere and Hagalwadi.

2. No. 24 Date 24-4-1764

Mahadaji Narayan tells of his interiew with the Nawab of savanur and relates how, after keeping some force for the protection of savanur, Rao Saheb encamped on the bank of tungabhadra and decided to have encounter with hyder who intends to capture savanur.

3. No 26 Date 6-12-1764

Krishnabai sindia informs dama that hyder Ali who took his position at bednur (the capital of Keladi) and was besieged by the Nayars of Kotatris, the portuguese and a force of sondha suumnoed his mieutenant mir fairzulla to help him.

Mala 7/219-A Kingdam of Kasaragod which was at the southern tip of the kingdom of keladi somasekhara Nayaka was govermed by Nairs-for an amount of the teritories of the kolattiri Rajas, [see JRAS 1922 p. 167 ff and JRAS 1923 p. 81 ff.]

4. No. 28/Date 04-03-01765

News letter from mahadaji Ballal and Hari Ballal. After the failure of peace negotiations writh hyder vakil it was decided to attack hyder who got shut up in the jungle, the Maratha forces captred hyders thanas, After the capture of the Ananthapur the force would go to bedunur where hyder was reported to be encamped (See Appendix)

5. No. 37/March 1767

After the capture of Madakeri Narsing Rao Janardan Dhaygude and Trimbak bhaskar who were asked to proced to channarayadurga write about the capture of midgisi and bednur (Keladi) forts from hyder ali.

6. No. 40/17-3-1767

Venkappa Nirkalkeri writing to Haripanth Phadke Communicates the capture of Sira and Madugiri and release of Royal couple of Bednur (Keladi queen and son) from the custody of hyder also by the peshwa.

7. No. 48/Date 1-12-1768

An order regarding the monthly payment to somashekhar Nayak of Keladi (Bedunr) -CH 777.

ಕೆಳದಿನೃಪ ವಿಜಯದಲ್ಲಿನ ಒಂಭತ್ತನೆಯ ಆಶ್ವಾಸದಲ್ಲಿ ಶಿವಾಜಿ ಹಾಗೂ ಮರಾಠೆರವರ ಸಮಗ್ರ ಇತಿಹಾಸವನ್ನು ಒಳಗೊಂಡಿದೆ. ಭಾರತೀಯ ಇತಿಹಾಸ ಸಂಶೋಧನಾ ಮಂಡಳ ಪೂನಾದಿಂದ ಪ್ರಕಟವಾದ ರಾಜಾರಾಮ ಚರಿತೆಯಲ್ಲಿಯೂ ಉಲ್ಲೇಖನಗೊಂಡಿವೆ. ಶಿವಾಜಿಯು ಕೆಳದಿ ರಾಜ್ಯಕ್ಕೆ ಸೇರಿದ ಬಸರೂರನ್ನು ಅತಿಕ್ರಮಿಸಿ ಹಣವನ್ನು ದೋಚಿದ ಸಂಗತಿಯೂ ಕಂಡುಬರುತ್ತದೆ. ಇಷ್ಟಾದರೂ ಶಿವಾಜಿಯ ಮಗ ರಾಜಾರಾಮನನ್ನು ಬೆನ್ನಟ್ಟಿದ ದೆಹಲಿಯ ಬಾದಷಹ ಔರಂಗಜೇಬನ ಸೈನ್ಯವನ್ನು ಸೋಲಿಸಿ, ಹಿಮ್ಮೆಟ್ಟಿಸಿ ರಾಜಾರಾಮನನ್ನು ರಕ್ಷಿಸಿದ ಕೆಳದಿ ರಾಣಿ ಚೆನ್ನಮ್ಮಾಜಿಯ ಔದಾರ್ಯತೆಯನ್ನು ಕುರಿತು ಮಹಾರಾಷ್ಟ್ರ ಇತಿಹಾಸ ವಿದ್ವಾಂಸರಾದ ಡಾ. ಖರೆ, ಶಿಜ್ವಾಲ್‌ಕರ್ ಮುಂತಾದವರು ಶ್ಲಾಘಿಸುತ್ತಾ ಕರ್ನಾಟಕದ ಕೆಳದಿ ಸಂಸ್ಥಾನಕ್ಕೆ ಕೃತಜ್ಞತೆ ಸಲ್ಲಿಸಿದ್ದಾರೆ. ಕೆಳದಿ ರಾಜಧಾನಿ ಬಿದನೂರಿನಲ್ಲಿ ಶಿವಾಜಿಯ ಮಗ ರಾಜಾರಾಮನಿಂದ ನಿರ್ಮಿತ ಶ್ರೀ ಪಾರ್ವತಾಂಬಾ ದೇವಾಲಯ, ಕೆಳದಿ ದೇವಾಲಯದ ಧ್ವಜಸ್ತಂಭದಲ್ಲಿರುವ ಕೆಳದಿ ರಾಣಿ ಚೆನ್ನಮ್ಮಾಜಿ, ಮರಾಠಾ ಸರದಾರ ಮತ್ತು ಘೋರ್ಪಡೆರವರ ಶಿಲ್ಪಗಳನ್ನು ಈಗಲೂ ಅವಲೋಕಿಸಬಹುದು.

ಡಾ. ಪಾಂಡುರಂಗ ದೇಸಾಯಿರವರು ಲಿಂಗಣ್ಣ ಕವಿಯ ಕೆಳದಿ ನೃಪವಿಜಯವನ್ನು ಮರಾಠಿಯಲ್ಲಿ ಭಾಷಾಂತರಿಸಿದ್ದಾರೆ. ಪೂನಾದ ಭಾರತೀಯ ಇತಿಹಾಸ ಸಂಶೋಧನಾ ಮಂಡಳದಲ್ಲಿರುವ ಕೆಳದಿ ಇತಿಹಾಸ ಕುರಿತ ಮರಾಠಿ ಭಾಷೆಯಲ್ಲಿರುವ ಹಸ್ತಪ್ರತಿ ದಾಖಲೆಗಳನ್ನು ಪೂನಾ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕ ಡಾ. ಚಿಟ್ನೀಸ್‌ರವರು ಭಾಷಾಂತರಿಸಿದ್ದಾರೆ. (ಅನುಬಂಧ ನೋಡಿರಿ) ಪೂನಾ ದಖ್ಖನ್ ಕಾಲೇಜ್ ಕೇಂದ್ರದಲ್ಲಿರುವ ಕೆಳದಿ ಬಸವರಾಜಕೃತ ಸುಭಾಷಿತ ಸುರದ್ರುಮ ಪ್ರಾಚೀನ ಹಸ್ತಪ್ರತಿಯನ್ನು ಪರಿಶೋಧಿಸಿದ್ದಾರೆ. ಪಿ.ಕೆ. ಘೋಡೆರವರ ಸಂಶೋಧನೆಗಳೂ ಪ್ರಕಟವಾಗಿದ್ದು ಕೆಳದಿ ಇತಿಹಾಸದಲ್ಲಿ ಅಧ್ಯಯನ ಯೋಗ್ಯವಾಗಿವೆ. ಭೀಮರಾವ್ ಪಾಟೀಲ್‌ರವರು "ಕೆಳದೀಚೀ ವೀರಾಂಗಣಾ ರಾಣೀ ಚೆನ್ನಮ್ಮಾ" ಕೃತಿಯನ್ನು ಮರಾಠಿ ಭಾಷೆಯಲ್ಲಿ ಪ್ರಕಟಿಸಿ ಮಹಾರಾಷ್ಟ್ರಕ್ಕೆ ಪರಿಚಯಿಸಿದ್ದಾರೆ. ಈ ದಿಸೆಯಲ್ಲಿ ಕೆಳದಿ ಮರಾಠಾ ಬಾಂಧವ್ಯದ ಬಗ್ಗೆ ಮಹಾರಾಷ್ಟ್ರೀಯರಿಗೆ ಅರಿವನ್ನುಂಟು ಮಾಡಲು ಪ್ರಯತ್ನಿಸಲಾಗಿದೆ. ಕೆಳದಿ ವಸ್ತುಸಂಗ್ರಹಾಲಯ ಇತಿಹಾಸ ಸಂಶೋಧನಾ ಕೇಂದ್ರದಲ್ಲಿರುವ ಮರಾಠಿ ಹಸ್ತಪ್ರತಿಗಳ ಸಂಶೋಧನೆ ಅಧ್ಯಯನಶೀಲರಿಗೆ ಸ್ವಾಗತ. (ಅನುಬಂಧ ನೋಡಿರಿ).

ಅನುಬಂಧ

ಶ್ರೀರಾಮೋಜಯತೀ

ಭಾ॥ಇಸಂಮಂ ಸಂಗ್ರಹ

ಸೋಲಾಪುರ ದೇಶಮುಖ

ದಫ್ತರ

sri onkar

ಲಿಪ್ಯಂತರ (ಕನ್ನಡಕ್ಕೆ) ಪತ್ರ–೧

and

copied by me

(Dr. Chitris) 1-1-1984


ರಾಜಶ್ರೀ ಬಸಾಪಾನಾಯಿಕ ಸಂಸ್ಥಾನ ಬಿದನೂರ (ಕೆಳದಿ)
ಗೋಸಾವೀ ಯಾಂಸೀ

೧ ಶ್ರೀ ಸಕಲಗುಣಾಲಂಕರಣ ಅಖಂಡಿತ ಲಕ್ಷ್ಮೀ ಅಲಂಕೃತ
೨ ರಾಜಮಾನ್ಯ [ಮೋ.ಜಾ.] ಶ್ರೀ ಯಶವಂತರಾವೂ ಮಹಾದೇವಖಾಸನಿವಿಸ
೩ ರಾಮರಾಮವಿನಂತಿ ಉಪರೀಯೇಥೀಲ ಕುಷಲ ಜಾಣೂನ ಸ್ವಕೀಯೇ
೪ ಕುಶಲ ಲೇಖನ ಕರೀತ ಅಸಿಲೇ ಪಾಹಿಜೇ ವಿಶೇಷ ಕರ್ನಾಟಕ
೫ ಪ್ರಾಂತಾಚಾ ಮಾಮಲಾ ಮಾಹಾರಾಜ ರಾಜಶ್ರೀ [ಮೋ.ಜಾ.] ಸ್ವಾಮೀನೀ
೬ ಹುಜಾರ ಖಾಲಶಾಕಡೇ ತೇಊನ ಬಂದೋಬಸ್ತ ಕರಾವಯಾಥೀ ಆಜ್ಞಾ।
೭ (ಆನಹಾಸ) ಕೇಲೀ ಆಹೇ ಯೈಸಿಯಾಸ ಆಮ್ಹಿ ಫೌಜೇ ಸಹವರ್ತಮಾನ
೮ ಸತ್ವರೀಚ ತ್ಯಾ ಪ್ರಾಂತಾಸ ಯೇತ ಅಸೋತ್ಯಾಸ xxx (ಕಾಟು ಹೊಡೆದಿದೆ)
೯ ತುಮ್ಹಾ ಕಡೀಲ ದುಸಾಲಾ ಚೌಥಾಯೀ ವ ಸರದೇಶಮುಖೀ ಚಾ ಐವಜ
೧೦ ಯೇಣೀ ಯಾಜಕರಿತಾ ರಾಜಶ್ರೀ ಕೃಷ್ಣಾಜೀ ಹರಿಬಂ ಸಪಾಠವಿಲೇ
೧೧ ಆಹೇತ ತರೀ ತುಮ್ಹಿ ಆಪಣಾಕಡೀಲ ಮಾತಬರ ವಕೀಲ
೧೨ ಪಾಠಊನ ಚೌಥಾಯೀ ವ ಸರದೇಶಮುಖೀ ಚಾ ತಹ ಕಹೂನ ಮುಲಕಾಸ
೧೩ ಉಪಸರ್ಗ ನ ಲಗೆ ಪುಢೇ ತುಮಚೇ ಆಮಚೇ (ಸೌಖ್ಯರಾಹೆ) ತೋ ಅರ್ಥ
೧೪ ಕೇಲಾ ಪಾಹಿಜೇ ಯೇವಿಸೀಚಾ ಸವಿಸ್ತರ ಅರ್ಥ ತೀರ್ಥಸ್ವರೂಪ
೧೫ ರಾಜಶ್ರೀ ಶಾಮಜೀಬಾವಾ ಯಾಂಣೀ ಲಿಹಿಕೇ ಆಹೇತ್ಯಾವರೂನ
೧೬ ಕಲೋ ಯೇಈಲ ಮಾರನಿಲೇ ಪಾಠವಿಲೇ ಆಹೇತ ಯಾಸ
೧೭ ಸರ್ಯಾಸ ಹೋನ ೧೨೦೦ (ನಾರಾರೋ) ದೇವಿಲೇ ಆಹೇತ ಪಾವತೇಕರಣೀ
೧೮ ರಾ.ಶಾ. (೬೨೪) ಜಿಲ್ಹೇಜ ಬಹುತ ಕಾಯಲಿಹಿಣೀ ಸೂಜ್ಞ ಆಸಾ

(ಅನುಬಂಧ)

No. 28 ಫಾಲ್ಗುಣ ಶು ೧೨ ಶಕೆ ೧೬೮೬
ದಿ ೪–೩–೧೭೬೫

ಸೇವೇಸೀ ಮಹಾದಾಜೀ ಬಲಾಲ ವ ಹರೀ ಬಲಾಲ ವ ಹರೀ ಬಲಾಲ ಕೃತಾನೇಕ ಸಾಷ್ಟಾಂಗ ನಮಸ್ಕಾರ ವಿಜ್ಞಾಪನಾ, ತಾ.ಛ. ೧೧ ರಮಜಾನ ಮುಳ ನಜಿಕ ಅನಂತಪುರ ಸ್ವಾಮಿಜೀ ಕೃಪಾವಲೋಕನೇ ಕರೂನ ವರ್ತಮಾನ ಯಥಾಸ್ಥಿತ ಅಸೇ ವಿಶೇಷ. ಇಕಡೀಲ ವರ್ತಮಾನ ತರ ಹೈದರನಾಯಿಕಾಕಡೀಲ ವಕೀಲ ಆಲಾ ಹೋತಾಪರಂತು ಬೋಲಲ್ಯಾಪ್ರಮಾಣೀ ಕಾಹೋಚ ನಿರ್ವಾಹ ನಾಹೀ. ತೇವ್ಹಾ ಝೂಡೀತ ಸಿರಾವೇ ಹಾ ನಿಶ್ಚಯ ಜಾಲಾ, ಬಾರೀಚೆ ತೋಡೀ ಹರಪನಹಲಿ ಕುಮಸೀ ವಗೈರೇ ಬೋನಚ್ಯಾರ ಠಾಣೀ ಹೋತೀ, ತೀ ಧೇಊನ ಕಾಲ ಫೌಜ ಬಾರೀತ ಆಲೀ. ಯೇಥೂವ ಅನಂತಪುರ ಚಾರಕೋಸ ಆಹೇ ಆಜಚಾ ಮುಕಾಮ ತೇಥೇಚ ಹೊಯಿಲ ಅನಂತಪುರ ಘೇತಲೇ ಮ್ಹಣಜೇ **ಬಿದರೂರಾಸ** ಜಾತೀಲ, ಫೌಜೇಸ ಸಾಲವಣಾಮ್ಹೀ ಗಾಠ ಪಹಲೀ ಆಹೇ, ಹೈದರಾನಾಯಕ ಬಿದರೂರಾಂತ ಆಹೇ, ಮೊಗಲ ತ್ಯಾಚೇ ಕುಮಕೇಸ ಯೇತ ನಾಹೀ ಪುಢೇ ಕಾಯಿ ಹೊಯಿಲ ತೇ ಲಿಹೂನ ಪಾಠಊ ಉಭಯೇಪಕ್ಷೀ ಪ್ರಸ್ತೂತ ಬನಾವ ಬರಾಚದಿಸತೋ. ವೇಡೇವಾ ಕಡೇ ಫಾರಸೇ ಕಾಹೋ ದಿಸತ ನಾಹೀ. ದರಮ್ಯಾನ ಸಖಾರಾಮಪಂತ ಆಹೇತ ಬಿಘಡೂ ದೇಣಾರ ನಾಹೀತಸೇ ವಾಟಸೇ ಬಹುತ ಕಾಯೆ ಲಿಹಾವೆ ಕೃಪಾ ಕೇಲೀಪಾಹಿಜೇ ಹೇ ವಿಜ್ಞಾಪನಾ.





पत्र – ૧





Photograph; Courtesy, Bharata Itihasa Samshodhaka Mandala, Poona


Raja Ram *(See page 51)*















ಮರಾಠಿ ಪತ್ರಗಳು



ಆಕರ ಗ್ರಂಥಗಳು

೧. ಶಿವಚರಿತ್ರ ವೃತ್ತ ಸಂಗ್ರಹ ೧, ಲಾ. ಖಂಡ; ಕಾನಡೀ ವಿಭಾಗ; ಭಾರತ ಇತಿಹಾಸ ಸಂಶೋಧನಾ ಮಂಡಳ ಪುಣೆ; ಪಾ.ಭೀ. ದೇಸಾಯಿ, ೧೯೩೮.

೨. ಕೆಳದೀಚೀ ವೀರಾಂಗಣಾ ರಾಣೀ ಚೆನ್ನಮ್ಮಾ; ಭೀಮರಾವ್ ಪಾಟೀಲ್, ಶರಣ ಸಾಹಿತ್ಯ ಮಂಡಳ, ಲಾತೂರ್; ೨೦೧೮.

೩. Selections from the peshwa daftar, New Servies 3; Revival of Maratha power 1761-1772; Ed: by Dr. P.M. Joshi, Director of Archives and Historical Monuments, Govt of Maharashtra 1961.

೪. Studies in Keladi History; Ed by; Prof. G.S. Dixit; Mythic Soceity, Bangalore 1981.

೫. ಲಿಂಗಣ್ಣ ಕವಿಯ ಕೆಳದಿ ನೃಪ ವಿಜಯಂ; ಡಾ. ಕೆಳದಿ ಗುಂಡಾಜೋಯಿಸ್, ಕ.ಸಾ.ಪ. (ಗದ್ಯಾನುವಾದ) ೧೯೭೭.

೬. ಕೆಳದಿ ಬಸವರಾಜ ಸಂಕಲಿಸಿದ ಶಿವತತ್ವ ರತ್ನಾಕರ, ಸಂ. II, ಸಂ: ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ; ಕನ್ನಡ ವಿಶ್ವವಿದ್ಯಾನಿಲಯ; ಹಂಪಿ ವಿದ್ಯಾರಣ್ಯ ೧೯೯೯.

೭. ರಾಜಾರಾಮ ಚರಿತಮ್; ಡಾ. ಕೆಳದಿ ಗುಂಡಾಜೋಯಿಸ್, ಕ.ಸಾ.ಪ. ಬಾಗಲಕೋಟೆ.

೮. ಡಾ. ಆರ್. ಶೇಷಶಾಸ್ತ್ರಿ ಅಭಿನಂದನಾ ಗ್ರಂಥ 'ವಿಶೇಷ' ಸಂ: ಡಾ. ಎಚ್.ಎಸ್. ಗೋಪಾಲರಾವ್; ಡಾ. ಎಸ್.ಎಲ್. ಶ್ರೀನಿವಾಸಮೂರ್ತಿ; ಚಿತ್ಕಲಾ ಪ್ರಕಾಶನ; ಕುಪ್ಪಂ (A.P) 2017.

೯. ಶಿವತತ್ವ ರತ್ನಾಕರ (P.L. MSS) 1745; 764; Nagari 16 x 4-5 cuer ; 9 leaves; Colalogue of palm leaf Manuscripts; 2000, Keladi Museum and Historical Research Bureau, Keladi.

ಕರ್ನಾಟಕದಲ್ಲಿ ಪ್ರಭುತ್ವ ಮತ್ತು ಪ್ರಜಾ ಬೆಂಬಲದ ತಂತ್ರಗಳು

ರಾಜೇಶ ಜಾಧವ*

ಪ್ರಭುತ್ವ ತನ್ನ ಸ್ಥಾನ ಭದ್ರ ಪಡಿಸಿ ಕೊಳ್ಳಲು ಮತ್ತು ತನ್ನದೇ ಆಡಳಿತ ಮುಂದುವರೆಯಲು, ಪ್ರಾಚೀನ ಕಾಲದಿಂದ ಅಂದರೆ ರಾಜತ್ವದ ಹುಟ್ಟಿನಿಂದಲೇ ಪ್ರಯತ್ನಿಸುತ್ತಾ ಬಂದಿದೆ. ಪ್ರಭುತ್ವದ ಈ ಪ್ರಯತ್ನದಲ್ಲಿ ರಾಜತ್ವ ದದೇವತ್ವ ಸಿದ್ಧಾಂತ, ತನ್ನ ಮೂಲದ ಬಗ್ಗೆ ಉತ್ಪ್ರೇಕ್ಷೆ, ಬಿರುದುಗಳ ಧಾರಣೆ, ಧರ್ಮದ ಆಸರೆ, ಆಶ್ರಿತ ವಿದ್ವಾಂಸರ ಮೂಲಕ ಸ್ವಪ್ರಚಾರಗಳಂತಹ ತಂತ್ರ (Strategies) ಪ್ರಯೋಗಿಸುತ್ತಾ ಬಂದಿದೆ. ಕೆಲ ಪ್ರಕರಣಗಳಲ್ಲಿ ಜನ ಪರ ಕಾರ್ಯಗಳ ಮೂಲಕ ಕೂಡ ತನ್ನ ಸ್ಥಾನ ಬಲಪಡಿಸಿಕೊಂಡಿದೆ.

ಕರ್ನಾಟಕ ಕೂಡ ಈ ರೂಢಿಗೆ ಹೊರತಾಗಿಲ್ಲ. ಕರ್ನಾಟಕದ ಮೊದಲ ರಾಜಮನೆತನ ಕದಂಬರಿಂದ ಹಿಡಿದು ಮೈಸೂರು ಒಡೆಯರುಗಳವರೆಗೆ ಪ್ರಭುತ್ವ ಬೇರೆ ಬೇರೆ ತಂತ್ರ ಪ್ರಯೋಗಿಸಿ ಇಲ್ಲಿನ ಪ್ರಜಾ ಬೆಂಬಲ ಪಡೆಯಲು ಪ್ರಯತ್ನಿಸಿದೆ. ಪ್ರಭುತ್ವದ ಪ್ರಜಾ ಬೆಂಬಲ ಪಡೆಯಲು ಪ್ರಯೋಗಿಸಿದ ವಿವಿಧತಂತ್ರಗಳನ್ನು ಪರಿಶೀಲಿಸಲಾಗಿದೆ.

ಕರ್ನಾಟಕದಲ್ಲಿ ಪ್ರಭುತ್ವ ಮತ್ತು ಪ್ರಜಾಬೆಂಬಲದ ತಂತ್ರಗಳು

ಪ್ರಾಚೀನ ಭಾರತದಲ್ಲಿ ಬೇರೆ ವಿಧದ ಆಡಳಿತದ ರೂಪಗಳು ಅಸ್ತಿತ್ವದಲ್ಲಿ ಇದ್ದರೂ, ರಾಜಪ್ರಭುತ್ವ (Monarchy) ಅತಿ ಸಾಮಾನ್ಯವಾದ ವ್ಯವಸ್ಥೆಯಾಗಿತ್ತು. ಈ ರಾಜ ಪ್ರಭುತ್ವದ ಉದಯದ ಬಗ್ಗೆ ವೈದಿಕ ಸಾಹಿತ್ಯದ ಐತರೇಯ ಬ್ರಾಹ್ಮಣಕದಲ್ಲಿ ಉಲ್ಲೇಖವಿದೆ. ದೇವ ಮತ್ತು ದಾನವರ ಸಂಘರ್ಷದಲ್ಲಿ ಸತತ ಹಿನ್ನಡೆ ಹೊಂದಿದ್ದ ದೇವ ಗಣ ಕೂಡಿ ಚರ್ಚಿಸಿ, ಕೊನೆಗೆ ತಮಗೆ ಮುನ್ನಡೆಸಲು ರಾಜನಿಲ್ಲದಿರುವುದೇ ಇದಕ್ಕೆ ಕಾರಣ ಎಂಬುದನ್ನು ಅರಿತು, 'ಸೋಮ'[1] ದೇವರನ್ನು ರಾಜನಾಗಿ ನೇಮಿಸಿ, ಗೆಲುವು ಸಾಧಿಸಿದರು. ಹೀಗೆ ಆರಂಭದಲ್ಲಿ 'ರಾಜ'ನ ಉಪಸ್ಥಿತಿಯಅವಶ್ಯಕತೆ ಯುದ್ಧಗಳಲ್ಲಿ ಮುನ್ನಡೆಸಲು ಸೈನಿಕ ಕಾರಣಗಳಿಗಾಗಿ ಮಾತ್ರ ಇತ್ತು ಎಂಬುದನ್ನು ಈ ಐತಿಹ್ಯ ಸ್ಪಷ್ಟಪಡಿಸುತ್ತದೆ. 'ಬೌದ್ಧರ ಐತಿಹ್ಯದ ಪ್ರಕಾರ 'ರಾಜತ್ವ' ಸಮಾಜದಲ್ಲಿ ಸುವ್ಯವಸ್ಥೆ ಸ್ಥಾಪಿಸಲು ಮತ್ತು ಕಾಪಾಡಿಕೊಂಡು ಹೋಗಲು ಎಲ್ಲ ಜನ ಕೂಡಿ, ನಿರ್ಧರಿಸಿ, ತಮ್ಮಲ್ಲೇ ಒಬ್ಬನನ್ನು ಆಯ್ಕೆ ಮಾಡಿ, ಬದಲಾಗಿ ತಮ್ಮ ದನಕರುಗಳು ಮತ್ತು ಭೂಮಿಯ ಉತ್ಪನ್ನದ ಒಂದು ಭಾಗ ಕೊಡಲು ಒಪ್ಪಿಕೊಂಡರು. ಹೀಗೆ 'ಸಾಮಾಜಿಕ ಒಪ್ಪಂದ'ದ ಪ್ರಕಾರ ಆಯಿತು'. (Prasad) ಇನ್ನೊಂದು ಕಡೆ ಬೌದ್ಧರು 'ಮಹಾಸಮ್ಮತ' ಪರಿಕಲ್ಪನೆ ಹೊಂದಿದ್ದರು ಎಂದು ಉಲ್ಲೇಖಿಸಲಾಗಿದೆ. ಅವಶ್ಯಕತೆ ಬಿದ್ದಾಗ, ಅತಿ ಹೆಚ್ಚು ಅರ್ಹನಾದವನನ್ನು ಜನರು ಆರಿಸಿ ತಮ್ಮ ಮುಖಂಡನಾಗಿ ಮಾಡಿದರು. ಅವನನ್ನೇ ಮಹಾಸಮ್ಮತ ಎಂದು ಕರೆದರು. (McKnight, 1976)

'ಮೌರ್ಯ ಕಾಲದ ಕೃತಿ 'ಅರ್ಥಶಾಸ್ತ್ರ'ದಲ್ಲಿ ದೇಶದಲ್ಲಿ ಮತ್ಸ ನ್ಯಾಯ ಪಸರಿಸಿದಾಗ ಜನರೆಲ್ಲ ಒಂದುಗೂಡಿ ಒಕ್ಕೊರಲಿನಿಂದರಾಜ್ಯಪದವಿ ಸೃಷ್ಟಿಗೆ ಕಾರಣರಾದರು. ಹೀಗೆ ಹುಟ್ಟಿದ ರಾಜ ದೇವರಾದ ಇಂದ್ರ (ದೇವರ ರಾಜ) ಮತ್ತು ಯಮ(ಸಾವಿನ ದೇವರು)ನ ಕಾರ್ಯನಿರ್ವಹಿಸುತ್ತಾರೆ ಎಂದು ಜನರಿಗೆ ತಿಳಿಸಬೇಕು ಎಂದು ಉಲ್ಲೇಖಿಸಲಾಗಿದೆ. ಈ ಮನೆತನದ ಅಶೋಕ ಮತ್ತು ಇತರರು "ದೇವಾನಾಂಪ್ರಿಯ" ಎಂಬ ಬಿರುದು ಧರಿಸಿದರು. ಹೀಗೆ ತಮ್ಮನ್ನು ದೇವತ್ವದ ಸ್ವರೂಪ ಎಂದು ಹೇಳಲಿಲ್ಲವಾದರೂ, ತಮ್ಮನ್ನು ಮಾನವರಿಗಿಂತ ಶ್ರೇಷ್ಠ ಅರೆ-ದೇವತ್ವ ರೂಪದವರು ಎಂದು ಭಾವಿಸಿದ್ದರು.' (Basham, 2004) ಇನ್ನು ಕುಶಾನರುಚೀನಿಯರಿಂದಪ್ರಭಾವಿತರಾಗಿ ತಮ್ಮನ್ನು ತಾವು 'ದೇವಪುತ್ರ'[2] ಎಂದು ಪ್ರಚಾರಪಡಿಸಿದರು. ಈ ಸಂಪ್ರದಾಯ ಮುಂದೆ ರಾಜತ್ವದ ದೇವತ್ವ ಸಿದ್ಧಾಂತಕ್ಕೆ ಎಡೆ ಮಾಡಿಕೊಟ್ಟಿತು. ಇನ್ನು ಗುಪ್ತರ ಕಾಲದಲ್ಲಿ ಒಂದು ಕಡೆ

* ಸಹಾಯಕ ಪ್ರಾಧ್ಯಾಪಕರು, ಸರಕಾರಿ ಪ್ರಥಮ ದರ್ಜೆ ಕಾಲೇಜು, ಕೊಕಟನೂರ, ರಾಣಿ ಚೆನ್ನಮ್ಮ ವಿವಿ, ಬೆಳಗಾವಿ.

ವಿದೇಶಿ ವ್ಯಾಪಾರ ಇಳಿಕೆ, ಸ್ಥಳೀಯ ಮಟ್ಟದ ಆಡಳಿತ ಕೇಂದ್ರಗಳ ಉದಯವಾಗುತ್ತ ಇದ್ದರೆ, ಇನ್ನೊಂದು ಕಡೆ ಗುಪ್ತರು ವೈಶ್ಯರಾಗಿರಬಹುದಾಗಿದ್ದರಿಂದ, ಬ್ರಾಹ್ಮಣೇತರರು, ಕ್ಷತ್ರಿಯೇತರರನ್ನು ಅಧಿಕಾರಿಗಳನ್ನಾಗಿ ನೇಮಿಸುವ ಪರಿಪಾಠ ಅಭಿವೃದ್ಧಿ ಆಗುತ್ತಿತ್ತು. ಕೃಷಿ ವಿಸ್ತರಣೆ ಯುಗ ಇದಾಗಿದ್ದು, ದೂರಾತಿ ದೂರ ಪ್ರದೇಶಗಳಲ್ಲಿ ಬ್ರಾಹ್ಮಣರಿಗೆ ಭೂ ದತ್ತಿ ಹಂಚಿಕೆ ಇದನ್ನು ಧೃಡಪಡಿಸುತ್ತದೆ. ಭೂಮಿಯಲ್ಲಿ ವೈಯಕ್ತಿಕ ಹಕ್ಕುಗಳ ಉದಯ, ಭೂಮಿಯ ಖರೀದಿ ಮತ್ತು ಮಾರಾಟದ ಸಾಕ್ಷಗಳು ಸಿಗಲು ಪ್ರಾರಂಭವಾಗುತ್ತವೆ. ಈ ಕಾರಣಗಳಿಂದಾಗಿಯೇ "ಗುಪ್ತರು ಹಲವು ರೀತಿಯ ರಾಜತ್ವದ ಮಾದರಿ ಪ್ರಕಟಿಸಿದರು. ತಮ್ಮನ್ನು ಸಾಂಪ್ರದಾಯಿಕವಾದಿಗಳು, ಸಂರಕ್ಷಣವಾದಿಗಳಂತೆ ಬಿಂಬಿಸಿ, ನೈಜ್ಯ ಧರ್ಮದ ಪುನಃ ಸ್ಥಾಪಕರಂತೆ, ನಿಂತು ಹೋಗಿದ್ದ ಬಲಿದಾನಗಳನ್ನು (Sacrifices) ಪುನಃ ಪ್ರಾರಂಭಿಸಿದರು. ರಾಮಾಯಣದ ರಾಮನ ಆದರ್ಶ ವ್ಯಕ್ತಿತ್ವದ ಮಾದರಿ ಕೂಡಾ ಗುಪ್ತರಿಗೆ ಒಪ್ಪಿತವಾಗಿತ್ತು. ಈ ರಾಮನ ಆದರ್ಶ ಮಾದರಿಯಿಂದಾಗಿಯೇ ಗುಪ್ತ ರಾಜರು ತಮ್ಮ ವೈಯಕ್ತಿಕತೆ ಕಳೆದುಕೊಂಡರು. ಹಾಗೆಯೇ ಗುಪ್ತರ ಕಾಲದಲ್ಲಿ ಬ್ರಾಹ್ಮಣಿಸಂ ಉಚ್ಛ್ರಾಯ ಸ್ಥಿತಿ ತಲುಪಿತು. ಬ್ರಾಹ್ಮಣರು ರಾಜ್ಯದ ಸೈದ್ಧಾಂತಿಕ ರೂಪ ನೀಡಿದರೆ, ಗುಪ್ತ ರಾಜರು ಅದನ್ನು ಜಾರಿಗೆ ತಂದರು. ಹೀಗೆ ಇಬ್ಬರಿಗೂ ಪರಸ್ಪರ ಲಾಭಕರವಾದ ಸಂಬಂಧ ಇದಾಗಿತ್ತು". (McKnight, 1976) ಹಾಗೆಯೇ ದೇವತ್ವದ ಸಿದ್ಧಾಂತದ ಮೂಲಕ ರಾಜ ದೇವರ ವಂಶಸ್ಥ ಎಂಬ ಆಲೋಚನೆಯು ಭಾರತದ ರಾಜಕೀಯ ಸಿದ್ಧಾಂತದಲ್ಲಿ ಬೇರೂರಿದೆ. ಈಗಾಗಲೇ ಚರ್ಚಿಸಿದಂತೆ "ವೈದಿಕ ಯುಗದಲ್ಲಿ ರಾಜನು ತಾನು ದೇವ ವಂಶಸ್ಥ ಎಂದು ವಾದಿಸಿದ ಉದಾಹರಣೆ ಇಲ್ಲ. ಆದರೆ ನಂತರದ ಯುಗಗಳಲ್ಲಿ ದೇವ ವಂಶಸ್ಥ, ದೈವಿ ಶಕ್ತಿ ಹೊಂದಿದವ, ದೇವರಿಂದ ಸೃಷ್ಟಿಯಾದವರ ವಂಶಸ್ಥ ಎಂಬ ಧೋರಣೆಗಳು ಸ್ಥಾಪಿತವಾದವು" (Deshpande). ಹೀಗೆ ಪ್ರಾರಂಭವಾದ 'ಪ್ರಭುತ್ವ'ದ ಪ್ರಜಾಬೆಂಬಲ ಪಡೆಯುವ ತಂತ್ರಗಳು ಕಾಲದಿಂದ ಕಾಲಕ್ಕೆ, ಸ್ಥಳದಿಂದ ಸ್ಥಳಕ್ಕೆ ಸನ್ನಿವೇಶದ ಅವಶ್ಯಕತೆ ಪರಿಗಣಿಸಿ ಪ್ರಜೆಗಳ ದೃಷ್ಟಿಯಲ್ಲಿ ತಮ್ಮ ಶ್ರೇಷ್ಠತೆ ಸಾಬೀತುಪಡಿಸಲು ಯತ್ನಿಸುವ ಮೂಲಕ ಪ್ರಜಾಬೆಂಬಲ ಪಡೆಯುವ ಪ್ರಯತ್ನ ಮಾಡಿದ್ದಾರೆ.

ರಾಜತ್ವದ ದೇವತ್ವ ಸಿದ್ಧಾಂತ

"ಕರ್ನಾಟಕದಲ್ಲಿ ಕದಂಬರು, ಚಾಲುಕ್ಯರು ತಮ್ಮನ್ನು ದೇವತೆಗಳ ಸೇನಾನಿಯಾದ ಸ್ವಾಮಿಮಹಾಸೇನನ ಮತ್ತು ಸಪ್ತಮಾತೃಕೆಯರ ಅನುಗ್ರಹದಿಂದ ಅಭಿಷಿಕ್ತರಾದವರು ಮತ್ತು ಅರಸೊತ್ತಿಗೆಯ ಪರಂಪರೆಯ ಮೊದಲನೆಯ ರಾಜನಾದ ಮನು ವೈವಸ್ವತ ವಂಶಾವಳಿಯವರೆಂದು ವರ್ಣಿಸಿಕೊಂಡಿದ್ದಾರೆ. ಆದಿಕದಂಬರು ಸೂರ್ಯವಂಶದ ಇಕ್ಷ್ವಾಕು ಮನೆತನದ ಭಗೀರಥ, ರಘು ಮೊದಲಾದವರಿಂದ ಸ್ಫೂರ್ತಿಗೊಂಡಂತೆ ಕಾಣುತ್ತದೆ. ಕದಂಬ ವಂಶದ ಮೊದಲ ಕೆಲವು ಅರಸರು ಈ ಅರಸು ಮನೆತನದ ರಾಜರುಗಳಾದ ಭಗೀರಥ, ರಘು, ಕಾಕುಸ್ಥ ಮೊದಲಾದವರ ಹೆಸರುಗಳನ್ನೇ ಧರಿಸಿಕೊಂಡಿದ್ದರು. ಹೀಗೆ ಸಮಾಜದಲ್ಲಿ ಇಂತಹ ಒಂದು ಉಚ್ಚ ಪರಂಪರೆಯುಳ್ಳ ಅವರು ಆಡಳಿತ ನಡೆಸುವ ಅಧಿಕಾರ ಉಳ್ಳವರೆಂದು ಸಮಾಜದಲ್ಲಿ ಬಿಂಬಿಸಿದ್ದರು. ಕ್ರಮೇಣ ಜನಪ್ರಿಯ ದೇವರುಗಳಾದ ಕೃಷ್ಣ, ವಿಷ್ಣು, ಹರಿ, ಮೃಗೇಶ (ನರಸಿಂಹ), ರವಿ, ಕುಮಾರ, ಮಾಧವ, ಸಿಂಹ ಮೊದಲಾದ ದೇವರ ಹೆಸರುಗಳನ್ನು ಧರಿಸುವುದರಿಂದ ದೇವರ ಪ್ರತಿನಿಧಿಗಳಾಗಿ ಭೂಮಿಯನ್ನು ಮತ್ತು ಜನರನ್ನು ರಕ್ಷಿಸುತ್ತಿರುವುದಾಗಿ ಸೂಚಿಸಿದಂತಿದೆ. "(ಡಾ. ಎಸ್.ವಿ. ಪಾಡಿಗಾರ, ೨೦೧೮).

ಇನ್ನೂ ರಾಷ್ಟ್ರಕೂಟ ವಂಶವು ಶಾಸನಗಳಲ್ಲಿ ತನಗೆ ತಾನೇ ವಿಶೇಷವಾಗಿ ಹೊಗಳಿಕೊಂಡಿರುವುದು ಕಾಣುವುದಿಲ್ಲ. ಕ್ರಿ.ಶ. ೮೦೮ರ ವಾಣಿದಿಂಡೋರಿ ಫಲಕದಲ್ಲಿ ೨ನೇ ಗೋವಿಂದನ ಜನನದಿಂದ ರಾಷ್ಟ್ರಕೂಟರು ಅಜಯರಾದರೂ ಕೃಷ್ಣನ ಜನನದಿಂದ ಯಾದವರು ಹೇಗೆ ಅಜಯರಾದರೋ ಹಾಗೆ ಎಂದು ಹೇಳಿದೆ. ಇನ್ನೂ "ಪೃಥ್ವಿ ವಲ್ಲಭ" ಎಂಬ ಬಿರುದು ರಾಷ್ಟ್ರಕೂಟ ವಂಶದ ಸ್ಥಾಪಕನಾದ ದಂತಿದುರ್ಗನಿಂದ ಹಿಡಿದು ಹೆಚ್ಚುಕಡಿಮೆ ಪ್ರತಿಯೊಬ್ಬ ರಾಷ್ಟ್ರಕೂಟ ಅರಸನು ಈ ಬಿರುದನ್ನು ಧರಿಸಿದ್ದಾನೆ. ಈ ಬಿರುದು ಮಹತ್ವವನ್ನುಳ್ಳದು. ಮೊದಲನೆಯದಾಗಿ ರಾಷ್ಟ್ರಕೂಟರು ಭೂಮಿಯನ್ನು ಪೃಥ್ವಿಯನ್ನು ವಿವಾಹವಾದರು ಎಂದು ಅದು ಹೇಳುತ್ತದೆ ಅವರು ರಾಜ್ಯವನ್ನು, ಪೃಥ್ವಿಯನ್ನು ಗಳಿಸಿದರು, ಬಲಪ್ರಯೋಗದಿಂದ ಗೆದ್ದುಕೊಂಡರು ಎಂದಾಗಲಿ ಅಥವಾ ಪೃಥ್ವಿಯು ಅವರನ್ನು ತನ್ನ ಪತಿಯಾಗಿವರಿಸಿದಳು. ಸ್ವಯಂವರ ಮಾದರಿಯ ವಿವಾಹ ಎಂದಾಗಲಿ ಅರ್ಥವಾಗಬಹುದು ಅದು ವಿಷ್ಣುವಿಗೆ ಅನ್ವಯಿಸುವ ಹೆಸರಾದರಿಂದಲೂ ಭೂ ದೇವಿಯ ಪತಿ ಎಂಬರ್ಥವನ್ನು ಕೊಡುವುದರಿಂದಲೂ ರಾಷ್ಟ್ರಕೂಟ ಅರಸನಿಗೆ ಭೂವಲ್ಲಭನಾಗಿ ನಿರ್ವಹಿಸಬೇಕಾದ ಕೆಲವು ಕರ್ತವ್ಯ ಗಳಿದ್ದವು ಎಂಬುದು ಸೂಚಿತವಾಗುತ್ತದೆ. ಹೀಗೆ ವಿಷ್ಣುವನ್ನು ವರ್ಣಿಸಲು ಬಳಸುವ ಪೃಥ್ವಿ ವಲ್ಲಭ ಎಂಬ ಬಿರುದನ್ನು ಉಪಯೋಗಿಸಿಕೊಂಡಿದ್ದು ರಾಷ್ಟ್ರಕೂಟರಿಗೆ ದೈವತ್ವವನ್ನು ಆರೋಪಿಸಲು ಕೈಗೊಂಡ ಒಂದು ಪ್ರಯತ್ನ. ಭೂಮಿಯ ಸಂರಕ್ಷಕರು ಎಂದು ಅವರ ಪಾತ್ರವನ್ನು ಪ್ರಧಾನವಾಗಿ ತೋರಿಸುವುದು ಆಗಿದೆ. ಜೊತೆಗೆ ರಾಷ್ಟ್ರಕೂಟ ವಂಶದ ರಾಜರನ್ನು

ನಿರ್ದಿಷ್ಟ ದೇವತೆಯೊಂದಿಗೆ ಹೋಲಿಸಿ ಅಥವಾ ದೈವಿಕವಾದ ನಿರ್ದಿಷ್ಟ ಗುಣವನ್ನು ಹೊಂದಿದವರು ಎಂದು ಹೇಳಲಾಗುತ್ತಿತ್ತು. ಒಂದನೇ ಕೃಷ್ಣನನ್ನು ಭಗವಂತ ಕೃಷ್ಣನಿಗೆ ಹೋಲಿಸಿದರೆ, ಎರಡನೇ ಗೋವಿಂದನನ್ನು ಶಿವನಿಗೆ ಹೋಲಿಸಲಾಗಿತ್ತು. ರಾಷ್ಟ್ರಕೂಟ ರಾಜರಿಗೆ ಹೀಗೆ ದೈವಿಕವಾದ ಗುಣಗಳನ್ನು ಆರೋಪಿಸಿ ದೇವತೆಗಳೊಂದಿಗೆ ಅವರನ್ನು ಹೋಲಿಸುತ್ತಾ ಈ ಬಿರುದುಗಳು ಮತ್ತು ವಿಶೇಷಣಗಳು ಅವರ ಆಳ್ವಿಕೆಯನ್ನು ಶಾಸನಬದ್ಧಗೊಳಿಸಲೆತ್ನಿಸಿದುವು. ರಾಷ್ಟ್ರಕೂಟರು ಅನೇಕ ವಿಜಯಗಳಿಂದ ರಾಜ್ಯ ವಿಸ್ತರಣೆಗಳಿಂದ ತಮ್ಮ ಮೇಲ್ಮೆಯನ್ನು ಸ್ಥಾಪಿಸಿಕೊಳ್ಳುವ, ನೂತನ ರಾಜ್ಯ ಭಾಗಗಳಲ್ಲಿ ತಮ್ಮ ಆಳ್ವಿಕೆಯನ್ನು ಶಾಸನಬದ್ಧಗೊಳಿಸಿಕೊಳ್ಳುವ ಅಗತ್ಯವನ್ನು ಮನಗಂಡರು. ದೈವಿಕ ವಂಶದ ಮೂಲವನ್ನು ಹೇಳಿಕೊಳ್ಳುವುದರಿಂದ ತಮ್ಮ ಪಾರಮ್ಯಕ್ಕೆ ಅವರು ಸಮರ್ಥನೆಯನ್ನು ನೀಡಿಲೆತ್ನಿಸಿದರು. (ಎಲಿಜಬತ್, ೨೦೧೮).

ಮುಂದೆ ರಾಷ್ಟ್ರಕೂಟ ಸಾಮ್ರಾಜ್ಯದ ವಾರಸುದಾರನಾದಕಲ್ಯಾಣಿ ಚಾಲುಕ್ಯರಸ್ಥಾಪಕ ದೊರೆ, ತೈಲ ೧೫ ಬಾರಿ ಮಾಳವದ ಅರಸ ವಾಕ್ಪತಿಮುಂಜನಿಂದ ಪರಾಭವಗೊಂಡು ೧೬ನೇ ಬಾರಿ ಮುಂಜನನ್ನು ಯಾದವ ಬಿಲ್ಲಮನ ನೆರವು ಪಡೆದು ಸೋಲಿಸಿ, 'ಲಕ್ಷ್ಮಿಯು ಮಹಿಮಾವಂತನಾದ ರಣರಂಗ ಭೀಕರ ಮನ ಮನೆಯಲ್ಲಿ ಪತಿವ್ರತೆಯಾಗಿ ಇರುವಂತೆ ಮಾಡಿದನು.' (ಬುರ್ಗೆಸ) ಹೀಗೆ ವಿಜಯಲಕ್ಷ್ಮಿಯನ್ನು ತನ್ನ ಪತಿವ್ರತಸ್ಥ ಪತ್ನಿಯಾಗಿ ಮಾಡಿಕೊಂಡು ತೈಲನು ತನ್ನ ನಾರಾಯಣ ರೂಪವನ್ನು ಹೊಸ ಸಾಮ್ರಾಜ್ಯದ ಪ್ರಜೆಗಳ ಸ್ಮೃತಿ ಪಟಲದ ಮೇಲೆ ಹೆರುತ್ತಿದ್ದಾನೆ.

ಹೊಯ್ಸಳರ ಮೂಲಪುರುಷ ಸಳ ಎಂಬುದು ಈಗ ನಿರ್ವಿವಾದ. ಹೊಯ್ಸಳರ ಲಾಂಛನದ ಹುಲಿಯನ್ನು ಕೊಲ್ಲುತ್ತಿರುವ ಸಳನ ಮೂರ್ತಿಯನ್ನು ಐತಿಹ್ಯವಾಗಿ ತೆಗೆದುಕೊಂಡಾಗ ಆತ ಹುಲಿಗೆ ಹೆದರುವ ಸಾಮಾನ್ಯ ಮನುಷ್ಯರಿಗಿಂತ ಶ್ರೇಷ್ಠ ಎಂಬ ಭಾವನೆ ಹೆರುವಿಕೆ, ಆತ ಹುಲಿಲಾಂಛನ ಹೊಂದಿರುವ ಚೋಳರನ್ನು ಸೋಲಿಸಿದುದರ ರೂಪಕವಾಗಿ ತೆಗೆದುಕೊಂಡಾಗ ಶೈವ ಚೋಳರನ್ನು ಸೋಲಿಸಲು ಪಣ ತೊಟ್ಟ ಜೈನ ಗುರು ಸುದತ್ತಚಾರ್ಯರ ಅಪ್ಪಟ ಶಿಷ್ಯನಾಗಿ ಅಭಿವ್ಯಕ್ತಿಗೊಂಡು ತನ್ನ ಹೊಸ ಸಾಮ್ರಾಜ್ಯದ ಪ್ರಜೆಗಳ ನಿಷ್ಠೆ ಗೆಲ್ಲುವ ಪ್ರಭುವಾಗಿ ಕಾಣುತ್ತಾನೆ.

೧೪ನೇ ಶತಮಾನದಲ್ಲಿ ಟರ್ಕೋ-ಅಫ್ಘನ್ನಾಳಿ ಕರ್ನಾಟಕದ ಮೇಲಾಗಿ ಇಲ್ಲಿನ ರಾಜಕೀಯ, ಧಾರ್ಮಿಕ, ಸಾಮಾಜಿಕ ಸಂಸ್ಥೆಗಳು ನಾಶಗೊಂಡು, ನಿರ್ವಾತ (vaccum) ಉಂಟಾದಾಗ ಅದನ್ನು ತುಂಬಿದ್ದೇ ಎಂದು ಮರೆಯಲಾಗದ ಸಾಮ್ರಾಜ್ಯ –ವಿಜಯನಗರ ಸಾಮ್ರಾಜ್ಯ. ಇದರ ಅತ್ಯಂತ ಶ್ರೇಷ್ಠ ರಾಜನಾದ ಶ್ರೀಕೃಷ್ಣದೇವರಾಯ ತನ್ನ ಪಟ್ಟಾಭಿಷೇಕಕ್ಕೆ ಆಯ್ದುಕೊಂಡದ್ದು ಶ್ರೀಕೃಷ್ಣಜನ್ಮಾಷ್ಟಮಿ ದಿನ.[3] ಉತ್ತರದಿಂದ ಬಂದ ಟರ್ಕೋ-ಅಫ್ಘನ ದಾಳಿಕೋರರ ಧರ್ಮ, ಸಂಸ್ಕೃತಿ ಎರಡು ಭಿನ್ನವಾಗಿದ್ದರಿಂದಲೇ, ಇಲ್ಲಿನ ಜನ ತಮ್ಮ ಅಸ್ತಿತ್ವದ ಬಗ್ಗೆ ತೀವ್ರ ಅಭದ್ರತೆ ಭಾವ ಹೊಂದಿದ್ದರು. ಈ ಸಂದರ್ಭದಲ್ಲಿ ಸಾಕ್ಷಾತ್ ವಿಷ್ಣುವೇ 'ಕೃಷ್ಣದೇವರಾಯನ ರೂಪದಲ್ಲಿ ಜನಿಸಿದ, ತಮಗೆ ಇನ್ನೂ ಭಯವಿಲ್ಲ ಎಂಬ ಭಾವನೆ ಪ್ರಜೆಗಳಲ್ಲಿ ಸೃಷ್ಟಿಸುವುದೇ ಈ ತಂತ್ರದ ಹಿನ್ನಲೆಯಾಗಿರಬಹುದು.

ಇಸ್ಲಾಮಿಕ್ ರಾಜ್ಯಗಳಾದ ಬಹಮನಿ ಮತ್ತು ಬಿಜಾಪುರ ರಾಜರು ತಮ್ಮನ್ನು 'ಸುಲ್ತಾನರು' ಎಂದು ಕರೆದುಕೊಂಡು ಮಧ್ಯಯುಗದ ಸಂಪ್ರದಾಯದಂತೆ ಖಲೀಪ್‌ನಿಂದ ಮಾನ್ಯತೆ ಪಡೆದವರಾಗಿ ತಮ್ಮ ಪ್ರಜೆಗಳ ರಾಜ್ಯಭಾರ ಮಾಡಿದರು. ಕಟ್ಟುನಿಟ್ಟಾದ ಇಸ್ಲಾಂ ಕಾನೂನಿನ ಪ್ರಕಾರ ದೇವಪ್ರಭತ್ವ (Theocracy) ದಲ್ಲಿ ನಿಜವಾಗಿ ದೇವ[4]ನೇ ಸಾಮ್ರಾಟ. ದೇವರ ಶಾಸನಗಳನ್ನು ಜಾರಿ ತರುವ ಪ್ರತಿನಿಧಿ 'ಸುಲ್ತಾನ್'. ಅಂದರೆ ತಾವು ದೇವರ ಪ್ರತಿನಿಧಿ, ತಮ್ಮನ್ನು ಪ್ರಶ್ನಿಸದೇ ಪಾಲಿಸಿಕೊಂಡು ಹೋಗಿ ಎಂಬ ಸಂದೇಶ ಪ್ರಜೆಗಳಲ್ಲಿ ಸ್ಥಾಪಿಸುವುದಾಗಿತ್ತು.

ಹೀಗೆ ಕರ್ನಾಟಕದ ಪ್ರಭುಗಳು ತಮ್ಮ ಪ್ರಜೆಗಳ ಬೆಂಬಲ ಪಡೆದು, ಅವರನ್ನು ಸ್ವಾಮಿನಿಷ್ಠ ಮಾಡಲು ರಾಜತ್ವದ ದೇವತ್ವ ಸಿದ್ಧಾಂತದ ತಂತ್ರ ಬಳಸಿ, ಹೊಸದಾಗಿ ಸ್ಥಾಪಿಸಿದ ಸಾಮ್ರಾಜ್ಯದ ಜನರ ಭಾವನೆಗಳನ್ನು ಬಳಸಿಕೊಂಡು ತಮ್ಮ ಸ್ಥಾನ ಭದ್ರಪಡಿಸಿಕೊಂಡರು ಎಂಬಂತೆ ನೋಡುವುದು ಅನಿವಾರ್ಯವಾಗುತ್ತದೆ. ಏಕೆಂದರೆ ದೇವರ ಹೆಸರಿಟ್ಟುಕೊಳ್ಳುವುದರಿಂದ, ದೇವರ ಪ್ರತಿನಿಧಿ ಎಂದು ಸ್ವಯಂ ಘೋಷಿಸಿಕೊಳ್ಳುವುದರಿಂದ ರಾಜತ್ವಕ್ಕೆ ದೇವತ್ವದ ಸ್ವರೂಪ ದೊರಕುತ್ತದೆ ಎಂಬುದು ನಂಬಲು ಕಷ್ಟ. ರಾಜನು ದೇವರಾಗಲು ದೇವರಂತೆ ಎಲ್ಲರನ್ನೂ ಸಮನಾಗಿ ಉಪಚರಿಸಿ, ಎಲ್ಲರ ಕಷ್ಟ ಪರಿಹರಿಸಬೇಕಾಗುತ್ತದೆ. ದೇವರಂತೆ ಸರ್ವವ್ಯಾಪಿ, ಸರ್ವಶಕ್ತ ಮತ್ತು ಸರ್ವಜ್ಞನಾಗಬೇಕಾಗುತ್ತದೆ.

ತನ್ನ ಮೂಲದ ಬಗ್ಗೆ ಉತ್ಪ್ರೇಕ್ಷೆ

ಕನ್ನಡದ ಮೊದಲ ರಾಜಮನೆತನವಾದ ಕದಂಬರು ತಮ್ಮ ಮೂಲದ ಬಗ್ಗೆ ಉತ್ಪ್ರೇಕ್ಷೆ ಮಾಡುವುದರೊಂದಿಗೆ ಕರ್ನಾಟಕದಲ್ಲಿ ಈ ಸಂಪ್ರದಾಯಕ್ಕೂ ಇವರೇ ಮೊದಲಿಗರಾದರು. ಮುಂದೆ ಬಂದ ಇವರ ವಂಶಸ್ಥರೆಂದು ಹೇಳಿಕೊಂಡಿರುವ

೧೦–೧೨ನೇ ಶತಮಾನದ ಹಾನಗಲ್ಲು ಮತ್ತು ಗೋವಾ ಕದಂಬರು ತಮ್ಮ ಶಾಸನಗಳಲ್ಲಿ ಕದಂಬರ ಮೂಲದ ಬಗ್ಗೆ ದಂತಕಥೆ ಹೆಣೆದಿದ್ದಾರೆ. ಶಿವನು ತ್ರಿಪುರಾಸುರನೊಂದಿಗೆ ಹೋರಾಡಿ ಅವನನ್ನು ಸಂಹರಿಸಿದಾಗ ಅವನ ಬೆವರಹನಿಯು ಒಂದು ಕದಂಬ ವೃಕ್ಷದ ಕೆಳಗೆ ಉದುರಿತು. ಈ ಬೆವರ ಹನಿಯಿಂದ ತ್ರಿಲೋಚನ ಕದಂಬ(ಮುಕ್ಕಣ್ಣ)ನು ಹುಟ್ಟಿದನು. ಇವನ ಮಗನೇ ಮಯೂರವರ್ಮ. ಕದಂಬ ವಂಶದ ಸ್ಥಾಪಕ. ಇನ್ನೊಂದು ದಂತಕಥೆಯ ಪ್ರಕಾರ ನಂದ ಎಂಬ ಅರಸನು ಶಿವನನ್ನು ಪೂಜಿಸಿ, ಪರಮೇಶ್ವರನ ಅನುಗ್ರಹದಿಂದ ಮಗನನ್ನು ಪಡೆದ ಎಂದು ತಿಳಿಸಲಾಗಿದೆ. ಇದರ ಪ್ರಕಾರ ಕದಂಬರ ಸಂಬಂಧ ಉತ್ತರ ಭಾರತದ ನಂದರೊಂದಿಗೆ ಹಚ್ಚುತ್ತದೆ. ಹೀಗೆ ೪ನೇ ಶತಮಾನದಲ್ಲಿ ಆರ್ಯೀಕರಣಗೊಳ್ಳುತ್ತಿರುವ ದಕ್ಷಿಣ ಭಾರತದಲ್ಲಿ ಪ್ರಜೆಗಳಿಗೆ ತಮ್ಮ ಶ್ರೇಷ್ಠತೆಯ ಛಾಪು ಮುಟ್ಟಿಸುವ ಪ್ರಯತ್ನ ಎಂಬಂತೆ ಇದು ಗೋಚರಿಸುತ್ತದೆ.

ಜೈನ ಕಥಾ ಪರಂಪರೆಯ ಪ್ರಕಾರ ಜೈನ ಆಚಾರ್ಯ ಸಿಂಹನಂದಿಯ ಅನುಯಾಯಿಗಳಾದ ದಡಿಗ ಮತ್ತು ಮಾಧವ ಆಚಾರ್ಯ ಸೂಚನೆಯ ಮೇರೆಗೆ ದಕ್ಷಿಣದಲ್ಲಿ ಒಂದು ರಾಜ್ಯವನ್ನು ಸ್ಥಾಪಿಸಬೇಕೆಂದು, ಗಂಗರಾಜ್ಯವನ್ನು ಸ್ಥಾಪಿಸಿದರು ಎಂಬುದು ಒಂದು ವಾದ. ಗಂಗರ ಮೂಲಪುರುಷರು ಅಯೋಧ್ಯಾಪುರದಿಂದ ಬಂದವರು ಎಂಬ ಇನ್ನೊಂದು ವಾದವೂ ಇದೆ. ಹೀಗೆ ಗಂಗರು ತಾವು ಉತ್ತರದಿಂದ ಬಂದವರು, ಶ್ರೇಷ್ಠರು, ಉತ್ತಮ ಕುಲದವರೆಂದು ತೋರಿಸಲು ತಮ್ಮ ಮೂಲದ ಬಗ್ಗೆ ಉತ್ಪ್ರೇಕ್ಷೆ ಮಾಡಿದ್ದಾರೆ.

ಬಾದಾಮಿ ಚಾಲುಕ್ಯರ ಮೂಲದ ಬಗ್ಗೆ ಕಲ್ಯಾಣ ಚಾಲುಕ್ಯರ ಶಾಸನಗಳು ಮತ್ತು ಬಿಲ್ಹಣನ ವಿಕ್ರಮಂಕದೇವಚರಿತಂ ಕಥೆಯೊಂದನ್ನು ನೀಡಿವೆ. ಬ್ರಹ್ಮನ ಚುಳುಕದಿಂದ ಭೂಮಿಯಲ್ಲಿ ಹೆಚ್ಚುತ್ತಿರುವ ಕೆಡಕನ್ನು ಕೊನೆಗೊಳಿಸಲು ಮಹಾಪರಾಕ್ರಮಿ ಚಾಲುಕ್ಯ ಹುಟ್ಟಿಬಂದನು. ಇವನೇ ಚಾಲುಕ್ಯ ವಂಶದ ಮೂಲಪುರುಷ. ಇನ್ನೊಂದು ಕಥೆಯ ಪ್ರಕಾರ ಆಯೋಧ್ಯ ರಾಜ ದಕ್ಷಿಣದಲ್ಲಿ ವಿಸ್ತರಣೆಗಾಗಿ ಬಂದಾಗ ಮರಣ ಹೊಂದಿದನು. ಗರ್ಭಿಣಿಯಾಗಿದ್ದ ಅವನ ಪತ್ನಿಯೂ ಇಲ್ಲಿ ವಿಷ್ಣುವರ್ಧನ ಎಂಬ ಮಗನನ್ನು ಹೆತ್ತಳು. ಅವನೇ ಬಾದಾಮಿ ಚಾಲುಕ್ಯರ ಮೂಲಪುರುಷ.

ರಾಷ್ಟ್ರಕೂಟರು ಕೂಡ ಪೌರಾಣಿಕ ವಂಶಮೂಲವನ್ನು ಹೇಳಿಕೊಂಡಿದ್ದಾರೆ. ಯದುವಿನಿಂದ, ಬ್ರಹ್ಮನಿಂದ, ಸಾತ್ಯಕಿಯ ವಂಶದವರೆಂದು ಕರೆದುಕೊಂಡಿದ್ದಾರೆ. ಹೀಗೆ ಅವರ ವಂಶಕ್ಕೆ ಪ್ರಾಚೀನತೆಯನ್ನು ಕೊಟ್ಟು ಅವರ ಅಧಿಕಾರವನ್ನು ಸಮರ್ಥನಿಯಗೊಳಿಸಿಕೊಂಡಿದ್ದರೆ. ಇವರಂ ತೆ ಹೊಯ್ಸಳರು ಕೂಡ ತಮ್ಮ ಮೂಲವನ್ನು ಯದುವಂಶಕ್ಕೆ ಸಮೀಕರಿಸಿಕೊಂಡಿದ್ದಾರೆ. ತಾವು ದ್ವಾರಕಾದವರು ಎಂದು ಹೆಮ್ಮೆಯಿಂದ ಶಾಸನಗಳಲ್ಲಿ ಹೇಳಿಕೊಂಡಿದ್ದಾರೆ. ಮೈಸೂರಿನ ಒಡೆಯರು ಇದಕ್ಕೆ ಹೊರತಾಗಿಲ್ಲ. ಅವರು ಕೂಡ ತಮ್ಮ ದ್ವಾರಕಾ ಮೂಲವನ್ನು ಯದುವಂಶದ ಮೂಲಕ ಹೇಳಿದ್ದಾರೆ.

ಶ್ರೇಷ್ಟತೆಯೊಂದಿಗೆ ನಿಷ್ಟತೆ ಹಿಂಬಾಲಿಸುತ್ತದೆ ಎಂಬ ಸಾಮಾನ್ಯ ನಂಬಿಕೆಯೊಂದಿಗೆ ಈ ಪ್ರಭುಗಳು ತಮ್ಮನ್ನು ತಾವು ಶ್ರೇಷ್ಟರು ಎಂದು ಬಿಂಬಿಸಿಕೊಳ್ಳಲು ಪ್ರಯತ್ನಿಸಿದ್ದಾರೆ. ಏಕೆಂದರೆ ಪ್ರಾಚೀನ, ಶ್ರೇಷ್ಟವಂಶಸ್ಥರು, ಜನಮಾನ್ಯ ವ್ಯಕ್ತಿಗಳ ನೆಲದಿಂದ ಬಂದವರಂತೆ ತೋರಿಸಿಕೊಂಡು ಹೊಸದಾಗಿ ಸ್ಥಾಪಿಸಿದ ಸಾಮ್ರಾಜ್ಯದ ಆಗಷ್ಟೇ ಪ್ರಜೆಗಳಾಗಿರುವವರ ಗೌರವಕ್ಕೆ, ಆದರಕ್ಕೆ ಪಾತ್ರರಾಗಬೇಕೆನ್ನುವುದು ಇವರ ಉದ್ದೇಶವಾಗಿತ್ತು. ಸ್ಥಾಪಿತ ಸಾಮ್ರಾಜ್ಯ ನಾಶ ಮಾಡಿ, ಇದ್ದ ರಾಜ ಎಷ್ಟೇ ಕುಖ್ಯಾತವಿರಲಿ, ಪ್ರಜಾಪೀಡಕನಿರಲಿ ಅವನನ್ನು ಕಿತ್ತೊಗೆದು ಹೊಸ ವ್ಯವಸ್ಥೆ, ಹೊಸ ರಾಜನ ಸ್ಥಾಪನೆ ಆದಾಗ ಪ್ರಜೆಗಳಿಗೆ ಒಂದು ರೀತಿಯ ಸಂಶಯ, ಭಯ ಖಂಡಿತ ಇರುತ್ತದೆ. ಇದನ್ನು ಹೋಗಲಾಡಿಸಿ ಗೌರವ, ಹೆಮ್ಮೆ ಮೂಡಿಸುವುದು ಅನಿವಾರ್ಯವಾಗಿತ್ತು.

ಬಿರುದುಗಳ ಧಾರಣೆ

ಬಿರುದುಗಳು ಕೂಡಾ ಪ್ರಭುಗಳ ಶಕ್ತಿ, ಸಾಮರ್ಥ್ಯಗಳನ್ನು ಉತ್ಪ್ರೇಕ್ಷಿಸುವ, ಅವರ ಸಾಧನೆಗಳಾದ ರಾಜ್ಯ ವಿಸ್ತರಣೆ, ಸಾಹಿತ್ಯ ಪೋಷಣೆ, ಶತ್ರು ದಮನ, ವೈಯಕ್ತಿಕ ಗುಣ ಮುಂತಾದವುಗಳನ್ನು ಪ್ರಚಾರಪಡಿಸಿ ಪ್ರಜೆಗಳ ಮನದಾಳದಲ್ಲಿ ತಮ್ಮ ಆಳುವವನ ಬಗ್ಗೆ ಹೆಮ್ಮೆ, ನಿಷ್ಠೆ ಮೂಡಿಸುವ ಇನ್ನೊಂದು ತಂತ್ರವಾಗಿ ಬಳಕೆ ಆಗಿವೆ ಅಂದರೆ ತಪ್ಪಾಗಲಾರದು. ಬಿರುದುಗಳ ಧಾರಣೆ ಮೂಲಕ ರಾಜರು ತಮ್ಮ ಯಜಮಾನಿಕೆ ಸಾಬೀತುಪಡಿಸುತ್ತಿರುವುದು ಗೋಚರವಾಗುತ್ತದೆ. ಕಾಲ ಮತ್ತು ಸಮಯಗಳು ಕೂಡಾ ಬಿರುದುಗಳ ಅನಿವಾರ್ಯತೆ ಸೃಷ್ಟಿಸಿದ್ದು ಇದೆ. ಕದಂಬರು, ಗಂಗರು ಸಾಮಾನ್ಯವಾಗಿ ತಮ್ಮನ್ನು ಪದೇ ಪದೇ 'ಧರ್ಮ ಮಹಾರಾಜ' ಎಂದು ವರ್ಣಿಸಿಕೊಂಡಿರುವುದು ತಾವೂ ಆ ಕಾಲಘಟ್ಟದ ಸನಾತನ ಪರಂಪರೆಯ ಮೌಲ್ಯಗಳನ್ನು ಉಳಿಸಿ ರಕ್ಷಿಸುತ್ತಿರುವವರೆಂದು ಘಂಟಾಘೋಷವಾಗಿ ಬಿಂಬಿಸುವಂತಿದೆ.

ತಮ್ಮ ವೈಯಕ್ತಿಕ ಸಾಧನೆಗಳನ್ನು, ಬೆಳೆಯುತ್ತಿದ್ದ ರಾಜಕೀಯ ಶಕ್ತಿಯನ್ನು ಸೂಚಿಸುವಂತಹ ಹಲವು ಬಿರುದುಗಳನ್ನು ಚಾಲುಕ್ಯರು ಧರಿಸಿದರು. ಪೃಥ್ವಿವಲ್ಲಭ, ಚಕ್ರವರ್ತಿ, ಮಹಾರಾಜಾಧಿರಾಜ ಭಟ್ಟಾರಕ, ಪರಮೇಶ್ವರ ಇವರ ಬಿರುದುಗಳಾಗಿವೆ. ತಾವು ಮಾಡಿದ ಮಹತ್ವದ ಕಾರ್ಯಗಳನ್ನೂ, ಯುದ್ಧ ಸಾಹಸಗಳನ್ನೂ ಸೂಚಿಸುವ ಕೆಲವು ಅರ್ಥಪೂರ್ಣವಾದ ಬಿರುದುಗಳನ್ನು ಚಾಲುಕ್ಯ ರಾಜರು ಧರಿಸಿದರು. ರಣವಿಕ್ರಮ, ರಣಪರಾಕ್ರಮ, ರಣವಿಕ್ರಾಂತ, ರಣರಸಿಕ ಯುದ್ಧಮಲ್ಲ ಈ ಸಾಲಿಗೆ ಸೇರುತ್ತವೆ. ಇನ್ನು ಕೆಲವು ಧಾರ್ಮಿಕ ಸ್ವರೂಪದ ಬಿರುದುಗಳನ್ನು ಅಂದರೆ ಪರಮಭಾಗವತ, ಪರಮೇಶ್ವರ, ಧರ್ಮ ಮಹಾರಾಜಗಳಂತಹ ಬಿರುದು ಧರಿಸಿದ್ದಾರೆ. ತಮಗಿಂತ ಕಿರಿಯ ರಾಜರು ಇದ್ದರು, ಮತ್ತು ಅವರು ತಮ್ಮ ನಿಯಂತ್ರಣದಲ್ಲಿದ್ದರು ಎಂಬುದನ್ನು ಸೂಚ್ಯವಾಗಿ ತಿಳಿಸುವ ಮಹಾರಾಜಾಧಿರಾಜ, ಪರಮಭಟ್ಟಾರಕ, ಸಮಸ್ತ ಭುವನಾಶ್ರಾಯ ಎಂಬ ಬಿರುದಗಳನ್ನು ಚಾಲುಕ್ಯ ಅರಸರು ಹೊಂದಿದ್ದರು. ಈ ಬಿರುದುಗಳು ರಾಜ ಬೆಳೆಯುತ್ತಿದ್ದ ಸ್ಥಾನಗೌರವವನ್ನು ಸ್ಪಷ್ಟವಾಗಿ ಸೂಚಿಸುತ್ತವೆ. (ಸಂಪುಟ–೧ ಪ್ರೊಫೆಸರ್ ಕೆ.ಆರ್. ಬಸವರಾಜು)

ರಾಷ್ಟ್ರಕೂಟರು ಧರಿಸಿದ ಬಿರುದುಗಳಲ್ಲಿ ರಾಜಸಿಂಹ, ಪರಮಭಟ್ಟಾರಕ, ಪರಮೇಶ್ವರ, ಮಹಾರಾಜಾಧಿರಾಜ ಎಂಬುವು ಕೆಲವು ರಾಷ್ಟ್ರಕೂಟರ ಅರಸರಿಗೆ 'ತುಂಗ' ಎಂಬುದರಿಂದ ಕೊನೆಗೊಳ್ಳುವ ಬಿರುದುಗಳು ಹೆಸರುಗಳು ಇದ್ದವು. ತುಂಗ ಎಂದರೆ ಉನ್ನತ, ಪ್ರಧಾನ, ಎತ್ತರವಾದುದು ಎಂದರ್ಥ. ಶುಭತುಂಗ, ಜಗತ್ತುಂಗ, ನೃಪತುಂಗ. ಈ ಬಿರುದುಗಳ ಮೂಲಕ ರಾಷ್ಟ್ರಕೂಟ ಅರಸರು ತಾವು ಇತರರಿಗಿಂತ ಬಹಳ ಪ್ರಮುಖರಾಗಿದ್ದರು ಎಂಬುದನ್ನು ಸೂಚಿಸುತ್ತದೆ. ಅದೇ ರೀತಿ 'ವರ್ಷ' ಎಂಬ ಪ್ರತ್ಯಯವನ್ನು ರಾಷ್ಟ್ರಕೂಟ ಅರಸರು ಸಾಮಾನ್ಯವಾಗಿ ಬಳಸಿದ್ದನ್ನು ನೋಡುತ್ತೇವೆ. ಅಕಾಲವರ್ಷ, ಪ್ರಭೂತವರ್ಷ, ಅಮೋಘವರ್ಷ, ಧಾರಾವರ್ಷ, ಸುವರ್ಣವರ್ಷ, ನಿತ್ಯವರ್ಷ ಎಂಬ ಹೆಸರುಗಳನ್ನು ನೋಡುತ್ತೇವೆ ವರ್ಷ ಎಂದರೆ ಮಳೆ. ಹೂವಿನಮಳೆ, ಬಾಣದಮಳೆ, ಧೂಳಿನಮಳೆ, ಐಶ್ವರ್ಯದ ಮಳೆ ಇತ್ಯಾದಿಗಳ ರೂಪಕವಾಗಿ ಬಳಸಲಾಗಿದೆ. ಇನ್ನು ವೈಯಕ್ತಿಕವಾಗಿ ದಂತಿದುರ್ಗನಿಗೆ ಖಡ್ಗವಲೋಕ ಎಂಬ ಬಿರುದಿತ್ತು. ಯಾರ ನೋಟುಗಳು ಕತ್ತಿಯ ಅಲಗಿನಷ್ಟು ಹರಿತವಾಗಿವೆಯೋ ಅಂಥವನು ಎಂದು ಅರ್ಥ. ಧ್ರುವನು ನಿರುಪಮ ಮತ್ತು ಕಲಿವಲ್ಲಭ (ಏನೆಯಿಲ್ಲದವನು ಮತ್ತು ಕಲಿಯುಗದಲ್ಲಿ ಪ್ರೀತಿಪಾತ್ರನು) ಎಂದು ನಿರೂಪಿತಗೊಂಡಿವೆ. ಅಮೋಘವರ್ಷನಿಗೆ ಮಹಾರಾಜ ಶರ್ವ (ಮಹಾರಾಜರಲ್ಲಿ ಈಶ್ವರನಂಥವನು), ಮಹಾರಾಜ ಸ್ಕಂದ (ಮಹಾರಾಜರಲ್ಲಿ ಸ್ಕಂದನಂತವನು) ಎಂಬ ಬಿರುದುಗಳಿದ್ದವು. ನಾಲ್ಕನೇ ಇಂದ್ರನು ನಿರಾಶ್ರಿತರ ಕಲ್ಪವೃಕ್ಷ ವೀರರವೀರ ಎಂದು ವರ್ಣಿಸಲಾಗಿದೆ. ಹೀಗೆ ರಾಷ್ಟ್ರಕೂಟರ ಆಳ್ವಿಕೆಯನ್ನು ಶಾಸನಬದ್ಧಗೊಳಿಸಲು ಯತ್ನಿಸಲಾಗಿದೆ.

ವಿಜಯನಗರ ಸಾಮ್ರಾಜ್ಯದ ಸ್ಥಾಪಕರಲ್ಲಿ ಒಬ್ಬರಾದ ಬುಕ್ಕರಾಯ ಸಮಗ್ರ ವೇದಸಂಹಿತೆಗಳ ಮೇಲೆ ಭಾಷಾ ರಚನೆ ಮಾಡುವ ಯೋಜನೆ ಹಮ್ಮಿಕೊಂಡು ಪ್ರಾರಂಭಿಸಿದ್ದರಿಂದ 'ವೈದಿಕಮಾರ್ಗ ಪ್ರವರ್ತಕ' ಎಂಬ ಬಿರುದನ್ನು ಹೊಂದಿದ್ದ. ಈತನ ಆಶ್ರಯದಲ್ಲಿ ಸಾಹಿತ್ಯ ಅಭಿವೃದ್ಧಿಗೊಂಡಿದ್ದರಿಂದ ಇವನಿಗೆ 'ಸಾಹಿತ್ಯರಸಪೋಷಣ' ಎಂಬ ಬಿರುದು ಇತ್ತು. ಮುಂದೆ ವೇದಗ ಳ ಮೇಲಿನ ಭಾಷ್ಯ ರಚನೆಯ ಕಾರ್ಯ ಪೂರ್ಣಗೊಳಿಸಿದ ಆತನ ಮಗ, ಉತ್ತರಾಧಿಕಾರಿಯಾದ ಇಮ್ಮಡಿ ಹರಿಹರರಾಯನಿಗೆ 'ವೇದಮಾರ್ಗ ಸ್ಥಾಪನಾಚಾರ್ಯ' ಎಂಬ ಬಿರುದು ಪ್ರಾಪ್ತವಾಯಿತು. ಈ ಅವಧಿಯಲ್ಲಿ ಕನ್ನಡ ಸಾಹಿತ್ಯ ರಚನೆಯಾಗಿದ್ದರಿಂದ ಹರಿಹರರಾಯನಿಗೆ 'ಕರ್ನಾಟಕ ವಿದ್ಯಾವಿಲಾಸ' ಎಂಬ ಬಿರುದು ಇತ್ತು. ತನ್ನ ಆನೆಗಳ ಬೇಟೆಯಾಡುವ ಆಸಕ್ತಿಯಿಂದಾಗಿ 'ಗಜಬೇಂಟಕಾರ' ಎಂಬ ಬಿರುದನ್ನು ಇಮ್ಮಡಿ ದೇವರಾಯನು ಹೊಂದಿದ್ದನು. ಮುಂದೆ ಶ್ರೀಕೃಷ್ಣನೇ ಅವತರಿಸಿ ಬಂದಂತೆ ಸಿಂಹಾಸನವೇರಿದ ಕೃಷ್ಣದೇವರಾಯ ತನ್ನ ಶತ್ರು ರಾಜ್ಯದ ಸುಲ್ತಾನ ಮಂತ್ರಿಯಿಂದ ಬಂಧಿತನಾಗಿದ್ದನ್ನು ಅರಿತು, ಬಂಧನದಿಂದ ಸುಲ್ತಾನ ಮಹಮದನನ್ನು ಬಿಡುಗಡೆಗೊಳಿಸಿ, ಸಿಂಹಾಸನಕ್ಕೆ ಏರಿಸಿದನು. ಈ ಕಾರ್ಯದಿಂದಾಗಿ 'ಯವನ ರಾಜ್ಯ ಸ್ಥಾಪನಾಚಾರ್ಯ' ಎಂಬ ಬಿರುದನ್ನು ಧರಿಸಿದನು. ಸ್ವತಃ ವಿದ್ವಾಂಸನಾಗಿದ್ದು, ಹಲವು ಗಣ್ಯವಿದ್ವಾಂಸರಿಗೆ ಆಶ್ರಯದಾತನಾಗಿದ್ದ. ಪ್ರಸಿದ್ಧ ತೆಲುಗು ಕವಿ ಅಲ್ಲಸಾಣಿಪೆದ್ದನ್ನಗಳಂತಹ ಹಲವಾರು ತೆಲುಗು ವಿದ್ವಾಂಸರಿಗೆ ಪೋಷಕನಾಗಿದ್ದರಿಂದ ಆಂಧ್ರಭೋಜ, ಆಂಧ್ರಕವಿತಾ ಪಿತಾಮಹ ಎಂಬ ಬಿರುದುಗಳು ಲಭಿಸಿದವು. ಕನ್ನಡ ಭಾಷೆಯ ಬ್ರಾಹ್ಮಣ, ವೀರಶೈವ ಮತ್ತು ಜೈನಕವಿಗಳಿಗೂ ಆಶ್ರಯ ನೀಡಿದ್ದರಿಂದ 'ಕನ್ನಡರಾಜ್ಯ ರಮಾರಮಣ'ಎಂಬ ಬಿರುದು ಧರಿಸಿದ್ದ.

ಬಹಮನಿ ಸಾಮ್ರಾಜ್ಯದ ಸ್ಥಾಪಕದೊರೆ ಅಲ್ಲಾವುದ್ದೀನ್ಬಹಮನ್ಷಾ ಬಹಮನಿ ಸಾಮ್ರಾಜ್ಯ ಸ್ಥಾಪನೆಯ ಪೂರ್ವ ದೌಲತಬಾದ್‌ನಲ್ಲಿ ಸುಲ್ತಾನ ಮಹಮ್ಮದ್ ಬಿನ್ ತುಘಲಕ್‌ನ ಸೈನ್ಯವನ್ನು ಸಂಪೂರ್ಣವಾಗಿ ಸೋಲಿಸುವ ಸಂದರ್ಭದಲ್ಲಿ ತಾನು ಎಲ್ಲರಿಗಿಂತಲೂ ಸಮರ್ಥ ದಕ್ಷ ಎಂದು ಸಾಬೀತುಪಡಿಸಿದ್ದ, ಹೀಗಾಗಿ ಅವನಿಗೆ ಎಲ್ಲರೂ 'ಜಫರ್ಖಾನ್' ಎಂಬ

ಬಿರುದು ನೀಡಿದರು. ಹಸನಬಾದ್‌ನಲ್ಲಿ ಹೊಸ ಬಹಮನಿ ಸಾಮ್ರಾಜ್ಯ ಸ್ಥಾಪಿಸಿದ ಮೇಲೆ ಈತತನ್ನನ್ನು 'ಸಿಕಂದರ್' ಎಂದು ಸ್ವಘೋಷಿಸಿಕೊಂಡು, ಇದೇ ಹೆಸರಿನಲ್ಲಿ ನಾಣ್ಯಗಳನ್ನು ಟಂಕಿಸಿದ್ದಾನೆ.

ಈ ರೀತಿಯ ತಂತ್ರಗಳನ್ನುಬಳಸುವುದು ಪ್ರಭುಗಳಿಗೆ ಅನಿವಾರ್ಯ ಅವಶ್ಯಕತೆಯಾಗಿತ್ತೆಂದು ತೋರುತ್ತದೆ. ಕಾಲ (Time) ಮತ್ತು ಸ್ಥಳ (Space) ಇವೆರಡು ಇತಿಹಾಸದ ದಿಕ್ಕನ್ನು ನಿರ್ಧರಿಸುತ್ತವೆ. ಆಯಾ ಕಾಲಧರ್ಮಕ್ಕೆ ಪೂರಕವಾಗಿ ಪ್ರಭುಗಳು ತಮ್ಮ ಪ್ರಜೆಗಳ ಮೇಲೆ ರಾಜತ್ವದ ದೇವತ್ವದ ಸಿದ್ಧಾಂತ ಹೇರಿ ಅಥವಾ ತಮ್ಮ ಮೂಲದ ಬಗ್ಗೆ ಉತ್ಪ್ರೇಕ್ಷಿಸಿ, ಪ್ರಭಾವಿ ಬಿರುದುಗಳನ್ನು ಧರಿಸಿ, ಅಮೂರ್ತ ಪ್ರಭಾವಳಿಯನ್ನು ತಮ್ಮ ಸುತ್ತ ಸೃಷ್ಟಿಸಿಕೊಂಡು, ಪ್ರಜೆಗಳ ಬೆಂಬಲ ಪಡೆದುಕೊಳ್ಳಲು ಯತ್ನಿಸಿದ್ದಾರೆ ಹಾಗೂ ಬಹುತೇಕರು ಇದರಲ್ಲಿ ಯಶಸ್ವಿಯಾಗಿದ್ದಾರೆ.

ಅಡಿ ಟಿಪ್ಪಣಿಗಳು

೧. ಇಂದ್ರ ಮತ್ತು ವರುಣನ ಹೆಸರು ಕೆಲ ವೈದಿಕ ಪಠ್ಯಗಳಲ್ಲಿ ಉಲ್ಲೇಖಿಸಲಾಗಿದೆ.

೨. ಚೀನಿ ರಾಜರು ತಮ್ಮನ್ನು ತಾವು 'ಸ್ವರ್ಗ ಪುತ್ರರು' ಎಂದು ಕರೆದುಕೊಂಡಿದ್ದಾರೆ.

೩. ಸಾ.ಶ. ೧೫೮೯ ಆಗಸ್ಟ್ ೮.

೪. ಅಲ್ಲಾ.

20

ಕನಕಗಿರಿಯಲ್ಲಿ ಶಿವಾಜಿ ಸಹೋದರ ಸಂಭಾಜಿ ಸಮಾಧಿ ಶೋಧ

ಶರಣಬಸಪ್ಪ ಕೋಲ್ಕಾರ*

ಕನಕಗಿರಿ, ಕೊಪ್ಪಳ ಜಿಲ್ಲೆಯ ಒಂದು ಪ್ರಸಿದ್ಧ ಚಾರಿತ್ರಿಕ ಸ್ಥಳ. ಪ್ರಸ್ತುತ ತಾಲೂಕು ಕೇಂದ್ರವಾಗಿರುವ ಕನಕಗಿರಿ ಹಂಪಿಯಿಂದ ಉತ್ತರಕ್ಕೆ ೩೦ ಕಿ.ಮೀ. ದೂರದಲ್ಲಿದೆ. ಕನಕಗಿರಿ ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಮಾಂಡಲಿಕ ರಾಜ್ಯವಾಗಿತ್ತು. ಅಲ್ಲಿ ಗುಜ್ಜಲವಂಶದ ನಾಯಕ ಅರಸರು ಆಡಳಿತ ನಡೆಸಿದರು. ವಿಜಯನಗರ ಸಾಮ್ರಾಟರ ನಿಷ್ಠ ಮಾಂಡಲಿಕರಾಗಿದ್ದ ಕನಕಗಿರಿ ಪಾಳೆಗಾರರು ಅವರ ಆಸ್ಥಾನದಲ್ಲಿ ಬಲಪಾರ್ಶ್ವದ (ಆಸೀನರಾಗುವ) ಮರ್ಯಾದೆಯನ್ನು ಹೊಂದಿದ್ದರು. ಕ್ರಿ.ಶ ೧೪೩೬ ರಲ್ಲಿ ಗುಜ್ಜಲವಂಶದ ಪರಸಪ್ಪ ಉಡಚನಾಯಕನು ಪ್ರೌಢದೇವರಾಯನಿಂದ ಮಾನ್ಯತೆ ಹಾಗೂ ಜಾಗೀರು ಪಡೆದು ಕನಕಗಿರಿಯಲ್ಲಿ ಪಾಳೆಯ ಪಟ್ಟಿಗೆ ಅಸ್ಥಿಭಾರ ಹಾಕಿದನು. ಪರಸಪ್ಪ ನಾಯಕನ ನಂತರ ಅವನ ಮಗ ನವಾಬ ಉಡಚಪ್ಪ ನಾಯಕ ಕನಕಗಿರಿಯನ್ನು ಹಲವಾರು ಸ್ಮಾರಕಗಳಿಂದ ಕಲಾಕೇಂದ್ರವನ್ನಾಗಿಸಿದನು. ಇವನ ತರುವಾಯ ಬಂದ ಏಳು ಜನ ಅರಸರಲ್ಲಿ ಕ್ರಮವಾಗಿ ಮೂರನೆಯವರಾದ ಇಮ್ಮಡಿ ಉಡಚಪ್ಪ ನಾಯಕ ಕನಕಗಿರಿ ನಾಯಕರಲ್ಲೇ ಪ್ರಸಿದ್ಧ ದೊರೆ. ಇವನು ಹಲವಾರು ಯುದ್ಧಗಳನ್ನು ಜಯಿಸಿ ಕನಕಗಿರಿಯನ್ನು ಬಲಿಷ್ಠ ರಾಜ್ಯಶಕ್ತಿಯನ್ನಾಗಿ ರೂಪಿಸಿದ್ದನು. ಇವನ ತರುವಾಯ ನಾಲ್ಕು ಜನ ಆಳ್ವಿಕೆ ನಡೆಸಿದರು. ಕೊನೆಯ ದೊರೆ ಹಿರೇನಾಯಕ ಉದ್ಧಟನಾಗಿದ್ದರಿಂದ ಹೈದರಾಬಾದ್ ನಿಜಾಮನ ಪರವಾಗಿ ಸುರಪುರದ ಪಾಮನಾಯಕನು ಕನಕಗಿರಿಯ ಮೇಲೆ ದಾಳಿ ಮಾಡಿದನು. ೧೮೩೩ ರಲ್ಲಿ ನಡೆದ ಎಮ್ಮಿಗುಡ್ಡ ಕಾಳಗದಲ್ಲಿ ಹಿರೇನಾಯಕನನ್ನು ಮೋಸದಿಂದ ಸೋಲಿಸಿ, ಸೆರೆಹಿಡಿದು ಹತ್ಯೆಗೈಯ್ಯಲಾಯಿತು. ಅಲ್ಲಿಗೆ ಕನಕಗಿರಿ ರಾಜ್ಯ ಪತನವಾಯಿತು.[೧]

ಕನಕಗಿರಿಯನ್ನಾಳಿದ ಅರಸರಲ್ಲಿ ಪ್ರಸಿದ್ಧನಾದ ಇಮ್ಮಡಿ ಉಡಚಪ್ಪ ನಾಯಕ (ಕ್ರಿ.ಶ. ೧೬೧೮–೧೭೦೮)ನ ಕಾಲದಲ್ಲಿ ನಡೆದ ಒಂದು ಯುದ್ಧದಿಂದಾಗಿ ಕನಕಗಿರಿಯಲ್ಲಿ ಶಿವಾಜಿಯ ಸಹೋದರ ಸಂಭಾಜಿ (ಮಗನ ಹೆಸರೂ ಕೂಡಾ ಸಂಭಾಜಿ) ಮರಣ ಹೊಂದುವಂತಾಯಿತು ಮತ್ತು ಅವನನ್ನು ಕನಕಗಿರಿಯಲ್ಲಿಯೇ ಸಮಾಧಿ ಮಾಡಲಾಯಿತು. ಈ ಎರಡು ಸಂಗತಿಗಳು ಪ್ರಧಾನವಾಗಿ ನಂಬಿಕೆಗಳಾಗಿಯೇ ಕನಕಗಿರಿಯಲ್ಲಿ ಉಳಿದುಬಂದಿವೆ. ಈ ನಂಬಿಕೆಗಳನ್ನು ಸಮಕಾಲೀನ ದಾಖಲೆಗಳೊಂದಿಗೆ ಸಮೀಕರಿಸಿ, ವಿಶ್ಲೇಷಿಸಿ ಇವು ಚಾರಿತ್ರಿಕ ಸತ್ಯ ಘಟನೆ ಎಂಬುದನ್ನು ನಿರೂಪಿಸುವ ಮತ್ತು ಸಂಭಾಜಿಯ ಸಮಾಧಿಯನ್ನು ಗುರುತಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

ಕನಕಗಿರಿ ಚರಿತ್ರೆ ಶೋಧನೆ: 'ಕಾಲಿದ್ದವರು ಹಂಪಿ ನೋಡಬೇಕು; ಕಣ್ಣಿದ್ದವರು ಕನಕಗಿರಿ ನೋಡಬೇಕು' ಎಂಬ ಜಾಣ್ನುಡಿ ಹಂಪಿ–ಕನಕಗಿರಿಯ ಪ್ರದೇಶದಲ್ಲಿ ಪ್ರಚಲಿತದಲ್ಲಿದೆ. ಇದು ಹಂಪಿಯ ವಿಸ್ತಾರತೆಯನ್ನು, ಕನಕಗಿರಿಯ ಪ್ರೇಕ್ಷಣೀಯತೆಯನ್ನು ಪ್ರತಿಬಿಂಬಿಸುತ್ತದೆ. ಕನಕಗಿರಿಯಲ್ಲಿಯ ಹತ್ತು ಹಲವು ದೇವಾಲಯ, ಭಾವಿ, ಪುಷ್ಕರಣಿ, ಮಂಟಪ, ಮಠ ಮತ್ತು ಸುಂದರವಾದ ದೇವತೆಗಳ ಮತ್ತು ರಾಜರ ಶಿಲ್ಪಗಳಿವೆ. ಇವೆಲ್ಲವುಗಳಲ್ಲಿ ಕನಕಗಿರಿನಾಥ ಲಕ್ಷ್ಮೀ ನರಸಿಂಹ ದೇವಾಲಯ ಮತ್ತು ವೆಂಕಟಪತಿ ಭಾವಿಗಳು ಅತ್ಯಂತ ಕಲಾತ್ಮಕವಾಗಿವೆ. ಪ್ರಾಯಶಃ ಇವೆರೆಡು ಸ್ಮಾರಕಗಳಿಂದಲೇ ಕಣ್ಣಿದ್ದವರು ಕನಕಗಿರಿ ಕಾಣಬೇಕು ಎಂಬ ಜಾಣ್ನುಡಿ ಪ್ರಚಲಿತಕ್ಕೆ ಬಂದಿರಬೇಕೆನಿಸುತ್ತದೆ. ಇಂಥ ವಿಶಿಷ್ಟ ಕಲಾ ಕೇಂದ್ರವಾಗಿರುವ ಕನಕಗಿರಿಯ ರಾಜಕೀಯ ಇತಿಹಾಸ ಬಹುಮಟ್ಟಿಗೆ ಅಪರಿಚಿತವಾಗಿಯೇ ಉಳಿದಿತ್ತು. ಅದನ್ನು ಹುಡುಕುವ ಉದ್ದೇಶದಿಂದ ನಾನು ೧೯೯೨ ರಲ್ಲಿ ಪ್ರಥಮ ಬಾರಿಗೆ ಕನಕಗಿರಿಯ ಬಗ್ಗೆ ಸಂಶೋಧನೆ, ಅಧ್ಯಯನ ಪ್ರಾರಂಭಿಸಿದೆ. ಆ ಸಂಶೋಧನಾ ಅಧ್ಯಯನದ ಫಲವಾಗಿ ಕನಕಗಿರಿಯ ಸಮಗ್ರ ರಾಜಕೀಯ ಹಾಗೂ ಸಾಂಸ್ಕೃತಿಕ ಇತಿಹಾಸ ಬೆಳಕಿಗೆ ಬರುವಂತಾಯಿತು. ಅಲ್ಲಿಂದ ಇಲ್ಲಿಯವರೆಗೆ ನಿರಂತರವಾಗಿ ಕನಕಗಿರಿಯ ಕುರಿತಾಗಿ ಸಂಶೋಧನಾ ಅಧ್ಯಯನ ಮುಂದುವರೆಸುತ್ತಾ ಬಂದಿದ್ದೇನೆ.

* ಪ್ರಾಚಾರ್ಯರು, ಕಲ್ಮಠ ಶ್ರೀ ಚನ್ನಬಸವಸ್ವಾಮಿ ವಿದ್ಯಾಲಯ, ಗಂಗಾವತಿ, ಕೊಪ್ಪಳ ಜಿಲ್ಲೆ, ಮೊ. ೯೮೪೫೨ ೬೭೧೫೫



ಅದರ ಭಾಗವಾಗಿ ಹಲವು ಲೇಖನಗಳು ರಚನೆಯಾಗಿ ಪ್ರಕಟಗೊಂಡಿದ್ದು, ಕನಕಗಿರಿಯ ವಿವಿಧ ಆಯಾಮಗಳ ಮೇಲೆ ಬೆಳಕು ಬೀರಿವೆ. ಹೀಗೆ ಕನಕಗಿರಿಯ ಚರಿತ್ರೆಯ ನಿರೂಪಣೆಯಲ್ಲಿ ಅಲ್ಲಿಯ ಶಿಲಾಶಾಸನಗಳು, ತಾಮ್ರ ಶಾಸನಗಳು, ಸ್ಮಾರಕ ಶಿಲ್ಪಗಳು ಅಷ್ಟೇ ಅಲ್ಲದೇ ಅಲ್ಲಿಯ ಮೌಖಿಕ ಹೇಳಿಕೆಗಳು ಕೂಡಾ ಅಪಾರ ಮಾಹಿತಿಯನ್ನು ಒದಗಿಸಿವೆ. ಹೀಗೆ ಮೌಖಿಕ ಮಾಹಿತಿಯೊಂದರ ಬೆನ್ನು ಹತ್ತಿ ಹೋದಾಗ ದೊರೆತ ಮಹತ್ವದ ಸಂಗತಿಯೇ ಕನಕಗಿರಿಯಲ್ಲಿ ಸಂಭಾಜಿಯ ಸಾವು ಮತ್ತು ಆತನ ಸಮಾಧಿ.

ಕನಕಗಿರಿಯ ಚರಿತ್ರೆಯನ್ನು ಹುಡುಕುವ ಹಾದಿಯಲ್ಲಿ ನಾನು ಎಷ್ಟೋ ಗ್ರಾಮಸ್ಥರನ್ನು ಸಂದರ್ಶಿಸಿ ಮಾಹಿತಿ ಪಡೆದಿದ್ದೇನೆ. ಹೀಗೆ ಮಾಹಿತಿಗಾಗಿ ಒಮ್ಮೆ ಒಬ್ಬ ವ್ಯಕ್ತಿಯನ್ನು ಭೇಟಿಯಾದಾಗ ಆತ ಕನಕಗಿರಿ ಹಳ್ಳದ ಉತ್ತರಕ್ಕೆ ಸ್ವಲ್ಪ ದೂರದಲ್ಲಿ ಇರುವ ಒಂದು ಸಮಾಧಿಯನ್ನು ಸಂಭಾಜಿಯದೆಂದೆ ಕರೆಯುತ್ತಿದ್ದರು, ಆದರೆ ಈಗ ಅದನ್ನು ಬೇರೆ ಹೆಸರಿನಿಂದ ಕರೆಯುತ್ತಾರೆ ಎಂದು ತಿಳಿಸಿದ. ಈ ಸಂಗತಿ ನನಗೆ ತುಂಬಾ ಕುತೂಹಲವನ್ನುಂಟು ಮಾಡಿತು. ಈ ಸಂಗತಿಯ ಬಗ್ಗೆ ತಿಳಿಯಲು ನಾನು ಕನಕಗಿರಿ ನಾಯಕ ವಂಶಸ್ಥರಾದ ಹುಲಿಹೈದರ್ ಗ್ರಾಮ ನಿವಾಸಿಗಳಾಗಿದ್ದ ಶ್ರೀ ರಾಜಾ ರಂಗಪ್ಪ ನಾಯಕರನ್ನು (ಆಗ ಅವರಿಗೆ ೮೦ ವರ್ಷಗಳಾಗಿದ್ದವು) ಭೇಟಿಯಾಗಿ ಚರ್ಚಿಸಿದೆ. ಅವರು ತಮ್ಮ ತಾಯಿಯವರಾದ ರಾಣಿ ಗೌರಮ್ಮನವರು ಈ ಸಂಗತಿಯ ಬಗ್ಗೆ ನನಗೆ ತಿಳಿಸಿದ್ದರು, ಹಳ್ಳದ ಬದಿಯಲ್ಲಿ ಮರಾಠಾ ದೊರೆ ಸಂಭಾಜಿಯ ಸಮಾಧಿ ಇದೆ ಎಂದರು. ಆದರೆ ಸಮಾಧಿ ಎಲ್ಲಿದೆ ಎನ್ನುವುದನ್ನು ಖಚಿತವಾಗಿ ಹೇಳಲಿಲ್ಲ. ಆದರೆ ನನಗೆ ಕನಕಗಿರಿಯಲ್ಲಿ ಸಂಭಾಜಿ ಸಮಾಧಿ ಇದೆ ಎನ್ನುವ ನಂಬಿಕೆಗೆ ಮತ್ತಷ್ಟು ಬಲಬಂದಂತಾಯಿತು. ಹಾಗಾಗಿ ಸಂಭಾಜಿಯ ಬಗ್ಗೆ ಪರಿಶೀಲನೆ ನಡೆಸಿದೆ.

ಮರಾಠಾ ಚರಿತ್ರೆಯ ಶ್ರೇಷ್ಠ ನಾಯಕ ಶಿವಾಜಿಗೆ ಹಿರಿಯ ಮಗನಾಗಿ ಸಂಭಾಜಿ ಇದ್ದ ಸಂಗತಿ ಸರ್ವವೇದ್ಯವಾಗಿದೆ. ಈತನು ತಂದೆಯ ಉತ್ತರಾಧಿಕಾರಿಯಾಗಿ (೧೬೮೧-೧೬೮೯) ಮರಾಠರನ್ನು ಸಂಘಟಿಸಲು ಪ್ರಯತ್ನಿಸಿದನು. ಆದರೆ ಮೊಗಲ್ ದೊರೆ ಔರಂಗಜೇಬನು ಈತನನ್ನು ಸೆರೆಹಿಡಿದು, ೧೧-೦೩-೧೬೮೯ ರಲ್ಲಿ ಹತ್ಯೆಗೈದನು. ಈತನ ಸಮಾಧಿ ಮಹಾರಾಷ್ಟ್ರದ ಪುಣೆಯಿಂದ ೪೦ ಕಿ.ಮೀ. ದೂರದಲ್ಲಿರುವ ತುಲಾಪುರದಲ್ಲಿದೆ. ಹಾಗಾದರೆ ಕನಕಗಿರಿಯಲ್ಲಿರುವುದು ಯಾವ ಸಂಭಾಜಿಯ ಸಮಾಧಿ. ಆತನ ಸಮಾಧಿ ಇಲ್ಲಿ ಏಕೆ ಆಯಿತು ಎಂಬ ಪ್ರಶ್ನೆಗಳು ಉದ್ಭವವಾದವು. ಅದಕ್ಕಾಗಿ ಮರಾಠಾ ಚರಿತ್ರೆಯ ಪುಸ್ತಕಗಳನ್ನು ಪರಿಶೀಲಿಸಲಾಗಿ ಕಂಡುಬಂದ ಉಲ್ಲೇಖಗಳು ಇಂತಿವೆ.

ಕನಕಗಿರಿಯಲ್ಲಿ ಸಮಾಧಿಯಾದ ಸಂಭಾಜಿಯ ಬಗ್ಗೆ ಮರಾಠಾ ಪುಸ್ತಕಗಳಲ್ಲಿ ಉಲ್ಲೇಖವಾದಂತೆ ಷಹಜಿ ಮತ್ತು ಜೀಜಾಬಾಯಿಯವರಿಗೆ ಸಂಭಾಜಿ, ಶಿವಾಜಿ ಮತ್ತು ಕಿರಿಯ ಪತ್ನಿ ತಾರಾಬಾಯಿ ಮೋಹಿತೆಯಿಂದ ವೆಂಕೋಜಿ (ತಂಜಾವೂರು) ಎಂಬ ಮೂರು ಜನ ಮಕ್ಕಳಿದ್ದರು. ಷಹಜಿ ಬಿಜಾಪುರದ ಆದಿಲ್‌ಶಾಹಿಗಳ ಬಳಿ ದಂಡನಾಯಕನಾಗಿ ಕಾರ್ಯನಿರ್ವಹಿಸುತ್ತಿದ್ದಾಗ ತನ್ನ ಬಳಿ ಕೆಲಕಾಲ ಹಾಗೂ ಬೆಂಗಳೂರಿನ ಜಹಗೀರಿಯಲ್ಲಿ ಹಿರಿಯ ಮಗ ಸಂಭಾಜಿಯನ್ನಿಟ್ಟುಕೊಂಡು ತರಬೇತಿಗೊಳಿಸುತ್ತಿದ್ದ. ಈ ಸಂಭಾಜಿಯೇ ಕನಕಗಿರಿಯಲ್ಲಿ ಸತ್ತು ಸಮಾಧಿಯಾದ ವ್ಯಕ್ತಿ. ಆ ಬಗೆಗೆ ಮರಾಠಾ ಪುಸ್ತಕಗಳಲ್ಲಿ ಉಲ್ಲೇಖಗಳು ಕೆಳಗಿನಂತಿವೆ.

ಶ್ರೀನಿವಾಸ್ ಸಿ.ಕೆ. ಯವರು The Kanakagiri Palegar was subdued by Shahji after the initial failure of Afzalkhan. Who was sent against him, and in which attack Sambhaji, the second son (ಇತರೆ ಎಲ್ಲಾ ದಾಖಲೆಗಳಲ್ಲಿ ಹಿರಿಯ ಮಗನೆಂದಿದೆ) of Shahji fell (1653). This account of the death of Sambhaji is based on the information given by Maratha historians ಎಂದು ಬರೆಯುತ್ತಾರೆ.[೨] ಇದರಿಂದ ಕನಕಗಿರಿಯ ಪಾಳೆಯಗಾರನ ವಿರುದ್ಧ ಅಫಜಲ್‌ಖಾನನ ನೇತೃತ್ವದಲ್ಲಿ ಕಳಿಸಲ್ಪಟ್ಟ ದಾಳಿ ವಿಫಲವಾಗಿ ಅವನ ಜೊತೆ ಬಂದಿದ್ದ ಸಂಭಾಜಿಯ ಸಾವು ಆಯಿತೆಂದು, ಈ ಸೋಲಿಗಾಗಿ ಮತ್ತು ಮಗನ ಸಾವಿನ ಸೇಡಿಗಾಗಿ ಷಹಜಿ ಕನಕಗಿರಿಯ ಮೇಲೆ ದಾಳಿ ಮಾಡಿ ಪಾಳೆಯಗಾರನನ್ನು ಸೋಲಿಸಿದನೆಂಬ ಸಂಗತಿ ತಿಳಿಯುತ್ತದೆ. ಷಹಜಿ ಕನಕಗಿರಿಯ ಮೇಲೆ ದಾಳಿ ಮಾಡಿ ಯಶಸ್ವಿಯಾದ ಬಗ್ಗೆ ಸ್ವತಃ ಷಹಜಿ ಬಿಜಾಪುರದ ಸುಲ್ತಾನ್ ಅಲಿ ಆದಿಲ್‌ಷಹ(೧೬೫೬-೭೨)ನಿಗೆ ಬರೆದ ಪತ್ರವೂ ಇದನ್ನು ಸ್ಪಷ್ಟೀಕರಿಸುತ್ತದೆ.

"Maharaj Shahji Raje humble begs to make the following request to your majesty.

From among the vassals of the Durbar of your majesty, I had been deputed to the expedition against Kanakagiri, and on having carried out the mission successfully, was duly rewarded. Subsequently I was dispatched to Anegundi were also I did my duty with credit………"[3]

ಈ ಪತ್ರದನ್ವಯ ಕನಕಗಿರಿ ಮೇಲಿನ ಬಿಜಾಪುರದ ೧೬೫೩ರ ದಾಳಿ ವಿಫಲವಾಗಲು ಸುಲ್ತಾನ್ ಅಲಿ ಆದಿಲ್ ಷಹ (೧೬೫೬–೭೨)ನು ಎರಡನೆಯ ಬಾರಿ ಷಹಜಿಯನ್ನು ಕಳುಹಿಸಿದ್ದು, ಅದರನ್ವಯ ಷಹಜಿ ಕನಕಗಿರಿಯ ಮೇಲೆ ದಾಳಿ ಮಾಡಿ ಅದನ್ನು ವಶಪಡಿಸಿಕೊಳ್ಳುವಲ್ಲಿ ಯಶಸ್ವಿಯಾದ ಸಂಗತಿ ವ್ಯಕ್ತವಾಗುತ್ತದೆ. ಆ ಸಮಯದಲ್ಲಿ ಕನಕಗಿರಿಯಲ್ಲಿ ಆಳುತ್ತಿದ್ದ ಪಾಳೆಯಗಾರನೆಂದರೆ ಇಮ್ಮಡಿ ಉಡಚಪ್ಪ ನಾಯಕ (೧೬೧೮–೧೭೦೮) ಈತನೇ ಅಫಜಲ್‌ಖಾನನನ್ನು ಸೋಲಿಸಿದ್ದು ಮತ್ತು ಷಹಜಿಯಿಂದ ಸೋತದ್ದು.

ಕನಕಗಿರಿಯ ಮೇಲಿನ ದಾಳಿಯಲ್ಲಿ ಆದ ಸಂಭಾಜಿಯ ಸಾವಿಗೆ ಅಫಜಲ್‌ಖಾನನೇ ಕಾರಣ ಎಂಬ ಭಾವನೆ ಮರಾಠರಲ್ಲಿತ್ತು. ಶಿವಾಜಿ ಮಹಾರಾಜರು ಅಫಜಲ್‌ಖಾನನನ್ನು ಹತ್ಯೆ ಮಾಡುವಲ್ಲಿ ತನ್ನ ಸಹೋದರ ಸಂಭಾಜಿಯ ಸಾವಿಗೆ ಅವನು ಕಾರಣವಾದ ಬಗೆಗಿನ ದ್ವೇಷವೂ ಇತ್ತೆಂದು ಮರಾಠಾ ಇತಿಹಾಸಕಾರ ಶೇರವಾನಿ ಹೆಚ್.ಕೆ.ಯವರು "The Khan left Bijapur in September 1659 and met Shivaji on the small plateau on the pratapgurh hill on 10th November 1659. Where he was killed by Shivaji. Afzalkhan was unpopular among the Marathas as he was suspected to have been responsible for the death of Sambhaji the elder brother of Shivaji in 1654 on the battle field of Kanakagiri"[4]

ಎಂದು ಬರೆಯುತ್ತಾರೆ. ಈ ಎಲ್ಲಾ ಉಲ್ಲೇಖಗಳಿಂದ ಮರಾಠ ನಾಯಕ ಷಹಜಿಯ ಹಿರಿಯ ಮಗ ಶಿವಾಜಿಯ ಸಹೋದರ ಸಂಭಾಜಿಯ ಸಾವು ಕನಕಗಿರಿಯಲ್ಲಿ ಆದದ್ದು ಖಚಿತವಾಗುತ್ತದೆ.

ಕನಕಗಿರಿಯಲ್ಲಿಯೇ ಸಂಭಾಜಿ ಸಮಾಧಿ: ಕನಕಗಿರಿಯಲ್ಲಿ ಹತನಾದ ಸಂಭಾಜಿಯ ದೇಹವನ್ನು ಕನಕಗಿರಿಯಲ್ಲಿಯೇ ಸಮಾಧಿ ಮಾಡಲಾಯಿತು. ಪ್ರಸ್ತುತ ಸಮಾಧಿಯು ಲಕ್ಷ್ಮೀ ನರಸಿಂಹ ದೇವಾಲಯದ ಬದಿಯಲ್ಲಿ ಹರಿಯುತ್ತಿರುವ ಹಳ್ಳದಿಂದ ಉತ್ತರಕ್ಕೆ ಅನತಿ ದೂರದಲ್ಲಿದೆ. ಗ್ರಾನೈಟ್ ಶಿಲೆಯಲ್ಲಿ ಕಟ್ಟಿರುವ ಈ ಸಮಾಧಿಯು ಮಂಚಬಂಧ ಅಧಿಷ್ಠಾನದ ಶೈಲಿಯಲ್ಲಿದೆ. ಸು. ೭ ಫೀಟ್ ಅಗಲ, ೬.೯ ಫೀಟ್ ಉದ್ದವಾಗಿದೆ. ಕಾಲಕ್ರಮೇಣ ಈ ಸಮಾಧಿಯ ಬಳಿ ಒಬ್ಬ ಸೂಫಿ ಸಂತ ವಾಸಿಸಲಾರಂಭಿಸಿದ. ಆತ ಸಮಾಧಿಯ ಮೇಲೆ ಕುಳಿತು ತನ್ನ ಬಳಿ ಬಂದ ಹಿಂದೂ–ಮುಸ್ಲಿಂ ಭಕ್ತರಿಗೆ ಉಪದೇಶ ನೀಡುತ್ತಿದ್ದ. ಆತನ ಮರಣಾನಂತರ ಭಕ್ತರು ಸಮಾಧಿಯ ಮೇಲೆ ನಡುಮಧ್ಯದಲ್ಲಿ ಗಾರೆಯಿಂದ ಗೋರಿ ಆಕಾರದಲ್ಲಿ ನಿರ್ಮಿಸಿ ಆ ಸಂತನ ಸ್ಮರಣಾರ್ಥ ಪೂಜಿಸಲಾರಂಭಿಸಿದರು. ಇಂದು ಹಿಂದುಗಳು ಸಂಭಾಜಿ ಸಮಾಧಿ ಎಂದು, ಮುಸ್ಲಿಂರು ಖಾದರಭಾಷಾನ ಗೋರಿ ಎಂದು ಪೂಜಿಸುತ್ತಿದ್ದಾರೆ. ಒಟ್ಟಿನಲ್ಲಿ ಅದೊಂದು ಭಾವೈಕ್ಯತೆಯ ತಾಣವಾಗಿದೆ.

ಅಡಿ ಟಿಪ್ಪಣಿಗಳು

೧. ಡಾ. ಶರಣಬಸಪ್ಪ ಕೋಲ್ಕಾರ, ೧೯೯೪, ಕನಕಗಿರಿ (ಇತಿಹಾಸ) ಸ್ಮಾರಕಗಳು ಮತ್ತು ಮೂರ್ತಿಶಿಲ್ಪಗಳು, ಎಂ.ಫಿಲ್ ಪ್ರಬಂಧ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೨. Shrinivasan C.K., 1945, Maratha rule in Carnatic, Annamalai University, Annamalai Nagar, P.P. 81.

೩. Sardesai, G.S., (Edi), 1927, Shivaji Souvenir, Keshav Bhikaji Dhawale Book seller, Girgaum, Bombay, P.P. 138-141.

೪. Sherwani, H.K., (Edi), 1973, History of Medieval Deccan (1295-1724) Vol. I, The Government of Andhra Pradesh, Hyderabad. P.P. 565.

ಚಿತ್ರದುರ್ಗ ಬೃಹನ್ಮಠದ ಶಸ್ತ್ರಾಗಾರ: ಒಂದು ಹಿನ್ನೆಲೆ

ಬಿ. ರಾಜಶೇಖರಪ್ಪ✷

ಬೃಹನ್ಮಠದ ಶಸ್ತ್ರಾಗಾರ

ಈಗ್ಗೆ ಕೆಲವು ವರ್ಷಗಳ ಹಿಂದೆ, ಚಿತ್ರದುರ್ಗದ ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠದ ರಾಜಾಂಗಣದಿಂದ ಕರ್ತೃಗದ್ದಿಗೆಯತ್ತ ಸಾಗುವಾಗ, ಎಡಭಾಗದಲ್ಲಿ, ಜಗುಲಿಯ ಮೇಲೆ, ಕಬ್ಬಿಣದ ಸರಳುಗಳ ಹಿಂದೆ, ಅನೇಕ ಆಯುಧಗಳ ಸಂಗ್ರಹ ಇದ್ದದ್ದು ನೆನಪಿಗೆ ಬರಬಹುದು. ಅಲ್ಲಿ ಮರದ ಚೌಕಟ್ಟು (frame) ಗಳಲ್ಲಿ (೧೨ ಅಡಿಯ ವರೆಗಿನ) ಉದ್ದುದ್ದನೆಯ ಬಂದೂಕುಗಳು, ವಿವಿಧ ಬಗೆಯ ವಿವಿಧ ಗಾತ್ರದ ಕತ್ತಿ ಕಠಾರಿಗಳು, ಬಾಕುಗಳು, ಇರಿಗತ್ತಿಗಳು, ಮುಂಗೈರಕ್ಷೆಗಳು, ಕತ್ತಿ ಹುದುಗಿಸಿದ್ದ ವಾಕಿಂಗ್ ಸ್ಟಿಕ್, ಭರ್ಜಿಗಳು, ಗಂಡುಗೊಡಲಿಗಳು, ಚಂದ್ರಾಯುಧಗಳು, ಗರಡಿಮನೆಯಲ್ಲಿರುವಂಥ ಮರದ ಗದೆಗಳು– ಇಂಥ ಆಯುಧಗಳನ್ನು ಪ್ರದರ್ಶಿಸಲಾಗಿತ್ತು. "ಕೊಲಬೇಡ... ಮುನಿಯಬೇಡ..." ಎಂಬ ಬಸವಣ್ಣನವರ ಮಾರ್ಗ ಪಾಲಿಸುವ ಮಠದಲ್ಲಿ ಆಯುಧಗಳೇಕೆ– ಎಂಬ ಪ್ರಶ್ನೆ ಅದನ್ನು ನೋಡುತ್ತಿದ್ದ ಎಲ್ಲರಿಗೂ ಮೂಡುವಂತಿತ್ತು. ಇಂಥ ಆಯುಧಗಳನ್ನೆಲ್ಲ ಮಠದವರು ಉಪಯೋಗಿಸಿದ್ದಕ್ಕೆ, ಸಾವು ನೋವು ರಕ್ತಪಾತ ಸಂಭವಿಸಿದ್ದಕ್ಕೆ ಯಾವ ವರದಿಯೂ ಇಲ್ಲ. ಮಠದ ಶ್ರೀಗಳವರು ಚಿತ್ರದುರ್ಗದಲ್ಲಿ ಮತ್ತು ಬೇರೆ ಊರುಗಳಲ್ಲಿ ಭಾಗವಹಿಸುತ್ತಿದ್ದ ಮೆರವಣಿಗೆಗಳಲ್ಲಿ, ಬೇರೆ ಊರುಗಳಿಗೆ ಸರ್ಕೀಟ್ ಹೋಗುವಾಗ ಒಯ್ಯುತ್ತಿದ್ದ ವಸ್ತುಪರಿಕರಗಳಲ್ಲಿ ಇವು ಸೇರಿದ್ದುವು ಎಂದರೆ ಆಶ್ಚರ್ಯವಾಗಬಹುದು.

ಸ್ವಾಮಿಗಳು ಬೇರೆ ಬೇರೆ ಊರುಗಳಿಗೆ ಪ್ರವಾಸ ಹೋಗುತ್ತಿದ್ದ ಕಾಲಕ್ಕೆ, ಅವರ ಜೊತೆಗೆ ತಪ್ಪದೆ ಇರುತ್ತಿದ್ದ ಸಿಬ್ಬಂದಿಯಲ್ಲಿ ಬಹುಸಂಖ್ಯೆಯಲ್ಲಿ ಸಿಪಾಯಿಗಳು ಮತ್ತು ಬಹುಸಂಖ್ಯೆಯಲ್ಲಿ ಬಂದೂಕು ತಲವಾರು ಮತ್ತಿತರ ಆಯುಧಗಳು ಇರುತ್ತಿದ್ದುದು ಕೆಲವು ರಹದಾರಿ ಪತ್ರಗಳಲ್ಲಿ ಉಲ್ಲೇಖವಾಗಿದೆ. ಅದನ್ನು ಗಮನಿಸಿದರೆ, ಮಾರ್ಗಮಧ್ಯೆ, ಕೆಲವರು ತಂಟೆಕೋರರ ಮತ್ತು ಕಳ್ಳಕಾಕರ ಉಪಟಳವಾದರೆ, ಸುರಕ್ಷಿತತೆಗಾಗಿ ಇರಲಿ ಎಂದು ಮಠದವರು ಇವನ್ನು ಇರಿಸಿಕೊಂಡಿರಬೇಕು ಎಂದು ಸಾಧಾರಣವಾಗಿ ಮನಸ್ಸಿಗೆ ಬರುತ್ತದೆ. ಉದಾಹರಣೆಗೆ, ೧೮೭೯ ನೇ ಇಸವಿ ಏಪ್ರಿಲ್ ೨೦ನೆಯ ತಾರೀಖು, ಮೈಸೂರು ದೊರೆಗಳ ಸೀಮೆಯ ರಾಜ್ಯಭಾರದ ಚೀಫ್ ಕಮೀಷನರ್ ನೀಡಿರುವ ಒಂದು ರಹದಾರಿ ಪತ್ರದಲ್ಲಿ ಸ್ವಾಮಿಗಳು ತಮ್ಮ ಪ್ರಯಾಣ ಕಾಲಕ್ಕೆ, ಅವರ ಜೊತೆಗೆ ಏನೆಲ್ಲವನ್ನೂ ತೆಗೆದುಕೊಂಡು ಹೋಗಲು ಸರಕಾರದ ಪರವಾನಿಗಿ ನೀಡಲಾಗಿತ್ತು ಎಂಬುದನ್ನು ನಮೂದಿಸುವಾಗ, ಸ್ವಾಮಿಗಳ ಜೊತೆಯಲ್ಲಿ ನಾನಾ ಬಗೆಯ ಬಿರುದುಗಳು, ವಿವಿಧ ಬಗೆಯ ವಾದ್ಯಗಳು, ಜೊತೆಗೆ ೧೫೦ ಜನ ಅಯ್ಯಗಳು (= ಜಂಗಮರು), ೨೦೦ ಜನ ಶೂದ್ರರು ಜವಾನರು ವಗೈರೆ, ೪ ಆನೆ, ೮ ಒಂಟೆ, ೮೦ ಕುದುರೆ, ೨ ಬಿಚ್ಚು ಫಿರಂಗಿಗಳು, ೨೦ ಬಂದೂಕು, ೪೦ ಹತ್ಯಾರು (ಬಹುಶಃ ಕತ್ತಿಗಳು), ೩೦ ಚಕ್ಕಡಿಬಂಡಿ ಇವೆಲ್ಲ ಇರುತ್ತಿದ್ದವೆಂದು ನಮೂದಿಸಲಾಗಿದೆ. ಈ ವಿವರದಿಂದ, ಸ್ವಾಮಿಗಳು ಸರ್ಕೀಟಿಗೆ ಹೋಗುವಾಗ ಮತ್ತು ಸಂದರ್ಭದ ಅಗತ್ಯಕ್ಕೆ ತಕ್ಕಂತೆ ಮುಂಜಾಗ್ರತೆಗಾಗಿ, ಮಠದಲ್ಲಿ ಇಂಥ ಆಯುಧಗಳನ್ನು ಇರಿಸಿಕೊಂಡಿದ್ದರೆಂದು ತಿಳಿಯಬಹುದು.

ಇಷ್ಟಾದರೂ ಇಂಥ ಆಯುಧ ಸಂಗ್ರಹಕ್ಕೆ ಕಾರಣವೇನೆಂಬ ಉತ್ತರ ಸಿಗುವಂತಹ ದಾಖಲೆ ಪತ್ರಗಳೇನಾದರೂ ಶ್ರೀಮಠದ ಪತ್ರ–ದಾಖಲೆಗಳ ಬೃಹತ್ ಸಂಗ್ರಹದಲ್ಲಿ ಇದ್ದಿರಬಹುದೆ ಎಂದು ಶೋಧಿಸಿದಾಗ, ದೊರೆತ ಒಂದು ಪತ್ರ ಇದಕ್ಕೆ ಉತ್ತರ ಹೇಳುವಂತಿದೆ. ಶ್ರೀಮಠದ ಪತ್ರ–ದಾಖಲೆಗಳ ಭಂಡಾರದ ಬಗ್ಗೆ ಇಲ್ಲಿ ಎರಡು ಮಾತು ಹೇಳಲೇಬೇಕು. ಇಲ್ಲಿ ನೂರಾರು ಕಡತ (file) ಗಳಲ್ಲಿ ಲಕ್ಷಾಂತರ ಸಂಖ್ಯೆಯ ಪತ್ರಗಳಿರುವುದು ಒಂದು ಆಶ್ಚರ್ಯದ ಸಂಗತಿಯೇ ಸರಿ. ೧೮೩೫ ರಲ್ಲಿ ಬ್ರಿಟಿಷ್ ವರಿಷ್ಠಾಧಿಕಾರಿ ಕ್ಯಾಪ್ಟನ್ ಡಾಬ್ಸ್ ಶ್ರೀಮಠದ ಸ್ವಾಮಿಗಳಿಗೆ ಬರೆದಿರುವ ಒಂದು ನಿರ್ದೇಶನದ ನಿರೂಪ ತುಂಬ ಕುತೂಹಲದ ಸಂಗತಿಗಳನ್ನು ನಮ್ಮೆದುರು ತೆರೆದಿಡುತ್ತದೆ. ಆ ಪತ್ರವನ್ನು ಪರಿಚಯಿಸುವ ಮುನ್ನ, ಬೃಹನ್ಮಠದ

✷ ಕನ್ನಡ ಪ್ರಾಧ್ಯಾಪಕರು, ಪ್ರಾಂಶುಪಾಲರು (ನಿ), ೨ನೇ ಕ್ರಾಸ್ (ಪಶ್ಚಿಮ), ಜಯಚಾಮರಾಜೇಂದ್ರ ಬಡಾವಣೆ, ಚಿತ್ರದುರ್ಗ.

ಒಂದು ಕಿರುಪರಿಚಯ ಅವಶ್ಯಕವೆನಿಸುತ್ತದೆ. ಜತೆಗೆ ಆ ಪತ್ರ ಯಾರಿಗೆ ಬಂದಿತ್ತೊ ಆ ಶ್ರೀಗಳ ಬಗ್ಗೆಯೂ ಒಂದು ಪರಿಚಯ ಅವಶ್ಯಕವೆಂದೇ ಅನ್ನಿಸುತ್ತದೆ.

ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠ ಮತ್ತು ಸಾವಳಿಗಿ ಗುರುಶಾಂತಸ್ವಾಮಿಗಳು

ಚಿತ್ರದುರ್ಗದ ಶ್ರೀ ಜಗದ್ಗುರು ಮುರುಘ ರಾಜೇಂದ್ರ ಬೃಹನ್ಮಠವು ಲಿಂಗಾಯತ ಧರ್ಮದ ಪ್ರಧಾನ ಮಠವಾಗಿ ಹೆಸರಾಗಿತ್ತೆಂಬುದು ಈಗ ಇತಿಹಾಸ. ಈ ಮಠದ ಪೀಠಾಧೀಶರಾಗಿದ್ದ ಸಣ್ಣ ಬರಹದ ರಾಚವಟ್ಟಿ ಸ್ವಾಮಿಗಳ (೧೭೯೬–೧೮೩೪) ಉತ್ತರಾಧಿಕಾರಿಯಾಗಿ ಸಾವಳಿಗೆ ಗುರುಶಾಂತ ಸ್ವಾಮಿಗಳು ಆಯ್ಕೆಯಾಗಿದ್ದರು. ಆ ಹಿರಿಯ ಸ್ವಾಮಿಗಳು ಲಿಂಗೈಕ್ಯರಾದ ಮೇಲೆ, ಸಾವಳಿಗಿ ಗುರುಶಾಂತಸ್ವಾಮಿಗಳು ಪೀಠಾಧೀಶರಾಗಿ ಕಾರ್ಯ ನಿರ್ವಹಿಸಬೇಕಾಗಿತ್ತು. ಆದರೆ ಆ ವೇಳೆಗೆ ಅವರ ಪಟ್ಟಾಧಿಕಾರಕ್ಕೆ ಗ್ರಹಣ ಹಿಡಿದಂತಾಯಿತು. ಮೈಸೂರು ಮಹಾರಾಜರ ಕಡೆಯಿಂದ ಸ್ವಾಮಿಗಳೊಬ್ಬರು, ಈ ಮಠದ ಉತ್ತರಾಧಿಕಾರಿಗಳೆಂದು ಆಗಮಿಸಿದರು. ಹೀಗಾಗಿ ಸಾವಳಿಗೆ ಗುರುಶಾಂತ ಸ್ವಾಮಿಗಳ ಉತ್ತರಾಧಿಕಾರಕ್ಕೆ ಸಮಸ್ಯೆಯುಂಟಾಯಿತು. ಇದರಿಂದ ಸ್ವಾಮಿಗಳು ಮಠದ ಮೂಲ ನಿವಾಸದಲ್ಲಿರಲಿ ಸಾಧ್ಯವಾಗದೆ, ಅದರ ಹಿಂಬದಿಯಲ್ಲಿ ಒಂದು ಪ್ರತ್ಯೇಕ ಕಟ್ಟಡ ಸಂಕೀರ್ಣ ಮಾಡಿಸಿಕೊಂಡು ಅಲ್ಲಿ ನೆಲೆಸಿ, ತಮ್ಮ ಎಂದಿನ ಶಿವಪೂಜೆ, ತಪೋನುಷ್ಠಾನಗಳನ್ನು ಮುಂದುವರೆಸಬೇಕಾಯಿತು. ಅದಕ್ಕೆ ಹೊಂದಿಕೆಯಾಗಿ ಅದರ ಸುತ್ತ ಅನೇಕ ಹೂಗಿಡಗಳು ಮರಗಳು ಇರುವ ವನವನ್ನು ರೂಪಿಸಿದರು. ಅದನ್ನೇ ಮುಂದೆ 'ಚಿದ್ವನ' 'ಚಿದಾರಣ್ಯ' ಎಂದು ಕರೆಯಲಾಯಿತು.

ಸ್ವಾಮಿಗಳ ಉತ್ತರಾಧಿಕಾರದ ಪ್ರಶ್ನೆ ಅಂದಿನ ಕಾಲದ ಬ್ರಿಟಿಷ್ ಆಡಳಿತದ ಉನ್ನತಾಧಿಕಾರದ ಸಮ್ಮುಖಕ್ಕೆ ಹೋಯಿತು. ಅಲ್ಲಿ ಸಾಕಷ್ಟು ಕಾಲ ಚರ್ಚಾವಸ್ಥೆಯಲ್ಲಿ ನಿಂತು, ಕಡೆಗೆ ಇಂಗ್ಲೆಂಡಿನ ಪಾರ್ಲಿಮೆಂಟ್‌ವರೆಗೆ ಮುಂದುವರಿಯಿತೆಂದೂ, ಅಲ್ಲಿ ಕೂಡಾ ಕೆಲಕಾಲ ಚರ್ಚೆಯ ಹಂತದಲ್ಲಿದ್ದು, ಆ ಮೇಲೆ ಇಂಗ್ಲೆಂಡಿನ (ಮಹಾರಾಣಿಯಾದ) ವಿಕ್ಟೋರಿಯಾಳ ಗಮನಕ್ಕೆ ಬಂದು, ಕಡೆಗೆ ಆಕೆ ಸಾವಳಿಗೆ ಗುರುಶಾಂತ ಸ್ವಾಮಿಗಳ ಉತ್ತರಾಧಿಕಾರವನ್ನು ಎತ್ತಿ ಹಿಡಿಯಲಾಗಿ, ಮಧ್ಯಾಂತರದಲ್ಲಿ ಬಂದಿದ್ದ ಮೈಸೂರಿನ ಸ್ವಾಮಿಗಳು ಮೈಸೂರಿಗೆ ಹಿಂತಿರುಗಿದರೆಂದೂ ಹೇಳಲಾಗಿದೆ. ಹೀಗೆ ಸುಮಾರು ೧೮೩೨ರಲ್ಲಿ ಶುರುವಾದ ಉತ್ತರಾಧಿಕಾರದ ವಿವಾದ ೧೮೩೫ಕ್ಕೆ ಕೊನೆಗೊಂಡು, ಸಾವಳಿಗೆ ಗುರುಶಾಂತಸ್ವಾಮಿಗಳು ಪೀಠಾಧಿಕಾರವನ್ನು ವಹಿಸಿಕೊಂಡು, ಅಲ್ಲಿಂದ ಸುಮಾರು ೧೦ ವರ್ಷಗಳ ಕಾಲ ಅಂದರೆ ೧೮೪೫ರವರೆಗೆ ಅದನ್ನು ಮುಂದುವರಿಸಿದರು. ಹೀಗೆ ೧೮೩೫ರ ಹೊತ್ತಿಗೆ ಆವರೆಗೆ ಇದ್ದ ಅಶಾಂತ ಪರಿಸ್ಥಿತಿ ಮುಕ್ತಾಯಗೊಂಡರೂ, ಬೇರೆ ರೀತಿಯ ತೊಂದರೆಯನ್ನು ಸ್ವಾಮಿಗಳು ಮತ್ತು ಮಠ ಎದುರಿಸಬೇಕಾಯಿತು. ಆ ತೊಂದರೆಗಳಲ್ಲೊಂದು ಮಠಕ್ಕೆ ಕಳ್ಳಕಾಕರು ಡಕಾಯಿತರು ದಾಳಿ ಮಾಡಲಿದ್ದಾರೆ ಎಂಬ ದಟ್ಟ ವದಂತಿ, ಅಂಥ ಸಂದರ್ಭ ಬಂದರೆ ಮಠದವರಾದ ನಾವು ಏನು ಮಾಡಬೇಕು ಎಂದು ನಿರ್ದೇಶನ ಕೋರಿ, ಸ್ವಾಮಿಗಳು ಆಗ ಚಿತ್ರದುರ್ಗ–ತುಮಕೂರು ವಿಭಾಗದ ಅಧಿಕಾರಿಯಾಗಿದ್ದ ಡಾಬ್ಸ್‌ಗೆ ಒಂದು ಪತ್ರವನ್ನು ಬರೆದರು. ಆಗ ಡಾಬ್ಸ್‌ನಿಂದ ಬಂದ ಉತ್ತರ ಹೀಗಿದೆ.

ಡಾಬ್ಸ್ ಬರೆದ ಉತ್ತರ

[ಇಂಗ್ಲಿಷ್
ಕನ್ನಡ
ಮೊಹರು]

ಚಿತ್ರದುರ್ಗ ತ್ತುಕಡಿ ಆ ಸುಪರ್‌ರಿಂಟೆಂಡೆಂಟ್ ಕೆಪಟನ್ ಡಾಬ್ಸ ಸಾಹೇಬರವ್ರು
ಚಿತ್ರದುರ್ಗದ ದೊಡ್ಡಮಠಕ್ಕೆ ಶೇರ್‍ರಿದ ಸರ್ವ ದೇಶದ ಚರಮು
ರ್ತಿಗಳು ವಿರಕ್ತರಿಗೆ ಸಗಾ ಹು॥ ಅದಾಗಿ ಅತರ್‍ರಾಫ ತಾಲ್ಕು
ನಲ್ಲಿ ಕಳಕಾಕರ್‍ರ ಉಪದ್ರವ ಬಹಳವಾಗಿ ಯಿರ್‍ರುವದ
ರ್‍ರಿಂದ್ದಾ ಯಿದರ ಬಂದೋಬಸ್ತು ಬಗ್ಗೆ ಶಿಬಂದೀ ಯಿಟ್ಟು ಯಿ
ಥೆ ವಂದು ವೇಳೆ ಕಳರ್‍ರು ಬಂದು ಮಠದ ಮೇಲೆ ಬಿದ ಸಮ
ಯದಲ್ಲಿ ಹಿಡಿಯುವದಕ್ಕೆ ಹೋದ ಸಮಯದಲ್ಲಿ ಗೋ

ಲ್ಲಿಯಿಂದಾ ಜಖಂ ಮಾಡುತ್ತಾರ್ರೆ ಆಗ್ಯೆ ನಾಲು ಜಖಂ ಮಾ
ಡಬೇಕಾಗುವದರ್ರಿಂದ್ದಾ ಯಿಾ ಬಗ್ಯೆ ಯೇನು ಅಪಣೆ ಯಂ
ಬದ್ದಾಗೀ ನವಂಬ್ರು ೧೮ನೇ ತಾರೀಖಿನ ಫಿರ್ಯಾದಿ/೩೨೯ ನೆಂಬರ್ರುನೂ
ಅರ್ಜಿ ಗುಜರಾಯ್ಸಿ ಯಿರ್ರುವದರಿಂದಾ ಜಾಹೀ
ರು ಆಗಿ ಯಿಾ ಬಗ್ಗೆ ಹುಕುಮು ಮಾಡುವದು ಯೇ
ನೆಂದರ್ರೆ ನಿಂಮ್ಮಾ ಜಿಂದಗಿ ಮತ್ತು ನಿಂಮ್ಮ ಪ್ರಾಣದ ಮೇಲೆ
ಯೋನಾದರೂ ಒಂದು ಗೋಲ್ಲಿ ವಗ್ಯೆರೆ ಚಲಾಯ್ಸುವ ವ್ಯಾ
ಳೆಯಲ್ಲಿ ನಿಂಮ್ಮ ಜಿಂದಗಿ ಉಸ್ತುವಾರಿಯಂನು ನಿಂ
ಮ್ಮ ಪ್ರಾಣಗಳ ಸಂರಕ್ಷಣೆ ಆಗುವ ಬಗ್ಯೆ ಸಹಾ
ಅಂತ್ತು ಕಳರ ಮೇಲೆ ಗೋಲ್ಲಿಯಿಂದ್ದಾ ಸುತ್ತು ಭಾಲಿ
ತರವಾರ್ರು ಮುಂತಾದ ಆಯುಧಗಳು ಯಿಂದ್ದಾ
ಬೇಷಕೆ ಕೈಚಲಾಯ್ಸಿ ಬಂದೋಬಸ್ತು ಮಾಡು
ವದು ಅಲ್ಲದೆ ದಸ್ತಗಿರಿ ಆದ ಕಳರ ಜಖಂ ವಗ್ಯೆ
ರ್ರೆ ಮಾಡದೆ ತಾಲ್ಲುಕು ಅಮೀಲನ ಬಳಿಗೆ ತಲುಪಿಸುವದೂ
ಖತ್ತಾರಿಕು ೨೫ನೇ ಮಾಹೆ ನವೆಂಬರ್ರು ಸನ್ ೧೮೩೫ನೇ
ಯಿಸವಿ ಮೊಕ್ಕಾಂ ಕಳಂಬೆಳ ತಾ। ಶಿರಾ

(ಇಂಗ್ಲಿಷ್‌ನಲ್ಲಿ ಸಹಿ)
ಡಾಬ್ಸ್
supdt

[ತುಕಡಿ= ಜಿಲ್ಲೆ/ವಿಭಾಗ; ಅತರಾಫ್= ಸುತ್ತಮುತ್ತಲ; ಜಖಂ= ಹಾನಿ; ಫಿರ್ಯಾದಿ= ದೂರು-ಅರ್ಜಿ; ಅರ್ಜಿ= ಮನವಿ, ಗುಜರಾಯ್ಸಿ= ಬರೆದುಕೊಂಡು; ಜಾಹೀರ್= ಸರ್ವಪ್ರಕಟವಾಗಿ; ಜಿಂದಗಿ= ಆಸ್ತಿ-ಪಾಸ್ತಿ; ಭಾಲಿ= ಭಲ್ಲೆ, ಭರ್ಜಿ; ತರವಾರು <ತಲವಾರು= ಕತ್ತಿ; ಹುಕುಮು= ಆದೇಶ; ಬೇಷಕೆ= ನಿಸ್ಸಂದೇಹವಾಗಿ; ಚಲಾಯ್ಸಿ < ಚಡಾಯ್ಸಿ= ಚಲಾಯಿಸಿ, ಪ್ರಯೋಗಿಸಿ; ಮಾಹೆ= ತಿಂಗಳು; ಮೊಕ್ಕಾಂ= ತಂಗಿದ ಸ್ಥಳ; ಗೋಲ್ಲಿ < ಗೋಲಿ= ಗುಂಡು, ಉಸ್ತುವಾರಿ= ರಕ್ಷಣೆ; ಶಿಬಂದಿ < ಸಿಬ್ಬಂದಿ= ಕಾರ್ಯಕರ್ತರು; ವಗ್ಯೆರೆ= ಮುಂತಾಗಿ, ಇತ್ಯಾದಿ]

ಸೂಪರಿಂಟೆಂಡೆಂಟ್ ಕ್ಯಾಪ್ಟನ್ ಡಾಬ್ಸ್

ಮೇಲ್ಕಂಡ ಪತ್ರವನ್ನು ಬರೆದವನ್ನು ಚಿತ್ರದುರ್ಗ ಮತ್ತು ತುಮಕೂರು ಡಿವಿಜನ್ನಿನ ವರಿಷ್ಠಾಧಿಕಾರಿ (ಕಲೆಕ್ಟರ್) ಆಗಿದ್ದ ರಿಚರ್ಡ್ ಸ್ಟುವರ್ಟ್ ಡಾಬ್ಸ್ (೧೮೩೪-೧೮೬೧). ೧೮೩೨ರ ಮೊದಲು ತುಮಕೂರು ಜಿಲ್ಲೆಯಾಗಿರಲಿಲ್ಲ. ಆಗ ಚಿತ್ರದುರ್ಗ ಜಿಲ್ಲೆಗೆ ತುಮಕೂರು ಪ್ರದೇಶವನ್ನು ಸೇರಿಸಿ, ಒಂದು ಡಿವಿಜನ್ ಎಂದು ಮಾಡಲಾಯಿತು. ಈ ಡಿವಿಜನ್ನಿನ ಮೊತ್ತ ಮೊದಲ ಕಲೆಕ್ಟರ್ ಆಗಿ ಅಧಿಕಾರ ನಡೆಸಿದವನು ಡಾಬ್ಸ್. ಹೀಗೆ ಅವನು ಕಾರ್ಯ ನಿರ್ವಹಿಸುತ್ತಿರುವಾಗ ೧೮೩೫ರಲ್ಲಿ ಬರೆದ ಪತ್ರ ಇದು. ಇಲ್ಲಿ ಇವನ ಬಗ್ಗೆ ಕೆಲವು ಮಾತುಗಳನ್ನು ಹೇಳಲೇ ಬೇಕು. ಅವನು ಕಲೆಕ್ಟರಾಗಿ ಅಧಿಕಾರವಹಿಸಿಕೊಂಡ ಕಾಲಕ್ಕೆ ಅವನಿಗಿನ್ನು ೨೭ ವರ್ಷ ವಯಸ್ಸು. ಬ್ರಿಟಿಷ್ ಸರಕಾರ ಅಷ್ಟು ಚಿಕ್ಕ ವಯಸ್ಸಿಗೇ ಅವನಿಗೆ ಒಂದು ಡಿವಿಜನ್ನಿನ ಕಲೆಕ್ಟರ್ ಹುದ್ದೆ ನೀಡಿತ್ತೆಂದರೆ, ಆ ವಯಸ್ಸಿಗೇ ಅವನು ತನ್ನ ದಕ್ಷತೆಯನ್ನು ಹೇಗೆ ತೋರಿಸಿದ್ದ ಎಂಬುದು ಮನಸ್ಸಿಗೆ ಬರಬಹುದು. ಹಾಗೇ ಬ್ರಿಟಿಷ್ ಸರಕಾರ ಅವನ ದಕ್ಷತೆಯನ್ನು ಗುರುತಿಸಿ ಅವನಿಗೆ ಆ ಹುದ್ದೆ ನೀಡಿತ್ತೆಂದು ಆಶ್ಚರ್ಯವಾಗುತ್ತದೆ. ಅವನು ತುಮಕೂರನ್ನು ಡಿವಿಜನ್ನಿನ ಆಡಳಿತ ಕೇಂದ್ರ (Head Quarters) ವಾಗಿ ಮಾಡಿಕೊಂಡು ಅಧಿಕಾರ ನಿರ್ವಹಿಸಿದನು. ತುಮಕೂರಿನ ಸಮೀಪ ಇರುವ ಒಂದು ಚಿಕ್ಕ ಪಟ್ಟಣ ಡಾಬ್ಸ್‌ಪೇಟೆ ಡಾಬ್ಸ್ ಮೇಲಿನ ಗೌರವದಿಂದ ಅವನ ಹೆಸರಿನಿಂದ ಕರೆಯಲ್ಪಟ್ಟ ಊರು. ಅದು ಈಗ ನೆಲಮಂಗಲ ತಾಲೂಕಿಗೆ ಸೇರಿದೆ.

ಡಾಬ್ಸ್ ಅಂದಿನ ಕಾಲದ ಇತರ ಬ್ರಿಟಿಷ್ ಅಧಿಕಾರಿಗಳಂತೆ ಶಿಕಾರಿ ಪ್ರಿಯನಾಗಿದ್ದ. ಕಾಡುಹಂದಿ ಮತ್ತು ಹುಲಿಗಳನ್ನು ಬೇಟೆಯಾಡುವುದರಲ್ಲಿ ಮತ್ತು ಹಿಡಿಯುವುದರಲ್ಲಿ ಅವನಿಗೆ ತುಂಬ ಆಸಕ್ತಿ. ಅಷ್ಟೇ ಅಲ್ಲ, ಸ್ವತಃ ಕ್ರೈಸ್ತನಾಗಿದ್ದ ಅವನಿಗೆ ಕ್ರೈಸ್ತ ಮತ ಪ್ರಚಾರದ ವಿಷಯದಲ್ಲಿ ಕೂಡಾ ತುಂಬಾ ಆಸಕ್ತಿ. ಆ ಮತದ ಪ್ರಚಾರಕ್ಕೆ ಅವನು ಉತ್ತೇಜನ ನೀಡುತ್ತಿದ್ದ, ೧೮೬೧ರಲ್ಲಿ ಡಿವಿಜನ್ನಿನ ಕಲೆಕ್ಟರ್ ಆಗಿದ್ದ ಅವನು ಮುಂದೆ ದಕ್ಷಿಣ ಆಫ್ರಿಕ ಮತ್ತು ಬರ್ಮಾ ದೇಶ ಇವುಗಳಲ್ಲೂ ಕೆಲ ಕಾಲ ಸೇವೆಸ ಸಲ್ಲಿಸಿದ. ಭಾರತದಲ್ಲಿದ್ದ ಕಾಲದಲ್ಲಿ ಇವನ ಅತಿಶಯವಾದ ಸಾಧನೆಯೆಂದರೆ, ಅನೇಕ ಕಡೆ ಉಪದ್ರವಕಾರಿಗಳಾಗಿದ್ದ ಕಳ್ಳಕಾಕರನ್ನು ಯಶಸ್ವಿಯಾಗಿ ನಿಗ್ರಹಿಸಿದ್ದು, ತನ್ನ ನೆನಪುಗಳ ಮಾಲಿಕೆಯ ಪುಸ್ತಕದಲ್ಲಿ ಆ ಕಳ್ಳಕಾಕರು ಹೆಚ್ಚಾಗಿ ಲಂಬಾಣಿಗಳು, ಕೊರಮರು, ಮತ್ತು ಕೊರಚರು ಇದ್ದರೆಂದು ಅವನು ನಮೂದಿಸಿದ್ದಾರೆ. ಪ್ರಸ್ತುತ ಪತ್ರ ಕೂಡ ಅಂದಿನ ಕಳ್ಳಕಾರರ ಬಗ್ಗೆಯೇ ಇನ್ನು ಕೆಲವು ವಿಶೇಷ ಅಂಶಗಳನ್ನು ಹೇಳುತ್ತದೆ. ಇದರಲ್ಲಿ ಬರುವ ಕೆಲವು ಪಾರ್ಸಿ (Parsian) ಮೂಲದ ಶಬ್ದಗಳನ್ನು ಬಿಟ್ಟರೆ, ಉಳಿದಂತೆ ನೇರವಾಗಿ ವಿಷಯವನ್ನು ನಿರೂಪಿಸುವಂತಿದೆ.

ಡಾಬ್ಸ್ ಪತ್ರದ ಅಭಿಪ್ರಾಯ

ಆಗಿನ ಕಾಲದಲ್ಲಿ ಇಡಿಯ ತಾಲೂಕಿನ ಸುತ್ತಮುತ್ತಲೂ ಕಳ್ಳರ ಉಪಟಳ ಹೆಚ್ಚಾಗಿತ್ತೆಂದೂ ಅದಕ್ಕಾಗಿ ತಕ್ಕ ಸಿಬ್ಬಂದಿಯನ್ನು ನೇಮಿಸಿ ಆಗಲೇ ಸೂಕ್ತ ಬಂದೋಬಸ್ತು ಕೈಕೊಂಡಿರುವುದಾಗಿಯೂ ಪತ್ರದ ಪ್ರಾರಂಭದಲ್ಲೇ ಡಾಬ್ಸ್ ಹೇಳಿದ್ದಾರೆ. ಅದರಂತೆ ಚಿತ್ರದುರ್ಗದ ಬೃಹನ್ಮಠಕ್ಕೂ ಕೂಡಾ ಕಳ್ಳರ ಭಯ ಸ್ವಾಮಿಗಳನ್ನೂ ಮತ್ತು ಅವರ ಜೊತೆಗೆ ಇರುತ್ತಿದ್ದ ಎಲ್ಲ ಚರಮೂರ್ತಿಗಳನ್ನೂ ವಿರಕ್ತರನ್ನೂ ಕಾಡುತ್ತಿತ್ತು. ಪತ್ರದಲ್ಲಿ ಡಾಬ್ಸ್ ಮುರುಘರಾಜೇಂದ್ರ ಬೃಹನ್ಮಠವನ್ನು 'ದೊಡ್ಡ ಮಠ' ಎಂದು ಹೆಸರಿಸಿದ್ದಾನೆ.

ಅವನು ಚಿತ್ರದುರ್ಗ ತುಕಡಿಯ ಸುಪರಿಂಟೆಂಡೆಂಟ್ ಕ್ಯಾಪ್ಟನ್ ಹುದ್ದೆಯಲ್ಲಿ ಸಹ ಇದ್ದನೆಂದು ಪತ್ರದ ಪ್ರಾರಂಭದಲ್ಲೇ ಸೂಚಿಸಲಾಗಿದೆ. (ಮುಂದೆ ಅವನು ಮೇಜರ್ ಜನರಲ್ ಹುದ್ದೆಗೂ ಏರಿದ ಎಂದು ತಿಳಿಯುತ್ತದೆ.) ಈ ಪತ್ರದಿಂದ ತಿಳಿಯುವ ಮತ್ತೊಂದು ಮುಖ್ಯ ಅಂಶವೆಂದರೆ, ಆಗಿನ ಕಳ್ಳರು ಬಂದೂಕು ಮುಂತಾದ ಆಗಿನ ಕಾಲದ ಸುಸಜ್ಜಿತ ಶಸ್ತ್ರಗಳನ್ನು ಹೊಂದಿದ್ದರೆಂದು ವ್ಯಕ್ತವಾಗುತ್ತದೆ. ಅಂತಹ ಸುಸಜ್ಜಿತ ಮಾರಕಾಸ್ತ್ರಗಳನ್ನು ಹೊಂದಿದ್ದೆಂಬ ಕಾರಣದಿಂದಲೇ ಅಂಥ ಠಕಾಯಿತರು ಮಠಕ್ಕೆ ನುಗ್ಗಿದರೆ, ಹಲ್ಲೆ ಮಾಡಿದರೆ, ಅವರನ್ನು ಹೊಡೆಯುವುದಿರಲಿ ಓಡಿಸುವುದರಲಿ, ತಡೆಯುವುದಾಗಲಿ ಎದುರಿಸುವುದಾಗಲಿ ಸುಲಭವಿರಲಿಲ್ಲ. ಮಠದಲ್ಲಿರುವವರು ಹೇಗೂ ನಿರಾಯುಧರಿರುತ್ತಾರೆ ಎಂಬ ಲಘುತ್ವದ ಭಾವನೆ ಆ ಠಕಾಯಿತರು ಮಠದವರ ಮೇಲೆ ಇನ್ನಷ್ಟು ಹೆಚ್ಚಿನ ಅಟಾಟೋಪ ಅಟ್ಟಹಾಸ ತೋರಿಸಲೂಬಹುದು ಎಂದು ಅವರ ಬಗ್ಗೆ ಭಯ ಇನ್ನೂ ಹೆಚ್ಚಾಗಲೂ ಕಾರಣವಾಗಿರಬೇಕು. ಅಂಥವರು ಮಠದ ಮೇಲೆ ಇದ್ದಕ್ಕಿದ್ದಂತೆ ದಾಳಿ ಮಾಡಿದರೆ ಗತಿಯೇನು? ಅದೂ ಚಿತ್ರದುರ್ಗ ಪಟ್ಟಣದಿಂದ ಮೂರು ಮೈಲು ದೂರದಲ್ಲಿರುವ ಮಠದೊಳಗೆ ಇದ್ದವರು ಆ ತುರ್ತು ಸಂದರ್ಭದಲ್ಲಿ ಏನು ಮಾಡಬೇಕು ? ಎಂದು ಅವರಿಗೆ ಸಹಜವಾಗಿಯೆ ದಿಗಿಲಾಗಿರಬೇಕು. ಅಂಥ ಹಿನ್ನೆಲೆಯಲ್ಲಿ ಸ್ವಾಮಿಗಳು, ಈ ಪ್ರದೇಶದ ಉನ್ನತ ಸರಕಾರಿ ಅಧಿಕಾರಿಯಾಗಿದ್ದ ಡಾಬ್ಸ್‌ಗೆ ೧೮೩೫ರ ನವೆಂಬರ್ ೧೮ರಂದು ಅರ್ಜಿ ಬರೆದು ನಿರ್ದೇಶನ ಕೋರಿದ್ದುದು ಸಹಜವಾಗಿದೆ.

ಸ್ವಾಮಿಗಳು ಡಾಬ್ಸ್ ಸಾಹೇಬರಿಗೆ ಬರೆದ ಪತ್ರದ ಅಭಿಪ್ರಾಯವಿಷ್ಟೇ. ಕಳ್ಳರು ಬಂದೂಕು ಮುಂತಾದ ಅಪಾಯಕಾರಿ ಶಸ್ತ್ರಗಳನ್ನು ಹಿಡಿದು ಮಠದ ಮೇಲೆ ಗೋಲಿ (ಗುಂಡು) ಚಲಾಯಿಸಿ ದಾಳಿ ಮಾಡಬಂದರೆ, ಆಗ ಮಠದ ಸಿಬ್ಬಂದಿಯವರೂ ಅದಕ್ಕೆ ಪ್ರತಿಯಾಗಿ – ತಮ್ಮ ಪ್ರಾಣ ರಕ್ಷಣೆಗಾಗಿ ಮತ್ತು ಮಠದ ಆಸ್ತಿ ರಕ್ಷಣೆಗಾಗಿ ಗೋಲಿ ಮೂಲಕವೇ ಉತ್ತರ ಕೊಡಲೆ ಬೇಕಾಗುತ್ತದೆ. ಹಾಗೆ ಅವರಿಗೆ ಉತ್ತರ ಕೊಡಬೇಕಾದರೆ ನಾವು ಅನಿವಾರ್ಯವಾಗಿ ಆಯುಧಗಳನ್ನು ಹಿಡಿಯಲೇಬೇಕಾಗುತ್ತದೆ. ಆಗ ಏನೆಲ್ಲ ನಡೆಯುತ್ತದೋ ಏನೋ ! ನಾವು ಶಸ್ತ್ರ ಉಪಯೋಗಿಸಬೇಕಾಗಿ ಬಂದರೆ ಏನು ಮಾಡಬೇಕು ಎಂದು– ಸರಕಾರದ ಉನ್ನತ ಆಡಳಿತ ವರ್ಗದವರ ಗಮನಕ್ಕೆ ಈ ಸಂಗತಿಯನ್ನು ತರುವುದೂ ಅವರಿಂದ ನಿರ್ದೇಶನ ಪಡೆಯುವುದೂ ಮಾಡಲೇಬೇಕಾಗುತ್ತದಷ್ಟೆ. ಆದ್ದರಿಂದ ಅವರು ಆ ಮೇಲೆ ಬಹುಶಃ ತಮ್ಮ ಆಕ್ಷೇಪಿಸಿದಂತೆ ರಕ್ಷಣೆ ಮಾಡಿಕೊಂಡಂತೆ ಆಗುತ್ತದೆ ಎಂದೂ. ಸ್ವಾಮಿಗಳು ಯೋಚಿಸಿ ತುಂಬಾ ಸೂಕ್ಷ್ಮವಾಗಿ ಪತ್ರ ಬರೆದಿದ್ದರೆಂಬುದನ್ನು ಇಲ್ಲಿ ಗಮನಸಬೇಕು. ಮಠದ ಸಿಬ್ಬಂದಿಯವರು, ಆಗ ತಲವಾರ್ ಭಲ್ಲೆ ಮುಂತಾದ ಹತ್ಯಾರುಗಳನ್ನು ಉಪಯೋಗಿಸಿ ದಾಳಿಕೋರ ಕಳ್ಳರನ್ನು ಎದುರಿಸಬೇಕಾಗುತ್ತದೆ ಅಥವಾ ತಡೆಯಬೇಕಾಗುತ್ತದೆ; ಸಾಧ್ಯವಾದರೆ ಅವರನ್ನು ಹಿಡಿಯುವ ಪ್ರಯತ್ನವನ್ನು ಮಾಡಬೇಕಾಗುತ್ತದೆ. ಆಗ ಮಠದವರು ಕಳ್ಳರನ್ನು ಹಿಡಿಯ ಹೋದಾಗ, ಅವರು ಬಂದೂಕಿನಿಂದ ಗೋಲಿ ಚಲಾಯಿಸಿದರೆ, ಆಗ ನಾವು ಏನು



ಹಿಂದೆ ಬೃಹನ್ಮಠದ ಕರ್ತೃಗದ್ದಿಗೆಯ ಮುಂದೆ ಕಟ್ಟೆಯ ಮೇಲೆ ಮರದ ಚೌಕಟ್ಟುಗಳಲ್ಲಿ ಆಯುಧಗಳನ್ನು ಇರಿಸಿದ್ದರ ಒಂದು ಚಿತ್ರ (ಶ್ರೀ ಬೃಹನ್ಮಠದ ಪ್ರಕಟಣೆ 'ಚಿನ್ಮೂಲಾದ್ರಿ ಚೇತನ'ದಿಂದ).



ಈಚೆಗೆ ಆಗಿರುವ ಹೊಸ ವಸ್ತುಸಂಗ್ರಹಾಲಯದಲ್ಲಿ ವ್ಯವಸ್ಥಿತವಾಗಿ ಆಕರ್ಷಕ ವಿನ್ಯಾಸದಲ್ಲಿ ಪ್ರದರ್ಶಿಸಿರುವ ವಿವಿಧ ಆಯುಧಗಳ ಸಂಗ್ರಹ– ಭಾಗ ೧–೪.

ಮಾಡಬೇಕು ? ಇದಕ್ಕೆ ಸೂಕ್ತ ನಿರ್ದೇಶನ ನೀಡಬೇಕು ಎಂದು ಸ್ವಾಮಿಗಳು ಕೇಳಿದ್ದಕ್ಕೆ ಡಾಬ್ಸ್ ಉತ್ತರಿಸುತ್ತಾ– ತಾವು ಬರೆದಿರುವಂತೆ ಕಳ್ಳಕಾಕರ ಉಪದ್ರವ ಇಡೀ ತಾಲೂಕಿನಲ್ಲೇ ಹೆಚ್ಚಾಗಿದೆಯಾದ್ದರಿಂದ ಈಗಾಗಲೇ ತಕ್ಕ ಸಿಬ್ಬಂದಿ ನೇಮಿಸಿ ಸೂಕ್ತ ಬಂದೋಬಸ್ತಿನ ಕ್ರಮಕೈಕೊಂಡಿದ್ದೇವೆ ಎನ್ನುತ್ತಾ, ಇಷ್ಟಾದರೂ ತಾವು ಬರೆದಿರುವಂತೆ ಕಳ್ಳರು ಮಠಕ್ಕೆ ನುಗ್ಗಿಬಂದರೆಂದರೆ, ನೀವು ಏನು ಮಾಡಬೇಕು ಎಂದರೆ, ನಿಮ್ಮ ಪ್ರಾಣರಕ್ಷಣೆಗಾಗಿ ಮತ್ತು ಆಸ್ತ ರಕ್ಷಣೆಗಾಗಿ ನೀವೂ ತಲವಾರ್ ಭಲ್ಲೆ ಮುಂತಾದ ಶಸ್ತ್ರಗಳನ್ನು ಬಳಸಬಹುದು. ಅವರನ್ನು ನೀವು ಹಿಡಿಯುವ ಪ್ರಯತ್ನ ಮಾಡಿದಾಗ ಅವರು ಗೋಲಿ ಚಲಾಯ್ಸಿದರೆ ನೀವು ಸುಮ್ಮನಿರಬೇಕಾಗಿಲ್ಲ. ಆಗ ನೀವೂ ಗೋಲೀ ಚಲಾಯಿಸಿರಿ. ನಿಮ್ಮ ಆತ್ಮರಕ್ಷಣೆ ಮತ್ತು ಸ್ವತ್ತು ರಕ್ಷಣೆ ಸಲುವಾಗಿ ನೀವು ಅಷ್ಟನ್ನು ಮಾಡಬಹುದು. ಒಂದು ವೇಳೆ ಅವರಲ್ಲಿ ಯಾರನ್ನಾದರೂ ನೀವು ಹಿಡಿದಿರೆಂದರೆ, ಅವರ ಮೇಲೆ ಬಲಪ್ರಯೋಗ ಮಾಡಿ ಅರ್ಥಾತ್ ಹಿಂಸಿಸಿ ಅವರಿಗೆ ಏನೂ ಜಖಂ ಮಾಡಕೂಡದು. ಅವರನ್ನು ಹಿಡಿದಿಟ್ಟುಕೊಂಡು ತಾಲ್ಲೂಕಿನ ವರಿಷ್ಠಾಧಿಕಾರಿಯಾದ ಅಮಿಲ್‌ದಾರರ ವಶಕ್ಕೆ ಅವರನ್ನು ಒಪ್ಪಿಸಬೇಕು. ಹೀಗೆಂದು ಹುಕುಂ ಅಥವಾ ಆದೇಶ ನೀಡಿ, ಡಾಬ್ಸ್ ತುಮಕೂರು ಜಿಲ್ಲೆಯ ಕಳ್ಳಂಬೆಳ್ಳ ಮೊಕಾಮ್ಕಿನಿಂದ ಅದೇ ೧೮೩೫ರ ನವೆಂಬರ್ ೨೫ರಂದು ಈ ಪತ್ರ ಬರೆದಿದ್ದಾನೆ. ಇದರಿಂದ ಬ್ರಿಟಿಷ್ ಅಧಿಕಾರಿಗಳ ಆಡಳಿತ ಅದೂ ದೂರದ ಸ್ಥಳದಲ್ಲಿದ್ದು ಎಷ್ಟು ಬೇಗ ಪ್ರಜೆಗಳ ಅಹವಾಲುಗಳಿಗೆ ಗಮನಕೊಡುತ್ತಿತ್ತು ಎಂದು ತಿಳಿಯಬಹುದು. ಈ ಪತ್ರದಲ್ಲಿ ಡಾಬ್ಸ್ ಮಠದವರಿಗೆ ಪೂರ್ಣ ಬೆಂಬಲ ನೀಡಿರುವುದಲ್ಲದೆ, ಸೆರೆಸಿಕ್ಕ ಕಳ್ಳರ ಮೇಲೆ ಬಲಪ್ರಯೋಗ ಮಾಡಬಾರದು ಅರ್ಥಾತ್ ಕಾನೂನು ಕೈಗೆ ತೆಗೆದುಕೊಳ್ಳಬಾರದು ಎಂದು ಸೂಕ್ಷ್ಮ ಎಚ್ಚರಿಕೆಯನ್ನು ನೀಡಿದ್ದಾನೆ.

ಪತ್ರದ ಪ್ರಾರಂಭದಲ್ಲಿ ಇಂಗ್ಲಿಷ್ ಮತ್ತು ಕನ್ನಡ ಅಕ್ಷರಗಳ ಮಿಶ್ರಣದ ಒಂದು ದುಂಡು ಮೊಹರನ್ನು ಹಾಕಲಾಗಿದ್ದು, ಪತ್ರದ ಕೊನೆಯಲ್ಲಿ ಮೊಕ್ಕಂ ಕಳ್ಳಂಬೆಳ್ಳ, ಶಿರಾ ತಾಲೂಕು ಎಂದೂ, ಅದರ ಕೆಳಗೆ ಕ್ಯಾಪ್ಟನ್ ಡಾಬ್ಸ್ ಪದಾಧಿಕಾರ ಸಹಿತವಾದ ಸಹಿಯೂ ಇದೆ. ಪ್ರಸ್ತುತ ಪತ್ರವು ಬ್ರಿಟಿಷರ ಕಾಲದ ಸಮಸ್ಯೆಗೆ ತತ್ ಕ್ಷಣವೇ ಗಮನ ಕೊಡುತ್ತಿದ್ದ ಅವರ ಆಡಳಿತ ವೈಖರಿಯನ್ನು ಪ್ರಜಾಕ್ಷೇಮಪಾಲನೆಯ ಹಿತಾಸಕ್ತಿಯನ್ನು – ಸಮಾಜ ಕಂಟಕರನ್ನು ನಿಗ್ರಹಿಸುವ ದೃಢ ನಿಶ್ಚಯದ ಕ್ರಮವನ್ನೂ ಮನಗಣಿಸುವಂತಿದೆ. ಆ ಮೇಲೆ ಕಳ್ಳರು ಮಠದ ಮೇಲೆ ದಾಳಿ ಮಾಡಿದರೋ ಹೇಗೋ, ಡಾಬ್ಸ್ ಸಾಹೇಬ ನೀಡಿದ ಸೂಚನೆಯಂತೆ ಮಠದವರು ಆ ಕಳ್ಳರ ಮೇಲೆ ಶಸ್ತ್ರ ಪ್ರಯೋಗಿಸಿದರೋ ಹೇಗೋ ಇದಾವುದೂ ಈಗ ತಿಳಿಯದು. ಸ್ವಾಮಿಗಳು ಚರಮೂರ್ತಿಗಳು ವಿರಕ್ತರಂತೂ ಕಳ್ಳರನ್ನು ತಾವೇ ಖುದ್ದಾಗಿ ಎದುರಿಸಿರಲಾರರು. ಬದಲಿಗೆ ಇಂಥ ಪರಿಸ್ಥಿತಿಯನ್ನು ನಿಭಾಯಿಸಲು ಕೆಲವರಾದರೂ ಸಿಪಾಯಿಗಳನ್ನು ಅಥವಾ ಸಿಬ್ಬಂದಿಯನ್ನು ನೇಮಿಸಿಕೊಂಡಿರಬಹುದು. ಕೆಲವರು ಭಕ್ತರೂ ಅವರ ರಕ್ಷಣೆಗೆ ನಿಂತರಬಹುದು. ಹಾಗೇ ಮಠದವರು ಬಂದೂಕು ತಲವಾರು ಭಲ್ಲೆ ಮುಂತಾದ ಆಯುಧಗಳನ್ನು ಸಂಗ್ರಹಿಸಿಟ್ಟುಕೊಳ್ಳಲು ಆಗಿನ ಬ್ರಿಟಿಷ್ ಆಡಳಿತ ಮತ್ತು ಡಾಬ್ಸ್ ಸಹಾಯ ಮಾಡಿರಬಹುದು.

ಉಪಸಂಹಾರ

ಮಠದವರು ಎಂದೂ ಯಾವ ರೀತಿಯಲ್ಲೂ ಹಿಂಸೆಗೆ ಕೈ ಹಾಕದೆ ಅಹಿಂಸಾ ಪರವಾದ ನಿಲವನ್ನು ಹೊಂದಿದ್ದವರೇ ಆದರೂ, ಪ್ರಾಣಾಪಾಯ ಆಸ್ತಿಹಾನಿ ಇಂಥ ಬಿಕ್ಕಟ್ಟಿನ ಪ್ರಸಂಗ ಬಂದರೆ, ವಿಧಿಯಿಲ್ಲದೆ, ಬಂದೂಕು ಕತ್ತಿ, ಭರ್ಜಿಗಳನ್ನು ಬಳಸಬೇಕಾಗಿ ಬರುತ್ತಿತ್ತು ಎಂದು ಈ ಪತ್ರದಿಂದ ವ್ಯಕ್ತವಾಗುತ್ತದೆ. ಹಾಗೆಂದೇ ಸ್ವಾಮಿಗಳು ಬೇರೆ ಊರುಗಳಿಗೆ ಪ್ರವಾಸ ಹೊರಟಾಗ ಬಂದೂಕು ಕತ್ತಿ ಭರ್ಜಿ ಇವೇ ಮೊದಲಾದ ಆಯುಧಗಳನ್ನು ತಮ್ಮ ಸಿಬ್ಬಂದಿಯ ಜೊತೆಗೆ ಒಯ್ಯುತ್ತಿದ್ದರು. ಕಳ್ಳಕಾಕರ ಮತ್ತು ಪುಂಡರ ಭಯದ ಇಂಥದೇ ಹಿನ್ನೆಲೆಯಲ್ಲಿ, ಮುಂದೆ ಬೇರೆ ಬೇರೆ ಮಠಾಧೀಶರೂ ಸಹ ಸಂಚಾರ

ಹೊರಡುವಾಗ, ವಿವಿಧ ಆಯುಧಗಳನ್ನು ತಮ್ಮ ಸಿಬ್ಬಂದಿಯವರ ಜೊತೆಗೆ ಕೊಂಡೊಯ್ಯುವ ಪರಿಪಾಟ ಬಂದಂತೆ ಕಾಣುತ್ತದೆ. ಹಾಗೇ ಆಮೇಲೆ ಮೆರವಣಿಗೆಯಂಥ ಸಂದರ್ಭಗಳಲ್ಲಿ ಆ ಆಯುಧಗಳನ್ನು ಪ್ರದರ್ಶಿಸುವುದನ್ನು ಮೆರವಣಿಗೆಯ ಭಾಗವಾಗಿ ಸೇರ್ಪಡೆ ಮಾಡಿಕೊಂಡಿರಬೇಕು. ಆದ್ದರಿಂದ ಕರ್ತೃಗದ್ದಿಗೆಯ ಎದುರಿನ ಒಂದು ಕಟ್ಟೆಯ ಮೇಲೆ, ಕಬ್ಬಿಣದ ಸರಳುಗಳ ಹಿಂದೆ ವಿವಿಧ ಬಗೆಯ ಬಂದೂಕುಗಳು, ವಿವಿಧ ಬಗೆಯ ಕತ್ತಿಗಳು, ಇವೇ ಮೊದಲಾದುವನ್ನು ಮಠದ ಚೌಕಟ್ಟುಗಳಲ್ಲಿ ಪ್ರದರ್ಶನದ ವಸ್ತುಗಳಂತೆ ಇಡುವ ಪರಿಪಾಟವೂ ರೂಢಿಗೆ ಬಂತೆಂದು ಹೇಳಬಹುದು. ಒಂದು ಕಾಲಕ್ಕೆ ಅಷ್ಟೊಂದು ತೀವ್ರವಾಗಿದ್ದ ಕಳ್ಳಕಾಕರ ದಾಳಿಯ ಭಯ ಆಮೇಲಿನ ದಿನಗಳಲ್ಲಿ ಕೊನೆಗಂಡಿತೆಂದು ತಿಳಿಯಬಹುದು. ಈಚೆಗೆ ಬೃಹನ್ಮಠದ ಆವರಣದಲ್ಲಿ, ಒಂದು ಸುಸಜ್ಜಿತವಾದ ವಸ್ತುಸಂಗ್ರಹಾಲಯ ಪ್ರಾರಂಭಗೊಂಡ ಮೇಲೆ ಆ ಆಯುಧಗಳನ್ನೆಲ್ಲ ಆಕರ್ಷಕ ವಿನ್ಯಾಸಗಳಲ್ಲಿ ವ್ಯವಸ್ಥೆಗೊಳಿಸಿ ಪ್ರದರ್ಶನಕ್ಕೆ ಇರಿಸಿರುವುದನ್ನು ನೋಡಬಹುದು.

ಮೇಲೆ ಹೇಳಿದಂತೆ, ಮುರುಘರಾಜೇಂದ್ರ ಬೃಹನ್ಮಠದ ಸ್ವಾಮಿಗಳು ಬೇರೆ ಬೇರೆ ಊರುಗಳಿಗೆ ಕಾರ್ಯಾರ್ಥವಾಗಿ ಪ್ರವಾಸ ಹೊರಟರೆಂದರೆ, ಅವರ ಜತೆಗೆ ಬಹು ಸಂಖ್ಯೆಯಲ್ಲಿ ಬರುತ್ತಿದ್ದ ವಿವಿಧ ಸ್ಥಾನ ಮತ್ತು ಕರ್ತವ್ಯಗಳ ಜಂಗಮರು, ಭಕ್ತರು, ಲಿಂಗಾಯತರು ಮತ್ತು ಇತರ ಕೋಮಿನ ಜನರು, ಅವರು ಜತೆಗೆ ತರುತ್ತಿದ್ದ ನಾನಾ ವಿಧದ ಸಲಕರಣೆಗಳು, ವಾದ್ಯಗಳು, ಆಯುಧಗಳು, ಆನೆ, ಒಂಟೆ, ಕುದುರೆ, ಎತ್ತುಗಳು, ಮೇನಾ, ಚಕ್ಕಡಿಗಳು, ಸ್ವಾಮಿಗಳ ಪೀಠದ ಗೌರವಕ್ಕೆ ಹಿಡಿಯುತ್ತಿದ್ದ ವಿವಿಧ ಲಾಂಛನಗಳು, ಬಿರುದು–ಬಾವಲಿಗಳು– ಇವೆಲ್ಲವುಗಳಿಂದ, ಒಂದು ಊರೇ ಗುಳೇ ಹೋಗುತ್ತಿರುವಂತೆ ಕಾಣುತ್ತಿದ್ದಿರಬೇಕು. ಇವೆಲ್ಲವೂ ಸಾಲಾಗಿ ಶಿಸ್ತಿನಿಂದ ಹೊರಟವೆಂದರೆ, ಆ ಸಾಲಿನ ಉದ್ದ ಬಹುಶಃ ಒಂದಕ್ಕಿಂತ ಹೆಚ್ಚು ಕಿಲೋಮೀಟರ್‌ಗಳಷ್ಟಾದರೂ ಆಗುತ್ತಿದ್ದಿರಬೇಕು. ಹೀಗೆ ಹೊರಟ ಸಾಲು, ರಸ್ತೆಯ ಬದಿಯಲ್ಲಿ ನಿಂತು ನೋಡುತ್ತಿದ್ದವರಿಗೆ ಆಕರ್ಷಕವಾದ, ಭವ್ಯವಾದ, ಕಣ್ಮನೋರಂಜಕವಾದ, ಒಂದು ಮಹಾ ದೃಶ್ಯವಾಗಿರುತ್ತಿದ್ದಿತೆಂದೇ ಹೇಳಬಹುದು. ಹೀಗೆ ವೈಭವದಿಂದ ಬರುತ್ತಿದ್ದ ಸ್ವಾಮಿಗಳ ವಿಷಯದಲ್ಲಿ, ಜನರು ಸಹಜವಾಗಿಯೇ ತುಂಬಾ ಭಯ–ಭಕ್ತಿಯನ್ನು ಹೊಂದಿರುತ್ತಿದ್ದರೆಂದು ಸ್ವಯಂ ಪ್ರಕಟವಾಗುವಂತಿತ್ತು. ಶರಣತತ್ತ್ವ ಪಾಲನೆಯೇ ಮುಖ್ಯವಾಗಿದ್ದು ವಿರಕ್ತರಾಗಿದ್ದರೂ ಸ್ವಾಮಿಗಳು, ಆ ಕಾಲಕ್ಕೆ ಸ್ವಾಮಿಗಳು ಹೀಗೇ ಇರಬೇಕು ಎಂಬಂತಹ ಅನಿವಾರ್ಯ ಸ್ಥಿತಿ ಏರ್ಪಟ್ಟು, ಅಂಥ ಸಾಮಾಜಿಕ ವೈಭವವನ್ನು ಅವರು ಅಳವಡಿಸಿಕೊಳ್ಳಬೇಕಾಯಿತೆಂದು ಕಾಣುತ್ತದೆ. ಈಚೆಗೆ ಮಠದ ಆವರಣದಲ್ಲಿ ನಿರ್ಮಾಣಗೊಂಡಿರುವ ವಸ್ತುಸಂಗ್ರಹಾಲಯದಲ್ಲಿ ಆ ಆಯುಧಗಳನ್ನೆಲ್ಲ ವ್ಯವಸ್ಥಿತವಾಗಿ ಪ್ರದರ್ಶನಕ್ಕೆ ಇಡಲಾಗಿರುವುದನ್ನು ನೋಡಬಹುದು. ಪ್ರಾದೇಶಿಕವಾದ ಕನ್ನಡ ಭಾಷೆಯನ್ನು ಆಡಳಿತ ಭಾಷೆಯಾಗಿ ಬ್ರಿಟಿಷರು ಬಳಸಿದ್ದರೆಂಬುದಕ್ಕೆ ಪ್ರಸ್ತುತ ಪತ್ರ ಒಂದು ಒಳ್ಳೆಯ ಉದಾಹರಣೆಯಾಗಿದೆ. ಜೊತೆಗೆ ಬ್ರಿಟಿಷರ ಕಾಲದ ಕಚೇರಿ ಪತ್ರಗಳ ಸ್ವರೂಪ, ನಿರೂಪಣೆ, ಉರ್ದುಮಿಶ್ರಿತ ಕನ್ನಡ ಇವುಗಳನ್ನು ಸಹ ಗಮನಿಸಬಹುದಾಗಿದೆ.

[ಈ ಮೇಲಿನ ಆಕರ ಗ್ರಂಥ ಪಟ್ಟಿಯಲ್ಲಿ ೭ನೆಯದಾಗಿ ಹೆಸರಿಸಿರುವ ಪುಸ್ತಕವನ್ನು ಜೆರಾಕ್ಸ್ ಮಾಡಿಸಿಕೊಳ್ಳಲು ನೀಡಿ ಸಹಕರಿಸಿದ ಬೃಹನ್ಮಠದ ಅಂದಿನ ಆಡಳಿತಾಧಿಕಾರಿಯಾದ ಶ್ರೀ ಎಸ್.ಕೆ. ಬಸವರಾಜನ್ ಅವರಿಗೆ, ಅದೇ ಪಟ್ಟಿಯಲ್ಲಿ ೬ನೆಯದಾಗಿ ಹೆಸರಿಸಿದ ಡಾಬ್ಸ್ ಕೃತಿಯ ಪ್ರತಿಮಾಡಿಸಿಕೊಟ್ಟ ತುಮಕೂರಿನ ಪ್ರಿಯಮಿತ್ರ ಡಾ. ಬಿ. ನಂಜುಂಡಸ್ವಾಮಿ ಅವರಿಗೆ, ಹಾಗೇ ಚಿತ್ರದುರ್ಗದ ಯುವಮಿತ್ರ ಶ್ರೀ ಎಚ್.ವಿ. ಇಂದುಶೇಖರ್ ಅವರಿಗೆ ನನ್ನ ಕೃತಜ್ಞತೆಗಳು.]

ಆಕರ ಗ್ರಂಥಗಳು

೧. ಚಿನ್ಮೂಲಾದ್ರಿ ಚೇತನ, ಸಂ. ಪ್ರೊ. ಜಿ. ಶಿವಕುಮಾರ್ ಮತ್ತು ಇತರರು, ಶ್ರೀ ಬೃಹನ್ಮಠ, ಚಿತ್ರದುರ್ಗ, ೧೯೮೯.

೨. ಮಹಾಲಿಂಗೇಂದ್ರ ವಿಜಯ, ಸಂ. ಡಾ. ಎಲ್. ಬಸವರಾಯರು, ಶ್ರೀ ಬೃಹನ್ಮಠ ಸಂಸ್ಥಾನ, ಚಿತ್ರದುರ್ಗ, ೧೯೭೧.

೩. ನಿರಂಜನವಂಶ ರತ್ನಾಕರ, ಸಂ. ಚೆನ್ನಮಲ್ಲಿಕಾರ್ಜುನ, ಸದ್ಧರ್ಮ ದೀಪಿಕೆ, ಹಾವೇರಿ, ೧೯೪೫.

೪. ಪಟ್ಟವಲ್ಲರಿ, ಯಲ್ಲಪ್ಪಾ ಫಕ್ಕೀರಪ್ಪಾ ಹೊಸಪೇಟಿ, ಗ್ರಾಯತ್ರಿ ಪ್ರಿಂಟಿಂಗ್ ಪ್ರೆಸ್, ಬ್ಯಾಡಗಿ.

೫. ಪಟ್ಟಾಂತರ ವಿವರ, ಸಂ. ಡಾ. ಬಿ. ರಾಜಶೇಖರಪ್ಪ, ಅಪ್ರಕಟಿತ.

೬ Remimiscences of life in Mysore, South Africa and Burmah, by R.S. Dobbs, Ed. G. Herbert, 1882.

೭. Manual of Birudus and other Honours, enjoyed by the Mathadhipatis in and outside State; Ed: Rajagopalachari, Govt. Press, Bangalore, 1933.

೭೨

ಕೆರೆಗೆ ಹಾರವಾದ ಹಿರೇ ಉಪ್ಪೇರಿಯ ಕೆಂಚಮ್ಮ ಚಾರಿತ್ರಿಕ ವಿಶ್ಲೇಷಣೆ

ಅಮರೇಶ ಯತಗಲ್✷

ರಾಯಚೂರು ಜಿಲ್ಲೆಯ ಲಿಂಗಸೂಗೂರು ತಾಲ್ಲೂಕಿನಿಂದ ಪಶ್ಚಿಮಕ್ಕೆ ೨೦ ಕಿ.ಮೀ. ದೂರದಲ್ಲಿರುವ ಹಿರೇ ಉಪ್ಪೇರಿ ಗ್ರಾಮವು ನಾರಾಯಣಪುರ ಆಣೆಕಟ್ಟೆಯ ಮಾರ್ಗ ಮಧ್ಯದಲ್ಲಿದೆ. ಹಿರೇ ಉಪ್ಪೇರಿ ಮತ್ತು ಚಿಕ್ಕ ಉಪ್ಪೇರಿ ಎಂಬ ಎರಡು ಗ್ರಾಮಗಳು ಅಕ್ಕಪಕ್ಕದಲ್ಲಿವೆ. ಹಿರೇ ಉಪ್ಪೇರಿ ಗ್ರಾಮದ ಪಶ್ಚಿಮ ಭಾಗಕ್ಕೆ ಎರಡು ಗುಡ್ಡಗಳ ಮಧ್ಯೆ ಒಂದು ಕೆರೆ ಇದೆ. ಇದನ್ನು 'ಊರು ಕೆರೆ', 'ಹಿರೇ ಉಪ್ಪೇರಿಯ ಕೆರೆ' ಎಂದು ಕರೆಯುತಿದ್ದರು. ಇದು ಸುಮಾರು ೨೦೦ ಎಕರೆಯಷ್ಟು ವಿಸ್ತೀರ್ಣವನ್ನು ಹೊಂದಿದ್ದು, ಈಗ ಕೆರೆಯ ತುಂಬೆಲ್ಲಾ ಗಿಡಗಂಟೆಗಳು ಬೆಳೆದು ನಿಂತಿವೆ.

ಗುಂತಗೋಳ ಸಂಸ್ಥಾನಿಕರ ಆಳ್ವಿಕೆಯ ಸಂದರ್ಭದಲ್ಲಿ ಈ ಕೆರೆಗೆ ಹಾರವಾದ ಪ್ರಸಂಗ ನಡೆದಿದೆ. ಗುಂತಗೋಳ ಸಂಸ್ಥಾನಿಕರು ಬಿಜಾಪುರ ಆದಿಲ್‌ಶಾಹಿಗಳ ಆಡಳಿತಾವಧಿ (ಕ್ರಿ.ಶ. ೧೪೪೯–೧೬೮೬)ಯಲ್ಲಿ ನಿರ್ಲಕ್ಷೀಸಲ್ಪಟ್ಟ ಪ್ರದೇಶದಲ್ಲಿ ಸಂಸ್ಥಾನವನ್ನು ಸ್ಥಾಪಿಸಿದರು. ಬ್ರಿಟಿಷರು ಮತ್ತು ಹೈದ್ರಾಬಾದ್ ನಿಜಾಮ (ಕ್ರಿ.ಶ. ೧೭೨೪ ರಿಂದ ೧೯೪೮)ರ ದಬ್ಬಾಳಿಕೆಯ ಮಧ್ಯೆ ಸಮರ್ಥವಾಗಿ ಆಡಳಿತ ನಡೆಸಿದರು.[೧] ಹಿರೇ ಉಪ್ಪೇರಿಯು ಗುಂತಗೋಳ ಸಂಸ್ಥಾನಿಕರ ಅಧೀನದ ಹಳ್ಳಿಯಾಗಿತ್ತು. ಈ ಹಳ್ಳಿಯಲ್ಲಿ ಸುಮಾರು ೩೦೦ ವರ್ಷಗಳ ಹಿಂದೆ ಕೆರೆಗೆ ಹಾರ ನೀಡಿದ ಘಟನೆಯು ನಡೆದಿದೆ. ಈ ಕುರಿತು ಕ್ಷೇತ್ರಕಾರ್ಯ ಕೈಗೊಂಡಾಗ ಅನೇಕ ಕಥೆಗಳು ಮತ್ತು ಜಾನಪದ ಹಾಡುಗಳಿರುವುದನ್ನು ಗಮನಿಸಲಾಯಿತು. ಇಲ್ಲಿಯ ಕಥೆಗಳಲ್ಲಿರುವ ಘಟನೆಗಳಿಗೂ ಹಾಗೂ ಹಾಡುಗಳಲ್ಲಿಯ ಘಟನೆಗಳಿಗೂ ಅನೇಕ ಹೋಲಿಕೆಗಳಿವೆ. ಅಲ್ಲದೆ ಹಿರೇ ಉಪ್ಪೇರಿಯಲ್ಲಿ ಕೆಂಚಮ್ಮನ ಸಮಾಧಿ, ಕೆಂಚಮ್ಮನ ದೇವಾಲಯ, ಕೆಂಚಮ್ಮನ ಕೆರೆ, ಕೆಂಚಮ್ಮನ ಗುಡ್ಡ ಹಾಗೂ ಕೆಂಚಮ್ಮನ ಹಳ್ಳಗಳು ಇಂದಿಗೂ ಇವೆ. ಜಾನಪದ ಹಾಡಿನಲ್ಲಿ ರಾಜಾ ರಾಯಪ್ಪ ನಾಯಕನ ಹೆಸರು ಉಲ್ಲೇಖವಾಗಿರುವುದನ್ನು ಗಮನಿಸಬಹುದು.

ಹಿರೇ ಉಪ್ಪೇರಿಯ ಕೆರೆಯನ್ನು ಕಟ್ಟಿಸಿದವರು ಗುಂತಗೋಳ ಸಂಸ್ಥಾನದ ಅರಸ ರಾಜಾ ಓಬಳನಾಯಕ. ಈ ಕುರಿತು ಜಾನಪದ ಸಾಹಿತ್ಯದಲ್ಲಿ ಉಲ್ಲೇಖವಿದೆ. ಈತನು ರಾಜಾ ರಾಯಪ್ಪನಾಯಕನ ಚಿಕ್ಕಪ್ಪನಾಗಿದ್ದನು. ಹಿರೇ ಉಪ್ಪೇರಿಯ ಸುತ್ತಮುತ್ತಲಿನ ಭಾಗದಲ್ಲಿ ನೀರಿನ ಅಭಾವವಾದಾಗ ಈ ಕೆರೆಯನ್ನು ನಿರ್ಮಿಸುತ್ತಾನೆ.[೨] ಹೀಗಾಗಿ ಕೆರೆಯ ಪಕ್ಕದಲ್ಲಿ ಓಬಳನಾಯಕನ ದೇವಾಲಯವಿತ್ತು. ಈಗ ಅದು ಹಾಳಾಗಿದೆ. ನಂತರ ಈ ದೇವಾಲಯವನ್ನು ರಾಜಾರಾಯಪ್ಪ ನಾಯಕನು ಈ ಕೆರೆಯನ್ನು ಕಟ್ಟಿಸಿದ ತಮ್ಮ ಚಿಕ್ಕಪ್ಪ ಓಬಳನಾಯಕನ ಹೆಸರಿನಿಂದ ಈ ದೇವಾಲಯವನ್ನು ಕಟ್ಟಿಸಿದರು.[೩] ಗುಂತಗೋಳ ಸಂಸ್ಥಾನಿಕರ ವಂಶಾವಳಿಯಲ್ಲಿಯೂ ಕೂಡ ರಾಜಾ ಓಬಳನಾಯಕ ಮತ್ತು ರಾಜಾ ರಾಯಪ್ಪನಾಯಕರ ಹೆಸರುಗಳಿವೆ.[೪] ಇವು ಈ ಕೆರೆಯ ನಿರ್ಮಾಣದ ಕುರಿತಾದ ಅಧಿಕೃತ ಆಕರಗಳಾಗಿವೆ.

ಹಿರೇ ಉಪ್ಪೇರಿ ಕೆರೆಯು ಸಂಪೂರ್ಣ ನೀರಿನಿಂದ ತುಂಬಿದಾಗ, ಆಗಾಗ ಈ ಕೆರೆಯ ಒಡ್ಡು ಹೊಡೆಯುತಿತ್ತು. ಆಗ ಊರಿನ ಜನರು ಜೋಯಿಸರನ್ನು ಕೇಳಿದಾಗ, "ಗರ್ಭಿಣಿ ಸ್ತ್ರೀಯನ್ನು ಕೆರೆಗೆ ಹಾರ ಕೊಟ್ಟರೆ ಮಾತ್ರ ಕೆರೆಯ ಒಡ್ಡು ನಿಲ್ಲುತ್ತದೆ"೫ ಎಂದು ಹೇಳುತ್ತಾರೆ. ಈ ಕುರಿತಾಗಿ ಜಾನಪದ ನುಡಿಯೊಂದು ಹೀಗೆ ಹೇಳುತ್ತದೆ:

"ಉತ್ತಮರೆಲ್ಲರೂ ಒತ್ತಿಗೆ ತೆಗಿಸ್ಯಾರ
ಗರ್ಭಿಣಿ ಹಾರ ಕೊಡಬೇಕಂತ/ಕೆಂಚಮ್ಮಗ
ತುಂಬ್ಯಾವ ನವಮಾಸ"[೬]

✷ ಮುಖ್ಯಸ್ಥರು, ಶಾಸನ ಶಾಸ್ತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಮೊ. ೯೯೭೨೮ ೪೧೩೫೬

ಆಗ ಹಿರೇ ಉಪ್ಪೇರಿಯ ಮಾಲೀಗೌಡರು ಮತ್ತು ಪೋಲೀಸ್‌ಗೌಡರು ಊರಿನ ಜನರ ಸಭೆಯನ್ನು ನಡೆಸುತ್ತಾರೆ. ಈ ಗೌಡರ ಮನೆತನದ ವಂಶಸ್ಥರು ಇಂದಿಗೂ ಹಿರೇ ಉಪ್ಪೇರಿಯಲ್ಲಿ ವಾಸವಾಗಿದ್ದಾರೆ. ಆಗ ಮಾಲೀಗೌಡರ ಮನೆಯ ಸಂಬಂಧಿಕರುಗಳಾದ ತಿಪ್ಪಣ್ಣವರ್ ಎಂಬ ಅಡ್ಡ ಹೆಸರಿನ ಮನೆಯವರಲ್ಲಿ ಬಸಪ್ಪನ ಪತ್ನಿ ಕೆಂಚಮ್ಮಳು ಗರ್ಭವತಿಯಾಗಿದ್ದ ವಿಷಯ ತಿಳಿಯುತ್ತದೆ.[೭] ಆಗ ಗುಂತಗೋಳದ ಅರಸ ರಾಜಾ ರಾಯಪ್ಪನಾಯಕನ ಒಪ್ಪಿಗೆಯನ್ನು ಪಡೆದ ಕುರಿತಾದ ಜಾನಪದ ನುಡಿಯೊಂದು ಹೀಗೆ ಹೇಳುತ್ತದೆ:

"ರಾಜ ರಾಯಪ್ಪ ನಾಯಕನ ಒಪ್ಪಿಗೆ
ಪಡೆದಾರ, ಗೌಡರೆಲ್ಲರೂ/ಸೇರ್‍ಯಾರ
ಬಲಿಕೊಡುವ ಯೋಚನಾ ಮಾಡ್ಯಾರ"[೮]

ಹೀಗೆ ಗುಂತಗೋಳ ಸಂಸ್ಥಾನದ ಅರಸರ ಅನುಮತಿಯನ್ನು ಪಡೆದು ತಿಪ್ಪಣ್ಣವರ್ ಮನೆತನದವರು ಹಾಗೂ ಕೆಂಚಮ್ಮಳ ಪತಿ ಬಸಪ್ಪ ತಿಪ್ಪಣ್ಣವರ್ ಅವರ ಅನುಮತಿಯನ್ನು ಪಡೆದುಕೊಳ್ಳುತ್ತಾರೆ. ಆದರೆ ಕೆಂಚಮ್ಮಳಿಗೆ ಈ ವಿಚಾರವನ್ನು ಹೇಳದೆ, "ನೀನು ಕೆರೆಗೆ ಪೂಜೆ ಮಾಡಬೇಕು ಎಂದು ಜೋಯಿಸರು ಹೇಳಿದ್ದಾರೆ" ಎಂದು ಮಾತ್ರ ಹೇಳುತ್ತಾರೆ. ಈ ಕುರಿತಾಗಿ ಜಾನಪದ ನುಡಿಯೊಂದು ಹೀಗೆ ಹೇಳುತ್ತದೆ:

"ರಾಜಾ ಓಬಳಪ್ಪನ ಕೆರೆಗೆ
ಕರಕೊಂಡು ಹೊಂಟಾರ/ಕೆಂಚಮ್ಮ
ನಿನ್ನ ರಿಣ ಇಲ್ಲಿಗೆ ಮುಗಿತವ್ವ"[೯]

ಒಂದು ಶುಭ ದಿನದಂದು ಬಾಜಾ-ಬಜಂತ್ರಿ ಸಮೇತ ಮೆರವಣಿಗೆಯೊಂದಿಗೆ ಕೆರೆಗೆ ಕರೆದುಕೊಂಡು ಬರುತ್ತಾರೆ. ಕೆರೆಯ ಒಡ್ಡಿನ ಪಕ್ಕದಲ್ಲಿ ಈ ಮೊದಲೇ ಒಂದು ತೆಗ್ಗನ್ನು ತೋಡಿರುತ್ತಾರೆ. ಕೆಂಚಮ್ಮಳಿಗೆ "ನೀನು ಕಳಸವನ್ನು ಬೆಳಗು" ಎಂದು ಹೇಳಿ, ಆ ತೆಗ್ಗಿನಲ್ಲಿ ಇಳಿಸುತ್ತಾರೆ. ಆ ಕುರಿತಾಗಿ ಜಾನಪದ ನುಡಿಯೊಂದು ಹೀಗೆ ಹೇಳುತ್ತದೆ:

"ಏನೇನೂ ಗೊತ್ತಿಲ್ಲ ಕೆಂಚಮ್ಮ ನಿನಗ
ಕರಕೊಂಡು ಹೋಗ್ಯಾರ/ಕಳಸ
ಬೆಳಗಾಕ ಇಳಿಸ್ಯಾರ"[೧೦]

ಕೆಂಚಮ್ಮಳು ತೆಗ್ಗಿಗೆ ಇಳಿದು ಪೂಜೆ ಮಾಡುತ್ತಾಳೆ. ನಂತರ ಆಕೆಯ ಮೇಲೆ ದೊಡ್ಡದಾದ ಬಂಡೆಯನ್ನು ಎಳೆದು ಮುಚ್ಚುತ್ತಾರೆ. ನಂತರದ ದಿನಗಳಲ್ಲಿ ಸಮಾಧಿಯನ್ನು ಕಟ್ಟುತ್ತಾರೆ.

ಕೆಂಚಮ್ಮಳಿಗೆ ಒಬ್ಬ ಮಗನಿದ್ದ ಕುರಿತು ಸೋಬಾನೆ ಹಾಡೊಂದರಲ್ಲಿ ಮಾಹಿತಿ ಇದೆ. ಅದು ಇಂತಿದೆ: "ತಿರುಗಿ ಬಂದೆ ನೋಡ ನೀ ಹಡೆದವ್ವ ಬಾಲ ಕೆಂಚನ ಮೇಲೆ/ದಯೆ ಇರಲಿ ಸೋ ಎನ್ನೀರೆ"[೧೧] ಎಂದು ಹೀಗೆ ಹಾಡು ಮುಂದುವರೆಯುತ್ತದೆ.

ಕೆಲವು ದಿನಗಳಾದ ಮೇಲೆ ಕೆಂಚಮ್ಮಳ ಮನೆತನಕ್ಕೆ ಕಾಡಾಟ ಪ್ರಾರಂಭವಾಗುತ್ತದೆ. ಆಗ ಜೋಯಿಸರನ್ನು ಕೇಳಲಾಗಿ, ಜೋಯಿಸರು "ಕೆಂಚಮ್ಮಳ ಹೆಸರಿನಲ್ಲಿ ದೇವಾಲಯವನ್ನು ಕಟ್ಟಿಸಿ, ಈ ಮನೆತನದವರೇ ಪೂಜೆಯನ್ನು ಮಾಡಬೇಕು" ಎಂದು ಹೇಳುತ್ತಾರೆ. ಆಗ ತಿಪ್ಪಣ್ಣವರ್ ಮನೆತನದವರು ಕೆಂಚಮ್ಮಳ ದೇವಾಲಯನ್ನು ಕಟ್ಟಿಸಿ, ಪೂಜೆಯನ್ನು ಆರಂಭಿಸುತ್ತಾರೆ. ಅಂದಿನಿಂದ ಇಂದಿನವರೆಗೂ ಈ ಮನೆತನದವರೇ ಪೂಜೆಯನ್ನು ಮಾಡುತ್ತಾರೆ. ಪ್ರತಿ ಮಂಗಳವಾರ ಮತ್ತು ಶುಕ್ರವಾರ ಕೆಂಚಮ್ಮಳಿಗೆ ವಿಶೇಷ ಪೂಜೆ ನಡೆಯುತ್ತದೆ. ಮಳೆ ಬರದಿದ್ದಾಗ ಕೆಂಚಮ್ಮಳ ಹೆಸರಿನಲ್ಲಿ ವಾರವನ್ನು ಮಾಡುತ್ತಾರೆ. ಹೊಲ ಬಿತ್ತನೆ ಮಾಡುವಾಗ ಹೊಸ ಸೀರೆ, ಬಳೆಯನ್ನು ತೊಡಿಸುವುದರೊಂದಿಗೆ ಉಡಿ ತುಂಬುವ ಕಾರ್ಯಕ್ರಮವನ್ನು ಮಾಡುತ್ತಾರೆ. ರೈತರು ರಾಶಿಯನ್ನು ಮಾಡುವ ಮೊದಲು ಕೆಂಚಮ್ಮಳಿಗೆ ಪೂಜೆಯನ್ನು ಸಲ್ಲಿಸುತ್ತಾರೆ. ದೀಪಾವಳಿ ಪಾಡ್ಯದ ದಿನ ಕಳಸದ ಪೂಜೆಯು ಜರುಗುತ್ತದೆ. ಕೆಂಚಮ್ಮಳಿಗೆ ಬಲಿಕೊಡುವ ಪದ್ಧತಿಯೂ ಇದೆ. ಹಿರೇ ಉಪ್ಪೇರಿಯ ಅಕ್ಕಪಕ್ಕದ ಗ್ರಾಮಗಳಾದ ಹಾಲಬಾವಿ, ಯರಗುಂಟಿ, ಈಚನಾಳ, ತೋರಲಬೆಂಚಿ, ಸುಣಕಲ್ಲು, ಚಿಕ್ಕ ಉಪ್ಪೇರಿ ಮುಂತಾದ ಗ್ರಾಮದವರು ಕೆಂಚಮ್ಮಳ ಪೂಜೆಯನ್ನು ಮಾಡುತ್ತಾರೆ. ಕೆಂಚಮ್ಮಳು ವಾಲ್ಮೀಕಿ ಜನಾಂಗಕ್ಕೆ ಸೇರಿದವಳಾಗಿದ್ದರೂ ಸರ್ವ ಜನಾಂಗದವರು ಈಕೆಗೆ ಪೂಜೆಯನ್ನು ಸಲ್ಲಿಸುತ್ತಾರೆ. ಹಿರೇ ಉಪ್ಪೇರಿ ಹಾಗೂ ಸುತ್ತಲಿನ ಹಳ್ಳಿಯ ಜನರು ಜಾತ್ಯತೀತವಾಗಿ ಇವತ್ತಿಗೂ ಕೂಡ ತಮ್ಮ ಮನೆಯಲ್ಲಿ ಕೆಂಚಮ್ಮ, ಕೆಂಚವ್ವ, ಕೆಂಚಪ್ಪ ಎಂಬ ಹೆಸರುಗಳನ್ನು ಇಡುವರು.

ಕೆಂಚಮ್ಮನ ಕೆರೆಯ ಪಕ್ಕದ ಗುಡ್ಡಕ್ಕೆ 'ಕೆಂಚಮ್ಮಳ ಗುಡ್ಡ'ವೆಂದು, ಅಲ್ಲಿಂದ ಹರಿಯುವ ಹಳ್ಳಕ್ಕೆ 'ಕೆಂಚಮ್ಮಳ ಹಳ್ಳ' ಎಂದು ಕರೆಯುತ್ತಾರೆ. ಇತ್ತೀಚೆಗೆ ಗೊರೆಬಾಳ ಗ್ರಾಮ ಪಂಚಾಯಿತಿಯ ವತಿಯಿಂದ ಈ ಕೆಂಚಮ್ಮಳ ಕೆರೆಯ ಅಭಿವೃದ್ಧಿ

ಯೋಜನೆಯ ಕಾರ್ಯ ನಡೆದಿದೆ. ಕೆಂಚಮ್ಮಳ ಗುಡಿಯ ಅಕ್ಕಪಕ್ಕ ಕೆಂಚಮ್ಮಳ ಸಂಬಂಧಿಕರುಗಳಾದ ಪೂರ್ವಕ್ಕೆ ಸೋಮನಗೌಡರ ಹೊಲ, ಪಶ್ಚಿಮಕ್ಕೆ ಯಮನಪ್ಪನವರ ಹೊಲ, ಉತ್ತರಕ್ಕೆ ಲಾಲನಾಯಕರ ಹೊಲ ಮತ್ತು ದಕ್ಷಿಣಕ್ಕೆ ಕರಿಬಸಪ್ಪನವರ ಹೊಲಗಳಿವೆ.

ಕೆರೆಗೆ ಹಾರವಾದ ಈ ಘಟನೆಯು ಗುಂತಗೋಳ ಸಂಸ್ಥಾನದ ಇತಿಹಾಸದೊಂದಿಗೆ ತಳಕು ಹಾಕಿಕೊಂಡಿರುವುದು ವಿಶೇಷವಾಗಿದೆ. ಕೆಂಚಮ್ಮಳ ಕುರಿತಾಗಿ ಇನ್ನೂ ಅನೇಕ ಜಾನಪದ ಹಾಡುಗಳು ಮತ್ತು ಕಥೆಗಳು ಸಿಗುವ ಸಾಧ್ಯತೆ ಇದೆ. ಅವುಗಳನ್ನು ಸಂಗ್ರಹಿಸಿ ಚಾರಿತ್ರಿಕ ದೃಷ್ಟಿಕೋನದಿಂದ ವಿಶ್ಲೇಷಿಸುವ ಕಾರ್ಯ ಮಾಡಬೇಕಾಗಿದೆ.

ಈಗಾಗಲೇ ರಾಯಚೂರು ಜಿಲ್ಲೆಯಲ್ಲಿ ರಾಯಚೂರು ಕೋಟೆಗೆ ಬಾಳ ಸಂಗಮ್ಮನನ್ನು ಬಲಿ ನೀಡಿದ ಪ್ರಸಂಗ, ಬಿಜ್ಜಮಳನ್ನು ಕರಡಕಲ್ಲಿನ ಬಿಲ್ಲಮನ ಕೆರೆಗೆ ಹಾರ ನೀಡಿದುದರ ಸಾಲಿಗೆ ಹಿರೇ ಉಪ್ಪೇರಿಯ ಕೆಂಚಮ್ಮಳು ಕೆರೆಗೆ ಹಾರವಾದ ಘಟನೆಯೂ ಸೇರುತ್ತದೆ. ಇಲ್ಲಿಯವರೆಗೂ ಚರಿತ್ರೆಯಲ್ಲಿ ದಾಖಲಾಗದ ಹಿರೇ ಉಪ್ಪೇರಿಯ ಕೆರೆಗೆ ಹಾರವಾದ ಕೆಂಚಮ್ಮಳ ಚಾರಿತ್ರಿಕ ಸಂಗತಿಯು ಕರ್ನಾಟಕದ ಇತಿಹಾಸ ಮತ್ತು ಸಂಸ್ಕೃತಿಗೆ ಹೊಸ ಸೇರ್ಪಡೆಯಾಗಿದೆ.

[ಕ್ಷೇತ್ರಕಾರ್ಯದಲ್ಲಿ ಸಹಕರಿಸಿದ ಶ್ರೀ ಬಾಲರಾಜು ಮುಂಡರಗಿ ಸಾ. ಹಾಲಬಾವಿ, ಶ್ರೀ ಅಮರೇಗೌಡ ಮಾಲೀಪಾಟೀಲ್ ಸಾ. ಹಿರೇ ಉಪ್ಪೇರಿ ಇವರುಗಳಿಗೆ ಅನಂತ ಕೃತಜ್ಞತೆಗಳು.]

ಅಡಿ ಟಿಪ್ಪಣಿಗಳು

೧. ಡಾ. ಅಮರೇಶ ಯತಗಲ್, ಇತಿಹಾಸ ಇಂಚರ, ಅದಿತಿ ಪ್ರಕಾಶನ, ಲಿಂಗಸೂಗೂರು, ೨೦೦೭, ಪುಟ ೫೬.

೨. ಶ್ರೀ ಶಿವಪ್ಪ ವಾಲಿ (ವಯಸ್ಸು ೮೦), ಹಿರೇ ಉಪ್ಪೇರಿ, ತಾಲ್ಲೂಕು ಲಿಂಗಸೂಗೂರು, ರಾಯಚೂರು ಜಿಲ್ಲೆ ಇವರ ಹೇಳಿಕೆಯಿಂದ.

೩. ಶ್ರೀ ಬಸಪ್ಪ ಪರಾಂಪುರ (ವಯಸ್ಸು ೮೫), ಹಿರೇ ಉಪ್ಪೇರಿ, ತಾಲ್ಲೂಕು ಲಿಂಗಸೂಗೂರು, ರಾಯಚೂರು ಜಿಲ್ಲೆ ಇವರ ಹೇಳಿಕೆಯಿಂದ.

೪. ಡಾ. ಅಮರೇಶ ಯತಗಲ್, ಕರ್ನಾಟಕದ ಜೀವಂತ ನಾಯಕ ಅರಸುಮನೆತನಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೨೦, ಪುಟ ೧೨೮.

೫. ಶ್ರೀ ಯಮನಪ್ಪ ಸಂಗಪ್ಪ ತಿಪ್ಪಣ್ಣವರ್ (ವಯಸ್ಸು ೬೦), ಹಿರೇ ಉಪ್ಪೇರಿ, ತಾಲ್ಲೂಕು ಲಿಂಗಸೂಗೂರು, ರಾಯಚೂರು ಜಿಲ್ಲೆ ಇವರ ಹೇಳಿಕೆಯಿಂದ.

೬. ಶ್ರೀಮತಿ ಶಿವಮ್ಮ ತೋರಲಬೆಂಚಿ (ವಯಸ್ಸು ೬೮), ಶ್ರೀಮತಿ ಬಸಮ್ಮ ತಳವಾರ (ವಯಸ್ಸು ೫೮), ಶ್ರೀಮತಿ ಹನುಮಮ್ಮ ಗುಡದಾರ (ವಯಸ್ಸು ೫೬), ಶ್ರೀಮತಿ ದೇವಮ್ಮ ಗುಡಗುಂಟಿ (ವಯಸ್ಸು ೫೫), ಶ್ರೀಮತಿ ರೇಣಮ್ಮ ಯರಗೋಡಿ (ವಯಸ್ಸು ೫೫), ಶ್ರೀಮತಿ ಬಾಲಮ್ಮ ಮಿಂಚೇರಿ (ವಯಸ್ಸು ೫೪), ಹಿರೇ ಉಪ್ಪೇರಿ, ತಾಲ್ಲೂಕು ಲಿಂಗಸೂಗೂರು, ರಾಯಚೂರು ಜಿಲ್ಲೆ ಇವರ ಹೇಳಿಕೆಯಿಂದ.

೭. ಶ್ರೀ ಬಸಪ್ಪ ಪರಾಂಪುರ (ವಯಸ್ಸು ೮೫), ಹಿರೇ ಉಪ್ಪೇರಿ, ತಾಲ್ಲೂಕು ಲಿಂಗಸೂಗೂರು, ರಾಯಚೂರು ಜಿಲ್ಲೆ ಇವರ ಹೇಳಿಕೆಯಿಂದ.

೮. ಶ್ರೀಮತಿ ಶಿವಮ್ಮ ತೋರಲಬೆಂಚಿ, ಪೂರ್ವೋಕ್ತ, ಹಾಡಿದುದು.

೯. ಅದೇ.

೧೦. ಅದೇ.

೧೧. ಅದೇ.

೭೩

ಕರ್ನಾಟಕದಲ್ಲಿ ಚೋಳರ ಕಾಲದ ಸ್ಮಾರಕ ಶಿಲೆಗಳು

ತಾ.ನಂ. ಕುಮಾರಸ್ವಾಮಿ*

ಕರ್ನಾಟಕದಲ್ಲಿ ವೀರಗಲ್ಲುಗಳ ಪರಂಪರೆ ದೊಡ್ಡದು. ಪ್ರಸ್ತುತ ನಮಗೆ ಲಭ್ಯವಿರುವ ವೀರಗಲ್ಲುಗಳು ಮತ್ತು ಮಾಸ್ತಿಕಲ್ಲುಗಳಿಗೆ ಸು. ೧೫೦೦ ವರ್ಷಗಳ ಇತಿಹಾಸವಿದೆ. ವೀರಗಲ್ಲುಗಳು ಸಾಮಾಜಿಕ ವ್ಯವಸ್ಥೆಯೊಂದರ ಬಗ್ಗೆ, ಆಡಳಿತದ ಬಗ್ಗೆ, ಆಯುಧಗಳ ಬಗ್ಗೆ, ವಾದ್ಯ ಪ್ರಕಾರಗಳ ಬಗ್ಗೆ, ಶಿಲ್ಪಗಳೇ ಮುಂತಾದವುಗಳ ಬಗ್ಗೆ ಅನೇಕ ಮಾಹಿತಿಗಳನ್ನು ನೀಡುತ್ತವೆ. ಇದುವರೆಗೆ ಕರ್ನಾಟಕದಲ್ಲಿ ದೊರೆತ ಚೋಳರ ವೀರಗಲ್ಲುಗಳ ಬಗ್ಗೆ ಕ್ರಮವಾದ ಅಧ್ಯಯನ ನಡೆದಿಲ್ಲ. ಕರ್ನಾಟಕದಲ್ಲಿ ಸದ್ಯಕ್ಕೆ ಲಭ್ಯವಿರುವ ಚೋಳರ ಕನ್ನಡ ಶಾಸನಗಳ ಸಂಖ್ಯೆ ಸುಮಾರು ೭೦ ಮಾತ್ರ ಇವೂ ಸೇರಿದಂತೆ ಚೋಳರ ಒಟ್ಟು ಶಾಸನಗಳ ಸಂಖ್ಯೆ ಸು. ೨೩೫ ಮಾತ್ರ. ಈ ಪೈಕಿ ಸು. ೩೦ ವೀರಸ್ಮಾರಕಶಿಲೆಗನ್ನು ಮಾತ್ರ ನಾನು ಇಲ್ಲಿ ಗುರುತಿಸಿದ್ದೇನೆ. ಇವುಗಳಲ್ಲಿ ೫ ಮಾತ್ರ ತಮಿಳಿನಲ್ಲಿವೆ ಅಷ್ಟೆ. ಹಾಗಾಗಿ ಸಾಮ್ರಾಟ-ಚೋಳರ ಕಾಲದಲ್ಲಿ ಕನ್ನಡ ವೀರರೇ ಹೆಚ್ಚು ಹೋರಾಟಗಳಲ್ಲಿ ಭಾಗವಹಿಸಿರುವುದು ಕಂಡುಬರುತ್ತದೆ.

ವೀರಗಲ್ಲನ್ನು ನೆಡುವಾಗ ಅದನ್ನು ಮುಂದಿನ ಜನಾಂಗಕ್ಕೆ ತಲುಪಿಸುವ ಉದ್ದೇಶವಿತ್ತೆಂಬುದು ಗಮನಾರ್ಹ. ಇಲ್ಲೂ ಕೂಡ ಎರಡು ಉದ್ದೇಶಗಳಿವೆ. ಒಂದು ವೀರನ ಪ್ರರಾಕ್ರಮವನ್ನು ಮೆಚ್ಚಿ ಅದನ್ನು ಲೋಕಕ್ಕೆ ತಿಳಿಯಲೆಂದು ಪ್ರಕಟಿಸುವುದು (ಲೌಕಿಕ) ಮತ್ತು ಎರಡನೆಯದು ಅವನ/ಅವಳ ತ್ಯಾಗದಿಂದ ಸ್ವರ್ಗ, ಕೈಲಾಸ, ವೈಕುಂಠ ಪ್ರಾಪ್ತವಾಗುತ್ತದೆಯೆಂದು ನಂಬುವುದು (ಪಾರಮಾರ್ಥಿಕ). ಈ ಹಿನ್ನೆಲೆಯಲ್ಲಿ ಕರ್ನಾಟಕದಲ್ಲಿ ಸಾಮ್ರಾಟ-ಚೋಳರ ಶಾಸನಗಳಲ್ಲಿ ಲಭ್ಯವಿರುವ ಕೆಲವು ವೀರಸ್ಮಾರಕ ಶಿಲೆಗಳನ್ನು ಪರಿಚಯಿಸುವುದೇ ಆಶಯ.

ಚೋಳರ ಕಾಲದ ವೀರಗಲ್ಲುಗಳಲ್ಲಿ ಹೆಚ್ಚಿನವು ತುರುಗಾಳೆಗ+ಪೆಣ್ಬುಯಲ್ ಮತ್ತು ಯುದ್ಧಗಳಿಗೆ ಸಂಬಂಧಿಸಿದ ವೀರಗಲ್ಲುಗಳಾಗಿವೆ. ಉಳಿದಂತೆ ಊರಳಿವು, ಕಳ್ಳರೊಡನೆ ಹೋರಾಟ, ಹಂದಿಬೇಟೆ, ಮಾಸ್ತಿಕಲ್ಲುಗಳು ಮತ್ತು ಇತರ ಸ್ಮಾರಕಗಳು ಎಂದು ವಿಭಾಗಿಸಿಕೊಂಡು ಅವಲೋಕಿಸಲು ಇಲ್ಲಿ ಪ್ರಯತ್ನಿಸಲಾಗಿದೆ.

ತುರುಗಾಳೆಗದ ವೀರಗಲ್ಲುಗಳು: ಕೋಲಾರ ಜಿಲ್ಲೆಯ ಮುಳಬಾಗಿಲು ತಾಲ್ಲೂಕಿನ ಬೈರಕೂರು ಗ್ರಾಮದ ಕ್ರಿ.ಶ. ೯೩೪ರ ಪರಾಂತಕಚೋಳನ (ಪರಕೇಸರಿವರ್ಮನ) ವೀರಗಲ್ಲು ಇದೆ. ಕಾಲದ ದೃಷ್ಟಿಯಿಂದ ಇದು ಗಮನಾರ್ಹವಾದುದು. ಏಕೆಂದರೆ ಈ ಶಾಸನದ ಕಾಲಕ್ಕೆ ಚೋಳರು ಆಗ ತಾನೇ ತಮಿಳುನಾಡಿನ ಉತ್ತರ ದಿಸೆಗೆ ತಮ್ಮ ಆಕ್ರಮಣಗಳನ್ನು ಆರಂಭಿಸಿದ್ದರು. ಆದರೆ ತಮಿಳುನಾಡಿನ ಉತ್ತರ ದಿಸೆಯಲ್ಲಿ ರಾಷ್ಟ್ರಕೂಟರ ಪ್ರಬಲ ಆಡಳಿತವಿದ್ದುದರಿಂದ ಅವರು ಮುಂದೆ ಕ್ರಿ.ಶ. ಸು. ೯೯೦ರ ವರೆಗೂ ಕರ್ನಾಟಕದ ಕಡೆ ಕಣ್ಣಾಕಲು ಸಾಧ್ಯವಾಗಿರಲಿಲ್ಲ, ಅಲ್ಲದೆ ಕ್ರಿ.ಶ. ಸು. ೯೪೨ - ೯೪೩ರ ಸುಮಾರಿನಲ್ಲಿ ರಾಷ್ಟ್ರಕೂಟರು-ಗಂಗರು ಸೇರಿ ತಕ್ಕೋಲದಲ್ಲಿ ಚೋಳರ ವಿರುದ್ದ ನಡೆದ ಭೀಕರ ಕಾಳೆಗದ ಪರಿಣಾಮವಾಗಿ ಇಡೀ ತೊಂಡೈಮಂಡಲ ಪ್ರದೇಶವು ರಾಷ್ಟ್ರಕೂಟರ ಆಳ್ವಿಕೆಗೆ ಒಳಪಟ್ಟು ಸು. ೨೪ ವರ್ಷಗಳ ಕಾಲ ರಾಷ್ಟ್ರಕೂಟರು ತಮ್ಮ ಸಾಮಂತರಾದ ಗಂಗ, ಬಾಣ, ನೊಳಂಬ ಮತ್ತು ವೈದುಂಬರ ಸಹಕಾರದೊಂದಿಗೆ ಅಖಂಡವಾಗಿ ಆಳ್ವಿಕೆ ನಡೆಸಿದರು. ಅವರ ಆಳ್ವಿಕೆಯ ಕುರುಹಾಗಿ ಆ ಪ್ರದೇಶದಲ್ಲಿ ರಾಷ್ಟ್ರಕೂಟರ ಸು. ೧೦೬ ಶಿಲಾಶಾಸನಗಳು ಆ ಪ್ರದೇಶದಲ್ಲಿದ್ದು ಸಾಕ್ಷಿ ನುಡಿಯುತ್ತಿವೆ.

ಪ್ರಸ್ತುತ ಬೈರಕೂರು ವೀರಗಲ್ಲಿನಲ್ಲಿ ಬೈರಕೂರು ಮಾರೆಮ್ಮನ ಮೊಮ್ಮಗನಾದ ಗನಿಪರಾಮ ತುಱುವನಿಕ್ಕಿಸಿ ಮಡಿದ ವಿವರವಿದೆ. ಪೆರ್ಮ್ಮಾಡಿಯ ಸಾಮನ್ತನು ಒಂದು ಖಂಡುಗ ಗದ್ದೆ ಭೂಮಿಯನ್ನು ಕಲ್ನಾಟು ದತ್ತಿಯಾಗಿ ಬಿಟ್ಟ ಉಲ್ಲೇಖ ಬಂದಿದೆ. [ಎ.ಕ. ೧೦ (ರೈಸ್) ಮುಳುಬಾಗಿಲು ೨೦೩].

* ಸಂಸ್ಥಾಪಕ ಕಾರ್ಯದರ್ಶಿ, ವಿಧಾತ್ ವಿದ್ಯಾ ಸಂಸ್ಥೆಗಳು, ಆನೇಕಲ್.

ಕ್ರಿ.ಶ. ೧೦೧೧ರಲ್ಲಿ ಮಂಡ್ಯ ಜಿಲ್ಲೆಯ ಪಾಂಡವಪುರ ತಾಲ್ಲೂಕಿನ ಚಿನಕುರಳಿ ಗ್ರಾಮದಲ್ಲಿನ ಒಂದನೇ ರಾಜರಾಜಚೋಳನ ಕಾಲಕ್ಕೆ ಸೇರಿದ ವೀರಗಲ್ಲಿನಲ್ಲಿ ಬಂಗಲಿ ಎರೆಯಮ್ಮನ ಮಗನಾದ ನಾಗಯ್ಯನು ಚಿಕವಂಗಲದ ತುರುಗಾಳೆಗದಲ್ಲಿ ತುರುಗಳನ್ನು ಇಕ್ಕಿಸಿ ಹೋರಾಡಿ ಮಡಿದ ವಿವರ ಬಂದಿದೆ. [ಎ.ಕ.–೬ (ಪರಿಷ್ಕೃತ), ಪಾಂಡವಪುರ ೫೧].

ಚಾಮರಾಜನಗರ ಜಿಲ್ಲೆಯ ಚಾಮರಾಜನಗರ ತಾ॥ ಕಿರುಗೊತಾರ ಗ್ರಾಮದ, ಬಹುವಾಗಿ ತ್ರುಟಿತವಾದ ವೀರಗಲ್ಲು ಶಾಸನವು ಒಂದನೇ ರಾಜೇಂದ್ರ ಚೋಳನ (ಕ್ರಿ.ಶ. ೧೦೧೬) ಕಾಲಕ್ಕೆ ಸೇರಿದೆ. ಈ ವೀರಗಲ್ಲು ಶಾಸನವು ತುರುಕಾಳಗದಲ್ಲಿ ಯೋಧನೊಬ್ಬನು ವೀರ ಮರಣ ಹೊಂದಿದನೆಂದು ಹೇಳಿದೆ. [ಎ.ಕ.–೪ (ಪರಿಷ್ಕೃತ), ಚಾಮರಾಜನಗರ ೪೦೬].

ಮೈಸೂರು ಜಿಲ್ಲೆಯ ಹುಣಸೂರು ತಾಲ್ಲೂಕಿನ ಮರೂರು ಗ್ರಾಮದ ಈ ವೀರಗಲ್ಲು ಶಾಸನ ತ್ರುಟಿತವಿದ್ದು ಇಪಗೊಂಡಚೋಳ ಎಂಬ ಶೂರನು ತುರುಕಾಳಗದಲ್ಲಿ ಪ್ರದರ್ಶಿಸಿದ ಶೌರ್ಯಕ್ಕೆ ಋಣವಾಗಿ ನಾಲ್ಕು ಖಂಡುಗ ಬೆಳೆದ ಭೂಮಿಯನ್ನು ಉಡುಗೊರೆಯಾಗಿ ನೀಡಿದ ಪ್ರಸ್ತಾಪಿಸಿದೆ. [ಎ.ಕ.–೪ (ಪರಿಷ್ಕೃತ), ಹುಣಸೂರು ೫].

ಮೈಸೂರು ಜಿಲ್ಲೆಯ ಹೆಗ್ಗಡದೇವನಕೋಟೆ ತಾಲ್ಲೂಕಿನ ಲಕ್ಷ್ಮಣಾಪುರದಲ್ಲಿರುವ ಈ ವೀರಗಲ್ಲು, ಒಂದನೇ ರಾಜೇಂದ್ರಚೋಳನ ಕಾಲ(ಕ್ರಿ.ಶ. ೧೦೩೦)ದ್ದಾಗಿದೆ, ಬಾಣಿಗ ಭೀಮಯ್ಯನ ಮಗ ತಟ್ಟಲ ಏಚಗಾವುಂಡನ ಮಾವ ಸಾಂತಯ್ಯ ಕೊಟ್ಟಗನು ಬಂದು ತುಱುವ ಕೊಂಡು ಹೋಗುವಾಗ ದಟ್ಟಬಿನ್ನಾಂಡಿಯು ತುಱುವ ಮಗುಳ್ಚಿ ಸುರಲೋಕಕ್ಕೆ ಸಂದನೆಂದು ದಾಖಲಿಸಿದೆ. [ಎ.ಕ.–೩ (ಪರಿಷ್ಕೃತ), ಹೆಗ್ಗಡದೇವನಕೋಟೆ ೯೮].

ಕೋಲಾರ ಜಿಲ್ಲೆಯ ಕೋಲಾರ ತಾಲ್ಲೂಕಿನ ಪುರಹಳ್ಳಿ ಗ್ರಾಮದಲ್ಲಿನ ವೀರಗಲ್ಲು ಒಂದನೆಯ ರಾಜೇಂದ್ರಚೋಳನ ಕಾಲಕ್ಕೆ (ಕ್ರಿ.ಶ. ೧೦೩೫) ಸೇರಿದೆ. ಕಯ್ವರನಾಡ ಬೇಬುಗಲ್ಲ ಬುಕಯ್ಯನ ಅರಮನೆಯ ಪೂಜಾರಿಯ ಅಳಿಯ ಪಾಲ್ಪಡು ಚೋಳಾಚಾರಿಯು ತಗಡನಾಡಿನ ವೊಲ್ಲೆಯೂರ ತುಱುಗಳನ್ನು ಕಳ್ಳರು ಕೊಂಡೊಯ್ಯುವಾಗ ಕಳ್ಳನೊಬ್ಬನನ್ನು ಕೊಂದು ತುಱುಗಳನ್ನು ಹಿಂಪಡೆದು, ಹೋರಾಟದಲ್ಲಿ ಗಾಯಗೊಂಡು ಸತ್ತು ಸ್ವರ್ಗವಾಸಿಯಾದ. [ಎ.ಕ. ೧೦ (ರೈಸ್)–ಕೋಲಾರ ೧೪].

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ತಾಲ್ಲೂಕಿನ ಬೇಚಿರಾಕ್ ತಿಮ್ಮಸಂದ್ರ ಗ್ರಾಮದ ಸಿದ್ದನಹಳ್ಳಿಯ ಕೆರೇ ಏರಿಯ ಕೆಳಗೆ ಹಳೇಕೊಡಿಯ ಬಳಿ ಬಿದ್ದಿದ್ದಿತೆಂದು ಹೇಳುವ ಕ್ರಿ.ಶ. ೧೦೪೧ರ, ಈ ಮಹತ್ವದ ವೀರ–ಸ್ತ್ರೀಯೊರ್ವಳ ವೀರಗಲ್ಲು ಈಗ ಕಾಣುತ್ತಿಲ್ಲ. ಇದು ಒಂದನೇ ರಾಜೇಂದ್ರಚೋಳ ದೊರೆಯ ಕಾಲದ್ದಾಗಿದೆ. ಕೈವಾರನಾಡಿನ ಸರಕ್ಕನೂರು ಕಿಟ್ಟಂಬಿ ಮಾಸರಗಾವುಂಡನ ಮಗ ಮಳ್ಳಗಾವುಂಡನ್ ಅವನ ಮಗ ಚಾವಯ್ಯ ಗಾವುಂಡನ್ ಅವನ ಅಳಿಯ ಮಾಚಗಾವುಂಡನ್ ಅವನ ಮಗಳು ಲಕ್ಷ್ಮಮ್ಮ–ಗಾವುಂಡಿ. ಈಕೆ ಸರಕ್ಕನೂರ ಎಮ್ಮೆ ತುಱುಗಳ ಕಳುವಿನ ಪುಯ್ಯಲನ್ನು ಕೇಳಿ ವೈರಿಗಳ ವಿರುದ್ಧ ವೀರಾವೇಶದಿಂದ ಹೋರಾಡಿ ಪಶುಗಳನ್ನು ಹಿಂಪಡೆದು ಸತ್ತು ಸ್ವರ್ಗ ಸೇರಿದಳೆಂದು, ಈ ಶಾಸನವನ್ನು ಮುದಿಗೊಂಡ ಚೋಳಪಟ್ಟಿ ಎಂಬುವನು ಬರೆದ ವಿವರವೂ ಇದೆ. [ಎ.ಕ. ೯ (ರೈಸ್) ಹೊಸಕೋಟೆ ೧೧]

ಕುಲೋತ್ತುಂಗ ಚೋಳದೇವನ ಕ್ರಿ.ಶ. ೧೦೭೬ರ ಕೋಲಾರ ತಾಲ್ಲೂಕು ಸೂಳೂರು ಗ್ರಾಮದ ವೀರಗಲ್ಲು ತಮಿಳು ಶಾಸನ ನಿಗರಿಲಿ ಚೋಳಮಂಡಲದ ಕೈವಾರನಾಡಿನ ಜನನಾಥಚತುರ್ವೇದಿಮಂಗಲ ಎಂಬ ವೆಳ್ಳಿಯೂರಿನ ಕುಮಾರಾಂಡೈಕಾಟ್ಟಮೈಯನ್ ಇಮ್ಮಡಿ ಚೋಳಮಾಯಲಟ್ಟಿ ಎಂಬುವನು, ವೈರಿಗಳು ಆ ಊರಿನ ಮೇಲೆ ನಡೆಸಿದ ಆಕ್ರಮಣದಲ್ಲಿ ತುಱುಗಳನ್ನೂ ಊರನ್ನೂ ರಕ್ಷಿಸುವಲ್ಲಿ ಹೋರಾಡಿ ಮಡಿದು ಸ್ವರ್ಗವೇರಿದನು. ಆಗ ಅವನ ಮಗ ಕೇತ್ತಿರಪಾಲ ಇರುಮುಡಿ ಚೋಳ–ಮಾಯಲಟ್ಟಿ ಎಂಬುವನು ಈ ಕಲ್ಲನ್ನು ನಿಲ್ಲಿಸದನು ಎಂಬ ವಿವರವಿದೆ. [ಎ.ಕ. ೧೦ (ರೈಸ್) ಕೋಲಾರ ೯೧].

ತುರುಗಾಳೆಗ ಒಂದರಲ್ಲಿ ಗಾಮುಂಡನೊರ್ವನು ಮಡಿದಾಗ, ಅವನ ಸ್ಮಾರಕವಾಗಿ ವೀರಗಲ್ಲನ್ನು ಸ್ಥಾಪಿಸಿದ ಸಂಗತಿ ಮೈಸೂರು ಜಿಲ್ಲೆ ಹೆಗ್ಗಡದೇವನಕೋಟೆ ತಾಲ್ಲೂಕಿನ ಅಣ್ಣೂರುಗ್ರಾಮದ ಕ್ರಿ.ಶ. ೧೧೧೫–೧೧೧೬ರ ಶಾಸನದಲ್ಲಿ ಬಂದಿದೆ. [ಎ.ಕ.–೩ (ಪರಿಷ್ಕೃ), ಹೆಗ್ಗಡದೇವನಕೋಟೆ ೧೦].

ತುರುಗಾಳೆಗ ಮತ್ತು ಪೆಣ್‌ಪುಯಲ್ ವೀರಗಲ್ಲುಗಳು

ಕ್ರಿ.ಶ. ೧೦೧೫ರಲ್ಲಿ ಕೋಲಾರ ಜಿಲ್ಲೆಯ ಶ್ರೀನಿವಾಸಪುರ ತಾಲ್ಲೂಕಿನ ನಂಬಿಹಳ್ಳಿ ಗ್ರಾಮದಲ್ಲಿನ ಒಂದನೆಯ ರಾಜೇಂದ್ರನ ಕಾಲದಲ್ಲಿ ಚೋರಯದೇವನ ಆಳ್ವಿಕೆಯಲ್ಲಿ ಅರಸಿಗಯಗಾವುಂಡನ ಮಗ ಎರೆಯಗಾವುಂಡನು ತೊರಗೋಳಲ್ಲಿ

(ಪೆಣ್ಡಿರನೂಡೆಉಡ್ವಲು) ಪೆಣ್ಬುಯಲ್ ಸಂದರ್ಭ ಹೋರಾಡಿ ಮಡಿದ ವಿವರ. ಮಂಗಪಾಲೆಯಗಾವುಂಡ (ಕಲ್ಲನ್ನು)ಮಾಡಿಸಿದ. [ಎ.ಕ.–೧೦ (ರೈಸ್) ಶ್ರೀನಿವಾಸಪುರ ೧೪].

ಮೈಸೂರು ಜಿಲ್ಲೆಯ ಮೈಸೂರು ತಾಲ್ಲೂಕಿನ ಮಲ್ಲೇಗೌಡನಕೊಪ್ಪಲು ಗ್ರಾಮದ ಕ್ರಿ.ಶ. ೧೦೩೬ರ ಈ ವೀರಗಲ್ಲು ಒಂದನೇ ರಾಜೇಂದ್ರಚೋಳನ ಕಾಲದ್ದಾಗಿದೆ. ತಿಲುಗರಮಾರಿ ಎಂಬ ಬಿರುದಾಂಕಿತನಾದ ಚಂಗಾಳ್ವನು ಮತ್ತು ಅವನ ಕಿರಿಯ ಸೋದರ ಕೂಡಿ ತುಱುಗಾಳೆಗ ನಡೆಸಿದಾಗ, ಒಳಿನಾಗಯ್ಯನ ಮಗ ಬಾಗ್ಗುಳಿ ಸಿರಿಯಣ್ಣನು ಚಂಗಾಳ್ವನೊಂದಿಗೆ ಹೋರಾಡಿ ತುರುಗಳನ್ನು ಮಗುಳ್ಚಿ ಪೆಣ್ಡಿರ ಪೆಱಗಿಕ್ಕಿ ಕಾದಿ ಸತ್ತನು. ಅವನ ತಮ್ಮ ಅಣ್ಣನಿಗೆ ಪರೋಕ್ಷ ವಿನಯಂಗೆಯ್ದನು ಎಂದು ಶಾಸನ ದಾಖಲಿಸಿದೆ. [ಎ.ಕ.–೪ (ಪರಿಷ್ಕೃತ), ಮೈಸೂರು ೧೧೩].

ಮೈಸೂರು ಜಿಲ್ಲೆಯ ಮೈಸೂರು ತಾಲ್ಲೂಕಿನ ಮಲ್ಲೇಗೌಡನಕೊಪ್ಪಲು ಗ್ರಾಮದ ಕ್ರಿ.ಶ. ೧೦೩೬ರ ಈ ವೀರಗಲ್ಲು ಒಂದನೇ ರಾಜೇಂದ್ರಚೋಳನ ಕಾಲದ್ದಾಗಿದೆ. ಪಂಚಿಯ ಸಿರಿಯಮ್ಮನ ಮಗ ಪಂಚಿಯ ಮುದ್ದಯ್ಯನು ಸ್ವರ್ಗಸ್ಥನಾದ ಯೋಧನಿಗಾಗಿ ನೆಟ್ಟ ವೀರಗಲ್ಲು. [ಎ.ಕ.–೪ (ಪರಿಷ್ಕೃತ), ಮೈಸೂರು ೧೧೪].

ಯುದ್ಧ ಸಂಬಂಧಿ ವೀರಗಲ್ಲುಗಳು

ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕಿನ ದೊಡ್ಡಶಿವಾರ ಎಂಬ ಗ್ರಾಮದಲ್ಲಿನ ವೀರಗಲ್ಲು ಒಂದನೇ ರಾಜರಾಜ ಚೋಳನ ಕಾಲಕ್ಕೆ (ಕ್ರಿ.ಶ. ೧೦೦೯) ಸೇರಿದೆ. ನಾಲ್ಗಾವುಂಡನೊರ್ವನು ದುಷ್ಟ ನಿಗ್ರಹ ಶಿಷ್ಟ ಪ್ರತಿಪಾಲನಂಗೆಯ್ಯುವಲ್ಲಿ ನಡೆದ ಯುದ್ಧದಲ್ಲಿ ವೀರನು ಹೋರಾಡಿ ಕೆಳಗೆ ಬಿದ್ದು ನಿಧನ ಹೊಂದಿದ ಎಂಬ ವಿವರವಿದೆ. ಇದು ಆತನ ಬಲಿದಾನದ ಪ್ರತೀಕವಾಗಿ ನೆಡಿಸಿದ ಸ್ಮಾರಕವಾಗಿದೆ. [ಎ.ಕ. ೧೦ (ರೈಸ್) ಮಾಲೂರು ೧೧೨].

ಹಾಸನ ಜಿಲ್ಲೆಯ ಸಕಲೇಶಪುರ ತಾಲ್ಲೂಕಿನ ರಾಜೇಂದ್ರಪುರ ಗ್ರಾಮದ ವೀರಗಲ್ಲು ತ್ರುಟಿತ ಶಾಸನವು ಒಂದನೇ ರಾಜೇಂದ್ರಚೋಳನ ಕಾಲದ್ದಾಗಿದೆ (ಕ್ರಿ.ಶ. ೧೦೨೨–೨೩). ರಾಜೇಂದ್ರಚೋಳ ಪೃಥುವಿ ಮಹಾರಾಜ ಮತ್ತು ಹೊಯ್ಸಳ ನೃಪಕಾಮನ ನಡುವೆ ನಡೆದ ಹೋರಾಟದಲ್ಲಿ, ಮಹಾರಾಜನ ಆಜ್ಞೆಯ ಮೇರೆಗೆ ಪಡೆವಳ ಜೋಗಯ್ಯ ಕನ್ನಂಮ್ಮನೊಂದಿಗೆ ಯುದ್ಧಮಾಡಿ ಅವನ ಕುದುರೆಯನ್ನು ಕೊಂದು ಮಡಿಯುತ್ತಾನೆ. [ಎ.ಕ.–೯ (ಪರಿಷ್ಕೃತ), ಸಕಲೇಶಪುರ ೩೪].

ಮೈಸೂರು ಜಿಲ್ಲೆಯ ಕೃಷ್ಣರಾಜನಗರ ತಾಲ್ಲೂಕಿನ ಹಂಪಾಪುರ ಗ್ರಾಮದಕ್ರಿ.ಶ. ೧೦೩೩ರ ಈ ವೀರಗಲ್ಲು ಒಂದನೇ ರಾಜೇಂದ್ರ ಚೋಳನ ಕಾಲದ್ದು, ಆತನ ಆಡಳಿತ ಕಾಲದಲ್ಲಿ ಚಂಗಾಳ್ವಾರ ಜೊತೆ ಹೋರಾಡಿ ಮಡಿದ ವ್ಯಕ್ತಿಯೊಬ್ಬನ ದಾಖಲೆ ಇದಾಗಿದೆ. ಆದರೆ ಶಾಸನವು ತ್ರುಟಿತವಿದ್ದು ಹೆಚ್ಚಿನ ವಿವರಗಳು ಅಲಭ್ಯ. [ಎ.ಕ.–೪ (ಪರಿಷ್ಕೃತ), ಕೃಷ್ಣರಾಜನಗರ ೧೧೩].

ಕ್ರಿ.ಶ. ೧೦೩೩ರ ಚೋಳ ಮೊದಲನೆಯ ರಾಜೇಂದ್ರನ ಶಾಸನ, ಕೃಷ್ಣಗಿರಿ ಜಿಲ್ಲೆ ಡೆಂಕಣಿಕೋಟೆ ತಾಲ್ಲೂಕಿನ ಚಿಂತನಪಲ್ಲಿ ಗ್ರಾಮದಲ್ಲಿದ್ದು, ತ್ರುಟಿತವಿದ್ದು ವಸಂತನ ಮಗ ಕಾಱೆಯಮುಂಮಡಿಸ್ವಾಮಿ ಎಂಬ ಉಲ್ಲೇಖವಿದ್ದು ಪಾಯ್ದು ಕೊಂದ ಎಂಬ ಅಸ್ಪಷ್ಟ ಉಲ್ಲೇಖವಿದೆ. ಇದು ಯಾವುದೋ ಹೋರಾಟವನ್ನು ಸೂಚಿಸುವಂತಿದೆ. [ಪಿವಿಕೆ., ತಮಿಳುನಾಡಿನ ಕನ್ನಡ ಶಾಸನಗಳು, ಶಾಸಂ–೭೩, ಪು. ೭೧].

ಮೈಸೂರು ಜಿಲ್ಲೆ ಕೃಷ್ಣರಾಜನಗರ ತಾಲ್ಲೂಕಿನ ಕುರುಬಳ್ಳಿ ಗ್ರಾಮದಲ್ಲಿನ ಕ್ರಿ.ಶ. ೧೦೩೪ರ ವೀರಗಲ್ಲು. ಒಂದನೇ ರಾಜೇಂದ್ರ ಚೋಳನ ಆಳ್ವಿಕೆಯ ಕಾಲದ್ದಾಗಿದೆ. ರಾಜೇಂದ್ರಚೋಳನ ರಾಜ್ಯದಿಂದ ಚಂಗಾಳ್ವ ನಾಯಕನು ಹೋಗಿ ಚಂಗಾಳ್ವರೊಂದಿಗೆ ಹೋರಾಡಿ ಕೌಂಡಿಗರ ಕುಲದಾತ ಪಾಡಿಕಬೆಗೆ ಬರುತ್ತಿರುವಾಗ ಎಣ್ಚಸಿರ ಕಲ್ಲೆತ್ತಿ ಬನಿಕಿ ಬುಂಕರಗವುಂಡನ ಮಗ ಬಿಂಜವುಣಿರದೇವನ ನೆನಪಿನಲ್ಲಿ ವೀರಗಲ್ಲನ್ನು ಸ್ಥಾಪಿಸಲಾಯಿತು ಎಂಬ ಅಸ್ಪಷ್ಟ ವಿವರವಿದೆ. [ಎ.ಕ.–೪ (ಪರಿಷ್ಕೃತ), ಕೃಷ್ಣರಾಜನಗರ ೮೫].

ಮೈಸೂರು ಜಿಲ್ಲೆಯ ಹೆಗ್ಗಡದೇವನಕೋಟೆ ತಾಲ್ಲೂಕಿನ ಅಂಕನಾಥಪುರದಲ್ಲಿರುವ ಒಂದನೇ ರಾಜೇಂದ್ರ ಚೋಳನ ಕ್ರಿ.ಶ. ೧೦೩೭ರ ಶಾಸನವು ಚೆಂಗಾಳ್ವರಿಂದ ನೊಲೆನಾಡಿನ ಕೂಡಲೂರನ್ನು ಗೆದ್ದಾಗ ಪ್ರಾಯಃ ಆ ಯುದ್ಧದಲ್ಲಿ ಭಾಗಿಗಳಾದ ಪಿಳಿಂಗೆಯ ಅಜ್ಜುಣಗಾವುಂಡನ ಮಕ್ಕಳು ಐವರು; ಜೋಗಗಾವುಂಡ, ಅಂಕಗಾವುಂಡ, ಓಬಗಾವುಂಡ, ಚಾವಗಾವುಂಡ, ಭಸಗಾವುಂಡ ಕೇತಗಾವುಂಡ ಮುಂತಾದವರಿಗೆ ತೆಲುಗರಮಾರಿ ಮಹಾದಂಡನಾಯಕ ಪಂಚವಮಾರಾಯನು ತನ್ನ

'ತೆಲುಗರಮಾರಿ' ಎಂಬ ಬಿರುದನ್ನು ಅವರಿಗೆ ನೀಡಿ ನಾಗವಂಗಲವನ್ನು ಕಲ್ನಾಡು ದತ್ತಿಯನ್ನಾಗಿ ಕೊಟ್ಟು ಸತ್ಕರಿಸಿದನು. ಆ ಸಂದರ್ಭದಲ್ಲಿ ಪೆರ್ವ್ವಯಿಲಿನ ನಾಳ್ಗಾವುಂಡರೆಲ್ಲರೂ ಸೇರಿದ್ದರು. [ಎ.ಕ.–೩ (ಪರಿಷ್ಕೃತ), ಹೆಗ್ಗಡದೇವನಕೋಟೆ ೭].

ಇಂದಿನ ಮಹಾರಾಷ್ಟ್ರದ ಕೊಲ್ಹಾಪುರ ಮಹಾಲಕ್ಷ್ಮೀ ದೇವಾಲಯದ ಮೇಲಿನ ಆಕ್ರಮಣದ ಸಂದರ್ಭದಲ್ಲಿ ಮೊದಲನೆಯ ರಾಜೇಂದ್ರಚೋಳನ ಸೈನ್ಯ ಮಹಾಲಕ್ಷ್ಮೀ ದೇವಾಲಯವನ್ನು ಮುತ್ತಿ ಅದನ್ನು ಸುಡಲೆತ್ನಿಸುತ್ತಿದ್ದಾಗ ಮುಟ್ಟಯ್ಯನೆಂಬ ಯೋಧನೊಬ್ಬನು ಹೋರಾಡಿ ಮಡಿದನೆಂಬ ಸೂಚನೆ ಕೊಲ್ಹಾಪುರದ ಲಕ್ಷ್ಮೀವಿಲಾಸ ಅರಮನೆಯ ವಸ್ತು ಸಂಗ್ರಹಾಲಯದಲ್ಲಿನ ಶಾಸನದಿಂದ ತಿಳಿಯುತ್ತದೆ. [ಕೊಲ್ಹಾಪುರದ ಲಕ್ಷ್ಮೀವಿಲಾಸ ಮ್ಯೂಸಿಯಂನ ವೀರಗಲ್ಲು, ಕೊಲ್ಹಾಪುರದ ಶಾಸನಗಳು (೨೦೦೦), ಸಂ.೨೭].

ಕ್ರಿ.ಶ. ೧೦೮೦ರ ಕೋಲಾರ ಜಿಲ್ಲೆ ಶಿಡ್ಲಘಟ್ಟ ತಾಲ್ಲೂಕಿನ ಗುಡಿಹಳ್ಳಿಯ ವೀರಗಲ್ ತಮಿಳು ಶಾಸನ ಬಹುವಾಗಿ ತ್ರುಟಿತವಿದ್ದು ವಿಜಯರಾಜೇಂದ್ರಮಂಡಲದ ಕಳವಾರನಾಡನ್ನು ಉಲ್ಲೇಖಿಸುತ್ತದೆ. ಇದೊಂದು ಸ್ಥಳೀಯವಾಗಿ ನಡೆದಿರುವ ಕಾಳಗದಲ್ಲಿ ವೀರ ಭಾಗವಹಿಸಿ ಸತ್ತನೆಂದು ಹೇಳಬಹುದು. [ಎ.ಕ. ೧೦ (ರೈಸ್) ಶಿಡ್ಲಘಟ್ಟ ೬೯].

ಕುಲೋತ್ತುಂಗ ಚೋಳನ ಆಳ್ವಿಕೆಯನ್ನು ಉಲ್ಲೇಖಿಸುವ ಕೋಲಾರ ಜಿಲ್ಲೆ ಶಿಡ್ಲಘಟ್ಟದ ವೀರಗಲ್ಲು ಅಸ್ಪಷ್ಟವಾಗಿದ್ದು ಕೈವಾರನಾಡು ಮತ್ತು ಕುಙಿಪೂರಗಳನ್ನು ಉಲ್ಲೇಖಿಸುತ್ತದೆ. ಇದು ಪ್ರಾಯಃ ಸ್ಥಳೀಯ ಹೋರಾಟಕ್ಕೆ ಸಂಬಂಧಿಸಿದೆಂದು ತೋರುತ್ತದೆ. [ಎ.ಕ. ೧೦ (ರೈಸ್) ಶಿಡ್ಲಘಟ್ಟ ೩೦].

ಊರಳಿವು ವೀರಗಲ್ಲುಗಳು: ಕೋಲಾರ ಜಿಲ್ಲೆಯ ಮುಳುಬಾಗಿಲು ತಾಲ್ಲೂಕಿನ ಬಿಸ್ಸನಹಳ್ಳಿ ಗ್ರಾಮದಲ್ಲಿ ಒಂದನೇ ರಾಜರಾಜ ಚೋಳನ ಕಾಲಕ್ಕೆ ಸೇರಿದ (ಕ್ರಿ.ಶ. ಸು. ೧೦೦೦) ವೀರಗಲ್ಲಿನಲ್ಲಿ ಎಲವರದ ಕಥವಬೂರ ಮಯಗಾವುಂಡರ ಮಗ ಕ . . ತ್ತಯ . . ಗಿಯ . . . ಮಂಡಿಕಲ್ಲ ಊರಟಿವಿನೊಳ್ ಕಾದಿ ಸತ್ತಂ ಎಂಬ ವಿವರವಿದೆ. [ಎ.ಕ. ೧೦ (ರೈಸ್) ಮುಳಬಾಗಿಲು ೨೫೬]

ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ತಾಲ್ಲೂಕಿನ ಕಲ್ಲಹಳ್ಳಿ ಗ್ರಾಮದಲ್ಲಿ ಒಂದನೇ ರಾಜರಾಜ ಚೋಳನ ಕಾಲಕ್ಕೆ ಸೇರಿದ (ಕ್ರಿ.ಶ. ೧೦೧೦) ವೀರಗಲ್ಲಿನಲ್ಲಿ ಚೊಳರ ರಾಜರಾಜನ ಸಾಮಂತನಾಗಿ ನೊಳಂಬರ ಚೋರಯ್ಯನ ಆಳ್ವಿಕೆಯಲ್ಲಿ ಕೆಯಮಂಗಲ ಗ್ರಾಮದ ಊರಳಿವಿನ ಹೋರಾಟದಲ್ಲಿ ನನ್ನಿಯಭೂಪನ ಮಗ ಜೆಬಯ್ಯನಿಂದ ಬಳಲೆ ಚೋರನೊಳಂಬಸೆಟ್ಟಿ ನನ್ನಿಯಭೂಪನು ಕೊಳತೂರ ಕಲ್ನಾಡುಪಟ್ಟವನ್ನು ಪಡೆದನು. ವೀರಗಲ್ಲನ್ನು ವೀರನ ಅಣ್ಣ ನೆಲ್ಲಿಗೆರೆಯಲ್ಲಿ ಸ್ಥಾಪಿಸಿದನು. ನಿರ್ಗುಂದಸೆಟ್ಟಿ ಕಲ್ಲನ್ನು ನಿಲ್ಲಿಸಿದನು. [ಎ.ಕ. ೧೦ (ರೈಸ್) ಚಿಂತಾಮಣಿ ೧೧೮].

ಕಳ್ಳರೊಡನೆ ಹೋರಾಟದ ವೀರಗಲ್ಲುಗಳು: ಮೈಸೂರು ಜಿಲ್ಲೆಯ ಹೆಗ್ಗಡದೇವನಕೋಟೆ ತಾಲ್ಲೂಕಿನ ನಿಂಗಹಳ್ಳಿ ಗ್ರಾಮದ ಕ್ರಿ.ಶ. ೧೦೬೯–೭೦ರ ಈ ವೀರಗಲ್ಲು ಎರಡನೇ ರಾಜೇಂದ್ರಚೋಳನ ಕಾಲದ್ದಾಗಿದ್ದು, ತ್ರುಟಿತವಾಗಿರುವ ಈ ವೀರಗಲ್ಲು ಬಯನಾಡಹರಿನಲಿ ಬೀರ ಎಂಬುವನು ಕಳ್ಳರೊಂದಿಗೆ ಹೋರಾಡಿ ಅವರನ್ನು ಓಡಿಸಿ ವೀರಪದವಿಯನ್ನು ಪಡೆದನು. ಅವನ ಮಗನು ಪ್ರಾಯಃ ಈ ವೀರಗಲ್ಲನ್ನು ನೆಡಿಸಿದ್ದಾನೆ. [ಎ.ಕ.–೩ (ಪರಿಷ್ಕೃತ), ಹೆಗ್ಗಡದೇವನಕೋಟೆ ೧೨೨]

ಹಂದಿ ಬೇಟೆ ವೀರಗಲ್ಲುಗಳು: ಬೆಂಗಳೂರು ನಗರ ಜಿಲ್ಲೆಯ ಬೆಂಗಳೂರು ಉತ್ತರ ತಾಲ್ಲೂಕಿನ ಅಲ್ಲಾಳಸಂದ್ರ ಗ್ರಾಮದ ಈ ವೀರಗಲ್ಲು. ಒಂದನೇ ಕುಲೋತ್ತುಂಗ ಚೋಳನ ಕಾಲದ್ದಾಗಿದೆ. ಇದು ಕ್ರಿ.ಶ. ಸು. ೧೦೮೦ ಕ್ಕೆ ಸೇರಿದೆ. ಸಣ್ಣೆನಾಡ ಪ್ರಭು ಕಾಡೆಯನಾಯಕನ ಭಂಟ ಮುಮ್ಮಡಿ ನಟ್ಟಯನ ಮಗ ಗೂಳಿಯಣ್ಣನ ತಮ್ಮ ರಾಮದೇವನು ಬೇಟೆ ಹೊರವಟ್ಟು ಹಿರಿಯ ಹಂದಿಗೆ ಬೇಂಟೆಯಲು ಬಿಟ್ಟಾಗ ಅದನ್ನು ತಾಗಿ ಕೊಂದು ತಾನೂ ಗಾಯಗೊಂಡು ದೇಹ ಬಾಧೆಯಿಂದ ನರಳಿ ಮಡಿದ. [ಎ.ಕ. ೯ (ರೈಸ್) ಬೆಂಗಳೂರು ೩೨]

ಯಲಹಂಕದಲ್ಲಿದ್ದ ರಾಜೇಂದ್ರ ಚೋಳನ (೧೦೧೨–೪೪) ವೀರಗಲ್ಲಿನಿಂದ ಕನ್ನಾಲ ಎಂಬ ಗ್ರಾಮದ ಪಲ್ಲವ ಗಾವುಂಡ ನೆಂಬ ಬೇಟೆಗಾರನ ನಾಯಿ ಮಾದಕೇಸರಿ ಎಂಬುದು ಹಂದಿಯೊಡನೆ ಹೋರಾಡುವಲ್ಲಿ ಸತ್ತ ವಿಷಯ ತಿಳಿಯುತ್ತದೆ. [ಎಂ. ಚಿದಾನಂದಮೂರ್ತಿ., ಬೇಟೆಯ ವೀರಗಲ್ಲುಗಳು, ಉದಯವಾಣಿ (ದೀಪಾವಳಿ ವಿಶೇಷಾಂಕ ೧೯೭೩), ಪು. ೬೫].

ಮಾಸ್ತಿಕಲ್ಲುಗಳು: ಕ್ರಿ.ಶ. ಸು. ಹನ್ನೊಂದನೇ ಶತಮಾನದ ಶಾಸನ ಚಿತ್ತೂರು ಜಿಲ್ಲೆ ಪುಂಗನೂರು ತಾಲ್ಲೂಕಿನ ಕರ್ಶನಪಲ್ಲಿ ಗ್ರಾಮದಲ್ಲಿದ್ದು, ಚೋಳ ದೊರೆಇಮ್ಮಡಿ ರಾಜೇಂದ್ರನ ಆಳ್ವಿಕೆಯಲ್ಲಿ ಮುತ್ತಕೂರು ಕಿತ್ತಿಗಾವುಂಡನ ಮಗಳು ನಡುಳಬ್ಬೆ ಸತ್ತಳ್ ಎಂ ವಿವರ ಬಂದಿದೆ. [ಕವಿಶಾಸಂ–೫ ಶಾ.ಸಂ. ೨೨೩]

ಮೈಸೂರು ಜಿಲ್ಲೆಯ ಹೆಗ್ಗಡದೇವನಕೋಟೆ ತಾಲ್ಲೂಕಿನ ಬೆಳತೂರು ಗ್ರಾಮದ ಹೊಲವೊಂದರಲ್ಲಿರುವ ಬಿಸಕಲಮ್ಮನ ಗುಡಿಯ ಬಳಿ ಇರುವ ಶಾಸನ ಶಿಲ್ಪದ ಕಲ್ಲು ವಿಶಿಷ್ಟವಾದುದು. ಇದು ಇಮ್ಮಡಿ ರಾಜೇಂದ್ರನ ಕಾಲಕ್ಕೆ ಅಂದರೆ ಕ್ರಿ.ಶ. ೧೦೫೭ಕ್ಕೆ ಸೇರಿದೆ. ನುಗನಾಡಿನ ಅಧಿಪನಾದ ರವಿಗನು ತನ್ನ ಮಗಳಾದ ದೇಕಬ್ಬೆಗಾಗಿ ಹಾಕಿಸಿದ ಮಾಸ್ತಿಕಲ್ಲು ಇದಾಗಿದೆ. ಆಕೆ ನವಲೆನಾಡಿನ ಪೆರ್ವಯಲ ಏಚನನ್ನು ಮದವೆಯಾಗಿದ್ದಳು. ಆಕೆಯ ಗಂಡನಾದ ಏಚನನ್ನು ಚೋಳರಾಜ ತನ್ನ ದಾಯಿಗರನ್ನು ಪ್ರಾಯಃ ಘಾತಿಸಿದಕ್ಕಾಗಿ ತಲಕಾಡಿಗೆ ಹೊಯ್ದು ಕೊಂದುಹಾಕಿದರು ಆ ವಾರ್ತೆಯನ್ನು ಕೇಳಿ ದೇಕಬ್ಬೆ ಮಹಾಸತಿ ಆಗಲು ನಿಶ್ಚೈಸಿದಳು, ಬಂಧು ಭಾಂದವರು ವಿರೋಧಿಸಿದರೂ ಕೇಳದೆ ನಯವಾಗಿ ಧಿಕ್ಕರಿಸಿ ದೇವರಿಗೆ ನಂದಾದೀವಿಗೆ, ನೈವೇಧ್ಯ ಮುಂತಾದವುಗಳಿಗೆಲ್ಲಾ ದ್ರವ್ಯದಾನ, ಭೂಮಿ ದಾನ ಮುಂತಾದವುಗಳನ್ನು ಮಾಡಿ ದೇವರಿಗೆ ಪ್ರೀತಿಯಿಂದ ಕೈಮುಗಿದು ಉರಿ ಉರಿಯನ್ನು ಪೊಕ್ಕು ದೇವಲೋಕಕ್ಕೆ ಹೋದಳೆಂಬ ವರ್ಣನೆ ಕಾವ್ಯಮಯವಾಗಿ ಬಂದಿದೆ. ಇತ್ತೀಚೆಗೆ ಆ ಶಾಸನ ಶಿಲೆಯ ಹಿಂಬದಿಯಲ್ಲಿದ್ದ ಸಚಿತ್ರ ವಿರಣೆಯನ್ನು ಮಾನ್ಯ ಡಾ. ಡಿ.ವಿ. ಪರಮಶಿವಮೂರ್ತಿ ಅವರು ಬೆಳಕಿಗೆ ತಂದಿದ್ದಾರೆ. ಸದ್ಯದಮಟ್ಟಿಗೆಮಾಸ್ತಿ ಆಚರಣೆಗೆ ಸಂಬಂಧಿಸಿದ ವಿಸ್ತೃತ ಶಿಲ್ಪ ಇದೊಂದೆ ಎಂದು ತೋರುತ್ತದೆ. [ಎ.ಕ.–೩ (ಪರಿಷ್ಕೃತ), ಹೆಗ್ಗಡದೇವನಕೋಟೆ ೬೦]

ಮೈಸೂರು ಜಿಲ್ಲೆಯ ಹೆಗ್ಗಡದೇವನಕೋಟೆ ತಾಲ್ಲೂಕಿನ ಹೆಬ್ಬಲಗುಪ್ಪೆ ಗ್ರಾಮದ ರಾಮೇಶ್ವರ ದೇವಾಲಯದ ಬಳಿ ನೆಟ್ಟ ಸ್ಮಾರಕ ಶಿಲೆ. ಇದು ಒಂದನೇ ಕುಲೋತುಂಗ ಚೋಳನ ಕಾಲದ್ದಾಗಿದೆ (ಕ್ರಿ.ಶ. ೧೦೮೮–೮೯). ಇದು ಸಾಕಷ್ಟು ಸವೆದಿದ್ದು ನವಿಲೆನಾಡಿನ ನಾಳಗಾವುಂಡ ಪೆರ್ವ್ವಯಲ ಅಬಿಗಿಯಚೋಳನು, ಆತನ ಮಗ ನವಲಾಷಿರಾಜ ಸತ್ತಾಗ ಆತನ ಮಡದಿ ತಪಜೆಯಕಮ್ಮಾರಿ ಎಂಬುವಳು ಉಯ್ದು ಸತ್ತಳು ಆಗ ಪ್ರಾಯಃ ಅವರ ನೆನಪಿನಲ್ಲಿ ಅಬಿಗಿಯಚೋಳನು ಅವರಿಗೆ ಸದ್ಗತಿಯನ್ನು ಕೋರಿ (ರಾಮೇಶ್ವರದೇವರಿಗೆ) ಹೊಲ ಗದ್ದೆ ಭೂಮಿಗಳನ್ನು ದತ್ತಿ ಬಿಟ್ಟ ವಿವರವಿದ್ದಂತಿದೆ. [ಎ.ಕ.–೩ (ಪರಿಷ್ಕೃತ), ಹೆಗ್ಗಡದೇವನಕೋಟೆ ೬೧]

ಇತರ ಸ್ಮಾರಕಗಳು: ಮೈಸೂರು ಜಿಲ್ಲೆಯ ಹುಣಸೂರು ತಾಲ್ಲೂಕಿನ ಮರೂರು ಗ್ರಾಮದ ಈ ವೀರಗಲ್ಲು ತ್ರುಟಿತವಿದ್ದು ಒಂದನೇ ರಾಜೇಂದ್ರ ಚೋಳನ (ಕ್ರಿ.ಶ. ೧೦೨೦–೨೧?) ಕಾಲದ್ದು, ಈ ವೀರಗಲ್ಲು ಬಮ್ಮಗಾವುಂಡನಾಡಿನ ವರಲಕ್ಷ ಗಾವುಂಡನ ಮಗ ರಾಜೇಂದ್ರ ಚೋಳಸೆಟ್ಟಿಯ ಮರಣಕ್ಕೆ ಸಂಬಂಧಿಸಿದೆ. ಇದಲ್ಲದೆ ಹುಲಿಮುದ್ದನಾದ ರಾಜೇಂದ್ರಚೋಳನಾಟ್ಟರ್, ಚೋಳ ಚಟ್ಟಯನಿಕ್ಕಿ ಕೊಂದ ಮದ್ದಯ್ಯನನ್ನು ಕೊಂದು ತಳವ ತಂದಂ, ನಟ್ಟರೆಯನಿಗೆ ಕೆಳೆಯಬ್ಬೆ ಸಿರಿಕಾವಣ್ಣ ಬಿ . ಣ್ಣನು ಜಟ್ಟಯಬಯಲಲ್ಲಿ? .. . .ಎಣ್ಬು ಕಣ್ಬುಗ ಎಂಬುವ ಅಸ್ಪಷ್ಟ, ತ್ರುಟಿತ ಉಲ್ಲೇಖಗಳು ಕಾಣುತ್ತದೆ.[ಎ.ಕ.–೪ (ಪರಿಷ್ಕೃತ), ಹುಣಸೂರು ೪].

ಕ್ರಿ.ಶ. ಸು. ಹನ್ನೊಂದನೆ ಶತಮಾನದ ಚೋಳ ದೊರೆ ಮೊದಲನೆಯ ರಾಜೇಂದ್ರನ ಶಾಸನ ಕೃಷ್ಣಗಿರಿ ಜಿಲ್ಲೆ ಡೆಂಕಣಿಕೋಟೆ ತಾಲ್ಲೂಕಿನ ಚಿನ್ನಟ್ಟಿ ಗ್ರಾಮದಲ್ಲಿದ್ದು, ತ್ರುಟಿತವಿದೆ. ಇದರಲ್ಲಿ ರಕ್ಕಸಗಂಗನ ಅನೇಕ ಬಿರುದಗಳ ಪಟ್ಟಿ ಇಲ್ಲಿದೆ.ದೆ. ಎರಡು ಕೆರೆಗಳ ನಿರ್ಮಾಣ ಅದರ ನಿರ್ವಹಣೆಗೆ ಕೆಲವು ದತ್ತಿಗಳನ್ನು ನೀಡಿರುವ ವಿವಗಳೊಂದಿಗೆ ಮಲ್ಲಯ್ಯನ ಮಗ . . . . ಪರಲೋಕ ಪ್ರಾಪ್ತನಾದಾಗ ಆತನ ಭೋಗೆ (ಹೆಂಡತಿ) ಕೇತಬ್ಬೆ ತಲೆಯನ್ನು ಕಡಿಸಿಕೊಂಡು ಸತ್ತಳು. ಎಂಬ ಅಸ್ಪಷ್ಟ ವಿವರಗಳು ದಾಖಲಾಗಿವೆ. [ಪಿವಿಕೆ., ತಮಿಳುನಾಡಿನ ಕನ್ನಡ ಶಾಸನಗಳು, ಶಾಸಂ–೭೪, ಪು. ೯೮].

ಹೋರಾಟವೊಂದರಲ್ಲಿ ವ್ಯಕ್ತಿಯೊರ್ವನು ಮಡಿದನು ಆಗ ಅವನ ಗೆಳೆಯನು ಪ್ರತಿಯಾಗಿ ಮುಡಿಗೊಂಡಚೋಳ ಮಂಡಲದ ನವಲೆನಾಡಿನಲ್ಲಿ ಅವನ ವೈರಿಯನ್ನು ಕೊಂದನೆಂಬ ವಿವರ ಮೈಸೂರು ಜಿಲ್ಲೆ ಹೆಗ್ಗಡದೇವನಕೋಟೆ ತಾಲ್ಲೂಕಿನ ಗುಜ್ಜಪ್ಪನಹುಂಡಿ ಗ್ರಾಮದ ಕ್ರಿ.ಶ. ೧೦೬೩ರ ಶಾಸನದಲ್ಲಿ ಬಂದಿದೆ. [ಎ.ಕ.–೩ (ಪರಿಷ್ಕೃತ), ಹೆಗ್ಗಡದೇವನಕೋಟೆ ೩೪].

ಆಕರ ಗ್ರಂಥಗಳು

೧. ಎಪಿಗ್ರಾಫಿಯಾ ಕರ್ನಾಟಿಕ, ಶಾಸನ ಸಂಪುಟಗಳು, ರೈಸ್ ಮತ್ತು ಪರಿಷ್ಕೃತ ಆವೃತ್ತಿಗಳು, ಮೈಸೂರು.

೨. ಕನ್ನಡ ವಿಶ್ವವಿದ್ಯಾಲಯದ ಶಾಸನ ಸಂಪುಟ ೪ ಮತ್ತು ೫, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩. ತಮಿಳುನಾಡಿನ ಕನ್ನಡ ಶಾಸನಗಳು, ಪಿ.ವಿ. ಕೃಷ್ಣಮೂರ್ತಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೧೮.

ಹೈದರಾಲಿ ಕಾಲದ ಮಿಂಚುಕಲ್ಲು ಬೆಟ್ಟದ ಕೋಟೆ

ಎನ್. ನಂದೀಶ್ವರ*

ಹೈದರಾಲಿ ಕಾಲದಲ್ಲಿ ತನ್ನ ರಾಜ್ಯದಾದ್ಯಂತ ಅನೇಕ ಕೋಟೆ ಕೊತ್ತಲಗಳನ್ನು ಕಟ್ಟಿಸುವುದರ ಜೊತೆಗೆ, ಅವುಗಳನ್ನು ಜೀರ್ಣೋದ್ಧಾರವನ್ನು ಮಾಡಿಸಿದರೆಂದು ಅನೇಕ ವಿದ್ವಾಂಸರು ತಿಳಿಸುತ್ತಾರೆ. ಇಂತಹ ಕಟ್ಟಿಸಿದ ಕೋಟೆಗಳಲ್ಲಿ ತುಮಕೂರು ಜಿಲ್ಲೆಯ ತುಮಕೂರು ತಾಲ್ಲೂಕಿನ ಮಿಂಚುಕಲ್ಲು ಬೆಟ್ಟದ ಕೋಟೆಯು ಒಂದಾಗಿದೆ.ಆದರೆ ಈ ಅಜ್ಞಾತ ಕೋಟೆಯನ್ನು ಹೈದರಾಲಿ ನಿರ್ಮಿಸಿದ ಬಗ್ಗೆಯಾಗಲಿ ಅಥವಾ ಮಿಂಚುಗಲ್ಲು ಕೋಟೆಯ ಬಗ್ಗೆಯಾಗಲಿ ಇತಿಹಾಸಕಾರರ ಗಮನಕ್ಕೆ ಬಂದಿಲ್ಲ. ಇದನ್ನು ತಿಳಿಸುವುದೇ ಈ ಪ್ರಬಂಧದ ಉದ್ದೇಶ.

ತುಮಕೂರು ಜಿಲ್ಲೆಯ ಪಶ್ಚಿಮ ಭಾಗದಲ್ಲಿ ದಕ್ಷಿಣ, ಆಗ್ನೇಯ ದಿಕ್ಕಿನ ಕಡೆ ಬೆಟ್ಟಗಳ ಸುಮಾರು ಉದ್ದನೆಯ ಸಾಲುಗಳಿವೆ. ಇಲ್ಲಿರುವ ಬೆಟ್ಟಗಳ ಸಾಲು ಚಿತ್ರದುರ್ಗ ಸಿ(ಶಿ)ಸ್ಟ್ ಪಟ್ಟಿಯ ದಕ್ಷಿಣ ದಿಕ್ಕಿನ ವಿಸ್ತರಣೆಯಾಗಿದ್ದು ರಾಜ್ಯದಲ್ಲಿ ಕಂಡುಬರುವ ಧಾರವಾಡ ಶಿಸ್ಟ್‌ಗಳ ಕೇಂದ್ರ ಗುಂಪಿಗೆ ಸೇರುತ್ತವೆ. ಜಿಲ್ಲೆಯ ಪೂರ್ವ ಭಾಗಕ್ಕೆ ಕಡಿದಾದ ಗ್ರಾನೈಟ್ ಬಂಡೆಗಳ ಬೆಟ್ಟಗಳಿವೆ. ಈ ಗುಂಪಿನ ಬೆಟ್ಟಗಳಲ್ಲಿ ದೇವರಾಯನದುರ್ಗ ಮತ್ತು ಮಧುಗಿರಿ ಬೆಟ್ಟಗಳನ್ನು ಸೇರಿಸಬಹುದು. ಈ ಜಿಲ್ಲೆಯಲ್ಲಿ ಉತ್ತರದಿಂದ ದಕ್ಷಿಣಕ್ಕೆ ಎರಡು ಸಮಾನಾಂತರದ ಬೆಟ್ಟಗಳ ಸಾಲುಗಳಿವೆ. ಮೊದಲನೆಯ ಸಾಲು ಜಿಲ್ಲೆಯ ಪೂರ್ವ ಭಾಗದಲ್ಲಿದ್ದು ಗ್ರಾನೈಟ್ ಶಿಲೆಗಳಿಂದ ರಚಿತವಾಗಿದೆ ಮತ್ತು ಇವು ಪಾವಗಡ, ಮಧುಗಿರಿ, ಕೊರಟಗೆರೆ ಮತ್ತು ತುಮಕೂರು ತಾಲ್ಲೂಕಿನ ಉತ್ತರದ ಭಾಗದ ಮುಖಾಂತರ ಹಾದು ಹೋಗುತ್ತವೆ. ಎರಡನೇ ಸಾಲಿನವು ಪ್ರಮುಖವಾಗಿ ಶಿಸ್ಟೋಸ್ ಬಂಡೆಗಳಿಂದ ಕೂಡಿದ್ದು ಜಿಲ್ಲೆಯ ಪಶ್ಚಿಮ ಭಾಗದಲ್ಲಿ ಸಿರಾ ಮತ್ತು ಗುಬ್ಬಿ ತಾಲ್ಲೂಕುಗಳ ಮೂಲಕ ಹಾದು ಹೋಗುತ್ತವೆ. ಕುಣಿಗಲ್ ತಾಲ್ಲೂಕಿನ ಮಧ್ಯಭಾಗ ಮತ್ತು ದಕ್ಷಿಣ ಭಾಗಗಳಲ್ಲಿ ಬೆಟ್ಟಗಳ ಮತ್ತೊಂದು ಗುಂಪಿದೆ[೧].

ತುಮಕೂರು ತಾಲ್ಲೂಕಿನಲ್ಲಿ ದೇವರಾಯನದುರ್ಗ ೩೮೯೬ ಅಡಿ, ರಾಮದೇವರ ಬೆಟ್ಟ ೩೮೮೧ ಅಡಿ, ಮಂದರಗಿರಿ ಬೆಟ್ಟ ೨೫೬೦ ಅಡಿ, ಸೀತಕಲ್ಲು ಬೆಟ್ಟ ೨೨೪೫ ಅಡಿ, ಮಧುಗಿರಿ ತಾಲ್ಲೂಕಿನಲ್ಲಿ ಮಧುಗಿರಿ ಬೆಟ್ಟ ೩೯೩೦ ಅಡಿ, ಮಿಡಿಗೇಶಿ ಬೆಟ್ಟ ೩೪೮೯ ಅಡಿ, ಬ್ಯಾಲ್ಯ ಬೆಟ್ಟ ೨೯೧೩ ಅಡಿ, ಕೊರಟಗೆರೆ ತಾಲ್ಲೂಕಿನಲ್ಲಿ ಚನ್ನರಾಯನದುರ್ಗ ೩೭೩೪ ಅಡಿ, ಕೊರಟಗೆರೆ ಬೆಟ್ಟ ೨೮೮೫ ಅಡಿ, ಸಿದ್ಧರಬೆಟ್ಟ ೨೬೫೦ ಅಡಿ, ಪಾವಗಡ ತಾಲ್ಲೂಕಿನಲ್ಲಿ ಕಾಮನದುರ್ಗ ೩೫೩೪ ಅಡಿ, ನಿಡಗಲ್ ಬೆಟ್ಟ ೩೭೬೯ ಅಡಿ, ಪಾವಗಡ ಬೆಟ್ಟ ೩೦೧೨ ಅಡಿ, ಯಲ್ಲಪ್ಪನಾಯಕನ ಕೋಟೆ (ವೈ.ಎನ್. ಹೊಸಕೋಟೆ ಬೆಟ್ಟ) ೨೬೭೦ ಅಡಿ, ತಿಪಟೂರು ತಾಲ್ಲೂಕು ಬೊಮ್ಮನಹಳ್ಳಿ ಬೆಟ್ಟ ೩೧೨೫ ಅಡಿ, ಚೌಡನಹಳ್ಳಿ ಬೆಟ್ಟ ೨೬೬೫ ಅಡಿ, ಕುಣಿಗಲ್ ತಾಲ್ಲೂಕಿನಲ್ಲಿ ಹುತ್ರಿದುರ್ಗ ೩೭೦೮ ಅಡಿ, ಹುಲಿಯೂರು ದುರ್ಗ ೨೭೭೧ ಅಡಿ, ಹೇಮಗಿರಿ ಬೆಟ್ಟ ೩೦೮೩ ಅಡಿ, ರಂಗಸ್ವಾಮಿ ಬೆಟ್ಟ ೨೯೯೭ ಅಡಿಗಳಷ್ಟು ಎತ್ತರ ಇದ್ದು, ಇವು ಜಿಲ್ಲೆಯಲ್ಲಿರುವ ಅತಿ ಪ್ರಮುಖ ಬೆಟ್ಟಗಳಾಗಿರುತ್ತವೆ[೨].

ತುಮಕೂರು ಕೊರಟಗೆರೆ ರಸ್ತೆಯಲ್ಲಿ ಬೆಳಧರ ಗ್ರಾಮದಿಂದ ಪೂರ್ವಕ್ಕೆ ೧.೫ ದೂರದಲ್ಲಿ, ತಾಲ್ಲೂಕು ಹಾಗೂ ಜಿಲ್ಲಾ ಕೇಂದ್ರವಾದ ತುಮಕೂರಿನಿಂದ ೧೬ ಕಿ.ಮೀ. ದೂರದಲ್ಲಿ ಅಹೋಬಲ ಅಗ್ರಹಾರ ಗ್ರಾಮವಿದೆ. ಅಹೋಬಲ ಅಗ್ರಹಾರ ಗ್ರಾಮದ ಪೂರ್ವಕ್ಕೆ ಹಾಗೂ ದಕ್ಷಿಣಕ್ಕೆ ಊರ ಬಾಗಿಲು ಇದೆ. ಸುತ್ತಲೂ ರಕ್ಷಣಾ ಗೋಡೆ ಇದೆ.ಈ ಗ್ರಾಮದಲ್ಲಿ ೫ ಬ್ರಾಹ್ಮಣರ ಮನೆಗಳು ಹಿಂದೆ ಇದ್ದವು.ಆದರೆ ಇವರು ೪-೫ ವರ್ಷಗಳ ಹಿಂದೆ ಬೆಂಗಳೂರು ನಗರವನ್ನು ಸೇರಿದ ನಂತರ ಇಂದು ಗ್ರಾಮದಲ್ಲಿ ಯಾರು ಇರುವುದಿಲ್ಲ. ಈ ಬ್ರಾಹ್ಮಣರು ವಾಸಿಸುತ್ತಿದ್ದ ಪ್ರದೇಶದ ಜಾಗವೇ ಹಿಂದೆ ಅಗ್ರಹಾರವಾಗಿತ್ತು.ಈ ಪ್ರದೇಶದಲ್ಲಿ ರಾಮೇಶ್ವರ ದೇವಸ್ಥಾನವಿದೆ.

ಅಹೋಬಲ ಅಗ್ರಹಾರ ಉತ್ತರಕ್ಕೆ ೨.೫ ಕಿ.ಮೀ. ದೂರಲ್ಲಿ ಮಿಂಚುಕಲ್ಲು ಬೆಟ್ಟ ಇದೆ. ಈ ಬೆಟ್ಟವು ೩೬೧೨.೮ ಅಡಿ ಎತ್ತರವನ್ನು ಹೊಂದಿದೆ.ಈ ಬೆಟ್ಟದ ಹತ್ತಿರ ಮಿಂಚುಕಲ್ಲು ಗೊಲ್ಲಹಳ್ಳಿ ಇದೆ. ಈ ಬೆಟ್ಟದ ಉತ್ತರಕ್ಕೆ ಮಿಂಚುಕಲ್ಲು ಗೊಲ್ಲಹಳ್ಳಿ,

* ಪ್ರಾಂಶುಪಾಲರು, ಪೂರ್ಣಚಂದ್ರ ತೇಜಸ್ವಿ ಸದನ, ಸಿದ್ಧಪ್ಪ ಲೇಔಟ್, ಸಿರಾ ಟೌನ್, ತುಮಕೂರು, ಮೊ. ೯೯೬೪೭ ೦೭೧೨೩

ದಕ್ಷಿಣಕ್ಕೆ ಜಕ್ಕೇನಹಳ್ಳಿ, ಪೂರ್ವಕ್ಕೆ ಕೊರಟಗೆರೆ ತಾಲ್ಲೂಕಿನ ಹೊಸಕೋಟೆ, ಪಶ್ಚಿಮಕ್ಕೆ ಅಹೋಬಲ ಅಗ್ರಹಾರ, ಆಗ್ನೇಯಕ್ಕೆ ಹೊನ್ನೇನಹಳ್ಳಿ, ವಾಯುವ್ಯಕ್ಕೆ ಮಸಣಿಪಾಳ್ಯ, ಈಶಾನ್ಯಕ್ಕೆ ನವಿಲುಕುರಿಕೆ, ನೈರುತ್ಯಕ್ಕೆ ಜಿನವಾರದಹಳ್ಳಿ, ಮಲ್ಲಯ್ಯನಪಾಳ್ಯ, ಅನ್ನದಾನಶಾಸ್ತ್ರಿಪಾಳ್ಯ ಗ್ರಾಮಗಳು ಇರುತ್ತವೆ. ಬೆಟ್ಟದ ಕೆಲ ಭಾಗ ಹಾಗೂ ದೇವರಬೆಟ್ಟವು ಸೇರಿ ಮಿಂಚಿಕಲ್ ಕಾಯ್ದಿರಿಸಿದ ಅರಣ್ಯ ಪ್ರದೇಶವಿದೆ. ಮಿಂಚುಕಲ್ಲು ಬೆಟ್ಟದ ಈಶಾನ್ಯಕ್ಕೆ ಹಂಚಿಹಳ್ಳಿ ಬೆಟ್ಟ (೩೧೩೨ ಅಡಿ), ದಕ್ಷಿಣಕ್ಕೆ ದೇವರಾಯನದುರ್ಗ (೩೮೯೬ ಅಡಿ), ಚಿನ್ನಾಗರ ಬೆಟ್ಟ (೪೦೧೬ ಅಡಿ), ವಾಯುವ್ಯಕ್ಕೆ ಕಾವರಗಲ್ ಬೆಟ್ಟ (೩೫೬೪ ಅಡಿ), ಭೀಮನಬೆಟ್ಟ (೩೩೮೫ ಅಡಿ), ಅಜ್ಜಿ ಬೆಟ್ಟ(೩೭೮೬ ಅಡಿ)ಗಳು ಇವೆ[೩].

ಮಿಂಚುಕಲ್ಲು ಬೆಟ್ಟವನ್ನು ಪಶ್ಚಿಮ ದಿಕ್ಕಿನಿಂದ ಮೇಲೇರುತ್ತಾ ಹೋದರೆ ಮೊದಲ ಸುತ್ತಿನ ಕೋಟೆ ಹಾಗೂ ಕೋಟೆ ಬಾಗಿಲು ಕಂಡುಬರುತ್ತದೆ. ಬೆಟ್ಟದ ಮಧ್ಯಭಾಗದಲ್ಲಿ ಮುದಕದ ಕಟ್ಟೆ ಇದೆ. ಇದು ಮಣ್ಣು ತುಂಬಿ ಇಂದು ನೀರು ನಿಲ್ಲುತ್ತಿಲ್ಲ.

ಒಂದನೇ ಕೋಟೆಯಿಂದ ಎರಡನೇ ಕೋಟೆಗೆ ೫೦೦-೬೦೦ ಅಡಿ ಅಂತರವಿದೆ. ಕೋಟೆಯ ಬಾಗಿಲು ಕಿತ್ತು ಹಾಕಲಾಗಿದೆ. ಬಾಗಿಲಿನಲ್ಲಿ ನಿಲ್ಲಿಸಿರುವ ಕಂಬಗಳಲ್ಲಿ ಆಂಜನೇಯ, ವೀರನ ಚಿತ್ರಗಳನ್ನು ಕೆತ್ತಿರುತ್ತಾರೆ. ಒಂದನೇ ಕೋಟೆ ಬಾಗಿಲಿಗೆ ೧೦೦ ಅಡಿ ಅಂತರದಲ್ಲಿ ಇನ್ನೊಂದು ಕೋಟೆ ಪ್ರವೇಶ ದ್ವಾರವಿದೆ. ಒಂದನೇ ಕೋಟೆ ಬಾಗಿಲ ಹತ್ತಿರ ಬಂಡೆಯ ಮೇಲೆ ಒಳಕಲ್ಲು ಇವೆ. ಒಂದನೆ ಹಾಗೂ ಎರಡನೇ ಕೋಟೆ ಮಧ್ಯದಲ್ಲಿ ಸೈನಿಕರ ವಾಸದ ತಳಪಾಯ ಇವೆ. ಆದರೆ ಇವುಗಳು ಬಿದ್ದು ಅಧಿಷ್ಟಾನ ಮಾತ್ರ ಉಳಿದಿದೆ. ಈ ಎರಡು ಕೋಟೆಗಳಿಗೆ ಪ್ರಕೃತಿಯಲ್ಲಿ ಸಿಗುವ ಕಲ್ಲನ್ನು ಯಾವುದೇ ರೀತಿ ಕೆತ್ತನೆ ಮಾಡದೆ ಮಣ್ಣನ್ನು ಉಪಯೋಗಿಸಿ ಕೋಟೆ ಗೋಡೆ ನಿರ್ಮಿಸಿರುತ್ತಾರೆ. ಎರಡನೇ ಕೋಟೆಯ ಕೆಳಭಾಗದಲ್ಲಿ ದಕ್ಷಿಣ ದಿಕ್ಕಿನಲ್ಲಿ ಜಕ್ಕೇನಹಳ್ಳಿ ಊರ ಬಾಗಿಲು ಎಂದು ಕರೆಯುತ್ತಿದ್ದರು.ಆದರೆ ಇಂದು ಮಳೆ ಬಂದು ಈ ಊರ ಬಾಗಿಲು ಬಿದ್ದು, ಕೆಳಗೆ ಜರುಗಿ ಹೋಗಿರುತ್ತದೆ.

ಮೂರನೆಯ ಸುತ್ತಿನ ಕೋಟೆಯನ್ನು ಅತ್ಯಂತ ನಯವಾಗಿ ಕಟ್ಟಿರುತ್ತಾರೆ. ಸಾಳ್ವ ನರಸಿಂಹ ಹಾಗೂ ೨ನೇ ನರಸಿಂಹ ವಿಜಯನಗರದಿಂದ ಆಳ್ವಿಕೆ ನಡೆಸಿರುತ್ತಾರೆ. ಈ ಸಾಳ್ವ ವಂಶದಲ್ಲಿ ಆಹೋಬಲ ವೀರನರಸಿಂಹ ಕೂಡ ಒಬ್ಬನಾಗಿದ್ದ. ಈ ವಂಶದ ಅಹೋಬಲ ನರಸಿಂಹನ ಹೆಸರಿನಲ್ಲಿ ಅಹೋಬಲ ಅಗ್ರಹಾರ ಸ್ಥಾಪನೆಯಾಗಿರುವ ಸಾಧ್ಯತೆ ಉಂಟು.

ಮೂರನೆಯ ಸುತ್ತಿನ ಕೋಟೆಯು ಸುಮಾರು ೩೦೦ ಅಡಿ ಉದ್ದ ಬೆಟ್ಟದ ಅಚ್ಚಿನಂತೆ ಸ್ವಲ್ಪವೂ ಸಂದು ಇಲ್ಲದೆ ಗಾರೆ, ಕೆಸರು ಮಣ್ಣು ಉಪಯೋಗಿಸದೆ ಕೋಟೆ ನಿರ್ಮಾಣವಾಗಿದೆ. ಅಹೋಬಲ ಅಗ್ರಹಾರದ ಜೊತೆಗೆ ಮೂರನೆ ಸುತ್ತಿನ ಕೋಟೆಯನ್ನು ನಿರ್ಮಿಸಿದ್ದಿರಬಹುದು. ಅದರ ಮೇಲೆ ನಂತರ ಬಹುಶಃ ಹೈದರಾಲಿ ಅಳ್ವಿಕೆಯ ಕಾಲದಲ್ಲಿ ದಿಂಡಿಕಲ್ಲುಗಳನ್ನು ಉಪಯೋಗಿಸಿ ಕೋಟೆ ಗೋಡೆಯನ್ನು ನಿರ್ಮಿಸಿರುತ್ತಾರೆ. ಬೆಲ್ಲ ಅಚ್ಚಿನಂತಿರುವ ಕೆಲವೆಡೆ ೧೦ ಸಾಲುಗಳಲ್ಲಿ ಕಟ್ಟಿದ ಕೋಟೆ ಇದೆ. ವಿಜಯನಗರ ಅರಸರ ರಾಜಧಾನಿಯಾದ ಇಂದಿನ ಹಂಪೆಯಲ್ಲೂ ಕೂಡ ಇದೇ ಮಾದರಿಯ ಕೋಟೆ ಗೋಡೆಗಳನ್ನು ನಾವು ಇಂದಿಗೂ ಕಾಣಬಹುದಾಗಿದೆ. ಮಿಂಚುಕಲ್ಲು ಬೆಟ್ಟದ ಕೋಟೆಯು ಗಿರಿದುರ್ಗ ಕೋಟೆಯ ಸಾಲಿಗೆ ಸೇರುತ್ತದೆ.

ಮೂರನೆಯ ಸುತ್ತಿನ ಕೋಟೆ ದಾಟಿ ಹೋದರೆ ಕಾವಲು ಮಂಟಪ ಇದೆ. ಇದರಲ್ಲಿ ೫ ಅಡಿ ಎತ್ತರದ ಬಂಡೆಗೆ ಆಂಜನೇಯನ ವಿಗ್ರಹವನ್ನು ಕೆತ್ತಿ, ದೇವಸ್ಥಾನ ನಿರ್ಮಿಸಿರುತ್ತಾರೆ. ಮೂರನೇ ಸುತ್ತಿನ ಕೋಟೆಯಲ್ಲಿ ಅರ್ಧಚಂದ್ರಾಕಾರದ ಕೊತ್ತಲ ಇದೆ. ಪೂರ್ವ ದಿಕ್ಕಿನಲ್ಲಿ ಬೆಟ್ಟ ಕಡಿದಾಗಿ ಇರುವುದರಿಂದ ಕೋಟೆಯನ್ನು ಪೂರ್ತಿ ಕಟ್ಟಿರುವುದಿಲ್ಲ. ಪಶ್ಚಿಮ ದಿಕ್ಕಿನಲ್ಲಿ ಮಾತ್ರ ಕೋಟೆಯನ್ನು ಹತ್ತಬಹುದು.

ಮಿಂಚುಕಲ್ಲು ಬೆಟ್ಟದ ತುಂಬೆಲ್ಲಾ ತಗ್ಗು ಪ್ರದೇಶ ಇರುವ ಕಡೆ ಕಟ್ಟೆಯನ್ನು ಕಟ್ಟಿ ನೀರಿನ ದೊಣೆಯನ್ನು ನಿರ್ಮಿಸಿರುತ್ತಾರೆ. ಬೆಟ್ಟದ ಮೊದಲನೇ ಕೋಟೆ ಬಾಗಿನಿಂದ ಶಿಖರಾಗ್ರದ ಕೋಟೆಯವರೆಗೆ ಕಲ್ಲಿನ ದಾರಿಯನ್ನು ನಿರ್ಮಿಸಿರುವುದನ್ನು ನಾವು ಇಂದಿಗೂ ನೋಡಬಹುದಾಗಿದೆ.

ಬೆಟ್ಟದ ಶಿಖರಾಗ್ರಹದಲ್ಲಿ ವೆಂಕಟಪ್ಪನವರ ಅರಮನೆ ಇದೆ. ಕ್ಷೇತ್ರ ಕಾರ್ಯಕ್ಕೆ ದಿನಾಂಕ ೨೬-೯-೨೦೨೦ ರಂದು ಇಲ್ಲಿಗೆ ಭೇಟಿ ನೀಡಿದಾಗ ಮೂಡಲಗಿರಿಯಪ್ಪ ನಿವೃತ್ತ ಆರೋಗ್ಯ ಇಲಾಖೆಯ ಇನ್‌ಸ್ಪೆಕ್ಟರ್ ಹಾಗೂ ವೆಂಕಟೇಶ್ ಸನ್ ಆಫ್ ವೆಂಕಟರವಣಪ್ಪ ಮಾಜಿ ಗ್ರಾಮ ಪಂಚಾಯಿತಿ ಸದಸ್ಯರು ಹಾಗೂ ಸುತ್ತಮುತ್ತಲಿನ ಗ್ರಾಮಸ್ಥರು ವಯೋವೃದ್ಧರು ಇಂದಿಗೂ ಕೂಡ ಇದನ್ನು ಅರಮನೆಯ ಭಗ್ನಾವಶೇಷಗಳನ್ನು ಅರಮನೆ ಎಂದೇ ಕರೆಯುತ್ತಾರೆ. ಆದುದರಿಂದ ಹೈದರ್ ನಾಮೆಯಲ್ಲಿ ಉಲ್ಲೇಖಗೊಂಡ ಹೈದರಾಲಿಯ ಪ್ರಧಾನ ವೆಂಕಪ್ಪಯ್ಯ ನಿರ್ಮಿಸಿದ ಕೋಟೆ ಹಾಗೂ ಅರಮನೆ ಇದೇ

ಎಂದು ಖಚಿತವಾಗುತ್ತದೆ. ಅರಮನೆಯನ್ನು ಹುಟ್ಟುಬಂಡೆಯ ಮೇಲೆ ಪೂರ್ವ ಪಶ್ಚಿಮ ೨೦೦ ಅಡಿ, ಉತ್ತರ ದಕ್ಷಿಣ ೧೫೦ ಅಡಿ ಜಾಗದಲ್ಲಿ ನಿರ್ಮಿಸಲಾಗಿದೆ. ಅರಮನೆಯನ್ನು ನಿರ್ಮಿಸಲು ೨೦ ಕಂಬಗಳ ನಿಲುಗಳನ್ನು ನಿಲ್ಲಿಸಿ, ಕಂಬಗಳಿಗೆ ಗಾರೆಯಿಂದ ಪ್ಲಾಸ್ಟಿಂಗ್ ಮಾಡಿರುತ್ತಾರೆ. ಪ್ರತಿಯೊಂದು ಕಂಬದ ಮೇಲೆ ಸಾದಾ ಬೋದಿಗೆ ಕಲ್ಲು ಇದೆ. ಅದರ ಮೇಲೆ ಅಡ್ಡ ಉದ್ದ ಕಲ್ಲಿನ ತೊಲೆಗಳನ್ನು ಹಾಕಿರುತ್ತಾರೆ. ಅದರ ಮೇಲೆ ಸ್ವಲ್ಪ ಸಂದು ಇರದೆ ಚಪ್ಪಡಿ ಕಲ್ಲು ಜೋಡಿಸಿ, ಗಾರೆ ಚುರಕಿ ಹಾಕಿಸಿರುತ್ತಾರೆ. ತಳಪಾಯದ ಮೇಲೆ ದಿಮ್ಮಿಕಲ್ಲುಗಳನ್ನು ಸುತ್ತಲೂ ಒಂದು ಸಾಲು ಹಾಕಿರುತ್ತಾರೆ. ಸುತ್ತಲೂ ನೀರು ಹಾಗೂ ಹುಳಗಳು ಬರದಂತೆ ಒಂದು ಅಡಿ ಎತ್ತರ ಮಾಡಿರುತ್ತಾರೆ.

ಅರಮನೆಯ ಪ್ರಾಂಗಣದ ಬಲಭಾಗದಲ್ಲಿ ೨೦ ಅಡಿ ದೂರದಲ್ಲಿ ಅಡುಗೆ ಮನೆ ಇದೆ. ಅರಮನೆಯ ಪ್ರಾಂಗಣದ ಪ್ರದೇಶದಲ್ಲಿ ಯತೇಚ್ಛವಾಗಿ ಮಡಿಕೆ ಚೂರು ಇರುತ್ತವೆ. ಅರಮನೆ ಸುತ್ತ ಇರುವ ರಕ್ಷಣಾ ಗೋಡೆ ತಳಪಾಯವು ೩ ಅಡಿ ಅಗಲವಿದ್ದು, ಮೇಲೆ ಹೋದಂತೆಲ್ಲಾ ಕಿರಿದಾಗುತ್ತಾ ೮ ಅಡಿ ಎತ್ತರದವರೆಗೂ ಗೋಡೆ ನಿರ್ಮಿಸಿರುತ್ತಾರೆ. ಇದೇ ರೀತಿಯ ಗೋಡೆಯು ಹಂಪಿಯ ಸ್ನಾನಗೃಹದ ಹತ್ತಿರ ಇದೆ. ಅರಮನೆಯ ಹತ್ತಿರದಲ್ಲಿಯೇ ಒಂದು ಗುಂಡಿನ ಕೆಳಗೆ ಮದ್ದುಗುಂಡುಗಳನ್ನು ಅರೆಯುತ್ತಿದ್ದರು. ಈ ಗುಂಡನ್ನು ಇಂದಿಗೂ ಮದ್ದುಗುಂಡು ಎಂದು ಕರೆಯುತ್ತಾರೆ. ಇಲ್ಲಿ ಚಿಕ್ಕ ಗೋಡೆಯನ್ನು ಕಟ್ಟಿರುತ್ತಾರೆ.

ಬೆಟ್ಟದ ಮೇಲ್ಭಾಗದಲ್ಲಿ ನೈಸರ್ಗಿಕ ದೊಣೆಗಳು ಇವೆ. ಎಂತಹ ಕಾಲದಲ್ಲೂ ಇವು ಬತ್ತುವುದಿಲ್ಲ. ಇಂದು ಬೆಟ್ಟದ ಮೇಲಿರುವ ವೆಂಕಟರವಣಸ್ವಾಮಿಯ ಪಾದಕ್ಕೆ ಉತ್ಸವ ಮಾಡುವಾಗ ಇಲ್ಲಿ ಅಡುಗೆ ಮಾಡಲು ದೊಣೆಯಲ್ಲಿನ ನೀರನ್ನು ತೆಗೆದುಕೊಂಡು ಹೋಗುತ್ತಾರೆ. ಬೆಟ್ಟದ ಉತ್ತರಕ್ಕೆ ನೈಸರ್ಗಿಕವಾದ ಕರಡಿಗವಿ, ಪಶ್ಚಿಮ ದಿಕ್ಕಿನಲ್ಲಿ ಮಡಕೆಗವಿ ಮತ್ತು ಮಲ್ಲೇಗವಿಗಳು ಇರುತ್ತವೆ.

ಬೆಟ್ಟದ ಮೇಲ್ಭಾಗದಲ್ಲಿ ೪ನೇ ಸುತ್ತಿನ ಕೋಟೆ ಇದೆ. ೩–೪ನೇ ಕೋಟೆಯ ಮಧ್ಯೆ ಸೈನಿಕರ ೩ ವಾಸದ ತಳಪಾಯಗಳು ಇವೆ. ಬೆಟ್ಟದ ತುತ್ತ ತುದಿಯಲ್ಲಿ ೧೦೦ ಅಡಿ ಉದ್ದ, ೧೦ ಅಗಲದ ವಾಸದ ತಳಪಾಯ ಇವೆ. ಇವು ಸೈನಿಕರ ವಾಸದ ತಳಪಾಯವಾಗಿರುವ ಸಾಧ್ಯತೆ ಉಂಟು.

ಬೆಟ್ಟದ ತುದಿಯಲ್ಲಿ ೫ ಸುತ್ತಿನ ಕೋಟೆ ಕಂಡುಬರುತ್ತದೆ. ಅಂದರೆ ಬೆಟ್ಟಕ್ಕೆ ಒಟ್ಟು ೫ ಸುತ್ತಿನ ಕೋಟೆಗಳು ಕಂಡು ಬರುತ್ತವೆ. ೧, ೨, ೩ನೇ ಸುತ್ತಿನ ಕೋಟೆಗಳು ಅರ್ಧಚಂದ್ರಾಕಾರದಲ್ಲಿ ಕಂಡುಬರುತ್ತವೆ. ಪಶ್ಚಿಮ ದಿಕ್ಕಿನಲ್ಲಿ ಬೆಟ್ಟ ಕಡಿದಾಗಿ ಇರುವುದರಿಂದ ಕೋಟೆಯನ್ನು ಕಟ್ಟಿರುವುದಿಲ್ಲ. ಕೊತ್ತಲಗಳು ಚಚೌಕಾರವಾಗಿ ಇರುತ್ತವೆ.

ಹಾಗಾದರೆ ಈ ಕೋಟೆಯನ್ನು ಕಟ್ಟಿಸಿದ ವೆಂಕಟೇಶಯ್ಯನವರು ಯಾರು ಎಂದು ಯೋಚಿಸಿದಾಗ ಇವರೇ ಪ್ರಧಾನ ವೆಂಕಪ್ಪಯ್ಯನವರ ತಮ್ಮ. ಇವರು ತುಮಕೂರು ಜಿಲ್ಲೆ ಕೊರಟಗೆರೆ ತಾಲ್ಲೂಕು ಅಕ್ಕಿರಾಂಪುರ ಹಂಪೆಯಮಾತ್ಯಾ ಮತ್ತು ವಾಮಾಂಬೆಯವರ ಮಗನಾಗಿ ಕ್ರಿ.ಶ. ೧೭೨೮ರಲ್ಲಿ ಜನಿಸಿದರು. ವೆಂಕಪ್ಪಯ್ಯನವರಿಗೆ ಮೂವರು ಸಹೋದರಿಯರು ಹಾಗೂ ತಮ್ಮ ವೆಂಕಟೇಶಯ್ಯನವರು ಇದ್ದರು. ಪ್ರಧಾನ ವೆಂಕಪ್ಪನವರು ತುಮಕೂರು ಹಾಗೂ ಮೈಸೂರಿನಲ್ಲಿ ಶಿಕ್ಷಣ ಪಡೆದು ದೇವಲಾಪುರದ ಶ್ಯಾನುಭೋಗರಾದ ವೀರಪ್ಪಯ್ಯನವರ ಪುತ್ರಿ ಲಕ್ಷ್ಮಮ್ಮನವರೊಂದಿಗೆ ವಿವಾಹವಾದರು[೪]. ಪ್ರಧಾನ ವೆಂಕಪ್ಪನವರು ಸಾಕಷ್ಟು ಸಾಹಿತ್ಯ ಕೃಷಿ ಮಾಡಿ 'ವೆಂಕಾಮಾತ್ಯ' ಎಂಬ ಹೆಸರಿನಲ್ಲಿ ಅನೇಕ ಕೃತಿಗಳನ್ನು ರಚಿಸಿರುವರು. ಕಾಮವಿಲಾಸ ಬಾಣ, ಕುವಂಬಕ ಬಾಣ, ಮಹೇಂದ್ರ ವಿಜಯ ಮಹಿಮ, ವೀರ ರಾಘವ ವ್ಯಾಯೋಗ, ಲಕ್ಷ್ಮೀ ಸ್ವಯಂವರ ಸಮವತಾರ (ವಿಬುಧದಾನವ ಸಮವತಾರ), ಸೀತಾ ಕಲ್ಯಾಣ ವಿಧಿ, ರುಕ್ಮಿಣೀ ಮಾಧವ (ಸಂಸ್ಕೃತ ನಾಟಕ), ಸುಧಾಝುರಿ (ಗದ್ಯಗ್ರಂಥ), ಕುಶಲವ ಚಂಪೂ, ಅಲಂಕಾರ ಮಣಿದರ್ಪಣ, ಜಗನ್ನಾಥ ಕಾವ್ಯಂ, ಹನುಮಾನ್ ಶತಕ, ಸೂರ್ಯ ಶತಕ ಕೃತಿಗಳನ್ನು ಸಂಸ್ಕೃತ ಭಾಷೆಯಲ್ಲಿ, ಕರ್ನಾಟ ರಾಮಾಯಣ, ಇಂದಿರಾಭ್ಯುದಯ, ಹನುಮದ್ವಿಲಾಸ ಕೃತಿಗಳನ್ನು ಕನ್ನಡದಲ್ಲಿ ಬರೆದಿರುವರು[೫].

ಹೈದರಾಲಿಯು ಮೈಸೂರು ಸಂಸ್ಥಾನದ ಫೌಜುದಾರನಾಗಿದ್ದಾಗ ಸಿರಾ, ಮಧುಗಿರಿ, ಮಾಕಳಿದುರ್ಗ ಮುಂತಾದ ತಾಲ್ಲೂಕುಗಳ ಇರಸಾಲಿಯನ್ನು ಮೈಸೂರು ಅರಮನೆಯ ಖಜಾನೆಗೆ ತಲುಪಿಸುವ ಮಾರ್ಗದಲ್ಲಿ ತುಮಕೂರಿನ ಶೆಟ್ಟಿಹಳ್ಳಿ ಬಳಿ ತೋಪೊಂದರಲ್ಲಿ ವಿಶ್ರಾಂತಿಗಾಗಿ ಮಲಗಿದ್ದನು. ಆ ಸಮಯದಲ್ಲಿ ಸರ್ಪವೊಂದು ಹೈದರಾಲಿಯ ತಲೆಯ ಮೇಲೆ ಹೆಡೆಯಾಡಿಸುತ್ತಿದ್ದುದನ್ನು ಪ್ರಧಾನ ವೆಂಕಪ್ಪಯ್ಯನವರು ಕಂಡರು. ಅವರು ಹೈದರಾಲಿಯು ನಿದ್ರೆಯಿಂದ ಎಚ್ಚೆತ್ತ ಬಳಿಕ ಈ ವಿಷಯವನ್ನು ಆತನಿಗೆ ತಿಳಿಸಿ, ನೀವು ಮುಂದೆ ಸಾಮ್ರಾಜ್ಯ ಪದವಿಯನ್ನು ಹೊಂದುತ್ತೀರಿ ಎಂದು ಭವಿಷ್ಯ ನುಡಿದನು. ಆಗ ಹೈದರಾಲಿಯು, 'ನೀವು ತಿಳಿಸಿದಂತೆ ಈ ರಾಜ್ಯದ ಪ್ರಭುತ್ವ ಪ್ರಾಪ್ತವಾದಲ್ಲಿ ಆಗ್ಗೆ ನಿಮ್ಮನ್ನು ನನ್ನಲ್ಲಿ ರಾಜ್ಯದ ಪ್ರಧಾನತ್ವದಲ್ಲಿ

ತೆಕ್ಕೊಳ್ಳುವುದಾಗಿ ತಿಳಿಸಿದನು. ಅದರಂತೆ ಹೈದರಾಲಿಯು ಸರ್ವಾಧಿಕಾರಿಯಾದಾಗ ವೆಂಕಪ್ಪನವರು ಅವರನ್ನು ಕಂಡು ತಮ್ಮ ಮತ್ತು ಆತನ ನಡುವೆ ಹಿಂದೆ ನಡೆದಿದ್ದ ಮಾತುಕತೆಯನ್ನು ನೆನಪು ಮಾಡಲಾಗಿ, ಹೈದರನು ಅವರನ್ನು ಪ್ರಧಾನರಾಗಿ ಸ್ವೀಕರಿಸಿದವನೆಂದು ಹಸ್ತಪ್ರತಿ ತಿಳಿಸುತ್ತದೆ. ಆದರೆ ಹೈದರ್ ನಾಮೆಯಾಗಲೀ, ಹೈದರನ ಕೈಫಿಯತ್ತಾಗಲಿ, ವೆಂಕಪ್ಪಯ್ಯನವರ (ವೆಂಕಾಮಾತ್ಯರ) ಕೃತಿಯಾಗಲಿ ಇದನ್ನು ಅನುಮೋದಿಸುವುದಿಲ್ಲ. ಹಾಗಾಗಿ ಈ ವಿವರವನ್ನು ದಂತಕಥೆಯೆಂದು ನಿರ್ಧರಿಸಲಾಗಿದೆ[೬].

ಹೈದರನು ಪ್ರಾಬಲ್ಯಕ್ಕೆ ಬರುವ ಪೂರ್ವದಲ್ಲಿ ಮಧುಗಿರಿ ಮತ್ತು ಸಿರಾ ಪ್ರಾಂತ್ಯಗಳಲ್ಲಿ ಮರಾಠರ ಒಡನಾಟ ಬಹಳವಾಗಿತ್ತು. ಶಿಕ್ಷಿತರೂ, ವ್ಯವಹಾರ ಚತುರರೂ ಆದ ವೆಂಕಪ್ಪಯ್ಯನವರು ಮರಾಠರ ಜೊತೆಯಲ್ಲಿ ಮುಂದುವರೆದು ಬಿದನೂರನ್ನು ತಲುಪಿ, ಅವರಲ್ಲಿ ಸೇವೆಗೆ ಸೇರಿರುವ ಸಾಧ್ಯತೆಗಳಿವೆ. ಅಥವಾ ಮರಾಠರಿಗೆ ಸಹಾಯಕನಾಗಿ ಬಂದ ಬಿದನೂರಿನ ಸೈನ್ಯಾಧಿಕಾರಿಗಳ ಗಮನಕ್ಕೆ ಬಿದ್ದ ವೆಂಕಪ್ಪಯ್ಯನವರನ್ನು ಬಿದನೂರಿಗೆ ಕರೆದುಕೊಂಡು ಹೋಗಿ ಸೇವೆಯಲ್ಲಿ ಸೇರಿಸಿಕೊಂಡಿರುವ ಸಾಧ್ಯತೆ ಅಧಿಕವಾಗಿ ಕಂಡುಬರುತ್ತದೆ. ವೆಂಕಪ್ಪಯ್ಯನವರ ಭಾಷಾ ಜ್ಞಾನ ಮತ್ತು ಸಂಧಾನ ಕುಶಲತೆಯನ್ನು ಗಮನಿಸಿದ ಬಿದನೂರಿನ ರಾಣಿ ವೀರಮ್ಮಾಜಿಯು ಅವರನ್ನು ತಮ್ಮ ಸಂಧಾನಕಾರರಾಗಿ ನೇಮಿಸಿಕೊಂಡರು[೭].

ಹೈದರನು ಬಿದನೂರನ್ನು ಆಕ್ರಮಿಸಿದಾಗ ವೀರಮ್ಮಾಜಿ ಹೈದರನೊಂದಿಗೆ ಸಂಧಾನ ಮಾಡಿಕೊಳ್ಳುವ ಪ್ರಯತ್ನ ಮಾಡುತ್ತಾಳೆ. ವೀರಮ್ಮಾಜಿಯ ಸಂಧಾನದ ಪ್ರಯತ್ನವನ್ನು ಹೈದರನು ತಿರಸ್ಕರಿಸಿ, ಕಣಿವೆಯನ್ನು ವಶಪಡಿಸಿಕೊಳ್ಳುತ್ತಾನೆ. ಬಿದನೂರಿನ ಆಕ್ರಮಣದ ಬಳಿಕ ಹೈದರಾಲಿಯು ವೀರಮ್ಮಾಜಿಯ ಸೇವೆಯಲ್ಲಿದ್ದ ವೆಂಕಪ್ಪಯ್ಯನವರನ್ನು ಕ್ರಿ.ಶ. ೧೭೬೩ರಲ್ಲಿ ನಗರದ ಪ್ರಧಾನರಾಗಿ ನಿಯೋಜಿಸಿದನೆಂದು ಹೈದರ್ ನಾಮೆ ಮತ್ತು ವಂಶರತ್ನಾಕರ ಖಚಿತಪಡಿಸುತ್ತವೆ[೮].

ಪ್ರಧಾನ ವೆಂಕಪ್ಪಯ್ಯನವರ ತಮ್ಮ ವೆಂಕಟೇಶಯ್ಯನವರನ್ನು ಮಿಂಚುಕಲ್ಲುಬೆಟ್ಟದ ಪ್ರದೇಶಕ್ಕೆ ಸೈನ್ಯಾಧಿಕಾರಿಯನ್ನಾಗಿ ನೇಮಕ ಮಾಡಿರಬಹುದು. ವೆಂಕಟೇಶಯ್ಯನವರು ಮಿಂಚುಕಲ್ಲು ಗೊಲ್ಲಹಳ್ಳಿ ಬೆಟ್ಟದ ಮೇಲೆ ಒಂದು ಮನೆ ಕಟ್ಟಿಸಿ ಇವರು ಅಲ್ಲಿಯೂ ಕೆಲವು ದಿವಸ ವಾಸಮಾಡುತ್ತಿದ್ದರೆಂದು ತಿಳಿದುಬರುತ್ತದೆ[೯].ಇದೇ ವಿಷಯವನ್ನು ಹೈದರ್ ನಾಮವು ಪ್ರಧಾನ ವೆಂಕಪ್ಪನವರ ತಮ್ಮ ವೆಂಕಟೇಶಯ್ಯನವರು ಮಿಂಚುಕಲ್ಲು ಬೆಟ್ಟದ ಮೇಲೆ ಕೋಟೆ ಮನೆ ಕಟ್ಟಿಸಿಕೊಂಡು ಕೆಲವು ಸಿಬ್ಬಂಧಿಯನ್ನು ಇಟ್ಟುಕೊಂಡಿದ್ದನೆಂದು ತಿಳಿಸುತ್ತದೆ[೧೦]. ಅಂದರೆ ಮಿಂಚುಕಲ್ಲು ಬೆಟ್ಟದ ಮೇಲೆ ಪ್ರಧಾನ ವೆಂಕಪ್ಪಯ್ಯ ಹಾಗೂ ತಮ್ಮ ವೆಂಕಟೇಶಯ್ಯನವರು ಅರಮನೆ ಹಾಗೂ ಕೋಟೆಯನ್ನು ೧೭೬೮-೬೯ರಲ್ಲಿ ಕಟ್ಟಿಸಿರಬಹುದು.

ವಿರೋಧಿಕೃತ್ ನಾಮ ಸಂವತ್ಸರದ ಪುಷ್ಯ ಮಾಸದಲ್ಲಿ ಅಂದರೆ, ೧೭೭೦ರ ಜನವರಿಯಲ್ಲಿ ಹೈದರನು ಪ್ರಧಾನ ವೆಂಕಪ್ಪಯ್ಯನವರಿಗೆ ಹಾಸನ, ಮಹಾರಾಜನ ದುರ್ಗ, ವಸ್ತಾರೆ, ಬೇಲೂರು ಮತ್ತಿತರ ಪಾಳೆಯಗಾರರನ್ನು ಹತ್ತಿಕ್ಕುವ ಸಲುವಾಗಿ ಸೈನ್ಯಾಧಿಕಾರವನ್ನು ನೀಡಿದನು. ಕ್ರಿ.ಶ. ೧೭೭೧ರ ಏಪ್ರಿಲ್ ತಿಂಗಳಿನಲ್ಲಿ ಮರಾಠರು ಮೇಲುಕೋಟೆಯನ್ನು ಮುತ್ತಿದಾಗ, ಹೈದರನ ಮಗನಾದ ಟಿಪ್ಪುವಿನ ಸಂಗಡ ಮರಾಠರ ವಿರುದ್ಧ ಸೈನ್ಯ ಕಾರ್ಯಾಚರಣೆಯಲ್ಲಿ ಅವರು ಭಾಗಿಯಾಗಿದ್ದರು. ಯುದ್ಧದಲ್ಲಿ ಮರಾಠರ ಕೈ ಮೇಲಾದಾಗ ಯುವರಾಜ ಟಿಪ್ಪು ಮರಾಠರಿಗೆ ಸೆರೆ ಸಿಕ್ಕದಂತೆ ಅವರನ್ನು ರಕ್ಷಿಸಿದ್ದು ವೆಂಕಪ್ಪಯ್ಯನವರ ಮತ್ತೊಂದು ಮಹತ್ವದ ಸಾಧನೆ. ಇದಾದ ಬಳಿಕ ಅದೇ ವರ್ಷ ಅಂದರೆ, ೧೭೭೧ರ ಮೇ ತಿಂಗಳಲ್ಲಿ ವೆಂಕಪ್ಪಯ್ಯನವರನ್ನು ಕೊಡಗಿನ ರಾಜನೊಂದಿಗೆ ಸಂಧಾನ ನಡೆಸಲು ಕಳಿಸಲಾಗಿತ್ತು[೧೧].

ಕ್ರಿ.ಶ. ೧೭೭೨ರಲ್ಲಿ ಹೈದರನು ಪ್ರಧಾನ ವೆಂಕಪ್ಪಯ್ಯನವರು ಆವರೆಗೆ ಸಲ್ಲಿಸಿದ ಸೇವೆಯಿಂದ ಸಂತುಷ್ಟನಾಗಿ ಅವರನ್ನು 'ಮಹಾಲಾಟಿ ಕಛೇರಿ'ಯ ದಿವಾನರಾಗಿ ನೇಮಕ ಮಾಡಿದನು[೧೨].

ಕ್ರಿ.ಶ. ೧೭೭೪ರ ಏಪ್ರಿಲ್‌ನಲ್ಲಿ ಹೈದರನು ದಿವಾನರಾದ ಪ್ರಧಾನ ವೆಂಕಪ್ಪಯ್ಯನವರನ್ನು ಮರಾಠ ಪೇಶ್ವೆಯಾದ ರಘುನಾಥರಾಯ ರಘೋಬನ ಆಸ್ಥಾನಕ್ಕೆ ಮೈಸೂರು ಸಂಸ್ಥಾನದ ಸಂಧಾನಕಾರನಾಗಿ ಅಪ್ಪಾಜಿರಾವ್ ಮತ್ತು ಹರಿಕಾರ ನರಸಪ್ಪ ನಾಯಕರ ಸಂಗಡ ಕಳುಹಿಸಿಕೊಟ್ಟನು. ಅದೇ ವರ್ಷ ಅಕ್ಟೋಬರ್‌ನಲ್ಲಿ ಹೈದರನು ಪ್ರಧಾನ ವೆಂಕಪ್ಪಯ್ಯನವರನ್ನು ಮಧುಗಿರಿ, ಚನ್ನರಾಯನದುರ್ಗ ಮತ್ತು ಸಿರಾ ಪ್ರದೇಶದ ರಾಜ್ಯಪಾಲರಾಗಿ (ಪ್ರಧಾನರಾಗಿ) ನೇಮಕ ಮಾಡಿದನು[೧೩].

೧೭೬೧ರಿಂದ ೧೭೭೨ರವರೆಗೆ ಪೇಶ್ವೆ ಮಾಧವರಾಯನ ಕಾಲ. ಮೈಸೂರಿನ ಕೆಲವು ಭಾಗಗಳು ಮರಾಠರಿಗೆ ಸೇರಿದ್ದವು. ಸೇರಿದ ಪ್ರದೇಶಗಳ ಮೇಲೆಲ್ಲಾ ಕೈಚಾಚಿ ಚೌತಾಯವೆಂಬ ಕರಾಳ ಸುಂಕ ವಸಾಲಿಯನ್ನು ಮಾಡುತ್ತಿದ್ದರು. ಅದರಂತೆ ೧೭೭೨ರಲ್ಲಿ ಮಾಧವರಾಯನು ತನ್ನ ಸೇನೆಯೊಡನೆ ಇತ್ತ ಧಾವಿಸಿದನು. ಹೈದರ್, ಟಿಪ್ಪುರವರು ಮಾಧವರಾಯನ ಸರದಾರ ತ್ರಿಯಂಬಕಮಾನೆನನ್ನು ಚಿನಕುರಳಿಯ ಬಳಿ ಎದುರಿಸಬೇಕಾಯಿತು. ಆದರೆ ಟಿಪ್ಪು ಮತ್ತು ಹೈದರ್ ಇಬ್ಬರೂ





ಹಿಮ್ಮೆಟ್ಟಿ ಶ್ರೀರಂಗಪಟ್ಟಣಕ್ಕೆ ಓಡಿದರು. ಆದರೆ ಮರಾಠರ ಸೈನ್ಯವು ಹಿಂಬಾಲಿಸಿ ಶ್ರೀರಂಗಪಟ್ಟಣವನ್ನು ವಶಪಡಿಸಿಕೊಂಡಿತು. ಹೈದರ್ ಮರಾಠರನ್ನು ಹೊರದೂಡುವುದರಲ್ಲಿ ವಿಫಲನಾಗಿ ಕರಾರು ಮಾಡಿಕೊಳ್ಳಬೇಕಾಯಿತು. ೩೦ ಲಕ್ಷ ವರಾಹಗಳನ್ನು ನೀಡುವುದಾಗಿ ಒಪ್ಪಿ, ಹಣ ಪಾವತಿ ಮಾಡುವವರೆಗೂ ಕೋಲಾರ, ಹೊಸಕೋಟೆ, ದೊಡ್ಡಬಳ್ಳಾಪುರ, ಸಿರಾ, ಮಧುಗಿರಿ, ಚನ್ನರಾಯನದುರ್ಗ, ಗುರಪ್ಪಬೆಟ್ಟ ಮುಂತಾದ ಪ್ರದೇಶಗಳನ್ನು ಭೋಗ್ಯ ಮಾಡಿದನು[೧೪]. ಈ ಸಂದರ್ಭದಲ್ಲಿಯೇ ಆಡಳಿತದ ಕಾಲದಲ್ಲಿ ಮಿಂಚುಕಲ್ಲು ಬೆಟ್ಟದ ಮೇಲೆ ಧಾಳಿ ಮಾಡಿ ವೆಂಕಟೇಶಯ್ಯನನ್ನು ಸೆರೆ ಹಿಡಿಯುತ್ತಾನೆ. ಸೆರೆಹಿಡಿದ ವೆಂಕಟೇಶಯ್ಯನನ್ನು ಮಧುಗಿರಿ ಜೈಲಿಗೆ ಹಾಕುತ್ತಾರೆ[೧೫]. ಆದರೆ ಮುಂದೆ ವೆಂಕಟೇಶಯ್ಯನವರು ಏನಾದರೆಂದು ಮಾಹಿತಿ ತಿಳಿದುಬರುವುದಿಲ್ಲ.

ಮರಾಠ ನಾಯಕರುಗಳು ಈ ಗೆದ್ದ ಪ್ರದೇಶಗಳಿಗೆಲ್ಲಾ ಒಬ್ಬೊಬ್ಬ ಮರಾಠ ನಾಯಕರನ್ನು ನೇಮಿಸಿದನು. ಇವರುಗಳಲ್ಲಿ ಭಾಮಾಜಿ ಸಿಂಧ್ಯನಿಗೆ ಸಿರಾ, ಆನಂದರಾವ್ ಎಂಬುವನಿಗೆ ಮಧುಗಿರಿ, ಗಣೇಶರಾವ್ ನಾರಾಯಣ ಚನ್ನರಾಯನ ದುರ್ಗಗಳ ಮೇಲ್ವಿಚಾರಕರಾದರು[೧೬].

ಇತ್ತ ಪ್ರಧಾನ ವೆಂಕಪ್ಪನವರು ಪೂನಾಕ್ಕೆ ತೆರಳಿ ಕಾರ್ಯಭಾರ ನಿರ್ವಹಿಸಿದ ಮೇಲೆ ರಾಜಧಾನಿ ಶ್ರೀರಂಗಪಟ್ಟಣಕ್ಕೆ ಹಿಂತಿರುಗಿದರು. ಆ ವೇಳೆಗೆ ಪೂನಾದಲ್ಲಿ ಒಂದು ಮಹತ್ತರ ಘಟನೆ ಜನಿಸಿತು. ರಘೋಬನು ನಾರಾಯಣರಾಯನನ್ನು ಕೊಲೆಮಾಡಿ ಭೀಕರವಾದ ಅಪರಾಧವೆಸಗಿದ್ದನು. ಕುಪಿತಗೊಂಡಿದ್ದ ಸರದಾರರೆಲ್ಲರೂ ಒಟ್ಟುಗೂಡಿ ಮಗುವೇ ರಾಜ್ಯದ ಸೂಕ್ತ ಹಕ್ಕುದಾರನೆಂದು ಘೋಷಿಸಿದರು. ಈ ಮಗು ಬೆಳೆಯುವವರೆಗೂ ನಾನಾಫಡ್ನವೀಸನನ್ನು ರಾಜ್ಯದ ಮೇಲಾಧಿಕಾರಿಯನ್ನಾಗಿ ನೇಮಿಸಿದರು. ರಘೋಬರಿಗೆ ಇವರ ಮೇಲೆ ತಿರುಗಿ ಬೀಳಲು ಶಕ್ತಿ ಸಾಲದಾಯಿತು. ಇಂಗ್ಲೀಷರನ್ನು ಸಂಧಿಸಲು ಬೊಂಬಾಯಿಗೆ ಹೋದನು. ಸವಾಯಿ ಮಾಧವರಾವ್ ನಾರಾಯಣ ವಾರಸುದಾರನಾದ ವಿಚಾರವನ್ನು ಮರಾಠರು ಎಲ್ಲಾ ಮರಾಠ ಪ್ರಾಂತ್ಯಗಳಿಗೆ ತಿಳಿಸಿದರು. ಈ ಮೊದಲು ರಘೋಬನು ಒಂದು ಪತ್ರವನ್ನು ಬರೆದು ವೆಂಕಪ್ಪಯ್ಯನವರ ಮುಖಾಂತರ ಕಳುಹಿಸಿದ್ದನು. ಸಿರಾ ಪ್ರಾಂತ್ಯವನ್ನು ಮೈಸೂರು ರಾಜ್ಯಕ್ಕೆ ಬಿಟ್ಟುಕೊಡುವ ವಿಚಾರ ಆ ಪತ್ರದಲ್ಲಿತ್ತು. ಆದರೆ ರಘೋಬನು ಪೇಶ್ವೆಯಲ್ಲವೆಂದು, ಸವಾಯಿ ಮಾಧವರಾವ್ ನಾರಾಯಣನ ಉತ್ತರಾಧಿಕಾರಿ ಸಿರಾವನ್ನು ಬಿಟ್ಟುಕೊಡಲು ನಿರಾಕರಿಸಿದರು. ರಘೋಬನು ಪದಚ್ಯುತನಾಗಿದ್ದ ವಿಷಯ ವೆಂಕಪ್ಪಯ್ಯನವರಿಗೆ ತಿಳಿದಿರಲಿಲ್ಲ. ಇವರು ಪೂನಾದಿಂದ ಹಿಂತಿರುಗುವ ವೇಳೆಗೆ ಈ ಎಲ್ಲ ಸಂಗತಿಗಳೂ ನಡೆದುಹೋಗಿದ್ದವು. ವೆಂಕಪ್ಪಯ್ಯನವರು ಈ ವಿಚಾರಗಳನ್ನೆಲ್ಲಾ ಹೈದರನಿಗೆ ವಿವರಿಸಿದರು. ಹೈದರನಿಗೆ ಇಷ್ಟೇ ಸಾಕಾಗಿತ್ತು. ಇದೇ ಒಂದು ಪ್ರಮುಖ ಕಾರಣವೆಂದು ತಿಳಿದು ತನ್ನ ಮಗನಾದ ಟಿಪ್ಪುವಿನ ಮುಖಂಡತ್ವದಲ್ಲಿ ದೊಡ್ಡ ಸೈನ್ಯವನ್ನು ಕಳುಹಿಸಿದನು. ಟಿಪ್ಪು ವೀರಾವೇಶದಿಂದ ಹೋರಾಡಿ ೧೭೭೪ರಲ್ಲಿ ಸಿರಾ ಮತ್ತು ಮಧುಗಿರಿಯನ್ನು ವಶಪಡಿಸಿಕೊಂಡನು. ಅನಂತರ ಚನ್ನರಾಯನದುರ್ಗವನ್ನು ವಶಪಡಿಸಿಕೊಂಡನು. ಈ ಹೋರಾಟ ಸುಮಾರು ತಿಂಗಳುಗಳ ಕಾಲ ನಡೆಯಿತು. ಅನಂತರ ಮರಾಠರು ಇಲ್ಲಿಂದ ಪಲಾಯನ ಮಾಡಿದರು. ಏಳು ವರ್ಷಗಳ ಕಾಲ ಮಧುಗಿರಿ ಮರಾಠರ ವಶದಲ್ಲಿದ್ದು ಮತ್ತೆ ಮೈಸೂರು ಆಳ್ವಿಕೆಗೆ ಸೇರಿತು. ಟಿಪ್ಪುವು ಸೈಯದ್ ಫಕ್ರುದ್ದೀನ್ ಎಂಬುವನನ್ನು ಮಧುಗಿರಿಯ ಅಧಿಕಾರಿಯನ್ನಾಗಿ ಮತ್ತು ಪ್ರಧಾನ ವೆಂಕಪ್ಪಯ್ಯನವರ ತಮ್ಮ ಸಹೋದರ ವೆಂಕಟೇಶಯ್ಯನವರ (ಪುಟ್ಟೋಬಮ್ಮಳನನ್ನು ವಿವಾಹ) ಅಳಿಯ ಹಾಗೂ ತಮ್ಮ ಅಳಿಯನ ತಮ್ಮನಾಗಿದ್ದ ರಘುಪತಯ್ಯನವರನ್ನು ಸಿರಾದ ಮೇಲಾಧಿಕಾರಿಯನ್ನಾಗಿ ನೇಮಕ ಮಾಡಿದರು[೧೭].

ಹೈದರಾಲಿಯು ಚಿತ್ರದುರ್ಗದ ಮೇಲೆ ದಾಳಿ ಮಾಡುವ ಸಲುವಾಗಿ ಸಿರಾ ಮಾರ್ಗವಾಗಿ ಮುಂದುವರೆಯುತ್ತಿದ್ದಾಗ, ಸಿರಾದ ಪ್ರಧಾನರಾದ ರಘುಪತಯ್ಯನವರು ಸರ್ವಾಧಿಕಾರಿಯನ್ನು ಸಿರಾದ ಸೀಮೆಯಲ್ಲಿ ಎದುರುಗೊಂಡು ಸೂಕ್ತ ರೀತಿಯಲ್ಲಿ ಸತ್ಕರಿಸಲಿಲ್ಲವೆಂದೂ, ಗಡಿಯ ಅಂತ್ಯದವರೆಗೆ ಪ್ರಧಾನ ತನ್ನೊಂದಿಗೆ ಬರಲಿಲ್ಲವೆಂದೂ ಕುಪಿತನಾದ ಹೈದರನು ಆತನನ್ನೂ

ಪ್ರಧಾನ ಪದವಿಯಿಂದ ಕೆಳಗಿಳಿಸಿದ. ರಘುಪತಯ್ಯನ ಸ್ಥಾನಕ್ಕೆ ಖಾಜಿ ಅಬ್ದುಲ್ಲಾನನ್ನು ನೇಮಕ ಮಾಡಿದನು. ಈ ಘಟನೆಯಿಂದ ಹೈದರಾಲಿ ಮತ್ತು ಪ್ರಧಾನ ವೆಂಕಪ್ಪಯ್ಯನವರ ಸಂಬಂಧ ಬಿರುಕು ಬಿಡಲಾರಂಭಿಸಿದಂತೆ ಕಂಡುಬರುತ್ತದೆ. ಇದರ ಫಲವಾಗಿ ೧೭೭೯ರಲ್ಲಿ ನಗರದ ಪ್ರಧಾನರನ್ನು ಆ ಪದವಿಯಿಂದ ಕೆಳಗಿಳಿಸಿ, ಶ್ರೀರಂಗಪಟ್ಟಣದ ಸೆರೆಮನೆಗೆ ಹಾಕಲಾಯಿತು. ಅಪ್ಪಾಜಿರಾಯನ ಸಂಧಾನದಿಂದ ೬೦೦೦೦ ವರಹಗಳನ್ನು ತೆತ್ತು, ೧೦೦೦ ರೂಪಾಯಿ ಮಾಸಾಶನದೊಂದಿಗೆ 'ಪ್ರಧಾನ' ಬಿರುದಿನೊಂದಿಗೆ ನಿವೃತ್ತಿಗೊಳಿಸಿದರು[೧೮].

ಪ್ರಧಾನ ವೆಂಕಪ್ಪನವರು ಪತ್ನಿ ಮರಣ ಹೊಂದಿದ ನಂತರ ಲಕ್ಷ್ಮಮ್ಮ ಎಂಬುವವರನ್ನು ದ್ವಿತಿಯ ಸಂಸಾರವಾಗಿ ಸ್ವೀಕರಿಸಿದರು. ವೆಂಕಪ್ಪಯ್ಯನವರು ತಮ್ಮ ೫೫ ವರ್ಷ ವಯಸ್ಸಿನಲ್ಲಿ ಅಂದರೆ ೧೭೮೨ರ ನವೆಂಬರ್ ತಿಂಗಳಿನಲ್ಲಿ ಇಹಲೋಕ ತ್ಯಜಿಸಿದರು.

ತುಮಕೂರು ತಾಲ್ಲೂಕಿನ ಮಿಂಚುಕಲ್ಲು ಬೆಟ್ಟದ ಮೇಲಿರುವ ಕೋಟೆಯನ್ನು ಪ್ರಧಾನ ವೆಂಕಪ್ಪನವರು ಹಾಗೂ ಅವರ ಸಹೋದರ ಸೈನ್ಯಾಧಿಕಾರಿಯಾಗಿದ್ದ ವೆಂಕಟೇಶಯ್ಯನವರು ಕಟ್ಟಿಸಿರುವರು. ಆದ್ದರಿಂದಲೇ ಇಲ್ಲಿರುವ ಅರಮನೆಯ ಅವಶೇಷವನ್ನು ವೆಂಕಪ್ಪಯ್ಯನವರ ಅರಮನೆಯೆಂದು ಕರೆಯುತ್ತಾರೆ.ಈ ಅಜ್ಞಾನ ಮಿಂಚುಕಲ್ಲು ಕೋಟೆಯ ಅವಶೇಷಗಳು ನಾಶವಾಗುತ್ತಿದ್ದು ಇತಿಹಾಸದಲ್ಲಿ ದಾಖಲಾಗುತ್ತಿದೆ.

[ಕ್ಷೇತ್ರ ಕಾರ್ಯದಲ್ಲಿ ಸಹಕಾರ ನೀಡಿದ ಬೆಂಗಳೂರಿನ ಹಲಸೂರು ಜೌಗುಪಾಳ್ಯದ ಬಿ. ತಾಯಪ್ಪ, ಅಹೋಬಲ ಅಗ್ರಹಾರದ ಮಾಜಿ ತಾಲ್ಲೂಕು ಪಂಚಾಯಿತಿ ಸದಸ್ಯರಾದ ಮೂಡಲಗಿರಿಯಪ್ಪ, ಮಾಜಿ ಗ್ರಾಮ ಪಂಚಾಯಿತಿ ಸದಸ್ಯರಾದ ವೆಂಕಟೇಶ್‌ರವರಿಗೆ ಕೃತಜ್ಞತೆಗಳು.]

ಅಡಿ ಟಿಪ್ಪಣಿಗಳು

೧ ಎನ್. ಚಂದ್ರಶೇಖರ್, (ಮುಖ್ಯ ಸಂಪಾದಕರು), ತುಮಕೂರು ಜಿಲ್ಲಾ ಗ್ಯಾಸೆಟಿಯರ್, (ಕನ್ನಡ ಪರಿಷ್ಕೃತ ಆವೃತ್ತಿ), ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಬೆಂಗಳೂರು, ೨೦೧೭.

೨ ಅದೇ.

೩ ಸರ್ವೇ ಆಫ್ ಇಂಡಿಯಾ ಟ್ರೋಪೋ ಶೀಟ್, ಓಪನ್ ಸೀರಿಸ್ ಮ್ಯಾಪ್ ನಂ. ಡಿ–೪೩ಆರ್೩ (೫೭ಜಿ/೩).

೪ ಡಾ. ಲ.ನ.ಸ್ವಾಮಿ ಹಾಗೂ ಡಾ. ಬಿ.ಆರ್. ಭಾರತೀ, (ಸಂ.) ಮೈಸೂರು ಸಂಸ್ಥಾನದ ಪ್ರಧಾನ ವೆಂಕಪ್ಪನವರು (ವೆಂಕಾಮಾತ್ಯರ ಜೀವನ ಚರಿತ್ರೆ), ಶ್ರೀ ಚಿನ್ನಯಿ ಪ್ರಕಾಶನ, ಉಜಿರೆ, ಪುಟ ೧೫.

೫ ಅದೇ, ಪುಟ ೨೦, ೨೧.

೬ ಅದೇ, ಪುಟ ೧೭.

೭ ಅದೇ, ಪುಟ ೧೭.

೮ ಅದೇ, ಪುಟ ೧೭.

೯ ಅದೇ, ಪುಟ ೬೧.

೧೦ ತಿ.ತಾ. ಶರ್ಮಾ (ಸಂ.), ಚಾರಿತ್ರಿಕ ದಾಖಲೆಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೯, ಪುಟ ೪೯.

೧೧ ಡಾ. ಲ.ನ. ಸ್ವಾಮಿ ಹಾಗೂ ಡಾ. ಬಿ.ಆರ್. ಭಾರತೀ, (ಸಂ.) ಅದೇ, ಪುಟ ೧೮.

೧೨ ಅದೇ, ಪುಟ ೧೮.

೧೩ ಅದೇ, ಪುಟ ೧೮.

೧೪ ಎಂ.ಡಿ. ಶ್ರೀನಿವಾಸ್, ಮಧುಗಿರಿ ಇತಿಹಾಸ, ಸುಧಾ ಪ್ರಕಾಶನ, ಮಧುಗಿರಿ, ೧೯೮೭, ಪುಟ ೫೫.

೧೫ ತಿ.ತಾ. ಶರ್ಮಾ (ಸಂ.), ಅದೇ, ಪುಟ ೪೯.

೧೬ ಎಂ.ಡಿ. ಶ್ರೀನಿವಾಸ್, ಅದೇ, ಪುಟ ೫೫.

೧೭ ಎಂ.ಡಿ. ಶ್ರೀನಿವಾಸ್, ಅದೇ, ಪುಟ ೫೫.

೧೮ ಎಂ.ಡಿ. ಶ್ರೀನಿವಾಸ್, ಅದೇ, ಪುಟ ೫೭.

ರಾಜನಕೋಳೂರು ಗ್ರಾಮದ ಅವಶೇಷಗಳು

ನಿಂಗನಗೌಡ.ಹ.ದೇಸಾಯಿ (ಹನಿ)*

ಯಾದಗಿರಿ ಜಿಲ್ಲೆಯಲ್ಲಿ ನೂತನವಾಗಿ ರಚನೆಯಾದ ಹುಣಸಗಿ ತಾಲೂಕಿನಲ್ಲಿ ಅನೇಕ ಐತಿಹಾಸಿಕ ದೇವಾಲಯ, ಶಿಲ್ಪಗಳು, ಶಾಸನಗಳು ಲಭ್ಯವಿದ್ದು. ಆದರೆ ಸದ್ಯ ಅವುಗಳ ವಸ್ತುಸ್ಥಿತಿ ಸರಿಯಿಲ್ಲ. ಈ ತಾಲೂಕಿನಲ್ಲಿ ಪ್ರಮುಖವಾಗಿ ಹಗರಟಗಿ, ವಜ್ಜಲ, ಮುದನೂರ, ಅರಕೇರಾ, ರಾಜನಕೋಳೂರು ಗ್ರಾಮಗಳಲ್ಲಿ ಮಹತ್ವದ ದೇವಾಲಯಗಳಿದ್ದು, ತಾಲೂಕಿನ ಹಿರಿಮೆ-ಗರಿಮೆಗೆ ಸಾಕ್ಷಿಯಾಗಿವೆ. ಅದರಲ್ಲೂ ರಾಜನಕೋಳುರು ಗ್ರಾಮ ಬಹುವೈಶಿಷ್ಠತೆಯಿಂದ ಕೂಡಿದ ಐತಿಹಾಸಿಕ ಸ್ಥಳ ಎನ್ನಬಹುದು, ಏಕೆಂದರೆ ಇದೊಂದು ಬೃಹತ್ ಶಿಲಾಯುಗದ ಸಂಸ್ಕೃತಿಯ ನೆಲೆ ಇಲ್ಲಿಯ ನೂರಾರು ಶಿಲಾಸಮಾಧಿಗಳು ನಾಡಿನ ಇತಿಹಾಸ ಚರಿತ್ರೆಗೆ ಹೊಸ ಮೆರಗು ನೀಡಿವೆ. ಇದುವರೆಗೆ ರಾಜನಕೋಳೂರದ ಶಿಲಾಸಮಾಧಿಗಳ ಬಗ್ಗೆ ಕೆಲವರು ಲೇಖನ ಬರೆದಿದ್ದಾರೆ.

ಈ ರಾಜನಕೋಳೂರು ಗ್ರಾಮವು ತಾಲೂಕು ಕೇಂದ್ರ ಹುಣಸಗಿಯಿಂದ ನೈರುತ್ಯಕ್ಕೆ ೧೨ ಕಿ.ಮೀ. ದೂರದಲ್ಲಿದೆ. ಸದ್ಯ ಇಲ್ಲಿಯ ದೇವಾಲಯ ಶಿಲ್ಪಗಳ ಬಗ್ಗೆ ನೋಡುವ ಮೊದಲು ಈ ಗ್ರಾಮದ ಸಮೀಪದಲ್ಲಿರುವ ಬೃಹತ್ ಶಿಲಾಯುಗ ಸಂಸ್ಕೃತಿಯ ನೆಲೆಯನ್ನು ನೋಡೋಣ.

ಬೃಹತ್ ಶಿಲಾಯುಗ ಸಂಸ್ಕೃತಿಯ ನೆಲೆ

ಈ ರಾಜನಕೋಳೂರು ಗ್ರಾಮದಿಂದ ಪಶ್ಚಿಮಕ್ಕೆ ೨ ಕಿ.ಮೀ. ದೂರದಲ್ಲಿ ತೀರ್ಥಗ್ರಾಮದ ದಾರಿಯಲ್ಲಿ ಸುಮಾರು ೪ ಎಕರೆ ಪ್ರದೇಶದಲ್ಲಿ ಬೃಹತ್ ಶಿಲಾಯುಗ ಸಂಸ್ಕೃತಿಯ ನೂರಾರು ಶಿಲಾಸಮಾಧಿಗಳು ಇಲ್ಲಿವೆ. ಇಷ್ಟೊಂದು ಬೃಹತ್ ಶಿಲಾಯುಗ ಸಮಾಧಿಗಳು ಒಂದೇ ಕಡೆ ದೊರೆತಿದ್ದನ್ನು ಗಮನಿಸಿ ಇದೊಂದು ಬೃಹತ್ ಶಿಲಾಯುಗದ ಪ್ರಮುಖ ನೆಲೆ ಎಂದು ಡಾ॥ ಕೆ. ಪೆದ್ದಯ್ಯನವರು ಹೇಳಿದ್ದಾರೆ.

ಇದಲ್ಲದೆ ಇದೇ ಭಾಗದಲ್ಲಿ ಬರುವ ಕೊಡೇಕಲ್, ಬೂದಿಹಾಳ, ಹುಣಸಗಿಗಳಲ್ಲಿ ನವ ಶಿಲಾಯುಗ ಸಂಸ್ಕೃತಿಯ ನೆಲೆಗಳು ಇವೆ. ಇದೇ ಪರಿಸರದಲ್ಲಿ ಅದರ ಮುಂದುವರಿದ ಬೃಹತ್ ಶಿಲಾಯುಗ ಸಂಸ್ಕೃತಿಯ ಸಮಾಧಿಗಳು ಈ ರಾಜನಕೋಳೂರು ಸಮೀಪದ ನೆಲೆಯಲ್ಲಿ ಅಧಿಕ ಸಂಖ್ಯೆಯಲ್ಲಿ ಲಭಿಸಿರುವುದು ಗಮನಾರ್ಹ ಸಂಗತಿ ಎಂದು ಡಾ. ಕೆ. ಪದ್ದಯ್ಯನವರು ಹೇಳಿದ್ದಾರೆ.

ಬುಡ್ಡರ ಮನೆ: ಈ ಪ್ರದೇಶದಲ್ಲಿ ದೊರೆತಿರುವ ಈ ಪುರಾತನ ಸಮಾಧಿಗಳಿಗೆ ಬುಡ್ಡರ ಮನೆ ಅಥವಾ ಮೋರೆರ ಮನೆ ಎಂದು ಕರೆಯುವುದಲ್ಲದೇ ಚಿಕ್ಕಮನೆಗಳಂತೆ ಕಾಣುವ ಈ ಸಮಾಧಿಗಳು ನಿಜವಾಗಿಯೂ ಮನೆಗಳಾಗಿರದೆ ಮೂರುಸಾವಿರ ವರ್ಷ ಹಿಂದಿನ ಹಳೆಯ ಶಿಲಾ ಸಮಾಧಿಗಳೆಂದು ಡಾ॥ ಕೆ. ಪೆದ್ದಯ್ಯನವರು ತಿಳಿಸಿದ್ದಾರೆ. ಸುಮಾರು ೩೫೦ಕ್ಕೂ ಹೆಚ್ಚು ಶಿಲಾಸಮಾಧಿಗಳು ಇಲ್ಲಿದ್ದು ಈ ಸಮಾಧಿಗಳಿಗೆ ಮೂರು ಕಡೆ ಬಂಡೆ ಜೋಡಿಸಿದ್ದು ಮುಖಭಾಗ ತೆರೆಯಲಾಗಿದೆ. ಮೇಲೆ ದೊಡ್ಡದಾದ ಬಂಡೆ ಹಾಕಲಾಗಿದೆ. ಈ ಪ್ರದೇಶದಲ್ಲಿ ವಾಸಿಸಿದ್ದ ಜನರು ಮೃತರಾದ ನಂತರ ಅವರ ಸಂಬಂಧಿಕರು ಮೃತರನ್ನು ಸಮಾಧಿಯೊಳಗೆ ಹೂತು ಮೇಲೆ ಈ ರೀತಿ ಆ ಕಾಲದಲ್ಲಿಯೇ ನಿರ್ಮಿಸಿರುವುದು ವಿಶೇಷವಾಗಿದೆ ಎಂದು ವಿದ್ವಾಂಸರು ಹೇಳಿದ್ದಾರೆ.

ಶಾಸನಗಳಲ್ಲಿ ರಾಜನಕೋಳೂರು

ಪ್ರಾಗೈತಿಹಾಸಿಕ ನೆಲೆಯಾದ ರಾಜನ ಕೋಳೂರಿನಲ್ಲಿ ಐತಿಹಾಸಿಕವಾಗಿ ಮೂರು ಶಾಸನಗಳು ಲಭ್ಯವಾಗಿದ್ದು ಅದರಲ್ಲಿ ಕ್ರಿ.ಶ. ೧೦೯೧ರ ಶಾಸನವು ಕಲ್ಯಾಣ ಚಾಲುಕ್ಯರ ಚಕ್ರವರ್ತಿ ೬ನೇ ವಿಕ್ರಮಾದಿತ್ಯನ ಕಾಲಕ್ಕೆ ಸೇರಿದ್ದಾಗಿದ್ದು ಅವನ

* ಸರಕಾರಿ ಬಾಲಕಿಯರ ಪ್ರೌಢಶಾಲೆ, ಕೆಂಭಾವಿ.


ವೀರಗಲ್ಲು


ಜೈನತೀರ್ಥಂಕರ ವಿಗ್ರಹ


ಭೈರವ ವಿಗ್ರಹ

ರಾಣಿ ಚಂದಲಾಮಹಾದೇವಿಯು ರಾಜನಕೋಳೂರಿನಲ್ಲಿ ಇದ್ದುಕೊಂಡು ಅಲ್ಲಿಯ ಬ್ರಹ್ಮಪುರಿಯ ೩೨ ಬ್ರಾಹ್ಮಣರಿಗೆ ಭೂಮಿದಾನ ನೀಡಿದ ವಿವರ ತಿಳಿಸುತ್ತದೆ. ಕ್ರಿ.ಶ. ೧೦೯೭ಕ್ಕೆ ಸೇರಿದ ಮತ್ತೊಂದು ಶಾಸನ ರಾಣಿ ಚಂದಲಾದೇವಿ ಶಂಕರನಾರಾಯಣ ದೇವಾಲಯಕ್ಕೆ ದಾನ ನೀಡಿದ ಹೊಲ, ಗಾಣ, ಪೂಜಾ ನಿವೇಶನದ ಬಗ್ಗೆ ತಿಳಿಸುತ್ತದೆ. ಕ್ರಿ.ಶ. ೧೨೧೪ರ ಶಾಸನವು ಯಾದವ ಚಕ್ರವರ್ತಿ ಸಿಂಘಣನ ಕಾಲದ್ದಾಗಿದ್ದು, ಶಂಕರನಾರಾಯಣ ದೇವರಿಗೆ ಅನೇಕರು ದತ್ತಿ ಬಿಟ್ಟ ವಿಷಯವನ್ನು ತಿಳಿಸುತ್ತದೆ.

ಭತ್ತಗ್ರಾಮ

ಮೇಲಿನ ಮೂರು ಶಾಸನಗಳಲ್ಲಿ ಅಂದರೆ ೧೦೯೧ ಶಾಸನ. ೧೦೯೭ರ ಶಾಸನದಲ್ಲಿ ಹಾಗೂ ೧೨೧೪ರ ಶಾಸನದಲ್ಲಿ ಭತ್ತಗ್ರಾಮ ಎಂದು ಪದ ಬಳಕೆಯಾಗಿದೆ. ಭತ್ತಗ್ರಾಮವೆಂದರೆ ಸ್ವಂತ ಉಪಯೋಗಕ್ಕೆ ಪಡೆದ ಗ್ರಾಮ ಎಂದಾಗುತ್ತದೆ. ಅಲ್ಲದೆ ಬ್ರಾಹ್ಮಣರ ಉಪಯೋಗಕ್ಕೆ ಕೊಟ್ಟಿರುವ ಊರು ಎಂದೂ ಕೂಡಾ ಅರ್ಥೈಸಿದ್ದಾರೆ. ಅಲ್ಲದೆ ಅಗ್ರಹಾರಕ್ಕೆ ಇರುವ ಇನ್ನೊಂದು ಹೆಸರೇ ಭತ್ತಗ್ರಾಮ ಎಂದು ಹಿರಿಯ ವಿದ್ವಾಂಸರು ತಿಳಿಸಿದ್ದಾರೆ. (ಭತ್ತಗ್ರಾಮದ ಕುರಿತು ನನ್ನ ಲೇಖನ ನೋಡಿರಿ ಸಂಶೋಧನಾ ವ್ಯಾಸಂಗ, ದ್ವೈಮಾಸಿಕ ಪತ್ರಿಕೆ, ಸಂ–೧೪, ಸಂಚಿಕೆ–೮೦ ಗುಲ್ಬರ್ಗಾ ವಿ.ವಿ–೨೦೦೨) ಒಟ್ಟಾರೆ ಮೇಲಿನ ಎಲ್ಲದರಿಂದ ರಾಣಿ ಚಂದಲಾದೇವಿಯ ಜೀವನೋಪಾಯಕ್ಕೆ ಈ ಗ್ರಾಮದ ಆದಾಯವನ್ನು ನೀಡಿದ್ದ ಕಾರಣಕ್ಕಾಗಿ ಭತ್ತಗ್ರಾಮ ಎಂದು ವಿಶೇಷ ಪದ ಬಳಕೆಯಾಗಿರಬಹುದು.

ಶಂಕರ ನಾರಾಯಣಗುಡಿ

ಶಾಸನೋಕ್ತ ಶಂಕರನಾರಾಯಣ ದೇವಾಲಯವು ಇತ್ತೀಚಿಗೆ ಜೀರ್ಣೋದ್ದಾರಗೊಂಡಿದ್ದು ಈ ದೇವಾಲಯ ಮೂಲ ರೂಪದಲ್ಲಿ ಉಳಿದಿಲ್ಲ ಅಲ್ಪಸ್ವಲ್ಪ ಪಳಿಯುಳಿಕೆಯೊಂದಿಗೆ ಐತಿಹಾಸಿಕ ದೇವಾಲಯವೆಂದು ಗುರುತಿಸಬಹುದು. ಕ್ರಿ.ಶ. ೧೦೯೭ರ ಈ ಊರಿನ ಶಾಸನದಲ್ಲಿ ರಾಣಿ ಚಂದಲಾದೇವಿಯು ಈ ದೇವಾಲಯಕ್ಕೆ ನಾಲ್ಕು ಮತ್ತರು ಹೊಲ ಎರಡು ತೋಟ ಒಂದು ಗಾಣ ಹಾಗೂ ಒಂದು ನಿವೇಶನ ದತ್ತಿ ಬಿಟ್ಟ ವಿಷಯ ಇರುವುದರಿಂದ ಕ್ರಿ.ಶ. ೧೧ನೇ ಶತಮಾನದಲ್ಲಿ ಗ್ರಾಮದ ಮಹತ್ವದ ದೇವಾಲಯವಾಗಿರಲು ಸಾಧ್ಯವಿದೆ.

ರಾಮಲಿಂಗೇಶ್ವರ ಗುಡಿ

ಗ್ರಾಮದ ಮಾಲೀಗೌಡರ ಓಣಿಯಲ್ಲಿರುವ ಈ ರಾಮಲಿಂಗೇಶ್ವರ ದೇವಾಲಯವು ತ್ರಿಕೂಟ ಮಾದರಿಯಲ್ಲಿದ್ದು ಇದು ಕೂಡಾ ಜೀರ್ಣೋದ್ಧಾರಗೊಂಡಿದೆ. ಆದರೂ ಮೂಲ ಸ್ವರೂಪ ಉಳಿದುಕೊಂಡಿದೆ. ಮೂರು ಗರ್ಭಗೃಹ ಮೂರು ತೆರೆದ ಅಂತರಾಳ ಹಾಗೂ ಒಂದೇ ನವರಂಗ ಹೊಂದಿವೆ. ಈ ಗುಡಿಯ ಮೂಲ ಗರ್ಭಗೃಹದಲ್ಲಿ (ಪೂರ್ವಕ್ಕೆ ಮುಖ ಮಾಡಿರುವ) ಬೃಹತ್ ಶಿವಲಿಂಗ ಇದೆ. ಪೀಠ ಹಳೆಯದು ಶಿವಲಿಂಗ ಇತ್ತೀಚಿನದಾಗಿದೆ. (ಹಳೆಯ ಶಿವಲಿಂಗ ಪಕ್ಕದಲ್ಲಿದೆ) ಅಲ್ಲದೆ ಈ ದೇವಾಲಯದಲ್ಲಿ ಸೂರ್ಯ, ಮಹಿಷಮರ್ಧಿನಿ ಶಿಲ್ಪಗಳಿವೆ. ದೇವಾಲಯದ ನವರಂಗದ ಬಲಕೋಷ್ಠದಲ್ಲಿ ಮತ್ತು ಗುಡಿಯ ಮುಂಭಾಗದಲ್ಲಿ ಅನೇಕ ಶಿಲ್ಪಗಳನ್ನು ಕೆತ್ತಲಾಗಿದೆ. ಶಿವಲಿಂಗದ ಎದುರಿಗೆ ಬೆಳ್ಳಿ ನಂದಿ ವಿಗ್ರಹ ಇದೆ. ಈ ದೇವಾಲಯ ಕೂಡಾ ೧೧–೧೨ನೇ ಶತಮಾನದಲ್ಲಿ ಪ್ರಮುಖ ದೇವಾಲಯವಾಗಿತ್ತೆಂದು ತಿಳಿಯುತ್ತದೆ.

ಹನುಮಂತ ದೇವಾಲಯ ಹಾಗೂ ಅಲ್ಲಿರುವ ಶಿಲ್ಪಗಳು

ಈ ದೇವಾಲಯವು ಕೂಡಾ ಮೂರು ಗರ್ಭಗೃಹ ಹೊಂದಿದ್ದು ಅಂತರಾಳವಿಲ್ಲದೆ. ಒಂದೇ ನವರಂಗ ಹೊಂದಿದೆ. ನವರಂಗದ ಕಂಬಗಳು ಇತ್ತೀಚೆಗೆ ಪರಿವರ್ತಿಸಿ ನೂತನ ಆಕಾರದಲ್ಲಿ ಮಾಡಿದ್ದಾರೆ. ಈ ದೇವಾಲಯ ಪರಿಸರದಲ್ಲಿ ಭೈರವ ಹಾಗೂ ನಾಲ್ಕು ಮಾತೃಕೆಯರ ಶಿಲ್ಪಗಳಿವೆ. ಮತ್ತು ಕುದುರೆ ವೀರನನ್ನೊಳಗೊಂಡ ಭಗ್ನ ವೀರಗಲ್ಲಿದೆ. ಇಲ್ಲಿಯೇ ಒಂದು ತೀರ್ಥಂಕರ ವಿಗ್ರಹವಿದೆ ಹಾಗೂ ನಾಗಶಿಲ್ಪಗಳಿವೆ.

ಈ ವೀರಗಲ್ಲಿನಲ್ಲಿ ವೀರ ತನ್ನ ಎಡಗೈ ಮುಂದೆ ಮಾಡಿ ಬಲಗೈಯಲ್ಲಿ ಕತ್ತಿ ಹಿಡಿದು ಎದುರಿಗಿರುವ ಕುದುರೆ ಕಡೆ ಮುಖ ಮಾಡಿ ಹೋರಾಡುವ ವೀರನನ್ನು ಸುಂದರವಾಗಿ ಕೆತ್ತಲಾಗಿದೆ. ಕುದುರೆಗೆ ತಡಿ ಸಾಮಗ್ರಿಗಳನ್ನು ಕೆತ್ತಲಾಗಿದೆ.

ಜಿನತೀರ್ಥಂಕರ: ಈ ಪದ್ಮಾಸೀನ ಭಂಗಿಯದ್ದು ಮುಖಭಾಗ ಸಂಪೂರ್ಣ ಭಗ್ನಗೊಂಡಿದ್ದು ನಾಸಿಕ ಹಾಗೂ ಕಿವಿಗಳು ಕೂಡಾ ತೃಟಿತಗೊಂಡಿವೆ ಕಪ್ಪು ಕಲ್ಲಿನಲ್ಲಿ ಕೆತ್ತಿರುವ ಈ ವಿಗ್ರಹದ ಮೇಲೆ ಮುಕ್ಕೊಡೆವಿದೆ. ವಿಗ್ರಹದ ಎಡ ಮತ್ತು ಬಲಕ್ಕೆ ಚಾಮರದಾರಿ ಶಿಲ್ಪಗಳನ್ನು ಕೆತ್ತಿದ್ದು ತುಂಬಾ ಸುಂದರವಾಗಿ ಕಾಣುತ್ತವೆ.

ಭೈರವ: ಹನುಮಂತ ದೇವಾಲಯದ ಪರಿಸರದಲ್ಲಿರುವ ಕಪ್ಪುಕಲ್ಲಿನಲ್ಲಿ ಕೆತ್ತಿರುವ ಈ ವಿಗ್ರಹಕ್ಕೆ ಜನರು ಎಣ್ಣೆ ಹಾಕಿ ವಿರೂಪಗೊಳಿಸಿದ್ದಾರೆ ಆದರೂ ಸೂಕ್ಷ್ಮವಾಗಿ ಗಮನಿಸಿದಾಗ ವಿಗ್ರಹದ ಕೈಗಳಲ್ಲಿ ಡಮರು, ತ್ರಿಶೂಲ, ಖಡ್ಗ, ಬೂದುಬಟ್ಟಲು ಕೆತ್ತಿರುವುದು ಕಾಣುತ್ತದೆ. ವಿಗ್ರಹದ ಕೊರಳಲ್ಲಿ ರುಂಡಮಾಲೆ ಇದೆ ಒಟ್ಟಾರೆ ವಿಗ್ರಹ ಕ್ರಿ.ಶ. ೧೧-೧೨ನೇ ಶತಮಾನಕ್ಕೆ ಸೇರಿದ್ದಾಗಿದೆ.

ಶಿವಲಿಂಗ: ಕಪ್ಪುಕಲ್ಲಿನಲ್ಲಿ ಕೆತ್ತಿರುವ ರಾಮಲಿಂಗೇಶ್ವರ ದೇವಾಲಯದ ಗರ್ಭಗೃಹದಲ್ಲಿ ಪೂರ್ವಕ್ಕೆ ಮುಖ ಮಾಡಿದ ಬೃಹತ್ ಶಿವಲಿಂಗ ಇದೆ. ಪೀಠ ಹಳೆಯದಾಗಿದ್ದು ಶಿವಲಿಂಗ ಇತ್ತೀಚಿನದಾಗಿದೆ. (ಹಳೆಯ ಶಿವಲಿಂಗ ಪಕ್ಕದಲ್ಲಿದೆ) ಮೇಲಿರುವ ಲಿಂಗ ಚಿಕ್ಕದಾಗಿದ್ದು ಒಟ್ಟಾರೆ ಈ ಶಿವಲಿಂಗ ಸುಂದರವಾಗಿದೆ. ನಿತ್ಯ ಪೂಜೆ ಮಾಡಲಾಗುತ್ತದೆ. ಈ ಹನುಮಂತ ದೇವಾಲಯದ ಪರಿಸರದಲ್ಲಿ ಗ್ರಾಮದ ಬೇರೆ ಬೇರೆ ಐತಿಹಾಸಿಕ ದೇವಾಲಯಗಳ ಬಿಡಿಭಾಗಗಳು ಇಲ್ಲಿವೆ. ಇದರಲ್ಲಿ ಊರ ಹೊರಗಡೆ ಚನ್ನಕೇಶವ ದೇವಾಲಯವಿದ್ದು ಅದು ಸಂಪೂರ್ಣ ಹಾಳಾದ ಸ್ಥಿತಿಯಲ್ಲಿದೆ.

ಅಲ್ಲದೆ ಗ್ರಾಮದಲ್ಲಿ ಇತ್ತೀಚಿನ ಸೋಮನಾಥ, ಹನುಮಂತ, ಕೊಟ್ಟೂರು ಬಸವ, ಮರಗಮ್ಮ, ದುರ್ಗಮ್ಮ, ವೀರಭದ್ರೇಶ್ವರ ಗುಡಿ ಇವೆ. ಜುಮ್ಮಾ ಮಸೀದಿ, ದರ್ಗಾ ಕೂಡಾ ಇದೆ. ಇಲ್ಲಿ ಷೇಕಲಿ ಕಟ್ಟೆಯು ಇದ್ದು ಹಿಂದೂ ಮುಸ್ಲಿಂ ಭಾವೈಕ್ಯತೆಯ ಸಂಕೇತವಾಗಿದೆ. ಒಟ್ಟಾರೆ ಐತಿಹಾಸಿಕ ಮಹತ್ವದ ನೆಲೆಯಾಗಿರುವ ಈ ಗ್ರಾಮ ಇಂದು ಆಧುನಿಕವಾಗಿ ಬೆಳೆದರೂ, ದುರ್ದೈವವೆಂದರೆ ಇಲ್ಲಿಯ ಐತಿಹಾಸಿಕ ಶಿಲ್ಪಗಳು ಯಾವುದೇ ರಕ್ಷಣೆ ಇಲ್ಲದೆ ಅನಾಥವಾಗಿ ಬಿದ್ದಿರುವುದು ನೋವಿನ ಸಂಗತಿ.

ಆಕರ ಗ್ರಂಥಗಳು

೧. ಕಲಬುರ್ಗಿ ಜಿಲ್ಲಾ ಗ್ಯಾಸೆಟಿಯರ್, ೧೯೯೭, ಎಂ.ಬಿ. ಪಾಟೀಲ.

೨. ಸುರಪುರ ತಾಲೂಕಿನ ಶಾಸನಗಳು, ಹನುಮಾಕ್ಷಿ ಗೋಗಿ.

ಗುಬ್ಬಿ ತಾಲ್ಲೂಕಿನ ಸ್ಮಾರಕ ಶಿಲ್ಪಗಳ ಸಂಕ್ಷಿಪ್ತ ಅಧ್ಯಯನ

ಎಸ್.ಆರ್. ಪ್ರಸನ್ನಕುಮಾರ್*

ಗುಬ್ಬಿ ದಕ್ಷಿಣ ಕರ್ನಾಟಕದ ತುಮಕೂರು ಜಿಲ್ಲೆಯಲ್ಲಿನ ಒಂದು ತಾಲ್ಲೂಕು ಕೇಂದ್ರವಾಗಿದೆ. ಈ ತಾಲ್ಲೂಕು ಚೇಳೂರು, ಚಂದ್ರಶೇಖರಪುರ (ಸಿ.ಎಸ್. ಪುರ), ಗುಬ್ಬಿ ಕಸಬಾ, ಹಾಗಲವಾಡಿ, ಕಡಬ ಹಾಗೂ ನಿಟ್ಟೂರು ಹೀಗೆ ಒಟ್ಟು ಆರು ಹೋಬಳಿಗಳನ್ನು, ೩೮೬ ಹಳ್ಳಿಗಳನ್ನು ಹಾಗೂ ಒಂದು ಪಟ್ಟಣವನ್ನು ಒಳಗೊಂಡಂತೆ ೧೨೨೨.೨೩ ಚ.ಕಿ.ಮೀ. ಭೂಪ್ರದೇಶದಲ್ಲಿ ವ್ಯಾಪಿಸಿದೆ. ಈ ತಾಲ್ಲೂಕು ಕ್ರಿ.ಶ. ೧೮೮೬ರಲ್ಲಿ ಅಸ್ತಿತ್ವಕ್ಕೆ ಬಂದಿತು. ಗುಬ್ಬಿ ಹೊಸಳ್ಳಿಯ ಮಹಾನಾಡಪ್ರಭು ಹೊನ್ನಪ್ಪಗೌಡರು ಗುಬ್ಬಿ ಪಟ್ಟಣವನ್ನು ಕ್ರಿ.ಶ. ೧೫ನೇ ಶತಮಾನದಲ್ಲಿ ಸ್ಥಾಪಿಸಿದರು.

ಐತಿಹಾಸಿಕ ಸ್ಮಾರಕ ಶಿಲ್ಪಗಳು ವ್ಯಕ್ತಿ ಓರ್ವನ ಅಥವಾ ವ್ಯಕ್ತಿಗಳ ಆದರ್ಶಪ್ರಾಯವಾದ ಅಗಲಿಕೆಯನ್ನು ಸ್ಮರಿಸುವ, ಜಗಜ್ಜಾಹಿರಾಗಿಸುವ ಹಾಗೂ ಮುಂದಿನ ಪೀಳಿಗೆಯಲ್ಲಿ ಅವರ ಬಗ್ಗೆ ಆಸಕ್ತಿ ಹಾಗೂ ಗೌರವ ಉಂಟು ಮಾಡುವ ಉದ್ದೇಶದಿಂದ ಸ್ಥಾಪಿಸಲಾಗುತ್ತಿತ್ತು. ಈ ಸ್ಮಾರಕ ಶಿಲ್ಪಗಳು ಕೇವಲ ಮನುಷ್ಯರಿಗಷ್ಟೆ ಸೀಮಿತವಾಗಿರದೆ ಅವರ ಒಡನಾಡಿಗಳಾದ ಪ್ರಾಣಿ, ಪಕ್ಷಿಗಳಿಗೂ ಸ್ಥಾಪಿಸಿದ ಸಾಕಷ್ಟು ಉದಾಹರಣೆಗಳಿವೆ. ಈ ನಿಟ್ಟಿನಲ್ಲಿ ಸ್ಮಾರಕ ಶಿಲ್ಪಗಳನ್ನು ಅಧ್ಯಯನಕ್ಕೆ ಒಳಪಡಿಸಿದಾಗ ಸಾಕಷ್ಟು ಅಲಿಖಿತ ಐತಿಹಾಸಿಕ ಮಾಹಿತಿಗಳನ್ನು ಹೊರತೆಗೆಯಬಹುದಾಗಿದೆ.

ಪ್ರಸ್ತುತ ಮಂಡನೆಯಾಗಿರುವ ಸಂಶೋಧನಾ ಕ್ಷೇತ್ರದಲ್ಲಿ ಒಟ್ಟು ೧೪೫ ಸುಸ್ಥಿತಿಯಲ್ಲಿರುವ, ವಿವಿಧ ಕಾಲಘಟ್ಟಕ್ಕೆ ಸೇರಿದ, ವಿವಿಧ ಪ್ರಕಾರದ ಸ್ಮಾರಕ ಶಿಲ್ಪಗಳು ಪತ್ತೆಯಾಗಿವೆ. ಗುಬ್ಬಿ ಪರಿಸರದಲ್ಲಿ ಸ್ಮಾರಕ ಶಿಲ್ಪಗಳ ಲಭ್ಯತೆ ಕ್ರಿ.ಶ. ೯ನೇ ಶತಮಾನದಿಂದ ಆರಂಭಗೊಂಡಿರುವುದು ತಿಳಿದುಬರುತ್ತದೆ. ಆದರೆ ಇವುಗಳ ರಚನೆ ಸರ್ವವ್ಯಾಪಿಯಾಗಿ ಆರಂಭಗೊಂಡದ್ದು ಕ್ರಿ.ಶ. ೮–೯ನೇ ಶತಮಾನದಿಂದ.

ವಿವಿಧ ಶತಮಾನಗಳಲ್ಲಿ ಸ್ಥಾಪಿತವಾದ ಸ್ಮಾರಕ ಶಿಲ್ಪಗಳು: ಗುಬ್ಬಿ ತಾಲ್ಲೂಕಿನ ವಿವಿಧ ಹೋಬಳಿಗಳಲ್ಲಿ ಕ್ರಿ.ಶ. ೯ನೇ ಶತಮಾನದಿಂದ ೧೮ನೇ ಶತಮಾನದವರೆಗೆ ಸ್ಥಾಪಿತವಾಗಿರುವ ಸ್ಮಾರಕ ಶಿಲ್ಪಗಳ ವಿಶ್ಲೇಷಣಾತ್ಮಕ ಅಧ್ಯಯನಕ್ಕೆ ಮಾಹಿತಿ ನೀಡುತ್ತದೆ. ಈ ದತ್ತಾಂಶಗಳನ್ನು ಗಮನಿಸಿದಾಗ ಕ್ರಿ.ಶ. ೯, ೧೦, ಮತ್ತು ೧೧ನೇ ಶತಮಾನದಲ್ಲಿ ತಲಾ ಎರಡು ಸ್ಮಾರಕ ಶಿಲ್ಪಗಳು ಕಂಡುಬಂದಿರುವುದು ಆರಂಭಿಕ ಕಾಲಘಟ್ಟದಲ್ಲಿ ಸ್ಮಾರಕ ಶಿಲ್ಪಗಳ ಸ್ಥಾಪನೆ ಅತ್ಯಂತ ವಿರಳ ಹಾಗೂ ಸೀಮಿತ ವರ್ಗಗಳಿಗೆ ಮೀಸಲಿದ್ದವೆಂದು ಮೇಲ್ನೋಟಕ್ಕೆ ಗೋಚರಿಸುತ್ತದೆ. ಕ್ರಿ.ಶ. ೧೨ ಮತ್ತು ೧೩ನೇ ಶತಮಾನದಲ್ಲಿ ಕ್ರಮೇಣ ೬ ಹಾಗೂ ೧೧ಕ್ಕೆ ಏರಿಕೆಯಾಗಿರುವುದು ಆ ಕಾಲದ ರಾಜಕೀಯ ಚಟುವಟಿಕೆಗಳ ಪ್ರಭಾವಗಳನ್ನು ತೋರ್ಪಡಿಸುತ್ತವೆ, ಆದರೆ ಕ್ರಿ.ಶ. ೧೪ನೇ ಶತಮಾನದಲ್ಲಿ ಇವುಗಳ ಸಂಖ್ಯೆ ಎರಡಕ್ಕೆ ಕುಸಿದಿರುವುದು ದಕ್ಷಿಣ ಭಾರತದ ರಾಜಕೀಯ ಚಟುವಟಿಕೆಗಳು ಉತ್ತರ ಭಾರತದ ಆಡಳಿತಶಾಹಿಗಳ ಕರಿನೆರಳಿಗೆ ಒಳಪಟ್ಟಿದ್ದುದ್ದರ ಪ್ರತೀಕ ಎಂಬುದಕ್ಕೆ ಸಾಕ್ಷ್ಯಗಳಾಗಿ ಕಂಡುಬರುತ್ತಿವೆ.

ಕ್ರಿ.ಶ. ೧೫ ಮತ್ತು ೧೬ನೇ ಶತಮಾನಗಳು ಕರ್ನಾಟಕದ ಶ್ರೇಷ್ಠ ಸಾಮ್ರಾಜ್ಯವಾದ ವಿಜಯನಗರ ಸಾಮ್ರಾಜ್ಯದ ಬೆಳವಣಿಗೆ ಹಾಗೂ ವಿಸ್ತರಣೆಯ ಕಾಲಘಟ್ಟವಾಗಿದ್ದು, ಈ ಅವಧಿಯಲ್ಲಿ ರಾಯರುಗಳು ಹಲವು ರಾಜಮನೆತನಗಳು ಹಾಗು ಅನ್ಯಧರ್ಮೀಯ ಆಡಳಿತಾಧಿಕಾರಿಗಳೊಂದಿಗೆ ಹೋರಾಟ ನಡೆಸಬೇಕಾಯಿತು, ಈ ಅವಧಿಯಲ್ಲಿ ಸೈನಿಕರ ಸ್ಥೈರ್ಯ ಹಾಗೂ ಬಲವನ್ನು ಹೆಚ್ಚಿಸಲು ಹಲವು ಕ್ರಮಗಳನ್ನು ಕೈಗೊಳ್ಳಲಾಗಿ ಅವುಗಳಲ್ಲಿ ಒಂದು ಸ್ಮಾರಕ ಶಿಲ್ಪಗಳ ಸ್ಥಾಪನೆ, ಈ ಮೂಲಕ ಸೈನಿಕರ ಹಾಗೂ ಅವರ ಒಡನಾಡಿಗಳ ತ್ಯಾಗ, ಬಲಿದಾನವನ್ನು ಸ್ಮರಿಸುವುದಕ್ಕಾಗಿ ಆಡಳಿತಶಾಹಿ ವರ್ಗ ಸಹಕರಿಸಿರುವುದು ಹಾಗೂ ನೆರವು ನೀಡಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಕ್ರಿ.ಶ. ೧೭ನೇ ಶತಮಾನದಲ್ಲಿ ಈ ಪ್ರದೇಶದಲ್ಲಿ ಅತಿ ಹೆಚ್ಚು ಅಂದರೆ ೫೭ ಸ್ಮಾರಕ ಶಿಲ್ಪಗಳು ಸ್ಥಾಪಿತವಾಗಿರುವುದು ಅತ್ಯಂತ ಗಮನಾರ್ಹವಾಗಿದೆ. ಈ ನಿಟ್ಟಿನಲ್ಲಿ

* ಐಸಿಹೆಚ್ಆರ್, ಕಿರಿಯ ಸಂಶೋಧನಾರ್ಥಿ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು, ಮೊ. ೯೪೮೨೭ ೨೨೫೯೧

ವಿಶ್ಲೇಷಿಸಿದಾಗ ವಿಜಯನಗರ ಸಾಮ್ರಾಜ್ಯದ ಪಥನದ ನಂತರ ಅನೇಕ ಸ್ಥಳೀಯ ನಾಯಕರುಗಳು ಸ್ವಾತಂತ್ರರಾಗಿ ಆಡಳಿತ ನಡೆಸಲು ಆರಂಭಿಸಿದ್ದರಿಂದ ಹಲವಾರು ಸಣ್ಣ ಸಣ್ಣ ಯುದ್ಧಗಳು ನಾಯಕರುಗಳ ನಡುವೆ ಸಂಭವಿಸಿದ್ದಕ್ಕೆ ಈ ಸ್ಮಾರಕ ಶಿಲ್ಪಗಳು ಆಧಾರಗಳಾಗಿವೆ, ಅಲ್ಲದೆ ಈ ವೇಳೆಗಾಗಲೇ ಸ್ಮಾರಕ ಶಿಲ್ಪಗಳ ರಚನೆ ಮತ್ತು ಸ್ಥಾಪನೆ ಪ್ರತಿಷ್ಠೆ ಹಾಗೂ ಒಂದು ಸಂಪ್ರದಾಯದಂತೆ ಬೆಳೆದು ಬಂದಿದ್ದದ್ದು ತಿಳಿಯುತ್ತದೆ. ನಂತರದ ಕಾಲದಲ್ಲಿ ಹಲವು ನಾಯಕ ಮನೆತನಗಳು ಸ್ಥಳೀಯ ಸಂಸ್ಥಾನಗಳಲ್ಲಿ ವಿಲೀನವಾಗಿ ರಾಜಕೀಯ ಪ್ರಕ್ಷುಬ್ದತೆ ತಣ್ಣಗಾದದ್ದು ೧೮ನೇ ಶತಮಾನದಲ್ಲಿ ದೊರೆತಿರುವ ಕೇವಲ ಒಂದು ಸ್ಮಾರಕ ಶಿಲ್ಪ ಪ್ರತಿಬಿಂಬಿಸುತ್ತದೆ. ಈ ಮೇಲಿನ ದತ್ತಾಂಶಗಳು ಗುಬ್ಬಿ ಪ್ರದೇಶದ ಸ್ಮಾರಕ ಶಿಲ್ಪಗಳ ಸಂಖ್ಯಾಧಾರಿತ ವಿಶ್ಲೇಷಣೆಯಾಗಿದ್ದರೂ ಇವುಗಳು ಕರ್ನಾಟಕದ ರಾಜಕೀಯ ಚಿತ್ರಣವನ್ನು ಸ್ಥೂಲವಾಗಿ ಪ್ರತಿನಿಧಿಸುತ್ತಿರುವುದು ಗಮನಾರ್ಹ.

ಕ್ರ.ಸಂ.	ಹೋಬಳಿ	ವೀರಗಲ್ಲುಗಳು	ವೀರ ಮಾಸ್ತಿ ಶಿಲ್ಪಗಳು	ಸತಿ ಶಿಲ್ಪಗಳು	ಇತರೆ ಸ್ಮಾರಕ ಶಿಲ್ಪಗಳು	ಒಟ್ಟು ಸ್ಮಾರಕ ಶಿಲ್ಪಗಳು
೧.	ಚೇಳೂರು	೧೮	೧೦		೨	೩೦
೨.	ಸಿ.ಎಸ್. ಪುರ	೧೮	೮			೨೬
೩.	ಗುಬ್ಬಿ ಕಸಬಾ	೨೮	೧೨	೪		೪೪
೪.	ಹಾಗಲವಾಡಿ	೭	೩	೧		೧೧
೫.	ಕಡಬ	೯	೩	೧	೨	೧೫
೬.	ನಿಟ್ಟೂರು	೧೩	೩	೨	೧	೧೯
ಒಟ್ಟು		೯೩	೩೯	೮	೫	೧೪೫

ಗುಬ್ಬಿ ತಾಲ್ಲೂಕಿನ ಹೋಬಳಿಗಳಲ್ಲಿ ಹಂಚಿಕೆಯಾಗಿರುವ ವಿವಿಧ ಬಗೆಯ ಸ್ಮಾರಕ ಶಿಲ್ಪಗಳು

ಗುಬ್ಬಿ ತಾಲ್ಲೂಕಿನ ಆರು ಹೋಬಳಿಗಳಲ್ಲಿ ಹಂಚಿಕೆಯಾಗಿರುವ ವಿವಿಧ ಬಗೆಯ ಸ್ಮಾರಕ ಶಿಲ್ಪಗಳ ದತ್ತಾಂಶವು ದೊರೆಯುತ್ತದೆ. ಈ ದತ್ತಾಂಶಗಳಿಂದ ಹಲವು ಮಾಹಿತಿಗಳು ದೊರೆಯುವುದರ ಹಲವು ಪ್ರಶ್ನೆಗಳು ಹುಟ್ಟಿಕೊಳ್ಳುತ್ತವೆ. ಗುಬ್ಬಿ ತಾಲ್ಲೂಕಿನಲ್ಲಿ ದೊರಕಿರುವ ಒಟ್ಟು ೧೪೫ ಸ್ಮಾರಕ ಶಿಲ್ಪಗಳಲ್ಲಿ ೯೩ ವೀರಗಲ್ಲುಗಳು ಮೊದಲ ಸ್ಥಾನದಲ್ಲಿ, ೩೯ ವೀರಮಾಸ್ತಿಗಲ್ಲು ಎರಡನೇ ಸ್ಥಾನದಲ್ಲಿ, ೮ ಮಾಸ್ತಿಗಲ್ಲುಗಳು ಮೂರನೇ ಸ್ಥಾನದಲ್ಲಿ ಹಾಗೂ ಇತರೆ ಸ್ಮಾರಕ ಶಿಲ್ಪಗಳು ಕಡೆಯ ಸ್ಥಾನದಲ್ಲಿವೆ.

ಈ ದತ್ತಾಂಶಗಳನ್ನು ಗಮನಿಸಿದಾಗ ಸ್ಮಾರಕ ಶಿಲ್ಪಗಳೆಂದರೆ ವೀರಗಲ್ಲುಗಳೇ ಎಂಬಂತಹ ಪರಿಸ್ಥಿತಿ ನಿರ್ಮಾಣವಾಗಿದೆ, ಇದಕ್ಕೆಕಾರಣ ಅವುಗಳ ಸಂಖ್ಯೆ ಹಾಗು ವ್ಯಾಪಕತೆ. ಭಾರತೀಯ ಸಮಾಜ ಸರ್ವಕಾಲದಲ್ಲೂ ಪುರುಷ ಪ್ರಧಾನ ಹಾಗೂ ವೀರತನಕ್ಕೆ ಆದ್ಯತೆ ನೀಡುತ್ತಾ ಬಂದಿರುವುದು ಸ್ಪಷ್ಟವಾಗುತ್ತದೆ. ಇನ್ನು ಸತಿ ಸ್ಮಾರಕ ಶಿಲ್ಪಗಳ ಸಂಖ್ಯೆ ಗಮನಿಸಿದಾಗ ಸ್ತ್ರೀ ಓರ್ವಳು ಒಬ್ಬೊಂಟಿಯಾಗಿ ಆತ್ಮಾರ್ಪಣೆ ಮಾಡಿಕೊಳ್ಳುವುದಕ್ಕೆ ಹಾಗೂ ಮಾಡಿಕೊಂಡದ್ದಕ್ಕೆ ಹೆಚ್ಚಿನ ಆದ್ಯತೆ, ಪುರಸ್ಕಾರ ಹಾಗು ಸ್ವೀಕೃತ ಮನೋಭಾವ ಸಮಾಜದಲ್ಲಿ ಇಲ್ಲದೆ ಇದ್ದದ್ದು ತಿಳಿದು ಬರುತ್ತದೆ. ಈ ಪ್ರದೇಶದಲ್ಲಿ ದೊರೆತಿರುವ ಐತಿಹಾಸಿಕ ಲಿಖಿತ ದಾಖಲೆಗಳಲ್ಲಿ ಸತಿಸಹಗಮನದ ಬಗ್ಗೆ ಹೆಚ್ಚಿನ ಮಾಹಿತಿಗಳು ಕಂಡುಬಂದಿಲ್ಲ, ಆದರೆ ಈ ಸ್ಮಾರಕ ಶಿಲ್ಪಗಳು ಅದಕ್ಕೆ ತದ್ವಿರುದ್ದವಾಗಿ ಮಾಹಿತಿ ಒದಗಿಸುತ್ತಿರುವುದು ಈ ಸಂಪ್ರದಾಯದ ಬಗೆಗಿನ ಸತ್ಯಾಸತ್ಯತೆಯ ಬಗ್ಗೆ ಮಾಹಿತಿ ಸಂಗ್ರಹಿಸಲು ಪರೋಕ್ಷವಾಗಿ ಪ್ರೇರಣೆ ನೀಡುತ್ತಿವೆ.

ವೀರಗಲ್ಲುಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಅವುಗಳಿಂದ ವೀರನ ಉದಾತ್ತ ಕರ್ತವ್ಯ ಪ್ರಜ್ಞೆ ಹಾಗೂ ಸಾಮಾಜಿಕ ಜವಾಬ್ದಾರಿಗಳನ್ನು ಅರಿಯುವುದರ ಜೊತೆಗೆ ಆ ವೀರನಿಗೆ ಅವನ ಸಮಾಜದಲ್ಲಿದ್ದ ಸ್ಥಾನಮಾನ, ಅಧಿಕಾರ ಹಾಗೂ ಅವನ ಕಾರ್ಯಕ್ಕಿದ್ದ ಸಾಮಾಜಿಕ ಮನ್ನಣೆಯನ್ನು ತಿಳಿಸುವುದರ ಜೊತೆಗೆ ಬಳಕೆಯಲ್ಲಿದ್ದ ಶಸ್ತ್ರಾಸ್ತ್ರಗಳ ಅಧ್ಯಯನಕ್ಕೂ ಈ ಶಿಲ್ಪಗಳು ನೆರವಾಗುತ್ತವೆ. ಈ ತಾಲ್ಲೂಕಿನಲ್ಲಿ ದೊರಕಿರುವ ೯೩ ವೀರಗಲ್ಲುಗಳಲ್ಲಿ ೬ ತುರುಗೊಳ್, ೩ ಪ್ರಾಣಿ ಬೇಟೆ ಹಾಗೂ ಹೋರಾಟದ, ೪ ಬಂದೂಕು, ೧೦ ಅಧಿಕಾರಶಾಹಿ ಸಂಕೇತಗಳನ್ನು ಒಳಗೊಂಡ ಹಾಗೂ ೭೦ ಸಾಮಾನ್ಯ ವೀರಗಲ್ಲುಗಳು.

ಇನ್ನು ಈ ತಾಲ್ಲೂಕಿನಲ್ಲಿ ದೊರಕಿರುವ ಸ್ಮಾರಕ ಶಿಲ್ಪಗಳಲ್ಲಿ ಹಲವು ವೈಶಿಷ್ಟ್ಯಗಳನ್ನು ಗುರುತಿಸಬಹುದಾಗಿದೆ. ಅವುಗಳನ್ನು ಗಮನಿಸುವುದಾದರೆ, ಪ್ರಭುವನಹಳ್ಳಿ, ಕೆ. ರಾಂಪುರ, ತಾಳೆಕೊಪ್ಪ, ಕೋಣನಕಲ್ಲು ಗ್ರಾಮಗಳಲ್ಲಿ ಪತ್ತೆಯಾಗಿರುವ ಸ್ಮಾರಕ ಶಿಲ್ಪಗಳಲ್ಲಿ ಸರ್ಪಗಳನ್ನು ಚಿತ್ರಿಸಲಾಗಿದೆ, ಸ್ಮಾರಕ ಶಿಲ್ಪಗಳಲ್ಲಿ ಸರ್ಪಗಳ ರಚನೆಗೆ ಸಂಬಂಧಿಸಿದಂತೆ ಜಿ.ಕೆ. ದೇವರಾಜಸ್ವಾಮಿಯವರು ಸರ್ಪಗಳು ಅವರ ಕುಲವನ್ನು ಪ್ರತಿನಿಧಿಸುತ್ತವೆ ಎಂದು ತಮ್ಮ ಲೇಖನವೊಂದರಲ್ಲಿ ತಿಳಿಸಿರುತ್ತಾರೆ, ಹಾಗೂ ಹಲವರು ಆ ವೀರನು ಸರ್ಪ ಕಡಿತದಿಂದ ಮರಣ ಹೊಂದಿರುವುದಾಗಿ ಅಭಿಪ್ರಾಯಪಟ್ಟಿರುತ್ತಾರೆ. ಇಲ್ಲಿ ದೇವರಾಜಸ್ವಾಮಿಯವರ ಅಭಿಪ್ರಾಯದಂತೆ ಶಿಲ್ಪಗಳಲ್ಲಿರುವ ಸರ್ಪವು ಕುಲದ ಪ್ರತೀಕವೇ ಆಗಿರಬಹುದೆಂಬುದು ಹೆಚ್ಚು ಸೂಕ್ತವಾಗಿದೆ. ಉದಾಹರಣೆಗೆ, ಒಕ್ಕಲಿಗ ಸಮುದಾಯದಲ್ಲಿ ಸರ್ಪ ಒಕ್ಕಲಿಗ ಎಂಬ ಒಳಪಂಗಡ ಇದೆ, ಇದೇ ರೀತಿ ಕುರುಬ ಸಮಾಜದಲ್ಲಿ ಸರ್ಪ ಗೋತ್ರದವರು ಇರುವುದು ತಿಳಿದುಬರುತ್ತದೆ. ಅಲ್ಲದೆ, ಪ್ರಾಣಹಾನಿ ಮಾಡಿದ ಜೀವಿಯನ್ನು ಸ್ಮಾರಕ ಶಿಲ್ಪಗಳಲ್ಲಿ ಅಷ್ಟೊಂದು ಗೌರವಯುತವಾಗಿ ಚಿತ್ರಿಸುವುದು ತಾರ್ಕಿಕವಾಗಿಲ್ಲ. ಕಗ್ಗೆರೆಯಲ್ಲಿ ಪತ್ತೆಯಾಗಿರುವ ಸ್ಮಾರಕ ಶಿಲ್ಪವು ಅತ್ಯಂತ ವಿಶಿಷ್ಟವಾಗಿದ್ದು ಇದು ಒಂದು ಇಡೀ ಕುಟುಂಬದ ಸ್ಮಾರಕ ಶಿಲ್ಪವಾಗಿದೆ. ಇದರಲ್ಲಿ ಬಿಲ್ಲುಧಾರಿಯಾದ ವೀರ, ಆತನ ಪತ್ನಿ, ನಗ್ನವಾಗಿರುವ ಒಂದು ಹೆಣ್ಣು ಹಾಗೂ ಗಂಡು ಮಗು, ವೀರನ ಸಾಕುನಾಯಿಯನ್ನು ಈ ಶಿಲ್ಪದಲ್ಲಿ ಕೆತ್ತಿರುವುದು ಹಲವು ವಿಶ್ಲೇಷಣೆಗೆ ಎಡೆಮಾಡಿಕೊಟ್ಟಿದೆ. ತಾಳೆಕೊಪ್ಪದ ಸ್ಮಾರಕ ಶಿಲ್ಪವೊಂದರಲ್ಲಿ ಸ್ತ್ರೀ ಓರ್ವಳು ಸರ್ಪವನ್ನು ಕೈಯಲ್ಲಿ ಹಿಡಿದು ನಿಂತಿರುವ ಶಿಲ್ಪವು ದಿವ್ಯ ಪರೀಕ್ಷೆ ಸ್ಮಾರಕ ಶಿಲ್ಪಕ್ಕೆ ಒಂದು ಉತ್ತಮ ಉದಾಹರಣೆಯಾಗಿದೆ. ಕಡೆಯದಾಗಿ ಇರಕಸಂದ್ರ ಗ್ರಾಮದಲ್ಲಿ ದೊರೆತಿರುವ ಆನೆ ಜೊತೆಗಿನ ಹೋರಾಟದ ವೀರಗಲ್ಲು ಗಜಬೇಂಟೆಕಾರ ಎಂಬ ಬಿರುದನ್ನು ಸ್ಮೃತಿ ಪಟಲಕ್ಕೆ ತರುತ್ತದೆ.

ಈ ಮೇಲಿನ ಎಲ್ಲಾ ಅಂಶಗಳನ್ನು ಅವಲೋಕಿಸಿದಾಗ ಗುಬ್ಬಿ ತಾಲ್ಲೂಕು ದಕ್ಷಿಣ ಕರ್ನಾಟಕದ ಒಂದು ಪ್ರಮುಖ ರಾಜಕೀಯ ಕೇಂದ್ರವಾಗಿದ್ದುದ್ದರ ಜೊತೆಗೆ, ಇದು ಹಲವು ಬಗೆಯ ಐತಿಹಾಸಿಕ ಕುರುಹುಗಳಿಂದ ಸಂಮೃದ್ಧವಾಗಿದ್ದು, ಇಲ್ಲಿ ದೊರೆಯುವ ಸ್ಮಾರಕ ಶಿಲ್ಪಗಳು ಹೊಸ ದೃಷ್ಟಿಕೋನದ ಮೂಲಕ ಅಧ್ಯಯನ ಕೈಗೊಳ್ಳಲು ಪ್ರೇರೇಪಿಸುತ್ತಿವೆ.

ಆಕರ ಗ್ರಂಥಗಳು

೧. ಚಿದಾನಂದಮೂರ್ತಿ ಎಂ., ೨೦೧೪, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನಗಳು, ಬೆಂಗಳೂರು, ಸಪ್ನ ಬುಕ್ ಹೌಸ್ (ಪ್ರೈ) ಲಿಮಿಟೆಡ್.

೨. ದೇವರಾಜಸ್ವಾಮಿ ಜಿ.ಕೆ., ೨೦೧೭, ಶಾಸನಗಳಲ್ಲಿ ಬೇಟೆ ಹಾಗೂ ಸ್ಮಾರಕಗಳು, ಡಾ. ಆರ್. ಶೇಷಶಾಸ್ತ್ರಿ ಅಭಿನಂದನಾ ಗ್ರಂಥದಲ್ಲಿ (ಗೋಪಾಲರಾವ್, ಹೆ.ಎಸ್. ಹಾಗೂ ಶ್ರೀನಿವಾಸಮೂರ್ತಿ, ಎಸ್.ಎಲ್. ಸಂ.): ಕುಪ್ಪಂ, ಚಿತ್ಕಲಾ ಪ್ರಕಾಶನ, ೩೨೫-೩೩೬.

೩. ಶೇಷಶಾಸ್ತ್ರಿ ಆರ್., ೨೦೦೪, ಕರ್ನಾಟಕದ ವೀರಗಲ್ಲುಗಳು, ಬೆಂಗಳೂರು, ಕನ್ನಡ ಸಾಹಿತ್ಯ ಪರಿಷತ್ತು.

೪. ಪರಮಶಿವಮೂರ್ತಿ ಡಿ.ವಿ. ೧೯೯೯. ಕನ್ನಡ ಶಾಸನ ಶಿಲ್ಪ, ಹಂಪಿ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ.

೫. ಪ್ರಸನ್ನಕುಮಾರ್ ಎಸ್.ಆರ್., ೨೦೨೦, ಎ ಸ್ಟಡಿ ಆಫ್ ಆರ್ಟ್ ಅಂಡ್ ಆರ್ಕಿಟೆಕ್ಚರ್ ಆಫ್ ಗುಬ್ಬಿ ತಾಲ್ಲೂಕು, (ತುಮಕೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿರುವ ಅಪ್ರಕಟಿತ ಪಿ.ಹೆಚ್‌ಡಿ. ಸಂಶೋಧನಾ ಪ್ರಬಂಧ), ತುಮಕೂರು.

೬. ಶೆಟ್ಟರ್ ಎಸ್. ಅಂಡ್ ಅದರ್ಸ್, (ಸಂ). ೧೯೮೨, ಮೆಮೋರಿಯಲ್ ಸ್ಟೋನ್ಸ್, ಎ ಸ್ಟಡಿ ಆಫ್ ದೇರ್ ಓರಿಜಿನ್, ಸಿಗ್ನಿಫಿಕೆನ್ಸ್ ಅಂಡ್ ವೆರೈಟಿ, ಧಾರವಾಡ, ಇನ್‌ಸ್ಟಿಟ್ಯೂಟ್ ಆಫ್ ಇಂಡಿಯನ್ ಆರ್ಟ್ ಹಿಸ್ಟರಿ, ಕರ್ನಾಟಕ್ ಯೂನಿವರ್ಸಿಟಿ.

ಬಡವನಹಳ್ಳಿ ಪರಿಸರದ ಸ್ಮಾರಕ ಶಿಲ್ಪಗಳು

ಬಿ.ಆರ್. ರಂಗನಾಥ್*

ಬಡವನಹಳ್ಳಿ ಗ್ರಾಮವು ತುಮಕೂರು ಜಿಲ್ಲೆಯ ಮಧುಗಿರಿ ತಾಲ್ಲೂಕಿನಲ್ಲಿದ್ದು, ಮಧುಗಿರಿ ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ೧೬ ಕಿ.ಮೀ. ದೂರದಲ್ಲಿರಾಷ್ಟ್ರೀಯ ಹೆದ್ದಾರಿ ೨೩೪ರಲ್ಲಿ ಇದೆ. ಬಡವನಹಳ್ಳಿ ಗ್ರಾಮವು ಐತಿಹಾಸಿಕ ಮಹತ್ವ ಪಡೆದಿದ್ದು, ಇಲ್ಲಿನ ಶಾಸನ ಹಾಗೂ ವೀರಗಲ್ಲುಗಳಿಂದ ತಿಳಿದು ಬರುತ್ತದೆ. ಈ ಗ್ರಾಮದಲ್ಲಿ ೨ ವೀರಗಾರಗುಡಿಗಳು ಇದ್ದು ಈ ವೀರಗಾರಗುಡಿಗಳನ್ನು ಒಳಗೊಂಡಂತೆ ಒಟ್ಟು ೯ ವೀರಗಲ್ಲು ೧೨ ವೀರಮಾಸ್ತಿಗಲ್ಲು, ೧ ಮಾಸ್ತಿಗಲ್ಲು ಇವೆ.

ಮೊದಲನೇ ವೀರರ ಗುಡಿ

ಈ ವೀರಗಾರರ ಗುಡಿಯು ಬಡವನಹಳ್ಳಿಯ ಉತ್ತರ ದಿಕ್ಕಿಗೆ ಪೂರ್ವ ಹೊರ ಭಾಗದ ಸರ್ವೆ ನಂ. ೧೬೭ರ ಜಮೀನಿನಲ್ಲಿ ಇದೆ. ಈ ವೀರಗಾರರ ಗುಡಿಯು ಪೂರ್ವಭಿಮುಖವಾಗಿದ್ದು ಈ ಗುಡಿಯು ದೇವಾಲಯ ಹಾಗೆ ಕಟ್ಟಡ ಮತ್ತು ಗೋಪುರವನ್ನು ಹೊಂದಿಲ್ಲ ಸರಳವಾದ ಕಟ್ಟಡವಾಗಿದ್ದು ಗುಂಡುಕಲ್ಲುಗಳಿಂದ ಕಟ್ಟಲಾಗಿದೆ. ಮೇಲ್ಚಾವಣಿ ಬಿದ್ದು ಹೋಗಿ ವೀರಗಲ್ಲುಗಳು ಮುಚ್ಚಿಕೊಂಡಿದೆ. ಈ ವೀರಗಾರರ ಗುಡಿಯನ್ನು ಕುರುಬ ಜನಾಂಗದ ಕೊಳ್ಳಿ ಕುರುಬರು ಪೂಜಿಸುತ್ತಾರೆ. ಹಬ್ಬದ ದಿನಗಳಲ್ಲಿ ನಾಗಧಾರನೆ ಸಮಯದಲ್ಲಿ ತಮ್ಮ ಪೂರ್ವಿಕರೆಂದು ಪೂಜಿಸುತ್ತಾರೆ ಹಾಗೂ ದಾಸ ಪದ್ಧತಿ ಮಾಡುತ್ತಿದ್ದು ಈ ವೀರಗಾರ ಗುಡಿಗೆ ಸ್ತ್ರೀಯರು ಹಾಗೂ ಕೆಲ ವರ್ಗದ ಜನರು ಇಂದಿಗೂ ಹೋಗುವುದಿಲ್ಲ. ಈ ವೀರಗಾರರ ಗುಡಿಯಲ್ಲಿ ೬ ವೀರಗಲ್ಲು ೨ ವೀರ ಮಾಸ್ತಿಗಲ್ಲುಗಳಿವೆ. ಈ ವೀರಗಲ್ಲುಗಳ ಮೇಲೆ ಶಾಸನದ ಪಾಠಗಳು ಈ ವೀರಗಾರರ ಗುಡಿಯಲ್ಲಿ ಒಂದೆ ಕಾಲಕ್ಕೆ ಸೇರಿದ ವೀರಗಲ್ಲುಗಳು ಇಲ್ಲ ೧೬–೧೭ ನೇ ಶತಮಾನಕ್ಕೆ ಸೇರಿದ ವಿಜಯನಗರ ಅರಸರ ಕಾಲದ ಹಾಗೂ ನಾಯಕರ ಕಾಲದ ವೀರಗಲ್ಲುಗಳನ್ನು ಇರುವುದು ಗಮನಿಸಬಹುದು. ಈ ವೀರಗಾರರ ಗುಡಿಯಲ್ಲಿ ವೀರಗಲ್ಲುಗಳಿಗಿಂತ ಹೆಚ್ಚು ವೀರ ಮಾಸ್ತಿಗಲ್ಲುಗಳಿಗೆ ಪ್ರಾಧಾನ್ಯತೆ ನೀಡಿ ವೀರ ಶಿಲ್ಪಗಳನ್ನು ಸುಂದರವಾಗಿ ಕೆತ್ತಲಾಗಿದೆ.

ಒಂದನೇ ವೀರಗಲ್ಲು

ಈ ವೀರಗಲ್ಲು ಒಂದು ಹಂತದಲ್ಲಿ ಇದೆ ೨ ಅಡಿ ಎತ್ತರ ೨ ಅಡಿ ಅಗಲವಿದ್ದು ಬಿಳಿ ವರ್ಣದ ಒರಟು ಕಲ್ಲಿನಿಂದ ಕೆತ್ತಲಾಗಿದೆ. ಈ ವೀರಗಲ್ಲಿನಲ್ಲಿ ಇಬ್ಬರು ವೀರರು ಇದ್ದಾರೆ ಮೊದನೆಯ ವೀರನು ಕಿರೀಟವನ್ನು ಹಾಕಿಕೊಂಡಿದ್ದಾನೆ. ಕೈ ಮುಗಿದು ನಿಂತಿದ್ದಾನೆ, ಎಡಗೈಯಲ್ಲಿ ಕತ್ತಿ ಸಿಗಿಸಿಕೊಂಡಿದ್ದಾನೆ, ಎರಡನೇ ವೀರನು ಬಲಗೈಯಲ್ಲಿ ಕತ್ತಿಯನ್ನು ಬಲಭುಜದ ಮೇಲೆ ಬಾಣ ಭತ್ತಳಿಕೆಯನ್ನು ಹಾಕಿದ್ದು ಎಡಗೈಯಲ್ಲಿ ಬಿಲ್ಲು ಹಿಡಿದಿದ್ದಾನೆ, ಆಭರಣ ಧರಿಸಿದ್ದು ಮುಡಿಯನ್ನು ತುರಿಬಿನಂತೆ ಕಟ್ಟಿಕೊಂಡಿದ್ದಾನೆ. ವೀರರು ತೋಳು ಬಂದಿ ಕಂಠಿಹಾರ ಕಿವಿ ಓಲೆ ಹಾಕಿಕೊಂಡು ಸಮರೋಚಿತವಾದ ಉಡುಪು ಧರಿಸಿದ್ದಾರೆ.

ಈ ವೀರಗಲ್ಲು ಎತ್ತರ ೨ ಅಡಿ ಅಗಲ ೧ ಅಡಿ ಇದೆ. ಒಂದು ಹಂತದಲ್ಲಿ ಇದೆ ಅರ್ಧದಷ್ಟು ಭಾಗ ಭೂಮಿಯಲ್ಲಿ ಹುದುಗಿದೆ ವೀರನು ಕೈ ಮುಗಿದು ನಿಂತಿದ್ದಾನೆ ಎಡಗೈಯಲ್ಲಿ ಕತ್ತಿಯನ್ನು ಸಿಗಿಸಿಕೊಂಡಿದ್ದಾನೆ ಆಭರಣಗಳನ್ನು ಧರಿಸಿದ್ದಾರೆ.

ಈ ವೀರಗಲ್ಲು ಒಂದು ಹಂತದಲ್ಲಿ ಇದೆ ಎತ್ತರ ಒಂದೂವರೆ ಅಡಿ ೨ ಅಡಿ ಅಗಲ ಇದೆ ಅರ್ಧದಷ್ಟು ಭಾಗ ಭೂಮಿಯಲ್ಲಿ ಹುದುಗಿದೆ ಈ ವೀರಗಲ್ಲಿನಲ್ಲಿ ಸೂರ್ಯಚಂದ್ರ ಶಿಲ್ಪಗಳಿವೆ, ವೀರನ ಬಲಗೈಯಲ್ಲಿ ಕತ್ತಿ ಎಡಗೈಯಲ್ಲಿ ಗುರಾಣಿ ಹಿಡಿದ್ದಿದ್ದಾನೆ, ಕೇಶವನ್ನು ಮುಡಿಯಂತೆ ಮೆಲಕ್ಕೆ ಕಟ್ಟಿಕೊಂಡಿದ್ದಾನೆ.

* ಬಿ.ಆರ್. ರಂಗನಾಥ್,

ಈ ವೀರಗಲ್ಲು ೨ ಅಡಿ ಎತ್ತರ ಒಂದೂವರೆ ಅಡಿ ಅಗಲ ಇದೆ ಒಂದು ಹಂತದಲ್ಲಿದೆ ಚೌಕಕಾರದ ಪಟ್ಟಿಕೆಯಲ್ಲಿ ಶಿಲ್ಪ ಕೆತ್ತಲಾಗಿದೆ ವೀರನು ಕಿರೀಟವನ್ನು ಹಾಕಿದ್ದಾನೆ ಬಲಗೈಯಲ್ಲಿ ವೀರಾವೇಶದಿಂದ ವಿಶೇಷವಾಗಿ ಈ ವೀರಗಾರರ ಗುಡಿಯ ವೀರರ ಶಿಲ್ಪಗಳಲ್ಲಿ ವಿಭಿನ್ನ ರೀತಿಯ ಆಯುಧವನ್ನು ಹಿಡಿದ್ದಿದಾನೆ & ಆಭರಣಗಳನ್ನು ಧರಿಸಿದ್ದಾನೆ.

ಈ ವಿರಗಲ್ಲು ಒಂದೂವರೆ ಅಡಿ ಉದ್ದ ಒಂದೂವರೆ ಅಡಿ ಅಗಲ ಇದೆ ಒಂದು ಹಂತದಲ್ಲಿದೆ ಈ ಶಿಲ್ಪದಲ್ಲಿ ವೀರನು ಬಲಗೈಯಲ್ಲಿ ಕತ್ತಿ ಎಡಗೈಯಲಿ ಗುರಾಣಿ ಹಿಡಿದಿದ್ದಾನೆ ಕೇಶವನ್ನು ಮುಡಿಯಂತೆ ಕಟ್ಟಿಕೊಂಡಿದ್ದಾನೆ, ತ್ರಿಭಂಗಾಸನದಲ್ಲಿ ನಿಂತಿದ್ದಾನೆ, ಯುದ್ದ ಮಾಡುವಂತೆ ಶಿಲ್ಪವು ಕಾಣಬರುತ್ತದೆ.

ಒಂದು ಹಂತದಲ್ಲಿ ಈ ವೀರಗಲ್ಲು ಇದೆ ೨ ಅಡಿ ಅಗಲ ೨ ಅಡಿ ಎತ್ತರ ಇದ್ದು ಅರ್ಧದಷ್ಟು ಭಾಗ ಭೂಮಿಯಲ್ಲಿ ಹುದುಗಿದೆ ಈ ವೀರಗಲ್ಲಿನಲ್ಲಿ ಇಬ್ಬರು ವೀರರು ಇದ್ದು ಬಲಗೈಯಲ್ಲಿ ಕತ್ತಿ ಎಡಗೈಯಲ್ಲಿ ಗುರಾಣಿ ಹಿಡಿದಿದ್ದಾರೆ, ಈ ಶಿಲ್ಪವನ್ನು ಗಮನಿಸಿದರೆ ಯುದ್ಧದ ರಣಕಹಳೆ ಮುಳುಗಿದಾಗ ಎದುರಾಳಿಗಳ ಕಡೆಗೆ ಓಡುವಂತೆ ಶಿಲ್ಪ ಕಾಣುತ್ತದೆ.

ಈ ವೀರಮಾಸ್ತಿಗಲ್ಲು ೩ ಅಡಿ ಎತ್ತರ ೬ ಅಡಿ ಅಗಲವಿದೆ ೨ ಹಂತದಲ್ಲಿ ಇದೆ. ಬಿಳಿ ವರ್ಣದ ಶಿಲೆಯಿಂದ ಕೆತ್ತಲಾಗಿದೆ. ಅರ್ಧದಷ್ಟು ಭಾಗ ಭೂಮಿಯಲ್ಲಿ ಹುದುಗಿಹೋಗಿದೆ, ಮೊದಲ ಹಂತದಲ್ಲಿ ೫ ಜನ ವೀರರು ಇದ್ದು, ವಿಶೇಷವೇನೆಂದರೆ ಈ ವೀರಮಾಸ್ತಿಗಲ್ಲಿನಲ್ಲಿ ೬ ಜನರು ಇದ್ದಾರೆ ಮೊದಲನೆಯ ವೀರನು ಗುಡಿಯ ಕಟ್ಟಡ ಹಾಗೂ ಮಣ್ಣಿನಲ್ಲಿ ಹುದುಗಿ ಹೋಗಿದ್ದಾನೆ ೨ನೇ ವೀರನು ಬಲಗೈಯಲ್ಲಿ ಬಾಣ ಎಡಗೈಯಲ್ಲಿ ಬಿಲ್ಲು ಹಿಡಿದಿದ್ದಾನೆ ೩ನೇ ವೀರನು ಬಲಗೈಯಲ್ಲಿ ಕತ್ತಿ ಎಡಗೈಯಲ್ಲಿ ಗುರಾಣಿ ಹಿಡಿದಿದ್ದಾನೆ. ೩ನೇ ವೀರನು ಬಲಗೈಯಲ್ಲಿ ಕತ್ತಿ ಎಡಗೈಯಲ್ಲಿ ಗುರಾಣಿ ಹಿಡಿದಿದ್ದಾನೆ ನಂತರ ಸ್ತ್ರೀಯು ಇದ್ದು ಬಲಗೈಯಲ್ಲಿ ನಿಂಬೆ ಹಣ್ಣಿದ್ದು ಕೈ ಮೇಲಕ್ಕೆ ಎತ್ತಿದ್ದಾಳೆ ಎಡಗೈಯಲ್ಲಿ ಕನ್ನಡಿಯನ್ನು ಹಿಡಿದು ನೋಡುತ್ತಿರುವ ದೃಶ್ಯವಿದ್ದು ನಂತರದಲ್ಲಿ ಕುದುರೆಯ ವೀರನು ಕುಳಿತು ಬಲಗೈಯಲಿ ಭರ್ಜಿ ಎಡಗೈಯಲ್ಲಿ ಲಗಾಮು ಹಿಡಿದಿದ್ದಾನೆ ನಂತರ ಛತ್ರಿಯನ್ನು ಸೇವಕ ಹಿಡಿದಿದ್ದಾನೆ, ೨ನೇ ಹಂತದಲ್ಲಿ ಸೂರ್ಯಚಂದ್ರರ ಶಿಲ್ಪವು ಇದ್ದು ಶಿವಲಿಂಗ ಹಾಗೂ ನಂದಿಯ ಶಿಲ್ಪವು ಇದ್ದು ವೀರನು ಪೂಜೆಯನ್ನು ಮಾಡುತ್ತಿರುವ ದೃಶ್ಯ ಬಿಡಿಸಲಾಗಿದೆ. ಈ ವೀರಮಾಸ್ತಿಗಲ್ಲಿನಲ್ಲಿ ವಿಶೇಷ ಲಕ್ಷಣ ಏನೆಂದರೆ ೪ ರಂಧ್ರಗಳನ್ನು ಕೊರೆಯಲಾಗಿದೆ. ವಿಜಯನಗರ ಅರಸರ ಕಾಲದಲ್ಲಿ ವೀರಗಲ್ಲುಗಳ ಮೇಲೆ ರಂಧ್ರವನ್ನು ಕೊರೆಸಲಾಗುತ್ತಿತ್ತು ಆದರೆ ಯಾವುದೇ ಉದ್ದೇಶಕ್ಕೆ ಮಾಡಿರುವರೆಂಬ ಮಾಹಿತಿ ಇಲ್ಲ. ಇದರಿಂದಾಗಿ ಈ ವೀರಮಾಸ್ತಿಗಲ್ಲುಗಳು ವಿಜಯನಗರ ಅರಸರ ಕಾಲದಾಗಿದೆ. ಈ ವೀರಮಾಸ್ತಿಗಲ್ಲು ವೀರನನ್ನು ನಾಯಕನ ರೀತಿಯಲ್ಲಿ, ಆತನ ಮಡದಿಯನ್ನು ನಾಯಕಿಯಾಗಿ ಚಿತ್ರವನ್ನು ಬಿಡಿಸಲಾಗಿದೆ.

ಈ ವೀರಮಾಸ್ತಿಗಲ್ಲು ೨ ಅಡಿ ಎತ್ತರ ೫ ಅಡಿ ಅಗಲವಿದೆ ಒಂದು ಹಂತದಲ್ಲಿದೆ. ಮೂವರು ವೀರರು, ಇಬ್ಬರು ಸ್ತ್ರೀಯರು ಇರುವುದನ್ನು ಗಮನಿಸಬಹುದು ಮೊದಲನೆಯ ವೀರನ ಬಲಗೈಯಲ್ಲಿ ಕತ್ತಿ ಎಡಗೈಯಲ್ಲಿ ಬಿಲ್ಲು ಹಿಡಿದಿದ್ದು ೨ನೇ ವೀರನು ಕೈ ಮುಗಿದು ನಿಂತಿದ್ದಾನೆ ನಂತರ ಸ್ತ್ರೀಯು ಬಲಗೈಯಲ್ಲಿ ನಿಂಬೆ ಹಣ್ಣನ್ನು ಹಿಡಿದು ಮೇಲೆ ಮಾಡಿದ್ದಾಳೆ, ಎಡಗೈಯಲ್ಲಿ ಕನ್ನಡಿ ಹಿಡಿದು ನೊಡುತ್ತಿರುವುದನ್ನು ಗಮನಿಸಬಹುದು, ನಂತರ ೩ನೇ ವೀರನು ಕೈ ಮುಗಿದು ನಿಂತಿದ್ದಾನೆ ನಂತರ ಸ್ತ್ರೀಯು ಬಲಗೈಯಲ್ಲಿ ನಿಂಬೆಹಣ್ಣನ್ನು ಹಿಡಿದು ಎಡಗೈಯಲ್ಲಿ ಕನ್ನಡಿ ಹಿಡಿದು ನೋಡುತ್ತಿರುವುದನ್ನು ಗಮನಿಸಬಹುದು, ವೀರರ ಮಾಸ್ತಿಗಲ್ಲಿನಲ್ಲಿ ರಂಧ್ರ ಕೊರೆದಿರುವುದನ್ನು ಗಮನಿಸಬಹುದು.

ಈ ವೀರಗಾರರ ಗುಡಿಯು ಬಡವನಹಳ್ಳಿ ಗ್ರಾಮದ ದಕ್ಷಿಣ ದಿಕ್ಕಿಗೆ ತೇರಿನ ಬೀದಿ ಬಳಿ ಇದೆ. ಮೊದಲ ವೀರಗಾರರ ಗುಡಿಯ ಸಮೀಪದಲ್ಲಿ ಸರ್ವೆ ನಂ. ೧೬೮ ಜಮೀನಿನಲ್ಲಿದೆ ಈ ವೀರಗಾರ ಗುಡಿಯು ಪೂರ್ವಾಭಿಮುಖವಾಗಿದ್ದು ಸರಳವಾದ ಕಟ್ಟಡವನ್ನು ಹೊಂದಿದೆ. ದೇವಾಲಯಗಳ ಹಾಗೆ ಗೋಪುರವನ್ನು ಹೊಂದಿಲ್ಲ ಸ್ಥಳಿಯರು ಕುರುಬರ ವೀರಗಾರರ ಗುಡಿ ಎಂದು ಕರೆಯುತ್ತಾರೆ. ಕುರುಬ ಜನಾಂಗದ ಕೊಳ್ಳಿ ಕುರುಬರು ಪೂಜೆ ಮಾಡುತ್ತಿದ್ದು ಅದರಲ್ಲಿ ತಿಂಗಳವರೆಗೆ ಸರದಿ ರೂಪದಲ್ಲಿ ಪೂಜೆ ಮಾಡುತ್ತಾರೆ ಯುಗಾದಿ ಹಬ್ಬದ ಸಮಯದಲ್ಲಿ ಹೆಚ್ಚು ಪೂಜೆ ಮಾಡುತ್ತಾರೆ. ವೀರಗಲ್ಲು ಪಕ್ಕದಲ್ಲಿ ಪ್ರತ್ಯಕವಾದ ನಾಗರ ಕಲ್ಲುಗಳನ್ನು ಹಾಕಲಾಗಿದ್ದು ಇಂದಿಗೂ ಈ ವೀರಗಾರರ ಗುಡಿಯಲ್ಲಿ ಪೂಜೆಯನ್ನು ಮಾಡುತ್ತಿರುವುದನ್ನು ಗಮನಿಸಬಹುದು. ಕೆಲವರ್ಗದ ಜನರು ಪ್ರವೇಶ ಮಾಡುವುದಿಲ್ಲ ಈ ವೀರಗಾರರ ಗುಡಿಯಲ್ಲಿ ವೀರಗಲ್ಲುಗಳ ಮೇಲೆ ಶಾಸನದ ಪಾಠವಿಲ್ಲ ಒಂದೇ ಕಾಲಕ್ಕೆ ಸೇರಿದ ವೀರಗಲ್ಲುಗಳಿಲ್ಲ ಹೆಚ್ಚಾಗಿ ವೀರ ಮಾಸ್ತಿಗಲ್ಲುಗಳಿವೆ ೨ ವೀರಗಲ್ಲುಗಳು ೮ ವೀರಮಾಸ್ತಿಗಲ್ಲುಗಳಿವೆ.

ಈ ವೀರಗಲ್ಲು ಒಂದು ಹಂತದಲ್ಲಿದ್ದು ೨ ಅಡಿ ಎತ್ತರ ಒಂದೂವರೆ ಅಡಿ ಅಗಲವಿದೆ ವೀರನು ಬಲಗೈಯಲ್ಲಿ ಕತ್ತಿ ಹಿಡಿದಿದ್ದಾನೆ ಎಡಗೈಯನ್ನು ಮೇಲಕ್ಕೆ ಮಾಡಿರುವುದನ್ನು ವೀರಾವೇಶದಲ್ಲಿ ಚಿತ್ರಿಸಿದ್ದಾರೆ, ಈತನು ಕಿವಿ ಓಲೆ, ಕಡಗ, ಸರ ಸೊಂಟಪಟ್ಟಿ ತೋಳುಬಂದಿ ಹಾಕಿದ್ದಾನೆ ಕೇಶವನ್ನು ಕಿರೀಟದಂತೆ ಕಟ್ಟಿಕೊಂಡಿದ್ದನ್ನು ಗಮನಿಸಿದರೆ ವಿಜಯನಗರದ ಅರಸರ ಕಾಲದಾಗಿದೆ.

ಈ ವೀರಗಲ್ಲು ೨ ಅಡಿ ಎತ್ತರ ಒಂದೂವರೆ ಅಡಿ ಅಗಲವಿದೆ ಒಂದು ಹಂತದಲ್ಲಿದೆ ವೀರನು ಬಲಗೈಯಲ್ಲಿ ಕತ್ತಿಯನ್ನು ಹಿಡಿದಿದ್ದಾನೆ ಎಡಗೈ ಸೊಂಟದ ಮೇಲೆ ಇದೆ ಕೇಶವನ್ನು ಮುಡಿಯಂತೆ ಕಟ್ಟಿಕೊಂಡಿದ್ದಾನೆ ಹಾಗೂ ಆಭರಣಗಳನ್ನು ಧರಿಸಿದ್ದಾನೆ ವೀರನು ನಿಂತಿರುವ ದೃಶ್ಯವು ಯುದ್ಧದಲ್ಲಿ ವೀರರ ವಿರುದ್ಧ ಸೆಣಸಾಡಿ ಆಯಾಸಗೊಂಡಂತೆ ಕಾಣಬರುತ್ತಿದೆ.

ಈ ವೀರಮಾಸ್ತಿಗಲ್ಲು ಬಿಳಿ ಶಿಲೆಯ ಕಲ್ಲಿನಲ್ಲಿ ಕೆತ್ತಲಾಗಿದ್ದು ಈ ವೀರಗಲ್ಲು ೨ ಅಡಿ ಎತ್ತರ ೧/೨ ಅಗಲ ಒಂದು ಹಂತದಲ್ಲಿ ಇದೆ. ಈ ಶಿಲ್ಪದಲ್ಲಿ ಮೊದಲು ಸೂರ್ಯಚಂದ್ರರ ಉಬ್ಬುಶಿಲ್ಪಗಳಿವೆ ಮೊದಲು ಸ್ತ್ರೀಯಿದ್ದು ನಂತರ ವೀರನು ಇದ್ದಾನೆ ವೀರನು ನೀರಾಯುಧನಾಗಿ ಕೈ ಮುಗಿದು ನಿಂತಿದ್ದಾನೆ, ಸ್ತ್ರೀಯು ಬಲಗೈ ಮೇಲೆ ಮಾಡಿದ್ದಾಳೆ ಎಡಗೈಯಲ್ಲಿ ಕನ್ನಡಿಯನ್ನು ಹಿಡಿದಿದ್ದಾಳೆ ಇವರ ಆಭರಣ ಗಮನಿಸಿದಾಗ ಕಿವಿ, ಓಲೆ, ಕಡಗ, ಸರ, ಸೊಂಟಪಟ್ಟಿ, ಕಾಲು ಕಡಗ, ತೋಳುಬಂದಿ ಹಾಕಿಕೊಂಡು ವಸ್ತ್ರ ಧರಿಸಿದ್ದಾರೆ ಹಾಗೂ ಇವರಿಬ್ಬರೂ ಕೇಶವನ್ನು ಬಲಕ್ಕೆ ತುರುಬಿನಾಕಾರದಲ್ಲಿ ಕಟ್ಟಿಕೊಂಡಿದ್ದಾರೆ.

ಈ ವೀರ ಮಾಸ್ತಿಗಲ್ಲು ಸುಮಾರು ೨ ಅಡಿ ಎತ್ತರ ಒಂದೂವರೆ ಅಡಿ ಅಗಲವಿದೆ ಒಂದು ಹಂತದಲ್ಲಿ ಈ ವೀರಮಾಸ್ತಿಗಲ್ಲು ಇದೆ.

ಈ ವೀರಮಾಸ್ತಿಗಲ್ಲಿನಲ್ಲಿ ಮೊದಲು ವೀರನು ಇದ್ದು ವೀರನು ಕೈ ಮುಗಿದು ನಿಂತಿದ್ದಾನೆ ವೀರನ ಬಲಭುಜದ ಮೇಲೆ ಬಿಲ್ಲು ಮತ್ತು ಬಾಣಗಳಿರುವ ಬತ್ತಳಿಕೆ ಹಾಕಿಕೊಂಡಿದ್ದಾನೆ, ಸ್ತ್ರೀಯು ಬಲಗೈಯನ್ನು ಮೇಲೆ ಮಾಡಿದ್ದಾಳೆ, ಆಭರಣಗಳಾಗಿ ಇಬ್ಬರು ಕಿವಿ, ಓಲೆ, ಸೊಂಟಪಟ್ಟಿ, ತೋಳುಬಂದಿ ಕಡಗ, ಸರ ಹಾಕಿಕೊಂಡು ವಸ್ತ್ರ ಹಾಕಿದ್ದಾರೆ, ಕೇಶವನ್ನು ಬಲಕ್ಕೆ ವೀರನು ಮತ್ತು ಸ್ತ್ರೀ ಕೇಶವನ್ನು ಎಡಕ್ಕೆ ಗಂಟು ಕಟ್ಟಿಕೊಂಡಿದ್ದಾರೆ.

ವೀರಮಾಸ್ತಿಗಲ್ಲು ೨ ಅಡಿ ಎತ್ತರ ಒಂದೂವರೆ ಅಡಿ ಅಗಲವಿದೆ ಒಂದು ಹಂತದಲ್ಲಿ ಇದೆ ಈ ವೀರಮಾಸ್ತಿಗಲ್ಲಿನಲ್ಲಿ ವೀರನು ಮೊದಲಿದ್ದು ವೀರನು ಕೈ ಮುಗಿದು ನಿಂತಿದ್ದಾನೆ ಯಾವುದೇ ಆಯುಧವನ್ನು ಬಳಸಿಲ್ಲ, ಎಡಕ್ಕೆ ಸ್ತ್ರೀಯು ಇದ್ದು ಬಲಗೈ ಮೇಲೆ ಮಾಡಿದ್ದಾಳೆ ಎಡಗೈ ಸೊಂಟದ ಮೇಲೆ ಇದೆ ಇಬ್ಬರು ಆಭರಣಗಳನ್ನು ಹಾಕಿದ್ದು ಕಿವಿ, ಓಲೆ, ಸರ, ಬಳೆ, ಕಡಗ, ತೋಳುಬಂದಿ, ಸೊಂಟಪಟ್ಟಿ ಹಾಕಿ ಕೇಶವನ್ನು ತುರುಬಿನಂತೆ ಕಟ್ಟಿದ್ದಾರೆ.

ಈ ವೀರಮಾಸ್ತಿಗಲ್ಲು ಸುಮಾರು ೨ ಅಡಿ ಎತ್ತರ ಒಂದೂವರೆ ಅಡಿ ಅಗಲವಿದೆ ಒಂದು ಹಂತದಲ್ಲಿದೆ ವೀರನು ಬಲಗೈಯಲ್ಲಿ ಕತ್ತಿ ಹಿಡಿದಿದ್ದಾನೆ ಎಡಭುಜದ ಮೇಲೆ ಬಿಲ್ಲನ್ನು ಹಾಕಿದ್ದಾನೆ, ಸ್ತ್ರೀಯು ಬಲಗೈಯಲ್ಲಿ ನಿಂಬೆಹಣ್ಣು ಹಿಡಿದು ಮೇಲಕ್ಕೆ ಕೈ ಎತ್ತಿದ್ದಾಳೆ, ಎಡಗೈಯಲ್ಲಿ ಕನ್ನಡಿ ಇದೆ, ಆಭರಣಗಳಾಗಿ ತೋಳುಬಂದಿ, ಸೊಂಟಪಟ್ಟಿ ಕಿವಿ ಓಲೆ ಸರ ಹಾಕಿಕೊಂಡಿದ್ದಾಳೆ ವೀರನು ಕೇಶವನ್ನು ಮುಡಿಯಂತೆ ಕಟ್ಟಿದ್ದಾನೆ, ಸ್ತ್ರೀಯು ಉದ್ದಕ್ಕೆ ತುರುಬಿನಂತೆ ಮುಡಿ ಕಟ್ಟಿದ್ದಾಳೆ.

ಈ ವೀರಮಾಸ್ತಿಗಲ್ಲು ೩ ಅಡಿ ಎತ್ತರ ೨ ಅಡಿ ಅಗಲವಿದೆ, ೨ ಹಂತದಲ್ಲಿ ಇದೆ ಮೊದಲ ಹಂತದಲ್ಲಿ ಸೂರ್ಯಚಂದ್ರರ ಕೆತ್ತನೆ ಇದೆ, ಶಿವಲಿಂಗದ ಕೆತ್ತನೆ ಇದೆ ಶಿವಲಿಂಗದ ಎಡಕ್ಕೆ ನಂದಿಯ ಶಿಲ್ಪದ ಕೆತ್ತನೆ ಇದೆ, ಸ್ತ್ರೀಯು ಮೊದಲು ಇದ್ದು ಬಲಗೈ ಮೇಲೆ ಮಾಡಿದ್ದಾಳೆ ಎಡಗೈಯಲ್ಲಿ ನಿಂಬೆಹಣ್ಣು ಹಿಡಿದಿದ್ದಾಳೆ ವೀರನು ಕತ್ತಿಯನ್ನು ಬಲಗೈಯಲ್ಲಿ ಹಿಡಿದಿದ್ದಾನೆ ಎಡಗೈ ಸೊಂಟದ ಮೇಲೆ ಇದೆ.

ಈ ವೀರಮಾಸ್ತಿಗಲ್ಲು ಸುಮಾರು ೨ ಅಡಿ ಎತ್ತರ ೨ ಅಡಿ ಅಗಲವಿದೆ ಒಂದು ಹಂತದಲ್ಲಿದೆ ಈ ವೀರಗಲ್ಲಿನಲ್ಲಿ ವೀರನು ಇಬ್ಬರು ಮಡದಿಯರನ್ನು ಹೊಂದಿದ್ದು ವೀರನು ಕೈ ಮುಗಿದು ನಿಂತಿದ್ದು ಯಾವುದೇ ಆಯುಧವಿಲ್ಲ, ವೀರನ ಬಲಕ್ಕೆ ನಂತ ಸ್ತ್ರೀಯು ಬಲಗೈಯನ್ನು ಮೇಲೆ ಮಾಡಿದ್ದಾಳೆ ಎಡಗೈಯಲ್ಲಿ ಕನ್ನಡಿ ಹಿಡಿದಿದ್ದಾಳೆ ವೀರನು ಎಡಕ್ಕೆ ನಂತ ಸ್ತ್ರೀಯು ಬಲಗೈ ಮೇಲೆ ಮಾಡಿದ್ದಾಳೆ


ಈ ವೀರಮಾಸ್ತಿಗಲ್ಲು ಒಂದು ಹಂತದಲ್ಲಿದ್ದು ೨ ಅಡಿ ಎತ್ತರ ಒಂದೂವರೆ ಅಡಿ ಅಗಲವಿದೆ ಈ ವೀರಮಾಸ್ತಿಗಲ್ಲಿನಲ್ಲಿ ಸ್ತ್ರೀಯು ಶಿಲ್ಪವು ಮೊದಲು ಇದ್ದು ಸ್ತ್ರೀಯ ಬಲಗೈಯನ್ನು ಮೇಲೆ ಮಾಡಿದ್ದು ಎಡಗೈಯಲ್ಲಿ ಕನ್ನಡಿ ಹಿಡಿದಿದ್ದಾಳೆ, ವೀರನು ಬಲಗೈಯಲ್ಲಿ ಕತ್ತಿಯನ್ನು ಹಿಡಿದಿದ್ದಾನೆ ಈ ಶಿಲ್ಪ ಗಮನಿಸಿದಾಗ ವೀರನು ಶಾಂತವಾಗಿ ನಿಂತಿರುವಂತೆ ಕಾಣಬರುತ್ತದೆ.


ಎರಡನೇ ವೀರಗಲ್ಲು


ಮೂರನೇ ವೀರಗಲ್ಲು


ನಾಲ್ಕನೇ ವೀರಗಲ್ಲು



ಐದನೇ ವೀರಗಲ್ಲು


ಆರನೇ ವೀರಗಲ್ಲು


ಒಂದನೇ ವೀರಮಾಸ್ತಿ ಗಲ್ಲು


ಎರಡನೇ ವೀರಮಾಸ್ತಿಗಲ್ಲು



ಎರಡನೇ ವೀರಗಾರರ ಗುಡಿ


ಎರಡನೇ ವೀರಗಲ್ಲು



ಒಂದನೇ ವೀರಮಾಸ್ತಿಗಲ್ಲು


ಎರಡನೇ ವೀರ ಮಾಸ್ತಿಗಲ್ಲು


ಮೂರನೇ ವೀರಮಾಸ್ತಿಗಲ್ಲು


ನಾಲ್ಕನೇ ವೀರಮಾಸ್ತಿಗಲ್ಲು


ಐದನೇ ವೀರಮಾಸ್ತಿಗಲ್ಲು



ಆರನೇ ವೀರಮಾಸ್ತಿಗಲ್ಲು


ಏಳನೇ ವೀರಮಾಸ್ತಿಗಲ್ಲು


ಏಳನೇ ವೀರಮಾಸ್ತಿಗಲ್ಲು


ಎಂಟನೇ ವೀರಮಾಸ್ತಿಗಲ್ಲು


ಬಡವನಹಳ್ಳಿಯ ಹೊಸ ಬಡಾವಣೆಯ ಸರ್ವೆ ನಂ. ೦೪ರಲ್ಲಿರುವ ವೀರ ಮಾಸ್ತಿಗಲ್ಲು



ಬಡವನಹಳ್ಳಿಯ ಪೂರ್ವ ದಿಕ್ಕಿನ ಸರ್ವೆ ನಂ. ೩೮ರಲ್ಲಿರುವ ವೀರಮಾಸ್ತಿಗಲ್ಲು



ಬಡವನಹಳ್ಳಿಯ ಪೂರ್ವ ದಿಕ್ಕಿನಲ್ಲಿರುವ ಸರ್ವೆ ನಂ. ೩೭ರ ರಂಗನಾಥಪ್ಪನವರ ಜಮೀನಿನಲ್ಲಿ ಇರುವ ಮಾಸ್ತಿಗಲ್ಲು

ಒಂದು ಹಂತದಲ್ಲಿ ವೀರಮಾಸ್ತಿಗಲ್ಲು ಇದ್ದು ೨ ಅಡಿ ಎತ್ತರ ಒಂದುವರೆ ಅಡಿ ಅಗಲವಿದೆ ವೀರನ ಬಲಗೈಯಲ್ಲಿ ಕತ್ತಿಯನ್ನು ವೀರಾವೇಶದಿಂದ ಹಿಡಿದಿದ್ದಾನೆ, ಸ್ತ್ರೀಯು ಎರಡು ಕೈಗಳನ್ನು ಮೇಲೆ ಮಾಡಿದ್ದಾಳೆ.

ಬಡವನಹಳ್ಳಿ ಈ ೨ ವೀರಗಾರರ ಗುಡಿಯನ್ನು ಹೊರತುಪಡಿಸಿ ಒಂದು ವೀರಗಲ್ಲು ೨ ವೀರ ಮಾಸ್ತಿಗಲ್ಲು ೧ ಮಾಸ್ತಿಗಲ್ಲು ಇವೆ. ಈ ವೀರಗಲ್ಲುಗಳಿಗೆ ಕುರುಬ ಜನಾಂಗದರೇತರರು ಪೂಜೆ ಮಾಡುತ್ತಾರೆ. ಈ ವೀರಗಲ್ಲುಗಳು ಊರ ಹೋರ ಭಾಗದ ಹೊಲಗಳಲ್ಲಿ ಇವೆ.

ಬಡವನಹಳ್ಳಿಯ ಗಾಂಧಿನಗರದಲ್ಲಿರುವ ವೀರಗಲ್ಲುಗಳು

ಈ ವೀರಗಲ್ಲು ಒಂದು ಹಂತದಲ್ಲಿ ಇದ್ದು ಕುದುರೆ ಕಾಳಗದ ವೀರಗಲ್ಲು ಆಗಿದ್ದು, ೨ ಅಡಿ ಎತ್ತರವಿದ್ದು ಅರ್ಧದಷ್ಟು ಭಾಗ ಭೂಮಿಯಲ್ಲಿ ಹುದುಗಿದೆ ಇದರ ಅಗಲ ಒಂದೂವರೆ ಅಡಿ ಇದೆ ೬ ಇಂಚು ಕಪ್ಪು ಕಲ್ಲಿನದಾಗಿದ್ದು ಈ ವೀರಗಲ್ಲಿನಲ್ಲಿ ಸೂರ್ಯಚಂದ್ರ ಇದ್ದು, ವೀರನು ಕುದುರೆ ಮೇಲೆ ಕುಳಿತಿದ್ದು ಬಲಗೈಯಲ್ಲಿ ಕತ್ತಿಯನ್ನು ಹಿಡಿದಿದ್ದು ಎಡಗೈಯಲ್ಲಿ ಲಗಾಮು ಹಿಡಿದಿದ್ದು ಯುದ್ಧಕ್ಕೆ ಸನ್ನದ್ದನಾಗಿ ನಿಂತಿರುವಂತೆ ದೃಶ್ಯ ಮನೋಹರವಾಗಿದೆ ಈತನ ಕೈಗಳಲ್ಲಿ ಕಡಗ ತೋಳುಬಂದಿ ಕಿವಿಓಲೆ, ಸರ ಸೊಂಟಪಟ್ಟಿ ಹಾಕಿಕೊಂಡಿದ್ದಾನೆ, ಕೇಶವನ್ನು ಮುಡಿಯಂತೆ ಕಟ್ಟಿಕೊಂಡಿದ್ದಾನೆ.

ಈ ವೀರ ಮಾಸ್ತಿಗಲ್ಲಿ ವಿಶೇಷವಾಗಿದು ೨ ಅಡಿ ಎತ್ತರ ೪ ಅಡಿ ಅಗಲವಿದ್ದು ಒಂದು ಪೆಟ್ಟಿಗೆಯಿಂದ ಕೂಡಿದೆ, ಈ ಚಿತ್ರದಲ್ಲಿ ಕಂಡುಬರುವಂತ ಸ್ತ್ರೀಯರು ಮತ್ತು ಪುರುಷರ ಶಿಲ್ಪಗಳಿವೆ, ಇಲ್ಲಿವೀರ ಪುರುಷನು ಕುದುರೆಯ ಮೇಲೆ ಕುಳಿತಿದ್ದು ಬಲಗೈಯಲ್ಲಿ ಭರ್ಜಿ ಹಿಡಿದಿದ್ದಾನೆ ಎಡಗೈಯಲ್ಲಿ ಲಗಾಮು ಹಿಡಿದಿದ್ದಾನೆ ಈ ವೀರನ ಎಡಗಡೆಯಲ್ಲಿ ಮೂವರು ಸೇವಕರು ಇದ್ದು ಛತ್ರಿ, ಚಾಮರಗಳನ್ನು ಹಿಡಿದಿದ್ದಾನೆ. ವೀರನ ಬಲಗಡೆಯಲ್ಲಿ ಸ್ತ್ರೀಯ ಚಿತ್ರವಿದ್ದು ಮನಮೋಹಕವಾಗಿದೆ ಬಲಗೈಯನ್ನು ಮೇಲಕ್ಕೆ ಎತ್ತಿದ್ದಾಳೆ ಎಡಗೈಯಲ್ಲಿ ಹೂವನ್ನು ಹಿಡಿದಿದ್ದಾಳೆ ಈಕೆಯು ಕೇದಿಗೆ ಗರಿಯನ್ನು ಮುಡಿದು ನಗುಮುಖದ ದೃಶ್ಯವಾಗಿದ್ದು ಬಲಗಡೆಯಲ್ಲಿ ಸೇವಕಿ ಶಿಲ್ಪವು ಇದೆ. ಈ ವೀರ ಮಾಸ್ತಿಗಲ್ಲಿನಲ್ಲಿ ಕುದುರೆಯ ಮೇಲೆ ಕುಳಿತಿರುವ ವೀರನನ್ನು ನಾಯಕನಾಗಿ ಸ್ತ್ರೀಯನ್ನು ನಾಯಕಿಯಾಗಿ ಮಾಡಿದ್ದು ಇಬ್ಬರು ವೀರೋಚಿತವಾದ ಉಡುಪುಗಳನ್ನು ಹಾಕಿಕೊಂಡಿದ್ದಾರೆ.

ಈ ವೀರಮಾಸ್ತಿಗಲ್ಲು ಒಂದು ಹಂತದಲ್ಲಿದೆ ೨ ಅಡಿ ಎತ್ತರಒಂದೂವರೆ ಅಡಿ ಅಗಲವಿದೆ ವೀರನು ವೀರಾವೇಶದಿಂದ ಕತ್ತಿಯನ್ನು ಹಿಡಿದಿದ್ದು ಸ್ತ್ರೀಯು ಬಲಗೈಯನ್ನು ಮೇಲೆ ಎತ್ತಿದ್ದಾಳೆ ಕೇದಿಗೆಗರಿ ಮುಡಿದು ಆಭರಣ ಧರಿಸಿದ್ದಾಳೆ. ಈ ಶಿಲ್ಪದ ತಳಭಾಗವು ಭೂಮಿಯಲ್ಲಿ ಹುದುಗಿ ಸುಟ್ಟಂತೆ ಆಗಿದೆ.

ಒಂದು ಹಂತದ ಮಾಸ್ತಿಗಲ್ಲು ಆಗಿದ್ದು ಇದು ೨ ಅಡಿ ಎತ್ತರ ಒಂದೂವರೆ ಅಡಿ ಅಗಲವಿದೆ ಸೂರ್ಯಚಂದ್ರರ ಶಿಲ್ಪಗಳಿವೆ ಸ್ತ್ರೀಯು ಬಲಗೈಯನ್ನು ಮೇಲಕ್ಕೆ ಎತ್ತಿದ್ದಾಳೆ ಕೇಶವನ್ನು ಮುಡಿಯಂತೆ ಕಟ್ಟಿಕೊಂಡಿದ್ದು ಆಭರಣಗಳನ್ನು ಧರಿಸಿದ್ದು ಸ್ತ್ರೀಯ ಶಿಲ್ಪದ ಬಲಕ್ಕೆ ಆಯುಧದ ಶಿಲ್ಪ ಕಾಣಬಹುದಾಗಿದೆ.

[ಶಶಿಕುಮಾರ್ ನಾಯ್ಕ ಕೆ.ಸಿ. ಹಾಗೂ ಮಾರ್ಗದರ್ಶನ ನೀಡಿರುವ ಗುರುಗಳಾದ ಡಾ. ಎಂ. ಕೊಟ್ರೇಶ್ ಹಾಗೂ ಡಾ. ಎಲ್.ಪಿ. ರಾಜು ಇವರಿಗೆ ಧನ್ಯವಾದಗಳು.]

ಅಡಿ ಟಿಪ್ಪಣಿಗಳು

೧. ಶೇಷಶಾಸ್ತ್ರಿ, ೨೦೦೪, ಕರ್ನಾಟಕದ ವೀರಗಲ್ಲುಗಳು, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.

೨. ಪರಮಶಿವಮೂರ್ತಿ, ಕನ್ನಡ ಶಾಸನ ಶಿಲ್ಪ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, ೧೯೯೭.

೩. ಇತಿಹಾಸ ದರ್ಶನ, ಸಂಪುಟ ೨೨, ಡಾ. ಎನ್. ನಂದೀಶ್ವರ್, ೨೦೦೭, ದ್ವಾರುಳಗಳ ವೀರಗಲ್ಲುಗಳು ಹಾಗೂ ಅಪ್ರಕಟಿತ ವೀರಗಲ್ಲು ಶಾಸನಗಳು, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು, ಪುಟ ಸಂಖ್ಯೆ ೧೫೭–೧೫೯.

೪. ಇತಿಹಾಸ ದರ್ಶನ, ಸಂಪುಟ ೩೩, ಕೆ.ಎನ್. ಸುಪ್ರೀತ್, ೨೦೧೮, ಬಿನ್ನಾಡಿಯಲ್ಲಿನ ದೇವಾಲಯಗಳು ಮತ್ತು ಸ್ಮಾರಕ ಶಿಲ್ಪಗಳು, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು, ಪುಟ ಸಂಖ್ಯೆ ೫೦೫–೫೦೭.

ತಾಳೆಕೊಪ್ಪ ಪರಿಸರದ ಪ್ರಾಚ್ಯಾವಶೇಷಗಳು

ಎ.ಜಿ. ಶ್ರೀನಿವಾಸ*

ತಾಳೆಕೊಪ್ಪ ಗ್ರಾಮವು ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕು ಕೇಂದ್ರದ ವಾಯುವ್ಯ ದಿಕ್ಕಿಗೆ ಸುಮಾರು ೨೬ ಕಿ.ಮೀ. ದೂರದಲ್ಲಿ ಕಂಡುಬರುವ ಒಂದು ಪುಟ್ಟಗ್ರಾಮ ಇದರ ಪ್ರಾಚೀನ ಹೆಸರು ಹೊನ್ನಿನ ಕೊಪ್ಪ ಎಂದಾಗಿತ್ತು. ಹೊನ್ನಿನ ಕೊಪ್ಪ ಎಂದು ಹೆಸರು ಬರಲು ಜನರಲ್ಲಿ ಒಂದು ಕಥೆಯೂ ತಳಕು ಹಾಕಿಕೊಂಡಿದೆ. ಒಮ್ಮೆ ಪವಾಡ ಪುರುಷ ಸಂತ ಪಲ್ಲಾರದಯ್ಯನವರು ಕೊರಟಗೆರೆ ತಾಲ್ಲೂಕಿನ ಸಿದ್ದರಬೆಟ್ಟಕ್ಕೆ ಹೋದ ಸಂದರ್ಭದಲ್ಲಿ ದೇವಕನ್ಯೆಯರು ಚಿನ್ನದ ಕಳಸವನ್ನು ಕೊಟ್ಟು ಕಳುಹಿಸಿದ್ದರು. ಈ ಸಂತ ಶರಣರು ತಂದ ಕಳಸವನ್ನು ನೋಡಿದ ಜನರು ಈ ಗ್ರಾಮಕ್ಕೆ ಆಪತ್ತು ತರುತ್ತಾರೆಂದು ಭಾವಿಸಿ ಅವರನ್ನು ಓಡಿಸಿಕೊಂಡು ಹೋಗಿ ಬೇರೆಡೆಗೆ ಬಿಟ್ಟು ವಾಪಾಸಾಗುವುದರ ವೇಳೆಗೆ ಮತ್ತೆ ಶರಣರು ಅದೇ ಊರಿನಲ್ಲಿದ್ದುದನ್ನು ಕಂಡು ಬೆಕ್ಕಸ ಬೆರಗಾಗಿ ಚಿನ್ನದ ಕೊಪ್ಪ ಎಂದು ಹೆಸರಿಡಲಾಯಿತು. ಮತ್ತೊಂದು ಅಂಶದ ಪ್ರಕಾರ ಹಿಂದೆ ಈ ಗ್ರಾಮದಲ್ಲಿ ಆಗರ್ಭ ಶ್ರೀಮಂತರಿದ್ದು ಬಂಗಾರ ಧನಕನಕಗಳನ್ನು ಹೊಂದಿದ್ದ ಗ್ರಾಮವಾಗಿತ್ತು. ಅಪಾರ ದವಸ ಧಾನ್ಯಗಳನ್ನು ಬೆಳೆಯುತ್ತಿದ್ದರು ಹಾಗಾಗಿ ಹೊನ್ನಿನ ಕೊಪ್ಪ ಎನ್ನುತ್ತಿದ್ದರು. ಕಾಲಾನಂತರದಲ್ಲಿ ತಾಳೆಕೊಪ್ಪ ಎನ್ನುತ್ತಾರೆ.

ಗ್ರಾಮದ ಭೂಭಾಗ ಬಯಲುನಾಡಿನಿಂದ ಕೂಡಿದ್ದು ಮರಳು ಮಿಶ್ರಿತ ಕೃಷಿಗೆ ಯೋಗ್ಯ ಫಲವತ್ತಾದ ಭೂಮಿಯನ್ನು ಹೊಂದಿದೆ ಗ್ರಾಮದ ಈಶಾನ್ಯ ದಿಕ್ಕಿನಲ್ಲಿ ಕಪ್ಪಯ್ಯನ ಕಟ್ಟೆ, ಅಗಸರ ಕಟ್ಟೆ, ದಕ್ಷಿಣದಿಂದ ಉತ್ತರಾಭಿಮುಖವಾಗಿ ಹರಿಯುವ ಕಣಿವೆ ಹಳ್ಳ, ಪೂರ್ವದಿಂದ ಪಶ್ಚಿಮಕ್ಕೆ ಹರಿಯುವ ದ್ವಾಗೆಹಳ್ಳ, ಕುರುಬರ ಹಳ್ಳಿ, ಹಳ್ಳಗಳಿವೆ. ಗ್ರಾಮದ ಉತ್ತರಕ್ಕೆ ಸಾಮಾಜಿಕ ಅರಣ್ಯವಿದೆ. ಅಲ್ಲಲ್ಲಿ ದೊಡ್ಡ ಬಂಡೆಗಳು ಕಂಡು ಬಂದರೆ ಕಪ್ಪುಕಲ್ಲು ಬಂಡೆಗಳ ಸಾಲು ಸಿದ್ಧರ ಬೆಟ್ಟದವರೆಗೂ ಹಾದು ಹೋಗಿದೆ. ಈ ಗ್ರಾಮವು ೧೩.೫೦೦ ಉತ್ತರ ರೇಖಾಂಶ ೭೬.೮೮೦ ಅಕ್ಷಾಂಶ ಮಧ್ಯೆ ಕಂಡುಬಂದಿದ್ದು ಸಮುದ್ರ ಮಟ್ಟಕ್ಕಿಂತ ೨೫೦೦ ಅಡಿ ಎತ್ತರದಲ್ಲಿದೆ

ಶಿಲಾ ಶಾಸನ: ಗ್ರಾಮದ ಸರ್ವೇ ನಂಬರ್ ೧೯೧ರ ಜಮೀನಿನಲ್ಲಿ ಹೂವಿನಕಟ್ಟೆಗೆ ಹೋಗುವ ದಾರಿಯ ಸಮೀಪದಲ್ಲಿ ಸುಮಾರು ೧೦ ಅಡಿ ಎತ್ತರವುಳ್ಳ ೧೩ನೇ ಶತಮಾನದ ಶಿಲಾಶಾಸನವಿದೆ. ಈ ಶಾಸನದ ಸಾಲುಗಳು ಸವೆದು ಹೋಗಿದ್ದು ಶಕವರುಷ, ಹನ್ನೆರಡು ಸಂವತ್ಸರದ ಹಳ್ಳಿಯ ಹೊಲ ಮೇರೆಯಿಂದ.[೧] ಬನಹಳ್ಳಿಯ ಹೊಲ ಮೇರೆಯವರೆಗೆ ಎಂಬ ಪದಗಳನ್ನು ಹೊರತುಪಡಿಸಿದರೆ ಉಳಿದಿದೆಲ್ಲವೂ ನಶಿಸಿಹೋಗಿದೆ. ಯಾವ ಹಳ್ಳಿಯ ಹೊಲ ಮೇರೆಯಿಂದ ಎಂದು ಗುರುತಿಸಲಾಗಿದೆ. ೧೨ ಎಂಬ ಸಂಖ್ಯೆ ಸ್ಪಷ್ಟವಾಗಿದ್ದು ಮುಂದಿನ ಅಕ್ಷರ ಸವೆದಿರುವುದರಿಂದ ಈ ಶಾಸನ ಹದಿಮೂರನೇ ಶತಮಾನಕ್ಕೆ ಸೇರಿರುವುದು ಎಂದು ತಿಳಿಯುತ್ತದೆ. ಈ ಶಾಸನದಲ್ಲಿ ಉಲ್ಲೇಖಗೊಂಡಿರುವ ಬನಹಳ್ಳಿಯನ್ನು ಎಸ್.ಆರ್. ಪ್ರಸನ್ನಕುಮಾರ್‌ರವರು ತಾಳೆಕೊಪ್ಪ ಗ್ರಾಮದ ದಕ್ಷಿಣಕ್ಕೆ ಒಂದು ಕಿ.ಮೀ. ದೂರದಲ್ಲಿರುವ ಸಣಬನಹಳ್ಳಿಯೇ ಬನಹಳ್ಳಿ ಆಗಿರಬಹುದು[೨] ಎಂದು ಅಭಿಪ್ರಾಯಪಟ್ಟಿದ್ದಾರೆ.

ದೇವಾಲಯಗಳು

ಈ ಗ್ರಾಮದಲ್ಲಿ ಆಂಜನೇಯ, ಈಶ್ವರ, ತಿರುಮಲೇಶ್ವರ, ಕಣಿವೆ ಆಂಜನೇಯ ಮಾರಮ್ಮ ಎಂಬ ಐದು ದೇವಾಲಯಗಳಿವೆ. ಆಂಜನೇಯ ಮತ್ತು ಈಶ್ವರ ದೇವಾಲಯಗಳು ಪ್ರಾಚೀನ ದೇವಾಲಯಗಳಾಗಿವೆ ಆದರೂ ಜೀರ್ಣೋದ್ಧಾರಗೊಂಡಿವೆ. ಆಂಜನೇಯ ದೇವಾಲಯ ಗ್ರಾಮದ ಮಧ್ಯಭಾಗದಲ್ಲಿ ದಕ್ಷಿಣಾಭಿಮುಖವಾಗಿ ನಿರ್ಮಾಣಗೊಂಡಿದ್ದು ಗರ್ಭಗೃಹ ಮತ್ತು ನವರಂಗ ಭಾಗಗಳನ್ನು ಒಳಗೊಂಡಿದ್ದು ಗರ್ಭಗೃಹದಲ್ಲಿ ಸುಮಾರು ೩ ೧/೨ ಅಡಿ ಎತ್ತರದ ಆಂಜನೇಯನ ವಿಗ್ರಹವಿದೆ. ಹಿಂಭಾಗದಲ್ಲಿ ಹಿತ್ತಾಳೆ ಪ್ರಭಾವಳಿಯಿದೆ. ನವರಂಗದಲ್ಲಿ ನಾಲ್ಕು ಕಂಬಗಳಿದ್ದು ಮೇಲ್ಛಾವಣಿಯನ್ನು ಹೊತ್ತು ನಿಂತಿವೆ. ಇದೇ ಭಾಗದಲ್ಲಿ ಮೆರವಣಿಗೆ ದೇವರುಗಳಿವೆ. ನವರಂಗದ ಮುಂದೆ ತೆರೆದ ಮಂಟಪವಿದೆ. ನಾಲ್ಕು ಮೆಟ್ಟಿಲುಗಳನ್ನು ಹತ್ತಿ

* ಸಂಶೋಧನಾ ವಿದ್ಯಾರ್ಥಿ, ಪ್ರಾಚೀನ ಇತಿಹಾಸ & ಪುರಾತತ್ವ ಅಧ್ಯಯನ ವಿಭಾಗ, ಕನ್ನಡ ವಿವಿ, ಹಂಪಿ, ಮೊ. ೯೯೮೬೭ ೬೫೨೩೯



ಒಳ ಪ್ರವೇಶಿಸಬೇಕು. ದೇವಾಲಯದ ಎದುರಿಗೆ ಸುಮಾರು ೪ ಅಡಿ ಜಗತಿಯ ಮೇಲೆ ಸುಮಾರು ೨೦ ಅಡಿ ಎತ್ತರದ ಗರುಡ ಕಂಬವಿದೆ. ಗರುಡಕಂಬದ ಮುಂದೆ ನಾಲ್ಕು ಕಂಬಗಳ ದ್ವಾರ ಮಂಟಪವಿದೆ. ದೇವಾಲಯದ ಗರ್ಭಗೃಹದ ಮೇಲೆ ಶಿಖರವಿದೆ. ಈ ದೇವಾಲಯದಲ್ಲಿ ಜೀರ್ಣೋದ್ಧಾರಗೊಳ್ಳುವುದಕ್ಕಿಂತ ಮುಂಚೆ ಪಾಕಶಾಲೆ. ಪಾಠಶಾಲೆ. ಅಂಚೆ ಇಲಾಖೆ, ಗಣಪತಿ ದೇವಸ್ಥಾನ ಎಲ್ಲವೂ ಇದೇ ದೇವಾಲಯದಲ್ಲಿದ್ದವೆಂದು ಗ್ರಾಮದ ಹಿರಿಯರು ತಿಳಿಸುತ್ತಾರೆ. ಇದರ ಕಾಲ ಸುಮಾರು ೧೫ನೇ ಶತಮಾನ.

ಆಂಜನೇಯ ದೇವಾಲಯದ ಸಮೀಪದಲ್ಲೇ ಪೂರ್ವಾಭಿಮುಖವಾಗಿ ಈಶ್ವರ ದೇವಾಲಯ ನಿರ್ಮಾಣಗೊಂಡಿದೆ. ಈ ದೇವಾಲಯವು ಗರ್ಭಗೃಹ ಮತ್ತು ನವರಂಗ ಭಾಗಗಳನ್ನು ಒಳಗೊಂಡಿದೆ. ದೇವಾಲಯದ ಗರ್ಭಗುಡಿಯಲ್ಲಿ ಶಿವಲಿಂಗುವಿದ್ದು ಅದರ ಅಭಿಮುಖವಾಗಿ ನಂದಿಯನ್ನು ಪ್ರತಿಷ್ಠಾಪಿಸಲಾಗಿದೆ. ನವರಂಗದಲ್ಲಿ ಸಾಧಾರಣವಾದ ನಾಲ್ಕು ಕಂಬಗಳಿವೆ ದೇವಾಲಯದ ಮೇಲ್ಛಾವಣಿಯ ಮೇಲೆ ನಾಲ್ಕು ಮೂಲೆಗಳಲ್ಲಿ ನಂದಿಯನ್ನು ಪ್ರತಿಷ್ಠಾಪಿಸಲಾಗಿದೆ. ಮುಂಭಾಗದಲ್ಲಿನ ದೇವ ಕೋಷ್ಠಕದಲ್ಲಿ ಶಿವ, ಪಾರ್ವತಿ, ಗಣಪತಿ ಮೂರ್ತಿಗಳಿವೆ.

ವೀರಗಲ್ಲುಗಳು

ಇದೇ ಗ್ರಾಮದಲ್ಲಿ ಎರಡು ವೀರಗಲ್ಲುಗಳು ಕಂಡುಬಂದಿವೆ. ಒಂದು ವೀರಗಲ್ಲು ಪ್ರಕಾಶ್ ಎಂಬುವರ ಮಾವಿನ ತೋಟದ ಬದುವಿನಲ್ಲಿದ್ದು ಎಲ್ಲಿಂದಲೋ ತಂದು ಹಾಕಲಾಗಿದೆ. ಇದು ಗಟ್ಟಿಯಾದ ಗ್ರಾನೈಟ್ ಕಲ್ಲಿನಿಂದ ಕೂಡಿದ್ದು ವೀರನಾದವನು ಎಡಗೈಯಲ್ಲಿ ಬಿಲ್ಲನ್ನು ಹಿಡಿದು ಬಲಗೈಯಲ್ಲಿ ಬಾಣವನ್ನು ಹೂಡಿ ಯುದ್ಧಕ್ಕೆ ಸಿದ್ಧನಾಗಿ ನಿಂತಿರುವಂತಿದೆ. ಆತನ ಸೊಂಟದಲ್ಲಿ ಹಿಮ್ಮುಖವಾಗಿ ಚಿಕ್ಕದಾದ ಕತ್ತಿಯನ್ನು ಇಟ್ಟಿದ್ದಾನೆ. ತನ್ನ ತಲೆಯ ಕೂದಲನ್ನು ಹಿಂಬದಿಯಲ್ಲಿ ದಪ್ಪನಾಗಿ ಕಟ್ಟಿದ್ದಾನೆ. ಮುಂದೆ ಸತಿಯು ನಿಂತಿದ್ದು ತನ್ನ ಬಲಗೈಯನ್ನು ಮೇಲೆತ್ತಿ ನಿಂತಿದ್ದಾಳೆ. ವೀರನ ಕಾಲ ಕೆಳಭಾಗದಲ್ಲಿ ಅಡ್ಡಲಾಗಿ ಶತ್ರುವೀರನು ಮರಣ ಹೊಂದಿರುವುದನ್ನು ಸೂಚಿಸುತ್ತದೆ. ಕಲ್ಲಿನ ಮೇಲ್ಭಾಗದಲ್ಲಿ ಶಿವಲಿಂಗು. ನಂದಿಯ ಕೆತ್ತನೆ ಮತ್ತು ಮರಣ ಹೊಂದಿರುವ ವೀರ ಸ್ವರ್ಗದಲ್ಲಿ ಶಿವನ ದರ್ಶನ ಮಾಡಿರುವಂತೆ ಕೆತ್ತಲಾಗಿದೆ. ಸೂರ್ಯ–ಚಂದ್ರರ ಕೆತ್ತನೆಯಿದೆ. ಈ ವೀರಗಲ್ಲನ್ನು ಗಮನಸಿದಾಗ ಮತ್ತೊಂದು ಪೀಠದ ಕಲ್ಲಿನ ರಂಧ್ರಕ್ಕೆ ಜೋಡಿಸುವಂತೆ ತಳಭಾಗದಲ್ಲಿ ಸ್ವಲ್ಪ ಉದ್ದವಾದ ಕಲ್ಲಿನ ಭಾಗಚೂಪಾಗಿ ಬಿಡಲಾಗಿದೆ.

ಮತ್ತೊಂದು ವೀರಗಲ್ಲು ಕಪ್ಪಯ್ಯನ ಕಟ್ಟೆಯಲ್ಲಿದ್ದು ಗಟ್ಟಿಯಾದ ಗ್ರಾನೈಟ್ ಶಿಲೆಯಿಂದ ನಿರ್ಮಿಸಲಾಗಿದೆ. ಇದನ್ನು ಸ್ಥಳೀಯರು ರಾಮನ ಕಲ್ಲು ಎಂದು ಕರೆಯುತ್ತಾರೆ. ಈ ವೀರಗಲ್ಲಿನಲ್ಲಿ ವೀರನು ಎಡಗೈಯಲ್ಲಿ ಬಿಲ್ಲನ್ನು ಹಿಡಿದು ಬಲಗೈಯಲ್ಲಿ ಬಾಣವನ್ನು ಹಿಡಿದು ನಿಂತಿದ್ದಾನೆ. ಸೊಂಟದಲ್ಲಿ ಚಿಕ್ಕದಾದ ಕತ್ತಿಯನ್ನು ಇಟ್ಟಿದ್ದಾನೆ. ಈತನು ತನ್ನ ತಲೆಕೂದಲನ್ನು ಜಡೆ ರೂಪದಲ್ಲಿ ಉದ್ದವಾಗಿ ಹಿಂದಕ್ಕೆ ಬಿಟ್ಟಿದ್ದಾನೆ. ಸೊಂಟದಲ್ಲಿ ಕಟಿವಸ್ತ್ರ, ವೀರಗಚ್ಚೆ ಧರಿಸಿದ್ದಾನೆ. ಕಲ್ಲಿನ ತುದಿಯ ಎಡ ಬಲಭಾಗದಲ್ಲಿ ಸೂರ್ಯ ಚಂದ್ರರ ಕೆತ್ತನೆಯಿದೆ. ಈ ಎರಡೂ ವೀರಗಲ್ಲಿನ ಶಿಲ್ಪವೈವಿಧ್ಯತೆ ಮತ್ತು ಬಳಸಿರುವ ಶಿಲೆಯ ಆಧಾರದ ಮೇಲೆ ಕ್ರಿ.ಶ. ೧೫ನೇ ಶತಮಾನಕ್ಕೆ ಸೇರಿದ್ದವೆಂದು ತಿಳಿಯುತ್ತದೆ.

ಕಲ್ಗುಳಿಗಳು: ತಾಳೆಕೊಪ್ಪ ಗ್ರಾಮದ ಉತ್ತರಕ್ಕಿರುವ ಅರಣ್ಯ ಪ್ರದೇಶದಲ್ಲಿ ಕಣಿವೆ ಆಂಜನೇಯ ದೇವಾಲಯಕ್ಕೆ ಹೋಗುವ ದಾರಿ ಸಮೀಪದಲ್ಲಿ ವಿಶಾಲವಾದ ಬಿಳಿ ಬಣ್ಣದ ಬಂಡೆಯಿದೆ. ಇದನ್ನು ಇಲ್ಲಿನ ಸ್ಥಳೀಯರು ಈ ಶಿಲಾ ಬಂಡೆಯನ್ನು ಪಾಂಡವರ ಕಲ್ಲು ಎನ್ನುತ್ತಾರೆ. ಪಾಂಡವರು ವನವಾಸದ ಸಂದರ್ಭದಲ್ಲಿ ಇಲ್ಲಿ ಬಂದು ವಾಸಿಸುತ್ತಿದ್ದರು. ಬಂಡೆಯ ಮೇಲಿರುವ ಕಲುಳ್ಗಿಗಳನ್ನು ಬಂಡೆಯ ಮೇಲೆ ಅಡುಗೆ ಮಾಡಿ ಊಟ ಮಾಡಿರುವುದು ಎಂಬ ಪರಿಕಲ್ಪನೆ ಹೊಂದಿದ್ದಾರೆ. ಈ ಪರಿಸರವನ್ನು ಗಮನಿಸಿದರೆ ಆದಿ ಮಾನವನ ವಾಸಕ್ಕೆ ಎಲ್ಲಿ ರೀತಿಯಲ್ಲೂ ಯೋಗ್ಯವಾದ ಪ್ರದೇಶವಾಗಿದೆ. ಅವನಿಗೆ ಅಗತ್ಯವಾಗಿರುವ ನೀರು ಹರಿಯುವ ಹಳ್ಳಗಳು ಸೂಕ್ತವಾದ ಭೂಪ್ರದೇಶ, ಅಗತ್ಯವಾದ ಬಯಲು ಬಂಡೆಗಳು ಕಂಡುಬಂದಿರುವುದರಿಂದ ಆದಿಮಾನವನಿಗೆ ಯೋಗ್ಯವಾದ ಪ್ರದೇಶವಾಗಿತ್ತೆಂದು ತಿಳಿಯುತ್ತದೆ. ಕ್ಷೇತ್ರಕಾರ್ಯ ಕೈಗೊಂಡಾಗ ಯಾವುದೇ ಸಮಾಧಿಗಳಾಗಲೀ ಇತರ ಅವಶೇಷಗಳು ಕಂಡುಬಂದಿಲ್ಲ ಕಲ್ಗುಳಿಗಳು ಮಾತ್ರ ಕಂಡುಬಂದಿವೆ. ಈ ಕಲ್ಗುಳಿಗಳನ್ನು ಒಳಗೊಂಡಿರುವ ದೈತ್ಯಾಕಾರದ ಶಿಲಾಬಂಡೆ ಅದರ ಸುತ್ತಲೂ ಇರುವ ಕಲ್ಗುಳಿಗಳನ್ನು ಗಮನಿಸಿದಾಗ ಇದೇ ಬೃಹತ್ ಶಿಲಾಯುಗದ ವೃತ್ತಾಕಾರದ ಸಮಾಧಿಯಾಗಿರುವುದು ಎಂದು ಅನುಮಾನ ಬರುತ್ತದೆ.

ಮಧ್ಯದಲ್ಲಿರುವ ದೈತ್ಯಾಕರದ ಶಿಲಾಬಂಡೆಯ ಕೆಳಗೆ ಸಣ್ಣದಾದ ಬಂಡೆಯಿದ್ದು ಅದರ ಮೇಲೆ ಓರೆಯಾಗಿ ದೈತ್ಯಾಕಾರದ ಕಲ್ಲುಬಂಡೆಯಿದೆ. ಅದರ ಮೇಲಿನ ಬಂಡೆಯಲ್ಲಿ ೧೫೫ ಕಲ್ಗುಳಿಗಳು ಕಂಡು ಬಂದಿವೆ. ಕಲ್ಗುಳಿಗಳು ಇರುವ ಹಾಸು

ಬಂಡೆಯು ಒಡೆದು ಹೋಗಿದೆ. ಈ ಶಿಲಾ ಬಂಡೆಯು ಪೂರ್ವ ಪಶ್ಚಿಮವಾಗಿ ೧೫ ಅಡಿ, ಉತ್ತರ ದಕ್ಷಿಣವಾಗಿ ೧೪ ಅಡಿ ಇದ್ದು ೭ ಅಡಿ ಎತ್ತರವಾಗಿದೆ. ಇಲ್ಲಿ ಕಂಡುಬರುವ ಕಲ್ಗುಳಿಗಳಲ್ಲಿ ಮೂರು ಚೌಕಾಕಾರವಾಗಿದ್ದು ಉಳಿದವು ವೃತ್ತಾಕಾರದಲ್ಲಿವೆ. ಕೆಲವು ಕಲ್ಗುಳಿಗಳು ಕಪ್ ರೀತಿಯಲಿದ್ದು ಕೆಲವು ಬಟ್ಟಲಾಕೃತಿಯಲ್ಲಿವೆ. ಚೌಕಾಕಾರವಾಗಿರುವ ಕಲ್ಗುಳಿಗಳಲ್ಲಿ ಎರಡು ೫×೫ ಉದ್ದ ಅಗಲವಿದ್ದು ೩ ಸೆ.ಮೀ. ಆಳವಿದೆ ಮತ್ತೊಂದು ೪×೪ ಉದ್ದಗಲವಿದ್ದು ೨ ಸೆ.ಮೀ. ಆಳವಿದೆ. ಉಳಿದ ಎಲ್ಲಾ ಕಲ್ಗುಳಿಗಳು ವಿವಿಧ ಅಳತೆಗಳಿಂದ ಕೂಡಿವೆ. ಇಲ್ಲಿ ಕಂಡು ಬರುವ ಕಲ್ಗುಳಿಗಳಲ್ಲಿ ಅಳುಗುಳಿಮನೆ ಮತ್ತು ಚನ್ನಮಣೆಯೆಂದು ಕರೆಯುವ ಆಟದ ಮನೆಯನ್ನು ಹೋಲುವ ಕಲ್ಗುಳಿಗಳಿವೆ. ೧೨×೬ ಸೆ.ಮೀ. ಉದ್ದಗಲದಲ್ಲಿ ಬಾಕ್ಸ್‌ನಂತೆ ಮಾಡಿಕೊಂಡು ಸಮಾನಾಂತರವಾಗಿ ಒಂದೊಂದು ಸಾಲಿನಲ್ಲಿ ಐದೈದು ಕಲ್ಗುಳಿಗಳಿರುವ ಎರಡು ಸಾಲುಗಳಿವೆ. ಒಟ್ಟು ೧೦ ಗುಳಿಗಳಿವೆ ಮತ್ತೊಂದು ೧೪×೬ ಸೆ.ಮೀ. ಉದ್ದಗಲದ ಬಾಕ್ಸ್‌ನಲ್ಲಿ ಒಂದು ಸಾಲಿನಲ್ಲಿ ನಾಲ್ಕು ಕಲ್ಲು ಇರುವ ಎರಡು ಸಮಾನಾಂತರ ಸಾಲುಗಳಿವೆ ಒಟ್ಟು ಎಂಟು ಗುಳಿಗಳನ್ನು ಒಳಗೊಂಡಿದೆ. ಚನ್ನಮಣೆ ಆಟ ಇಂದಿಗೂ ಈ ಭಾಗದಲ್ಲಿ ಮುಂದುವರೆಯುತ್ತಿರುವ ಒಳಾಂಗಣ ಆಟವಾಗಿದೆ. ಇದೇ ಪರಿಸರದಲ್ಲಿ ಕಂಡುಬರುವ ಸಣಬನಹಳ್ಳಿಯ ಜುಂಜಪ್ಪನ ದೇವಾಲಯದ ಆವರಣದಲ್ಲಿನ ಹಾಸುಬಂಡೆಯ ಮೇಲಿನ ಎರಡು ಕಲ್ಲುಳಿಗಳನ್ನು ಪ್ರಸನ್ನಕುಮಾರ್ ರವರು ವರದಿ ಮಾಡಿದ್ದಾರೆ. ಬೃಹತ್ ಶಿಲಾ ಸಂಸ್ಕೃತಿಯ ಕಾಲದಲ್ಲಿ ಕಲ್ಗುಳಿಗಳು ಸಹ ಸಾವಿನ ಸಂಕೇತವಾಗಿದೆ[೩] ಎಂದು ಕಳಸ ಪರಿಸರದ ನವಶೋಧಿತ ಬೃಹತ್ ಶಿಲಾಯುಗದ ಸಮಾಧಿ ಮತ್ತು ಕಲ್ಗುಳಿಗಳು ಎಂಬ ಲೇಖನದಲ್ಲಿ ಉಲ್ಲೇಖಿಸಲಾಗಿದೆ.

ತಾಳೆಕೊಪ್ಪ ಗ್ರಾಮದ ಪಶ್ಚಿಮಕ್ಕೆ ಸುಮಾರು ಮೂರು ಕಿ.ಮೀ. ದೂರದಲ್ಲಿರುವ ಗುಡ್ಡದ ಜೋಗಿಹಳ್ಳಿಯಲ್ಲಿ ಕಲ್ಗುಳಿಗಳು ಕಂಡುಬಂದಿವೆ. ಗ್ರಾಮದ ಪೂರ್ವದಿಕ್ಕಿನಲ್ಲಿ ಕಲ್ಲು ಬಂಡೆ, ಗುಂಡುಗಳ ಸಮೂಹವಿದೆ ಮತ್ತು ನೀರು ಹರಿಯುವ ಹಳ್ಳಗಳಿವೆ. ಇಲ್ಲಿ ಕಂಡುಬರುವ ಕಲ್ಲು ಬಂಡೆಗಳು ಗ್ರಾನೈಟ್ ಶಿಲಾವರ್ಗಕ್ಕೆ ಸೇರಿದ್ದು ಸುತ್ತಮುತ್ತಲ ಪ್ರದೇಶದಲ್ಲಿ ಅಲ್ಲಲ್ಲಿ ಚದುರಿದಂತೆ ಬಂಡೆಗಳ ಸಮೂಹವಿದೆ. ಸರ್ವೆ ನಂಬರ್ ೦೫ರಲ್ಲಿ ಕಂಡುಬರುವ ಕಲ್ಲುಬಂಡೆಯನ್ನು ಸ್ಥಳೀಯರು ದೊಡ್ಡಬಂಡೆ ಎನ್ನುತ್ತಾರೆ ಸುಮಾರು ೧೫ ಅಡಿ ಎತ್ತರದ ದೊಡ್ಡ ಬಂಡೆಯ ಮೇಲೆ ಸುಮಾರು ಮೂರು ಅಡಿ ಎತ್ತರದ ದುಂಡಾದ ಹಾಸು ಬಂಡೆಯಿದೆ. ಇದನ್ನು ಕುಟ್ಟಿದರೆ ಠಣ್‌ಠಣ್ ಎಂಬ ಲೋಹದ ಶಬ್ಧ ಬರುತ್ತದೆ. ಇದು ಪ್ರಕೃತಿಯ ವಿಶಿಷ್ಟ ರಚನೆಯಾಗಿದೆ.

ಈ ಅಂಡಾಕಾರದ ಬಂಡೆಯ ಮೇಲೆ ಬಟ್ಟಲಾಕಾರದ ಹನ್ನೊಂದು(೧೧) ಕಲ್ಲುಗುಳಿಗಳು ಕ್ಷೇತ್ರಕಾರ್ಯದಲ್ಲಿ ಕಂಡು ಬಂದಿವೆ. ಬಂಡೆಯ ಮಧ್ಯಭಾಗ, ನೈರುತ್ಯ, ವಾಯುವ್ಯ, ಪಶ್ಚಿಮ ಭಾಗಗಳಲ್ಲಿ ಗುಳಿಗಳು ಕಂಡು ಬಂದಿದ್ದು, ೯.೫ ಸೆ.ಮೀ. ನಿಂದ ೭ ಸೆ.ಮೀ ಅಗಲದವರೆಗೆ ೧ ಸೆ.ಮೀ. ಆಳದಿಂದ ೨ ಸೆ.ಮೀ.ವರೆಗೆ ವಿಭಿನ್ನ ಅಳತೆಗಳನ್ನು ಹೊಂದಿವೆ, ಕಲ್ಲು ಸತಿಯೂ ಇದೆ. ಈ ಹಿಂದೆ ಇದೇ ಪರಿಸರದಲ್ಲಿ ಕೆ.ಬಿ.ಶಿವತಾರಕ್‌ರವರು ಅಂತ್ಯ ಹಳೆ ಶಿಲಾಯುಗ ಮತ್ತು ಸೂಕ್ಷ್ಮ ಶಿಲಾಯುಗ ಕಾಲಘಟ್ಟದ ಜಾಸ್ಪರ್‌ರ್ ಮತ್ತು ಬೆಣಚುಕಲ್ಲಿನಲ್ಲಿ ಸಿದ್ಧಗೊಳಿಸಿರುವ ಉಪಕರಣಗಳಾದ ನೀಳಚಕ್ಕೆ, ಹೆರೆಚಕ್ಕೆ, ಮೊನೆ, ಕೊರಗ, ಕೊರೆಯುಳಿಗಳು, ಅರ್ಧ ಚಂದ್ರಾಕೃತಿ ಉಪಕರಣ, ದಬ್ಬಳಗಳನ್ನು ಗುರುತಿಸಿದ್ದಾರೆ.[೪] ಈ ಕಲ್ಗುಳಿಗಳನ್ನು ಗಮನಿಸಿದಾಗ ಆಯುಧಗಳನ್ನು ಹರಿತಗೊಳಿಸಲು ಬಳಸಿಕೊಂಡಿರುವಂತೆಯೂ ಅಳಿಗುಳಿಮನೆ ಆಟಕ್ಕೆ ಬಳಕೆಯಾಗಿರುವುದು, ನೂರ ಐವತ್ತು ಕಲ್ಗುಳಿಗಳು ಒಂದೇ ಬಂಡೆಯಲ್ಲಿರುವುದರಿಂದ ಧಾರ್ಮಿಕ ಕಾರ್ಯಗಳಿಗೆ ದೀಪವನ್ನು ಹಚ್ಚಲು ಬಳಸಿರುವ ಸಾಧ್ಯತೆಯೂ ಮೇಲ್ನೋಟಕ್ಕೆ ಕಂಡುಬರುತ್ತದೆ.

ಕಲ್ಗುಳಿ ಆಕೃತಿಗಳು ಯಾವುದೋ ಒಂದು ಜನಾಂಗ ಅಥವಾ ಸಾಂಸ್ಕೃತಿಕ ವಲಯಕ್ಕೆ ಸಂಬಂಧಿಸಿದ್ದೆಂದು ಭಾವಿಸಲು ಸಾಧ್ಯವಿಲ್ಲ. ಒಟ್ಟಾರೆಯಾಗಿ ಶಿಲಾಯುಗದ ಮಾನವರು ಕಡಿಮೆ ಶ್ರಮದಿಂದ ಅವರಿಗೆ ಬೇಕಾದ ವಸ್ತು, ಉಪಕರಣಗಳನ್ನು ತಯಾರಿಸಲು ಅನುಕೂಲವಾಗುವಂತಹ ಬಿಡಿಯಾದ ಕಲ್ಲು ಬಂಡೆಗಳನ್ನು ಆಯ್ದು ಸೂಕ್ತ ರೂಪ ಕೊಡುತ್ತಿದ್ದರು. ಅದಕ್ಕೆ ತಾಳೆಕೊಪ್ಪ ಪರಿಸರವು ಸೂಕ್ತವಾದ ಪ್ರದೇಶವಾಗಿತ್ತು ಎಂದು ತಿಳಿಯುತ್ತದೆ.

ಅಡಿ ಟಿಪ್ಪಣಿಗಳು

೧. ಬಿ.ಎಲ್. ರೈಸ್, ಎಪಿಗ್ರಾಫಿಯಾ ಕರ್ನಾಟಕ ಸಂಪುಟ ೧೨ (ಹಳೆಯದು) ಗುಬ್ಬಿ ೫೪.
೨. ಎಸ್.ಆರ್. ಪ್ರಸನ್ನಕುಮಾರ್ (ಲೇ), ಸಣಬನಹಳ್ಳಿಯ ಐತಿಹಾಸಿಕ ಕುರುಹುಗಳು ಪು. ೩೫೪-೩೫೫.
೩. ಕೆ.ಎನ್. ಸುಪ್ರೀತ, ಕಳಸ ಪರಿಸರದ ನವಶೋಧಿತ ಬೃಹತ್ ಶಿಲಾಯುಗದ ಸಮಾಧಿ ಮತ್ತು ಕಲ್ಗುಳಿಗಳು ಪು. ೧೯-೨೦.
೪. ಕೆ.ಬಿ. ಶಿವತಾರಕ್, ಕರ್ನಾಟಕದ ಪುರಾತತ್ವ ನೆಲೆಗಳು ಪು. ೨೭೮.
೫. ಲಕ್ಷ್ಮಣ್ ತೆಲಗಾವಿ (ಲೇ), ಚಿತ್ರದುರ್ಗ ಪರಿಸರದ ಕುಳಿಭರಿತ ಭೀಮನ ಗುಂಡು: ಪುರಾತಾತ್ವಿಕ ಅಧ್ಯಯನ ಪು. ೧-೧೩.

ಕಟಗೇರಿ ಗ್ರಾಮದ ಪ್ರಾಚ್ಯಾವಶೇಷಗಳು

ಅಶೋಕ ಕಂದಗಲ್ಲ*

'**ಅ**ನಾದಿ ಅಗ್ರಹಾರ' ಹಾಗೂ 'ಬಣಂಜದ ಆದಿ ಪಟ್ಟಣ' ವೆಂದು ಶಾಸನಗಳಲ್ಲಿ ಉಲ್ಲೇಖಿತವಾದ ಕಟಗೇರಿ ಗ್ರಾಮವು ಬಾಗಲಕೋಟೆಯಿಂದ ದಕ್ಷಿಣಕ್ಕೆ ೧೫ ಕಿ.ಮೀ. ಅಂತರದಲ್ಲಿರುವ ಚಾಲುಕ್ಯರ ರಾಜಧಾನಿ ಬದಾಮಿಯಿಂದ ಉತ್ತರಕ್ಕೆ ೧೯ ಕಿ.ಮೀ. ಅಂತರದಲ್ಲಿದೆ. ಇಂದು ಬಾದಾಮಿ ತಾಲ್ಲೂಕಿನ ಪ್ರಮುಖ ಗ್ರಾಮಗಳಲ್ಲೊಂದಾಗಿದೆ.

ಈ ಗ್ರಾಮದಲ್ಲಿ ಈಗಾಗಲೇ ಪ್ರಕಟಿತವಾಗಿರುವ ಐದು ಶಾಸನಗಳಿವೆ. ಕಲ್ಯಾಣದ ಚಾಲುಕ್ಯ ಚಕ್ರವರ್ತಿ ಆರನೇ ವಿಕ್ರಮಾದಿತ್ಯನ ಆಳ್ವಿಕೆಯಲ್ಲಿ ಕ್ರಿ.ಶ. ೧೧೯೨ರಲ್ಲಿ ರಚನೆಯಾದ ಎರಡು ಶಾಸನಗಳು, ಕಲಚೂರಿಯರ ಕಾಲದ ಕ್ರಿ.ಶ. ೧೧೭೬, ಕ್ರಿ.ಶ. ೧೧೭೮ರ ಕಾಲದ ಎರಡು ಶಾಸನಗಳು, ಇನ್ನೊಂದು ೧೨ನೇ ಶತಮಾನಕ್ಕೆ ಸಂಬಂಧಿಸಿದ ವೀರಗಲ್ಲು ಶಾಸನವೊಂದು ಈ ಗ್ರಾಮದಲ್ಲಿವೆ.

ಒಂದನೇ ವೀರಗಲ್ಲು: ಗ್ರಾಮದ ಕೆ.ವ್ಹಿ.ವ್ಹಿ. ಪ್ರೌಢಶಾಲೆಯ ಆವರಣದಲ್ಲಿ ಸಾಲಾಗಿ ನಿಲ್ಲಿಸಿರುವ ಈ ವೀರಗಲ್ಲುಗಳು ಹೀಗಿವೆ ಬಲದಿಂದ ಒಂದನೇ ವೀರಗಲ್ಲು ಮೂರು ಅಡಿ ಎತ್ತರ ಹಾಗೂ ಎರಡು ಅಡಿ ಅಗಲವಾಗಿದ್ದು ಬಳಪದ ಕಲ್ಲಿನಲ್ಲಿ ನಿರ್ಮಾಣವಾಗಿದೆ. ಇದರ ಮೊದಲನೇ ಪಟ್ಟಿಕೆಯಲ್ಲಿ ವೀರನು ವೈರಿಗಳೊಂದಿಗೆ ಹೋರಾಡುತ್ತಿದ್ದಾನೆ. ವೀರನ ಮುಂಭಾಗದಲ್ಲಿ ವೈರಿಪಡೆಯನ್ನು ಚಿತ್ರಿಸಿದ್ದಾರೆ. ವೀರನ ಹಿಂಬದಿಯಲ್ಲಿ ಹಸುಗಳ ಸಾಲನ್ನು ಕಾಣುತ್ತೇವೆ. ಎರಡನೇ ಪಟ್ಟಿಕೆಯಲ್ಲಿ ಮರಣ ಹೊಂದಿದ ವೀರನನ್ನು ಅಪ್ಸರೆಯರು ಸ್ವರ್ಗಕ್ಕೆ ಕೊಂಡೊಯ್ಯುತ್ತಿರುವ ದೃಶ್ಯವಿದೆ. ವೀರನು ಮಂಟಪದಲ್ಲಿ ಕುಳಿತಿದ್ದು, ಎಡ-ಬಲದಲ್ಲಿ ಚಾಮರವನ್ನು ಹಿಡಿದ ಅಪ್ಸರೆಯರು ವೀರನನ್ನು ಸ್ವರ್ಗಕ್ಕೆ ಕೊಂಡೊಯ್ಯುತ್ತಿದ್ದಾರೆ. ಮೂರನೇ ಪಟ್ಟಿಕೆ ತೃಟಿತಗೊಂಡಿದೆ.


ಮಾಸ್ತಿಕಲ್ಲು: ಬಲದಿಂದ ಎರಡನೇ ಕಲ್ಲು ವೀರ ಮಾಸ್ತಿಕಲ್ಲು ಇದು ೨ ½ ಅಡಿ ಎತ್ತರ ೧ ½ ಅಡಿ ಅಗಲವಾಗಿದ್ದು, ಕೆಂಪು ಉಸುಕು ಮಿಶ್ರಿತ ಕಲ್ಲಿ (Red Shine Stone) ನಲ್ಲಿ ನಿರ್ಮಿಸಲಾಗಿದೆ. ಬಾದಾಮಿ ಚಾಲುಕ್ಯರ ಕಾಲದ ಸ್ಮಾರಕಗಳು ಇದೇ ಮಾದರಿಯ ಕಲ್ಲಿನಲ್ಲಿ ನಿರ್ಮಾಣವಾಗಿದೆ. ಈ ವೀರ ಮಾಸ್ತಿಕಲ್ಲಿನಲ್ಲಿ ವೀರ ಮತ್ತು ಆತನ ಸತಿಯನ್ನು ಚಿತ್ರಿಸಲಾಗಿದೆ. ವೀರನು ಎಡಗೈಯಲ್ಲಿ ಬಿಲ್ಲನ್ನು ಹಿಡಿದಿದ್ದು ಬಲಗೈಯನ್ನು ಟೊಂಕದ ಮೇಲೆ ಇಟ್ಟಿದ್ದಾನೆ. ಇವನ ಪಕ್ಕದಲ್ಲಿ ಸತಿಯು ನಿಂತಿದ್ದು ಬಲಗೈಯನ್ನು ಎತ್ತಿ ಹಿಡಿದಿದ್ದು ಎಡಗೈಯನ್ನು ಇಳಿಬಿಟ್ಟಿದ್ದಾಳೆ. ಇವರಿಬ್ಬರೂ ಹಿರಿದಾದ ತುರುಬನ್ನು ಕಟ್ಟಿದ್ದಾರೆ.

ಎರಡನೇ ವೀರಗಲ್ಲು: ಬಲದಿಂದ ಮೂರನೆ ಸ್ಮಾರಕ ಶಿಲೆಯು ೧ ½ ಅಡಿ ಎತ್ತರವಾಗಿದ್ದು, ಬಳಪದ ಕಲ್ಲಿನಲ್ಲಿ ಕಂಡರಿಸಲ್ಪಟ್ಟಿದೆ. ಈ ವೀರಗಲ್ಲಿನಲ್ಲಿ ವೀರನೋರ್ವನ ಚಿತ್ರಣವೇ ಪ್ರಧಾನವಾಗಿದೆ. ವೀರನು ಎಡಗೈಯಲ್ಲಿ ಬಿಲ್ಲನ್ನು ಹಿಡಿದಿದ್ದು ಬಲಗೈಯಲ್ಲಿ ಬಾಣವನ್ನು ಹಿಡಿದಿದ್ದಾನೆ. ಈತನು ಬಿಲ್ವಿದ್ಯೆಯಲ್ಲಿ ಪ್ರವೀಣನಾಗಿದ್ದು ಶತ್ರುಗಳೊಂದಿಗೆ ಹೋರಾಡಿ ಮರಣಹೊಂದಿರುವುದರಿಂದ ಈ ಸ್ಮಾರಕ ಶಿಲೆಯನ್ನು ನಿರ್ಮಿಸಿದ್ದಾರೆ. ಹೆಚ್ಚಿನ ಅಲಂಕಾರಗಳಿರುವದಿಲ್ಲ.

ಮೂರನೇ ವೀರಗಲ್ಲು: ಬಲದಿಂದ ಎಡಕ್ಕೆ ಸಾಲಾಗಿ ನಿಲ್ಲಿಸಿರುವ ಈ ಸ್ಮಾರಕ ಶಿಲೆಗಳಲ್ಲಿ ನಾಲ್ಕನೆ ಸ್ಮಾರಕ ಈ ವೀರಗಲ್ಲು ಇದು ತ್ರುಟಿತಗೊಂಡಿದ್ದು, ಸ್ವಲ್ಪ ಭಾಗ ಮಾತ್ರ ಇದೆ. ಇನ್ನುಳಿದ ಭಾಗವು ಕಾಣಿಸುತ್ತಿಲ್ಲ ಇದು ಸುಮಾರು ಮೂರು ಅಡಿ ಎತ್ತರ ಎರಡು ಅಡಿ ಅಗಲವಾದ ಬಳಪದ ಕಲ್ಲಿನಲ್ಲಿ ನಿರ್ಮಿಸಲಾಗಿದೆ. ಇದು ತುರುಗೋಳ್ ಶಿಲ್ಪವಾಗಿದೆ.

೪ನೇ ವೀರಗಲ್ಲು: ಇದು ನಾಲ್ಕು ಅಡಿ ಎತ್ತರ ಎರಡು ಅಡಿ ಅಗಲವಾಗಿದೆ. ಬಳಪದ ಕಲ್ಲಿನಲ್ಲಿ ನಿರ್ಮಾಣವಾಗಿದೆ. ಈ ವೀರಗಲ್ಲಿನ ವಿಶೇಷವೆಂದರೆ ಎರಡು ಜನ ಯೋಧರು ಹೋರಾಡಿರುವುದನ್ನು ಇಲ್ಲಿ ಕಾಣುತ್ತೇವೆ. ಮೊದಲನೇ ಪಟ್ಟಿಕೆಯಲ್ಲಿ ವೀರ ಯೋಧರು ಹೋರಾಡುವ ದೃಶ್ಯವಿದೆ. ಈ ಎರಡೂ ಯೋಧರು ಹೋರಾಡುವದನ್ನು ಪ್ರತ್ಯೇಕವಾದ ಭಾಗದಲ್ಲಿ ಚಿತ್ರಿಸಿದ್ದಾರೆ. ಈ ಇಬ್ಬರೂ ಯೋಧರು ಬಿಲ್ಲು-ಬಾಣಗಳಿಂದ ಶತ್ರುಗಳೊಂದಿಗೆ ಹೋರಾಡುತ್ತಿದ್ದಾರೆ. ವೈರಿಗಳು

* ಪ್ರಾಚಾರ್ಯರು, ಸಕ್ರೀ ಪದವಿಪೂರ್ವ ಕಾಲೇಜು, ಬಾಗಲಕೋಟೆ.

ಖಡ್ಗವನ್ನು ಹಿಡಿದಿದ್ದಾರೆ. ಒಬ್ಬ ವೈರಿ ಪಡೆಯ ಯೋಧನು ಎಡಗೈಯಲ್ಲಿ ಗುರಾಣಿಯನ್ನು ಹಿಡಿದಿದ್ದಾನೆ. ಯೋಧರು ಕೊರಳಹಾರ, ಕಂಠಹಾರ ವಿವಿಧ ಆಭರಣಗಳನ್ನು ಧರಿಸಿದ್ದು, ಇವರೀರ್ವರ ಉತ್ತಮ ಆಭರಣ, ವಸ್ತುಗಳನ್ನು ಗಮನಿಸಿದರೆ ಇವರು ಪ್ರಮುಖ ವ್ಯಕ್ತಿಗಳಾಗಿದ್ದರೆಂದು ತಿಳಿಯಬಹುದಾಗಿದೆ.

ಈ ಮೊದಲನೇ ಪಟ್ಟಿಕೆಯ ಮೇಲ್ಭಾಗದ ಪಟ್ಟಿಕೆಯಲ್ಲಿ ಶಾಸನವಿದ್ದು ಪ್ರಕಟಿತವಾಗಿದೆ. 'ತಳಾರ ಚಾವೆಯನಾಯ್ಕನ ಮಗ ಕಲ್ಲ', ಅವನ ಅಣ್ಣನ ಮಗ ಸಂಕಯುಖ್ಯರು ಬಾದಾಮಿಯ ದಾರಿಯಲ್ಲಿ ಕಡಕೆರೆಯ ಮಹಾಜನರ (ಕೋರಿಕೆಯಂತೆ) ಕಳ್ಳರೊಡನೆ ಕಾದಿ ಸತ್ತಾಗ ಅವರ ಧೈರ್ಯವನ್ನು ಮೆಚ್ಚಿದ ಮಹಾಜನರು ಭೂದಾನ ನೀಡಿದಂತೆ ಉಲ್ಲೇಖವಿದೆ. ಶಾಸನದ ಉಲ್ಲೇಖದಂತೆ ಈರ್ವರು ಯೋಧರು ಕಳ್ಳರೊಡನೆ ಹೋರಾಡಿ ವೀರ ಮರಣವನ್ನು ಹೊಂದಿರುವುದರಿಂದ ಇವರೀರ್ವರ ಹೋರಾಟವನ್ನು ಪ್ರತ್ಯೇಕವಾಗಿ ಚಿತ್ರಿಸಲಾಗಿದೆ. ಎರಡನೇ ಪಟ್ಟಿಕೆಯಲ್ಲಿ ಯೋಧರು ಪ್ರತ್ಯೇಕವಾದ ಮಂಟಪದಲ್ಲಿ ಕುಳಿತಿದ್ದು, ಎಡ ಬಲದಲ್ಲಿ ಚಾಮರಧಾರಿಣಿಯರಾದ ಅಪ್ಸರೆಯರಿದ್ದಾರೆ. ಮೇಲ್ಭಾಗದಲ್ಲಿ ವಾದ್ಯಗಳನ್ನು ನುಡಿಸುತ್ತಿರುವ ದೃಶ್ಯ, ಪುಷ್ಪಾರ್ಚನೆ ಮಾಡುತ್ತಿರುವ ದೃಶ್ಯವಿದೆ. ಮೂರನೇ ಪಟ್ಟಿಕೆಯ ಮಧ್ಯದಲ್ಲಿ ಈಶ್ವರ ಶಿಲ್ಪವಿದ್ದು ಇಕ್ಕೆಲಗಳಲ್ಲಿ ಯೋಧರು ಕುಳಿತಿದ್ದಾರೆ. ಎಡಬದಿಯ ಯೋಧನ ಹಿಂದೆ ನಂದಿಯ ಶಿಲ್ಪವಿದೆ. ಬಲಬದಿಯ ಯೋಧನ ಮುಂದೆ ಜಟಾಧಾರಿಯಾದ ಮುನಿಯೊಬ್ಬನು ಕೈಮುಗಿದು ನಿಂತಿದ್ದಾನೆ ಶಿವಲಿಂಗದ ಮೇಲ್ಭಾಗದ ಇಕ್ಕೆಲಗಳಲ್ಲಿ ಸೂರ್ಯ–ಚಂದ್ರರನ್ನು ಚಿತ್ರಿಸಿದ್ದಾರೆ.

ಐದನೇ ವೀರಗಲ್ಲು: ಬಲದಿಂದ ಎಡಕ್ಕೆ ಇರುವ ಆರನೇ ಸ್ಮಾರಕ ಶಿಲೆ ಈ ಐದನೇ ವೀರಗಲ್ಲು. ಇದು ನಾಲ್ಕು ಅಡಿ ಎತ್ತರ ೨ ½ ಅಡಿ ಅಗಲವಾಗಿದೆ. ಬಳಪದ ಕಲ್ಲಿನಲ್ಲಿ ನಿರ್ಮಿಸಲಾಗಿದ್ದು ತ್ರುಟಿತಗೊಂಡಿದೆ.

ಮೊದಲನೆ ಪಟ್ಟಿಕೆಯಲ್ಲಿ ಯುದ್ಧದ ದೃಶ್ಯವಿದೆ. ಪ್ರಧಾನ ಯೋಧನು ಕೈಯಲ್ಲಿ ಖಡ್ಗವನ್ನು ಹಿಡಿದು ಕುದುರೆ ಮೇಲೆ ಕುಳಿತ ಶತ್ರುವಿನೊಂದಿಗೆ ಹೋರಾಡುತ್ತಿದ್ದಾನೆ. ಇವನ ಹಿಂಭಾಗದಲ್ಲಿ ಕುದುರೆ ಮೇಲೆ ಕುಳಿತ ಯೋಧನಿದ್ದಾನೆ ಕುದುರೆಗಳ ಸಾಲುಗಳನ್ನೆ ಚಿತ್ರಿಸಿದ್ದಾರೆ. ಎರಡನೇ ಪಟ್ಟಿಕೆಯಲ್ಲಿ ವೀರಮರಣ ಹೊಂದಿದ ಯೋಧನನ್ನು ಅಪ್ಸರೆಯರು ಸ್ವರ್ಗಕ್ಕೆ ಕೊಂಡೊಯ್ಯುತ್ತಿದ್ದಾರೆ ವೀರನು ಮಂಟಪದಲ್ಲಿ ಕುಳಿತಿದ್ದು ಚಾಮರಧಾರಿಣಿಯರು ನಿಂತಿದ್ದಾರೆ. ಮೂರನೆ ಪಟ್ಟಿಕೆ ತ್ರುಟಿತವಾಗಿದೆ.

ಒಟ್ಟಿನಲ್ಲಿ ಕಟಗೇರಿ ಗ್ರಾಮವು ವಿವಿಧ ರಾಜಮನೆತನಗಳ ಆಳ್ವಿಕೆಗೆ ಒಳಪಟ್ಟು ಆಳರಸರ ಆಳ್ವಿಕೆಯ ಕಾಲದಲ್ಲಿ ಊರ ರಕ್ಷಣೆಗಾಗಿ (ತುರುಗಳ) ಹಸು–ದನ ಕರಗಳ ರಕ್ಷಣೆಗಾಗಿ ಶತೃಗಳೊಂದಿಗೆ ಹೋರಾಡಿ ವೀರಮರಣವನ್ನಪ್ಪಿದ ಯೋಧರ ಸ್ಮರಣಾರ್ಥ ವೀರಗಲ್ಲುಗಳನ್ನು, ವೀರಮಾಸ್ತಿ ಕಲ್ಲನ್ನು ನಿಲ್ಲಿಸಲಾಗಿದೆ.

ಮೇಕನಗದ್ದೆ ಪರಿಸರದ ಐತಿಹಾಸಿಕ ನೆಲೆಗಳು

ಮೇಕನಗದ್ದೆ ಲಕ್ಷ್ಮಣಗೌಡ*

ಚಿಕ್ಕಮಗಳೂರು ಜಿಲ್ಲೆ ಮೂಡಿಗೆರೆ ತಾಲ್ಲೂಕಿನ ಮೇಕನಗದ್ದೆ ಹಾಗೂ ಸುತ್ತಮುತ್ತಲಿನ ಕಾಡಿನ ಅಂಚಿನಲ್ಲಿರುವ ಊರುಗಳಾದ ಹೇರಿಕೆ, ಬೈರಾಪುರ, ಕುಂಬರಡಿ, ಗುತ್ತಿ, ಕೋಗಿಲೆ ಮುಂತಾದ ಊರುಗಳು ದಟ್ಟಾರಣ್ಯದಿಂದಾವೃತ ಪ್ರದೇಶಗಳು. ಇವು ನಾಗರಿಕ ಜಗತ್ತಿನಿಂದ ಇತ್ತೀಚಿನತನಕ ದೂರವೇ ಉಳಿದಿದ್ದ ಪ್ರದೇಶಗಳು. ಈ ಊರುಗಳ ಗಡಿಯಾಚೆಗೆ ದಕ್ಷಿಣ ಹಾಗೂ ಪಶ್ಚಿಮ ದಿಕ್ಕಿಗೆ ಯಾವುದೇ ಊರು ಅಥವಾ ಜನವಸತಿಗಳಾಗಲೀ ಈಗ ಇಲ್ಲ. ಆದ್ದರಿಂದ ಮೇಕನಗದ್ದೆಗೆ ಭೂಮಿ ಕೊನೆಯಾದ ಊರು ಎಂಬ ಅನ್ವರ್ಥ ನಾಮವೂ ಇದೆ. ಆದರೆ ಈ ಊರುಗಳಲ್ಲಿ ಪುರಾತನ ಕಾಲದಲ್ಲಿ ಜನವಸತಿ ಇದ್ದುದ್ದರ ಬಗ್ಗೆ ಅಲ್ಲಲ್ಲಿ ಹಲವಾರು ಕುರುಹುಗಳು ಕಂಡುಬರುತ್ತಿವೆ.

ಮೇಕನಗದ್ದೆಯ ಸುತ್ತಲಿನ ಈ ಪ್ರದೇಶವು ದಕ್ಷಿಣ ಹಾಗೂ ಪಶ್ಚಿಮಕ್ಕೆ ಆವರಿಸಿರುವ ಎತ್ತರವಾದ ಗುಡ್ಡಬೆಟ್ಟಗಳಿಂದಲೂ, ಸುತ್ತುವರಿದಿರುವ ದಟ್ಟಾರಣ್ಯಗಳಿಂದ ಕೂಡಿದ್ದು, ವಾರ್ಷಿಕ ಸರಾಸರಿ ಮಳೆಯ ಪ್ರಮಾಣ ಮುನ್ನೂರು ಇಂಚುಗಳವರೆಗೂ ಬೀಳುತ್ತದೆ. ಇಲ್ಲಿನ ಹವಾಗುಣಕ್ಕೆ ಒಗ್ಗಿಕೊಂಡಂತೆ ತರೀ ಜಮೀನಿನಲ್ಲಿ ಖಾರೀಫ್ ಋತುವಿನಲ್ಲಿ ಬತ್ತ ಹಾಗೂ ಕಾಡು ಮತ್ತು ಹನಾಲಿನಲ್ಲಿ ಏಲಕ್ಕಿ ಬೆಳೆ ಅಷ್ಟೆ ಇಲ್ಲಿನ ಕೃಷಿ ಉತ್ಪನ್ನಗಳಾಗಿದ್ದವು. ಅದು ಬಿಟ್ಟರೆ ಇಲ್ಲಿನ ದಟ್ಟ ಕಾಡುಗಳಲ್ಲಿ ಸ್ವಾಭಾವಿಕವಾಗಿ ಬೆಳೆಯುತ್ತಿದ್ದ ಕಾಡು ಏಲಕ್ಕಿ ಸಹ ಒಂದು ಉತ್ಪನ್ನವಾಗಿತ್ತು. ಇತ್ತೀಚಿನ ವರ್ಷಗಳಲ್ಲಿ ಮಳೆಯ ಪ್ರಮಾಣ ಕಡಿಮೆಯಾದ ಪರಿಣಾಮ ಆಧುನಿಕ ಬೆಳೆಗಳಾದ ಕಾಫಿ, ಮೆಣಸು, ಶುಂಠಿ, ಬಾಳೆ, ಮುಂತಾದವು ಕಾಣಿಸಿಕೊಳ್ಳುತ್ತಿವೆಯಲ್ಲದೆ ಇಲ್ಲಿನ ಪರಂಪರಾನುಗತ ಕೃಷಿ ಪದ್ಧತಿ ಮರೆಯಾಗಿ ಹೋಗಿದೆ. ಪುರಾತನ ಕಾಲದಿಂದಲೂ ಜನವಸತಿ ಇದ್ದ ಬಗ್ಗೆ ಕಂಡುಬರುವ ಕುರುಹುಗಳ ಬಗ್ಗೆ ಗಮನ ಸೆಳೆಯುವುದೇ ಈ ಲೇಖನದ ಉದ್ದೇಶವಾಗಿದೆ.

೧. ಕೆಳಮೇಕನಗದ್ದೆಯ ಬೀರರ ಬನ, ೨. ಪಾಂಡವರ ಗುಡ್ಡದ ಮೇಲಿರುವ ಶಿಲಾವಶೇಷಗಳು, ೩. ಕಾಡಿನಲ್ಲಿರುವ ಉಳಿಯುವ ಕಲ್ಲುಗಳು, ೪. ದಿಗ್ಗಲ್ಲು/ಎತ್ತಿನಬುಜ, ೫. ಕಬ್ಬಿಣ ಕರಗಿಸಿದ ಕಲ್ಲಿನ ಅವಶೇಷಗಳು.

೧. ಕೆಳಮೇಕನಗದ್ದೆಯ ಬೀರರ ಬನ: ಮೇಕನಗದ್ದೆ ಗ್ರಾಮದ ಕೆಳಮೇಕನಗದ್ದೆಯಲ್ಲಿರುವ ಪುರಾತನವಾದ ಬಾವಿಯೊಂದರ ಬಳಿ ಮರದ ಬುಡದಲ್ಲಿ ಆರು ಬೀರರ ಕಲ್ಲುಗಳಿವೆ. ಇವು ಕೆತ್ತನೆ ಹಾಗೂ ಆಕಾರ, ಗಾತ್ರಗಳಿಂದಾಗಿ ಒಂದೇ ರೀತಿ ಇವೆ. ಸುಮಾರು ನಾಲ್ಕು ಅಡಿ ಎತ್ತರ ಹಾಗೂ ಎರಡು ಅಡಿ ಅಗಲ ಇರುವಗಟ್ಟಿಯಾದ ಕರಿಗಲ್ಲಿನ ಶಿಲೆಗಳಲ್ಲಿ ಕೆತ್ತಲಾಗಿದೆ. ಕಲ್ಲಿನ ಕೆಳಭಾಗ ಸಾದಾ ಇದ್ದು ಅರ್ಧಕ್ಕಿಂತ ಮೇಲಿನ ಭಾಗದಲ್ಲಿ ಎರಡು ಹಂತಗಳಲ್ಲಿ ಚಿತ್ರಗಳನ್ನು ಕೊರೆಯಲಾಗಿದೆ. ಇಲ್ಲಿ ನಾಲ್ಕು ವೀರಗಲ್ಲುಗಳು ಹಾಗೂ ಎರಡು ವೀರಮಾಸ್ತಿ ಕಲ್ಲುಗಳಿವೆ. ವೀರಗಲ್ಲುಗಳಲ್ಲಿ ಎರಡು ರೀತಿ ಕೆತ್ತನೆಗಳಿವೆ. ಎರಡು ಕಲ್ಲುಗಳಲ್ಲಿ ಕತ್ತಿ ಹಿಡಿದು ಮೇಲೆತ್ತಿ ನೆಲದ ಮೇಲೆ ನಿಂತು ಹೋರಾಡುತ್ತಿರುವ ವೀರರ ಚಿತ್ರದ ಜೊತೆಗೆ ಚಾಮರ ಬೀಸುತ್ತಿರುವ ಯೋಧನ ಚಿತ್ರವಿದೆ.

ಈ ಊರಿನ ಪ್ರತಿ ಮನೆಯಲ್ಲಿ ಹಸು ಕರು ಹಾಕಿದ ಮೇಲೆ ಹನ್ನೆರಡು ದಿನ ಕಳೆದ ಮೇಲೆ ಆ ಹಸುವಿನ ಹಾಲನ್ನು ಬಳಸಿ ಹಾಲನ್ನ ಮಾಡಿ ಈ ಬೀರರ ಕಲ್ಲುಗಳ ಎದುರು ತಂದು ಎಡೆ ಹಾಕಿ ನೈವೇದ್ಯ ಮಾಡ ಬೇಕು. ಹೀಗೆ ಮಾಡಿದ ಮೇಲೆಯೇ ಮನೆಯಿಂದ ಹೊರಗಿನವರಿಗೆ ಹಾಲು ನೀಡಬಹುದು. ಒಂದು ವೇಳೆ ನೈವೇದ್ಯ ಮಾಡದೆ ಹಾಲನ್ನು ಇತರರಿಗೆ ನೀಡಿದರೆ ಹಸುವಿನ ಕೆಚ್ಚಲು ಒಡೆಯುವುದು, ಹಾಲಿನ ಬದಲಿಗೆ ರಕ್ತ ಸುರಿಯುವುದು ಇತ್ಯಾದಿ ಅವಗಢಗಳಾಗುತ್ತವೆಂದು ಇಲ್ಲಿನ ಹಿರಿಯರು ತಿಳಿಸುತ್ತಾರೆ.

ಇಲ್ಲಿನ ಸುಗ್ಗಿ ಹಬ್ಬದಲ್ಲಿ ದೇವರ ಸೇವೆಗೆ ಸಂಬಂಧಿಸಿದಂತೆ ಒಂದೊಂದು ಕೆಲಸ ಮಾಡಲು ಒಂದೊಂದು ವರ್ಗಕ್ಕೆ ಮೀಸಲಾಗಿರುತ್ತದೆ. ಸುಗ್ಗಿಹಬ್ಬದಲ್ಲಿ ದೇವರಿಗೆ ಮಡೆ ಮಾಡಿ ನೈವೇದ್ಯ ಅರ್ಪಿಸಲು ಮೀಸಲಾಗಿರುವ ಕುಟುಂಬಗಳಿವೆ.

---

* ಮೊ. ೯೪೮೨೧ ೬೨೦೦೧

ಆಯಾಯ ಕುಟುಂಬದ ನಿರ್ದಿಷ್ಟ ಒಕ್ಕಲಿನವರು ಅದಕ್ಕೆ ಸಂಬಂಧಿಸಿದ ಆಚರಣೆ ನೆರವೇರಿಸುತ್ತಾರೆ. ಊರಿನ ಎಲ್ಲರ ಮನೆಯಲ್ಲೂ ಒಂದು ದಿನ ಉಪವಾಸವಿದ್ದು ಬೀರರ ಚೌತ ಆಚರಿಸುತ್ತಾರೆ. ಆ ವರ್ಷದ ಹಬ್ಬದ ಕೊನೆಯ ದಿನ ಬೀರರಿಗೆ ಮಡೆ ನೈವೇದ್ಯ ಮಾಡುತ್ತಾರೆ.

ಮಡೆ ಮಾಡುವ ಮನೆಯವರು ನೀಡುವ ಮಾಹಿತಿಯಂತೆ ಹಿಂದಿನ ರಾತ್ರಿಯೇ ಮೂರು ಬೊಗಸೆ ಅಕ್ಕಿಯನ್ನು ತೆಗೆದು ಅದರಲ್ಲಿ ದೋಸೆ ಅನ್ನ ಕಡುಬು ಮುಂತಾಗಿ ಮೂರು ಬಗೆಯ ಖಾದ್ಯ ತಯಾರಿಸಿ ಪೂಜಾ ಸಾಮಗ್ರಿಗಳೊಂದಿಗೆ ಬುಟ್ಟಿಯಲ್ಲಿ ತುಂಬಿ ಬಾಯಿಗೆ ಬಟ್ಟೆ ಕಟ್ಟಿಕೊಂಡು ಬುಟ್ಟಿಯನ್ನು ತಲೆಯ ಮೇಲೆ ಹೊತ್ತುಕೊಂಡು ಈ ಬನಕ್ಕೆ ಬರುತ್ತಾರೆ. ಇವರ ಮುಂದೆ ಒಂದು ಬೆಂಕಿ ಕೊಳ್ಳಿ ಹಿಡಿದುಕೊಂಡು ಯಾರೂ ಎದುರುಗಡೆ ಬರಬಾರದೆಂದು ಸೂಚನೆ ಕೊಡುತ್ತಾರೆ. ಇಲ್ಲಿಗೆ ಬಂದು ಕಲ್ಲುಗಳನ್ನು ತೊಳೆದು ಎಣ್ಣೆಮಜ್ಜನ ಮಾಡಿ ಅರಿಶಿಣ ಕುಂಕುಮಗಳಿಂದ ಅಲಂಕರಿಸಿ ಎಡೆ ಇಟ್ಟು ನೈವೇದ್ಯ ಮಾಡಿ ಅರ್ಪಿಸಿ ಕೈ ಮುಗಿದು ಬೇಡಿಕೊಳ್ಳುತ್ತಾರೆ.

ಇಲ್ಲಿನ ಈ ಆಚರಣೆಯೊಂದಿಗೆ ಹೊಂದಿಕೊಂಡ ಇನ್ನೊಂದು ವಿಶೇಷತೆಯಿದೆ. ಇಲ್ಲಿ ನೈವೇದ್ಯ ಮಾಡಿದ ಪ್ರಸಾದವನ್ನು ಹೆಣ್ಣು ಮಕ್ಕಳಿಗಾಗಲೀ ಮಹಿಳೆಯರಿಗಾಗಲಿ ಕಡ್ಡಾಯವಾಗಿ ನೀಡುವುದಿಲ್ಲ. ಒಂದುವೇಳೆ ಅಚಾನಕ್ಕಾಗಿ ಸೇವಿಸಿದರೆ ಅಂತವರಿಗೆ ಮಕ್ಕಳಾಗುವುದಿಲ್ಲವೆಂಬ ನಂಬಿಕೆಯಿದೆ. ಆದರೆ ಇಲ್ಲಿ ಈ ರೀತಿಯ ಆಚರಣೆಗಳನ್ನು ನೆರವೇರಿಸುವುದು ಯಾವಾಗಿನಿಂದ ಆರಂಭವಾಯಿತೆಂಬ ಬಗ್ಗೆ ವಿವರಗಳು ದೊರೆಯುವುದಿಲ್ಲ.

ಇಂತಹ ಕಲ್ಲುಗಳು ಇಲ್ಲಿನ ಸುತ್ತಮುತ್ತಲ ಊರುಗಳಲ್ಲಿ ಕೆಲವು ಕಡೆ ಗುಂಪಾಗಿ, ಮತ್ತೆ ಕೆಲವು ಕಡೆ ಒಂದೊಂದಾಗಿ ಬಯಲು ಪ್ರದೇಶಗಳಲ್ಲಿ ಹರಡಿಕೊಂಡಿರುವುದು ಕಂಡುಬರುತ್ತವೆ. ಸಮೀಪದ ಹೊಸಹಳ್ಳಿಯಲ್ಲಿ ಇದೇ ತರಹದ ಗುಂಪಾಗಿರುವ ಕಲ್ಲುಗಳಿವೆ.


೨. ಪಾಂಡವರ ಗುಡ್ಡದ ಶಿಲಾವಶೇಷಗಳು: ಮೇಕನಗದ್ದೆ ಗ್ರಾಮದ ವ್ಯಾಪ್ತಿಯಲ್ಲಿರುವ ಪಾಂಡವರ ಗುಡ್ಡ ಸುಮಾರು ೨೦೦೦ ಅಡಿಗೂ ಹೆಚ್ಚು ಎತ್ತರವಿರುವ ಚೂಪಾದ ಗುಡ್ಡಗಳ ತುತ್ತತುದಿ. ಇದರ ಸುತ್ತಮುತ್ತ ಹತ್ತಿರದಲ್ಲಿ ಎಲ್ಲೂ ಜನವಸತಿಗಳಿಲ್ಲ. ಈ ಗುಡ್ಡದ ಉತ್ತರಕ್ಕೆ ನೂರಾರು ಕಿಲೋಮೀಟರುಗಳವರೆಗೆ ಸಾವಿರಾರು ಎಕರೆ ದಟ್ಟಾರಣ್ಯ ಹರಡಿದೆ. ಇಲ್ಲಿ ಇರುವ ಕಲ್ಲಿನ ಆಕೃತಿಗಳನ್ನು ಆಧರಿಸಿ ಇದಕ್ಕೆ ಪಾಂಡವರ ಗುಡ್ಡ ಎಂಬ ಅನ್ವರ್ಥನಾಮವಿದೆ. ಇವುಗಳನ್ನು ಕುರಿತು ಹಲವಾರು ಇತಿಹಾಸ ತಜ್ಞರು ಇಲ್ಲಿಗೆ ಭೇಟಿ ನೀಡಿ ಪರಿಶೀಲಿಸದೆ ಇವು ಶಿಲಾಯುಗದ ಕಾಲದ ಪಳೆಯುಳಿಕೆಗಳು ಎಂದು ಹಲವು ಕಡೆ ಉಲ್ಲೇಖಿಸಿದ್ದಾರೆ. ಹಾಗಾದರೆ ಈ ಬೆಟ್ಟದ ತುತ್ತತುದಿಯಲ್ಲಿ ಅಪರಿಮಿತವಾದ ಗಾಳಿ ಮಳೆಗಳ ಹೊಡೆತ ತಡೆದುಕೊಂಡು ಇಲ್ಲಿ ಜನರು ನೆಲೆ ನಿಂತಿದ್ದರೇ ಎಂಬುದು ಅನುಮಾನ. ಇಲ್ಲಿನ ಹಲವಾರು ಕಲ್ಲುಗಳ ಆಕೃತಿಗಳನ್ನು ಕಂಡು ಇವೆಲ್ಲಾ ಪಾಂಡವರ ಕಾಲದ ಅವಶೇಷಗಳೆಂದು, ಪಾಂಡವರು ದಿನಿತ್ಯದಲ್ಲಿ ಬಳಸುತ್ತಿದ್ದ ವಸ್ತುಗಳು ನಂತರದಲ್ಲಿ ಕಲ್ಲಾದವೆಂದು ಹೇಳುತ್ತಾರೆ.

ಕಾಡಿನಲ್ಲಿರುವ ಉಳಿಯುವ ಕಲ್ಲುಗಳು

ಪಾಂಡವರ ಗುಡ್ಡದ ತಪ್ಪಲಿನಲ್ಲಿರುವ ದಟ್ಟಾರಣ್ಯಗಳಿಗೆ ಇಲ್ಲಿನ ಸುತ್ತಮುತ್ತಲಿನ ಊರುಗಳಿಂದ ಶಿಕಾರಿ ಮತ್ತಿತರ ಉದ್ದೇಶಗಳಿಗೆ ಹೋದವರು ಈ ಕಾಡುಗಳಲ್ಲಿರುವ ಕಲ್ಲುಗಳಲ್ಲಿ ಆಶ್ರಯ ಪಡೆಯುದಾಗಿ ತಿಳಿದು ಬರುತ್ತದೆ. ಈ ಕಲ್ಲುಗಳು ಮಾನವ ವಾಸ ಯೋಗ್ಯವಾಗಿದ್ದು ಕಾಡುಪ್ರಾಣಿಗಳು ಮತ್ತಿತರ ಅಪಾಯಗಳಿಂದ ರಕ್ಷಣೆ ಪಡೆಯಲು ಯೋಗ್ಯವಾಗಿವೆ ಎಂದು ತಿಳಿದು ಬರುತ್ತವೆ. ಇಲ್ಲಿರುವ ಕಲ್ಲುಗಳಿಗೆ ಎಲೇಕಲ್ಲು, ಮರಿಗೌಡನ ಕಲ್ಲು, ಇತ್ಯಾದಿ ಹೆಸರುಗಳಿಂದ ಕರೆಯುತ್ತಾರೆ. ಈ ಕಲ್ಲುಗಳ ರಚನೆಯಾದದ್ದು ನೈಸರ್ಗಿಕವೇ ಅಥವಾ ಆದಿ ಮಾನವ ಇಲ್ಲಿ ನೆಲೆ ಆರಂಭಿಸಿದಾಗ ಇವುಗಳನ್ನು ವಾಸಯೋಗ್ಯ ಮಾಡಿಕೊಂಡಿರಬಹುದೆಂಬ ಅಂಶ ಕಂಡುಬರುತ್ತದೆ.


ದಿಗ್ಗಲ್ಲು/ಎತ್ತಿನ ಭುಜ


ಇದೊಂದು ದಟ್ಟಾರಣ್ಯದ ನಡುವೆ ಎದ್ದುಕಾಣುವಂತೆ ಎತ್ತರವಾದ ಕಲ್ಲುಗಳನ್ನು ಕಡೆದು ಜೋಡಿಸಿರುವಂತೆ ಅತ್ಯಂತ ಎತ್ತರಕ್ಕೆ ಗೋಚರವಾಗುವ ನಿಸರ್ಗದತ್ತ ಕಲ್ಲಿನ ರಾಶಿ. ಬಹಳ ದೂರಕ್ಕೆ ಗೋಚರಿಸುವುದರಿಂದ ಈ ಕಲ್ಲುಗಳ ರಾಶಿ ತಿರುಗಾಡುವವರಿಗೆ ದಾರಿಯನ್ನು – ದಿಕ್ಕನ್ನು ಗುರುತಿಸಲು ಸಹಕಾರಿಯಾಗುತ್ತಿದ್ದದ್ದರಿಂದ ಇದಕ್ಕೆ ದಿಗ್ಗಲ್ಲು ಎಂದು ಹೆಸರಿದೆ ಯಾವುದೇ ಜನವಸತಿಗಳಿಲ್ಲದೆ ವಿಪರೀತವಾಗಿ ಸುರಿವ ಬಾರಿ ಮಳೆಯ ಬಿರುಸಿನ ಆರ್ಭಟಕ್ಕೆ ಹಾಗೂ ಗಾಳಿಯ









ಹೊಡೆತಕ್ಕೆ ನಲುಗದೆ ಅಲುಗಾಡದಂತೆ ನಿಂತಿರುವುದು ನಿಸರ್ಗದ ವಿಸ್ಮಯವಾಗಿದೆ. ಸಂಧುಗಳಲ್ಲಿ ಜನರು ಅಡಗಿಕೊಳ್ಳ ಬಹುದಾದಷ್ಟು ದೊಡ್ಡ ಗುಹೆಗಳಿವೆ. ಇವು ಸಹ ಆದಿಮಾನವ ಇಲ್ಲಿ ತನ್ನ ನೆಲೆಯನ್ನು ಕಂಡುಕೊಂಡ ಸಾಧ್ಯತೆಗಳನ್ನು ಅಲ್ಲಗಳೆಯುವಂತಿಲ್ಲ.

ಒಂದು ತಲೆಮಾರಿನ ಹಿಂದೆ ಮಲೆಯರ ಕೆಲವು ಒಕ್ಕಲುಗಳು ಇಲ್ಲಿಗೆ ಸಮೀಪದ ಕುಮಾರಹಳ್ಳಿ ಎಂಬ ಊರಿನಲ್ಲಿ ಬಂದು ನೆಲೆಸಿದ್ದು ಆಗಾಗ ತನ್ನ ಸಂಗಡಿಗ ನಾಯಿಗಳೊಂದಿಗೆ ಶಿಕಾರಿ ಮತ್ತಿತರ ಉದ್ದೇಶಗಳಿಗೆ ಕಾಡಿಗೆ ಬರುತ್ತಿದ್ದ ಬಗ್ಗೆ ಜನಜನಿತವಾದ ವಿವರಗಳು ದೊರೆಯುತ್ತವೆ. ಈ ಹಿನ್ನೆಲೆಯಲ್ಲಿ ಪೂರ್ಣ ನಾಗರಿಕ ಜೀವನಕ್ಕೆ ಒಗ್ಗಿಕೊಳ್ಳುವ ಮುನ್ನ ಯಾವುದೋ ಒಂದು ವರ್ಗದ ಜನರು ಈ ತಾಣಗಳಲ್ಲಿ ಆಶ್ರಯ ಪಡೆದಿರಬಹುದಾದ ಸಾಧ್ಯತೆಯಿದೆ.

ಬೈರಾಪುರದ ಬಳಿ ಇರುವ ಚೂಪಾದ ಎತ್ತರದ ಗುಡ್ಡವು ನಿಸರ್ಗ ನಿರ್ಮಿತವೇ ಆದರೂ ಬಹಳ ಆಕರ್ಷಣೀಯವಾಗಿದೆ. ಅದರ ಸಮೀಪದಲ್ಲಿ ಜನವಸತಿಗಳಿಲ್ಲ. ಆದರೆ ಅದರ ಸಮೀಪದಲ್ಲಿ ಪ್ರಾಚೀನ ಸರಕು ಸಾಗಾಣಿಕೆಯ ಮಾರ್ಗಗಳಿದ್ದ ಅವಶೇಷಗಳಿವೆ.

ಕಬ್ಬಿಣ ಕರಗಿಸಿದ ಕಲ್ಲುಗಳು

ಕೆಳಮೇಕನಗದ್ದೆಯ ಬೀರರ ಬನದ ಸಮೀಪದಲ್ಲಿ ಇದ್ದ ದೊಡ್ಡಕರ್ಕಿ ಮರದ ಬುಡದಲ್ಲಿ ರಾಶಿರಾಶಿಯಾಗಿ ಒಂದು ಬಗೆಯ ಒರಟು ಒರಟಾದ ಕಲ್ಲುಗಳು ರಾಶಿರಾಶಿಯಾಗಿ ಬಿದ್ದಿದ್ದವು. ಇವುಗಳು ಮೇಲ್ನೋಟಕ್ಕೆ ಇತರ ಕಲ್ಲುಗಳಂತಲ್ಲದೆ ಕಬ್ಬಿಣದಷ್ಟು ಭಾರವಾಗಿದ್ದು, ಅಂಟಂಟಾದ ಮೇಣದ ಅಚ್ಚು ತೆಗೆದಂತೆ ರಂಧ್ರಗಳಿಂದ ಕೂಡಿರುತ್ತಿದ್ದವು. ಇವುಗಳನ್ನು ಹಿರಿಯರು ಕಬ್ಬಿಣ ಕರಗಿಸಿದ ಕಲ್ಲುಗಳು ಎನ್ನುತ್ತಿದ್ದರು. ಇತ್ತೀಚೆಗೆ ಈ ಕಲ್ಲುಗಳು ರಸ್ತೆ ಅಗಲೀಕರಣ ಮತ್ತಿತರ ಅಭಿವೃದ್ಧಿಯ ಕೆಲಸಗಳಿಂದ ಕಣ್ಮರೆಯಾಗಿವೆ. ಆದರೆ ಈ ಕಲ್ಲುಗಳನ್ನು ಯಾವಾಗ ಯಾರು ತೆಗೆದು ಪರೀಕ್ಷೆಗೊಳಪಡಿಸಿದರು. ಅವುಗಳ ನಿಕ್ಷೇಪ ಎಲ್ಲಿದೆ ಇತ್ಯಾದಿ ವಿವರಗಳು ಯಾರಿಗೂ ತಿಳಿದಿಲ್ಲ. ಸುತ್ತಮುತ್ತಲೂ ಹಲವಾರು ಐತಿಹಾಸಿಕ ಹಿನ್ನೆಲೆಗಳನ್ನೊದಗಿಸುವ ಸ್ಥಳಗಳು ಕಂಡುಬರುತ್ತವೆ. ಅವುಗಳ ಬಗ್ಗೆ ಆಳವಾದ ಅಧ್ಯಯನ ನಡೆಯಬೇಕಾಗಿದೆ.

ಮನರಂಜನೆ, ಸಾಹಸ ಪ್ರವಾಸ ಮತ್ತು ಪ್ರಯಾಣಗಳು: ಶಿಕಾರ್ ಕ್ಯಾಂಪ್, ಗೇಮ್ ಪ್ಲಾನಿಂಗ್

ಎನ್.ಆರ್. ಲಲಿತಾಂಬ*

ಇತ್ತೀಚಿನ ದಿನಮಾನಗಳಲ್ಲಿ ಪ್ರವಾಸ ಪ್ರಯಾಣಗಳು ಬಹಳ ವಿಶೇಷವಾದಂತಹ ರೀತಿಯ ಆಕರ್ಷಣೆಯನ್ನು ಹೊಂದಿವೆ.ಈ ಪ್ರವಾಸ ಮತ್ತು ಪ್ರಯಾಣಗಳು ಹಾಗೂ ಅವುಗಳಿಂದ ಉಂಟಾಗುವ ಸಾಮಾಜಿಕ ಆರ್ಥಿಕ ಪರಿಣಾಮಗಳನ್ನು ಆಧರಿಸಿ, ಪ್ರವಾಸವು ಆಧುನಿಕ ಕಾಲದಲ್ಲಿ ಒಂದು ಉದ್ಯಮವಾಗಿ ಬೆಳೆದಿರುವುದನ್ನು ಗಮನಿಸಬಹುದು. ಇಂತಹ ಪ್ರವಾಸ ಪ್ರಯಾಣಗಳ ದಾಖಲೆಗಳು ಹಲವು ಬಗೆಯ ವಿಚಾರಗಳನ್ನು ತಮ್ಮ ಒಡಲಿನಲ್ಲಿ ಅಡಗಿಸಿಕೊಂಡಿರುತ್ತವೆ. ಈ ಹಿನ್ನೆಲೆಯಲ್ಲಿ ಒಂದು ಸಂಸ್ಕೃತಿಯ ಸಮಾಜೋ–ಆರ್ಥಿಕ ಚಟುವಟಿಕೆಯಾಗಿ ಈ ಪ್ರವಾಸಗಳು ಮತ್ತು ಪ್ರಯಾಣಗಳನ್ನು ಪರಿಗಣಿಸಬೇಕಾಗುತ್ತದೆ.

ಅನಾದಿ ಕಾಲದಿಂದಲೂ ಮನುಷ್ಯ ಒಂದು ತಾಣದಿಂದ ಮತ್ತೊಂದು ತಾಣದೆಡೆಗೆ ತನ್ನ ಜೀವನೋಪಾಯಗಳನ್ನು ಉತ್ತಮ ನೆಲೆಗಳನ್ನು ಹುಡುಕಿ ಸಂಚಾರ ಕೈಗೊಂಡಿರುವುದು ಸಾಮಾನ್ಯ. ಸಂಚಾರದ ಅಥವಾ ಪರ್ಯಟನೆಯ ಚರಿತ್ರೆಯು ಇಂದು ಟೂರ್ಸ್ ಅಂಡ್ ಟ್ರಾವೆಲ್ಸ್ ಟೂರಿಸಂ ಎಂಬ ಹೆಸರಿನೊಂದಿಗೆ ಮುನ್ನೆಲೆಗೆ ಬಂದಿದೆ. ಪ್ರಾಚೀನ ಕಾಲದಲ್ಲಿ ವಿಶೇಷವಾಗಿ ಪುಣ್ಯ ಸಂಪಾದನೆ, ವ್ಯಾಪಾರ–ವಹಿವಾಟು ಅಭಿವೃದ್ಧಿ, ಜ್ಞಾನ ಸಂಗ್ರಹ, ಸ್ಥಾನಮಾನ ಗೌರವಪಡೆವ ಹಂಬಲ, ತನ್ನ ವಿದ್ಯಾ ಪಾಂಡಿತ್ಯ, ಕಲಾ ಪ್ರದರ್ಶನದ ಬಯಕೆ, ಸಹಜ ಕುತೂಹಲ, ನಿರಂತರ ಶಾಂತಿ ಸಮಾಧಾನಗಳ ಹುಡುಕಾಟ, ಆಧ್ಯಾತ್ಮಿಕ ಸೆಳೆತ ಪ್ರಕೃತಿಯೊಂದಿಗಿನ ಆಧ್ಯಾತ್ಮಿಕ ಅನುಸಂಧಾನ ಇವೆಲ್ಲವೂ ಮನುಷ್ಯನನ್ನು ನಿರಂತರ ಸಂಚಾರಿಯಾಗಿ ಮಾಡಿವೆ. ಆಳರಸರ ಜೈತ್ರಯಾತ್ರೆಗಳು ಅಶ್ವಮೇಧಗಳು ಇವೆಲ್ಲವೂ ಸಂಪತ್ತಿನ ವೃದ್ಧಿ, ಅಧಿಕಾರ ವಿಸ್ತರಣೆಯ ಕಾರಣವನ್ನು ಹೊಂದಿದ್ದವು. ಭಾರತೀಯ ಸಂಸ್ಕೃತಿಯಲ್ಲಿ ವನವಾಸ, ದೇಶಪರ್ಯಟನೆಗಳು ವ್ಯಕ್ತಿಯು ಹಲವು ಅನುಭವಗಳನ್ನು ಪಡೆದುಕೊಳ್ಳುವ ಒಂದು ಅವಕಾಶದಂತೆ ಚಿತ್ರಣಗೊಂಡಿದೆ. ಮಾರ್ಗಕಾವ್ಯ, ದೇಸೀ ಕಾವ್ಯಗಳಿರಲಿ, ಜಾನಪದ ಕಥೆಗಳಿರಲಿ ದೇಶ ಪರ್ಯಟನೆ, ದೇಶಾಂತರ ಹೋಗುವುದು ಯಾತ್ರೆ ಕೈಗೊಳ್ಳುವುದು, ಕಾಡಿಗೆ ತಪಸ್ಸಿಗೆ ಹೋಗುವುದು, ವಿದ್ಯಾರ್ಜನೆಗೆ ಗುರುವನ್ನು ಅರಸುತ್ತಾ ಹೋಗುವುದು, ಅನ್ನದ ದಾರಿಯನ್ನು ಹುಡುಕಿ ಹೊರಡುವುದು, ವ್ಯಾಪಾರಕ್ಕಾಗಿ ವರ್ತಕರು ಸಾರ್ಥವಾಹಕರಾಗಿ ಸಂಚಾರವನ್ನು ಕೈಗೊಳ್ಳುವುದನ್ನು ಕುರಿತ ಕಥನಗಳೇ ತುಂಬಿದೆ.

ಮನರಂಜನೆ, ರಜೆ, ಆರೋಗ್ಯ, ಅಧ್ಯಯನ, ಧರ್ಮ, ಕ್ರೀಡೆ ವ್ಯಾಪಾರ ವಹಿವಾಟು ಇತ್ಯಾದಿ ಉದ್ದೇಶಗಳಿಗಾಗಿ, ತನ್ನ ವೃತ್ತಿಯ ವೈಯಕ್ತಿಕ ಕಾರ್ಯಗಳನ್ನು ನೆರವೇರಿಸಲು ಕರ್ತವ್ಯದ ಮೇಲೆ ಮತ್ತೊಂದು ಪ್ರದೇಶಕ್ಕೆ ಪ್ರಯಾಣ ಬೆಳೆಸುವುದು ಇತ್ತೀಚಿನ ದಿನಗಳಲ್ಲಿ ವಿಶೇಷವಾಗಿದೆ. ಕೌಟುಂಬಿಕ ಕಾರಣಕ್ಕಾಗಿ ಸಾಮಾಜಿಕ ಕಾರಣಕ್ಕಾಗಿ ಧಾರ್ಮಿಕ ಕಾರಣಕ್ಕಾಗಿ ವೃತ್ತಿ ಸಂಬಂಧಿತವಾಗಿದೆ ಸಮಾರಂಭಗಳಿಗಾಗಿ ಬೇರೆ ಸ್ಥಳಗಳನ್ನು ಸಂದರ್ಶಿಸುವುದು ಇತ್ಯಾದಿಗಳು. ಪ್ರವಾಸ ಪ್ರಯಾಣಗಳಿಗೆ ಕಾರಣವಾಗುತ್ತವೆ ಪ್ರಯಾಣ ಮಾಡುವವರೆಲ್ಲರನ್ನೂ 'ಪ್ರವಾಸಿಗರು' ಎಂದು ಕರೆಯಲಾಗುವುದಿಲ್ಲ.

ಪ್ರಸ್ತುತ ಲೇಖನದಲ್ಲಿ ಮೈಸೂರು ಅರಮನೆಯ ಆಯ್ದ ಕೆಲವು ದಾಖಲೆಗಳಲ್ಲಿ ಕಂಡುಬರುವ ಸಾಹಸೀ ಮತ್ತು ಮನರಂಜನಾ ಸಂಬಂಧಿತ 'ಗೇಮ್ ಪ್ಲಾನಿಂಗ್' ಶಿಕಾರ್ ಕ್ಯಾಂಪ್‌ಗಳಿಗೆ ಸಂಬಂಧಿಸಿದ ಆಯ್ದ ದಾಖಲೆಗಳನ್ನು ಗಮನಿಸಲಾಗಿದೆ. ಇವುಗಳ ಅಧ್ಯಯನದಿಂದ ನಮೂದಾಗಿರುವ ಪ್ರವಾಸದ ಮಾರ್ಗಗಳು, ಪ್ರದೇಶಗಳು ಅವುಗಳ ಪ್ರಾಕೃತಿಕ ಮತ್ತು ಭೌಗೋಳಿಕ ಪರಿಸರ ಐತಿಹಾಸಿಕ ಪರಂಪರೆಯ ಅರಿವು ಉಂಟಾಗುತ್ತದೆ. ಮೈಸೂರು ಅರಸರು, ಹಾಗೂ ವಸಾಹತುಶಾಹಿ ಆಡಳಿತದ ಸಂದರ್ಭಗಳಲ್ಲಿ ಇದ್ದ ನೀತಿ ನಿಯಮ ನಿರ್ಬಂಧನೆಗಳು, ಯೋಜನೆಗಳು ಸವಲತ್ತುಗಳನ್ನು ಸಹ ಈ ಅಧ್ಯಯನದಿಂದ ತಿಳಿಯ ಬಹುದಾಗಿದೆ. ಸಾರಿಗೆ–ಸಂಪರ್ಕ, ಪ್ರವಾಸಿ ತಂಗುದಾಣಗಳು, ಸಾರಿಗೆ ವೆಚ್ಚ, ಸಹಾಯಕರು ಮತ್ತು ಸೇವಕವರ್ಗಗಳ ಭತ್ಯೆ, ಯಾತ್ರಿಗಳ ಪ್ರಾಯೋಜನೆ, ರಹದಾರಿ ಪತ್ರಗಳ ವಿತರಣೆ ನವೀಕರಣ ರದ್ದತಿ ಇತ್ಯಾದಿ ಮಾಹಿತಿಗಳು ಅಧ್ಯಯನದಲ್ಲಿ ತಿಳಿದು ಬರುತ್ತದೆ.

* ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಿಜಯನಗರ, ಬೆಂಗಳೂರು.

ಒಂದು ಪ್ರಯಾಣವೆಂದರೆ ಏಕವ್ಯಕ್ತಿ ಪ್ರಯಾಣ–ಪ್ರವಾಸದಂತೆಯೇ ಸಾಂಸ್ಥಿಕ ಪ್ರವಾಸಗಳು, ಒಂದು ದಿನದಿಂದ ಹಿಡಿದು ಹಲವು ತಿಂಗಳುಗಳ ವರೆಗಿನ ಪ್ರವಾಸಗಳು ನಡೆಯುತ್ತಿದ್ದು ಅಂತಹ ಪ್ರಯಾಣಗಳ ಮಾಹಿತಿಗಳು ದಾಖಲೆಗಳಲ್ಲಿ ದೊರಕುತ್ತವೆ. ಸಾಮೂಹಿಕ ಪ್ರಯಾಣಗಳು ಕ್ರೀಡಾ ಸಂಬಂಧಿತ, 'ಶಿಕಾರಿ ಟೂರ್'ಗಳು ಅನೇಕ ಜನರನ್ನು ಒಳಗೊಂಡಿರುತ್ತವೆ. ಅನೇಕ ಸಂಸ್ಥೆಗಳು ಇದರಲ್ಲಿ ಕರ್ತವ್ಯ ನಿರ್ವಹಿಸಬೇಕಾಗುತ್ತದೆ. ಊಟೋಪಚಾರ ಕಾಳುಕಡ್ಡಿ ಸಾಗಣೆ, ಕ್ಷೇತ್ರಗಳಲ್ಲಿ ನೀರಿನ ವ್ಯವಸ್ಥೆ, ಆಹಾರ ವ್ಯವಸ್ಥೆ ರಕ್ಷಣೆ ಒದಗಿಸುವುದು ಯಾವುದೇ ತೊಂದರೆಗಳಿಲ್ಲದೆ ಸರಾಗವಾಗಿ ನಡೆಯಬೇಕಾದರೆ ಈ ಎಲ್ಲ ಬಗೆಯ ವ್ಯವಸ್ಥೆಗಳು ಚೆನ್ನಾಗಿ ನಡೆಯಬೇಕಾಗುತ್ತದೆ. ಅದಕ್ಕಾಗಿ ಹಲವಾರು ಜನರನ್ನು ಇದು ಒಳಗೊಳ್ಳುತ್ತದೆ.ಇದರಿಂದಾಗಿ ಅನೇಕ ಬಗೆಯ ಉದ್ಯೋಗ ಅವಕಾಶಗಳನ್ನು ಸಹ ಈ ಶಿಕಾರ್ ಕ್ಯಾಂಪ್ಗಳು ಒದಗಿಸುತ್ತಿದ್ದವು. ಸೇವಕ ವರ್ಗಕ್ಕೆ ಕೂಲಿ ದೊರಕುತ್ತಿತ್ತು, ಬೇಟೆಗಾರರಿಗೆ, ಅಧಿಕಾರೀ ವರ್ಗದವರಿಗೆ ಪ್ರಯಾಣವೆಚ್ಚಗಳು, ದಿನಭತ್ಯೆಗಳು ದೊರಕುತ್ತಿದ್ದವು.

ಮನರಂಜನಾ ಪ್ರವಾಸಗಳು ವಿಶ್ರಾಂತಿ–ವಿರಾಮ– ಮನರಂಜನೆಗಾಗಿ ಮಾಡುವ ಪ್ರಯಾಣಗಳೇ ಆಗಿರುತ್ತವೆ. ಈ ಪ್ರವಾಸಗಳು ಮಾನಸಿಕ ತೃಪ್ತಿಗಾಗಿ ಆನಂದ ಸಂತೋಷಗಳಿಗಾಗಿ ದಿನನಿತ್ಯದ ಏಕತಾನತೆಯನ್ನು ಮುರಿಯಲು ಹೊಸ ತಾಜಾ ಅನುಭವಗಳಿಗೆ ತೆರೆದುಕೊಳ್ಳುವುದಕ್ಕಾಗಿ ದೇಶದಲ್ಲಿ ಪ್ರವಾಸಗಳನ್ನು ಕೈಗೊಳ್ಳಲಾಗುತ್ತದೆ. ದಿನನಿತ್ಯದ ಒತ್ತಡ ಏಕತಾನತೆಯನ್ನು ನೀಗಲು ನವೋಲ್ಲಾಸವನ್ನು ಪಡೆಯಲು ಜನಸಾಮಾನ್ಯರು ಇಂತಹ ಪ್ರವಾಸಗಳನ್ನು ಕೈಗೊಳ್ಳುತ್ತಾರೆ. ಆಧುನಿಕಪೂರ್ವ ದಾಖಲೆಗಳಲ್ಲಿ ಕರ್ನಾಟಕದಲ್ಲಿ ಕೇವಲ ಶುದ್ಧ ಮನರಂಜನೆಗಾಗಿಯೇ ನಡೆದಿರುವ ಪ್ರವಾಸ ಪ್ರಯಾಣಗಳನ್ನು ಕುರಿತ ದಾಖಲೆಗಳು ವಿರಳ. ಬಹುಶಃ ಇಂತಹ ಶುದ್ಧ ಮನರಂಜನಾತ್ಮಕವಾದ ಸಾಹಸವನ್ನು ಒಳಗೊಂಡ ಪ್ರವಾಸಗಳು ನಮಗೆ ವಸಾಹತುಶಾಹಿ ಆಡಳಿತದ ಸಂದರ್ಭದಲ್ಲಿ ಮುನ್ನೆಲೆಗೆ ಬಂದಂತೆ ಕಂಡುಬರುತ್ತದೆ. ಆದರೆ ಪ್ರಾಚೀನ ಮತ್ತು ಮಧ್ಯಕಾಲೀನ ಕರ್ನಾಟಕದ ಅನೇಕ ದೊರೆಗಳು ಮನರಂಜನೆಗಾಗಿ ಬೇಟೆಯನ್ನು ಕೈಗೊಳ್ಳುತ್ತಿದ್ದರು. ಭೇಟಿಯು ಮನರಂಜನೆಯ ಜೊತೆಜೊತೆಗೆ ಕಾಡುಪ್ರಾಣಿಗಳಿಂದ ತಮ್ಮ ಪ್ರಜೆಗಳಿಗೆ ಉಂಟಾಗುವ ಹಾನಿಯಿಂದ ಪ್ರಜೆಗಳನ್ನು ರಕ್ಷಿಸುವ ಸಲುವಾಗಿ ಎಂಬ ಒಂದು ಉದ್ದೇಶವನ್ನು ಸಹ ಹೊಂದಿರುತ್ತಿದ್ದವು. ಶ್ರೀಮಂತರು ಮಧ್ಯಮ ವರ್ಗದವರು ಮೋಜಿಗಾಗಿ ಬಿಡುವಿನ ದಿನಗಳಲ್ಲಿ ವನ್ಯಧಾಮಗಳು ಪಕ್ಷಿಧಾಮಗಳು ಐತಿಹಾಸಿಕ ಸ್ಥಳಗಳಿಗೆ ಭೇಟಿ ನೀಡುವುದು ಆಧುನಿಕ ಕಾಲದಲ್ಲಿ ಸರ್ವೇಸಾಮಾನ್ಯ ಆದರೆ ಹಿಂದೆ ಶಾಸನಗಳಲ್ಲಿ ಕಡತಗಳಲಿ ಈ ಬಗೆಯ ಮೋಜು–ಮಸ್ತಿಗಾಗಿಯೇ ಪ್ರವಾಸ ಕೈಗೊಂಡವರ ವಿವರಗಳು ದೊರಕುವುದಿಲ್ಲ. ಸಾರಿಗೆ ಸಂಪರ್ಕದ ಸ್ಫೋಟವಾಗಿರುವ ಈ ಕಾಲದಲ್ಲಿ ಪ್ರವಾಸಗಳು ಇಂದು ಹೆಚ್ಚಾಗಿವೆ. ಹಿಂದಿನ ಕಾಲದಲ್ಲಿ ಮುಖ್ಯ ಉದ್ದೇಶವಿಲ್ಲದೆ ಕೇವಲ ಮನರಂಜನೆಯ ಪ್ರವಾಸವನ್ನು ಆಳರಸರನ್ನು ಹೊರತುಪಡಿಸಿ ಅನ್ಯರು ಕೈಗೊಳ್ಳುತ್ತಿರಲಿಲ್ಲ ವೆಂದು ಹೇಳಬೇಕು. ಧಾರ್ಮಿಕ, ಆಧ್ಯಾತ್ಮಿಕ, ವ್ಯಾಪಾರ ಉದ್ಯೋಗ, ವಿದ್ಯೆ ಇತ್ಯಾದಿ ಪುಣ್ಯಾರ್ಜನೆ, ದ್ರವ್ಯಾರ್ಜನೆಗಳು, ಜ್ಞಾನಾರ್ಜನೆಯ ಮೂರು ಪ್ರಮುಖ ಪ್ರೇರಣೆಗಳನ್ನು ಪ್ರವಾಸಗಳಿಗೆ ಮೂಲವೆಂಬುದು ಕಂಡುಬರುತ್ತದೆ.

ಪ್ರಸ್ತುತ ಗೇಮ್ ಪ್ಲಾನಿಂಗ್ ಸಾಹಸ ಪ್ರವಾಸ ಪ್ರಯಾಣಗಳು ಕೇವಲ ಮನರಂಜನಾ ಚಟುವಟಿಕೆಗಳಷ್ಟೇ ಅಲ್ಲ ಅವು ಹೇಗೆ ಆರ್ಥಿಕ ಚಟುವಟಿಕೆಗಳೂ ಆಗಿದ್ದವು ಎಂಬುದನ್ನು ಅವುಗಳ ಖರ್ಚು–ವೆಚ್ಚದ ದಾಖಲೆಗಳಿಂದ ಮನಗಾಣಬಹುದು. ಸಂಬಂಧಿಸಿದ ಪ್ರವಾಸಗಳ ಕೂಲಿ, ಸಾರಿಗೆ ವೆಚ್ಚ, ರಕ್ಷಣಾ ವ್ಯವಸ್ಥೆಯ ಖರ್ಚು, ಬೇಟೆಗಾರರಿಗೆ ಸಮವಸ್ತ್ರಗಳು[೧] ಬೆಚ್ಚಗಿನ ಬಟ್ಟೆಗಳು, ಸಾಹಸ ತೋರಿದವರಿಗೆ ಮೆಚ್ಚು ಕೊಡುಗೆಗಳು, ಬಹುಮಾನಗಳು[೨] ಟೆಂಟ್‌ಗಳು ಹಾಗೂ ಸೆಡ್‌ಗಳ ನಿರ್ಮಾಣ[೩]. ರಸ್ತೆ ನಿರ್ಮಾಣ, ಮಂಚಿಕೆಗಳು ಖೆಡ್ಡ ಗುಳಿಗಳ ನಿರ್ಮಾಣ, ಅಗತ್ಯ ಶಿಖಾರಿ ಸಮಾನುಗಳ ಖರೀದಿ[೪] ಬೇಟೆಗಾಗಿ ತರಿಸಿದ ದೀವದ ಪ್ರಾಣಿಗಳ ಖರ್ಚುವೆಚ್ಚ[೫] ಊಟೋಪಚಾರದ ಖರ್ಚು ವೆಚ್ಚ, ಹೋಟೆಲುಗಳು, ತಂಗುದಾಣಗಳ ವೆಚ್ಚ ಮುಂತಾದ ಅನೇಕ ಆರ್ಥಿಕ ವಿಚಾರಗಳೂ ಸಹ ಮುಖ್ಯವಾಗಿ ದಾಖಲೆಗಳಲ್ಲಿ ದೊರಕುತ್ತವೆ.[೬]

ಮನರಂಜನೆ ಮತ್ತು ಸಾಹಸ ಪ್ರವಾಸೀ ತಾಣಗಳು ನಿಸರ್ಗ ನಿರ್ಮಿತ ಹಾಗೂ ಮಾನವ ನಿರ್ಮಿತವಾದವುಗಳಾಗಿದ್ದು, ಇವು ಮನರಂಜನೆ ಬಯಸುವವರನ್ನು ಮತ್ತು ಸಾಹಸಿಗ ಪ್ರಯಾಣಿಕರನ್ನು ಸೆಳೆಯುವ ಎರಡು ವಿಧದ ಆಕರ್ಷಣೆಗಳಾಗಿವೆ. 'ನಿಸರ್ಗವು ಪ್ರವಾಸೋದ್ಯಮವನ್ನು ಉತ್ಪಾದಿಸುವ ಪ್ರಮುಖ ಕಾರ್ಖಾನೆ' ಇದ್ದಂತೆ ಎಂದು ಹೇಳಲಾಗುತ್ತದೆ. ನಿಸರ್ಗದ ಸಹಜ ಸೃಷ್ಟಿಯ ತಾಣಗಳಾದ ಕಾಡು, ಕಡಲು, ನದಿಗಳು. ಸಂಗಮಗಳು. ಗಿರಿಗಳು. ಹಿಮಚ್ಛಾದಿತ ಪರ್ವತಗಳು, ಸಹಜವಾಗಿ ಮಾನವನ ಸಾಹಸ ಪ್ರವೃತ್ತಿಯನ್ನು ಉದ್ದೀಪಿಸುತ್ತವೆ. ಇವುಗಳನ್ನು ಗಿರಿಧಾಮಗಳಾಗಿ, ಅರಣ್ಯಧಾಮಗಳು, ನ್ಯಾಷನಲ್ ಪಾರ್ಕ್‌ಗಳಾಗಿ, ಬಟಾನಿಕಲ್ ಗಾರ್ಡನ್‌ಗಳಾಗಿ, ನದಿತೀರದ ಸರೋವರಗಳು ದೋಣಿ ವಿಹಾರ ತಾಣಗಳಾದ ಅಪೂರ್ವ ಪ್ರಾಕೃತಿಕ ದೃಶ್ಯಾವಳಿಗಳ ತಾಣಗಳಾಗಿ ಇಂದು ಅಭಿವೃದ್ಧಿಪಡಿಸಲಾಗಿದೆ.

ಮೈಸೂರು ಸಂಸ್ಥಾನದಲ್ಲಿ ವಸಾಹತುಶಾಹಿ ಆಡಳಿತದ ಸಂದರ್ಭದಲ್ಲಿ ಅತ್ಯಂತ ಇಷ್ಟವಾದ ಕ್ರೀಡೆಯಾಗಿ ಬೆಳೆದದ್ದು 'ಗೇಮ್ ಪ್ಲಾನಿಂಗ್' ಎಂಬುದು ಇಲ್ಲಿನ ದಾಖಲೆಗಳಿಂದ ತಿಳಿದುಬರುತ್ತದೆ. ಮೈಸೂರು ಅರಮನೆಯ ಅನೇಕ ದಾಖಲೆಗಳು

ಇಂತಹ ಪ್ರಯಾಣ ಪ್ರವಾಸಗಳಿಗೆ ಸಂಬಂಧಿಸಿದಂತೆ ಗೇಮ್ಸ್‌ಗಳ ಮಾಹಿತಿಯನ್ನು ನೀಡುತ್ತವೆ. ಹುಲಿ ಬೇಟೆ ಚಿರತೆಯ ಬೇಟೆ ಆನೆಯ ಬೇಟೆಯ ಸಂದರ್ಭದಲ್ಲಿ ಕೈಗೊಂಡಿರುವ ಪ್ರಯಾಣಗಳನ್ನು ತಿಳಿಸುವ ಅದರಲ್ಲಿ ಭಾಗವಹಿಸಿದವರುಗಳ ವಿವರಗಳಲ್ಲಿ ಎಷ್ಟು ಜನ, ಎಷ್ಟು ದಿನ ಆಡಿದ ಬೇಟೆಯ ವಿವರಗಳೇನು, ಆದ ಖರ್ಚುವೆಚ್ಚಗಳು ಎಷ್ಟು, ಪ್ರಯಾಣಕ್ಕೆ ಬಳಸಿದ ಸಾರಿಗೆ ವಿವರ ವೆಚ್ಚ ಇತ್ಯಾದಿಗಳೂ ಸಹ ಈ ದಾಖಲೆಗಳಿಂದ ನಮಗೆ ದೊರಕುತ್ತವೆ. ಇಂತಹ ಗೇಮ್ ಟೂರ್‌ಗಳಲ್ಲಿ ವಿದೇಶಿ ಅಧಿಕಾರಿಗಳು, ಅವರ ಕುಟುಂಬದವರು, ರಾಜಕುಮಾರರುಗಳು, ಸ್ಥಳೀಯ ಬೇಟೆಗಾರರು ಅವರ ನಾಯಕರುಗಳು ಇವರೆಲ್ಲರೂ ಭಾಗವಹಿಸುತ್ತಿದ್ದರು ಎಂಬುದು ಕಂಡುಬಂದಿದೆ. 'ಗೇಮ್ ಟೂರ್' ಗಳು ನಿಗಧಿತವಾಗಿ ನಡೆಯುತ್ತಿದ್ದು, ಅದರಲ್ಲಿ ಪಾಲ್ಗೊಳ್ಳುವ ಸಲುವಾಗಿ ಮೊದಲೇ ಮಾಹಿತಿ ನೀಡಿದ್ದು ಪ್ರವಾಸಿತಾಣಗಳನ್ನು ತಂಗುದಾಣ ವ್ಯವಸ್ಥೆಗಳನ್ನು ಮಾಡಿಕೊಳ್ಳುವ ವಿಚಾರಗಳ ಕುರಿತಾದ ದಾಖಲೆಗಳು ದೊರಕಿವೆ. ಗ್ರಾಮಾಂತರ ಪ್ರದೇಶದವರು ಹುಲಿ ಚಿರತೆ ಆನೆಗಳ ದಾಂಧಲೆಯ ದೂರು ಕೊಟ್ಟ ಸಂದರ್ಭದಲ್ಲೂ ಸಹ ಇಲಾಖೆಯವರು ಆ ಸ್ಥಳಗಳಿಗೆ ಅಗತ್ಯವಸ್ತುಗಳು, ಜನರೊಂದಿಗೆ ಪ್ರಯಾಣ ಬೆಳೆಸಿ ಬೇಟೆಯ ಕಾರ್ಯವನ್ನು ಕೈಗೊಂಡಿರುವಂತಹ ಮಾಹಿತಿ ಮತ್ತು ಆದ ಖರ್ಚು ವೆಚ್ಚದ ವಿವರಗಳು ಈ ದಾಖಲೆಗಳಲ್ಲಿ ದೊರಕಿವೆ. ಇಂತಹ ಕೆಲವು ದಾಖಲೆಗಳಲ್ಲಿ ವಿಶಿಷ್ಟವಾದ ಮಾಹಿತಿಗಳು ಸಹ ನಮಗೆ ದೊರಕುತ್ತವೆ ವಿದೇಶಿಯರು ಬಂದು ತಂಗಿದ್ದ ಅಂತಹ ಹೋಟೆಲುಗಳು ಅಲ್ಲಿ ಆದ ಖರ್ಚು ವೆಚ್ಚಗಳ ವಿವರಗಳಲ್ಲದೆ ಬೇಟೆಗೆ ಅವಶ್ಯಕವಾಗಿದ್ದ ಬಂದೂಕುಗಳನ್ನು ತರಿಸಿಕೊಂಡಿರುವ ವಿವರಗಳು ಹಾಗೂ ಮೀನು ಬೇಟೆಗಾಗಿ ಅಗತ್ಯವಾಗಿದ್ದ ವಸ್ತುಗಳನ್ನು ತರಿಸಿಕೊಂಡಿರುವ ಮಾಹಿತಿಗಳು ದೊರಕುತ್ತವೆ

ಮೈಸೂರಿಗೆ ಅತಿಥಿಗಳಾಗಿ ವೈಸರಾಯಗಳು ಪ್ರೆಸಿಡೆನ್ಸಿಯ ಗೌರ್ನರ್‌ಗಳು ಕಮಾಂಡರ್ ಇನ್ ಚೀಫ್‌ಗಳು ರೆಸಿಡೆಂಟರು ಭಾರತದ ಇತರ ರಾಜ್ಯಗಳ ಮಹಾರಾಜರುಗಳು ಮತ್ತು ಇತರ ಅತಿಥಿಗಳು ಆಗಮಿಸಿದ ಸಂದರ್ಭದಲ್ಲಿ ಶಿಖಾರ್ ಕ್ಯಾಂಪುಗಳನ್ನು, ಖೆಡ್ಡಾಗಳನ್ನು ಏರ್ಪಡಿಸಲಾಗುತ್ತಿತ್ತು ಎಂಬುದು ಅರಮನೆಯ ಕೆಲವು ದಾಖಲೆಗಳಿಂದ ತಿಳಿದುಬರುತ್ತದೆ. ಲಾರ್ಡ್ ಚೆಲ್ಮ್ಸ್ ಫೋರ್ಡ್‌ರವರು, ವಿಶೇಷ ಅತಿಥಿಯಾಗಿ ಖೆಡ್ಡಾ ನೋಡಲು ಆಗಮಿಸಿದ್ದಾರೆ. ವೇಲ್ಸ್ ರಾಜ್ಯದ ರಾಜಕುಮಾರ ಖೆಡ್ಡಾ ನೋಡಲು, ಶಿಖಾರಿ ಕ್ಯಾಂಪಿನಲ್ಲಿ ಭಾಗವಹಿಸಲು ಮೈಸೂರಿಗೆ ಪ್ರವಾಸ ಕೈಗೊಂಡಿದ್ದಾರೆ. ವೈಸ್‌ರಾಯ್ ಆಫ್ ಇಂಡಿಯಾ ಲಾರ್ಡ ಪೀಲ್ ಮತ್ತು ಲಾರ್ಡ್ ಗೇಜ್, ಬರೋಡಾದ ರಾಜಕುಮಾರ್ ಪ್ರತಾಪ್ ಸಿಂಗ್, ಬಿಕನೂರಿನ ಮಹಾರಾಜಕುಮಾರ ಮತ್ತು ಜೋದಪುರದ ಮಹಾರಾಜ, ಲಾರ್ಡ್ ರೀಡಿಂಗ್ ಮಹಾಶಯ ಖೆಡ್ಡಾ ವಿಶೇಷ ಕಾರ್ಯಕ್ರಮವನ್ನು ವೀಕ್ಷಿಸಲು ಮೈಸೂರಿಗೆ ಗೇಮ್ ಟೂರ್ ಕೈಗೊಂಡಿದ್ದ ವಿವರಗಳು ದೊರಕುತ್ತವೆ. ಕ್ಯಾಪ್ಟನ್ ಮತ್ತು ಶ್ರೀಮತಿ ಟೆನಿಸನ್ರವರು ಕಾಕನಕೋಟೆಯ ಬೇಟೆಯ ಸಾಹಸ ಪ್ರವಾಸವನ್ನು, ಕಬಿನಿ ನದಿಯ ಮೀನುಬೇಟೆಯನ್ನು ವೀಕ್ಷಿಸಲು ಮೈಸೂರಿಗೆ ಪ್ರವಾಸಕೈಗೊಂಡಿದ್ದರು ಇತ್ಯಾದಿ ಅನೇಕ ಸಾಹಸೀ ಪ್ರವಾಸಿಗ ಅತಿಥಿಗಳ ಮನರಂಜನಾ ಕೂಟಗಳು, ಶಿಕಾರ್ ಕ್ಯಾಂಪ್‌ಗಳು, ಇವೆಲ್ಲವುಗಳಿಗೂ ಅಗತ್ಯವಾದ ಏರ್ಪಾಟುಗಳನ್ನು ಮಾಡಲಾಗುತ್ತಿತೆಂಬ ವಿಚಾರ, ಅವುಗಳಿಗಾಗಿ ತಗುಲಿದ ಖರ್ಚುವೆಚ್ಚಗಳ ಮಾಹಿತಿ ದಾಖಲೆಗಳಲ್ಲಿ ದೊರೆಯುತ್ತದೆ.[2] ಕ್ರಿ.ಶ. ೧೯೨೦–೨೬ರ ವರೆಗಿನ ಅವಧಿಯಲ್ಲಿ ೧೮ ಶಿಖಾರಿ ಕ್ಯಾಂಪುಗಳನ್ನು ರಾಜ್ಯಕ್ಕೆ ಗಣ್ಯವ್ಯಕ್ತಿಗಳು ಬಂದ ಸಂದರ್ಭದಲ್ಲಿ ಆಯೋಜಿಸ ಲಾಗಿತ್ತೆಂದು, ೨೦ ಹುಲಿಗಳ ಬೇಟೆಯಾಡಲಾಗಿತ್ತೆಂದು, ಆ ಪ್ರವಾಸ ಪ್ರಯಾಣಗಳಿಗೆ ಅಗತ್ಯವಾದ ಸಿದ್ಧತೆಗಳನ್ನು ಮಾಡಿದ್ದರೆಂಬ ವಿಚಾರಗಳು ತಿಳಿದುಬರುತ್ತವೆ. ಮೇಜರ್ ಗ್ರೇಟನ್ ಕರಪುರ ಶಿಕಾರ್ ಕ್ಯಾಂಪಿಗೆ ಬಂದಾಗ ಅಲ್ಲೇ ಬಂಗಲೆಯಲ್ಲಿ ತಂಗಿದ್ದು, ಆ ಕ್ಯಾಂಪಿನಲ್ಲಿ ಆತ ಅನೇಕ ಶಿಖಾರಿಯನ್ನು ಮಾಡಿದನೆಂದು, ಅವರಿಗೆ ಇಬ್ಬರು ಕೊತ್ವಾಲರನ್ನೂ, ಅನೇಕ ಬೇಟೆಗೆ ಸಹಾಯಕರರಾದ ಟ್ರಾಕರ್‌ಗಳನ್ನೂ, ಬೇಟೆಯ ಸಿಬ್ಬಂದಿಗಳನ್ನೂ ನೇಮಿಸಿದ್ದು, ಅದೆಲ್ಲದರ ಖರ್ಚುವೆಚ್ಚದ ವಿವರನೀಡಲಾಗಿದೆ. ನೀಲಕಂಠರಾವ್ ಅವರು ಫಾರೆಸ್ಟ್ ರೇಂಜರ್ ಆಗಿದ್ದ ಕಾಲದಲ್ಲಿ ಅತಿಥಿಗಳ ಪ್ರವಾಸಕ್ಕೆ ಸುಗಮವಾದ ಮೋಟಾರು ಗಾಡಿಗಳ ಪ್ರಯಾಣಕ್ಕೆ ಹೊಂದುವಂತಹ ರಸ್ತೆಗಳನ್ನು ಬಲ್ಲೆ ಕೈಮರ ಮತ್ತು ಸುಂಕದಕಟ್ಟೆ ಕೈಮರ ರಸ್ತೆಗಳನ್ನು ಕ್ರಿ.ಶ. ೧೯೧೯ ಮತ್ತು ಕ್ರಿ.ಶ. ೧೯೨೧ರಲ್ಲಿ ಸಜ್ಜುಗೊಳಿಸಿದ್ದರೆಂಬುದು ತಿಳಿದುಬರುತ್ತದೆ.

ಸಾಹಸ ಪ್ರವಾಸಿಗರ ಪ್ರಯಾಣವನ್ನು ಸುಗಮಗೊಳಿಸಲು. ಮಹಾರಾಜರು ಎರಡು ಮೋಟಾರು ರಸ್ತೆಗಳನ್ನು ಮಾಡಿಸಲು ಅಪೇಕ್ಷಿಸಿದ್ದು, ಒಂದು ಬಂಡಿಪುರದಿಂದ ಕೆಕ್ಕನಹಳ್ಳದಿಂದ ಗೆಸ್ಟ ಹೌಸವರೆಗೆ, ಮತ್ತೊಂದು ಮಲ್ಲಪುರಕೆರೆಯನ್ನು ಹಾದು ಹೋಗಬೇಕು ಮತ್ತೊಂದು ಬಂಡಿಪುರ, ಹನಗೆರೆ, ಬೇಡಗುಲಿ ರಸೆಯ ಮಾರ್ಗ. ಈ ಕಾರ್ಯವನ್ನು ನೆರವೇರಿಸಲು ಜಿಲ್ಲಾ ಅರಣ್ಯ ಇಲಾಖೆಯ ಆಫೀಸರ್ ಆಗಿದ್ದ ವೆಂಕಟರಾವ್ ಅವರನ್ನು ನೇಮಿಸಾಗಿತ್ತೆಂದು ತಿಳಿದುಬರುತ್ತದೆ. ಅದೇ ರೀತಿ ಪ್ರಮುಖವಾದ ೩ ಶಿಕಾರ್ ಕ್ಯಾಂಪುಗಳು ನಡೆಯುವ ತಾಣಗಳಲ್ಲಿನ ಪ್ರವಾಸೀ ತಂಗುದಾಣಗಳ ದುರಸ್ತಿಯನ್ನು ಕಾಲಕಾಲಕ್ಕೆ ಮಾಡಿಸುತ್ತಿದ್ದು, ಎಲೆಕ್ಟ್ರಿಕ್ ಲೈಟುಗಳು, ಮ್ಯಾಜಿಕ್ ಕೋಲ್‌ಟೈಪ್ ಹೀಟರ್‌ಗಳು, ನೆಲಕ್ಕೆ ಹೊಳೆಯುವ ಟೈಲ್ಸ್‌ಗಳನ್ನು,

ಪೀಠೋಪಕರಣಗಳು ಮುಂತಾದ ಅಗತ್ಯ ಸೌಕರ್ಯಗಳೊಂದಿಗೆ ಸಜ್ಜುಗೊಳಿಸಲಾಗುತ್ತಿತೆಂದು ತಿಳಿದುಬರುತ್ತದೆ.[೮] ಅಲ್ಲದೆ ಕಾಡಿನ ಮಧ್ಯೆ ಕಾಶ್ಮೀರಿ ಟೆಂಟುಗಳನ್ನು, ಅವುಗಳಿಗೆ ಕಾರ್ಪೆಟ್‌ಗಳನ್ನು, ಗಸ್ತಿನ ಸಿಬ್ಬಂದಿಗಳನ್ನೂ ಒದಗಿಸಲಾಗುತ್ತಿತ್ತು.[೯] ೩೦ ಅಡಿ ಉದ್ದ ೧೫ ಅಡಿ ಅಗಲ ಅಳತೆಯುಳ್ಳ ಶೆಡ್ಗಳಿಗೆ ಕಲ್ಲಿನ ಕಂಟ್ರಿಸೈಡ್ ಟೈಲ್ಸ್‌ಗಳನ್ನು ಅಳಚವಡಿಸಿ ಎರಡು ಶೆಡ್‌ಗಳ ನಿರ್ಮಾನವನ್ನು ಮಾಡಿರುವ ವಿಚಾರವಿದೆ. ಇವುಗಳನ್ನು ಗದ್ದಿಗೆ ಶಿಖಾರಿಗಾಗಿ ಹಾಗೂ ಪ್ರೇಕ್ಷಕರಿಗಾಗಿ ಕ್ರಿ.ಶ. ೧೯೩೦-೩೧ರಲ್ಲಿ ನಿರ್ಮಿಸಲಾಗಿತ್ತೆಂದು, ಅದರ ಹಿಂದಿನ ವರ್ಷ ಕ್ರಿ.ಶ. ೧೯೨೯ರಲ್ಲಿ ಪ್ರೇಕ್ಷಕರಿಗಾಗಿಯೇ ಒಂದು ಪ್ರತ್ಯೇಕ ಶೆಡ್ಡೊಂದನ್ನು 'ಗೇಮ್ ಸ್ಪಾಟ್‌ನಲ್ಲಿ' ನಿರ್ಮಿಸಿದ್ದರೆಂಬುದು ತಿಳಿಯುತ್ತದೆ.

ಕಾಕನಕೋಟೆಯ ಕಾಡು, ಕರಪುರ ಕಾಡು, ಬಂಡೀಪುರ, ಹೆಗ್ಗಡದೇವನ ಕೋಟೆ, ಪ್ರದೇಶಗಳಲ್ಲಿ ಇಂತಹ ಕ್ಯಾಂಪುಗಳು ಪದೇಪದೇ ನಡೆದಿರುವುದಕ್ಕೆ ದಾಖಲೆಗಳಿವೆ ಕ್ರಿ.ಶ. ೧೯೪೦-೪೫ ವರ್ಷಗಳ ಅವಧಿಯಲ್ಲಿ ೬೯ ಹುಲಿಗಳು ೧೮ ಆನೆಗಳು, ೨೬ ಕಾಡುಕೋಣಗಳು, ೨೦ ಕರಡಿಗಳು, ೧೩ ಚಿರತೆಗಳು, ೧೪ ಚುಕ್ಕೆ ಜಿಂಕೆಗಳು, ನಾಲ್ಕು ಮೊಸಳೆಗಳು ಮತ್ತು ೧ ಹುಲ್ಲೆ ಇವುಗಳ ಬೇಟೆ ನಡೆದಿದೆ ಎಂಬುದನ್ನು ಗಮನಿಸಿದರೆ, ಈ ಶಿಕಾರಿ ಪ್ರವಾಸದ ಚಟುವಟಿಕೆಗಳು ಯಾವ ಬಗೆಯಲ್ಲಿ ಮೈಸೂರು ಸಂಸ್ಥಾನದಲ್ಲಿ ನಡೆಯುತ್ತಿತ್ತು ಎಂಬುದು ತಿಳಿಯುತ್ತದೆ. ಅರಮನೆಯಲ್ಲಿ ಶಿಕಾರಿ ಪ್ರವಾಸ ಇತ್ಯಾದಿಗಳನ್ನು ನೋಡಿಕೊಳ್ಳುವುದಕ್ಕಾಗಿಯೇ "ಗೇಮ್ಸ್ ಪ್ರಿಸರ್ವ್ ಆಫೀಸರ್" ಕಚೇರಿಯನ್ನು, ಅಧಿಕಾರಿಗಳನ್ನು ಹೊಂದಿತ್ತು ಎಂಬುದು ತಿಳಿದುಬರುತ್ತದೆ. ಕ್ರಿ.ಶ. ೧೯೦೧ರಲ್ಲಿ ವಿಕ್ಟೋರಿಯಾ ಮಹಾರಾಣಿಯು 'ಗೇಮ್‌ಪ್ರಿಸರ್ವಿಂಗ್' ಸಂಬಂಧಿಸಿದ ನಿಯಮ ನಡಾವಳಿಗಳನ್ನು ಆದೇಶಿಸಿದ್ದು, ಅದರಂತೆ ಮೈಸೂರು ಸಂಸ್ಥಾನವು ಅದನ್ನು ಜಾರಿಗೆ ತಂದಿತ್ತು ಎಂಬುದು ತಿಳಿದುಬರುತ್ತದೆ.

ಚಿತ್ರದುರ್ಗ ದೇವರಾಯನ ದುರ್ಗಗಳಲ್ಲಿ, ಹುಣಸೂರು, ಹೆಗ್ಗಡದೇವನ ಕೋಟೆಯ ಅರಣ್ಯ ಪ್ರದೇಶಗಳಲ್ಲಿ ಹುಲಿಬೇಟೆ ವಿಶೇಷವಾಗಿ ನಡೆಯುತ್ತಿತ್ತು. ೧೮೭೦ ರಲ್ಲಿ ಚಿತ್ರದುರ್ಗ ಮತ್ತು ಸುತ್ತಮುತ್ತಿನ ಪ್ರದೇಶದಲ್ಲಿ ಹಾಗೂ ಕ್ರಿ.ಶ. ೧೯೦೯ರಲ್ಲಿ ದೇವರಾಯನ ದುರ್ಗದ ಅರಣ್ಯ ಪ್ರದೇಶದಲ್ಲಿ ಹುಲಿ ಬೇಟೆಗಳು ಆಯೋಜಿತವಾಗಿದ್ದವು ಎಂಬುದು ತಿಳಿದುಬರುತ್ತದೆ.ಆದರೆ ಶಿವಮೊಗ್ಗ ಕಡೂರು ತರೀಕೆರೆ ಭಾಗಗಳಲ್ಲಿ ಹುಲಿಗಳ ಸಂತತಿ ಹೆಚ್ಚಾಗಿದ್ದು ನಾಗರೀಕರು ಅವುಗಳಿಂದ ತೊಂದರೆಗೆ ಒಳಗಾಗುತ್ತಿದ್ದುದು ಸರ್ವೇಸಾಮಾನ್ಯವಾಗಿತ್ತು. ಇಂತಹ ಪ್ರದೇಶಗಳಲ್ಲಿ ಕೆಲವು ನಿಗದಿತ ಸ್ಥಳಗಳಲ್ಲಿ ವಿಶೇಷ ಸಂದರ್ಭಗಳಲ್ಲಿ ಮಾತ್ರ ಹುಲಿ ಬೇಟೆಗೆ ಮೈಸೂರು ಸರ್ಕಾರವು ಮೈಸೂರು ಜಿಲ್ಲೆಯ ಕೆಲವು ಪ್ರದೇಶಗಳಲ್ಲಿ ಹಾಗೂ ತರೀಕೆರೆ ಸಕ್ಕರೆ ಬಯಲು ಪ್ರದೇಶಗಳಲ್ಲಿ ಶಿಕಾರಿಗೆ ಅವಕಾಶ ಮಾಡಿಕೊಟ್ಟಿರುವುದು ಕಂಡುಬಂದಿದೆ.

ಬಿಗ್ ಗೇಮ್ ಮತ್ತು ಸ್ಮಾಲ್ ಗೇಮ್ ಎಂದು ಕಾಡು ಪ್ರಾಣಿ ಪಕ್ಷಿಗಳನ್ನು ಸರ್ಕಾರದ ಅನುಮತಿ ಪರವಾನಗಿ ಅಥವಾ ವಿಶೇಷ ಆದೇಶಗಳು ಇಲ್ಲದೆ ಬೇಟೆಯಾಡುವಂತಿಲ್ಲ ಎಂಬ ಕಾನೂನನ್ನು ಕ್ರಿ.ಶ.೧೯೦೨ ಫೆಬ್ರವರಿ ೨ರಂದು ಜಾರಿಗೊಳಿಸಲಾಯಿತು.[೧೦] ಈ ಸಂಬಂಧಿತವಾಗಿ ವಿವರವಾದ ನಿಯಮ ನಡಾವಳಿ ಶಿಕ್ಷೆ ಇತ್ಯಾದಿ ವಿವರಗಳನ್ನು ಖಚಿತವಾಗಿ ನೀಡಲಾಯಿತು. ಶಿಕ್ಷಾರ್ಹ ಅಪರಾಧಗಳ ಮತ್ತು ಅವುಗಳ ಸಂಬಂಧಿತ ನಿಯಮಗಳನ್ನು ರಚಿಸಿ ಜಾರಿಗೊಳಿಸಲಾಯಿತು. ಈ ನಿಯಮವು ಕೇವಲ ಕಾಡು ಪ್ರಾಣಿ ಪಕ್ಷಿಗಳಿಗೆ ಸಂಬಂಧಿಸಿ ಮಾತ್ರವಲ್ಲದೆ ಮೀನುಗಾರಿಕೆಯನ್ನು ಸಹ ಒಳಗೊಂಡಿತ್ತು ಎಂಬುದು ವಿಶೇಷ. 'ಕ್ರಿ.ಶ. ೧೯೦೧ರ ಮೈಸೂರ್ ಗೇಮ್ ಅಂಡ್ ಫಿಷ್ ಪ್ರಿಸರ್ವೇಷನ್ ರೆಗ್ಯುಲೇಷನ್'ನನ್ನು ಜಾರಿಗೆ ತಂದು ಮಹಾರಾಜರು ಮೈಸೂರುತಾಲ್ಲೂಕಿನ ಬೊಮ್ಮೇನಹಳ್ಳಿಯಲ್ಲಿ ೧೨೦ ಎಕರೆ ಮತ್ತು ಇಲವಾಲ ರೆಸಿಡೆನ್ಸಿ ಕಾಂಪಂಡ್ ಮೈಸೂರು ತಾಲ್ಲೂಕು ೫೩೦ ಎಕರೆ ಪ್ರದೇಶ ವ್ಯಾಪ್ತಿಯಲ್ಲಿ ಯಾರೂ ಮೀನುಶಿಖಾರಿ ಮಾಡಲು ಅಥವಾ ಬಲೆಹಾಕಿ ಹಿಡಿಯಲು ಮಹಾರಾಜರ ಪರವಾನಗಿ ಪತ್ರ ಪಡೆಯಬೇಕೆಂಬ ನಿಯಮ ಮಾಡಲಾಗಿತ್ತೆಂದು ತಿಳಿದುಬರುತ್ತದೆ.[೧೧] ಕಾಲುವೆಗಳಲ್ಲಿ, ನದಿಗಳಲ್ಲಿ ಮೂರುಮುಕ್ಕಾಲು ಇಂಚು, ಎರಡು ಇಂಚುಗಳಿಗಿಂತಲೂ ಸಣ್ಣ ಜಾಲ ಉಳ್ಳ ಬಲೆಗಳನ್ನು ಬಳಸುವುದನ್ನು ನಿರ್ಬಂಧಿಸಲಾಗಿತ್ತು.

ಪರವಾನಗಿಯನ್ನು ನೀಡುವ ನಿರಾಕರಿಸುವ ಅಧಿಕಾರವನ್ನೂ ಜಿಲ್ಲಾಧಿಕಾರಿಗಳು ಜಿಲ್ಲಾ ಮ್ಯಾಜಿಸ್ಟ್ರೇಟರಿಗೆ ನೀಡಲಾಗಿತ್ತು. ಅರಣ್ಯಾಧಿಕಾರಿಗಳು ರೆವಿನ್ಯೂ ಮತ್ತು ಪೊಲೀಸರುಗಳು ಕಾನೂನು ಬಾಹಿರವಾಗಿ ಬೇಟೆ ಆಡುವವರನ್ನು ಬಂಧಿಸಲು ಅಧಿಕಾರವನ್ನು ಹೊಂದಿದ್ದರು. ಬೇಟೆಗೆ ಪರವಾನಗಿ ಪಡೆಯಲು ಬಯಸುವವರು ನಿಗಧಿತ ವಿವರಗಳನ್ನು ಭರ್ತಿ ಮಾಡಿ ಶುಲ್ಕವನ್ನು ಪಾವತಿಸಬೇಕಿತ್ತು, ಅಲ್ಲದೆ ಪರವಾನಗಿ ಪಡೆದವರಿಗೂ ಸಹ ಅವರ ಬೇಟೆಯ ಚಟುವಟಿಕೆಗಳಿಗೆ ನಿರ್ಬಂಧವಿದ್ದು, ವಾರ್ಷಿಕವಾಗಿ ಕೆಲವು ತಿಂಗಳುಗಳು ಪ್ರಾಣಿಗಳು ಮತ್ತು ಪ್ರದೇಶಗಳನ್ನು ನಿರ್ದಿಷ್ಟವಾಗಿ ನಿರ್ಧರಿಸಲಾಗುತ್ತಿತ್ತು.

ಸಾಹಸಿ ಪ್ರವಾಸಿಗರು ತಮಗೆ ಸಹಕರಿಸಿದ ಆಡಳಿತ ಸಿಬ್ಬಂಧಿಗಳಿಗೆ ಕೊಡುಗೆಗಳನ್ನು ನೀಡುತ್ತಿದ್ದರೆಂಬುದನ್ನೂ ಸಹ ಒಂದು ದಾಖಲೆ ತಿಳಿಸುತ್ತದೆ. ಕ್ರಿ.ಶ. ೧೯೩೦ ಜುಲೈ ೧೫ನೇ ತಾರೀಖಿನ ತುಂಬು ಚೆಟ್ಟಿ ಎಂಬುವವರು ಬರೆದಿರುವ ಪತ್ರ ದಾಖಲೆಯೊಂದು ಕುತೂಹಲಕರವಾದ ವಿಚಾರವನ್ನು ತಿಳಿಸಿದೆ. ಕ್ಯಾಪ್ಟನ್ ಮತ್ತು ಶ್ರೀಮತಿ ಟೆನ್ನಿಸನ್‌ರವರು ಕ್ರಿ.ಶ.

೧೯೩೦ರ ಮಾರ್ಚ್‌ನಲ್ಲಿ ಮೈಸೂರಿಗೆ ಭೇಟಿ ನೀಡಿದ್ದರು, ಇವರು ಮದ್ರಾಸ್ ಸರ್ಕಾರದ ಮಿಲಿಟರಿ ಸೆಕ್ರೆಟರಿಯಾಗಿದ್ದ ಸಂದರ್ಭದಲ್ಲಿ ಮೈಸೂರಿನ ಕಾಕನಕೋಟೆಯ ಗೇಮ್ ಪ್ರಿಸರ್ವಿನವರು ಆಯೋಜಿಸಿದ್ದ ಶಿಕಾರಿ ಕ್ಯಾಂಪಿನಲ್ಲಿ ಭಾಗವಹಿಸಲು ಅನುಮತಿ ಪಡೆದುಕೊಂಡಿದ್ದರು. ಅವರ ಈ ಪ್ರವಾಸದಲ್ಲಿ ತಮಗೆ ಕಾಡಿನ ವಿಶಿಷ್ಟ ಪ್ರಾಣಿ ಪಕ್ಷಿಗಳನ್ನು ನೋಡಲು ಎಲ್ಲ ರೀತಿಯಿಂದಲೂ ಸಹಕರಿಸಿದ ತಮ್ಮ ಪ್ರವಾಸವು ಹೆಚ್ಚು ಆನಂದದಾಯಕವಾಗುವಂತೆ ಮಾಡಿದ ಶ್ರೀಮಾನ್ ಡಿ.ಎಂ. ನೀಲಕಂಠರಾವ್ ರವರಿಗೆ ಮೆಚ್ಚು ಕೊಡುಗೆಯಾಗಿ ಲಂಡನ್ನಿನಿಂದ ಎರಡು ಬೈನಾಕುಲರ್ ಕಳುಹಿಸಿಕೊಟ್ಟಿದ್ದರು.[೧೨] ಎಂಬುದು ಹಾಗೂ ಅದನ್ನು "ಅಸಿಸ್ಟೆಂಟ್ ಕನ್ಸರ್ವೇಟರ್ ನೀಲಕಂಠರಾವ್ ರವರು ತಮ್ಮ ಹತ್ತಿರ ಇಟ್ಟುಕೊಳ್ಳಲು ಅನುಮತಿಸಲಾಗಿದೆ" ಎಂದು ಬರೆಸಿರುವ ಮಹಾರಾಜರ ಪತ್ರದ ದಾಖಲೆಯಿದೆ. ಶ್ರೀಮತಿ ಟೆನಿಸನ್‌ರವರು ಈ ಪತ್ರದಲ್ಲಿ ಬರೆದಿರುವ ಒಕ್ಕಣೆ ವಿಶೇಷವಾಗಿದೆ. "May this show you as many birds and beasts as you showed us" ಎಂದು ಶುಭಾಶಯ ಕೋರಿದ್ದಾರೆ. ಅಂದರೆ ಬೈನಾಕುಲರ್ ಕಣ್ಣಿಗೂ ಕಾಣದಿರಬಹುದಾದಷ್ಟು ಪ್ರಾಣಿ–ಪಕ್ಷಿಗಳನ್ನು ನೀಲಕಂಠರಾವ್ ಅವರು ಇವರಿಗೆ ತೋರಿಸಿದ್ದರು ಎಂಬ ಸಂತೋಷ ಕೃತಜ್ಞತೆ ಅವರದು ಎಂಬುದು ವ್ಯಕ್ತವಾಗುತ್ತದೆ. ಮಾರ್ಚ್ ತಿಂಗಳಿನಲ್ಲಿ ಅವರು ಕೈಗೊಂಡ ಪ್ರವಾಸದ ನೆನಪು ಅವರಲ್ಲಿ ಅಪಾರವಾದ ಆನಂದವನ್ನು ಕೊಟ್ಟಿತ್ತು ಮತ್ತು ಅವರು ಸ್ವದೇಶಕ್ಕೆ ಹಿಂದಿರುಗಿದ ಮೇಲೆ ಅವರು ಕಳುಹಿಸಿದ ಬಹುಮಾನವು ಲಂಡನ್ನಿನಿಂದ ಜುಲೈ ತಿಂಗಳಿನಲ್ಲಿ ಬಂದು ಸೇರಿರುವುದಕ್ಕೆ ದಾಖಲೆಗಳಿವೆ.

ಈ ನೀಲಕಂಠರಾವ್ ಅವರು ಗೇಮ್ ಪ್ರಿಸರ್ವ್ ಆಫೀಸರ್ ಆಗಿ ಮಾಡಿರುವ ಸೇವೆ ವಿಶೇಷವಾಗಿದ್ದು, ಅದನ್ನು ಪ್ರತ್ಯೇಕವಾಗಿ ಅಧ್ಯಯನ ಮಾಡಲು ಅವಕಾಶವಿದೆ. ಮಹಾರಾಜರ ಯುರೋಪಿನ ಪ್ರವಾಸದ ಸಂದರ್ಭದಲ್ಲಿ ಅವರೊಂದಿಗೆ ಇವರಿಗೆ ಪ್ರವಾಸಕ್ಕೆ ತೆರಳಲು ಅವಕಾಶವನ್ನು ಮಾಡಿಕೊಡಲಾಗಿತ್ತು. ಆ ಪ್ರಯಾಣದ ಸಂದರ್ಭದಲ್ಲಿ ಅವರ ಬದಲಿಗೆ ಕಾರ್ಯನಿರ್ವಹಿಸಲು ಫಾರೆಸ್ಟ್ ಸಬ್ ಡಿವಿಷನ್ ಆಫೀಸರ್ ಹೆಗ್ಗಡದೇವನಕೋಟೆ ಇವರಿಗೆ ಆದೇಶ ಪತ್ರವನ್ನು ನೀಡಿರುವ ದಾಖಲೆಯಿದೆ[೧೩] ಇದಲ್ಲದೆ ಈ ನೀಲಕಂಠ ರಾವ್ ಅವರು ಆನೆಗಳ ವಿಷಯದಲ್ಲಿ ಬಹಳ ತಿಳುವಳಿಕೆಯನ್ನು ಹೊಂದಿದ್ದು ಮಹತ್ವಪೂರ್ಣವಾದ ತೀರ್ಮಾನಗಳನ್ನು ತೆಗೆದುಕೊಳ್ಳುವ ಸಾಮರ್ಥ್ಯ ಹೊಂದಿದ್ದುದರಿಂದ ಅವರನ್ನು ಅರಮನೆಯ ಅಂಬಾರಿಯ ಆನೆಯನ್ನು ಆರಿಸಲು ಹೊರರಾಜ್ಯಕ್ಕೆ ಕಳಿಸಿಕೊಡಲಾಗಿತ್ತು.[೧೪] ಹಾಗೆ ಹೋದಾಗ ಅವರ ಜೊತೆಗೆ ಒಬ್ಬ ಸೇವಕನನ್ನು ಕಳುಹಿಸಿಕೊಡಲಾಗಿತ್ತು.ಆತನ ಪ್ರಯಾಣ ಭತ್ಯೆಯ ವಿವರಗಳು ಸಹ ದಾಖಲೆಗಳಲ್ಲಿ ನೀಡಲಾಗಿದೆ. ಆ ಸೇವಕನಿಗೆ ದಿನದ ಬಾಟ ೮ ಆಣೆ ಮೂರನೇ ದರ್ಜೆಯ ರೈಲು ಖರ್ಚು ಅಥವಾ ಬಸ್ ಚಾರ್ಜ್, ಇಲ್ಲದಿದ್ದರೆ ೬ ಪೈಸೆ ಒಂದು ಮೈಲಿಗೆ ಎಂದು ತೀರ್ಮಾನಿಸಲಾಗಿದೆ. ಈ ಪ್ರಯಾಣದ ಖರ್ಚನ್ನು ಆರು ಪೈಸೆಯಿಂದ ಎಂಟು ಪೈಸೆಗೆ ಹೆಚ್ಚುವರಿ ಮಾಡಿರುವುದು ಉಳಿದವರ ಪ್ರಯಾಣ ದರವನ್ನು ದುಪ್ಪಟ್ಟು ಮಾಡಿರುವುದು ಕೂಡ ಇಲ್ಲಿ ನಮಗೆ ತಿಳಿದು ಬರುತ್ತದೆ. ಈ ಪ್ರವಾಸ ಮತ್ತು ಪ್ರಯಾಣಗಳು ಕೇವಲ ಮನರಂಜನೆಯ ಹಾಗೂ ಆತಿಥ್ಯದ ಭಾಗವಾಗಿ ನಡೆಯುತ್ತಿದ್ದರೂ ಸಹ ಅವುಗಳನ್ನು ಏರ್ಪಡಿಸುವುದಕ್ಕಾಗಿ ಮಾಡುತ್ತಿದ್ದ ಖರ್ಚುವೆಚ್ಚಗಳ ಲೆಕ್ಕಾಚಾರಗಳನ್ನು ಚಾಚೂ ತಪ್ಪದಂತೆ ದಾಖಲಿಸಲಾಗಿದೆ. ಹಾಗಾಗಿ ಇಂಥ ಪ್ರವಾಸಗಳು ಮತ್ತು ಪ್ರಯಾಣಗಳ ಆರ್ಥಿಕ ಆಯಾಮಗಳನ್ನು ನಾವು ಕಡೆಗಣಿಸಲಾಗುವುದಿಲ್ಲ.

ಯುವರಾಜ ಜಯಚಾಮರಾಜ ಒಡೆಯರ್ ಅವರ ಶಾಲೆಯಿಂದ ಕ್ಯಾತೆ ದೇವರ ಗುಡಿಗೆ ಪ್ರವಾಸ ಏರ್ಪಡಿಸಲಾಗಿದ್ದು, ಆ ಸಂದರ್ಭದಲ್ಲಿ ಪ್ರಯಾಣಕ್ಕಾಗಿ ಬಳಸಿದ ಸಿ.ಪಿಸಿ. ಬಸ್ಸಿನಲ್ಲಿ ಇತರ ಅನೇಕ ಸೇವಕ ವರ್ಗದವರೂ ಪ್ರಯಾಣ ಬೆಳೆಸಿದ್ದು, ಅವರ ಖರ್ಚು ವೆಚ್ಚದ ಕುರಿತು ಯುವರಾಜರ ಶಾಲೆಯ ಮುಕ್ತೇಸರ ಕ್ರಿ.ಶ. ೧೯೩೩ನೇ ಆಗಸ್ಟ್‌ನಲ್ಲಿ ವರದಿ ಮಾಡಿದ್ದಾರೆ. ಈ ಪ್ರವಾಸದಲ್ಲಿ ಇಬ್ಬರೂ ಸರ್ಕಾರಿ ನೌಕರರನ್ನು ನಿಯೋಜಿಸಲಾಗಿದ್ದು, ಅವರ ವಿಷಯ ಮತ್ತು ಅವರ ಹೆಸರುಗಳು ಉಲ್ಲೇಖವಾಗಿಲ್ಲ. ಹಾಗಾಗಿ ಅವರು ಯಾವ ರೀತಿ ಪ್ರಯಾಣಿಸಿದರು ಮತ್ತು ಹೋಗಿ ಬರುವ ಖರ್ಚಿನ ವಿಷಯವನ್ನು ತಿಳಿಸುವಂತೆ ಮುಕ್ತೇಸರರನ್ನು ಕೋರಲಾಗಿದ್ದು. ಅವರ ಖರ್ಚನ್ನೂ ಸಹ ಸರ್ಕಾರದಿಂದ ಭರಿಸಬಹುದಾಗಿದೆ. ಇತ್ಯಾದಿ ವಿವರಗಳು ಈ ದಾಖಲೆಯಲ್ಲಿದೆ. ಈ ಪ್ರವಾಸಕ್ಕೆ ಒಟ್ಟು ೩೦೦ ರೂ ಖರ್ಚು ಆಗಿರುವುದು ಕಂಡುಬಂದಿದೆ.

ಶಿಕಾರಿ ಪ್ರವಾಸ ಅಥವಾ ಶಿಕಾರಿ ಟ್ರಿಪ್‌ಗಾಗಿ ಅನೇಕ ಬ್ರಿಟಿಷ್ ಅಧಿಕಾರಿಗಳು ಬಂಡೀಪುರಕ್ಕೆ ಪ್ರವಾಸ ಕೈಗೊಂಡಿದ್ದು, ಆ ಪ್ರಯಾಣಿಕರು ಉಳಿದುಕೊಂಡಿದ್ದ ಬಂಗಲೆಗಳು ಮತ್ತು ಆ ಪ್ರವಾಸಕ್ಕಾಗಿ ತಗುಲಿದ ಖರ್ಚು ವೆಚ್ಚಗಳ ವಿವರಗಳು ನಮಗೆ ತಿಳಿದುಬರುತ್ತವೆ.[೧೫]

ಚಿರತೆ ಕಾಟ ಮೊಸಳೆಗಳಿಂದ ಆಗಿರುವ ಹಾನಿ ಇತ್ಯಾದಿಗಳಿಂದ ಸಾಮಾನ್ಯ ಜನರನ್ನು ರಕ್ಷಿಸಲು ಅರಮನೆ ಜಿಲ್ಲೆ ಕಚೇರಿಯಿಂದ ಬೇಟೆಗಾರರನ್ನು ಕಳುಹಿಸಿದಾಗ ಆಗಿರುವ ಖರ್ಚುವೆಚ್ಚಗಳ ವಿವರ ನೀಡುವ ದಾಖಲೆಗಳು ಆ ಸಂದರ್ಭಗಳಲ್ಲಿ

ಸಾಮಾನ್ಯ ಜನರಿಗೆ ಕಾಡು ಪ್ರಾಣಿಗಳಿಂದ ಉಂಟಾಗುತ್ತಿದ್ದ ಕಷ್ಟನಷ್ಟಗಳನ್ನು ಕುರಿತು ತಿಳಿಸಿಕೊಡುತ್ತವೆ. ಇಂತಹ ಸಂದರ್ಭಗಳಲ್ಲಿ ಪ್ರಯಾಣಕ್ಕಾಗಿ ಬಳಸಿದ ಬಂಡಿ ಬಾಡಿಗೆ, ಪ್ರಯಾಣದ ಬಗ್ಗೆ ವಿವರಗಳು ಸಹ ಇಲ್ಲಿ ಕಂಡು ಬಂದಿವೆ.[೧೬] ಈ ಪ್ರವಾಸದಲ್ಲಿ ಅನೇಕ ದಿನಗಳು ಕಾಡಿನಲ್ಲಿ ಉಳಿದು ಕಾಡು ಜಿಂಕೆಗಳನ್ನು ಬೇಟೆಯಾಡಿರುವ ಮಾಹಿತಿ ನಮಗೆ ದೊರಕುತ್ತದೆ. ಈ ಸಂದರ್ಭದಲ್ಲಿ ಆದಂತ ಖರ್ಚು ವೆಚ್ಚದಲ್ಲಿ ಬೇಟೆಗಾರರಿಗೆ ನೀಡಿದ ಕಂಬಳಿಯ ವಿಚಾರ ಮತ್ತು ಬನಿಯನ್‌ಗಳ ವಿಚಾರವನ್ನು ತಿಳಿಸಲಾಗಿದೆ. ಸುಮಾರು ೧೭೭ ಸಂಖ್ಯೆಯ ಕಂಬಳಿಗಳು ಮತ್ತು ಬನಿಯನ್ ಗಳನ್ನು ವಿತರಿಸುವುದನ್ನು ಗಮನಿಸಿದಾಗ ೧೭೭ ಜನ ಸಹಾಯಕರಾಗಿ ಬೇಟೆಗಾರರು ಜೊತೆಗೆ ಬಂದಿದ್ದರು ಎಂಬುದು ನವೆಂಬರ್ ತಿಂಗಳಾದ್ದರಿಂದ ಚಳಿಯನ್ನು ತಡೆದುಕೊಳ್ಳಲು ಈ ಏರ್ಪಾಟು ನಡೆದಿದೆ ಎಂಬುದು ವಿಧಿತವಾಗುತ್ತದೆ. ಈ ದಾಖಲೆಯಲ್ಲಿ ಈ ಕಂಬಳಿಗಳು ಹಾಗೂ ಬನಿಯನ್ನುಗಳಿಗಾಗಿ ಆದ ಖರ್ಚು ಎಷ್ಟು ಎಂಬುದನ್ನು ಮಾತ್ರ ತಿಳಿಸಿಲ್ಲ.

ಹೊರದೇಶಗಳಿಂದ ಪ್ರವಾಸ ಅಥವಾ ಶಿಕಾರ್ ಕ್ಯಾಂಪ್‌ಗಾಗಿ ಬರುತ್ತಿದ್ದ ಅನೇಕ ಪ್ರವಾಸಿಗರ ದಾಖಲೆಗಳಲ್ಲಿ ಒಂದು ಮಹತ್ವಪೂರ್ಣವಾದಂತಹ ದಾಖಲೆ ೨೧ ರಿಂದ ೨೪ ಡಿಸೆಂಬರ್‌ವರೆಗೆ ಕ್ರಿ.ಶ. ೧೯೩೯ರಲ್ಲಿ ನಡೆದಂತಹ ಘಟನೆಯನ್ನು ವಿವರಿಸಿದೆ. ಈ ದಾಖಲೆಯಲ್ಲಿ ಶ್ರೀಯುತ ಲಾರೆನ್ಸ್ ಮತ್ತು ಅವರ ತಾಯಿಯವರು ಕರಪುರ ಕ್ಯಾಂಪಿಗೆ ಆಗಮಿಸಿದ್ದುದನ್ನು ಉಲ್ಲೇಖಿಸುತ್ತದೆ. ಈ ಕ್ಯಾಂಪಿಗಾಗಿ ಪ್ರವಾಸಿಗರೊಂದಿಗೆ ನೀಲಕಂಠರಾವ್ ಗೇಮ್‌ಪ್ರಿಸರ್ವಿಂಗ್ ಆಫೀಸರ್ ಅವರ ಕೋರಿಕೆಯ ಮೇರೆಗೆ ಮಹಾರಾಜ ಹುಜೂರ ಸೆಕೆರೇಟ್ರಿಯವರನ್ನು ಕಳುಹಿಸಿಕೊಟ್ಟಿದ್ದಾರೆ. ಈ ಕ್ಯಾಂಪಿಗಾಗಿ ೧೭ ರೂ ೩೬ ಪೈಸೆಯನ್ನು ಸರಕಾರವು ಬಳಸಿರುವುದು ತಿಳಿದು ಬರುತ್ತದೆ.

ಪ್ರವಾಸಗಳಲ್ಲಿ ಆನೆಯ ಖೆಡ್ಡ ಕೂಡ ಬಹಳ ವಿಶಿಷ್ಟವಾದಂತಹ ಒಂದು ಮನರಂಜನೆ ಹಾಗೂ ಸಾಹಸ ಕಾರ್ಯಾಚರಣೆ ಆಗಿರುತ್ತಿತ್ತು. ಕಬಿನಿ ನದಿಯ ದಂಡೆಯ ಕಾಕನಕೋಟೆ ಅರಣ್ಯ ಪ್ರದೇಶವು ರಾಜ್ಯದ ನಿರ್ಬಂಧಿತ ಆನೆ ಶಿಕಾರಿ ಖೆಡ್ಡದ ಕಾರ್ಯಗಳ ಸ್ಥಳವಾಗಿತ್ತು. ಈ ಖೆಡ್ಡದ ಬಹುಪಾಲು ವಿಶೇಷ ಅತಿಥಿಗಳು ಪ್ರವಾಸಿಗರೆ ಆಗಿರುತ್ತಿದ್ದರು ಈ ಪ್ರವಾಸಿಗರ ಮನರಂಜನೆಗಾಗಿ ಅನೇಕ ಖೆಡ್ಡಗಳನ್ನು ಏರ್ಪಡಿಸುತ್ತಿದ್ದರು ಎಂಬುದು ದಾಖಲೆಗಳಿಂದ ತಿಳಿದು ಬರುತ್ತದೆ.

ಕಾಡಿನ ಅನೇಕ ಉತ್ಪನ್ನಗಳನ್ನು ಸಾಗಿಸುವ ಸಂದರ್ಭದಲ್ಲಿ ಆನೆಗಳ ಸಹಾಯವನ್ನು ಪಡೆದುಕೊಳ್ಳಲಾಗುತ್ತದೆ. ಖೆಡ್ಡ ಕಾರ್ಯಾಚರಣೆಯ ನಂತರ ಸೆರೆಹಿಡಿದ ಕಾಡಾನೆಗಳನ್ನು ಪಳಗಿಸಲು, ಪಳಗಿಸಿದ ಆನೆಗಳ ಸಹಾಯವನ್ನು ಪಡೆದುಕೊಳ್ಳಲಾಗುತ್ತಿತ್ತು. ಆನೆಗಳನ್ನು ದೇವಾಲಯಗಳ ಮಠಮಾನ್ಯಗಳ ಮತ್ತು ಅರಮನೆಗಳ ಉತ್ಸವಗಳಲ್ಲಿ, ಮಹೋತ್ಸವಗಳಲ್ಲಿ ಪೂಜೆ, ಆರಾಧನೆ ಮುಂತಾದುವುಗಳಲ್ಲಿ ವಿಶೇಷವಾಗಿ ಬಳಸುತ್ತಿದ್ದುದರಿಂದ ಆನೆಗಳನ್ನು ಹಿಡಿದು ಅವುಗಳನ್ನು ಪಳಗಿಸುವ ಅವಶ್ಯಕತೆ ಇರುತ್ತಿತ್ತು. ಈ ಮೊದಲು ಯುದ್ಧಗಳಲ್ಲಿ ಆನೆಯನ್ನು ಬಳಸುತ್ತಿದ್ದುದು ನಮಗೆ ತಿಳಿದೇ ಇದೆ.

ಶಿಕಾರಿ ಮತ್ತು ಖೆಡ್ಡ ಕಾರ್ಯಾಚರಣೆಗಳಲ್ಲದೆ 'ಗೇಮ್ ಅನಿಮಲ್ಸ್' ಎಂದು ಹೆಸರಿಸಲಾಗಿರುವ ಅನೇಕ ಕ್ರೂರ ಪ್ರಾಣಿಗಳು ಗ್ರಾಮಗಳಿಗೆ ತೊಂದರೆಗಳನ್ನು ನೀಡುತ್ತಿದ್ದ ಸಂದರ್ಭಗಳಲ್ಲಿಯೂ ಸಹ ಅವುಗಳನ್ನು ಬೇಟೆಯಾಡಲು ಗ್ರಾಮಸ್ಥರ ಕೋರಿಕೆಯ ಮೇರೆಗೆ ಕಾರ್ಯ ನಿಯೋಜಿಸಲಾಗಿತ್ತು ಮತ್ತು ಅದರ ಖರ್ಚುವೆಚ್ಚಗಳನ್ನು ಭರಿಸಲಾಗುತ್ತಿತ್ತು ಎಂಬುದು ಅನೇಕ ದಾಖಲೆಗಳಿಂದ ತಿಳಿದುಬರುತ್ತದೆ.

ಜನಸಾಮಾನ್ಯರಿಂದ ಮತ್ತು ರೈತಾಪಿ ವರ್ಗದವರಿಂದ ಆನೆಗಳ ಗುಂಪುಗಳು ಬೆಳೆಯನ್ನು ನಾಶ ಮಾಡುತ್ತಿದ್ದ ಸಂದರ್ಭದಲ್ಲಿ ತಮ್ಮ ಪೈರಿನ ರಕ್ಷಣೆಗಾಗಿ ಅರಮನೆಗೆ ಮನವಿಗಳು ಬರುತ್ತಿದ್ದು, ಆ ಮೇರೆಗೆ ಅವುಗಳ ಬೇಟೆಗಾಗಿ ನುರಿತ ಜನರನ್ನು ಕಳುಹಿಸಿ ಕೊಡಲಾಗುತ್ತಿತ್ತು. ಜನ-ಜಾನುವಾರುಗಳಿಗೆ ಪ್ರಾಣ ಭೀತಿಯನ್ನು ಒಡ್ಡುತ್ತಿದ್ದ ಇವುಗಳ ಹಾವಳಿ ತಪ್ಪಿಸಲು ಅಂಥವುಗಳನ್ನು ಕೊಲ್ಲಲು ಗೇಮ್ಸ್ ಸ್ಟಾಪ್ ಅಥವಾ ಬೇಟೆಗಾಗಿ ಮೀಸಲಾದ ಮತ್ತು ಅರಣ್ಯ ಇಲಾಖೆಯ ಜನರನ್ನು ನೇಮಿಸಿ ಕಳುಹಿಸಿ ಕೊಡಲಾಗುತ್ತಿತ್ತೆಂಬುದು ತಿಳಿದುಬರುತ್ತದೆ. ಗಾಯಗೊಂಡ ಅಥವಾ ಕಾಯಿಲೆಯಿಂದ ನರಳುತ್ತಿರುವ ಪ್ರಾಣಿಗಳನ್ನು ಆನೆಗಳನ್ನು ಗುಂಡುಹಾರಿಸಿ ಇಲ್ಲವೇ ಅವುಗಳಿಗೆ 'stry o nine' (ಸ್ಟ್ರೇ ಒ ನೈನ್) ನೀಡಿ ಕೊಲ್ಲಲಾಗುತ್ತಿತ್ತು ಎಂದು ತಿಳಿದುಬರುತ್ತದೆ.[೧೭]

ಖೆಡ್ಡವು ಒಂದು ಸಾಹಸಿ ಮನೋಭಾವದ ಪ್ರವಾಸಿಗರಿಗೆ ಅತ್ಯಂತ ಆಕರ್ಷಣೆಯ ಸಂದರ್ಭವಾಗಿರುತ್ತಿತ್ತು. ಅದರಲ್ಲಿ ಭಾಗವಹಿಸಲು ಪ್ರವೇಶವನ್ನು ಕಾಯ್ದಿರಿಸುತ್ತಿದ್ದರೆಂದೂ ತಿಳಿದುಬರುತ್ತದೆ. ಶಿಕಾರಿ ಕ್ಯಾಂಪ್‌ಗಳಿಗೆ ಪ್ರವೇಶದರ ನಿಗಧಿಪಡಿಸಿದ್ದು ನಿಗದಿತ ಸ್ಥಳಗಳಲ್ಲಿ ಟಿಕೆಟ್ಗಳನ್ನು ಮಾರಾಟಮಾಡಲಾಗುತ್ತಿತ್ತು. ಇಂತಹ ಕೆಲವು ದೊಡ್ಡ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದ ಅನೇಕ ಪ್ರವಾಸಿಗರು ತಮ್ಮ ಪ್ರವಾಸಿ ಕಥನಗಳಲ್ಲಿ ತಮ್ಮ ಅನುಭವವನ್ನು, ಖೆಡ್ಡದ ವಿಚಾರಗಳನ್ನು ಮರೆಯದೆ ದಾಖಲಿಸಿರುವುದನ್ನು ಗಮನಿಸಬಹುದು. ಅವುಗಳಲ್ಲಿ ಕೆಲವು ಮನಮಿಡಿಯುವಂತಹ ವಿಚಾರಗಳು ಇವೆ. ಖೆಡ್ಡದ ಆಚರಣೆಯು ಮಾಸ್ತಿಗುಡಿಯ

ದೇವರಿಗೆ ಪ್ರಾರ್ಥನೆ ಪೂಜೆ ಸಲ್ಲಿಸುವ ಮೂಲಕ ಆರಂಭವಾಗುತ್ತಿತ್ತು ಎಂಬುದು ತಿಳಿದುಬರುತ್ತದೆ ಖೆಡ್ಡವು ಅಲೆದಾಡುವ ಆನೆಗಳ ಗುಂಪುಗಳನ್ನು ಸುತ್ತುವರೆದು ನಾನಾ ಬಗೆಯ ಧ್ವನಿಗಳನ್ನು ಮಾಡುತ್ತಾ ತುಪಾಕಿ ಹಾರಿಸುತ್ತಾ ಜನರು ಕಿರುಚಾಡಿ ಗದ್ದಲವನ್ನು ಎಬ್ಬಿಸಿ, ಗಾಬರಿ ಹುಟ್ಟಿಸಿ ಆನೆಗಳನ್ನು ಒಂದು ದಿಕ್ಕಿಗೆ ನಡೆಸುತ್ತಾ ಅವುಗಳನ್ನು ಖೆಡ್ಡಾಕ್ಕಾಗಿಯೇ ತೋಡಿದ ಹಳ್ಳಗಳತ್ತ ಅಟ್ಟಲಾಗುತ್ತಿತ್ತು. ಈ ದನಿಗಳಿಗೆ ಹೆದರುತ್ತಿದ್ದ ಆನೆಗಳು ಆ ಪ್ರದೇಶವನ್ನೇ ತೊರೆದು ಹೋಗಿ ಬಿಡುತ್ತಿದ್ದವು ಎಂಬುದೂ ಸಹ ತಿಳಿದುಬರುತ್ತದೆ. ಕ್ರಿ.ಶ. ೧೯೨೨-೨೩ನೇ ವರ್ಷದಿಂದ ಆರಂಭಗೊಂಡ ವಿಶೇಷವಾದ ಖೆಡ್ಡ ಆಚರಣೆಯಿಂದಾಗಿ ಹೆದರಿದ ಆನೆಗಳ ಗುಂಪುಗಳು ಕೂರ್ಗ್ ಮತ್ತು ಮಲಬಾರಿನ ಮೈದಾನದ ಪ್ರದೇಶಗಳಿಗೆ ಪ್ರಯಾಣ ಬೆಳೆಸಿದವು ಎಂಬುದು ದಾಖಲೆಗಳಿಂದ ತಿಳಿದುಬರುತ್ತದೆ. ಕ್ರಿ.ಶ. ೧೯೨೮-೨೯ನೇ ವರ್ಷದಲ್ಲಿ ವಿಶೇಷವಾಗಿ ನಡೆದ ಖೆಡ್ಡಾಗಳ ದಾಖಲೆ ನಮಗೆ ಸಿಗುತ್ತದೆ. ಕಾಕನಕೋಟೆಯ ಅರಣ್ಯದಲ್ಲಿ ಖೆಡ್ಡವನ್ನು ಒಂದು ಖಾಯಂ ಕಾರ್ಯಾಚರಣೆಯಾಗಿ ಮಾಡಬೇಕು ಎಂಬ ಬೇಡಿಕೆ ಇತ್ತು. ಆ ನಿಟ್ಟಿನಲ್ಲಿ ಸತತವಾಗಿ ಮೂರು ಕಾರ್ಯಾಚರಣೆಗಳನ್ನು ಪ್ರಯೋಗಾತ್ಮಕವಾಗಿ ನಡೆಸಲಾಗಿದ್ದು, ಮೊದಲನೆಯದು ಯಶಸ್ವಿಯಾಗಿರಲಿಲ್ಲ. ಎರಡನೆಯ ಬಾರಿಯ ಕಾರ್ಯಾಚರಣೆಯು ಯಶಸ್ವಿಯಾಗಿದ್ದು, ಅದಕ್ಕೆ ತಗುಲಿದ ವೆಚ್ಚವನ್ನು ಅರಮನೆಯು ಭರಿಸಿದೆ ಎಂಬುದು ತಿಳಿದುಬರುತ್ತದೆ. ಮೂರನೆಯ ಕಾರ್ಯಾಚರಣೆಯಲ್ಲಿ ೩೦ ಆನೆಗಳ ದಂಡಿನಲ್ಲಿ ಕೇವಲ ಎಂಟು ಆನೆಗಳನ್ನು ಸೆರೆ ಹಿಡಿಯಲಾಯಿತು. ಅದಕ್ಕಾಗಿ ೧೨೫೨ ರೂ ೬ಹಣ ಎರಡನೆಯ ಬಾರಿಗೆ ೧೦,೦೦೦, ಮೂರನೆಯ ಬಾರಿಗೆ ೫,೦೦೦ ರೂ ಖರ್ಚಾಗಿತ್ತೆಂಬ ಮಾಹಿತಿ ದಾಖಲೆಗಳಲ್ಲಿ ದೊರಕುತ್ತದೆ.[೧೮] ಇಂತಹ ಆನೆಯ ಖೆಡ್ಡ ಸಂಬಂಧಿತ ಕಾರ್ಯಾಚರಣೆಗಳು ವಿಶೇಷವಾಗಿ ಕಾಕನಕೋಟೆ ಭೂತಿಪಡೆಗ ಅರಣ್ಯ ಪ್ರದೇಶದಲ್ಲಿ ನಡೆದಿದ್ದು, ಮೈಸೂರು ಜಿಲ್ಲೆಯಲ್ಲಿ ಆನೆಗಳಿಂದ ಜನ ಸಾಮಾನ್ಯರಿಗೆ ಉಂಟಾಗುತ್ತಿದ್ದ ಹಾನಿಯನ್ನು ಕಡಿಮೆ ಮಾಡಲು ಸಾಧ್ಯವಾಯಿತು ಎಂಬುದು ದಾಖಲೆಗಳಿಂದ ತಿಳಿದು ಬರುತ್ತದೆ. ಇಂತಹ ಖೆಡ್ಡಾ ಕಾರ್ಯಾಚರಣೆಗಳು ಅನಿವಾರ್ಯವಾಗಿರುತ್ತಿದ್ದವು ಮತ್ತು ಅದಕ್ಕಾಗಿ ಹೆಚ್ಚಿನ ಜನರನ್ನು ಒಳಗೊಳ್ಳಬೇಕಾಗುತಿದ್ದು, ತ್ರಾಸದಾಯಕವಾಗಿರುತಿತ್ತು. ಅಗತ್ಯ ಜನರನ್ನು ನಿರ್ದಿಷ್ಟ ಜಾಗಕ್ಕೆ ಕರೆತರುವ ಸಾರಿಗೆ ವೆಚ್ಚ, ಕೂಲಿ ಊಟೋಪಚಾರ ವಸತಿಗಳನ್ನು ಮಾಡಿ ಕೊಡಬೇಕಾಗುತ್ತಿತ್ತು. ಇದಕ್ಕಾಗಿ ನಿರ್ದಿಷ್ಟ ಕೂಲಿಯನ್ನು ನಿಗದಿಗೊಳಿಸಲಾಗಿತ್ತು. ಕಾಡಿನಲ್ಲಿ ಖೆಡ್ಡಾ ಗುಂಡಿಗಳನ್ನು ತೋಡುವ ಅದನ್ನು ಮರೆಮಾಚುವ ಕಾರ್ಯಗಳು ಕಷ್ಟವೇ ಆಗಿರುತ್ತಿತ್ತು.

ಕ್ರಿ.ಶ. ೧೯೩೦ರಲ್ಲಿ ಶ್ರೀಯುತ ಸ್ಯಾಂಡರ್ಸನ್ ರವರು ಖೆಡ್ಡಾ ಕಾರ್ಯಾಚರಣೆಯ ಸೂಪರಿಂಟೆಂಡೆಂಟ್ ಆಗಿದ್ದರು. ಖೆಡ್ಡಾದ ಕಾರ್ಯಾಚರಣೆಯನ್ನು ಕುರಿತು ಬರೆದಿದ್ದಾರೆ. ಶ್ರೀಮತಿ ಪಾರ್ಸನ್ಸವರು ಬ್ರಿಟಿಷ್ ಮಿಷನರಿಯಾಗಿದ್ದು, ಮೈಸೂರಿಗೆ ಕ್ರಿ.ಶ. ೧೯೦೬ ರಲ್ಲಿ ಭೇಟಿನೀಡಿದ್ದ ಸಂದರ್ಭದಲ್ಲಿ ಕಾಕನಕೋಟೆ ಕಾಡಿನಲ್ಲಿ ಏರ್ಪಡಿಸಲಾಗಿದ್ದ ಖೆಡ್ಡಾ ಕಾರ್ಯಾಚರಣೆಯ ಕ್ಯಾಂಪಿನಲ್ಲಿ ಭಾಗವಹಿಸಿದ್ದು, ತಾವು ಕಣ್ಣಾರೆಕಂಡಿದ್ದನ್ನು ಕುರಿತು ವಿಸ್ತಾರವಾಗಿ ಬರೆದಿದ್ದಾರೆ. ಈ ಖೆಡ್ಡಾ ಕಾರ್ಯಾಚರಣೆಯಲ್ಲಿ ೫೦ ಕಾಡಾನೆಗಳನ್ನು ಹಿಡಿದರು ಎಂಬುದನ್ನು ಅವರು ದಾಖಲಿಸಿದ್ದಾರೆ. ಆಕೆ ಕಾರ್ಯಾಚರಣೆಯನ್ನು ಕಂಡು ದುಃಖಿತರಾಗಿ ತಮ್ಮ ಭಾವನೆಗಳನ್ನು ಇಲ್ಲಿ ಹಂಚಿಕೊಂಡಿದ್ದಾರೆ. ತಮ್ಮ ಪುಟ್ಟ ಪುಟ್ಟ ಸೊಂಡಿಲುಗಳಿಂದ ತಮ್ಮ ತಾಯಂದಿರಿಗೆ ಥಳಿಸುತ್ತಿದ್ದ ಪುಟ್ಟ ಆನೆಯ ಮರಿಗಳನ್ನು, ಆ ತಾಯಿಮರಿಗಳ ಪ್ರೇಮವನ್ನು ಕುರಿತು ಬರೆದಿದ್ದಾರೆ. ಖೆಡ್ಡಾದ ಸಂದರ್ಭದಲ್ಲಿ ಮರಿ ಆನೆಗಳಿಂದ ದೂರಾದ ತಾಯಿ ಆನೆಗಳು ಕಣ್ಣೀರು ಸುರಿಸುವುದನ್ನು ಕಂಡು, "ಅದು ಹೃದಯವಿದ್ರಾವಕವಾದ ದೃಶ್ಯವಾಗಿತ್ತು" ಎಂದು ಅವರು ದಾಖಲಿಸಿದ್ದಾರೆ.

ಮತ್ತೊಂದು ದಾಖಲೆ ಕ್ರಿ.ಶ. ೧೯೩೬ರ ಮೇ ತಿಂಗಳಿನಲ್ಲಿ ಬಿಳಿಗಿರಿರಂಗನ ಬೆಟ್ಟದಲ್ಲಿ ನಡೆಸಲಾದ ಖೆಡ್ಡಾ ಕಾರ್ಯಾಚರಣೆಯ ವಿಚಾರವನ್ನು ಖರ್ಚುವೆಚ್ಚವನ್ನು ದಾಖಲಿಸಿದೆ. ಅಲ್ಲದೆ, ಹೈದರಾಬಾದಿನಿಂದ ಮೈಸೂರಿಗೆ ಆಗಮಿಸಿದಂತಹ ಗೇಮ್ ಪ್ರಿಸರ್ವ್ ಅಂಡ್ ದಿ ಸ್ಯಾಂಚುರಿ ಇನ್‌ಸ್ಪೆಕ್ಟರ್ ಜನರಲ್ ಆಫ್ ಫಾರೆಸ್ಟ್ ಅವರು ಭೇಟಿ ನೀಡಿದ ಸಂದರ್ಭದ, ಹಾಗೂ ಪ್ರಯಾಣದ ವಿವರಗಳನ್ನೂ ಅಗತ್ಯವಾದ ಖರ್ಚುವೆಚ್ಚಕ್ಕೆ ತಗಲುವ ಹಣದ ಬಿಡುಗಡೆಗಾಗಿ ಮನವಿ ಸಲ್ಲಿಸಿರುವುದನ್ನು ಗಮನಿಸಬಹುದು.[೧೯] Sandez z Shah ಎಂಬ ಸಾಹಸಿ ವ್ಯಕ್ತಿಯು ಲಂಡನ್ನಿನಿಂದ ಫಾಲ್ಕನರ್ ಅಂಡ್ ಸನ್ಸ್ ಅವರಿಂದ ಮೈಸೂರಿಗೆ ಶೂಟಿಂಗ್ ಬೂಟ್ಸ್‌ಗಳನ್ನು ೫, ೬, ೭ ಇಂಚು ಮತ್ತು ಎಂಟು ಇಂಚುಗಳು ಇರುವ ಅಳತೆಯ ಶೂಗಳನ್ನು ಅತ್ಯಂತ ಎಚ್ಚರಿಕೆಯಿಂದ, ಪ್ಯಾಕ್ ಮಾಡಿಸಿ ವಿಮೆ ಮಾಡಿಸಿ ಮೈಸೂರಿಗೆ ಕಳುಹಿಸಬೇಕೆಂದು ಕೇಳಿಕೊಂಡು ಕ್ರಿ.ಶ. ೧೯೨೬ ರಲ್ಲಿ ಬರೆದ ದಾಖಲೆ ಇದೆ.

ಅದೇ ರೀತಿ ಮೀನು ಬೇಟೆಯಲ್ಲಿ ವಿಶೇಷ ಆಸಕ್ತಿಯುಳ್ಳ ಅಧಿಕಾರಿಯೊಬ್ಬ ಮೈಸೂರಿಗೆ ಪ್ರವಾಸವನ್ನು ಕೈಗೊಂಡಿದ್ದು, ಆತ ಮೀನು ಬೇಟೆಯಾಡಲು ಬಯಸಿ ತನಗೆ ಮೀನು ಹಿಡಿಯುವುದಕ್ಕೆ ಬಳಸುವ ಅಗತ್ಯವಾದ 'ಫಿಶ್ ಟ್ರಾಪಿಂಗ್ ಸ್ಟಿಕ್'ನ್ನು ತರಿಸಿಕೊಳ್ಳಲು ಬರೆದಿರುವ ದಾಖಲೆಯಿದೆ. ಮೈಸೂರು ಸಂಸ್ಥಾನದಲ್ಲಿ ಇಂತಹ ಮೀನು ಬೇಟೆಯನ್ನು ಹಲವು ಜಾಗಗಳಲ್ಲಿ

ನಿಯಂತ್ರಿಸಿದ್ದರು ಎಂಬುದು ಮತ್ತು ಆ ನಿಟ್ಟಿನಲ್ಲಿ ಹಲವು ಆದೇಶಗಳನ್ನು ಸಹ ಮಾಡಿದ್ದರು ಎಂಬುದು ತಿಳಿದುಬರುತ್ತದೆ. ಮನರಂಜನಾ ಪ್ರವಾಸಗಳಲ್ಲಿ ಇಂದಿಗೂ ಸಹ ಮೀನು ಬೇಟೆ ಮೀನು ಶಿಕಾರಿಗಳು ಪ್ರವಾಸಿಗರ ನೆಚ್ಚಿನ ಆಸಕ್ತಿಗಳಾಗಿವೆ. ಎಂಬುದನ್ನು ಗಮನಿಸಬಹುದು.

೧೭–೩–ಕ್ರಿ.ಶ. ೧೯೨೯ರ ದಾಖಲೆಯು[೨೦] ಫರ್ನ್ಹಿಲ್ ಪ್ಯಾಲೇಸ್ ನೀಲಗಿರೀಸಿನಲ್ಲಿದ್ದ ನಭಿಖಾನ್ ಇಸ್ಸ್ಯು (ಎ.ಡಿ.ಸಿ.ಆಫ್. ಮಹಾರಾಜರ) ಅವರ ವಿಳಾಸಕ್ಕೆ ಬರೆದಿರುವ ಪತ್ರವು ಕುತೂಹಲಕರವಾಗಿದೆ.

ಪ್ರಸ್ತುತ ಪತ್ರದಲ್ಲಿ ಮೈಸೂರಿನ ಕರ್ಲ್ಜನ್ ಹೋಟೆಲಿನ ಮ್ಯಾನೇಜರ್ ರವರು ನೀಲಗಿರೀಸ್ ಫರ್ನಹಿಲ್ಸ್‌ನಲ್ಲಿದ್ದ ನಬಿ ಖಾನ್‌ರವರಿಗೆ ಬರೆದಿರುವ ಪತ್ರವಿದು. ಇದರಲ್ಲಿ ಮೈಸೂರಿಗೆ ಪ್ರವಾಸಿಗರಾಗಿ ಬಂದಿದ್ದ ಸಾರ್ಜೆಂಟ್ ಮೇಜರ್ ಕ್ರಾಸ್ ಮತ್ತು ಅವರ ಶ್ರೀಮತಿಯವರು ಪ್ರವಾಸದ ಸಂದರ್ಭದಲ್ಲಿ ಹೋಟೆಲಿನಲ್ಲಿ ತಂಗಿದ್ದರು. ಅವರು ಪ್ರೇಕ್ಷಣೀಯ ಸ್ಥಳಗಳಿಗೆ ಹೋಗಿ ಬರಲು ಟಾಂಗಾಗಳನ್ನು ಬಳಸುತ್ತಿದ್ದರು. ಅವರ ಪ್ರಯಾಣ ಹಾಗೂ ತಂಗು ತಾಣಕ್ಕಾಗಿ ಮತ್ತು ಆತಿಥ್ಯಕ್ಕಾಗಿ ಒಟ್ಟು ೮೦ ರೂಪಾಯಿ ತಗುಲಿದ್ದವು. ಅದೆಲ್ಲದರ ಬಿಲ್ಲನ್ನು ಖಾನ್‌ರವರಿಗೆ ಕಳುಹಿಸುವಂತೆ ಹೇಳಿ ಪ್ರವಾಸಿಗರು ಅಲ್ಲಿಂದ ತೆರಳಿದ್ದರು. ಅದರಂತೆ ಹೋಟೆಲಿನ ಮ್ಯಾನೇಜರ್ ಬಿಲ್ಲನ್ನು ತೆಗೆದುಕೊಂಡು ನಬಿ ಅವರ ಮನೆಗೆ ಹೋದಾಗ ಅವರು ಫರ್ನಹಿಲ್ಸ್‌ಗೆ ಪ್ರಯಾಣ ಮಾಡಿರುವುದು ತಿಳಿದು ಬರುತ್ತದೆ. ಅಲ್ಲದೆ ಖಾನ್ ಸಾಹೇಬರ ಕ್ಲರ್ಕ್ ಬಿಲ್ ಪಾವತಿಸಲು ನಿರಾಕರಿಸುತ್ತಾರೆ ಮತ್ತು ಖಾನರ ಒಪ್ಪಿಗೆ ಪತ್ರವನ್ನು ತರುವಂತೆ ಹೇಳಿಕಳಿಸುತ್ತಾರೆ. "ಕುದುರೆಗಾಡಿಯವರು ಪ್ರತಿದಿನವೂ ಬಂದು ಬಾಡಿಗೆಯ ಮೊತ್ತಕ್ಕಾಗಿ ವತಾರ ಮಾಡುತ್ತಿರುವ ಹಿನ್ನೆಲೆಯಲ್ಲಿ ತಾವು ತಮ್ಮ ಕಾರಖೂನನಿಗೆ ಕೂಡಲೇ ಹಣವನ್ನು ಪಾವತಿಸುವಂತೆ ಪತ್ರ ಬರೆಯಬೇಕು" ಎಂದು ಕೋರಿ ಹೋಟೆಲಿನ ಮ್ಯಾನೇಜರ್‌ರವರು ನಬಿ ಖಾನರಿಗೆ ಪತ್ರಬರೆದಿದ್ದಾರೆ.

ಹೊರಗಿನಿಂದ ಬಂದ ಪ್ರವಾಸಿಗರು ಮೈಸೂರಿನ ಕೆಲವು ಹೋಟೆಲುಗಳಲ್ಲಿ ತಂಗುತ್ತಿದ್ದರು. ಇಂತಹ ದಾಖಲೆಗಳು ಮೈಸೂರು ಮುಂತಾದ ಪ್ರದೇಶಗಳಲ್ಲಿ ನಿಧಾನವಾಗಿ ಹೇಗೆ ಈ ಮನರಂಜನಾ ಪ್ರವಾಸಗಳು ಮತ್ತು ಸಾಹಸ ಪ್ರವಾಸಗಳು ಐತಿಹಾಸಿಕ ತಾಣಗಳ ಪ್ರವಾಸಗಳು ವಿಶೇಷವಾಗಿ ಅಭಿವೃದ್ಧಿ ಹೊಂದತೊಡಗಿದವು ಎಂಬುದಕ್ಕೆ ಸಾಕ್ಷಿಯಾಗಿವೆ ಅಲ್ಲದೆ ಖಾಸಗಿಯಾದ ಈ ಪ್ರಯಾಣ ಪ್ರವಾಸಗಳ ಮೇಲೆ ಬೆಳಕು ಚೆಲ್ಲುತ್ತವೆ. ಸಾರಿಗೆ ಸಂಪರ್ಕ, ಹೋಟೆಲ್ ಉದ್ಯಮ, ರಸ್ತೆ ನಿರ್ಮಾಣ ಇತ್ಯಾದಿಗಳನ್ನು ಒಳಗೊಳ್ಳುತ್ತಾ ಹೇಗೆ ನಿಧಾನವಾಗಿ ಉದ್ದಿಮೆಯ ಸ್ವರೂಪವನ್ನು ಪಡೆದುಕೊಳ್ಳತೊಗಿತು ಎಂಬುದು ಸಹ ಅಧ್ಯಯನ ಯೋಗ್ಯವಾಗಿದೆ. ಹೆಚ್ಚಿನ ಪ್ರವಾಸಿಗರು ಓಡಾಡುವ, ತಂಗುವ ಪ್ರದೇಶಗಳ ಕಚ್ಚಾದಾರಿಗಳನ್ನು ದುರಸ್ತಿಮಾಡುವುದರ ಬಗೆಗೂ ನಿಗಾವಹಿಸಬೇಕಾದ ವಿಚಾರಗಳನ್ನು ಕುರಿತ ದಾಖಲೆಗಳೂ ಸಹ ಇವೆ. ಮೈಸೂರು ಅರಮನೆ ಪ್ರಯೋಜಿತ ಈ 'ಗೇಮ್ ಪ್ಲಾನಿಂಗ್, ಶಿಕಾರ್ ಕ್ಯಾಂಪ್‌ಗಳ ಪ್ರವಾಸ ಪ್ರಯಾಣಗಳು ಮತ್ತು ನಿರ್ವಹಣೆ'ಯು ಕರ್ನಾಟಕದ ಸಾಹಸ ಪ್ರವಾಸೋದ್ಯಮದ ಅಭಿವೃದ್ಧಿಯ ಚರಿತ್ರೆಯಲ್ಲಿ ದಾಖಲಾಗಬೇಕಾದ ಮಹತ್ತರ ಘಟ್ಟವಾಗಿದೆ.

ಅಡಿ ಟಿಪ್ಪಣಿಗಳು

೧. ಸೆಲೆಕ್ಷನ್ಸ್ ಫ್ರಮ್ ದಿ ರೆಕಾರ್ಡ್ಸ್ ಆಫ್ ದಿ ಮೈಸೂರ್ ಪ್ಯಾಲೇಸ್ ಸಂಪುಟ–೩. ಜಿ.ಪಿ.ಒ. ಕ್ರಿ.ಶ. ೧೯೨೯ .
೨. ಅದೇ. ಜಿಪಿಒ. ಕ್ರಿ.ಶ. ೧೯೨೮; ಜಿ.ಪಿ.ಒ ಕ್ರಿ.ಶ. ೧೯೩೪–೩೪–೩೬ ನಂ. ೫೧೫೮.
೩. ಅದೇ. ಜಿ.ಪಿ.ಒ. ಕ್ರಿ.ಶ. ೧೯೩೦–೩೧. ೪. ಅದೇ. ಜಿ.ಪಿ.ಒ. ಕ್ರಿ.ಶ. ೧೯೫೧–೫೨.
೫. ಅದೇ ನಂ. ೫. ರಾಯಲ್ ಪಾರ್ಟಿ ರಿಪೋರ್ಟ್, ಕ್ರಿ.ಶ. ೧೯೩೨.
೬ ಅದೇ ಜಿ.ಪಿ.ಒ. ಕ್ರಿ.ಶ. ೧೯೪೧, ಜಿಪಿಒ, ೧೦೨೯, ಜಿ.ಪಿ.ಒ ಕ್ರಿ.ಶ. ೧೯೨೬.
೭. ಅದೇ ಒ. ೧೯೨೬–೩೧ ಪರ್ಸನಲ್ ಪೇಪರ್ಸ್ ಆಫ್ ನೀಲಕಂಠರಾವ್ ಗೇಮ್ ಪ್ರಿಸರ್ವಿಂಗ್ ಆಫೀಸರ್.
೮. ಅದೇ ಜಿ.ಪಿ.ಒ. ೧೯೫೧–೫೨. ೯. ಅದೇ ಜಿ.ಪಿ.ಒ. ೧೦೩೦–೩೧.
೧೦. ಅದೇ ನೋಟಿಫಿಕೇಷನ್, ದಿನಾಂಕ ೧೪ನೇ ಡಿಸೆಂಬರ್ ಕ್ರಿ.ಶ. ೧೯೦೧.
೧೧. ಅದೇ ನೋಟಿಫಿಕೆಷನ್ ದಿನಾಂಕ ೩೦ ಡಿಸೆಂಬರ್ ಕ್ರಿ.ಶ. ೧೯೩೧.
೧೨. ಅದೇ ಅರಮನೆ ಕಛೇರಿಯ ತುಂಬುಚೆಟ್ಟಿತವರಪತ್ರ ೧೫/೭/ಕ್ರಿ.ಶ. ೧೯೩೦.
೧೩. ಅದೇ ಜಿ.ಪಿ.ಒ. ಪತ್ರ ಸಂ. ೩೯೦೩. ೧೪. ಅದೇ ಜಿ.ಪಿ.ಒ. ಕ್ರಿ.ಶ. ೧೯೩೪–೩೬.
೧೫. ಅದೇ ಜಿ.ಪಿ.ಒ. ಕ್ರಿ.ಶ. ೧೯೩೬ ಶಿಕಾರ್ ಕ್ಯಾಂಪ್ ಆಫ್ ಮೈಸೂರ್ ೧–೧೨–ಕ್ರಿ.ಶ. ೧೯೩೬.
೧೬. ಅದೇ ನಂ. ೧೦೫ ರಾಯಲ್ ಪಾರ್ಟಿ ಗೇಮ್ ಪ್ರಿಸರ್ವ ಆಫೀಸ್ ಮೈಸೂರ್, ೨೦–೧೧–ಕ್ರಿ.ಶ. ೧೯೩೪.
೧೭. ಅದೇ ಜಿ.ಪಿ.ಒ. ಕ್ರಿ.ಶ. ೧೯೩೬. ೧೮. ಅದೇ ಜಿ.ಪಿ.ಒ. ಕ್ರಿ.ಶ. ೧೯೪೬–೫೧, ಖೆಡ್ಡ ಅಂಡ್ ಪಿಟ್ ಕ್ಯಾಪ್ಚರ್.
೧೯. ಅದೇ ನಂ. ೭೮೨–ಕ್ರಿ.ಶ. ೧೯–೫–ಕ್ರಿ.ಶ. ೧೯೩೬ ಖಿಲ್ಲೆ ಕಛೇರಿಗೆ ನೀಲಕಂಠರಾವ್‌ರವರ ಪತ್ರ
೨೦. ಅದೇ ಕರ್ಲ್ಜನ್ ಹೋಟೆಲ್ ಮೈಸೂರು, ಕ್ರಿ.ಶ. ೧೯೨೯–೩೩.

ಬಳ್ಳಾರಿ ಪ್ರದೇಶದ ಆಶೂರಖಾನಗಳ ಚಾರಿತ್ರಿಕ ನೋಟ

ಮಕ್ಬಲ್ ಬೇಗಂ*

ಸ್ಥಳೀಯವಾಗಿ ಮೊಹರಂ ಸಂಸ್ಕೃತಿಕ ಆಚರಣೆಯಾಗಿ ಕಾಣಲು ಇದರ ಹಿನ್ನಲೆಯನ್ನು ಅದ್ಯಯನಕ್ಕೆ ಒಳಪಡಿಸಿದಾಗ. ದಕ್ಷಿಣ ಭಾರತದಲ್ಲಿ ಕಲಬುರ್ಗಿ ಮತ್ತು ಬೀದರಿನಿಂದ ಆಳಿದ ಬನಹಮನಿ ಸುಲ್ತಾನರ (ಕ್ರಿ.ಶ. ೧೩೪೭–೧೫೩೮) ಬಿಜಾಪುರದ ಆದಿಲ್‌ಸಾಹಿಗಳು ಕ್ರಿ.ಶ. (೧೪೮೯ ರಿಂದ ೧೬೮೬) ಸಂಭ್ರಮ ಹಾಗೂ ಪ್ರೇರಣಾತ್ಮಕವಾಗಿ ಮೊಹರಂ ಆಚರಿಸುತ್ತಿದ್ದರು. ಗೋಲ್ಕೊಂಡಾದ ಕುತುಬ್ ಷಾಹಿಗಳು (ಕ್ರಿ.ಶ.೧೫೫೦–೧೬೭೨) ಹೈದರಾಬಾದ್ ನಗರದಲ್ಲಿ ಆಲಂ ಇಡುವ ಪದ್ಧತಿ ಆರಂಭಿಸಿ ಮುಂದುವರಸಿಕೊಂಡು ಬಂದರು. ಅಬ್ದುಲ್ ಕುತುಬ್ ಷಾ ಮೊಹರಂ ತಿಂಗಳ ಮೊದಲನೆಯ ದಿನದಿಂದ ಸಫರ ತಿಂಗಳಾಗಿ ಪೋಷಿಸಿದನು. ಆಲಂ ಇಡುವುದಕ್ಕಾಗಿ ಕಟ್ಟಿಸಿದ ಆಶೂರಖಾನೆಗಳು ಇಂದಿಗೂ ಸುಸ್ಥಿತಿಯಲ್ಲಿದ್ದು ಹೈದರಾಬಾದ್ ನಗರದಲ್ಲಿ ಸಾಂಸ್ಕೃತಿಕ ಮಹತ್ವವನ್ನು ತಿಳಿಸುತ್ತವೆ. ಹಾಗೆಯೇ ಬಳ್ಳಾರಿ ಜಿಲ್ಲೆಯ ಸಾಂಸ್ಕೃತಿಕ ಮಹತ್ವವು ಮೊಹರಂ ಹಬ್ಬದ ಪ್ರತಿರೂಪವಾಗಿದೆ. ಮೊಗಲ್ ದೊರೆಗಳಿಂದ ಈ ಆಚರಣೆಗಳು ದಖ್ಖನಿನ ವಿವಿಧ ಪ್ರದೇಶಗಳಲ್ಲಿ ಮುಸ್ಲಿಂ ಮುಸ್ಲಿಮೇತರರು ಸೇರಿ ಮಾಡುವ ಹಬ್ಬವಾಗಿದೆ. ಆದರೆ ಇದು ಹಬ್ಬವಲ್ಲ. ಮೊಹಮ್ಮದ್ ಪೈಗಂಬರ್ ಅವರ ಮೊಮ್ಮಕ್ಕಳು ಹುತಾತ್ಮರಾದ ದಿನ. ಇದನ್ನು ಸೂತಕದಂತೆ ಆಚರಿಸಬೇಕೆಂದು ಟಿಪ್ಪು ಈ ಹಬ್ಬವನ್ನು ನಿಷೇಧಿಸಿದ.[೧]

ಬ್ರಿಟಿಷರು ಇದನ್ನು ರಾಜಕೀಯ ಚಹರೆಯಾಗಿ ಸೃಷ್ಟಿಸಿದರು. ಅಂದಿನ ಬಳ್ಳಾರಿ ಜಿಲ್ಲೆಯ ಇಂದಿನ ವಿಜಯನಗರ ಜಿಲ್ಲೆಯಲ್ಲಿನ ಹೊಸಪೇಟೆಯಲ್ಲಿ ಕೂಡಿಸುವ ಮೌಲಾಲಿ ಆಲಮ್‌ಗಳಿಗೂ ಹಿಂದೂ– ಮುಸ್ಲಿಮರು ರಾಮುಲಸ್ವಾಮಿ ಎಂದೇ ಗುರುತಿಸಿ ಪ್ರಾರ್ಥನೆ ಮಾಡುತ್ತಾರೆ ಎಂಬುದನ್ನು ದಸ್ತಗೀರ್ ಅಲ್ಲಿಬಾಯಿ ಅವರು ತಮ್ಮ 'ಕರ್ನಾಟಕದ ಮೊಹರಂ ಪದಗಳು' ಕೃತಿಯಲ್ಲಿ ಉಲ್ಲೇಖಿಸಿದ್ದಾರೆ.

ಹಿಂದೂ–ಮುಸ್ಲಿಮರು ವಿಶೇಷವಾಗಿ ಬ್ರಾಹ್ಮಣರು ತಮ್ಮ ಶಕ್ತ್ಯಾನುಸಾರ ದೇವರ ಚಾಕರಿ ಮಾಡುತ್ತಾರೆ. ಹರಕೆ ತೀರಿಸುತ್ತಾರೆ. ಗದಗ– ಬೆಟಗೇರಿಯಲ್ಲಿ ನಡೆಯುವ ಮೊಹರಂ ಮೆರವಣಿಗೆಯಲ್ಲಿ ಹಿಂದೂ–ಮುಸ್ಲಿಂ ಭಕ್ತರು ಪಾಲ್ಗೊಂಡು ಮೈತುಂಬಿದ ದೇವರಿಂದ ಮಳೆ–ಬೆಳೆ ಕುರಿತು ಹೇಳಿ–ಕೇಳಿಕೆ ಮಾಡುತ್ತಾರೆ. ಸೂಟಕನಹಾಳದ ಡೋಲಿ ಮತ್ತು ಕೈದೇವರು ದ್ಯಾಮವ್ವನ ಗುಡಿಗೆ ಭೇಟಿ ಇತ್ತಾಗ ಜನ ಇಮಾಮ ಹುಸೇನರು ತಂಗಿ ದ್ಯಾಮವ್ವನ ದರ್ಶನಕ್ಕೆ ಬಂದಿದ್ದಾರೆಂದೇ ತಿಳಿಯುತ್ತಾರೆ.[೨]

ಆಶೂರಖಾನಗಳ ಐಡೆಂಟಿಕರಣವು ಮೊಹರಂ ಆಚರಣೆಯನ್ನು ಪಸ್ತುತೀಕರಿಸುತ್ತದೆ. ಈ ಆಚರಣೆ ಅರಬ್‌ನಲ್ಲಿ ನಡೆದ ಹಿಂಸಾತ್ಮಕ ಘಟನೆಯನ್ನು ಪ್ರಾದೇಶಿಕವಾಗಿ ಪ್ರತಿನಿಧಿಸುತ್ತದೆ. ಪ್ರಸ್ತುತವಾಗಿ ಮೊಹರಂ ಆಚರಣೆಯು ಮುಸ್ಲಿಮ್ ಸಮುದಾಯಗಳ ಸ್ಥಳೀಯವಾಗಿ ನೆಲೆನಿಂತ ಸಾಂಸ್ಕೃತಿಕ ಪ್ರತಿನಿಧಿತ್ವ ಸೂಚಿಸುತ್ತದೆ. ಮೊಹರಂ ಹಬ್ಬವನ್ನು ಆಚರಿಸುವ ಕಟ್ಟಡ, ಸ್ಥಳ, ಜಾಗವನ್ನು ಆಶೂರಖಾನವಾಗಿ ಗುರುತಿಸಬಹುದು. ಇದು ಮುಸ್ಲಿಮ್–ಮುಸ್ಲಿಮೇತರರ ಸಾಂಸ್ಕೃತಿಕ ಆಚರಣೆಯ ಅಸ್ಮಿತೆಯಾಗಿದೆ.[೩]

ಇದು ಒಂದೇ ಧಾರ್ಮಿಕ ಚಹರೆಗೆ ಒಳಪಡದೆ, ಹಿಂದೂ–ಮುಸ್ಲಿಂ ಸಾಮರಸ್ಯದ ಪ್ರತೀತಿಯಾಗಿದೆ. ದಖ್ಖನ್ ಮೂಲದ ಮುಸ್ಲಿಂ ರಾಜ್ಯವಾದ ಬಹಮನಿ ಸಂಸ್ಥಾನವು ಮೊಹರಂ ಆಚರಣೆಯನ್ನು ಸಾಂಪ್ರದಾಯಿಕವಾಗಿಸಿ, ಸ್ಥಳೀಯತೆ ಪಡೆಯಿತು. ಪ್ರಭುತ್ವದ ಪತನಾನಂತರ ಸಾಂಸ್ಕೃತಿಕ ಸ್ಥಿತ್ಯಂತರದ ಕುರುಹಾಗಿ ಮೊಹರಂ ಆಚರಣೆ ರೂಪದಲ್ಲಿ ಮುಂದುವರೆದಿರುವುದನ್ನು ಕಾಣಬಹುದು. ವಿಜಯನಗರ ಕಾಲದಲ್ಲಿಯೂ ಇಂತಹ ಆಚರಣೆಗಳಿಗೆ ರಾಜಪ್ರಭುತ್ವದ ಸಮ್ಮತಿ ಪಡೆದದ್ದು, ಈಗಿನ ಕಮಲಾಪುರದ ಸುತ್ತಮುತ್ತಲಿನ ಪ್ರದೇಶಗಳಾದ ಕಂಪ್ಲಿ, ಹೊಸಪೇಟೆ, ಬಳ್ಳಾರಿಗಳಲ್ಲಿನ ಆಶೂರಖಾನಗಳೇ ಸಾಕ್ಷಿಯಾಗಿವೆ.

---

* ಮಕ್ಬಲ್ ಬೇಗಂ.

ಕಮಲಾಪುರದ ಮುಲ್ಲಾಗಲ್ಲಿ, ಮುದುಗಲ್ ಮಸೀದಿ, ಆನೆಬೈ ಆಶೂರಖಾನಗಳನ್ನು ಉದಾಹರಿಸಬಹುದು. ಪುರುಷೋತ್ತಮ ಬಿಳಿಮಲೆ ಮತ್ತು ಚೆಲುವರಾಜು ಅವರ ಕೃತಿಯಾದ 'ಹಂಪಿ ಜಾನಪದ' ಮೊಹರಂ ಸ್ಥಳೀಯವಾಗಿ ಹಿಂದೂ–ಮುಸ್ಲಿಂರು ಸೇರಿ ಆಚರಿಸುವ ಹಬ್ಬ ಎಂದು ಉಲ್ಲೇಖಿಸಿದ್ದಾರೆ. ವಿಜಯನಗರ ಪತನಾನಂತರ ಹಿಂದೂ–ಮುಸ್ಲಿಮ್ ಜನವರ್ಗಗಳು ತಮ್ಮ ಜೀವನಾವಶ್ಯಕವಾಗಿ ಪೂರಕವಾದ ಸ್ಥಳಗಳಲ್ಲಿ ನೆಲೆನಿಂತರು. ಸಂಪ್ರದಾಯಿಕ ಆಚರಣೆಗಳನ್ನು ಕೈಬಿಡದೆ ಮುನ್ನಡೆಸಿದರು. ಇವುಗಳ ಕುರುಹಾಗಿ ಬಳ್ಳಾರಿಯಲ್ಲಿಯೂ ೮೬ಕ್ಕೂ ಅಧಿಕ ಆಶೂರಖಾನಗಳನ್ನು ಕಾಣುತ್ತೇವೆ.[೪]

ಇವುಗಳಲ್ಲಿ ಕೆಲವೊಂದಕ್ಕೆ ಭೇಟಿ ಮಾಡಲಾಯಿತು. ಬಳ್ಳಾರಿ ನಗರ ಸಮೀಪದ ಆಲದಹಳ್ಳಿ ಸರ್ವರ್ ಹುಸೇನ್ ಆಶೂರಖಾನೆಗಳು, ಪಿಂಜಾರ ಓಣಿಯಲ್ಲಿ ಹಸೇನ್ ಅಲಿಯವರ ಸಂಪ್ರದಾಯದಂತೆ ಮೊಹರಂ ಆಚರಿಸಲಾಗುತ್ತದೆ. ವಿವಿಧ ಧರ್ಮದವರು ಪೂಜ್ಯಭಾವನೆಯಿಂದ ಮೊಹರಂ ಉತ್ಸವದಲ್ಲಿ ಭಾಗವಹಿಸುತ್ತಾರೆ. ಕುರುಬರೊಂದಿಗೆ ಹೆಚ್ಚಿನ ನಂಟನ್ನು ಹೊಂದಿ, ಸರ್ವರ್ ಅಲ್ಲಿ ಆಶೂರ್‌ಖಾನ್, ಹುಸೇನ್ ಸಂಪ್ರದಾಯವನ್ನು ಮುನ್ನಡೆಸಿಕೊಂಡು ಬಂದವರು ಕುರುಬರು. ಮತಾಂತರದಿಂದಾಗಿ ಮುಸ್ಲಿಂ ಧರ್ಮ ಸ್ವೀಕರಿಸಿದರು. ಈ ಕಟ್ಟಡವು ಹಿಂದೂ–ಸಾರ್ಸನಿಕ್ ಶೈಲಿಗೆ ಒಳಪಟ್ಟಿದ್ದು, ಮುಸ್ಲಿಂ ವಾಸ್ತುಶಿಲ್ಪ ಲಕ್ಷಣಗಳನ್ನು ಹೊಂದಿರುವುದನ್ನು ಕಾಣಬಹುದು. ಮೀನಾರ್‌ಗಳು, ಗೊಮ್ಮಟಕಾರದ ಶೈಲಿ, ಕಮಾನುಗಳು, ಕಂಭಸಾಲುಗಳು, ಐತಿಹಾಸಿಕ ಆಚರಣೆಯಲ್ಲಿ ಮೊಹರಂ ಒಂದಾಗಿ ಗುರುತಿಸಿಕೊಂಡಿದೆ.

ಸರ್ವರ್ ಹುಸೇನ್ ಆಶೂರಖಾನವು ಇಂಡೋ–ಇಸ್ಲಾಮಿಕ್ ವಾಸ್ತುಶೈಲಿಯ ಸ್ಮಾರಕಗಳಾಗಿದ್ದು, ಸಾಲುಕಂಬಗಳಿದ್ದು, ಮೀನಾರುಗಳನ್ನು ಒಳಗೊಂಡಿವೆ. ಇಲ್ಲಿ ಪಕ್ಕದಲ್ಲಿಯೇ ಆಂಜನೇಯ ಸ್ವಾಮಿದೇವಸ್ಥಾನವಿದ್ದು, ಇತ್ತೀಚಿಗೆ ನವೀಕರಿಸಲ್ಪಟ್ಟಿದೆ ಎಂಬುದಾಗಿ ಕ್ಷೇತ್ರ ಕಾರ್ಯದಿಂದ ತಿಳಿದುಬಂದಿದೆ.

ಮೊಹರಂ ಹಬ್ಬವನ್ನು ಹಿಂದೂ ಮುಸ್ಲಿಮರು ಭಾಗವಹಿಸಿ ಆಚರಿಸುತಾರೆ. ಇಲ್ಲಿ ಮುಸ್ಲಿಮ್ ಧರ್ಮಕ್ಕಿಂತ ಹಿಂದೂ ಧರ್ಮದವರೇ ಹೆಚ್ಚಾಗಿ ಪೂಜೆಗಳಲ್ಲಿ ಭಾಗವಹಿಸುತ್ತಾರೆ. (ಇಲ್ಲಿ ಆಲಂ ಕೂಡಿಸುವ ಪದ್ಧತಿಯನ್ನು ಹಿನ್ನೆಲೆ ಕುರುಬ ಜನಾಂಗದವರು ಮುಸ್ಲಿಮ್ ಧರ್ಮಕ್ಕೆ ಮತಾಂತರಗೊಂಡವರಾಗಿದ್ದು ಇದನ್ನು ಆಚರಣೆಯಾಗಿ ಮುನ್ನಡೆಸಿದರು.) ಆದರೆ ಇಲ್ಲಿ ವಿಶೇಷವಾಗಿ ಆಶೂರಖಾನ ಮತ್ತು ಆಂಜನೇಯ ದೇವಸ್ಥಾನಕ್ಕೆ ಅಕ್ಕ ಪಕ್ಕದಲ್ಲಿ ಕಾಣಬಹುದು. ಗೋಡೆಗಳು, ಕಟ್ಟಡಗಳು ಪುರಾತನವಾಗಿದ್ದರಿಂದ ನವೀಕರಿಸಲಾಯಿತು ಎಂದು ತಿಳಿಸಿದರು.

ಪಿಂಜಾರ್ ಓಣಿ ಆಶೂರಖಾನ

ನ್ಯಾಯಾಲಯದಲ್ಲಿ ವ್ಯಾಜ್ಯವಿರುವ ಕಾರಣ ೧೮೨೬ರಲ್ಲಿ "ಇಲ್ಲಿ ಆಶೂರಖಾನವಿದೆ" ಎರಡು ಮಿನಾರುಗಳ ನಡುವೆ ಗುಮ್ಮಟವನ್ನು ಹೊಂದಿದ್ದು, ಇದು ಇಂಡೋ–ಇಸ್ಲಾಮಿಕ್ ಶೈಲಿಯ ಲಕ್ಷಣ ಒಳಗೊಂಡಿದೆ. ಅಲ್ಲದೆ ನಡುವೆ ಕಮಾನುಗಳ ಸಾಲುಗಳಿವೆ. ಆಶೂರಖಾನದ ದ್ವಾರ ಬಾಗಿಲಾಗಿದ್ದು, ಒಳಭಾಗದಲ್ಲಿ ಕಂಭಗಳಿದ್ದು ಆಲಂ ಪೋಟೋ ಇಟ್ಟಿದ್ದಾರೆ. ಆದರೆ ಮೊಹರಂ ಹಬ್ಬದಲ್ಲಿ ಆಲಂ ಕೂಡಿಸುವ ಪದ್ಧತಿಯಿದು. ಸರಿಯಾಗಿ ಅದರ ಮೇಲ್ಭಾಗಕ್ಕೆ ಗೊಮ್ಮಟವಿದೆ. ಇದು ಸುಮಾರು ೩ ಭಾರೀ ನವೀಕರಿಸಲಾಗಿದೆ ಎಂದು ಖಾಜಾಬೀ ಎಂಬುವವರು ತಿಳಿಸಿದರು. ಇಲ್ಲಿ ಹೆಣ್ಣುಮಕ್ಕಳು ನಮಾಜ್ ಮಾಡುವುದಕ್ಕೆ ಅವಕಾಶವಿದೆ. ಎಲ್ಲಾ ಧರ್ಮದವರು ಸೇರಿ ಉತ್ಸವದಲ್ಲಿ ಭಾಗವಹಿಸುತ್ತಾರೆ. ಕುರುಬರು, ಗೊಲ್ಲರು, ಲಿಂಗಾಯತರು, ವಡ್ಡರು, ಈಡಿಗರು, ಭಕ್ತಿಯಿಂದ ಪೂಜೆ ಸಲ್ಲಿಸುತ್ತಾರೆ.

ಬಳ್ಳಾರಿ ನಗರದ ಎಲ್ಲ ಪ್ರದೇಶಗಳ ಜನತೆಯೂ ಮೊಹರಂನ ೭ನೇ ದಿನದಂದು ಸಕ್ಕರೆಯನ್ನು ಓದಿಕೆ ಮಾಡಿಸುತ್ತಾರೆ. ಸಕ್ಕರೆ ಓದಿಕೆಗೆ ಇಲ್ಲಿ ದಿನಗಳನ್ನು ನಿಗದಿ ಮಾಡಲಾಗಿದೆ. ೭ನೇ ದಿನದಂದು ಮುಸ್ಲಿಮರು ಹಾಗೂ ಹರಕೆ ಹೊತ್ತವರು ಸಕ್ಕರೆ ಓದಿಕೆ ಮಾಡಿದರೆ, ಅಗಸರು ಮತ್ತು ಇನ್ನಿತರೆ ಸಮುದಾಯದವರು ೮ನೇ ದಿನದಂದು ಸಕ್ಕರೆ ಓದಿಕೆ ಮಾಡುತ್ತಾರೆ. ೯ನೇ ದಿನದಂದು ಕುರುಬರು, ವಡ್ಡರು, ಮಾದಿಗರು ಸೇರಿದಂತೆ ಎಲ್ಲ ಸಮುದಾಯದವರು ಈ ದಿನದಂದು ಸಕ್ಕರೆ ಓದಿಕೆ ಮಾಡುತ್ತಾರೆ.

ಮೊಹರಂ ೯ನೇ ದಿನದ ಮಧ್ಯರಾತ್ರಿಯಂದೇ ಆಲದಹಳ್ಳಿಯಿಂದ ಬಂಡಿಹಟ್ಟಿ, ಕೌಲ್‌ಬಜಾರ್ ಮಾರ್ಗವಾಗಿ ಸರ್ವರ್ ಹುಸೇನ್ ಆಲಂ ಅನ್ನು ಬ್ರೂಸ್‌ಪೇಟೆಯ ಬೆಂಗಳೂರು ರಸ್ತೆಯಲ್ಲಿ ಬೆಳಗಿನ ಜಾವ ೪.೦೦ ಗಂಟೆಗೆ ಮೆರವಣಿಗೆ ಇರುತ್ತದೆ. ಈ ಮೆರವಣಿಗೆಯಲ್ಲಿ ಬಳ್ಳಾರಿ ನಗರವೂ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳಲ್ಲಿರುವ ಆಲಂಗಳು ಸರ್ವರ್ ಹುಸೇನ್ ಆಲಂನೊಂದಿಗೆ ಅಲಾಯ್‌ಬುಲಾಯ್ ತೆಗೆದುಕೊಳ್ಳುವ ಸಂಪ್ರದಾಯವಿದೆ. ಸರ್ವರ್ ಹುಸೇನ್ ಆಲಂ ಅನ್ನು ಆಡಿಸುತ್ತಾ ಆಡಿಸುತ್ತಾ ಇತರೆ ಆಲಂಗಳೊಂದಿಗೆ ಸ್ಪರ್ಶಿಸುವ ಪರಿಪಾಠವಿದೆ. ಇದು ಒಂದು ರೀತಿಯಲ್ಲಿ ಯುದ್ಧದಂತೆ

















ಕಂಡು ಬರುತ್ತದೆ. ಇದು ಇರಾಕ್‌ನ ಕರ್ಬಲಾ ಕಾಳಗವನ್ನು ನೆನಪಿಸುತ್ತದೆ. ಈ ವೇಳೆಯಲ್ಲಿ ಸಾವಿರಾರು ಜನರು ಕಿಕ್ಕಿರಿದು ನೆರೆದಿರುತ್ತಾರೆ. ಈ ವೇಳೆ ಆಲಂಗಳ ಆಡಿಸುವುದಕ್ಕೆ ತಪ್ಪಡಿ, ವಾದ್ಯಮೇಳಗಳನ್ನು ಬಳಸಲಾಗುತ್ತದೆ. ತಪ್ಪಡಿಯ ಶಬ್ದಕ್ಕೆ ಆಲಂಗಳ ತಿರುಗಿಸುವಿಕೆ ಮಾಡಿ ಪರಸ್ಪರ ಸ್ಪರ್ಶಿಸಿದಾಗ ನೆರೆದಿದ್ದ ಭಕ್ತರು ಚಪ್ಪಾಳೆ ತಟ್ಟುತ್ತಾ ಹರ್ಷೋದ್ಗಾರವನ್ನು ವ್ಯಕ್ತಪಡಿಸಿ ಕೇಕೆ ಹಾಕುತ್ತಾರೆ. ಬಳ್ಳಾರಿ ಜಿಲ್ಲೆಯ ಎಲ್ಲಾ ಆಶೂರಖಾನಗಳಲ್ಲಿನ ಆಲಂಗಳನ್ನು ಮೊಹರಂ ೯ನೇ ದಿನದಂದು ಅಲ್ವಿದಾಯ ಕಾರ್ಯಕ್ರಮ ಮಾಡಿದರೆ, ಆಲದಹಳ್ಳಿಯ ಆಶೂರಖಾನದ ಆಲಂಗಳ ಅಲ್ವಿದಾಯ ಕಾರ್ಯಕ್ರಮ ೧೦ನೇ ದಿನದಂದು ನಡೆಯುತ್ತದೆ. ನಂತರ ೩ ದಿನದ ಕಾರ್ಯಕ್ರಮ ನಡೆಯುತ್ತದೆ. ನಂತರ ಆಲಂಗಳ ಚಿಹ್ನೆ ಮತ್ತು ಮುಂಡಾಸು ಅಥವಾ ಬಟ್ಟೆಗಳನ್ನು ಪೆಟ್ಟಿಗೆಯಲ್ಲಿಡಲಾಗುತ್ತದೆ. ಇದರೊಂದಿಗೆ ಹಬ್ಬ ಮುಕ್ತವಾಗುತ್ತದೆ.

ನಂತರ ಮುಜಾವರುಗಳಾದವರು ಪ್ರತಿಗುರುವಾರದಂದು ಆಶೂರಖಾನಗಳಲ್ಲಿ ಸಕ್ಕರೆ ಓದಿಕೆ ಮಾಡುತ್ತಾರೆ. ಭಕ್ತರು ಎಣ್ಣೆ, ಊದುಬತ್ತಿ, ಹೂ ಅರ್ಪಿಸಿ ಪೂಜಿಸುತ್ತಾರೆ.

ಆಲದಹಳ್ಳಿಯ ಸರ್ವಾರ್ ಹುಸೇನ್ ಆಲಂ ದೇವರು ಮನಸ್ಸಿನಲ್ಲಿ ಸಂಕಲ್ಪ ಮಾಡಿಕೊಂಡಿದ್ದನ್ನು ಈಡೇರಿಸುತ್ತಾನೆ ಎಂಬ ನಂಬಿಕೆ ಜನರಲ್ಲಿದೆ. ಈ ದೇವರು ಯಾವುದೇ ವ್ಯಕ್ತಿಯ ಮೈಮೇಲೆ ಬಂದು ಹೇಳಿಕೆ, ಕೇಳಿಕೆಗಳನ್ನು ಮಾಡುವುದಿಲ್ಲ. ಅಗ್ನಿಯಲ್ಲಿ ಇಳಿಯುವುದಿಲ್ಲ. ಸಾಮಾನ್ಯ ಸ್ವರೂಪದ ಆಲಂದೇವರಾಗಿ ಕಂಡು ಬರುತ್ತಾನೆ.

ಆಶೂರಖಾನದ ಒಳಗೆ ಮತ್ತು ಹೊರಗೆ ಸಾಕಷ್ಟು ಫೋರಿಗಳಿವೆ. ಆ ಫೋರಿಗಳಲ್ಲಿ ಆಶೂರಖಾನರು ಸ್ಥಾಪಿಸಿದ ಫೋರಿಯು ಪ್ರಮುಖವಾಗಿದ್ದು, ಮೊಹರಂ ಸಂದರ್ಭದಲ್ಲಿ ಆ ಫೋರಿಗೆ ಮಾತ್ರ ವಿಶೇಷವಾಗಿ ಪೂಜಿಸಲಾಗುತ್ತದೆ.

ಆಶೂರ್‌ಖಾನ್ ಪದದ ನಿಷ್ಪತ್ತಿ: ಆಶೂರಖಾನ ಪರ್ಶಿಯನ್ ಪದವಾಗಿದ್ದು, ಮೊಹರಮ್ ಹಬ್ಬದಲ್ಲಿ ದೇವರು-ಆಲಂ ಕೂಡಿಸುವ ಜಾಗೆ. ಬಡ ಮುಸ್ಲಿಮ್‌ರ ಪ್ರವಾಸಿಗರ ಛತ್ರ ಎಂದು ಉಲ್ಲೇಖವಿದ್ದು, ಇಂತಹ ಆಶೂರಖಾನ (೧೮ನೇ ಆದಿಲ್‌ಷಾಹಿ, ಸಂಪುಟದಲ್ಲಿ)ಬಳ್ಳಾರಿ ಪ್ರದೇಶದ ಸುತ್ತಲು ಕಾಣಸಿಗುತ್ತದೆ.

ಭಾರತದಲ್ಲಿ ಮೊಹರಂ ಆಚರಣೆ: ಮೊಹರಂ ಆಚರಣೆಯನ್ನು ಪ್ರಮುಖವಾಗಿ ಅಮೀರ್ ತೈಮೂರ್‌ನ ಪ್ರೋತ್ಸಾಹಿಸಿದನು. ತಾಜಿಯಾ ಕೂಡಿಸುವ ಪದ್ಧತಿಯನ್ನು ಜಾರಿಗೆ ತಂದರು. ಈ ತಾಜಿಯಾ ಕೂಡಿಸುವ ಅಥವಾ ಆಲಂ ಕೂಡಿಸುವ ಜಾಗವೇ ಆಶೂರ್‌ಖಾನವಾಗಿದ್ದು, ಈ ಆಶೂರಖಾನಗಳ ಮಾಹಿತಿಯು ಶಾಸನ, ಲಿಖಿತ ಆಧಾರಗಳಿಂದ ನಿರ್ಲಕ್ಷಿಸಲ್ಪಟ್ಟವು.

ಇವುಗಳ ಅಧ್ಯಯನ ಸಿಗುವುದು ವಿರಳ. ಇಂತಹ ಒಂದು ವಿಷಯವನ್ನು ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಿ ಒಂದು ಲೇಖನವಾಗಿ ಬರವಣಿಗೆ ಪ್ರಯತ್ನಿಸಿದ್ದೇನೆ. ವಕ್ತೃಗಳನ್ನು ಭೇಟಿಯಾಗಿ ಆಶೂರಖಾನದ ಬಗ್ಗೆ ಮಾಹಿತಿ ಕೇಳಿದಾಗ ಅವರು ಆಶೂರಖಾನವನ್ನು ಮಕಾನ್ ಆಗಿ ತಿಳಿಸಿದರು. ಇದರ ಬಗ್ಗೆ ಜನಸಾಮಾನ್ಯ ತಿಳಿಯದ ದುರಂತ ಈ ಕಟ್ಟಡವಾಗಿದೆ. ಕೆಲವರು ಇವರ ಬಗ್ಗೆ ಮಾಹಿತಿ ನೀಡಿದರು. ಖಾಜಾಬನಿ, ಅಬ್ದುಲ್, ಚಂದ್ರಪ್ಪ ಹೆಬ್ಬಾಳಕರ್, ಗೌಸ್‌ಬಾಷ ಇವರೆಲ್ಲರು ಸಹಕರಿಸಿದರು.

೧೧-೧೨ನೇ ಶತಮಾನದಲ್ಲಿ ಮೊಹರಂ ಆಚರಣೆಯನ್ನು ಭಾರತದಲ್ಲಿ ಆಚರಿಸಲಾಗುತ್ತಿತ್ತು. ನಂತರದಲ್ಲಿ ತಾಜಿಯಾವನ್ನು ಕೂಡಿಸುವ ಪರಂಪರೆಯಾಗಿ ಮಾಡಿಕೊಂಡರು. ಇದಕ್ಕೆ ಅನೇಕ ಸುಲ್ತಾನರ, ಬಾದಷಹರ ಪ್ರೋತ್ಸಾಹವಿದ್ದಿತು.[೫] ಅಮೀರ್ ತೈಮೂರ್ ಬಾದಶಹನ ಪ್ರೋತ್ಸಾಹಿಕ ದಾನ, ದತ್ತಿಯನ್ನು ನೀಡುತ್ತಿದ್ದರು. ಶೇರ್ ಷಹಾ ವಂಶದ ಸುಲ್ತಾನರು ಇದನ್ನೆ ಮುನ್ನಡೆಸಿದರು. ಹೀಗೆ ಕಾಲಕ್ರಮೇಣವಾಗಿ ಸಾಂಸ್ಕೃತಿಕ ಹಬ್ಬವಾಗಿ ಗುರುತಿಸಿಕೊಂಡಿತು. ಹಂತ ಹಂತವಾಗಿ ಸ್ಥಿತ್ಯಂತರಕ್ಕೆ ಒಳಪಟ್ಟಿತ್ತು. ಔದ್ ಪ್ರಾಂತ್ಯದ ಮೊಗಲ್ ಸಾಮ್ರಾಜ್ಯದ ನವಾಬನಾದ ಶುಜಾ ಉದೌಲದ ಹೆಂಡ್ತಿಯು ಈ ಆಚರಣೆಗೆ ಸಾಕಷ್ಟು ಹಣವನ್ನು ಸಹಾಯ ಮಾಡಿದರಲ್ಲದೆ ಈ ಆಚರಣೆಯಲ್ಲಿ ಭಾಗವಹಿಸುತ್ತಿದ್ದರು.

ದಕ್ಷಿಣ ಭಾರತದಲ್ಲಿ ಆಳಿದ ಬಹಮನಿ ಸುಲ್ತಾನರು ಕ್ರಿ.ಶ. ೧೩೪೭-೧೫೩೮ರವರೆಗೆ ಬೀದರ್, ಕಲಬುರ್ಗಿಯಲ್ಲಿ ಮೊಹರಂ ಹಬ್ಬದ ಆಚರಣೆಗೆ ಪ್ರೋತ್ಸಾಹಿಸಿದರು. ಅದರಂತೆ ಬಿಜಾಪುರದ ಅದಿಲ್‌ಶಾಹಿ ಅರಸರು ಕ್ರಿಶ. ೧೪೮೯ರಿಂದ ೧೬೮೬ವರೆಗೆ ಮೊಹರಂ ಹಬ್ಬವನ್ನು ಸಂಭ್ರಮದಿಂದ ಆಚರಿಸುತ್ತಿದ್ದರು. ಗೊಲ್ಕೊಂಡದ ಕುತುಬ್‌ಸಾಹಿ ಅರಸರು ೧೫೫೦-೧೬೭೭ರಲ್ಲಿ ಆಲಂ ಕೂಡಿಸುವ ಪದ್ಧತಿಯನ್ನು ಜಾರಿಗೆ ತಂದರು. ಅಬ್ದುಲ್ ಕುತುಬ್‌ಶಾಹನು ಮೊಹರಂ ತಿಂಗಳನ್ನು ಕುತುಬ್ ಶಾಹನು ಸಫರ್ ತಿಂಗಳಾಗಿಸಿದನು. ಆಶೂರಖಾನಗಳನ್ನು ಕಟ್ಟಿಸಿದನು. ವಿಜಯನಗರ ಕಾಲದಲ್ಲಿಯೂ ಇಂತಹ ಆಶೂರಖಾನಗಳನ್ನು ಕಾಣಬಹುದು. ಈ ಹಬ್ಬವು ಸಾಂಸ್ಕೃತಿಕ ಹಬ್ಬವಾಗಿ ಪ್ರಾಮುಖ್ಯತೆ ಪಡೆಯಿತು. ಇಂತಹ ಆಶೂರಖಾನಗಳು ಆಲಂ ಕೂಡಿಸುವ ಬಡ ವ್ಯಾಪಾರಸ್ಥ ಮುಸ್ಲಿಮರ ವಸತಿ ಸ್ಥಳವಾಗಿತ್ತು. ಇಲ್ಲಿ ಉಚಿತ ಆಹಾರವನ್ನು ಪೂರೈಸಲಾಗುತ್ತಿತ್ತು. ಈ ಹಬ್ಬವನ್ನು ಅಕ್ಬರ್ ಬಾದಷಹ ಮೊಹರಮ್‌ನ ರಾಷ್ಟ್ರೀಯ ಹಬ್ಬವಾಗಿ ಗುರುತಿಸಿದನು. ಕ್ರಿ.ಶ. ೧೮ನೇ ಶತಮಾನದಲ್ಲಿ ಮೈಸೂರು ಸಂಸ್ಥಾನವನ್ನಾಳಿದ ಟಿಪ್ಪು ಸುಲ್ತಾನನು ಮೊಹರಂ ಇದೊಂದು ಹಬ್ಬವಲ್ಲ, ಹಜರತ್ ಮಹಮ್ಮದ್ ಪೈಗಂಬರರ ಮೊಮ್ಮಕ್ಕಳ ಹುತಾತ್ಮರಾದ ದಿನ. ಇದನ್ನು ಸೂತಕದಂತೆ ಆಚರಿಸಬೇಕೆಂದು ಸಾರಿದನು. ಇದರಿಂದಾಗಿ ಎಲ್ಲಾರೂ ಒಂದಾಗಿ ಈ ಹಬ್ಬ ಆಚರಿಸುವ ಮುಸ್ಲಿಂ ಬಾಂಧವರಲ್ಲಿ ಕಳವಳ ಉಂಟಾಗಿ, ಕೆಲವರು ಮುನ್ನಡೆಸಿದರು. ಇನ್ನೂ ಕೆಲವರು ಆಚರಣೆಯನ್ನು ನಿಷೇಧಿಸಿದರು.

ಅಡಿ ಟಿಪ್ಪಣಿಗಳು

೧. ದಸ್ತಗೀರ್ ಅಲ್ಲಿ ಬಾಯಿ, ಕರ್ನಾಟಕದ ಮೊಹರಂ, ಪುಟ ೧೦.
೨. ಅದೇ ಪುಟ, ೧೫.
೩. ಅದಿಲ್ ಶಾಹಿ ಸಾಹಿತ್ಯ ಸಂಪುಟ ೧೮, ಪುಟ ೧೩.
೪. ಕ್ಷೇತ್ರಕಾರ್ಯದಿಂದ ಪಡೆದ ವರದಿ.
೫. ಚಂದ್ರಪ್ಪ ಹೆಬ್ಬಾಳಕರ, ಬೀದರ ಜಿಲ್ಲೆಯ ಮೂಹರಂ ಪದಗಳು, ಪುಟ ೧೨.

ಆಕರ ಗ್ರಂಥಗಳು

೧. ರಹತಮತ್ ತರೀಕೆರೆ, ೧೯೯೮, ಕರ್ನಾಟಕದ ಸೂಫಿಗಳು, ಅಭಿನವ ಪ್ರಕಾಶನ, ಬೆಂಗಳೂರು.
೨. ಚಂದ್ರಪ್ಪ ಹೆಬ್ಬಾಳಕರ್, ೨೦೦೯, ಬೀದರ್ ಜಿಲ್ಲೆಯ ಮೊಹರಂ ಪದಗಳು.
೩. ಆದಿಲ್‌ಶಾಹಿ ಸಾಹಿತ್ಯ ಸಂಪುಟಗಳು, ೨೩, ೧೮.
೪. ರಹಮತ್ ತರೀಕೆರೆ, ೨೦೧೪, ಕರ್ನಾಟಕದ ಮೊಹರಂ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
೫. ಚಿನ್ನಸ್ವಾಮಿ ಸೋಸಲೆ ಎನ್., ೨೦೦೪, ಸಾಮ್ರಾಜ್ಯ ಮತ್ತು ಸಂಸ್ಥಾನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೮೩

ವಸಾಹತುಷಾಹಿ ಚಿಕ್ಕಮಗಳೂರು ಜಿಲ್ಲೆಯ ಕಂದಾಯ ಪದ್ಧತಿ

ಬಿ.ವಿ. ರವಿರಾಜ್*

ರಾಜ್ಯದ, ಪ್ರಾಂತ್ಯದ ಅಥವಾ ಯಾವುದೇ ಜಿಲ್ಲೆಯ ಪ್ರಗತಿಯಾಗಬೇಕಿದ್ದರೆ ಆದಾಯದ ಮೂಲಗಳು ಅತ್ಯವಶ್ಯಕವಾಗಿರುತ್ತದೆ. ವಿವಿಧ ರಾಜ ಮನೆತನಗಳು, ಯುರೋಪಿಯನ್ನರು ತಾವು ಆಡಳಿತ ನಡೆಸುತ್ತಿದ್ದ ಕ್ಷೇತ್ರದಲ್ಲಿ ಅಲ್ಲಿನ ಸ್ಥಳೀಯರಿಂದ ನಾನಾ ವಿಧವಾದ ಕಂದಾಯವನ್ನು ವಸೂಲಿ ಮಾಡುತ್ತಿದ್ದರು. ಇದರ ಉದ್ದೇಶವು ರಾಜ್ಯ ಅಥವಾ ಜಿಲ್ಲೆಗೆ ಪೂರಕವಾದ ಮೂಲಭೂತ ಅವಶ್ಯಕತೆಗಳನ್ನು ಪೂರೈಸುವುದು ಹಾಗೂ ಆಯಾ ಭಾಗದ ಅಭಿವೃದ್ಧಿ ಯೋಜನೆಗಳಿಗೆ ಸೂಕ್ತ ಪರಿಹಾರವನ್ನು ಹುಡುಕುವುದು ಮಾತ್ರವಲ್ಲದೆ ಈ ರೀತಿಯ ಕಂದಾಯವನ್ನು ನಿರ್ಧರಿಸುವುದರಿಂದ ಸರ್ಕಾರದ ಹಣಕಾಸನ್ನು ಸುಧಾರಿಸುವುದು ಹಾಗೂ ಸರ್ಕಾರದಿಂದ ವಿವಿಧ ಕಾರ್ಯ ಯೋಜನೆಗಳನ್ನು ಒದಗಿಸಲು ಸಹಕರಿಸುವುದು ಇದರ ಮೂಲ ಉದ್ದೇಶವಾಗಿತ್ತು. ಆದುದರಿಂದ ಭೂಮಿಯೇ ಅತೀ ದೊಡ್ಡ ಸಂಪತ್ತಾದುದರಿಂದ ಭೂಮಿಯ ಮಣ್ಣು ಫಲವತ್ತತೆ, ಇಳುವರಿಯ ಪ್ರಮಾಣ ಮಳೆ, ನೀರಾವರಿ ಸೌಲಭ್ಯ ಮುಂತಾದುವುಗಳನ್ನು ಆಧರಿಸಿ ಕಂದಾಯವನ್ನು ನಿರ್ಧಾರ ಮಾಡಲಾಗುತ್ತಿತ್ತು. ಹೀಗೆ ವಿವಿಧ ಹಳ್ಳಿಗಳಿಂದ ಜನರು ಸರ್ಕಾರಕ್ಕೆ ಸಂದಾಯ ಮಾಡುತ್ತಿದ್ದ ಕಂದಾಯದ ಮೊತ್ತವು ರಾಜ್ಯದ ಪ್ರಮುಖ ಆದಾಯದ ಮೂಲವಾಗಿತ್ತು. ಜಿಲ್ಲೆಯಲ್ಲಿ ಪ್ರಾಚೀನ ಕಾಲದಲ್ಲಿ ಕದಂಬರ ಆಳ್ವಿಕೆಯ ಕಾಲದಲ್ಲಿ 'ಗೋಪ ಮಂತ್ರಿ' ಮತ್ತು 'ನಗದು ಕರಣಿಕ'ರು ಕೃಷಿ ಮಾಡುತ್ತಿದ್ದ ಎಲ್ಲಾ ಹಳ್ಳಿಗಳನ್ನು ಅಳತೆ ಮಾಡಿ ವಲಯಗಳನ್ನು ನಿರ್ಧರಿಸಿ ಕಂದಾಯವನ್ನು ನಿರ್ಧಾರ ಮಾಡಲಾಗುತ್ತಿತ್ತು. ಅಹಾರ ಬೆಳೆಗಳಾದ ಭತ್ತ, ಹೆಸರುಬೇಳೆ, ಹುರುಳಿ ಮುಂತಾದ ೯ ವಿಧದ ಬೆಳೆಗಳನ್ನು "ನವಧಾನ್ಯ" ಎಂದು ಕರೆಯಲಾಗುತ್ತಿತ್ತು. ಇದರ ಮೇಲೆ ವಿಧಿಸುತ್ತಿದ್ದ ಕಂದಾಯವನ್ನು "ನಿಷ್ಕ" ಎಂದು ಕರೆಯಾಗುತ್ತಿತ್ತು. ನಿಷ್ಕವನ್ನು ಫಲ ಅಥವಾ ನವತಕ್ಕೆಯ ಮೇಲೆ ನಿರ್ಧಾರವಾಗುತ್ತಿತ್ತು. ೬೪ ಪಲ್ಲಾವು ೧ ಮಣಕ್ಕೆ ಸಮವಾಗಿತ್ತು. ೨೦ ಮಣವು ಒಂದು ಕೊಳಗಕ್ಕೆ ಸಮನಾಗಿತ್ತು. ೪೦-೬೦ ಕೊಳಗವು ಒಂದು 'ಕಂಡಗ' ಎನ್ನಲಾಗುತ್ತಿತ್ತು.[೧] ತೆಂಗು, ಹಣ್ಣು ಬೆಳೆಗಳನ್ನು ಕಂದಾಯ 'ಆಗಮ' ಎಂದು ಕರೆಯಲಾಗುತ್ತಿತ್ತು. ಈ ವಿಧದ ಕಂದಾಯವನ್ನು ೧೮ ಇಂಬುಗಳ ಉದ್ದದಿಂದ ನಿರ್ಧಾರ ಮಾಡಲಾಗುತ್ತಿತ್ತು. ಕಂದಾಯ ನಿರ್ಧರಿಸುವವನು 'ಮೆಟ್ಟಿಲು' ಆಧಾರದ ಮೇಲೆ ಕಂದಾಯ ಹಾಕಲಾಗುತ್ತಿತ್ತು. ಮನುಷ್ಯನ ಬಲಪಾದದ ಅರ್ಧದಷ್ಟಕ್ಕೆ ಅನುಗುಣವಾಗಿ ನಿರ್ಧಾರ ಮಾಡಲಾಗುತಿತ್ತು. ಈ ವ್ಯವಸ್ಥೆಯನ್ನು 'ಮಾನದಂಡ' ಎಂದು ಕರೆಯಲಾಗುತ್ತಿತ್ತು. ಹೊಯ್ಸಳರ ಕಾಲದಲ್ಲಿ ಅಂದರೆ ೧೧ ರಿಂದ ೧೪ನೇ ಶತಮಾನದಲ್ಲಿ ಒಂದು 'ಫಣಂ' ಪ್ರತಿಯೊಂದು 'ಖಂಡಿ' (ಬೆಳೆದ ಭೂಮಿಗೆ)ಯಿಂದ ಪಡೆಯಲಾಗುತ್ತಿತ್ತು.[೨]

೧೭ನೇ ಶತಮಾನದಲ್ಲಿ ಕೆಳದಿಯ ಶಿವಪ್ಪ ನಾಯಕನ ಆಳ್ವಿಕೆಯ ಕಾಲದಲ್ಲಿ ಈ ಭಾಗದಲ್ಲಿ 'ಶಿಸ್ತ್' ಪದ್ದತಿಯನ್ನು ಜಾರಿಗೆ ತರಲಾಯಿತು. ಶಿವಪ್ಪ ನಾಯಕನು ಭೂಮಿಯನ್ನು ಅದರ ಫಲವತ್ತತೆ, ಸಾಮರ್ಥ್ಯ, ನೀರಾವರಿ ಪದ್ದತಿಗನುಗುಣವಾಗಿ ವಿಭಾಗಿಸಿದ್ದನು. ಆದರಂತೆ ೧೦೦೦ ಅಡಿಕೆ ಮರಗಳಿರುವ ತೋಟಕ್ಕೆ ಕಂದಾಯವನ್ನು ನಿರ್ಧಾರ ಮಾಡಲಾಯಿತು. ೧೮ ಅಡಿ ೬ ಇಂಚು ಇರುವ ಮಾಪಕದಲ್ಲಿ ಅಳತೆ ಮಾಡಿ ಕಂದಾಯವನ್ನು ನಿರ್ಧಾರ ಮಾಡಲಾಗುತ್ತಿತ್ತು ಮೈಸೂರು ರಾಜ್ಯದ ಅಡಳಿತದಲ್ಲಿ ಪ್ರತಿಯೊಂದು ತಾಲೂಕಿಗೆ 'ಹರಿಕಾರ' ಎಂಬುವವನನ್ನು ಹೈದರ್ ಅಲಿ, ಟಿಪ್ಪುವಿನ ಅಡಳಿತಾವಧಿಯಲ್ಲಿ ನೇಮಿಸಲಾಯಿತು. ಈ ಹುದ್ದೆಯನ್ನು ರಾಜ್ಯದ ಎಲ್ಲಾ ಭಾಗಗಳಲ್ಲೂ ಜಾರಿಗೆ ತರಲಾಯಿತು. ಇಡೀ ಸಾಮ್ರಾಜ್ಯವನ್ನು ೫,೦೦೦ ಪಗೋಡಗಳನ್ನೊಳಗೊಂಡ ತಾಲೂಕ್‌ದಾರ್‌ಗಳನ್ನು ನೇಮಕ ಮಾಡಲಾಯಿತು. ಪ್ರತಿಯೊಂದು ತಾಲೂಕಿಗೆ ಅಧಿಕಾರಿಗಳನ್ನು ನೇಮಕ ಮಾಡಿ ಉಸ್ತುವಾರಿ ಜವಾಬ್ದಾರಿಯನ್ನು ನೀಡಲಾಯಿತು. ಪ್ರತಿಯೊಂದು 'ಅಸಫ್'ಗಳಿಗೆ ೨೦ ರಿಂದ ೩೦ ತುಕಡಿಗಳನ್ನು ನಿಯೋಜಿಸಲಾಯಿತು.[೩]

* ಮಂಗಳೂರು ವಿಶ್ವವಿದ್ಯಾನಿಲಯ, ಮೊ. ೯೩೧೧೮ ೭೩೩೮೫

೧೭೯೯ರಲ್ಲಿ ಶ್ರೀರಂಗಪಟ್ಟಣದ ಪತನದಿಂದ ನಂತರ ಒಡೆಯರ್ ವಂಶವು ಅಡಳಿತ ಜವಬ್ದಾರಿಯನ್ನು ಪಡೆದ ನಂತರ ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು ಪೂರ್ಣಯ್ಯನವರನ್ನು ದಿವಾನರನ್ನಾಗಿ ಆಯ್ಕೆ ಮಾಡಲಾಯಿತು. ಪೂರ್ಣಯ್ಯನವರು ಕಂದಾಯ ವ್ಯವಸ್ಥೆಯನ್ನು ಸುಧಾರಿಸಿ ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಿದರು. ಇವರ ಕಾಲದಲ್ಲಿ ಬಯಲುಗಳನ್ನು, ಭೂಮಿಯನ್ನು 'ಪೈಮಶ್' ಎಂದು ಕರೆಯಲಾಯಿತು. ನಿರಂತರವಾಗಿ ಪ್ರತಿಯೊಂದು ಕಂದಾಯವನ್ನು ಮುಂದುವರೆಸಲಾಯಿತು. ಒಣ ಭೂಮಿಗೆ ಹಣದ ರೂಪದಲ್ಲಿ ೩/೧ ಭಾಗವು ಕಂದಾಯ ವಿಧಿಸಿದರೆ, ತೇವಾಂಶವುಳ್ಳ ಭತ್ತದ ಭೂಮಿಗೆ ಅರ್ದ(೧/೨) ಭಾಗ ಬೆಳೆಯಲ್ಲಿ ನೀಡಬೇಕಾಗಿತ್ತು. (ಅರ್ದ ಬೆಳೆ ನೀಡಬೇಕಿತ್ತು) ರೈತರು ಗೇಣಿ ಪಡೆದ ಭೂಮಿ 'ವರಂ' ಅಥವಾ 'ಬಟಾಯಿ' ಭೂಮಿಯಲ್ಲಿ ಬೆಳೆಯುತ್ತಿದ್ದ ಬೆಳೆಯಿಂದ ಅರ್ಧಪಾಲು ಸರ್ಕಾರಕ್ಕೆ ಗೇಣಿ ಕಂದಾಯವಾಗಿ ನೀಡಬೇಕಾಯಿತು.

ಬ್ರಿಟಿಷರ ಅವದಿಯಲ್ಲಿ (೧೮೩೧–೮೧)ಬ್ರಿಟಿಷ್ ಕಮಿಷನ್ ೧೮೩೧ರಲ್ಲಿ ಜಿಲ್ಲೆಯ ಕಂದಾಯ ನಿರ್ವಹಣೆ, ವಿಧಿಸುವುದು ಮುಂತಾದ ಕೆಲಸಗಳ ಜವಾಬ್ದಾರಿಯನ್ನು ಹೊತ್ತುಕೊಂಡಿತು. ಅತಿಯಾಗಿ ಹಣದ ರೂಪದಲ್ಲಿ ಕಂದಾಯವನ್ನು ಸರ್ಕಾರವು ಜಾರಿಗೆ ತಂದಿತು. 'ಬಟಾಯಿ' ಆದಾರದಲ್ಲಿ ನೀಡುತ್ತಿದ್ದ ಭೂಮಿಯಿಂದ ಹಣದ ರೂಪದ ಕಂದಾಯವನ್ನು ಜಿಲ್ಲೆಯ ಹಿಡುವಳಿದಾರರು ಪಾವತಿಸಬೇಕಿತ್ತು. ಹಳ್ಳಿಗಳ ಕಂದಾಯವನ್ನು ಶೃಂಗೇರಿಯ ಮೇಲ್ವಿಚಾರಣೆಯಲ್ಲಿ ವಸೂಲಿ ಮಾಡುವ ಪ್ರಯೋಗವನ್ನು ಮಾಡಿತು. ಕಂದಾಯ ಅಧಿಕಾರಿಗಳು ನಿಗದಿತ ಸಮಯದಲ್ಲಿ ವಸೂಲಿ ಮಾಡಬೇಕಿತ್ತು. ಮೈಸೂರು ರಾಜ್ಯದ ಚೀಫ್ ಕಮಿಷನರಾದ ಮಾರ್ಕ್ ಕಬ್ಬನನು ಮುಂಬೈ ಪ್ರಾಂತ್ಯದಲ್ಲಿದ್ದಂತೆ ರಾಜ್ಯದ ಭೂ ಸರ್ವೇ ಕಾರ್ಯ ನಡೆಸಿ ಕಂದಾಯ ನಿರ್ಧರಿಸಲು 'ಸರ್ವೇ ಇಲಾಖೆ'ಯನ್ನು ಸ್ಥಾಪಿಸಿದನು. ಇದರ ಉದ್ದೇಶವು ಭೂಮಿಯನ್ನು ಮಾಪನ ಮಾಡಿ ಭೂ ತೆರಿಗೆಯನ್ನು ವಿಧಿಸುವುದಾಗಿತ್ತು. ಪ್ರಥಮವಾಗಿ ಮೈಸೂರು ರಾಜ್ಯದಲ್ಲಿ ಜೆ.ಪಿ. ಗ್ರಾಂಟ್ ಎಂಬುವವನನ್ನು ಸರ್ಕಾರವು ನೇಮಿಸಿ ೧೮೬೩ರಲ್ಲಿ ಸರ್ವೇ ಕಾರ್ಯವನ್ನು ನಡೆಸಿತು. ನಂತರ ಸರ್ವೇ ಕಾರ್ಯ ನಡೆದ ಜಿಲ್ಲೆಯ ವಿವಿಧ ತಾಲೂಕುಗಳನ್ನು ವರ್ಗೀಕರಣ ಮಾಡಲಾಯಿತು. ೧೮೭೬ರಲ್ಲಿ ತರೀಕೆರೆ ತಾಲೂಕಿನಲ್ಲಿ ಸರ್ವೇ ಕಾರ್ಯ ಆರಂಬಿಸಲಾಯಿತು ಇದು ನಗರ ವಿಭಾಗಕ್ಕೆ ಸೇರಿದ್ದು, ಇದನ್ನು ಎರಡು ವಿಭಾಗಗಳಾಗಿ ವಿಭಾಗಿಸಲಾಯಿತು. ೧. ಅಜ್ಜಂಪುರ ತರಫ್, ೨. ತರೀಕೆರೆ ತರಫ್ ಎಂಬುದಾಗಿ ಈ ಎರಡೂ ವಿಭಾಗಗಳು ಸುಮಾರು ೩೧೧ ಸರ್ಕಾರಿ ಸ್ವಾಮ್ಯದ ಹಳ್ಳಿಗಳನ್ನು, ೭ ಇನಾಂ ಹಳ್ಳಿಗಳನ್ನು ಹೊಂದಿದ್ದು ೩೧ ಮಾಗಣಿಗಳಾಗಿ ಜೋಡಿಸಲಾಗಿತ್ತು. ಈ ಹಿಂದಿನಿಂದಲೂ ಜಾರಿಯಲ್ಲಿದ್ದ 'ಬೀಜಾವರಿ ತೆರಿಗೆ' ಪದ್ದತಿ (ಅಂದರೆ ಒಟ್ಟು ಇಳುವರಿಯ ಆಧಾರದ ಮೇಲೆ ವಿಧಿಸುತ್ತಿದ್ದ ತೆರಿಗೆ)ಯನ್ನು ಮುಂದುವರಿಸದೆ 'ಶಿಸ್ತ್' ಮತ್ತು 'ಪತ್ತಿ' (Patti) ಎಂಬ ಪದ್ದತಿಗಳಾಗಿ ಬದಲಾವಣೆಗೊಳಿಸಲಾಯಿತು.[೪]

ಒಣ ಭೂಮಿಗಳಲ್ಲಿ ಕೃಷಿ ಚಟುವಟಿಕೆಗಳನ್ನು ನಡೆಸುತ್ತಿದ್ದರೆ 'ವರಂ' ಅಥವಾ 'ಬಟಾಯಿ' ಬೆಳೆದು ನಿಂತ ಬೆಳೆಯ ತೆರಿಗೆಯನ್ನು ನಿರ್ಧರಿಸಲು ಸರ್ಕಾರವು ಆಯಾ ಭಾಗದ ಪಟೇಲರೊಂದಿಗೆ ಚರ್ಚಿಸಿ ಜಾರಿಗೊಳಿಸಲಾಗುತ್ತಿತ್ತು. ಅದರೆ ಈ ಪದ್ದತಿಯು ಧೀರ್ಘಕಾಲದವರೆಗೆ ಮುಂದುವರೆಯದೆ ಸ್ಥಗಿತಗೊಂಡಿತು. ಹಳ್ಳಿಯ ಅಧಿಕಾರಿಯು ಆಯಾ ಹಳ್ಳಿಯ ಎಲ್ಲಾ ಭೂಮಿಯನ್ನು ಅದರ ವಿಸ್ತೀರ್ಣ, ವಲಯಗಳು, ಕ್ಷೇತ್ರವನ್ನು ದಾಖಲು ಮಾಬೇಕಿತ್ತು. ಈ ವ್ಯವಸ್ಥೆಯನ್ನು 'ದಗ್‌ವಾರ್' (Dagvar) ಎಂದು ಕರೆಯಲಾಯಿತು. ಅನುಪಯುಕ್ತ ಭೂಮಿಗಳಿದ್ದಲ್ಲಿ ಅವುಗಳಿಗೆ ಹಿಂದಿನ ಮಾದರಿಯಾಗಿ ಕಂದಾಯ 'ದಾಗ್'ನ್ನು ವಿಧಿಸಲಾಗುತ್ತಿತ್ತು.

ಅಮೃತಾಪುರ, ಕುಡ್ಲೂರು, ಲಿಂಗದಹಳ್ಳಿ, ತರೀಕೆರೆಗಳ 'ಮಾಗಣಿ'ಗಳನ್ನು ಅದರ ದರ್ಜೆಯ ಅದಾರದ ಮೇಲೆ ಎರಡು ವಿಭಾಗಗಳಾಗಿ ವಿಭಾಗಿಸಲಾಗಿತ್ತು. ಅವುಗಳೆಂದರೆ 'ಹನುಮಾನ್ ದಯಾ' ಹಾಗೂ 'ಮನುಷ್ಯನ ದಯಾ' 'ಹನುಮಾನ್ ದಯಾ'ವು ಜನರ ಆರಾಧನಾ ದೈವವಾದ, ಹನುಮಂತನ ವಿಗ್ರಹವು ಹಿರೆಕತೂರ್ ಹಳ್ಳಿಯಲ್ಲಿದ್ದುದರಿಂದ ಹನುಮಂತನ ಎಡಗಾಲಿನ ಪಾದದ ಅಳತೆಯನ್ನಾದರಿಸಿ ನಿರ್ಧರಿಸುವ ಪರಿಪಾಠವಿದ್ದಿತು. ೧೮ ಅಡಿಯ ೧ 'ಕಟೆ' ಮತ್ತು ೧೦೦ ಕಟ್ಟಿಗಳ ೪,೯೮೭ ಯಾರ್ಡುಗಳು (೧ ಎಕರೆ, ೧ ಗುಂಟಾ ಮತ್ತು ೨೬ ಯಾರ್ಡ್ ಅಂದರೆ ೦.೫೯ ಹೆಕ್ಟೇರುಗಳು). 'ಮನುಷ್ಯನ ದಯಾ'ದಲ್ಲಿ ಮನುಷ್ಯನ ಪಾದದ ಸಹಾಯದಿಂದ ನಿರ್ಧರಿಸುವಿಕೆ. ೨,೬೨೬ ೯/೧೦ ಯಾರ್ಡ್‌ಗಳಿಗೆ ಸಮಾನವಾಗಿತ್ತು (೨೧ ಗುಂಟಾ) ಮತ್ತು ೮೫ ೯/೧೬ ಯಾರ್ಡ್‌ಗಳ ಅಂದರೆ ೦.೨೨ ಹೆಕ್ಟೇರ್‌ಗಳಾಗಿದ್ದವು. ೧೮೫೯ರ ನಂತರ ಕಂದಾಯದಲ್ಲಿ ಮಾರ್ಪಾಡುಗಳನ್ನು ತರಲಾಯಿತು 'ರೆಖನಶ್ತ್' ಕಂದಾಯ ನಿರ್ಧರಿಸದೇ ಇದ್ದ ಭೂಮಿಗೆ ಅರಣ್ಯ ಭಾಗಗಳಿಗೆ ಈ ವಿಧದ ಕಂದಾಯ ೬. ಅನ್ನದಷ್ಟು ಪ್ರಮಾಣವನ್ನು ಕಾಡು ಅಥವಾ ಒಣ ಭೂಮಿಗೆ ವಿಧಿಸಲಾಗುತ್ತಿತ್ತು. ಅಜ್ಜಂಪುರದಲ್ಲಿ ಉಪವಿಭಾಗದಲ್ಲಿ ಮೇಲಿನ ಈ ಕಂದಾಯವು ಐನ್ ಕಂದಾಯಗೆ ಸಮನಾಗಿತ್ತು.

ಇವೆಲ್ಲವೂ ಭೂಮಿಯ ಮಣ್ಣಿನ ಫಲವತ್ತತೆಗೆ ಅನುಗುಣವಾಗಿ ನಿರ್ಧರಿತವಾಗುತ್ತಿತ್ತು. ಒಣ ಭೂಮಿಯನ್ನು ೩ ದರ್ಜೆಗಳಾಗಿ ವಿಭಾಗಿಸಲಾಗಿತ್ತು. ಮೊದಲ ದರ್ಜೆಯ ಭೂಮಿಯು ೧೪೩ ಹಳ್ಳಿಗಳನ್ನು, ಎರಡು ದರ್ಜೆಯ ೧೧೦ ಹಳ್ಳಿಗಳನ್ನು ಹಾಗೂ ತೃತೀಯ ದರ್ಜೆಯ ಮೂರನೇ ಭೂಮಿಯ ೪೯ ಹಳ್ಳಿಗಳನ್ನು ಒಳಗೊಂಡಿತ್ತು. ಒಣಭೂಮಿಗೆ ಹೆಚ್ಚೆಂದರೆ ರೂ. ೧-೧೨-೦ ಪ್ರಥಮ ದರ್ಜೆಯ ಭೂಮಿಗೆ, ರೂ. ೧-೮-೦ ದ್ವಿತೀಯ ಭೂಮಿಗೆ, ರೂ. ೧-೪-೦ ತೃತೀಯ ದರ್ಜೆಯ ಭೂಮಿಗೆ ವಿಧಿಸಲಾಗುತ್ತಿತ್ತು. ಭತ್ತದ ಭೂಮಿಯನ್ನು I, II, III (ಪ್ರಥಮ, ದ್ವಿತೀಯ, ತೃತೀಯ) ದರ್ಜೆಗಳಾಗಿ ವಿಂಗಡಿಸಲಾಗಿತ್ತು.[೫]

ಬಾಣಾವರ ತಾಲೂಕು ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲೂಕಿಗೆ ಸೇರಿತ್ತು. ಅದರೆ ಪ್ರಸ್ತುತ ಹಾಸನ ಜಿಲ್ಲೆಗೆ ಸೇರಿಸಲಾಗಿದೆ. ೧೮೭೭ರಲ್ಲಿ ಈ ಭಾಗವನ್ನು ಸರ್ವೇ ಕಾರ್ಯವನ್ನು ನಡೆಸಿ ನಗರ ವಿಭಾಗದ ತಾಲೂಕೆಂದು ಪಟ್ಟಿ ಮಾಡಲಾಯಿತು. ಇಲ್ಲಿ ಸುಮಾರು ೪೧೮ ಸರ್ಕಾರಿ ಸ್ವಾಮ್ಯದ ಹಳ್ಳಿಗಳು ೫ ಇನಾಂ ಹಳ್ಳಿಗಳಾಗಿ ಇದ್ದವು. ರೈತವಾರಿ ಕಂದಾಯ ಪದ್ದತಿಯನುಸಾರ ಇಲ್ಲಿನ ಒಣ ಹಾಗೂ ಭತ್ತದ ಭೂಮಿಯ ಮೇಲೆ ಕಂದಾಯವನ್ನು ನಿರ್ಧರಿಸಲಾಯಿತು. ಶ್ರೀ. ಸ್ಟೋಕ್ಸ್ ಎಂಬಾತನು ಈ ಭಾಗದಲ್ಲಿ 'ವರ್ಗ' ಪದ್ದತಿ ಇದ್ದಿತು ಎಂದು ವರದಿ ಮಾಡುತ್ತಾನೆ. ಇಲ್ಲಿನ ಒಣಭೂಮಿಗೆ ರೂ. ೪-೦-೦ ಪ್ರತಿ ಎಕರೆಗೆ, ಭತ್ತದ ಭೂಮಿಗೆ ರೂ. ೮-೦-೬ ಪ್ರತಿ ಎಕರೆಗೆ, ಗಾರ್ಡನ್ ಲ್ಯಾಂಡ್‌ಗೆ ಪ್ರತಿ ಎಕರೆಗೆ ರೂ. ೩೪-೦-೦ ಪ್ರತಿ ಎಕರೆಗೆ ಕಂದಾಯ ವಿಧಿಸಲಾಗುತ್ತಿತ್ತು. ಕಡೂರು ತಾಲೂಕಿನ ಕಡೂರು, ಮಲ್ಲೇಶ್ವರ ಮತ್ತು ಕದರಹಳ್ಳಿ ಸುಮಾರು ೪೦ ವರ್ಷಗಳಿಂದಲೂ ಕೃಷಿ ಚಟುವಟಿಕೆಗಳು ನಡೆದ ಬಂದ ಪ್ರದೇಶಗಳಾಗಿದ್ದು ಇದರ ಮೇಲೆ ೨೫ ವರ್ಷ ಪೂರ್ವದಿಂದಲೂ ಕಂದಾಯ ನಿಗದಿ ಮಾಡಲಾಯಿತು. ೧೮೫೧-೫೨ರಲ್ಲಿಈ ಭಾಗದಿಂದ ರೂ. ೬೭,೧೮೦ ರೂ. ಸಂಗ್ರಹವಾದರೆ ೧೮೭೫-೭೬ರಲ್ಲಿ ರೂ. ೧,೧೪,೯೪ರೂ ಗಳಷ್ಟು ಏರಿಕೆಯಾಯಿತು. ಇಲ್ಲಿನ ಭೂಮಿಗೆ ಒಂದು, ಎರಡು, ಮೂರನೇ ದರ್ಜೆಗಳಾಗಿ ವಿಂಗಡಿಸಲಾಗಿತ್ತು. ಒಂದನೇ ಗುಂಪಿನಿಂದ ರೂ. ೧-೧೨-೦, ಎರಡನೇ ದರ್ಜೆ, ಮೂರನೇಯಿಂದ ೧-೮-೦ ದಷ್ಟು ನಿಗದಿ ಮಾಡಲಾಗುತ್ತಿತ್ತು. ರೂ. ೭-೦-೦, ರೂ. ೬-೮-೦ ಮತ್ತು ೬-೦-೦ ಎಂಬುದಾಗಿ. ೧೮೭೫-೭೬ರಲ್ಲಿ ಈ ಭಾಗದ ರೆವೆನ್ಯೂ ಸಂಗ್ರಹವು ೧೫೨,೯೩ ರೂ ಗಳಾಗಿದ್ದವು.

ಕೊಪ್ಪ ತಾಲೂಕನ್ನು ೧೮೭೮ರಲ್ಲಿ ಸರ್ವೇ ಕಾರ್ಯ ನಡೆಸಲಾಯಿತು. ಈ ತಾಲೂಕು ಸಹ ನಗರ ವಿಭಾಗಕ್ಕೆ ಸೇರಿದ ತಾಲೂಕಾಗಿದ್ದು ಇದು ೪೪೦ ಸರ್ಕಾರಿ ಸ್ವಾಮ್ಯದ ಹಳ್ಳಿಗಳನ್ನು ೨ ಇನಾಂ ಹಳ್ಳಿಗಳನ್ನು ಹೊಂದಿತ್ತು. ಹಳ್ಳಿಗಳನ್ನು ೧೫ ಮಾಗಣಿಗಳಾಗಿ ವಿಂಗಡಿಸಲಾಗಿತ್ತು. ಈ ಭಾಗದಲ್ಲಿ 'ವರ್ಗ' ಕಂದಾಯ ಸಾಮಾನ್ಯವಾಗಿತ್ತು. ಶಿವಪ್ಪ ನಾಯಕನ ಕಾಲಾವದಿಯ 'ಶಿಸ್ತ್' ವ್ಯವಸ್ಥೆಯು ಜಾರಿಯಲ್ಲಿತ್ತು. ಕನ್-ಶಿಸ್ತ್ ಎಂಬುದು ಪ್ರಮುಖವಾಗಿತ್ತು. 'ವರ್ಗದಾರ್ಸ್' ಹಾಗೂ ಕನ್-ಶಿಸ್ತ್ ಎಂಬುವವರು ಕರಿಮೆಣಸು, ಅರಣ್ಯ ಉತ್ಪನ್ನ ಟಿಂಬರ್ ಮುಂತಾದುವುಗಳ ಮೇಲೆ ತೆರಿಗೆ ವಿಧಿಸಿ ಸಂಗ್ರಹ ಮಾಡಲಾಗಿತ್ತು. ಅದು ೧೮೭೬-೭೭ ರಲ್ಲಿ ೧,೦೪,೯೩೬ ರೂ ಗಳಿಗೆ ಏರಿಕೆಯಾಗಿತು. ಒಣಭೂಮಿ ಹಾಗೂ ಭತ್ತದ ಭೂಮಿಗಳನ್ನು ನಾಲ್ಕು ವಿಭಾಗಗಳಾಗಿ ವಿಂಗಡಿಸಲಾಗಿತ್ತು.[೬] ದರ್ಜೆ ಒಂದು, ಎರಡನೇ, ಮೂರನೇ, ನಾಲ್ಕನೇ ಎಂದು ವಿಂಗಡಿಸಲಾಗಿತ್ತು. ೧೮೯೭ರಲ್ಲಿ ಲಕ್ಕವಳ್ಳಿ ತಾಲೂಕಿನಲ್ಲಿ ಸರ್ವೇ ಕಾರ್ಯವನ್ನು ನಡೆಸಲಾಯಿತು. ಪ್ರಸ್ತುತ ಅವಧಿಯಲ್ಲಿ ತಾಲೂಕು ಅಸ್ತಿತ್ವದಲ್ಲಿಲ್ಲ ಇದನ್ನು ತರೀಕೆರೆ ತಾಲೂಕಿನ ವ್ಯಕ್ತಿಗೆ ಸೇರಿಸಲಾಗಿದೆ. ಲಕ್ಕವಳ್ಳಿ ತಾಲೂಕು ೪೪೨ ಸರ್ಕಾರಿ ಸ್ವಾಮ್ಯದ ಹಳ್ಳಿಗಳನ್ನು ಮತ್ತು ೨ ಕವಲುಗಳನ್ನು ಹೊಂದಿದ್ದು ಇದರ ವತಿಯಿಂದ ೧೭ ಮಾಗಣಿಗಳಾಗಿ ವಿಭಾಗಿಸಲಾಗಿತ್ತು. 'ವರ್ಗ' ಕಂದಾಯವು ಸಾಮಾನ್ಯವಾಗಿತ್ತು. ಶಿವಪ್ಪ ನಾಯಕನ ಶಿಸ್ತ್‌ನ ಅದಾರದಲ್ಲಿ ನಿಗದಿ ಪಡಿಸಲಾಗಿತ್ತು. 'ಪಟ್ಟೆದಾರ್'ನು ಎತ್ತಿನ ಗಾಡಿಯಲ್ಲಿ ಬಿತ್ತನೆ ಬೀಜಗಳನ್ನು ವಿತರಿಸುತ್ತಿದ್ದನು, ಈತನಿಗೆ ರೂ.೨೦ನ್ನು ಕೃಷಿಕನು ನೀಡಬೇಕಾಗಿತ್ತು. ೧೮೫೪-೫೫ ರಲ್ಲಿ ೩೦,೬೬೩ ರಷ್ಟು ೧೮೭೮-೭೯ರಲ್ಲಿ ರೂ. ೪೧,೬೪೬ ರೂ ಗಳವರೆಗೆ ಏರಿಕೆಯಾಯಿತು. ಒಣ ಹಾಗೂ ಭತ್ತದ ಬೆಳೆಯುವ ಭೂಮಿಗಳನ್ನು ನಾಲ್ಕು ವಿಭಾಗಗಳಿಗೆ ವಿಂಗಡಿಸಲಾಗಿತ್ತು.

ನಗರ ವಿಭಾಗದ ಚಿಕ್ಕಮಗಳೂರು ತಾಲೂಕನ್ನು ೧೮೮೦ರಲ್ಲಿ ಸರ್ವೇ ನಡೆಸಲಾಯಿತು. ಈ ತಾಲೂಕು ೩೪೯ ಸರ್ಕಾರಿ ಹಳ್ಳಿಗಳನ್ನು, ೩ ಕಾಫಿ ಎಸ್ಟೇಟುಗಳನ್ನು ೨೯ ಇನಾಂ ಹಳ್ಳಿಗಳನ್ನು ಮತ್ತು ೨೩ ಮಾಗಣಿಗಳನ್ನು ಹೊಂದಿತ್ತು. ರೈತವಾರಿ ಪದ್ದತಿಯನುಗುಣವಾಗಿ ಕಂದಾಯ ನಿರ್ದಾರವು ಮಾಡಲಾಗಿತ್ತು. ೧೮೫೪-೫೫ರಲ್ಲಿ ೧,೦೮,೯೯೧ ರೂ ಗಳನ್ನು, ೧೮೭೮-೭೯ರಲ್ಲಿ ೧,೫೧,೮೭೧ ರೂಗಳನ್ನು ಕಂದಾಯದ ರೂಪದಲ್ಲಿ ಪಡೆಯಲಾಯಿತು. ಭೂಮಿಯನ್ನು ೫ ವಿಭಾಗಗಳಾಗಿ ವಿಂಗಡಿಸಲಾಗಿತ್ತು. ಮೊದಲನೆ ಒಂದನೇ ದರ್ಜೆಯ ೯೭ ಹಳ್ಳಿಗಳನ್ನು ಹೊಂದಿದ್ದು, ಹೆಚ್ಚಂದರೆ ೨-೧೦-೦ ಕಂದಾಯ ವಿಧಿಸಿದರೆ, ಎರಡನೇ ಗುಂಪಿನಲ್ಲಿ ೭೨ ಹಳ್ಳಿಗಳಿದ್ದು ರೂ. ೨-೪-೦ ಯಷ್ಟು; ಮೂರನೇ

ದರ್ಜೆಯು ೫೯ ಹಳ್ಳಿಗಳನ್ನು ಒಳಗೊಂಡು ರೂ. ೧-೮-೦ ದಷ್ಟು ೪ನೇ ದರ್ಜೆಯು ೪೭ ಹಳ್ಳಿಗಳನ್ನು ಒಳಗೊಂಡು ರೂ ೧-೮-೦ದಷ್ಟು, ಐದನೇ ದರ್ಜೆಯು ೭೭ ಹಳ್ಳಿಗಳನ್ನು ಒಳಗೊಂಡಿದ್ದು ರೂ. ೧-೦-೦ ದಷ್ಟು ಕಂದಾಯ ನಿಗದಿ ಮಾಡಲಾಗಿತ್ತು.[೭] ಮೂಡಿಗೆರೆ ತಾಲೂಕು ೧೮೭೬ರಲ್ಲಿ ಅಸ್ತಿತ್ವಕ್ಕೆ ಬಂದಿತು. ಚಿಕ್ಕಮಗಳೂರು, ಬೇಲೂರು ಮತ್ತು ಮಂಜರಾಬಾದ್‌ನ ಹಳ್ಳಿಗಳನ್ನೊಳಗೊಂಡ ತಾಲೂಕಾಗಿದ್ದಿತು. (ಮಂಜರಾಬಾದ್, ಬೇಲೂರು ತಾಲೂಕನ್ನು ಹಾಸನ ಜಿಲ್ಲೆಗಳುಗೆ ಸೇರಿಸಲಾಯಿತು.) ೬ ಮಾಗಣಿಗಳಿದ್ದವು. ಗೋಣಿಬೀಡು ಮಾಗಣಿಯನ್ನು ಬೇಲೂರು ತಾಲೂಕಿನ ವ್ಯಾಪ್ತಿಗೆ ಸೇರಿಸಲಾಯಿತು. ಉಳಿದ ೫ ಮಾಗಣಿಗಳಲ್ಲಿ ೧೧೬ ಸರ್ಕಾರಿ ಸ್ವಾಮ್ಯದ ಹಳ್ಳಿಗಳು, ೧೩ ಕಾಪಿ ಎಸ್ಟೇಟುಗಳನ್ನು ೧೮೮೦-೮೧ರಲ್ಲಿ ಕಂದಾಯದ ವ್ಯಾಪ್ತಿಗೆ ಒಳಪಡಿಸಲಾಯಿತು. ಈ ತಾಲೂಕು ಹೆಚ್ಚು ಬೆಟ್ಟಗುಡ್ಡಗಳಿಂದ ಆವೃತವಾಗಿದ್ದು ೧೮೫೫-೫೬ರಲ್ಲಿ ರೂ. ೪೧,೬೫೪, ೧೮೭೯-೮೦ರಲ್ಲಿ ೫೧,೬೬೯ರೂ ಕಂದಾಯ ವಸೂಲಿ ಮಾಡಲಾಯಿತು.

ಒಣ ಹಾಗೂ ಭತ್ತ ಬೆಳೆಯುವ ಭೂಮಿಯನ್ನು ನಾಲ್ಕು ಗುಂಪುಗಳಾಗಿ ವಿಂಗಡಿಸಲಾಗಿತ್ತು. ಒಂದನೇ ಗುಂಪು ೩೮ ಹಳ್ಳಿಗಳನ್ನೊಳಗೊಂಡ ಒಣ ಭೂಮಿಯಾಗಿದ್ದರೆ, ಎರಡನೇ ಗುಂಪು ೧೯ ಹಳ್ಳಿಗಳನ್ನು, ಮೂರನೇ ಗುಂಪು ೨೦ ಹಳ್ಳಿಗಳನ್ನು ನಾಲ್ಕನೇ ಗುಂಪು ೫೯ ಹಳ್ಳಿಗಳನ್ನು ಒಳಗೊಂಡಿತ್ತು. ಒಂದನೇ, ಎರಡನೇ ಗುಂಪಿಗೆ ೧-೦-೦ ರಷ್ಟು, ಮೂರನೇ, ನಾಲ್ಕನೇ ಗುಂಪಿಗೆ ೦-೧೨-೦ ರಷ್ಟು ಕಂದಾಯ ವಿಧಿಸಲಾಗುತ್ತಿತ್ತು. ಶೃಂಗೇರಿಯು ಧಾರ್ಮಿಕ ಸಂಸ್ಥಾನವಾಗಿದ್ದು ಶಾರದ ಮಠದ ವ್ಯಾಪ್ತಿಗೆ ಬರುವ ಈ ಕ್ಷೇತ್ರವನ್ನು ಇನಾಂ ಕ್ಷೇತ್ರವನ್ನಾಗಿ ಪರಿಗಣಿಸಲಾಯಿತು. ೧೮೯೭ರ ಕಕಾಯ್ದೆ ಸಂಖ್ಯೆ ನಾಲ್ಕರಂತೆ ಜಾಗೀರು ಭೂಮಿಯಿಂದ ಶೃಂಗೇರಿಯು ಭತ್ತದ ಬೆಳೆಯ ರೂಪದಲ್ಲಿ ಕಂದಾಯ ಸಲ್ಲಿಸುವ ಬದಲು ಅಗ್ರಹಾರ ಇನಾಂ ಸಲ್ಲಿಸಬೇಕಾಗಿತ್ತು. ಬಟಾಯಿ ಕಂದಾಯವನ್ನು ಈ ಭಾಗಕ್ಕೆ ಅನ್ವಯಿಸಿರಲಿಲ್ಲ. ಶೃಂಗೇರಿ ಜಾಗಿರನ್ನು ೧೯೦೧ರಲ್ಲಿ (ಸೆಟಲ್) ನಿರ್ಣಯ ಮಾಡಲಾಯಿತು.[೮]

೧೯ನೇ ಶತಮಾನದಲ್ಲಿ ಕಾಫಿ ಕೃಷಿಯ ಸಣ್ಣ ಪ್ರಮಾಣದಲ್ಲಿ ಆರಂಭವಾಯಿತು. ನಂತರ ವಿಸ್ತಾರಗೊಳ್ಳುತ್ತಾ ಸಾಗಿತು. 'ಕಾಫಿ ಕೃಷಿಯು ಮೇಲೆಯೂ ತೆರಿಗಯನ್ನು ವಿಧಿಸಲಾಗುತ್ತಿತ್ತು. ಅವುಗಳಲ್ಲಿ ಮುಖ್ಯವಾದುದು 'ವರಂ' (ಉತ್ಪಾದನೆಯ ಅರ್ದ ಪಾಲು ನೀಡುವುದು) ಎನ್ನುವ ತೆರಿಗೆಯನ್ನು ಸರ್ಕಾರವು ನಿರ್ಧರಿಸಿತು. ೧೮೩೧ರಲ್ಲಿ ಬ್ರಿಟಿಷರು ಜಿಲ್ಲೆಯನ್ನು ತಮ್ಮ ನೇರ ಹತೋಟಿಗೆ ತೆಗೆದುಕೊಂಡಾಗ 'ಹಲಾತ್' () ಪ್ರತಿ ಮೌಂಡ್‌ಗೆ ಒಂದು ರೂ ಇತ್ತು ಅಥವಾ (ಪ್ರತಿ ೮ ವ್ಯಾಟ್‌ಗೆ ೪ರೂ).

ಕಂದಾಯದ ವಿಧಗಳು

ಭೂಮಿಯನ್ನು ಉಳುಮೆ ಮತ್ತು ಉತ್ಪಾಧಕತೆಯ ಆಧಾರಕ್ಕನುಗುಣವಾಗಿ ವಿಂಗಡನೆ ಮಾಡಲಾಗಿತ್ತು. ಅವುಗಳೆಂದರೆ:

೧. ಬಟಾಯಿ ಕಂದಾಯ: ಬೆಳೆಯುವ ಬೆಳೆಗೆ ಅನುಗುಣವಾಗಿ ಭೂಮಿಯನ್ನು ವಿಭಾಗಿಸಿ ಬಟಾಯಿ ಭೂಮಿಗಳನ್ನು ನೀಡಲಾಗುತ್ತಿತ್ತು. ಇಂತಹ ಭೂಮಿಯಲ್ಲಿ ಯಾವುದೇ ವಿತ್ತೀಯ ನಿರ್ಧಾರವಿಲ್ಲದೆ ಬೆಳೆಯ ಪ್ರಮಾಣದ ಆಧಾರದಲ್ಲಿ ಕಂದಾಯವನ್ನು ನಿರ್ಧರಿಸಲಾಗುತ್ತಿತ್ತು. ಬಟಾಯಿ ವ್ಯವಸ್ಥೆಯನ್ನು ಸಾಮಾನ್ಯವಾಗಿ 'ವರಂ' ಪದ್ಧತಿ ಎಂದೂ ಕರೆಯಲಾಗುತ್ತಿತ್ತು. ಇಂತಹ ಭೂಮಿಯನ್ನು ಪಡೆದ ರೈತರು ಹಲವಾರು ವರ್ಷಗಳವರೆಗೆ ಕೃಷಿಯನ್ನು ನಡೆಸುವ ಅವಕಾಶವನ್ನು ಹೊಂದಿದ್ದರು. ಈ ಬಟಾಯಿ ಪದ್ಧತಿಯಿಂದಾಗಿ ರೈತರು ವಿವಿಧ ರೀತಿಯಲ್ಲಿ ಅನುಕೂಲಗಳನ್ನು ಪಡೆದರು. ಕೃಷಿ ಮಾಡುತ್ತಿದ್ದ ರೈತರಿಗೆ ಪ್ರತಿ ವರ್ಷವೂ ಬಟಾಯಿ ಭೂಮಿಯು ಸುಲಭವಾಗಿ ಸಿಗುತ್ತಿತ್ತು. ಕೆಲವೊಮ್ಮೆ ಹಲವು ವರ್ಷಗಳಲ್ಲಿ ಹಲವು ರೈತರು ಈ ಭೂಮಿಯನ್ನು ಪಡೆಯುತ್ತಿದ್ದರು. ಹೀಗೆ ರೈತರು, ಭೂ ಒಡೆಯರು ಮತ್ತು ಸರ್ಕಾರಗಳು ಪದ್ಧತಿಯನುಸಾರ ಉತ್ಪಾಧಿಸಿದ ಬೆಳೆಯನ್ನು ಸಮವಾಗಿ ಹಂಚಿಕೊಳ್ಳುತ್ತಿದ್ದರು. ಕೆಲವೊಮ್ಮೆ ರೈತನಿಗೆ ೨/೩ರಷ್ಟು ಅಥವಾ ಅದಕ್ಕಿಂತ ಹೆಚ್ಚು ಬೆಳೆಯು ಲಾಭವಾಗುತ್ತಿತ್ತು. ಅಡಿಕೆ ಬೆಳೆಯನ್ನು ಬೆಳೆಯುತ್ತಿದ್ದ ಬಟಾಯಿ ಭೂಮಿಯನ್ನು ಹೊಂದಿದ್ದ ರೈತರು ತಾವು ಪಡೆದ ಭೂಮಿಯಲ್ಲಿ ವಂಶಪಾರಂಪರ್ಯವಾಗಿ ಕೃಷಿ ಚಟುವಟಿಕೆಗಳನ್ನು ನಡೆಸಬಹುದಿತ್ತು. ಸರ್ಕಾರಕ್ಕೆ ಕಂದಾಯವನ್ನು ಸಲ್ಲಿಸಲು ವಿಫಲನಾದರೆ, ಸರ್ಕಾರವು ನೀಡುತ್ತಿದ್ದ ಬಾಕಿಯನ್ನು ಧೀರ್ಘಕಾಲದವರೆಗೆ ಮುಂದುವರೆಸುತ್ತಿರಲಿಲ್ಲ. ಸರ್ಕಾರಕ್ಕೆ ಬಟಾಯಿ ಭೂಮಿಯನ್ನು ಹೊಂದಿದ್ದವರು ತನ್ನ ಭೂಮಿಯನ್ನು ಮಾರಾಟ ಮಾಡಬಹುದಿತ್ತು. ಹಾಗೆಯೇ, ಬಾಕಿಯನ್ನು ಕಟ್ಟಬೇಕಿತ್ತು. ಈ ಮಾದರಿಯ ಬಟಾಯಿ ಕಂದಾಯ ವ್ಯವಸ್ಥೆಯು ಜಿಲ್ಲೆಯ ಬೀರೂರಿನ ಭಾಗದಲ್ಲಿದ್ದ ಅಡಿಕೆ ತೋಟಗಳಿಗೆ ಹೆಚ್ಚು ಅನ್ವಯ ಮಾಡಲಾಗಿತ್ತು. ಪೂರ್ಣಯ್ಯನವರ ಆಡಳಿತಾವಧಿಯಲ್ಲಿ ೧೮೩೪-೩೫ರವರೆಗೂ ಬೀರೂರಿನಲ್ಲಿ ಬಟಾಯಿ ಪದ್ಧತಿ ಅಸ್ತಿತ್ವದಲ್ಲಿತ್ತು.[೯] ಬಟಾಯಿ ಭೂಮಿಯಿಂದ ಪಡೆದ ಉತ್ಪಾದನೆಯಲ್ಲಿ ೧ ಗೋಣಿ (ಚೀಲ)ದಷ್ಟು ಸರ್ಕಾರಕ್ಕೆ

ಸಲ್ಲಿಸಬೇಕಿತ್ತು. ಬ್ರಿಟಿಷ್ ಭಾರತದ ಚಿಕ್ಕಮಗಳೂರು ಜಿಲ್ಲೆಯಲ್ಲಿ ಹೆಚ್ಚು 'ಬಟಾಯಿ ಪದ್ದತಿ'ಯು ಚಾಲ್ತಿಯಲ್ಲಿರುತ್ತದೆ. ರಾಜ್ಯದ ಇತರೇ ಜಿಲ್ಲೆಗಳಲ್ಲಿ ಈ ಪದ್ದತಿಯನ್ನು ನಿಷೇಧಿಸಲಾಗಿತ್ತು.

೨. ಗೇಣಿಮುಕ್ತ ಹಿಡುವಳಿ

ರಾಜ್ಯದಲ್ಲಿ ಗೇಣಿಮುಕ್ತ ಹಿಡುವಳಿ ಪದ್ದತಿಯು ಜಾರಿಯಲ್ಲಿದ್ದಿತು. ಧಾರ್ಮಿಕ ಕೇಂದ್ರಗಳಿಗೆ, ಅಗ್ರಹಾರಗಳಿಗೆ ಹಿಡುವಳಿಗಾಗಿ ಸರ್ಕಾರವು ಇಂತಹ ಭೂಮಿಯನ್ನು ನೀಡುತ್ತಿತ್ತು. ಬ್ರಾಹ್ಮಣರ ಸಂಘ ಸಂಸ್ಥೆಗಳು, ಧಾರ್ಮಿಕ ಕೇಂದ್ರಗಳಿಗೆ ದೇವಾದಾಯ ಇನಾಂ, ಧರ್ಮಾದಾಯ ಇನಾಂಗಳನ್ನು ವಿತರಿಸಲಾಗುತ್ತಿತ್ತು. ಹೀಗೆ ವಿತರಿಸಿದ ಭೂಮಿಗೆ ಯಾವುದೇ ಕಂದಾಯ, ಸುಂಕವನ್ನು ವಿಧಿಸುತ್ತಿರಲಿಲ್ಲ. ಇಂತಹ ಭೂಮಿಗಳಿಗೆ 'ಸರ್ವಮಾನ್ಯ ಇನಾಂ' ಭೂಮಿ, ತೆರಿಗೆ ಮುಕ್ತ ಭೂಮಿ ಎಂದು ಕರೆಯಲಾಗುತ್ತಿತ್ತು. ಬ್ರಾಹ್ಮಣ ಸಮುದಾಯಗಳು ಹೀಗೆ ಪಡೆದ ಭೂಮಿಯಲ್ಲಿ ಹಿಡುವಳಿಯನ್ನು ನಡೆಸಿ ಸಂಪೂರ್ಣ ಆದಾಯವನ್ನು, ಬೆಳೆಯನ್ನು ಅನುಭೋಗಿಸುವ ಹಕ್ಕನ್ನು ನೀಡಲಾಗಿತ್ತು.[೧೦]

೩. ಕೊಡಿಗೆ ಭೂಮಿಗಳು

ಇಂತಹ ಭೂಮಿಗಳು ತೆರಿಗೆಯಿಂದ ಮುಕ್ತತೆಯನ್ನು ಪಡೆದಿದ್ದವು. ಪರಿಸ್ಥಿತಿಗನುಗುಣವಾಗಿ ಅಲ್ಪ ಪ್ರಮಾಣದ ತೆರಿಗೆಯನ್ನು ವಿಧಿಸುವ ಭೂಮಿಯಾಗಿತ್ತು. ಆದರೆ, ಇಂತಹ ಭೂಮಿಯನ್ನು ಪಾಳು ಬಿಡುವ ಹಾಗಿರಲಿಲ್ಲ. ಇದೂ ಕೂಡ ಇನಾಂ ಭೂಮಿಯ ಮಾದರಿ ವ್ಯವಸ್ಥೆಯಾಗಿದ್ದು, ಅವಕಾಶಕ್ಕನುಗುಣವಾಗಿ ಅಲ್ಪ ಪ್ರಮಾಣದ ತೆರಿಗೆಯನ್ನು ಇಂತಹ ಭೂಮಿಗೆ ವಿಧಿಸಬಹುದಿತ್ತು.[೧೧]

೪. ಖಾಯಾಂ ಗುತ್ತಾ ಹಿಡುವಳಿ

ನಿಗದಿತ ಸಮಯವನ್ನು ನಿಗಧಿಪಡಿಸದೆ ಸಂಪೂರ್ಣವಾಗಿ ಇಡೀ ಹಳ್ಳಿಗೆ ವಿಧಿಸಲಾಗುತ್ತಿದ್ದ ಕಂದಾಯ ಪದ್ದತಿಯೇ ಖಾಯಂ ಗುತ್ತಾ ಹಿಡುವಳಿ ಪದ್ದತಿ. ಈ ವ್ಯವಸ್ಥೆಯು ೧೮೧೧-೧೮೩೧ರ ಪೂರ್ಣಯ್ಯ ಹಾಗೂ ಮುಮ್ಮಡಿ ಕೃಷ್ಣರಾಜ ಒಡೆಯರ್‌ರವರ ಆಳ್ವಿಕೆಯ ಅವಧಿಯಲ್ಲಿ ಅಸ್ತಿತ್ವಕ್ಕೆ ಬಂದಿತು. ಇದರ ಪ್ರಕಾರ ೩ರಿಂದ ೫ವರ್ಷಗಳವರೆಗೆ ಕಂದಾಯದಲ್ಲಿ ಸಡಿಲಿಕೆ ಇದ್ದಿತು. ಬೆಳೆಗಳು ಕಣಾವಿಗೆ ಬಂದ ಸಂದರ್ಭದಲ್ಲಿ, ಕಣಾವಿನ ನಂತರ ಹಳ್ಳಿಯ ಪಟೇಲ, ಶಾನುಭೋಗ ಅಥವಾ ಸರ್ಕಾರ್‌ಗಳ ಸೇವಕರುಗಳಿಗೆ ನಿಗದಿತ ಕಂದಾಯವನ್ನು ಸಲ್ಲಿಸಬೇಕಿತ್ತು. ಹೀಗೆ ಸಂಗ್ರಹವಾದ ಕಂದಾಯವು ನಂತರ ಸರ್ಕಾರಕ್ಕೆ ಸಂದಾಯವಾಗುತ್ತಿತ್ತು. ಈ ವ್ಯವಸ್ಥೆಯಲ್ಲಿ ಗುತ್ತಿಗೆಯನ್ನು ಪಡೆದ ಗುತ್ತಿಗೆದಾರನು ಹೆಚ್ಚು ಲಾಭವನ್ನು ಇಟ್ಟುಕೊಳ್ಳುವಂತಿರಲಿಲ್ಲ. ಉತ್ಪಾದನೆಯ ೧ನೇ ೨ರಷ್ಟು (೧/೨) ಪಾಲನ್ನು ರೈತನು ಹೊಂದಬಹುದಿತ್ತು. ವಂಚನೆಯೆಸಗುವ ರೈತರುಗಳಿಗೆ ಸರ್ಕಾರವು ಆಯಾ ಹಳ್ಳಿಯ ಸರ್ಕಾರ್ ಸರ್ವೆಂಟ್‌ಗಳಿಗೆ ವಸೂಲಿಯ ಜವಾಬ್ದಾರಿ, ವಂಚನೆ ತಡೆ ಮುಂತಾದ ಜವಾಬ್ದಾರಿಯನ್ನು ನೀಡಿತ್ತು. ಖಾಯಂ ಗುತ್ತಾ ಭೂಮಿಗಳನ್ನು ಮಾರಾಟ ಮಾಡುವುದು ಕಡಿಮೆಯಾಗಿತ್ತು. ಖಾಯಾಂ ಗುತ್ತಾ ಕಂದಾಯ ಭೂಮಿಯು ಹೆಚ್ಚಾಗಿ ಹೊಂದಿದ್ದ ಟ್ಯಾಂಕುಗಳು, ಫಲವತ್ತತೆ ಹಾಗೂ ಸಂಪತ್ತಿನ ಲಭ್ಯತೆಗೆ ಅನುಗುಣವಾಗಿ ಹೆಚ್ಚು ಬೆಲೆಯನ್ನು ಅಂತಹ ಭೂಮಿಗೆ ನಿಗದಿಪಡಿಸಲಾಗುತ್ತಿತ್ತು.[೧೨]

ಬ್ರಿಟಿಷರ ಕಾಲಾವಧಿಯಲ್ಲಿ ಕಂದಾಯ ಪದ್ಧತಿ

ಬ್ರಿಟಿಷರ ಆಡಳಿತಾವಧಿಯಲ್ಲಿ ಭೂ ಹಿಡುವಳಿ ಪದ್ದತಿಯಲ್ಲಿ ಬದಲಾವಣೆಗಳಾದವು ಬ್ರಿಟಿಷರು ಪೂರ್ವದಲ್ಲಿದ್ದ ಕಂದಾಯ ಪದ್ದತಿಗಳಲ್ಲಿ ಬದಲಾವಣೆಗಳನ್ನು ತಂದರು. ರಾಜ್ಯದ ವಿವಿಧ ಭೂ ಹಿಡುವಳಿದಾರರು ಹೊಂದಿದ್ದ ಭೂಮಿಯನ್ನು ಮೊದಲು ನೋಂದಣಿ ಮಾಡುವ ವ್ಯವಸ್ಥೆಯನ್ನು ಜಾರಿಗೆ ತಂದರು. ಈ ಹಿಂದೆ ಉತ್ಪಾದನೆಯಲ್ಲಿ ರಾಜನ ಪಾಲು ಎಂಬುದಾಗಿದ್ದ, ವಾರ್ಷಿಕವಾಗಿ ಸಲ್ಲಿಸಬೇಕಿದ್ದ ಉತ್ಪಾದನೆ (ಕಂದಾಯ)ಯನ್ನು ಕಾಣಿಕೆ ನೀಡುವುದನ್ನು ರದ್ದುಪಡಿಸಿ, ಹಣದ ರೂಪದಲ್ಲಿ ಪಾವತಿ ಮಾಡುವ ನೀತಿಯನ್ನು ಜಾರಿಗೆ ತಂದರು. ಆದರೆ, ಹೀಗೆ ಪಾವತಿ ಮಾಡಬೇಕಿದ್ದ ಹಣವು ಹಿಡುವಳಿದಾರರ ಬೆಳೆಯು ಉತ್ತಮವಾಗಿದ್ದರೂ, ಉತ್ತಮವಾಗಿಲ್ಲದಿದ್ದರೂ, ಬೆಳೆಯನ್ನು ಬೆಳೆದರೂ, ಬೆಳೆಯದಿದ್ದರೂ ಕಡ್ಡಾಯವಾಗಿ ಸಲ್ಲಿಸಬೇಕಾಗಿತ್ತು. ಈ ರೀತಿಯಲ್ಲಿ ಸಲ್ಲಿಸಲಾಗುತ್ತಿದ್ದ ಹಣವನ್ನು "ಗೇಣಿ" ಎಂದು ಕರೆಯಲಾಯಿತು.[೧೩]

ಬ್ರಿಟಿಷ್ ಸರ್ಕಾರವು ಈ ಹಿಂದೆ ಧಾರ್ಮಿಕ ಸಂಸ್ಥೆಗಳಿಗೆ ನೀಡುತ್ತಿದ್ದ 'ಇನಾಂ' ಪದ್ದತಿಯನ್ನು ರದ್ದುಪಡಿಸಿ ಖಾಯಾಂ ಗುತ್ತಾ ಪದ್ದತಿಯಂತೆ ಧಾರ್ಮಿಕ ಸಂಸ್ಥೆಗಳಿದ್ದರೂ ಆ ಹಳ್ಳಿಗೆ ಕಂದಾಯ ನಿರ್ಧರಿಸಲಾಯಿತು. ಪೂರ್ಣಯ್ಯನವರು

ದಿವಾನರಾಗಿದ್ದ ಕಾಲದಲ್ಲಿ ಇನಾಂ ಭೂಮಿಯನ್ನು 'ಅಕ್ಷಯ'ವೆಂದು ಕರೆಯಲಾಗುತ್ತಿತ್ತು. ಬ್ರಿಟಿಷರ ಕಾಲಾವಧಿಯಲ್ಲಿ 'ಎಕರೆಗಳು' ಮತ್ತು 'ಗುಂಟಾ' ಎಂಬುದಾಗಿ ಮಾರ್ಪಾಡಾಯಿತು.[೧೪]

೧೮೭೫ರಲ್ಲಿ 'ಕೊಡಿಗೆ ಇನಾಂ'ನ್ನು ರದ್ದುಪಡಿಸಲಾಯಿತು. ೧೮೮೧ರಲ್ಲಿ ಇನಾಂ ಇಲಾಖೆಯನ್ನು ಮುಚ್ಚಲಾಯಿತು. ಇನಾಂ ಭೂಮಿಗಳಾಗಿ ನೀಡಿದ್ದ ೫೭,೮೮೮ ಎಕರೆಗಳಲ್ಲಿ ೫೭,೭೨೬ ಎಕರೆಗಳು ಕ್ರಮಭದ್ಧವಾಗಿದ್ದರೆ ೧೬೨ ಕ್ರಮಭದ್ಧವಾಗಿರಲಿಲ್ಲ. ಆದುದರಿಂದ, ಇನಾಂ ಕಂದಾಯ ವ್ಯವಸ್ಥೆಯನ್ನು ತೆಗೆದುಹಾಕಲಾಯಿತು. ಬ್ರಿಟಿಷರ ಆಡಳಿತಾವಧಿಯಲ್ಲಿ ರೈತವಾರಿ ಪದ್ಧತಿ ಜಾರಿಗೆ ಬಂದಿತು. ಸರ್ಕಾರ ಹಾಗೂ ಕೃಷಿಕನೊಂದಿಗೆ ಇದರ ಮೂಲಕ ನೇರ ಸಂಪರ್ಕ, ಸಂಬಂಧವನ್ನು ಏರ್ಪಡಿಸಲಾಯಿತು. ಪಟೇಲರು (ಗೌಡರು) ಹೆಚ್ಚು ಶಕ್ತಿಶಾಲಿಯಾಗಿದ್ದು, ಹಳ್ಳಿಯ ರೈತರ ಜಮೀನನ್ನು ನೋಡಿಕೊಳ್ಳುವ ಜವಾಬ್ದಾರಿಯನ್ನು ಹೊಂದಿದ್ದರು. ಹೀಗೆ ಅಧಿಕಾರವನ್ನು ಪಡೆದಿದ್ದ ಪಟೇಲರು ರೈತರು ಬೆಳೆಯುತ್ತಿದ್ದ ಏಲಕ್ಕಿ ತೋಟ ಹಾಗೂ ಇತರೇ ಕೃಷಿ ಭೂಮಿಗೆ ಅದರ ನೈಜ ಬೆಲೆಗಿಂತ ಕಡಿಮೆ ಪ್ರಮಾಣದ ಬೆಲೆಯನ್ನು ನಿರ್ಧರಿಸುತ್ತಿದ್ದರು. ಮಾರುಕಟ್ಟೆ ಉತ್ಪನ್ನಗಳು ಹೆಚ್ಚಾಗಿ ಬೆಳೆಯುತ್ತಿದ್ದರೂ ಅಂತಹ ಭೂಮಿಗೆ ನಿಖರ ಬೆಲೆಯನ್ನು ನೀಡುತ್ತಿರಲಿಲ್ಲ. ಬದಲಾಗಿ ಗೇಣಿಗೆ ಪಡೆದು ಅಧಿಕ ಲಾಭವನ್ನು ಗಳಿಸುತ್ತಿದ್ದರು. ಕೆಲವೊಮ್ಮೆ ಗೇಣಿಗೆ ಪಡೆದ ಜಮೀನಿಗೆ ಹಣ ಅಥವಾ ಉತ್ಪನ್ನವನ್ನು ನಿಗದಿ ಮಾಡುತ್ತಿದ್ದರು.[೧೫]

ಪಟೇಲರು ಹಿಂದೆ ಪಡೆದಿದ್ದ ವಂಶಪಾರಂಪರ್ಯವಾಗಿ ಕಂದಾಯ ನಿರ್ವಹಣೆಯ ಜವಾಬ್ದಾರಿಯ ಬದಲಿಗೆ 'ಅಮೀಲ್ದಾರ'ರ ನೇಮಕ ಮಾಡಲಾಯಿತು. ಕಂದಾಯ ನಿರ್ಧಾರವನ್ನು, ಶಾನುಭೋಗನಿಗೆ ವಹಿಸಲಾಯಿತು. ಮೈಸೂರು ಬ್ರಿಟಿಷರ ನೇರ ಆಳ್ವಿಕೆಗೆ ಬರುವ ಪೂರ್ವದಲ್ಲಿ ಸ್ಥಳೀಯ ಸರ್ಕಾರವು ಪಟೇಲ ಎಂಬ ಏಜನ್ಸಿಯ ಮೂಲಕ ಹೆಚ್ಚಿನ ಇನಾಂಗಳನ್ನು ಅನುಭವಿಸುತ್ತಿದ್ದರು, ಇಂತಹ ವ್ಯವಸ್ಥೆಗೆ ಕಡಿವಾಣ ಹಾಕಲಾಯಿತು.[೧೬] ೧೮೮೦–೮೧ರಲ್ಲಿ ಹಲಾತ್‌ನಿಂದ ೨೨,೩೨೨ರೂ ಬಂದರೆ, ಜಮೀನಿನ ಮೇಲಿನ ಕಂದಾಯದಿಂದ ೩೩,೦೦೦ರೂ ಬಂದಿತು. ನಂತರ, ಸಿಂಕೋನಾ ತೋಟಗಾರಿಕೆಗು ಕಾಫಿಯ ನಿಬಂಧನೆಗಳನ್ನು ಅನ್ವಯ ಮಾಡಲಾಯಿತು. ಹಳೆಯ ಪಟ್ಟಾಗಳನ್ನು ಸರ್ಕಾರವು ವಾಪಾಸು ತೆಗೆದುಕೊಂಡು ಹೊಸ ಪಟ್ಟಾಗಳನ್ನು ರಂಗಾಚಾರ್ಲುರವರು ಮೈಸೂರಿನ ದಿವಾನರಾಗಿದ್ದ ಅವಧಿಯಲ್ಲಿ ನೀಡಿತು.[೧೭] ೧೯೦೬ಕ್ಕೂ ಪೂರ್ವದಲ್ಲಿ ಜಿಲ್ಲೆ ಹಾಗೂ ಮೈಸೂರಿನಲ್ಲಿ ಸಾಮಾನ್ಯವಾಗಿ 'ಹಲಾತ್' ಕಂದಾಯ ನಿರ್ಧರಿಸುವಿಕೆ ಸಾಮಾನ್ಯವಾಗಿತ್ತು. ಈ ಕಂದಾಯವು ಅಡಿಕೆ ತೋಟಗಳಿಗೆ ಹೆಚ್ಚಾಗಿ ಅನ್ವಯವಾಗುತ್ತಿತ್ತು. ಗಾರ್ಡನ್ ಟಾಕ್ಸ್‌ನ ಮೂಲಕ ಕೊಪ್ಪದ ಭಾಗದಲ್ಲಿರುವ ಅಡಿಕೆ ತೋಟಗಳಿಂದ ೪೫,೦೦೦ರೂಗಳಷ್ಟು ಸಂಗ್ರಹವಾಗುತ್ತಿತ್ತು. ಹಲಾತ್ ಕಂದಾಯವನ್ನು ವಿಧಿಸಿದ್ದರಿಂದ ಕಂದಾಯದ ಪ್ರಮಾಣ ೪೭,೦೦೦ ರೂಗಳಿಗೆ ಏರಿಕೆಯಾಗಿತ್ತು ಆದುದರಿಂದ ಅಡಿಕೆ, ಕಾಫಿ ಬೆಳೆಗಾರರು ಈ ವಿಧದ ಕಂದಾಯ ಕ್ರಮಕ್ಕೆ ತೀವ್ರ ವಿರೋಧವನ್ನು ವ್ಯಕ್ತಪಡಿಸಿದರು. ಇದಕ್ಕೆ ಸರಕಾರವು ಪ್ರತಿಯಾಗಿ, ರಾಜ್ಯದ ಹಣಕಾಸು ಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು, ಯಾವುದೇ ಪೂರ್ವಗ್ರಹವಿಲ್ಲದೆ, ಅಗತ್ಯವಿದ್ದಲ್ಲಿ ಕಂದಾಯದ ಮಾರ್ಪಾಡುಗಳನ್ನು ತರಲಾಗುವುದು ಹಾಗೆಯೇ, ಹಲಾತ್ ಕಂದಾಯವನ್ನು ನಿರ್ಮೂಲನೆಗೊಳಿಸುವ ಮತ್ತು ಸರ್ಕಾರದ ಆರ್ಥಿಕ ಸ್ಥಿತಿಗತಿಗಳನ್ನು ಸಮತೋಲನದಲ್ಲಿ ಕಾಯ್ದುಕೊಳ್ಳುವಂತೆ ಸರ್ವೇ ಕಮೀಷನರುಗಳಿಗೆ ಆಜ್ಞಾಪಿಸಿ, ಆ ಮೂಲಕ ನಿರ್ಧರಿಸಲಾಗುವುದೆಂದಿತು. ಹಾಗೆಯೇ 'ಖಿಸ್ತ್' ಕಂದಾಯವನ್ನು ಕಾಫಿ ಭೂಮಿಯನ್ನು ಪಡೆದು ಅಡಿಕೆ ತೋಟಗಳನ್ನು ಮಾಡುತ್ತಿದ್ದಲ್ಲಿ ಖಿಸ್ತ್ (khist) ಕಂದಾಯವನ್ನು ಕಾಫಿ ಭೂಮಿಯನ್ನು ಪಡೆದು ಅಡಿಕೆ ತೋಟಗಳನ್ನು ಮಾಡುತ್ತಿದ್ದಲ್ಲಿ ಖಿಸ್ತ್ ಕಂದಾಯವನ್ನು ರೆವೆನ್ಯೂ ಕಮಿಷನರ್ ನಿರ್ದೇಶನದಂತೆ ಮುಂದುವರಿಸಲಾಗುವುದೆಂದು ೧೯೦೬ರಲ್ಲಿ ತೀರ್ಮಾನಕ್ಕೆ ಬರಲಾಯಿತು.[೧೮] ಭಾಗಾಯತು ಭೂಮಿಗಳಲ್ಲಿ ಬೆಳೆಯುತ್ತಿದ್ದ ಅಡಿಕೆ ಮತ್ತು ತೆಂಗಿನ ಬೆಳೆಗಳು, ೧೯೦೫–೦೬ರಲ್ಲಿ ಅಪಾರವಾದ ಮಳೆಯಿಂದಾಗಿ ಸಂಪೂರ್ಣವಾಗಿ ಹಾನಿಗೊಳಗಾಯಿತು. ಅದಕ್ಕಾಗಿ ಮಲೆನಾಡಿನ ಭಾಗಾಯತು ಭೂಮಿಯಲ್ಲಿ ಅಡಿಕೆ ಬೆಳೆಗಳಿಗೆ ಪರ್ಯಾಯವಾಗಿ ಏಲಕ್ಕಿ ಮತ್ತು ಕರಿ ಮೆಣಸಿನ ಕೃಷಿಗೆ ಅದ್ಯತೆ ನೀಡಲಾಯಿತು. ಇಲ್ಲಿ ಬೆಳೆಯುತ್ತಿದ್ದ ಏಲಕ್ಕಿ ಮತ್ತು ಕರಿಮೆಣಸಿನ ಉತ್ಪಾಧನೆಯ ಅಧಾರದ ಮೇಲೆ ಭಾಗಾಯತು ಕಂದಾಯವನ್ನು ನಿರ್ಧರಿಸಲಾಯಿತು. ೧೮೯೦ರ ಲ್ಯಾಂಡ್ ರೆವೆನ್ಯೂ ಕಾನೂನಿನಂತೆ ದಕ್ಷಿಣ ಕನ್ನಡದ ಮೂಲದ ಹಲವಾರು ಕೃಷಿಕರು, ಮಲೆನಾಡಿನಲ್ಲಿ ಭೂಮಿಯನ್ನು ಪಡೆದರು. ಸರ್ಕಾರವು ಭೂಮಿಯನ್ನು ದಾನ ಮಾಡುವ ಪ್ರಕ್ರಿಯೆಗಳು ಹೆಚ್ಚಿಸಿದುದರಿಂದ ಮಲೆನಾಡಿನಲ್ಲಿ ದಕ್ಷಿಣ ಕನ್ನಡದಿಂದ ಬಂದು ಭೂಮಿಯನ್ನು ಪಡೆದ ರೈತರು ಸರ್ಕಾರದ ನಿಯಮಗಳಿಗೆ ಬದ್ಧರಾಗಿ ಭತ್ತ, ರಾಗಿ, ಕಬ್ಬು, ಅಡಿಕೆ ಮುಂತಾದ ಬೆಳೆಗಳನ್ನು ಬೆಳೆಯಲು ತೊಡಗಿದರು.[೧೯]

ಈ ಅವಧಿಯಲ್ಲಿ ೨೫,೦೦೦ ಎಕರೆ ಹೊಸ ಜಮೀನನ್ನು ಕುಮ್ಕಿ, ಭಾಗಾಯ್ತು ಮತ್ತು ಕಾಫಿ, ಸಾಗುವಳಿಗಾಗಿ ತೆಗೆದುಕೊಳ್ಳಲಾಯಿತು. ೧೮೯೭ರಲ್ಲಿ ಪೂರ್ವದಲ್ಲಿದ ಜಮೀನು ಬಾಬಿನ ಹುಟ್ಟುವಳಿಯು ೪,೦೭,೯೦೭ ನಿವ್ವಳ ರೂಪಾಯಿಯು

೧೮೯೭ರಲ್ಲಿ ೨೫,೦೦೦ ಎಕರೆ ಹೊಸ ಜಮೀನನ್ನು ತೆಗೆದುಕೊಂಡಿದ್ದರಿಂದ ೧೮,೫೦೦ ರೂ.ಗಳಷ್ಟು ಹೆಚ್ಚು ಹುಟ್ಟುವಳಿಯಾಯಿತು.[೨೦] ಕಾಫಿ ಬೆಳೆಗಾರರು ತಮ್ಮ ಹಿಡುವಳಿಯಲ್ಲಿರುವ ಜಮೀನಿನಲ್ಲಿರುವ ಬಗನಿ, ಸೇಂದಿ ಮರಗಳ ಸದರಿ ಮರಗಳಿಗೆ ಆ ಹಿಡುವಳಿದಾರರನ್ನು ಅವುಗಳನ್ನು ಬಳಸಿಕೊಳ್ಳುವ ಹಕ್ಕುಗಳನ್ನು ನೀಡಬೇಕು. ಹಾಗೂ ಹಿಡುವಳಿ ಜಮೀನಿನಲ್ಲಿರುವ ಬಗನಿ ಮರಗಳಿಗೆ ಯಾವುದೇ ಕಾರಣಕ್ಕೂ ಹೊಸ ತೆರಿಗೆಯನ್ನು ವಿಧಿಸಬಾರದು, ಇದರಿಂದ ಅನುಕೂಲಕ್ಕಿಂತ ಅನಾನುಕೂಲವೇ ಹೆಚ್ಚಾಗುತ್ತದೆ ಎಂಬ ಅಂಶವನ್ನು ಸರ್ಕಾರದ ಗಮನಕ್ಕೆ ತಂದರು. ಇದಕ್ಕೆ ಸರ್ಕಾರವು ಕಾಫಿ ಸಾಗುವಳಿಯನ್ನು ಮಾಡುತ್ತಿರುವ ಜಮೀನಿನಲ್ಲಿರುವ ಬಗನಿ, ಸೇಂದಿ ಮರಗಳನ್ನು ಕಾಫಿ ಪ್ಲಾಂಟರುಗಳು ತಮ್ಮ ಸ್ವಂತಕ್ಕೆ ಉಪಯೋಗಿಸಬಹುದು. ತೋಟದ ಮಾಲೀಕನಿಗೆ ಅದನ್ನು ಬಳಸುವ ಹಕ್ಕು ನೀಡಲಾಗುವುದು. ಪ್ರತಿ ಪ್ಲಾಂಟರ್‌ನ ಅವಶ್ಯಕತೆಗನುಸಾರವಾಗಿ ಸೇಂದಿ ಮರಗಳಿಗೆ ಸಂಖ್ಯೆಯನ್ನು (ಗುರುತು) ಹಾಕಬೇಕಾಗುವ ಅವಶ್ಯಕತೆ ಇರುವುದಿಲ್ಲ. ಇದನ್ನು ವ್ಯವಹಾರವಾಗಿ ಬಳಸಿಕೊಳ್ಳುವುದನ್ನು ತಡೆಯಲಾಗುವುದು ಎಂಬ ನಿಬಂಧನೆಯನ್ನು ಹೊರಡಿಸಿತು.[೨೧] ಕೆಲವು ತೋಟಗಳಲ್ಲಿ ಅಪಾರವಾಗಿದ್ದ ಬಗನಿ ಮರಗಳನ್ನು ಗುರುತಿಸಿ ಅವುಗಳಿಗೆ ತೆರಿಗೆ ವಿಧಿಸುವ ನಿರ್ಧಾರ ಮಾಡಲಾಯಿತು. ಅದರಂತೆ ತೆರಿಗೆಯ ಅರ್ಧದಷ್ಟು ತೋಟದ ಮಾಲೀಕನಿಗೆ ಹಾಗೂ ಉಳಿದರ್ಧ ತೆರಿಗೆಯು ಸರ್ಕಾರಕ್ಕೆ ಸಂದಾಯವಾಗುತ್ತಿತ್ತು.[೨೨]

೧೯೦೨ರಲ್ಲಿ ರೆವೆನ್ಯೂ ಕಮಿಷನರನ ನೇಮಕವಾಯಿತು. ಇದರ ಉದ್ದೇಶವು ಪರಿಣಾಮಕಾರಿಯಾಗಿ ರೆವೆನ್ಯೂ ಇಲಾಖೆಯನ್ನು ನೋಡಿಕೊಳ್ಳುವುದು ಮತ್ತು ರೆವೆನ್ಯೂ ಇಲಾಖೆಯನ್ನು ಹಿಡಿತದಲ್ಲಿಟ್ಟುಕೊಳ್ಳುವುದಕ್ಕಾಗಿ ಹಾಗೂ ರೆವೆನ್ಯೂ ಇಲಾಖೆಯಲ್ಲಿ ಭ್ರಷ್ಟತೆ, ಅವ್ಯವಹಾರಗಳು ಕಂಡುಬಂದಲ್ಲಿ ಅಂತಹ ಅಧಿಕಾರಿಗಳ ವಿರುದ್ಧ ಕಟ್ಟುನಿಟ್ಟಾದ ಕ್ರಮ ಕೈಗೊಳ್ಳುವುದು ಇದರ ಉದ್ದೇಶವಾಗಿತ್ತು.[೨೩] ಇದಕ್ಕಾಗಿ ಪ್ರತಿಯೊಂದು ತಾಲೂಕುಗಳಲ್ಲಿಯೂ ಶಿರಸ್ತೆದಾರರ ನೇಮಕ ಮಾಡಲಾಯಿತು. ಅಲ್ಲದೇ ತಾಲೂಕಿನ ಗುಮಾಸ್ತ ಮತ್ತು ಶೇಕ್‌ದಾರರಿಗೆ ಆಯಾ ತಾಲೂಕಿನ ಕಂದಾಯಕ್ಕೊಳಪಡುವ ಭೂಮಿಗಳ ಲೆಕ್ಕಪತ್ರ, ದಾಖಲೆಗಳನ್ನು ಇಟ್ಟುಕೊಳ್ಳುವ ಜವಾಬ್ದಾರಿಯನ್ನು ನೀಡಲಾಯಿತು.[೨೪] ರೆವೆನ್ಯೂ ಇಲಾಖೆಯನ್ನು ನೋಡಿಕೊಳ್ಳುವುದಕ್ಕಾಗಿ ನೈಸರ್ಗಿಕ ವಿಪತ್ತಿನಿಂದಾಗಿ ಶೃಂಗೇರಿ ಜಹಗೀರು ಭೂಮಿಯಲ್ಲಿ ಬೆಳೆಯುತ್ತಿದ್ದ ಅಡಿಕೆ ತೋಟಗಳು ವಿನಾಶದತ್ತ ಸಾಗಿತು. ಆಗ ರೈತರು ಹಲಾತ್ ಕಂದಾಯವನ್ನು ನಿರ್ಮೂಲನೆ ಮಾಡುವಂತೆ ಬೇಡಿಕೆಯಿಟ್ಟರು. ಕಲೋನಲ್ ಗ್ರಾಂಟ್ ಎಂಬಾತನು ಮಲೆನಾಡಿನಲ್ಲಿ ಆದ ತೀವ್ರ ವಿರೋಪದಿಂದಾಗಿ ಬೆಳೆ ನಾಶಮಾಡುವುದರ ಬಗ್ಗೆ ತನಿಖೆ ನಡೆಸಿ ನಂತರ, ಈ ಭಾಗದಲ್ಲಿ ಹಲಾತ್ ತೆರಿಗೆಯನ್ನು ವಿಧಿಸುವುದು ಬಹಳ ಕಷ್ಟವೆಂದು ಸರ್ಕಾರಕ್ಕೆ ವರದಿ ಮಾಡಿದನು.[೨೫] ಹಾಗೆಯೇ, ಅಡಿಕೆ ತೋಟಗಳಿಗೆ ವಿಧಿಸುತ್ತಿದ್ದ ಖಿಸ್ತ್ ತೆರಿಗೆಯನ್ನು ಜನವರಿ ತಿಂಗಳಲ್ಲಿ ಬಡ್ಡಿ ಸಹಿತವಾಗಿ ಪಾವತಿಸುವುದಾಗಿ ಒಪ್ಪಿಗೆಯಾಯಿತು. ಬದಲಾಗಿ ಕಾಫಿಯ ಮೇಲೆ ವಿಧಿಸಿದ ಖಿಸ್ತ್ ತೆರಿಗೆಯನ್ನು ಮೇ ತಿಂಗಳಲ್ಲಿ ನೀಡುವುದಾಗಿ ಚನ್ನಕೇಶವ ರಾವ್ ಮುಂತಾದ ಜಿಲ್ಲೆಯ ಪ್ಲಾಂಟರುಗಳು ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿದರು, ಇದಕ್ಕೆ ಪ್ರತಿಯಾಗಿ ಸರ್ಕಾರವು ಈಗಾಗಲೇ ಕಂದಾಯವನ್ನು ನೀಡುವ ಅವಧಿಯನ್ನು ನೀಡಲಾಗಿದ್ದು ಇದರಲ್ಲಿ ಯಾವುದೇ ಬದಲಾವಣೆಯನ್ನು ಮಾಡಲಾಗುವುದಿಲ್ಲವೆಂದಿತು. ರೆವೆನ್ಯೂ ಕಮಿಷನರ್ ಹಾಗೂ ಡೆಪ್ಯೂಟಿ ಕಮಿಷನರುಗಳು ತೀರ್ಮಾನಿಸಿದಂತೆ ಕಂದಾಯ ಕಡ್ಡಾಯವಾಗಿ ನೀಡಬೇಕೆಂದು ಪ್ರತಿಕ್ರಿಯಿಸಿತು. (ಇದರಲ್ಲಿ ಕಂಡುಬರುವ ಅಂಶವೆಂದರೆ ಬೆಳೆಗಳು ಪಸಲು ಅವಧಿಯನ್ನು ಬಿಟ್ಟರೆ ಬೇರೆ ಅವಧಿಯಲ್ಲಿ ಬೆಳೆಗಾರರಲ್ಲಿ ಹಣವಿರುವುದಿಲ್ಲ ಆದುದರಿಂದ ಸ್ಥಳೀಯರ ಮೇಲೆ ಈ ಕಂದಾಯ ವ್ಯವಸ್ಥೆ ಪರಿಣಾಮವನ್ನುಂಟು ಮಾಡಿತು).[೨೬]

ನಗರ ವಿಭಾಗದಲ್ಲಿ ರೈತರು ಬೆಳೆಯುತ್ತಿದ್ದ ಬೆಳೆಗಳನ್ನು ಕಣಗಳಲ್ಲಿ ಒಣಗಿಸುವುದು ಸಂಗ್ರಹಿಸುವುದು, ಹದಗೊಳಿಸುವುದು ಸಾಮಾನ್ಯವಾಗಿತ್ತು. ಕಣಗಳು ಅವರು ಬೆಳೆದ ಬೆಳೆಗಳನ್ನು ರಕ್ಷಿಸುವ ಹಾಗೂ ಬಿಸಿಲಿನಲ್ಲಿ ಒಣಗಿಸುವ ಪ್ರದೇಶವಾಗಿದ್ದು, ಈ ಭಾಗಕ್ಕೂ ತೆರಿಗೆ ವಿಧಿಸುವ ಪದ್ದತಿ ಇದ್ದಿತು. ಈ ಪದ್ದತಿಯನ್ನು ರೈತರು ವಿರೋಧಿಸಿದುದರಿಂದ ೧೯೦೭ರಲ್ಲಿ ಈ ತೆರಿಗೆ ನೀತಿಯನ್ನು ತೆಗೆದು ಹಾಕಲಾಯಿತು. ಆದರೆ ಅಪಾರವಾಗಿ ಬೆಳೆಯುತ್ತಿದ್ದ ಹಳ್ಳಿಯ ಹುಲ್ಲು ಬೆಳೆಯುವ ಪ್ರದೇಶಗಳಿಗೂ 'ಹಿತ್ತಲ ಹುಲ್ಲು' ಎಂಬ ತೆರಿಗೆ ವಿಧಿಸುವ ಪದ್ಧತಿ ಇದ್ದಿತು.[೨೭] ಮಲೆನಾಡಿನ ಬಾಗಾಯ್ತು ಭೂಮಿಗಳಲ್ಲಿ ಬೆಳೆಯುತ್ತಿದ್ದ ಅಡಿಕೆ, ಏಲಕ್ಕಿ, ಕರಿಮೆಣಸು ಮುಂತಾದ ಬೆಳೆಗಳು ನೀರಿನ ಆಭಾವದಿಂದಾಗಿ ನಾಶವಾಗುತ್ತ ಬಂದಿತು. ಇದರಿಂದಾಗಿ ಉತ್ಪಾಧನಾ ಮಟ್ಟವೂ ಕುಸಿಯಿತು. ಇಂತಹ ಸಂದರ್ಭದಲ್ಲಿ ರೈತರು ನಿಗದಿತ ಕಂದಾಯವನ್ನು ಸಕಾಲದಲ್ಲಿ ಪಾವತಿ ಮಾಡಲು ಕಷ್ಟವಾಗುತ್ತಿತ್ತು. ಅದುದರಿಂದ ಕ್ರಮೇಣ ಸರ್ಕಾರವು ಈ ಭಾಗಕ್ಕೆ ವಿಧಿಸುತ್ತಿದ್ದ ಕಂದಾಯದ ಪ್ರಮಾಣದಲ್ಲಿ ಕಡಿಮೆ ಮಾಡಿತು. ಕಾಫಿ ತೋಟಗಾರಿಕೆಯು ಪ್ರವರ್ಧಮಾನಕ್ಕೆ ಬಂದಾಗ ಕಂದಾಯವು ರೂ ೧.೮.೦ ಪ್ರತಿ ಎಕರೆಗೆ ನಿರ್ಧರಿಸಲಾಯಿತು. ಪ್ರತಿ ಒಣ ಭೂಮಿಗೂ ಈ ಕಂದಾಯವನ್ನು ಹೇರಲಾಯಿತು. ಆದರೆ ಕಾಫಿ ಕೃಷಿಯು ನಾನಾ ಕಾರಣದಿಂದ ಒಣ

ಭೂಮಿಯಲ್ಲಿ ಪತನವನ್ನು ಕಂಡಾಗ ಇದನ್ನೇ ನಂಬಿಕೊಂಡಿದ ಜನರು ಬಡವರಾದರು, ಅದುದರಿಂದ ಈ ಕಂದಾಯವನ್ನು ಮಲೆನಾಡಿನಲ್ಲಿ ಸಂಪೂರ್ಣವಾಗಿ ನಿಷೇದಿಸಲಾಯಿತು.[೨೮]

೧೯೧೩ರ ಫೆಬ್ರವರಿಯಲ್ಲಿ ಮಹಾರಾಜರು ಮಲೆನಾಡಿನ ಜಿಲ್ಲೆಗಳಾದ ಹಾಸನ, ಕಡೂರು, ಶಿವಮೊಗ್ಗ ಮುಂತಾದ ಜಿಲ್ಲೆಗಳಿಗೆ ಭೇಟಿ ನೀಡಿ, ಜಿಲ್ಲೆಗಳ ಪ್ರಗತಿಗಳನ್ನು ಪರಿಶೀಲಿಸುತ್ತಾರೆ.[೨೯] ಜೂನ್ ೧೨, ೧೯೧೩ರಂದು ಮೈಸೂರಿನಲ್ಲಿ ಆರ್ಥಿಕ ಸಮ್ಮೇಳನ(Economic Conference)ವನ್ನು ಏರ್ಪಡಿಸಲಾಯಿತು. ಇಲ್ಲಿ ಚರ್ಚಿತವಾದಂತೆ ಬ್ರಿಟಿಷ್ ಭಾರತದಲ್ಲಿ ನಡೆಸಲ್ಪಡುತ್ತಿರುವ ಎಣ್ಣೆ ಗಿರಣಿ(oil mills)ಗಳಿಗೂ ನಿಗದಿತ ಪ್ರಮಾಣದ ಕಂದಾಯವನ್ನು ವಿಧಿಸುವ ತೀರ್ಮಾನಕ್ಕೆ ಬರಲಾಯಿತು.[೩೦] ೧೯೧೨-೧೩ರಲ್ಲಿ ೧೮,೮೫,೧೪೪ ಎಕರೆ ಪ್ರದೇಶಗಳನ್ನು ಸರ್ವೇಕಾರ್ಯ ಮಾಡಲಾಯಿತು. ಅವುಗಳಲ್ಲಿ ೮,೫೫೮,೨೬೦ ಎಕರೆಗಳು ಕಂದಾಯ ನಿರ್ಧರಿತವಾದ ಪ್ರದೇಶಗಳಾಗಿದ್ದವು. ೮,೯೧೭,೧೦೪ ಎಕರೆಗಳು ಅರಣ್ಯದಿಂದ ಕೂಡಿದ ಹಾಗೂ ಕೃಷಿಗೆ ಯೋಗ್ಯವಲ್ಲದ ಅನುಪಯುಕ್ತ ಭೂಮಿ ಎಂದು ನಿರ್ಧರಿಸಲಾಯಿತು. ತರೀಕೆರೆ, ಶಿವಮೊಗ್ಗ ಮುಂತಾದ ಕಡೆಗಳಲ್ಲಿ ಮರು ಸರ್ವೇಕಾರ್ಯ ನಡೆಸಿ ತರೀಕೆರೆಯನ್ನು ಪ್ರತ್ಯೇಕ ತಾಲೂಕಾಗಿ ರೂಪುಗೊಳಿಸಲಾಯಿತು.[೩೧]

೧೯೨೪-೨೫ರ ಅವಧಿಯಲ್ಲಿ ಪೋತ್‌ಗಿ ಕಂದಾಯ ನಿರ್ಧರಿಸುವಿಕೆಯನ್ನು ಮರು ಪರಿಷ್ಕರಿಸಿ ಸರ್ಕಾರವು ೧೭೪೫ ಹಳ್ಳಿಗಳಲ್ಲಿ ಪೋತ್‌ಗಿ ಕಂದಾಯ ನಿರ್ಧಾರವನ್ನು ಇನಾಂ ಭೂಮಿಗೆ ನಿರ್ಧರಿಸಲಾಯಿತು. ಸುಮಾರು ೨೭ ಹಳ್ಳಿಗಳು ಬರುವ ಕಷ್ಣರಾಜ ಸಾಗರದ ೨೭ ಹಳ್ಳಿಗಳನ್ನು ಪುನಃ ಪೋತ್‌ಗಿ ಕಂದಾಯದ ವ್ಯಾಪ್ತಿಗೆ ಸೇರಿಸಲಾಯಿತು, ಇದರಿಂದಾಗಿ ೨,೨೬,೯೬೬ ರೂ.ಗಳ ಸಂಗ್ರಹವಾಯಿತು.[೩೨] ಒಟ್ಟು ೩೬,೩೩೭ ಎಕರೆಗಳಷ್ಟು ಭೂಮಿಗೆ ಕಂದಾಯ ನಿರ್ಧರಿಸಲಾಯಿತು.

ಮಲೆನಾಡು ಸೇರಿದಂತೆ ರಾಜ್ಯದ ವಿವಿದೆಡೆ ಅಡಿಕೆ ಬೆಳೆಗೆ ಕೊಳೆರೋಗವು ಉಂಟಾಯಿತು. ಕ್ರಮೇಣ ಕಾಫಿ, ಬೆಳೆಗೆ ಈ ಕೊಳೆರೋಗವು ತಗುಲಿ ವ್ಯಾಪಕ ಬೆಳೆ ಹಾನಿಯಾಯಿತು. ಇದಕ್ಕಾಗಿ ೨೭,೦೦೦ರೂ.ಗಳನ್ನು ಔಷಧಿ ಸಿಂಪಡಣೆಗೆ ಖರ್ಚು ಮಾಡಲಾಯಿತು. ೧೯೨೪-೨೫ರ ಅವಧಿಯು ಪ್ಲಾಂಟರುಗಳ ಮಟ್ಟಿಗೆ ತೀರಾ ನಿರಾಸದಾಯಿಕವಾಯಿತಲ್ಲದೆ ಅಪಾರವಾದ ಅಡಿಕೆ, ಕಾಫಿ ಬೆಳೆಯನ್ನು ಕಳೆದುಕೊಂಡರು. ೧೯೨೫-೨೬ರಲ್ಲಿ ಒಟ್ಟು ಭೂ ಕಂದಾಯದಿಂದ ರಾಜ್ಯದಿಂದ ಬಂದ ಅದಾಯವು ೧೨೫,೧೬,೩೫೭ ರೂ. ಗಳಾಗಿದ್ದವು.[೩೩] ೧೯೨೬-೨೭ರಲ್ಲಿ ಭೂ ಕಂದಾಯವು ಒಟ್ಟು ೧,೨೭,೩೭,೪೧೩ರೂ ಗಳವರೆಗೆ ಏರಿಕೆಯಾಯಿತು.[೩೪] ೧೯೨೭-೨೮ರಲ್ಲಿ ಕಂದಾಯದ ಮೂಲದಿಂದ ಬಂದ ಹಣವು ೧,೨೯,೬೯,೦೨೭ ರೂ ಗಳಾಗಿದ್ದವು.[೩೫] ಈ ಅವಧಿಯಲ್ಲಿ ಬೆಳೆಯು ಉತ್ತಮವಾಗಿದುದರಿಂದ ಕೃಷಿಕ ವರ್ಗವು ಉತ್ತಮ ಪಸಲನ್ನು, ಲಾಭವನ್ನು ಪಡೆದರು.[೩೬] ೧೯೩೨-೩೩ರಲ್ಲಿ ಕಾಫಿ ಭೂಮಿಯನ್ನು ಪ್ರತಿ ಎಕರೆಗೆ ೨೦ರೂ ನಷ್ಟು ತಗ್ಗಿಸಲಾಯಿತು. ಚಹಾ ತೋಟಗಾರಿಕೆಗೆ ಹೊಸ ಭೂಮಿಯನ್ನು ನೀಡುವುದನ್ನು ನಿಲ್ಲಿಸಲಾಯಿತು. ಚಹಾ ತೋಟಗಾರಿಕೆಯ ವಿಸ್ತರಣೆಯನ್ನೂ ತಗ್ಗಿಸಲಾಯಿತು.[೩೭] ಕಾಫಿಯ ಕುರಿತು ಸಂಶೋಧನೆಗಳು ಬಿರುಕುಗೊಂಡಿತು ಒಟ್ಟು ಕಾಫಿಯ ಬೆಳವಣಿಗೆಯಲ್ಲಿ PH ಮೌಲ್ಯವು ೬.೫ ದಿಂದ ೭ ಆಗಿತ್ತು.[೩೮] ಈ ಅವಧಿಯಲ್ಲಿ ಕೂಲಿಯ ವೇತನವು ೮ ಆಣೆಯಿಂದ ರೂ. ೪ರಷ್ಟಿತ್ತು.[೩೯] ೧೯೩೩-೩೪ರಲ್ಲಿ ರಾಜ್ಯದ ವಿವಿಧ ಭಾಗಗಳಿಂದ ಅನುಪಯುಕ್ತ ಭೂಮಿಯ ಪ್ರಮಾಣವು ೫೫,೨೭೪ ಎಕರೆಗಳಷ್ಟಿತ್ತು ಅವುಗಳನ್ನು ಕೃಷಿಗೆ ಬಳಕೆ ಮಾಡಲಾಯಿತು ಹಾಗೆಯೇ ರೂ. ೭೨,೬೬೦ ರೂ. ಕಂದಾಯವನ್ನು ನಿರ್ಧರಿಸಲಾಯಿತು.[೪೦] ಐದು ವರ್ಷಕ್ಕೆ ಮೀರಿ ನೌಕರಿಯಲ್ಲಿರುವ (ಬಾರ್) ಇಲಾಖೆಯವರನ್ನು ೨೦೦ ರೂಪಾಯಿಗೆ ಮೇಲ್ಪಟ್ಟು ಕಂದಾಯ ಕೊಡುವ ಜಮೀನುದಾರರನ್ನು ಮೈಸೂರು ಆಯೋಗಗಳ ರೆಗ್ಯುಲೇಷನ್‌ನಿಂದ ವಿನಾಯಿತಿ ನೀಡಬೇಕೆಂದು ಬೇಡಿಕೆ ಇರುತ್ತದೆ. ಶಿಕಾರಿಗೆ ಹಾಕುವ ಕಂದಾಯವನ್ನು ೨ ರೂ.ಗೆ ಇಳಿಸಬೇಕು. ಶಿಕಾರಿ ಪರವಾನಗಿಗೆ ೫ರೂ. ಇದ್ದುದರಿಂದ ಜಮೀನಿಗೆ ಪ್ರವೇಶಿಸುವ ಕಾಡುಮೃಗಗಳನ್ನು ಬಂದೂಕಿನಿಂದ ಹೊಡೆದು ಅಟ್ಟಲು ಪರವಾನಗಿ ಪಡೆಯಬೇಕು. ಶಿಕಾರಿ ಲೈಸೆನ್ಸ್‌ಗೆ ತೆರಿಗೆ ರೂ. ೫ ಇದ್ದದ್ದನ್ನು ೨ರೂ.ಗೆ ಇಳಿಸಬೇಕೆಂದು ಬೇಡಿಕೆ ಇಟ್ಟರು.[೪೧] ಹೀಗೆ ವಸಾಹತುಷಾಹಿ ಕಾಲದ ಕಂದಾಯದ ವಿಧಾನಗಳನ್ನು ಚರ್ಚಿಸಲಾಗಿದೆ.

ಅಡಿ ಟಿಪ್ಪಣಿಗಳು

೧. Chikmagalur District Gazetteer, Bangalore, 1981, p. 302.
೨. Chikmagalur District Gazetteer, Bangalore, 1981, 303.
೩. Chikmagalur District Gazetteer, Bangalore, 1981, p. 304.
೪. Chikmagalur District Gazetteer, Bangalore, 1981, p. 305.
೫. Chikmagalur District Gazetteer, Bangalore, 1981, p. 306.
೬. Chikmagalur District Gazetteer, Bangalore, 1981, p. 308.
೭. Chikmagalur District Gazetteer, Bangalore, 1981, p. 310.
೮. Chikmagalur District Gazetteer, Bangalore, 1981, p. 311.
೯. ಸಿದ್ದಲಿಂಗ ಸ್ವಾಮಿ, ಅಗ್ರೇರಿಯನ್ ರಿಲೇಷನ್ಸ್ ಇನ್ ಮೈಸೂರ್ ೧೭೯೯–೧೮೮೧, ಬೆಂಗಳೂರು, ೧೯೯೭. ಪು. ೧೫.
೧೦. ಸಿದ್ದಲಿಂಗ ಸ್ವಾಮಿ, ಅಗ್ರೇರಿಯನ್ ರಿಲೇಷನ್ಸ್ ಇನ್ ಮೈಸೂರ್ ೧೭೯೯–೧೮೮೧, ಬೆಂಗಳೂರು, ೧೯೯೭. ಪು. ೧೬.
೧೧. ಸಿದ್ದಲಿಂಗ ಸ್ವಾಮಿ, ಅಗ್ರೇರಿಯನ್ ರಿಲೇಷನ್ಸ್ ಇನ್ ಮೈಸೂರ್ ೧೭೯೯–೧೮೮೧, ಬೆಂಗಳೂರು, ೧೯೯೭. ಪು. ೧೭.
೧೨. ಸಿದ್ದಲಿಂಗ ಸ್ವಾಮಿ, ಅಗ್ರೇರಿಯನ್ ರಿಲೇಷನ್ಸ್ ಇನ್ ಮೈಸೂರ್ ೧೭೯೯–೧೮೮೧, ಬೆಂಗಳೂರು, ೧೯೯೭. ಪು. ೧೯.
೧೩. ಸಿದ್ದಲಿಂಗ ಸ್ವಾಮಿ, ಅಗ್ರೇರಿಯನ್ ರಿಲೇಷನ್ಸ್ ಇನ್ ಮೈಸೂರ್ ೧೭೯೯–೧೮೮೧, ಬೆಂಗಳೂರು, ೧೯೯೭. ಪು. ೨೧.
೧೪. ಸಿದ್ದಲಿಂಗ ಸ್ವಾಮಿ, ಅಗ್ರೇರಿಯನ್ ರಿಲೇಷನ್ಸ್ ಇನ್ ಮೈಸೂರ್ ೧೭೯೯–೧೮೮೧, ಬೆಂಗಳೂರು, ೧೯೯೭. ಪು. ೨೨.
೧೫. ಸಿದ್ದಲಿಂಗ ಸ್ವಾಮಿ, ಅಗ್ರೇರಿಯನ್ ರಿಲೇಷನ್ಸ್ ಇನ್ ಮೈಸೂರ್ ೧೭೯೯–೧೮೮೧, ಬೆಂಗಳೂರು, ೧೯೯೭. ಪು. ೨೫.
೧೬. ಸಿದ್ದಲಿಂಗ ಸ್ವಾಮಿ, ಅಗ್ರೇರಿಯನ್ ರಿಲೇಷನ್ಸ್ ಇನ್ ಮೈಸೂರ್ ೧೭೯೯–೧೮೮೧, ಬೆಂಗಳೂರು, ೧೯೯೭. ಪು. ೨೪.
೧೭. ನಾಗೇಗೌಡ ಹೆಚ್.ಎಲ್., ಬೆಟ್ಟದಿಂದ ಬಟ್ಟಲಿಗೆ, ಮೈಸೂರು, ೧೯೭೮, ಪುಟ. ೧೦೭.
೧೮. Proceedings of the Assembly of Representative Rayats and Merchants of the State of Mysore 1906, Bangalore, 1906, p. 20.
೧೯. Proceedings of the Assembly of Representative Rayats and Merchants of the State of Mysore 1906, Bangalore, 1906, p. 28.
೨೦. ರೈತರು ಮತ್ತು ವರ್ತಕರು ಪ್ರತಿನಿಧಿ ಸಭೆಯ ಪ್ರೊಸೀಡಿಂಗ್ಸ್, ೧೮೯೭, ಪು. ೫.
೨೧. ರೈತರು ಮತ್ತು ವರ್ತಕರು ಪ್ರತಿನಿಧಿ ಸಭೆಯ ಪ್ರೊಸೀಡಿಂಗ್ಸ್, ೧೮೯೭, ಪು. ೫೯.
೨೨. ರೈತರು ಮತ್ತು ವರ್ತಕರು ಪ್ರತಿನಿಧಿ ಸಭೆಯ ಪ್ರೊಸೀಡಿಂಗ್ಸ್, ೧೮೯೭, ಪು. ೬೦.
೨೩. Proceedings of the Mysore Representative Assembly, 1906, p. 3.
೨೪. Proceedings of the Mysore Representative Assembly, 1906, p. 4.
೨೫. Proceedings of the Mysore Representative Assembly, 1906, p. 20.
೨೬ Proceedings of the Mysore Representative Assembly, 1906, p. 21.
೨೭. Proceedings of the Mysore Representative Assembly, 1906, p.27.
೨೮. Proceedings of the Mysore Representative Assembly, 1906, p.32.
೨೯. Report of the Administration of Mysore, 1912-13, Bangalore, 1913, p.1.
೩೦. Report of the Administration of Mysore, 1912-13, Bangalore, 1913, p. 3.
೩೧. Report of the Administration of Mysore, 1912-13, Bangalore, 1913, p. 4.
೩೨. Report of the Administration of Mysore, 1924-25, Bangalore, 1925, p. 7.
೩೩. Report of the Administration of Mysore, 1925-26, Bangalore, 1926, p. 8.
೩೪. Report of the Administration of Mysore, 1926-27, Bangalore, 1927, p. 8.
೩೫. Report of the Administration of Mysore, 1927-28, Bangalore, 1928, p.12.
೩೬. Report of the Administration of Mysore, 1932-33, Bangalore, 1933, p. 84.
೩೭. Report of the Administration of Mysore, 1933-34, Bangalore, 1934, p. 11.
೩೮. Report of the Administration of Mysore, 1933-34, Bangalore, 1934, p. 55.
೩೯. Report of the Administration of Mysore, 1933-34, Bangalore, 1934, p. 69.
೪೦. Report of the Administration of Mysore, 1933-34, Bangalore, 1934, p.10.
೪೧. ಮೈಸೂರು ಸೀಮೆಯ ಪ್ರಜಾಪ್ರತಿನಿಧಿಗಳಾದ ರೈತರು ಮತ್ತು ವರ್ತಕರು ಮೈಸೂರಲ್ಲಿ ೧೯೦೭ನೇ ಇಸವಿಯ ಅಕ್ಟೋಬರ್ ತಿಂಗಳಲ್ಲಿ ಸಭೆ ಸೇರಿ ನಡೆಸಿದ ನಡವಳಿಕೆಗಳು, ಬೆಂಗಳೂರು, ೧೯೦೭. ಪು. ೨೫.

“ಮೈಸೂರು ಒಡೆಯರ ಕಾಲದಲ್ಲಿ ಚಿಕ್ಕಮಗಳೂರಿನಲ್ಲಿ ಸಂಭವಿಸಿದ ಕ್ಷಾಮ ಮತ್ತು ಪರಿಣಾಮಗಳು” (೧೮೭೬–೧೯೪೭)

ಸಿ.ಎಸ್. ನಾಗರಾಜ*

೧೮೭೬ರಿಂದ ೧೯೪೭ರ ಅವಧಿಯಲ್ಲಿ ಮೈಸೂರು ಸಂಸ್ಥಾನದ ಬಹುಭಾಗಗಳಲ್ಲಿ ಅನೇಕ ಬಾರಿ ಭೀಕರ ಕ್ಷಾಮವು ಕಂಡುಬಂದಿತ್ತು. ಸಂಸ್ಥಾನದ ಒಂದು ಭಾಗವಾದ ಚಿಕ್ಕಮಗಳೂರು ಜಿಲ್ಲೆಯ ಮೇಲೂ ಕ್ಷಾಮವು ಆವರಿಸಿತ್ತು. ಈ ಸಂದರ್ಭದಲ್ಲಿ ಕಂಡುಬಂದ ಅತಿವೃಷ್ಠಿ, ಅನಾವೃಷ್ಠಿಯ ಕಾರಣದಿಂದ ಉಂಟಾದ ಕ್ಷಾಮವು ಕೃಷಿ ಬೆಳೆ, ಕೃಷಿ ಸಮುದಾಯಗಳ ಮೇಲೆ ಬೀರಿದ ಪರಿಣಾಮಗಳನ್ನು ಈ ಪ್ರಬಂಧದಲ್ಲಿ ವಿಶ್ಲೇಷಿಸಲಾಗಿದೆ.

ಕ್ಷಾಮ ಎಂಬ ಪದವು ಲ್ಯಾಟಿನ್ ಭಾಷೆಯ ‘ಫೇಮ್ಸ್’ ಎಂಬ ಪದದಿಂದ ಬಂದಿದೆ. ಇದರ ಅರ್ಥ ‘ಹಸಿವು’ ಎಂಬುದಾಗಿದೆ. ಇಂಟರ್ ನ್ಯಾಷನಲ್ ಎನ್ಸೈಕ್ಲೋಪೀಡಿಯಾ ಆಫ್ ಸೋಷಿಯಲ್ ಸೈನ್ಸ್‌ನ ಪ್ರಾಕಾರ, “ಆಹಾರ ಪೂರೈಕೆಯ ವೈಫಲ್ಯದ ಪರಿಣಾಮವಾಗಿ ಒಂದು ಪ್ರದೇಶದ ಜನಸಂಖ್ಯೆಯು ತೀವ್ರ ಹಸಿವಿನಿಂದ ಬಳಲುವ ಸ್ಥಿತಿ”.[೧] ಎಂದು ವ್ಯಾಖ್ಯಾನಿಸಲಾಗಿದೆ. ಬ್ರಿಟಾನಿಕ ಎನ್ಸೈಕ್ಲೋಪೀಡಿಯಾದ ಪ್ರಕಾರ “ಒಂದು ಪ್ರದೇಶದ ಅಥವಾ ದೇಶದ ಜನಸಂಖ್ಯೆಯ ಗಣನೀಯ ಪ್ರಮಾಣದಲ್ಲಿ ತೀವ್ರ ಮತ್ತು ದೀರ್ಘಕಾಲದ ಹಸಿವಿನಿಂದ ಬಳಲುವುದು ಮತ್ತು ಇದರ ಪರಿಣಾಮವಾಗಿ ವ್ಯಾಪಕ ಮತ್ತು ತೀವ್ರ ಅಪೌಷ್ಟಿಕತೆ ಮತ್ತು ಕಾಯಿಲೆಯಿಂದ ಸಾವನ್ನಪ್ಪುವ ಸ್ಥಿತಿ”.[೨] ಎಂದು ವ್ಯಾಖ್ಯಾನಿಸಲಾಗಿದೆ. ಭಾರತದಲ್ಲಿ ಕಾಲಕಾಲಕ್ಕೆ ಕಂಡುಬರುತ್ತಿದ್ದ ಕ್ಷಾಮದಿಂದಾಗಿ ದೇಶದ ಜನಸಂಖ್ಯೆ ಮೇಲೆ ಪರಿಣಾಮ ಉಂಟಾಗುತ್ತಿತ್ತು. ೧೯೦೧ರ ಕ್ಷಾಮ ಆಯೋಗದ ವರದಿಯಂತೆ ೧೭೬೫ ರಿಂದ ೧೮೫೮ರ ವರೆಗೆ ದೇಶವು ಸುಮಾರು ೧೨ ಬಾರಿ ಕ್ಷಾಮವನ್ನು ಎದುರಿಸಿತು ಮತ್ತು ೪ ಬಾರಿ ತೀವ್ರವಾದ ಆಹಾರ ಮತ್ತು ನೀರಿನ ಅಭಾವ ಎದುರಿಸಿತು. ಈ ಕಾರಣದಿಂದಾಗಿ ಸಾಕಷ್ಟು ಸಂಖ್ಯೆಯ ಸಾವುಗಳ ಕಂಡುಬಂದಿತು. ಇದಕ್ಕೆ ಮುಖ್ಯ ಕಾರಣ ಮನ್ಸೂನ್ ಮಳೆಬಾರದೆ ಹೋದುದು. ದೇಶದಲ್ಲಿ ೩/೪ ಭಾಗದಷ್ಟು ಜನರು ಕೃಷಿ ಅವಲಂಬಿಸಿದವರಾಗಿದ್ದು ನೀರಿನ ಕೊರತೆಯಿಂದ ಆಹಾರ ಧಾನ್ಯಗಳು ಬೆಳೆ ವಿಫಲವಾದವು, ಜೊತೆಗೆ ಜಾನುವಾರುಗಳಿಗೆ ಮೇವಿನ ಮತ್ತು ನೀರಿನ ಕೊರತೆಯಿಂದ ಹೆಚ್ಚಿನ ಪ್ರಮಾಣದಲ್ಲಿ ಸಾವುಗಳು ಸಂಭವಿಸಿದವು.[೩] ೧೭೭೦ರಲ್ಲಿ ಸತತ ಆರು ತಿಂಗಳ ಕಾಲ ಒಂದು ಹನಿ ಮಳೆ ಬಾರದೆ ಬಂಗಾಲ ಪ್ರಾಂತ್ಯದಲ್ಲಿ ಕ್ಷಾಮ ಸ್ಥಿತಿ ಕಂಡುಬಂದಿದ್ದು, ಇದೇ ರೀತಿಯ ಸಂದರ್ಭ ದೇಶದ ಇತರ ಭಾಗಗಳಲ್ಲಿ ಸಹ ನಿರ್ಮಾಣವಾಯಿತು. ಮತ್ತೊಂದು ಪ್ರಮುಖವಾದ ಬರಗಾಲವೆಂದರೆ ೧೭೮೩ರಲ್ಲಿ ಕಂಡುಬಂದಿತು. ಸತತ ಎರಡು ವರ್ಷಗಳ ಕಾಲ ಕ್ಷಾಮ ಕಂಡುಬಂದಿತು. ಬೆಳೆ ಅಭಾವ, ಆಹಾರಧಾನ್ಯಗಳ ಕೊರತೆ, ಬೆಲೆ ಏರಿಕೆ, ಮುಂತಾದ ಪರಿಣಾಮಗಳಿಂದ ಸಮಾಜದ ಕೆಳಸ್ಥರದ ಬಡ ಜನರ ಮೇಲೆ ಕೆಟ್ಟ ಪರಿಣಾಮ ಉಂಟಾಯಿತು. ಕೊಳ್ಳುವ ಶಕ್ತಿ ಇಲ್ಲದೆ, ದುಡಿಮೆಯೂ ಇಲ್ಲದೆ ಹಸಿವಿನಿಂದ ಪ್ರಾಣ ಕಳೆದುಕೊಂಡರು ಮತ್ತು ಕೃಷಿಕಾರ್ಯಗಳಲ್ಲಿ ಪೂರಕವಾಗಿದ್ದ ಜಾನುವಾರಗಳು ಮೇವಿನ ಅಭಾವ ಮತ್ತು ನಾನಾ ರೀತಿಯ ರೋಗಗಳಿಗೆ ತುತ್ತಾಗಿ ಹೆಚ್ಚಿನ ಪ್ರಮಾಣದಲ್ಲಿ ಮರಣ ಹೊಂದಿದವು. ಬರಗಾಲದ ಜೊತೆ ಜೊತೆಗೆ ಸಾಂಕ್ರಾಮಿಕ ಕಾಯಿಲೆಗಳು ಕಾಣಿಸಿಕೊಂಡವು. ಬ್ರಿಟೀಷ್ ಸರ್ಕಾರ ಮತ್ತು ದೇಶದ ಸಂಸ್ಥಾನಗಳು ಬರಗಾಲದಿಂದ ಉಂಟಾದ ಅನಾಹುತಗಳನ್ನು ತಪ್ಪಿಸಲು ಕೆಲವಾರು ಕ್ರಮಗಳನ್ನು ಕೈಗೊಂಡವು ಅವುಗಳೆಂದರೆ, ಆಹಾರ ಧಾನ್ಯಗಳ ಕೊರತೆ ಪ್ರದೇಶಗಳಿಗೆ ಆಹಾರ ಪೂರೈಕೆ, ನೀರಿನ ಸೌಲಭ್ಯ ಹಳೆಯ ಕೆರೆಗಳ ದುರಸ್ಥಿ, ಹೊಸ ಕೆರೆಗಳ ನಿರ್ಮಾಣ ೧೮೭೬–೭೮ರ ನಂತರದ ಕ್ಷಾಮ ಕೃತಕ ನೀರಿನ ಸೌಕರ್ಯಗಳನ್ನು ಮಾಡುವ ಪ್ರಯತ್ನಗಳು ನಡೆದವು. ಆದರೂ ಈ ಕ್ಷಾಮಗಳಿಂದ ಸುಮಾರು ೧.೪ ಮಿಲಿಯನ್ ಜನರು ಹಸಿವು ಮತ್ತು ಅಪೌಷ್ಟಿಕತೆಯಿಂದ ಸಾವಿಗೀಡಾದರೆಂದು ಅಂದಾಜು ಮಾಡಲಾಗಿದೆ.[೪] ೫ನೇ ನವೆಂಬರ್ ೧೮೭೬ರ ಕರ್ನಾಟಕ ಪ್ರಕಾಶಿಕ ಪತ್ರಿಕೆಯಲ್ಲಿ ರಾಜ್ಯದ ಹವಾಮಾನದ ವರದಿಯಲ್ಲಿ ‘ಸುಮಾರು ೧೫ ದಿನಗಳಿಂದ ಮಳೆಯಿಲ್ಲ, ರಾತ್ರಿ ಕಾಲಗಳಲ್ಲಿಯೂ ಮತ್ತು

* ಸಂಶೋಧನಾ ವಿದ್ಯಾರ್ಥಿ, ಇತಿಹಾಸ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಕೊಣಾಜೆ, ಮೊ. ೯೪೮೧೮ ೩೭೬೭೮

ಸಾಯಂಕಾಲ ಚಳಿ ಹೆಚ್ಚುತ್ತದೆ. ಪದಾರ್ಥಗಳ ಧಾರಣೆ ಮಧ್ಯೆ ಕೆಲವು ದಿನಗಳಲ್ಲಿ ಕುಗ್ಗುತ್ತಾ ಪುನಃ ಹೆಚ್ಚುತ್ತಾಯಿದೆ. ಈಗ ಕೆಲವು ದಿನಗಳಿಂದ ಮಳೆನಿಂತಿರುವುದರಿಂದ ಧಾರಣೆ ಹೆಚ್ಚುಕಡಿಮೆಯಾಗಿ ಇನ್ನೂ ಒಂದೆರಡು ದಿನದಲ್ಲಿ ಮಳೆಯಾಗದೆ ಹೋದರೆ ದುರ್ಭಿಕ್ಷೆಯೂ ಹೀಗೆಯೇ ಇರುವುದೆಂತಲೂ ಜನಗಳು ಹೇಳಿಕೊಳ್ಳುತ್ತಾರೆ. ಈ ದುರ್ಭಿಕ್ಷೆ ದೇಶದಲ್ಲಿ ನೆಲೆಗೊಂಡಿರುವುದಕ್ಕೆ ಬಡವರ ಕಷ್ಟ ತಪ್ಪುವುದಿಲ್ಲ. ಪ್ರಾಯಶಃ ಯದೇಶ ಎಲ್ಲಾ ತಾಲ್ಲೂಕುಗಳಲ್ಲಿಯೂ ಜನಗಳ ಸ್ಥಿತಿ ಹೀಗೆಯೇ ಇರುವಂತೆ ತಿಳಿದುಬರುತ್ತದೆ'[೫] ಎಂದು ಉಲ್ಲೇಖಿಸಿದೆ.

ಬ್ರಿಟೀಷ್ ಕಮೀಷನರ್ ಬೌರಿಂಗ್ ಅಧಿಕಾರವಧಿಯ ಮೈಸೂರು ಸಂಸ್ಥಾನದಲ್ಲಿ ೧೮೬೪ರಲ್ಲಿ ಕಂಡುಬಂದ ಅತಿವೃಷ್ಟಿಯಿಂದ ರಾಜ್ಯ ಹೆಚ್ಚಿನ ಭಾಗಗಳಲ್ಲಿ ಬೆಳೆದ ಬೆಳೆಯು ನಾಶವಾಯಿತು. ಮತ್ತು ಹೆಚ್ಚಿನ ರೈತರು ತಮ್ಮಲ್ಲಿದ್ದ ಬೆಳೆಯನ್ನು ಮಾರಾಟಮಾಡಿದ್ದರು. ಅತಿವೃಷ್ಟಿಗೆ ಹೊಂದಿಕೊಂಡಂತೆ ಮುಂದಿನ ಸತತ ವರ್ಷಗಳಲ್ಲಿ ಅನಾವೃಷ್ಟಿ ೧೮೬೮ರ ವರೆಗೆ ಮುಂದುವರಿಯಿತು. ಮೊದಲು ಸಂಸ್ಥಾನದ ನಾಗಮಂಗಲ, ಚನ್ನರಾಯಪಟ್ಟಣ, ಕೋಲಾರ, ಬೆಂಗಳೂರು, ಹಾಸನ, ಕಡೂರು, ಚಿತ್ರದುರ್ಗ ಜಿಲ್ಲೆಗಳಲ್ಲಿ ಕಂಡುಬಂದು ಮುಂದೆ ಇತರೆ ಜಿಲ್ಲೆಗಳಿಗೆ ವ್ಯಾಪಿಸಿತು. ಅಂದರೆ ಸಂಸ್ಥಾನದ ಎಲ್ಲಾ ಪ್ರದೇಶಗಳು ಕ್ಷಾಮಕ್ಕೆ ತುತ್ತಾದವು.[೬] ಕರ್ಣಾಟಕ ಪ್ರಕಾಶಕ ಪತ್ರಿಕೆಯಲ್ಲಿ 'ಕಡೂರು ಡಿಸ್ಟ್ರಿಕ್ಟ್ ಕಾಲಸ್ಥಿತಿ ರಿಪೋರ್ಟ್ ಚಿಕ್ಕಮಗಳೂರು, ಲಕ್ಕವಳ್ಳಿ, ಬಾಣಾವರ ಯಾ ತಾಲ್ಲೂಕುಗಳಲ್ಲಿ ಕಳೆದ ತಿಂಗಳೊಳಗೆ ಬಹಳ ಸ್ವಲ್ಪವಾಗಿ ಮಳೆಬಿತ್ತು. ಮಿಕ್ಕ ತಾಲ್ಲೂಕುಗಳಲ್ಲಿ ಶುದ್ಧಾಂಗ ಮಳೆಯಿಲ್ಲವು. ಅಧಿಕವಾದ ಬೇಸಿಗೆಯಿಂದ ಕೆರೆಗಳು ಬೇಗನೆ ಬತ್ತುತ್ತಾ ಬರುತ್ತವೆಯಾಗಿ ರೈತರಿಗೆ ಬಹಳ ಚಿಂತೆಗೆ ಕಾರಣವಾಗಿದೆ. ಭತ್ತದ ಫಸಲೂ ಗೋಮಾಗಿ ಕಾಣ ಬಂದಾಗ್ಯೂ ಮಳೆ ಬಾರದೇ ಹೋದರೆ ಬಹುಶಃ ನಷ್ಟವಾಗುವದೆಂದೂ ಕಾಣುತ್ತೆ. ಬಹಳ ಮಟ್ಟಿಗೆ ಜಮೀನುಗಳು ಉಳಲ್ಪಟ್ಟವು. ಬಿತ್ತನೆಯ ವಿಷಯದಲ್ಲಿ ರೈತರು ಮುಂಗಾರಿಗಾಗಿ ಕಾದಿದ್ದರೆ'. ಮುಂದುವರಿದು, 'ಜನಗಳಿಗೆ ಜ್ವರ ಶಿಡುಬು ಈ ರೋಗಗಳು ವ್ಯಾಪಿಸಿದ್ದವು. ಇದರಿಂದ ೨೮ ಮಂದಿ ಮೃತಪಟ್ಟಿರುತ್ತಾರೆ. ದನಗಳಲ್ಲಿ ಕಾಲುಜ್ವರ, ಬಾಯಿಜ್ವರ ಈ ರೋಗಗಳ ಕೆಲವು ಮಟ್ಟಿಗೆ ವ್ಯಾಪಿಸಿ ೩೨೩ ಕಾಲ್ನದೆ ಸತ್ತುಹೋದವು'.[೭] ಕ್ಷಾಮ ತಲೆದೋರಿದ್ದಕ್ಕೆ ಮತ್ತು ಮುಂದುವರಿದಿದ್ದಕ್ಕೆ ಮಳೆಯ ವೈಫಲ್ಯವು ಒಂದು ಪ್ರಮುಖ ಕಾರಣ ಎಂಬುದಾಗಿ ಬ್ರಿಟೀಷ್ ಸರ್ಕಾರ ಹೇಳಿತು. ಮಳೆ ಅಭಾವ ಮತ್ತು ಬೆಳೆ ವಿಫಲಗೊಂಡಿದ್ದರಿಂದ ಜನರ ಮತ್ತು ರಾಜ್ಯದ ವರಮಾನ ಕುಸಿತವುಂಟಾಯಿತು. ೧೮೭೬ರಲ್ಲಿ ಉಂಟಾದ ಭೀಕರ ಕ್ಷಾಮ ಸಾಕಷ್ಟು ಪ್ರಮಾಣದಲ್ಲಿ ವಿನಾಶವನ್ನುಂಟುಮಾಡಿತು. ಇದು ಸತತವಾಗಿ ೩ ವರ್ಷಗಳಕಾಲ ರಾಜ್ಯವನ್ನು ಕಾಡಿತು. ೧೮೭೭ರಲ್ಲಿ ಇದು ತೀವ್ರ ಸ್ವರೂಪವನ್ನು ಕಂಡಿತು. ರಾಜ್ಯದ ಸಾಮಾನ್ಯ ಜನರು ಮತ್ತು ಕೃಷಿ ಅವಲಂಬಿತ ರೈತರು ಸಮಸ್ಯೆಗಳನ್ನು, ಕಷ್ಟ ಕಾರ್ಪಣ್ಯಗಳನ್ನು ಎದುರಿಸಿದರು. ೧೮೭೬-೭೭ರ ಅಂಕಿ-ಅಂಶಗಳ ಪ್ರಕಾರ ರಾಜ್ಯದಲ್ಲಿ ೫,೦೫೫,೪೧೨ ಜನರಲ್ಲಿ ೨,೫೩೫,೬೨೪ ಪುರುಷರು ಮತ್ತು ೨,೫೧೯,೪೮೮ ಜನ ಸ್ತ್ರೀಯರು ಇದ್ದರು. ಇವರಲ್ಲಿ ಸುಮಾರು ೫೪,೨೬೫ ಮರಣಗಳು ದಾಖಲಾದವು. ಇವುಗಳಲ್ಲಿ ೪೫,೨೩೨ ಅಂದರೆ ೮೮.೫% ಗ್ರಾಮೀಣ ಪ್ರದೇಶಗಳಲ್ಲಿಯೂ, ೬,೦೩೩ ಅಥವಾ ೧೧.೫% ನಗರ ಪ್ರದೇಶಗಳಲ್ಲಿಯೂ ಸಂಭವಿಸಿದವು.[೮] ಮತ್ತು ರಾಜ್ಯದ ಆದಾಯ ಕಡಿಮೆಯಾಗಿ ಆರ್ಥಿಕ ದುಸ್ಥಿತಿಯನ್ನು ಎದುರಿಸಿತು. ಖರ್ಚ-ವೆಚ್ಚಗಳನ್ನು ಕಡಿಮೆ ಮಾಡುವ ಕ್ರಮಗಳನ್ನು ಕೈಗೊಳ್ಳಲಾಯಿತು.[೯] ೧೮೭೬-೭೭ರಲ್ಲಿ ಧಾನ್ಯಗಳ ಉತ್ಪಾದನೆ ಕುಸಿದು ಬೆಳೆಗಳಲ್ಲಿ ತೀವ್ರವಾದ ಏರಿಕೆಯುಂಟಾಯಿತು. ೧೮೭೩-೭೪ರಲ್ಲಿ ಧಾನ್ಯಗಳ ಸರಾಸರಿ ಬೆಲೆಯು ರೂಪಾಯಿಗೆ ೭೪ ಸೇರುಗಳಿದ್ದು, ೧೮೭೭ರ ವೇಳೆಗೆ ರೂಪಾಯಿಗೆ ೧೩ ೧/೨ ಸೇರುಗಳ ಮಟ್ಟಕ್ಕೆ ಕುಸಿಯಿತು. ೧೮೬೭-೬೮ರಲ್ಲಿ ೭೩ ಲಕ್ಷಕ್ಕೆ ಏರಿತು. ಆದರೆ ಅದು ಮತ್ತೆ ೧೮೬೯-೭೦ರಲ್ಲಿ ೭೨ ೧/೨ ಇಳಿಯಿತು. ೧೮೭೩-೭೪ರಲ್ಲಿ ಮಾತ್ರ ಅದು ೭೪ ಲಕ್ಷವಾಯಿತು. ೧೮೭೩-೭೪ರಲ್ಲಿ ಕಡೂರು ಜಿಲ್ಲೆಯಲ್ಲಿ ರೂಪಾಯಿಗೆ ಭತ್ತ ೩೩ ಸೇರು ಮತ್ತು ರಾಗಿ ೯ ೧/೨ ಸೇರು ಇದ್ದರೆ, ೧೮೭೬-೭೭ರಲ್ಲಿ ರೂಪಾಯಿಗೆ ೧೩ ಸೇರು ಭತ್ತ ಮತ್ತು ರಾಗಿ ೧೫ ಸೇರಿಗೆ ಏರಿಕೆಯಾಯಿತು.[೧೦] ೧೮೭೬-೭೮ರ ಅವಧಿಯಲ್ಲಿ ತಲೆದೋರಿದ ಭೀಕರ ಕ್ಷಾಮದಿಂದ ಪ್ರಗತಿಯ ಗತಿ ಕುಂಠಿತವಾಯಿತಲ್ಲದೆ ಕೃಷಿ ವ್ಯವಸ್ಥೆಯನ್ನು ಎರಡು ದಶಕಗಳಷ್ಟು ಹಿಂದಕ್ಕೆ ತಳ್ಳಿತು. ಆ ಅವಧಿಯಲ್ಲಿ ದಕ್ಷಿಣದಲ್ಲಿ ಶೇಕಡಾ ಇಪ್ಪತ್ತೈದು ಭಾಗ ಜನರು ಕ್ಷಾಮದಿಂದ ಅಸುನೀಗಿದರೆಂದು ತಿಳಿದು ಬರುತ್ತದೆ.[೧೧] ಬ್ರಿಟೀಷರ ನೇರ ಆಳ್ವಕೆಯಲ್ಲಿ ಭೂಕಂದಾಯ ವಸೂಲಿಯಲ್ಲಿ ಏರುಪೇರಾಯಿತು ಕಾರಣ ಉತ್ಪಾದನೆಯಲ್ಲಿ ಗಣನೀಯ ಪ್ರಮಾಣದ ಇಳಿಕೆಯಾಗಿದ್ದು. ಆದರೆ ಬ್ರಿಟೀಷರು ಇದನ್ನು ಸರಿಯಾಗಿ ಪರಿಗಣಿಸಲಿಲ್ಲ.[೧೨] ಕ್ಷಾಮ ಪರಿಹಾರ ಕ್ರಮಗಳನ್ನು ಬ್ರಿಟೀಷ್ ಆಡಳಿತ ತೆಗೆದುಕೊಂಡರು ಅದು ಕೇವಲ ದಾಖಲೆಗಳಿಗೆ ಮಾತ್ರ ಸೀಮಿತವಾಗಿತ್ತು. ನಿಜವಾದ ಪರಿಹಾರ ಕ್ರಮಗಳು ಜನರಿಗೆ ತಲುಪದೆ ಹೋಯಿತು. ಸಾರ್ವಜನಿಕ ಕಾರ್ಯಗಳಿಗೆ ಮಂಜೂರಾದ ೨೯,೫೦,೦೦ ರೂಪಾಯಿಗಳನ್ನು ಸರಿಯಾಗಿ ಉಪಯೋಗಿಸಲಿಲ್ಲ. ಪೌರ ಅಧಿಕಾರಿಗಳ ಕೈಕೆಳಗೆ ಪರಿಹಾರ ಕಾರ್ಯಗಳಿಗೆಂದು ಒದಗಿಸಿದ

೧೦,೫೦,೦೦೦ ರೂಪಾಯಿಗಳಲ್ಲಿ ಸ್ವಲ್ಪ ಮಾತ್ರ ಕೆರೆ, ಬಾವಿ ದುರಸ್ತಿ ಮತ್ತು ಎರಡನೆಯ ದರ್ಜೆಯ ರಸ್ತೆಗಳ ನಿರ್ಮಾಣಕ್ಕೆ ವಿನಿಯೋಗಿಸಲಾಯಿತು.[೧೩] ಹೆಚ್ಚಿನ ಹಣವನ್ನು ಕಛೇರಿ ದುರಸ್ಥಿ, ಒಳಚರಂಡಿ ಸುಧಾರಣೆಗೆ ಖರ್ಚು ಮಾಡಲಾಯಿತು. ಬಾವಿ, ನಾಲೆಗಳಿಲ್ಲದೆ ಜನರು ಕುಡಿಯುವ ನೀರಿಗೆ ಪರಿತಪಿಸಬೇಕಾಯಿತು. ಕೃಷಿಗೆ ಬೇಕಾದ ಸೌಲಭ್ಯಗಳನ್ನು ಒದಗಿಸುವಲ್ಲಿ ನಿರ್ಲಕ್ಷಿಸಿದರು. ಕ್ಷಾಮ ಪರಿಹಾರವನ್ನು ಸರಿಯಾಗಿ ತಲುಪಲಿ ಎಂದು ಚೀಫ್ ಕಮೀಶನರು ೧೮೭೭ರಲ್ಲಿ ವೃದ್ಧರಿಗೆ, ಅಸಹಾಯಕರಿಗೆ ಮನೆಗಳಿಗೆ ಕ್ಷಾಮ ಪರಿಹಾರ ಸಾಮಗ್ರಿಗಳನ್ನು ತಲುಪಿಸಲು ಆದೇಶವನ್ನು ಹೊರಡಿಸಿದರು. ಈ ಕಾರ್ಯವನ್ನು ಪಟೇಲರಿಗೂ, ಅಮಲ್ದಾರಿಗೂ ಡೆಪ್ಯೂಟಿ ಕಮೀಶನರನ ಅಧೀನ ಅಧಿಕಾರಿಗಳಿಗೆ ವಹಿಸಲಾಯಿತು. ಆದರೆ ಈ ಅಧಿಕಾರಿಗಳು ತಮ್ಮ ಕಾರ್ಯದಲ್ಲಿ ನಿರ್ಲಕ್ಷ್ಯ ತೋರಿಸಿದರು. ಇಂತಹ ಸನ್ನಿವೇಷದಲ್ಲಿ ರೈತರಿಗೆ ಭೂಕಂದಾಯದಿಂದ ವಿನಾಯಿತಿ ಮತ್ತು ಭೂಕಂದಾಯವನ್ನು ಮುಂದೂಡುವ ಅಗತ್ಯವಿತ್ತು. ಇದರ ಪರವಾಗಿ ಡೆಪ್ಯೂಟಿ ಕಮೀಷನ್ನರು ಸಲಹೆಯನ್ನು ಮಾಡಿದರೂ ಚೀಫ್ ಕಮೀಷನರ್ ಅದನ್ನು ತಳ್ಳಿಹಾಕಿದರು. ಇದರ ಫಲವಾಗಿ ಸುಮಾರು ಶೇ. ೧೩% ಜನರು ಕೆಲಸವನ್ನು ಮತ್ತು ದನಗಳಿಗೆ ಮೇವನ್ನು ಅರಸುತ್ತಾ ಮಲೆನಾಡಿನ ಕಾಫಿ ತೋಟಗಳಿಗೆ ಕೂಲಿಗಾಗಿ ವಲಸೆ ಹೋದರು.[೧೪] ೧೮೮೧ರಲ್ಲಿ ರಂಗಾಚಾರ್ಲು ದಿವಾನರಾಗಿ ನೇಮಕಗೊಂಡಾಗ, ರಾಜ್ಯದಲ್ಲಿ ಆರ್ಥಿಕ ಸ್ಥಿತಿ ಶೋಚನೀಯವಾಗಿತ್ತು. ೧೮೭೭-೭೮ರ ಕ್ಷಾಮದಿಂದ ಜನರು ಮತ್ತು ಸಂಸ್ಥಾನ ಚೇತರಿಸಿಕೊಂಡಿರಲ್ಲಿಲ್ಲ. ಲಕ್ಷಾಂತರ ರೂಪಾಯಿಗಳ ಮೀಸಲು ನಿಧಿಯನ್ನೆಲ್ಲ ಖರ್ಚು ಮಾಡಿದ್ದ ಸರ್ಕಾರವು ಎಂಭತ್ತು ಲಕ್ಷ ರೂಪಾಯಿಗಳ ಸಾಲದ ಹೊರೆಯಲ್ಲಿತ್ತು. ದಿವಾನ್ ರಂಗಾಚಾರ್ಲುರವರ ದಿಟ್ಟ ನಿರ್ಧಾರಗಳನ್ನು ತಮ್ಮ ಆಡಳಿತದಲ್ಲಿ ತೆಗೆದುಕೊಂಡ ಪರಿಣಾಮ ರಾಜ್ಯದ ಆರ್ಥಿಕ ಸ್ಥಿತಿಯಲ್ಲಿ ಸುಧಾರಣೆಗಳು ಕಂಡುಬಂದವು. ೧೮೯೮ರಲ್ಲಿ ಸಂಸ್ಥಾನದಲ್ಲಿ ತಲೆದೋರಿದ ಸಾಂಕ್ರಾಮಿಕ ರೋಗ ಪ್ಲೇಗ್ ದಿನೇ ದಿನೇ ಹರಡುತ್ತಾ ಸಾವಿರಾರು ಜನರನ್ನು ಬಲಿ ತೆಗೆದುಕೊಳ್ಳಲಾರಂಭಿಸಿತು. ಸರ್ಕಾರ ರೋಗಪೀಡಿತರನ್ನು ಬೇರೆಯವರ ಸಂಪರ್ಕಕ್ಕೆ ಬಾರದ ರೀತಿಯಲ್ಲಿ ಸ್ಥಳಾಂತರಿಸುವ ಕಾರ್ಯ ಮತ್ತು ಲಸಿಕೆಯನ್ನು ನೀಡುವ ಕಾರ್ಯ ವ್ಯಾಪಕವಾಗಿ ಕೈಗೊಂಡಿತು. ಗ್ರಾಮಾಂತರ ಜನರ ವಿರೋಧದ ನಡುವೆಯು ಕಟ್ಟುನಿಟ್ಟಾಗಿ ಚಿಕಿತ್ಸೆಯನ್ನು ಜಾರಿಗೆ ತರುವ ಪ್ರಯತ್ನ ಮಾಡಲಾಯಿತು. ಆದರೂ ರಾಜ್ಯದಲ್ಲಿ ಈ ಸೋಂಕಿನಿಂದ ೧೪,೮೩೧ ಮಂದಿಗೆ ಸೊಂಕು ಕಾಣಿಸಿಕೊಂಡಿದ್ದಲ್ಲದೆ ಸುಮಾರು ೧೨,೭೭೩ ಮಂದಿ ಮೃತಪಟ್ಟರು. ಈ ರೋಗವನ್ನು ತಡೆಗಟ್ಟಲು ಸಂಸ್ಥಾನದ ಸರ್ಕಾರ ಸುಮಾರು ೨೦ ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡಿತು.[೧೫] ಮಲೆನಾಡಿನ ಜನತೆ ದೂರದ ಆಸ್ಪತ್ರೆಗಳಿಗೆ ಹೋಗಲು ತೊಂದರೆಯಾಗುತ್ತಿದ್ದುದರಿಂದ ಎತ್ತಿನ ಗಾಡಿಯಲ್ಲಿ ವೈದ್ಯರೇ ಗ್ರಾಮಗಳಿಗೆ ಹೋಗಿ ಚಿಕಿತ್ಸೆ ಮಾಡುವ ಸೌಕರ್ಯವನ್ನು ಮಾಡಲಾಯಿತು.[೧೬] ೧೯೧೮ರಲ್ಲಿ ರಾಜ್ಯದಲ್ಲಿ ಕಾಣಿಸಿದ ಇನ್ಫ್ಲೂಎಂಜಾ ವ್ಯಾದಿ ತಲೆದೋರಿದಾಗ ದಿವಾನರಾದ ವಿಶ್ವೇಶ್ವರಯ್ಯನವರು ಕೂಡಲೆ ಪರಿಹಾರಕ್ರಮಗಳನ್ನು ತೆಗೆದು ಕೊಂಡರು. ಈ ಅವಧಿಯಲ್ಲಿ ೧೯೩೧ರಲ್ಲಿ ಕಂಡುಬಂದ ಬರ ಕೃಷಿ ಕ್ಷೇತ್ರದ ಮೇಲೆ ಕರಿಛಾಯೆ ಮೂಡಿಸಿತು. ಬೆಳೆ ಚೆನ್ನಾಗಿ ಬರಲಿಲ್ಲ, ಮತ್ತು ಬೆಳೆಯ ಧಾರಣೆಯು ಅತಿಶಯವಾಗಿ ಇಳಿದುಹೋಯಿತು ಮಲೆನಾಡು ಭಾಗಗಳಲ್ಲಿ ಅಡಿಕೆ ಉತ್ಪಾದನೆ ಕುಸಿತ ಮತ್ತು ಬೆಲೆ ಇಳಿಕೆಯಿಂದ ರೈತರು ಸಾಕಷ್ಟು ಸಂಕಷ್ಟ ಅನುಭವಿಸಿದರು ಇದು ಇತರೆ ಎಲ್ಲಾ ರೈತವರ್ಗವನ್ನು ಕಾಡಿತು.[೧೭]

೧೮೯೯-೧೯೦೦ರ ಅವಧಿಯಲ್ಲಿ ಕಡೂರು ಜಿಲ್ಲೆಯಲ್ಲಿ ಬಿತ್ತನೆ ಮಾಡಿದ ಒಟ್ಟು ಭೂಮಿ ಈ ಕೆಳಕಂಡಂತಿದೆ.[೧೮]

ಜಿಲ್ಲೆ	ಜನಸಂಖ್ಯೆ	ಒಟ್ಟು ಕೃಷಿಭೂಮಿ (ಎಕರೆಗಳಲ್ಲಿ)	೧೮೯೯-೧೯೦೦ರಲ್ಲಿ ಬಿತ್ತನೆ ಮಾಡಿದ ಭೂಮಿ (ಎಕರೆಗಳಲ್ಲಿ)	ಶೇಕಡವಾರು ಬಿತ್ತನೆ ಮಾಡಿದ ಭೂಮಿ
ಕಡೂರು	೩,೩೦,೦೬೩	೬,೭೩,೯೨೦	೪,೯೧,೨೩೦	೭೨.೯%
ಒಟ್ಟು ಸಂಸ್ಥಾನದಲ್ಲಿ	೪೯,೪೩,೬೦೪	೯,೮೮೦,೩೨೦	೬,೫೦೩,೫೬೨	೬೫.೫%

ಇದರಲ್ಲಿ ಒಣ, ನೀರಾವರಿ, ತೋಟ, ಕಾಫಿ-ಸಿಂಕೋನ-ಏಲಕ್ಕಿ ಭೂಮಿ ಒಳಗೊಂಡಿದೆ. ಈ ಅವಧಿಯಲ್ಲಿ ಬಿತ್ತನೆ ಪ್ರಮಾಣ ಕಡಿಮೆಯಾಗಿರುವುದಕ್ಕೆ ಮಳೆಯ ಕೊರತೆ ಒಂದು ಪ್ರಮುಖ ಕಾರಣವಾಯಿತು.

೧೯ನೇ ಮತ್ತು ೨೦ನೇ ಶತಮಾನದಲ್ಲಿ ಕಂಡುಬಂದ ಭೀಕರ ಕ್ಷಾಮ ಪರಿಸ್ಥಿತಿ ಚಿಕ್ಕಮಗಳೂರು ಜಿಲ್ಲೆ ಮತ್ತು ಮೈಸೂರು ಸಂಸ್ಥಾನದಲ್ಲಿನ ರೈತಾಪಿ ವರ್ಗ ಒಳಗೊಂಡಂತೆ ಸಮಾಜದ ಮಧ್ಯಮ ಮತ್ತು ಕೆಳವರ್ಗದ ಮೇಲೆ ಸಾಕಷ್ಟು

ದುಷ್ಪರಿಣಾಮಗಳನ್ನು ಉಂಟು ಮಾಡಿ ಹೈರಾಣಾಗುವಂತೆ ಮಾಡಿತು. ಹೆಚ್ಚಿನ ಪ್ರಮಾಣದ ಸಾವು ನೋವುಗಳು ಉಂಟಾದವು. ಆಹಾರದ ಕೊರತೆ, ಸಾಂಕ್ರಾಮಿಕ ರೋಗಗಳ ಭಾದೆಗಳಿಂದ ಜನ ತತ್ತರಿಸಿದರು. ಸರ್ಕಾರದ ಆರ್ಥಿಕತೆಯ ಮೇಲು ವ್ಯತಿರಿಕ್ತ ಪರಿಣಾಮ ಕಂಡುಬಂದಿತು ಎಂಬುವುದು ಈ ಅಧ್ಯಯನದಿಂದ ತಿಳಿದುಬರುತ್ತದೆ.

ಅಡಿ ಟಿಪ್ಪಣಿಗಳು

೧. ಇಂಟರ್ ನ್ಯಾಷನಲ್ ಎನ್ಸೈಕ್ಲೋಪೀಡಿಯಾ ಆಫ್ ಸೋಷಿಯಲ್ ಸೈನ್ಸ್ಸ್, ಪುಟ ೪೪೭.

೨. ಎನ್ಸೈಕ್ಲೋಪೀಡಿಯ ಬ್ರಿಟನಿಕ.

೩. ಮೆಕ್‌ಡೊನೆಲ್ ಡ್ರಾಟ್ ಕಮಿಷನ್ ರಿಪೋರ್ಟ್ ೧೯೦೦-೦೧.

೪. ಕೇಂಬ್ರಿಡ್ಜ್ ಎಕನಾಮಿಕ್ ಹಿಸ್ಟರಿ ಆಫ್ ಇಂಡಿಯಾ, ಪು. ೪೭೮.

೫. ಕರ್ಣಾಟಕ ಪ್ರಕಾಶಿಕಾ ಪತ್ರಿಕೆ, ೫ನೇ ನವೆಂಬರ್ ೧೮೬೬, ಪುಟ ೨೩.

೬ ಕರ್ನಾಟಕ ಚರಿತ್ರೆ, ಸಂಪುಟ ೬ ಪುಟ ೨೫೪.

೭. ಕರ್ಣಾಟಕ ಪ್ರಕಾಶಿಕ ಪತ್ರಿಕೆ, ೬ನೇ ಸೋಮವಾರ ಮೇ ೧೯೬೭, ಪುಟ ೩೨.

೮. ಕರ್ನಾಟಕ ಚರಿತ್ರೆ, ಸಂಪುಟ ೬ ಪುಟ ೨೫೨.

೯. ದೇವೇಗೌಡ, ಪುಟ ೪೬.

೧೦. ಕರ್ನಾಟಕ ಚರಿತ್ರೆ, ಸಂಪುಟ ೬ ಪುಟ ೨೬೫.

೧೧. ಡಾ. ಎಸ್. ಚಂದ್ರಶೇಖರ್, ದಕ್ಷಿಣ ಭಾರತ, ಪುಟ ೩೬.

೧೨. ಕರ್ನಾಟಕ ಚರಿತ್ರೆ, ಸಂಪುಟ ೬, ಪುಟ ೨೬೫.

೧೩. ಕರ್ನಾಟಕ ಸರಿತ್ರೆ, ಸಂಪುಟ ೬ ಪುಟ ೨೫೪

೧೪. ಕರ್ನಾಟಕ ಚರಿತ್ರೆ ಸಂಪುಟ, ಪುಟ ೨೬೨.

೧೫. ಮೈಸೂರು ಸಂಸ್ಥಾನದ ಆಡಳಿತ ವ್ಯವಸ್ಥೆ ಮತ್ತು ರಾಜಕೀಯ, ಡಾ. ಟಿ.ಡಿ. ದೇವೇಗೌಡ ಪುಟ ೯೨.

೧೬. ಡಾ ಟಿ.ಡಿ.ದೇ. ಪು. ೯೩.

೧೭. ವಸಾಹತುಶಾಹಿ ಪರಿಕಲ್ಪನೆಗಳು, ಪುಟ ೧೨೨.

೧೮. ರಿಪೋರ್ಟ್ ಆನ್ ದಿ ಇಂಡಿಯನ್ ಇರ್ರಿಗೇಷನ್ ಕಮೀಷನ್, ೧೯೦೧-೧೯೦೩, ಪುಟ ೩೨೦.

ವಸಾಹತುಕಾಲೀನ ಸ್ಮಾರಕಗಳು: ಧಾರವಾಡ

ಬಸಮ್ಮ ದಾನಪ್ಪಗೌಡ್ರ*

ಧಾರವಾಡ ಸಾಂಸ್ಕೃತಿಕ ಮತ್ತು ಐತಿಹಾಸಿಕ ಸ್ಥಳವಾಗಿದೆ. ಇದರ ಪುರಾತತ್ವ ಸಂಶೋಧನೆ ಈ ಪ್ರದೇಶದ ಇತಿಹಾಸ ಮತ್ತು ಸಂಸ್ಕೃತಿಯ ಪುನಃ ರಚನೆಗೆ ವೈಜ್ಞಾನಿಕ ನೆಲೆಗಟ್ಟನ್ನು ನೀಡಿದೆ. ಪ್ರಾಚೀನ ಮತ್ತು ಮಧ್ಯಯುಗಿನ ಅರಸು ಮನೆತನಗಳ ಆಳ್ವಿಕೆಯಲ್ಲಿ, ತದನಂತರ ಮರಾಠರು, ಪೇಶ್ವೆ, ಸಂಸ್ಥಾನಿಕರು ಮತ್ತು ಬ್ರಿಟೀಷ್ ಆಳ್ವಿಕೆ–ಹೀಗೆ ಬಹು ದೀರ್ಘ ಕಾಲಾವಧಿಯ ಇತಿಹಾಸ ಮತ್ತು ಸಂಸ್ಕೃತಿಗಳು ಇಲ್ಲಿ ಹಾಸು ಹೊಕ್ಕಾಗಿವೆ. ಪ್ರಸ್ತುತ ದಿನಗಳಲ್ಲಿ ವಸಾಹತು ಕಾಲದ ಕೆಲವೊಂದು ಸ್ಮಾರಕಗಳು ನೆಲಸಮಗೊಳ್ಳಲಿದ್ದು, ಅದೇ ಸ್ಥಳದಲ್ಲಿ ಕಾಂಕ್ರೀಟ್ ಕಟ್ಟಡಗಳನ್ನು ಕೆಲವೇ ತಿಂಗಳುಗಳಲ್ಲಿ ನಿರ್ಮಿಸುವ ಯೋಜನೆಯನ್ನು ಸರಕಾರ ರೂಪಿಸಿದೆ, ಹೀಗಾಗಿ ಅಳಿವಿನ ಅಂಚಿನಲ್ಲಿರುವ ಹಾಗೂ ಭೂಗರ್ಭದಲ್ಲಿ ಮಣ್ಣಾಗಲಿರುವ ಧಾರವಾಡದ ವಸಾಹತು ಕಾಲದ ಸ್ಮಾರಕಗಳನ್ನು ಗುರುತಿಸಿ ಕ್ಷೇತ್ರಕಾರ್ಯ ಕೈಗೊಂಡು ವಸಾಹತು ಕಾಲದಲ್ಲಿ ನಿರ್ಮಾಣಗೊಂಡ ಸ್ಮಾರಕಗಳ ರಚನೆಯ ಮೂಲ ಉದ್ದೇಶವನ್ನು ಅರಿಯುವುದಾಗಿದೆ.

ಧಾರವಾಡ ಎಂಬ ಹೆಸರು ಒಂದು ಸಾವಿರ ವರ್ಷಗಳಷ್ಟು ಪ್ರಾಚೀನ. ಈ ನಗರದ ದುರ್ಗ ದೇವಾಲಯದಲ್ಲಿರುವ ಕ್ರಿ.ಶ. ೧೧೧೭ರ ಕನ್ನಡ ಶಾಸನದಲ್ಲಿ ಧಾರವಾಡ ಎಂಬ ಹೆಸರಿದೆ. ಧಾರವಾಡ ಹೆಸರು ಊಹೆಯ ಪ್ರಕಾರ ಪ್ರಾಚೀನ ಕಾಲದಿಂದಲೂ ಧಾರವಾಡ ಮಲೆನಾಡು ಮತ್ತು ಬಯಲುಸೀಮೆ ನಡುವೆ ಸಾಗುತ್ತಿದ್ದ, ವ್ಯಾಪಾರಿ ಸರಕುಗಳು ಸುಂಕ ಸಂಗ್ರಹಕ್ಕೆ 'ದ್ವಾರ'ದಂತಿದ್ದ ಮುಖ್ಯ ಪಟ್ಟಣವಾಗಿತ್ತು. ದಕ್ಷಿಣ ಮತ್ತು ಉತ್ತರ ಕರ್ನಾಟಕ ಭಾಗಗಳನ್ನು ಜೋಡಿಸುವ ಕೊಂಡಿಯಾಗಿದೆ. ಧಾರವಾಡವು ನೂಲಿನ ವಸಾಹತು ಎನ್ನುವ ಅರ್ಥವನ್ನು ಹೊಂದಿದೆ. ಸ್ಥಳ ಪುರಾಣದಲ್ಲಿ ಮಲೆನಾಡಿಗೆ ಹೋಗಬೇಕಾದರೆ ಧಾರವಾಡವೇ ಮಾರ್ಗವಾಗಿದ್ದರಿಂದ 'ದ್ವಾರವಾಟ' ಎಂಬ ಹೆಸರು ಬಂದಿದೆ. ವಿಜಯ ನಗರದ ಆಳ್ವಿಕೆಯಲ್ಲಿ ಕ್ರಿ.ಶ. ೧೪೦೩ರಲ್ಲಿ ಧಾರವ ಎಂಬ ವಿಜಯನಗರದ ಅಧಿಕಾರಿ ಈ ಸ್ಥಳವನ್ನು ಆಳುತ್ತಿದ್ದನೆಂದು ಐತಿಹ್ಯವಿದೆ. ಈ ಅಧಿಕಾರಿಯಿಂದ ಈ ನಗರಕ್ಕೆ ಧಾರವಾಡ ಎಂಬ ಹೆಸರು ಬಂದಿತೆಂದು ಹೇಳಲಾಗುತ್ತದೆ. ಬ್ರಿಟೀಷರ ಕಾಲದಲ್ಲಿ ಧಾರವಾಡವು 'ಧಾರವಾದ್'ವಾಗಿ ನಂತರ 'ಧಾರವಾಡ'ವೆಂದೇ ಪ್ರಸಿದ್ಧಿಯಾಗಿದೆ.

ಮೊಘಲರ ದೊರೆಯಾದ ಔರಂಗಜೇಬನ ಮರಣದ ನಂತರ ಮರಾಠಾ ಪೇಶ್ವೆಗಳು ಪ್ರಬಲರಾಗಿ ಉತ್ತರಕರ್ನಾಟಕ ಭಾಷಿಕರ ಪ್ರಾಂತ್ಯಗಳ ಮೇಲೆ ಅಧಿಕಾರ ಪಡೆದರು. ತಮ್ಮ ತಮ್ಮಲ್ಲಿ ಹೊಡೆದಾಡುತ್ತಿದ್ದ ಪೇಶ್ವೆಗಳು ತಮ್ಮ ಸಹಾಯಕ್ಕಾಗಿ ಬ್ರಿಟೀಷರೊಂದಿಗೆ ಸ್ನೇಹ ಬೆಳೆಸುವ ಸಲುವಾಗಿ ಕ್ರಿ.ಶ. ೧೮೦೧ರಲ್ಲಿ ಮರಾಠಾ ಪೇಶ್ವೆ ಭಾಜಿರಾಯನು ಅವರಿಗೆ ಧಾರವಾಡ ಪ್ರಾಂತ್ಯವನ್ನು ನೀಡಿದನು.

ಈ ಪ್ರಾಂತ್ಯವನ್ನು ನೀಡಿದ ನಂತರವೂ ಪೇಶ್ವೆ ಮತ್ತು ಬ್ರಿಟೀಷರ ನಡುವೆ ನಿರಂತರ ೧೬ ವರ್ಷಗಳ ಕಾಲ ಹೋರಾಟ ನಡೆಯಿತು. ಕೊನೆಗೆ ಕ್ರಿ.ಶ. ೧೮೧೭ರಲ್ಲಿ ಬ್ರಿಟೀಷ್ ಸೇನಾಪತಿ ಮನ್ರೋ ಪೇಶ್ವೆಗಳನ್ನು ಸಂಪೂರ್ಣವಾಗಿ ಸೋಲಿಸಿ ಧಾರವಾಡ ಪ್ರಾಂತ್ಯವನ್ನು ವಶಪಡಿಸಿಕೊಂಡನು. ಆನಂತರ ಅದನ್ನು ಮುಂಬೈ ಪ್ರಾಂತ್ಯಕ್ಕೆ ಸೇರಿಸಲಾಯಿತು. ಬ್ರಿಟೀಷ್ ಆಡಳಿತದ ಪ್ರಭಾವದಿಂದ ಸಾಮಾಜಿಕ, ಧಾರ್ಮಿಕ, ರಾಜಕೀಯ, ಆರ್ಥಿಕ, ಶೈಕ್ಷಣಿಕ, ಸಾಹಿತ್ಯಿಕ, ಕಲೆ ಮತ್ತು ವಾಸ್ತು ಶಿಲ್ಪ ಕ್ಷೇತ್ರದಲ್ಲಿ ಉಂಟಾದ ಬದಲಾವಣೆ ಕ್ರಾಂತಿಕಾರಕವಾಗಿದೆ. ಬ್ರಿಟಿಷ್ ಆಡಳಿತಕ್ಕೊಳಪಟ್ಟ ಧಾರವಾಡ ವಾಸ್ತುಶಿಲ್ಪ ಕ್ಷೇತ್ರದಲ್ಲಿ ಹೊಸ ಅಧ್ಯಾಯ ಆರಂಭವಾಯಿತು. ಅವರು ತಮಗೆ ಆಡಳಿತಕ್ಕೆ ಅನುಕೂಲವಾಗುವ ರೀತಿಯಲ್ಲಿ ಹಲವಾರು ಕಟ್ಟಡಗಳನ್ನು ಇಂಡೊ ಯುರೋಪಿಯನ್ ಶೈಲಿಯಲ್ಲಿ ನಿರ್ಮಿಸಿದರು. ಅವುಗಳಲ್ಲಿ ಪ್ರಮುಖವಾದ ಕಟ್ಟಡಗಳೆಂದರೆ ಜಿಲ್ಲಾಧಿಕಾರಿಗಳ ಕಚೇರಿ, ಮಹಾನಗರಸಭೆ, ನ್ಯಾಯಾಲಯ, ಅಂಚೆ ಕಚೇರಿ, ತಂತಿ ಇಲಾಖೆ, ಆರಕ್ಷಕ ಠಾಣೆ, ಭೂ ದಾಖಲೆ ಇಲಾಖೆ, ದರಬಾರ್ ಹಾಲ್, ರೈಲ್ವೆ ಸ್ಟೇಶನ್ ಶೈಕ್ಷಣಿಕ, ಧಾರ್ಮಿಕ, ಸಾರ್ವಜನಿಕ ಕಟ್ಟಡಗಳನ್ನು ಉನ್ನತ ಅಧಿಕಾರಿಗಳ ಬಂಗಲೆ ಮತ್ತು

* ಸಂಶೋಧನಾ ವಿದ್ಯಾರ್ಥಿನಿ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಕನ್ನಡ ವಿವಿ, ಹಂಪಿ.

ಕೆಳದರ್ಜೆಯ ನೌಕರರ ವಸತಿ ನಿವೇಶನಗಳು ನಿರ್ಮಾಣಗೊಂಡವು. ಈ ಕಟ್ಟಡಗಳ ಯೋಜನೆಯನ್ನು ಸಿದ್ಧಪಡಿಸುವವರು ಬ್ರಿಟೀಷ್ ಇಂಜಿನೀರಗಳಾಗಿದ್ದರು. ತಮ್ಮೊಂದಿಗೆ ವಾಸ್ತುಶಿಲ್ಪಿಗಳನ್ನು ಭಾರತಕ್ಕೆ ಅಲ್ಪ ಪ್ರಮಾಣದಲ್ಲಿ ಕರೆ ತಂದಿದ್ದರು. ಅದರ ಪರಿಣಾಮವಾಗಿ ಭಾರತದಾದ್ಯಂತ ಪಾಶ್ಚಿಮಾತ್ಯರ ವಾಸ್ತು ಶೈಲಿಗಳಾದ ಗೋಥಿಕ್, ಅಯೋನಿಕ್, ಡೋರಿಕ್ ಮತ್ತು ಕೊರಂಥಿಯನ್ ಶೈಲಿಯನ್ನು ಅಳವಡಿಸಿ ಹಲವಾರು ಕಟ್ಟಡಗಳನ್ನು ನಿರ್ಮಿಸಿದರು. ಕಟ್ಟಡಗಳ ನಿರ್ಮಾಣ ಕಾರ್ಯದಲ್ಲಿ ಸ್ಥಳೀಯ ಕಾರ್ಮಿಕರು ಸೇರಿಕೊಂಡಿದ್ದರಿಂದ ಬ್ರಿಟಿಷ್ ಕಟ್ಟಡಗಳಲ್ಲಿ ಯುರೋಪಿಯನ್ ಮತ್ತು ಭಾರತೀಯ ವಾಸ್ತು ಲಕ್ಷಣಗಳು ಸೇರಿಕೊಂಡು ಹೊಸದಾದ ವಾಸ್ತು ಶೈಲಿ ಹುಟ್ಟಿಕೊಂಡಿತು. ಈ ಶೈಲಿಯನ್ನು 'ಇಂಡೋ ಯುರೋಪಿಯನ್' ವಾಸ್ತು ಶಿಲ್ಪವೆಂದು ಕರೆಯಲಾಗುತ್ತದೆ. ಇಂತಹ ಹಲವಾರು ಸ್ಮಾರಕಗಳು ಧಾರವಾಡದಲ್ಲಿ ನಿರ್ಮಾಣಗೊಂಡಿರುವುದನ್ನು ಕಾಣಬಹುದಾಗಿದೆ.

ಜಿಲ್ಲಾ ಕಛೇರಿ: ಈ ಕಟ್ಟಡವನ್ನು ಕ್ರಿ.ಶ. ೧೮೨೦ರಲ್ಲಿ ಎರಡು ಅಡಿ ಎತ್ತರದ ತಳಪಾಯದ ಮೇಲೆ ದಕ್ಷಿಣಾಭಿಮುಖವಾಗಿ ನಿರ್ಮಿಸಲಾಗಿದೆ. ಕಛೇರಿಯ ಆವರಣವು ಒಟ್ಟು ೧೮ ಗುಂಟೆ ಇದೆ. ಅದರಲ್ಲಿ ಜಿಲ್ಲಾ ಕಛೇರಿಯು ೧೯೦೦ ಚದರ ಅಡಿ ಇರುತ್ತದೆ. ಇದು ಎರಡು ಅಂತಸ್ತಿನ ಕಟ್ಟಡವಾಗಿದೆ. ಕೆಳ ಅಂತಸ್ತಿನಲ್ಲಿ ೪ ಕೊಠಡಿಗಳಿವೆ. ಅವುಗಳ ಮುಂದುಗಡೆ ೧೦ ಅಡಿ ಅಗಲವಾದ ಕಾರಿಡಾರ್ ಇದೆ. ಇಲ್ಲಿ ಬ್ರಿಟಿಷ್ ವಾಸ್ತು ಶಿಲ್ಪದ ಲಕ್ಷಣಗಳಾದ ಕಮಾನುಗಳನ್ನು ಅಳವಡಿಸಲಾಗಿದೆ. ಡೊರಿಕ್ ಶೈಲಿಯ ಕಂಬಗಳು ಕಂಡು ಬರುತ್ತವೆ. ಇವುಗಳ ಛತ್ತಿಗೆ ಮದ್ರಾಸ್ ತಾರಸಿಯನ್ನು ಹಾಕಲಾಗಿದೆ. ಮೇಲಂತಸ್ತಿಗೆ ಹೋಗಲು ಮೆಟ್ಟಲುಗಳನ್ನು ಅಳವಡಿಸಲಾಗಿದೆ. ಮೇಲಂತಸ್ತಿನಲ್ಲಿಯೂ ನಾಲ್ಕು ಕೊಠಡಿಗಳು ಕಂಡು ಬರುತ್ತವೆ. ಇಲ್ಲಿಯೂ ಕಮಾನಿನ ಆಕೃತಿಗಳು ಕಂಡು ಬರುತ್ತವೆ. ಕಟ್ಟಡದ ಎರಡೂ ಬದಿಯಲ್ಲಿ ಕಬ್ಬಿಣದ ಸುರುಳಿಯಾಕಾರದ ಮೆಟ್ಟಿಲುಗಳನ್ನು ಅಳವಡಿಸಲಾಗಿದೆ. ಈ ಕಟ್ಟಡವು ೨೦೦ ವರ್ಷಗಳಷ್ಟು ಹಳೆಯದಾಗಿದೆ ಆದರೂ ಸದೃಢವಾಗಿ ನಿಂತಿದೆ. ಆದರೆ ಇದು ಅತ್ಯಂತ ಹಳೆಯ ಕಟ್ಟಡವಾಗಿದ್ದರಿಂದ ಇಂದು ಸರಕಾರವು ಈ ಸ್ಮಾರಕವನ್ನು ನೆಲಸಮಗೊಳಿಸುವ ಯೋಜನೆಯಲ್ಲಿದೆ. ಇಂತಹ ಸ್ಮಾರಕಗಳನ್ನು ರಕ್ಷಿಸುವತ್ತ ಪ್ರಾಕ್ತನ ಇಲಾಖೆಯು ಗಮನಹರಿಸಬೇಕಾಗಿದೆ.

ಧಾರವಾಡ ಮಹಾನಗರ ಸಭೆ: ಧಾರವಾಡ ನಗರದ ಮಧ್ಯ ಭಾಗದಲ್ಲಿ ಈ ಆಡಳಿತ ಭವನ ನೆಲೆಗೊಂಡಿದೆ. ದೇಶಿಯ ಅರಸರ ಕಾಲದಲ್ಲಿ ಒಂದೇ ರಾಜ್ಯದಲ್ಲಿ ವಿಭಿನ್ನ ಪ್ರಕಾರದ ನಗರಸಭೆಗಳು ಅಸ್ತಿತ್ವದಲ್ಲಿದ್ದವು, ಆದರೆ ಬ್ರಿಟಿಷ್ ಆಳ್ವಿಕೆಯ ಅವಧಿಯಲ್ಲಿ ಏಕರೂಪವಾದ ನಗರಾಡಳಿತ ವ್ಯವಸ್ಥೆ ಅಸ್ತಿತ್ವಕ್ಕೆ ಬಂದು, ಮುಂಬೈ-ಕರ್ನಾಟಕದಲ್ಲಿ ೧೮೫೦ರ ೨೬ನೇ ನಿಯಮದಂತೆ ನಗರಸಭೆ ಜಾರಿಗೆ ಬಂದಿತು. ಧಾರವಾಡದಲ್ಲಿ ೧೦-೦೧-೧೮೫೬ರಂದು ಮಹಾನಗರ ಸಭೆ ಸ್ಥಾಪನೆಯಾಯಿತು. ಮುಂಬೈ ಸರಕಾರದ IV ೧೮೭೩ರ ಕಾಯ್ದೆಯನ್ವಯ ಏಪ್ರಿಲ್ ೧, ೧೮೮೩ರಲ್ಲಿ ಶಹರ ನಗರಸಭೆಯಾಗಿ ಪರಿವರ್ತನೆಗೊಂಡಿತು.

ಧಾರವಾಡ ನಗರದ ಮಹಾನಗರ ಪಾಲಿಕೆಯ ಕಟ್ಟಡವು ೬,೭೦೦ ಚದರ ಅಡಿ ವಿಸ್ತೀರ್ಣದಲ್ಲಿದೆ. ಇದು ೩ ಅಂತಸ್ಥಿನ ಕಟ್ಟಡವಾಗಿದೆ. ಕಟ್ಟಡವು ೨ ಅಡಿ ಎತ್ತರದ ತಳಪಾಯದ ಮೇಲೆ ಪೂರ್ವಾಭಿಮುಖವಾಗಿ 'U' ಆಕಾರದಲ್ಲಿ ನಿರ್ಮಿಸಲಾಗಿದೆ. ಇದರ ಅಡಿಗಲ್ಲು ಸಮಾರಂಭ ದಿನಾಂಕ: ೨೬-೦೮-೧೯೨೪ ರಂದು ಮುಂಬೈ ಸರ್ಕಾರದ ಅಂದಿನ ಗವರ್ನರ್ ಆದ ಲೆಸ್ಲೆ ಆರ್ಮೇ ವಿಲ್ಸನ್ ಅವರು ನೆರವೇರಿಸಿದರು. ಆಡಳಿತ ಭವನದ ನಿರ್ಮಾಣದ ಕಾರ್ಯವನ್ನು ಎಸ್.ಆರ್. ಶಶಿತಾಲ್ ಅವರು ವಹಿಸಿಕೊಂಡಿರುವುದು ಮುಂಭಾಗದ ಗೋಡೆಯ ಶಿಲಾ ಫಲಕದಿಂದ ತಿಳಿದು ಬರುತ್ತದೆ. ೧೯೨೯ ರಲ್ಲಿ ನಿರ್ಮಾಣ ಕಾರ್ಯ ಪೂರ್ಣಗೊಂಡಿತು. ಕೆಳ ಅಂತಸ್ಥಿನಲ್ಲಿ ವಿಶಾಲವಾದ ಹಾಲ್, ಇದರ ಮುಂದುಗಡೆ ಕಾರಿಡಾರ್ ಇದೆ. ಕಾರಿಡಾರ್‌ನ ಎರಡೂ ಬದಿಯಲ್ಲಿ ಒಂದೇ ರೀತಿಯ ರಚನೆ ಹೊಂದಿದ ಕೋಣೆಗಳಿವೆ. ಎರಡೂ ಕೋಣೆಗಳ ಪಕ್ಕದಲ್ಲಿ ಮೇಲಂತಸ್ಥಿಗೆ ಹತ್ತಿ ಹೋಗುವುದಕ್ಕೆ ನಾಲ್ಕು ಅಡಿ ಅಗಲವಾದ ತೇಗಿನ ಕಟ್ಟಿಗೆಯ ಮೆಟ್ಟಿಲುಗಳನ್ನು ಅಳವಡಿಸಲಾಗಿದೆ. ಕಟ್ಟಡದ ಮುಖ ಮಂಟಪವು ಡೋರಿಕ್ ಶೈಲಿಯ ಕಂಬಗಳಿಂದ ಕೂಡಿದೆ. ಕೆಳ ಅಂತಸ್ಥಿನ ಬಲ ಬಲಗಡೆ ಜನರು ತೆರಿಗೆ ತುಂಬುವುದಕ್ಕೆ ಅವಕಾಶ ಮಾಡಿಕೊಡಲಾಗಿದೆ. ಕೆಳ ಅಂತಸ್ತು ಮದ್ರಾಸ್ ತಾರಸಿಯನ್ನು ಹೊಂದಿದೆ. ಅದಕ್ಕೆ ಕಬ್ಬಿಣದ ತೊಲೆಗಳನ್ನು ಹಾಕಲಾಗಿದೆ. ನೆಲಕ್ಕೆ ಎರಗುಂಟ್ಲಾ ಟೈಲ್ಸ್ ಹೊಂದಿಸಲಾಗಿದೆ.

ಮೊದಲ ಅಂತಸ್ತಿನಲ್ಲಿ ವಿಶಾಲವಾದ ಸಭಾ ಭವನವನ್ನು ನಿರ್ಮಿಸಲಾಗಿದೆ. ಅದರ ಅಳತೆ ೭೪.೦೬ ಅಡಿ ಉದ್ದ ೩೨.೦೬ ಅಡಿ ಅಗಲವಾಗಿದೆ. ಇಲ್ಲಿ ತೆರಿಗೆಯ ಹಣವನ್ನು ಸಂಗ್ರಹಿಸಿ ಇಡುವುದಕ್ಕೆ

ನೆಲದಲ್ಲಿಯೇ ಕಬ್ಬಿಣದ ಟ್ರಝುರಿಯನ್ನು ಮಾಡಲಾಗಿದೆ. ಮೊದಲ ಮಹಡಿ ನಿರ್ಮಿಸುವುದಕ್ಕೆ ೧,೨೫,೦೦೦ ರೂ. ವೆಚ್ಚ ತಗುಲಿದೆ. ಇದರ ಛತ್ತನ್ನು ಸಿಮೆಂಟ್‌ನಿಂದ ನಿರ್ಮಿಸಲಾಗಿದೆ. ಈ ಸಭಾ ಭವನದಲ್ಲಿ ಸುಮಾರು ೬೦೦ ಜನರು ಕುಳಿತುಕೊಳ್ಳುವುದಕ್ಕೆ ಸ್ಥಳಾವಕಾಶವಿದೆ. ಕೆಳ ಮಹಡಿ ಮತ್ತು ಮೊದಲ ಮಹಡಿಯಲ್ಲಿ ಗಾಳಿ, ಬೆಳಕು ಒಳನುಸುಳುವುದಕ್ಕಾಗಿ ದೊಡ್ಡ ದೊಡ್ಡ ದ್ವಾರ ಜಾಲಂದರಗಳನ್ನು ಅಳವಡಿಸಲಾಗಿದೆ. ಇವುಗಳ ಮೇಲೆ ಕಮಾನಿನ ಆಕೃತಿಯನ್ನು ಮಾಡಲಾಗಿದೆ. ಎರಡನೇ ಮಹಡಿಯ ಮೇಲೆ ಎರಡೂ ಬದಿಗೆ ಒಂದೇ ತೆರನಾದ ಗುಮ್ಮಟಾಕಾರ ಮತ್ತು ಗೋಥಿಕ್ ಶೈಲಿಯಿಂದ ಅಲಂಕರಿಸಲಾಗಿದೆ. ಈ ಕಟ್ಟಡವು ಬ್ರಿಟಿಷ್ ಸ್ಮಾರಕಗಳಲ್ಲಿಯೇ ವಿಶಿಷ್ಟತೆಯನ್ನು ಹೊಂದಿದೆ. ಈ ಭವನ ನಿರ್ಮಿಸುವುದಕ್ಕೆ ಬಾದಾಮಿ ಬಣ್ಣದ ಕಲ್ಲನ್ನು ಬಳಸಲಾಗಿದೆ.

ಧಾರವಾಡ ತಾಲೂಕು ಕಛೇರಿ: ಧಾರವಾಡ ತಾಲೂಕು ಕಛೇರಿಯು ಜಿಲ್ಲಾಧಿಕಾರಿಗಳ ಆವರಣದಲ್ಲಿಯೇ ಕಂಡು ಬರುತ್ತದೆ. ಈ ಕಟ್ಟಡವು ಕ್ರಿ.ಶ. ೧೯೧೨ರಲ್ಲಿ ನಾಲ್ಕು ಅಡಿ ಎತ್ತರದ ಕಲ್ಲಿನ ತಳಪಾಯದ ಮೇಲೆ ಉತ್ತರಾಭಿಮುಖವಾಗಿ ನಿರ್ಮಾಣಗೊಂಡಿದೆ. ಇದು 'U' ಆಕಾರದಲ್ಲಿದೆ. ಇಲ್ಲಿ ಎರಡು ಕೊಠಡಿಗಳು ಕಂಡು ಬರುತ್ತವೆ. ಮೊದಲ ಕೊಠಡಿ ಸಿಬ್ಬಂದಿಯ ಕೊಠಡಿಯಾಗಿದೆ. ಎರಡನೇ ಕೊಠಡಿ ತಹಶೀಲ್ದಾರ್ ಅವರದಾಗಿದೆ. ಇವುಗಳ ಛತ್ತು ೨೫ ಅಡಿ ಎತ್ತರವಾಗಿದೆ. ಛತ್ತಿಗೆ ತೇಗಿನ ಕಟ್ಟಿಗೆಯ ಮೇಲೆ ಮಂಗಳೂರ ಹಂಚನ್ನು ಹೊದಿಸಲಾಗಿದೆ. ಈ ಕೊಠಡಿಗಳ ಮುಂದುಗಡೆ ಹತ್ತು ಫೂಟ್ ಅಗಲವಾದ ಕಾರಿಡಾರ್ ಇದೆ. ಇದರ ಛತ್ತು ಇಳಿಜಾರಾಗಿದೆ. ಅದಕ್ಕೆ ಆಸರೆಯಾಗಿ ಸರಳವಾದ ಕಟ್ಟಿಗೆಯ ಕಂಬಗಳನ್ನು ನಿಲ್ಲಿಸಲಾಗಿದೆ. ಈ ಕಟ್ಟಡವು ಮುಂಭಾಗದ ಗೋಡೆಯಲ್ಲಿ ಈ ಸ್ಮಾರಕ ನಿರ್ಮಿಸಿರುವ ಇಸ್ವಿಯನ್ನು ಬರೆಯಲಾಗಿದೆ. ಈ ಭವನವು ೧೯೧೨ರಿಂದ ಪ್ರಸ್ತು ಅವಧಿಯಲ್ಲಿಯೂ ತಾಲೂಕಾ ಕಛೇರಿಯಾಗಿ ಕಾರ್ಯ ನಿರ್ವಹಿಸುತ್ತಾ ಬಂದಿದೆ ಎಂದು ಇಂದಿನ ತಹಶೀಲ್ದಾರರಾದ ಶ್ರೀಯುತ ಎಸ್.ಟಿ. ಕುದರಿಯವರು ನನಗೆ ತಿಳಿಸಿದರು.

ರೈಲ್ವೇ ಸ್ಟೇಶನ್: ಪ್ರಪ್ರಥಮವಾಗಿ ರೈಲ್ವೆ ಸಾರಿಗೆ ಆರಂಭವಾದದ್ದು ೧೮೨೫ರಲ್ಲಿ ಇಂಗ್ಲಂಡಿನ ಸ್ಟಾಕ್‌ಟೌನ್‌ನಿಂದ ಡಾರ್ಲಿಂಗ್‌ಟನ್‌ವರೆಗೆ ಮೊದಲ ರೈಲ್ವೆ ಚಲಿಸಿತು. ಈ ಅವಧಿಯಲ್ಲಿ ರೈಲ್ವೆ ಹಳಿಗಳು ಕಟ್ಟಿಗೆಯಿಂದ ನಿರ್ಮಿತವಾಗಿದ್ದವು. ಆನಂತರ ಕಬ್ಬಿಣದ ಹಳಿಗಳಿಂದ ನಿರ್ಮಿಸಲಸಾಯಿತು. ಭಾರತಕ್ಕೂ ರೈಲ್ವೆ ಸಾರಿಗೆಯನ್ನು ಪರಿಚಯಿಸಿದ ಕೀರ್ತಿ ಬ್ರಿಟಿಷ್ ಗೌರ್‍ನರ್ ಜನರಲ್ ಡಾಲ್‌ಹೌಸಿಗೆ ಸಲ್ಲುತ್ತದೆ. ಇವರು ಸೂವ್ಯವಸ್ಥಿತವಾದ ರೈಲ್ವೆ ಮಾರ್ಗಗಳನ್ನು ನಿರ್ಮಿಸಿ ಭಾರತದಲ್ಲಿ ರೈಲು ಸಂಚಾರವನ್ನು ಜಾರಿಗೆ ತಂದು ೧೮೫೩ರಲ್ಲಿ ಈಸ್ಟ್ ಇಂಡಿಯಾ ಕಂಪನಿಯವರು ಮುಂಬೈನಿಂದ ಠಾಣಾದವರೆಗೆ ಓಡಿಸಿದರು. ಧಾರವಾಡ ಜಿಲ್ಲೆಯಲ್ಲಿ ಸದರ್ನ್ ಮರಾಠಾ ಕಂಪನಿಯು ದಿನಾಂಕ: ೦೧.೧೧.೧೮೮೭ರಂದು ಜಿಲ್ಲೆಯಲ್ಲಿ

ಮೀಟರ್‌ಗೇಜ್ ರೈಲ್ವೆ ಹಳಿ ಹಾಕಲು ಪ್ರಾರಂಭಿಸಿ ತನ್ನ ಕಾರ್ಯವನ್ನು ಪೂರ್ಣಗೊಳಿಸಿತು. ಧಾರವಾಡದಲ್ಲಿ ರೈಲ್ವೆ ಹಳಿ ಹಾಕುವ ಉದ್ದೇಶವೆಂದರೆ ಹತ್ತಿ ಮತ್ತು ಮೆಣಸಿನಕಾಯಿ ಬೆಳೆಯುವ ಪ್ರಮುಖ ಸ್ಥಳವಾಗಿತ್ತು. ಅವುಗಳನ್ನು ತಮ್ಮ ದೇಶಕ್ಕೆ ತೆಗೆದುಕೊಂಡು ಹೋಗುವ ನಿಮಿತ್ತವಾಗಿ ರೈಲ್ವೆ ಹಳಿ ಹಾಕಿದರು. ಇದರ ಜೊತೆಗೆ ಧಾರವಾಡದ ಜನತೆಗೆ ವಾಣಿಜ್ಯದ ಮತ್ತು ಸಾಮಾಜಿಕ ಅನುಕೂಲಗಳನ್ನು ಒದಗಿಸಿಕೊಡುವುದಾಗಿತ್ತು.

ಧಾರವಾಡದಲ್ಲಿ ಕ್ರಿ.ಶ. ೧೮೮೮ರಲ್ಲಿ ರೈಲ್ವೆ ಸ್ಟೇಶನ್ ನಿರ್ಮಿಸಿದರು. ಅದು ಎರಡು ಅಂತಸ್ತಿನ ಕಟ್ಟಡವಾಗಿದೆ. ಇಲ್ಲಿ ಟಿಕೆಟ್ ಕೌಂಟರ್, ವಿಶ್ರಾಂತಿ ಕೋಣೆ, ಅಧಿಕಾರಿಗಳ ಕೊಠಡಿ ಹಾಗೂ ಇನ್ನಿತರ ಕೊಠಡಿಗಳನ್ನು ನಿರ್ಮಿಸಲಾಗಿದೆ. ಈ ಕೊಠಡಿಗಳ ಒಳಗಡೆ ಗಾಳಿ, ಬೆಳಕು ನುಸುಳುವುದಕ್ಕಾಗಿ ದ್ವಾರ ಮತ್ತು ಕಿಟಕಿಗಳನ್ನು ಅಳವಡಿಸಿ ಅವುಗಳಿಗೆ ಗಾಜುಗಳನ್ನು ಹಾಕಲಾಗಿದೆ. ಈ ಕಟ್ಟಡ ನಿರ್ಮಿಸುವುದಕ್ಕೆ ಇಟ್ಟಿಗೆ, ಗಾರೆ, ಕಬ್ಬಿಣ ಮತ್ತು ಮರದ ತಿರುಳನ್ನು ಹಾಗೂ ಮಂಗಳೂರು ಹಂಚು ಬಳಸಲಾಗಿದೆ. ಈ ಸ್ಟೇಶನ್‌ನಲ್ಲಿ ೧೯೨೨ರಲ್ಲಿ ರವೀಂದ್ರನಾಥ ಟ್ಯಾಗೋರ ಅವರು ಮತ್ತು ಸಿ.ಎಸ್. ಯಂಡ್ರೂಸ್ ಅವರು ಸೇರಿಕೊಂಡು ಪುಣೆ–ಬೆಂಗಳೂರು ರೈಲ್ವೆನಲ್ಲಿ ಸಿಲೋನ್ ನಗರಕ್ಕೆ ಹೊರಟಿದ್ದರ ಸ್ಮರಣಾರ್ಥ ರೈಲ್ವೆ ಇಲಾಖೆ ಒಂದು ಮೂಲೆಯಲ್ಲಿ ರವೀಂದ್ರ ಟ್ಯಾಗೋರ ಅವರ ಒಂದು ದೊಡ್ಡ ಗಾತ್ರದ ಭಾವಚಿತ್ರವನ್ನು ಇಡಲಾಗಿದೆ. ಆ ಸ್ಥಳಕ್ಕೆ ಗುರುದೇವ ಸ್ಮಾರಕ ಎಂದು ಕರೆಯಲಾಗುತ್ತದೆ. ಸದರ್ನ್ ಮರಾಠಾ ಕಂಪನಿಯು ೧೯೦೮ರಲ್ಲಿ ಮದ್ರಾಸ್ ರೈಲ್ವೆ ಕಂಪನಿಯೊಂದಿಗೆ ವಿಲೀನವಾಗಿ ಎಂ. & ಎಸ್.ಎಂ. ಕಂಪನಿಯಾಗಿ ಪರಿವರ್ತನೆ ಹೊಂದಿತು. ೧೯೧೫ರ ವೇಳೆಗೆ ಧಾರವಾಡದಲ್ಲಿಯ ರೈಲ್ವೆಯ ಪ್ರಧಾನ ಕಛೇರಿಯು ಮದ್ರಾಸ್‌ಗೆ ಸ್ಥಳಾಂತರಗೊಂಡಿತು. ಆ ಕಛೇರಿಯು ೧೯೨೦ರಿಂದ ಇಂದಿನ ಕರ್ನಾಟಕ ಕಾಲೇಜ್ ಆಗಿ ಪರಿವರ್ತನೆಗೊಂಡಿತು.

ಕರ್ನಾಟಕ ಕಾಲೇಜ್: ಕರ್ನಾಟಕ ಕಾಲೇಜಿನ ಶಂಕುಸ್ಥಾಪನೆ ಭೋಟಾ ಮಹಾಬಳೇಶ್ವರ ಅಂದರೆ ಇಂದಿನ ಕರ್ನಾಟಕ ವಿಶ್ವವಿದ್ಯಾಲಯ ನೆಲೆಗೊಂಡಿರುವ ಸ್ಥಳ. ಕ್ರಿ.ಶ. ೧೯೧೯ರ ಜುಲೈ ೨೯ರಂದು ಮುಂಬೈ ಗವರ್ನರ್ ಜಾರ್ಜ್‌ಲೈಡ್ ಅವರು ಶಂಕು ಸ್ಥಾಪನೆ ನೆರವೇರಿಸಿ ಮರಳಿ ಬರುವ ಸಂದರ್ಭದಲ್ಲಿ ಅವರ ಕಣ್ಣಿಗೆ ಆಕಸ್ಮಿಕ ಕಾಣಿಸಿಕೊಂಡಿದ್ದು ರೈಲ್ವೆಯ ಪ್ರಧಾನ ಕಛೇರಿ, ಸದರ್ನ್ ಮರಾಠಾ ರೈಲ್ವೆದವರು ತಮ್ಮ ಕಛೇರಿಯನ್ನು ಮದ್ರಾಸ್‌ಗೆ ಸ್ಥಳಾಂತರಿಸಿದ್ದರು. ಕರ್ನಾಟಕ ಕಾಲೇಜಿನ ಪ್ರಾಚಾರ್ಯರಾದ ರಾವಿಲ್ಲ ಸನ್ ಅವರು ಈ ರೈಲ್ವೆ ಪ್ರಧಾನ ಕಛೇರಿಯ ಕಟ್ಟಡವನ್ನು ಕರ್ನಾಟಕ ಕಾಲೇಜಿಗೆ ದೊರಕಿಸಿಕೊಡಬೇಕೆಂದು ಗವರ್ನರ್ ಜಾರ್ಜ್ ಲೈಡ್ ಅವರಿಗೆ ಕೇಳಿಕೊಂಡರು. ಅವರು ಒಪ್ಪಿಗೆಯನ್ನು ಸೂಚಿಸಿದರು. ತಕ್ಷಣವೇ ರಾವಿಲ್‌ಸನ್ ಅವರು ಮದ್ರಾಸ್ಸಿಗೆ ಹೋಗಿ ಪ್ರಧಾನ ರೈಲ್ವೆ ಕಟ್ಟಡ ಹಸ್ತಾಂತರ ಕುರಿತು ಮಾತುಕತೆ ನಡೆಸಿದರು. ಕೊನೆಗೆ ಖರೀದಿ ಕಾಗದ ಪತ್ರಗಳು ಲಂಡನ್, ಕಲ್ಕತ್ತಾ, ಮದ್ರಾಸ್, ಮುಂಬೈ ಮತ್ತು ಧಾರವಾಡಗಳಲ್ಲಿ ಸುತ್ತಾಡಿದವು. ೧೯೨೦ರಲ್ಲಿ ಕಟ್ಟಡವು ಮುಂಬೈ ಸರಕಾರದ ವಶವಾಯಿತು. ಮುಂಬೈ ಸರಕಾರವು ೬,೦೪,೧೨೬ ರೂ.ಗಳಿಗೆ ಖರೀದಿಸಿತು. ಆನಂತರ ೧೯೨೦ರಲ್ಲಿ ಕರ್ನಾಟಕ ಕಾಲೇಜು ಉದ್ಘಾಟನೆಗೊಂಡಿತು.

ಧಾರವಾಡದ ಕಲೆಕ್ಟರ್ ಕಛೇರಿಯ ಹತ್ತಿರದಲ್ಲಿ ಎತ್ತರವಾದ ಸ್ಥಳದಲ್ಲಿ ಇಂಡೋ-ಯುರೋಪಿಯನ್ ವಾಸ್ತು ಲಕ್ಷಣಗಳಾದ ಕಮಾನುಗಳಿಂದ ಸೌಂದರ್ಯ ಕಂಗೊಳಿಸುತ್ತಿರುವ ಕಟ್ಟಡ ಎರಡು ಅಡಿ ಎತ್ತರದ ತಳಪಾಯದ ಮೇಲೆ ೧೯೪೯ರಲ್ಲಿಯೇ ಉತ್ತರಾಭಿಮುಖವಾಗಿ ನಿರ್ಮಿಸಲಾಗಿತ್ತು. ಕಟ್ಟಡ ನಿರ್ಮಿಸುವುದಕ್ಕೆ ಸುಟ್ಟ ಇಟ್ಟಿಗೆ, ಗಾರೆ, ಮರದ ತಿರುಳು, ಬಿಳುಪು ಕಲ್ಲು, ಚಂದ್ರಶಿಲೆ, ಕಬ್ಬಿಣ ಮತ್ತು ಮಂಗಳೂರು ಹಂಚನ್ನು ಬಳಸಲಾಗಿದೆ. ನೆಲಕ್ಕೆ ಇಟಲಿ ಮತ್ತು ಯರಗುಂಟಲಾ ಚಪ್ಪಡಿಗಳನ್ನು ಹಾಕಲಾಗಿದೆ. ಇದು ಎರಡು ಅಂತಸ್ತಿನ ಕಟ್ಟಡವಾಗಿದೆ. ಒಟ್ಟು ೧೮ ಕೊಠಡಿಗಳನ್ನು ಹೊಂದಿದೆ. ಪ್ರಾಚಾರ್ಯರ ಕೊಠಡಿಯ ಮೇಲೆ ಗೋಥಿಕ್ ಶೈಲಿಯ ಗೋಪುರವನ್ನು, ನವೀನ ದೊಡ್ಡ ಗಾತ್ರದ ಗಡಿಯಾರವನ್ನು ಅಳವಡಿಸಲಾಗಿದೆ. ಪ್ರಾಚಾರ್ಯರ ಕೊಠಡಿಯ ಬಾಲ್ಕನಿಯಲ್ಲಿ ಕಬ್ಬಿಣದ ಗ್ರಿಲ್ ಹಾಕಲಾಗಿದೆ. ಜೊತೆಗೆ ಕೊರಂಥಿಯನ್ ಶೈಲಿಯ ಕಬ್ಬಿಣದ ಕಂಬಗಳನ್ನು ಅಳವಡಿಸಲಾಗಿದೆ. ಈ ಕಟ್ಟಡದಲ್ಲಿ ಯುರೋಪಿಯನ್ ವಾಸ್ತು ಶೈಲಿಯ ಲಕ್ಷಣಗಳಾದ ಗೋಥಿಕ್, ಡೋರಿಕ್, ಕೊರಂಥಿಯನ್ ಮತ್ತು ಅಯೋನಿಕ್ ಶೈಲಿಗಳನ್ನು ಕಂಬಗಳಲ್ಲಿ ಅಳವಡಿಸಲಾಗಿದೆ. ಈ ಕಾರಣದಿಂದಾಗಿ ಈ ಸ್ಮಾರಕವನ್ನು ಯುರೋಪಿಯನ್ ವಾಸ್ತುಶಿಲ್ಪದ ಪ್ರಯೋಗ ಶಾಲೆ ಎಂದು ಕರೆಯಬಹುದು ಎಂದು ನನಗೆ ಅನಿಸುತ್ತದೆ.

ನೆಲ ಮಹಡಿಯ ಛತ್ತಿಗೆ ಮದ್ರಾಸ್ ಥಾರಸಿಯನ್ನು ಹಾಕಲಾಗಿದೆ. ಮೊದಲ ಅಂತಸ್ಥಿನ ಛತ್ತಿಗೆ ತೇಗಿನ ಕಟ್ಟಿಗೆಯ ಬಾಟಮ್ ಹಾಕಿ ಅದರ ಮೇಲೆ ಮಂಗಳೂರು ಹಂಚನ್ನು ಹೊದಿಸಲಾಗಿದೆ. ಇದು ಇಳಿಜಾರಾಗಿದೆ. ವರ್ಗದ ಕೊಠಡಿಗಳು ಅತ್ಯಂತ ವಿಶಾಲವಾಗಿವೆ. ಅವು ಅನೇಕ ದ್ವಾರಗಳನ್ನು, ಜಾಲಂದ್ರಗಳನ್ನು ಮತ್ತು ವೆಂಟಿಲೇಟರ್‌ಗಳನ್ನು ಗಾಳಿ ಬೆಳಕಿನ ನಿಮಿತ್ತವಾಗಿ ಹೊಂದಿವೆ. ಅವುಗಳ ಮೇಲೆ ಕಮಾನಿನ ಆಕೃತಿಯನ್ನು ಅಳವಡಿಸಲಾಗಿದೆ. ಕಾರಿಡಾರನಲ್ಲಿ ಅಳವಡಿಸಲಾದ ಕಮಾನುಗಳು ನಯನ ಮನೋಹರವಾಗಿವೆ. ಇಲ್ಲಿ ಡೋರಿಕ್ ಶೈಲಿಯ ಕಂಬಗಳನ್ನು ಅಳವಡಿಸಲಾಗಿದೆ. ಮೊದಲ ಮಹಡಿಗೆ ಹತ್ತಿ ಹೋಗಲು ಎರಡೂ ಬದಿಗೆ ಮೆಟ್ಟಿಲುಗಳನ್ನು ನಿರ್ಮಿಸಲಾಗಿದೆ. ಕಟ್ಟಡದ ಪಶ್ಚಿಮ ಭಾಗದಲ್ಲಿ ಕಬ್ಬಿಣದ ಸುರಳೀಕೃತ ಮೆಟ್ಟಿಲುಗಳನ್ನು ಅಳವಡಿಸಲಾಗಿದೆ. ಪ್ರವೇಶ ದ್ವಾರದಲ್ಲಿ ಎರಡು ಸಿಂಹಗಳನ್ನು ಕೆತ್ತಲಾಗಿದೆ. ಮೆಟ್ಟಿಲುಗಳಿಗೆ ಹತ್ತಿ ಹೋಗುವ ಎದುರಿನ ಗೋಡೆಯ ಮೇಲೆ ಶಿಲಾ ಫಲಕದಲ್ಲಿ ಜಾರ್ಜ್ ಲೈಡ್ ಅವರು ಈ ಕಟ್ಟಡವನ್ನು ಉದ್ಘಾಟಿಸಿದ ಇಸ್ವಿಯನ್ನು ಬರೆಯಲಾಗಿದೆ. ಈ ಕಟ್ಟಡವು T ಆಕಾರದಲ್ಲಿದೆ. ಒಟ್ಟು ಆವರಣವು ಆರು ಎಕರೆ ೨೯ ಎಕರೆ ಗುಂಟೆ ಜಾಗದಲ್ಲಿ ೨೩ ಸಾವಿರ ಚದರ ಅಡಿ ಅಳತೆಯನ್ನು ಈ ಕಟ್ಟಡ ಹೊಂದಿದೆ.

ಕರ್ನಾಟಕ ಕಾಲೇಜು ದೇಶಕ್ಕೆ, ನಾಡಿಗೆ, ಜೀವನದ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ ಪದ್ಮಭೂಷಣ ಪ್ರಶಸ್ತಿ ಪಡೆದ ಡಾ. ಡಿ. ಸಿ. ಪಾವಟೆ, ಜ್ಞಾನಪೀಠ ಪ್ರಶಸ್ತಿ ಪಡೆದ ಡಾ. ವಿ.ಕೃ. ಗೋಕಾಕ ಮತ್ತು ಗೋವಾ ರಾಜ್ಯದ ಮಾಜಿ ಮುಖ್ಯಮಂತ್ರಿ ಶ್ರೀಮತಿ ಶಶಿಕಲಾ ಕಾಕೋಡ್ ಹಾಗೂ ಇತರ ಕ್ಷೇತ್ರಗಳಲ್ಲಿ ಸಾಧನೆಗೈದ ವಿದ್ಯಾರ್ಥಿಗಳನ್ನು ಪಡೆದ ಸೌಭಾಗ್ಯ ಕರ್ನಾಟಕ ಕಾಲೇಜಿನದಾಗಿದೆ. ಗತ ಕಾಲದ ಬ್ರಿಟಿಷ್ ಸರಕಾರದ ಮುಂಬೈ ಪ್ರಾಂತ್ಯದಲ್ಲಿ ಉತ್ತರ ಕರ್ನಾಟಕದ ಜ್ಞಾನ ಪಿಪಾಸು ತರುಣರಿಗೆ ಸ್ಥಾಪಿಸಲ್ಪಟ್ಟ ಈ ಕಾಲೇಜು ಪ್ರಪಂಚದ ಉಚ್ಚ ಶಿಕ್ಷಣ ಕೇಂದ್ರಗಳಲ್ಲಿ ಒಂದಾಗಿದೆ. ಈ ಕಾಲೇಜು ೧೯೬೮ರಲ್ಲಿ ಚಿನ್ನದ ಹಬ್ಬವನ್ನು, ೧೯೮೮ರಲ್ಲಿ ವಜ್ರ ಮಹೋತ್ಸವ ಮತ್ತು ಕ್ರಿ.ಶ. ೨೦೧೭ರಲ್ಲಿ ಶತಮಾನೋತ್ಸವ ಆಚರಿಸಿಕೊಂಡ ಈ ಕಾಲೇಜ್ ವಸಾಹತು ಕಾಲೀನ ಧಾರವಾಡದ ಹೆಮ್ಮೆಯ ಸ್ಮಾರಕವಾಗಿದೆ.




ಜಿಲ್ಲಾ ಕಛೇರಿ ಧಾರವಾಡ ೧೮೨೦





ಕರ್ನಾಟಕ ಕಾಲೇಜ ಧಾರವಾಡ -೧೯೧೭





ಗಂಡು ಮಕ್ಕಳ ತರಬೇತಿ ಕಾಲೇಜು, ಧಾರವಾಡ

ಗಂಡು ಮಕ್ಕಳ ಟ್ರೇನಿಂಗ್ ಕಾಲೇಜ್: ಕ್ರಿ.ಶ. ೧೮೫೫ ರ ವೇಳೆಗೆ ಧಾರವಾಡದಲ್ಲಿ ಶಾಲೆಗಳ ಸಂಖ್ಯೆ ೧೨ ಆಗಿತ್ತು. ಜಿಲ್ಲೆಯಲ್ಲಿ ಶಾಲೆಗಳು ಬೆಳೆಯುತ್ತಿದ್ದವು. ಡೈರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್ ಅವರ ಕಚೇರಿ ಸ್ಥಾಪನೆಯಾಯಿತು. ಎಜುಕೇಶನ್ ಇನ್ಸ್‌ಪೆಕ್ಟರ್ ಆದ ಜೆ.ಎಫ್. ಲಿಸ್ಟರ್ ಅವರು ಎಲ್ಲ ಶಾಲೆಗಳಲ್ಲಿ ತರಬೇತಿ ಪಡೆದ ಶಿಕ್ಷಕರು ಇರಬೇಕೆಂಬ ಧೋರಣೆ ತಳೆದರು. ಹೀಗಾಗಿ ತರಬೇತಿ ಸಂಸ್ಥೆಯನ್ನು ತೆರೆಯುವ ಅವಶ್ಯಕತೆ ಉಂಟಾಯಿತು. ೧೮೫೭ ಫೆಬ್ರುವರಿಯಲ್ಲಿ ಶಿಕ್ಷಕರ ತರಬೇತಿಗಾಗಿ 'ನಾನಾಗಿಲ್ ಕ್ಲಾಸ್' ಎಂಬ ಸಂಸ್ಥೆ ಪ್ರಾರಂಭವಾಗಿ ಶಿಕ್ಷಣದ ಅಭಿವೃದ್ಧಿಗೆ ನಾಂದಿ ಹಾಕಿತು. ಈ ಸಂಸ್ಥೆಯ ಮುಖ್ಯಸ್ಥರಾಗಿ ಚನ್ನಬಸಪ್ಪನವರು ನೇಮಕಗೊಂಡರು. ಆದರೆ ೧೮೬೧ರಲ್ಲಿ ಈ ಸಂಸ್ಥೆಯನ್ನು ಬೆಳಗಾವಿಗೆ ಸ್ಥಳಾಂತರಿಸಲಾಯಿತು. ಆದರೆ ಪುನಃ ೧೮೭೫ರಲ್ಲಿ ಮರಳಿ ಧಾರವಾಡಕ್ಕೆ ಸ್ಥಳಾಂತರಿಸಲಾಯಿತು. ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಧಾರವಾಡಕ್ಕೆ ಸ್ಥಳಾಂತರಗೊಂಡ ಮೇಲೆ ಕಟ್ಟಡದ ಅವಶ್ಯಕತೆ ಉಂಟಾಯಿತು. ಅದಕ್ಕಾಗಿ ಮುಂಬೈ ಸರಕಾರವು ೨೫ ಎಕರೆ ೨ ಗುಂಟೆ ಸ್ಥಳವನ್ನು ಕಟ್ಟಡ ನಿರ್ಮಿಸುವುದಕ್ಕೆ ನೀಡಿತು. ಸ್ಥಳದ ಮೌಲ್ಯ ೭,೫೧೫ ರೂ. ಆಗಿತ್ತು.

ಕಟ್ಟಡವನ್ನು ಇಟ್ಟಿಗೆ, ಗಾರೆ, ಕಲ್ಲು, ಕಬ್ಬಿಣ, ಮರದ ತಿರುಳು ಮತ್ತು ಮಂಗಳೂರು ಹಂಚು ನಿರ್ಮಿಸಿ ಬಳಸಲಾಗಿದೆ. ಇದು ಎರಡು ಅಡಿ ಎತ್ತರದ ತಳಪಾಯದ ಮೇಲೆ ದಕ್ಷಿಣಾಭಿಮುಖವಾಗಿ ನಿರ್ಮಿಸಲಾಗಿದೆ. ಭುವನದ ಒಳಗಡೆ ಗಾಳಿ, ಬೆಳಕು ಹೊರಸೂಸುವುದಕ್ಕಾಗಿ ದೊಡ್ಡ ದೊಡ್ಡ ದ್ವಾರಗಳು, ಜಾಲಂದರಗಳು ಮತ್ತು ವೆಂಟಿಲೇಟರ್‌ಗಳನ್ನು ಅಳವಡಿಸಲಾಗಿದೆ. ಇವುಗಳ ಮೇಲೆ ಕಮಾನು ಇಲ್ಲವೇ ಎಲೆ ಮೊಣಚಿನಂತಹ ಅಲಂಕರಣೆ ಮಾಡಲಾಗಿದೆ, ಎತ್ತರವಾದ ಛತ್ತನ್ನು ಹೊಂದಿದೆ.

ಕಟ್ಟಡದ ಮಧ್ಯದಲ್ಲಿ ಗೋಥಿಕ್ ಶೈಲಿಯ ಗೋಪುರ ನಿರ್ಮಿಸಲಾಗಿದೆ. ಇಲ್ಲಿಯೂ ಕಮಾನುಗಳು ಮತ್ತು ಡೋರಿಕ್ ಶೈಲಿಯ ಕಂಬಗಳು ಕಂಡು ಬರುತ್ತವೆ. ಕಟ್ಟಡದ ಪ್ರವೇಶ ದ್ವಾರದ ಪೂರ್ವದ ಭಾಗದಲ್ಲಿ ಪ್ರಾಚಾರ್ಯರ ಬಂಗಲೆ ನಿರ್ಮಿಸಲಾಗಿದೆ. ೧೮೭೫ ರಲ್ಲಿ ವಾಸದ ಕೋಣೆ, ಊಟದ ಮನೆ, ಅಡುಗೆ ಮನೆ, ಮಲಗುವ ಕೊಠಡಿಗಳನ್ನು ನಿರ್ಮಿಸಲಾಯಿತು. ಮುಖ್ಯ ಕಟ್ಟಡವು ೧೯೧೨ ರಲ್ಲಿ ಪೂರ್ಣಗೊಂಡಿತು. ಈ ತರಬೇತಿ ಶಾಲೆಯ ಪ್ರಥಮ ಪ್ರಾಚಾರ್ಯರು ಡೆಪ್ಯೂಟಿ ಚನ್ನಬಸಪ್ಪನವರಾಗಿದ್ದರು.

ಈ ತರಬೇತಿ ಶಾಲೆಯು ಧಾರವಾಡದಲ್ಲಿ ಅನೇಕ ಸಂಘ–ಸಂಸ್ಥೆಗಳಿಗೆ ಆಸರೆ ನೀಡಿದೆ. ಅವುಗಳಲ್ಲಿ ಪ್ರಮುಖವಾಗಿ ಕರ್ನಾಟಕ ಕಾಲೇಜು, ಜಿಲ್ಲಾ ಲೋಕಲ್ ಬೋರ್ಡ್, ಜಿಲ್ಲಾ ಸ್ಕೂಲ್ ಬೋರ್ಡ್, ಪದವೀಧರ ಜಿಲ್ಲಾ ಶಿಕ್ಷಣ ಕೇಂದ್ರ ಮುಂತಾದವುಗಳು. ಕ್ರಿ.ಶ. ೧೮೫೬ರಲ್ಲಿ ನಾಲ್ಕಾರು ವಿದ್ಯಾರ್ಥಿಗಳಿಂದ ಪ್ರಾರಂಭವಾದ ಈ ತರಬೇತಿ ಶಾಲೆ ಇಂದು ಹೆಮ್ಮರವಾಗಿ ಬೆಳೆದು ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿಯನ್ನು ಮಾಡಿದೆ. ೧೯೫೬ ರಲ್ಲಿ ಈ ಸಂಸ್ಥೆ ಶತಮಾನೋತ್ಸವ ಆಚರಿಸಿಕೊಂಡಿದೆ. ಈ ಸ್ಮಾರಕ ನಿರ್ಮಾಣಗೊಂಡು ೧೧೦ ವರ್ಷಗಳಾದೂ ಸದೃಢತೆಯಿಂದ ನಿಂತಿದೆ. ಇದೊಂದು ಯುರೋಪಿಯನ್ ಇಂಜಿನೀಯರುಗಳು ತಾಂತ್ರಿಕತೆ ಮತ್ತು ಭಾರತೀಯ ಕಾರ್ಮಿಕರ ಕೌಶಲ್ಯತೆಗೆ ಗೋಚರ ಪರಂಪರೆಯ ಮೂಲ ಆಕರವಾಗಿದೆ. ವಸಾಹತು ಕಾಲಿನ ಹೆಮ್ಮೆಯ ಸ್ಮಾರಕವೂ ಆಗಿದೆ.

ಧಾರವಾಡದಲ್ಲಿರುವ ಬ್ರಿಟೀಷ್ ವಸಾಹತು ಶೈಲಿಯ ವಾಸ್ತುಶಿಲ್ಪ ಮತ್ತು ಇದರಿಂದ ಪ್ರಭಾವಗೊಂಡ ಸಮಕಾಲೀನ ದೇಶಿಯ ವಾಸ್ತು ಶಿಲ್ಪದ ಪಕ್ಷಿನೋಟ ದೊರೆಯುತ್ತದೆ. ನಮ್ಮ ಸಂಸ್ಕೃತಿಯ ಹೆಗ್ಗುರುತುಗಳಾದ ಈ ಸೌಧಗಳು ಧಾರವಾಡದ ಹೆಮ್ಮೆಯ ಪ್ರತೀಕಗಳೆನಿಸಿವೆ. ಬ್ರಿಟಿಷ್ ವಸಾಹತು ವಾಸ್ತುಶಿಲ್ಪ ಭಾರತೀಯ ವಾಸ್ತುಶಿಲ್ಪ ಶೈಲಿಯಲ್ಲಿ ಸಮ್ಮಿಳಿತಗೊಂಡಿದೆ. ಛಜ್ಜಾ, ಮಾಳಿಗೆ, ಛತ್ತು, ಜಾಲಂದ್ರ ಮುಂತಾದ ಭಾರತೀಯ ಲಕ್ಷಣಗಳು ಯುರೋಪಿಯನ್ ಶೈಲಿಯಲ್ಲಿ ಮಿಶ್ರಣಗೊಂಡು ಹೊಸ ಶೈಲಿ ಹುಟ್ಟಿಕೊಂಡಿತು. ಅದೇ ಇಂಡೋ–ಯುರೋಪಿಯನ್ ಶೈಲಿ ಎಂದು ಕರೆಯಲಾಗುತ್ತಿದೆ. ಪ್ರಸ್ತುತ ಅವಧಿಯಲ್ಲಿ ವಸಾಹತು ಸ್ಮಾರಕಗಳು ಉಳಿದಿರುವುದು ಅತ್ಯಲ್ಪವಾಗಿವೆ. ಈ ನಿಟ್ಟಿನಲ್ಲಿ ವಸಾಹತು ಸ್ಮಾರಕಗಳ ಸಮಗ್ರ ಅಧ್ಯಯನ ಅವಶ್ಯಕವೆನಿಸಿದೆ.

ಆಕರ ಗ್ರಂಥಗಳು

೧. ಸೂರ್ಯನಾಥ. ಯು. ಕಾಮತ್., ೧೯೯೫, ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಧಾರವಾಡ ಜಿಲ್ಲೆ, ಜಲ ಮಂಡಳ ಕಟ್ಟಡ, ಬೆಂಗಳೂರು.

೨. ವೆಂಕಟರಂಗೋ ಕಟ್ಟಿ (ಸಂ), ೧೮೯೩, ಬಾಂಬೆ–ಕರ್ನಾಟಕ ಗ್ಯಾಸೆಟಿಯರ್, ಮುಂಬೈ.

೩. ಗೋಪಾಲ ಆರ್., (ಸಂ), ೨೦೦೮, ಧಾರವಾಡ ಜಿಲ್ಲೆ ಇತಿಹಾಸ ಮತ್ತು ಪುರಾತತ್ವ, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಅರಮನೆ ಆವರಣ, ಮೈಸೂರು.

೪. ಹಿರೇಮಠ ಡಿ.ಎಂ., (ಪ್ರ.ಸಂ.) ಗುಂಜೆಟ್ಟಿ. ಬಿ.ವಿ. ಬಾಳಣ್ಣ ಶೀಗಿಹಳ್ಳಿ., ಹೆಗಡೆ. ಜಿ.ಎಂ., ೨೦೧೦, ಧಾರಾನಗರಿ, ಕನ್ನಡ ಸಾಹಿತ್ಯ ಭವನ, ಆರ್.ಎನ್. ಶೆಟ್ಟಿ ಕ್ರೀಡಾಂಗಣ ಆವರಣ, ಧಾರವಾಡ.

೫. Cambell James; Gazetter of Bombay, Presidency Dharwad-1884.

೮೬

ಮೈಸೂರು ಸಂಸ್ಥಾನದಲ್ಲಿ ೧೮೯೮ರ ಪ್ಲೇಗು ಮಹಾಮಾರಿ

ಜೆ.ವಿ. ಗಾಯತ್ರಿ*

ಮೈಸೂರು ಸಂಸ್ಥಾನದಲ್ಲಿ ಆಗಸ್ಟ್ ೧೮೯೮ರಲ್ಲಿ ಕಾಣಿಸಿಕೊಂಡ ಪ್ಲೇಗು ಮಹಾಮಾರಿ ಸಾವಿರಾರು ಜೀವಗಳನ್ನು ಬಲಿ ತೆಗೆದುಕೊಂಡು ಜನರ ಸಾಮಾಜಿಕ–ಆರ್ಥಿಕ ಪರಿಸ್ಥಿತಿಗಳ ಮೇಲೆ ದುಷ್ಪರಿಣಾಮ ಬೀರಿದರೂ ಸಹ ನಗರ ಬೆಳವಣಿಗೆಯ ಮೇಲೆ ಕೆಲವು ಆಧುನಿಕ ಬದಲಾವಣೆಗಳನ್ನು ತರಲು ಕಾರಣವಾಯಿತು. ಇತ್ತೀಚೆಗೆ ಚೀನಾ ದೇಶದಿಂದ ಬಂದ ಕರೋನಾ ಸಾಂಕ್ರಾಮಿಕ ವಿಶ್ವವ್ಯಾಪ್ತಿ ಹರಡಿರುವಂತೆ ಅಂದು ೧೮೯೬ರಲ್ಲಿಯೂ ಚೀನಾ ದೇಶದ ಯುನಾನ್ ಪ್ರದೇಶದಿಂದ ಹರಡಿದ ಪ್ಲೇಗು ಮಹಾಮಾರಿ ಇಲಿಗಳ ಸೋಂಕಿನಿಂದ ಉಂಟಾಗಿ ಪ್ರಪಂಚದ ಅನೇಕ ರಾಷ್ಟ್ರಗಳಲ್ಲಿ ಹರಡಿತು ಎಂದು ತಿಳಿದುಬರುತ್ತದೆ. ಸರಕು ಸಾಗಾಣಿಕೆಯ ಹಡಗುಗಳ ಮೂಲಕ ಹಾಂಗ್‌ಕಾಂಗ್, ಬ್ರಿಟಿಷ್ ಇಂಡಿಯಾ ಮತ್ತು ಪ್ರಪಂಚದ ಅನೇಕ ಪ್ರದೇಶಗಳಿಗೆ ಈ ಸಾಂಕ್ರಾಮಿಕದ ಸೋಂಕು ಪಸರಿಸಿತು. ಭಾರತದಲ್ಲಿ ಮುಂಬೈ ಪ್ರಾಂತ್ಯದ ಮಾಂಡ್ವಿ ಜಿಲ್ಲೆಯ ಮನೆಯೊಂದರಲ್ಲಿ ೨೩ ಸೆಪ್ಟೆಂಬರ್ ೧೮೯೬ರಂದು ಮೊದಲು ಪ್ಲೇಗು ಸೋಂಕು ಕಾಣಿಸಿಕೊಂಡಿತೆಂದು ಹೇಳಲಾಗುತ್ತದೆ. ಪ್ರಪಂಚದಾದ್ಯಂತ ಲಕ್ಷಾಂತರ ಮಂದಿ ಈ ಸಾಂಕ್ರಾಮಿಕದಿಂದ ಸಾವನ್ನಪ್ಪಿದರು. ಮೈರಾನ್ ಎಕೆನ್‌ಬರ್ಗ್ ಎಂಬ ಕೆನಡಿಯನ್ ಇತಿಹಾಸಕಾರ "Plague Ports: The Global Urban Impact of Bubonic Plague, 1894-1901" ಎಂಬ ಕೃತಿಯಲ್ಲಿ ೧೮೯೬ ರಿಂದ ೧೯೨೧ರ ಅವಧಿಯಲ್ಲಿ ಪ್ಲೇಗಿನಿಂದಾಗಿ ಸುಮಾರು ೧೨ ಮಿಲಿಯನ್ ಮಂದಿ ಪ್ರಾಣ ಕಳೆದುಕೊಂಡರು ಎಂದು ದಾಖಲಿಸುತ್ತಾನೆ[೧].

ಮುಂಬೈ ಪ್ರಾಂತ್ಯದಲ್ಲಿ ಕಾಣಿಸಿಕೊಂಡ ಪ್ಲೇಗಿನಿಂದಾಗಿ ಸಾವಿರಾರು ಮಂದಿ ಸಾವು–ನೋವುಗಳನ್ನು ಅನುಭವಿಸಿದರು. ರಾಷ್ಟ್ರದ ಪ್ರಥಮ ಮಹಿಳಾ ಶಿಕ್ಷಕಿಯೆಂಬ ಹೆಗ್ಗಳಿಕೆಗೆ ಪಾತ್ರರಾಗಿ ಎಲ್ಲಾ ಜಾತಿಯ ಹೆಣ್ಣು ಮಕ್ಕಳಿಗೆ, ಅನಾಥ ಹೆಣ್ಣು ಮಕ್ಕಳಿಗೆ ಮತ್ತು ವಿಧವೆಯರಿಗಾಗಿ ೧೮೫೧ ರಲ್ಲಿಯೇ ಪುಣೆಯಲ್ಲಿ ಶಾಲೆಯನ್ನು ತೆರೆದಿದ್ದ ಧೀಮಂತ ಮಹಿಳೆ ಸಾವಿತ್ರಿಬಾಯಿ ಪುಲೆಯವರು ಪ್ಲೇಗು ಸೋಂಕಿನ ರೋಗಿಗಳಿಗೆ ಶುಶ್ರೂಷೆ ಮಾಡುತ್ತಾ ಇದೇ ಪ್ಲೇಗು ಮಹಾಮಾರಿಯಿಂದ ಮಾರ್ಚ್ ೧೦, ೧೮೯೭ರಂದು ಕೊನೆಯುಸಿರೆಳೆದರು[೨]. ಸಮಾಜದ ಎಷ್ಟೋ ನತದೃಷ್ಟ ಹೆಣ್ಣು ಮಕ್ಕಳಿಗೆ ಧೈರ್ಯ ತುಂಬಿ ವಿದ್ಯಾರ್ಜನೆ ನೀಡಿದ ಈ ಮಹಿಳೆಯ ಸಾವು ಸಮಾಜಕ್ಕೆ ತುಂಬಲಾರದ ನಷ್ಟವಾಯಿತು. ಹೀಗೆಯೇ ಮಹಾನಾಯಕ ಡಾ॥ ಬಿ.ಆರ್. ಅಂಬೇಡ್ಕರ್‌ರವರ ಕುಟುಂಬ ದಲ್ಲಿಯೂ ಸಹ ಕೆಲವರು ಪ್ಲೇಗು ಸೋಂಕು ತಗುಲಿ ಸಾವಿಗೀಡಾದರು.

ಇಲಿಗಳ ಸೋಂಕಿನಿಂದ ಉಂಟಾಗುತ್ತಿದ್ದ ಈ ಸಾಂಕ್ರಾಮಿಕದಲ್ಲಿ ಮೊದಲು ರೋಗಿಯ ಕಂಕಳು, ತೊಡೆ ಸಂದಿಗಳಲ್ಲಿ ಗಡ್ಡೆಗಳಾಗಿ ಕಾಣಿಸಿ ವಿಪರೀತ ಜ್ವರದ ತಾಪ ಹಾಗೂ ನೋವಿನಿಂದ ನರಳಿ ಸಾವಿಗೀಡಾಗುತ್ತಿದ್ದುದು ಪ್ಲೇಗು ರೋಗದ ಲಕ್ಷಣವಾಗಿರುತ್ತಿತ್ತು. ಇದು ಮುಂಬೈ ಪ್ರಾಂತ್ಯದಿಂದ ಮೈಸೂರು ಸಂಸ್ಥಾನಕ್ಕೆ ಹರಡದಂತೆ ತಡೆಗಟ್ಟಲು ಮೈಸೂರು ಸರ್ಕಾರ ಹಲವಾರು ಮುಂಜಾಗರೂಕತಾ ಕಾರ್ಯಕ್ರಮಗಳನ್ನು ಕೈಗೆತ್ತಿಕೊಂಡಿತ್ತು. ಆಗ ಮೈಸೂರು ಸಂಸ್ಥಾನದ ಆಳ್ವಿಕೆಯ ಚುಕ್ಕಾಣಿ ಹಿಡಿದಿದ್ದವರು, ದಿವಂಗತ ಮಹಾರಾಜ ಹತ್ತನೆಯ ಚಾಮರಾಜ ಒಡೆಯರ್‌ರವರ ಧರ್ಮಪತ್ನಿ ಮಹಾರಾಣಿ ವಾಣಿವಿಲಾಸ ಸನ್ನಿಧಾನ ಕೆಂಪುನಂಜಮ್ಮಣ್ಣಿಯವರು. ಆಗ ದಿವಾನರಾಗಿದ್ದವರು ಸರ್ ಕೆ.ಶೇಷಾದ್ರಿ ಅಯ್ಯರ್‌ರವರು. ಮಹಾರಾಣಿಯವರು ಆಗಷ್ಟೇ ಫೆಬ್ರವರಿ ೧೮೯೭ರಲ್ಲಿ ಅರಮನೆಗೆ ಆದ ಅಗ್ನಿ ಅನಾಹುತದಿಂದ ಚೇತರಿಸಿಕೊಂಡು ಅರಮನೆಯ ಪುನರ್ನಿರ್ಮಾಣ ಕಾರ್ಯಕ್ಕೆ ಚಾಲನೆ ಕೊಡುವ ಸಮಯದಲ್ಲಿಯೇ ಪ್ಲೇಗು ಸಾಂಕ್ರಾಮಿಕ ತಡೆಗಟ್ಟಲು ಕಾರ್ಯ ರೂಪಿಸಿಕೊಳ್ಳಬೇಕಾಯಿತು. ಅದರಂತೆ ಫೆಬ್ರವರಿ ೧೮೯೭ರಲ್ಲಿ ಸಾಂಕ್ರಾಮಿಕ ರೋಗ ನಿಯಂತ್ರಣ ಕಾಯಿದೆಯನ್ನು ಜಾರಿಗೆ ತರಲಾಯಿತು. ಆಗ ಮೈಸೂರು ಸರ್ಕಾರದಲ್ಲಿ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೋಲೀಸ್ ಆಗಿದ್ದ, ವಿ.ಪಿ. ಮಾಧವರಾವ್‌ರನ್ನು ಪ್ಲೇಗು ಕಮೀಷನರ್ ಆಗಿ ನೇಮಕ ಮಾಡಿ ಪ್ಲೇಗು ನಿಯಂತ್ರಣವನ್ನು ನಿರ್ವಹಿಸುವ ಜವಾಬ್ದಾರಿ ವಹಿಸಲಾಗಿತ್ತು.

* ಎಫ್ ೨, ಮೊದಲ ಮಹಡಿ, ಶ್ರೀ ವರಕೃಷ್ಣ ಅಪಾರ್ಟ್‌ಮೆಂಟ್, ವಿ.ವಿ. ಮೊಹಲ್ಲಾ, ಮೈಸೂರು, ಮೊ. ೯೪೪೮೨ ೪೬೯೧೪

ಪ್ಲೇಗು ಸೋಂಕನ್ನು ತಡೆಗಟ್ಟಲು ಸ್ವಚ್ಛತೆ ಮತ್ತು ನಗರಗಳ ನೈರ್ಮಲ್ಯತೆಗೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗಿತ್ತು. ವಿಶೇಷವಾಗಿ ಆಡಳಿತ ಕೇಂದ್ರವಾಗಿದ್ದ ಬೆಂಗಳೂರು ನಗರದಲ್ಲಿ ನೈರ್ಮಲ್ಯತೆ ಕಾಪಾಡಲು ಆಗ ರೂ. ೧೦,೫೦೦/-ಗಳನ್ನು ವಿನಿಯೋಗಿಸಲಾಗಿತ್ತು.[೩] ಹನ್ನೆರಡು ಹೆಗ್ಗಣಗಳನ್ನು ನಾಶಮಾಡಲು ೬ ಆಣೆಗಳನ್ನು ಹಾಗೂ ೧೨ ಇಲಿಗಳನ್ನು ನಾಶಪಡಿಸಿದವರಿಗೆ ೩ ಆಣೆಗಳನ್ನು ಬಹುಮಾನವಾಗಿ ನೀಡಲಾಗುವುದೆಂದು ಸರ್ಕಾರದಿಂದ ಪ್ರಚಾರ ಮಾಡಲಾಗಿತ್ತು[೪]. ರೋಗದ ಲಕ್ಷಣಗಳು ಮತ್ತು ಸಾರ್ವಜನಿಕರು ಅನುಸರಿಸಬೇಕಾದ ಜಾಗರೂಕತಾ ಕ್ರಮಗಳ ಬಗ್ಗೆ ತಿಳುವಳಿಕೆ ನೀಡಲು ಕರಪತ್ರಗಳನ್ನು ಮುದ್ರಿಸಿ ವಿತರಿಸುವ ಹೊಣೆಯನ್ನು ರೈಲ್ವೆ ಪೋಲೀಸರು ಮತ್ತು ಸರ್ಕಾರದ ಅಧಿಕಾರಿಗಳಿಗೆ ನೀಡಲಾಗಿತ್ತು. ಬೆಂಗಳೂರು ನಗರಕ್ಕೆ ರಸ್ತೆ ಮೂಲಕ ಹೋಗುವ ಪ್ರಯಾಣಿಕರ ಬಗ್ಗೆ ನಿಗಾವಹಿಸಲು ಎಂಟು ಮುಖ್ಯ ಗಡಿಗಳಲ್ಲಿ ಗಡಿ ಕಾವಲು ಠಾಣೆಗಳನ್ನು ತೆಗೆದು ಒಬ್ಬ ಧಫೇದಾರ್ ಹಾಗೂ ನಾಲ್ವರು ಪೋಲೀಸ್ ಪೇದೆಗಳನ್ನು ನೇಮಿಸಲಾಗಿತ್ತು. ಪ್ಲೇಗು ಸೋಂಕಿತವಾಗಿದ್ದ ಮುಂಬೈ ಪ್ರಾಂತ್ಯದ ಕಡೆಯಿಂದ ಬೆಂಗಳೂರಿಗೆ ರೈಲ್ವೆ ಮೂಲಕ ಆಗಮಿಸುವ ಪ್ರಯಾಣಿಕರನ್ನು ಪ್ರತ್ಯೇಕವಾಗಿ ಊರಾಚೆ ಸಂಪರ್ಕ ನಿಷೇಧಿತ ಸ್ಥಳಗಳಲ್ಲಿ ಕ್ವಾರಂಟೈನ್ ಮಾಡಿ ಇರಿಸಿ ಅವರ ಆರೋಗ್ಯದ ಬಗ್ಗೆ ಗಮನ ಇಡುವ ಏರ್ಪಾಡು ಮಾಡಲಾಗಿತ್ತು. ಸ್ಮಶಾನಗಳಲ್ಲಿ ನಡೆಯುತ್ತಿದ್ದ ಶವಸಂಸ್ಕಾರಗಳ ಬಗ್ಗೆ ವಿವರಗಳನ್ನು ದಾಖಲಿಸಿಕೊಳ್ಳಲು ಪೊಲೀಸ್ ಪೇದೆಗಳನ್ನು ನೇಮಿಸಲಾಗಿತ್ತು. ನಗರ ನೈರ್ಮಲ್ಯ ಕಾಪಾಡಲು ಹೆಚ್ಚುವರಿ ಸಿಬ್ಬಂದಿಯನ್ನು ಹಂಗಾಮಿಯಾಗಿ ನೇಮಿಸಲಾಗಿತ್ತು. ಬೆಂಗಳೂರಿಗೆ ನೀರು ಸರಬರಾಜು ಮಾಡುತ್ತಿದ್ದ ಹೆಸರು ಘಟ್ಟದ ಚಾಮರಾಜೇಂದ್ರ ಜಲಾಶಯ ಮತ್ತು ಅದರ ಸುತ್ತಮುತ್ತಲಿನ ಪ್ರದೇಶವನ್ನು ಶುಚಿಯಾಗಿಡಲಾಗಿತ್ತು.

ಬೆಂಗಳೂರು ನಗರದಲ್ಲಿ ಇಷ್ಟೆಲ್ಲಾ ಮುಂಜಾಗರೂಕತೆ ತೆಗೆದುಕೊಂಡರೂ ಗುಡ್‌ಷೆಡ್ ಪ್ರದೇಶದಲ್ಲಿ ಆಗಸ್ಟ್ ೧೮೯೮ರಲ್ಲಿ ಪ್ರಥಮ ಬಾರಿ ಪ್ಲೇಗು ಕಾಣಿಸಿಕೊಂಡಿತು. ರೈಲ್ವೆ ಲೋಕೋಷೆಡ್ ಸೂಪರಿಂಟೆಂಡೆಂಟ್‌ರಾಗಿದ್ದ ವಿಲಿಯಮ್ಸ್ ಎಂಬಾತನ ಅಡಿಗೆಯವನಾದ ಡೇವಿಡ್, ಆಗಸ್ಟ್ ೧೧ನೇ ತಾರೀಖು ಹುಬ್ಬಳ್ಳಿಯಿಂದ ರೈಲಿನಲ್ಲಿ ಬೆಂಗಳೂರಿಗೆ ಬರುತ್ತಾನೆ. ೧೨ನೇ ತಾರೀಖು ಆತನಿಗೆ ಪ್ಲೇಗಿನ ಸೋಂಕು ತಗುಲಿ ೧೫ನೇ ತಾರೀಖು ಸಾವನ್ನಪ್ಪುತ್ತಾನೆ. ಇದಾದ ಹತ್ತು ದಿನಗಳಲ್ಲಿ ಬೆಂಗಳೂರಿನಲ್ಲಿ ೧೭ ಪ್ಲೇಗಿನ ಪ್ರಕರಣಗಳಾಗುತ್ತವೆ[೫]. ಬೆಂಗಳೂರಿನಿಂದ ಇದರ ಸೋಂಕು ಸಮೀಪದ ಮೈಸೂರು, ಕೋಲಾರ ಮತ್ತು ತುಮಕೂರು ಜಿಲ್ಲೆಗಳಿಗೂ ವ್ಯಾಪಕವಾಗಿ ಹರಡುತ್ತದೆ. ಇದರ ಸೋಂಕು ಜೂನ್ ೧೮೯೯ ರವರೆಗೆ ಇರುತ್ತದೆ. ಈ ಅವಧಿಯಲ್ಲಿ ಜನ ಅನುಭವಿಸಿದ ಕಷ್ಟ-ನಷ್ಟಗಳನ್ನು ಊಹಿಸಲು ಅಸಾಧ್ಯ. ಪ್ಲೇಗು ನಿಯಂತ್ರಣಕ್ಕೆ ಸರ್ಕಾರವು ಊರಾಚೆ ಹಾಕಿದ್ದ ಷೆಡ್ಡುಗಳಲ್ಲಿಯೂ ಇರಲಾರದೆ ಎಷ್ಟೋ ಜನ ಊರು ಬಿಟ್ಟು ಓಡಿಹೋದರು. ಮನೆಗಳಲ್ಲಿ ಪ್ಲೇಗಿನಿಂದ ಸತ್ತವರ ಶವಗಳನ್ನು ಬೀದಿಗಳಲ್ಲಿ, ಚರಂಡಿಗಳಲ್ಲಿ ಎಸೆದು ಓಡಿದರು. ಪ್ಲೇಗು ಪ್ರಾರಂಭವಾದ ಮರು ತಿಂಗಳಿನಲ್ಲಿಯೇ ಬೆಂಗಳೂರು ನಗರದ ಬೀದಿ ಗುಡಿಸುವವರು ಕೆಲವರು ಪ್ಲೇಗಿನಿಂದ ಸತ್ತಿದ್ದರಿಂದ ಬೀದಿ ಗುಡಿಸುವವರು ಮುಷ್ಕರ ಹೂಡಿದರು. ಇದರಿಂದ ಸ್ವಲ್ಪ ದಿನಗಳು ನಗರ ಸ್ವಚ್ಛತೆ ಕಾರ್ಯ ಸ್ಥಗಿತಗೊಂಡಿತ್ತು.

ಆದರೂ ಸರ್ಕಾರ ಕೈಗೊಂಡ ಹಲವಾರು ನಿಯಂತ್ರಣ ಕ್ರಮಗಳು ಗಮನಾರ್ಹವಾದುದೇ. ಪ್ಲೇಗು ಕಾಣಿಸಿಕೊಂಡ ನಂತರ ರೈಲಿನಿಂದ ಬಂದಿಳಿಯುವ ಪ್ರಯಾಣಿಕರ ಕೈಕಾಲುಗಳನ್ನು ಸೋಂಕು ನಿವಾರಕ ದ್ರಾವಣದಿಂದ ತೊಳೆಸುವ ವ್ಯವಸ್ಥೆಯನ್ನು ಅಂದು ಬೆಂಗಳೂರು-ಮೈಸೂರು ರೈಲ್ವೆ ನಿಲ್ದಾಣಗಳಲ್ಲಿ ಮಾಡಲಾಗಿತ್ತು. ಅವರು ಧರಿಸಿದ ಬಟ್ಟೆಗಳನ್ನು ಹಬೆಯಲ್ಲಿ ಸ್ವಚ್ಛ ಮಾಡುವ ವ್ಯವಸ್ಥೆ ಮಾಡಲಾಗಿತ್ತು. ನಗರಸಭೆಯಿಂದ ಮನೆಗಳಿಗೆ ಕ್ರಿಮಿನಾಶಕ ಸಿಂಪಡಿಸಲಾಗುತ್ತಿತ್ತು. ಹೀಗೆ ಬೆಂಗಳೂರು ನಗರದಲ್ಲಿ ಅಕ್ಟೋಬರ್ ೧೮೯೮ರಿಂದ ಜೂನ್ ೧೮೯೯ರವರೆಗೆ ೮೪೧೮ ಮನೆಗಳಿಗೆ ಕ್ರಿಮಿನಾಶಕ ಸಿಂಪಡಿಲಾಗಿತ್ತು.[೬] ಜನದಟ್ಟಣೆಯಿಂದ ಕೂಡಿ ಇಕ್ಕಟ್ಟಾದ ಮನೆಗಳನ್ನು ಒಡೆದುಹಾಕಿ ಗಾಳಿ-ಬೆಳಕುಳ್ಳ ಮನೆಗಳನ್ನು ನಿರ್ಮಿಸಲಾಯಿತು. ಬೆಂಗಳೂರಿನಲ್ಲಿ ೬೫೧ ಮನೆಗಳನ್ನು ಒಡೆದು ಹಾಕಲಾಯಿತು.[೭] ಹಳೆಯ ತರಗುಪೇಟೆಯನ್ನು ನೆಲಸಮ ಮಾಡಲಾಯಿತು. ಕ್ರಿಮಿನಾಶಕ ಸಿಂಪಡಿಸುವ ಮತ್ತು ಮನೆ, ಕಟ್ಟಡಗಳನ್ನು ಒಡೆಯುವ ಸಿಬ್ಬಂದಿಗಳು ಸೋಂಕು ತಗಲದಂತೆ ಕಾಲುಗಳಿಗೆ ದಪ್ಪಬೂಟುಗಳನ್ನು ಧರಿಸುತ್ತಿದ್ದರು. ಹಾಗೂ ಕೈಕಾಲುಗಳಲ್ಲಿ ಗಾಯವಾಗಿದ್ದ ಸಿಬ್ಬಂದಿಗಳು ಈ ಕಾರ್ಯದಲ್ಲಿ ತೊಡಗದಂತೆ ನಿರ್ಬಂಧಿಸಲಾಗುತ್ತಿತ್ತು. ಮೈಸೂರು ನಗರದಲ್ಲಿಯೂ ಅರಮನೆ ಕೋಟೆಯೊಳಗಿದ್ದ ಮನೆಗಳನ್ನು ಒಡೆದು ನಿವಾಸಿಗಳಿಗೆ ಬದಲಿ ನಿವೇಶನಗಳನ್ನು ಹೊಸ ಮೊಹಲ್ಲಾಗಳಲ್ಲಿ ಹಂಚಿಕೆ ಮಾಡಲಾಯಿತು. ಇದರ ಪರಿಣಾವಾಗಿ ಮೈಸೂರು ಸಂಸ್ಥಾನದಲ್ಲಿಯೇ ಪ್ರಪ್ರಥಮವಾಗಿ ೧೯೦೪ ರಲ್ಲಿಯೇ ಮೈಸೂರು ನಗರದಲ್ಲಿ ಸ್ಥಾಪಿಸಲ್ಪಟ್ಟ ನಗರಾಭಿವೃದ್ಧಿ ವಿಶ್ವಸ್ಥ ಮಂಡಲಿ ಬಡಾವಣೆಗಳ ನಿರ್ಮಾಣ ಹಾಗೂ ನಿವೇಶನ ಹಂಚಿಕೆ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸಿ ಜನಮನ್ನಣೆ ಪಡೆಯಿತು.

ಪ್ಲೇಗು ನಿಧಿಯನ್ನು ಪ್ರತ್ಯೇಕವಾಗಿ ಕಾಯ್ದಿರಿಸಿಕೊಂಡು ರೋಗಿಗಳಿಗೆ ಷೆಡ್‌ಹಾಕಿ ಪ್ರತ್ಯೇಕವಾಗಿರಿಸುವ ಕ್ವಾರಂಟೈನ್ ವ್ಯವಸ್ಥೆ, ಅವರ ಆಹಾರ, ವೈದ್ಯಕೀಯ ಸೇವೆಗಳು, ಪೋಲೀಸ್ ವೆಚ್ಚಗಳು, ಕ್ರಿಮಿನಾಶಕ ಸಿಂಪಡಣೆ ಮನೆಗಳನ್ನು ಒಡೆಯುವುದು, ನಗರ ನೈರ್ಮಲ್ಯ ಇತ್ಯಾದಿ ಕಾರ್ಯಗಳಿಗಾಗಿ ಮೈಸೂರು ಸಂಸ್ಥಾನದಲ್ಲಿ ರೂ. ೭,೫೯,೪೦೬-೭-೬ಗಳನ್ನು ಆಗ ಖರ್ಚು ಮಾಡಲಾಗಿತ್ತು.[೮] ಈ ನಿಧಿಯಲ್ಲಿ ಇಂತಹ ಕಾರ್ಯಗಳಿಗಾಗಿ ಬೆಂಗಳೂರು ನಗರದಲ್ಲಿ ರೂ. ೨,೪೫,೭೯೦-೧೩-೮ ಗಳನ್ನು ಖರ್ಚು ಮಾಡಲಾಗಿತ್ತು[೯]. ನಗರದಲ್ಲಿ ವೃತ್ತಗಳ ನಿರ್ಮಾಣ, ರಸ್ತೆ ಅಗಲೀಕರಣ, ಕನ್ಸರ್ವೆನ್ಸಿ ನಿರ್ಮಾಣ ಮುಂತಾದವುಗಳಿಗೆ ಆದ್ಯತೆ ನೀಡಲಾಯಿತು. ಬೆಂಗಳೂರು ನಗರದಲ್ಲಿ ಮನೆ ನಿರ್ಮಾಣಕ್ಕೆ ಸರ್ಕಾರಿ ನೌಕರರಿಗೆ ಸಾಲ ನೀಡಲಾಯಿತು. ಗೃಹ ನಿರ್ಮಾಣ ಕಾಯಿದೆಯನ್ನು ಜಾರಿಗೆ ತರಲಾಯಿತು. ಅದರಂತೆ ಗಾಳಿ-ಬೆಳಕುಳ್ಳ ವಾತಾವರಣ ಕಲ್ಪಿಸಲು ಯೋಗ್ಯವಾಗುವಂತೆ ನಿವೇಶನದ ಅಳತೆಗೆ ತಕ್ಕಂತೆ ೧/೩ ಭಾಗ ಮಾತ್ರ ಕಟ್ಟಡ ನಿರ್ಮಿಸಿ ೨/೩ ಭಾಗದಷ್ಟು ಖಾಲಿ ಜಾಗ ಬಿಡಲು ನಿಯಮಾವಳಿ ರೂಪಿಸಲಾಗಿತ್ತು.[೧೦] ರಸ್ತೆಯ ಮಟ್ಟಕ್ಕಿಂತ ೧ ಅಡಿ ಎತ್ತರದಲ್ಲಿ ಮನೆ ಕಟ್ಟುವಂತೆಯೂ, ಇಲಿ-ಹೆಗ್ಗಣಗಳು ಕೊರೆಯದಂತೆ ಪಾಯಕ್ಕೆ ಕಲ್ಲು, ಸಿಮೆಂಟ್‌ಗಳನ್ನೇ ಬಳಸಬೇಕೆಂದು ಸೂಚಿಸಲಾಗಿತ್ತು. ಇಂತಹ ಮನೆಗಳಲ್ಲಿ ವಾಸ ಮಾಡಿ ಅಭ್ಯಾಸವಿಲ್ಲದ ಜನರು ಮೊದಲು ತಮಗೆ ಚಳಿಯಿಂದಾಗಿ ನೆಗಡಿ, ತಲೆನೋವು ಬರುತ್ತಿದೆ ಅಂತ ಅಕ್ಷೇಪಣೆ ಎತ್ತುತ್ತಿದ್ದರು. ಕ್ರಮಣ ಇಂತಹ ಆರೋಗ್ಯಕರ ವಾತಾವರಣವಿರುವ ಮನೆಗಳಲ್ಲಿ ವಾಸಿಸುವುದು ಸೂಕ್ತ ಎಂದು ಜನರ ಅನುಭವಕ್ಕೆ ಬಂದಿತು.

ಬೆಂಗಳೂರು ನಗರದಲ್ಲಿ ಬಸವನಗುಡಿ ಮತ್ತು ಮಲ್ಲೇಶ್ವರಂ ಬಡಾವಣೆಗಳನ್ನು ನಿರ್ಮಿಸಿ ಅಲ್ಲಿ ನಿವೇಶನ ಹಂಚಿಕೆ ಮಾಡಲಾಯಿತು. ಬಸವನಗುಡಿಯನ್ನು ೪೪೦ ಎಕರೆ ಪ್ರದೇಶದಲ್ಲಿ ನಿರ್ಮಿಸಲು ರೂ. ೪ ಲಕ್ಷಗಳನ್ನು ಮತ್ತು ಮಲ್ಲೇಶ್ವರಂ ಬಡಾವಣೆಯನ್ನು ೨೯೦ ಎಕರೆ ಪ್ರದೇಶದಲ್ಲಿ ನಿರ್ಮಾಣ ಮಾಡಲು ರೂ. ೧.೩೮ ಲಕ್ಷಗಳನ್ನು ವೆಚ್ಚ ಮಾಡಲಾಯಿತು.[೧೧] ವೃಷಭಾವತಿ ಮೂಲದಲ್ಲಿ ನಿರ್ಮಿತವಾದ ಬಸವನಗುಡಿ ಬಡಾವಣೆ ೧೪,೦೦೦ ಜನಗಳ ವಾಸಕ್ಕೆ ಯೋಗ್ಯವಾದ ೨೦೦೦ ನಿವೇಶನಗಳನ್ನೊಳಗೊಂಡಿತ್ತು.[೧೨] ಅಲ್ಲಿ ೧೪೭ x ೨೫೦ ಅಡಿ ವಿಸ್ತೀರ್ಣವುಳ್ಳ ೨೫ ವಿಲ್ಲಾ ನಿವೇಶನಗಳು, ೯೫ x ೧೫೦ ಅಡಿಯ ೪೦ ಬಂಗ್ಲೇ ನಿವೇಶನಗಳು, ೩೦ x ೧೨೦ ಅಡಿವುಳ್ಳ ೫೧೧ ಅಂಗಡಿ ನಿವೇಶನಗಳು ೧೦೦ x ೩೦ ಅಡಿ ಮತ್ತು ೧೧೦ x ೫೫ ಅಡಿಯ ೧೪೧೬ ಸಾಧಾರಣ ಮನೆ ನಿವೇಶನಗಳನ್ನು ಮಾಡಲಾಗಿತ್ತು.[೧೩] ವಿಲ್ಲಾ ನಿವೇಶನಕ್ಕೆ ರೂ. ೧೫೦ ಮತ್ತು ಸಾಧಾರಣ ಮನೆ ನಿವೇಶನಕ್ಕೆ ರೂ. ೧೧೫ರ ಬೆಲೆ ನಿಗಧಿಪಡಿಸಲಾಗಿತ್ತು.[೧೪] ಈ ಬಡಾವಣೆಯಲ್ಲಿ ೧೦೦ ಅಡಿ ಅಗಲವುಳ್ಳ ನಾಲ್ಕು ಮುಖ್ಯರಸ್ತೆಗಳಿದ್ದು ಅವು ರೈಲ್ವೆ ನಿಲ್ದಾಣ, ಸಾರ್ವಜನಿಕ ಕಛೇರಿಗಳು ಮತ್ತು ಹೊಸ ತರಗುಪೇಟೆಯನ್ನು ತಲುಪುವ ಸಂಪರ್ಕ ರಸ್ತೆಗಳಾಗಿದ್ದವು.

ಮಲ್ಲೇಶ್ವರಂ ಬಡಾವಣೆಯಲ್ಲಿ ೧೭ ಅಡ್ಡರಸ್ತೆಗಳು ಹಾಗೂ ೧೦ ಅವೆನ್ಯೂ ರಸ್ತೆಗಳಿದ್ದು, ಪ್ರತಿ ರಸ್ತೆಯೂ ೬೦ ಅಡಿ ಅಗಲವಿರುತ್ತಿತ್ತು. ವಿವಿಧ ಅಳತೆಯ ಸುಮಾರು ೮೬೦ ನಿವೇಶನಗಳನ್ನು ನಿರ್ಮಿಸಲಾಗಿದ್ದು, ಬಂಗ್ಲೇ ನಿವೇಶನಕ್ಕೆ ರೂ. ೭೬೫ ಮತ್ತು ಕನಿಷ್ಠ ಅಳತೆಯ ನಿವೇಶನಕ್ಕೆ ರೂ. ೫೦ನ್ನು ನಿಗಧಿಪಡಿಸಲಾಗಿತ್ತು.[೧೫] ಈ ಬಡಾವಣೆಗಳಲ್ಲಿ ಮನೆ ಕಟ್ಟಿಕೊಳ್ಳಲು ನಿವೇಶನ ಹಂಚಿಕೆ ಮಾಡಲಾಯಿತು. ಇದರಿಂದ ಜನವಸತಿಯಿಂದ ಕೂಡಿ ಈ ಬಡಾವಣೆಗಳು ಅಭಿವೃದ್ಧಿ ಹೊಂದಿದ್ದಲ್ಲದೆ ನಗರವೂ ವಿಸ್ತಾರವಾಗಿ ಬೆಳೆಯಲು ಸಾಧ್ಯವಾಯಿತು.

ಪ್ಲೇಗಿನಿಂದ ಆದ ಮತ್ತೊಂದು ಮುಖ್ಯ ಬೆಳವಣಿಗೆಯಿಂದಾಗಿ ಆಸ್ಪತ್ರೆಗಳಲ್ಲಿ ದಾಖಲಾದ ಪ್ಲೇಗು ರೋಗಿಗಳ ಆರೋಗ್ಯದ ಬಗ್ಗೆ ವಿವರಗಳನ್ನು ಪಡೆಯಲು ದೂರವಾಣಿ ಸಂಪರ್ಕ ಕಲ್ಪಿಸಲಾಯಿತು. ಆಸ್ಪತ್ರೆಗಳು ಹಾಗೂ ಸಾರ್ವಜನಿಕ ಕಛೇರಿಗಳಲ್ಲಿ ದೂರವಾಣಿ ಸಂಪರ್ಕ ಕಲ್ಪಿಸಲಾಯಿತು. ೧೮೯೯ರ ಸಮಯದಲ್ಲಿ ಪ್ರತಿದಿನ ಬೆಂಗಳೂರಿನಲ್ಲಿ ೧೨೨ ದೂರವಾಣಿ ಕರೆ ಬರುತ್ತಿದ್ದವು[೧೬], ಹೀಗಾಗಿ ಸಂಪರ್ಕ ವ್ಯವಸ್ಥೆಯು ನಗರಗಳಿಗೆ ಕಲ್ಪಿತವಾಗಿ ಸರ್ಕಾರದ ಆಡಳಿತವೂ ಸುಸೂತ್ರವಾಗಿ ನಡೆಯಲು ಕಾರಣವಾಯಿತು.

ಪ್ಲೇಗು ಮಹಾಮಾರಿಯಿಂದ ಉಂಟಾದ ಮತ್ತೊಂದು ಮುಖ್ಯ ಸಾಮಾಜಿಕ ಬದಲಾವಣೆಯೆಂದರೆ ಫಲಹಾರ ಮಂದಿರಗಳ ಪ್ರಾರಂಭ. ಅನೇಕ ಸಂಸಾರಗಳಲ್ಲಿ ಪ್ಲೇಗಿನ ಸೋಂಕಿಗೆ ಹೆದರಿ ಹೆಂಡತಿ, ಮಕ್ಕಳು ತಾವಿದ್ದ ಸ್ಥಳಗಳನ್ನು ಬಿಟ್ಟು ಬೇರೆ ಊರುಗಳಲ್ಲಿದ್ದ ತಮ್ಮ ತವರು ಮನೆಗೆ ತೆರಳಿದ್ದರಿಂದ ನಗರಗಳಲ್ಲಿ ವಿಶೇಷವಾಗಿ ಬೆಂಗಳೂರು ನಗರದಲ್ಲಿ ಸರ್ಕಾರಿ ಕೆಲಸಗಳಲ್ಲಿದ್ದ ಗಂಡಸರ ಊಟೋಪಚಾರಕ್ಕಾಗಿಯೇ ಸಸ್ಯಾಹಾರಿ ಹೋಟೆಲ್‌ಗಳು ಪ್ರಾರಂಭವಾದವು. ಬೆಂಗಳೂರಿನಲ್ಲಿ ಅವನಿ ನರಸಿಂಗರಾವ್ ಎಂಬಾತ ಪ್ರಪ್ರಥಮವಾಗಿ ಚಿಕ್ಕಪೇಟೆಯಲ್ಲಿ ಸಸ್ಯಾಹಾರಿ ಫಲಹಾರ ಮಂದಿರವನ್ನು ಪ್ರಾರಂಭಿಸಿದರು.[೧೭] ಪ್ಲೇಗು ಸೋಂಕಿನಿಂದಾಗಿ ಮನೆಯ ಊಟ, ತಿಂಡಿ ಇಲ್ಲದೆ ಇದ್ದ ಬ್ರಾಹ್ಮಣ ಸರ್ಕಾರಿ ನೌಕರರ ಆಹಾರ ಪೂರೈಕೆಗಾಗಿ

ಕೆ.ಟಿ. ಅಪ್ಪಣ್ಣನವರು 'ಹಿಂದೂ ಕಾಫಿ ಕ್ಲಬ್' ಸ್ಥಾಪಿಸಿದರು. ಈ ಕಾಫಿ ಕ್ಲಬ್‌ನಲ್ಲಿ ಪ್ರತಿ ಊಟಕ್ಕೆ ೨ ಆಣೆಯಂತೆ ಪ್ರತಿ ತಿಂಗಳಿಗೆ ರೂ. ೭ರಂತೆ ಬೆಲೆಯನ್ನು ನಿಗಧಿಪಡಿಸಲಾಗಿತ್ತು[೧೮]. ಮುಂದೆ ಈ ಕಾಫಿ ಕ್ಲಬ್ 'ಮಾಡ್ರನ್ ಹಿಂದೂ ರೆಸ್ಟೋರೆಂಟ್' ಎಂಬ ಹೆಸರಿನಲ್ಲಿ ಜನಪ್ರಿಯವಾಗಿ ದಿವಾನ್ ಸರ್ ಎಂ.ವಿಶ್ವೇಶ್ವರಯ್ಯನವರ ಪೋಷಣೆ ಪಡೆದಿತ್ತು. ಬೆಂಗಳೂರಿನ ಬಳೇಪೇಟೆ ಮತ್ತು ಚಿಕ್ಕಪೇಟೆಗಳಲ್ಲಿ ಹೋಟೆಲ್‌ಗಳು ಪ್ರಾರಂಭಿಸಲ್ಪಟ್ಟು, ಪರಸ್ಥಳಗಳಿಂದ ಆಗಮಿಸುವ ಪ್ರಯಾಣಿಕರಿಗೆ ಊಟ, ತಿಂಡಿ, ಕಾಫಿ ಪೂರೈಸುತ್ತಿದ್ದುದಲ್ಲದೇ ಮುಂದಿನ ದಿನಗಳಲ್ಲಿ ಸರ್ಕಾರ ಹೋಟೆಲ್‌ಗಳನ್ನು ವಾಣಿಜ್ಯೋದ್ಯಮವಾಗಿ ಗುರುತಿಸಿತು. ಸರ್. ಎಂ. ವಿಶ್ವೇಶ್ವರಯ್ಯನವರು ದಿವಾನರಾಗಿದ್ದ ಕಾಲದಲ್ಲಿ, ೧೯೧೬ರಲ್ಲಿ ಹೋಟೆಲ್‌ಗಳನ್ನು ಪ್ರಾರಂಭಿಸಲು ಸರ್ಕಾರ ವಿಶೇಷ ರಿಯಾಯಿತಿಗಳನ್ನು ನೀಡಿ ಉತ್ತೇಜಿಸಿತು. ಮುಂದೆ ೧೯೩೬ರಲ್ಲಿ ಬೆಂಗಳೂರಿನಲ್ಲಿ 'ಹೋಟೆಲ್ ಮಾಲೀಕರ ಸಂಘ'ವು ಸ್ಥಾಪಿಸಲ್ಪಟ್ಟು, ಇದು ಹೋಟೆಲ್ ಉದ್ಯಮವಾಗಿ ಬೆಳೆಯಲು ಸಾಧ್ಯವಾಗಿ ಎಷ್ಟೋ ಜನರಿಗೆ ಉದ್ಯೋಗಾವಕಾಶ ಸಿಕ್ಕಿತು ಹಾಗೂ ಪ್ರವಾಸೋದ್ಯಮ ಅಭಿವೃದ್ಧಿಗೂ ಅವಕಾಶ ಕಲ್ಪಿಸಿದಂತಾಯಿತು.

ಪ್ಲೇಗನ್ನು ಹತೋಟಿಗೆ ತರಲು ಜೂನ್ ೧೮೯೯ರ ವೇಳೆಗೆ ಲಸಿಕೆ ಸಿದ್ಧವಾಗಿದ್ದರಿಂದ ಪ್ರೋಫೆಸರ್ ಹಾಫ್‌ಕಿನ್ ಮಾದರಿಯಲ್ಲಿ ಆಗ ಸಂಸ್ಥಾನದಲ್ಲಿ ೧,೨೯,೭೩೪ ಮಂದಿಗೆ ಇನ್ಯಾಕುಲೇಷನ್ ಹಾಕಲಾಯಿತು.[೧೯] ಬೆಂಗಳೂರು ನಗರದಲ್ಲಿ ೩೬,೨೫೯ ಮಂದಿಗೆ ಒಬ್ಬ ಮಹಿಳಾ ವೈದ್ಯೆಯೂ ಸೇರಿದಂತೆ ೧೪ ವೈದ್ಯರು ಇನ್ಯಾಕುಲೇಷನ್ ಹಾಕಿದ್ದರು[೨೦]. ಮೈಸೂರು ನಗರದಲ್ಲಿ ೧೯,೯೯೩ ಮಂದಿಗೆ ಇನಾಕ್ಯುಲೇಷನ್ ಹಾಕಲಾಗಿತ್ತು.[೨೧] ಮೈಸೂರು ಸಂಸ್ಥಾನದಲ್ಲಿ ಇನಾಕ್ಯುಲೇಷನ್ ಹಾಕಿಸಿಕೊಂಡವರಲ್ಲಿ ಕೆಲವು ಸಾವುಗಳಾದವು ಮತ್ತು ಕೆಲವರಿಗೆ ಸಣ್ಣಪುಟ್ಟ ತೊಂದರೆಗಳಾದವು. ಈ ವಿವರಗಳನ್ನು ಸಮಗ್ರವಾಗಿ ಕೆಳಗಿನ ತಃಖ್ತೆಯಲ್ಲಿ ನೀಡಲಾಗಿದೆ.[೨೨]

	ಇನಾಕ್ಯುಲೇಷನ್ ಹಾಕಿಸಿಕೊಂಡವರು	ಇನಾಕ್ಯುಲೇಷನ್ ಹಾಕಿಸಿಕೊಂಡವರಲ್ಲಿ ಉಂಟಾದ ತೊಂದರೆ	ಇನಾಕ್ಯುಲೇಷನ್ ಹಾಕಿಸಿಕೊಂಡವರಲ್ಲಿ ಉಂಟಾದ ಸಾವು
ಬೆಂಗಳೂರು ನಗರ	೩೬೨೫೯	೨೩೬	೧೨೦
ಬೆಂಗಳೂರು ಜಿಲ್ಲೆ	೯೪೫೬	೯೧	೨೯
ಮೈಸೂರು ನಗರ	೧೯೯೯೩	೧೭೪	೧೨೩
ಮೈಸೂರು ಜಿಲ್ಲೆ	೧೭೯೩	೧೩	೧೦
ಕೋಲಾರ ಜಿಲ್ಲೆ (ಕೆ.ಜಿ.ಎಫ್. ಹೊರತುಪಡಿಸಿ)	೬೨೦೦	೧೯	೫
ತುಮಕೂರು ಟೌನ್	೨೦೭೧	೯೭	೫೬
ತುಮಕೂರು ಜಿಲ್ಲೆ (ತುಮಕೂರು ಟೌನ್ ಹೊರತುಪಡಿಸಿ)	೧೨೩೮	೨೨	೮
ಚಿತ್ರದುರ್ಗ ಜಿಲ್ಲೆ	೬೬	–	–
ಕಡೂರು ಜಿಲ್ಲೆ	೪೪೪	–	–
ಹಾಸನ ಜಿಲ್ಲೆ	೩೨೫	–	–
ಶಿವಮೊಗ್ಗ ಜಿಲ್ಲೆ	೨೭೦	–	–

ಪ್ಲೇಗು ಸಾಂಕ್ರಾಮಿಕದಿಂದಾಗಿ ಮೈಸೂರು ಸಂಸ್ಥಾನದ ಜನಸಂಖ್ಯೆ ಬಹಳಷ್ಟು ಕಡಿಮೆಯಾಗುತ್ತದೆ. ಮೊದಲು ಬೆಂಗಳೂರು ನಗರದಲ್ಲಿ ೧೧ ಆಗಸ್ಟ್ ೧೮೯೮ರಲ್ಲಿ ಕಾಣಿಸಿಕೊಂಡ ಪ್ಲೇಗು ಬೆಂಗಳೂರಿನಿಂದ ತುಮಕೂರು ಜಿಲ್ಲೆಯಲ್ಲಿ ವ್ಯಾಪಿಸಿ ಅಲ್ಲಿ ಸೆಪ್ಟೆಂಬರ್ ೨೧ರಂದು ಕಾಣಿಸಿಕೊಳ್ಳುತ್ತದೆ. ನಂತರ ಬೆಂಗಳೂರು ಜಿಲ್ಲೆಯಾದ್ಯಂತ ಅಕ್ಟೋಬರ್ ೯ರಂದು, ಕೋಲಾರ ಜಿಲ್ಲೆಯಲ್ಲಿ ಅಕ್ಟೋಬರ್ ೧೬ರಂದು ಹಾಗೂ ಮೈಸೂರು ಜಿಲ್ಲೆಯಲ್ಲಿ ನವೆಂಬರ್ ೧೧ರಂದು ಕಾಣಿಸಿಕೊಳ್ಳುತ್ತದೆ. ಆದರೆ ಬೆಂಗಳೂರಿನಿಂದ ಸ್ವಲ್ಪ ದೂರವಿದ್ದ ಹಾಸನ,* ಶಿವಮೊಗ್ಗ, ಚಿಕ್ಕಮಗಳೂರು ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಪ್ಲೇಗಿನ

ಸೋಂಕು ಹರಡಿರುವುದಿಲ್ಲ. ೧೮೯೧ರ ಜನಗಣತಿಯಂತೆ ಬೆಂಗಳೂರು ನಗರದಲ್ಲಿ–೮೦೨೮೫, ಮೈಸೂರು ನಗರ–೭೪೦೪೮, ಕೋಲಾರ ಟೌನ್–೧೨,೧೪೮, ತುಮಕೂರು ಟೌನ್–೧೧೦೮೬, ಹಾಸನ–೬೬೫೧, ಚಿಕ್ಕಮಗಳೂರು ಜಿಲ್ಲೆ–೭೮೧೬, ಶಿವಮೊಗ್ಗ–೧೧೩೪೦ ಹಾಗೂ ಚಿತ್ರದುರ್ಗಗಳಲ್ಲಿ ೪೯೪೬ ಮಂದಿ ಜನಸಂಖ್ಯೆ ಇರುತ್ತದೆ.[೨೩] ಅದೇ ವರ್ಷ ಜಿಲ್ಲಾವಾರು ತೆಗೆದುಕೊಂಡರೆ ಬೆಂಗಳೂರು ಜಿಲ್ಲೆಯಲ್ಲಿ ೧೨೧೯೩, ಮೈಸೂರು ಜಿಲ್ಲೆ–೯೧೪೪೮, ಕೋಲಾರ–೧೧೧೨೧೩, ತುಮಕೂರು–೧೧೬೦೦೨, ಹಾಸನ–೯೬೯೪೬, ಚಿಕ್ಕಮಗಳೂರು–೬೨೭೭೧, ಶಿವಮೊಗ್ಗ–೯೬೯೮೭ ಹಾಗೂ ಚಿತ್ರದುರ್ಗ ಜಿಲ್ಲೆಗಳಲ್ಲಿ– ೭೭೮೪೭ ಕಲ್ಲು, ಮಣ್ಣು ಮುಂತಾದವುಗಳಿಂದ ನಿರ್ಮಿಸಿದ ಎಲ್ಲಾ ರೀತಿಯ ವಾಸದ ಮನೆಗಳಿದ್ದವು.[೨೪] ಬೆಂಗಳೂರು ನಗರದಲ್ಲಿ ೧೮೯೧ರಲ್ಲಿ ೮೦೨೮೫ ಇದ್ದ ಜನಸಂಖ್ಯೆ ಪ್ಲೇಗಿನಿಂದಾಗಿ ೧೯೦೧ರ ಜನಗಣತಿಯಂತೆ ೬೯೪೪೭ ಕ್ಕೆ ಇಳಿದಿರುತ್ತದೆ[೨೫]. ೧೮೯೮–೯೯ ರಲ್ಲಂತೂ ಬೆಂಗಳೂರಿನ ಜನಸಂಖ್ಯೆ ಅತಿ ಕಡಿಮೆ ೪೮೨೩೬ಕ್ಕೆ ಇಳಿಯುತ್ತದೆ.[೨೬] ಮೈಸೂರು ಸಂಸ್ಥಾನದಲ್ಲಿ ಆ ವರ್ಷ ೩೪೯೩೩ ಮಂದಿಗೆ ಪ್ಲೇಗು ಸೋಂಕು ತಗುಲಿ ಅದರಲ್ಲಿ ೧೨೨೭೨ ಮಂದಿ ಸಾವಿಗೀಡಾಗುತ್ತಾರೆ.[೨೭]

ಮೈಸೂರು ನಗರದಲ್ಲಿ ಸಮೀಪದಲ್ಲಿದ್ದ ಪಾಂಡವಪುರದಿಂದ ಬಂದ ಪ್ರಥಮ ಪ್ಲೇಗು ಪ್ರಕರಣ ಅಕ್ಟೋಬರ್ ೧, ೧೮೯೮ ರಂದು ಕಾಣಿಸಿಕೊಂಡರೂ ೨೬ ನವೆಂಬರ್‌ರವರೆಗೆ ಸ್ಥಳೀಯವಾಗಿ ಹರಡಿರುವುದಿಲ್ಲ. ಇದು ಜನವರಿ ೧೮೯೯ ರಿಂದ ನಗರದಲ್ಲೆಡೆ ವ್ಯಾಪಿಸಿ ಫೆಬ್ರವರಿ ತಿಂಗಳಿನಲ್ಲಿ ವ್ಯಾಪಕವಾಗಿ ಹರಡುತ್ತದೆ. ಅಲ್ಲಿಯವರೆಗೆ ೧೦೮೩ ಪ್ರಕರಣಗಳಾಗಿ ೮೮೩ ಮಂದಿ ಸಾವನ್ನಪ್ಪುತ್ತಾರೆ.[೨೮] ಮುಂದೆ ಮಾರ್ಚ್ ೧೮೯೯ ರ ನಂತರ ಪ್ಲೇಗು ಪ್ರಕರಣಗಳು ಪೂರ್ತಿ ಇಳಿಮುಖವಾಗಿ ಮೇ–ಜೂನ್ ತಿಂಗಳುಗಳಲ್ಲಿ ಕೇವಲ ೫೯ ಮತ್ತು ೫೫ ಪ್ಲೇಗು ಪ್ರಕರಣಗಳು ಕಂಡು ಬರುತ್ತವೆ.

ಬೆಂಗಳೂರು ನಗರದಲ್ಲಿ ಸಂಸ್ಥಾನದಲ್ಲಿಯೇ ಮೊದಲ ಬಾರಿಗೆ ಆಗಸ್ಟ್‌ನಲ್ಲಿ ೧೮೯೮ ರಲ್ಲಿ ಕಾಣಿಸಿಕೊಂಡ ಪ್ಲೇಗು ಸೋಂಕು ಸೆಪ್ಟೆಂಬರ್‌ವರೆಗೆ ನಿಧಾನಗತಿಯಲ್ಲಿದ್ದು, ಅಕ್ಟೋಬರ್ ನಂತರ ತೀವ್ರಗತಿಯಲ್ಲಿ ಹರಡುತ್ತದೆ. ಅಕ್ಟೋಬರ್ ತಿಂಗಳಿನಲ್ಲಿ ೧೯೩೩ ಪ್ರಕರಣಗಳಾಗಿದ್ದು, ಆಗಸ್ಟ್‌ನಿಂದ ಅಕ್ಟೋಬರ್‌ವರೆಗೆ ಒಟ್ಟು ೨೮೦೭ ಮಂದಿ ಸಾವನ್ನಪ್ಪುತ್ತಾರೆ.[೨೯] ನವೆಂಬರ್ ೧೫ರ ನಂತರ ಸ್ವಲ್ಪ ಇಳಿಮುಖವಾಗುತ್ತಾ ಬಂದು ೧೨ ಮಾರ್ಚ್‌ಯಿಂದ ೨೭ ಮೇವರೆಗೆ ಹೊರ ಊರುಗಳಿಂದ ಬಂದ ಕೆಲವು ಪ್ರಕರಣಗಳನ್ನು ಹೊರತು ಪಡಿಸಿದಂತೆ ಸ್ಥಳೀಯವಾಗಿ ಯಾವುದೇ ಪ್ಲೇಗು ಸೋಂಕು ಪ್ರಕರಣ ಕಾಣಿಸಿಕೊಳ್ಳುವುದಿಲ್ಲ. ಮೇ–ಜೂನ್ ತಿಂಗಳುಗಳಲ್ಲಿ ಯಾವುದೇ ಪ್ಲೇಗು ಪ್ರಕರಣ ವರದಿಯಾಗುವುದಿಲ್ಲ.

ಬೆಂಗಳೂರು, ಮೈಸೂರು, ಕೋಲಾರ ಮತ್ತು ತುಮಕೂರು ಜಿಲ್ಲೆಗಳಲ್ಲಿ ಹರಡಿದ್ದ ಪ್ಲೇಗಿನ ಸೋಂಕು ಜೂನ್ ೧೮೯೯ರಲ್ಲಿ ಸಂಪೂರ್ಣವಾಗಿ ಇಳಿಮುಖವಾಗುತ್ತದೆ. ಮೈಸೂರು ಸಂಸ್ಥಾನದ ಜನಸಂಖ್ಯೆ ೧೮೮೧ರಿಂದ ೧೮೯೧ರ ಹತ್ತು ವರ್ಷಗಳ ಅವಧಿಯಲ್ಲಿ ಶೇಕಡ ೧೮.೦೮ ಏರಿಕೆಯಾಗಿದ್ದರೆ ಪ್ಲೇಗಿನ ದೆಸೆಯಿಂದ ೧೮೯೧ರಿಂದ ೧೯೦೧ರ ಅವಧಿಯಲ್ಲಿ ೧೯೦೧ರ ಜನಗಣತಿಯಂತೆ ಕೇವಲ ಶೇಕಡ ೧೨ರಷ್ಟು ಮಾತ್ರ ಏರಿಕೆಯಾಗಿರುತ್ತದೆ. ಹೀಗಾಗಿ ೧೯೦೧ ರ ಜನಗಣತಿಯಂತೆ ಸಂಸ್ಥಾನದ ಜನಸಂಖ್ಯೆಯಲ್ಲಿ ಶೇಕಡ ೬.೦೮ರಷ್ಟು ಕಡಿಮೆಯಾಗಿರುತ್ತದೆ. ಹೀಗಾಗಿ ನೇಯ್ಗೆಯಂತಹ ಕುಲಕಸುಬುಗಳನ್ನು ಅವಲಂಬಿಸಿದ್ದ ಎಷ್ಟೋ ಕುಟುಂಬಗಳಲ್ಲಿ ಕೆಲವು ಸಾವು–ನೋವುಗಳಾಗಿ ಈ ಕಸಬು ಕ್ಷೀಣಿಸಿತು. ಈ ಕುಟುಂಬಗಳಲ್ಲಿ ಬದುಕಿ ಉಳಿದಿದ್ದವರು ಬೇರೆ ಉದ್ಯೋಗಗಳನ್ನು ಹುಡುಕಿಕೊಳ್ಳಬೇಕಾಯಿತು. ಈ ಅವಧಿಯಲ್ಲಿ ನೇಕಾರರು ಉತ್ಪಾದಿಸಿದ ಬಟ್ಟೆಗಳಿಗೆ ಮಾರುಕಟ್ಟೆ ಸರಿಯಾಗಿ ದೊರೆಯದೆ ಹಾಗೂ ಕೆಲಸಗಾರರು ಸಿಕ್ಕದೆ ಜೀವನ ನಿರ್ವಹಣೆಗೆ ಪರದಾಡಬೇಕಾಯಿತು.

ಪ್ಲೇಗಿನಿಂದಾಗಿ ಜನರು ಸಾಮಾಜಿಕ–ಆರ್ಥಿಕ ಸಂಕಷ್ಟಗಳನ್ನು ಎದುರಿಸಬೇಕಾಯಿತು. ಜನರು ಸರಿಯಾದ ಆಹಾರವಿಲ್ಲದೆ ನರಳಾಡಿದರು. ಎಲ್ಲೆಡೆ ಹಸಿವಿನ ಹಾಹಾಕಾರ ಹೆಚ್ಚಾಯಿತು. ರಾತ್ರಿ ವೇಳೆ ತೋಟಗಳಿಗೆ ನುಗ್ಗಿ ಹಲಸಿನಕಾಯಿ, ತೆಂಗಿನಕಾಯಿಗಳನ್ನು ಕದ್ದು ಕಿತ್ತು ಹೊಟ್ಟೆ ತುಂಬಿಸಿಕೊಂಡರು. ಸೋಂಕು ತಡೆಗಾಗಿ ಹಾಕಿಕೊಂಡಿದ್ದ ಷೆಡ್ಡುಗಳಲ್ಲಿ ಜನ ಇಟ್ಟುಕೊಂಡಿದ್ದ ಆಹಾರ ಪದಾರ್ಥಗಳ ಕಳ್ಳತನಗಳಾದವು. ಎಷ್ಟೋ ಜನ ಭೂಮಿಯನ್ನು ಅಗೆದು ಶತ್ತೆಬೇರು, ಕತ್ತಾಳೆ ಮುಂತಾದ ಬೇರು, ಗಡ್ಡೆ ಮುಂತಾದವುಗಳನ್ನು ತಿಂದು ವಾಂತಿ ಬೇಧಿಗಳಿಂದ ನರಳಿದರು. ಕಳ್ಳತನ, ಲೂಟಿ ಪ್ರಕರಣಗಳು ಹೆಚ್ಚಾದವು. ಪ್ಲೇಗಿನಿಂದ ಸತ್ತ ಹೆಣ್ಮಕ್ಕಳ ಮೈಮೇಲಿದ್ದ ಓಲೆ, ಮೂಗುಬಟ್ಟುಗಳನ್ನು ಕದ್ದು ಮಾರಾಟ ಮಾಡಿ ಹೊಟ್ಟೆ ತುಂಬಿಸಿಕೊಳ್ಳುವ ಕೃತ್ಯಗಳು ನಡೆದವು. ಅನೇಕ ಸಂಸಾರಗಳಲ್ಲಿ ಹೊಸದಾಗಿ ಮದುವೆಯಾದ ನವದಂಪತಿಗಳು ಹೊಸ ಸಂಸಾರ ಶುರು ಮಾಡುವ ಮೊದಲೇ ಪ್ಲೇಗಿಗೆ ಬಲಿಯಾದರು. ಸಮಾಜದಲ್ಲಿ ವಿಧವೆಯರು, ವಿದುರರು ಮತ್ತು ಅನಾಥ ಮಕ್ಕಳ ಸಂಖ್ಯೆ ಹೆಚ್ಚಾಗುತ್ತಾ ಹೋಯಿತು. ಸಾಂಸಾರಿಕ ಭದ್ರತೆಯಿಲ್ಲದೆ ದಾರುಣ ಬದುಕನ್ನು ಇವರು ಎದುರಿಸಬೇಕಾಯಿತು.

ಹೀಗೆ ೧೮೯೮ ರಲ್ಲಿ ಮೈಸೂರು ಸಂಸ್ಥಾನದಲ್ಲಿ ಕಾಣಿಸಿಕೊಂಡ ಪ್ಲೇಗು ಮಹಾಮಾರಿ ಜನ ಜೀವನದ ಮೇಲೆ ದುಷ್ಪರಿಣಾಮ ಬೀರಿತು. ಇದರಿಂದ ಚೇತರಿಸಿಕೊಳ್ಳಲು ಜನರಿಗೆ ಹಲವಾರು ವರ್ಷಗಳೇ ಬೇಕಾಯಿತು. ಆದರೂ ನಗರ ಪ್ರದೇಶಗಳಲ್ಲಿ ಕೆಲವು ಆಧುನಿಕ ಸೌಲಭ್ಯಗಳನ್ನು ಪರಿಚಯಿಸಲು ಪ್ಲೇಗು ಕಾರಣವಾಯಿತು.

ಅಡಿ ಟಿಪ್ಪಣಿಗಳು

೧. ಮೈರಾನ್ ಎಕೆನ್‌ಬರ್ಗ್, ಪ್ಲೇಗ್‌ಪೋರ್ಟ್ಸ್: ದಿ ಗ್ಲೋಬಲ್ ಅರ್ಬನ್ ಇಂಪ್ಯಾಕ್ಟ್ ಆಫ್ ಬ್ಯೂಬೋನಿಕ್ ಪ್ಲೇಗ್, ೧೮೯೪–೧೯೦೧, ನ್ಯೂಯಾರ್ಕ್ ಯೂನಿವರ್ಸಿಟಿ ಪ್ರೆಸ್, ನ್ಯೂಯಾರ್ಕ್ ೨೦೦೭, P. 5.
೨. ಪ್ರಜಾವಾಣಿ, ೩ ಜನವರಿ ೨೦೧೪.
೩. ಅಡ್ಮಿನಿಸ್ಟ್ರೇಷನ್ ರಿಪೋರ್ಟ್ ಆಫ್ ದಿ ಬೆಂಗಳೂರು ಸಿಟಿ ಮುನಿಸಿಪಾಲಿಟಿ ೧೮೯೬–೯೭, ಪುಟ ೧೩.
೪. ಅದೇ.
೫. ರಿಪೋರ್ಟ್ ಆನ್ ದಿ ಪ್ಲೇಗ್ ಆಪ್‌ರೇಷನ್ಸ್ ಇನ್ ಮೈಸೂರು ಸ್ಟೇಟ್ ಎಕ್ಸ್‌ಕ್ಲೂಡಿಂಗ್ ದಿ ಸಿವಿಲ್ ಎಂಡ್ ಮಿಲಿಟರಿ ಸ್ಟೇಷನ್ ಆಫ್ ಬೆಂಗಳೂರು, ೧೮೯೮–೯೯ ಪುಟ ೪.
೬ ಅದೇ.
೭. ಅದೇ, ಪುಟ ೧೪.
೮. ಮೈಸೂರ್ ಅಡ್ಮಿನಿಸ್ಟ್ರೇಷನ್ ರಿಪೋರ್ಟ್, ೧೮೯೮–೯೯, ಪುಟ ೬೪.
೯. ಅದೇ
೧೦. ಜೆ.ಹೆಚ್.ಸ್ಟೀಫನ್, ಪ್ಲೇಗ್ ಪ್ರೂಫ್ ಟೌನ್ ಪ್ಲಾನಿಂಗ್ ಇನ್ ಬೆಂಗಳೂರ್, ಸೌತ್ ಇಂಡಿಯಾ, ೧೯೧೪, ಪುಟ ೩೬.
೧೧. ರಿಪೋರ್ಟ್ ಆನ್ ದಿ ಪ್ಲೇಗ್ ಆಪರೇಷನ್ಸ್ ಇನ್ ಮೈಸೂರ್ ಸ್ಟೇಟ್ ಎಕ್ಸ್‌ಕ್ಲೂಡಿಂಗ್ ದಿ ಸಿವಿಲ್ ಎಂಡ್ ಮಿಲಿಟರಿ ಸ್ಟೇಷನ್ ಆಫ್ ಬೆಂಗಳೂರ್, ೧೮೯೮–೯೯, ಪೂರ್ವೋಕ್ತ, ಪುಟ ೧೪.
೧೨. ಅದೇ.
೧೩. ಅದೇ.
೧೪. ಅದೇ.
೧೫. ಅದೇ.
೧೬. ಮೈಸೂರು ರೆಸಿಡೆನ್ಸಿ ಕಡತ ಸಂಖ್ಯೆ ೫೮೫, ೧೮೯೯.
೧೭. ಡಿ.ವಿ. ಗುಂಡಪ್ಪ, ಜ್ಞಾಪಕ ಚಿತ್ರಶಾಲೆ, ಸಂಪುಟ VII, ಬೆಂಗಳೂರು, ಪುಟ ೧೨೩.
೧೮. ಅದೇ.
೧೯. ಮೈಸೂರ್ ಅಡ್ಮಿನಿಸ್ಟೇಷನ್ ರಿಪೋರ್ಟ್, ಪೂರ್ವೋಕ್ತ ಪುಟ ೬೫.
೨೦. ಅದೇ.
೨೧. ಅದೇ.
೨೨. ಅದೇ.
* ೧೮೯೮ರಲ್ಲಿ ಹಾಸನ ಜಿಲ್ಲೆಯಲ್ಲಿ ಕೇವಲ ೬ ಮಂದಿಗೆ ಪ್ಲೇಗಿನ ಸೋಂಕು ತಗುಲಿತ್ತು. ಆದರೆ ಸುಮಾರು ೧೯೩೮ರ ಸಮಯದಲ್ಲಿ ಹಾಸನ ಜಿಲ್ಲೆಯ ಅನೇಕ ಕುಟುಂಬಗಳಲ್ಲಿ ಪ್ಲೇಗು ಸೋಂಕು ಉಂಟಾಗಿ ಹಲವಾರು ಸಾವು ನೋವುಗಳಾದವು. ಅನೇಕರ ಬದುಕು ದುರಂತವಾಯಿತು. ಸುಪ್ರಸಿದ್ಧ ಕಾದಂಬರಿಕಾರರಾದ ಶ್ರೀ ಎಸ್.ಎಲ್. ಭೈರಪ್ಪನವರ ಕುಟುಂಬದಲ್ಲಿಯೂ ಕೆಲವರು ಪ್ಲೇಗಿನಿಂದ ಸಾವಿಗೆ ಬಲಿಯಾದರೆಂದು ತಿಳಿದು ಬರುತ್ತದೆ. ಅವರ ಕಾದಂಬರಿ 'ಗೃಹಭಂಗ' ದಲ್ಲಿಯೂ ಹಾಸನ ಜಿಲ್ಲೆಯಲ್ಲಿ ಕಾಣಿಸಿಕೊಂಡ ಪ್ಲೇಗು ಸಾಂಕ್ರಾಮಿಕದಿಂದ ಅನೇಕ ಬಡಕುಟುಂಬಗಳು ಅನುಭವಿಸಿದ ಕಷ್ಟಗಳು, ಸಾವು–ನೋವು, ಹೊಟ್ಟೆಗಿಲ್ಲದೆ ಪಟ್ಟ ಹಾಹಾಕಾರಗಳ ಬಗ್ಗೆ ವಿವರವಾದ ಚಿತ್ರ ನೀಡಲಾಗಿದೆ. ಪ್ಲೇಗು ಸಂಪೂರ್ಣವಾಗಿ ನಮ್ಮ ದೇಶದಲ್ಲಿ ಕಣ್ಮರೆಯಾದರೂ ೧೯೯೪ರಲ್ಲಿ ಗುಜಾರಾತ್ ರಾಜ್ಯದ ಸೂರತ್‌ನಲ್ಲಿ ಕೆಲವರಿಗೆ ಪ್ಲೇಗು ಸೋಂಕು ತಗುಲಿದ್ದನ್ನು ಇಲ್ಲಿ ನೆನೆಯಬಹುದು.
೨೩. ಮೈಸೂರು ಅಡ್ಮಿನಿಸ್ಟೇಷನ್ ರಿಪೋರ್ಟ್, ಪೂರ್ವೋಕ್ತ.
೨೪. ಅದೇ.
೨೫. ಮೈಸೂರ್ ಸೆನ್ಸಸ್ ಕಂಪ್ಯಾರಿಟೀವ್ ಟೇಬಲ್ಸ್ ೧೮೮೧–೧೯೪೧.
೨೬. ರಿಪೋರ್ಟ್ ಆನ್ ದಿ ಪ್ಲೇಗ್ ಆಪರೇಷನ್ಸ್ ಇನ್ ದಿ ಮೈಸೂರು ಸ್ಟೇಟ್ ಎಕ್ಸ್‌ಕ್ಲೂಡಿಂಗ್ ದಿ ಸಿವಿಲ್ ಎಂಡ್ ಮಿಲಿಟರಿ ಸ್ಟೇಷನ್ ಆಫ್ ಬೆಂಗಳೂರ್, ಪೂರ್ವೋಕ್ತ ಪುಟ ೪.
೨೭. ಮೈಸೂರ್ ಅಡ್ಮಿನಿಸ್ಟ್ರೇಷನ್ ರಿಪೋರ್ಟ್, ಪೂರ್ವೋಕ್ತ.
೨೮. ಅದೇ.
೨೯. ಅದೇ.
೩೦. ಎಂ.ಶಾಮರಾವ್, ಮಾಡ್ರನ್ ಮೈಸೂರ್, ೧೯೩೬, ಪುಟ ೧೮೩.

ಸ್ವಾತಂತ್ರ್ಯಪೂರ್ವ ದಕ್ಷಿಣ ಕನ್ನಡದಲ್ಲಿ ಸಮಾಜವಾದ ಮತ್ತು ಕಾಂಗ್ರೆಸ್ ಸಿದ್ಧಾಂತದ ಸಂಯೋಜನೆ

ಪಿ. ಸೀತಾರಾಮ*

ಸ್ವಾತಂತ್ರ್ಯಪೂರ್ವ ಭಾರತದಲ್ಲಿ ವಿವಿಧ ಪಕ್ಷಗಳು ಬೇರೆ ಬೇರೆ ನಿಲುವುಗಳೊಂದಿಗೆ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ನೇತೃತ್ವದಡಿಯಲ್ಲಿ ತನ್ನ ಅಸ್ಮಿತೆಯೊಂದಿಗೆ ಕಾರ್ಯ ನಿರ್ವಹಿಸುತ್ತಿತ್ತು. ಭಾರತೀಯ ಕಮ್ಯುನಿಸ್ಟ್ ಪಕ್ಷವು (ಸಿಪಿಐ) ೧೯೩೬ರಿಂದ ಕಾಂಗ್ರೆಸ್ ಪಕ್ಷದ ಭಾಗವಾಗಿದ್ದು, ೧೯೪೫ರಲ್ಲಿ ಕಾಂಗ್ರೆಸ್ ನಿಯಮಗಳನ್ನು ಸ್ವೀಕರಿಸಲು ವಿರೋಧಿಸಿ ಕಾಂಗ್ರೆಸ್‌ನ್ನು ತ್ಯಜಿಸುತ್ತದೆ. ಪ್ರಜಾ ಸೋಷಿಯಲಿಸ್ಟ್ ಪಾರ್ಟಿ (ಪಿಎಸ್‌ಪಿ) ೧೯೪೮ರವರೆಗೆ ಕಾಂಗ್ರೆಸ್ ಭಾಗವಾಗಿದ್ದುಕೊಂಡು ಕಾರ್ಯನಿರ್ವಹಿಸಿ, ಕಾಂಗ್ರೆಸ್ ಬಂಡವಾಳಶಾಹಿಗಳಿಗೆ ಬೆಂಬಲಿಸುತ್ತದೆ ಎಂದು ಆರೋಪಿಸಿ ೧೯೪೮ರಲ್ಲಿ ಹೊರಬಂದು ಸ್ವತಂತ್ರ ಪಕ್ಷವಾಗಿ ರೂಪಿತಗೊಳ್ಳುತ್ತದೆ.

ವಿವಿಧ ಪಕ್ಷಗಳ ಸಂಯೋಜನೆಯನ್ನು ಸ್ವಾತಂತ್ರ್ಯಪೂರ್ವ ದಕ್ಷಿಣ ಕನ್ನಡದ ರಾಜಕೀಯ ಕನ್ನಡ ಪತ್ರಿಕೆಗಳಲ್ಲಿ ಗುರುತಿಸಬಹುದಾಗಿದೆ. ೧೯೩೫ರ ಭಾರತ ಸರ್ಕಾರ ಕಾಯ್ದೆಯು ಅಖಿಲಾ ಭಾರತ ಒಕ್ಕೂಟವನ್ನು ರಚನೆ ಮಾಡುವ ಉದ್ದೇಶಗಳೊಂದಿಗೆ ದ್ವಿಸದನ ಪದ್ಧತಿ ಸರ್ಕಾರ ರಚನೆಗೆ ಅವಕಾಶ ಮಾಡಿಕೊಡುತ್ತದೆ. ಈ ಸಂದರ್ಭದಲ್ಲಿ ಕಾಂಗ್ರೆಸ್ ನೇತೃತ್ವದಡಿಯಲ್ಲಿ ಸಮಾಜವಾದಿ ಪಕ್ಷಕಾರ್ಯ ನಿರ್ವಹಿಸುತ್ತದೆ. ದಕ್ಷಿಣಕನ್ನಡದ ಪತ್ರಿಕೆಗಳು, ಪತ್ರಿಕಾ ಸಂಪಾದಕರು ಕಾಂಗ್ರೆಸ್ ಮತ್ತು ಸಮಾಜವಾದಿ ಪಕ್ಷದ ಸಿದ್ಧಾಂತವನ್ನು ತಮ್ಮ ಭಾಗವಾಗಿಸಿಕೊಂಡಿದ್ದರು. ಹಾಗೆಯೇ ಸಮಾಜವಾದಿ ಮತ್ತು ಕಾಂಗ್ರೆಸ್ ಸಿದ್ಧಾಂತವಾದಿಗಳು ತಮ್ಮ ಅಭಿಪ್ರಾಯಗಳ ಪ್ರಚಾರಕ್ಕೆ ಹಾಗೂ ಕಾರ್ಯಶೀಲತೆಗೆ ಪತ್ರಿಕೆಗಳನ್ನು ಅವಲಂಬಿಸಿಕೊಂಡಿದ್ದರು.

ನವಯುಗ ಪತ್ರಿಕೆಯ ಸಂಪಾದಕರಾದ ಕೆ.ಕೆ. ಶೆಟ್ಟಿಯವರು ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಕಾರ್ಯಕಾರಿ ಮಂಡಳಿಯ ಜನರಲ್ ಸೆಕ್ರೆಟರಿಯಾಗಿದ್ದು ಸಮಾಜವಾದಿ ಪಕ್ಷದ ನಾಯಕರಾದ ಕಮಲಾದೇವಿ ಚಟ್ಟೋಪಾಧ್ಯಾಯರ ಬೆಂಬಲಿಗರಾಗಿರುತ್ತಾರೆ. ಇವರ ನೇತೃತ್ವದಲ್ಲಿ ಪ್ರಚಾರದಲ್ಲಿ ತೊಡಗುತ್ತಾರ. ೧೯೩೫ರ ಭಾರತ ಸರ್ಕಾರ ಕಾಯ್ದೆಯಂತೆ ೧೯೩೭ರ ಚುನಾವಣೆಗೆ ಸ್ಪರ್ಧಿಗಳನ್ನು ನೇಮಿಸುವಂತಹ ಸಂದರ್ಭದಲ್ಲಿ ಸಮಾಜವಾದಿ ಶ್ರೀ ಸುಬ್ಬಣ್ಣ ಶೆಟ್ಟರ ಆಯ್ಕೆ ಮಾಡಲಾಗುತ್ತದೆ. ಇದಕ್ಕೆ ಕಾಂಗ್ರೆಸ್‌ನ ಹಲ್ಸನಾಡ್ ಸೂರಪ್ಪಯ್ಯನವರು ಅಸಮಾಧಾನ ವ್ಯಕ್ತಪಡಿಸುತ್ತಾ, 'ಜಿಲ್ಲಾ ಕಾಂಗ್ರೆಸ್ ಕಮಿಟಿಯು ಕಮಲಾದೇವಿಯವರ ಕೈಗೊಂಬೆ ಆಯಿತು ಎನ್ನುತ್ತಾರೆ.[೧] ಇದಕ್ಕೆ ಕಮಲಾದೇವಿಯವರು, ನವಯುಗ ಪತ್ರಿಕೆಯ ಮುಖಾಂತರ ಉತ್ತರವನ್ನು ಕೊಡುತ್ತಾ, 'ಶ್ರೀಸೂರಪ್ಪಯ್ಯನವರು ಸಮಾಜವಾದಿ ಪಕ್ಷದ ವಿಷಯದ ಕುರಿತು ತನ್ನ ಅಭಿಪ್ರಾಯವನ್ನು ಪ್ರಕಟಿಸುವಲ್ಲಿ ಆ ಪಕ್ಷದ ವಿಷಯ ಅವರಿಗೆ ಏನೇನೋ ತಿಳಿದಿಲ್ಲವೆಂಬುದು ವ್ಯಕ್ತವಾಗುವುದು... ಸಮಾಜವಾದಿ ಪಕ್ಷವು ಕೊಂಗ್ರಸ್ಸಿನೊಳಗಿದ್ದು ತನ್ನ ಕಾರ್ಯ ಕಲಾಪವನ್ನು ನಡೆಸುತ್ತದೆಯೆಂಬುದರ ಅರ್ಥವೇ ಸಂಪೂರ್ಣ ರಾಜಕೀಯ ಸ್ವಾತಂತ್ರ್ಯಾರ್ಜನೆಯು ಈ ಪಕ್ಷದವರ ಮೊತ್ತಮೊದಲಿನ ಧ್ಯೇಯವೆಂದೂ, ಬದಲು ಸಮಾಜಸತ್ತಾತ್ಮಕ ರಾಜಾಧಿಕಾರ ಸ್ಥಾಪನೆಯಲ್ಲವೆಂಬುದು ಸ್ಪಷ್ಟವಿದೆ'[೨] ಎಂಬುದಾಗಿ ಪ್ರತ್ಯುತ್ತರಿಸುತ್ತಾರೆ. ಇದಕ್ಕೆ ಪೂರಕವಾಗಿ ನವಯುಗ ಪತ್ರಿಕೆಯ ಸಂಪಾದಕರಾದ ಕೆ.ಕೆ. ಶೆಟ್ಟಿಯವರು, 'ಸೂರಪ್ಪಯ್ಯನವರು ಆಯ್ಕೆಯಾಗದೆ ಇರೋದಕ್ಕೆ ನನ್ನನ್ನೇ ಹೊಣೆಗಾರರನ್ನಾಗಿ ಮಾಡಬೇಕು. ಇತ್ತಿತ್ತಲಾಗಿ ಅವರ (ಸೂರಪ್ಪಯ್ಯ) ವರ್ತನೆಗಳು ಸರಿ ಇಲ್ಲದ ಕಾರಣ ನಾನು ಅವರ ಪರವಾಗಿ ಜನರಲ್ ಸೆಕ್ರೆಟರಿಯಾಗಿ ಓಟು ಮಾಡಲಿಲ್ಲ' ಎನ್ನುತ್ತಾರೆ. ಹಾಗೆಯೇ ಕೆ.ಕೆ ಶೆಟ್ಟಿಯವರು ಸಮಾಜವಾದಿ ಕಮಲಾದೇವಿ ಚಟ್ಟೋಪಾಧ್ಯಯರ ನೇತೃತ್ವದಲ್ಲಿ ಪ್ರಚಾರವನ್ನು ನಡೆಸುತ್ತಾರೆ.

---

* ಅತಿಥಿ ಉಪನ್ಯಾಸಕರು, ಪಲ್ಲೋಡಿ ಮನೆ, ಐವತ್ತೊಕ್ಲು ಗ್ರಾಮ, ಪಂಜ ಅಂಚೆ, ಸುಳ್ಯ ತಾಲ್ಲೂಕು, ಮೊ. ೯೪೮೩೨ ೦೧೭೮೫

ಕಾಂಗ್ರೆಸ್ ಚುನಾವಣೆಯಲ್ಲಿ ಗೆದ್ದ ನಂತರ, ಸಮಾಜವಾದಿವಾದಿಯವರು ಅಧಿಕಾರ ಸ್ವೀಕಾರವನ್ನು ವಿರೋಧಿಸಿದ್ದರು. ಶ್ರೀಮತಿ ಕಮಲಾದೇವಿಯವರು '೧೯೩೫ರ ಭಾರತ ಸರ್ಕಾರದ ಪ್ರಾಂತಿಕ ಸ್ವಾತಂತ್ರ್ಯ ಬರಿಯ ಕಣ್ಣುಕಟ್ಟು' ಅಂತ ಹೇಳುತ್ತಾ, 'ಕಾಂಗ್ರೆಸ್‌ನವರು ಮಂತ್ರಿಗಳಾದುದರಿಂದ ದೇಶದ ರಾಜಕೀಯ ಪರಿಸ್ಥಿತಿಯಲ್ಲಿ ಅಂತಹ ಮಾಪಾಟೇನು ಆಗಿರುವುದಿಲ್ಲ'[೩] ಎನ್ನುತ್ತಾರೆ. ಕಮಲಾದೇವಿಯವರು ಕಾಂಗ್ರೆಸ್‌ನ್ನು ಬಡಬಗ್ಗರ, ಮಜೂರರ ಮತ್ತು ಬೇಸಾಯಗಾರರ ಸಂಸ್ಥೆಯನ್ನಾಗಿ ಮಾಡಬೇಕು ಎಂಬ ಅಭಿಪ್ರಾಯದೊಂದಿಗೆ ಆಗ್ರಹಿಸುತ್ತಿದ್ದರು.

ಕಮಲಾದೇವಿಯವರ ನೇತೃತ್ವದಲ್ಲಿ, ಕಾಂಗ್ರೆಸಿನ ಶಿಸ್ತು ನಿಯಮಗಳಿಗೆ ವಿರೋಧ ಮಾಡದಂತೆ ಕಾಂಗ್ರೆಸ್ ಬಲಗೊಳಿಸುವ ಕಾರ್ಯ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾಂಗ್ರೆಸ್ ಸೋಷಿಯಲಿಸ್ಟ್ ಪಕ್ಷದಿಂದ ನಡೆಯುತ್ತದೆ. ಉದಾಹರಣೆಗೆ ೨೧/೮/೧೯೩೭ರಂದು ಉಡುಪಿಯ ಐಡಿಯಲ್ ಸ್ಟೋರ್‌ನ ಮಾಳಿಗೆಯಲ್ಲಿ ೨೦ ಮಂದಿ ತರುಣರು ಸದಸ್ಯರಾಗಿ ಸೇರುವುದರೊಂದಿಗೆ ಸೋಷಿಯಲಿಸ್ಟ್ ತಂಡವನ್ನು ರಚನೆ ಮಾಡಿ ಕಾರ್ಯ ನಿರ್ವಹಿಸಲಾಗುತ್ತದೆ. ತುಳುನಾಡು ಪ್ರೆಸ್‌ನಲ್ಲಿ ಅಲ್ಲಿಯ ಕೆಲಸಗಾರರ ಸಂಘ ರಚನೆಯನ್ನು ಶ್ರೀಪಣಿಯಾಡಿಯವರು ಒಪ್ಪಿಕೊಳ್ಳುತ್ತಾ ಕಮಲಾದೇವಿಯವರಿಗೆ ಕೃತಜ್ಞರಾಗುತ್ತಾರೆ.

ಕೇರಳ ಎಡಪಕ್ಷ ಸ್ವಾಧೀನವುಳ್ಳ ಕಾಂಗ್ರೆಸ್‌ನ ಹಿನ್ನೆಲೆಯ ಹೋರಾಟದ 'ಕಯ್ಯೂರು ಕೈದಿಗಳಿಗೆ ಜೀವದಾನ ಮಾಡಬೇಕು' ಎಂಬ ಚಳುವಳಿ ೧೯೪೨ರಲ್ಲು ಮುಂದುವರಿಯುತ್ತದೆ. ಇದರ ಹಿನ್ನೆಲೆಯು ಕಿಸಾನ್ ಸಂಘ, ಟ್ರೇಡ್ ಯೂನಿಯನ್ ಕಮ್ಯೂನಿಸ್ಟ್ ಪಾರ್ಟಿ ಮೊದಲಾದ ಸಂಘಟನೆಗಳನ್ನು ಸರ್ಕಾರವು ನಿಯಂತ್ರಿಸಿದಾಗ ಕೇರಳ ಎಡಪಕ್ಷ ಸ್ವಾಧೀನವುಳ್ಳ ಕಾಂಗ್ರೆಸ್ ೧೯೪೦ ಸಪ್ಟೆಂಬರ್ ೧೩ ದಿನವನ್ನು 'ಮರ್ಧನ ವಿರೋಧ ದಿನ' ವೆಂದು ಆಚರಿಸಬೇಕೆಂದು ಆಹ್ವಾನ ಕೊಡುತ್ತದೆ. ಈ ಹೋರಾಟದ ಮುಂದಾಳು ಇ.ಎಮ್.ಎಸ್. ಕೃಷ್ಣ ಪಿಳ್ಳೆಯವರನ್ನು ತಿರುವಾಂಕೂರಿನಲ್ಲಿ ಬಂಧಿಸಿ ಎಲ್ಲಿ ಕೊಂಡು ಹೋದರೆಂಬ ಮಾಹಿತಿಯಿಲ್ಲದೆ, ಜನರು ಸರ್ಕಾರದ ದುಷ್ಟ ನೀತಿಯನ್ನು ಪ್ರತಿಭಟಿಸುತ್ತಾರೆ. ಇದು ಕಾಸರಗೋಡು ತಾಲ್ಲೂಕಿನ ಕಯ್ಯೂರುನಲ್ಲೂ ಕಾಣಿಸಿಕೊಳ್ಳುತ್ತದೆ. ಕಯ್ಯೂರುನಲ್ಲಿ ಮೆರವಣಿಗೆ ಹೋಗುತ್ತಿರುವಾಗ ಅಲ್ಲಿ ಬಂದ ನೀಲೇಶ್ವರ ರೆವಿನ್ಯು ಇನ್ಸ್‌ಪೆಕ್ಟರ್ ಬಾಲಕೃಷ್ಣ ನಾಯರ್ ಹಾಗೂ ಅವರ ಪೇದೆಗೆ ದಾರಿ ಬಿಡಲಿಲ್ಲವೆಂದು ಪ್ರಮುಖ ಕಾರ್ಯಕರ್ತರ ಮೇಲೆ ದೋಷಾರೋಪಣೆಗಳನ್ನು ಮಾಡಿ ರಿಪೋರ್ಟ್ ಮಾಡುತ್ತಾರೆ. ಹಾಗಾಗಿ ೧೯೪೧ ಮಾರ್ಚ್ ೨೬ರಂದು ರಾತ್ರಿ ೨ ಗಂಟೆಗೆ ಅಂದಿನ ಹೊಸದುರ್ಗ ಸಬ್‌ಇನ್ಸ್‌ಪೆಕ್ಟರ್ ನಿಕೋಲಸ್ ಕೆಲವೇ ಕೆಲವು ಪೊಲೀಸರೊಂದಿಗೆ ಮನೆಗೆ ನುಗ್ಗಿ ಹೆಂಗಸರು ಮಕ್ಕಳೆನ್ನದೇ ಹಿಂಸಾಚಾರ ನಡೆಸುತ್ತಾರೆ.

ಮಾರ್ಚ್ ೨೮, ೧೯೪೧ರಂದು ಈ ಮರ್ಧನವನ್ನು ಪ್ರತಿಭಟಿಸಲು ಸಂಜೆ ೪ ಗಂಟೆಗೆ ಮೆರವಣಿಗೆಯೊಂದು ಹೋಗುತ್ತಿರುವಾಗ, ಮದ್ಯದಂಗಡಿಯಿಂದ ಪೊಲೀಸ್ ಕಾನ್‌ಸ್ಟೇಬಲ್ ಸುಬ್ರಾಯರು ಹೊರಟು ಬಂದರು. ಮಾರ್ಚ್ ೨೬ ರಂದು ಜನರನ್ನು ಮರ್ಧಿಸಿದ ಪ್ರಮುಖರಲ್ಲಿ ಇವನೆಂದು, ಜನ ಸಿಟ್ಟುಕೊಂಡು ಕೆಂಬಾವುಟವನ್ನು ಪೊಲೀಸನ ಕೈಯಲ್ಲಿ ಹಿಡಿಸುತ್ತಾರೆ. ಸ್ವಲ್ಪ ದೂರ ಹೋದ ಮೇಲೆ ಬಾವುಟದ ಕೋಲಿನಿಂದ ಜನರಿಗೆ ಹೊಡೆದಾಗ, ಜನರು ಆತನನ್ನು ಹಿಡಿದುಕೊಂಡಾಗ ಜನರಿಂದ ತಪ್ಪಿಸಿ ಓಡಿ ಹೊಳೆಗೆ ಹಾರುತ್ತಾರೆ. ಮದ್ಯದಿಂದ ಅಮಲುಗೊಂಡಿರುವ ಕಾನ್‌ಸ್ಟೇಬಲ್‌ನು ಈಜಾಡಲಾಗದೆ ಸತ್ತು ಹೋಗುತ್ತಾನೆ. ಇದರ ಆಪಾದನೆ ಆ ಹೋರಾಟಗಾರರ ಮೇಲೆ ಬರುತ್ತದೆ. ಇದರಲ್ಲಿ ೬೪ ಮಂದಿಯನ್ನು ಬಂಧಿಸಿ ವಿಚಾರಣೆಗೆ ಗುರಿಪಡಿಸಿ ಕೆಲವರಿಗೆ ೨, ೩ ವರ್ಷಗಳ ಶಿಕ್ಷೆಗೆ ಗುರಿಪಡಿಸಿದರೆ ನಾಲ್ಕು ಮಂದಿಗೆ ಗಲ್ಲು ಶಿಕ್ಷೆಯಾಗುತ್ತದೆ. ಇದರ ಕುರಿತಂತೆ ಪತ್ರಿಕೆ ಬೆಳಕು ಚೆಲ್ಲುತ್ತದೆ. ಇದನ್ನು ರಾಷ್ಟ್ರಬಂಧು ಪತ್ರಿಕೆಯು 'ಕಯ್ಯೂರು ಕೈದಿಗಳಿಗೆ ಜೀವದಾನ' ಎಂಬ ಶೀರ್ಷಿಕೆಯಡಿಯಲ್ಲಿ ಪ್ರಕಟಿಸುತ್ತದೆ.[೪] ಇದರಲ್ಲಿ ಮದ್ರಾಸ್ ಮತ್ತು ಕೇಂದ್ರ ನ್ಯಾಯ ವಿಧಾಯಕ ಸಭೆಗಳ ಸದಸ್ಯರಾದ ಶ್ರೀಯುತ ಕೆ.ಆರ್. ಕಾರಂತ, ಎ.ಬಿ. ಶೆಟ್ಟಿ, ವೆಂಕಟ್ರಾಯ ಬಾಳಿಗ, ಕೆ.ಬಿ. ಜಿನರಾಜ ಹೆಗ್ಡೆ, ಕೆ. ಈಶ್ವರ, ಮಹಮ್ಮದ್ ಹಸನ್ ಸಾಹೇಬ್‌ರವರು 'ಮರಣದಂಡನೆ ತಪ್ಪಿಸಬೇಕು' ಎಂಬುದಾಗಿ ಕೇಳಿಕೊಳ್ಳುತ್ತಾರೆ.[೫]

ರಾಷ್ಟ್ರಬಂಧು ಪತ್ರಿಕೆ ಈ ಘಟನೆಯ ಕುರಿತಂತೆ ಆಸಕ್ತಿವಹಿಸಿದ್ದು ಪ್ರಮುಖ ನಾಯಕರುಗಳ ಅಭಿಪ್ರಾಯ ಸಂಗ್ರಹ ಮಾಡುತ್ತದೆ. ಶ್ರೀಮತಿ ಕಮಲಾದೇವಿಯವರು ರಾಷ್ಟ್ರಬಂಧು ಪ್ರತಿನಿಧಿಯೊಂದಿಗೆ, ಅವರ್‍ಯಾರು ಏನು ತಪ್ಪು ಮಾಡಿಲ್ಲದ ಕಾರಣ ಅವರ ಮರಣದಂಡನೆಯನ್ನು ರದ್ದುಪಡಿಸಲು ಹೇಳಿಕೆಯನ್ನಿತ್ತರು. ಜಿಲ್ಲಾ ಪತ್ರಿಕೋದ್ಯೋಗಿಗಳ ಸಂಘ, ವಿದ್ಯಾರ್ಥಿಗಳು ಕಯ್ಯೂರಿನ ಕೈದಿಗಳ ಜೀವದಾನ ಜಾಥ ನಡೆಸಿ ಕೇಳಿಕೊಳ್ಳುತ್ತಾರೆ.[೬] ಕಯ್ಯೂರು ಕೈದಿಗಳಿಗೆ ಜೀವದಾನ ಕೊಡುವ ಚಳವಳಿಯು ಕೇರಳದಲ್ಲಿ ಆರಂಭಗೊಂಡಿರುವುದನ್ನು ಪತ್ರಿಕೆಯು ಪ್ರಕಟಿಸುತ್ತದೆ.[೭] ಶ್ರೀ ಸುಬ್ಬಣ್ಣ ಶೆಟ್ಟರು, ಕಯ್ಯೂರು ಕೈದಿಗಳಿಗೆ ಜೀವದಾನ ಮಾಡಬೇಕೆಂದು ಕೈಗೊಂಡ ನಿರ್ಣಯವು ಎಂ.ಡಿ. ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ಜರುಗಿದ ಜಿಲ್ಲಾ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ಸ್ವೀಕರಿಸಲ್ಪಡುತ್ತದೆ.

ಕಯ್ಯೂರು ಜೀವ ರಕ್ಷಾ ಜಾಥಾ ಎಂಬ ಹೆಸರಿನ ಕಿಸಾನರ ಮೆರವಣಿಗೆಯೊಂದು ಕಯ್ಯೂರು ಕೈದಿಗಳನ್ನು ಕಾಪಾಡುವುದರ ಕುರಿತು ಅವಶ್ಯವಿರುವ ಯತ್ನಗಳನ್ನು ಮಾಡಲು ತಾ: ೧೧-೦೮-೧೯೪೨ ರಂದು ಜಾಥಾ ಹೊರಟಿತು ಎಂಬ ಮಾಹಿತಿಯನ್ನು ರಾಷ್ಟ್ರಬಂಧು ಪತ್ರಿಕೆ ಕೊಡುತ್ತದೆ.[೮] ಈ ಪ್ರಕರಣದ ಕುರಿತಂತೆ ಪತ್ರಿಕೆಯೂ ನಿರಂತರವಾದ ಮಾಹಿತಿಯನ್ನು ಕೊಡುತ್ತದೆ. ಇದರ ಕುರಿತಂತೆ ಕೇರಳ, ದಕ್ಷಿಣ ಕನ್ನಡದಲ್ಲಿ ನಿರಂತರ ಜಾಥಾಗಳು, ಚಳುವಳಿ ನಡೆಯುತ್ತವೆ ಎಂಬುದನ್ನು ಪತ್ರಿಕೆಗಳಿಂದ ತಿಳಿದುಕೊಳ್ಳಬಹುದು. ಹಾಗಿದ್ದರೂ ೧೯೪೩ ಮಾರ್ಚ್ ೨೯ರಂದು ಬೆಳಿಗ್ಗೆ ೫ ಘಂಟೆಗೆ ಅಪ್ಪು ಪೊಡೊರ ಕುಂಞಂಬು, ಕೊಯಿತಟ್ಟಿಲ್ ಚಿರುಕಂಡನ್, ಪಳ್ಳಿಕಲ್ ಅಬ್ಬುಬಕರ್ ಇವರಿಗೆ ಮರಣದಂಡನೆ ವಿಧಿಸಲಾಗುತ್ತದೆ.[೯]

೧೯೪೨ರ ಭಾರತ ಬಿಟ್ಟು ತೊಲಗಿ ಸ್ವಾತಂತ್ರ್ಯ ಹೋರಾಟದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಸಮಾಜವಾದಿ ಕಮ್ಯುನಿಸ್ಟರು ಸಕ್ರಿಯವಾಗಿರುವುದನ್ನು ಗುರುತಿಸಬಹುದು. ದಕ್ಷಿಣ ಕನ್ನಡ ಜಿಲ್ಲೆಯ ಕಮ್ಯುನಿಸ್ಟರು ರಾಷ್ಟ್ರದ ಧುರೀಣರ ಬಿಡುಗಡೆಯಾಗಬೇಕೆಂದು ಸೂಚಿಸುತ್ತಾರೆ.[೧೦] ಸ್ವದೇಶಾಭಿಮಾನಿ ಪತ್ರಿಕೆಯು, ಮಂಗಳೂರಿನಲ್ಲಿ ಕಮ್ಯೂನಿಸ್ಟ್ ಪಾರ್ಟಿ ಶಾಖೆಯು ಶ್ರೀಕೃಷ್ಣ ಶೆಟ್ಟಿ, ಕೇಶವ ಕಾಮತ್, ಹರಿದಾಸ ಮೊದಲಾದ ನಾಯಕರೊಂದಿಗೆ ಮೆರವಣಿಗೆ ನಡೆಸಿ ಅವರು ರಾಷ್ಟ್ರೀಯ ಸರಕಾರ ರಚನೆಗೆ ಬೆಂಬಲ ಕೊಟ್ಟಿರುವುದನ್ನು ತಿಳಿಸುತ್ತದೆ.[೧೧] ಇದರೊಂದಿಗೆ ಕಮ್ಯೂನಿಸ್ಟ್ ನಾಯಕರಾದ ಶ್ರೀ ಕೆ. ಕೇಶವ ಕಾಮತ್, ಬಿ.ವಿ. ಕಕ್ಕಿಲಾಯ, ವಿ.ಕೆ ನಾಯರ್‌ರವರ ಬಂಧನ, ವಿಚಾರಣೆ, ಬಿಡುಗಡೆ ಕುರಿತಂತೆ ಪತ್ರಿಕೆಗಳು ನಿರಂತರವಾದ ಮಾಹಿತಿ ಕೊಡುತ್ತದೆ.

ಸ್ವಾತಂತ್ರ್ಯ ದೊರಕಿದ ಸಂದರ್ಭದಲ್ಲಿ, ಕಾಂಗ್ರೆಸ್ ಪ್ರಣೀತವಾದ ಅಭಿಪ್ರಾಯಕ್ಕೆ ಹೆಚ್ಚು ಒತ್ತು ಕೊಡುತ್ತಿದ್ದ ಸ್ವದೇಶಾಭಿಮಾನಿ ಪತ್ರಿಕೆ, 'ಸ್ವರಾಜ್ಯವು ನಿಜವಾದ ಸ್ವರಾಜ್ಯವಾಗಬೇಕಾದರೆ ಅದು ಸಮತಾವಾದೀ ರಾಷ್ಟ್ರವಾಗಬೇಕೆಂಬುದು ನಿರ್ವಿವಾದ ಸಂಗತಿ'[೧೨] ಎನ್ನುತ್ತದೆ.

ಸ್ವಾತಂತ್ರ್ಯಪೂರ್ವ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿರೋಧ, ಸಮ್ಮತಿ, ಸೈದ್ಧಾಂತಿಕ ಸಂಘರ್ಷಗಳ ಒಳಗೊಳ್ಳುವಿಕೆಯೊಂದಿಗೆ ಪತ್ರಿಕೆಗಳಲ್ಲಿ ಪ್ರತಿಫಲಿಸುವುದರೊಂದಿಗೆ, ಸಮಾಜವಾದ ಮತ್ತು ಕಾಂಗ್ರೆಸ್ ಸಿದ್ಧಾಂತದ ಸಂಯೋಜನೆಯನ್ನು ಗುರುತಿಸಬಹುದು. ಇವುಗಳೆಲ್ಲವೂ ಸ್ವಾತಂತ್ರ್ಯ ಪಡೆಯುವಿಕೆಯ ಮುಖ್ಯ ಗುರಿಯ ಈಡೇರಿಕೆಗಾಗಿ ಕಾರ್ಯ ನಿರ್ವಹಿಸುತ್ತದೆ.

ಅಡಿ ಟಿಪ್ಪಣಿಗಳು

೧. ನವಯುಗ, ಸಂಪುಟ ೧೭, ಸಂಚಿಕೆ ೩೭, ೧೯ ಮೇ ೧೯೩೮, ಪು. ೧೭.

೨. ನವಯುಗ, ಸಂಪುಟ ೧೭, ಸಂಚಿಕೆ ೩೭, ೧೯ ಮೇ ೧೯೩೮, ಪು. ೧೭.

೩. ...ಅದೇ..., ಸಂಪುಟ ೧೦, ಸಂಚಿಕೆ ೫೧, ೨೬ ಆಗೋಸ್ಟ್ ೧೯೩೭, ಪು. ೫.

೪. ರಾಷ್ಟ್ರಬಂಧು, ಸಂಪುಟ ೧೫, ಸಂಚಿಕೆ ೧೪, ೩ ಆಗಸ್ಟ್ ೧೯೪೨, ಪು. ೩.

೫. ...ಅದೇ... ೬. ...ಅದೇ... ೭. ...ಅದೇ...

೮. ...ಅದೇ... ಸಂಚಿಕೆ ೧೭, ೨೩ ಆಗಸ್ಟ್ ೧೯೪೨, ಪು. ೩. ೯. ಅರುಣ, ೦೧-೦೪-೧೯೫೬, ಪು. ೩.

೧೦. ನವಯುಗ, ಸಂಪುಟ ೨೨, ಸಂಚಿಕೆ ೪, ೨೪ ಸಪ್ಟೆಂಬರ್ ೧೯೪೨, ಪು. ೭.

೧೧. ಸ್ವದೇಶಾಭಿಮಾನಿ, ಸಂಪುಟ ೧೭, ಸಂಚಿಕೆ ೩೨, ೧೪ ಆಗಸ್ಟ್ ೧೯೪೨, ಪು. ೮.

೧೨. ...ಅದೇ... ಸಂಪುಟ ೪೧, ಸಂಚಿಕೆ ೩೩, ೧೫ ಆಗಸ್ಟ್ ೧೯೪೭, ಪು. ೧.

ಟಿಪ್ಪುಸುಲ್ತಾನರ ನಿಧನದ ನಂತರ ಅವರ ಕುಟುಂಬದ ಇತಿಹಾಸ

ಮಹಮ್ಮದ್ ಕಲೀಂಉಲ್ಲ*

ಹದಿನೆಂಟನೇ ಶತಮಾನದ ಕೊನೆಯ ಕಾಲುಶತಮಾನದ ಟಿಪ್ಪುಸುಲ್ತಾನರ ಆಳ್ವಿಕೆಯ ಕಾಲವು ಮೈಸೂರು ಸಂಸ್ಥಾನದಲ್ಲಿ ಒಂದು ಪ್ರಗತಿಯ ಹಾಗೂ ಸಂಘರ್ಷದ ಕಾಲವಾಗಿತ್ತು. ಬ್ರಿಟೀಷರ ವಿರುದ್ಧದ ಆತನ ಹೋರಾಟವು ಉಗ್ರವಾದ ಪ್ರತಿಭಟನೆಯಾಗಿತ್ತು. ಬ್ರಿಟೀಷರಿಂದ ಮುಂದೆ ಒದಗಬಹುದಾದ ಅನಾಹುತಗಳ ಬಗ್ಗೆ ಟಿಪ್ಪು ಸಮಕಾಲೀನ ದೊರೆಗಳ ಗಮನಕ್ಕೆ ತಂದರೂ, ಅವರು ಟಿಪ್ಪುಸುಲ್ತಾನನ್ನು ನಂಬಲಿಲ್ಲ. ಆತನ ಮಾತಿಗೆ ಗಮನ ಕೊಡಲಿಲ್ಲ. ಇವರೆಲ್ಲ ಬ್ರಿಟೀಷರ ಕುಟಿಲತೆಗಳಿಗೆ ಬಲಿಯಾಗಿದ್ದರು. ಇವರೊಡನೆ ಟಿಪ್ಪುವಿನ ಆಪ್ತರೂ ಸಹ ಆಮಿಶಗಳಿಗೆ ಒಳಗಾದರು. ಇವರೆಲ್ಲರ ಒಳಸಂಚಿಗೆ ಟಿಪ್ಪುಸುಲ್ತಾನ ಬಲಿಯಾಗಬೇಕಾಯಿತು.

ಶ್ರೀರಂಗಪಟ್ಟಣದ ಕೋಟೆ ಭಾರತದ ಬಲಿಷ್ಠವಾದ ಕೋಟೆಗಳಲ್ಲಿ ಒಂದು. ಆದರೂ ಕೋಟೆಯ ವಾಯುವ್ಯ ದಿಕ್ಕಿನ ಕೋಟೆ ದುರ್ಬಲವಾಗಿದೆ ಎಂಬ ಮಾಹಿತಿಯನ್ನು ಬ್ರಿಟೀಷರಿಗೆ ನೀಡಲಾಗಿತ್ತು. ಆ ಜಾಗದಲ್ಲಿ ಕಾವಲಿದ್ದ ಟಿಪ್ಪುಸುಲ್ತಾನರ ನಂಬಿಕಸ್ತ ಸೇನಾನಿ ಸಯ್ಯದ್‌ಗಫಾರ್‌ನನ್ನು ಬ್ರಿಟೀಷರು ಕೊಂದರು. ಮೀರ್‌ಸಾದಿಖಿನ ಕುಟಿಲತೆಯಿಂದ ಬ್ರಿಟೀಷರು ಅನಾಯಾಸವಾಗಿ ಕೋಟೆಯ ಒಳಹೊಕ್ಕರು. ಅಂದು ವಿಶ್ರಾಂತಿಗಾಗಿ ಅರಮನೆಗೆ ಹೋಗಿದ್ದ ಟಿಪ್ಪುಸುಲ್ತಾನ್ ಮಧ್ಯಾಹ್ನದ ಊಟ ಮಾಡುತ್ತಿದ್ದಾಗ ಆತನಿಗೆ ಸೈದ್‌ಗಫಾರ್ ನಿಧನದ ಸುದ್ದಿ ತಿಳಿಯಿತು. ತಕ್ಷಣ ಆತ ತಾನಿದ್ದ ಸ್ಥಿತಿಯಲ್ಲಿಯೇ ಕತ್ತಿಯೊಡನೆ ರಣರಂಗಕ್ಕೆ ಬಂದು ಯುದ್ಧದಲ್ಲಿತೊಡಗುತ್ತಾನೆ. ಟಿಪ್ಪು ಗಾಯಗೊಂಡು ಅರೆಪ್ರಜ್ಞನೆಯ ಸ್ಥಿತಿಯಲ್ಲಿರುತ್ತಾನೆ. ಒಬ್ಬ ಬ್ರಿಟೀಷ್ ಸೈನಿಕ ಟಿಪ್ಪುವಿನ ನಡುಪಟ್ಟಿಗೆ ಕೈಹಾಕುತ್ತಾನೆ. ಟಿಪ್ಪು ಆತನ ಮೇಲೆ ಕತ್ತಿಯಿಂದ ಪ್ರಹಾರ ಮಾಡುತ್ತಾನೆ. ಆಗ ಆ ಆಂಗ್ಲ ಸೈನಿಕ ಟಿಪ್ಪುವಿನ ತಲೆಗೆ ಗುರಿಯಿಟ್ಟು ಗುಂಡು ಹಾರಿಸುತ್ತಾನೆ. ಗುಂಡು ತಗಲಿದ ಟಿಪ್ಪು ಅಮರನಾಗುತ್ತಾನೆ. ಆದರೆ ಟಿಪ್ಪುವನ್ನು ಕೊಂದವನಿಗೆ ಈತನೇ ಟಿಪ್ಪುಸುಲ್ತಾನ ಎಂದು ತಿಳಿದಿರಲಿಲ್ಲ. ಕೋಟೆಯ ಒಳನುಗ್ಗಿದ ಬ್ರಿಟೀಷ್ ಸೇನೆ, ಟಿಪ್ಪುಸುಲ್ತಾನರು ಅರಮನೆಯಲ್ಲಿ ಅಡಗಿರಬಹುದೆಂದು ತಿಳಿದು ಅರಮನೆಯ ಬಳಿ ಹೋಗುತ್ತದೆ. ಮೇಜರ್ ಅಲನ್‌ನನ್ನು ಶಾಂತಿಯ ಧ್ವಜದೊಡನೆ ಟಿಪ್ಪುವಿನ ಅರಮನೆಯ ಬಳಿ ಕಳುಹಿಸಲಾಯಿತು. ಆತ ಅರಮನೆಯವರು ತಕ್ಷಣ ಶರಣಾಗತರಾದರೆ ಅವರನ್ನು ಜೀವಸಹಿತ ಬಿಡಲಾಗುತ್ತದೆ, ಅವರು ವಿರೋಧಿಸಿದರೆ ಸೂಕ್ತಕ್ರಮ ಕೈಗೊಳ್ಳಲಾಗುವುದು ಎಂಬ ಸಂದೇಶವನ್ನು ಕಳುಹಿಸುತ್ತಾನೆ. ಇದನ್ನು ಕೇಳಿಸಿಕೊಂಡ ಟಿಪ್ಪುವಿನ ದಳಪತಿಯೊಬ್ಬ ಸುಲ್ತಾನರು ಅರಮನೆಯಲ್ಲಿ ಇಲ್ಲವೆಂದೂ, ಶರಣಾಗತಿಗೆ ಅರಮನೆಯವರ ವಿರೋಧವಿದೆಯೆಂದೂ ತಿಳಿಸುತ್ತಾನೆ. ದಳಪತಿಯ ಈ ಮಾತು ನಂಬದೆ ಆಲೆನ್ ರಾಜಕುಮಾರರನ್ನು ಸಂದಿಸಿ ಹೆಬ್ಬಾಗಿಲನ್ನು ತೆರೆಯುವಂತೆ ತಿಳಿಸುತ್ತಾನೆ. ಆಗ ರಾಜಕುಮಾರರು ತಮ್ಮ ತಂದೆ ಅರಮನೆಯಲ್ಲಿ ಇಲ್ಲವೆಂದೂ, ಅವರ ಅಪ್ಪಣೆ ಇಲ್ಲದೆ ಅರಮನೆಯ ಹೆಬ್ಬಾಗಿಲನ್ನು ತೆರೆಯುವುದಿಲ್ಲವೆಂದೂ ತಿಳಿಸುತ್ತಾರೆ. ಆಗ ಅಲೆನ್ ಅರಮನೆಯ 'ಪ್ರತಿಯೊಬ್ಬರ ಪ್ರಾಣ ಮತ್ತು ಗೌರವಗಳನ್ನು ರಕ್ಷಿಸಲಾಗುವುದು' ಎಂಬ ಅಭಯವನ್ನು ನೀಡುತ್ತಾನೆ. ಆಗ ಅರಮನೆಯ ಬಾಗಿಲನ್ನು ತೆರೆಯಲಾಗುತ್ತದೆ. ಅಲೆನ್ ಅರಮನೆಯನ್ನು ತನ್ನ ವಶಕ್ಕೆ ಪಡೆಯುತ್ತಾನೆ. ಬೆಯರ್ಡ್‌ಸಹ ಒಂದು ದೊಡ್ಡ ಪಡೆಯೊಡನೆ ಅರಮನೆಯ ಬಳಿಗೆ ಬರುತ್ತಾನೆ. ಅರಮನೆಯಲ್ಲಿದ್ದ ಎಲ್ಲ ರಾಜಕುಮಾರರು ಅರಮನೆಯಿಂದ ಹೊರಬರುತ್ತಾರೆ. ಬೆಯರ್ಡ್ ಆ ರಾಜಕುಮಾರರನ್ನು ಸ್ವಾಗತಿಸಿ ಹ್ಯಾರಿಸ್ಸಿನ ವಶಕ್ಕೆ ಕಳುಹಿಸುತ್ತಾನೆ.

ಪೂರ್ಣಯ್ಯನವರು ಟಿಪ್ಪುವಿನ ಮಕ್ಕಳಿಗೇ ಪುನಃ ಅಧಿಕಾರ ಕೊಡಬೇಕೆಂದು ಬ್ರಿಟೀಷರಲ್ಲಿ ಕೇಳಿಕೊಳ್ಳುತ್ತಾರೆ. ಆದರೆ ಬ್ರಿಟೀಷರು ಇದಕ್ಕೆ ಒಪ್ಪದೆ ತಮಿಳುನಾಡಿನ ವೆಲ್ಲೂರು ಕೋಟೆಯಲ್ಲಿ ಟಿಪ್ಪುವಿನ ಎಲ್ಲಾ ಸದಸ್ಯರನ್ನೂ ಅವರ ಸೇವಕರೂ ಹಾಗೂ ಅಂಗರಕ್ಷಕರೊಡನೆ ಬಂಧನದಲ್ಲಿ ಇಡಲು ತೀರ್ಮಾನಿಸುತ್ತಾರೆ. ಇದಕ್ಕೆ ಸಂಬಂಧಿಸಿದಂತೆ ವೈಸ್ರಾಯಿ ಲಾರ್ಡ್ ವೆಲ್ಲೆಸ್ಲಿ ತನ್ನ ತಮ್ಮ ಕರ್ನಲ್ವೆಲ್ಲೆಸ್ಲಿಗೆ ಒಂದು ರಹಸ್ಯಪತ್ರವನ್ನು ಬರೆಯುತ್ತಾನೆ. ಆ ಪತ್ರದ ಸಾರಾಂಶವು ಹೀಗಿದೆ.

* ನಿವೃತ್ತ ಶಿಕ್ಷಕ, ಎಂ.ಜಿ. ಕೊಪ್ಪಲು ಕ್ರಾಸ್, ಮಂಡ್ಯ ರಸ್ತೆ, ನಾಗಮಂಗಲ, ಮೊ. ೮೭೬೨೨೮೩೫೪೩

"ಟಿಪ್ಪುವಿನ ಕುಟುಂಬವನ್ನು ವೆಲ್ಲೂರಿಗೆ ಸಾಗಿಸಲು ನೀನು ಸೂಕ್ತವಾದ ಕ್ರಮಗಳನ್ನು ಕೈಗೊಳ್ಳಬಹುದು. ಈ ಕರುಣಾಜನಕವಾದ ಕೆಲಸವನ್ನು ನಿರ್ವಹಿಸುವ ವ್ಯಕ್ತಿ ಮಾನವೀಯ ಗುಣಗಳಿರುವ ವ್ಯಕ್ತಿಯಾಗಿರಬೇಕು. ಅಂತಹ ಗುಣಗಳು ನಿನ್ನನ್ನು ಬಿಟ್ಟು ಯಾರಲ್ಲೂ ನಾನು ನಿರೀಕ್ಷಿಸಲು ಸಾಧ್ಯವಿಲ್ಲ. ನಾನು ಕರ್ನಲ್ ಡೋವ್ಟನ್ ರವರಿಗೆ ವೆಲ್ಲೂರಿನ ಕೋಟೆಯ ಹೊಣೆಯನ್ನು ನೀಡಿದ್ದೇನೆ. ಈ ಕೋಟೆಯು ಇನ್ನುಮುಂದೆ ಟಿಪ್ಪುವಿನ ವಂಶಸ್ಥರ ನಿವಾಸವಾಗಿರುತ್ತದೆ. ಹಾಗೆಯೇ ಡೌಟನ್ನನನ್ನು ಟಿಪ್ಪುವಿನ ಕುಟುಂಬದವರಿಗೆ ಮಾಸಾಶನ ನೀಡುವ ಪೇಮಾಸ್ಟರ್ ಆಗಿಯೂ ನೇಮಿಸಿರುತ್ತೇನೆ. ಟಿಪ್ಪುವಿನ ಕುಟುಂಬದವರಿಗೆ ವೆಲ್ಲೂರು ಕೋಟೆಯಲ್ಲಿ ವಾಸಿಸಲು ಅವರ ಅರ್ಹತೆಗೆ ಅನುಗುಣವಾಗಿ ಮತ್ತು ಅವರುಗಳ ನಿರೀಕ್ಷೆಗಳ ಅನುಸಾರ ಸೂಕ್ತವಾದ ವ್ಯವಸ್ಥೆಯನ್ನು ಮಾಡಲು ಆದೇಶಿಸಿದ್ದೇನೆ. ಟಿಪ್ಪುವಿನ ವಂಶಸ್ಥರಿಗೆ ಮಾಸಾಶನಗಳನ್ನು ಉದಾರತೆಯಿಂದ ನೀಡಲು ನಾನು ನಿರ್ಧರಿಸಿದ್ದೇನೆ. ಹಾಗಾಗಿ ನೀನು ಟಿಪ್ಪುವಿನ ಕುಟುಂಬದ ಪ್ರತಿಯೊಬ್ಬ ಸದಸ್ಯರಿಗೆ ಸೂಕ್ತವಾದ ಮಾಸಾಶನವನ್ನು ನೀಡಲು ನಿನಗೆ ಆದೇಶಿಸಿದ್ದೇನೆ. ಮಾಸಾಶನವು ರಾಜಪರಿವಾರದ ಮಹಿಳೆಯರಿಗೂ ಇರಲಿ. ಆದರೆ ಈ ಮಾಸಾಶನವು ಮೂರು ಅಥವಾ ಹೆಚ್ಚೆಂದರೆ ನಾಲ್ಕು ಲಕ್ಷ ಪಗೋಡಾಗಳನ್ನು ಮೀರಬಾರದು. ರಾಜಕುಮಾರರೊಡನೆ ಅವರ ಮಹಿಳೆಯರು ಮತ್ತು ಮಕ್ಕಳೂ ಸಹ ಕಡ್ಡಾಯವಾಗಿ ಜೊತೆಗೆ ಇರಲಿ. ಅಗತ್ಯವಾದರೆ ನೀನು ಟಿಪ್ಪುವಿನ ಕುಟುಂಬವನ್ನು ವೆಲ್ಲೂರಿಗೆ ಸಾಗಿಸುವಾಗ ಅವರ ರಕ್ಷಣೆಗೆ ಹೋಗುವ ಸೇನೆಗೆ ನೀನೇ ಕಮಾಂಡರ್ ಇನ್ ಚೀಫ್ ಆಗಿ ಹೋಗು".

ಟಿಪ್ಪುವಿನ ನಾಲ್ಕು ಹಿರಿಯ ರಾಜಕುಮಾರರಾದ ಫತೆಹೈದರ್, ಅಬ್ದುಲ್ ಖಾಲಕ್, ಮೈನುದ್ದೀನ್ ಮತ್ತು ಮೊಹಿಯುದ್ದೀನ್ ಮತ್ತು ಅವರ ಕುಟುಂಬವು ೧೯ ಜೂನ್ ೧೭೯೯ರಲ್ಲಿ ಮೊಟ್ಟಮೊದಲು ವೆಲ್ಲೂರಿಗೆ ಹೊರಟರು. ಈ ಕುಟುಂಬ ಸಾಗುವಾಗ ೧,೫೦೦ ಮಂದಿ ಬ್ರೀಟೀಷ್ ಮತ್ತು ಭಾರತೀಯ ಸೈನಿಕರ ಮತ್ತು ನಾಲ್ಕು ತೋಪುಗಳ ರಕ್ಷಣೆಯಲ್ಲಿ ಇವರನ್ನು ವೆಲ್ಲೂರಿಗೆ ಸಾಗಿಸಲಾಯಿತು. ಇದರ ನೇತೃತ್ವವನ್ನು ಲೆಫ್ಟನೆಂಟ್ ಕರ್ನಲ್ ಕೋಕ್ ವಹಿಸಿದ್ದನು. ಈ ತಂಡವು ವೆಲ್ಲೂರನ್ನು '೧೨ ಜುಲೈ ೧೭೯೯ರಂದು ವೆಲ್ಲೂರು ತಲುಪಿತು. ೧೮೦೬ರ ವರೆಗೆ ಈ ಕೋಟೆಯಲ್ಲಿ ಹೈದರ್ ಆಲಿಯ ಕುಟುಂಬ, ಟಿಪ್ಪುವಿನ ಕುಟುಂಬ ಅವರ ಸಂಬಂಧಿಗಳು ಮತ್ತು ಸೇವಕರೂ ಸೇರಿದಂತೆ ಸುಮಾರು ಒಂದು ಸಾವಿರಕ್ಕೂ ಹೆಚ್ಚು ಮಂದಿ ಇದ್ದರು.

೧೮೦೬ರಲ್ಲಿ ಕೋಟೆಯಲ್ಲಿದ್ದ ಭಾರತೀಯ ಸೈನಿಕರಿಗೆ ಗೋವಿನ ಚರ್ಮವನ್ನು ಬಳಸಿ ತಯಾರಿಸಿದ ಟೋಪಿಗಳನ್ನು ಹಾಕಿಕೊಳ್ಳುವಂತೆ ಆದೇಶಿಸಲಾಯಿತು. ಸೈನಿಕರು ಇದು ತಮ್ಮ ಧಾರ್ಮಿಕ ನಂಬಿಕೆಗಳಿಗೆ ವಿರುದ್ಧವೆಂದು ಈ ಟೋಪಿಗಳನ್ನು ಧರಿಸಲು ನಿರಾಕರಿಸಿದರು. ಈ ಹೊಸ ಟೋಪಿಯನ್ನು ಬಟ್ಟೆಯಿಂದ ತಯಾರಿಸಿ ಅದಕ್ಕೆ ಕಬ್ಬಿಣದ ಸರಳುಗಳಿಂದ ಆಕಾರವನ್ನು ನೀಡಿ ಚರ್ಮದಿಂದ ಬಂಧಿಸಿದ್ದರು. ಅದರ ಮುಂಭಾಗವನ್ನು ಗರಿಯಿಂದ ಅಲಂಕರಿಸಲಾಗಿತ್ತು. ಇದನ್ನು ಧರಿಸಲು ಭಾರತೀಯ ಸೈನಿಕರು ನಿರಾಕರಿಸಿರು.

ದಿನಾಂಕ ೧೦ ಜುಲೈ೧೮೦೬ರಂದು ಟಿಪ್ಪುವಿನ ಮಕ್ಕಳ ಚೇತಾವಣಿಯಿಂದ ಈ ದಂಗೆಯು ಪ್ರಾರಂಭವಾಯಿತು ಎಂದು ಸರ್ಕಾರಿ ಅಧಿಕಾರಿಗಳ ವಲಯದಲ್ಲಿ ಸುದ್ದಿ ಕೇಳಿಬಂದಿತು. ಜುಲೈ ೯ರಂದು ರಾಜಕುಮಾರ ಮೊಹೆಯುದ್ದೀನ್ನ ಸಹೋದರಿ ನೂರುನ್ನೀಸಾ ಬೇಗಂಳ ವಿವಾಹವು ಏರ್ಪಟ್ಟಿತ್ತು. ದಿನಾಂಕ ೧೮೦೬ ಜುಲೈ ೧೦ ರಂದು ಮದುವೆಗೆ ಸೇರಿದ್ದ ಸಿಪಾಯಿಗಳನ್ನು ಟಿಪ್ಪುವಿನ ನಾಲ್ಕನೆಯ ಪುತ್ರ ರಾಜಕುಮಾರ ಮೈಜುದ್ದೀನ್ ಕೋಟೆಯಲ್ಲಿದ್ದ ಬ್ರಿಟೀಷರ ನಿವಾಸದ ಮೇಲೆ ದಾಳಿ ಮಾಡುವಂತೆ ಪ್ರೇರೇಪಿಸಿದನು. ಕೊನೆಗೆ ಈ ದಂಗೆಯನ್ನು ಕ್ಷಿಪ್ರ ಕಾರ್ಯಾಚರಣೆಯ ಮೂಲಕ ಬ್ರಿಟೀಷರು ಶಮನ ಮಾಡುತ್ತಾರೆ. ಈ ದಂಗೆಯು ಅಷ್ಟು ಪರಿಣಾಮಕಾರಿಯಾಗಿರಲಿಲ್ಲ. ಏಕೆಂದರೆ ಇದರ ನೇತೃತ್ವವನ್ನು ವಹಿಸುವ ಧೀರತ್ವ ಯಾವ ರಾಜಕುಮಾರರಲ್ಲೂ ಇರಲಿಲ್ಲ. ಅವರುಗಳು ಸಿಪಾಯಿಗಳ ದಂಗೆಯ ಲಾಭವನ್ನು ಪಡೆದುಕೊಳ್ಳುವ ಕಾತುರತೆಯಿಂದಿದ್ದರು. ಹೊರಗಿನಿಂದ ಬಂದ ಬ್ರಿಟೀಷ್ ಸೇನೆಯು ಈ ದಂಗೆಯನ್ನು ಅಡಗಿಸುತ್ತದೆ. ಕೊನೆಗೆ ಬ್ರಿಟೀಷರು ನಡೆಸಿದ ತನಿಖೆಯಿಂದ ತಿಳಿದುಬಂದ ಸಂಗತಿಯೆಂದರೆ, ರಾಜಕುಮಾರ ಮೈಜುದ್ದೀನ್ ಈ ದಂಗೆಯ ಪ್ರಮುಖ ರೂವಾರಿಯಾಗಿರುತ್ತಾನೆ. ಮತ್ತು ಈತನೊಡನೆ ಮೊಹಿಯುದ್ದೀನ್ ಸಹ ಸೇರಿರುವ ಸಂಭವವಿರುತ್ತದೆ. ಆದರೆ ಟಿಪ್ಪುವಿನ ಇತರೆ ಕುಟುಂಬದವರು ಈ ದಂಗೆಯಲ್ಲಿ ಭಾಗವಹಿಸಿದ್ದಕ್ಕೆ ಯಾವುದೇ ಪುರಾವೆಗಳಿರುವುದಿಲ್ಲ. ಈ ಘಟನೆಯ ನಂತರ ಬ್ರಿಟೀಷರು ಟಿಪ್ಪುವಿನ ಕುಟುಂಬವನ್ನು ಕೊಲ್ಕತ್ತಕ್ಕೆ ಸಾಗಿಸಲು ನಿರ್ಧರಿಸುತ್ತಾರೆ. ಆದರೆ ವಯಸ್ಸಾದವರನ್ನು ಅಂದರೆ ಬಹುತೇಕ ಹೈದರಾಲಿಯ ಕುಟುಂಬವನ್ನು ವೆಲ್ಲೂರಿನಲ್ಲೇ ಉಳಿಸುತ್ತಾರೆ. ಹೀಗೆ ವೆಲ್ಲೂರಿನಲ್ಲಿರುವ ಟಿಪ್ಪುಸುಲ್ತಾನನ ಕುಟುಂಬದವರ ಸ್ಮಶಾನವು ಸಿ.ಎಮ್.ಸಿ. ಆಸ್ಪತ್ರೆಯ ಸನಿಹದಲ್ಲಿದೆ. ಇಲ್ಲಿರುವ ಗೋರಿಗಳ ಮೇಲಿರುವ ಫಲಕದಿಂದ ವೆಲ್ಲೂರಿನಲ್ಲಿ ಉಳಿದವರು ಯಾರೆಂಬುದು ತಿಳಿಯುತ್ತದೆ.

ವೆಲ್ಲೂರಿನಿಂದ ಕೊಲ್ಕತ್ತಾದ ತಾಲಿಗಂಜ್ಗೆ ಪಯಣ

ದಂಗೆಯ ನಂತರ ಟಿಪ್ಪುವಿನ ಮಕ್ಕಳನ್ನು ಅವರ ಕುಟುಂಬದೊಡನೆ ಕೊಲ್ಕತ್ತಾದ ರಸ್ಸಾಘಗ್ಲಾ ಎಂಬ ಜಾಗದಲ್ಲಿಡುತ್ತಾರೆ. ಕೊಲ್ಕತ್ತಾದ ಈ ಜಾಗವು ಕೊಳಚೆ ಪ್ರದೇಶವಾಗಿದ್ದು ಮಲೇರಿಯಾ ಪೀಡಿತವಾಗಿರುತ್ತದೆ. ಈಗ ಈ ಜಾಗದ ಹೆಸರು ತಾಲಿಗಂಜ್ ಎಂದಾಗಿದೆ. ಟಿಪ್ಪುವಿನ ಪತ್ನಿಯರು, ಮತ್ತು ಹನ್ನೊಂದು ಮಕ್ಕಳಾದ ಫತೆಹೈದರ್, ಮುಯಿನ್ ಉದ್ದೀನ್, ಅಬ್ದುಲ್ ಖಾಲಖ್, ಮುಯಿಜ್ ಉದ್ದೀನ್, ಮುಹಮ್ಮದ್ ಸುಭಾಹನ್, ಷುಕ್ರುಲ್ಲಾ, ಸರ್ವರ್ ಉದ್ದೀನ್, ಮಹಮ್ಮದ್ ಯಾಸೀನ್, ಜಮಾಲುದ್ದೀನ್, ಮುನೀರುದ್ದೀನ್, ಗುಲಾಮ್ ಮೊಹಮ್ಮದ್ ಮತ್ತು ಗುಲಾಮ್ ಅಹ್ಮದ್ ಮತ್ತು ಅವರ ಕುಟುಂಬದ ಸದಸ್ಯರು ಸೇರಿದಂತೆ ಒಟ್ಟು ೫೨ ಮಂದಿ ಮತ್ತು ಅವರ ಸಂಬಂಧಿಗಳು ಮತ್ತು ಸೇವಕರು ಸೇರಿ ಮುನ್ನೂರು ಮಂದಿ ಇರುತ್ತಾರೆ. ಇವರುಗಳನ್ನು ಮೊದಲಿಗೆ ರಸ್ಸಾಫಗ್ಲಾದ ಜಾನ್ ಆಂಡ್ರೀವ್ಸ್ನ ಬಂಗಲೆಯಲ್ಲಿ ಇಟ್ಟಿರುತ್ತಾರೆ. ಈತ ಕೊಲ್ಕತ್ತೆಯ ಮೊದಲ ಸರ್ಕ್ಯುಲೇಟಿಂಗ್ ಲೈಬ್ರರಿಯ ಸ್ಥಾಪಕ ಮತ್ತು ಒಬ್ಬ ಪ್ರಸಿದ್ಧ ವ್ಯಾಪಾರಿ. ಇದೇ ಬಂಗಲೆಯಲ್ಲಿ ಇರಾನಿನ ರಾಯಭಾರಿಯ ನಿವಾಸವೂ ಇರುತ್ತದೆ. ನಂತರ ಇವರನ್ನು ತಾಲಿಗಂಜಿನಲ್ಲಿದ್ದ ರಿಚರ್ಡ್ ಜಾನ್ಸನ್ಗೆ ಸೇರಿದ್ದ ಮೂರು ಪುಟ್ಟ ಮನೆಗಳಲ್ಲಿ ಇಡುತ್ತಾರೆ. ೧೮೪೦ರಲ್ಲಿ ರಾಜಕುಮಾರರಿಗೆ ಹೊಸ ಬಂಗಲೆಗಳನ್ನು ನಿರ್ಮಿಸಿ, ಅವುಗಳನ್ನು ಸಬ್‌ಟ್ರೆಜರರ್ ಆದ ಹೆಚ್.ಸ್ತೇನ್ ರಾಜಕುಮಾರರಿಗೆ ಹಸ್ತಾಂತರಿಸುತ್ತಾನೆ. ೧೮೪೦ರಲ್ಲಿ ಟಿಪ್ಪು ಮಕ್ಕಳಿಗಾಗಿ ನಿರ್ಮಿಸಿದ ಬಂಗಲೆಗಳು. ೧. ಖಾಸ್ ಮಹಲ್. ೨. ನಯೂಟ್ಸ್ ಕೋಠಿ, ೩. ಬಾರಾಮಹಲ್, ೪. ಪುಲ್ಪಹಾರ್, ಇದು ಗುಲಾಮ್ ಮೊಹಮ್ಮದ್ ರವರಿಗೆ. ಇದನ್ನು ಮೈಸೂರ್ ಹೌಸ್ ಎನ್ನುತ್ತಾರೆ. ಈ ಐತಿಹಾಸಿಕ ಅರಮನೆಯನ್ನು ಟಿಪ್ಪುವಿನ ಮಗ ಗುಲಾಮ್ ಮೊಹಮ್ಮದ್ರವರು ನವೀಕರಿಸುತ್ತಾರೆ. ಈ ಅರಮನೆಯ ಮೊದಲ ಅಂತಸ್ತಿನಲ್ಲಿ ಅನೇಕ ಕಲಾಕೃತಿಗಳು, ಕೈಬರಹದ ದಾಖಲೆಗಳು, ವರ್ಣಚಿತ್ರಗಳು ಇದ್ದವು. ಇದರಲ್ಲಿ ಮುಖ್ಯವಾದದ್ದು ಎಂದರೆ 'ಅಂತಃಪುರದಿಂದ ಟಿಪ್ಪುವಿನ ಮಕ್ಕಳ ನಿರ್ಗಮನ' ಎಂಬ ಕಲಾಕೃತಿ.

ಟಿಪ್ಪುವಿನ ಪುತ್ರರು ಅಂದಿನ ಗೌರ್ನರ್ ಜನರಲ್ ಆಗಿದ್ದ ಲಾರ್ಡ್ ಮಿಂಟೋರವರಿಗೆ ಪತ್ರ ಬರೆದು, ಮಂಜೂರು ಮಾಡಿರುವ ಮಾಸಾಶನವನ್ನು ಹೆಚ್ಚಿಸಬೇಕೆಂದೂ, ತಮ್ಮ ದೈನಂದಿನ ವ್ಯವಹಾರದಲ್ಲಿ ಆಂಗ್ಲರ ಹಸ್ತಕ್ಷೇಪವನ್ನು ರದ್ದುಮಾಡುಬೇಕೆಂದು ಕೋರಿಕೊಳ್ಳುತ್ತಾರೆ.

ರಾಜಕುಮಾರರ ಈ ಪತ್ರಕ್ಕೆ ಉತ್ತರವಾಗಿ ಮಿಂಟೋರವರು ದಿನಾಂಕ ಅಕ್ಟೋಬರ್ ೧೯, ೧೮೦೭ ರಂದು ಒಂದು ಆದೇಶವನ್ನು ಹೊರಡಿಸುತ್ತಾರೆ. ಅದರ ಸಾರಾಂಶ ಈ ಕೆಳಕಂಡಂತಿದೆ.

೧. ಮಾಸಾಶನವನ್ನು ಕುಟುಂಬದ ಮುಖ್ಯಸ್ಥನಿಗೆ ಅಥವ ಅವರು ಸೂಚಿಸಿರುವ ವ್ಯಕ್ತಿಗೆ ನೀಡಲಾಗುವುದು.

೨. ಮಾಸಾಶನವನ್ನು ಅವರ ಕುಟುಂಬದ ನಿರ್ವಹಣೆಗಾಗಿ ನೀಡಲಾಗುವುದು. ಈ ಹಣದಿಂದ ಅವರು ತಮಗೆ ಬೇಕಾದ ಎಲ್ಲ ವಸ್ತುಗಳನ್ನು ಕೊಳ್ಳಬಹುದಾಗಿದೆ. ಉದಾಹರಣೆಗೆ, ಊಟದ ಖರ್ಚು, ಮನೆ ಬಾಡಿಗೆ, ಮನೆ ಖರೀದಿ, ಪೀಠೋಪಕರಣಗಳು, ವೈದ್ಯಕೀಯ ಅಗತ್ಯಗಳು, ಇತ್ಯಾದಿ.

೩. ಮಾಸಾಶನ ಪಡೆಯುವ ವ್ಯಕ್ತಿಯ ಕುಟುಂಬದಲ್ಲಿ ಸಾವು ಸಂಭವಿಸಿ ಸದಸ್ಯರ ಸಂಖ್ಯೆ ಕಡಿಮೆಯಾದರೆ ಅಥವಾ ಮದುವೆ ಅಥವಾ ಜನನವಾಗಿ ಸದಸ್ಯರ ಸಂಖ್ಯೆ ಹೆಚ್ಚಾದರೂ ಮಾಸಾಶನದಲ್ಲಿ ಯಾವುದೇ ಹೆಚ್ಚಳವನ್ನಾಗಲಿ, ಕಡಿತವನ್ನಾಗಲಿ ಮಾಡಲಾಗುವುದಿಲ್ಲ.

೪. ಮಾಸಾಶನ ಪಡೆಯುತ್ತಿರುವ ವ್ಯಕ್ತಿಗಳಿಗೆ ನೀಡಲಾಗುತ್ತಿರುವ ಹಣದಲ್ಲಿ ಯಾವುದನ್ನೂ ತಡೆಹಿಡಿಯಲಾಗುವುದಿಲ್ಲ. ಆದರೆ ಸದಸ್ಯರ ಅವಿಧೇಯತೆ ಕಂಡುಬಂದರೆ ಅಂತಹ ಸಂದರ್ಭದಲ್ಲಿ ಮಾಸಾಶನವನ್ನು ತಡೆ ಹಿಡಿಯಲಾಗುವುದು.

೫. ಮಾಸಾಶನ ಪಡೆಯುತ್ತಿರುವ ಮುಖ್ಯವ್ಯಕ್ತಿ ನಿಧನಹೊಂದಿದರೆ ಸದರಿ ಮಾಸಾಶನವನ್ನು ಆತನ ವಿಧವೆಗೆ ಅಥವಾ ಆತನ ಕುಟುಂಬದ ಸದಸ್ಯರಿಗೆ ನೀಡಲಾಗುವುದು.

೬. ಮಾಸಾಶನ ಪಡೆಯುವ ವ್ಯಕ್ತಿಯು ಮಾಸಾಶನವನ್ನು ಖರ್ಚುಮಾಡುವುದಕ್ಕೆ ಯಾವುದೇ ನಿರ್ಬಂಧವಿಲ್ಲ. ಆದರೆ ಆ ವ್ಯಕ್ತಿಯು ಮಾಸಾಶನವನ್ನು ಬಳಕೆ ಮಾಡಿಕೊಂಡಿರುವುದಕ್ಕೆ ಸೂಕ್ತ ಲೆಕ್ಕವಿಡಬೇಕು. ಆ ಲೆಕ್ಕವನ್ನು ಟಿಪ್ಪು ರಾಜಕುಮಾರರ ಕುಟುಂಬದ ನಿರ್ವಹಣೆಯ ಹೊಣೆಹೊತ್ತಿರುವ ಅಧಿಕಾರಿಗೆ ಪ್ರತಿತಿಂಗಳು ಸಲ್ಲಿಸಬೇಕು.

೭ ರಾಜಕುಮಾರರು ತಮ್ಮ ಉಳಿತಾಯದ ಹಣವನ್ನು ಯಾವುದೇ ಸಂಸ್ಥೆಗಳಲ್ಲಿ ತೊಡಗಿಸಬಹುದು. ಆದರೆ ಅದಕ್ಕೆ ಸರ್ಕಾರದ ಅನುಮತಿ ಪಡೆಯಬೇಕು.

೮. ರಾಜಕುಮಾರರು ಕೊಲ್ಕತ್ತಾ ನಗರದ ಪರಿಮಿತಿಯಲ್ಲಿ ಎಲ್ಲಿಬೇಕಾದರೂ ವಾಸಮಾಡಬಹುದು. ಆದರೆ ಇದಕ್ಕೆ ಸರ್ಕಾರದ ಪೂರ್ವಾನುಮತಿ ಪಡೆಯಬೇಕು ಹಾಗೂ ಇದನ್ನು ಸರ್ಕಾರ ನೇಮಿಸಿರುವ ಅಧಿಕಾರಿಯ ಗಮನಕ್ಕೆ ತರಬೇಕು.

೯. ವೆಲ್ಲೂರು ದಂಗೆಯಲ್ಲಿ ತಪ್ಪಿತಸ್ಥರೆಂದು ತೀರ್ಮಾನವಾಗಿದ್ದ ಫತೆಹೈದರ್ ಮತ್ತು ಮೊಹಿಯುದ್ದೀನ್‌ರವರ ಕುಟುಂಬದ ಮೇಲೆ ಸೂಕ್ತ ಕಣ್ಗಾವಲನ್ನು ಇಡಲಾಗುವುದು.

ಈ ಕೆಳಕಂಡ ಶರತ್ತುಗಳನ್ನು ಈ ಇಬ್ಬರು ರಾಜಕುಮಾರರ ಮೇಲೆ ವಿಧಿಸಲಾಗಿದೆ.

೧. ದೇಶದಲ್ಲಿ ಶಾಂತಿ ನೆಲಸುವಲ್ಲಿ ನೀವು ಸಹಕರಿಸಬೇಕು. ಯಾವುದೇ ಪ್ರತಿಕೂಲವಾದ ವಾತಾವರಣವನ್ನು ಸೃಷ್ಟಿಸಬಾರದು.

೨. ಸರ್ಕಾರದೊಡನೆ ನೀವು ಅನ್ಯೂನತೆಯೊಡನೆ ಇರಬೇಕು. ಯಾವುದೇ ಕ್ಷೋಭೆಯ ಅಥವ ಅಪನಂಬಿಕೆಯ ವಾತಾವರಣವನ್ನು ಸೃಷ್ಟಿಸಬಾರದು.

೩. ಸರ್ಕಾರದ ಅನುಮತಿ ಇಲ್ಲದೆ ನೀವು ಬೇರೆಕಡೆಗಳಿಗೆ ಹೋಗಬಾರದು.

೪. ನೀವು ಯಾವುದೇ ಮೆರವಣಿಗೆಗಳಲ್ಲಿ ಭಾಗವಹಿಸಬಾರದು. ಯಾವುದೇ ಹಬ್ಬಗಳಲ್ಲಾಗಲಿ ಮನೆಯ ಕಾರ್ಯಕ್ರಮಗಳಲ್ಲಾಗಲೀ ಸಾರ್ವಜನಿಕವಾಗಿ ಆಚರಿಸಲ್ಪಡುತ್ತಿದ್ದರೆ ಅದರಲ್ಲೂ ಭಾಗವಹಿಸಬಾರದು.

೫. ನಿಮಗೆ ನೀಡಿರುವ ಸವಲತ್ತುಗಳನ್ನು ನಿಮ್ಮ ಜಾಗದಲ್ಲಿ ಅನುಭವಿಸಲು ನೀವು ಸ್ವತಂತ್ರರಾಗಿರುತ್ತೀರ.

೬. ನೀವು ಬೇರೆ ಕುಟುಂಬಗಳೊಡನೆ ಮತ್ತು ಇತರೆ ಭಾರತೀಯರಾದ ಸ್ಥಳೀಯರೊಡನೆ ದೈಹಿಕ ಸಂಪರ್ಕವನ್ನು ಇಟ್ಟುಕೊಳ್ಳಬಾರದು. ಯಾವುದೇ ಪತ್ರವ್ಯವಹಾರಕ್ಕೆ ಸರ್ಕಾರದ ಅನುಮತಿ ಪಡೆಯುವುದು ಕಡ್ಡಾಯ. ಅಂದರೆ ನೀವು ಕಳುಹಿಸುವ ಪತ್ರಗಳು ಮತ್ತು ನಿಮಗೆ ಬರುವ ಪತ್ರಗಳನ್ನೂಸಹ ಸರ್ಕಾರಿ ಅಧಿಕಾರಿಯ ಗಮನಕ್ಕೆ ತರಬೇಕು.

೭ ಸರ್ಕಾರದ ಪೂರ್ವಾನುಮತಿ ಇಲ್ಲದೆ ಯಾವುದೇ ವ್ಯಕ್ತಿಯನ್ನು ವಿಶೇಷವಾಗಿ ಕರಾವಳಿಯ ವ್ಯಕ್ತಿಗಳನ್ನು ನೀವು ನಿಮ್ಮ ಮನೆಗೆ ಆಹ್ವಾನಿಸಬಾರದು.

ಮಾಸಾಶನ ನೀಡಲು ಮೈಸೂರಿನ ರಾಜಕುಮಾರರನ್ನು ಮೂರು ಭಾಗವಾಗಿ ವಿಂಗಡಿಸಲಾಯಿತು.

ಭಾಗ ೧. ವೆಲ್ಲೂರಿನ ದಂಗೆಗಳಲ್ಲಿ ಭಾಗವಹಿಸಿದ್ದವರು ಮತ್ತು ಈ ಕಾರಣಕ್ಕಾಗಿ ಜೈಲು ಶಿಕ್ಷೆ ಅನುಭವಿಸಿದ್ದವರು.

ಭಾಗ ೨. ಹದಿನೈದು ವರ್ಷ ಅಥವಾ ಅದಕ್ಕಿಂತ ಮೇಲಿನ ವಯಸ್ಸಿನವರು.

ಭಾಗ ೩. ಅಪ್ರಾಪ್ತವಯಸ್ಸಿನ ಮಕ್ಕಳು.

ಅಪ್ರಾಪ್ತವಯಸ್ಸಿನ ಮಕ್ಕಳಿಗೆ (ಒಬ್ಬರಿಗೆ) ಮತ್ತು ಅವರ ಕುಟುಂಬಕ್ಕೆ ಮಾಸಿಕ ರೂ ೧೫೦೦ ನಿರ್ಧರಿಸಲಾಯಿತು.

ಈ ಅಪ್ರಾಪ್ತವಯಸ್ಸಿನ ಮಕ್ಕಳು ಹದಿನೈದು ವರ್ಷ ತುಂಬಿದ ನಂತರ ಅವರಿಗೆ ಮಾಸಿಕ ೨,೦೦೦ ಎಂದು ನಿರ್ಧರಿಸಲಾಯಿತು.

ಟಿಪ್ಪುವಿನ ಪತ್ನಿಯರು, ಮತ್ತು ಹನ್ನೊಂದು ಮಕ್ಕಳಾದ ಫತೆಹೈದರ್, ಮುಯಿನ್ ಉದ್ದೀನ್, ಅಬ್ದುಲ್ ಖಾಲಖ್, ಮುಯಿಜ್ ಉದ್ದೀನ್, ಮುಹಮ್ಮದ್ ಸುಭಾಹನ್, ಷುಕ್ರುಲ್ಲಾ, ಸರ್ವರ್ ಉದ್ದೀನ್, ಮಹಮ್ಮದ್ ಯಾಸೀನ್, ಜಮಾಲುದ್ದೀನ್, ಮುನೀರುದ್ದೀನ್, ಗುಲಾಮ್ ಮೊಹಮ್ಮದ್ ಮತ್ತು ಗುಲಾಮ್ ಅಹ್ಮದ್ ಮತ್ತು ಟಿಪ್ಪುವಿನ ಹೆಣ್ಣುಮಕ್ಕಳು ಕೊಲ್ಕತ್ತದಲ್ಲಿ ವಾಸವಾಗಿದ್ದರು. ಟಿಪ್ಪುವಿನ ಮರಣದ ಸಮಯದಲ್ಲಿ ಟಿಪ್ಪುವಿನ ಮಕ್ಕಳಲ್ಲಿ ಕೊನೆಯವರಾದ ಗುಲಾಮ್ ಮೊಹಮ್ಮದ್ಗೆ ಮೂರುವರ್ಷ ವಯಸ್ಸು ಆತನ ತಮ್ಮನಿಗೆ ಸುಮಾರು ಒಂದು ವರ್ಷ ವಯಸ್ಸು.

ಟಿಪ್ಪುಸುಲ್ತಾನರ ಹಿರಿಯರಾಣಿ (ಗುಲಾಂಮಹಮ್ಮದ್ ರವರ ತಾಯಿ) ಟಿಪ್ಪು ನಿಧನಹೊಂದಿದ ನಂತರ ಸುಮಾರು ನಲವತುವರ್ಷಗಳ ಕಾಲ ಕೊಲ್ಕತ್ತೆಯಲ್ಲಿ ಬದುಕಿದ್ದರು. ಗೌರ್ನರ್ ಜನರಲ್ ಏಡೆನ (ಲಾರ್ಡ್ ಆಕ್ಲೆಂಡ್)ರವರ ಸಹೋದರಿ ಎಮಿಲಿ ಏಡನ್ ೧೮ ನವಂಬರ್ ೧೮೪೦ರಲ್ಲಿ ಟಿಪ್ಪುವಿನ ಪತ್ನಿಯನ್ನು ಭೇಟಿಯಾಗಿದ್ದರು. ಅವರ ಅಭಿಪ್ರಾಯ: 'ಟಿಪ್ಪುವಿನ ಪತ್ನಿಯನ್ನು ಹಿಂದೊಮ್ಮೆ ಭೇಟಿಯಾಗಿದ್ದೆ. ಈಗ ಇವರು ಪಾಸ್ಟ್ ೮೬. ಆದರೆ ಇವರು ತುಂಬ ಸುಂದರವಾಗಿದ್ದರು. ಕಣ್ಣುಗಳು ತೀಕ್ಷಣವಾಗಿ ಸುಂದರವಾಗಿದ್ದವು. ಇವರ ಬಳಿ ಅನೇಕ ಮಂದಿ ಮೊಮ್ಮಕ್ಕಳು ಮತ್ತು ಮರಿಮಕ್ಕಳು ಸುತ್ತುವರೆದಿದ್ದರು. ಈಕೆ ತುಂಬ ಸಂತೋಷದಿಂದಿದ್ದರು. ಇವರ ಮಗ ಗುಲಾಂಮಹಮ್ಮದ್ ನಮ್ಮ ಸಂಭಾಷಣೆಯಲ್ಲಿ ದುಬಾಷಿಯಾಗಿದ್ದರು. ನಾನು ರಾಣಿಗಾಗಿ ಕೆಲವು ಉಂಗುರಗಳು ಮತ್ತು ಒಂದು ಬಳೆಯನ್ನು ಬೆಳಿಗ್ಗೆಯೇ ಕಳುಹಿಸಿಕೊಟ್ಟಿದ್ದೆ. ಕೋಣೆಯಲ್ಲಿ ಮೂರುತಿಂಗಳ ಮಗು ಮತ್ತು ಅದರ ಹದಿಮೂರು ವರ್ಷದ ತಾಯಿ ಇದ್ದರು. ಆ ಮಗು ಈಕೆಯ ಮರಿಮಗುವಾಗಿತ್ತು. ಆ ಮಗು ಸುಂದರವಾಗಿದ್ದು ಜರತಾರಿ ಬಟ್ಟೆಗಳನ್ನು ಉಟ್ಟಿಕೊಂಡಿತ್ತು.'

ಟಿಪ್ಪುವಿಗೆ ಐದು ಹೆಣ್ಣುಮಕ್ಕಳು. ಇವರಲ್ಲಿ ಇಬ್ಬರು ಟಿಪ್ಪು ಇರುವಾಗಲೇ ಶ್ರೀರಂಗಪಟ್ಟಣದಲ್ಲೇ ತೀರಿಕೊಂಡಿದ್ದರು. ಹಿರಿಯ ಮಗಳು ಉಮ್ದಬೇಗಮ್‌ಳನ್ನು ಹೈದರ್ಹುಸೇನ್ ಖಾನ್ನೊಡನೆ ವಿವಾಹಮಾಡಿದ್ದರು. ಈ ಕುಟುಂಬವು ಕೊಲ್ಕತ್ತಾದಲ್ಲೇ ವಾಸವಾಗಿತ್ತು. ಟಿಪ್ಪುವಿನ ಮತ್ತೊಬ್ಬ ಮಗಳು ನೂರುನ್ನೀಸಾ ಬೇಗಂ ಈಕೆಯ ವಿವಾಹ ೯-೦೭-೧೮೦೬ರಂದು ವೆಲ್ಲೂರು ಕೋಟೆಯಲ್ಲಾಯಿತು. (ದಂಗೆಯ ಹಿಂದಿನ ದಿನ) ಟಿಪ್ಪುವಿನ ಕಿರಿಯಮಗಳು ರಾಜಕುಮಾರಿ ಹಲೀಮಾಬೇಗಂ. ಈಕೆಯನ್ನು ಖ್ವಾಜಾ ಅಲೀಹುಸೇನ್ಖಾನ್‌ನೊಡನೆ ವಿವಾಹ ಮಾಡಲಾಗಿತ್ತು. ಈಕೆಯ ಮಗಳು ಶೆಹಜಾದಿ ಬೇಗಂ. ಇವರೆಲ್ಲಾ ಕೊಲ್ಕತ್ತದಲ್ಲೇ ವಾಸವಾಗಿದ್ದರು.

ಕೊಲ್ಕತ್ತಾದಲ್ಲಿ ಟಿಪ್ಪುವಿನ ಸಂತಾನ

೧. **ಫತೆಹೈದರ್:** ಈತ ಟಿಪ್ಪುವಿನ ನಿಧನದ ದಿನ ಶ್ರೀರಂಗಪಟ್ಟಣದಲ್ಲಿ ಇರಲಿಲ್ಲ. ಈತ ಒರಟು ಸ್ವಭಾವದವ. ಅನುಮಾನ ಹುಟ್ಟಿಸುವ ವ್ಯಕ್ತಿತ್ವ ಈತನದು. ಈತ ತುಂಬಾ ಚುರುಕು. ಹಾಗಾಗಿ ಇವನ ನಿವಾಸದ ಬಳಿ ಒಂದು ಪೋಲಿಸ್ ಕೋಠಿಯನ್ನು ಇಡಲಾಗಿತ್ತು. ಹಾಗೆಯೇ ಲಾರ್ಡ್ ಮಿಂಟೋ ಒಂದು ಆದೇಶ ಹೊರಡಿಸಿ, ಇವನ ಮೇಲೆ ಕೆಲವು ನಿರ್ಭಂದವನ್ನು ವಿಧಿಸಿದ್ದನು. ಯಾವಾಗಲೂ ಪಾನ್ ಸೇವಿಸುವುದೇ ಇವನ ಕೆಲಸ. ಈತನಿಗೆ ೨೧ ಮಂದಿ ಮಕ್ಕಳು.

೨. **ಮುಯಿನ್ ಉದ್ದೀನ್:** ಈತ ೧೮೦೫ರಲ್ಲಿ ನಿಧನಹೊಂದುತ್ತಾನೆ. ಈತನಿಗೆ ೭ ಮಂದಿ ಮಕ್ಕಳಿದ್ದರು.

೩. **ಮುಯಿಜ್ ಉದ್ದೀನ್:** ಈತ ವೆಲ್ಲೂರು ದಂಗೆಯ ರೂವಾರಿ ಎಂದು ಅನುಮಾನಪಡಲಾಗಿತ್ತು. ಈತ ಮತ್ತು ಈತನ ತಮ್ಮ ಅಬ್ದುಲ್ ಖಾಲಕ್‌ರವರನ್ನು ಮೂರನೆಯ ಮೈಸೂರು ಯುದ್ಧದ ನಂತರ ಲಾರ್ಡ್ ಕಾರನ್ವಾಲಿಸ್ ೨೯ಮೇ೧೭೯೨ ರಿಂದ ೨೯ಮೇ ೧೭೯೪ರವರೆಗೆ ಒತ್ತೆಆಳಾಗಿ ಇಟ್ಟುಕೊಂಡಿರುತ್ತಾನೆ. ಮುಯಿಜ್ ಉದ್ದೀನ್ ೧೮೦೬ರ ದಂಗೆಯಲ್ಲಿ ಭಾಗವಹಿಸಿದ್ದರಿಂದ ಈತನನ್ನು ಹಡಗಿನಲ್ಲಿ ಬಂಧನದಲ್ಲೇ ಇಟ್ಟುಕೊಂಡು ಕೊಲ್ಕತ್ತಾಕ್ಕೆ ಬರುತ್ತಾರೆ. ಬಂಧನದ ಅವಧಿ ಮುಗಿಯದೇ ಇದ್ದರಿಂದ ಈತನನ್ನು ಕೊಲ್ಕೊತ್ತಾದ ಗ್ರೇಟ್ಜೋಲ್ ಎಂಬಲ್ಲಿ ಜೈಲಿನಲ್ಲಿ ಇಟ್ಟಿರುತ್ತಾರೆ. (ಈ ಜಾಗದಲ್ಲೇ ಈಗ ವಿಕ್ಟೋರಿಯಾ ಮೆಮೋರಿಯಲ್ ನಿರ್ಮಿಸಿರುವುದು). ಈತನನ್ನು ೨೫ಜೂನ್ ೧೮೧೩ರಲ್ಲಿ ಜೈಲಿನಿಂದ ಬಿಡುಗಡೆ ಮಾಡುತ್ತಾರೆ. ಈತ ೧೮೧೮ರಲ್ಲಿ ಕಾಲರ ವ್ಯಾಧಿಯಿಂದ ನಿಧನಹೊಂದುತ್ತಾನೆ.

ಕೊಲ್ಕತ್ತಾದ ಸುಪ್ರೀಮ್‌ಕೋರ್ಟಿನ ಪ್ರಸಿದ್ಧ ಅಟಾರ್ನಿ ಜನರಲ್ ಆಗಿದ್ದ ವಿಲಿಯಮ್ ಹಿಕಿರವರು ಮುಯಿಜ್ ಉದ್ದೀನ್ ಗೆಳಯರಾಗಿದ್ದು, ಈತನ ಬಗ್ಗೆ ತುಂಬ ಅನುಕಂಪವನ್ನು ಇಟ್ಟುಕೊಂಡಿದ್ದರು. ಅವರು ಈತನನ್ನು ಆಗಾಗ್ಗೆ ಬಂದು ಜೈಲಿನಲ್ಲಿ ಭೇಟಿಯಾಗುತ್ತಿದ್ದರು. ಮುಯಿಜ್ ಉದ್ದೀನ್ ತುಂಬ ಮೃದುಸ್ವಭಾವದ ವ್ಯಕ್ತಿ, ಆತ ಒಬ್ಬ ಕವಿ. ವಿಲಿಯಂಹಿಕಿರವರು ಆತನಿಗೆ ಒಂದು ಪೆನ್ನು, ಕಾಗದ ಮತ್ತು ಶಾಯಿಯನ್ನು ಒದಗಿಸುತ್ತಾರೆ. ಆತ ದಿನದಲ್ಲಿ ಸುಮಾರು ಎಂಟುಗಂಟೆಗಳ ಕಾಲ ಪರ್ಷಿಯನ್ ಭಾಷೆಯಲ್ಲಿ ಕವನಗಳನ್ನು ಮತ್ತು ಧಾರ್ಮಿಕ ವಿಷಯಕ್ಕೆ ಸಂಬಂಧಿಸಿದಂತೆ ಲೇಖನಗಳನ್ನು ಬರೆಯುತ್ತಿದ್ದನು. ಆತ ಒಮ್ಮೆ ಹಿಕಿಯೊಂದಿಗೆ ಹೀಗೆ ಹೇಳಿಕೊಳ್ಳುತ್ತಾನೆ. 'ನನ್ನನ್ನು ಏಕೆ ಇಂತಹ ಅಸಹ್ಯಕರವಾದ ಬಂಧನದಲ್ಲಿ ಇಟ್ಟಿದ್ದಾರೆ. ನಮ್ಮ ಕುಟುಂಬವನ್ನು ಈ ಅಪರಿಚಿತವಾದ ನೆಲದಲ್ಲಿ ಇಷ್ಟು ಅಸಹ್ಯಕರವಾದ ಜಾಗದಲ್ಲಿ ಇಟ್ಟಿದ್ದಾರೆ, ಇವರು ನಮ್ಮ ತಂದೆಯನ್ನು ಕೊಂದರು, ಅವರ ಸಾಮ್ರಾಜ್ಯವನ್ನು ಕಸಿದುಕೊಂಡರು, ನನ್ನನ್ನು ಇಲ್ಲಿಯೂ ಬಂಧನದಲ್ಲಿ ಇಟ್ಟಿದ್ದಾರೆ. ಇನ್ನೂ ಇವರ ದಾಹ ತೀರಲಿಲ್ಲವೇ? ನನ್ನ ಮೇಲಿನ ಆರೋಪಗಳು ಹುಸಿ ಎಂದು ಈ ಅಧಿಕಾರಿಗಳಿಗೆ ತಿಳಿಯುವುದಿಲ್ಲವೇ. ನನ್ನ ಅಗತ್ಯಗಳು ಬಹಳ ಅಲ್ಪವಾದವು. ನನಗೆ ಸ್ವಲ್ಪ ನೀರು ಮತ್ತು ಸ್ವಲ್ಪ ಅನ್ನ ಸಿಕ್ಕಿದರೆ ಸಾಕು' ಎನ್ನುತ್ತಾನೆ. ಕಾವೇರಿಯಿಂದಮ್ ಗೋದಾವರಿಯವರೆಗೆ ಆಳಿದ ದೊರೆಯ ರಾಜಕುಮಾರ ಸ್ವಲ್ಪ ಅನ್ನ ಮತ್ತು ಸ್ವಲ್ಪ ನೀರು ದೊರೆತರೆ ಸಾಕು ಎನ್ನುತ್ತಾನೆ. ಎಂಟು ಏಪ್ರಿಲ್ ೧೮೧೮ರಂದು ಈತ ನಿಧನಹೊಂದುತ್ತಾನೆ. ಈತನಿಗೆ ಒಟ್ಟು ಆರು ಮಂದಿ ಮಕ್ಕಳು ಆದರೆ ಕೊಲ್ಕತ್ತಾದಲ್ಲಿ ಈ ವಂಶದವರ ವಾರಸುದಾರರ ಸುಳಿವು ದೊರೆಯಲಿಲ್ಲ.

೪. **ಅಬ್ದುಲ್ ಖಾಲಖ್:** ಟಿಪ್ಪುಸುಲ್ತಾನರನ್ನು ಮೇ ೫, ೧೭೯೯ರಲ್ಲಿ ದಫನ್ ಮಾಡುವಾಗ ಆ ಕಾರ್ಯಕ್ರಮದ ನೇತೃತ್ವವನ್ನು ಅಬ್ದುಲ್ ಖಾಲಕ್ ವಹಿಸಿರುತ್ತಾನೆ. ಏಕೆಂದರೆ ಈತನ ಅಣ್ಣ ಫತೇಹೈದರ್ ಶ್ರೀರಂಗಪಟ್ಟಣದಲ್ಲಿ ಇರಲಿಲ್ಲ. ಟಿಪ್ಪುವಿನ ಕುಟುಂಬವನ್ನು ವೆಲ್ಲೂರಿನಿಂದ ಕೊಲ್ಕತ್ತಾಗೆ ಸಾಗಿಸುವಾಗ ೧೨ ಸಪ್ಟೆಂಬರ್ ೧೮೦೬ರಲ್ಲಿ ಈತ ನಿಧನಹೊಂದುತ್ತಾನೆ. ಈತನಿಗೆ ಮುನೀರುದ್ದೀನ್ ಮತ್ತು ಮುಖೀಮುದ್ದೀನ್ ಎಂಬ ಇಬ್ಬರು ಮಕ್ಕಳಿರುತ್ತಾರೆ. ಈ ಕುಟುಂಬದವರ ಬಗ್ಗೆಯೂ ಇಂದು ಕಲ್ಕತ್ತೆಯಲ್ಲಿ ಸುಳಿವಿಲ್ಲ.

೫. **ಸರ್ವರ್ ಉದ್ದೀನ್:** ಈತನ ಕುಟುಂಬದಲ್ಲಿ ೩೧ ಮಂದಿ ಇರುತ್ತಾರೆ. (ಸೇವಕರೂ ಸೇರಿ).

ಡಾ. ಎಫ್.ಟಿ. ಸ್ಟ್ರಾಂಗ್ ಎನ್ನುವರು ಮೇಜರ್ ಬೆನ್ ಸನ್ ರವರಿಗೆ ಒಂದು ಪತ್ರ ಬರೆಯುತ್ತಾರೆ. ಆ ಪತ್ರದ ಸಾರಾಂಶ ನೋಡಿದರೆ ಈತನ ಬದುಕಿನ ಬಗ್ಗೆ ತಿಳಿಯುತ್ತದೆ. 'ಈ ರಾಜಕುಮಾರ ಅನೇಕ ಖಾಯಿಲೆಗಳಿಗೆ ಒಳಗಾಗಿದ್ದಾನೆ.

ಅದರಲ್ಲೂ ಮುಖ್ಯವಾಗಿ ಆತನಿಗೆ ಮಲೇರಿಯ ಕಾಡುತ್ತಿದೆ. ಇದಕ್ಕೆ ಮುಖ್ಯ ಕಾರಣ, ಆತ ವಾಸವಾಗಿರುವ ಪ್ರದೇಶ, ಇಂತಹ ಸ್ಥಳದಲ್ಲಿ ಆತ ಹೇಗೆ ವಾಸವಾಗಿ ಬದುಕಿದ್ದಾನೆ ಎಂಬುದೇ ನನಗೆ ಆಶ್ಚರ್ಯವಾಗುತ್ತದೆ. ನಾನು ಅನೇಕ ಅಧಿಕಾರಿಗಳನ್ನು ಇಲ್ಲಿಗೆ ಕರೆದುತಂದು ಈತ ವಾಸಿಸುತ್ತಿರುವ ತಾಣವನ್ನು ತೋರಿಸಿದ್ದೇನೆ. ಆದರೂ ಯಾರೂ ಏನೂ ಕ್ರಮಕೈಗೊಂಡಿಲ್ಲ. ಈತ ಜ್ವರ, ಅಪಸ್ಮಾರ, ನರರೋಗ, ಹಾಗೂ ಸ್ವಲ್ಪ ಬುದ್ಧಿಭ್ರಮಣೆಗೂ ಒಳಗಾಗಿದ್ದಾನೆ. ಈತನಿಗೆ ಇಬ್ಬರು ಹೆಣ್ಣುಮಕ್ಕಳು ಇದ್ದರು. ಅದರಲ್ಲಿ ಒಬ್ಬಾಕೆಯ ಹೆಸರು ಅಹ್ಮದಿಬೇಗಂ. ಈತನಿಗೆ ಶಮ್ಸುದ್ದೀನ್, ಅಲೀಗೌಹರ್ ಮತ್ತು ಕೈಕೋಬಾದ್ ಎಂಬ ಮೂರುಜನ ಗಂಡುಮಕ್ಕಳು. ಸರ್ವರುದ್ದೀನ್ ನ ವಂಶಸ್ಥರನ್ನು ಈಗ ಕೊಲ್ಕತ್ತೆಯಲ್ಲಿ ಗುರ್ತಿಸಲು ಆಗಲಿಲ್ಲ.

೬. **ಯಾಸೀನ್ ಷಾ:** ಈತನಿಗೆ ಎಂಟುಮಕ್ಕಳು. ರಾಜಕುಮಾರ ಯಾಸಿನ್ಗೆ ಮಾಸಿಕ ರೂ. ೨೦೯೦ ಮಾಸಾಶನ ದೊರೆಯುತ್ತಿರುತ್ತದೆ. ಈತನ ಮಗ ಬೆಹ್ರಾಮ್ ಷಾನ ವಂಶಸ್ಥರು ದೇಶವಿಭಜನೆಯ ಸಂದರ್ಭದಲ್ಲಿ ಪಾಕಿಸ್ತಾನಕ್ಕೆ ಹೋಗಿ ನೆಲೆಸಿದರು.
೭. **ಶುಕ್ರುಲ್ಲಾ:** ಈತನ ಪೂರ್ಣ ಹೆಸರು: ಹೈದರ್ ಹುಸೇನ್ ಖಾನ್ ಶುಕ್ರುಲ್ಲಾ, ಈತನಿಗೆ ೧೨ ಮಕ್ಕಳು, ಶುಕ್ರುಲ್ಲಾರವರ ವಂಶಸ್ಥರನ್ನೂ ಸಹ ಇಂದು ಕೊಲ್ಕತ್ತೆಯಲ್ಲಿ ಪತ್ತೆಹಚ್ಚಲು ಸಾಧ್ಯವಾಗುತ್ತಿಲ್ಲ.
೮. **ಜಮಾಲುದ್ದೀನ್:** ಈತನಿಗೆ ಬದ್ರುದ್ದೀನ್ ಎಂಬ ಏಕಮಾತ್ರ ಪುತ್ರನಿದ್ದನು. ೧೮೨೩ರಲ್ಲಿ ಜಮಾಲುದ್ದೀನ್ ಗೆ ೩೨ ವರ್ಷ ವಯಸ್ಸು. ಈತನ ಕಟುಂಬದಲ್ಲಿ ಕೇವಲ ೯ ಮಂದಿ ಇದ್ದರು. ಟಿಪ್ಪು ಮಕ್ಕಳಲ್ಲಿ ಇಂಗ್ಲೆಂಡಿಗೆ ಹೋಗಿದ್ದವರಲ್ಲಿ ಈತ ಮೊದಲಿಗ.
೯. **ಪ್ರಿನ್ಸ್ ಸುಭ್ಹಾನ್ ಸುಲ್ತಾನ್:** ಈತನಿಗೆ ೧೦ ಮಂದಿ ಮಕ್ಕಳು. ತಂದೆ ಮಕ್ಕಳಿಗೆಲ್ಲರೂ ಮಾಸಾಶನ ಬರುತ್ತಿತ್ತು. ಈತನ ಕುಟುಂಬದ ವಂಶಸ್ಥರನ್ನು ಈಗ ಕೊಲ್ಕತ್ತೆಯಲ್ಲಿ ಪತ್ತೆಹಚ್ಚಲು ಸಾಧ್ಯವಾಗುತ್ತಿಲ್ಲ.
೧೦. **ಮುನೀರುದ್ದೀನ್ ಸುಲ್ತಾನ್:** ೧೮೨೩ರಲ್ಲಿ ಇವರಿಗೆ ೨೯ ವರ್ಷ. ಇವರ ಏಕಮಾತ್ರ ಪುತ್ರ ಪ್ರಿನ್ಸ್ ಅನ್ವರ್ ಷಾ. ಮತ್ತು ಇವರಿಗೆ ಇಬ್ಬರು ಪುತ್ರಿಯರು, ಮಿಸ್ರೀ ಬೇಗಂ ಮತ್ತು ಉಮ್ರಾವ್ ಬೇಗಂ. ಈ ವಂಶದ ಮಗಳು ಆಫ್ತಾಬ್ ಷಾ ಪದವೀಧರ ವೈದ್ಯೆ. ಕಾಮ್ಗಾರ ಷಾ ೧೯೬೬ ರಲ್ಲಿ ನಿಧನಹೊಂದುತ್ತಾರೆ. ಟಿಪ್ಪುವಿನ ವಂಶಸ್ಥರಲ್ಲಿ ಈ ಕುಟುಂಬವು ಅತ್ಯಂತ ಪ್ರತಿಷ್ಠಿತ ಕುಟುಂಬವಾಗಿದೆ.
೧೧. **ಪ್ರಿನ್ಸ್ ಗುಲಾಂ ಮಹಮ್ಮದ್:** ಕೆ.ಸಿ.ಎಸ್.ಐ. ಟಿಪ್ಪು ಸುಲ್ತಾನರು ನಿಧನಹೊಂದಿದಾಗ ಇವರಿಗೆ ಮೂರು ವರ್ಷ ಪ್ರಾಯ ಇವರ ಕುಟುಂಬದಲ್ಲಿ ೧೮೨೩ರಲ್ಲಿ ೨೧ ಜನರಿದ್ದರು. ಗುಲಾಂ ಮುಹಮ್ಮದ್ ರವರು ಟಿಪ್ಪುವಿನ ತಮ್ಮ ಕರೀಂಷಾರವರ ಮಗಳನ್ನು ಏಪ್ರೆಲ್ ೧೮೧೪ರಲ್ಲಿ ವಿವಾಹವಾಗುತ್ತಾರೆ.
೧೨. **ಗುಲಾಮ್ ಅಹ್ಮದ್:** ಟಿಪ್ಪು ಸುಲ್ತಾನರು ನಿಧನಹೊಂದಿದಾಗ ಇವರಿಗೆ ಒಂದು ವರ್ಷ ಪ್ರಾಯ. ಇವರಿಗೆ ಅಹ್ಮದ್ ಅಕ್ಬರ್, ಶಹಿನ್ಶಾ ಬೇಗಂ, ಅಮೀರುನ್ನೀಸಾ ಬೇಗಂ ಮತ್ತು ಷಾಬೇಗಂ ಎಂಬ ನಾಲ್ಕು ಮಕ್ಕಳಿದ್ದರು. ಇವರು ೧೨ ಏಪ್ರಿಲ್ ೧೮೨೪ರಲ್ಲಿ ನಿಧನಹೊಂದಿದರು. ಇವರ ವಂಶಸ್ಥರನ್ನೂ ಈಗ ಕೊಲ್ಕತ್ತೆಯಲ್ಲಿ ಪತ್ತೆಹಚ್ಚಲು ಸಾಧ್ಯವಾಗುತ್ತಿಲ್ಲ.

೧೮೪೨ರ ಹೊತ್ತಿಗೆ ಟಿಪ್ಪುವಿನ ಮಕ್ಕಳಲ್ಲಿ ಮಹಮ್ಮದ್ ಯಾಸೀನ್, ಮಹಮ್ಮದ್ ಸುಭ್ಹಾನ್, ಮತ್ತು ಗುಲಾಮ್ ಮಹಮ್ಮದ್ ಮಾತ್ರ ಉಳಿದಿದ್ದರು. ೧೮೫೧ರಲ್ಲಿ ಟಿಪ್ಪುವಿನ ಮಕ್ಕಳನ್ನು ಪ್ರತಿನಿಧಿಸುತ್ತಿದ್ದವರಲ್ಲಿ ಗುಲಾಮ್ ಮಹಮ್ಮದ್ ಮಾತ್ರ ಉಳಿದುಕೊಂಡಿದ್ದರು. ರಾಜಕುಮಾರ ಗುಲಾಂ ಮಹಮ್ಮದ್ ಟಿಪ್ಪುವಿನ ಮಕ್ಕಳಲ್ಲಿ ಅತ್ಯಂತ ಪ್ರಸಿದ್ಧ ವ್ಯಕ್ತಿಯಾಗಿದ್ದರು. ಕೊಲ್ಕತ್ತಾದಲ್ಲಿ ಇವರು ಇಂಗ್ಲೀಷ್ ಶಿಕ್ಷಣವನ್ನು ಪಡೆದರು. ಇವರು ೧೮೧೪ರಲ್ಲಿ ತನ್ನ ಚಿಕ್ಕಪ್ಪ ಕರೀಂಶಾನ ಮಗಳನ್ನು ವಿವಾಹವಾಗುತ್ತಾರೆ. ಇವರು ೧೫ ವರ್ಷವಯಸ್ಸಿಗೆ ಬರುವವರಿಗೆ ಇವರಿಗೆ ತಿಂಗಳಿಗೆ ೧೫೦೦ ರೂಪಾಯಿ ಮಾಸಾಶನ ದೊರೆಯುತ್ತಿತ್ತು. ಇವರಿಗೆ ಹದಿನೈದು ವರ್ಷ ತುಂಬಿದನಂತರ ನಿಯಮಾನುಸಾರ ಮಾಸಿಕ ೨೦೦೦ರೂಪಾಯಿ ಮಾಸಾಶನ ಸಿಗುತ್ತಿತ್ತು. (ಆಗ ಪ್ರಾಪ್ತವಯಸ್ಸು ಅಂದರೆ ೧೫ ವರ್ಷಗಳು).

ಮೈಸೂರು ರಾಜಕುಮಾರರ ಅರೋಗ್ಯಾಧಿಕಾರಿಯಾಗಿದ್ದ ಸರ್ಜನ್ ಎಫ್.ಟಿ. ಸ್ಟ್ರಾಂಗ್‌ರವರ ವರದಿಯಂತೆ ಗುಲಾಂ ಮಹಮ್ಮದ್‌ರವರ ನಿವಾಸವು ಅತ್ಯಂತ ಅನಾರೋಗ್ಯಕರವಾದ ಸ್ಥಳದಲ್ಲಿತ್ತು ಹಾಗೂ ಮಲೇರಿಯಾದ ತಾಣವಾಗಿತ್ತು. ಗುಲಾಂ ಮಹಮ್ಮದ್‌ರವರು ಸರ್ಕಾರದ ಅನುಮತಿ ಪಡೆದು ಅಲೀಪುರದಲ್ಲಿ ತಮ್ಮ ಕಛೇರಿಗಾಗಿ ಒಂದು ಕೊಠಡಿಯನ್ನು ಖರೀದಿಸಿದರು. ಇವರಿಗೆ ಮಾಸಿಕ ವೇತನದ ಬಾಕಿಯ ಹಣವಾಗಿ ೩೬,೦೦೦ ರೂಪಾಯಿ ಬರಬೇಕಾಗಿತ್ತು. ಅದಕ್ಕಾಗಿ ಸರ್ಕಾರದಲ್ಲಿ ಬೇಡಿಕೆ ಸಲ್ಲಿಸಿದಾಗ ಸರ್ಕಾರವು ಆ ಹಣ ಮಂಜೂರು ಮಾಡಿ ನೀಡಿತು. ಆ ಹಣದಿಂದ ಇವರು

ಕಲ್ಕೋತ್ತಾದಲ್ಲಿ ಒಂದು ಮನೆಯನ್ನು ಖರೀದಿಸಿದರು. ಗುಲಾಂ ಮಹಮ್ಮದ್ ರವರು ಈ ಮನೆ ಖರೀದಿಸಿದಲ್ಲದೆ ತಾಲಿಗಂಜ್ ಸರ್ಕಲ್ ರಸ್ತೆಯಲ್ಲಿ ಪುಲ್ ಪಹಾರ್ ಎಂಬ ನಿವಾಸವನ್ನು ಕಟ್ಟಿಸಿದರು. ಇದಲ್ಲದೆ ಇವರು ಕಲ್ಕತ್ತಾದ ಜಿ.ಪಿ.ಓ ಹತ್ತಿರ ಮತ್ತು ಬೆಂಟಿಂಕ್ ಸ್ಟ್ರೀಟ್ ಮತ್ತು ಧರ್ಮತಾಲದ ಬಳಿ ಸ್ವತ್ತುಗಳನ್ನು ಖರೀದಿಸಿದರು.

ಕೋಲ್ಕತ್ತಾದಲ್ಲಿ ಗುಲಾಂ ಮಹಮ್ಮದ್ ನಿರ್ಮಿಸಿದ ಮಸೀದಿಗಳು

ಟಿಪ್ಪುಸುಲ್ತಾನರ ಪುತ್ರ ಗುಲಾಂ ಮಹಮ್ಮದ್ ರವರು ಧರ್ಮತಾಲಾದ ಬಳಿ (ಚೌರಂಗೀ ರಸ್ತೆಯ ಉತ್ತರದ ತುದಿಯಲ್ಲಿ) ಅತಿ ಸುಂದರವಾದ ಮಸೀದಿಯನ್ನು ನಿರ್ಮಿಸುತ್ತಾರೆ.

ಅಲ್ಲಿರುವ ಶಾಸನದ ಪಾಠ: ಈ ಮಸೀದಿಯನ್ನು ಟಿಪ್ಪುಸುಲ್ತಾನರ ಪುತ್ರ ಗುಲಾಂ ಮಹಮ್ಮದ್, ಆಕ್ಲ್ಯಾಂಡ್ ಸರ್ಕಾರದ ಅವಧಿಯಲ್ಲಿ, ದೇವರಿಗೆ ಕೃತಜ್ಞತೆ ಸಲ್ಲಿಸಲು ನಿರ್ಮಾಣ ಮಾಡಿದರು ಹಾಗು ನನಗೆ ಸರ್ಕಾರದಿಂದ ಬರಬೇಕಾಗಿದ್ದ ಬಾಕಿ ಮಾಸಾಶನವನ್ನು ಸರ್ಕಾರವು ೧೮೪೦ರಲ್ಲಿ ಮಂಜೂರು ಮಾಡಿದಕ್ಕಾಗಿ ನಾನು ಸರ್ಕಾರಕ್ಕೆ ಋಣಿಯಾಗಿದ್ದೇನೆ.'

ಅಲ್ಲೇ ಇರುವ ಮತ್ತೊಂದು ಶಾಸನ

ದಿವಂಗತ ಟಿಪ್ಪೂ ಸುಲ್ತಾನರ ಪುತ್ರ ಮಹಮ್ಮದ್ (ಈ ಮಸೀದಿಯನ್ನು ನಿರ್ಮಿಸಿದ್ದಾರೆ). ಕೇವಲ ಮಹಮ್ಮದರಲ್ಲ, ಪ್ರವಾದಿ ಮಹಮದ್ ರವರ ವಿನಮ್ರ ಸೇವಕ ಹಾಗು ಪ್ರವಾದಿಯವರ ಧರ್ಮದ ಅನುಯಾಯಿ, ಪ್ರಾರ್ಥನೆಗೆ ಅರ್ಹವಾದ ಈ ಮಂದಿರವನ್ನು ನಿರ್ಮಿಸಿದ್ದಾರೆ. ಇದರ ಕೀರ್ತಿಯು ಮಸ್ಜಿದ್ ಎ ಅಕ್ಸಾದ ಹಾಗೆ ಹರಡಲಿ. ಈ ಮಸೀದಿಯ ನಿರ್ಮಾಣದ ಸಂದರ್ಭದಲ್ಲಿ ದೇವದೂತ ಜಿಬ್ರಯೀಲ್‌ರವರು ಹೀಗೆ ಪ್ರಾರ್ಥಿಸಿದರು. 'ಈ ದೇವಮಂದಿರವನ್ನು ದೇವರು ಜೆರೋಸಲಮ್ಮಿನ ಪವಿತ್ರ ಮಂದಿರದಂತೆ (ಟೆಂಪಲ್ ಮೌಂಟ್) ಸಂರಕ್ಷಿಸಲಿ, ಈ ಮಸೀದಿ ನಿರ್ಮಿಸಿದವರಿಗೆ ಮತ್ತು ಅವರ ಕುಟುಂಬದವರ ಮೇಲೆ ದೇವರ ಕೃಪೆಯಿರಲಿ'

ಈ ಮಸೀದಿಯನ್ನು ಗುಲಾಂ ಮಹಮ್ಮದ್ ರವರು ೧೮೪೨ರಲ್ಲಿ ಉದ್ಘಾಟಿಸುತ್ತಾರೆ. ಇವರ ವಂಶದ ಸ್ಮಾಶನದ ಜಾಗ ಮತ್ತು ಇತರೆ ಸ್ವತ್ತುಗಳಿಗೆ ಸರ್ಕಾರವು ಕೆಲವು ಶರತ್ತುಗಳೊಡನೆ ತೆರಿಗೆಯನ್ನು ಮನ್ನಾ ಮಾಡಿರುತ್ತದೆ. ಇವರು ಕೋಲ್ಕತ್ತಾದಲ್ಲಿ ಒಂದು ಆಸ್ಪತ್ರೆಯನ್ನೂ ಸಾರ್ವಜನಿಕರಿಗಾಗಿ ತೆರೆಯುತ್ತಾನೆ (ಬಂಗೂರ್ ಹಾಸ್ಪಿಟಲ್)

ಬ್ರಿಟಿಷ್ ಸರ್ಕಾರವು ಗುಲಾಂ ಮಹಮ್ಮದ್ ರವರಿಗೆ ಕೆಲವು ಮಹತ್ವದ ಕಮಿಟಿಗಳಲ್ಲಿ ಸದಸ್ಯರನ್ನಾಗಿ ನೇಮಕ ಮಾಡಿರುತ್ತದೆ. ಅದರಲ್ಲಿ ಮುಖ್ಯವಾದದ್ದು ೧೮೫೧ರಲ್ಲಿ ಲಂಡನ್ನಿನಲ್ಲಿ ಜರುಗಿದ ವಿಶ್ವ ವಸ್ತುಪ್ರದರ್ಶನದ ನಿರ್ವಹಣಾ ಸಮಿತಿಯೂ ಒಂದಾಗಿದೆ.

ಪ್ರಿನ್ಸ್ ಗುಲಾಂಮಹಮ್ಮದ್ ರವರು ೧೮೫೪ರಲ್ಲಿ ತಮ್ಮ ಮಗನೊಡನೆ (ಹಿರಿಯ ಮಗ ಫಿರೋಜ್ ಷಾ) ಇಂಗ್ಲೇಂಡಿನ ಎಡಿನ್ ಬರ್ಗ್‌ಗೆ ಭೇಟಿ ನೀಡಿರುತ್ತಾರೆ. ಇವರ ಭೇಟಿಯ ಕುರಿತು ಅಲ್ಲಿಯ ಪತ್ರಿಕೆಯು ದಿನಾಂಕ ೩ ಆಗಸ್ಟ್ ೧೮೫೪ರಂದು ಒಂದು ಸುದ್ದಿಯನ್ನು ಪ್ರಕಟಿಸುತ್ತದೆ. ಅದರ ಸಾರಾಂಶ ಈರೀತಿ ಇದೆ.

"ಟಿಪ್ಪುಸುಲ್ತಾನರ ಪುತ್ರ ಗುಲಾಂಮಹಮ್ಮದ್ ಸರಕಾರಿ ಬಂಗಲೆಗೆ ಆಗಮಿಸಿದರು. ಅವರಿಗೆ ಅತ್ಯಂತ ಆದರದ ಹಾಗೂ ಹಾರ್ದಿಕ ಸ್ವಾಗತವನ್ನು ನೀಡಲಾಯಿತು. ಗುಲಾಂ ಅಹಮದ್ ರವರಿಗೆ ವಿಕ್ಟೋರಿಯಾ ರಾಣಿಯು ಕ್ಯಾಂಡಲ್ ಬರ್ನ್ ಆಫ್ ಡ್ರೆಸ್ ಡನ್ ಚೀನ (ಮೇಣದ ಬತ್ತಿ ಉರಿಸುವ ದೀಪಸ್ತಂಭ) ನೆನಪಿನ ಕಾಣಿಕೆಯಾಗಿ ನೀಡಿದರು. ಹಾಗೆಯೇ ಗುಲಾಂಮಹಮ್ಮದ್‌ರವರ ಮಗನಿಗೂ ಒಂದು ನೆನಪಿನ ಕಾಣಿಕೆಯನ್ನು ನೀಡಿದರು. ಗುಲಾಂಮಹಮ್ಮದ್‌ರವರು ಪಡೆಯುತ್ತಿದ್ದ ನಿವೃತ್ತಿ ವೇತನದಲ್ಲಿ ರೂ. ೧೦೦೦ವನ್ನು ಹೆಚ್ಚಿಸಲಾಯಿತು. ಇದರೊಡನೆ ಮೂರು ಸಾವಿರ ಪೌಂಡ್‌ಗಳ ನಗದು ಉಡುಗರೆಯನ್ನೂ ನೀಡಲಾಯಿತು. ಮಹಾರಾಣಿಯವರು ಗುಲಾಂಮಹಮ್ಮದ್‌ರವರ ಗೌರವಾರ್ಥ ಭೋಜನಕೂಟವನ್ನು ಏರ್ಪಡಿಸಿದ್ದರು. ಮಹಾರಾಣಿಯವರ ಬಲಭಾಗದಲ್ಲಿ ಇವರ ಆಸನವನ್ನು ನಿಗದಿ ಮಾಡಲಾಗಿತ್ತು.

ಪ್ರಿನ್ಸ್ ಗುಲಾಂಮಹಮ್ಮದ್‌ರವರು ಭಾರತಕ್ಕೆ ಮರಳಿದನಂತರ ಲಾರ್ಡ್‌ಕ್ಯಾನಿಂಗ್‌ರವರು ಇವರನ್ನು ಕೊಲ್ಕತ್ತಾ ವಿಶ್ವವಿದ್ಯಾಲಯದ ಫೌಂಡೇಶನ್‌ಫೆಲೋ ಆಗಿ ನೇಮಿಸಿದರು. ಹಾಗೂ ಇವರಿಗೆ ನೈಟ್‌ಹುಡ್ ಪದವಿಯನ್ನು ನೀಡಿ ಗೌರವಿಸಲಾಯಿತು. (ಕೆ.ಸಿ.ಎಸ್.ಐ.) ಪ್ರಿನ್ಸ್ ಗುಲಾಂಮಹಮ್ಮದ್‌ರವರು ಕೊಲ್ಕತ್ತಾದಲ್ಲಿ ಅಪಾರ ಪ್ರಮಾಣದ ಜಮೀನು ಹಾಗು ಕಟ್ಟಡಗಳನ್ನು ಹೊಂದಿದ್ದರು. ಅದರಲ್ಲಿ ಕೊಲ್ಕತ್ತಾ ಗಾಲ್ಫ್‌ಕ್ಲಬ್‌ನ ೭೦ ಎಕರೆ ಜಾಗ, ತಾಲಿಗಂಜ್‌ನ ೬೦ ಎಕರೆ ಜಾಗ, ವಿಜಯಮಲ್ಯರವರ ಅಧೀನದಲ್ಲಿರುವ ಷಾವಾಲೇಸ್ ಕಟ್ಟಡ ಹೊಂದಿರುವ ಸ್ವತ್ತು, ಹಾಗೆಯೇ ಧರ್ಮತಾಲಾದಲ್ಲಿರುವ ಮಸೀದಿ ಹಾಗೂ ಅದಕ್ಕೆ ಹೊಂದಿಕೊಂಡಿರುವ ಅಂಗಡಿ ಮಳಿಗೆಗಳು, ತಾಲಿಗಂಜ್ ಮಸೀದಿ ಹಾಗೂ ಅದಕ್ಕೆ ಹೊಂದಿಕೊಂಡಿರುವ ವಿಸ್ತಾರವಾದ ಸ್ಮಶಾನದ ಜಾಗ ಪ್ರಮುಖವಾಗಿವೆ. ಈ ಸ್ವತ್ತುಗಳನ್ನು ನಿಭಾಯಿಸಲು ಆಗಸ್ಟ್ ೧೮೭೨ರಲ್ಲಿ

'ಹಿಸ್ ಹೈನೆಸ್ ಗುಲಾಂ ಮಹಮ್ಮದ್ ಟ್ರಸ್ಟ್'ಅನ್ನು ಸ್ಥಾಪಿಸಲಾಯಿತು. ೧೯೪೪ರಲ್ಲಿ ಕಲ್ಕತ್ತಾ ಉಚ್ಚನ್ಯಾಯಾಲಯವು ಈ ಟ್ರಸ್ಟಿಗೆ ಐದುಮಂದಿಯ ಸಮಿತಿಯನ್ನು ರೂಪಿಸಿತು. ಈ ಸಮಿತಿಯ ಮುಖ್ಯಸ್ಥರಾಗಿ ಪ್ರಿನ್ಸ್ ಗುಲಾಂಮಹಮ್ಮದ್‌ರವರ ಆರನೆಯ ತಲೆಮಾರಿನವರಾದ ಪ್ರಿನ್ಸ್ ಹೈದರ್ ಅಲಿಯವರನ್ನು ನೇಮಿಸಿತು. (ಪ್ರಿನ್ಸ್ ಹೈದರ್ ಅಲಿಯವರು ಅಕ್ಟೋಬರ್ ೧೯೭೩ರಲ್ಲಿ ಕರ್ನಾಟಕಕ್ಕೆ ಭೇಟಿನೀಡಿದ್ದರು.)

ಟಿಪ್ಪುಸುಲ್ತಾನರ ವಂಶಸ್ಥರು ಹೊಂದಿದ್ದ ಕೆಲವು ಸ್ವತ್ತುಗಳನ್ನು ಟ್ರಸ್ಟಿನ ನಿರ್ವಾಹಕರು ಅಕ್ರಮವಾಗಿ ಮಾರಾಟ ಮಾಡಿಕೊಂಡಿದ್ದಾರೆ, ಬಹುತೇಕ ಸ್ವತ್ತುಗಳನ್ನು ಸರ್ಕಾರ ಸ್ವಾಧೀನ ಪಡಿಸಿಕೊಂಡಿದೆ, ಕೆಲವು ಸ್ವತ್ತುಗಳು ಅತಿಕ್ರಮಣಗೊಂಡಿವೆ. ಹಾಗೂ ಕೆಲವು ಸ್ವತ್ತುಗಳ ಹಕ್ಕಿನ ಬಗ್ಗೆ ನ್ಯಾಯಾಲಯದಲ್ಲಿ ಖಟ್ಲೆಗಳು ನಡೆಯುತ್ತಿವೆ. ಈ ಖಟ್ಲೆಗಳಿಂದಾಗಿ ಟಿಪ್ಪುವಿನ ವಂಶದ ವಾರಸುದಾರರು ರೋಸಿಹೋಗಿದ್ದಾರೆ. ವಿಜಯಮಲ್ಯ ಮತ್ತು 'ಹಿಸ್ ಹೈನೆಸ್ ಗುಲಾಂ ಮಹಮ್ಮದ್ ಟ್ರಸ್ಟ್' ನಡುವೆ ವಿವಾದವಿದ್ದ ಷಾವಾಲೇಸ್ ಸ್ವತ್ತಿನ ನ್ಯಾಯಾಲಯದ ತೀರ್ಪು, ಇತ್ತೀಚೆಗೆ ಟ್ರಸ್ಟಿನ ಪರವಾಗಿ ನೀಡಲಾಗಿದೆ. ಆದರೂ ಆ ಸ್ವತ್ತು ಇನ್ನೂ ಟಿಪ್ಪುವಿನ ವಂಶಸ್ಥರ ಕೈಸೇರಿಲ್ಲ.

ಕಲ್ಕತ್ತಾ ನಗರದಲ್ಲಿ ಟಿಪ್ಪೂ ಸುಲ್ತಾನ್ ರಸ್ತೆ ಸೇರಿದಂತೆ ಹತ್ತು ರಸ್ತೆಗಳ ಹೆಸರು ಟಿಪ್ಪುಸುಲ್ತಾನರ ವಂಶಸ್ಥರ ಹೆಸರುಗಳನ್ನು ಹೊಂದಿವೆ. ಟಿಪ್ಪುಸುಲ್ತಾನರ ವಂಶದ ಮೂರು ಮಂದಿಗೆ ಗೌರವಯುತವಾದ ಕಲ್ಕತ್ತಾದ 'ಶರೀಫ್' ಹುದ್ದೆ ದೊರೆತಿದೆ. ಇದೇ ವಂಶದ ಪ್ರಿನ್ಸ್ ಬಖ್ತಿಯಾರ್ ಷಾ. ಸಿ.ಐ.ಇ. (ಕಂಪಾನಿಯನ್ ಆಫ್ ಇಂಡಿಯನ್ ಎಂಪೈರ್) ರವರು ಕೊಲ್ಕತ್ತಾದ ಶರೀಫ್ ಹುದ್ದೆಯನ್ನು ಅಲಂಕರಿಸಿದಲ್ಲದೆ ತಾಲಿಗಂಜ್ ಮುನಿಸಿಪಾಲಿಟಿಯ ಪ್ರಥಮ ಅಧ್ಯಕ್ಷರೂ ಆಗಿದ್ದರು.

ಟಿಪ್ಪುಸುಲ್ತಾನರ ಮಕ್ಕಳಲ್ಲಿ ಅವರ ನಾಲ್ಕು ಗಂಡುಮಕ್ಕಳು ಮತ್ತು ಟಿಪ್ಪುವಿನ ಹಿರಿಯಮಗಳು ಹಾಗೂ ಟಿಪ್ಪುವಿನ ಕಿರಿಯ ಸಹೋದರ ಕರೀಮ್‌ಶಾ ರವರ ವಂಶಸ್ಥರನ್ನು ಮಾತ್ರ ಈಗ ಕೊಲ್ಕತ್ತಾದಲ್ಲಿ ಗುರ್ತಿಸಬಹುದಾಗಿದೆ.

೧. ಟಿಪ್ಪುಸುಲ್ತಾನರ ಮೊದಲ ಪುತ್ರ ಫತೇಹೈದರ್. ಈತನ ವಂಶದ ದಿಲಾವರ್ ಶಾ ಮತ್ತು ಅನ್ವರ್‌ಶಾರವರು ಪ್ರಿನ್ಸ್ ಅನ್ವರ್‌ಶಾ ರಸ್ತೆಯಲ್ಲಿ ವಾಸವಿದ್ದು ತಮ್ಮ ಜೀವನ ನಿರ್ವಹಣೆಗೆ ಸೈಕಲ್ ರಿಕ್ಷಾವನ್ನು ಹೊಂದಿದ್ದಾರೆ. (೨೦೦೪ರ ವರದಿ)

೨. ಟಿಪ್ಪುಸುಲ್ತಾನರ ಆರನೆಯ ಪುತ್ರ ಯಾಸಿನ್ ಸುಲ್ತಾನ್. ಈತನ ವಂಶಸ್ಥರಾದ ರಯೀಸ್‌ಅಹ್ಮದ್, ಗಾರ್ಡನ್ ರೀಚ್‌ರೋಡಿನ ನಿವಾಸದಲ್ಲಿ, ಮತ್ತು ಯಾಸೀನ್ ಅಹ್ಮದ್ ರವರು ಕೊಲ್ಕತ್ತಾ ಮಹಾನಗರದಲ್ಲಿ ವಾಸವಾಗಿದ್ದಾರೆ. (೨೦೦೪ರ ವರದಿ)

೩. ಟಿಪ್ಪುಸುಲ್ತಾನರ ೧೧ನೆಯ ಪುತ್ರ, ಗುಲಾಂಮಹಮ್ಮದ್: ಬ್ರಿಟೀಷರಿಂದ ಕೆ.ಸಿ.ಎಸ್.ಐ. ಪಡೆದು ತನ್ನ ಜೀವಿತಕಾಲದಲ್ಲಿ ಸರ್ಕಾರದ ಅನೇಕ ಪ್ರತಿಷ್ಠಿತ ಗೌರವ ಹುದ್ದೆಗಳನ್ನು ಪಡೆದಿದ್ದ ಪ್ರಿನ್ಸ್ ಗುಲಾಂಮಹಮ್ಮದ್‌ರವರ ವಂಶಸ್ಥರಾದ ಇಬ್ಬರು ಸಹೋದರರಾರದ ಅನ್ವರ್‌ಅಲಿಶಾ ಮತ್ತು ಅವರ ಕಿರಿಯ ಸಹೋದರ ಅಕ್ಬರ್‌ಅಲಿಶಾರವರನ್ನು ನಾನು ಇತ್ತೀಚೆಗೆ ಎರಡುಬಾರಿ ಖುದ್ದಾಗಿ ಭೇಟಿಯಾಗಿದ್ದೇನೆ. ಇವರ ನಿವಾಸವು ತಾಲಿಗಂಜ್‌ನಲ್ಲಿದೆ. ಇವರು ಪ್ರಿನ್ಸ್ ಗುಲಾಂಮಹಮ್ಮದ್‌ರವರು ನಿರ್ಮಿಸಿದ್ದ ನಿವಾಸದ ಒಂದು ಭಾಗದಲ್ಲಿ ವಾಸವಾಗಿದ್ದಾರೆ. ಹಿರಿಯ ಸಹೋದರ ಅನ್ವರ್‌ಅಲಿಶಾರವರು 'ಹಿಸ್ ಹೈನೆಸ್ ಪ್ರಿನ್ಸ್ ಗುಲಾಂಮಹಮ್ಮದ್ ಟ್ರಸ್ಟ್'ನ ಮುಖ್ಯಸ್ಥರಾಗಿದ್ದಾರೆ. ಪ್ರಿನ್ಸ್ ಗುಲಾಂಮಹಮ್ಮದ್‌ರವರು ರಚಿಸಿದ್ದ ಈ ಟ್ರಸ್ಟಿನ ಬಹುತೇಕ ಆಸ್ತಿಯನ್ನು ಈ ಟ್ರಸ್ಟಿನ ನಿರ್ವಾಹಕರೇ ಅಕ್ರಮವಾಗಿ ಮಾರಾಟ ಮಾಡಿಕೊಂಡಿದ್ದಾರೆ. ಆದರೂ ಸಹ ಈಗಲೂ ಈ ಟ್ರಸ್ಟ್ ಕೋಟ್ಯಾಂತರ ರೂಪಾಯಿಯ ಆಸ್ತಿಯನ್ನು ಹೊಂದಿದೆ. ಆದರೆ ಈ ಟ್ರಸ್ಟಿನ ಬಹುತೇಕ ಆಸ್ತಿಯು ಅತಿಕ್ರಮಣ ಹಾಗೂ ನ್ಯಾಯಾಲಯಗಳ ಖಟ್ಲೆಗಳ ಸುಳಿಯಲ್ಲಿ ಸಿಕ್ಕಿವೆ. ಅನ್ವರ್‌ಅಲಿಶಾರವರು ಜೀವನ ನಿರ್ವಹಣೆಗೆ ಸೈಕಲ್‌ರಿಕ್ಷಾ ಅವಲಂಬಿಸಿದ್ದರು, ಆದರೆ ಈಗ ಟ್ರಕ್ ಚಾಲಕರಾಗಿ ಜೀವನ ನಿರ್ವಹಿಸುತ್ತಿದ್ದಾರೆ. ಇವರ ತಮ್ಮ ಅಕ್ಬರ್‌ಅಲಿಶಾ ಇದೇ ನಿವಾಸಕ್ಕೆ ಹೊಂದಿಕೊಂಡಿರುವ ಅಂಗಡಿ ಮಳಿಗೆಯಲ್ಲಿ ಪಿಂಗಾಣಿ ನೆಲಹಾಸುಗಳ (ಟೈಲ್ಸ್) ಮಾರಾಟದ ಅಂಗಡಿ ಹೊಂದಿದ್ದಾರೆ.

೪. ಟಿಪ್ಪುಸುಲ್ತಾನರ ಹತ್ತನೆಯ ಮಗ ಪ್ರಿನ್ಸ್ ಮುನಿರುದ್ದೀನ್‌ಶಾರವರ ವಂಶಸ್ಥರನ್ನೂ ಸಹ ನಾನು ಕೊಲ್ಕತ್ತೆಯಲ್ಲಿ ಇತ್ತೀಚೆಗೆ ಭೇಟಿಯಾಗಿದ್ದೇನೆ. ಕೊಲ್ಕತ್ತೆಯ ಶೇಕ್ಸ್‌ಪಿಯರ್‌ಸರಾನಿ ರಸ್ತೆಯಲ್ಲಿ ಇವರ ನಿವಾಸವಿದೆ. ಪ್ರಿನ್ಸ್ ಮುನೀರುದ್ದೀನರ ವಂಶಸ್ಥರಾದ ಮಹಮ್ಮದ್ ಹುಸೇನ್‌ಶಾ (೭೭ ವರ್ಷ) ಮತ್ತು ಅವರ ಪುತ್ರ ಬಖ್ತಿಯಾರ್‌ಅಲಿಶಾರವರನ್ನು ನಾನು ಕೊಲ್ಕತ್ತಾದಲ್ಲಿ ಭೇಟಿಯಾಗಿದ್ದೆ. ಮಹಮ್ಮದ್ ಹುಸೇನ್‌ಶಾರವರು ಇಂಡಿಯನ್ ಆಯಲ್ ಕಾರ್ಪೋರೇಶನ್‌ನ ಸೀಮೆಯಣ್ಣೆ ವಿತರಕರಾಗಿದ್ದರು. ಇವರು ನವಂಬರ್ ೨೦೨೦ರಲ್ಲಿ ನಿಧನರಾದರು. ಬಕ್ತಿಯಾರ್ ಅಲಿಶಾರವರು



ಮಹಮ್ಮದ್ ಹುಸೇನ್ ಶಾ



ಬಕ್ತಿಯಾರ್ ಶಾ



ಅನ್ವರ್ ಅಲಿ ಶಾ



ಅಕ್ಬರ್ ಅಲಿ ಶಾ

ಕೊಲ್ಕತ್ತಾ ಹೈಕೋರ್ಟಿನ ವಕೀಲರಾಗಿದ್ದಾರೆ. ಇವರ ತಮ್ಮ ಸೈಫ್‌ಅಲಿಶಾರವರು ಆಸ್ಟ್ರೇಲಿಯಾದ ಪರ್ತ್ ನಗರದಲ್ಲಿ ಜಿ.ಯಿ. ಕಂಪನಿಯ ಹಣಕಾಸಿನ ನಿರ್ವಹಣಾಧಿಕಾರಿಯಾಗಿದ್ದಾರೆ. (ಫೈನಾನ್ಸ್ ಕಂಟ್ರೋಲರ್).

ಟಿಪ್ಪುಸುಲ್ತಾನರ ವಂಶಸ್ಥರಲ್ಲಿ ಈ ಕುಟುಂಬವು ಒಂದು ಪ್ರತಿಷ್ಠಿತ ಕುಟುಂಬವಾಗಿದೆ. ಇದಕ್ಕೆ ಕಾರಣ ಈ ವಂಶಸ್ಥರಿಗೆ ಉತ್ತಮ ಶೈಕ್ಷಣಿಕ ಅವಕಾಶಗಳು ದೊರೆತವು. ಟಿಪ್ಪುಸುಲ್ತಾನರ ಪುತ್ರ ಮುನೀರುದ್ದೀನರ ಮೊಮ್ಮಗ ಪ್ರಿನ್ಸ್ ಬಖ್ತಿಯಾರ್ ಶಾರವರು ಈಗಿನ ಜಾರ್ಖಂಡಿನಲ್ಲಿ ಹಿಂದುಸ್ತಾನ್ ಕಾಪರ್ ಲಿಮಿಟೆಡ್ ಎಂಬ ಸುಮಾರು ೧೧,೦೦೦ ಚದರ ಮೈಲಿ ವಿಸ್ತೀರ್ಣದ ಜಾಗದಲ್ಲಿ ತಾಮ್ರದ ಗಣಿಯನ್ನು ಹೊಂದಿದ್ದರು. (ಆದರೆ ಈ ಗಣಿಯನ್ನು ಬಿಹಾರ ಸರ್ಕಾರವು ೧೯೭೪ರಲ್ಲಿ ಕಂಪನಿಯ ವಾರಸುದಾರರಿಗೆ ಯಾವುದೇ ಪರಿಹಾರ ನೀಡದೆ ರಾಷ್ಟ್ರೀಕರಣ ಮಾಡಿತು.) ಬಖ್ತಿಯಾರ್ ಶಾರವರ ಮೊಮ್ಮಕ್ಕಳೇ ಮಹಮ್ಮದ್ ಹುಸೇನ್ ಶಾ. ಇವರಿಗೆ ಕೊಲ್ಕತ್ತಾದ ಸೇಂಟ್ ಕ್ಸೇವಿಯರ್ ಚಾಲೇಜಿನಲ್ಲಿ ಶಿಕ್ಷಣ ದೊರೆಯಿತು.

೫. ಟಿಪ್ಪುಸುಲ್ತಾನರಿಗೆ ಐದುಮಂದಿ ಪುತ್ರಿಯರು ಇದ್ದರು. ಇವರಲ್ಲಿ ಇಬ್ಬರು ಎಳೆಯ ವಯಸ್ಸಿನಲ್ಲಿಯೇ ಶ್ರೀರಂಗಪಟ್ಟಣದಲ್ಲಿಯೇ ಮರಣಹೊಂದಿದರು. ಉಮ್ದಾಬೇಗಂ ಮತ್ತು ಹಲೀಮಾಬೇಗಂ ಇನ್ನುಳಿದ ಇಬ್ಬರು ಹೆಣ್ಣುಮಕ್ಕಳು. ಹಲೀಮಾ ಬೇಗಂರವರಿಗೆ ಒಬ್ಬಳು ಹೆಣ್ಣುಮಗಳಿದ್ದಳು. ಈಕೆಗೆ ಗಂಡು ಸಂತಾನವಿರಲಿಲ್ಲ. ಹಾಗಾಗಿ ಕೊಲ್ಕತ್ತಾದಲ್ಲಿ ಈಗ ಈಕೆಯ ವಂಶಸ್ಥರ ಸುಳಿವಿಲ್ಲ. ಆದರೆ ಉಮ್ದಾಬೇಗಂರವರ ವಂಶಸ್ಥರಾದ ಕರೀಮುದ್ದೀನ್‌ಖಾನ್‌ರವರು ಶಿಪ್ಪಿಂಗ್ ಕಾರ್ಪೋರೇಷನ್ ಆಫ್ ಇಂಡಿಯಾದ ಉದ್ಯೋಗಿಯಾಗಿದ್ದಾರೆ. (೨೦೦೪)

೬. ಟಿಪ್ಪುಸುಲ್ತಾನರ ಕಿರಿಯ ಸಹೋದರ ನವಾಬ್ ಕರೀಂಶಾರವರ ವಂಶದ ಮಹಮ್ಮದ್ ಶಾಹಿದ್‌ಆಲಂರವರು ಕೊಲ್ಕತ್ತಾದಲ್ಲಿಯೇ ವಾಸವಾಗಿದ್ದಾರೆ. ಇವರ ಪತ್ನಿ ನೀಲುಫರ್ ಸಿದ್ದೀಖಿ ಕೊಲ್ಕತ್ತಾ ಉಚ್ಚನ್ಯಾಯಾಲಯದಲ್ಲಿ ವಕೀಲರಾಗಿದ್ದಾರೆ. (೨೦೦೪)

ಬ್ರಿಟೀಷರಿಗೆ ಸಿಂಹಸ್ವಪ್ನವಾಗಿದ್ದು, ತನ್ನ ವೈರಿಗಳೂ ಸಹ ತಲೆದೂಗುವಂತೆ ಆಳ್ವಿಕೆ ನಡೆಸಿ, ದಕ್ಷಿಣ ಭಾರತದ ಬಹುಭಾಗದಲ್ಲಿ ತನ್ನ ಸಾಮ್ರಾಜ್ಯವನ್ನು ವಿಸ್ತರಿಸಿ, ರಣರಂಗದಲ್ಲಿ ವೀರಮರಣ ಹೊಂದಿದ, ಕನ್ನಡನಾಡಿನ ಸುಪುತ್ರ ಟಿಪ್ಪುಸುಲ್ತಾನರ ವಂಶಸ್ಥರ ನೋವು ನಲಿವಿನ ಇತಿಹಾಸವನ್ನು ಸಂಕ್ಷಿಪ್ತವಾಗಿ ಇಲ್ಲಿ ತೆರೆದಿಡಲಾಗಿದೆ.

ಆಕರ ಗ್ರಂಥಗಳು

೧. 'ಸೌತ್ ಇಂಡಿಯನ್ಸ್ ಇನ್ ಕೊಲ್ಕತ್ತಾ' ಲೇಖಕರು ಪಿ.ತಂಕಪ್ಪ ನಾಯರ್. ಪ್ರಕಾಶಕರು, ಪುಂತಿ ಪುಸ್ತಕ್, ಕೊಲ್ಕತ್ತಾ. ೨೦೦೦೪ ಪುಸ್ತಕ ಪ್ರಕಟಣೆಯ ವರ್ಷ ೨೦೦೪.

೨. 'ಟಿಪ್ಪು ಸುಲ್ತನನ ಇತಿಹಾಸ'. ಮೂಲ ಲೇಖಕರು ಮೊಹಿಬ್ಬುಲ್ ಹಸನ್. ಕನ್ನಡಕ್ಕೆ ಅನುವಾದ. ಶ್ರೀ ಸಮತೇನಹಳ್ಳಿ ರಾಮರಾಯರು. ಪ್ರಕಟಣೆ. ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.

೩. ಕೊಲ್ಕತ್ತಾ ನಗರಕ್ಕೆ ಭೇಟಿನೀಡಿ, ಟಿಪ್ಪುಸುಲ್ತಾನರ ವಂಶಸ್ಥರನ್ನು ಭೇಟಿಮಾಡಿ ಅವರಿಂದ (ಕ್ಷೇತ್ರ ಕಾರ್ಯ) ಮಾಹಿತಿಯನ್ನು ಸಂಗ್ರಹಿಸಲಾಗಿದೆ.

ಅಂದಾನಪ್ಪ ದೊಡ್ಡಮೇಟಿ ಅವರ ನೀರಾವರಿ ಯೋಜನೆಗಳು

ಎಸ್.ಆರ್. ನದಾಫ✷

ಕೃಷಿ ಪ್ರಧಾನವಾದ ಭಾರತದಲ್ಲಿ ನೀರಾವರಿ ಭೂಮಿಗಿಂತ ಒಣಬೇಸಾಯವೇ ಅಧಿಕವಾಗಿದೆ. ಪ್ರಾಚೀನ ಕಾಲದಿಂದಲೂ ಭಾರತದಲ್ಲಿ ನೀರಾವರಿ ವ್ಯವಸ್ಥೆ ಬಳಕೆಯಲ್ಲಿದೆ. ಶೇಕಡಾ ೪೭ರಷ್ಟು ಕೃಷಿ ಸಾಗುವಳಿ ಭೂಮಿ ಇದ್ದು ಅದರಲ್ಲಿ ಶೇ. ೨೭ರಷ್ಟು ಭೂ-ಭಾಗ ಮಾತ್ರ ನೀರಾವರಿ ಸೌಲಭ್ಯವನ್ನು ಪಡೆದಿದೆ. ಅಲ್ಲದೇ ಇದಕ್ಕೆ ಭೌಗೋಳಿಕ ಅಂಶಗಳ ಪ್ರಭಾವವು ಕಾರಣವಾಗಿದೆ. ನೀರಾವರಿ ವ್ಯವಸ್ಥೆ ಕಲ್ಪಿಸಲು ರಾಜಪ್ರಭುತ್ವದಿಂದ ಹಿಡಿದು ಇಂದಿನ ಪ್ರಜಾಪ್ರಭುತ್ವದವರೆಗೆ ಹಲವಾರು ಪ್ರಯತ್ನಗಳು ನಡೆದಿವೆ.

ಅಂದಾನಪ್ಪ ದೊಡ್ಡಮೇಟಿಯವರ ಕೃಷಿ ಕುಟುಂಬದವರಾದ್ದರಿಂದ ರೈತರ ಸಂಕಷ್ಟಗಳನ್ನು ಸ್ವ-ಅನುಭವದಿಂದ ಬಲ್ಲವರಾಗಿದ್ದರು. ಇದು ಅನೇಕ ಕೆರೆ ಬಾವಿ, ಕೊಳವೆ ಬಾವಿಗಳ ಯೋಜನೆಗಳ ಬಗ್ಗೆ ಮುಂಬಯಿ ಶಾಸನ ಸಭೆ ಮತ್ತು ಮೈಸೂರು ವಿಧಾನಸಭೆಗಳಲ್ಲಿ ಧ್ವನಿ ಎತ್ತಲು ಪ್ರೇರಣೆಯಾಯಿತು. ಅಲ್ಲದೇ ಮುಖ್ಯಮಂತ್ರಿಗಳಾದ ಶ್ರೀ. ವೀರೇಂದ್ರ ಪಾಟೀಲರ ಸಚಿವ ಸಂಪುಟದಲ್ಲಿ ಚಿಕ್ಕ ನೀರಾವರಿ ಸಚಿವರಾಗಿದ್ದು ತಮ್ಮ ಕಾರ್ಯಸಾಧನೆಗೆ ಬಲಬಂದಂತಾಯಿತು. ಗದಗ ಜಿಲ್ಲೆ ಗಜೇಂದ್ರಗಡ ತಾಲೂಕಿನ ನಾಗೇಂದ್ರಗಡ, ನಾಗರಸಕೊಪ್ಪ, ಬೆನಸಮಟ್ಟಿ, ಜಿಗೇರಿ ಗ್ರಾಮಗಳಲ್ಲಿ ಬೃಹತ್ ಕೆರೆಗಳನ್ನು ನಿರ್ಮಿಸಿದರು. ಹೀಗೆ ಹಲವಾರು ಕೆರೆಗಳ ನಿರ್ಮಾಣ ಮತ್ತು ದುರಸ್ತಿಗೆ ಯೋಜನೆಗಳನ್ನು ರೂಪಿಸಿದರು.

ನಾಗೇಂದ್ರಗಡ ಕೆರೆ

ಗದಗ ಜಿಲ್ಲೆಯ ಅಂದಿನ ರೋಣ ತಾಲೂಕಿನ ಪೂರ್ವಕ್ಕೆ, ಇಂದಿನ ಗಜೇಂದ್ರಗಡ ತಾಲೂಕಿನ ಉತ್ತರ ಭಾಗದಲ್ಲಿರುವ ನಾಗೇಂದ್ರಗಡ ಗ್ರಾಮದ ಕೆರೆಯು ಸು.೩೫೦ ಎಕರೆ ಆಯಕಟ್ಟಿನ ಕೆರೆಯಾಗಿದ್ದು, ಸುಮಾರು ೪೫೦ ಎಕರೆ ನೀರಾವರಿ ಕ್ಷೇತ್ರ ಹೊಂದಿರುವ ಕೆರೆಯಾಗಿದೆ. ಇದಕ್ಕೆ 'ಹೊಗರಿ ಕೆರೆ' ಎಂತಲೂ ಕರೆಯುವರು. ಈ ಕೆರೆಯ ದುರಸ್ತಿ ಕಾರ್ಯ ಸಾಕಾರಗೊಳ್ಳುವುದಕ್ಕಾಗಿ ಅಂದಾನಪ್ಪ ದೊಡ್ಡಮೇಟಿಯವರು ಮುಂಬೈ ಶಾಸನ ಸಭೆಯಲ್ಲಿ ನಾಗೇಂದ್ರಗಡ ಗ್ರಾಮದ ಜನರ ಈ ಬೇಡಿಕೆಯ ವಿಳಂಬವನ್ನು ಮತ್ತು ಸರಕಾರದ ಕ್ರಮಗಳನ್ನು ಪ್ರಶ್ನಿಸಿದರು. ಅದಕ್ಕೆ ಅರಣ್ಯ ಮತ್ತು ಕೃಷಿ ಸಚಿವರಾಗಿದ ಶ್ರೀ ಎಂ.ಪಿ. ಪಾಟೀಲ್‌ರವರು-ಗ್ರಾಮಸ್ಥರ ಮನವಿ ಪರಿಗಣಿಸಲಾಗಿದೆ ಮತ್ತು ಮಂಡಳಿಯು ಜೂನ ೧೯೪೭ರಲ್ಲಿ ಶಿಫಾರಸ್ಸು ಮಾಡಿದೆ. ಆದರೆ ಅದನ್ನು ತುರ್ತು ಯೋಜನೆಯಾಗಿ ಶಿಫಾರಸ್ಸು ಮಾಡಿಲ್ಲ. ಆದ್ದರಿಂದ ೧೮೭೯ರ ಬಾಂಬೆ ನೀರಾವರಿ ಕಾಯ್ದೆಯ ೭೩ನೇ ಕಲಂ ಅಡಿಯಲ್ಲಿ ಕೆರೆಯನ್ನು ದ್ವೀತಿಯ ದರ್ಜೆಯ ನೀರಾವರಿ ಕಾರ್ಯವೆಂದು ಘೋಷಿಸಿ ಸರಕಾರ ಕ್ರಮ ಕೈಗೊಳ್ಳುತ್ತಿದೆ ಎಂದು ಪ್ರತಿಕ್ರಿಯೆ ನೀಡಿದರು. ಮುಂದುವರೆದು, ಈ ಯೋಜನೆಯನ್ನು ತುರ್ತಾಗಿ ಕೈಗೊಳ್ಳಬೇಕೆಂದು ಧಾರವಾಡ ಜಿಲ್ಲಾ ಗ್ರಾಮೀಣಾಭಿವೃದ್ಧಿ ಮಂಡಳಿಯು ಶಿಫಾರಸ್ಸು ಮಾಡಿದರೆ ಕಾರ್ಯವನ್ನು ತೀವ್ರಗೊಳಿಸಬಹುದು ಎಂದರು.[೧] ಹೀಗೆ ಬೆಂಬಿಡದೆ ಕೆರೆ ನಿರ್ಮಾಣ ಕಾರ್ಯದಲ್ಲಿ ಯಶಸ್ವಿಯಾದರು. ನಂತರ ಇವರು ೧೯೬೭ರಲ್ಲಿ ಚಿಕ್ಕ ನೀರಾವರಿ ಸಚಿವರಾಗಿದ್ದಾಗ ಇದನ್ನು ಅಭಿವೃದ್ಧಿಪಡಿಸಿದರು. ಪ್ರಸ್ತುತ ನೂರು ಎಕರೆ ವಿಸ್ತೀರ್ಣ ಒಡಲಾಳ ಹೊಂದಿರುವ ಈ ಬೃಹತ್ ಕೆರೆಯಿಂದ ೬೩೦ ಎಕರೆಗೆ ನೀರಾವರಿ ಪ್ರದೇಶದಿಂದ ಕೃಷಿಕರಿಗೆ ವರದಾನವಾಗಿದೆ.[೨]


ನಾಗರಸಕೊಪ್ಪ ಕೆರೆ

ನಾಗರಸಕೊಪ್ಪ ಗ್ರಾಮದಲ್ಲಿರುವ ಈ ಕೆರೆಯು ಗಜೇಂದ್ರಗಡ ತಾಲೂಕಿನ ಪೂರ್ವ ದಿಕ್ಕಿಗಿರುವ ಕುಷ್ಟಗಿ ರಸ್ತೆಗೆ ಹೊಂದಿಕೊಂಡಿದೆ. ಇಲ್ಲಿ ಕರ್ನಾಟಕ ಸರ್ಕಾರದ ಜಲಸಂಪನ್ಮೂಲ ಇಲಾಖೆ, ಸಣ್ಣ ನೀರಾವರಿ ಯೋಜನೆಯಡಿ ಸು. ೩೬೦ ಎಕರೆ ನೀರಾವರಿ ಕ್ಷೇತ್ರದ ನೀರಾವರಿಗಾಗಿ ಈ ಕೆರೆಯನ್ನು ನಿರ್ಮಿಸಲಾಗಿದೆ. ಈ ಕೆರೆ ೨೫೪ ಹೆಕ್ಟೇರ್ ವಿಸ್ತೀರ್ಣ

✷ ಸಂಶೋಧನಾ ವಿದ್ಯಾರ್ಥಿ, ಡಾ. ಆ.ನೇ. ಉಪಾಧ್ಯೆ ಅಧ್ಯಯನ ಕೇಂದ್ರ, ಬೆಳಗಾವಿ, ಕನ್ನಡ ವಿವಿ, ಹಂಪಿ.



ಕೆರೆಯ ಗೇಟ್ ವಾಲ್ (ಕೆರೆ ಬರಿದಾದ ಕಾಲದಲ್ಲಿ)



ಬರಿದಾದ ಕೆರೆಯ ಒಳಾಂಗಣದ ಛಾಯಾಚಿತ್ರ



ತುಂಬಿದ ಕೆರೆಯ ಛಾಯಾಚಿತ್ರ

ಹೊಂದಿದ್ದು, ೧೮.೩೭ ಎಂ.ಸಿ.ಎಫ್. ನೀರು ಸಂಗ್ರಹ ಸಾಮರ್ಥ್ಯ ಮತ್ತು ೨೮.೦೨ ಹೆಕ್ಟೇರ್ ಹೀನ್ನಿರು ಸಾಮರ್ಥ್ಯ ಹೊಂದಿದೆ.[3] ಈ ಕೆರೆಯನ್ನು ನಾಗರಸಕೊಪ್ಪ ಮತ್ತು ಗೋಗೆರಿ ಗ್ರಾಮಗಳ ಭೂಮಿಯನ್ನು ನೀರಾವರಿಗೊಳಿಸುವ ಉದ್ದೇಶದಿಂದ ಕೆರೆಯನ್ನು ಅಭಿವೃದ್ಧಿಗೊಳಿಸಲಾಗಿದೆ. ಗ್ರಾಮಸ್ಥರು ಹೇಳುವಂತೆ ಈ ಕೆರೆಯು ಒಮ್ಮೆ ತುಂಬಿತೆಂದರೆ ಸುತ್ತಲಿ ಗ್ರಾಮಗಳ ಕೊಳವೆ ಬಾವಿಗಳಿಗೆ ಉತ್ತಮ ಅಂತರ್ಜಲ ದೊರೆಯುತ್ತದೆ.

ಗಜೇಂದ್ರಗಡ-ಕುಷ್ಟಗಿ ರಸ್ತೆ ನಾಗರಸಕೊಪ್ಪ ಗ್ರಾಮದ ಪಕ್ಕದಲ್ಲಿರುವ ಸೂಚನಾ ಫಲಕದಲ್ಲಿ ಈ ಕೆರೆಯು ಕರ್ನಾಟಕ ಸರ್ಕಾರದ ಜಲಸಂಪನ್ಮೂಲ ಇಲಾಖೆ, ಸಣ್ಣ ನೀರಾವರಿ ಯೋಜನೆಯಡಿ ರೈತ ಕಾಯಕದ ೩೬೦ ಎಕರೆ ನೀರಾವರಿ ಕ್ಷೇತ್ರದ ಕೆರೆಯೊಂದನ್ನು ನಿರ್ಮಿಸ ಉಲ್ಲೇಖವಿರುತ್ತದೆ. ಈ ಕೆರೆ ಕುರಿತು ಜ್ಞಾನದೇವ ದೊಡ್ಡಮೇಟಿ, ರವೀಂದ್ರನಾಥ ದೊಡ್ಡಮೇಟಿ ಹಾಗೂ ಸ್ಥಳೀಯರು ಅಂದಾನಪ್ಪ ದೊಡ್ಡಮೇಟಿಯವರು ಸಣ್ಣ ನೀರಾವರಿ ಸಚಿವರಾಗಿದ್ದ ಕಾಲದಲ್ಲಿ

ಯೋಜನೆಯನ್ನು ರೂಪಿಸಿದರೆಂದು ಹೇಳಿರುತ್ತಾರೆ. ಆದರೆ ನಿರ್ದಿಷ್ಟ ಕಾಲಮಾನ ಸೂಚಕ ಕುರುಹುಗಳು ಉಳಿದು ಬಂದಿರುವುದಿಲ್ಲ.

ಈ ಯೋಜನೆಗಳನ್ನು ಅನುಷ್ಠಾನಗೊಳಿಸುವಲ್ಲಿ ವಿಳಂಬಗತಿಗೆ ಕಾರಣರಾದ ದುರ್ಬಲ ಅಧಿಕಾರಿಗಳ ವಿರುದ್ಧ ಅಧಿವೇಶನದಲ್ಲಿ ಧ್ವನಿ ಎತ್ತಿದರು. ಅಷ್ಟೇ ಅಲ್ಲದೆ, ಗಜೇಂದ್ರಗಡದ ಸುತ್ತ ೨೨ ಹಳ್ಳಿಗಳ ರೈತರಿಗೆ ಸರಕಾರಿ ಜಮೀನನ್ನು–ಆರುಪಟ್ಟು ಕಂದಾಯವನ್ನು ತೆಗೆದುಕೊಂಡು ಹಂಚಿಕೆ ಮಾಡಲು ೧೯೬೦ನೇ ವರ್ಷದಲ್ಲಿ ಹೊರಡಿಸಿದ ಆದೇಶವನ್ನು ಇಲ್ಲಿಯವರೆಗೆ ಜಾರಿಗೊಳಿದೆ ಇರುವುದನ್ನು ಪ್ರಶ್ನಿಸಿ, ತೀವ್ರಗತಿಯಲ್ಲಿ ಜಾರಿಗೊಳಿಸುವಂತೆ ಮತ್ತು ಭೂಸುಧಾರಣೆ ತರಲು ಒತ್ತಾಯಿಸಿದರು. ಹೀಗೆ ನೀರಾವರಿ ಯೋಜನೆಗಳ ಜೊತೆಗೆ ರೈತರಿಗೆ ಸಂಬಂಧಿಸಿದ ಸುಧಾರಣೆಗೆ ಯಾವಾಗಲೂ ಕಂಕಣಬದ್ಧರಾಗಿದ್ದರು.[೪]




ಕೆರೆಯ ಸೂಚನಾ ಫಲಕ



ಕೆರೆಯ ನೀರು ಹೊರಹರಿವಿನ ಗೇಟ್



ಬರಿದಾಗಿರುವ ಕೆರೆಯ ಛಾಯಾಚಿತ್ರ



ತುಂಬಿದ ಕೆರೆಯ ಛಾಯಾಚಿತ್ರ

ಬೆನಸಮಟ್ಟಿ ಕೆರೆ

ಇದು ಗದಗ ಜಿಲ್ಲಾ ರೋಣ ತಾಲೂಕಿನ ಪ್ರಸ್ತುತ ಗಜೇಂದ್ರಗಡ ತಾಲೂಕಿನ ಈಶಾನ್ಯ ದಿಕ್ಕಿಗಿರುವ ಬೆನಸಮಟ್ಟಿ ಗ್ರಾಮವು ನಾಗರಸಕೊಪ್ಪದಿಂದ ೨ ಕಿ.ಮೀ. ಅಂತರದಲ್ಲಿದೆ. ಇಲ್ಲಿಯು ಕೂಡಾ ನೀರಾವರಿಗೆ ಅನುಕೂಲವಾಗಲೆಂದು ಕೆರೆ ನಿರ್ಮಾಣಕ್ಕೆ ಯೋಜನೆ ರೂಪಿಸಲಾಗುತ್ತದೆ. ಈ ಕೆರೆಯು ಸುಮಾರು. ೩೫೦ ಎಕರೆ ನೀರಾವರಿ ಕ್ಷೇತ್ರವನ್ನು ಒಳಗೊಂಡಿರುತ್ತದೆ. ಈ ಕೆರೆ ೧೭೪ ಹೆಕ್ಟೇರ್ ವಿಸ್ತೀರ್ಣವಿದ್ದು, ೧೦.೧೧ ಎಂ.ಸಿ.ಎಫ್. ನೀರು ಸಂಗ್ರಹ ಸಾಮರ್ಥ್ಯ ಮತ್ತು ೨೨ ಹೆಕ್ಟೇರ್ ಹೀನ್ನಿರು ಸಂಗ್ರಹ ಸಾಮರ್ಥ್ಯ ಹೊಂದಿದೆ. ಈ ಕೆರೆಯಿಂದ ನಾಗರಸಕೊಪ್ಪ, ಕುಂಟೋಜಿ ಗ್ರಾಮಗಳ ೩೬೦ ಎಕರೆ ಭೂಮಿಗೆ ಎಡದಂಡೆ ಮತ್ತು ಬಲದಂಡೆ ಕಾಲುವೆಗಳ ಮೂಲಕ ನೀರುಣಿಸಲಾಗುತ್ತದೆ.[೬]



ಕೆರೆಯ ಗೇಟ್ ಛಾಯಾಚಿತ್ರ



ಗೇಟ್ ವಾಲ್ ಮತ್ತು ಬರಿದಾದ ಕೆರೆಯ ಛಾಯಾಚಿತ್ರ




ತುಂಬಿದ ಕೆರೆಯ ಛಾಯಾಚಿತ್ರ

ಜಿಗೇರಿ ಕೆರೆ

ಗಜೇಂದ್ರಗಡ ತಾಲೂಕಿನ ಉತ್ತರ ದಿಕ್ಕಿಗಿರುವ ಜಿಗೇರಿ ಕೆರೆಯು ಹನುಮಸಾಗರ ರಸ್ತೆಗೆ ಹೊಂದಿಕೊಂಡಿರುತ್ತದೆ. ಈ ಕೆರೆಯು ಸು. ೧೫೧ ಹೆಕ್ಟೇರ್ ಅಚ್ಚುಕಟ್ಟು ಪ್ರದೇಶ ಒಳಗೊಂಡಿದ್ದು, ಸು. ೩೬೦ ಎಕರೆ ನೀರಾವರಿ ಕ್ಷೇತ್ರ ಒಳಗೊಂಡಿದೆ. ಈ ಕೆರೆ ೧೫೧ ಹೆಕ್ಟೇರ್ ವಿಸ್ತೀರ್ಣ ಹೊಂದಿದ್ದು, ೨೨.೪೧ ಎಂ.ಸಿ.ಎಫ್ (ಮಿಲಿಯನ್ ಕ್ಯೂಬಿಕ್ ಫೀಟ್) ನೀರು ಸಂಗ್ರಹ ಸಾಮರ್ಥ್ಯ ಹೊಂದಿದೆ.[೭] ಈ ಕೆರೆಯಿಂದ ಜಿಗೇರಿ, ವದೇಗೊಳ, ಕುಷ್ಟಗಿ ತಾಲೂಕಿನ ಚಿಕ್ಕಗೋಣ್ಣಾಗರ, ನರಸಾಪುರ ಗ್ರಾಮಗಳ ಸು. ೩೬೦ ಎಕರೆಯಷ್ಟು ಭೂಮಿಗೆ ಜಾಕವೆಲ್‌ನಿಂದ ಎಡದಂಡೆ ಹಾಗೂ ಬಲದಂಡೆ ಕಾಲುವೆಗಳ

ಮೂಲಕ ನೀರಾವರಿ ವ್ಯವಸ್ಥೆಯನ್ನು ಕಲ್ಪಿಸುವ ಕೆರೆಯಾಗಿತ್ತು. ಗುಡ್ಡದ ಮೇಲಿರುವ ಬೈರಾಪುರಕ್ಕೆ ಸರಕಾರ ೪೦ ಲಕ್ಷ ರೂ. ವೆಚ್ಚದಲ್ಲಿ ನೀರು ಪೂರೈಕೆಯ ಯೋಜನೆಯನ್ನು ಮಾಡಿರುತ್ತದೆ.[೬] ಈ ಕೆರೆ ೧೫೧ ಹೆಕ್ಟೇರ್ ವಿಸ್ತೀರ್ಣ ಹೊಂದಿದ್ದು, ೨೨.೪೧ ಎಂ.ಸಿ.ಎಫ್ (ಮಿಲಿಯನ್ ಕ್ಯೂಬಿಕ್ ಫೀಟ್) ನೀರು ಸಂಗ್ರಹ ಸಾಮರ್ಥ್ಯ ಹೊಂದಿದೆ.[೮]



ಕೆರೆಯ ಗೇಟ್ ಛಾಯಾಚಿತ್ರ



ಬರಿದಾದ ಕೆರೆಯ ಛಾಯಾಚಿತ್ರ



ತುಂಬಿದ ಕೆರೆಯ ಛಾಯಾಚಿತ್ರ

ಪಾರ್ವತಿಕೊಳ್ಳದ ಕೆರೆ

ಈ ಕೆರೆಯು ಗಜೇಂದ್ರಗಡ ತಾಲೂಕಿನ ಬೊಮ್ಮಸಾಗರ, ಸರ್ಜಾಪೂರ, ಆನಂದಗಿರಿ, ಬದಾಮಿ ತಾಲೂಕಿನ ಗುಡ್ಡದಮಲ್ಲಾಪೂರ ಗ್ರಾಮಗಳ ಮಧ್ಯದಲ್ಲಿದೆ. ಇದು ಸು. ೯೩ ಹೆಕ್ಟೇರ್ ವಿಸ್ತೀರ್ಣವಿದ್ದು, ೧೧.೫೦ ಎಂ.ಸಿ.ಎಫ್. ನೀರು ಸಂಗ್ರಹ ಸಾಮರ್ಥ್ಯ ಹಾಗೂ ೨೧.೬೩ ಹೆಕ್ಟೇರ್ ಹಿನ್ನೀರು ಸಂಗ್ರಹ ಸಾಮರ್ಥ್ಯವನ್ನು ಹೊಂದಿದೆ.[೯] ಈ ಕೆರೆಯ ದಡದಲ್ಲಿ ಹನಮಂತ ಮತ್ತು ವೀರಭದ್ರೇಶ್ವರ ದೇವಾಲಯಗಳಿರುತ್ತದೆ. ಈ ಕೆರೆಯ ಪಕ್ಕದ ಜಮೀನಿನಲ್ಲಿ ವಾಸವಾಗಿರುವ ಬೊಮ್ಮಸಾಗರ ಗ್ರಾಮದ ಯಲ್ಲಮ್ಮ ಯರಳಿ (ವಯಸ್ಸು. ೬೫) ಅವರು ಹೇಳುವಂತೆ ಈ ಕೆರೆಗೆ ನೀರು ಪಕ್ಕದ ಬೆಟ್ಟದಲ್ಲಿ ಇರುವ ಪಾರ್ವತಿ ಮೂರ್ತಿ ಇದ್ದು ಅದರ ಹಿಂಭಾಗದಿಂದ ನೀರು ಹರಿದು ಬರುತ್ತಿರುವುದರಿಂದ ಕೆರೆಗೆ ಪಾರ್ವತಿಕೊಳ್ಳವೆಂದು ಕರೆಯುತ್ತಾರೆಂದು ಹೇಳಿರುತ್ತಾರೆ.

ಎಂ.ಸಿ.ಎಫ್. ನೀರು ಸಂಗ್ರಹ ಸಾಮರ್ಥ್ಯ ಹೊಂದಿದೆ. ಮತ್ತು ೨೨ ಹೆಕ್ಟೇರ್ ಹಿನ್ನಿರು ಸಾಮರ್ಥ್ಯ ಹೊಂದಿದೆ.[೧೦] ಈ ಕೆರೆಯನ್ನು ಜನರ ಅನುಕೂಲಕ್ಕಾಗಿ ನಿರ್ಮಿಸಿದರು. ಇದರಿಂದ ಸುಮಾರು ೩೦ ಸಾವಿರ ಹೆಕ್ಟೇರ್ ಪ್ರದೇಶ ನೀರಾವರಿಗೆ ಒಳಪಟ್ಟಿದೆ, ೨೦೦೩ ರಲ್ಲಿ ಭೀಕರ ಬರಗಾಲವನ್ನು ಸಮರ್ಥವಾಗಿ ಎದುರಿಸಲು ನೆರವಾಯಿತು.[೧೧]



ಕೆರೆಯ ಗೇಟ್ ಛಾಯಾಚಿತ್ರ



ಕೆರೆಯ ಛಾಯಾಚಿತ್ರ

ಅಂದಾನಪ್ಪ ದೊಡ್ಡಮೇಟಿಯವರು ಮೈಸೂರು ವಿಧಾನಸಭೆಯಲ್ಲಿ ಧಾರವಾಡ ಜಿಲ್ಲೆಯ ರೋಣ ತಾಲೂಕಿನ ಗಜೇಂದ್ರಗಡ, ಹೊಳೆಆಲೂರು ಮತ್ತು ನರೇಗಲ್ಲ್ ಗ್ರಾಮಗಳಿಗೆ ನೀರು ಸರಬರಾಜು ಮಾಡುವ ಯೋಜನೆ ಸಿದ್ಧವಾಗಿತ್ತು. ಸ್ವಪ್ರದೇಶದ ಕಾಳಜಿ ಹೊಂದಿದ ಇವರು ಅದರಲ್ಲಿ ಪ್ರತಿ ಹಳ್ಳಿಗಳಿಗೆ ಎಷ್ಟು ವೆಚ್ಚ ಮತ್ತು ಮಾಡಲಾಗುತ್ತಿದೆ ಮತ್ತು ಯಾವಾಗ ಈ ಕಾರ್ಯವನ್ನು ಮುಗಿಸುವ ಯೋಜನೆಯನ್ನು ಹಾಕಿಕೊಳ್ಳಲಾಗಿದೆ ಎಂದು ಪ್ರಶ್ನಿಸಿದರು. ಅದಕ್ಕೆ ಶ್ರೀ. ರಾಮಕೃಷ್ಣ. ಹೆಗಡೆಯವರು ಈ ಯೋಜನೆಗೆ ೧,೫೦,೦೦೦ ರೂಪಾಯಿ ಮತ್ತು ೩ ತಿಂಗಳು ಅವಧಿ ನಿಗದಿಪಡಿಸಲಾಗಿದೆ. ಇವತ್ತಿನ ಪರಿಸ್ಥಿತಿಯಲ್ಲಿ ಗಜೇಂದ್ರಗಡಕ್ಕೆ ಸಂಬಂಧಿಸಿದಂತೆ ಸು. ೩,೩೧,೦೦೦ ರೂಪಾಯಿ ಖರ್ಚು ಬರುತ್ತದೆಂದು ಅಂದಾಜಿಸಲಾಗಿದೆ ಎಂದು ತಿಳಿಸಿರುವರು. ಕೆರೆ ನಿರ್ಮಾಣದ ಜೊತೆಗೆ ಶಾಶ್ವತ ಪರಿಹಾರ ಕಂಡುಕೊಳ್ಳುವ ದಿಶೆಯಲ್ಲಿ ಅಂದಾನಪ್ಪ ದೊಡ್ಡಮೇಟಿಯವರು ಹೊಳೆಆಲೂರು ಮಲ್ಲಪ್ರಭಾ ನದಿ ದಡದಲ್ಲಿದ್ದು, ಅಲ್ಲಿಂದ ಗದಗಗೆ ನೀರನ್ನು ತಂದರೇ ಹೊಳೆಆಲೂರ ಮತ್ತು ಗದಗ ಎರಡಕ್ಕೂ ಅನುಕೂಲವಾಗುತ್ತದೆ. ಅದನ್ನು ಸರಕಾರದವರು ಯೋಚನೆ ಮಾಡುತ್ತಾರೆಯೇ? ಎಂಬ ಪ್ರಶ್ನೆಗೆ ರಾಮಕೃಷ್ಣ ಹೆಗಡೆಯವರು–ಈ ಸೂಚನೆಯನ್ನು ಪರಿಶೀಲನೆ ಮಾಡಬಹುದು. ನನಗೆ ಗದಗ ನೀರು ಸರಬರಾಜಿನ ವಿಚಾರ ಗೊತ್ತಿಲ್ಲ, ಕಡಿಮೆ ಖರ್ಚಿನಲ್ಲಿ ಸಾಧ್ಯವಾಗುವುದಾದರೆ ಮಾಡಿಸೋಣ ಎಂದು ಉತ್ತರಿಸಿದರು. ಮುಂದುವರೆದು ಅಂದಾನಪ್ಪ ದೊಡ್ಡಮೇಟಿಯವರು ಈ ಮೂರು (ಗಜೇಂದ್ರಗಡ, ಹೊಳೆಆಲೂರ ಮತ್ತು ನರೆಗಲ್) ಹಳ್ಳಿಗರು ತಮ್ಮ ಭಾಗದ ೨೫ ಅಂಶ ಕೊಡಲಿಕ್ಕೆ ಒಪ್ಪಿಕೊಂಡು ರೆಸಲ್ಯೂಷನ್ ಮಾಡಿರುವದು ಸರಕಾರದವರ ಗಮನಕ್ಕೆ ಬಂದಿದೆಯೇ ಎಂದು ಪ್ರಶ್ನಿಸಿದಾಗ, ರಾಮಕೃಷ್ಣ ಹೆಗಡೆಯವರು ಹೊಳೆಆಲೂರು ಪಂಚಾಯಿತಿ ಆರ್ಥಿಕ ಪರಿಸ್ಥಿತಿ ಸಾಧಾರಣವಾಗಿ ಚೆನ್ನಾಗಿದೆ ಎಂದು ಗೊತ್ತಾಗಿದೆ. ಮತ್ತು ಅದಕ್ಕೆ ೧೦೦ಕ್ಕೆ ೨೫ ರಷ್ಟು ಕೊಡುವ ಶಕ್ತಿ ಇದೆ ಎಂದು ನಮಗೆ ವರದಿಯಾಗಿದೆ. ಗಜೇಂದ್ರಗಡ ಪಂಚಾಯತಿಯು ಸರಕಾರದ ಕಡೆಯಿಂದ ಸಾಲ ತೆಗೆದುಕೊಂಡು ತಾಲೂಕು ಬೋರ್ಡ ಮುಖಾಂತರ ಮಾಡಿಸುತ್ತೇವೆ ಎಂದು ಹೇಳುತ್ತಾರೆ. ಅವರ ಆರ್ಥಿಕ ಪರಿಸ್ಥಿತಿ ಅಷ್ಟು ಚೆನ್ನಾಗಿಲ್ಲ ಎಂದರು. ಹೀಗೆ ಯೋಜನೆ ಸಾಕಾರಗೊಳ್ಳಲು ಅಗತ್ಯ ಪ್ರಶ್ನೆಗಳನ್ನು ಕೇಳಿ ಸಮರ್ಪಕ ಉತ್ತರ ಪಡೆದುಕೊಂಡರು.[೧೨]

ಕೆ. ಪಿ. ಗದಗರವರು ಚರ್ಚಿತ ವಿಷಯಕ್ಕೆ ಪ್ರಶ್ನೆಗೆ ಪೂರಕವಾಗಿ ಅಂದಾನಪ್ಪ ದೊಡ್ಡಮೇಟಿಯವರು ಕೇಳಿದ ಹಾಗೇ ಗದಗ–ಬೆಟಗೇರಿ ನಗರಕ್ಕೆ ನೀರು ಒದಗಿಸುವ ಎರಡು ಯೋಜನೆಗಳಿವೆ. ತುಂಗಭದ್ರಾ ಯೋಜನೆಗೆ ೧೨೫ ಲಕ್ಷ, ಮಲಪ್ರಭಾ ಯೋಜನೆಗೆ ೧೦೦ ಲಕ್ಷ ಎಂದು ಅಂದಾಜು ಇದೆ.ಅನುಮತಿ ಪಡೆಯಬೇಕೆಂಬ ಉದ್ದೇಶದಿಂದ ಅಂಡರ್ ಎಸ್ಟಿಮೇಟ್ ಮಾಡಿದ ಹಾಗೆ ಕಾಣುತ್ತದೆ. ಕಡಿಮೆ ಖರ್ಚ ಆಗುವ ಯೋಜನೆಗೆ ಅನುಮತಿ ಕೊಡುತ್ತೀರಾ?.ಇದಕ್ಕೆ ಪ್ರತಿಕ್ರಿಯಿಸಿದ ವೀರೇಂದ್ರ ಪಾಟೀಲ್‌ರವರು ಎರಡೂ ಯೋಜನೆಗಳನ್ನು ಪರಿಶೀಲನೆ ಮಾಡಲಾಗಿದೆ. ತುಂಗಭದ್ರಾ ಯೋಜನೆಗೆ ೧೨೫ ಲಕ್ಷ ಹಾಗೂ ಮಲಪ್ರಭಾ ಯೋಜನೆಗೆ ೧೦೦ ಲಕ್ಷ ಖರ್ಚು ಆಗುವ ಅಂದಾಜು ಇದೆ. ಆದರೆ ಮಲಪ್ರಭಾ

ಯೋಜನೆಯಲ್ಲಿ ೮೦೦ ಅಡಿವರೆಗೆ ನೀರು ಪಂಪ್ ಮಾಡಬೇಕಾಗುತ್ತದೆ. ಇದರಿಂದ ರೆಕರಿಂಗ್ ಎಕ್ಸಪೆಂಡಿಚರ್ ಹೆಚ್ಚಾಗುತ್ತದೆ. ಆದುದರಿಂದ ಪರಿಶೀಲನೆಯಲ್ಲಿದೆ ಎಂದರು.[೧೩]

ಧಾರವಾಡ ಜಿಲ್ಲೆಯ ನವಲಗುಂದ, ನರಗುಂದ ಮತ್ತು ರೋಣ ತಾಲೂಕಿನ ಪಶ್ಚಿಮದಲ್ಲಿ ಕಪ್ಪು (ಎರೆ) ಮಣ್ಣು ಇರುವ ಹಳ್ಳಿಗಳಲ್ಲಿ ಕುಡಿಯುವ ನೀರಿನ ಕೊರತೆ ಪರಿಹರಿಸಲು ಕೊಳವೆ ಭಾವಿ ತೊಡಿಸುವತ್ತ ಸರಕಾರದ ಗಮನ ಸೆಳೆದರು. ಈ ಕುರಿತು ರೋಣ ತಾಲೂಕ ಅಭಿವೃದ್ಧಿ ಮಂಡಳಿಯ ಸಲಹಾ ಸಮಿತಿಯು ಸರಕಾರಕ್ಕೆ ಸಲ್ಲಿಸಿದ ಪ್ರಸ್ತಾವಣೆಗೆ ಸರಕಾರದ ಪ್ರತಿಕ್ರಿಯೆ ಮತ್ತು ಅದರ ನಡೆಯನ್ನು ಪ್ರಶ್ನಿಸಿದರು. ಅದಕ್ಕೆ ರಾಮಕೃಷ್ಣ ಹೆಗಡೆಯವರು ಪ್ರಸ್ತಾವಣೆಯನ್ನು ಪರಿಶೀಲಿಸಿ, ತಾಂತ್ರಿಕ ಪರಿಣಿತರ ಸಲಹೆ ಮೇರೆಗೆ ಅದನ್ನು ೧೯೬೦ರಲ್ಲಿ ಕೈಬಿಡಲಾಗಿದೆ. ಆದರೂ ಪರಿಸ್ಥಿತಿ ಸುಧಾರಣೆಗಾಗಿ ಅಲ್ಲಿಯ ಕುಡಿಯುವ ನೀರಿನ ಕೆರೆಗಳನ್ನು ಹೂಳು ಎತ್ತಿಸುವ ಮತ್ತು ಆಳ ಹೆಚ್ಚಿಸುವ ಕೆಲಸವನ್ನು ಬರಗಾಲ ಕಾಮಗಾರಿ ಅಡಿಯಲ್ಲಿ ಸ್ಥಾನಿಕ ಆಡಳಿತಗಾರರಿಂದ ನಡೆದಿದೆ ಎಂದು ತಿಳಿಸಿದರು. ಶ್ರೀ ಕೊಂಡಜ್ಜಿ. ಬಸಪ್ಪವನರು ೧೮ನೇ ಜುಲೈ ೧೯೬೭ರಲ್ಲಿ ನವಲಗುಂದ, ನರಗುಂದ ತಾಲೂಕ ಮತ್ತು ರೋಣ ತಾಲೂಕಿನ ಪಶ್ಚಿಮ ಭಾಗದಲ್ಲಿ ಬಹಳ ಆಳದವರೆಗೆ ಎರೆ ಮಣ್ಣು ಇರುವುದರಿಂದ ಅಲ್ಲಿ ಅಂತರ್ಜಲ ಇರುವುದು ಕಡಿಮೆ, ಇಂಥಲ್ಲಿ ಕೊಳವೆ ಬಾವಿಗಳನ್ನು ಹಾಕಲು ಸಾಧ್ಯವಿಲ್ಲ. ಇತ್ತೀಚಿಗೆ ಭೂಗರ್ಭಶಾಸ್ತ್ರಜ್ಞರೊಬ್ಬರು ಆ ಪ್ರದೇಶವನ್ನು ಪರೀಕ್ಷಿಸಿ ಅಲ್ಲಿ ಈವರೆಗೂ ಕೊಳವೆ ಬಾವಿ ಹಾಕಿಲ್ಲ, ಹಾಕಿದ್ದರು ಯಶಸ್ವಿಯಾಗಿಲ್ಲ ಎಂದು ಖಚಿತ ಅಭಿಪ್ರಾಯ ಹೇಳಿದ್ದಾರೆ.[೧೪]

ಬರಗಾಲ ಪರಿಹಾರಕ್ಕಾಗಿನ ಕೆಲಸದಲ್ಲಿ ಕಡಿಮೆ ವೆಚ್ಚದಲ್ಲಿ ಹೆಚ್ಚಿನ ಭೂಮಿಯನ್ನು ಸಾಗುವಳಿ ಗೋಳಿಸಲಿಕ್ಕೆ ಅನುಕೂಲವಾಗುತ್ತದೆ. ಈ ದೃಷ್ಟಿಯಿಂದ ನೀರಾವರಿ ಬಾವಿಗಳು ಹೆಚ್ಚು ಹೆಚ್ಚಾಗಿ ನಮ್ಮ ರಾಜ್ಯದಲ್ಲಿ ಆಗಬೇಕು. ಆ ದೃಷ್ಟಿಯಿಂದ ಸರಕಾರದವರು ಎಲ್ಲೆಲ್ಲಿ ನೀರಾವರಿ ಬಾವಿಗಳಾಗುವ ಸಂಭವವಿದೆಯೋ ಅಲ್ಲೆಲ್ಲಾ ಕೊಡಲು ಪ್ರಯತ್ನ ಮಾಡಬೇಕು. ಉದಾಹರಣೆಗೆ ರೋಣ ತಾಲೂಕಿನೊಳಗೆ ಸುಮಾರು ಎರಡು ವರ್ಷದಲ್ಲಿ ಎರಡು ನೂರು ಬಾವಿಗಳು ಸರಿಯಾದ ವೇಳ್ಯಕ್ಕೆ ಆದವು. ಆದರೂ ಇನ್ನೂ ಎರಡು ನೂರು ಬಾವಿಗಳು ಆಗುವ ಸಂಭವವಿದೆ. ಈ ದೃಷ್ಟಿಯಿಂದ ಅಲ್ಲಿ ಮತ್ತೊಂದು ಅಡಚಣೆ ಏನೆಂದರೆ ಅದು ಕಂದಾಯ ಮಂತ್ರಿಗಳಿಗೆ ಗೊತ್ತಿರಬಹುದು. ರೋಣ ತಾಲೂಕಿನೊಳಗಿರುವ ಗಜೇಂದ್ರಗಡ ಭಾಗ ಸರಂಜಾಮು ಭಾಗದೊಳಗೆ ಒತ್ತಾಯದಿಂದ ಬಾವಿ ಮಂಜೂರು ಮಾಡುವದು ಸಾಧ್ಯವಿರಲಿಲ್ಲ. ಈಗ ಸುಧೈವದಿಂದ ಇನಾಂದಾರು ಮಾಡಿದ ರಿಟ್ ಅವರಿಗೆ ವಿರುದ್ಧವಾಗಿದೆ. ಅದು ಸರಕಾರಕ್ಕೆ ಅನುಕೂಲವಾಗಿದೆ. ಇದೆ ಸಮಯವನ್ನು ಬೇಗ ಉಪಯೋಗಿಸಿ ರೈತರ ಮಾಲಕಿ ಹಕ್ಕನ್ನು ಹೆಚ್ಚಿಸಲಿಕ್ಕೆ ಏರ್ಪಾಡು ಮಾಡಬೇಕು. ಆ ಅಭಾವ ಪರಿಸ್ಥಿತಿ ಹೋಗಬೇಕಾದರೆ ಮೊದಲು ಭೂಮಿಯಲ್ಲಿ ಬೆಳೆಯತಕ್ಕ ರೈತನಿಗೆ ಅದು ತನ್ನ ಸ್ವಂತ ಭೂಮಿ ಎಂಬ ಭಾವನೆ ಬರಬೇಕು.[೧೫]

ಚಿಕ್ಕ ನೀರಾವರಿಗಾಗಿ ಪಂಪ್‌ಸೆಟ್‌ಗಳನ್ನು ಯಾವುದೇ ಪಕ್ಷಪಾತವಿಲ್ಲದೆ ಪುಕ್ಕಟೆಯಾಗಿ ಹಂಚಬೇಕೆಂದರು.[೧೬] ನೀರಾವರಿ ಬಾವಿಗಳನ್ನು ತೊಡಲು ಸರಕಾರ ನೀಡುವ ಸಾಲ ದುರುಪಯೋಗ ಆಗದ ಹಾಗೇ ನೋಡಿಕೊಳ್ಳಬೇಕು.

ಸರಕಾರ ಒಂದು ಕ್ರಮವನ್ನು ಅನುಸರಿಸಬೇಕು. ಸರಕಾರ ಈ ಹಣವನ್ನು ಸಾಲವೆಂದು ಕೊಡಬಾರದು. ದೊಡ್ಡ ದೊಡ್ಡ ಜಲಾಶಯಗಳನ್ನು ಕಟ್ಟಿದಾಗ ಹೇಗೆ ಬೆಟರ್‌ಮೇಂಟ್ ಲೇವಿ ಎಂದು ಹಾಕುತ್ತಾರೋ ಹಾಗೆ ಹಾಕಬೇಕು. ಐದಾರು ಎಕರೆ ತೋಟ ಮಾಡುವದಕ್ಕೆ ಒಂದು ಬಾವಿಗೆ ಧನಸಹಾಯ ಮಾಡುತ್ತಿರಿ. ದೊಡ್ಡ ನೀರಾವರಿಗೆ ಬೇಟರ್‌ಮೇಂಟ್ ಲೇವಿ ಹೇಗೆ ಹಾಕುತ್ತಿರೋ ಹಾಗೆ ಆರು ಎಕರೆ ತರಿ ಅಥವಾ ತೋಟ ಮಾಡಿದರೆ ಒಂದು ಎಕರೆಗೆ ೫೦೦ ರೂಪಾಯಿಗಳಂತೆ ಬೇಟರ್‌ಮೇಂಟ್ ಲೇವಿ ಹಾಕಿ ಅದನ್ನು ೨೫ ಕಂತುಗಳಲ್ಲಿ ವಸೂಲಿ ಮಾಡುವ ಮಾರ್ಗವನ್ನು ಏಕೆ ಸಣ್ಣ ನೀರಾವರಿಗೆ ಅನ್ವಯಿಸಬಾರದು ಎಂಬುದನ್ನು ಯೋಚನೆ ಮಾಡಬೇಕು. ಇದರಿಂದ ಬಡ್ಡಿ ಉಳಿತಾಯವಾಗುವುದಲ್ಲದೇ ಹಣದ ಸದುಪಯೋಗವಾಗುತ್ತದೆ. ಯಾರು ಮಾಡಿದ್ದಾರೆ ಯಾರು ಮಾಡಿಲ್ಲ ಎನ್ನುವದನ್ನು ತಣಿಕೆ ಮಾಡುವದಕ್ಕೂ ಅವಕಾಶವಾಗುತ್ತದೆ. ಈ ದೃಷ್ಟಿಯಿಂದ ಸರಕಾರ ಈ ಸೂಚನೆಯನ್ನು ನಿಜವಾಗಿಯು ಆಲೋಚನೆ ಮಾಡಬೇಕಾಗಿದೆ. ಪಂಪ್‌ಸೆಟ್ಟುಗಳನ್ನು ಹಂಚುವ ವಿಚಾರದಲ್ಲಿ ಸಾಮಾನ್ಯವಾಗಿ ಉದಾರ ಧೋರಣೆಗಳನ್ನು ಅನುಸರಿಸುತ್ತಿದ್ದಾರೆ. ಆದರೆ ಪಂಪ್‌ಸೆಟ್ಟುಗಳನ್ನು ನಾವೇ ಕೊಡುತ್ತೇವೆ, ಬೇಕಾದವರು ತೆಗೆದುಕೊಳ್ಳಬಹುದು ಎಂದು ಅಧಿಕಾರ ವರ್ಗದ ಮೂಲಕ ಡಂಗುರ ಸಾರಿದರು. ಎಷ್ಟನ್ನು ಹಂಚಿದ್ದಾರೆ ಎಂಬುದನ್ನು ನೋಡಿದರೆ, ಅದು ಎತಕ್ಕೂ ಸಾಲದು. ಅದಕ್ಕು ವಿಳಂಬ ಅಧಿಕವಾಗಿದೆ. ಇದಕ್ಕೆ ಕಾರಣವೇನೆಂದು ಶೋಧನೆ ಮಡಬೇಕು ಮತ್ತು ವಿಳಂಬ ವಿಲ್ಲದಂತೆ ವ್ಯವಸ್ಥೆ ಮಾಡಬೇಕು. ಪಂಪ್‌ಸೆಟ್ಟುಗಳು ಬೇಗ ರೈತರ ಕೈಸೇರುವಂತೆ ಮಾಡಬೇಕು ಎಂದು ವಿನಂತಿಸಿಕೊಂಡಿರುತ್ತಾರೆ.[೧೭]

ಅಂದಾನಪ್ಪ ದೊಡ್ಡಮೇಟಿಯವರು ಧಾರವಾಡ ಜಿಲ್ಲೆಯ ರೈತರು ತಮ್ಮ ಕೃಷಿ ಭೂಮಿಯಲ್ಲಿ ಬಾವಿ ತೋಡಿಸಲು ಸಾಲ ಮತ್ತು ಸಬ್ಸಿಡಿಗಾಗಿ ಅರ್ಜಿ ಸಲ್ಲಿಸಿದ್ದಾರೆ. ಮಂಜೂರಾತಿಯ ವಿಳಂಬದಿಂದಾಗಿ ರೈತರು ನಿರಾಸೆಗೊಂಡಿದ್ದಾರೆ. ಈ ರೀತಿಯ ವಿಳಂಬಕ್ಕೆ ಕಾರಣವೇನು? ಅದರ ಪರಿಹಾರಕ್ಕೆ ಸರಕಾರ ಯಾವ ಕ್ರಮ ಕೈಗೊಂಡಿದೆ. ಅರಣ್ಯ ಮತ್ತು ಕೃಷಿ ಸಚಿವರಾದ ಶ್ರೀ.ಎಂ. ಪಿ. ಪಾಟೀಲರು ೧೯೪೬-೪೭ ರಲ್ಲಿ ೮೬ ಅರ್ಜಿಗಳು ಬಂದಿದ್ದು, ಅದರಲ್ಲಿ ೩೬ ಮಂಜೂರಾಗಿದ್ದು, ೩೯ ಅರ್ಜಿಗಳು ತಿರಸ್ಕೃತಗೊಂಡಿದ್ದು, ೧೧ ಬಾಕಿ ಉಳಿದಿವೆ. ೧೯೪೭-೪೮ ರಲ್ಲಿ ೩೯೬ ಅರ್ಜಿಗಳು ಬಂದಿದ್ದು, ಅದರಲ್ಲಿ ೯೦ ಮಂಜೂರಾಗಿದ್ದು, ೧೩೭ ಅರ್ಜಿಗಳು ತಿರಸ್ಕೃತಗೊಂಡಿದ್ದು, ೧೬೯ ಬಾಕಿ ಉಳಿದಿವೆ. ಅರ್ಜಿಗಳು ದೋಷಯುಕ್ತವಾಗಿದ್ದು, ಅಂದರೆ ಜಮೀನಿಗೆ ಸಂಬಂಧಿಸಿದ ಹಕ್ಕು ದಾಖಲೆ ಒದಗಿಸುವಲ್ಲಿ, ವೈಯಕ್ತಿಕವಾಗಿ ಹೇಳಿಕೆ ನೀಡಲು ಹಾಜರಾಗುವಲ್ಲಿ ನಿಧಾನವಾಗಿರುವದು ವಿಳಂಬಕ್ಕೆ ಕಾರಣವಾಗಿದೆ. ಅರ್ಜಿಗಳ ತ್ವರಿತ ವಿಲೇವಾರಿಗೆ ಸರ್ಕಾರ ಇತ್ತಿಚಿಗೆ ಸೂಕ್ತ ಮಾರ್ಪಾಡು ಮಾಡಿಕೊಂಡಿದೆ.

ಒಟ್ಟಿನಲ್ಲಿ ತಾವು ಕೈಗೆತ್ತಿಕೊಂಡ ಜನಪರ ಯೋಜನೆಗಳನ್ನು ರೂಪಿಸುವುದಷ್ಟೇ ಅಲ್ಲದೆ, ಅವುಗಳು ಪೂರ್ಣಗೊಳ್ಳುವವರೆಗೆ ಪ್ರಗತಿ ಪರಿಶೀಲನೆ ಮಾಡುತ್ತಿದ್ದರು. ರೈತರಿಗೆ ಸರಕಾರಿ ಭೂಮಿ ಕೊಡಿಸುವುದು, ಬಾವಿ ತೆಗೆಸಲು ಸಾಲ ನೀಡುವ ಬಗ್ಗೆ ಜೊತೆಗೆ ರೈತರಿಗೆ ಹಕ್ಕುಪತ್ರ ಕೊಡಿಸುವುದರವರೆಗೆ ಹರವಿಕೊಂಡಿರುವುದು ಇವರ ಜನಪರ ಕಾಳಜಿಗೆ ಸಾಕ್ಷಿಯಾಗಿವೆ.

ಅಡಿ ಟಿಪ್ಪಣಿಗಳು

೧. ಮುಂಬೈ ಶಾಸನಸಭೆಯ ದಾಖಲೆಗಳು, ಮಹಾರಾಷ್ಟ್ರ ಪತ್ರಾಗಾರ ಇಲಾಖೆ, ಮುಂಬೈ, ಆರ್-೨೪೯೫೮, {ಸೆಪ್ಟಂಬರ್, ೧೯೪೮}, ಪು.ಸಂ. ೧೪೫.

೨. ಕರಡಿನ ಕಾಶಪ್ಪ, ಮೈದುಂಬಿದ ನಾಗೇಂದ್ರಗಡ ಕೆರೆ, ವಿಜಯ ಕರ್ನಾಟಕ ದಿನಪತ್ರಿಕೆ, vijaykarnataka.com. ೨೫.೦೯.೨೦೧೪.

೩. ಕೆರೆ ಕಟ್ಟೆಗಳು ಕಾಲಿ ಕಾಲಿ, ಉದಯವಾಣಿ ಪತ್ರಿಕೆ, udayavani.com. ೨೩.೦೨.೨೦೧೯

೪. ಮೈಸೂರು ವಿಧಾನಸಭೆಯ ದಾಖಲೆಗಳು, ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ವಿಧಾನಸೌಧ, ಬೆಂಗಳೂರು, ಬಿ೦೦೪೮೩೨-ಮಾರ್ಚ್-೧೯೬೫-೦೫೧), ೨೭.೦೩.೧೯೬೫, ಪು. ೨೩೯-೨೪೨. ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ವಿಧಾನಸೌಧ, ಬೆಂಗಳೂರು.

೫. ಕೆರೆ ಕಟ್ಟೆಗಳು ಕಾಲಿ ಕಾಲಿ, ಉದಯವಾಣಿ ಪತ್ರಿಕೆ, udayavani.com. ೨೩.೦೨.೨೦೧೯

೬ ಬಾಯಾರಿದ ಕೆರೆಗಳು, gadaga:News:vijayakarnataka.com/news/gadag/thirsty-lakes-/amp-articleshow/69375117.ems. 18.05.2019.

೭. ಕೆರೆ ಕಟ್ಟೆಗಳು ಕಾಲಿ ಕಾಲಿ, ಉದಯವಾಣಿ ಪತ್ರಿಕೆ, udayavani.com. ೨೩.೦೨.೨೦೧೯.

೮. ಅದೇ.

೯. ಅದೇ.

೧೦. ಕುಂಬಾರ ಮಲ್ಲಿಕಾರ್ಜುನ, ಕಾಯಕಲ್ಪಕ್ಕೆ ಕಾದಿರುವ ದಿಂದೂರು ಕೆರೆ, ಪ್ರಜಾವಾಣಿ ಪತ್ರಿಕೆ. www.prajavani.net, ೧೨.೦೫.೨೦೧೫.

೧೧. ಮೈಸೂರು ವಿಧಾನಸಭೆಯ ದಾಖಲೆಗಳು, ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ವಿಧಾನ ಸೌಧ, ಬೆಂಗಳೂರು, ಬಿ೦೦೪೮೧೫-ಜುಲೈ-೧೯೬೪-೧೬೨, ೦೪.೦೬.೧೯೬೪. ಪು.ಸಂ. ೩೩೪೫-೩೩೪೮.

೧೨. ಮೈಸೂರು ವಿಧಾನಸಭೆಯ ದಾಖಲೆಗಳು, ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ವಿಧಾನಸೌಧ, ಬೆಂಗಳೂರು, ಬಿ೦೦೪೮೪೨-ಎಫ್ಇಬಿ-೧೯೬೬-೦೫೦), ೦೧.೦೨.೧೯೬೬. ಪು.ಸಂ. ೧೬೭-೧೬೯.

೧೩. ಕೆರಿಮನಿ ಸಿ.ವಿ., ಪ್ರತಿಭಾವಂತ ಸಂಸದೀಯ ಪಟು ಪುಸ್ತಕ ಮಾಲೆ, ಅಂದಾನಪ್ಪ ದೊಡ್ಡಮೇಟಿ, ಕರ್ನಾಟಕ ವಿಧಾನಮಂಡಲದ ಗ್ರಂಥಾಲಯ ಸಮಿತಿ, ವಿಧಾನಸೌಧ, ಬೆಂಗಳೂರು. ೨೦೦೮. ಪು. ೮೫-೮೬.

೧೪. ಅದೇ.

೧೫. ಅದೇ.

೧೬. ಮೈಸೂರು ವಿಧಾನಸಭೆಯ ದಾಖಲೆಗಳು, ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ವಿಧಾನ ಸೌಧ, ಬೆಂಗಳೂರು, ಬಿ೦೦೪೮೦೮-ಎಫ್ಇಬಿ-೧೯೬೪-೦೩೮) ೨೯.೦೨.೧೯೬೪, ಪು. ೧೭೧-೧೭೩.

೧೭. ಮುಂಬೈ ಶಾಸನ ಸಭೆಯ ದಾಖಲೆಗಳು, ಮಹಾರಾಷ್ಟ್ರ ಪತ್ರಾಗಾರ ಇಲಾಖೆ, ಮುಂಬೈ, ಆರ್-೨೪೯೫೮ {ಸೆಪ್ಟಂಬರ್, ೧೯೪೮}), ಪು. ಸಂ. ೫೧೯.

ಹಾವೇರಿ ಜಿಲ್ಲಾ ಸ್ವಾತಂತ್ರ್ಯ ಚಳುವಳಿಯಲ್ಲಿ ಹೊಸಮನಿ ಸಿದ್ಧಪ್ಪ ಅವರ ಪಾತ್ರ

ಮಹಾಂತೇಶ್ ಕುತನಿ*

ಹಾವೇರಿ ಜಿಲ್ಲೆಯ ವರದಾ ನದಿಯ ದಂಡೆಯ ಮೇಲಿರುವ ಕರ್ಜಗಿ ಗ್ರಾಮದ ಸಾಮಾನ್ಯ ರೈತ ಕುಟುಂಬದಲ್ಲಿ ೧೩ನೇ ಡಿಸೆಂಬರ್ ೧೮೮೮ರಂದು ಸಿದ್ದಪ್ಪನವರ ಜನನವಾಯಿತು. ಇವರ ತಂದೆ ಕರಿಯಪ್ಪ, ತಾಯಿ ಸಿದ್ದಲಿಂಗವ್ವನವರು. ತಂದೆಯ ಸಹೋದರ ಮಗನಾದ ಪರಮಣ್ಣ ಹೊಸಮನಿ ಸಹ ಖ್ಯಾತ ಸ್ವಾತಂತ್ರ್ಯ ಹೋರಾಟಗಾರರು. ಸಿದ್ದಪ್ಪನವರ ಪ್ರಾಥಮಿಕ ಶಿಕ್ಷಣ ಕರ್ಜಗಿ ಗ್ರಾಮದಲ್ಲಿ ಲಕ್ಷ್ಮೇಶ್ವರದ ಉಮಾ ವಿದ್ಯಾಲಯದಲ್ಲಿ ಮಾಧ್ಯಮಿಕ ಶಿಕ್ಷಣವನ್ನು ಪೂರೈಸಿದರು. ಧಾರವಾಡದಲ್ಲಿ ಮೆಟ್ರಿಕ್ ಪರೀಕ್ಷೆಯಲ್ಲಿ ತೇರ್ಗಡೆಯಾದರು. ಮುಂದೆ ಮುಂಬೈ ವಿಶ್ವವಿದ್ಯಾಲಯದ ಪುಣೆಯಲ್ಲಿ ಫರ್ಗ್ಯುಸನ್ ಕಾಲೇಜಿನಲ್ಲಿ ಬಿ.ಎ., ಪದವಿ ಪಡೆದರು. ತದನಂತರ ನಾಲ್ಕಾರು ತಿಂಗಳು ಬಿಜಾಪುರ ಜಿಲ್ಲೆ ಇಂಡಿ ತಾಲ್ಲೂಕಿನಲ್ಲಿ ರೆವಿನ್ಯೂ ಇನ್‌ಸ್ಪೆಕ್ಟರ್ ಆಗಿ ಸರಕಾರಿ ಸೇವೆ ಸಲ್ಲಿಸಿದರು. ಆದರೆ ತಾವು ಗುಲಾಮಗಿರಿಯ ಸೇವೆ ಮಾಡುತ್ತಿರುವ ಭಾವನೆಯಿಂದ ಆ ಹುದ್ದೆಯನ್ನು ತ್ಯಜಿಸಿದರು. ತಮ್ಮ ಶಿಕ್ಷಣವನ್ನು ಮುಂದುವರಿಸುತ್ತಾ ೧೯೦೮ ರಲ್ಲಿ ಮುಂಬೈನಲ್ಲಿ ಎಲ್.ಎಲ್.ಬಿ. ಪದವಿ ಗಳಿಸಿದರು.[೧] ತದನಂತರ ಹಾವೇರಿಯಲ್ಲಿ ವಕೀಲ ವೃತ್ತಿಯನ್ನು ಆರಂಭಿಸಿದರು. ಹಣಕ್ಕಾಗಿ ನ್ಯಾಯ ಸೇವೆಯನ್ನು ಮಾಡದೇ ಬಡವರಿಗೆ ಸುಲಭವಾಗಿ ಕಾನೂನು ಸಿಗಲೆಂದು ವಕೀಲ ವೃತ್ತಿಯನ್ನು ನಿರ್ವಹಿಸಿದರು. ಅಂದಿನ ಧಾರವಾಡ ಪ್ರಾಂತ್ಯದ ಭಾಗದಲ್ಲಿ ೫ ರೂ. ವಕೀಲರೆಂದೇ ಪ್ರಸಿದ್ಧರಾಗಿದ್ದರು.

ಈ ಸಮಯದಲ್ಲಿ ತಮ್ಮ ಸ್ವಗ್ರಾಮವಾದ ಕರ್ಜಗಿಯಲ್ಲಿ ಸ್ವಚ್ಚತಾ ಸಮಿತಿ ರಚಿಸಿ ನೈರ್ಮಲ್ಯವನ್ನು ಕಾಪಾಡುವ ಬಗ್ಗೆ ಜಾಗೃತಿ ಮೂಡಿಸಿದ್ದರು. ತಮ್ಮ ವಕೀಲ ವೃತ್ತಿಯಿಂದ ಅಂದಿನ ಅಖಂಡ ಧಾರವಾಡ ಜಿಲ್ಲೆಯಲ್ಲಿ ಪ್ರಖ್ಯಾತರಾಗಿದ್ದರು. ಈ ಮೂಲಕ ಹಾವೇರಿ ತಾಲ್ಲೂಕು ಮತ್ತು ಧಾರವಾಡ ಜಿಲ್ಲೆ ಲೋಕಲ್ ಬೋರ್ಡಿನ ಸದಸ್ಯರಾಗಿ ೧೯೧೩ರಲ್ಲಿ ಆಯ್ಕೆಯಾಗಿದ್ದರು.

೧೯೨೧ರಿಂದ ೧೯೩೨ರವರೆಗೆ ಹಾವೇರಿಯ ಮುನಿಸಿಪಾಲಿಟಿಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದರು. ಈ ಸಂದರ್ಭದಲ್ಲಿ ಭಾರತದಲ್ಲಿ ಮೊದಲನೇ ಬಾರಿಗೆ ಮುನಿಸಿಪಾಲಿಟಿಯಲ್ಲಿ ಖಾದಿ ರಾಷ್ಟ್ರಧ್ವಜವನ್ನು ಹಾರಿಸುವ ಠರಾವುವನ್ನು ಪಾಸ್ ಮಾಡಿದರು. ಅಂದು ಯೂನಿಯನ್ ಜಾಕ್ (ಧ್ವಜಗಳು) ಹಾರಾಡುತ್ತಿದ್ದ ಸಂದರ್ಭದಲ್ಲಿ ಯೂನಿಯನ್ ಜಾಕ್ (ಧ್ವಜವನ್ನು) ಕೆಳಕ್ಕಿಳಿಸಿ ರಾಷ್ಟ್ರಧ್ವಜವನ್ನು ಹಾರಿಸುವ ಠರಾವನ್ನು ತಂದು ಒಮ್ಮತದಿಂದ ಪಾಸು ಮಾಡಿದುದ್ದಲ್ಲದೇ ಮುನಿಸಿಪಾಟಿಯ ಕಟ್ಟಡದ ಮೇಲೆ ಖಾದಿ ರಾಷ್ಟ್ರಧ್ವಜವನ್ನು ಹಾರಿಸುವಲ್ಲಿ ಯಶಸ್ವಿಯಾಗಿದ್ದರು.[೨]

ಈ ಸಮಯದಲ್ಲಿ ಕಾಂಗ್ರೆಸ್ ಪಕ್ಷವು ಕರ್ನಾಟಕದಾದ್ಯಂತ ಪ್ರವರ್ಧಮಾನಕ್ಕೆ ಬರುತ್ತಿತ್ತು. ಕಾಂಗ್ರೆಸ್ ಸೇರುವ ಪೂರ್ವದಲ್ಲಿ ಬ್ರಾಹ್ಮಣೇತರ ಪಾರ್ಟಿಯನ್ನು ಸಂಘಟಿಸಿ, ಸಿದ್ದಪ್ಪ ಕಂಬಳಿ, ಹುಲಕೋಟೆಯವರೊಂದಿಗೆ ಬಹುವಾಗಿ ಶ್ರಮಿಸಿದ್ದರು. ಸುಮಾರು ೧೯೨೯-೩೦ರಲ್ಲಿ ಕಾಂಗ್ರೆಸ್ ಸೇರಿದರು. ೧೯೩೦ರಲ್ಲಿ ಬೆಳಗಾವಿಯಲ್ಲಿ ಸೇರಿದ್ದ ಕರ್ನಾಟಕ ಪರಿಷತ್ತು ಅಧ್ಯಕ್ಷರಾಗಿದ್ದರು. ತದನಂತರ ಧಾರವಾಡ ಜಿಲ್ಲಾ ಕಾಂಗ್ರೆಸ್ ಕಛೇರಿಯನ್ನೇ ಧಾರವಾಡದಿಂದ ಹಾವೇರಿಗೆ ಸ್ಥಳಾಂತರಿಸಿದರು. ಅಲ್ಲದೇ ರಾಣೆಬೆನ್ನೂರಿನಲ್ಲಿ ವಿದೇಶಿ ಬಟ್ಟೆಯ ಬಹಿಷ್ಕಾರ ಚಳುವಳಿಯ ಮುಂದಾಳತ್ವವನ್ನು ವಹಿಸಿದ್ದರು ಹಾಗೂ ಸತ್ಯಾಗ್ರಹಿಗಳಾಗಿ ಮಾರ್ಗದರ್ಶನಕರಾಗಿದ್ದರು.[೩]

ಉತ್ತರ ಕರ್ನಾಟಕದ ಭಾಗದಲ್ಲಿ ಕಾಂಗ್ರೆಸ್ ಬೆಳೆದು ಬಲಗೊಳ್ಳುವುದಕ್ಕೆ ರಾಷ್ಟ್ರೀಯ ವಿಚಾರಗಳು ಹಬ್ಬಿಕೊಳ್ಳುವುದಕ್ಕೆ ಮೂಲ ಕಾರಣರೆನಿಸಿದರು. ಅವರು ಕಾಂಗ್ರೆಸ್ ಸೇರುವವರೆಗೆ ಕರ್ನಾಟಕದಲ್ಲಿಯ ಕಾಂಗ್ರೆಸ್ ಕೇವಲ ಒಂದು ಜಾತಿಯ ಜನರಿಗೆ ಸೀಮಿತವಾದ ಸಂಸ್ಥೆ ಎನ್ನುವ ಭಾವನೆಯನ್ನು ಪಡೆದಿದ್ದಿತು. ೧೯೨೯ರಲ್ಲಿ ಕಾಂಗ್ರೆಸ್ ಸೇರಿದಾಗ ತಮ್ಮೊಂದಿಗೆ

* ಮಹಾಂತ ನಿಲಯ, ದೊಡ್ಡಹುಣಸೆ ಮಠದ ಹತ್ತಿರ, ಸವಣೂರು, ಸವಣೂರು ತಾಲ್ಲೂಕು, ಹಾವೇರಿ ಜಿಲ್ಲೆ.

ದೊಡ್ಡ ಯುವಪಡೆ ಸೇರ್ಪಡೆಯಾಯಿತು. ಈ ಮೂಲಕ ಹಳೆಯ ಹಾಗೂ ಹೊಸ ಕಾಂಗ್ರೆಸ್ಸಿಗರೆಲ್ಲರಿಗೂ ಹಾವೇರಿಯು ಕೇಂದ್ರ ಸ್ಥಳವಾಯಿತು.[೪]

ಸ್ವಾತಂತ್ರ್ಯ ಮತ್ತು ಹೋರಾಟದಲ್ಲಿ

೧೯೩೦ರಲ್ಲಿ ಸವಿನಯ ಕಾಯ್ದೆಭಂಗ ಚಳುವಳಿಯಲ್ಲಿ ಅಂದಿನ ಧಾರವಾಡ ಜಿಲ್ಲೆಯ ಹಾವೇರಿಯ ಭಾಗದಲ್ಲಿ ಹಳ್ಳಿಕೇರಿ ಗುದ್ಲಪ್ಪ, ಹೊಸಮನಿ ಸಿದ್ದಪ್ಪ ಮತ್ತು ಎನ್.ಬಿ.ಹೀರೇಮಠರು, ಹೀರೇಕೆರೂರ ಭಾಗದಲ್ಲಿ ವೀರನಗೌಡ ಪಾಟೀಲ ಮತ್ತು ಟಿ.ಆರ್.ನೇಸ್ವಿ, ರಾಣೆಬೆನ್ನೂರು ಮತ್ತು ಬ್ಯಾಡಗಿ ಭಾಗದಲ್ಲಿ ಕೆ.ಎಫ್. ಪಾಟೀಲರು ಮುಂತಾದವರು ಕಾರ್ಯ ಮಾಡುತ್ತಿದ್ದರು. ಇವರಲ್ಲಿ ವಿಶೇಷವಾಗಿ ಹೊಸಮನಿ ಸಿದ್ದಪ್ಪನವರು ಹಳ್ಳಿಗಳಲ್ಲಿ ಸ್ವಯಂ ಸೇವಕರನ್ನು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಲು ತರಬೇತಿಗೊಳಿಸುತ್ತಿದ್ದರು ಹಾಗೂ ಈ ಭಾಗದ ಜನರಲ್ಲಿ ಸ್ವಾತಂತ್ರ್ಯ ಚಳುವಳಿಯ ಚೈತನ್ಯವನ್ನು ತುಂಬಿದರು.[೫] ೧೯೩೧ರಲ್ಲಿ ದ್ವಿತೀಯ ದುಂಡುಮೇಜಿನ ಸಮ್ಮೇಳನದಲ್ಲಿ ಮಹಾತ್ಮ ಗಾಂಧೀಜಿ ಮಾತುಗಳು ವಿಫಲವಾದ ನಂತರ ಕಾಂಗ್ರೆಸ್ ಪಕ್ಷವನ್ನು ಬ್ರಿಟಿಷ್ ಸರಕಾರ ಬಹಿಷ್ಕರಿಸಿತು. ಅಲ್ಲದೆ ಕಾಂಗ್ರೆಸ್ ನಾಯಕರನ್ನು ಬಂಧಿಸಲು ಆರಂಭಿಸಿತು. ಆ ಸಮಯದಲ್ಲಿ ಧಾರವಾಡ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾಗಿದ್ದ ಸಿದ್ದಪ್ಪ ಹೊಸಮನಿ ಅವರನ್ನು ಹಿಂದೂಸ್ಥಾನ ಸಂರಕ್ಷಣಾ ಕಾಯಿದೆ ಅನ್ವಯ ಹಾವೇರಿಯಲ್ಲಿ ಬಂಧಿಸಲ್ಪಟ್ಟರು. ಅವರನ್ನು ಗಜೇಂದ್ರ ಗಡದಲ್ಲಿ ಸೆರೆಯಿಟ್ಟು ಆ ಸೀಮ ರೇಖೆಯಿಂದ ಹೊರಗೆ ಹೋಗಬಾರದೆಂದು ಹಾಗೂ ಪ್ರತಿನಿತ್ಯ ಪೊಲೀಸ್ ಕಛೇರಿಗೆ ಬಂದು ಎರಡು ಸಲ ಹಾಜರಿಯನ್ನು ನೀಡಬೇಕೆಂದು ನಿರ್ಬಂಧಿಸಲ್ಪಟ್ಟರು. ಇವರ ಎರಡೂ ಆಜ್ಞೆಗಳನ್ನು ಉಲ್ಲಂಘಿಸಿದರು. ಸರಕಾರದ ಆಜ್ಞೆಗಳನ್ನು ಉಲ್ಲಂಘಿಸಿದ ಆರೋಪದ ಮೇಲೆ ಗದುಗಿನ ಮಾಜಿಸ್ಟ್ರೇಟರ್ ಶಿಕ್ಷೆ ವಿಧಿಸಿದರು. ಇದರ ಪ್ರಕಾರ ಒಂದು ವರುಷದ ಶಿಕ್ಷೆ ಹಾಗೂ ದಂಡವನ್ನು ವಿಧಿಸಿ ಬೆಳಗಾವಿಯ ಹಿಂಡಲಗಿ ಜೈಲಿಗೆ ಕಳಿಸಿದರು. ಈ ಶಿಕ್ಷೆಯನ್ನು ಅನುಭವಿಸಿ ಬಿಡುಗಡೆಯಾಗಿ ಬಂದರು.[೬]

೧೯೩೪ರಲ್ಲಿ ಕೇಂದ್ರ ವಿಧಾನ ಮಂಡಲ ಮತ್ತು ಪ್ರಾಂತಿಯ ಶಾಸನಸಭೆಗಳಿಗೆ ನಡೆದ ಚುನಾವಣೆಯಲ್ಲಿ ದಕ್ಷಿಣ ಭಾಗದ ಅಭ್ಯರ್ಥಿಯಾಗಿ ಹೊಸಮನಿ ಸಿದ್ದಪ್ಪನವರು ಆಯ್ಕೆಯಾದರು. ದಕ್ಷಿಣ ಭಾಗವು ಬೆಳಗಾವಿ, ಕಾರವಾರ, ಧಾರವಾಡ, ವಿಜಾಪುರ, ಜಿಲ್ಲೆಗಳಲ್ಲದೆ ಮಹಾರಾಷ್ಟ್ರದ ಎರಡು ಜಿಲ್ಲೆಗಳಾದ ಕುಲಬಾ ಮತ್ತು ರತ್ನಗಿರಿ ಕ್ಷೇತ್ರವನ್ನು ಒಳಗೊಂಡಿದ್ದಿತು. ಮತದಾರ ಕ್ಷೇತ್ರದ ಒಂದು ತುದಿ ಕರ್ನಾಟಕದ ಗದುಗಿನಲ್ಲಿದ್ದರೆ ಇನ್ನೊಂದು ತುದಿ ಮಹರಾಷ್ಟ್ರ ಕುಲಬಾದಲ್ಲಿತ್ತು. ಈ ಎಲ್ಲಾ ಕ್ಷೇತ್ರ ಜನರಿಂದ ಹೆಚ್ಚಿನ ಮತಗಳಿಂದ ಆಯ್ಕೆಯಾಗಿ ಬಂದರು. ೧೯೩೪ರಿಂದ ೧೯೪೪ರವರೆಗೂ ಕೇಂದ್ರ ಮಂಡಲದ ಸದಸ್ಯರಾಗಿದ್ದರು.[೭] ಈ ಮೂಲಕ ಶಾಸನ ಸಭೆಯಲ್ಲಿ ಈ ಭಾಗದ ಸಮಸ್ಯೆಗಳನ್ನು ಸದನದಲ್ಲಿ ಸೆಳೆಯುವಲ್ಲಿ ಪ್ರಮುಖ ಪಾತ್ರವಹಿಸಿದ್ದರು.

೧೯೩೪ರ ಮಾರ್ಚ್ ೧ರಂದು ಹರಿಜನನಿಧಿ ಸಂಗ್ರಹಕ್ಕಾಗಿ ಮಹಾತ್ಮ ಗಾಂಧೀಜಿಯವರು ಹಾವೇರಿಗೆ ಭೇಟಿ ನೀಡಿದಾಗ ಅವರನ್ನು ಸ್ವಾಗತಿಸಿದರು. ಆಗ ಚಿತ್ರದುರ್ಗದ ಶ್ರೀ ಜಯದೇವ ಸ್ವಾಮಿಗಳು ಹೊಂಡದ ಮಠದಲ್ಲಿದ್ದ ಅವರೂ ಸಹ ಗಾಂಧೀಜಿಯವರನ್ನು ಭೇಟಿ ಮಾಡಿದರು ಸ್ವಾಮಿಗಳು ಅಖಿಲಭಾರತ ಹರಿಜನ ನಿಧಿಗಾಗಿ ಕಾಣಿಕೆಯನ್ನರ್ಪಿಸಿದರು. ಗಾಂಧೀಜಿಯವರು ಆ ಕಾಣಿಕೆಯನ್ನು ಸಿದ್ದಪ್ಪನವರಿಗೆ ನೀಡಿ ಇದು ನಿಮ್ಮೂರಿಂದ ಬಂದದ್ದು ನಿಮ್ಮೂರಲ್ಲಿಯೇ ಹರಿಜನೋದ್ದಾರಕ್ಕೆ ವ್ಯಯವಾಗಬೇಕು, ಈ ಕಾರ್ಯ ನಿಭಾಯಿಸುವ ಹೊಣೆ ನಿಮ್ಮದು ಎಂದು ಅವರಿಗೆ ಅರ್ಪಿಸಿದರು. ಆ ಹಣದಿಂದಲೇ ಹಾವೇರಿಯಲ್ಲಿ ಹರಿಜನ ಮಕ್ಕಳಿಗಾಗಿ ವಸತಿ ನಿಲಯವನ್ನು ಸ್ಥಾಪಿಸಿದರು. ಶಾಲೆಯನ್ನು ಕಲಿಯಲು ಬರುವ ಬಡಮಕ್ಕಳಿಗೆ ಆಶ್ರಯ ನೀಡಿದರು. ಈ ಮೂಲಕ ಹೊಸಮನಿ ಸಿದ್ದಪ್ಪನವರು ತಮ್ಮ ಜೀವನ ಕೊನೆಯವರೆಗೂ ವಸತಿ ನಿಲಯದೊಂದಿಗೆ ನಿರಂತರವಾದ ಸಂಬಂಧವನ್ನಿಟ್ಟುಕೊಂಡಿದ್ದರು.[೮]

೧೯೩೬–೩೭ರ ಚುನಾವಣೆಯ ಸಮಯದಲ್ಲಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ ಜವಹರ್‌ಲಾಲ್ ನೆಹರುರವರನ್ನು ಹಾವೇರಿಗೆ ಆಹ್ವಾನಿಸಿದ್ದರು.[೯] ಈ ಸಂದರ್ಭದಲ್ಲಿ ಜವಹರಲಾಲ್ ನೆಹರು ಅವರೊಂದಿಗೆ ಒಂದಿಷ್ಟು ವಿಚಾರಗಳಲ್ಲಿ ಭಿನ್ನಾಭಿಪ್ರಾಯ ಉಂಟಾಗಿ ತಮ್ಮತನವನ್ನು ಉಳಿಸಿಕೊಳ್ಳುವಲ್ಲಿ ಹೊಸಮನಿ ಸಿದ್ದಪ್ಪನವರು ಯಶಸ್ವಿಯಾಗಿದ್ದರು.

೧೯೩೭ರ ಫೆಬ್ರವರಿ ೫ರಂದು ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಗೆ ಹೊಸಮನಿ ಸಿದದಪ್ಪನವರು ಅಧ್ಯಕ್ಷರಾಗಿ ಚುನಾಯಿತರಾದರು. ಇವರೊಂದಿಗೆ ಕಮಲಾದೇವಿ ಚಟ್ಟೋಪಾಧ್ಯಾಯ, ಟಿ. ಸಿದ್ದಲಿಂಗಯ್ಯನವರು ಉಪಾಧ್ಯಕ್ಷರುಗಳಾಗಿಯೂ,

ಕೃಷ್ಣಬಾಯಿ ಪಣಜಕರು ಕೋಶಾಧ್ಯಕ್ಷರಾಗಿದ್ದರು. ಹರ್ಡಿಕರ ಮಂಜಪ್ಪ ಮತ್ತು ಶ್ರೀನಿವಾಸ ಮಲ್ಯರವರ ಕಾರ್ಯದರ್ಶಿಯಾಗಿ ಚುನಾಯಿಸಲ್ಪಟ್ಟಿದ್ದರು.[೧೦]

ಹೊಸಮನಿ ಸಿದ್ದಪ್ಪನವರ ಅಧ್ಯಕ್ಷತೆಯಲ್ಲಿ ಕರ್ನಾಟಕ ಪ್ರಾಂತಿಯ ಕಾಂಗ್ರೆಸ್ ಸಮಿತಿಯ ಪರಿಷತ್ತು ಸಭೆಯು ಧಾರವಾಡದಲ್ಲಿ ನಡೆಯಿತು. ಸಭೆಯಲ್ಲಿ ಮೈಸೂರಿನ ಸತ್ಯಾಗ್ರಹಗಳ ದಸ್ತಗಿರಿಗಳನ್ನು ಪರಿಶೀಲಿಸಿ ಸರ್ಕಾರದ ನೀತಿಯನ್ನು ಖಂಡಿಸಲಾಯಿತು. ಇದಕ್ಕಾಗಿ ಕರ್ನಾಟಕ ಪ್ರಾಂತಿಯ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಹೊಸಮನಿ ಸಿದ್ದಪ್ಪನವರು ಮೈಸೂರು ಸಂಸ್ಥಾನದಲ್ಲಿ ಪ್ರವಾಸ ಮಾಡಬೇಕೆಂದು ತೀರ್ಮಾನಿಸಲಾಯಿತು. ಅದರಂತೆ ಅವರು ೩ನೇ ಅಕ್ಟೋಬರ್ ೧೯೩೯ ರಿಂದ ಚಿತ್ರದುರ್ಗ ಜಿಲ್ಲೆಯಿಂದ ತಮ್ಮ ಪ್ರವಾಸವನ್ನು ಆರಂಭಿಸಿದ್ದರು. ಅವರು ಒಟ್ಟು ಹತ್ತು ದಿವಸ ಮೈಸೂರು ಸಂಸ್ಥಾನದಲ್ಲಿ ಸಂಚರಿಸಿದರು. ಈ ಸಂದರ್ಭದಲ್ಲಿ ಸಾರ್ವಜನಿಕ ಸಭೆಯಲ್ಲಿ ಭಾಷಣ ಬದಲಾಗಿ ಕಾಂಗ್ರೆಸ್ ಕಾರ್ಯಕರ್ತರುಗಳೊಡನೆ ಸಮಾಲೋಚನೆ ಮಾಡಿದರು. ಇದರಿಂದ ಹೊಸಮನಿ ಸಿದ್ದಪ್ಪನವರ ಪ್ರವಾಸದಿಂದ ಮೈಸೂರು ಸಂಸ್ಥಾನದ ಕಾಂಗ್ರೆಸ್ ಚಟುವಟಿಕೆಗಳು ಚುರುಕುಗೊಂಡವು.[೧೧]

೧೯೩೯ರಲ್ಲಿ ರಾಷ್ಟ್ರಮಟ್ಟದಲ್ಲಿ ಮಹಾತ್ಮ ಗಾಂಧೀಜಿಯವರು ಮತ್ತು ಸುಭಾಷ್‌ಚಂದ್ರ ಬೋಸರ ನಡುವೆ ಭಿನ್ನಾಭಿಪ್ರಾಯ ಉಂಟಾಯಿತು. ಈ ಸಂದರ್ಭದಲ್ಲಿ ಸುಭಾಷ್‌ಚಂದ್ರ ಬೋಸರು. ಫಾರ್ವರ್ಡ್ ಬ್ಲಾಕ್, ಪಕ್ಷದ ಸಂಘಟನೆಗಾಗಿ ೧೯೩೯ ರಲ್ಲಿ ಧಾರವಾಡ ಜಿಲ್ಲೆಗೆ ಭೇಟಿ ನೀಡಿದ್ದರು. ಫಾರ್ವಡ್ ಬ್ಲಾಕ್ ಪಕ್ಷದ ಶಾಖೆ, ಉಪಶಾಖೆಗಳು ಭಾರತದ ಎಲ್ಲ ಪ್ರಾಂತ್ಯಗಳಲ್ಲಿಯೂ ಆರಂಭವಾಗಿದ್ದವು. ಕರ್ನಾಟಕ ಪ್ರಾಂತ್ಯಕ್ಕೆ ಹೊಸಮನಿ ಸಿದ್ದಪ್ಪನವರು ಫಾರ್ವರ್ಡ್ ಬ್ಲಾಕ್ ಪಕ್ಷದ ಅಧ್ಯಕ್ಷರಾಗಿದ್ದರು. ದಿನಾಂಕ ೧೩ನೇ ಜುಲೈ ೧೯೩೯ರಂದು ಕೆ.ಎಚ್. ಪಾಟೀಲ ಮತ್ತು ಹೊಸಮನಿ ಸಿದ್ದಪ್ಪನವರ ಆಮಂತ್ರಣದ ಮೇರೆಗೆ ಬ್ಯಾಡಗಿ ಮತ್ತು ಹಾವೇರಿಗೆ ಭೇಟಿ ನೀಡಿದ್ದರು. ಆಗ ಅವರಿಗೆ ಅಭೂತಪೂರ್ವ ಸ್ವಾಗತ ನೀಡಲಾಯಿತು. ತರುಣ ಸಂಘದವರು ಏರ್ಪಡಿಸಿದ್ದ ಸಮ್ಮೇಳನದ ಉದ್ಘಾಟನೆಯನ್ನು ಸುಭಾಷ್‌ಚಂದ್ರ ಬೋಸ್ ಮಾಡಿದರು. ತಮ್ಮ ಭಾಷಣದಲ್ಲಿ ಈಗ ಕಬ್ಬಿಣ ಕಾದಿದೆ ಹೊಡೆಯಿರಿ. ಇದು ಕೊನೆಯ ಹೋರಾಟ, ಭಾರತ ಮಡಿದರೆ ಯಾರು ಉಳಿಯವರು? ಎಂಬ ಸಂದೇಶವನ್ನಿತ್ತರು. ಇವರ ಸಾರ್ವಜನಿಕ ಭಾಷಣದಿಂದ ಹಾವೇರಿ ಭಾಗದ ತರುಣರು ಸ್ವಾತಂತ್ರ್ಯ ಚಳುವಳಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಧುಮುಕಲು ಕಾರಣವಾಯಿತು.[೧೨]

ಈ ಸಭೆಯಲ್ಲಿ ಭಾರತದ ರಾಜಕೀಯದಲ್ಲಿ ಗುತ್ತೇದಾರಿ ಇದೆ. ಪ್ರತಿಷ್ಠಾಪನೆ ಮಾಡಿದ ದೇವರಿಗೆ ನಿಮ್ಮ ವಿಧೇಯರಾಗಿ ನಡೆದುಕೊಳ್ಳದಿದ್ದರೆ ನಿಮ್ಮ ತಿಥಿ ಆಗಿ ಹೋಗುತ್ತದೆ. ಜನರಿಗೆ ಈ ಗುತ್ತೇದಾರಿ ಬೇಕಾಗಿಲ್ಲ. ಆದರೆ ಅದನ್ನು ಪ್ರತಿಭಟಿಸುವ ಧೈರ್ಯ ಅವರಲ್ಲಿ ಇಲ್ಲ. ನೀವೊಬ್ಬರೆ ಈ ಗುತ್ತೇದಾರಿಯನ್ನು ಎದುರಿಸಿ ನಿಂತಿದ್ದೀರಿ. ಅಧಿಕಾರದ ಹಸಿವು ಒಂದು ಕಡೆಗೆ ಇದ್ದರೆ ಸ್ವಾತಂತ್ರ್ಯದ ಹಸಿವು ಇನ್ನೊಂದು ಕಡೆಗೆ ಇದೆ. ತಮ್ಮ ಅಧಿಕಾರಕ್ಕೆ ಅವಕಾಶ ಒದಗಿಸಿಕೊಡುವುದೆಂದು ಅವರಿಗೆ ಸ್ವಾತಂತ್ರ್ಯಬೇಕು. ಆದರೆ ನಿಮಗೆ ಅಧಿಕಾರ ಮುಖ್ಯವಲ್ಲ, ಸ್ವಾತಂತ್ರ್ಯ ಮುಖ್ಯ ಎಂದು ಸುಭಾಷ್‌ಚಂದ್ರಬೋಸ್‌ರನ್ನು ಹೊಸಮನಿ ಸಿದ್ದಪ್ಪನವರು ತಮ್ಮ ಭಾಷಣದ ಮೂಲಕ ಉತ್ತೇಜಿಸಿದರು.[೧೩]

ನಂತರ ಸಂಜೆಯ ವೇಳೆಗೆ ರಾಣಿಬೆನ್ನೂರಿಗೆ ಭೇಟಿ ನೀಡಿದರು. ಈ ಸಂದರ್ಭದಲ್ಲಿ ಎನ್.ಎಂ. ಚಂದ್ರಶೇಖರ್ ಮೆಣಸನಹಾಳ ತಿಮ್ಮನಗೌಡರು, ಕೆ.ಎಫ್. ಪಾಟೀಲರು ಸುಭಾಷ್‌ಚಂದ್ರ ಬೋಸ್‌ರವರನ್ನು ಭೇಟಿ ಮಾಡಿದರು. ತದನಂತರ ಅವರ ಮಾತುಗಳಿಂದ ಪ್ರಭಾವಿತರಾಗಿ ಸುತ್ತಮುತ್ತಲಿನ ಗ್ರಾಮಗಳಿಂದ ಯುವಕರನ್ನು ಸೇರಿಸಿ ೩೧ ಜನ ಸ್ವಯಂ ಸೇವಕರಿಂದ ಕೂಡಿದ ಸಂಘವನ್ನು ಸುಭಾಷ್‌ಚಂದ್ರಬೋಸ್ ಸ್ಥಾಪಿಸಿದರು.[೧೪]

ಸುಭಾಷ್‌ಚಂದ್ರ ಬೋಸ್‌ರು ಕರ್ನಾಟಕ ಪ್ರವಾಸದ ನಂತರ ತಮ್ಮ ಸಂಪಾದಕತ್ವದಲ್ಲಿ ಪ್ರಕಟವಾಗುತ್ತಿದ್ದ ಫಾರ್ವರ್ಡ್ ಬ್ಲಾಕ್ ಪತ್ರಿಕೆಯಲ್ಲಿ ಹೊಸಮನಿ ಸಿದ್ದಪ್ಪನವರ ಬಗ್ಗೆ ಈ ರೀತಿಯಾಗಿ ಬರೆದರು. "ಹೊಸಮನಿಯವರು ಶ್ರೇಷ್ಠ ರಾಜಕಾರಣಿ, ಮುತ್ಸದ್ಧಿ, ತಾವು ಕಂಡಿರುವವರಲ್ಲಿ ಅಪರೂಪದ ವ್ಯಕ್ತಿ. ತಮಗೆ ರಾಜಕೀಯ ಸ್ಫೂರ್ತಿ ಒದಗಿಸಿಕೊಟ್ಟಿದ್ದಾರೆ. ಅವರ ಸಭ್ಯತೆ, ಪ್ರಮಾಣೀಕತೆ, ದೇಶಾಭಿಮಾನ, ಎದೆಗಾರಿಕೆ ಹಾಗೂ ವಿಶಾಲ ಮನೋಭಾವನೆಗಳು ರಾಷ್ಟ್ರಕ್ಕೆ ಮಾರ್ಗದರ್ಶಕವಾಗಿವೆ. ದೈಹಿಕವಾಗಿ ಅವರು ವೃದ್ಧರಾಗಿದ್ದರೂ ರಾಜಕೀಯ ವಿಚಾರಗಳ ದೃಷ್ಟಿಯಿಂದ ಅವರು ತರುಣರಾಗಿದ್ದಾರೆ".[೧೫] ಸುಭಾಷ್‌ಚಂದ್ರ ಬೋಸರನ್ನು ಹಾವೇರಿಗೆ ಆಹ್ವಾನಿಸಿದ್ದಕ್ಕೆ ಹೊಸಮನಿ ಸಿದ್ದಪ್ಪನವರಿಗೆ ರಾಷ್ಟ್ರೀಯ ಕಾಂಗ್ರೆಸ್ ನೋಟೀಸನ್ನು ನೀಡಿತು. ಕಾಂಗ್ರೇಸ್ಸಿನಿಂದ ಸಿಡಿದು ನಿಂತಿದ್ದ ಸುಭಾಷ್‌ಚಂದ್ರ ಬೋಸರನ್ನು ರಾಷ್ಟ್ರ ವ್ಯಾಪ್ತಿ ಕಾಂಗ್ರೆಸ್ಸಿಗರು ಯಾವುದೇ ರೀತಿಯಿಂದ ಸಹಕರಿಸಬಾರದೆಂದು ಪರಿಪತ್ರ ಹೊರಡಿಸಿದ್ದರೂ, ಅವರನ್ನು ಹಾವೇರಿಗೆ ಆಹ್ವಾನಿಸಿದ್ದಕ್ಕೆ ಸಿದ್ದಪ್ಪ ಹೊಸಮನಿಯವರಿಗೆ

ನೋಟಿಸ್ ಜಾರಿಗೊಳಿಸಿತು. ಇದಕ್ಕೆ ಅವರು ಈ ರೀತಿಯಾಗಿ ಉತ್ತರಿಸಿದರು. ಸ್ವಾತಂತ್ರ್ಯದ ಅಪ್ರತಿಮ ಹೋರಾಟಗಾರರನ್ನು, ವೀರಾಗ್ರಣಿ ದೇಶಭಕ್ತರನ್ನು ಗೌರವಿಸಲು, ಸನ್ಮಾನಿಸಲು ಪಕ್ಷದ ಅನುಮತಿ ಪಡೆಯಬೇಕಾದ ಅವಶ್ಯಕತೆ ಇಲ್ಲ. ಊರಿಗೆ ಬಂದ ಸ್ವಾತಂತ್ರ್ಯ ವೀರನನ್ನು ಸನ್ಮಾನಿಸುವುದು ಪಕ್ಷದ ಶಿಸ್ತಿನ ಉಲ್ಲಂಘನೆ ಎನಿಸಲಾರದು. ಪಕ್ಷಕ್ಕಿಂತ ರಾಷ್ಟ್ರ ದೊಡ್ಡದು ಎನ್ನುವ ಭಾವನೆಯನ್ನು ಕಾಂಗ್ರೆಸ್ಸು ಕಳೆದುಕೊಳ್ಳಲಾರದು ಸಂಕುಚಿತ ಭಾವನೆ ಇರಿಸಿಕೊಂಡು ಹೋದರೆ ಕಾಂಗ್ರೆಸ್ಸು ದುರ್ಬಳಗೊಳ್ಳುತ್ತದೆ ಎಂದು ಉತ್ತರಿಸಿದರು. ಈ ಉತ್ತರ ನೀಡಿದ ನಂತರ ಅವರ ಮೇಲೆ ಶಿಸ್ತುಭಂಗ ಕ್ರಮ ಕೈಗೊಳ್ಳುವುದನ್ನು ರಾಷ್ಟ್ರೀಯ ಕಾಂಗ್ರೆಸ್ ಪಕ್ಷ ಕೈ ಬಿಟ್ಟಿತು.[೧೬]

೧೯೪೨ರ ಕ್ವಿಟ್ ಇಂಡಿಯಾ ಚಳುವಳಿಯ ಸಂದರ್ಭದಲ್ಲಿ ಮೈಲಾರ ಮಹಾದೇವಪ್ಪ, ಸಂಗೂರ ಕರಿಯಪ್ಪ ಮೆಣಸನಹಾಳ ತಿಮ್ಮನಗೌಡ, ಕೊಟ್ರೆನಂಜಪ್ಪ, ಹಳ್ಳಿಯವರ ಜಿನ್ನಪ್ಪ, ಮಡಿವಾಳ ನರಸಪ್ಪ, ಚನ್ನಬಸವಯ್ಯ, ಹಾಲಯ್ಯನವರ ಮಠ, ಪಂಜಾಕ್ಷರಿ ವಳ ಸಂಗದ ಇವರೇ ಮೊದಲಾದವರು ಹೊಸಮನಿಯವರನ್ನು ರಹಸ್ಯವಾಗಿ ಕಂಡು ಮುಂದಿನ ಕಾರ್ಯಕ್ರಮ ಯೋಜನೆಯನ್ನು ಪಡೆದು ಕೊಂಡಿದ್ದರು. ಅಲ್ಲದೇ ಮೈಸೂರು ಸೀಮೆಯ ಚಿತ್ರದುರ್ಗದ ಕೆ.ಕೆಂಚಪ್ಪ, ರಾಮಗಿರಿ ಹನುಮಂತಪ್ಪ, ರಂಗಾಪುರ ಸಿದ್ದಪ್ಪ, ಇಟಗಿ ವೇದಮೂರ್ತಿ, ದೊ.ಮ. ರೇವಣಸಿದ್ದಯ್ಯ, ಎನ್.ಡಿ.ಶಂಕರ, ಇವರೇ ಮೊದಲಾದ ಹೋರಾಟಗಾರರು ಸುಭಾಷರ ಕಾರ್ಯಕ್ರಮಗಳಲ್ಲಿ ವಿಶ್ವಾಸ ಇರಿಸಿಕೊಂಡು, ಹೊಸಮನಿಯವರ ಸಂಪರ್ಕ ಹೊಂದಿ ಅವರ ಸಲಹೆಯಂತೆ ನಡೆದುಕೊಳ್ಳುತ್ತಿದ್ದರು.[೧೭] ಪ್ರತಿಯೊಬ್ಬರೂ ತನ್ನ ಶಕ್ತಿ ಹಾಗೂ ಇಚ್ಛೆಗಳಿಗೆ ಅನುಸಾರವಾಗಿ ರಾಷ್ಟ್ರಕ್ಕೆ ತನ್ನ ಸೇವೆ ಸಲ್ಲಿಸಬೇಕು. ದೇಶವು ಅಸ್ವಾತಂತ್ರ್ಯ ಸ್ಥಿತಿಯಲ್ಲಿದ್ದುಕೊಂಡು, ಜನಜೀವನವು ಉಬ್ಬಸಗೊಂಡಿರುವ ಪರಿಸ್ಥಿತಿಯನ್ನು ಅನುಭವಿಸುತ್ತಿರುವ ಸಂದರ್ಭದಲ್ಲಿ ಯಾವ ಒಬ್ಬ ವ್ಯಕ್ತಿಯು ಏನನ್ನೂ ಮಾಡದೆ ಕೈಕಟ್ಟಿಕೊಂಡು ಕುಳಿತರೆ ಅದು ಅನೀತಿ ಎನಿಸುತ್ತದೆ. ಅಧರ್ಮ ಎನಿಸುತ್ತದೆ. ಅಪರಾಧವೆನಿಸುತ್ತದೆ ಎಂದು ಸ್ವಾತಂತ್ರ್ಯ ಹೋರಾಟಕ್ಕೆ ಪಾಲ್ಗೊಳ್ಳಲು ಹೆಚ್ಚಿನ ಸಂಖ್ಯೆಯಲ್ಲಿ ಯುವಕರನ್ನು ಪ್ರೋತ್ಸಾಹಿಸುತ್ತಿದ್ದರು. ಈ ಮೂಲಕ ೧೯೪೭ ಆಗಸ್ಟ್ ೧೫ರಂದು ಭಾರತವು ಸ್ವಾತಂತ್ರ್ಯವನ್ನು ಪಡೆಯಿತು.

ಕರ್ನಾಟಕ ಏಕೀಕರಣ ಚಳುವಳಿಯಲ್ಲಿ

ಭಾರತಕ್ಕೆ ಸ್ವಾತಂತ್ರ್ಯ ಬಂದ ನಂತರ ಹೊಸಮನಿ ಸಿದ್ದಪ್ಪನವರು ಕರ್ನಾಟಕದ ಏಕೀಕರಣಕ್ಕಾಗಿ ಶ್ರಮಿಸಿದರು. ತಾವು ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾಗಿ ಸಂಚರಿಸಿದ ಪ್ರದೇಶಗಳೆಲ್ಲ ಸೇರಿ ಅಖಂಡ ಕರ್ನಾಟಕ ರಾಜ್ಯ ನಿರ್ಮಾಣಗೊಳ್ಳಬೇಕೆನ್ನುವ ಕನಸು ನನಸಾಗಬೇಕೆಂದು ಅವರು ಹಂಬಲಿಸಿದರು. ಅಷ್ಟೇ ಅಲ್ಲದೇ ಅದಕ್ಕೆ ರೂಪರೇಷೆಯನ್ನು ಸಿದ್ದಪಡಿಸಿದ್ದರು. ದೇಶಕ್ಕೆ ಸ್ವಾತಂತ್ರ್ಯ ಬಂದಿದ್ದನ್ನು ಕಂಡಿದ್ದೇನೆ, ಈಗ ಕರ್ನಾಟಕ ಏಕೀಕರಣವಾಗುವುದನ್ನು ನೋಡುತ್ತೇನೆ. ಕರ್ನಾಟಕ ಏಕೀಕರಣ ನೋಡದೆ ನಾನು ಸಾಯುವುದಿಲ್ಲ. ಎಷ್ಟೋ ಜನರು ಬ್ರಿಟಿಷರು ಭಾರತಬಿಟ್ಟು ಹೋಗುತ್ತಾರೆ. ದೇಶ ಸ್ವಾತಂತ್ರ್ಯವಾಗುತ್ತದೆ ಎಂದು ನಂಬಿರಲಿಲ್ಲ. ಅದೇ ರೀತಿ ದೇಶೀಯ ಸಂಸ್ಥಾನಗಳು ಹೋಗುತ್ತವೆ, ಕರ್ನಾಟಕ ರಾಜ್ಯ ಆಗುತ್ತದೆ ಎಂದು ಎಷ್ಟೋ ಜನರು ನಂಬಿಲ್ಲ. ಕರ್ನಾಟಕ ರಾಜ್ಯ ಆಗುವುದನ್ನು ತಪ್ಪಿಸುವುದು ಯಾರಿಂದಲೂ ಸಾಧ್ಯವಾಗಲಾರದು ಎಂಬುದು ಹೊಸಮನಿ ಸಿದ್ದಪ್ಪ ಅಚಲ ನಂಬಿಕೆಯಾಗಿತ್ತು.

ಏಕೀಕರಣದ ಬಗ್ಗೆ ಕಾಂಗ್ರೆಸ್ಸಿಗೆ ಚುರುಕು ಮುಟ್ಟಿಸಬೇಕೆಂದು ತಮ್ಮ ಸಾಂಕೇತಿಕ ವಿರೋಧವನ್ನು ವ್ಯಕ್ತಪಡಿಸಲು ಹೊಸಮನಿ ಸಿದ್ದಪ್ಪನವರು ೧೯೫೨ರ ಲೋಕಸಭೆಗೆ ಸ್ಪರ್ಧಿಸಿ ಸೋಲನ್ನು ಅನುಭವಿಸಿದರು. ನಾನು ಸೋತರೇನಂತೆ? ಏಕೀಕರಣದ ಪ್ರಶ್ನೆಯನ್ನು ಗೆಲ್ಲಿಸುತ್ತೇನೆ ಎಂದು ಅವರು ಭರವಸೆಯಿಂದ ನುಡಿದರು. ಅದರಂತೆಯೇ ಹಾವೇರಿಯಲ್ಲಿ ಪಕ್ಷಾತೀತದ ಸಭೆಯನ್ನು ಯಶಸ್ವಿಯಾಗಿ ನಡೆಸಿದರು. ಈ ಸಭೆಯಲ್ಲಿ ಕಾಂಗ್ರೆಸ್ಸನ್ನು ಹೊರತುಪಡಿಸಿ ಕರ್ನಾಟಕದೊಳಗಿನ ಇನ್ನುಳಿದ ಎಲ್ಲ ರಾಜಕೀಯ ಪಕ್ಷಗಳು ಹೊಸಮನಿಯವರನ್ನು ಬೆಂಬಲಿಸಿದವು. ಜನರಾಜ ಹೆಗ್ಗಡೆ, ಕೆ.ಆರ್.ಕಾರಂತ, ಗಾದಿ ಲಿಂಗನಗೌಡ, ಅಳವಂಡಿ ಶಿವಮೂರ್ತಿಸ್ವಾಮಿ, ವಾಲಿ ಚೆನ್ನಪ್ಪ, ಶಾಂತಿನಾಥ ಇಂಗಳೆ, ಯಜಮಾನ ಶಾಂತರುದ್ರಪ್ಪ, ಮುರಗೋಡ ಮಹಾದೇವಪ್ಪ, ತಲ್ಲೂರ ರಾಮನಗೌಡ, ಭಿ.ಸು. ಪಾಟೀಲ, ಗದಿಗೆಪ್ಪ ಹುರಳಿ ಮೊದಲಾದವರೆಲ್ಲರೂ ಬೆಂಬಲಕ್ಕೆ ನಿಂತರು.[೧೮]

ದಾವಣಗೆರೆಯಲ್ಲಿ ಅಖಂಡ ಕರ್ನಾಟಕ ರಾಜ್ಯ ನಿರ್ವಹಣ ಪರಿಷತ್ತಿನ ಸಮಾವೇಶವನ್ನು ಯಶಸ್ವಿಯಾಗಿ ಸಂಘಟಿಸಿದರು. ಈ ಸಭೆಯಲ್ಲಿ ಕರ್ನಾಟಕದ ನಾನಾ ಮೂಲೆಗಳಿಂದ ಕನ್ನಡದ ಮುಂದಾಳುಗಳು, ಸಾಹಿತಿಗಳು, ರಾಜಕಾರಣಿಗಳು, ರೈತರು, ಕಾರ್ಮಿಕರು, ವಿದ್ಯಾರ್ಥಿಗಳು, ದೊಡ್ಡ ಸಂಖ್ಯೆಯಲ್ಲಿ ಸಮಾವೇಶಗೊಳ್ಳಲು ಕಾರಣಿಭೂತರಾದರು. ೩೦ನೇ

ಏಪ್ರಿಲ್ ೧೯೫೩ ರಂದು ಕರ್ನಾಟಕ ಪ್ರಾಂತ್ಯ ರಚನೆಗೆ ಮೈಸೂರು ಸರ್ಕಾರವು ಪ್ರಧಾನ ಪಾತ್ರ ವಹಿಸಿದರೆ ಅನುಕೂಲ ಮತ್ತು ಔಚಿತ್ಯ ಪೂರ್ಣವಾದುದು ಎಂದು ತೀರ್ಮಾನಿಸಲಾಯಿತು. ಅಂದಿನ ಮೈಸೂರಿನ ಮುಖ್ಯಮಂತ್ರಿ ಕೆ. ಹನುಮಂತಯ್ಯನವರನ್ನು ಸಿದ್ದಪ್ಪ ಹೊಸಮನಿ, ಕೆ.ಆರ್. ಕಾರಂತ, ಎಂ.ಎಸ್. ಬ್ಯಾಡಗಿ, ಕೆ.ಪಿ. ನೆಲವಿಗಿ ಮತ್ತು ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರನ್ನೊಳಗೊಂಡ ನಿಯೋಗವೊಂದು ಭೇಟಿಮಾಡಿ ಮನವಿಯನ್ನು ಸಲ್ಲಿಸಿತು.

೧೯೫೩ ಮೇ ೧೫ ಮತ್ತು ೧೬ರಂದು ಎರಡು ದಿನ ಕಾಸರಗೋಡಿನಲ್ಲಿ ಪ್ರಜಾ ಸೋಷಿಯಲಿಸ್ಟ್ ಪಕ್ಷ ಏರ್ಪಡಿಸಿದ್ದ ಏಕೀಕರಣ ಸಮ್ಮೇಳನದ ಅಧ್ಯಕ್ಷತೆಯನ್ನು ಹೊಸಮನಿ ಸಿದ್ದಪ್ಪನವರು ವಹಿಸಿದ್ದರು. ಅಧ್ಯಕ್ಷತೆಯ ಭಾಷಣದಲ್ಲಿ ಮೈಸೂರಿನವರು ಒಪ್ಪದ ಹೊರತು ಕರ್ನಾಟಕ ಏಕೀಕರಣವಿಲ್ಲ ಎಂಬ ಮೊಂಡುವಾದಕ್ಕೆ ವಿರಾಮ ಹಾಕಬೇಕು. ಕೇಂದ್ರ ಸರಕಾರದ ವಿಳಂಬ ನೀತಿಯನ್ನು ಹಾಗೂ ಮೈಸೂರಿನ ಕೆಲವು ರಾಜಕಾರಣಿಗಳು ಮತ್ತು ಸಾಹಿತಿಗಳು ದ್ವಿ ಕರ್ನಾಟಕ ಪ್ರಾಂತ ರಚನೆಯ ಮಾತನಾಡುತ್ತಿರುವುದನ್ನು ಹೊಸಮನಿ ಸಿದ್ದಪ್ಪನವರು ಖಂಡಿಸಿದರು.[೧೯]

ಏಕೀಕರಣದ ವಿಳಂಬದಿಂದ ಕೆಲವಡೆ ವಿಧ್ವಂಸಕ ಕೃತ್ಯಗಳು ನಡೆದಾಗ ಬೊಂಬಾಯಿ ಸರ್ಕಾರದ ಮುಖ್ಯಮಂತ್ರಿ ಮೊರಾರ್ಜಿ ದೇಸಾಯಿಯವರು. ಅಖಂಡ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ತಿನವರನ್ನು ಆರೋಪಿ ಸ್ಥಾನದಲ್ಲಿ ಹೆಸರಿಸಿದರು. ಅದನ್ನು ಕರ್ನಾಟಕ ಏಕೀಕರಣ ಪಕ್ಷದ ಅಧ್ಯಕ್ಷರು ಅಖಂಡ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ತಿನ ಕ್ರಿಯಾ ಸಮಿತಿಯ ಸದಸ್ಯರೂ ಆದ ಸಿದ್ದಪ್ಪಹೊಸಮನಿ ಅವರು ಖಂಡಿಸಿದರು. ೧ನೇ ಸೆಪ್ಟಂಬರ್ ೧೯೫೩ ರಂದು ಹುಬ್ಬಳ್ಳಿಯಲ್ಲಿ ಅಖಂಡ ಕರ್ನಾಟಕ ಏಕೀಕರಣ ನಿರ್ಮಾಣ ಪರಿಷತ್ತಿನ ಉಪಸಮಿತಿಯು ಸಿದ್ದಪ್ಪ ಹೊಸಮನಿ ಅವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಪರಿಷತ್ತಿನ ಮುಖಂಡರನ್ನು ಬಂಧನಲ್ಲಿಟ್ಟಿರುವ ಮುಂಬಯಿ ಸರ್ಕಾರದ ನೀತಿಗೆ ಪ್ರತಿಯಾಗಿ ಪ್ರತಿಭಟನಾ ದಿನಾಚರಣೆಯನ್ನು ಆಚರಿಸುವ ಮೂಲಕ ಎಚ್ಚರಿಸಿದರು.[೨೦]

ದಿನಾಂಕ ೮ನೇ ಮಾರ್ಚ್ ೧೯೫೪ ರಂದು ಅಖಂಡ ಕರ್ನಾಟಕ ರಾಜ್ಯ ನಿರ್ಮಾಣ, ಪರಿಷತ್ತಿನ ಬೆಳಗಾವಿಯ ಶಾಖೆಯನ್ನು ಹೊಸಮನಿ ಸಿದ್ದಪ್ಪ ಅವರು ಉದ್ಘಾಟಿಸಿದರು. ಈ ಪರಿಷತ್ತಿಗೆ ಬಿಜಾಪುರ ಜಿಲ್ಲೆಯ ಪೀಪಲ್ಸ್ ಪಾರ್ಟಿ, ಬಳ್ಳಾರಿ ಜಿಲ್ಲೆಯ ಜಸ್ಟೀಸ್ ಪಾರ್ಟಿ, ಸಮಾಜವಾದಿ ಪಕ್ಷ, ಫಾರ್ವರ್ಡ್ ಬ್ಲಾಕ್ ಮತ್ತು ಇನ್ನೂ ಅನೇಕ ಸಂಘ–ಸಂಸ್ಥೆಗಳು ಜೊತೆಗೂಡಿದ್ದವು. ತದನಂತರ ದಿನಗಳಲ್ಲಿ ೧೯೫೫ರ ಸೆಪ್ಟಂಬರ್ ಕೊನೆಯ ವಾರದಲ್ಲಿ ಆಂಧ್ರ ಪ್ರಾಂತ್ಯ ರಚನೆಗೆ ಸಂಬಂಧಿಸಿದಂತೆ ಕೇಂದ್ರ ಸರಕಾರದ ರಾಜ್ಯ ಪುನರ್ ವಿಂಗಡಣೆ ಆಯೋಗವು ಬಳ್ಳಾರಿ, ಹೊಸಪೇಟೆ, ಮತ್ತು ಶಿರಗುಪ್ಪ ತಾಲ್ಲೂಕುಗಳನ್ನು ಆಂಧ್ರಕ್ಕೆ ಸೇರಿಸಲು ಶಿಫಾರಸ್ಸು ಮಾಡಿತ್ತು. ಬಳ್ಳಾರಿಯನ್ನು ಒಡೆದು ಕರ್ನಾಟಕ ರಚನೆ ಮಾಡುವುದನ್ನು ಹೊಸಮನಿ ಸಿದ್ದಪ್ಪ ಖಂಡಿಸಿದರು. ಪಕ್ಷೇತರ ಕರ್ನಾಟಕ ಏಕೀಕರಣ ಪರಿಷತ್ತಿನ ಮೊದಲ ಅಧಿವೇಶನವನ್ನು ೧೯೫೫ರ ಮೇ ೨೫ ಮತ್ತು ೨೬ರಂದು ಹಾವೇರಿಯಲ್ಲಿ ಯಶಸ್ವಿಯಾಗಿ ನಡೆಸಿದರು.[೨೧]

ಅಲ್ಲದೇ ಅಂದಿನ ಮೈಸೂರು ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯ ಅವರಿಗೆ ಕರ್ನಾಟಕ ಏಕೀಕರಣಕ್ಕೆ ಮುಂದಾಗಬೇಕೆಂದು ನಿರಂತರವಾಗಿ ಹುರಿದುಂಬಿಸುತ್ತಿದ್ದರು. ಇದು ಐತಿಹಾಸಿಕ ಪರ್ವಕಾಲ ಕೆಂಪೇಗೌಡ ಬೆಂಗಳೂರು ಕಟ್ಟಿದ, ಕೆಂಗಲ್ ಹನುಮಂತಯ್ಯ ಕರ್ನಾಟಕ ಕಟ್ಟಿದ ಎನ್ನುವ ಹೆಸರನ್ನು ನೀವು ಪಡೆದುಕೊಳ್ಳಬೇಕು, ಇತಿಹಾಸದಲ್ಲಿ ಎಷ್ಟೋ ಜನ ರಾಜರು ಒಂದೆರಡು ಗ್ರಾಮಗಳನ್ನು ತಮ್ಮವನ್ನಾಗಿ ಮಾಡಿಕೊಳ್ಳಲು ಹೋರಾಡಿದ್ದಾರೆ. ರಕ್ತ ಸುರಿಸಿದ್ದಾರೆ. ಆದರೆ ಇಲ್ಲಿ ರಕ್ತ ಸುರಿಸುವ ಹೋರಾಟ ಮಾಡಬೇಕಾದ ಪ್ರಶ್ನೆಯೇ ಇಲ್ಲ. ಎಲ್ಲ ಪ್ರದೇಶಗಳ ಕನ್ನಡ ಜನರೂ ಈಗ ಮೈಸೂರು ಸೇರಬೇಕೆಂದಿದ್ದಾರೆ. ಅನಾಯಸವಾಗಿ ಲಭಿಸಿರುವ ಈ ಅವಕಾಶವನ್ನು ನೀವೇಕೆ ಕಳೆದುಕೊಳ್ಳಬೇಕು? ಮೈಸೂರು, ಕನ್ನಡ ರಾಜ್ಯ ಅಂಥ ಕನ್ನಡ ರಾಜ್ಯದ ಮುಖ್ಯಮಂತ್ರಿಯಾದ ನಿಮ್ಮಲ್ಲಿ ಕನ್ನಡ ನೆಲದ ಬಗೆಗೆ, ಜನರ ಬಗೆಗೆ ಅಭಿಮಾನ ಇರಬಾರದೆ? ಕರೆದು ಹೆಣ್ಣು ಕೊಟ್ಟರೆ ಅಳಿಯನಿಗೆ ಮಲರೋಗ ಬಂದಿತು ಎನ್ನುವಂತೆ ಮಾಡಬೇಡಿರಿ ಎಂದರು. ಅಲ್ಲದೇ ಕನ್ನಡ ನಾಡನ್ನು ಮೈಸೂರೆಂದೇ ಕರೆಯುವುದಕ್ಕೆ ಆಕ್ಷೇಪ ಏನನ್ನು ವ್ಯಕ್ತಪಡಿಸಲಿಲ್ಲ. ಕುರುಡನಿಗೇನು ಬೇಕು? ಎರಡು ಕಣ್ಣುಬೇಕು. ಯಾವ ರೀತಿಯಿಂದಾರೂ ದೃಷ್ಟಿ ಬಂದರೆ ಸಾಕು. ಹೆಸರಿನ ಪ್ರಶ್ನೆಗಿಂತ ಕನ್ನಡ ನಾಡು ಒಂದುಗೂಡುವುದು, ಒಂದು ಆಡಳಿತದಲ್ಲಿ ಬರುವುದು ಮುಖ್ಯ ಎಂದರು.[೨೨]

ಅಂತಿಮವಾಗಿ ನವೆಂಬರ್ ೧, ೧೯೫೬ರಂದು ಅಖಂಡ ಮೈಸೂರು ರಾಜ್ಯ ಏಕೀಕರಣಗೊಂಡಿತು. ಈ ಮೂಲಕ ಭಾರತ ಸ್ವಾತಂತ್ರ್ಯ ಸಂಪಾದಿಸಿದ ಹಾಗೂ ಕರ್ನಾಟಕ ಏಕೀಕರಣ ಸಾಧಿಸಿದ ಹೆಮ್ಮೆ ಹೊಸಮನಿ ಸಿದ್ದಪ್ಪನವರೆನಿಸಿತು. ಸ್ವಾತಂತ್ರ್ಯ ಮತ್ತು ಏಕೀಕರಣದೊಂದಿಗೆ ಜಿಲ್ಲೆಯಾದ್ಯಂತ ಅನೇಕ ರಚನಾತ್ಮಕ ಕಾರ್ಯಗಳನ್ನು ನಿರ್ವಹಿಸಿದ್ದಾರೆ. ಅವುಗಳಲ್ಲಿ

ಅರ್ಬನ್ ಬ್ಯಾಂಕ್, ಕೆ.ಸಿ.ಸಿ. ಬ್ಯಾಂಕ್ ಹಾವೇರಿ ಬ್ರಾಂಚ್, ಧಾರವಾಡ ಡಿ.ಸಿ.ಸಿ. ಬ್ಯಾಂಕ್, ಜಿಲ್ಲಾ ಸ್ಕೂಲ್ ಬೋರ್ಡ್, ಡೆವಲಪ್ ಮೆಂಟ್ ಆಫೀಸ್, ಹಾವೇರಿ ಹಾಗೂ ಕರ್ಜಗಿಯ ಸಹಕಾರಿ ಸಂಘಗಳು, ಜಿಲ್ಲಾ ಸ್ಥಳೀಯ ಸಂಸ್ಥೆ ಲ್ಯಾಂಡ್ ಮಾರ್ಟಗೇಜ್ ಬ್ಯಾಂಕ್ ಇತ್ಯಾದಿ ಹಾವೇರಿ ಪ್ರೌಢಶಾಲೆಯ ದೊಡ್ಡ ಪ್ರಮಾಣ ಕಟ್ಟಡ ಕಟ್ಟಿಸಲು ಇವರು ಕಾರಣರಾದರು.[೨೩]

ಮೇಲ್ಕಂಡಂತೆ ಎಲ್ಲ ಸಂಘ ಸಂಸ್ಥೆಗಳಲ್ಲಿಯೂ ಅಪಾರ ಸೇವೆ ಸಲ್ಲಿಸಿ ೧೪ನೇ ಫೆಬ್ರವರಿ ೧೯೫೯ ರಂದು ನಿಧನರಾದರು. ಅನ್ಯಾಯ ಮಾಡುವವನಿಗಿಂತಲೂ ಅನ್ಯಾಯ ವಾದದ್ದನ್ನು ನೋಡಿ ಸಹಿಸುವವನೇ ಮಹಾಪಾಪಿ ಎಂದು ನಂಬಿ ನಡೆದ ಮಹಾನುಭಾವ ಹೊಸಮನಿ ಸಿದ್ದಪ್ಪನವರು.

ಅಡಿ ಟಿಪ್ಪಣಿಗಳು

೧. ಸೂರ್ಯನಾಥ ಕಾಮತ್ (ಸಂ.), (೧೯೯೮), ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಸಂಪುಟ ೧; ಬೆಂಗಳೂರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಪು. ೭೫೬.

೨. ಗೋವಿಂದಮೂರ್ತಿ ದೇಸಾಯಿ, (೧೯೭೮), ಸಿದ್ದಪ್ಪ ಹೊಸಮನಿ, ಬೆಂಗಳೂರು, ಐಬಿಎಚ್ ಪ್ರಕಾಶನ, ಪು. ೨೬.

೩. ಅದೇ, ಪು. ೩೦.

೪. ಪಾಟೀಲ ಪುಟ್ಟಪ್ಪ, (೧೯೮೪); ಹೊಸಮನಿ ಸಿದ್ದಪ್ಪ, ಡಂಬಳ-ಗದಗ, ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಪು. ೧೩.

೫. ಕಲ್ಬುರ್ಗಿ.ಎಂ.ಎಂ. ಮತ್ತು ಪಾಟೀಲ.ಎಸ್.ಎಚ್. (ಸಂ.) (೧೯೯೮); ಭಾರತ ಸ್ವಾತಂತ್ರ್ಯ ಮತ್ತು ಕರ್ನಾಟಕ ಏಕೀಕರಣ ಲಿಂಗಾಯತರ ಪಾತ್ರ; ಗದಗ; ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಪು. ೦೭.

೬ ಸೂರ್ಯನಾಥ ಕಾಮತ್ (ಸಂ.) (೧೯೯೮); ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಸಂಪುಟ ೧, ಬೆಂಗಳೂರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಪು. ೭೫೭.

೭. ಸೂರ್ಯನಾಥ ಕಾಮತ್ (ಸಂ.), (೧೯೯೫); ಧಾರವಾಡ ಜಿಲ್ಲೆ ಗ್ಯಾಸೇಟಿಯರ್, ಪು. ೧೪೪.

೮. ಗೋವಿಂದಮೂರ್ತಿ ದೇಸಾಯಿ; (೧೯೭೮), ಮೇಲೆ ಉದ್ಧರಿಸಿದ ಗ್ರಂಥ, ಪು. ೧೨.

೯. ಪಾಟೀಲ ಪುಟ್ಟಪ್ಪ, (೧೯೮೪); ಮೇಲೆ ಉದ್ಧರಿಸಿದ ಗ್ರಂಥ, ಪು. ೫.

೧೦. ಸಾಧ್ವಿ ಪತ್ರಿಕೆ, ದಿನಾಂಕ ೦೬.೦೨.೧೯೫೯, ಸಂಪುಟ-೦೩, ಸಂಚಿಕೆ-೪೯, ಪು. ೦೯.

೧೧. ಸಾಧ್ವಿ ಪತ್ರಿಕೆ, ದಿನಾಂಕ ೨೮.೦೮.೧೯೫೯, ಸಂಪುಟ-೦೪, ಸಂಚಿಕೆ-೨೬, ಪು. ೧೧.

೧೨. ಡಿ.ಜಿ.ಕರಮಕರ (ಸಂ) (೧೯೯೭), ನೇತಾಜಿ ಸುಭಾಷ್‌ಚಂದ್ರ ಬೋಸ್ ಜನ್ಮ ಶತಾಬ್ಧಿ ಸ್ಮರಣ ಸಂಚಿಕೆ, ಬೆಂಗಳೂರು; ಸುಭಾಷ್‌ಚಂದ್ರ ಬೋಸ್ ಜನ್ಮಶತಾಬ್ಧಿ ಟ್ರಸ್ಟ್ (ರಿ.), ಪು. ೬೮.

೧೩. ಪಾಟಿಲ ಪುಟ್ಟಪ್ಪ (೧೯೮೪); ಮೇಲೆ ಉದ್ಧರಿಸಿದ ಗ್ರಂಥ, ಪು. ೧೧೯.

೧೪. ದೇವರ ಕೊಂಡಾರೆಡ್ಡಿ, ಜಿ.ಕೆ. ಮತ್ತು ದೇವರಾಜಸ್ವಾಮಿ (ಸಂ.) (೨೦೧೫), ಇತಿಹಾಸದರ್ಶನ, ಸಂಪು-೩೦, ಬೆಂಗಳೂರು, ಕರ್ನಾಟಕ ಇತಿಹಾಸ ಅಕಾದೆಮಿ (ರಿ), ಪು. ೪೬೪.

೧೫. ಪಾಟೀಲಪುಟ್ಟಪ್ಪ; (೧೯೮೪); ಪೂರ್ವೋಕ್ತ, ಪು. ೧೧.

೧೬. ಅದೇ, ಪು. ೧೨೦.

೧೭. ಅದೇ, ಪು. ೧೨೪.

೧೮. ಮುಖ್ಯಮಂತ್ರಿ ಚಂದ್ರು (ಪ್ರ.ಸಂ.), (೨೦೧೨); ಕರ್ನಾಟಕ ಏಕೀಕರಣಕ್ಕೆ ದುಡಿದ ಮಹನೀಯರು, ಬೆಂಗಳೂರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಪು. ೧೧೩.

೧೯. ಗೋಪಾಲರಾವ್.ಎಚ್.ಎಸ್. (ಸಂ.), (೧೯೯೬); ಕರ್ನಾಟಕ ಏಕೀಕರಣ ಇತಿಹಾಸ ಬೆಂಗಳೂರು, ನವಕರ್ನಾಟಕ ಪಬ್ಲಿಕೇಷನ್ಸ್, ಪು. ೨೦೪.

೨೦. ಅದೇ, ಪು. ೨೦೯.

೨೧. ಮುಖ್ಯಮಂತ್ರಿ ಚಂದ್ರು (ಪ್ರ.ಸಂ.) ಪೂರ್ವೋಕ್ತ, ಪು. ೧೧೪.

೨೨. ಪಾಟೀಲಪುಟ್ಟಪ್ಪ (೧೯೮೪); ಪೂರ್ವೋಕ್ತ, ಪು. ೧೩೫.

೨೩. ಸೂರ್ಯನಾಥ ಕಾಮತ್ (ಸಂ.), (೧೯೯೮), ಪೂರ್ವೋಕ್ತ, ಪು. ೭೫೮.

೯೧

ನ. ಭದ್ರಯ್ಯ: ಜೀವನ ಮತ್ತು ಸಾಧನೆ

ಎ.ಸಿ. ಮಂಜುಳ*

"ನಿಸ್ವಾರ್ಥ ಸೇವಾ ದೀಕ್ಷೆಯೇ ಸ್ವಾತಂತ್ರ್ಯದ ಶ್ರೀತಂತ್ರ" ಎಂದವರು ಗಾಂಧೀಜಿ. ಅವರ ರಚನಾತ್ಮಕ ಕಾರ್ಯಕ್ರಮದಲ್ಲಿ ತೀವ್ರ ಶ್ರದ್ಧೆ ಹೊಂದಿ ತಮ್ಮ ಜೀವನವನ್ನೇ ಸ್ವಾತಂತ್ರ್ಯಹೋರಾಟ ಮತ್ತು ರಚನಾತ್ಮಕ ಕಾರ್ಯಗಳಿಗೆ ಸಮರ್ಪಿಸಿಕೊಂಡ ಅನೇಕ ಮಹನೀಯರುಗಳಲ್ಲಿ ನ. ಭದ್ರಯ್ಯನವರು ಕೂಡ ಒಬ್ಬರು. ಸಾಂಪ್ರದಾಯಿಕವಾಗಿ ಶಾಲಾಕಾಲೇಜುಗಳಿಗೆ ಹೋಗಿ ಪದವಿ–ಪ್ರಶಸ್ತಿಗಳನ್ನು ಪಡೆಯದೆ ಜೀವನಪರ್ಯಾಂತ ಸ್ವಂತ ಪರಿಶ್ರಮದಿಂದ ಜ್ಞಾನಾರ್ಜನೆ ಮಾಡಿ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸಮಸ್ಯೆಗಳ ಬಗ್ಗೆ ಅಪಾರ ಜ್ಞಾನ ಹೊಂದಿದ್ದ ಸ್ವಾತಂತ್ರ್ಯ ಹೋರಾಟಗಾರರು, ಸಾಹಿತಿಗಳು, ಸಮಾಜಸುಧಾರಕರು, ಶಿಕ್ಷಣ ಪ್ರೇಮಿಗಳು, ಗಾಂಧಿವಾದಿಗಳು ಆಗಿದ್ದ ನ. ಭದ್ರಯ್ಯನವರು ಕ್ರಿ.ಶ. ೧೯೧೨ ಸೆಪ್ಟೆಂಬರ್ ೯ ರಂದು ಮಂಡ್ಯಜಿಲ್ಲೆಯ ಪಾಂಡವಪುರ ತಾಲ್ಲೂಕಿನ ನೀಲನಹಳ್ಳಿಯಲ್ಲಿ ತಂದೆ ನಡ್ಲೇಗೌಡ ತಾಯಿ ತಾಯಮ್ಮ ದಂಪತಿಯ ಹಿರಿಯ ಮಗನಾಗಿ ಬಡರೈತ ಕುಟುಂಬದಲ್ಲಿ ಜನಿಸಿದರು[1]. ಮೂವರು ಕಿರಿಯ ಸಹೋದರರು ಹಾಗೂ ಒಬ್ಬ ಸಹೋದರಿಯ ಪ್ರೀತಿಯ ಅಣ್ಣನಾಗಿದ್ದರು. ಲಕ್ಷ್ಮಿಸಾಗರದಲ್ಲಿ ಪ್ರಾಥಮಿಕ ಮತ್ತು ಮಾಧ್ಯಮಿಕಶಿಕ್ಷಣ ಮುಗಿಸಿ ಮೈಸೂರಿನಲ್ಲಿ ಪ್ರೌಢಶಿಕ್ಷಣ ಪಡೆದುಕೊಂಡರು ವಾರಾನ್ನದ ವಿದ್ಯಾರ್ಥಿಯಾಗಿ ಶಿಕ್ಷಣ ಪಡೆಯುತ್ತಿದ್ದ ಭದ್ರಯ್ಯನವರು ಇಂಟರ್ ಮಿಡಿಯೇಟ್ ಓದುವ ವೇಳೆಗೆ ಸ್ವಾತಂತ್ರ್ಯಹೋರಾಟಕ್ಕೆ ಧುಮುಕಿ ತಮ್ಮ ಓದಿಗೆ ತಿಲಾಂಜಲಿಯನ್ನಿಟ್ಟರು. ಪಾರಂಪರಿಕ ಅರ್ಥದಲ್ಲಿ ಶಿಕ್ಷಣ ನಿಂತರು, ನಿಜವಾದ ಅರ್ಥದಲ್ಲಿ ಅವರ ಶಿಕ್ಷಣ ಕೊನೆಯವರೆವಿಗೂ ಮುಂದುವರೆಯಿತು. ಭಾರತವನ್ನು ಬ್ರಿಟಿಷರದಾಸ್ಯದಿಂದ ವಿಮೋಚನೆಗೊಳಿಸುವುದರ ಜೊತೆಗೆ ಗ್ರಾಮದಉದ್ಧಾರವಾಗದೆ ರಾಷ್ಟ್ರದ ವಿಮೋಚನೆ ಮತ್ತು ಪ್ರಗತಿಯಾಗಲಾರದೆಂದು ನಂಬಿದ ನ.ಭದ್ರಯ್ಯನವರು ರಚನಾತ್ಮಕ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ತಮ್ಮಂಥಹ ಹಲವಾರು ತರುಣರು ಬಡತನದಿಂದಾಗಿ ವಿದ್ಯಾಭ್ಯಾಸ ನಿಲ್ಲಿಸಬಾರದೆಂದು ಗ್ರಾಮೀಣವಿದ್ಯಾರ್ಥಿಗಳಿಗಾಗಿ "ಗ್ರಾಮಸೇವಾನಿಲಯ"ವೆಂಬ ಉಚಿತ ವಿದ್ಯಾರ್ಥಿ ನಿಲಯ ಸ್ಥಾಪಿಸಿದರು. ಹಾಗೆಯೇ "ವಿವೇಕಾನಂದವಿದ್ಯಾರ್ಥಿನಿಲಯ"ಎಂಬ ವಸತಿನಿಲಯವನ್ನು ಸ್ಥಾಪಿಸಿ ಶ್ರೀಮಂತರ ಮಕ್ಕಳಿಂದ ಹಣ ಪಡೆದು, ಬಡವರಮಕ್ಕಳಿಗೆ ಉಚಿತ ಊಟವಸತಿಯನ್ನು ಕಲ್ಪಿಸುವ ತತ್ವವನ್ನು ಜಾರಿಗೆ ತಂದರು[2]. ಗ್ರಾಮದಉದ್ದಾರವೇ ದೇಶದ ಉದ್ದಾರವೆಂದು ತಿಳಿದು ಗಾಂಧೀಜಿಯವರ ರಾಮರಾಜ್ಯದ ಕನಸನ್ನು ನನಸು ಮಾಡಲು ಕಾರ್ಯತತ್ಪರರಾಗಿ ತಮ್ಮ ಇಪ್ಪತ್ತಮೂರನೇ ವಯಸ್ಸಿನಲ್ಲಿ "ಗ್ರಾಮಸೇವಾ" ಪತ್ರಿಕೆಯನ್ನು ಪ್ರಾರಂಭಿಸಿದರು[3]. ಗ್ರಾಮಸೇವೆಯ ವಿಚಾರಗಳಿಗೆ ಮೀಸಲಾದ ಪತ್ರಿಕೆ ಇದಾಗಿದ್ದು ೧೯೩೫ರಿಂದ ೧೯೪೦ರವರೆಗೆ "ಗ್ರಾಮಸೇವಾ" ಪತ್ರಿಕೆಯ ಸಂಪಾದಕರಾಗಿದ್ದರು. ಸ್ವಾತಂತ್ರ್ಯ ಚಳವಳಿಯ ಕಾಲದಲ್ಲಿ ಅವರ ಪತ್ರಿಕೆಯ ಮೇಲೆ ಸರ್ಕಾರ ಕಣ್ಣಿಟ್ಟಿತು. ಅದರ ಫಲವಾಗಿ ಪತ್ರಿಕೆ ಮತ್ತು ವಿವೇಕಾನಂದ ವಿದ್ಯಾರ್ಥಿ ನಿಲಯ ನಿಂತುಹೋಯಿತು. ಸೋಲೊಪ್ಪಿಕೊಳ್ಳದ ಭದ್ರಯ್ಯನವರು "ಕಿರುತಾರೆ" ಎಂಬ ಪತ್ರಿಕೆಯನ್ನು ಸ್ವಲ್ಪ ಕಾಲ ನಡೆಸಿದರು[4]. "ಗ್ರಾಮಸೇವಾ"ವಿದ್ಯಾರ್ಥಿ ನಿಲಯ ಮುಂದುವರಿಯಿತು. ಆನೇಕ ಶ್ರೀಮಂತರು ಹಾಗೂ ಮೈಸೂರಿನ ಸಂತೇಪೇಟೆಯ ವರ್ತಕರು ಧಾನ್ಯಗಳನ್ನು ಧಾರಾಳವಾಗಿ ನೀಡುತ್ತಿದ್ದರಿಂದ ಗ್ರಾಮಸೇವಾವಿದ್ಯಾರ್ಥಿನಿಲಯ ಸರಾಗವಾಗಿ ನಡೆಯುತ್ತಿತ್ತು. ಸ್ವಾತಂತ್ರ್ಯಹೋರಾಟದಲ್ಲಿ ಭಾಗವಹಿಸಿದ್ದ ನ.ಭದ್ರಯ್ಯನವರನ್ನು ೧೯೪೦ರಲ್ಲಿ ಸರ್ಕಾರ ಬಂಧಿಸಿ ತೀರ್ಥಹಳ್ಳಿ ಸೆರೆಮನೆಯಲ್ಲಿ ಇಟ್ಟಿತು.ಸೆರೆಮನೆಯಿಂದ ಬರುವ ವೇಳೆಗೆ ಅವರು ಸ್ಥಾಪಿಸಿದ ಗ್ರಾಮಸೇವಾ ವಿದ್ಯಾರ್ಥಿನಿಲಯ ಮುಚ್ಚಿಹೋಯಿತು.

ಕ್ರಿ.ಶ. ೧೯೪೨ರ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ನ. ಭದ್ರಯ್ಯನವರು ಯುವಜನತೆಯನ್ನು ಸಂಘಟಿಸಿದರು. ಗಾಂಧೀಮಾರ್ಗದ ದೀಕ್ಷೆ ತೊಟ್ಟು ನೂರಾರು ಗ್ರಾಮಗಳಲ್ಲಿ ರಚನಾತ್ಮಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡರು. ಮೈಸೂರು ಸಂಸ್ಥಾನದ ಗಾಂಧಿವಾದಿಗಳಾದ ಸಿದ್ಧವನಹಳ್ಳಿ ಕೃಷ್ಣಶರ್ಮ, ದಾಸಪ್ಪ ದಂಪತಿಗಳು, ಎಂ.ಎನ್. ಜೋಯಿಸ್, ಸಾಹುಕಾರ್ ಚನ್ನಯ್ಯ, ರಂಗದಾಮಯ್ಯ, ಮುಂತಾದ ಹಿರಿಯರ ಸ್ಪೂರ್ತಿಯಿಂದ ಜನಜಾಗೃತಿಯಲ್ಲಿ ತೊಡಗಿ ಪ್ರತಿಭಟನಾ ಚಳುವಳಿಯನ್ನು

* ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರದ. ಕಾಲೇಜು, ಕೃಷ್ಣರಾಜಸಾಗರ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ.

ಕೈಗೊಂಡರು. ಮೈಸೂರಿನ ವೈದ್ಯಕೀಯ ಕಾಲೇಜಿನ ವಿದ್ಯಾರ್ಥಿಯಾಗಿದ್ದ ಗಾಂಧೀಜಿಯವರ ಮೊಮ್ಮಗ ಕಾಂತಿಲಾಲ್‌ಗಾಂಧೀ ಹಾಗೂ ಅವರ ಪತ್ನಿ ಸರಸ್ವತಿ ಮತ್ತು ಟಿ.ಎನ್. ಶಾಮರಾವ್ ಮುಂತಾದವರೊಡನೆ ಸೇರಿ "ಗಾಂಧಿಸೇವಾ ಸಂಘ"ವನ್ನು ಸ್ಥಾಪಿಸಿದ ಭದ್ರಯ್ಯನವರು, ರಚನಾತ್ಮಕ ಕಾರ್ಯಗಳನ್ನು ಕೈಗೊಂಡರು. ನ.ಭದ್ರಯ್ಯನವರ ಪ್ರೇರಣೆಯಿಂದ ಮೈಸೂರುನಗರ ಮತ್ತು ಸುತ್ತಮುತ್ತಲಿನ ಹಳ್ಳಿಗಳಲ್ಲಿ ಹಲವಾರು ಸಮಾಜಸೇವಾ ಸಂಘಗಳನ್ನು ಸ್ಥಾಪಿಸಲ್ಪಟ್ಟವು. ಖಾದಿಸೊಸೈಟಿ, ಹರಿಜನ ಸೇವಾ ಕೇಂದ್ರ, ಚೇತನಾ ಪ್ರಕಟನಾಲಯ, ವಿದ್ಯಾಸಂಸ್ಥೆಗಳು, ಗಾಂಧೀ ವಿಚಾರಪರಿಷತ್, ಗಾಂಧೀ ಸ್ಮಾರಕ ನಿಧಿ ಸಂಸ್ಥೆಗಳು, ಗಾಂಧೀ ಗ್ರಂಥಮಾಲೆ ಮುಂತಾದ ಸಂಘ ಸಂಸ್ಥೆಗಳನ್ನು ಸ್ಥಾಪಿಸಿ ಹಲವಾರು ಯುವಪೀಳಿಗೆಗಳಿಗೆ ಪ್ರೋತ್ಸಾಹಿಸಿ ಜೊತೆಗೆ ಗಾಂಧೀಜಿಯವರ ಬರವಣಿಗೆಗಳನ್ನು ಪ್ರಕಟಿಸಿದರು. ಗಾಂಧೀಜಿ ಯುವ ಸಾಹಿತ್ಯ, ಕನ್ನಡದಲ್ಲಿ ವಿಜ್ಞಾನ ಸಾಹಿತ್ಯ ಹಾಗೂ ಸಾಮಾನ್ಯ ಜ್ಞಾನಕ್ಕೆ ಸಂಬಂಧಪಟ್ಟ ಕೃತಿಗಳನ್ನು ಭದ್ರಯ್ಯನವರೇ ರಚಿಸಿ ಪ್ರಕಟಿಸಿದರು. ೧೯೪೭ರ ಮೈಸೂರು ಚಲೋ ಚಳುವಳಿಯಲ್ಲಿ ಭಾಗವಹಿಸಿ ಬಂಧಿತರಾದರು. ಹಲವಾರು ಬಾರಿ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿ ಸೆರೆಮನೆವಾಸವನ್ನು ಅನುಭವಿಸಿದರೂ ಕೂಡ, ಸ್ವಾತಂತ್ರ್ಯನಂತರ ಅದರ ಲಾಭವನ್ನು ಪಡೆದುಕೊಳ್ಳಲಿಲ್ಲ. ತಾರುಣ್ಯದಲ್ಲಿಯೇ ಭದ್ರಯ್ಯನವರು ಗಾಂಧೀಜಿಯವರ ತೀವ್ರಪ್ರಭಾವಕ್ಕೆ ಒಳಗಾಗಿ, ಗಾಂಧೀಜಿಯವರ ಸಿದ್ಧಾಂತವನ್ನು ಬದುಕಿನ ಕೊನೆಯವರೆವಿಗೂ ಪಾಲಿಸಿದರು. ಬಾಲ್ಯದಲ್ಲಿಯೇ ಮಾಂಸಹಾರವನ್ನು ತ್ಯಜಿಸಿದ ಅವರು ಅಂತರರಾಷ್ಟ್ರೀಯ ವಲಯದಲ್ಲಿ ಕಾರ್ಯನಿರ್ವಹಿಸುವಾಗಲೂ ತಮ್ಮ ಸಸ್ಯಹಾರದ ವೃತವನ್ನು ಮುರಿಯಲಿಲ್ಲ. ಸರಳ ಜೀವನ ಮತ್ತು ಉನ್ನತ ಚಿಂತನೆ ಭದ್ರಯ್ಯನವರ ಜೀವನದ ಆದರ್ಶವಾಗಿತ್ತು[೫]. ರಚನಾತ್ಮಕ ಕಾರ್ಯಕ್ರಮಗಳು ಹಾಗೂ ಗ್ರಾಮಸುಧಾರಣೆ ಭದ್ರಯ್ಯನವರ ಕನಸಾಗಿದ್ದು, ಪ್ರಚಾರದಿಂದ ದೂರ ಉಳಿದಿದ್ದ ಅವರು ತಾವು ನಂಬಿದ ತತ್ವಸಿದ್ಧಾಂತಗಳನ್ನು ಕಾರ್ಯಪ್ರವೃತ್ತಗೊಳಿಸಲು ವಯಸ್ಕರ ಶಿಕ್ಷಣ ಚಳುವಳಿಯಿಂದ ಸಾಧ್ಯವಾಯಿತು.

ಮೈಸೂರು ಸಂಸ್ಥಾನದಲ್ಲಿ ೧೮೮೭ರ ಜನವರಿ ತಿಂಗಳಲ್ಲಿ ರಾತ್ರಿಶಾಲೆ ಆರಂಭವಾಗುವುದರೊಂದಿಗೆ ವಯಸ್ಕರ ಶಿಕ್ಷಣ ಪ್ರಾರಂಭವಾಯಿತು. ಇಬ್ಬರು ಮುಸ್ಲಿಂ ವಿದ್ಯಾರ್ಥಿಗಳಿಂದ ಪ್ರಾರಂಭವಾದ ರಾತ್ರಿಶಾಲೆಯ ನೇತೃತ್ವವನ್ನು ಎಂ. ಶಾಮರಾವ್ ವಹಿಸಿಕೊಂಡಿದ್ದರು ಇವರು ಮಹಾರಾಜ ಕಾಲೇಜಿನಲ್ಲಿ ಸಹಾಯಕ ಶಿಕ್ಷಕರಾಗಿದ್ದರು[೬]. ೧೮೯೦ರ ವೇಳೆಗೆ ೧೦೯ ವಿದ್ಯಾರ್ಥಿಗಳು ವಯಸ್ಕರ ಶಿಕ್ಷಣಕ್ಕೆ ಸೇರಿಕೊಂಡಿದ್ದು. ೪ ತರಗತಿಗಳಲ್ಲಿ ಶಿಕ್ಷಣ ನಡೆಯುತ್ತಿತ್ತು. ೧೮೯೯ರ ಜುಲೈ ತಿಂಗಳಿನಲ್ಲಿ ಮೈಸೂರು ಸರ್ಕಾರ ತಿಂಗಳಿಗೆ ಇಪ್ಪತ್ತು ರೂಪಾಯಿಗಳ ಸಹಾಯಧನ ಮಂಜೂರು ಮಾಡಿತು. ೧೯೧೨ರ ನಂತರ ವಯಸ್ಕರ ಶಿಕ್ಷಣಕ್ಕೆ ಸರ್ಕಾರ ಹೆಚ್ಚಿನ ಪ್ರೋತ್ಸಾಹ ನೀಡಿತು. ಸುಮಾರು ೭,೦೦೦ ಶಿಕ್ಷಣಕೇಂದ್ರಗಳು ಹಾಗೂ ಸಾವಿರಾರು ಪುಸ್ತಕ ಭಂಡಾರಗಳು ಮೈಸೂರು ಸಂಸ್ಥಾನದಲ್ಲಿ ವಯಸ್ಕರಶಿಕ್ಷಣ ಶಾಲೆಗಳು ಕ್ಷೀಣಿಸತೊಡಗಿದವು. ಆದರೆ ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ವಯಸ್ಕರ ಶಿಕ್ಷಣದ ಅಡಿಪಾಯ ಗಟ್ಟಿಯಾಗಿ ಬೇರೂರಿದವು. ೧೯೪೦ರಲ್ಲಿ ಮೈಸೂರು ಸರ್ಕಾರದಲ್ಲಿ ಸೇವೆ ಸಲ್ಲಿಸುತ್ತಿದ್ದ ಕೆಲವು ಉನ್ನತ್ತಾಧಿಕಾರಿಗಳು, ಖಾಸಗಿ ವ್ಯಕ್ತಿಗಳು, ಅಕ್ಷರಪ್ರಚಾರ ಕಾರ್ಯಕ್ಕೆ ಬೆಂಬಲ ನೀಡಿದರು. ವಯಸ್ಕರ ಶಿಕ್ಷಣ ಶಾಲೆಗಳಿಗೆ ಯಮುನಾಚಾರ್ಯರು , ಜೆ.ಬಿ. ಮಲ್ಲಾರಾಧ್ಯ, ದೇವುಡು ನರಸಿಂಹಚಾರ್ಯರು, ಜೆ.ಆರ್. ರಂಗಸ್ವಾಮಿ , ಕೆ.ಎಸ್. ಆಚಾರ್ಯ, ಎಸ್.ವಿ. ಶ್ರೀನಿವಾಸರಾವ್ ಹಾಗೂ ಟಿ. ಕೃಷ್ಣಮೂರ್ತಿ ಮುಂತಾದವರು ಪ್ರೋತ್ಸಾಹ ನೀಡಿದರು. ೧೯೪೦ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ಸಂಘದವರು ಮೈಸೂರು ನಗರದ ವಿವಿಧ ಭಾಗಗಳಲ್ಲಿ ಸಾಕ್ಷಾರತಾ ತರಗತಿಗಳನ್ನು ತೆರೆಯಲು ನಿರ್ಧರಿಸಿದರು. ಅಕ್ಷರ ಪ್ರಚಾರಕ್ಕಾಗಿ ಸ್ವಯಂಸೇವಕರು ಮುಂದೆ ಬಂದರು ವಿಶ್ವವಿದ್ಯಾನಿಲಯದ ಉಪಕುಲಪತಿಗಳಾಗಿದ್ದ ಎನ್.ಎಸ್. ಸುಬ್ಬರಾಯರು ಸ್ವಯಂಸೇವಕರಿಗೆ ತರಬೇತಿ ಶಿಬಿರಗಳನ್ನು ಏರ್ಪಡಿಸಿ ಅವರಿಗೆ ವಯಸ್ಕರ ಮನಶಾಸ್ತ್ರ ತರಗತಿಗಳ ನಿರ್ವಹಣೆ ಮತ್ತು ಅಕ್ಷರ ಕಲಿಸುವ ವಿಧಾನಗಳ ಬಗ್ಗೆ ಮಾರ್ಗದರ್ಶನ ನೀಡಿದರು. ಮೈಸೂರು ವಿಶ್ವವಿದ್ಯಾನಿಲಯದ ಈ ಕಾರ್ಯಕ್ಕೆ ಪುರಸಭೆ ತನ್ನ ಸಹಾಯ ಹಸ್ತ ನೀಡಿತು. ಹೀಗೆ ವಿಶ್ವವಿದ್ಯಾನಿಲಯದ ಮೇಲ್ವಿಚಾರಣೆಯಲ್ಲಿ ಸಾಕ್ಷರತಾ ಕೆಲಸವನ್ನು ನೇರವೇರಿಸಲು "ಮೈಸೂರು ನಗರ ಅಕ್ಷರ ಪ್ರಚಾರ ಸಮಿತಿ" ಯನ್ನು ಸ್ಥಾಪಿಸಿತು. ೧೯೪೧ರಲ್ಲಿ ಮೈಸೂರು ಸಂಸ್ಥಾನದ ಸರ್ಕಾರವು "ಮೈಸೂರು ಸಂಸ್ಥಾನದ ಅಕ್ಷರ ಪ್ರಚಾರ ಸಮಿತಿ" ಎಂದು ಹೆಸರನ್ನು ಬದಲಾಯಿಸಿ, ಸರ್ಕಾರದ ಕಾರ್ಯಕ್ರಮವಾಗಿ ಅಂಗೀಕರಿಸಿತು[೭]. ಈ ಸಮಿತಿಗೆ ಅಧ್ಯಕ್ಷರಾಗಿ ಮೈಸೂರು ವಿಶ್ವವಿದ್ಯಾನಿಲಯದ ಆಂಗ್ಲ ಭಾಷಾ ಪ್ರಾಧ್ಯಾಪಕರಾದ ಬಿ.ಎಂ. ಶ್ರೀಕಂಠಯ್ಯನವರು ಕಾರ್ಯನಿರ್ವಹಿಸಿದರೆ, ಉಪಾಧ್ಯಕ್ಷರಾಗಿ ಡಬ್ಲ್ಯು.ಜಿ. ಈಗಲ್‌ಟನ್‌ರವರು ಹಾಗೂ ಸರ್ಕಾರದ ಪ್ರತಿನಿಧಿಗಳಾಗಿ ನ. ಭದ್ರಯ್ಯ, ಸಾಹುಕಾರ್ ಚೆನ್ನಯ್ಯ, ಟಿ. ಮರಿಯಪ್ಪ ಮುಂತಾದವರನ್ನು ನೇಮಿಸುವುದರ ಜೊತೆಗೆ ರೂ. ೫೦೦೦/- ಸಹಾಯಧನವನ್ನು ನೀಡಿತು. ಹೀಗೆ ಮೈಸೂರು ಸಂಸ್ಥಾನದ ಅಕ್ಷರ ಪ್ರಚಾರ ಸಮಿತಿ ಪ್ರಾರಂಭವಾದಾಗ ಸಹಜವಾಗಿಯೇ ಸಮಾಜಸೇವೆಯಲ್ಲಿ ಆಸಕ್ತಿ ಇದ್ದ ಭದ್ರಯ್ಯನವರು ತಮ್ಮನ್ನು ತಾವು ವಯಸ್ಕರಶಿಕ್ಷಣ ಸಮಿತಿಗೆ ಅರ್ಪಿಸಿಕೊಂಡರೆಂದರೆ

ತಪ್ಪಾಗಲಾರದು. ಹಳೆಯ ಮೈಸೂರುಸಂಸ್ಥಾನದ ೯ ಜಿಲ್ಲೆಗಳಲ್ಲಿ ಸರ್ಕಾರದ ಕಡೆಯಿಂದ ವಯಸ್ಕರಶಿಕ್ಷಣಶಾಲೆಗಳು ಪ್ರಾರಂಭವಾದವು. ಭದ್ರಯ್ಯನವರು ಈ ಶಿಕ್ಷಣ ಚಳುವಳಿಗೆ ರಾಷ್ಟ್ರೀಯ ದೃಷ್ಟಿಯನ್ನು ತುಂಬಿ ಅದ್ಭುತ ಪ್ರೇರಕಶಕ್ತಿಯಾದರು. ಸಮರ್ಪಣಾ ಮನೋಭಾವ ಹೊಂದಿದ್ದ ಅವರು ಹೊಸದಾಗಿ ಅಕ್ಷರ ಕಲಿತವರಿಗೆ ಪುಸ್ತಕಮಾಲೆಗಳನ್ನು, "ಬೆಳಕು" ಎಂಬ ವಾರಪತ್ರಿಕೆಯನ್ನು ವಯಸ್ಕರಶಿಕ್ಷಣ ಸಮಿತಿಯಿಂದ ಹೊರತರುವಲ್ಲಿ ಪ್ರಮುಖಪಾತ್ರ ವಹಿಸಿದರು. ವಿದ್ಯಾವಂತರಿಗಾಗಿ "ಪುಸ್ತಕ ಪ್ರಪಂಚ" ಎಂಬ ಮಾಸಪತ್ರಿಕೆ ಹಾಗೂ ಹಲವಾರು ಪ್ರಕಟಣೆಗಳು ವಯಸ್ಕರ ಶಿಕ್ಷಣ ಸಮಿತಿಯಿಂದ ಹೊರಬರಲು ನ.ಭದ್ರಯ್ಯನವರ ಅವಿರತ ಸೇವೆಯೇ ಕಾರಣವಾಗಿದೆ.

ಕರ್ನಾಟಕದಲ್ಲಿ ವಯಸ್ಕರಶಿಕ್ಷಣ ಎಂದರೆ ನ. ಭದ್ರಯ್ಯ ಎನುವಷ್ಟರ ಮಟ್ಟಿಗೆ ಅವರು ಖ್ಯಾತಿ ಪಡೆದಿದ್ದರು. ವಯಸ್ಕರ ಶಿಕ್ಷಣ ಸಮಿತಿಯಲ್ಲಿ ವಿದ್ಯಾಪೀಠದ ಆಚಾರ್ಯರಾಗಿ, ಪ್ರಧಾನ ಕಾರ್ಯದರ್ಶಿಯಾಗಿ, ಅಧ್ಯಕ್ಷರಾಗಿ ಸೇವೆ ಸಲ್ಲಿಸಿದರು. ೧೯೫೫ರಿಂದ ೫೮, ೧೯೫೯ರಿಂದ ೧೯೬೨, ೧೯೬೫ರಿಂದ ೧೯೬೬ ಹಾಗೆಯೇ ೧೯೮೨ರಿಂದ ೮೮ರವರೆಗೆ ವಯಸ್ಕರ ಶಿಕ್ಷಣ ಸಮಿತಿಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದರು. ವಯಸ್ಕರ ಶಿಕ್ಷಣ ಸಮಿತಿಯಿಂದ ಜಿಲ್ಲೆಗೊಂದರಂತೆ ವಿದ್ಯಾಪೀಠಗಳ ಸ್ಥಾಪನೆಯ ರೂವಾರಿ ನ. ಭದ್ರಯ್ಯನವರು ಎನ್ನುವುದನ್ನು ಮರೆಯುವಂತಿಲ್ಲ. ಡೆನ್ಮಾರ್ಕ್ ಮತ್ತು ಅಮೇರಿಕಾದ ಪೋರ್ಡ್ ಫೌಂಡೆಷನ್‌ನಿಂದ ಆರ್ಥಿಕನೆರವು ಪಡೆದುಕೊಂಡು ಹೆಚ್ಚುವರಿ ವಿದ್ಯಾಪೀಠಗಳನ್ನು, ಮುದ್ರಣಾಲಯಗಳನ್ನು ಸ್ಥಾಪಿಸಿದ ಭದ್ರಯ್ಯನವರ ಕಾರ್ಯ ಚರಿತ್ರಾರ್ಹವಾಗಿದೆ. ಯುನೆಸ್ಕೋ ತಜ್ಞರಾಗಿ ಆಫ್ರಿಕಾ, ಇಂಡೋನೇಷಿಯ, ಇರಾನ್ ಮುಂತಾದ ದೇಶಗಳಲ್ಲಿ ತಮ್ಮ ತಜ್ಞ ಸಲಹೆಗಳಿಂದ ಮತ್ತು ಸೇವಾ ಕಾರ್ಯದಿಂದ ಕರ್ನಾಟಕವನ್ನು ಹಾಗೂ ವಯಸ್ಕರ ಶಿಕ್ಷಣ ಸಮಿತಿಯನ್ನು ಗುರುತಿಸುವಂತೆ ಮಾಡಿದ್ದಾರೆ. ಡೆನ್ಮಾರ್ಕಿನ ಜಾನಪದ ವಿದ್ಯಾಲಯಗಳ ಸಂಪರ್ಕ ಪಡೆದು ವಿಶೇಷ ತಜ್ಞರನ್ನು ಬರಮಾಡಿಕೊಂಡು, ಇಲ್ಲಿನವರಿಗೆ ತರಬೇತಿ ಕೊಡಿಸಿದರು. ಇಲ್ಲಿನ ಕಾರ್ಯಕರ್ತರನ್ನು ಅಲ್ಲಿಗೆ ಕಳುಹಿಸಿ, ಶಿಕ್ಷಣಕೊಡಿಸಿ ವಿದ್ಯಾಪೀಠದ ಪ್ರಾಂಶುಪಾಲರುಗಳನ್ನಾಗಿ ನೇಮಿಸಿದರು. ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಗಮನ ಸೆಳೆದ ಈ ವಿದ್ಯಾಪೀಠಗಳು ಗ್ರಾಮೀಣ ಅಕ್ಷರಸ್ಥ ಯುವಕ ಯುವತಿಯರಿಗೆ ಆಧುನಿಕ ವ್ಯವಸಾಯ, ಗ್ರಾಮ ಕೈಗಾರಿಕೆಗಳು. ವಿಜ್ಞಾನ ಮತ್ತು ತಂತ್ರಜ್ಞಾನಗಳ ಪರಿಚಯ, ಸಾಮಾನ್ಯವಾದ ಪ್ರಪಂಚ ಜ್ಞಾನಗಳನ್ನು ಬೋಧಿಸುವ ಕೇಂದ್ರಗಳಾಗಿ ಹೊಸ ಚೈತನ್ಯ ತುಂಬಿಕೊಟ್ಟಿತು. ಈ ಕೇಂದ್ರಗಳು ಗಾಂಧಿಪ್ರಣೀತ ಜೀವನ ಶಿಕ್ಷಣ ಅಥವಾ ಮೂಲ ಶಿಕ್ಷಣದ ಪ್ರಯೋಗಶಾಲೆಗಳಾದವು. ಕೆಲಸದ ಮಾಧ್ಯಮದಿಂದ ಶಿಕ್ಷಣ, ಶಿಕ್ಷಣದ ಮೂಲಕ ಹೆಚ್ಚು ಪರಿಶ್ರಮಶೀಲ ಉದ್ಯಮ ವಿದ್ಯಾಪೀಠದ ಮೂಲಮಂತ್ರವಾಗಿದ್ದು, ರಾಜ್ಯದಲ್ಲಿ ಒಟ್ಟು ೧೮ ವಿದ್ಯಾಪೀಠಗಳು ಸ್ಥಾಪನೆಯಾಗಿ ನ. ಭದ್ರಯ್ಯನವರ ಕನಸನ್ನು ನನಸುಗೊಳಿಸಲಾಯಿತು ಈ ವಿದ್ಯಾಪೀಠಗಳ ಆದ್ಯ ಪ್ರವರ್ತಕರಾಗಿದ್ದ ನ. ಭದ್ರಯ್ಯನವರ ಹೆಸರು ಇತಿಹಾಸದಲ್ಲಿ ಶಾಶ್ವತವಾಗಿ ಉಳಿಯುವಂತೆ ಮಾಡಿದೆ.

ಅಂತರಾಷ್ಟ್ರೀಯ ಸಂಸ್ಥೆಯಾದ ಯುನೆಸ್ಕೊದಲ್ಲಿ ವಯಸ್ಕರ ಶಿಕ್ಷಣ ವಿಭಾಗದ ಮುಖ್ಯಸ್ಥರಾಗಿದ್ದ ಪ್ರೊ. ಈಗಲ್‌ಟನ್‌ರವರು ಭದ್ರಯ್ಯನವರ ಸೇವೆಯನ್ನು ಗುರುತಿಸಿ, ಅವರನ್ನು ಯುನೆಸ್ಕೊ ಸಂಸ್ಥೆಗೆ ಕೆಲಸ ಮಾಡಲು ಬರಮಾಡಿಕೊಂಡರು ಆಫ್ರಿಕಾ, ಕೀನ್ಯಾ, ಇರಾನ್ , ಇಂಡೊನೇಷಿಯ ಮುಂತಾದ ಹಲವು ದೇಶಗಳಿಗೆ ಭದ್ರಯ್ಯನವರು ವಯಸ್ಕರ ಶಿಕ್ಷಣದ ಯೋಜನೆಗಳನ್ನು ರೂಪಿಸಿಕೊಟ್ಟರು. ಅಲ್ಲಿನ ಪರಿಸರಕ್ಕೆ ತಕ್ಕಂತೆ ಯೋಜನೆಗಳನ್ನು ರೂಪಿಸಿ ಪ್ರಯೋಗಗಳನ್ನು ಮಾಡಿ ಯಶಸ್ವಿಯಾದ ಭದ್ರಯ್ಯನವರು, ಒಂದೆರೆಡು ವರ್ಷಕ್ಕೆಂದು ಹೋದವರು ೧೮ ವರ್ಷಗಳ ಕಾಲ ದೀರ್ಘಸೇವೆಯನ್ನು ಸಲ್ಲಿಸಿದರು. ಯುನೆಸ್ಕೊದ ರಾಯಭಾರಿಯಾಗಿ ಕಾರ್ಯನಿರ್ವಹಿಸಿದ ಇವರು ನಿವೃತ್ತಿಯ ನಂತರ ಮೈಸೂರಿನಲ್ಲಿ ನೆಲೆಸಿದರು.

ಸಹಜವಾಗಿಯೇ ಬರವಣಿಗೆಯ ಹವ್ಯಾಸವನ್ನು ಬೆಳೆಸಿಕೊಂಡಿದ್ದ ನ.ಭದ್ರಯ್ಯನವರು ಸುಮಾರು ಇಪ್ಪತ್ತೈದಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದರು. ಓದುಗರಲ್ಲಿ ಹಾಗೂ ಅಕ್ಷರಕಲಿತವರಲ್ಲಿ ಅರಿವು ಮೂಡಿಸುವುದು ಅವರ ಬರವಣಿಗೆಯ ಉದ್ದೇಶವಾಗಿತ್ತು. ಸರಳವಾದ, ನೇರವಾದ ಬರವಣಿಗೆಯ ಶೈಲಿಯನ್ನು ಒಳಗೊಂಡಿದ್ದ ಅವರ ಕೃತಿಗಳು ವಸ್ತುನಿಷ್ಠವಾಗಿದ್ದವು. "ಮಹಾತ್ಮಾಗಾಂಧಿ" ಮತ್ತು "ಅಶೋಕ ಚಕ್ರವರ್ತಿ" ಈ ಎರಡು ಕೃತಿಗಳು ಜೀವನ ಚರಿತ್ರೆಗೆ ಸಂಬಂಧಿಸಿದ ಕೃತಿಗಳಾಗಿದ್ದು, "ಎವರೆಸ್ಟ್ ಆರೋಹಣ", "ಪ್ರಪಂಚದ ಕಥೆ" ಮತ್ತು "ಸಾಹಸ ಕಥೆಗಳು" ಮಕ್ಕಳಿಗಾಗಿ ಬರೆದ ಕೃತಿಗಳಾಗಿದ್ದು, ಈ ಕೃತಿಗಳು ಹೊಸಪ್ರದೇಶದ ಪರಿಚಯ ಮಾಡಿಸುವ ಸಾಹಸ ಕಥನಗಳಾಗಿದೆ. ಸಾಮಾನ್ಯ ಜನರಿಗಾಗಿ "ಧ್ರುವ ಸಂಶೋಧನೆ", "ಸಾಗರ ಸಂಶೋಧನೆ", "ಆಕಾಶಲೋಕ" ಹಾಗೂ ಹಾರಾಡುವತಟ್ಟೆಗಳನ್ನು ಕುರಿತು "ಯಕ್ಷನೌಕೆ" ಎಂಬ ಕೃತಿಗಳನ್ನು ರಚಿಸಿದ್ದಾರೆ. ಇವುಗಳು ವೈಜ್ಞಾನಿಕ ವಿಷಯಗಳನ್ನು ಆದಷ್ಟು ಸರಳವಾಗಿ ಹೇಳುವ ಉದ್ದೇಶದಿಂದ ರಚಿಸಿದ ಕೃತಿಗಳಾಗಿದೆ. "ನಿಮ್ಮ ದೇಹ" ಮತ್ತು "ಜೀವಸಂತಾನ ಸಾಗಿದ ಬಗೆ" ಎಂಬ ಕೃತಿಗಳು ಆರೋಗ್ಯಶಾಸ್ತ್ರ ಮತ್ತು ಜೀವವಿಜ್ಞಾನಕ್ಕೆ ಸಂಬಂಧಿಸಿದ ಕೃತಿಗಳಾಗಿವೆ. ನವಸಾಕ್ಷರರಿಗಾಗಿಯೇ ಬರೆದ ಕೊಡಗಿನ ಚರಿತ್ರೆ ಒಳಗೊಂಡ ಪುಸ್ತಕ "ನಡೆದು ನೋಡು ಕೊಡಗಿನ ಬೆಡಗ" ಪ್ರವಾಸ ಕಥನವಾಗಿದೆ. "ಕುಮಾರವ್ಯಾಸನ ಕರ್ಣ", "ಅರ್ಪಣೆ" ಮತ್ತು " ಗಾಂಧೀ ಪ್ರಮಾಣ

ವಚನಗಳು" ನ. ಭದ್ರಯ್ಯನವರು ಸಂಪಾದಿಸಿದ ಕೃತಿಗಳಾಗಿದ್ದು, "ಅರ್ಪಣೆ" ಗಾಂಧಿಜಿಯವರ ಎಪ್ಪತ್ತೊಂದನೆಯ ಜನ್ಮದಿನಾಚರಣೆ ಸಂದರ್ಭದಲ್ಲಿ ಅರ್ಪಿಸಿದ ಕೃತಿಯಾಗಿದೆ. ಇವರ ಕೆಲವು ಕೃತಿಗಳಿಗೆ ವಿವಿಧ ಬಹುಮಾನಗಳು ಸಂದಿವೆ. ನ. ಭದ್ರಯ್ಯನವರ "ಆಕಾಶದ ಆಶ್ಚರ್ಯ" ಎಂಬ ಖಗೋಳಶಾಸ್ತ್ರದ ಕುರಿತ ಕೃತಿಗೆ ರಾಜ್ಯಸಾಹಿತ್ಯ ಅಕಾಡೆಮಿಯ ಬಹುಮಾನ ದೊರೆತಿದೆ. ನ. ಭದ್ರಯ್ಯನವರು ಪ್ರಪಂಚದ ಅನೇಕ ದೇಶಗಳನ್ನು ಸುತ್ತಿಬಂದವರಾಗಿದು ಮೂರು ಪ್ರವಾಸ ಕಥನಗಳನ್ನು ರಚಿಸಿದ್ದಾರೆ.

"ಕ್ಯಾಮರೂನಿನ ಬಣಗಳೊಡನೆ ಮತ್ತು ಅರಬ್ ದೇಶಗಳಲ್ಲಿ" ಎಂಬ ಪ್ರವಾಸಕಥನ ವಿಶ್ವವಿದ್ಯಾನಿಲಯದ ಪದವಿ ವಿದ್ಯಾರ್ಥಿಗಳಿಗೆ ಪಠ್ಯವಾಗಿದ್ದು ಭಿನ್ನವಾದ ವಿಶಿಷ್ಟವಾದ ಕಥನಶೈಲಿ ಇದೆ. ಭಾಷೆ ತಿಳಿಯದವರ ನಡುವೆ ವ್ಯವಹರಿಸಿ ಅವರ ದುಃಖಗಳನ್ನು ಈ ಕೃತಿಯಲ್ಲಿ ಅನಾವರಣಗೊಳಿಸಿದ್ದಾರೆ. "ಯುನೆಸ್ಕೋ ಸೇವೆಯಲ್ಲಿ" ಎಂಬ ಪ್ರವಾಸ ಕಥನದಲ್ಲಿ ಅವರು ಇಂಡೋನೇಷಿಯ, ಇರಾನ್ ಮತ್ತು ಕೀನ್ಯಾ ದೇಶಗಳಲ್ಲಿ ಪಡೆದ ಅನುಭವಗಳ ಕಥನವಿದೆ, ಹಾಗೆಯೇ "ಪ್ರಪಂಚ ಪರ್ಯಟನೆ" ಎಂಬ ಪುಸ್ತಕದಲ್ಲಿ ಫ್ರಾನ್ಸ್, ಸ್ವಿಡ್ಜರ್‌ಲ್ಯಾಂಡ್ ಮೊದಲಾದ ಯುರೋಪಿನ ದೇಶಗಳ ಪ್ರವಾಸದ ನಿರೂಪಣೆ ಇದೆ. ನ.ಭದ್ರಯ್ಯನವರ ಈ ಎಲ್ಲಾ ಕೃತಿಗಳು ಬಹಳ ಜನಪ್ರಿಯವಾದವು.

ನ.ಭದ್ರಯ್ಯನವರ ಸೇವಾಮನೋಭಾವ ಮತ್ತು ಸರಳಜೀವನ ಅವರನ್ನು ವಿಶ್ವಪ್ರಜೆಯನ್ನಾಗಿ ಪರಿವರ್ತಿಸಿತು. ಅವರಿಗೆ ಅನೇಕ ರಾಷ್ಟ್ರೀಯ ಮತ್ತು ರಾಜ್ಯಮಟ್ಟದ ಪ್ರಶಸ್ತಿಗಳು ಸಂದಿವೆ. ೧೯೮೨ರಲ್ಲಿ ವಯಸ್ಕರಶಿಕ್ಷಣಕ್ಕಾಗಿ ಇರುವ ರಾಷ್ಟ್ರಮಟ್ಟದ ಅತ್ಯುನ್ನತ "ನೆಹರೂ ಸಾಕ್ಷರತಾ ಪ್ರಶಸ್ತಿ" ಯನ್ನು ಪಡೆದರು. ಹಾಗೆಯೇ ಅಂತರಾಷ್ಟ್ರೀಯ ಮಟ್ಟದ "ಮಹಮದ್ ರೆಹಜಾ ಷಾ ಪಹ್ಲವಿ" ಪ್ರಶಸ್ತಿ ವಯಸ್ಕರ ಶಿಕ್ಷಣ ಸಮಿತಿಗೆ ದೊರಕುವಲ್ಲಿ ನ. ಭದ್ರಯ್ಯನವರ ಸೇವೆ ಮಹತ್ವದ ಪಾತ್ರವಹಿಸಿದೆ.

ನ. ಭದ್ರಯ್ಯನವರು ವಿಶ್ವಮಾನವ ಪರಿಕಲ್ಪನೆಯನ್ನು ಹೊಂದಿದ್ದು ೧೯೫೬ರಲ್ಲಿ ವಯಸ್ಕರ ಶಿಕ್ಷಣ ಚಳುವಳಿಯ ಬಗ್ಗೆ ಅಧ್ಯಯನ ಮಾಡಲು ಭಾರತಕ್ಕೆ ಬಂದಿದ್ದ ವಯಸ್ಕರ ಶಿಕ್ಷಣ ಚಳುವಳಿಯ ಸ್ನಾತಕೋತ್ತರ ಪದವಿ ಪಡೆದಿದ್ದ ಮಿಸ್ ಈವನ್ಸ್‌ರನ್ನು ೧೯೬೬ರಲ್ಲಿ ವಿವಾಹವದರು. ಮದುವೆಯಾದ ಮೇಲೆ ಅವರನ್ನು ಶಾಂತಿ ಎಂದು ಕರೆದರು. ಭಾರತೀಯ ಪೌರತ್ವವನ್ನು ಮಾತ್ರ ಪಡೆಯದೆ ಸಂಪೂರ್ಣ ಭಾರತೀಯ ಸಂಸ್ಕೃತಿಯನ್ನು ಮೈಗೂಡಿಸಿಕೊಂಡು ಶಾಂತಿ ಅವರು ನ. ಭದ್ರಯ್ಯರವರ ಕೊನೆಗಾಲದವರೆಗೂ ಕಷ್ಟಸುಖಗಳನ್ನು ಹಂಚಿಕೊಂಡರು. ಮೂವತ್ತು ವರ್ಷಗಳ ಅವರ ದಾಂಪತ್ಯ ಜೀವನದಲ್ಲಿ ಭದ್ರಯ್ಯ ದಂಪತಿಗಳು ಸಂಪೂರ್ಣವಾಗಿ ಸಮಾಜ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಅವರಿಗೆ ಶುಭ ಎಂಬ ಮಗಳಿದ್ದು ಪ್ರಸ್ತುತ ಅಮೇರಿಕಾದಲ್ಲಿ ನೆಲೆಸಿದ್ದಾರೆ. ಭದ್ರಯ್ಯನವರು ತಮ್ಮ ೭೬ನೇ ವಯಸ್ಸಿನಲ್ಲಿ ಮೇ ೧೬ರ ಮಧ್ಯರಾತ್ರಿ ಇಹಲೋಕ ತ್ಯಜಿಸಿದರು. ಬದುಕಿನಲ್ಲಿ ಪ್ರಚಾರ ಪ್ರಶಸ್ತಿಗಳಿಂದ ದೂರ ಉಳಿದಿದ್ದ ಅವರು ತಾವು ಸತ್ತಾಗ ತಮ್ಮ ದೇಹಕ್ಕೆ ಸ್ನಾನ ಮಾಡಿಸುವುದಾಗಲಿ, ಬಟ್ಟೆ ಬದಲಾಯಿಸುವುದಾಗಲಿ ಮಾಡದೆ ಸತ್ತ ನಾಲ್ಕು ಗಂಟೆಯೊಳಗಾಗಿ ದೇಹವನ್ನು ವಿದ್ಯುಚ್ಛಕ್ತಿ ಚಿತಾಗಾರದಲ್ಲಿ ಚಿತೆಗೆ ಕೊಟ್ಟು ಚಿತಾಭಸ್ಮವನ್ನು ತಮ್ಮ ತೋಟದ ಗಿಡಗಳಿಗೆ ಹಾಕುವಂತೆ ಮತ್ತು ಯಾರಿಗೂ ಕಾಯದೆ ಯಾವ ಉತ್ತರಾದಿ ಕ್ರಿಯೆಯನ್ನು ಮಾಡದಂತೆ ಅಂತಿಮ ಇಚ್ಚೆಯಂತೆ ವ್ಯಕ್ತಪಡಿಸಿದ ಭದ್ರಯ್ಯನವರ ಅಂತಿಮ ಇಚ್ಚೆಯನ್ನು ಅವರ ಪತ್ನಿ ನೆರವೇರಿಸಿದರು. ನ. ಭದ್ರಯ್ಯನವರ ಬಗ್ಗೆ ರಾಷ್ಟ್ರಕವಿ ಕುವೆಂಪುರವರು ಈ ರೀತಿ ಹೇಳಿದ್ದಾರೆ "ಯಾವುದು ಅಂತಿಮ ಸಂದೇಶವೆಂದು ಸಾರುತ್ತಿದ್ದೇನೆಯೋ ಆ ವಿಶ್ವಮಾನವ ಪ್ರಜ್ಞೆಯನ್ನು ನ. ಭದ್ರಯ್ಯನವರು ತಮ್ಮ ಬದುಕಿನಲ್ಲಿ ಸಾಧಿಸಿ ಕೃತಕೃತ್ಯರಾಗಿದ್ದಾರೆ" ಇಂತಹ ಮೇರು ವ್ಯಕ್ತಿತ್ವದ ಭದ್ರಯ್ಯನವರು ಯಾವ ಜನರಿಗೆ ಸೇವಾ ಮನೋಭಾವ ದವರಿಗೆ ಸ್ಪೂರ್ತಿಯಾಗಿದ್ದಾರೆ.

ಅಡಿ ಟಿಪ್ಪಣಿಗಳು

೧. ಪ್ರೊ. ದೇ. ಜವರೇಗೌಡ (ಪ್ರ.ಸಂ), 'ಪುಸ್ತಕ ಪ್ರಪಂಚ', ಮೈಸೂರು, ೧೯೮೮, ಪುಟ ಸಂಖ್ಯೆ ೩.
೨. ಪ್ರೊ. ಹಾ.ಮಾ. ನಾಯಕ, 'ಪ್ರಜಾವಾಣಿ' ಜೂನ್ ೫, ೧೯೮೮, ಪುಟಸಂಖ್ಯೆ ೫.
೩. ಪ್ರೊ. ಎಚ್ಚೆಸ್ಕೆ, 'ಪುಸ್ತಕ ಪ್ರಪಂಚ', ಮೈಸೂರು, ೧೯೮೮, ಪುಟ ಸಂಖ್ಯೆ ೫.
೪. ಕೆ.ಎಸ್. ನಾರಾಯಣ ಸ್ವಾಮಿ, 'ಕನ್ನಡ ಪ್ರಭ, ಜೂನ್ ೧೩, ೧೯೮೮.
೫. ಪ್ರೊ. ಕಲಾಶ್ರೀ, ಮೈಸೂರು, ಇವರಿಂದ ಮಾಹಿತಿ (ನ. ಭದ್ರಯ್ಯನವರ ಸಂಬಂಧಿ).
೬ ಅಡ್ಮಿನಿಸ್ಟ್ರೇಷನ್ ರಿಪೋರ್ಟ್ ಅನ್ ಪಬ್ಲಿಕ್ ಇನ್‌ಸ್ಟ್ರಕ್ಷನ್, ೧೯೪೯-೯೦, ಪ್ಯಾರಾ ೫೭.
೭. ವೆಂಕಟೇಶ್.ಟಿ., 'ಕನ್ನಡದಲ್ಲಿ ನವಸಾಕ್ಷರ ಸಾಹಿತ್ಯ' ಒಂದು ಅಧ್ಯಯನ, ಮೈಸೂರು, ೨೦೦೯, ಪುಟ ಸಂಖ್ಯೆ ೧೪.
೮. ಪ್ರೊ. ಹಾ.ಮಾ. ನಾಯಕ, 'ಪ್ರಜಾವಾಣಿ' ಜೂನ್ ೫, ೧೯೮೮, ಪುಟಸಂಖ್ಯೆ ೫.
೯. ರಾಜೇಂದ್ರ, ನೀಲನಹಳ್ಳಿ ಪಾಂಡವಪುರ, ಇವರಿಂದ ಮಾಹಿತಿ (ನ. ಭದ್ರಯ್ಯನವರ ಸಂಬಂಧಿ).

ಕರ್ನಾಟಕ ಇತಿಹಾಸ ಅಕಾದೆಮಿ (ರಿ).

ಬಿ.ಎಂ.ಶ್ರೀ ಪ್ರತಿಷ್ಠಾನ ಆವರಣ, ೩ನೇ ಮುಖ್ಯರಸ್ತೆ, ನರಸಿಂಹರಾಜಾ ಕಾಲೋನಿ,
ಬೆಂಗಳೂರು – ೫೬೦ ೦೧೯

karnatakaitihasaacademy25@gmail.com | www.karnatakaitihasaacademy.org

೨೦೨೦–೨೧ನೆಯ ಸಾಲಿನ ವಾರ್ಷಿಕ ವರದಿ

ಪ್ರಿಯ ಸದಸ್ಯ ಬಂಧುಗಳೇ,

ಕರ್ನಾಟಕ ಇತಿಹಾಸ ಅಕಾದೆಮಿಯ ೩೫ನೆಯ ವಾರ್ಷಿಕ ಸಮ್ಮೇಳನಕ್ಕಾಗಿ ಬೆಂಗಳೂರು ಇತಿಹಾಸ ಅಕಾದೆಮಿ ಕಛೇರಿಯಲ್ಲಿನ ಬಿ.ಎಂ.ಶ್ರೀ ಪ್ರತಿಷ್ಠಾನ ಸಭಾಂಗಣದಲ್ಲಿ ಸಮಾವೇಶಗೊಂಡಿದ್ದೇವೆ. ಕಳೆದ ಸುಮಾರು ಮೂರೂವರೆ ದಶಕಗಳಿಂದ ಅಕಾದೆಮಿಯ ಎಲ್ಲ ಚಟುವಟಿಕೆಗಳಲ್ಲಿ ಪ್ರತ್ಯಕ್ಷ, ಪರೋಕ್ಷವಾಗಿ ಪಾಲ್ಗೊಂಡು ನಿರಂತರ ಸಹಕಾರ ನೀಡುತ್ತಿರುವ ಎಲ್ಲರಿಗೂ ಅನಂತ ಧನ್ಯವಾದಗಳು. ಕಳೆದ ೩೪ ಸಮ್ಮೇಳನಗಳಿಗೆ ಆಶ್ರಯ ನೀಡಿ ಅಕಾದೆಮಿಯನ್ನು ಪೋಷಿಸಿರುವ ಎಲ್ಲಾ ಸಂಘಸಂಸ್ಥೆ ಹಾಗೂ ಧರ್ಮಪೀಠಗಳಿಗೆ ಅಕಾದೆಮಿಯು ಕೃತಜ್ಞವಾಗಿದೆ.

ಐತಿಹಾಸಿಕ ಪರಂಪರೆ ಉಳಿಸಿ – ೨೦೨೧

ಅಕಾದೆಮಿಯು ನಡೆಸಿಕೊಂಡು ಬರುತ್ತಿದ್ದ ಕಾರ್ಯಕ್ರಮಗಳಲ್ಲಿ ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮವು ನಮ್ಮ ಸಂಸ್ಕೃತಿಯನ್ನು ಬಿಂಬಿಸುವ ಸ್ಮಾರಕಗಳನ್ನು ರಕ್ಷಿಸುವ ನಿಟ್ಟಿನಲ್ಲಿ ಒಂದು ದೊಡ್ಡ ಅಭಿಯಾನವಾದೆ. ಹಿಂದಿನ ಹಲವಾರು ವರ್ಷಗಳಲ್ಲಿ ಈ ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮವನ್ನು ಅವ್ಯಾಹತವಾಗಿ ಅಕಾದೆಮಿಯು ನಡೆಸಿಕೊಂಡು ಬರುತ್ತಿದ್ದುದಕ್ಕೆ ತಾವೆಲ್ಲರೂ ಸಾಕ್ಷಿಯಾಗಿದ್ದಿರಿ. ಆದರೆ **ಕಳೆದ ಒಂದುವರೆ ವರ್ಷದಿಂದ ಪ್ರಪಂಚಕ್ಕೆ ಕಂಟಕದಂತೆ ಕಾಡುತ್ತಿರುವ ಕರೋನ ಖಾಯಿಲೆಯ ಭೀತಿಯು ಹಲವು ಕಾರ್ಯಕ್ರಮಗಳಿಗೆ ಅಡ್ಡಿಯುಂಟುಮಾಡಿದೆ. ಇದರಿಂದಾಗಿ ಎಂದಿನಂತೆ ನಡೆಯಬೇಕಿದ್ದ ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮದ ಉದ್ಘಾಟನೆ ಹಾಗೂ ವರ್ಷಪೂರ್ತಿ ನಡೆಯ ಬೇಕಿದ್ದ ಪರಂಪರೆ ಉಳಿಸುವ ಕಾರ್ಯಕ್ರಮಗಳಿಗೆ ಚಾಲನೆ ನೀಡಲು ಸಾಧ್ಯವಾಗಲಿಲ್ಲ**. ಮುಖ್ಯವಾಗಿ ಈ ಕಾರ್ಯಕ್ರಮವು ಶಾಲಾ–ಕಾಲೇಜುಗಳ ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳಿಂದ ಹಾಗೂ ಆಸಕ್ತರಿಂದ ನಡೆಯುವ ಕಾರ್ಯಕ್ರಮವಾಗಿದ್ದು, ವರ್ಷ ಪೂರ್ತಿ ಆನ್‌ಲೈನ್ ಮೂಲಕವೇ ಪಾಠ–ಪ್ರವಚನಾದಿಗಳು ನಡೆದುದರ ಪರಿಣಾಮವಾಗಿ ಶಾಲಾ–ಕಾಲೇಜುಗಳಲ್ಲಿ ಈ ಕಾರ್ಯಕ್ರಮ ನಡೆಸಲು ಸಾಧ್ಯವಾಗಲಿಲ್ಲ.

ಅಕಾದೆಮಿಯ ಕೆಲವು ಆಸಕ್ತ ಸದಸ್ಯರು ಇಂತಹ ವಿಷಮ ಪರಿಸ್ಥಿತಿಯ ನಡುವೆಯೂ ಕೆಲವು ಅಪರೂಪದ ಶಾಸನಗಳನ್ನು, ಸ್ಮಾರಕಗಳನ್ನು ಸಂರಕ್ಷಿಸುವ, ಅವುಗಳಿಗೆ ಫಲಕಗಳನ್ನು ಬರೆಯಿಸುವ ಕಾರ್ಯಕ್ಕೆ ಸದಸ್ಯರು ಮುಂದಾದದು ಶ್ಲಾಘನೀಯ. ಅಕಾದೆಮಿಯ ಸದಸ್ಯರು ತಮ್ಮ ಅಧ್ಯಯನ ವ್ಯಾಪ್ತಿಯಲ್ಲಿನ ಕೆಲವು ಕ್ಷೇತ್ರಗಳಲ್ಲಿ ಇಂತಹ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಿದ್ದಾರೆ.

ದಿನಾಂಕ: ೨೨–೮–೨೦೨೧, ಹರಳೂರು



ಹೊಸಕೋಟೆ ತಾಲ್ಲೂಕಿನ ಹರಳೂರಿನಲ್ಲಿ 'ಇತಿಹಾಸ ಪರಂಪರೆ ಉಳಿಸಿ' ಕಾರ್ಯಕ್ರಮವನ್ನು ಹಲಸೂರು ಜೌಗುಪಾಳ್ಯ ಬಿ. ತಾಯಪ್ಪನವರೊಂದಿಗೆ ಅಕಾದೆಮಿಯ ಸದಸ್ಯರಾದ ಆದಪ್ಪ ಪಾಸೋಡಿಯವರ ಮುಂದಾಳತ್ವದಲ್ಲಿ ಹಮ್ಮಿಕೊಳ್ಳಲಾಯಿತು. ಹರಳೂರಿನಲ್ಲಿ ಸುಮಾರು ೧೬ನೆಯ ಶತಮಾನದ ಊರಬಾಗಿಲು, ಸುಮಾರು ಹತ್ತನೆಯ ಶತಮಾನಕ್ಕೆ ಸೇರಿದ ರಾಷ್ಟ್ರಕೂಟ ಕನ್ನರದೇವನ ಕಾಲದ ಅಪ್ರಕಟಿತ ಶಾಸನ ಹಾಗೂ ವೀರಗಲ್ಲುಗಳಿವೆ. ಊರಿನ ಇಂತಹ ಐತಿಹಾಸಿಕ ಸ್ಮಾರಕಗಳ ಮಹತ್ವವನ್ನು ಅಲ್ಲಿನ ಶಾಲಾಮಕ್ಕಳಿಗೆ ತಿಳಿಸಿಕೊಡಲಾಯಿತು. ಇದೇ ಸಂದರ್ಭದಲ್ಲಿ ಸರ್ಕಾರಿ ಶಾಲೆಯ ಹಿಂಭಾಗದ ಹೊಲದಲ್ಲಿರುವ ಮಂಟಪದ ವೀರಗಲ್ಲಿನ ಬಳಿ ಶಾಲಾಮಕ್ಕಳನ್ನು ಕರೆದೊಯ್ದು, ವೀರಗಲ್ಲಿನ ಬಗ್ಗೆ ವಿವರಣೆ ತಿಳಿಸಿಕೊಡಲಾಯಿತು. ಅಲ್ಲಿನ ವೀರಗಲ್ಲಿನಲ್ಲಿ ಕಂಡಿರಿಸಿರುವಂತೆ, ವೀರನು ಖಡ್ಗಾಸನ ಭಂಗಿಯಲ್ಲಿದ್ದು, ಬಲಗೈಯಲ್ಲಿರುವ ಖಡ್ಗವನ್ನು ಕೆಳಮುಖವಾಗಿ ಇಟ್ಟಿದ್ದಾನೆ. ಈತನು ಕಂಠೀಹಾರ

ಕೈಕಡಗ, ತೋಳ್ಬಂದಿ ಆಭರಣಗಳನ್ನು ಧರಿಸಿರುವಂತೆ ತೋರಿಸಲಾಗಿದೆ. ವೀರನ ಇಕ್ಕೆಲದಲ್ಲಿ ಇನ್ನಿಬ್ಬರು ವೀರರು ನಿರಾಯುಧರಾಗಿ ನಿಂತಿದ್ದಾರೆ. ಕಾರ್ಯಕ್ರಮದಲ್ಲಿ ಗ್ರಾಮದ ಹಿರಿಯರಾದ ನಾರಾಯಣಪ್ಪ, ನಾರಾಯಣಸ್ವಾಮಿ ಮುಂತಾದವರು ಉಪಸ್ಥಿತರಿದ್ದರು.

ದಿನಾಂಕ: ೨೪-೦೮-೨೦೨೧, ಅಪ್ಪೇಗೌಡನಹಳ್ಳಿ



ಚಿಕ್ಕಬಳ್ಳಾಪುರ ಜಿಲ್ಲೆಯ ಶಿಡ್ಲಘಟ್ಟ ತಾಲ್ಲೂಕಿನ ಅಪ್ಪೇಗೌಡನಹಳ್ಳಿ ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು ಕೃಷಿ ಇಲಾಖೆ ಕರ್ನಾಟಕ ಸರ್ಕಾರದ ವತಿಯಿಂದ ಗ್ರಾಮೀಣ ಕೃಷಿ ಕಾರ್ಯಾಲಯದಲ್ಲಿ ನಿರತರಾಗಿದ್ದ ವಿದ್ಯಾರ್ಥಿಗಳಿಗೆ ಶಾಸನ, ವೀರಗಲ್ಲು ಮತ್ತು ಐತಿಹಾಸಿಕ ಸ್ಮಾರಕಗಳನ್ನು ಸಂರಕ್ಷಿಸುವ ಬಗ್ಗೆ ಅರಿವು ಮೂಡಿಸಿದ ಕೆ.ಧನಪಾಲ್‌ರವರು ಅದೇ ಗ್ರಾಮದ ಪ್ರಾಥಮಿಕ ಪಾಠಶಾಲೆಯಲ್ಲಿ 'ಐತಿಹಾಸಿಕ ಪರಂಪರೆ ಉಳಿಸಿ' ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಗ್ರಾಮದ ಹೊಲದಲ್ಲಿದ್ದ ಕೆಲವು ಶಾಸನ, ವೀರಗಲ್ಲು, ಮಾಸ್ತಿಕಲ್ಲುಗಳ ಬಗ್ಗೆ ಪ್ರತ್ಯಕ್ಷವಾಗಿ ತೋರಿಸಿ ಅವುಗಳ ಬಗ್ಗೆ ವಿದ್ಯಾರ್ಥಿಗಳಿಗೆ ಆಸಕ್ತಿ ಮೂಡಿಸಿದರು. ಈ ಕಾರ್ಯಕ್ರಮದಲ್ಲಿ ಸ್ಥಳೀಯರಾದ ತ್ಯಾಗರಾಜ್ ಮತ್ತು ಇತಿಹಾಸ ಆಸಕ್ತರಾದ ವಿಜಯಪುರದ ಸುದರ್ಶನರೆಡ್ಡಿಯವರು ಪಾಲ್ಗೊಂಡಿದ್ದರು.





ದಿನಾಂಕ: ೮-೧೧-೨೦೨೧, ಆರಕುಂದ

ಅಕಾದೆಮಿಯ ಸದಸ್ಯರಾದ ಕೆ. ಧನಪಾಲ್ ಮತ್ತು ಡಾ. ಎಸ್. ವೆಂಕಟೇಶ್‌ರವರು ಚಿಕ್ಕಬಳ್ಳಾಪುರ ಜಿಲ್ಲೆ, ಗೌರಿಬಿದನೂರು ತಾಲ್ಲೂಕು, ಆರಕುಂದ ಗ್ರಾಮಕ್ಕೆ ಭೇಟಿ ಕೊಟ್ಟ ಸಂದರ್ಭದಲ್ಲಿ ಅಳಿವಿನ ಅಂಚಿನಲ್ಲಿದ್ದ ಶಾಸನ ಮತ್ತು ವೀರಗಲ್ಲನ್ನು ಗಮನಿಸಿ, ಸ್ಥಳೀಯ ಉತ್ಸಾಹಿ ಯುವಕರಿಗೆ ಮಾರ್ಗದರ್ಶನ ನೀಡಿ, ಅವುಗಳನ್ನು ಸಂರಕ್ಷಿಸಿದ್ದಲ್ಲದೆ, ದಿನಾಂಕ ೦೮-೧೧-೨೦೨೧ ರಂದು 'ಐತಿಹಾಸಿಕ ಪರಂಪರೆ ಉಳಿಸಿ' ಕಾರ್ಯಕ್ರಮವನ್ನು ಹಮ್ಮಿಕೊಂಡು, ಸ್ಮಾರಕಗಳ ಮಹತ್ವ ಹಾಗೂ ಅವುಗಳನ್ನು ಉಳಿಸಿಕೊಂಡು ಬರಬೇಕಾದ ಕರ್ತವ್ಯವನ್ನು ಕುರಿತು ತಿಳಿಯಹೇಳಿದರು. ಕಾರ್ಯಕ್ರಮದಲ್ಲಿ ಗಂಗಸಂದ್ರ ಗ್ರಾಮದ ಇತಿಹಾಸ ಸಂಶೋಧಕ ಇರ್ಫಾನ್‌ರವರೂ ಪಾಲ್ಗೊಂಡಿದ್ದರು.





ದಿನಾಂಕ: ೧೯-೭-೨೦೨೧, ನಗರಗೆರೆ


ಅಕಾದೆಮಿಯ ಸದಸ್ಯರಾದ ಪ್ರೊ. ಕೆ.ಆರ್. ನರಸಿಂಹನ್ ಮತ್ತು ಕೆ. ಧನಪಾಲ್‌ರವರು ಚಿಕ್ಕಬಳ್ಳಾಪುರ ಜಿಲ್ಲೆ ಗೌರಿಬಿದನೂರು ತಾಲ್ಲೂಕು ನಗರಗೆರೆಯಲ್ಲಿ ಕ್ಷೇತ್ರಕಾರ್ಯ ನಡೆಸುವ ಸಂದರ್ಭದಲ್ಲಿ ತಮ್ಮನ್ನು ಭೇಟಿಮಾಡಿದ ಗ್ರಾಮದ ಗಣ್ಯರಿಗೆ ಹಾಗೂ ಯುವಕರಿಗೆ ಅಲ್ಲಿನ ಸ್ಮಾರಕಗಳ ಮಹತ್ವ ತಿಳಿಸಿಕೊಟ್ಟರು. ಇದರಿಂದ ಪ್ರೇರೇಪಿತರಾದ ಗ್ರಾಮಸ್ಥರ ಕೋರಿಕೆಯ ಮೇರಿಗೆ ದಿನಾಂಕ ೧೯-೦೭-೨೦೨೧ರಂದು ಅಲ್ಲಿನ ಶ್ರೀ ರಾಮೇಶ್ವರ ದೇವಾಲಯದಲ್ಲಿ 'ಐತಿಹಾಸಿಕ ಪರಂಪರೆ ಉಳಿಸಿ' ಕಾರ್ಯಕ್ರಮ



ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದಲ್ಲಿ ಮಾಜಿ ಮಂತ್ರಿಗಳು ಮತ್ತು ಹಾಲಿ ಶಾಸಕರಾದ ಶ್ರೀ ಹೆಚ್.ಎನ್. ಶಿವಶಂಕರರೆಡ್ಡಿಯವರು ಆಸಕ್ತಿಯಿಂದ ಭಾಗವಹಿಸಿ, ಸ್ಮಾರಕಗಳ ರಕ್ಷಣೆಗೆ ಬದ್ಧರಾಗುವುದಾಗಿ ಹಾಗೂ ಅದರ ಕುರಿತಾಗಿ ಜನಜಾಗೃತಿ ಮೂಡಿಸುವುದಾಗಿ ಭರವಸೆ ನೀಡಿದರು. ಇದೇ ಸಂದರ್ಭದಲ್ಲಿ ತಮ್ಮ ಹೊಲದಲ್ಲಿರಿಸಿದ ಶಾಸನವೊಂದರ ಕುರಿತಾಗಿ ಮಾಹಿತಿ ನೀಡಿದ ಸ್ಥಳೀಯರ ಹೊಲಕ್ಕೆ ದಿನಾಂಕ ೩೧-೦೮-೨೦೨೧ರಂದು ಭೇಟಿನೀಡಲಾಯಿತು. ಪ್ರೊ॥ ನರಸಿಂಹನ್‌ರವರ ಮಾರ್ಗದರ್ಶನದಲ್ಲಿ ನಡೆದ ಈ ಅಧ್ಯಯನದಲ್ಲಿ, ಶಾಸನವು ಮೂರನೇ ವೀರಬಲ್ಲಾಳನ ಕಾಲಕ್ಕೆ ಸೇರಿದ ಅಪ್ರಕಟಿತ ಶಾಸನವೆನ್ನುವುದನ್ನು ಗಮನಿಸಿ, ಶಾಸನದ ಪಾಠವನ್ನೂ ಹಾಗೂ ವೀರಗಲ್ಲನ್ನು ಕುರಿತು ಗ್ರಾಮಸ್ಥರಿಗೆ ತಿಳಿಸಿಕೊಡಲಾಯಿತು. ಈ ಕಾರ್ಯಕ್ರಮದಲ್ಲಿ ಇತಿಹಾಸ ಸಂಶೋಧಕರಾದ ಕೆ. ಧನಪಾಲ್, ಬಾಗೇಪಲ್ಲಿಯ ಕೃಷ್ಣ ಮತ್ತು ಪುರಾತತ್ವ ಇಲಾಖೆಯ ಉಪನಿರ್ದೇಶಕಿ ಶ್ರೀಮತಿ ಕಾವ್ಯಶ್ರೀ ಅವರು ಭಾಗವಹಿಸಿದ್ದರು.

ದಿನಾಂಕ: ೨೯-೦೬-೨೦೨೧, ಮೇಲಾಗಾಣಿ ಮತ್ತು ಕೀಲಾಗಾಣಿ, ಕೋಲಾರ





ಮುಳಬಾಗಿಲು ತಾಲ್ಲೂಕು ಮೇಲಾಗಾಣಿ ಮತ್ತು ಕೀಲಾಗಾಣಿ ಗ್ರಾಮಗಳಲ್ಲಿ ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮವನ್ನು ಹಮ್ಮಿಕೊಂಡು ಅಲ್ಲಿನ ಶಾಸನ, ವೀರಗಲ್ಲು ಮತ್ತು ಸ್ಮಾರಕಗಳ ಸಂರಕ್ಷಣೆಯಲ್ಲಿ ಪ್ರೊ॥ ಕೆ.ಆರ್.ನರಸಿಂಹನ್ ಮತ್ತು ಕೆ.ಧನಪಾಲ್ ರವರು ತೊಡಗಿದಾಗ, ತುಂಡಾಗಿ ಬಿದ್ದಿದ್ದಂತಹ ಅಪರೂಪಕ್ಕೆ ಕಂಡುಬರುವ ಹಂದಿ, ನಾಯಿ ಬೇಟೆಯ ಸ್ಮಾರಕವೊಂದನ್ನು ಗುರುತಿಸಿ, ಸಂರಕ್ಷಿಸಿದರು. ಜೊತೆಗೆ ಗ್ರಮಸ್ಥರಿಗೆ ಅದರ ಮಹತ್ವವನ್ನು ತಿಳಿಸಿಕೊಟ್ಟರು. ಈ ವಿಶಿಷ್ಟವಾದ ಸ್ಮಾರಕದೊಂದಿಗೆ ಕೆಲವು ವೀರಗಲ್ಲುಗಳನ್ನು ಸ್ಥಳೀಯರ ಸಹಕಾರದೊಂದಿಗೆ ಸಂರಕ್ಷಿಸಿದರು. ಈ ಕಾರ್ಯಕ್ರಮದಲ್ಲಿ ಮುಳಬಾಗಿಲಿನ 'ಮೂಡಣ ಕಿರಣ' ಚಾನಲ್‌ನ ಚಲಪತಿಯವರೂ ಭಾಗವಹಿಸಿದ್ದರು.

ಪ್ರಸ್ತುತ ಸಾಲಿನಲ್ಲಿ ಕಷ್ಟಕರ ಪರಿಸ್ಥಿತಿಯಲ್ಲೂ ಸದಸ್ಯರು ಆಸಕ್ತಿಯಿಂದ ಇಂತಹ ಕಾರ್ಯಕ್ರಮ ನೆರವೇರಿಸಿದ್ದಾರೆ. ಅವರಿಗೆ ಅಕಾದೆಮಿಯು ಕೃತಜ್ಞತೆ ಸಲ್ಲಿಸುತ್ತದೆ.

ಇತಿಹಾಸ ನಿರ್ಮಾತೃಗಳು: ಆನ್‌ಲೈನ್ ಕಾರ್ಯಕ್ರಮ

ಪ್ರಪಂಚದಾದ್ಯಂತ ಹಬ್ಬಿದ ಕೋವಿಡ್ ಕಾಯಿಲೆ ಜಗತ್ತನ್ನೇ ತತ್ತರಿಸಿದ. ಇಂತಹ ಸಂದರ್ಭದಲ್ಲೂ ಕರ್ನಾಟಕ ಇತಿಹಾಸ ಅಕಾದೆಮಿಯು 'ಪರಂಪರೆ ಉಳಿಸಿ' ಕಾರ್ಯಕ್ರಮದ ಭಾಗವಾಗಿ ಹೊಸ ರೀತಿಯಲ್ಲಿ ಆನ್‌ಲೈನ್ ಕಾರ್ಯಕ್ರಮವನ್ನು ಹಮ್ಮಿಕೊಂಡು ಯಶಸ್ವಿಯನ್ನು ಕಂಡುಕೊಂಡಿದೆ. ೨೦೨೦ ಜುಲೈ ತಿಂಗಳಿನಿಂದ ಪ್ರತಿ ಸೋಮವಾರ ನಿರಂತರವಾಗಿ ಕರ್ನಾಟಕದ ಇತಿಹಾಸ ನಿರ್ಮಿಸುವಲ್ಲಿ ಮಹತ್ತರವಾದ ಕೊಡುಗೆಯನ್ನು ನೀಡಿರುವ ಇತಿಹಾಸ ಕಟ್ಟಿದ ಮಹನೀಯರನ್ನು ಕುರಿತಾಗಿ ಉಪನ್ಯಾಸ ಮಾಲಿಕೆ ಆರಂಭವಾಗಿದ್ದು, ೨೦೨೧ರ ನವೆಂಬರ್ ತಿಂಗಳಾಂತ್ಯದವರೆಗೂ ಈ ಸರಣಿಯಲ್ಲಿ ೭೦ ಉಪನ್ಯಾಸಗಳು ನೆರವೇರಿದವು. ಹಿರಿಯ ವಿದ್ವಾಂಸರು ನಡೆಸಿಕೊಟ್ಟ ಈ ಸರಣಿಯ ಉಪನ್ಯಾಸವು ಬಹಳ ಜನಪ್ರಿಯ ಗೊಂಡು, ಇಂದಿನ ಯುವ ಸಂಶೋಧಕರಿಗೆ, ವಿದ್ಯಾರ್ಥಿಗಳಿಗೆ ಬಹಳ ಉಪಯುಕ್ತವೂ, ಆಕರದ ಮಾದರಿಯಲ್ಲಿ ಬಳಸಿಕೊಳ್ಳುವಂತಹ ಮೌಲ್ಯಯುತವಾದ ಸಂಗ್ರಹವೆನಿಸಿದೆ. ಈ ಉಪನ್ಯಾಸವನ್ನು ಅಕಾದೆಮಿಯ ಅಧಿಕೃತ ಫೇಸ್‌ಬುಕ್ ಪೇಜಿನಲ್ಲಿ ಹಾಗೂ ಯೂಟ್ಯೂಬ್ ಚಾನೆಲ್‌ಗಳಲ್ಲಿ ವೀಕ್ಷಿಸಲು ಎಲ್ಲರಿಗೂ ಮುಕ್ತವಾಗಿ ದೊರಕುವಂತೆ ಅಪ್‌ಲೋಡ್ ಮಾಡಿ ಸಂಗ್ರಹಿಸಿಡಲಾಗಿದೆ. ಈ ಮಾಲಿಕೆಯಲ್ಲಿ ನಡೆದ ಉಪನ್ಯಾಸವು ಈ ಪ್ರಕಾರವಾಗಿದೆ.

ಸರಣಿ ಉಪನ್ಯಾಸ ಮಾಲಿಕೆ ಆನ್‌ಲೈನ್ ಕಾರ್ಯಕ್ರಮ

ಕ್ರ ಸಂ.	ಇತಿಹಾಸಕಾರರು	ಉಪನ್ಯಾಸಕಾರರು	ನಿರೂಪಣೆ	ಕಾರ್ಯಕ್ರಮ ದಿನಾಂಕ
೧	ಶಾಸನತಜ್ಞ ಶ್ರೀ ಎನ್. ಲಕ್ಷ್ಮೀನಾರಾಯಣರಾಯರು	ಡಾ. ಎಚ್.ಎಸ್. ಗೋಪಾಲರಾವ್	ಡಾ. ವೇದಾಬಾಲು	೧೩..೭.೨೦೨೦
೨	ಕನ್ನಡ ಶಾಸನ ಪಿತಾಮಹ ಬಿ.ಎಲ್. ರೈಸ್	ಡಾ. ಜೆ.ಎಮ್. ನಾಗಯ್ಯ	ಡಾ. ಕೌಜಲಗಿ	೨೦.೭.೨೦೨೦
೩	ಭಾರತೀಯ ಶಾಸನಶಾಸ್ತ್ರ	ಡಾ. ಎಸ್.ಎಲ್. ಶ್ರೀನಿವಾಸಮೂರ್ತಿ	ಶ್ರೀಮತಿ ಅನನ್ಯಾ	೨೭.೭.೨೦೨೦
೪	ಜ್ಞಾನೋಪಾಸಕ ಆ.ನೇ. ಉಪಾಧ್ಯೆ	ಡಾ. ನಾಡೋಜ ಹಂಪನಾ	ಡಾ. ಸಂಧ್ಯಾ ವಿ.	೩.೮.೨೦೨೦
೫	ಪ್ರಸಿದ್ಧ ಪುರಾತತ್ವಜ್ಞ ಎಮ್.ಎಚ್. ಕೃಷ್ಣ	ಡಾ. ಬಿ. ರಾಜಶೇಖರಪ್ಪ	ಡಾ. ತಿಪ್ಪೇಸ್ವಾಮಿ ಸಿ.ಎಂ.	೧೦.೮.೨೦೨೦
೬	ರಾಷ್ಟ್ರಕವಿ ಎಂ. ಗೋವಿಂದ ಪೈ	ಡಾ. ಕೆ.ಆರ್. ಗಣೇಶ್	ಗೀತಾ ಜಿ.	೧೭.೮.೨೦೨೦
೭	ಶಾಸನತಜ್ಞ ಹಾಗೂ ಇತಿಹಾಸಕಾರ ಶ್ರೀನಿವಾಸ ರಿತ್ತಿ	ಡಾ. ಶ್ರೀನಿವಾಸ್ ಪಾಡಿಗಾರ್	ಡಾ. ಶ್ರೀನಿವಾಸ್ ಪಾಡಿಗಾರ್	೨೪.೮.೨೦೨೦
೮	ಪುರಾಭಿಲೇಖ ಪಂಡಿತ ಡಾ. ಜಿ.ಎಸ್. ಗಾಯಿ	ಡಾ. ಪಿ.ವಿ. ಕೃಷ್ಣಮೂರ್ತಿ	ಶ್ರೀಮತಿ ಸೀತಾಲಕ್ಷ್ಮಿ	೩೧.೮.೨೦೨೦
೯	ಕನ್ನಡದ ಮೊದಲ ದೇಸೀ ಇತಿಹಾಸಕಾರ ದೇವಚಂದ್ರ	ಡಾ. ಹರೀಶ್ ಜಿ.ಬಿ.	ಕಿರಣ್‌ಮಯಿ	೭.೯.೨೦೨೦
೧೦	ಭಾರತೀಯ ಪೂರ್ವೇತಿಹಾಸ ರಾಬರ್ಟ್ ಬ್ರೂಸ್‌ಫೂಟ್	ಡಾ. ರವಿ ಕೋರಿಷೆಟ್ಟರ್	ಶ್ರೀಮತಿ ಸೀತಾಲಕ್ಷ್ಮಿ	೧೪.೯.೨೦೨೦
೧೧	ಶಾಸನ ಸಾಹಿತ್ಯ ಸಂಪಾದಕ ಮೇವುಂಡಿ ಮಲ್ಲಾರಿ	ಡಾ. ಆರ್. ಶೇಷಶಾಸ್ತ್ರಿ	ಶ್ರೀಮತಿ ನಿರ್ಮಲಾ ಎಸ್.ವೈ.	೨೧.೯.೨೦೨೦
೧೨	ಇತಿಹಾಸ ಆಕರಗಳ ಸಂಗ್ರಾಹಕ ಕರ್ನಲ್ ಮೆಕೆಂಝಿ	ಡಾ. ಎಂ.ಜಿ. ಮಂಜುನಾಥ್	ಶ್ರೀ ಪ್ರಭಾಕರ್ ಎಮ್.ಎನ್.	೨೮.೯.೨೦೨೦
೧೩	ಸಂಶೋಧಕ–ಚಿಂತಕ–ಸಂಘಟನಕಾರ ಜಿ.ಎನ್. ದೀಕ್ಷಿತ್	ಡಾ. ಜ್ಯೋತ್ಸ್ನಾ ಕಾಮತ್	ಡಾ. ಸ್ಮಿತಾ ಡಿ. ರೆಡ್ಡಿ	೦೫.೧೦.೨೦೨೦
೧೪	ಇತಿಹಾಸ ಸಂಶೋಧನಾ ಹರಿಕಾರ ಡಾ.ಸೂರ್ಯನಾಥ ಯು.ಕಾಮತ್	ಡಾ. ಎಚ್.ಎಸ್. ಉಷಾರಾಣಿ	ಶ್ರೀ ಪ್ರಭಾಕರ್ ಎಮ್.ಎನ್.	೧೨.೧೦.೨೦೨೦
೧೫	ಶಾಸನ ಕಾಲಗಣನೆಯ ಅಧ್ವರ್ಯು ಡಾ. ಎ. ವೆಂಕಟಸುಬ್ಬಯ್ಯ	ಶ್ರೀ ಕಾರ್ತೀಕ್ ಎಸ್.	ಡಾ. ಸಂಧ್ಯಾ ವಿ.	೧೯.೧೦.೨೦೨೦
೧೬	ಮೆಡೋಸ್ ಟೇಲರ್‌ನ ಕೊಡುಗೆಗಳು	ಶ್ರೀ ದೇವು ಪತ್ತಾರ್	ಶ್ರೀಮತಿ ಸೀತಾಲಕ್ಷ್ಮಿ	೨೬.೧೦.೨೦೨೦
೧೭	ಇತಿಹಾಸ ಸಂಶೋಧಕ ಶ್ರೀ ನಾ. ರಾಜಪುರೋಹಿತ	ಡಾ. ಕೃಷ್ಣ ಕೊಲ್ಹಾರಕುಲಕರ್ಣಿ	ಡಾ. ಸ್ಮಿತಾ ಡಿ. ರೆಡ್ಡಿ	೦೨.೧೧.೨೦೨೦
೧೮	ನಾಡಿನ ಸಂಸ್ಕೃತಿಯ ಹರಿಕಾರ ತಿರುಮಲೆ ತಾತಾಚಾರ್ಯ ಶರ್ಮ	ಡಾ. ಕೆ. ವಸಂತಲಕ್ಷ್ಮಿ	ಡಾ. ಸಂಧ್ಯಾ ವಿ.	೦೯.೧೧.೨೦೨೦
೧೯	ಶಾಸನ ದಿಗ್ಗಜ ಡಾ. ಕೆ.ವಿ. ರಮೇಶ್	ಡಾ. ಮೈಸೂರು ನಾಗರಾಜ ಶರ್ಮ	ಡಾ. ಮಂಜುಶ್ರೀ	೧೬.೧೧.೨೦೨೦
೨೦	ಕಂನಾಡು ಕಂಡ ಅಪ್ರತಿಮ ವಿದ್ವಾಂಸ ಶಂ.ಬಾ. ಜೋಶಿ	ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್	ಶ್ರೀ ಸ್ಮಿತಾ ಡಿ. ರೆಡ್ಡಿ	೨೩.೧೧.೨೦೨೦
೨೧	ಭಾರತೀಯತೆಯ ವಿಶ್ವಕೋಶ: ಪ್ರೊ. ಸಾ.ಕೃ. ರಾಮಚಂದ್ರರಾವ್	ಶ್ರೀ ಎಸ್. ಸೂರ್ಯಪ್ರಕಾಶ್ ಪಂಡಿತ್	ಶ್ರೀ ಸೂರ್ಯಪ್ರಕಾಶ್	೩೦.೧೧.೨೦೨೦

೨೨	ಶಾಸನ ತಜ್ಞ ಡಾ. ಬಾ.ರಾ. ಗೋಪಾಲ್	ಡಾ. ಎಚ್.ಎಸ್. ಗೋಪಾಲರಾವ್	ಡಾ. ವೇದಾಬಾಲು	೦೭.೧೨.೨೦೨೦
೨೩	ಅವಿಸ್ಮರಣೀಯ ಸಾಧಕ ಡಾ. ಕೆ. ಅಭಿಶಂಕರ್	ಶ್ರೀ ಎಮ್.ಬಿ. ಪಾಟೀಲ್	ಡಾ. ನಳಿನಿ ವೆಂಕಟೇಶ್	೧೪.೧೨.೨೦೨೦
೨೪	ಇತಿಹಾಸ ಕ್ಷೇತ್ರದ ಸಾಧಕ ಡಾ.ಪಿ. ಗುರುರಾಜಭಟ್	ಡಾ. ಪುಂಡಿಕೈ ಗಣಪೈಯ್ಯ ಭಟ್	ಶ್ರೀಮತಿ ನಿರ್ಮಲಾ ಎಸ್.ವೈ.	೨೧.೧೨.೨೦೨೦
೨೫	ಪರ್ಸಿ ಬ್ರೌನ್ – ಕಿರುಪರಿಚಯ	ಡಾ. ಜಿ. ಮನೋಜ್	ಶ್ರೀಮತಿ ತಾರಾ	೦೪.೦೧.೨೦೨೧
೨೬	ಕನ್ನಡದ ಅಸ್ಮಿತೆಯ ಶೋಧಕ ಡಾ. ಎಂ. ಚಿದಾನಂದಮೂರ್ತಿ	ಡಾ. ಎಸ್.ಎಸ್. ತಾರಾನಾಥ	ಡಾ. ಸಂಧ್ಯಾ ವಿ.	೧೧.೦೧.೨೦೨೧
೨೭	ಹಸ್ತಪ್ರತಿತಜ್ಞ ಶ್ರೀ ಎಸ್. ಶಿವಣ್ಣ	ಡಾ. ನಂಜುಂಡಸ್ವಾಮಿ	ಶ್ರೀ ಧನುಷ್ ಎಚ್. ಶೇಖರ್	೧೮.೦೧.೨೦೨೧
೨೮	ಸಂಶೋಧನಾ ಮಾರ್ಗಕಾರ ಡಾ. ಎಂ.ಎಂ. ಕಲಬುರ್ಗಿ	ಡಾ. ಕೆ. ರವೀಂದ್ರನಾಥ	ಶ್ರೀಮತಿ ಶಿವಕುಮಾರಿ ಎಂ.ಎಸ್.	೨೫.೦೧.೨೦೨೧
೨೯	ಇತಿಹಾಸಕಾರ ಡಾ.ಹೆಚ್.ಆರ್. ರಘುನಾಥ ಭಟ್	ಡಾ. ವೆಂಕಟೇಶ್ ಜೋಯಿಸ	ಗೀತಾ ಪಾಟೀಲ್	೧.೦೨.೨೦೨೧
೩೦	ವಚನಶಾಸ್ತ್ರ ಪಿತಾಮಹ ಡಾ. ಫ.ಗು. ಹಳಕಟ್ಟಿ	ಡಾ. ಎಫ್.ಟಿ. ಹಳ್ಳಿಕೇರಿ	ಶ್ರೀ ರವಿಕುಮಾರ್ ನವಲಗುಂದ	೦೮.೨.೨೦೨೧
೩೧	ಭಾರತೀಯ ಸಂಗೀತ ಇತಿಹಾಸ ಮತ್ತು ಸಂಸ್ಕೃತಿಗೆ ಡಾ. ಸತ್ಯ ನಾರಾಯಣ ಅವರ ಕೊಡುಗೆ	ಡಾ. ಶ್ರೀಕಾಂತಮ್ ನಾಗೇಂದ್ರಶಾಸ್ತ್ರಿ	ಶ್ರೀ ಕಾರ್ತೀಕ್ ಕಾಮಣ್ಣ	೧೫.೦೨.೨೦೨೧
೩೨	ಇತಿಹಾಸ ನಿರ್ಮಾತೃ ರಾಬರ್ಟ್ ಸಿವೆಲ್	ಡಾ. ಕೆ.ಜಿ. ಗೋಪಾಲಕೃಷ್ಣರಾವ್	ಶ್ರೀ ರಘೋತ್ತಮರಾವ್	೨೨.೦೨.೨೦೨೧
೩೩	ಹೊಯ್ಸಳ ಇತಿಹಾಸ ನಿರ್ಮಾಣಕ್ಕೆ ಜೆ. ಡಂಕನ್ ಎಮ್. ಡೆರೆಟ್ ಅವರ ಕೊಡುಗೆ	ಡಾ. ಎಸ್.ಕೆ. ರಾಮಶೇಷನ್	ಡಾ. ಪದ್ಮಾಜಾ ದೇಸಾಯಿ	೦೧.೦೩.೨೦೨೧
೩೪	ಪ್ರೊ. ಎಸ್. ಶೆಟ್ಟರ್ ಅವರ ಕರ್ನಾಟಕದ ಇತಿಹಾಸ ಮತ್ತು ಕಲಾಅಧ್ಯಯನಗಳ ಅವಲೋಕನ	ಡಾ. ಎಸ್.ಕೆ. ಅರುಣಿ	ಡಾ. ಸ್ಮಿತಾ ಡಿ. ರೆಡ್ಡಿ	೦೮.೦೩.೨೦೨೧
೩೫	ಕರ್ನಾಟಕ ಕುಲಪುರೋಹಿತ ಆಲೂರು ವೆಂಕಟರಾಯರು	ಡಾ. ಕೆ.ಆರ್. ಗಣೇಶ್	ಶ್ರೀ ಪ್ರವೀಣ್	೧೫.೦೩.೨೦೨೧
೩೬	ಶಾಸನ ವ್ಯಾಕರಣದ ಅಧ್ವರ್ಯು ಡಾ. ಎ.ಎನ್. ನರಸಿಂಹಯ್ಯ	ಶ್ರೀ ಎಸ್. ಕಾರ್ತಿಕ್	ಶ್ರೀಮತಿ ವೀಣಾ	೨೨.೦೩.೨೦೨೧
೩೭	ಕರ್ನಾಟಕ ಇತಿಹಾಸಕ್ಕೆ ಹೊಸ ಬೆಳಕು ಬೀರಿದ ಫಾದರ್ ಐ. ಅಂತಪ್ಪ	ಶ್ರೀ ಸಿ. ಮರಿಜೋಸೆಫ್	ಡಾ. ರಾಕೇಶ್ ಬಿ.ಸಿ.	೨೯.೦೩.೨೦೨೧
೩೮	ಶಾಸನತಜ್ಞ, ಇತಿಹಾಸಕಾರ ಡಾ. ಪಿ.ಬಿ. ದೇಸಾಯಿ	ಡಾ. ಜಿ.ಎಮ್. ಹೆಗ್ಗಡೆ	ಡಾ. ದತ್ತಪ್ರಸನ್ನ ಪಾಟೀಲ	೦೫.೦೪.೨೦೨೧
೩೯	ಬಹುಮುಖಿ ಪ್ರತಿಭೆಯ ಅದ್ವಿತೀಯ ವಿದ್ವಾಂಸ ಪ್ರೊ. ಕೆ.ಜಿ. ಕುಂದಣಗಾರ	ಡಾ. ಸ್ಮಿತಾ ಪಿ. ಸುರೇಬಾನಕರ	ಡಾ. ಸ್ಮಿತಾ ಡಿ. ರೆಡ್ಡಿ	೧೨.೦೪.೨೦೨೧
೪೦	ರಾಜಚರಿತ ವಿಶಾರದ ಕಾಂಚಿಪುರಂ ಹಯವದನರಾವ್	ಡಾ. ಲ.ನ. ಸ್ವಾಮಿ	ಡಾ. ಸಂಧ್ಯಾ ವಿ.	೧೯.೦೪.೨೦೨೧
೪೧	ಹೈದರಾಬಾದ್–ಕರ್ನಾಟಕ ಚರಿತ್ರೆ ಕಟ್ಟಿದ ಇತಿಹಾಸಕಾರ ಪದ್ಮಭೂಷಣ ಡಾ. ಗುಲಾಮ್ ಯಾಜ್ದಾನಿ	ಡಾ. ಎಸ್.ಕೆ. ಅರುಣಿ	ಶ್ರೀ ಕಾರ್ತಿಕ್ ಜಿ.	೨೬.೦೪.೨೦೨೧
೪೨	ಇತಿಹಾಸ ಸಂಶೋಧನಾ ಪ್ರಸಕ್ತ ಶ್ರೀ ಹುಲ್ಲೂರು ಶ್ರೀನಿವಾಸ ಜೋಯಿಸ್	ಡಾ. ಎಸ್.ಎಸ್. ಮಹಂತೇಶ	ಡಾ. ಚಾರುಲತಾ	೦೩.೦೫.೨೦೨೧

೪೩	ಪುರಾತತ್ವ ಶಾಸ್ತ್ರಜ್ಞ ಮತ್ತು ಕಲಾ ಇತಿಹಾಸಕಾರ ಹೆನ್ರಿ ಕಸಿನ್ಸ್	ಡಾ. ಜಿ. ಮನೋಜ್	ಶ್ರೀ ಕಾರ್ತಿಕ್ ಕಾಮಣ್ಣ	೧೦.೦೫.೨೦೨೧
೪೪	ಇತಿಹಾಸ ಸಂಶೋಧನಾಚಾರ್ಯ ಎಸ್.ಆರ್. ಪಂಚಮುಖಿ	ಡಾ. ಚಂದ್ರಶೇಖರ್ ಬಿ. ತಬೋಜಿ	ಡಾ. ದತ್ತಪ್ರಸನ್ನ ಪಾಟೀಲ್	೧೭.೦೫.೨೦೨೧
೪೫	ಶ್ರೇಷ್ಠ ಇತಿಹಾಸ ತಜ್ಞ ಡಾ.ಭಾಸ್ಕರ ಆನಂದ ಸಾಲೆತೊರೆ	ಡಾ. ವಿ. ಅನುರಾಧ	ಡಾ. ಸನ್ಮತಿ ಕುಮಾರ್	೨೪.೦೫.೨೦೨೧
೪೬	ಶ್ರೇಷ್ಠ ಇತಿಹಾಸತಜ್ಞ ಡಾ. ಎ.ಕೆ. ಶಾಸ್ತ್ರಿ	ಡಾ. ಜಿ.ಎಂ. ಹೆಗ್ಗಡೆ	ಡಾ. ವೀಣಾ ಕಲ್ಮಠ	೩೧.೦೫.೨೦೨೧
೪೭	ಸಹೃದಯಿ ಕನ್ನಡಿಗ ವಾಲ್ಟರ್ ಎಲಿಯಟ್	ಡಾ. ಎಸ್.ಎಲ್. ಶ್ರೀನಿವಾಸಮೂರ್ತಿ	ಶ್ರೀಮತಿ ಭಾರತಿ ನಾಗೇಂದ್ರ	೦೭.೦೬.೨೦೨೧
೪೮	ತುಳುನಾಡಿನ ಇತಿಹಾಸ ಸಂಶೋಧನಾ ಮಾರ್ಗಪ್ರವರ್ತಕ ಎಂ. ಗಣಪತಿರಾವ್ ಐಗಳ್	ಡಾ. ಪುಂಡಿಕೈ ಗಣಪೈಯ್ಯ ಭಟ್	ಡಾ. ರಾಕೇಶ್ ಬಿ.ಸಿ.	೧೪.೦೬.೨೦೨೧
೪೯	ಪ್ರಾಕ್ತನ ವಿಮರ್ಶ ವಿಚಕ್ಷಣ, ರಾವ್‌ಬಹದ್ದೂರ್ ಆರ್. ನರಸಿಂಹಾಚಾರ್	ಪ್ರೊ. ಜಿ. ಅಶ್ವತ್ಥನಾರಾಯಣ	ಶ್ರೀ ಗುರುಪ್ರಸಾದ್ ಬಿ.ಎಸ್.	೨೧.೦೬.೨೦೨೧
೫೦	ಕರ್ನಾಟಕ ಸಂಸ್ಕೃತಿಯ ಸಮೀಕ್ಷಕ ಡಾ. ಎಚ್. ತಿಪ್ಪೇರುದ್ರಸ್ವಾಮಿ	ಡಾ. ಪರಮಶಿವಮೂರ್ತಿ	ಡಾ. ಸಂಧ್ಯಾ ವಿ.	೨೮.೦೬.೨೦೨೧
೫೧	ಕರ್ನಾಟಕ ಪುರಾತತ್ವ ತಜ್ಞ ಹಸ್ಮುಖ್ ದಿರಾಜ್‌ಲಾಲ್ ಸಂಕಾಳಿಯಾ	ಡಾ. ಮೋಹನ್ ಆರ್.	ಶ್ರೀ ರೇಣುಕಾಸ್ವಾಮಿ ಒಡೆಯರ್	೦೫.೦೭.೨೦೨೧
೫೨	ಅದ್ವಿತೀಯ ಪುರಾತತ್ವ ಸಂಶೋಧಕ ಡಾ. ಎಸ್.ಆರ್. ರಾವ್	ಶ್ರೀ ಸಿ.ಬಿ. ಪಾಟೀಲ್	ಶ್ರೀಮತಿ ಸೀತಾಲಕ್ಷ್ಮೀ ರಾವ್	೧೨.೦೭.೨೦೨೧
೫೩	ಅರುಣೋದಯದ ನಾಡೋಜ ಡಾ. ಶ್ರೀನಿವಾಸ ಹಾವನೂರ	ಡಾ. ನಳಿನಿ ವೆಂಕಟೇಶ್	ಶ್ರೀಮತಿ ಸ್ವರ್ಣ	೧೯.೦೭.೨೦೨೧
೫೪	ಕರ್ನಾಟಕದ ಪುರಾತತ್ವ ಅಧ್ಯಯನಕ್ಕೆ ಹೊಸ ಆಯಾಮ ನೀಡಿದ ಡಾ.ಎಫ್.ಆರ್. ಆಲ್ಚಿನ್	ಡಾ. ಎಸ್.ಕೆ. ಅರುಣಿ	ಶ್ರೀ ನಾಗೇಂದ್ರ	೨೬.೦೭.೨೦೨೧
೫೫	ಐತಿಹಾಸಿಕ ರತ್ನ ಶ್ರೀ ಎಸ್. ಶ್ರೀಕಂಠಯ್ಯ	ಡಾ. ಪಿ. ಜಯಸಿಂಹ	ಶ್ರೀ ರೇಣುಕಾಸ್ವಾಮಿ ಒಡೆಯರ್	೦೨.೦೮.೨೦೨೧
೫೬	ಕೊಡಗಿನ ಆದ್ಯ ಇತಿಹಾಸಕಾರ ಡಿ.ಎನ್. ಕೃಷ್ಣಯ್ಯ	ಡಾ. ಕೆ.ಎಮ್. ಲೋಕೇಶ್	ಡಾ. ಸಂಧ್ಯಾ ವಿ.	೦೯.೦೮.೨೦೨೧
೫೭	ಕರ್ನಾಟಕ ಇತಿಹಾಸ ಮತ್ತು ಸಂಸ್ಕೃತಿಯ ಆಚಾರ್ಯ ಡಾ. ಎಸ್. ಶ್ರೀಕಂಠಶಾಸ್ತ್ರಿ	ಡಾ. ಎಚ್.ಎಸ್. ಗೋಪಾಲರಾವ್	ಶ್ರೀಮತಿ ಶಿವಕುಮಾರಿ ಎಂ.ಎಸ್.	೧೬.೦೮.೨೦೨೧
೫೮	ಮಹಿಳಾ ಸಮಾಜದ ಐತಿಹಾಸಿಕ ಸಂಶೋಧಕಿ ಡಾ. ಚೆನ್ನಕ್ಕಪಾವಟೆ	ಪ್ರೊ. ಶಕುಂತಲಾ ಸಿಂಧೂರ	ಡಾ. ಪದ್ಮಜಾ ದೇಸಾಯಿ	೨೩.೦೮.೨೦೨೧
೫೯	ಮಹಾಮಹೋಪಾಧ್ಯಾಯ ಡಾ. ಆರ್. ಶಾಮಾಶಾಸ್ತ್ರಿ	ಶ್ರೀ ಎಸ್. ಕಾರ್ತಿಕ್	ಶ್ರೀ ಕೆ.ಎಲ್. ರಾಜಶೇಖರ್	೩೦.೦೮.೨೦೨೧
೬೦	ಇತಿಹಾಸಕಾರ, ಪ್ರವಾಸಿ ಫ್ರಾನ್ಸಿಸ್ ಬುಕನಾನ್	ಶ್ರೀ ಲಕ್ಷ್ಮೀಶ್ ಹೆಗಡೆ ಸೋಂದಾ	ಶ್ರೀ ಧನುಷ್ ಎಚ್. ಶೇಖರ್	೦೬.೦೯.೨೦೨೧
೬೧	ಶಾಸನ ತಜ್ಞ ಎ.ಎಮ್. ಅಣ್ಣಿಗೇರಿ	ಡಾ. ಜಿ.ಎಂ. ಹೆಗ್ಗಡೆ	ಡಾ. ಸಂಧ್ಯಾ ವಿ.	೧೩.೦೯.೨೦೨೧
೬೨	ಮೈಸೂರು ಪುರಾತತ್ವ ಇಲಾಖೆಯ ಶಾಸನತಜ್ಞ ಶ್ರೀ ಎಂ. ಹನುಮಂತರಾಯರು	ಶ್ರೀ ಎಸ್. ಕಾರ್ತೀಕ್	ಡಾ. ಸಂಧ್ಯಾ ವಿ.	೨೦.೦೯.೨೦೨೧

೬೩	ನಡಿಕೇರಿಯಂಡ ಚಿಣ್ಣಪ್ಪ – ಬದುಕು ಮತ್ತು ಬರಹ	ಡಾ. ಮೀನಾಕ್ಷಿ ಲೋಕೇಶ್	ಶ್ರೀಮತಿ ತಾರಾ	೨೭.೦೯.೨೦೨೧
೬೪	ಕರ್ನಾಟಕ ಇತಿಹಾಸಕ್ಕೆ ಡಾ. ಸರೋಜಿನಿ ಮಹಿಷಿ ಅವರ ಕೊಡುಗೆ	ಡಾ. ಎಲ್.ಜಿ. ಮೀರಾ	ಡಾ. ಸಂಧ್ಯಾ ವಿ.	೧೧.೧೦.೨೦೨೧
೬೫	ಮಹಾರಾಷ್ಟ್ರದ ನೆಲದಲ್ಲಿ ಕರ್ನಾಟಕದ ಇತಿಹಾಸವನ್ನು ಪ್ರಚುರಪಡಿಸಿದ ಮಹನೀಯರು: ವಿಠ್ಠಲ ರಾಮಜಿ ಸಿಂಧೆ, ವಿ.ವಿ. ಮಿರಾಶಿ, ಡಾ. ರಾ.ಚಿಂ. ಢೇರೆ, ಸೇತುಮಾಧವರಾವ್ ಪಗಡಿ	ಡಾ. ಜಿ.ಎನ್. ಉಪಾಧ್ಯ ಮುಂಬಯಿ	ಡಾ. ಸಂಧ್ಯಾ ವಿ.	೧೮.೧೦.೨೦೨೧
೬೬	ಕರ್ನಾಟಕ ಸಂಸ್ಕೃತಿ ಸಂಶೋಧಕ ಶ್ರೀ ಕಪಟರಾಳ ಕೃಷ್ಣರಾಯರು	ಶ್ರೀ ಎಸ್. ಸೀತಾರಾಮ ಜಾಗೀರ್‌ದಾರ್	ಶ್ರೀ ಎಮ್.ಎನ್. ಪ್ರಭಾಕರ್	೨೫.೧೦.೨೦೨೧
೬೭	ಪಂಡಿತವರೇಣ್ಯ ಶ್ರೀ ಸೇಡಿಯಾಪು ಕೃಷ್ಣಭಟ್ಟ	ಪ್ರೊ. ಪಿ.ಎನ್. ನರಸಿಂಹಮೂರ್ತಿ	ಡಾ. ಶಿವರಾಂ	೦೧.೧೧.೨೦೨೧
೬೮	ಭಾರತದ ಅಕ್ಷರ ಸೂರ್ಯ ಜೇಮ್ಸ್ ಪ್ರಿನ್ಸೆಪ್	ಡಾ. ಡಿ. ಸ್ಮಿತಾ ರೆಡ್ಡಿ	ಡಾ. ಸಂಧ್ಯಾ ವಿ.	೦೮.೧೧.೨೦೨೧
೬೯	ಭಾರತೀಯ ಪುರಾತತ್ವ ಕ್ಷೇತ್ರಕ್ಕೆ ಮಾರ್ಟಿಮರ್ ವೀಲರ್ ಅವರ ಕೊಡುಗೆ	ಡಾ. ಎಸ್.ವೈ. ಸೋಮಶೇಖರ್	ಶ್ರೀಮತಿ ವೀಣಾ	೧೫.೧೧.೨೦೨೧
೭೦	ಕರ್ನಾಟಕದ ಇತಿಹಾಸ ಮತ್ತು ಸಂಸ್ಕೃತಿಯ ಬಹುಮುಖೀ ಶೋಧನೆಗೆ ಅಕಾದೆಮಿ ಸದಸ್ಯರ ಕೊಡುಗೆ: ಇತಿಹಾಸ ದರ್ಶನ ಅವಲೋಕನ	ಡಾ. ಎನ್.ಆರ್. ಲಲಿತಾಂಬಾ	ಡಾ. ಸಂಧ್ಯಾ ವಿ.	೨೨.೧೧.೨೦೨೧
೭೧	ಸಮಾರೋಪ ಕಾರ್ಯಕ್ರಮ ದಿ. ೦೬.೧೨.೨೦೨೧ ಸೋಮವಾರ ಸಂಜೆ ೭ ಗಂಟೆ	ಮುಖ್ಯ ಅತಿಥಿಗಳು ಡಾ. ಎಂ.ಜಿ. ನಾಗರಾಜ್ ಉಪಾಧ್ಯಕ್ಷರು, ಕ.ಇ.ಅ. ಡಾ. ದೇವರಕೊಂಡಾರೆಡ್ಡಿ ಅಧ್ಯಕ್ಷರು, ಕ.ಇ.ಅ.	ಡಾ. ಸಂಧ್ಯಾ ವಿ.	೦೬.೧೨.೨೦೨೧

ಈ ಕಾರ್ಯಕ್ರಮವನ್ನು ನಡೆಸಿಕೊಟ್ಟ ಎಲ್ಲ ವಿದ್ವಾಂಸರಿಗೂ, ನಿರೂಪಕರಿಗೂ ಹಾಗೂ ಕಾರ್ಯಕ್ರಮದ ಜವಾಬ್ದಾರಿ ವಹಿಸಿಕೊಂಡು ಅಚ್ಚುಕಟ್ಟಾಗಿ ನೆರವೇರಿಸಿದ ಡಾ. ಸಂಧ್ಯಾ.ವಿ ಹಾಗೂ ಶ್ರೀಮತಿ. ಸೀತಾಲಕ್ಷ್ಮೀರಾವ್ ಅವರಿಗೂ ಹಾಗೂ ಅವರಿಗೆ ಸಹಕಾರ ನೀಡಿದ ಡಾ. ಸ್ಮಿತಾರೆಡ್ಡಿ. ಡಿ, ಹಲವಾರು ಉಪನ್ಯಾಸಗಳನ್ನು ಆಯೋಜಿಸಲು ನೆರವಾದ ಶ್ರೀ ಎಮ್.ಎನ್. ಪ್ರಭಾಕರ್, ಕು. ಅನಿರುದ್ಧ, ಡಾ. ಮಂಜುಶ್ರೀ, ಡಾ. ಶಿವರಾಮ್, ಕಾರ್ತಿಕ್.ಜಿ, ಚಿರಾಗ್, ಶ್ರೀಮತಿ ನಿರ್ಮಲ ಎಸ್.ವೈ. ಇವರೆಲ್ಲರಿಗೂ ಧನ್ಯವಾದಗಳು.

ಮೂವತ್ನಾಲ್ಕನೆಯ ವಾರ್ಷಿಕ ಸಮ್ಮೇಳನ

ಇಂದಿನ ಪೀಳಿಗೆಯವರು ಹಿಂದೆಂದೂ ಕಂಡಿರದ ಸಾಂಕ್ರಾಮಿಕ ರೋಗಾಣುವಿನ ಭೀತಿಯನ್ನು ಈ ವರ್ಷ ಎದುರಿಸಬೇಕಾಯಿತು. ಈ ಹಿನ್ನೆಲೆಯಲ್ಲಿ, ಸಾರ್ವಜನಿಕ ಸಮ್ಮೇಳನಗಳು ನಡೆಯದ ಸ್ಥಿತಿ ಬಂದೊದಗಿದ ಕಾರಣ ಮತ್ತು ಸರ್ಕಾರದ ಆದೇಶದಂತೆ ಮೂವತ್ತನಾಲ್ಕನೆಯ ವಾರ್ಷಿಕ ಸಮ್ಮೇಳನವನ್ನು ಆನ್‌ಲೈನ್ ಮೂಲಕ ನಡೆಸಲು ಸರ್ವಸದಸ್ಯರ ಸಭೆಯಲ್ಲಿ ತೀರ್ಮಾನ ಕೈಕೊಳ್ಳಲಾಯಿತು. ಅದರಂತೆ ಪತ್ರಿಕೆ ಮಂಡಿಸುವವರಿಂದ ಪ್ರವೇಶ ಶುಲ್ಕ ಹಾಗೂ ಅರ್ಜಿಯನ್ನು ಆನ್‌ಲೈನ್ ಮೂಲಕವೇ ತರಿಸಿಕೊಳ್ಳಲಾಯಿತು.

ಉದ್ಘಾಟನಾ ಸಮಾರಂಭ: ದಿನಾಂಕ: ೨೪.೧೨.೨೦೨೦ ರಂದು ಸಂಜೆ ೪ ಗಂಟೆಗೆ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನದ ಎಂ.ವಿ.ಸೀ ಸಭಾಂಗಣದಲ್ಲಿ ಉದ್ಘಾಟನಾ ಸಮಾರಂಭ ಆಯೋಜಿಸಲಾಗಿತ್ತು. ನಾಡಿನ ಖ್ಯಾತ ಶಾಸನತಜ್ಞರಾದ ಶ್ರೀಯುತ ಸೀತಾರಾಮ ಜಾಗೀರ್ದಾರ್ ಸಮ್ಮೇಳನಾಧ್ಯಕ್ಷರಾಗಿ ಮೈಸೂರಿನಿಂದ ಆಗಮಿಸಿದ್ದರು. ಖ್ಯಾತ ಇತಿಹಾಸಜ್ಞರಾದ ಡಾ. ಎಸ್. ನಾಗರಾಜು ಅವರು ಗಣ್ಯರೊಂದಿಗೆ ದೀಪಬೆಳಗುವುದರ ಮೂಲಕ ಉದ್ಘಾಟನಾ ಕಾರ್ಯಕ್ರಮ ನೆರವೇರಿಸಿ ಉದ್ಘಾಟನಾ ಭಾಷಣ

ನಡೆಸಿಕೊಟ್ಟರು. ಡಾ. ಆರ್. ಲಕ್ಷ್ಮೀನಾರಾಯಣ, ಅಧ್ಯಕ್ಷರು, ಬಿ.ಎಂ.ಶ್ರೀ ಪ್ರತಿಷ್ಠಾನ ಇವರು ಉಪಸ್ಥಿತರಿದ್ದು, ೨೦೧೯ನೆಯ ಸಾಲಿನ 'ಇತಿಹಾಸ ದರ್ಶನ ಸಂಪುಟ ೩೫'ವನ್ನು ಬಿಡುಗಡೆ ಮಾಡಿ, ವಾರ್ಷಿಕ ಸಂಚಿಕೆಯನ್ನು ಕುರಿತು ಮಾತನಾಡಿದರು. ಶ್ರೀಯುತ ಜಿ.ಕೆ. ದೇವರಾಜಸ್ವಾಮಿ ಅವರು ಅಕಾದೆಮಿಯ ಬಗ್ಗೆ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಡಾ. ದೇವರಕೊಂಡಾರೆಡ್ಡಿ ಅವರು ಅಧ್ಯಕ್ಷೀಯ ಭಾಷಣ ಮಾಡಿದರು. ಶ್ರೀ ಕೆ.ಎಲ್. ರಾಜಶೇಖರ್ ಅವರು ಗಣ್ಯರನ್ನು ಸ್ವಾಗತಿಸಿ, ಪರಿಚಯ ಮಾಡಿಕೊಟ್ಟರು. ಡಾ. ಸಂಧ್ಯಾ.ವಿ ಅವರು ವಂದನಾರ್ಪಣೆ ಮಾಡಿದರು.

ಈ ಕಾರ್ಯಕ್ರಮಕ್ಕೆ ಬೆಂಗಳೂರಿನ ನಿವಾಸಿಗಳಾದ ಕೆಲವು ಅಕಾದೆಮಿಯ ಸದಸ್ಯರು ಹಾಗೂ ಆಸಕ್ತರು ಆಗಮಿಸಿದ್ದು, ಉಳಿದ ಸದಸ್ಯರು ಆನ್‌ಲೈನ್ ಮೂಲಕ ಕಾರ್ಯಕ್ರಮವನ್ನು ಅಕಾದೆಮಿಯ ಅಧಿಕೃತ ಫೇಸ್‌ಬುಕ್ ಪೇಜಿನಲ್ಲಿ ಹಾಗೂ ಯೂಟ್ಯೂಬ್ ಚಾನೆಲ್ ಮೂಲಕ ವೀಕ್ಷಿಸಿದರು. ಇದಕ್ಕೆ ಶ್ರೀಮತಿ. ಸೀತಾಲಕ್ಷ್ಮಿ ರಾವ್ ಹಾಗೂ ಶ್ರೀ ನೀಲಾದ್ರಿ ಅವರು ತಾಂತ್ರಿಕ ನೆರವು ನೀಡಿ ಸಹಕರಿಸಿದರು. ಅವರಿಗೆ ಕೃತಜ್ಞತೆಗಳು.

ಪ್ರಶಸ್ತಿಗಳು: ಕರ್ನಾಟಕ ಇತಿಹಾಸ ಸಂಸ್ಕೃತಿ, ಶಾಸನ, ಪುರಾತತ್ವ, ನಾಣ್ಯ ಮೊದಲಾದ ವಿಚಾರಗಳನ್ನು ಕುರಿತು ಸುದೀರ್ಘ ಅಧ್ಯಯನ ನಡೆಸಿ ಮಹತ್ವದ ಸಂಶೋಧನಾ ಕಾರ್ಯಗಳನ್ನು ಕೈಗೊಂಡು, ಕರ್ನಾಟಕ ಇತಿಹಾಸಕ್ಕೆ ಸಂಬಂಧಿಸಿದ ಹೊಸ ವಿಚಾರಗಳನ್ನು ಬೆಳಕಿಗೆ ತಂದ ವಿದ್ವಾಂಸರನ್ನು ಪುರಸ್ಕರಿಸುವ ಕಾರ್ಯಕ್ರಮವನ್ನು ಅಕಾದೆಮಿಯು ಹಮ್ಮಿಕೊಂಡು ಬಂದಿದೆ. ಇದಕ್ಕಾಗಿ ಅಕಾದೆಮಿಯ ಸದಸ್ಯ ಮಹನೀಯರು ಅಕಾದೆಮಿಯಲ್ಲಿ ದತ್ತಿ ಇಟ್ಟಿದ್ದಾರೆ. ಅದರ ಮೂಲಕ ಪ್ರಶಸ್ತಿಗಳನ್ನು ನೀಡುತ್ತಾ ಬಂದಿದೆ.

ಇತಿಹಾಸ ಅಕಾದೆಮಿಯ ೩೪ನೇ ವಾರ್ಷಿಕ ಸಮ್ಮೇಳನ (ದಿನಾಂಕ: ೨೪.೧೨.೨೦೨೦) ದಲ್ಲಿ ಕೋವಿಡ್ ಮಹಾಮಾರಿಯ ಕಾರಣದಿಂದ ಸರ್ಕಾರದ ಆದೇಶದಂತೆ ಜನಸಂದಣಿ, ಸಭೆ ಮುಂತಾದವುಗಳಿಗೆ ಅವಕಾಶವಿಲ್ಲದಿದ್ದುದರಿಂದ ಪ್ರಸ್ತುತ ವರ್ಷ ಯಾವುದೇ ದತ್ತಿ ಪ್ರಶಸ್ತಿಗಳನ್ನು ನೀಡಲು ಸಾಧ್ಯವಾಗಲಿಲ್ಲ. ಮುಂದೆ ಈ ಕಾರ್ಯಕ್ರಮದ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಪ್ರಬಂಧ ಮಂಡನೆ: ದಿನಾಂಕ ೨೫.೧೨.೨೦೨೦ ರಿಂದ ೨೭.೧೨.೨೦೨೦ರ ವರೆಗಿನ ಮೂರು ದಿನಗಳ ಕಾಲ ಅಕಾದೆಮಿಯ ಸದಸ್ಯರು ಪುರಾತತ್ವ, ಶಾಸನ, ನಾಣ್ಯ, ಹಸ್ತಪ್ರತಿ, ಶಾಸನಾಧ್ಯಯನ, ಕರ್ನಾಟಕ ಇತಿಹಾಸ ಸಂಸ್ಕೃತಿಗೆ ಸಂಬಂಧಿಸಿದಂತೆ ಹಲವಾರು ಹೊಸ ವಿಚಾರಗಳನ್ನು ಕುರಿತಾದ ಪ್ರಬಂಧಗಳನ್ನು ಆನ್‌ಲೈನ್ ಮೂಲಕ ಮಂಡಿಸಿದರು. ಈ ಮೂರು ದಿನಗಳ ಪ್ರಬಂಧ ಮಂಡನಾ ಸಂದರ್ಭದಲ್ಲಿ ೧೨೦ ಸಂಶೋಧನಾ ಪತ್ರಿಕೆಗಳನ್ನು ಅಕಾದೆಮಿಯ ಸದಸ್ಯರು ಪ್ರಸ್ತುತ ಪಡಿಸಿದರು. ಬಿ.ಎಂ.ಶ್ರೀ ಸ್ಮಾರಕ ಕಲಾಭವನದ ಮೊದಲನೆಯ ಮಹಡಿಯನ್ನು ಕೇಂದ್ರಸ್ಥಳವನ್ನಾಗಿಸಿಕೊಂಡು ನಡೆಸಿದ ಈ ಗೋಷ್ಠಿಗಳಲ್ಲಿ ಸದಸ್ಯರು ಆನ್‌ಲೈನ್ ಮೂಲಕ ತಮ್ಮ ಸ್ಥಳಗಳಿಂದಲೇ ಪತ್ರಿಕೆಗಳನ್ನು ಮಂಡಿಸಿದರು. ಅಕಾದೆಮಿಯ ಅಧ್ಯಕ್ಷರಾದ ಡಾ. ದೇವರಕೊಂಡಾರೆಡ್ಡಿ ಅವರ ಮಾರ್ಗದರ್ಶನದಲ್ಲಿ ನಡೆದ ಆನ್‌ಲೈನ್ ಗೋಷ್ಠಿಯ ಪ್ರಸರಣ ಸಂದರ್ಭದಲ್ಲಿ ಸ್ಥಳದಲ್ಲೇ ಹಾಜರಿದ್ದು, ಡಾ. ದೇವರಕೊಂಡಾರೆಡ್ಡಿ, ಡಾ. ಕೆ.ಆರ್. ಗಣೇಶ್, ಡಾ. ನಾಗರಾಜು ಎಸ್., ಶ್ರೀ ಜಿ.ಕೆ. ದೇವರಾಜಸ್ವಾಮಿ, ಡಾ. ಶ್ಯಾಮಲಾ ರತ್ನಕುಮಾರಿ, ಡಾ. ಸ್ಮಿತಾರೆಡ್ಡಿ, ಎಂ.ಎನ್. ಪ್ರಭಾಕರ್ ಅವರು ಪ್ರಬಂಧ ಮಂಡನೆಕಾರರಿಗೆ ಸಲಹೆ, ಸೂಚನೆ, ಪ್ರಶಂಸೆಗಳನ್ನು ವ್ಯಕ್ತಪಡಿಸಿದರು. ಆನ್‌ಲೈನ್‌ನಲ್ಲೇ ಪ್ರಬಂಧ ಮಂಡನಾಕಾರರಿಗೆ ಡಾ. ಅರುಣಿ ಎಸ್.ಕೆ., ಡಾ. ರವೀಂದ್ರನಾಥ್ ಕೆ. ಮುಂತಾದವರೂ ಸಲಹೆ ಸೂಚನೆಗಳನ್ನು ನೀಡಿದರು. ಇದೊಂದು ವಿಶಿಷ್ಟ ಮಾದರಿ ಎನಿಸಿದರೂ, ಹೊಸ ರೀತಿಯ ತಂತ್ರಜ್ಞಾನವನ್ನು ಬಳಸಿಕೊಂಡು ನಡೆಸಲಾದ ಪ್ರಯೋಗವಾಗಿ ಯಶಸ್ವಿಯಾಗಿ ನೆರವೇರಿತು. ಈ ಆನ್‌ಲೈನ್ ಕಾರ್ಯಕ್ರಮದ ಸಂಪೂರ್ಣ ಜವಾಬ್ದಾರಿ ವಹಿಸಿಕೊಂಡು ನಡೆಸಿಕೊಟ್ಟ ಶ್ರೀಮತಿ. ಸೀತಾಲಕ್ಷ್ಮೀರಾವ್ ಹಾಗೂ ಅವರಿಗೆ ಸಹಕಾರ ನೀಡಿದ ಡಾ. ಸಂಧ್ಯಾ ವಿ. ಅವರಿಗೆ ಅಕಾದೆಮಿಯ ಸರ್ವ ಸದಸ್ಯರ ಶ್ಲಾಘನೆ ಹಾಗೂ ಕೃತಜ್ಞತೆ ಸಂದಾಯವಾಯಿತು.

ಸಮಾರೋಪ ಸಮಾರಂಭ: ದಿನಾಂಕ: ೨೮.೧೨.೨೦೨೧ ರಂದು, ಬಿ.ಎಂ.ಶ್ರೀ ಕಲಾಭವನದ ಮೊದಲನೆಯ ಮಹಡಿಯಲ್ಲಿ ಸಮ್ಮೇಳನದ ಸಮಾರೋಪ ಸಮಾರಂಭ ನೆರವೇರಿತು. ಕಾರ್ಯಕ್ರಮಕ್ಕೆ ಶ್ರೀ.ವಿ.ನಾಗರಾಜ್, ಗೌರವ ಕಾರ್ಯದರ್ಶಿ, ದಿ ಮಿಥಿಕ್ ಸೊಸೈಟಿ, ಬೆಂಗಳೂರು ಇವರು ಸಮಾರೋಪ ಸಮಾರಂಭದ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಸಮಾರಂಭವು ಕುಮಾರಿ. ಪೂರ್ಣ ಅವರ ಸುಶ್ರಾವ್ಯ ಪ್ರಾರ್ಥನಾ ಗೀತೆಯೊಂದಿಗೆ ಪ್ರಾರಂಭಗೊಂಡಿತು. ಡಾ. ಸಂಧ್ಯಾ.ವಿ ಅವರು ಸ್ವಾಗತ ಕೋರಿದರು. ಅಕಾದೆಮಿಯ ಸದಸ್ಯರಾದ ಡಾ. ಸ್ಮಿತಾ ಸುರೇಬಾನ್‌ಕರ್, ಬೆಳಗಾವಿ ಹಾಗೂ ಶ್ರೀ. ಬಸವರಾಜು, ಬಳ್ಳಾರಿ ಇವರು ಆನ್‌ಲೈನ್‌ನಲ್ಲಿ ನಡೆದ ಸಮ್ಮೇಳನವನ್ನು ಕುರಿತು ಪ್ರೇಕ್ಷಕ ಪ್ರತಿನಿಧಿಗಳಾಗಿ ಸಮ್ಮೇಳನವನ್ನು ಕುರಿತು ಪ್ರತಿಕ್ರಿಯೆ ನೀಡಿದರು. ಕಾರ್ಯಕ್ರಮ ವಿಭಿನ್ನವಾಗಿ, ವಿಶೇಷವಾಗಿ ಮೂಡಿಬಂದುದರ ಕುರಿತು ಡಾ. ಸ್ಮಿತಾ ಸುರೇಬಾನ್‌ಕರ್ ಅವರು ಮಾತನಾಡಿದರೆ, ಶ್ರೀಯುತ ಬಸವರಾಜು ಅವರು ಸಭೆ-ಸಮಾರಂಭಗಳನ್ನು ನಡೆಸಲಾರದಂತಹ ಸಂದಿಗ್ಧ ಸ್ಥಿತಿಯಲ್ಲಿಯೂ ಸಮ್ಮೇಳನವನ್ನು ನೆರವೇರಿಸಿ, ಆನ್‌ಲೈನ್ ಕಾರ್ಯಕ್ರಮಗಳ ಪರಿಕಲ್ಪನೆಯೇ ಇಲ್ಲದವರಿಗೂ ಸಹ ಭಾಗವಹಿಸಿ ಮಾತನಾಡುವಂತೆ ಮಾಡಿದ ಕಾರ್ಯಕ್ರಮಗಳನ್ನು ಕುರಿತು ಶ್ಲಾಘನೆ ವ್ಯಕ್ತಪಡಿಸಿದರು. ಕಾರ್ಯಕ್ರಮದ ಮುಖ್ಯ ಅತಿಥಿಗಳು ಮಾತನಾಡಿ, ಹೊಸ ಸಂಶೋಧನೆಗಳನ್ನು ಪ್ರಸ್ತುತಪಡಿಸಲು ಅಕಾದೆಮಿ ನಡೆಸಿಕೊಂಡು ಬರುತ್ತಿರುವ ಸಮ್ಮೇಳನ ಹೇಗೆ ಪ್ರಯೋಜನಕಾರಿಯಾಗಿದೆ, ಇಂದಿನ ಪೀಳಿಗೆಗೆ

ಇತಿಹಾಸ ತಲುಪಿಸುವ ಅಗತ್ಯತೆಯ ಕುರಿತಂತೆ ಮಾತನಾಡಿ, ಅಕಾದೆಮಿಯ ಯಾವುದೇ ಕಾರ್ಯಕ್ಕೆ ಮಿಥಿಕ್ ಸೊಸೈಟಿ ಸಹಕಾರ ನೀಡುವುದಾಗಿ ಭರವಸೆ ನೀಡಿದರು. ಡಾ. ದೇವರಕೊಂಡಾ ರೆಡ್ಡಿಯವರು ಅಧ್ಯಕ್ಷೀಯ ನುಡಿಗಳನ್ನಾಡಿ, ಇತಿಹಾಸ ದರ್ಶನದ ಮುದ್ರಣಕ್ಕೆ ಸಹಕಾರ ನೀಡಿರುವ ಮಿಥಿಕ್ ಸೊಸೈಟಿಗೆ, ಪ್ರತಿ ವರ್ಷ ಧನಸಹಾಯವನ್ನು ನೀಡುವ ರಂಭಾಪುರಿ ಮಠದ ಜಗದ್ಗುರುಗಳಿಗೆ, ಇದೇ ರೀತಿ ಪ್ರೋತ್ಸಾಹ ನೀಡುತ್ತಿರುವ ಪರಮಪೂಜ್ಯ ಸಂಗನಬಸವ ಮಹಾಸ್ವಾಮಿಗಳು ಬಾದಾಮಿ ಇವರಿಗೆ ಕೃತಜ್ಞತೆ ಸಲ್ಲಿಸಿದರು. ಜಿ.ಕೆ. ದೇವರಾಜಸ್ವಾಮಿ ಅವರು ವಂದನಾರ್ಪಣೆ ನೆರವೇರಿಸಿದರು. ಕಾರ್ಯಕ್ರಮವನ್ನು ಆನ್‌ಲೈನ್ ಮೂಲಕ ನೂರಾರು ಸಂಖ್ಯೆಯಲ್ಲಿ ಸದಸ್ಯರು ವೀಕ್ಷಿಸಿದರು. ಕಾರ್ಯಕಾರಿ ಸಮಿತಿ ಸದಸ್ಯರಾದ ಡಾ. ಕೊಟ್ರೇಶ್, ಶ್ರೀ ಗುರುಪ್ರಸಾದ್ ಬಿ.ಎಸ್., ಎಂ.ಎನ್. ಪ್ರಭಾಕರ್ ಅವರುಗಳೊಂದಿಗೆ ಡಾ. ಶಾಮಲಾ ರತ್ನಕುಮಾರಿ, ಡಾ. ವಸಂತಲಕ್ಷ್ಮಿ, ಡಾ. ಮುತ್ತುರಾಜ್, ಡಾ. ಗಣೇಶ್.ಕೆ.ಆರ್., ವಿಜಯಕರ್ನಾಟಕ ಪತ್ರಿಕೆಯ ಪ್ರತಿನಿಧಿಯಾಗಿ ಶ್ರೀ ಎ.ಸಿ.ಕುಮಾರ್, ಮೊದಲಾದವರು ಭಾಗವಹಿಸಿದ್ದರು.

ಕಾರ್ಯಕ್ರಮ ಅಚ್ಚುಕಟ್ಟಾಗಿ ನೆರವೇರಲು ಕಾರಣರಾದ ಶ್ರೀ ರೇಣುಕಾಸ್ವಾಮಿ ಒಡೆಯರ್, ಶ್ರೀ ಧನುಷ್, ಶ್ರೀ ಕಾರ್ತಿಕ್ ಕಾಮಣ್ಣ, ಶ್ರೀಮತಿ ನಿರ್ಮಲಾ ಎಸ್.ವೈ, ಡಾ. ನಳಿನಿ ವೆಂಕಟೇಶ್ ಮೊದಲಾದವರು ಪ್ರತಿವರ್ಷದಂತೆಯೇ ನೆರವಾಗಿದ್ದಾರೆ. ಇವರೆಲ್ಲರಿಗೂ ಅಕಾದೆಮಿಯು ಧನ್ಯವಾದಗಳನ್ನು ಸಲ್ಲಿಸುತ್ತದೆ. ಅಕಾದೆಮಿಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಜಿ.ಕೆ. ದೇವರಾಜಸ್ವಾಮಿ ಅವರ ವಂದನಾರ್ಪಣೆಯೊಂದಿಗೆ ಕಾರ್ಯಕ್ರಮ ಯಶಸ್ವಿಯಾಗಿ ಮುಕ್ತಾಯವಾಯಿತು.

ವಾರ್ಷಿಕ ಸಮ್ಮೇಳನದಲ್ಲಿ ಪ್ರತಿವರ್ಷ ಹಮ್ಮಿಕೊಳ್ಳುವ ಸರ್ವಸದಸ್ಯರ ಸಭೆಯನ್ನು, ೨೦೨೦ರ ಸಾಲಿನಲ್ಲಿ ೩೪ನೇ ವಾರ್ಷಿಕ ಸಮ್ಮೇಳನದ ಮುನ್ನಾದಿನ ದಿನಾಂಕ ೨೩.೧೨.೨೦೨೧ ರಂದು ಸಂಜೆ ೪.೩೦ಕ್ಕೆ ಹಮ್ಮಿಕೊಳ್ಳಲಾಯಿತು. ಆನ್‌ಲೈನ್ ಮೂಲಕ ಅಕಾದೆಮಿಯ ಎಲ್ಲ ಸದಸ್ಯರೂ ಪಾಲ್ಗೊಳ್ಳಲು ಸಾಧ್ಯವಾಗುವಂತೆ ಕಾರ್ಯಕ್ರಮವನ್ನು ಬಿ.ಎಂ.ಶ್ರೀ ಕಲಾಭವನದ ಮೊದಲನೆಯ ಮಹಡಿಯ ಕೇಂದ್ರ ಸ್ಥಳದಿಂದ ಆಯೋಜಿಸಲಾಗಿತ್ತು.

೨೦೨೦-೨೧ನೇ ಸಾಲಿನ ೩೪ನೇ ವಾರ್ಷಿಕ ಸರ್ವಸದಸ್ಯರ ಸಭೆಯ ನಡಾವಳಿಗಳು

ದಿನಾಂಕ ೨೯-೧೨-೨೦೨೦ ಬುಧವಾರದಂದು ಸಂಜೆ ೬.೦೦ ಘಂಟೆಗೆ ಅಕಾದೆಮಿಯ ೩೪ನೇ ವಾರ್ಷಿಕ ಸರ್ವಸದಸ್ಯರ ಸಭೆಯು, ಅಕಾದೆಮಿಯ ಕಚೇರಿಯಲ್ಲೇ, ಅಕಾದೆಮಿಯ ಅಧ್ಯಕ್ಷರಾದ ಡಾ. ದೇವರಕೊಂಡಾರೆಡ್ಡಿ ಅವರ ಅಧ್ಯಕ್ಷತೆಯಲ್ಲಿ ಜಾಲತಾಣ (Virtual Meeting) ದ ಮೂಲಕ ಮತ್ತು ಹಾಜರಿದ್ದ ಸದಸ್ಯರ ಸಮ್ಮುಖದಲ್ಲಿ ಜರುಗಿತು. ಅಕಾದೆಮಿಯು ಸದಸ್ಯರೆಲ್ಲರಿಗೂ ದಿನಾಂಕ ೨೨ನೇ ನವೆಂಬರ್ ೨೦೨೦ರ ಸುತ್ತೋಲೆಯ ಮುಖಾಂತರ ೩೪ನೇ ಸರ್ವಸದಸ್ಯರ ಸಭೆಯನ್ನು ಜಾಲತಾಣದ ಮೂಲಕ (Virtual Meeting) ನಡೆಸುವ ಬಗ್ಗೆ ತಿಳಿಸಲಾಗಿತ್ತು ಹಾಗೂ ಆನ್‌ಲೈನ್ ಮೂಲಕ ಸಭೆಯ ಕಲಾಪಗಳಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ವಿನಂತಿಸಲಾಗಿತ್ತು.

ಆನ್‌ಲೈನ್ ಮತ್ತು ಖುದ್ದು ಹಾಜರಿದ್ದ ಸದಸ್ಯರ ಸಂಖ್ಯೆ ೧೩೩ (ಭಾಗವಹಿಸಿದ್ದ ಸದಸ್ಯರ ಪಟ್ಟಿಯನ್ನು ಲಗತ್ತಿಸಿದೆ).

ಕಾರ್ಯಸೂಚಿಯ ಪ್ರಕಾರ ನಡೆದ ಕಲಾಪಗಳು

೧. ಸಭೆಯ ಪ್ರಾರಂಭಕ್ಕೆ ಮುಂಚಿತವಾಗಿ, ಪ್ರದಾನ ಕಾರ್ಯದರ್ಶಿಗಳಾದ ಶ್ರೀ ದೇವರಾಜಸ್ವಾಮಿಯವರು, ೨೦೨೦-೨೧ ಸಾಲಿನಲ್ಲಿ ಈ ತಾರೀಖಿನವರೆಗೆ ನಮ್ಮನ್ನಗಲಿದ ಸದಸ್ಯರ ಹೆಸರುಗಳನ್ನು ವಾಚಿಸಿದರು. ಸಭೆಯು ಒಂದು ನಿಮಿಷದ ಮೌನಾಚರಣೆಯ ಮೂಲಕ ಅಗಲಿದ ಸದಸ್ಯರಿಗೆ ಶ್ರದ್ಧಾಂಜಲಿ ಸಲ್ಲಿಸಿತು. ಅಗಲಿದ ಸದಸ್ಯರುಗಳ ಪಟ್ಟಿ.

೧. ಶ್ರೀ ಚನ್ನಪ್ಪ ವೀರಪ್ಪ ಮುಳಗುಂದ-ಧಾರವಾಡ, ೨. ಶ್ರೀಮತಿ ಜಿಲಾನ್ ಬಾನು ಸಿ.ಜಿ.-ಕೂಡ್ಲಿಗಿ, ೩. ಶ್ರೀ ಪ್ರಕಾಶ್ ಕುಮಾರ್ ಸಿ.ಎನ್.-ಅರಸಿಕೆರೆ, ೪. ಡಾ. ದಯಾನಂದ ಕುಮಾರ್ ಎಸ್.-ಚಿಕ್ಕಮಗಳೂರು, ೫. ಶ್ರೀ ಜಯದೇವಪ್ಪ ಜೈನಕೇರಿ -ಶಿವಮೊಗ್ಗ, ೬. ಡಾ. ಕುಮಾರಸ್ವಾಮಿ-ಭದ್ರಾವತಿ.

೨. ೨೦೧೯-೨೦ನೇ ಸಾಲಿನ ವಾರ್ಷಿಕ ವರದಿಯ ವಾಚನ ಮತ್ತು ಸ್ವೀಕಾರ

ಅಕಾದೆಮಿಯ ಪ್ರಧಾನ ಕಾರ್ಯದರ್ಶಿ ಶ್ರೀ ಜಿ.ಕೆ. ದೇವರಾಜಸ್ವಾಮಿ ಅವರು ಪ್ರತೀ ವರ್ಷದಂತೆ ಈ ವರ್ಷವೂ ತಾವು ಅಕಾದೆಮಿಯ ಎಲ್ಲಾ ಚಟುವಟಿಕೆಗಳನ್ನು ಕುರಿತಂತೆ ಸುದೀರ್ಘವಾದ ವರದಿಯನ್ನು ಸಿದ್ಧಪಡಿಸಿರುವುದಾಗಿ ತಿಳಿಸಿದರು. ಸಭೆಗೆ ಆಗಮಿಸಿದ್ದ ಸದಸ್ಯರೆಲ್ಲರಿಗೂ ವರದಿಯನ್ನು ಕೊಡಲಾಯಿತು. ಅಕಾದೆಮಿಯ ಪ್ರಮುಖ ಮೂರು ಚಟುವಟಿಕೆಗಳ ಬಗ್ಗೆ ವಿವರಣೆ ನೀಡಿದರು. ವಾರ್ಷಿಕ ವರದಿಯನ್ನು ಶ್ರೀ ಎಂ.ಎನ್. ಪ್ರಭಾಕರ್, ಮೈಸೂರು ಅವರು ಅನುಮೋದಿಸಿದರು ನಂತರ ಸಭೆಯು ಸರ್ವಾನುಮತದಿಂದ ವಾರ್ಷಿಕ ವರದಿಯನ್ನು ಅಂಗೀಕರಿಸಿತು.

೩. ೨೦೧೯-೨೦ನೇ ಸಾಲಿನ ಲೆಕ್ಕಪತ್ರಗಳ ಮಂಡನೆ ಮತ್ತು ಸ್ವೀಕಾರ

ಕೋಶಾಧಿಕಾರಿಗಳಾದ ಶ್ರೀ ಎಂ.ಬಿ. ಪಾಟೀಲ್ ಅವರು ಅಕಾದೆಮಿಯ ಆರ್ಥಿಕವಾಗಿ ಅಷ್ಟೇನೂ ಸದೃಢವಾಗಿಲ್ಲವೆಂದು ಹೇಳಿ ಸರ್ಕಾರದಿಂದ ಮೂರು ವರ್ಷಗಳ ಅನುದಾನ ಬಿಡುಗಡೆಯಾಗಿಲ್ಲವೆಂದು ತಿಳಿಸಿದರು. ಪ್ರಸಕ್ತ ಕರೋನಾ ಪಿಡುಗಿನಿಂದಾಗಿ, ಸರ್ಕಾರವೂ ಆರ್ಥಿಕ ಹಿಂಜರಿಕೆಯನ್ನು ಅನುಭವಿಸುತ್ತಿರುವ ಸಂದರ್ಭದಲ್ಲಿ, ಈ ವರ್ಷವೂ ಅನುದಾದನ ಬಿಡುಗಡೆಯಾಗುವ ಯಾವ ಸೂಚನೆಯೂ ಕಾಣುತ್ತಿಲ್ಲವೆಂದು ತಿಳಿಸಿದರು. ಇಂತಹ ಸಂದರ್ಭದಲ್ಲಿ ಅಕಾದೆಮಿಯ ಸದಸ್ಯರೆಲ್ಲರೂ, ಸಂಸ್ಥೆಯ ಸದಸ್ಯತ್ವವನ್ನು (Institutional Membership) ತರಲು ಶ್ರಮಿಸಬೇಕೆಂದು ಕರೆ ನೀಡಿದರು. ಈ ವರ್ಷ ಮೂಲನಿಧಿಗೆ ದೇಣಿಗೆ ತರಲು (Corpus Fund) ವಿನಂತಿಸಿದರು.

ನಂತರ ಸಹಾಯಕ ಕೋಶಾಧಿಕಾರಿಗಳಾದ ಶ್ರೀ ಬಿ.ಎಸ್. ಗುರುಪ್ರಸಾದ್ ಅವರು ಅಕಾದೆಮಿಯ ಲೆಕ್ಕಪರಿಶೋಧನೆಯ ಕಾರ್ಯ ೨೦೨೦ ಡಿಸೆಂಬರ್ ೫ಕ್ಕೆ ಸಂಪೂರ್ಣವಾಗಿ ಮುಗಿದು, ಲೆಕ್ಕ ಪರಿಶೋಧಕರು ವರದಿಯನ್ನು ಸಲ್ಲಿಸಿದ್ದನ್ನು ತಿಳಿಸಿ, ಲೆಕ್ಕ ಪರಿಶೋಧಕರಿಗೆ ವಂದನೆ ತಿಳಿಸಿದರು. Income and Expandditure and Receipts and paymentsಗಳ ಸಂಪೂರ್ಣ ವಿವರಗಳನ್ನು ನೀಡಿ, Balance Sheet ನಲ್ಲಿನ ವಿವರಗಳನ್ನು ನೀಡಿ, ಚರ್ಚೆಗೆ ಅವಕಾಶವಿರುವುದಾಗಿ ತಿಳಿಸಿದರು.

೩೩ನೇ ವಾರ್ಷಿಕ ಸಮ್ಮೇಳನದ ಖರ್ಚು ವೆಚ್ಚ ಮತ್ತು ಐತಿಹಾಸಿಕ ಪರಂಪರೆ ಕಾರ್ಯಕ್ರಮಕ್ಕೆ ತಗುಲಿದ ವಿವರಗಳನ್ನು ಸಭೆಗೆ ನೀಡಿದರು. ಇತಿಹಾಸ ದರ್ಶನ ಸಂಪುಟ ೩೩ರ ವೆಚ್ಚವನ್ನು ಸಂಪೂರ್ಣವಾಗಿ ದಿ ಮಿಥಿಕ್ ಸೊಸೈಟಿಯೇ ನೀಡಿದ್ದನ್ನು ಸ್ಮರಿಸಿ, ಅಲ್ಲಿನ ಆಡಳಿತ ಮಂಡಳಿಯ ಪದಾಧಿಕಾರಿಗಳಿಗೆ ಕೃತಜ್ಞತೆ ಸಲ್ಲಿಸಿದರು. ಈಗ ಸಲ್ಲಿಸಿರುವ ೨೦೧೯-೨೦ನೇ ಸಾಲಿನ ಪರಿಶೋಧಿತ ಲೆಕ್ಕಪತ್ರಗಳನ್ನು ಅಂಗೀಕರಿಸಬಹುದೆಂದು ಶ್ರೀ ಕುಲಕರ್ಣಿಯವರು ಸೂಚಿಸಿದರು ಹಾಗೂ ಶ್ರೀ ಪಾಂಡುರಂಗ ಅವರು ಅದನ್ನು ಅನುಮೋದಿಸಿದರು.

೪. ೨೦೨೦-೨೧ನೇ ಸಾಲಿನ ಮುಂಗಡ ಲೆಕ್ಕಪತ್ರ ಮಂಡನೆ ಮತ್ತು ಸ್ವೀಕಾರ

ಶ್ರೀ ಬಿ.ಎಸ್. ಗುರುಪ್ರಸಾದ್ ಸಹಾಯಕ ಕೋಶಾಧಿಕಾರಿಗಳು ೨೦೨೦-೨೧ನೇ ಸಾಲಿನಲ್ಲಿ ಬರುವ ಅಂದಾಜು ಆದಾಯ ಮೂಲಗಳ ಗಾತ್ರ ಮತ್ತು ಸದಸ್ಯದ ಕೋವಿಡ್-೧೯ ಪರಿಸ್ಥಿತಿಯನ್ನು ಗಮನದಲ್ಲಿರಿಸಿಕೊಂಡು, ಖರ್ಚು, ವೆಚ್ಚಗಳ ಬಾಬ್ತುಗಳನ್ನು ಪರಿಶೀಲಿಸಿ, ಮುಂಗಡ ಪತ್ರ ತಯಾರಿಸಿರುವುದಾಗಿ ಹೇಳಿ ಸಭೆಯ ಮುಂದೆ ಮಂಡಿಸಿದರು. ಈ ವಿಷಯದಲ್ಲಿ ಸದಸ್ಯರ ಸಲಹೆ, ಸೂಚನೆಗಳಿದ್ದರೆ ತಿಳಿಸಬಹುದೆಂದು ಮನವಿ ಮಾಡಿದರು. ಸಭೆಯು ಸರ್ವಾನುಮತದಿಂದ ಮುಂಗಡ ಪತ್ರವನ್ನು ಅಂಗೀಕರಿಸಿತು. ಆದಾಗ್ಯೂ ಶ್ರೀ ಎಂ. ಬಿ. ಪಾಟೀಲ್ ಅವರು ಮುಂಗಡ ಪತ್ರವನ್ನು ಸ್ವೀಕರಿಸಬಹುದೆಂದು ಸೂಚಿಸಿದರು. ಶ್ರೀ ಹರಿಹರ ಶ್ರೀನಿವಾಸರಾವ್ ಅವರು ಅದನ್ನು ಅನುಮೋದಿಸಿದರು.

೫. ೨೦೨೦-೨೧ನೇ ಸಾಲಿಗೆ ಲೆಕ್ಕ ಪತ್ರ ಪರಿಶೋಧಕರ ನೇಮಕ ಮತ್ತು ಅದರ ಸಂಭಾವನೆ

ಅಕಾದೆಮಿ ಕಚೇರಿಯ ಸಮೀಪವಿರುವ ಜಿ.ಬಿ.ಎ. ಅಂಡ್ ಅಸೋಸಿಯೇಟ್ಸ್ - ಲೆಕ್ಕಪರಿಶೋಧಕರು, ಕಳೆದ ನಾಲ್ಕು ವರ್ಷಗಳಿಂದಲೂ ಅಕಾದೆಮಿಯ ಲೆಕ್ಕಪತ್ರಗಳನ್ನು ಪರಿಶೋಧಿಸಿ ತಮ್ಮ ವರದಿಯನ್ನು ಸಕಾಲದಕ್ಕೆ ಸಲ್ಲಿಸುತ್ತಿದ್ದಾರೆ. ಅಕಾದೆಮಿಗೆ ಅವಶ್ಯವಿರುವ ಹೆಚ್ಚುವರಿ ಪ್ರಮಾಣಪತ್ರಗಳನ್ನೂ ನೀಡಿ ಸಹಕರಿಸುತ್ತಿರುವುದಾಗಿ ಸಹಾಯಕ ಕೋಶಾಧಿಕಾರಿಗಳು ತಿಳಿಸಿದರು, ಆದ ಕಾರಣದಿಂದ, ಈಗಿರುವ ಲೆಕ್ಕಪರಿಶೋಧಕರ ಸೇವೆಯನ್ನು ಅದೇ ಸಂಭಾವನೆ ಆಧಾರದ ಮೇಲೆ ನಿಗಧಿಪಡಿಸಿ ಅವರ ಸೇವೆಯನ್ನು ಮುಂದುವರಿಸಬಹುದೆಂದು ಸಭೆಯು ಸರ್ವಾನುಮತದಿಂದ ಒಪ್ಪಿಗೆ ನೀಡಿತು. ಸಭೆಯ ಪರವಾಗಿ ಡಾ. ನಳಿನಿ ವೆಂಕಟೇಶ್ ಅವರ ಸೂಚನೆಯನ್ನು ಶ್ರೀಮತಿ ಸೀತಾಲಕ್ಷ್ಮಿಯವರು ಅನುಮೋದಿಸಿದರು.

೬. ಠರಾವುಗಳ ಮಂಡನೆ: ಕೊರೋನಾ ಮಹಾಮಾರಿಯ ಕಾರಣದಿಂದ ಸಭೆಯ ಆನ್‌ಲೈನ್ ಮೂಲಕ ನಡೆಸಿದೆ. ಸಭೆಯಲ್ಲಿ ಯಾವುದೇ ಠರಾವುಗಳು ಬಂದಿಲ್ಲದ ಕಾರಣದಿಂದ ಮಂಡನೆಯಾಗಿಲ್ಲ.

೭. ಅಪ್ಪಣೆಯ ಮೇರೆಗೆ ಇತರ ವಿಷಯಗಳು

ಅ) ಅಕಾದೆಮಿಗೆ ಆದಾಯ ತೆರಿಗೆ ಇಲಾಖೆಯಿಂದ ೮೦ ಜಿ ಸೌಕರ್ಯವನ್ನು ಪಡೆದುಕೊಳ್ಳುವ ಬಗ್ಗೆ

ಕೋಶಾಧಿಕಾರಿಗಳಾದ ಶ್ರೀ ಎಂ. ಬಿ. ಪಾಟೀಲ್ ಅವರು ಈಗ ಸೇವೆ ನೀಡುತ್ತಿರುವ ಲೆಕ್ಕಪರಿಶೋಧಕರನ್ನೇ, ೮೦ ಜಿ ಸೌಕರ್ಯ ಪಡೆಯಲು ಆದಾಯ ತೆರಿಗೆ ಇಲಾಖೆಗೆ ಬೇಕಾದ ಅಕಾದೆಮಿಯ ಬಗ್ಗೆ ಮಾಹಿತಿ ಮತ್ತು ಲೆಕ್ಕ ಪತ್ರಗಳನ್ನು ನೀಡಿ, ಅರ್ಜಿ ಸಲ್ಲಿಸಲು ಮನವಿ ಮಾಡುವುದಾಗಿ ತಿಳಿಸಿದರು.

೮. **ಕೃತಜ್ಞತೆ:** ಪ್ರೊ. ದೇವರಾಜಸ್ವಾಮಿ, ಪ್ರದಾನ ಕಾರ್ಯದರ್ಶಿಗಳು ಸಭೆಗೆ ಖುದ್ದಾಗಿ ಹಾಜರಿದ್ದ ಸದಸ್ಯರೆಲ್ಲರಿಗೂ ಹಾಗು ಜಾಲತಾಣ ಮೂಲಕ ದೂರದಿಂದ ವೀಕ್ಷಿಸುತ್ತಿರುವ ಸದಸ್ಯರೆಲ್ಲರಿಗೂ ಧನ್ಯವಾದ ತಿಳಿಸಿದರು. ೩೪ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆಯನ್ನು ಜಾಲತಾಣ ಮೂಲಕ ಯಾವ ಅಡೆತಡೆಗಳಿಲ್ಲದೆ ಬಹಳ ಯಶಸ್ವಿಯಾಗಿ ನಡೆಸಿಕೊಟ್ಟ ಶ್ರೀಮತಿ ಸೀತಾಲಕ್ಷ್ಮಿಯವರಿಗೂ ಮತ್ತು ಅವರಿಗೆ ಅಗತ್ಯ ಸಹಕಾರ ನೀಡಿದ ಸದಸ್ಯರ ತಂಡಕ್ಕೆ ವಿಶೇಷವಾಗಿ ಅಭಿನಂದಿಸಿದರು. ಇಲ್ಲಿಗೆ ೩೪ನೇ ವಾರ್ಷಿಕ ಸರ್ವ ಸದಸ್ಯರ ಸಭೆ ಸಂಪನ್ನಗೊಂಡಿತು.

೯. **ಕಾರ್ಯಕಾರಿ ಸಮಿತಿ ಸಭೆಗಳು:** ಕೊರೋನಾ ಮಹಾಮಾರಿ ಕಾರಣದಿಂದ ಜನರ ಓಡಾಟವೇ ಸ್ಥಗಿತವಾಗಿದ್ದಲ್ಲದೆ ಕೆಲಸ ಕಾರ್ಯಗಳು ಕುಂಟಿತಗೊಂಡವು. ಆದರೂ ಅಕಾದೆಮಿಯು ಆನ್‌ಲೈನ್ ಮೂಲಕ ಕಾರ್ಯಕಾರಿ ಸಮಿತಿ ಸಭೆಯನ್ನು ಎರಡು ಬಾರಿ ಕರೆಯಲಾಗಿದೆ. ಬೆಂಗಳೂರಿನ ಕೆಲವೇ ಸದಸ್ಯರು ಹಾಜರಿದ್ದು, ಉಳಿದಂತೆ ಸದಸ್ಯರು ವಿದ್ಯುನ್ಮಾನಗಳ ಮೂಲಕ ಆನ್‌ಲೈನ್ ಮೂಲಕ ಸೂಚನೆ ಒಪ್ಪಿಗೆಗಳನ್ನು ನೀಡಿ ಕಾರ್ಯಚಟುವಟಿಕೆಗಳನ್ನು ಯಶಸ್ವಿಗೊಳಿಸಿದ್ದಾರೆ.

೧೦. **ಅಕಾದೆಮಿಯ ಸದಸ್ಯ ಬಲ:** ೨೦೨೧ ಡಿಸೆಂಬರ್‌ವರೆಗೆ ಅಕಾದೆಮಿಯಲ್ಲಿ ಒಟ್ಟು ೨೧೪೩ ಆಜೀವ ಸದಸ್ಯರಿದ್ದಾರೆ. ಅದರಲ್ಲಿ ೩೦ ಸಂಘ ಸಂಸ್ಥೆಗಳು ಇವೆ.

೧೧. **ಜಿಲ್ಲಾ ಘಟಕಗಳು:** ಪ್ರಸ್ತುತ ಕೆಲವು ವರ್ಷಗಳಿಂದ ಯಾವುದೇ ಜಿಲ್ಲಾ ಘಟಕಗಳು ಇಲ್ಲ. ಆದರೂ ಆಯಾ ಜಿಲ್ಲೆಯ ಸದಸ್ಯರು ಆಸಕ್ತಿಯಿಂದ ಇತಿಹಾಸ ಪರಂಪರೆ ಉಳಿಸಿ ಕಾರ್ಯಕ್ರಮ ಹಮ್ಮಿಕೊಳ್ಳುತ್ತಿದ್ದಾರೆ. ಕಾರ್ಯಕ್ರಮಗಳನ್ನು ಆಯೋಜಿಸಿ ಇತಿಹಾಸದ ಅರಿವನ್ನು ಜಾಗೃತಗೊಳಿಸುವಲ್ಲಿ ಯಶಸ್ವಿಯಾಗಿ ಕಾರ್ಯಗಳನ್ನು ಮಾಡುತ್ತಿದ್ದಾರೆ.

ಕೃತಜ್ಞತೆಗಳು

ಕರ್ನಾಟಕ ಇತಿಹಾಸ ಅಕಾದೆಮಿಯನ್ನು ಸೋದರ ಸಂಸ್ಥೆ ಎಂಬಂತೆ ಪರಿಗಣಿಸಿ ಸಹಕರಿಸುತ್ತಾ ಬಂದಿರುವ ಕರ್ನಾಟಕ ರಾಜ್ಯ ಪ್ರಾಚ್ಯವಸ್ತು ಮತ್ತು ವಸ್ತುಸಂಗ್ರಹಾಲಯ ನಿರ್ದೇಶನಾಲಯದ ನಿರ್ದೇಶಕರು, ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗ, ೨೦೧೯ರ 'ಐತಿಹಾಸಿಕ ಪರಂಪರೆ ಉಳಿಸಿ' ಕಾರ್ಯಕ್ರಮವನ್ನು ಬೆಂಗಳೂರಿನ ಬಿಎಂಶ್ರೀ ಪ್ರತಿಷ್ಠಾನ, ನರಸಿಂಹರಾಜ ಕಾಲೋನಿಯಲ್ಲಿ ಹಮ್ಮಿಕೊಳ್ಳಲಾಗಿತ್ತು. ಅಲ್ಲಿಯ ಅಧಿಕಾರಿ ವರ್ಗ ಹಾಗೂ ಸಹಕರಿಸಿದ ಎಲ್ಲರಿಗೂ ಧನ್ಯವಾದಗಳು.

ಬೆಂಗಳೂರಿನ ದಿ ಮಿಥಿಕ್ ಸೊಸೈಟಿಯ ಪದಾಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗ, ಶ್ರೀ ಬೈಸಾನಿ ರುಕ್ಮಣಮ್ಮ ರತ್ನಂಶೆಟ್ಟಿ ಕುಟುಂಬದ ಸೇವಾ ಟ್ರಸ್ಟ್‌ನ ಶ್ರೀ ಅಶೋಕ್‌ಕುಮಾರ್; ವಾಗ್ದೇವಿ ಮುದ್ರಣಾಲಯದ ಶ್ರೀ ಪ್ರಭು ಮತ್ತು ಸಿಬ್ಬಂದಿವರ್ಗ; ಬಾ.ರಾ. ಗೋಪಾಲ್ ಕುಟುಂಬ ವರ್ಗ; ಸಮ್ಮೇಳನಾಧ್ಯಕ್ಷರಿಗೆ ಗೌರವ ಸ್ಮರಣ ಫಲಕವನ್ನು ಪ್ರಾಯೋಜಿಸಿರುವ ಶ್ರೀ ಕೆ. ಅಭಿಶಂಕರ ಕುಟಂಬವರ್ಗ; 'ಇತಿಹಾಸ ಸಂಸ್ಕೃತಿ ಶ್ರೀ' ಪ್ರಶಸ್ತಿಯನ್ನು ಪ್ರಾಯೋಜಿಸುತ್ತಿರುವ ಬೈಸಾನಿ ಶ್ರೀಮತಿ ರುಕ್ಮಣಮ್ಮ ಶ್ರೀ ರತ್ನಂಶೆಟ್ಟಿ ಟ್ರಸ್ಟ್‌ನವರಿಗೆ; ಡಾ. ಬಾ.ರಾ. ಗೋಪಾಲ್ ಪ್ರಶಸ್ತಿಯ ಸ್ಮರಣ ಫಲಕವನ್ನು ಪ್ರಾಯೋಜಿಸುತ್ತಿರುವ ಶ್ರೀ ವೇಮಗಲ್ ಸೋಮಶೇಖರ್; ಪಿಎಚ್.ಡಿ. ಪದವೀಧರರಿಗೆ ಉತ್ತೇಜನ ನೀಡುವ ಸಲುವಾಗಿ ದತ್ತಿ ಸ್ಥಾಪಿಸಿರುವ ಶ್ರೀ ರಾಜನ್, ತುಮಕೂರು; ವೆಬ್‌ಸೈಟ್ ನಿರ್ವಹಣೆ ಮಾಡಲು ದತ್ತಿ ಸ್ಥಾಪಿಸಿರುವ ಡಾ. ದೇವರಕೊಂಡಾರೆಡ್ಡಿ ಅಭಿನಂದನಾ ಸಮಿತಿಗೆ; ಡಾ. ಸೂರ್ಯನಾಥ್ ಕಾಮತ್ ನೆನಪಿನ ಸೂರ್ಯಕೀರ್ತಿ ಪ್ರಶಸ್ತಿಗೆ ದತ್ತಿ ಸ್ಥಾಪಿಸಿರುವ ಶ್ರೀಮತಿ ಅರ್ಚನ ಎಸ್.ರಾವ್ ಅವರಿಗೆ; ಶ್ರೀಮತಿ ವಿ. ಗೌರಮ್ಮ ಗಂಗಾಧರಯ್ಯ ಅವರ ನೆನಪಿನ 'ಸಂಶೋಧನ ಶ್ರೀ' ಪ್ರಶಸ್ತಿಗಾಗಿ ದತ್ತಿ ನೀಡಿದ ಡಾ. ಎಂ.ಜಿ. ನಾಗರಾಜ್, ಶ್ರೀಮತಿ ಎಂ.ಜಿ. ಪದ್ಮ ವಿರೂಪಾಕ್ಷಯ್ಯ, ಡಾ. ಎಂ.ಜಿ. ಚಂದ್ರಕಾಂತ್ ಅವರುಗಳಿಗೆ; ಪ್ರಾಗೈತಿಹಾಸಿಕ ಲೇಖನಕ್ಕೆ ಡಾ. ಎಂ.ಎಚ್. ಕೃಷ್ಣ ಮೆರಿಟ್ ಅವಾರ್ಡ್‌ಗಾಗಿ ದತ್ತಿ ನೀಡಿರುವ ಪ್ರೊ. ಕೆ. ಪದ್ದಯ್ಯ, ಪುಣೆ ಅವರಿಗೆ; 'ನಾಯಕಶ್ರೀ' ಪ್ರಶಸ್ತಿಗೆ ಹಾಗೂ ಹುಲ್ಲೂರು ಶ್ರೀನಿವಾಸ ಜೋಯಿಸ್ ಸ್ಮಾರಕ ಗ್ರಂಥ ಪ್ರಶಸ್ತಿಗೆ ದತ್ತಿ ನೀಡಿರುವ ಪ್ರೊ. ಲಕ್ಷ್ಮಣ ತೆಲಗಾವಿ; ಧಾರವಾಡ ಅವರಿಗೆ; ಡಾ. ಶ್ರೀನಿವಾಸ ಹಾವನೂರ ನೆನಪಿನ ಪ್ರಶಸ್ತಿಗಾಗಿ ದತ್ತಿ ನೀಡಿರುವ ಡಾ. ಸಿ.ಆರ್. ಶ್ಯಾಮಲ ಅವರಿಗೆ; ಬಿ.ಸಿ. ಪಾಟೀಲ್ ಟ್ರಸ್ಟ್ ಕೊಪ್ಪಳ ಇವರು ಸ್ಥಾಪಿಸಿರುವ ಸುಮಂಗಳಾ ಪಾಟೀಲ್ ಅವರ ಹೆಸರಿನಲ್ಲಿ ಮಹಿಳೆಯರಿಗಾಗಿ ಕೊಡುವ ಪ್ರಶಸ್ತಿಗೆ ದತ್ತಿ ನೀಡಿರುವ ಶ್ರೀ ಸಿ.ಬಿ. ಪಾಟೀಲ್ ಅವರಿಗೆ ಡಾ. ಪ್ರತಿಭಾ ಚೆನ್ನಪ್ಪ ಸ್ಮರಣಾರ್ಥ ಪ್ರಶಸ್ತಿ ಹಾಗೂ ಜಿ.ಎಸ್. ದೀಕ್ಷಿತ್ ಸ್ಮರಣಾರ್ಥ ಪ್ರಶಸ್ತಿ ಸ್ಥಾಪಿಸಿರುವ ಡಾ. ಶ್ಯಾಮಲಾ ರತ್ನಕುಮಾರಿ ಅವರಿಗೆ – ಈ ಮೇಲಿನ ಎಲ್ಲರಿಗೂ ಅಕಾದೆಮಿಯು ಅಭಾರಿಯಾಗಿದೆ. ಇತಿಹಾಸ ದರ್ಶನ ವಾರ್ಷಿಕ ಸಂಚಿಕೆಯ ಮುದ್ರಣಕ್ಕೆ ಆಶೀರ್ವಾದ ಪೂರ್ವಕವಾಗಿ ಪ್ರತಿವರ್ಷದಂತೆ ಈ ವರ್ಷವೂ (೨೦೨೦-೨೧) ರೂ ೫೦,೦೦೦/– (ಐವತ್ತು ಸಾವಿರ) ನೆರವು ನೀಡಿರುವ ಬಾಳೆಹೊನ್ನೂರಿನ ಶ್ರೀಮದ್ರಂಭಾಪುರಿ ಮಹಾಸಂಸ್ಥಾನದ ಜ. ಶ್ರೀ ಪ್ರಸನ್ನ ರೇಣುಕ ವೀರಸೋಮೇಶ್ವರ ರಾಜದೇಶೀಕೇಂದ್ರ ಶಿವಾಚಾರ್ಯ ಮಹಾಸ್ವಾಮೀಜಿ ಅವರಿಗೆ ನಮಸ್ಕಾರಗಳು.

ಇತಿಹಾಸ ದರ್ಶನ ಸಂಚಿಕೆಯ ೩೬ನೆಯ ಸಂಪುಟವನ್ನು ಸಂಪಾದಿಸಿ ಕೊಟ್ಟಿರುವ ಸಂಪಾದಕರಾದ ಡಾ. ದೇವರಕೊಂಡಾರೆಡ್ಡಿ, ಪ್ರೊ. ಜಿ.ಕೆ. ದೇವರಾಜಸ್ವಾಮಿ ಅವರಿಗೆ ಸಂಪುಟವನ್ನು ಸುಂದರವಾಗಿ ಮುದ್ರಿಸಿಕೊಟ್ಟಿರುವ ಲಕ್ಷ್ಮೀ ಮುದ್ರಣಾಲಯದ ಮಾಲೀಕರಾದ ಶ್ರೀ ಕೆ.ಎಸ್. ಮಂಜು ಹಾಗೂ ಸಿಬ್ಬಂದಿ ವರ್ಗದವರಿಗೆ, ಇತಿಹಾಸ ದರ್ಶನ ಪ್ರಾರಂಭದಿಂದಲೂ ಅಂದವಾಗಿ

ಡಿ.ಟಿ.ಪಿ. ಮಾಡುತ್ತಿರುವ ಪಿ.ಎಸ್. ಸುಬ್ರಮಣಿ ಬಾಬು ಅವರಿಗೆ ಹಾಗೂ ಶ್ರೀಮತಿ ಎಂ. ಮಾಲಾ ಮತ್ತು ಪಿ.ಎಸ್. ಪ್ರಸನ್ನಕುಮಾರ್ ಲಕ್ಷ್ಮೀ ಮುದ್ರಣಾಲಯ ಅವರಿಗೆ, ಇತಿಹಾಸ ದರ್ಶನದ ಮುಖಪುಟವನ್ನು ರಚಿಸಿಕೊಟ್ಟ ಶ್ರೀನಿವಾಸ್ ಟಿ. ಅವರಿಗೆ, ಅಕಾದೆಮಿಯ ಕೆಲಸಗಳಲ್ಲಿ ಸಹಾಯ ಮಾಡುತ್ತಿರುವ ಶ್ರೀ ಗುರುಪ್ರಸಾದ್ ಬಿ.ಎಸ್., ಡಾ. ಸಂಧ್ಯಾ ವಿ., ಶ್ರೀ ರಾಜಶೇಖರ್ ಕೆ.ಎಲ್., ಶ್ರೀಮತಿ ಸೀತಾಲಕ್ಷ್ಮಿ ರಾವ್, ಶ್ರೀ ರೇಣುಕಸ್ವಾಮಿ ಒಡೆಯರ್ ಬಿ.ಈ. ಹಾಗೂ ಶ್ರೀಮತಿ ನಿರ್ಮಲಾ ಎಸ್.ವೈ., ಡಾ. ನಳಿನಿ ವೆಂಕಟೇಶ್, ಶ್ರೀಮತಿ ಭಾರತಿ ಹಾಗೂ ಸಹಕರಿಸಿದ ಎಲ್ಲಾ ಸದಸ್ಯರಿಗೂ ಅಕಾದೆಮಿಯು ಆಭಾರಿಯಾಗಿದೆ.

ಕಾರ್ಯಕಾರಿ ಸಮಿತಿಯ ಅನುಮತಿ ಮೇರೆಗೆ

ದೇವರಕೊಂಡಾರೆಡ್ಡಿ
ಅಧ್ಯಕ್ಷರು

ಎಂ.ಜಿ. ನಾಗರಾಜ್
ಲಕ್ಷ್ಮಣ್ ತೆಲಗಾವಿ
ಉಪಾಧ್ಯಕ್ಷರುಗಳು

ಜಿ.ಕೆ. ದೇವರಾಜಸ್ವಾಮಿ
ಪ್ರಧಾನ ಕಾರ್ಯದರ್ಶಿ

ಶ್ರೀ ಗುರುಪ್ರಸಾದ್ ಬಿ.ಎಸ್.
ಕೋಶಾಧಿಕಾರಿ

ಶ್ರೀ ಕೆ.ಎಲ್. ರಾಜಶೇಖರ್
ಶ್ರೀಮತಿ ಸಂಧ್ಯಾ ವಿ.
ಕಾರ್ಯದರ್ಶಿಗಳು

ಕಾರ್ಯಕಾರಿ ಸಮಿತಿ ಸದಸ್ಯರು

ಡಾ|| ಎಂ. ಕೊಟ್ರೇಶ್, ತುಮಕೂರು

ಶ್ರೀ ಪ್ರಭಾಕರ್ ಎಂ.ಎನ್., ಮೈಸೂರು

ಡಾ. ಕೆ. ರವೀಂದ್ರನಾಥ್, ಹಂಪಿ

ಡಾ|| ಅಮರೇಶ್ ಯತಗಲ್, ಹಂಪಿ

ಡಾ|| ಲಿಂಗರಾಜು, ಮಂಡ್ಯ

ಪ್ರೊ. ಮುರುಗೇಶಿ ಟಿ., ಉಡುಪಿ

ಡಾ|| ಎಸ್.ಕೆ. ಮೇಲಾಕಾರ, ಧಾರವಾಡ

ಶ್ರೀ ನಿಂಗನಗೌಡ ಹ. ದೇಸಾಯಿ, ಯಾದಗಿರಿ

ಡಾ|| ಕೆಳದಿ ವೆಂಕಟೇಶ್ ಜೋಯಿಸ್, ಶಿವಮೊಗ್ಗ

ಡಾ|| ಶರಣಬಸಪ್ಪ ಕೋಲ್ಕಾರ್, ಗಂಗಾವತಿ

ಪ್ರೊ|| ಶಕುಂತಲ ಸಿ. ಸಿಂಧೂರ, ಗದಗ

ಶ್ರೀಮತಿ ಸೀತಾಲಕ್ಷ್ಮೀ ರಾವ್, ಬೆಂಗಳೂರು

ಡಾ|| ಪಿ.ವಿ. ಕೃಷ್ಣಮೂರ್ತಿ, ಬೆಂಗಳೂರು

ಡಾ. ಸಿ.ಬಿ. ಪಾಟೀಲ, ಕೊಪ್ಪಳ

ಶ್ರೀ ಬಸವರಾಜ್ ಟಿ.ಎಚ್.ಎಂ. ಬಳ್ಳಾರಿ

ಡಾ|| ಶಕುಂತಲ ಎನ್., ದಾವಣಗೆರೆ

ಶ್ರೀ ಬಸವರಾಜ ಸಂಗಯ್ಯಮಠ, ವಿಜಯಪುರ

ಶ್ರೀ ಇಷ್ಟಲಿಂಗ ಶಿರಸಿ, ಬಾದಾಮಿ

ಅಕಾದೆಮಿಯಲ್ಲಿ ಸ್ಥಾಪಿಸಿರುವ ದತ್ತಿಗಳ ವಿವರ


ಕ್ರಸಂ.	ದತ್ತಿ ನಿಧಿಯ ವಿವರ	ಮೊತ್ತ	ಆರಂಭದ ವರ್ಷ
1.	ಡಾ॥ ಅಭಿಶಂಕರ್ ಅವರ ನೆನಪಿನಲ್ಲಿ ನೀಡುತ್ತಿರುವ ಸಮ್ಮೇಳನಾಧ್ಯಕ್ಷರ ಸ್ಮರಣಿಕೆ ಮತ್ತು ಸನ್ಮಾನ	30,000	1998
2.	ಡಾ॥ ಬಾ.ರಾ.ಗೋಪಾಲ್ ನೆನಪಿನ ದತ್ತಿ ನಿಧಿ–ಶಾಸನ ತಜ್ಞರಿಗೆ	1,20,000	2001
3.	ಶ್ರೀ ಕೆ. ರಾಜನ್, ತುಮಕೂರು– ಪಿಎಚ್.ಡಿ ಪಡೆದ ವಿದ್ಯಾರ್ಥಿಗಳಿಗೆ ಉತ್ತೇಜನವಾಗಿ ನೀಡುವ ನಗದು ಬಹುಮಾನ	1,06,000	2014
4.	ಡಾ॥ ದೇವರಕೊಂಡಾರೆಡ್ಡಿ ಅಭಿನಂದನಾ ಸಮಿತಿಯವರು ನೀಡಿರುವ ದತ್ತಿ (ವೆಬ್‌ಸೈಟ್‌ನ ವಾರ್ಷಿಕ ನಿರ್ವಹಣಾ ವೆಚ್ಚ ಬರಿಸಲು)	1,10,000	2016
5.	ಶ್ರೀಮತಿ ಅರ್ಚನ. ಎಸ್. ರಾವ್ ಅವರು ನೀಡಿರುವ ದಿ॥ ಡಾ॥ ಸೂರ್ಯನಾಥ್ ಕಾಮತ್ ಅವರ ನೆನಪಿನ 'ಸೂರ್ಯಕೀರ್ತಿ' ದತ್ತಿ ನಿಧಿ ಪ್ರಶಸ್ತಿ	1,28,000	2016
6.	ಶ್ರೀಮತಿ ವಿ. ಗೌರಮ್ಮ ಗಂಗಾಧರಯ್ಯ ಅವರ ಮಕ್ಕಳಾದ ಡಾ॥ ಎಂ.ಜಿ. ನಾಗರಾಜ್, ಶ್ರೀಮತಿ ಎಂ.ಜಿ. ಪದ್ಮ ವಿರೂಪಾಕ್ಷಯ್ಯ ಮತ್ತು ಡಾ॥ ಎಂ.ಜಿ. ಚಂದ್ರಕಾಂತ್ ಅವರುಗಳು ಸ್ಥಾಪಿಸಿರುವ "ಸಂಶೋಧನ ಶ್ರೀ" ಪ್ರಶಸ್ತಿ (ಶ್ರೇಷ್ಠ ಸಂಶೋಧಕರಿಗೆ ನೀಡುವ ಪ್ರಶಸ್ತಿ)	3,05,000	2016
7.	ಡಾ. ಕೆ. ಪದ್ದಯ್ಯ, ಪುಣೆ, 30ನೇ ವಾರ್ಷಿಕ ಸಮ್ಮೇಳನದ ಸರ್ವಾಧ್ಯಕ್ಷರು ಇವರು ಸ್ಥಾಪಿಸಿರುವ 'ಡಾ॥ ಎಂ.ಎಚ್. ಕೃಷ್ಣ' ಮೆರಿಟ್ ಅವಾರ್ಡ್ ನಗದು ದತ್ತಿ ಪ್ರಶಸ್ತಿ (ಅತ್ಯುತ್ತಮ ಪ್ರಾಗೈತಿಹಾಸಿಕ ಲೇಖನಕ್ಕೆ)	30,000	2016
8.	ಬಿ.ಸಿ. ಪಾಟೀಲ ಟ್ರಸ್ಟ್ ಕೊಪ್ಪಳ, ಇವರು ಸ್ಥಾಪಿಸಿರುವ 'ಶ್ರೀಮತಿ ಸುಮಂಗಳಾ ಪಾಟೀಲ' ದತ್ತಿ ನಿಧಿ ಪ್ರಶಸ್ತಿ (ಮಹಿಳಾ ಸಂಶೋಧಕರಿಗಾಗಿ)	1,26,000	2017
9.	ಪ್ರೊ. ಲಕ್ಷ್ಮಣ್ ತೆಲಗಾವಿ ಅವರು ಸ್ಥಾಪಿಸಿರುವ 'ನಾಯಕ ಶ್ರೀ' ದತ್ತಿ ನಿಧಿ ಪ್ರಶಸ್ತಿ	2,00,000	2017
10.	ಡಾ. ಸಿ.ಆರ್., ಶ್ಯಾಮಲ ಅವರು ಸ್ಥಾಪಿಸಿರುವ 'ಡಾ. ಶ್ರೀನಿವಾಸ ಹಾವನೂರ' ಸ್ಮರಣಾರ್ಥ ದತ್ತಿ ಪ್ರಶಸ್ತಿ	1,62,000	2018
11.	ಡಾ. ಶ್ಯಾಮಲಾ ರತ್ನಕುಮಾರಿ ಅವರು ಸ್ಥಾಪಿಸಿದ ಡಾ. ಜಿ.ಎಸ್. ದೀಕ್ಷಿತ್ ಅವರ ನೆನಪಿನ ದತ್ತಿ	2,00,000	2020
12.	ಡಾ. ಶ್ಯಾಮಲಾ ರತ್ನಕುಮಾರಿ ಅವರು ಸ್ಥಾಪಿಸಿದ ಡಾ. ಪ್ರತಿಭಾ ಚಿನ್ನಪ್ಪ ಅವರ ನೆನಪಿನ ದತ್ತಿ	2,00,000	2020
13.	ಅರಸೀಕೆರೆಯ ಮೇಲಣ ಮಠದ ಲಿಂ॥ ಎಸ್. ಸಿದ್ದಣ್ಣಯ್ಯ ಮತ್ತು ಶ್ರೀಮತಿ ಗಂಗಮ್ಮ ಸ್ಮಾರಕ ಟ್ರಸ್ಟ್ ನೀಡುವ "ನೊಳಂಬ ಶ್ರೀ" ಪ್ರಶಸ್ತಿ, ದತ್ತಿಯ ದಾನಿಗಳು ಶ್ರೀ ಪರಮಶಿವಮೂರ್ತಿ ಎಸ್.	2,00,000	2020
14.	ಪ್ರೊ. ಲಕ್ಷ್ಮಣ್ ತೆಲಗಾವಿ ಅವರು ಸ್ಥಾಪಿಸಿರುವ ಸಂಶೋಧಕ ಪ್ರಸಕ್ತ ಹುಲ್ಲೂರು ಶ್ರೀನಿವಾಸ ಜೋಯಿಸ್ ಸ್ಮಾರಕ ಅತ್ಯುತ್ತಮ ಇತಿಹಾಸ ಕೃತಿಗೆ ದತ್ತಿ	1,00,000	2021
	(ಡಿಸೆಂಬರ್ 2021ರವರೆಗೆ) ಒಟ್ಟು	**20,17,000**	

ದಾನಿಗಳ ಪಟ್ಟಿ

ಕ್ರ.ಸಂ.	ದಾನಿಗಳು	ಮೊತ್ತ ರೂ.
1.	ಪಟ್ಟಾಧ್ಯಕ್ಷರು, ಕೊಟ್ಟೂರು ಮಠ, ಹೊಸಪೇಟೆ	1,00,000
2.	ಶ್ರೀಮದ್ರಂಭಾಪುರಿ ಮಠ, ಬಾಳೆಹೊನ್ನೂರು	50,000
3.	ಶ್ರೀಮತಿ ಭಾರತಿ.ಕೆ., ಬೆಂಗಳೂರು	20,000
4.	ಶ್ರೀಮತಿ ನಿರ್ಮಲಾ ಎಸ್.ವೈ.	10,000
5.	ಶ್ರೀ ಶ್ಯಾಮಸುಂದರಗೌಡ, ಅಂಕೋಲಾ	5,000
6.	ಡಾ. ನಳಿನಿ ವೆಂಕಟೇಶ್, ಬೆಂಗಳೂರು	5,000
7.	ಡಾ. ಶೀಲಾಕಾಂತ ಪತ್ತಾರ್, ಬಾದಾಮಿ	5,000
8.	ಶ್ರೀ ಬಿ.ಎಸ್. ಗುರುಪ್ರಸಾದ್	5,000
9.	ಡಾ. ಸಂಧ್ಯಾ ವಿ., ಬೆಂಗಳೂರು	4,000
10.	ಟಿ.ಎಚ್.ಎಂ. ಬಸವರಾಜು, ಬಳ್ಳಾರಿ	2,000
11.	ಡಾ. ಲಕ್ಷ್ಮೀನಾರಾಯಣ್ ಆರ್., ಬೆಂಗಳೂರು	500
	ಒಟ್ಟು	2,06,500



34ನೇ ವಾರ್ಷಿಕ ಸಮ್ಮೇಳನದ ಅಧ್ಯಕ್ಷರಾದ ಸೀತಾರಾಮ ಜಗೀರ್‌ದಾರ್ ಅವರಿಗೆ ಸನ್ಮಾನ



www.karnatakaitihasaacademy.org
karnatakaitihasaacademy25@gmail.com
youtube.com/c/karnatakaitihasaacademy
karnatakaitihasaacademy

ISBN: 978-81-950402-6-1